ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XVII] BANGALORE—MONDAY, JANUARY 6, 1890 [No. 1.

ಸಂಪುಟ ೧೭.] ಬೆಂಗಳೂರು:—ಸನ್ ೧೮೯೦ನೇ ಇಸವಿ ಜನವರಿ ೬ ನೇ ತಾರೀಖು ಸೋಮವಾರ. [ಸಂಖ್ಯೆ ೧.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

[illegible]

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

[illegible]

[illegible]

NOT OIL.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 6 0

ವೈದ್ಯಸಾರ ಸಂಗ್ರಹ.

[illegible]

ಇದರ ಕ್ರಯ—ಟ್ಯಾಂಪು ಮತ್ತು ಅಂಚೆ [illegible] ಪ್ರತಿ ಒಂದಕ್ಕೆ ರೂ 5 0—0

ಟಿ. ಬಿ. [illegible]

[illegible]

ADVERTISEMENTS.

ನೋಟೀಸ್

ಅದ್ಭುತವಾದ ಹೊಸ ಔಷಧ

[illegible]

Sole Agents for India

NAYLOR, SON, GRIMES, & CO.,

Wholesale Depot, 15, Clive Street, Calcutta

[illegible]

[illegible]

ವೆಂಕಟರಾವ್ ಕೃಷ್ಣರಾವ್ ಮತ್ತು ಕಂಪೆನಿ.

[illegible]

ವೆಂಕಟರಾವ್ ಕೃಷ್ಣರಾವ್ ಮತ್ತು ಕಂಪೆನಿ

ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪೆನಿ

(ಲಿಮಿಟೆಡ್.)

ನೋಟೀಸ್.

[illegible]

J. G. LINDSAY, Col., R. E.,

Agent and Chief Engineer

ನೋಟೀಸು.

[illegible]

ಕ್ಕೆ ಪತ್ರಿಕೆಯ ಚಂದಾ [illegible] ಕಳುಹಿಸಿ ಕೊಡ ಬೇಕೆಂದು ಕೋರುತ್ತೇವೆ. ಇದನ್ನು ಕುರಿತ ಇತರ ಪತ್ರಿಕೆಗಳು ಮುಂದಿನವಾರದಲ್ಲಿ ಉಪ ಪತ್ರಿಕೆಯಾಗಿ ಪ್ರಕಟಿಸಲ್ಪಡುವವು.

ಬೆಂಗಳೂರು, ತಾ ೫ನೇ ಜನವರಿ ೧೮೯೦. } ಟಿ. ಸಿ. ಶ್ರೀನಿವಾಸಾಚಾರ್, ಪ್ರೊಪ್ರೈಟರ್. ಕರ್ಣಾಟಕ ಪ್ರಕಾಶಿಕಾ.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JANUARY 6, 1889.

೧೮೯೦ನೇ ಜನವರಿ, ತಾ| ೬ ನೇ ಸೋಮವಾರ.

THE YEAR 1889.

[illegible]

ಲೋಕದೊಳು ಕಾಲಗತಿಯಿಂದ ಗತಿಸಿದ [illegible] ಗಳು ಹ್ಯಾಗೆ ಮರಳಿ [illegible] ಭವಿಷ್ಯದ್ವರ್ಷಗಳು ಸಹ ಮರೆಯಾಗುತ್ತವೆ. ಹೀಗಿದ್ದಾಗ್ಯೂ ಪೂರ್ವಸಂಬಂಧಜ್ಞಾನವು ಅದರ ಸಂಬಂಧ ಸ್ಮಾರಕ ರೂಪವಾಗಿಯೂ ಭವಿಷ್ಯದ್ವರ್ತನಕ್ಕೆ ಮಾರ್ಗದರ್ಶಿಯಾಗಿ ಇರುವದರಿಂದ ಈಗ ಗತಿಸಿದ ಸಂವತ್ಸರವು ಸ್ಮರಣೀಯಗಳಾದ ಬಹ್ವಂಶಗಳಿಂ [illegible] ಸುಖದುಃಖ ಮಿಶ್ರವಾಗಿದ್ದಾಗ್ಯೂ ಅದು ಕೆಲವರಿಗೆ ಸಂತೋಷ ಪ್ರದವಾಗಿಯೂ, ಮತ್ತು ಕೆಲವರಿಗೆ ದುಃಖಕಾರಿಯಾಗಿಯೂ, ಇನ್ನೂ ಕೆಲವರಿಗೆ [illegible] ಯೂ, ಬೇರೆ ಕೆಲವರಿಗೆ ಮೃತಿಗಾಮಿಯಾಗಿಯೂ ಇರುತಲಿತ್ತು. ಇಂತಾ ಸಮಸ್ತೋಚ್ಚ ಗತಿಗಳುಳ್ಳ [illegible] ಗತಿಸಿ ನೂತನ ಸಂವತ್ಸರ ಪ್ರಾರಂಭಿಸಿದ್ದರಿಂದ ಇದು ಸರ್ವವಿಷಯದಲ್ಲಿಯೂ ಪ್ರಕೃತಿ ಮುಂದಿಲಕ್ಕೆ ಹಿತಕಾರಿ ಯಾಗಬೇಕೆಂದು ಕಾಲರೂಪಿಯಾದ ಭಗವಂತನು ಪ್ರಥಮತಃ ಪ್ರಾರ್ಥಿಸುವೆವು.

ಕೆಲವು ಕಾರ್ಯಕಾರಣಗಳ ದೆಸೆಯಿಂದ ಗತವರುಷದಲ್ಲಿ ಯೂರೋಪ್ ಖಂಡದ ಸ್ಥಿತಿಯು [illegible] ಯವಾಗಿದ್ದುದರಿಂದ ಕೆಲವರು [illegible] ಗಳ ಸುಖ ಸಮಾಧಾನಗಳಿಗೆ ಭಂಗ ಪ್ರಾಪ್ತವಾಗುವದೆಂದಲೂ, ತತ್ಕಾಲಿಕ ಅನೇಕ ಲಕ್ಷ ಪ್ರಜೆಗಳ ಪ್ರಾಣಹಾನಿಯೂ, ದ್ರವ್ಯನಾಶವೂ ಪ್ರಾಪ್ತವಾಗುವದೆಂದಲೂ ಎಲ್ಲರೂ ದೃಢವಾಗಿ ನಂಬಿದ್ದರು. [illegible] ಇಂಗ್ಲೆಂಡ್ ರಾಜನೀತಿಯ ಕಾರಣಗಳಿಂದ ಅದ್ಯಾಪಿ ಯುದ್ಧಂಗ [illegible] ಲದರ ಪ್ರಜ್ವಲನಕ್ಕೆ [illegible] ಉಪಕರಣಗಳು ಸನ್ನದ್ಧವಾಗಿರುವದರಿಂದ ಯಾವ ಮುಹೂರ್ತದೊಳಗು ಪ್ರಜ್ವಲಿಸುತ್ತದೆ [illegible] ಈಗ ಯೂರೋಪ್ ಖಂಡದ ಸಂಸ್ಥಾನಾಧಿಪತಿಗಳ ಅಧೀನದೊಳು ಕೋಟಿ [illegible] ಲಕ್ಷ ಸೈನ್ಯವು ಶಿಕ್ಷಿತವಾಗಿ ಯುದ್ಧಾಯತ್ತವಾಗಿರುತ್ತದೆ. ಯುದ್ಧ ನಿರ್ಣಯ [illegible] ಸೈನ್ಯ [illegible]

ರೋಗದೊಳು ಬಂದು ನಿಲ್ಲುವಾಗ್ಯೆ ಉಂಟಾಗಬಹುದಾದ ವಿಪತ್ಪರಂಪರೆಯು ಊಹಿಸಲಳವಲ್ಲದ್ದಾಗಿರುತಿದೆ. ಈ ಸಂವತ್ಸರದಲ್ಲಿ ಗಾಂಭೀರವಾಗಿರುವ ಕ್ಷೋಭಾಗ್ನಿಯು ಬಹಿರ್ಮುಖವಾಗದುದವನರ್ಥ ಸಂದಾಯಕವಾಗಬಹುದೆಂದೆಣಿಸುತ್ತೇವೆ. ಪರಂತು ತಲ್ಲಕ್ಷಣಗಳು ಈಗ್ಯೆ ಹನ್ನೆರಡು ತಿಂಗಳ ಕಾಲವಾಗಿದ್ದಂತೆಯೇ ಅದ್ಯಾಪಿ ಇರುತಲಿರುವದರಿಂದ ದೈವಾನುಗ್ರಹದಿಂ ಈ ಸಂವತ್ಸರದ ಅನ್ವರ್ಥನಾಮವು ಸಾರ್ಥಕವಾಗದಂತೆ ವಿಕೃತಿಯುಂಟಾಗದಿರಲೆಂದು. ಬಹಿಂಗಿನ್ಯ ಗತಿಸಿದ ಅನುಭವವು ಭವಿಷ್ಯಚ್ಛುಭನಿರೀಕ್ಷಣೆಗನುಕೂಲವಾಗಿಲ್ಲವು. ಗತಸಂವತ್ಸರದ ಆರಂಭದಲ್ಲಿ ಜರ್ಮನಿಯವರಿಗೂ ಫ್ರೆಂಚನವರಿಗೂ ಇರುವ ಅನಾದಿಕಾಲಿಕವಾದ ಅಸಮಾಧಾನವು ಅಲಿಸಾಕ್ ಮತ್ತು ಲೋರೇನ್ ಎಂಬ ಎರಡು ತುಕಡಿಗಳ ದೆಸೆಯಿಂದ ಅಭಿವ್ಯಕ್ತವಾಗುವದಾಗಿದ್ದು ಕಡೆವರೆಗೆ ಹಿಂದುಬಗೆಯಾಗಿ ಉಪಶಮಿಸಿತು. ರಷ್ಯ ಸಂಸ್ಥಾನದೊಳಿದ್ದ ಬ್ರಿಟಿಷ್ ರಾಯಭಾರಿಯಾದ ಸರ್ ರಾಬರ್ಟ್ ಮೊರಿಯರ್ ಎಂಬವನು, ಜರ್ಮನೀಯವರ ಯುದ್ಧಸೇನೆಯು ರೈನ್ ನದಿಯಂ ದಾಟಿ ಬರುತಲಿದೆ ಯೆಂಬದಾಗಿ ಫ್ರೆಂಚನವರಿಗೆ ವರ್ತಮಾನ ಕೊಟ್ಟರೆಂಬದಾಗಿ ನಿರಾಧಾರವಾದ ದೋಷ ಒಂದು ಅವರಮೇಲೆ ಆರೋಪಿಸಲ್ಪಟ್ಟಲು ಅದು ಅನಿರೂಪಕವೆಂದು ಕ್ರಮವಾಗಿ ಸ್ಥಿರಪಡುವ ತನಕ ಜರ್ಮನೀ ಚಕ್ರವರ್ತಿಯವರಿಗೆ ಇಂಗ್ಲಿಷನವರ ಮೇಲೆ ಸ್ವಲ್ಪ ಅತೃಪ್ತಿ ಯುಂಟಾಗಿತ್ತು. ಅದು ಕ್ರಮೇಣ ಚಕ್ರವರ್ತಿಯವರು ಇಂಗ್ಲಾಂಡಿಗೆ ಹೋಗಿ ಬಂದ ಬಳಿಕ ನಿವೃತ್ತಿಯಾಗಿ ಪರಸ್ಪರ ಅನ್ಯೋನ್ಯಭಾವವು ಪೂರ್ವದಂತೆ ನೆಲೆಗೊಂಡಿತು. ಫ್ರೆಂಚನವರೂ ಜರ್ಮನಿಯವರೂ ಪರಸ್ಪರ ಯುದ್ಧ ಸನ್ನಾಹಗಳಿಂ ಕೊರತೆ ಇಲ್ಲದೆ ಮಾಡುತಲಿದಾರೆ. ಪರಂತು ಒಬ್ಬರೂ ಅಭಿಮುಖರಾಗಿ ಹೊರಗೆ ಹೊರಡಲಿಲ್ಲವು. ಜರ್ಮನೀಯವರು ಮೂವರು ಸಂಸ್ಥಾನಾಧಿಪತಿಗಳ ಸಹಾಯವಂ ಬೇಡಿರುವರಲ್ಲದೆ ಫ್ರೆಂಚನವರೊಡನೆ ಯುದ್ಧ ಪ್ರಾಪ್ತವಾಗುವಸಂದರ್ಭದಲ್ಲಿ ತುರ್ಕೀಯವರು ಸಹ ತಮ್ಮ ಕಡೆ ಸೇರುವರೆಂದು ನಿರೀಕ್ಷಿಸುತ ಅವರಂ ಪ್ರೇರಿಸುತಲಿದಾರೆ. ಫ್ರೆಂಚನವರು ರಷ್ಯಾದವರ ಸಹಾಯವಂ ಕೋರಿರುವರಲ್ಲದೆ ತಮ್ಮ ಸಹಾಯದ ಬಗ್ಗೆ ಇತರ ಕೆಲವು ಸಣ್ಣ ಸಂಸ್ಥಾನಾಧಿಪತಿಗಳಂ ಸಹ ಪ್ರಾರ್ಥಿಸುತಲಿದಾರೆ. ಇವರ ಸ್ಥಿತಿ ಈರೀತಿ ಇರುವಲ್ಲಿ ತುರ್ಕೀಯವರು ಮಧ್ಯೆ ಸಿಲುಕಿ ಸಂಕಟಪಡತಕ್ಕಾಲಪ್ರಾಪ್ತವಾಗಿದೆ. ರಷ್ಯಾದವರು ಕಾನ್‌ಸ್ಟಾಂಟಿನೋಪಿಲ್ ಪಟ್ಟಣವಂ ಸ್ವಾಧೀನಪಡಿಸಿಕೊಳ್ಳುವ ವಿಷಯದಲ್ಲಿ ಬಹಳ ಅಭಿನಿವೇಶವುಳ್ಳವರಾಗಿರುವದರಿಂದ ಅವರ ಇಷ್ಟಪೂರ್ತಿಗೆ ತಕ್ಕ ಸಮಯವು ಅವರು ಆತುರದೊಡನೆ ನಿರೀಕ್ಷಿಸುತಲಿದಾರೆ. ಇವಲ್ಲದೆ ತುರ್ಕೀ ಸಂಸ್ಥಾನದ ಒಳ ಆಡಳಿತವು ತೃಪ್ತಿಕರವಾಗಿಲ್ಲವು. ಹೊರಗಡಿ ರಾಜ್ಯಗಳ ಬಂದೋಬಸ್ತಿಯ ವಿಷಯದೊಳು ಸುಲ್ತಾನರವರು ಬಹಳ ಅಶ್ರದ್ಧೆಯಂ ತೋರಿಸುತಲಿರುವದರಿಂದ ಅಲ್ಲಿನ ಪ್ರಜೆಗಳು ಮಾತ್ರವಲ್ಲದೆ ಒಳದೇಶದಲ್ಲಿ, ತತ್ರಾಪಿ ರಾಜಧಾನಿಯಲ್ಲಿರತಕ್ಕವರೇ ಕೇವಲ ಅಸಂತುಷ್ಟರಾಗಿರುತಲಿದಾರೆ. ಏಶೀನ ಖಾಂಡೇಯ ರಾಜ್ಯ ಸುಖ ನ್ಯಾಯವಾಗಿ ಸುಲ್ತಾನರಸ್ಥಿತಿಯು ನಿರ್ಭರವಾಗಿರಲಿಕ್ಕೆ ತಕ್ಕಂತಿಲ್ಲವು. ಯೂರೋಪಿಯನ್ ಸಂಸ್ಥಾನಗಳ ಮಧ್ಯೆ ಇದೊಂದು ಮುಸಲ್ಮಾನ ರಾಜ್ಯವಿರುವದು ಅನೇಕರಿಗೆ ಶಿರೋವೇದನೆಗೆ ನಿಮಿತ್ತವಾಗಿದೆ. ಎಲ್ಲರೂ ಅದಂ ಹಂಚಿಕೊಳ್ಳುವ ಕುತೂಹಲದೊಳಿರುವದರಿಂದ ಯಾವ ಸಮಯವು ಯಾವರೀತಿಯಿಂದ ಪರಿಣಮಿಸುವದೋ ತಿಳಿಯಲಾರದು.

ಬಲ್ಗೇರಿಯಾ ಸಂಸ್ಥಾನವು ಸಕಲ ವಿಷಯದಲ್ಲಿಯೂ ಇತರಾಪೇಕ್ಷೆಯಾ ಪ್ರಾಬಲ್ಯವಾಗಿದ್ದರೂ ಅದು ರಷ್ಯಾ ಸಂಸ್ಥಾನದವರಿಗೆ ಕಂಟಕ ರೂಪವಾಗಿ ಏರ್ಪಟ್ಟಿದೆ. ಅದಂ ಸ್ವಾಧೀನಪಡಿಸಿಕೊಳ್ಳುವದರಿಗೆ ರಷ್ಯಾದವರು ಪರಾತಂತರಾಗಿರಲಾರರು. ಗತವರುಷದ ಪ್ರಾರಂಭದೊಳು ಸರ್ವಿಯಾ ಅರಸನಾದವನು ಸ್ವತಃ ಪ್ರಭುತ್ವವಂ ತೊರೆದು ಅದಂ ತಮ್ಮ ಕುಮಾರಿಗೊಪ್ಪಿಸಿ ವಿಶ್ರಾಂತಿಸುಖವಂ ಕೈಗೊಂಡನು. ಅಂದು ಮೊದಲು ಸಂಸ್ಥಾನದ ಸ್ಥಿತಿಯು ಚಿಂತನೀಯವಾಗಿ ಬಹುವಿಧ ಕಲಹಗಳಿಗೂ, ಅವ್ಯವಸ್ಥೆಗಳಿಗೂ ಉತ್ಪತ್ತಿಸ್ಥಾನವಾಗಿ ಏರ್ಪಟ್ಟಿದೆ. ಇನ್ನು ಇಂಗ್ಲಾಂಡ ದೇಶದ ಸ್ಥಿತಿಯಂ ಪರಿಭಾವಿಸಿ ನೋಡಲಾಗಿ ಲಿಬರಲ್ ಕಕ್ಷಿಯವರಿಗೂ ಕನ್ಸರವೇಟಿವ್ ಕಕ್ಷಿಯವರಿಗೂ ರಾಜಕೀಯಗಳಾದ ಸ್ಪರ್ಧೆಯು ಉಪಶಾಂತವಾಗದೆ ಒಬ್ಬರು ಮತ್ತೊಬ್ಬರ ಪರಾಭವವಂ ನಿರೀಕ್ಷಿಸುತ ತದರ್ಥ ಸಕಲಸನ್ನಾಹಗಳಿಂ ಕೊರತೆ ಇಲ್ಲದೆ ನಡೆಸುತಲಿದಾರೆ. ಜನಪಕ್ಷಾವಲಂಬಿಯಾದ ಮಿ|| ಗ್ಲಾಡ್‌ಸ್ಟನ್‌ಯವರ ಕಕ್ಷೆಗೆ ಸೇರಿದವರೆಲ್ಲರೂ, ಐರ್ಲ್ಯಾಂಡ ರಾಜ್ಯಕ್ಕೆ ಸ್ವತಂತ್ರವಾದ ಪ್ರತ್ಯೇಕ ಪಾರ್ಲಿಮೆಂಟ ಸಭೆಯನ್ನೇ ಘಟಿಸಿ ರಾಜ್ಯಾಡಳಿತವು ಜರಿಗಿಸುವ ಸ್ವಾತಂತ್ರ್ಯವಂ ಪ್ರಜೆಗಳಿಗೆ ಕಲ್ಪಿಸಬೇಕೆಂಬ ದೃಢ ಸಂಕಲ್ಪವುಳ್ಳವರಾಗಿದಾರೆ. ಈಗ ಅಧಿಕಾರ ಪದದೊಳಿರತಕ್ಕ ರಾಜಪಕ್ಷಾವಲಂಬಿಗಳಾದ ಕನ್ಸರ್ವೆಟಿವ್ ಕಕ್ಷಿಯವರು ಅದರ ವಿಷಯವಂ ಸ್ವಲ್ಪವೂ ಅಂಗೀಕರಿಸದೆ ಪ್ರತಿಷೇಧಿಸುತಲಿದಾರೆ. ಪ್ರಕೃತ ಸ್ಥಿತಿಯನ್ನೇ ಕೊಂಡಾಡತಕ್ಕ ಲಿಬರಲ್ ಕಕ್ಷಿಯವರು ಐರ್ಲ್ಯಾಂಡ ರಾಜ್ಯದ ವಿಚಾರದಲ್ಲಿ ಮಾತ್ರ ಕನ್ಸರ್ವೆಟಿವ್‌ಗಳೊಡನೆ ಏಕೀಭವಿಸುವ ಅಭಿಪ್ರಾಯವುಳ್ಳವರಾಗಿದಾರೆ. ಪರಂತು ಮುಂದಿನ ಪಾರ್ಲಿಮೆಂಟ ಸಭೆಯು ಮರಳಿ ವ್ಯವಸ್ಥಾಪಿಸಲ್ಪಡುವಾಗ್ಯೆ ಐರಿಷ್ ಪ್ರಜೆಗಳ ಅಭೀಷ್ಟವು ಸ್ಪಷ್ಟವಾಗುವದು. ಮಿ|| ಗ್ಲಾಡ್‌ಸ್ಟನ್‌ಯವರಿಗೆ ತಾವು ಜೀವಿಸಿರುವವರೊಳಗಾಗಿ ಪರಾಧೀನರಾದ ಐರಿಷ್ ಪ್ರಜೆಗಳಿಗೆ ಸ್ವಾತಂತ್ರ್ಯವಂ ಕಲ್ಪಿಸಿ ನೋಡಬೇಕೆಂಬ ಕೋರಿಕೆಯು ಬಹಳವಾಗಿರುತಿದೆ.

ಗತ ಸಂವತ್ಸರದಲ್ಲಿ ಆಫ್ರಿಕಾ ಖಂಡದ ಸ್ಥಿತಿಯು ಬಹಳ ಅತೃಪ್ತಿಕರವಾಗಿಯೂ, ಪ್ರಜೆಗಳ ಸುಖ ಸಮಾಧಾನಗಳಿಗೆ ಭಂಜಕವಾಗಿಯೂ ಇತ್ತು. ಆಗಿಂದಾಗ್ಯೆ ಕಲಹಗಳ ಪ್ರಾಬಲ್ಯದಿಂ ಸದರೀ ಖಂಡವು ವಿಶೇಷ ಪ್ರಾಶಸ್ತ್ಯವನ್ನೈದಿತ್ತು. ದರ್ವೇಷಿಗಳೆಂಬ ಜನರು ಒಗ್ಗಟ್ಟಾಗಿ ಕಲಹಿಸಿ ಈಜಿಪ್ಟ ರಾಜ್ಯದಲ್ಲಿನ ಪ್ರಜೆಗಳ ಸಮಾಧಾನಕ್ಕೆ ಭಂಗವನ್ನುಂಟುಮಾಡಿದರಾಗಿ ಅದರನ್ನಡಗಿಸುವಬಗ್ಗೆ ಸೈನ್ಯವು ಕಳುಹಿಸಲ್ಪಟ್ಟಿತು. ಟೋಸ್ಕೀ ಎಂಬ ಪ್ರದೇಶದಲ್ಲಿ ಪ್ರಬಲ ಯುದ್ಧ ನಡೆದು ಕಡೆಗೆ ಸದರೀ ಜನರು ಪರಾಜಿತರಾದರು, ಆದಾಗ್ಯೂ ಅದೇ ಜನರು ಮರಳಿ ಗುಂಪುಗೂಡುತ ಬ್ರಿಟಿಷನವರ ಮೇಲೆ ಯುದ್ಧ ಸನ್ನಾಹಗಳಂ ಮಾಡುತಲಿರುವಂತೆ ತಿಳಿಯಬರುತಿದೆ. ಬಹುಶಃ ಇವರ ಕದನವು ಸನ್ನಿಹಿತವಾಗಿರುವದೆಂದು ತೋರುತಿದೆ.

ಅಮೆರಿಕಾ ಖಂಡದ ಆಡಳಿತವು ಪರ್ಯಾಲೋಚಿಸಲಾಗಿ ಸಂಭಾವನೀಯಗಳಾದ ಅನೇಕ ವಿಷಯಗಳಿಂದ ಸ್ಮರಣೀಯಗಳಾಗಿರುತಿದೆ. ಅವುಗಳ ಪೈಕಿ ಬ್ರೇಜಿಲ್‌ರಾಜ್ಯದಲ್ಲಿ, ಪ್ರಜೆಗಳು ಪ್ರಭುಶಕ್ತಿಯಂ ನಿರೋಧಿಸಿ ಪ್ರಜಾಪ್ರತಿನಿಧಿ ರೂಪವಾದ ಪ್ರಭುತ್ವವಂ ನೆಲೆಗೊಳಿಸುವದಕ್ಕಾಗಿ ಅಲ್ಲಿನ ಚಕ್ರವರ್ತಿಯವರು ಪದಚ್ಯುತರನ್ನಾಗಿ ಮಾಡಿ ಅವರ ಅಲ್ಲಿನ ವಾಸ ಸಹ ಅಪಾಯಕರವೆಂಬ ಭಾವನೆಯೊಡನೆ ಅವರಂ ಅನ್ಯದೇಶಕ್ಕೆ ಕಳುಹಿಸಿಬಿಟ್ಟದ್ದು ಕೇವಲ ಮುಖ್ಯಾಂಶವಾಗಿರುತಿದೆ. ಈಗ ನೂತನವಾಗಿ ನೆಲೆಗೊಳಿಸಲ್ಪಟ್ಟ ರಾಜ್ಯಭಾರ ಕ್ರಮವು ಜನರ ಸುಖ ಸಮಾಧಾನಗಳಿಗೆ ಪೋಷಕವಾಗಿರುವದೆಂದೆಣಿಸಿದೆವು. ಪರಂತು ಈಚೆಗೆ ಬರುವ ವೃತ್ತಾಂತಗಳ ಮೂಲಕ ಅಲ್ಲಿನ ಪ್ರಜೆಗಳಲ್ಲಿ ಎರಡು ಕಕ್ಷಿಭೇದಗಳೇರ್ಪಟ್ಟು ಒಂದು ಪ್ರಭೇದದವರು ಪೂರ್ವ ಪ್ರಭುತ್ವ ಕ್ರಮವನ್ನೂ, ಮತ್ತೊಂದು ಪ್ರಭೇದದವರು, ನೂತನ ರಾಜ್ಯಭಾರ ಕ್ರಮವನ್ನೂ ಅನುಮೋದಿಸುತ ಪರಸ್ಪರ ಸ್ಪರ್ಧಿಸುತಲಿರುವಂತೆ ತಿಳಿಯಬರುತಿದೆ. ಸದರೀ ರಾಜ್ಯದ ಮುಂದಿನ ಸ್ಥಿತಿಯು ಅಲ್ಲಿನ ಪ್ರಜೆಗಳ ಪ್ರಾಬಲ್ಯ ದೌರ್ಬಲ್ಯವನ್ನನುಸರಿಸಿದ್ದಾಗಿರುತಿದೆ.

ಇನ್ನು ನಮಗೆ ಆವಾಸಸ್ಥಾನವಾದ ಇಂಡ್ಯದೇಶದ ಮತ್ತು ಅದರ ಅಂತರಾಸನೊಳಿರುವ ರಾಜ್ಯಗಳ ಹ್ರಾಸವೃದ್ಧಿಗಳಂ ಕುರಿತು ಸ್ವಲ್ಪಮಟ್ಟಿಗೆ ಇದರಡಿ ವಿಚಾರ ಮಾಡುವೆವು. ಈದೇಶದಲ್ಲಿ ಪರಿಭಾವನೀಯಗಳಾದ ಪ್ರಬಲ ಯುದ್ಧಲಕ್ಷಣಗಳ್ಯಾವದೂ ಕಾಣಿಸದಿದ್ದರೂ ಆಗಿಂದಾಗ್ಯೆ ಸ್ವಲ್ಪಮಟ್ಟಿಗೆ ಕಲಹಗಳ ಪ್ರಾಬಲ್ಯವೂ ಅವರನ್ನಡಗಿಸುವಾಗ್ಯೆ ಉಂಟಾಗುತಲಿದ್ದ ಅನೇಕ ಸಣ್ಣ ಯುದ್ಧಗಳೂ ಕೆಲವುಮಟ್ಟಿಗೆ ಗವರ್ನಮೆಂಟನವರ ಚಿಂತೆಗೆ ವಿಷಯಗಳಾಗದಿರಲಿಲ್ಲವು. ಕಳೆದ ವರುಷದ ಏಪ್ರಿಲ್ ತಿಂಗಳಲ್ಲಿ ಸಿಕಿಂ ಎಂಬ ಪ್ರದೇಶದೊಳು ಒಂದು ಯುದ್ಧ ಪ್ರಾಪ್ತವಾಗಿ ಅದು ಅದ್ಯಾಪಿ ವ್ಯವಸ್ಥೆಯಾಗದೆ ಇದೆ. ಬರ್ಮಾ ರಾಜ್ಯದ ಮೇಲ್ಭಾಗವು ಈಗ ತಹಬಂದಿಯಲ್ಲಿ ಬರುವತೆಯೂ ಅಲ್ಲಿನ ಪ್ರಜೆಗಳು ವಿಧೇಯರಾಗಿ ರಾಜಭಕ್ತಿಯುಳ್ಳವರಾಗಿದಾರೆಂಬದಾಗಿಯೂ, ಈಚೆಗೆ ದೇಶದ ಐಶ್ವರ್ಯಾಭಿವೃದ್ಧಿಗೆ ನಿಮಿತ್ತಗಳಾದ ಕಾರ್ಯಗಳು ಬಹಳವಾಗಿ ಮಾಡಲ್ಪಟ್ಟು ಇತರ ರಾಜ್ಯಗಳಂತೆ ಅನಾಮಯವಾಗಿ ಪುರೋವೃದ್ಧಿಯುಳ್ಳಿರುತಿದೆಂಬದಾಗಿಯೂ ಗವರ್ನಮೆಂಟನವರು ಅನ್ಯರು ಪ್ರಾಸಿಸುವಂತೆ ಪದೇ ಪದೆ ಪ್ರಕಟಿಸುತಲಿದ್ದಾಗ್ಯೂ ಯುದ್ಧಸನ್ನಾಹಗಳಲ್ಲಿಯೂ, ಸೈನ್ಯವನ್ನೊದಗಿಸುವದರಲ್ಲಿಯೂ ತತ್ಪ್ರಯುಕ್ತವಾದ ಧನವ್ಯಯದಲ್ಲಿಯೂ ಯಾವ ಕೊರತೆಯೂ ಕಾಣಿಸಲಿಲ್ಲವು. ಚಿನ್ ಎಂಬ ಪ್ರಜೆಗಳು ಯುದ್ಧಪ್ರಯತ್ನವು ನಡೆಸಲು ಈಗ ಅವರು ಸುಧಿಸುವದಕ್ಕಾಗಿ ಯುದ್ಧಸೇನೆಯು ಕಳುಹಿಸಲ್ಪಟ್ಟಿದೆ. ಅಥವಾ ಪ್ರಾಂತದಲ್ಲಿ ಲುಷಾಯಿಗಳೆಂಬ ಜನಗಳು ಕಲಹಿಸಿ ತಿರಿಗಿಬೀಳಲು ಅವರು ತಡೆಯುವದಕ್ಕಾಗಿ ಅಲ್ಲಿಗೂ ಬೇಕಾದ ಸೈನ್ಯವು ಕಳುಹಿಸಲ್ಪಟ್ಟಿದೆ. ಸರಹದ್ದು ಪ್ರಾಂತದಲ್ಲಿಯೂ ಅಫ್‌ಘಾನಿಸ್ತಾನ ರಾಜ್ಯದಲ್ಲಿಯೂ ಪ್ರಾಧಾನ್ಯೇನ ಉಪಯೋಗಿಸಲ್ಪಡತಕ್ಕ ಅಂಶಗಳ್ಯಾವದೂ ಇಲ್ಲವು. ಆದಾಗ್ಯೂ ರಷ್ಯಾ ಸಂಸ್ಥಾನದವರು ಮಧ್ಯ ಏಷ್ಯಾದಲ್ಲಿ ಮಾಡುತಲಿರುವ ಪ್ರಯತ್ನಗಳೂ, [illegible] ಯದಂತೆ ಅವರ ಅವ್ಯಕ್ತವಾದ ಅಭ್ಯಂತರೇಚ್ಛೆನ್ನೂ ಆಗಿಂದಾಗ್ಯೆ ಇಂಡ್ಯ ಗವರ್ನಮೆಂಟನವರ ಚಿಂತೆಯಂ ವೃದ್ಧಿಪಡಿಸತಕ್ಕದ್ದಾಗಿರುತಿದೆ.

ನಮಗೆ ಯಾವಾಗಲು ವಿಚಾರಾರ್ಹವಾಗಿರುವ ನೇಟಿವ್ ಸಂಸ್ಥಾನಗಳ ಆಡಳಿತಗಳಂ ಕುರಿತು ಚಿಂತಿಸಿದೊಡೆ ಕಾಶ್ಮೀರ ಸಂಸ್ಥಾನದಲ್ಲಿ ನಡೆದ ಪ್ರಬಲ ವಿಷಯವೇ ಪ್ರಥಮತಃ ಪ್ರಸ್ತಾವಿಸತಕ್ಕದ್ದಾಗಿರುತಿದೆ. ಕಳೆದ ವರುಷದ ಪ್ರಾರಂಭದಲ್ಲಿ ಕಾಶ್ಮೀರ ಮಹಾರಾಜರ ಪ್ರಭುತ್ವಕ್ರಮವು ಅಲ್ಲಗಳೆದು ಅವರು ಅಧಿಕಾರ ರಹಿತರನ್ನಾಗಿ ಮಾಡಿ ಅವರ ಪ್ರಾಬಲ ವೈಭವಗಳಿಗೆ ಕೊರತೆಯನ್ನುಂಟುಮಾಡಬೇಕೆಂಬ ತಾತ್ಪರ್ಯದೊಡನೆ ಕೆಲವರು ಮಾಡಿದ ಕುಟಿಲ ಸಂಧಾನಗಳೆಲ್ಲವೂ ಅಲ್ಲಿನ ಪೊಲಿಟಿಕಲ್ ಏಜಂಟರ ಸಂಬಂಧದಿಂ ಸಫಲವಾಗಿ ಮಹಾರಾಜರಿಗೆ ಅಧಿಕಾರವು ತಪ್ಪಿ ಕಡೆಗೆ ರಾಜ್ಯಭಾರವು ಪೊಲಿಟಿಕಲ್ ಏಜಂಟರ ಅಧ್ಯಕ್ಷತೆಯೊಳು ನಡೆಯುವಂತೆ ಪರಿಣಮಿಸಿತು. ನೇಟಿವ್ ಸಂಸ್ಥಾನಗಳಲ್ಲಿ ಪೊಲಿಟಿಕಲ್ ಏಜಂಟರುಗಳೇ ಪ್ರಕಾರಾಂತರ ಪಾಲಕರಾಗಿಯೂ ಅಲ್ಲಿನ ದಿವಾನರುಗಳೇ ತತ್ಪ್ರತಿನಿಧಿಗಳಾಗಿಯೂ ಇರುವದರಿಂದ ಈ ವಿಷಯಕವಾದ ವೃತ್ತಾಂತ ಪತ್ರಿಕಾ ಲೇಖನಗಳೆಲ್ಲವೂ ನಿಷ್ಪ್ರಯೋಜನಗಳಾದವು. ಆದಾಗ್ಯೂ ಗವರ್ನಮೆಂಟನವರು ಸದರೀ ರಾಜ್ಯದ ವಿಷಯದಲ್ಲಿ ಅವಲಂಬಿಸಿರುವ ರಾಜ್ಯತಂತ್ರಕ್ರಮವು ಕೇವಲ ಶ್ಲಾಘ್ಯವೆಂಬದಕ್ಕೆ ಅದು ಈಚೆಗೆ ಪಡೆಯುತಲಿರುವ ಸುಖಸ್ವಾತಂತ್ರ್ಯಾದಿ ಪ್ರಯೋಜನಗಳೂ, ಐಶ್ವರ್ಯಾಭಿವೃದ್ಧಿಯೂ ಮುಖ್ಯ ನಿದರ್ಶನಗಳೆಂಬದಾಗಿ ಕೆಲವು ಇಂಗ್ಲಿಷ್‌ಪತ್ರಿಕೆಗಳು ತಾತ್ಪರ್ಯಪಡುತಿವೆ. ಇತರ ಪ್ರಯೋಜನಗಳೆಲ್ಲವು ಪರಿಭಾವನೀಯಗಳಲ್ಲದಿದ್ದರೂ, ಅಲ್ಲಿ ಅಬಕಾರೀ ಹುಟ್ಟುವಳಿಯಂ ಜಾಸ್ತಿಪಡಿಸಿದ್ದೂ, ಷರಾಪ್ ದುಕಾನಗಳನ್ನು ವೃದ್ಧಿಗೊಳಿಸಿದ್ದೂ, ಅನಾಸ್ವಾದಿತಪೂಘ್ರಾಣಿತವಾಗಿದ್ದ ಮದ್ಯವಂ ಪ್ರಚಾರದೊಳು ತಂದದ್ದೂ ಪರಮ ಪ್ರಯೋಜನವಾದುದರಿಂದ ಇದಕ್ಕಾಗಿ ಯಾದರೂ ಕಾಶ್ಮೀರದೇಶೀಯರೆಲ್ಲರು ಗವರ್ನಮೆಂಟನವರ ವಿಷಯದೊಳು ಬಹಳ ಕೃತಜ್ಞರಾಗಿರಬೇಕು. ಇತರ ನೇಟಿವ್ ಸಂಸ್ಥಾನಗಳ ಆಡಳಿತಗಳೆಲ್ಲವೂ ಹಿಂದಿನ ಸಂವತ್ಸರದೊಳಿದ್ದಂತೆಯೆ ಸಾಮಾನ್ಯ ದಶೆಯೊಳಿದ್ದದರಿಂದ ಇಲ್ಲಿ ಪ್ರಾಧಾನ್ಯೇನ ತಿಳಿಸಬೇಕಾದುದೇನೂ ಇಲ್ಲವು.

ನಮಗೆ ಸನ್ನಿಹಿತ ಸಂಬಂಧವುಳ್ಳ ಮದರಾಸ ಪ್ರೆಸಿಡೆನ್ಸಿಯ ಸ್ಥಿತಿಯಂ ಕುರಿತು ಚಿಂತಿಸಿ ನೋಡುವಲ್ಲಿ ವ್ಯಕ್ತವಾಗುವದೇನೆಂದರೆ—ಮದರಾಸ್ ಗವರ್ನರವರಿಗೆ ಸಂಸ್ಕೃತಿ ಕ್ಲೇಶ ಒಂದು ಪ್ರಾಪ್ತವಾಗಿ ಅದರಿಂದ ಅವರಉತ್ಸಾಹವು ಬಹಳಮಟ್ಟಿಗೆ ಕಡಮೆಯಾಯಿತು. ಗತಸಂವತ್ಸರದ ಮಧ್ಯಭಾಗದಲ್ಲಿ ಗಂಜಾಂ ಡಿಸ್ಟ್ರಿಕ್ಟಿನಲ್ಲಿ ಪ್ರಬಲ ದುರ್ಭಿಕ್ಷವು ಪ್ರಾಪ್ತವಾಗಿ ತನ್ಮೂಲಕ ಸಾವಿರಾರು ಜನ ಮೃತಪಟ್ಟರು. ಈಗ್ಯೆ ಕೆಲವುಕಾಲದ ಮೊದಲು ಆಲೋಚನೆಯೊಳಿದ್ದ ಪೂರ್ವ ಸಮುದ್ರತೀರದ ರೆಯಿಲ್‌ರಸ್ತೆಯ ಪ್ರಯತ್ನವು ಈಗ ಕೇವಲ ಆವಶ್ಯಕವೆಂಬ ಭಾವವು ಸದರೀ ಕ್ಷಾಮದಿಂದುಂಟಾಗಿ ತತ್ಪ್ರಯುಕ್ತವಾದ ಏರ್ಪಾಡುಗಳು ಕೆಲವುಮಟ್ಟಿಗೆ ಜರಿಗಿ ಈಗ ಸರ್ವೇ ನಡೆಯುತಲಿದೆ. ಕಳೆದ ಸಾಲಿನಲ್ಲಿ ಕಾಲವೃಷ್ಟಿ ಇಲ್ಲದೆ ಹೋಗಿ ಪೈರುಗಳಿಗೆ ನಷ್ಟವುಂಟಾದುದರಿಂದ ೧೮೭೬—೭೭ನೇ ಇಸವಿಯಂತೆ ಕ್ಷಾಮವೆಲ್ಲಿ ಪ್ರಾಪ್ತವಾಗುವದೋ ಎಂಬ ಭೀತಿಯು ಅನೇಕರಂ ಬಾಧಿಸುತಲಿತ್ತು. ಕೆಂಡಕೋಣ ವಗ್ಯೆರೆ ಕೆಲವು ಪ್ರದೇಶಗಳಲ್ಲಿ ತತಕ್ಷಣವಾಗಿ ಊಟವೂ, ನಿರವು ಪೋಸ್ತಿಯೂ, ಪ್ರಜೆಗಳಿಗೆ ಸಂಕಟವೂ ಯಥೋಚಿತ ಪ್ರಾಪ್ತವಾದವು. ಪರಂತು ದೈವಾನುಗ್ರಹದಿಂ ಇತ್ತರಲ್ಲಿಯೇ ಮಳೆ ಬಂದು ಬೇಕಾದ ಧಾನ್ಯಗಳು ಅನ್ಯದೇಶಗಳಿಂದ ಬಂದೊದಗಿದ್ದರಿಂದ ಜನರ ಕಳವಳವು ಉಪಶಾಂತವಾಗಿ ಭಯತಪ್ಪಿತು. ಲಾರ್ಡ್ ಕಾನಿಮಾರಾ ಯವರು ತಮ್ಮ ಪ್ರೆಸಿಡೆನ್ಸಿಯ ಉತ್ತರದಿಕ್ಕಿನ ಡಿಸ್ಟ್ರಿಕ್ಟಿನ ಸ್ಥಿತಿಗತಿಗಳಂ ಖುದ್ದು ಅಜಮಾಯಿಷೀ ಮಾಡುವದಕ್ಕಾಗಿ ಸರ್ಕ್ಯೂಟ್ ಹೋಗಿ ಈಗ ಹೈದರಾಬಾದ ಪ್ರಾಂತದೊಳಿದಾರೆ. ಮಿ|| ಸ್ಟರ್ ಕ್ರಾಪೋರ್ಡ್ ಯವರ ರುಷುವತ್ ಮೊಕದ್ದಮೆಯ ವಿಷಯದಲ್ಲಿ ಮುಂಬೈ ಗವರ್ನಮೆಂಟನವರ ತೀರ್ಮಾನದ ಮೇಲೆ ಸ್ಟೇಟ್ ಸೆಕ್ರೆಟರಿಯವರು ಕೊಟ್ಟ ಪೈಸಲೂ ಮಾಮಲತದಾರರುಗಳ ವಿಷಯದಲ್ಲಿ ಗವರ್ನಮೆಂಟನವರು ಅನುಸರಿಸಿದ ರಾಜನೀತಿಯೂ, ಲಾರ್ಡ್ ರೇಯವರಿಗೆ ಅಸಮಾಧಾನಕರವಾಗಿ ಪರಿಣಮಿಸಿತು. ಯದ್ಯಪಿ ಅವರ ಉದ್ಯೋಗಕಾಲವು ಪ್ರಾಪ್ತೈಸುತ ಬಂದದರಿಂದ ಸಾಬಕ್ ಮದರಾಸ್ ಗವರ್ನರವರ ಪುತ್ರರಾದ ಲಾರ್ಡ್ ಹಾರಿಸ್ ಎಂಬವರು ಮೊಕರರಾಗಿ ಬರುವ ಮಾರ್ಚ್ ತಿಂಗಳಲ್ಲಿ ಮುಂಬೈಗೆ ಬಂದು ತಮ್ಮ ಕೆಲಸದ ಚಾರ್ಜನ್ನು ವಹಿಸುವರು.

ಇಂಡ್ಯದೇಶದ ರಾಜ್ಯಾಡಳಿತದಲ್ಲಿ ಸಾಬಕ್ ವೈಸ್‌ರಾಯಿ ಯಾದರಾದ ಲಾರ್ಡ್ ಡಫ್ರಿನ್‌ಯವರು ಉದ್ಯೋಗಪದದಿಂ ನಿವೃತ್ತರಾದದ್ದೂ, ಅವರಿಗೆ ಬದಲಾಗಿ ಬಂದ ಈಗಿನ ವೈಸ್‌ರಾಯಿಯವರಾದ ಲಾರ್ಡ್ ಲಾನ್ಸ್‌ಡೌನ್ ಯವರು ಕಳೆದ ಜನವರಿಯಲ್ಲಿ ಚಾರ್ಜ್ ತೆಗೆದುಕೊಂಡದ್ದೂ ಮುಖ್ಯಾಂಶವಾಗಿರುತಿದೆ. ಲಾರ್ಡ್ ಡಫ್ರಿನ್‌ಯವರು ಈದೇಶಕ್ಕೆ ಪ್ರಥಮತಃ ಬಂದಿದ್ದ ಕಾಲದಲ್ಲಿ ಅವರು ಪ್ರಜಾ ಬಂಧುವಾಗಿರುವರೆಂಬ ಭಾವನೆಯೊಡನೆ ಜನರೆಲ್ಲರೂ ಬಹಳ ನಂಬಿದ್ದರು. ಆದರೆ ಅವರು ರಾಜನೀತಿಜ್ಞರಾದುದರಿಂದ ಅಂತರವಾದ ಸ್ವಾಭಾವಿಕ ಗುಣವು ಹೊರಪಡಿಸದೆ ಇದ್ದರಾಗಿ ಅವರ ಸ್ವರೂಪ ನಿರ್ಧಾರಣವು ಪ್ರಜೆಗಳಿಗೆ ಕ್ರಮಸಾಧ್ಯವಾಗಿತ್ತು. ಆದಾಗ್ಯೂ ಅವರು ಈ ದೇಶವಂ ಬಿಟ್ಟು ಹೋದಕಾಲದಲ್ಲಿ ಕಲ್ಕತ್ತೆಯಲ್ಲಿಯೂ ತರುವಾಯ ಇಂಗ್ಲಾಂಡಿನಲ್ಲಿಯೂ ಆಯಾ ಪ್ರಕರಣಗಳೊಳು ಇಂಡ್ಯಾದೇಶ ವಿಷಯ

ಹಾಗಿ ಅವರು ವ್ಯಕ್ತಪಡಿಸುತಬಂದ ಅಭಿಪ್ರಾಯಗಳಿಂದ ಪ್ರಜಾಹಿತೈಷಿಗಳೆಲ್ಲರಿಗೂ ಸ್ಪಷ್ಟವಾಯಿತು. ಅವರ ಪ್ರತ್ಯಾಪನ್ನಾಯರಾದ ಲಾರ್ಡ್ ಲ್ಯಾನ್ಸ್‍ಡೌನ್‍ಯವರು ಸಹ ತಮ್ಮ ಪೂರ್ವಿಕರಂತ ಪ್ರಜಾರಂಜನೆಯೊಳು ದೃಷ್ಟಿ ಇಲ್ಲದವರೆಂದು ತೋರುತಿದೆ. ಯಾತಕ್ಕೆಂದರೆ, ಅವರು ಈಚೆಗೆ ಕಾಶ್ಮೀರ ಸಂಸ್ಥಾನದ ವಿಷಯದಲ್ಲಿ ಮಾಡಿದ ಪಿರ್ಗದೂ ಇಂಡ್ಯದೇಶದ ವೃತ್ತಾಂತಪತ್ರಿಕಾಸ್ವಾತಂತ್ರ್ಯ ಭಂಜಕವಾದ ಅಫಿಷಿಯಲ್ ಸೀಕ್ರೆಟ್ಸ್ ಆಕ್ಟೆಂಬ ಒಂದು ಕಾನೂನನ್ನು ಪ್ರಜಾಭಿಪ್ರಾಯಕ್ಕೆ ವಿರುದ್ಧವಾಗಿ ಜಾರಿಯಲ್ಲಿ ತಂದದ್ದೂ ಅವರ ಮನೋಭಾವವು ಹೊರಪಡಿಸತಕ್ಕದ್ದಾಗಿರುತಿವೆ. ಇಂಡ್ಯದೇಶದ ಅಭಿಮಾನಶಾಲಿಗಳಾಗಿರುವವರಲ್ಲಿ ಪ್ರಮುಖರಾಗಿದ್ದ ಮಿ|| ಜಾರ್ಜ್ ಯೂಲ್‍ಯವರು ನಮ್ಮ ದೌರ್ಭಾಗ್ಯದಿಂ ಕಾಲಗತಿಯನ್ನೈದಿದಾಗ್ಯೂ ಅವರ ಸ್ಥಾನದಲ್ಲಿ ಮಿ|| ಬ್ರಾಡ್ಲಾ ಯವರನ್ನು ಭಗವಂತನು ನಮಗೆ ಅನುಗ್ರಹಿಸಿದನು. ಇವರ ಮೂಲಕ ಪಿರ್ಲಿಮೆಂಟಿಯರು ಬಹುವಿಧ ಶುಭಸಮಾಚಾರಗಳಂ ಪಡೆಯಲು ನಿರೀಕ್ಷಿಸುತಲಿದ್ದಾರೆ. ಇವರೆ ಅವರ ಚಿತ್ತಸ್ವಾಸ್ಥ್ಯವು ಮೇಲ್ಪಡಿಸುವಂತೆ ಕಳಿಸಬೇಕೆಂದು ಕೋರುತ್ತೇವೆ.

ಬಹುಜನ ರತ್ನಗರ್ಭದಲ್ಲಿ ನ್ಯಾಷನಲ್ ಕಾಂಗ್ರೆಸ್ ಸಭೆಯು ಕ್ರಮೇಣ ಅಭಿವೃದ್ಧಿಯನ್ನೈದುತಬರುತಿದೆ. ಗತವಾರದಲ್ಲಿ ಮುಂಬೈಯೊಳು ಸೇರಿದ್ದ ಸಭೆಯು ಅದರ ಹಿಂದಿನ ವರುಷಗಳ ಸಭೆಗಳಿಗಿಂತ ಪ್ರತಿನಿಧಿಗಳ ಸಂಖ್ಯೆಯಿಂದಲೂ ಅಭಿಮಾನಶಾಲಿಗಳ ಹಾಜರಿಯಿಂದಲೂ ಪ್ರಮುಖರಾದ ಪಾರ್ಲಿಮೆಂಟ್ ಮೆಂಬರುಗಳ ಸಾನ್ನಿಧ್ಯದಿಂದಲೂ, ಇವರಲ್ಲಿ ಹೆಂಗಸರಿಗೆ ಕೂಡ ಪ್ರಾಂಬ ಗುತಬರುವ ಆದರಾತಿಶಯದಿಂದಲೂ, ಪ್ರತಿಪಕ್ಷಿಗಳ ವಿರುದ್ಧಪ್ರಯತ್ನಗಳು ನಿಷ್ಫಲಗಳಾಗುತ ಬರುವವರಿಂದಲೂ, ಅಪರಿಮಿತವಾದ ಜನರ ಪ್ರೇಮಪ್ರದರ್ಶನದಿಂದಲೂ ವಿಶೇಷವೆನಿಸಿತು. ಈ ಸಭೆಯಲ್ಲಿ ನ್ಯಾಯವಿಧಾಯಕ ಸಭೆಯ ಪುನರ್ವ್ಯವಸ್ಥಾ ವಿಚಾರವೇ ಬಹಳವಾಗಿ ಜರಿಗಿ ಮಿಸ್ಟರ್ ಬ್ರಾಡ್ಲಾ ಯವರ ಮಸೂದಾ ಆಕ್ಟ್ ಕೆಲವು ನೂತನ ಬದಲಾವಣೆಗಳೊಡನೆ ಬರುವ ಪಾರ್ಲಿಮೆಂಟ್ ವಿಶಾಖ ಗನಲ್ಲಿ ವಿಮರ್ಶೆಯಾಗಬೇಕೆಂದು ತೀರ್ಮಾನವಾಯಿತು.

ಸಮಯಾಚಾರ ಪರಿಷ್ಕರಣಾಭಿಲಾಷಿಗಳ ಪ್ರಯತ್ನೋತ್ಸಾಹಗಳು ಉತ್ತರೋತ್ತರ ಅಭಿವೃದ್ಧಿಯಾಗಿದೆ. ಇವರ ಮನೋರಥಕ್ಕೂ ಪ್ರಯತ್ನಗಳಿಗೂ ತಕ್ಕ ಪ್ರಯೋಜನ ಪಾತ್ರ ಆದ್ಯಾಪಿ ಉಂಟಾಗಲಿಲ್ಲವು. ಇವರ ನಿರ್ಣಯಗಳು ಅವರು ನಿರೀಕ್ಷಿಸುವಷ್ಟು ಸುಲಭವಾಗಿ ಕಾರ್ಯಕಾರಿಗಳಾಗುವದಿಲ್ಲ. ಅವರ ತಾತ್ಪರ್ಯಗಳು ಕೇವಲ ಪರಾರ್ಥೋದ್ದೇಶ್ಯವಾದವುಗಳಾಗಿರುತಿವೆ. ಅವರ ನಡತೆಯು ಅವರ ಅಭಿರುಚಿಯಂತೆ ಇರುವದರಿಂದ ಅವರ ಪ್ರಯತ್ನಗಳು ಹಠವಿವಾದಶಾಲಿಗಳಾದ ಕೆಲವರಿಗೆ ವಿನಾ ಅನ್ಯರಿಗೆ ಹಿತಕರವಾಗಿ ಕಂಡುಬರಲಿಲ್ಲವು.

ಇನ್ನು ನಮ್ಮ ಮೈಸೂರು ಆಡಳಿತವಂ ಸ್ವಲ್ಪ ಪರಿಭಾವಿಸಿ ನೋಡಿದರೆ ಪ್ರಸ್ತಾವನೀಯಗಳಾದ ಒಂದೆರಡು ವಿಷಯಗಳು ವಿನಾ ಬೇರೆಂಥದೂ ಕಾಣಿಸಲಿಲ್ಲವು. ಅವು ಯಾವವೆಂದರೆ— ಶ್ರೀಮನ್ಮಹಾರಾಜ್ಞೀ ಯವರ ಪ್ರಿಯಪೌತ್ರರಾಗಿಯೂ, ತದಾಧಿರಾಜ್ಯಭಾಜನರಾಗಿಯೂ ಇರುವ ಪ್ರಿನ್ಸ್ ವಿಕ್ಟರವರು ಕಳೆದ ನವಂಬರ್ ಆಖೈರಿನಲ್ಲಿ ಇಲ್ಲಿಗೆ ದಯಮಾಡಿ ತಮ್ಮ ದರ್ಶನ ಭಾಗ್ಯದಿಂದ ಏತದ್ದೇಶೀಯರಿಗೂ ಶ್ರೀಮನ್ಮಹಾರಾಜರವರಿಗೂ ಸಂತೋಷ ಪ್ರತಿಷ್ಠೆಗಳಂ ಘಟಿಯಿಸಿದ್ದು ಮುಖ್ಯ ವಿಷಯವಾಗಿರುತಿದೆ. ಪರಿಣಾಮಾವಸ್ಥೆಯಲ್ಲಿ ದುಃಖವು ಸಂತೋಷಕರವಾಗಿಯೂ, ಸಂತೋಷವು ದುಃಖಕರವಾಗಿಯೂ ಕಾಣುರುವದು ಕೆಲವು ಸಂದರ್ಭಗಳಲ್ಲಿ ಸಹಜವಾದುದರಿಂದ ಶೀಘ್ರದಲ್ಲೇ ರಾಜಪುತ್ರರ ಆಗಮನಪ್ರಯುಕ್ತವಾದ ಆನಂದ ಸಂಘಟನೆಗೆ ಹೇತುವೆಂತೆ ಆಕ್ಟೋಬರ್ ತಿಂಗಳಲ್ಲಿ ಮೈಸೂರಿಲು ದಸರಾ ಹಬ್ಬದಲ್ಲಿ ನಡೆದ ಗಲಾಟೆಯೂ, ಆ ಕಾಲದಲ್ಲಿ ಅಧಿಕಾರಿಗಳ ವರ್ತನೆಯೂ, ತತ್ಪ್ರಯುಕ್ತವಾದ ಜನರ ಅಸಮಾಧಾನವೂ ಚಿಂತನೀಯವಾಗಿರುತಿದ್ದವು. ಸಂಸ್ಥಾನದ ದೊಡ್ಡ ಅಧಿಕಾರಿಗಳು, ಅಂದರೆ ಒಬ್ಬ ಕೌನ್ಸಿಲರೂ, ಮಿಲಿಟರಿ ಸೆಕ್ರೆಟರಿಯೂ ಕೆಲಸದಿಂದ ನಿವೃತ್ತರಾದುದರಿಂದ ಆವರಮೇಲೆ ಮಿ|| ಚೆಂಚಲ್‍ರಾಯರವರ ನೌಕರಾತಿಯೂ, ಡೆಪ್ಯುಟಿ ಕಮಿಷನರುಗಳ ಬತ್ತೀ ಬದಲಾವಣೆಗಳೂ, ಅಬ್ಕಾರೀ ಕಮಿಷನರ್ ವಗೈರೇರವಿಂದ್ಪಾ, ಇತರ ನೌಕರರಾತಿಗಳೂ, ಮಡಿದವರ ತನಕ ದೈಶಿರಸ್ತೆಯು ಬಡಾಯಿಸಿ ಪ್ರಯಾಣಸ್ಪರ ಆನುಷ ರಕ್ಷಣೆಗೆ ಅನುಕೂಲ್ಯವುಂಟಾದದ್ದೂ ಸ್ಮರಣೀಯಗಳಾಗಿರುತಿವೆ. ಕಳೆದ ವರುಷದಲ್ಲಿ ರೋಗಾದ್ಯುಪದ್ರವಗಳೇನೂ ವಿಶೇಷವಾಗಿಲ್ಲವು. ಪ್ರಜೆಗಳೂ ಪಶುಗಳೂ ಸುಖಸ್ವಚ್ಛಂದವಾದ ಸ್ಥಿತಿಯಲ್ಲಿದ್ದವು. ದಿವಾನರವರು ದೇಶಸ್ಥಿತಿಯನ್ನು ಜವಾಬ್ದಾರಿಯಿಂದ ಮಾಡುವಬ್ರಿಗ್ಯಾ ವಿದವುಗ್ಗಾ ಪ್ರಾಂತಕ್ಕೆ ಸರಕ್ಯಾದಿ ಹೋಗವಾರೆ. ನಮ್ಮ ಮಹಾರಾಜರವರಿಗೂ, ಬ್ರಿಟಿಷ್ ಗವರ್ನಮೆಂಟಿನವರಿಗೂ ನೆಲಗೊಂಡಿರುವ ಸ್ನೇಹ ಸಂಬಂಧವು ಪಕ್ವರೂಪವಾಗಿದೆ. ಇಲ್ಲಿನ ರೆಸಿಡೆನ್ಸಿಯಲ್ಲಿ ರೆಸಿಡೆಂಟರ ಮತ್ತು ಅಸಿಸ್ಟೆಂಟ್ ರೆಸಿಡೆಂಟರ ಬದಲಾವಣೆಗಳು ನಡೆದವು. ಸಂಸ್ಥಾನದ ದುಸ್ಸ್ವಭಾವಳಿಯು ಅದರ ಹಿಂದಿನ ಸ್ಥಿತಿಗಿಂತ ಜಾಸ್ತಿಯಾಯಿತಲ್ಲದೆ ಹಿರ್ಕ ಸಹ ಬಹಳ ದುಷ್ಟಗೆ ಜಾಸ್ತೀ ಮಾಡಲ್ಪಟ್ಟಿತು. ಮುಖ್ಯವಾಗಿ ಈ ಸಂಸ್ಥಾನದ ಸ್ಥಿತಿಯು, ಗತ ವರುಷದಲ್ಲಿ ಸಾಮಾನ್ಯವಾಗಿತ್ತಲ್ಲದೆ ಪ್ರಜೆಗಳು ಸುಖಸ್ವಾತಂತ್ರ್ಯ ರಾಜಭಕ್ತಿ ಯುಳ್ಳವರಾಗಿದ್ದರು.

ಸ್ವವಿಷಯಕವಾದ ಕೆಲಸಂಗತಿಗಳನ್ನು ಪರಿತಿಳಿಸುವದೇನೆಂದರೆ—ಗತವಾರದೊಡನೆ ಈ ಪತ್ರಿಕೆಯು ಮೂರಳಯುಕ್ತೋಪನಿಸಿ ೧೬ ವರುಷಗಳಾದವು. ಈ ಪತ್ರಿಕೆಯು ಪ್ರಾರಂಭಿಸಲ್ಪಟ್ಟ ಕಾಲದಲ್ಲಿದ್ದ ಪ್ರೋತ್ಸಾಹವೂ ಪ್ರತ್ಯಾಶೆಯೂ ಪ್ರತಿ ಸಂವತ್ಸರದಲ್ಲಿಯೂ ಕ್ರಮೇಣ ಕಡಿಮೆಯಾಗುತ ಬಂದವು. ಇದರ ಉಪಯೋಗಗಳನ್ನು ಪರಿಗ್ರಹಿಸಿ ಓದುವವರಲ್ಲಿ ವಿಶೇಷ ಪ್ರೀತಿಯಂ ವ್ಯಕ್ತಪಡಿಸುತಲಿರುವದರಿಂದ ಸ್ವಪ್ರಯೋಜನವಂ ಸಹಿಸಿ ಪ್ರೋತ್ಸಾಹದಿಂದ ಬಹು ವಿಧ ಪ್ರತಿಬಂಧಕಗಳ ಮಧ್ಯೆ ಪತ್ರಿಕೆಯಂ ನಿರ್ವಿಘ್ನವಾಗಿ ಜರಿಗಿಸುತ ಬಂದೆವು. ಇವರೆ ಇವರ ಪ್ರತ್ಯೇಕವೃತ್ತಿಯಂ ಬಯಸಿ ಜನರು ತಕ್ಕ ಸಹಾಯ ಮಾಡುವುದಕ್ಕೆ ಸ್ವಾಭಾವಿಕವಾದ ಅವರ ಔದಾಸೀನ್ಯವೂ, ಧೈರ್ಯಸಂಕೋಚನವೂ, ಬಾಧಕಗಳಾಗ ಪರಿಣಮಿಸಿದೆ. ಆದಾಗ್ಯೂ ಅವರ ಅಪೇಕ್ಷಿತಾಂಶಗಳನ್ನೂ ದಕ್ಷಾದಾರಿಗಳನ್ನೂ ಉಚಿತರೀತಿಯಿಂ ಪೋಷಿಸಿ ಮಾಡಿಸಲಿಕ್ಕೆಷ್ಟುಮಾತ್ರವೂ ಈ ಪತ್ರಿಕೆ ಹಿಂಜರಿಯಲಿಲ್ಲವು. ಇದು ಇನ್ನೂ ಪ್ರಯೋಜನಕಾರಿಯಾಗಿ ಮಾಡಲಿಕ್ಕೆ ತಕ್ಕ ದ್ರವ್ಯಸಂಪತ್ತಿಯೂ ಇತರಾನುಕೂಲ್ಯವೂ ನಮಗೆ ವ್ಯಗ್ರವಾಗಿರುವದರಿಂದ ನಮ್ಮ ಕೋರಿಕೆಯೆಲ್ಲವೂ ನಮ್ಮಲ್ಲೇ ಲೀನವಾಗುತಲಿದೆ. ಮುಖ್ಯವಾಗಿ ಈ ಪತ್ರಿಕೆಯು ಹಿಂದಿನ ವರುಷದ ಸ್ಥಿತಿಯು ನಮಗೆ ಸ್ವಲ್ಪವಾಗಲಿ ಪ್ರೋತ್ಸಾಹಕಾರಿಯಾಗಲಿಲ್ಲವು. ಇನ್ನಾದರೂ ಇದರ ಪ್ರಯೋಜನವು ಜನರು ಪರಿಭಾವಿಸಿ ತಮಗೆ ಸಾಧ್ಯವಾದ ಸಹಾಯಗಳಂ ಮಾಡಬೇಕೆಂದು ಕೋರುತ್ತೇವೆ. ಇದುವರಿವಿಗೆ ಚಂದಾದಾರರಾಗಿದ್ದು ಅಭಿಮಾನಶಾಲಿಗಳಾಗಿರತಕ್ಕವರಿಗೆಲ್ಲ ನಾವು ಬಹಳ ಕೃತಜ್ಞರಾಗಿರುವೆವು. ಈ ಪತ್ರಿಕೆಗೂ, ಇದರ ಚಂದಾದಾರರಿಗೂ, ಪಾಠಕರಿಗೂ ಈಗ ಬರಿಸಿದ ನೂತನ ಸಂವತ್ಸರವು ಸುಖಸಂತೋಷ ಪ್ರದವಾಗಿ "ಲೋಕಾಸಮಸ್ತಾಸ್ಸುಖಿನೋಭವಂತು" ಎಂಬ ಪ್ರಾರ್ಥನಾಪೂರ್ವಕ ಗತವರುಷದ ವಿಚಾರವು ಕೊನೆಗಾಣಿಸುವೆವು.

THE SOCIAL CONFERENCE

ಆಬೇ ಭಾನುವಾರದ ದಿನ ನ್ಯಾಷನಲ್ ಕಾಂಗ್ರೆಸ್ಸಿಗೆ ಸೇರಿದಂತೆ ಮುಂಬೈಯಲ್ಲಿ ಹಿಂದೂ ಸಮಯಾಚಾರ ಪರಿಷ್ಕರಣ ಸಭೆಯೊಂದು, ಅದೇ ಚಪ್ಪರದಲ್ಲಿ ಸೇರಿತ್ತು. ಆ ಕಾಲದಲ್ಲಿ ಬಹುಜನ ಕಾಂಗ್ರೆಸ್ ಪ್ರತಿನಿಧಿಗಳೂ, ಇಂಡ್ಯ ದೇಶದೊಳರುವ ಸಮಯಾಚಾರ ಪರಿಷ್ಕರಣಾಭಿಲಾಷಿಗಳಲ್ಲಿ ಪ್ರಮುಖರಾದವರೂ ಇತರರು ಸಹ ಬಂದಿದ್ದರು. ಇದಲ್ಲದೆ ಪಂಡಿತ ರಮಾಬಾಯಿ ವಗೈರೆ ಒಬ್ಬರಿಬ್ಬರು ವಿಲಕ್ಷಣಸ್ತ್ರೀಯರ ಸಾನ್ನಿಧ್ಯದಿಂದಲೂ ಸದರೀ ಸಭೆಯು ಮತ್ತಷ್ಟು ಶೋಭೆಯನ್ನೈದಿತ್ತು. ಈಗ ಕೆಲವರಿಗೆ ಬಾಧಕವೆಂದು ತೋರಿರುವ ಹಿಂದೂ ಸಮಯಾಚಾರಗಳನ್ನು ಬದಲಾಯಿಸಬೇಕಾದದ್ದರ ಅವಶ್ಯಕತೆಯನ್ನೂ ಉಪಾಯವನ್ನೂ ಕುರಿತು ಸಭೆಯವರು ವಿಚಾರ ಮಾಡತೊಡಗಿದರು. ಆ ಕಾಲದಲ್ಲಿ ಮಾಡಲ್ಪಟ್ಟ ಮುಖ್ಯ ನಿರ್ಣಯಗಳ್ಯಾವವೆಂದರೆ—ವಿವಾಹಾಂಗೀಕಾರದ ಬಗ್ಯೆ ಕ್ಲುಪ್ತವಾಗಿರುವ ವಧೂವರರ ವಯಃಪರಿಮಾಣವಿಷಯಕವಾದ ನಿಬಂಧನೆಯಂ ಬದಲಾಯಿಸುವಣ; ಸಮಯಾಚಾರ ಪರಿಷ್ಕರಣ ಸಮಾಜಗಳನ್ನು ರಿಜಿಸ್ಟರ್ ಮಾಡುವಣ; ೧೮೬೦ನೇ ಇಸವಿಯಲ್ಲಿ ಜಾರಿಯಲ್ಲಿ ತರಲ್ಪಟ್ಟ ವಿಶಂತೂ ವಿವಾದ ಆಕ್ಟಿನ ತಾತ್ಕಾಲಿಕ ಪ್ರಯೋಜನ ಮತ್ತು ಅದನ್ನು ಪ್ರಯೋಗಿಸಿಕೊಳ್ಳಬೇಕಾದ ವಿಧಾನ, ೧೬ವರುಷಗಳ ವಯಸ್ಸಿನೊಳಗಿನ ವಿಶಂತುಗಳಂ ಮುಂದಣಾವಿಗಳ ಮೂಲಕ ವಿರೂಪಗೊಳಿಸಬರುವಣ; ಏವಮಾದಿಗಳು. ಮೇಲೆಕಂಡ ತೀರ್ಮಾನಗಳೆಲ್ಲವೂ, ಪುನರ್ವಿವಾಹಕ್ಕೆ ಪರಂಪರೆಯಾ ಪ್ರೋತ್ಸಾಹ ಕಾರಿಗಳಾಗಿಯೂ ತತ್ಕೃತ ಪ್ರೋತ್ಸಾಹಕ್ಕೆ ಪ್ರೋತ್ಸಾಹಕರೂಪವಾದ ಗವರ್ನಮೆಂಟಿನವರ ಸಂಬಂಧವನ್ನು ಪ್ರಕಾರಾಂತರೇಣ ಕೋರತಕ್ಕವಾಗಿಯೂ ಇರುವದರಿಂದ ಈ ವಿಷಯವಾಗಿ ಸಭೆಯವರಲ್ಲಿ ಮಹಾ ಸಂಘರ್ಷಣವುಂಟಾಗಿ ಅವರವರು, ಜಾತಿ ಮತಾಚಾರಗಳ ಔತ್ಕೃಷ್ಟ್ಯವನ್ನೂ ಅವುಗಳಲ್ಲಿ ಪ್ರಜೆಗಳಿಗಿರುವ ಸ್ವಾತಂತ್ರ್ಯವನ್ನೂ ಬಹಳ ಮುಖ್ಯಗೆ ವೋಚಿಸಿ ಮಾತನಾಡಿದರು. ಇಂತಾ ವಿಚಾರಗಳಿಗೆ ಪ್ರಸಕ್ತ ಸಭೆಯು ಕುದ್ದಾಂಗ ಅನರ್ಹವಾದುದೆಂದು ನಾವು ಭಾವಿಸುತ್ತೇವೆ. ವಿಚಾರಾರ್ಹವಾದ ಅಂಶಗಳು ಗಹನಗಳಾಗಿಯೂ ಶಾಸ್ತ್ರೀಯಗಳಾಗಿಯೂ ಅನೇಕಕೋಟಿ ಪ್ರಜೆಗಳ ಯೋಗಕ್ಷೇಮಾಭಿವೃದ್ಧಿಗೆ ನಿಮಿತ್ತವಾದವಾಗಿಯೂ, ಪೂರ್ವ ಸಂಪ್ರದಾಯವನ್ನನುಸರಿಸಿದ್ದಾಗಿಯೂ ಜನರಾಚಾರವರ್ತನಕ್ಕೆ ಪ್ರತಿಷೇಧಕ ಸಾಮಗ್ರಿಯಾಗಿಯೂ, ಭಾವ್ಯನರ್ಥಗಳಿಗನವಕಾಶವಾಗಿಯೂ, ಇರುವದರಿಂದ ಮೇಲೆಕಂಡಂತಾ ವಿಷಯಗಳನ್ನು ಕುರಿತು ಲೋಕಚರ್ಯಾನಭಿಜ್ಞರಾದ ಬಾಲಕರೂ, ಕೇವಲ ಅನ್ಯಭಾಷಾ ಪಾಂಡಿತ್ಯ ವಾಕ್ಪಟುತ್ವ ಪ್ರದರ್ಶನೋತ್ಸಾಹಿಗಳಾಗಿ, ಸರ್ವಜ್ಞರಂತೆ ನಟಿಸುವಂತಾ ಅಧುನಿಕರೂ, ಹಿಂದೂಜಾತಿ ಮತಾಚಾರಗಳಿಗೆತ್ಯಾಜ್ಯರಾದ ನಿರ್ವಿವೇಕಿಯರೂ, ತನ್ಮಾರ್ಗನುಸರಣಾಸಕ್ತರಾದ ಅನ್ಯಜಾತಿಯವರೂ ಮನಸ್ವೀ ವಿಚಾರ ಮಾಡಿ ಆತುರದಿಂದೊಂದು ನಿರ್ಣಯವಂ ಮಾಡಿ ಅದಂ ಅನೇಕ ಪ್ರಜೆಗಳೂ ಅಂಗೀಕರಿಸಬೇಕೆಂತಲೂ, ಅದಕ್ಕೆ ಸಾಧಕವಾಗಿಸ್ವಮತಾಭಿನಿವೇಶಶೂನ್ಯ ಗವರ್ನಮೆಂಟಿನವರ ಅಧಿಕಾರಬಲವನ್ನು ವಿನಿಯೋಗಿಸುವದಿನಾ ವಬೇಕೆಂದಲೂ ಕೋರಿ ಪ್ರಯತ್ನಪಡುವದಕ್ಕಿಂತ ಸಾರ್ವಜನೀನವಾದ ವಿಷಯಗಳಲ್ಲಿ ಪ್ರಜೆಗಳ ಅಭಿಪ್ರಾಯವು ಕೂಲಂಕಷವಾಗ ಅರಿತು ಅವರ ಅಭಿಪ್ರಾಯವು ಪ್ರತಿಕೂಲವಾಗಿ ಕಂಡುಬಂದರೆ ಅಂತವರಿಗೆಲ್ಲ ಪ್ರಸಕ್ತ ಪ್ರಯತ್ನೋದ್ದೇಶಗಳಿಂದುಂಟಾಗಬಹುದಾದ ಸಾಧಕ ಬಾಧಕಗಳನ್ನೂ, ಇದಕ್ಕೆ ಶಾಸ್ತ್ರಪ್ರಕಾಶವನ್ನೂ ವಿವರಿಸಿ ತಿಳಿಸಬೇಕಾದುದಲ್ಲದೆ ಅವರ ಅನುಮತಿಯನ್ನೂ ಸಹಾಯವನ್ನೂ ಪ್ರಥಮತಃ ಪಡೆಯಬೇಕಾದದ್ದು ಆವಶ್ಯಕವೆಂದೆಣಿಸುತ್ತೇವೆ. ಪ್ರಜೆಗಳೆಲ್ಲರೂ ಅದ್ಯಾಪಿ ಮೌಢ್ಯದಶೆಯಲ್ಲೇ ಇರುವದರಿಂದ ಅವರಿಗೆ ಇನ್ನೂ ಯುಕ್ತಾಯುಕ್ತ ವಿವೇಚನೆ ಮಾಡುವಷ್ಟು ಶಕ್ತಿ ಸಾಲದೆಂತಲೂ, ಆದುದರಿಂದ ಅವರನ್ನೊಡಂಬಡಿಸುವದಸಾಧ್ಯವೆಂತಲೂ ಹೇಳುವ ಪಕ್ಷಕ್ಕೆ ಪ್ರಸಕ್ತ ವಿಚಾರದೊಳು ಮುಖ್ಯಪ್ರವರ್ತಕರಾಗಿರುವವರು ಲೋಕಕ್ಕೆಲ್ಲ ಮಾರ್ಗದರ್ಶಕರಾಗಲಾರರು. ಸಾಮಾನ್ಯ ಪ್ರಜಾಭಿಮತಕ್ಕೆ ಪರಿಮಿತ ಸಂಖ್ಯೆಯುಳ್ಳ ಸಜಾತೀಯ ವಿಜಾತೀಯರು ಕೆಲವರ ಅಭಿಪ್ರಾಯವು ಸಹಕಾರಿಯಾಗಲಾರದು. ಸಾರ್ವಜನೀನವಾದ ಆವಶ್ಯಕತೆಯೂ ಪ್ರಾರ್ಥನೆಯೂ ಇಲ್ಲದೇನೆ ಇಂತಾ ವಿಷಯಗಳಲ್ಲಿ ಕೆಲವರ ಪ್ರೇರಣೆಯ ಮೇಲೆ ಪ್ರವೇಶಿಸಿ ಒಂದು ಏರ್ಪಾಡಂ ಮಾಡುವದು ಮತ್ತೊಂದುಬಗೆ ರಾಜಕೀಯವಾದ ಬಾಧಕಕ್ಕೆ ಕಾರಣವಾಗುವದೆಂಬದನ್ನೂ, ಸಹಗಮನವನ್ನು ನಿಲ್ಲಿಸಿದ ಕಾಲದಲ್ಲಿದ್ದಂತೆ ಪ್ರಜೆಗಳ ಸ್ಥಿತಿಯು ಈಗ ಇಲ್ಲದೆ ಬಹಳ ಭಿನ್ನಿಸಿದೆ ಯೆಂಬದನ್ನೂ, ತಮ್ಮ ಸ್ಥಿತಿ ಸಹ ಪೂರ್ವಕ್ಕಿಂತ ಈಗ ಅನೇಕ ವಿಷಯಗಳಲ್ಲಿ ಭಿನ್ನಿಸಿದೆ ಯೆಂಬದನ್ನೂ, ಗವರ್ನಮೆಂಟಿನವರು ತಿಳಿಯದಿರಲಿಲ್ಲವು. ಆದುದರಿಂದ ಪರಪ್ರೇರಕವಾದ ಏವಮಾದಿ ಸಮಾಜಗಳಿಂದ ಕಾರ್ಯತಃ ಜನರಿಗೆ ಒಂದು ಪ್ರಯೋಜನವುಂಟಾಗುವದೆಂದು ಸಧ್ಯಃ ನಾವು ಭಾವಿಸಲಾರೆವಾಗಿ ಈ ವಿಷಯಗಳಲ್ಲಿ ಪ್ರಜೆಗಳ ವಿಚಾರಪ್ರವೃತ್ತಿಯನ್ನೇ ಪ್ರಾಧಾನ್ಯೇನ ಸಾಧ್ಯವಾದ ಮಟ್ಟಿಗೆ ಪಡೆಯಬೇಕಾದುದು ಆವಶ್ಯಕವಾಗಿರುತಿದೆ.

A WIDOW MARRIAGE.

ಮದರಾಸ್ ಹಿಂದೂ ಪತ್ರಿಕೆಯ ಎಡಿಟರಾದ ಮಿ|| ಸುಬ್ರಹ್ಮಣ್ಯಯ್ಯನವರ ಕುಮಾರಿಗೆ ಗತ ವರುಷದಲ್ಲಿ ಪತಿ ವಿಯೋಗವುಂಟಾದ ಅಂಶವು ಪ್ರಾಯೇಣ ಯೆಲ್ಲರ ಜ್ಞಾಪಕದೊಳಿರಬಹುದಷ್ಟೆ. ಸದರೀ ಬಾಲವಿತಂತುವಿಗೆ ಆ ಕಾಲದೊಳುಂಟಾದ ಪತಿ ವಿಯೋಗ ಜನ್ಯವಾದ ದುಃಖ ನಿವೃತ್ತಿಯ ಬಗ್ಯೆ ಆಕೆಯ ತಂದೆಯು ಕ್ಷಿಪ್ರದಲ್ಲಿ ಪ್ರಯತ್ನಪಟ್ಟು ಸದರೀ ನಷ್ಟವಂ ಬೇರೊಂದು ರೀತಿಯಾಗಿ ಹೋಗಲಾಡಿಸಿದರು. ಮಿ|| ಸುಬ್ರಹ್ಮಣ್ಯಯ್ಯನವರು ಕಾಂಗ್ರೆಸ್ ಸಭೆಗೆ ಮುಂಬೈಗೆ ಹೋದಾಗ ತಮ್ಮ ಮಗಳನ್ನೂ ರಾಮಸ್ವಾಮಯ್ಯರೆಂಬ ಅನಾಥನಾದ ಸಜಾತೀಯ ಬಾಲಕನೊಬ್ಬನನ್ನೂ ತಮ್ಮ ಸಂಗಡಕರೆದುಕೊಂಡು ಹೋಗಿ ಕಳೆದ ತಿಂಗಳ ೩೧ನೇ ತಾರೀಖಿನಲ್ಲಿ ಮುಂಬೈ ಪುನರ್ವಿವಾಹ ಶೋಧದಲ್ಲಿ ಅವರಿಬ್ಬರಿಗೂ ವಿವಾಹ ಜರಿಗಿಸಿದರು. ಸದರೀ ವಿವಾಹಕಾಲದಲ್ಲಿ ಅನೇಕ ಜನ ದೊಡ್ಡ ಮನುಷ್ಯರೂ ಹೆಂಗಸರೂ ಬಂದಿದ್ದರು. ಇವಲ್ಲದೆ ಆ ಕಾಲದಲ್ಲಿ ಜಸ್ಟಿಸ್ ತೆಲಾಂಗರವರೂ, ದಿವಾನ್ ಬಹದೂರ್ ಮಿ|| ರಘುನಾಥರಾಯರವರೂ: ಮಿ|| ಬ್ರಾಡ್ಲಾ, ಮಿ|| ವೆಡರ್ಬರ್ನ್ ಮೊದಲಾದ ಯೂರೋಪಿಯನ್ ದೊಡ್ಡ ಮನುಷ್ಯರೂ ಹಾಜರಿದ್ದರು. ಕೇವಲ ಬಾಲ್ಯ ದೆಶೆಯೊಳರುವ ದ್ವಿತೀಯ ಪರಿಣೀತಳ ವಿಷಯದೊಳೆಲ್ಲರೂ ಅನುತಾಪಗೊಂಡು ಪ್ರಕೃತ ಪ್ರಯತ್ನವಂ ಬಹಳವಾಗಿ ಅನುಮೋದಿಸಿ ಕೊಂಡಾಡಿದರೆಂಬದಾಗಿ ಟೈಂಸ್ ಪತ್ರಿಕೆ ತಿಳಿಸುತಿದೆ. ಈ ವಿವಾಹಕ್ಕೆ ಮಿ|| ಸುಬ್ರಹ್ಮಣ್ಯಯ್ಯನವರು ಪ್ರೇರಕರಾಗಿದ್ದರೂ, ಅವರ ಭಾರ್ಯೆಯೂ ಬಂಧುಗಳೂ ಪ್ರತ್ಯರ್ಥಿಗಳಾಗಿದಾರೆಂದು ಕೇಳುತ್ತೇವೆ. ವರನು ಪಿತೃಹೀನನಾಗಿದ್ದರೂ, ತಾನು ಮಾತಲಿತ್ತಿಸಿದಕಾರ್ಯದಕ್ಕೃತ್ಯಾಕೃತ್ಯವಿವೇಚನಮಾಡುವಷ್ಟು ಶಕ್ತನಾಗಿಲ್ಲದ್ದರಿಂದ ಆತನ ದೂರಬಂಧುಗಳ ವಿರೋಧವು ಕಾರ್ಯಕಾರಿಯಾಗದೆ ಹೋಯಿತು. ಮುಖ್ಯವಾಗಿ ಏತದ್ವಿವಾಹಪ್ರಯುಕ್ತವಾದ ಸಂತೋಷವನ್ನು ಮಿ|| ಅಯ್ಯರವರೂ, ಅವರ ಕುಟುಂಬವೂ ಯಾವರೀತಿಯಾಗಿ ಅನುಭವಿಸುವರೋ ಅದು ಅವರು ಮದರಾಸಿಗೆ ಬಂದಬಳಿಕ ವ್ಯಕ್ತವಾಗುವದು.

Occasional Notes
ನೈಮಿತ್ತಿಕ ವಿಷಯನ್ಯಾಸ.

Erection of barracks —ಪತಿಯಾಲಾ ಮಹಾರಾಜರವರು ಈಚೆಗೆ ಹೊಸದಾಗಿ ಜಮಾಯಿಸಿ ಯೇರ್ಪಡಿಸುತಲಿರುವ ಸೇನೆಯ ವಾಸದ ಬಗ್ಯೆ ಬ್ಯಾರಕ್ಸ್ ಕಟ್ಟುವದಕ್ಕಾಗಿ ಏಳು ಲಕ್ಷ ರೂಪಾಯಿಗಳು ಕೊಟ್ಟಿರುತ್ತಾರೆ.

Arrival of dogs.—ಈಚೆಗೆ ಹೈದರಾಬಾದ್ ನಿಜಾಮರವರಿಗಾಗಿ ಇಂಗ್ಲಾಂಡ್ ದೇಶದಿಂದ ಕೆಲವು ನಾಯಿಗಳು ಬಂದಂತೆ ಹರ್ಕಾರ ಪತ್ರಿಕೆಯಿಂದ ತಿಳಿಯುತ್ತಿದೆ. ಈ ಕಾಲದಲ್ಲಿ ನೇಟೀವ್ ಸಂಸ್ಥಾನಾಧಿಪತಿಗಳ ಆವಳಿಕದಲ್ಲಿ ವಿಲಾಯತಿ ನಾಯಿಗಳು ರಾಜ್ಯಕಾರ್ಯಕ್ಕೆ ಮುಖ್ಯಾಂಗವಾಗಿ ಭಾವಿಸಲ್ಪಟ್ಟಿರುವದರಿಂದ ಅವು ಕೇವಲ ಆವಶ್ಯಕವಾದವು!

Suppression of Newspapers.—ಈಚೆ ಗೆಶ್ರಿಟ ಎಂಬ ಪ್ರದೇಶದಲ್ಲಿ ಕ್ರೌರ್ಯನಡೆಸಲ್ಪಟ್ಟಂತೆ ಆಕ್ಷೇಪಿಸಿ ಕೆಲವು ಲಕರ್ ವೃತ್ತಾಂತ ಪತ್ರಿಕೆಗಳು ಪ್ರಕಟಿಸಿದ್ದದಕ್ಕಾಗಿ ತುರ್ಕೀ ಸುಲ್ತಾನರವರು ಅವುಗಳನ್ನೆಲ್ಲ ಅಡಗಿಸಿಬಿಡುವಂತೆ ಆಜ್ಞೆ ಮಾಡಿ ... ಕೇಳಿಕೊಂಡಿರುವಂತೆ ... ನ್ಯೂಸ್‌ಪತ್ರಿಕೆಯ ಕಾನ್ಸ್ಟಾಂಟಿನೋಪಿಲ್ ಪಟ್ಟಣದ ಬಾತಮೀದಾರನು ಬರೆಯುತ್ತಾನೆ.

Departure of Mr. C. Bradlaugh & others.—ಈ ಸಲದ ಕಾಂಗ್ರೆಸ್ ಸಭೆಯಂ ಉದ್ದೇಶಿಸಿ ಇಂಗ್ಲೆಂಡಿನಿಂದ ಮುಂಬೈಗೆ ಬಂದಿದ್ದ ಪಾರ್ಲಿಮೆಂಟ್ ಮೆಂಬರ್‌ಗಳಾದ ಮಿ॥ ಬ್ರಾಡ್ಲಾಯವರೂ, ಸರ್ ವಿಲ್ಲಿಯಂ ವೆಡರ್‌ಬರ್ನ್‌ಯವರೂ ಮಾಹೇ ಮುಜಕೂರ್ ೩ನೇ ತಾರೀಖ್ ಶನಿವಾರದ ದಿನ ಸಾಯಂಕಾಲ ಇಂಗ್ಲಾಂಡಿಗೆ ಪ್ರಯಾಣವಾದರು. ಸದರೀ ಇಬ್ಬರು ದೊಡ್ಡ ಮನುಷ್ಯರನ್ನು ಸಾಗಕಳುಹಿಸುವ ಬಗ್ಗೆ ಬಹು ಮಂದಿ ನೇಟಿವ್ ದೊಡ್ಡ ಮನುಷ್ಯರು ಹೋಗಿದ್ದು ಅವರು ಬಹಳ ಮರ್ಯಾದೆಯೊಡನೆ ಸತ್ಕರಿಸಿ ಕಳುಹಿಸಿದರು.

The National Congress.—ಈ ಸಲದ ಕಾಂಗ್ರೆಸ್ ಸಭೆಯಲ್ಲಿ ಅದರ ಹಿಂದಿನ ವರುಷಗಳ ಸಭೆಗಳಲ್ಲಿ ಮಾಡಲ್ಪಟ್ಟ ತೀರ್ಮಾನಗಳೇ ಮರಳಿ ವಿಚಾರದ್ವಾರ ನಿರ್ಧರಿಸಲ್ಪಟ್ಟವು. ಅಬಕಾರಿ, ಆರ್ಮ್ಸ್ ಆಕ್ಟ್, ಅನ್ಯದೇಶಗಳಿಗೆ ರಫ್ತಾಗುವ ಬೆಳ್ಳಿ ಪದಾರ್ಥಗಳ ಮೇಲಣ ತೀರ್ವೆ ಈ ವಿಷಯಗಳು ಪ್ರಾಧಾನ್ಯೇನ ವಿಚಾರ ಮಾಡಲ್ಪಟ್ಟವು. ಮಿಸ್ಟರ್ ಹ್ಯೂಂ ಯವರು ಮುಂದಿನ ಸಭೆಯ ಜನರಲ್ ಸೆಕ್ರೆಟರಿಯಾಗಿ ನೇಮಕರಾದರು. ಲೆಜಿಸ್ಲೇಟಿವ್ ಕೌನ್ಸಿಲಿನ ಪುನರ್ವ್ಯವಸ್ಥೆಯ ವಿಷಯದಲ್ಲಿ ಸಭೆಯವರು ಉದ್ದೇಶಿಸಿರುವ ಬದಲಾವಣೆಗಳನ್ನು ಇಂಗ್ಲಾಂಡಿನೊಳಗಿರುವ ಜನರಿಗೆ ತಿಳಿಸಿ ಅವರ ಮೂಲಕ ಬೇಕಾದ ಸಹಾಯವಂ ಪಡೆಯುವ ಬಗ್ಗೆ ಹಿಂದಿನ ಪ್ರಮುಖರಾದ ಯೂರೋಪಿಯನ್ ಮತ್ತು ನೇಟಿವ ದೊಡ್ಡ ಮನುಷ್ಯರು ಅಲ್ಲಿಗೆ ಹೋಗತಕ್ಕದ್ದೆಂದು ತೀರ್ಮಾನವಾಗಿ ಅವರ ದಾರಿಖರ್ಚಿನ ಬಗ್ಗೆ ಸದ್ಯಕ್ಕೆ ೪೫,೦೦೦ ರೂಪಾಯಿಗಳು ಚಂದಾ ಮಾಡಿದರು.

LOCAL AND PROVINCIAL NEWS.

ಸ್ವದೇಶ ಮತ್ತು ತಾಲ್ಲೂಕಿನ ವೃತ್ತಾಂತಗಳು

Reopening of offices.—ಕ್ರಿಸ್‌ಮಸ್ ಹಬ್ಬಕ್ಕಾಗಿ ಕೊಡಲ್ಪಟ್ಟಿದ್ದ ೧೩ ದಿನಗಳ ರಜಾ ಮೊನ್ನೆಯೊಡನೆ ಪೂರೈಸಿದ್ದರಿಂದ ಈ ಸಂಸ್ಥಾನಕ್ಕೆ ಸೇರಿದ ಸರ್ಕಾರಿ ಆಫೀಸುಗಳೆಲ್ಲವೂ ಈ ದಿನ ಮರಳಿ ತೆರೆಯಲ್ಪಟ್ಟವು.

Mr. Hanmajee Row.—ಮಿ॥ ಹೇಮಾಜೀರಾಯರವರು ಈ ತಿಂಗಳ ೧೪ನೇ ತಾರೀಖ್ ಮೊದಲು ಒಂದು ವರ್ಷ ಫರ್ಲೋ ರಜಾವನ್ನು ತೆಗೆದುಕೊಳ್ಳುವವರಾಗಿದ್ದಾರೆಂಬದಾಗಿ ಮೈಸೂರು ಹೆರಲ್ಡ್ ಪತ್ರಿಕೆ ತಿಳಿಸುತ್ತದೆ.

Departure.—ಕ್ರಿಸ್‌ಮಸ್ ಹಬ್ಬಕ್ಕಾಗಿ ಕೊಡಲ್ಪಟ್ಟ ರಜಾಮೇಲೆ ಪರಸ್ಥಳಗಳಿಂದ ಈ ಊರಿಗೆ ಬಂದಿದ್ದ ಮೈಸೂರು ಸೆರ್ನಿಸ ಜಡ್ಜ್‌ಗಳು, ಡೆಪ್ಯುಟಿ ಕಮಿಷನರ್, ಅಸಿಸ್ಟೆಂಟ್ ಕಮಿಷನರುಗಳು ವಗೈರೆಯವರೆಲ್ಲರೂ ತಮ್ಮ ತಮ್ಮ ಹೆಡ್‌ಕ್ವಾರ್ಟರುಗಳಿಗೆ ವಾಪಸ್ ಹೊರಟುಹೋದರು.

The weather.—ಈಗ್ಯೆ ಕಾಲಸ್ಥಿತಿಯು ಬಹಳ ಅನುಕೂಲವಾಗಿಯೂ ಮನೋಹರವಾಗಿಯೂ ಇದೆ. ಪರಂತು ಮಂಜು ಛಳಿಯೂ ಅಧಿಕವಾಗಿದೆ. ರೋಗಾದ್ಯುಪದ್ರವಗಳೇನೂ ವಿಶೇಷವಾಗಿಲ್ಲವು. ದಾರಣೆವಾಸಿ ಸ್ವಲ್ಪಮಟ್ಟಿಗೆ ಇಳಿದಿದೆ. ಪಶುಗಳಿಗೆ ಆರೋಗ್ಯವೂ ಪದಸ್ಥಳಗಳಿಗೆ ಧಾನ್ಯ ರಫ್ತಾಗುತಲಿದ್ದದ್ದು ಈಗ ಸ್ವಲ್ಪಮಟ್ಟಿಗೆ ಕಡಮೆಯೆಂದು ತೋರುತಿದೆ.

Railway Magistrate.—ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟರವರಾದ ಮಿಸ್ಟರ್ ಸ್ಪಾರ್ಕ್ಸ್‌ಯವರು, ರೈಲ್ವೇ ಮ್ಯಾಜಿಸ್ಟ್ರೇಟರಾಗಿಯೂ ಕರಾರ್ಮಾತಲ್ಪಟ್ಟವರಿಂದ ಅವರ ಕೆಲಸಕ್ಕೆ ಅಸಿಸ್ಟೆಂಟ್ ಕಮಿಷನರ್ ಮಿ॥ ಎಚ್. ಬಿ. ಕ್ಯಾರ್ಕ್‌ಯವರು ನಿಯಮಿಸಲ್ಪಟ್ಟಂತೆ ತಿಳಿಯಲಾದೆವು. ಮ್ಯಾಜಿಸ್ಟ್ರೇಟ್ ಕೆಲಸಗಳಾಟವಿಯ ತಪ್ಪದೆ, ಮಿ॥ ಕ್ಯಾರ್ಕ್‌ಯವರು ಜೈಲ್ ಸೂಪರಿಂಟೆಂಡೆಂಟ್ ಕೆಲಸವನ್ನು ಕೋರಿರುವಂತೆ ಕಾಣುತಿದೆ.

Reintroduction of octroi duties.—ಈಗ್ಯೆ ಕೆಲವು ಕಾಲದ ಮೊದಲು ಮೌಕೂಫ್ ಮಾಡಲ್ಪಟ್ಟಿದ್ದ ಆಕ್ಟ್ರಾಯಿ ತೆರಿಗೆಯನ್ನು ಇಲ್ಲಿನ ಸಿವಿಲ್ ಮಿಲಿಟರಿ ಸ್ಟೇಷನ್ನಲ್ಲಿ ಮರಳಿ ಜಾರಿಯೊಳು ತರಬೇಕೆಂಬ ಅಭಿಪ್ರಾಯವು ಇಲ್ಲಿನ ಮ್ಯುನಿಸಿಪಲ್ ಕಮಿಟಿಯವರಿಗುಂಟಾಗಿರುವಂತೆ ತಿಳಿಯಬರುತಿದೆ. ಈ ಬಾಬಿನಲ್ಲಿ ಹುಟ್ಟುವಳಿಯಾಗುತಲಿದ್ದ ೪೪೦೦೦ ರೂಪಾಯಿಗಳ ನಷ್ಟವು ಬೇರೇ ರೀತಿಯಿಂದ ಭರ್ತಿ ಮಾಡಲ್ಪಟ್ಟಾಗ್ಯೂ ಇನ್ನೂ ೧೪,೦೦೦ ರೂಪಾಯಿಗಳು ಮ್ಯುನಿಸಿಪಾಲಿಟಿಗೆ ಲುಕ್ಸಾನುಂಟಾಗಿರುವದರಿಂದ ಅದಂ ಯಾವರೀತಿಯಿಂದ ಭರ್ತೀ ಮಾಡಬಹುದೆಂಬ ಜಿಜ್ಞಾಸೆ ಯುಂಟಾಗಿದೆಯಂತೆ.

Railway projects in Mysore.—ಈದೇಶದಲ್ಲಿ ರೈಲ್ವೇ ರಸ್ತೆಯಂ ಒತಾಯಿಸುವ ವಿಷಯವು ಗವರ್ನಮೆಂಟಿನವರ ಆಲೋಚನೆಯೊಳು ಬಹಳವಾಗಿರುವುದೆಯ ೩, ಕಡೂರಿನಿಂದ ಚಿಕ್ಕಮಗಳೂರಿಗೂ, ಬೀರೂರಿಂದ ಶಿವಮೊಗ್ಗೆಗೂ, ಅರಸೀಕೆರೆಯಿಂದ ಹಾಸನಕ್ಕೂ, ಹೆಗ್ಗಳೂರಿಂದ ಹಿಂದೂಪುರಕ್ಕೂ, ಮೈಸೂರಿಂದ ನಂಜನಗೂಡುಮಾರ್ಗವಾಗಿ ಗುಂಡ್ಲುಪೇಟೆಗೂ ರೆಯಿಲ್ ರಸ್ತೆಗಳನ್ನು ಹಾಕುವ ಉದ್ದೇಶದೊಳಿರುವದಾಗಿಯೂ, ಪರಂತು ಯಾವ ರಸ್ತೆಯು ಯಾವಾಗ ಉಪಕ್ರಮಿಸಲ್ಪಡುವವೋ ಅವನ್ನೀಗ ತಿಳಿಸುವದಕ್ಕಾಗುವದಿಲ್ಲವೆಂತಲೂ, ಪರಂತು ಈ ಕಾಮಗಾರಿಗಳೆಲ್ಲವು ಸಂಸ್ಥಾನದ ಹುಟ್ಟುವಳಿಯನ್ನನುಸರಿಸಿದ್ದಾಗಿರುವವೆಂತಲೂ ದಿವಾನರವರು ಕಡೂರ್ ಜಿ॥ ಮ್ಯುನಿಸಿಪಲ್ ಕಮಿಷನರ್‌ಗಳ ವಿಜ್ಞಾಪನ ಪತ್ರಿಕೆಗೆ ಜವಾಬ್ ಕೊಟ್ಟರು.

The Dewan in the Kadur District.—ದಿವಾನರವರು ಕಡೂರು ಡಿಸ್ಟ್ರಿಕ್ಟಿನಲ್ಲಿ ಸಂಚರಿಸಿದ ಕಾಲದೊಳು, ಕಡೂರಿಗೆ ೩ ಮೈಲುಗಳ ಫಾಸಲೆಯಲ್ಲಿರುವ ಅಮೃತಮಹಲ್ ಕಾವಲಿಗೆ ಹೋಗಿ ಅಲ್ಲಿ ಅಮೃತಮಹಲ್ ಇಲಾಖಾ ಅಸಿಸ್ಟೆಂಟರಿಂದ ಜಮಾಯಿಸಲ್ಪಟ್ಟಿದ್ದ ೩೬೦೦ ಕಾಲ್ನಡೆಗಳು, ೩೦ ರ ಪ್ರಕಾರ ೬ ಮಂದೆಗಳ ಸಾಲಿನೊಳಿಸಿ ನಿಲ್ಲಿಸಲ್ಪಟ್ಟಿದ್ದವಂ ನೋಡಿ, ಅವುಗಳ ಸ್ಥಿತಿಯಂ ಕಂಡು ಬಹಳ ಸಂತೋಷಿಸಿ ಮಿಸ್ಟರ್ ಗೋಪಾಲಯ್ಯಂಗಾರ್ಯವರನ್ನು ಬಹಳ ಕೊಂಡಾಡಿ ಕಾವಲಿಗಾರರನ್ನೆಲ್ಲ ಪ್ರೋತ್ಸಾಹಪಡಿಸಿ ತಾವು ಬೆಂಗಳೂರಿಗೆ ವಾಪಸ್ ಹೋದ ಬಳಿಕ ಇನಾಂಗಳು ಕಳುಹಿಸಿಕೊಡುವಂತೆ ವಾಗ್ದಾನ ಮಾಡಿದರೆಂಬದಾಗಿ ಒಬ್ಬ ಬಾತಮೀದಾರನು ಬೆಂಗಳೂರು ಸ್ಪೆಕ್ಟೇಟರ್ ಪತ್ರಿಕೆಗೆ ಬರೆದಿರುತ್ತಾನೆ.

NEWS LETTER

ವೃತ್ತಾಂತಪತ್ರಿ.

ರೆಸಿಡೆಂಟರವರ ಆಗಮನ.

ಶೃಂಗೇರಿ, ತಾ॥ ೨೪–೧೨–೮೯.—ಮೈಸೂರು ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಸರ್ ಆಲಿವರ್ ಸೇಂಟ್ ಜಾನ್‌ಯವರು ಈ ಸಂಸ್ಥಾನಕ್ಕೆ ಸೇರಿದ ಪ್ರಸಿದ್ಧಗಳಾದ ಪ್ರದೇಶಗಳನ್ನು ಕಟಾಕ್ಷಿಸುವ ಕುತೂಹಲದೊಡನೆ ಸಂಚಾರ ಹೊರಟು ಮುಂಚೆ ಪ್ರೋಗ್ರಾಂ ವ್ಯವಸ್ಥೆಯಾಗಿದ್ದ ಪ್ರಕಾರ ಮಾಹೇ ಮುಜಕೂರ್ ೨೦ನೇ ತಾರೀಖ್‌ನಲ್ಲಿ ಕೊಪ್ಪದ ಮೊಕ್ಕಾಮಿಗೆ ದಯಮಾಡಿದರು. ಆ ಕಾಲದಲ್ಲಿ ಅಲ್ಲಿಗೆ ಸಮೀಪವಾಗಿರುವ ಈ ಶೃಂಗೇರೀ ಸಂಸ್ಥಾನಾಧಿಪತಿಗಳಾದ ಶ್ರೀ ಜಗದ್ಗುರು ಸಚ್ಚಿದಾನಂದ ಶಿವಾಭಿನವ ಶ್ರೀ ನೃಸಿಂಹಭಾರತೀಸ್ವಾಮಿಗಳವರು ತಮ್ಮ ಕಡೆ ಏಜೆಂಟರಾದ ಬ್ರಹ್ಮಶ್ರೀ ಸುಬ್ರಹ್ಮಣ್ಯ ಶಾಸ್ತ್ರಿಗಳನ್ನೂ ಅಮಲ್ದಾರ್ ವಗೈರೆ ಸಂಸ್ಥಾನದ ಅಧಿಕಾರಿಗಳನ್ನೂ ಸಕಲ ಉಚಿತವಣೆಗಳೊಡನೆ ಕೊಪ್ಪಕ್ಕೆ ಕಳುಹಿಸಿ ರೆಸಿಡೆಂಟರವರನ್ನು ಶೃಂಗೇರಿಗೆ ದಯಮಾಡುವಂತೆ ತಾವು ಕೋರುವವಾಗಿ ತಿಳಿಯಪಡಿಸಿದರು. ರೆಸಿಡೆಂಟರವರು, ಶೃಂಗೇರಿಯಲ್ಲಿ ಮೊಕ್ಕಾಂ ಮಾಡುವ ನಿರೀಕ್ಷಣೆ ಇಲ್ಲದೆ ನವರಿಂದ ... ತಮ್ಮ ಪ್ರೋಗ್ರಾಮಿನಲ್ಲಿ ನಮೂದಿಸಿ ... ದ್ದರಿಂದ ಅವಕಾಶವಿಲ್ಲವಾದಾಗ್ಯೂ ಶ್ರೀ ಸ್ವಾಮಿಗಳವರ ಅಭಿಪ್ರಾಯವನ್ನು ನಿರಾಕರಿಸಲಿಚ್ಛೆ ಇಷ್ಟವಿಲ್ಲದ ಮಾಹೇ ಮುಜಕೂರ್ ೨೪ನೇ ತಾರೀಖ್ ... ದಿನ ಶೃಂಗೇರಿಗೆ ಬಂದು ಶ್ರೀ ಸ್ವಾಮಿಗಳ ಸಂದರ್ಶನ ಮಾಡಿಕೊಳ್ಳುವಂತೆ ಒಪ್ಪಿಕೊಂಡರು. ಅದರ ಮೇಲೆ ... ರೆಸಿಡೆಂಟರವರ ... ಅಮಲ್ದಾರರ ... ರೆಸಿಡೆಂಟರನ್ನು ಬರಮಾಡಿಕೊಳ್ಳುವದಕ್ಕೆ ಬೇಕಾದ ಏರ್ಪಾಟುಗಳನ್ನೆಲ್ಲ ಸಂಸ್ಥಾನದ ಗೌರವಾನುಗುಣವಾಗಿ ಶೃಂಗೇರಿಯಲ್ಲಿ ತಯಾರಿಸಿದ್ದರು. ೨೪ನೇ ತಾರೀಖು ದಿನ ರೆಸಿಡೆಂಟರವರನ್ನು ಬ್ರಹ್ಮಶ್ರೀ ಸುಬ್ರಹ್ಮಣ್ಯ ಶಾಸ್ತ್ರಿಗಳು, ಪಾರುಪತ್ಯಗಾರ ಸುಬ್ರಹ್ಮಣ್ಯ ಜೋಯಿಸರು, ಸಂಸ್ಥಾನದ ... ರು, ಮ್ಯುನಿಸಿಪಲ್ ಮೆಂಬರ್ ಸಾಹುಕಾರ ... ಮ ರಾ॥ ... ಪುಟ್ಟಯ್ಯನವರು, ... ತಿಂಗಳ ... ರವರು, ... ಶಾನುಭೋಗರು ... ಎಲ್ಲರೂ ... ಕೂಡಿ ... ಯಾಗಿ ... ಬರಮಾಡಿಕೊಂಡರು. ... ಫಿಲ್ ... ಅಸಿಸ್ಟೆಂಟ್ ಕಮಿಷನರ್ ಮತ್ತು ... ಸನ ... ಪುಷ್ಪಹಾರಗಳನ್ನು ... ಅರ್ಪಿಸಿ ... ಸಿದರು. ... ಭೋಜನಾನಂತರ ರೆಸಿಡೆಂಟರವರನ್ನು ಶ್ರೀ ಮಠಕ್ಕೆ ಬರಮಾಡಿಕೊಳ್ಳುವದಕ್ಕಾಗಿ ... ವಗೈರೆಯವರನ್ನು ಶ್ರೀ ಸ್ವಾಮಿಗಳು ಡೆಪ್ಯುಟೇಷನ್ ಕಳುಹಿಸಿದರು. ಗ್ರಾಮನಿವಾಸಿಗಳು ಕದಳೀಸ್ತಂಭ ತೋರಣಾದಿಗಳ ದಿಂದಲಂಕರಿಸಿದ್ದ ರಾಜಮಾರ್ಗದಲ್ಲಿ ರೆಸಿಡೆಂಟರು ಶ್ರೀ ಮಠಕ್ಕೆ ದಯಮಾಡಿದ ಕೂಡಲೆ ... ಶ್ರೀ ಸ್ವಾಮಿಗಳು ಅವರು ಬರಮಾಡಿಕೊಂಡರು. ಆ ಕಾಲದಲ್ಲಿ ಶ್ರೀ ಸ್ವಾಮಿಗಳವರು ಸಂಸ್ಥಾನದ ಪದ್ಧತಿಯನ್ನನುಸರಿಸಿ ಸಿಂಹಾಸನಾರೂಢರಾಗಿ ... ಶ್ರೀ ಸ್ವಾಮಿಗಳವರು ... ಆಜ್ಞಾಪಿಸಿದರೆ ನುಡಿದ—ಶ್ರೀಮನ್ಮಹಾರಾಣಿಯವರ ಇಂಡ್ಯಾ ಚಕ್ರವರ್ತಿನಿಯವರು ತಮ್ಮ ಸಮಸ್ತ ಪ್ರಜೆಗಳಲ್ಲಿ ... ನಿರತವಾದ ... ವಿವರ ... ಆಳಿಯುವದ ಸೌಜನ್ಯ ಸೌಶೀಲ್ಯಾದಿ ಗುಣಗಳಿಗೆ ನಿದರ್ಶನವಾಗಿರುತಿದೆ. ಇಂತಾ ಗುಣಪೂರ್ಣರ ಶ್ರೇಯಸ್ಸನ್ನು ... ಕೋರುತಲಿರುವೆವು. ಈ ಸಂಸ್ಥಾನದವರಿಗೆ ... ಸಿಂಹಾಸನದ ಪ್ರತಿಷ್ಠೆ ... ಬಹುಕಾಲದಿಂದಲೂ ಬಂದಿರುತ್ತದೆ. ಇಂತಾ ... ನವರ ಪ್ರಕೃಷ್ಟ ... ಸಂಸ್ಥಾನಕ್ಕೆ ಮಧ್ಯೆ ಕಾರಣಾಂತರಗಳಿಂದುಂಟಾದ ಮತಪಿಚ್ಛಿತ್ತಿಯಂ ಪರಿಹರಿಸಿ ಶ್ರೀಮನ್ಮಹಾರಾಜರವರು ... ಪುನಃ ಅದು ... ದ್ಧಾರ ಮಾಡಿ ಅಭಿಮಾನಿಸಿರುವದು ನಮಗೆ ಮತ್ತೂ ಸಂತೋಷಕಾರಿಯಾಗಿರುವದರಿಂದ ಅವರ ಶ್ರೇಯಃಪ್ರಾರ್ಥನೆಯು ಅವಶ್ಯಕರಣೀಯವೆಂದು ಭಾವಿಸಿರುವೆವು. ಮಹಾರಾಜ್ಞೀಯವರು ದೂರದೇಶದಲ್ಲಿರುವದರಿಂದ ನಮ್ಮ ಅಭಿಮಾನ ಪುರಸ್ಸರವಾದ ಶ್ರೇಯಃಪ್ರಾರ್ಥನೆಯು ಪ್ರತ್ಯಕ್ಷತಃ ತಿಳಿಸಲಿಕ್ಕೆ ಅನುಕೂಲಿಸದಿದ್ದರೂ ಅವರ ಪ್ರತಿನಿಧಿಗಳಾದ ತಮ್ಮ ಆಗಮನವು ನಮಗೆ ಅಮಿತಾನಂದವನ್ನುಂಟುಮಾಡಿತು, ಎಂಬದು. ಆಗ ರೆಸಿಡೆಂಟರವರು ಶ್ರೀ ಸ್ವಾಮಿಗಳವರ ಸೂಕ್ತಿಗಳನ್ನಾಲೈಸಿ ನಾನು ಈ ಸಂಸ್ಥಾನದೊಳು ಸಂಚರಿಸಿದ ಕಾಲದಲ್ಲಿ ಪ್ರಜೆಗಳೆಲ್ಲರೂ ಬಹಳ ಸಂತುಷ್ಟರಾಗಿ ಸುಖಸಮಾಧಾನ ಸ್ಥಿತಿಯಲ್ಲಿರುವದು ನೋಡಿ ಸಂತೋಷಿಸುತ್ತೇನೆ. ಇದಕ್ಕೆ ಕಾರಣವೇನೆಂದರೆ, ಪ್ರಜೆಗಳೆಲ್ಲರೂ ಮಹಾರಾಜ್ಞೀಯವರ ವಿಷಯದಲ್ಲಿ ತುಂಬಾ ಪ್ರೀತಿಗೌರವಗಳುಳ್ಳವರಾಗಿರುವರೇ ಎಂದು ಭಾವಿಸುತ್ತೇನೆ, ಮತ್ತು ತಮ್ಮಂತಾ ತಪಸ್ವಿಗಳು ಜನರ ಯೋಗಕ್ಷೇಮಾಭಿವೃದ್ಧಿಯಲ್ಲಿಯೇ ಆಸಕ್ತರಾಗಿ ... ಎರಡನೆಯ ಕಾರಣವೆಂದೆಣಿಸುತ್ತೇನೆ. ಈ ಶೃಂಗೇರೀ ವಿಷಯವನ್ನು ಕುರಿತು ನಾನು ಇದುವರಿವಿಗೆ ಬಹಳವಾಗಿ ಕೇಳುತ್ತಿದ್ದೆ. ಈಗ ಪ್ರತ್ಯಕ್ಷತಃ ತಮ್ಮ ಸಂದರ್ಶನಭಾಗ್ಯ ಲಭಿಸಿದ್ದು ನನಗೆ ವಿಶೇಷ ಆನಂದಸಂದಾಯಕವಾಯಿತು. ನಾನು ಮತ್ತೊಂದಾವರ್ತಿ ಈ ಪ್ರಾಂತ ಬಂದ ಸಮಯದಲ್ಲಿ ಮರಳಿ ತಮ್ಮ ದರ್ಶನ ಮಾಡಿ ... ತ್ತೇನೆಂದರು. ತರುವಾಯ ... ಸಂಪ್ರದಾಯ ... ಮತ್ತು ... ಕಗಳೊಪ್ಪಿಸಲ್ಪಟ್ಟವು. ... ಸ್ವೀಕರಿಸಿ ೧೨ ಘಂಟೆಗೆ ಸರಿಯಾಗಿ ಸಾಳಿಗ್ರಾಮದ ಮುಕಾಮಿಗೆ ದಯಮಾಡಿದರು.

SUMMARY OF NEWS

ವೃತ್ತಾಂತಸಾರಾಂಶವು

ಪ್ಯಾರಿಸ್ ಪಟ್ಟಣದಲ್ಲಿ ಮಹಮ್ಮದೀಯರಿಗೆಲ್ಲ ಗುರುವಾದ ... ತನ್ನ ಮತವನ್ನು ಪ್ರಜೆಗಳು ಅವಲಂಬಿಸಬೇಕೆಂದು ಮಹಾಧರ್ಮ ಯುದ್ಧಗಳನ್ನು ಸಾಧಿಸುವ ಒಂದು ಸಂಘವನ್ನು ... ಯಾರಂಭಿಸಿರುತ್ತಾನೆ. ಕ್ರಿಸ್ತರು ತಮ್ಮ ಮತದ ಗುಟ್ಟನ್ನು ... ಸ್ವಯಂ ಹೊರಗೆ ಹಾಕಿ ಬಳ್ಳಿ ತಮ್ಮ ಮತವನ್ನು ... ಎಂದು ಪ್ರಸಿದ್ಧ ... ಜನರು ತಮ್ಮ ಮತದ ನಾಶವನ್ನು ... ಅದೇರೀತಿಯಾಗಿ ತಮ್ಮ ಮತದ ಗೌರವವು ಹೋಗುತದೆಂದು ಹೆದರುತ್ತಾರೆ. ಇದು ಆಶ್ಚರ್ಯವೇನು? ಆದರೆ ಈ ಹಿಂದೂ ಮತವನ್ನು ... ರೂ ... ಹೀಗೆ ... ಅವರ ನಿಜಸ್ಥಿತಿಯು ಮನಸ್ಸಿಗೆ ... ಚಿಂತಿಸುವರು.—ಜ್ಞಾ.

ಗಂಗಾಪುರವೆಂಬ ಗ್ರಾಮದಲ್ಲಿ ಒಬ್ಬ ಒಕ್ಕಲಿಗನ ರಾತ್ರಿ ಮನೆಯಲ್ಲಿ ಮಲಗಿರುವಾಗ ತನ್ನ ... ಸರಸರ ಎಂದು ಶಬ್ದವಾಯಿತು. ಅವನು ಅದಕ್ಕೆ ಅನುಮಾನ ಹುಟ್ಟಿ ದೀಪ ಹಚ್ಚಿ ನೋಡಲು ಒಂದು ನಾಗರಹಾವು ಸುತ್ತು ಕಟ್ಟಿಕೊಂಡು ಮಲಗಿತ್ತು. ಒಡನೆ ಅವನಿಗೆ ಭಯವುಂಟಾಗಿ ಅದಕ್ಕೆ ... ಹಾಕಿ ಅಡ್ಡಬಿದ್ದು ಪ್ರಾರ್ಥನೆ ಮಾಡಿಕೊಂಡನು. ಅದು ಯಾವ ಹಾಯಿಯನ್ನೂ ಮಾಡದೆ ಹೊರಟುಹೋಯಿತು. ಆಮೇಲೆ ಅವನು ಮಲಗಿಕೊಂಡನು. ಮಾರನೇದಿನ ಯಥಾಪ್ರಕಾರ ಹಾವು ಬರಲು ಅದಕ್ಕೆ ಭಕ್ತಿಯಿಂದ ಒಂದು ಬಟ್ಟಲು ಹಾಲನ್ನು ಇಟ್ಟನು, ಅದು ಕುಡಿದುಬಿಟ್ಟು ಹೋಯಿತು. ಹೀಗೆ ಪ್ರತಿದಿನವೂ ಬರುತ್ತಿದ್ದವರಿಂದ ಅವನಿಗೂ ಅದಕ್ಕೂ ಸ್ನೇಹಭಾವ ಬೆಳೆಯಿತು. ಹೀಗಿರುವಾಗ ಒಂದಾನೊಂದು ದಿನ ಈ ಒಕ್ಕಲಿಗನು ಮನೆಯಲ್ಲಿ ಇಲ್ಲದಾಗ ಕೆಲವರು ಕಳ್ಳರು ಬಂದು ಮನೆಯನ್ನು ಪ್ರವೇಶಿಸಲು ಆ ಹಾವು ಅವರನ್ನೆಲ್ಲ ಕಚ್ಚಿಬಿಟ್ಟಿತು.

Bangalore.—Printed and published at the KARNATIC PRESS, No. 109, SRINIVASA MANDIR ROAD PETTAH.—1890

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಶ್ರೀಮದ್ವಿವಿಧಸ್ವತ್ಯುಗಮಾರ್ಗಕರ್ಣಾಟಕಪ್ರಕಾಶನವರಾಭಿಧಾಪ್ರಥಿತಸಾಹಿತೀಶೋಭಿತಾ॥ವ್ಯಗ್ರಾಂಶಹಿತವಾಸರೆನಿಹಿತಮುದ್ರಣಾಸಜ್ಜನೈರ್ದ್ವಿಕಾನುಪರಿಪೂರಿತಾದಿಶಕಿನಾನಸುಸುಂದರಂ॥

Vol. XVII.] BANGALORE:—MONDAY, JANUARY 13, 1890. [No. 1.

ಸಂಪುಟ ೧೭.] ಬೆಂಗಳೂರು:—ಸನ್ ೧೮೯೦ನೇ ಇಸವಿ ಜನವರಿ ೧೩ ನೇ ತಾರೀಖು ಸೋಮವಾರ. [ಸಂಚಿಕೆ ೧.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಬಾಲ್ ಇಸ್ಕಿ	ಸ್ಥಳದವರಿಗೆ ಹಣವಿಲ್ಲದೆ.	ಪರಸ್ಥಳದವರಿಗೆ ಹಾಸಲ್‌ಸೇರಿ.
ಮುಂಗಡಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ ದಸೂರುಪ್ರ ಮಾಡಿದ ತಾರೀಖು ಮೊದಲು ಒಂದು ತಿಂಗಳೊಳಗಾಗಿ ಚಂದಾ ಹಣವನ್ನು ಕಳುಹಿಸುವಂಥವರಿಗೆ ಮಾತ್ರವೆ ಅಡ್ವಾನ್ಸ್ ದರದಂತೆ ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಮೂರು ತಿಂಗಳಿಗಿಂತ ಕಡಮೆ ಕಾಲ ಚಂದಾ ಹಣವು ಅಂಗೀಕರಿಸಲ್ಪಡುವದಿಲ್ಲ.

ನೋಟುಗಳು ರವಾನಿಸತಕ್ಕವರು ನೋಟು ಕಳುಹಿಸಿದ ಅರ್ಧಭಾಗವು ತಲುಪಿದಬಳಿಕ ನಮ್ಮ ಕಾಗದವು ಬರದ ಹೊರತು ಬಾಕಿ ಅರ್ಧ ನೋಟನ್ನು ರವಾನಿಸತಕ್ಕದ್ದು. ಊರಿಬಿಲ್ಲುಗಳು ಕಳುಹಿಸತಕ್ಕವರು ಊರೊಳಗೆ ಒಡನೆಯೆ ಹಣ ಸಿಗುವಂತೆ ಡಿಸ್‌ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅನ್ಯಥಾ ಡಿಸ್‌ಕೌಂಟ್ ಕೊಡಬೇಕಾಗುವದು. ಡಿಸ್‌ಕೌಂಟಿಲ್ಲದೆ ಸಿಗುವ ಹಣವು ಅದು ಮನಿ ಆರ್ಡರ್ ಮೂಲಕ ಕಳುಹಿಸಲ್ಪಡುವದು [illegible]

ಪ್ರಕಟನೆಯ ರಿವಾಜ್.

ಮೊದಲನೆಸಾರಿಗೆ ಪಂಕ್ತಿ ಒಂದಕ್ಕೆ ೦—೨—೦

ಎರಡನೆಸಾರಿಗೆ ಪಂಕ್ತಿ ಒಂದಕ್ಕೆ ೦—೧—೦

ಒಟ್ಟು—ಎರಡಾವರ್ತಿಗಿಂತ ಜಾಸ್ತಿಯಾಗಿ ಪ್ರಕಟಿಸತಕ್ಕ ನೋಟೀಸು ಮೊದಲಾದ್ದಕ್ಕೆ ಪಂಕ್ತಿ ಒಂದಕ್ಕೆ ಇಂತಿಷ್ಟೆಂಬ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಹಾಯಿ ಪ್ರಕಟಿಸುವುದಕ್ಕೆ ಪ್ರತ್ಯೇಕವಾಗಿ ಕರಾರು ಮಾಡಬೇಕು [illegible]. ಇಲ್ಲದಿದ್ದಲ್ಲಿ ಅವರು ನಮಗೆ ತಿಳಿಸುವ ತನಕ ಅದು ಪ್ರಕಟಿಸಲ್ಪಡುವದು ಮತ್ತು ಹಾಗೆ ಪ್ರಕಟಿಸಲ್ಪಟ್ಟದ್ದಕ್ಕೆ ಮೇಲ್ಕಂಡ ದರದಂತೆ ಚಾರ್ಜು ವಸೂಲು ಮಾಡಲ್ಪಡುವದು. ಪ್ರಕಟನೆಗಳನ್ನು ಗುರುವಾರದ ಮಧ್ಯಾಹ್ನ ೨ ಗಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಗಳು ಈ ಪತ್ರಿಕೆ ಕಳುಹಿಸಲ್ಪಡುವ ಕಾಗದಗಳಲ್ಲಿ ತಿಳಿಸಲ್ಪಡುವ ಅಧಿಪ್ರಾಯಗಳಿಗೆ ನಾವು ಜವಾಬ್ದಾರರಾಗುವದಿಲ್ಲ. ಕಳುಹಿಸಲ್ಪಡುವ ಕಾಗದಗಳ ಯಾವ ಭಾಗವನ್ನಾದರೂ ಪ್ರಕಟಿಸುವದು [illegible] ಕಾಗದಗಳು ಹಿಂದಕ್ಕೆ ಕಳುಹಿಸಲ್ಪಡುವದಿಲ್ಲ.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs. 5 6 0

ವೈದ್ಯಸಾರ ಸಂಗ್ರಹ.

ಈ ಗ್ರಂಥವು ಬೇಕಾದವರು ಹಣವನ್ನು ಕಳುಹಿಸಿ ತರಿಸಿಕೊಳ್ಳಬಹುದು. ಕೆಳಗೆ ಬರೆದ ವಿಳಾಸಕ್ಕೆ ಕಳುಹಿಸತಕ್ಕದ್ದು. ಹಣವು ಮೊದಲು ಬರದ ಕಾಗದಗಳಿಗೆ ಸಿಗಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಜೊತೆಯಲ್ಲಿ ಪ್ರತಿ ಒಂದಕ್ಕೆ ರೂ 5—6—0

ಟಿ. ಬಿ. ವೆಂಕಟಾಚಾರ್,

ಬೆಂಗಳೂರ್. ಪ್ರತ್ಯಕ್ಷಕೊತ್ವಾಲ್ ಪೇಟೆ, 41ನೇ ನಂ. ಮನೆ.

ADVERTISEMENTS.

ನೋಟೀಸ್.

ಅದ್ಭುತವಾದ ಒಂದು ಔಷಧ

ಹೊಟ್ಟೆಯಲ್ಲಿ ವಾಯು ಸೇರಿಕೊಳ್ಳುವ ರೋಗ ಉಂಟಾದರೆ, ಪಿತ್ತದಿಂದ ತಲೆ ತಿರುಗುವಿಕೆ, ಕಣ್ಣುಗಳ ಕತ್ತಲೆ ಕವಿಯುವಿಕೆ, ಊಟ ಮಾಡಿದ ಮೇಲೆ ಹೊಟ್ಟೆ ಉಬ್ಬರಿಸಿ ಕೊಳ್ಳುವಿಕೆ, ತಲೆ ಗಿರ್ರನೆ ತಿರುಗುವಿಕೆ, ತೂಕಡಿಕೆ, ಚಳಿ, ಜ್ವರ ಮೊದಲಾದವುಗಳಿಂದ ಮುಖ ಕೆಂಪಾಗುವಿಕೆ, ಹಸಿವು ತಪ್ಪುವಿಕೆ, ಶ್ವಾಸ ಬದ್ಧ, ಮಲಬದ್ಧ, ದೌರ್ಬಲ್ಯದಿಂದ ಮುಖಬಿಳುಚಿಕೊಳ್ಳುವಿಕೆ, ಚರ್ಮದಮೇಲೆ ಗುಳ್ಳೆಗಳು ಏಳುವಿಕೆ, ನಿದ್ರಾಭಂಗ, ಭಯಂಕರವಾದ ಕನಸುಗಳು, ನಿಶ್ಶಕ್ತಿಯಿಂದ ನಡುಕ, ಇವು ವಿಶೇಷವಾದ ಪಿತ್ತ ಮತ್ತು ನರಸಂಬಂಧವಾದ ರೋಗಗಳಿಗೆಲ್ಲ ಬೀಚಾಂ ಎಂಬುವರು ಮಾಡಲ್ಪಟ್ಟಿರುವ ಗುಳಿಗೆಗಳ ದಬ್ಬಿ ಒಂದಕ್ಕೆ ಹನ್ನೊಂದರೆರಡಾಣೆಯ ಕ್ರಯ ಕೊಡಬಹುದು. ಈ ಔಷಧವು ಯಾವ ರೋಗಕ್ಕಾದರೂ ಉಪಯುಕ್ತವಾಗಿ ಅಂಗೀಕರಿಸಲ್ಪಟ್ಟಿದೆ. ಈ ಗುಳಿಗೆಯನ್ನು ಮೊದಲು ತೆಗೆದುಕೊಂಡ ೨೦ ನಿಮಿಷಗಳೊಳಗಾಗಿ ಗುಣಕಾಣುವದು. ಪ್ರತಿ ರೋಗಿಯೂ ಒಂದುದಬ್ಬಿ ಈ ಗುಳಿಗೆಗಳನ್ನು ತರಿಸಿ ಸೇವಿಸಿ ನೋಡಬೇಕೆಂದು ಕೋರುತ್ತೇವೆ. ಆಗ ಅದು ಒಂದು ಗಿನಿ ಅಂದರೆ ಹನ್ನೆರಡೂವರೆ ರೂಪಾಯಿಗಳ ಕ್ರಯ ಬಾಳುವದೆಂದು ಒಪ್ಪಿಕೊಳ್ಳುವರು.

ಎಲ್ಲಾ ಮನುಷ್ಯರ ದೇಹಗಳಿಗೂ ಈ ಗುಳಿಗೆಗಳು ಅಮೂಲ್ಯವಾದವು. ಕೆಲವು ಆವರ್ತಿ ಅವುಗಳನ್ನು ಸೇವನೆ ಮಾಡಿದರೆ ದೇಹದಲ್ಲಿರುವ ಕೆಟ್ಟ ಸ್ಥಿತಿಯೆಲ್ಲ ಹೋಗಿ ಸುಗುಣಗಳನ್ನುಂಟುಮಾಡುವದು. ಯಾವ ಮನೆಯಲ್ಲಾದರೂ ಈ ಗುಳಿಗೆಯನ್ನು ತನ್ನಲ್ಲಿಟ್ಟುಕೊಳ್ಳದಿರಬೇಕು. ದೇಹ ತತ್ವ ಕ್ರಮಕ್ಕೆ ಬಾಧಕವಾದ ಯಾವ ರೋಗಗಳಾಗಲಿ ಬೀಚಾಂ ಅವರ ಗುಳಿಗೆಗಳಿಗೆ ಸಮಾನವಾದ ಔಷಧ ಯಿಲ್ಲವೇ ಇಲ್ಲದು. ಈ ಔಷಧದ ಪ್ರತಿಯೊಂದು ದಬ್ಬಿಯ ಸಂಗಡ ಕಳುಹಿಸುವ ಕಾಗದದಲ್ಲಿ ತಿಳಿಸಲ್ಪಡುವ ಕ್ರಮವನ್ನನುಸರಿಸಿ ಅದನ್ನು ಸೇವನೆ ಮಾಡಿದರೆ ಎಲ್ಲಾ ಮನುಷ್ಯರ ದೇಹಗಳಿಗೂ ಸಂಪೂರ್ಣ ಆರೋಗ್ಯವೂ ಕಾಯಪುಷ್ಟಿಯೂ ಉಂಟಾಗುವವು. ಈ ಅಂಶ ಅದನ್ನು ಸೇವನೆಮಾಡಿ ಗುಣಹೊಂದಿದ ಸಾವಿರಾರು ಜನರಿಂದ ಅನುಭವ ಪೂರ್ವಕ ರುಜುವಾತಾಗಿ ಬಂದಿದೆ.

ಅನ್ನ ಕೋಶದ ದೌರ್ಬಲ್ಯ, ಜೀರ್ಣಶಕ್ತಿ ತಪ್ಪಿಹೋಗುವಿಕೆ, ಪಿತ್ತಕೋಶದಲ್ಲಿನ ವ್ಯಾಧಿಗಳು ಇವುಗಳಿಗೂ ಈ ಗುಳಿಗೆಗಳು ಅದ್ಭುತವಾದ ಔಷಧ. ಇದನ್ನು ಕೆಲವು ಆವರ್ತಿ ಸೇವನೆ ಮಾಡಿದರೆ ಮನುಷ್ಯನ ದೇಹದಲ್ಲಿನ ಅವಯವಗಳಿಗೆ ಶಕ್ತಿ ಉಂಟಾಗಿ ಅದ್ಭುತವಾದ ಕಾರ್ಯಗಳನ್ನು ಮಾಡುವಂತೆ ಕಾಯಪುಷ್ಟಿಯುಂಟಾಗುತ್ತದೆ. ಬಹುಕಾಲದ ರೋಗದಿಂದ ಕ್ಷೀಣರಾಗಿರುವ ನರಗಳು ಮತ್ತು ಸ್ನಾಯುಗಳು ಪುನಃ ಬಲವನ್ನು ಹೊಂದುವವು. ಬೀಚಾಂ ಅವರ ಗುಳಿಗೆಗಳು ಮನುಷ್ಯರಿಗೆ ಬೇಕಾದ ತ್ರಾಣವನ್ನುಂಟುಮಾಡುತ್ತವೆ.

ಇದು ವಾಸ್ತವ್ಯವಾದದ್ದು. ಇದನ್ನು ಎಲ್ಲರೂ ಒಪ್ಪಿಕೊಂಡಿರುತ್ತಾರೆ. ಮತ್ತು ಈ ಪ್ರಪಂಚದಲ್ಲಿ ಎಲ್ಲಾ ಔಷಧಗಳಿಗಿಂತಲೂ ಈ ಔಷಧ ಅಧಿಕವಾಗಿ ಖರ್ಚಾಗುವದರಿಂದಲೇ ನಿಸ್ಸಂದೇಹವಾಗಿ ಇದು ಸರ್ವೋತ್ತಮವಾದ ಔಷಧವೆಂದು ನಂಬುವದಕ್ಕೆ ಕಾರಣವುಂಟಾಗಿದೆ.

Sole Agents for India.

NAYLOR, SON, GRIMES, & CO.,

Wholesale Depot, 35, Clive Street, Calcutta.

ನೋಟಿಸ್—ಔಷಧ ಬೇಕೆಂದು ಬರೆಯುವವರು ನೆ. ಸ್ರ. ನೇಲರ್, ಸನ್, ಮತ್ತು ಗ್ರೈಮ್ಸ್ ಕಂಪೆನಿಯವರು ವಾಲ್ಸಿಲ್ಲೆ ಇರುವ [illegible] ದಬ್ಬಿ ಒಂದು ರವಾನಿಸುವರು. ಅದರ ಕ್ರಯ ಇದರ [illegible] ಲ್ಲಿದೆ, ಕ್ಯಾಪಂಡರ್—ದಬ್ಬಿ ೧ ಕ್ಕೆ ೫ ಆಣೆ ೧೮ ಪೈ. ಮತ್ತು ರೂ॥ ೨ ಕಿಮ್ಮತ್ತು ಇರುತ್ತದೆ. ಬೇಕಾದದ್ದನ್ನು ತರಿಸಿಕೊಳ್ಳಬಹುದು. ಕಾಗದ ನೇರ ಕೊಡಬೇಕು.

ವೈದ್ಯರಿಗೂ ಔಷಧ ಮಾರುವವರಿಗೂ ಕೇಳಿಕೊಂಡರೆ ಒಟ್ಟು ಬಿಕರೀ ದರಕ್ಕೆ ಕೊಡಲ್ಪಡುವದು.

ವಸಂತರಾವ್ ಕೃಷ್ಣರಾವ್ ಮತ್ತು ಕಂಪೆನಿ.

ಕಮಿಷನ್ ಏಜಂಟ್ಸ್, ವರ್ತಕ, ದಳ್ಳಾಳಿವಗೈರೆ.

ಮಾಂಡವಿ, ಮುಂಬೈ.

ನಾವು ಇಲ್ಲಿ ಕಳೆದ ಆರು ವರುಷದಿಂದ ದಳ್ಳಾಳಿ ವಗೈರೆಯ ಕೆಲಸ ನಡೆಸುತ್ತೇವೆ. ನಮ್ಮ ಕೆಲಸದ ರೀತಿಯು ನಮ್ಮ ಎಲ್ಲಾ ಆಸಾಮಿಗಳಿಗೆ ಬಹಳ ಪಸಂದ್ ಬಿದ್ದದರಿಂದ, ನಾವು ಈ ಕೆಲಸವನ್ನು ಬೆಳೆಯಿಸಬೇಕೆಂದು ಅವರ ಕಡೆಯಿಂದ ನಮಗೆ ಆಗ್ರಹವಾದ್ದರಿಂದ, ಅಪ್ರಕಾರ ಬೆಳೆಯಿಸಿ ನಮ ವಿಷಯ ಅವರಿಗೆ ಪೂರ್ಣ ಖಾತರಿ ಮಾಡುತ್ತೇವೆ.

ಮುಂಬೈ ಅಥವಾ ಬೇರೆ ಯೂರೋಪ್ ದೇಶದ ಅಂದರೆ ವಿಲಾಯತಿ, ಅಮೆರಿಕ, ಫ್ರೆಂಚ್, ವಗೈರೆ ಕಡೆಯ (ಹಿತ್ತಾಳೆ ಅಥವಾ ಕೆಡದು) ಯಾವದೇ ತರದ ಜಿನಸು ಯಾರಿಗೆ ಬೇಕಾದರೂ ನಾವು ಅದನ್ನು ಕೂಡಲೇ ಖರೀದಿ ಮಾಡಿ ತರಿಸಿ ಅವರಿಗೆ ಮುಟ್ಟಿಸಿ ಕೊಡುತ್ತೇವೆ.

ಹಾಗೆಯೇ ಯಾರಾದರೂ ತಮ್ಮ ಯಾವತ್ತೇ ತರದ ಜಿನಸು ಅಂದರೆ ಅರಳೆ ಧಾನ್ಯ (ಕಾಳು) ವಗೈರೆ ಮಾರಬೇಕಾದರೆ ನಮ್ಮ ಕಡೆಗೆ ಕಳುಹಿಸಿದರೆ ನಾವು ಅದನ್ನು ಕೂಡಲೆಯೂ ಒಳ್ಳೇ ಧಾರಣೆ ಮಾಡುತ್ತೇವೆ. ಖರೀದಿಯ ಕಾಗದ ವಿಕ್ರಯದ ಲೆಕ್ಕ ಪತ್ರ ಮಾಲೀಕರಿಗೆ ಕೊಡಲೇ ಕಳುಹಿಸಿಕೊಡುತ್ತೇವೆ. ವಿಕ್ರಯ ಮತ್ತು ಖರೀದಿಯ ಕೆಲಸದ ಮೇಲೆ ನಾವು ಬಹಳ ಹುಷಾರ್ ಜನರನ್ನು ನೇಮಿಸಿದ್ದೇವೆ.

ಆಸಾಮಿಗಳಿಗೆ ಪ್ರತಿ ವಾರಕ್ಕೆ ಬಾಜಾರ್ ಭಾವ (ಧಾರಣೆ) ಕಳುಹಿಸಲ್ಪಡುವದು. ವ್ಯವಹಾರವನ್ನು ದೇಶದ ವಿಷಯದ [illegible] ವ್ಯವಹರಿಸುವರು.

ವಸಂತರಾವ್ ಕೃಷ್ಣರಾವ್ ಮತ್ತು ಕಂಪೆನಿ.

ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪೆನಿ

(ಲಿಮಿಟೆಡ್.)

ನೋಟೀಸ್.

ಉಡುಪುಗಳ ಸರಬರಾಯಿಗೋಸ್ಕರ ದರಖಾಸ್ತುಗಳು ಕೊಡತಕ್ಕವರಿಗೆ ಇದರಿಂದ ತಿಳಿಸುವದೇನೆಂದರೆ—ಸದರಿಬಗ್ಗೆ ದರಖಾಸ್ತುಗಳು ಸನ್ ೧೮೯೦ನೇ ಇಸವಿ ಫೆಬ್ರವರಿ ಗುರ್ರೇ ತಾರೀಖು ವರಿವಿಗೆ ಅಂಗೀಕರಿಸಲ್ಪಡುವದು, ಮತ್ತು ವಿವರಿಸಲ್ಪಟ್ಟಿರುವ ಕಂಟ್ರಾಕ್ಟು ತಖ್ತೆಗಳು ಮತ್ತು ದರಖಾಸ್ತುಗಳನ್ನು ಜನವರಿ ತಿಂಗಳ ಮೊದಲನೇ ವಾರದಲ್ಲಿ ಸ್ಟೋರ್ ಕೀಪರಿಂದ ಪಡೆಯಬಹುದು.

ಧಾರ್ವಾಡ, ತಾ॥ ೨೦ನೇ ಡಿಸಂಬರ್ ೧೮೮೯.

J. G. LINDSAY, *Col.* R. E.,

Agent and Chief Engineer.

ನೋಟೀಸ್.

ಇದರಿಂದ ನಮ್ಮ ಚಂದಾದಾರರಿಗೂ ಇತರರಿಗೂ ತಿಳಿಸುವದೇನೆಂದರೆ:—

ಸನ್ ೧೮೮೯ನೇ ಇಸವಿ ಡಿಸಂಬರ್ ಆಖೈರಿನವರಿವಿಗೆ ಚಂದಾ ಬಾಕಿಯನ್ನು ಪೂರಾ ಫೈಸಲ್ ಮಾಡತಕ್ಕ ಚಂದಾದಾರರ ಹೆಸರುಗಳನ್ನು ಮಾತ್ರ ನಾವು ರಿಜಿಸ್ಟರ್ ದಾಖಲು ಮಾಡಿಕೊಂಡು ಈ ಜನವರಿ ಆಗಾಯತು ಪತ್ರಿಕೆ ಕಳುಹಿಸುತ್ತೇವೆ. ಅವರ ಪೈಕಿ ಯಾರಿಗಾದರೂ ಪತ್ರಿಕೆಯ ಅವಶ್ಯವಿಲ್ಲದಿದ್ದರೆ ಅಂತವರು ಕೂಡಲೇ ತಮ್ಮ ಅಭಿಪ್ರಾಯವನ್ನು ಮೂರುಕಾಸಿನ ಕಾರ್ಡಿನಲ್ಲಿ ನಮಗೆ ತಿಳಿಸಬಹುದು. ಪತ್ರಿಕೆಯ ಅವಶ್ಯಕತೆ ಇರತಕ್ಕವರು ಸಾಧ್ಯವಾದಷ್ಟು ತ್ವರೆಯಲ್ಲಿ ಚಂದಾ ಹಣಗಳನ್ನು ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಬೆಂಗಳೂರು, ತಾ ೫ನೇ ಜನವರಿ ೧೮೯೦.

ಟಿ. ಸಿ. ಶ್ರೀನಿವಾಸಾಚಾರ್, ಪ್ರೊಪ್ರೈಟರ್, ಕರ್ಣಾಟಕ ಪ್ರಕಾಶಿಕಾ.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JANUARY 13, 1890.

೧೮೯೦ನೇ ಜನವರಿ, ತಾ॥ ೧೩ ನೇ ಸೋಮವಾರ

A NEW SCOURGE.

ಈಚೆಗೆ ಎರಡುಮೂರು ತಿಂಗಳ ಕಾಲದ ಮೊದಲು ಪಶ್ಚಿಮ ದೇಶಗಳು, ಅಂದರೆ, ಯೂರೋಪ ಮತ್ತು ಅಮೆರಿಕಾ ಖಂಡಗಳಲ್ಲಿ, "ಇನ್‌ಫ್ಲುಯೆನ್ಜಾ" ಎಂಬ ಹೆಸರಿನಿಂದ ಕರೆಯಲ್ಪಡುವ ವಿಷಜ್ವರದ ರೋಗವು ವ್ಯಾಪಿಸಿ, ಪ್ರಜಾಕ್ಷೋಭೆಯನ್ನು ಹುಟ್ಟಿಸುತ್ತಾ ಇರುವಂತೆ ತಿಳಿಯುತ್ತದೆ. ಈ ರೋಗವು ಪ್ರಾಚೀನ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟಿದ್ದರೂ ಅದು ಈಗಿನಷ್ಟು ಅಪಾಯಕರವಾದುದೆಂತಲೂ ಸಾಂಕ್ರಾಮಿಕವಾದುದೆಂತಲೂ ಗ್ರಹಿಸಲ್ಪಟ್ಟಿರಲಿಲ್ಲ. ಇದು ಋತುಧರ್ಮದ ದೆಸೆಯಿಂದ ಉಂಟಾಗುವ ಶೈತ್ಯಾಧಿಕ್ಯದಿಂದ ಪ್ರಾಪ್ತವಾಗುವಂತೆ ಕಾಣುತ್ತದೆ. ಪ್ರಾಯಶಃ ಇದು ಜ್ವರದಿಂದೊಡಗೂಡಿದ್ದಾಗಿಯೇ ಇರಬೇಕೆಂದು ನಾವು ಅಭಿಪ್ರಾಯ ಪಡುತ್ತೇವೆ. ಪರಂತು ಈ ಇಂಡ್ಯಾ ದೇಶದೊಳಗೆ ಸದರೀ ರೋಗವು ಹಿಂದೆ ಯಾವ ಕಾಲದೊಳಗಾದರೂ ವ್ಯಾಪಿಸಿ, ಜನಗಳ ಅನುಭವಕ್ಕೆ ವಿಷಯವಾಗಿದೆ ಇರುವದರಿಂದ ಇದಕ್ಕೆ ನಮ್ಮ ಪ್ರಾಚೀನ ವೈದ್ಯಗ್ರಂಥಗಳಲ್ಲಿ ಹೆಸರೇನಿಟ್ಟಿರುತ್ತಾರೆಯೋ ಅದು ನಿರ್ಧರಿಸಿ ಹೇಳಲು ಸದ್ಯಕ್ಕೆ ಅಸಾಧ್ಯವಾಗಿರುತ್ತದೆ. ಆದರೆ ಯೂರೋಪ ಮತ್ತು ಅಮೆರಿಕಾ ಖಂಡಗಳಲ್ಲಿ ಸಹ ಈ ವರ್ಷ ಅಂತ ವಿಚಿತ್ರವಾದ ಋತುಧರ್ಮ ಭೇದ ಉಂಟಾಗಿರುವಂತೆ ತಿಳಿಯಬಾರದಿದ್ದಾಗ್ಯೂ ಈ ಸಲ ಈ ರೋಗವು ಇಷ್ಟು ಪ್ರಾಬಲ್ಯಕರವಾಗುವದಕ್ಕೆ ಪ್ರಬಲಿಸುವದಕ್ಕೆ ಕಾರಣ ಮುಂದೆ ವಿಚಾರದಿಂದರಿಯಬೇಕಾಗಿದೆ. ಇದು ಸಾಂಕ್ರಾಮಿಕವೆಂದು ತಿಳಿಯಬರುವದರಿಂದ ಭೀತಿಸಬೇಕಾಗಿದೆ. ಈ ರೋಗೋದ್ಭವಕ್ಕೆ ಉಂಟಾದ ಕಾರಣವು ಕೆಲವು ಹಿರಿಯರು ಯೂರೋಪ ಖಂಡ ಡಾಕ್ಟರ್‌ಗಳೂ ಮತ್ತು ನಮ್ಮ ದೇಶದ ವೈದ್ಯರೂ ಶೀಘ್ರವಾಗಿ ಪ್ರಸಿದ್ಧಿಸಬೇಕಾದದ್ದು ಅವಶ್ಯಕವಾಗಿ ಕಾಣುತ್ತದೆ.

ಈ ರೋಗದ ದೆಸೆಯಿಂದ, ಯೂರೋಪ್ ಖಂಡದಲ್ಲೂ, ವಿಶೇಷತಃ ಇಂಗ್ಲಂಡಿನಲ್ಲಿಯೂ, ಬಹುಮಂದಿ ದೊಡ್ಡ ಮನುಷ್ಯರು, ರಾಜ್ಯದ ಅಧಿಕಾರಿಗಳು, ಪ್ರಿನ್ಸ್ ಚಾರ್ಲ್ಸ್, ಟೆಲಿಗ್ರಾಫ್ ಇಲಾಖೆಯ ನೌಕರರು, ಸೈನಿಕರು ಮೊದಲಾದವರು ಪೀಡಿತರಾಗಿರುವಂತೆ ತಿಳಿಯಬರುತ್ತದೆ. ಈ ರೋಗಗ್ರಸ್ತರಾದವರ ಪೈಕಿ ಅನೇಕರು ಪ್ರಾಣಗಳನ್ನು ಕಳೆದುಕೊಂಡಿರುತ್ತಾರೆ. ಇತ್ತೀಚೆಗೆ ದೇಶದ ಪ್ರಖ್ಯಾತ [illegible] ಯವರ ಪತ್ನಿಯಾದ ಮಹಾರಾಣಿ ಆಗಸ್ಟ ಎಂಬವರು

ಸಹ ಈಚೆಗೆ ಸದರೀ ರೋಗದ ದೆಸೆಯಿಂದ ಮೃತಪಟ್ಟಿರುತ್ತಾರೆ. ಇಂಗ್ಲಾಂಡ್ ದೇಶದ ಪ್ರಧಾನ ಮಂತ್ರಿಯವರಾದ ಲಾರ್ಡ್ ಸಾಲಿಸ್‌ಬರಿಯವರಿಗೆ ಸಹ ಮೇಲಿನ ರೋಗ ತಗಲಿ ಶ್ರಮಪಟ್ಟು ಈಚೆಗೆ ಸ್ವಲ್ಪ ಗುಣ ಮುಖವಾಗಿರುವಂತೆ ತಿಳಿಯಬರುತಿದೆ.

THE TERUPATI MAHANT'S CASE.

ತಿರುಪತಿ ಮಹಂತರವರಾದ ಭಗವಾನ್‌ದಾಸ್ ಎಂಬವರು ಅಲ್ಲಿನ ಶ್ರೀ ವೇಂಕಟಾಚಲಪತಿ ಸ್ವಾಮಿಗಳವರ ದೇವಸ್ಥಾನದ ಧರ್ಮಕರ್ತರಾಗಿರುವ ಅದಕ್ಕೆ ಸೇರಿದ ಕೆಲವು ಬಂಗಾರದ ನಾಣ್ಯಗಳಂ ದುರುಪಯೋಗ ಪಡಿಸಿದರೆಂದು ಅವರಮೇಲೆ ಸದರೀ ಸ್ಥಳ ಆಚಾರ ಪುರುಷರಲ್ಲೊಬ್ಬರಾದ ಶ್ರೀರಂಗಾಚಾರ್ರೆಂಬವರಿಂದ ತರಲ್ಪಟ್ಟ ಕ್ರಿಮಿನಲ್ ಮೊಕದ್ದಮೆಯು ಉತ್ತರ ಆರ್ಕಾಡು ಡಿಸ್ಟ್ರಿಕ್ಟ್ ಸಬ್ ಕಲೆಕ್ಟರವರ ಕೋರ್ಟಿನಲ್ಲಿ ಪ್ರಥಮ ವಿಚಾರಣೆಯಾಗಿ ಚಿತ್ತೂರು ಸೆಷನ್ಸ್ ಕೋರ್ಟಿಗೆ ಕಮಿಟಿ ಮಾಡಲ್ಪಟ್ಟಿರುವಂತೆ ಹಿಂದಿನ ಪತ್ರಿಕೆಯ ಮೂಲಕ ತಿಳಿಸಿರುತ್ತೇವೆ ಯಷ್ಟೆ. ಕಳೆದ ವಾರದೊಳು ಸದರೀ ಮೊಕದ್ದಮೆಯ ಪರ್ಯಾಪ್ತಿಯು ಪ್ರಾರಂಭವಾಗಿ ಫಿರ್ಯಾದಿಯ ತರಫ್ ಸಾಕ್ಷಿ ವಿಚಾರಣೆ ಪೂರ್ತಿಯಾಗಿ ಅಪರಾಧಿಯ ತರಫ್ ಸಾಕ್ಷಿ ವಿಚಾರಣೆಗೆ ಪ್ರಾರಂಭವಾಗಿರುತಿದೆ. ಫಿರ್ಯಾದಿಯ ತರಫ್ ಗಾಯ್‌ಬವರ್ಸ್ ಎಸ್. ಸುಬ್ರಹ್ಮಣ್ಯ ಅಯ್ಯರವರೂ ಮತ್ತು ಅಟಾರ್ನಿ ಮಿ. ಪಿ. ಸುಬ್ರಹ್ಮಣ್ಯ ಅಯ್ಯರವರೂ, ಅಪರಾಧಿಯ ಕಡೆ ಬ್ಯಾರಿಸ್ಟರ್ ಮಿ. ಎಸ್. ಸುಬ್ರಹ್ಮಣ್ಯಮ್‌ಯವರೂ ಹಾಜರಾಗಿ ಮೊಕದ್ದಮೆಯಂ ನಡೆಸುತಲಿದ್ದಾರೆ. ಅಪರಾಧಿಯ ತರಫ್ ಸಾಕ್ಷಿ ವಿಚಾರಣೆಗೆ ಪ್ರಾರಂಭವಾಗುವದಕ್ಕೆ ಪೂರ್ವಭಾವಿಯಾಗಿ, ಸೆಷನ್ಸ್ ಜಡ್ಜಿಯವರು, ಕೋರ್ಟಿನವರಿಗೆ ತಿಳಿಸಬೇಕಾದ ಅಂಶ ಯಾವದಾದರು ಇದ್ದರೆ ತಿಳಿಸಬಹುದೆಂದು ಮಹಂತರವರಂ ಕೇಳಲಾಗಿ, ತಾವು ತಮ್ಮ ಮೊಕದ್ದಮೆಯನ್ನು ತಮ್ಮ ಕಡೆ ವಕೀಲರಿಗೆ ಒಪ್ಪಿಸಿರುವದರಿಂದ ತಮ್ಮ ತರಫ್ ಕೋರ್ಟಿಗೆ ತಿಳಿಸಬೇಕಾದ ಅಂಶಗಳನ್ನೆಲ್ಲ ಅವರೇ ತಿಳಿಸುವರೆಂದು ಹೇಳಿದರು. ಕೆಲವರು ಸಾಕ್ಷಿಗಳ ವಿಚಾರಣೆ ನಡೆದವು. ಅವರ ಪೈಕಿ ಓವರ್‌ಸಿಯರ್ ರಂಗನಾಥ ಮೊದಲಿಯಾರ್ರೆಂಬವರು ದೇವಸ್ಥಾನದ ಮತ್ತು ಧ್ವಜಸ್ತಂಭದ ನಕ್ಷೆಯನ್ನು ಹಾಜರ್ಮಾಡಿದರು. ದೇವಸ್ಥಾನದ ಜವಾನನಾದ ಬಾಲಾಜೀ ಎಂಬವನು, ಧ್ವಜಸ್ತಂಭ ಸ್ಥಾಪನಮಾಡಿದ ಸಂದರ್ಭದೊಳು, ಆರು ತಗಡಿಗಳಲ್ಲಿ ನಾಣ್ಯಗಳಂ ಬೆಟ್ಟದಮೇಲಕ್ಕೆ ಹೊತ್ತುಕೊಂಡು ಹೋದ ಜವಾನರ ಪೈಕಿ ತಾನೊಬ್ಬನೆಂತಲೂ, ಸದರೀ ತಗಡಿಗಳೆಲ್ಲವು ಬೆಟ್ಟದಮೇಲಿರುವ ಪಾರುಪತ್ಯಗಾರರು ಗೋಪಾಲರಾಯರ ವಶಕ್ಕೆ ಒಪ್ಪಿಸಲ್ಪಟ್ಟವೆಂತಲೂ, ಅವನ್ನೆಲ್ಲ ಕೋರಾರಿ ಹರಿಭಜನದಾಸ್ ಎಂಬವರು ನೋಡಿದರೆಂತಲೂ ಹೇಳಿದನು. ರಂಗೈಯ್ಯ ಮತ್ತು ರಂಗಪ್ಪ ಎಂಬ ಬೇರೆ ಇಬ್ಬರು ಸಾಕ್ಷಿಗಳು ಅದ್ವಾಕ್ ಸಾಕ್ಷಿ ಹೇಳಿದಂತೆಯೇ ಹೇಳಿದರು. ಧ್ವಜಸ್ತಂಭ ಪ್ರತಿಷ್ಠೆ ಮಾಡಿದ ದಿನ ಮಹಂತರವರು ರೇಣಿಗುಂಟೆಗೆ ಹೋಗಿ ಬಂದರಾಗಿ ಆ ಸಂದರ್ಭದಲ್ಲಿ ಪೂರಾ ಅವರು ದೇವಸ್ಥಾನದಲ್ಲಿರಲಿಲ್ಲವೆಂದು ಬೇರೆಯೊಬ್ಬ ಸಾಕ್ಷಿ ಹೇಳಿದ್ದಲ್ಲದೆ, ಮಹಂತರವರು ಧ್ವಜಸ್ತಂಭ ಪ್ರತಿಷ್ಠೆಗಾಗಿ ಬೆಟ್ಟದ ಮೇಲಕ್ಕೆ ಹೋದ ಕಾಲದಲ್ಲಿ ಭಾರವಾದ ಚೀಲಗಳನ್ನು ತಂದು ಅವರ ಪಾಲಕ್ಕಿಯಲ್ಲಿಟ್ಟದ್ದಾಗಿ ಹೇಳುವದು ಸುಳ್ಳೆಂದು ಹೇಳಿದನು. ಈ ಮೊಕದ್ದಮೆಯ ವಿಚಾರಣೆ ಇನ್ನೆರಡುವಟ್ಟಿಗೆ ನಡೆದಿರುವಂತೆ ತಿಳಿಯಬರುತಿದೆ. ಈ ವಾರದಲ್ಲಿ ನಡೆಯುವ ನಿಕೇಲಗಳನ್ನು ಮುಂದಿನಪತ್ರಿಕೆಯಮೂಲಕತಿಳಿಸುತ್ತೇವೆ

WHAT HAS ENGLAND DONE FOR INDIA.

ಇಂಗ್ಲೀಷಿನವರು ಇಂಡ್ಯಾದೇಶಕ್ಕೆ ಪ್ರಥಮತಃ ಪ್ರವೇಶಿಸಿದ ಕ್ರಮವೂ, ಕ್ರಮೇಣ ಇಲ್ಲಿ ಅವರು ತಮ್ಮ ಪ್ರಭುತ್ವವನ್ನು ಜಾತಪಡಿಸಿದ ಬಗೆಯೂ ಅವರಿಂದ ಗತ ೩೦ ವರುಷಗಳ ಕಾಲದ ಮೊದಲು ಈ ದೇಶೀಯರು ಪಡೆದ ಪ್ರಯೋಜನಗಳೂ, ಅವರ ಪಾಲನಬಂಧನಂಟಾದ ವಿನಿಮಯಗಳೂ, ಕೇವಲ ಮುಖ್ಯ ವಿಷಯಗಳಾಗಿರುವದರಿಂದ ಈ ಪತ್ರಿಕೆಯ ಶ್ರೋದತಕ್ಕವರ ತಿಳುವಳಿಕೆಯ ಬಗ್ಗೆ ಅವು ಸಂಗ್ರಹವಾಗಿ ಇವರದಿ ಪ್ರಕಟಿಸುವೆವು. ಇದರಿಂದ ದೈವಾನುಗ್ರಹವುಳ್ಳ ಪುರುಷನ ಪ್ರಯತ್ನವು ಯೆಷ್ಟು ಅಲ್ಪವಾಗಿದ್ದರೂ ಕಡೆಗೆ ಅದೇ ಪ್ರಾಬಲ್ಯವನ್ನೈದಿ ತನ್ಮೂಲಕ ಮಹತ್ಫಲಗಳುಂಟಾಗುವದೆಂದು ಸ್ಪಷ್ಟವಾಗುತಿದೆ.

ಇಂಗ್ಲೀಷಿನವರು ಪ್ರಥಮತಃ ಈ ದೇಶಕ್ಕೆ ಬಂದ ಕಾಲದಲ್ಲಿ ಮುಂದೆ ಇದರ ಪಾಲಕರಾಗುವರೆಂಬ ನಂಬಿಕೆಯು ಅವರಿಗೆ ಸುತರಾಂ ಇರಲಿಲ್ಲವು. ಅವರು ಮೊದಲು ವರ್ತಕರಾಗಿ ಈ ದೇಶಕ್ಕೆ ಬಂದರು. ಆ ಕಾಲದೊಳಿದ್ದ ಇಂಡ್ಯಾದೇಶದ ಐಶ್ವರ್ಯವು ಅನ್ಯದೇಶೀಯರಿಗೆ ಬಹಳ ಆಕರ್ಷಕವಾಗಿದ್ದುದರಿಂದ, ವ್ಯಾಪಾರ ವಿಷಯದೊಳವರಿಗಿರುವ ಸ್ವಾಭಾವಿಕ ಪ್ರವೃತ್ತಿಯೇ ಅವರಂ ಇಷ್ಟರದೂರದೇಶಕ್ಕೆ ಬರುವಂತೆ ಪ್ರೇರಿಸಿತು. ಪ್ರಾರಂಭದಲ್ಲಿ, ವಿಜಾತೀಯರಾದ ಸದರೀ ಜನಗಳಿಗೆ, ಅನ್ಯರಾಜ್ಯದಲ್ಲಿ ಅನ್ಯರ ಮಧ್ಯೆ ನೆಲೆಸುವದು ಬಹಳ ಪ್ರಯಾಸವಾಗಿ ತೋರಬಹುದಿಲ್ಲವೆ. ಪರಂತು ಸದರೀ ಜನರ ಜಾಗರೂಕತೆಯೂ, ಸಮಯೋಚಿತ ವರ್ತನವೂ, ಸ್ವಪ್ರಯೋಜನಸಿದ್ಧಿಗಾಗಿ ಅವರು ಮಾಡುವ ನಾನಾವಿಧ ತಂತ್ರಗಳೂ, ಅವುಗಳಿಗೆ ಸಹಕಾರಿಯಾಗಿ, ಹಿಂದೂಗಳ ಪರಸ್ಪರ ವಿದ್ವೇಷವೂ, ಅಸಹಿಷ್ಣುತೆಯೂ, ಅಜಾಗರೂಕತೆಯೂ, ನಿರಭಿಮಾನತ್ವವೂ, ಪ್ರಸಿದ್ಧಗಳಾಗಿರುವದರಿಂದ, ಮೇಲೆ ಕಂಡ ಇಂಗ್ಲೀಷಿನವರ ಭವಿಷ್ಯತ್ಪ್ರಭವ ವೈಭವಾಭಿವೃದ್ಧಿಗಳಿಗೆಲ್ಲ ಅವರ ಗುಣಗಳೇ ಮಾರ್ಗದರ್ಶಕಗಳಾಗಿದ್ದವು. ಮಿ. ಮಹಾರ್ ೧೬೩೬ನೆಯ ಸಂವತ್ಸರದಲ್ಲಿ ಸೂರತಿ ಪ್ರಾಂತದೊಳು ಬೌರ್ಟನ್ ಎಂಬೊಬ್ಬ ಇಂಗ್ಲೀಷ್ ಚಿಕಿತ್ಸಕರಿದ್ದರು, ಆಗ ಚಕ್ರವರ್ತಿಯಾಗಿದ್ದ ಷಹಜಹಾನರ ಕುಮಾರಿಯರ ಪೈಕಿ ಒಬ್ಬಳಿಗೆ ಚಿಕಿತ್ಸೆ ಮಾಡುವಬಗ್ಗೆ ಸದರೀ ಚಿಕಿತ್ಸಕರು ಸೂರತ್ತಿನಿಂದ ಆಗ್ರಾ ಪಟ್ಟಣಕ್ಕೆ ಕರೆಯಿಸಲ್ಪಟ್ಟರು. ಇಂಗ್ಲೀಷಿನವರ ಕೌಶಲ್ಯ ಪ್ರದರ್ಶನಕ್ಕೆ ಇದೊಂದು ಪ್ರಬಲ ಸಂದರ್ಭ ದೊರೆತದರಿಂದ, ಬೌರ್ಟನ್‌ಯವರು ಚಕ್ರವರ್ತಿಯವರ ಮಗಳಿಗೆ ಚಿಕಿತ್ಸೆ ಮಾಡಿ ಗುಣ ಪಡಿಸಲು ಷಹಜಹಾನರವರು ಬಹಳ ಸಂತೋಷಿಸಿ ಅವರಿಗೆ ವಿಶೇಷವಾಗಿ ಸನ್ಮಾನವಂ ಮಾಡಿದರು. ಬಹಳ ಪ್ರಸನ್ನರಾದ ಬೌರ್ಟನ್‌ಯವರಿಗೆ ನಾನಾವಿಧ ಇನಾಂಗಳು ಕೊಡಲ್ಪಟ್ಟವಲ್ಲದೆ ತಮ್ಮ ರಾಜ್ಯದ ಸರಹದ್ದಿನೊಳಗೆಲ್ಲ ಸುಂಕವಿಲ್ಲದೆ ವ್ಯಾಪಾರ ಮಾಡುವ ಸ್ವಾತಂತ್ರ್ಯವು ಸಹ ಚಕ್ರವರ್ತಿಯವರು ಕಲ್ಪಿಸಿದರು. ಇಂಗ್ಲೀಷಿನವರಾದಾಗಲು ಅಲ್ಪಾವಕಾಶವು ಸಹ ಬಳಪಡಿಸಿಕೊಂಡು ಸರ್ವಸ್ವವಂ ಸ್ವಾಧೀನಪಡಿಸಿಕೊಳ್ಳುವ ಸ್ವಭಾವವುಳ್ಳವರಾದುದರಿಂದ ಅದರಮೇಲೆ ಬೌರ್ಟನ್‌ಯವರು ಇಂಗ್ಲಾಂಡಿಗೆ ಹೋಗಿ ಕೆಲವು ಸಾಮಾನುಗಳನ್ನು ಕೊಂಡುಕೊಂಡು ಈ ದೇಶಕ್ಕೆ ಬಂದು ವ್ಯಾಪಾರವಮಾಡ ಪ್ರಯತ್ನಿಸಿದರು. ಇದ್ದಷ್ಟರಲ್ಲಿ ಬಂಗಾಳೇ ನವಾಬರ ಕುಟುಂಬದವರ ಪೈಕಿ ಒಬ್ಬರು ಅಪಾಯಸ್ಥಿತಿಯೊಳಿದ್ದುದರಿಂದ ಅವರಿಗೆ ಸಹ ಬೌರ್ಟನ್‌ಯವರು ಚಿಕಿತ್ಸೆ ಮಾಡಿ ಗುಣಪಡಿಸಲು ನವಾಬರವರು ಅವರಿಗೆ ಮಾಹೇಯಾನಾ ಪೋಷಣೆಗೊತ್ತುಮಾಡಿ ಚಕ್ರವರ್ತಿಯವರು ಇವರೊಬ್ಬರ ವಿಷಯದಲ್ಲಿಯೇ ಮಾಡಿದ್ದ ಸ್ವಾತಂತ್ರ್ಯವನ್ನು ಬಂಗಾಳೆಗೆ ಬಂದು ವ್ಯಾಪಾರಮಾಡುವಂತಾ ಇಂಗ್ಲೀಷಿನವರಿಗೆಲ್ಲ ಕಲ್ಪಿಸಿ ಅವರ ವ್ಯಾಪಾರಕ್ಕೆ ಬೇಕಾದ ಅನುಕೂಲ್ಯಗಳನ್ನುಂಟುಮಾಡಿದರು. ಈ ವಿಷಯಗಳೆಲ್ಲವು ಸೂರಾತಿನೊಳಿದ್ದ ಇಂಗ್ಲೀಷ್ ಗವರ್ನರಿಗೆ ಬೌರ್ಟನ್‌ಯವರು ತಿಳಿಸಲು, ಅವರ ಸಲಹೆಯ ಮೇರೆ ಈಸ್ಟಿಂಡಿಯಾ ಕಂಪೆನಿಯವರು ಎರಡು ಜಹಜುಗಳನ್ನು ಬಂಗಾಳೆಗೆ ಕಳುಹಿಸಿದರು, ಇವೆಲ್ಲವು ವಿಶೇಷ ಗಲಭೆ ಇಲ್ಲದಂತೆ ಸಾಮಾನ್ಯವಾಗಿ ಜರಿಗಿದಾಗ್ಯೂ ಕಲ್ಕತ್ತೆಯಲ್ಲಿ ಮೊದಲು ನೆಲಸ್ವದು ಆಗ ಇಂಗ್ಲೀಷಿನವರಿಗೆ ಸುಲಭವಾಗಿರಲಿಲ್ಲವು. ಈ ಪ್ರದೇಶವು ಚಕ್ರವರ್ತಿಯವರಾದ ಷಹಜಹಾನರವರ ಸ್ವಂತ ವಿಚಾರಣಾಧಿಕಾರಗಳಿಗೆ ಬಹಳ ದೂರವಾಗಿದ್ದದರಿಂದ ಅಲ್ಲಿನ ಜನರು ಇಂಗ್ಲೀಷಿನವರಿಗೆ ಸ್ವಲ್ಪವೂ ಅವಕಾಶಕೊಡಲಿಲ್ಲವು. ಈಗ ಮುಖ್ಯ ರಾಜಧಾನಿಯಾಗಿ ಏರ್ಪಟ್ಟಿರುವ ಕಲ್ಕತ್ತಾಪಟ್ಟಣವು ಮೊದಲು ಹೂಗ್ಲಿನದಿಯ ದಡದಲ್ಲಿ ಮಣ್ಣು ಗುಡಿಸಲುಗಳುಳ್ಳ ಮೂರು ಹಳ್ಳಿಗಳಾಗಿರುತಲಿತ್ತು. ಇಂಗ್ಲೀಷ್ ವ್ಯಾಪಾರಕ್ಕೆ ಅನುಕೂಲವಾದ ಪಟ್ಟಣವ ಸಂಪಾದಿಸಿಕೊಳ್ಳುವ ವಿಷಯದಲ್ಲಿ ಮಾಡಲ್ಪಟ್ಟ ಪ್ರಯತ್ನ ವಿಫಲವಾದದ್ದೇ ಅಲ್ಲವು. ಅವರ ಹಿಂದಿನ ಪ್ರಯತ್ನಗಳೆಲ್ಲವು ಹಿಂದೂಗಳಿಂದ ಭಂಗ ಪಡಿಸಲ್ಪಟ್ಟದರಿಂದ ಇಂಗ್ಲೀಷಿನವರ ಉದ್ದೇಶವು ಸಫಲವಾಗಲಿಲ್ಲವು. ಮುಖ್ಯವಾಗಿ ಬೆಂಗಾಲ್ ಪ್ರಸಿಡೆನ್ಸಿಯು ಬಂದು ಸ್ಥಾಪಿತ ದಶೆಗೆ ಬಂದು ಸ್ವಾಧೀನವಾಗುವದು ಪ್ರಥಮತಃ ಪ್ರಯಾಸವಾಗಿದ್ದರೂ ಕ್ರಮೇಣ ನಾನಾ ಉಪಾಯಗಳಿಂದ ಅದನ್ನವರು ವಶಪಡಿಸಿಕೊಂಡು ಸಂಪೂರ್ಣ ಯಜಮಾನ್ಯವಂ ವಹಿಸಿದರು.

ಇಂಗ್ಲೀಷಿನವರಿಗೆ ಮುಂಬೈದ್ವೀಪ ಸಿದ್ಧಿಸಿದ ಕ್ರಮವು ಪ್ರಾಯೇಣ ಇಂಡ್ಯಾದೇಶದ ಚರಿತ್ರೆ ಗ್ರಂಥವನ್ನೋದತಕ್ಕ ಬಾಲಕರಿಗೆ ಕೂಡ ತಿಳಿದ ಅಂಶವಾಗಿರುತದೆ ಪೋರ್ಚುಗೀಸ್ ಸಂಸ್ಥಾನಕ್ಕೆ ಸೇರಿದ್ದ ಮುಂಬೈದ್ವೀಪವು ೧೬೬೧ನೇ ಇಸವಿಯಲ್ಲಿ ಇಂಗ್ಲಾಂಡ್ ದೇಶದ ಅರಸರಾಗಿದ್ದ ಚಾರ್ಲ್ಸ್ ಅವರ ಭಾರ್ಯೆಯಾದ ಕ್ಯಾಥರೈನ್ ಯೆಂಬ ರಾಜಪುತ್ರಿಗೆ ಆಕೆಯ ತಂದೆಯಿಂದ ಸ್ತ್ರೀಧನರೂಪವಾಗಿ ಕೊಡಲ್ಪಟ್ಟದ್ದಾದುದರಿಂದ ಆ ದ್ವೀಪವು ಇಂಗ್ಲೀಷಿನವರ ಸ್ವಾಧೀನಕ್ಕೆ ಬರಲಿಕ್ಕೆ ಕಾರಣವಾಯಿತು. ನಿಷ್ಪ್ರಯೋಜಕಕಾರಿಯಾಗಿದ್ದ ಸದರೀ ಮುಂಬೈ ದ್ವೀಪವಂ ತೊರೆಯುವದನ್ನು ಪೋರ್ಚುಗೀಸ್ ಅರಸರಿಗೆ ಬಹಳ ಸಂತೋಷಕಾರಿಯಾಗಿತ್ತು. ಕೆಲವು ಸಂವತ್ಸರಗಳ ತರುವಾಯ ಇಂಗ್ಲೀಷ್ ಸರ್ಕಾರದವರು ಮುಂಬೈ ದ್ವೀಪದ ವಿಚಾರಣಾಧಿಕಾರವನ್ನು ಈಸ್ಟಿಂಡಿಯಾ ಕಂಪೆನಿಯವರಿಗೊಪ್ಪಿಸಿದರು. ಈಗ ಸದರೀ ಪಟ್ಟಣವು ಬ್ರಿಟಿಷರವರ ರಾಜಧಾನಿಗಳ ಪೈಕಿ ೩ನೆಯದಾಗಿ ಪರಿಗಣಿಸಲ್ಪಟ್ಟಿದೆ. ದಕ್ಷಿಣ ಇಂಡ್ಯಾ ದೇಶಕ್ಕೆ ಮದರಾಸು ಮುಖ್ಯ ರಾಜಧಾನಿಯಾಗಿರುತಿದೆ. ಕಂಪೆನಿಯವರು ತಮ್ಮ ಕೋಠಿಯನ್ನು ಪ್ರಥಮ ತಿರುಮಲೀಬಂದರಿನಲ್ಲಿ ಸ್ಥಾಪಿಸಿ ಅಲ್ಲಿಂದ ೧೬೩೯ನೇ ಇಸವಿಯಲ್ಲಿ ಅರ್ಮಿಗಾನ್ ಯೆಂಬ ಪ್ರದೇಶಕ್ಕೆ ವರ್ಗಮಾಡಿದರು. ಆದಾಗ್ಯೂ ವ್ಯಾಪಾರವು ಅಷ್ಟು ಲಾಭಕರವಾಗಿಲ್ಲದೆ ಹೋದದರಿಂದ ಕೋಠಿಯ ಸೂಪರಿಂಟೆಂಡೆಂಟಾದ ಮಿ. ಡೇ ಎಂಬವರನ್ನು ವಿಜಯನಗರದ ರಾಜವಂಶಕ್ಕೆ ಸೇರಿದ ಚಂದ್ರಗಿರಿ ರಾಜರು ಕರೆಯಿಸಿ ಅವರ ಕಾರ್ಯವನ್ನು ತಮ್ಮ ರಾಜ್ಯದಲ್ಲೇ ನೆರೆಗೊಳಿಸುವಂತೆ ಅಪ್ಪಣೆ ಮಾಡಿ ತದರ್ಥ ಬೇಕಾದ ಏರ್ಪಾಡುಗಳನ್ನೆಲ್ಲ ಮಾಡಿದರು. ೧೬೩೯ನೇ ಇಸವಿಯಲ್ಲಿ ಪೂರ್ವ ಸಮುದ್ರತೀರದಲ್ಲಿ ಜಹಜ್ ವ್ಯಾಪಾರಕ್ಕೆ ಅನುಕೂಲವಾದ ಒಂದು ಪ್ರದೇಶವನ್ನು ಗೊತ್ತುಮಾಡಿ ಅಲ್ಲಿಂದು ವ್ಯಾಪಾರ ಕೋಠಿಯನ್ನು ಸದರೀ ಡೇಯವರು ಕಟ್ಟಿಸಿದರು. ಅದು ಕ್ರಮೇಣ ಅಭಿವೃದ್ಧಿಯನ್ನೈದಿ ಈಗ ಒಂದು ದೊಡ್ಡ ರಾಜಧಾನಿಯಾಗಿಯೂ, ವ್ಯಾಪಾರಕ್ಕೆ ಮಧ್ಯಪ್ರದೇಶವಾಗಿಯೂ ಏರ್ಪಟ್ಟಿದೆ. ಆ ಕಾಲದಲ್ಲಿ ಹಿಂದೂ ವರ್ತಕರಿಗೆ ನಂಬಿಕೆಯುಂಟಾಗುವದಕ್ಕಾಗಿ ಇಂಗ್ಲೀಷ್ ವರ್ತಕರು ತಾವು ಆಕ್ರಮಿಸಿದ್ದ ಪ್ರದೇಶದ ಸುತ್ತಲು ಕೋಟೆಯಂ ಕಟ್ಟಿ ಗೌರವಾರ್ಥವೆಂಬದಾಗಿ ೧೨ ತೋಫಗಳನ್ನಿಟ್ಟು ಅದು ಫೋರ್ಟ್ ಸೆಂಟ್ ಜಾರ್ಜ್ ಎಂಬದಾಗಿ ವ್ಯವಹರಿಸುತ ಬಂದರು. ಇಂಗ್ಲೀಷಿನವರಿಗೆ ಇಂಡ್ಯಾದೇಶದಲ್ಲೀಗ ಪ್ರಸಿದ್ಧಗಳಾಗಿರುವ ಮೂರು ಪ್ರೆಸಿಡೆನ್ಸೀ ರಾಜಧಾನಿಗಳು ವ್ಯಾಪಾರನಿಮಿತ್ತ ಮೊದಲು ಲಭ್ಯವಾದ ಬಗೆಯಂ ಸಂಗ್ರಹವಾಗಿ ತಿಳಿಸಿದೆವಷ್ಟೆ. ಆದಿಯಲ್ಲಿ ವ್ಯಾಪಾರಾರ್ಥ ಕಟ್ಟಿದ ೩ ಸಣ್ಣ ಊರುಗಳು ಈಗ ಭಾರೀ ವ್ಯಾಪಾರಗಳಿಗೆಲ್ಲ ಆಶ್ರಯಸ್ಥಾನಗಳಾಗಿ ಏರ್ಪಟ್ಟಿವೆ. ತರುವಾಯ ಜವಾಬ್ದಾರೀಯೂ, ಅವಶ್ಯಕತೆಯೂ ವೃದ್ಧಿಯಾದಂತೆಲ್ಲ ಮಿಲಿಟರಿ ಅಂದರೆ ಸೈನಿಕರ ಬಲವಂ ಜಾಸ್ತಿ ಮಾಡುತ ಬಂದರು. ಸೈನಿಕ ಬಲವು ಜಾಸ್ತಿಯಾಗಿ ಇಂಗ್ಲೀಷಿನವರೂರ್ಜಿತರಾದಮೇಲೆ ಹಿಂದೂ ಅರಸರ ಪರಸ್ಪರ ಕಲಹಗಳಲ್ಲಿ ಸ್ವತಃ ಪ್ರವೇಶಿಸಿ ಇಬ್ಬರಿಗೂ ಮಧ್ಯಸ್ಥ ಮಾಡುತ್ತೇವೆಂದು ಹೇಳುತ ಬಲಾಬಲದಮೇಲೆ ಒಂದು ಪಕ್ಷವನ್ನವಲಂಬಿಸಿ ಯುದ್ಧಗಳಿಗೆ ಪ್ರೋತ್ಸಾಹವನ್ನುಂಟುಮಾಡಿ, ಅದರಮೂಲಕ ಪ್ರತಿಫಲವಾಗಿ ಕೆಲವು ರಾಜ್ಯಗಳನ್ನು ಸಂಪಾದಿಸಿ ತಮ್ಮ ಪ್ರಭುತ್ವಕ್ಕೆ ದಾಖಲ್ಮಾಡಿಕೊಳ್ಳುತ ಬಂದರು. ಇದಲ್ಲದೆ ಕೆಲವು ಸಂಸ್ಥಾನಗಳಿಗೆ ವಾರಸುದಾರರಿಲ್ಲದೆ ಹೋಗಲು ಕುಟಿಲೋಪಾಯಗಳಿಂದವು ಆಕ್ರಮಿಸಲಾರಂಭಿಸಿದರು. ಹೀಗೆಯೇ ಆಯುಧ ಬಲದಿಂದಲೂ ನೇಟಿವ್ ಅರಸರ ಅವಿವೇಕದಿಂದಲೂ, ಯುಕ್ತಿ ಚಾತುರ್ಯದಿಂದಲೂ, ಇಂಗ್ಲೀಷಿನವರು ಇಂಡ್ಯಾದೇಶವನ್ನೆಲ್ಲ ಸ್ವಾಧೀನ ಪಡಿಸಿಕೊಂಡು ಈಗ ಸರ್ವತೋಭದ್ರವಾದ ಸ್ಥಿತಿಯಲ್ಲಿರುತಲಿದ್ದಾರೆ. ಈ ದೇಶದಲ್ಲಿ ಬ್ರಿಟಿಷ್ ಪ್ರಭುತ್ವ ನೆಲೆಗೊಳ್ಳಲಿಕ್ಕೆ ವ್ಯಾಪಾರವೇ ಮುಖ್ಯಕಾರಣವು. ವ್ಯಾಪಾರಾಭಿವೃದ್ಧಿಯಿಂದ ಈ ದೇಶದ ಐಶ್ವರ್ಯವು ವೃದ್ಧಿಯಾಗಿ ಜನರ ಸುಖ ಸಮಾಧಾನಗಳು ಬಹಳಮಟ್ಟಿಗೆ ಹೆಚ್ಚಿದವೋ ಭಾವನೆಗೆ ಆ ಶೇಷರಿಗೆ ತಲೆದೋರದಿರಲ್ಲವು. ಪರಂತು ಇಂಗ್ಲೀಷ್ ಪ್ರಭುತ್ವದಿಂದುಂಟಾದ ಪ್ರಯೋಜನಗಳ ವಿಶೇಷ ಸ್ಪಷ್ಟಾಂತಗಳೂ ತಿಳಿಸಲಿಕ್ಕೆ ಪೂರ್ವದ ಅವರ ಪಾಲನೆಯಲ್ಲಿ ಗತ ೩೦ ವರುಷಗಳ ಕಾಲದೊಳುಂಟಾದ ಬಹುವಿಧ ಪ್ರಯೋಜನಗಳನ್ನು ಪ್ರಥಮತಃ ಸಂಗ್ರಹವಾಗಿ ತಿಳಿಸುವೆವು, ಏನುವರೆ.

ಸನ್ ೧೮೫೮ನೇ ಇಸವಿಯಲ್ಲಿ ನಡೆದ ಇಂಡಿಯನ್ ಮ್ಯುಟಿನಿಯ ತರುವಾಯ ಇಂಡ್ಯಾದೇಶದ ಪ್ರಭುತ್ವವು ಈಸ್ಟಿಂಡಿಯಾ ಕಂಪೆನಿಯವರ ಸ್ವಾಧೀನದಿಂ ತಪ್ಪಿ ಶ್ರೀಮನ್ಮಹಾರಾಜ್ಞೀಯವರ ಸಾಕ್ಷಾತ್ಪಾಲನಾಧಿಕಾರಗಳಿಗೊಳಪಟ್ಟಿತು. ಅದು ಮೊದಲು ಇದುವರೆಗೆ ಅಂದರೆ, ಗತ ೩೦ ವರುಷಗಳ ಕಾಲದಲ್ಲುಂಟಾದ ಬದಲಾವಣೆಗಳೂ ಪ್ರದೇಶಗಳ ಸ್ಥಿತಿ ಭೇದವೂ ಬಹಳ ಪರಿಗಣನೀಯಗಳಾಗಿರುತಿವೆ. ಸನ್ ೧೮೫೩ನೇ ಇಸವಿಯಲ್ಲಿ ಈ ದೇಶದೊಳು ರೈಲ್ವೇ ಸಂಬಂಧವು ಕೇವಲ ಅಲ್ಪವಾಗಿತ್ತು. ಅಂದರೆ ೩೦೦ ಮೈಲುಗಳವರಿಗೆ ರೈಲ್ವೆ ಹಾಕಲ್ಪಟ್ಟಿತ್ತು. ಈಗಲಾದರೋ ೧೪೦೦೦ ಮೈಲುಗಳಿಗೆ ಮೇಲ್ಪಟ್ಟು ರೈಲ್ ರಸ್ತೆಯು ಹಾಕಲ್ಪಟ್ಟು ಅನೇಕ ರಸ್ತೆ ಜರುಗುತಲಿವೆ ಆಕಾಲದಲ್ಲಿ ೩೦೦೦ ಮೈಲುಗಳವರಿಗೆ ತಂತಿ ಹಾಕಲ್ಪಟ್ಟು ಎಂಭತ್ತು ಆಫೀಸುಗಳು ಸ್ಥಾಪಿಸಲ್ಪಟ್ಟಿದ್ದವು. ಈಗಲಾದರೋ ೩೦೦೦ ಮೈಲುಗಳ ವರಿಗೆ ೪೩,೪೯೦ ಮೈಲುಗಳ ಉದ್ದವುಳ್ಳ ತಂತಿಯು ಹಾಕಲ್ಪಟ್ಟು ಇದಕ್ಕಾಗಿ ೩೦೪೯ ಟೆಲಿಗ್ರಾಫ್ ಆಫೀಸುಗಳು ಸ್ಥಾಪಿಸಲ್ಪಟ್ಟಿರುತವೆ. ಇದಲ್ಲದೆ ಯೂರೋಪ್ ಮತ್ತಿತರ ಅನ್ಯದೇಶಗಳಿಗೆ ತಂತಿ ಮೂಲಕವಾದ ಸಂಬಂಧವು ಇರಲಿಲ್ಲವು. ಈಗ ಭೂಮಂಡಲದೊಳೆಲ್ಲಿ ಏನು ಜರುಗಿದಾಗ್ಯೂ ಕೂಡಲೇ ತಿಳಿಯುವದಕ್ಕೆ ಅನುಕೂಲಿಸುವಂತೆ ಸಮುದ್ರ ಮಾರ್ಗದೊಳು ಸಹ ತಂತಿ ಹಾಕಲ್ಪಟ್ಟಿದೆ. ಪೂರ್ವದಲ್ಲಿ ಯೂರೋಪಿಗೆ ಟಪಾಲ್ ಹೋಗಿ ಬರಲಿಕ್ಕೆ ೩೫೦ ... ದಾಟಿ ೬೦ ದಿನಗಳಕಾಲ ಹಿಡಿಯುತಲಿತ್ತು. ಈಗ ಬೇಕಾದ ಸೌಕರ್ಯ ಪ್ರಬಂಧ ಮಾಡಲ್ಪಟ್ಟದ್ದರಿಂದ ೧೬-೧೭ ದಿವಸಗಳೊಳಗಾಗಿ ಇಂಗ್ಲಾಂಡಿಗೆ ಟಪಾಲ್ ಹೋಗಿ ತಲುಪುತದೆ. ೧೮೫೭ನೇ ಇಸವಿಯ ಮೊದಲು ಉದ್ಯೋಗಗಳಾದ ವಿಷಯಗಳ ಪರಿವಿಡಿಯನ್ನರಿಯಲಿಕ್ಕೆ ಸಾಧಕವಾಗಿ ಲೆಕ್ಕಗಳಂ ಪಡೆಯಲಿಕ್ಕೆ ಬೇಕಾದ ಪ್ರಯತ್ನಗಳು ಮಾಡಲ್ಪಡದಿರಲಿಲ್ಲವು. ಪ್ರಜಾಸಂಖ್ಯೆಯನ್ನರಿಯುವದಕ್ಕೆ ಸ್ವಲ್ಪ ಹೆಚ್ಚು ಕಡಿಮೆಯಾಗಿ ಸರಾಸ್ ವಾಕಾ ಪಾನೇಷ್ಮಾರಿಯೂ, ಕೇವಲ ಪರಿಮಾಣ ಗುಣಭೇದಗಳಂ ಬೋಧಿಸುವ ಟಾಪೋಗ್ರಾಫಿಕಲ್ ಸರ್ವೆಯೂ, ಪೂರ್ವರಾಜರ ವೃತ್ತಾಂತಗಳನ್ನೂ ಅವರ ಪ್ರಶಸ್ತಿಗಳನ್ನೂ ಅವರ ದಾನ ಧರ್ಮಗಳನ್ನೂ ಅವರ ಕಾಲದೇಶ

ಪ್ರಸ್ತುತಗತಿಗಳನ್ನು ಅರುಹುವಂತಃ ಪೂರ್ವ ಪದ್ಧತಿಗಳ ಪರಿಶೋಧನೆಯೂ ಮೃತ್ತಿಕಾ ಶಾಸ್ತ್ರಸಂಬಂಧವಾದ ಪರಿಶೋಧನೆಯೂ ಪ್ರಾರಂಭಿಸಿ ಕೀರ್ತಿಯನ್ನೈದಿದರು. ನಿಷ್ಪಕ್ಷಪಾತವಾದ ನ್ಯಾಯ ವಿಮರ್ಶೆಯ ಬಗ್ಗೆ ನ್ಯಾಯಸ್ಥಾನಗಳೂ ಅವುಗಳ ಅಪೀಲ್ ಬಗ್ಗೆ ಸರ್ವೋತ್ಕೃಷ್ಟಗಳಾದ ನ್ಯಾಯ ನಿಬಂಧನೆಗಳೂ ಪ್ರಜಾಹಿತಚಿಂತನೆಯಿಂದ ನಡೆಗೊಳಿಸಲ್ಪಟ್ಟವು. ಇಲ್ಲದೆ ಗತ ೩೦ ವರುಷಗಳ ಕಾಲದಲ್ಲಿ ಸೇಕಡಾ ೩ರ ಬಡ್ಡಿಯ ಪ್ರಕಾರ ೧,೩೯೮,೩೩,೦೦೦ ರೂಪಾಯಿಗಳಿಂದ ೨,೩೬೦೩,೦೦೦ ರೂಪಾಯಿಗಳವರೆಗೆ ಹಣದ ಬಡ್ಡಿ ಹಾಕಿದ ಬಟ್ಟೆವಳಿಯು ಜಾಸ್ತಿಯಾಯಿತು. ಮತ್ತು ವ್ಯವಸಾಯಾಭಿವೃದ್ಧಿಯಿಂದಲೂ, ನಿರಪ್ ಚೆತೆವಾಗುತ ಬಂದುದರಿಂದಲೂ ನೀರಾವರಿ ಕಾಮಗಾರಿಗಳ ಮೂಲಕ ಪ್ರಯೋಜನವಿಲ್ಲದ ವಿಶೇಷ ಜಲವಸತಿ ಯಿಂದಲೂ ನೂತನಗಳಾದ ಆಹಾರ ಧಾನ್ಯಗಳು ಈಚೆಗೆ ಈ ದೇಶದಲ್ಲಿ ಹೇರಳವಾಗಿ ಪ್ರಚಾರ ಕ್ಕೆ ಬಂದದರಿಂದಲೂ ಜಮೀನು ಮೂಲಕವಾಗಿ ಬಟ್ಟೆ ಹಿಡುವಳಿಯು ಸೇಕಡಾ ೧೨ ರೂಪಾಯಿಗಳ ವರೆಗೆ ಹೆಚ್ಚಾಗುವ ಸಂಭವ ವುಂಟಾಗಿದೆ, ೧೮೮೭ ನೇ ಇಸವಿಯಲ್ಲಿದ್ದ ೧೪೦೦ ಸರಕಾರಿ ಆಸ್ಪತ್ರೆಗಳಲ್ಲಿ ೬,೨೧,೦೦೦ದುಂಬ ರೋಗ ಪೀಡಿತರು ಚಿಕಿತ್ಸೆ ಹೊಂದಿದ್ದರು, ೧೮೮೭ ನೇ ಇಸವಿಯಲ್ಲಿ ೧-೧೧ ಆಸ್ಪತ್ರೆಗಳು ಸ್ಥಾಪಿಸಲ್ಪಟ್ಟು ೫೩,೦೦೦ ಜನಸ್ಥಳದವರೂ ೧೦.೩೬,೦೦೦ ವಸ್ಥಳದವರೂ ಚಿಕಿತ್ಸೆಗಳಿಗೊಳಗಾಗಿದ್ದರು ೩೭ ವ ಡಕಿನಿಂದಲ್ಲಿ ಹಾಕಲ್ಪಟ್ಟಿದ್ದ ೩೦೦ ಮೈಲುಗಳ ಫಾಸಲೆಯುಳ್ಳ ರೈಲ್ವೆ ರಸ್ತೆಯಲ್ಲಿ ೪೦ ಲಕ್ಷ ರೂ ವೆಗಳ ಮತ್ತು ೫೩,೨೦,೦೦ ಜನಗಳ ಸಂಚಾರವು ನಡೆಯುವಂತೆ ಸರಗಳ ಅನುಕೂಲವು ನ ಡೆಯುವದಿದೆ. ಈಗ ೧೫೦೦೦ ಮೈಲುಗ ಳರೈಲುರಸ್ತೆಯು ಮುಗಿದಾಗಿ ೯,೫೦೦,೦೦೦ ಪ್ರಜೆಗಳ ಸಂಚಾರಕ್ಕೆ ಸಿದ್ಧವಾಗಿ ೬ ಕೋಟಿ ವರ್ಗದ ಸಾಮಾನುಗಳು ರವಾನಿಸಲ್ಪಟ್ಟವು. ಇಲ್ಲದೆ ೬೦೦ ಮೈಲುಗಳ ರಸ್ತೆಯು ಅಣ್ವಾ ಏಕಾಮಗಾರಿಯಲ್ಲಿದೆ. ಸರಕುಗಳ ಆಮದ್ ರಫ್ತಿನ ವಿಷಯದಲ್ಲಿ ತ್ವರಿತವಾದ ಸಂಚಾರಕ್ಕೆ ಅನುಕೂಲವಾದ ರಾಜಮಾರ್ಗಗಳೂ, ನಿರಪಾಯಗಳಾದ ಇತರ ಸಾಧನಗಳೂ, ಸುಲಭವಾದ ರೈಲ್ವೇ ಅನುಕೂಲ್ಯವೂ ಪ್ರಾಪ್ತವಾಗಿರುವದರಿಂದ ಹಿಂದೆ ಒಬ್ಬ ಮನುಷ್ಯನು ದಿವಸವೊಂದಕ್ಕೆ ೨೦ ಮೈಲುಗಳ ದೂರ ಪ್ರಯಾಣಮಾಡುವದರಿಂದ ಪಡೆಯುತಲಿದ್ದ ಪ್ರಯೋಜನವು ನೋಡಲಾಗಿ ಈಗ ಸದರೀ ಮನುಷ್ಯನು ದಿನ ೧ ಕ್ಕೆ ೪೦೦ ಮೈಲುಗಳ ವರೆಗೆ ಪ್ರಯಾಣ ಮಾಡುವದಕ್ಕೆ ಶಕ್ತನಾಗಿರುವದರಿಂದ, ಈ ಮೂಲಕ ವರ್ತಕರೂ, ಬೇಸಾಯಗಾರರೂ, ಪ್ರಯಾಣಿಕರೂ ಸಾಲಿಯಾನಾ ೬ ಕೋಟಿ ರೂಪಾಯಿಗಳ ಲಾಭವನ್ನು ಹೊಂದುತ್ತ ಬರಲಿಕ್ಕೆ ವಿಶೇಷತಃ ಸಮಯಾನುಕೂಲವಾಗಿ ೧೮೯೦ ನೇ ಇಸವಿಯಲ್ಲಿ ೨೫ ಪ್ರೋವಿನ್ಸುಗಳ ಲ್ಲದೆ ೩೭೦೦೦ ಮೈಲುಗಳ ವರೆಗೆ ಕಾಗದಗಳು ಹೋಗಿ ಬರಲಿಕ್ಕೆ ರಸ್ತೆಗಳು ಹಾಕಲ್ಪಟ್ಟವು. ಈಗ ೧೬-೭೬ ಪ್ರೋವಿನ್ಸುಗಳು ನೆರೆಗೊಳಿಸಲ್ಪಟ್ಟು ೭೬-೭೬ ಮೈಲುಗಳ ಫಾಸಲೆಯುಳ್ಳ ರಸ್ತೆಯು ಸಿದ್ಧವಾಗಿದೆ. ಹಿಂದೆ ಬರಹವೆಂಬ ಗುತಲಿದ್ದ ೩೩೦ ಲಕ್ಷ ಲಕೋಟೆಗಳಿಂದ, ೨೨೮ ಲಕ್ಷ ಲಕೋಟೆಗಳ ವರೆಗೆ ಈಗ ಜಾಸ್ತಿಯಾಗಿದೆ. ೧೮೫೮ನೇ ಇಸವಿಯಲ್ಲಿ ಸಮುದ್ರಮಾರ್ಗವಾಗಿ ರಫ್ತಾದ ಸರಕುಗಳ ಮೂಲಕ ೫೫ ಲಕ್ಷ ರೂಪಾಯಿಗಳು ಹುಟ್ಟುವಳಿಯಾದವು. ೮೮ನೇ ಇಸವಿಯಲ್ಲಿ ೯೩ ಲಕ್ಷ ರೂಪಾಯಿಗಳ ವರೆಗೆ ವೃದ್ಧಿಯಾಯಿತು. ಹೀಗೆಯೇ ಆಮದ್ ಮೂಲಕ ಸಹ ೧೪೫ ರಿಂದ ೬೫ ಲಕ್ಷ ರೂಪಾಯಿಗಳ ತನಕ ಜಾಸ್ತಿಯಾಯಿತು. ಈಗ್ಗೆ ೩೦ ವರುಷಗಳ ಹಿಂದೆ ಇಂಡ್ಯಾ ದೇಶದಲ್ಲಿ ಯಾವ ಸುಪ್ರೀಂ ಹೈಕೋರ್ಟುಗಳಲ್ಲಾಗಲೀ, ಯಾವ ನ್ಯಾಯ ವಿಧಾಯಕ ಸಭೆಯಲ್ಲಾಗಲಿ ನೇಟಿವನೊಬ್ಬ ನೂ ಇರಲಿಲ್ಲವು. ೧೮೮೮ ನೇ ಇಸವಿಯಲ್ಲಿ ೫೯ ಜನ ಇಂಡಿಯನ್ ಕವೆನಾಂಟಡ್ ಸಿವಿಲ್ ಸರ್ವಿಸಿಗೆ ಸೇರಿದ ನೇಟಿವ್ ಉದ್ಯೋಗಸ್ಥರೂ ೩೫೮೮ ಜನ ಸಬಾರ್ಡಿನೇಟ್ ಜಡ್ಜ್ ಮತ್ತು ಜಡ್ಜಿಗಳ ಪೈಕಿ ೫೫೫೩ ಮಂದಿ ನೇಟಿವ್ ಆಫೀಸರುಗಳೂ ನೌಕರಿಯಲ್ಲಿದ್ದಾರೆ. ೧೮೬೫ ನೇ ಇಸವಿಯಲ್ಲಿ ೫೬ ಕಾಲೇಜುಗಳೂ ೧೯೦೦೦ ನಾನಾ ದರ್ಜೆಗಳುಳ್ಳ ಸ್ಕೂಲುಗಳೂ ಇದ್ದವು. ಈಗ ೧೧೦ ಕಾಲೇಜುಗಳೂ, ೧೨೨೦೫೨ ಸ್ಕೂಲುಗಳೂ ನೆರೆಗೊಳಿಸಲ್ಪಟ್ಟಿವೆ. ಮೊದಲು ಸದರೀ ಸ್ಕೂಲುಗಳಲ್ಲಿ ವಿದ್ಯಾಭ್ಯಾಸ ಮಾಡುತಲಿದ್ದವರು ೬,೧೯, ೫೭೦ ಮಂದಿಗಿಂತ ಜಾಸ್ತಿಯಾಗಿಲ್ಲವು. ಈಗಲಾದರೋ ೩೩,೧೪,೫೮೬ ಜನ ವಿದ್ಯಾಭ್ಯಾಸ ಮಾಡುತಲಿದ್ದಾರೆ. ಈಗ್ಗೆ ಹಿಂದೂ ಬಾಲೆಯರಿಗಾಗಿ ಒಂದು ಶಾಲೆಯ ಸಹ ಏರ್ಪಟ್ಟಿರಲಿಲ್ಲವು. ಈಗ ಎತ್ತ ನೋಡಿದರೂ ಪುರುಷರಿಗೆ ಸಮಾನವಾಗಿ ಸ್ತ್ರೀಯರನ್ನು ವಿದ್ಯಾವತಿಯರನ್ನಾಗಿ ಮಾಡುವ ಬಗ್ಗೆ ಕನ್ಯಾ ಪಾಠಶಾಲೆಗಳು ಸ್ಥಾಪಿಸಲ್ಪಟ್ಟು ಅನೇಕ ಹಿಂದೂ ಹುಡುಗಿಯರು ವಿದ್ಯಾಭ್ಯಾಸ ಮಾಡುತ್ತ [illegible] ಬರುತಲಿದ್ದಾರೆ. ಈಗ್ಗೆ ೩೦ ವರುಷಗಳ ಹಿಂದೆ ಇದ್ದ ಜನರ ಕ್ಷುದ್ರಭಾವವೆಯೂ ಜಾತಿಮತ ಪ್ರಯುಕ್ತವಾದ ಈರ್ಷ್ಯಾಸೂಯೆಗಳೂ ರಾಗದ್ವೇಷಗಳೂ ತುಮ್ಮಾಂಗ ನಿಸ್ಸತ್ವಗಳಾಗಿ ಮಾನವಕೋಟಿ ಗೊಳಿಸಲ್ಪಡವರೆಲ್ಲರೂ ಸೋದರ ವಾತ್ಸಲ್ಯ ಪ್ರಣಯರಾಗಿ ಅನ್ಯೋನ್ಯ ಭಾವವೊದನೆ ಏಕೀಭವಿಸಬೇಕೆಂಬ ಕೋರಿಕೆಯೂ ಪ್ರವೃತ್ತಿಯೂ ಸರ್ವ ಜನೀನವಾಗಿ ಏರ್ಪಟ್ಟಿದೆ. ಜನರ ಸ್ವಾತಂತ್ರ್ಯವೂ ಅರ್ಹತೆಯೂ, ವಿದ್ಯಾವಿನಯಾದಿ ಗುಣಗಳೂ, ಪೂರ್ವಕ್ಕಿಂತ ಜಾಸ್ತಿಯಾಗುತಲಿವೆ. ಹೀಗೆಯೇ ಚಿಂತನೀಯಗಳಾದ ಇನ್ನೂ ಅನೇಕ ಗುಣಭಾಗಗಳಿಂದ ಬ್ರಿಟಿಷರವರ ಪ್ರಭುತ್ವವು ಇಂಡ್ಯಾ ದೇಶೀಯರಿಗೆ ದಿನಗಣನೀಯಗಳಾದ ಶುಭ ಪರಂಪರೆಗಳನ್ನುಂಟುಮಾಡಿತು. ಗತ ೩೦ ವರುಷಗಳ ಕಾಲದಲ್ಲಿ ಇಷ್ಟರ ಪಿಲಿಟಿಷರವರ ಗೊಳಪಡಿಸಿದ ಅನ್ಯ ದೇಶೀಯರ ಪ್ರಭುತ್ವದಿಂ ನಾವು ಪಡೆವ ವಿರುದ್ಧ ಫಲಗಳು ಕೆಲವಂ ಮತ್ತೊಂದುಸಂದರ್ಭದಲ್ಲಿ ತಿಳಿಸುವೆವು.

Occasional Notes
ನೈಮಿತ್ತಿಕ ವಿಷಯನ್ಯಾಸ.

The Calcutta University.—ಈ ಸಲ ಕಲ್ಕತ್ತಾ ಯೂನಿವರ್ಸಿಟಿ ಎಂ. ಎ. ಪರೀಕ್ಷೆಗೆ ಹೋಗಿದ್ದವರ ಪೈಕಿ ಅರವತ್ತೆರಡುಮಂದಿ ತೇರ್ಗಡೆಯಾಗಿರುತ್ತಾರೆ.

The excise revenue of Madras.—೧೮೮೮-೮೯ ನೇ ಸರ್ಕಾರ್ ಸಾಲಿನಲ್ಲಿ ಮದರಾಸ್ ಎಕ್ಸೈಜ್ ಸಂಬಂಧ ಹುಟ್ಟುವಳಿಯು ೭,೧೪,೨೪,೮೦೬ ರೂಪಾಯಿಗಳು.

A liberal donation.—ಗಯಾ ಜಿಲ್ಹೆ ನಿವಾಸಿಯಾದ ಬಾಬೂರಾಮ್‌ಬಹದೂರ್‌ಸಿಂಗರವರು, ವೈದ್ಯಶಾಸ್ತ್ರ ಪ್ರವೀಣರಾದ ಹೆಂಗಸೊಬ್ಬಳು ಸದರೀ ಸ್ಥಳದಲ್ಲಿರಬೇಕಾದ್ದಾವಶ್ಯಕವೆಂದು ಯೋಚಿಸಿ, ಆಕೆಯ ಸಂಬಳದ ಬಗ್ಗೆ ೫೫,೦೦೦ ರೂಪಾಯಿಗಳು ಕೊಟ್ಟಿರುತ್ತಾರೆ.

Recovery from illness.—ಅಲ್ವಾರ್ ಸಂಸ್ಥಾನದ ಮಹಾರಾಜರವರು ಈಚೆಗೆ ಕಲವುದಿನಗಳ ಮೊದಲು ಅನಾರೋಗ್ಯಸ್ಥಿತಿಯಲ್ಲಿದ್ದರಷ್ಟೆ. ಈಗ ಸದರೀಯವರಿಗೆ ರೋಗ ನಿವೃತ್ತಿಪೂರ್ವಕ ಆರೋಗ್ಯಭಾಗ್ಯ ಪ್ರಾಪ್ತವಾಗುತಲಿರುವಂತೆ ತಿಳಿದು ಸಂತೋಷಿಸುತ್ತೇವೆ.

An order of Government.—ಸರ್ಕಾರ್ ಉದ್ಯೋಗಸ್ಥರು ತಮ್ಮ ಇಲಾಖಾ ಮೊಖ್ತೇಸರರಿಂದ ಲಿಖಿತಮೂಲಕ ಅಪ್ಪಣೆಯು ಪಡೆದ ಹೊರತು ಯಾವ ವೃತ್ತಾಂತ ಪತ್ರಿಕೆಗೂ ಬಾತ ವಿಚಾರವಾದನಾಗಕೂಡದೆಂದು ನಿಷೇಧಿಸಿ ಬಂಗಾಳೇ ಗವರ್ನಮೆಂಟಿನವರು ಒಂದು ನಿಬಂಧನೆಯಂ ಮಾಡಿ ಆಯಾ ಇಲಾಖೆಗಳ ಮೊಖ್ತೇಸರರುಗಳಿಗೆ ಕಳುಹಿಸಿರುತ್ತಾರೆ.

The Travancore High Court.—ಈ ತಿಂಗಳ ೧೩ನೇ ತಾರೀಖಿನಲ್ಲಿ ತಿರುವಾಂಕೂರು ಹೈಕೋರ್ಟಿನಲ್ಲಿ ಕೆಲವು ಹೊಸ ಏರ್ಪಾಡುಗಳು ನಡೆಯುವವು. ಅಲ್ಲಿ ಈಗಿರುವ ಐದುಮಂದಿ ಜಡ್ಜಿಗಳ ಪೈಕಿ ಒಬ್ಬರನ್ನು ವಜಾ ಮಾಡಿ ಅವರಿಗೆ ಸಲ್ಲುತಲಿದ್ದ ಸಂಬಳವನ್ನು ಉಳಿದ ನಾಲ್ವರು ಜಡ್ಜಿಗಳಿಗೆ ಅವರವರ ಯೋಗ್ಯತಾನುಸಾರ ಮತ್ತು ಅದೃಷ್ಟಾನುಸಾರ ಹಂಚಲ್ಪಡುವವು.

A police notice.—ಮುಸಲ್ಮಾನ್ ಹೆಂಗಸರು ಹೊರಗೆ ಸಂಚಾರಕಾಲಗಳಲ್ಲಿ ಮುಖವನ್ನು ಬಟ್ಟೆಯಿಂದ ಅಥವಾ ಬೇರೆ ವಿಧದಿಂದ ಮರೆಮಾಡಿಕೊಂಡು ಹೋಗುವ ಶ್ಲಾಘ್ಯವಾದ ಪುರಾತನ ಸಂಪ್ರದಾಯವು ಅನುಸರಿಸಬೇಕಾದ್ದಾವಶ್ಯಕವೆಂದು ನಮೂದಿಸಿ ತುರ್ಕೀದೇಶದ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ಪಟ್ಟಣದ ಪೋಲೀಸ್ ಅಧಿಕಾರಿಗಳು ಅಲ್ಲಿನ ಹೆಂಗಸರಿಗೆ ನೋಟೀಸ್ ಕೊಟ್ಟಿರುತ್ತಾರೆ.

A meeting.—ಈ ಸಂವತ್ಸರಾರಂಭದಿನದಲ್ಲಿ ದೆಹಲೀ ಪಟ್ಟಣದೊಳಗಣ ಖಾತಿಯಾನಾ ಎಂಬ ಹವೇಲಿನೊಳು ಧರ್ಮ ಸಭೆಯವರು ಸಮಾಜ ಸೇರಿದ್ದರಲ್ಲದೆ ಮಹಾಮಂಡಲ ಸಭೆಯು ಪ್ರಬಲರಾದ ಸಂಸ್ಕೃತ ಪಂಡಿತರನೇಕರು ಸಹ ಬಂದಿದ್ದು ಮಹಾರಾಜ್ಞೀ ಇಂಡ್ಯಾ ಚಕ್ರವರ್ತಿನೀಯವರಿಗೆ ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನುಂಟುಮಾಡಬೇಕೆಂದು ಭಗವಂತನು ಕುರಿತು ಪ್ರಾರ್ಥಿಸಿದರು.

Freak of nature.—ಚೆಂಗನಚ್ಚೇರಿ ಎಂಬ ಸ್ಥಳದಿಂದ ಮದರಾಸ್ ಮೆಯಿಲ್ ಪತ್ರಿಕೆಯ ಬಾತಮಿದಾರನೊಬ್ಬನು ಬರೆಯುತ್ತಾನೇನೆಂದರೆ:—ವಾಳಪ್ಪಳ್ಳಿ ಯೆಂಬ ಸ್ಥಳದಲ್ಲಿ ಕುಜಾತಿ ಹೆಂಗಸೊಬ್ಬಳು ಗರ್ಭಿಣಿಯಾಗಿದ್ದು ಈಚೆಗೆ ಹೆತ್ತಳು. ಮಗುವಿನಮೇಲೆಲ್ಲ ಕೂದಲು ಮತ್ತು ಕಪ್ಪು ಗೆರೆಗಳು ತುಂಬಿರುತಿವೆ. ಕೂದಲು ಬಹಳವಾಗಿಯೂ ದಪ್ಪವಾಗಿಯೂ ಇವೆ. ಉಗುರುಗಳು ಬಹಳವಾಗಿಯೂ ಡೊಂಕು ಡೊಂಕಾಗಿಯೂ ಇವೆ. ಮಗುವು ಕ್ಷೇಮದಿ ಬೆಳೆದ ಕಾಲದಿ ಚೆಕ್ಕನಾಗಿದೆ, ಎಂಬದು.

Fever in Cuddapa.—ಈಚೆಗೆ ಕಡಪೆಯಲ್ಲಿ ಜ್ವರರೋಗ ಪ್ರಬಲಗೊಂಡು ಸರ್ಕಾರಿ ನೌಕರರ ಪೈಕಿ ಅನೇಕರು ಅದಕ್ಕೆ ಗುರಿಯಾಗಿರುವದರಿಂದ, ಅವರು ಮಾಡುತಲಿದ್ದ ಕೆಲಸಗಳೆಲ್ಲವು ಅವಚಿಕೆಯಾಗಿಯೇ ಹೋಗಿರುವಂತೆಯೂ, ಕಲೆಕ್ಟರ್ ಕಚ್ಚೇರಿ ನೌಕರರು ೫೩ ಮಂದಿಯ ಪೈಕಿ ೧೩ ಮಂದಿ ರಜೆಯಲ್ಲಿದ್ದಾಗಿರುವದರಿಂದ ಅವರೆಲ್ಲರಿಗೂ ಆರೋಗ್ಯ ಪ್ರಾಪ್ತವಾಗುವ ತನಕ ಸರ್ಕಾರ್ ಕೆಲಸಗಳು ನಡೆಸತಕ್ಕ ಬಗ್ಗೆ ದುಗಾವಿನಾ ಯಾಗಿ ಕೆಲವರು ಬಿಟ್ಟುಕೊಳ್ಳಬೇಕಾದ ದಕ್ಕೆ ರುಕುಂ ಆಗಬೇಕೆಂತಲೂ ಕಲೆಕ್ಟರವರು ಗವರ್ನಮೆಂಟಿಗೆ ಬರೆದುಕೊಂಡಿರುವಂತೆ ತಿಳಿಯಬರುತಿದೆ.

LOCAL AND PROVINCIAL NEWS.
ಒಳದೇಶವಮತ್ತುತಾಲ್ಲೂಕಿನವಾರ್ತೆಗಳು.

Enrollment.—ಊಟಿರು ಚೀಫ್‌ಕೋರ್ಟ್ ಅಡ್ವೋಕೇಟುಗಳಲ್ಲೊಬ್ಬರಾದ ಮೆ|| ತಿಮ್ಮಕೃಷ್ಣರಾಯರವರು, ಮದರಾಸ್ ಕೋರ್ಟುಗಳಲ್ಲಿ ಸಹ ವಕಾಲತಿ ಮಾಡುವ ತಾತ್ಪರ್ಯದೊಡನೆ ಮದರಾಸ್‌ಹೈಕೋರ್ಟಿನ ವಕೀಲರಾಗಿ ದಾಖಲಾಗುವದಾಗಿದಾರೆಂದು ಕೇಳುತ್ತೇವೆ.

Birth of a son.—ಶ್ರೀಮನ್ಮಹಾರಾಜರವರ ಜ್ಯೇಷ್ಠಕರಾದ ಮ|| ಬಾಳೇ ಅರಸಿನವರ ಮಕ್ಕಳ ಧರ್ಮಪತ್ನಿಗಳ ಗರ್ಭ ಸುಧಾಂಬುಧಿಯಲ್ಲಿ ನಿನ್ನೇ ಆದಿತ್ಯವಾರ ದಿವಸ ಸುಮಾರು ೬ ಗಂಟೆವೇಳೆಯಲ್ಲಿ ಪುತ್ರರತ್ನವುದಯವಾದ ಸಂಗತಿಯನ್ನು ಅತ್ಯಂತ ಸಂತೋಷದಿಂದ ತಿಳಿಸುತ್ತೇವೆ.

H. H. the Maharani of Mysore.—ಶ್ರೀಮನ್ ಮೈಸೂರ್ ಮಹಾರಾಣಿಯವರು ಮೊನ್ನೇ ಮಡಕೇರಿಗೆ ೧೬ ನೇ ತಾರೀಖ್ ಗುರುವಾರ ದಿವಸ ಸ್ಪೆಷಲ್ ಟ್ರೈನಿನಲ್ಲಿ ಈ ಪ್ರಾಂತಕ್ಕೆ ದಯಮಾಡುವರೆಂದು ನಿರೀಕ್ಷಿಸಲ್ಪಟ್ಟಿದೆ. ಅವರು ತಮ್ಮ ಮಕ್ಕಳೊಡನೆ ಕೆಲವುಕಾಲ ಊಟಿಯಲ್ಲೇ ಇರುವರೆಂದು ತೋರುತಿದೆ.

The B. A. Degree Examination.—ಕಳೆದ ನವಂಬರ್ ತಿಂಗಳೊಳು ಜರಿಗಿದ ಬಿ. ಎ. ಪರೀಕ್ಷೆಯ ಪೂರ್ವ ಭಾಗದಲ್ಲಿ ತೇರ್ಗಡೆಯಾದ ಉಮೇದುವಾರರೆಲ್ಲರೂ ಮುಂದಿನ ವಾರದಲ್ಲಿ ಉತ್ತರಭಾಗದಪರೀಕ್ಷೆಗೆ ಹಾಜರಾಗುವದಕ್ಕಾಗಿ ಮದರಾಸಿಗೆ ಪ್ರಯಾಣವಾಗುವರು. ಅದೇಕಾಲದಲ್ಲಿ ಈಸಲದ ಬಿಯಲ್ ಪರೀಕ್ಷೆ ಸಹ ಜರುಗುವದು.

Additional allowances.—ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟೀಕಮಿಷನರ್ ಮಿ|| ಮಿಡಿಲ್‌ಟನರವರು ಅಲ್ಲಿನ ಮ್ಯುನಿಸಿಪಾಲಿಟಿಯ ವಿಚಾರಣೆ ಮಾಡುವದಕ್ಕಾಗಿ ಅವರಿಗೆ ಮಾಹೆಯಾನಾ ೫೦ ರೂಪಾಯಿಗಳೂ, ಟೌನ್ ಮ್ಯಾಜಿಸ್ಟ್ರೇಟರಿಗೆ ವೈಸ್ ಪ್ರೆಸಿಡೆಂಟ್ ಕೆಲಸ ನೋಡತಕ್ಕ ಬಗ್ಗೆ ಮಾಹೆಯಾನಾ ೫೦ ರೂಪಾಯಿಗಳೂ ರುಸುಂ ತರೀಕ ಕೊಡಲ್ಪಡತಕ್ಕದ್ದೆಂದು ದಿವಾನರವರು ಹುಕುಂ ಮಾಡಿರುವಂತೆ ತಿಳಿಯಲಾದೆವು.

Re-opening of Schools.—ಕೆಲವು ಒಳದೇಶದ ಇಂಗ್ಲಿಷ್ ಪಾಠಶಾಲೆಗಳಿಗೆ ಕ್ರಿಸ್‌ಮಸ್ ಹಬ್ಬಕ್ಕಾಗಿ ಕೊಡಲ್ಪಟ್ಟಿದ್ದ ರಜಾ ಪೂರೈಸುತ ಬಂದದರಿಂದ ಅವು ಮುಂದಿನ ವಾರದಲ್ಲಿ ಮರಳ ತೆರೆಯಲ್ಪಟ್ಟು ಪಾಠ ಪ್ರವಚನಗಳು ಮರಳ ಉಪಕ್ರಮಿಸಲ್ಪಡುವವು. ಇದಲ್ಲದೆ ಕಳೆದ ತಿಂಗಳಲ್ಲಿ ನಡೆದ ಮಿಡಲ್‌ಸ್ಕೂಲ್ ಪರೀಕ್ಷೆಯ ಫಲಿತಾಂಶವು ಮುಂದಿನವಾರದಲ್ಲಿ ಹೊರಬೀಳುವದೆಂದು ನಿರೀಕ್ಷಿಸಲ್ಪಟ್ಟಿರುತಿದೆ.

Mr. B. L. Rice.—ಎಜ್ಯುಕೇಷನ್ ಸೆಕ್ರೆಟರಿಯವರಾದ ಮಿ|| ರೈಸ್ ಯವರಿಗೆ ವಿದ್ಯಾಭ್ಯಾಸದ ಇಲಾಖೆಯ ವಿಚಾರಣಾಧಿಕಾರವು ಕ್ಷೀಣವಾಗಲಿದೆ ಎಂಬ ವರ್ತಮಾನವು ಕೇಳುತ್ತೇವೆ. ಮೈಸೂರು ದೇಶದ ವಿದ್ಯಾಭಿವೃದ್ಧಿಗೂ, ತತ್ರಾಪಿ ಕರ್ಣಾಟಕ ಭಾಷೆಯ ಪ್ರಾಬಲ್ಯಕ್ಕೂ, ಮಿ|| ರೈಸ್ ಯವರು ಕಾರಣಭೂತರಾದ ಒಬ್ಬರೆಂದು ಸೀರಾಕರಿಸಲಾದರು. ಈ ಮಹನೀಯರು ಈ ದೇಶಕ್ಕೆ ಮಾಡಿದ ಮಹೋನ್ನತ ಉಪಕಾರಗಳನಾರ್ಹವಾಗದೆ ಹೋಗಲಾರದೆಂದೆಣಿಸುತ್ತೇವೆ.

An importation.—ಮುಂಬೈ ಪೋಲೀಸ್ ಚೀಫ್ ಇನ್ಸ್‌ಪೆಕ್ಟರಾದ ಮಿ|| ಫ್ರಾಂಜಿ ಯೆಂಬವರು ಈ ದೇಶದ ಪೋಲೀಸ್ ಇಲಾಖೆಯಲ್ಲಿ ಅಸಿಸ್ಟೆಂಟ್ ಕಮಿಷನರ್ ಕೆಲಸಕ್ಕೆ ಕರೆಯಿಸಲ್ಪಟ್ಟು ನೇಮಕರಾಗುತಲಿದ್ದಾರೆಂದು ಕೇಳುತ್ತೇವೆ. ಇಂತಾ ಕೆಲಸಕ್ಕೆ ಈ ಪ್ರಾಂತ್ಯದವನೊಬ್ಬನೂ ಅರ್ಹರೆಂದು ಭಾವಿಸಲ್ಪಡದೆ ಹೋದದಕ್ಕಾಗಿ ವಿಷಾದಪಡಬೇಕಾಗಿದೆ. ಸದರೀ ಇಲಾಖೆಯಲ್ಲಿ ಜನಗಳ ಪರಿಚಯ, ಶೀಲಸ್ವಭಾವಕ್ಕೂ ತಕ್ಕ ಅತ್ಯಂತಾವಶ್ಯಕಗಳಾಗಿರುವಲ್ಲಿ ಈಗ ಹೊಸದಾಗಿ ಬಂದಿರತಕ್ಕವರು ಹೆಚ್ಚರವಾಗಿ ತಮ್ಮ ನೌಕರಿಯಂ ಸಾರ್ಥಕಗೊಳಿಸುವರೋ ನೋಡಬೇಕು.

NEWS LETTER.
ವೃತ್ತಾಂತಪತ್ರ.

ಸಾಗರ, ತಾ ೨ನೇ ಜನವರಿ, ೧೮೯೦.

ನಮ್ಮ ದಿವಾನರವರು ಮೊನ್ನೇ ಮಂಗಳವಾರ ರಾತ್ರಿ ೭|| ಘಂಟೆಗೆ ಈ ಪಟ್ಟಣವನ್ನು ತಮ್ಮ ಕುಮಾರನೊಂದಿಗೂ ಏಪ್ಪಟೆ ಪತ್ರರೊಂದಿಗೂ ಪ್ರವೇಶಮಾಡಿ ಈ ಪ್ರಾಮ ಹೊರಗಿನ ಟ್ರಾವಲರ್ಸ್ ಬಂಗ್ಲೆಯಲ್ಲಿ ಇಳಿದರು. ೫ ನೇ ತಾರೀಖ್ ಬೆಳಿಗ್ಗೆ ಬೆಪ್ಪಳೀಕೆರೆಯನ್ನು ನೋಡುವದಕ್ಕೆ ಹೋಗಿ ಅಲ್ಲಿ ಬೋಯಿ ಸುಬ್ಬಯ್ಯನವರ ಮನೆಯಲ್ಲಿ ಇಳಕೊಂಡು ಆತನ ಅಹಾಯ ವೆಚ್ಚಗಳನ್ನೆಲ್ಲ ಕೇಳಿ ತಿಳಿದುಕೊಂಡು ಬಂಗ್ಲೆಗೆ ೧೧ ಘಂಟೆಗೆ ವಾಪಸುದಯಮಾಡಿದರು. ಸಾಯಂಕಾಲ ನಾಲ್ಕು ಘಂಟೆಗೆ ಬಂಗ್ಲೆಯಿಂದ ಹೊರಟು ಪೇಟೆಗಳಿಂದ ದಿವಾನರೊಂದಿಗೆ ತಮ್ಮ ಪರಿವಾರವನ್ನು ಸಂಗಡ ಕರೆದುಕೊಂಡು ಹೊಸಪೇಟೆಯ ವರೆವಿಗೂ ಅಲ್ಲಲ್ಲಿ ನಿಲ್ಲಿಸಿದಕಲ್ಲ ನಿನೆಟಿಯ ಕಂಭಗಳನ್ನೂ ತೋರಣಗಳನ್ನೂ ಮುಂ

ವಗಳನ್ನೂ ವೀಕ್ಷಿಸುತ ವ|| ರಾ|| ಯಾಗ್ನೆಯ್ಯನವರ ಗೋವಿಂದಪ್ಪನವರ ಮೇಲ್ವಿಚಾರಣೆಯಲ್ಲಿ ರಕ್ಷಕ್ಕೆ ಮುಕ್ಕಾಸ್ಸೆಯ ಚಪ್ಪರಕ್ಕೆ ಬಂದ ಕೂಡಲೆ ಮ|| ರಾ|| ಗೋವಿಂದಪ್ಪನವರು ಕನ್ನಡದಲ್ಲಿ ತಯಾರ್ಮಾಡಿಸಿ ಕೊಟ್ಟಿದ್ದ ಅಡ್ರೆಸ್ಸನ್ನು ಓದಿದರು. ಇವರ ವೃದ್ಧಾಪ್ಯದ ದೆಸೆಯಿಂದ ಅಕ್ಷರಗಳು ಸ್ಫುಟವಾಗಿ ಹೊರತವೆ ಅಲ್ಲಿ ನೆರೆದವರಿಗೂ ದಿವಾನರವರಿಗೂ ಕೇಳಸದೆ ಇದ್ದುದರಿಂದ ಮರಾ|| ಡೆಪ್ಯುಟಿ ಕಮ್ಮಿಷನರವರ ಅಪ್ಪಣೆಯ ಮೇರಿಗೆ ಊರ್‍ನೂರು ಇಂಗ್ಲಿಷ ಸ್ಕೂಲ್ ಮಾಸ್ಟರ್ ಮ|ರಾ|| ವೆಂಕಟ ವರದಯ್ಯಂಗಾರ್‍ರವರು ಅದೇ ಅಡ್ರೆಸ್ಸನ್ನು ಪುನಃ ಘಟ್ಟಿಯಾಗಿ ಯೆಲ್ಲರಿಗೂ ಕೇಳಸುವಹಾಗೆ ಓದಿದರು ಅವರೆ ಕತೆಕತೆಗೆ ಬಹಳ ವೇಗವಾಗಿ ಓದಿಕೊಂಡು ಹೋದ್ದರಿಂದ ಕೆಲವರಿಗೆ ಮಾತ್ರ ಅದರ ಭಾಗವು ತಿಳಿಯದೆ ಹೋಯಿತು. ಆದರೂ ಇವರ ಓದೋಣವು ಶ್ಲಾಘನೆ ಮಾಡತಕ್ಕದ್ದೇ ಆಗಿತ್ತು. ಇದಕ್ಕೆ ದಿವಾನರವರು ಪ್ರತಿಯಾಗಿ ಕನ್ನಡದಲ್ಲಿಯೇ ಜವಾಬನ್ನು ಕೊಟ್ಟರು. ಅನಂತರ ಗಂಧ ಪುಷ್ಪ ಫಲ ತಾಂಬೂಲಗಳು ಭಾರೀ ಸಂಬಳಗಳ ಉದ್ಯೋಗಸ್ಥರಿಗೆ ಹಂಚಲ್ಪಟ್ಟವು. ಈ ಮಧ್ಯೆ ತಾಷೆಯೂ ಸ್ವಲ್ಪ ಹೊತ್ತು ನಡೆಯಿತು. ಅನಂತರ ಓವರ್‌ಸೀಯರ ಬಂಗ್ಲೆ ಮುಂದೆ,ಅಂದರೆ ಚಾಮರಾಜಪೇಟೆಯೆಂತ ಹೊಸದಾಗಿ ನಾಮಧೇಯವನ್ನು ಹೊಂದಿರುವ ಪೇಟೆಯ ಮಧ್ಯದೊಳಗೆ ಇಲ್ಲಿನ ಸಾರಸ್ವತ ಬ್ರಾಹ್ಮಣರಮೂಲಕ ಹಾಕಿರತಕ್ಕ ಚಪ್ಪರಕ್ಕೆ ದಯಮಾಡಿದರು. ಅಲ್ಲಿ ಇಂಗ್ಲಿಷಿನಲ್ಲಿ ತಯಾರ್ಮಾಡಿಸಿದ್ದ ಅಡ್ರೆಸ್ಸನ್ನು ಮ|ರಾ|| ಅಡ್ವೊಕೇಟ್ ವೆಂಕಟರಾಯರವರು ಓದಿದರು. ಇದಕ್ಕೆ ಪ್ರತಿಯಾಗಿ ಇಂಗ್ಲಿಷಿನಲ್ಲಿಯೇ ದಿವಾನರವರು ಜವಾಬ್ ಕೊಟ್ಟರು. ಅನಂತರ ಊರ್‍ನೂರು ಜ್ಯುಬಿಲೀ ಇಂಗ್ಲಿಷ್ ಸ್ಕೂಲ್ ಶಿಲಾಸ್ಥಾಪನದ ಸ್ಥಳಕ್ಕೆ ದಯಮಾಡಿ ಅಲ್ಲಿ ಬ್ರಾಹ್ಮಣರ ಮೂಲಕವಾಗಿ ಕ್ರಮವಾದ ಧೂಪ ದೀಪ ನೈವೇದ್ಯಗಳೊಡನೆ ಪೂಜೆಯನ್ನು ಮಾಡಿಸಿ ಬೆಂಗಳೂರಿಂದ ತಯಾರಾಗಿ ಬಂದಿದ್ದ ಬೆಳ್ಳೀ ಕರಣೆಯಿಂದ ದಿವಾನರವರು ಗಾರೆಯನ್ನು ಕಲ್ಲಿನ ಸಂದಿಗೆ ಹಾಕಿ ಒಂದು ತಾರೀಖಿನಂಬನ್ನು ಬರೆದು ಶೀಷೆಯಲ್ಲಿಟ್ಟ ಷೆಡ್ ಹರ್ಮ್ಯಾದಿ ಗುಂಡಿಯೊಳಗೆ ಇಟ್ಟು ಬ್ರಾಹ್ಮಣರ ಸ್ವಸ್ತಿವಾಚನದ ಗದ್ದಲದೊಡನೆ ಶಿಲಾಸ್ಥಾಪನೆಯನ್ನು ಮಾಡಿ ಅಲ್ಲಿ ನೆರೆದ ಜನಗಳಲ್ಲಿ ಅನೇಕರು ತೆಂಗಿನ ಕಾಯಿಗಳನ್ನು ಕೊಟ್ಟರು. ಅನಂತರ ಪುನಃ ಸಾರಸ್ವತರ ಚಪ್ಪರಕ್ಕೆ ದಿವಾನರವರು ತಮ್ಮ ಪರಿವಾರದೊಡನೆ ದಯಮಾಡಿ ಅಲ್ಲಿ ಇವರಿಗಾಗಿ ಉನ್ನತವಾಗಿ ಹಾಕಿದ್ದ ಆಸನದಲ್ಲಿ ಕೂತುಕೊಂಡರು. ಅನಂತರ ವಿಧವಿಧವಾದ ವಾಸನಾದ್ರವ್ಯಗಳಿಂದ ದಿವಾನರವರ ಮತ್ತು ಅಲ್ಲಿ ನೆರೆದಿರ್ದ ದೊಡ್ಡದೊಡ್ಡ ಉದ್ಯೋಗಸ್ಥರ ಕರವಸ್ತ್ರಗಳು ನೆನೆಸಲ್ಪಟ್ಟು ಪುಷ್ಪಹಾರ ತಾಂಬೂಲಗಳು ಕೊಡಲ್ಪಟ್ಟವು. ತಾಷೆ ಸಹ ಆಯಿತು. ಅದಾದತರುವಾಯ ಸಾರಸ್ವತರು ಹೊಸದಾಗಿ ಕಟ್ಟಬೇಕೆಂಬ ತಮ್ಮ ದೇವಸ್ಥಾನದ ನೆಲಗಟ್ಟಿನ ಹಿಂಭಾಗದಲ್ಲಿ ಕೋಲುಸುಂಪಿಗೆಗಿತ ಒಂದು, ನೆಲಸುಂಪಿಗೆ ಗಿತ ಒಂದು ಈರೀತಿ ದಿವಾನರ ಕೈಯಿಂದ ಯೆರಡು ಗಿಡಗಳನ್ನು ಹಾಕಿಸಿ ನೀರು ಬಿಡಿಸಲ್ಪಟ್ಟವು. ಇದಾದ ತರುವಾಯ ಬಂಗ್ಲೆಗೆ ವಾಪಸ್ ದಯಮಾಡುವ ಕಾಲದಲ್ಲಿ ಅನೇಕ ಮತಾಪುಗಳೂ, ಬಾಣಬಿರುಸುಗಳೂ, ತಾಷೆ ಓಲಗ ಮೊದಲಾದ ವಿನೋದಗಳೂ ನಡೆದವು. ರಾತ್ರಿ ೪ ಘಂಟೆಗೆ ಬಂಗ್ಲೆಯನ್ನು ಪ್ರವೇಶಮಾಡಿ ಅಲ್ಲಿಯೂ ಸೂಳೆಯರು ಬಿತವೆ ಕುಣಿಯುತಿರುವಾಗ ಊರ್‍ನೂರು ಸಾಹುಕಾರ್ ದುಂಡಲಿಯಾ ಶೆಟ್ಟಿಗಳಲ್ಲಿ ಫಲ ಪುಷ್ಪಗಳನ್ನು ತಂದು ದಿವಾನರವರಿಗೆ ನಜರ್ ಮಾಡಿದರು. ಅವುಗಳನ್ನೆಲ್ಲ ಅತ್ಯಂತ ಸಂತೋಷದಿಂದ ಸ್ವೀಕರಿಸಿ, ತಮ್ಮಕಡೆಯಿಂದ ಅಲ್ಲಿ ನೆರದಿದ್ದವರೆಲ್ಲರಿಗೂ ಅಂದರೆ ತಾಷೆದವರು ವಿನಾ ಬಾಕೀಯವರೆಲ್ಲರಿಗೂ ತಾಂಬೂಲವನ್ನು ಕೊಡಿಸಿ ಎಲ್ಲರಿಗೂ ನಮಸ್ಕಾರಗಳನ್ನು ಮಾಡುತಪಳಕ್ಕೆ ದಯಮಾಡಿದರು. ಅದುವರಿವಿಗೂ ಬಯಾಸವಟ್ಟ ವೇಶ್ಯಾಸ್ತ್ರೀಯರಿಗೆ ತಾಂಬೂಲ ಸಹ ದೊರೆಯದೆ ಇದ್ದುದಕ್ಕಾಗಿ ಬಹಳ ಆಶ್ಚರ್ಯ ಪಡಬೇಕಾಗಿದೆ.

೭ನೇ ತಾರೀಖಿನ ಬೆಳಗ್ಗೆ ವರದಾ ಮೂಲಕ್ಕೆ ದಯಮಾಡಿದ್ದು ೧೦—೧೧ ಘಂಟೆಗೆ ಬಂಗ್ಲೆಗೆ ವಾಪಸ್ ಬಂದರು. ಮಧ್ಯಾಹ್ನ ೩ ಘಂಟೆಯ ಅಗಾಯತು ೪ ಘಂಟೆ ವರಿವಿಗೂ ಕಚ್ಚೇರಿ ಮಾಡಿ ಅರ್ಜಿ ಕೊಡುವವರನ್ನೆಲ್ಲ ಕೂಗಿಸಿ ಅವರವರ ಅರ್ಜಿಯನ್ನೆಲ್ಲ ಅಂಗೀಕರಿಸಿ ರಾತ್ರಿ ೪ಘಂಟೆಗೆ ಬಂದರೆ ಜವಾಪ್ ಹೇಳುವವಾಗಿ ಅವರುಗಳಿಗೆ ಅಪ್ಪಣೆ ಮಾಡಿ ತಾನು ಅವ್ವರೊಂದಿಗೆ ಕೆಳದಿಗ ದಯಮಾಡಿದರು. ಅಲ್ಲಿಯ ದೇವಸ್ಥಾನವನ್ನೂ ಕೆರೆಯನ್ನೂ ನೋಡಿಕೊಂಡು ರಾತ್ರಿ ೪ಘಂಟೆಗೆ ಬಂಗ್ಲೆಗೆ ಬಂದು ಅಲ್ಲಿ ಕಾದಿದ್ದ ಅರ್ಜೀದಾರರುಗಳಿಗೆ ಅವರು ಕೇಳಿದ ಫಾರೆಸ್ಟ್ ಬಾಬಿನ ವಿಷಯಕ್ಕೆ ತಕ್ಕ ಅಂದರೆ ರೈತರಿಗೆ ತೃಪ್ತಿಕರವಾದ ಅಪ್ಪಣೆಯನ್ನು ಹೇಳಿ ಕಳುಹಿಸಿಕೊಟ್ಟರು. ಇದಕ್ಕಾಗಿ ಉಪಗ್ರಾಮಗಳಿಂದ ಅನೇಕ ಜನಗಳು ಬಂದಿದ್ದರು. ಇವರ ಅಪೇಕ್ಷಿತವಾದ ಅಪ್ಪಣೆಯನ್ನು ಕೇಳಿ ತೃಪ್ತಿಯನ್ನು ಹೊಂದಿ ಆ ರಾತ್ರಿಯೇ ತಮ್ಮತಮ್ಮ ನಿವಾಸಗಳಿಗೆ ತೆರಳಿದರು.

೮ನೇ ತಾರೀಖ್ ಬೆಳಗ್ಗೆ ಇಲ್ಲಿ ಹೊಸದಾಗಿ ಆಗತಕ್ಕ ಸಂದಲಿಕೋಡಿಯನ್ನೂ ವರದಾನದಿಯ ಸೇತುವೆಯನ್ನೂ ನೋಡಿಕೊಂಡು ಇಂಗ್ಲಿಷ್ ಮತ್ತು ಕನ್ನಡ ಸ್ಕೂಲ್ (ಹಾಲೀ ಮಾಡತಕ್ಕ ಸ್ಕೂಲ್ ಕಾಮಗಾರಿಯಲ್ಲಿರುವದರಿಂದ) ಮುನಸೀಫರ್ ಖಾನೆ ಮುಂದೆ ದಯಮಾಡಿದರು ಆಗ ಬಾಲಕರುಗಳ ಸಾಮರ್ಥ್ಯವನ್ನು ತೋರಿಸಿ ಮೇಜವಾನಿಯನ್ನು ಪಡೆಯಬೇಕೆಂತ ಅಲ್ಲಿ ನಿಂತಿದ್ದ ಕನ್ನಡ ಇಂಗ್ಲಿಷ ಮ್ಯಾಸ್ಟರುಗಳ ನಮಸ್ಕಾರಕ್ಕೆ ಪ್ರತಿ ನಮಸ್ಕಾರಗಳಿಂ ಮಾತ್ರವೇ ಮಾಡಿ ಸ್ಕೂಲೊಳಗೆ ಬರಲಿಕ್ಕೆ ಹೊತ್ತಾದ ನಿಮಿತ್ತ ಮ್ಯಾಸ್ಟರುಗಳನ್ನು ಭಗ್ನಮನಸ್ಕರನ್ನಾಗಿ ಮಾಡಿ, ಮುಂದಕ್ಕೆ ದಯಮಾಡಿದರು. ಇದೇದಾರಿಯಲ್ಲಿ ಮ||ರಾ|| ಇಲ್ಲಿನ ಮುನಸಫರವರ ಮನೆಯಮುಂದೆ ಇವರ ಆಗಮನೋತ್ಸವಕ್ಕಾಗಿ ದೊಡ್ಡದಾದ ಚಪ್ಪರವನ್ನೂ ಇದಕ್ಕೆ ಇಂಗ್ಲಿಷಿನಲ್ಲಿ "ಲಾಂಗ್ ಲೈಫ್ ಅಂಡ್ ಪ್ರಾಸ್ಪೆರಿಟಿ ಟು ಅವರ್ ದಿವಾನ್" ಎಂತಲೂ ಕನ್ನಡದಲ್ಲಿ "ಸತ್ಯಮೇವೋದ್ಧರಾಮ್ಯಹಂ" ಎಂಬ ಈ ಯೆರಡು ಅರ್ಚ್ ಹಾಕಿದುದನ್ನು ವೀಕ್ಷಿಸಿ ಅತ್ಯಂತಾನಂದವನ್ನು ಹೊಂದಿ ತಾಳಗುಪ್ಪೆ ಮಾರ್ಗವಾಗಿ ಜೋಗಿಗೆ ಪ್ರಯಾಣ ಮಾಡಿದರು. ಇಲ್ಲಿನ ಮುನಸಫರವರಿಗೆ ಮ|| ದಿವಾನರವರಲ್ಲಿ ಅತ್ಯಂತ ಪ್ರೀತಿಯೂ ಮರ್ಯಾದೆಯೂ ಇವೆ ಯೆಂಬದಕ್ಕೆ ಈ ಚಪ್ಪರವೇ ದೃಷ್ಟಾಂತವಾಗಿದೆಯೆಂತ ವಾಚಕರೆಲ್ಲ ಆಲೋಚಿಸದಿರಲಾರರು. ಇಂಗ್ಲಿಷ್‌ಅಡ್ರೆಸ್ಸನ್ನು ಒಂದು ಗುಧದ ಪೆಟ್ಟಿಗೆಯಲ್ಲಿ ಗರ್ಭೀಕರಿಸಿ ಕೊಡಲ್ಪಟ್ಟಿತು. ಕನ್ನಡವು ರೇಷ್ಮೆಯ ಒಂದು ಚೀಲದಲ್ಲಿಟ್ಟು ಕೊಡಲ್ಪಟ್ಟಿತು. ಅಹಹ! ಇದರಲ್ಲಿಯೂಕೂಡ ಇಂಗ್ಲಿಷಿಗೆ ಹೆಚ್ಚು ಮರ್ಯಾದೆ, ಕನ್ನಡಕ್ಕೆ ಅದಕ್ಕೆ ತಕ್ಕ ಮರ್ಯಾದೆ ತೋರಿಸಲ್ಪಟ್ಟದ್ದಕ್ಕೆ ಆಶ್ಚರ್ಯವಾಗಿದೆ.

TELEGRAMS.
ತಂತಿ ವೃತ್ತಾಂತಗಳು.

ಲಂಡನ್, ೬ ನೇ ಜನವರಿ.— ನಿನ್ನೆಯ ದಿನ ಇಂಗ್ಲಾಂಡಿನಲ್ಲಿ ಪ್ರಬಲವಾದ ಚಂಡಮಾರುತದ ದೆಸೆಯಿಂದ ಸ್ವತ್ತುಗಳು ಬಹಳ ಮಟ್ಟಿಗೆ ನಾಶವಾದವಲ್ಲದೆ ಅನೇಕ ಹಡಗುಗಳು ಒಡೆದು ಹೋದವು.

ಐರ್ಲಾಂಡ್ ದ್ವೀಪದೊಳಗಣ ಬರ್ ಎಂಬ ಸ್ಥಳದಲ್ಲಿ ಒಂದು ದೇವಾಲಯಕ್ಕೆ ಸಿಡಿಲು ತಗಲಿ ನಾಶವಾಯಿತು.

ಸಿಡ್ನಿ, ೫ ನೇ ಜನವರಿ.— ಆಸ್ಟ್ರೇಲಿಯಾ ದ್ವೀಪಕ್ಕೆ ಸೇರಿದ ಕ್ವೀನ್ಸ್‌ಲ್ಯಾಂಡ್ ಎಂಬ ಖಂಡದಲ್ಲಿ ನಾಶಕರವಾದ ಪ್ರವಾಹದ ದೆಸೆಯಿಂದ ಮುನ್ನೂರು ಮೈಲಿಗಳ ಫಾಸಲೆಯುಳ್ಳ ದೇಶ ಮುಳುಗಿ ಹೋಯಿತು.

ಲಂಡನ್, ೪ ನೇ ಜನವರಿ.—ಪರ್ಷಿಯಾದೇಶದ ರಾಜಧಾನಿಯಾದ ಟೆಹರಾನ್ ಪಟ್ಟಣಕ್ಕೆ ೧೪೦ ಮೈಲಿಗಳ ದೂರದಲ್ಲಿರುವ ಹಾಮದಾನ್ ಎಂಬ ಊರಲ್ಲಿ ವಾಂತಿಭೇದಿ ರೋಗ ಪ್ರಬಲಗೊಂಡಿದೆ. ಅದು ಟೆಹರಾನ್ ಪಟ್ಟಣಕ್ಕೆ ವ್ಯಾಪಿಸುವದೋ ಎಂಬ ಭೀತಿ ಯುಂಟಾಗಿದೆ.

ಲಂಡನ್, ೩ ನೇ ಜನವರಿ.—ಮಹಾರಾಜ್ಞೀ ಇಂಡ್ಯ ಚಕ್ರವರ್ತಿನೀ ಯವರಿಗೆ ವಾತರೋಗ ಸಂಬಂಧವಾದ ದೇಹಾಲಸ್ಯ ವುಂಟಾಗಿತ್ತು. ಪರಂತು ಈಗ ಸ್ವಸ್ಥರಾಗಿದ್ದರೂ, ಈಸಲ ಪಾರ್ಲಿಮೆಂಟ್ ಸಭೆಯನ್ನು ಖುದ್ದು ನಿಜನ್ನು ಮಾಡುವದಕ್ಕೆ ಅಶಕ್ತರಾಗಿರುತ್ತಾರೆ.

ಲಂಡನ್, ೬ ನೇ ಜನವರಿ.—ಸರ್ ಲೆಪಲ್ ಗ್ರಿಫಿನ್ ಯವರು ಬರ್ಮಾ ದೇಶದಲ್ಲಿನ ಕೆಂಪಿನಗಣಿಗಳನ್ನು ಖುದ್ದು ನೋಡುವದಕ್ಕಾಗಿ ಈ ತಿಂಗಳ ೧೦ ನೇ ತಾರೀಖಿನಲ್ಲಿ ತಮ್ಮ ಭಾರ್ಯೆ ಯವರೊಡನೆ ಇಂಡ್ಯ ದೇಶಕ್ಕೆ ಪ್ರಯಾಣವಾಗುತ್ತಾರೆ.

ಲಂಡನ್, ೩ ನೇ ಜನವರಿ.— ಸರ್‌ಜಾರ್ಜ್ ಗ್ರೀನ್ಸ್ ಯವರು ಮುಂಬೈ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರಾಗಿಯೂ, ಮುಂಬೈ ಪ್ರೆಸಿಡೆನ್ಸಿ ಸೇನಾಧಿಪತಿಯವರಾಗಿಯೂ ಮಾಡಲ್ಪಟ್ಟಿರುತ್ತಾರೆ.

ಬ್ರಸ್ಸಲ್ಸ್, ೭ ನೇ ಜನವರಿ.— ಬ್ರಸ್ಸಲ್ಸ್ ಪಟ್ಟಣದಲ್ಲಿ ಎರಡು ನಾಟಕಶಾಲೆಗಳೂ ಹಾವರ್ ಪಟ್ಟಣದಲ್ಲಿ ಒಂದು ನಾಟಕಶಾಲೆಯೂ ಬೆಂಕಿಯಿಂದ ಸುಟ್ಟುಹೋದವು. ಈ ಅಪಾಯಗಳಲ್ಲಿ ಪ್ರಾಣನಾಶಗಳೇನೂ ಯಿಲ್ಲವು.

ಕಲ್ಕತ್ತಾ, ೭ ನೇ ಜನವರಿ.— ಈದಿನ ರಾತ್ರಿ ಮಹಾರಾಜ್ಞೀ ಯವರ ಪೌತ್ರರಾದ ಪ್ರಿನ್ಸ್ ಆಲ್ಬರ್ಟ್ ವಿಕ್ಟರವರ ಗೌರವಾರ್ಥ ವಿನೋದ ಸನ್ನಿವೇಶ ವೊಂದು ನಡೆಸಲ್ಪಟ್ಟಿತು. ಈ ಬಗ್ಯೆ ವಿಸ್ತಾರವಾದ ಚಪ್ಪರ ವೊಂದು ಕಟ್ಟಿಸಿ ಅದಕ್ಕೆ ಸುತ್ತಲು ಕಟಕಟೆ ಕಟ್ಟಿಸಲ್ಪಟ್ಟಿತು. ಅದರೊಳಗೆ ತಿಬೆಟ ದೇಶದ, ಅಂದರೆ ಕಿಂಪುರುಷ ದೇಶದ ನಾಟ್ಯ, ಕಟಕ ದೇಶದ ನರ್ತನ, ತಾಷೆ, ಹಕ್ಕಿಬಿಕ್ಕಿ ಮೊದಲಾದ ಹಸ್ತಲಾಘವ ವಿದ್ಯೆಗಳು, ಇವುಗಳೆಲ್ಲವು ಆಡಲ್ಪಟ್ಟವು. ಈ ವಿನೋದ ದರ್ಶನಾರ್ಥ ರಾಜಕುಮಾರರು, ವೈಸ್‌ರಾಯ್ ಯವರು, ಡ್ಯೂಕ್ ಆಫ್ ಕನಾಟಿಯವರು ಮೊದಲಾದವರು ಸದರೀ ಸ್ಥಳಕ್ಕೆ ದಯಮಾಡಿದರು. ಆ ಕಾಲದಲ್ಲಿ ಇವರನ್ನು ಬರಮಾಡಿಕೊಳ್ಳುವದಕ್ಕಾಗಿ ಏರ್ಪಡಿಸಲ್ಪಟ್ಟಿದ್ದ ಕಮಿಟಿಯವರು ಅವರನ್ನೆಲ್ಲ ಉಚಿತ ಮರ್ಯಾದೆಗಳೊಡನೆ ಬರಮಾಡಿಕೊಂಡು ಅವರಿಗಾಗಿ ಸನ್ನದ್ಧವಾಗಿದ್ದ ವೇದಿಗೆ ಕರೆದುಕೊಂಡು ಹೋಗಿ ಉಚಿತಾಸನಗಳಲ್ಲಿ ಕುಳ್ಳಿರಿಸಿದರು. ಟಿಕೆಟ್ ಯಿಲ್ಲದವರನೇಕರು ಬಂದು ಸೇರಿದ್ದರಿಂದ ಅದು ಪಡೆದಿದ್ದವರಿಗೆ ಸ್ಥಳ ದುರ್ಲಭವಾಯಿತು. ಸದರೀ ಮೈದಾನೂ ಅದಕ್ಕೆ ಸೇರಿದಂತಿರುವ ಬೀದಿಗಳೂ ರಸ್ತೆಗಳೂ ವಿಧವಿಧ ದೀಪಾವಳಿಗಳಿಂ ಶೋಭಿಸುತಲಿದ್ದವು. ಇವುಗಳ ಸ್ಪೈಕಿ ೩೦ ಅಡಿಗಳ ಉದ್ದ ಮಹಾದೀರ್ಘ ತೆರವೆಯಲ್ಲಿ ಒಂದು ಪಟ್ಟಣ ಕಟ್ಟಲ್ಪಟ್ಟು ಅದರೊಳು, ಸದರೀ ದೇಶಕ್ಕೆ ಮುಖ್ಯಂಗಳಾದ ಮಸ್‌ಜಿದ್‌ಗಳೂ, ಅವುಗಳ ಗೋಪುರಗಳೂ ಮನೆಗಳೂ ಕಾಣಬರುತಲಿದ್ದವು. ಇತರ ಚಿತ್ರಭಾಗಗಳಲ್ಲಿ ಅನೇಕ ಹಿಂದೂ ದೇವಾಲಯಗಳೂ ಒರಿಸಾ ದೇಶದೊಳು ಒಂದೇ ಕಲ್ಲಿನಲ್ಲಿ ನಿರ್ಮಿಸಲ್ಪಟ್ಟಿರುವ ದೇವಾಲಯಗಳೂ ತೋರಿಸಲ್ಪಟ್ಟಿದ್ದವು. ಎರಡು ಘಂಟೆಯಕಾಲ ಈ ವಿನೋದಗಳಿಂ ನೋಡಿ ಅತ್ಯಾನಂದ ಭರಿತರಾಗಿ ಪ್ರಿನ್ಸರವರು ವೈಸ್‌ರಾಯ್ ಯವರೊಡನೆ ಗವರ್ನಮೆಂಟ್ ಹೌಸಿಗೆ ದಯಮಾಡಿದರು.

ಲಂಡನ್, ೯ ನೇ ಜನವರಿ —ಮಹಾರಾಜ್ಞೀ ಯವರು ಬರುವ ವಸಂತ ಋತುವಿನಲ್ಲಿ, ಜರ್ಮನೀ ದೇಶದೊಳಗಣ ಹಾಂಬರ್ಗ್ ಎಂಬ ಪಟ್ಟಣದೊಳು ಒಂದು ತಿಂಗಳ ಕಾಲ ವಾಸಮಾಡುವರು.

ಅಲಹಾಬಾದ್, ೪ ನೇ ಜನವರಿ —ಪತ್ತಿಯಾಳ ಸಂಸ್ಥಾನದ ಕಾರ್ಯನಿರ್ವಾಹಕ ಸಭೆಯ ಅಗ್ರಾಸನಾಧಿಪತಿಯವರಾಗಿದ್ದ ಸರ್ ದೇವಸಿಂಗರವರು ಮೃತಪಟ್ಟರು.

SUMMARY OF NEWS.
ವೃತ್ತಾಂತಸಂಗ್ರಹವು.

ದುಲೀಪಸಿಂಗ್ ಮಹಾರಾಜರವರು ಅಮೆರಿಕಾ ದೇಶದ ಭಾಗ್ಯ ಸಂಪನ್ನಳಾದ ಒಬ್ಬ ಯುವತಿಯನ್ನು ಮದುವೆ ಮಾಡಿಕೊಳ್ಳುತ್ತಾರೆಂಬ ಸಂತೋಷ ವರ್ತಮಾನವನ್ನು ಒಂದಾನೊಂದು ಪತ್ರಿಕೆಯು ತಿಳಿಸುತ್ತದೆ.—ವೃ. ಪ.

ಪ್ರಿನ್ಸ್ ಆಲ್ಬರ್ಟ್‌ವಿಕ್ಟರವರು ಮಾಂಡಲೇ ಪಟ್ಟಣದಲ್ಲಿರುವಾಗ್ಯೆ ಅಲ್ಲಿದ್ದ ಫ್ರೂಗೀಸ್ ಎಂಬ ಜನರು ವಿಕ್ಟರವರು ನಿಶ್ಚಯವಾಗಿ ಮಹಾರಾಣಿಯವರ ವಂಶಸ್ತರು ಹೌದೋ ಅಲ್ಲವೋ ಎಂದು ಬಹಳವಾಗಿ ಚರ್ಚೆ ಮಾಡಿ,ವಿಕ್ಟರವರುಬಹುಶಃ ಅದೇ ವಂಶಸ್ಥರಾಗಿರಬಹುದು ; ಯಾಕೆಂದರೆ ಎರಡು ದಿವಸಗಳಿಂದಲೂ ಬಹಳ ಮೋಡವಾಗಿಯೇ ಇದೆ ; ಪ್ರಿನ್ಸರವರ ಆಗಮನಾರ್ಥವಾಗಿ ಸೂರ್ಯನೂ ಕೂಡ ತನ್ನ ಕಾಂತಿಯನ್ನು ಪ್ರಕಾಶಪಡಿಸಲಿಲ್ಲ ; ಎಂದು ಈ ಪ್ರಕಾರ ಊಹಿಸಿಕೊಂಡು ಸುಮ್ಮನಾದರೆಂದು ತಿಳಿಸುತ್ತದೆ.—ವೃ.ಪ.

ಹೈದರಾಬಾದು ನಿಜಾಮರವರು ಪಟ್ಟಣದಲ್ಲಿ ಈಗ್ಯೆ ೬—೭ ದಿವಸಗಳಲ್ಲಿ ಸವಾರಿ ಹೋಗುತ್ತಿರುವಾಗ್ಯೆ ಒಂದು ಎಳೇ ಮಗುವು ಗಾಡಿಯ ಚಕ್ರಕ್ಕೆ ಸಿಕ್ಕಿ ಸತ್ತು ಹೋಗುತಿತ್ತು, ಅಂತಾ ಕಾಲದಲ್ಲಿ ನಿಜಾಮರವರು ಬಹಳ ಚತುರತ್ವದಿಂದ ಕುದುರೆಗಳನ್ನು ತಡೆದು ಮಗುವನ್ನು ಬದುಕಿಸಿದರು. ಅನಂತರ ಒಬ್ಬ ಪೋಲೀಸ್ ಕೊತ್ವಾಲನನ್ನು ಕರೆದು, ಇನ್ನು ಮೇಲೆ ಯಾರಾದರು ತಮ್ಮ ಮಕ್ಕಳನ್ನು ಅಜಾಗರೂಕತೆಯಿಂದ ಬೀದಿಯಲ್ಲಿ ಬಿಟ್ಟದ್ದೇ ಆದರೆ ಅಂತಾ ಮಕ್ಕಳಿಗೆ ಯಾವದೊಂದು ಅಪಾಯ ಸಂಭವಿಸಿದಾಗ್ಯೂ ಅಥವಾ ಅವರನ್ನು ಯಾರಾದರೂ ಎತ್ತಿಕೊಂಡು ಹೋದಾಗ್ಯೂ, ಪೋಲೀಸಿನವರೇ ಆಗಲಿ, ಸರ್ಕಾರದವರೇ ಆಗಲಿ ಜವಾಬ್ದಾರರಾಗಿರಲಾರರೆಂದು ಪಟ್ಟಣದಲ್ಲೆಲ್ಲಾ ಸಾರಿಸುವ ಹಾಗೆ ಹುಕುಂ ಕೊಟ್ಟರು.— ವೃ. ಪ.

ಒಂದು ಹುಲಿಯು ರೀವಾ ಎಂಬ ಪಟ್ಟಣದೊಳಕ್ಕೆ ಪ್ರವೇಶಿಸಿ ಒಬ್ಬನನ್ನು ಕೊಂದು ಗುಂಪಾಗಿ ಹೋಗುತ್ತಿದ್ದ ೫—೬ ಜನರ ಮೇಲೆ ಬಿದ್ದು ಒಬ್ಬನನ್ನು ತನ್ನ ಪಂಜಾದಿಂದ ಹೊಡೆಯಿತು. ಆತನು ಆಸ್ಪತ್ರೆಯಲ್ಲೇ ಕಾಲವಾದನು. ಸ್ವಲ್ಪ ಹೊತ್ತಿನಲ್ಲೇ ಆ ಪಟ್ಟಣದ ಸುಮಾರು ೪೦—೫೦ ಮಂದಿ ಜನರು ಆ ದುಷ್ಟ ಮೃಗದ ಸುತ್ತಲೂ ಘೇರಾಯಿಸಿಕೊಂಡು ಅದಾಗೆ ಹೋಗದಂತೆ ಎಲ್ಲರೂ ಒಂದು ಘಂಟೆ ಹೊತ್ತು ತುಪಾಕಿ ಹಾರಿಸಲು, ಕೊನೆಗೆ ಹೊಡೆದ ಕೆಲವು ಗುಂಡುಗಳು ಅದರ ದೇಹದಲ್ಲಿ ಪ್ರವೇಶಿಸಿತು. ಅನಂತರ ಅದು ಸತ್ತು ಬಿದ್ದಿತು. ಇದು ಬಹಳ ತಮಾಷೆಯಾಗಿತ್ತೆಂತಲೂ ಮತ್ತು ಆ ಮೃಗವು ೧೦ ಅಡಿ, ೬ ಅಂಗುಲ ಉದ್ದವಿತ್ತೆಂತಲೂ ಒಂದಾನೊಂದು ಪತ್ರಿಕೆ ತಿಳಿಸುವದೆ.

ಬಂಗಾಳಾ ಕೋರ್ಟಿಗೆ ಸೇರಿದ ಹುಗ್ಲಿ ಡಿಸ್ಟ್ರಿಕ್ಟಿನಲ್ಲಿದ್ದ ಒಬ್ಬ ವಕೀಲನ ತಂದೆ ತಾಯಿಗಳು ಕಾಲವಾದರು. ಆ ವಕೀಲನು ರುಮಾಲನ್ನು ಹಾಕಿಕೊಳ್ಳದೆ ತನ್ನ ಕಕ್ಷಿಗಾರನ ತರಫೆ ವಾದಿಸುವದಕ್ಕೋಸ್ಕರ ಕೋರ್ಟಿಗೆ ಹೋದಾಗ ಜಡ್ಜಿಯು ನೀನು ಬರೀ ತಲೆಯಲ್ಲಿ ಬರುವದಕ್ಕೆ ಇದೇನು ಮನೆ ಎಂದು ತಿಳದೆಯೋ, ಜಿಲ್ಲಾಸ್ಕಿನಲ್ಲಿ ಕೋರ್ಟಿಗೆ ಬರಕೂಡದೆಂದು ಹೇಳಿ ವಕೀಲನನ್ನು ಕಳುಹಿಸಿಬಿಟ್ಟರು. ಈ ವಿಷಯವನ್ನು ಕುರಿತು ಚರ್ಚೆಮಾಡುವದಕ್ಕೋಸ್ಕರ ಅಲ್ಲಿರುವ ವಕೀಲರೆಲ್ಲರೂ ಸೇರಿ ಒಂದು ಮೀಟಿಂಗ ಮಾಡಿದರು. ಇವರಿಗೆಲ್ಲಾ ಮುಖ್ಯರಾಗಿದ್ದ ಪಬ್ಲಿಕ್ ಪ್ರಾಸಿಕ್ಯೂಟರು ಈ ಮೀಟಿಂಗಿಗೆ ಬಾರದೆ ಹೋದರು. ಆದಾಗ್ಯೂ ಸೇರಿದ್ದವರೆಲ್ಲರು ಹೈಕೋರ್ಟಿನ ಅಪ್ಪಣೆಯಂತೆ ನಡೆಯಕೊಳ್ಳೋಣವೆಂದು ಒಪ್ಪಿ ಒಂದು ಅರ್ಜಿಯನ್ನು ಬರೆದು ಯೆಲ್ಲರೂ ರುಜು ಮಾಡಿ ಅನಂತರ ತಮ್ಮ ತಮ್ಮ ಮನೆಗಳಿಗೆ ಹೊರಟುಹೋದರು.

Bangalore —Printed and published at the Karnatic Press, No. 108, Srinivasa Mandirm Road Pettah.—1890.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಶ್ರೀಮನ್ನಿವಿಧಪ್ರವೃತ್ತ್ಯುದಗಮಾರ್ಥಕರ್ಣಾಟಕಪ್ರಕಾಶಿಕಾಭಿಧಾಪ್ರಥಿತಾಹಿತೇಶೋಭಿತಾ ನ್ಯಗ್ರಾಹಿತಹಿತವಾಸಕರನಿಹಿತಮುದ್ರಣಾಸಜ್ಜನ್ಯರ್ಕಿ ಕಾಸುದರಿಶೋಭಿತಾ ವಿಕಸಿತವಾನಸಂಸುಮುದೇ

Vol. XVII.] BANGALORE:—MONDAY, JANUARY 20, 1890 [No. 3.

ಸಂಪುಟ ೧೭.] ಬೆಂಗಳೂರು:—ಸಿ ೧೮೯೦ನೇ ಇಸವಿ ಜನವರಿ ೨೦ ನೇ ತಾರೀಖ್ ಸೋಮವಾರ. [ಸಂಖ್ಯೆ ೩.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಡಾಕ್ ಸಹಿತ	ಸ್ಥಳದವರಿಗೆ ಮುಂಗಡವಾಗಿ.	ಪರಸ್ಥಳದವರಿಗೆ. ಹಿಂಗಡವಾಗಿ.
ಮುಂಗಡವಾಗಿ ಕೊಡತಕ್ಕವರಿಗೆ	8—0—0	9—0—0
ಹಿಂಗಡವಾಗಿ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡವಾಗಿ ಕೊಡತಕ್ಕವರಿಗೆ	4—0—0	5—0—0
ಹಿಂಗಡವಾಗಿ ,,	5—0—0	6—0—0

ಈ ಪತ್ರಿಕೆಗೆ ಚಂದಾದಾರರಾಗ ಬಯಸುವವರು ತಾರೀಖು ನೋಡ ಲು ಒಂದು ತಿಂಗಳೊಳಗಾಗಿ ಚಂದಾ ಕೊಡಬೇಕು. ಕೆಲಸ ಕಳುಹಿಸುವವರಿಗೆ ಸೂಚನೆ ಅವರ್ಸ್ಮಾ ದಯಮಾಡಿ ಪತ್ರಿಕೆ ಕ ಳುಹಿಸಲ್ಪಡುವದು. ಪ್ರಾರಂಭಿಸುವದು ಇಂಗ್ಲಿಷ್ ಭಾಗವ ನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತರಿಸಿಕೊಳ್ಳಬಹುದು. ಮುಂಗಡ ಹಿಂಗಡಗಳಿಗೆ ಕಡಮೆ ದರ ಚಂದಾ ಕೊಡಲು ಅಂಗೀಕರಿಸಲ್ಪಡಲಾರದು.

ಪತ್ರಿಕೆಗೆ ಬರಬೇಕಾದ ಹಣವನ್ನು ಕಳುಹಿಸು ವ ವರು ಹಣ ಕಳುಹಿಸಿದ ವಿವರವನ್ನು ಬರೆದು ಕಳುಹಿಸಬೇಕು. ಆಫೀಸ್ ಸೀಲಿನಿಂದ ರಶೀದಿಯನ್ನು ಕೊಡಲ್ಪಡುವದು. ಹಣ ಕಳುಹಿಸತಕ್ಕವರು ರಸೀದಿಯನ್ನು ಇಟ್ಟುಕೊಂಡು ಡಿಸ್ಕೌಂಟು ಸಹ ಇಲ್ಲದೆ ಕಳುಹಿಸತಕ್ಕದ್ದು. ಅಂಗೀಕರಿಸದ ಪಾರ್ಸೆಲುಗಳ ಕಾಗದಗಳನ್ನು ಹಿಂದಕ್ಕೆ ಕಳುಹಿಸುವದು. ಡಿಸ್ಕೌಂಟು ಇಲ್ಲದೆ ಕಳುಹಿಸುವ ನೋಟುಗಳನ್ನು ಅವರ ಖರ್ಚಿನಲ್ಲಿ ಪತ್ರಿಕೆಯವರು ಲೆಕ್ಕಕ್ಕೆ ತೆಗೆದುಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆ ಸಾರಿಗೆ ಸಾಲೊಂದಕ್ಕೆ ೦—೨—೦

ಎರಡನೆ ಸಾರಿಗೆ ಸಾಲೊಂದಕ್ಕೆ ೦—೧—೦

ಸೂ—ವರ್ತಮಾನಗಳಿಗಂತೆ ಬರೆಯತಕ್ಕ ವಿಷಯ ವ್ಯಾಜ್ಯ ಮತ್ತು ಖಾಸಗಿ ಕಾಗದಗಳು ಬರೆಯತಕ್ಕವರು ಹೆಸರು ವಿಳಾಸ ಸಹಿತ ಬರೆಯಬೇಕು. ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವ ಅಭಿಪ್ರಾಯಗಳಿಗೆ ಪ್ರಕಟಿಸುವವರು ಜವಾಬ್ದಾರರಲ್ಲ. ಪತ್ರಿಕೆಗೆ ಬರುವ ಕಾಗದಗಳನ್ನು ಸ್ಪಷ್ಟವಾಗಿ ಬರೆಯತಕ್ಕದ್ದು. ಪ್ರಕಟಿಸಲ್ಪಡದ ಕಾಗದ ಗಳನ್ನು ಹಿಂದಕ್ಕೆ ಕಳುಹಿಸಲಾಗುವುದಿಲ್ಲ. ಕಾಗದ ಬರೆಯುವವರು ಕಾಗದದ ಒಂದು ಪಕ್ಕದಲ್ಲಿ ಮಾತ್ರ ಬರೆಯಬೇಕು. ಪ್ರಕಟನೆಗಳನ್ನು ಆ ದರದ ಮೇರೆಗೆ ಮುಂಗಡವಾಗಿ ಕೊಡತಕ್ಕದ್ದು. ಪ್ರತಿಕೆಗೆ ಸಂಬಂಧಪಟ್ಟ ಕಾಗದಗಳನ್ನು ಮ್ಯಾನೇಜರ್ ಹೆಸರಿಗೆ ಕಳುಹಿಸತಕ್ಕದ್ದು. ಡಾಕ್ ಸಹಿತ ಇಲ್ಲದ ಕಾಗದಗಳು ಅಂಗೀಕರಿಸಲ್ಪಡುವದಿಲ್ಲ.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 6-0

ವೈದ್ಯಸಾರ ಸಂಗ್ರಹ.

ಈ ಗ್ರಂಥವು ಬೇಕಾದವರು ಮೊಬಲಗನ್ನು ಕೊಟ್ಟು ಈ ಕೆಳಗೆ ಸಹಿ ಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೊಡಲ್ಪಡುವದು. ಮೊಬಲಗು ಇಲ್ಲದೆ ಕಳುಹಿಸುವಾಗ ಸಿಗದೆ ಹೋಗಲ್ಪಡಲಾರದು.

ಬೆಲೆ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಬೋಸ್ಟಲ್ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್,

ಬೆಂಗಳೂರ್, ಆಸ್ಪತ್ರೆ ರೋಡ್ ಪೇಟೆ, 41ನೇ ನಂ. ಮನೆ.

ADVERTISEMNTS.

ನೋಟೀಸ್

ಅದ್ಭುತವಾದ ಒಂದು ಔಷಧ

ಹೊಟ್ಟೆಯಲ್ಲಿ ವಾಯು ಸೇರಿಕೊಂಡು ನೋಯುವಿಕೆ, ಪಿತ್ತದಿಂದ ತಲೆ ಸುತ್ತುವಿಕೆ, ಕಣ್ಣುಗಳು ತಿರುಗುವಿಕೆ, ಭೋಜನವಾದಮೇಲೆ ಹೊಟ್ಟೆ ತುಂಬಿಕೊಂಡು ಉಬ್ಬರಿಸಿ ಕೊಳ್ಳುವಿಕೆ, ತಲೆ ಗಿರ್ರನೆ ತಿರುಗುವಿಕೆ, ತೂಕಡಿಕೆ, ಚಳಿ, ಜ್ವರ ಬರುವಿಕೆಯಿಂದ ಮುಖ ಕೆಂಪಾಗುವಿಕೆ, ಹಸಿವು ತಪ್ಪುವಿಕೆ, ಶ್ವಾಸಬದ್ಧ ಮಲಬದ್ಧ, ದೌರ್ಬಲ್ಯದಿಂದ ಮುಖವು ಬಿಳಿಚುವಿಕೆ, ಚರ್ಮದಮೇಲೆ ಗುಳ್ಳೆಗಳು ಏಳುವಿಕೆ, ನಿದ್ರಾಭಂಗ, ಭಯಂಕರವಾದ ಕನಸುಗಳು, ನಿಶ್ಶಕ್ತಿಯಿಂದ ನಡುಕ, ಇವು ಮೊದಲಾದ ಪಿತ್ತ ಮತ್ತು ನರಸಂಬಂಧವಾದ ರೋಗಗಳೆಲ್ಲ ಬೀಚಾಂ ರವರಿಂದ ಮಾಡಲ್ಪಟ್ಟಿರುವ ಗುಳಿಗೆಗಳ ದೆಸೆಯಿಂದ ಒಂದೆರಡು ನಿಮಿಷಗಳೊಳಗಾಗಿ ವಾಸಿಯಾಗುವದು ಸಾಮಾನ್ಯವಾಗಿ ಎಲ್ಲರಿಂದಲೂ ಅಂಗೀಕರಿಸಲ್ಪಟ್ಟಿದೆ. ಔಷಧವನ್ನು ಮೊದಲು ತೆಗೆದುಕೊಂಡ ೨೦ ನಿಮಿಷಗಳೊಳಗಾಗಿ ಗುಣವಾಗಿದೆ. ಪ್ರತಿ ರೋಗಿಯೂ ಒಂದು ಡಬ್ಬಿ ಈ ಗುಳಿಗೆಗಳನ್ನು ತರಿಸಿ ಸೇವನೆ ಮಾಡಬೇಕೆಂದು ಕೋರುತ್ತೇವೆ. ಅದು ಒಂದು ಗಿನಿ ಬೆಲೆಯುಳ್ಳದ್ದಾಗಿದ್ದರೂ ಸಹ ಅದರ ಕ್ರಯ ಬಹಳ ಕಡಮೆ ಎಂದು ತಿಳಿದುಕೊಳ್ಳುವರು.

ಎಲ್ಲಾ ಮನುಷ್ಯರ ಹೆಂಗಸರಿಗೂ ಈ ಗುಳಿಗೆಗಳು ಅಮೂಲ್ಯವಾದವು. ಕೆಲವು ಅವಶ್ಯ ಅವುಗಳನ್ನು ಸೇವನೆ ಮಾಡಿದರೆ ದೇಹದಲ್ಲಿರುವ ಕೆಟ್ಟ ಸಕಲ ರೋಗ ನಿವಾರಣೆಯಾಗುವದು. ಯಾವ ಹೆಂಗಸೇ ಆಗಲಿ ಈ ಗುಳಿಗೆಗಳನ್ನು ತನ್ನ ದೇಹಕ್ಕೆ ಹೊಂದಿಸಿಕೊಂಡರೆ, ಪೇಟೆಂಟ್ ತತ್ವಕ್ರಮಕ್ಕೆ ಬಾಧಕವಾದ ಯಾವ ರೋಗಕ್ಕಾಗಲಿ ಬೀಚಾಂರವರ ಗುಳಿಗೆಗಳಿಗೆ ಸಮಾನವಾದ ಔಷಧ ಯಾವದೂ ಇಲ್ಲವು. ಈ ಔಷಧದ ಪ್ರತಿಯೊಂದು ಡಬ್ಬಿಯ ಸಂಗಡ ಕೊಡಲ್ಪಡುವ ಕಾಗದದಲ್ಲಿ ತಿಳಿಸಲ್ಪಡುವ ಕ್ರಮವನ್ನನುಸರಿಸಿ ಇವನ್ನು ಸೇವನೆ ಮಾಡಿದರೆ ಎಲ್ಲಾ ಮನುಷ್ಯರ ಹೆಂಗಸರಿಗೂ ಸಂಪೂರ್ಣ ಆರೋಗ್ಯ ಶರೀರದಾರ್ಢ್ಯವುಂಟಾಗುವದು. ಇವುಗಳನ್ನು ಸೇವಿಸಿದವರು ಗುಣಹೊಂದಿದ ಸಾವಿರಾರು ಜನರಿಂದ ಬರುವ ಪತ್ರಗಳೇ ದೃಷ್ಟಾಂತವಾಗಿವೆ.

ಅನ್ನಕೋಶದ ದೌರ್ಬಲ್ಯ, ಜೀರ್ಣಶಕ್ತಿ ತಪ್ಪಿಹೋಗಿರುವಿಕೆ, ಪಿತ್ತಕೋಶದಲ್ಲಿನ ಮೈಲಿಗೆ ಬಾಧೆಗಳಿಗೂ ಈ ಗುಳಿಗೆಗಳು ಅದ್ಭುತವಾದ ಔಷಧ. ಇದನ್ನು ಕೆಲವು ದಿವಸ ಸೇವನೆ ಮಾಡಿದರೆ ಮನುಷ್ಯನ ದೇಹದಲ್ಲಿನ ಅವಯವಗಳಿಗೆ ವ್ಯಾಪಿಸಿ ಅದ್ಭುತವಾದ ಕಾರ್ಯಗಳನ್ನು ಮಾಡುತ್ತವೆ. ಕಾಂತಿಯುಕ್ತವಾಗುವಂತೆ ಮಾಡುತ್ತವೆ. ಬಹುಕಾಲದ ಮೊದಲು ತಪ್ಪಿಹೋಗಿರುವ ಮುಖ ವರ್ಚಸ್ಸನ್ನು ಪಡೆವನ್ನೂ ಮರಳಿ ಬರುವಂತೆ ಮಾಡಿ, ದೇಹಾರೋಗ್ಯದೊಡನೆ ಮನುಷ್ಯ ಶರೀರಕ್ಕೆ ಇರಬೇಕಾದ ಶಕ್ತಿಯನ್ನುಂಟುಮಾಡುತ್ತವೆ.

ಇದು ವಾಸ್ತವವಾದದ್ದು, ಇದನ್ನು ಎಲ್ಲರೂ ಒಪ್ಪಿಕೊಂಡಿರುತ್ತಾರೆ. ಮತ್ತು ಈ ಪ್ರಪಂಚದಲ್ಲಿನ ಎಲ್ಲಾ ಔಷಧಗಳಿಗಿಂತಲೂ ಈ ಔಷಧ ಅಧಿಕವಾಗಿ ಖರ್ಚಾಗುವದರಿಂದಲೇ ನಿಸ್ಸಂದೇಹದಿಂದ ಇದು ಸರ್ವೋತ್ಕೃಷ್ಟವಾದ ಔಷಧವೆಂದು ತಿಳಿಯುವದಕ್ಕೆ ಕಾರಣವಾಗಿದೆ.

Sole Agents for India

NAYLOR, SON, GRIMES, & CO.,

Wholesale Depot, 35, Clive Street, Calcutta.

ನೋಟೀಸ್—ಔಷಧ ಬೇಕೆಂದು ಬರೆದುಕೊಂಡವರಿಗೆ ಮೆಸರ್ಸ್ ನೇಯಿಲರ್, ಸನ್, ಮತ್ತು ಗ್ರೈಮ್ಸ್ ಕಂಪೆನಿಯವರು ಹೋಲ್ಸೇಲ್ ಡಿಪೋದಲ್ಲಿ ಸಮಯಕ್ಕೆ ಡಬ್ಬಿ ಒಂದು ಮಾರಿಸುವರು. ಅದರ ಕ್ರಯ ಇದರಡಿ ನಮೂದಿಸಲ್ಪಟ್ಟಿದೆ, ಪ್ಯಾಕಿಂಗ್—ಡಬ್ಬಿ ೧ಕ್ಕೆ ೮ ಆಣೆ, ೧೪ ಆಣೆ ಮತ್ತು ರೂ॥ ೨ ಈ ದರದಲ್ಲಿ ಇರುತ್ತವೆ. ಬೇಕಾದದ್ದನ್ನು ತರಿಸಿಕೊಳ್ಳಬಹುದು. ಹಾಸಲ್ ಬೇರೆ ಕೊಡಬೇಕು.

ವೈದ್ಯರಿಗೂ ಔಷಧ ಮಾರುವವರಿಗೂ ಕಮಿಷನ್ ಒಟ್ಟು ಬಿಕರಿಯ ದರಕ್ಕೆ ಕೊಡಲ್ಪಡುವದು.

ಮಹಾರಾಜಾ ಆಫ್ ಮೈಸೂರು ಸ್ಪಿನ್ನಿಂಗ್ ಮ್ಯಾನ್ಯುಫ್ಯಾಕ್ಚರಿಂಗ್ (ಕಂಪೆನಿ ಲಿಮಿಟೆಡ್.)

ಸೌದೆ ಕಂಟ್ರಾಕ್ಟುದಾರರಿಗೆ ನೋಟೀಸ್.

ಇದರಿಂದ ತಿಳಿಸುವದೇನೆಂದರೆ:—ಮೈಸೂರು ಮಹಾರಾಜರವರ ಸ್ಪಿನ್ನಿಂಗ್ ಮತ್ತು ಮ್ಯಾನ್ಯುಫ್ಯಾಕ್ಚರಿಂಗ್ ಕಂಪೆನಿಗೆ ಸುಮಾರ್ ೫,೦೦೦ ಟನ್ನುಗಳ ಕಾಡು ಸೌದೆ ಬೇಕಾಗಿರುವದರಿಂದ ಅದರ ಸರಬರಾಯಿ ಬಗ್ಗೆ ಬರತಕ್ಕ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳನ್ನು ಕಂಪೆನಿಯ ಸೆಕ್ರೆಟರಿಯವರು ೧೮೯೦ನೇ ಇಸವಿ ಜನವರಿ ೩೧ನೇ ತಾರೀಖ್ ಶುಕ್ರವಾರದ ವರೆವಿಗೆ ಅಂಗೀಕರಿಸುವರು.

ದರಖಾಸ್ತುಗಳ ಸಂಗಡ ೧೦೦ ರೂಪಾಯಿಗಳ ಠೇವಣಾತಿ ಕಳುಹಿಸಬೇಕಾದ್ದಲ್ಲದೆ ಸೌದೆ ದರಖಾಸ್ತೆಂದು ಲಕೋಟೆಯ ಮೇಲೆ ಬರೆಯತಕ್ಕದ್ದು.

ಸೌದೆಯ ತುಂಡುಗಳ ಅಳತೆ ಮತ್ತು ತರಹೇಗಳನ್ನು ಕುರಿತ ಇತರ ಕಪ್ಶೀಲ್‌ಗಳನ್ನು ಆದಿತ್ಯವಾರಗಳು ವಿನಾ ಇತರ ದಿನಗಳಲ್ಲಿ ಬೆಳಗ್ಗೆ ೧೧ ಘಂಟೆಯಮೇಲೆ ಸಾಯಂಕಾಲ ೪ ಘಂಟೆ ಯೊಳಗಾಗಿ ಸೆಕ್ರೆಟರಿಯವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

ಯಾವ ದರಖಾಸ್ತುದಾರು ತಿರಸ್ಕರಿಸಲ್ಪಟ್ಟರೆ ಅದಕ್ಕೆ ಕಾರಣ ತಿಳಿಸಲ್ಪಡಲಾರದು.

ತಾ॥ ೧೪ನೇ ಜನವರಿ, ೧೮೯೦ನೇ ಇಸವಿ.

JAMES SCOTT & Co.,
Agents.

ಮಹಾರಾಜಾ ಆಫ್ ಮೈಸೂರು ಸ್ಪಿನ್ನಿಂಗ್ ಮ್ಯಾನ್ಯುಫ್ಯಾಕ್ಚರಿಂಗ್ (ಕಂಪೆನಿ ಲಿಮಿಟೆಡ್.)

ಇದರಿಂದ ತಿಳಿಸುವದೇನೆಂದರೆ,—

ಸನ್ ೧೮೯೦ನೇ ಇಸವಿ ಫೆಬ್ರವರಿ ೩ನೇ ತಾರೀಖ್ ಸಾಯಂಕಾಲ ನಾಲ್ಕು ಘಂಟೆಗೆ ಮಹಾರಾಜಾ ಆಫ್ ಮೈಸೂರು ಸ್ಪಿನ್ನಿಂಗ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪೆನಿ ಹಿಸ್ಸೇದಾರರು ಯಂತ್ರದ ಕಾರ್ಖಾನೆಯಲ್ಲಿರುವ ಕಂಪೆನಿ ಆಫೀಸಿನಲ್ಲಿ ಇದರಡಿ ತಿಳಿಸಲ್ಪಡುವ ಕೆಲಸಗಳನ್ನು ನಡೆಸುವದಕ್ಕಾಗಿ ಯೆಕಸ್ಟ್ರಾಡಿನರಿ ಜನರಲ್ ಮೀಟಿಂಗ್ ಸೇರುವರು, ಅವು ಯಾವವೆಂದರೆ:—

ಕಂಪೆನಿಯ ಆರ್ಟಿಕಿಲ್ಸ್ ಆಫ್ ಅಸೋಸಿಯೇಷನ್ ೧೦೫ ನೇ ಕಲಂನಲ್ಲಿ "ಕಂಪೆನಿಯ ನಿವ್ವಳ ನಫೆಯಲ್ಲಿ ನೂರಕ್ಕೆ ಹತ್ತರ ಮೇರೆ" ಎಂದು ನಮೂದಿಸಿರುವ ಕಡೇ ಹತ್ತು ಶಬ್ದಗಳನ್ನು ಹೊಡೆದು ಹಾಕಿ ಅದಕ್ಕೆ ಬದಲು, "ತಯಾರಾಗುವ ನೂಲು ಮತ್ತು ಬಟ್ಟೆಗಳಲ್ಲಿ ಪೌಂಡ್ ಒಂದಕ್ಕೆ ಮೂರು ಪೈ ಮೇರೆ" ಎಂದು ಸೇರಿಸತಕ್ಕದ್ದು.

ಆಗ ೧೦೫ನೇ ಕಲಂ ಇದರಡಿ ಕಂಡಂತಿರುವದು:—

ಮುಂಬೈಯಲ್ಲಿ ೯ನೇನಂಬರ್ ಹಾರ್ನಬೀ ಬೀದಿಯಲ್ಲಿರುವ ಮೆಸ್ಸರ್ಸ್ ಜೇಂಸ್‌ಸ್ಕಾಟ್ ಅಂಡ್ ಕೋ ಯವರ ಕೋಠಿಯಲ್ಲಿ, ಕಾಯಮಾಗಿ ೩೦ ವರ್ಷಗಳ ಕಾಲ ನಾಲ್ಕು ದಾರರಾಗಿ ಸೇರಿರುವ ಅಥವಾ ಮುಂದೆ ಸೇರಬಹುದಾದವರು ಕಂಪೆನಿಯ ಏಜಂಟರಾಗಿರತಕ್ಕದ್ದು. ಮತ್ತು ಆ ಕಾಯಿದೆ ಪ್ರಕಟವಾಗುವ ಕಾಲದಲ್ಲಿ, ಜಾಸ್ತಿ ಸಂಖ್ಯೆಯುಳ್ಳ ಹಿಸ್ಸೇದಾರರ ಅಭಿಪ್ರಾಯವನ್ನನುಸರಿಸಿ ವಜಾ ಮಾಡಲ್ಪಡದೆ ಇರುವ ಪಕ್ಷಕ್ಕೆ ಅವರೇ ಏಜಂಟರಾಗಿರತಕ್ಕದ್ದು. ಮತ್ತು ತಯಾರಾಗುವ ನೂಲು ಮ ಬಟ್ಟೆಗಳಲ್ಲಿ ಪೌಂಡ್ ಒಂದಕ್ಕೆ ಮೂರು ಪೈ ಮೇರೆ ಏಜಂಟರುಗಳಾಗಿರುವ ಹಿಸ್ಸೇದಾರರಿಗೆ ರುಸುಂ ಸಲ್ಲತಕ್ಕದ್ದು.

ಕಾರಣಗಳು—ಹಿಸ್ಸೇದಾರರುಗಳ ತಿಳುವಳಿಕೆಯಬಗ್ಗೆ ಇದರಡಿ ಬರುವ ಅಂಶಗಳನ್ನು ನಮೂದು ಮಾಡುವದು ಉಚಿತವಾಗಿರುತ್ತದೇನೆಂದರೆ, ಮದರಾಸಿನಲ್ಲಿರುವ ಬಕ್ಕಿಂಗ್ಹಾಂ ಮತ್ತು ಕರ್ನಾಟಿಕ್ ಮಿಲ್‌ಗಳು, ಬಿನ್ನಿ ಕಂಪೆನಿಯವರು ಏಜಂಟರುಗಳಾಗಿರುವ ಬೆಂಗಳೂರಿನ ಅರಳೆ, ಕಂಬಳಿ ಮತ್ತು ರೇಷ್ಮೆ ಯಂತ್ರದ ಕಾರ್ಖಾನೆಗಳು, ಇವೆಲ್ಲವೂ ಸೇರಿ ದಕ್ಷಿಣ ಹಿಂದೂ ದೇಶದಲ್ಲಿನ ಯಂತ್ರದ ಕಾರ್ಖಾನೆಗಳಲ್ಲಿ ಮೂರು ಪೈ ಪದ್ಧತಿ ಆಚರಣೆಯಲ್ಲಿರುತ್ತದೆ. ಇನ್ನು ದೇಶದೊಳಗಣ ವಿಪುಲ ಯಂತ್ರದ ಕಾರ್ಖಾನೆಗಳ ಹಿಸ್ಸೆಗಳಿಗಿಂತಲೂ ಬಹಳ ಜಾಸ್ತಿ ಕ್ರಯವುಳ್ಳ ಮದರಾಸ್ ಯುನೈಟೆಡ್ ಮಿಲ್ ಎಂಬ ಕಾರ್ಖಾನೆಯಲ್ಲೂ, ಮುಂಬೈ ಕಾರ್ಖಾನೆಗಳ ಪೈಕಿ ನೂರಕ್ಕೆ ೯೦ ರಲ್ಲೂ ಅದೇ ಪದ್ಧತಿಯೇ ಇರುತ್ತದೆ. ಆದುದರಿಂದ ಇತರ ಕಾರ್ಖಾನೆಗಳಲ್ಲಿನಂತೆಯೇ ಇಲ್ಲಿಯೂ ಏಜಂಟರುಗಳನ್ನು ಇಡುವದಕ್ಕಾಗಿ ಈ ಬದಲಾವಣೆ ಮಾಡಬೇಕಾಗಿದೆ.

JAMES SCOTT & Co.,
Agents.

ನೋಟಿಸ್.

ಇದರಿಂದ ನಮ್ಮ ಚಂದಾದಾರರಿಗೂ ಇತರರಿಗೂ ಪ್ರಕಟಪಡಿಸುವದೇನಂದರೆ —

ಸನ್ ೧೮೮೯ನೇ ಇಸವಿ ಡಿಸೆಂಬರ್ ಆಖೈರಿನವರಿವಿಗೆ ಚಂದಾ ಬಾಕಿಯನ್ನು ಪೂರಾ ಕೊಡತಕ್ಕ ಚಂದಾದಾರರ ಹೆಸರುಗಳನ್ನು ಮಾತ್ರ ನಾವು ರಿಜಿಸ್ಟರ್ ದಾಖಲ್ಮಾಡಿಕೊಂಡು ಈ ಜನವರಿ ಲಾಗಾಯತು ಪತ್ರಿಕೆ ಕಳುಹಿಸುತ್ತೇವೆ. ಅವರ ಪೈಕಿ ಯಾರಿಗಾದರು ಪತ್ರಿಕೆಯ ಅಪೇಕ್ಷೆ ಇಲ್ಲದಿದ್ದರೆ ಅಂತವರು ಕೂಡಲೇ ತಮ್ಮ ಅಭಿಪ್ರಾಯವನ್ನು ಮುರುಕಾಸಿನ ಕಾರ್ಡಿನಲ್ಲಿ ನಮಗೆ ತಿಳಿಸಿಬಿಡಬಹುದು. ಪತ್ರಿಕೆಯ ಆವಶ್ಯಕತೆ ಇರತಕ್ಕವರು ಸಾಧ್ಯವಾದಷ್ಟು ತ್ವರೆಯಲ್ಲಿ ಚಂದಾ ಮೊಬಲಗನ್ನು ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಬೆಂಗಳೂರು. ತಾ॥೩ನೇ ಜನವರಿ ೧೮೯೦. — ಟಿ. ಸಿ. ಶ್ರೀನಿವಾಸಾಚಾರ್, ಪ್ರೊಪ್ರೈಟರ್. ಕರ್ಣಾಟಕ ಪ್ರಕಾಶಿಕಾ.

ದಕ್ಷಿಣ ಮಹರಾಷ್ಟ್ರ ರೆಯಿಲ್ವೇ ಕಂಪೆನಿ (ಲಿಮಿಟೆಡ್.)
ನೋಟೀಸ್.

ಉಪಕರಣಗಳ ಸರಬರಾಯಿ ಬಗ್ಗೆ ದರಖಾಸ್ತುಗಳು ಕೊಡತಕ್ಕವರಿಗೆ ಇದರಿಂದ ತಿಳಿಸುವದೇನಂದರೆ—ಸದರೀ ಬಗ್ಗೆ ದರಖಾಸ್ತುಗಳು ಸನ್ ೧೮೯೦ನೇ ಇಸವಿ ಫೆಬ್ರವರಿ ೧೫ನೇ ತಾರೀಖ್ ವರಿವಿಗೆ ಅಂಗೀಕರಿಸಲ್ಪಡುವದು, ಮತ್ತು ವಿಮರ್ಶಿಸಲ್ಪಟ್ಟಿರುವ ಕಂಟ್ರಾಕ್ಟು ತಪ್ಸೀಲ್‌ಗಳು ಮತ್ತು ದರತ್ತುಗಳನ್ನು ಜನವರಿ ತಿಂಗಳ ಮೊದಲನೇ ವಾರದಲ್ಲಿ ಸ್ಟೋರ್ ಕೀಪರಿಂದ ಪಡೆಯಬಹುದು.

ಧಾರ್ವಾಡ, ತಾ॥೨೫ನೇ ಡಿಸೆಂಬರ್ ೧೮೮೯.

J. G. LINDSAY, Col, R. E.,
Agent and Chief Engineer.

Bangalore City Municipality.
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಸನ್ ೧೮೯೦ನೇ ಇಸವಿ ಜನವರಿ ೩೧ನೇ ತಾರೀಖ್ ಶುಕ್ರವಾರ ಪ್ರಾತಃಕಾಲ ೭½ ಘಂಟೆಗೆ ಸಿಟಿ ಮ್ಯುನಿಸಿಪಲ್ ಕಮಿಷನರ್‌ಗಳು ತಮ್ಮ ಆಫೀಸಿನಲ್ಲಿ ಸಭೆ ಸೇರುವಾಗ ಅವರ ವ್ಯವಸ್ಥೆಗೆ ತರಲ್ಪಡುವ ವಿಷಯಗಳ ಯಾದಾಸ್ತು.

೧. ಸನ್ ೧೮೮೯ನೇ ಇಸವಿ ಡಿಸೆಂಬರ್ ತಿಂಗಳ ಟಾಬಕು ಜಾಲತಿ ಜಮಾಖರ್ಚು ಲೆಕ್ಕಗಳು ಮತ್ತು ಮರಣ ಲೆಕ್ಕಗಳು.

೨. ಸನ್ ೧೮೯೦-೯೧ನೇ ಸಪ್ಲೈಗ್ ಸಾಲಿಗೆ ಮ್ಯುನಿಸಿಪಲ್ ಫಂಡಿನ ಜಮಾಖರ್ಚಿನ ಮುಸವಿದಾ ಬಜೆಟ್ ಅಂದಾಜ್ ಪಟ್ಟಿ.

೩. ಬನ್ನಿಯಾವತ ಕಾಫೀ ಕಾರ್ಖಾನೆಯ ಮ್ಯಾನೇಜರಾದ ಮಿ॥ ಹಾರ್ಡಿಯವರು ತಮ್ಮ ಯಿಸ್ಸೀ ಯಂತ್ರದ ಕಾರ್ಖಾನೆಗೆ ಸೇರಿದ ಜಮೀನಿನ ಪಶ್ಚಿಮ ಸರಹದ್ದನ್ನು ರಸ್ತೆಯ ವರಿವಿಗೆ ಬಡಾಯಿಸಿಕೊಳ್ಳಬೇಕಾದ ವಿಷಯದಲ್ಲಿ ಬರೆದುಕೊಂಡ ಅರ್ಜಿ.

೪. ಚಿಕ್ಕರಾಯನ ಕೆರೆಯ ಬಳಿ ಸ್ಮಶಾನದ ಘಟ್ಟವನ್ನೇರ್ಪಡಿಸುವದಕ್ಕೆ ಬೇಕಾದ ಜಮೀನ್ದಾರಗಳಿಗೆ ಕೊಡತಕ್ಕ ಕಂಪೆನ್ಸೇಷನ್ ಅಂದರೆ ನಷ್ಟ ಮೊಬಲಗುಗಳು ನಮೂದಿಸಿ ಬೆಂಗಳೂರು ಅಮಲ್ದಾರರು ಕಳುಹಿಸಿಕೊಟ್ಟ ಲೆಕ್ಕದ ಪಟ್ಟಿಯನ್ನು ಶಿಫಾರಸು ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರು ಸನ್ ೧೮೯೦ನೇ ಇಸವಿ ಜನವರಿ ೧೪ನೇ ಮಕಾಮಿನಲ್ಲಿ ಬರೆದ ೧೬೩ನೇ ನಂಬರ್ ಲೆಟರ್.

ತಾ॥ ೧೩ನೇ ಜನವರಿ, ೧೮೯೦.

A. SRINIVASACHARLU, B. A.,
Vice-President,
City Municipal Commission.

ಕರ್ಣಾಟಕ ಪ್ರಕಾಶಿಕಾ.
THE KARNATAKA PRAKASIKA.

MONDAY, JANUARY 20, 1890
೧೮೯೦ನೇ ಜನವರಿ, ತಾ॥ ೨೦ ನೇ ಸೋಮವಾರ.

PRESIDENCY BANK DIVIDENDS.

ಮದರಾಸ್, ಮುಂಬೈ, ಕಲ್ಕತ್ತಾ, ಈ ಮೂರು ಪ್ರೆಸಿಡೆನ್ಸೀ ಬ್ಯಾಂಕ್‌ಗಳಲ್ಲಿ ನಡೆಸಲ್ಪಡುವ ಆದಾಯಗಳ ಕ್ರಮವನ್ನೂ, ಅವುಗಳ ಹಿಸ್ಸೇದಾರರಿಗೆ ಸಿಕ್ಕತಕ್ಕ ಲಾಭದ ದರವನ್ನೂ ಈ ದೇಶದೊಳಗಣ ನೇಟಿವ್ ಬ್ಯಾಂಕ್‌ಗಳ ಮತ್ತು ವ್ಯಾಪಾರ ಸಂಘಗಳ ಕಾರ್ಯನಿರ್ವಾಹಕರು, ಮುಖ್ಯವಾಗಿ ಹಿಸ್ಸೇದಾರರ ತಿಳುವಳಿಕೆಗೆ ತರಬೇಕಾದುದು ಕೇವಲ ಆವಶ್ಯಕವೆಂದು ಕಂಡುಬಂದದರಿಂದ ಅವನ್ನು ಸಂಗ್ರಹವಾಗಿ ಇದರ ಕೆಳಗೆ ತಿಳಿಸುವೆವು.

ಮದರಾಸ್ ಬ್ಯಾಂಕ್—ಕಳೆದ ಡಿಸೆಂಬರ್ ತಿಂಗಳಿಗೆ ಆಖೈರಾದ ಛಮಾಹಿಯಲ್ಲಿ, ಅದರ ಹಿಂದಿನ ಬಾಕಿ ಲೆಕ್ಕದಿಂದ ಕೊಡಲ್ಪಟ್ಟ ೧,೧೨,೩೩೦ ರೂಪಾಯಿಗಳು ಸೇರಿ ಹುಟ್ಟುವಳಿಯಾದ ಛಮಾಹಿ ನಫೆಯು ೩,೨೬,೬೩೪ ರೂಪಾಯಿಗಳು. ಈ ಮೊತ್ತದಲ್ಲಿ ಹಿಸ್ಸೇದಾರರಿಗೆ ಸೇಕಡ ಹತ್ತು ರೂಪಾಯಿಗಳ ಮೇರೆ ನಫೆ ಬಟವಾಡೆ ಮಾಡಿ, ಉಳಿದ ಮೊಬಲಗು ಪೈಕಿ ೫೦,೦೦೦ ರೂಪಾಯಿಗಳು ರಿಸರ್ವ್ ಫಂಡಿಗೆ ಕೊಡಲ್ಪಟ್ಟು ಉಳಿದ ೨೬,೬೩೪ ರೂಪಾಯಿಗಳು ಮುಂದಿನ ಛಮಾಹೀ ಲೆಕ್ಕಕ್ಕೆ ದಾಖಲ್ಮಾಡಲ್ಪಟ್ಟವು. ಸನ್ ೮೮ನೇ ಇಸವಿಯಲ್ಲಿ ಬ್ಯಾಂಕಿನ ಮೂಲಧನಕ್ಕೆ ಸೇಕಡ ೧೪ ರೂಪಾಯಿಗಳಂತೆ ನಫೆ ಸಂಪಾದ್ಯವಾಯಿತು. ಈಗ ರಿಸರ್ವ್ ಫಂಡಿನಲ್ಲಿ ಹದಿಮೂರುವರೆ ಲಕ್ಷ ರೂಪಾಯಿಗಳು, ಅಂದರೆ ಬಂಡವಾಳಕ್ಕೆ ಸೇಕಡಾ ೨೩ ರೂಪಾಯಿಗಳಂತೆ ಜಮಾ ಆಗಿರುತ್ತದೆ. ಇದರ ದೆಸೆಯಿಂದ ೫೦೦ ರೂಪಾಯಿಗಳ ಕ್ರಯವುಳ್ಳ ಒಂದು ಹಿಸ್ಸೆಯು ಈಗಿನ ದರವು ೯೨೫ ರಿಂದ ೯೩೦ ರ ವರಿವಿಗೆ ಏರ್ಪಟ್ಟು ಹೋಗಿರುತ್ತದೆ.

ಬಂಗಾಳೆ ಬ್ಯಾಂಕ್—ಇವರಲ್ಲಿ ಪ್ರತಿ ವರ್ಷದ ಸ್ಲೂ ಸೇಕಡ ಹತ್ತರ ಮೇರೆ ನಫೆ ಬಟವಾಡೇ ಮಾಡಿ, ಡೌಟಫುಲ್, ಅಂದರೆ ವಸೂಲೀ ಸಂದೇಹಾಸ್ಪದವಾದ ಲೆಕ್ಕಕ್ಕೆ ಐದು ಲಕ್ಷ ರೂಪಾಯಿಗಳು ತೆಗದಿಟ್ಟು, ಮುಂದಿನ ಹೊಸ ಲೆಕ್ಕಕ್ಕೆ ೧,೧೨,೨೦೦ ರೂಪಾಯಿಗಳು ದಾಖಲ್ ಮಾಡಲ್ಪಡುತಿವೆ.

ಮುಂಬೈ ಪ್ರೆಸಿಡೆನ್ಸೀ ಬ್ಯಾಂಕ್—ಇವರಲ್ಲಿ ಸಾಲೀಯಾನಾ ಸೇಕಡ ೮ ರೂಪಾಯಿಗಳಂತೆ ನಫೆ ಬಟವಾಡೆ ಮಾಡಲ್ಪಟ್ಟು, ರಿಸರ್ವ್ ಫಂಡಿಗೆ ೫೦,೦೦೦ ರೂಪಾಯಿಗಳು ದಾಖಲ್ಮಾಡಲ್ಪಟ್ಟು, ಮುಂದಿನ ಸಾಲ್ ಲೆಕ್ಕಕ್ಕೆ ೧,೫೦,೦೦೦ ರೂಪಾಯಿಗಳು ವರ್ಗ ಮಾಡಲ್ಪಡುತಿವೆ. ಈಗ ರಿಜರ್ವ್ ಫಂಡ್ ಮದರಾಸ್ ಬ್ಯಾಂಕಿನಲ್ಲಿ ೧೩½ ಲಕ್ಷ ರೂಪಾಯಿಗಳೂ, ಅಂದರೆ ಬಂಡವಾಳಕ್ಕೆ ಸೇಕಡಾ ೨೩ ರಂತೆಯೂ, ಬೆಂಗಾಲ್ ಬ್ಯಾಂಕಿನಲ್ಲಿ ೫೮ ಲಕ್ಷ ರೂಪಾಯಿಗಳೂ, ಅಂದರೆ ಬಂಡವಾಳಕ್ಕೆ ಸೇಕಡ ೨೯ ರೂಪಾಯಿನಂತೆಯೂ, ಮುಂಬೈ ಬ್ಯಾಂಕಿನಲ್ಲಿ ೩೦ ಲಕ್ಷ ರೂಪಾಯಿಗಳೂ, ಅಂದರೆ ಬಂಡವಾಳಕ್ಕೆ ಸೇಕಡಾ ೩೦ ರೂಪಾಯಿಗಳಂತೆಯೂ ಹಾಜರಿರುತಿವೆ. ಮದರಾಸ್ ಬ್ಯಾಂಕಿನಲ್ಲಿ ಹಿಸ್ಸೆಗಳ ದರ ಸೇಕಡಾ ೯೦ ರೂಪಾಯಿನಂತೆಯೂ, ಬಂಗಾಳೇ ಬ್ಯಾಂಕಿನಲ್ಲಿ ಸದರೀ ದರವು ಸೇಕಡಾ ೧೦೪ ರೂಪಾಯಿಗಳಂತೆಯೂ, ಮುಂಬೈ ಬ್ಯಾಂಕಿನಲ್ಲಿ ಸೇಕಡ ೮೬ ರೂಪಾಯಿಗಳಂತೆಯೂ ಜಾಸ್ತೀಯಾಗಿರುತಿವೆ.

ಈ ಮೈಸೂರು ದೇಶದೊಳು ಸುಮಾರ್ ೨೫ ವರ್ಷಗಳಿಂದೀಚೆಗೆ ನೂರಾರು ಬ್ಯಾಂಕ್‌ಗಳು ಹುಟ್ಟಿ ಅವುಗಳ ಪೈಕಿ ಪ್ರಾಯಶಃ ಯೆಲ್ಲವು ಕಾಲಕ್ರಮೇಣ ನಾಶವನ್ನೈದುತ ಬಂದವು. ಇದಕ್ಕುಂಟಾದ ಕಾರಣವು ವಿಚಾರಿಸಿ ನೋಡಲಾಗಿ, ಇವುಗಳಿಗೆ ಏಜಂಟರುಗಳಾಗಿಯೂ, ವ್ಯವಸ್ಥಾಪಕರಾಗಿಯೂ ಯೇರ್ಪಟ್ಟವರ ದ್ರೋಹಚಿಂತೆಯೂ, ನಿರಕ್ಷರ ಕುಕ್ಷಿಗಳಾಗಿ ಮತ್ತು ಏಜಂಟರುಗಳಿಗೆ ಅನುಬಂಧಿಗಳಾಗಿ ಇರತಕ್ಕವರು ಡೈರೆಕ್ಟರ್‌ಗಳಾಗಿಯೂ ಆಡಿಟರ್‌ಗಳಾಗಿಯೂ ಯೇರ್ಪಡುವಣವೂ, ಹಿಸ್ಸೇದಾರರ ಓದಾಸೀನ್ಯ ಮತ್ತು ಅವಿವೇಕವೂ ಮುಖ್ಯಕಾರಣಗಳೆಂದು ಸ್ಪಷ್ಟವಾಗುತಿವೆ. ಛಮಾಹಿ ಅಥವಾ ಸಾಲೀಯಾನಾ ಮೀಟಿಂಗ್ ನಡೆಯುವ ಕಾಲಗಳಲ್ಲಿ ಕೋರಂ ಸಂಖ್ಯೆ ಪೂರ್ತಿಯಾಗುವದಕ್ಕೆ ಹಿಸ್ಸೇದಾರರನ್ನು ಸೆಳೆದುಕೊಂಡು ಬರಬೇಕಾಗಿರುತಿವೆ. ಹಾಗೆ ಬಂದವರ ಪೈಕಿ ಯೊಬ್ಬನು ರಿಸರ್ವ್ ಫಂಡ್ ಯೇತಕ್ಕೆ, ಅದನ್ನು ಸೇರಿಸಿ ನಫೆ ಬಟವಾಡೆ ಯೇತಕ್ಕೆ ಮಾಡಬಾರದೆಂತಲೂ, ಮತ್ತೊಬ್ಬನು ಸದರೀ ಫಂಡಿಗೆ ತೆಗದಿಡುವ ಮೊಬಲಗಿನ ದರವನ್ನು ತಗ್ಗಿಸಬೇಕೆಂತಲೂ, ಬೇರೆ ಯೊಬ್ಬನು, ಈ ಸಲ ನಫೆ ಸೇಕಡ ಒಂದು ರೂಪಾಯಿಗೆ ಕಮ್ಮಿ ಬೀಳುವದರಿಂದ ಅದಕ್ಕೆ ಭರ್ತಿಯಾಗಿ ರಿಸರ್ವ್ ಫಂಡಿನಿಂದ ತೆಗದುಕೊಂಡು ಒಂದು ರೂಪಾಯಿನಂತೆ ಬಟವಾಡೇ ಮಾಡಬೇಕೆಂತಲೂ, ಎತ್ತಿಂಚಿತ್ ತಿಳುವಳಿಕೆಯುಳ್ಳ ಹಿಸ್ಸೇದಾರನು ಯಾವನಾದರೊಬ್ಬನು ದೈವಾತ್ ಆ ಕಾಲದಲ್ಲಿ ಹಾಜರಿದ್ದು, ಲೆಕ್ಕಗಳು ತನಿಖಿಯಾದವೆ, ಯೆಲ್ಲವು ಕ್ರಮವಾಗಿವೆಯೇ ಯೆಂದು ಆಡಿಟರನ್ನು ಕೇಳಿದರೆ ಏಜಂಟರೂ ವ್ಯವಸ್ಥಾಪಕರೂ ಡೈರೆಕ್ಟರ್ಸ್ ಮೀಟಿಂಗನ್ನು ತಾವೇ ತಯಾರ್ಮಾಡಿ ನನ್ನ ಕೈಗೆ ಕೊಟ್ಟು ರುಜು ಮಾಡೆಂದು ಹೇಳಿದ ಮೇರೆಗೆ ನಾನು ಅದಕ್ಕೆ ರುಜು ಮಾಡಿರುತ್ತೇನೆ, ಆ ಭಾಗದಲ್ಲಿ ತಿಳಿದುಕೊಳ್ಳಬೇಕಾದ ಅಂಶ ಯಾವದಾದರೂ ಇದ್ದರೆ ಏಜಂಟರನ್ನು ಕೇಳಿ ತಿಳಿದುಕೊಳ್ಳಬಹುದೆಂತಲೂ ಹೇಳುವದೂ ನಮ್ಮಂತಿ ಅನೇಕರ ಅನುಭವಕ್ಕೆ ವಿಷಯವಾಗಿಲ್ಲದೆ ಹೋಗಲಾರದು.

ಮುಖ್ಯವಾಗಿ ಪ್ರಾರಂಭದಲ್ಲಿ ಏಜಂಟರಾಗಿ ಏರ್ಪಡುವಂತವರು ಇತರ ಜೀವನೋಪಾಯವಿಲ್ಲದೆ, ತಮ್ಮ ಜಂಗತಿಗೆ ಸೇರಿದವರೆಂದು ತಿಳಿಯಬರುವ ಕೆಲವರನ್ನು ಸೇರಿಸಿಕೊಂಡು, ಇಂತಾ ಸಂಘಗಳನ್ನೇರ್ಪಡಿಸಿ, ಮುಂದಿನ ಫಲವನ್ನಾಲೋಚಿಸುವದಕ್ಕೆ ಬುದ್ಧಿ ಬಲವಿಲ್ಲದ ಗ್ರಾಮವಾಸಿಗಳಿಗೆ ಬೋಧಿಸಿ ಅವರು ಹಿಸ್ಸೇದಾರರನ್ನಾಗಿ ದಾಖಲ್ಮಾಡಿಕೊಂಡು, ಅವರಿಂದ ಹಿಸ್ಸೇ ಮೊಬಲಗು ವಸೂಲ್ಮಾಡಿ, ಭಾರೀ ತಲಬಿನ ಮೇರೆ ಸ್ವಜನಗಳನ್ನೇ ಬ್ಯಾಂಕಿನ ನೌಕರರನ್ನಾಗಿ ಇಟ್ಟುಕೊಂಡು, ಕೆಲವು ದಿನಗಳ ತನಕ ಆದಾಯ ನಡೆಸುವಂತೆ ನಟಿಸುತ, ಪ್ರಾರಂಭದಾದ ಆರುತಿಂಗಳೊಳಗಾಗಿಯೇ ನಾನಾವಿಧ ಕಾರಣಗಳಂಕಲ್ಪಿಸಿಕೊಂಡು ಬ್ಯಾಂಕು ವೈಂಡಪ್ ಮಾಡಿ ತಾವೇ ಲಿಕ್ವಿಡೇಟರಾಗಿ ಯೇರ್ಪಟ್ಟು ಆಕಾಲದಲ್ಲಿ ವಸೂಲಾಗುವ ಮೊಬಲಗನ್ನು ಸಹ ಭಕ್ಷಿಸಿಬಿಟ್ಟು ಸುಳ್ಳು ಲೆಕ್ಕಗಳು ಬರೆದಿರುತ ಬಂದು, ಆಖೈರಿಗೆ ಷೇರುದಾರರನ್ನು ಮೇಲುಕೋಟೆ ಯಾತ್ರೆಗೆ ಪ್ರಯಾಣ ಮಾಡಿಸುತ್ತಾರೆಂಬದಕ್ಕೆ ಹಾಸನ ಬೆಂಗಳೂರು, ಕೋಲಾರ ಕಸಬೆಯಲ್ಲಿ ವಿಧವಿಧ ಹೆಸರುಗಳಿಂದ ಸ್ಥಾಪಿಸಲ್ಪಟ್ಟ ಸಂಘಗಳ ಪ್ರಕೃತಸ್ಥಿತಿಗಿಂತಲೂ ಬೇರೆ ನಿದರ್ಶನ ಅನಾವಶ್ಯಕವಾಗಿರುತಿವೆ.

ಒಂದೆರಡು ವರ್ಷಗಳಿಂದೀಚೆಗೆ ಕೋಲಾರ ಡಿಸ್ಟ್ರಿಕ್ಟು ತಾಲ್ಲೂಕು ಜಾಗನಲ್ಲಿ ಹೊಸದಾಗಿ ನೂರಾರು ಬ್ಯಾಂಕ್‌ಗಳೇರ್ಪಟ್ಟು, ಅವುಗಳ ಷೇರುದಾರರಾಗಿ ಸೇರಿದವರಿಂದ ಅನೇಕ ಲಕ್ಷ ರೂಪಾಯಿಗಳು ವಸೂಲಾಗಿ ಕೆಲವು ದಿನಗಳ ತನಕ ನೆಪಮಾತ್ರಕ್ಕೆ ಆದಾಯ ನಡೆದು. ಈಚೆಗೆ ಒಂದೊಂದಾಗಿ ವೈಂಡಪ್ ಆಗುತ ಬರುತಲಿವೆ. ಈ ಬ್ಯಾಂಕುಗಳಲ್ಲಿ ಆದಾಯ ನಡೆಸಿದ ಮತ್ತು ನಡೆಸುತಿರುವಂತವರ ಹಿಂದಿನ ಹುಲ್ಲುಮನೆಗಳು ಈಗ ಗಾರೆ ಮನೆಗಳಾದವು, ಅವರ ಪ್ರಾಣಾಧಾರಣಕ್ಕೆ ಆಧಾರಭೂತವಾಗಿದ್ದ ಹಿಟ್ಟಿಗೆ ಬದಲು ಶಾಲ್ಯಾನ್ನವಾಯಿತು, ಅವರ ಕಂಬಳಿಗಳೂ ದುಪ್ಪಟಿಗಳೂ ತಪ್ಪಿ ಶಾಲ್ಯದ ಪಟ್ಟಂಚು ಧೋತ್ರಗಳೂ ಕಲಾಬತ್ ಶಾಲುಗಳು ಕುದುರಿದವು. ಇವರ ಜೇಬಿಗೆ ಟ್ವೀಡ್ ಕೋಟುಗಳೂ, ಗಡಿಯಾರ ಸರಪಣಿಗಳೂ, ಚತಾಪ್‌ಗಳೂ ಕುದುರಿದವು. ಬೆಂಗಳೂರು ಮೈಸೂರಂತಾ ದೊಡ್ಡ ಪಟ್ಟಣಗಳಿಗೆ ತಾವು ಹೋಗಬೇಕಾದ ಸಂದರ್ಭಗಳಲ್ಲಿ ತಮ್ಮ ಜೇಬಿನಲ್ಲಿ ಅಂಗನಾಮಣಿಯೊಬ್ಬಳಿಲ್ಲದೆ ಹೋದರೆ ತಮ್ಮ ಗೌರವಕ್ಕೆ ಕೊರತೆಯುಂಟಾಗುವದೆಂಬ ಭಾವನೆಯಿಂದ ಕೆಲವರು ಅದನ್ನೂ ಕುದುರಿಸಿಕೊಂಡರು. ಬೇರೆ ಕೆಲವರು ತಮ್ಮ ಆದಾಯ ಕಾಲದಲ್ಲಿ ಸಂಪಾದಿಸಿದ ದ್ರವ್ಯವನ್ನು ತಮ್ಮ ಹೆಂಡತಿಗಳ ಹೆಸರಿನಲ್ಲೂ ಭಾವಮೈದುನನ ಹೆಸರಿನಲ್ಲೂ ಕಾಪ್ಯವಾದ ಒಂದು ಸ್ಥಿತಿ ರೂಪವಾಗಿ ಮಾಡಿಬಿಟ್ಟು ತಮಗೆ ನಿಷ್ಕಿಂಚನತ್ವವಾಗಿದ್ದ ಅವಸ್ಥೆಯನ್ನನುಭವಿಸಬೇಕಾದವರಾದರು. ಸಂಗ್ರಹರೂಪೇಣ ಇವರ ಸ್ಥಿತಿ ಹೀಗಿರುವಲ್ಲಿ, ಮೇಲಿನ ಸಂಘಗಳಿಗೆ ಹಿಸ್ಸೇದಾರರಾಗಿ ಯೇರ್ಪಟ್ಟವರ ಪೈಕಿ ಬಡ ವೈದಿಕರು, ದ್ರಾಕ್ಷಿ ಸುವಾಸಿನಿಯರು, ಕೃಷಿಕರು, ವರ್ತಕರು ಮೊದಲಾದವರನೇಕರು ಸಂಘಗಳ ಏಜಂಟರುಗಳ ಪೂರ್ವಸ್ಥಿತಿಯನ್ನನುಭವಿಸಬೇಕಾದವರಾದರು. ಈ ವಿಷಯದಲ್ಲಿ ಇನ್ನು ತಿಳಿಸಬೇಕಾದ ಅಂಶಗಳು ಬಹಳವಾಗಿರುವದರಿಂದ ಅವು ಮತ್ತೊಂದು ಸಂದರ್ಭದಲ್ಲಿರುವುದು.

THE AHOBALA JIYAR AT SRIRANGAM.

ತಿರುವಲ್ಲೂರು ಶ್ರೀ ಅಹೋಬಲ ಮಠದ ಸನ್ಯಾಸಿ ವಿಷಯವು ಕ್ರಿಮಿನಲ್ ಕೋರ್ಟುಗಳ ವರಿವಿಗೆ ಹೋಗಿ ಕಡೆಗೆ ಅದು ನಾನಾ ರೂಪವನ್ನೈದಿದ ಅಂಶವು ಪತ್ರಿಕಾ ಓದುಗರಿಗೆ ಈ ಪತ್ರಿಕೆಯ ಮುಖಾಂತರ ತಿಳಿದುಬಂದಿರುವುದು. ನ್ನೋದತಕ್ಕವರ ಸ್ಮೃತಿಪಥದಿಂ ಸಮುತ್ತಾರಿತವಾಗಿರಲಾರದೆಂದೆಣಿಸುತ್ತೇನೆ. ಸದರೀ ಮಠಾಧಿಪತ್ಯೆಯು ಕೌಟಿಲ್ಯದಿಂದಲೂ ಧನಪ್ರಯೋಗದಿಂದಲೂ, ಮಾನವಶಕ್ತಿಯಿಂದಲೂ ಕಮಚಿತ ಸಾಧಿಸಿದ ಪ್ರಸ್ತುತ ಜಿಯ್ಯರವರಾದ ಮಂಗೀಪುರಂ ಶ್ರೀರಂಗಾಚಾರ್ಯರವರು, ತಮ್ಮ ಅತ್ಯಂತ ಪ್ರಿಯತಮವಾದ ಸ್ವಸ್ಥಾನ ಕೀರ್ತಿಸ್ಮೃತಿಸ್ಥಗಳಾದ ಸಂಸ್ಕೃತರಾಗವೆ ಅನ್ಯ ಕ್ಷೇತ್ರಗಳಲ್ಲಿ ಸಹ ತಮ್ಮ ಪರಾಕ್ರಮ ಪ್ರಕಟಿಸಬೇಕೆಂಬ ಕುತೂಹಲದಿಂದ ಪರಸ್ಥಳಗಳಲ್ಲಿ ಸಂಚರಿಸುತ ಅಲ್ಲಲ್ಲಿ ಕಲಹ ವಿದ್ವೇಷಗಳು ವೃದ್ಧಿಪಡಿಸುತಲಿರುವದಕ್ಕಾಗಿ ನಾವು ಬಹಳ ವಿಷಾದಿಸುತ್ತೇವೆ. ಕಲಹಾಧೀನ ಜನ್ಯವಾದ ವಿದ್ವೇಷದಿಂದಲೇ ಬರೆವನೆಂದು ತಪ್ಪಾಗಿ ಭಾವಿಸಬಹುದು. ಪರಂತು ಸಮಗತಾವ್ಯಕ್ತಭಾವವಾಗಲಿ ಛೀವಜ್ಞಾನವಾಗಲಿ ಸ್ವಲ್ಪವೂ ಇಲ್ಲದಿರುವದರಿಂದ ಮತ ಸಂರಕ್ಷಕರೆನ್ನಿಸಿಕೊಂಡಿರುವ ಮಠಾಧಿಪತಿಗಳ ವರ್ತನವು ಈ ಕಾಲದಲ್ಲಿ ಬಯಲ ಮಟ್ಟಿಗೆ ಬರಲಾಯಿಸಲ್ಪಡತಕ್ಕದ್ದಾಗಿದೆಯೆಂಬ ಭಾವನೆಯೊಡನೆ ಪ್ರಸಕ್ತ ವಿಷಯವು ಕುರಿತು ಈ ಸಂದರ್ಭದಲ್ಲಿ ಸ್ವಲ್ಪ ವಿಚಾರ ಮಾಡಬೇಕಾದ ಆವಶ್ಯಕತೆಯುಂಟಾಯಿತೇನಂದರೆ—ಅಹೋಬಲ ಸ್ವಾಮಿಗಳವರು ದಿವ್ಯದೇಶ ಯಾತ್ರೋದ್ದೇಶದಿಂ ಕಳೆದ ನವಂಬರ್ ತಿಂಗಳ ೬ ನೇ ತಾರೀಖಿನಲ್ಲಿ ಶ್ರೀರಂಗಕ್ಕೆ ದಯಮಾಡಿದ್ದರು. ಸದರೀ ಕ್ಷೇತ್ರವು ಅನಾದಿಯಾಗಿ ಪ್ರತಿಪಕ್ಷ ಕಲೆಯವರಾದ ತೆಂಗಲೆ ವೈಷ್ಣವರ ಪ್ರಾಬಲ್ಯಾಧಿಕಾರಗಳಿಗೆ ಆಶ್ರಯವಾಗಿರುವದರಿಂದ ಅವರ ಸ್ವಾಭಾವಿಕೆಯಲ್ಲಿ ಅನ್ಯರು ಬಂದು ನೂತನ ಮರ್ಯಾದೆಯನ್ನಪೇಕ್ಷಿಸಿದರೆ ಅಲ್ಲಿನ ಜನರು ಸುಲಭವಾಗಿ ಸಿದ್ಧಿಸುವಂತೆ ಮಾಡಲಾರರೆಂಬದು ಪ್ರಸಿದ್ಧವಾಗಿಯೇ ಇರುತಿವೆ. ಪದ್ಧತಿಗೆ ವಿರುದ್ಧವಾದ ವರ್ತನವು ಯಾವಾಗಲು ಆಕ್ಷೇಪನೀಯವಿಲ್ಲದೆ ಹೋಗುವದಿಲ್ಲವು. ಹೀಗಿರುವಲ್ಲಿ ಅಹೋಬಲ ಸ್ವಾಮಿಗಳವರು ತಮಗೆ ದೇವಸ್ಥಾನದಲ್ಲಿ ವಿಶೇಷ ಮರ್ಯಾದೆಗಳು ನಡೆಸಬೇಕೆಂಬ ಕೋರಿಕೆಯೊಡನೆ ದೇವಸ್ಥಾನದ ಧರ್ಮಕರ್ತರೊಡನೆ ತಕ್ಕ ಏರ್ಪಾಟುಗಳು ಮಾಡಿಕೊಂಡರು. ಸದರೀ ಸ್ವಾಮಿಗಳವರ ಸೂಚನೆಗಳೆಲ್ಲವು ಧರ್ಮಕರ್ತರಿಗೆ ಅನುಕೂಲಗಳಾಗಿ ಕಂಡು ಬಂದುದರಿಂ

ಅವರು ಅಪೇಕ್ಷಿಸಿದ ಮರ್ಯಾದೆಗಳೆಲ್ಲವು ಜರಿಗಲಿಕ್ಕೆ ಸಮ್ಮತಿಸಿದರು ಅದೇರೀತಿ ಸ್ವಾಮಿಗಳವರು ತಕ್ಕ ಮರ್ಯಾದೆಗಳೊಡನೆ ದೇವಸ್ಥಾನಕ್ಕೆ ಹೋಗಿ ಶ್ರೀರಂಗನಾಥನ ದರ್ಶನವಂ ಮಾಡಿದರು. ಇಷ್ಟಕ್ಕೆ ಸ್ವಾಮಿಗಳವರು ತೃಪ್ತರಾಗಲಿಲ್ಲವು. ಆನೆ, ಪಲ್ಲಕಿ, ಛತ್ರ, ಚಾಮರಂಟಿಗೆ ವಡಗಲು ನಾಮಗಳನ್ನು ಹಾಕಿ ಅವುಗಳೊಡನೆ ದೇವಸ್ಥಾನಕ್ಕೆ ಬರಕೂಡದೆಂದು ಹಿಂದಿನ ದಿವಸದಲ್ಲಿ ಧರ್ಮಕರ್ತರು ಮಾಡಿದ್ದ ಯೋಚನೆಯನ್ನಂಗೀಕರಿಸಿ ತದ್ವತ್, ಸ್ವಾಮಿಗಳು ನಡೆದು ಕೊಂಡಿದ್ದರೂ ೭ ನೇ ತಾರೀಖಿನಲ್ಲಿ ಮೇಲ್ಕಂಡ ಪ್ರೋರ್ಜಿತವನ್ನುಲ್ಲಂಘಿಸಿ ಪದ್ಧತಿಗೆ ವಿರೋಧವಾಗಿ ತಮ್ಮ ವಡಗಲೆ ನಾಮಗಳುಳ್ಳ ವಸ್ತುಗಳೊಡನೆ ದೇವಸ್ಥಾನಕ್ಕೆ ಹೋಗುವದಕ್ಕಾಗಿ ಪುರವಣಿಗೆ ಹೊರಡುವ ಸನ್ನಾಹದಲ್ಲಿದ್ದರು. ಈ ರೀತಿಯಾಗಿ ಶ್ರೀರಂಗದ ಗುಡಿಯಲ್ಲಿ ಸ್ವಾಮಿಗಳು ಬರುವದು ಪದ್ಧತಿಗೆ ವಿರುದ್ಧವಾಗಿಯೂ ಐವಂಪರ್ಯಂತ ಕಲಹವು ವೃದ್ಧಿಪಡಿಸಿ ಸಮಾಧಾನವಂ ಭಂಗಪಡಿಸುವದಾಗಿಯೂ ಇರುವದರಿಂದ ಅದಕ್ಕೆ ಅವಕಾಶ ಕೊಡಕೂಡದೆಂದು ಸ್ವಾಮಿಗಳವರಿಗೆ ತಿಳಿಸಬೇಕೆಂಬದಾಗಿ ಅಲ್ಲಿನ ತೆಂಗಲೆ ವೈಷ್ಣವರೆಲ್ಲರೂ ತಿರುಚನಾಪಳ್ಳಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಕೊಟ್ಟರು. ಅವರ ಮೇಲೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು, ಸದರೀ ಅರ್ಜಿಯನ್ನು ವಿಚಾರಿಸಿ, ಪದ್ಧತಿಗೆ ವಿರುದ್ಧವಾಗಿ, ಶ್ರೀರಂಗದ ಬೀದಿಯಲ್ಲಿ ಸ್ವಾಮಿಗಳು ವಡಗಲೆ ನಾಮಗಳುಳ್ಳ ವಸ್ತುಗಳೊಡನೆ ಹೋಗಕೂಡದೆಂದು ನಿಷೇಧಿಸಿದರು. ಬಳಿಕ ಸ್ವಾಮಿಗಳವರು ಪಟ್ಟದ ಆನೆಗಳಿಲ್ಲವೂ ಜನರ ಸಮಸ್ತಪ್ರಶಸ್ತ್ಯಗಳಿಲ್ಲದ ರೀತಿ ಅವರಲ್ಲಿ ಜನರು ತಮಗೆ ಬೇಕಾದ ಮತ ಗುರುತುಗಳುಳ್ಳ ವಸ್ತುಗಳೊಡನೆ ಇಷ್ಟವಾದ ಸ್ಥಾನಗಳನ್ನು ಹಾಕಿಕೊಂಡು ಸಂಚರಿಸಲಿಕ್ಕೆ ಯಾವ ಅಭ್ಯಂತರವೂ ಯಿರುವದಿಲ್ಲವೆಂಬದಾಗಿ ಕಲೆಕ್ಟರ ಬಳಿ ಅಪೀಲು ಮಾಡಿದರು. ಆ ಅಪೀಲ್ ನ ವಿಚಾರಣೆಯಲ್ಲಿ ಯತಿಗಳಿಗೆ ವಿರುದ್ಧವಾಗಿಯೇ ಪರಿಣಮಿಸಿತು. ಬಳಿಕ ಕಲೆಕ್ಟರು ಸ್ವಾಮಿಗಳವರಿಗೆ, ಪ್ರಜಾ ನಿಮ್ಮವರಿಗೆ ಭಂಗವನ್ನುಂಟುಮಾಡುವಂತಾ ಸ್ವಾತಂತ್ರ್ಯವೇನಾದರು ವಿಶೇಷಕ್ಕೆ ಇರುವ ಪಕ್ಷಕ್ಕೆ ಅದು ಅವರು ಸಿವಿಲ್ ಕೋರ್ಟು ಮೂಲಕ ಸ್ಥಾಪಿಸಿಕೊಳ್ಳಬಹುದೆಂದು ಹುಕುಂ ಮಾಡಿದರು. ಇವಲ್ಲದೆ ಮ್ಯಾಜಿಸ್ಟ್ರೇಟರ ಹುಕುಮಿಗೆ ಅನ್ಯಥಾ ಸ್ವಾಮಿಗಳು ಮರ್ಯಾದೆಗಳೊಡನೆ ಬೀದಿಗಳಲ್ಲಿ ಸಂಚರಿಸುವ ಪಕ್ಷಕ್ಕೆ ಏನೆನ್ನೆಕೋರ್ಟ ೧೮೮ನೇ ಸೆಕ್ಷನಿನಲ್ಲಿ ತಿಳಿಸಲ್ಪಡುವ ತಕ್ಸೀರಿಗೂ ದಂಡನೆಗೂ ಪಾತ್ರರಾಗಬೇಕಾಗ ಬಹುದೆಂದು ಸಹ ತಿಳಿಸಿದರು. ಈಗ ಸ್ವಾಮಿಗಳವರು ವಕೀಲರುಗಳನ್ನಿಟ್ಟು ಸಿವಿಲಿನಲ್ಲಿ ದಾವಾಮಾಡಿ ತಮ್ಮ ಹಕ್ಕುದಾರಿಯು ಸ್ಥಾಪಿಸಿಕೊಳ್ಳುವ ಪ್ರಯತ್ನದೊಳಗಿರುವರೆಂದು ತಿಳಿಯಬರುತಿದೆ. ಅಪೀಲಿನಲ್ಲಿ ಮೊಕದ್ದಮೆ ಹ್ಯಾಗೆ ಪರ್ಯವಸಾನವನ್ನೈದುವದೋ ಅದು ಈಗ ತಿಳಿಸುವುದಕ್ಕೆ ಸಾಧ್ಯವಲ್ಲವು. ಇದಕ್ಕೆ ಪೂರ್ವವಂ ಶ್ರೀರಂಗ ದೇವಸ್ಥಾನದ ವಿಷಯದೊಳು ವಡಗಲೆ ತೆಂಗಲೆ ಯವರಿಗೆ ವ್ಯಾಜ್ಯವುಂಟಾಗಿ ಅದು ಮದರಾಸ್ ಹೈಕೋರ್ಟು ವರಿವಿಗೆ ಹೋಗಿ ಅಲ್ಲಿ ತೆಂಗಲೆ ವೈಷ್ಣವರ ಪಕ್ಷವಾಗಿ ಫೈಸಲಾಯಿತಲ್ಲದೆ ವಡಗಲೆಯವರು ಸದರೀ ರಂಗನಾಥನ ದೇವಸ್ಥಾನದಲ್ಲಿ ಯಾವವಿಧ ಕಾರ್ಯಕಗಳಂ ನಡೆಸಕೂಡದೆಂಬದಾಗಿ ತೀರ್ಮಾನವಾಗಿರುತಿದೆ. ಇವರ ವೈಷಮ್ಯಗಳಿಗೂ ಈರ್ಷ್ಯಾಸೂಯೆಗಳಿಗೂ, ದುರಭಿಮಾನಿಗಳಾದ ಉಭಯಪಕ್ಷದ ವೈಷ್ಣವರೇ ಕಾರಣರು. ಇವರು ಇಬ್ಬರ ಸಿದ್ಧಾಂತಾವಲಂಬಿಗಳಾಗಿ ಹಿಂದು ಮೋಕ್ಷಮಾರ್ಗವನ್ನಂಗೀಕರಿಸತಕ್ಕವರಾಗಿದ್ದರೂ ದೇಶಭೇದದಿಂದಾಚಾರಭೇದಗಳನ್ನೇರ್ಪಡಿಸಿಕೊಂಡು ತಾವಮಾತ್ರಕ್ಕೆ ತಮ್ಮೊಳೊಂದು ಯಿಲ್ಲದ ವ್ಯಾಪ್ಯವ್ಯಾಪಕ ಭಾವವನ್ನಾರೋಪಿಸಿ ಕೊಳ್ಳುತ ಅದಕ್ಕೆ ಸಾಧಕವಾಗಿ, ವಿರಕ್ತರಾಗಿದ್ದು ಗತಿಸಿಹೋದ ಇಬ್ಬರು ಭಕ್ತರ ವಿಗ್ರಹಗಳನ್ನು ನಿಮಿತ್ತಗಳನ್ನಾಗಿ ಮಾಡಿ, ಬ್ರಹ್ಮಹತ್ಯಾದಿ ಪಾತಕಗಳಿಗೂ, ನಿತ್ಯ ನರಕಹೇತುವಾದ ಭಗವದ್ಭಾಗವತಾಪರಾಧಗಳಿಗೂ ಪಾತ್ರರಾಗುತಲಿರುತ್ತಾರೆ. ಇದಕ್ಕೆ ತಕ್ಕಂತೆ ಮಠಾಧಿಪತಿಗಳೆನ್ನಿಸಿರ್ಪ ಯತಿಗಳ ಸ್ಥಿತಿಯಂ ಆಲೋಚಿಸಿದರೆ ಅದೂ ಅದಕ್ಕೆ ತಕ್ಕಂತೆಯೇ ಇದೆ. ಮತ್ತ ಗಡಗಳಂತೆ ಕಲಹಗಳಿಗೆ ಕಾಲ್ಕೆದರುತ ವೈಷಮ್ಯ ಸ್ಪರ್ಧೆಗಳೊಡನೆ ವರ್ತಿಸುವಣವು ತಮಗೂ, ತಮ್ಮ ಶಿಷ್ಯ ಕೋಟಿಗೂ, ತಾವು ಅವಲಂಬಿಸಿರುವ ಆಶ್ರಮ ಧರ್ಮಕ್ಕೂ ಕುದ್ದಾಂಗ ಅನುರೂಪವಲ್ಲ ಮೆಂಬದಂ ಸನ್ಯಾಸಿಗಳು ಭಾವಿಸದೆ ಹೋದದಕ್ಕಾಗಿ ನಾವು ಬಹಳ ವಿಷಾದಿಸುತ್ತೇವೆ. ಸ್ವೇಚ್ಛಾವಿಹಾರಾಸಕ್ತರಾದ ಈ ಕಾಲದ ಸ್ತ್ರೀಪುರುಷರಿಗೆ ಗುರುಮಠಗಳಲ್ಲಿಯೂ ಪೂಜ್ಯವಸ್ತುಗಳಲ್ಲಿಯೂ, ಅನಾದಿ ಸಂಪ್ರದಾಯಗಳಲ್ಲಿಯೂ, ಕಡೆಗೆ ಪೂರ್ವಿಕರ ವಿಷಯಗಳಲ್ಲಿಯೂ, ಅಪ್ರೀತಿಯೂ, ಅನಾಸ್ಥೆಯೂ ಹೆಚ್ಚುತಲಿರುವ ಸಂದರ್ಭಗಳಲ್ಲಿ ಅವರು "ಡ್ಯಾಂ ನಾನ್‌ಸೆನ್ಸ್" ಎನ್ನುತ ಎಲ್ಲವಂ ಒದರಿಬಿಡುವಂತೆ ಅವರಂ ನಮ್ಮ ಮಠಾಧಿಪತಿಗಳೂ ಶ್ರದ್ಧಾಳುಗಳಾದ ವೈದಿಕರೂ ತಮ್ಮ ದುರ್ವರ್ತನಗಳ ಮೂಲಕ ಪ್ರೇರಿಸುತಲಿದಾರೆ. ಮಠಾಧಿಪತಿಗಳು ಶಿಷ್ಯಾರ್ಜನೆಗೆ ಹೋದರೆ ಅವರ ಆಗಮನವು ಭಕ್ತಿ ವಿಶ್ವಾಸಗಳಿಗೆ ಬದಲು ದಾರುಣ ಹಿಂಸಾರೂಪವಾಗಿ ಗಣಿಸಲ್ಪಡುತಲಿದೆ. ಗುರುದಕ್ಷಿಣೆಯು ದುಷ್ಪ್ರಯಗಳಲ್ಲೊಂದಾಗಿ ಬಾವಿಸಲ್ಪಟ್ಟಿದೆ. ಗುರುಮಠವು ಅಪಚಾರಿಕವಾಗಿ ಏರ್ಪಟ್ಟಿತು. ಇವುಗಳೆಲ್ಲ ಶಿಷ್ಯವರ್ಗದವರ ನಾಗರಿಕ ವೈಲಕ್ಷಣ್ಯಗಳೂ ಮಠಾಧಿಪತಿಗಳ ಉಚ್ಛೃಂಖಲ ವರ್ತನವೂ ಕಾರಣಗಳಲ್ಲದೆ ಬೇರಲ್ಲವು. ಆದುದರಿಂದ ಮಠಾಧಿಪತಿಗಳು ಇಂತಾ ರಾಗದ್ವೇಷ ನಿಮಿತ್ತಕಗಳಾದ ವಿಷಯಗಳಲ್ಲಿ ವ್ಯರ್ಥಾಭಿ ನಿವೇಶಂಗಳಂ ಪಡೆಯದೆ ಆಶ್ರಮ ನಿಷ್ಠರಾದ ಶಾಂತಿ ಕಮದಮಾದಿ ಗುಣಗಳುಳ್ಳವರಾಗಿ ತಮ್ಮ ಧರ್ಮಸ್ವರೂಪವನು ವಿಚಾರಿಸಿ ಅದರಂತೆ ನಡೆಯುವದಾದರೆ ಇನ್ನೊಂದು ಹತ್ತು ವರುಷಗಳ ಕಾಲವಾದರೂ ತಮ್ಮ ಆಶ್ರಮಗಳೂ, ಗುರುಪರಂಪರಾಗತವಾದ ಕೀರ್ತಿ ಪ್ರತಿಷ್ಠೆಗಳೂ ಚಿರಕಾಲಿಕಗಳಾದ ಮಠ ಪ್ರಶಸ್ತಿಗಳೂ ನೆರೆಗೊಂಡಿರುವವೇ ಯೊ ಶರ್ಗ, ಇಲ್ಲದ ಪಕ್ಷಕ್ಕೆ ಅತ್ಯಂತ ದುಃಖಕರವಾದ ದುರ್ದಶೆಗೆ ಗುರಿಯಾಗಬೇಕಾಗುವದು. ನಮ್ಮ ಸನ್ಯಾಸಿಗಳು ತಮ್ಮ ಚೇಷ್ಟೆಗಳಿಂದ ಇಂತಾ ದುರವಸ್ಥೆಗಳನ್ನು ಸ್ವತಃ ತಂದುಕೊಳ್ಳುವ ಪಕ್ಷಕ್ಕೆ ಇವರಿಗೂ, ಸ್ವಮತ ಪ್ರಚಾರಾರ್ಥ ಈ ದೇಶಕ್ಕೆ ಬಂದಿರುವ ಕ್ರಿಶ್ಚಿಯನ್ ಮಿಷನೆರಿಗಳಿಗೂ ಯಾವ ವಿಧದಲ್ಲಿಯೂ ತಾರತಮ್ಯವಿಲ್ಲದೆ ಹೋಗುವದಾದುದರಿಂದ ಈ ವಿಷಯಗಳಂ ನಮ್ಮ ಯತಿಗಳು ದೈನಂದಿನ ಪ್ರಣವ ಮಂತ್ರೋಚ್ಚಾರಣೆಯೊಡನೆ ತ್ರಿಕಾಲದಲ್ಲಿಯೂ, ಅನುಸಂಧಾನ ಮಾಡುತಲಿರಬೇಕೆಂಬದಾಗಿ ಬದ್ಧಾಂಜಲಿಪುಟರಾಗಿ ಪ್ರಾರ್ಥಿಸುತಲಿರುವೆವು. ಜೀವಿನ ಬೀಜವು ಬಿತ್ತಿ ಮಾವಿನಹಣ್ಣನ್ನು ನಿರೀಕ್ಷಿಸಿದರೆ ಅದು ಅಲಭ್ಯವು.

Occasional Notes
ನೈಮಿತ್ತಿಕ ವಿಷಯನ್ಯಾಸ.

The Middle School Examination—ಈ ಸಲದ ಮಿಡಲ್‌ಸ್ಕೂಲ್ ಪರೀಕ್ಷೆಗೆ ಹೋದ ೧೧೦೦ ಬಾಲಕರ ಪೈಕಿ ೪೦೦ ಮಂದಿ ಪರೀಕ್ಷೆಯಲ್ಲಿ ತಪ್ಪಿಹೋದರು. ಇದಕ್ಕೆ ಕಾರಣವಂ ವಿಚಾರಿಸಲಾಗಿ ರೇಖಾಗಣಿತ, ಬೀಜಗಣಿತ ಪ್ರಶ್ನೆಗಳು ಕೇವಲ ಕಠಿಣಗಳಾಗಿದ್ದವೆಂದು ತಿಳಿಯಬರುತಿದೆ. ಈ ವಿಷಯದಲ್ಲಿ ಮದರಾಸ್ ಮೆಯಿಲ್ ಪತ್ರಿಕೆ ಸೂಚಿಸುವ ಉಪಾಯವು ಕೇವಲ ಶ್ಲಾಘನಾರ್ಹವಾಗಿ ತೋರುತಿದೆ.

A remission recommended—ಚೆಂಗಲ್‌ಪಟ್ಟು ಡಿಸ್ಟ್ರಿಕ್ಟಿನಲ್ಲಿ ಕಾಲ ವರ್ಷಾಭಾವದಿಂದ ಫಸಲುಗಳು ಕೆಟ್ಟುಹೋಗಿರುವದನ್ನು ರೆವಿನ್ಯೂ ಇಲಾಖಾ ಉದ್ಯೋಗಸ್ಥರು ಖುದ್ದು ನೋಡಿದ್ದರಿಂದ, ಈ ಸಲದ ಕಿಸ್ತನ್ನು ಡಿಸ್ಟ್ರಿಕ್ಟು ಒಟ್ಟಾರೆಯೊಳಿ ವಜಾ ಮಾಡಬೇಕೆಂದು ಡಿಸ್ಟ್ರಿಕ್ಟ್ ಕಲೆಕ್ಟರವರು ಗವರ್ನಮೆಂಟಿಗೆ ಶಿಫಾರಸ್ ಮಾಡಿರುತ್ತಾರೆ. ಅದೇ ಅಂಶವಂ ಕುರಿತು ವಿಶಿಷ್ಟ ಗ್ರಾಮಸ್ಥರೂ ಅರ್ಜಿಗಳು ಬರೆದುಕೊಂಡಿರುತ್ತಾರೆ.

A restriction removed—ನೆಣಬು ಗಿಡಗಳಿಂದ ತಯಾರ್ಮಾಡಲ್ಪಡುವ ಗಾಂಜಾ ಮತ್ತು ಔಷಧ ಸಾಮಾಗ್ರಿಗಳನ್ನಿಟ್ಟುಕೊಂಡಿರುವ ಮತ್ತು ಅನ್ಯದೇಶಗಳಿಗೆ ರಫ್ತು ಮಾಡುವ ವಿಷಯದಲ್ಲಿ ಯಾವ ನಿರ್ಬಂಧವನ್ನೂ ಉಂಟು ಮಾಡಕೂಡದೆಂತಲೂ, ಸದರೀ ಗಿಡಗಳ ಸಾಗುವಳಿದಾರರು ಲೈಸೆನ್ಸ್ ಪಡೆದ ಬಕರೀದಾರರಿಗೆ ಮಾರುವದಕ್ಕೆ ಲೈಸೆನ್ಸ್ ಕೊಡತಕ್ಕದ್ದೆಂತಲೂ ಮದರಾಸ್ ಗವರ್ನಮೆಂಟಿನವರು ಹುಕುಂ ಮಾಡಿರುತ್ತಾರೆ

The Mahant's Case—ತಿರುಪತಿ ಮಹಂತರವರ ಮೇಲೆ ತರಲ್ಪಟ್ಟಿರುವ ಮೊಕದ್ದಮೆಯ ಪ್ರಕೃತಸ್ಥಿತಿಯಂ ಕುರಿತು ಕಳೆದವಾರದೊಳು ಸ್ವಲ್ಪಮಟ್ಟಿಗೆ ತಿಳಿಸಿ ಇರುತ್ತೇವೆ ಯಷ್ಟೆ. ಅವರ ತರಫ ಸಾಕ್ಷಿಗಳ ವಿಚಾರಣೆಯಾಗುತಲಿದೆ. ಈ ಬಗ್ಗೆ ಕೋರ್ಟಿಗೆ ಬಾರದವರೆಲ್ಲರು ಈ ಮೊಕದ್ದಮೆಯಲ್ಲಿ ಮಹಂತರವರು ನಿರಪರಾಧಿಯೆನ್ನಿಸಿಕೊಳ್ಳುವದಕ್ಕೆ ಸಾಧಕವಾಗಿ ಸಾಕ್ಷ್ಯ ಹೇಳುತಲಿದಾರೆ. ಆ ಮೊಕದ್ದಮೆ ಪೂರಾ ವ್ಯವಸ್ಥೆಯಾಗುವವರೆಗೆ ಇನ್ನು ಒಂದೆರಡು ವಾರಗಳ ಕಾಲ ಹಿಡಿಯಬಹುದಾಗಿ ಕಾಣುತಿದೆ.

LOCAL AND PROVINCIAL NEWS.
ಒಳದೇಶವರ್ತಮಾನ ತಾಲ್ಲೂಕಜಾತ ವೃತ್ತಾಂತಗಳು.

The Octroi Department.—ಇಲ್ಲಿನ ಮ್ಯುನಿಸಿಪಲ್ ಆಕ್ಟ್ರಾಯಿ ಇಲಾಖೆಯ ಮ್ಯಾನೇಜರ್ ವ ಡಿಟೆಕ್ಟಿವ್ ಇನ್ಸ್‌ಪೆಕ್ಟರಾಗಿದ್ದ ಮ॥ ಲೇಸಿಯವರು ರಿಸರ್ವ್ ಪೋಲೀಸ್ ಇನ್ಸ್‌ಪೆಕ್ಟರಾಗಿ ಮೊಕರರ್ಮಾಡಲ್ಪಟ್ಟದ್ದರಿಂದ ಅವರ ಕೆಲಸಕ್ಕೆ ನಾಗಮಂಗಲ ಪೋಲೀಸ್ ಇನ್ಸ್‌ಪೆಕ್ಟರಾಗಿದ್ದ ಮ॥ ನಾರಾಯಣರಾಯರವರು ಮೊಕರರ್ಮಾಡಲ್ಪಟ್ಟು ತಮ್ಮ ಕೆಲಸದ ಚಾರ್ಜು ವಹಿಸಿರುತ್ತಾರೆ

The weather—ಈಗಿನ ಹವಾ ಬಹಳ ತಣುವಾಗಿರುವದರಿಂದ ಅಲ್ಲಿಯಲ್ಲಿ ನೆಗಡಿ, ಜ್ವರ ಮೊದಲಾದ ರೋಗಗಳಿಂದ ಜನರಿಗೆ ಸುಖರೋಗವುಂಟಾಗಿದೆ. ಪದಾರ್ಥಗಳ ಧಾರಣೆಗಳು ಪ್ರಾಯಶಃ ಒಂದುವಿಧವಾಗಿಯೇ ಇದೆ. ಈ ಷಹರಿಗೆ ಆಮದ್ ಆದ ಜಿನಿಸಿಗಳು ಒಂದು ಘಂಟೆಯಕಾಲ ಇಲ್ಲಿ ತಂಗುವದಿಲ್ಲವು ಪರಸ್ಥಳಗಳ ಗಿರಾಕಿಗಳಲ್ಲಿ ಕೊರತೆ ಯಿಲ್ಲವಾಗಿ ಧಾರಣೆಗಳು ಇಳಿಯುವ ಸಂಭವ ಸದ್ಯಃ ತೋರಲಿಲ್ಲವು ದೇಶದೊಳೆತ್ತ ನೋಡಿದರು ರೆಯಿಲ್ ಮಾರ್ಗಗಳು ವೃದ್ಧಿಯಾದ ನಾಗೆಲ್ಲ, ಇತರವಿಧ ಪ್ರಯೋಜನಗಳಿಷ್ಟಿದ್ದಾಗ್ಯೂ ಬೆಳದ ಜಿನಿಸಿಗಳು ಅನ್ಯದೇಶಗಳಿಗೆ ಸಾಗಿ ಹೋಗುವದರಿಂದ ಬಡಜನರಿಗುಂಟಾಗುವ ಕಷ್ಟವು ಅಪರಿಹಾರ್ಯವಾಗಿ ಏರ್ಪಟ್ಟಿದೆ.

Return of the Resident and the Dewan.—ಬ್ರಿಟಿಷ್ ರೆಸಿಡೆಂಟ್, ದಿವಾನರವರೂ ಸರ್ಕ್ಯೂಟ್ ಹೋಗಿದ್ದರಷ್ಟೆ. ಸದರೀ ಇಬ್ಬರ ಪೈಕಿ ರೆಸಿಡೆಂಟರವರು ಕಳೆದ ಶನಿವಾರದ ದಿನ ಇಲ್ಲಿಗೆ ವಾಪಸ್ ಬಂದಿರುತ್ತಾರೆ. ದಿವಾನರವರು ೨೫ನೇ ತಾರೀಖಿನಲ್ಲಿ ಬರುವರೆಂದು ನಿರೀಕ್ಷಿಸಲ್ಪಟ್ಟಿದೆ. ಇಷ್ಟುಕಾಲ ಸದರೀ ಇಬ್ಬರು ದೊಡ್ಡ ಅಧಿಕಾರಿಗಳೂ ಪರಸ್ಥಳಗಳಲ್ಲಿ ಸಂಚರಿಸುತ ಪ್ರಜೆಗಳಿಂದ ಸನ್ಮಾನಿತರಾಗಿ ಅವರವರೊಪ್ಪಿಸಿದ ವಿಜ್ಞಾಪನ ಪತ್ರಿಕೆಗಳನ್ನಂಗೀಕರಿಸಿ ಅವುಗಳಿಗೆ ತಕ್ಕಂತೆ ಜವಾಬುಗಳನ್ನು ಕೊಟ್ಟಿರುತ್ತಾರಾಗಿ ಪ್ರಜೆಗಳ ಮನೋಭಾವವಂ ಸದರೀ ಇಬ್ಬರು ಅಧಿಕಾರಿಗಳೂ ತಮ್ಮ ತಮ್ಮ ಭಾವನಾನುಗುಣವಾಗಿ ಗ್ರಹಿಸಿರುವರೆಂದು ನಂಬುತ್ತೇವೆ.

Retirement from the public service—ಈ ಸರ್ಕಾರ್ ಸಾಲಿನ ಆಖೈರಿನಲ್ಲಿ ಈ ಸಂಸ್ಥಾನದ ರಾಜ್ಯಾಡಳಿತದಲ್ಲಿ ಉದ್ಯೋಗಸ್ಥರ ಕೆಲವು ಬದಲಾವಣೆಗಳು ಬಹುಶಃ ಜರಗಬಹುದೆಂದು ತೋರುತಿದೆ. ಆದಾಗ್ಯೂ ಬೆಂಗಳೂರು ಸ್ಪೆಕ್ಟೇಟರ್ ಮತ್ತು ಈವಿನಿಂಗ್ ಮೆಯಿಲ್ ಪತ್ರಿಕೆಗಳೆರಡೂ ಪರಿಭಾವಿಸಿರುವಷ್ಟು ನಡೆಯಲಿಕ್ಕೆ ಸದ್ಯಃ ಅವಕಾಶವಿಲ್ಲವೆಂದೆಣಿಸುತ್ತೇವೆ. ಸದರೀ ಎರಡು ಪತ್ರಿಕೆಗಳ ಪೈಕಿ ಮೊದಲನೆಯದು, ಅನೇಕ ಗ್ರೇಡೆಡ್ ಆಫೀಸರ್‌ಗಳಿಗೂ ಅಸಿಸ್ಟೆಂಟ್ ಕಮಿಷನರ್‌ಗಳಿಗೂ ಡೆಪ್ಯುಟಿ ಕಮಿಷನರ್‌ಗಳಿಗೂ ಸಾಲ್ ಆಖೈರಿನಲ್ಲಿ ಸ್ಪೆಷಲ್ ಆನ್ಯುಯೇಟಿ ಕೊಡುವದಾಗಿ ಮೈಸೂರು ಸರ್ಕಾರದವರು ನಿಶ್ಚೈಸಿರುವಂತೆ ನಾವು ಕೇಳುವೆವೆಂಬದಾಗಿ ತಿಳಿಸುತಿದೆ. ಯೆಂಬು ಡಿಸ್ಟ್ರಿಕ್ಟ್ ಕಮಿಷನರ್‌ಗಳ ಪೈಕಿ ಕಡೂರು ಡೆಪ್ಯುಟಿ ಕಮಿಷನರೊಬ್ಬರು ವಿನಾ ಮಿಕ್ಕವರೆಲ್ಲರೂ ಡೆಪ್ಯುಟಿ ಕಮಿಷನರ್ ಕೆಲಸವನ್ನು ನಿರೀಕ್ಷಿಸಬೇಕಾದಷ್ಟು ವಯಸ್ಸು ಸಂದವರಾಗಿ ಸಹ ಇರುವದಿಲ್ಲವು. ಕರ್ನಲ್ ಕೇಂಬಲ್ ಸಾಹೆಬರವರು ಬಹುಕಾಲದ ಹಿಂದೆ ಪೆನ್ಷನ್ ಮೇಲೆ ನಿವೃತ್ತರಾಗಿ ಹೋಗಿದ್ದರೂ, ಯಾವದೋ ಒಂದು ವಿಶೇಷ ಪ್ರಯೋಜನಾರ್ಥ ಈ ಸರ್ಕಾರದವರು ಅವರಿಗೆ ಮರಳಿ ನೌಕರಿ ಕೊಟ್ಟು ಈಚೆಗೆ ಒಂದು ಡಿಸ್ಟ್ರಿಕ್ಟು ಚಾರ್ಜಿನೊಳಿಟ್ಟಿರುತ್ತಾರಾಗಿ ಅವರು ಇಷ್ಟು ತ್ವರೆಯಲ್ಲಿ ಕೆಲಸವಂ ಬಿಟ್ಟು ಹೋಗುವರೆಂದು ನಂಬಲಿಕ್ಕಾಗುವದಿಲ್ಲವು ಅಸಿಸ್ಟೆಂಟ್ ಕಮಿಷನರ್‌ಗಳೆಲ್ಲರೂ ಪ್ರಾಯೇಣ ಪೂರ್ವ ವಯಸ್ಸಿನವರಾಗಿಯೂ, ಸರ್ವಿಸ್ ಸಾಲದವರಾಗಿಯೂ ಇರುವದರಿಂದ ಸ್ಪೆಷಲ್ ಆನ್ಯುಯೇಟಿ ಪೆನ್ಷನಿಗೆ ಲಾಯಖಾದವರು ವಿಶೇಷವಾಗಿಲ್ಲವೆಂದು ತೋರುತಿದೆ ಪರಂತು ಸರ್ವಿಸ್ ಆಗಬೇಕಾದ ಆವಶ್ಯಕತೆಯಿಲ್ಲವೆಂದು ನುಡಿಯುವ ಪಕ್ಷಕ್ಕೆ ನಮ್ಮ ಆಕ್ಷೇಪಣೆ ಯೇನೂ ಇರುವದಿಲ್ಲವು. ಕುಮಾರ್ ಈ ಮಂದಿಗಿಂತ ಮೇಲ್ಪಟ್ಟು ಅಮಲ್ದಾರರು ಪೆನ್ಷನ್ ಮೇಲೆ ತೆಗೆಯಲ್ಪಡುವರೆಂಬದಾಗಿ ಈವಿನಿಂಗ್ ಮೆಯಿಲ್ ಪತ್ರಿಕೆ ತಿಳಿಸುತಿದೆ. ಅಲ್ಲಿಯೂ ಏಕಕಾಲದಲ್ಲಿ ಆ ಜನಸನ್ನಿವೇಶವಿರುತ್ತಾರೆಂಬದು ನಮಗೆ ಸ್ವಲ್ಪ ಅನುಮಾನವಾಗಿದೆ. ಲೆಜಿಸ್ಲೇಟಿವ್ ಸೆಕ್ರಟರಿಯವರಾದ ವೆ॥ ವೆಂಕಟವರದಯ್ಯಂಗಾರ್ಯರವರು ಸಹ ಕೆಲಸದಿಂ ನಿವೃತ್ತರಾಗವವರಾಗಿದಾರೆಂದು ಸದರೀ ಪತ್ರಿಕೆಯೇ ತಿಳಿಸುತಿದೆ ಪರಂತು ಅವರ ಕೆಲಸಕ್ಕೆ ಬರತಕ್ಕವರು ಫಲಾನೆಯವರೆಂದು ಮಾತ್ರ ತಿಳಿಸಲಿಲ್ಲವು. ಆಬಕಾರೀ ಇಲಾಖೆಯು ಇನ್ನೂ ಬದಲಾಯಿಸಲ್ಪಡುವದೆಂಬದಾಗಿ ಕೇಳುತ್ತೇವೆ ಎಲ್ಲದಕ್ಕಿಂತಲೂ ಇದು ಕೇವಲ ಆವಶ್ಯಕವಾದ ಏರ್ಪಾಟೆಂದು ಭಾವಿಸುತ್ತೇವೆ. ಚೀಫ್ ಕೋರ್ಟಿನಲ್ಲಿಯೂ ಕೆಲವು ಬದಲಾವಣೆಗಳು ಜರಗಬಹುದೆಂಬ ಪ್ರವಾದ ವುಂಟಾಗಿದೆ. ಮುಜರಾಯಿ ಇಲಾಖೆಯೊಂದು ಏರ್ಪಡಬಹುದಾಗಿ ದೆಂಬದಕ್ಕೆ ತಕ್ಕಂತೆ ಗವರ್ನಮೆಂಟಿನವರು ಮುಜರಾಯಿ ವಿಷಯದಲ್ಲಿ ಹಿಂದಿನ ದಾಖಲೆಗಳನ್ನು ಪರೀಕ್ಷಿಸಿದಾರೆಂದು ಕೇಳುತ್ತೇವೆ. ಇನ್ನೂ ಯಾವಯಾವ ಏರ್ಪಾಟುಗಳು ಗವರ್ನಮೆಂಟಿನವರ ಉದ್ದೇಶದೊಳವೆಯೋ ತಿಳಿಯಲಿಲ್ಲವು. ಮುಖ್ಯವಾಗಿ ಯಾವವಿಧ ಏರ್ಪಾಟುಗಳು ಮಾಡಿದಾಗ್ಯೂ ಅವುಗಳೆಲ್ಲ ದೇಶದ ಹುಟ್ಟುವಳಿಯು ಅವಕಾಶ ಕೊಡತಕ್ಕದ್ದಾಗಿರುತಿದೆ. ಒಬ್ಬರು ನಷ್ಟಪಟ್ಟಾಗ್ಯೂ ಅನ್ಯರೊಬ್ಬರು ಪ್ರಯೋಜನವನ್ನೈದುವಿಕೆಗೆ ಸನ್ನದ್ಧರಾಗುತ್ತಾರೆ. ಲಾಭನಷ್ಟಗಳು ಮಹಾರಾಜರವರನ್ನನುಸರಿಸಿದ್ದಾಗಿರುತಿದೆ.

NEWS LETTER.
ವೃತ್ತಾಂತಪತ್ರಿಕೆ.

ಮೊ|| ಬಿರ್ಡ್ ಸಾಹೇಬರವರಿಗೆ ಸಾಗರ ನಿವಾಸಿಗಳು ಕೊಟ್ಟ ಕನ್ನಡ ಅಡ್ರೆಸ್.

ಶ್ರೀಮನ್ಮಹೀಶೂರ ಸಂಸ್ಥಾನದ ಸಚಿವ ಶಿಖಾಮಣಿಗಳಾದ ಶ್ರೀಮಾನ್ ಕೆ. ಶೇಷಾದ್ರಿ ಅಯ್ಯರ್ ಸಿ. ಯಸ್. ಐ. ಯವರ ಸನ್ನಿಧಾನದಲ್ಲಿ

ಸಾಗರ ನಿವಾಸಿಗಳಾದ ನಾವು ಅತ್ಯಂತ ಭಕ್ತಿ ವಿನಯಗಳೊಡನೆ ವಿಜ್ಞಾಪಿಸಿಕೊಳ್ಳುವದೇನೆಂದರೆ.

ನಮ್ಮ ಪಾಲಕರಾದ ಶ್ರೀಮಚ್ಚಾಮರಾಜೇಂದ್ರ ಒಡೆಯರವರಿಗೆ ರಾಜಕಾರ್ಯಾವಲೋಕನ ವಿಷಯದಲ್ಲಿ ನೇತ್ರಪ್ರಾಯರಾದಂಥಾ ತಾವು ಈ ಪ್ರಾಂತ ದಯಮಾಡುವ ವಾರ್ತೆಯನ್ನು ಕೇಳಿದ ಲಾಗಾಯತು ಇಲ್ಲಿನ ಪ್ರಜೆಗಳೆಲ್ಲರೂ ತಮ್ಮ ಸಂದರ್ಶನಾತುರರಾಗಿದ್ದೆವು. ಈ ದಿವಸ ತಮ್ಮ ದಿವ್ಯ ಸಂದರ್ಶನವನ್ನು ಹೊಂದಿದ ಕಾರಣ ನಮ್ಮ ವಾಸಸ್ಥಾನವು ಆನಂದಸಾಗರವೆಂಬ ನೂತನವಾದ ಹೆಸರನ್ನು ಹೊಂದಿದೆ. ಶ್ರೀಮಾನ್ ಮಹಾರಾಜರವರ ಪ್ರಜೆಗಳಲ್ಲಿ ನಾವು ಅತ್ಯಂತ ದೂರವಾಸಿಗಳಾಗಿರುವೆವು. ಆದರೆ ರಾಜ್ಯಭಾರ ನಿರ್ವಾಹದಲ್ಲಿ ತಮಗಿರುವ ಅಧಿಕ ಸಾಮರ್ಥ್ಯದಿಂದಲೂ ಸ್ವಭಾವಸಿದ್ಧವಾದ ತಮ್ಮ ಬುದ್ಧಿ ಕೌಶಲ್ಯಾದಿ ಯೋಗ್ಯತೆಯಿಂದಲೂ, ಮತ್ತು ಸೌಲಭ್ಯವೇ ಮೊದಲಾದ ತಮ್ಮ ಗುಣಗಳಿಂದಲೂ, ನಮ್ಮ ಯೋಗಕ್ಷೇಮಕ್ಕೆ ಯಾವದೊಂದು ಕುಂದಕವೂ ಪ್ರಾಪ್ತವಾಗುವದಕ್ಕೆ ಮಾರ್ಗವಿಲ್ಲದೆ ಇರುವಲ್ಲಿದೆ. ಇನ್ನೂ ಬಹುಕಾಲ ಶ್ರೀಮನ್ಮಹಾರಾಜರವರು ತಮ್ಮ ಮಂತ್ರಾಲೋಚನೆಯ ಸಹಾಯದೊಡನೆ ನಮ್ಮನ್ನು ಪರಿಪಾಲಿಸುವರೆಂದು ನಂಬಿದೇವೆ.

ದೇಹಶ್ರಮವನ್ನು ಮತ್ತು ಇತರ ಅನಾನುಕೂಲಗಳನ್ನು ಗಣನೆಗೆ ತಾರದೆ ನಮ್ಮಗಳ ಕಷ್ಟ ಸುಖಗಳನ್ನು ವಿಚಾರಿಸಲಿಕ್ಕೆ ತಾವು ಇಷ್ಟುದೂರ ದಯಮಾಡಿದ್ದಕ್ಕಾಗಿ ನಾವು ಬಹಳ ಕೃತಜ್ಞರಾಗಿದ್ದೇವೆ. ಮತ್ತು ಇದಕ್ಕಾಗಿ ನಮ್ಮ ಮನಃಪೂರ್ವಕವಾದ ವಂದನೆಗಳನ್ನು ದಯಮಾಡಿ ಅಂಗೀಕರಿಸಬೇಕಾಗಿ ಬೇಡುತ್ತೇವೆ.

ತಾವು ಮಂತ್ರಿತ್ವವನ್ನು ವಹಿಸಿದ ಲಾಗಾಯತು ಪ್ರಜೆಗಳಿಗೆ ಸುಖ ಸಂಪತ್ತು ಉಂಟಾಗಿರುವದೆಂಬದಕ್ಕೆ ಈ ಚಿಕ್ಕ ಪಟ್ಟಣದಲ್ಲಿಯೇ ಎಷ್ಟು ದೃಷ್ಟಾಂತಗಳು ತೋರಬಹುದಿವೆ. ಅವು ಯಾವವೆಂದರೆ, ಈ ಗ್ರಾಮದ ಪಶ್ಚಿಮ ಭಾಗದಲ್ಲಿ ಸುಮಾರು ನಲವತ್ತು ಮನೆಗಳುಳ್ಳ ಒಂದು ನೂತನ ಶ್ರೇಣಿಯು ಆಗುತಲಿದೆ. ಮತ್ತು ಇದೇ ಸ್ಥಳದಲ್ಲಿ ಮುಖ್ಯವಾಗಿ ಪ್ರಜೆಗಳ ಚಂದಾ ಮೂಲಕ ಒಂದು ನೂತನ ವಿದ್ಯಾಶಾಲೆಯು ಕಟ್ಟಲ್ಪಡುವದು. ಈಗ ವಿಸ್ತರಿಸಲ್ಪಟ್ಟಿರುವ ಈ ಪಟ್ಟಣದ ಪಶ್ಚಿಮಭಾಗಕ್ಕೆ ಚಾಮರಾಜೇಂದ್ರಪೇಟೆ ಯೆಂಬ ಹೆಸರು ಕೊಡಲು ಶ್ರೀಮನ್ಮಹಾರಾಜರವರು ಅನುಜ್ಞೆಯನ್ನು ದಯಪಾಲಿಸಿದಾರೆ. ಈ ಸಾಗರವು ಪೂರ್ವದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಇಕ್ಕೇರೀ ಸಂಸ್ಥಾನಕ್ಕೆ ಸೇರಿತ್ತು. ಕೆಲವುಕಾಲದಿಂದ ಮಾಲಿನ್ಯವನ್ನು ಹೊಂದಿದ್ದು ಈಗ ನಾಲ್ಕೈದು ವರ್ಷಗಳಿಂದ ಬಹಳವಾಗಿ ಅಭಿವೃದ್ಧಿಗೆ ಬರುತಲಿದೆ. ಆದಕಾರಣ ಈ ಪತ್ತನಾಭಿವೃದ್ಧಿಯು ನಮ್ಮ ಪ್ರಿಯತಮರಾದ ಚಾಮರಾಜ ಸಾರ್ವಭೌಮರ ಪ್ರಭುತ್ವಕ್ಕೆ ಶಾಶ್ವತವಾದ ಹೆಗ್ಗುರುತಾಗಿರುವದು. ಮತ್ತು ಅವರ ಕೀರ್ತಿಯು ಇದರಿಂದ ಆಚಂದ್ರಾರ್ಕಸ್ಥಾಯಿಯಾಗಿರುವದು. ನೂತನ ವೀಧಿಗೆ ನಾಮಾಭಿಧಾನ ಮಾಡುವದಕ್ಕೆ ತಾವು ನಮ್ಮಲ್ಲಿ ಪರಿಪೂರ್ಣ ದಯವಿಟ್ಟು ಒಪ್ಪಿರುವದರಿಂದ ಅದನ್ನು ನೆರವೇರಿಸಲು ಪ್ರಾರ್ಥಿಸುವೆವು.

ಇಲ್ಲಿ ಜ್ಯೂಬಿಲಿ ಇಂಗ್ಲಿಷ್ ಸ್ಕೂಲೆಂಬ ವಿದ್ಯಾಶಾಲೆ ಯೊಂದು ಕಟ್ಟಲ್ಪಡುವದು. ಇದು ಶ್ರೀಮಚ್ಚಕ್ರವರ್ತಿನೀಯವರಿಗೆ ಈ ಸಂಸ್ಥಾನದ ಅಭಿವೃದ್ಧಿ ವಿಷಯದಲ್ಲಿ ಇರತಕ್ಕ ಆಸಕ್ತಿಯನ್ನೂ ಮತ್ತು ನಮ್ಮ ಪ್ರಭುಗಳಲ್ಲಿರತಕ್ಕ ಅಪಾರವಾದ ಅನುರಾಗ ಭಕ್ತಿಗಳನ್ನೂ ಸೂಚಿಸುವಂಥಾದ್ದಾಗಿದೆ. ಮತ್ತು ನಮಗೆ ಅವರಲ್ಲಿರಬೇಕಾದ ಭಕ್ತಿ ಕೃತಜ್ಞತೆಯನ್ನು ಸಹ ತೋರಿಸಬಹುದಾಗಿದೆ. ಇದರ ಅಸ್ತಿಭಾರ ಶಿಲೆಯನ್ನು ತಾವು ನೆಲಗೊಳಿಸಬೇಕೆಂದು ನಾವು ಬೇಡಿಕೊಂಡಿದ್ದರ ಮೇಲೆ ಅದಕ್ಕೆ ದಯವಿಟ್ಟು ಸಮ್ಮತಿಸಿರುವಿರಿ. ಆ ಕಾರ್ಯವನ್ನು ಸಹ ಈಗ ನೆರವೇರಿಸಬೇಕಾಗಿ ಪ್ರಾರ್ಥಿಸುವೆವು. ವಿದ್ಯಾಶಾಲೆಯನ್ನು ಸ್ಥಾಪಿಸುವ ವಿಷಯದಲ್ಲಿ ತಾವು ವಿಶೇಷವಾದ ಅಭಿಮಾನವುಳ್ಳವರೆಂಬುವದನ್ನು ಹೇಳಲವಶ್ಯಕವಿಲ್ಲವು ಈ ಶೀಮೆಯಲ್ಲಿ ವಿದ್ಯಾಭ್ಯಾಸವು ತಮ್ಮ ಪ್ರೋತ್ಸಾಹದಿಂದಲೂ, ಸಹಾಯದಿಂದಲೂ ಯೆಷ್ಟುಮಟ್ಟಿಗೆ ಪ್ರಾಚುರ್ಯವನ್ನು ಹೊಂದಿದೆ ಯೆಂಬುವದು ಪ್ರತಿ ವರ್ಷವೂ ಯೂನಿವರ್ಸಿಟಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವ ಈ ದೇಶೀಯರ ಸಂಖ್ಯೆಯಿಂದಲೇ ತಿಳಿಯಬರುತಿದೆ. ತಾವು ಸ್ವಯಂ ವಿದ್ಯಾಶಾಲಿಗಳೂ ಮತ್ತು ಅತ್ಯಂತ ವಿದ್ವತ್ಪಕ್ಷಪಾತಿಗಳೂ ಆಗಿರುವದರಿಂದ ಈ ದೇಶಕ್ಕೆ ಉಂಟಾಗಿರುವ ಪ್ರಯೋಜನವು ಬಹಳವಾಗಿರುವದು. ಈಗ್ಗೆ ೨–೪ ವರುಷಗಳಿಗೆ ಮುಂಚೆ ಈ ದೇಶೀಯರಲ್ಲಿ ವೈದ್ಯ, ಅಗ್ರಿಕಲ್ಚರ್, ಅಂದರೆ ವ್ಯವಸಾಯ, ಇವೇ ಮೊದಲಾದ ವಿಶಿಷ್ಟ ಶಾಸ್ತ್ರಗಳನ್ನು ಅಭ್ಯಸಿಸಿದವರು ಯಾರೂ ಇರಲಿಲ್ಲವು. ಈಗ ಯಾವ ಶಾಸ್ತ್ರದಲ್ಲಿ ಪರಿಶ್ರಮವಿದ್ದರು ಅದಕ್ಕೆ ತಕ್ಕ ಫಲವು ಈ ರಾಜ್ಯದಲ್ಲಿ ದೊರೆಯುವದೆಂಬ ಭರವಸೆ ಇರುವದರಿಂದ ಈ ದೇಶೀಯರು ಬಹುಮಂದಿ ನಾನಾ ಶಾಸ್ತ್ರಗಳನ್ನು ಅಭ್ಯಸಿಸುತಲಿದಾರೆ. ಮತ್ತು ಈ ವರಿನಿಗೆ ಶಾಸ್ತ್ರಾಭ್ಯಾಸವನ್ನು ತಕ್ಕಮಟ್ಟಿಗೆ ಮಾಡಿ ಪರೀಕ್ಷೆಗಳನ್ನು ಕೊಟ್ಟಿರುವರನೇಕರು ತಕ್ಕ ಬಹುಮಾನಗಳನ್ನು ಹೊಂದಿರುವರು

ತಾವು ಕುಟುಂಬ ಸಮೇತರಾಗಿ ದೀರ್ಘಾಯುಷ್ಮಂತರಾಗಿಯೂ, ಶ್ರೇಯೋವಂತರಾಗಿಯೂ ಇರುವಂತೆ ಶ್ರಿಯಃಪತಿಯು ಕರುಣಿಸಲೆಂದು ಸಾರ್ವದಾ ಪ್ರಾರ್ಥಿಸುತಲಿರುವ ತಮ್ಮ ಅತ್ಯಂತ ವಿಧೇಯರಾದ ಸಾಗರ ನಿವಾಸಿಗಳು.

ಇದಕ್ಕೆ ಮೊ|| ಬಿರ್ಡ್ ಸಾಹೇಬರವರು ಕನ್ನಡದಲ್ಲಿ ಜವಾಬ್ ಕೊಟ್ಟದ್ದರ ಸಾರಾಂಶ.

ಸಾಗರ ನಿವಾಸಿಗಳಾದ ದೊಡ್ಡಮನ ಸ್ನೇಹಿತಗಳಿರಾ—ಈಗ ನನಗೆ ನೀವು ಮಾಡಿದ ಮರ್ಯಾದೆಗಳಿಗೆ ನಾನು ಬಹಳ ಸಂತೋಷ ಪಟ್ಟೆನು ನೀವು ಈ ಅಡ್ರೆಸ್ಸಿನಲ್ಲಿ ಸೂಚಿಸಿರುವ ವಿಷಯವನ್ನು ಶ್ರೀಮನ್ಮಹಾರಾಜರವರಿಗೆ ಶ್ರುತಪಡಿಸುವದರಲ್ಲಿ ಆತುರನಾಗಿರುವೆನು. ಉತ್ತರವಾದ ಪ್ರದೇಶವಾಗಿಯೂ, ಒಳ್ಳೇ ಫಲ ಬರುವ ಸ್ಥಳವಾಗಿಯೂ ಇರುವ ಕಡೆಗೆ ನೀವುಗಳು ಹೊಸದಾಗಿ ಪಟ್ಟಣವನ್ನು ಬತಾಯಿಸಿದ್ದಕ್ಕಾಗಿ ಬಹಳ ಸಂತೋಷ ಪಡುವದಲ್ಲದೆ ಈ ಮಲ್ನಾಡು ಪ್ರದೇಶವೆಲ್ಲ ಬೈಲು ಪ್ರಾಂತದೋಪಾದಿಯಲ್ಲಿ ಆಗುತಬರುವದೆಂಬದಕ್ಕೆ ಸಹ ಸಂತೋಷಪಡುತ್ತೇನೆ.

ಈ ಹೊಸಪೇಟೆಗೆ ಚಾಮರಾಜಪೇಟೆಯೆಂತ ಕೊಟ್ಟಿರುವ ಹೆಸರು ಬಹಳ ಪ್ರಶಸ್ತವಾದದ್ದೇ ಸರಿ. ನೀವು ಕೇಳುವ ಪ್ರಕಾರ ಇಲ್ಲಿ ಹೊಸದಾಗಿ ಕಟ್ಟತಕ್ಕ ಜ್ಯೂಬಿಲೀ ಇಂಗ್ಲಿಷ್ ಸ್ಕೂಲಿನ ಕಟ್ಟಡದ ಅಸ್ತಿಭಾರ ಶಿಲೆಯನ್ನು ಬಹಳ ಸಂತೋಷದಿಂದ ಸ್ಥಾಪಿಸುವೆನು. ನೀವುಗಳೆಲ್ಲರೂ ಸೌಖ್ಯವಾಗಿರಬೇಕೆಂತ ದೇವರಿಗೆ ಪ್ರಾರ್ಥಿಸುತ್ತೇನೆ. (ಈ ಮಾತುಗಳೆಲ್ಲವು ಅವರ ಸ್ವಂತವಾಗಿ ಕೊಟ್ಟ ಮಾತುಗಳಲ್ಲ, ಅಂದರೆ ಏತದರ್ಥವಾದ ಮಾತುಗಳೆಂದರೇ ಹೇಳದವುಗಳಾಗಿವೆ).

TELEGRAMS.
ತಂತಿ ವೃತ್ತಾಂತಗಳು.

ಲಂಡನ್, ೧೩ನೇ ಜನವರಿ—ರ್ಡ್ ಸ್ಯಾಲಿಸ್ಬರಿ ಯವರಿಗೆ ಇನ್‌ಫ್ಲುಯೆಂಜಾ ಎಂಬ ರೋಗದ ವ್ಯಾಧಿ ಕಡಮೆಯಾಗುತ ಬರುತಲಿದೆ.

ಲಾರ್ಡ್ ಹಾಟಿಂಗ್ಟನ್ ಯವರಿಗೆ ಸದರೀ ರೋಗ ನಿವೃತ್ತಿಯಾಗುತಲಿದೆ. ಸ್ವೀಡನ್‌ದೇಶದ ಅರಸರಾದ ಕಿಂಗ್ ಆಸ್ಕರ್ ಯವರಿಗೆ ಕ್ರಮೇಣ ರೋಗನಿವಾರಣವಾಗುತ ಪ್ರಾಣಾಪಾಯ ಭಯ ತಪ್ಪಿತು.

ಮುಂಬೈ. ೧೪ನೇಜನವರಿ-ಮುಂಬೈ ಮತ್ತು ಪುನೇ ಪಟ್ಟಣಗಳಲ್ಲಿ ಮಹಮ್ಮದಿಯ್ಯ ಕುಲದ ಯಜಮಾನರು ನಾಟಕಗಳಿಗೆ ವಿರೋಧವಾಗಿ ಒಂದು ಸಮಾಖ್ಯೆಯಂ ಕಲ್ಪಿಸಿಕೊಂಡು ಅದನ್ನು ಪ್ರಕಟಿಸಿರುತ್ತಾರೇನೆಂದರೆ –ಮಹಮ್ಮದಿಯ್ಯಾ ಮತಾವಲಂಬಿಯಾದವನ್ಯಾವನೇ ಆಗಲಿ, ನಾಟಕಗಳಂ ನೋಡುವದಕ್ಕೆ ಹೋಗಕೂಡದು. ಹಾಗೆ ಯಾವನಾದರು ಹೋಗುವನಾದರೆ ಅತ ಪ್ಪಿತಬಗ್ಗೆ ಮೊದಲ್ ದಫಾ ಐದು ರೂಪಾಯಿಗಳೂ, ಯೆರಡನೇ ದಫಾ ಹತ್ತುರೂಪಾಯಿಗಳೂ ಕುಲಾಚಾರದ ಗುಂಪಿಗೆ ಜುಲ್ಮಾನೆ ಕೊಡಬೇಕಾದ್ದಲ್ಲದೆ ಮೂರನೇ ಆವರ್ತಿ ಮಾಡುವ ತಪ್ಪಿತಕ್ಕೆ ಕುಲದಿಂದ ಬಹಿಷ್ಕೃತನಾಗಿ, ಮೃತನಾದಲ್ಲಿ ಮಹಮ್ಮದಿಯ್ಯಾ ಮತ ಸಂಪ್ರದಾಯಾನುಗುಣವಾಗಿ ದಫನ್ ಮಾಡಲ್ಪಡಲಾರನೆಂದು. ಇಂಥಾ ನಿರ್ಬಂಧವನ್ನುಂಟುಮಾಡುವದಕ್ಕೆ ಅವರು ತಿಳಿಸುವದೇನೆಂದರೆ-ಈಚೆಗೆ ಪ್ರಾಚೀನ ಶಕ್ಕಣದಲ್ಲಿ ಆದಷ್ಟು ಒಂದು ನಾಟಕಸಂದರ್ಭದೊಳು ಪೀರ್ಘಂಬರರಾದ ಮಹಮ್ಮದರವರ ವಿವೇಕವಂ ತಾಳದ ವರ್ತಮಾನ ಇವ್ವರೇಕೆಕ್ಕೆ ಬಂದಂತೆಯೂ, ಅನೀತಿ ಸಂಗ ಸಾಹಿತಿ ಕಲ್ಪಿತವಾಗಿ ಚಿತ್ರ ಬರೆಯುವವರಾಗಲಿ, ತುಟ್ಟಾಕ್ಷ ವಿಧಂವಲಾಗಲಿ, ಅವನ ಸ್ವರೂಪವನ್ನು ಪ್ರದರ್ಶಿಸುವವರಾಗಲಿ ಮಹಮ್ಮದೀಯರ ಮತಾಚಾರ ಪ್ರಕಾರ ಪ್ರತಿಷ್ಠಿಸುವದಕ್ಕೆ ಅಪರಾಧವಾದ ಪಾಪವಾಗುತಿದೆಯೆಂಬದು.

ಮ್ಯಾಡ್ರಾಸ್, ೧೩ನೇ ಜನವರಿ—ಮೈಸೂರು ಸಂಸ್ಥಾನದ ಮಹಾರಾಣಿಯವರು ಮೊನ್ನೆಯದಿನ ಕಾಲಗತಿಯನ್ನೈದಿದರು ಆಕೆಯವರು ತಮ್ಮ ಪ್ರಜೆಗಳ ಭಕ್ತಿ ಗೌರವಗಳಿಗೆ ಕೇವಲ ಪಾತ್ರರಾಗಿದ್ದದರಿಂದ ಆಕೆಯವರ ಮರಣ ಬಹಳ ದುಃಖಿಸಲ್ಪಟ್ಟಿದೆ.

ಕಲ್ಕತ್ತಾ, ೧೩ನೇ ಜನವರಿ—ಪ್ರಿನ್ಸ್ ಆಲ್ಬರ್ಟ್ ವಿಕ್ಟರವರು ಈದಿನ ಸಾಯಂಕಾಲ ಸ್ಪೆಷಲ್ ಟ್ರೇಯಿನ್ನಲ್ಲಿ ಕಾಶಿಗೆ ಪ್ರಯಾಣವಾದರು. ಅವರ ಚಿಕ್ಕಪ್ಪಂದಿರಾದ ಡ್ಯೂಕಾಫ್ ಕನಾಟಿಯವರ ಸಂಗಡ ಹೋದರು.

ಲಂಡನ್, ೧೪ನೇ ಜನವರಿ—ಲಾರ್ಡ್ ನೇಪಿಯರ್ ಆಫ್ ಮ್ಯಾಗ್ಡಲಾಯವರು ಇನ್‌ಫ್ಲುಯೆಂಜಾ ಯೆಂಬ ವಿಷಮ ಶೀತರೋಗದ ಬೇನೆಯಿಂದ ಶ್ವಾಸಕೋಶದಲ್ಲಿ ಪ್ರಾಣ ಸ್ಥಿರವಾಗಿ ಮೃತರಾದರು.

ಲಂಡನ್, ೧೫ನೇ ಜನವರಿ—ಈ ವಾರದೊಳು ಈ ಶಹರಿನಲ್ಲಿ ೩,೭೦೦ ಮಂದಿ ಮೃತಪಟ್ಟರು, ಅವರಲ್ಲಿ ಸರಾಸರಿ ಸಂಖ್ಯೆಗಿಂತಲೂ ೪೦ ಮಂದಿ ಜಾಸ್ತಿಯಾಗಿದೆ. ಈಸಂಖ್ಯೆಯು ಇನ್ಫ ೭೭ಮಂದಿ ವಿಷಮ ಶೀತಜ್ವರದಿಂದಲೂ, ೧೦೮ ಮಂದಿ ವಿಧವಿಧ ರೋಗಗಳಿಂದಲೂ ಪ್ರಾಣಗಳು ಯೋಗಲಾಡಿಸಿಕೊಂಡರು.

ಲಂಡನ್, ೧೮ ನೇ ಜನವರಿ.— ಮಿ ಗ್ಲ್ಯಾಡ್‌ಸ್ಟನ್ ಯವರು ನಿನ್ನೆಯದಿನ ಹವಾರ್ಡ್ ಎಂಬ ಪ್ರದೇಶದೊಳು ಉಪನ್ಯಾಸ ಮಾಡಿದಂಥ ಸಂದರ್ಭದಲ್ಲಿ, ಇಂಗ್ಲಿಷ್ ಜನರು ಇಂಡ್ಯಾದೇಶದ ವಿಷಯದಲ್ಲಿ ತಮಗಿರುವ ಪ್ರಬಲವಾದ ಜವಾಬ್ದಾರಿಯ ಸ್ವರೂಪವನ್ನರಿಯುತ ಬರುವದು ತಮಗೆ ಕೇವಲ ಸಂತೋಷಜನಕವಾಗಿರುತದೆಂತಲೂ ಪರಂತು ಆ ದೇಶದ ವಿಷಯದಲ್ಲಿ ತಮ್ಮ ಬಹುಬಲ ಪ್ರದರ್ಶನವಂ ಬಿಡಲಾರದೆ ಹೋದಾಗ್ಯೂ, ಇಂಗ್ಲೆಂಡ್ ಸಂಸ್ಥಾನವು ತಮ್ಮ ಆಳ್ವಿಕೆಯನ್ನು ಸುಖಕರವಾಗಿಯೂ, ಶಾಶ್ವತವಾಗಿಯೂ ಮಾಡುವದಕ್ಕೆ ಧಾರ್ಮಿಕಮಾರ್ಗವನ್ನವಲಂಬಿಸಬೇಕೆಂತಲೂ ಹೇಳಿದರು.

ಲಂಡನ್, ೧೫ ನೇ ಜನವರಿ.— ಲಾರ್ಡ್ ಹಾರ್ಟಿಂಗ್ಟನ್ ಯವರಿಗೆ ಆರೋಗ್ಯ ವುಂಟಾಗಿದೆ, ಅವರ ಶರೀರಸ್ಥಿತಿ ವಿಷಯದಲ್ಲಿ ವರ್ತಮಾನ ಬರುವದನ್ನು ನಿಂತಿರುತಿದೆ.

ಬನಾರಿಸ್, ೧೫ ನೇ ಜನವರಿ.— ಪ್ರಿನ್ಸ್ ಆಲ್ಬರ್ಟ್ ವಿಕ್ಟರವರು ಈದಿನ ಇಲ್ಲಿಗೆ ಬಂದು ಸೇರಿ ವಿಶೇಷ ಗೌರವ ಪುರಸ್ಕಾರಗಳೊಡನೆ ಬರಮಾಡಿಕೊಳ್ಳಲ್ಪಟ್ಟರು. ಇಲ್ಲಿನ ಸ್ನಾನ ಘಟ್ಟಕ್ಕೆ ಹೋಗಿ ನೋಡಿದ ತರುವಾಯ, ಇಲ್ಲಿ ಗಂಗಾನದಿಯ, ನೀರನ್ನು ಬಹುಮುಖವಾಗಿ ಕೆಡಿಸುತಲಿರುವ ಬಾಧಿಕೆಯನ್ನು ತಪ್ಪಿಸಬೇಕೆಂಬ ಉದ್ದೇಶದೊಡನೆ ಈಚೆಗೆ ಸ್ಥಾಪಿಸಲ್ಪಟ್ಟಿರುವ ಸಂಘದವರು, ಕೆಟ್ಟ ನೀರನ್ನೆಲ್ಲ ಸಾಗಿಸುವದಕ್ಕಾಗಿ ಕಟ್ಟಲುದ್ದೇಶಿಸಿರುವ ಕಟ್ಟಡದ ಅಸ್ತಿಭಾರದ ಕಾರ್ಯವು ಪೂರೈಸಿದ್ದರು ಪ್ರಿನ್ಸರವರ ವಿಷಯದಲ್ಲಿ ಅನ್ಯತ್ರ ನಡೆಸಲ್ಪಟ್ಟ ಬಹುವಿಧ ವಿನೋದಗಳೆಲ್ಲವೂ ಇಲ್ಲಿಯೂ ನೆರವೇರಿಸಲ್ಪಟ್ಟವು.

ಅಲಹಾಬಾದ್, ೧೫ ನೇ ಜನವರಿ — ಈ ಕಾಲದೊಳು ಸ್ವಾಭಾವಿಕವಾಗಿ ಕಲ್ಕತ್ತೆಯೊಳು ವ್ಯಾಪಿಸುವ ಜ್ವರದ ಬೇನೆಯಿಂದ ವ್ಯಸನ ಯುಕ್ತರಾಗಿ ಪ್ರಮಾಣ ಮಾಡುತಲಿದ್ದಾರೆ

ಲಂಡನ್, ೧೪ ನೇ ಜನವರಿ —ಪ್ರಿನ್ಸ್ ಆಫ್ ವೇಲ್ಸ್ ರವರ ಕುಮಾರ [illegible] ವರು ವಿಷಮಶೀತ ರೋಗಾನುಭವದಲ್ಲಿರುತ್ತಾರೆ

ಲಂಡನ್, ೧– ನೇ ಜನವರಿ. ವಿವಾದ ಸಂಬಂಧ ನಿಶ್ಚಯಿಸಲು ಪೋರ್ಚುಗಲ್ ಸರಕಾರದಲ್ಲಿ [illegible] ಯವರ ಬರೆದ ನ [illegible] ಪತ್ರಿಕೆಯು [illegible] ಪತ್ರಿಕೆಗಳ ಬರೆದದು ಅವರವರ [illegible] ತಪ್ಪು ಕಾರಣ [illegible] ಯವರ, ಮಿ|| ಗ್ಲ್ಯಾಡ್‌ಸ್ಟನ್ ಯವರಿಗೆ ೧,೦೦೦ [illegible] ಅವರ ವಿಷಯಗಳ [illegible] ಬರೆದಿದ್ದಾರೆ. (ಈ ಕಥೆ [illegible] ಬರೆದದ್ದು [illegible] ಗಾರಿಯನಾಗಿದ್ದವರು—ಎ. ಕ. ಪ್ರ)

SUMMARY OF NEWS
ವೃತ್ತಾಂತಸಂಗ್ರಹವು.

ಫ್ರಾನ್ಸ್ ದೇಶದೊಳು ಪ್ರಾಚೀನನೊಬ್ಬನು ಒಂದು ನೀರ ವಾಹಿನಿಯಿಂದ ಮುಂದಾಗಿ ಚುನಾಯಿಸಲ್ಪಟ್ಟಿರುತ್ತಾನೆ

ಕಳೆದ ೮ ಸಂವತ್ಸರಗಳಲ್ಲಿ ನಡೆದ ಮೆಟ್ರಿಕ್ಯುಲೇಷನ್ ಪರೀಕ್ಷೆಗಳಲ್ಲಿ ಪ್ರತಿವರ್ಷ ಒಬ್ಬರು ಮಾತ್ರ ಬಾಲಿಕೆಯರು ತೇರ್ಗಡೆಯಾದಂತೆ ತಿಳಿಯಬರುತಿದೆ.

ಜೀವರಕ್ಷೆಗೆ ಉಂಟಾಗಿರುವ ಹಿಂಸೆಯನ್ನು ತಪ್ಪಿಸುವದಕ್ಕಾಗಿ ನ್ಯಾಯವಿಧಾಯಕ ಸಭೆಯವರು ಒಂದು ಕಾನೂನನ್ನು ರಚಿಸುವ ಕಾರ್ಯವನ್ನು ಶೀಘ್ರದಲ್ಲಿ ಕೈಗೊಳ್ಳಬಹುದೆಂದು ಕಾಣುತಿದೆ.

ಲಂಡನ್ ಪಟ್ಟಣದ ಪೋಸ್ಟ್ ಮಾಸ್ಟರೊಬ್ಬನು ಒಂದು ಭಾಗಿಯನ್ನು ಒಡೆದು ಇದರಲ್ಲಿ ಅಪಹರಿಸಲ್ಪಟ್ಟದ್ದು ಯೆರಡು ಲಕ್ಷ ರೂಪಾಯಿಗಳ ಕ್ರಯ ಬಾಳುವಷ್ಟು ವಜ್ರಗಳಂ ಅಪಹರಿಸಿದನಂತೆ.

ಅಮೆರಿಕಾ ದೇಶದಲ್ಲಿ ಈಚೆಗೆ ರೈಲ್‌ಮಾರ್ಗಗಳೊಳು ಮೂರು ವರೆ ಕಂಬಿಗಳು ಹಾಕಿಅದಕ್ಕೆ ಅನುಸಾರವಾಗಿ ಗಾಡಿಗಳಿಗೆ ಮೂರುವರೆ ಚಕ್ರಗಳೂ ಹಾಕಿ ಗಾಡಿಗಳು ನಡೆಸುತಲಿದಾರೆ. ಈ ಹೊಸ ಏರ್ಪಾಡಿನ ದೆಸೆಯಿಂದ ಗಾಡಿಗಳು ಪೂರ್ವಕ್ಕಿಂತಲೂ ವೇಗದೊಡನೆ ನಡೆಯುತಲಿವೆ.

Bangalore —Printed and published at the Karnatic Press, No. 108, Srinivasa Mandiram Road Pettah —1890

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol XVII] BANGALORE —MONDAY, JANUARY 27, 1890 [No. 4.

ಸಂಪುಟ ೧೭ | ಬೆಂಗಳೂರು — ಸನ್ ೧೮೯೦ನೇ ಇಸವಿ ಜನವರಿ ೨೭ನೇ ತಾರೀಖು ಸೋಮವಾರ. | ಸಂಖ್ಯೆ ೪

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

		ಸ್ಥಳದವರಿಗೆ	ಪರಸ್ಥಳದವರಿಗೆ
		ಪೋಸ್ಟಿಲ್ಲದೆ	ಪೋಸ್ಟೇಜಿ
ಮುಂಗಡವಾಗಿ	ವರ್ಷ	8—0—0	9—0—0
ಹಿಂದಾಗಿ	,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡವಾಗಿ	ವರ್ಷ	4—0—0	5—0—0
ಹಿಂದಾಗಿ	,,	5—0—0	6—0—0

[illegible]

ಪ್ರಕಟನೆಯ ದರಗಳು

[illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

☞ Price including Postage Rs 5 6 0

ವೈದ್ಯಸಾರ ಸಂಗ್ರಹ.

[illegible]

ಇದರ ಕ್ರಯ — ಪ್ಯಾಕಿಂಗ್ ಮತ್ತು ಅಂಚೆ ಕೂಲಿ

ಸೇರಿ ಪ್ರತಿ ಒಂದಕ್ಕೆ ರೂ 5 0—0

[illegible]

ADVERTISEMENTS

ನೋಟೀಸ್

ಅದ್ಭುತವಾದ ಒಂದು ಔಷಧ

ಹೊಟ್ಟೆಯಲ್ಲಿ ವಾಯು [illegible] ಪಿತ್ತದಿಂದ [illegible] ತಲೆ ತಿರುಗುವಿಕೆ, [illegible]

[illegible]

Sole Agents for India

NAYLOR, SON, GRIMES, & CO.,

Wholesale Depot [illegible] Clive Street, Calcutta

[illegible]

ಮಾರಿಸುವುದು ಅದರ ಕ್ರಯ ಇದರಡಿ ನಮೂದಿಸಲ್ಪಟ್ಟಿದೆ, ಪ್ಯಾಕಲೆಂಡರು — [illegible] ಮತ್ತು [illegible] ಬೇಕಾದವರನ್ನು | ಅರಿಸಿಕೊಳ್ಳತಕ್ಕದು ಬಿಲ್ [illegible] ಕೊಡಬೇಕು ವೈದ್ಯರಿಗೂ ಔಷಧ [illegible] ಒಪ್ಪುವಿಕೆಗೇ ದರಕ್ಕೆ ಕೊಡಲ್ಪಡುವದು

ಮಹಾರಾಜಾ ಆಫ್ ಮೈಸೂರು ಸ್ಪಿನ್ನಿಂಗ್ ವ ಮ್ಯಾನ್ಯುಫಾಕ್ಚರಿಂಗ್

(ಕಂಪೆನಿ ಲಿಮಿಟೆಡ್.)

ಸೌದೆ ಕಂಟ್ರ್ಯಾಕ್ಟದಾರರಿಗೆ ನೋಟೀಸ್.

ಇದರಿಂದ ತಿಳಿಸುವದೇನಂದರೆ — ಮೈಸೂರು ಮಹಾರಾಜರವರ ಸ್ಪಿನ್ನಿಂಗ್ ಮತ್ತು ಮ್ಯಾನ್ಯುಫಾಕ್ಚರಿಂಗ್ ಕಂಪೆನಿಗೆ ಷುಮಾರ್ ೫,೦೦೦ ಟನ್ನುಗಳ ಕಾಡು ಸೌದೆ ಬೇಕಾಗಿರುವದರಿಂದ ಅದರ ಸರಬರಾಯ್ ಬಗ್ಗೆ ಬರತಕ್ಕ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳನ್ನು ಕಂಪೆನಿಯು ಸಕ್ರೆಟರಿಯವರು ೧೮೯೦ನೇ ಇಸವಿ ಜನವರಿ ೩೧ನೇ ತಾರೀಖು ಶುಕ್ರವಾರದ ವರಿವಿಗೆ ಅಂಗೀಕರಿಸುವರು

ದರಖಾಸ್ತುಗಳ ಸಂಗಡ ೧೦೦ ರೂಪಾಯಿಗಳ ಠೇವಣಾತಿ ಕಳುಹಿಸಬೇಕಾದ್ದಲ್ಲದೆ ಸೌದೇ ದರಖಾಸ್ತೆಂದು ಲಕೋಟೆಯ ಮೇಲೆ ಬರೆಯತಕ್ಕದ್ದು.

ಸೌದೆಯ ತುಂಡುಗಳ ಅಳತೆ ಮತ್ತು ತರಹೇಗಳನ್ನು ಕುರಿತ ಇತರ ತಪ್ಸೀಲ್‌ಗಳನ್ನು ಆದಿತ್ಯವಾರಗಳು ವಿನಾ ಇತರ ದಿನಗಳಲ್ಲಿ ಬೆಳಿಗ್ಗೆ ೧೧ ಘಂಟೆಯಿಂದ ಸಾಯಂಕಾಲ ೪ ಘಂಟೆಯೊಳಗಾಗಿ ಸೆಕ್ರೆಟರಿಯವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

ಯಾವ ದರಖಾಸ್ತುದಾರರು ತಿರಸ್ಕರಿಸಲ್ಪಟ್ಟರೆ ಅದಕ್ಕೆ ಕಾರಣ ತಿಳಿಸಲ್ಪಡಮಾರದು.

ತಾ॥ ೧೮ನೇ ಜನವರಿ, ೧೮೯೦ನೇ ಇಸವಿ

JAMES SCOTT & Co.,
Agents.

ಮಹಾರಾಜಾ ಆಫ್ ಮೈಸೂರು ಸ್ಪಿನ್ನಿಂಗ್ ವ ಮ್ಯಾನ್ಯುಫಾಕ್ಚರಿಂಗ್

(ಕಂಪೆನಿ ಲಿಮಿಟೆಡ್.)

ಇದರಿಂದ ತಿಳಿಸುವದೇನಂದರೆ,—

ಸನ್ ೧೮೯೦ನೇ ಇಸವಿ ಫೆಬ್ರುವರಿ ೩ನೇ ತಾರೀಖು ಸಾಯಂಕಾಲ ನಾಲ್ಕು ಘಂಟೆಗೆ ಮಹಾರಾಜಾ ಆಫ್ ಮೈಸೂರು ಸ್ಪಿನ್ನಿಂಗ್ ವ ಮ್ಯಾನ್ಯುಫಾಕ್ಚರಿಂಗ್ ಕಂಪೆನಿ ಹಿಸ್ಸೇದಾರರು ಮುಂಬೈಯ ಕಾರಖಾನೆಯಲ್ಲಿರುವ ಕಂಪೆನಿ ಆಫೀಸಿನಲ್ಲಿ ಇದರಡಿ ತಿಳಿಸಲ್ಪಡುವ ಕೆಲಸಗಳನ್ನು ನಡೆಸುವದಕ್ಕಾಗಿ ಖುಸೂಸಿ ಜನರಲ್ ಮೀಟಿಂಗ್ ಸೇರುವರು, ಅವು ಯಾವವೆಂದರೆ.—

ಕಂಪೆನಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ ೧೦೫ನೇ ಕಲಂನಲ್ಲಿ "ಕಂಪೆನಿಯ ನಿವಳ ಸಲುವಾಗಿ ಸೇಕಡ ಹತ್ತರಮೇರೆ" ಎಂದು ನಮೂದಿಸಿರುವ ಕಡೇ ಮತ್ತು ಶಬ್ದಗಳನ್ನು ತೊಡೆದುಹಾಕಿ ಅದಕ್ಕೆ ಬದಲು, "ತಯಾರಾಗುವ ನೂಲು ಮತ್ತು ಬಟ್ಟೆಗಳಲ್ಲಿ ಪೌಂಡ್ ಒಂದಕ್ಕೆ ಮೂರು ಪೈ ಮೇರೆ" ಎಂದು ಸೇರಿಸತಕ್ಕದ್ದು.

ಆಗ ೧೦೫ನೇ ಕಲಂ ಇದರಡಿ ಕಂಡಂತಿರುವದು —

ಮುಂಬೈಯಲ್ಲಿ ನಂಬರ್ [illegible] ಬೀದಿಯಲ್ಲಿರುವ ಮೆಸ್ಸರ್ಸ್ ಜೇಮ್ಸ್ ಸ್ಕಾಟ್ ಅಂಡ್ ಕೋ ಯವರ ಕೋಠಿಯಲ್ಲಿ, ಕಾಯಮವಾಗಿ ೨೫ ವರ್ಷಗಳ ಕಾಲ ಪಾಲುದಾರರಾಗಿ ಸೇರಿರುವ ಅಥವಾ ಮುಂದೆ ಸೇರತಕ್ಕಂಥವರು ಕಂಪೆನಿಯ ಏಜೆಂಟರುಗಳಾಗಿರತಕ್ಕದ್ದು. ಮತ್ತು ಆ ವಾಯಿದೆ ಪೂರೈಸಿಹೋಗುವ ಕಾಲದಲ್ಲಿ, ಜಾಸ್ತೀ ಸಂಖ್ಯೆಯುಳ್ಳ ಹಿಸ್ಸೇದಾರರ ಅಭಿಪ್ರಾಯವನ್ನನುಸರಿಸಿ ಪುನಾ ನಾಮಕರಣವಾದ ಪಕ್ಷಕ್ಕೆ ಅವರೇ ಏಜೆಂಟರಾಗಿರತಕ್ಕದ್ದು. ಮತ್ತು ತಯಾರಾಗುವ ನೂಲು ವ ಬಟ್ಟೆಗಳಲ್ಲಿ ಪೌಂಡ್ ಒಂದಕ್ಕೆ ಮೂರು ಪೈ ಮೇರೆ ಏಜೆಂಟರುಗಳಾಗಿರುವ ಹಿಸ್ಸೇದಾರರಿಗೆ ರುಸುಂ ಸಲ್ಲತಕ್ಕದ್ದು.

ತಾತ್ಪರ್ಯ — ಹಿಸ್ಸೇದಾರರುಗಳ ತಿಳುವಳಿಕೆಯ ಬಗ್ಗೆ ಇದರಡಿ ಬರುವ ಅಂಕಗಳನ್ನು ನಮೂದು ಮಾಡುವದಾಗಿರುತ್ತದೇನಂದರೆ, ಮದರಾಸಿನಲ್ಲಿರುವ ಬಕ್ಕಿಂಗ್ಹಾಂ ಮತ್ತು ಕರ್ನಾಟಕ ಮಿಲ್‌ಗಳು, ಬಿನ್ನಿ ಕಂಪೆನಿಯವರು ಏಜೆಂಟರುಗಳಾಗಿರುವ ಬೆಂಗಳೂರಿನಲ್ಲಿನ ಅರಳೆ, ಕಂಬಳಿ ಮತ್ತು ರೇಷ್ಮೆ ಯಂತ್ರದ ಕಾರ್ಖಾನೆಗಳು, ಇವೆಲ್ಲವೂ ಸೇರಿ ಹತ್ತು ಇಂಡ್ಯಾ ದೇಶದಲ್ಲಿನ ಯಂತ್ರದ ಕಾರ್ಖಾನೆಗಳಲ್ಲಿ ಮೂರು ಪೈ ಪದ್ಧತಿ ಚಾಲತಿಯಲ್ಲಿರುತ್ತದೆ. ಇಂಡ್ಯಾ ದೇಶದೊಳಗಣ ವಿಶಿಷ್ಟ ಯಂತ್ರದ ಕಾರ್ಖಾನೆಗಳ ಹಿಸ್ಸೆಗಳಿಗಿಂತಲೂ ಬಹಳ ಜಾಸ್ತೀ ಕ್ರಯವುಳ್ಳ ಮದರಾಸ್ ಯುನೈಟೆಡ್ ಮಿಲ್ ಎಂಬ ಕಾರ್ಖಾನೆಯಲ್ಲೂ, ಮುಂಬೈ ಕಾರ್ಖಾನೆಗಳ ಪೈಕಿ ಸೇಕಡ ೯೦ ರಲ್ಲೂ ಇದೇ ಪದ್ಧತಿಯೇ ಇರುತ್ತದೆ. ಆದುದರಿಂದ ಇತರ ಕಾರ್ಖಾನೆಗಳಲ್ಲಿರುವಂತೆಯೇ ಇಲ್ಲಿಯೂ ಏಜೆಂಟುಗಳನ್ನು ಇಡುವದಕ್ಕಾಗಿ ಈ ಬದಲಾವಣೆ ಮಾಡಬೇಕಾಗಿದೆ.

JAMES SCOTT & Co.,
Agents.

ನೋಟಿಸ್.

ಇದರಿಂದ ನಮ್ಮ ಚಂದಾದಾರರಿಗೂ ಇತರರಿಗೂ ಗೊತ್ತುಪಡಿಸುವದೇನೆಂದರೆ:—

ಸನ್ ೧೮೮೯ನೇ ಇಸವಿ ಡಿಸೆಂಬರ್ ಆಖೈರವರಿವಿಗೆ ಚಂದಾ ಬಾಕಿಯನ್ನು ಪೂರಾ ಫೈಸಲ್ಮಾಡದೆ ಇರತಕ್ಕ ಚಂದಾದಾರರ ಹೆಸರುಗಳನ್ನು ಮಾತ್ರ ನಾವು ರಿಜಿಸ್ಟರ್ ದಾಖಲ್ಮಾಡಿಕೊಂಡು ಈಜನವರಿ ಲಾಗಾಯತು ಪತ್ರಿಕೆ ಕಳುಹಿಸುತ್ತೇವೆ. ಅವರ ಪೈಕಿ ಯಾರಿಗಾದರು ಪತ್ರಿಕೆಯು ಅಪೇಕ್ಷೆ ಇಲ್ಲದಿದ್ದರೆ ಅಂತವರು ಕೂಡಲೇ ತಮ್ಮ ಅಭಿಪ್ರಾಯವನ್ನು ಮೂರುಕಾಸಿನ ಕಾರ್ಡಿನಲ್ಲಿ ನಮಗೆ ತಿಳಿಸಬಹುದು. ಪತ್ರಿಕೆಯ ಆವಶ್ಯಕತೆ ಇರತಕ್ಕವರು ಸಾಧ್ಯವಾದಷ್ಟು ತ್ವರೆಯಲ್ಲಿ ಚಂದಾ ಮೊಬಲಗನ್ನು ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಬೆಂಗಳೂರು, ತಾ ೫ನೇ ಜನವರಿ ೧೮೯೦ } ಟಿ. ಸಿ. ಶ್ರೀನಿವಾಸಾಚಾರ್, ಪ್ರೊಪ್ರೈಟರ್. ಕರ್ಣಾಟಕ ಪ್ರಕಾಶಿಕಾ.

Bangalore City Municipality
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಸನ್ ೧೮೯೦ನೇ ಇಸವಿ ಜನವರಿ ೩೧ನೇ ತಾರೀಖ್ ಶುಕ್ರವಾರ ಪ್ರಾತಃಕಾಲ ೭½ ಘಂಟೆಗೆ ಸಿಟಿ ಮ್ಯುನಿಸಿಪಲ್ ಕಮಿಷನರ್‌ಗಳು ತಮ್ಮ ಆಫೀಸಿನಲ್ಲಿ ಸಭೆ ಸೇರುವಾಗ ಅವರ ವ್ಯವಸ್ಥೆಗೆ ತರಲ್ಪಡುವ ವಿಷಯಗಳ ಯಾದಾಸ್ತು.

೧. ಸನ್ ೧೮೮೯ನೇ ಇಸವಿ ಡಿಸೆಂಬರ್ ತಿಂಗಳ ಬಾಬತು ಚಾಲತಿ ಜಮಾಖರ್ಚ್ ಲೆಕ್ಕಗಳು ಮತ್ತು ಮರಣ ಲೆಕ್ಕಗಳು.

೨. ಸನ್ ೧೮೯೦-೯೧ನೇ ಸರ್ಕಾರ್ ಸಾಲಿಗೆ ಮ್ಯುನಿಸಿಪಲ್ ಫಂಡಿನ ಜಮಾಖರ್ಚಿನ ಮುಸವಿದಾ ಬಜೆಟ್ ಅಂದಾಜ್ ಪಟ್ಟಿ.

೩. ಬಿನ್ನಿಯವರ ಕಾಟನ್ ಕಾರ್ಖಾನೆಯ ಮ್ಯಾನೇಜರಾದ ಮ್ಯ|| ಹಾರ್ಡಿಯವರು ತಮ್ಮ ಯಿಸ್ಟೀಮ್ ಯಂತ್ರದ ಕಾರ್ಖಾನೆಗೆ ಸೇರಿದ ಜಮೀನಿನ ಪಶ್ಚಿಮ ಸರಹದ್ದನ್ನು ರಸ್ತೆಯ ವರಿವಿಗೆ ಬಡಾಯಿಸಿಕೊಳ್ಳಬೇಕಾದ ವಿಷಯದಲ್ಲಿ ಬರೆದುಕೊಂಡ ಅರ್ಜಿ.

೪. ಜಕ್ಕರಾಯನ ಕೆರೆಯಬಳಿ ಸ್ಮಶಾನದ ಘಟ್ಟವನ್ನೇರ್ಪಡಿಸುವದಕ್ಕೆ ಬೇಕಾದ ಜಮೀನ್‌ಗಳಿಗೆ ಕೊಡತಕ್ಕ ಕಂಪೆನ್‌ಸೇಷನ್ ಅಂದರೆ ಈಡು ಮೊಬಲಗುಗಳಂ ನಮೂದಿಸಿ ಬೆಂಗಳೂರು ಅಮಲ್ದಾರರು ಕಳುಹಿಸಿಕೊಟ್ಟ ಲೆಕ್ಕದ ಪಟ್ಟಿಯನ್ನು ತಕರಾರು ಮಾಡಿ ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ಸನ್ ೧೮೯೦ನೇ ಇಸವಿ ಜನವರಿ ೧೪ನೇ ಮುಕಾಂನಲ್ಲಿ ಬರೆದ ೧೬೩೩ನೇ ನಂಬರ್ ಲೆಟರ್.

ಹಾಸ್ತೀ ಅಂಶಗಳು.

೧. ಅಗ್ರಿಕಲ್ಚ್ಯುರಲ್ ಕಾಲೇಜ್ ಗ್ರಾಜ್ಯುಯೇಟ್ ಎಸ್. ಸುಬ್ಬರಾಯರು ಕುಂಬಾರಗುಂಡಿಗೆ ಪಶ್ಚಿಮ ಭಾಗದಲ್ಲಿ ಒಂದು ಮಾಡಲ್‌ಫಾರಂ ಮಾಡುವದಕ್ಕಾಗಿ ಒಂದು ತುಂಡು ಜಮೀನ್ ಕೊಡಿಸಬೇಕೆಂದು ಸನ್ ೧೮೯೦ನೇ ಇಸವಿ ಜನವರಿ ೧೯ನೇ ತಾರೀಖಿನಲ್ಲಿ ಬರೆದುಕೊಂಡ ಅರ್ಜಿ.

೨. ಕೋಟೆಯ ಮೈದಾನದಲ್ಲಿ ಒಂದು ತುಂಡು ಜಮೀನ್ ಕೊಡಿಸಬೇಕೆಂದು ಕೇಶವಯ್ಯಂಗಾರ್ಯವರು ಬರೆದುಕೊಂಡ ಅರ್ಜಿ.

೩. ಮಹಮ್ಮದೀಯರ ಬಾಲಿಕಾ ಪಾಠಶಾಲೆಯ ಸೆಕ್ರೆಟರಿಯವರಾದ ಮೊ|| ರಾಜ ನಜಾರ್ ಹುಸೇನ್ ಷರೀಫ್‌ಯವರು, ಸದರೀ ಪಾಠಶಾಲೆಗೆ ಮ್ಯುನಿಸಿಪಲ್ ಫಂಡಿನಿಂದ ಹಂಗಾಮಿ ತರೀಖ್ ಗ್ರಾಂಟ್ ಕೊಡಿಸಬೇಕೆಂದು ಬರೆದುಕೊಂಡ ಅರ್ಜಿ.

ತಾ|| ೧೩ನೇ ಜನವರಿ, ೧೮೯೦.

A. SRINIVASACHARLU, B. A.,
Vice President,
City Municipal Commission.

ಕರ್ಣಾಟಕ ಪ್ರಕಾಶಿಕಾ.
THE KARNATAKA PRAKASIKA.
MONDAY, JANUARY 27, 1890
೧೮೯೦ನೇ ಜನವರಿ, ತಾ|| ೨೭ನೇ ಸೋಮವಾರ

THE INDIAN NATIONAL CONGRESS

ಕಳೆದ ಡಿಸೆಂಬರ್ ತಿಂಗಳಲ್ಲಿ ಮುಂಬೈಯೊಳು ನಡೆದ ನ್ಯಾಷನಲ್ ಕಾಂಗ್ರೆಸ್ ಎಂಬ ಸಾರ್ವಜನಿಕ ಸಭೆಯಲ್ಲಿ ಅಗ್ರಾಸನವ ವಹಿಸಿದ್ದ ಸರ್ ವಿಲ್ಲಿಯಂ ವೆಡ್ಡರ್‌ಬರ್ನ್‌ಯವರು ಪಾಲ್‌ಮಾಲ್ ಗಜೆಟ್ ಎಂಬ ಪತ್ರಿಕೆಯಲ್ಲಿ ಘಾಯಿಷ್ ಮಾಡಿರುತ್ತಾರೇನೆಂದರೆ.—

ಇಂಡ್ಯ ದೇಶದ ವಿಷಯದಲ್ಲಿ ಇಂಗ್ಲಾಂಡ್ ಸಂಸ್ಥಾನವು ಮಾಡಬೇಕಾದ ಕರ್ತವ್ಯವು ಬಹಳವಿರುತಿದೆಯೆಂದು ಯೆಲ್ಲರು ಒಪ್ಪುತ್ತಾರೆ. ಈಗ ಇಂಡ್ಯದೇಶವು ಪ್ರತಿನಿಧಿ ಶೂನ್ಯವಾಗಿರುತಿದೆ. ಇಂಡ್ಯದೇಶದ ಕಾರ್ಯ ನಿರ್ವಹಣೆಯಲ್ಲಿ ಬ್ರಿಟಿಷ್ ಚುನಾವಣೆ ದಾರನೊಬ್ಬನಿಗಿರುವಷ್ಟು ಸ್ವಾಯಂ ಅಧಿಕಾರವು ಇಂಡ್ಯದೇಶದ ಇಪ್ಪತ್ತು ಕೋಟಿ ಪ್ರಜೆಗಳಿಗೆ ಯಿಲ್ಲವು. ಆದುದರಿಂದ ಇಂಡ್ಯದೇಶದ ಅನೇಕ ಕೋಟಿ ಪ್ರಜೆಗಳ ಪ್ರಾಣ, ಮಾನ, ಸುಖಗಳಿಗೆ ಗ್ರೇಟ್ ಬ್ರಿಟನ್ ಸಂಸ್ಥಾನದ ಚುನಾವಣೇದಾರರು ಜವಾಬುದಾರರಾಗಿರುತ್ತಾರೆ ಈ ಜವಾಬ್ದಾರಿಯು ಯಾವ ರೀತಿಯಲ್ಲಿ ನೆರವೇರಿಸಲ್ಪಡಬೇಕು ?

ಇಂಡ್ಯ ದೇಶದ ವಿಷಯದಲ್ಲಿ ಇಂಗ್ಲಿಷ್ ಸರ್ಕಾರದವರು ಕೆಡಕು ಯಾವದನ್ನೂ ಮಾಡಲಿಲ್ಲವು. ಪರಂತು ತಮ್ಮ ಕರ್ತವ್ಯವನ್ನುಪೇಕ್ಷಿಸಿದರು ದೇಶ ಚರಿತ್ರೆಯಲ್ಲಿ ಕಂಡಂತೆ, ಇಂಗ್ಲಿಷ್ ಜನರು ಇಂಡ್ಯದೇಶದ ಕಾರ್ಯಗಳಲ್ಲಿ ಯಾವ ಕಾಲದೊಳು ಪ್ರವರ್ತಿಸಿದರೂ ಪ್ರಜೆಗಳಿಗೆ ಬಹುಸುಖವನ್ನುಂಟುಮಾಡುವದಕ್ಕಾಗಿ ಯಾಗಲಿ ಕೆಟ್ಟ ಅಧಿಕಾರಿಯನ್ನು ದಂಡಿಸುವದಕ್ಕಾಗಿ ಯಾಗಲಿ ಅವರು ಪ್ರವರ್ತಿಸಿದವರಾಗಿರುತ್ತಾರೆ. ಇಂಗ್ಲಿಷಿನವರು ತಾವು ಅನುಭವಿಸುವ ಸ್ವಾತಂತ್ರ್ಯಾಭಿವೃದ್ಧಿಗಳಂ ಇಂಡ್ಯದೇಶದ ಪ್ರಜೆಗಳು ಸಹ ಅನುಭವಿಸಬೇಕೆಂದು ಅಪೇಕ್ಷಿಸುವಣವು ಕೇವಲ ಶ್ಲಾಘನೀಯವಾದವು. ಇವುಗಳಿಗಾಗಿ ಇಂಡ್ಯದೇಶೀಯರು ಕೇವಲ ಕೃತಜ್ಞತೆಯುಳ್ಳವರಾಗಿರುತ್ತಾರೆ ಅವರಉದ್ದೇಶವು ಒಳ್ಳೆಯದೆ, ಪರಂತು ಅದನ್ನಾಚರಿಸುವರೀತಿ ಕೆಟ್ಟದ್ದಾಗಿರುತಿದೆ. ಅವರ ಕರ್ತವ್ಯದಲ್ಲುಂಟಾಗಿರುವ ಲೋಪ ಯಾವದೆಂದರೆ, ತಮ್ಮ ಜವಾಬ್ದಾರಿಯಂ ನೆರವೇರಿಸಬೇಕಾದ ವಿಷಯದಲ್ಲಿ ಸ್ವಾಯಂಪ್ರವರ್ತಿಸದೆ, ಅದಂ ಇಂಡ್ಯದೇಶದ ಪ್ರಜೆಗಳ ಪ್ರಯೋಜನಕ್ಕೆ ಪ್ರತ್ಯಕ್ಷ ವಿರುದ್ಧಗಳಾಗಿರುವ ಪ್ರಯೋಜನಗಳುಳ್ಳ ಸರ್ಕಾರ್ ಅಧಿಕಾರಿಗಳ ವಶ ಮಾಡಿರುತ್ತಾರೆ. ಸಾಮಾನ್ಯವಾಗಿ ಕಂದಾಯ ತೆರತಕ್ಕವರ ಪ್ರಯೋಜನವು ಅಂತಾ ಕಂದಾಯವನ್ನು ಪಯೋಗಿಸಿಕೊಳ್ಳುವ ಜನರ ಪ್ರಯೋಜನಕ್ಕೆ ವಿರುದ್ಧಗಳಾಗಿರುತಿವೆ ಇಂಡ್ಯದೇಶದಲ್ಲಿ ಕಂದಾಯ ತೆರತಕ್ಕವರ ಪ್ರಯೋಜನವು ದೇಶದ ನೆಮ್ಮದಿ, ಮಿತವ್ಯಯ, ಆಡಳಿತೆ ವೈಲಕ್ಷಣ್ಯ, ಇವುಗಳು. ಆದರೆ ಇಂಡ್ಯ ದೇಶದಲ್ಲಿ ನಿರಂಕುಶ ಪ್ರಭುತ್ವ ನಡೆಸುವ ಸಿವಿಲ್ ವ ಮಿಲಿಟರಿ ಅಧಿಕಾರಿಗಳಿಗೆ ಅನಿಷ್ಟಗಳಾಗಿರುತಿವೆ. ಅಂತವರಿಗೆ ಬರ್ಮಾ ದೇಶದಲ್ಲಿ ನಡೆದಂತೆ ಯುದ್ಧಗಳು ನಡೆದಲ್ಲಿ, ದೇಶಾಕ್ರಮಣ, ನೂತನಉದ್ಯೋಗಗಳು, ಗೌರವ, ಬಡ್ತಿ, ಇವುಉಂಟಾಗುತಿವೆ ಹೀಗಿರುವಲ್ಲಿಮಿತವ್ಯಯಕ್ಕೆ, ಅಂದರೆ ಖರ್ಚುಗಳಂತಗ್ಗಿಸುವದಕ್ಕೆ, ಅಥವಾ ಪ್ರಭುತ್ವ ವೈಲಕ್ಷಣ್ಯ, ಅಂದರೆ, ತಮ್ಮ ನಿರಂಕುಶಾಧಿಕಾರವಂ ನಿರ್ಬಂಧಪಡಿಸಲಿಕ್ಕೆ ಅವರು ಹ್ಯಾಗೆ ಸಮ್ಮತಿಸುವರು ? ಕಂದಾಯ ಕೊಡತಕ್ಕವರು ನಾಮತಃ ಸ್ವಾತಂತ್ರ್ಯ ಪ್ರಿಯರಾಗಿರುವ ಇಂಗ್ಲಾಂಡ್ ದೇಶದಲ್ಲಿಯೇ ಅಮಿತವ್ಯಯ ಮಾಡುವ ಇಲಾಖೆಗಳನ್ನು ಹತೋಟಿಯಲ್ಲಿಟ್ಟುಕೊಂಡಿರುವಣವು ಕೇವಲ ಕಷ್ಟವಾಗಿರುವಲ್ಲಿ, ಅದಕ್ಕೆ ಪ್ರತ್ಯಕ್ಷ ವಿರುದ್ಧ ಸ್ಥಿತಿಯಲ್ಲಿರುತಲೂ, ಸದರೀ ದೊಡ್ಡ ಇಲಾಖೆಗಳೇ ಸ್ವತಂತ್ರಾಧಿಕಾರ ಪ್ರಬಲದ್ದಾಗಿರುತಲೂ, ಕಂದಾಯದಾರರು ತಾವು ಕೊಡಬೇಕಾದ ಕಂದಾಯವನ್ನು ಕೇಳದ ಕೂಡಲೇ ಕೊಟ್ಟು ಬಿಡಬೇಕಾದವರಾಗಿರುತಲೂ ಇರುವ ಇಂಡ್ಯದೇಶದಲ್ಲಿ ಇನ್ನು ಹ್ಯಾಗೆ ಇದ್ದೀತು ? ಸಿವಿಲ್ ವ ಮಿಲಿಟರಿ ಅಧಿಕಾರಿಗಳು ತಮಗೆ ಸ್ವಭಾವಸಿದ್ಧವಾದ ಮತ್ತು ಶಿಕ್ಷಣಕ್ಕೆ ಸಂಬಂಧಪಟ್ಟ ಮನಃಪ್ರವೃತ್ತಿಗಳನ್ನು ಅನುಸರಿಸುವ ವಿಷಯದಲ್ಲಿ ಅವರಮೇಲೆ ನಾನು ದೋಷಾರೋಪಣೆ ಮಾಡುವದಿಲ್ಲವು. ಆದರೆ, ಇಂಡ್ಯದೇಶದ ಪ್ರಜೆಗಳ ಪ್ರಯೋಜನಗಳಿಗೆ ಪ್ರತ್ಯಕ್ಷ ವಿರುದ್ಧ ಪ್ರಯೋಜನಗಳುಳ್ಳ ಜನಗಳ ಆಡಳಿತಕ್ಕೆ ಇಂಡ್ಯದೇಶದ ಕಾರ್ಯಗಳನ್ನು ಅವಿಚಾರವಾಗಿ ಒಪ್ಪಿಸುವಣವು ಇಂಗ್ಲಾಂಡ್ ದೇಶದ ಜನಗಳ ವಿಶ್ವಾಸ ಭಂಗವೆಂದುಹೇಳುತ್ತೇನೆ.

ಇಂಡ್ಯದೇಶದ ಉದ್ಯೋಗಸ್ಥರ ಮೇಲೆ ಇಂಗ್ಲಾಂಡಿನಿಂದ ಸ್ವಲ್ಪಮಟ್ಟಿಗೆ ಮೇಲ್ವಿಚಾರಣೆ ನಡೆಸಲ್ಪಡುತಲಿದೆಯೆಂದು ಯಾರಾದರು ಯೆಣಿಸಬಹುದು, ಪರಂತು ವಸ್ತುಸ್ಥಿತಿ ಹಾಗಿಲ್ಲವು. ಅಪೀಲ್ ಮಾಡಿಕೊಳ್ಳಬೇಕಾಗಿದ್ದರೆ ಮಂತ್ರಾಲೋಚಕ ಸಮಾಜದೊಳಗಣ ಇಂಡ್ಯ ಸ್ಟೇಟ್ ಸೆಕ್ರೆಟರಿಯವರಿಗೆ ಮಾತ್ರವೇ ಮಾಡಿಕೊಳ್ಳಬೇಕಾಗಿರುತಿದೆ ಸ್ಟೇಟ್ ಸೆಕ್ರೆಟರಿಯವರಿಗೆ ಇಂಡ್ಯದೇಶದ ವಿಷಯ ಯಾವದೂ ತಿಳಿಯದು, ಅಥವಾ, ಯಾವ ಕಾರ್ಯಗಳಮೇಲೆ ಅಪೀಲ್ ತರಲ್ಪಡುತಿದೆಯೊ ಅಂತಾ ಜನರ ಗುಂಪಿನಿಂದ ಚುನಾಯಿಸಲ್ಪಟ್ಟ ಮತ್ತು ರಹಸ್ಯವಲ್ಲೂ ಸ್ವತಂತ್ರವಾಗಿಯೂ ಕೆಲಸಗಳುನಡೆಸುವ ಕೌನ್ಸಿಲ್ ಎಂಬ ಸಮಾಜದ ಅಭಿಪ್ರಾಯಾನುಗುಣವಾಗಿ ಅವರು ಜರಿಗಿಸಬೇಕಾದವರಾಗಿರುತ್ತಾರೆ ಮೇಲ್ವಿಚಾರಣೆಯ ವಿಷಯದಲ್ಲಾದರೋ, ಸನ್ ೧೮೫೮ನೇ ಇಸವಿಯಲ್ಲಿ ಮಹಾರಾಜ್ಞೀಯವರು ಈ ರಾಜ್ಯದುರವಂ ಸ್ವಾಯಂ ಕೈಗೊಂಡದ್ದು ಮೊದಲು ಮತ್ತಷ್ಟು ಕೆಟ್ಟುಹೋಯಿತು. ಯೇತಕ್ಕೆಂದರೆ, ಇಂಡ್ಯದೇಶದ ಆಡಳಿತವು, ಈಸ್ಟಿಂಡಿಯಾ ಕಂಪೆನಿಯವರ ವಶದಲ್ಲಿದ್ದಾಗ ಅವರ ಸನದುಗಳ ಮೇಲೆ ಪಾರ್ಲಿಮೆಂಟಿ ಸಭೆಯವರು ಕೇವಲ ಅಸೂಯಾಪೂರ್ವಕವಾದ ನಿಗೇವಾನಿ ಇಟ್ಟದ್ದಲ್ಲದೆ, ಪ್ರತಿ ಇಪ್ಪತ್ತು ಸಂವತ್ಸರಕ್ಕೊಂದಾವರ್ತಿ ಚಾರ್ಟರ್ ಯಾನೆ ಸನ್ನದ್ ಬದಲಾಯಿಸಲ್ಪಡುವಲ್ಲಿ, ಜನಗಳ ಫಿರ್ಯಾದಿಗಳನ್ನೂ ಸಂಕಷ್ಟಗಳನ್ನೂ ಸಂಪೂರ್ಣವಾಗಿ ಪಾರ್ಲಿಮೆಂಟ್ ಸಭೆಯಲ್ಲಿ ವಿಚಾರಿಸಲಿಕ್ಕೆ ಅವಕಾಶ ಉಂಟಾಗಿತ್ತು. ಈಗಲಾದರೋ ಅಂತಾ ಅವಕಾಶ ತಪ್ಪಿಹೋಗಿರುತಿದೆ, ಮತ್ತು ಸರ್ಕಾರ್ ಉದ್ಯೋಗಸ್ಥರು ಮಾಡುವ ಅಕ್ರಮಗಳಂ ವಿಚಾರಿಸುವದಕ್ಕೆ ಸಂದರ್ಭವೇ ಇಲ್ಲವು.

ಅಮಿತವ್ಯಯ ಮಾಡುವ ಈ ಇಲಾಖೆಯಿಂದ ನಡೆಸಲ್ಪಡುವ ಸ್ವಚ್ಛಂದ ಮತ್ತು ನಿರಂಕುಶವಾದ ಆಡಳಿತದ ದೆಸೆಯಿಂದ ಸ್ವಾಭಾವಿಕವಾಗಿ ಉಂಟಾಗಬೇಕಾದ ಪರ್ಯವಸಾನವೇನಾಗಿರುವದು? ಅದರ ಸ್ವಭಾವ ಸಿದ್ಧವಾದ ಪರ್ಯವಸಾನವೇನೆಂದರೆ, ಹಿಂಸಾಕರವಾದ ತೆರಿಗೆ ಮತ್ತು ಘೋರ ದಾರಿದ್ರ್ಯ ಇಂಡ್ಯದೇಶದಲ್ಲಿ ಒಬ್ಬ ಮನುಷ್ಯನಿಗೆ ಸಂಪಾದನೆ ದಿನ ಒಂದಕ್ಕೆ ಒಂದಾಣೆ ವರಮಾನವಿರುತಿದೆ ಇದರಿಂದ, ಐಶ್ವರ್ಯಯುಕ್ತವಾದ ಇಂಗ್ಲಾಂಡ್ ದೇಶದಲ್ಲಿ ಪ್ರಜೆಗಳು ತಮ್ಮ ಆಯತಿಗೆ ಅನುಸಾರವಾಗಿ ಕೊಡುವ ಕಂದಾಯಕ್ಕೆ ದ್ವಿಗುಣವಾಗಿ ಇಲ್ಲಿನವರು ಕಂದಾಯ ಕೊಡಬೇಕಾದವರಾಗಿರುತ್ತಾರೆ ಇದಕ್ಕೆ ಪರಿಹಾರವೇನು ? ಇಂಡ್ಯದೇಶದ ವಿಷಯದಲ್ಲಿ ಇಂಗ್ಲಿಷ್ ಜನರು ತಮಗಿರುವ ಜವಾಬ್ದಾರಿಯನ್ನು ನೆರವೇರಿಸಲಿಕ್ಕೆ ಯಾವ ಮಾರ್ಗವನ್ನವಲಂಬಿಸಬೇಕು ? ಇದು ವರಿವಿಗೆ ಇಂಡ್ಯದೇಶದ ಪ್ರಜೆಗಳು ಬಾಯಿಲ್ಲದವರೆಂಬ ಅಪವಾದ ಉಂಟಾಗಿರುತಲಿತ್ತು, ಅವರಿಗೆ ಬಾಧಕರವಾದ ಅಂಶವನ್ನು ತಿಳಿದುಕೊಳ್ಳುವದಕ್ಕೆ ನಮಗೆ ಅವಕಾಶ ವಿಲ್ಲವೆನ್ನುತಲಿದ್ದರು. ಈಗಲಾದರೋ ದೈವಾನುಗ್ರಹದಿಂದ ಅಂತಾ ಪ್ರತಿಬಂಧಕ ಸಾಮಗ್ರಿ ಯಾವದೂ ಇಲ್ಲವು. ಕಡೆಗೆ ಇಂಡ್ಯದೇಶದ ಪ್ರಜೆಗಳಿಗೆ ಬಾಯುಂಟಾಯಿತು. ವಿದ್ಯಾಭಿವೃದ್ಧಿ, ವೃತ್ತಾಂತ ಪತ್ರಿಕೆಗಳಿಗೆ ಮತ್ತು ಪ್ರಜೆಗಳು ಸಮಾಜ ಸೇರುವದಕ್ಕೆ ಉಂಟು ಮಾಡಲ್ಪಟ್ಟಿರುವ ಸ್ವಾತಂತ್ರ್ಯ, ಇವುಗಳ ಬಗ್ಗೆ ಅವರು ಕೃತಜ್ಞರಾಗಿರಬೇಕು. ಇಂಗ್ಲಾಂಡ್ ಸಂಸ್ಥಾನದಿಂದ ಉದಾರ ಸ್ವಭಾವದೊಡನೆ ಉಂಟುಮಾಡಲ್ಪಟ್ಟ ಈ ಪ್ರಬಲ ಅನುಕೂಲ್ಯಗಳು ವ್ಯರ್ಥವಾಗಲಿಲ್ಲವು. ಈಗ ನ್ಯಾಷನಲ್ ಕಾಂಗ್ರೆಸ್ ಎಂಬ ಸಾರ್ವಜನಿಕ ಸಭೆ ಎಂಬ ಹೆಸರಿನಿಂದ ಒಂದು ಪ್ರಬಲತರ ಸಮಾಜವೇರ್ಪಟ್ಟು ಇಂಡ್ಯದೇಶದ ವಿಶಿಷ್ಟ ಪ್ರಾಂತಗಳಿಂದಲೂಜನಗಳು ಬಂದು ಸೇರಿ ಇಂಡ್ಯದೇಶೀಯರಸಂಕಟಗಳು, ಅಪೇಕ್ಷಿತಾಂಶಗಳು, ಕೋರಿಕೆಗಳು, ಇವುಗಳನ್ನು ಇಂಗ್ಲಾಂಡ್ ದೇಶದ ಪ್ರಜೆಗಳಿಗೆತಿಳಿಸುತಿದಾರೆ ನ್ಯಾಯಬದ್ಧವಾದ ಈ ಪ್ರಯತ್ನವು ವಿವೇಕ ಮತ್ತು ಶಾಂತಿಯೊಡನೆ ನಡೆಸಲ್ಪಡುತಿದೆ. ನ್ಯಾಯವಿಧಾಯಕ ಸಭೆಗಳನ್ನುವೃದ್ಧಿಪಡಿಸಬೇಕೆಂಬ ಯೋಚನೆಯು ಕೇವಲ ನ್ಯಾಯ ಸಂಬಂಧವಾಗಿದೆ ಪಾರ್ಲಿಮೆಂಟ್ ಸಮಾಜದಿಂದಲೂ ಮಹಾರಾಜ್ಞೀಯವರಿಂದಲೂ ಕೊಡಲ್ಪಟ್ಟ ಭರವಸೆಗಳನ್ನು ನೆರವೇರಿಸಬೇಕೆಂದುಅಪೇಕ್ಷಿಸುತ್ತಾರೆ ಯಲ್ಲದೆ ಬೇರೆ ಹೊಸ ಅಂಶಗಳು ಯಾವದು ಅಪೇಕ್ಷಿಸಲ್ಪಡಲಿಲ್ಲವು ಅವರಿಂದಪೇಕ್ಷಿಸಲ್ಪಡುವ ಅಂಶಗಳೆಲ್ಲವು ನೆರವೇರಿಸಲ್ಪಡುವ ಪಕ್ಷದಲ್ಲಿ ಪ್ರಜೆಗಳು ತೃಪ್ತರಾಗಿಯೂ ಸುಖಿಗಳಾಗಿಯೂ ಇರುತಾರಾದರಿಂದ ಬ್ರಿಟಿಷ್ ಸಾಮ್ರಾಜ್ಯದ ಅಸ್ತಿಭಾರವು ದೃಢಪಡುವದು. ಇಂಗ್ಲಿಷಿನವರು ಇಂಡ್ಯದೇಶೀಯರ ಸಹಾಯವನ್ನು ಪಡೆಯುವರಾದರೆ ಅಲ್ಲಿನ ತಮ್ಮ ಕಡೆ ಅಧಿಕಾರಿಗಳಂ ಸ್ವಾಧೀನದಲ್ಲಿಟ್ಟುಕೊಂಡು ತಮ್ಮ ಜವಾಬ್ದಾರಿಯಂ ನೆರವೇರಿಸುವರು.

ವಿದ್ಯಾವಂತರಾದ ಇಂಡ್ಯದೇಶೀಯರು, ಇಂಡ್ಯ ದೇಶವನ್ನು ಸ್ವತಂತ್ರವಾಗಿ ಆಳುವದು ತಮಗೆ ಅಸಾಧ್ಯವಾದ ಕಾರ್ಯವೆಂದು ಚೆನ್ನಾಗಿ ತಿಳಿದುಕೊಂಡಿರುತ್ತಾರೆ ಇಂಗ್ಲಾಂಡ್ ಅಥವಾ ರಷಿಯಾ ಸರ್ಕಾರದ ಪ್ರಭುತ್ವಕ್ಕೆ ಇಂಡ್ಯ ದೇಶೀಯರು ಗುರಿಯಾಗತಕ್ಕವರು ಇಂಡ್ಯದೇಶೀಯರು ಇಂಗ್ಲಾಂಡಿನವರ ಪ್ರಭುತ್ವದಲ್ಲಿ ಅನುಭವಿಸುವ ವಿದ್ಯಾ ವೈಲಕ್ಷಣ್ಯ ಮತ್ತು ಸ್ವಾತಂತ್ರ್ಯಗಳಿಗೆ ಬದಲು ರಷಿಯಾ ಸರ್ಕಾರದ ಅವಿವೇಕ ಮತ್ತು ನಿರಂಕುಶ ಪ್ರಭುತ್ವವನ್ನು ಅಪೇಕ್ಷಿಸುವದಿಲ್ಲ. ಕರುಣಾಶಾಲಿಯಾದ ಲಾರ್ಡ್ ರಿಪನ್ ಯವರ ಆಡಳಿತ ಕಾಲದ ಮೊದಲು ವಿದ್ಯಾವಂತರಾದ ಇಂಡ್ಯದೇಶೀಯರು ಬ್ರಿಟಿಷಿನವರ ಪ್ರಭುತ್ವವನ್ನು ಪ್ರಜೆಗಳ ಪ್ರಭುತ್ವವನ್ನಾಗಿ ಅಂಗೀಕರಿಸಿರುತ್ತಾರೆ ಕಾಂಗ್ರೆಸ್ ಸಮಾಜದ ಉದ್ದೇಶವೇನೆಂದರೆ, ಬ್ರಿಟಿಷಿನವರ [illegible]ಯನ್ನು ತಮ್ಮ ಆಳ್ವಿಕೆಯನ್ನಾಗಿ ಒಪ್ಪಿ, ಅದನ್ನು ಇಂಡಿಯಾ ಮತ್ತು ಇಂಗ್ಲಾಂಡ್ ದೇಶಗಳ ಪ್ರಜೆಗಳಿಗೆ ಪ್ರಯೋಜನಕರವನ್ನಾಗಿ ಮಾಡಬೇಕೆಂದು ಅಪೇಕ್ಷಿಸುತ್ತಾರೆಂಬುದು.

ಇಂಗ್ಲಾಂಡ್ ದೇಶದಿಂದ ಇಲ್ಲಿಗೆ ಬರುವ ದೊಡ್ಡ ಅಧಿಕಾರಗಳುಮಾಡುವವರನೇಕರಿದ್ದಾಗ್ಯೂ, ಸರ್ ವಿಲ್ಲಿಯಂ ವೆಡರ್‌ಬರ್ನ್‌ಯವರಂತೆ ಇಲ್ಲಿನ ನಿಜಸ್ಥಿತಿಯಂ ಕೂಲಂಕಷವಾಗಿ ಅರಿತು, ಅದು ಇಂಗ್ಲಾಂಡಿನಲ್ಲಿನ ಅಧಿಕಾರಿಗಳ ಅವಧಾನಕ್ಕೆ ತರುವವರ ಮೂಲಕ ಇಂಡ್ಯ ದೇಶೀಯರಿಗೆ ಒಂದು ಮೇಲನ್ನುಂಟುಮಾಡಬೇಕೆಂದು ಪ್ರಯತ್ನಪಟ್ಟವರ ಸಂಖ್ಯೆ ಕೇವಲ ಮಿತವಾಗಿರುತಿವೆ ನಿಷ್ಕಲ್ಮಷ ಹೃದಯರಾದ ಈ ದೊಡ್ಡಮನುಷ್ಯರ ಪ್ರಕೃತ ಪ್ರಯತ್ನವು ಇಂಡ್ಯದೇಶೀಯರ ವಿಷಯದಲ್ಲಿ ಫಲಕಾರಿ ಯಾಗಬೇಕೆಂದು ಕೋರುವೆವು

Occasional Notes
ನೈಮಿತ್ತಿಕ ವಿಷಯನ್ಯಾಸ.

The agricultural prospects in Delhi. ದೆಹಲೀ ಪ್ರಾಂತದಲ್ಲಿ ಕಳೆದ ಆಗಸ್ಟ್ ತಿಂಗಳ ಮೊದಲು ವರ್ಷಾಭಾವದಿಂದ ಫಸಲ್‌ಗಳು ಒಣಗುತ ಬರುತಲೂ ಜಿನಿಸಿಗಳ ಧಾರಣೆಗಳು ದಿನೇ ದಿನೇ ಹೆಚ್ಚುತ ಬರುತಲೂ ಇರುವದರಿಂದ ಅಲ್ಲಿನ ಪ್ರಜೆಗಳು ಕೇವಲ ಅನುತ್ಸಾಹಿಗಳಾಗಿರುತ್ತಾರೆ

...ಈ ತಿಂಗಳ ಆಖೈರೊಳಗಾಗಿ ಮಳೆ ಬಾರದೆ ಹೋಗುವಪಕ್ಷದಲ್ಲಿ ಫಸಲಿಗಳು ಪೂರಾ ಕೆಟ್ಟುಹೋಗುವ ಸ್ಥಿತಿಯಲ್ಲಿರುವಂತೆಯೂ ತಿಳಿಸುತ್ತಿದೆ.

Cholera in the mofussil.—ಉತ್ತರ ಆರ್ಕಾಟು ಡಿಸ್ಟ್ರಿಕ್ಟ್ ಪೈಕಿ ಕೆಲವು ಪ್ರದೇಶಗಳಲ್ಲಿಯೂ, ಕಡಪಾ ಡಿಸ್ಟ್ರಿಕ್ಟಿನಲ್ಲೂ ವಾಂತಿಭೇದಿ ರೋಗ ವ್ಯಾಪಿಸಿರುವದರಿಂದ, ಗುಂಟಕಲ್ ಮೊದಲು ಬಳ್ಳಾರಿ ವರಿವಿಗೆ ಹಾಕಲ್ಪಡುತಲಿರುವ ರೈಲ್ ರಸ್ತೆಯ ಕಾಮಗಾರಿಗಳು ನಿಂತುಹೋಗಿವೆ; ಮತ್ತು ಅಲ್ಲಿ ಕೂಲಿಮಾಡುತಲಿದ್ದವರೆಲ್ಲ ಓಡಿಹೋದರು. ಕಂಟ್ರಾಕ್ಟದಾರರು ತಮ್ಮ ಕೆಲಸಗಳಿಗೆ ಕೂಲಿ ಮಾಡುವ ಜನರನ್ನು ಹೊರಗೆ ಕಳುಹಿಸುವದಾಗಲಿ, ರೋಗಪೀಡಿತವಾದ ಪ್ರದೇಶಗಳ ಕಡೆಯಿಂದ ಹೊಸ ಜನರನ್ನು ಕೆಲಸಕ್ಕೆ ಸೇರಿಸಿಕೊಳ್ಳುವದಾಗಲಿ ಕೂಡದೆಂದು ಅವರು ಖಚಿತವಾಗಿ ಹುಕುಂ ಕೊಡಲ್ಪಟ್ಟಿರುತ್ತಾರೆ.

Sati—ಹಿಂದೆ ಈ ಹಿಂದೂದೇಶದೊಳು ನಡೆಯುತಲಿದ್ದ ಸಹಗಮನವೆಂಬುದು ಇಲ್ಲಿ ಮಾತ್ರವೇ ಅಲ್ಲದೆ ದ್ವೀಪಾಂತರಗಳಲ್ಲಿ ಸಹ ಅವ್ಯಾಹತವಾಗಿ ನಡೆಯುತ್ತಿರುವಂತೆ ಸ್ಪಷ್ಟವಾಗಿ ಕಾಣಬರುತಲಿದೆ ಹ್ಯಾಗಂದರೆ, ಜಾವಾ ದ್ವೀಪಕ್ಕೆ ಪೂರ್ವಕ್ಕೆ ಸ್ವಲ್ಪ ದೂರದಲ್ಲಿರುವ ಬಾಲಿ ದೇಶಕ್ಕೆ ಸೇರಿದ ದ್ವೀಪ ಸಮೂಹದಲ್ಲೊಂದಾದ ಬಲಿ ಎಂಬ ದ್ವೀಪದೊಳು ಇತ್ತೀಚೆಗೆ ಕಾಲದಲ್ಲಿ ವಾಸ್ತವ್ಯವಾದವಳು ಸಹಗಮನ ಮಾಡುವ ವಾಡಿಕೆ ನಡೆದು ಬರುತಲಿದೆ. ಮೃತ ಸಮುದ್ರತೀರದಲ್ಲಿ ಕೇವಲ ಗೌರವನೀಯರಾದ ಪಕ್ಷದಲ್ಲಿ ಆತನ ಸೇವಕರು ಸಹ ಪ್ರಾಣತ್ಯಾಗ ಮಾಡಿಕೊಳ್ಳುವ ಪದ್ಧತಿ ಯೊಂದು ಅಲ್ಲಿಯು ನೆಲೆಗೊಂಡಿರುತಲಿದೆ. ಮೇಲಿನ ಸಂಗತಿಗಳು ತಪ್ಪಿಸುವದಕ್ಕೆ ಗವರ್ನಮೆಂಟಿನವರು ಪ್ರಯತ್ನಿಸಿಲ್ಲ. ಕೆಲವು ದಿನಗಳ ಹಿಂದೆ ಸದರೀ ದ್ವೀಪಕ್ಕೆ ಸೇರಿದ ಹಿಂದೂಸ್ಥಳವಪ್ರಭುವು ಒಬ್ಬನು ಮೃತನಾದಾಗ ಆತನ ಭಾರ್ಯೆಯರು ಮೂವರು ಸಹಗಮನ ಮಾಡಿದರು. ಗವರ್ನಮೆಂಟಿನವರು ಅದನ್ನು ನಿರೋಧಿಸುವದಕ್ಕೆ ಪ್ರಯತ್ನಿಸಲಿಲ್ಲವಾಗಿರುತ್ತಾರೆ.

Another examination scandal.—ಕಳೆದ ಸೋಮವಾರದ ಮೊದಲು ಮದರಾಸಿನಲ್ಲಿ ನಡೆಯುತಲಿದ್ದ ಬಿ ಎ. ಪರೀಕ್ಷೆಯು ಕಳೆದ ಶುಕ್ರವಾರದ ದಿನ ನಿಲ್ಲಿಸಲ್ಪಟ್ಟಿತು. ಇದಕ್ಕೆ ಕಾರಣವೇನೆಂದರೆ, ಜಾರಿಫ್ ಫ್ರೋಫೆಸರ್ ಎಂಬ ದರ್ಶನಶಾಸ್ತ್ರದ ಪ್ರಶ್ನಪತ್ರ ಯಾವ ಮೂಲಕವಾಗಿಯೊ ಹೊರಗಾಗಿ, ಯಾವನೋ ಒಬ್ಬನು ಪ್ರಶ್ನಪತ್ರದ ನಕಲೊಡನೆ ಯೂನಿವರ್ಸಿಟಿ ರಿಜಿಸ್ಟ್ರಾರಿಗೆ ಕಳುಹಿಸಲು ಅವರದು ಅಚ್ಚು ಹಾಕಲ್ಪಟ್ಟ ಪ್ರಶ್ನಪತ್ರಕ್ಕೆ ಸರಿನೋಡಿದ್ದರಲ್ಲಿ ಸರಿಯಾಗಿಯೇ ಕಂಡುಬಂದದರಿಂದ, ಸದರೀ ಶಾಸ್ತ್ರದಲ್ಲಿ ಬೇರೆ ಪ್ರಶ್ನಪತ್ರವನ್ನು ಸಿದ್ಧಮಾಡಬೇಕಾಯಿತು. ಹೆಸರಿಲ್ಲದೆ ಬರೆಯಲ್ಪಟ್ಟ ಸದರೀ ಕಾಗದವು ಅನಾಮಿಯ ಪತ್ರವು ಬಗ್ಗೆ ಪೋಲೀಸಿನವರಿಗೆ ಒಪ್ಪಿಸಲ್ಪಟ್ಟಿರುತಿದೆ. ಇತರ ಪ್ರಶ್ನಪತ್ರಗಳು ಸಹ ಹೊರಗಾಗಿರಬಹುದೆಂಬ ಸಂಶಯ ಹುಟ್ಟಿರುವದರಿಂದ ಇದುವರಿವಿಗೆ ನಡೆದ ಪರೀಕ್ಷೆಯನ್ನೇ ರದ್ದುಮಾಡಿ ಎಲ್ಲ ವಿಷಯಗಳಲ್ಲಿಯೂ ಪುನಃ ಪರೀಕ್ಷೆ ನಡೆಸಬೇಕೆಂದು ಉಮೇದುವಾರರೆಲ್ಲರು ಸೇರಿ ಸಿಂಡಿಕೇಟ್ ಸಭೆಗೆ ಅರ್ಜಿ ಬರೆದುಕೊಂಡಿರುತ್ತಾರೆಂದು ತಿಳಿಯಲಾಗಿದೆ.

Hindu widow re-marriage—ಮದರಾಸ್ ಮೆಯಿಲ್ ಪತ್ರಿಕೆಯ ಬಾತಮಿದಾರನೊಬ್ಬನು ಬರೆಯುತ್ತಾನೇನಂದರೆ—ಮದರಾಸ್ ಹಿಂದೂ ಪತ್ರಿಕೆಯ ಎಡಿಟರಾದ ಮಿ ಜಿ ಸುಬ್ರಹ್ಮಣ್ಯ ಅಯ್ಯರವರ ಪುತ್ರಿಯಾದ ಶ್ರೀಮತಿ ಶಿವಪ್ರಿಯೆ ಎಂಬ ಹುಡುಗಿಯನ್ನು ಮೆಟ್ರಿಕ್ಯುಲೇಷನ್ ಪರೀಕ್ಷೆ ಕೊಟ್ಟಿರುವ ರಾಮಸ್ವಾಮಿ ಅಯ್ಯರೆಂಬ ಬಾಲಕನಿಗೆ ಕೊಟ್ಟು, ಮುಂದೈಯಲ್ಲಿ ಮಿ|| ರಾಘವದಾಸ್ ಎಂಬವರಿಂದ ಕಟ್ಟಲ್ಪಟ್ಟಿರುವ ವಿಧವಾ ವಿವಾಹ ಮಂದಿರದಲ್ಲಿ ಈ ರೆಚೆಗೆ ಕೆಲವು ದಿನಗಳ ಹಿಂದೆ ಹಿಂದೂಮತ ಸಂಪ್ರದಾಯಾನುಗುಣವಾಗಿ ಪುನರ್ವಿವಾಹ ನಡೆಯಿತಷ್ಟೆ. ಸದರೀ ದಂಪತಿಗಳಿಬ್ಬರೂ ಈ ತಿಂಗಳ ೨೩ನೇ ತಾರೀಖ್ ಬೃಹಸ್ಪತಿವಾರದ ದಿನ ಬೆಳಿಗ್ಗೆ ರೆಯಿಲ್ ಮಾರ್ಗವಾಗಿ ಮದರಾಸಿಗೆ ಬಂದು ಸೇರಿದರು. ಆ ಕಾಲದಲ್ಲಿ ದಿವಾನ್‌ಬಹದೂರ್ ಆರ್. ರಘುನಾಥರಾಯರವರು ಮೊದಲಾದ ವರನೇಕರು ಸ್ಟೇಷನ್ ಪ್ಲ್ಯಾಟಿಫಾರಮಿನಲ್ಲಿ ಹಾಜರಿದ್ದು ಸದರೀ ವಧೂವರರಿಬ್ಬರನ್ನೂ ಬರಮಾಡಿಕೊಂಡು ಅಲ್ಲಿನ ಒಂದು ಕೊಠಡಿಗೆ ಕರೆದುಕೊಂಡು ಹೋಗಿ ಅವರಿಗೆ ಗಂಧ ಪುಷ್ಪ ತಾಂಬೂಲ ವಸ್ತ್ರಗಳಂ ಕೊಟ್ಟರು. ಅನಂತರ ವಾದ್ಯಗಳೊಡನೆಯೂ ಕೋಲಾಹಲದೊಡನೆಯೂ ತಿರುವಲ್ಲಿಕ್ಕೇಣಿಯಲ್ಲಿರುವ ತಮ್ಮ ವಾಸಗೃಹಕ್ಕೆ ತೆರಳಿದರು, ಎಂಬದು.

LOCAL AND PROVINCIAL NEWS.

ಸ್ವದೇಶ ಮತ್ತು ತಾಲ್ಲೂಕು ಜಾತಿ ವೃತ್ತಾಂತಗಳು

The Dewan.—ಈ ಸಂಸ್ಥಾನದ ದಿವಾನರಾದ ಮಿ ಕೆ. ಶೇಷಾದ್ರಿ ಅಯ್ಯರ್, ಸಿ ಎಸ್. ಐ. ಯವರು ಶಿವಮೊಗ್ಗ ಪ್ರಾಂತಕ್ಕೆ ಸರಿಕ್ಯೂಟ್ ದಯಮಾಡಿದ್ದರಷ್ಟೆ. ಸದರೀ ಯವರು ಕಳೆದ ಬುಧವಾರದ ದಿನ ರಾತ್ರಿ ತಮ್ಮ ಪರಿಜನರೊಡನೆ ಇಲ್ಲಿಗೆ ಬಂದು ಸೇರಿದರು.

The Chief Secretary—ಈ ಸಂಸ್ಥಾನದ ದಿವಾನರವರ ಚೀಫ್ ಸೆಕ್ರೆಟರಿಯವರಾದ ಮಿ ವಿ. ಪಿ. ಮಾಧವರಾಯರವರು ರಜಾ ಮೇಲೆ ಮದರಾಸಿಗೆ ಹೋಗಿದ್ದರಷ್ಟೆ. ಸದರೀ ಯವರು ಕಳೆದ ಮಂಗಳವಾರದ ದಿನ ಇಲ್ಲಿಗೆ ವಾಪಸ್ ಬಂದು ತಮ್ಮ ಕೆಲಸದ ಚಾರ್ಜು ವಹಿಸಿದರು.

The Market Show—ಬೆಳಿಗ್ಗೆ ೮ ಗಂಟೆಯಿಂದ ಸಾಯಂಕಾಲ ೪ ಘಂಟೆಗೆ ಈ ಪೂರು ಮಾರ್ಕೆಟಿನಲ್ಲಿ ಫಲಪುಷ್ಪ ಪ್ರದರ್ಶಕ ವಿನೋದ ನಡೆಯುವದಕ್ಕೆ ಆವಶ್ಯಕಗಳಾದ ಸುವಿಧಾಗಗಳು ನಡೆಯುತಲಿವೆ ಈ ವಿಶೇಷ ಸಂದರ್ಭದ ದರ್ಶನಾರ್ಥ ಶ್ರೀಮನ್ಮಹಾರಾಜರವರು ಸಹ ದಯಮಾಡುವರೆಂದು ಕೇಳುತ್ತೇವೆ.

Work without wages—ಶಿವಮೊಗ್ಗಾ ಡಿಸ್ಟ್ರಿಕ್ಟ್ ಅ|| ಕೆ|| ಮಿ. ಚೆಲುವಯ್ಯಂಗಾರ್ಯರು ಹಾಸನ ಡಿಸ್ಟ್ರಿಕ್ಟ್ ಖಜಾನೆ ಚಾರ್ಜಿನಲ್ಲಿದ್ದ ಕಾಲಕ್ಕೆ ತಮಗೆ ರುಸುಂ ಕೊಡಬೇಕೆಂದು ಕೇಳಿದ್ದಕ್ಕೆ, ಖಜಾನೇ ಕೆಲಸಗಳು ಎ. ಕಮಿಷನರ್ ಕೆಲಸಗಳಲ್ಲೊಂದು ಭಾಗವಾಗಿರುವದರಿಂದ ಆ ಬಗ್ಗೆ ಬೇರೆ ರುಸುಂ ಸಲ್ಲತಕ್ಕದ್ದಿಲ್ಲವೆಂದು ಮೈಸೂರು ಗವರ್ನಮೆಂಟಿನವರು ಅವರಿಗೆ ಜವಾಬ್ ಕೊಟ್ಟದ್ದಾಗಿ ಬೆಳಗಿನ ಈವನಿಂಗ್ ಮೆಯಿಲ್ ಪತ್ರಿಕೆ ತಿಳಿಸುತಿದೆ.

Col Magrath—ಇಲ್ಲಿನ ಸಿವಿಲ್ ಮಿಲಿಟರಿ ಸ್ಟೇಷನ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮತ್ತು ಮ್ಯುನಿಸಿಪಲ್ ಪ್ರೆಸಿಡೆಂಟರಾದ ಕರ್ನಲ್ ಮೆಗ್ರಾತ್ ಯವರು ಬರುವ ಮಾರ್ಚ್ ತಿಂಗಳಲ್ಲಿ ಫರ್ಲೋ ರಜಾ ಪಡಕೊಂಡು ಸ್ವದೇಶಕ್ಕೆ ಪ್ರಯಾಣಮಾಡುವರಾಗಿರಾರೆಂಬ ವಾರ್ತೆ ಯುಂಟಾಗಿದೆ. ಅಂತಾ ಸಂದರ್ಭ ಪ್ರಾಪ್ತವಾಗುವಲ್ಲಿ ಈಗ ಪೋಲೀಸ್ ಸೂಪರಿಂಟೆಂಡೆಂಟಾಗಿರುವ ಮೆ|| ಪ್ಯಾಯಡಿಸನ್ ಯವರು ಕರ್ನಲ್ ಮೆಗ್ರಾತಿಯವರ ಕೆಲಸವನ್ನು ಬದಲೀ ನೋಡುವರು

The weather.—ಈಗ ಪೂರ್ವದ ಸ್ವಲ್ಪ ಬದಲಾಯಿಸಿರುವದು ಕಾಣುತಿದೆ. ಅದಾಗದಲ್ಲಿದ್ದಷ್ಟು ಚಳಿ ಕಳೆದ ವಾರದಲ್ಲಿಲ್ಲವು. ಬಿಸಲು ಹೆಚ್ಚಾಗಿ ಬರುತಿದೆ. ಅದರ ಜೊತೆಯಲ್ಲಿ ಗಾಳಿಯೂ ಬಲವಾಗುತಲಿದೆ. ಸಮಾಚಾರಗಳ ಪ್ರದೇಶಗಳಲ್ಲಿ ಹೆಚ್ಚು ಕಮ್ಮಿ ಇಲ್ಲವು, ಅಂದರೆ ಬಯಿವಾದವಲ್ಲಿದ್ದಂತೆಯೇ ಇದೆ. ಇಳ್ಳಿಯ ಅಸ್ತಿ ಸಿಕ್ಕದಿಲ್ಲವು ಒಂದು ವೇಳೆ ಅಂತಾದ್ದು ಒಂದಾಗ್ಯ ಕಿರುವ ಲಕ್ಷ್ಯವನ್ನು ಜನರು ನೋಡುತ್ತಾರೆ

ಸರ್ಕಾರಿಯ ಧಾರಣೆಯು ಸರ್ವದಾ ಧಾರಣೆಯಾಗಿದೆ.

The Rasikajananandini Company.—ಈಗ್ಯೆ ಸುಮಾರು ಯೇಳೆಂಟು ವರ್ಷಗಳಿಂದೀಚೆಗೆ ಈ ಪೂರಲ್ಲಿ ವಿಧವಿಧ ಹೆಸರುಗಳಿಂದ ಅನೇಕ ನಾಟಕ ಕಂಪನಿಗಳೇರ್ಪಟ್ಟು ಅವುಗಳಪೈಕಿ ಕೆಲವು ಒಂದೆರಡು ವರ್ಷಗಳೊಳಗಾಗಿಯೇ ನಾಶವನ್ನೈದಿ, ಕೆಲವು ನಾಮಮಾತ್ರವ ಶಿಷ್ಟವಾಗಿ, ಒಂದೆರಡು ಮಾತ್ರ ಅದ್ಯಾಪಿ ನೆಲೆಗೊಂಡಿರುತಿವೆ. ಈಗ ಉಳಿದಿರುವ ಕಂಪನಿಗಳ ಪೈಕಿ ಯೊಂದಾದ "ರಸಿಕಜನಾನಂದಿನೀ" ಎಂಬ ಕಂಪನಿಯವರು ಮೈಸೂರು ಮಹಾರಾಜಾ ಸಾನ್ನಿಧ್ಯದಲ್ಲಿ ಸಹ ಹಿಂದೆ ಒಂದು ಸಂದರ್ಭದೊಳು ನಾಟಕವು ಆಡಿ ಬಹುಮಾನವು ಪಡೆದರಲ್ಲದೆ ಬಳ್ಳಾರಿ ಮೊದಲಾದ ದೊಡ್ಡ ದೊಡ್ಡ ಷಹರ್‌ಗಳಿಗೆ ಹೋಗಿದ್ದು ಅಲ್ಲಿನವರಿಂದ ಆದರಿಸಲ್ಪಟ್ಟು ಈಗ ಈ ಪೂರಲ್ಲಿ ನೆಲಸಿರುತ್ತಾರೆ. ಈ ಕಂಪೆನಿಯವರು ಬರುವ ಫೆಬ್ರುವರಿ ತಿಂಗಳಲ್ಲಿ ಈ ಪೂರು ತುಲಸೀತೋಟದ ಬಳಿ ಕಟ್ಟಲ್ಪಟ್ಟಿರುವ ನಾಟಕ ಶಾಲೆಯೊಳು ಮರಳಿ ಆಟಕ್ಕೆ ಪ್ರಾರಂಭಿಸಬೇಕೆಂದು ಯೋಚಿಸಿರುವಂತೆ ಕೇಳುತ್ತೇವೆ. ಈ ಕಂಪೆನಿಯವರು ಇಲ್ಲಿನ ಕೋಟೆಯ ಬಾಗಿಲ ಬಳಿ ಸ್ವಂತ ಆಗವಟನಿಂದ ಒಂದು ನಾಟಕ ಶಾಲೆಯಂ ಕಟ್ಟಿಸಬೇಕೆಂದು ಯೋಚಿಸಿ, ಅದಕ್ಕೆ ಬೇಕಾದ ಜಮೀನಿನ ಬಗ್ಗೆ ಸಿಟಿ ಮ್ಯುನಿಸಿಪಲ್ ಅಧಿಕಾರಿಗಳಿಗೆ ಅರ್ಜಿ ಕೊಟ್ಟಿರುವಂತೆ ತಿಳಿಯಬರುತಿದೆ ನಾಟಕಶಾಲೆಗಳು ಜನಸಮ್ಮರ್ದವಾದ ಪ್ರದೇಶಗಳೊಳಿರುವದು ಅನುಯಕರವಾದದ್ದೆಂಬ ಅಂಶವು ನ್ಯಾಯವಾಗಿ ಎಲ್ಲರ ಅನುಭವಕ್ಕೆ ವಿಷಯವಾಗಿರುವದರಿಂದ ಪ್ರಸಕ್ತ ಅರ್ಜಿದಾರರಿಗೆ ಸುಲಭ ಕುದಾಯಕ್ಕೆ ಜಮೀನ್ ಕೊಟ್ಟು ಪ್ರೋತ್ಸಾಹ ಪ್ರಯವಮಾಡುವದುಚಿತವೆಂದು ಸೂಚಿಸುತ್ತೇವೆ

Sri Chamarajendra Vidvajjanamanoranjini Sabha.—ಈಗ್ಯೆ ಕೆಲವು ವರ್ಷಗಳಿಂದ ಈ ಪೂರಲ್ಲಿ ಏರ್ಪಟ್ಟಿರುವ ಶ್ರೀ ಚಾಮರಾಜೇಂದ್ರವಿದ್ವಜ್ಜನಮನೋರಂಜನೀಸಭಾ ಎಂಬ ಅಭಿಧಾನದಿಂ ಸ್ಥಾಪಿಸಲ್ಪಟ್ಟಿರುವ ನಾಟಕ ಕಂಪೆನಿಯ ಸ್ಟೇಜ್ ಮ್ಯಾನೇಜರಾದ ಹುಡ್ಯಾಡಿಗರ ಬಿ. ಅಚ್ಚಯ್ಯ ಎಂಬಾತನು, ಸದರೀ ಕಂಪೆನಿಯವರು ಆಡುವ ನಾಟಕಗಳಲ್ಲಿ ರಾಣಿ ವೇಷವು ಹಾಕುತಲಿದ್ದ ಮೈಸೂರು ವೆಂಕಟಸುಬ್ಬಯ್ಯ ಎಂಬಾತನು, ನೂರು ರೂಪಾಯಿಗಳ ಕ್ರಯ ಬಾಳುವ ಉಗುರದ್ದಿಗೆಯಂ ಕಳವುಮಾಡಿಕೊಂಡು ಹೋದನೆಂಬದಾಗಿ ಆತನಮೇಲೆ ಇಲ್ಲಿನ ಪ್ರೋಬ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿಮಾಡಿದ ಫಿರ್ಯಾದ್ ವಿಚಾರಣೆಯಾಗಿ ಅದು ಸುಳ್ಳು ಫಿರ್ಯಾದೆಂದು ಕಳೆದ ಶುಕ್ರವಾರದದಿನ ಡಿಸ್‌ಮಿಸ್ ಮಾಡಲ್ಪಟ್ಟದ್ದಲ್ಲದೆ, ಸುಳ್ಳು ಫಿರ್ಯಾದ್ ತಂದ ಬಗ್ಗೆ ಅಚ್ಚಯ್ಯ ಎಂಬಾತನಮೇಲೆಯೂ, ಆತನ ತರಫ ಸಾಕ್ಷ್ಯ ಹೇಳಿದ ಮೂವರಪೈಕಿ ಬೊಬ್ಬಾತನು ವಿನಾ ಮಿಕ್ಕ ಇಬ್ಬರ, ಅಂದರೆ ಚಿಕ್ಕಬಳ್ಳಾಪುರದ ನಗರ್ತರ ಕೃಷ್ಣಣ್ಣ ಮತ್ತು ಈ ಪೂರು ನಿವಾಸಿಯಾದ ಕ್ಷೇತ್ರಮೂಲ ರಾಮಕೃಷ್ಣಶಾಸ್ತ್ರಿ, ಇವರಮೇಲೆ ಕ್ರಿಮಿನಲ್ ವಿಚಾರಣೆ ಮಾಡುವದಾಗಿ ಮ್ಯಾಜಿಸ್ಟ್ರೇಟರು ಖಚಿತವಾಗಿ ತಿಳಿಸಿರುವಂತೆಯೂ ನಮ್ಮ ಬಾತಮೀದಾರನು ತಿಳಿಸುತ್ತಾನೆ. ಇಂತಾ ದುಂಡುಜನರ ಗುಂಪನ್ನು ಅಡಗಿಸುವದು ಪ್ರಜೆಗಳ ಕ್ಷೇಮಕ್ಕೆ ಕೇವಲ ಆವಶ್ಯಕವಾದ ಕಾರ್ಯವಾಗಿರುತಿದೆ.

CORRESPONDENCE

ಮ||ರಾ|| ಕರ್ಣಾಟಕ ಪ್ರಕಾಶಿಕಾ ಎಡಿಟರವರ ಸನ್ನಿಧಿಗೆ

ಅಯ್ಯಾ—ಕಳೆದ ವಾರ ನಾನು ಕೇಳಿದ ಒಂದು ಪ್ರಶ್ನೆಗೆ ತಾವುಗಳು ತಮ್ಮ ಪತ್ರಿಕಾ ದ್ವಾರಾ ಉತ್ತರ ಕೊಡುವರ ಮೂಲಕ ಈ ವೇಳೆ ಕೆಲವು ದಿನಗಳಿಂದ ನನಗುಂಟಾಗಿರುವ ಸಂಶಯವು ನಿವೃತ್ತಿ ಮಾಡಬೇಕೆಂದು ಕೋರುತ್ತೇನೆ, ಏನಂದರೆ,—

ಲೋಕ ಹಿತಾರ್ಥವಾಗಿ, ಒಂದೊಂದು ಕಾಲದಲ್ಲಿ ಒಂದೊಂದು ರೂಪವನ್ನು ಧರಿಸಿ ... ದಶಾವತಾರಗಳನ್ನು ಎತ್ತಿದನೆಂಬ ಅಂಶ ಪ್ರಸಿದ್ಧವಾಗಿದೆ ಯಷ್ಟೆ. ಅಂತಾ ಅವತಾರಗಳ ಪೈಕಿ ಒಂಬತ್ತನೆಯದು ಬೌದ್ಧಾವತಾರವೆಂದು ನಾನೂ ನನ್ನಂತೆ ಅನೇಕರೂ ತಿಳಿದುಕೊಂಡಿದ್ದೆವು. ಇರಲು ಈಚೆಗೆ ಕೆಲವರು, ಬುದ್ಧರು ದಶಾವತಾರಕ್ಕೆ ಸೇರಿದವರಲ್ಲವೆಂದು ವಾದಿಸುತ, "ರಾಮೋರಾಮಶ್ಚರಾಮಶ್ಚ ಕೃಷ್ಣಃ ಕಲ್ಕಿರ್ಮಹಾಬಲ" ಎಂಬ ವಚನವು ಅದಕ್ಕೆ ಪ್ರಮಾಣವಾಗಿ ಉದಹರಿಸುತ್ತಾರೆ. "ರಾಮೋರಾಮಶ್ಚ ಕೃಷ್ಣಶ್ಚ ಬುದ್ಧಃ ಕಲ್ಕಿರ್ಮಹಾಬಲ" ಎಂಬದಾಗಿ ನಾವು ಕೇಳಿರುತ್ತೇವೆ. ಮೇಲಿನ ಎರಡು ವಚನಗಳ ಪೈಕಿ ಯಾವದು ಯಥಾರ್ಥವಾದದ್ದೋ ತಿಳಿಯಲಪೇಕ್ಷಿಸುತ್ತೇನೆ. ಈ ವಿಷಯದಲ್ಲಿ ರಾಮಾಯಣ, ಭಾರತ, ಭಾಗವತ ಮೊದಲಾದ ಅಷ್ಟಾದಶ ಪುರಾಣ ಗ್ರಂಥಗಳಲ್ಲಿ ಯಾವದಾದರು ನಿದರ್ಶಕವಾದ ವಚನಗಳಿದ್ದಲ್ಲಿ ಅವುಗಳೊಡನೆ ಉತ್ತರವನ್ನಪೇಕ್ಷಿಸುತ್ತೇನೆ. ಬುದ್ಧರು ಒಂಬತ್ತನೇ ಅವತಾರವೆಂದು ಅಂಗೀಕರಿಸುವ ಪಕ್ಷಕ್ಕೆ ಅವರು ಯಾವ ಕಾರಣದ ಮೇಲೆ, ಯಾವಕಾಲದೊಳು, ಎಲ್ಲಿ, ಯಾರ ಗರ್ಭದೊಳುದಯಿಸಿ ಯಾವ ಕಾರ್ಯವಂ ಮಾಡಿ ಹೋದರೋ ಅದಂ ಸಹ ಸಪ್ರಮಾಣವಾಗಿ ತಮ್ಮ ಪತ್ರಿಕಾ ಮೂಲಕ ತಿಳಿಸಬೇಕೆಂದು ಪ್ರಾರ್ಥಿಸುವ

ತಮ್ಮ ವಿಧೇಯನಾದ
ವಿರೋಧಿನಾಮ ಸಂ|| ಪುಷ್ಯ ಶು, ೬ ಬುಧವಾರ } ನರಸಿಂಹ ಭಟ್ಟ, ಕಲ್ಯಾಣಪುರ ನಿವಾಸಿ.

[ಕೇಳಿದ ವಿಷಯ ಪರಿಷ್ಕಾರವು ಅವಶ್ಯಕವಾದದ್ದಾಗಿರುವದರಿಂದ ಇಲ್ಲಿನ ಸಂಸ್ಕೃತ ಕಾಲೇಜ್ ಪಂಡಿತರಲ್ಲಾರಾದರೂ ಬರೆದು ಕೊಟ್ಟರು ಕೂಡಲೇ ಇದಕ್ಕೆ ಉತ್ತರ ಕೊಡುವದು ಅವರಿಗೆ ಜನಪ್ರಿಯವಾಗಿರುವದೆಂದು ನಂಬುತ್ತೇವೆ.—ಎ. ಕ. ಪ್ರ.]

TELEGRAMS.

ತಂತಿ ವೃತ್ತಾಂತಗಳು.

ಸೇಂಟ್ ಪೀಟರ್ಸ್ ಬರ್ಗ್, ೧೯ ನೇ ಜನವರಿ.—ರಷ್ಯಾ ಸರ್ಕಾರದವರು ಯೆರಡು ಕೋಟಿ ರೂಬಲ್ಗಳ ಸಾಲಕ್ಕೆ ಫ್ರೆಂಚ್, ಜರ್ಮನಿ ಮತ್ತು ಇಂಗ್ಲಿಷ್ ವರ್ತಕರೊಡನೆ ಯೇರ್ಪಾಟು ಮಾಡಿಕೊಂಡಿರುತ್ತಾರೆ.

ಪೀಟರ್ಸ್ ಬರ್ಗ್, ೨೦ ನೇ ಜನವರಿ.—ರಷ್ಯಾ ಸರ್ಕಾರದವರು ಮುಂದಿನ ವಸಂತ ಋತುವಿನಲ್ಲಿ ಪಶ್ಚಿಮ ಸರಹದ್ದು ಪ್ರಾಂತಕ್ಕೆ ಹೊಸದಿ ರೆಯಿಲ್ ರಸ್ತೆ ಹಾಕಿ, ಅದಕ್ಕೆ ಸೇರಿದಂತೆ ಮಿಲಿಟರಿ ಸರಂಜಾಂ ಕೋಠಿಗಳಂ ಸ್ಥಾಪಿಸುವರು

ಲಂಡನ್, ೨೧ ನೇ ಜನವರಿ.—ರಷ್ಯಾ ದೇಶದೊಳು ವಾಸವಾಗಿರುವ ಫ್ರೆಂಚ್ ಮತ್ತು ಜರ್ಮನೀ ದೇಶಕ್ಕೆ ಸೇರಿದ ದೊಡ್ಡ ಮನುಷ್ಯರು ಮೂವತ್ತೊಂಭತ್ತು ಮಂದಿ ಅಲ್ಲಿಂದ ಓಡಿಸಲ್ಪಟ್ಟರು.

ಲಂಡನ್, ೨೧ ನೇ ಜನವರಿ.—ಬರ್ಲಿನ್ ಪಟ್ಟಣದಿಂದ ಬಾಲ್ಟಿಕ್ ಸಮುದ್ರ ವರಿವಿಗೆ ಒಂದು ನಾಲೆಯನ್ನು ಕಟ್ಟಿಸುವಂತೆ ಜರ್ಮನೀ ಸರ್ಕಾರದವರು ಮಂಜೂರ್ಮಾಡಿರುತ್ತಾರೆ.

ಲಂಡನ್, ೨೫ನೇ ಜನವರಿ—ಈಚೆಗೆ ಕೆಲವು ದಿನಗಳ ಹಿಂದೆ ಹೊಡೆದ ಬಿರುಗಾಳಿಯ ದೆಸೆಯಿಂದ ಅಮಿತವಾಗಿ ಸ್ವತ್ತುಗಳೂ ಹಡಗುಗಳೂ ನಾಶವನ್ನೈದಿದವೆಂದು ಗ್ರೇಟ್ ಬ್ರಿಟನ್ ಸಂಸ್ಥಾನದ ಎಲ್ಲ ಕಡೆಗಳಿಂದ ವರ್ತಮಾನ ಬಂದಿರುತಿದೆ.

ಬರ್ಲಿನ್, ೨೭ನೇ ಜನವರಿ—ಜರ್ಮನೀ ದೇಶದ ಚಕ್ರವರ್ತಿಯವರಾದ ವಿಲ್ಲಿಯಂ ಯವರು ತಮ್ಮ ಸವಾರ್ ಸೈನ್ಯಕ್ಕೆಲ್ಲ ಉಕ್ಕಿನ ಬಲ್ಲೆಯಗಳಂ ಮಾಡಿಸಿ ಕೊಡತಕ್ಕದ್ದೆಂದು ಹುಕುಂ ಕೊಟ್ಟಿರುತ್ತಾರೆ.

ಅಲಹಾಬಾದ್, ೨೭ನೇ ಜನವರಿ—ಬಂಗಾಳದಿಂದ ನಾಗಪುರ್ ವರಿವಿಗೆ ಹಾಕಲ್ಪಟ್ಟ ರೈಲ್ ರಸ್ತೆಯಲ್ಲಿ ಜಾಸ್ತೀಯಾಗಿ ೭೦ ಮೈಲಿಗಳ ದೂರ ಸರುಕು ಗಾಡಿಗಳು ಬಿಡುವದಕ್ಕೆ ನಿನ್ನೆಯದಿನ ಪ್ರಾರಂಭವಾಯಿತು. ಕಳೆದ ಡಿಸಂಬರ್ ೧೫ನೇ ತಾರೀಖ್ ವರಿವಿಗೆ ಒಟ್ಟು ೧೬೦ ಮೈಲಿಗಳ ಫಾಸಲೆಯ ವರಿವಿಗೆ ಗಾಡಿಗಳು ನಡೆಸುವದಕ್ಕೆ ಪ್ರಾರಂಭವಾದಂತೆ ಆಯಿತು. ನಾಗಪುರದಿಂದ ಅಸ್ಸನ್‌ಸೋಲ್ ಎಂಬ ಷಹರ್ ವರಿವಿಗೆ ಧಾರಾ ರಸ್ತೇ ಕಾಮಗಾರಿ ಪೂರ್ತಿಯಾಗುವದಕ್ಕೆ ಇನ್ನು ೧೮೦ ಮೈಲಿಗಳ ಫಾಸಲೆ ಬಾಕಿಯಲ್ಲಿದೆ.

ಆಗ್ರಾ, ೨೧ನೇ ಜನವರಿ—ಈದಿನ ರಾತ್ರಿ ತಾಜ್‌ಮಹಾಲ್ ಎಂಬ ಕಟ್ಟಡವು ಯೆಲೆಕ್ಟ್ರಿಕ್ ಲೈಟ್ ಎಂಬ ಆಶ್ಚರ್ಯಕರವಾದ ದೀಪಗಳಿಂದ ಮನೋಹರವಾಗಿ ಅಲಂಕರಿಸಲ್ಪಟ್ಟಿತ್ತು. ಅದಕ್ಕೆ ಸೇರಿದ ತೋಟವು ನಾನಾವಿಧ ದೀಪಾವಳಿಗಳಿಂದ

ಕಣ್ಣೊಗ್ಗಳಸುತಲಿತ್ತು. ಮಹಾರಾಜ್ಞೀಯವರ ಪೌತ್ರರಾದ ಪ್ರಿನ್ಸ ಆಲ್ಬರ್ಟ ವಿಕ್ಟರವರು ಲೆಪ್ಟಿನೆಂಟ ಗವರ್ನರರಿಂದೊಡಗೂಡಿ ಬಂದು ಅವೆಲ್ಲವಂ ನೋಡಿ ಸುಕೊಂಡಿಸಿದರು.

ಆಗ್ರಾ, ೨೩ನೇ ಜನವರಿ—ಪ್ರಿನ್ಸರವರು ತಮ್ಮ ಪರಿಜನ ಪರಿಚಾರಕ ಮಂಡಲಿಯೊಡನೆ ಮೃಗಯಾವಿನೋದಾರ್ಥ ಇಂದಿನ ಪ್ರಾತಃಕಾಲ ಸ್ಪೆಷಲ್‌ಟ್ರೇಯಿನ್ನಲ್ಲಿ ಭರತಪುರಕ್ಕೆ ಪ್ರಯಾಣವಾದರು.ಅಲ್ಲಿ ಅಯಿದು ಕರಡಿಗಳಂ ಕೊಂದರು.

SUMMARY OF NEWS.
ವೃತ್ತಾಂತಸಂಗ್ರಹವು.

ಕೊಚ್ಚಿ ಸಂಸ್ಥಾನದ ದಿವಾನರವರು ಅಲ್ಲಿನ ಪೋಲೀಸ್ ಇನ್ಸ್ಪೆಕ್ಟರುಗಳಿಂದ ಜಾಮೀನು ತೆಗೆದುಕೊಳ್ಳಬೇಕೆಂದು ಪೋಲೀಸ್ ಸೂಪರಿಂಟೆಂಡೆಂಟರುಗಳಿಗೆ ಹುಕುಂ ಮಾಡಿರುತ್ತಾರೆ.

ಪಂಜಾಬ ದೇಶದಲ್ಲಿ ಮಿಡತೆಗಳ ಬಾಧೆ ಅಧಿಕವಾಗಿರುತಿದೆ. ಈಚೆಗೆ ಮುರಿದ್ಕಿ ಎಂಬ ದೇಶದೊಳು ಸದರೀ ಹುಳಗಳ ಒಂದು ದೊಡ್ಡಗುಂಪು ದಕ್ಷಿಣ ದಿಕ್ಕಿನಲ್ಲಿ ಹೋಗುತಲಿದ್ದದ್ದು ಕಂಡುಬಂತು.

ಮೆರೆವ್ ಎಂಬ ಪ್ರದೇಶದಲ್ಲಿರುವ ರಷಿಯಾದೇಶದ ಗ್ಯಾರಿಸನ್ ಸೈನ್ಯಕ್ಕೆ ಇನ್ಫ್ಲುಯೆನ್‌ಜಾ ಎಂಬ ವಿಷನೆಗಡಿ ರೋಗ ತಗಲಿ ಯಿದೆ. ಮೆರೆವ್, ಅಸ್ಕಾಬಾದ್, ಮತ್ತು ಚಾರ್ಜ ಎಂಬ ಷಹರ ನಿವಾಸಿಗಳಿಗೆ ಸಹ ಸದರೀ ರೋಗ ತಗಲಿ ಯಿದೆ

ಪಯೋನಿಯರ ಪತ್ರಿಕೆಯಮೇಲೆ ಶ್ರೀಮಾರ್ಗಸ್ವಾಮಿಯವರು ತರಲೆತ್ತಿಸುತಲಿರುವ ಮಾನನಷ್ಟ ಮೊಕದ್ದಮೆಯಲ್ಲಿ ಅವರ ತರಫ ಸಾಕ್ಷಿಗಳಾಗಿ ಸಮ್ಮನ್ ಮಾಡಲ್ಪಡುವವರಾಗಿರುವ ದೊಡ್ಡ ಅಧಿಕಾರಿಗಳ ಪೈಕಿ ವಾಯುವ್ಯದೇಶದ ಲೆಪ್ಟಿನೆಂಟ ಗವರ್ನರಾದ ಸರ ಆಕ್ಲೆಂಡ್ ಕಾಲ್ವಿನ್ ಯವರೊಬ್ಬರಾಗಿರುವರೆಂದು ತೋರುತಿದೆ.

ಮರಣದಂಡನೆ ವಿಧಿಸಲ್ಪಟ್ಟ ಖೈದಿಯರನ್ನು ಗಲ್ಲಿಗೆ ಹಾಕುವದಕ್ಕೆ ಬದಲು ಅಂತರ್ಗತಾಗ್ನಿಯ ಶಕ್ತಿಯಿಂದ ಕೊಲ್ಲಬೇಕೆಂದು ಯೋಚಿಸಿ ನ್ಯೂಯಾರ್ಕ ಎಂಬ ಪಟ್ಟಣದಲ್ಲಿ ಹೊಸದಾಗಿ ಮಾಡಲ್ಪಟ್ಟ ಸದರೀ ಅಗ್ನಿ ಸಂಬಂಧವಾದ ಯಂತ್ರದಲ್ಲಿ ಒಂದು ಯೆತ್ತನ್ನು ಬಿಟ್ಟು ಪರೀಕ್ಷಿಸಿ ನೋಡಿದ್ದರಲ್ಲಿ ಅದು ಕೂಡಲೆಸತ್ತುಹೋಯಿತು.

ಇಂಡ್ಯ ಚಕ್ರವರ್ತಿನೀಯವರ ಪೌತ್ರರಾದ ಪ್ರಿನ್ಸ ಆಲ್ಬರ್ಟ ವಿಕ್ಟರವರು ಈ ದೇಶಕ್ಕೆ ಬಂದದರ ಜ್ಞಾಪಕಾರ್ಥವಾಗಿ, ಅವರ ಮತ್ತು ವೈಸ್‌ರಾಯ್‌ಯವರ ಫೋಟೋಗ್ರಾಫುಗಳನ್ನು ಸಾವಿರಾರು ತಯಾರ್ಮಾಡಿಸಿ ಧರ್ಮಾರ್ಥ ಯೆಲ್ಲರಿಗೂ ಕೊಡುವದಾಗಿ ಅಜಿಂಗಂಜ ಜಮೀನ್ದಾರರಾದ ರಾಯ್ ಧನಪತಿ ಸಿಂಗ್ ಬಹದ್ದೂರರವರು ಹೇಳುತ್ತಾರೆ.

ಲಾಹೋರ್ ನಿವಾಸಿಯಾದ ಹರಿದೇವಿ ಯೆಂಬ ಹಿಂದೂಜಾತಿ ಹೆಂಗಸೊಬ್ಬಳೆಯು ತನ್ನಸೋದರಿ ಸಮಾನರಾದ ಸ್ತ್ರೀಯರ ವಿದ್ಯಾ ವೈಲಕ್ಷಣ್ಯಾಭಿವೃದ್ಧಿಯಬಗ್ಗೆ ಪ್ರಯತ್ನ ಪಡುತಿರುವಳು. ಸದರೀ ಪ್ರಯತ್ನವು ಕೈಗೂಡುವದಕ್ಕಾಗಿ ಆಕೆಯು ಈಗ ಪ್ರಕಟಿಸುತಲಿರುವ ಭರತ ಭಗಿನೀ ಎಂಬ ಪತ್ರಿಕೆಯನ್ನು ಇಂಗ್ಲಿಷ್ ಭಾಷೆಯಲ್ಲಿ ಪಬ್ಲಿಷ್ ಮಾಡಬೇಕೆಂದು ಯೋಚಿಸುತಲಿದಾಳೆ.

ಅಫೀಂ ಮತ್ತು ಇತರ ನಿಷಾ ಪದಾರ್ಥಗಳಂ ಮಾರುವದಕ್ಕೆ ಲೈಸೆನ್ಸ್ ಪಡೆದವರು ಸದರೀ ಪದಾರ್ಥಗಳ ಪೈಕಿ ಬಹುಭಾಗವನ್ನು ತಮ್ಮಮನೆಗಳಲ್ಲಿಟ್ಟು ಕೊಂಡುಅಲ್ಪಸ್ವಲ್ಪ ಅಂಗಡಿಗಳಲ್ಲಿಟ್ಟುಮಾರುವಂತೆ ತಿಳಿಯಬರುವದರಿಂದ ಅಂತಾ ಪದಾರ್ಥಗಳನ್ನೆಲ್ಲ ಅಂಗಡಿಯಲ್ಲೇ ಇಟ್ಟರತಕ್ಕದ್ದೆಂದು ವಿಧಿಸುವ ಒಂದು ಕಲಮನ್ನು ಲೈಸೆನ್ಸಿನಲ್ಲಿ ದಾಖಲ್ ಮಾಡತಕ್ಕದ್ದೆಂದು ಮದರಾಸ್ ಗವರ್ನಮೆಂಟನವರು ಹುಕುಂ ಮಾಡಿರುತ್ತಾರೆ.

ಸೈಯಾಂ ದೇಶದ ಅರಸರವರು ದರ್ಬಾರ ದುಸ್ತುಗಳಂ ಧರಿಸಿಕೊಂಡಿರುವ ಸಂದರ್ಭದೊಳು ನೋಡುವದಕ್ಕೆ ಬಹಳ ಗಂಭೀರವಾಗಿ ಕಾಣುತ್ತಾರೆ. ಈ ಸಂದರ್ಭದೊಳು ಅಧಮಪಕ್ಷ ಇಪ್ಪತ್ತುಲಕ್ಷ ರೂಪಾಯಿಗಳ ಕ್ರಯ ಬಾಳುವಷ್ಟು ದಿವ್ಯರತ್ನಗಳಿಂದಲಂಕೃತರಾಗಿರುತ್ತಾರೆ. ಅರಸರವರು ತಮ್ಮ ಮುನ್ನೂರುಮಂದಿ ಭಾರ್ಯೆಯರಲ್ಲೂ ಯೆಂಭತ್ತೇಳುಮಂದಿ ಮಕ್ಕಳಲ್ಲೂ ವಿಶೇಷ ಅನುರಾಗ ಸ್ವಭಾವರಾಗಿರುತ್ತಾರೆ, ಎಂದು ಒಂದಾನೊಂದು ಇಂಗ್ಲಿಷ ಪತ್ರಿಕೆ ಹೇಳುತಿದೆ.

ದೀರ್ಘಕಾಲ ದಂಡನೆಯನ್ನನುಭವಿಸುವಂತವರ ವಾಸಕ್ಕಾಗಿ ಯೇರ್ಪಟ್ಟಿರುವ ಅಂಡಮಾನ್ ದ್ವೀಪವು ಶೀಘ್ರದಲ್ಲೇ ಬ್ರಿಟಿಷ್ ರಾಜ್ಯವಾಗಿ ಮಾಡಲ್ಪಡುವದು, ಯಾತಕ್ಕೆಂದರೆ, ಅಲ್ಲಿನ ಹವಾ ಮತ್ತು ಇತರ ಅನುಕೂಲ್ಯಗಳು ಕೇವಲ ಆಕರ್ಷಕವಾಗಿರುವದರಿಂದ ಬಹುಮಂದಿ ಯುರೋಪಿಯನ್ನರು ಅಲ್ಲಿಗೆ ಹೋಗಿ ಸೇರುತಲಿದಾರೆ. ಪೋರ್ಟ ಬ್ಲೇಯರೆಂಬ ಊರು ಒಂದು ದೊಡ್ಡ ಪಟ್ಟಣವಾಗಿ ನಾಗರಿಕತೆಗೆ ಬೇಕಾದ ಸಹಕಾರಿಗಳೆಲ್ಲವು ಅಲ್ಲಿ ಅನುಕೂಲಿಸಿರುತಿದೆ.

ದರ್ಭಂಗಾ ಸಂಸ್ಥಾನದಲ್ಲಿ ನೂರು ಸಂವತ್ಸರಗಳಿಂದ ನೆಲಗೊಂಡಿದ್ದ ಒಂದು ಹಿಂದೂ ದೇವಾಲಯವಂ ಅಲ್ಲಿನ ಮ್ಯುನಿಸಿಪಾಲಿಟಿಯ ವೈಸ್‌ಪ್ರೆಸಿಡೆಂಟರು ಅದನ್ನು ಹಾಕುವಂತೆ ಹುಕುಂ ಮಾಡಿ ಅದೇರೀತಿ ನೆರವೇರಿಸಿದಂತೆ ತಿಳಿಯಬರುತಿದೆ. ಈ ಕೃತ್ಯವು ಅನಾವಶ್ಯಕವಾದ್ದಾಗಿಯೂ ಅಗೌರವವಾದ್ದಾಗಿಯೂ ಇರುವದಲ್ಲದೆ, ಇದರಿಂದ ಹಿಂದೂ ಜನರಿಗೆ ಉಂಟಾಗಿರುವ ಕೋಪವು ಹ್ಯಾಗೆ ಪರಿಣಮಿಸುವದೊ ತಿಳಿಯದು. ಮ್ಯುನಿಸಿ ಪಾಲಿಟಿಯ ವೈಸ್ ಪ್ರೆಸಿಡೆಂಟರು ಮುಸಲ್ಮಾನರು. ಅಲ್ಲಿನ ಜನರೆಲ್ಲ ಸಭೆ ಸೇರಿ ಇವನು ಮಾಡಿದ್ದು ದುಷ್ಕೃತ್ಯವೆಂಬ ನಿರ್ಣಯ ಪೂರ್ವಕ ಮುಗಿಸಿದರು.

EXTRACTS.

ಮೈಸೂರು ದಿವಾನ ಸಾಹೇಬರವರು ಇನ್ನೂ ಲಾಗಿ ಒಂದೆರಡು ತಿಂಗಳಿಂದ ಅತ್ತಿತ್ತ ಸವಾರಿ ಹೊರಡೆಯುವದರಲ್ಲಿಯೇ ಇರುತ್ತಾರೆ ಆದರೆ ದಿವಾನರ ಸಂಗಡ ದೊಡ್ಡ ದೊಡ್ಡ ಆಫೀಸರರು ಸಹ ಇರುವದರಿಂದ ಸರ್ಕಾರಿ ಕೆಲಸದ ಯೋಗ್ಯ ವ್ಯವಸ್ಥೆಯಾಗುವದೊಂದುಕಡೆಗಿರಲಿ. ಎಲ್ಲ ಆಫೀಸರರ ಟ್ರಾವಲಿಂಗ ಅಲೋವೆನ್ಸ ಮಾತ್ರ ಸರ್ಕಾರದ ಭಂಡಾರದಿಂದ ಹೆಚ್ಚಾಗಿ ಸಲ್ಲಬೇಕಾಗುವದು ಇಂಥ ಸವಾರಿಯನ್ನು ಆಫೀಸರ ಜನರು ಮಾಡಬೇಕಾದರೆ ಅವರು ತಮ್ಮ ಸ್ವಂತ ಸಮಯವನ್ನು ವೆಚ್ಚ ಮಾಡುವದು ನಿಧಾಯಕವಾಗಿರುತ್ತೆ. ಮೈಸೂರ ದರ್ಬಾರದವರು ಆಫೀಸರರಿಗೆ ಸರ್ಕಾರದ ಸಮಯವನ್ನು ಬಳಸಕೊಟ್ಟದ್ದು ವಿಧಾಯಕವೆಂದು ನಾವು ಹೇಳಲಾರೆವು. ಪರ್ಮ್ಯಾನೆಂಟ್ ಶೀಮೆಯ ಅಧಿಕಾರಿಗಳು ರಜಾ ತಕ್ಕೊಂಡ ಸಮಯದಲ್ಲ್ಯಾಗಲೀ ಇಲ್ಲವೆ ಪಕ್ಕಿನ ರಜಾದಿನ ಸಮಯದಲ್ಲ್ಯಾಗಲೀ, ಇಂತಾ ಪ್ರವಾಸವನ್ನು ಬೆಳಸುತ್ತಾರೆಂಬದನ್ನು ಮೈಸೂರ್ ದೇಶೀಯರು ಅರಿಯದೆ ಇರಲಾರರು. ಹೀಗಿದ್ದು ದಿವಾನರವರ ಪ್ರವಾಸದಿಂದ ಮೈಸೂ 5 ರಾಜ್ಯ ಭಂಡಾರವು ಈಗ ಸಹಿಸಬೇಕಾದ ವಿಶೇಷ ಖರ್ಚನ್ನು ಆ ದೇಶೀಯರು ನ್ಯಾಯವೆಂದು ತಿಳಿಯುತ್ತಾರೆ ಹ್ಯಾಗೆ?

ಏತದ್ದೇಶೀಯರ ಆಳ್ವಿಕೆಯು ಜನರಿಗೆ ತಿರಸ್ಕಾರಾರ್ಹವಾಗುವದಕ್ಕೆಲ್ಲ ಇಂಥ ಮಿತಿಮೀರಿದ ಖರ್ಚು, ಕಂದಾಚಾರಗಳೇ ಕಾರಣಭೂತವಾಗಿರುತ್ತವೆ. ಇಂಥ ನಿರರ್ಥಕ ಖರ್ಚುಗಳ ಬಗ್ಗೆ ಕನಿಕರ ಪಡದೆ ಎಲ್ಲ್ಯಾದರೂ, ಜಿಲ್ಲೆಗೆ ಕೆಲಸದ ಮೇಲಿರುವ ದಿವಾನರ ಭಾಗಗಳನ್ನು ಲಗಮುಹಾಕಿ ಸರ್ಕಾರಕ್ಕೆ ಆದಾಯವನ್ನು ತೋರಿಸುವಂಥ ಅಧಿಕಾರಿಗಳ ಸುಖವೇ ಮೈಸೂರ್ ದೇಶದಲ್ಲಿ ಪಪ್ಪುರಿಸಲ್ಪಡುತ್ತದೆಯೂ, ಪ್ರಜೆಗಳ ಸುಖ ದುಃಖದಮೇಲೆ ಕನಿಕರವಿಲ್ಲದೆ, ಬೇರೆ ಶೀಮೆಯಂತೆ ಮೈಸೂರು ದೇಶದಲ್ಲಿ, ಕಾಡ. ಕಾಮದಿಗಳನ್ನು ಬೆಳಸುವಗನ್ದಲನೆಂದ್ದರಿಂದಲೂ, ಮೇಲಿಂದ ಮೇಲಕ್ಕೆ ಕೋರಿಸುವ ಆದಾಯದ ಬೆಳ್ಳಿ ದ ಪಟ್ಟಿಯು ಕೆಲಸದಿಂದ ಮಾತ್ರವೇ ಶ್ಲಾಘಿಸುವದರಲ್ಲಿ ಆಶ್ಚರ್ಯವಿಲ್ಲ. ನೇಟವರಿಗೆ ನಿರಂಕುಶ ಪ್ರಭುತ್ವ ಬಂದಾಗ ಇಂಥ ಅಂದಾಧುಂದಿಗಳಾದಾಗ್ಯೂ ಶ್ಲಾಘನೀಯ ವೆಂತಲೇ ಅನ್ನಿಸಿಕೊಳ್ಳುವದು.

ದಿವಾನ ಸಾಹೇಬರವರ ವಿಶಿಷ್ಟ ಟ್ರಾವಲಿಂಗ ಖರ್ಚುಗಳು ಸರಕಾರದಿಂದಲೇ ಸಲ್ಲತಕ್ಕದ್ದಾದ್ದರಿಂದ, ಈಗ ಅವರು ಗೋಕರ್ಣಾದಿ ಕ್ಷೇತ್ರ ತೀರ್ಥಗಳಲ್ಲಿ ಮಾಡಿದ ಕ್ಷೇತ್ರವಿಧಿಯ ಖರ್ಚು ಕೂಡಾ ಸರಕಾರದಿಂದ ಸಲ್ಲಬೇಕಾದೀತೋ? ಅಥವಾ ಅದನ್ನು ಮಾತ್ರ ಅವರು ತಮ್ಮ ಖರ್ಚಿಗೆ ಹಾಕಿ ಪಡಿಸಿಕೊಂಡಾರೋ? ಎಂಬದನ್ನು ಮಾತ್ರ ತಿಳಯಲಿಕ್ಕೆ ತುಂಬಾ ಆತುರರಾಗಿರುತ್ತೇವೆ.—ಧನ್ಯಕ ಸುಬೋಧ.

ಹೇಮಂತೋತ್ಸವ ವ್ಯಾಖ್ಯಾನ ಮಾಲಿಕೆ

ಹಿಂದು ಯೂನಿಯನ್ ಕ್ಲಬ್ಬಿನವರು ವರುಷ ಪ್ರತಿಕೊಡುವ ವ್ಯಾಖ್ಯಾನಕ್ಕೆ ಪ್ರಾರಂಭವಾಗಿರುತ್ತವೆ ಮೊನ್ನೇ ಶನಿವಾರದ ದಿನ ಇಲ್ಲಿಯ ಸರಕಾರಿ ಮುದ್ರಣಶಾಲೆಯ ಮ್ಯಾನೇಜರಾದ ರಾವ್ ಸಾಹೇಬ ಗುಪ್ತ್ಯಯವರು "ಮದ್ಯಪಾನ" ವೆಂಬ ವಿಷಯದ ಮೇಲೆ ಉಪನ್ಯಾಸ ಮಾಡಿದರು. ಮದ್ಯ ಕುಡಿಯುವದರಿಂದ ಶರೀರದ ಬೇರೆಬೇರೆ ಅವಯವಗಳಲ್ಲಿ ಹ್ಯಾಗೆ ಹ್ಯಾಗೆ ರೋಗೋತ್ಪತ್ತಿ ಉಂಟಾಗುತ್ತದೆಂಬದನ್ನು ಚಿತ್ರಪಟದ ಮೂಲಕ ತೋರಿಸಿದರು. ಒಟ್ಟಿನಮೇಲೆ ಅವರ ಈ ವ್ಯಾಖ್ಯಾನವು ಚೆನ್ನಾಗಿ ಆಯಿತು. ಅವರ ವ್ಯಾಖ್ಯಾನದ ಸಾರಾಂಶವನ್ನು ಈ ಕೆಳಗೆ ಕೊಡುತ್ತೇವೆ.

ಮದ್ಯಪಾನದ ವಿಷಯವನ್ನೇ ನಾನು ಆರಿಸಿಕೊಂಡದ್ದಕ್ಕೆ ಮೂರು ಕಾರಣಗಳಿರುತ್ತವೆ. (೧) ಶೀತ ಪ್ರದೇಶಗಳಲ್ಲಿ ಮದ್ಯಪಾನದ ನಡವಳಿಕೆಯ ಅವಶ್ಯಕತೆಯುಂಟೆಂದು ಜನರ ತಿಳುವಳಿಕೆಯಾಗಿದ್ದು ಅದರ ವಿರುದ್ಧವಾಗಿ ವಿಲಾಯತಿಯ ಪ್ರವಾಸದಿಂದ ನನಗಾದ ಅನುಭವ. (೨) ಅಲ್ಲಿರುವ ಮದ್ಯ ನಿಷೇಧಕ ಸಂಘದವರೊಂದಿಗೆ ನನ್ನ ಸಹವಾಸ (೩) ಗ್ರಾಂಟ ಮೆಡಿಕಲ್ ಕಾಲೇಜದಲ್ಲಿ ನಾನು ಮೂರು ವರುಷ ಕಳೆದದರಿಂದ ಇದೇ ವಿಷಯ ತೆಗೆದು ಕೊಳ್ಳುವದಕ್ಕೆ ನನಗೆ ಬಹಳ ಉಮೇದಿ. ಯಾವ ತರದ ಸಾರಾಯಿ ಕುಡಿದರೂ ಅದರಲ್ಲಿ ಅಮಲು ಹುಟ್ಟಿಸುವ ಶಕ್ತಿ ಇದ್ದೇ ಇರುವದರಿಂದ ವಿಷಕಾರಿ ಪದಾರ್ಥದಂತೆ ಶರೀರದ ಜೀವಂತ ಬೇರೆ ಅವಯವಗಳ ಮೇಲೆ ಅದರಿಂದ ಬಹಳ ಕೆಟ್ಟ ಪರಿಣಾಮವಾಗುತ್ತದೆ ಆ ಪದಾರ್ಥವು ಶರೀರದ ಪ್ರತಿ ಒಂದು ಭಾಗವನ್ನು ಸುಟ್ಟು ಬಿಡುತ್ತದೆ. ಸಾರಾಯಿ ಕುಡಿದರೆ ತಿಂದ ಅನ್ನವು ಪಚನವಾಗುವದಿಲ್ಲ, ಶೈತ್ಯವಾಗುವದೆ, ರಕ್ತ ವಾಹಿನಿಗಳು ನಿಂತು ಹೋಗುತ್ತವೆ, ಹಾಗೂ ಬುದ್ಧಿಯುಮಂದವಾಗಿ ಕಡೆಗೆ ಭ್ರಮಿಷ್ಟನಾಗುತ್ತಾನೆ. ಇವುಗಳಲ್ಲದೆ ಇನ್ನು ಎಷ್ಟೋ ವಿಕಾರಗಳುಂಟು. ಸಾರಾಯಿ ಕುಡಿದವನಿಗೆ ನಾಲಿಗೆ ಸುಟ್ಟು ಹಸಿವು ಚೆನ್ನಾಗಿ ಬಾರದಿರುವದರಿಂದ ಅನ್ನ ನುಂಗಲಿಕ್ಕಾಗುವದಿಲ್ಲ ಪಿಷ್ಟೀ ಇಲ್ಲ; ಕ್ರಮೇಣ ತಿನ್ನುವದರ ನಿರ್ಬಂಧವೂ ತಪ್ಪಿ ಹೋಗುತ್ತದೆ. ಮಿತಿಯಿಂದ ಸಾರಾಯಿ ಕುಡಿದರೆ ಅನ್ನ ಪಚನವಾಗುತ್ತದಾದರೂ ಅದೇ ಅಳತೆ ತಪ್ಪಿ ತುಸು ಹೆಚ್ಚಾದರೆ ಕರುಳು ಬೀಗುತ್ತದೆ. ಮೊದಗುವಕತನದಿಂದ ಕಾಲಿಜೆಯು ಕೆಡುತ್ತದೆ. ಅಂತಃಕರಣಕ್ಕಂತು ಬಹಳ ಕೆಟ್ಟ ಪರಿಣಾಮ ಪ್ರಾಪ್ತವಾಗುತ್ತದೆ. ಮಿದುಳಿನ ಒಳಗಿನ ನರಗಳು ಒಡೆದು ಹೋಗುತ್ತವೆ ಕಟ್ಟ ಕಡೆಗೆ ಅರ್ಧಾಂಗವಾಯುವಾಗಿ ಅವನು ಸಾಯುತ್ತಾನೆ. ಮದ್ಯಪಾನದ ಯೋಗದಿಂದ ಮನುಷ್ಯನ ರೂಪದಲ್ಲಿ ಅಜಗಜಾಂತರವಾಗಿ ಅವನ ಮನೋವೃತ್ತಿಯಾದರೂ ಬದಲಾಗುತ್ತದೆ ಶೀತ ಪ್ರದೇಶಗಳಲ್ಲಿ ಸುರಾಪಾನ ಮಾಡಲೇಬೇಕಾಗುತ್ತದೆಂದು ಇಲ್ಲಿಯ ಜನರಲ್ಲುಂಟಾಗಿರುವ ತಿಳುವಳಿಕೆಯು ತಪ್ಪಾಗಿರುತ್ತದೆ. ಯಾಕಂದರೆ ನಾನು ವಿಲಾಯತಿಗೆ ಹೋದಾಗ ಅಲ್ಲಿ ನಾನು ಸಾರಾಯಿ ಕುಡಿಯದೆ ಇದ್ದರೂ ನನ್ನ ದೇಹದ ಪ್ರಕೃತಿ ಯಂತು ಕೆಡಲೇ ಇಲ್ಲ, ಇಷ್ಟೇ ಅಲ್ಲ, ಒಂದೇ ವರುಷದೊಳಗೆ ನಾನು ಭಾರದಲ್ಲಿ ೭ ರಾತ್ಲು ಹೆಚ್ಚಾಗಿ ಬೆಳೆದೆ. ಹೀಗೆ ಕುಡಿಯದವರು ಅಲ್ಲಿ ಅನೇಕರಿದ್ದಾರೆ. ಈ ಪ್ರಕಾರ ಜೇಳ ರಾ. ಸಾ. ಗುಪ್ತ್ಯಯವರು ತಮ್ಮ ವ್ಯಾಖ್ಯಾನವನ್ನು ಮುಗಿಸಿದರು.—ಕ. ಸು.

ಬಡವರಿಗೆ ಸರಕಾರದ ಮನೆಗಳು.

ಪ್ರಭುತ್ವದ ದಾರ್ಢ್ಯಕ್ಕೆ ಪ್ರಜೆಗಳ ಉತ್ತಮ ದಶೆಯೇ ಕಾರಣಭೂತವಾದದ್ದು. ಯಾವ ಪ್ರಭುಗಳು ಈ ಅಂಶವನ್ನು ತಿಳಿದುಕೊಂಡು ಪ್ರಜೆಗಳ ಪುರೋಭಿವೃದ್ಧಿಯಲ್ಲಿ ಆಸಕ್ತರಾಗಿರುತ್ತಾರೋ ಅವರು ಶ್ರೇಷ್ಠಗೆ ಬರುವರು. ಪ್ರಜೆಗಳು ವಿದ್ಯಾವಂತರಾಗಿಯೂ, ನಾಗರಿಕರಾಗಿಯೂ ಕೃಷಿವಾಣಿಜ್ಯ. ಶಿಲ್ಪ ಮೊದಲಾದ ಕಾರ್ಯಗಳಲ್ಲಿ ನಿರತರಾಗಿಯೂ, ದೃಢಕಾಯವನ್ನೂ ಆರೋಗ್ಯವನ್ನೂ ಉಳ್ಳವರಾಗಿಯೂ ಇದ್ದರೆ ದೇಶದಲ್ಲಿ ಅವರ ಉದ್ಯೋಗಬಲದಿಂದ ಸಕಲ ಭೋಗ್ಯವಸ್ತುಗಳೂ ವಿಶೇಷವಾಗಿ ಉತ್ಪತ್ತಿಯಾಗುವವು. ಆ ಕಾರಣ ಮುಖ್ಯವಾಗಿ ಸರಕಾರಕ್ಕೆ ಬರತಕ್ಕ ಉತ್ಪನ್ನವೂ ಹೆಚ್ಚುವದು. ಸರಕಾರಕ್ಕೂ ಪ್ರಜೆಗಳಿಗೂ ಕ್ಷೇಮ ಉಂಟಾಗುವದಕ್ಕೆ ಪ್ರಜೆಗಳ ಆರೋಗ್ಯವೇ ಮುಖ್ಯ ಕಾರಣವಾಗಿರುವದು. ವಿಲಾಯತಿ ಮುನಿಸಿಪಾಲಿಟಿಗಳು ಈ ಅಂಶವನ್ನು ಯೋಚಿಸಿ ದೇಶದ ಶ್ರೇಷ್ಠಿಗೆ ಬರಬೇಕಾದರೆ ಪ್ರಜೆಗಳ ಆರೋಗ್ಯವೇ ನಿಮಿತ್ತ. ಜನಗಳಿಗೆ ಆರೋಗ್ಯಕರವಾದ ಮನೆಗಳು ಬಹಳ ಅವಶ್ಯಕವಾದದ್ದರಿಂದಲೂ, ಅಂಥ ಮನೆಗಳನ್ನು ಆರೋಗ್ಯ ಶಾಸ್ತ್ರಕ್ಕನುಗುಣವಾಗಿ ಸರಕಾರದವರು ಕಟ್ಟಿಸಿ ಅವುಗಳಿಗೆ ಕಡಿಮೆ ಬಾಡಿಗೆಯನ್ನು ತೆಗೆದುಕೊಂಡು ಉದ್ಯೋಗದಿಂದ ಜೀವಿಸತಕ್ಕ ಪ್ರಜೆಗಳಿಗೆ ವಾಸಕ್ಕಾಗಿ ಬಾಡಿಗೆಗೆ ಕೊಡಬೇಕೆಂಬದಾಗಿಯೂ ಏರ್ಪಾಡು ಮಾಡುವದಕ್ಕೆ ಪ್ರಯತ್ನ ನಡೆಯುತ್ತಲಿದೆ.

ಇದು ಬಹಳ ಅವಶ್ಯಕವಾದ ಕೆಲಸ. ಉದ್ಯೋಗದಿಂದ ಜೀವಿಸತಕ್ಕವರು ಈ ಪ್ರಪಂಚದ ಭಾರವನ್ನು ವಹಿಸಿ ಇರತಕ್ಕವರು. ಅವರ ಕ್ಷೇಮಾರ್ಥವಾಗಿ ಒಳ್ಳೇ ಪ್ರದೇಶದಲ್ಲಿ ದುಬಾರಿ ಖರ್ಚಿಲ್ಲದೆ ನಿರ್ಮಲವಾದ ಗಾಳಿ ನೀರಿಗೆ ಅನುಕೂಲವಾಗುವಂತೆ ಮನೆಗಳನ್ನು ಕಟ್ಟಿಸುವದು, ಸರಕಾರದವರಿಗೆ ಬಹಳ ಸುಲಭವಾದದ್ದು. ಇದಲ್ಲದೆ ಆ ಮನೆಗಳಿಗೆ ಬಾಡಿಗೆ ಸೊಪ್ಪಾಗಿ ದೊರೆಯುವದರಿಂದ ಈ ಪ್ರಯತ್ನವು ಬಹಳ [illegible]ವಾದದ್ದು ಕೂಡಾ ಆಗುವದು. ಬಹಳ ಚಾರಿ ತಾಪದ ಮನೆಗಳನ್ನು ಕಟ್ಟುವದಾದರೆ ವಿಶೇಷ ದ್ರವ್ಯವ್ಯಯ ಆಗುವದು. ಬಡ್ಡಿಯೂ ಕೂಡ ಗಿಟ್ಟುವದಿಲ್ಲ. ಸಾಮಾನ್ಯವಾದ ಹಂಚಿನ ಮನೆಗಳನ್ನು ಕಟ್ಟಿಸುವದು ಸರಕಾರದವರಿಗೆ ಬಹಳ ಸುಲಭ. ಸರಕಾರದ ಜಂಗಲುಗಳಿಂದ ಸಾಮಾನು ಸಿಕ್ಕುವವು. ಹೆಂಚು ಕೂಲಿ ಇವುಗಳಿಗೆ ಮಾತ್ರ ದ್ರವ್ಯವನ್ನು ವಿನಿಯೋಗಿಸಬೇಕಾಗುವದು. ಈ ಬಗ್ಗ್ಯಾಗಿ ಒಂದು ಇಲಾಖೆಯನ್ನು ನಿರ್ಮಿಸಿ ಇದರಲ್ಲಿ ಆಗುವ ಹುಟ್ಟುವಳಿಯಲ್ಲಿ ಕಮಿಷನನ್ನು ನೇಮಕ ಮಾಡಿದಾಗ್ಯೂ ಇದನ್ನು ನಿರ್ವಾಹ ಮಾಡುವದಕ್ಕೆ ಹೊಸ ಇಲಾಖೆ ಏರ್ಪಡಬಹುದು. ವಿಲಾಯತಿ ಮಹಾಜನಗಳು ಈ ಅಂಶವನ್ನು ಯೋಚಿಸುತ್ತಾ ಇರುವದು, ಈ ಭರತಖಂಡದ ಪ್ರಭುಗಳಿಗೆ ಮೇಲು ಪಜ್ಞೆಯಾಗಿ ಪರಿಣಮಿಸಿ ಯಿದೆ ಇದನ್ನು ಅನುಸರಿಸಿ ನಮ್ಮ ಪ್ರಭುಗಳು ಈ ರೀತಿಯಲ್ಲಿ ಪ್ರಜೆಗಳ ಹಿತ ಚಿಂತನೆಯನ್ನು ಮಾಡಿದರೆ ಉದ್ಯೋಗದಿಂದ ಜೀವನ ಮಾಡತಕ್ಕವರು ಆರೋಗ್ಯ ದೃಢಕಾಯರಾಗಿ ವಿಶೇಷ ಉತ್ಪತ್ತಿಯನ್ನು ಮಾಡಿ ದೇಶವನ್ನು ಆಬಾದು ಮಾಡತಕ್ಕದ್ದು ಮಾತ್ರವಲ್ಲದೆ ಪ್ರಭುಗಳಿಗೂ ಪ್ರಯೋಜನವನ್ನು ಕೀರ್ತಿಯನ್ನು ತರುವರು.—ವೃ. ಮ.

Bangalore.—Printed and published at the KARNATIC PRESS, No. 108, SRINIVASA MANDIRAM ROAD, PETTAH.—1890.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol XVII] BANGALORE—MONDAY, FEBRUARY 3, 1890 [No. 5.

ಸಂಪುಟ ೧೭.] ಬೆಂಗಳೂರು—ಸನ್ ೧೮೯೦ನೇ ಇಸವಿ ಫೆಬ್ರುವರಿ ೩ ನೇ ತಾರೀಖು ಸೋಮವಾರ. [ಸಂಚಿಕೆ ೫.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲೀಷು ಮತ್ತು ಕನ್ನಡಭಾಗಗಳಿಗೆ.

	ಮುಂಗಡವಾಗಿ	ಹಿಂದಿನಿಂದ
ಸಂವತ್ಸರಕ್ಕೆ	8—0—0	9—0—0
ಆರು ತಿಂಗಳಿಗೆ	9—0—0	10—8—0

ಇಂಗ್ಲೀಷು ಅಥವಾ ಕನ್ನಡಭಾಗಗಳಿಗೆ.

ಸಂವತ್ಸರಕ್ಕೆ	4—0—0	5—0—0
ಆರು ತಿಂಗಳಿಗೆ	5—0—0	6—0—0

[illegible]

ಪ್ರಕಟನೆಯ ರಿವಾಜು.

[illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs. 1-0-0

ವೈದ್ಯಸಾರ ಸಂಗ್ರಹ.

[illegible]

ಟಿ. ಬಿ. ... ಶೆಟ್ಟರು,

ಬೆಂಗಳೂರು, ... ಪೇಟೆ, 41ನೇ ನಂ ಮನೆ.

ADVERTISEMENTS.

ನೋಟೀಸ್

ಅದ್ಭುತವಾದ ಬಿಂದು ಔಷಧ

[illegible]

Sole Agents for India.

NAYLOR, SON, GRIMES & CO.,

Wholesale Depot, 5 Cato Street, Calcutta

[illegible]

[illegible] ... ಸ್ಯಾಗಂಡರೆ—ದಪ್ಪ ೧ ಕ್ಕೆ ... ಆಣೆ, ... ಆಣೆ, ... ದೇಶಾವಸ್ಥೆ ... ಉಂಡೆ ... ಕೊಡುವೆವು

ಕೃಷ್ಣಯ್ಯಂಗಾರಿ ... ಬಿಡಾರದ ... ಕೊಡಲ್ಪಡುವದು

ನೋಟೀಸ್.

ಇದರಿಂದ ನಮ್ಮ ಚಂದಾದಾರರಿಗೂ ಇತರರಿಗೂ ತಿಳಿಯಪಡಿಸುವದೇನಂದರೆ —

ಸನ್ ೧೮೮೯ನೇ ಇಸವಿ ಡಿಸೆಂಬರ್ ಆಖೈರಿನ ವರೆಗೆ ಚಂದಾ ಟಿ. ಕೃಷ್ಣಸ್ವಾಮಿ ... ಬರತಕ್ಕ ಚಂದಾದಾರರ ಹೆಸರುಗಳನ್ನು ಮಾತ್ರ ನಾವು ... ಈ ಹೊಸ ವರಿ ... ಪತ್ರಿಕೆ ಕಳುಹಿಸುತ್ತೇವೆ ಅವರ ಪೈಕಿ ಯಾರಿಗಾದರು ಪತ್ರಿಕೆಯ ಆಪೇಕ್ಷೆ ಇಲ್ಲದಿದ್ದರೆ ಅಂಥವರು ಕೂಡಲೆ ತಮ್ಮ ಅಭಿಪ್ರಾಯವನ್ನು ಮುದ್ರಣಾಲಯದ ಕಾರ್ಡಿನಲ್ಲಿ ನಮಗೆ ತಿಳಿಸಬಹುದು. ಪತ್ರಿಕೆಯು ಆವಶ್ಯಕತೆ ಇರುವವರು ಸಾಧ್ಯವಾದಷ್ಟು ತ್ವರೆಯಲ್ಲಿ ... ಹಣವನ್ನು ಕಳುಹಿಸಿ ... ಬೇಕೆಂದು ಕೋರುತ್ತೇವೆ.

ಬೆಂಗಳೂರು, ಫೆಬ್ರವರಿ ೩ ನೇ ೧೮೯೦ } ಟಿ. ಸಿ. ಶ್ರೀನಿವಾಸಾಚಾರ್ ಪ್ರೊಪ್ರೈಟರ್. ಕರ್ಣಾಟಕ ಪ್ರಕಾಶಿಕಾ.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY FEBRUARY 3, 1890

[illegible]

PLEA FOR JAILS

ಕಳೆದ ವಾರದ ಮೈಸೂರು ವೃತ್ತಾಂತ ... ಪತ್ರಿಕೆಯು, ಮೈಸೂರು ... ಸಂಬಂಧವಾದ ... ಮುಂಬೈ ... ಮನುಷ್ಯರನ್ನು ಕರೆಯಿಸಿದ ಬಗ್ಗೆ ಆಕ್ಷೇಪಿಸಿ ತಿಳಿಸುವದೇನು ವದ್ದೆ—

"ನಮ್ಮ ... ಈ ಮೈಸೂರಿನಲ್ಲಿ ... ನೋಡಲಾಗಿ ... ಈ ಸಂಸ್ಥಾನದ ನಿವಾಸಿಗಳು ... ಆವಶ್ಯ ... ಪ್ರತ್ಯಕ್ಷ ... ಜೋಗಲಾರದು. ... ಕಮಿಷನರುಗಳೂ, ಇಬ್ಬರು ಅಮಲ್ದಾರರುಗಳೂ, ಇಬ್ಬರು ಅಸಿಸ್ಟೆಂಟ್ ಕಮಿಷನರುಗಳೂ, ಇಬ್ಬರು ... ಮೇಜಿಸ್ಟ್ರೇಟರೂ, ಇಬ್ಬರು ಪೊಲೀಸ್ ಸೂಪರಿಂಟೆಂಡೆಂಟರೂ, ಇಬ್ಬರು ... ಇರುತ್ತಾರೆ. ಇವಲ್ಲದೆ ಜವಾನರವರೇ ... ಇರುತ್ತಾರೆ ... ರಾಜ್ಯ ... ನಮ್ಮ ಜವಾನರವರು ಸಾಧಾರಣವಾದವರು ಪೊಲೀಸ್ ಸೂಪರಿಂಟೆಂಡೆಂಟರ ಕೆಲಸದಲ್ಲಿ ಇದ್ದರೆ ಏನು ಅನರ್ಥಗಳು ಬರುವವೋ ಎಂದು ... ಬ್ಬ ಪಾರಸೀಯವರನ್ನು ಸೂಪರಿಂಟೆಂಡೆಂಟ್ ಕೆಲಸಕ್ಕೆ ಕರೆಸುತ್ತಾರೆಂದು ತಿಳಿಯ ಬರುತ್ತದೆ ನಮ್ಮ ಜವಾನರಿಗೆ ಈ ರೀತಿಯಲ್ಲಿ ಯೋಚನೆ ಪರಿಣಮಿಸಿರುವದೇನೂ ಆಶ್ಚರ್ಯವಲ್ಲ. ... ಅನ್ನು ... ಎಂದು ಗುಲ್ಲು ಮಾಡುತ್ತಾರೆ. ... ಪಾರಸೀಯವರನ್ನು ತಂದು ನೋಡೋಣ ಎಂದು ಪರೀಕ್ಷೆ ಮಾಡುತ್ತಾರೋ ಅಥವಾ ... ಸೂಪರಿಂಟೆಂಡೆಂಟರವರು ... ಎಂದು ಭಾವಿಸಿ ... ಸರ್ವಾಂತರ್ಯಾಮಿಗೇ ವೇದ್ಯ ... ಈ ಪಾರಸೀ ... ಏನು ಮಾಡಬಲ್ಲರು. ... ಇಲ್ಲಿನವರ ... ತಿಳಿಯಬೇಕಾಗಿರುವದಕ್ಕೆ ಇಲ್ಲಿನ ಭಾಷೆಯೋ ತಿಳಿಯದು ಮತ್ತು ಅವರು ದೇಶಾಂತರದವರು. ಇಲ್ಲಿ ವಾಸವಾಗಿದ್ದವರೂ ಕೂಡಾ ಅಲ್ಲ. ... ಎಷ್ಟು ಬುದ್ಧಿವಂತರಾಗಿದ್ದಾಗ್ಯೂ ನಮ್ಮ ಜವಾನರವರಿಗೆ ... ಅಸಂಭವ ... ಎಂದು ಒಂದು ಯೋಚನೆಯು ತೋರುತ್ತದೆ. ಇವಲ್ಲದೆ ... ಗಳನ್ನು ... ವಿಶೇಷವೇನೋ ತೋರುವದಿಲ್ಲ. ಹ್ಯಾಗಾದರೂ ಆಗಲಿ. ಈ ... "... ಇಲ್ಲ" ಎಂಬುವದನ್ನು ... ಈ ಮೈಸೂರು ಸಂಸ್ಥಾನದಲ್ಲಿ ದೇಶಾಭಿಮಾನ ಪ್ರಜಾಭಿಮಾನಗಳೊಡನೆ ಕೂಡಿರತಕ್ಕ ಈ ದೇಶದ ಹಿಂದೂ ... ಯೋಗ್ಯರಾದವರು ... ನಮ್ಮ ಜವಾನರವರ ಅಭಿಪ್ರಾಯದಲ್ಲಿ ಯಾರೂ ಇರಲಿಲ್ಲವೇನೋ! ಇಲ್ಲ, ... ಹೀಗೆ ಭಾವಿಸಿಕೊಂಡಿರಲಿ, ... ಈ ಅನ್ಯಾಯ್ಯವಾದ ... ಗಳನ್ನು ಮಾಡಿ ಎಷ್ಟು ಸಂತೋಷವನ್ನು ... ಸಂಬಂಧವಾದ ... ಕಷ್ಟ ... ಕಾಲವು ... ದಿವಸಗಳ ... ಅಷ್ಟು ದಿವಸವೂ ನಾವು ... ಆದಾಗ್ಯೂ ವಿದ್ಯಾವಂತರೆಲ್ಲರೂ ... ನಮ್ಮ ವಿಶೇಷ ವಿಶ್ವಾಸವನ್ನು ಸಂಪಾದಿಸುತ್ತಲೂ ... ದಿನದಿನಕ್ಕೆ ... ವೃದ್ಧಿಯಾಗುತ್ತಿದ್ದರೆ ... ನಾವು ... ದೃಷ್ಟಿಯಾಗುತ್ತಾ ... ನೀತಿವಾಕ್ಯವನ್ನು ಸ್ಮರಿಸಿಕೊಂಡು ನಮ್ಮ ... ನಮ್ಮನ್ನು ರಕ್ಷಿಸುವನು."

... ಪ್ರಜೆಗಳ ... ಅವಿರೋಧವಾಗಿ ರಾಜ್ಯಪಾಲನಮಾಡಬೇಕಾದವರಾಗಿರುತ್ತಾರೆ. ...

ಅರಸರ ಆಳ್ವಿಕೆಯ ಕ್ರಮವು ಅವರ ಪ್ರಜೆಗಳ ಪ್ರಯೋಜನಕ್ಕೆ ಯಾವ ಭಾಗದಲ್ಲಾದರೂ ಭಂಗ ಬರುವಂತೆ ಬಂದರೆ ಅದನ್ನು ಸರಿಪಡಿಸುವುದು ಅರಸರುಗಳ ಕರ್ತವ್ಯವೆಂದು ಅರಸರು ಹೇಳುವ ಬಾಧ್ಯತೆಯಂ ಪ್ರಜೆಗಳು ಪಡೆದಿರುತ್ತಾರೆ. ಇನ್ನು ಕೆಲವು ದೇಶಗಳಲ್ಲಿ ಅರಸರ ಅಧಿಕಾರವಂ ತಪ್ಪಿಸಿ ಅದಂ ಪ್ರಜೆಗಳು ತಾವೇ ವಹಿಸಿ ನಡೆಸುತಲಿರುವ ಅಂಶ ಪ್ರಸಿದ್ಧವಾಗಿಯೇ ಇದೆ. ಅರಸರು ರಾಜ್ಯ ಪರಿಪಾಲನವು ಮಾಡುವ ದೇಶಗಳಲ್ಲಿ ಪ್ರಜೆಗಳಿಂದ ಚುನಾಯಿಸಲ್ಪಡುವ ಪ್ರತಿನಿಧಿ ಸಭಾಪತಿ ವಿಮರ್ಶೆಗೆ ಒಳಪಟ್ಟು ಆಳಿಕೆಗಳು ನಡೆಸಲ್ಪಡುತಿವೆ. ಈ ಇಂಡ್ಯ ದೇಶದಲ್ಲಾದರೂ, ಅರಸರಿಂದ ಪ್ರಜೆಗಳಲ್ಲದ ಪ್ರಜೆಗಳಿಂದ ಅರಸರಲ್ಲವು. ಆದುದರಿಂದ ಅರಸರು ತಮ್ಮ ಇಷ್ಟಾನುಸಾರ ರಾಜ್ಯಕಾರ್ಯವು ನಡೆಸುವ ಸ್ವಾತಂತ್ರ್ಯವುಳ್ಳವರಾಗಿರುತ್ತಾರೆ. ಈ ದೇಶದಲ್ಲಿ ಪ್ರಾಯಶಃ ಎಲ್ಲ ಸಂಸ್ಥಾನಗಳಲ್ಲೂ ದಿವಾನ್ ಎಂಬ ಹೆಸರಿನಿಂದ ಒಬ್ಬ ದೊಡ್ಡ ಅಧಿಕಾರಿಯು ನೇಮಕರಿಸಲ್ಪಟ್ಟು ಅವರ ಮೂಲಕ ರಾಜ್ಯಕಾರ್ಯಗಳು ನಡೆಸಲ್ಪಡುತ ಬರುತಿವೆ. ಹೈದರಾಬಾದ್, ಬರೋಡ, ಮೈಸೂರ್, ತಿರುವಾಂಕೂರು ಮೊದಲಾದ ಕೆಲವು ದೊಡ್ಡ ಸಂಸ್ಥಾನಗಳೊಳು ರಾಜ್ಯಕಾರ್ಯ ನಿರ್ವಹಣೆಯಲ್ಲಿ ಅರಸರಿಗೆ ಅಥವಾ ದಿವಾನರಿಗೆ ಸಹಾಯಕವಾಗಿ ಕೌನ್ಸಿಲ್ ಎಂಬ ಮಂತ್ರಾಲೋಚಕ ಸಮಾಜಗಳು ಸಹ ಯೋಜಿಸಲ್ಪಟ್ಟಿರುತಿವೆ. ಈ ಸಂಸ್ಥಾನಗಳಲ್ಲಿ ದಿವಾನರುಗಳಿಂದ ನಡೆಸಲ್ಪಡುವ ಮುಖ್ಯವಾದ ಕಾರ್ಯಗಳೆಲ್ಲವು, ಮಂತ್ರಾಲೋಚಕ ಸಮಾಜದ ಸಮ್ಮತಿಗೆ ಒಳಪಟ್ಟು ಅರಸರಾದವರ ಮಂಜೂರಾತಿಯಂ ಪಡೆಯಬೇಕೆಂಬ ಪ್ರಜೆಗಳು ತಿಳಿಯಬೇಕಾಗಿದೆ, ಮತ್ತು ಅಪೇಕ್ಷಿಸದಿರುವದೂ ಹಾಗೆಯೇ. ಕೆಲವು ಸಂಸ್ಥಾನಗಳಲ್ಲಿ ರಾಜ್ಯಕಾರ್ಯಗಳ ನಿರ್ವಹಣೆಯ ಬಗ್ಗೆ ದಿವಾನರೂ ಅವರ ಸಹಾಯದ ಬಗ್ಗೆ ಕೌನ್ಸಿಲೂ ಯೋಜಿಸಲ್ಪಟ್ಟಿರುವ ದರಿಂದ ಎಲ್ಲವು ಕ್ರಮವಾಗಿ ನಡೆದು ಬರುತಲಿವೆ ಯೆಂಬ ಭರವಸೆಯ ಮೇಲೆ ಅರಸರಾದವರು ನಿರ್ಭರರಾಗಿರುವದೂ ಉಂಟು. ಅಂತಾ ಸಂದರ್ಭಗಳೊಳು ಆಳಿಕೆ ನಡೆಸತಕ್ಕವರಿಂದ ಯಾವ ಭಾಗದಲ್ಲಾದರೂ ತಮ್ಮ ಪ್ರಯೋಜನಗಳಿಗೆ ಭಂಗ ಉಂಟುಮಾಡಲ್ಪಟ್ಟಂತೆ ಪ್ರಜೆಗಳಿಗೆ ತೋರಿಬರುವ ಪಕ್ಷಕ್ಕೆ, ದಿವಾನರಿಗೂ ಕೌನ್ಸಿಲಿಗೂ ಮೇಲ್ಪಟ್ಟ ಅಧಿಕಾರಿಗಳಾಗಿರುವ ಅರಸರ ಸನ್ನಿಧಿಯಲ್ಲಿ, ತಮ್ಮ ವಿಷಯದೊಳು ನಡೆಸಲ್ಪಟ್ಟ ಅಕ್ರಮಗಳಂ ಉಚಿತ ರೀತಿಯಿಂದ ಅರಿಕೆ ಮಾಡಿಕೊಳ್ಳುವ ಸ್ವಾತಂತ್ರ್ಯವು ಪ್ರಜೆಗಳು ಪಡೆದಿರುತ್ತಾರೆ. ಅಂತಾ ಉಚಿತ ಮಾರ್ಗವನ್ನುಪೇಕ್ಷಿಸಿ, ತಮ್ಮ ಪ್ರಯೋಜನಾಭಿವೃದ್ಧಿಗೆ ಸಂಸ್ಥಾನದ ದಿವಾನರವರು ಭಂಜಕರೆಂದು ಹೋರೆಯಿಡುವಂತೆ ಅರಸರೊಬ್ಬರಿರುವ ದೇಶದ ಪ್ರಜೆಗಳ ಕಾರ್ಯವಾಗಿ ತೋರುವದಿಲ್ಲವು.

THE LATE MR ROBERT KNIGHT.

ಕಲ್ಕತ್ತೆಯೊಳು ಬಹುಕಾಲದ ಮೊದಲು ಪ್ರಕಟಿಸಲ್ಪಡುತ ಬರುವ ಸ್ಟೇಟ್ಸ್‌ಮನ್ ಯೆಂಬ ಪತ್ರಿಕೆಯೂ, ಅದರ ಎಡಿಟರಾಗಿದ್ದ ಮಿ. ರಾಬರ್ಟ್ ನೈಟ್ ಎಂಬವರ ಲೇಖನ ಶಕ್ತಿಯೂ ಪ್ರಸಿದ್ಧವಿರುವುಗಳಾಗಿವೆಯಷ್ಟೆ. ಸದರೀ ಲೇಖಕರವರು ಕಳೆದ ವಾರದಲ್ಲಿ ಕಾಲಗತಿಯನ್ನೈದಿದರೆಂಬ ವೃತ್ತಾಂತವು ತಿಳಿಸಲಿಕ್ಕೆ ನಾವು ಬಹಳ ದುಃಖಿಸುತ್ತೇವೆ. ಈ ದೊಡ್ಡ ಮನುಷ್ಯರು ಇಂಡ್ಯಾ ದೇಶಕ್ಕೆ ಬಂದಮೇಲೆ ಸ್ವಲ್ಪಕಾಲದ ವರಿವಿಗೆ ಮೈಸೂರು ಪ್ರಾಂತದೊಳಿದ್ದು ತರುವಾಯ ಮುಂಬೈಗೆ ಹೋಗಿ ಕಾಲಕ್ರಮೇಣ ಮುಂಬೈ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಎಡಿಟರ್ ಅ ಧಿಕಾರ್ಯಾಗಿ ಯೋಜಿಸಲ್ಪಟ್ಟರು. ಆ ಕಾಲದಲ್ಲಿ ಮಿ. ರಾಬರ್ಟ್ ನೈಟ್ ಯವರು ಪತ್ರಿಕಾಲೇಖನ ಕಾರ್ಯದೊಳು ವ್ಯಕ್ತಪಡಿಸಿದ ವಿದ್ವತ್ತೆ ಮುಖ್ಯವೇ ಟೈಮ್ಸ್ ಪತ್ರಿಕೆ ಅದ್ಯಾಪಿ ಪಡೆದಿರುವ ಪ್ರಶಸ್ತಿಗೆ ಕಾರಣವಾಗಿರುತಿವೆ. ಕೆಲವು ಕಾಲದಮೇಲೆ ಈ ದೊಡ್ಡ ಮನುಷ್ಯರು ಕಲ್ಕತ್ತೆಗೆ ಹೋಗಿ ಸ್ಟೇಟ್ಸ್‌ಮನ್ ಎಂಬ ಪತ್ರಿಕೆಯಂ ಪ್ರಾರಂಭಿಸಿ, ಫ್ರೆಂಡ್ ಆಫ್ ಇಂಡಿಯಾ ಎಂಬ ಪತ್ರಿಕೆಯಂ ಕೊಂಡುಕೊಂಡು ಸದರೀ ಯೆರಡು ಪತ್ರಿಕೆಗಳಂ ಒಂದಾಗಿ ಸೇರಿಸಿ ನಡೆಸುತಬಂದರು. ರಾಜ್ಯದ ಸಗಡೀಯಾತ್ ತಗಳಿಕದ ವಿಷಯದಲ್ಲಿ ಮಿ|| ನೈಟ್‌ಯವರು ತಮ್ಮ ಪತ್ರಿಕಾಮೂಲಕ ಆಗಿಂದಾಗ್ಯೆ ವ್ಯಕ್ತಗೊಳಿಸುತಬಂದ ಅಭಿಪ್ರಾಯಗಳಂ ಅನುಮೋದಿಸಿ, ಆ ಕಾಲದಲ್ಲಿ ವೈಸ್‌ರಾಯ್‌ಯವರಾಗಿದ್ದ ಲಾರ್ಡ್ ನಾರ್ಥ್‌ಬ್ರೂಕ್ ಸಾಹೇಬರವರು ಬಹಳ ಸಂತುಷ್ಟರಾಗಿ, ಫಿನಾನ್ಷಿಯಲ್ ಇಲಾಖೆಯಲ್ಲಿ ಮಿ|| ನೈಟ್‌ಯವರಿಗೆ ಅಂಡರ್ ಸೆಕ್ರೆಟರಿ ಕೆಲಸವಂ ಕೊಡುವದಾಗಿ ತಿಳಿಸಿದರು. ಮಿ|| ನೈಟ್‌ಯವರು ತಮ್ಮ ಎಡಿಟರ್ ಕೆಲಸಕ್ಕೆ ಬಾಧಕವಿಲ್ಲದಂತೆ ಅದಂ ಅಂಗೀಕರಿಸಿ ಸರ್ಕಾರ ನೌಕರಿಯನ್ನು ಕೇವಲ ಕೃತಜ್ಞತಾಭಕ್ತಿಗಳೊಡನೆ ನಡೆಸುತ, ಆಯಾಸಂದರ್ಭಗಳೊಳು ಗವರ್ನಮೆಂಟಿನ ಆಳಿಕೆಯಲ್ಲಿ ಗುಣದೋಷ ವಿಮರ್ಶೆ ಮಾಡುವ ಸ್ವಾತಂತ್ರ್ಯವನ್ನುಪೇಕ್ಷಿಸದೆ ತಮ್ಮ ಕರ್ತವ್ಯವಂ ಉಚಿತವಾಗಿಯೇ ನಡೆಸುತಬಂದರು. ಲಾರ್ಡ್ ನಾರ್ಥ್‌ಬ್ರೂಕ್ ಸಾಹೇಬರವರು ಕೆಲವು ಕಾಲದ ವರಿವಿಗೆ ಮಿ|| ನೈಟ್‌ಯವರ ನಡತೆಗೆ ಒಳಪಡುತಲಿದ್ದಾಗ್ಯೂ ಕಡೆಗೆ ಕೋಪಗೊಂಡು ಎಡಿಟರ್ ಕೆಲಸವನ್ನಾದರೂ ಸರ್ಕಾರ ನೌಕರಿಯನ್ನಾದರು ಬಿಟ್ಟುಬಿಡಬೇಕೆಂದು ಮಿ|| ನೈಟ್‌ಯವರಿಗೆ ತಿಳಿಸಲು ಮಿ|| ನೈಟ್‌ಯವರು ಸರ್ಕಾರ ನೌಕರಿಗೆ ರಾಜೀನಾಮೆ ಕೊಟ್ಟು ಪತ್ರಿಕಾಲೇಖನ ಸ್ವಾತಂತ್ರ್ಯವಂ ಸಂಪೂರ್ಣವಾಗಿ ಕೈಗೊಂಡರು. ಮಿ ನೈಟ್‌ಯವರು ಪತ್ರಿಕಾಲೇಖನ ಕಾರ್ಯವಂ ಬಿಟ್ಟು, ತಾವು ಪಡೆದಿದ್ದ ವೈದುಷ್ಯದ ಪ್ರಯೋಜನವನ್ನು ಗವರ್ನಮೆಂಟಿನವರಿಗೆ ಉಂಟುಮಾಡಿರುವವರಾದರೆ, ಫಿನಾನ್ಷಿಯಲ್ ಇಲಾಖೆಯಲ್ಲಿ ಪ್ರಶಸ್ತಿಯಂ ಪಡೆದಿರುವರಲ್ಲದೆ ಫಿನಾನ್ಷಿಯಲ್ ಮಿನಿಸ್ಟರಾಗಿ ಸಹ ಪುರಸ್ಕರಿಸಲ್ಪಟ್ಟಿರುವರು. ಮುಖ್ಯಗಳಾದ ಅವರ ಯೋಗ್ಯತೆಗಳೆಲ್ಲವು ಪತ್ರಿಕಾಲೇಖನ ಕಾರ್ಯದಲ್ಲೇ ವಿನಿಯೋಗಿಸಲ್ಪಟ್ಟವು. ಇವರು ಯಾವಾಗಲೂ ಇಂಡ್ಯಾದೇಶದ ನೇಟಿವ್‌ಗಳ ಅಪೇಕ್ಷಿತಾಂಶಗಳಿಗನುಮೋದಕರಾಗಿರುತಲಿದ್ದರು. ಮಿ|| ರಾಬರ್ಟ್ ನೈಟ್‌ಯವರು, ವಾರ್ಧಕ್ಯ ದಶೆಯಲ್ಲುಂಟಾಗುವ ರೋಗಗಳ್ಯಾವವೂ ಇಲ್ಲದೆ ಮೃತಪಡುವದಕ್ಕೆ ಕೆಲವು ದಿನಗಳ ಹಿಂದಿನ ವರಿವಿಗೆ ಸಾಮಾನ್ಯವಾಗಿ ಮನುಷ್ಯರಿಗೆ ಬಾಲ್ಯದಶೆಯಲ್ಲುಂಟಾಗಿರುವ ಚಾಕಚಕ್ಯವಂ ವ್ಯಕ್ತಗೊಳಿಸುತಲಿದ್ದರು. ಇವರಿಗೆ ಮರಣ ಕಾಲದಲ್ಲಿ ವಯಸ್ಸು ಅರವತ್ತನಾಲ್ಕು ವರ್ಷಗಳು. ಇಂತವರ ಮರಣಕ್ಕಾಗಿ ಯಷ್ಟು ದುಃಖಿಸಿದರೂ ಅಲ್ಪವಾಗಿಯೇ ಇರುವದು.

THE MAHUNT OF TIRUPATI CONVICTED.

ತಿರುಪತಿ ಮಹಂತರ ಮೇಲೆ ತರಲ್ಪಟ್ಟ ಕ್ರಿಮಿನಲ್ ಮೊಕದ್ದಮೆಯ ಸ್ವರೂಪವನ್ನೂ ಅದು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಪ್ರಥಮ ವಿಚಾರಣೆಯಾಗಿ ಉತ್ತರ ಆರ್ಕಾಡು ಡಿಸ್ಟ್ರಿಕ್ಟ್ ಸೆಷನ್ಸ್ ಕೋರ್ಟ್ ವಿಚಾರಣೆಗೆ ಕಮಿಟ್ ಆಗಿ ಅಲ್ಲಿ ನಡೆಯುತ ಬಂದ ವಿಚಾರಣೆಯ ಕ್ರಮವನ್ನೂ ಹಿಂದಿನ ಪತ್ರಿಕೆಗಳ ಮೂಲಕ ತಿಳಿಸಿ ಇರುತ್ತೇವೆಯಷ್ಟೆ. ಸದರೀ ಮೊಕದ್ದಮೆಯಲ್ಲಿ ಉಭಯ ವಾದಿಗಳ ವಿಚಾರಣೆ ಪೂರೈಸಿಯಾಗಿ ಕಳೆದ ತಿಂಗಳ ೩೦ ನೇ ತಾರೀಖಿನಲ್ಲಿ ಉಭಯ ಕಕ್ಷಿಯವರ ವಕೀಲರುಗಳು ತಮ್ಮ ತಮ್ಮ ಕಕ್ಷಿಗಳ ಪೋಷಕಗಳಾದ ಅಂಶಗಳಂ ಕುರಿತ ವಾದಗಳಂ ಪೂರೈಸಿದಮೇಲೆ ಜಡ್ಜಿಯವರು, ಈ ಮೊಕದ್ದಮೆಯಲ್ಲಿ ನಿಯಮಿಸಲ್ಪಟ್ಟಿದ್ದ ಅಸೆಸರ್ಸ್ ಎಂಬ ಇಬ್ಬರು ಪಂಚಾಯತರ ಅಭಿಪ್ರಾಯವಂ ಕೇಳಿದಾಗ ಅವರಿಬ್ಬರೂ ಏಕಮತ್ಯದೊಡನೆ ಅಪರಾಧಿಯ ಮೇಲೆ ತಕ್ಸೀರ್ ರುಜುವಾತಾಗಲಿಲ್ಲವೆಂದು ಹೇಳಲು, ಜಡ್ಜಿಯವರು ಭಿನ್ನಾಭಿಪ್ರಾಯವುಳ್ಳವರಾಗಿ, ಅಪರಾಧಿಯಾದ ಮಹಂತರ ವನ್ನಾಧಿಕರಿಸಿ ಕೆಲವು ಮಾತುಗಳಂ ಹೇಳಿದ ಮೇಲೆ ಅವರಿಗೆ ಮೂರು ಸಂವತ್ಸರಗಳ ಕಠಿಣ ಶಿಕ್ಷೆಯ ಸಹಾ ವಿಧಿಸಿರುವದಾಗಿ ತಿಳಿಸಿ, ಅಪರಾಧಿಯ ತರಫ್ ಲಾಯರ ಪ್ರಾರ್ಥನೆಯ ಮೇಲೆ ಸದರೀ ದಂಡನೆಯ ಶಿಕ್ಷೆ ಮೊದಲು ಒಂದು ತಿಂಗಳ ಕಾಲ ಸಾಮಾನ್ಯ ಶಿಕ್ಷೆ ಅನುಭವಿಸತಕ್ಕದ್ದೆಂದು ವಿಧಿಸಿ ೩೧ ನೇ ತಾರೀಖಿನಲ್ಲಿ ಜೈಲಿಗೆ ಕಳುಹಿಸಿದರು. ಈ ಮೊಕದ್ದಮೆಯಲ್ಲಿ ಕೋರ್ಟಿನ ಫೈಸಲನ್ನು ತಿಳಿಯುವ ಉತ್ಕಟೇಚ್ಛೆಯಿಂದ ಸಾವಿರಾರುಜನರು ಕೋರ್ಟಿನಬಳಿ ಗುಂಪು ಗೂಡಿದ್ದರು. ಜಡ್ಜಿಯವರ ಫೈಸಲಂ ಕೇಳಿದಕೂಡಲೆ ಕೆಲವರು ಎದೆ ಎದೆ ಬಡಕೊಂಡು, ಕೆಲವರು ರೋದನಕ್ಕೆ ಪ್ರಾರಂಭಿಸಿದರು. ಕಕ್ಷಿ ಪಕ್ಷದವರು ಸಂತುಷ್ಟ ಮನಸ್ಕರಾಗಿ ಹೊರಬಿದ್ದರು, ಎಂದು ಪಕ್ಕದ ನಮ್ಮ ಪತ್ರಿಕೆಯ ಬಾತಮಿದಾರರು ಬರೆಯುತ್ತಾರೆ. ಈ ಮೊಕದ್ದಮೆಯಲ್ಲಿ ನಡೆಯಬಹುದಾದ ಅಪೀಲ್ ವಿಚಾರಣೆಯ ಕ್ರಮವನ್ನೂ ಅದರ ಫಲಿತಾಂಶವನ್ನೂ ಆಯಾ ಕಾಲಗಳಲ್ಲಿ ತಿಳಿಸುವೆವು.

Occasional Notes.
ನೈಮಿತ್ತಿಕ ವಿಷಯನ್ಯಾಸ.

A proposal.—ಇಂಡ್ಯಾ ದೇಶದೊಳಗಣ ಸಣ್ಣ ರೈಲು ಮಾರ್ಗಗಳನ್ನೆಲ್ಲ ದೊಡ್ಡದಾಗಿ ಮಾಡಬೇಕೆಂದು ಇಂಡ್ಯಾಸ್ಟೇಟ್ ಸೆಕ್ರೆಟರಿಯವರ ಮಂತ್ರಾಲೋಚಕ ಸಮಾಜದವರಿಗೆ ಅಭಿಪ್ರಾಯ ನ್ಯುಂಟಾಗಿರುವಂತೆಯೂ, ತದ್ಬಗ್ಗೆ ಇಪ್ಪತ್ತು ಕೋಟಿ ರೂಪಾಯಿಗಳ ಖರ್ಚು ಅಂದಾಜ ಮಾಡಲ್ಪಟ್ಟಿರುವಂತೆಯೂ ಒಂದಾನೊಂದು ಪತ್ರಿಕೆಯ ಲಂಡನ್ ಬಾತಮಿದಾರರು ಬರೆದಿರುತ್ತಾರೆ.

Parsees as Volunteers.—ಇದರ ಬಗ್ಗೆ ಬನ ಮಿಲಿಟರಿ ಹುಕುಂ ಘಾಮಿಸಲ್ಪಟ್ಟಿರುತಿದೇನಂದರೆ—ಪ್ರಸೆಡು ವಾಲಂಟಿಯರ್ ರೈಫಲ್ ಕೋರ್‌ನಲ್ಲಿ ಪಾರ್ಸೀ ಜಾತಿಯವರನ್ನು ಸೇರಿಸಿಕೊಳ್ಳುವನಾವು ಮಂಜೂರ್ಮಾಡಲ್ಪಟ್ಟಿರುತಿದೆ, ಪರಂತು ಹಾಗೆ ಸೇರತಕ್ಕವರಿಗೆ ಇಂಗ್ಲಿಷ್ ಭಾಷಾ ಪರಿಚಯವು ಚೆನ್ನಾಗಿರಬೇಕು, ಸನದೀ ಸೈನ್ಯದ ದುಸ್ತು ಹಾಕಿಕೊಳ್ಳಬೇಕು, ಅದರ ಕೆಲಸಗಳನ್ನು ಮಾಡುವದಕ್ಕೆ ಸಮ್ಮತಿಸಬೇಕು, ಯೆಂಬ ಷರತ್ತುಗಳ ಸಹಿ ಮಂಜೂರ್ಮಾಡಲ್ಪಟ್ಟಿರುತಿದೆ.

The Burdwan Raj.—ಭರದ್ವಾನ್ ಸಂಸ್ಥಾನದ ಸ್ವೀಕಾರ ವಿಷಯವನ್ನು ಕುರಿತ ತಕರಾರುಗಳೆಲ್ಲವು ವ್ಯವಸ್ಥೆಯಾಗಿ ಪ್ರಕೃತ ಮಹಾರಾಜರವರ ತಾಯಿಯವರಿಗೆ ೧೩,೦೦,೦೦೦ ರೂಪಾಯಿಗಳು ಕೊಡತಕ್ಕದ್ದೆಂದು ನಿರ್ಣಯವಾಗಿರುವದರಿಂದ ಸಂಸ್ಥಾನದ ಮೂಲಧನವನ್ನು ಪಯೋಗಿಸಿಕೊಳ್ಳುವದಕ್ಕೆ ಹುಕುಂ ಕೊಡಬೇಕೆಂದು ಕೋರ್ಟ್ ಆಫ್ ವಾರ್ಡ್ಸ್, ಅಂದರೆ ಸಂಸ್ಥಾನ ಕಾರ್ಯನಿರ್ವಾಹಕ ಕಮಿಟಿಯವರು ಗವರ್ನಮೆಂಟಿಗೆ ಬರೆದುಕೊಂಡಿರುತ್ತಾರೆ.

Bumper crops in Burma.—ಈಸಲ ಬರ್ಮಾದೇಶದೊಳು ಬತ್ತ ಬೆಳೆಯುವ ಹತ್ತು ಡಿಸ್ಟ್ರಿಕ್ಟ್‌ಗಳ ಪೈಕಿ ಯೆರಡರಲ್ಲಿ ಪೂರಾಗದ ಫಸಲೂ, ಒಂದರಲ್ಲಿ ಸಾಮಾನ್ಯವೇಳೆ ಫಸಲೂ, ನಾಲ್ಕು ಡಿಸ್ಟ್ರಿಕ್ಟ್‌ಗಳಲ್ಲಿ ಮಾಮೂಲಿನ ಫಸಲೂ, ಯೆರಡು ಡಿಸ್ಟ್ರಿಕ್ಟ್‌ಗಳಲ್ಲಿ ಹೆಚ್ಚಿನ ಫಸಲೂ, ಒಂದು ಡಿಸ್ಟ್ರಿಕ್ಟಿನಲ್ಲಿ ಮಾಮೂಲಿಗೂ ಮೂರು ವೀಸದ ಫಸಲೂ ಆಗಿರುವದಲ್ಲದೆ ಅದರ ಪೈಕಿ ೧೩,೬೦,೦೦೦ ಟನ್‌ಗಳ ಬತ್ತ ಅನ್ಯರಾಜ್ಯಗಳಿಗೆ ರಫ್ತಾಗುವದಕ್ಕೆ ಸಿದ್ಧವಾಗಿರುತಿದೆಯೆಂದು ತಿಳಿಯ ಬರುತಿದೆ.

Christian defamation of Hinduism.—ತಾಳಾ ಪತ್ರ್ಯದಲ್ಲಿರುವ ಯ [illegible] ಸರಿಗಳು ಹಿಂದೂಮತವು ಭ್ರಷ್ಟವಾದದ್ದೆಂದು ಸಣ್ಣ ಪುಸ್ತಕವು ಪ್ರಕಟಿಸಿ ತನ್ಮೂಲಕ ಹಿಂದೂ ಜನರಿಗೆ ಕ್ಷೋಭೆಯನ್ನುಂಟುಮಾಡಿದ್ದರಿಂದ, ಇವರೆಲ್ಲರು ಸೇರಿ, ಮಿಷನೆರಿಗಳ ದುಷ್ಕೃತ್ಯ ಗಳಂ ತಪ್ಪಿಸಬೇಕೆಂದು ಸ್ಥಳಾಧಿಕಾರಿಗಳಿಗೆ ಅರ್ಜಿ ಬರೆದುಕೊಳ್ಳಬೇಕೆಂದು ಯೋಚಿಸುತಲಿರುವಂತೆ ತಿಳಿಯಬರುತಿದೆ. ಈ ವಿಷಯದಲ್ಲಿ ಅಧಿಕಾರಿಗಳು ಮಾಡುವ ನ್ಯಾಯ ವಿಮರ್ಶೆಯಂ ಕೇವಲ ಆತುರದೊಡನೆ ನಿರೀಕ್ಷಿಸುತಲಿರುವೆವು.

The recent F. A. Examination.—ಕಳೆದ ಡಿಸಂಬರ್ ತಿಂಗಳಲ್ಲಿ ನಡೆದ ಮದರಾಸ್ ಯೂನಿವರಸಿಟಿ ಎಫ್. ಎ. ಪರೀಕ್ಷೆಗೆ ಹೋಗಿದ್ದ ೨,೦೫೮ ಮಂದಿ ಉಮೇದವಾರರ ಪೈಕಿ ಒಂದನೇ ತರಗತಿಯಲ್ಲಿ ೩೬ ಮಂದಿ, ಎರಡನೇ ತರಗತಿಯಲ್ಲಿ ೩೦೩ ಮಂದಿ, ಜಾಮ್ಲ್ಲಾ ೩೩೯ ಮಂದಿ ತೇರ್ಗಡೆಯಾಗಿರುತ್ತಾರೆ. ಈ ಪರೀಕ್ಷೆಯ ಬಗ್ಗೆ ಉಮೇದವಾರರು ಕೊಟ್ಟ ಫೀಸ್, ೨೦,೫೮೦ ರೂಪಾಯಿಗಳು. ಪರೀಕ್ಷೆಯಲ್ಲಿ ತೇರ್ಗಡೆಯಾದ ೩೩೯ಮಂದಿ ಉಮೇದವಾರರು ಕೊಟ್ಟ ೧೬,೯೫೦ ರೂಪಾಯಿಗಳು ಜಾತಾ ಉಳಿದ ೧೬,೯೦೦ ರೂಪಾಯಿಗಳು ಸಮುದ್ರದಲ್ಲಿ ಹಾಕಿದಂತೆ ಆಯಿತು. ಪರೀಕ್ಷಕರಾಗಿ ಯೋಜಿಸಲ್ಪಡುವವರು ಸಹ ಒಂದುವಿಧ ಲಾಭಕರವಾದ ಕಸಬುದಾರರೇ ಹೇಳಬೇಕಾಗಿದೆ.

LOCAL AND PROVINCIAL NEWS.
ಸ್ಥಳದೇಶವರ್ತಮಾನಗಳು ಮತ್ತು ಪ್ರಾಂತ್ಯವೃತ್ತಾಂತಗಳು.

The recent F. A. Examination.—ಈಸಲ ಈ ದೇಶದಿಂದ ಮದರಾಸ್ ಯೂನಿವರಸಿಟಿ ಎಫ್ ಎ ಪರೀಕ್ಷೆಗೆ ಹೋಗಿದ್ದ ೧೦೩ ಮಂದಿ ಉಮೇದವಾರರ ಪೈಕಿ ಮೂವರು ಒಂದನೇ ತರಗತಿಯಲ್ಲೂ ಇಪ್ಪತ್ತೈದು ಮಂದಿ ದ್ವಿತೀಯ ತರಗತಿಯಲ್ಲೂ ತೇರ್ಗಡೆಯಾಗಿರುತ್ತಾರೆ.

The Resident.—ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಸರ್ ಆಲಿವರ್ ಸೇಂಟ್‌ಜಾನ್‌ರವರು, ತಮ್ಮ ಸಂಚಾರದಿಂದ ಕಳೆದ ಮಂಗಳವಾರದ ದಿನ ಸಾಯಂಕಾಲ ವಾಪಸ್ ಬಂದರು. ಆ ಬಗ್ಗೆ ಇಲ್ಲಿನ ಅಧಿಕಾರಿಗಳು ಮೊದಲಾದವರು ಸ್ಟೇಷನ್‌ನಲ್ಲಿ ಹಾಜರಿದ್ದು ರೆಸಿಡೆಂಟರವರನ್ನು ಉಚಿತ ಮರ್ಯಾದೆಯೊಡನೆ ಬರಮಾಡಿಕೊಂಡರು.

A lecture.—ಕಳೆದ ಶನಿವಾರದ ದಿನ ಸಾಯಂಕಾಲ ಸುಮಾರು ೬ ಘಂಟೆಗೆ ಇಲ್ಲಿನ ಉತ್ತರ ಪ್ರದೇಶದ ಪಾಠಶಾಲೆಯ ಹಾಲಿನಲ್ಲಿ, ಮದರಾಸ್ ಹೈಕೋರ್ಟ್ ಬ್ಯಾರಿಸ್ಟರಾದ ಮಿ|| ಇ. ನಾರ್ಟನ್‌ಯವರು, ನ್ಯಾಷನಲ್ ಕಾಂಗ್ರೆಸ್ ಸಭಾಜನರ ಉದ್ದೇಶ ಪ್ರಯತ್ನಗಳನ್ನೂ ಅವಕ್ಕೆ ವಿರೋಧಿಗಳಾಗಿರುವವರು ಮಾಡುವ ದೂಷಣೆ ತಿರಸ್ಕಾರಗಳನ್ನೂ ಕುರಿತು ವಿಸ್ತಾರವಾಗಿ ಉಪನ್ಯಾಸ ಮಾಡಿದರು. ಇದನ್ನು ಕೇಳುವದಕ್ಕಾಗಿ ಬಹು ಮಂದಿ ಗುಂಪು ಗೂಡಿದ್ದರು.

A wedding in high life.—ಈ ಸಂಸ್ಥಾನದ ದಿವಾನರಾದ ಮಿ|| ಕೆ. ಶೇಷಾದ್ರಿ ಅಯ್ಯರ್ ಸಿ. ಎಸ್. ಐ. ಯವರ ಕುಮಾರಿಯನ್ನು ಮೈಸೂರಲ್ಲಿರುವ ಮಿ|| ಅಂಬ್ಳೆ ಅಣ್ಣಯ್ಯ ಪಂಡಿತರ ಪುತ್ರರಿಗೆ ಕೊಟ್ಟು ನಿನ್ನೆಯ ದಿನ ಈ ಪಟ್ಟಣದಲ್ಲಿ ದಿವಾನರವರ ಸ್ವಗೃಹದೊಳು ವಿವಾಹ ಮಹೋತ್ಸವವು ಅತಿ ವಿಜೃಂಭಣೆಯೊಡನೆ ನಡೆಯಿತು. ಈ ಬಗ್ಗೆ ಪೂರ್ವಭಾವಿಯಾಗಿ ಇಲ್ಲಿನ ಲೌಕಿಕ ವೈದಿಕ ಮಂಡಲಿಗಳೂ ಪೇಟೆ ಲಷ್ಕರ್ ವಗೈರೆ ಸ್ಥಳ ನಿವಾಸಿಗಳಾದ ವರ್ತಕರು ವಗೈರೇರೆಲ್ಲರೂ ಕರೆಯಿಸಲ್ಪಟ್ಟರು. ಬ್ರಾಹ್ಮಣಮಂಡಲಿಗೆ ವಿಶೇಷವಾಗಿ ದಕ್ಷಿಣ ಫಲತಾಂಬೂಲಗಳೂ ಮೃಷ್ಟಾನ್ನ ಭೋಜನವೂ ನಡೆದವು. ಮುಂದೆ ನಡೆಯುವ ಇತರ ವಿಶೇಷಗಳನ್ನು ಮುಂದಿನ ವಾರದಲ್ಲಿ ಪ್ರಕಟಿಸುವೆವು.

The Market Show.—ಕಳೆದ ತಿಂಗಳ ೨೮ ತಾರೀಖ್ ಮಂಗಳ ವಾರದ ದಿನ, ಹಿಂದಿನ ಪತ್ರಿಕೆಯ ಮೂಲಕ ತಿಳಿಸಿ ಇದ್ದಂತೆ, ಈ ಪಟ್ಟಣದ ರು ಮಾರ್ಕೆಟ್ ನಲ್ಲಿ ಬಹುವಿಧ ಶಾಕ ಫಲಪುಷ್ಪ ಪ್ರದರ್ಶನ ಕಾರ್ಯವು ನಡೆಯಿತು. ಈ ಬಗ್ಗೆ ಈ ಸಂಸ್ಥಾನದ ದಿವಾನರವರು, ಕೌನ್ಸಿಲರ್

ಷ್ಟ ಚಂಚಲರಾಯರವರು, ಚೀಫ್‌ಕೋರ್ಟಿನ ಜ ಡ್ಜಿಯವರಾದ ಮ. ತಂಬುಶೆಟ್ಟರವರು, ಡಿಸ್ಟ್ರಿಕ್ಟ್ ಜಡ್ಜ್ ಮ. ಕೃಷ್ಣಮೂರ್ತಿಯವ ರು ಮೊದಲಾದ ನೇಟಿವ್ ಅಧಿಕಾರಿಗಳೂ ಕೆಲವು ಯೂರೋಪಿಯನ್ ಅಧಿಕಾರಿಗಳೂ ಲೇಡಿಗ ಳೂ ಬಂದಿದ್ದರು. ಶ್ರೀಮನ್ಮಹಾರಾಜರವರು ಸ್ಕೂಲಿಗೆ ದಯಮಾಡಿ, ಮಾರ್ಕೆಟಿನಲ್ಲಿ ಪದಾರ್ಥಗಳ ಬಾಹುಳ್ಯ, ಔತ್ಕೃಷ್ಟ್ಯ ಮತ್ತು ಸಂವಿಭಾಗಗಳಂ ಕಟಾಕ್ಷಿಸಿ ಸಂತೋಷ ದಬಗ್ಗೆ ಯೋರ್ಪಟ್ಟಿದ್ದ ಕಮಿಟಿಯವರಿಂದ ಸನ್ಮಾನಿತರಾಗಿ ವಾಪಸು ದಯಮಾಡಿದಮೇಲೆ ಬಹು ಪದಾರ್ಥಗಳ ಯೋಗ್ಯತಾನುಸಾರ ಅಪ್ರ ಗಳು ತಂದಿದ್ದವರಿಗೆ ಬಹುಮಾನಗಳು ಕೊಡಲ್ಪಟ್ಟ ವು. ಈ ವಿಧವಾದ ತಮಾಷೆಯು ಕಳೆದ ಸಾರ್ ನ್ನಿ ನಿಂತು ಹೋದಬಗ್ಗೆ ಜನರು ಅಸಮಾಧಾನ ಗೊಂಡಿದ್ದರು.

A mysterious murder.—ಕಳೆದವಾರದೊ ಳು ಇಲ್ಲಿನ ಎಲಿಯಂಟ್ಸ್ ಬಾಗಿಲ ಹೊರಗಡೆಯಲ್ಲಿ ರುವ ಕಿಚ್ಚನ್ಗ ಸತ್ರದಲ್ಲಿ ವಿಚಿತ್ರವಾದ ಖೂನಿ ನಡೆಯಿತು, ಹ್ಯಾಗಂದರೆ,—ಒಂದು ದಿನ ಇಬ್ಬರು ಗಂಡಸು ಇಬ್ಬರು ಹೆಂಗಸರು ಸದರೀ ಸ ತ್ರದಲ್ಲಿ ಇಳಿದಿದ್ದರು. ಅವರು ತಾವು ಶ್ರೀನಿವಾ ಸಪುರದಿಂದ ಬಂದಂತೆ ಹೇಳುತಲಿದ್ದರು. ಒಂದೆ ರಡು ದಿನಗಳಮೇಲೆ ಇಬ್ಬರು ಹೆಂಗಸರ ಪೈಕಿ ಮುದುಕಿಯಾದವಳು ಮೊದಲು ಹೊರಟುಹೋ ದಳು. ತರುವಾಯ ಗಂಡಸುಗಳೂ ಎಳೆದ ವ್ಯ ಕೋಣೆಗೆ ಬೀಗ ಹಾಕಿಕೊಂಡು ಹೊರಟು ಹೋದರು. ಮಾರನೇ ಆ ದಿನಗಳಮೇಲೆ ಸದರೀ ಕೋಣೆಯಿಂದ ದುರ್ವಾಸನೆ ಬರುವದು ಕಂಡು ಕೋಣೆಯ ಬೀಗವ ಒಡೆದು ನೋಡುವ ಲ್ಲಿ ಒಬ್ಬ ಹೆಂಗಸನ್ನು ಕುತ್ತಿಗೆಯನ್ನು ತಿರಿಗ ಸಿ ಕೊಂದು ಹಾಕಿ ಮಲಗಿಸಿ ಮೇಲೆ ಹೊದ್ದಿಸಿ ದಿದ್ದದ್ದು ಕಂಡುಬಂತು. ಮೃತಪಟ್ಟ ಹೆಂಗ ಸು ಸುಮಾರು ೩೦ ವರ್ಷಗಳ ವಯಸ್ಸುಳ್ಳವ ಳು, ಬ್ರಾಹ್ಮಣಜಾತಿ. ಮೈಮೇಲೆ ಸುಮಾರು ೩೦೦ರೂಪಾಯಿಗಳು ಬಾಳುವಷ್ಟು ಒಡವೆಗಳು ಇದ್ದವು. ಈ ದುಷ್ಕೃತ್ಯ ನಡೆಸಿದವರ ಪ ತ್ತೆಯಲ್ಲಿ ಪೊಲೀಸಿನವರು ನಿರತರಾಗಿರುತ್ತಾರೆ.

Rumoured official changes.—ಈಚೆ ಗೆ ಮರಳಿ ಯೋಗ್ಯವಿರುವ ಪ್ರವಾಸಕ್ಕೆ ಪ್ರಾರಂಭ ವಾಗುತ್ತಿರುವಂತೆ, ಮ. ಮೀನಾಕ್ಷಿ ಅಯ್ಯರ ವರು ಒಂದುನೂರು ರೂಪಾಯಿಗಳ ಹೆಚ್ಚಿನ ಮೇಲೆ ಈಗಿನ ಅವರ ಕೆಲಸದೊಂದಿಗೆ ರಿಜಿಸ್ಟ್ರೇ ಷನ್ ಸೆಕ್ರೆಟರಿಯಾಗಿ ನೇಮಕರಾದ್ದಲ್ಲದ್ದು, ಸ ಪ್ಲೈಸ್ ಜನರಲ್ ಕೆಲಸವು ಮಾಸಿಕ ೪೦೦ ರೂಪಾಯಿಗಳು ಸಂಬಳ ಮ. ಕುಂಡಿಲ್ಲಾವರೆ ರಾವ್ ಗಾಗಿಯಾರವರಿಗೆ ಕೊಡಲ್ಪಡುವದೆಂಬದು ಈ ಯೋಜನೆಗಳಿಗೆ ಪ್ರಾರಂಭಿಕ ಅನುಮತಿ ದೊರೆತಿಲ್ಲವೆಂದು ಸಿದ ಪ್ರಸ್ತಾಪವಲ್ಲದೆ. ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ಮ. ರಿಕೆಟ್ಸ್ ಯವರಿಗೆ ಹಿ ಡಿಕೊಡಲ್ಪಟ್ಟಿದ್ದ ನೌಕರಿಯು ನಾಯಿಡುಯು ಈ ವಾರ್ತೆ ಅವರ್ತನಿಗೆ ಸ್ವತಂತ್ರವಾಗುವದ ರಿಂದ ಅವರು ಕೆಲಸದಿಂದ ನಿವೃತ್ತರಾಗಿ ಅವರ ಕೆಲಸಕ್ಕೆ ತಿನವೆಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿಕ ಮಿಷನರಾದ ಮ|| ವಿ. ಪಿ. ಮಾಧವರಾಯರವ ರು ನಿಯಮಿಸಲ್ಪಡುವರೆಂತಲೂ, ಜವಾನರ ಅಂ ಡರ್ ಸೆಕ್ರೆಟರಿ ಕೆಲಸಕ್ಕೆ ಇಲ್ಲಿನ ಸಿವ ಜಡ್ಜಿ ಯಾದ ಮ|| ಅನಂತಶಾಮಿ ರಾಯರವರು ನೇಮ ಕ ಮಾಡಲ್ಪಟ್ಟು ಅವರ ಕೆಲಸಕ್ಕೆ ಈಗ ಅಂಡರ್ ಸೆಕ್ರೆಟರಿ ಕೆಲಸವನ್ನು ಬದಲಿ ನೋಡುತಲಿರು ವ ಮ|| ಕೃಷ್ಣರಾಯರವರು ನಿಯಮಿಸಲ್ಪಡು ವರೆಂತಲೂ ಪ್ರವಾದ ಹುಟ್ಟಿದೆ. ಇದ್ದು ಎ ಷ್ಟರ ಮಟ್ಟಿಗೆ ಯಥಾರ್ಥವೋ ನಾವರಿಯೆವು.

NEWS LETTER.

ವೃತ್ತಾಂತಪತ್ರಿಕೆ.

ಸೊಗರ, ತಾ|| ೨೯ನೇ ಜನವರಿ.—ಈ ಊರು ಶಿವಪ್ಪನಾಯ ಮಹಾರಾಜನ್ನು ನುಜು ಹತಾಯವ ರವರ ನಾಲ್ಕೈದು ವರುಷಗಳ ಕುಮಾರರಿಗೆ ಸುಮಾರು ತಿಂಗಳುವರೆ ಕೆಳಗೆ ಜ್ವರಕ್ಕೆ ಪ್ರಾ ರಂಭವಾಗಿ ೧೬ ದಿನಸದ ಪರಿವಿಗೂ ಬಿಡದೆ ದಿನೇ ದಿನೇ ವೃದ್ಧಿಯಾಗುತ ಬಂದು ಸದರೀ ಬಾ ಲಕನನ್ನು ಎಲ್ಲರೂ ಕೈ ಬಿಟ್ಟಿದ್ದರು. ಸುಮಾ ರು ೧೧-೧೨ ದಿನಸಗಳಿಂದಲೂ ಗುಣ ಮುಖಕ್ಕೆ ಪ್ರಾರಂಭವಾಗಿದೆ. ಈಗ ತಕ್ಕಮಟ್ಟಿಗೆ ಆರೂ ಗ್ಯ ಹುಷಾರಾಗಿರುವದನ್ನು ನೋಡಿ ಎಲ್ಲರೂ ಸಂ ತೋಷಪಡುತ್ತೇವೆ. ಈ ಸಂತೋಷಕ್ಕಾಗಿ ಅಮಲ್ದಾರರವರು ನಿನ್ನೆ ಅಂದರೆ, ತಾ|| ೨೨ನೇ ಬೆಳಗ್ಗೆ ಊರಿನಲ್ಲಿ ವೈದಿಕ ಬ್ರಾಹ್ಮಣರಾದ ಕೆಲ ವರಿಗೆ ಭೋಜನವನ್ನೂ, ರಾತ್ರಿ ಈ ಊರು ಗಣಪತಿ ದೇವರಿಗೆ ತಾಳ ಮೇಳ ಕರಡೀವಾದ್ಯ ಬಾಣ ಬಿರುಸಿನೊಂದಿಗೆ ಊರಲ್ಲೆಲ್ಲ ಉತ್ಸವವ ನ್ನೂ ಮಾಡಿಸಿ, ಸುಮಾರು ರಾತ್ರಿ ೧೨ ಘಂಟೆಗೆ ದೇವರು ದೇವಸ್ಥಾನಕ್ಕೆ ಬಿಜಮಾಡಿದರು. ೧೦೮ ತೆಂಗಿನಕಾಯಿಗಳನ್ನು ಸಂಚಕಂಚಾಯವನ್ನು ದೇ ವರಿಗೆ ನೈವೇದ್ಯವನ್ನು ಮಾಡಿಸಿ ಸನಾರು ರಾತ್ರಿ ೧ ಘಂಟೆಗೆ ಎಲ್ಲರೂ ಅವರವರ ಮನೆಗಳಿಗೆ ಹೊ ರಟು ಹೋದರು. ದೇವರ ಹಿಂದೆ ಮ|| ರಾ|| ಈ ಊರು ಮುನ್ಸಿಫರವರು, ಮ|| ರಾ|| ಅಮಲ್ದಾ ರರು, ಮ|| ರಾ|| ಓವರ್ಸಿಯರ್ ಶ್ರೀಪತಿರಾಯ ರವರುಮೊದಲಾದ ಈ ಊರು ಅಧಿಕಾರಿಗಳೂ ಸಾಹುಕಾರರುಗಳೂ ಹೋಗಿದ್ದರು. ಮ|| ರಾ|| ಅಮಲ್ದಾರರವರಿಗೆ ಈರೀತಿ ದೇವರಲ್ಲಿ ಭಕ್ತಿ ಇರುವದಲ್ಲದೆ ಬ್ರಾಹ್ಮಣರಲ್ಲಿಯೂ ಭಕ್ತಿ ವಿಶ್ವಾ ಸಗಳಿರುವದಕ್ಕೂ, ತಾಲ್ಲೂಕ್ ಜನಗಳಲ್ಲಿ ದಯೆ ಯುಳ್ಳವರಾಗಿರುವದಕ್ಕೂ ಇವರನ್ನು ಎಲ್ಲರೂ ಕೊಂಡಾಡಬೇಕಾಗಿದೆ.

ಅಪ್ಪೇಕರ ರಸಗುಂದ ಸೋಡಬರಿಗೋಸ್ಕರವೂ, ವಿವಾಹಗರವರಿಗೋಸ್ಕರವೂ ಜನಗಳು ಚಂದಾ ಮೂಲಕ ಹಾಕಿಸಿದ್ದ ಛತ್ರವೂ ಅದಕ್ಕೆ ಅಲಂ ಕರಿಸಿದ ಎನ್ಕೆ ಪಗ್ಗರೆ ಸಾಮಾನುಗಳೂ ಈ ತಾ ಲ್ಲೂಕಿನಲ್ಲಿರುವ ಪೇಷ್ಕಾರರವರ ಯಿವರಿಗೆ ಪ ರಾಧೀನವಾಗಲ್ಪಟ್ಟವು. ಬಡಜನರಿಗೆ ಅನುಕೂಲವಾದ ಮಗಳಿವುಟ್ಟು ಬಿದಿರವರಲ್ಲೇನೂ ಅಡ್ಡಿಇಲ್ಲವು. ಈ ಛತ್ರದ ಮೇಲ್ವಿಚಾರಣೆ ಕೆಲಸಕ್ಕೋಸ್ಕರ ಜೊತೆ ನೇಮಿಸಿದ್ದ ಒಬ್ಬರಿಬ್ಬರು ಇಲ್ಲದೆಹೋಗಿ ಸುಮಾರು ನಾಲ್ಕಾರು ತಿಂಗಳಿಂದ ದಿವಾಣವೇ ಜೋಪಾನ ಮಾಡುತ್ತಿರುವದರಿಂದ ಈ ಬಗ್ಗೆ ನ್ನು ಇಟ್ಟುಕೊಂಡು ಬಾಕೀ ನೌಕರರನ್ನೂ ಇತರರನ್ನೂ ಹೀಯಾಳಿಸುವದು ನೋಡಿದರೆ ಅ ಕ್ಕತ್ತಗ್ಗ ಪಡಬೇಕಾಗಿದೆ. ತಾಜಾದಾರರಿಗೆ ಯ ದ್ದೇದಾರರಾದವರು ಯಾವಕೆಲಸವನ್ನು ಹೇಳ ದಾಗ್ಯೂ ವಹಿಸತಕ್ಕದ್ದು ಲೋಕವಾಡಿಕೆಯು ಇದಾಗಿ ಇನ್ನುಮೇಲಾದರೂ ಉಪಿಸಲಾರದೆ ಹೋಗಲಾರದೆಂದು ನಂಬುತ್ತೇನೆ.

ಪೋಲೀಸ್ ಇನ್ಸ್ಪೆಕ್ಟರ್ ಜನರಲವರಾದ ಮ|| ರಿಕೆಟ್ಸ್ ಸಾಹೇಬರವರು ತಾರೀಖ್ ೨೯-೩೦ಕ್ಕೆ ಶ್ರೀಗನಲ್ಲಿ ಮೊಕ್ಕಾಂ ಮಾಡುವದಾಗಿಯೂ, ೩೧ಕ್ಕೆ ತಾಳಗುಪ್ಪ ಯಿಂತಲೂ, ಫೆಬ್ರುವರಿ ಗು ರೈಯಲ್ಲಿ ಈ ಊರಿಗೆ ದಯಮಾಡುವದಾಗಿಯೂ ವರ್ತಮಾನವಿದೆ. ಇವರನ್ನು ಬರಮಾಡಿಕೊಳ್ಳು ವ ಉದ್ದೇಶ್ಯ ಇಲ್ಲಿನ ಅಮಲ್ದಾರರವರೂ ಪೋಲೀ ಸ್ ಇನ್ಸ್ಪೆಕ್ಟರವರೂ ಈದಿನ ಬೆಳಗ್ಗೆ ತಾಳ ಗುಪ್ಪೆಗೆ ದಯಮಾಡಿದರು.

TELEGRAMS.

ತಂತಿ ವೃತ್ತಾಂತಗಳು.

ಲಂಡರ್, ೨೬ನೇ ಜನವರಿ.—ಮ. ಬ್ರಾಡ್ಲಾ ಯವರು ಸ್ವದೇಶವು ಸೇರಿದರು. ಅವರು ಬಾ ರಿನಸೂರಿ ಗೆಜೆಟ್ ಪತ್ರಿಕೆಯ ಬಾತ್ಮಿದಾರನ ಸಂಗಡ ಮಾತನಾಡಿದ ಸಂದರ್ಭದೊಳು, ಇಂಡ್ಯಾ ದೇಶದ ಪ್ರಯಾಣದಿಂದ ತಮಗೆ ಬಹಳ ಆರೋ ಗ್ಯ ಪ್ರಾಪ್ತಿಯಾಯಿತು, ಪರಂತು ತನ್ನ ಕೆಲವು ಅಲ್ಪ ಬಾಧೆಗಳು ನಿವೃತ್ತಿಯಾಗಲಿಲ್ಲವೆಂತಲೂ, ತಾವು ಮುಂಬೈಗೆ ಹೋಗಿದ್ದ ಕಾಲದೊಳು ತ ಮ್ಮನ್ನು ಅಲ್ಲಿನವರು ವಿಶೇಷ ಗೌರವ ಪುರಸ್ಸ ರಗಳೊಡನೆ ಬರಮಾಡಿಕೊಂಡರೆಂತಲೂ, ಕಾ ಗ್ರೆಸ್ ಸಮಾಜಕ್ಕೆ ಐದು ದೇಶಗಳಿಂದ ನಾನಾ ಜಾತಿಯವರು ಪ್ರತಿನಿಧಿಗಳಾಗಿ ಬಂದಿದ್ದದನ್ನು ನೋಡಲಾಗಿ ಇಂಗ್ಲಂಡ್ ದೇಶದ ಜನರಿಗೆ ಇಂ ಡ್ಯಾ ದೇಶದ ಮತ್ತು ಅದರ ಜನರ ಸ್ವರೂಪ ಜ್ಞಾನವಿಲ್ಲವೆಂಬ ತಾತ ತಮಗೆ ಸ್ಪಷ್ಟವಾಗಿ ತಿಳಿಯಬಂದಂತೆಯೂ ಪ್ರಸ್ತಾಪಿಸಿದರು.

ಲಂಡರ್, ೨೬ನೇ ಜನವರಿ.—ಮುಂಬೈ ಗವ ರ್ನರಾಗಿ ಈಗ ನೇಮಕರಾಗಲ್ಪಟ್ಟಿರುವ ಲಾರ್ಡ್ ಹಾರಿಸ್ ಸಾಹೇಬರವರಿಗೆ ಫೆಬ್ರುವರಿ ೨೦ನೇ ತಾರೀಖಿನೊಳು ಸಾರ್ಥೆಂಬ್ರೂಕ್ ಕ್ಲಬ್ ಎಂಬ ಸ ಭಾದವರು ಔತಣ ಮಾಡಿಕೊಡುವರಾಗಿರುತ್ತಾರೆ. ಈ ಸಂದರ್ಭಕ್ಕೆ ಲಾರ್ಡ್ ಸಾಲಿಸ್ಬರಿ ಮತ್ತು ಲಾರ್ಡ್ ಕ್ರಾಸ್ ಸಾಹೇಬರುಗಳು ಬರುವರೆಂದು ನಿ ರೀಕ್ಷಿಸಲ್ಪಟ್ಟಿರುತ್ತಾರೆ.

ಲಂಡರ್, ೨೬ನೇ ಜನವರಿ.—ಇಂಗ್ಲಂಡ್ ದೇಶದಲ್ಲಿ ಕೇವಲ ಆಶ್ಚರ್ಯಕರವಾದ ಬಿರುಗಾ ಳಿಯು ಬೀಸುತಲಿದೆ. ಪ್ರವಾಹಗಳ ದೆಸೆಯಿಂ ದ ಸೇತುವೆಗಳು ಒಡೆದು ಹೋದವಲ್ಲದೆ ನಾವೆ ರಾರು ಕುರಿಗಳೂ ದನಗಳೂ ಪ್ರವಾಹದಲ್ಲಿ ಕೊ ಚ್ಚಿಕೊಂಡು ಹೋದವು. ಸಮುದ್ರ ತೀರದೊ ಳು ದೊಡ್ಡ ಅಲೆಗಳು ದಡದಮೇಲೆ ಹರಿದು ಬ ಹುವಿಧ ನಷ್ಟಗಳುಂಟಾಗುತಲಿವೆ. ಇದರಂತೆ ಐರ್ಲಾಂಡ್ ದ್ವೀಪದ ದಕ್ಷಿಣ ಭಾಗದಲ್ಲಿ ಸಹ ಬಿ ರುಗಾಳಿ ಮಳೆಯ ದೆಸೆಯಿಂದಲೂ, ಶಾನನ್ ಎಂ ಬ ನದಿಯ ಪ್ರವಾಹದ ದೆಸೆಯಿಂದಲೂ ಬಹಳ ನ ಷ್ಟ ಪ್ರಾಪ್ತವಾಯಿತು.

ಲಂಡರ್, ೨೬ನೇ ಜನವರಿ.—ಬಾಕ್ಸೈಮಂಡಿ ಮೆಂಬರಾದ ಮ. ಬಿಡಲ್ಫ್ ಎಂಬವರು ತಮ್ಮ ಭಾರ್ಯೆಯೊಡನೆ ರೆವ್ಸಜ್ ಎಂಬ ಪ್ರದೇಶದೊಳು ನಡೆದ ರಾಜಕೀಯ ಸಭೆಗೆ ಹೋಗಿದ್ದು ವಾಪಸ್ ಬರುವ ಕಾಲದಲ್ಲಿ ಕೆಲವರು ಗುಂಪು ಗೂಡಿಕೊಂ ಡು ಬಂದು ಅವರ ಗಾಡಿಯಮೇಲೆ ಬಿದ್ದು ನಡೆ ಸಿದ ಜುಲುಮಿನಲ್ಲಿ ಅವರ ಭಾರ್ಯೆಯವರ ಮುಖದ ಲ್ಲಿ ಘಾಯಗಳು ತಗಲಿದವು.

ಲಂಡರ್, ೨೭ನೇ ಜನವರಿ.—ಆಫ್ರಿಕಾದೇಶ ದೊಳಗಣ ಪೋರ್ಚುಗೀಸರ ಸಂಸ್ಥಾನಕ್ಕೆ ಸೇರಿ ದ ದೆಲಗೋವಾ, ಮಾರ್ಕಸ್ ಮೊದಲಾದ ಪಟ್ಟಣಗಳಲ್ಲಿ ವಾಸಮಾಡುತಲಿರುವ ಬ್ರಿಟಿಷ್ ಜನಗ ಳನ್ನು ಅಲ್ಲಿನವರು ಬಹಳವಾಗಿ ಅವಮಾನಪಡಿ ಸುತಲಿದಾರೆ.

ಹೈದರಾಬಾದ್, ೨೬ನೇ ಜನವರಿ.—ನವಾಬ್ ಮುನೀರುದ್ದೌಲ್ಲೆ ಯವರು ಈದಿನ ಬೆಳಗ್ಗೆ ಕಾಲಗತಿಯನ್ನೈದಿದರು. ಈದಿನ ನಿಯಾಮತ್ ಲ ದರ್ಬಾರ್ ಮಾಡಲ್ಪಡುವದು.

ಅಲಹಾಬಾದ್, ೨೬ನೇ ಜನವರಿ.—ಸ್ಟೇಟ್ ಸೆಕ್ರೆಟರಿಯವರು ಮ. ಕ್ರಾಫೋರ್ಡ್ ಯವರ ಭಾರ್ಯೆಗೆ ಸಾಲೀಯಾನಾ ೩೦೦ ಪೌಂಡುಗಳೂ, ಅವರ ಮಗಳಿಗೆ ಸಾಲೀಯಾನಾ ೫೦ ಪೌಂಡುಗ ಳೂ ಜೀವನಾರ್ಥ ಕೊಡತಕ್ಕದ್ದೆಂದು ಹುಕುಂ ಮಾಡಿರುತ್ತಾರೆ.

ಕಲ್ಕತ್ತಾ, ೨೬ನೇ ಜನವರಿ.—ಕಲ್ಕತ್ತಾ ಸ್ಟೇಟ್ಸ್‌ಮನ್ ಪತ್ರಿಕೆಯ ಎಡಿಟರಾಗಿದ್ದ ಮ. ರಾಬರ್ಟ್ ನೈಟ್ ಯವರು ಈದಿನ ಮೃತಪಟ್ಟರು.

ಕಲ್ಕತ್ತಾ, ೨೭ನೇ ಜನವರಿ.—ಈದಿನ ಸಾ ಯಂಕಾಲ ಮ. ರಾಬರ್ಟ್ ನೈಟ್ ಯವರ ಉತ್ತ ರಕ್ರಿಯೆಗಳು ನಡೆದವು. ಆ ಬಗ್ಗೆ ಇಲ್ಲಿನ ವೃ ತ್ತಾಂತ ಪತ್ರಿಕಾ ರೀಟಕರನೇಕರು ಬಂದಿದ್ದರು. ಸ್ಟೇಟ್ಸ್‌ಮನ್ ಪತ್ರಿಕೆಯ ಆಫೀಸು ಶಾಪಾರ ನೆಯು ಈದಿನ ಮುಚ್ಚಲ್ಪಟ್ಟಿತು.

ಹೈದರಾಬಾದ್, ೨೭ನೇ ಜನವರಿ.—ಈದಿನ ಫೇಮಿಷ್ ಮಾಡಲ್ಪಟ್ಟ ಸರ್ಕಾರೀ ಗೆಜೆಟಿನಲ್ಲಿ ನವಾಬ್ ಮುನೀರುದ್ದೌಲ್ಲೆ ಯವರು ಕಾಲಗತಿ ಯನ್ನೈದಿದ ವಿಷಯದಲ್ಲಿ ಸಂಸ್ಥಾನದ ಪ್ರಧಾನ ಮಂತ್ರಿಯವರು ಬಹಳ ವ್ಯಸನ ಪಡುವದಲ್ಲದೆ ಗೌರವಸ್ಥರಾಗಿಯೂ, ಸಮರ್ಥರಾಗಿಯೂ ಇದ್ದ ಅಧಿಕಾರರು ಗತಿಸಿಹೋದದ್ದು ಸರ್ಕಾರಕ್ಕೆ ಬ ಹಳ ನಷ್ಟವೆಂತಲೂ ನಮೂದ್ ಮಾಡಲ್ಪಟ್ಟಿ ರುತಿದೆ.

ಲಂಡರ್, ೨೮ನೇ ಜನವರಿ.—ಇಂಗ್ಲಂಡ್ ಸರ್ಕಾರಕ್ಕೂ ಪೋರ್ಚುಗೀಸ್ ಸರ್ಕಾರಕ್ಕೂ ಈಗ ಏರ್ಪಡಿದ್ದಾಗಿರುವ ಮನಸ್ತಾಪವನ್ನು ವ್ಯವ ಸ್ಥೆಯ ಬಗ್ಗೆ ಪಂಚಾಯತರಿಗೆ ಒಪ್ಪಿಸತಕ್ಕ ದ್ದೆಂದು ಇತರ ಸಂಸ್ಥಾನಾಧಿಪತಿಗಳನೇಕರು ಬ್ರಿಟಿಷ್ ಸರ್ಕಾರಕ್ಕೆ ತಿಳಿಸಿ ದರುತ್ತಾರೆ.

ಲಂಡರ್, ೨೮ನೇ ಜನವರಿ.—ಲಾರ್ಡ್ ಹಾ ರ್ಟಿಂಗ್‌ಟನ್ ಸಾಹೇಬರು ಕುಳಿವಾತದ ಬಿಡಿ ಕ್ಕೆ ರೋಗ ವಿಷ್ಣುವಿಕ್ಕೆ ಪ್ರಯಾಣ ಹೊರಡುತ್ತಾರೆ.

ಲಂಡರ್, ೨೮ನೇ ಜನವರಿ.—ಪ್ರಸಿದ್ಧ ವೈ ದ್ಯರಾದ ಸರ್ ವಿಲ್ಲಿಯಂಗಲ್ ಎಂಬವರಿಗೆ ಪಕ್ಷವಾ ಯು ರೋಗ ತಗಲಿ ಯಿದೆ.

ಲಂಡರ್, ೨೯ನೇ ಜನವರಿ.—ದರ್ಭಂಗಾದೇ ಶದ ಅರಸರಾದ ಮಹಾ ರಾಜರು, ಸರ್. ಎಡ್ವಿನ್ ಆರ್ನಾಲ್ಡ್ ಎಂಬವರು ಒಪ್ಪಿಸಿದ ಪ್ರಭಿಕ ಪುಸ್ತಕವನ್ನು ಅಂಗೀಕರಿಸಿದ ಬಗ್ಗೆ ಅಲ್ಲಿನ ಪ್ರಜೆಗಳು ಅರಮನೆಯ ಮುಂಮುಖದ ನಿಂತು ಕೂಗಿಕೊಂಡು ಗುಲ್ಲು ಮಾಡಿದರು. ಈ ವಿಧವಾದ ಗಲಾಟೆಗಳು ಕೂಡಲೇ ಅಡಗಿಸಲ್ಪಟ್ಟವು. ಪಟ ರೇಜನರ ಸಂಖ್ಯೆಯು ಯಾರದರದ್ದು ಹೆಚ್ಚಿಸ ಲ್ಪಟ್ಟಿತು.

ಲಂಡರ್, ೧ನೇ ಫೆಬ್ರುವರಿ.—ಲಾರ್ಡ್ ಹಾರ್ಟಿಂಗ್ ಟನ್‌ಯವರು ರೋಗಪೀಡಿತರಾದ ದೆಸೆಯಿಂದ ದೇಶಸಂ ಚಾರಕ್ಕೆ ಈಗ ಅಸಮರ್ಥರಾಗಿರುತ್ತಾರೆ.

ಲಂಡರ್, ೧ನೇ ಫೆಬ್ರುವರಿ.—ಸರ್ ಪ್ರಡ್ಯಾರಿಕ್ ವ್ಯಾಪ್ಸಿಯವರು ಟಹೆರಾ ವೃತ್ತಾಂತದೊಳು ಕಲ ಹ ಪ್ರಾಪ್ತವಾಯಿತೆಂದು ಮುಟ್ಟಿದ ವಾರ್ತೆಯು ಸು ಳ್ಳೆಂದು ತಿಳಿಸುತ್ತಾರೆ.

ಕಲ್ಕತ್ತಾ, ೩೧ನೇ ಜನವರಿ.—ನಿನ್ನೆಯದಿನ ರಾತ್ರಿ ನಾಲ್ವರು ಥರುಗಿಯವರು ಸೇರಿ ಇಲಿಗಳ ಬೇಟೆಯಬಗ್ಗೆ ಹೊರಗೆ ಹೋಗಿ ರಸ್ತೆಯಲ್ಲಿ ಗಲಾಟೆ ನಡೆಸುತಲಿರುವಲ್ಲಿ ಪಾರ್‌ಪಕಾಕ್ ಬಂದ ಜನಗಳ ಮೇಲೆ ಬಿದ್ದು ಜುಲುಂ ನಡೆಸಿದ್ದಲ್ಲದೆ ಒಂದು ಗಾಡಿಯನ್ನು ಮುರಿದುಬಿಟ್ಟು ಆ ಗಾಡಿ ಯವನನ್ನು ಹೊಡೆದರು. ಬೀಟವನಮೇಲಿದ್ದ ಪೋಲೀಸ್ ಜವಾನನು ಬರುವಲ್ಲಿ ಅವನನ್ನು ಚೆನ್ನಾಗಿ ಹೊಡೆದು ಹುಣ್ಣುಮಾಡಿದರು. ಪೊಲೀಸ್ ಕಾ ಕ್ಯಾಪಿಸಿಹರು ಹೋಗಿ ಕೂಗಿದರು...

...ಮುಸ್ತಫಾ ಹೊತ್ತು ಮುಪ್ಪಿನ ದುಸೆಯೊಳು ನುಗ್ಗುವದಕ್ಕೆ ಪ್ರಯತ್ನಪಡುವಲ್ಲಿ ಜಹರಿಯಾ ನು ತಡೆಯಲು ಸದರೀ ನಾಲ್ವರ ಪೈಕಿ ಕಿಂಗ್ ಯೆಂಬವನು ತನ್ನ ಕೈಯಲಿದ್ದ ಗುಪ್ತಿ ಯೆಂಬ ಕತ್ತಿಯನ್ನು ಸೆಳೆದುಕೊಂಡು ಜಹರಿಯಾದ ಎ ದೆಯಮೇಲೆ ತಿವಿಯಲು ಅವನು ಮೃತಪಟ್ಟನು. ಕೂಡಲೆ ಸದರೀ ಹುಂಟರು ಪರಾರಿಯಾದರು, ಪರಂತು ಪತ್ತೆಗಿದ್ದುದರಿಂದ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ರಸ್ತೆಯರು ಹಾಜರ್ಮಾಡಲ್ಪಟ್ಟು ನಡೆದ ವಿಚಾರಣೆಯಲ್ಲಿ ಜುಲುಂ ನಡೆಸಿದ ಬಗ್ಗೆ ಮೂವರು ಥೀ ಇದಮು ಕೂ ರೂಪಾಯಿಗಳು ಜುರ್ಮಾನೆ ವಿಧಿಸಲ್ಪಟ್ಟಿರು. ಖೂನಿ ನಡೆಸಿದ ಕಿಂಗ್ ಎಂಬವನು ಮಾತ್ರ ಇನ್ನು ವಶಪತ್ತುಯು ಲ್ಲಿರುತ್ತಾನೆ.

ಪೆಶಾವರ್, ೩೦ನೇ ಜನವರಿ.—ದುಹಾರಾಷ್ಟ್ರೇ ಯವರ ಪುತ್ರರಾದ ಪ್ರಿನ್ಸ್ ಆಲ್ಬರ್ಟ್ ವಿಕ್ಟರ ವರು ಈದಿನ ಪ್ರಾತಃಕಾಲ ಪೆಶಾವರಿನಿಂದ ಹೊ ರಟು ಜಂರೂಡಿಗೆ ಹೋದರು. ಅಲ್ಲಿ ಮೇಜರ್ ಅಸ್ಲಾಂಖಾನಯವರು ಮತ್ತುಖೈಬರ್‌ಘಾಟಿಯ ಸೇನೆಯ ಪೈಕಿ ೫೦೦ ಮಂದಿಯೂ ಹಾಜರಿದ್ದು ಪ್ರಿನ್ಸರವರನ್ನು ಬರಮಾಡಿಕೊಂಡರು. ಪ್ರಿನ್ಸ ರವರು ಅಸ್ಲಾಂಖಾನರಿಗೂ ಬೇರೆ ಕೆಲವರಿಗೂ ಸರ್ಕಾರದಿಂದ ಹುಕುಂ ಆಗಿದ್ದ ಬಹುಮಾನ ದಿರಿಸು ಗಳನ್ನು ಕೊಟ್ಟದಮೇಲೆ ತಮ್ಮ ಪರಿವಾರದೊಡ ನೆ ಲಂಡಿಕೋಟಲಿಗೆ ಹೋದರು. ಮಾರ್ಗ ದಲ್ಲಿ ಖೂಬಾ ಕೀಲ್ಸ್ ಯೆಂಬ ಜನರು ಬ ದು ರಾಜಪುತ್ರರನ್ನು ಸ್ವಾಗತ ಪೂರ್ವಕ ಬರ ಮಾಡಿಕೊಂಡರು. ಲಂಡಿಕೋಟಲಿನಲ್ಲಿ ಆ ಪಾರಿ ಪ್ರಮುಖರು ಹಾಜರಿದ್ದರು. ಅಲ್ಲಿ ಕಮ ಟಿಯಾಳು ಅಲ್ಲಿನ ಕೆಲಸಗಳನ್ನು ನೋಡಿದಮೇ ಲೆ ಫಲಾಹಾರದ ಬಳಿಕ ಅಲ್ಲಿ ಮಲ್ಲಿಕ್ಕಿನಲ್ಲಿದ್ದು ವಾಪಸ ಜಂರೂಡಿಗೆ ವಾಪಸ್ ಬಂದರು. ಅಲ್ಲಿ ಮೇಜರ್ ಅಸ್ಲಾಂಖಾನರು ಅವರಿಗೆ ಫಲಾಹಾ ರಗಳು ಸರಬರಾಯಿ ಮಾಡಿದರು. ಸಾಯಂಕಾಲ ೬ ಘಂಟೆಗೆ ಪೆಶಾವರಿಗೆ ವಾಪಸ್ ಬಂದುಸೇರಿದರು.

SUMMARY OF NEWS.
ವೃತ್ತಾಂತಸಂಗ್ರಹವು.

ಈ ತಿಂಗಳ ೮ ನೇ ತಾರೀಖಿನಲ್ಲಿ ಮಧುರೆ ಡಿಸ್ಟ್ರಿಕ್ಟ್ ತಿಮ್ಮನಾಯಕನೂರ್ ಬಳಿ ನಡೆಸಲ್ಪಟ್ಟ ದರೋಡೆಗೆ ಸೇರಿದವರ ಪತ್ತೆಗೆ ಬೇಕಾದ ವರ್ತಮಾನ ಕೊಡುವಂತವರಿಗೆ ೧೦೦ ರೂಪಾಯಿಗಳ ಇನಾಂ ಕೊಡುವದಾಗಿ ಸದರೀ ಡಿಸ್ಟ್ರಿಕ್ಟ್ ಕಲೆಕ್ಟರವರು ಪ್ರಾಯಿಷ್ ಮಾಡಿರುತ್ತಾರೆ.

ಸಾಣೇಕಟ್ಟೆಯಿಂದ ಉಪ್ಪಿನ ಪಟ್ಟಣದ ನದಿಗೆ ಸಣ್ಣದೊಂದು ಹೊಗೇ ಹಡಗು ನಡೆಸಲ್ಪಡುತಿದೆ. ಸಾಣೆಕಟ್ಟೆಯಿಂದ ಧಳಕಾರಿಗೆ ೧೪ ಆಣೆ, ಮಣಿಕೆಗೆ ೬ ಆಣೆ, ಉಪ್ಪಿನ ಪಟ್ಟಣಕ್ಕೆ ೩ ಆಣೆ, ಈ ಪ್ರಕಾರ ದರ ಏರ್ಪಾತಾಗಿದೆ. ಒಂದಾವರ್ತಿಗೆ ೩೦-೪೦ ಜನರು ಕೂತುಕೊಳ್ಳುವಷ್ಟು ಜಾಗ ಉಂಟೆಂದು ತಿಳಯಬರುತಿದೆ—ಕ. ಸು.

ಸಲ್ಲಿವನ್ ಮತ್ತು ಐವರ್ ಎಂಬ ಇಬ್ಬರು ಯೂರೋಪಿಯನರು ಕುಡಿದು ಬಿದ್ದು ಗುದ್ದಾಡುವಲ್ಲಿ, ಮೊದಲನೆಯವನು ಎರಡನೆಯವನ ಜೇಬಿನಿಂದ ೯ ರೂಪಾಯಿಗಳನ್ನು ಬಲಾತ್ಕಾರದಿಂದ ಕದ್ದುಕೊಂಡುದಕ್ಕೆ ಬ್ಲ್ಯಾಕ್ ಟೌನ್ ಪ್ರಸಿಡೆನ್ಸಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಋಜುವಾದಾಗಿ ಅಪರಾಧಿಯು ಮೂರು ತಿಂಗಳ ಕಠಿಣ ಶಿಕ್ಷೆ ಸಹಾ ವಿಧಿಸಲ್ಪಟ್ಟನು.

ಕಾಲಸ್ಥಿತಿ.—ಮಳೆ ಯಿಲ್ಲವು ಫಸಲುಗಳು ಸಾಮಾನ್ಯವಾಗಿ ಚೆನ್ನಾಗಿರುತಿವೆ, ಪರಂತು ನೆಲ್ಲೂರು ಡಿಸ್ಟ್ರಿಕ್ಟ್ ಪೈಕಿ ಕೆಲವು ಭಾಗ, ದಕ್ಷಿಣ ಆರ್ಕಾಡು, ಚೆಂಗಲ್ಪಟ್ಟು, ಮಧುರೆ, ತಿರುನವೇಲಿ, ಕೊಯಿಂಬತ್ತೂರು, ಸೇಲಂ, ಉತ್ತರ ಆರ್ಕಾಡು, ಮತ್ತು ತಂಜಾವೂರು, ಈ ಪ್ರಾಂತಗಳಲ್ಲಿ ವರ್ಷಾಪೇಕ್ಷೆ ಬಹಳವಾಗಿದೆ. ಕಾಲ ಸೂಚನೆಗಳು ಸುಮಾರಾಗಿವೆ.

ಮಧುರೆ ಡಿಸ್ಟ್ರಿಕ್ಟ್ ಪಳನಿಯಲ್ಲೂ ಅದರ ಆಸ್‍ಪಾಸ್ ಪ್ರದೇಶದೊಳಗೂ ವಾಂತಿಭೇದಿ ರೋಗ ವ್ಯಾಪಿಸಿ ಯಿರುವದರಿಂದ, ಪಳನಿಯಲ್ಲಿ ನಡೆಯುವ ತೈಪೂಸ. ಅಂದರೆ ಪುಷ್ಯಮಾಸ ಪುಷ್ಯ ನಕ್ಷತ್ರದೊಳು ನಡೆಯುವ ಉತ್ಸವಕ್ಕೆ ಅಲ್ಲಿಗೆ ಹೋಗುವದು ಅನಾಯುಕರವೆಂದು ಸದರೀ ಡಿಸ್ಟ್ರಿಕ್ಟ್ ಕಲೆಕ್ಟರವರು ಪ್ರಾಯಿಷ್ ಮಾಡಿರುತ್ತಾರೆ.

ಕೊಲರಾಡೋನಿನಲ್ಲಿ ಒಂದು ದೊಡ್ಡ ಚಪ್ಪಡಿಕಲ್ಲು ಇತ್ತು, ಅದನ್ನು ಕೀಳಲು ಅದರ ಕೆಳಗೆ ಒಂದು ಅಗಮನೆಯು ಕಾಣಿಸಿತು. ಈಗ ಅದನ್ನು ಚೆನ್ನಾಗಿ ಪರಿಶೋಧಿಸಿ ನೋಡುವಲ್ಲಿ ಅದು ೩೮೫ ಅಡಿ ಉದ್ದವೂ ೪೦ ಅಡಿ ಎತ್ತರವೂ ಇರುವದಲ್ಲದೆ ಅದರಲ್ಲಿ ನೆಲವು ಒಳ್ಳೇ ಗಾರೆಯಿಂದ ಅತಿ ರಮಣೀಯವಾಗಿಯೂ ನಿರ್ಮಲವಾಗಿಯೂ ಇದೆ. ಮತ್ತು ಅದರಲ್ಲಿ ೧೬ ಕೊಟಡಿಗಳು ಇವೆ. ಇವೆಲ್ಲಾ ಗಾರೆ ಕಲ್ಲು ಕೆಲಸದಿಂದಲೇ ಕಟ್ಟಿರುತ್ತಾರೆ. ಇದಲ್ಲದೆ ಈ ಕಟ್ಟಡವನ್ನು ಸುಮಾರು ೬೦೦ ವರುಷಗಳ ಹಿಂದೆ ಕಟ್ಟಿರಬಹುದೆಂದು ಹೇಳುತ್ತಾರೆ.

ಫ್ರಾನ್ಸ್ ದೇಶದೊಳಗಿನ ಎಲಿಯನ ಕೋರ್ಟ ಎಂಬಲ್ಲಿ ಒಬ್ಬ ಹುಡುಗಿ ಇದ್ದಾಳೆ. ಅವಳು ಈಗ ಎಷ್ಟೋ ದಿನಗಳಿಂದ ಗಾಢನಿದ್ರಾವಶಳಾಗಿ ಹೋಗಿದ್ದಾಳೆ. ಪ್ರಖ್ಯಾತ ಧನ್ವಂತರಿಗಳೂ ಸಹ ಅವಳು ಈ ಪ್ರಕಾರ ದೀರ್ಘ ನಿದ್ರೆಗೆ ಯ್ಯುವದರ ಕಾರಣವನ್ನು ಕಂಡು ಹಿಡಿಯಲಾರದೆ ಸೋತು ಹೋಗಿದ್ದಾರೆ. ಅವಳನ್ನು ಅತಿ ನಿದ್ರೆಯಿಂದ ತಪ್ಪಿಸಬೇಕೆಂದು ಅವರು ಮಾಡಿದ ಹಲವು ಬಗೆಯ ಪ್ರಯತ್ನಗಳೆಲ್ಲವೂ ವ್ಯರ್ಥವಾದವು. ಅವಳು ನಿದ್ರೆಯ ಅಮಲಿನಲ್ಲಿರುವಾಗ ನಾನಾತರದ ಅಪಶಬ್ದಗಳನ್ನುಚ್ಚರಿಸುತ್ತ ಏನಾದರೂ ಹಲಬುತ್ತಿರುತ್ತಾಳೆ. ಘಟ್ಟಿಯಾಗಿ ಚೀರುತ್ತಾಳೆ; ಆದರೆ ನಿದ್ರೆಯಿಂದ ಏಳುವದಿಲ್ಲ. ಅವಳಿಗೆ ಔಷಧೋಪಚಾರ ಮಾಡಬೇಕಾದರೆ ಒತ್ತಾಯದಿಂದ ಬಾಯೊಳಗೆ ಹಾಕಬೇಕಾಗುತ್ತದೆ.—ಕ ಸು.

ಆಚೆ ಶುಕ್ರವಾರ ಹೈದರಾಬಾದ ಲಾಟರಿಯ ಫಲಿತಾಂಶವು ಗೊತ್ತಾಯಿತು. ಅದರಲ್ಲಿ ಬೆಲ್ಲಾರಿನಲ್ಲಿರುವ ೧೧೧೫೨ನೇ ನಂಬರಿನ ಮಿಸೆಸ್ ಎಸ್. ಎ. ಲಾಮಾಸ್ ರವರಿಗೆ ೫೦,೦೦೦ ರೂಪಾಯಿಗಳೂ, ಮದರಾಸ್ ಎಗ್ಮೂರಿನಲ್ಲಿರುವ ೪೯೬೩ನೇ ನಂಬರ್ ಮ॥ ರಾ॥ ಸುಬ್ರಹ್ಮಣ್ಯ ಮೊದಲಿಯಾರ್ರಿಗೆ ೧೦,೦೦೦ ರೂಪಾಯಿಗಳೂ, ಮಸಲಿ ಪಟ್ಟಣದಲ್ಲಿರುವ ಮ॥ ರಾ॥ ಬಿ. ವಿ. ಕೃಷ್ಣ ಎಂಬವರಿಗೆ ೫,೦೦೦ ರೂಪಾಯಿಗಳೂ ಬಂದವು—ವೃ. ಪ.

ರೈಲ ಗಾಡಿಗಳು ಹೋಗುತಲಿರುವಾಗ್ಯೆ ಅವುಗಳನ್ನು ನಿಲ್ಲಿಸುವದಕ್ಕಾಗಿ "ಬ್ರೇಕ್" ಎಂಬದಾಗಿ ಇರುವದು ಸಕಲರಿಗೂ ತಿಳಿದಿರಬಹುದು. ಈ ಬ್ರೇಕಿನಲ್ಲಿ ಒಂದು ನೂತನ ವಿಧಾನವನ್ನು ಕಂಡು ಹಿಡಿದಿರುವರು. ಬರ್ಮಿಂಗ್ಹಾಂ ನಲ್ಲಿರುವ ನಾರ್ತವೆಸ್ಟ್ ರೈಲ್ವೆಯಲ್ಲಿ ಈ ವಿಧಾನವನ್ನು ಪರೀಕ್ಷಿಸಿ ನೋಡಿರುವರು. ಇನ್ನು ಸ್ವಲ್ಪ ದಿವಸಗಳಲ್ಲಿಯೇ ಇದು ರಷ್ಯಾದಿನಲ್ಲೂ ಉಪಯೋಗಕ್ಕೆ ಬರುವದು. ಇಲ್ಲಿ ಎಲೆಕ್ಟ್ರೋ ಮ್ಯಾಗ್ನೆಟಿ ಎಂಬ ವಿಷಯವನ್ನು ಬಹು ಯುಕ್ತಿಯಿಂದ ಉಪಯೋಗಿಸಿ, ಸಂಚರಿಸುತಲಿರುವ ಗಾಡಿಯೊಂದು ಚಕ್ರವನ್ನೂ ೧೪ ಸೆಕೆಂಡುಗಳಲ್ಲಿಯೇ ನಿಲ್ಲಿಸಲು ಸಾಧ್ಯವಾಗುವದು.—ವೃ. ಪ.

ಕಲ್ಕತ್ತಾ ಪಟ್ಟಣದಲ್ಲಿ ಪ್ರಿನ್ಸ್ ಆಲ್ಬರ್ಟ ವಿಕ್ಟರರವರ ಆಗಮನಾರ್ಥವಾಗಿ ಪ್ರಜೆಗಳೆಲ್ಲರೂ ಚಂದಾ ಹಣವನ್ನು ಹಾಕಿದ್ದರಷ್ಟೆ. ಈಗ ಖರ್ಚೆಲ್ಲಾ ಕಳೆದು ಬಹಳವಾಗಿ ಮಿಕ್ಕಿರುವದೆಂದು ತಿಳಿದು ಬರುತ್ತದೆ. ಈ ಹಣವನ್ನು ಲೇಡಿ ಡಫರಿನ್ ಫಂಡಿಗೆ ಕೊಡಬೇಕೆಂದು ಕೆಲವರು ಸೂಚಿಸಿರುವರು. ಬಾಬು ಸುರೇಂದ್ರನಾಥ ಬಾನರ್ಜಿಯವರು ಕುಷ್ಠರೋಗಿಗಳಿಗಾಗಿ ಒಂದು ಆಸ್ಪತ್ರೆಯನ್ನು ನಿರ್ಮಿಸಬೇಕೆಂದು ಪ್ರಯತ್ನಿಸುತ್ತಿರುವದೂ ಇದಕ್ಕಾಗಿ ೫೫,೦೦೦ ರೂಪಾಯಿಗಳು ಸೇರಿರುವದೂ ಸಮಸ್ತರಿಗೂ ತಿಳಿದಿರುವದು. ಮಿಕ್ಕ ಹಣವನ್ನು ಕುಷ್ಠರೋಗಿಗಳ ಆಸ್ಪತ್ರೆಯ ನಿಧಿಗೆ ಸೇರಿಸುವದು ಉಚಿತವೆಂದು ತೋರುವದು.—ವೃ ಪ.

ಕ್ಯಾನ್ಸೈನ್ ಎಂಬ ಔಷದವನ್ನು ಜ್ವರಕ್ಕೆ ಸಂಜೀವನವೆಂದು ಸಮಸ್ತರೂ ಉಪಯೋಗಿಸುತ್ತಿರುವರಷ್ಟೆ. ಇದನ್ನು ಮಿತಿಮೀರಿ ಪ್ರಯೋಗಿಸುವದರಿಂದ ಅನರ್ಥವೂ ಸಂಭವಿಸುವದೆಂದು ತಿಳಿಯಬರುತ್ತದೆ. ಈಗ ೧—೨ ವರ್ಷಗಳ ಕೆಳಗೆ ಅಮೆರಿಕಾ ದೇಶದವನೊಬ್ಬನು "ನ್ಯುರೆಲ್ಜಿಯಾ" ಎಂಬ ವ್ಯಾಧಿಯಿಂದ ಪೀಡಿಸಲ್ಪಡುತ್ತಿದ್ದುದರಿಂದ, ತಾನೇ ಚಿಕಿತ್ಸೆಯನ್ನು ಮಾಡಿಕೊಳ್ಳಬೇಕೆಂದು ಯೋಚಿಸಿ, ಒಂದಾವರ್ತಿಗೆ ಒಂದು ಅರುಕಾಸಿನ ಬಿಲ್ಲೆಯಷ್ಟು ಕ್ಯಾನ್ಸೈನನ್ನು ತೆಗೆದುಕೊಂಡನು. ಘಂಟೆಗೆ ಒಂದಾವರ್ತಿ ಎಂದು ಹೀಗೆ ಎರಡು ಸಾರಿ ತೆಗೆದುಕೊಂಡನು. ಇನ್ನು ಸ್ವಲ್ಪ ಹೊತ್ತಿನಲ್ಲೇ ಅವನ ದೃಷ್ಟಿಯು ಕವಿಯಾಯಿತು. ಒಂದು ವಾರದೊಳಗಾಗಿ ಸಂಪೂರ್ಣವಾಗಿ ಕುರುಡನಾದನು. ಕಣ್ಣನ್ನು ಬರ ಮಾಡಿಕೊಳ್ಳಲು ನಡಸಿದ ಪ್ರಯತ್ನವೆಲ್ಲಾ ನಿರರ್ಥಕವಾಯಿತು. ಈಗಲೂ ದೃಷ್ಟಿಯು ಬಹಳ ಕವಡು ಎಂದು ಕೇಸರಿ ಎಂಬ ಪತ್ರಿಕೆಯು ತಿಳಿಸುತದೆ.—ವೃ ಪ.

ಬರೋಡೆಯ ಶ್ರೀಮಂತ ಸೆಯಾಜೀ ರಾವ ಗಾಯಕವಾಡರವರು ತಮ್ಮ ಸೆಕ್ರೆಟರಿಗಳಾದ ಮ॥ ರಾ॥ ವಾಸುದೇವ ದಾಮೋದರ ಸಮರ್ಥ ಇವರಿಗೆ ಇದೇ ೧೮೯೦ ನೇ ವರುಷದ ಆಗಾಯಿತು ಪ್ರತಿ ವರುಷಕ್ಕೆ ೧೮೦೦ ರೂಪಾಯಿ ಇನಾಮು ಕೊಡುವದನ್ನು ನಿಶ್ಚಯಿಸಿದರು. ಇದರ ಕಾರಣವೇನೆಂದರೆ:—೧೮೮೪ ನೇ ಇಸಿವಿಯಲ್ಲಿ ಗಾಯಕವಾಡರು ತಮ್ಮ ಕುಟುಂಬದೊಳಗಿನ ಕೆಲವು ತರುಣರಾದ ಹುಡುಗರನ್ನು ವಿದ್ಯಾಭ್ಯಾಸದ ಬಗ್ಗೆ ವಿಲಾಯತಿಗೆ ಕಳುಹಿಸುವದಕ್ಕೆ ಪರದೇಶದಲ್ಲಿ ಅವರ ಪೋಷಣ ಸಂಬಂಧ ಪರಾಮರ್ಶೆಯನ್ನು ಮಾಡುವದಕ್ಕೆ ಒಳ್ಳೇ ತಿಳುವಳಿಕೆಯುಳ್ಳವರಾಗಿಯೂ, ವಿಶ್ವಾಸನಂತರಾಗಿಯೂ ಯಾರು ಇದ್ದಾರು ಎಂಬ ವಿಚಾರದೊಳಗಿರುವಾಗ ಮ॥ ರಾ॥ ಪರದೇಶಕ್ಕೆ ಹೋಗುವ ಸಮ್ಮತಿಯುಳ್ಳವರು ಸಿಗದೆ ಕೊನೆಗೆ ಈ ಸೆಕ್ರೆಟರಿಗಳು ತಾವು ಹೋಗುತ್ತೇವೆಂದು ಹೇಳಿ ಆ ಕೆಲಸವನ್ನು ನಿರ್ವಹಿಸಿಕೊಂಡು ಬಂದ ಕಾರಣ ಅವರ ಮೇಲೆ ಗಾಯಕವಾಡರ ಪ್ರೀತಿಯು ವೃದ್ಧಿಯಾಗಿ, ಮೇಲಿನ ಇನಾಮನ್ನು ವರ್ಷಾಸನ ರೂಪದಿಂದ ಕೊಡುವದಕ್ಕೆ ಅಪ್ಪಣೆ ಮಾಡಿದರು. ಇದೊಂದು ನಮ್ಮ ಗಾಯಕವಾಡರಿಗೆ ಭೂಷಣದ ಮಾತಾಗಿರುತ್ತದೆ. ಇದರಿಂದ ಅವರ ಸೇವಕಜನರಿಗೆ ತಮ್ಮ ಯಜಮಾನರ ಸೇವೆಯನ್ನು ವಿಶ್ವಾಸದಿಂದ ಮಾಡುವದಕ್ಕೆ ಹೆಚ್ಚು ಉತ್ತೇಜನ ಬಂದಂತಾಯಿತು.—ಹ. ಸು.

EXTRACTS

ಮೈಸೂರು ಸರಕಾರದವರು ತಮ್ಮ ಸ್ವದೇಶೀಯ ಜನರ ಮೇಲೆ ಹೆಚ್ಚು ಔದಾಸೀನ ಮನಸ್ಸುಳ್ಳವರಾಗಿದ್ದಾರೆ. ಬಹು, ಇಲ್ಲಿ ನಡೆಯುವ ಪ್ರತಿ ಒಂದು ರಾಜಕೀಯ ಚಿಕ್ಕ ಸಂಗತಿಗಳನ್ನು ಕುರಿತು ವಿಚಾರ ಮಾಡಿದರೆ, ತಿಳಿದು ಬರುತ್ತದೆ. ಇದನ್ನು ಕೇಳಿದರೆ ಯಾವನೊಬ್ಬ ವಿಚಾರೀ ಮನುಷ್ಯನಿಗಾದರೂ ಹೆಚ್ಚು ವ್ಯಸನವಾಗದೆ ಉಳಿಯಲಾರದು. ಯಾವದೊಂದು ದೇಶದಲ್ಲಿಯಾದರೂ ಆ ದೇಶವು ಒಳ್ಳೇ ಸ್ಥಿತಿಗೆ ಬರಬೇಕಾದರೆ, ಅಲ್ಲಿಯ ರಾಜ್ಯಕರ್ತರು ತಮ್ಮ ಸ್ವದೇಶೀಯ ಪ್ರಜೆಗಳ ಮನಸ್ಸನ್ನು ಕೆಡಿಸದೆ, ಅವರ ಇಷ್ಟಾನುಸಾರವಾಗಿಯೂ, ತಮ್ಮ ಅವರ ಯೋಗ್ಯತೆಗೆ ಕೊರತೆಯನ್ನುಂಟುಮಾಡಿಕೊಳ್ಳದಂತೆಯೂ ಪ್ರತಿಯೊಂದು ವಿಷಯದ ಕೆಲಸಗಳನ್ನು ರೂಢಿಯಲ್ಲಿ ತರುವದು ಸ್ವಾಭಾವಿಕವಾಗಿರುತ್ತದೆ. ಹೀಗೆ ನಡೆಯುತ್ತಿದ್ದರೆ, ಆ ದೇಶವು ಒಳ್ಳೇ ಸುಭಿಕ್ಷವನ್ನು ಹೊಂದಿ, ಹೆಚ್ಚು ಉನ್ನತ ಸ್ಥಿತಿಯನ್ನು ಪಡೆಯುವದೆಂಬದರಲ್ಲಿ ಸಂಶಯವಿಲ್ಲ. ಹಾಗಲ್ಲದೆ ಅಲ್ಲಿಯ ರಾಜ್ಯಕರ್ತರು ಪ್ರಜೆಗಳ ಸುಖ ಕಷ್ಟಗಳನ್ನು ವಿಚಾರ ಮಾಡದೆ, ಒಬ್ಬ ತಮ್ಮ ಇಚ್ಛಾನುಸಾರವಾಗಿ ನಾನಾ ನವೀನ ನಿರ್ಬಂಧಗಳನ್ನು ನಡಸಿದ್ದಾದರೆ, ಅದರಿಂದ ರಾಜ್ಯಕರ್ತರ ಮೇಲೆ ಪ್ರಜೆಗಳ ಔದಾಸೀನ್ಯವು ಉಂಟಾಗಿ, ಸ್ವಾಭಾವಿಕ ಉದ್ಯೋಗಾದಿ ಉದ್ಯಮಗಳೆಲ್ಲಾ ಕುಂಠಿತವಾಗಿ ಬಂದು, ಕಡೆಗೆ ಆ ದೇಶವು ಹೀನ ಸ್ಥಿತಿಗೆ ಬರುವದೆಂಬುವದರಲ್ಲಿ ಸಂದೇಹವಿಲ್ಲ.

ಮೈಸೂರು ಸರಕಾರದವರು ತಮ್ಮ ದೇಶದಲ್ಲಿ ನೇಮಣುಕಾಗತಕ್ಕ ಎಲ್ಲ ಸರಕಾರೀ ಉದ್ಯೋಗಕ್ಕೂ ಇತ್ತೀಚೆಗಾಗಿ ಮದ್ರಾಸೀ ಅಯ್ಯರನ್ನೂ ಮತ್ತು ಪಶ್ಚಿಮ ದೇಶದಿಂದ ಸಾಹೇಬ ಜನರನ್ನೂ ಕರಿಸಿ ಕೊಡು, ಕೆಲಸಕ್ಕೆ ಹಚ್ಚುವ ಪಾಡಿಕೆಯನ್ನು ಒಳ್ಳೇ ಜೋರಿನಿಂದ ನಡಿಸಲಿಕ್ಕೆ ಪ್ರಾರಂಭಿಸಿರುತ್ತಾರೆ. ಸ್ವದೇಶದ ಪ್ರಜೆಗಳ ಮನಸ್ಸನ್ನು ಕೆಡಿಸಲಿಕ್ಕೆ ಇದೊಂದು ಒಳ್ಳೇ ಮಹತ್ವದ ಕಾರಣವಾಗಿರುತ್ತದೆ. ನಮ್ಮ ಪ್ರಜೆಗಳಲ್ಲಿ ಮೇಲ್ಪಟ್ಟ ಅಧಿಕಾರಕ್ಕೆ ಯೋಗ್ಯರಾದ ಜನರುಗಳು ಸಿಗದೇ ಹೋದ ಪಕ್ಷಕ್ಕೆ ನಾವು ಮೈಸೂರು ಸರಕಾರದವರ ವ್ಯವಸ್ಥೆಯನ್ನು ಅವಶ್ಯವಾಗಿ ಮನ್ನಿಸುತ್ತಿದ್ದೆವು. ಆದರೆ ಆ ದೇಶದಲ್ಲಿ ಒಳ್ಳೊಳ್ಳೇ ನವವಿಧ [illegible] ಸಂಪಾದಿಸಿದಂಥ ದೊಡ್ಡ ಮನುಷ್ಯರುಗಳು ಬಹುಮಂದಿ ಇರುವದು ನಮ್ಮ ದೃಷ್ಟಾಂತಕ್ಕೆ ಬಂದಿರುತ್ತದೆ. [illegible] ಲ್ಲ ಇರುತ್ತಾ ಅನ್ಯ ದೇಶೀಯರನ್ನು ತಂದು, ಸ್ಥಾನವನ್ನು ವಹಾಮುವದೆಂದರೆ, ಎಂಥಾ ವ್ಯಸನಕಾರಕ ವಿಷಯವೆ! ಇವರ ವಿಧಾನಾ ತಾವುಗಳೆಲ್ಲಾ ಹಣ ವ್ಯಯ ಮಾಡಿ, ದೇಹ ದಂಡನೆಯಿಂದ ಬಹು ವರುಷ ಮಾಡಿದ ಶ್ರಮವೆಲ್ಲಾ "ನೀರಿನಲ್ಲಿ ಹೋಮ ಮಾಡಿದಂತೆ" ನಿರರ್ಥಕವಾಯಿತೆಂತಾ ಅಲ್ಲಿಯ ಮೇಲಾದವರ ಪರೀಕ್ಷೆಗಳನ್ನು ಕೊಟ್ಟವರೆಲ್ಲಾ ತಿಳುಕೊಂಡಾರೆಂಬವರಲ್ಲಿ ಸಂದೇಹವೇನು? ಇಂತಿಂಥಾ ದೊಡ್ಡ ಮನುಷ್ಯರೆಲ್ಲಾ ತಮ್ಮ ಶ್ರಮಕ್ಕೆ ತಕ್ಕ ಫಲ ಸಿಗದೇ ತಮ್ಮ ಸರಕಾರದಮೇಲೆ ಯಾವಾಗ ಉದಾಸೀನರಾದರೋ, ಆಗ ಆದೇಶದ ಪ್ರಜೆಗಳೆಲ್ಲರೂ ಉದಾಸೀನರಾದಾರೆಂಬದರಲ್ಲಿ ಸಂಶಯವಿಲ್ಲಾ. "ಮನೆಯಲ್ಲಿದ್ದ ಕಾಮಧೇನುವನ್ನು ಬಿಟ್ಟು, ಗೊಡ್ಡಾಕಳನ್ನು ಕೊಟ್ಟಿಗೆಯ ಭರ್ತಿಗೆ ತುಂಬಿಕೊಂಡಂತೆ" ನಾವು ನವು ಮೈಸೂರಿನಂಥ ಘನ ಹೊಂದಿದ ಸರಕಾರಕ್ಕೆ ಯೋಗ್ಯವಾದ ಭೂಷಣವಾಗಲಾರದೆಂತ ನಾವು ಖಂಡಿತ ಹೇಳುತ್ತೇವೆ.

ಮೈಸೂರು ಸರಕಾರದವರು ತಮ್ಮ ಚಾಕರಿವಾನರ ವಿಷಯದಲ್ಲಿ ಎಷ್ಟೋ ಹೆಚ್ಚು ಕಠಿಣಗಳಾದ ಹೊಸ ಅವಲಾ ಬದಲಾವಣೆಗಳನ್ನು ಮಾಡುವದರಿಂದ್ದಾರೆಂದು ಅತ್ಯಂತಕನೆಯು ವರ್ತಮಾನ ಪತ್ರಿಕೆಗಳು ರಕಿಸುತ್ತಿದ್ದವೆ. ಈ ಸಂದರ್ಭದಲ್ಲಿ ಸುಮಾರು ೩೦ ತಾಲ್ಲೂಕ ಅಮಲ್ದಾರರನ್ನು ಪೆನ್ಷನ್ ಮೇಲೆ ತೆಗೆದಾರೆಂಬದೊಂದು ವಿಶೇಷ ವರ್ತಮಾನವು ಹೊರಬಿದ್ದಿರುತ್ತದೆ. ಆದರೆ ಈ ಜಾಗಗಳನ್ನು ತುಂಬುವವರ ಸಲುವಾಗಿ ಹೊಸದಾಗಿ ಎಷ್ಟು ಜನ ಗ್ರಾಜ್ಯುಯೇಟರು ಮದ್ರಾಸ ಪ್ರಾಂತದಿಂದ ಬರುತ್ತಾರೋ ಅದನ್ನು ನೋಡಬೇಕಾಗಿದೆ. ಇನ್ನು ಮುಂದೆ [illegible] ಕೆಲವು [illegible] ಹಚ್ಚಿ [illegible] ಲ್ಪಡ ನದೆ ಬದಲಿಂದ [illegible] ಮುಖವು. ಯಾವನಾದರೊಬ್ಬ ಯುರೋಪಿಯನ್ [illegible] ಗಿದ್ದರೂ, ಅವರುಗಳ್ಯ [illegible] ಲ ಷ ಕೆಲಸವು ಒಂದು [illegible] ಎಷ್ಟೋ [illegible] ಕಲ್ಪಿಸಿ [illegible] ಕೆಂದ್ಯಾನೆ [illegible] ತಿಳಿಯುತ್ತದೆ. ಇದಲ್ಲದೇ [illegible] ಗಳಾದ ಮ॥ ರಾ॥ [illegible] ದವರಿಗೆ [illegible] ಕಾರಣ ಈ ಜಾಗ ಒಂದು ಮದ್ರಾಸೀ ಅಯ್ಯಗಾರಿಗೆ ಅಥವಾ ಯಾವನಾದರೊಬ್ಬ [illegible] ಸಾಹೇಬ ಗೃಹಸ್ಥನ ಭಾಗಧೇಯಕ್ಕಾಗಲೀ ಒಳಪಡುವಂತಾಗಿದ್ದಲ್ಲಿ [illegible] ವಿಷಯವಾಗಿ ದುಃಖ ಅನುಭವಿಸುತ್ತೇವೆ. ಮೈಸೂರು ದೇಶದಲ್ಲಿ ದಾನಧರ್ಮದೊಂದು ಮಹತ್ವದ ಕೆಲಸವು ಒಳಿದಾಗಲೀ ಅಲ್ಲದೇ ಹೊಸದಾಗಿ ಏರ್ಪಡಿಸಲ್ಪಡದಾಗಲೀ ಆ ಸಮಯದಲ್ಲಿ ಆ ಮದ್ರಾಸೀ ಗ್ರಾಜ್ಯುಯೇಟರಿಗೆ ಅಥವಾ [illegible] ಉಳಿದರೆ ಮೈಸೂರು ಸಂಸ್ಥಾನದ ಗೃಹಸ್ಥರಿಗಾಗಲೀ (ಚಂದ್ರಸೇನ) ಬೃಹಸ್ಪತಿಯೋಗ" ಎಂಬ [illegible] ವೃತ್ತಾಂತಗಳಂತೆ [illegible] ಮಾಗಿ ಹೋಗಿರುತ್ತದೆ.

ಈಗ ೩೦ ತಾಲ್ಲೂಕ ಅಮಲ್ದಾರರುಗಳನ್ನು ಪೆನ್ಷನ್ ಮೇಲೆ ನಿವೃತ್ತಿ ಮಾಡುವದು ನಿಜವಾಗಿದ್ದರೆ ಮೈಸೂರು ದೇಶದ ಪರಿಸ್ಥಿತಿಗೆ ಒಂದು ತರದ ಹೊಸ ಬಣ್ಣ ಬರುವದೆಂದು ಹೇಳಬಹುದಾಗಿದೆ. ಯಾಕಂದರೆ, ಸರ್ವಿಸಿನಲ್ಲಿ ನುರಿತರಾದ ಮತ್ತು ಬಹುಕಾಲಗಳಿಂದ ಕೆಲಸ ಮಾಡಿ ಅನುಭವ ಹೊಂದಿದ ಮತ್ತು ಪ್ರಜೆಗಳ ಸುಖ ಕಷ್ಟಗಳನ್ನರಿತ ದೇಶ ವಾತ್ಸಲ್ಯವುಳ್ಳ ಹಳೇ ಚಾಕರಿದಾರರೆಲ್ಲ ಹೋಗಿ, ಬಹಾರಾಮಗಳಲ್ಲಿ ಮತ್ತು ದಾನುತಕಾಲೇಜುಗಳಲ್ಲಿಯೂ, ಹೊಟ್ಟೆಗೆ ಆಸಕ್ತಿಪಡುವ ಅಪ್ರೌಢ ವಯಸ್ಸಿನ ಹೊಸ ವಿದ್ವಾಂಸರು ಮುಖ್ಯವಾಗಿ ಜನರ ಸುಖ ದುಃಖಗಳನ್ನು ಸರಕಾರಕ್ಕೆ ನಿವೇದಿಸಲಿಕ್ಕೆ ಮುಖ್ಯವಾದ ತಾಲ್ಲೂಕ ಅಧಿಕಾರದ ಜಾಗದ ಮೇಲೆ ನೇಮಿಸಲ್ಪಡುವದಾದರೆ ಹಳೇ ಬಣ್ಣವೇ ನಿಂತೀತೆಂದು ಯಾವನೊಬ್ಬನಾದರೂ ಗ್ರಹಿಸಲಾರನು. ಹೀಗಾದರೆ ಮೈಸೂರು ದೇಶದ ಪ್ರಜೆಗಳು ಒಂದು ತರದ ಕಷ್ಟಕ್ಕೆ ಸಹ ಪಾತ್ರರಾದಾರೆಂದು ನಾವು ಗ್ರಹಿಸುತ್ತೇವೆ.—ಹ. ಸು.

Bangalore :—Printed and published at the Karnatic Press, No. 108, Srinivasa Mandirum Road Pettah.—1890

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಶ್ರೀಮದ್ವಿವಿಧನೃಪನೃತ್ಯಪದಗಮಾರ್ಹ ಕರ್ನಾಟಕಪ್ರಕಾಶನವರಾಭಿಧಾ ಪ್ರಥಿತಸಾಹಿತೀಶೋಭಿತಾ [illegible]

Vol. XVII.] BANGALORE:—MONDAY, FEBRUARY 10, 1890. [No. 6.

ಪುಸ್ತಕ ೧೭.] ಬೆಂಗಳೂರು:—ಸನ್ ೧೮೯೦ನೇ ಇಸವಿ ಫೆಬ್ರುವರಿ ೧೦ ನೇ ತಾರೀಖ್ ಸೋಮವಾರ. [ಸಂಚಿಕೆ ೬.

ಕರ್ನಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಸಾಲ್ ೧ಕ್ಕೆ	ಸ್ಥಳದವರಿಗೆ ಪರಸ್ಥಳದವರಿಗೆ. ಪಾಸ್ಟಿಲ್ಲದೆ.	ಹಾಸಲ್ ಸೇರಿ
ಮುಂಗಡಕೊಡತಕ್ಕವರಿಗೆ	8—0—0	9—0—0
ಹಿಂದಾದರು ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡಕೊಡತಕ್ಕವರಿಗೆ	4—0—0	5—0—0
ಹಿಂದಾದರು ,,	5—0—0	6—0—0

ಈ ಪತ್ರಿಕೆಗೆ ದಸ್ತಾವೇಜು ಮಾಡಿದ ತಾರೀಖು ಮೊದಲು ಒಂದು ತಿಂಗಳ ಒಳಗಾಗಿ ಚಂದಾ ಮೊಬಲಗು [illegible] ಕೊಡತಕ್ಕವರಿಗೆ ಮಾತ್ರವೆ ಅಡ್ವಾನ್ಸ್ ದರದಂತೆ ಪತ್ರಿಕೆ ಕಳುಹಿಸಲ್ಪಡುವದು. [illegible] ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತರಿಸಿಕೊಳ್ಳಬಹುದು. ಮೂರು ತಿಂಗಳಿಗಿಂತ ಕಡಮೆ ಕಾಲ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

[illegible]

ಪ್ರಕಟನೆಯ ರಿವಾಜು.

ಮೊದಲನೆಯದಫಾ ಪಙ್ಕ್ತಿ ಒಂದಕ್ಕೆ	೦—೨—೦
ಎರಡನೆಯದಫಾ ಪಙ್ಕ್ತಿ ಒಂದಕ್ಕೆ	೦—೧—೦

[illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs.5 6-0

ವೈದ್ಯಸಾರ ಸಂಗ್ರಹ.

ಈ ಗ್ರಂಥವು [illegible] ಮೊಬಲಗಿನೊಡನೆ [illegible] ಕೊಡತಕ್ಕವರ ಹೆಸರಿಗೆ ಬರೆದುಕೊಂಡರೆ [illegible] ಕಳುಹಿಸಲ್ಪಡುವದು. ಮೊಬಲಗು [illegible] ಸಿಗೆ ಕೊಡಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಸೇರಿ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ಮೆಕಟಾಚಾರ್,

ಬೆಂಗಳೂರು, ಬಸ್ವಪ್ಪಶೆಟ್ಟಿ [illegible] 41ನೇ ನಂ ಮನೆ.

ADVERTISEMENTS.

ನೋಟೀಸ್

ಅದ್ಭುತವಾದ ಒಂದು ಔಷಧ

BEECHAM'S PATENT PILLS. ST. HELENS LANCASHIRE

ಹೊಟ್ಟೆಯಲ್ಲಿ ವಾಯು ಸೇರಿಕೊಂಡುಹೋಯುವಿಕೆ, ಪಿತ್ತದಿಂದ ತಲೆ ನೋವು, ಕಣ್ಣುಗಳು ತಿರುಗುವಿಕೆ, ಭೋಜನವಾದಮೇಲೆ ಹೊಟ್ಟೆ ತುಂಬಿಕೊಂಡು ಉಬ್ಬರಿಸಿಕೊಳ್ಳುವಿಕೆ, ತಲೆ ಗಿರ್ರನೆ ತಿರುಗುವಿಕೆ, ತೂಗಡಿಕೆ, ಚಳಿ, ಉಷ್ಣಾಧಿಕ್ಯದಿಂದ ಮುಖ ಕೆಂಪಾಗುವಿಕೆ, ಹಸಿವು ತಪ್ಪುವಿಕೆ, ಶ್ವಾಸವೃದ್ಧಿ, ಮಲಬದ್ಧ, ದೌರ್ಬಲ್ಯದಿಂದ ಮುಖಬಿಳುಪಾಗುವಿಕೆ, ಚರ್ಮದಮೇಲೆ ಗುಳ್ಳೆಗಳು ಏಳುವಿಕೆ, ನಿದ್ರಾಭಂಗ, ಭಯಂಕರವಾದ ಕನಸುಗಳು, ನಿಶ್ಶಕ್ತಿಯಿಂದ ನಡುಕ, ಇವು ಮೊದಲಾದ ಪಿತ್ತ ಮತ್ತು ನರಸಂಬಂಧವಾದ ರೋಗಗಳಿಗೆಲ್ಲ [illegible] ಮಾಡಲ್ಪಟ್ಟಿರುವ ಗುಳಿಗೆಗಳ ಡಬ್ಬಿ ಒಂದಕ್ಕೆ [illegible] ಕ್ರಯ ಕೊಡಬಹುದೆಂದು [illegible] ಅಂಗೀಕರಿಸಲ್ಪಟ್ಟಿದೆ. [illegible] ಈ ಗುಳಿಗೆಗಳನ್ನು ತರಿಸಿ ಸೇವನೆ ಮಾಡಬೇಕೆಂದು ಕೋರುತ್ತೇವೆ. [illegible]

ಎಲ್ಲಾ ವಯಸ್ಸಿನ ಹೆಂಗಸರಿಗೂ ಈ ಗುಳಿಗೆಗಳು ಅಮೂಲ್ಯವಾದವು. [illegible]

ಅನ್ನಕೋಶದ ದೌರ್ಬಲ್ಯ, ಜೀರ್ಣಶಕ್ತಿ ತಪ್ಪಿಹೋಗುವಿಕೆ, ಪಿತ್ತಕೋಶದಲ್ಲಿನ ಎಲ್ಲವಿಧ ಬಾಧೆಗಳಿಗೂ ಈ ಗುಳಿಗೆಗಳು ಅದ್ಭುತವಾದ ಔಷಧ. ಇದನ್ನು ಕೆಲವುವೇಳೆ ಸೇವನೆ ಮಾಡಿದರೆ ಮನುಷ್ಯನ ದೇಹದಲ್ಲಿನ ಅಣುವಣುಗಳಿಗೆ ವ್ಯಾಪಿಸಿ ಅದ್ಭುತವಾದ ಕಾರ್ಯಗಳನ್ನು ಮಾಡುತ್ತದೆ. [illegible] ದೇಹಾರೋಗ್ಯದೊಡನೆ ಮನುಷ್ಯ ಶರೀರಕ್ಕೆ ಇರಬೇಕಾದ ತ್ರಾಣವನ್ನುಂಟುಮಾಡುತ್ತದೆ.

ಇದು ವಾಸ್ತವ್ಯವಾದದ್ದು, ಇದನ್ನು ಎಲ್ಲರೂ ಒಪ್ಪಿಕೊಂಡಿರುತ್ತಾರೆ. ಮತ್ತು ಈ ಪ್ರಪಂಚದಲ್ಲಿನ ಎಲ್ಲಾ ಔಷಧಗಳಿಗಿಂತಲೂ ಈ ಔಷಧ ಅಧಿಕವಾಗಿ ಬಿಕರಿಯಾಗುವದರಿಂದಲೇ [illegible] ಇದು ಸರ್ವೋತ್ತಮವಾದ ಔಷಧವೆಂದು ನಂಬುವದಕ್ಕೆ ಕಾರಣವುಂಟಾಗಿದೆ

Solo Agents for India

NAYLOR, SON, GRIMES, & CO.,

Wholesale Depot, 35, Clive Street, Calcutta.

ನೋಟೀಸು—ಔಷಧ ಬೇಕೆಂದು ಬರೆದುಕೊಂಡವರಿಗೆ ಮೆಸರ್ಸ್ ನೆಯಿಲರ್, ಸನ್, ಮತ್ತು ಗ್ರೈಮ್ಸ್ ಕಂಪೆನಿಯವರು ಹಾಲ್ಸೇಲ್ [illegible] ನಮೂನೆ ಡಬ್ಬಿ ಒಂದು ದಾನಿಸುವರು. ಅದರ ಕ್ರಯ ಇದರಡಿ ನಮೂದಿಸಲ್ಪಟ್ಟಿದೆ, ಪ್ಯಾಕಿಂಗ್—ಡಬ್ಬಿ ೧ ಕ್ಕೆ ೯ ಆಣೆ, ೧೪ ಆಣೆ, ಮತ್ತು ರೂ॥ ೨ ಈ ಮೇರೆ ಇರುತ್ತದೆ. ಬೇಕಾದದ್ದನ್ನು ತರಿಸಿಕೊಳ್ಳಬಹುದು. ಹಾಸಲ್ ಬೇರೆ ಕೊಡಬೇಕು

ವೈದ್ಯರಿಗೂ ಔಷಧ ಮಾರುವವರಿಗೂ ಕೇಳಿಕೊಂಡರೆ ಒಟ್ಟುವಿಕರೀ ದರಕ್ಕೆ ಕೊಡಲ್ಪಡುವದು.

ನೋಟೀಸ್.

ಇದರಿಂದ ನಮ್ಮ ಚಂದಾದಾರರಿಗೂ ಇತರರಿಗೂ ಪ್ರಕಟಪಡಿಸುವದೇನೆಂದರೆ:—

ಸನ್ ೧೮೮೯ನೇ ಇಸವಿ ಡಿಸೆಂಬರ್ ಆಖೈರಿನವರೆವಿಗೆ ಚಂದಾ ಬಾಕಿಯನ್ನು ಪೂರಾ ಫೈಸಲ್ಮಾಡಿರತಕ್ಕ ಚಂದಾದಾರರ ಹೆಸರುಗಳನ್ನು ಮಾತ್ರ ನಾವು ರಿಜಿಸ್ಟರ್ ದಾಖಲ್ಮಾಡಿಕೊಂಡು ಈ ಜನವರಿ ಆಗಾಯತು ಪತ್ರಿಕೆ ಕಳುಹಿಸುತ್ತೇವೆ. ಅವರ ಪೈಕಿ ಯಾರಿಗಾದರು ಪತ್ರಿಕೆಯ ಅಪೇಕ್ಷೆ ಇಲ್ಲದಿದ್ದರೆ ಅಂತವರು ಕೂಡಲೆ ತಮ್ಮ ಅಭಿಪ್ರಾಯವನ್ನು ಮೂರುಕಾಸಿನ ಕಾರ್ಡಿನಲ್ಲಿ ನಮಗೆ ತಿಳಿಸಬಹುದು. ಪತ್ರಿಕೆಯ ಆವಶ್ಯಕತೆ ಇರತಕ್ಕವರು ಸಾಧ್ಯವಾದಷ್ಟು ತ್ವರೆಯಲ್ಲಿ ಚಂದಾ ಮೊಬಲಗನ್ನು ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಬೆಂಗಳೂರು. ತಾ ೫ನೇ ಜನವರಿ ೧೮೯೦. } ಟಿ. ಸಿ. ಶ್ರೀನಿವಾಸಾಚಾರ್ ಪ್ರೊಪ್ರೈಟರ್. ಕರ್ನಾಟಕ ಪ್ರಕಾಶಿಕಾ.

ನೋಟಿಸ್.

ಕಾಫೀ ತೋಟಕ್ಕೆ ಕೂಲೀ ಜನರನ್ನು ಒದಗಿಸಿ ಕೊಡತಕ್ಕಬಗ್ಗೆ ಕಂಟ್ರಾಕ್ಟು ಮಾಡಿಕೊಳ್ಳುವದಕ್ಕೆ ಒಬ್ಬ ಏಜಂಟ ಅಥವಾ ಮೇಸ್ತ್ರಿ ಬೇಕಾಗಿರುತ್ತದೆ, ದಾಖಲೆಗಳೊಡನೆ ಹಾಜರಾಗಬೇಕು. ಕಾಫೀ ತೋಟವು ಆರೋಗ್ಯಕರವಾದದ್ದು, ನೀರು ಒಳ್ಳೆಯದು. ಬಾಜಾರಿಗೆ ಸಮೀಪದಲ್ಲಿದೆ

ಇತರ ತಪ್ಸೀಲಗಳನ್ನು ತಿಳಿದುಕೊಳ್ಳಬೇಕಾದರೆ ಉತ್ತರ ಕೊಡಗಿಗೆ ಸೇರಿದ ಸುಂಟಿಕೊಪ್ಪದಲ್ಲಿರುವ ಹರದೂರು ತೋಟದ ಸೂಪರಿಂಟೆಂಡೆಂಟರವರಿಗೆ ಬರೆದುಕೊಳ್ಳತಕ್ಕದ್ದು.

ದಕ್ಷಿಣ ಮಹರಾಷ್ಟ್ರ ರಯಿಲ್ವೆ ಕಂಪೆನಿ (ಲಿಮಿಟೆಡ್.)

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ:—

ಸನ್ ೧೮೯೦ ನೇ ಇಸವಿ ಏಪ್ರಿಲ್ ಒಂದನೇ ತಾರೀಖಿಗೆ ಪ್ರಾರಂಭವಾಗುವ ಸಾಲಿನಲ್ಲಿ ಯೂನಿಫಾರಂ, ಬೂಟ್ಸ್, ಚಿಂದಿ ಬಟ್ಟೆ ಇವುಗಳ ಸರಬರಾಯ್ ಬಗ್ಗೆ ಬರತಕ್ಕ ಸೀಲ್ ಮಾಡಲ್ಪಟ್ಟ ದರಖಾಸ್ತುಗಳು ಕೊಡಬಹುದು.

ಸದರೀ ಪದಾರ್ಥಗಳನ್ನು ಹುಬ್ಬಳ್ಳಿ, ಹೊಸೂರು, ಅಥವಾ ಬೆಂಗಳೂರಲ್ಲಿರುವ ಸಾಮಾನುಗಳ ಕೋಠಿಗಳಲ್ಲಿ ಒಪ್ಪಿಸಬೇಕು.

ಮೇಲೆ ನಮೂದಿಸಿರುವ ಕೋಠಿಗಳ ಪೈಕಿ ಯಾವದರಲ್ಲಾದರು ಒಪ್ಪಿಸುವದಕ್ಕೆ ದರಖಾಸ್ತುಗಳ ತಪ್ಸೀಲಗಳು ಮತ್ತು ನಮೂನೆಗಳನ್ನು ಹುಬ್ಬಳ್ಳಿಯಲ್ಲಿರುವ ಸ್ಟೋರ್ ಕೀಪರಿಂದ ಪಡೆಯಬಹುದು.

ದರಖಾಸ್ತುಗಳು, ಧಾರ್ವಾಡದಲ್ಲಿರುವ ಏಜಂಟ ಮತ್ತು ಚೀಫ್ ಇಂಜನಿಯರರ ಆಫಿಸ್ಸಿಗೆ ಸನ್ ೧೮೯೦ನೇ ಇಸವಿ ಮಾರ್ಚ್ ೮ನೇ ತಾರೀಖಿನೊಳಗಾಗಿ ಸೇರಬೇಕು, ಮತ್ತು ಲಿಫಾಫೆಗಳ ಮೇಲ್ಗಡೆ "ಯೂನಿಫಾರಂ, ಬೂಟ್ಸ್, ಚಿಂದಿ ಬಟ್ಟೆಗಳ ಬಗ್ಗೆ ದರಖಾಸ್ತು" ಎಂದು ಬರೆಯತಕ್ಕದ್ದು.

ಏಜಂಟ ಮತ್ತು ಚೀಫ್ ಇಂಜನಿಯರರವರು ಕಂ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲವು. ಜಾಸ್ತೀ ಅಂಶಗಳ್ಯಾವವನ್ನಾದರು ತಿಳಿದುಕೊಳ್ಳಬೇಕಾಗಿದ್ದರೆ ಹುಬ್ಬಳ್ಳಿಯಲ್ಲಿರುವ ಸ್ಟೋರ್ ಕೀಪರಿಂದ ತಿಳಿದುಕೊಳ್ಳತಕ್ಕದ್ದು.

ಧಾರ್ವಾಡ, ೩ನೇ ಫೆಬ್ರುವರಿ 1890. } G. J. LINDSAY, Agent and Chief Engineer,

ಮಹಾರಾಜಾ ಆಫ್ ಮೈಸೂರು ಸ್ಪಿನ್ನಿಂಗ್ ಅ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ (ಲಿಮಿಟೆಡ್.)

ಇದರಿಂದ ತಿಳಿಸುವದೇನೆಂದರೆ:—

ಸನ್ ೧೮೯೦ನೇ ಇಸವಿ ಫೆಬ್ರುವರಿ ೩ನೇ ತಾರೀಖಿನಲ್ಲಿ ಕಂಪೆನಿಯವರು ಸೇರಿನಡೆಸಿದ ಎಕ್ಸ್ಟ್ರಾಡಿನರಿ ಜನರಲ್ ಮೀಟಿಂಗಿನಲ್ಲಿ ಮಾಡಲ್ಪಟ್ಟ ವಿಶೇಷ ನಿರ್ಣಯಗಳನ್ನು ಕಾಯಂ ಮಾಡತಕ್ಕ ಬಗ್ಗೆ, ಸನ್ ೧೮೯೦ನೇ ಇಸವಿ ಫೆಬ್ರುವರಿ ೨೦ನೇ ತಾರೀಖಿನ ಸಾಯಂಕಾಲ ನಾಲ್ಕು ಘಂಟೆಗೆ ಯಂತ್ರದ ಕಾರ್ಖಾನೆಯಲ್ಲಿರುವ ಕಂಪೆನಿಯ ಆಫೀಸಿನಲ್ಲಿ ಮಹಾರಾಜಾ ಆಫ್ ಮೈಸೂರು ಸ್ಪಿನ್ನಿಂಗ್ ಮತ್ತು ಮ್ಯಾನ್ಯುಫ್ಯಾಕ್ಚರಿಂಗ್ ಕಂಪೆನಿ ಲಿಮಿಟೆಡ್ಡಿನ ಹಿಸ್ಸೇದಾರರ ಮೀಟಿಂಗ್ ಸೇರಿಸಲ್ಪಡುವದು, ಹ್ಯಾಗೆಂದರೆ—

ಕಂಪೆನಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಷನಿನ ೧೦೫ನೇ ಕಲಂನಲ್ಲಿ "ಕಂಪೆನಿಯ ನಿಸಳ ನಕಲೀ ಪೈಕಿ ಸೇಕಡ ೧೦ರೂಪಾಯಿಗಳು" ಎಂಬದಾಗಿ ನಮೂದಿಸಲ್ಪಟ್ಟಿರುವ ಪದಗಳು ಹೊಡೆದು ಹಾಕಲ್ಪಡತಕ್ಕದ್ದು. ಮತ್ತು ಇದರಿಂದ ಹೊಡೆದು ಹಾಕಲ್ಪಟ್ಟಿದ್ದ ಅಕ್ಷರಗಳಿಗೆ ಬದಲು ಏರ್ಪಡುವ ನಾಲು ಪದಗಳ ಪೈಕಿ ನೂರಿನಲ್ಲಿ ಮಾತ್ರ ಹಿಂದೆ ೧ಕ್ಕೆ ೩ಷ್ಟು" ಎಂದು ಸೇರಿಸಲ್ಪಡತಕ್ಕದ್ದು, ಮತ್ತು ಡೈರೆಕ್ಟರ್‌ಗಳು ಕರಾಗಿಗೆ ರುಜು ಮಾಡಿ ಕಾಯಂ ಮಾಡತಕ್ಕದ್ದು.

೧೦೫ನೇ ಕಲಂ ಇದರಡಿ ಕಂಡಂತೆ ಇರುವದು.

ಮುಂಬೈಯೊಳು ೯ನೇ ನಂಬರ್ ಹಾರ್ನಬಿ ಬೀದಿಯಲ್ಲಿರುವ ಮೆಸರ್ಸ್ ಜೇಂಸ್ ಸ್ಕಾಟ್ ಅಂಡ್ ಕೋ ಯವರ ಕೋಠಿಯಲ್ಲಿ ಇದ್ದುಕೊಂಡಿರುವ [illegible] ಸೇರಿರುವ ಅಥವಾ ಮುಂದೆ ಸೇರಬಹುದಾದವರು ಕಂಪೆನಿಯ ಏಜಂಟರುಗಳಾಗಿರತಕ್ಕದ್ದು, ಮತ್ತು ಆ ಪಾಯಿದೆ ಪ್ರಕಾರವಾಗುವ ಕಾಲದಲ್ಲಿ ಜಾಸ್ತೀ ಸಂಖ್ಯೆಯುಳ್ಳ ಹಿಸ್ಸೇದಾರರ ಅಭಿಪ್ರಾಯವನ್ನನುಸರಿಸಿ ವಜಾ ಮಾಡಲ್ಪಡತಕ್ಕದ್ದು. ಅವರೇ ಏಜಂಟರುಗಳಾಗಿರತಕ್ಕದ್ದು, ಮತ್ತು ತಯಾರಾಗುವ ನೂಲಿನಲ್ಲಿ ಮಾತ್ರ ಪೌಂಡು ಒಂದಕ್ಕೆ ೩ ಪೈ ಯಂತೆ ಅವರ ಏಜಂಟರುಗಳಿಗೆ ರುಸುಂ ಸಲ್ಲತಕ್ಕದ್ದು.

Bangalore, 4th February 1890 } "By order" JAMES SCOTT & Co., Agents.

ಮಹಾರಾಜಾ ಆಫ್ ಮೈಸೂರು ಸ್ಪಿನ್ನಿಂಗ್ ವ ಮ್ಯಾನ್ಯುಫ್ಯಾಕ್ಚರಿಂಗ್ ಕಂಪೆನಿ (ಲಿಮಿಟೆಡ್.)

ನೋಟೀಸ್.

ಮಾಹೇಯಾನಾ ೫೦ ರೂಪಾಯಿಗಳ ಸಂಬಳದ ಮೇಲೆ ಬುದ್ಧಿಶಾಲಿಗಳಾದ ಮೂವರು ನೇಟಿವ್ ಅಕೌಂಟೆಂಟುಗಳು ಬೇಕಾಗಿರುತ್ತಾರೆ. ಬಿಕರಿಯಲ್ಲಿ ನೇಕಡಾ ಅರ್ಧ ರೂಪಾಯಿನಂತೆ ರುಸುಂ ಕೊಡಲ್ಪಡುವದು. ನೂಲು ವ ಬಟ್ಟೆಗಳ ಬಿಕರೀ ವಿಷಯದಲ್ಲಿ ಅವರು ಮಾಡುವ ಶ್ರಮದೊಡನೆ ಅನುಗುಣವಾಗಿ ಹೆಚ್ಚಿಯ ರುಸುಂ ಸಿಕ್ಕುವದು. ಕೆಲಸ ಮಾಡಬೇಕಾದ ಸ್ಥಳಗಳು ಕಾರ್ಖಾನೆಯಲ್ಲಿ ತಿಳಿಸಲ್ಪಡುವದು. ಇಸಂ ೧ಕ್ಕೆ ೩,೦೦೦ ರೂಪಾಯಿಗಳಿಗೆ ಜಾಮೀನ್ ಕೊಡಬೇಕು. ಯೋಗ್ಯತಾ ಪತ್ರಿಕೆಗಳು ವಗೈರೆಯೊಡನೆ ಫೆಬ್ರುವರಿಗೆ ಒಳಗೆ ದುಕೊಳ್ಳತಕ್ಕದ್ದು.

Messrs JAMES SCOTT & Co.,
Maharajah Spinning Mills,
Bangalore

ಮಹಾರಾಜಾ ಆಫ್ ಮೈಸೂರು ಸ್ಪಿನ್ನಿಂಗ್ ವ ಮ್ಯಾನ್ಯುಫ್ಯಾಕ್ಚರಿಂಗ್ ಕಂಪೆನಿ (ಲಿಮಿಟೆಡ್.)

ಇದರಿಂದ ತಿಳಿಸಲ್ಪಡುವದೇನಂದರೆ.—

ಇದರಡಿ ನಮೂದ್ ಮಾಡಲ್ಪಡುವ ಕೆಲಸಗಳನ್ನು ಜರಿಗಿಸತಕ್ಕ ಬಗ್ಗೆ, ಸನ ೧೮೯೦ ನೇ ಇಸವಿ ಫೆಬ್ರುವರಿ ೨೫ನೇ ತಾರೀಖ್ ಮಧ್ಯಾಹ್ನ ೩ ಘಂಟೆಗೆ, ಯಂತ್ರದ ಕಾರ್ಖಾನೆಯಲ್ಲಿರುವ ಕಂಪೆನಿಯ ರಿಜಿಸ್ಟರ್ ಮಾಡಲ್ಪಟ್ಟ ಆಫೀಸಿನಲ್ಲಿ ಹಿಸ್ಸೇದಾರರ ಆಯಿದನೇ ದಫೇ ಸಾಲೀಯಾನಾ ಸಾಮಾನ್ಯ ಸಭೆ ಸೇರುವದು:—

೧. ಸನ ೧೮೮೯ನೇ ಇಸವಿಯ ಬಾಬತು ಡೈರೆಕ್ಟರುಗಳ ರಿಪೋರ್ಟು ಮತ್ತು ಲೆಕ್ಕಗಳನ್ನು ಬರಮಾಡಿಕೊಂಡು ಅಗೀಕರಿಸುವಣ.

೨. ಸರ್ವೀ ಮೇರೆ ಕೆಲಸವು ಬಿಟ್ಟು ಹೋಗುವ ಡೈರೆಕ್ಟರುಗಳ ಸ್ಥಾನಕ್ಕೆ ಬೇರೆ ಇಸಂಗಳನ್ನು ಚುನಾಯಿಸುವಣ.

೩. ಆಡಿಟರಗಳನ್ನು ಚುನಾಯಿಸಿ ಅವರಿಗೆ ರುಸುಂ ಗೊತ್ತು ಮಾಡುವಣ

"By order"
J. SCOTT & Co
Agents

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, FEBRUARY 10, 1890

೧೮೯೦ನೇ ಫೆಬ್ರುವರಿ ತಾ|| ೧೦ನೇ ಸೋಮವಾರ

OFFICIAL IDIOSYNCRACIES

ಸಾಗರದ ಸಬ್‌ಡಿವಿಜನ್ ಮುನಸಫ್ ಕೋರ್ಟಿನಲ್ಲಿ ಮಾಹೇಯಾನಾ ೧೫ ರೂಪಾಯಿಗಳ ಸಂಬಳವುಳ್ಳ ರೈಟರ್ ಕೆಲಸಕ್ಕೆ ಒಂದು ಇಸಂ ಬೇಕಾಗಿರುವದರಿಂದ ಅಭ್ಯರ್ಥಿಗಳು ಪಕ್ಷ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನಾದರೂ ಕೊಟ್ಟಿರತಕ್ಕವರೇ ಅವಕ್ಕೆ ದರಖಾಸ್ತು ಮಾಡಬೇಕೆಂತಲೂ, ಉಮೇದವಾರರ ಪೈಕಿ ಬ್ರಾಹ್ಮಣೇತರರಿಗೆ ವಿಶೇಷ ಅವಧಾನ ಕೊಡಲ್ಪಡುವದೆಂತಲೂ ಅಲ್ಲಿನ ಮುನಸಫರು ಈ ತಿಂಗಳ ಗುರುವಾರದಿನದ ಮೈಸೂರು ಗೆಜೆಟಿನ ಮೂಲಕ ಪ್ರಕಟಿಸಿರುತ್ತಾರೆ. ಈ ಮುನಸಫರು ಜಾತಿಯಲ್ಲಿ ಶ್ರೀವೈಷ್ಣವ ಬ್ರಾಹ್ಮಣರು, ಈ ಸಂಸ್ಥಾನದಲ್ಲಿ ಅನೇಕ ಸಂವತ್ಸರಗಳ ಕಾಲ ದೊಡ್ಡ ಅಧಿಕಾರಗಳಂ ಮಾಡಿ ಗೌರವವಾದ ಪೆನ್‌ಷನ್ ಮೇಲೆ ಕೆಲಸದಿಂದ ನಿವೃತ್ತರಾಗಿ, ಈಗ ಆಮುಷ್ಮಿಕ ಸುಖ ಸಂಪಾದನದಲ್ಲಿ ನಿರತರಾಗಿರತಕ್ಕ ಶ್ರೀಮಾನ್ ನಾಯಬ್ ಶ್ರೀನಿವಾಸಯ್ಯಂಗಾರ್ಯವರ ಕನಿಷ್ಠಪುತ್ರರು. ಇವರು ಮದರಾಸ್ ಯೂನಿವರ್ಸಿಟಿ ಬಿ ಎ ಮತ್ತು ಬಿ. ಎಲ್ ಪರೀಕ್ಷೆಗಳಂ ಕೊಟ್ಟು ಪ್ರಶಸ್ತಿಗಳಂ ಪಡೆದು ಬಹುಕಾಲದ ವರಿವಿಗೆ ಅಧಿಕಾರಿಗಳ ಉಪಸರ್ಜನೆಯಿಂದ ಪ್ರಕೃತ ಪದವಿಗೆ ಬಂದವರಾಗಿರುತ್ತಾರೆ. ಇಂತಾ ವಿದ್ಯಾ ಬುದ್ಧಿ ವಿವೇಕಾದಿ ಸುಗುಣಗಳುಳ್ಳವರಲ್ಲಿ ಸರ್ವ ಸಮತೆಯೆಂಬ ಮುಖ್ಯಗುಣವು ಗವರ್ನ್‌ಮೆಂಟಿನವರೂ ಪ್ರಜೆಗಳೂ ಪ್ರಾಧಾನ್ಯೇನ ನಿರೀಕ್ಷಿಸುವದಾಮದರಿಂದ ಅದೂ ತಮ್ಮಲ್ಲಿ ನೆಲೆಗೊಂಡಿದೆ ಯೆಂದು ವ್ಯಕ್ತಪಡಿಸಿದಂತೆ ತೋರುತಿದೆ. ಈ ಅಧಿಕಾರಿಯು ಸ್ವಯಂ ಬ್ರಾಹ್ಮಣರಾದುದರಿಂದ, ಬ್ರಾಹ್ಮಣೇತರರನ್ನು ಕೋರುವಣವು ಪರಪ್ರೇರಿತ ಕಾರ್ಯವೆಂದು ಊಹಿಸಬೇಕಾದ್ದಕ್ಕೆ ಅವಕಾಶವನ್ನುಂಟುಮಾಡಿದೆ. ಹಾಗಿಲ್ಲದ ಪಕ್ಷದಲ್ಲಿ ಆರೋಪಿತ ಗುಣಪ್ರಕಾಶನವೆಂದು ಹೇಳಬೇಕಾಗಿರುತಿದೆ. ಪರಕಬ್ಬಕ್ಕೆ ಈ ಸಂದರ್ಭದಲ್ಲಿ ಮೇಲ್ಪಟ್ಟ ಅಧಿಕಾರಿಗಳಲ್ಲದೆ ಅನ್ಯರು ಆಗಲಾರರು. ಮೇಲ್ಪಟ್ಟ ಅಧಿಕಾರಿಗಳು ಚೀಫ್‌ಕೋರ್ಟಿನವರೆಂಬದು ಸ್ಪಷ್ಟವಾಗಿಯೇ ಇದೆ. ಚೀಫ್‌ಕೋರ್ಟಿನವರು ಅಂತರಂಗದಲ್ಲಾಗಲಿ, ಬಹಿರಂಗವಾಗಿ ಯಾಗಲಿ ಬ್ರಾಹ್ಮಣೇತರರನ್ನೇ ಉದ್ಯೋಗಗಳಿಗೆ ಚುನಾಯಿಸತಕ್ಕದ್ದೆಂದು ಹುಕುಂ ಕೊಟ್ಟಿರಬಹುದೆಂದು ಊಹಿಸುವಣವೆಂದರೆ, ಅವರು ಬ್ರಾಹ್ಮಣರಾದ ಈ ದೊಡ್ಡ ಮನುಷ್ಯರನ್ನು ಮುನಸಿಫ್ ಕೆಲಸದಲ್ಲಿ ನಿಯಮಿಸಿರುವದರಿಂದ, ಅದಕ್ಕೆ ಅವಕಾಶವಿಲ್ಲವಾಯಿತು. ಅಂತಾ ಅಭಿಪ್ರಾಯವು ಚೀಫ್ ಕೋರ್ಟಿನವರಿಗಿದ್ದು, ಅಪೇಕ್ಷಿತ ಕಾಲದಲ್ಲಿ ಈ ಮುನಸಫರವರು ಪ್ರಕಟಿಸಿದಂತೆ, ಅವರೂ ಪ್ರಕಟಿಸಿರುವ ಪಕ್ಷಕ್ಕೆ, ಇವರಂತೆ, ಕದಾಚಿತ್ ಇವರಿಗಿಂತದೊಡ್ಡ ಪರೀಕ್ಷೆಗಳಂ ಕೊಟ್ಟಿರುವಂತವರು ಅನೇಕರು ಅತಿ ಸುಲಭವಾಗಿ ಸಿಕ್ಕಿರುವದರಲ್ಲಿ ಯೆಷ್ಟುಮಾತ್ರವೂ ಸಂಶಯವಿರಲಾರದು. ಆದುದರಿಂದ ಇದು ಚೀಫ್‌ಕೋರ್ಟಿನವರ ಅಭಿಪ್ರಾಯವನ್ನನುಸರಿಸಿ ಮಾಡಿದ ಕಾರ್ಯವಲ್ಲವೆಂದು ಧಾರಾಳವಾಗಿ ಹೇಳಬಹುದು.

ಏತೇನ ಮುನಸಫರು ಅಂತಾ ಪ್ರಕಟನೆಯ ಮೂಲಕ ತಾವು ನಿಷ್ಪಕ್ಷಪಾತಿ ಮತ್ತು ಸರ್ವಸಮತೆಯುಳ್ಳವರೆಂಬ ಭಾವವು ಮೇಲ್ಪಟ್ಟ ಅಧಿಕಾರಿಗಳ ಮತ್ತು ಸಾಮಾನ್ಯವಾಗಿ ಪ್ರಜೆಗಳ ಹೃದಯಗಳಲ್ಲುಂಟುಮಾಡಿ ತನ್ಮೂಲಕ ಅಧಿಕಾರ ಪದದಲ್ಲುನ್ನತಸ್ಥಾನಕ್ಕೆ ಬರಬೇಕೆಂಬ ಉದ್ದೇಶದೊಡನೆ ಮಾಡಿದ ಕೊಹಕ ಕಾರ್ಯವೆಂದು ಸ್ಪಷ್ಟವಾಗಿ ಕಾಣುತಿದೆ. ಈ ಅಧಿಕಾರಿಯು ಈಗ ಪ್ರಕಟಿಸಿರುವ ಕೆಲಸಕ್ಕೆ ಬೆಂಗಳೂರು ಮ್ಯುನಿಸಿಪಲ್ ವೈಸ್ ಪ್ರಸಿಡೆಂಟರು ಸಂಪೂರ್ಣ ಅರ್ಹರೆಂದು ಹೇಳುವೆವು

ಅಹಾ! ಉದರವೆ! ನಿನ್ನ ಪೋಷಣೆಗೆ ಯೆಷ್ಟುವಿಧ ಕುತ್ಸಿತ ಪ್ರಯತ್ನಗಳಂ ಮಾಡಿಸುತ್ತಿ! ಯಾವ ಮೂಲಕ ಸಂಪಾದಿಸಿದ್ದೂ ನಿನ್ನಂ ತೃಪ್ತಿಗೊಳಿಸಲಿಕ್ಕೆ ಸಾಲದ್ದಾಗಿಯೆಲ್ಲಾ! ಉದರ ನಿಮಿತ್ತಂ ಬಹುಕೃತವೇಷಂ

THE HON'BLE Mr K N NULKAR ON SOCIAL REFORM

ಹಿಂದೂಗಳ ಸಮಯಾಚಾರ ಪರಿಷ್ಕರಣ ಸಭೆಗಳ ವಿಷಯದಲ್ಲಿ ವೈಸ್‌ರಾಯಿಯವರ ನ್ಯಾಯವಿಧಾಯಕ ಸಭೆಯ ಮೆಂಬರಾದ ಮಿ|| ನಲ್ಕಾರ್ ಎಂಬವರು ತಿಳಿಸುವ ಅಭಿಪ್ರಾಯಗಳ ಪೈಕಿ ಬಹುಭಾಗ ಸಮಂಜಸವಾಗಿ ಕಾಣಬರುವದರಿಂದ ಸಾಮಾನ್ಯವಾಗಿ ಯೆಲ್ಲರು ಇವನ್ನರಿಯತಕ್ಕ ಬಗ್ಗೆ ಇದರಡಿ ಪ್ರಕಟಿಸುವೆವು :—

ಈ ಕಾಲದಲ್ಲಿ ನಡೆಸಲ್ಪಡುವ ಇತರ ಪ್ರಯತ್ನಗಳ ಪೈಕಿ ಹಿಂದೂ ಸಮಯಾಚಾರ ಪರಿಷ್ಕರಣವಿಷಯದಲ್ಲಿ ನಾನು ಅನುತಾಪವುಳ್ಳವನಾಗಿದ್ದಾಗ್ಯೂ ಈ ಪ್ರಯತ್ನದ ಔಚಿತ್ಯವಿಷಯದಲ್ಲಿ ನನಗೆ ಅನೇಕಸಂದರ್ಭಗಳೊಳು ಸಂಶಯವುಂಟಾದದ್ದಲ್ಲದೆ ಈಬಗ್ಯೆ ಏರ್ಪಟ್ಟಿರುವ ಸಾಮಾಜಿಕರ ಉದ್ದೇಶವೇ ಭಂಗವನ್ನೈದುವದೆಂಬ ಭೀತಿ ಸಹ ಉಂಟಾಗಿದೆ. ಕೇವಲ ಆತುರದೊಡನೆ ಯೋಚಿಸಿ,ಅಜಾಗರೂಕತೆಯೊಡನೆಹೊರಡಿಸಿ ಸಭೆಸೇರಿದಕಾಲದಲ್ಲಿ ಅಭಿಪ್ರಾಯಭೇದವಿಲ್ಲದೆ ಪಾಸ್ ತೆಗೆದುಕೊಂಡ ಕೆಲವು ನಿರ್ಣಯಗಳ ಬಲೆಯಿಂದ ಹಾಗೆ ಯೋಚಿಸಬೇಕಾಗಿದೆ. ಈ ಪ್ರಯತ್ನಕ್ಕೆ ಪ್ರತ್ಯರ್ಥಿಗಳಾಗಿ ಏರ್ಪಟ್ಟಿರುವವರು ಅವಿಚಾರವಾಗಿ ಪ್ರತಿಭಟಿಸುವಣವೇ ಪ್ರಕೃತಕಾರ್ಯ ಪ್ರವರ್ತಕರು ಆತುರಪಡುವದಕ್ಕೆ ಕಾರಣವಾಯಿತು. ಆದರೆ, ಅಪೇಕ್ಷಿತಾಂಶವನ್ನು ಆಚರಣೆಯಲ್ಲಿ ತಂದು ತೋರಿಸಬೇಕೇಹೊರತು ಶಬ್ದತಃ ಪ್ರಯೋಜನವಿಲ್ಲವೆಂಬ ಅಂಶವನ್ನು ಮರೆತುಹೋಗುತಲಿದಾರೆ ಸಮಯಾಚಾರಗಳೂ ಪುರಾಣ ಪ್ರತಿಪಾದಿತಗಳಾದ ಪ್ರಮಾಣಗಳೂ ಶ್ರುತಿಸ್ಮೃತಿಗಳಿಗೆ ವಿರುದ್ಧವಾಗಿದ್ದರೆ ಅವುಗಳು ಉಪೇಕ್ಷಿಸಲ್ಪಡತಕ್ಕವೆಂದು ಪೂನೆಯಲ್ಲಿನ ಪಂಡಿತರುಗಳಿಗೆ ಜಸ್ಟಿಸ್ ಬಹದೂರ್ ರಘುನಾಥ ರಾಯರವರು ನಿರೂಪಿಸಿದ್ದರಿಂದ ಪ್ರಕೃತ ಪ್ರಯತ್ನಕ್ಕೆ ಸಹಾಯಕವಾಯಿತು. ಪರಂತು ದಿವಾನ್ ಬಹದೂರರವರು ಕೇವಲ ಪ್ರಾಚೀನ ಪ್ರಮಾಣಗಳಂ ಆಗಿಂದಾಗ್ಯೆ ಉಪಹರಿಸುವದರ ಮೂಲಕ ತಮ್ಮ ಕಕ್ಷಿಗೆ ದೌರ್ಬಲ್ಯವುಂಟಾಗಬಹುದೆಂಬ ಅಂಶವನ್ನು ಮರೆತಿರಬಹುದು. ನ್ಯಾಯವಿಧಾಯಕ ಸಭೆಯ ಸಹಾಯ ಪ್ರುಂಟಾಗಿಯಾಗಲಿ ಅದಿಲ್ಲದೆಯಾಗಲಿ, ಈ ಸಮಾಜಗಳ ಮೂಲಕ ಸಮಯಾಚಾರ ಪರಿಷ್ಕರಣಕಾರ್ಯವು ಕೈಗೂಡುವದೆಂದು ನಾನು ನಂಬಲಾರೆನು ನ್ಯಾಯವಿಧಾಯಕಸಭೆಯವರು ಇದಕ್ಕೆ ಸಹಾಯಕರಾಗುವಣವು ನ್ಯಾಯಸಮ್ಮತವೆಂಬ ವಿಷಯವು ಸಂಶಯಾಸ್ಪದವಾದುದು. ಅನಾರೋಗ್ಯಸ್ಥಿತಿಯಲ್ಲಿ ಹುಣ್ಣುಗಳು ವೇದನಾಪ್ರವೃತ್ಯವಾಗಿರುತ್ತ ಕ್ರಮೇಣ ವಾಸಿಯಾಗುವಂತೆ ನಮ್ಮ ಸಮಯಾಚಾರಗಳಲ್ಲಿ ದುಷ್ಟ ಸಂಪ್ರದಾಯಗಳಿರುತ್ತ ಕ್ರಮೇಣ ಬದಲಾಯಿಸಬಲ್ಲಿದೆ ಅವುಗಳನ್ನು ಕಾಲಕ್ರಮೇಣ ತೆಗೆದು ಮತ್ತು ಒಂದೊಂದಾಗಿ ತಪ್ಪಿಸುವರವೇಕು ಅದನ್ನು ಕಾರ್ಯತಃ ಆಚರಣೆಯ ಮೂಲಕ ಅನುಕೂಲ ಪಡಿಸಿ ಕೊಳ್ಳಬೇಕ ಹಾಗೆ ಮಾಡುವದನ್ನ ಅನ್ಯರ ಆಕ್ಷೇಪಣಗಳಿಗೆ ವಿಶೇಷ ಅವಕಾಶ ಕೊಡದಂತಿರಬೇಕು. ಅದಕ್ಕೆ ಅನ್ಯರ ಆಕ್ಷೇಪಣೆಗೆ ಸುತರಾಂ ಅವಕಾಶವಿಲ್ಲದಿರಬೇಕೆಂದು ಯೋಚಿಸು ಸುಮ್ಮನಿರಬಾರದು. ಕಳೆದ ಮೂವತ್ತು ವರ್ಷಗಳ ಕಾಲದಲ್ಲಿ ವಿದ್ಯಾವಂತರಾದವರು ಏಕಾಂತವಾಗಿಯೂ ಯುಕ್ತಾಯುಕ್ತ ವಿವೇಚನೆ ಯಿಲ್ಲದೆಯೂ ಅವಿಚಾರವಾಗಿಯೂ ಬಹುವಿಧ ಆಚಾರಗಳಿಗೆ ಅವಕಾಶವು ಕೊಟ್ಟು ಅದು ಅನುವರ್ತಿಸಿ ನಡೆದು ಕೊಂಡು ಬರುವದಂ ನೋಡಲು ಕೇವಲ ಆಶ್ಚರ್ಯಕರವಾಗಿರುತಿದೆ. ಬಾಲ್ಯವಿವಾಹ ವೈಧವ್ಯಕ್ಕೆ ಗುರಿಯಾದ ಬಾಲಿಕೆಯರಿಗೆ ಮುಂದಿನ ಮಾಡಿಸುವ ಕ್ರೂರಕೃತ್ಯವನ್ನು, ನಮ್ಮ ಆಚಾರಗಳಿಗೆ ಬಾಧಕವಿಲ್ಲದಂತೆ ತಪ್ಪಿಸುವಣವು ನಮ್ಮನಮ್ಮ ಕುಟುಂಬದವರಿಗೆ ಸಾಧ್ಯವಾಗಿದ್ದಾಗ್ಯೂ ಅದನ್ನು ಒಂದು ಪ್ರಬಲಕಾರ್ಯವನ್ನಾಗಿ ಭಾವಿಸಿ ಅದನ್ನು ತಪ್ಪಿಸಬೇಕಾದ ವಿಷಯದಲ್ಲಿ ನ್ಯಾಯವಿಧಾಯಕ ಸಭೆಯ ಸಹಾಯವಂ ಅಪೇಕ್ಷಿಸುತ್ತಾರೆ ಈ ವಿಷಯದಲ್ಲಿ ಗವರ್ನ್‌ಮೆಂಟಿನವರು ಪ್ರವರ್ತಿಸುವಣವು ಅಕ್ರಮವೆಂದು ನಾನು ಹೇಳುವದಿಲ್ಲವು, ಪರಂತು ವರ್ಷಕ್ಕೊಂದಾವರ್ತಿ ಒಂದು ಕಡೆ ಯೆಲ್ಲರು ಗುಂಪುಗೂಡಿ ರಮ್ಯ ತನ್ಮ ವಾಗ್ಮಿತೆಗಳಂ ಪ್ರಕಾಶಗೊಳಿಸುವದಕ್ಕಿಂತಲೂ ಹಿಂಬಿನ ವರ್ಷದಲ್ಲಿ ತಮ್ಮತಮ್ಮ ಆಚಾರಗಳಲ್ಲಿ ತಾವು ಯೋಜನಾತಿಸಿಕೊಂಡ ನೂತನ ಪದ್ಧತಿಗಳಂ ಸಭ್ಯರಿಗೆ ತಿಳಿಸಿ ಮುಂದೆ ಮಾಡಬೇಕಾದ ಕಾರ್ಯಗಳಂ ನಿರ್ಧರಿಸಿಕೊಂಡು ಹೋಗುವಣವು ಉಚಿತವಾಗಿರುವದೆಂಬದು.

Occasional Notes

ನೈಮಿತ್ತಿಕ ವಿಷಯನ್ಯಾಸ.

Lepers —ಮುಂದೆ ಖಾನೇಷುಮಾರಿಲೆಕ್ಕ ತೆಗೆಯುವಕಾಲದೊಳು ಕುಷ್ಠರೋಗಿಗಳು ಪ್ರತ್ಯೇಕವಾಗಿ ಲೆಕ್ಕ ಮಾಡಲ್ಪಡುವರೆಂದು ತಿಳಿಯಬರುತಿದೆ. ಈ ಕಾರ್ಯವು ಸುಲಭಸಾಧ್ಯವಾದದ್ದೆಂದು ಸಾಧಿಸಲಾರೆವು.

Locusts —ತೆನಕು ಮತ್ತು ರಾಜಮಹೇಂದ್ರವರದ ತಾಲ್ಲೂಕುಗಳಲ್ಲಿ ಮಿಡತೆ ಹುಳಗಳ ದಂಡು ಬಂದು ಪೈರುಗಳನ್ನೆಲ್ಲ ನಾಶ ಮಾಡಿತು. ಸದರೀ ದಂಡು ಹೈದರಾಬಾದ್ ಪ್ರಾಂತ್ಯದಿಂದ ಅಲ್ಲಿಗೆ ಹೋದಂತೆ ಕಾಣುತಿದೆ

Return of Col Olcott —ಕರ್ನಲ್ ಆಲ್ಕಾಟಿಯವರು ಕಳೆದ ಬುಧವಾರದದಿನ ಸಿಲೋನ್ ದ್ವೀಪದಿಂದ ಮದರಾಸಿಗೆಬಂದುಸೇರಿದರು ಅವರಸಂಗಡ ಜಪಾನ್‌ದ್ವೀಪದ ದೊಡ್ಡ ಮನುಷ್ಯರಿಬ್ಬರುಬಂದು ಕರ್ನಲ್‌ಯವರ ಮನೆಯಲ್ಲಿಳಿದಿರುತ್ತಾರೆ.

An offer accepted —ಸರಹದ್ದು ಪ್ರಾಂತ್ಯದ ಬಂದೋಬಸ್ತಿಯ ಬಗ್ಯೆ ಮೈಸೂರು ಸರ್ಕಾರದವರು ೧,೦೦೦ ಸವಾರ್ ಫೌಜನ್ನು ಕಳುಹಿಸಿಕೊಡುವದಾಗಿ ತಿಳಿಸಿ ಇದ್ದವರಷ್ಟೆ. ಅದನ್ನು ಇಂಡ್ಯಾ ಗವರ್ನ್‌ಮೆಂಟಿನವರು ಅಂಗೀಕರಿಸಿದರೆಂದು ಒಂದಾನೊಂದು ಲಾಹೂರ್ ಪತ್ರಿಕೆ ತಿಳಿಸುತಿದೆ

Sale of Obscene books —ಮದರಾಸಿನಲ್ಲಿ ಕೊಕ್ಕೋಕಂ ಯೆಂಬ ಕಾಮಶಾಸ್ತ್ರ ಬುಕ್ಕನ್ನು ಇಟ್ಟುಕೊಂಡು ವಿಕ್ರಯಿಸಿದ ಪಕ್ಷಿರಾಜುಗೈ ಶರವಣ ಮೊದಲಿ ಯೆಂಬಾತನು ಆರೋಪಿಸಲ್ಪಟ್ಟು ಮ್ಯಾಜಿಸ್ಟ್ರೇಟಿನಿಂದ ಮೂರು ವಾರಗಳ ಕಠಿಣ ಬ್ರೈಡ್ ಸಜಾ ಮತ್ತು ೫೦ ರೂಪಾಯಿಗಳ ಜುಲ್ಮಾನೆ ವಿಧಿಸಲ್ಪಟ್ಟನು

A royal trip —ಬರೋಡ ಸಂಸ್ಥಾನದ ಮಹಾರಾಜರವರು ಸರ್ವ ರಾಣಿಯವರ ಜೊತೆ ಹಿಂದ ಸಮುದ್ರಸಂಚಾರ ಮಾಡುವ ಶ ಇಂಗ್ಲೆಂಡ್ ದೇಶಕ್ಕೆ ಸ್ವರಣಿಂದ ಪ್ರೇರಿತರಾಗಿ ಬಕ್ಕಿ ೧೦ ತಿಂಗಳ ಪ್ರಯಾಣೋದ್ದೇಶವಾಗಿ ಬರುವ ವರ್ಷ ತಿಂಗಳ ಗುರ್ರಾತ್ತಿದ್ದಲ್ಲಿ ಹೊರಗೆ ಹತ್ತಾರದಕ್ಕೆ ಆವಶ್ಯಕಗಳಾದವನ್ನು ಪ್ರೇಕಳೆ ನ್ಯಸದಾಗಿ ತಲೆದಂತೆ ತಿಳಿದು ಬರುತಿದೆ

Hailstorm —ಸಾಜಾಪುರ ಪ್ರಾಂತದಲ್ಲಿ ಹಿಂದೆ ಬಲವಾದ ಆಳೆಮಳೆಯು ಅದರಲ್ಲಿ ಕೋಳಿಮೊಟ್ಟೆಯಷ್ಟು ದಪ್ಪ ಆನೆಕಲ್ಲುಗಳು ಬಿದ್ದು ಸಾಸಿ ಪ್ರದೇಶದೊಳಗಿರುವ ನ ಲಕ್ಷ ರೂಪಾಯಿ ಗ್ರಾಮಗಳಲ್ಲಿ ಫಸಲುಗಳೆಲ್ಲ ನಾಶವಾದವು. ಈ ಮಳೆಯ ಬೀಸಿನಿಂದ ಎಂಟುಮೈಲಿಗಳ ಪ್ರದೇಶ ಮೂವತ್ತೈದುಗಳಿಗಿಂತ ಜಾಸ್ತಿಯು ನಷ್ಟಕ್ಕೆ ಗುರಿಯಾಯಿತು.

A meeting convened —ಮಹಾರಾಜಶ್ರೀಯವರ ಪೌತ್ರರಾದ ಪ್ರಿನ್ಸ್ ವಿಕ್ಟರವರು ಮುಂಬೈಗೆ ವಾಪಸ್ ಬರುವಕಾಲದಲ್ಲಿ ಅವರನ್ನು ಉಚಿತ ಗೌರವ ಪುರಸ್ಕಾರಗಳೊಡನೆ ಬರಮಾಡಿಕೊಳ್ಳುವದಕ್ಕೆ ಅವಶ್ಯಕಗಳಾದ ಏರ್ಪಾಡುಗಳಂ ಮಾಡುವದಕ್ಕಾಗಿ ಕಳೆದ ಶುಕ್ರವಾರದದಿನ ಮುಂಬೈ ಟೌನ್‌ಹಾಲಿನೊಳು ಸಭೆ ಸೇರಬೇಕೆಂದು ಮುಂಬೈದೊಡ್ಡಮನುಷ್ಯರನೇಕರು ಸೇರಿ ಬರೆದುಕೊಂಡ ಅರ್ಜಿಯನ್ನನುಸರಿಸಿ ಅಲ್ಲಿನ ಷರಿಫ್‌ರವರು ಆಬಗ್ಯೆ ತಕ್ಕ ಏರ್ಪಾಡುಗಳಂ ಮಾಡಿದರು

An order.—ಹೈದರಾಬಾದ್ ಸಂಸ್ಥಾನದ ಪ್ರಧಾನಿಯಾಗಿದ್ದು ಗತಿಸಿದ ಸರ್ ಸಾಲಾರ್‌ಜಂಗರವರ ಜಹಗೀರ್ ಮೊದಲಾದ ಸ್ವತ್ತುಗಳ ವಿಚಾರಣೆಯನ್ನು ನಿಜಾಂ ಸರ್ಕಾರದವರು ಸ್ವಯಂವಹಿಸಿಕೊಂಡು, ಸಾಲಾರ್ ಜಂಗರವರ ಕುಮಾರ ಮತ್ತು ಅವರ ತಮ್ಮಂದಿರಾದ ನವಾಬ್ ಮುನೀರುದ್ ಮುಲ್ಕಯವರ ಕುಮಾರಿ, ಇವರುಗಳ ಸಂರಕ್ಷಣಕಾರ್ಯವನ್ನು ತಾವೇ ವಹಿಸಿಕೊಳ್ಳುವದಕ್ಕೆ ಏರ್ಪಾಡು ಮಾಡಿರುವಂತೆ ಅಲ್ಲಿನ ಬಾತಮೀದಾರನೊಬ್ಬಾತನು ಒಂದಾನೊಂದುಪತ್ರಿಕೆಗೆ ಬರೆಯುತ್ತಾನೆ

Extention of a railway.—ಕಳೆದ ಮೇ ತಿಂಗಳಲ್ಲಿ ಮಚಲೀಬಂದರ್ ನಿವಾಸಿಗಳು,ನಿಜಾಂ ಸರ್ಕಾರ್ ರೆಯಿಲ್‌ರಸ್ತೆಯೂ ಬಳ್ಳಾರಿ ಕೃಷ್ಣಾ ರೆಯಿಲ್‌ರಸ್ತೆಯೂ ಬೆಜವಾಡದಲ್ಲಿ ಸಂಧಿಸುವದರಿಂದ ಅದನ್ನು ಅಲ್ಲಿಂದ ಮಚಲೀಬಂದರ್‌ವರಿವಿಗೆ ಬಡಾಯಿಸಬೇಕೆಂದು ವೈಸ್‌ರಾಯಿ ಗವರ್ನರ್ ಜನರಲ್ ಸಾಹೇಬರವರಿಗೆ ಅರ್ಜಿ ಬರೆದುಕೊಂಡಿದ್ದರು. ಅದು ಈಗ ವೈಸ್‌ರಾಯಿಯವರ ಅನು

ಕಾಲವಾದ ಯೋಚನೆಗೆ ವಿಷಯವಾಗಿ, ಚೀಫ್ ಇಂಜನಿಯರವರ ಮೂಲಕ ಆವಿಷಯದಲ್ಲಿ ಆವಶ್ಯಕಗಳಾದ ವಿಚಾರವನ್ನೆಲ್ಲ ನಡೆಸಿ ಇಂಡ್ಯಾ ಗವರ್ನಮೆಂಟಿಗೆ ರಿಪೋರ್ಟುಮಾಡತಕ್ಕದ್ದೆಂದು ಮದರಾಸ್ ಗವರ್ನಮೆಂಟಿನವರು ಅಪೇಕ್ಷಿಸಲ್ಪಟ್ಟರೆಂತ ತಿಳಿಯಬರುತ್ತದೆ.

The — ಮೈಸೂರು ಪುರದ ಅರಸರವರು ದೇಹಾಲಸ್ಯದಬಗ್ಗೆ ಕಾಶೀಗೆ ಹೋಗಿ ಅಲ್ಲಿ ವಿಜಯನಗರದ ಮಹಾರಾಜರವರ ಅನುದಬಾಗ್ ಯೆಂಬತೋಟದಲ್ಲಿ ಇಳಿದಿರಲು ಒಂದುದಿನರಾತ್ರಿ ಅವರ ಮೇಜಿನಮೇಲಿಟ್ಟಿದ್ದ ಸುಮಾರು ೪,೦೦೦ ರೂಪಾಯಿಗಳ ಕ್ರಯಬಾಳುವ ನಗಗಳು ಅಡಗಿದ್ದ ಒಂದು ಸಂದೂಕ್ ಕಳವಾಗಿಹೋಯಿತು. ಇದು ಪತ್ತೆಯಾಗಲಿಲ್ಲವು. ಅರಸರವರು ಕಾಶಿಯಲ್ಲಿ ಕೆಲವುಕಾಲ ವಾಸಮಾಡಬೇಕೆಂದು ಯೋಚಿಸುತಲಿದ್ದಾಗ್ಯೂ ಆರೋಗ್ಯ ಸ್ಥಿತಿಯ ಮೇಲೆ ಅಲ್ಲಿ ವಾಸಕ್ಕಿಂತಲೂ ಸ್ವದೇಶವಾಸ ಯೋಗ್ಯವೆಂದು ಯೋಚಿಸಿ ಬೆಂಗಳೂರಿಗೆ ಪ್ರಯಾಣಮಾಡುತ್ತ ಇರುತ್ತಾರೆ.

The Maharaja of Travancore — ತಿರುವಾಂಕೂರು ಮಹಾರಾಜರವರು ಕಾಶೀಕ್ಷೇತ್ರಕ್ಕೆ ಯಾತ್ರಾರ್ಥವಾಗಿ ಕೆಲವುದಿನಗಳಿಂದೆ ಮಾರ್ಗವಾಗಿ ಮದರಾಸಿಗೆ ದಯಮಾಡಿದ್ದರಷ್ಟೆ. ಸವಾರಿಯವರು ಈ ತಿಂಗಳ ೭ ನೇ ತಾರೀಖಿನಲ್ಲಿ ಎಂ ... ಸ್ಟೀಮರ ... ಸುಮಾರು ೧೫೦ ಮಂದಿ ಪರಿವಾರ ಸಹಿತರಾಗಿ ... ಸ್ಪೆಷಲ್ ಎಕ್ಸ್‌ಪ್ರೆಸ್ ಟ್ರೈನಿನಲ್ಲಿ ಕಾಶಿಗೆ ಪ್ರಯಾಣಮಾಡಿದರು. ಆಕಾಲದಲ್ಲಿ ನಡೆದ ... ಗೌರ್ನರ್ ... ಮತ್ತು ನೇಟಿವ್ ಅಧಿಕಾರಿಗಳೂ, ಬಂಧುಮಿತ್ರರೂ ಮುಂತಾದ ಅನೇಕರ ಹಾಜರಿದ್ದು ಶ್ರೀಮನ್ಮಹಾರಾಜರವರನ್ನು ಸಾಗಕಳುಹಿಸಿದರು.

The Mahant of Tirupathi — ತಿರುಪತಿ ಮಹಂತರವರು ನಾಲ್ಕು ಸಂವತ್ಸರ ಕಠಿಣ ಶಿಕ್ಷೆ ಸಹಾ ವಿಧಿಸಲ್ಪಟ್ಟಿರಷ್ಟೆ. ಈಗ ಇವರು ತಿರುಪತಿಯಿಂದ ವೇಲೂರು ಜೈಲಿಗೆ ಕಳುಹಿಸಲ್ಪಟ್ಟಿರುತ್ತಾರೆ. ಅಲ್ಲಿಗೆ ಹೋಗುವ ಕಾಲದಲ್ಲಿ ಬಂದಿದ್ದ ಪೊಲೀಸ್ ಸಹರಡಿಯೊಡನೆ ಸ್ವತ ಗಾಡಿಯಲ್ಲಿ ಕೂತು ಹೋಗುವದಕ್ಕೆ ಅವಕಾಶ ಕೊಡಲ್ಪಟ್ಟರು. ಚಿತ್ತೂರಲ್ಲಿರುವ ಕಾಲದಲ್ಲಿ ಅಲ್ಲಿನ ಜಡ್ಜಿ ನೆಲೆಗೊಟ್ಟುವದಕ್ಕೆ ಬೇಕಾದ ತಮ್ಮ ಸುದತಿಯನ್ನು ಪೆಟ್ರೋಲ ಕಚೇರಿದವರ ವಶಕ್ಕೆ ಕೊಟ್ಟರು. ಅದರ ಕೆಳ ೧೪,೦೦೦ ರೂಪಾಯಿಗಳ ಕ್ರಯ ಬಾಳುವಷ್ಟು ಚಿನ್ನದ ಒಡವೆಗಳಿದ್ದವು. ಮಹಂತರವರು ಜೈಲಿಗೆ ಕಳುಹಿಸಲ್ಪಟ್ಟದ್ದು ಮೊದಲು ಮಣ್ಣು ನೀರು ಹಾ ಇವರು ವರ್ತನವನ್ನು ಭುಜಿಸುವದಿಲ್ಲ ವೈ ಅವರಿಗೆ ಈಗ ವಿಧಿಸಲ್ಪಟ್ಟಿರುವ ದಂಡನೆಯು ಹೈಕೋರ್ಟಿನವರಿಂದ ಕಾಯಂ ಪಡದಲ್ಲ ... ಪಕ್ಷಕ್ಕೆ ಮದರಾಸ್ ಪೆನಿಟೆನ್ಷರಿ ಜೈಲಿಗೆ ಕಳುಹಿಸಲ್ಪಡುವರೆಂದು ಕಾಣುವೆ. ಈ ತಿಂಗಳ ಗುರ್ವೇ ತಾರೀಖಿನಲ್ಲಿ, ಜೈಲಿನಲ್ಲಿರುವಾಗಲೇ ಇಪ್ಪತ್ತೈದು ವರ್ಷಗಳ ವಯಸ್ಸಿನ ಮಹಾವೀರದಾಸ್ ಯೆಂಬುವರನ್ನು ತಮ್ಮ ಸ್ಥಾನಕ್ಕೆ ನಿಯಮಿಸಿ, ತಿರುಪತಿ ದೇವಸ್ಥಾನ ಮತ್ತು ಅಲ್ಲಿನ ತಮ್ಮ ಮಠ ಇವುಗಳ ವಿಷಯದಲ್ಲಿ ತಮಗಿರುವ ವಿಶಿಷ್ಟ ಬಾಧ್ಯತೆಗಳನ್ನು ಅವರಿಗೆ ಒಪ್ಪಿಸಿಬಿಟ್ಟರು. ಈ ಯೇರ್ಪಾಟಿನ ಮೇಲೆ ಸಿವಿಲ್‌ಕೋರ್ಟುಗಳಲ್ಲಿಯೂ ಮದರಾಸ್ ಹೈಕೋರ್ಟಿನಲ್ಲಿಯೂ ವ್ಯಾಜ್ಯ ತರಲ್ಪಡುವದು ಕಾಣುತ್ತಿದೆ.

The Mahant of Tirupathi — ಈ ತಿಂಗಳ ೭ನೇ ತಾರೀಖಿನಲ್ಲಿ ಬ್ಯಾರಿಸ್ಟರ್ ಮೆ|| ನಾರ್ಟನ್ ರವರು ಮದರಾಸ್ ಹೈಕೋರ್ಟಿನಲ್ಲಿ ರಾಜಾಗಿ ತನ್ನ ಕಕ್ಷಿಗಾರರಾದ ತಿರುಪತಿ ಮಹಂತರವರ ಕೇಸುವಿಚಾರಣೆ ವಿಧಿಸಲ್ಪಟ್ಟಿರುವ ... ಸಮಯದಲ್ಲಿ ತಾವು ಮಾಡುವ ಅಪೀಲಿನವಿಷಯದಲ್ಲಿ ಹೈಕೋರ್ಟಿನವರು ಕೊಡುವ ತೀರ್ಮಾನಕ್ಕೆ ಬಿಳಬಿಟ್ಟು ಭಗವಾನ್‌ದಾಸರನ್ನು ಜಾಮೀನ್ ಮೇಲೆ ಬಿಡುಗಡೆಮಾಡಬೇಕೆಂದು ಕೇಳಿಕೊಂಡದ್ದಲ್ಲದೆ ಮಹಂತರವರು ಕಾನೂನಿನ ಅರ್ಥರೀತ್ಯಾ ದೇವಸ್ಥಾನದ ಟ್ರಸ್ಟಿಯಲ್ಲವೆಂತಲೂ, ದೇವಸ್ಥಾನದವ್ಯವಹಾರವನ್ನು ಜರ್ಗಮಾಡುವವಿಷಯದಲ್ಲಿ ಮಹಂತರವರು ಅವರಹಿರಿಯರನಾಗರ್ ವನ್ನವಲಂಬಿಸಿ ನಡೆಸುತಬಂದರೆಂತಲೂ ವಾದಿಸಿ ಇವರದಿ ತಿಳಿಸಲ್ಪಡುವಂತೆ ಅರ್ಜಿ ಸಂ. ದಾಖಲ್ಮಾಡಿದರು. ಹೈಕೋರ್ಟಿನವರ ತೈಸಲಿಗೆ ಬಿಳಬಿಟ್ಟು ಅವರಿಗೆ ಯುಕ್ತವಾಗಿ ತೋರುವಷ್ಟು ರತ್ನಗಳ ಮತ್ತು ನಗದು ಜಾಮೀನ್‌ಮೇಲೆ ಇವರದಿ ತಿಳಿಸಲ್ಪಡುವ ಕಾರಣಗಳಬಗ್ಗೆ ಮಹಂತರವರನ್ನು ಬಿಡುಗಡೆಮಾಡಬೇಕು ೧ನೇ — ಮಹಂತರವರಿಗೆ ವಿಧಿಸಲ್ಪಟ್ಟಿರುವ ಶಿಕ್ಷೆ ಕಾಯಂ ಮಾಡಲ್ಪಡುವದಕ್ಕೆ ಪ್ರೂಫ್, ಅವರು ಅನ್ಯರಿಂದ ನಿಯಮಿಸಲ್ಪಟ್ಟ ಅಧಿಕಾರಿಯಲ್ಲವಾಗಿ ಅವರಿಗೆ ವಿಧಿಸಲ್ಪಟ್ಟ ದಂಡನೆಯು ಔಚಿತ್ಯವು ಸಂಶಯಾಸ್ಪದವಾದದು. ೨ನೇ — ಅರ್ಜಿದಾರರು ಅವರ ಅಪೀಲಿನ ಪರ್ಯವಸಾನದಂತೆ ನಡೆದುಕೊಳ್ಳುವದಕ್ಕೆ ಸನ್ನದ್ಧರಾಗಿ ಮುಚ್ಚಳಿಕೆವುಳ್ಳವರಾಗಿಯೂ ಇರುವದಲ್ಲದೆ, ಅವರು ಮಠಾಧಿಕಾರಿಗಳೂ ಲೌಕಿಕಸ್ಥಾನವುಳ್ಳವರೂ ಗೌರವಸ್ಥರಾಗಿರುವದರಿಂದ, ಅವರ ಅಪೀಲ್ ನಿಷ್ಪ್ರಯೋಜಕ ವಾಗುವಪಕ್ಷಕ್ಕೆ ಕೋರ್ಟಿನಕಾಲವಲ್ಲಿ ಸಿಕ್ಕಲಾರರೆಂದು ಹೆದರುವದಕ್ಕೆ ಕಾರಣವಿಲ್ಲವು. ೩ನೇ — ಅರ್ಜಿದಾರರು ಆತ್ಮಾಭಿಮಾನದಿಂದಲೂ ಸ್ಥಾನಗೌರವದಿಂದಲೂ, ಪ್ರತಿದಿನವೂ ಕೆಲವು ವೈದಿಕಕಾರ್ಯಗಳು ಮಾಡಬೇಕಾದವರಾಗಿರುತ್ತಾರೆ. ಅವುಗಳಂತ್ಯಜಿಸಿದರೆ ಯಾತ್ರಾರ್ಥ ದೇವತಾಸಾನ್ನಿಧ್ಯಕ್ಕೆ ಬರತಕ್ಕ ಪರದೇಶಿಗಳಿಗೆ ಅನಾನುಕೂಲವೂ ಹಾನಿಯೂ ಉಂಟಾಗುವವು. ೪ನೇ — ಅವರ ಪ್ರಸ್ತುತಸ್ಥಿತಿಯಲ್ಲಿ ಆಪೀಲ್ ವ್ಯವಹಾರವನ್ನು ನಡೆಸಲು ತಕ್ಕ ವ್ಯವಸ್ಥೆಯಾದ ಅವಕಾಶವಿತ್ತಿಯನ್ನೊಂದುವದಕ್ಕೆ ಅಶಕ್ತರಾಗಿರುತ್ತಾರೆಂಬದು.

ಜಡ್ಜಿಗಳವರು ಈವಿಷಯದಲ್ಲಿ ಗವರ್ನಮೆಂಟಿನವರಿಗೆ ನೋಟೀಸುಕೊಡಬೇಕೆಂತಲೂ ಕೆಳಕೋರ್ಟಿನ ತೈಸಲನ್ನು ನೋಡಬೇಕೆಂತಲೂ ಅಭಿಪ್ರಾಯಪಟ್ಟು ಮೊಕದ್ದಮೆಯನ್ನು ಈ ತಿಂಗಳ ೧೦ನೇ ತಾರೀಖಿಗೆ ನಿಲ್ಲಿಸಿಬಿಟ್ಟಿರುತ್ತಾರೆ.

LOCAL AND PROVINCIAL NEWS

ಒಳದೇಶದ ಮತ್ತು ತಾಲ್ಲೂಕಿನ ಜಾತಿವೃತ್ತಾಂತಗಳು

The Matriculation Examination — ಈಸಲದ ಮೆಟ್ರಿಕ್ಯುಲೇಷನ್ ಪರೀಕ್ಷೆಯ ಫಲಿತಾಂಶ ತಿಳಿಯಬಂದವರಲ್ಲಿ ಬೆಂಗಳೂರಿನಲ್ಲಿ ಪರೀಕ್ಷಿಸಲ್ಪಟ್ಟವರಲ್ಲಿ ಸೇಕಡ ೫೩ ಮಂದಿ ಪಾಸ್ ಮಾಡಿರುತ್ತಾರೆ.

A garden party. — ಈ ದಿನ ಸಾಯಂಕಾಲ ಶ್ರೀಮನ್ಮಹಾರಾಜರವರ ಉದ್ದೇಶ್ಯ ರೆಸಿಡೆಂಟರ ಬಂಗ್ಲೆಯಲ್ಲಿ ಉದ್ಯಾನೋತ್ಸವ ನಡೆಯುವದು. ಇದರ ಬಗ್ಗೆ ಇಲ್ಲಿನ ಯೂರೋಪಿಯನ್ ಮತ್ತು ನೇಟಿವ್ ದೊಡ್ಡಮನುಷ್ಯರನೇಕರಿಗೆ ಆಹ್ವಾನ ಪತ್ರಿಕೆಗಳು ಕಳುಹಿಸಲ್ಪಟ್ಟಿರುತ್ತವೆ.

The weather — ಈಚೆಗೆ ಬಿಸಲಿನಝಳ ಬಹಳ ಹೆಚ್ಚು ವೃದ್ಧಿಯಾಗುತಲಿದೆ. ಕೆರೆಕುಂಟೆಗಳಲ್ಲಿ ನೀರು ಬತ್ತುವದಕ್ಕೆ ಪ್ರಾರಂಭವಾಯಿತು. ಮಣ್ಣು ಗಾಳಿಯಬಾಧೆ ಹೆಚ್ಚುತ್ತ ರೋಗಾದ್ಯುಪದ್ರವಗಳು ವಿಶೇಷವಾಗಿ ಯಾವದೂ ಇಲ್ಲ. ಹೈ ... ಪದಾರ್ಥಗಳ ಧಾರಣೆಗಳು ಪ್ರಾಯಶಃ ಒಂದೇವಿಧವಾಗಿರುತ್ತವೆ.

The Daily Post. — ಇಲ್ಲಿನ ವಿಂಟರ್ ಸ್ಟೀಂ ಪ್ರೆಸ್ಸಿನಲ್ಲಿ ಕೆಲವು ಸಂವತ್ಸರಗಳಕಾಲದಮೊದಲು ಪ್ರಾರಂಭ ಮಾಡಲ್ಪಟ್ಟಿರುವ ಡೆಯಿಲಿ ಪೋಸ್ಟ್ ಎಂಬ ಇಂಗ್ಲೀಷು ಪತ್ರಿಕೆಯ ಪ್ರೊಪ್ರೈಟರಾದವರು ಜೆ ... ಯು ... ಪತ್ರಿಕೆಯ ವಿಷಯದಲ್ಲಿ ತಮಗುಂಟಾಗಿದ್ದ ಹಿತಸ್ಪೃಹ ... ದ್ಯತೆಗಳು ಅವರ ಮಗನಾದ ಮೆ|| ರಿಚ್‌ಮಂಡ ಜೇಜೆಯವರಿಗೆ ಒಪ್ಪಿಸಿರುತ್ತಾರೆ.

Opening of post and telegraph offices — ಇದರಡಿ ತಿಳಿಸಲ್ಪಡುವ ಸ್ಥಳಗಳಲ್ಲಿ ಪೋಸ್ಟಾಫೀಸುಗಳು ಮತ್ತು ಟೆಲಿಗ್ರಾಫ್ ಆಫೀಸುಗಳು ಈಚೆಗೆ ಯೇರ್ಪಡಿಸಲ್ಪಟ್ಟಿರುತ್ತವೆ —

ಅರಸೀಕೆರೆ ಮತ್ತು ಬೀರೂರಲ್ಲಿ ಟೆಲಿಗ್ರಾಫ್ ಆಫೀಸುಗಳು.

ಸಕಲೇಶಪುರ ಮತ್ತು ಹಾಸನದಲ್ಲಿ ಟೆಲಿಗ್ರಾಫ್ ಪೋಸ್ಟಾಫೀಸುಗಳು ಸೇರಿರುತ್ತವೆ.

ಶಿವಮೊಗ್ಗೆಯಲ್ಲಿ ಟೆಲಿಗ್ರಾಫ್ ಆಫೀಸು.

An honorarium refused — ರಾಣಿಸೂರಲ್ಲಿರುವ ಮದರಾಸ್‌ಗವರ್ನಮೆಂಟಿಗೆಸೇರಿದ ಜಾಸ್ತೀವನಗಳನ್ನು ರೂಲ್ಸ್ ಅನುಸರಿಸಿ ಹರಾಜ್‌ಮೂಲಕ ವಿಕ್ರಯಿಸ ಬೇಕಾಗಿದ್ದಾಗ್ಯೂ ಕೆಲವುಕಾರಣಗಳಮೇಲೆ ಸ್ಥಳದಲ್ಲೀ ಸದರೀವನಗಳನ್ನು ವಿಕ್ರಯಿಸಿ, ಆ ವಿಷಯದಲ್ಲಿ ಮೆಹನತ್ ಮಾಡಿದ ಮೆ|| ಗೋಪಾಲಯ್ಯಂಗಾರ್ ಮತ್ತು ಮೆ|| ರಂಗರಾಜೇ ಅರಸಿನವರಿಗೆ ಬಹುಮಾನ ಕೊಡಬೇಕೆಂದು ಕರ್ನಲ್ ಹೇ ಸಾಹೇಬರವರು ಮದರಾಸ್ ಗವರ್ನಮೆಂಟಿಗೆ ಮಾಡಿದ ಶಿಫಾರಸ್ಸನ್ನು, ರೂಲ್ಸಿಗೆ ವ್ಯತಿರಿಕ್ತವಾಗಿ ಮಾಡಿದ ಕಾರ್ಯವೆಂಬ ಕಾರಣದಮೇಲೆ ಸದರೀ ಗವರ್ನಮೆಂಟಿನವರು ಅಂಗೀಕರಿಸಲಿಲ್ಲವೆಂದು ಮದರಾಸಿನಮೆಯಿಲ್ ಪತ್ರಿಕೆಯ ಮೂಲಕ ತಿಳಿಯಲಾದೆವು.

Entertainment to the Maharajah — ಈಚೆ ಆದಿತ್ಯವಾರದದಿನ ಈ ಸಂಸ್ಥಾನದ ದಿವಾನರಾದ ಮ|| ಕೆ. ಶೇಷಾದ್ರಿಅಯ್ಯರವರ ಕುಮಾರರಾಯರಿಗೆ ವಿವಾಹ ಮಹೋತ್ಸವ ಜೆಳದಸುಗತಿಯನ್ನು ಕಳೆದವಾರದ ಈಪತ್ರಿಕೆಯಮೂಲಕ ಸೂಕ್ಷ್ಮವಾಗಿ ತಿಳಿಸಿರುತ್ತೇವೆಯಷ್ಟೆ. ಅದುಮೊದಲು ಪ್ರತಿದಿನದಲ್ಲೂ ಶುಭಪ್ರಯುಕ್ತವಾದ ವಿನೋದಗಳೂ ಬ್ರಾಹ್ಮಣ ಸಂತರ್ಪಣೆಯೂ ನಡೆದುಬಂದದ್ದಲ್ಲದೆ ಕಳೆದ ಬುಧವಾರದದಿನ ಅತಿ ವೈಭವದೊಡನೆ ಪುಷ್ಪವಾಟಿಕೆ ಮೆರವಣಿಗೆ ಸಹ ನಡೆಯಿತು. ಕಳೆದ ಶುಕ್ರವಾರದ ದಿನ ಹಗಲು ೩ ಘಂಟೆಗೆ ಶ್ರೀಮನ್ಮಹಾರಾಜರವರ ಸವಾರಿಯು ದಿವಾನರಮನೆಗೆ ಚಿತ್ತೈಸಿ ಫಲಾಹಾರನವೇದನೆ ... ಮದರಾಸಿನಿಂದ ಬಂದಿದ್ದ ... ಕರೆಯಿಸಲ್ಪಟ್ಟಿದ್ದ ವಾರಾಂಗನೆಯರ ಗಾನವೂ, ತರುವಾಯ ಈ ಸ್ಥಳದ ನಾಯಕಸಾನಿಯರ ನಾಟ್ಯವೂ ರಾತ್ರಿ ೭ ಘಂಟೆಯವರೆಗೆ ಜರಗಿದವು. ಇವೆಲ್ಲ ಆದತರುವಾಯ ಹಿಂದಿನವಾರದಲ್ಲಿ ನಮ್ಮ ಪ್ರಸ್ತಾಪಕ್ಕೆ ವಿಷಯವಾಗಿದ್ದ ರಸಿಕ ಜನಾಕರ್ಷಣೀ ... ಯಿಂದ ದಮಯಂತೀ ಸ್ವಯಂವರವೆಂಬ ಆಟ ಆಡಲ್ಪಟ್ಟಿತು. ಇವು ಸರ್ವ ವಿನೋದ ಹಾಳಿ ... ಉಂಟಾದ ಹೃದಯಂಗಮವಾದ ತಮ್ಮ ಆಹ್ಲಾದವನ್ನು ಶ್ರೀಮನ್ಮಹಾರಾಜರವರು ತಾಂಬೂಲಪೂರ್ವಕ ವ್ಯಕ್ತಗೊಳಿಸಿ ಸಮಯ ವ್ಯರ್ಥಸ್ವರ್ಗ ... ತರುವಾಯ ರಾತ್ರಿ ೯ಘಂಟೆಗೆ ಶ್ರೀಮನ್ಮಹಾರಾಜರವರಿಗೆ ದಿವಾನರಗೃಹದಲ್ಲಿ ... ಜನನವೇ ಮ, ಗಂಧ ಪುಷ್ಪ ತಾಂಬೂಲಾದ್ಯುಪಚಾರಗಳೆಲ್ಲವು ಪೂರ್ತಿಯಾಗಿ ಕೆಲವು ನಿಮಿಷಗಳ ಕಾಲ ಬಾಣವಿನೋದಗಳು ಜರಿಗಿಸಲ್ಪಟ್ಟ ಮೇಲೆ ಶ್ರೀಮನ್ಮಹಾರಾಜರವರ ಸವಾರಿಯು ಅರಮನೆಗೆ ಚಿತ್ತೈಸಿತು.

THE MYSORE GAZETTE

ಮೈಸೂರು ಗೆಜೆಟ.

ಶ್ರೀಮನ್ಮಹಾರಾಜಾಧಿರಾಜರವರ ಸರ್ಕಾರದಿಂದ ಕೊಡಲ್ಪಟ್ಟ ಉಪ್ಪರಿಗಾಮಾನುಗಳು

ನಂ. ೩೦೩, ೨೦ ನೇ ಜನವರಿ — ಮೈಸೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮೆ|| ಅಣ್ಣಾಜಿ ರಾಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ನಂ. ೩೦೪ — ಹಾಸನ ಡಿಸ್ಟ್ರಿಕ್ಟ್ ೧ ನೆ ಸರ್ಜನ್ ಎ. ಎಸ್. ಅಚ್ಯುತರಾಯರಿಗೆ ಫೆಬ್ರುವರಿ ೩ ನೇ ತಾರೀಖ್ ಮೊದಲು ಅಥವಾ ಅವರದನ್ನು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಅಚ್ಯುತರಾಯರು ರಜಾಮೇಲಿರುವಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಅವರ ಕೆಲಸವನ್ನು ಬದಲೀ ನೋಡಿಕೊಳ್ಳ ಲಿಕ್ಕೆ ಸಬ್ ಅಸಿಸ್ಟೆಂಟ್ ಸರ್ಜನ್ ಐ. ಎಸ್. ಕೃಷ್ಣಸ್ವಾಮಿ ಅಯ್ಯರವರು ನೇಮಕರಾಗಿರಲ್ಪಟ್ಟಿರುತ್ತಾರೆ.

ನಂ. ೩೦೫ — ಚಿತ್ರದುರ್ಗ ಡಿಸ್ಟ್ರಿಕ್ಟ್ ಅಸಿ ಕಮಿಷನರ್ ಮೆ|| ವೆಂಕಟಾದ್ರಿಯವರಿಗೆ, ಸಿವಿಲ್ ಲೀವ್‌ಕೋಡ್ (೬ನೇ ಭಾಗ) ೧೩೮ ನೇ ಶೆಕ್ಷನ್ ಅನುಸರಿಸಿ ಮುಸುಂ ಇಲ್ಲದ ಮೂರು ತಿಂಗಳ ಕಾಲ ಎಕಸ್ಟ್ರಾರ್ಡಿನರೀ ರಜಾ ಕೊಡಲ್ಪಟ್ಟಿರುತ್ತದೆ.

ನಂ. ೩೦೬, ೧ನೇ ಫೆಬ್ರುವರಿ — ಮೆ|| ಫ್ರಾಂಜಿ ಬಕ್ಕಾಜಿಮೆಂಬವರು, ಸನ್ ೧೮೯೦ನೇ ಇಸವಿ ಜನವರಿ ೧೧ನೇ ತಾರೀಖ್ ಮೊದಲು ಮೂರು ತಿಂಗಳಕಾಲ ಆಜಮಾಯಿಷಿ ತರೀಕೆ ೪ನೇಗ್ರೇಡ ಪೊಲೀಸ್ ಅಸಿಸ್ಟೆಂಟ್ ಕಮಿಷನರಾಗಿ ನೇಮಕರಾಗಲ್ಪಟ್ಟಿರುತ್ತಾರೆ.

ನಂ ೩೦೮ — ಸಿವಿಲ್ ಲೀವ್‌ಕೋಡ್ ೬೬ನೇ ಶೆಕ್ಷನ್ ಅನುಸರಿಸಿ, ಲೆಜಿಸ್ಲೆಟಿವ್ ಸೆಕ್ರಟರಿ ವ ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್‌ವರಾದ ಮೆ|| ಎಸ್. ವೆಂಕಟವರದಯ್ಯಂಗಾರ್, ಬಿ. ಎ. ಎಂ. ಎಲ್. ಯವರು ೧೮೯೦ನೇ ಮಾರ್ಚ್ ೩೦ನೇ ತಾರೀಖ್‌ವರಿವಿಗೆ ಅಥವಾ ಅವರುಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ ೩೦೯ — ಗವರ್ನಮೆಂಟ್ ಅಡ್ವೊಕೇಟ್ ಬ್ಯಾರಿಸ್ಟರ್ ಮೆ|| ವಿಶಾಲಾಕ್ಷಿಅಯ್ಯರವರು. ಮೆಸ್ಟರ್ ಎಸ್ ವೆಂಕಟವರದಯ್ಯಂಗಾರ್, ಬಿ. ಎ. ಎಂ. ಎಲ್ ಯವರ ಸ್ಥಾನದಲ್ಲಿ ಲೆಜಿಸ್ಲೆಟಿವ್ ಸೆಕ್ರಟರಿ ಕೆಲಸವನ್ನು ಬದಲೀನೋಡುವಂತೆ ನೇಮಕರಾಗಲ್ಪಟ್ಟಿರುತ್ತಾರೆ.

ನಂ. ೩೧೦ — ಲೆಜಿಸ್ಲೆಟಿವ್ ಸೆಕ್ರಟರಿಯಾದ ಬ್ಯಾರಿಸ್ಟರ್ ಮೆ|| ಸಿ. ವಿಶಾಲಾಕ್ಷಿಅಯ್ಯರವರು, ಧಾಂಗಾಮಿತರೀಖ್, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್‌ಜನರಲಾಗಿಯೂ ಕಂಪೆನಿಗಳ ಎಕ್ಸ್ ಆಫಿಷಿಯೊ ರಿಜಿಸ್ಟ್ರಾರಾಗಿಯೂ ನೇಮಕರಾಗಲ್ಪಟ್ಟಿರುತ್ತಾರೆ.

ನಂ. ೩೧೧ — ಇವರಡಿಬರುವ ಅಸಿಸ್ಟೆಂಟ್‌ಕಮಿಷನರುಗಳ ವರ್ಗಾವಣೆ ಹುಕುಂ ಮಾಡಲ್ಪಟ್ಟಿರುತ್ತವೆ.

೧ ಮೆ. ನಾಮಕಲ್‌ರಾವ್ — ಬೆಂಗಳೂರು ಡಿಸ್ಟ್ರಿಕ್ಟಿನಿಂದ ಮೈಸೂರು ಡಿಸ್ಟ್ರಿಕ್ಟಿಗೆ.

೨ — ಮೆ. ಬಿ. ಜಿ. ಕೃಷ್ಣಯ್ಯಂಗಾರ್ — ಹಾಸನಡಿಸ್ಟ್ರಿಕ್ಟಿನಿಂದ ಬೆಂಗಳೂರುಡಿಸ್ಟ್ರಿಕ್ಟಿಗೆ

ನಂ. ೩೧೨ — ಹಾಸನಡಿಸ್ಟ್ರಿಕ್ಟ್ ಅಸಿ ಕಮಿಷನರ್ ಮೆಸ್ಟರ ಬಿ. ಜಿ. ಕೃಷ್ಣಯ್ಯಂಗಾರ್‌ರವರು ಅವರುಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ೧೫ ದಿನಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತ್ತಾರೆ.

ನಂ|| ೩೧೩ — ೧ನೇ ತರಗತಿ ಅಮಲ್ದಾರ್ ಕೆ ರಾಮಾನುಜಯ್ಯಂಗಾರ್‌ರವರು ೪ನೇ ತರಗತಿ ಆಫೀಷಿಯೇಟಿಂಗ್ ಅಸಿಸ್ಟೆಂಟ್ ಕಮಿಷನರಾಗಿ ನೇಮಕರಾಗಲ್ಪಟ್ಟು ಹಾಸನ ಡಿಸ್ಟ್ರಿಕ್ಟಿಗೆ ನಿಯಮಿಸಲ್ಪಟ್ಟಿರುತ್ತಾರೆ.

೧೫ನೇ ಅಮಲ್ದಾರ್ ಮಹಮ್ಮದ್ ರಜಾಯವರು ಚೆನ್ನರಾಯಪಟ್ಟಣ ತಾಲ್ಲೂಕು ಇನ್‌ಚಾರ್ಜಿನಲ್ಲಿರತಕ್ಕಬಗ್ಗೆ ೪ನೇ ತರಗತಿ ಆಫೀಷಿಯೇಟಿಂಗ್ ಅಮಲ್ದಾರಾಗಿ ನೇಮಕರಾಗಲ್ಪಟ್ಟಿರುತ್ತಾರೆ.

ನಂ. ೩೧೪ — ಪುರುಷರ ದಾರಣೆ ಹೆಚ್ಚಾಗಿರುವದರಿಂದ, ಸನ್ ೧೮೯೦ ನೇ ಇಸವಿ ಫೆಬ್ರುವರಿ ಗುರ್ವೇ ತಾರೀಖ್ ಮೊದಲು ಒಂದು ತಿಂಗಳಕಾಲ, ಸಿರಿಸ್ತೆದಾರ್ ಡಿಪಾರ್ಟ್‌ಮೆಂಟುಗಳಸಬಾರದಿಗೆ ಇವರಡಿ ಬರುವ ದರದಂತೆ ಸಂಬಳದ ಅನುಭತ್ಯ ಕೊಡುವಂತೆ ಶ್ರೀಮನ್ಮಹಾರಾಜರವರು ಹುಕುಂ ಮಾಡಿರುತ್ತಾರೆ —

ಹುರಳಿ ಆಧಮಪಕ್ಷ ರೂಪಾಯಿ ೧ಕ್ಕೆ ೧೬ ಸೇರುಗಳಿಗೆ ಕಮ್ಮಿಯಾಗಿ ಮಾರಲ್ಪಡುವಲ್ಲಿ ಸ ಚರೀ ದರಕ್ಕೆ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನ ರಿಂದ ಸರ್ಟಿಫೈ ಮಾಡಲ್ಪಡುವ ಆ ತಿಂಗಳ ನಿರ ಖಿನ ದರವು ಕಮ್ಮಿಯಾಗಿ ಕಾಣಬಂದರೆ ೧೬ಸೇ ರಿಗೆ ಛರ್ತಿಯಾಗಿ ಸವಾರನೊಬ್ಬನಿಗೆ ದಿನ ೧ಕ್ಕೆ ೩ ಸೇರುಗಳ ಮೇರೆ ಲೆಕ್ಕಮಾಡಿಕೊಡತಕ್ಕದ್ದು.

ನಂ. ೩೧೩.—೧೮೮೯ನೇ ಇಸವಿ ಜನ ವರಿ ೨೬ ನೇ ತಾರೀಖ್‌ನೊಳು ಚಿಕ್ಕಮಗಳೂ ರು ಪೋಸ್ಟಾಫೀಸ್‌ನಲ್ಲಿ ಗವರ್ನಮೆಂಟು ಟೆಲಿಗ್ರಾಫ್ ಆಫೀಸ್ ಇಡಲ್ಪಟ್ಟಿತು.

ನಂ ೩೨೦, ೮ ನೇ ಫೆಬ್ರುವರಿ.—ತುಮಕೂ ರು ಡಿಸ್ಟ್ರಿಕ್ಟು ಸಬ್ ಅ|| ಕನ್ಸರ್ವೇಟರ್ ಮ|| ಬಿ. ಶ್ರೀನಿವಾಸ ರಾಯರವರು ಅವರು ಪಯೋಗಿ ಸಿಕೊಳ್ಳುವ ತಾರೀಖ್ ಲಾಗಾಯತು ೧೦ ದಿನಗ ಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

TELEGRAMS.
ತಂತಿ ವೃತ್ತಾಂತಗಳು.

ಲಂಡನ್, ೬ನೇ ಫೆಬ್ರುವರಿ.—ಲಾರ್ಡ್ ಹಾರ್ಟಿಂಗ್ ಟನ್‌ಯವರು ಈ ತಿಂಗಳ ೬ನೇ ತಾರೀಖ್ ಬೃಹ ಸ್ಪತಿವಾರದದಿನ ಕೈರೊ ಪಟ್ಟಣಕ್ಕೆ ಪ್ರಯಾ ಣವಾದರು.

ಲಂಡನ್, ೩ನೇ ಫೆಬ್ರುವರಿ—ಮ|| ಬ್ರಾಡ್ಲಾ ಯವರು ಮಾಡಿರುವ ಇಂಡ್ಯದೇಶದ ಮಂತ್ರಾ ಲೋಚಕ ಸಮಾಜಗಳನ್ನು ಕುರಿತ ಮಸವಿದಾ ಕಾನೂನ್ ವಿಷಯದಲ್ಲಿ ಪಾರ್ಲಿಮೆಂಟ್ ಮೆಂಬರುಗ ಳಾದ ಮ|| ಕೇನ್, ಮ|| ಮರ್ಲಾಂಡ್, ಮ| ಮೆಕ್ಲಾ ರನ್, ಇವರು ಮ|| ಬ್ರಾಡ್ಲಾಯವರಿಗೆ ಸಹಾಯ ಕರಾಗುವದಕ್ಕೆ ಸಮ್ಮತಿಸಿ ಇರುತ್ತಾರೆ. ಈಗ ನೆಲೆಗೊಂಡಿರುವ ಆರು ಗವರ್ನಮೆಂಟುಗಳ ಮಂ ತ್ರಾಲೋಚಕ ಸಮಾಜಗಳಿಗೆ ಬೇಕಾಗಿರುವ ಮೆಂಬರುಗಳ ಸಂಖ್ಯೆಯ ಪೈಕಿ ಅಯಿದರಲ್ಲಿ ನಾ ಲ್ಕು ಭಾಗ ಲಾಯಖಾದ ಪ್ರಜೆಗಳಿಂದ ಚುನಾ ಯಿಸಲ್ಪಡತಕ್ಕದ್ದೆಂದು ವಗೈರೆ ಸದರೀ ಮಸ ವಿದಾ ಕಾನೂನಿನಲ್ಲಿ ನಮೂದಿಸಲ್ಪಟ್ಟಿರುತಿದೆ.

ಸೇಂಟಪೀಟರ್ಸ್‌ಬರ್ಗ್, ೧ನೇ ಫೆಬ್ರುವರಿ—ರ ಷಿಯಾ ಗವರ್ನಮೆಂಟಿನವರು ಸುಮಾರು ಯೆರ ಡುಕೋಟಿ ಅಯಿವತ್ತುಲಕ್ಷ ರೂಪಾಯಿಗಳ ಲಾ ಗುವತಿನಿಂದ ಬಾಲ್ಟಿಕ್ ಸಮುದ್ರದಲ್ಲಿ ಲೈಬಾ ಯೆಂಬ ಪ್ರದೇಶದ ಬಳಿ ನಾವಿಕ ಸೈನ್ಯದನ್ನು ಸ್ಥಾಪಿಸಬೇಕೆಂದು ನಿಶ್ಚಯಿಸಿರುತ್ತಾರೆ.

ಲಂಡನ್, ೩ನೇ ಫೆಬ್ರುವರಿ-ಲಿಸ್ಬನ್ ಪಟ್ಟಣದ ಲ್ಲಿ ನೌಕರಿಯೊಳಿದ್ದ ಇಂಗ್ಲಿಷ್ ಜನರು ಕೆಲಸ ದಿಂದ ತಗ್ಗಿಗೆ ಮಾಡಲ್ಪಟ್ಟದರಿಂದ ಅವರೆಲ್ಲರು ಜೀವನಾಧಾರವಿಲ್ಲದೆ ಬೀದಿಗಳಲ್ಲಿ ತಿರುಗುತ ಲಿದಾರೆ.

ಲಂಡನ್, ೪ನೇ ಫೆಬ್ರುವರಿ—ನಿನ್ನೆಯದಿನ ಸಾ ಯಂಕಾಲ ಲಂಡನ್ ಷಹರಿನೊಳು ಒಂದು ಕಡೆ ಬೆಂಕಿ ತಗಲಿ, ಅಯಿದು ಮಹಡಿಗಳುಳ್ಳ ಒಂದು ಗಡಂಗ್ ಸುಟ್ಟುಹೋಗಿ ಅಮಿತವಾದ ನಷ್ಟ ವುಂಟಾಯಿತು.

ನ್ಯೂಯಾರ್ಕ್, ೩ನೇ ಫೆಬ್ರುವರಿ—ಉತ್ತರ ಅಮೆರಿಕಾ ಖಂಡಕ್ಕೆ ಸೇರಿದ ಯುನೈಟೆಡ್ ಸ್ಟೇ ಟ್ಸ್ ಯೆಂಬ ದೇಶದ ರಾಜಧಾನಿಯಾದ ವಾಷಿಂಗ್ ಟನ್ ಎಂಬ ಷಹರಿನಲ್ಲಿ ಒಂದುಕಡೆ ಬೆಂಕಿ ತಗಲಿ ಒಬ್ಬರ ದೊಡ್ಡಮನೆ ಸುಟ್ಟುಹೋಗಿ, ಅವರ ಹೆಂಡತಿ ಮಕ್ಕಳು ಸತ್ತುಹೋದರು. ಸದರೀ ದೊಡ್ಡಮನುಷ್ಯರು ಸಹ ಕೇವಲ ಅಪಾಯಸ್ಥಿ ತಿಯಲ್ಲಿದ್ದು ಈಚೆಗೆ ಗುಣಮುಖವಾಗಿರುತಿದೆ.

ಪ್ಯಾರಿಸ್, ೩ನೇ ಫೆಬ್ರುವರಿ—೧೮೮೮—೮೯ನೇ ಇಸವಿಯಲ್ಲಿ ಫ್ರೆಂಚ್ ರಾಜ್ಯದಲ್ಲಿ ಹುಟ್ಟುವಳಿ ಗಿಂತಲು ಒಂದು ಕೋಟಿ ಯೆಂಭತ್ತುಲಕ್ಷ ರೂ ಪಾಯಿಗಳು ಜಾಸ್ತೀ ವ್ಯಯವಾಗಿರುತಿದೆ.

ಲಂಡನ್, ೫ನೇ ಫೆಬ್ರುವರಿ—ಸರ್ ಚಾರ್ಲಸ್ ರಸ್ಸಲ್ ಯೆಂಬವರು ವಿಷಮಗತಿ ರೋಗದಿಂದ ಶಾ ಹಿಡೀಪಾಗಿರುತ್ತಾರೆ.

ಮುಂಬೈ, ೪ನೇ ಫೆಬ್ರುವರಿ—ಸರ್ ದಿನ್‌ಷಾ ಮಾಣಿಕ್‌ಜಿ ಪೇಟಿಟ್ ಎಂಬವರು, ಮಹಾರಾ ಜ್ಞೀಯವರ ಪೌತ್ರರಾದ ಪ್ರಿನ್ಸ್ ವಿಕ್ಟರವರು ಮುಂಬೈಗೆ ಬಂದದರ ಜ್ಞಾಪಕಾರ್ಥ, ಕುಷ್ಠ ರೋಗಿಗಳ ವಾಸಕ್ಕಾಗಿ ಒಂದು ಶಾಲೆಯಂ ಕಟ್ಟ ತಕ್ಕಬಗ್ಗೆ ಮುಂಬೈ ಗವರ್ನಮೆಂಟಿನವರ ವಶ ಕ್ಕೆ ಒಂದುಲಕ್ಷ ರೂಪಾಯಿಗಳು ಕೊಡುವದಾಗಿ ಹೇಳಿರುತ್ತಾರೆ. ಅದಂ ಅಂಗೀಕರಿಸುವ ವಿಷ ಯವು ಗವರ್ನಮೆಂಟಿನವರ ಆಲೋಚನೆಯಲ್ಲಿ ದೆ, ಪ್ರಾಯಶಃ ಅಂಗೀಕರಿಸಲ್ಪಡಬಹುದು.

ಬರ್ಲಿನ್, ೪ನೇಫೆಬ್ರುವರಿ—ಜರ್ಮನೀದೇಶದ ಚ ಕ್ರವರ್ತಿಯಾದ ವಿಲ್ಲಿಯಂ ಯವರಿಗೂ ಅವರ ತಾಯಿಯವರಿಗೂ ಉಂಟಾಗಿರುವ ಮನಸ್ತಾಪ ವಂ ಕುರಿತು ಟೈಂಸ್ ಪತ್ರಿಕೆ ಪ್ರಕಟಿಸಿದ ಲೇಖ ನವನ್ನು ಕಲೋನ್ ಗೆಜೆಟ್ ಯೆಂಬ ಪತ್ರಿಕೆಯ ಎಡಿಟರು ತನ್ನ ಪತ್ರಿಕೆಯಲ್ಲಿ ಪ್ರಕಟಿಸಿದ ಅಪ ರಾಧದಬಗ್ಗೆಒಂಭತುತಿಂಗಳಸಜಾವಿಧಿಸಲ್ಪಟ್ಟರು.

SUMMRY OF NEWAS.
ವೃತ್ತಾಂತಸಂಗ್ರಹವು.

ಈದಿನ ಮದರಾಸ್ ಹೈಕೋರ್ಟಿ ಪ್ಲೀಡರ್ ಪ ರೀಕ್ಷೆಯು ಅಲ್ಲಿನ ಸೆನೆಟ್ ಹೌಸಿನಲ್ಲಿ ಪ್ರಾರಂಭ ವಾಗುವದಲ್ಲದೆ ಇತರ ಪರೀಕ್ಷಾ ಸ್ಥಳಗಳೊಳು ಸಹ ನಡೆಯುವದು.

ನಮ್ಮ ಹಿಂದುಸ್ಥಾನದ ರಾಷ್ಟ್ರೀಯ ಸಭೆಗೆ ತಮ್ಮಿಂದಾದಷ್ಟು ಪ್ರಯತ್ನದಿಂದ ಸಹಾಯ ಮಾಡಬೇಕೆಂಬ ಇಚ್ಛೆಯಿಂದ ಲಂಡನ್ನಲ್ಲಿ ಯೂ ರೋಪಿಯನ್ ಸ್ತ್ರೀಯರೆಲ್ಲ ಆಲೋಚನೆ ಮಾಡಿ, ಒಂದು ಸಭೆಯನ್ನು ಸ್ಥಾಪನೆ ಮಾಡಿರುತ್ತಾರೆ. ಇಂತಾ ಇವರ ಉಪಕಾರವನ್ನು ನಮ್ಮ ದೇಶೀ ಯರು ಸ್ಮರಿಸತಕ್ಕದ್ದಾಗಿದೆ—ಪ. ಸು.

ಈ ಸಲದ ಮದರಾಸ್ ಹೈಕೋರ್ಟಿ ಕ್ರಿಮಿನ ಲ್ ಸೆಷನ್ ವಿಚಾರಣೆಯ ಕಡೇ ದಿನದಲ್ಲಿ ಕಳವು ತಕ್ಸೀರ್‌ಬಗ್ಗೆ ಒಬ್ಬ ಖೈದಿಯನ್ನು ದಂಡಿಸುವ ಲ್ಲಿ ಅಲ್ಲಿನ ಚೀಫ್ ಜಸ್ಟಿಯವರು ಅಪರಾಧಿಯಂ ಕುರಿತು ತಿಳಿಸಿದ್ದೇನುವರೆ—ಇದುವರಿವಿಗೆ ನೀನು ಏಳಾವರ್ತಿಗೆ ಕಮ್ಮಿಯಿಲ್ಲದೆ ಕಳವಿನಬಗ್ಗೆ ದಂ ಡಿಸಲ್ಪಟ್ಟಿರುತ್ತಿ. ಹಿಂದೆ ನಡೆಸಿದ ಕಳವುಗಳ ಲ್ಲೆಲ್ಲ ನಿನಗೆ ಸಿಕ್ಕಿದ್ದು ಆರುರೂಪಾಯಿ ಚಿಲ್ಲರೆ. ಕಳವುಮಾಡುದಣವು ತಕ್ಸೀರ್‌ಕರವಾದದ್ದು. ಅ ದುಮಾಡತಕ್ಕವರಿಗೆ ಅದು ಪ್ರಯೋಜನಕರವ ಲ್ಲವು. ಹಿಂದೆ ನೀನುಮಾಡಿದ ತಕ್ಸೀರ್‌ಗಳಬಗ್ಗೆ ೬೪ ಚಡಿಪೆಟ್ಟು ಐದುವರ್ಷಗಳು ಕೆಲವುತಿಂಗ ಳಸಜಾ ನೀನು ಅನುಭವಿಸಿರುತ್ತಿ. ಈಸಂದ ರ್ಭದೊಳು ನಿನಗೆ ಮೂರುವರ್ಷಗಳ ಕಠಿಣ ಖೈದ್ ಸಜಾ ವಿಧಿಸಿರುತ್ತೇನೆ. ನೀನು ಖೈದ ನಿಂದ ಬಿಡುಗಡೆಯಾಗಿ ಬಂದಮೇಲೆ ಗೌರವವಾ ದ ವೃತ್ತಿಯಂ ಕೈಗೊಂಡರೆ ಅಧಿಕಪ್ರಯೋಜನ ವುಂಟಾಗುವದು, ಎಂಬದು.

EXTRACTS.

ಭಡೋಚ ಜಿಲ್ಲೆಯೊಳಗಿನ ಒಂದು ಹೆಂಗಸಿನ ಶ್ರವ ಸುಡುವ ಸಂಬಂಧವಾಗಿ, ನಡೆದ ತಂಟೆಯ ವಿ ಷಯದಲ್ಲಿ ಹಿಂದಿನ ಪತ್ರಿಕೆಯಲ್ಲಿ ಬರೆದಿರುತ್ತೇ ವಷ್ಟೆ. ಈಗ ಸದರೀ ಸ್ತ್ರೀಯಳಗಂಡನು ಗವ ರ್ನರ್‌ಸಾಹೇಬರವರಕಡೆಗೆ ಫಿರ್ಯಾದ್‌ಮಾಡಿರುತ್ತಾ ನೆ. ಅವನು ಫಿರ್ಯಾದಿಯಲ್ಲಿ ನಾವು ಬ್ರಾಹ್ಮಣ ರು, ನೇಮದಂತೆ ನಮ್ಮಬ್ರಾಹ್ಮಣರ ಸ್ಮಶಾನ ಭೂಮಿಯಲ್ಲಿ ಶವತೆಂದು ಸುಡುವವೇಳೆ ಈ ಅ ಸಿಸ್ಟೆಂಟು ಕಲೆಕ್ಟರನು ಬಬ್ಬ ಕೊಡಲಿಕಡೆಯಿಂ ದ ಚಿತಿಗೆ ನೀರುಹಾಕಿಸಿದನು. ಅವರೂ ನಮ್ಮ ಜನರು ಕೇಳಲಿಲ್ಲವೆಂದು ಸ್ವತಃ ಒಂದು ಚಿತಾ ಯುಕಡೆಯಿಂದ ಬಹಳ ಬಲಾತ್ಕಾರ ನಡೆಸಿದಕಾ ರಣ ಅರ್ಧಬೆಂದ ಸದರೀಶ್ರವ ತೆಗೆದುಕೊಂಡು ಬೇರೆಕಡೆಯಲ್ಲಿ ಸುಡಬೇಕಾಯಿತು. ಇದರಬಗ್ಗೆ ಸರಕಾರದವರು ಯೋಗ್ಯವಿಚಾರ ಮಾಡಬೇಕು, ಎಂತ. ಈವಿಷಯದಲ್ಲಿ ಈ ಮುಂಬೈ ಹಿಂದೂ ಜನರು ಖಾಸಗಿರೀತಿಯಿಂದ ಒಂದುಸಭೆ ಮಾಡ ಬೇಕೆಂತ ನಿಶ್ಚಯಿಸಿ ಕಳೆದ ಶನಿವಾರದಿವಸ ಸಾ ಲಿಸಿಟರ್‌ಭಾಯಿ ಸಂಕರ ನಾನಾಭಾಯಿ ಇವರಬಂ ಗಳೆಯಲ್ಲಿ ಸಭೆಕೂಡಿಸಿದ್ದರು. ಗವರ್ನರ್‌ಸಾಹೇ ಬರಡೆಗೆ ಮಾಡಿದ ಅರ್ಜಿಯ ನಿಕಾಲೆಯಾಗುವವ ರಿಗೆ ಏನೂ ಪ್ರಯತ್ನಕ್ಕೆ ಹೋಗಬಾರದು. ಏ ನಾದರೂ ವಿರುದ್ಧ ನಿಕಾಲೆಮಾಡಿದಪಕ್ಷಕ್ಕೆ ಮುಂ ದೆ ತಕ್ಕಪ್ರಯತ್ನ ನಡಿಸುವಬಗ್ಗೆ ಪ್ರಿವ್ವಿದ ಅನು ಕೂಲತೆಯಾಗಬೇಕೆಂದು ನಿಶ್ಚಯಿಸಿದರು. ಕೂ ಡಲೇ ೧೨,೦೦೦ ರೂಪಾಯಿಯ ವರ್ಗಣಿಯು ಜ ಮೆಯಾಯಿತು.—ಪ. ಸು.

ಇಂದೂರ್‌ಸಂಸ್ಥಾನದಲ್ಲಿ ಗೋವುಗಳನ್ನು ಕ ಟುಕರಕೈಯಿಂದ ತಪ್ಪಿಸುವ ಸಲುವಾಗಿ ಅಲ್ಲಿಯ ಹಿಂದೂಜನರು ಹೋಲ್ಕರ್ ಮಹಾರಾಜರಿಗೆ ಅ ರ್ಜಿಮಾಡಿಕೊಂಡಿರುತ್ತಾರೆಂತ ವಗೈರೆ ಹಿಂದಿನ ನಮ್ಮಪತ್ರಿಕೆಯಲ್ಲಿ ಪ್ರಕಟಿಸಿರುತ್ತೇವೆ. ಆಅರ್ಜಿ ಯಸಂಬಂಧವಾಗಿಹೋಲ್ಕರರು ಒಳ್ಳೇಯೋಗ್ಯ ವಾದ ತೀರ್ಮಾನವನ್ನು ಮಾಡಿದರು. ಅಂದರೆ ಕಟುಕರಿಗೆ ಆಕಳುಗಳ ಯೋಗ್ಯವಾದ ಕ್ರಯವ ನ್ನು ಹಿಂದುಜನರಿಂದ ಕೊಡಿಸಿ ಸದರೀಗೋವು ಗಳನ್ನು ಬಿಡುಗಡೆಪಡಿಸಿದರು. ಹಿಂದು ಮತ್ತು ಕಟುಕರಿಗೆ ತಂಟೆ ನಡಿಯುವಸಮಯದಲ್ಲಿ ಹೋಲ್ ಕರರಸವಾರಿಯು ಇಂದೂರೊಳಗೆ ಇರಲಿಲ್ಲ. ಅಲ್ಲಿ ಯ ದಿವಾನರಾದ ಮ|| ಕೀರ್ತನೆಯವರು ಹೆಚ್ಚು ನಮ್ರಭಾವದವರಾಗಿರುತ್ತಾರೆ. ಇಂತಾ ತಂಟೆ ಯು ಉಪಸ್ಥಿತವಾಯಿತೆಂದು ತಿಳಿದಕೂಡಲೇ ಮಹಾರಾಜರು ದಿವಾನರಿಗೆ ಹೆಚ್ಚು ದೂಷಣೆಕೊ ಟ್ಟರು. ರಾಜಸ್ಥಾನದಲ್ಲಿ ಕಾರ್‌ಬಾರ್‌ಗಳನ್ನು ನಡಿ ಸತಕ್ಕದ್ದು ಸರ್ವ ಸಾಧಾರಣ ಕೆಲಸವಲ್ಲ. ಅದ ಕ್ಕೆ ಒಳ್ಳೇಜ್ಞಾನವೂ, ಚತುರತೆಯೂ, ಧೈ ರ್ಯವೂ, ನಿಷ್ಪಕ್ಷಪಾತವೂ, ಮುಂತಾದ ಒ ಳ್ಳೊಳ್ಳೇಗುಣಗಳಿಂದ ಭರಿತನಾದವನೇಬೇಕು. ಮ|| ಕೀರ್ತನೆಯವರು ಒಳ್ಳೇ ಸುಧಾರಿಸಿದವರೂ ಚತುರರೂಯಿದ್ದಾಗ್ಯೂ ಧೈರ್ಯ ಯಿಲ್ಲದಿರುವಿಕೆ ಯೂನಮ್ರಸ್ವಭಾವಪ್ರಕೂಡ ಇವರಿಗೆ ಹೆಚ್ಚು ಕಳಂಕವನ್ನುಂಟುಮಾಡುತ್ತವೆ. ಹೇಗೆಯೆಂದರೆ ಹಿಂದೂಜಾತಿ ಯೊಳಗುಳ್ಳಪ್ರತಿಯೊಬ್ಬ ಮನ ಷ್ಯನಿಗಾದರೂಕೂಡ ಗೋವುಗಳನ್ನು ಪಾ ಲನೆಮಾಡುವದುವರೆ ಮುಖ್ಯವಾದ ಅವನ ಕುಲ ಧರ್ಮವಾಗಿದೆಯೆಂದರೂ ತಪ್ಪಾಗಲಾರದು. ಮ|| ಸ್ಟೆರ್ ಕೀರ್ತನೆಯವರಾದರೂ ಇತರಜಾತಿಯವ ರೇನಲ್ಲ. ಹಿಂದೂಜಾತಿಯವರಾಗಿದ್ದಾರೆ. ಇದ ಲ್ಲದೆ ರಾಜ ಮರ್ಯಾದೆಯನ್ನವಲಂಬಿಸಿ ನೋಡಿ ದಾಗ್ಯೂ, ತನ್ನ ತನ್ನ ಧರ್ಮಕ್ಕೆ ನ್ಯೂನ ತುಂ ಬುವಂತೆ ಯಾವ ಕೆಲಸವನ್ನಾದರೂ ಮಾಡಲಿ ಕ್ಕೆ ಆತುರಪಡುವದಿಲ್ಲ. ಹಾಗೂ ಸಜೀವ ವಧೆ ಯನ್ನು ಮಾಡತಕ್ಕದ್ದು ಕೂಡ, ಶಾಸ್ತ್ರದಿಂ ದ ತಿರಸ್ಕರಿಸಲ್ಪಟ್ಟದೆ. ಹೀಗಿರುವಾಗ ಮ|| ಕೀರ್ತನೆಯವರು ಆ ಕಟುಕರಿಗೆ ಗೋವುಗಳ ನ್ನು ತಿರಿಗಿ ಒಪ್ಪಿಸಿ ಕೊಡಬೇಕೆಂತ ಮಾಡಿದ್ದ ಕ್ಕೆ ಎಂತಾ ಅಜ್ಞಾನಿಗಳಾದರೂ, ದೂಷಣೆ ಕೊ ಡತಕ್ಕ ಪ್ರಾತೇ ಸರಿ. ನಮ್ಮ ಹೋಲ್ಕರ್ ಮ ಹಾರಾಜರು ತಮ್ಮ ಪೂರ್ವಜರ ಆಜ್ಞೆಯನ್ನೂ ಧರ್ಮದನ್ನೂ ಕೂಡ ಪಾಲಿಸಿದ್ದಕ್ಕಾಗಿ, ಹೆ ಚ್ಚು ಸಂತೋಷ ಪಡಬೇಕಾಗಿದೆ.—ಪ. ಸು.

ಕಳೆದ ಡಿಸೆಂಬರ್ ಅಂತ್ಯಭಾಗದಲ್ಲಿ ನಾನು ತಿ ರುಪತಿ ಮುಂತಾದ ಸಿಮೋಗಾರ್ಥವಾಗಿ ಹೋ ಗಿದ್ದೆನು, ಅಲ್ಲಿಯ ವಿಷಯಗಳನ್ನು ಸಂಗ್ರಹಿಸಿ ರುವೆನು. ದಯಮಾಡಿ ವಾಚಕರಿಗೆ ಉಪಯೋ ಗವಾಗುವಂತೆ ಪ್ರಕಟಿಸಬೇಕೆಂದು ಕೋರುತ್ತೇ ನೆ. ಅಲ್ಲಿಯ ಜನರು ಕುಚಿಭೂತರಾಗಿರುವರು, ಮತ್ತು ಮೈಸೂರು ದೇಶದವರಿಗಿಂತ ಹೆಚ್ಚು ಕಷ್ಟಪಟ್ಟು ಕೆಲಸ ಮಾಡತಕ್ಕವರಾಗಿರುತ್ತಾ ರೆ. ಸೋಮಾರಿಗಳ ಹುಟ್ಟೇ ಅಲ್ಲಿ ಕಾಣುವದಿಲ್ಲವು. ಜನಗಳೆಲ್ಲರೂ ತಮ್ಮ ಮತಕ್ಕಾಗಿ ಪ್ರಾಣವನ್ನಾ ದರೂ ಸಮರ್ಪಿಸುವದಕ್ಕೆ ಸಿದ್ಧರಾಗಿರುತ್ತಾರೆ. ಅಲ್ಲಲ್ಲಿ ಸಂಘಗಳನ್ನು ಮಾಡಿ ಬೈಬಲ್‌ನಲ್ಲಿರುವ ದೋಷಗಳನ್ನೆಲ್ಲ ಬಹಿರಂಗಪಡಿಸುವರು. ಅವ ರು ಬೈಬಲಿನಲ್ಲಿಯ ಸುಳ್ಳುಗಳ ತಗಿದೋರಿಸುವೆಂಬ ಪುಸ್ತಕವನ್ನು ಛಾಪಿಸಿರುತ್ತಾರೆ. ಇಮ್ಮ ತ್ತಪ್ಪುಗಳಿಂದ ಕೂಡಿರುವ ಪುಸ್ತಕವನ್ನು ಸ ಮಸ್ತರಿಗೂ ಬುದ್ಧಿ ಹೇಳ ಯೆಲ್ಲರಿಗಿಂತಲೂ ಪಂಡಿತರು ಪಸ್ತುತತ್ತ್ವ ಜ್ಞಾನಿಗಳೆಂದೆನ್ನಿಸಿ ಕೊಳ್ಳುವ ಆಂಗ್ಲೇಯರು ಹ್ಯಾಗೆ ನಂಬುತ್ತಾ ರೋ ಪರಮಾತ್ಮನೆ ಬಲ್ಲನು. ಮ್ಯುನಿಸಿಪಲ್ ಇಲಾಖೆಯವರು ವಿಶೇಷವಾಗಿ ವಿಚಾರಣೆ ತೆಗದು ಕೊಳ್ಳಲಿಲ್ಲವೆಂದು ತೋರುತದೆ. ಬ್ರಿಟಿಷ್ ಸರ್ಕಾ ರದವರು, ವಸೂಲಾಗುವ ಹುಟ್ಟುವಳಿಯನ್ನು ಇನ್ಯಾವ ಇಲಾಖೆಗೂ ವಿಶೇಷವಾಗಿ ವೆಚ್ಚಿಸದೆ ಕೇವಲ ಮಿಲಿಟರಿ ಇಲಾಖೆಗೆ ವೆಚ್ಚಿಸುವದಾಗಿ ಆಡಿಕೊಳ್ಳುತ್ತಾರೆ. ಮದರಾಸ್ ಪ್ರಸಿಡೆನ್ಸಿ ಯಲ್ಲಿ ಇಂಗ್ಲಿಷ್ ಪಾಠಶಾಲೆಗಳಲ್ಲಿ ಶಾಲಾ ವೇತನ ವು ಬಹಳ ಹೆಚ್ಚಾದದರಿಂದ ಅಲ್ಲಿಯ ವಿದ್ಯಾರ್ಥಿ ಗಳು ಮೈಸೂರು ದೇಶಕ್ಕೆ ಬಂದು ಓದಿ ತಿರಿಗ ತಮ್ಮ ಸ್ಥಳಕ್ಕೆ ಹೋಗುವರು. ಕವವೆ ವಿಷ ಯಗಳಲ್ಲಿ ನಮ್ಮ ಮೈಸೂರು ದೇಶಕ್ಕಿಂತಲೂ ಉನ್ನತಸ್ಥಿತಿಯಲ್ಲಿರುವದು.

ತಿರುಪತಿಯು ರೇಣುಗುಂಟೆ ರೈಲ್ವೇ ಸ್ಟೇ ಷನಿಗೆ ಏಳುಮೈಲಿ ಫಾಸಲೆಯಲ್ಲಿರುತದೆ. ತಿರು ಪತಿಗೆ ಒಂದುಮೈಲಿ ದೂರದಲ್ಲಿ ವೆಂಕಟಾದ್ರಿಯರು ಇವರಮೇಲೆ ಶ್ರೀನಿವಾಸಸ್ವಾಮಿಯು ವಾಸ ಮಾ ಡುವನು. ಪ್ರತಿ ದಿವಸದ ಪ್ರತಿ ಕ್ಷಣದಲ್ಲಿಯೂ ಸಾವಿರಾರುಮಂದಿ ಭಕ್ತರು ನಾನಾ ದೇಶಗಳಿಂದ ಲೂ ಬಂದು ಹೋಗುವರು. ಆ ತಿರುಪತಿಯ ಪೂರ್ವಭಾಗದಲ್ಲಿ ತಿರಚ್ಚಾನೂರೆಂಬ ಒಂದು ಚ ಮಣೀಯವಾದ ಗ್ರಾಮವಿರುತಿದೆ. ಇದು ರೇಣು ಗುಂಟೆ ಮತ್ತು ತಿರುಪತಿಯು ಇವೆರಡು ಮಧ್ಯದಲ್ಲಿ ನವಾಗಿರುತಿವೆ ಈ ತಿರುಚಾನೂರಿಗೆ ಪದ್ಮ ಸ ರೋವರವೆಂದು ನಾಮಾಂಕಿತವು. ಈ ಗ್ರಾಮದ ಮಧ್ಯದಲ್ಲಿ ರಮಣೀಯವಾದ ಸರೋವರವಿರುವ ದು ಇದಕ್ಕೆ ಸುವರ್ಣಮುಖಿಯು ಕಾಲ್ವೆಯು ಒಂದು ಹೋಗುತಿವೆ, ಆದುದರಿಂದ ನೀರು ಸದಾ ನಿರ್ಮಲವಾಗಿರುತಿವೆ, ನಾಡಯುರಾಜ ಎತಿಗಳು ವಾಸಿ ರಚಿಸಿದ ನವರಸಭರಿತವಾದ ತೀರ್ಥನ್ಯ ಬಂಧವೆಂಬ ಕ್ಷೇತ್ರ ಕಥಾ ಪುಂಜವಾದ ಗ್ರಂಥದ ಲ್ಲಿ «ಯ ಸುವರ್ಣಮುಖಿ ನದಿಯೆ! ನಿನ್ನ ಸುವ ರ್ಣಕ್ಕೆ ಸಮಾನವಾದ ಕಾಂತಿಯುಳ್ಳ ಉದಕವಿಂ ದ ನನ್ನ ಮನಸ್ಸು ಸುವರ್ಣದಂತೆ ನಿರ್ಮಲವಾಗಿ ಹೊಳೆಯುವಹಾಗೆ ಮಾಡುವಳಾಗು! ನಿನ್ನನ್ನು ನಾನು ಸೇವಿಸುವೆನು, ಎಂದು ನುತಿಗೈದಿರುವ ರು. ಇಲ್ಲಿ ಪದ್ಮಾವತಿಯ ದೇವಾಲಯವು ಇರು ತಿದೆ. ಈಗ ೧೦ ವರುಷಕ್ಕೆ ಮುಂಚೆ ಎರಡ್ನೂ ೧೦—೧೫ ಮನೆಗಳಿದ್ದವು. ಮಹಂತಜೀಯ ವರ ಸತ್ರವೂ ಮತ್ತೊಬ್ಬ ಭಕ್ತರ ಸತ್ರವೂ ಇಷ್ಟೇ ಇದ್ದವು ಈಗ ಹತ್ತು ವರುಷಗಳಿಂದ ಪ್ರತಿ ವರುಷದಲ್ಲೂ «ಮಧ್ವಸಿದ್ಧಾಂತೋನ್ನ ಹಿನೀ” ಎಂಬ ಸಭೆಯು ನಡೆಯುವದಲ್ಲದೆ ವಿಶಾ ಲವಾದ ಸಭಾಸದನವು ಕಟ್ಟಲ್ಪಟ್ಟಿರುತದೆ. ಸಭೆಯ ಕಾಲಕ್ಕೆ ಸಾವಿರಾರು ಜನರು ಬಂದು ಹೋಗುತ್ತಾರಾದ್ದರಿಂದ ಅನೇಕ ಮನೆಗಳೂ ದೇವಾಲಯಗಳೂ, ಹೊಸದಾಗಿ ತಯಾರಾಗಿರು ತವೆ. «ವಸತಿ ನೈಸ್ಥಾವಾಯತ್ರ ತತ್ರಸ ನ್ನಿಹಿತೋಹರಿಃ ಯಾತ್ರಪದ್ಮವನಾನಿಚ” ಎಂ ಬಂತೆ ಇಲ್ಲಿ ವಿಷ್ಣು ಸಾನ್ನಿಧ್ಯವು ಪೂರ್ಣವಾಗಿ ರುವದು. «ರಾಗಿ ಇಲ್ಲದೆ ಅಕ್ಕಿ ತಂದರು.” ಎಂಬ ಗಾದೆಯಂತೆ ನಿಸ್ಸಾರವಾದ ಮಣ್ಣಿನಿಂ ದ ಮನೆಗಳು ನಿಲ್ಲುವದಿಲ್ಲವಾದ ಕಾರಣ ಬಡವ ರು ಕೂಡ ದಿವ್ಯವಾದ ಗಚ್ಚಿನ ಮನೆಗಳನ್ನು ಕ ಟ್ಟಿಕೊಂಡು ಶುಭವಸ್ತ್ರ ವಿಲಸಿತ ಗಾತ್ರರಾಗಿ ಪ್ರತಿ ಶುಕ್ರವಾರದಲ್ಲಿಯೂ ಅಮ್ಮನವರಿಗೆ ಅಂ ದರೆ ನಾರಾಯಣ ಸ್ವಾಮಿಯ ಪತ್ನಿಯಾದ ಪ ದ್ಮಾವತಿ ಯಮ್ಮನವರಿಗೆ ನಡಿಯುವ ಉದ್ಯಾ ನೋತ್ಸವದ ಸಂಭ್ರಮವನ್ನು ನೋಡುವದು. ಗ್ರಾಮವೆಲ್ಲವೂ ಕಲ್ಯಾಣ ಮಂಟಪದೋಪಾದಿ ಯಲ್ಲಿರುವದು. ಕಲಿಯುಗದಲ್ಲಿ ಇದಲ್ಲವೇ ವೈ ಕುಂಠವು!—ಪ. ಸು.

Bangalore:—Printed and published at the Karnatic Press, No. 108, Srinivasa Mandiram Road Pettah—1890.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]ಕರ್ಣಾಟಕಪ್ರಕಾಶನ[illegible]

Vol. XVII] BANGALORE—MONDAY, FEBRUARY 17, 1890. [No 7.

ಸಂಪುಟ ೧೭.] ಬೆಂಗಳೂರು—ಸನ್ ೧೮೯೦ನೇ ಇಸವಿ ಫೆಬ್ರುವರಿ ೧೭ ನೇ ತಾರೀಖು ಸೋಮವಾರ. [ಸಂಚಿಕೆ ೭.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಸಾಲ್ ೧ಕ್ಕೆ	ಸ್ಥಳದವರಿಗೆ ಹಾಸಲ್ಲಿದೆ	ಪರಸ್ಥಳದವರಿಗೆ ಹಾಸಲ್ ಸೇರಿ
ಮುಂಗಡ ಕೊಡತಕ್ಕವರಿಗೆ	8—0—0	9—0—0
ಹಿಂದೆ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡ ಕೊಡತಕ್ಕವರಿಗೆ	4—0—0	5—0—0
ಹಿಂದೆ ,,	5—0—0	6—0—0

ಈ ಪತ್ರಿಕೆಗೆ [illegible] ಪತ್ರಿಕೆ [illegible] ಇಂಗ್ಲಿಷ್ [illegible] ಕನ್ನಡ [illegible] ಪತ್ರಿಕೆ [illegible] ಲೆಕ್ಕಕ್ಕೆ ದಾಖಲ್ಮಾಡಿಕೊಳ್ಳಲ್ಪಡುವದು.

ಪ್ರಕಟನೆಯ [illegible].

ಮೊದಲನೆ ಸಾರಿ ಪಂಕ್ತಿ ಒಂದಕ್ಕೆ ೦—೨—೦

ಎರಡನೆಯ ಸಾರಿ ಪಂಕ್ತಿ ಒಂದಕ್ಕೆ ೦—೧—೦

ಸೂಚನೆ—[illegible] ಪಂಕ್ತಿ ಒಂದಕ್ಕೆ [illegible] ಈ ಪತ್ರಿಕೆಯ [illegible] ಪ್ರಕಟಿಸುವ [illegible] ಪ್ರಕಟಿಸಲ್ಪಟ್ಟ [illegible] ಪ್ರಕಟನೆಗಳನ್ನು [illegible] ಈ ಪತ್ರಿಕೆಗೆ [illegible] ನಿರಾಕ [illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 6 0

ವೈದ್ಯಸಾರ ಸಂಗ್ರಹ.

ಈ ಗ್ರಂಥವನ್ನು [illegible] ಮೊಬಲಗನ್ನು ಕೊಡತಕ್ಕವರ [illegible] ಕಳುಹಿಸಲ್ಪಡುವದು [illegible]

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಸೇರಿ ಪ್ರತಿ ಒಂದಕ್ಕೆ ರೂ ೫—0—0

ಬಿ. ಪಿ. [illegible],

ಬೆಂಗಳೂರ್, ಅಪ್ಪಾಜಿರಾವ್ ಪೇಟೆ, 11ನೇ ನಂ ಮನೆ

ADVERTISEMNTS.

ನೋಟೀಸ್

ಅದ್ಭುತವಾದ ಒಂದು ಔಷಧ

ಹೊಟ್ಟೆಯಲ್ಲಿ ನೋವು [illegible], ಪಿತ್ತದಿಂದ ತಲೆ ನೋವು, ಕಣ್ಣುಗಳು ತಿರುಗುವಿಕೆ, [illegible] ಹೊಟ್ಟೆ [illegible] ಉಬ್ಬರಿಸಿ [illegible], ತಲೆ [illegible] [illegible] ಮೊದಲಾದ ಪಿತ್ತ ಮತ್ತು ವಾತಸಂಬಂಧವಾದ ರೋಗಗಳಲ್ಲಿ ಬೀಚಾಂ ಯವರ [illegible] ಪ್ರಯೋಜನವಾಗುವದೆಂದು [illegible] ಅಂಗೀಕರಿಸಲ್ಪಟ್ಟಿದೆ [illegible]

ಎಲ್ಲಾ ಮನುಷ್ಯರ [illegible] ಕೆಲವು [illegible] ತನ್ನ [illegible] ದೇಶ [illegible] ಬೀಚಾಂ [illegible] ಔಷಧ [illegible] ಈ ಔಷಧದ ಪ್ರತಿಯೊಂದು [illegible] ಕ್ರಮವನ್ನನುಸರಿಸಿ [illegible] ಮನುಷ್ಯನ [illegible] ಸಂಪೂರ್ಣ ಆರೋಗ್ಯ [illegible] ಅನುಭವ ಪೂರ್ವಕ ರುಜುವಾತಾಗಿ [illegible]

ಅನ್ನ ಕೋಶದ ದೌರ್ಬಲ್ಯ, ಜೀರ್ಣಶಕ್ತಿ ಹೀನತೆ [illegible], ಪಿತ್ತಕೋಶದ [illegible] ಈ ಗುಳಿಗೆಗಳು ಅದ್ಭುತವಾದ ಔಷಧ [illegible] ಮನುಷ್ಯನ [illegible] ಅದ್ಭುತವಾದ ಕಾರ್ಯಗಳನ್ನು ಮಾಡುತ್ತವೆ [illegible] ಮನುಷ್ಯ [illegible]

[illegible] ಈ ಪ್ರಪಂಚದಲ್ಲಿ [illegible] ಔಷಧವೆಂದು [illegible]

Sole Agents for India

NAYLOR, SON, GRIMES, & CO.,

Wholesale Depot, 5a, Clive Street, Calcutta

ನೋಟೀಸ್—[illegible] ಮತ್ತು [illegible]

ಮಾರುವವರು ಅದರ ಕ್ರಯ ಇದರ ನಮೂದಿಸಲ್ಪಟ್ಟಿದೆ, ಹ್ಯಾಗಂದರೆ—ಡಬ್ಬಿ ೧ ಕ್ಕೆ ೯ ಆಣೆ, ೧೪ ಆಣೆ, ಮತ್ತು ರೂ|| ೨ ರ ಪ್ರಕಾರ ಇರುತ್ತದೆ, ಬೇಕಾದದ್ದನ್ನು ತರಿಸಿಕೊಳ್ಳಬಹುದು. ಪಾರ್ಸಲ್ ಫೀಜು ಕೊಡಬೇಕು.

ವೃದ್ಧರಿಗೂ ಔಷಧ [illegible] ಒಪ್ಪುಬಿಕರೀ ದರಕ್ಕೆ ಕೊಡಲ್ಪಡುವದು

ನೋಟೀಸ್.

ಇದರಿಂದ ನಮ್ಮ ಚಂದಾದಾರರಿಗೂ ಇತರರಿಗೂ ತಿಳಿಸುವದೇನಂದರೆ —

ಸನ್ ೧೮೮೯ನೇ ಇಸವಿ ಡಿಸೆಂಬರ್ ಆಖೈರಿನ ವರೆಗೆ ಚಂದಾ ಬಾಕಿಯನ್ನು ಪೂರಾ ಸಲ್ಲಿಸತಕ್ಕ ದರದಕ್ಕೆ ಚಂದಾದಾರರ ಹೆಸರುಗಳನ್ನು ಮಾತ್ರ ನಾವು ರಿಜಿಸ್ಟರ್ ದಾಖಲ್ಮಾಡಿಕೊಂಡು ಈ ವರೆ ಭಾಗಾಯತು ಪತ್ರಿಕೆ ಕಳುಹಿಸುತ್ತೇವೆ. ಅವರ ಪೈಕಿ ಯಾರಿಗಾದರು ಪತ್ರಿಕೆಯು ಬೇಕಿಲ್ಲದಿದ್ದರೆ ಅಂತವರು ಕೂಡಲೇ ನಮ್ಮ ಅಭಿಪ್ರಾಯವನ್ನು ಮೂರುಕಾಸಿನ ಕಾರ್ಡನಲ್ಲಿ ನಮಗೆ ತಿಳಿಸಬಹುದು. ಪತ್ರಿಕೆಯು ಆವಶ್ಯಕತೆ ಇರತಕ್ಕವರು ಸಾಧ್ಯವಾದಷ್ಟು ತ್ವರಿತದಲ್ಲಿ ಚಂದಾ ಮೊಬಲಗನ್ನು ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಬೆಂಗಳೂರು, ತಾ ೫ನೇ ಜನವರಿ ೧೮೯೦ } ಟಿ. ಶಿ ಶ್ರೀನಿವಾಸಾಚಾರ್ ಪ್ರೊಪ್ರೈಟರ್. ಕರ್ಣಾಟಕ ಪ್ರಕಾಶಿಕಾ.

ನೋಟೀಸ್.

ಕಾಫೀ ತೋಟಕ್ಕೆ ಕೂಲೀ ಜನರನ್ನು ಒದಗಿಸಿ ಕೊಡತಕ್ಕಬಗ್ಗೆ ಕಂಟ್ರಾಕ್ಟು ಮಾಡಿಕೊಳ್ಳುವದಕ್ಕೆ ಒಬ್ಬ ಏಜಂಟ ಅಥವಾ ಮೇಸ್ತ್ರಿ ಬೇಕಾಗಿರುತ್ತದೆ, ಮುಖರೆಗಳೊಡನೆ ಜಾಮೀನ್ ಕೊಡಬೇಕು. ಕಾಫೀ ತೋಟವು ಆರೋಗ್ಯಕರವಾದದ್ದು. ನೀರು ಒಳ್ಳೆಯದು. ಬಾಜಾರಿಗೆ ಸಮೀಪದಲ್ಲಿದೆ

ಇತರ ವಿಷಯಗಳನ್ನು ತಿಳಿದುಕೊಳ್ಳಬೇಕಾದರೆ ಉತ್ತರ ಕೊಡಗಿಗೆ ಸೇರಿದ ಸುಂಟಿಕೊಪ್ಪದಲ್ಲಿರುವ ಕೆಪ್ಪದೂರು ತೋಟದ ಸೂಪರಿಂಟೆಂಡೆಂಟರವರಿಗೆ ಬರೆದುಕೊಳ್ಳತಕ್ಕದ್ದು.

ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿ (ಲಿಮಿಟೆಡ್.)

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ.—

ಸನ್ ೧೮೯೦ನೇ ಇಸವಿ ಏಪ್ರಿಲ್ ಗುರ್ರೇ ತಾರೀಖಿಗೆ ಪ್ರಾರಂಭವಾಗುವ ಸಾಲಿನಲ್ಲಿ ಬೇಕಾಗಿರುವ, ಜೋಡಿ ಬಟ್ಟೆ ಇತ್ಯಾದಿಗಳ ಸರಬರಾಯಿ ಬಗ್ಗೆ ಬರತಕ್ಕ ಸೀಲ್ ಮಾಡಲ್ಪಟ್ಟ ದರಖಾಸ್ತುಗಳು ಕೊಡಬಹುದು.

ಸದರೀ ದರಖಾಸ್ತುಗಳನ್ನು ಹುಬ್ಬಳ್ಳಿ, ಸ್ಟೋರ್ಸ ಅಥವಾ ಬೆಂಗಳೂರಲ್ಲಿರುವ ಸಾಮಾನುಗಳ ಕೋಠಿಗಳಲ್ಲಿ ಒಪ್ಪಿಸಬೇಕು.

ಮೇಲೆ ನಮೂದಿಸಿರುವ ಕೋಠಿಗಳ ಪೈಕಿ ಯಾವದರಲ್ಲಾದರೂ ಒಪ್ಪಿಸುವದಕ್ಕೆ ದರಖಾಸ್ತುಗಳ ತಪಸೀಲುಗಳು ಮತ್ತು ನಮೂನೆಗಳನ್ನು ಹುಬ್ಬಳ್ಳಿಯಲ್ಲಿರುವ ಸ್ಟೋರ್ ಕೀಪರಿಂದ ಪಡೆಯಬಹುದು

ದರಖಾಸ್ತುಗಳು, [illegible]

ದ ಚೀಫ್ ಇಂಜನಿಯರ ಆಫೀಸ್ಸಿಗೆ ಸನ್ ೧೮೯೦ನೇ ಇಸವಿ ಮಾರ್ಚ ೭ನೇ ತಾರೀಖಿನೊಳಗಾಗಿ ಸೇರಬೇಕು, ಮತ್ತು ಲಿಫಾಫೆಗಳ ಮೇಲ್ಗಡೆ "ಯೋಣ್ಣೆ, ಕೊಬ್ಬು, ಜೋಡಿ ಬಟ್ಟೆಗಳ ಬಗ್ಗೆ ದರಖಾಸ್ತು" ಎಂದು ಬರೆಯತಕ್ಕದ್ದು.

ಏಜಂಟ ವ ಚೀಫ್ ಇಂಜನಿಯರವರು ಕಡಿಮೆ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನೇ ಯಾಗಲಿ ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲವು. ಜಾಸ್ತೀ ಅಂಶಗಳ್ಯಾವವನ್ನಾದರು ತಿಳಿದುಕೊಳ್ಳಬೇಕಾಗಿದ್ದರೆ ಹುಬ್ಬಳ್ಳಿಯಲ್ಲಿರುವ ಸ್ಟೋರ್ ಕೀಪರಿಂದ ತಿಳಿದುಕೊಳ್ಳತಕ್ಕದ್ದು.

ಧಾರವಾಡ, ೩ನೇ ಫೆಬ್ರುವರಿ 1890 } G. J. LINDSAY, *Agent and Chief Engineer,*

ಮಹಾರಾಜಾ ಆಫ್ ಮೈಸೂರು ಸ್ಪಿನ್ನಿಂಗ್ ವ ಮ್ಯಾನ್ಯುಫಾಕ್ಚರಿಂಗ್ ಕಂಪೆನಿ (ಲಿಮಿಟೆಡ್.)

ಇದರಿಂದ ತಿಳಿಸುವದೇನಂದರೆ.—

ಸನ್ ೧೮೯೦ನೇ ಇಸವಿ ಫೆಬ್ರುವರಿ ೩ನೇ ತಾರೀಖಿನಲ್ಲಿ ಕಂಪೆನಿಯವರು ಸೇರಿನಡೆಸಿದ ಎಕ್ಸ್ಟ್ರಾರ್ಡಿನರಿ ಜನರಲ್ ಮೀಟಿಂಗ್ನಲ್ಲಿ ಮಾಡಲ್ಪಟ್ಟ ವಿಶೇಷ ನಿರ್ಣಯಗಳನ್ನು ಕಾಯಂ ಮಾಡತಕ್ಕ ಬಗ್ಗೆ, ಸನ್ ೧೮೯೦ನೇ ಇಸವಿ ಫೆಬ್ರುವರಿ ೨೦ನೇ ತಾರೀಖಿನ ಸಾಯಂಕಾಲ ನಾಲ್ಕು ಘಂಟೆಗೆ ಯುತ್ರದ ಕಾರ್ಖಾನೆಯಲ್ಲಿರುವ ಕಂಪೆನಿಯ ಆಫೀಸಿನಲ್ಲಿ ಮಹಾರಾಜಾ ಆಫ್ ಮೈಸೂರು ಸ್ಪಿನ್ನಿಂಗ್ ಮತ್ತು ಮ್ಯಾನ್ಯುಫ್ಯಾಕ್ಚರಿಂಗ್ ಕಂಪೆನಿ ಲಿಮಿಟೆಡ್ಡಿನ ಹಿಸ್ಸೇದಾರರ ಮೀಟಿಂಗ ಸೇರಿಸಲ್ಪಡುವದು, ಹ್ಯಾಗಂದರೆ—

ಕಂಪೆನಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಷನಿನ ೧೦೫ನೇ ಕಲಂನಲ್ಲಿ "ಕಂಪೆನಿಯ ನಿವಳ ನಫೇ ಪೈಕಿ ಸೇಕಡ ೧೦ರೂಪಾಯಿಗಳು" ಎಂಬದಾಗಿ ನಮೂದಿಸಲ್ಪಟ್ಟಿರುವ ಪದಗಳು ತೆಗೆದು ಹಾಕಲ್ಪಡತಕ್ಕದ್ದು. ಮತ್ತು ಇದರಿಂದ ತೆಗೆದು ಹಾಕಲ್ಪಟ್ಟದ್ದೇ ಅವುಗಳಿಗೆ ಬದಲು ತಯಾರಾಗುವ ನೂಲು ಬಟ್ಟೆಗಳ ಪೈಕಿ ನೂಲಿನಲ್ಲಿ ಮಾತ್ರ ಪೌಂಡ ೧ಕ್ಕೆ ೩ ಪೈ" ಎಂದು ಸೇರಿಸಲ್ಪಡತಕ್ಕದ್ದು, ಮತ್ತು ಡೈರೆಕ್ಟರುಗಳು ಅದಾಗಿಗೆ ರುಜು ಮಾಡಿ ಕಾಯಂ ಮಾಡತಕ್ಕದ್ದು.

೧೦೫ನೇ ಕಲಂ ಇದರ ರೀತಿ ಇರುವದು.

ಮುಂಬೈಯೊಳಗೆ ೯ನೇ ನಂಬರ್ ಹಾರ್ನಬಿ ರೋಡಿನಲ್ಲಿರುವ ಮೆಸ್ಸರ್ಸ್ ಜೇಂಸ್ ಸ್ಕಾಟ ಅಂಡ್ ಕೊ ಯವರ ಕೋಠಿಯಲ್ಲಿ ಇಪ್ಪತ್ತೈದು ವರ್ಷಗಳ ಕಾಲ ಕಾಯಂ ಪಾಲುದಾರರಾಗಿ ಈಗ ಸೇರಿರುವ ಅಥವಾ ಮುಂದೆ ಸೇರತಕ್ಕ ಜನರು ಕಂಪೆನಿಯ ಏಜಂಟರುಗಳಾಗಿರತಕ್ಕದ್ದು, ಮತ್ತು ಆ ಮಾಯಿದೆ ಪ್ರಾರ್ಥನೆಯಾಗುವ ಕಾಲದಲ್ಲಿ ಜಾಸ್ತೀ ಸಂಖ್ಯೆಯುಳ್ಳ ಹಿಸ್ಸೇದಾರರ ಅಭಿಪ್ರಾಯವನ್ನನುಸರಿಸಿ ಮಾತ್ರ ಮಾಡಲ್ಪಡುವ ಪಕ್ಷಕ್ಕೆ ಅವರೇ ಏಜಂಟರುಗಳಾಗಿರತಕ್ಕದ್ದು, ಮತ್ತು ತಯಾರಾಗುವ ನೂಲಿನಲ್ಲಿ ಮಾತ್ರ ಪೌಂಡು ಒಂದಕ್ಕೆ ೩ ಪೈಯಂತೆ ಆ ಏಜಂಟರುಗಳಿಗೆ ರುಸುಂ ಸಲ್ಲತಕ್ಕದ್ದು.

Bangalore, 4th February 1890 } "By order" JAMES SCOTT & Co., *Agents*

ಮಹಾರಾಜಾ ಆಫ್ ಮೈಸೂರು ಸ್ಪಿನ್ನಿಂಗ್ ವ ಮ್ಯಾನ್ಯುಫ್ಯಾಕ್ಚರಿಂಗ್ ಕಂಪೆನಿ (ಲಿಮಿಟೆಡ್.)

ನೋಟೀಸ್.

ಮಾಯೆಯಾನಾ ೫೦ ರೂಪಾಯಿಗಳ ತಲಬಿನ ಮೇಲೆ ಬುದ್ಧಿಶಾಲಿಗಳಾದ ಮೂವರು ನೇಟಿವ್ ಅಕ್ಕೌಂಟೆಂಟುಗಳು ಬೇಕಾಗಿರುತ್ತಾರೆ. ಬಳಿಕ ಯಲ್ಲಿ ನೇಕಡಾ ಅರ್ಧದೊಪಾಯಿನಂತೆ ರುಸುಂ ಕೊಡಲ್ಪಡುವದು ನೂಲು ವ ಬಟ್ಟೆಗಳ ಬಿಕರೀ ವಿಷಯದಲ್ಲಿ ಅವರು ಮಾಡುವ ತರದೂದಿಗೆ ಅನುಗುಣವಾಗಿ ಒಳ್ಳೆಯ ರುಸುಂ ಸಿಕ್ಕುವದು. ಕೆಲಸ ಮಾಡಬೇಕಾದ ಸ್ಥಳಗಳು ಕಾರ್ಖಾನೆಯಲ್ಲಿ ತಿಳಿಸಲ್ಪಡುವವು. ಇನು ೧ಕ್ಕೆ ೩,೦೦೦ ರೂಪಾಯಿಗಳಿಗೆ ಜಾಮೀನ್ ಕೊಡಬೇಕು. ಯೋಗ್ಯತಾ ಪತ್ರಿಕೆಗಳು ವಗ್ಯೆರೆಯೊಡನೆ ಏಜಂಟರಿಗೆ ಬರೆದುಕೊಳ್ಳತಕ್ಕದ್ದು.

Messrs James SCOTT & Co,
Maharajah Spinning Mills,
Bangalore

ಮಹಾರಾಜಾ ಆಫ್ ಮೈಸೂರು ಸ್ಪಿನ್ನಿಂಗ್ ವ ಮ್ಯಾನ್ಯುಫ್ಯಾಕ್ಚರಿಂಗ್ ಕಂಪೆನಿ (ಲಿಮಿಟೆಡ್.)

ಇದರಿಂದ ತಿಳಿಸಲ್ಪಡುವದೇನಂದರೆ.—

ಇದರ ನಮೂದ್ ಮಾಡಲ್ಪಡುವ ಕೆಲಸಗಳನ್ನು ಜರಿಗಿಸತಕ್ಕ ಬಗ್ಯೆ, ಸನ್ ೧೮೯೦ ನೇ ಇಸವಿ ಫೆಬ್ರುವರಿ ೨೫ನೇ ತಾರೀಖ್ ಮಧ್ಯಾನ್ಹ ೩ ಘಂಟೆಗೆ, ಯಂತ್ರದ ಕಾರ್ಖಾನೆಯಲ್ಲಿರುವ ಕಂಪೆನಿಯ ರಿಜಿಸ್ಟರ್ ಮಾಡಲ್ಪಟ್ಟ ಆಫೀಸಿನಲ್ಲಿ ಹಿಸ್ಸೇದಾರರ ಐದನೇ ದಫಾ ಸಾಲಿಯಾನಾ ಸಾಮಾನ್ಯ ಸಭೆ ಸೇರುವದು:—

೧. ಸನ್ ೧೮೮೯ನೇ ಇಸವಿಯ ಬಾಬತು ಡೈರೆಕ್ಟರುಗಳ ರಿಪೋರ್ಟ್ ಮತ್ತು ಲೆಕ್ಕಗಳನ್ನು ಬರಮಾಡಿಕೊಂಡು ಅಂಗೀಕರಿಸುವಣ.

೨. ಸರದೀ ಮೇರೆ ಕೆಲಸವು ಬಿಟ್ಟು ಹೋಗುವ ಡೈರೆಕ್ಟರುಗಳ ಸ್ಥಾನಕ್ಕೆ ಬೇರೆ ಇಸಂಗಳನ್ನು ಚುನಾಯಿಸುವಣ.

೩. ಆಡಿಟರುಗಳನ್ನು ಚುನಾಯಿಸಿ ಅವರಿಗೆ ರುಸುಂ ಗೊತ್ತು ಮಾಡುವಣ.

"By order"
J. SCOTT & Co
Agents

Bangalore City Municipality

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ

ನಂಬರ್ ೬೬೪

NOTICE.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಸಿಟಿ ಮ್ಯುನಿಸಿಪಲ್ ಸರಹದ್ದಿಗೆ ಒಳಪಟ್ಟಿರುವ ಪ್ರತಿಯೊಂದು ಕಟ್ಟಡಗಳಿಗೂ ಹೊಸದಾಗಿ ನಂಬರುಗಳು ಹಾಕಲ್ಪಡುತಿವೆ; ಅಂತಾ ನಂಬರುಗಳನ್ನು ಯಾರಾದರು ಕೆಡಿಸಿದರೆ ಅಂತವರು ಮ್ಯುನಿಸಿಪಲ್ ರೆಗ್ಯುಲೇಷನ್ ೧೫೨ನೇ ಸೆಕ್ಷನ್ನಲ್ಲಿ ವಿಧಿಸಲ್ಪಟ್ಟಿರುವ ದಂಡನೆಗೆ ಗುರಿಯಾಗುವರು. ಸದರೀ ಸೆಕ್ಷನ್ ಇದರಡಿ ಸೇರಿಸಲ್ಪಟ್ಟಿದೆ.

ಬೆಂಗಳೂರು, ೧೦ನೇ ಫೆಬ್ರುವರಿ ೧೮೯೦.

P. N. KRISHNAMURTI,
President,
City Municipal Commission.

"೧೫೨.—ಪ್ರೆಸಿಡೆಂಟರವರು ಆಗಿಂದಾಗ್ಯೆ ಯಾವದಾದರು ಕಟ್ಟಡದ ಹೊರಗಡೆಯಲ್ಲರಿಗೂ ಚೆನ್ನಾಗಿ ಕಾಣುವಂತೆ ಒಂದು ಸ್ಥಳದಲ್ಲಿ, ಅಥವಾ ಸದರೀ ಕಟ್ಟಡದ ಆವರಣದ ಬಾಗಲಲ್ಲಿ ರಸ್ತೆಗೆ ರೂಬರೂ ನಂಬರನ್ನು ಹಾಕಿಸಬಹುದು. ಅಂತಾ ನಂಬರನ್ನು ಯಾರಾದರು ಕೆಡಿಸಿದಾಗ್ಯೂ ಕಿತ್ತುಹಾಕಿದಾಗ್ಯೂ ಅಥವಾ ವಿರೂಪ ಮಾಡಿದಾಗ್ಯೂ ಅಂತವರು ೫೦ ರೂಪಾಯಿಗಳಿಗೆ ಮೇಲ್ಪಡದ ಜುಲ್ಮಾನೆಗೆ ಗುರಿಯಾಗುವರು."

ಕಟ್ಟಡಗಳ ಮೇಲೆ ನಂಬರ್‌ಗಳು.

P. N. KRISHNAMURTI,
President,
City Municipal Commission.

ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪೆನಿ.

ರೈಲ್ವೆ ಕಂಟ್ರಾಕ್ಟದಾರರಿಗೆ ಇದರಿಂದ ತಿಳಿಸಲ್ಪಡುವದೇನಂದರೆ —

ಮೈಸೂರು ಸ್ಟೇಟ್ ರೈಲ್ವೆ ರಸ್ತೆಯನ್ನು ಮೈಸೂರಿಂದ ನಂಜನಗೂಡು ವರಿವಿಗೆ ೧೫ ಮೈಲುಗಳ ಫಾಸಲೆ ಬತಾಯಿಸಿ ಹಾಕುವದಕ್ಕೆ ದರಖಾಸ್ತುಗಳನ್ನು ಸೀಲ್ ಮಾಡಿ ಕಳುಹಿಸಿಕೊಡತಕ್ಕದ್ದು.

ಮೂರು ಮೈಲುಗಳಿಗೆ ಸೆಕ್ಷನ್, ಅಂದರೆ ಒಂದು ಭಾಗದ ಮೇರೆ ವಿಂಗಡಿಸಲ್ಪಟ್ಟಿದೆ, ಅವುಗಳ ಪೈಕಿ ಒಂದು ಅಥವಾ ಜಾಸ್ತೀ ಸೆಕ್ಷನ್‌ಗಳಿಗೆ ದರಖಾಸ್ತುಗಳು ಅಂಗೀಕರಿಸಲ್ಪಡುವವು.

ದರಖಾಸ್ತುಗಳ ಲಿಫಾಫೆಯ ಮೇಲೆ ನಂಜನಗೂಡು ರೈಲ್ವೆ ರಸ್ತೆಗೆ ದರಖಾಸ್ತೆಂದು ಗುರುತುಮಾಡಿ, ಧಾರವಾಡದಲ್ಲಿರುವ ಏಜಂಟರು ವ ಚೀಫ್ ಇಂಜನಿಯರವರ ಹೆಸರಿಗೆ ರಿಜಿಸ್ಟರ್ ಮಾಡಿ ಕಳುಹಿಸತಕ್ಕದ್ದು. ಅವು ಸನ್ ೧೮೯೦ ನೇ ಇಸವಿ ಮಾರ್ಚ್ ೧೫ನೇ ತಾರೀಖ್ ಮಧ್ಯಾನ್ಹ ದವರಿವಿಗೆ ಬರಮಾಡಿಕೊಳ್ಳಲ್ಪಡುವವು,

ಏಜಂಟ್ ವ ಚೀಫ್ ಇಂಜನಿಯರವರು ಕಂಡರಖಾಸ್ತುಗಳನ್ನಾಗಲಿ ಯಾವ ದರಖಾಸ್ತನ್ನೇಯಾಗಲಿ ಅಂಗೀಕರಿಸುವದಕ್ಕೆ ಬದ್ಧರಾಗುವದಿಲ್ಲವು

ಮಾಡಬೇಕಾದ ಕಾಮಗಾರಿಯ ದಸ್ತೈವಜು ಪಟ್ಟಿ, ಸಾಮಾನುಗಳ ಪರಿಮಾಣದ ಪಟ್ಟಿ, ಕರಾರಿನ ನಮೂನೆ, ಇವುಗಳನ್ನು ಪಡೆಯಬೇಕಾದವರು ೫೦ ರೂಪಾಯಿಗಳಂ ಕೊಟ್ಟು ಧಾರವಾಡದಲ್ಲಿರುವ ಏಜಂಟ್ ವ ಚೀಫ್ ಇಂಜನಿಯರಿಂದ ಪಡೆಯಬಹುದು.

ಪ್ರತಿ ಒಂದು ದರಖಾಸ್ತಿನ ಸಂಗವಲೂ ೧,೦೦೦ ರೂಪಾಯಿಗಳ ಸಂಚಕಾರದ ಮೊಬಲಗು ಕಳುಹಿಸತಕ್ಕದ್ದು. ದರಖಾಸ್ತು ಮಂಜೂರ್ಮಾಡಲ್ಪಡದ ಪಕ್ಷಕ್ಕೆ ಸದರೀ ಮೊಬಲಗು ವಾಪಸ್ ಮಾಡಲ್ಪಡುವದು, ದರಖಾಸ್ತು ವಾಪಸ್ ತೆಗದುಕೊಳ್ಳಲ್ಪಟ್ಟರೆ ಅದು ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

ದರಖಾಸ್ತಿನಿಂದ ಪಡೆದ ಕಾಮಗಾರಿಗೆ ಹಿಡಿಯುವ ಲಾಗವಡು ಮೊಬಲಗು ಪೈಕಿ ನೇಕಡ ೫ ರೂಪಾಯಿನಂತೆ, ಕಂಟ್ರಾಕ್ಟನ್ನು ಕ್ರಮವಾಗಿ ಪೂರ್ತಿ ಮಾಡುವದಕ್ಕೆ ಜಾಮೀನ್ ತರೀಖ್ ಡಿಪಾಜಿಟ್ ಇಡತಕ್ಕದ್ದು.

ದರಖಾಸ್ತು ಮಂಜೂರ್ಮಾಡಲ್ಪಟ್ಟ ತಾರೀಖ್ ಲಾಗಾಯತು ಆರು ತಿಂಗಳೊಳಗಾಗಿ ಕಾಮಗಾರಿಯನ್ನು ಪೂರ್ತಿ ಮಾಡತಕ್ಕದ್ದು.

ವಿಶಿಷ್ಟ ಸೇತುವೆಗಳ ನಕ್ಷೆಗಳನ್ನೂ ಇತರ ಕಾಮಗಾರಿಗಳ ನಕ್ಷೆಗಳನ್ನು ಧಾರವಾಡದಲ್ಲಿರುವ ಏಜಂಟ್ ವ ಚೀಫ್ ಇಂಜನಿಯರ ಆಫೀಸಿನಲ್ಲಿ ನೋಡಬಹುದು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, FEBRUARY 17, 1890

೧೮೯೦ನೇ ಫೆಬ್ರುವರಿ, ತಾ|| ೧೭ನೇ ಸೋಮವಾರ.

AN INSTANCE OF ANCIENT HINDU WISDOM

ರಾಜಾ ಸರ್. ಟಿ. ಮಾಧವರಾಯರವರು ಹಿಂದೂಗಳಾದ ನಮ್ಮ ಪೂರ್ವಿಕರು ಪಡೆದಿದ್ದ ಯುಕ್ತಾಯುಕ್ತ ಪರಿಜ್ಞಾನವಂ ಕುರಿತು ಒಂದು ನೆಯಿಂದು ಪತ್ರಿಕೆಗೆ ಇದರಡಿಕಂಡಂತೆ ಬರೆದಿರುತ್ತಾರೆ ಹ್ಯಾಗಂದರೆ,—

"ಪ್ರಜೆಗಳಪೈಕಿ ಅಧಿಕ ಸಂಖ್ಯೆಯುಳ್ಳವರು ವಸ್ತುವಿಚಾರದಲ್ಲಿ ಸ್ಥೂಲಮಾರ್ಗವನ್ನವಲಂಬಿಸಬೇಕೇಹೊರತು ಸೂಕ್ಷ್ಮಮಾರ್ಗವಂ ಪ್ರಾಯಶಃ ಅವಲಂಬಿಸಕೂಡದೆಂಬ ಅಂಶವಂ ಆರ್ಯರು ಸ್ಪಷ್ಟವಾಗಿ ತಿಳಿದು ಅದರಂತೆ ನಡೆಯುತಬಂದರು. ಆದುದರಿಂದ ಸೂಕ್ಷ್ಮಮಾರ್ಗದಲ್ಲಿ ವಿಚಾರಕ್ಕೆ ಬ್ರಾಹ್ಮಣರೇ ಅರ್ಹರೆಂದು ಏರ್ಪಟ್ಟಿತು. ಇತರಜಾತಿಯವರು ಸ್ಥೂಲಮಾರ್ಗವು ಉಪೇಕ್ಷಿಸುವದರಿಂದ ಅವರಿಗೆ ಹಾನಿಯೇಹೊರತು ಕ್ಷೇಮವಿಲ್ಲವೆಂದು ತಿಳಿಸಲ್ಪಟ್ಟಿತು. ಈ ಅಭಿಪ್ರಾಯಾನುಸಾರವಾಗಿ ಕೃಷಿಜೀವಿಗಳು, ವಾಣಿಜ್ಯಜೀವಿಗಳು, ಆಯುಧ ಜೀವಿಗಳು, ಅಂದರೆ ಶೂದ್ರ, ವೈಶ್ಯ, ಕ್ಷತ್ರಿಯರು, ಶಾಸ್ತ್ರಾಭ್ಯಾಸ ಮಾಡುವವರಲ್ಲ ಅನುತ್ಸಾಹ ವುಂಟುಮಾಡಲ್ಪಟ್ಟರು. ಬ್ರಾಹ್ಮಣರಿಗೆ ಇತರ ಜಾತಿಯವರಲ್ಲಿ ಅಸೂಯೆಯಿಂದ ಈ ರೀತಿಮಾಡಲಿಲ್ಲವು, ಪರಂತು ಪ್ರಜಾಕ್ಷೇಮವಿಷಯದಲ್ಲಿ ಸಂಪೂರ್ಣ ದೃಷ್ಟಿಯಿಂದ ಮಾಡಿದಕಾರ್ಯವಾಗಿರುತದೆ. ಕೃಷಿಜೀವಿಗಳು ಜಗತ್ಸೃಷ್ಟಿ, ಆತ್ಮವಿಚಾರ, ಈ ವಿಷಯಗಳಲ್ಲಿ ವ್ಯರ್ಥವಾಗಿ ಕಾಲವಂ ಕಳೆಯಬೇಕಾದ್ದಿಲ್ಲವೆಂದು ಆರ್ಯರು ಚೆನ್ನಾಗಿ ಅರಿತಿದ್ದರು, ಪರಂತು ಈಕಾಲದ ಇಂಗ್ಲಿಷಜನರಿಗೆ ಅಂತಾ ನಿಷ್ಕಲಂಕಜ್ಞಾನವಿಲ್ಲದೆ ಸರ್ಕಾರ್ ನೌಕರಿಗಳಂ ಕೊಡುವದಾಗಿ ಎಗ್ಗನಮಾಡಿ ಅಕ್ಷರ ಗಣಿತ ಶಾಸ್ತ್ರಮೊದಲಾದವನ್ನು ಅಭ್ಯಾಸಮಾಡುವಂತೆ ಪ್ರೋತ್ಸಾಹಗೊಳಿಸುತಲಿದಾರೆ. ಇವರಲ್ಲಿ ಯಾರು ಬುದ್ಧಿವಂತರು ‘ ಈಕಾಲದ ಇಂಗ್ಲಿಷಿನವರೆ, ಪೂರ್ವಕಾಲದ ಆರ್ಯರೆ ?’’ ಎಂಬದು.

ಈ ದೊಡ್ಡಮನುಷ್ಯರು ತಿಳಿಸಿರುವ ಮೇಲಿನ ಅಭಿಪ್ರಾಯವಂ ಕುರಿತು ಪರ್ಯಾಲೋಚಿಸಿ ನೋಡುವಲ್ಲಿ ನಮ್ಮ ಪೂರ್ವಿಕರು ಜಾತಿ ಮತಾಚಾರಗಳಲ್ಲ ಮಾಡಿರುವ ಏರ್ಪಾಡುಗಳೆಲ್ಲವು ಕೇವಲ ಲೋಕಹಿತಾರ್ಥವಾಗ ಮಾಡಿದರೆ ಹೊರ್ತು ಸ್ವಪ್ರಯೋಜನ ದೃಷ್ಟಿಯಿಂದಲ್ಲವೆಂದು ಸ್ಪಷ್ಟವಾಗಿ ಕಾಣುತದೆ. ಹೀಗಿರುವಲ್ಲಿ ಕೇವಲ ಶ್ಲಾಘ್ಯವಾದ ಅಂತವರ ಉದ್ದೇಶಗಳನ್ನರಿಯಲಾರದೆ ಬ್ರಾಹ್ಮಣೇತರರ ಪೈಕಿ ಆಧುನಿಕ ವೈಲಕ್ಷಣ್ಯಾಭಿಲಾಷಿಗಳಾದ ಕೆಲವರು, ಪೂರ್ವಕಾಲದಲ್ಲಿ ಬ್ರಾಹ್ಮಣರಾದವರು ಇತರ ಮೂರುವರ್ಣದವರು ತಮ್ಮಂ ಪೂಜ್ಯರೆಂದು ಭಾವಿಸಿ ಗೌರವಿಸುತ ಬರಬೇಕೆಂಬ ಆಂತರವಾದ ಉದ್ದೇಶದೊಡನೆ ಮಾಡಿದ ಯೋಜನೆಗಳೆಂದು ಭಾವಿಸಿ, ಬ್ರಾಹ್ಮಣ ತಿರಸ್ಕಾರಕ್ಕೆ ಪ್ರಾರಂಭಿಸಿ, ಪರಂತು ಬ್ರಾಹ್ಮಣರಂತೆ ತಾವೂ ಆಗಬೇಕೆಂದು ಮಾಡುವ ಬಹುವಿಧ ಪ್ರಯತ್ನಗಳು, ಅಂದರೆ, ಬ್ರಾಹ್ಮಣರಂತೆ ವಸ್ತ್ರಧಾರಣ, ಅವರಂತೆ ಶಾಸ್ತ್ರಿ, ಆಚಾರ್ಯ, ಆಚಾರ್ರು, ಭಟ್ಟ ಎಂದು ಪಗ್ಯೆರೆ ಹೆಸರುಗಳನ್ನಿಟ್ಟುಕೊಂಡು, ಕಾಲಸ್ನಾನ, ಜಪ, ಹೋಮ, ಯಾತ್ರಾದಿಗಳು ಮೊದಲಾಗಿ ಯುಗಾಂತರಗಳಿಂದ ಬ್ರಾಹ್ಮಣ್ಯ ಮಾತ್ರಕ್ಕೆ ವಿಧಿಸಲ್ಪಟ್ಟಿರುವ ಬಹುವಿಧ ಕರ್ಮಗಳಂ ಸಹ ಒಂದೊಂದಾಗಿ ಆಚರಿಸುವದಕ್ಕೆ ಯತ್ನಪಡುತಲಿರುವದು ನೋಡಲಾಗಿ ಕೇವಲ ಹಾಸ್ಯಾಸ್ಪದವಾಗಿ ಕಾಣುತಿದೆ ಮೇಲೆ ತಿಳಿಸಲ್ಪಟ್ಟ ದುರಭಿಪ್ರಾಯಗಳಂ ತ್ಯಜಿಸಿ, ದೀರ್ಘದರ್ಶಿಗಳಾದ ಪೂರ್ವಿಕರು ಆಯಾ ಜಾತಿಯವರಿಗೆ ವಿಧಿಸಿರುವ ಕಟ್ಟಳೆಗಳನ್ನೆಲ್ಲಂ ಮೀಸದೆ ಅನುವರ್ತಿಸುತ ಬರುವವರ ಮೂಲಕ ಉಂಟಾಗುವ ಸುಖವು ಅಮಿತವಾಗಿರುವದು.

A WHOLESOME ORDER

ಸಾಗರ ಮುನಸಫರವರು ತಮ್ಮ ಕೋರ್ಟ್ ನೌಕರಿಗೆ ಬೇಕಾದ ಒಂದು ಇಸಂ ವಿಷಯದಲ್ಲಿ ಈ ತಿಂಗಳ ೮ನೇ ತಾರೀಖ್ ಶನಿವಾರದ ಮೈಸೂರು ಗೆಜೆಟಿನಲ್ಲಿ ಪ್ರಾಯಿಷ್ ಮಾಡಿದ್ದ ಪ್ರಕಟನೆಯ ಔಚಿತ್ಯವಂ ಕುರಿತು ಇದೇ ತಿಂಗಳ ೧೦ನೇ ತಾರೀಖಿನ ನಮ್ಮ ಪತ್ರಿಕೆಯಲ್ಲಿ ನಾವು ಮಾಡಿದ ವಿಚಾರವು, ಕೊಟ್ಟ ಅಭಿಪ್ರಾಯವೂ ಯೋಗ್ಯಕಃ ಈ ಪತ್ರಿಕಾ ದಾತರಿಗೂ ಇತರರಿಗೂ ತಿಳಿದಿರುವದಷ್ಟೆ. ಈ ವಿಷಯವು ದಿವಾನರವರ ಅವಧಾನಕ್ಕೆ ಬಂದು, ಗವರ್ನಮೆಂಟನವರು ಜಾತಿ ಮತ ಪ್ರಯುಕ್ತವಾದ ತಾರತಮ್ಯವು ಪರಿಗಣಿಸಲಾರರೆಂತಲೂ, ಪರಂತು ವಿದ್ಯಾವಂತರಾದವರು ಯಾವ ಜಾತಿಯವರಾಗಿದ್ದಾಗ್ಯೂ ಅವರು ಪುರಸ್ಕರಿಸಲ್ಪಡತಕ್ಕದ್ದೆಂತಲೂ, ಮುನಸಫರು ಕೊಟ್ಟ ಪ್ರಕಟನೆಯು ಕೇವಲ ಅಯುಕ್ತವಾದದ್ದೆಂತಲೂ ಅಭಿಪ್ರಾಯ ಪಟ್ಟು, ಆ ಬಗ್ಯೆ ಪ್ರೊಸೀಡಿಂಗ್ಸ ಮಾಡಿ ತಿಳುವಳಿಕೆಯ ಬಗ್ಯೆ ಇಲಾಖೆಗಳಿಗೆಲ್ಲ ಕಳುಹಿಸುವಂತೆ ಹುಕುಂ ಮಾಡಿರುವದಾಗಿ ಕೇಳುತ್ತೇವೆ. ಈ ವರ್ತಮಾನವು ಕೇವಲ ಪ್ರವಾದ ರೂಪವಾಗಿ ಪರಿಣಮಿಸದೆ ಕಾರ್ಯತಃ ಆಚರಣೆಗೆ ಬಂತೆಂಬ ವಾರ್ತೆಯಂ ಕೇಳುವದರಲ್ಲಿ ಅತ್ಯಂತ ಕುತೂಹಲ ಪೂರ್ಣರಾಗಿರುತ್ತೇವೆ. ಐಚ್ಛಿಕ ಪ್ರವೃತ್ತಿಗೆ ಒಂದು ನಿರ್ಬಂಧ ವುಂಟಾಗದೆ ಹೋದಮೇಲೆ ಅದರಿಂದ ಬಹುವಿಧ ಅನರ್ಥಗಳಿಗೆ ಅವಕಾಶ ವುಂಟಾಗುವದರಲ್ಲಿ ಸಂದೇಹ ವಿಲ್ಲವು.

THE LATE Mr SAHUKAR GARUDACHAR

ಈ ದೇಶದೊಳು ಅನೇಕ ಸಂವತ್ಸರಗಳಿಂದಲವನೊದಲು ಪ್ರಖ್ಯಾತ ಚಾರಿತ್ರರಾಗಿಯೂ ಪ್ರಜೆಗಳ ಅಂತರವಾದ ಗೌರವ ಪುರಸ್ಕಾರಗಳಿಗೆ ವಿಷಯರಾಗಿಯೂಯಿದ್ದ ಶ್ರೀಮಾನ್ ಸಾಹುಕಾರ್ ಗರುಡಾಚಾರ್ಯರೆಂಬ ದೊಡ್ಡಮನುಷ್ಯರು ಈಚೆಗೆ ಒಂದೆರಡು ತಿಂಗಳ ಕಾಲದಮೊದಲು ಅಸ್ವಸ್ಥಸ್ಥಿತಿಯಲ್ಲಿದ್ದು, ತನ್ನಿವೃತ್ತಿಯಬಗ್ಯೆ ಮಾಡಲ್ಪಟ್ಟ ಬಹುವಿಧಚಿಕಿತ್ಸೆಗಳೆಲ್ಲವು ನಿಷ್ಪ್ರಯೋಜಕಗಳಾಗಿ, ಕಳೆದ ಶನಿವಾರದಹಿನರಾತ್ರಿ ಆರುಘಂಟೆಗೆ ಈ ಪುರದಲ್ಲಿ ಸ್ವರ್ಗಸದನೊಳು ಪರಮಪದವಂ ಸೇರಿದರು. ಸಿನ್ನೆಯದಿನ ಅವರ ಉತ್ತರಕ್ರಿಯೆಗಳೆಲ್ಲವು ಸಾಂಗವಾಗಿ ನೆರವೇರಿದವು. ಈ ದೊಡ್ಡಮನುಷ್ಯರಿಗೆ ಅರವತ್ತು ವರುಷಗಳ ವಯಸ್ಸು ಪೂರ್ತಿಯಾಗಿದ್ದವು. ಈ ದೊಡ್ಡಮನುಷ್ಯರು ಅನೇಕಸಂವತ್ಸರಗಳಕಾಲ ಸಂಧೀದುರ್ಗಾ ಟ್ರಿಪಿಜನ್ ಖಜಾನ್ ಚೀಕೆಲಸದಲ್ಲಿದ್ದು, ಉಚಿತಕಾಲದಲ್ಲಿ ಪೆನ್ಷನ್ ಮೇಲೆ ನಿವೃತ್ತರಾಗಿ ನಿವೃತ್ತಿ ಸುಖಾನುಭವದಲ್ಲಿರುತಿದ್ದರು. ಇವರು ಸ್ವಭಾವತಃ ಶೀಲರು ಶಾಂತರು, ದಾನ್ಯಮಾಶೀಲರು, ಪಕ್ಷಿ ಪ್ರಕರರು, ದಯಾಳು, ಮತ್ತು ಆಸ್ತಿಕರು. ಇಂತಾ ಸದ್ಗುಣ ಪರಿಪೂರ್ಣರಾದವರು ಇನ್ನು ಕೆಲವುಸಂವತ್ಸರಗಳಕಾಲ ಜೀವಿಸಿದ್ದರೆ ಬಡವರಾದವರನೇಕರಿಗೆ ಸಹಾಯಕರಾಗಿರುವರು. ಇಂತವರ ಅನಿರೀಕ್ಷಿತ ಮರಣದಬಗ್ಯೆಯೆಷ್ಟು ದುಃಖಿಸಿದರು ಸ್ವಲ್ಪವಾಗಿರುವದು.

Occasional Notes
ನೈಮಿತ್ತಿಕ ವಿಷಯನ್ಯಾಸ.

The Indian National Congress—ಬರುವ ಡಿಸಂಬರ್ ತಿಂಗಳಲ್ಲಿ ನಡೆಯಬೇಕಾದ ನ್ಯಾಷನಲ್ ಕಾಂಗ್ರೆಸ್ ಎಂಬ ಸಾರ್ವಜನಿಕ ಸಭೆಯು ಕಲ್ಕತ್ತೆಯೊಳು ನಡಿಸಲ್ಪಡತಕ್ಕದ್ದೆಂದು ನಿರ್ಣಯವಾಗಿರುವಂತೆ ತಿಳಿಯಬರುತಿದೆ.

A royal trip—ಜಿಲ್ಯಾನ್ ಸುಲ್ತಾನರ ಮಹಾರಾಜರವರು ಆಸ್ಟ್ರೇಲಿಯಾ ದೇಶಕ್ಕೆ ಹೋಗುವ ಉದ್ದೇಶದಿಂದ ಕೆಲವರು ಪರಿಜನರೊಡನೆ ಕಳೆದ ಬುಧವಾರದದಿನ ಮೊಂಬೈಗೆ ದಯಮಾಡಿ ಮರುದಿನ ಅಲ್ಲಿ ಹಡಗು ಹತ್ತುವವರಾಗಿದ್ದರು.

Cholera.—ತಿರುಚನಾಪಲ್ಲಿಯೊಳು ಮರಳಿ ವಾಂತಿ ಭೇದಿ ರೋಗ ತಲೆದೋರಿರುವಂತೆಯೂ, ತತ್ರಾಪಿ ಸದರೀ ಷಹರಪೈಕಿ ದಕ್ಷಿಣ ಇಂಡಿಯಾ ರೈಲ್ ಇಲಾಖಾ ಬಡ ನೌಕರರು ವಾಸ ಮಾಡುವ ಪ್ರದೇಶದಲ್ಲಿ ವ್ಯಾಪಿಸಿ ಪ್ರಾಣ ಹಾನಿಗಳು ಸಹ ವುಂಟಾಯಿತೆಂತಲೂ ಕೇಳಿವಿಷಾದಿಸುವವು.

Charity—ರಾಜಕೋಟೆ ಸಂಸ್ಥಾನದ ಠಾಕೂರ್ ಸಾಹೆಬರವರು ಅಲ್ಲಿನ ರೈಲ್ವೆ ಸ್ಟೇಷನ್ ಬಳಿ ಬಡವರಾದ ಪ್ರಯಾಣಸ್ಥರ ಪ್ರಯೋಜನಾರ್ಥ ಒಂದು ಧರ್ಮ ಶಾಲೆಯಂ ಸ್ಥಾಪಿಸಬೇಕೆಂಬ ಅಭಿಮತ ಪೂರ್ಣರಾಗಿದಾರೆಂದು ಕೇಳಿ ಬಹಳ ಸಂತೋಷಿಸುತ್ತೇವೆ.

Transfer of S I Railway.—ದಕ್ಷಿಣ ಇಂಡಿಯಾ ರೈಲ್ ರಸ್ತೆಯನ್ನು ಸರ್ಕಾರಕ್ಕೆ ವರ್ಗಮಾಡಿ ಕೊಳ್ಳತಕ್ಕಬಗ್ಯೆ ಅಂದಾಜ್ ಪಟ್ಟಿಗಳೂ ಸದರೀ ರೈಲ್ವೆ ಕಂಪೆನಿಗೆ ಸೇರಿದ ಗಾಡಿಗಳ ಪಟ್ಟಿಯೂ ತಯಾರಾಗುತಲಿರುವದಲ್ಲದೆ ತಾಬೇದಾರಿ ನೌಕರರನೇಕರು ಶೀಘ್ರದಲ್ಲಿ ನೌ

ಕರಗಳು ಬಿಡಬೇಕಾಗುವದೆಂದು ನೋಟಿಸ್ ಕೊಡಲ್ಪಟ್ಟಿರುವಂತೆಯೂ, ಈ ವರ್ಗವು ಬರುವ ಏಪ್ರಿಲ್ ಗುರ್ರೇ ತಾರೀಖಿನಲ್ಲಿ ಜಾರಿಯೊಳು ಬರುವದೆಂತಲೂ ತಿಳಿಯಬರುತಿದೆ.

Demand for camphor.—ಜರ್ಮನೀದೇಶದೊಳು ತೋಪು ಮದ್ದನ್ನು ಮಾಡುವದರಲ್ಲಿ ಒಂದು ನೂತನ ಮಾರ್ಗವು ಕಂಡು ಹಿಡಿದಿರುತ್ತಾರೆ. ಅದರಂತೆಮಾಡುವದರೊಳುಸುಡುವಾಗ ಹೊಗೆಹೊರಡದಿರುತಿದೆ. ಈಬಾಬತು ಮದ್ದುತಯಾರಿಗೆ ಕರ್ಪೂರವು ವಿಶೇಷವಾಗಿ ಉಪಯೋಗಿಸಬೇಕಾಗಿರುವದರಿಂದ ಅನೇಕಪ್ರದೇಶಗಳೊಳು ಅದರದಾರಣೆ ಮೊದಲಿಗಿಂತಲೂ ಹೆಚ್ಚಿಹೋಗಿರುತಿದೆಯೆಂದು ಒಂದಾನೊಂದು ಇಂಗ್ಲಿಷ್‌ಪತ್ರಿಕೆ ತಿಳಿಸುತಿದೆ.

An allowance to be withdrawn.—ಇಂಡ್ಯದೇಶದ ಸಿವಿಲ್ ಸರ್ವಿಸ್ ಪರೀಕ್ಷೆಯ ಬಗ್ಯೆ ಇಲ್ಲಿಂದ ಇಂಗ್ಲಾಂಡಿಗೆ ಹೋಗಿ ಅಲ್ಲಿ ಮೊದಲು ಸಂವತ್ಸರಗಳಕಾಲವಿದ್ದು ಓದುವಂತವರಿಗೆ ಕೆಲವು ಷರತ್ತುಗಳ ಮೇಲೆ ಇಂಡ್ಯ ಗವರ್ನಮೆಂಟಿನವರು ಈಚೆಗೆ ಕೆಲವು ಸಂವತ್ಸರಗಳಿಂದ ಕೊಡುತಬಂದ ೩೦೦ ಪೌಂಡುಗಳಂ ನಿಲ್ಲಿಸಿಬಿಟ್ಟು, ಇಲ್ಲಿ ಬೋನಾಫೈಡಿ ಅಲ್ಲಿಗೆ ಕಳುಹಿಸಲ್ಪಡುವ ವಿದ್ಯಾರ್ಥಿಯು ಅಲ್ಲಿನ ಪರೀಕ್ಷೆಯಂ ಕೊಟ್ಟು ತೇರ್ಗಡೆಯಾಗುವ ತನಕ ಅದಂ ಕೊಡತಕ್ಕದೆಂತಲೂ ಇಂಡ್ಯ ಗವರ್ನಮೆಂಟಿನವರು ಯೋಚಿಸುತ ಇರುವಂತೆ ಒಂದು ಪ್ರವಾದ ಹುಟ್ಟಿರುತ್ತದೆ.

Skin-grafting.—ಬಂದಾಸಿಂಬಂದು ಪತ್ರಿಕೆಯ ಲಂಡನ್ ಬಾತಮೀದಾರನು ಬರೆಯುತ್ತಾನೇನೆಂದರೆ:—ಒಬ್ಬ ಹುಡುಗನಿಗೆ ಬೆಂಕಿ ತಗಲಿ ಮೊಳಕಾಲಿನಿಂದ ಪಾದದ ವರಿವಿಗೆ ಬೆಂದು ಹೋಗಲು ಚಿಕಿತ್ಸೆಯಬಗ್ಯೆ ಅವನು ಆಸ್ಪತ್ರಿಗೆ ಕಳುಹಿಸಿದರು. ಅವನು ಆಸ್ಪತ್ರಿ ಸೇರಿದ ಹದಿನೈದು ದಿನಗಳ ಮೇಲೆ ಒಂದು ಬಿಳಿ ನಾಯಿ ಮರಿಯ ಚರ್ಮವು ಸಣ್ಣಸಣ್ಣಪಟ್ಟೆಗಳಾಗಿಕುಯಿದು ಬೆಂದುಹೋದ ಸ್ಥಳಗಳಿಗೆ ಸೇರಿಸಿ ಕಟ್ಟಿ, ತಕ್ಕ ಔಷಧಗಳಂ ಹಾಕಲು ಸದರೀ ಪಟ್ಟೆಗಳ ಪೈಕಿ ಒಂದು ವಿನಾ ಮಿಕ್ಕವೆಲ್ಲವು ಒಂದಾಗಿ ಕಲೆತು ಹೋಗಿ ಪ್ರಾಯ ವಾಸಿಯಾಗಿ ಆರು ವಾರಗಳೊಳಗಾಗಿ ಸದರೀ ಹುಡುಗನು ಹೊರಟು ಹೋದನು ಎಂಬದು.

The Mahant's appeal.—ತಿರುಪತಿ ಮಹಂತರವರ ಮೊಕದ್ದಮೆಯು ಹೈಕೋರ್ಟಿಗೆ ಅಪೀಲಾಗಿ ಬಂದು ಬುಧವಾರದ ದಿನ ಚೀಫ್ ಜಸ್ಟಿಸ್ ಮತ್ತು ಆನರೆಬಲ್ ಮಿ॥ ಜಸ್ಟಿಸ್ ಪಾರ್ಕರವರ ಮುಂದೆ ವಿಚಾರಣೆಗೆ ಪ್ರಾರಂಭವಾಗುವದು. ಅಪೀಲ್ ವಾದಿಯಕಡೆ ಬಾರಿಸ್ಟರ್ ಮಿಸ್ಟರ್ ನಾರ್ಟ್ಟನ್ ಮತ್ತು ಬ್ಯಾರಿಸ್ಟರ್ ಮಿ॥ ನಿಫ್ಗಿನ್ಸ್ ಯವರು ಹಾಜರಾಗಿ ಮೊಕದ್ದಮೆಯಂ ನಡೆಸುವರು.

A laudable step.—ವಿಜಯನಗರದ ಮಹಾರಾಜರವರು, ವಯೋವೃದ್ಧರಾದವರು ಸಣ್ಣ ಹುಡಿಗಿಯರಂ ಕೊಂಡುಕೊಂಡು ಮದುವೆ ಮಾಡಿಕೊಳ್ಳುವ ಕೆಟ್ಟ ವಾಡಿಕೆಯಂ ತಮ್ಮ ದೇಶದೊಳು ತಪ್ಪಿಸಬೇಕೆಂಬ ಉದ್ದೇಶದೊವನೆ ಹಾಗೆ ಮಾಡತಕ್ಕವರಂ ಶಿಕ್ಷೆಗೆ ಗುರಿ ಮಾಡಬೇಕೆಂದು ಯೋಚಿಸುತಲಿದಾರೆಂದು ಉತ್ತರದೇಶದ ಪತ್ರಿಕೆಯೊಂದು ತಿಳಿಸುತಿದೆ. ವಿಧವಾವಿವಾಹ ವಿಷಯದಲ್ಲಿ ನಡೆಸಲ್ಪಡುತಬರುವ ವ್ಯರ್ಥವಾದ ಪ್ರಯತ್ನಕ್ಕಿಂತಲೂ ಈಗ ವಿಜಯನಗರದ ಮಹಾರಾಜರವರ ಆಲೋಚನೆಗೆ ವಿಷಯವಾಗಿರುವ ಕಾರ್ಯವು ಶ್ಲಾಘ್ಯವಾದುದು ಮತ್ತು ಕೇವಲ ಅವಶ್ಯಕವಾದುದು.

Reduction in Turkey.—ಸನ್ ೧೮೯೦ನೇ ಇಸವಿಗೆ ಬಜೆಟು ಲೆಕ್ಕವು ತಯಾರಾಗುವಂತೆ ತುರ್ಕೀ ದೇಶದ ಸುಲ್ತಾನರವರು ಹುಕುಂ ಕೊಟ್ಟರು. ಸಂಸ್ಥಾನದ ಉಪ್ಪುವಳಗಿಂತಲೂ ಖರ್ಚು ಒಂಭತ್ತುಕೋಟ ಫ್ರಾಂಕ್, (ಫ್ರಾಂಕ್ ಒಕ್ಕೆ ಆರಾಣೆ ನಾಲ್ಕುಪೈ) ಜಾಸ್ತಿಯಾಗುವದರಿಂದ ಸದರೀ ಮೊರತುಬಾಬನ್ನು ಸರಿಮಾಡಬೇಕೆಂದುಯೋಚಿಸಿ ಸಂಸ್ಥಾನದ ವಿಶಿಷ್ಟ ಉದ್ಯೋಗಸ್ಥರತಲಬಗಳನ್ನು ಶೇಕಡ ೧೫ ರಿಂದ ೫ ರವರಿವಿಗೆ ಕಮ್ಮಿಮಾಡುವದಕ್ಕೆ ಸಮ್ಮತಿಸಿದ್ದಲ್ಲದೆ ಅರಮನೆಖರ್ಚಿನಲ್ಲಿ ಸಹ ಸಾಲೀಯಾನಾ ಎರಡೂವರೆಕೋಟ ಫ್ರಾಂಕ್‌ಗಳುಕಮ್ಮಿಮಾಡುವದಕ್ಕೆ ಒಪ್ಪಿದಿರುತ್ತಾರೆ.

The Mahant of Tirupathi.—ಕಳೆದ ವಾರದಪತ್ರಿಕೆಯ ಮೂಲಕ ತಿಳಿಸಿಯಿದ್ದಂತೆ ತಿರುಪದ ಮಹಂತರನ್ನು, ಅವರು ಹೈಕೋರ್ಟ್‌ನಲ್ಲಿ ಹಾಕುವ ಅಪೀಲ್ ವ್ಯವಸ್ಥೆಯ ನಿರೀಕ್ಷಣೆಯಿಂದ, ಕೋರ್ಟಿನವರಿಗೆ ಯುಕ್ತವಾಗಿ ತೋರುವ ಜಾಮೀನಿನ ಮತ್ತು ಷರತ್ತುಗಳಮೇಲೆ ಖುಲಾಸೇ ಮಾಡಬೇಕೆಂದು ಅವರಕಡೆ ವಕೀಲರಾದ ಬ್ಯಾರಿಸ್ಟರ್ ಮಿ ನಾರ್ಟ್ಟನಯವರು ಆಪಿವಾರದಲ್ಲಿ ಮದರಾಸ್ಹೈಕೋರ್ಟಿಗೆಕೊಟ್ಟ ಅರ್ಜಿಯು ಕಳೆದ ಸೋಮವಾರದದಿನ ವ್ಯವಸ್ಥೆಗೆ ಇಡಲ್ಪಟ್ಟಿತ್ತಷ್ಟೆ. ಸದರೀದಿನದಲ್ಲಿ ಅನೇಕ ವ್ಯವಹಾರ ವಿಮರ್ಶೆಗೆಬಂದು ಉಭಯವಾದಿಗಳ ಕಡೆಯ ಬ್ಯಾರಿಸ್ಟರುಗಳವಾದಗಳು ನಡೆದಮೇಲೆ ಮಹಂತರವರಿಗೆ ವಿಧಿಸಲ್ಪಟ್ಟ ಸಜಾಪೈಕಿ ಮೊದಲು ಒಂದುತಿಂಗಳಕಾಲ ಸಾಮಾನ್ಯಸೈಜ ನಲ್ಲಿರತಕ್ಕದ್ದೆಂದು ತೀರ್ಮಾನವಾಗಿರುವದರಿಂದ ಅವರೊಳಗಾಗಿ ಅವರಅಪೀಲ್ ವ್ಯವಸ್ಥೆಯಾಗದ ಹೋಗುವಪಕ್ಷಕ್ಕೆ ವ್ಯವಸ್ಥೆಯಾಗುವತನಕಸಾಮಾನ್ಯಸೈಜಿನಲ್ಲಿರುವಂತೆ ಹುಕುಂ ಮಾಡುವದಾಗಿ ಹೈಕೋರ್ಟಿನವರು ತೀರ್ಮಾನಿಸಿದರು.

A suit for partition.— ರಾಮನಾಥಪುರದ ಜಮೀನ್ದಾರರಾದ ರಾಮಲಿಂಗ ಸೇತುಪತಿಯವರು ಸನ್ ೧೮೭೩ನೇ ಇಸವಿ ಯೊಳು ಮೃತಪಡುವ ಕಾಲದಲ್ಲಿ ಅವರಿಗೆ ಭಾಸ್ಕರಸ್ವಾಮಿ ಮತ್ತು ದಿನಕರಸ್ವಾಮಿ ಯೆಂಬ ಇಬ್ಬರು ಮೈನರ್ ಮಕ್ಕಳಿದ್ದರು. ಜಮೀನ್ದಾರಿಯ ವಿಚಾರಣೆಯ ಬಗ್ಯೆ ಸರ್ಕಾರದಿಂದ ಏರ್ಪಡಿಸಲ್ಪಟ್ಟ ಅಧಿಕಾರಿಗಳು ತಮ್ಮ ಆಡಳಿತ ಕಾಲದಲ್ಲಿ ಆದಾಯದುಳಿತಾಯದಲ್ಲಿ ಖರ್ಚು ಜಾತಾ ಉಳಿದ ವೆಂಬಲಗು ಪೈಕಿ ಆ ಕಾಲದಲ್ಲಿ ಜಮೀನ್ದಾರಿಗೆ ಇದ್ದ ಸುಮಾರು ೧೨ ಲಕ್ಷ ರೂಪಾಯಿಗಳ ಸಾಲವನ್ನುತೀರಿಸಿ, ಸನ್ ೧೮೮೯ ನೇ ಇಸವಿ ನವಂಬರ್ ೪ ನೇ ತಾರೀಖಿನಲ್ಲಿ ಜ್ಯೇಷ್ಠ ಪುತ್ರರಾದ ಭಾಸ್ಕರಸ್ವಾಮಿ ಯೆಂಬವರು ಮೈನಾರಿಟಿ ತೀರಿ ಪ್ರಬುದ್ಧ ದಶೆಗೆ ಬಂದದಾಗಿ, ಜಮೀನ್ದಾರಿಯು ವಿಭಾಗಾರ್ಹ ವಲ್ಲವೆಂಬ ಕಾರಣದಮೇಲೆ, ಕೋರ್ಟ್‌ಆಫ್ ವಾರ್ಡ್ಸ್ ಎಂಬಅಧಿಕಾರಿಗಳು ಜಮೀನ್ದಾರಿಯನ್ನೂ ೩,೩೦,೦೦೦ ರೂಪಾಯಿಗಳ ನಗದನ್ನೂ ಭಾಸ್ಕರಸ್ವಾಮಿಯವರವಶಕ್ಕೆ ಒಪ್ಪಿಸಿದರು. ಕನಿಷ್ಠ ಪುತ್ರರಾದ ದಿನಕರಸ್ವಾಮಿಯೆಂಬವರು ಮಿತಾಕ್ಷರಪ್ರಕಾರ ಪಿತ್ರಾರ್ಜಿತ ಜಿಂದಗಿಯು ವಿಭಾಗಾರ್ಹವೆಂದಾಲೋಚಿಸಿ, ೧೮೮೯ ನೇ ಇಸವಿ ನವಂಬರ್ ೪ ನೇ ತಾರೀಖಿನಲ್ಲಿ, ಹಾಜರಿದ್ದ ಜಿಂದಗಿಯ ಪೈಕಿ ತಮಗೆ ಅರ್ಧಭಾಗ ಬರಬೇಕೆಂತಲೂ, ಜಮೀನ್ದಾರಿಯನ್ನು ಮೈನರ್ ಮಕ್ಕಳನ್ನೂ ಕೋರ್ಟ್‌ಆಫ್ ವಾರ್ಡ್ಸ್ ಎಂಬ ಪಂಚಾಯತ ಸಭೆಯವರು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿದ್ದದ್ದು ಹುದ್ದ ತಪ್ಪೆಂತಲೂ ಆಕ್ಷೇಪಿಸಿ ಯಿರುತ್ತಾರೆ ಭಾಗಕ್ಕಾಗಿ ಮಧುರೆ ಸಬ್‌ಕೋರ್ಟಿನಲ್ಲಿ ದಾವಾ ದಾಖಲ್ ಮಾಡಿದ ಮೇಲೆ ಸದರೀ ಮೊಕದ್ದಮೆಯನ್ನು ಡಿಸ್ಟ್ರಿಕ್ಟ್ ಕೋರ್ಟಿಗೆ ವರ್ಗ ಮಾಡಬೇಕೆಂದು ಡಿಸ್ಟ್ರಿಕ್ಟ್ ಜಡ್ಜಿಯವರಲ್ಲಿ ಅರ್ಜಿ ಕೊಟ್ಟು ಅವರು ಸದರೀ ಅಂಶವಂ ನಮೂದಿಸಿ ಪ್ರತಿವಾದಿಗೆ ನೋಟಿಸ್ ಕೊಟ್ಟಿರುತ್ತಾರೆ. ಏತನ್ಮಧ್ಯೆ ಈಗ ವಿವಾದಗ್ರಸ್ತವಾಗಿರುವ ಜಿಂದಗಿಯನ್ನು ಕಾಪಾಡಿ ಬಂದೋಬಸ್ತಿಯಿಂದ ಇಟ್ಟುಕೊಂಡು ಕ್ರಮವಾಗಿ ಜಮೀನ್ದಾರಿಯ ಕಾರ್ಯಗಳಂ ನಡೆಸುತ ಬರತಕ್ಕ ಬಗ್ಯೆ ರಿಸೀವರ್ ಎಂಬ ಅಧಿಕಾರಿಯಂ ಮೊಕರರ್ಮಾಡಬೇಕೆಂದು ಸಬ್ ಕೋರ್ಟಿಗೆ ಅರ್ಜಿ ಕೊಟ್ಟು, ಆರೀತಿ ಮಾಡದೆ ಹೋದರೆ ಜಿಂದಗಿಗಳು ಖಿಲವಾಗಿ ಹೋಗಿ ವಾದಿಯ ಭಾಗಕ್ಕೆ ಹಾನಿ ಯುಂಟಾಗುವದೆಂಬ ಭೀತಿ ತಮಗೆ ಇರುವಂತೆ ತಿಳಿಸಿರುತ್ತಾರೆ ಪ್ರತಿವಾದಿಯಾದ ತನ್ನಅಣ್ಣನು ಅಮಿತವಾಗಿ ದುಂದುಗಾರಿಕೆ ಮಾಡುವಂತೆಯೂ, ಜಿಂದಗಿಯು ತನ್ನ ಸ್ವಾಧೀನಕ್ಕೆ ಬಂದು ತಿಂಗಳೊಳಗಾಗಿ ತನ್ನ ಕೈಗೆ ಕೊಟ್ಟ ನಗದು ೩,೩೦,೦೦೦ ರೂಪಾಯಿಗಳನ್ನು ಖರ್ಚುಮಾಡಿದ್ದಲ್ಲದೆ ಮದರಾಸಿನಲ್ಲಿ ಮೂರುಲಕ್ಷ ರೂಪಾಯಿಗಳು ಸಾಲಮಾಡಿ ಆಬಗ್ಯೆ ಅನೇಕ ಗ್ರಾಮಗಳಂ ಗುತ್ತಿಗೆಗೆ ಬರೆದುಕೊಟ್ಟು ಬಿಟ್ಟಂತೆಯೂ ಅರ್ಜಿಯಲ್ಲಿ ವಾದಿಯಾದವರು ನಮೂದು ಮಾಡಿರುತ್ತಾರೆ. ವಾದಿಯಕಡೆ ಮಿಸ್ಟರ್ ನಾರ್ಟ್ಟನಯವರೂ ಪ್ರತಿವಾದಿಯ ಕಡೆ ಮಿಸ್ಟರ್ ಭಾಷ್ಯಮ್ಮಯ್ಯಂಗಾರ್, ಮತ್ತು ಮಿಸ್ಟರ್ ಸುಬ್ರಮಣ್ಯ ಅಯ್ಯರವರು ಹಾಜರಾಗುತ್ತಾರೆ, ಯೆಂದು ಪಗ್ರತೆ ಒಂದಾನೊಂದು ಪತ್ರಿಕೆಯ ಮಧುರೆ ಬಾತಮೀದಾರನು ಬರೆಯುತ್ತಾನೆ.

LOCAL AND PROVINCIAL NEWS.

ಒಳದೇಶಮತ್ತುತಾಲ್ಲೂಕುಜಿಲ್ಲೆವೃತ್ತಾಂತಗಳು.

A holiday.—ಈ ತಿಂಗಳ ೨೧ ನೇ ತಾರೀಖು ಶುಕ್ರವಾರದ ದಿನ ಶ್ರೀಮನ್ಮಹಾರಾಜರವರಿಗೆ ಇಪ್ಪತ್ತೇಳನೆ ವರ್ಷವರ್ಧಂತಿ ದಿನವಾದುದರಿಂದ ಆ ಬಗ್ಯೆ ಮಾಮೂಲಿಮೇರೆ ಈ ಸಂಸ್ಥಾನದ ವಿಶಿಷ್ಟ ಇಲಾಖೆಗಳಿಗೂ ರಜಾ ಕೊಡಲ್ಪಡುವದು.

Mr. C. Meenatshi Iyer.—ಮಿ. ಮೀನಾಕ್ಷಿ ಅಯ್ಯರವರು ಈಚೆಗ ಲೆಜಿಸ್ಲೇಟಿವ್ ಸೆಕ್ರೆಟರಿ, ರಿಜಿಸ್ಟ್ರಾರ್ ಜನರಲ್, ಕಂಪನಿಗಳ ರಿಜಿಸ್ಟ್ರಾರ್, ಈ ಮೂರು ಅಧಿಕಾರಗಳಂ ನಿರ್ವಹಿಸತಕ್ಕ ಬಗ್ಯೆ ಮೊಕರರ್ಮಾಡಲ್ಪಟ್ಟಿರುತ್ತಾರೆಯಷ್ಟೆ. ಸದರೀ ಮೂರು ಕೆಲಸಗಳಿಗೂ ಒಟ್ಟಾಗಿ ೧,೦೦೦ ರೂಪಾಯಿಗಳ ಸಂಬಳ ಪಡೆಯುವರೆಂದು ಒಳದೇಶದ ಪತ್ರಿಕೆಯೊಂದುತಿಳಿಸುತಿದೆ.

S. M. Railway.—ಬರುವ ತಿಂಗಳ ಗುರ್ರೇ ತಾರೀಖು ಮೊದಲು ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪೆನಿ ಯವರು ಮೈಸೂರಿನಿಂದ ಪುನೇವರಿವಿಗೆ ಮೆಯಿಲ್ ಟ್ರೇನ್ ಎಂಬ ತಪಾಲು ಗಾಡಿಯಂ ಪ್ರತಿದಿನದಲ್ಲೂ ಬಿಡುವರು. ಸದರೀ ಗಾಡಿಯು ಬೆಳಗ್ಯೆ ೬ ಘಂಟೆಗೆ ಸರಿಯಾಗಿ ಮೈಸೂರಿಂದ ಹೊರಟು ಮೂರನೇ ದಿನ ರಾತ್ರಿ ೭ ಘಂಟೆಗೆ ಪುನೇ ಸೇರುವದು.

City Municipality.—ಈ ಷಹರ್ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಾದ ಮಿ. ಎ. ಶ್ರೀನಿವಾಸಾಚಾರ್ಲು ಯವರು ಸ್ವಂತ ಕೆಲಸದಮೇಲೆ ಮೊರಡುತಿಂಗಳ ರಜಾ ಪಡೆಕೊಂಡಿರುತ್ತಾರೆಯಷ್ಟೆ. ಸದರೀ ಯವರು ರಜಾಮೇಲಿರುವ ಕಾಲದಲ್ಲಿ ವೈಸ್ ಪ್ರೆಸಿಡೆಂಟ ಕೆಲಸವಂ ನಿರ್ವಹಿಸತಕ್ಕ ಬಗ್ಯೆ ಈ ಡಿಸ್ಟ್ರಿಕ್ಟ್ ರೆವಿನ್ಯೂರಿರಸ್ತೇದಾರರಾದ ಮಿ. ಎ. ಎಸ್. ರಾಘವಾಚಾರ್ಯರು ಮೊಕರರ್ಮಾಡಲ್ಪಟ್ಟಿರು.

The Arya Balika Patasala.—ಈ ಪ್ರಾಂತ್ಯದಲ್ಲಿ ಸುಮಾರು ಒಂದೂವರೆ ವರ್ಷಗಳ ಹಿಂದೆ ನೂತನವಾಗಿ ಸ್ಥಾಪಿಸಲ್ಪಟ್ಟ ಆರ್ಯಬಾಲಿಕಾ ಪಾಠಶಾಲೆಯ ವಿದ್ಯಾರ್ಥಿನೀಯರಿಗೆ ಪ್ರಥಮವಾರ್ಷಿಕ ಬಹುಮಾನಗಳಂ ಕೊಡತಕ್ಕಬಗ್ಯೆ ಈದಿನ ಬೆಳಗ್ಯೆ ಘಂಟೆಗೆ ಘಾಠಶಾಲಾ ಸೌಧದಲ್ಲಿ ಸಭೆ ಸೇರುವದು. ಈಸಭೆಯಲ್ಲಿ ಶ್ರೀಮನ್ಮಹಾರಾಜರವರು ಅಗ್ರಾಸನವಂ ವಹಿಸುವರು. ಇದಕ್ಕಾಗಿ ಪೇಟೆ ಮತ್ತು ಮಿಲಿಟರಿ ಸ್ಟೇಷನ್ ನಿವಾಸಿಗಳಾದ ದೊಡ್ಡಮನುಷ್ಯರನೇಕರಿಗೆ ಆಹ್ವಾನ ಪತ್ರಿಕೆಗಳು ಕಳುಹಿಸಲ್ಪಟ್ಟಿವೆ.

Theft of treasure.—ಈ ತಿಂಗಳ ೯ ನೇ ತಾರೀಖಿನಲ್ಲಿ, ನೆಲಮಂಗಲ ತಾಲ್ಲೂಕ್ ಖಜಾನೆಯ ಶಿಪ್ಟಡ್ದ ಅಲ್ಲಿನ ಮುನಸಫ್ ಕೋರ್ಟ್ ಖಜಾನೆ ಪೆಟ್ಟಿಗೆಯು ಸದರೀ ಖಜಾನೆ ಹಿಂದುಗಡೆ ಬೇಲಿಯಲ್ಲಿ ಬಿದ್ದದ್ದು ಕಂಡುಬಂದು ಅದನ್ನು ತರಿಸಿ ಮುನಸಫರು ಪಂಚಾಯತರ ಮುಂದೆ ತೆರದು ನೋಡುವಲ್ಲಿ ಲೆಕ್ಕ ಪ್ರಕಾರ ಇರಬೇಕಾದ ಮೊಬಲಗು ಸರಿಯಾಗಿದ್ದಂತೆಯೂ, ಆ ದಿನ ಖಜಾನೆ ಪಹರೆಯಲ್ಲಿದ್ದ ಪೋಲೀಸ್ ಜವಾನನು ಈಗ ಸಸ್ಪೆಂಡ್ ಮಾಡಲ್ಪಟ್ಟು ವಿಚಾರಣೆಯಲ್ಲಿರುವಂತೆಯೂ ತಿಳಿಯಬರುತಿದೆ.

Murder.—ಹನೆಹಳ್ಳಿ ತಾಲ್ಲೂಕ್ ಅತ್ತಿಬೆಲೆ ಹೋಬಳಿ ಮಂಚನಹಳ್ಳಿ ಕುರುಬರ ಚಿಕ್ಕನೆಂಬವನು ಸದರೀಗ್ರಾಮದಲ್ಲಿದ್ದ ಬಯ್ಯೆಂಬವಳನ್ನು ಲಗ್ನವ ಮಾಡಿಕೊಂಡಿದ್ದ ಸಂಗತಿ ಹೊರಗಾಗಿ ಈ ತಿಂಗಳ ೭ ನೇ ತಾರೀಖಿನಲ್ಲಿ ತಿರುಕ್ಕ, ರುಗ್ಗ, ಮುನಿಯ ಎಂಬ ಮೂವರು ಸೇರಿ ಕುರುಬರ ಚಿಕ್ಕನೆಂಬವನನ್ನು ಕರೆದುಕೊಂಡು ಹೋಗಿ, ಒಬ್ಬನುದೊಣ್ಣೆಯಿಂದಲೂ, ಇನ್ನೊಬ್ಬನು ಮಚ್ಚಿನಿಂದಲೂ ಮೂರನೇಯವನು ಭರ್ಜಿಯಿಂದಲೂ ಹೊಡೆಗತಿವಿದು ಕೊಂದುಹಾಕಿ ಹೊಳೆಯಲ್ಲಿ ಹೆಣವಬಿಟ್ಟು ಓಡಿಹೋದರು. ಈ ಕ್ರೂರಕೃತ್ಯ ಯೋಗಾಗಿ ಅಪರಾಧಿಗಳು ವಸ್ತ್ತಗಿರಿಯಿಂದ ಪ್ರಥಮ ವಿಚಾರಣೆ ನಡೆದು ಸೆಷನ್ ವಿಚಾರಣೆಯ ಬಗ್ಯೆ ಕಮಿಟ್ ಮಾಡಲ್ಪಟ್ಟಿರುತ್ತಾರೆ.

The Nanjangode extension.—ಈ ಪತ್ರಿಕೆಯಲ್ಲಿ ಮತ್ತೊಂದು ಕಡೆ ಪ್ರಕಟಿಸಲ್ಪಟ್ಟಿರುವ ಪ್ರಕಟನೆಯ ಮೂಲಕ ಮೈಸೂರಿಂದ ನಂಜನಗೂಡು ವರಿವಿಗೆ ರೈಲ್ವೆ ರಸ್ತೆಯನ್ನು ಬಡಾಯಿಸಬೇಕಾದ ವಿಷಯದಲ್ಲಿ ಇಂಡ್ಯ ಗವರ್ನಮೆಂಟಿನವರ ಮಂಜೂರಾತಿಯಂ ಪಡೆದು ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪೆನಿಯವರು ಈ ಕಾರ್ಯವಂ ಕೈಗೊಂಡಿರುತ್ತಾರೆಂಬದಾಗಿ ತಿಳಿಯಬರುತಿದೆ. ಈ ಸಂವತ್ಸರ ಪೂರ್ತಿಯಾಗುವದರೊಳಗಾಗಿ ನಂಜನಗೂಡು ವರಿವಿಗೆ ಪ್ರಯಾಣಸ್ಥರ ಗಾಡಿ ಬಿಡಲ್ಪಡುವದೆಂದು ತೋರುತಿದೆ.ಇದರಿಂದ ಯಾತ್ರಾರ್ಥಿಗಳಾಗಿ ನಂಜನಗೂಡಿಗೆ ಹೋಗುವಂತವರಿಗೆ ಬಹಳ ಅನುಕೂಲ್ಯ ಪ್ರಾಪ್ತವಾಗುವದು.

NEWS LETTER.

ವೃತ್ತಾಂತಲೇಖ.

ಸಾಗರ, ತಾ॥ ೧೦ನೇ ಫೆಬ್ರುವರಿ ೧೮೯೦.

ನಾನು ಹಿಂದಿನ ವಾರದಲ್ಲಿ ಅರಿಕೆ ಮಾಡಿದಪ್ರಕಾರವೇ ತಾ॥ ೨ನೇ ಭಾನುವಾರದ ಬೆಳಗ್ಯೆ ೮ ಘಂಟೆಗೆ ಸರಿಯಾಗಿ ತಾಳಗುಪ್ಪೆಯಿಂದ ಮಿ॥ ರಿಕೆಟ್ಸ್ ಸಾಹೆಬರವರು ತಮ್ಮ ಪತ್ನೀ ಪುತ್ರಿಯರ ಸಮೇತರಾಗಿಯೂ, ತಮ್ಮ ಅಚ್ಚೀಸಿ ಅ॥ ಕಮ್ಮಿಷನರ್ ಮಿ॥ ಕೃಷ್ಣಸ್ವಾಮೈಯ್ಯಂಗಾರ್ಯವರೊಂದಿಗೂ ಈ ಪಟ್ಟಣವನ್ನು ಪ್ರವೇಶಿಸಿದರು. ಸೊರಬಕ್ಕೆ ಜಮಾಬಂದಿ ಪ್ರಯುಕ್ತ ಹೋಗಬೇಕಾಗಿ ಇಲ್ಲಿಗೆ ತಾ॥ ೧ನೇ ಶನಿವಾರದ ದಿನ ಮ ರಾ॥ ಡೆಪ್ಯುಟಿ ಕಮ್ಮಿಷನರಾದ ವಿ. ಪಿ. ಮಾಧವರಾಯರವರು ತಮ್ಮ ಕುಟುಂಬ ಸಮೇತರಾಗಿ ದಯಮಾಡಿದ್ದರು. ಮಿ॥ ರಿಕೆಟ್ಸ್ ಸಾಹೆಬರವರನ್ನು ಬರಮಾಡಿಕೊಳ್ಳುವದಕ್ಕಾಗಿ ಈ ತಾಲ್ಲೂಕು ಅಫಿಷಿಯಲ್ಸ್‌ಗಳೂ ಮತ್ತು ದಾಹಿ ಪಿರ್ಯಾದುಕಾರರುಗಳೂ ಅಲ್ಲದೆ ಮ್ಯುನಿಸಿಪಲ್ ಕೌನ್ಸಿಲರವರು ಸಹ ಮುಂಗಡವಾಗಿ ಹೋಗಿ ಬಹಳ ವಾದ್ಯಾದಿಯಿಂದ ಸಾಹೆಬರವರನ್ನು ಕರೆತಂದು ಬಂಗ್ಲೆಯಲ್ಲಿ ಇಳಿಸಿದರು. ಮಾರ್ಗಾಯಾಸದಿಂದ ಆ ದಿವಸ ಸಾಹೆಬರವರು ಹೊರಗೆ ಹೊರಡಲಿಲ್ಲ. ತಾರೀಖು ೩ನೇ ಸಾಯಂಕಾಲ ಈ ಪಟ್ಟಣದಲ್ಲಿ ಮುಖ್ಯಾಲಯಗಳು ನೋಡಿ ಡೆಪ್ಯುಟಿ ಕಮ್ಮಿಷನರೊಂದಿಗೆ ಬಂಗ್ಲೆಗೆ ತೆರಳಿದರು. ತಾ॥ ೪ನೇ ಪ್ರಾತಃಕಾಲ ಇಲ್ಲಿನ ಗವರ್ನಮೆಂಟ್ ಸ್ಕೂಲಿಗೂ, ಮೊಸಳೆಹೊ ತಾಲ್ಲೂಕು ಕಚ್ಚೇರಿಗೂ

ಹೋಗಿ ಅಲ್ಲಿ ನೋಡತಕ್ಕವನ್ನೆಲ್ಲನೋಡಿವಾಪಸ್ ದಯಮಾಡಿದರು. ತಾ|| ೫ನೇ ಬುಧವಾರ ಬೆಳಗ್ಗೆ ಅವಿನಹಳ್ಳಿ ಮಾರ್ಗವಾಗಿ ಸೊರಬಾದ್ರಿಗೆ ದಯಮಾಡಿದರು. ಇವರನ್ನು ಸಾಗು ಕಳುಹಿಸುವದಕ್ಕೆ ಇಲ್ಲಿನ ದೊಡ್ಡಮನುಷ್ಯರುಗಳೂ ಮ|| ಮಾಧವರಾಯರವರು ಕೂಡ ಯೆರಡುಮೈಲು ಹೋಗಿ ಅವರನ್ನು ಅತ್ತಕಡೆಗೆ ಕಳುಹಿಸಿ ವಾಪಸ್ ಬಂದು ಆ ಕ್ಷಣವೇ ಡೈ| ಕ| ರವರು ಸೊರಬದ ಮಾರ್ಗದಲ್ಲಿ ದಯಮಾಡಿದರು. ಇಷ್ಟು ದೊಡ್ಡಮನುಷ್ಯರುಗಳು ಬಂದಾಗ್ಯೂ ಕನ್ನಡ ಇಂಗ್ಲಿಷ್ ಸ್ಕೂಲ್‌ಗಳಿಗೆ ಬರಲಿಲ್ಲವೆಂದು ವಾಚಕರು ಊಹಿಸಾರು. ಇದರ ಕಾರಣವೇನಂದರೆ—ಮೊದಲು ಈ ಪಾಠಶಾಲೆಗಳು ಇದ್ದ ಜಾಗಾ ಮದ್ಯರಾಷ್ಟ್ರವಾಗಿ, ಯಾರು ಬಂದಾಗ್ಯೂ ಅದನ್ನು ಹೊಕ್ಕು ಹೋಗಲು ಮನಸ್ಸು ಕೊಡುತಿತ್ತು. ಸದರೀ ಶಾಲೆಯ ಕಟ್ಟಡವು ರಿಪೇರಿಯಾಗುತಲಿರುವದರಿಂದ ಟೌನಿನ ಒಂದು ಮೂಲೆಯಲ್ಲಿರುವ ಮುಸಾಫರ ಖಾನೆಯಲ್ಲಿ ಈಪಾಠಶಾಲೆಗಳು ಇಡಲ್ಪಟ್ಟಿವೆ. ಇದಕ್ಕೆ ಬರಬೇಕಾದರೆ ಸ್ಕೂಲ್ ಇಲಾಖೆಯವರು ಉದ್ದೇಶದಿಂದ ಬರುವಹಾಗೆ ಬರಬೇಕೇ ಹೊರ್ತು ಅನ್ಯಥಾ ಇಲ್ಲ. ಅಂತಾ ಆವಶ್ಯಕತೆಯು ಇಂತಾ ದೊಡ್ಡಮನುಷ್ಯರುಗಳಿಗೆ ಯಾಕೆ ಇರಬೇಕು.

ಇಲ್ಲಿನ ಚಪ್ರದ ಸಂಬಂಧದ ಬಟ್ಟೆ ಮುಂತಾದವುಗಳು ಹರಾಜ್ ಹಾಕಲ್ಪಟ್ಟವೆಂದು ಮೊದಲೇ ತಿಳಿಸಿರುತ್ತೇನಷ್ಟೆ. ಆ ಪೈಕಿ ಕೆಲವು ಬಟ್ಟೆಗಳು ಇಲ್ಲಿನ ತಾಲ್ಲೂಕು ರೆವಿನ್ಯೂ ಜವಾನ ಸುಬ್ಬನೆಂಬವನಿಂದ ಕದಿಯಲ್ಪಟ್ಟವೆಂಬದಾಗಿ ಸದರೀಯವನಮೇಲೆ ಪೋಲೀಸ್ ನವರು ಕೇಸುಮಾಡಿ ಇಲ್ಲಿನ ಮುನಸಫ್ ಮ್ಯಾಜಿಸ್ಟ್ರೇಟರ ಹತ್ರಕ್ಕೆ ವಿಚಾರಣೆಗೆ ಹಾಕಿದರು. ಮುನಸಫರವರು ಸರಿಯಾದ ರುಜುವಾತಿಲ್ಲವಾಗಿ ಕೇಸ್ ಡಿಸ್‌ಮಿಸ್ ಮಾಡಿದರು. ಅಹಹ! ಬಡವರಿಗೆ ಯೆಂದಿಗೂ ಸುಖವಿಲ್ಲವಲ್ಲ. "ಅನಾಥೋದೈವರಕ್ಷಿತಃ" ಎಂಬದಾಗಿ ಅವರ ಭಾಗದ ದೇವರೇ ಅವರನ್ನು ಕಾಪಾಡುತ್ತಾನೆ.

ಈ ಊರಿಗೆ ಯಾವಾಗ್ಯೂ ಮಧ್ಯಾನ್ಹ ೧೨ ಘಂಟೆಯೊಳಗಾಗಿ ಶಿವಮೊಗ್ಗಾ ಮಾರ್ಗದ ಟಪಾಲ್ ಬರುವ ಪದ್ಧತಿ ಇದೆ. ಅಂತಾದ್ದು ತಾ|| ೧೫ನೇ ಬುಧವಾರದದಿನ ರಾತ್ರಿ) ೧೨ ಘಂಟೆಗೆ ತಲಪಿತು. ಮೆಯಿಲ್ ತಡಾಯಿತು ಲಗಿರಬಹುದೆಂತ ಯೋಚನೆ ಮಾಡುತಿದ್ದ ಇಲ್ಲಿನ ಜನಗಳಿಗೆ ಕುಂಶಿಗೂ ಆನಂತಪುರಕ್ಕೂ ನಡುವಿನ ಒಬ್ಬ ರನ್ನರನ್ನು ತನಗೆ ಲೈನ್ ಓವರ್ಸಿಯರಿಂದ ಆದ ಚ್ಯೆಗಳಿಗೆ ಕೋಪಿಸಿ "ನಿಮ್ಮ ಟಪಾಲ್ ನೀವೆ ತೆಗದುಕೊಳ್ಳಿ" ಎಂಬದಾಗಿ ಹೇಳಿ ದಾರಿಯಲ್ಲಿ ಟಪಾಲ್ ಚೀಲಗಳನ್ನು ಬಿಟ್ಟು ಹೋಗಿಬಿಟ್ಟನಂತೆ. ಅನಂತರ ಲೈನ್ ಓವರ್ಸಿಯರು ಥಂಡಿ ತೆಗದುಕೊಂಡು ಬಂದು ಅದರಮೇಲೆ ಇಟ್ಟುಕೊಂಡು ಮುಂದಿನ ಉಕ್ಕಡಕ್ಕೆ ತಂದು ಕೊಟ್ಟದ್ದಾಗಿ ತಿಳಿಯಿತು. ಈಚೆಗೆ ಸೊರಬದ ಮಾರ್ಗದಲ್ಲಿ ಸಹ ರಾತ್ರಿ ೪ ಘಂಟೆಗೆ ಬರುವದಕ್ಕೆ ಉಪಕ್ರಮಿಸಿ ಇದೆ. ಇದು ಯಾವಾಗ್ಯೂ ಸಾಯಂಕಾಲ ೩ಘಂಟೆಗೆ ಬರುತಿತ್ತು. ವ್ಯವಸಾಯ ಮಾಡಿಕೊಂಡು ಜೀವನ ಮಾಡುತ್ತಿರುವ ಈ ರನ್ನರುಗಳ ಮೇಲೆ ಹುದ್ದೇದಾರರು ಆರ್ಭಟ ಮಾಡಿದರೆ ಅದು ನಡದೀತೆ? ಪೂರ್ವದಲ್ಲಿ ಅಂಚೆ ಇದ್ದಾಗ್ಯೆ ರೈತಾಬಿ ಕಸಬನ್ನೂ ಟಪಾಲ್ ಹೊರುವ ಕೆಲಸವನ್ನು ಸಹ ನಡಿಸಿಕೊಂಡು ಕ್ರಮವಾದ ಹೊತ್ತಿಗೆ ಟಪಾಲ್ ತರುತಿರಲಿಲ್ಲವೆ.

TELEGRAMS.
ತಂತಿ ವೃತ್ತಾಂತಗಳು.

ಲಂಡನ್, ೪ನೇ ಫೆಬ್ರುವರಿ.—ಸೈಬೀರಿಯಾ ದೇಶದೊಳಿರುವ ರಷಿಯಾ ಸೇನೆಯು ಬಹಳ ವೃದ್ಧಿಪಡಿಸಲ್ಪಟ್ಟದರಿಂದ ಚೀನಾ ಸರ್ಕಾರದವರು ಮಾನ್‌ಚೂರಿಯಾ ಎಂಬದರಲ್ಲಿ ಬಲವಾದ ಸೈನ್ಯವನ್ನು ಸೇರಿಸುತಲಿದಾರೆಂದು ಸ್ಟ್ಯಾಂಡರ್ಡ ಪತ್ರಿಕೆಯಲ್ಲಿ ತಂತಿ ವರ್ತಮಾನ ಪ್ರಕಟಿಸಲ್ಪಟ್ಟಿರುತಿದೆ.

ಲಂಡನ್, ೧೧ ನೇ ಫೆಬ್ರುವರಿ.—ಕರ್ನಲ್ ಆರ್ಥರ್ ಹಾರ್ವರ್ಡ್ ಯೆಂಬವರು ಮಹಾರಾಜ್ಞೀಯವರ ಪ್ರೈವೇಟ್ ರಕ್ಷಕರಾಗಿ ನಿಯಮಿಸಲ್ಪಟ್ಟರು.

ಲಂಡನ್, ೧೧ ನೇ ಫೆಬ್ರುವರಿ.— ಪೋರ್ಚುಗಲ್ ಸಂಸ್ಥಾನದ ರಾಜರೂ ರಾಣಿಯವರೂ ರಾಜಕ ರಾಣಿಯವರೂ ಸೇರಿ ಪ್ರಜಾರಕ್ಷಣಾರ್ಥ ಸ್ಥಾಪಿಸಲ್ಪಟ್ಟಿರುವ ಫಂಡಿಗೆ ೨೦,೦೦೦ ಪೌಂಡುಗಳು ಚಂದಾ ಮಾಡಿದರು.

ರಿಯೊ ಡಿ ಜನೀರೊ, ೯ನೇ ಫೆಬ್ರುವರಿ.—ಬ್ರೇಜಿಲ್ ಸರ್ಕಾರದವರು ಬರುವ ಸೆಪ್ಟಂಬರ್ ತಿಂಗಳೊಳಗಾಗಿ ತಮ್ಮ ಸೈನ್ಯವನ್ನು ಹತ್ತುಸಾವಿರ ಜಾಸ್ತೀ ಮಾಡುವವರಾಗಿದಾರೆ.

ಲಿಸ್ಬನ್, ೧೧ ನೇ ಫೆಬ್ರುವರಿ.— ಲಿಸ್ಬನ್ ಪಟ್ಟಣದ ರಕ್ಷಣೆ, ಕೋಟೆಗಳ ಮೇಲ್ಗಡೆ ಹೊಸ ತೋಫುಗಳು ಹತ್ತಿಸುವಣ, ಶತ್ರುಗಳ ಜಹಜುಗಳಿಗೆ ಬೆಂಕಿ ಹಚ್ಚಿ ಮುಣಿಗಿಸುವದಕ್ಕಾಗಿ ತಯಾರ್ಮಾಡಲ್ಪಟ್ಟಿರುವ ಯಂತ್ರಗಳುಳ್ಳ ಹಡಗುಗಳು ಟೇಗಸ್ ಎಂಬ ನದಿಯಲ್ಲಿ ಇಡುವಣ, ಸೈನ್ಯವನ್ನು ವಿಮರ್ಶಾಪೂರ್ವಕ ಬಲಪಡಿಸಿ ಯಿಡುವಣ, ಈ ಬಗ್ಯೆ ರಾಜಾಜ್ಞೆಯಾಗಿ ಅದು ಪ್ರಕಟಿಸಲ್ಪಟ್ಟಿರುತಿದೆ. ಸಣ್ಣಸಣ್ಣ ಯುದ್ಧನಾವೆಗಳು ಖರೀದಿ ಮಾಡಬೇಕೆಂತಲೂ, ಆ ಬಗ್ಯೆ ತಗಲುವ ಖರ್ಚುಗಳಿಗಾಗಿ ಸಾಲ ಮಾಡಬೇಕೆಂತಲೂ ಯೋಚಿಸಲ್ಪಟ್ಟಿದೆ.

ಲಂಡನ್, ೧೧ ನೇ ಫೆಬ್ರುವರಿ.—ಮಿ. ಬ್ರಾಡ್ಲಾ ಯವರು, ಇಂಡ್ಯಾ ದೇಶದ ಮಂತ್ರಾಲೋಚಕ ಸಮಾಜವನ್ನು ಕುರಿತ ತಮ್ಮ ಮಸವಿದಾ ಆಕ್ಟನ್ನು ಪಾರ್ಲಿಮೆಂಟ್ ಸಮಾಜದ ವಿಚಾರಕ್ಕೆ ತರುವದಾಗಿ ಪ್ರಸ್ತಾವಿಸಿದರು.

ಲಂಡನ್, ೧೩ನೇ ಫೆಬ್ರುವರಿ.—ಇಂಡ್ಯಾ ದೇಶದ ನೇಟಿವ್ ಸೈನ್ಯಗಳ ವಿಷಯದಲ್ಲಿ ಪ್ರಿನ್ಸ ಆಲ್ಬರ್ಟ್ ವಿಕ್ಟರವರಿಗೆ ಉಂಟಾದ ತಾರೀಫನ್ನು ಪ್ರಕಟಪಡಿಸುವದಕ್ಕಾಗಿ ಅನೇಕನೇಟಿವ್‌ರಿಜಿಮೆಂಟಿಗಳಿಗೆ ಪ್ರಿನ್ಸರವರ ಹೆಸರನ್ನಿಡಬೇಕೆಂದು ನಿರ್ಣಯವಾಗಿರುವಂತೆ ಘಾಯಿಷಮಾಡಲ್ಪಟ್ಟಿದೆ.

ಲಂಡನ್, ೧೭ನೇ ಫೆಬ್ರುವರಿ—ಹೌಸ್ ಆಫ್ ಕಾಮನ್ಸ್‌ಸಮಾಜದಲ್ಲಿ ಮಿ|| ಗ್ಲಾಡ್‌ಸ್ಟನ್‌ಯವರು ಈಗ ಪೋರ್ಚುಗಲ್ ಸಂಸ್ಥಾನಕ್ಕೂ ಬ್ರಿಟಿಷ ಸರ್ಕಾರಕ್ಕೂ ಮನಸ್ತಾಪಕ್ಕೆ ಕಾರಣವಾಗಿರುವ ಪ್ರಾಂತದವಿಷಯದಲ್ಲಿ ಬ್ರಿಟಿಷ ಗವರ್ನಮೆಂಟಿನವರ ನಡವಳಿಕೆಗಳು ತಾವು ಒಪ್ಪುವದಾಗಿ ತಿಳಿಸಿದರು.

ಐರ್ಲ್ಯಾಂಡ್ ದ್ವೀಪದೊಳು ಸ್ವದೇಶ ಪರಿಪಾಲನೆಯ ವಿಷಯದಲ್ಲಿ ಗವರ್ನಮೆಂಟಿನವರು ಅವಲಂಬಿಸಿದ ಲೌಖ್ಯದ ದೆಸೆಯಿಂದ ಮರಳಿ ಗದ್ದಲಕ್ಕೆ ಕಾರಣವುಂಟಾಗುವದೆಂದು ಮಿ|| ಗ್ಲಾಡ್‌ಸ್ಟನ್ ಯವರು ಯೆಚ್ಚರಿಸಿದರು.

ಮುಂಬೈ, ೧೩ನೇ ಫೆಬ್ರುವರಿ—ನಿನ್ನೆಯದಿನ ಮಧ್ಯಾಹ್ನಾತ್ಪರ ಕ್ರಾಫೋರ್ಡ್ ಮಾರ್ಕೆಟಿಬಳಿ ನೇಟಿವ್‌ಜನರು ವಾಸ ಮಾಡುವ ಸ್ಥಳದಲ್ಲಿ ಬೆಂಕಿ ತಗಲಿ ಹನ್ನೆರಡು ಮನೆಗಳು ಪೂರಾ ಸುಟ್ಟುಹೋದವು. ಇದರದೆಸೆಯಿಂದ ಹನ್ನೆರಡುಲಕ್ಷರೂಪಾಯಿಗಳ ನಷ್ಟವುಂಟಾದಂತೆ ಅಂದಾಜಾಗಿರುತಿದೆ. ಪ್ರಬಲವುಮಾಡಗಳು ಪ್ರಾಪ್ತವಾದವು. ಪರಂತು ಪ್ರಾಣಹಾನಿ ಯಾವದೂ ಇಲ್ಲವು.

SUMMRY OF NEWAS.
ವೃತ್ತಾಂತಸಂಗ್ರಹವು.

ದರ್ಭಂಗಾ ಮಹಾರಾಜರವರು ಈ ವರುಷದ ೬ನೇ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗುವರೆಂದು ಒಂದಾನೊಂದು ಪತ್ರಿಕೆಯು ತಿಳಿಸುತಿದೆ.

ಘಾಂಗದ್ರಾ ಸಂಸ್ಥಾನದಿಂದ ವಢ್ವಾಣ್ ಸಂಸ್ಥಾನದವರಿಗೆ ರೆಯಿಲ್ ರಸ್ತೆಯು ಹಾಕಬೇಕೆಂದು ಏರ್ಪಾಡಾಗಿ ಮಂಜೂರಾಗಿದೆ.

ಮದರಾಸ್ ಪೋಲೀಸ್ ಇನ್‌ಸ್ಪೆಕ್ಟರ್ ಜನರಲವರಾದ ಕರ್ನಲ್ ಜಿ. ಗತ್ರಿಯೆಂಬವರು ಆಚೆ ಆದಿತ್ಯವಾರದದಿನ ಯೂರೋಪ್ ದೇಶಕ್ಕಾಗಿ ಹಡಗು ಹತ್ತಿದರು.

ಮದರಾಸ್ ಮೆಡಿಕಲ್ ಪರೀಕ್ಷೆಗಳಸದಲ್ಲಿ ಈಚೆಗೆ ಮೊಕದ್ದಮ್ಮಾಡಲ್ಪಟ್ಟ ಮಿ. ಆರ್. ಎ. ಥಾಂಸನ್ ಯವರು ಕಳೆದ ಸೋಮವಾರದ ದಿನ ತಮ್ಮ ಹೊಸಕೆಲಸವು ಕೈಗೊಂಡರು.

ಕಳೆದ ಸೋಮವಾರದದಿನಮದರಾಸ್‌ಬ್ಯಾಂಕ್ ಡೈರೆಕ್ಟರ್‌ಗಳು ಸಭೆ ಸೇರಿ ಬಡ್ಡಿ ಮತ್ತು ಡಿಸ್ಕಾಂಟುದರವನ್ನು ಸೇಕಡ ಒಂದರಮೇಲೆರಡಕ್ಕೆ ಏರಿಸಿದರು, ಈಗಿನವರ ಸೇಕಡ ಪತ್ತರಂತೆಯಿದೆ.

ಮಧುರೆ ಬಾತಮೀದಾರನೊಬ್ಬನು ಬರೆಯುತ್ತಾನೇನಂದರೆ—ಪ್ರಕೃತ ಕಾಲಸ್ಥಿತಿಯುಂಟೋ ದಾಗಿ ದುರ್ಭಿಕ್ಷಸೂಚಕವಾಗಿದೆ. ಪೈರುಗಳು ಒಣಗುತಲಿವೆ. ಅನೇಕ ಸ್ಥಳಗಳಲ್ಲಿ ಇಮವರಿವಿಗೇನೆ ಒಣಗಿಹೋದವು. ಛತ್ರದಲ್ಲಿ ಸದಾಸವಿ ಎಂಟಾಣೆಮುಟ್ಟನಳಿಯಾಯಿತು. ಮಳೆಯಿಲ್ಲ. ಬಿಸಿಲು ದುಸ್ಸಹವಾಗುತ ಬರುತಲಿದೆ. ಡಿಸ್ಟ್ರಿಕ್ಟ್ಪೈಕಿ ಅನೇಕ ಪ್ರದೇಶಗಳೊಳು ವಾಂತಿಭೇದರೋಗ ವ್ಯಾಪಿಸಿದೆ. ರೂಪಾಯಿ ೧ಕ್ಕೆ ೬|| ಪಡಿ ಅಕ್ಕಿಸಿಕ್ಕುತಿವೆ. ಪ್ರಜೆಗಳು ಭಗ್ನಮನಸ್ಕರಾಗಿರುತ್ತಾರೆ, ಎಂಬದು.

ಕಳೆದಸಂವತ್ಸರದ ಅಬಕಾರಿಯಲ್ಲಿ ಯೆಂಟಾಣೆ ಬಾಬತು ೧೨೦ ಕೋರ್ಟ್ ಫೀ ಸ್ಟ್ಯಾಂಪುಗಳನ್ನೂ ಅದೇ ಕ್ರಯವುಳ್ಳ ೨೦೦ ಜಾಡಿಕಲ್ ಬಾಬಿನ ಸ್ಟ್ಯಾಂಪುಗಳನ್ನೂ ಕಳ್ಳತನಮಾಡಿಕೊಂಡು ಪರಾರಿಯಾಗಿಹೋದ ಪಾಲ್‌ಘಾಟ್ ತಾಲ್ಲೂಕು ಗುಮಾಸ್ತಾ ನಾರಾಯಣಭಟ್ಟರೆಂಬವನು ಪೋಲೀಸ್ ಕಾನ್‌ಸ್ಟೇಬಲ್ ಒಬ್ಬನಿಂದ ಕಾಶಿಯಲ್ಲಿ ದಸ್ತಗಿರಿಯಿಂದ ಕಳ್ಳಿಕೋಟೆಗೆ ತರಲ್ಪಟ್ಟು ಅಲ್ಲಿನ ಸೆಷನ್‌ಜಡ್ಜಿಯವರಿಂದ ಮೂರುವರ್ಷಗಳ ಕಠಿಣಟ್ಯೆಪ ಸಜಾ ವಿಧಿಸಲ್ಪಟ್ಟನು. ಕಲೆಕ್ಟರವರು ಹೇಳಿದ್ದ ೧೨೦ ರೂಪಾಯಿಗಳ ಯಿನಾಂ ದಸ್ತಗಿರಿಮಾಡಿದ ಪೋಲೀಸ್‌ಜವಾನನಿಗೆ ದೊರೆಯಿತು.

ಈಚೆಗೆ ಸೇಲಂ ಡಿಸ್ಟ್ರಿಕ್ಟ್ ತಿರುಪತ್ತೂರ ಲ್ಲಿ ಹಿಂದೂಗಳಿಗೂ ಮುಸಲ್ಮಾನರಿಗೂ ನಡೆದ ಕಲಹದ ಮೊಕದ್ದಮೆಯು ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆಗೆ ಪ್ರಾರಂಭವಾಗಿ ನಡೆದುಬರುತಲಿದೆ. ಹಿಂದೂಗಳು ಗಂಗೆಯತ್ತನ್ನು ಆಡಿಸುತ ಬೀದಿಯಲ್ಲಿ ಮೆರವಣಿಗೆ ಹೋಗುತ್ತಿರುವಲ್ಲಿ ಮುಸಲ್ಮಾನರು ಯಾವದೊ ಒಂದುಬೀದಿಯಲ್ಲಿ ಹೋಗಬೇಡವೆಂದು ಕೇಳಿಕೊಂಡರು. ಅದರಮೇಲೆ ಜಗಳಕ್ಕೆ ಪ್ರಾರಂಭವಾಯಿತು. ಇದರಲ್ಲಿ ಹಿಂದೂಗಳೇ ಮೊದಲು ದೊಣ್ಣೆಗಳೊಡನೆ ಮುಸಲ್ಮಾನರಮೇಲೆಬಿದ್ದು ಹೊಡೆಯಲು ದೆಬ್ಬೆತಗಲಿದ ಮುಸಲ್ಮಾನ್ ಮುದುಕನೊಬ್ಬನು ಕೆಲವುದಿನಗಳಮೇಲೆ ಸತ್ತುಹೋದನು.

ವಿಧವೆಯರ ಉತ್ತರೋತ್ತರಾಭಿವೃದ್ಧಿಗೋಸ್ಕರಮುಂಬೈಪಟ್ಟಣದಲ್ಲಿಸ್ಥಾಪಿಸಲ್ಪಟ್ಟಿರುವ ಶಾರದಾಸದನದ ಸಂಬಂಧವಾಗಿ ಅಮೇರಿಕಾದೊಳಗಿನ ನ್ಯೂಯಾರ್ಕ್ ಪಟ್ಟಣದ ಇಲಸ್ಟ್ರೇಟೆಡ ಕ್ರಿಶ್ಚನ್ ವೀಕ್ಲಿ ಎಂಬ ವರ್ತಮಾನಪತ್ರಿಕೆಯ ಕಳೆದ ಡಿಸೆಂಬರ್ ತಿಂಗಳ ೨೧ನೇ ತಾರೀಕಿನ ಲಂಕೆಯಲ್ಲಿ ಈಕೆಳಗಿನದೇಖನವು ಕಾಣುತದೆ:—

ಅಲ್ಲಿ ಶಾರದಾಸದನದಲ್ಲಿ ಈಗ ೭ ವಿಧವೆಯರಾದ ವಿದ್ಯಾರ್ಥಿನಿಗಳಿದ್ದಾರೆ. ಅವರ ಪೈಕಿ ಇಬ್ಬರು ಕ್ರಿಸ್ತಧರ್ಮದಮೇಲಿರುವ ತಮ್ಮಭಕ್ತಿಯನ್ನು ವ್ಯಕ್ತಪಡಿಸಿದರು. ಅವರು ಪ್ರತಿದಿನವೂ ರಮಾಬಾಯಿಯ ಸಂಗಡ ಪ್ರಾರ್ಥನೆಗೆ ಹೋಗುತ್ತಾರೆ. ಇನ್ನೊಬ್ಬಳಂತೂ ಸ್ವೇಚ್ಛೆಯಿಂದ ಒಬ್ಬ ಮಿಷನರಿಯಕಡೆಯಿಂದ ಶಿಕ್ಷಣೆಯೊಂದುತ್ತಾಳೆ. ಅಲ್ಲಿಯ ವಿದ್ಯಾರ್ಥಿನಿಯರಿಗೆ ಮತ ಸ್ವಾತಂತ್ರ್ಯವಿರುವದು ಅಪಾಯಕರವಲ್ಲವೆಂತಲೂ ಹಾಗೂ ಈ ಸದನವು ಕ್ರಿಸ್ತ ಮತದ್ದೆಂತಲೂ ಇದರಮೇಲಿಂದ ಸ್ಪಷ್ಟವಾಗಿ ಕಂಡು ಬಂದೀತು.

ಶ್ರೀಮನ್ಮಹಾರಾಜ್ಞೀಯವರ ಮೊಮ್ಮಕ್ಕಳಾದ ಪ್ರಿನ್ಸ್ ಆಲ್ಬರ್ಟ್ ವಿಕ್ಟರವರು ಪ್ರಯಾಣ ಮಾಡುತ ಮಾಡುತ ಹಿಂದುಸ್ಥಾನದಿಂದ ಈಗ ಬ್ರಹ್ಮದೇಶಕ್ಕೆ ಹೋಗಿರುವದನ್ನು ನಮ್ಮ ವಾಚಕರು ಬಲ್ಲರಷ್ಟೆ. ಆದರೆ ಅಲ್ಲಿ (ಬ್ರಹ್ಮದೇಶದಲ್ಲಿ) ಈರಾಜಕುಲ ಮಕುಟ ಮಣಿಗಳು ತಮ್ಮ ಗುಣವನ್ನು ಚೆನ್ನಾಗಿ ಬೆಳಗಿಸಿದರು. ಅದು ಒಂದುವೇಳೆ ನಿಜವಿದ್ದರೆ ನಮ್ಮೆಲ್ಲರಿಗೂ ಬಹು ದುಃಖಕ್ಕೂ ಅವರಿಗೆ ಬಹುಲಾಂಛನಕ್ಕೂ ಕಾರಣಭೂತವಾದದ್ದೆಂದು ಹೇಳಬಹುದು. ಆ ಅಧರ್ಮಕೃತ್ಯದ ವಿವರವೇನಂದರೆ:—

ಪ್ರಿನ್ಸ್ ಆಲ್ಬರ್ಟ್ ವಿಕ್ಟರವರು ಬ್ರಹ್ಮದೇಶದಲ್ಲಿ "ಮೊಗಲ್ ಬ್ರಹ್ಮೀ" ಜಾತಿಯೊಳಗೆ ಇರುವ ಅತಿ ಸುಂದರ ತರುಣಸ್ತ್ರೀಯರನ್ನು ನೋಡಿ ಮೋಹಾತುರರಾಗಿ ಸಾರಾಸಾರ ವಿಚಾರವಿಲ್ಲದೆ ಕಂಡ ಕಂಡವರನ್ನು ಮಂಚಕ್ಕೆ ಎಳದು ಅವರೊಡನೆ ರತಿವಿಲಾಸವನ್ನು ಮಾಡಿದರೆಂದು ಕಲ್ಕತ್ತೆಯಲ್ಲಿ ಹೊರಡುವ ಇಂಡಿಯನ್ ಡೇಲಿ ನ್ಯೂಸ್ ಎಂಬ ವರ್ತಮಾನಪತ್ರಿಕೆಗೆ ರಂಗೂನಿನ ಒಬ್ಬ ವಾರ್ತಾದಾಯಕನು ತಿಳಿಸಿದ್ದಾನೆ. ಪ್ರಿನ್ಸ್ ಆಲ್ಬರ್ಟರವರ ಈ ಅಧರ್ಮ ಕೃತ್ಯವನ್ನು ಕುರಿತು ಬ್ರಹ್ಮೀಜನರ ಮನಸ್ಸಿನಲ್ಲಿ ರಾಜ್ಞೀ ಕುಟುಂಬದಬಗ್ಯೆ ಪೂಜ್ಯಬುದ್ಧಿ ಕಮ್ಮಿಯಾಗಿರುತಿದೆ. ಮತ್ತು ಬ್ರಹ್ಮದೇಶದ ಕಮಿಷನರವರು ಜನರನ್ನು ಹ್ಯಾಗೆ ಸಮಾಧಾನಗೊಳಿಸಬೇಕೆಂಬ ಬಗ್ಯೆ ಈಗ ಸಂಕಟದಲ್ಲಿಬಿದ್ದಾರೆಂದು ಅದೇ ವಾರ್ತಾದಾಯಕನು ತಿಳಿಸುತ್ತಾನೆ. ಹೀಗಾದಮೇಲೆ ಆ ಧಾರ್ಮಿಕರ ಆಳ್ವಿಕೆಯಲ್ಲಿ ಧಾರ್ಮಿಕತ್ವವು ಹ್ಯಾಗೆ ಉಳಿದೀತು—ಜಾಮದ್ರೋದಯ.

ಅಲಹಾಬಾದ್ ಇಂಡಿಯನ್ ಯೂನಿಯನ್ ಎಂಬ ಪತ್ರದಲ್ಲಿ ಸಹಗಮನ ಸಂಬಂಧವಾದ ಒಂದು ಚಮತ್ಕಾರವಾದ ಸಂಗತಿಯು ಪ್ರಸಿದ್ಧವಾಗಿರುತದೆ. ಅದೇನಂದರೆ—ಅಲೀಗಢದ ಸಮೀಪ ಲೆವಾ ಎಂಬ ಗ್ರಾಮದಲ್ಲಿ ಕಳೆದ ಡಿಸೆಂಬರ್‌ತಿಂಗಳಲ್ಲಿ ಒಬ್ಬ ಮುದಿಮನುಷ್ಯನು ಮರಣಪಟ್ಟನು, ಆಗ ಪತಿವ್ರತೆಯಾದ ಅವನ ಹೆಂಡತಿಯು ಗಂಡನ ಪ್ರೇತದ ಸಂಗಡ ಸಹಗಮನ ಮಾಡಬೇಕೆಂದು ನಿಶ್ಚಯಿಸಿದಳು. ಅವಳು ೫೦ ವರುಷ ಪ್ರಾಯದವಳು, ನಾಲ್ಕುಮಕ್ಕಳತಾಯಿ. ಅವಳ ಮಕ್ಕಳೂ ಬೇರೆ ಆಪ್ತಸ್ಟರೂ ಸತಿ ಹೋಗಬಾರದೆಂದು ಬಹಳವಾಗಿ ಅವಳನ್ನು ಪೀಡಿಕೊಂಡರೂ ಅವಳು ತನ್ನ ದೃಢನಿಶ್ಚಯವನ್ನು ಬಿಡಲಿಲ್ಲ. ಆಗ ಪೋಲೀಸಿನವರ ಸಹಾಯ ಪಡೆಯಲಾಯಿತು. ಅವರು ಅವಳನ್ನು ಅಲೀಗಢಕ್ಕೆ ತಂದು ಪಹರೆಯಲ್ಲಿಟ್ಟು ಮ್ಯಾಜಿಸ್ಟ್ರೇಟರ ಅಪ್ಪಣೆ ಮೇರಿಗೆ ಆಪ್ರೇತದಹನಸಂಸ್ಕಾರವು ನಡೆಯಿತು. ಮುಂದೆ ಈವಿಷಯವಾಗಿ ಆ ಪೂರಿನಲ್ಲಿಯೂ ಅದರ ನೆರೆಹೊರೆಯ ಗ್ರಾಮಗಳಲ್ಲಿಯೂ ಬಹಳ ಗೊಂದಲವಾಯಿತು. ಪೋಲೀಸರ ವಶದಲ್ಲಿದ್ದ ಆ ಪತಿವ್ರತೆಯನ್ನು ನೋಡುವದಕ್ಕೋಸ್ಕರ ಹೆಂಗಸರೂ ಗಂಡಸರೂ ಕೂಡಿ ಸಾವಿರಾರುಜನರು ಪೋಲೀಸ್‌ಠಾಣ್ಯದಸುತ್ತಲೂನೆರದರು. ಅವಳ ಕೈಯಲ್ಲಿ ಜಪಮಾಲೆಯನ್ನು ಹಿಡಿದು ಧ್ಯಾನ ಮಾಡುತ ಕೂತಿದ್ದಳು. ಅವಳ ಸಮೀಪ ಒಂದು ತೆಂಗಿನಕಾಯಿಯೂ ಭಾಗೀರಥಿಯಿಂದ ತುಂಬಿದ ಒಂದು ಜಲಪಾತ್ರೆಯೂ ಇದ್ದವು. ಪೋಲೀಸರೂ ಮ್ಯಾಜಿಸ್ಟ್ರೇಟರೂ ಅವಳ ಜಬಾನಿತೆಗದುಕೊಂಡರು, ಅವಳು ತನ್ನ ಕೃತನಿಶ್ಚಯವನ್ನು ಬಿಡಲಿಕ್ಕಿಲ್ಲವೆಂದು ಸ್ಪಷ್ಟವಾಗಿ ಹೇಳಿದಳು. ಜನರು ಅವಳಿಗೆ ಬಹಳತರದಿಂದ ಹೇಳಿದಾಗ್ಯೂ ಅವಳು ಕೇಳಲಿಲ್ಲ. ಆತ್ಮಘಾತಮಾಡಿಕೊಳ್ಳುವ ಪ್ರಯತ್ನ ಮಾಡಿದಳೆಂಬ ಅಪರಾಧ ಅವಳಮೇಲೆ ಹೊರಿಸಿ ಮ್ಯಾಜಿಸ್ಟ್ರೇಟರು ಅವಳಿಗೆ ಒಂದು ವರ್ಷದ ಶಿಕ್ಷೆ ವಿಧಿಸಿದರು

Bangalore :—Printed and publisehd at the KARNATIC PRESS, No. 108, SRINIVASA MANDIRM ROAD PETTAH—1890

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಕ್ಷಾಮುವಿವಿದವ್ಯಾಪೃತ್ಯುಸಗಮಾರ್ಕ್ಯಕರ್ಣ್ಣಾಟಕಪ್ರಕಾಶನವರಾಭಿದಾದ್ರುತತಸಾಹಿತ್ಯಕೋಪಿತಾ । ವ್ಯಗ್ರಾಂಕಹಿತವಾಸರನಿಹಿತಮುದ್ರಣಾಸಜ್ಜಸ್ಯರ್ಶ್ವಾಸುಧರಿಪೋಷಿತಾದಿಕಿತಮಾನಸಂಸಂಕುಲ್ಯ ।

Vol. XVII.]	BANGALORE—MONDAY, FEBRUARY 24, 1890	[No. 8.
ಸಂಪುಟ ೧೭.]	ಬೆಂಗಳೂರು—ಸನ್ ೧೮೯೦ನೇ ಇಸವಿ ಫೆಬ್ರುವರಿ ೨೪ ನೇ ತಾರೀಖ್ ಸೋಮವಾರ.	[ಸಂಚಿಕೆ ೮.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲೀಷು ಮತ್ತು ಕನ್ನಡಭಾಗಗಳಿಗೆ.

ಸಾಲ್ ಒಂದಕ್ಕೆ	ಸ್ಥಳದವರಿಗೆ ಡಾಕಿಲ್ಲದೆ	ಪರಸ್ಥಳದವರಿಗೆ ಡಾಕ್‌ಸಹಿತ
ಮುಂಗಡಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲೀಷು ಅಥವಾ ಕನ್ನಡಭಾಗಗಳಿಗೆ.

ಮುಂಗಡಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ ದ[illegible] ಮಾಡಿದ [illegible] ಒಂದು ತಿಂಗಳ [illegible] ಕಳುಹಿಸಲ್ಪಡುವದು. [illegible] ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು [illegible] ಅಂಗೀಕರಿಸಲ್ಪಡುವದು.

[illegible] ಅರ್ಥ [illegible] ಒಂದು [illegible] ಕಳುಹಿಸತಕ್ಕದ್ದು. [illegible] ಪತ್ರಿಕೆಗೆ [illegible] ಹಾಕಲ್ಪಡುವದು.

ಪ್ರಕಟನೆಯ ದರಗಳು.

ಮೊದಲನೇ ದಫೆ ಪಂಕ್ತಿ ಒಂದಕ್ಕೆ ೦—೩—೦

ಎರಡನೇ ದಫೆ ಪಂಕ್ತಿ ಒಂದಕ್ಕೆ ೦—೧—೦

ಪತ್ರಿಕೆಗೆ [illegible] ಪತ್ರಿಕೆಯಲ್ಲಿ ಪ್ರಕಟಿಸತಕ್ಕದ್ದು. [illegible] ಪ್ರಕಟಿಸುವ [illegible] ಪ್ರಕಟನೆಯುಳ್ಳ [illegible] ಕಳುಹಿಸಲ್ಪಡಲಾರವು.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 6-0

ವೈದ್ಯಸಾರ ಸಂಗ್ರಹ.

ಈ ಗ್ರಂಥಕ್ಕಪೇಕ್ಷೆಯುಳ್ಳವರು ಮೊಬಲಗನ್ನು ಈ ಕೆಳಗೆ ರುಜು ಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೊಡಲ್ಪಡುವದು, ಮೊಬಲಗು ಇಲ್ಲದ ದರಖಾಸ್ತುಗಳಿಗೆ ಪುಸ್ತಕ ಕೊಡಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಪಾಸಲ್ ಡೆಲಿವರಿ ಪ್ರತಿ ಒಂದಕ್ಕೆ ರೂ 5 -0—0

ಟಿ. ಬಿ. ವೆಂಕಟಾಚಾರ್,

ಬೆಂಗಳೂರು, ಅಪ್ಪತ್ರಿಯೋಜ್ ಪೇಟೆ, 41ನೇ ನಂ ಮನೆ.

ADVERTISEMENTS

ನೋಟೀಸ್

ಅದ್ಭುತವಾದ ಒಂದು ಔಷಧ

BEECHAM'S PATENT PILLS. ST. HELENS LANCASHIRE

ಹೊಟ್ಟೆಯಲ್ಲಿ ವಾಯು ಸೇರಿಕೊಂಡು ನೋಯುವಿಕೆ, ಪಿತ್ತದಿಂದ ತಲೆ ನೋವು, ಕಣ್ಣುಗಳು ತಿರುಗುವಿಕೆ, [illegible] ಜನವಾದ ನಂತರ ಹೊಟ್ಟೆ ತುಂಬಿದಂತೆ ಉಬ್ಬರಿಸಿಕೊಳ್ಳುವಿಕೆ, ತಲೆ ನಿರ್ಭ್ರಾಂತಿ ಯಾಗುವಿಕೆ, [illegible], ಉಷ್ಣಾಧಿಕ್ಯದಿಂದ ಮುಖ ಕೆಂಪಾಗುವಿಕೆ, [illegible], [illegible] ಪುಬದ್ಧ, ದೌರ್ಬಲ್ಯದಿಂದ [illegible] ಹೋಗುವಿಕೆ, ಚರ್ಮದಮೇಲೆ ಗುಳ್ಳೆಗಳು ಏಳುವಿಕೆ, ನಿದ್ರಾಭಂಗ, ಬಹು ಕೆಟ್ಟದಾದ ಕನಸುಗಳು, ನಿಶ್ಯಕ್ತಿಯಿಂದ ನಡುಕ, ಇವು ಮೊದಲಾದ ಪಿತ್ತ ಮತ್ತು ನರಸಂಬಂಧವಾದ ರೋಗಗಳಿಗೆಲ್ಲಾ [illegible] ಮಾತ್ರೆಗಳ [illegible] ಒಂದಕ್ಕೆ [illegible] ಸಾವಿರಾರ್ವವಾಗಿ [illegible] ಅಂಗೀಕರಿಸಲ್ಪಟ್ಟಿದೆ [illegible] ಒಂದು [illegible] ಈ ಗುಳಿಗೆಗಳನ್ನು [illegible] ಕ್ರಮ [illegible].

ಎಲ್ಲಾ ವಯಸ್ಸಿನ [illegible] ಈ ಗುಳಿಗೆಗಳು [illegible] ಔಷಧ [illegible] ಇಟ್ಟುಕೊಂಡಿರಬೇಕು. [illegible] ಈ ಔಷಧದ ಪ್ರತಿಯೊಂದು ಡಬ್ಬಿಯ ಸಂಗಡ [illegible] ಆದನ್ನು [illegible] ಮಾಡಿದರೆ ಎಲ್ಲಾ ವಯಸ್ಸಿನ [illegible] ಸಂಪೂರ್ಣ ಆರೋಗ್ಯ [illegible] ಸಾವಿರಾರು ಜನರಿಂದ ಅನುಭವ [illegible] ತಿಳಿಬಂದಿದೆ.

ಅನ್ನಕೋಶದ ದೌರ್ಬಲ್ಯ, ಜೀರ್ಣಶಕ್ತಿ ತಪ್ಪಿಹೋಗಿರುವಿಕೆ, ಪಿತ್ತಕೋಶದಲ್ಲಿನ [illegible] ಈ ಗುಳಿಗೆಗಳು ಅದ್ಭುತವಾದ ಔಷಧ. ಇದನ್ನು ಕೆಲವು ವೇಳೆ ಸೇವನೆ ಮಾಡಿದರೆ ಮನುಷ್ಯನ [illegible] ಅದ್ಭುತವಾದ ಕಾರ್ಯಗಳನ್ನು ಮಾಡುತ್ತಿವೆ [illegible] ಹೋಗಿರುವ [illegible] ಮಾಡಿ, ದೇಹಾರೋಗ್ಯದೊಡನೆ ಮನುಷ್ಯ ಶರೀರಕ್ಕೆ ಇರಬೇಕಾದ ಶಕ್ತಿಯನ್ನು ಉಂಟುಮಾಡುತ್ತದೆ.

ಇದು ವಾಸ್ತವ್ಯವಾದದ್ದು, [illegible] ಒಪ್ಪಿಕೊಡಿರುತ್ತಾರೆ ಮತ್ತು ಈ ಪ್ರಪಂಚದಲ್ಲಿನ ಎಲ್ಲಾ ಔಷಧಗಳಿಗಿಂತಲೂ ಈ ಔಷಧ ಅಧಿಕವಾಗಿ ವಿಕ್ರಯವಾಗು[illegible] ನಿತ್ಯ [illegible] ಪ್ರಮಾಣವಾದ ಔಷಧವೆಂದು ನಂಬುವದಕ್ಕೆ ಕಾರಣವಾಗಿದೆ.

Sole Agents for India

NAYLOR, SON, GRIMES & CO,

Wholesale Depot, 3o, Clive Street, Calcutta

ನೋಟಿಸ್—ಔಷಧ ಬೇಕೆಂದು ಬರೆದುಕೊಳ್ಳುವವರಿಗೆ ಮೆಸರ್ಸ್ ನೇಲರ್, ಸನ್, ಮತ್ತು ಗ್ರೈಮ್ಸ್ ಕಂಪೆನಿಯವರು ವಾಲ್ಯೂಪೇಯಬಲ್ ಪೋಸ್ಟಿನಲ್ಲಿ ನಮೂನೆ ಡಬ್ಬಿ ಒಂದು ಹಣಿಸುವರು. ಅದರ ಕ್ರಯ ಇದರ ನಮೂದಿಸಲ್ಪಟ್ಟಿದೆ, ಹ್ಯಾಗಂದರೆ—ಡಬ್ಬಿ ೧ಕ್ಕೆ ಆಣೆ ೧೮ ಆಣೆ, ಮತ್ತು ರೂ॥ ೨ ಈ ದರ ಇರುತ್ತದೆ ಬೇಕಾದದ್ದನ್ನು ತರಿಸಿಕೊಳ್ಳಬಹುದು ಪಾಸಲ್ ಡೆಲಿವರಿ ಕೊಡಬೇಕು.

ವೈದ್ಯರಿಗೂ ಔಷಧ ಮಾರುವವರಿಗೂ ಕೇಳಿಕೊಂಡರೆ ಒಟ್ಟುಬೆಲೆಯ ದರಕ್ಕೆ ಕೊಡಲ್ಪಡುವದು.

ನೋಟೀಸ್.

ಇದರಿಂದ ನಮ್ಮ ಚಂದಾದಾರರಿಗೂ ಇತರರಿಗೂ ಶ್ರುತಪಡಿಸುವದೇನೆಂದರೆ —

ಸನ್ ೧೮೮೯ನೇ ಇಸವಿ ಡಿಸೆಂಬರ್ ಆಖೈರ ವರಿವಿಗೆ ಚಂದಾ ಬಾಕಿಯನ್ನು ಕ್ರಮವಾಗಿ ಸಲ್ಲಿಸದವರಿಗೆ ಚಂದಾದಾರರ ಹೆಸರುಗಳನ್ನು ನಾವು ರಿಜಿಸ್ಟರ್ [illegible] ಈ ಜನವರಿ ಆಗಾಯತು ಪತ್ರಿಕೆ ಕಳುಹಿಸುತ್ತೇವೆ. ಅವರ ಪೈಕಿ ಯಾರಿಗಾದರು ಪತ್ರಿಕೆಯ ಅಪೇಕ್ಷೆ ಇಲ್ಲದಿದ್ದರೆ ಅಂತವರು ಕೂಡಲೇ ತಮ್ಮ ಅಭಿಪ್ರಾಯವನ್ನು ಮುಂದಿನ ಕಾರ್ಡಿನಲ್ಲಿ ನಮಗೆ ತಿಳಿಸಬಹುದು. ಪತ್ರಿಕೆಯ ಆವಶ್ಯಕತೆ ಇರತಕ್ಕವರು ಸಾಧ್ಯವಾದಷ್ಟು ತ್ವರೆಯಲ್ಲಿ ಚಂದಾ ಮೊಬಲಗನ್ನು ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಬೆಂಗಳೂರು ತಾ ೫ನೇ ಜನವರಿ ೧೮೯೦	ಟಿ. ಸಿ ಶ್ರೀನಿವಾಸಾಚಾರ್ ಪ್ರೊಪ್ರೈಟರ್, ಕರ್ಣಾಟಕ ಪ್ರಕಾಶಿಕಾ.

ನೋಟಿಸ್.

ಕಾಫೀ ತೋಟಕ್ಕೆ ಕೂಲೀ ಜನರನ್ನು ಒದಗಿಸಿ ಕೊಡತಕ್ಕ ಬಗ್ಗೆ ಕಂಟ್ರಾಕ್ಟು ಮಾಡಿಕೊಳ್ಳುವದಕ್ಕೆ ಒಬ್ಬ ಏಜಂಟ ಅಥವಾ ಮೇಸ್ತ್ರಿ ಬೇಕಾಗಿರುತ್ತದೆ, ದಾಖಲೆಗಳೊಡನೆ ಜಾಮೀನ್ ಕೊಡಬೇಕು. ಕಾಫೀ ತೋಟವು ಆರೋಗ್ಯಕರವಾದದ್ದು. ನೀರು ಒಳ್ಳೆಯದು. ಬಾಜಾರಿಗೆ ಸಮೀಪದಲ್ಲಿದೆ.

ಇತರ ವಿವರಗಳನ್ನು ತಿಳಿದುಕೊಳ್ಳಬೇಕಾದರೆ ಉತ್ತರ ಕೊಡಗಿಗೆ ಸೇರಿದ ಸುಂಟಿಕೊಪ್ಪದಲ್ಲಿರುವ ಹರದೂರು ತೋಟದ ಸೂಪರಿಂಟೆಂಡೆಂಟರವರಿಗೆ ಬರೆದುಕೊಳ್ಳತಕ್ಕದ್ದು.

ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿ (ಲಿಮಿಟೆಡ್.)

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ.—

ಸನ್ ೧೮೯೦ನೇ ಇಸವಿ ಏಪ್ರಿಲ್ ಒಂದನೇ ತಾರೀಖಿಗೆ ಪ್ರಾರಂಭವಾಗುವ ಸಾಲಿನಲ್ಲಿ ಮೆಣಸು, ಕೊಬ್ಬರಿ, ಟಿ ವಿ ಬಟ್ಟೆ ಇವುಗಳ ಸರಬರಾಯಿ ಬಗ್ಗೆ ಬರತಕ್ಕ ಸೀಲ್ ಮಾಡಲ್ಪಟ್ಟ ದರಖಾಸ್ತುಗಳು ಕೊಡಬಹುದು.

ಸದರೀ ಪದಾರ್ಥಗಳನ್ನು ಹುಬ್ಬಳ್ಳಿ, ಧಾರ್ವಾಡ, ಅಥವಾ ಬೆಂಗಳೂರಿನಲ್ಲಿರುವ ಸಾಮಾನುಗಳ ಕೋಠಿಗಳಲ್ಲಿ ಒಪ್ಪಿಸಬೇಕು.

ಮೇಲೆ ನಮೂದಿಸಿರುವ ಕೋಠಿಗಳ ಪೈಕಿ ಯಾವದರಲ್ಲಾದರು ಒಪ್ಪಿಸುವದಕ್ಕೆ ದರಖಾಸ್ತುಗಳ ವಿವರಗಳು ಮತ್ತು ನಮೂನೆಗಳನ್ನು ಹುಬ್ಬಳ್ಳಿಯಲ್ಲಿರುವ ಸ್ಟೋರ್ ಕೀಪರಿಂದ ಪಡೆಯಬಹುದು.

ದರಖಾಸ್ತುಗಳು, ಧಾರ್ವಾಡದಲ್ಲಿರುವ ಏಜಂಟ ವ ಚೀಫ್ ಇಂಜನಿಯರ ಆಫೀಸಿಗೆ ಸನ್ ೧೮೯೦ನೇ ಇಸವಿ ಮಾರ್ಚ್ ೮ನೇ ತಾರೀಖಿನೊಳಗಾಗಿ ಸೇರಬೇಕು, ಮತ್ತು ಲಕೋಟೆಗಳ ಮೇಲ್ಗಡೆ "ಮೆಣಸು, ಕೊಬ್ಬರಿ, ಟಿ ವಿ ಬಟ್ಟೆಗಳ ಬಗ್ಗೆ ದರಖಾಸ್ತು" ಎಂದು ಬರೆಯತಕ್ಕದ್ದು.

ಏಜಂಟ ವ ಚೀಫ್ ಇಂಜನಿಯರವರು ಕಂಡ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನೇ ಯಾಗಲಿ ಅಂಗೀಕರಿಸುವದಕ್ಕೆ ಬದ್ಧರಾಗುವದಿಲ್ಲವು. ಜಾಸ್ತೀ ಅಂಶಗಳ್ಯಾವದನ್ನಾದರು ತಿಳಿದುಕೊಳ್ಳಬೇಕಾಗಿದ್ದರೆ ಹುಬ್ಬಳ್ಳಿಯಲ್ಲಿರುವ ಸ್ಟೋರ್ ಕೀಪರಿಂದ ತಿಳಿದುಕೊಳ್ಳತಕ್ಕದ್ದು.

ಧಾರ್ವಾಡ, ೨೩ನೇ ಫೆಬ್ರುವರಿ 1890	G J Lindsay, *Agent and Chief Engineer*,

ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪೆನಿ.

ರೈಲ್ವೆ ಕಂಟ್ರಾಕ್ಟದಾರರಿಗೆ ಇದರಿಂದ ತಿಳಿಸಲ್ಪಡುವದೇನಂದರೆ —

ಮೈಸೂರು ಸ್ಟೇಟ್ ರೈಲ್ವೆ ರಸ್ತೆಯನ್ನು ಮೈಸೂರಿಂದ ನಂಜನಗೂಡು ವರಿವಿಗೆ ೧೫ ಮೈಲುಗಳ ಫಾಸಲೆ ಬಡಾಯಿಸಿ ಹಾಕುವದಕ್ಕೆ ದರಖಾಸ್ತುಗಳನ್ನು ಸೀಲ್ ಮಾಡಿ ಕಳುಹಿಸಿಕೊಡತಕ್ಕದ್ದು.

ಮೂರು ಮೈಲುಗಳಿಗೆ ಸೆಕ್ಷನ್, ಅಂದರೆ ಒಂದು ಭಾಗದ ಮೇರೆ ವಿಂಗಡಿಸಲ್ಪಟ್ಟಿದೆ, ಅವುಗಳ ಪೈಕಿ ಒಂದು ಅಥವಾ ಜಾಸ್ತೀ ಸೆಕ್ಷನ್‌ಗಳಿಗೆ ದರಖಾಸ್ತುಗಳು ಅಂಗೀಕರಿಸಲ್ಪಡುವವು.

ದರಖಾಸ್ತುಗಳ ಲಕೋಟೆಯ ಮೇಲೆ ನಂಜನಗೂಡು ರೈಲ್ವೆ ರಸ್ತೆಗೆ ದರಖಾಸ್ತು ಎಂದು ಗುರುತು ಮಾಡಿ, ಧಾರವಾಡದಲ್ಲಿರುವ ಏಜಂಟರು ವ ಚೀಫ್ ಇಂಜನಿಯರವರ ಹೆಸರಿಗೆ ರಿಜಿಸ್ಟರ್ ಮಾಡಿ ಕಳುಹಿಸತಕ್ಕದ್ದು. ಅವು ಸನ್ ೧೮೯೦ ನೇ ಇಸವಿ ಮಾರ್ಚ್ ೧೫ನೇ ತಾರೀಖ್ ಮಧ್ಯಾಹ್ನದವರಿವಿಗೆ ಬರಮಾಡಿಕೊಳ್ಳಲ್ಪಡುವವು.

ಏಜಂಟ ವ ಚೀಫ್ ಇಂಜನಿಯರವರು ಕಂಡ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನೇ ಯಾಗಲಿ ಅಂಗೀಕರಿಸುವದಕ್ಕೆ ಬದ್ಧರಾಗುವದಿಲ್ಲವು.

ಮಾಡಬೇಕಾದ ಕಾಮಗಾರಿಯ ಸ್ಪೆಸಿಫಿಕೇಷನ್ ಪಟ್ಟಿ, ಸಾಮಾನುಗಳ ಪರಿಮಾಣದ ಪಟ್ಟಿ, ಟೆಂಡರಿನ ನಮೂನೆ ಇವುಗಳನ್ನು ಪಡೆಯಬೇಕಾದವರು ೨೦ ರೂಪಾಯಿಗಳಂ ಕೊಟ್ಟು, ಧಾರವಾಡದಲ್ಲಿರುವ ಏಜಂಟ ವ ಚೀಫ್ ಇಂಜನಿಯರಿಂದ ಪಡೆಯಬಹುದು.

ಪ್ರತಿ ಒಂದು ದರಖಾಸ್ತಿನ ಸಂಗಡಲೂ ೧,೦೦೦ ರೂಪಾಯಿಗಳ ಸ್ಟಚಕಾರತ ಮೊಬಲಗು ಕಳುಹಿಸತಕ್ಕದ್ದು. ದರಖಾಸ್ತು ಮಂಜೂರ್ಮಾಡಲ್ಪಡದ ಪಕ್ಷಕ್ಕೆ ಸದರೀ ಮೊಬಲಗು ವಾಪಸ್ ಮಾಡಲ್ಪಡುವದು, ದರಖಾಸ್ತು ವಾಪಸ್ ತೆಗೆದುಕೊಳ್ಳಲ್ಪಟ್ಟರೆ ಅದು ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

ದರಖಾಸ್ತಿನಿಂದ ಪಡೆದ ಕಾಮಗಾರಿಗೆ ಹಿಡಿಯುವ ಭಾಗದ ಮೊಬಲಗು ಪೈಕಿ ಸೇಕಡ ೫ ರೂಪಾಯಿಯಂತೆ, ಕಂಟ್ರಾಕ್ಟನ್ನು ಕ್ರಮವಾಗಿ ಪೂರೈಸುವದಕ್ಕೆ ಜಾಮೀನ್ ರೀತ್ಯಾ ಹಿಡಿದು ಇಡತಕ್ಕದ್ದು.

ದರಖಾಸ್ತು ಮುಂದಾಗ್ಯೆ ಕಲ್ಪಿಸಲ್ಪಟ್ಟ ತಾರೀಖ್ ಆಗಾಯಿತು ಆರು ತಿಂಗಳೊಳಗಾಗಿ ಕಾಮಗಾರಿಯನ್ನು ಪೂರ್ತಿ ಮಾಡತಕ್ಕದ್ದು.

ವಿಶಿಷ್ಟ ಸೇತುವೆಗಳ ನಕ್ಷೆಗಳನ್ನೂ ಇತರ ಕಾಮಗಾರಿಗಳ ನಕ್ಷೆಗಳನ್ನು ಧಾರವಾಡದಲ್ಲಿರುವ ಏಜಂಟ್ ವ ಚೀಫ್ ಇಂಜನಿಯರ ಆಫೀಸ್ನಲ್ಲಿ ನೋಡಬಹುದು.

ಮಹಾರಾಜಾ ಆಫ್ ಮೈಸೂರು ಸ್ಪಿನ್ನಿಂಗ್ ವ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ (ಲಿಮಿಟೆಡ್.)

ಇದರಿಂದ ತಿಳಿಸಲ್ಪಡುವದೇನಂದರೆ:—

ಇದರ ಕೆಳಗೆ ನಮೂದಿ ಮಾಡಲ್ಪಡುವ ಕೆಲಸಗಳನ್ನು ಜರುಗಿಸತಕ್ಕ ಬಗ್ಗೆ, ಸನ್ ೧೮೯೦ನೇ ಇಸವಿ ಫೆಬ್ರುವರಿ ೨೮ನೇ ತಾರೀಖ್ ಮಧ್ಯಾಹ್ನ ೩ ಘಂಟೆಗೆ, ಯಂತ್ರದ ಕಾರ್ಖಾನೆಯಲ್ಲಿರುವ ಕಂಪನಿಯ ರಿಜಿಸ್ಟರ್ ಮಾಡಲ್ಪಟ್ಟ ಆಫೀಸಿನಲ್ಲಿ ಹಿಸ್ಸೇದಾರರ ಆರುವನೇ ದಫೆ ಸಾಲೀಯಾನಾ ಸಾಮಾನ್ಯ ಸಭೆ ಸೇರುವದು:—

೧. ಸನ್ ೧೮೮೯ನೇ ಇಸವಿಯ ಬಾಬತು ಡೈರೆಕ್ಟರುಗಳ ರಿಪೋರ್ಟ್ ಮತ್ತು ಲೆಕ್ಕಗಳನ್ನು ಬರಮಾಡಿಕೊಂಡು ಅಂಗೀಕರಿಸುವದು.

೨. ಸರದೀ ಮೇರೆ ಕೆಲಸವು ಬಿಟ್ಟು ಹೋಗುವ ಡೈರೆಕ್ಟರುಗಳ ಸ್ಥಾನಕ್ಕೆ ಬೇರೆ ಇತರರನ್ನು ಚುನಾಯಿಸುವದು.

೩. ಆಡಿಟರುಗಳನ್ನು ಚುನಾಯಿಸಿ ಅವರಿಗೆ ರುಸುಂ ಗೊತ್ತು ಮಾಡುವದು.

"By order"
J. SCOTT & Co.
Agents

Bangalore City Municipality
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ

ನಂಬರ್ ೬೬೪

NOTICE.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ಸಿಟಿ ಮ್ಯುನಿಸಿಪಲ್ ಸರಹದ್ದಿಗೆ ಒಳಪಟ್ಟಿರುವ ವಿಶಿಷ್ಟ ಕಟ್ಟಡಗಳಿಗೂ ಹೊಸದಾಗಿ ನಂಬರುಗಳು ಹಾಕಲ್ಪಡುತ್ತವೆ; ಈ ನಂಬರುಗಳನ್ನು ಯಾರಾದರು ಕೆಡಿಸಿದರೆ ಅಂಥವರು ಮ್ಯುನಿಸಿಪಲ್ ರೆಗ್ಯುಲೇಷನ್ ೧೫೦ನೇ ಸೆಕ್ಷನ್ನಲ್ಲಿ ವಿಧಿಸಲ್ಪಟ್ಟಿರುವ ದಂಡನೆಗೆ ಗುರಿಯಾಗುವರು. ಸದರೀ ಸೆಕ್ಷನ್ ಇದರ ಕೆಳಗೆ ಸೇರಿಸಲ್ಪಟ್ಟಿದೆ.

ಬೆಂಗಳೂರು, ೧೧ನೇ ಫೆಬ್ರುವರಿ ೧೮೯೦.

P. N. KRISHNAMURTI,
President,
City Municipal Commission.

"೧೫೦—ಮ್ಯುನಿಸಿಪಲ್ ಕಟ್ಟಡಗಳ ಮೇಲೆ ನಂಬರ ಗಳು. ಯಾರೇ ಆದರು ಕಟ್ಟಡದ ಹೊರಗಡೆಯಲ್ಲಿರಿಗೂ ಚೆನ್ನಾಗಿ ಕಾಣುವಂತೆ ಒಂದು ಸ್ಥಳದಲ್ಲಿ, ಅಥವಾ ಸದರೀ ಕಟ್ಟಡದ ಆವರಣದ ಬಾಗಲಲ್ಲಿ ರಸ್ತೆಗೆ ರಂಬರೂ ನಂಬರನ್ನು ಹಾಕಿಸಬಹುದು. ಅಂಥಾ ನಂಬರನ್ನು ಯಾರಾದರು ಕೆಡಿಸಿದಾಗ್ಯೂ ಕಿತ್ತುಹಾಕಿದಾಗ್ಯೂ ಅಥವಾ ವಿರೂಪ ಮಾಡಿದಾಗ್ಯೂ ಅಂಥವರು ೫೦ ರೂಪಾಯಿಗಳ ಮೇಲ್ಪಡದ ಜುಲ್ಮಾನೆಗೆ ಗುರಿಯಾಗುವರು."

P. N. KRISHNAMURTI,
President,
City Municipal Commission.

ಹರಾಜ್ ಇಸ್ತಿಹಾರ್.

ಮೈಸೂರು ಚೀಫ್ಕೋರ್ಟ್ ಆರ್ಡರ್ ಪ್ರಕಾರ ಮೈಸೂರು ಆದ ಡಿ. ಮಾಯಿಲೆ ಕೃಷ್ಣಸ್ವಾಮಿನಾಯಡು ಕಾಲವಿದ್ದ ಕಂಪೆನಿ ಬಾಬತು ಪ್ರಿಂಟಿಂಗ್ ಆಫೀಸು ಪ್ರೆಸ್ ವಗೈರೆ ಸಾಮಾನುಗಳನ್ನು ಬೆಂಗಳೂರು ಸಗರ್ಪೇಟೆ ಹೊಸ ಕಟ್ಟಿಡಿ ಸಿಂಚನದಲ್ಲಿ ನನರ ೩ ನೇ ನಂಬ್ರ ಮನೆಯಲ್ಲಿಟ್ಟು ತಾ|| ೧—೩—೯೦ ರಲ್ಲು ಪ್ರಾತಃಕಾಲ ೩ ಘಂಟೆಯಿಂದ ೪ ಘಂಟೆವರಿಗೂ ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತೆ. ಇಷ್ಟವುಳ್ಳವರು ಹಾಜರಾಗತಕ್ಕದ್ದು.

ಕೀ. ಸುಬ್ರಾಯ್ ರಿಸೀವರ್.

Bangalore City Municipality.
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಸನ್ ೧೮೯೦ನೇ ಇಸವಿ ಫೆಬ್ರುವರಿ ೨೮ನೇ ತಾರೀಖ್ ಶುಕ್ರವಾರ ಮಧ್ಯಾಹ್ನ ೩ ಘಂಟೆಗೆ ಸಿಟಿ ಮ್ಯುನಿಸಿಪಲ್ ಕಮಿಷನರುಗಳು ತಮ್ಮ ಆಫೀಸಿನಲ್ಲಿ ಸಭೆ ಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳ ಯಾದಿ:—

೧. ಸನ್ ೧೮೯೦ನೇ ಇಸವಿ ಜನವರಿ ಮಾಹೆ ಬಾಬತು ಜಮಾಖರ್ಚು ಲೆಕ್ಕಗಳು ಮತ್ತು ಮುದ್ದತ್ತುಗಳು.

೨. ಜಕರಾಯನ ಕೆರೆಯ ಸ್ವಾಧೀನ ಭೂಮಿಗಾಗಿ ಕೊಡಬೇಕಾದ ಜಮೀನಿನ ಸ್ವಾಧೀನದಾರರಿಗೆ ಕೊಡಬೇಕಾದ ಈತರ ಜಮೀನಿನ ವಿಷಯದಲ್ಲಿ ಸಬ್ ಕಮಿಟಿಯವರು ಮಾಡಿದ ರಿಪೋರ್ಟ್.

೩. ಬ್ಯಾಂಡ್ ಡಿಸ್ಪೆನ್ಸರಿ ಇಲಾಖೆಯ ಆಸ್ಪತ್ರೆ ಅಸಿಸ್ಟೆಂಟರಿಗೆ ರುಸುಂ ಕೊಡಬೇಕೆಂದು ಮೈಸೂರು ಗವರ್ನಮೆಂಟ್ ಸೀನಿಯರ್ ಸರ್ಜನ್ ಮತ್ತು ಸಾನಿಟರಿ ಕಮಿಷನರ ಬರೆದ ಸನ್ ೧೮೯೦ನೇ ಇಸವಿ ಫೆಬ್ರುವರಿ ೭ನೇ ತಾರೀಖು ೬೪೦ನೇ ನಂಬರ್ ಲೆಟರ್.

೪. ಈಷನ್ ಬೌಲೀಂಗ್ಗೋಡೆಗೂ ಡಿಸ್ಟ್ರಿಕ್ಟ್ ಆಫೀಸ್ ಕಟ್ಟಡಕ್ಕೂ ಮಧ್ಯೆಯಿರುವ ಖಾಲಿ ಜಮೀನಿನಲ್ಲಿ ಸರಬರಾಜುಯವರ ಆಫೀಸಿನಲ್ಲಿ ವಾಸ ಮಾಡಬೇಕಾದ ಸರ್ಜರ್ನರಿಗೆ ಮನೆ ಕಟ್ಟಿಕೊಡಬೇಕಾದ ವಿಷಯದಲ್ಲಿ ಬೆಂಗಳೂರು ಡಿವಿಜನ್ ಎಗ್ಜಿಕ್ಯುಟಿವ್ ಇಂಜನಿಯರವರಿಂದ ಬಂದ ಸನ್ ೧೮೯೦ನೇ ಇಸವಿ ಜನವರಿ ೨೫ನೇ ತಾರೀಖು ೩೫೦—೨೫ನೇ ನಂಬರ್ ಲೆಟರ್.

೫. ಲಕಪ್ಷಾ ಮಸ್ಜಿದ್ ಮ್ಯಾನೇಜರವರು, ಈಗಿನ ಸ್ಮಶಾನಭೂಮಿಗೆ ಮ್ಯುನಿಸಿಪಲ್ ಹುಲ್ಲುಗಾವಲಿನಿಂದ ಒಂದುಭಾಗವನ್ನು ಸೇರಿಸಿಕೊಡಬೇಕೆಂದು ಮಾಡಿಕೊಂಡಿರುವ ಅರ್ಜಿ.

P. N. KRISHNAMURTI,
President

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, FEBRUARY 24, 1890

೧೮೯೦ನೇ ಫೆಬ್ರುವರಿ, ತಾ|| ೨೪ನೇ ಸೋಮವಾರ.

SOCIAL REFORM.

ಈಚೆಗೆ ಕೆಲವರು ಹಿಂದುಸಮಾಜದವರಲ್ಲಿ ಸಮಾಜಸುಧಾರಣೆಗಳ ಬಗ್ಗೆ ಅಂದರೆ ಹಿಂದೂ ಸಮಯಾಚಾರ ಪರಿಷ್ಕಾರವೂ, ತತ್ಕಾಲ ವಿಧವಾವಿವಾಹವಿಷಯವೂ ಪ್ರಧಾನ್ಯೇನ ವಿಚಾರಣೀಯವಾಗಿ ಏರ್ಪಟ್ಟು, ಈ ಇಂಡ್ಯಾದೇಶದಲ್ಲಿ ಅನೇಕಸ್ಥಳಗಳಲ್ಲಿ ಏತದ್ವಿಷಯಕ ಸಭೆಗಳು ಸಹ ಸ್ಥಾಪಿತವಾಗಿ ಸದರೀ ವಿಷಯಸಂಬಂಧವಾಗಿ ಆಗಿಂದಾಗ್ಯೆ ಪ್ರಬಲವಿಚಾರಗಳು ನಡೆಯುತಬರುತಲಿವೆಯಷ್ಟೆ. ಏತದ್ವಿಷಯಕವಾದ ವಿಚಾರಕ್ಕೆ ಮುಖ್ಯ ಪ್ರವರ್ತಕರಾದವರು ಪ್ರಾಯಶಃ ಆಧುನಿಕ ವೈಲಕ್ಷಣ್ಯಾಭಿಲಾಷಿಗಳಾಗಿರುತ್ತಾರೆಯಲ್ಲದೆ ಅವರ ವಿಚಾರಗಳೆಲ್ಲವೂ ಇಂಗ್ಲೀಷುಭಾಷೆಯಲ್ಲೇ ನಡೆಸಲ್ಪಡುತ್ತಬರುತಲಿವೆ. ಇದಕ್ಕೆ ಕಾರಣವು, ಈಜನರಿಗುಂಟಾಗಿರುವ ಇತರ ಭಾಷಾನಭಿಜ್ಞತೆಯೊ ಅಥವಾ ಇಂಗ್ಲೀಷ್ ಭಾಷಾ ಪರಿಚಯ ಪ್ರಚುರವಾಗಿರುವುದೋ ತಮ್ಮ ಅಭಿಪ್ರಾಯಗಳು ತಿಳಿಯಬೇಕಾದರೆ ಇದುಕಡೆ ಬಳಸಬೇಕೋ ನಾವರಿಯೆವು. ಇವರ ಪ್ರಯತ್ನಗಳಿಗೆ ಪ್ರತಿಪಕ್ಷಿಗಳಾಗಿ ಏರ್ಪಟ್ಟಿರುವಂತವರು ಇಂಗ್ಲೀಷುಭಾಷಾ ಪರಿಚಯವಿಲ್ಲದ ಶುದ್ಧ ಸನಾತನ ವೈದಿಕ ಬ್ರಾಹ್ಮಣ ಮಂಡಲಿಯೆಂಬುದು ಪ್ರಸಿದ್ಧವಿಷಯವಾಗಿರುತದೆ. ಹಿಂದೂಸಮಯಾಚಾರ ಪರಿಷ್ಕರಣಕಾರ್ಯದಲ್ಲಿ ಅತ್ಯಂತಾಭಿನಿವೇಶಪೂರ್ವಕವಾದ ಪ್ರವೃತ್ತಿಯುಳ್ಳವರು ಆವಿಷಯದಲ್ಲಿ ತಾವು ಪಡೆದಿರುವ ಅಭಿಪ್ರಾಯಗಳುಕ್ತರೀತಿ ತಮ್ಮ ಉಪನ್ಯಾಸಗಳು ಆಯಾದೇಶದೊಳು ಪ್ರಚಾರದಲ್ಲಿರುವ ಭಾಷೆಗಳಲ್ಲಿ ನಡೆಸಿದರೆ, ತಮ್ಮ ಉದ್ದೇಶಪ್ರಯತ್ನಗಳಿಗೆ ಭಂಜಕರಾಗಿ ಯಿತಸಲ್ಪಟ್ಟಿರುವ ಶುದ್ಧಾಗಮಗಳಾದ ವೈದಿಕ ಮಂಡಲಿಗೂ ವಿಂದಿತ ಪಾಮರ ಸಾಮಾನ್ಯೇನ ಎಲ್ಲರಿಗೂ ತಿಳಿಯಬಂದು ಅವರ ಯುಕ್ತಾಯುಕ್ತತೆಯುಕ್ತರೀತಿ ತಮ್ಮ ಅಭಿಪ್ರಾಯಗಳು ವ್ಯಕ್ತಪಡಿಸಲು ಅವರು ಶಕ್ತರಾಗುವರು. ಇಂತಾ ಉಚಿತಮಾರ್ಗವನ್ನುಪೇಕ್ಷಿಸಿ, ಹಿಂದೂಸಮಯಾಚಾರ ಪರಿಷ್ಕರಣವಿಷಯವಂಕುರಿತ ಸಭೆಗಳಲ್ಲಿ ಯೂರೋಪಿಯನ್ನರುಗಳನ್ನು ಸಭಾನಾಯಕರನ್ನಾಗಿ ಮಾಡಿಕೊಳ್ಳುವದು, ಅಂತಾ ಸಭೆಗಳಲ್ಲಿ ನಡೆಯುವ ಉಪನ್ಯಾಸಗಳು ಇಂಗ್ಲೀಷ್ ಭಾಷೆಯಲ್ಲಿ ನಡೆಸಿ, ಇಂಗ್ಲೀಷ್ ವೃತ್ತಾಂತಪತ್ರಿಕೆಗಳಮೂಲಕ ಪ್ರಚಾರಗೊಳಿಸುವದು, ತಮ್ಮ ವಾದಗಳಿಗೆ ಪೋಷಕಗಳಾಗಿ ಇಂಗ್ಲೀಷ್ ಜನರ ಲೇಖನಗಳು ಪ್ರಮಾಣಗಳನ್ನಾಗಿ ಅಂಗೀಕರಿಸಿ ಉಪಪಾದಿಸುವದು, ಇತ್ಯಾದಿ ಅನುಚಿತಮಾರ್ಗಗಳನ್ನವಲಂಬಿಸಿ ನಡೆಸುತಬರುವದರಿಂದ ಪ್ರತ್ಯೇಕಗಳಾದವರ ಆಗ್ರಹಕ್ಕೂ ತನ್ಮೂಲಕವಾದ ಅವರ ಮುದ್ದೇಶಕ್ಕೂ ಸಂಪೂರ್ಣಾವಕಾಶವನ್ನುಂಟುಮಾಡಿದಂತಾಯಿತೆಂದೆನ್ನುತ್ತ ವೈಲಕ್ಷಣ್ಯಾಭಿಲಾಷಿಗಳಾದವರ ಪ್ರಯತ್ನಗಳು ನಿರುಪಯುಕ್ತಗಳಾಗಿ ಕೈಗೂಡದಂತಾಗಿಲ್ಲವು. ಇದಕ್ಕೆ ನಿದರ್ಶನರೂಪವಾಗಿ ಈಚೆಗೆ ಗುತ್ತಿಯಲ್ಲಿ ನಡೆದ ಒಂದುಸಂದರ್ಭವು ಸಂಗ್ರಹರೂಪೇಣ ಇವರದಿ ತಿಳಿಸುವೆವೆಂದರೆ,—

ಈ ತಿಂಗಳ ಆದಿ ಭಾಗದಲ್ಲಿ ಗುತ್ತಿಯೊಳು ಪುನರ್ವಿವಾಹ ಮಾಡಿಕೊಂಡ ವಿಧವೆಯೊಬ್ಬಳು ಮೃತಪಡಲು ಆಕೆಯ ಗಂಡನು ದಹನಾರ್ಥ ಶವವನ್ನು ರುದ್ರಭೂಮಿಗೆ ಸಾಗಿಸುವದಕ್ಕೆ ಅಲ್ಲಿನ ಬ್ರಾಹ್ಮಣರ ಸಹಾಯವನ್ನಪೇಕ್ಷಿಸಲಾಗಿ ಅವರೆಲ್ಲರು ಒಗ್ಗಟ್ಟಾಗಿ ತಿರಸ್ಕರಿಸಿ ಆತನು ಬಹಳ ಕಷ್ಟಕ್ಕೆ ಗುರಿಯಾದನೆಂಬದು. ಈವಿಷಯದಲ್ಲಿ ಮೈಸೂರು ಹೆರಾಲ್ಡ್ ಎಂಬ ಇಂಗ್ಲೀಷ್ ಪತ್ರಿಕೆ ಹೇಳುವ ಅಭಿಪ್ರಾಯವೇನಂದರೆ—ಬ್ರಾಹ್ಮಣರಲ್ಲಿ ಪುರುಷನಾಗಲಿ ಸ್ತ್ರೀಯಾಗಲಿ ತನ್ನ ಜೀವಿತ ಕಾಲದಲ್ಲಿ ಜಾತಿತ್ಯಜನಂಬಡಿದ್ದವುತನಕ ಅಂತಿಮಗಳ ಉತ್ತರಕ್ರಿಯೆಯಂನಡೆಸಬೇಕಾದ ಸಂದರ್ಭಗಳೊಳು ಬ್ರಾಹ್ಮಣನಾದವನು ಪತಿತನ ಶವವನ್ನು ಮುಟ್ಟಬಾರದೆಂದು ಪ್ರಮಾಣ ವಚನಗಳಿರುವವೆ, ಪ್ರಕೃತ ಸಂದರ್ಭದಲ್ಲಿ ಗುತ್ತಿ ಬ್ರಾಹ್ಮಣರು ವಹಿಸಿದ ತಾಟಸ್ಥ್ಯವು ವಾದ ಹೇತುವಾದ ಕೃತ್ಯವೆಂಬದು ವಗ್ಗಿದೆ. ಈ ಅಭಿಪ್ರಾಯಕ್ಕೆ ಪ್ರೋತ್ಸಾಹಕವಾದ ಪ್ರಮಾಣ ವಚನಗಳು ಹೆರಾಲ್ಡ್ ಪತ್ರಿಕಾಲೇಖಕರ ಹೃದಯಗತ್ಯರವಲ್ಲದಗಿಸಿ ಇಟ್ಟುಕೊಂಡಿರುವದಕ್ಕಿಂತಲೂ ಅಂತಾ ಪ್ರಮಾಣಗಳು ಹೊರಪಡಿಸಿದ್ದರೆ, ಲೋಕಕ್ಕೆ ಬಹಳ ಉಪಕೃತಿಯಂ ಮಾಡಿದಂತಾಗುವದು. ಇಂತಾಅನುಚಿತಮಾರ್ಗವಂದಿಟ್ಟು ಲೋಕದಲ್ಲಿ ಇಂಗ್ಲೀಷ್ ಭಾಷೆಯೋ ಭಾಷೆಯೆಂತಲೂ, ತದ್ಭಾಷಾ ಪರಿಚಯವುಳ್ಳವರೇ ವಿವೇಕಿಗಳೆಂತಲೂ, ಇತರರು ಎಷ್ಟು ವಿದ್ವಾಂಸರಾಗಿದ್ದಾಗ್ಯೂ ಅವಿವೇಕಿಗಳೆಂತಲೂ, ಮೂರ್ಖರೆಂತಲೂ ಬಹುಮುಖವಾಗಿ ಅವರಂದೂಷಿಸಿ ತಿರಸ್ಕರಿಸುತ, ಶಾಸ್ತ್ರಕ್ಕೂ ಶಿಷ್ಟಾಚಾರಕ್ಕೂ ಪ್ರತ್ಯಕ್ಷ ವಿರುದ್ಧವಾದ ಉಚ್ಛೃಂಖಲ ಪ್ರವೃತ್ತಿಯುಳ್ಳ ಆಧುನಿಕ ವೈಲಕ್ಷಣ್ಯಾಭಿಲಾಷಿಗಳು ಪರರ ಸಹಾಯದಮೇರೆ ಸ್ವಸ್ವಾಭಿರುಚಿ ಮನಸ್ವೀ ವರ್ತಿಸತಕ್ಕ ಮಂದಮತಿಗಳಿಗೆ ಇದಕ್ಕಿಂತಲು ಒಳ್ಳೆಯ ಫಲವೇನುಂಟಾಗಿತೆವು? ಅಂತಾ ದುರ್ಘಟ ಸಂದರ್ಭವಾಗುವಲ್ಲಿ ಅದು ಕುರಿತು ಚಿಂತಿಸಿ ಪ್ರಯೋಜನವೇನು? ಅಂತಾಉಚ್ಛೃಂಖಲ ಪ್ರವೃತ್ತಿಗೆ ಪ್ರೋತ್ಸಾಹಕರಾದವರು ಪ್ರಕೃತ ಸಂದರ್ಭದಲ್ಲಿ ಸದರೀ ಅನಾಥ ಬ್ರಾಹ್ಮಣನಿಗೆ ಸಹಾಯ ಮಾಡದೆ ಹೋದದಕ್ಕೆ ಕಾರಣವೇನು? ಗುತ್ತಿಯಲ್ಲಿ ಆಧುನಿಕ ವೈಲಕ್ಷಣ್ಯಾಭಿಲಾಷಿಗಳಾದವರ್ಯಾರೂ ಇಲ್ಲದೆ ಹೋದರೆ, ಅಥವಾ ಯಿದ್ದು ಉನ್ನೆಕ್ಷಿಸಿದರೆ? ಸುಮಾರು ಹದಿನೆರಡು ಸಂವತ್ಸರಗಳ ಹಿಂದೆ ಶ್ರೀ ಶೃಂಗೇರಿ ಸ್ವಾಮಿಗಳವರು ಬಳ್ಳಾರಿಯಲ್ಲಿ ದಯಮಾಡಿದ್ದ ಕಾಲದಲ್ಲಿ ಮೇಲೆ ತಿಳಿಸಲ್ಪಟ್ಟಂತೆ ಒಂದು ಸಂದರ್ಭ ನಡೆದು ಆ ಕಾಲದಲ್ಲಿ ಸಹ ಅಲ್ಲಿನ ಬ್ರಾಹ್ಮಣರು ತಾಟಸ್ಥ್ಯವಹಿಸಿದರೆಂಬ ಅಂಶವು ಈ ಪತ್ರಿಕಾಮೂಲಕ ತಿಳಿಸಿ ಇರುತ್ತೇವೆ. ಇನ್ನು ಅನೇಕ ಸಂದರ್ಭಗಳಲ್ಲಿ ಅನೇಕರು ಬಹುವಿಧ ಪರಿಭವಗಳು ಅನುಭವಿಸಿದರೆಂಬದು ಪ್ರಸಿದ್ಧ ವಿಷಯವಾಗಿದೆ. ಏಕೇನ ವೈದಿಕ ಮಂಡಲಿಯು ನಿಗ್ರಹಿಸಿ ಹಿಂದೂ ಸಮಯಾಚಾರ ಪರಿಷ್ಕರಣಕಾರ್ಯ ಪ್ರವರ್ತಕರನ್ನಿಸಿಕೊಂಡಿರುವ ಆಧುನಿಕ ವೈಲಕ್ಷಣ್ಯಾಭಿಲಾಷಿಗಳು ಮಾಡುವ ಪ್ರಯತ್ನಗಳೆಲ್ಲವು ನಿಷ್ಪ್ರಯೋಜಕಗಳಾಗುವವರಲ್ಲಿ ಸ್ವಲ್ಪವಾದರೂ ಸಂಶಯವಿಲ್ಲವು.

Occasional Notes
ನೈಮಿತ್ತಿಕ ವಿಷಯನ್ಯಾಸ.

A report—ಸಿಲೋನ್ದ್ವೀಪದಲ್ಲಿ ಒಂದು ಕಡೆ ಬಹಳವಾಗಿ ಚಿನ್ನಗಳುಳ್ಳ ಕಲ್ಲುಗಳು ಸಿಕ್ಕಿರುವಂತೆ ತಿಳಿಯಬರುತಿದೆ.

The Governor of Bombay.—ಮುಂಬೈ ಗವರ್ನರಾದ ಲಾರ್ಡ್ ರೇ ಯವರು ತಮ್ಮ ಕೆಲಸವನ್ನು ಬಿಡಬೇಕಾಗಿ ಬರುವ ಏಪ್ರಿಲ್ ೧೫ನೇ ತಾರೀಖಿನಲ್ಲಿ ಸ್ವದೇಶಕ್ಕಾಗಿ ಹಡಗು ಹತ್ತುವರು.

A rumour—ಇಂಡ್ಯಾಗವರ್ನಮೆಂಟಿನವರು ವಿದ್ಯಾಭ್ಯಾಸದ ಇಲಾಖೆ ಮಿನಿಸ್ಟರ್ (ಪ್ರಧಾನಿ) ಎಂಬ ಅಧಿಕಾರವು ನೂತನವಾಗಿಸೃಜಿಸಿ ಉದ್ಯೋಗವನ್ನು ಕಲ್ಪಿಸಿ ಅದಕ್ಕೆ ಬಂಗಾಳೆ ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರಾದ ಸರ್ ಆಲ್ಫ್ರೆಡ್ ಕ್ರಾಫ್ಟ್ ಎಂಬವರಂ ನೇಮಕರ್ಮಾಡುವರೆಂಬ ಪ್ರವಾದವು ಹಬ್ಬಿರುವದೆಂದು ಉತ್ತರದೇಶದ ಪತ್ರಿಕೆಯೊಂದು ತಿಳಿಸುತಿದೆ.

Sale of indecent photographs—ಈಚೆಗೆ ಅಮೆರಿಕಾ ದೇಶದವನೊಬ್ಬಾತನು ದೇಶ ಸಂಚಾರ ಮಾಡಿಕೊಂಡು ಮಾರ್ಗವಶಾತ್ ಮದರಾಸಿಗೆ ಬಂದು ಅಲ್ಲಿ ಒಂದು ಕಡೆ ನಿಂತು ವದಕ್ಕೆ ಅಸಭ್ಯಕರವಾದ ಕೆಲವು ಛಾಯಾಪಟಗಳನ್ನು ಮಾರಿದ ಬಗ್ಗೆ ಪೋಲೀಸಿನವರಿಂದ ಆರೋಪಿಸಲ್ಪಟ್ಟು ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ನಡೆದ ವಿಚಾರಣೆಯೊಳು ಆತನಾಧಿಯು ೧೦೦ ರೂಪಾಯಿಗಳ ಜುಲ್ಮಾನೆ ವಿಧಿಸಲ್ಪಟ್ಟನೆಂದು ತಿಳಿಯಬರುತಿದೆ.

A proposal sanctioned.—ಮದರಾಸ್ ಪೋಲೀಸ್ ಇನ್ಸ್ಪೆಕ್ಟರುಗಳ ಮತ್ತು ಹೆಡ್ ಕಾನ್ಸ್ಟೆಬಲ್ಗಳ ಕೆಲಸಗಳಂ ವಿಮರ್ಶಾ ಪೂರ್ವಕ ಮರಳಿ ಏರ್ಪಾಡು ಮಾಡಿ ಸನ್ ೧೮೯೦ನೇ ಏಪ್ರಿಲ್ ಗುರ್ರೆ ತಾರೀಖ್ವೊದಲು ಸಾಲೀಯಾನಾ ೧,೦೩,೭೩೬ ರೂಪಾಯಿಗಳ ಖರ್ಚಿನಿಂದ ಅವರ ಸಂಬಳಗಳು ಜಾಸ್ತೀ ಮಾಡಬೇಕೆಂದು ಸ್ಥಳೀಕ ಗವರ್ನಮೆಂಟಿನವರು ತಿಳಿಸಿದ ಅಭಿಪ್ರಾಯವನ್ನು ಇಂಡ್ಯ ಗವರ್ನಮೆಂಟಿನವರು ಮಂಜೂರ್ಮಾಡಿರುವರಾಗಿ ತಿಳಿಯಬರುತಿದೆ.

Mail robbery.—ಒಂದಾನೊಂದು ಮದರಾಸ್ ಪತ್ರಿಕೆಯ ಕಡೆಗೆ ಬಾತ್ಮಿದಾರನು ಬರೆಯುತ್ತಾನೇನಂದರೆ,—ಈ ತಿಂಗಳ ೧೩ನೇ ತಾರೀಖು ರಾತ್ರಿ ಕಡಪೆಯಿಂದ ರಾಚೋಟಿಮಾರ್ಗವಾಗಿ ಮಡಿವನಿಳ್ಳಿಗೆ ತಪಾಲ್ ಹೋಗುತ್ತಿರುವಲ್ಲಿ ದರೋಡೆಕಳ್ಳರುಬಂದುಬಿದ್ದು ತಪಾಲ್ ರನ್ನರ್ಗಳನ್ನುಹೊಡೆದು ಥಾಲೀಕ್ರಯಗಳುಳ್ಳ ಚಾಂಗೀಗಳನ್ನೆಲ್ಲ ಲೂಟಿಮಾಡಿಕೊಂಡು ಹೋದರು. ಪೋಲೀಸ್ ಸೂಪರಿಂಟೆಂಡೆಂಟರುಬಂದು ಅವಶ್ಯಕಗಳಾದ ತನಿಖೆಗಳಂ ಮಾಡುತಲಿದ್ದಾರೆ ಎಂಬದು.

A severe fire.—ಈ ತಿಂಗಳ ೧೧ನೇ ತಾರೀಖಿನಲ್ಲಿ ಸೂರತ್ ಡಿಸ್ಟ್ರಿಕ್ಟ್ಗೆ ಸೇರಿದ ಮಹಾಂಲಿ ಯೆಂಬ ಪಟ್ಟಣದೊಳು ಮೊದಲು ಕೆಲವುಗುಡಿಸಲುಗಳಿಗೆ ಬೆಂಕಿತಗಲಿ, ಅದು ಕ್ರಮೇಣ ಒಳ್ಳೆಯಕಟ್ಟಡಗಳಿಗೆ ವ್ಯಾಪಿಸಿ ೭೫ ಮನೆಗಳು ಸುಟ್ಟುಹೋದವು. ಏಟ್ಟುನಷ್ಟ ೩೫,೦೦೦ ರೂ

ಖಯಿಗಳಿಂದ ಅಂದಾಜಾಗಿರುತಿದೆ. ಈಅಗ್ನಿಯ ಪೀಡೆಯಿಂದ ಸರ್ವಸ್ವವ ಹೋಗಲಾಡಿಸಿಕೊಂಡವರ ಸಹಾಯಾರ್ಥ ಅಲ್ಲಿನ ಕಲೆಕ್ಟರವರು ಚಂದಾ ವಸೂಲೀಪ್ರಯತ್ನದೊಳಿರುವಂತೆ ಕಾಣುತಿದೆ.

LOCAL AND PROVINCIAL NEWS.

ಪ್ರದೇಶಮತ್ತುತಾಲ್ಲೂಕಿನವೃತ್ತಾಂತಗಳು.

Removal of Public offices:—ಮೈಸೂರು ಸಂಸ್ಥಾನದ ದಿವಾನ್‌ಕಚೇರಿಯಬಗ್ಗೆ ಪ್ಯಾಲೇಸಿನಲ್ಲಿ ನೂತನವಾಗಿ ಹಿಂದುಗಡೆ ಕಟ್ಟಿಸಲ್ಪಟ್ಟ ದಯಮಿಟ್ಟೀ ಹಿಸ್ರದಲ್ಲಿ ದಿವಾನ್‌ಕಚೇರಿ, ಕಂಟ್ರೋಲರಾಫೀಸು, ಖಜಾನೆ ಮೊದಲಾದ ಕೆಲವು ಆಫೀಸುಗಳು ಅಲ್ಲಿಗೆ ವರ್ಗಮಾಡಲ್ಪಟ್ಟು ಇಲ್ಲಿನ ಹಿಂದಿನಕಚೇರಿ ಕಟ್ಟಡವು ಮದರಾಸು ಗವರ್ನಮೆಂಟು ಮಿಲಿಟರಿಇಲಾಖೆಗೆ ಸೇರಲ್ಪಡುವದೆಂಬ ಹಿಂದಿನ ಪ್ರವಾದವು ಬಲವತ್ತರವಾಗಿದೆ ಈಕಾಲದಲ್ಲಿ ಸರ್ವಂ ಸುಭಿಕ್ಷ್ಯಂ.

The weather.—ಈವೇಳೆಗೆ ಬಹಳ ಬಿಸಿಲು ಬೀಳಲಾರಂಭಿಸಿರುತಿದೆ ಪ್ರಾತಃಕಾಲದಲ್ಲಿ ೮ ಘಂಟೆಯ ವರಿವಿಗೆ ಚಳಿಯಾಗಿರುತಿದೆ. ೧೦ ಘಂಟೆಯ ಮೇಲೆ ಬಿಸಿಲಿನ ಝಳ ಜಾಸ್ತಿಯಾಗಿದೆ. ರಾತ್ರಿ ಕಾಲದಲ್ಲಿ ಸೆಖೆ ಪ್ರಾರಂಭವಾಯಿತು. ಇದರ ಜೊತೆಗೆ ಸೊಳ್ಳೆ ಮತ್ತು ತಗಣೆ ಬಾಧೆ ಉಂಟಾಯಿತು. ಕೆಲ ಕುಂಟೆಗಳಲ್ಲಿ ನೀರು ಬತ್ತಿ ಬಂತು. ಗಾಳಿ ಬೀಸುತ್ತಿದೆ ನಿವಾರ್ಥಗಳ ಪ್ರಂತಶಗಳು ಒಂದೇಸಮವಾಗಿರುತಿವೆ. ಅಲ್ಲಿಯಲ್ಲಿ ಮಾಂತ ಫೀವರು ಕಾರ್ತಿ ಸೇಕ್ಷಯಿಕರೋಗಗಳು ಪರಿಸೋರಿವೆ.

A branch line.—ಗುಬ್ಬಿಹಳ್ಳಿಯಿಂದ ಕೋಲಾರ ಕಡೆಯವರೆಗೆ ಒಂದು ಸಣ್ಣ ರೈಲುವೇ ಮಾರ್ಗವನ್ನು ಹಾಕುವ ಉದ್ದೇಶವೊಂದಿರುವ ಪ್ರಣವಲ್ಲಿ ಹಿಂದುಗಡೆ ಸರ್ಕಾರಾಗಿ ಹಿಂದೆ ಎಕ್ಸಿಕ್ಯೂಟಿವ್ ಇಂಜನಿಯರಾಗಿಯೂ ಅಸಿಸ್ಟೆಂಟ್ ಇಂಜನಿಯರಾಗಿಯೂ ಅಧಿಕಾರವಹಿಸಿದ್ದು ಕೆಲಸದಿಂದ ನಿವೃತ್ತರಾಗಿ ಸ್ವದೇಶಕ್ಕೆ ಹೊರಟುಹೋದ ಮಿ॥ ರಾಬರ್ಟ್ಸ್ ಎಂಬವರು ಸವರೀಕ್ಷಣವಿಗೆ ಮ್ಯಾನೇಜಿಂಗ್ ಡೈರೆಕ್ಟರಾಗಿ ಮರಳಿ ಇಲ್ಲಿಗೆ ಬರುವಂತೆ ಒಂದು ಸುದರಾಸುಪತ್ರಿಕೆಯಮೂಲಕ ತಿಳಿಯಲಾದೆವು.

Highway robbery.—ಈತಿಂಗಳ ೩ನೇ ಶನಿವಾರ ರಾತ್ರಿ ಸುಮಾರು ಹನ್ನೆರಡುಘಂಟೆಯ ಸಮಯದಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕು ನಂದಿಯಲ್ಲಿ ಮಹಾಶಿವರಾತ್ರಿಪ್ರಯುಕ್ತ ನಡೆವ ಉತ್ಸವಕ್ಕೆ ಹೋಗಿ ವಾಪಸ್‌ಬರುತಲಿದ್ದ ಕೆಲವರು ಬ್ರಾಹ್ಮಣರಮೇಲೆ ದರೋಡೆಕೋರರುಬಿದ್ದು ಗಾಡಿ ಹೊಡೆಯುವನನ್ನು ಹಾರಹೊಡೆದು ಗಾಡಿಯನ್ನು ಎತ್ತುಗಳಜೊತೆಗೆ ಪಕ್ಕದಲ್ಲಿದ್ದ ಹೊಂಗೆಮರದಲ್ಲಿ ಕಟ್ಟಿಹಾಕಿ ಬುದ್ಧಿಯಿಲ್ಲದೆ ಹಾರುತಿದ್ದವರನ್ನು ಬಿಟ್ಟುಬಿಟ್ಟನ್ನಾಗಿ ಆಚೆಗೆಸೆದು ಅವರಲ್ಲಿದ್ದ ಚಿನ್ನದ ಒಡವೆಗಳು ವಗೈರೆ ಸುಮಾರು ನೆನೂರು ರೂಪಾಯಿಗಳ ಕ್ರಯ ಬಾಳತಕ್ಕ ಸಮಾನುಗಳಂ ಕಸಗೊಂಡು ಪರಾರಿಯಾದರೆಂತಲೂ ಈವಿಷಯದ ಪೋಲೀಸಿನವರಿಗೆ ರಿಪೋರ್ಟಾಗಿ ಅವರು ತನಿಖೆ ತರದೂದಿನಲ್ಲಿರುವುದಾಗಿಯೂ ತಿಳಿಯಬಂದೆವು.

H. H. the Maharaja's departure—ಕಳೆದ ಶುಕ್ರವಾರದದಿನ ಹಗಲು ೧೧ ಘಂಟೆಗೆ ಶ್ರೀಮನ್ಮಹಾರಾಜರವರು ತಮ್ಮ ಕುಟುಂಬ ಪರಿವಾರಸಮೇತರಾಗಿ ಸ್ಪೆಷಲ್‌ಟ್ರೈನಿನಲ್ಲಿ ರಾಜಧಾನಿಗೆ ವಾಪಸ್ ದಯಮಾಡಿದರು. ಈವಿಶೇಷ ಸಂದರ್ಭದಬಗ್ಗೆ ಪೇಟೆ ರೈಲ್ವೇ ಸ್ಟೇಷನು ತೋರಣ ಕದಳೀಸ್ತಂಭಗಳು ಮೊದಲಾದವುಗಳಿಂದಲಂಕೃತವಾಗಿ, ರೆಸಿಡೆಂಟರು ಮೊದಲಾದ ಬಹುಮಂದಿ ಯೂರೋಪಿಯನ್ ಅಧಿಕಾರಿಗಳೂ, ಈಸಂಸ್ಥಾನದ ದಿವಾನರು ಮೊದಲಾದ ಬಹುಮಂದಿ ನೇಟಿವ್ ಅಧಿಕಾರಿಗಳೂ ಖುಷ್‌ಬಾಷ್‌ದೊಡ್ಡಮನುಷ್ಯರೂ ಹಾಜರಿದ್ದು ಶ್ರೀಮನ್ಮಹಾರಾಜರವರನ್ನು ಬರಮಾಡಿಕೊಂಡರು. ಮಹಾರಾಜರವರು ಗಾಡಿಯಿಂದಿಳಿದಕೂಡಲೆ ಅಲ್ಲಿ ಹಾಜರಿದ್ದ ನೇಟಿವ್ ದೊಡ್ಡಮನುಷ್ಯರ ಮರ್ಯಾದೆಗಳಂಕೈಗೊಂಡು ಮೈಸೂರು ರಯಿಲ್ವೆ ಪ್ಲಾಟ್‌ಫಾರಕ್ಕೆ ದಯಮಾಡಿ ಅಲ್ಲಿ ಬ್ರಿಟಿಷ್ ರೆಸಿಡೆಂಟರು ಮೊದಲಾದ ಯೂರೋಪಿಯನ್ ದೊಡ್ಡಮನುಷ್ಯರಸಂಗಡ ಕೆಲವು ನಿಮಿಷಗಳಕಾಲ ಮಾತನಾಡುತಲಿದ್ದು ತರುವಾಯ ಗಾಡಿಗೆ ಬಿಜಮಾಡಿದರು. ಕೂಡಲೆ ಗಾಡಿಹೊರಟಿತು. ಈಸಂದರ್ಭದಲ್ಲಿ ನಡೆಯತಕ್ಕಾದ ತೋಪ್ ಮೊದಲಾದ ಮಾಮೂಲ್ ಮರ್ಯಾದೆಗಳೆಲ್ಲವೂ ನಡೆದವು.

The Arya Balika Patasala.—ಹಿಂದಿನ ವಾರದ ಪತ್ರಿಕೆಯ ಮೂಲಕ ತಿಳಿಸಿ ಇದ್ದಂತೆ, ಕಳೆದ ಸೋಮವಾರದ ದಿನ ಪ್ರಾತಃಕಾಲ ೯ಘಂಟೆಯ ವೇಳೆ, ಇಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟಿರುವ ಆರ್ಯಬಾಲಿಕಾ ಪಾಠಶಾಲೆಯ ವಿದ್ಯಾರ್ಥಿನೀಯರಿಗೆ ಪ್ರಥಮವಾರ್ಷಿಕ ಇನಾಂಗಳುಕೊಡುವ ಉದ್ದೇಶದೊಡನೆ ಪ್ರಬಲಸಭೆ ಸೇರಿತು. ಏತದ್ದರ್ಥ ಪಾಠಶಾಲಾ ಸೌಧವು ತೋರಣ ಕದಳೀಸ್ತಂಭ ವಿತಾನಾದ್ಯನೇಕಾಲಂಕಾರಗಳಿಂದ ಶೋಭಿತವಾಗಿ ಕಣ್ಗೊಳಿಸುತಲಿತ್ತು. ದಿವಾನರವರು, ಚೀಫ್‌ಕೋರ್ಟ್ ಜಡ್ಜಿಗಳು, ಕೌನ್ಸಿಲರುಗಳು ಮೊದಲಾದ ಬಹುಮಂದಿ ದೊಡ್ಡಮನುಷ್ಯರು ಧರ್ಮಪಿತಾಪಿಯಾಗಿ ಬಂದು ಮಹಾರಾಜರವರ ಆಗಮನವನ್ನು ಅತ್ಯಾತುರದೊಡನೆ ನಿರೀಕ್ಷಿಸುತಲಿರುವಾಗ್ಯೆ ಶ್ರೀಮನ್ಮಹಾರಾಜರವರ ಸವಾರಿ ಸುಮಾರು ೯½ ಘಂಟೆಗೆ ಚಿತ್ತೈಸಿತು. ಅವರಿಗಾಗಿ ಪರಿಕ್ಲುಪ್ತವಾಗಿದ್ದ ಉನ್ನತಾಸನವನ್ನಲಂಕರಿಸಿದ ಮೇಲೆ ವಿದ್ಯಾರ್ಥಿನೀಯರು ಕೆಲವರು ಮಹಾರಾಜರವರಿಗೆ ಶುಭ ಪರಂಪರೆಯಂ ಬಯಸಿ ಕೆಲವು ಪದಗಳಂ ಹಾಡಿದರು. ತರುವಾಯ ಕೆಲವರು ವಿದ್ಯಾರ್ಥಿನೀಯರು ತಾವು ಓದಿದ್ದ ಪಾಠಗಳ ಪೈಕಿ ಒಂದೊಂದು ಭಾಗವನ್ನು ಓದಿದರು. ಇವೆಲ್ಲ ಆದಮೇಲೆ ಮಹಾರಾಜರವರು ವಿದ್ಯಾರ್ಥಿನೀಯರ ಪೈಕಿ ಅನೇಕರಿಗೆ ಬಹುಮಾನಗಳನ್ನು ದಯಪಾಲಿಸಿ ಸಭಿಕರಿಂದ ಪಡೆಯಲ್ಪಟ್ಟ ಮರ್ಯಾದೆಗಳಂ ಕೈಗೊಂಡು ಸಂತುಷ್ಟ ಮನಸ್ಕರಾಗಿ ಸವಾರಿ ವಾಪಸ್ ಚಿತ್ತೈಸಿದರು. ಸಭೆ ಬರಖಾಸ್ತಾಯಿತು.

TELEGRAMS.

ತಂತಿ ವೃತ್ತಾಂತಗಳು.

ಲಂಡನ್, ೧೪ನೇ ಫೆಬ್ರವರಿ.—ಮಿ॥ ಡಬ್ಲ್ಯು ಎಚ್. ಸ್ಮಿತ್‌ಯವರು ಮಿ॥ ಬ್ರಾಡ್ಲಾಯವರಿಗೆ ಜವಾಬುಹೇಳುವಲ್ಲಿ, ನ್ಯಾಷನಲ್ ಕಾಂಗ್ರೆಸ್ ಸಮಾಜದವರು ಬರೆದುಕೊಂಡ ಅರ್ಜಿಯಲ್ಲಿ ನಮೂದುಮಾಡಲ್ಪಟ್ಟಿರುವ ಕಸ್ತ್ಯಗಳಂಕುರಿತು ವಿಚಾರಕ್ಕೆ ಈಸಲ ಫಿಸ್ತದಲ್ಲಿಯೇ ಅವಕಾಶಕೊಡಲ್ಪಡುವದೆಂದು ತಿಳಿಸಿದರು.

ಲಂಡನ್, ೧೫ನೇ ಫೆಬ್ರವರಿ.—ಇಂಡ್ಯಾದೇಶದ ಮಂತ್ರಾಲೋಚಕ ಸಮಾಜಗಳಂಕುರಿತು ಲಾರ್ಡ್ ಕ್ರಾಸ್ ಸಾಹೇಬರವರು ರಚಿಸಿರುವ ಮಸವಿದಾಕ್ಕೆ ಲಾರ್ಡ್ ಲ್ಯಾನ್ಸ್‌ಡೌನ್‌ಯವರು ಮಾಡಿದ ಶಿಫಾರಸ್ಸನ್ನನುಸರಿಸಿ, ಕಳೆದ ಸಾಲಿನಲ್ಲಿ ತಯಾರ್ಮಾಡಲ್ಪಟ್ಟದ್ದಾಗಿ ಹೇಳುತ್ತಾರೆ. ನಿಯಾಮಕ ಮೂಲಕ ಆಯಾ ಗವರ್ನಮೆಂಟುಗಳ ಮಂತ್ರಾಲೋಚಕ ಸಮಾಜಗಳಂ ವೃದ್ಧಿಪಡಿಸುವದಕ್ಕೆ ಅವಕಾಶ ಕೊಡಲ್ಪಟ್ಟಿದೆ, ಪರಂತು ಲಾರ್ಡ್ ಡಫರಿನ್‌ಸಾಹೇಬರಿಂದಲೂ ಅವರ ಮಂತ್ರಾಲೋಚಕ ಸಮಾಜದಿಂದಲೂ ಮಾಡಲ್ಪಟ್ಟ ಶಿಫಾರಸ್ಸಿನ ಮೇಲೆ ಕೆಲವುಮೆಂಬರುಗಳನ್ನು ಚುನಾವಣೆಮೂಲಕ ಯೋಗ್ಯಮಾಡುವದಕ್ಕೆ ಅವಕಾಶವಿಲ್ಲವು. ವೈಸ್‌ರಾಯಿಯವರ ಮತ್ತು ಆಯಾಸ್ಥಳಿಕ ಗವರ್ನಮೆಂಟುಗಳ ಮಂತ್ರಾಲೋಚಕ ಸಮಾಜಗಳಲ್ಲಿ ಆಕ್ಷೇಪಿಸುವ ಸ್ವಾತಂತ್ರ್ಯಮೆಂಬರುಗಳಿಗೆ ಉಂಟುಮಾಡಲ್ಪಡುವದು, ಮತ್ತು ಆಯಾಸ್ಥಳಿಕ ಗವರ್ನಮೆಂಟುಗಳ ಮತ್ತು ಇಂಡ್ಯಾಸರ್ಕಾರದ ಬಜೆಟ್‌ಲೆಕ್ಕಗಳು ಮಂತ್ರಾಲೋಚಕ ಸಮಾಜದ ವಿಚಾರಕ್ಕೆ ಇಡಲ್ಪಡುವವು.

ಲಂಡನ್, ೧೫ನೇ ಫೆಬ್ರವರಿ.—ಸರ್ ಜಾರ್ಜ್ ಚೆಸ್ನೀಯವರು ಹೌಸ್‌ಆಫ್ ಕಾಮನ್ಸ್ ಸಭೆಯಲ್ಲಿ ಒಂದುಶಕ್ಕೆ ಜವಾಬುಹೇಳುವಲ್ಲಿ ಕಾಶ್ಮೀರದೇಶದ ಮಹಾರಾಜರವರ ಹಕ್ಕುಗಳೆಲ್ಲವನ್ನೂ ಅವರ ಪ್ರಜೆಗಳ ಹಕ್ಕುದಾರಿಗಳಿಗೆ ಬಾಧಕವಿಲ್ಲದಂತೆ ನಡೆಸಿಕೊಡಬೇಕಾದವಿಷಯದಲ್ಲಿ ಗವರ್ನಮೆಂಟಿನವರು ಇಷ್ಟಪೂರ್ವಕರಾಗಿದಾರೆಂದು ತಿಳಿಸಿದರು, ಮಹಾರಾಜರವರನ್ನು ಅವರ ಹಿಂದಿನ ಸ್ಥಿತಿಗೆ ತರುವವಿಷಯದಲ್ಲಿ ಲಾರ್ಡ್ ಕ್ರಾಸ್‌ಯವರು ತಿಳಿಸಿದ ಅಭಿಪ್ರಾಯದ ದೆಸೆಯಿಂದ ಈಗಿನಸ್ಥಿತಿ ಬದಲಾಯಿಸಲ್ಪಡುವದೆಂದು ಕಾಣುತಿದೆ.

ಬರ್ಲಿನ್, ೧೪ನೇಫೆಬ್ರವರಿ —ಪ್ರಿನ್ಸ್ ಬಿಸ್ಮಾರ್ಕ್‌ಯವರು ಪ್ರಧಾನಸಂಸ್ಥಾನದ ಮಂತ್ರಿತ್ವವು ಬಿಟ್ಟುಬಿಡುವವರಾಗಿದಾರೆಂದು ದಟ್ಟಾಗಿ ಪ್ರವಾದವುಂಟಾಗಿದೆ.

ಪೀಟರ್ಸ್‌ಬರ್ಗ್, ೧೪ನೇ ಫೆಬ್ರವರಿ.—ಯುದ್ಧಖರ್ಚಗಳಂ ಕೊಡಬೇಕೆಂದು ರಷಿಯಾಸರ್ಕಾರದವರು ತುರ್ಕೀ ಸುಲ್ತಾನರನ್ನು ಬಲಾತ್ಕರಿಸುತಲಿದಾರೆ.

ಲಂಡನ್, ೧೪ನೇ ಫೆಬ್ರವರಿ.—ಈಗ ಇಂಗ್ಲೆಂಡ್ ಸರ್ಕಾರಕ್ಕೂ ಪೋರ್ಚುಗಲ್ ಸರ್ಕಾರಕ್ಕೂ ಒಂದುದೇಶದ ವಿಷಯದಲ್ಲುಂಟಾಗಿರುವ ತಕರಾರಿನ ವ್ಯವಸ್ಥೆಯಬಗ್ಗೆ ಪೋರ್ಚುಗಲ್ ಸರ್ಕಾರದ ಕಡೆ ಸ್ವಿಟ್ಜರ್ಲ್ಯಾಂಡ್ ಸರ್ಕಾರದವರು ಮಾಧ್ಯಸ್ಥವ ವಹಿಸುವವರಾಗಿದಾರೆ.

ಲಂಡನ್, ೧೫ನೇ ಫೆಬ್ರವರಿ.—ಇಂಡ್ಯಾದೇಶದ ಮಂತ್ರಾಲೋಚಕ ಸಭೆಗಳಂಕುರಿತ ಕಾನೂನನ್ನು ತಿದ್ದುಪಡಿಮಾಡುವ ಉದ್ದೇಶದಿಂದ ಲಾರ್ಡ್ ಕ್ರಾಸ್‌ಯವರು ರಚಿಸಿದ ಮಸವಿದಾಕಕ್ಕೆ ಸದರೀಸಭೆಯನ್ನು ವೃದ್ಧಿಪಡಿಸಿ, ಆಕ್ಷೇಪಿಸುವ ಅಧಿಕಾರವಂ ಕೊಡುವದಾಗಿ ಲಾರ್ಡ್ ಲ್ಯಾನ್ಸ್‌ಡೌನ್‌ಯವರು ಕೊಟ್ಟ ಭರವಸೆಯನ್ನು ನೆರವೇರಿಸತಕ್ಕದ್ದಾಗಿರುತಿದೆ.

ಲಂಡನ್, ೧೫ನೇ ಫೆಬ್ರವರಿ.—ಕೆಲವು ಸಂವತ್ಸರಗಳಹಿಂದೆ ರಷಿಯಾದೇಶಕ್ಕೂ ತುರ್ಕೀದೇಶಕ್ಕೂ ನಡೆದ ಯುದ್ಧ ಖರ್ಚಿನಬಗ್ಗೆ ಬಲ್ಗೇರಿಯಾ ಸರ್ಕಾರದವರು ಕೊಡತಕ್ಕಾಗಿ ಮೇಲಿರ್ದ ಬಾಕೀ ಹಣವನ್ನು ಈಗ ಕೊಡಬೇಕೆಂದು ರಷಿಯಾ ಸರ್ಕಾರದವರು ಬಲ್ಗೇರಿಯಾ ಸರ್ಕಾರವನ್ನು ತಗಾದೆ ಮಾಡುತಲಿರುವಂತೆ ಹೇಳಿಕೊಳ್ಳುತ್ತಾರೆ.

ಬರ್ಲಿನ್, ೧೦ ನೇ ಫೆಬ್ರವರಿ.—ಪ್ರಿನ್ಸ್ ಬಿಸ್ಮಾರ್ಕರವರು ತಮ್ಮ ಕೆಲಸವ ಬಿಡುವವರಾಗಿದಾರೆಂದು ಹುಟ್ಟಿದ ಪ್ರವಾದವು ಮರಳಿ ಬಲಪಡುತ ಬರುವದಲ್ಲದೆ ತಮ್ಮ ಸಾಮಾನುಗಳನ್ನು ಬರ್ಲಿನ್ ಪಟ್ಟಣದಿಂದ ತಮ್ಮ ಊರಲ್ಲಿರುವ ಅರಮನೆಗೆ ಸಾಗಿಸುತಲಿರುವದಾಗಿ ಸಹ ಹೇಳಿಕೊಳ್ಳುತ್ತಾರೆ.

ಪ್ಯಾರಿಸ್, ೧೫ ನೇ ಫೆಬ್ರವರಿ.—ಇದ್ದಲಿನ ಪುಡಿಯ ರಾಸಿಗೆ ಬೆಂಕಿ ಬಿದ್ದು ಗಣಿಯ ಒಳ ಕೆಲಸ ಮಾಡುತಲಿದ್ದವರ ಪೈಕಿ ಮೂವತ್ತಾಲ್ಕು ಮಂದಿಯ ಮುರ್ದೆಗಳು ಸೆಳೆಯಹಾಕಲ್ಪಟ್ಟವು.

ವಾಷಿಂಗ್ಟನ್, ೧೫ ನೇ ಫೆಬ್ರವರಿ —ಅಮೆರಿಕಾ ಖಂಡದೊಳಗಣ ಯುನೈಟೆಡ್ ಸ್ಟೇಟ್ಸ್ ಸರ್ಕಾರಕ್ಕೂ ಗ್ರೇಟ್ ಬ್ರಿಟನ್ ಸರಕಾರಕ್ಕೂ ನಡೆದ ಎಕ್ಸ್ಟ್ರಡಿಷನ್ ಟ್ರೀಟಿಗೆ (ಅಂದರೆ ಒಂದು ದೇಶದಲ್ಲಿ ದರೋಡೆ ನಡೆಸಿ ಮತ್ತೊಂದು ದೇಶಕ್ಕೆ ಓಡಿಹೋದರೆ ಅವನನ್ನು ಹಿಡದು ಒಪ್ಪಿಸುವಿಕೆ) ಯುನೈಟೆಡ್ ಸ್ಟೇಟ್ಸ್ ಸರ್ಕಾರದವರು ರುಜುಮಾಡಿದರು.

SUMMARY OF NEWS.

ವೃತ್ತಾಂತಸಂಗ್ರಹವು.

ಅಮೆರಿಕಾ ದೇಶದ ಕೆಲವು ಪ್ರದೇಶಗಳಲ್ಲಿ ಹೊಗೇಸೊಪ್ಪನ್ನು ಮಾರಕೂಡದೆಂದು ನಿಷ್ಕರ್ಷಿಸಿರುವರು.

ಬ್ರಹ್ಮದೇಶದಲ್ಲಿ ಐರಾವತಿ ನದೀ ದಡದಲ್ಲಿರುವ ಸಾವರಿ ಎಂಬ ಊರನ್ನು ದರೋಡೆಗಾರರು ಹೊಕ್ಕು ಬೆಂಕಿ ಹಾಕಿ ಜನರನ್ನೆಲ್ಲ ಸುಲಿಕೊಂಡದ್ದಲ್ಲದೆ ಊರೊಳಗಿನ ಸಾಹುಕಾರ ಜನರನ್ನು ಕಡಿದು ತುಂಡುತುಂಡು ಮಾಡಿ ಊರೆಲ್ಲಾ ಬೆಂಕಿ ಹಚ್ಚಿ ಸುಟ್ಟುಬಿಟ್ಟರು. ಇದರಂತೆ ಇನ್ನೂ ೩—೪ ಊರುಗಳನ್ನು ಸುಟ್ಟರೆಂದು ಸುದ್ದಿ ಯುಂಟು.—ಹಿಂ.

ಉತ್ತರ ಬರ್ಮ್ಹಾ, ಪಂಜಾಬ್ ದೇಶದ ಸರಹದ್ದು ಪ್ರಾಂತದ ಸೈನ್ಯ, ಅಸ್ಸಾಂ, ರಾವಲ್‌ಪಿಂಡಿ, ಪೆಷಾವರ್ ಮೊದಲಾದ ಸ್ಥಳಗಳಲ್ಲಿ ಅಜಮಾಯಿಷಿಬಗ್ಗೆ ಸಾರಿವಾಣಗಳನ್ನು ಕೆಲಸಗಳಿಗೆ ಬಳಸುವ ಪ್ರಯತ್ನ ನಡೆಸಲ್ಪಟ್ಟು ಅವು ಸುತರಾಂ ಸಾಧ್ಯವಾಗದೆಹೋಗಲು ಸಾರಿವಾಣಗಳೆಲ್ಲವು ಸೇರಲ್ಪಟ್ಟವಲ್ಲದೆ ಅವುಗಳ ವಾಸಕ್ಕಾಗಿ ಕಟ್ಟಲ್ಪಟ್ಟ ಮನೆಗಳೆಲ್ಲವು ಕಿತ್ತುಹಾಕಲ್ಪಟ್ಟು ಅವುಗಳ ಸಾಮಾನುಗಳೆಲ್ಲವು ಹರಾಜ್ ಮೂಲಕ ವಿಕ್ರಯಿಸಲ್ಪಟ್ಟವು.

ಮೂರು ಪ್ರೆಸಿಡೆನ್ಸಿಗಳಲ್ಲೂ ಕ್ಯಾಂಪ್ ಆಫ್ ಎಕ್ಸರಸೈಜ್, ಅಂದರೆ ಸೇನೆಗಳಂ ಒಂದು ಕಡೆ ಕೂಡಿಸಿ ವ್ಯೂಹಗಳಂ ಕಟ್ಟಿಸಿ ಯುದ್ಧಗಳು ಮಾಡಿಸುವ ಕಾರ್ಯದ ಖರ್ಚಿನ ಬಗ್ಗೆ ೧೮೯೦-೯೧ ನೇ ಇಸವಿ ಬಜೆಟ್ ಲೆಕ್ಕದಲ್ಲಿ ಇಂಡ್ಯಾ ಗವರ್ನಮೆಂಟಿನವರು ಒಂದು ಲಕ್ಷ ರೂಪಾಯಿಗಳು ಸೇರಿಸಿ ಇರುತ್ತಾರೆ. ಈ ಮೊತ್ತದ ಪೈಕಿ ಬಂಗಾಳೆಗೆ ೬೫೦೦೦ರೂ. ಮುಂಬೈಗೆ ೨೦,೦೦೦, ಮದರಾಸಿಗೆ ೧೫,೦೦೦ ರೂಪಾಯಿಗಳಂತೆ ಕೊಡಲ್ಪಡುವವು.

ವಾಯುವ್ಯದೇಶ ಮತ್ತು ಅಯೋಧ್ಯೆ ಈ ಪ್ರಾಂತಗಳಲ್ಲಿನ ನಿವಾಸಿಗಳು ಮ್ಯುನಿಸಿಪಾಲಿಟಿಗಳಲ್ಲೂ, ೧೮೯೧—೯೨ ನೇ ಇಸವಿಯಲ್ಲಿ ಚುನಾವಣೆ ಮೂಲಕ ಚೇರ್ಮನ್ ಮೆಂಬರುಗಳನ್ನು ಆರಿಸಿಕೊಂಡರು. ಮೆಂಬರುಗಳ ಚುನಾವಣೆ ವಿಷಯದಲ್ಲಿ ಅಭಿಪ್ರಾಯ ಕೊಡುವ ಬಾಧ್ಯತೆಯಂ ಪಡೆದಿರುವ ತಮ್ಮ ವಿಷಯದಲ್ಲಿ ಪ್ರಜೆಗಳು ವಿಶೇಷ ಅಕ್ಕರೆಯ ವಹಿಸಿರುತ್ತಾರೆಂದು ಲೆಫ್ಟಿನೆಂಟ್ ಗವರ್ನರವರು ತಿಳಿಸುತ್ತಾರೆ.

ಬಾಬೂ ಸುರೇಂದ್ರನಾಥ ಬಾನರ್ಜಿ ಯವರು ಬರುವ ತಿಂಗಳ ೭ ನೇ ತಾರೀಖಿನಲ್ಲಿ ಮುಂಬೈಯಿಂದ ಹೊರಡುವ ಹೊಗೇ ಹಡಗಿನಲ್ಲಿ ಇಂಗ್ಲೆಂಡ್ ದೇಶಕ್ಕೆ ಪ್ರಯಾಣ ಮಾಡಬೇಕೆಂದು ಯೋಚಿಸುತಲಿದಾರೆ. ನ್ಯಾಷನಲ್ ಕಾಂಗ್ರೆಸ್ ಸಮಾಜದ ಉದ್ದೇಶ ಪ್ರಯತ್ನಗಳಂ ಇಂಗ್ಲೆಂಡಿನಲ್ಲಿನ ಜನರಿಗೆ ತಿಳಿಸುವದಕ್ಕಾಗಿ ಸದರೀ ದೇಶದಲ್ಲೆಲ್ಲ ಕಡೆಗಳಲ್ಲೂ ಉಪನ್ಯಾಸ ಮಾಡಿ, ಸದರೀ ಸಮಾಜದ ವಿಷಯದಲ್ಲಿ ಸಹಾಯವು ಪಡೆಯಬೇಕೆಂಬದೇ ಮಿ॥ ಬಾನರ್ಜಿ ಯವರ ಮುಖ್ಯೋದ್ದೇಶವಾಗಿರುತಿದೆ. ಕಾಂಗ್ರೆಸ್ ಸಮಾಜದ ಸೆಕ್ರೆಟರಿಯವರಾದ ಮಿ॥ ಹ್ಯೂಂ ಎಂಬವರು ಸಹ ಅದೇ ಹಡಗಿನಲ್ಲಿ ಇಂಗ್ಲೆಂಡಿಗೆ ಪ್ರಯಾಣವಾಗುವರು.

EXTRACTS.

ಸೈಯದ್ ಅಹಮದ್ ಎಂಬವನಿಗೂ ಆತನ ಪ್ರಾಣಪತ್ನಿಯಾಳಿಗೂ ಕಲಹ ಹುಟ್ಟಿ ಆಕೆಯು ಪತಿಯ ಜೊತೆಯನ್ನು ಬಿಟ್ಟು ತನ್ನ ಸೋದರ ಮಾವನಲ್ಲಿ ಹೋಗಿ ಉಳಿದಳು. ಒಂದು ದಿವಸ ಆತನು ತನ್ನ ಪತ್ನಿಯನ್ನು ಕರೆದುಕೊಂಡು ಬರಬೇಕೆಂಬ ಇಚ್ಛೆಯುಳ್ಳವನಾಗಿ ಆಕೆಯ ಮಾವನ ಮನೆಗೆ ಹೋದದ್ದರಲ್ಲಿ, ಅವಳು ಎಷ್ಟುಪ್ರಯತ್ನ ಮಾಡಿದಾಗ್ಯೂ ಪತಿಯೊಡನೆ ಬರುವದಕ್ಕೆ ಸಮ್ಮತಿಸದ್ದರಿಂದ, ಅವಳನ್ನು ಜೊತೆಯ ಬರುವ ಇನ್ನು ತನಗೆ ಸಮಾಧಾನವಾಗದೆ ಅವಳ ಮೂಗನ್ನು ಕಸ್ರನೆ ಕಚ್ಚಿ ಮೂಳಿಯಾಗಿ ಮಾಡಿದನು. ಈ ಅವಮಾನವು ಪೋಲೀಸಿನವರ ಕಿವಿಗೆ ಬೀಳಲು, ಅವನನ್ನು ಹಿಡಿದು ಇದೇ ತಿಂಗಳ ೭ನೇ ತಾರೀಖಿನಲ್ಲಿ ಎಡಿಷನಲ್ ಪ್ರೆಸಿಡೆನ್ಸಿ ಕೋರ್ಟಿನ ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಪೊಲೀ

ಪ್ರಾರ್ಥನಾ ಸಮಯದಲ್ಲಿ ತುಂಡಾಗಿ ಬಿದ್ದ ಮೂಗು ಆತನ ತುಂಡಂಗಿಯ ಕಿಸೆಯಲ್ಲಿ ಕಾಗದದೊಳು ಸುರುಳಿಸುತ್ತಿಕೊಂಡದ್ದು ಸಿಕ್ಕಿತು. ಮೊಕದ್ದಮೆಯು ತೀರಿಕೆಯಾಗುವದಕ್ಕೆ ಮೂಳೆಯು ಆಸ್ಪತ್ರೆಯಲ್ಲಿ ಶಯನವಾಗಿರುವದರಿಂದ ಬಾಕಿಯಲ್ಲಿ ಇದೆ. ನೋಡಿದಿರಾ! ಗರ್ವದ ಫಲವು. "ಕೊಬ್ಬಿ ದೇವರಿಗೆ ದೊಣ್ಣೆ ಪೂಜೆ" ಎಂಬಂತೆ ಆಯಿತು. ಪುರುಷರಿಗಾಗಲಿ, ಸ್ತ್ರೀಯರಿಗಾಗಲಿ ಗರ್ವವೆಂಬದು ಇರಬಾರದು.—ಹ. ಸು.

ನಾಗಪುರದಲ್ಲಿ ನಾಲ್ಕನೆ ವರ್ಣಕ್ಕೆ ಸೇರಿದ ಜನಗಳಲ್ಲಿ ಒಂದು ಬಗೆ ಮದುವೆಯು ನಡೆಯುತದೆ. ತಂದೆಯು ಮಗಳನ್ನು ನೋಡಿ ನೀನು ಯಾರನ್ನು ಮದುವೆ ಮಾಡಿಕೊಳ್ಳುತ್ತೀಯೋ ಎಂದು ಕೇಳಿದಮೇಲೆ ಆಕೆಯು ತಾನು ಒಪ್ಪಿದ ಗಂಡನನ್ನು ಹೇಳಿದ ಕೂಡಲೆ ವರನ ತಂದೆಯು ಬಳಿಗೆ ಹೋಗಿ ನನ್ನ ಮಗಳು ನಿನ್ನ ಮಗನಲ್ಲಿ ಅನುರಕ್ತಳಾಗಿದಾಳೆಂದು ಹೇಳುತ್ತಾನೆ. ಆಗ ಅವನು ತನ್ನ ಮಿತ್ರ ಮಂಡಲಿಯ ಸಹಿತ ಹೋಗಿ ವಧುವನ್ನು ನೋಡಿ ಮಗನಿಗೂ ಆಕೆಯನ್ನು ತೋರಿಸಿ ಆತನು ಸಮ್ಮತಿಸಿದಪಕ್ಷದಲ್ಲಿ ವಧು ದಕ್ಷಿಣೆ ಎಂತ ೫ ಖುಡಗ' ದವಸವನ್ನು ಹೆಣ್ಣಿನ ಮನೆಗೆ ಕಳುಹಿಸುತ್ತಾನೆ. ನಿಶ್ಚಿತಾರ್ಥಗಳಾದ ದಿವಸದಲ್ಲಿ ವರನ ಮನೆಯವರು ಕುದುರೆಗಳ ಮೇಲೆ ಕೂತುಕೊಂಡು ಉತ್ಸವದಿಂದ ಹೊರಡುತ್ತಾರೆ. ಹೆಣ್ಣಿನ ಮನೆಯವರು ಅನ್ನದ ಉಂಡೆಗಳನ್ನು ಮಾಡಿಕೊಂಡು ಇವರನ್ನು ಹೊಡೆದು ಹಿಂದಕ್ಕೆ ಓಡಿಸಿ ವರನನ್ನು ಹಿಡಿದು ಕರೆದುಕೊಂಡು ಹೋಗುತ್ತಾರೆ. ಆಮೇಲೆ ಅತ್ತೆಯು ತನ್ನ ಅಳಿಯನನ್ನು ಹಿಡಿದುಕೊಂಡು ೫ ತುತ್ತು ಅನ್ನವನ್ನು ಆತನ ಬಾಯಿಗೆ ಹಾಕಿ ತುಗಿ ಅನಂತರದಲ್ಲಿ ಮುದ್ದಿಟ್ಟು ಕೊಡುತ್ತಾಳೆ. ಇಲ್ಲಿಗೆ ವಿವಾಹ ವಿಧಿಯು ಸಂಪೂರ್ಣವಾಯಿತು. ಅನಂತರದಲ್ಲಿ ಎಲ್ಲರೂ ಸೇರಿ ವಿಶೇಷವಾಗಿ ಭೋಜನಗಳನ್ನು ನೆರವೇರಿಸಿಕೊಂಡು ವಧೂವರರಿಗೆ ಆಶೀರ್ವಾದವನ್ನು ಮಾಡಿ ಹೊರಟುಹೋಗುತ್ತಾರೆ. ಅದುಮೊದಲ ವಧೂವರರಿಬ್ಬರೂ ದಂಪತಿಗಳಂತೆ ಬಾಳುವರು.

ಪದವಿ ಸಮಾರಂಭ ಕಾಲದಲ್ಲಿ ನಾಮ್‌ದಾರ್ ಲಾರ್ಡ್ ರೇ ಪ್ರಭುಗಳು ಒಂದತ್ಯುಪಯುಕ್ತ ಸೂಚನೆಯನ್ನು ಮಾಡಿರುವರು, ಅದೇನಂದರೆ.— ಒಂದು ಬೋರ್ಡ್ ಆಫ್ ಸ್ಟಡೀಜ್ ನೇಮಿಸತಕ್ಕದ್ದು. ಪರೀಕ್ಷಕರು ವಿದ್ಯಾರ್ಥಿಗಳ ಕಾಗದಗಳನ್ನು ಶೋಧಿಸುವದರಲ್ಲಿ ದುರ್ಲಕ್ಷ್ಯ ಮಾಡಿದರೆ ಅವರನ್ನು ಶಿಕ್ಷೆಗೆಯ್ಯುವ ಅಧಿಕಾರವು ಈ ಬೋರ್ಡಿಗಿರತಕ್ಕದ್ದು. ಅವರುಗಳು ಯಾರಾದರೂ ಅನ್ಯಾಯದಿಂದಾಗಲಿ ಪಕ್ಷಪಾತದಿಂದಾಗಲಿ ವರ್ತಿಸಿದರೆ ಅವರನ್ನಾದರೂ ತೆಗೆದುಹಾಕುವ ಅಧಿಕಾರವು ಬೋರ್ಡಿಗಿರತಕ್ಕದ್ದು. ನಾಮ್‌ದಾರ್ ದೊರೆಗಳವರ ಈ ಸೂಚನೆಯಮೇಲಿಂದ ಅವರು ಹಗಲಿರುಳು ಕಷ್ಟಪಟ್ಟು ಶರೀರಸಂಪತ್ತು, ಸಮಯ, ದ್ರವ್ಯ ಇತ್ಯಾದಿಗಳನ್ನು ಕಳಕೊಳ್ಳುವ ಈ ವಿದ್ಯಾರ್ಥಿಗಳ ಬಗ್ಯೆ ಅವರಲ್ಲೆಷ್ಟು ಅಂತಃಕರಣವದೆಂಬದು ಸ್ಪಷ್ಟವಾಗುತಿದೆ. ಇವರ ಸೂಚನೆಯಂತೆ ಬೇಗನೆ ಈ ಬೋರ್ಡನ್ನು ಸ್ಥಾಪಿಸಿದಲ್ಲಿ ಕಷ್ಟಪಡುವ ಬಡವಿದ್ಯಾರ್ಥಿಗಳಿಗೆ ಪರೀಕ್ಷಕರು ಯಮಸದೃಶರಾಗಿ ತೋರದೆ ತಮ್ಮ ಶ್ರಮಕ್ಕೆ ನ್ಯಾಯಕ್ಕನುಸರಿಸಿ ಫಲಪ್ರಾಪ್ತಿಯಾಗುವದೆಂದು ನಿಶ್ಚಿಂತತೆಯಿಂದ ಸಂತೋಷದಲ್ಲಿ ತಮ್ಮ ಕರ್ತವ್ಯ ಕರ್ಮವನ್ನು ನೆರವೇರಿಸ ತೊಡಗುವರು. ಇವಲ್ಲದೆ ಪರೀಕ್ಷಕರ ಪಕ್ಷಪಾತ, ಆಲಸ್ಯ, ಇತ್ಯಾದಿ ವಿಚಿತ್ರಗುಣಗಳ ಮೂಲಕ ವಿದ್ಯಾರ್ಥಿಗಳಿಗೆ ವ್ಯರ್ಥ ಖರ್ಚು ಮಾಡಬೇಕಾದ ಕಾಲ, ದೇಹಶ್ರಮ, ಇತ್ಯಾದಿ ಮೊದಲಿನಂತೆ ವ್ಯರ್ಥ ಹೋಗದೆ ನ್ಯಾಯದಿಂದ ಅದಕ್ಕೆ ತಕ್ಕ ಫಲ ದೊರೆಯುವದಿಷ್ಟೇಯಲ್ಲ. ವಿಚಿತ್ರ ಪರೀಕ್ಷಕರ ಆಲಸ್ಯವೂ ಪಕ್ಷಪಾತಾದಿ ಗುಣಗಳೂ ಇಲ್ಲವಾಗಿ ಪರೀಕ್ಷಕರು ಸಹ ಅಂತಾ ದುರ್ಗುಣವೆಂಬ ರೋಗದಿಂದ ಮುಕ್ತರಾಗುವರು. ಈಬಗ್ಯೆ ವಿದ್ಯಾರ್ಥಿಗಳು ನಾಮ್‌ದಾರರ ದಯೆಯನ್ನು ನೆನಸತಕ್ಕದ್ದು.—ಚಂದ್ರೋದಯ.

ಇದೇತಿಂಗಳ ತಾ|| ೧೨ನೇ ಬುಧವಾರದದಿನ ನಾಗದೇವಿರಸ್ತೆಯಲ್ಲಿ (ಫಿದಾಯಿ ಆಲಿ) ಎಂಬವನು ವಾಸಮಾಡಿಕೊಂಡಿದ್ದ ಒಂದು ಕೋಣೆಯಲ್ಲಿ ಅಗ್ನಿಪ್ರವೇಶವಾಯಿತು. ಆತನು ವಾಸಮಾಡಿಕೊಂಡಿದ್ದ ಕೋಣೆಮನೆಯು ೫ ಉಪ್ಪರಿಗೆಗಳುಳ್ಳದ್ದಾಗಿ ಬಡೋದೆಯ ಕರಿಂಬೈ, ಅಲಿಬೈ ಎಂಬ ಬೋಹರಿಗೆ ಸಂಬಂಧಿಸಿದ್ದಾಗಿತ್ತು. ಕೋಣೆಯಲ್ಲಿ ಉರಿದಂಥಬೆಂಕಿಯನ್ನು ಒಂದೆರಡು ನಿಮಿಷದಲ್ಲಿ ಟಬೀ ಮತ್ತು ರಂಗಿನಿಂದ ಹೊಳೆಯುತಿದ್ದ ಹಲಗೆಗಳು ತತ್ಕ್ಷಣವೇ ಆಕರ್ಷಿಸಿದ್ದರಿಂದ ಕಂಡಗಳು ಉತ್ಪನ್ನವಾಗಿ ನಾಲ್ಕುಕಡೆಗೂ ವಿಸ್ತರಿಸಿದ್ದಲ್ಲದೆ ಮೇಲಿನ ಅಂತಸ್ತುಗಳನ್ನು ಒಳಸಡಿಸಿ ಕಾಲುಘಂಟೆಯೊಳಗೆ ಇಡೀ ಮಾಡನ್ನು ಕೆಡಿಸಿತು. ದೊಡ್ಡಮನೆಯು ಪೈರಿಯೋಣದಿಂದ ಹತ್ತಿರಯಿದ್ದ ಮರದಿಂದಲೇ ಕಟ್ಟಿದ ಒಂದು ಚಿಕ್ಕಅಂಗಡಿಯೂ ಕ್ಷಣಮಾತ್ರದಲ್ಲಿ ಅಗ್ನಿಗವನವಾಯಿತು. ಬೆಂಕಿಹಿಡಿದ ಗಲ್ಲಿಯ ಬೀದಿಗಳು ಬಹಳ ಇಕ್ಕಟ್ಟಾದ್ದರಿಂದ ಅಗ್ನಿಗೆ ಬಳಿಪಟ್ಟಮನೆಯು ದಹಿಸುವಿಕೆಯು ಹತ್ತರದ ಅಡುಮನೆಗಳನ್ನು ಹಿಡಿಯಲು ದೊಡ್ಡಮನೆಯಗತಿಯನ್ನೇ ಹೊಂದಿದವು. ಅಗ್ನಿಯನ್ನು ಸಮಾಧಾನಪಡಿಸುವದಕ್ಕಾಗಿ ನಾಲ್ಕು ಫಯರ್ ಎಂಜಿನ್‌ಗಳು ಮರುದಿವಸ ಪ್ರಾತಃಕಾಲ ೬ ಘಂಟೆಯವರಿಗೂ ತಪ್ಪದೆ ಕೂಡುವಷ್ಟರವರೆಗೆ ಜಲಾಸ್ತ್ರಗಳನ್ನು ಎಸೆಯುತಿದ್ದವು. ಬೆಂಕಿಯ ಕಾಟದ ಮೃತಪಟ್ಟ ದುರ್ದೈವದನರ ಶರೀರವನ್ನು ಹುಡುಕುತ್ತಿರುವಾಗ್ಯೆ ಎರಡು ಭಂಗಾರದ ನತ್ತುಗಳೂ, ಎರಡು ಕೈಬಳೆಗಳೂ ಮತ್ತು ಒಂದು ಮಗುವಿನಕಾಲುಬಳೆಯೂ ಅಂತಿಷ್ಟು ಆಭರಣಗಳುಮಾತ್ರ ಸಿಕ್ಕಿತಲ್ಲದೆ ಶರೀರಗಳೆಲ್ಲ ಬೂದಿಗವಶವಾಗಿದ್ದವು. ಮರಣದ ಎಂಟುಜನರಲ್ಲಿ ಒಂದು ಹೆಂಗಸು ೫೦ ವರುಷಪ್ರಾಯದವಳೂ, ಇಬ್ಬರು ೬೦ ವರುಷ ಪ್ರಾಯದವರು ಮಾತ್ರವಲ್ಲದೆ ಅಗ್ನಿಕಾಟಕ್ಕೆ ಆಸ್ಪದವಾದ ಕೋಣೆಯ ವಾಸಿತನಾದ (ಫಿದಾಯಿ ಅಲ್ಲಿ ಅಬ್ದುಲ್‌ರಸೂಲ್) ಎಂಬವನಪ್ರಾಣವಲ್ಲದೆ ಹದಿನೆಂಟು ವರುಷಪ್ರಾಯದ ರಟಬಾಯಿ ಯೆಂಬಾಕೆಯೂ ಆತನ ಪುತ್ರನಾದ ೫ ವರುಷಪ್ರಾಯದ ಗುಲಾಂ ಆಲಿ ಎಂಬವನೂ ಆತನಪುತ್ರಿ ಎರಡುವರುಷಪ್ರಾಯದ ಅಸ್ಮಾಬಾಯಿ ಯೆಂಬ ಬಾಲೆಯೂ, ಆತನ ಕಿರೀ ಅಕ್ಬರ್ ಅಲಿ ಎಂಬ ಎರಡುತಿಂಗಳುಮಾತ್ರದ ಹಿಂದುಳಿದ ಪ್ರಾಕೂಪ, ಒಂದೇಕುಟುಂಬಸ್ತ್ರ ಇಹದ ಸುಖದುಃಖಗಳಿಂದ ಬಿಡುಗಡೆಯಾದರು.—ಹ.ಸು.

ಪಾರಸಿ ಪೋಲೀಸ್ ಇನ್ಸ್‌ಪೆಕ್ಟರ್.—ಕಳೆದ ಸ್ಟ್ರೈಕಾವಮೇಲೆ ಸಮರ್ಥರಾದ ಒಬ್ಬ ಪೋಲೀಸ್ ಸೂಪರಿಂಟೆಂಡೆಂಟನನ್ನು ಇಲ್ಲಿಡಬೇಕೆಂದು ನಮ್ಮ ದಿವಾನರಿಗೆ ತೋರಿ ಪಂಜಾಬ್ ವಾಯವ್ಯಪ್ರಾಂತ್ಯಗಳು ಬೊಂಬಾಯಿ ಇವುಗಳಿಗೆ ಸಮರ್ಥರಾದ ಒಬ್ಬ ಪೋಲೀಸ್ ಸೂಪರಿಂಟೆಂಡೆಂಟರನ್ನು ಕಳುಹಿಸಬೇಕೆಂದು ದಿವಾನರವರು ಬರೆದಿದ್ದಂತೆಯೂ, ಇದರಮೇಲೆ ಬೊಂಬಾಯಿನಲ್ಲಿ ೧೫೦ ರೂಪಾಯಿ ಸಂಬಳ ತೆಗೆದುಕೊಂಡು ಇನ್ಸ್‌ಪೆಕ್ಟರ್‌ಕೆಲಸದಲ್ಲಿದ್ದ ಒಬ್ಬ ಪಾರಸಿ ದೊಡ್ಡಮನುಷ್ಯರು ೫೦೦ ರೂಪಾಯಿ ಸಂಬಳದಮೇಲೆ ಇಲ್ಲಿಗೆ ಕಳುಹಿಸಲ್ಪಟ್ಟಂತೆಯೂ, ತಿಳಿಯಬರುತದೆ. ಇವರನ್ನು ನಾವು ನೋಡಿದೆವು. ಸುಮಾರು ೫೦ ವರುಷಗಳಿಗೆ ಕಮ್ಮಿಯಿಲ್ಲದ ವಯಸ್ಸುಳ್ಳವರಾಗಿದಾರೆ. ದೇಶಭಾಷೆಯಂತು ತಿಳಿಯದು. ಜನಗಳ ಶೀಲಸ್ವಭಾವಗಳನ್ನ ಮೊದಲೇತಿಳಿಯದು. ಮದರಾಸಿನವರುಬಂದರೆ ಜನಗಳು ನಿಂದಿಸ್ಯಾರೆಂಬದಾಗಿ ದಿವಾನರವರು ಇವರನ್ನು ಕರೆಸಿದರು. ಮದರಾಸಿನವರಿಗಿಂತಲೂ ಇವರು ಯಾವವಿಷಯದಲ್ಲಿಯೂ ಕಡಮೆಯಾಗಿರುವಂತೆ ತೋರುವದಿಲ್ಲ. ಇವಲ್ಲದೆ ಇವರನ್ನು ಈಪ್ರಾಂತ ಸೂಪರಿಂಟೆಂಡೆಂಟರಕೆಲಸಕ್ಕೆಂದು ಕರೆಸಿ ಕೆಲವುದಿವಸನೋಡಿದ ನಂತರ ಇವರನ್ನು ಫ್ರೆಂಚ್‌ರಾಕ್ಸ್‌ಗೆ ಕಳುಹಿಸಿದರು. ಅಲ್ಲಿ ಅವರು ಕಣ್ಣುಕಣ್ಣುಬಿಡುತಲಿದಾರೆ. ಮೆ|| ಸೈದುದೀನ್ ಸಾಹೇಬರವರು ಈದೇಶದ ಅನುಭವವನ್ನು ವಿಶೇಷವಾಗಿ ಉಳ್ಳವರಾಗಿಯೂ ಈ ಸಂಸ್ಥಾನದ ಎಲ್ಲಾಭಾಷೆಗಳಲ್ಲಿಯೂ ಪರಿಚಯವುಳ್ಳವರಾಗಿಯೂ, ಜನಗಳ ಶೀಲಸ್ವಭಾವಗಳನ್ನು ಬಲ್ಲವರಾಗಿಯೂ ಇದಾರೆ. ಈಗ ಈ ಪೋಲೀಸಿನ ಮೇಲ್‌ವಿಚಾರಣೆಗೆ ಇವರೇ ಉತ್ತಮರೆಂದು ತಿಳಿಯಬಹುದಿರಬಹುದು. ಈಪಾರಸೀ ದೊಡ್ಡಮನುಷ್ಯರನ್ನು ಕರೆಸುವದಕ್ಕೆ ಬದಲಾಗಿ ಇಲ್ಲಿನ ಜನಗಳನ್ನೇ ಏರ್ಪಾಡು ಮಾಡಿಯಿದ್ದರೆ ಎಷ್ಟೋ ಉಚಿತವಾಗಿತ್ತು. ಆದರೆ ಇಲ್ಲಿನವರೆಲ್ಲರು ತುಂಟರು. ಪರದೇಶೀಯರೆಲ್ಲರೂ ಸಜ್ಜನರೆಂದು ಭಾವಿಸಿಕೊಂಡು ದಿವಾನರವರು ಪ್ರವರ್ತಿಸುತ್ತಾರೆ ಈದೇಶೀಯರ ದೌರ್ಭಾಗ್ಯದಿಂದ ಶ್ರೀಮನ್ಮಹಾರಾಜರವರೂ ಈ ವಿಷಯದಲ್ಲಿ ಪ್ರವರ್ತಿಸುವದಿಲ್ಲ. (ಅಂತೂ ಇಂತೂ ಕುಂತೀಮಕ್ಕಳಿಗೆರಾಜ್ಯವಿಲ್ಲ) ಎಂಬಂತೆ ನಮ್ಮದೇಶದ ಹಣವನ್ನು ಪರದೇಶೀಯರು ತಿನ್ನುವದಕ್ಕೆ ಅವಕಾಶವಾಯಿತು. ಇದರಿಂದ ದಿವಾನರಿಗೆ ಯಾವಸಾದಕ್ಯವೂ ಇಲ್ಲ ಜನಗಳಿಗೆಅಸಂತುಷ್ಟಿಯು ಇನ್ನೂ ವಿಶೇಷವಾಗಿ ಆಗುವದಕ್ಕೆಮಾತ್ರ ಅವಕಾಶವಾಯಿತು. ಪರ್ವಕ್ಕೆ ಕೊನೆಗೂ ಲೋಪಬರುವದೋ ಅಥವಾ ದಿವಾನರವರಿಗೆ ಒಳ್ಳೇಬುದ್ಧಿಯು ಹುಟ್ಟುವದೋ ನೋಡಬೇಕಾಗಿದೆ—ವ್ಯ. ಚಿ.

ಈಗ್ಯೆ ನಾಲ್ಕೈದು ಸಂವತ್ಸರಗಳ ಮೊದಲು ಮೈಸೂರು ಸಂಸ್ಥಾನದ ದೊಡ್ಡ ಉದ್ಯೋಗಗಳಿಗೆಲ್ಲ ಅನ್ಯದೇಶೀಯರನ್ನು ಕರೆಯಿಸೋಣವೂ ಅರ್ಹರಾಗಿಯೂ ಸಮರ್ಥರಾಗಿಯೂ, ಇರತಕ್ಕ ಸ್ವದೇಶೀಯರನ್ನು ನೌಕರಿಗಳಿಂದ ತಪ್ಪಿಸಿ ಅವರಿಗೆ ಪ್ರಯೋಜನ ಹಾನಿಯನ್ನುಂಟುಮಾಡಿ, ಅವರ ಕೆಲಸಗಳನ್ನು ಆಪ್ತರಾದ ಅನ್ಯ ದೇಶೀಯರಿಗೆ ಕೊಡೋಣವೂ, ಸ್ವಲ್ಪಮಟ್ಟಿಗೆ ಉಪಶಾಂತವಾಗಿದ್ದವು. ಈಗ ದಿವಾನರವರ ಕಾಲಪರಿಮಿತಿಯ ನಿಬಂಧನೆಯು ತಪ್ಪಿ, ಕಾಲನಿಯಮವಿಲ್ಲದೆ ಹೋಗಿ, ಸಂಬಳವು ೩೦೦೦ ರೂಪಾಯಿಗಳಿಂದ, ೪೦೦೦ ರೂಪಾಯಿಗಳ ತನಕ ಜಾಸ್ತಿಯಾದವರಿಂದ ಇನ್ನು ತಮ್ಮ ಪದವಿಯು ಅನುಪಹತವಾದದ್ದೆಂಬ ಭಾವನೆಯೊಡನೆ ತಮ್ಮ ಪೂರ್ವ ಸಿದ್ಧಾಂತವನ್ನೇ ಮರಳಿ ಅವಲಂಬಿಸಲುಪಕ್ರಮಿಸಿದ್ದಾರೆಂತ ತಿಳಿಯುತ್ತದೆ. ದಿವಾನರವರ ವರ್ತನವನ್ನು ಕುರಿತು ಯಾರಾದರು ಆಕ್ಷೇಪಿಸಿದರೆ ಅವರ ಮೇಲೆ ಕೆಲಹುಡುಗರಾದ ಕೆಲವರು ಅಸಂತುಷ್ಟರಿಂದ ಅನಿರೂಪಕವಾಗಿ ಮಾಡಲ್ಪಡುವ ವ್ಯರ್ಥ ಬದನಾಮಿ ಎಂದು ಹೇಳುತ್ತ ಸವರಿಸಿ ಬಿಡುತ್ತಾರೆ. ಇದಕ್ಕೆ ಮೈಸೂರಲ್ಲಿ ನಮ್ಮ ವರ್ತಕರ ಗಲಾಟೆಯೇ ನಿದರ್ಶನವಾಗಿರುತ್ತದೆ. ಈ ಸಂಸ್ಥಾನದಲ್ಲಿ ದೊಡ್ಡ ನೌಕರಿಗಳಿಗೆ ಲಾಯಖಾದವರನೇಕರಿದ್ದಾಗ್ಯೂ ಪೋಲೀಸ್ ಸೂಪರಿಂಟೆಂಡೆಂಟ್ ಕೆಲಸಕ್ಕೆ ಅರ್ಹರಾದವನೊಬ್ಬರೂ ದೊರೆಯಲಿಲ್ಲವೆಂದು ಒಬ್ಬರನ್ನು ಮುಂಬೈಯಿಂದ ಕರೆಯಿಸಿ ಅವರಿಗೆ ಒಂದೇ ದಫಾ ೫೦೦ ರೂಪಾಯಿಗಳನ್ನು ಕೊಟ್ಟರಂತೆ, ಗತವಾರದಲ್ಲಿಯೆ ತಿಳಿಸಲ್ಪಟ್ಟದೆಯಷ್ಟೆ. ಇವರು ದೇಶಜನ ಮರ್ಯಾದೆಗಳಿಗೆ ಶುದ್ಧ ಹೊಸಬರಾಗಿರುತ್ತಾರೆ. ಒಳದೇಶಗಳಲ್ಲಿ ನೌಕರಿಗಳಿಲ್ಲದೆ, ವಿದ್ಯಾವಂತರಾದವರನೇಕರು ಹೇಬಾಡುತ್ತ ಜೀವನ ಸಂಪಾದನಾರ್ಥ ಅನ್ಯ ದೇಶಗಳಿಗೆ ಹೋಗುತ್ತಿರುವಾಗ್ಯೆ ಅನ್ಯತ್ರ ನಾಲಾಯಖಾಗಿ ಪೆನ್ಶನ್ ಪಡೆದು ಕೆಲಸವಿಲ್ಲದಿರತಕ್ಕ ವೃದ್ಧ ಜಂಬುಕಗಳನ್ನೆಲ್ಲ, ಅವರೊಳಿಲ್ಲದ ಪ್ರತಿಮೆಗಳನ್ನೆಲ್ಲ ಆರೋಪಿಸುತ್ತ ಮಹಾರಾಜರ ಸಮ್ಮತಿಯನ್ನು ಪಡೆದು ನೌಕರರನ್ನಾಗಿ ಮಾಡುವಂತೆ ಕಾಣುತ್ತದೆ. ಮುಖ್ಯವಾಗಿ ವಿಶೇಷ ವೇತನವೂ ಜವಾಬ್ದಾರಿಯೂ, ಪ್ರಜಾನುರಾಗವೂ, ಇರಬೇಕಾದ ನೌಕರಿಗಳನ್ನೆಲ್ಲ ಅನ್ಯರಿಗೆ ಕೊಡುವದರಿಂದ ಮೈಸೂರು ದೇಶೀಯರ ಸಂಕಟಕ್ಕೆ ಬಹಳ ಅವಕಾಶ ಉಂಟಾಗಿರುವಂತೆ ಅಲ್ಲಿಯ ಪತ್ರಿಕೆಗಳ ಮೂಲಕ ತಿಳಿಯಬರುತ್ತದೆ. ಈಗ ಮತ್ತೊಂದು ವಿಷಯದಿಂದ ಅಲ್ಲಿನವರಿಗೆಲ್ಲ ಇನ್ನು ಸ್ವಲ್ಪ ಅಸಮಾಧಾನ ಜಾಸ್ತಿಯಾಗಿರುವಂತೆ ತೋರುತ್ತದೇನಂದರೆ:—ಆ ಸಂಸ್ಥಾನದ ನೌಕರರ ಪೈಕಿ ಬಹಳ ಹಳಬರಾಗಿಯೂ, ವಿದ್ಯಾವಂತರಾಗಿಯೂ, ಮಾನ್ಯರಾಗಿಯೂ, ಇರುವ ಲೆಜಿಸ್ಲೇಟಿವ್ ಸೆಕ್ರೆಟರಿಯಾದ ಮೆ|| ವೆಂಕಟವರದಯ್ಯಂಗಾರ್ ಬಿ. ಎ. ಎಂ. ಎಲ್. ಯವರು ಬರುವ ಎಪ್ರಿಲ್ ತಿಂಗಳ ಲಾಗಾಯಿತು ಪೆನ್ಶನ್ ಮೇಲೆ ನಿವೃತ್ತರಾಗಬೇಕೆಂದು ಬಲಾತ್ಕರಿಸಲ್ಪಟ್ಟು ಅದಕ್ಕೆ ಪೂರ್ವಭಾವಿಯಾಗಿ ಎರಡು ತಿಂಗಳ ರಜಾ ಕೊಡಲ್ಪಟ್ಟದ್ದರಿಂದ ಅವರು ಕಳೆದ ಸೋಮವಾರದ ದಿವಸ ಅಂದರೆ ಫೆಬ್ರುವರಿ ೩ ನೇ ತಾರೀಖಿನ ದಿನ ಬೆಳಗ್ಯೆ ತಮ್ಮ ಚಾರ್ಜನ್ನು ಮೆ|| ಮೀನಾಕ್ಷಿ ಅಯ್ಯರ್ ಬ್ಯಾರಿಸ್ಟರ್ ಅಟ್‌ಲಾ ಎಂಬವರಿಗೆ ಒಪ್ಪಿಸಿದರೆಂದು ತಿಳಿಯಲಾದೆವು. ಮೆ|| ವೆಂಕಟವರದಯ್ಯಂಗಾರ್ಯವರು ೫೫ ವರುಷಗಳ ವಯಸ್ಸಾದವರಾಗಿದ್ದು ೩೩ ವರ್ಷಗಳ ಸರ್ವಿಸ್ಸಿನವರಾಗಿದ್ದರೂ, ಶರೀರ ಪಾಟವದಲ್ಲಿಯೂ ಬುದ್ಧಿ ಶಕ್ತಿಯಲ್ಲಿಯೂ, ಕಾರ್ಯಜಾಗರೂಕತೆಯಲ್ಲಿಯೂ, ಪ್ರಮಾಣಿಕತೆಯಲ್ಲಿಯೂ ಇವರು ಅಸಮರ್ಥರೆಂದು ಭಾವಿಸಿದವರಿಗಿಂತ ಕಡಿಮೆಯಾಗಿಲ್ಲವೆಂದು ಅಲ್ಲಿಯ ಬಾತಮಿದಾರನೊಬ್ಬನು ಬರೆಯುತ್ತಾನೆ. ಇವರು ನೌಕರಿಮಾಡಲಿಕ್ಕೆ ಇನ್ನೂ ಶಕ್ತರಾಗಿದ್ದಾಗ್ಯೂ ಇವರನ್ನು ನಿವೃತ್ತಿಸಬೇಕಾದ ಆವಶ್ಯಕತೆಯು ಅಲ್ಲಿಯ ಸರಕಾರದವರಿಗೇನು ಉಂಟಾಯಿತೋ ನಾವರಿಯೆವು. ಬ್ರಿಟಿಷ್ ಅಮಲತಯಲ್ಲಿ ನೌಕರಿ ಮಾಡಿ, ಪೆನ್ಶನ್ ಪಡೆದು, ಬಹುಕಾಲ ನಿರ್ವ್ಯಾಪಾರರಾಗಿದ್ದ ಅಜ್ಜಂದಿರಿಗೆಲ್ಲ ಯೌವನವನ್ನಾರೋಪಿಸಿ, ಅವರಿಗೆಲ್ಲ ಮರಳಿ ನೌಕರಿಕೊಟ್ಟು ಇಟ್ಟಿರುವಾಗ್ಯೆ ಅವರಿಗಿಂತ ಕಡಮೆ ವಯಸ್ಸಿನವರನ್ನು ಯಾತಕ್ಕೆ ಕೆಲಸಬಿಡುವಂತೆ ಬಲಾತ್ಕರಿಸಬೇಕೋ ತಿಳಿಯಲಿಲ್ಲವು. ಪ್ರಾಯಶಃ ಮೆ|| ವೆಂಕಟವರದಯ್ಯಂಗಾರ್ಯರ ಸ್ವಾತಂತ್ರ್ಯವೂ, ಮನೋಧೈರ್ಯವೂ, ಅಲ್ಲಿಯ ಅಧಿಕಾರಿಗಳಿಗೆ ಸರಿಬೀಳದಿರಬಹುದೆಂದು ತೋರುತ್ತದೆ. ಇವರಂತು ನಾವು ಪ್ರತ್ಯಕ್ಷವಾಗಿ ನೋಡದಿದ್ದರೂ, ಗಾಂಭೀರ್ಯವೂ, ನಿಸ್ಪೃಹತೆಯೂ ವಿಶೇಷ ಪ್ರಜ್ಞೆಯೂ, ವಿದ್ಯೆಯೂ, ಐಶ್ವರ್ಯವೂ ಉಳ್ಳವರೆಂದು ಕೇಳುತ್ತೇವೆ. ಇವರು ಸ್ವಪ್ರಯೋಜನಕ್ಕಾಗಿ, ಒಬ್ಬರನ್ನು ರಾಳು ಕಟ್ಟತಕ್ಕವರಲ್ಲವಂತೆ. 'ಪರೋಪಸರ್ಪಣೆ'ಯು ಇವರಿಗೆ ಅಪರಿಚಿತವಾದದ್ದು. ಆದದರಿಂದಲೇ ಅನರಿಷ್ಟದ್ದು ನಿರೋಧನೆಯಾಗಿ ಎಣಿಸಲ್ಪಟ್ಟರು.

ಪರಂತು ಮೆ|| ವೆಂಕಟವರದಯ್ಯಂಗಾರ್ಯವರು ಬಹಳ ಸಮರ್ಥರೆಂತಲೂ, ಮೈಸೂರು ದರ್ಬಾರಿಗೆ ಲಾಯಖಾದವರಲ್ಲೊಬ್ಬರಾಗಿದ್ದರೆಂತಲೂ ಅನ್ಯದೇಶೀಯರ ಪ್ರಾಬಲ್ಯದಲ್ಲಿ ಉಪೇಕ್ಷಿಸಲ್ಪಟ್ಟವರಲ್ಲಿ ಇವರೂ ಒಬ್ಬರೆಂತಲೂ ತಿಳಿಯಬರುತದೆ. ಇವರು ನೌಕರಿಯಲ್ಲಿದ್ದದ್ದು ಅಂತಃ ಸರಕಾರದವರಿಗೆ ಆಲೋಚನೀಯಾಂತವಾಗಿದ್ದರಬಹುದು. ಹೀಗೆ ಕೆಲಸ ಮಾಡುವದಕ್ಕೆ ಶಕ್ತರಾಗಿಯೂ ಸಮರ್ಥರಾಗಿಯೂ ಇರತಕ್ಕವರನ್ನೆಲ್ಲ ಬಲಾತ್ಕಾರದಿಂದ ನಿವೃತ್ತಿಸಿ, ಅವರಿಗೆ ತಿಂಗಳ ಗಟ್ಟಲೆ ೪೦೦—೫೦೦ ರೂಪಾಯಿಗಳಂತೆ ಪೆನ್ಶನ್‌ಗಳನ್ನು ಕೊಡುತ್ತಾ ಅವರಿಗೆಬದಲಾಗಿ ಹೊಸಬರು ಮಾಡಲ್ಪಡುವದಕ್ಕೆ ಇಷ್ಟಮಿತ್ರರಿಗೆಲ್ಲ ಪೂರ್ವದವರಿಗಿಂತ ಜಾಸ್ತಿ ಸಂಬಳಗಳನ್ನು ಕೊಡುತ್ತಲೂ ಬಂದರೆ, ಇನ್ನು ಅತ್ಯಲ್ಪಕಾಲದಲ್ಲಿ ಮೈಸೂರು ಸಂಸ್ಥಾನದ ಹುಟ್ಟುವಳಿಯು ನೌಕರ ಮಾನೇರ ತಲಬಿಗೂ ಪೆನ್ಶನಿಗೂ ಸರಿಹೋಗಿ, ಅವುಗಳಿಗಾಗಿ ದೇಶವನ್ನು ಮಹಾರಾಜರು ಅವರವರಿಗೆ ಹಂಚಿಕೊಟ್ಟು ತಮಗೆಸಲ್ಲುವ ೧೫ ಲಕ್ಷ ರೂಪಾಯಿಗಳಿಗೆ ಮಾರ್ಗಾಂತರವನ್ನು ಹುಡುಕಬೇಕಾಗುವದೆಂಬದರಲ್ಲಿ ಸ್ವಲ್ಪಮಾತ್ರವೂ ಸಂಶಯವಿಲ್ಲವು. ಇವಲ್ಲದೆ ಆಸಂಸ್ಥಾನದಸ್ಥಿತಿಯು ಶೋಚನೀಯವಾಗುವದೆಂದು ಹೆದರುತ್ತೇವೆ.—ಹವ್ಯಕ ಸುಬೋಧ.

Bangalore.—Printed and published at the Karnatic Press, No. 108, Srinivasa Mandiram Road Pettah—1890

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XVII.] BANGALORE—MONDAY, MARCH 3, 1890. [No. 9.

ಸಂಪುಟ ೧೭.] ಬೆಂಗಳೂರು:—ಸನ್ ೧೮೯೦ನೇ ಇಸವಿ ಮಾರ್ಚ್ ೩ ನೇ ತಾರೀಖ್ ಸೋಮವಾರ. [ಸಂಖ್ಯೆ ೯

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಪೋಸ್ಟ್ ಆಫೀಸ್	ಸ್ಥಳದವರಿಗೆ	ಪರಸ್ಥಳದವರಿಗೆ
	ಪೋಸ್ಟೇಜು	ಹಾಸಲಾಗಿ
ಮುಂಗಡವಾಗಿ ಕೊಟ್ಟವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡವಾಗಿ ಕೊಟ್ಟವರಿಗೆ	4—0—0	5—0—0
ತರುವಾಯ ,,	5—0—0	6—0—0

[illegible]

ಪ್ರಕಟನೆಯ ರಿವಾಜ್.

ಮೊದಲನೆಯ ಸಲ ಪಕ್ತಿ ಒಂದಕ್ಕೆ 0—2—0

ಎರಡನೆಯ ಸಲ ಪಕ್ತಿ ಒಂದಕ್ಕೆ 0—1—0

[illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

☞ Price including Postage Rs 5 6-0

ವೈದ್ಯಸಾರ ಸಂಗ್ರಹ.

[illegible]

ಇದರ ಕ್ರಯ—ಪೋಸ್ಟೇಜ್ ಮತ್ತು ಅಂಚೆ ಹಾಲ್ ಡೇಟಿಲ್ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್,

[illegible] 41ನೇ ನಂ ಮನೆ.

ADVERTISEMENTS.

ನೋಟೀಸ್

ಅದ್ಭುತವಾದ ಒಂದು ಔಷಧ

[illegible]

Sole Agents for India

NAYLOR, SON, GRIMES, & CO.,

Wholesale Depot, 15, Clive Street, Calcutta

[illegible]

[illegible]

ನೋಟೀಸ್.

ಇದರಿಂದ ನಮ್ಮ ಚಂದಾದಾರರಿಗೂ ಇತರರಿಗೂ ತಿಳಿಸುವದೇನೆಂದರೆ —

[illegible]

ಬೆಂಗಳೂರು, ತಾ ೩ನೇ ಮಾರ್ಚ್ ೧೮೯೦.	ಟಿ. ಸಿ. ಶ್ರೀನಿವಾಸಾಚಾರ್ ಪ್ರೊಪ್ರೈಟರ್. ಕರ್ಣಾಟಕ ಪ್ರಕಾಶಿಕಾ.

ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪನಿ.

ರೈಲ್ವೆ ಕಂಟ್ರಾಕ್ಟುದಾರರಿಗೆ ಇದರಿಂದ ತಿಳಿಸಲ್ಪಡುವದೇನೆಂದರೆ.—

[illegible]

Bangalore City Municipality

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ

ನಂಬರ್ [illegible]

NOTICE.

[illegible]

ಬೆಂಗಳೂರು, [illegible] ೧೮೯೦.

P. N. KRISHNAMURTI,
President,
City Municipal Commission.

[illegible]

P. N. KRISHNAMURTI,
President,
City Municipal Commission.

ನೋಟೀಸು.

[illegible]

ಇಸ್ತಿಹಾರ್.

ಸನ್ ೧೮೭೭ನೇ ಇಸವಿ ಸೆಪ್ಟಂಬರ್ ೨೮ನೇ ಮುರ್ಕ್ಕಾ ೩೨೩೩—೧೯ನೇ ನಂ. ಇಸ್ತಿಹಾರಿನಲ್ಲಿ ವಿಧಾಯಕವಾಗಿರುವ ರೂಲ್ಸಿನ ಪ್ರಕಾರ ಇನಾಂ ಗ್ರಾಮಗಳ ಮಾಲೀಕರು ತಮ್ಮ ಗ್ರಾಮಗಳ ವಿಚಾರಕೆ ಪ್ರತ್ಯೇಕ್ಯ ಒಬ್ಬ ಏಜಂಟನ್ನ ನೇಮಿಸಬೇಕೆಂದು ಇರುವವರಿಂದಲೂ, ಮತ್ತು ಈಡಿಸ್ಟ್ರಿಕ್ಟಿನ ಬಹುಶಃ ಎಲ್ಲಾ ಇನಾಂ ಗ್ರಾಮಗಳಲ್ಲಿಯೂ ಏಜಂಟರುಗಳು ನೌಕರರು ಆಗದೆ ಇರುವದಾಗಿ ನಮ್ಮ ನೋಟೀಸಿಗೆ ಬಂದು ಇರುವದರಿಂದಲೂ ಇದರಿಂದ ಜೋಡಿ ಕಾಯಂ ಗುತ್ತಾ ಮತ್ತು ಸರ್ವಮಾನ್ಯ ಇನಾಂದಾರರಿಗೆ ತಿಳಿಯಪಡಿಸುವದೇನಂದರೆ:—

ಈ ತಾರೀಖ್ ಲಾಗಾಯತು ಒಂದು ತಿಂಗಳ ವಾಯಿದೆ ಕೊಡಲ್ಪಟ್ಟಿರುತ್ತೆ. ಆ ವಾಯಿದೆಯೊಳಗೆ ಇನಾಂದಾರ್ರು ತಮ್ಮ ತಮ್ಮ ಗ್ರಾಮಗಳಿಗೆ ಒಬ್ಬ ಏಜಂಟನ್ನ ನೇಮಕಮಾಡಿ ಅಂತಾ ಏಜಂಟಿನ ಹೆಸರನ್ನು ತಾಲ್ಲೂಕ್ ಅಮಲ್‌ದಾರ್ರುಗಳಿಗೆ ತಿಳಿಸಬೇಕು. ಹಾಗೆ ನೌಕರರು ಮಾಡುವದಕ್ಕೆ ತಪ್ಪಿದಲ್ಲಿ ಸದರೀ ನೋಟಿಫಿಕೇಷನ್ ೨ ನೇ ರೂಲ್ಸಿಪ್ರಕಾರ ಡಿ. ಕ. ಸಾಹೇಬರವರು ಹೊಂದಿರುವ ಅಧಿಕಾರವನ್ನ ಚಲಾಯಿಸಿ ಒಬ್ಬ ಏಜಂಟನ್ನ ನೌಕರಿಯ ಮಾಡುವದರಲ್ಲಿ ಬಾಪೇತು. ಅಂತಾ ಏಜಂಟ ನಡೆಸುವ ಎಲ್ಲಾ ಕೆಲಸಗಳು ಇನಾಂದಾರ್ರು ಖುದ್ದು ತಾವೇ ನಡೆಸಿದಂತೆ ಎಣಿಸಲು ಬದ್ಧರಾಗಿರುತ್ತಾರೆ. ಈ ರೂಲ್ಸ್ ಮತ್ತು ಈ ಇಸ್ತಿಹಾರಿನ ಅಮಲ್ ಒಂದು ಗ್ರಾಮದಲ್ಲಿ ಒಬ್ಬ ಇನಾಂದಾರನಿಗಿಂತ ಜೆಚ್ಚಾಗಿ ಇನಾಂದಾರ್ರು ಯಾ ಹಿಸ್ಸೇದಾರ್ರು ಇರುವ ಗ್ರಾಮಗಳಿಗೆ ಅನ್ವಯಿಸುತ್ತೆ.

ತಾ|| ೨೮ನೇ ಫೆಬ್ರವರಿ ೧೮೯೦ನೇ ಇಸವಿ, ಬೆಂಗಳೂರು.

P. N. KRISHNAMURTI,
Deputy Commissioner

ಹರಾಜ್ ನೋಟೀಸ್.

ಸನ್ ೧೮೯೦ನೇ ಇಸವಿ ಮಾರ್ಚಿ ಮಾಹೆ ೩—೮ನೇ ತಾರೀಖ್‌ಗಳಲ್ಲಿ ದಕ್ಷಿಣಮಹರಾಷ್ಟ್ರ ರೈಯಿಲ್ವೆ ಕಂಪೆನಿಯ ಹರಾಜ್‌ದಾರರು, ಬೆಂಗಳೂರು ಪೇಟೆನಲ್ಲಿರುವ ಕಂಪೆನಿಯ ಕಟ್ಟಡಗಳ ಬಳಿ ಕೆಲವು ಸಾಗುವಾನಿ ಮತ್ತು ಕಾಡು ದೂಲಗಳು, ಹಳೇದೇವದಾರಿ ಸ್ಲೀಪರ್‌ಗಳು, ಅಂದರೆ ತಾವಿಗಳು, ಅನುಪಯುಕ್ತವಾದ ಆಯುಧಗಳು, ಸಾಮಾನುಗಳು, ಮತ್ತು ಕಂಪೆನಿಗೆ ಸೇರಿದ ಸ್ಕಿಡ್ ಮತ್ತು ಎಕ್ಸ್ ಟಿಪ್ಪಿಂಗ್ ವ್ಯಾಗನ್ಸ್ ಎಂಬ ಬಂಡಿಗಳನ್ನು ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸುವರು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MARCH 3, 1890.

೧೮೯೦ನೇ ಮಾರ್ಚಿ ತಾ|| ೩ನೇ ಸೋಮವಾರ.

ALCHEMY.

ಇಂಡ್ಯಾ ದೇಶದೊಳು ರಸವಾದ ವಿಷಯದಲ್ಲಿ ಬಹು ಪ್ರಾಚೀನಗಳಾದ ಪುರಾತನ ಗ್ರಂಥಗಳು ಕೆಲವು ಇರುತ, ಅವುಗಳಲ್ಲಿ ತಿಳಿಸಲ್ಪಟ್ಟಿರುವ ವಿಧಾನದಿಂ ಸ್ವರ್ಣವ ಮಾಡಿ, ಏಕಕಾಲದಲ್ಲಿ ಐಶ್ವರ್ಯವಂತರಾಗಿ ಬಹುವಿಧ ಭೋಗಭಾಗ್ಯಗಳನ್ನನುಭವಿಸಬೇಕೆಂಬ ದುರಾಶಾ ಪೀಡಿತರಾಗಿ ಅನೇಕರು ತಮಗೆ ಈಶ್ವರ ದತ್ತವಾದ ಸರ್ವಸ್ವವ ಹೋಗಲಾಡಿಸಿಕೊಂಡು, ತಾವು ಭಿಕ್ಷುಕರಾಗುವದಲ್ಲದೆ ತಮ್ಮಂತೆ ದುರಾಶಾ ಪೀಡಿತರಾದ ಇತರರನ್ನು ಸಹ ಕೆಡಿಸಿಯೂ ಕೆಡಿಸುತಲೂ ಇರುವದು ಪ್ರಸಿದ್ಧ ವಿಷಯವಾಗಿರುತಿದೆಯಷ್ಟೆ. ಈ ವಿಷಯದಲ್ಲಿ ಹುಟ್ಟಿರುವ ಶಾಸ್ತ್ರಗಳೇ ಸುಳ್ಳೆಂದು ಕೆಲವರು, ಅವುಗಳಲ್ಲಿ ಪ್ರಯೋಗಿಸಲ್ಪಟ್ಟಿರುವ ಶಬ್ದಗಳ ಗೂಢಾರ್ಥವನ್ನರಿಯಲಾರದೆ ಶಾಸ್ತ್ರಾರ್ಥದಲ್ಲಿ ಅನ್ಯಥಾ ಜ್ಞಾನದಿಂ ತಾತ್ಪರ್ಯ ಪ್ರವರ್ತಕರು ಕೆಡುತ್ತಾರೆಯೇ ಹೊರತು ಶಾಸ್ತ್ರ ಸುಳ್ಳಲ್ಲವೆಂದು ಕೆಲವರು, ಈ ರೀತಿ ಅಭಿಪ್ರಾಯಗಳು ಭಿನ್ನಭಿನ್ನಗಳಾಗಿಯೂ ಅನುಭವಾನುಗುಣಗಳಾಗಿಯೂ ಇರುತಿವೆ. ಹಿಂದೂಗಳ ಶಾಸ್ತ್ರಗಳ ಪೈಕಿ ಮಂತ್ರ, ಜ್ಯೋತಿಷದಲ್ಲಿ ಪ್ರಶ್ನಭಾಗ, ರಸವಾದವಿನ್ನು ಮೊದಲಾದ ಕೆಲವು ಶಾಸ್ತ್ರಗಳಲ್ಲಿ ಇಂಗ್ಲಿಷನವರಿಗೆ ಯಾವಾಗಲೂ ಅಪ್ರಮಾಣ್ಯ ಜ್ಞಾನವೆಂಬದು ಪ್ರಸಿದ್ಧ ವಿಷಯವಾಗಿದ್ದಾಗ್ಯೂ ಅವರು ವಿಷಯ ಶೋಧನೆಯಲ್ಲಿ ದೃಢತರವಾದ ಪ್ರವೃತ್ತಿಯೂ, ಅದಕ್ಕೆ ಆವಶ್ಯಕಗಳಾದ ಬುದ್ಧಿಕೌಶಲ್ಯವೂ ಸಹನೆಯೂ ಉಳ್ಳವರಾದುದರಿಂದ ಅವರು ಕೈಗೊಳ್ಳುವ ಕಾರ್ಯಗಳು ಪ್ರಾಯಶಃ ಸಫಲಗಳಾಗದೆ ಹೋಗುವದಿಲ್ಲವೆಂಬದಕ್ಕೆ ನಿದರ್ಶನವಾಗಿ ಈಚೆಗೆ ತಿಳಿಯಬಂದ ಒಂದಂಶವು ಲಂಡನ್ ಪಟ್ಟಣದೊಳು ಪ್ರಕಟಿಸಲ್ಪಡುವ ಪ್ರಸಿದ್ಧವಾದ ಕೋರ್ಟ್ ಜರ್ನಲ್ ಎಂಬ ವಾರ ಪತ್ರಿಕೆಯು ತಿಳಿಸುತಿದೇನಂದರೆ—

ಪ್ರಸಿದ್ಧ ಶಾಸ್ತ್ರಜ್ಞರಾದ ದೊಡ್ಡ ಮನುಷ್ಯರೊಬ್ಬರು ಒಂದು ಪರ್ಯಕಾಲದ ಮೊದಲು ಭಂಗಾರದಂತಿರುವ ಒಂದು ಲೋಹದ ಪರಿಶೀಲನೆ ಮಾಡುತಲಿದ್ದು ಕಡೆಗೆ ಪ್ರಾಯಶಃ ಅವರ ಉದ್ದೇಶವು ಸಂಪೂರ್ಣವಾಗಿ ಕೈಗೂಡಿದಂತಿವೆ. ಅವರು ಕೆಲವು ಲೋಹಗಳ ವಿಭಾಗ ಪೂರ್ವಕ ವಾದಪರಿಶೀಲನೆಯಂ ಮಾಡುತ್ತಿರುವಲ್ಲಿ ದೈವಾತ್ ಅವರಲ್ಲಿ ಒಂದುವ ಮಾರ್ಗ ಸಿಕ್ಕಿ ಅದು ಸಾಧ್ಯವೆಂದು ಅನುಭವ ಪೂರ್ವಕ ತಿಳಿಯಬಂದ ಮೇಲೆ, ಅದೇ ರೀತಿ ಒಂದು ಲೋಹವಂ ಮಾಡಿದರು ಲೋಹ ಪರೀಕ್ಷೆಯಲ್ಲಿ ಸಂಪೂರ್ಣ ಜ್ಞಾನವುಳ್ಳವರಿಗೆ ಸಹ ಅದು ಭಂಗಾರವಲ್ಲವೆಂದು ಹೇಳಶಕ್ಯವಾಗಿದೆ. ತೂಕದಲ್ಲಿ ಭಂಗಾರಕ್ಕೆ ಸಮನಾಗಿರುತಿದೆ ನೋಡುವದಕ್ಕೆ ಭಂಗಾರದಂತೆಯೇ ಇದೆ. ಭಂಗಾರದ ಪರೀಕ್ಷೆಗಳನ್ನು ಅದರ ವಿಷಯದಲ್ಲುಪಯೋಗಿಸಿ ನೋಡುವಲ್ಲಿ ಅದು ಭಂಗಾರವಲ್ಲವೆಂದು ಹೇಳುವದಕ್ಕೆ ಅವಕಾಶವಿಲ್ಲವು. ಸಾಮಾನ್ಯವಾದ ಖರ್ಚಿನಲ್ಲಿ ಈ ಲೋಹವನ್ನು ಮಾಡುವದಕ್ಕಾಗುತಿದೆ, ಎಂಬದು.

ಏತೇನ ಸದರೀ ಶಾಸ್ತ್ರಜ್ಞರ ಪ್ರಕೃತವು ಯತ್ನವು ನಿರಾಕ್ಷೇಪಣೀಯವಾಗಿ ಸಂಪೂರ್ಣ ಫಲದಾಯಕವಾಗುವಪಕ್ಷಕ್ಕೆ ಹಿಂದೂಗಳ ಶಾಸ್ತ್ರಗಳಲ್ಲೊಂದು ಜೀರ್ಣೋದ್ಧಾರ ವಾಯಿತೆಂಬ ವಾರ್ತೆಯು ನಮಗೆ ಸಂತೋಷಜನಕವಾಗಿದ್ದಾಗ್ಯೂ ಇದರಿಂದ ಮುಂದುಂಟಾಗಬಹುದಾದ ಅನರ್ಥ ಪರಂಪರೆಗಳಂ ಕುರಿತು ನಾವು ಚಿಂತಿಸಬೇಕಾಗಿದೆ. ಈ ಅಂಶಗಳನ್ನೆಲ್ಲ ಸರ್ವಜ್ಞರಾದ ನಮ್ಮ ಮಹರ್ಷಿವರ್ಯರು ಚೆನ್ನಾಗಿ ಆಲೋಚಿಸಿಯೇ ಈ ವಿಷಯದಲ್ಲಿ ತಾವು ರಚಿಸಿದ ಗ್ರಂಥಗಳ ನೈಜಾರ್ಥವಂ ಗುರುಮುಖದಿಂದಲ್ಲದೆ ಗ್ರಹಿಸಲು ಯಾರಿಗೂ ಸಾಧ್ಯವಲ್ಲದೆ ಮಾಡಿರುತ್ತಾರೆ ಇಂತಾ ಅವರ ಉದ್ದೇಶವನ್ನರಿಯಲಾರದೆ ಕೆಲವರು ಸದರೀ ಕಾರ್ಯದಲ್ಲಿ ಪ್ರವೇಶಿಸಿ ಆತ್ಮನಾಶನವನ್ನುಂಟುಮಾಡಿಕೊಳ್ಳುತ್ತಾರೆ. ಬೇರೆ ಕೆಲವರು ಅಂತಾ ನಾಶನಕ್ಕೆ ಬುದ್ಧಿಹೀನರಾದ ಕೆಲವರಂ ಗುರಿಮಾಡಿ ತನ್ಮೂಲಕ ತಾವು ಕ್ಷಣಿಕಗಳಾದ ಭೋಗಗಳನ್ನನುಭವಿಸಿ ಕಡೆಗೆ ಬಹುಜನ ದೂಷಣ ತಿರಸ್ಕಾರಗಳಿಗೆ ಗುರಿಯಾಗಿ ನಾನಾವಿಧ ಪರಿಭವಗಳನ್ನನುಭವಿಸುತ್ತಾರೆಂಬದಕ್ಕೆ ಈ ದೇಶದಲ್ಲೀ ದೃಷ್ಟಾಂತಗಳು ಹೇರಳವಾಗಿರುತಿವೆ.

SHAVING OF HINDU WIDOWS

ಬಾಲ್ಯದಲ್ಲಿ ವೈಧವ್ಯಕ್ಕೆ ಗುರಿಯಾಗುವಂತವರಿಗೆ ಮುಂಡನ ಮಾಡಿಸುವವರಮೇಲೆ ಕ್ರಿಮಿನಲ್ ದಾವೆ ತಂದು, ಆ ವಿಷಯದಲ್ಲಿ ನಿರ್ಧಾರವಾದ ಒಂದು ವ್ಯವಸ್ಥೆಯಂ ಪಡೆಯುವ ತನಕ ಸದರೀ ಮೊಕದ್ದಮೆಯನ್ನು ನಡೆಸಬೇಕಾದ್ದಲ್ಲದೆ ಮೊದಲು ದಾವಾ ಮಾಡಲ್ಪಡುವ ಮೊಕದ್ದಮೆಯು ಬ್ರಾಹ್ಮಣ ಜಾತಿಯವರಿಗೆ ಸೇರಿದ್ದಾಗಿರಬೇಕೆಂಬ ಷರತ್ತಿನಮೇಲೆ, ಸದರೀ ವ್ಯವಹಾರಕ್ಕೆ ಹಿಡಿಯಬಹುದಾದ ವಿಶಿಷ್ಟ ಖರ್ಚುಗಳನ್ನೂ ತಾವು ವಹಿಸುವದಾಗಿ ಮುಂಬೈಯಲ್ಲಿನ ನೇಟಿವ್ ದೊಡ್ಡ ಮನುಷ್ಯರೊಬ್ಬರು ಹೇಳುವಂತೆ ಒಂದಾನೊಂದು ಪತ್ರಿಕೆ ತಿಳಿಸುತಿದೆ ಉಪಪನ್ನರಾದವರು ಮಾಡಬೇಕಾದ ಬಹುವಿಧ ಧರ್ಮ ಕಾರ್ಯಗಳಲ್ಲಿಗೂ ಒಂದೆಂದು ಸದರೀ ದೊಡ್ಡಮನುಷ್ಯರು ಭಾವಿಸಿರುವಂತೆ ಎಣಿಸುವೆವು.

ವಿಧವಾಮುಂಡನವಿಷಯದೊಳು ಪ್ರವರ್ತಿಸಿರುವ ಶಾಸ್ತ್ರಗಳಲ್ಲಿ ಮುಂಡನಮಾಡಿಸಬೇಕಾದ್ದು ವಿಧಿಚೋದಿತವೆಂದು ಹೇಳುವಂತವರಿಗೂ, ಶಾಸ್ತ್ರದಲ್ಲಿ ಹಾಗಿಲ್ಲವೆಂದು ವಾದಿಸುವಂತವರಿಗೂ ಸಂಪೂರ್ಣವಕಾಶ ವುಂಟುಮಾಡಲ್ಪಟ್ಟಿರುವದರಿಂದ ಉಭಯಪಕ್ಷೀಯವರೂ ಪುರಾತನಗಳಾದ ತಮ್ಮ ತಮ್ಮ ಸಂಪ್ರದಾಯಾನುಸಾರವಾಗಿ ಆವಿಷಯದಲ್ಲಿ ನಡೆಸುತಬರುತಲಿದ್ದಾರೆ ಶಾಸ್ತ್ರಕ್ಕೂ ವೃದ್ಧಾಚಾರಕ್ಕೂ ಬದ್ಧರಾಗಿ ಹಿಂದೂಗಳು ನಡೆಸುವ ಕಾರ್ಯಗಳು ತಕ್ಸೀರ್‌ಕರವೆಂದು ಅವರಮೇಲೆ ತರಲ್ಪಡುವ ಕ್ರಿಮಿನಲ್‌ದಾವೆಗಳನ್ನು ಯಾವ ಕಾನೂನಿನ ಆಧಾರದಮೇಲೆ ಯಾವಕೋರ್ಟಿನವರು ಅಂಗೀಕರಿಸಿ ಅವರನ್ನು ಯಾವರೀತಿಯಲ್ಲಿ ದಂಡಿಸುವರೋ ನಾವರಿಯೆವು. ಹಿಂದೂಸಮಯಾಚಾರ ಪರಿಷ್ಕರಣಕಾರ್ಯ ಪ್ರವರ್ತಕರೆನ್ನಿಸಿಕೊಂಡು ಮನಸ್ವೀ ವರ್ತಿಸುತಲಿರುವ ಕೆಲವರು ಪೀಡಿಸುತಲಿರುವ ಬಹುವಿಧ ಭ್ರಾಂತಿಗಳೊಳ್ಳಿದೂ ಒಂದು ವಿಪಾದಪಟ್ಟೊಂದು ದಾರಾಳವಾಗಿ ಹೇಳುವೆವು. ಈ ಸಮಯಾಚಾರ ಪರಿಷ್ಕರಣ ಕಾರ್ಯದಲ್ಲಿ ಪ್ರವರ್ತಿಸಿರುವಂತವರು ಶಬ್ದತಃ ಅನ್ಯರಿಗೆ ಕೇವಲ ಉಪದೇಶಕರಾಗಿ ಬೋರ್ಡುಪಟ್ಟ ವೃತ್ತಾಂತಪತ್ರಿಕೆಗಳಮೂಲಕವಾಗಿಯೂ ಇತರವಿಧದಿಂದಲೂ ಅನ್ಯರ ಪ್ರಕಟನೆಗಳಿಗೆ ತಾವು ವಿಷಯರಾಗಬೇಕೆಂಬದೇ ಅವರ ಮುಖ್ಯೋದ್ದೇಶವೆಂದು ಕಾಣುತಿದೆಯೇ ಹೊರತು ತಾವು ಉಚಿತವೆಂದು ನಂಬುವಮಾರ್ಗದಲ್ಲಿ ಸ್ವಾನುಷ್ಠಾನಪೂರ್ವಕ ಅನ್ಯರನ್ನೂ ಅನುಯಾಯಿಗಳಾಗಿ ಮಾಡಿಕೊಳ್ಳಬೇಕೆಂಬ ಪ್ರಯತ್ನವೇ ಈಜನರಲ್ಲಿ ಮೃಗ್ಯವಾಯಿತು ಆದುದರಿಂದ ಇಂತಾ ಜನರನ್ನು ವೇಷಧಾರಿಗಳೆಂದು ಯಾರುತಾನೆ ಹೇಳದಿರುವರು, ಅದಕ್ಕಾಗಿ ಅವರು ಚಿಂತಿಸಿ ಏನು ಪ್ರಯೋಜನ?

Occasional Notes
ನೈಮಿತ್ತಿಕ ವಿಷಯನ್ಯಾಸ.

The salt revenue—ಚಾಲತಿ ಸರ್ಕಾರ ಸಾಲಿನಲ್ಲಿ ಮೊದಲು ಹತ್ತು ತಿಂಗಳಿಗೆ ನಮ್ಮಕ್ ಬಾಬಿನಲ್ಲಿ ಕಳೆದ ಸಾಲಿಗಿಂತಲೂ ೨೪,೧೨,೦೦೦ ರೂಪಾಯಿಗಳು ಜಾಸ್ತೀ ದುಟ್ಟುವಳಿಯಾಗಿರುತಿದೆ ಒಟ್ಟು ಹುಟ್ಟುವಳಿಯು ೬,೫೫,೬೫,೦೦೦ ರೂಪಾಯಿಗಳು.

Discovery of a peculiar creeper.—ಕಡೂರು ಡಿಸ್ಟ್ರಿಕ್ಟಿನ ಸಬ್ ಓವರ್‌ಸಿಯರರೊಬ್ಬರು, ವೈದ್ಯ ಇಲಾಖೆಯ ಅಧಿಕಾರಿಗಳ ತಿಳುವಳಿಕೆಗೆ ಒಂದಂಶವನ್ನು ತಂದಿರುತ್ತಾರೇನಂದರೆ,—ಒಂದು ತರಹಬಳ್ಳಿ ಇರುವಂತೆಯೂ, ಅದರ ಎಲೆಗಳನ್ನು ಬಾಯಲ್ಲಿ ಹಾಕಿಕೊಂಡು ಅಗೆದರೆ, ಒಂದೆರಡು ಘಂಟೆಗಳ ಕಾಲ, ಸಿ, ಉಪ್ಪು, ಹುಳಿ, ಖೈ, ಖಾರ ಮೊದಲಾದ ರಸಗಳು ನಾಲಿಗೆಗೆ ಹತ್ತುವದಿಲ್ಲವೆಂಬದು. ಈಶ್ವರಸೃಷ್ಟಿಗೆ ಒಳಪಟ್ಟ ಪದಾರ್ಥಗಳಲ್ಲಿ ಎಷ್ಟೋವಿಧ ವಿಚಿತ್ರಗುಣಗಳಿರುತಿವೆ.

Gold in European state treasuries—ಇಂಗ್ಲಾಂಡ್‌ದೇಶದೊಳು ಫಾಯಿಷ್ ಮಾಡಲ್ಪಡುವ ಸ್ಪ್ಯಾಟರ್ ರಿವ್ಯೂ ಎಂಬ ಪತ್ರಿಕೆ ತಿಳಿಸುವಪ್ರಕಾರ ಅಮೇರಿಕಾದೇಶದ ಯುನೈಟೆಡ್ ಸ್ಟೇಟ್ಸಿ ಸಂಸ್ಥಾನದ ಖಜಾನೆಯಲ್ಲಿ ೪೦ ಕೋಟಿ ರೂಪಾಯಿಗಳ ಕ್ರಯಬಾಳುವಷ್ಟು ಭಂಗಾರದ ನಾಣ್ಯಗಳು ಹಾಜರಿರುತಿವೆ. ಫ್ರಾನ್ಸ್‌ದೇಶದಲ್ಲಿ ೫೦ ಕೋಟಿ ರೂಪಾಯಿಗಳ ಭಂಗಾರದ ನಾಣ್ಯಗಳು, ಜರ್ಮನೀ ಮತ್ತು ರಷಿಯಾ, ಈ ಉಭಯ ಸಂಸ್ಥಾನಗಳ ಖಜಾನೆಗಳಲ್ಲೂ ೨೫ ಕೋಟಿ ರೂಪಾಯಿಗಳ ಭಂಗಾರದ ನಾಣ್ಯಗಳಿರುವಂತೆ ಕಂಡುಬರುತಿವೆ.

Madras Railway fares—ಈ ತಿಂಗಳ ಗುರ್ರೀ ತಾರೀಖ್ ಮೊದಲು ಮದರಾಸ ರೈಯಿಲ್ವೆಯಲ್ಲಿ ಮೂರನೇತರಗತಿ ಪ್ರಯಾಣಸ್ಥರ ಟಿಕ್ಕೆಟ ದರದಲ್ಲಿ ಕಾಲಾಣೆಗೆ ಕಡಿಮ್ಮೆ ಬೀಳುವವೊ ಬಲಗುಗಳೆಲ್ಲವು ಕಾಲಾಣೆಯಾಗಿ ಲೆಕ್ಕಮಾಡಲ್ಪಡುವದೆಂದು ಮದರಾಸ್ ರೈಯಿಲ್ವೆ ಕಂಪೆನಿಯವರು ಫಾಯಿಷ್‌ಮಾಡಿರುತ್ತಾರೆ ಈ ಹೊಸ ಏರ್ಪಾಡಿನದೆಸೆಯಿಂದ ಸದರೀ ಕಂಪೆನಿಯವರಿಗೆ ಸಾಲೀಯಾನಾ ಲಕ್ಷಾಂತರ ರೂಪಾಯಿಗಳು ಕಡುದರೆ ಯೆಂಬವರಲ್ಲಿಷ್ಟುಮಾತ್ರವು ಸಂಶಯವಿಲ್ಲವು

Desecration.—ಗುಂಟೂರು ಡಿಸ್ಟ್ರಿಕ್ಟ್ ಹೆಡ್ ಅಸಿಸ್ಟೆಂಟ್ ಕಲೆಕ್ಟರವರು ಒಂದು ಹಿಂದೂ ದೇವಾಲಯವಂ ಬಲಾತ್ಕಾರ ಪೂರ್ವಕ ಪ್ರವೇಶಿಸಿದ ಬಗ್ಯೆ ಅಲ್ಲಿನ ಹಿಂದೂ ಜನರು ಅವರಮೇಲೆ ಸಗ್ಗದ ಮೊಕದ್ದಮೆ ತಂದಿರುವದಲ್ಲದೆ ಅವರ ನಡತೆಯಂ ಕುರಿತು ಗವರ್ನಮೆಂಟಿಗೆ ಅರ್ಜಿ ಬರೆದುಕೊಂಡಿರುವದಾಗಿ ತಿಳಿಯಬರುತಿದೆ ಈ ಕಾಲದಲ್ಲಿ ಹಿಂದೂಗಳ ಜಾತಿ ಮತಾಚಾರಗಳು ಕೆಡಿಸುವ ವಿಷಯದಲ್ಲಿ, ಅದೇ ಉದ್ದೇಶವೊಡನೆ ಇಲ್ಲಿಗೆ ಬರುವ ಮಿಷನರಿಗಳಗಿಂತಲೂ ಸಿವಿಲ್ಯನ್ ಅಧಿಕಾರಗಳ ಉಚ್ಛೃಂಖಲ ಪ್ರವೃತ್ತಿಯನ್ನು ನಿರೋಧಿಸತಕ್ಕವರಿಲ್ಲವಾಯಿತು.

LOCAL AND PROVINCIAL NEWS
ಸ್ವದೇಶಮತ್ತುತಾಲ್ಲೂಕುವೃತ್ತಾಂತಗಳು.

Another noble visitor.—ಇನ್ನು ಸ್ವಲ್ಪದಿನಗಳೊಳಗಾಗಿ ಪುದುಕೋಟೆ ಅರಸರವರು ಈ ಪ್ಯೂರಿಗೆ ದಯಮಾಡಿ ಇಲ್ಲಿ ಕೆಲವು ದಿನಗಳ ಕಾಲವಿದ್ದು ಇಲ್ಲಿಂದ ಮೈಸೂರಿಗೆ ಪ್ರಯಾಣವಾಗುವರೆಂದು ಒಂದಾನೊಂದು ಪತ್ರಿಕೆ ತಿಳಿಸುತಿದೆ.

The Inspector General of Police—ಈ ಸಂಸ್ಥಾನದ ಪೊಲೀಸ್ ಇನ್ಸ್‌ಪೆಕ್ಟರ್ ಜನರಲವರಾದ ಮ|| ರಿಕ್ಕೆಟ್ಸ್ ಯವರು ಸರ್ಕ್ಯೂಟಿ ಹೋಗಿದ್ದರಷ್ಟೆ ಸದರೀಯವರು ತಮ್ಮ ಪರಿವಾರದೊಡನೆ ಕಳೆದತಿಂಗಳ ೨೮ನೇ ತಾರೀಖಿನಲ್ಲಿ ಈ ಪ್ಯೂರಿಗೆ ವಾಪಸ್ ಬಂದರು

The Parsee Assistant Commissioner of Police—ಮೈಸೂರು ಡಿ|| ಪೊಲೀಸ್ ಅಸಿಸ್ಟೆಂಟ್ ಕಮಿಷನರಾದ ಮ|| ಫ್ರಾಂಜಿಯವರು ತಾನು ದಸ್ತಗಿರಿಮಾಡಿದ ಒಂದು ಕ್ರಿಮಿನಲ್ ಮೊಕದ್ದಮೆಯಲ್ಲಿ ಸಾಕ್ಷ್ಯಕೊಡುವದಕ್ಕಾಗಿ ಕಲ್ಕತ್ತಾಗೆ ಹೋಗಿದಾರೆಂದು ತಿಳಿಯಬರುತಿದೆ

The Holi feast—ಈ ಸಲದ ಹೋಳಿಕೋತ್ಸವವು ಕರ್ಣಕಠೋರವಾದ ತಮ್ಮಟೆಧ್ವನಿ ಮತ್ತು ವಾಕ್ಯಾಟ್ಟದನದಿಂದೊಡಗೂಡಿ ಪ್ರಾರಂಭವಾಗಿ ನಡೆದುಬರುತಿದೆ ಬರುವ ಬೃಹಸ್ಪತಿವಾರದದಿನ ಕಾಮದಹನವೆಯುವದು. ಆ ಬಗ್ಯೆ ವಿಶಿಷ್ಟ ಇಲಾಖೆಗಳಿಗೂ ಆದಿನ ರಜಾ ಕೊಡಲ್ಪಡುವದು.

Agents to Inam Villages—ಈ ಪತ್ರಿಕೆಯ ಮತ್ತೊಂದುಭಾಗದಲ್ಲಿ ಫಾಯಿಷ್ ಮಾಡಲ್ಪಟ್ಟಿರುವ ಇಸ್ತಿಹಾರಿನ ದೆಸೆಯಿಂದ ಇನಾಂ ಗ್ರಾಮಗಳಿಗೆ ಇನಾಂದಾರರು ಒಂದುತಿಂಗಳೊಳಗಾಗಿ ಏಜಂಟರುಗಳನ್ನು ನಿಯಮಿಸಬೇಕೆಂತಲೂ ಹಾಗೆಮಾಡಲು ತಪ್ಪಿದರೆ ಡಿ|| ಡೆಪ್ಯುಟಿಕಮಿಷನರವರು ಈ ವಿಷಯದಲ್ಲಿ ತಮಗೆ ಉಂಟುಮಾಡಲ್ಪಟ್ಟಿರುವ ಅಧಿಕಾರವ ಚಲಾಯಿಸಿ ತಾವೇ ಏಜಂಟರುಗಳಂ ನೌಕರರ್ಮಾಡುವರೆಂತಲೂ ಪ್ರಕಟಿಸಿರುತ್ತಾರೆ.

The Mahant's Appeal.—ತಿರುಪತಿ ಮಹಂತರವರು ಚಿತ್ತೂರು ಡಿಸ್ಟ್ರಿಕ್ಟ್ ಕೋರ್ಟ್‌ನಲ್ಲಿ ತಮಗೆ ವಿಧಿಸಲ್ಪಟ್ಟ ದಂಡನೆಯ ಮೇಲೆ ಮದರಾಸ್ ಹೈಕೋರ್ಟಿಗೆ ಅಪೀಲ್ ಮಾಡಿಕೊಂಡಿರುತ್ತಾರೆ ಯಷ್ಟೆ ಸದರೀ ಮೊಕದ್ದಮೆಯ ಅಪೀಲ್ ವಿಚಾರಣೆಯು ಕಳೆದ ತಿಂಗಳ ೨೬ ನೇ ತಾರೀಖಿನಲ್ಲಿ ಪ್ರಾರಂಭಿಸಲ್ಪಡುವದೆಂದು ಮದ

ರಾಸ್ ಪತ್ರಿಕೆಗಳಮೂಲಕ ತಿಳಿದು ಪ್ರಕಟಿಸಿದ್ದೆವು. ಪರಂತು ಈಚೆಗೆ ಸದರೀ ಮೊಕದ್ದಮೆಯನ್ನು ಕುರಿತ ಪ್ರಸ್ತಾವ ಮದರಾಸ್ ಪತ್ರಿಕೆಗಳಲ್ಯಾವದರಲ್ಲಿಯೂ ಕಂಡುಬರಲಿಲ್ಲವಾಗಿ ಆ ವಿಷಯವಂ ಕುರಿತ ವರ್ತಮಾನವನ್ನು ತಿಳಿಸಲು ಈ ವಾರದಲ್ಲಿ ನಾವು ಅಶಕ್ತರಾಗಿರುತ್ತೇವೆ.

Changes in the train service.—ದಕ್ಷಿಣ ಮಹರಾಷ್ಟ್ರ ರೇಯಿಲ್‌ವೇಯಲ್ಲಿ ಈತಿಂಗಳ ಗುರ್ರೇತಾರೀಖು ಮೊದಲು ಗಾಡಿಗಳು ಹೊರಡುವಕಾಲ ಬದಲಾಯಿಸಲ್ಪಟ್ಟಿರುತಿದೆ ಹ್ಯಾಗಂದರೆ,— ಪ್ರತಿದಿನವಲ್ಲೂ ರಾತ್ರಿ ೮ಘಂಟೆ ೩೫ನಿಮಿಷಗಳಿಗೆ ಪುನೇಯಿಂದ ಮೆಯಿಲ್‌ಗಾಡಿಹೊರಟು ಮೂರನೇದಿನ ಮಧ್ಯಾಹ್ನ ಒಂದೂಕಾಲು ಘಂಟೆಗೆ ಬೆಂಗಳೂರಿಗೆಬಂದು ಇಲ್ಲಿ ನಾಲ್ವತ್ತು ನಿಮಿಷಗಳಕಾಲವಿದ್ದು ೧ ಘಂಟೆ ೫೫ ನಿಮಿಷಕ್ಕೆ ಇಲ್ಲಿಂದಹೊರಟು ರಾತ್ರಿ ೮ ಘಂಟೆ ೮ನಿಮಿಷಕ್ಕೆ ಮೈಸೂರು ಸೇರುತಿದೆ. ಮೈಸೂರಿಂದ ಬೆಳಗ್ಗೆ ೭¼ ಘಂಟೆಗೆ ಹೊರಟು ಮಧ್ಯಾಹ್ನ ೧ ಘಂಟೆ ೪೫ ನಿಮಿಷಕ್ಕೆ ಬೆಂಗಳೂರಿಗೆ ಬಂದು ಇಲ್ಲಿಂದ ೩ ಘಂಟೆ ೧೫ ನಿಮಿಷಕ್ಕೆ ಹೊರಟು ಮೂರನೇದಿನ ಬೆಳಗ್ಗೆ ೭ ಘಂಟೆ ೪೧ ನಿಮಿಷಕ್ಕೆ ಪುನೇ ಸೇರುತಿದೆ.

The weather.— ಈಗಿನಹವಾವನ್ನು ನೋಡಲಾಗಿ ಬೇಸಿಗೆ ಪ್ರಾರಂಭವಾಯಿತೆಂದು ಹೇಳುವದಕ್ಕೆ ಸಂಪೂರ್ಣಾವಕಾಶ ಕಂಡುಬರುತಿದೆ. ಬಿಸಿಲು ಏನೇ ಏನೆ ಚುರುಕಾಗುತ ಬಲವಾದ ಗಾಳಿ ಬೀಸುತಲಿದೆ. ರಾತ್ರಿ ಕಾಲದಲ್ಲಿ ಸೆಖೆಗಳು ಪ್ರಾರಂಭವಾಯಿತು. ಈ ಕಾಲದಲ್ಲಿ ಸೊಳ್ಳೆಗಳು, ಮಹಾನುಪಕಾರಿಯು ಮೇಲೆ ತಮಗಿರುವ ಅಧಿಕಾರವು ಗಂನ ಪ್ರವರ್ತಕ ನೆರವೇರಿಸಲುಪಕ್ರಮಿಸಿ, ವಸಂತ ಸಮಯದಲ್ಲಿ ಭೃಂಗಗಳು ಮಾಡುವಾನ ಮಾಡುವುದಲ್ಲ, ರಕ್ತಪಾನ ಮಾಡಲಾರಂಭಿಸಿವೆ. ಸ್ಮಾಲ್‌ಪಾಕ್ಸ ರೋಗದ ದೆಸೆಯಿಂದ ಉಂಟಾಗುವ ಪ್ರಾಣಾಪಾಯಗಳು ದುಸ್ಸಹವಾಗಿದೆ. ಇಲ್ಲಿನ ಅಷ್ಟರಲ್ಲಿ ಇನ್‌ಫ್ಲುಯೆಂಜಾ ಯೆಂಬ ವಿಷಮ ಶೀತ ರೋಗವು ತಲೆದೋರಿರುವುದಕ್ಕೆ ಅಲ್ಲಿನ ಪತ್ರಿಕೆಗಳು ತಿಳಿಸುತಿವೆ. ಪ್ರಾಯಶಃ ಅದು ದಿನ ಕ್ರಮೇಣ ನಮ್ಮಗೂ ವ್ಯಾಪಿಸಬಹುದು. ಈಸಲದ ಮುಂಗಾರು ಮಳೆ ಪ್ರಾರಂಭವಾಗುವದರೊಳಗಾಗಿ ಜಲದೌರ್ಲಭ್ಯ ಪ್ರಾಪ್ತವಾಗಬಹುದೆಂದು ಹೆದರುತ್ತೇವೆ. ಆಹಾರ ಪದಾರ್ಥಗಳ ಧಾರಣೆಗಳು ಹಿಟ್ಟಾಗಿ ಒಂದೇ ರೀತಿಯಲ್ಲಿದೆ.

ವರ್ಧಂತಿ ಉತ್ಸವವಿಷಯ—ಶ್ರೀಮನ್ಮಹಾರಾಜರವರ ೨೭ ನೇ ವಾರ್ಷಿಕ ವರ್ಧಂತಿಯು ಮುಂದಿನ ಸೋಮವಾರದದಿವಸ ಜೆಳಯತಕ್ಕದ್ದನ್ನು ಚೌತೀದಿವಸವೇ ಪಂಚಮಿ ಉವರಬಂದದ್ದರಿಂದ ನಡೆಯತಕ್ಕದ್ದೆಂದು ಅರಮನೆ ಜೋಯಿಸರು ನಿರ್ಧರಿಸಿದ್ದರು. ಧರ್ಮಾಧಿಕಾರಿಗಳು ಈ ವಿಷಯವನ್ನು ನೋಡೇ ಇರಲಿಲ್ಲ. ಬೆಂಗಳೂರಿಂದ ದಯಮಾಡಿಸಿದ ಮ|| ವಾಸುದೇವಶಾಸ್ತ್ರಿಗಳೇ ಮೊದಲಾದ ಪಂಡಿತರು ಶುಭಕರ್ಮಗಳು ಶೇಷಭಾಗ ಉದಕ್ಕದಿವಸದಲ್ಲೇ ನಡೆಯಬೇಕೆಂಬದಾಗಿ ಶಾಸ್ತ್ರವಿದೆ ಪೂರ್ವದಿವಸದಲ್ಲೇ ವರ್ಧಂತಿಯನ್ನು ಏರ್ಪಡಿಸಿರುವದು ಸಮಂಜಸವಲ್ಲವೆಂದು ಪ್ರಸ್ತಾಪಮಾಡಿದರು. ಶ್ರೀಮನ್ಮಹಾರಾಜರವರು ಬಿಜಯಮಾಡಿಸಿದಮೇಲೆ ಧರ್ಮಾಧಿಕಾರಿಗಳನ್ನೂ ಜೋಯಿಸರನ್ನೂ ಕರೆಸಿ ವರ್ಧಂತಿ ಉತ್ಸವ ಜೆಳಯತಕ್ಕ ವಿಷಯವನ್ನು ಚರ್ಚೆಗೆತರಲು ಧರ್ಮಾಧಿಕಾರಿಗಳ ಮತ್ತು ಜೋಯಿಸರ ಅಜಾಗರೂಕತೆಯು ವ್ಯಕ್ತವಾಯಿತು. ಇದೇವಿಷಯವನ್ನು ಶ್ರೀ ಪರಕಾಲಸ್ವಾಮಿಗಳಲ್ಲಿ ಪ್ರಶ್ನೆಮಾಡಿ ವಿದ್ವಾಂಸರ ಮತ್ತು ಸ್ವಾಮಿಗಳವರ ಅನುಜ್ಞೆಯಿಂದ ಪರದಿವಸದಲ್ಲಿಯೇ ಅಂದರೆ ಸೋಮವಾರದ ದಿವಸವೇ ಜೆಳೆಯತಕ್ಕದ್ದೆಂದು ನಿಷ್ಕರ್ಷೆಮಾಡಿದರು. ವೃ.—ಚಿಂ.

ವರ್ಧಂತಿ ಉತ್ಸವ—ನಿನ್ನೆ ಸೋಮವಾರದ ದಿವಸ ಶ್ರೀಮನ್ಮಹಾರಾಜರವರು ಮಂಗಳಸ್ನಾನವನ್ನಂಗೀಕರಿಸಿದಮೇಲೆ ದರ್ಬಾರ್‌ಜೆಳೆಯಿತು. ಅಲ್ಲಿಗೆ ಕಟ್ಟಳೆಯಪ್ರಕಾರ ಆಸ್ಥಾನದ ವಿದ್ವಾಂಸರೂ ಅರಸುಮಂಡಲಿಯವರೂ ಎಲ್ಲಾ ಅಧಿಕಾರಿಗಳೂ ದಯಮಾಡಿಸಿಯಿದ್ದರು. ಪದ್ಧತಿಯ ಪ್ರಕಾರ ಶ್ರೀ ಪರಕಾಲಸ್ವಾಮಿಗಳವರು ದಯಮಾಡಿಸಿದರು. ಒಡನೆ ಮಹಾರಾಜರವರು ಗುರುಪೂಜೆಯನ್ನು ನೆರವೇರಿಸಿ ಬ್ರಾಹ್ಮಣರ ಆಶೀರ್ವಾದವನ್ನು ಅಂಗೀಕರಿಸಿದರು. ನಂತರ ಫಲಪೂಜೆ ನೆರವೇರಿದಒಡನೆ ನೃತ್ಯಗೀತಾದಿಗಳೇ ಮೊದಲಾದ ರಾಜೋಪಚಾರಗಳು ಜೆಳೆದವು. ನಂತರ ಎಲ್ಲರಿಗೂ ಹಾರ ವೀಳ್ಯಗಳನ್ನು ಕೊಟ್ಟು ದರ್ಬಾರ್ ಜೆಳಸಿದರು. ಮಧ್ಯಾಹ್ನಾನಂತರ ಮಹಾರಾಜರವರು ಅಶ್ವಾರೋಹಿಗಳಾಗಿ ಚಾಮುಂಡೀ ಬೆಟ್ಟಕ್ಕೆ ದಯಮಾಡಿಸಿ ತಮ್ಮ ಕುಲದೇವರಾದ ಶ್ರೀ ಚಾಮುಂಡೇಶ್ವರಿಯವರ ದರ್ಶನವನ್ನು ನೆರವೇರಿಸಿಕೊಂಡು ಅಲ್ಲಿ ಸಿಂಹವಾಹನ ಉತ್ಸವವನ್ನು ಜೆಳಸಿಕೊಂಡು ರಾತ್ರಿ ೯ಗಂಟೆಗೆ ಅರಮನೆಗೆ ಬಿಜಯಮಾಡಿಸಿದರು. ಅನೇಕಜನ ಸಾಹುಕಾರರೇ ಮೊದಲಾದವರೆಲ್ಲರೂ ಶ್ರೀಮನ್ಮಹಾರಾಜರವರು ಪದ್ಧತಿಯಪ್ರಕಾರ ರೆಸಿಡೆನ್ಸಿಗೆ ಬರುವದಕ್ಕಾಗಿ ದೊಡ್ಡಪೇಟೆಲಿ ಸವಾರಿಯು ಬಿಜಯಮಾಡಿರುತ್ತಾರೆಂದು ಬಹಳ ಉತ್ಸಾಹದಿಂದ ನಜರು ಮುಜರೆಗಳನ್ನು ಒಪ್ಪಿಸುವದಕ್ಕಾಗಿತಾ ಬನ್ದು ನಮಗೆ ಲಭ್ಯವಾಗಲಿಲ್ಲವೆಂದು ಅಂದುಕೊಂಡರು.—ವೃ.—ಚಿಂ.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ ಮಹಾರಾಜರಾಜ್ಯಾಡಳಿತ ದರ್ಬಾರವರ ಕಾರ್ಯದಿಂದ ಕೊಡಲ್ಪಡಲಾದ ಪ್ಪಸಿದ್ಧಾವಾದಗಳು.

ನಂ. ೩೨೬. ೨೬ನೇ ಫೆಬ್ರುವರಿ.—ಕ್ರಿಮಿನಲ್ ಪ್ರೊಸಿಜ್ಯುರ್‌ಕೋಡು ೧೬ನೇ ಸೆಕ್ಷನ್ ಅನುಸರಿಸಿ, ಕೋಲಾರ ಡಿಸ್ಟ್ರಿಕ್ಟು ಶ್ರೀನಿವಾಸಪುರದ ಆಕ್ಟಿಂಗ್ ಡೆಪ್ಯುಟಿ ಅಮುಲ್‌ದಾರ್ರವರು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟು ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ

ಮೊಕ್ಕಾಂ ನಂ ೩೭೯—ಗುಂಡಲ್‌ಪೇಟೆ ಆ ಮಲ್‌ದಾರರು ವಾದರಲ್ಲೀಯವರು, ಅವರುವ ಯೋಗಿಸಿಕೊಳ್ಳುವ ತಾರೀಖು ಮೊದಲು ಮೆಡಿಕಲ್ ಸರ್ಟಿಫಿಕೇಟಿಮೇಲೆ ಎರಡುತಿಂಗಳ ಕಾಯಿಲೇ ರಜಾ ಕೊಡಲ್ಪಟ್ಟಿರುತ್ತಾರೆ.

ಮೈಸೂರು ಡಿ|| ಆಫಿಸ್ ರೆವಿನ್ಯೂ ಶಿರಸ್ತೇದಾರ್ ರಾಮಚಂದ್ರರಾಯರು, ವಾದರ್ ಅಲ್ಲೀಯವರು ರಜಾದಮೇಲೆ ಗೈರ್ಹಾಜರಿರುವಕಾಲದಲ್ಲಿ ಅಥವಾ ಮತ್ತೊಂದುಹುಕುಂ ಕೊಡಲ್ಪಡುವವರೆಗೆ ಗುಂಡಲ್‌ಪೇಟೆ ತಾಲ್ಲೂಕು ೫ ನೇ ಗ್ರೇಡ್ ಅಮುಲ್‌ದಾರ್ ವ ೩ನೇಕ್ಲಾಸ್ ಮ್ಯಾಜಿಸ್ಟ್ರೇಟಾಗಿ ಬದಲೀನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಮೊಕ್ಕಾಂ ನಂ. ೪೯೭.—ಮೈಸೂರು ಡಿ|| ಅಸಿಸ್ಟೆಂಟ್ ಕಮಿಷನರ್ ಮ. ಡಿ. ನಾಮಕರ್ಣರಾಯರವರು ಈ ತಿಂಗಳ ೧೨ನೇ ತಾರೀಖು ಮೊದಲು ೧೦ ದಿನಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತ್ತಾರೆ.

ನಂ ೩೫೧.—ಸೆಪ್ಟ ೧೮೯೦ನೇ ಇಸವಿ ಫೆಬ್ರುವರಿ ೧ನೇ ಮಾರ್ಚಿ ೩೦೮ನೇ ನಂ|| ಈಅಫಿಷಲ್ ಇಸ್ತಿಹಾರವನ್ನು ತಿದ್ದುಪಡಿಯಿಂದ ಲೆಜಿಸ್ಲೆಟಿವ್ ಸೆಕ್ರೆಟರಿ ಮತ್ತು ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲವರಾದ ಮೆ|| ಎನ್. ವೆಂಕಟವರದಯ್ಯಂಗಾರ್, ಬಿ. ಎ. ಎಂ. ಎಲ್, ಯವರು, ೧೮೯೦ನೇ ಇಸವಿ ಫೆಬ್ರುವರಿ ೩ನೇ ತಾರೀಖು ಮೊದಲು ೩ತಿಂಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತ್ತಾರೆ.

TELEGRAMS.
ತಂತಿ ವೃತ್ತಾಂತಗಳು.

ನ್ಯೂಯಾರ್ಕ್, ೨೩ನೇ ಫೆಬ್ರುವರಿ—ವಾಶಿಂಗ್‌ಟನ್ ಗ್ರೋವ್ ಯೆಂಬ ಪ್ರದೇಶದಬಳಿ ಇರುವ ಆಯಿದು ಮೈಲಿಗಳ ವಿಸ್ತೀರ್ಣವುಳ್ಳ ಕೆರೆಯ ಕಟ್ಟೆ ಒಡೆದುಹೋಗಿ ನಾಲ್ವತ್ತುಜನ ಅದರಲ್ಲಿ ಮುಣಿಗಿ ಹೋದರಲ್ಲದೆ ಇಪ್ಪತ್ತುಲಕ್ಷ ರೂಪಾಯಿಗಳ ಸ್ವತ್ತುಗಳು ನಾಶವಾದವು.

ಲಂಡನ್, ೨೫ನೇ ಫೆಬ್ರುವರಿ—ಲಾರ್ಡ್ ಹಾರಿಸ್, ಅವರ ಭಾರ್ಯೆಯವರು, ಮತ್ತು ಸರ್ ಡಾನಾಲ್ಡ್ ಸ್ಟೆವರ್ಟ್‌ಯವರು, ಈ ಮೂವರು ನಿನ್ನೆಯ ದಿನ ವಿಂಡ್‌ಸರ್ ಕ್ಯಾಸಲ್ ಎಂಬ ಅರಮನೆಯಲ್ಲಿ ಮಹಾರಾಜ್ಞೀಯವರೊಡನೆ ಭೋಜನ ಮಾಡಿದರು.

ಲಂಡನ್. ೨೫ನೇ ಫೆಬ್ರುವರಿ—ಸರ್ ಡಾನಾಲ್ಡ್ ಸ್ಟೆವರ್ಟ್‌ಯವರು ಈಗ ಖಾಲೀಯಾಗಿರುವ ಫೀಲ್ಡ್ ಮಾರ್ಷಲ್ (ಅಂದರೆ ವಿಶೇಷ ಪ್ರಶಸ್ತಿಯುಳ್ಳ ಸೇನಾಧಿಪತ್ಯ) ಕೆಲಸ ಕೊಡಲ್ಪಡುವರೆಂದು ಪಟ್ಟಾಗಿ ಹೇಳಲ್ಪಡುತಲಿದಾರೆ.

ಅಲಹಾಬಾದ್, ೨೪ನೇ ಫೆಬ್ರುವರಿ—ಭೋಪಾಲ್ ಸಂಸ್ಥಾನದ ಬೇಗಂಯವರ ಪತಿಯವರಾದ ಸಾದಿಕ್ ಹುಸೇನ್‌ಯವರು ಕಳೆದ ಬೃಹಸ್ಪತಿವಾರದ ದಿನ ಮೃತಪಟ್ಟರು. ಕೆಲವು ಸಂವತ್ಸರಗಳಹಿಂದೆ ಇವರು ಧೂರ್ತ ಕೆಲಸಗಳು ನಡೆಸಿದ್ದಾಗಿ ಸರ್‌ಲೆಪೆಲ್ ಗ್ರಿಫಿನ್‌ಯವರಿಗೆ ತಿಳಿಯಬಂದು ಇವರ ಗೌರವಗಳೆಲ್ಲ ಹೋಗಲಾಡಿಸಲ್ಪಟ್ಟವು.

ಲಂಡನ್, ೨೫ನೇ ಫೆಬ್ರುವರಿ—ಇಂಡ್ಯಾ ದೇಶದ ಮಂತ್ರಾಲೋಚಕ ಸಮಾಜಗಳ ವಿಷಯದಲ್ಲಿ ಇಂಡ್ಯಾಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಕ್ರಾಸ್‌ಯವರಿಂದ ರಚಿಸಲ್ಪಟ್ಟ ಮಸವಿದಾ ಆಕ್ಟಿನಲ್ಲಿ ವೈಸ್‌ರಾಯ್‌ಯವರ ಮಂತ್ರಾಲೋಚಕ ಸಮಾಜದ ಜಾಸ್ತೀ ಮೇಬರ್‌ಗಳನ್ನು ೧೦ ಕ್ಕಿನೊದಲು ೧೬ರವರೆವಿಗೂ, ಮದರಾಸ್ ಮತ್ತು ಮುಂಬೈ ಸಮಾಜಗಳಮೆಂಬರ್‌ಗಳಸಂಖ್ಯೆಯನ್ನು ೮ರಿಂದ ೨೦ ರವರೆವಿಗೂ ಹೆಚ್ಚಿಸಬಹುದೆಂದು ವಿಧಿಸಲ್ಪಟ್ಟದೆ, ಮತ್ತು ಬಂಗಾಳೆ ಕೌನ್ಸಿಲ್ ಮೆಂಬರ್‌ಗಳಸಂಖ್ಯೆಯನ್ನು ೨೦ರವರೆವಿಗೂ, ವಾಯವ್ಯದೇಶಗಳ ಕೌನ್ಸಿಲ್ ಮೆಂಬರ್‌ಗಳ ಸಂಖ್ಯೆಯನ್ನು ೧೫ ರವರೆವಿಗೂ ಜಾಸ್ತೀಮಾಡುವ ಅಧಿಕಾರವು ವೈಸ್‌ರಾಯ್‌ಯವರಿಗೆ ಕೊಡಲ್ಪಟ್ಟದೆ. ದೇಶದ ಹುಟ್ಟುವಳಿ ಜಮಾಖರ್ಚಿನವಿಷಯದಲ್ಲಿ ಯಾವ ಅಧಿಕಾರವೂ ಕೌನ್ಸಿಲ್ ಮೆಂಬರ್‌ಗಳಿಗೆ ಇರಕೂಡದು.

ವಾಶಿಂಗ್‌ಟನ್, ೨೫ನೇ ಫೆಬ್ರುವರಿ—ಉತ್ತರ ಅಮೇರಿಕಾಖಂಡದೊಳಗಣ ಯುನೈಟೆಡ್ ಸ್ಟೇಟ್ ಗವರ್ನಮೆಂಟಿನವರು ದೂಹೇಯೂನಾ ಕೊಂಭತ್ತುಲಕ್ಷರೂಪಾಯಿಗಳಿಗೆ ಬೆಳ್ಳಿ ಖರೀದಿಮಾಡಿ ಮಾಹೇಯಾನಾ ನಾಲ್ವತ್ತುಲಕ್ಷ ರೂಪಾಯಿಗಳಿಗೆ ಡಾಲರ್‌ಯೆಂಬ ನಾಣ್ಯವನ್ನು ಟಾಪಿಸಬೇಕೆಂದು ಮಾಡಿದ ಮಸವಿದಾಆಕ್ಟನ್ನು ಫೈನ್ಯಾನ್ಸ್ ಕಮಿಟಿಯವರುಮುಂಜೂರ್ಮಾಡಿರುತ್ತಾರೆ.

ಪುನಾ, ೨೫ನೇಫೆಬ್ರುವರಿ.—೧೦ನೇ ಮುಂಬೈ ಇನ್‌ಫೆಂಟ್ರಿಗೆಸೇರಿದ ಹೀರಾಸಿಂಗ್ ಯೆಂಬವನಿಗೆ ಈದಿನಸಾಯಂಕಾಲ ಬುದ್ಧಿಭ್ರಂಶವುಂಟಾಗಿ ತನ್ನ ಸುಬೇದಾರನನ್ನು ಗೋಲಿಯಿಂದ ಹೊಡೆದು ಹಾಕಿ ತರುವಾಯ ತನ್ನ ಜಮಾವ್‌ದಾರಳನ್ನು ಹೊಡೆದುಬಿಟ್ಟು ಸುಬೇದಾರ್ ಮೇಜರ್ ಮತ್ತು ಗಾರ್ಡಿನವನನ್ನೂ ಗೋಲೀಯಿಂದಹೊಡೆದು ಜಂಜುದಿನ್ನೆಗಾಗಿ ಓಡಿಹೋದನು. ಅಲ್ಲಿ ಗೋಲಿಯಿಂದಹೊಡೆಯಲ್ಪಟ್ಟನೊ ಅಥವಾ ತಾನೇಹೊಡಕೊಂಡು ಸತ್ತುಹೋದನೊ ತಿಳಿಯಲಿಲ್ಲವು.

ಲಂಡನ್. ೨೭ನೇ ಫೆಬ್ರುವರಿ.—ರಷಿಯಾದೇಶದಲ್ಲಿ ವಾಂತಿಭೇದಿರೋಗದ ವ್ಯಾಪಕತೆಯಂ ನಿರೋಧಿಸತಕ್ಕಬಗ್ಗೆ ಪ್ರಬಲ ಸನ್ನಾಹಗಳು ನಡೆಸಲ್ಪಡುತಲಿವೆ.

ಅಲಹಾಬಾದ್, ೨೭ನೇ ಫೆಬ್ರುವರಿ.—ದೆಹಲಿ ಬಳಿ ಒಂದುಗ್ರಾಮದಲ್ಲಿ ಜಿಂಕೆಗಳಿ ೮೦ಮನೆಗಳು ನಾಶವಾದದ್ದಲ್ಲದೆ ಹದಿನೇಳು ಮಂದಿ ಪ್ರಾಣಗಳು ಹೋಗಲಾಡಿಸಿಕೊಂಡರು.

ಬರುವ ಏಪ್ರಿಲ್ ಗುರ್ರೇ ತಾರೀಖ್ ಮೊದಲು ನೇಟಿವ್ ಮಿಲಿಟರಿ ಪೆನ್‌ಷನರ್‌ಗಳ ಪೆನ್‌ಷನನ್ನು ಕೊಡುವದಕ್ಕೆ ಪಂಜಾಬ್ ಪೋಸ್ಟಾಫೀಸ್ ಇಲಾಖೆಯವರು ಒಪ್ಪಿಕೊಂಡದರಿಂದ ಅವರಿಗೆ ಬಹಳ ಅನುಕೂಲ್ಯವುಂಟಾಯಿತು.

ಹಾಜಿ ಆದಂ ಮತ್ತು ಹಾಜಿ ಅಬ್ದುಲ್ ಲತೀಫ್ ಎಂಬವರು ಹದಿಮೂರು ಲಕ್ಷ ರೂಪಾಯಿಗಳಿಗೆ ಒಂದುಹುಂಡಿ ಬನಾವಣೆಮಾಡಿದ್ದಾಗಿ ಅವರಮೇಲೆ ಬಂಗಾಳೆ ಬ್ಯಾಂಕಿನಿಂದ ತರಲ್ಪಟ್ಟ ಕ್ರಿಮಿನಲ್ ಮೊಕದ್ದಮೆಯು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ನಿನ್ನೆಯದಿನ ಪ್ರಥಮ ವಿಚಾರಣೆಗೆ ಪ್ರಾರಂಭವಾಯಿತು. ಮೊಕದ್ದಮೆ ಶುಕ್ರವಾರದ ವರಿವಿಗೆ ನಿಲ್ಲಿಸಲ್ಪಟ್ಟಿತು. ಮ್ಯಾಜಿಸ್ಟ್ರೇಟರು ಅಪರಾಧಿಯನ್ನು ಜಾಮೀನ್ಮೇಲೆ ಖುಲಾಸೆ ಮಾಡುವದಿಲ್ಲ ಹೇಳಿದರು.

ಮುಂಬೈ, ೨೭ನೇ ಫೆಬ್ರುವರಿ.—ಇನ್‌ಫ್ಲುಯೆಂಜಾ ಯೆಂಬ ವಿಷಮ ಶೀತರೋಗದಂತಿರುವ ಒಂದುವಿಧ ಸಾಂಕ್ರಾಮಿಕರೋಗವು ಮುಂಬೈಯಲ್ಲಿ ವ್ಯಾಪಿಸಿದ್ದರಿಂದ ಜನಗಳು ಬಹಳ ಅಸಮಾಧಾನಗೊಂಡಿರುತ್ತಾರೆ. ಬಹುಮಂದಿ ಕೆಲಸಗಾರರನ್ನಿಟ್ಟುಕೊಂಡಿರುವಂತಾ ಕಾರ್ಖಾನೇದಾರರಿಗೆ ಇದರಿಂದ ಬಹಳ ಅನಾನುಕೂಲವುಂಟಾಗಿದೆ. ರೋಗವು ಯಾವದಾಗಿರಲಿ, ಈಚೆಗೆ ಪತ್ತು ಜನಗಳ ದೂವಳು ಕೇವಲ ಪ್ರಬಲಗೊಂಡಿವೆ ಮುಂಬೈ ಗೆಜೆಟ್ ಪ್ರೆಸ್ ಆಫೀಸ್ ನೌಕರರ ಪೈಕಿ ೫೦ ಮಂದಿ ಗೈರ್ಹಾಜರೆಂದು ಸದರೀಪತ್ರಿಕೆ ತಿಳಿಸುತಿದೆ.

SUMMARY OF NEWS.
ವೃತ್ತಾಂತಸಂಗ್ರಹವು.

ಫೆಬ್ರುವರಿ ತಿಂಗಳ ಅಂತ್ಯದಲ್ಲಿ ಕಲ್ಕತ್ತಾಪಟ್ಟಣದಲ್ಲಿ ಚಿಕ್ಕಮಕ್ಕಳ ಪ್ರದರ್ಶನ ನಡೆಯುವದು

ಪಂಜಾಬ್ ದೇಶದೊಳು ಬಹುಕಾಲದ ಮೊದಲು ಮಳೆ ಯಿಲ್ಲದೆ ಹೋದದರಿಂದ ಪದಾರ್ಥಗಳ ಧಾರಣೆಗಳು ಹೆಚ್ಚುತಲಿವೆ.

ಮುಲತಾನ್ ಎಂಬದಲ್ಲಿರುವ ಕರೆಮನೆಯ ಮುಖ್ಯಾಧಿಕಾರಿಯ(ಜೈಲರ್)ಮೂಗನ್ನು ಅಲ್ಲಿಯಲ್ಲಿರುತಿದ್ದ ಖೈದಿಗಳುಕೊಯಿದುಬಿಟ್ಟರು.-ಹಿ.ಸು.

ಲಾರ್ಡ್ ಗ್ಯಾಲೊವೆ ದೊರೆಗಳು ಒಬ್ಬ ಹುಡುಗಿಯನ್ನು ಹಿಡಿಸಿದದೆಂಬದರಿಂದ ಗ್ಲಾಸ್‌ಗೋ ಪಟ್ಟಣದಲ್ಲಿ ಅವರಮೇಲೆ ಆಪಾದನೆ ತರಲ್ಪಟ್ಟಿತು.—ಕ. ಸು.

ಒಬ್ಬ ಫ್ರೆಂಚ್ ಗೃಹಸ್ಥನು ವಿದ್ಯುಲ್ಲತೆಯ ಸಹಾಯದಿಂದ ಒಂದು ಯಂತ್ರವನ್ನು ಶೋಧಿಸಿರುತ್ತಾನೆ ಇದರ ಯೋಗದಿಂದ ಬಹಳ ದೂರವಿದ್ದ ಮನುಷ್ಯನನ್ನು ಗುರುತು ಹಿಡಿಯಬಹುದಂತೆ.—ಹ. ಸು.

ಸಿಸಿಲೀ ದ್ವೀಪದಲ್ಲಿ, ಒಂದು ಭಯಂಕರ ಭೂಕಂಪವಾಗಿ ಅದರ ಹೊಡೆತದಿಂದ ಅನೇಕ ಮನೆಗಳು ಬಿದ್ದು ಹೆಚ್ಚಿನ ಜನನಮುವಾಯುವು ನಾಶ ಹೊಂದಿತು.—ಹ. ಸು.

ಕಳೆದತಿಂಗಳ ೨೯ನೇ ತಾರೀಖ್‌ನಲ್ಲಿ ಮದರಾಸ್ ಬ್ಯಾಂಕ್ ಡೈರೆಕ್ಟರ್‌ಗಳು ಮೀಟಿಂಗ್‌ಮಾಡಿ ಬಡ್ಡಿ ಮತ್ತು ಡಿಸ್ಕೌಂಟ್ ದರಗಳನ್ನು ನೇಕಡ ಒಂದುರೂಪಾಯಿನಂತೆ ಹೆಚ್ಚಿಸಿದರು. ಈಗಿನ ದರವು ಸಾಲೀಯಾನಾ ನೇಕಡ ಹನ್ನೊಂದುರೂಪಾಯಿಗಳಂತಿದೆ.

ಕೊಲ್ಹಾಪುರ ಷಹರ್ ಮಜಕೂರಿನಲ್ಲಿ ಒಬ್ಬ ಮರಾಟ ಜಾತಿಯ ಬಾಯಿಯು ಪ್ರಸೂತಳಾಗಿ ಮೂರು ಹುಡುಗರನ್ನು ಒಂದೇ ದಿವಸದಲ್ಲಿ ಹೆತ್ತಳು. ಹುಡುಗರೂ, ತಾಯಿಯೂ ಸುಖರೂಪದಲ್ಲಿರುತ್ತಾರೆ. ಈ ಹುಡುಗರಿಗೆ ಒಬ್ಬ ತಾಯಿಯ ಮೊಲೆಯ ಹಾಲು ಹ್ಯಾಗೆ ಸಾಲಬೇಕು ? ಈಶ್ವರ ಮಹಿಮೆಯು ಅಗಾಧವದೆ !!-ಹ .ಸು.

ಮದರಾಸಿನಲ್ಲಿ ಉಪ್ಪಿನವರ್ತಕರು, ಮರಳನ್ನೂ ಉಪ್ಪನ್ನೂ ಬೆರಸಿ ಗುಜನೀರಲ್ಲಿನರೆಳಿ ಖಳತಮಾಡುವದರಿಗಳ ದಳಕ್ಕೆಹಾಕಿ ಸ್ವಲ್ಪಹೊತ್ತು ಪದಿಯನ್ನುಅಡಿಸಿ ಅದು ತಳದಲ್ಲಿ ಗಟ್ಟಿ

ಯಾಗಿ ಮತ್ತೆ ಕೆಲ್ಕಂಡಮೇಲೆ ಅದರಿಂದ ಉಳ್ಳ ಅಳದು ಮಾರಿ ಜನಗಳನ್ನು ಮೋಸಮಾಡುತಬರುವ ಸಂಗತಿ ನಮ್ಮ ಕಿವಿಗೆ ಮುಟ್ಟಿ ಪೊಲೀಸ್ ಇಲಾಖಾ ಅಧಿಕಾರಿಗಳಿಗೆ ತಿಳಿಯಬಂದು ಅಂತಾ ಮೋಸಕೃತ್ಯಗಳಂ ನಡೆಸುವ ವರ್ತಕರನ್ನು ಕಂಡುಹಿಡಿದು ಅವರನ್ನು ದಂಡನೆಗೆ ಗುರಿಮಾಡಬೇಕೆಂದು ಪೊಲೀಸ್ ಕಮಿಷನರಿಗೆ ಬರೆದಿರುತ್ತಾರೆ.

ಒಬ್ಬ ಗೃಹಸ್ಥನು ಕುರುಡರಿಗೆ ಉಪಯೋಗವಾಗುವಂತ, ಒಂದು ಘಡಿಯಾರವನ್ನು ತಯಾರಿಸಿರುತ್ತಾನೆ. ಈ ಘಡಿಯಾರವನ್ನು ನೋಡುವ ಕ್ರಮವ್ಯಾಗುವದರೆ ಈ ಘಡಿಯಾರದ ತಾಸು ತೋರಿಸುವ ಪ್ರತಿ ಒಂದು ಅಂಕೆಯ ಮೇಲ್ಭಾಗದಲ್ಲಿ ಒಂದೊಂದು ಮೊಳೆ ಇರುತ್ತದೆ. ತಾಸು ತೋರಿಸುವ ಮುಳ್ಳು ತಾಸಿನ ಅಂಕೆಯಮೇಲೆ ಬಂದ ಒಡನೆ ಅದರಮೇಲೆ ನೆಟ್ಟಿದ್ದ ಮೊಳೆಯು ಒಳಸೇರಲು ಉಳಿದ ತಾಸಿನ ಅಂಕೆಗಳ ಮೇಲೆ ನೆಟ್ಟಿರುವ ಮೊಳೆಗಳನ್ನು ಬೆರಳುಗಳಿಂದ ಮುಟ್ಟಿ ನೋಡುತ್ತ ಒಂದು ಕಡೆಗೆ ಇಷ್ಟೇ ಘಂಟೆ ಯಾಯಿತೆಂದು ಕುರುಡರು ಗೊತ್ತು ಮಾಡಿಕೊಳ್ಳುತ್ತಾರೆಂದು ತಿಳಿಯುತ್ತದೆ.—ಹ.ಸು

ಪ್ರಸಿದ್ಧ ವಿಮಾನಗಾರರಾದ ಮಿ| ಸ್ಪೆನ್ಸರವರು, ಕಳೆದ ಶನಿವಾರವಲ್ಲ ಆಚೆಯ ಶನಿವಾರದ ಸಾಯಂಕಾಲ ೬ ಘಂಟೆಯ ಸಮಯಕ್ಕೆ ಪುನಃ ವಿಮಾನವನ್ನು ಕಲ್ಕತ್ತೆಯಲ್ಲಿ ಹಾರಿಸಿದರು. ಈ ವಿಮಾನವು ೬೫ ಫೂಟು ಎತ್ತರವಿದ್ದು, ೩೦ ಫೂಟು ಅಗಲವಿರುತಿತ್ತು. ಇದರಲ್ಲಿ ಇಬ್ಬರು ಮೂವರು ಪುರುಷರೂ, ಒಬ್ಬ ಸ್ತ್ರೀಯೂ ಕೂಡಿ ಕೂತಿದ್ದರು. ವಿಮಾನವು ಭೂಮಿಯಿಂದ ಮೂರುಸಾವಿರ ಫೂಟು ಮೇಲೆ ಹೋಗಿ ೭ ಘಂಟೆಯ ೪೫ ನಿಮಿಷಕ್ಕೆ ಅಲ್ಲಿಗೆ ಸಮೀಪದಲ್ಲಿರುವ ಒಂದು ಹಳ್ಳಿಯಲ್ಲಿ ಬಿತ್ತು. ಈ ವಿಮಾನದಲ್ಲಿ ಹೆಂಗಸು ಕೂತು ಸುಖರೂಪಿಯಾಗಿ ಭೂಮಿಗೆ ಸೇರಿದ್ದರಿಂದ ಅಲ್ಲಿಯ ಜನರೆಲ್ಲರೂ ಬಹಳ ಆಶ್ಚರ್ಯಪರರಾಗಿರುವರು.—ಹ—ಸು

ಮಲಬಾರ್ ಜಿಲ್ಲಾ ಪ್ರಾಂತದಲ್ಲಿರುವ ಮಾಪಿಳ್ಳೆ ಎಂಬ ಮತಸ್ಥರು ತಮ್ಮ ಮತದಲ್ಲಿ ಯಾರಾದರು ಕಾಲಾಧೀನವಾದರೆ ಅವರನ್ನು ಸಿಹಿನೀರಿನ ಬಾವಿಗಳ ಸಮೀಪದಲ್ಲಿ ಆ ಶವಗಳ ಮೇಲಿಂದ ಹರಿದು ಬರುವ ನೀರು ಆ ಭಾವಿಗಳಲ್ಲಿ ನಿಲ್ಲುವಂತೆ ಸಮಾಧಿಗಳನ್ನು ಮಾಡುತ್ತಾರೆ. ಏತಕ್ಕೆಂದರೆ, ಅಂಥಾ ನೀರು ಕುಡಿದರೆ ಗಂಗಾಸ್ನಾನ ಮಾಡಿದ ಫಲ ಪ್ರಾಪ್ತವಾಗುವದೆಂತಲೂ, ಮಂಗಳಕರವಾಗುವದೆಂತಲೂ ತಿಳಿದುಕೊಂಡಿದ್ದಾರೆ. ಇದು ಎಂಥಾ ತಿಳುವಳಿಕೆಯ ಜ್ಞಾನವೋ ಅದನ್ನು ದೇವರೇ ಬಲ್ಲನು.—ವೃ. ಚಿ.

ಬಳ್ಳಾರಿ ಜಿಲ್ಲಾ ಪ್ಯಾಪಲಿ ಎಂಬ ಗ್ರಾಮದಲ್ಲಿ ರಾತ್ರಿ ದಂಪತಿಗಳು ತಮ್ಮ ಗೃಹದೊಳಗೆ ಮಲಗಿರಲು ಒಂದು ಹೊತ್ತಿನಲ್ಲಿ ಪತಿಯು ಪತ್ನಿಯು ಸಂಗವ ಪ್ರೀತಿಸಲು, ಆಕೆಯು ಪತಿಯನ್ನು ಒದ್ದಳು. ಒಡನೇ ಅತಿ ಕೋಪಿಷ್ಠನಾಗಿ ಕಲ್ಲಿನಿಂದಲೂ, ಒನಕೆಯಿಂದಲೂ ಮುಖದಮೇಲೂ, ನೆತ್ತಿಯಮೇಲೂ ೧೦—೧೮ ಪ್ರಹಾರಗಳನ್ನು ಪ್ರಯೋಗಿಸಿದನು. ಅಷ್ಟರಲ್ಲೇ ಆಕೆಯ ತಲೇಬುರುಡೆ ಒಡೆದು ಕಣ್ಣು, ಮೂಗು ಎಲ್ಲಾ ಒಂದು ಮಾಂಸದ ಉಂಡೆಯಾಗಿ ಆಯಿತು. ರಾತ್ರಿಯೇ ಪೊಲೀಸಿನವರು ಅವನನ್ನು ಕೈದು ಮಾಡಿದರು. ವಿಚಾರಣೆ ನಡೆಯುತ್ತಲಿದೆ. ಆತನೀಗ ಅವಳಿಗೆ ಗಂಡ.—ವೃ. ಚಿ.

ಈಚೆಗೆ ಇಂಗ್ಲಾಂಡದೇಶದೊಳಗಣ ಒಂದು ಗ್ರಾಮದಲ್ಲಿ ವಿಚಿತ್ರವಾದ ಒಂದುವಿವಾಹ ನಡೆಯಿತು. ಈವಿವಾಹದಲ್ಲಿ ವಧೂವರರಿಬ್ಬರೂ ಕಿವಿಡರು ಮತ್ತು ಮೂಗರು. ಇವರ ಮತಾನುಸಾರವಾಗಿ ವಿವಾಹಕಾಲದೊಳು ವಧೂವರರಿಂದ ಮಾಡಿಸಬೇಕಾದ ಕೆಲವು ದೇವತಾ ಪ್ರಾರ್ಥನೆಗಳಿಗೆ ಅವಕಾಶವಿಲ್ಲವಾಗಿ ಪುಸ್ತಕದಲ್ಲಿನ ಸದರೀ ವಚನಗಳನ್ನು ಅವರಿಗೆ ತೋರಿಸಿ, ವಿವಾಹ ಸಂಬಂಧವನ್ನು ಒಪ್ಪಿಕೊಳ್ಳುವರೆ ಹೌದು ಕೇಳಲಾಗಿ ಅವರು ತಮ್ಮ ಒಪ್ಪಿತವನ್ನು ಮೂಕ ಬಧಿರರಿಗಾಗಿ ಉಪಯೋಗಪಡುವ ಅಕ್ಷರಗಳಿಂದ ಬರೆದು ತಮ್ಮ ಅಂಗೀಕಾರವಂ ವ್ಯಕ್ತಪಡಿಸಿದರು. ಈ ವಿವಾಹ ಮಹೋತ್ಸವಕ್ಕೆ ಆಸುಪಾಸ್ ಪ್ರದೇಶಗಳಲ್ಲಿರುವ ಕಿವಿಡರು ಮೂಗರೆಲ್ಲರು ತಂಡೋಪತಂಡವಾಗಿ ಬಂದು ಸೇರಿ ಉತ್ಸವ ಸಂತೋಷವನ್ನನುಭವಿಸಿದರು.—ವೃ. ಚಿ.

ಬಂಗಾಲದೊಳಗಿನ ದರ್ಭಂಗಾ ದೇವಸ್ಥಾನದ ಪ್ರಕರಣದ ಸಂಬಂಧವಾಗಿ ವಿಚಾರ ಮಾಡುವದಕ್ಕೋಸ್ಕರ ಬಂಗಾಲ ಸರಕಾರದವರು ಪಾಟ್ನಾದ ಕಮಿಷನರರಾದ ಮಿಸ್ಟರ್ ಬಾಕ್ಸವೆಲ್ ರವರನ್ನು ನೇಮಿಸಿದ್ದರು. ಬಂಗಾಲ ಸರಕಾರದ ಚೀಫ್ ಸೆಕ್ರಿಟರಿಗಳು ಅದೇ ಸ್ಥಳದಲ್ಲಿ ದೇವಾಲಯವನ್ನು ತಿರಿಗಿ ಕಟ್ಟುವದಕ್ಕೆ ಅಪ್ಪಣೆ ಕೊಟ್ಟಿರುತ್ತಾರೆ. ಇವರ ಮೇರಿಂದ ಹಿಂದೂ ಜನರಿಗೆ ನ್ಯಾಯ ಸಿಕ್ಕಿತೆಂಬದಕ್ಕೆ ಸಂಶಯವಿಲ್ಲ. ಇನ್ನು ಅಪರಾಧಿಯನ್ನು ಶಿಕ್ಷಿಸುವದೂ ಸರಕಾರದವರ ಮರ್ಜಿಯ ಮಾತು. ದೇವಸ್ಥಾನ ತಿರಿಗಿ ಕಟ್ಟಲಿಕ್ಕೆ ಅಪ್ಪಣೆಯಿತ್ತರು, ಹೌದು. ಅದನ್ನು ತಿರಿಗಿ ಕಟ್ಟಲಿಕ್ಕೆ ತಗಲುವ ಖರ್ಚು ಕೊಡುವವರ್ಯಾರು? ವೈಸ್ ಚಯರ್ ಮೆನರು ಮಾಡಿದ ಅಪರಾಧವು ಸಿದ್ಧವಾಯಿತು, ಅಂದಮೇಲೆ ಖರ್ಚನ್ನು ಅವರು ವಹಿಸಬೇಕು.—ಹ—ಸು.

EXTRACTS

ಸಾಲದಬಗ್ಗೆ ಶಿಕ್ಷೆ ಅನುಭವಿಸುತಲಿದ್ದವನೊಬ್ಬನು, ಅವನಿಗೆ ವಿಧಿಸಲ್ಪಟ್ಟ ಶಿಕ್ಷೆ ಪೂರ್ತಿಯಾಗುವದಕ್ಕೆ ನಾಲ್ಕು ತಿಂಗಳಿಗೆ ಮುಂಚಿತವಾಗಿ ಬಿಡುಗಡೆಮಾಡಲ್ಪಟ್ಟನು. ಈ ಅಂಶ ಅವನ ವಿಷಯದಲ್ಲಿ ತೋರಿಸಲ್ಪಟ್ಟದ್ದು ನ್ಯಾಯದ ಕೋರ್ಟಿಗೆ ವಾರಂಟ ಅವನಮೇಲೆ ಹೊರಗಾಗಿ ಜೈಲ ಸೂಪರಿಂಟೆಂಡೆಂಟನು, ಮೇರಿನತಿಕ್ರಮಕ್ಕೆ ಕಾರಣ ತಿಳಿಸತಕ್ಕದ್ದೆಂದು ಕೋರ್ಟಿನವರು ಹುಕುಂ ಮಾಡಿದರು. ಈ ಮೊಕದ್ದಮೆ ಗವರ್ನಮೆಂಟಿಗೆ ರಿಪೋರ್ಟಾಗಿ ಅದನ್ನು ಅವರು ವಿಮರ್ಶೆಮಾಡಿ, ಸದರೀ ಅಕ್ರಮಕ್ಕೆ ಜೈಲ ಸೂಪರಿಂಟೆಂಡೆಂಟರು ಬಾಧ್ಯವಾದರೆಂದಲೂ, ವಾರಂಟಿನಲ್ಲಿ ಕಂಡಿರತಕ್ಕ ೨,೦೦೦ ರೂಪಾಯಿಗಳಿಗಾಗಿ ಸಾಲಗಾರನು ಆರುತಿಂಗಳಕಾಲ ಶಿಕ್ಷೆ ಅನುಭವಿಸಬೇಕಾಗಿರುವದರಿಂದ ಸದರೀ ಮೊಬಲಗನ್ನು ಜೈಲರು ಕೊಟ್ಟುಬಿಡತಕ್ಕದ್ದೆಂದು ಗವರ್ನಮೆಂಟಿನವರು ಹುಕುಂ ಮಾಡಿದರು.

ಪ್ರಸಿದ್ಧರಾದ ಜೈನ ಮಹಾರಾಜರುಗಳ ಪೈಕಿಯೊಬ್ಬರಾದ ಉದಯಸಿಂಗಜಿ ಮಹಾರಾಜರವರು ಆಜೆ ಶುಕ್ರವಾರದವಿನ ರಾತ್ರಿ ಜ್ವರರೋಗದಿಂದ ಅಹಮದಾಬಾದಿನಲ್ಲಿ ಕಾಲಗತಿಯನ್ನೈದಿದರು. ಈವರ್ತಮಾನವಂ ಕೇಳಿದಕೂಡಲೇ ಅಹಮದಾಬಾದಿನಲ್ಲಿರುವ ಜೈನರೆಲ್ಲರು ಪ್ರಬಲ ದುಃಖಕ್ಕೆ ಗುರಿಯಾದರು. ಆದಿನ ವ್ಯಾಪಾರ ಕಛೇರಿಗಳೆಲ್ಲತ್ತ ಮುಚ್ಚಲ್ಪಟ್ಟವು. ಮಧ್ಯಾಹ್ನ ೧ ಘಂಟೆಗೆ ವಿಶೇಷ ವೈಭವದೊಡನೆ ಚಿನ್ನದ ಪಾಲಕ್ಕಿಯಲ್ಲಿ ಶವವು ರುದ್ರಭೂಮಿಗೆ ಸಾಗಿಸಲ್ಪಟ್ಟಿತು. ಅದರ ಮುಂದುಗಡೆ ಕೆಲವರು ಸಾಂಬ್ರಾಣಿ ಧೂಪಗಳು ಹಾಕುತಹೋದರು. ರಸ್ತೆಯಲ್ಲಿ ತಾಂಬ್ರದ ನಾಣ್ಯಗಳನ್ನೂ ಕುಂಕುಮವನ್ನೂ ಚೆಲ್ಲುತಹೋದರು. ಶವದ ಸಂಗಡ ಒಂದು ಸಾವಿರಮಂದಿ ಹೋದರು. ಸುಮಾರು ಹತ್ತು ಸಾವಿರಮಂದಿ ರಸ್ತೆಯ ಉಭಯಪಾರ್ಶ್ವಗಳಲ್ಲೂ ನೆರದಿದ್ದರು.

ಸಹಗಮನ —ಆರ್ಚಿಪೆಲಗೋ ದ್ವೀಪ ಸಮೂಹದಲ್ಲಿರುವ ಬಾಲಿ ಎಂಬ ದ್ವೀಪದಲ್ಲಿರುವ ಜನಗಳಲ್ಲಿ ಒಂದು ವಿಲಕ್ಷಣವಾದ ಕ್ರೂರಪದ್ಧತಿಯು ನಡೆಗೊಂಡಿದೆ ಏನೆಂದರೆ;—ಮನೆಯಲ್ಲಿ ಯಜಮಾನನಾದವನು ದೈವಾಧೀನನಾದರೆ ಪ್ರೀತಿಯಿಂದ ಸಾಕಿ ಸಂರಕ್ಷಿಸಿದ ಆತನ ಮುದ್ದು ಮಕ್ಕಳೂ, ಯುವತಿಯೂ ಆ ಶವದ ಸಂಗಡ ಸಹಗಮನ ಮಾಡಬೇಕಾದ ಸಂಗತಿಯು ಪ್ರಾಪ್ತವಾಗುತ್ತದೆ. ಮತ್ತು ಸತ್ತವನ ಯುವತಿಯು ಹೋಗುವದಕ್ಕೆ ನಿರಾಕರಿಸಿದರೆ ಆ ಮನೆಯಲ್ಲಿರುವ ಯಾರಾದರೂ ಒಬ್ಬ ಮನುಷ್ಯರು ಭರ್ಜಿಯಿಂದ ಅವಳ ಎದೆಯನ್ನು ತಿವಿದು ಕೊಂದು ತನಗೆ ಕಾರ್ಯ ನಿರ್ವಹಿಸುತ್ತಾರಂತೆ. ಈ ಸ್ಥಾವರದಲ್ಲೀಗ ನಿಷೇಧವೇನೂ ಇಲ್ಲ. ಆದರೆ ಬಾಲ ವಿಧವೆಗಳ ವಿಷಯದಲ್ಲಿ ಈಗ ನಮ್ಮ ಹಿಂದೂಸ್ಥಾನದಲ್ಲಿರುವ ವೈದಿಕ ಮಂಡಲಿಯವರ ಕಟ್ಟಳೆಯು ಈ ದ್ವೀಪದ ಕಟ್ಟಳೆಗೆ ಸ್ವಲ್ಪ ಹೆಚ್ಚು ಕಡಮೆಯಾಗಿ ಸಮವಾಗಿಯೇ ಇರುತ್ತದೆ—ವೃ. ಚಿ.

ಮೀಸೆ ಇಲ್ಲದ್ದರಿಂದ ಬರವೆರ್ಷ ಮಾಡಿದ್ದು. ಜರ್ಮನಿ ಎಂಬ ಪಟ್ಟಣದೊಳಗೆ ಒಬ್ಬ ಮನುಷ್ಯನಿಗೆ ಹುಟ್ಟಿದಾರಭ್ಯದಿಂದಲೂ ಮೀಸೆಯೇ ಇದ್ದಿಲ್ಲಾ. ಆದರೆ ಇವನ ಯುವತಿಯು ನನ್ನ ಗಂಡನಿಗೆ ಯಾವಾಗ ಮೀಸೆ ಬಂದಾವು? ಯಾವಾಗ ನಾನು ಅಪ್ಪ್ರತಿಯನ್ನು ನೋಡೇನು; ಎಂಬ ಚಿಂತಾಕುಲಚಿತ್ತಳಾಗಿ ಬಹಳ ದಿವಸದಿಂದ ಮಾರ್ಗ ನಿರೀಕ್ಷಿಸುತ್ತಾ ಇರುತ್ತಿದ್ದಳು. ಕಡೆಗೆ ಅವಳ [illegible] ಗಂಡನಿಗೆ ಮೀಸೆಯು ಬರುವ ಲಕ್ಷಣಗಳು ತೋರ ಬಾರದ್ದರಿಂದ ಒಂದು ದಿವಸ ಆ ತರುಣ ಯುವತಿಯು ಗಂಡನ ಮೋರೆಯನ್ನು ಚೆನ್ನಾಗಿ ಪರೀಕ್ಷಿಸಿ ನೋಡಿ ಮೀಸೆ ಇಲ್ಲದ್ದರಿಂದ [illegible] ನನಗೆ ಜೀವನವು [illegible] ಕೆಲಕೆಲವು ಕೀಳು ನುಡಿಗಳನ್ನು ಆಡಿ ಅವನನ್ನು ಬಯ್ದು [illegible] ಇರುತ್ತಾಳೆ. ನೋಡಿರಿ! ಸಕ್ಕನೇ ಮೀಸೆ ಇಲ್ಲದವರು ಹೆದರುವ ಮಾತು.—ಹ—ಸು

ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ಕಾಶ್ಮೀರ ಸಂಸ್ಥಾನದ ಸಂಬಂಧವಾಗಿ ಕೇಳಿದ ಪ್ರಶ್ನೆಗೆ ಉತ್ತರವಾಗಿ, ಕಾಶ್ಮೀರ ಸಂಸ್ಥಾನದ ಪ್ರಜೆಗಳ ಅಭ್ಯುದಯಾನುಗುಣವಾಗಿ ಕಾಶ್ಮೀರದ ಮಹಾರಾಜರ ಹಸ್ತಗಳಿಂದ ಸರಕಾರದವರಿಂದ ಯೋಗ್ಯ [illegible] ಮಹಾರಾಜರವರು ತಿರಿಗಿ [illegible] ಸಂಸ್ಥಾನದ [illegible] ಅಂದರೆ ಸೆಕ್ರಿಟರಿಗಳಾದ ಸರ್ ಜಾನ್ ಗಾರ್ಸ್ಟ [illegible] ರೆಗಳು [illegible]. ಇವರ ಮೇರಿಂದ, ನಮ್ಮ ಸರಕಾರದವರಿಗೆ ಮಹಾರಾಜರವರನ್ನು ತಿರಿಗಿ ಸಿಂಹಾಸನದ ಮೇಲೆ ಕೂಡ್ರಿಸುವ ಮನಸ್ಸಿಲ್ಲವೆಂದು ಕಾಣುತ್ತದೆ. ಆದರೆ ಈ ಕಾಶ್ಮೀರ ಪ್ರಕರಣದಲ್ಲಿ ನಮ್ಮ ಸರಕಾರದವರ ಮನಸ್ಸು ಇಂಗಿತವೇನೆಂಬದು ಸ್ಪಷ್ಟವಾಗಿ ತಿಳಿಯುವದಿಲ್ಲ. ಮಿಸ್ಟರ್ ಬ್ರಾಡ್ಲಾ ಮೊದಲಾದವರು ಈ ವಿಷಯವಾಗಿ ಪಾರ್ಲಿಮೆಂಟ ಸಭೆಯಲ್ಲಿ ಅಗೋಚ್ಯ ಪ್ರಶ್ನೆ ಕೇಳದೆ ಇರಲಿಕ್ಕಿಲ್ಲವಾದ್ದರಿಂದ ಸರಕಾರದವರ ಉದ್ದೇಶ ಎಂದಾದರೂ ತಿಳಿದೀತು. ಕ—ಸು.

ದರ್ಭಂಗಾ ದೇವಸ್ಥಾನದ ಮೊಕದ್ದಮೆ.—ಡೆಪ್ಯೂಟಿ ಡಿಸ್ಟ್ರಿಕ್ಟ ಅಸಿಸ್ಟೆಂಟ ಕಲೆಕ್ಟರವರು ಹಿಂದೂಗಳ ಮತಾಚಾರಗಳಿಗೆ ಪ್ರತ್ಯಕ್ಷ ವಿರುದ್ಧವಾಗಿ ನಡೆಸಿದ ಕೃತ್ಯಗಳಂ ಕೆಲವುವಾರಗಳ ಹಿಂದೆ ತಿಳಿಸಿ ಇರುತ್ತೇವೆಯಷ್ಟೆ. ಅದೇ ಕಾಲದೊಳು ಬಂಗಾಳೆಯಲ್ಲಿ ಒಂದು ದುಷ್ಕೃತ್ಯವು ನಡೆಸಲ್ಪಟ್ಟಿತು. ದರ್ಭಂಗಾ ಮ್ಯುನಿಸಿಪಾಲಿಟಿಯ ಪ್ರಸಿಡೆಂಟರಾದ ಮಿ|| ಖೇದರ್ ಎಂಬವರು ಒಂದು ಪುರಾತನ ದೇವಸ್ಥಾನವನ್ನು ಒಡೆದು ಹಾಕುವಂತೆ ಹುಕುಂ ಮಾಡಿ ವೈಸ್ ಪ್ರೆಸಿಡೆಂಟರು, ಇದು ಹಿಂದೂಗಳಾದವರಿಗೆ ಬಹಳ ಆಗ್ರಹವನ್ನುಂಟುಮಾಡತಕ್ಕ ಕಾರ್ಯವೆಂಬದನ್ನು ಸುತರಾಂ ಯೋಚಿಸದೆ ಪ್ರೆಸಿಡೆಂಟರ ಹುಕುಮನ್ನು ಜಾರಿಯಲ್ಲಿ ತಂದರು. ಈ ವಿಷಯವು ಗವರ್ನಮೆಂಟಿಗೆ ರಿಪೋರ್ಟಾಗಿ ಅವರು ತುರ್ತಲೆ ದರ್ಯಾಪ್ತಿಗೆ ಪ್ರಾರಂಭಮಾಡಿರುತ್ತಾರೆ. ಪಾಟ್ನಾ ಕಮಿಷನರರಾದ ಮಿ|| ಬಾಕ್ಸವೆಲ್ ಎಂಬವರು ಇದರ ದರ್ಯಾಪ್ತಿಯ ಬಗ್ಗೆ ಮೊಕರರ ಮಾಡಲ್ಪಟ್ಟು ಕೇವಲ ಅಕ್ಷರಿಯೊಡನೆ ಆರಂಭಿಸಿರುತ್ತಾರೆ. ವಿಚಾರಣೆಯು ನಿಷ್ಪಕ್ಷಪಾತವಾಗಿ ನಡೆಯತಕ್ಕಬಗ್ಗೆ ಗವರ್ನಮೆಂಟಿನವರು ಮಿ|| ಖೇದರ್ ಯವರನ್ನು ಸಸ್ಪೆಂಡ ಮಾಡಿರಬೇಕಾಗಿತ್ತು. ಈಗ ನಡೆಸಿರುವ ವಿಚಾರಣೆಯ ರೀತಿಯಿಂದ ಪ್ರಸಿಡೆಂಟರು ನಡೆಸಿದ ನಡವಳಿ ಸರಿಯಾದದ್ದೆಂಬದಕ್ಕೆ ಅವಕಾಶವು ಉಳ್ಳದ್ದಾಗಿರುತಿದೆ. ವಿಚಾರಣೆ ಇನ್ನು ಪೂರ್ತಿಯಾಗಲಿಲ್ಲವು. ಆದುದರಿಂದ ಈಗ ಯಾವ ಅಭಿಪ್ರಾಯವನ್ನಾದರೂ ಕೊಡಲು ಅಕಾಲವಾಗಿರುತಿದೆ. ಜಾತಿಮತ ತಾರತಮ್ಯವನ್ನು ಪುರಸ್ಕರಿಸದೆ ಅಥವಾ ಸಿವಿಲ ಸರ್ವಿಸನವರಿಗೆ ಅಪಯಶಸ್ಸುಂಟಾಗುವದೆಂದು ಹೆದರದೆ ನ್ಯಾಯನಿರ್ಣಯ ಮಾಡಲ್ಪಡುವದೆಂದು ಕೋರುತ್ತೇವೆ.—ಮರಾಠಾ.

ಮಂತ್ರಾಲೋಚಕ ಸಮಾಜದ ವಿಮರ್ಶೆಯ ವಿಷಯದಲ್ಲಿ ಲಾರ್ಡ ಕ್ರಾಸಿಯವರು ರಚಿಸಿದ ಮಸವಿದಾ ಕಾನೂನ.—ಮಿ|| ಬ್ರಾಡ್ಲಾಯವರು ಯಾವದಕ್ಕಾಗಿ ಹುಟ್ಟಿಸಿದರೋ ಅದು ಈಗ ಆಚರಣೆಗೆ ಬಂದಿದೆ. ಈಸಲದ ಪಾರ್ಲಿಮೆಂಟ ಸಮಾಜದಲ್ಲಿ ಇಂಡ್ಯಾದೇಶದ ಮಂತ್ರಾಲೋಚಕ ಸಮಾಜವನ್ನು ವಿಸ್ತರಣಮಾಡಿ ಅದರಲ್ಲಿ ಪ್ರಜಾಪ್ರತಿನಿಧಿತ್ವವನ್ನು [illegible] ಬಹಳ ಪ್ರಶ್ನೆಯಾಗಿರುತ್ತದೆ. ಈ ವೃದ್ಧಿ [illegible] ಸಮಾಜದ ಅಪೇಕ್ಷೆ ಮತ್ತು ಸಮ್ಮತಿಯ ಮೇಲೆ ಈರೀತಿ ಮಾಡಿರುತ್ತಾರೆಂತಲೂ ತಿಳಿದುಕೊಂಡಿದೆ. ಮಿಸ್ಟರ್ ಬ್ರಾಡ್ಲಾಯವರ ಸಂಧಿ ಸ್ವಭಾವ ಮತ್ತು ಪ್ರಾಮಾಣಿಕತೆಯು [illegible] ಸಮಾಜದಲ್ಲಿ ಬಹುಮಾನ ಅವರ ಪಕ್ಷವನ್ನವಲಂಬಿಸುವರೆಂದು ಹೇಳಿ, ಇಂಡ್ಯಾದೇಶದ ಲೆಜಿಸ್ಲೇಟಿವ್ ಕೌನ್ಸಿಲನ್ನು ವಿಸ್ತರಣ ಮಾಡುವ ವಿಷಯದಲ್ಲಿ ತಾವೇ ಒಂದು ಮಸವಿದಾ [illegible] ಹಾಕುತ್ತಾರೆ. ಈತನ್ನ ಪ್ರಸ್ತಾಪಿತಗುಂತ ಸ್ವಲ್ಪ ಹೇಳಾಗಿರುವದೆಂದು ಸೂಚಿಸುತಿದೆ. ಮತ್ತು ಈಮೇಲು ಗವರ್ನಮೆಂಟಿನಿಂದ [illegible] ಪದಿಂದಲೂ ಇಗನೆ [illegible] ಜಾರಾತಿಯಂ [illegible], ಮಿ ಬ್ರಾಡ್ಲಾಯವರು [illegible] ಹಿಡಿದು [illegible] ಸಮತಪದದ [illegible] ಲಾರ್ಡ ಕ್ರಾಸಿಯವರು ಪ್ರಾರಂಭ ಸೂಚಿಸಿದ ಬಹುದು ಲಾರ್ಡ ಕ್ರಾಸಿಯವರ ಪಿರ್ಣಯದ ಪ್ರಕಾರ [illegible] ಬದಲಾವಣೆಗಳುಯಾವ ವೆಂದರೆ, [illegible] ಅಧಿಕಾರ, ಮತ್ತು ಬಜೆಟ್ಟನ್ನು ಕುರಿತು ಚರ್ಚಿಸುವದು, ಇದೇರೀತಿಯ [illegible], ಮೆಂಬರುಗಳ ಸಂಖ್ಯೆಯನ್ನು ಹೆಚ್ಚಿಸುವದಕ್ಕೆ ಅವಕಾಶವಿಲ್ಲವು, [illegible] ಲೆಕ್ಕದಮೇಲೆ ಆಧಿಪ್ರಾಯ [illegible] ಮಂತ್ರಾಲೋಚಕಸಭೆಗಳು ಸೇರುವ ಕಾಲಗಳಲ್ಲಿ ಪ್ರಜೆಗಳ ಕಷ್ಟಸುಖಗಳು ತಿಳಿಸುವ ಅವಕಾಶವಿಲ್ಲವು. ಸ್ಥಳಿಕ ಮಂತ್ರಾಲೋಚಕ ಸಭೆಗಳಲ್ಲಿ ಮೇಲೆ ತಿಳಿಸಿದ ಯಾವ ಬಗೆ ವಿಮರ್ಶೆಗಳೊಳಗೆ, ಮೆಂಬರ್‌ಗಳ ಸಂಖ್ಯೆಯು ಜಾಸ್ತೀಮಾಡಲ್ಪಡುತದೆ. ಈಗ ತಿಳಿಸಲ್ಪಟ್ಟಿರುವ ವಿಮರ್ಶೆಯು ಕೇವಲ ಅಲ್ಪವಾದದ್ದು, ಇದನ್ನು ಸ್ಪಷ್ಟವಾಗಿ ನಾವು ಪಾರ್ಲಿಮೆಂಟು ಸಮಾಜಕ್ಕೆ ಅರಿಕೆಮಾಡಿಕೊಳ್ಳಬೇಕು. ಈ ವಿಷಯವನ್ನು ಕುರಿತು ಪಾರ್ಲಿಮೆಂಟಿನ ಸಮಾಜಕ್ಕೆ ಉಚಿತವಾಗಿ ಅಪೀಲ್ ಮಾಡಿಕೊಳ್ಳುವ ಕಾರ್ಯ ಕೇವಲ ಅವಶ್ಯಕವಾಗಿದೆ. ಮುಖ್ಯವಾದ ಪ್ರತಿಷಧನಿಂದಲೂ ಪಾರ್ಲಿಮೆಂಟಿನ ಸಮಾಜಕ್ಕೆ ಅರ್ಜಿ ಬರೆದುಕೊಳ್ಳತಕ್ಕ ಪ್ರೊವಿನ್ಷಿಯಲ್ ಸಮಾಜದವರು ಔದಾಸೀನ್ಯವಂ ವಹಿಸಲಾರರು.—ಮರಾಠಾ.

Bangalore.—Printed and published at the Karnatic Press, No. 103, Srinivasa Mandir Road Pettah—1890.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XVII.] BANGALORE:—MONDAY, MARCH 10 1890. [No. 10.

ಸಂಪುಟ ೧೭.] ಬೆಂಗಳೂರು:—ಸನ್ ೧೮೯೦ನೇ ಇಸವಿ ಮಾರ್ಚ ೧೦ ನೇ ತಾರೀಖ ಸೋಮವಾರ. [ಸಂಖ್ಯೆ ೧೦

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಕಾಲ್ ಗಳ್ಳ	ಸ್ಥಳದವರಿಗೆ ಹಾಸಲಿಲ್ಲದೆ.	ಪರಸ್ಥಳದವರಿಗೆ ಹಾಸಲ್ ಸೇರಿ.
ಮುಂಗಡಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ ದರಖಾಸ್ತು ಮಾಡಿದ ತಾರೀಖ್ ಮೊದಲು ಒಂದು ತಿಂಗಳೊಳಗಾಗಿ ಚಂದಾ ಹಣವನ್ನು ಕಳುಹಿಸುವವರಿಗೆ ಮಾತ್ರವೆ ಅಡ್ವಾನ್ಸ್ ದರದಂತೆ ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಮೂರು ತಿಂಗಳಿಗಿಂತ ಕಡಮೆ ಯಾಗಿ ಚಂದಾ ಹಣವು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ಮೊದಲು ಸಗಮುಕು ವ ಅರ್ಧವನ್ನು ಕಳುಹಿಸಿ ನಮ್ಮಿಂದಾದವು ಬಂದ ಕೂಡಲೇ ಬಾಕಿ ಅರ್ಧ ನೋಟನ್ನು ರವಾನಿಸತಕ್ಕದ್ದು. ಲಕೋಟೆಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಡಿಸ್ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅರ್ಧಾಣೆಯ ಸ್ಟಾಂಪುಗಳನ್ನು ಕಳುಹಿಸತಕ್ಕದ್ದು. ಡಿಸ್ಕೌಂಟಿಲ್ಲದೆ ಕಳುಹಿಸಿದ ಸ್ಟಾಂಪುಗಳಲ್ಲಿ ಅದು ವಜಾಮಾಡಲ್ಪಟ್ಟು ಮಿಕ್ಕದ್ದಕ್ಕೆ ಲೆಕ್ಕಕ್ಕೆ ದಾಖಲ್ಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯದಕ್ಕೆ ಪಙ್ಕ್ತಿ ಒಂದಕ್ಕೆ ೦—೨—೦

ಎರಡನೆಯದಕ್ಕೆ ಪಙ್ಕ್ತಿ ಒಂದಕ್ಕೆ ೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ತಡವೆ ಕಾಯಮ್ ದಾಖಲು ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಕಾಯಮಾಗಿ ಪ್ರಕಟನೆಗಳ ಕಳುಹಿಸುವವರು ಅವು ಎಷ್ಟಾವರ್ತಿ ಕಾಯಮ್ ಮಾಡಲ್ಪಡಬೇಕೊ ಆ ಅಂಕವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದಕ್ಕೆ ಅವರು ನಮಗೆ ನಿಲ್ಲಿಸುವಂತೆ ಬರೆಯುವವರೆಗೆ ಅವು ಪ್ರಕಟಿಸುತ ಇದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲ್ಕಂಡ ದರದಂತೆ ಕಿಮ್ಮತ್ತು ವಸೂಲ್ಮಾಡಲ್ಪಡುವದು. ಪ್ರಕಟನೆಯಾಗಲಿಕ್ಕೆ ಕಳುಹಿಸಲ್ಪಡುವ ಪ್ರಕಟನೆಗಳನ್ನು ಆ ವಾ ಸೋಮವಾರದ ಮುಂಚೆ ೧೨ ಘಂಟೆ ಒಳಗಾಗಿ ಕಳುಹಿಸಬೇಕು. ಪ್ರಕಟಿಸುವದಕ್ಕೆ ಈ ಪತ್ರಿಕೆಗೆ ಕಳುಹಿಸುವದಕ್ಕೆ ಕಾಗದಗಳ ತಿಳಿಸಲ್ಪಡದ ಅವಿಗಳು ಯಾರಿಗೆ ನಾವು ಜವಾಬ್ದಾರರಾಗಲಾರೆವು. ಸ್ಪಷ್ಟವಾಗಿ ರುಜುಮಾಡಿ ಕಳುಹಿಸದ ಯಾವ ಕಾಗದವನ್ನೂ ಪ್ರಕಟಿಸಲಾರೆವು. ಸಿರಾಕ್ ಟಪ್ಪಾಲ್ ಶುಲ್ಕವಿಲ್ಲದೆ ಬರುವ ಕಾಗದಗಳು ತೆಗೆದುಕೊಳ್ಳಲಾರೆವು.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

☞ *Price including Postage Rs 5 6-0*

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜು ಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಏನೂ ಕೊಡಲ್ಪಡಲಾರದು.

ಪುಸ್ತಕ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಚಾರ್ಜ್ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್,

ಬೆಂಗಳೂರ್, ಅಕ್ಕಿಪೇಟೆ, 41ನೇ ನಂ ಮನೆ.

ADVERTISEMNTS.

ನೋಟೀಸ್

ಅದ್ಭುತವಾದ ಒಂದು ಔಷಧ

ಹೊಟ್ಟೆಯಲ್ಲಿ ವಾಯು ಸೇರಿಕೊಳ್ಳುವದರಿಂದುಂಟಾಗುವಿಕೆ, ಪಿತ್ತದಿಂದ ತಲೆ ತಿರುಗುವಿಕೆ, ಕಣ್ಣುಗಳು ತಿರುಗುವಿಕೆ, ಭೋಜನವಾದನಂತರ ಹೊಟ್ಟೆ ತುಂಬಿಕೊಂಡು ಉಬ್ಬರಿಸಿ ಕೊಳ್ಳುವಿಕೆ, ತಲೆ ಗಿರ್ರನೆ ತಿರುಗುವಿಕೆ, ತೂಗಡಿಕೆ, ಚಳಿ, ಉಷ್ಣಾಧಿಕ್ಯದಿಂದ ಮುಖ ಕೆಂಪಾಗುವಿಕೆ, ಹಸಿವು ತಪ್ಪುವಣ, ಶ್ವಾಸರೋಗ, ಮಲಬದ್ಧ, ದೌರ್ಬಲ್ಯದಿಂದ ಮುಖದಲ್ಲಿ ಬೆವರುವಿಕೆ, ಚರ್ಮದಮೇಲೆ ಗುಳ್ಳೆಗಳು ಏಳುವಿಕೆ, ನಿದ್ರಾಭಂಗ, ಭಯಂಕರವಾದ ಕನಸುಗಳು, ಸಿಡಿತಗಳಿಂದುಂಟಾಗುವ ನಡುಕ, ಇವು ಮೊದಲಾದ ಪಿತ್ತ ಮತ್ತು ನರಸಂಬಂಧವಾದ ರೋಗಗಳೆಲ್ಲ ಬೀಚಾಮ್ ರವರಿಂದ ಮಾಡಲ್ಪಟ್ಟಿರುವ ಗುಳಿಗೆಗಳ ಡಬ್ಬಿ ಒಂದಕ್ಕೆ ಪತ್ತುಪರಿಯಾಯಿಗಳ ಕ್ರಯ ಕೊಡಬಹುದೆಂದು ಸಾಮಾನ್ಯವಾಗಿ ಇಂಗ್ಲೆಂಡಿನ ಲೂ ಅಂಗೀಕರಿಸಲ್ಪಟ್ಟಿದೆ. ಈ ಗುಳಿಗೆಯನ್ನು ಮೊದಲು ತೆಗೆದುಕೊಂಡ ೨೦ ನಿಮಿಷಗಳೊಳಗಾಗಿ ಗುಣಕಾಣುವದು. ಪ್ರತಿ ರೋಗಿಯೂ ಒಂದೊಂದು ಈ ಗುಳಿಗೆಗಳನ್ನು ತರಿಸಿ ಸೇವನೆ ಮಾಡಬೇಕೆಂದು ಕೋರುತ್ತೇವೆ. ಆಗ ಅದು ಒಂದುಗಿನಿ ಅಂದರೆ ಹತ್ತು ಪರಿಯಾಯಿಗಳ ಕ್ರಯ ಬಾಳುವದೆಂದು ಒಪ್ಪಿಕೊಳ್ಳುವರು.

ಎಲ್ಲಾ ವಯಸ್ಸಿನ ಹೆಂಗಸರಿಗೂ ಈ ಗುಳಿಗೆಗಳು ಅಮೂಲ್ಯವಾದವು. ಕೆಲವು ಅವಧಿ ಅನುಗ್ರಹವನ್ನು ಸೇವನೆ ಮಾಡಿದರೆ ದೇಹದಲ್ಲಿರುವ ಕೆಟ್ಟ ನೀರೆಲ್ಲ ಹೋಗಿ ಸುಗುಣಗಳನ್ನುಂಟುಮಾಡುವದು. ಯಾವ ಹೆಂಗಸೇ ಆಗಲಿ ಈ ಗುಳಿಗೆಯನ್ನು ತನ್ನಲ್ಲಿಟ್ಟುಕೊಳ್ಳದಿರಬೇಕು. ದೇಹ ತತ್ತ್ವಕ್ರಮಕ್ಕೆ ಬಾಧಕವಾದ ಯಾವ ರೋಗಕ್ಕಾಗಲಿ ಬೀಚಾಮ್ ರವರ ಗುಳಿಗೆಗಳಿಗೆ ಸಮಾನವಾದ ಔಷಧ ಮತ್ತೊಂದು ಇಲ್ಲವೆ. ಈ ಔಷಧದ ಪ್ರತಿಯೊಂದು ಡಬ್ಬಿಯ ಸಂಗಡ ಕಳುಹಿಸುವ ಕಾಗದದಲ್ಲಿ ತಿಳಿಸಲ್ಪಡುವ ಕ್ರಮವನ್ನನುಸರಿಸಿ ಅದನ್ನು ಸೇವನೆ ಮಾಡಿದರೆ ಎಲ್ಲಾ ವಯಸ್ಸಿನ ಹೆಂಗಸಿಗೂ ಸಂಪೂರ್ಣ ಆರೋಗ್ಯವೂ ಶಾಯುಕ್ತಿಯೂ ಉಂಟಾಗುವದು. ಈ ಅಂಶ ಇದನ್ನು ಸೇವನೆಮಾಡಿ ಗುಣಹೊಂದಿದ ಸಾವಿರಾರು ಜನರಿಂದ ಅನುಭವ ಪೂರ್ವಕ ರುಜುವಾತಿಗೆ ಬಂದಿದೆ.

ಅನ್ನಕೋಶದ ದೌರ್ಬಲ್ಯ, ಜೀರ್ಣಶಕ್ತಿ ತಪ್ಪುವಿಕೆ, ಇರುವಿಕೆ, ಪಿತ್ತಕೋಶದಲ್ಲಿನ ಎಲ್ಲವಿಧ ಬಾಧೆಗಳಿಗೂ ಈ ಗುಳಿಗೆಗಳು ಅದ್ಭುತವಾದ ಔಷಧ. ಇದನ್ನು ಕೆಲವು ವೇಳೆ ಸೇವನೆ ಮಾಡಿದರೆ ಮನುಷ್ಯನ ದೇಹದಲ್ಲಿನ ಅವಯವಗಳಿಗೆ ವ್ಯಾಪಿಸಿ ಅದ್ಭುತವಾದ ಕಾರ್ಯಗಳನ್ನು ಮಾಡುತ್ತದೆ. ಶಾಯುಕ್ತಿಯುಂಟಾಗುತ್ತಿವೆ. ಬಹುಕಾಲದ ಮೊದಲು ತಪ್ಪಿಹೋಗಿರುವ ಮುಖ ವರ್ಚಸ್ಸನ್ನೂ ಹಸಿವನ್ನೂ ಮರಳಿ ಉಂಟುಮಾಡಿ, ದೇಹಾರೋಗ್ಯದೊಡನೆ ಮನುಷ್ಯ ಶರೀರಕ್ಕೆ ಇರಬೇಕಾದ ತ್ರಾಣವನ್ನುಂಟುಮಾಡುತ್ತದೆ.

ಇದು ವಾಸ್ತವ್ಯವಾದದ್ದು. ಇದನ್ನು ಎಲ್ಲರೂ ಒಪ್ಪಿಕೊಂಡಿರುತ್ತಾರೆ. ಮತ್ತು ಈ ಪ್ರಪಂಚದಲ್ಲಿನ ಎಲ್ಲಾ ಔಷಧಗಳಿಗಿಂತಲೂ ಈ ಔಷಧ ಅಧಿಕವಾಗಿ ಬಿಕರೀಯಾಗುವದರಿಂದಲೇ ನಿಸ್ಸಂದೇಹವಾಗಿ ಇದು ಸರ್ವೋತ್ತಮವಾದ ಔಷಧವೆಂದು ನಂಬುವದಕ್ಕೆ ಕಾರಣವುಂಟಾಗಿದೆ.

Sole Agents for India

NAYLOR, SON, GRIMES, & CO.,

Wholesale Depot, 35, Clive Street, Calcutta

ನೋಟೀಸ್—ಔಷಧ ಬೇಕೆಂದು ಬರೆಯುವವರಿಗೆ ನೈಲರ್, ಸನ್, ಮತ್ತು ಗ್ರೈಮ್ಸ್ ಕಂಪೆನಿಯವರು ವಾಲ್ಯೂಪೇಬಲ್ ಪೋಸ್ಟಿನಲ್ಲಿ ನಮೂನಾ ಡಬ್ಬಿ ಒಂದು ರವಾನಿಸುವರು. ಅದರ ಕ್ರಯ ಇದರ ಸಮೂಹಕ್ಕೆ ಟ್ಟಿದೆ, ಹ್ಯಾಂಡರೆ—ಡಬ್ಬಿ ೧ ಕ್ಕೆ ೯ ಆಣೆ, ೧೪ ಆಣೆ, ಮತ್ತು ರೂ ೨ ೨ ಆಣೆ ಇರುತ್ತದೆ, ಬೇಕಾದದ್ದನ್ನು ತರಿಸಿಕೊಳ್ಳಬಹುದು, ಹಾಸಲ್ ಸೇರಿ ಕೊಡಬೇಕು.

ವೈದ್ಯರಿಗೂ ಔಷಧ ಮಾರುವವರಿಗೂ ಕೇಳಿಕೊಂಡರೆ ಒಟ್ಟು ಬಿಕರೀ ದರಕ್ಕೆ ಕೊಡಲ್ಪಡುವದು.

ನೋಟೀಸ್.

ಇದರಿಂದ ನಮ್ಮ ಚಂದಾದಾರರಿಗೂ ಇತರರಿಗೂ ಪ್ರಕಟಿಸುವದೇನಂದರೆ:—

ಸನ್ ೧೮೮೯ನೇ ಇಸವಿ ಡಿಸೆಂಬರ್ ಆಖೈರಿನವರೆಗೆ ಚಂದಾ ಬಾಕಿಯನ್ನು ಪೂರಾ ಕೊಟ್ಟಿರತಕ್ಕ ಚಂದಾದಾರರ ಹೆಸರುಗಳನ್ನು ಮಾತ್ರ ನಾವು ರಿಜಿಸ್ಟರ್ ದಾಖಲ್ಮಾಡಿಕೊಂಡು ಈ ವರ್ಷ ದಿ ವರೆಗಾಯಿತು ಪತ್ರಿಕೆ ಕಳುಹಿಸುತ್ತೇವೆ. ಆವರ ಪೈಕಿ ಯಾರಿಗಾದರು ಪತ್ರಿಕೆಯ ಅಪೇಕ್ಷೆ ಇಲ್ಲದಿದ್ದರೆ ಅಂತವರು ಕೂಡಲೇ ತಮ್ಮ ಅಭಿಪ್ರಾಯವನ್ನು ಮುದ್ರಿತವಾದ ಕಾರ್ಡನಲ್ಲಿ ನಮಗೆ ತಿಳಿಸಬಹುದು. ಪತ್ರಿಕೆಯ ಆವಶ್ಯಕತೆ ಇರತಕ್ಕವರು ಸಾಧ್ಯವಾದಷ್ಟು ತ್ವರೆಯಲ್ಲಿ ಚಂದಾ ಮೊಬಲಗನ್ನು ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಬೆಂಗಳೂರು. ತಾ ಜನೇವರಿ ೧೮೯೦.	ಟಿ. ಸಿ. ಶ್ರೀನಿವಾಸಾಚಾರ್ ಪ್ರೊಪ್ರೈಟರ್. ಕರ್ಣಾಟಕ ಪ್ರಕಾಶಿಕಾ.

ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪೆನಿ.

ರೈಲ್ವೆ ಕಂಟ್ರಾಕ್ಟದಾರರಿಗೆ ಇದರಿಂದ ತಿಳಿಸಲ್ಪಡುವದೇನಂದರೆ:—

ಮೈಸೂರು ಸ್ಟೇಟ್ ರೈಲ್ವೆ ರಸ್ತೆಯನ್ನು ಮೈಸೂರಿಂದ ನಂಜನಗೂಡು ವರಿಗೆ ೧೫ ಮೈಲುಗಳ ಫಾಸಲೆ ಬಡಾಯಿಸಿ ಹಾಕುವದಕ್ಕೆ ದರಖಾಸ್ತುಗಳನ್ನು ಸೀಲ್ಮಾಡಿ ಕಳುಹಿಸಿಕೊಡತಕ್ಕದ್ದು.

ಮೇಲ್ಕಂಡ ಮೈಲುಗಳಿಗೆ ಸೆಕ್ಷನ್, ಅಂದರೆ ಒಂದು ಭಾಗದ ಮೇಲೆ ವಿಂಗಡಿಸಲ್ಪಟ್ಟಿದೆ. ಅವುಗಳ ಪೈಕಿ ಒಂದು ಅಥವಾ ಜಾಸ್ತೀ ಸೆಕ್ಷನ್ನುಗಳಿಗೆ ದರಖಾಸ್ತುಗಳು ಅಂಗೀಕರಿಸಲ್ಪಡುವವು.

ದರಖಾಸ್ತುಗಳ ಲಕೋಟೆಯ ಮೇಲೆ ನಂಜನಗೂಡು ರೈಲ್ ರಸ್ತೆಗೆ ದರಖಾಸ್ತೆಂದು ಗುರ್ತು ಮಾಡಿ, ದಾರವಾಡದಲ್ಲಿರುವ ಏಜೆಂಟರು ವ ಚೀಫ್ ಇಂಜನಿಯರವರ ಹೆಸರಿಗೆ ರಿಜಿಸ್ಟರ್ ಮಾಡಿ ಕಳುಹಿಸತಕ್ಕದ್ದು. ಅವು ಸನ್ ೧೮೯೦ ನೇ ಇಸವಿ ಮಾರ್ಚಿ ೧೫ನೇ ತಾರೀಖ್ ಮಧ್ಯಾನ್ಹದವರೆವಿಗೆ ಬರಮಾಡಿಕೊಳ್ಳಲ್ಪಡುವವು.

ಏಜೆಂಟ ವ ಚೀಫ್ ಇಂಜನಿಯರವರು ಕಂದರಖಾಸ್ತನ್ನಾಗಲಿ ಯಾವ ದರಖಾಸ್ತನ್ನೇಯಾಗಲಿ ಅಂಗೀಕರಿಸುವದಕ್ಕೆ ಬದ್ಧರಾಗುವದಿಲ್ಲವು.

ಮಾಡಬೇಕಾದ ಕಾಮಗಾರಿಯ ಡಿಸ್ಕ್ರಿಪ್ಷನ್ ಪಟ್ಟಿ, ಸಾಮಗ್ರಿಗಳ ಪರಿಮಾಣದ ಪಟ್ಟಿ, ಕರಾರಿನ ನಮೂನೆ, ಇವುಗಳನ್ನು ಬೇಕಾದವರು ೫೦ ರೂಪಾಯಿಗಳು ಕೊಟ್ಟು, ದಾರವಾಡದಲ್ಲಿರುವ ಏಜೆಂಟ್ ವ ಚೀಫ್ ಇಂಜನಿಯರಿಂದ ಪಡೆಯಬಹುದು.

ಪ್ರತಿ ಒಂದು ದರಖಾಸ್ತಿನ ಸಂಗಡಲೂ ೧,೦೦೦ ರೂಪಾಯಿಗಳ ಮುಚಳಿಕಾರದ ಮೊಬಲಗು ಕಳುಹಿಸತಕ್ಕದ್ದು. ದರಖಾಸ್ತು ಮಂಜೂರ್ಮಾಡಲ್ಪಡದ ಪಕ್ಷಕ್ಕೆ ಸದರೀ ಮೊಬಲಗು ವಾಪಸ್ ಮಾಡಲ್ಪಡುವದು, ದರಖಾಸ್ತು ಮಂಜೂರ್ ಕೊಡಲ್ಪಟ್ಟರೆ ಅದು ಡಿಪಾಸಿಟಾಗಿ ಸೇರಿಸಿಕೊಳ್ಳಲ್ಪಡುವದು.

ದರಖಾಸ್ತಿನ ಪ್ರಕಾರ ಕಾಮಗಾರಿಗೆ ಹಿಡಿಯುವ ವೆಚ್ಚ ಮೊಬಲಗು ಪೈಕಿ ಸೇಕಡ ೫ ರೂಪಾಯಿಯಂತೆ, ಕಂಟ್ರಾಕ್ಟನ್ನು ಶ್ರದ್ಧೆಯಾಗಿ ಪೂರ್ತಿ ಮಾಡುವದಕ್ಕೆ ಜಾಮೀನ್ ಡಿಪಾಜಿಟ್ ಇಡತಕ್ಕದ್ದು.

ದರಖಾಸ್ತು ಮಂಜೂರ್ಮಾಡಲ್ಪಟ್ಟ ತಾರೀಖ್ ಆಗಾಯಿತು ಆರು ತಿಂಗಳೊಳಗಾಗಿ ಕಾಮಗಾರಿಯನ್ನು ಪೂರ್ತಿ ಮಾಡತಕ್ಕದ್ದು.

ವಿವರ್ತ ನಕ್ಷೆಗಳ ನಕಲುಗಳನ್ನೂ ಇತರ ಕಾಮಗಾರಿಗಳ ನಕ್ಷೆಗಳನ್ನು ದಾರವಾಡದಲ್ಲಿರುವ ಏಜೆಂಟ ವ ಚೀಫ್ ಇಂಜನಿಯರ ಆಫೀಸ್ನಲ್ಲಿ ನೋಡಬಹುದು.

ನೋಟೀಸ್.

ಬೆಂಗಳೂರಲ್ಲಿ ಸ್ಥಾಪಿಸಲ್ಪಟ್ಟಿರುವ ಕಬ್ಬಿಣದ ಸಾಮಾನುಗಳ ತಯಾರೀ ಕಾರ್ಖಾನೆಗೆ ದೊಡ್ಡದಾದ ಬಹಳ ಮೆಸ್ತ್ರಿಯವರನ್ನು ಹೆಚ್ಚಾಗಿ ಕೆಲಸಗಾರರನ್ನು ಒದಗಿಸಿಕೊಡುವದಕ್ಕೆ ಕಬ್ಬಿಣಾಗಿರಬೇಕು. ಲಾಯಕೀಯನ್ನನುಸರಿಸಿ ಸಂಬಳ ಕೊಡಲ್ಪಡುವದು.

ಬೆಂಗಳೂರು ಪೇಟೆಯಲ್ಲಿನ ಕಬ್ಬಿಣದ ಸಾಮಾನ್ ತಯಾರೀ ಕಾರ್ಖಾನೆಗೆ ಬರೆದುಕೊಳ್ಳಬಹುದು, ಅಥವಾ ರೂಬರೂ ಹಾಜರಾಗಿ ಕೇಳಿಕೊಳ್ಳಬಹುದು.

ಇಸ್ತಿಹಾರ್.

ಸನ್ ೧೮೭೦ನೇ ಇಸವಿ ಸೆಪ್ಟಂಬರ್ ೨೮ನೇ ಮುಕ್ಕಾಂ ೩೩೩೩—೯ನೇ ನಂ. ಇಸ್ತಿಹಾರಿನಲ್ಲಿ ವಿಷಯಕವಾಗಿರುವ ರೂಲ್ಸಿನ ಪ್ರಕಾರ ಇನಾಂ ಗ್ರಾಮಗಳ ಪಟೇಲರು ತಮ್ಮ ಗ್ರಾಮಗಳ ವಿಚಾರಣೆ ವೃತ್ತಿಕ್ಕೆ ಪಟ್ಟ ಏಜೆಂಟನ್ನ ನೇಮಿಸಬೇಕೆಂದು ಇರುವದರಿಂದಲೂ, ಮತ್ತು ಡಿಸ್ಟ್ರಿಕ್ಟಿನ ಬಹುಶಃ ಎಲ್ಲಾ ಇನಾಂ ಗ್ರಾಮಗಳಲ್ಲಿಯೂ ಏಜೆಂಟರುಗಳು ಶೋತ್ರರು ಆಗದೆ ಇರುವದಾಗಿ ನಮ್ಮ ನೋಟೀಸಿಗೆ ಬಂದು ಇರುವದರಿಂದಲೂ ಇದರಿಂದ ಜೋಡಿ ಕಾಯಂ ಗುತ್ತಾ ಮತ್ತು ಸರ್ವಮಾನ್ಯ ಇನಾಂದಾರರಿಗೆ ತಿಳಿಯಪಡಿಸುವದೇನಂದರೆ:—

ಈ ತಾರೀಖ್ ಆಗಾಯಿತು ಒಂದು ತಿಂಗಳ ವಾಯಿದೆ ಕೊಡಲ್ಪಟ್ಟಿರುತ್ತೆ. ಆ ವಾಯಿದೆಯೊಳಗೆ ಇನಾಂದಾರ್ರು ತಮ್ಮ ತಮ್ಮ ಗ್ರಾಮಗಳಿಗೆ ಪಟ್ಟ ಏಜೆಂಟನ್ನ ನೇಮಕಮಾಡಿಕೊಂಡು ಏಜೆಂಟಿನ ಹೆಸರನ್ನು ತಾಲ್ಲೂಕ್ ಅಮಲ್ದಾರ್ರುಗಳಿಗೆ ತಿಳಿಸಬೇಕು. ಹಾಗೆ ಶೋತ್ರರು ಬರುವದಕ್ಕೆ ತಪ್ಪಿದಲ್ಲಿ ಸದರೀ ನೋಟಿಫಿಕೇಷನ್ ೨ ನೇ ರೂಲ್ಸಿನ ಪ್ರಕಾರ ಡಿ. ಕ. ಸಾಹೇಬರವರು ಹೊಂದಿರುವ ಅಧಿಕಾರವನ್ನು ಚಲಾಯಿಸಿ ಪಟ್ಟ ಏಜೆಂಟನ್ನು ಶೋತ್ರರು ಮಾಡುವದರಲ್ಲಿ ಬರಬೇಕು. ಅಂತಾ ಏಜೆಂಟ ನಡೆಸುವ ಎಲ್ಲಾ ಕೆಲಸಗಳು ಇನಾಂದಾರ್ರು ಖುದ್ದು ತಾವೇ ನಡೆಸಿದಂತೆ ಇತ್ಯರ್ಥ ಸಲು ಬದ್ಧರಾಗಿರತಕ್ಕದ್ದಾರೆ. ಈ ರೂಲ್ಸಿ ಪ್ರಕಾರ ಈ ಇಸ್ತಿಹಾರಿನ ಕಾಪಿ ಒಂದು ಗ್ರಾಮದಲ್ಲಿ

ಪಟ್ಟ ಇನಾಂದಾರನಿಗಿಂತ ಹೆಚ್ಚಾಗಿ ಇನಾಂದಾರು ಯಾ ಹಿಸ್ಸೇದಾರು ಇರುವ ಗ್ರಾಮಗಳಿಗೆ ಅನ್ವಯಿಸುತ್ತೆ.

ತಾ॥ ೧ನೇ ಫೆಬ್ರವರಿ ೧೮೯೦ನೇ ಇಸವಿ. ಬೆಂಗಳೂರು

P. N. KRISHNAMURTI,
Deputy Commissioner.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MARCH 10, 1890.
೧೮೯೦ನೇ ಮಾರ್ಚಿ ತಾ॥ ೧೦ನೇ ಸೋಮವಾರ.

A LAUDABLE ATTEMPT.

ಬಂಗಾಳೆ ದೇಶಕ್ಕೆ ಸೇರಿದ ಢಾಕಾಪಟ್ಟಣದೊಳು ಅತಿ ಚಾರ ಚೇವಿಗಳಾದ ಹಿಂಗಸರ ಸಮೂಹವು ದಿನೇದಿನೆ ವೃದ್ಧಿಯನ್ನೈದುತ ಸದರೀ ಪಟ್ಟಣದ ಮಧ್ಯಪ್ರದೇಶದೊಳು ವಾಸಮಾಡುವ ಮಹಸ್ಥರಾದವರನೇಕರಂ ತಮ್ಮ ದುರ್ವೃತ್ತಿಗೆ ವಿಷಯೀಕರಿಸಿ, ತನ್ಮೂಲಕ ಅವರ ಪ್ರಾಣ, ಧನ, ಮಾನ, ಆರೋಗ್ಯಗಳಿಗೆ ಹಾನಿಯನ್ನುಂಟುಮಾಡುತ್ತಲಿರುವದಂ ಕಂಡು ಅಲ್ಲಿನ ಕೆಲವರು ದೊಡ್ಡ ಮನುಷ್ಯರು, ಸದರೀ ಸ್ವೈರಿಣೀ ಮಂಡಲಿಯನ್ನು ಪ್ರಜಾಮಧ್ಯದಿಂ ಪ್ರತ್ಯೇಕಿಸುವಣವು ಅವಶ್ಯ ಕರ್ತವ್ಯಮೆಂದಾಲೋಚಿಸಿ ಆಭಾಗದಲ್ಲಿ ತತ್ಪ್ರಯತ್ನಗಳಂ ಮಾಡುತಲಿರುವಂತೆ ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಪ್ರಜಾಕ್ಷೇಮಾಭಿವೃದ್ಧಿಗೆ ಆವಶ್ಯಕಗಳಾದ ಏರ್ಪಾಡುಗಳಂ ಸಾಧ್ಯವಾದಮಟ್ಟಿಗೆ ಪ್ರಜೆಗಳೇ ಪ್ರಾರಂಭಿಸಿ ಅವು ಕೈಗೂಡುವವಿಷಯದಲ್ಲಿ ತಮಗೆ ಪ್ರತಿಕೂಲ ಸಾಮಗ್ರಿಗಳೇನಾದರು ದೈವಾತ್ ಪ್ರಾಪ್ತವಾಗುವ ಸಂಭವ ಕಂಡುಬರುವ ಸಂದರ್ಭಗಳೊಳು ತನ್ನಿವಾರಣಾರ್ಥ ಗವರ್ನಮೆಂಟಿನವರ ಸಹಾಯವನ್ನಪೇಕ್ಷಿಸುವಣ ಉಚಿತವೇ ಹೊರತು, ಹಿಂದೂ ಸಮಯಾಚಾರ ಪರಿಷ್ಕರಣ ಪ್ರವರ್ತಕರು ಕೆಲವರು, ಶಾಸ್ತ್ರಚೋದಿತಮೆಂದು ಚಿರಕಾಲದಿಂ ಸಾರ್ವತ್ರಿಕಮಾಗಿ ಆಚರಿಸಲ್ಪಡುತಬರುವ ಕೆಲವು ಆಚಾರಗಳು ವಿಧಿಚೋದಿತಗಳಲ್ಲವೆಂಬ ಭಾವನೆಯಮೇಲೆ, ಅಂತಾ ಅಶಾಸ್ತ್ರೀಯಗಳಾದ ಭಾಗಗಳಂ ಪರಿಷ್ಕರಿಸಬೇಕೆಂದು ಪ್ರವರ್ತಿಸಿ, ಅವು ಬಹುಜನ ಸಮ್ಮತವಾಗುವಣವು ಅಸಾಧ್ಯವೆಂದು ಕಾಣಬರಲು ತಮ್ಮ ಇಷ್ಟಪೂರ್ತಿಗೆ ಗವರ್ನಮೆಂಟಿನ ಸಹಾಯವನ್ನಪೇಕ್ಷಿಸುವುದದಿ, ಮಾಡುವಣಮುಚಿತವಲ್ಲವು. ಇಂತಾ ವಿಷಯಗಳಲ್ಲಿ ಸರ್ಕಾರದ ಸಹಾಯವನ್ನಪೇಕ್ಷಿಸುವಣವು ಪ್ರತ್ಯರ್ಥಿಗಳಾದವರ ಮೌರ್ಖ್ಯವಂ ಮತ್ತಷ್ಟು ವೃದ್ಧಿಗೊಳಿಸುವಂತೆ ಯಾಗುವದೇ ಹೊರತು ಅನ್ಯಥಾ ಆಗಲಾರದು. ಬಹುಜನ ಪ್ರಾರ್ಥನೆಯಿಂದಲ್ಲದೆ ಗವರ್ನಮೆಂಟಿನವರು ಪ್ರವರ್ತಿಸುವರೆಂದು ನಾವೆಣಿಸಲಾರೆವು, ಮತ್ತು ಆರೀತಿ ಅವರು ಪ್ರವರ್ತಿಸುವಣವೂ ಉಚಿತವಾಗಿ ಯೆಣಿಸಲ್ಪಡಲಾರದು. ಶಾಸ್ತ್ರಸಮ್ಮತವಾಗಿರಲಿ ಅಶಾಸ್ತ್ರೀಯವಾಗಿರಲಿ ಸಾರ್ವತ್ರಿಕವಾಗಿ ಚಿರಕಾಲದಿಂ ನೆಲಗೊಂಡಿರುವ ಒಂದು ಆಚಾರವಂ ಪರಿಷ್ಕರಿಸಬೇಕಾದುದು ಕಾಲಕ್ರಮದಿಂದಲೂ ಬಹುಜನ ಸಮ್ಮತಿಯಿಂದಲೂ ನೆರವೇರಬೇಕಾದ ಕಾರ್ಯವಾಗಿರುತಿವೆ. ಅಂತಾ ಪ್ರಚಂಡಮಾರ್ಗಮಂ ಬಿಟ್ಟು ಪ್ರವರ್ತಿಸತಕ್ಕವರ ಪ್ರಯತ್ನಗಳು ಯೆಂದಿಗಾದರೂ ಕೈಗೂಡುವದೆಂದು ನಾವೆಣಿಸಲಾರೆವು.

SHAVING OF WIDOWS.

ಹಿಂದೂ ಸಮಯಾಚಾರ ಪರಿಷ್ಕರಣ ಪ್ರವರ್ತಕರಿಗೆ ಸಹಾಯಕವಾಗಿಯೂ ಪ್ರೋತ್ಸಾಹಕರೂಪವಾಗಿಯೂ ದೀನಬಂಧು ಎಂಬಪತ್ರಿಕೆಯು ಒಂದು ಉಪಾಯವಂ ಯೋಚಿಸಿ ತಿಳಿಸುತಿದೆ. ಅದೇನೆಂದರೆ—ಹಿಂದೂಜಾತಿ ಹಜಾಮರೆಲ್ಲರು ಕುಲಾಚಾರ ಗುಂಪುಗೂಡಿ ವಿಧವೆಯರಿಗೆ ಕ್ಷೌರಮಾಡುವ ದುಷ್ಕೃತ್ಯವಂ ಮುಂದೆ ನಡೆಸಕೂಡದೆಂದು ಸಂಕೇತ ಮಾಡಿಕೊಳ್ಳತಕ್ಕದ್ದು, ಎಂಬದು. ಇಂಡ್ಯದೇಶದ ಇತರಪ್ರದೇಶಗಳೊಳಿರುವ ಹಜಾಮರು ಸುಖಜೀವಿಗಳಾಗಿರುವಲ್ಲಿ ಮುಂಬೈಯಲ್ಲಿನ ಹಜಾಮರು ಕೇವಲ ದುಸ್ಥಿತಿಗೆ ಬಂದಿರುವದಕ್ಕೆ ವಿಧವೆಯರಿಗೆ ಮುಂಡನಮಾಡುವದರ ಮೂಲಕ ಉಂಟಾಗುವ ಪಾಪವೇ ಕಾರಣವೆಂದು ಸಹ ತಿಳಿಸುತಿದೆ. ಈ ಪ್ರಯತ್ನವು ಸುತರಾಂ ಸಾಧ್ಯವಾದುದಲ್ಲವೆಂಬ ವಿಷಯದಲ್ಲಿ ಮುಂಬೈ ಹವ್ಯಕಸುಬೋಧ, ಫುನೇ ಮರಾಟಾ ಮೊದಲಾದ ಪತ್ರಿಕೆಗಳು ವ್ಯಕ್ತಪಡಿಸಿರುವ ಅನುಭವಸಿದ್ಧಗಳಾದ ಅಭಿಪ್ರಾಯಗಳು ಸಮಂಜಸಗಳಾಗಿಯೇ ಕಾಣುತಿವೆ. ಪೇರೆ ಕೆಲವರು ಮುಂಡನ ಮಾಡುವ ಕ್ಷೌರಕನನ್ನೂ ಮಾಡಿಸುವ ತಾಯಿ ತಂದೆಗಳನ್ನೂ ಇಂಡಿಯನ್ ಪೀನಲಿಕೋಡ್ ಅನುಸರಿಸಿ ದಂಡನೆಗೆಗುರಿಮಾಡಿಸಬೇಕೆಂದು ಸೂಚಿಸುತಿವೆ. ಹಿಂದೂಗಳಲ್ಲಿ ತತ್ರಾಪಿ ದ್ವಿಜರ ಪೈಕಿ ಮುಂಡನ ವಿಧಿಗೆ ವಿಷಯರಾದವರ ಕುಟುಂಬವಲ್ಲಿ, ಬಾಲ್ಯ ದಶೆಯೊಳು ವೈಧವ್ಯಕ್ಕೆ ಗುರಿಯಾಗುವ ಹೆಂಗಸು ತನ್ನ ಪತಿಯ ಪ್ರೇತಕರ್ಮಗಳು ಪೂರ್ತಿಯಾದ ಕೂಡಲೆ ಮುಂಡನ ಮಾಡಿಕೊಳ್ಳಬೇಕೆಂದು ಬಲಾತ್ಕರಿಸಲ್ಪಡುವದಿಲ್ಲವು. ಪರಂತು ಅಂತವರು ದಾಕ ಮೊದಲಾದ ಕೆಲವು ಕಾರ್ಯಗಳಲ್ಲಿ ಪ್ರವರ್ತಿಸಕೂಡದೆಂಬ ನಿರ್ಬಂಧ ಉಂಟೆಂಬದರಲ್ಲಿ ಸಂಶಯ ವಿಲ್ಲವು. ಇಂತಾ ನಿರ್ಬಂಧವು ವಿಶಂತುಗಳಿಗೆಮಾತ್ರವಲ್ಲವು. ಭಾರ್ಯಾಹೀನರಾದ ಪುರುಷರಿಗೆ ಸಹ ಕೆಲವು ವೈದಿಕ ಕಾರ್ಯಗಳಲ್ಲುಂಟುಮಾಡಲ್ಪಟ್ಟಿರುತಿದೆ. ದ್ವಿಜರಲ್ಲಿ ಪುರುಷನಾಗಲಿ ಸ್ತ್ರೀಯಾಗಲಿ ಒಂದು ಆಶ್ರಮವಂ ವಹಿಸಿರಬೇಕು. ಅಂತಾ ಆಶ್ರಮಕ್ಕೆ ಅರ್ಹರಾಗಿ ಕಂಡುಬರುವಕಾಲವಲ್ಲಿ ಮುಂಡನ ಮಾಡಿಸುವಂತೆ ತೋರುತಿದೆ. ಹೀಗಿರುವಲ್ಲಿ ಬಾಲವಿಧವೆಯರ ತಾಯಿತಂದೆಯರು ಬಲಾತ್ಕಾರಪೂರ್ವಕ ಮುಂಡನಮಾಡಿಸುತ್ತಾರೆಂದು ಆರೋಪಿಸಿಕೊಂಡು ಅವರನ್ನೂ ಮುಂಡನಮಾಡುವ ಕ್ಷೌರಕನನ್ನೂ ದಂಡನೆಗೆ ಗುರಿಮಾಡಿಸಬೇಕೆಂದು ಅಭಿಪ್ರಾಯ ಕೊಡತಕ್ಕವರೂ, ಅಂತಾ ಅಭಿಪ್ರಾಯವಂ ಪ್ರೋತ್ಸಾಹಿಸತಕ್ಕವರೂ ಕುಟಿರಿದಬಗ್ಗೆ ಎಷ್ಟು ಸಂತೋಷಿಸಿದರೂ ಸಾಲದಾಗಿದೆ. ಮುಂಡನಮಾಡಿಸಿಕೊಳ್ಳುವದಕ್ಕೆ ಇಷ್ಟವಿಲ್ಲದವರು ಸ್ವತಂತ್ರರಾಗಿರುವದರಲ್ಲಿ ಯಾರ ಅಭ್ಯಂತರವೂ ಕಾಣಿಸುವದಿಲ್ಲವು. ಪರಂತು ವಿಧಿಚೋದಿತಗಳಾದ ಕರ್ಮಗಳಂ ಒಂದೊಂದಾಗಿ ತ್ಯಜಿಸುತಬರುವದರಿಂದ ಬಹುವಿಧ ಅನರ್ಥಗಳುಂಟಾಗುವದರಲ್ಲಿ ಲೇಶಮಾತ್ರ ಸಂದೇಹವಿರಲಾರದು. ಇವೆಲ್ಲವು ದೂರದೃಷ್ಟಿಯುಳ್ಳವರು ಆಲೋಚಿಸತಕ್ಕ ವಿಷಯಗಳಾಗಿರುತಿವೆ.

(ಒಬ್ಬ ಬಾತಮಿದಾರರಿಂದ)

ಪೂರ್ವಿಕರು ಮತ್ತು ಆಧುನಿಕರು.

ಈ ಭರತ ಖಂಡದ ಪೂರ್ವ ನಿವಾಸಿಗಳ ಸ್ಥಿತಿಯನ್ನೂ ಈಗಿನ ನಿವಾಸಿಗಳ ಸ್ಥಿತಿಯನ್ನೂ ಪರೀಕ್ಷಿಸಿ ನೋಡಿದರೆ, ಈ ಎರಡು ಸ್ಥಿತಿಗಳಿಗೂ ತಾರತಮ್ಯಗಳು ವಿಶೇಷವಾಗಿ ಕಾಣುತವೆ. ಅನೇಕ ಆಧುನಿಕವಿದ್ವಾಂಸರು, ಈ ಪ್ರಪಂಚವು ಮೊದಲು ಬಾಲ್ಯಾವಸ್ಥೆಯಲ್ಲಿದ್ದು, ಕ್ರಮಕ್ರಮವಾಗಿ ಯೌವನಾವಸ್ಥೆಯನ್ನು ಹೊಂದುತಲಿದೆ. ಎಂಬದಾಗಿಯೂ; ಪೂರ್ವದವರಿಗಿಂತಲೂ ಈಗಿನವರಿಗೆ ವಸ್ತುಶಾಸ್ತ್ರ, ಭೌತಿಕ ಶಾಸ್ತ್ರಗಳಲ್ಲಿ ನಿರೂಢವಾದ ಜ್ಞಾನ,ಮತ್ತು ಯಂತ್ರಗಳು, ಹೊಗೇ ಹಡಗುಗಳು, ರೈಲುಗಳು, ತಂತಿ, ಅಗಾಧವಾದ ಸಮುದ್ರದ ಭಾಗಗಳಿಗೂ ನದಿಗಳಿಗೂ ಸೇತುವೆಗಳ ನಿರ್ಮಾಣ, ವ್ಯವಸಾಯ, ವ್ಯಾಪಾರಗಳು, ನಾನಾವಿಧವಾದ ಶಿಲ್ಪ, ಇವುಗಳೆಲ್ಲಲ್ಲಿ ಆಧುನಿಕರು ಪೂರ್ವಿಕರಿಗಿಂತಲೂ ಬಹಳ ನಿಪುಣರೆಂದು ಗಣಿಸಲ್ಪಟ್ಟಿದಾರೆ. ಇದು ವಾಸ್ತವವೇ ಸರಿ. ಈ ನೈಪುಣ್ಯವು ಸ್ವಕಾರ್ಯ ಧುರಂಧರತ್ವವನ್ನು ಪ್ರಚಾರ ಮಾಡುವದರಲ್ಲಿ ಪ್ರವರ್ತಕವಾಗಿದೆಯೇ ಹೊರತು, ಪರೋಪಕಾರಕ್ಕೆ ವಿಶೇಷ ಅವಕಾಶವನ್ನುಂಟುಮಾಡಲಿಲ್ಲವು. ಪ್ರೋತ್ಸಾಹವಾದ ನೈಪುಣ್ಯಗಳೊಡನೆ ದಾರಿದ್ರ್ಯತಿಶಯ ನ್ಯುಂಟಾಗಿದೆ. ಈಗಿನ ನಾಗರಕತೆಯ ಜೊತೆಯಲ್ಲಿ ಕುಶಲವಾದ ದುರ್ಮಾರ್ಗ ಪ್ರವರ್ತನೆಯೂ, ಅದರಿಂದ ಕಾಯಿಲ್ಲೇಶ ಮನಃಕ್ಲೇಶಗಳೂ, ಹಾಗೆಯೇ ನಾನಾ ವಿಧವಾದ ಮತ್ತು ಅಭೂತ ಪೂರ್ವವಾದ ಜಾಡ್ಯಗಳೂ, ಅದರಿಂದ ಕಾಲಹರಣವೂ ಇವುಗಳೆಲ್ಲ ಸಂಘಟಿಸಿವೆ. ಪೂರ್ವ ಕಾಲದಲ್ಲಿದ್ದ ಈ ಭಾರತೀಯರು ವಿಶೇಷ ನೈಪುಣ್ಯರಾಗಿಲ್ಲದೆ ಇದ್ದಾಗ್ಯೂ, ಈಗಿನಂತೆ ದಾರಿದ್ರ್ಯಾವಸ್ಥೆಯನ್ನು ಅನುಭವಿಸುತ್ತಿರಲಿಲ್ಲವು. ಆ ಕಾಲದಲ್ಲಿ ದ್ರವ್ಯಾರ್ಜನೆ ಕಡಮೆಯಾಗಿದ್ದಾಗ್ಯೂ ಅಶನವಸನಗಳಿಗೆ ನ್ಯೂನತೆ ಇರಲಿಲ್ಲ. ಜನಗಳು ಸುಲಭೋಪಾಯದಿಂದ ಉದರ ಭರಣವನ್ನು ಮಾಡಿಕೊಂಡು, ವಿರಾಮ ಕಾಲಗಳಲ್ಲಿ ಪರಲೋಕ ಜ್ಞಾನ ಸಂಬಂಧವಾದ ತತ್ವ ವಿಚಾರದಲ್ಲಿ ನಿರತರಾಗಿದ್ದರು. ಆ ಕಾಲದಲ್ಲಿ ವಿದ್ಯಾವಂತರು ವಿರಳರಾಗಿದ್ದಾಗ್ಯೂ ಪ್ರಾಯೇಣ ಧರ್ಮಪ್ರವರ್ತನೆಯಲ್ಲಿಯೇ ನಿರತರಾಗಿದ್ದರು. ಈಗಿನ ಭಾರತೀಯರ ಸ್ಥಿತಿಯನ್ನು ವಿಚಾರಿಸೋಣ. ವಿದ್ಯಾಭ್ಯಾಸವು ಪೂರ್ವಕ್ಕಿಂತಲೂ ಈಗ ವಿಶೇಷವಾಗಿದೆ; ಆದರೆ ಇದು ವೃದ್ಧಿಗೆ ಬಂದಂತೆ ಧರ್ಮಪ್ರವರ್ತನೆಯು ವೃದ್ಧಿಗೆ ಬರಲಿಲ್ಲ. ದೇಶಾಂತರದವರ ಯಂತ್ರ ಸಹಾಯದಿಂದ ನಡೆಯತಕ್ಕ ಕೈಗಾರಿಕೆ ಕೆಲಸಗಳಿಂದ, ನೌರಾಗಿಯೂ ಮನೋಹರವಾಗಿಯೂ ಇರುವ ವಸ್ತ್ರಗಳು ಯಾರಿಗೂ ವಿಶೇಷ ಶ್ರಮವಿಲ್ಲದೆ ಲಭಿಸುತಿವೆ ಆದರೆ ಅಂಗಕ್ಕೆ ಭೂಷಣವಾದ ಈವಸ್ತ್ರಗಳಂತೆ ಮನಸ್ಸಿಗೆ ಭೂಷಣವಾದ ಭೂತದಯ ಪಶ್ಚಾತ್ತಾಪಗಳು ನಾಮಾವಶೇಷವಾಗಿವೆ; ಅಂದರೆ ಸ್ವಕಾರ್ಯಸಿದ್ಧಿಗೋಸ್ಕರ ಅಭಿನಯಿಸತಕ್ಕವರ ವಾಗ್ವಿಜೃಂಭಣೆಯಲ್ಲಿ ಮಾತ್ರ ಈ ಗುಣಾತಿಶಯಗಳು ವ್ಯಕ್ತವಾಗುತವೆ. ಪೂರ್ವಕಾಲಕ್ಕಿಂತಲೂ ಈಗ ಅಸತ್ಯಪ್ರವರ್ತಕರೂ ತುಂಬರೂ ಹೆಚ್ಚಾಗಿರುತ್ತಾರೆ. ಈ ಕಾಲದ ನಾಗರಕತೆಯ ಮಹಿಮೆಯಿಂದ ಘನತೆಯನ್ನು ಹೊಂದಿರುವಂತೆ ಕಾಣತಕ್ಕವರು ಸಹ ಯಾರಿಗೂ ತಿಳಿಯದಂತೆ ಕುಮಾರ್ಗಪ್ರವರ್ತನೆಯಲ್ಲಿ ನಿರತರಾಗಿರುತ್ತಾರೆ. ಅರ್ಥವು ಪ್ರಾಣಕ್ಕಿಂತ ಅಧಿಕವಾಗಿ ಎಣಿಸಲ್ಪಟ್ಟಿದೆ. ಅವತಾರ ಪೂರ್ತಿಸಿದ ಮೇಲೆ ಪ್ರಾಣಕ್ಕಿಂತಲೂ ಅಧಿಕವಾಗಿ ಕಾಣಿಸಲ್ಪಟ್ಟ ದ್ರವ್ಯವು ಯಾವ ಪುರುಷಾರ್ಥವನ್ನು ಉಂಟುಮಾಡುವದೆಂದು ಯೋಚಿಸುವಂತವರೇ ಅಪೂರ್ವ. ಈ ಅರ್ಥಕ್ಕಾಗಿ ದುರ್ಮಾರ್ಗ ಪ್ರವರ್ತನೆಯೂ, ಸನ್ಮಾರ್ಗ ನಿವೃತ್ತಿಯೂ, ಆಗತಕ್ಕ ಕೆಲಸಗಳಲ್ಲಿ ಉತ್ತರ ಫಲವನ್ನು ನಿರೀಕ್ಷಿಸದೆ, ದೀಪಕ್ಕೆ ಬೀಳುವ ಶಲಭಗಳಂತೆ ನಡಮಕೊಳ್ಳುವ ಅಜ್ಞಾನಿಗಳ ಸ್ಥಿತಿಯೂ ಅತ್ಯಂತ ಶೋಚನೀಯವಾದದ್ದು. ಜ್ಞಾನಿಗಳೂ ಕೂಡ ಹೀಗೆ ದುರ್ಮಾರ್ಗದಲ್ಲಿ ಪ್ರವರ್ತಿಸುವದು ರೂಢಿಯಾಗುತಲಿದೆ. ಇದಕ್ಕಾಗಿ ಎಷ್ಟು ವ್ಯಥೆಪಟ್ಟಾಗ್ಯೂ ಕಡಮೆಯಾಗಿಯೇ ಇದೆ. ಜ್ಞಾನಿಷ್ಠರಾಗಿಯೂ ಧರ್ಮಮಾರ್ಗೈಕಪರರಾಗಿಯೂ ಇರತಕ್ಕ ಮಹಾನುಭಾವರು ಪೂರ್ವಿಕರ ಮತ್ತು ಆಧುನಿಕರ ಸ್ಥಿತಿಯನ್ನು ವಿಚಾರಿಸಿ, ಜ್ಞಾನಿಷ್ಠರಾಗಿಯೂ ಸಕಲ ತತ್ವಗಳನ್ನು ತಿಳಿದವರಾಗಿಯೂ ಇದೇವೆಂದು ಹೆಸರಿಗೆ ಮಾತ್ರ ಅಭಿನಯಿಸುತ ಅಂತಃ ದುರ್ಮಾರ್ಗಪ್ರವರ್ತನೆಯುಳ್ಳಿರುವ ಆಧುನಿಕ ಪಂಡಿತ ಶಿಖಾಮಣಿಗಳಿಗಿಂತ, ಪಾಮರರಾಗಿದ್ದಾಗ್ಯೂ ಭೂತದಯ ಪಶ್ಚಾತ್ತಾಪಗಳನ್ನು ಹೊಂದಿದ್ದ ನಮ್ಮ ಪೂರ್ವದ ಭಾರತೀಯರೇ ಸರ್ವೋತ್ತಮರೆಂದು ಭಾವಿಸುತ್ತಾರೆ. ಇದು ಸಹಜವಾಗಿಯೇ ತೋರುತದೆ.

Occasional Notes.
ನೈಮಿತ್ತಿಕ ವಿಷಯನ್ಯಾಸ.

The Commander-in-Chief of India. ಇಂಡ್ಯರಾಜ್ಯದ ಕಮಾಂಡರ್‌ಇನ್‌ಚೀಫರವರು ಆಸ್ಸಾಂದೇಶ ಸಂಚಾರಾರ್ಥ ಈತಿಂಗಳ ೧೫ನೇ ತಾರೀಖಿನಲ್ಲಿ ಪ್ರಯಾಣವಾಗುವರು.

Influenza.—ಇನ್‌ಫ್ಲುಯೆನ್ಜಾ ಎಂಬ ವಿಷಮ ಶೀತರೋಗವು ಲಕ್ನೋ ಷಹರಿನಲ್ಲಿ ಬಲವಾಗಿ ತಲೆದೋರಿ ಅಲ್ಲಿರುವ ಸೈನ್ಯಗಳಿಗೆ ವ್ಯಾಪಿಸಿ ಬಹುಮಂದಿ ಸೈನಿಕರು ಕಾಹಿಲೆಯಾಗಿರುವಂತೆ ತಿಳಿಯಬರುತಿದೆ.

A proposal.—ಈಸ್ಟಿಂಡಿಯನ್ ರೈಲ್ವೆ ಇಲಾಖೆಯ ಕಾರ್ಯ ನಿರ್ವಹಣೆಯಬಗ್ಗೆ ಇಂಡ್ಯದೇಶದಲ್ಲಿ ಬೋರ್ಡಾಫ್ ಡೈರೆಕ್ಟರ್ಸ್ ಎಂಬ ಒಂದು ಸಭೆಯನ್ನೇರ್ಪಡಿಸಬೇಕೆಂಬ ಆಲೋಚನೆ ಯುಂಟಾಗಿರುವಂತೆ ತಿಳಿಯಬರುತಿದೆ.

Easter Holidays.—ಈಸ್ಟರ್ ಹಬ್ಬದಬಗ್ಗೆ ಮದರಾಸ್ ಹೈಕೋರ್ಟ್, ಸ್ಮಾಲ್‌ಕಾಜ್ ಕೋರ್ಟ್, ಪ್ರಿಸಿಡೆನ್ಸಿಮ್ಯಾಜಿಸ್ಟ್ರೇಟರ ಕೋರ್ಟುಗಳು, ಇವೆಲ್ಲವು ಬರುವ ಏಪ್ರಿಲ್‌ತಿಂಗಳ ೩ನೇ ತಾರೀಖ್ ಗುರುವಾರದಮೊದಲು ಅದೇತಿಂಗಳ ೮ನೇ ತಾರೀಖ್ ಮಂಗಳವಾರದವರಿಗೆ ಮುಚ್ಚಲ್ಪಡುವವು

The Mahant of Tirupathi's appeal. ತಿರುಪತಿ ಮಹಂತರವರು ಮಾಡಿಕೊಂಡಿರುವ ಅಪೀಲ್ ಮೊಕದ್ದಮೆಯು ನಾಳೆ ಮಂಗಳವಾರದದಿನ ಮದರಾಸ್ ಹೈಕೋರ್ಟಿನಲ್ಲಿ ಮೂವರು ಜಡ್ಜಿಗಳಮುಂದೆ ದರ್ಯಾಪ್ತಿಗೆ ಪ್ರಾರಂಭವಾಗುವದು. ಅದರ ಪರ್ಯವಸಾನವನ್ನು ಮುಂದಿನ ವಾರದಲ್ಲಿ ತಿಳಿಸುವೆವು.

Assault.—ಕಾಶ್ಮೀರದೇಶದ ಕಮಾಂಡರ್‌ಇನ್‌ಚೀಫರವರಾದ ರಾಜಾ ರಾಂಸಿಂಗ್‌ರವರು ಈಚೆಗೆ ಯೊಂದುದಿನ ತಮ್ಮ ಆಫೀಸಿಗೆ ಹೋಗುತ್ತಲಿರುವಾಗ್ಯೆ ಒಬ್ಬಾತನು ಕೈಯಲ್ಲಿ ಒಂದು ಅರ್ಜಿಯಂ ಹಿಡಕೊಂಡುಬಂದು ರಾಜಾ ರಾಂಸಿಂಗರನ್ನು ಮುಖದಮೇಲೆ ಹೊಡದಂತೆಯೂ, ಕೂಡಲೆ ಸದರೀ ದುಷ್ಟನು ದಸ್ತಗಿರಿ ಮಾಡಲ್ಪಟ್ಟದ್ದಾಗಿಯೂ ಒಂದಾನೊಂದು ಪತ್ರಿಕೆ ತಿಳಿಸುತವೆ.

Gunpowder explosion.—ಪತಿಯಾಲಾ ಸಂಸ್ಥಾನಕ್ಕೆ ಸೇರಿದ ರಾಜಪುರವೆಂಬ ಷಹರಿನಲ್ಲಿ ಒಂದು ಮನೆಯೊಳು ೪೦ ಮಣ ತೋಫ್ ಮದ್ದು ಇಡಲ್ಪಟ್ಟಿತ್ತು. ಕಳೆದ ವಾರದೊಳು ಒಂದುದಿನ ಸದರೀ ಮನೆಯಲ್ಲಿ ಇಬ್ಬರು ಹೊಗೇ ಸುತ್ತು ಸೇದುತಲಿರುವಲ್ಲಿ ದೈವಾತ್ ಹ್ಯಾಗೋ ಒಂದು ಕಿಡಿ ಹಾರಿ ತೋಫ್‌ಮದ್ದಿಗೆ ತಗಲಿ ಅದು ಧಗ್ಗನೆ ಹತ್ತಿಕೊಂಡು ಸುಮಾರ್ ಇಪ್ಪತ್ತು ಮನೆಗಳು ಸುಟ್ಟುಹೋದದಲ್ಲದೆ ಪ್ರಾಣ ನಾಶಗಳು ಸಹ ಬಲವಾಗಿಯೇ ಆದಂತೆ ತಿಳಿಯಬರುತಿದೆ.

Term extended.—ಮದರಾಸ್ ಸ್ಮಾಲ್‌ಕಾಜ್ ಕೋರ್ಟ್ ದುಯ್ಯಂ ಸಿಯ್ಯಂ ಜಡ್ಜಿಗಳಾದ ಮೆ॥ ಪಿ. ಶ್ರೀನಿವಾಸರಾವ್ ಮತ್ತು ಮೆ॥ ಟಿ. ವಿ. ಪೊನ್ನುಸಾಮಿಪಿಳ್ಳೆ, ಇವರಿಬ್ಬರಿಗೂ ೫೫ವರ್ಷಗಳ ವಯಸ್ಸು ಭರ್ತಿಯಾಗಿದ್ದಾಗ್ಯೂ ಅವರಿಬ್ಬರಿಗೂ ಮದರಾಸ್ ಗವರ್ನಮೆಂಟಿನವರು ಇನ್ನೊಂದುವರ್ಷದ ಕಾಲವಾಯಿದೆ ಕೊಟ್ಟಿರುತ್ತಾರೆ. ಕಾರಣಾಂತರಗಳಿಂದುಂಟಾಗುವ ಅಸೂಯಾಜನಕವಾದ ವಿದ್ವೇಷವಂ ಬಿಟ್ಟು ಯೋಗ್ಯತೆಯನ್ನೇ ಪ್ರಾಧಾನ್ಯೇನ ಪುರಸ್ಕರಿಸುವ ಸ್ವಭಾವವುಳ್ಳ ಗವರ್ನಮೆಂಟಿನವರು ಮಾಡುವ ಕಾರ್ಯಗಳೆಲ್ಲವು ಹೀಗೆಯೇ ಇರುವವು.

Opening of a Railway.—ಜಮ್ಮೋ ಪಟ್ಟಣದವರಿಗೂ ಕಾಶ್ಮೀರಕ್ಕೂ ಹಾಕಲ್ಪಡುವ ರೈಲು ರಸ್ತೆಯನ್ನು ಈ ತಿಂಗಳ ಅಂತ್ಯಭಾಗದಲ್ಲಿ ಇಂಡ್ಯ ಗವರ್ನಮೆಂಟ್ ಕನ್‌ಸಲ್ಟಿಂಗ್ ಇಂಜನಿಯರವರು ಅಜಮಾಯಿಷಿ ಮಾಡಿದಮೇಲೆ, ಏಪ್ರಿಲ್ ೧ನೇ ತಾರೀಖಿನಲ್ಲಿ ಪ್ರಜೆಗಳ ಆಮದರಫ್ತು ಆಗ್ಯೆ ಗಾಡಿಗಳು ನಡೆಸುವದಕ್ಕಾಗಿ ವಾಯವ್ಯದೇಶದ ರೈಲು ಇಲಾಖೆಯವರಿಗೆ ಒಪ್ಪಿಸಲ್ಪಡುವದು.

Indian cutlery.—ಭರದ್ವಾಜ್ ದೇಶದಲ್ಲಿ ಬಂಗಾಳೇ ದೇಶದವನೊಬ್ಬಾತನು ಮಾಡುವ ಚೂರಿಗಳೂ, ಕತ್ತರಿಗಳೂ ವಿಶೇಷವಾಗಿ ಬಿಕರೀಯಾಗುವದರಿಂದ ಇನ್ನು ಸ್ವಲ್ಪ ದಿನಗಳಲ್ಲೇ ಇಂಗ್ಲಾಂಡ್ ದೇಶದಿಂದ ಆಮದು ಮಾಡಲ್ಪಡುವ ಸದರಿ ಪದಾರ್ಥಗಳಿಗೆ ಗಿರಾಕಿ ಕಡಮೆಯಾಗಬಹುದೆಂದು ಕಾಣುತಿದೆ. ಬಂಗಾಳೇ ಗವರ್ನಮೆಂಟಿನವರು ಭರದ್ವಾಜ್ ಕೆಲಸಗಾರರಿಂದಲೇ ಸದರೀ ಪದಾರ್ಥಗಳು ಕೊಂಡುಕೊಳ್ಳುತ್ತಾರೆ.

LOCAL AND PROVINCIAL NEWS.
ಸ್ವದೇಶಮತ್ತು ತಾಲ್ಲೂಕಜಾತವೃತ್ತಾಂತಗಳು.

Rain.—ಕಳೆದ ಬುಧವಾರ ಮಧ್ಯಾಹ್ನ ಹು ಮಾರು ೧೨ ಘಂಟೆಯ ಮೇಲೆ ಬಲವಾಗಿ ಮೋಡ ಮುಸುಕಿ ಅರ್ಧ ಘಂಟೆಯಕಾಲ ಗಟ್ಟಿಯಾಗಿ ಮಳೆ ಹೊಡೆಯಿತು. ಈ ವರ್ಷವು ಅರ್ಧ ಅಂಗುಲಕ್ಕೆ ಮೇಲ್ಪಟ್ಟದ್ದು. ಬೃಹಸ್ಪತಿವಾರದಿನ ಸಾಯಂಕಾಲ ಆರುವರೆ ಘಂಟೆಯಮೇಲೆ ವರ್ಷಕ್ಕೆ ಪ್ರಾರಂಭವಾಗಿ ರಾತ್ರಿ ಬಹಳಹೊತ್ತಿನವರೆಗೆ ಹನಿ ಬೀಳುತಲಿತ್ತು. ಪರಂತು ಹಿಂದಿನ ದಿನದಲ್ಲಿ ಬಿದ್ದಷ್ಟು ಬಲವಾದದ್ದಲ್ಲವು. ಈ ವರ್ಷದ ದೆಸೆಯಿಂದ ಬೀದಿಗಳಲ್ಲಿ ಧೂಳು ಸ್ವಲ್ಪ ಅಡಗಿರುತಿದೆ.

Official changes.—ಮೈಸೂರು ಡಿಸ್ಟ್ರಿಕ್ಟ ಮತ್ತು ಸೆಷನ್ ಜಡ್ಜಿಯಾದ ಮಿ॥ ದೇವಾಜಿ ರಾಯರವರು ಮರಳಿ ಇನ್ಸಪೆಕ್ಟರ್ ಜೆನರಲ್ ಆಫ್ ರಿಜಿಸ್ಟ್ರೇಷನ್ ಕೆಲಸಕ್ಕೆ ವಾಪಸ್ ಕಳುಹಿಸಲ್ಪಟ್ಟು ಅವರ ಕೆಲಸಕ್ಕೆ ಮೈಸೂರು ಸಬಾರ್ಡಿನೇಟ ಜಡ್ಜಿಯಾದ ಮಿ॥ ಶ್ರೀನಿವಾಸಯ್ಯಂಗಾರ್ರವರೂ, ಅವರ ಕೆಲಸಕ್ಕೆ ಈಗ ಚೀಫ್ ಕೋರ್ಟ್ ರಿಜಿಸ್ಟ್ರಾರ್ ಕೆಲಸವು ನೋಡುತಲಿರುವ ಮಿ॥ ಸುಬ್ಬರಾಯ ಅಯ್ಯರೂ ಮೊಕರರ್ಮಾಡಲ್ಪಡುವರಲ್ಲದೆ ಮಿ॥ ದೇವಾಜಿ ರಾಯರವರಿಗೆ ರಿಜಿಸ್ಟ್ರೇಷನ್ ಜನರಲ್ ಕೆಲಸ ಸಹ ಸೇರಿಸಿ ಕೊಡಲ್ಪಟ್ಟು, ಈಗ ಅವರು ಪಡೆಯುತಲಿರುವ ೪೦೦ರೂ ಸಂಬಳಕ್ಕೆ ಹೆಚ್ಚಾಗಿ ಕೊಡಲ್ಪಡುವದೆಂಬ ಪ್ರವಾದ ಪ್ರಬಲಿಸಿದೆ.

H. H. the Raja of Poodookota—ಪುದುಕೋಟೆ ಅರಸರವರು ಇಲ್ಲಿಗೆ ಬರುತ್ತಾರೆಂದು ಕಳೆದವಾರದ ಪತ್ರಿಕೆಯ ಮೂಲಕ ತಿಳಿಸಿದ್ದೆವಷ್ಟೆ. ಅದೇ ಪ್ರಕಾರ ಕಳೆದ ಮಂಗಳವಾರ ಪ್ರಾತಃಕಾಲ ಈ ಪುರಿಗೆ ಬಂದರು. ಈ ಅರಸರನ್ನು ಉಚಿತ ಮರ್ಯಾದೆಗಳೊಡನೆ ಬರಮಾಡಿಕೊಳ್ಳುವದಕ್ಕಾಗಿ ಈ ಸಂಸ್ಥಾನದ ದಿವಾನರವರು ಪೂರ್ವಾಭಿಮುಖವಾಗಿ ಇಲ್ಲಿಗೆ ಬಂದು, ಇಲ್ಲಿನ ಇತರ ಅಧಿಕಾರಿಗಳೊಡನೆ ಆದಿನ ಪ್ರಾತಃಕಾಲ ರೈಲುಸ್ಟೇಷನಿನಲ್ಲಿ ಹಾಜರಿದ್ದು ರಾಜಕುಮಾರರನ್ನು ಗೌರವ ಪುರಸ್ಕಾರಗಳೊಡನೆ ಬರಮಾಡಿಕೊಂಡು ಮಹಾರಾಜರವರ ಅರಮನೆಯಲ್ಲಿ ವಸತಿಯಂ ಕಲ್ಪಿಸಿದರು. ಅರಸರವರು ಈಪುರದೊಳಿದ್ದ ಕಾಲದಲ್ಲಿ ಲಾಲ್‌ಬಾಗ್, ಮ್ಯೂಜಿಯಂ ವಗೈರೆ ವೀಕ್ಷಣೀಯಗಳಾದ ವಿಷಯಗಳನ್ನೆಲ್ಲ ನೋಡಿ ಕಳೆದ ಶನಿವಾರದ ದಿನ ಪ್ರಾತಃಕಾಲ ೮½ ಘಂಟೆಗೆ ಹೊರಡುವ ಗಾಡಿಯಲ್ಲಿ ತಮ್ಮ ದಿವಾನರು ಮೊದಲಾದ ಪರಿಜನರೊಡನೆಯೂ ಈ ಸಂಸ್ಥಾನದ ದಿವಾನರೊಡನೆಯೂ ಮೈಸೂರಿಗೆ ದಯಮಾಡಿದರು. ಈ ಸಂದರ್ಭದೊಳು ನಡೆಯಬೇಕಾದ ಮರ್ಯಾದೆಗಳೆಲ್ಲವೂ ನಡೆದವು.

THE MYSORE GAZETTE
ಮೈಸೂರು ಗೆಜೆಟು.

ಶ್ರೀಮನ್ ಮಹಾರಾಜರಾಜಾಸಾಹೇಬ್ ಬಹದೂರರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರನಾಮೆಗಳು

ಮೊಕ್ಕಾಂ ನಂ. ೯೮೬, ೨೮ನೇ ಫಿಬ್ರುವರಿ—ಮೈಸೂರು ಡಿಸ್ಟ್ರಿಕ್ಟ ಟ್ರೆಜರಿ ಮತ್ತು ಆರಮನೆ ಇಲಾಖಾ ಚಾರ್ಜಿನಲ್ಲಿರುವ ಡೆಪ್ಯುಟಿಕಮಿಷನರ್ ಮಿ॥ ಎ. ಚಿದಂಬರಂಅಯ್ಯರವರು ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ಒಂದು ತಿಂಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತ್ತಾರೆ.

೨. ಮಿ॥ ಚಿದಂಬರಂ ಅಯ್ಯರವರು ರಜಾದಮೇಲೆ ಗೈರುಹಾಜರಾಗಿರುವಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಪ್ರೊಬೇಷನರ್ ಮಿ॥ ನಂಜರಾಜಅರಸಿನವರು ಮೈಸೂರು ಡಿಸ್ಟ್ರಿಕ್ಟ ಟ್ರೆಜರಿ ಇನ್‌ಚಾರ್ಜಿನಲ್ಲಿರತಕ್ಕದ್ದು.

೩. ದರ್ಬಾರ್ ಬಕ್ಷಿ ರಾಯಬಹದೂರ್ ಮಿಸ್ಟರ್ ಎ. ನರಸಿಂಹಯ್ಯಂಗಾರ್ರವರು, ಅವರ ಇತರ ಕೆಲಸಗಳೊಂದಿಗೆ, ಮಿ॥ ಚಿದಂಬರಂಅಯ್ಯರವರ ಗೈರುಹಾಜರೀಕಾಲದಲ್ಲಿ, ಪ್ಯಾಲೆಸ್ ಇಲಾಖಾ ಇನ್‌ಚಾರ್ಜಿನಲ್ಲಿರತಕ್ಕದ್ದೆಂದು ಶ್ರೀಮನ್ಮಹಾರಾಜರವರು ಹುಕುಂ ಮಾಡಿರುತ್ತಾರೆ.

ನಂ. ೩೫೪, ೩ನೇಮಾರ್ಚಿ—ಹಾಸನ ಡಿಸ್ಟ್ರಿಕ್ಟ ಡೆಪ್ಯುಟಿಕಮಿಷನರ್ ಆಫೀಸ್ ಹೆಡ್ ಅಕೌಂಟೆಂಟ ಎಸ್. ವೆಂಕಟರಾಮಯ್ಯನವರು, ಮಹಮ್ಮದ್‌ರಜಾಯವರು ಬೇರೆ ಕೆಲಸದಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದುಹುಕುಂ ಕೊಡಲ್ಪಡುವತನಕ ಗ್ರಾಮದ ಡಿಪ್ಯುಟಿ ಅಮಲ್ದಾರ್ ೨ನೇ ಕ್ಲಾಸ್ ಪ್ಯಾಡಸ್ಟ್ರೇಟ ಕೆಲಸವನ್ನು ನೋಡುವಂತೆ ಮೊಕರರ್ಮಾಡಲ್ಪಟ್ಟಿರುತ್ತಾರೆ.

ನಂ. ೩೫೭—ಶಿವಮೊಗ್ಗಾ ಡಿ॥ ಹೊನ್ನಾಳಿ ತಾಲ್ಲೂಕು ಅಮಲ್ದಾರ್ ಲಾಡರ್ ದುಮಿಂಗೋ ಯವರು ಅವರುಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ೪೫ ದಿನಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತ್ತಾರೆ.

ಶಿವಮೊಗ್ಗಾ ಡಿಸ್ಟ್ರಿಕ್ಟ ರೆವಿನ್ಯೂ ಹೆಡ್ ಅಕೌಂಟೆಂಟ ಕೆ. ಜಿ. ಅನಂತರಾಮಯ್ಯಂಗಾರ್ರವರು, ಲಾಡರ್ ದುಮಿಂಗೋಯವರ ಗೈರುಹಾಜರೀಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ, ಹೊನ್ನಾಳಿತಾಲ್ಲೂಕು ಅಮಲ್ದಾರ್ ವ ೩ನೇಕ್ಲಾಸ್ ಮೇಜಿಸ್ಟ್ರೇಟಕೆಲಸವನ್ನು ನೋಡುವಂತೆ ಮೊಕರರ್ಮಾಡಲ್ಪಟ್ಟಿರುತ್ತಾರೆ.

TELEGRAMS.
ತಂತಿ ವೃತ್ತಾಂತಗಳು.

ಲಂಡನ್, ೧ ನೇ ಮಾರ್ಚಿ.—ಕ್ವೇಟಾ ಎಂಬ ಜಹಜು ಒಂದು ಗುಪ್ತಕಲ್ಲಿಗೆ ತಗಲಿ ಮೂರು ನಿಮಿಷಗಳ ಕಾಲದೊಳಗಾಗಿ ಮುಣಿಗಿ ಹೋಗಿ ಅದರಿಂದ ೧೬೪ ಮಂದಿ ಪ್ರಾಣಗಳಂ ಕಳಕೊಂಡರು, ೧೧೬ ಮಂದಿ ಉಳಕೊಂಡರು.

ಲಿಸ್ಬನ್, ೩ ನೇ ಮಾರ್ಚಿ.—ಪೋರ್ಚುಗಲ್ ದೇಶದೊಳಗಣ ಸೂಬರ್ ಎಂಬ ಪ್ರದೇಶದೊಳು ಪ್ರಬಲ ಕಲಹ ಪ್ರಾಪ್ತವಾಗಿ ಮಿಲಿಟರಿ ಯವರು ಜನಗಳನ್ನು ಗೋಲಿಯಿಂದ ಹೊಡೆಯಲು ಇಬ್ಬರು ಸತ್ತುಹೋದರು. ಇದರ ದೆಸೆಯಿಂದ ಇನ್ನು ಕಲಹ ವೃದ್ಧಿಯಾಗಬಹುದೆಂಬ ಭೀತಿಯುಂಟಾಗಿದೆ.

ಲಂಡನ್, ೭ನೇ ಮಾರ್ಚಿ — ಇಂಡ್ಯಾ ದೇಶದ ಮಂತ್ರಾಲೋಚಕ ಸಮಾಜಗಳಂ ಕುರಿತ ಮಸವಿದಾ ಆಕ್ಟು, ನಿನ್ನೆಯದಿನರಾತ್ರಿ ಹೌಸ್ ಆಫ್ ಲಾರ್ಡ್ಸ್ ಸಮಾಜದಲ್ಲಿ ಎರಡನೇದಫಾ ಓದಲ್ಪಟ್ಟಿತು. ಲಾರ್ಡ್ ನಾರ್ಥ್‌ಬ್ರೂಕ್, ಲಾರ್ಡ್ ರಿಪನ್, ಲಾರ್ಡ್ ಕಿಂಬರ್ಲಿ, ಇವರೆಲ್ಲರು ಸದರೀ ಆಕ್ಟನ್ನು ಮಂಜೂರ್ಮಾಡಿ, ಪರಂತು ಕೌನ್ಸಿಲ್ ಮೆಂಬರ್‌ಗಳ ಚುನಾವಣೆ ವಿಷಯದಲ್ಲಿ ಯಾವ ಅಭಿಪ್ರಾಯವೂ ತಿಳಿಸಲ್ಪಟ್ಟಿರುವದಿಲ್ಲವೆಂದು ಅಸಮಾಧಾನ ಪಟ್ಟರು. ಲಾರ್ಡ್ ನಾರ್ಥ್‌ಬ್ರೂಕ್ ಯವರು ಸ್ಥಳೀಕ ಸಮಾಜಗಳ ಚುನಾವಣೆ ವಿಷಯದಲ್ಲಿ ಹಿಂದು ಪದ್ಧತಿಯನ್ನೇ ಪ್ರವರ್ತಿಸಬೇಕೆಂದು ಹೇಳಿ ಇಂಡ್ಯಾ ದೇಶದ ಸುಪ್ರೀಂ ಕೌನ್ಸಿಲಿಗೆ ಪಾರ್ಲಿಯಮೆಂಟಿ ಪದ್ಧತಿಯಂ ಕೊಡಕೂಡದೆಂದು ಹೇಳಿದರು.

ಚುನಾವಣೆಮೂಲಕ ಕೌನ್ಸಿಲ್ ಮೆಂಬರ್‌ಗಳನ್ನೇರ್ಪಡಿಸಬೇಕೆಂದು ಲಾರ್ಡ್ ಡಫರಿನ್‌ಯವರು ಮಾಡಿದ ಶಿಪಾರಸ್ಸನ್ನು ಅಲಕ್ಷ್ಯ ಮಾಡುವಣದಲ್ಲಿ ಗವರ್ನಮೆಂಟನವರು ಪೂರಾ ಜವಾಬ್ದಾರರಾಗುತ್ತಾರೆಂದು ಲಾರ್ಡ್ ಗ್ರಾನ್‌ವಿಲ್‌ಯವರು ತಿಳಿಸಿದರು.

ರಾಜ್ಯ ನಿರ್ವಹಣೆಯಲ್ಲಿ ಕಷ್ಟರಾದ ನೇಟಿವ್‌ಗಳ ಸಹಾಯವಂ ಪಡೆಯುವದಕ್ಕೆ ಈಗಿನ ಮಸವಿದಾ ಆಕ್ಟಿನಲ್ಲಿ ಬಹಳಮಟ್ಟಿಗೆ ಅವಕಾಶಕೊಡಲ್ಪಟ್ಟಿರುತಿದೆ ಎಂತಲೂ ಮೆಂಬರ್‌ಗಳನ್ನು ಚುನಾಯಿಸುವ ವಿಷಯದಲ್ಲಿ ವೈಸ್‌ರಾಯ್ ಮತ್ತು ಗವರ್ನರ್‌ಗಳು, ಯೂನಿವರ್ಸಿಟಿಗಳು, ವ್ಯಾಪಾರ ಸಂಘಗಳು, ಬ್ರಿಟಿಷ್ ಇಂಡಿಯಾ ಅಸೋಸಿಯೇಷನಂತಾ ಸಮಾಜಗಳೊಡನೆ ಆಲೋಚಿಸುವ ವಿಷಯದಲ್ಲಿ ಆಕ್ಷೇಪಣೆಗಳ್ಯಾವವೂ ಇಲ್ಲವೆಂದು ಲಾರ್ಡ್ ಕ್ರಾಸ್‌ಯವರು ತಿಳಿಸಿದರು

SUMMARY OF NEWS.
ವೃತ್ತಾಂತಸಂಗ್ರಹವು.

ಫ್ರಾನ್ಸಿನಿಂದ ರೋಮನ್ ಕ್ಯಾಥೊಲಿಕ್ ಮತಗುರು ಒಬ್ಬಾತನು ಇಂಡ್ಯಾ ದೇಶದೊಳಿರುವ ಕುಷ್ಠರೋಗಿಗಳಿಗೆ ವೈದ್ಯ ಮೊದಲಾದ ಅನುಕೂಲ್ಯಗಳಂ ಕಲ್ಪಿಸಲಿಕ್ಕೆ ಅಪ್ಪಣೆಯನ್ನಪೇಕ್ಷಿಸಿ ಇಂಡ್ಯಾದೇಶಕ್ಕೆ ಬಾದಿರುತ್ತಾನೆ.

ಪುಣೆಯ ಪೈಸ್ಕೂಲಿನಲ್ಲಿ ಈಚೆಗೆ ಇಬ್ಬರು ಹೊಲೆಯರ ಹುಡುಗರನ್ನು ಸೇರಿಸಿಕೊಂಡಿದ್ದಾರೆ. ಇದೇ ಈಕಾಲದಲ್ಲಿ ೭೦ನ ಸುಧಾರಣೆಗೆ ಮುಖ್ಯ ಚಿನ್ಹೆಯಾಗಿದೆಂಬದಕ್ಕೆ ಸಂಶಯ ವಿಲ್ಲವು.—ಹ. ಸು.

ಕಾಶ್ಮೀರದಲ್ಲಿ ಹಜಾರಿ ಮಹಲ್ ಜೆಂಬಾತನ ಮೇಲೆ ಬರಲ್ಪಟ್ಟ ಸ್ವಪ್ಪನೆ ಮೊಕದ್ದಮೆಯಲ್ಲಿ ರಾಜಾ ಅಮರಸಿಂಗ್ ಯೆಂಬವರ ಸಾಕ್ಷ್ಯವು, ಅಲ್ಲಿನ ರೆಸಿಡೆಂಟರಾದ ಕರ್ನಲ್ ನಿಸ್ಬೆಟ ಯೆಂಬವರಿಂದ, ಜಮ್ಮು ಪಟ್ಟಣದೊಳು ಇದಕ್ಕಾಗಿ ಏರ್ಪಟ್ಟ ಕಮಿಷನ್ನಲ್ಲಿ ತೆಗೆದುಕೊಳ್ಳಲ್ಪಟ್ಟಿತು.

ಇಂಗ್ಲಾಂಡಿನಲ್ಲಿ ೩೮೦ ಸ್ತ್ರೀಯರು ಕಮ್ಮಾರ ಕೆಲಸದಲ್ಲಿರುತ್ತಾರೆ. ಇವರು ಗಂಡಸರಂತೆ ಯೆಲ್ಲಾ ಕೆಲಸಗಳನ್ನು ಅನುಕೂಲತೆಯಿಂದ ನಡಿಸಿಕೊಳ್ಳುತ್ತಾರೆ. ಇದು ವಿನಾ ಚಪ್ಪಣದ ಮೊಳೆಗಳ ಕೆಲಸ ಮಾಡುವದಕ್ಕೇನೆ ೧೨,೦೦೦ಕ್ಕೂರುಷರು ಇರುತ್ತಾರಂತೆ. ಹ—ಸ.

ಮಿ॥ ಎಡಿಸನ್‌ರವರು ಇದುವರಿವಿಗೆ ಆಶ್ಚರ್ಯವಾದ ಯಂತ್ರಗಳನ್ನು ಎಷ್ಟೋ ತಯಾರ್‌ಮಾಡಿರುವರು. ಈಗ (ಫ್ರೊನೊಗ್ರಾಫ್) ಕ್ಲಾಕ್ ಎಂಬ ಯಂತ್ರ ಒಂದನ್ನು ತಯಾರ್‌ಮಾಡಿರುವರು. ಯಾವಕಾಲದಲ್ಲಿ ಯಾವಕೆಲಸವನ್ನು ಮಾಡಬೇಕಾದರೂ ಈ ಗಡಿಯಾರದ ಕ್ಲುಪ್ತಕಾಲದಲ್ಲಿ ಮಾಡಬೇಕಾದ ಕೆಲಸವನ್ನು ಘಟ್ಟಿಯಾಗಿಯೇ ಹೇಳಿ ತಿಳಿಸುವದು.—ವೃ. ಪ.

ಕಲ್ಕತ್ತೆಯೊಳು ವಿಲಕ್ಷಣವಾದ ಒಂದು ಇಲಾಖೆ ಯೇರ್ಪಾಟಾಗಿರುತಿದೇನುವರೆ,—ವಿವಾಹ ವರ್ತಕನೆನ್ನಿಸಿಕೊಂಡಿರುವ ಕೆಲವರು ಒಂದು ಆಫೀಸನ್ನು ಮಾಡಿಕೊಂಡು ಅದರಲ್ಲಿ ಆತಳತಗಳು ಅಂದರೆ ವರನಿಗೆ ಕನ್ಯೆಯನ್ನೂ ಕನ್ಯೆನೆಗೆ ವರನನ್ನೂ ಘಟಯಿಸುವ ಕಾರ್ಯವಂ ನಡೆಸುತಲಿದಾರೆ ಈ ಕಾರ್ಯವು ಅಭಿವೃದ್ಧಿಪೂರ್ವಕ ನಡೆಯುತಬರುತಲಿದೆ.

ಮದರಾಸು ಹೈಕೋರ್ಟಿನ ಜಡ್ಜಿಗಳಲ್ಲೊಬ್ಬರಾದ ಮಿ॥ ಜಸ್ಟಿಸ್ ಪಾರ್ಕರವರು ಒಂಭತ್ತುತಿಂಗಳ ಫರ್ಲೋರಜಾ ಮೇಲೆ ಹೋಗುವಕಾಲದಲ್ಲಿ ಅವರ ಕೆಲಸವನ್ನು ಬದಲೀನೋಡತಕ್ಕಂಥ್ಯೆ ಮೊಕರರ್ಮಾಡಲ್ಪಟ್ಟ ಸೇಲಂ ಡಿಸ್ಟ್ರಿಕ್ಟ ಜಡ್ಜಿಯವರಾದ ಮಿ॥ ಥಾಮುಸ್‌ವೀರ್ ಯೆಂಬವರು ಈ ತಿಂಗಳ ೪ನೇ ತಾರೀಖಿನಲ್ಲಿ ಪ್ರಮಾಣಪೂರ್ವಕವಾಗಿ ತಮ್ಮ ಕೆಲಸದ ಚಾರ್ಜಂ ವಹಿಸಿದರು.

ಅಫ್ಘಾನಿಸ್ತಾನ್ ಅಮೀರರವರು, ಆಫ್ಘಾನ್ ತುರ್ಕಿಸ್ತಾನ್ ದೇಶವನ್ನು ಕುರಿತ ತಮ್ಮ ಸನ್ನಾಹಗಳನ್ನೂ ಉದ್ದೇಶಗಳನ್ನೂ ಯಾರೂ ಹೊರಪಡಿಸಕೂಡದೆಂದು ಹುಕುಂ ಕೊಟ್ಟಿರುವಂತೆಯೂ, ಹಾಗೆ ಯಾರಾದರು ಅಂತಾ ವಿಷಯಗಳಂ ಕುರಿತು ಯೆಚ್ಚರವಿಲ್ಲದೆ ಮಾತನಾಡುವರಾದರೆ ಅಂತವರ ನಾಲಿಗೆ ಕುಯಿದು ಹಾಕಲ್ಪಡುವದೆಂತಲೂ ನೆರಹದ್ದಿಗೆ ಆಚೇಕಡೆ ಇರುವ ಬಾತಮೀದಾರನೊಬ್ಬಾತನು ಒಂದಾನೊಂದು ಪತ್ರಿಕೆಗೆ ಬರೆಯುತ್ತಾನೆ.

ಶ್ರೀವಿಕ್ಟೋರಿಯಾಯವರ ಜ್ಯೇಷ್ಠಕುಮಾರರಾದ ಪ್ರಿನ್ಸಆಫ್‌ವೇಲ್ಸ್‌ರವರ ಒಂದು ಚೀಟಿನಾಯಿಯಬಾಯಿಗೆ ಬಾಯಿಕಟ್ಟುಕಟ್ಟದೆ ಬೀದಿಯಲ್ಲಿ ಸಂಗಡ ಕರೆದುಕೊಂಡುಹೋಗುತ್ತಿರಲು ಆನಾಯಿಯನ್ನು ಜೊತೆಯಲ್ಲಿ ಕರೆದುಕೊಂಡು ಹೋದವನಿಗೆ ೫ ಷಿಲ್ಲಿಂಗ್ಸ್ ಜುಲ್ಮಾನೆಯನ್ನು ವಿಧಸಿದರು. ನೋಡಿದಿರಾ ! ಆಂಗ್ಲೇಯರ ರಾಜಧರ್ಮ ಶಾಸ್ತ್ರಗಳು ರಾಜಾಧಿರಾಜರಿಗೂ, ಬಡವರಿಗೂ ತಾರತಮ್ಯಗಳಿಲ್ಲದೆ ಒಂದೇಸಮವಾಗಿರುವವು. ನಮ್ಮರಾಜ್ಯಗಳಲ್ಲಿ ಆದರೂ "ಮುಖ ನೋಡಿ ಮಣೇಹಾಕು" ಎಂಬ ಲೋಕೋಕ್ತಿಗೆ ಅನುಗುಣವಾಗಿದೆ. ಹ—ಸು.

ಫ್ರೆಂಚ್ ಅಧಿಕಾರಕ್ಕೆ ಒಳಪಟ್ಟ ಚಂದ್ರನಗರದ ಜೈಲಿನಲ್ಲಿ ಕಂ ಜಾತಿ ಖೈದಿಯರನ್ನು ಅಡಿಗೆ ಮಾಡುವದಕ್ಕೆ ಯೇರ್ಪಡಿಸಿರುವದರಿಂದ ಉತ್ತಮಜಾತಿಯವರಲ್ಲಿ ಅಸಮಾಧಾನಕ್ಕೆ ಕಾರಣವುಂಟಾಗಿ ಬಹಳ ಗಲಾಟೆ ಯುಂಟಾಗಿರುವಂತೆ ತಿಳಿಯಬರುತಿದೆ. ಬ್ರಿಟಿಷ್ ಇಂಡ್ಯಾ ದೇಶದೊಳಗಣ ಜೈಲ್ ಖಾನೆಗಳಲ್ಲಿ ಅಡಿಗೆ ಕೆಲಸಕ್ಕೆ ಬ್ರಾಹ್ಮಣ ಜಾತಿಯವರನ್ನೇರ್ಪಡಿಸಿರುತ್ತಾರಾಗಿ ಚಂದ್ರನಗರದಲ್ಲೂ ಅದೇರೀತಿ ಮಾಡಬೇಕೆಂದು ಅಲ್ಲಿನವರು ಫ್ರೆಂಚ್ ಸರ್ಕಾರಕ್ಕೆ ಬರೆದುಕೊಂಡಿರುತ್ತಾರೆ.

ಕಾಲಸ್ಥಿತಿ—ಈ ತಿಂಗಳ ಗುರ್ರೇತಾರೀಖಿಗೆ ಹೈದರಾಬಾದಲ್ಲಿ, ನೀಲಗಿರಿ, ಮತ್ತು ತಿರುನಲ್‌ವೇಲಿಯಲ್ಲಿ ಮಿತವರ್ಷ, ತುಂಜಾವೂರು, ಮಧುರೆ, ತಿರುಚನಾಪಲ್ಲಿ, ಕೋಯಿಂಬತ್ತೂರು, ಮಲಬಾರ, ಇವುಗಳಲ್ಲಿ ಅಲ್ಪವರ್ಷ, ಇತರಪ್ರದೇಶಗಳಲ್ಲಿ ವರ್ಷವಿಲ್ಲವು. ಫಸಲ್‌ಗಳು ಸಾಮಾನ್ಯವಾಗಿ ಚನ್ನಾಗಿವೆ, ಪರಂತು ನೆಲ್ಲೂರು, ಚಂಗಲ್‌ಪಟ್ಟು, ದಕ್ಷಿಣ ಆರ್ಕಾಟು, ತಂಜಾವೂರು, ತಿರುನಲ್‌ವೇಲಿ, ಕೋಯಿಂಬತ್ತೂರು, ಸೇಲಂ, ಈ ಪ್ರದೇಶಗಳೊಳು ಫಸಲ್‌ಗಳು ಒಣಗುತಲಿವೆ ಉತ್ತರ ಆರ್ಕಾಟು ಡಿ॥ ಪೈಕಿ ಕೆಲವುಪ್ರದೇಶಗಳೊಳು ಭತ್ತದಫಸಲು ರೋಗದಿಂದ ಬಣ್ಣಗೆಟ್ಟಿದೆ. ದಾರಣೆಗಳು ಹೆಚ್ಚುತಲಿವೆ. ಕಾಲಪಶ್ಯಗಳು ಸುಮಾರಾಗಿವೆ.

ಭೂಪಾಳ ಸಂಸ್ಥಾನದ ಬೇಗಂಯವರ ಪತಿಯವರು ಈಚೆಗೆ ಕಾಲಗತಿಯನ್ನೈದಿದರಷ್ಟೆ. ಆ ವಿಷಯದಲ್ಲಿ, ವೈಸ್‌ರಾಯ್‌ಯವರು, ಗವರ್ನರ್ ಜನರಲವರ ಏಜೆಂಟರವರು, ಇನ್ನು ಬಹುಮಂದಿ ದೊಡ್ಡ ದೊಡ್ಡ ಅಧಿಕಾರಿಗಳಂದ ಅನುತಾಪಪೂರ್ವಕ ದುಃಖೋಪಶಾಮಕವಾದ ಕಾಗದಗಳು ಬೇಗಂಯವರಿಗೆ ಬರೆಯಲ್ಪಟ್ಟವು. ಅವುಗಳ ಪೈಕಿ ಕೆಲವು ಕಾಲಗತಿಯನ್ನೈದಿದ ನವಾಬರ ಸುಗುಣಗಳಂ ಪ್ರಶಂಸಿಸಿ ಬರೆಯಲ್ಪಟ್ಟದ್ದಂತೆಯೂ, ಸರ್ ಲೆಪೆಲ್ ಗ್ರಿಫಿನ್‌ಯವರಿಂದ ಉಂಟುಮಾಡಲ್ಪಟ್ಟ ಬಹುವಿಧ ಪರಿಭವಗಳ ದೆಸೆಯಿಂದ ಉಂಟಾದ ಹೃದ್ರೋಗದ ಮೂಲಕ ಸದರೀ ನವಾಬರು ಮೃತಪಟ್ಟಂತೆಯೂ ಒಬ್ಬ ಬಾತಮೀದಾರನು ಬರೆಯುತ್ತಾನೆ.

ಸಮಸ್ತ ದಕ್ಷಿಣ ಬ್ರಾಹ್ಮಣರಿಗೂ ಇದರಿಂದ ತಿಳಿಸುವದೇನೆಂದರೆ,—ನಮ್ಮ ದಕ್ಷಿಣ ಜನರಹೀನಸ್ಥಿತಿ ಲೌಕಿಕ ಜ್ಞಾನಹೀನತೆಯನ್ನು ನೋಡಿ ಬಹು ದುಃಖವಾಗುತ್ತದೆ. ದೇವರುಕೊಟ್ಟ ನನ್ನಶಕ್ತ್ಯನುಸಾರ ನಮ್ಮ ಜನರ ಹಿತವನ್ನು ಬಯಸುವದು ನನ್ನ ಜನ್ಮದ ಸಾರ್ಥಕವೆಂಬದನ್ನು ಪೂರ್ಣವಾಗಿ ನಾನು ತಿಳಕೊಂಡಿರುತ್ತೇನೆ. ಆದದರಿಂದ ನನ್ನ ಇಚ್ಛೆಯನ್ನು ಈಕೆಳಗೆ ಪ್ರಕಟಿಸುತ್ತೇನೆ.

ನಮ್ಮ ಜನರಲ್ಲಿ ದ್ರವ್ಯಾನುಕೂಲತೆ ಇದ್ದವರಿಗೆ ತಮ್ಮಮಕ್ಕಳನ್ನು ವಿದ್ವಾಂಸರನ್ನಾಗಿಮಾಡುವ ಮನಸ್ಸೇಯಿಲ್ಲ. ಮನಸ್ಸುಯಿದ್ದವರಿಗೆ ತಕ್ಕ ಅನುಕೂಲತೆಯಿಲ್ಲ. ಹೀಗೆ ಅನುಕೂಲತೆಯಿಲ್ಲದವರ ಸೋಯಿಯಬಗ್ಗೆ ತಕ್ಕಮಟ್ಟಿಗೆ ಆಲೋಚಿಸುವದೇ ಈಗಿನ ನನ್ನ ಕರ್ತವ್ಯವಾಗಿರುತದೆ—ಪ. ಸು.

EXTRACTS.

ಹಿಂದೆ ಮುಂಬೈ ಸಿವಿಲ್ ಸರ್ವಿಸ್ಸಿಗೆಸೇರಿದ್ದ ಮೆ|| ಆರ್ಥರ್ ಕ್ರಾಫೋರ್ಡಯವರಮೇಲೆ ತನಲ್ಪಟ್ಟ ಕ್ರಿಮಿನಲ್ ಮೊಕದ್ದಮೆಯ ದರ್ಯಾಪ್ತಿಯಲ್ಲಿ ಅವರಿಗೆ ತಗಲಿದ ಖರ್ಚುಗಳನ್ನು ಗವರ್ನಮೆಂಟಿನಿಂದ ಕೊಡಿಸಬೇಕೆಂದು ಅವರು ಕೇಳುವಷ್ಟು ಸಾಹಸಪರರಾಗಿರುತ್ತಾರೆ. ಇವರಮೇಲೆ ತರಲ್ಪಟ್ಟ ಮೊಕದ್ದಮೆಯಲ್ಲಿ ಹಾಜರ್ಮಾಡಲ್ಪಟ್ಟ ಸಾಕ್ಷ್ಯಗಳ ಯೋಗ್ಯತೆಯನ್ನು ಕಮಿಷನರಗಳು ಅರಿಯಲಾರದೆ ಹೋದವೆಂತಲೂ, ಮೆ|| ಕ್ರಾಫೋರ್ಡಯವರು ನಿರಪರಾಧಿಯೆಂಬವಿಷಯದಲ್ಲಿ ಕಮಿಷನರಗಳ ಅಭಿಪ್ರಾಯಗಳು ಖಚಿತವಾದವಲ್ಲವಾಗಿ ಅವು ಗೌರವಕ್ಕೆ ಅರ್ಹವಾದವಲ್ಲವೆಂತಲೂ ಸಾಮಾನ್ಯವಾಗಿ ಜನರುನಂಬಿರುತ್ತಾರೆ. ಬಹುಕಾಲದವರಿವಿಗೆ ಗೌರವವಾದ ನೌಕರಿಯೊಳರುತ ಕಡೆಗೆ ತಮ್ಮ ಅಧಿಕಾರ ಸರಹದ್ದಿನೊಳರುವ ಜನಗಳಿಂದ ಸಾಲಮಾಡಿದರೆಂಬ ತಪ್ಪಿತಕ್ಕಾಗಿಯೇ ಕೆಲಸದಿಂದ ನಿವೃತ್ತಿಮಾಡಲ್ಪಟ್ಟದ್ದು ಕಠಿಣ ಶಿಕ್ಷೆಯೆಂದು ಯೋಚಿಸಲ್ಪಟ್ಟಿತು. ಮೆ|| ಕ್ರಾಫೋರ್ಡಯವರಮೇಲೆ ಹೊರಿಸಲ್ಪಟ್ಟ ಪ್ರಬಲ ತಪ್ಪಿತವನ್ನು ಅವರು ಮಾಡಿದವರೆಂದು ಲಾರ್ಡ್ ಕ್ರಾಸಿಯವರ ಮನಸ್ಸಿನಲ್ಲಿ ನಾಟಿದ್ದರಿಂದಲೇ ಅವರಿಗೆ ಪ್ರಬಲ ಶಿಕ್ಷೆ ವಿಧಿಸಿದರೆಂದು ಭಾವಿಸಲ್ಪಟ್ಟಿತು. ಆದುದರಿಂದ ಈಗ ಮೆ|| ಕ್ರಾಫೋರ್ಡಯವರು ಕೇಳುವಖರ್ಚುಗಳಂ ಕೊಡಿಸುವ ವಿಷಯದಲ್ಲಿ ಲಾರ್ಡ್ ಕ್ರಾಸಯವರು ಅನುಕೂಲರಾಗಿದ್ದಾರೆಂದು ಕೇಳಿ ಆಶ್ಚರ್ಯ ಪಡುತ್ತೇವೆ. ಅವರಿಗೆ ಅರೀತಿ ಕೊಡಿಸುವಣವು ಕೇವಲ ನ್ಯಾಯವಿರುದ್ಧವಾದ ಕಾರ್ಯವಾಗಿರುವದು.

ಕಳೆದತಿಂಗಳ ೧೫ನೇ ತಾರೀಖಿನಲ್ಲಿ ಜಯಪುರದ ಮಹಾರಾಜರವರು, ಪ್ರಿನ್ಸ ಆಲ್ಬರ್ಟ ವಿಕ್ಟರವರ ಸಂತೋಷಾರ್ಥವಾಗಿ ಮದ್ದಾನೆಗಳು, ಗೂಳಿಗಳು, ಕೋಣಗಳು, ಟಗರು, ಹುಲ್ಲೆ ಮುಂತಾದವುಗಳ ಕಾಳಗವನ್ನು ನಡೆಸಿದರೆಂದು ಕೇಳಿ ಬಹಳವಾಗಿ ವಿಷಾದಿಸುವೆವು. ಎರಡುಆನೆಗಳನ್ನು ತರಿಸಿ ೩೦—೪೦ ಮಾವಟಿಗರಿಂದ ಅವುಗಳನ್ನು ಚುಚ್ಚಿಸಿ ಕೋಪಬರುವಂತೆಮಾಡಿ ಕಾಳಗಕ್ಕೆ ಉಪಕ್ರಮಿಸಿ ವಿನೋದಾರ್ಥವಾಗಿ ಮಾಡಿದ ಕೆಲಸವು ವಿಪರೀತಕ್ಕೆ ಬಂದಮೇಲೆ ಬಂದೂಖನ್ನು ಮದ್ದಿನಿಂದಮಾತ್ರ ಬಾರುಮಾಡಿ ಹೊಡೆದು ಅನಂತರ ಜಗಳವನ್ನು ನಿಲ್ಲಿಸಿದರಂತೆ. ಪ್ರಿನ್ಸ ಆಲ್ಬರ್ಟ ವಿಕ್ಟರವರ ತಂದೆಯಾದ ಪ್ರಿನ್ಸ ಆಫ್‌ವೇಲ್ಸರವರು ಇಂಡಿಯಾವಿಗೆ ಬಂದಿದ್ದಕಾಲದಲ್ಲಿ ಎರಡು ಹುಲಿಗಳ ಕಾಳಗವನ್ನು ನೋಡಬೇಕೆಂದು ಎಷ್ಟು ಬೆಸಗೊಂಡರೂಒಪ್ಪಲಿಲ್ಲ. ಈಚೆಗೆ ಅವರು ಫ್ರಾನ್ಸಿಗೆ ಹೋಗಿದ್ದಾಗ ಒಂದು ಗೂಳಿಯ ಕಾಳಗವನ್ನು ನೋಡುವದಕ್ಕಾಗಿ ಯಾವಯಾವ ದೊಡ್ಡಮನುಷ್ಯರು ಕರೆದರೂಹೋಗಲಿಲ್ಲ. ಯಾತಕ್ಕೋಸ್ಕರವಾಗಿ? ಪ್ರಾಣಿಹಿಂಸೆಯನ್ನು ಮಾಡಬಾರದೆಂದಲ್ಲವೆ! ಆನೆಯ ಕಾಳಗಕ್ಕಾಗಿ ಮೊದಲು ೩೦—೪೦ ಮಾವಟಗರು ಹಿಂಸಿಸಿ, ಅನಂತರ ಸರಸವು ಹೆಚ್ಚಿದಮೇಲೆ ಗುಂಡಿನ ಮದ್ದಿನ ಸಹಾಯದಿಂದ ಜಗಳವನ್ನು ನಿಲ್ಲಿಸುವದು ವಿನೋದವಾಯಿತು! ಟಗರಿನ ಕಾಳಗದಲ್ಲಿ ಒಂಭು ಸಾಯುವಂತೆ ಆಯಿತೆಂದು ತಿಳಿಯಬರುತ್ತದೆ. ಸಂತೋಷಾರ್ಥವಾಗಿ ಇದನ್ನು ನೋಡಬೇಕಲ್ಲವೆ? ಆಹಾ! ನಿಷ್ಕರುಣತೆಯೆ!! ಪ್ರಿನ್ಸ ಆಫ್‌ವೇಲ್ಸರವರಿಗೆ ಇದನ್ನು ಮೊದಲು ತಿಳಿಸಿದ್ದರೆ ಅವರು ಎಷ್ಟುಮಾತ್ರಕ್ಕೂ ತಮ್ಮ ಕುಮಾರರನ್ನು ನೋಡುವದಕ್ಕೆ ಬಿಡುತ್ತಲಿರಲಿಲ್ಲ. ಕರ್ನಲ್ ಬ್ರಾಡ್‌ಫರ್ಡರವರು ಹ್ಯಾಗೆತಾನೆ ಒಪ್ಪಿದರೊ ನಾವರಿಯೆವು.—ವೈ.—ಪ.

ಇಲ್ಲಿಯ ನಮ್ಮ ಮಹಾರಾಷ್ಟ್ರ ಬಂಧುಗಳಾದ "ದೀನಬಂಧು"ಪತ್ರಕರ್ತರುನಮ್ಮೊಳಗಿನಸಾಮಾಜಿಕ ಸುಧಾರಣೆಯ ಸಂಬಂಧವಾಗಿ ಒಂದು ಹೊಸ ಹಂಚಿಕೆ ಹುಡಿಕಿ ತೆಗೆದಿದ್ದಾರೆ. ನಮ್ಮೊಳಗಿನ ಸ್ತ್ರೀಯರು ಪತಿ ಮರಣಾನಂತರ ಒಳಗಾಗಬೇಕಾದ ಕೇಶ ವಪನದಂತಾ ದುಷ್ಟ ಪದ್ಧತಿಯು ನಿಂತು ಹೋಗಬೇಕಾದರೆ ಕ್ಷೌರದವರೆಲ್ಲರೂ ಒಗ್ಗಟ್ಟಾಗಬೇಕೆಂದು ಅವರು ಹೇಳುತ್ತಾರೆ. ಹಾಗೂ ಯಾವನೊಬ್ಬ ಕ್ಷೌರದವನು ಸಹ ವಿಧವೆಯರ ಕ್ಷೌರ ಕರ್ಮಗಳನ್ನು ನಡೆಸಕೂಡದೆಂದು ಅವರು ತಮ್ಮ ತಮ್ಮೊಳಗೆ ಕಟ್ಟು ಮಾಡಬೇಕೆಂದು ನಮ್ಮ ಬಂಧುಗಳು ಅವರಿಗೆ ಉಪದೇಶ ಮಾಡುತ್ತಾರೆ. ಆದರೆ ನಮ್ಮ ಬಂಧುಗಳ ಈ ಉಪದೇಶದಿಂದ ಅವರ ಇಚ್ಛೆ ಹೇತುವಂತು ಸಿದ್ಧಿಯಾಗಲಿಕ್ಕಿಲ್ಲ. ಇಷ್ಟೇ ಅಲ್ಲ, ಹಜಾಮರು ಕಟ್ಟು ಮಾಡಿದರೆ ಅದರಿಂದ ಅವರ ವೃತ್ತಿಗೆ ಮೊದಲು ಕುಂದು ಬರುವದೆಂದು ನಾವು ತಿಳಿಯುತ್ತೇವೆ. ಯಾಕಂದರೆ, ಈ ಹತ್ತೊಂಭತ್ತನೇ ಶತಮಾನದಲ್ಲಿ ದೇವರಿಗೂ, ಬಾಪಕಕ್ಕೂ, ಹಿರಿಯರು ಮಾಡಿಟ್ಟ ಧರ್ಮಶಾಸ್ತ್ರದ ಕಟ್ಟಳೆಗಳಿಗೂ ಅಂಜಿ ವಿಧೇಯರಾಗಿ ನಡೆಯತಕ್ಕವರು ಬಹಳ ಅಪರೂಪ. ಹಜಾಮರು ಕಟ್ಟು ಮಾಡಿ ವಿಧವೆಯರ ಕ್ಷೌರ ಮಾಡುವವನ್ನು ಬಿಟ್ಟು ಬಿಟ್ಟರೆ ಆಗುವ ಕಾರ್ಯವು ನಿಂತುಹೋದೀತೆಂದು ನಾವು ತಿಳಿಯುವದಿಲ್ಲ. ಯಾಕಂದರೆ, ನಾಪಿಕನ ವೃತ್ತಿಯನ್ನು ಸ್ವತಃ ಕೈಕೊಂಡು ತಮ್ಮ ಕೆಲಸ ಸಾಗಿಸಿಕೊಳ್ಳಲಿಕ್ಕೆ ಸಹ ನಮ್ಮ ಜನರು ಹಿಂದೆ ಮುಂದೆ ನೋಡಲಿಕ್ಕಿಲ್ಲ. ಮತ್ತು ಹಾಗೆ ಮಾಡಿದ ಬಗ್ಗೆ ದೃಷ್ಟಾಂತ ತೋರಿಸಬೇಕಾದರೂ ಬಹಳ ದೂರ ಹೋಗುವದು ಬೇಡ. ಒಂದೆರಡು ವರುಷಗಳ ಹಿಂದೆ ಪುಣೇಯ ಹಜಾಮರಿಗೂ ಅಲ್ಲಿಯ ಬ್ರಾಹ್ಮಣ ವರ್ಗದವರಿಗೂ ಯಾಕೋ ವೈಮನಸ್ಸುಂಟಾದ್ದರಿಂದ ಹಜಾಮರೆಲ್ಲರೂ ಒಗ್ಗಟ್ಟಾಗಿ ಬ್ರಾಹ್ಮಣರ ಕ್ಷೌರ ಮಾಡಲಿಕ್ಕಿಲ್ಲವೆಂದು ಕಟ್ಟು ಮಾಡಿದರು. ಆಗ ಬ್ರಾಹ್ಮಣರನೇಕರು ಕ್ಷೌರಕೂಪುಗಳನ್ನು ಕೈಯಲ್ಲಿ ತೆಗದುಕೊಂಡು ನಾಪಿಕನ ಕೆಲಸವನ್ನು ತಾವೇ ಸಾಗಿಸಿದರು. ಪ್ರತಿದಿನವೂ ತಾವೇ ತಮ್ಮ ಮುಖಕ್ಷೌರ ಮಾಡಿಕೊಳ್ಳುವ ಎಷ್ಟೋ ಗೃಹಸ್ಥರು ಈಪಟ್ಟಣದಲ್ಲಿ ಈಗಲೂ ಇದ್ದಾರೆ. ಆದ್ದರಿಂದ ದೀನಬಂಧು ಕರ್ತರ ಈ ಸೂಚನೆಯಿಂದ ಯಾವ ಪ್ರಯೋಜನವೂ ಆಗಲಿಕ್ಕಿಲ್ಲವೆಂದು ನಾವು ತಿಳಿಯುತ್ತೇವೆ—ಹ. ಸು.

ಸೂಳೇಮೊಕದ್ದಮೆ.—ಪಂಜಾಬ್‌ದೇಶದ ರಾಜನಾದ ರಣಜಿತಸಿಂಗ್ ಮಹಾರಾಜರಲ್ಲಿದ್ದನಾಯಕಸಾನಿಯ ಮೊಮ್ಮಗಳಾದ ಕಾಮಾಬಾಯಿ ಎಂಬವಳು ಅತ್ಯಂತರೂಪವತಿಯಾಗಿಯೂ ಸಂಗೀತ ನರ್ತನಾದಿಗಳಲ್ಲಿ ಅತ್ಯಂತ ಪ್ರವೀಣಳಾಗಿಯೂ ಇರುವದಲ್ಲದೆ ಅಲ್ಲಲ್ಲಿ ರಾಜಾಸ್ಥಾನಗಳಲ್ಲಿ ಕೂಡ ಅತ್ಯಂತ ಪ್ರಸಿದ್ಧಳಾಗಿ ಹೆಸರುವಾಸಿಯನ್ನು ಪಡೆದಿದ್ದಳು. ಕಳೆದತಿಂಗಳಲ್ಲಿ ಲಾಹೂರಪಟ್ಟಣದೊಳು ಒಂದುದಿವಸ ಈ ಕಾಮಬಾಯಿಯು ತನ್ನಯಜಮಾನನಮನೆಗೆ ಹೋಗುತ್ತಿರಲು ದಾರಿಯಲ್ಲಿ ಅವಳಗುರ್ತನ್ನುತಿಳಿದ ಒಬ್ಬ ಹೆಂಗಸು ಇವಳನ್ನ ಮನೆಗೆ ಬಲವಂತದಿಂದ ಕರೆದುಕೊಂಡುಹೋಗಿ ಸ್ವಲ್ಪಹೊತ್ತು ಮಾತಾಡುತಿದ್ದು ಆಮೇಲೆ ಸ್ವಲ್ಪ ದ್ರವ್ಯಸಹಾಯ ಮಾಡಬೇಕೆಂದು ಕೇಳಿದಳು. ಅದಕ್ಕೆ ಅವಳು ನನ್ನಲ್ಲಿ ದ್ರವ್ಯವಿಲ್ಲವೆಂದು ಹೇಳಲು ಅವಳೂ ಮತ್ತು ಅವಳ ಮಗ ಮಿರಾಸಬಕ್ಷ ಎಂಬವನೂಸೇರಿ ಈಸೂಳೆಯನ್ನು ಕೆಳಕ್ಕೆಕೆಡಹಿ ಮೈಮೇಲಿದ್ದ ೩,೦೦೦ರೂಪಾಯಿಗಳ ನಗಗಳನ್ನು ಕಿತ್ತುಕೊಂಡರು. ಆಮೇಲೆ ಮಿರಾಸಬಕ್ಷ ಯೆಂಬುವನು ಕಾಮಬಾಯಿ ಯೆಂಬ ಈಸೂಳೆಯ ಎದೆಯಮೇಲೆ ಕೂತುಕೊಂಡು ಒಳ್ಳೇ ಹದವಾದ ಕತ್ತಿಯನ್ನು ತೆಗದುಕೊಂಡುಬಾಯೆಂದು ತಾಯಿಯನ್ನುಕುರಿತು ಕೂಗಿ ಹೇಳಿದನು. ಆಗ ಇವನತಾಯಿಯು ಕತ್ತಿಯನ್ನು ತರುವದಕ್ಕೆ ಸಾವಕಾಶಮಾಡಿದ್ದರಿಂದ ಇವನು ಹಲ್ಲಿನಿಂದ ಈ ಸೂಳೆಯ ನಾಸಿಕವನ್ನು ಕಡಿಯುವದಕ್ಕೆ ಪ್ರಾರಂಭ ಮಾಡಲು, ಇವಳು ಇನ್ನೂ ತನ್ನಪ್ರಾಣ ಹೋಗುತ್ತೆಂಬ ಭಯದಿಂದ ಕೂಗಿಕೊಂಡಳು. ಆ ಕಾಲದಲ್ಲಿ ದಾರಿಯೊಳು ಹೋಗುತಲಿದ್ದ ಒಬ್ಬ ಪಠಾನನು ಈ ಆರ್ತಧ್ವನಿಯನ್ನು ಕೇಳಿ ತತ್‌ಕ್ಷಣ ಬಾಗಿಲುಗಳನ್ನು ಕಾಲಿನಿಂದ ಒದ್ದು ತೆಗದು ಒಳಕ್ಕೆ ನುಗ್ಗಿ ಇವಳನ್ನು ಬಿಡಿಸಿದನು. ಇಷ್ಟರಲ್ಲಿ ಗುಲ್ಲು ಬಲವಾಗಲು ಪೋಲೀಸಿನವರು ಬಂದು ಮಿರಾಸಬಕ್ಷನನ್ನೂ ಇವನ ತಾಯಿಯನ್ನೂ ದಸ್ತಗಿರಿ ಮಾಡಿ ಅಲ್ಲಿನ ಅಸಿಸ್ಟೆಂಟ ಕಮಿಷನರಲ್ಲಿ ವಿಚಾರಣೆಗೆ ತೆಗದುಕೊಂಡು ಹೋದರು. ಆ ಕಾಲದಲ್ಲಿ ವೇಶ್ಯಾ ಶಿರೋಮಣಿಯು ಮೇನಾದಲ್ಲಿ ಕೋರ್ಟಿಗೆ ಬರುವಾಗ್ಯೆ ಇವಳ ಈ ವಿಚಿತ್ರವಾದ ಮೊಕದ್ದಮೆಯನ್ನು ನೋಡುವ ಉದ್ದಿಶ್ಯ ೫,೦೦೦ ಜನಗಳ ಪರಿವಿಗೆ ಸೇರಿದ್ದರು. ಆಗ ಜವಾನರು ಅನೇಕ ಜನಗಳನ್ನು ಹೊರಕ್ಕೆ ಹೊರಡಿಸಿದರು. ಹೀಗೆ ಸೂಳೆಯರ ಮೊಕದ್ದಮೆ ಯಾವದಾದರು ಒಂದು ಕೋರ್ಟಿಗೆ ಬಂದರೆ ಪ್ರಾಯಶಃ ಬಹಳ ಜನಗಳು ನೆರೆವ ವಾಡಿಕೆ ಉಂಟಾಗಿದೆ. ಅವರಲ್ಲಿ ಇದು ವಿಶೇಷ—ಆಂಧ್ರಪ್ರಕಾಶಿಕಾ

ಶಾರದಾ ಸದನ.

ಈಗಿನ ಸುಧಾರಕ ಮಂಡಿಯ ಮನಸ್ಸಿನಲ್ಲಿ ಯಾರನ್ನಾದರೂ ಹೊಗಳಿಯ ಗಿದವಮೇಲೆ ಏನಿಸಬೇಕೆಂದು ಬಂದನೆ ಸಾಕು. ಅವರ ಸ್ತುತಿಪಾಠವನ್ನು ಮಾಡಲಿಕ್ಕೆ ಅವರು ಈಗಲೇ ಆರಂಭಿಸುತ್ತಾರೆ. ದೂರದರ್ಶಿಗಳಾದ ಜನರು ಅವರು ಮಾಡುವ ಸ್ತುತಿಪಾಠದ ಪರಿಣಾಮವು ಒಳ್ಳೇದಾಗುವದಿಲ್ಲವೆಂದು ಎಷ್ಟುಪರಿಯಿಂದ ಸೂಚಪಸ್ಯಸೂಕ್ತಕ್ಕೆ ಆರುಭವಮಾಡಿದರೂ ಅವರ ಮಾತಿಗೆ ಇವರ ಕಿವಿಗಳು ಕಿವುಡವಾಗುತ್ತವೆ. ಪಂಡಿತ ರಮಾಭಾಯಿಯವರು ವಿಲಾಯತಿಯಿಂದ ತಿರಿಗಿಬರುವಾಗ್ಯೆ ಈದೇಶದ ವಿಧವಾದುಃಖ ವಿಮೋಚನಾರ್ಥವಾಗಿ ದಾಕ್ಷಿಣಾತ್ಯರ ಕಡೆಯಿಂದ ಹೇರಳ ಧನವನ್ನು ತಂದರೆಂಬುವದು ಎಲ್ಲರೂ ಅರಿತಂತಮಾತೇ ಆಗಿರುವದು. ಆಸಮಯಕ್ಕೆ ಅನೇಕರು ತರ್ಕಿಸಿದಮೇರಿಗೆ ಈಕೆಂಬೋಗ ಮಾರವಾಸೇರು ನಿಮ್ಮದೇಶದ ವಿಧವೆಯರಲ್ಲಿ ಕರುಣೆ ಎಷ್ಟು ತೆಮ್ಮ ಹಿಮ್ಮಿಣಿಯ ಗಂಟುಸಡಿಲು ಮಾಡುವದರಲ್ಲಿ ಏನಾದರೂ ಗುಪ್ತ ಉದ್ದೇಶವಿದ್ದೀತೆಂದು ನಾವು ಇವಕ್ಕೆಮೊದಲು ಆಡಿತೋರಿಸಿದ ಮಾತಿನ ಪ್ರಚೀತಿಯು ಇಷ್ಟುಬೇಗನೆಬಂದದ್ದು ನೋಡಿ ಸುಧಾರಕರಬೊಟ್ಟು ಅವರ ಕಣ್ಣಿನಲ್ಲಿ ಯೇನಟ್ಟದ್ದು ನೋಡಿದವರಿಗೆ ದುಃಖವಾಗದೇ ಎಂದು ಇರಲಿಕ್ಕಿಲ್ಲ.

ಕಳೆದ ವಾರದ ಕೇಸರೀ ಪತ್ರದಲ್ಲಿ "ಶಾರದಾ ಸದನ"ದೊಳಗಿನ ಕೆಲವು ಹಿಂದೂಸ್ತ್ರೀಯರು ಖ್ರಿಸ್ತಮತಕ್ಕೆ ಸೇರಿದ ಸಂಗತಿಯು ಪ್ರಸಿದ್ಧವಾಗಿರುತ್ತದಷ್ಟೇ, ಈ ಲೇಖನವನ್ನು ಕುರಿತು ನಮ್ಮ ಪಂಡಿತ ರಮಾಬಾಯಿಯವರು ಕೇಸರಿ ಪತ್ರ ಕಾರರಿಗೆ ಒಂದು ಪತ್ರವನ್ನು ಬರೆದಿರುತ್ತಾರೆ. ಆ ಪತ್ರದಲ್ಲಿ ಶಾರದಾ ಸದನದೊಳಗಿನ ಸ್ತ್ರೀಯರಿಗೆ ಬೈಬಲ್ ಕೊಟ್ಟದ್ದನ್ನು ಒಪ್ಪಿಕೊಳ್ಳುತ್ತಾರೆ. ಪರಂತು ಈ ಮಂತಾರ ಮಾತುವದಕ್ಕೆ ಅಂತಃಕಾರಣಗಳೇ ಇದ್ದವೆಂದು ಖಚಿತವಾಗಿ ಅರಹುತ್ತಾರೆ. ಯೇನೇ ಆಗಲಿ. ನಮ್ಮ ಶಾರದಾ ಸದನವು ಪರಮ ಪೂಜ್ಯ ಪರಮೇಶ್ವರನಾದ ಏಸೂಕ್ರಿಸ್ತನ ಪವಿತ್ರಜಲದ ಮಾರ್ಜನದಿಂದ ಪುನೀತವಾಯಿತಾದ ಕಾರಣ ನಾವು ಪಂಡಿತ ಅಮ್ಮನವರ ಉಪಕಾರವನ್ನು ಜನ್ಮಜನ್ಮಾಂತರದಲ್ಲಾದರೂ ಮರಿಯಲಾರೆವು. ಪಂಡಿತೆಯು ತನ್ನ ಪತ್ರದಲ್ಲಿ ಅನ್ನುವದೇನೆಂದರೆ, ಈ ಶಾರದಾ ಸದನವು ಪ್ರಭೂ ಏಸುವಿನ ಪರಮಪ್ರಿಯಭಕ್ತರ ಉದಾರತನದ ಬಲವಾಗಿರುತದೆ. ಅಂದಮೇಲೆ ಸದನಾನು ಯಾಯಿಗಳು ತನ್ಮತವಂತರಾದದ್ದು ಸೋಜಿಗದ ಮಾತಲ್ಲಾ. ಈ ಅಪೇಕ್ಷಿತ ಉತ್ತರವನ್ನು ನಮ್ಮ ಪತ್ರವಾಚಕರು ಓದಿ ನೋಡಿ ಆಶ್ಚರ್ಯ ಚಕಿತರಾಗುವದಕ್ಕೆ ಕಾರಣವಿಲ್ಲ. ಯಾಕಂದರೆ, ಕುಲಗೆಟ್ಟ ಈ ಅಮ್ಮನವರ ಶಿಕ್ಷಣ ಹೊಂದಿದ ನಮ್ಮ ಸ್ತ್ರೀಯರು ಯಾವ ಮಾರ್ಗವನ್ನು ಅವಲಂಬಿಸುವರೆಂಬ ವಿಷಯದಲ್ಲಿ ಯಾರಿಗೂ ಸಂಶಯ ಬರಲಿಕ್ಕೆ ಬೇಡ. ಗುರುವಿನಂತ ಶಿಷ್ಯನಾಗುವದು ಜಗದೊಳಗೆ ವಾಡಿಕೆಯಾದದ್ದಷ್ಟೇ. ಪಂಡಿತ ರಮಾಬಾಯಿಯವರು ಹೇಳುವ ಕಾರಣಗಳ ಮೇರಿಗೆ ಧರ್ಮಾಂತರವು ಆದಷ್ಟೇ ಹೌದಾಗಿದ್ದರೆ, ಅದು ಹ್ಯಾಗೂ ಯಾವದಾದರೊಂದು ಪ್ರಾರ್ಥನಾಮಂದಿರದಲ್ಲಿ ಆಗಲಿಕ್ಕೆ ಬೇಕು. ಯಾಕಂದರೆ,—ಸಭೆಯಲ್ಲಿ ಎದ್ದು ನಿಂತು ದೊಡ್ಡ ಬಾಯಿಯಿಂದ "ನಮ್ಮ ಶಾರದಾ ಸದನದಲ್ಲಿ ಕ್ರಿಸ್ತಧರ್ಮೋಪದೇಶವು ಎಷ್ಟುಮಾತ್ರವು ಆಗಲಿಕ್ಕಿಲ್ಲ", ಎಂದು ಸಾವಿರಾರು ಜನರ ಮುಂದೆ ಆಣೆ ತೋರಿಸಿ ಕೃತ್ಯಕಾಲಕ್ಕೆ ಅದೇ ಸದನದಲ್ಲಿ ವಿಧವೆಯರ ತಲೆಯಮೇಲೆ ಕ್ರಿಸ್ತೇಸುವಿನ ಪವಿತ್ರಜಲ ಸಿಂಚನಮಾಡುವದು ಮಹಾ ಸಾಹಸದ ಕರ್ಮವೆಂದು ನಾವು ತಿಳಿಯುತ್ತೇವೆ. ಇದು ಈ ಶಾಲೆಯ ಅಭ್ಯುದಯಕ್ಕೆ ಬಾಧೆ ತರುವ ಉದಾಹರಣೆಯಲ್ಲವೆ? ಸಾಕು. ವಿಶೇಷ ವಿಸ್ತಾರದಿಂದ ಪ್ರಯೋಜನವೇನು? ಕಳ್ಳ ಕೇರಿದಮನೆಗೆ ಎಣ್ಣೆ ದುಂಡವೆಂಬ ನ್ಯಾಯದಂತೆ ನಾವು ಎಷ್ಟು ತೋಡಿಕೊಂಡರೂ ಆಗುವ ಮಾತು ಆಗಿ ಹೋಯಿತು —ಚಂದ್ರೋದಯ.

ನೋಟಿಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ. ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರಿಗೇ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

ಪೋಸಲ್ ಸಹಿ	ರೂ	ಆ	ಪೈ
ಸಟೀಕಾ ವೈದ್ಯಸಾರ ಸಂಗ್ರಹ …	೫	೮	೦
,, ಶಿವಗೀತೆ …	೧	೧	೦
,, ಶಿವಾನಂದಲಹರಿ …	೦	೪	೦
,, ಕಾಲಾಮೃತ …	೧	೨	೦
,, ಮುಹೂರ್ತದರ್ಪಣ …	೦	೧೨	೦
,, ಬಾಲರಾಮಾಯಣ …	೦	೮	೦
,, ಗೋಪಿಕಾ ಗೀತೆ …	೦	೧	೬
,, ಚಾಣಕ್ಯನೀತಿ (ಸಂಪೂರ್ಣ)	೦	೬	೦
ವಿಷ್ಣುಸಹಸ್ರನಾಮ ಪತ್ರಿಕೆ …	೦	೫	೦
ಸೂರ್ಯಸಹಸ್ರನಾಮ …	೦	೩	೦
ಕೃಷ್ಣಕರ್ಣಾಮೃತ …	೦	೭	೬
ತ್ರಿಕಾಂಡ ಅಮರ ಮೂಲ …	೦	೨	೬
೧ ಕಾಂಡ …	೦	೧	೦

ಕನ್ನಡ ಗ್ರಂಥಗಳು.

	ರೂ	ಆ	ಪೈ
ಶುಕಸಪ್ತತಿ ಅಪ್ಪಲ್ ಪ್ರತಿ …	೩	೦	೦
ಡಿಟೋ ಡೆಮ್ಯ …	೧	೮	೦
ವೃಷಭೇಂದ್ರ ವಿಜಯ …	೧	೪	೦
ಪಂಚಭಾಷೆ ಬಾಲಬೋಧೆ …	೦	೪	೦
ಹನುಮದ್ವಿಲಾಸ …	೦	೪	೦
ಕೀಚಕಮರ್ದನ …	೦	೨	೬
ಸುಭದ್ರಾಪರಿಣಯ …	೦	೨	೬
ಶಶಿರೇಖಾ ಪರಿಣಯ …	೦	೩	೦
ಸುಧಾಮಚರಿತ್ರೆ …	೦	೨	೦
ಪ್ಯೂರಾಮಾನ ಚರಿತ್ರೆ …	೦	೨	೦
ಬಾಲಗ್ರಹ ಚಿಕಿತ್ಸೆ …	೦	೨	೬
ಮಹಮ್ಮದನ್ ಲಾ …	೧	೦	೦
ಭ್ರಾಂತಿ ವಿಲಾಸ …	೦	೧೨	೦

Bangalore:—Printed and published at the Karnatic Press, No. 108, Srinivasa Mandiram Road Pettah—1890.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಕ್ಷೇಮವಿನಿದಸ್ರವೃತ್ತ್ಯುಪಗಮಾರ್ಥಕರ್ಣಾಟಕಪ್ರಕಾಶನವರಾಭಿಧಾಪ್ರಥಿತಸಾಹಿತೀಶೋಭಿತಾ। ಮೃಗಾಂಕಹಿತವಾಸರೆನಿಹಿತಮುದ್ರಣಾಸಜ್ಜಸ್ಸ್ವೈರ್ಹ್ರಿಕಾಸುಪರಿಪ್ರೋಟಾದಿಕಿತಿವಾಸನಸುಕುದೂಕಿ

Vol. XVII] BANGALORE:—MONDAY, MARCH 17 1890. [No. 11.

ಸಂಪುಟ ೧೭] ಬೆಂಗಳೂರು:—ಸನ್ ೧೮೯೦ನೇ ಇಸವಿ ಮಾರ್ಚಿ ೧೭ ನೇ ತಾರೀಖ್ ಸೋಮವಾರ. [ಸಂಚಿಕೆ ೧೧

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಮುಂಗಡ	ಸ್ಥಳದವರಿಗೆ	ಪರಸ್ಥಳದವರಿಗೆ
	ಪೋಸ್ಟಿಲ್ಲದೆ	ಪೋಸ್ಟಸೇರಿ
ಮುಂಗಡಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

[illegible] ಕೊಡತಕ್ಕದ್ದು. [illegible]

[illegible] ಪತ್ರಿಕೆಗೆ [illegible] ಬರೆದು ಕಳುಹಿಸಲ್ಪಡುವ ಲೇಖನಗಳು ಮೊಬಲಗು ಲೆಕ್ಕಕ್ಕೆ ದಾಖಲ್ಮಾಡಿಕೊಳ್ಳಲ್ಪಡುವದು

ಪ್ರಕಟನೆಯ ರಿವಾಜ್.

ಮೊದಲನೇ ದಫಾ ಪಙ್ಕ್ತಿ	ಒಂದಕ್ಕೆ	೦—೨—೦
ಎರಡನೇದಫಾ ಪಙ್ಕ್ತಿ	ಒಂದಕ್ಕೆ	೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ [illegible] ಪ್ರಕಟನೆಗಳನ್ನು [illegible] ಪ್ರಕಟಿಸಲ್ಪಟ್ಟಿದ್ದಾಗ್ಯೂ [illegible] ಪ್ರಕಟನೆಗಳನ್ನು [illegible] ಪತ್ರಿಕೆಗೆ [illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

☞ *Price including Postage Rs 5 6-0*

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜು ಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ರವಾನಿಸ್ತಿನಗಳಿಗೆ ಉತ್ತರ ಕೊಡಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಪೋಸ್ಟ್ ಚೇರಿಂಗ್ ಪ್ರತಿ 1 ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್,

ಕೋರ್ಟ್ ರೋಡ್, ಅಪ್ಪಾರ್ಪೇಟೆ, 41ನೇ ನಂ. ಮನೆ.

ADVERTISEEMNTS.

ನೋಟಿಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರಿಗೇ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

		ಪೋಸ್ಟ್ ಸಹಿ ರೂ. ಆ. ಪೈ
ಸಟೀಕಾ ವೈದ್ಯಸಾರ ಸಂಗ್ರಹ	...	೫ ೪ ೦
,, ಶಿವಗೀತೆ	...	೧ ೧ ೦
,, ಶಿವಾನಂದಲಹರಿ	...	೦ ೮ ೦
,, ಕೈವಲ್ಯನವನೀತ	..	೧ ೨ ೦
,, ಮುಕುಂದಮಾಲಾ	...	೦ ೧೨ ೦
,, ಬಾಲರಾಮಾಯಣ	..	೦ ೪ ೦
,, ಗೋಪಿಕಾಗೀತೆ	..	೦ ೧ ೬
,, ಚಾಣಕ್ಯನೀತಿ (ಸುಭಾಷಿತ)		೦ ೬ ೦
ವಿಷ್ಣುಸಹಸ್ರನಾಮ ಪತ್ರಿಕೆ	..	೦ ೫ ೦
ಸಂಧ್ಯಾಸಹಸ್ರನಾಮ	.	೦ ೩ ೦
ಕೃಷ್ಣಕರ್ಣಾಮೃತ	...	೦ ೨ ೬
ಶ್ರೀಕಂಠ ಅಮರ ಮೂಲ	...	೦ ೨ ೬
೧ ಶಿಖಿಂದ	...	೦ ೧ ೦

ಕನ್ನಡ ಗ್ರಂಥಗಳು.

ಬೃಹಸ್ಪತಿ ಅವ್ವಲ್ ಪ್ರತಿ	..	೩ ೦ ೦
ಡಿಟೋ ದುಯ್ಯಂ	.	೧ ೪ ೦
ವೃಷಭೇಂದ್ರ ವಿಜಯ	..	೧ ೮ ೦
ಪಂಚತಂತ್ರ ಬಾಲನೀತಿ	...	೦ ೮ ೦
ಕಸುಮವಿಲಾಸ	..	೦ ೮ ೦
ಕಾಲೀಮರ್ದನ	...	೦ ೨ ೬
ಸುಭದ್ರಾಪರಿಣಯ	...	೦ ೨ ೬
ರುಕ್ಮಿಣೀ ಪರಿಣಯ	..	೦ ೩ ೦
ಸುದಾಮಚರಿತ್ರೆ	...	೦ ೨ ೦
ದ್ರೌಪದೀಮಾನರಕ್ಷಣ ಚರಿತ್ರೆ	...	೦ ೨ ೦
ಬಾಲಗ್ರಹ ಚಿಕಿತ್ಸೆ	..	೦ ೨ ೬
ಸಹಸ್ರಾರ್ಜುನ ಲಾ	....	೧ ೦ ೨
ಭ್ರಾಂತ ವಿಲಾಸ	...	೦ ೧೨ ೦

ನೋಟಿಸ್.

ಇದರಿಂದ ನಮ್ಮ ಚಂದಾದಾರರಿಗೂ ಇತರರಿಗೂ ಪ್ರಕಟಪಡಿಸುವದೇನಂದರೆ—

೧೮೮೯ ನೇ ಇಸವಿ ಡಿಸೆಂಬರ್ ಆಖೈರಿನವರಿವಿಗೆ ಚಂದಾ ಬಾಕಿಯನ್ನು ಪೂರಾ ಫೈಸಲ್ಮಾಡಿರತಕ್ಕ ಚಂದಾದಾರರ ಹೆಸರುಗಳನ್ನು ಮಾತ್ರ ನಾವು ರಿಜಿಸ್ಟರ್ ದಾಖಲ್ಮಾಡಿಕೊಂಡು ಈಜನವರಿ ಲಾಗಾಯತು ಪತ್ರಿಕೆ ಕಳುಹಿಸುತ್ತೇವೆ. ಅವರ ಪೈಕಿ ಯಾರಿಗಾದರು ಪತ್ರಿಕೆಯ ಅಪೇಕ್ಷೆ ಇಲ್ಲದಿದ್ದರೆ ಅಂತವರು ಕೂಡಲೇ ತಮ್ಮ ಅಭಿಪ್ರಾಯವನ್ನು ಮೂರುಕಾಸಿನ ಕಾರ್ಡಿನಲ್ಲಿ ನಮಗೆ ತಿಳಿಸಿಬಿಡಬಹುದು. ಪತ್ರಿಕೆಯ ಆವಶ್ಯಕತೆ ಇರತಕ್ಕವರು ಸಾಧ್ಯವಾದಷ್ಟು ತ್ವರೆಯಲ್ಲಿ ಚಂದಾ ಮೊಬಲಗನ್ನು ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಬೆಂಗಳೂರು, } ಟಿ. ಸಿ. ಶ್ರೀನಿವಾಸಾಚಾರ್,
ತಾ ೫ನೇ ಜನವರಿ } ಪ್ರೊಪ್ರೈಟರ್.
೧೮೯೦. } ಕರ್ಣಾಟಕ ಪ್ರಕಾಶಿಕಾ.

ದಕ್ಷಿಣ ಮಹಾರಾಷ್ಟ್ರ ರೆಯಿಲ್ವೇ ಕಂಪೆನಿ.

ರೆಯಿಲ್ವೆ ಕಂಟ್ರ್ಯಾಕ್ಟುದಾರರಿಗೆ ಇದರಿಂದ ತಿಳಿಸಲ್ಪಡುವದೇನಂದರೆ—

ಮೈಸೂರು ಸ್ಟೇಟ್ ರೆಯಿಲ್ ರಸ್ತೆಯನ್ನು ಮೈಸೂರಿಂದ ನಂಜನಗೂಡು ವರಿವಿಗೆ ೧೫ಮೈಲುಗಳ ಫಾಸಲೆ ಬಡಾಯಿಸಿ ಹಾಕುವದಕ್ಕೆ ದರಖಾಸ್ತುಗಳನ್ನು ಸೀಲ್ಮಾಡಿ ಕಳುಹಿಸಿಕೊಡತಕ್ಕದ್ದು.

ಮೂರು ಮೈಲುಗಳಿಗೆ ಸೆಕ್ಷನ್, ಅಂದರೆ ಒಂದು ಭಾಗದ ಮೇರೆ ವಿಂಗಡಿಸಲ್ಪಟ್ಟಿದೆ, ಅವುಗಳ ಪೈಕಿ ಒಂದು ಅಥವಾ ಜಾಸ್ತೀ ಸೆಕ್ಷನ್‌ಗಳಿಗೆ ದರಖಾಸ್ತುಗಳು ಅಂಗೀಕರಿಸಲ್ಪಡುವವು.

ದರಖಾಸ್ತುಗಳ ಲಿಫಾಫೆಯ ಮೇಲೆ ನಂಜನಗೂಡು ರೆಯಿಲ್ ರಸ್ತೆಗೆ ದರಖಾಸ್ತೆಂದು ಗುರ್ತುಮಾಡಿ, ಧಾರವಾಡದಲ್ಲಿರುವ ಏಜಂಟರು ವ ಚೀಫ್ ಇಂಜನಿಯರವರ ಹೆಸರಿಗೆ ರಿಜಸ್ಟರ್ ಮಾಡಿ ಕಳುಹಿಸತಕ್ಕದ್ದು. ಅವು ಸನ್ ೧೮೯೦ ನೇ ಇಸವಿ ಮಾರ್ಚಿ ೧೫ನೇ ತಾರೀಖ್ ಮಧ್ಯಾಹ್ನ ದವರಿವಿಗೆ ಬರಮಾಡಿಕೊಳ್ಳಲ್ಪಡುವದು,

ಏಜಂಟ್ ವ ಚೀಫ್ ಇಂಜನಿಯರವರು ಕಂ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಬದ್ಧರಾಗುವದಿಲ್ಲವು.

ಮಾಡಬೇಕಾದ ಕಾಮಗಾರಿಯ ಪೆಸ್ಸಿಫಿಕೇಶನ್, ಸಾಮಾನುಗಳ ಪರಿಮಾಣದ ಪಟ್ಟಿ, ಕರಾರಿನ ನಮೂನೆ, ಇವುಗಳನ್ನು ಪಡೆಯಬೇಕಾದವರು ೨೦ ರೂಪಾಯಿಗಳಂ ಕೊಟ್ಟು, ಧಾರವಾಡದಲ್ಲಿರುವ ಏಜಂಟ್ ವ ಚೀಫ್ ಇಂಜನಿಯರಿಂದ ಪಡೆಯಬಹುದು.

ಪ್ರತಿ ಒಂದು ದರಖಾಸ್ತಿನ ಸಂಗಡಲೂ ೧,೦೦೦ ರೂಪಾಯಿಗಳ ಸುಚಕಾರದ ಮೊಬಲಗು ಕಳುಹಿಸತಕ್ಕದ್ದು. ದರಖಾಸ್ತು ಮಂಜೂರ್ಮಾಡಲ್ಪಡದ ಪಕ್ಷಕ್ಕೆ ಸದರೀ ಮೊಬಲಗು ವಾಪಸ್ ಮಾಡಲ್ಪಡುವದು, ದರಖಾಸ್ತು ವಾಪಸ್ ತೆಗದುಕೊಳ್ಳಲ್ಪಟ್ಟರೆ ಅದು ದುತವಾಗಿ ಸೇರಿಸಿಕೊಳ್ಳಲ್ಪಡುವದು.

ದರಖಾಸ್ತಿನಿಂದ ಬಡೆಪ ಕಾಮಗಾರಿಗೆ ಹಿಡಿಯುವ ಲಾಗತದ ಮೊಬಲಗು ಪೈಕಿ ನೇಕಡ ೫ ರೂಪಾಯಿನಂತೆ, ಕಂಟ್ರ್ಯಾಕ್ಟನ್ನು ಕ್ರಮವಾಗಿ ಪೂರ್ತಿ ಮಾಡುವದಕ್ಕೆ ಜಾಮೀನ್ ತರೀಖ್ ಡಿಪಾಜಿಟ್ ಇಡತಕ್ಕದ್ದು.

ದರಖಾಸ್ತು ಮಂಜೂರ್ಮಾಡಲ್ಪಟ್ಟ ತಾರೀಖ್ ಲಾಗಾಯತು ಆರು ತಿಂಗಳೊಳಗಾಗಿ ಕಾಮಗಾರಿಯನ್ನು ಪೂರ್ತಿ ಮಾಡತಕ್ಕದ್ದು.

ವಿಶಿಷ್ಟ ಸೇತುವೆಗಳ ನಕಷೆಗಳನ್ನೂ ಇತರ ಕಾಮಗಾರಿಗಳ ನಕಷೆಗಳನ್ನು ಧಾರವಾಡದಲ್ಲಿರುವ ಏಜಂಟ್ ವ ಚೀಫ್ ಇಂಜನಿಯರ ಆಫೀಸ್‌ನಲ್ಲಿ ನೋಡಬಹುದು.

ಇಸ್ತಿಹಾರ್.

ಸನ್ ೧೮೮೯ನೇ ಇಸವಿ ಸೆಪ್ಟಂಬರ್ ೨೮ ನೇ ಮರ್ಕೂಂ ೩೩೩೩—೧೯ನೇ ನಂ. ಇಸ್ತಿಹಾರ್‌ನಲ್ಲಿ ವಿಧಾಯಕವಾಗಿರುವ ರೂಲ್ಸಿನ ಪ್ರಕಾರ ಇನಾಂ ಗ್ರಾಮಗಳ ಮಾಲೀಕರು ತಮ್ಮ ಗ್ರಾಮಗಳ ವಿಚಾರಣೆ ಪ್ರವೃತ್ತ್ಯೆ ಒಬ್ಬ ಏಜಂಟನ್ನ ನೇಮಿಸಬೇಕೆಂದು ಇರುವದರಿಂದಲೂ, ಮತ್ತು ಈಇಸ್ತಿಹಾರಿನ ಬಹುಕಃ ಎಲ್ಲಾ ಇನಾಂ ಗ್ರಾಮಗಳಲ್ಲಿಯೂ ಏಜಂಟರುಗಳು ನೌಕರರು ಆಗದೆ ಇರುವದಾಗಿ ನಮ್ಮ ನೋಟೀಸಿಗೆ ಬಂದು ಇರುವದರಿಂದಲೂ ಇದರಿಂದ ಜೋಡಿ ಕಾಯಂ ಗುತ್ತಾ ಮತ್ತು ಸರ್ವಮಾನ್ಯ ಇನಾಂದಾರರಿಗೆ ತಿಳಯಪಡಿಸುವದೇನಂದರೆ:—

ಈ ತಾರೀಖ್ ಲಾಗಾಯತು ಒಂದು ತಿಂಗಳ ವಾಯಿದೆ ಕೊಡಲ್ಪಟ್ಟಿರುತ್ತೆ. ಆ ವಾಯಿದೆಯೊಳಗೆ ಇನಾಂದಾರ್ರು ತಮ್ಮ ತಮ್ಮ ಗ್ರಾಮಗಳಿಗೆ ಒಬ್ಬ ಏಜಂಟನ್ನು ನೇಮಕಮಾಡಿ ಅಂತಾ ಏಜಂಟನ ಹೆಸರನ್ನು ತಾಲ್ಲೂಕ್ ಅಮಲ್ದಾರ್ರುಗಳಿಗೆ ತಿಳಸಬೇಕು. ಹಾಗೆ ನೌಕರರು ಮಾಡುವದಕ್ಕೆ ತಪ್ಪಿದಲ್ಲಿ ಸದರೀ ನೋಟಿಫಿಕೇಷನ್ ೨ ನೇ ರೂಲ್ಸ್‌ಪ್ರಕಾರ ಡಿ. ಕ. ಸಾಹೇಬರವರು ಹೊಂದಿರುವ ಅಧಿಕಾರವನ್ನು ಚಲಾಯಿಸಿ ಒಬ್ಬ ಏಜಂಟನ್ನ ನೌಕರರು ಮಾಡುವದರಲ್ಲಿ ಬಾಡೀತು. ಅಂತಾ ಏಜಂಟ್ ನಡೆಸುವ ಎಲ್ಲಾ ಕೆಲಸಗಳು ಇನಾಂದಾರ್ರು ಖುದ್ದು ತಾವೇ ನಡೆಸಿದಂತೆ ಎಣಿಸಲು ಬದ್ಧರಾಗಿರುತ್ತಾರೆ. ಈರೂಲ್ಸು ಮತ್ತು ಈ ಇಸ್ತಿಹಾರಿನ ಅಮಲ್ ಒಂದು ಗ್ರಾಮದಲ್ಲಿ ಒಬ್ಬ ಇನಾಂದಾರನಿಗಿಂತ ಹೆಚ್ಚಾಗಿ ಇನಾಂದಾರ್ರು ಯಾ ಹಿಸ್ಸೇದಾರ್ರು ಇರುವ ಗ್ರಾಮಗಳಿಗೆ ಅನ್ವಯಿಸುತ್ತೆ.

ತಾಃ ೧೧ನೇ ಫೆಬ್ರವರಿ ೧೮೯೦ನೇ ಇಸವಿ. ಬೆಂಗಳೂರು.

P. N. KRISHNAMURTI,
Deputy Commissioner.

ನೋಟಿಸ್.

ಬೆಂಗಳೂರಲ್ಲಿ ಸ್ಥಾಪಿಸಲ್ಪಟ್ಟಿರುವ ಕಬ್ಬಿಣದ ಸಾಮಾನುಗಳ ತಯಾರೀಕಾರ್ಖಾನೆಗೆ ಲಾಯಖಾದ ಒಬ್ಬ ಮೇಸ್ತ್ರಿ ಬೊಬ್ಬನು ಬೇಕಾಗಿದೆ. ಕೆಲಸಗಾರರನ್ನೊದಗಿಸಿ ಕೆಲಸಮಾಡುವದಕ್ಕೆ ಶಕ್ತನಾಗಿರಬೇಕು. ಲಾಯಖಿಯನ್ನನುಸರಿಸಿ ಸಂಬಳ ಕೊಡಲ್ಪಡುವದು.

ಬೆಂಗಳೂರು ಪಟ್ಟಣದಲ್ಲಿನ ಕಬ್ಬಿಣದ ಸಾಮಾನ್ ತಯಾರೀ ಕಾರ್ಖಾನೆಗೆ ಬರೆದುಕೊಳ್ಳಬಹುದು, ಅಥವಾ ರೂಬರೂ ಹಾಜರಾಗಿ ಕೇಳಿಕೊಳ್ಳಬಹುದು.

Bangalore City Municipality.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ತಾ. ೭ನೇ ಮಾರ್ಚ್, ೧೮೯೦.

ಸನ್ ೧೮೯೦ನೇ ಇಸವಿ ಮಾರ್ಚ್ ೧೭ನೇ ತಾರೀಖ್ ಸೋಮವಾರ ಪ್ರಾತಃಕಾಲ ೮½ ಘಂಟೆಗೆ ಸಿಟಿ ಮ್ಯುನಿಸಿಪಲ್ ಕಮಿಷನರುಗಳು ತಮ್ಮ ಆಫೀಸಿನಲ್ಲಿ ಸಭೆ ಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳ ಯಾದಾಸ್ತು.

೧. ಸನ್ ೧೮೯೦ನೇ ಇಸವಿ ಫೆಬ್ರವರಿ ಮಾಹೆಬಾಬತು ನಗದು ಜಮಾಖರ್ಚು ಲೆಕ್ಕಗಳು, ಮತ್ತು ಮರಣಲೆಕ್ಕಗಳು.

೨. ೧೮೯೦—೯೧ ನೇ ಸರ್ಕಾರೀ ಸಾಲಿನ ಬಾಬತು ಜಮಾಖರ್ಚು ಅಂದಾಜ್ ಬಜೆಟನ್ನು ಅಖೈರಾಗಿ ಮಂಜೂರ್ಮಾಡತಕ್ಕ ವಿಷಯ.

೩. ಇದರಡಿ ಕಂಡ ದರಖಾಸ್ತುಗಳು ವೈಗೈರೆ ಮಾಡುವದು.

(೧) ಚೆರಂಡೀ ಕಾಮಗಾರಿಗಳಂ ನಡಿಸತಕ್ಕಬಗ್ಗ್ಯೂ, ಸಾವರ್ಜನಗಳನ್ನೊದಗಿಸತಕ್ಕಬಗ್ಗ್ಯೂ ಕೊಡಲ್ಪಟ್ಟಿರುವ ದರಖಾಸ್ತುಗಳು.

(೨) ಕೋಟೆಯ ಮುಂಭಾಗದ ಮೈದಾನಿನಲ್ಲಿ ಬಂದು ನಿಲ್ಲತಕ್ಕ ಒಡ್ಡರ ಗಾಡಿಗಳ ಮೇಲೆ ತೀರ್ವೆ ವಸೂಲ್ ಮಾಡತಕ್ಕ ಬಗ್ಯೆ ಕೊಡಲ್ಪಟ್ಟ ದರಖಾಸ್ತುಗಳು.

(೩) ಮ್ಯುನಿಸಿಪಲ್ ಖಸಾಯಿ ಅಂಗಡಿಗಳ ಮೇಲಿನ ತೀರ್ವೆ ವಸೂಲೀ ಬಗ್ಯೆ ಕೊಡಲ್ಪಟ್ಟ ದರಖಾಸ್ತುಗಳು.

(೪) ತರಕಾರೀ ಅಂಗಡಿಗಳಮೇಲಿನ ತೀರ್ವೆ ವಸೂಲೀಬಗ್ಯೆ ಕೊಡಲ್ಪಟ್ಟ ದರಖಾಸ್ತುಗಳು.

೪. ಜಕ್ಕರಾಯನ ಕೆರೇಬಳಿ ಹೊಸದಾಗಿ ಏರ್ಪಡಿಸಲ್ಪಡತಕ್ಕ ಸ್ಮಶಾನ ಭೂಮಿಯಬಗ್ಯೆ ಸಂಪಾದಿಸಬೇಕಾಗಿರುವ ಜಮೀನನ್ನು ಕುರಿತ ಸಬ್ ಕಮಿಟಿಯವರ ರಿಪೋರ್ಟ್.

೫. ಆಕ್ಟ್ರಾಯಿ ಇಲಾಖೆಯ ಜವಾನನಾದ ಸೊನ್ನಪ್ಪನೆಂಬವನಿಗೆ ಗ್ರಾಚ್ಯುಯಿಟಿ ಕೊಡಿಸಬೇಕೆಂದು ಸದರೀ ಇಲಾಖಾ ಮ್ಯಾನೇಜರು ಸಿಫಾರಸ್ ಮಾಡಿ ಬರೆದ ರಿಪೋರ್ಟ್.

೬. ಆಕ್ಟ್ರಾಯಿ ಕೆಲಸಗಳ ಬಗ್ಯೆ ಜಾಸ್ತೀ ಸ್ಥಳಾನುಕೂಲ್ಯವಂ ಕಲ್ಪಿಸಿ ಕೊಡಬೇಕೆಂದು ಸದರೀ ಇಲಾಖಾ ಮ್ಯಾನೇಜರವರು ಬರೆದ ೧೮೯೦ ನೇ ಇಸವಿ ಜನವರಿ ೯ನೇ ತಾರೀಖು ವೃತ್ತ ಲೆಟರ್.

A S RAGHAVACHARLU,
Vice President,
City Municipal Commission

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MARCH 17, 1890.

೧೮೯೦ನೇ ಮಾರ್ಚಿ ತಾ|| ೧೭ನೇ ಸೋಮವಾರ

THE BAR.

ತಿರುಪತಿ ಮಹಂತರವರು ದೇವಸ್ಥಾನಕ್ಕೆ ಸಂಬಂಧಪಟ್ಟ ಕೆಲವು ದ್ರವ್ಯವಂ ದುರ್ವಿನಿಯೋಗ ಪಡಿಸಿದರೆಂಬದಾಗಿ ಅವರಮೇಲೆ ತರಲ್ಪಟ್ಟದ್ದ ಕ್ರಿಮಿನಲ್ ಮೊಕದ್ದಮೆಯಲ್ಲಿ ಚಿತ್ತೂರ್ ಡಿಸ್ಟ್ರಿಕ್ಟ್ ಸೆಷನ್ಸ್ ಜಡ್ಜಿಯವರು ಮಹಂತರಿಗೆ ಮೂರುವರ್ಷಗಳ ಕಠಿಣಸೈಪ್ ಸಜಾ ವಿಧಿಸಿದ್ದು, ಅದರಮೇಲೆ ಮದರಾಸ್ ಹೈಕೋರ್ಟಿಗೆ ಅಪೀಲಾಗಿರುವದೂ, ಅದು ಚೀಫ್ ಜಸ್ಟಿಸ್‌ಯವರೂ ಜಸ್ಟಿಸ್ ಮೆ|| ಮುತ್ತುಸಾಮಿ ಅಯ್ಯರವರೂ ವಿಚಾರಣೆಮಾಡಿದ್ದುವನ್ನು ಮಾಡುದರೆಂಬದೂ ಪ್ರಾಯೇಣ ಎಲ್ಲರಿಗೂ ತಿಳಿದ ಅಂಶವಾಗಿರುತ್ತದೆಯಷ್ಟೆ. ಪ್ರಸಕ್ತ ಅಪೀಲ್ ವಿಚಾರಣೆ ಕಳೆದ ಮುಂಗಳವಾರದದಿನ ಪ್ರಾರಂಭವಾಗಿ ಬುಧವಾರದದಿನ ಪೂರ್ತಿಯನ್ನೈದಿತು. ಈ ಮೊಕದ್ದಮೆಯ ಪ್ರಾರಂಭಕಾಲದಲ್ಲಿ ಚೀಫ್ ಜೆಸ್ಟಿಸ್ ಮಿಸ್ಟರ್ ಕಾಲಿನ್ಸ್‌ಯವರು ತತ್ಕಾಲದಲ್ಲಿ ಕೋರ್ಟಿನೊಳಿದ್ದ ವಕೀಲರು ಕುರಿತು ಇದರಡಿ ಕಂಡಂತೆ ತಿಳಿಸಿದ ರೆಂಬದಾಗಿ ಮದರಾಸ್ ಮೆಯಿಲ್‌ಪತ್ರಿಕೆಯು ಪ್ರಕಟಿಸುತ್ತಿದೇನುವದೇ,—ಹಿಂದು ಕ್ರಿಮಿನಲ್‌ಮೊಕದ್ದಮೆಯಲ್ಲಿ ವಕೀಲರು ತಮಗರುಸುಂಸಲ್ಲಲಿಲ್ಲವೆಂಬ ಕಾರಣದಮೇಲೆ ಕೋರ್ಟಿಗೆ ಹಾಜರಾಗದೆ ಏಕಾಏಕ್ ನಿಂತುಬಿಡತಕ್ಕ ವಾಡಿಕೆಯು ಬಹಳ ಆಕ್ಷೇಪಣೀಯಾಂಶವಾಗಿರುತ್ತದೆ. ಇದಲ್ಲದೆ ವಕೀಲರ ರುಸುಂ ಕೊಡಲ್ಪಡಲಿಲ್ಲವೆಂಬ ಹಿಂದು ಕಾರಣಕ್ಕಾಗಿ ಒಬ್ಬ ಅಪರಾಧಿಯಂ ನಿರಾಧಾರನನ್ನಾಗಿ ಕೈಬಿಟ್ಟು ಬಿಡುವಣವು ಬಹಳ ಅಹಿತವೆಂದು ಭಾವಿಸುವೆನು. ಬೆಂಗಾಲಿಯ ಪರಂತೆ ಲಭಿಸತಕ್ಕ ಆಯಾ ದಿನದ ಮಜೂರಿಯಿಂದ ತೃಪ್ತರಾಗಿ ದಿನಕೂಲಿಯಮೇಲೆ ಗೊತ್ತು ಮಾಡಲ್ಪಡಲಿಕ್ಕೊಪ್ಪುವಂಬದುವದು ಕಸಬುದಾರರ ಧರ್ಮವೆಂದು ನಾನು ಭಾವಿಸಲಾರೆನು. ಅದು ಸಿವಿಲ್‌ಮೊಕದ್ದಮೆಯಾಗಿದ್ದರೆ ಇದೊಂದು ಪಚ್ಚಾಯವಾಗಿರುವುದು. ಕ್ರಿಮಿನಲ್‌ಮೊಕದ್ದಮೆಯಲ್ಲಿ ವಕೀಲನು ಮೊದಲು ಒಂದುಸಲ ಗೊತ್ತಾದರೇ ಆತನೆ ಕಡೆಗೂ ಅದಂ ಜರಿಗಿಸಲಿಕ್ಕೆ ಬದ್ಧನಾದವನಾಗಿರುತ್ತಾನೆ. ಕೆಳಕೋರ್ಟಿನಲ್ಲಿ ಅನೇಕಾವರ್ತಿ ವಕೀಲರು ಬದಲಾಯಿಸುತಬಂದದರಿಂದ, ಮಹಂತರಿಗೆ ಬಹಳನಷ್ಟ ಪ್ರಾಪ್ತವಾಗಲಿಕ್ಕೆ ನಿಮಿತ್ತವಾಯಿತು. ಮುಖ್ಯವಾಗಿ ಪ್ರಸಕ್ತ ಮೊಕದ್ದಮೆಯು ಅಥವಾ ಇಬ್ಬರು ವಕೀಲರುಗಳಿಂದ ನಡೆಸಲ್ಪಡತಕ್ಕದ್ದಾಗಿತ್ತಲ್ಲದೆ ಅವರೇ ಇದು ಕಡೆಗೂ ಜರಿಗಿಸಬೇಕಾಗಿತ್ತು. ಏತದ್ವಿಧವಾದ ಗರ್ಹಿತಕಾರ್ಯವಂ ಯಾವ ವಕೀಲಾಗಲಿ ಮರಳಿ ಜರಿಗಿಸಿದಂತೆ ನನ್ನ ತಿಳುವಳಿಕೆಗೆ ಬಂದರೆ ಆಗ ಇಲ್ಲಿನ ವಕೀಲರ ಪದ್ಧತಿ ಯಾವರೀತಿಯಾಗಿದ್ದರೂ ಆತನ ವಿಷಯದಲ್ಲಿ ಯುಕ್ತಾನುಸಾರ ನಪ್ಪದೆ ಜರಿಗಿಸಬೇಕಾಗಿರುವದು, ಎಂಬದು.

ಪ್ರಾಯಶಃ ಈ ದುವೃತ್ತಿಯು ಈದೇಶದೊಳು ಸಹ ಅಲ್ಲಿಯಲ್ಲಿ ನೆರೆಗೊಂಡಿರುತ್ತದೆ. ಸಾಧಾರಣವಾಗಿ ಒಂದು ಮೊಕದ್ದಮೆಯಲ್ಲಿ ಕಕ್ಷಿಗಾರನು ಕೊಡುವದಕ್ಕೆ ಒಪ್ಪಿಕೊಂಡ ಮೊಬಲಗು ವಕೀಲರಿಗೆ ಅಲ್ಪವೆಂದು ತೋರಿ ಅದು ಅಂಗೀಕರಿಸಲಿಕ್ಕೆ ಇಷ್ಟವಿಲ್ಲದಿದ್ದರೆ ನಿರಾಕರಿಸಿಬಿಡುವದು ಅವರ ಪ್ರಾಮಾಣಿಕತೆಗೂ ಉಚಿತಜ್ಞತೆಗೂ ಮುಖ್ಯ ಲಕ್ಷಣವಾಗಿರುವುದು. ಹಾಗೆ ನಿರಾಕರಿಸದೆ ಕಕ್ಷಿಗಾರರು ನಿಶ್ಕರ್ಷಿಸಿಕೊಡುವ ಮೊಬಲಗನ್ನು ಮೊದಲು ತೆಗದುಕೊಂಡು ವಿಚಾರಣೆಯಕಾಲದಲ್ಲಿ ತಮಗೆ ಬೇರೊಂದು ಕೋರ್ಟಿನಲ್ಲಿ ಭಾರೀ ಮೊಕದ್ದಮೆ ಯಿರುವದರಿಂದ ವಿಶೇಷ ಪ್ರಯೋಜನಕಾರಿಯಾದ ಅದು ಬಿಡದೆ ಅತ್ಯಲ್ಪ ಪ್ರವೇಶನವುಳ್ಳ ಇದಕ್ಕೆ ತಾವು ಬರುವದಿಲ್ಲವೆಂತಲೂ, ಜಾಸ್ತೀ ರುಸುಂ ಕೊಟ್ಟದಪಕ್ಷಕ್ಕೆ ಅವರಮೇಲೆ ತಾವು ಬೇಕಾದರೆ ಆಲೋಚಿಸುವಂತೆಯೂ ಹೇಳಿ ಒಳ್ಳೆಯ ಸಮಯದಲ್ಲಿ ಕಕ್ಷಿಗಾರನು ಅನುತ್ಸಾಹಪಡಿಸಿ ಮೋಸ ಪಡಿಸುತ್ತಾರೆ. ಅಂತಾ ಸಂದರ್ಭದಲ್ಲಿ ಕಕ್ಷಿಗಾರರ ಚಿತ್ತವೃತ್ತಿಯು ಯಾವರೀತಿಯಲ್ಲಿರುವದೋ ಅದು ಈಪತ್ರಿಕೆಯನ್ನೋದತಕ್ಕವರೇ ಊಹಿಸಬಹುದು. ಇನ್ನೂ ಕೆಲವರು ಒಂದು ಕಕ್ಷಿಯವರ ಬಲಾಬಲಗಳನ್ನೆಲ್ಲ ಅರಿತುಕೊಂಡು ಅವರವಕ್ಷಕ್ಕೆ ಸಾಧಕಗಳಾದ ದಸ್ತೈವಜುಗಳ ಸಾರಾಂಶಗಳನ್ನೆಲ್ಲ ಗ್ರಹಿಸಿದಮೇಲೆ ಜಾಸ್ತೀ ರುಸುಂ ತಗಾದೆಮಾಡಲು, ಅದು ಕಕ್ಷಿಗಾರರು ಕೊಡಲಿಕ್ಕೆ ಶಕ್ತಿಯಿಲ್ಲದೆ ನಿರಾಕರಿಸಿದರೆ ಆಗ ಪ್ರತಿಕಕ್ಷಿಯವರಿಂದ ಜಾಸ್ತೀ ರುಸುಂ ಪಡೆದು ಅವರಿಗೆ ಪೋಷಕವಾಗಿ ಸದರೀ ಸಾಧನಗಳೆಲ್ಲವು ವಿನಿಯೋಗಿಸಿ ಮೊದಲನೆಯವರು ವಂಚಿಸುತ್ತಾರೆ. ಸಾಮಾನ್ಯವಾಗಿ ವಕೀಲರು ಕೇವಲ ಅರ್ಥಾತುರರಾಗಿ ತಮ್ಮ ಕರ್ತವ್ಯವು ಸಹ ಸತ್ಯೆಗ್ಯಯದೆ ಒಳ್ಳೇ ಸಮಯಗಳಲ್ಲಿ ಕಕ್ಷಿಗಾರರ ತತ್ರಾಪಿ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಅಪರಾಧಿಗಳಾಗಿರತಕ್ಕವರ ಕೋರಿಕೆಗಳೆಲ್ಲವೂ ಕ್ಷಣದಲ್ಲಿ ಭಂಗವಾಗುವಂತೆ ಕೋರ್ಟಿಗೆ ಬರದೆ ನಿಂತು ಹೋಗುವದರಿಂದ ಅವರಿಗುಂಟಾಗುವ ಸಂಕಟಗಳೂ ನಷ್ಟಗಳೂ ಇಷ್ಟೇ ಎಂದು ಹೇಳುವದಕ್ಕೆ ಸಾಧ್ಯವಲ್ಲವು ಮೊಕದ್ದಮೆಯು ದರ್ಯಾಫ್ತಿಗೆ ಉಪಕ್ರಮಿಸಲ್ಪಟ್ಟಾಗ ವಕೀಲರು ಬರದಿದ್ದರೆ ಆ ಸಮಯದಲ್ಲಿ ಮತ್ತೊಬ್ಬನು ಮೊಕದ್ದಮೆ ಹಿಡಿಯುವದಕ್ಕೆ ಕಕ್ಷಿಗಾರನಿಗೆ ಅವಕಾಶವೂ ತತ್ಕಾಲದಲ್ಲಿ ಪ್ರಸ್ತಾಪಪಡತಕ್ಕುದೂ ಕಡಿಮೆಯಾಗಿರುತ್ತದೆ. ಇದಲ್ಲದೆ ಹಿಂದುವೇಳೆ ಆತನು ಜೆಯಿಲ್‌ನಲ್ಲಿ ನಿರ್ಬಂಧದೊಳಿದ್ದರೆ ಧಾರಾಳವಾಗಿ ಬಂದು ಬೇಕಾದವನು ಚನಾಯಿಸಿಡಲಿಕ್ಕೆ ವ್ಯವಧಾನವಿರುವದಿಲ್ಲವು. ಕೋರ್ಟಿಗೆ ಬಂದಮೇಲೆ ತನ್ನ ತರಫ್ ಲಾಯರ್ ಬರದೆ ಮೋಸ ಮಾಡಿದ್ದರಿಂದ ಮೊಕದ್ದಮೆಯನ್ನು ಅಜೇವರ್ನ್ ಮಾಡಬೇಕೆಂದು ಜಡ್ಜಿಯನ್ನು ಕೇಳಿಕೊಂಡರೆ ಅದಕ್ಕೆ ಆತ ಸುಲಭವಾಗಿ ನಿಗೇ ಕೊಡುವದಿಲ್ಲವು. ಇಂತಾ ಸಂದರ್ಭಗಳಲ್ಲಿ ಅನುಕಂಪರಹಿತ ಜಡ್ಜಿಗಳ ಆತುರದಿಂದಲೂ ಅರ್ಥಾತುರರಾದ ವಕೀಲರ ವಂಚನೆಯಿಂದಲೂ ಮೊದಲೇ ವಿಷಣ್ಣರಾದ ಕಕ್ಷಿಗಾರರು ಮತ್ತಷ್ಟು ಸರಿಭವಿಸಲಿಕ್ಕೆ ಬೇಕಾದ ಅವಕಾಶವುಂಟಾಗಿರುತ್ತದೆ. ಸಿವಿಲ್ ಮೊಕದ್ದಮೆಗಳಲ್ಲಿ ಜನರಿಗೆ ಅರ್ಥನಾಶ ಮಾತ್ರ ವುಂಟಾಗುತ್ತದೆ. ಕ್ರಿಮಿನಲ್ ಮೊಕದ್ದಮೆಗಳಲ್ಲಾದರೋ ಪ್ರಾಣಮಾನ ಧನಗಳು ಮೂರಕ್ಕೂ ಏಕಕಾಲದಲ್ಲಿ ಉಪಹತಿ ಯುಂಟಾಗುತ್ತದೆ. ಅರ್ಥಾತುರರಾದ ಲಾಯರ್‌ಗಳ ವಂಚನೆಯನ್ನೆಷ್ಟು ನಿಂದಿಸಿದಾಗ್ಯೂ ಬಹಳ ಅಲ್ಪವಾಗಿರುವದು. ಮುಖ್ಯವಾಗಿ ಚೀಫ್ ಜಸ್ಟಿಸ್‌ಯವರು ಲಾಯರ್‌ಗಳಂ ಕುರಿತು ತಿಳಿಸಿದ ಬುದ್ಧಿವಾದವು ಇತರ ಎಲ್ಲಾ ಜಡ್ಜಿಗಳಿಂದ ಅಂಗೀಕರಿಸಲ್ಪಡತಕ್ಕದ್ದಾಗಿಯೂ ವಕೀಲರಾದವರೆಲ್ಲರೂ ತಮ್ಮ ಮನದೊಳು ದೃಢವಾಗಿ ಧರಿಸಬೇಕಾದುದಾಗಿಯೂ ಇರುವದರಿಂದ ಅದು ಈ ಮೈಸೂರುದೇಶದ ಲಾಯರ್‌ಗಳು ಕೂಡ ಅವಶ್ಯಕವು ಅನುಸಂಧಾನಮಾಡುತ್ತಿರಬೇಕೆಂದು ಕೋರುವೆವು.

AN ANOMALY.

ಈ ಭೂಮಂಡಲದಲ್ಲೀಗ ಬಹಳ ಉತ್ತಮಸ್ಥಿತಿಯಲ್ಲಿರುವ ವಿಶೇಷ ನ್ಯಾಯತ್ವವುಳ್ಳವೆಂಬದಾಗಿ ವ್ಯವಹರಿಸಲ್ಪಡುತಲಿರುವ ರಾಜ್ಯಗಳ ಪ್ರಜೆಗಳೆಲ್ಲರು ಹಿಂದೆ ಪರಂಪರಾಯಾಗಿ ಶ್ರೇಷ್ಠವಾದ ಮನುಷ ಜನ್ಮಕ್ಕಿರಬೇಕಾದ ವಿವೇಕ ಉಚಿತಜ್ಞತೆ ಮೊದಲಾದ ಗುಣಗಳ್ಯಾವವನ್ನೂ ಪಡೆಯದೆ ಕಂದ ಮೂಲಗಳನ್ನು ಭಕ್ಷಿಸುವ ಶುದ್ಧ ವನಚರರಾಗಿದ್ದ ಕಾಲದಲ್ಲಿ ನಮ್ಮ ದೇಶೀಯರು ಬಹಳ ನಾಗರಿಕರಾಗಿಯೂ, ಜ್ಞಾನಿಗಳಾಗಿಯೂ, ಬುದ್ಧಿ ಚಾತುರ್ಯ ವುಳ್ಳವರಾಗಿಯೂ, ವೇದಾಂತಿಗಳಾಗಿಯೂ ಕಾಲಜ್ಞರಾಗಿಯೂ ಇದ್ದದರಿಂದ ಅವರು ಇತರಾಪೇಕ್ಷೆಯಾ ವಿಶೇಷ ಪ್ರಾಶಸ್ತ್ಯವನ್ನು ಪಡೆದು ಮಹೋನ್ನತ ಸ್ಥಿತಿಯೊಳಿರಲಿಕ್ಕೆ ಕಾರಣವಾಗಿತ್ತು. ಇತರ ದೇಶೀಯರು ಸಾಮಾನ್ಯವಾದ ಪರ್ಣಕುಟೀರಗಳನ್ನೂ, ಎಲೆಗಳನ್ನೂ ತಮ್ಮ ಮಾನರಕ್ಷಣಾರ್ಥ ಸುತ್ತಿಕೊಂಡು ಮೈಗೆ ಬಣ್ಣ ಹಾಕಿಕೊಂಡು ಬೆಟ್ಟ ಗುಹ್ಯಗಳಲ್ಲಿ ಸುತ್ತುತ ಕುಟೀರಗಳಲ್ಲಿದ್ದ ಕಾಲದಲ್ಲಿ ನಮ್ಮವರು ಅನರ್ಘಗಳಾದ ದಿವ್ಯ ವಸ್ತ್ರಾಭರಣಾಲಂಕೃತರಾಗಿ ದಿವ್ಯ ಮಂದಿರಗಳಲ್ಲಿ ಆಧ್ಯಾತ್ಮಿಕ ವಿಚಾರವನ್ನು ರಾಜತಂತ್ರಗಳನ್ನೂ ಶಾಸ್ತ್ರಗಳನ್ನೂ ಮತ ಸಿದ್ಧಾಂತಗಳನ್ನೂ ಕುರಿತು ವಿಚಾರಮಾಡುತ ಕೇವಲ ಉತ್ಸಾಹದಿಂ ಕಾಲಕಳೆಯುತಲಿದ್ದರು. ಇಂತಾ ಶ್ಲಾಘ್ಯತಮವಾದ ಸ್ಥಿತಿಯಲ್ಲಿದ್ದ ನಮ್ಮವರು, ಕ್ಷೀಣಗಳಾದ, ಶೌರ್ಯ ಧೈರ್ಯ ಮೊದಲಾದ ಶಕ್ತಿಗಳುಳ್ಳವರಾಗಿಯೂ, ಅಸ್ವತಂತ್ರರಾಗಿಯೂ ತಮ್ಮ ಪ್ರಾಣವಂ ಕುರಿತು ಸ್ವಲ್ಪವೂ ಚಿಂತಿಸದವರಾಗಿಯೂ ಅನ್ಯ ದೇಶೀಯರ ಮುಂದೆ ಪರಾಭವವನ್ನೈದಿದರು ಸಂಕಟ ವಿಲ್ಲದವರಾಗಿಯೂ, ಇತರರು ಅಭಿವೃದ್ಧಿಯಾಗುವಂತೆಲ್ಲ ಅವರು ಕ್ಷಯಿಸತಕ್ಕವರಾಗಿಯೂ ಏರ್ಪಡುತ ಬಂದರು. ಇದರಿಂದ ಹಿಂದೆ ವೃಕ್ಷಮೂಲಗಳಲ್ಲಿನಿಂತುಕೊಂಡು ಉನ್ಮತ್ತರಂತೆ ಭಗವತ್ಸ್ವರೂಪವನ್ನರಿಯದೆ ನಾನಸ್ವೀಕರಿಸುತಲಿದ್ದವರೆಲ್ಲರು, ಈಗ ನಮಗೆ ಜ್ಞಾನೋಪದೇಶ್ಟರುಗಳಾಗಿಯೂ, ಮೋಕ್ಷಪ್ರದಾತೃಗಳಾಗಿಯೂ, ಆಚಾರ ವ್ಯವಹಾರಬೋಧಕರಾಗಿಯೂ, ಕುಳಿರಲಿಕ್ಕೆ ಕಾರಣವಾಯಿತು. ಹಿಂದೆ ಮತಸಿದ್ಧಾಂತ ವೆಂಬವರ ಶಬ್ದಾರ್ಥವನ್ನೇ ಅರಿಯದಿದ್ದವರು ಈಗ ಚಿರ ಪರಿಷ್ಕೃತಗಳಾದ ನಮ್ಮ ಮತಾಚಾರಗಳಂ ಪಿಯ್ಯಾಳಿಸುವಂತೆ ಪರಿಣಮಿಸಿತು. ಕುಟೀರಗಳನ್ನು ಸಹ ನಿರಂಧ್ರವಾಗಿ ಹಾಕಿಕೊಳ್ಳಲಿಕ್ಕೆ ತಿಳಿಯದೆ ಇದ್ದಂತವರೆಲ್ಲರು ಈಗ ನಮಗೆ ಮಾಯ ವಿಶ್ವಕರ್ಮರಾಗಿ ಏರ್ಪಟ್ಟರು. ಶಿಲ್ಪ ಸ್ವರೂಪವನ್ನೇ ಅರಿಯದೆ ಇದ್ದವರು ಪೂರ್ವದಲ್ಲಿ ನಮ್ಮಿಂದ ಕಟ್ಟಲ್ಪಟ್ಟ ದಿವ್ಯವಾದ ರಾಜಮಂದಿರಗಳನ್ನೂ, ವಿಚಿತ್ರಗಳಾದ ಗೋಪುರ ಪ್ರಾಕಾರ ಮಂಟಪಾದಿಗಳನ್ನೂ ಈಗ ನೋಡಿ ಪರಿಹಾಸ್ಯ ಮಾಡುವಂತೆ ಪರಿಣಮಿಸಿತು. ಹೀಗೆಯೇ ನಮ್ಮ ಸ್ಥಿತಿಯು ಸರ್ವಪ್ರಕಾರದಿಂದ ವಿಷಾದಕರವಾಗಿಯೂ, ಹೇಳನಾಸ್ಪದಮಾದುದಾಗಿಯೂ, ಅಪ್ರತೀಕಾರನಾದುದಾಗಿಯೂ,ಕೂಡಿದೆ. ಇದಂ ನೋಡಿ ನಮ್ಮವರು ಸ್ವಲ್ಪವೂ ಚಿಂತಿಸದೆ ಮೃಗಪ್ರಾಯರಾಗಿದ್ದ ಅನ್ಯಾಯಾಂತರವನ್ನರೆ ಹೊಡನೆಸೇರಿ ಭವದಂತೆ ತಾವೂ ಒಬ್ಬರೆಂದು ಭಾವಿಸುತ ನಮ್ಮನ್ನೂ ನಮಗೆ ಸಂಬಂಧಿಸಿದವಿಷಯಗಳನ್ನೂ ಮನಸ್ವೀ ನಿಂದಿಸಲಿಕ್ಕೆ ಪ್ರವರ್ತಿಸುತ್ತಾರೆಂಬದು ಯಾರೂ ನಿರಾಕರಿಸಲಾರರಷ್ಟೆ. ಇಷ್ಟರ ಸ್ಥಿತಿ ವಿಪರ್ಯಯಕ್ಕೆ ಕಾರಣಗಳು ಅನೇಕರನೇಕ ವಿಧವಾಗಿ, ಪರಿಭಾವಿಸುತಿರಲಿಲ್ಲವು. ಪರಂತು ಆಂತರವಾದ ಶ್ರದ್ಧಾಭಕ್ತಿಯೊಡನೆ ಪ್ರಸಕ್ತ ದುಸ್ಥಿತಿಯಂ ಪರಿಹರಿಸುವದಕ್ಕಾಗಿ ಒಬ್ಬರೂ ಪ್ರವರ್ತಿಸಿದಂತೆ ಕಾಣಿಸಲಿಲ್ಲವು. ತಾತ್ಕಾಲಿಕಗಳಾದ ನಮ್ಮ ಉದ್ದೇಶ ಪ್ರಯತ್ನಗಳೆಲ್ಲವೂ ಕೇವಲ ಸ್ವಾರ್ಥಪರವಾದವಾಗಿಯೂ, ಸಾಧ್ಯಾಸ್ತ ಪ್ರಯೋಜನೋದ್ದಿಷ್ಟಗಳಾದವಾಗಿಯೂ, ಸ್ವಸಂತೋಷಾಭ್ಯರ್ಥಿತವಾದುದಾಗಿಯೂ ಇರುವಂತೆ ನಮಗೆ ತೋರುತ್ತಿದೆಯೋ ಹೊರ್ತು, ಕಾಲಕ್ರಮಾಗತ ವಾದ ದುಸ್ಥಿತಿಯಂ ನಿವೃತ್ತಿಪಡಿಸ ಲಕ್ಕವಾಗಿರುವಂತೆ ತೋರಲಿಲ್ಲವು. ಸ್ವಪ್ರಯೋಜನ ಪರರಾಗಿಯೂ ಸ್ವಕಾರ್ಯ ನಿರತರಾಗಿಯೂ ಅನ್ಯ ಪ್ರಾಗಲ್ಭ್ಯವನ್ನು ಬಹಳ ಕೊಂಡಾಡತಕ್ಕವರಾಗಿಯೂ ನಮ್ಮ ದೇಶೀಯ ವಿದ್ಯೆನ್ನಿಸಿ ಕೊಂಡವರಾಗಿಯೂ ಇರತಕ್ಕ ಪ್ರಮುಖರಾದವರೆಲ್ಲರು ದೇಶ ಸಾಮಾನ್ಯಕ್ಕಾಗಬೇಕಾದ ಕ್ಷೇಮಾದಿ ವೃದ್ಧಿಯಂ ಕುರಿತು ಸ್ವಲ್ಪವೂ ಚಿಂತಿಸುವದಿಲ್ಲವು. ಕೆಲ ಅತ್ಯಂತ ದೇಶಾಭಿಮಾನವನ್ನು ನ್ಯಸ್ತಪಡಿಸಿ ಯಾವ ಪ್ರಯತ್ನಮಾಡಿದಾಗ್ಯೂ ಅದೆಲ್ಲವೂ ದಸ್ಯುವಿನವಲ್ಲಿ ಸ್ವಾದ ನಿಷ್ಪ್ರಯೋಜನವಾಗಿರುತ್ತದೆ. ಈ ಒಂದು ಪ್ರಧಾನಗುಣದಿಂದ ಜನರಲ್ಲಿ ಪರಸ್ಪರ ಐಕಮತ್ಯವೂ ಅನ್ಯೋನ್ಯಾಭಿನಯವೂ ವೈರಾಗ್ಯವೂ ಪರೋಪಕಾರವೃತ್ತಿಯೂ ಜಾತಿಪ ಕ್ಷಪಾತಗಳೂ ವ್ಯಸನಗಳಾಗಿ, ಈಶ್ವರನು ಸೃಷ್ಟಿಸಿದ ಸೃಷ್ಟಿಯಲ್ಲಿರುವ ಅವರವರ ಮುಖ್ಯಗುಣ ಎ ತನ್ನೆಯ ಸಾಧನ ತ್ರಿಕವಾಗಿ ನಡೆಗೆ ಬಿಟ್ಟಿವೆ. ಈ ರೋಗವು ಬಿಡದಿರುವದಕ್ಕೆ, ಈಗಿನವರು ಕೆಲವರು, ನಮ್ಮ ಮರ್ಯಾದೆಗೆ, ನಮ್ಮ ಜಾತಿ ಮತಾಚಾರಗಳೂ, ದೇವಪ್ರಯುಕ್ತಗಳಾದ ವ್ಯಸನಗಳೂ ಮುಖ್ಯ ಕಾರಣಗಳೆಂದು ನುಡಿಯುತ್ತಾರೆ. ನಮ್ಮ ಆಚಾರವ್ಯವಹಾರಗಳೆಲ್ಲವೂ ಅವುಗಳಲ್ಲಿ ಬಹಳ ದೂರದೃಷ್ಟಿಯಿಂದ ಏರ್ಪಡಿಸಲ್ಪಟ್ಟವಾಗಿರುತ್ತವೆ. ಇದಲ್ಲದೆ ಪ್ರತಿ ಆಚಾರಕ್ಕೂ ಮುಖ್ಯವಾದ ಒಂದು ಉದ್ದೇಶವು ಸೂಕ್ಷ್ಮದರ್ಶಿಗಳಾದವರಿಗೆ ಅವ್ಯಕ್ತವಾಗಿರಲಾರದು. ಆದಕಾರಣ ಪ್ರತಿ ನಮ್ಮ ಆಚಾರದ ಪ್ರಯೋಜನವನ್ನು ಚೆನ್ನಾಗಿ ಪರಿಶೀಲಿಸದ ಮಂದಮತಿಗಳಾದವರು ಕೆಲವರು ಅಂದರನ್ನನು ದರ್ಶಿಸುವ ಅಂದನಂತೆ ಒಬ್ಬರನ್ನು ನೋಡಿ ಮತ್ತೊಬ್ಬರು ಸ್ವಸ್ವರೂಪಜ್ಞಾನವಿಲ್ಲದೆ ಮನಸ್ವೀ ದೂಷಿಸುತಲಿರುತ್ತಾರೆ. ನಾವೆಂಬ ಕಾರ್ಪಣ್ಯದಿಂದಲೇ ನಷ್ಟರಾದ ಅಜ್ಞಾನಾಂಧಕಾರ ನಿದ್ರೆಗೆ ಅವರ ಅಜ್ಞಾನವೇ ಮುಖ್ಯಕಾರಣವು. ವಿಷಮಪ್ರಾಯವಾದ ಆ ಮೌಢ್ಯವು ಮನುಷ್ಯನು ಬಹು ವಿಧ ಕಷ್ಟಗಳಿಗೆ ಗುರಿ ಮಾಡಲಾರದ. ಮನುಷ್ಯನು, ಅನಾಲೋಚಿತವಾಗಿ ಯಾವ ಕಾರ್ಯವನ್ನು ಮಾಡಿದಾಗ್ಯೂ ಯಾವ ಮಾತನ್ನು ನುಡಿದಾಗ್ಯೂ, ಅದರ ಫಲವನ್ನಾತನು ತಪ್ಪದೆ ಅನುಭವಿಸುವನು. ನಾವು ಬಿತ್ತತಕ್ಕ ಬೀಜದಂತೆ ಫಲವು ಲಭಿಸುವದರಿಂದ ನಮ್ಮ ಉದ್ದೇಶ ಪ್ರಯತ್ನಗಳೆಗೆಲ್ಲ ದೂರ ದೃಷ್ಟಿಯಿಂದಾಲೋಚಿಸತಕ್ಕಂತೆ ಪರ್ತಿಸಿದರೆ ಅನರ್ಥಗಳಿಗೊಳಗಾಗಲಾರೆವು. ಈಗ ಹಿಂದೂಜನರ ಸ್ಥಿತಿಯು ಸ್ವಪ್ನಸುಷುಪ್ತ್ಯವಸ್ಥೆಗಳ ಪೈಕಿ ಒಂದರಲ್ಲಿಯೂ ಸೇರಿದ್ದಾಗಿಲ್ಲವು. ಸುಷುಪ್ತಿಯಲ್ಲಿರತಕ್ಕವನಿಗೆ ಪೂರ್ವಾಪರ ಸಂಬಂಧಜ್ಞಾನ ವುಂಟಾಗಲರಿಯದು. ನಿದ್ರಾವಸ್ಥೆಯಲ್ಲಿರತಕ್ಕವನಂ ಎಬ್ಬಿಸಿದರೆ ಚೇತರಿಸಿಕೊಂಡು ಜಾಗರೂಕನಾಗುವನು. ಸ್ವಪ್ನಾವಸ್ಥೆಯಲ್ಲಿರುವಾತಂಗೆ ಭವಿಷ್ಯತ್ಕಾರ್ಯ ಪ್ರವೃತ್ತಿ ಯುಂಟಾಗಲಾರದು. ಅತಿನಿವ ಅವಸ್ಥಾಹೀನರಾದ ನಮ್ಮ ಹಿಂದುಗಳಿಗೆ ಈಗ

ಪ್ರಯಾಗಿರುವ ಜಾಗರೂಕತೆ ಯೆಲ್ಲವ್ರು ತಮ್ಮ ನ್ನು ತಾವೇ ಹಿಯಾಳಿಸಿಕೊಳ್ಳುತ ಪ್ರತಿಕ್ರಿಯೆ ಯನ್ನಾಲೋಚಿಸಲರಿಯದಿರುವವರ ಸ್ಥಿತಿಯಲ್ಲಿ ವ್ಯವಹಾರವನ್ನೈದಿವೆ. ಇನ್ನಾದರು ನಮ್ಮವರು ವಿವೇಕವಂ ತಂದುಕೊಂಡು ಇಂಗಿತಜ್ಞರಾಗಿ ಜಾಗರೂಕತೆಯೊಡನೆ ಅನ್ಯೋನ್ಯದಿಂ ವರ್ತಿಸುವರಾದರೆ ಕಾಲಾಂತರದೊಳಾದರೂ ಇದಕ್ಕಿಂತ ಉತ್ತಮಸ್ಥಿತಿಯಂ ಪಡೆಯಬಹುದು. ವೇದಶಾಸ್ತ್ರಗಳೂ, ಪುರಾಣಾದಿ ಶಾಸನಗಳೂ, ಆಲಯಾದಿಗಳೂ ಮತಸಿದ್ಧಾಂತಾದಿಗಳೂ, ಜಾತಿಯಾದ ಉದ್ದೇಶಗಳಿಗಾಗಿ ಮೊದಲು ನೆರೆ ಗೊಂಡವು, ಅವುಗಳ ಜ್ಞಾನವು ಈಗಿನವರಿಗೆ ಪ್ರಯೋಗವಿಲ್ಲದೇಹೋಗಲು ವೇದಶಾಸ್ತ್ರವು ಕುವಾದಗಳಿಗೂ, ಪುರಾಣಗಳು ಅಪಾರ್ಥಗಳಿಗೂ ದೇವಾಲಯಗಳು, ಕಲಹಾದಿ ದುಷ್ಕಾರ್ಯಗಳಿಗೂ ಮತಸಿದ್ಧಾಂತಗಳು ಪರಸ್ಪರ ವಿದ್ವೇಷಗಳಿಗೂ ಆಚಾರ ವ್ಯವಹಾರಗಳು, ದೂಷಣ ತಿರಸ್ಕಾರಗಳಿಗೂ ವಿಷಯಗಳಾಗಿ ಕುಂಠಿತ ತಿಳಿ ಮುಖ್ಯವಾಗಿ ನಮ್ಮ ಪ್ರಕೃತಸ್ಥಿತಿಯನ್ನಾಲೋಚಿಸಿ ನಮ್ಮಗುಣ ವ್ಯವಹಾರ ಪ್ರವರ್ತಿಸಿ [illegible] ನುಡಿಸು [illegible] ತನ್ನು ನುಡಿಸುತ. ಸಾಧ್ಯವ ಕಲಸವನ್ನ [illegible] ಹುತ [illegible] ಪಶ್ಚಾತ್ತಾಪ [illegible] ಸುವ [illegible] ದ [illegible] ದಗಳಿಂದ ಪ್ರಸ್ತಾಪಿಸಿರುವ [illegible] ಕರವಾದ [illegible] ಮತ ತಮ್ಮನ್ನು ಇಂಗ್ಲಿ [illegible] ದು ಸಿ [illegible] ತಾದವರು

INFLUENZA

[illegible] ಜನಿಸಿ ಪ್ರಪಂಚ ದ [illegible] ಹಿಂದೂ ದೇಶದಲ್ಲಿ ವ್ಯಾಪಿಸಿ ಅನೇಕರ ವ್ಯಕ್ತಿ [illegible] ಶರೀರಕ್ಕೆ ಯೂರೋಪು [illegible] ಯೆಂಬ ಹಿಂದುಗಳ ಸ್ವಾಭಾವಿಕ ಜ್ವ ರಕ್ಕೆ [illegible], ಆಗುವ [illegible] ಯೆಂಬ ಹೆ ಸರಿನಿಂದ [illegible] ಈ ವಿಗೊಂಡು ರಿಪೋರ್ಟು [illegible] — ೬೦ [illegible] ಮನುಷ್ಯನಿಗೆ ಹೇಳಲ್ಪಟ್ಟವರಿಗೆ ನಮಿ ರೋಗ ಹಿಂದುವೆ ಳೆ [illegible] ಆದರೆ ಅದೆರಡರ [illegible] ತೀಕ್ಷ್ಣವನ್ನು [illegible] ಚೆನ್ನಾಗಿ ನೀರು ಬಿಟ್ಟು [illegible] ಆ ಜೌಷ್ಧವು ೪ ಭಾಗವಾಗಿ ಭಾಗಿಸಿ ಹೊತ್ತಿಗೆ ಒಂದು ಭಾಗದಂತೆ ಸೇವಿಸತಕ್ಕದ್ದು. ೬೦ ವರುಷಗಳಿಗಿಂತ ಕಡಮೆ ವಯಸ್ಸುಳ್ಳವರು [illegible] ಸದರೀ ರೋಗಕ್ಕೆ ಅದೇ ಔಷಧವಂ ತೆಗೆದುಕೊಳ್ಳಬಹುದು ವಯಸ್ಸು ಅದರ ಪರಿಮಾಣವನ್ನು ರೋಗಿಯ ದೇಹಸ್ಥಿತಿಗೆ ತಕ್ಕಂತೆ ಕಡಮೆ ಮಾಡಬೇಕಾದ್ದು ಆವಶ್ಯಕವಾಗಿರುತ್ತದೆ, ಎಂಬುದು [illegible] ರೋಗಬಾಧೆ ದ ವಿಷಯದಲ್ಲಿ ವ್ಯತ್ಯರ ಪ್ರಕೃತಿ ಅನೇಕರು ಅನೇಕಾಭಿಪ್ರಾಯಗಳುಳ್ಳವರಾಗಿರುವರು ಹವಾ ಬದಲಾಯಿಸಿ ಅವರಲ್ಲುಂಟಾದಗತಕ್ಕ ವಿಷವಾದ ಶ್ವಾಸ ನಿಶ್ವಾಸಗಳಿಂದೀರೋಗ ಜನಿಸುತಿರಬಹುದೆಂತವರ ತಾತ್ಪರ್ಯವು ವಿಷಮಶೀತಜ್ವರದಲ್ಲಿಯೊಂದು ಪ್ರಭೇದವೆಂಬದಾಗಿ ಇನ್ನು ಕೆಲವರ ಅಭಿಪ್ರಾಯವು ಈಚೆಗೆ ಈ ರೋಗದಲ್ಲಿ ಕೆಲವು ವೈಲಕ್ಷಣ್ಯಗಳು ಸ್ಪಷ್ಟವಾಗಿ ಕಂಡುಬರುತಿವೆ ನಂತರ— ಮೊದಲು ನೆಗಡಿ ಪ್ರಾರಂಭಿಸಿ ಶೀತಾಧಿಕ್ಯವೂ ಆದರಮೇಲೆ ಜ್ವರವೂ ಕೂಡಲೇ ಪಲ್ಲಕ್ಷಣಗಳಾದ ಕೈಕಾಲುಗಳ ನೋವು, ಎದೆನೋವು ಕಫವೂ ಅಧಿಕವಾಗಿಗುಬ್ಬ ಕಟ್ಟಿಕೊಂಡು ಉಸಿರು ಬಿಡಲಿಕ್ಕೆ ಅನುಕೂಲವಿಲ್ಲದಂತೆ ಮಾಡಿ ರಮಕಶ್ವಾಸಕ್ಕೆ ಪ್ರಾರಂಭವಾಗುತಿದೆ, ಶ್ವಾಸವು ಬಲವಾಗಿ ಕಡೆಗೆ ಶರೀರವು ಪರಾರು ರೂಪವನ್ನೈದದೆಯೇ ಪ್ರಾಣವು ಹೋಗುತಿದೆ. ಇದರಿಂದ ಅನೇಕರು ಅಕಾಲಮೃತ್ಯುವಿಗೆ ಗುರಿಯಾಗುತಲಿರುವುದೇ ಹೊರಗಿನಿಂದ ಬರತಕ್ಕ ವೃತ್ತಾಂತಗಳ ಮೂಲಕ ತಿಳಿಯಬರುತಿದೆ. ಮೇಲೆ ತಿಳಿಸಲ್ಪಟ್ಟ ಚಿಕಿತ್ಸೆಯು ಕೇವಲ ಸುಲಭವಾಗಿರುವುದರಿಂದ ಅದು ಎಲ್ಲರೂ ಪರೀಕ್ಷಿಸಿ ಅದರ ಫಲಿತಾಂಶವು ಅನುಕೂಲವಾದುದಾದ್ದರೆ ಅದು ನಮಗೆ ತಿಳಿಸಬೇಕೆಂದು ಕೋರುವೆವು

Occasional Notes
ನೈಮಿತ್ತಿಕ ವಿಷಯನ್ಯಾಸ.

Telephone in the United States — ಉತ್ತರ ಅಮೆರಿಕಾಖಂಡಕ್ಕೆ ಸೇರಿದ ಯುನೈಟೆಡ್ ಸ್ಟೇಟ್ಸ್ ಎಂಬ ಸಂಯುಕ್ತ ರಾಜ್ಯಗಳಲ್ಲಿರುವ ರಿವಿಗೆ ೧೫೦,೦೦೦ ಮೈಲುಗಳತನಕ ಟೆಲಿಫೋನ್ ಅಂದರೆ ಸುಭಾಷಣೆ ಮಾಡತಕ್ಕಬಗ್ಯೆ ತಂತಿ ಹಾಕಲ್ಪಟ್ಟಿದೆ ಯೆಂತಲೂ, ತನ್ಮೂಲಕ ಪ್ರತಿನಿತ್ಯವೂ ೧೦ ಲಕ್ಷ ವರ್ತಮಾನಗಳು ಕಳುಹಿಸಲ್ಪಡುತಿನೆಯೆಂತಲೂ ತಿಳಿಯಲಾದೆವು.

Lord Harris — ಮುಂಬೈ ಗವರ್ನರ್ ಕೆಲಸಕ್ಕೆ ಮೊಕರರಾಗಿ ಬರತಕ್ಕ ಲಾರ್ಡ್ ಹಾರಿಸ್ ಯವರು ಮೆ|| ಬ್ರಾತೆ ರಾ ಯವರೊಡನೆ ಇಂಡ್ಯದೇಶದ ವಿಷಯವಾಗಿ ಬಹಳಹೊತ್ತು ಮಾತನಾಡುತಿದ್ದರೆಂತಲೂ ಅವರ ಸಂಭಾಷಣೆಯ ಸ್ವರೂಪ ನಿಂತಾಪ್ಪೆಂದು ಹೊರಗಾಗಿಲ್ಲವೆಂತಲೂ ಇಂಗ್ಲಿಷ ಪತ್ರಿಕೆಯೊಂದು ತಿಳಿಸುತಿದೆ.

The Travellore Mutts' Case — ತಿರುವ [illegible] ಅಹೋಬಿಲ ಮಠದ ಸನ್ಯಾಸಿಯ [illegible] ವಿವಾದಕ್ಕೆ ಅದ್ಯಾಪಿ ಉಪಶಮಿಸಿ [illegible]. ಈಗಿನ [illegible] ರಂಗಾಚಾರ್ಯರವರು, ದೊಡ್ಡ ದೀಕ್ಷಿತರ ಪರವಾಗಿ ಜಸ್ಟೀಸ್ ಕೆರ್ನಾಯರ್‌ರು ಕೊಟ್ಟ ಕೈಸಲಿನ ಮೇಲೆ ಮರಳಿ ಅಪೀಲ್ ಇರುವಂತೆ [illegible] ಅದಕ್ಕೆ [illegible] ಪ್ರತಿ ವಾದಿ [illegible] ಇವುಗಳ ವಿಚಾರಣೆ ನಮಿದಾಸ್ಯೇ ಜಡ್ಜಿಗಳು ತಮ್ಮ ತೀರ್ಮಾನವ ಅದ್ಯಾಪಿ ಹೊರಪಡಿಸದಿದಾರೆಂತ [illegible] ಬರುತಿದೆ

A new Minister of Education — ಈಗ್ಯೆ ಕೆಲವುದಿನಗಳ ಕೆಳಲು ಕಲ್ಕತ್ತೆಯಲ್ಲಿ [illegible] ಪ್ರವೇಶ ಪತ್ರಿಕೆಗಳ ಮೂಲಕ ಸರ್ವತ್ರ ಬಹುದಗೆ [illegible], [illegible] ಇಂಡ್ಯದೇಶದ ವಿದ್ಯಾಭಿವೃದ್ಧಿಯ ವಿಷಯದಲ್ಲಿ ಈಗಿನ ಸ್ಥಿತಿ ಗೂ ಈಗಿನ ಸ್ಥಿತಿಗೂ ಇರುವ ತಾರತಮ್ಯವನ್ನರಿತು ಮುಂದೆ ಮಾಡತಕ್ಕ ವಿಚಾರವನ್ನು [illegible] ತಿಳಿಸುವಬಗ್ಯೆ ನೇಮಿಸಲ್ಪಟ್ಟಿದ್ದ ಎಜ್ಯುಕೇಷನ್ ಕಮಿಟಿಯವರ ಸಲಹೆಯ ಮೇಲೆ ಇಂಡ್ಯ ಗವರ್ನಮೆಂಟಿನವರು ವಿದ್ಯಾಭ್ಯಾಸದ ಇಲಾಖಾ ಮಂತ್ರಿ [illegible] ಒಂದು ಉದ್ಯೋಗ [illegible] ಕಲ್ಪಿಸಿ [illegible] ಈಗ ಬಂಗಾಳದಲ್ಲಿ ವಿದ್ಯಾಭ್ಯಾಸದ ಡೈರೆಕ್ಟರಾಗಿರುವ ಸರ್ ಆಲ್ಫ್ರೆಡ್ ಕ್ರಾಫ್ಟ್ ಯೆಂಬವರಿಗೆ ಕೊಡುವ ತಾತ್ಪರ್ಯವುಳ್ಳವರಾಗಿದಾರೆಂಬದು.

A Mahomedan Missionary — ಕ್ರಿಸ್ತ ಮತಕ್ಕೆ ಸೇರಿದ ಮತಬೋಧಕರ [illegible] ಅನ್ಯ ಮತಸ್ಥರ ವ್ಯವಹಾರಗಳೆ ಇದುವರೆವಿಗೂ ಅವರಿಗೆ [illegible] ಯಾಗಿತ್ತು. ಈಗ ಒಬ್ಬ ಮಹಮ್ಮದೀಯನು ಕ್ರಿಸ್ತಿಯನ್ನರಿಗೆ ಪ್ರತಿಯಾಗಿ [illegible] ಸ್ವಮತ ಪ್ರಕಾಶ [illegible] ನಿಸಿದಾನೆ. ಮುಸಲ್ಮಾನರು [illegible] ಮುಂಬೈಯಿಂದ ಇಂಗ್ಲಂಡಿಗೆ ಹೋಗತಕ್ಕವನಾಗಿದಾನೆಂತಲೂ, ಅಲ್ಲಿನ ಕ್ರಿಶ್ಚಿಯನ್ನರಿಗೆ ತನ್ನ ಮತದ ಉತ್ಕರ್ಷವ ನಿಜವಾದರೀತಿಯಿಂದ ಬೋಧಿಸಿ ಅವರನ್ನೆಲ್ಲ ತನ್ನ ಮತದಲ್ಲಿ ಪ್ರವೃತ್ತಿಯನ್ನುಂಟುಮಾಡಬೇಕೆಂಬ ಉದ್ದೇಶವುಳ್ಳವನಾಗಿದಾನೆಂತಲೂ ಕೇಳುತ್ತೇವೆ.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕು ಸಮಾಚಾರ ವೃತ್ತಾಂತಗಳು.

Transfer of certain departments — ಕೆಲವು ಸರ್ಕಾರ್ ಇಲಾಖೆಗಳು ಮೈಸೂರಿಗೆ ವರ್ಗ ಮಾಡಲ್ಪಡತಕ್ಕ ಪ್ರವಾದವು ಈ ವಾರದಲ್ಲಿ ಬಹಳ ಪ್ರಚುರಗೊಂಡಿದೆ, ಪರಂತು ನೌಕರಸ್ಥರು ನೇರಿಗ್ಯಾರಿಗೂ ಸದರೀ ವಿಷಯ ಸರ್ಕಾರಿಯಾಗಿ ಅದ್ಯಾಪಿ ತಿಳಿಸಲ್ಪಟ್ಟಂತೆ ಕಾಣಿಸುವುದಿಲ್ಲವು.

Col Grant — ಇಲ್ಲಿನ ರೆವಿನ್ಯೂ ಸರ್ವೇ ಸೂಪರಿಂಟೆಂಡೆಂಟರಾದ ಕರ್ನಲ್ ಗ್ರಾಂಟಿಯವರು ವಿಲಿಯರಿ ಇಲಾಖಾ ನೌಕರಿಯಿಂದ ನಿವೃತ್ತರಾದರಾಗಿ ಸದರೀ ಇಲಾಖಾ ನಿರ್ದಿಷ್ಟವಾದೆಯುತ ಈ ಸಂಸ್ಥಾನದ ಹಾಯಿ ನೌಕರಿಯಲ್ಲಿ ಚಿರಕಾಲ ಸರ್ಕಾರದವರ ಕೃಪಾಪಾತ್ರರಾಗಿರುತಲಿರುವರು.

Easter Holidays — ಈ ಸಲದ ಈಸ್ಟರ್ ಹಬ್ಬವು ಬರುವ ತಿಂಗಳ ಮೂರನೇ ತಾರೀಖ್ ಶುಕ್ರವಾರ ಉಪಕ್ರಮವಾಗುವದರಿಂದ ಆ ದಿನದ ಮೊದಲು ೪ ನೇ ತಾರೀಖ್ ಮಂಗಳವಾರದ ವರಿವಿಗೆ ಉಭಯ ದಿನಗಳೂ ಸೇರಿ ೬ ದಿನಗಳ ಕಾಲ ಇಲ್ಲಿನ ಸರ್ಕಾರ್ ಇಲಾಖೆಗಳಿಗೆಲ್ಲ ರಜಾ ಕೊಡಲ್ಪಡುವದಲ್ಲದೆ ಸಿವಿಲ್ ಕೋರ್ಟುಗಳು ಸಹ ಬಿಡಲು ಕಾಲದ ಬಗ್ಯೆ ಆಗಲೇ ಮುಚ್ಚಲ್ಪಡುವ ವೆಂದು ಕೇಳುತ್ತೇವೆ.

A fatal accident — ಮೊನ್ನೇ ಮಾರ್ಚಿ ೧೪ ನೇ ತಾರೀಖ್ ಶುಕ್ರವಾರದ ದಿನ ಇಲ್ಲಿನ ಸಿಟಿ ರೈಲ್ವೆ ಸ್ಟೇಷನಿನಲ್ಲಿ ಸಾಮಾನು ಗಾಡಿಗಳನ್ನು ವಿಂಗಡಿಸುತಿದ್ದ ಕಾಲದೊಳು ವೀರಾಸಾಮಿ ಎಂಬ ರೈಲ್ವೆ ಪೋರ್ಟರ್ ಒಬ್ಬನು ಗಾಡಿಯಿಂದ ಪ್ಲಾಟ್ ಫಾರ್ಮ ಮೇಲೆ ಧುಮುಕುವಾಗ್ಯೆ ಕಾಲು ಜಾರಿ ರೈಲಿಗೂ ಪ್ಲಾಟ್ ಫಾರಮಿಗೂ ಮಧ್ಯೆ ಬೀಳಲು ಸಾಮಾನ್ ಗಾಡಿಯು ತಗಲಿ [illegible] ತಗಲಿ ಅದರಿಂದಲ್ಲಿ ಕ್ರೂರಾ ಜಖಮಾಯಿತು ಕೂಡಲೇ ಆವನನ್ನು ಸೆಂಟ್ರಲ್ ಫ್ರೆಂಡ್ ಯಂದ ಆಸ್ಪತ್ರಿಗೆ ಚಿಕಿತ್ಸಾರ್ಥ ಕಳುಹಿಸಿದರು. ಮಾರನೇದಿನ [illegible] ಆ ವೇದನೆಯಿಂದಲೇ ಆತನ ಪ್ರಾಣವು ಬಿಟ್ಟನು.

Remuneration of Patels and Shanbogues — ಈಚೆಗೆ ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮೆ|| ವಿ. ಪಿ. ಮಾಧವರಾಯರವರ ಅಭಿಪ್ರಾಯಾನುಗುಣವಾಗಿ ಪಟೇಲ್ ಶ್ಯಾನಭೋಗರಿಗೆ ಸಲ್ಲಬೇಕಾದ ರುಸುಮನ್ನ ಜಮಾಬಂದಿಯ ಕಾಲದಲ್ಲಾಗಲಿಯಾವಕಾಲಿಗೆ ಕೊಡಬೇಕೆಂದು ಕಾಲಿಂ [illegible] ಟಗಿಸಲ್ಲಬೇಕೋ ಆಸರ್ಕಾರೀಸಾಲಿನ ಅಖೈರಿನಲ್ಲಾಗಲಿ ಅವರವರಿಗೆ ಕ್ರಮವಾಗಿ ಬಟವಾಡೆ ಮಾಡತಕ್ಕದ್ದೆಂದು ಗವರ್ನಮೆಂಟಿನವರು ಹುಕುಂ ಮಾಡಿರುತ್ತಾರೆಂದು ತಿಳಿಯಲಾದೆವು. ಇದ್ದದು ಟ್ಟಿಗ ಇದು ಶ್ಲಾಘನೀಯವೆನಿಸಿಕೊಳ್ಳುವಿರಬೇಕು.

New Buildings in the fort of Mysore — ಮೈಸೂರು ಕೋಟೆಯಲ್ಲಿಯೂ ಅರಮನೆಯ ಸುತ್ತಲೂ ಹೊಸದಾಗಿ ಮನೆಗಳು ಕಟ್ಟಲ್ಪಡುತಲಿರುವದು ಆರೋಗ್ಯ ಬಾಧಕವಾಗಿರುವ ಅಂಶ ದಿವಾನರವರ ತಿಳುವಳಿಕೆಗೆಬಂದು ಅದರಮೇಲೆ ಮನೆಗಳಂಕಟ್ಟ ಪಡ್ಡುವಿಷಯದಲ್ಲಿ ಕೆಲವು ಹೊಸ ನಿಬಂಧನೆಗಳಂ ಮಾಡಿ ಅದು ಖಂಡಿತವಾಗಿ ಜಾರಿಯಲ್ಲಿ ತರತಕ್ಕದ್ದೆಂದು ಡೆಪ್ಯುಟೀ ಕಮಿಷನರಿಗೂ ಪಬ್ಲಿಕ್ ವರ್ಕ್ಸ್ ಸೆಕ್ರೆಟರಿಯವರಿಗೂ ಹುಕುಂ ಮಾಡಿರುತ್ತಾರೆ ಸದರೀ ನಿಬಂಧನೆಗಳೆಲ್ಲವೂ ಅಧಿಕಾರ ಬ್ಬುದ್ದೈ [illegible] ಕ್ಷಪಡಿಸತಕ್ಕವಾಗಿರುತಿವೆ.

Additional grant — ಮೈಸೂರು ಮಹಾರಾಣಿಯವರ ಬಾಲಿಕಾ ಪಾಠಶಾಲೆಗೆ ಮಾಹೇಯಾನಾ ಇನ್ನೂ ೧೨೦ ರೂಪಾಯಿಗಳ ಸಹಾಯ ಮಾಡುವದಕ್ಕೆ ಗವರ್ನಮೆಂಟಿನವರು ಒಪ್ಪಿದ್ದಾರೆಂತಲೂ, ಈ ಸಹಾಯವು ಯೆಲ್ಲಿಗೂ ಖಂಡುಗೊತ್ತಿಗೆ ನಿಲ್ಲದಿರುವದೂ ಕೆಂದು ಈಗಕೊಡುವಪ್ರಕಾರಕ್ಕಿಂತಲೂ ಜಾಸ್ತಿಯಾಗಿ ಮುಂದೆ ಕೊಡುವದಕ್ಕಾಗುವದಿಲ್ಲವಾದುದರಿಂದ, ಖರ್ಚನ್ನು ಆಯತಿಗೆ ತಕ್ಕಂತೆ ತಗ್ಗಿಸಿಕೊಂಡು ಕೆಲಸ ಜರಿಗಿಸಬೇಕಾದುದು ಆವಶ್ಯಕವೆಂಬದಾಗಿಯೂ ಮಾಡಿದರೆಂತಲೂ ತಿಳಿಯಬರುತಿದೆ. ಸ್ತ್ರೀ ವಿದ್ಯಾಭ್ಯಾಸಕ್ಕಾಗಿ ಎಷ್ಟು ವ್ಯಯಮಾಡಿದರೇನು ನಷ್ಟ? ಅದನ್ನೆಲ್ಲ ಅವರು ಮತ್ತೊಂದು ನಿಧಿಯಿಂ ತೀರಿಸಲಾರರೆ?

A medal for bravery — ಕೆಲವು ತಿಂಗಳ ಹಿಂದೆ [illegible] ರೈಲ್ವೇ ಸ್ಟೇಷನ್ [illegible] ರಾವ ಮೆ|| ಸ್ಕ್ವಾಲರ್ ಯೆಂಬವರು ಒಬ್ಬ ಹೆಂಗಸು, ಮುಂಭಾಗದಲ್ಲಿ ಬರುತಲಿದ್ದ ಗಾಡಿಯ ಕೆಳಗೆ ಸಿಕ್ಕುವದಾಗಿದ್ದದು ಕಂಡು ತಮ್ಮ ಪ್ರಾಣದ ಮೇಲೆ ಸಹ ಲಕ್ಷ್ಯ ವಿಡದೆ ಆಕೆಯಂ ಅಪಾಯದಿಂದ ತಪ್ಪಿಸಿ ಪ್ರಾಣವಂ ಕಾಪಾಡಿದರಾಗಿ ಅವರ ಧೈರ್ಯ, ಸಾಹಸ, ಭೂತದಯೆ ಮೊದಲಾದಗುಣಗಳಂ ಕೇಳಿ ಸಂತೋಷಿಸಿ ಗವರ್ನಮೆಂಟಿನವರು ಅವರಿಗೆ ೨೦೦ ರೂಪಾಯಿಗಳ ಇನಾಂಗಳನ್ನೂ ಒಂದು ಯೋಗ್ಯತಾ ಪತ್ರಿಕೆಯನ್ನೂ ರೈಲ್ವೇ ಅಧಿಕಾರಿಗಳ ಮೂಲಕ ಕಳುಹಿಸಿ ಕೊಟ್ಟರುತ್ತಾರೆ. ಇವಲ್ಲದೆ ಮುಂಬೈ ಕಮಾಂಡರ್ ಇನ್ ಚೀಫರವರಾದ ಡ್ಯೂಕ್ ಆಫ್ ಕಾನಾಟ್ ಯವರು ತಮ್ಮ ಮಿಲಿಟರಿ ಸೆಕ್ರೆಟರಿಯವರ ಮೂಲಕ ಒಂದು ಭಂಗಾರದ ಪ್ರತಿಷ್ಠಾ ಮುದ್ರೆಯಂ ಕಳುಹಿಸಲು ಅದು ಮೆ|| ಸ್ಕ್ವಾಲರ್ ಯವರಿಗೆ ಪಾವತಿ ಮಾಡತಕ್ಕ ಬಗ್ಯೆ ಮದರಾಸ್ ಗವರ್ನರವರ ಪ್ರೈವೇಟ್ ಸೆಕ್ರೆಟರಿಯವರಿಗೆ ಕಳುಹಿಸಲ್ಪಡಲು, ಗವರ್ನರವರು, ಸದರೀ ಮುದ್ರೆಯನ್ನು ಖುದ್ದು ಕೊಡಬೇಕೆಂಬ ಉತ್ಸಾಹ ವುಳ್ಳವರಾಗಿರುವದರಿಂದ ತಡಫ ಮದರಾಸಿಗೆ ಬರಬೇಕೆಂಬದಾಗಿ ಪ್ರೈವೇಟ್ ಸೆಕ್ರೆಟರಿ ಯವರು ಸ್ಟೇಷನ್ ಮ್ಯಾಸ್ಟರಿಗೊಂದು ಕಾಗದವಂ ಬರೆದರು ಅದೇಪ್ರಕಾರ ಅವರಲ್ಲಿಗೆ ಹೋಗುವವರಾಗಿದಾರೆಂದು ಕೇಳುತ್ತೇವೆ.

How to account for? — ಈಗ ಮೈಸೂರು ಗವರ್ನಮೆಂಟ್ ಪ್ರಿಂಟಿಂಗ್ ಆಫೀಸಿಗಾಗಿ ಸಾಲಿಯಾನಾ ಸುಮಾರು ೩೦,೦೦೦ ರೂಪಾಯಿಗಳಿಗಿಂತ ಜಾಸ್ತಿಯಾಗಿ ಖರ್ಚಾಗುತಲಿದ್ದಾಗ್ಯೂ, ಬಹಳ ಸಮರ್ಥರಾದ ಕಸಬು ದಾರರೆಂಬ ಭಾವನೆಯಿಂದ ಮಹಾಪೇಯಾನಾ ಭಾರೀ ಸಂಬಳ ನಿಗಿ ಒಬ್ಬ ಸೂಪರಿಂಟೆಂಡೆಂಟರನ್ನು ಮೊಕರರ್ ಮಾಡಿದ್ದಾಗ್ಯೂ, ಆವಶ್ಯಕತಾನಾವಶ್ಯಕತೆಯಂ ಸರಿಯಾಗಿ ತಿಳಿದೆ ಅವರುಬರೆದುಕೊಂಡ ಖರ್ಚು ಬಾಬುಗಳಿಗೆಲ್ಲ ಮುಂದಾಲೋಚನೆಯಿಲ್ಲದೆ ಗವರ್ನಮೆಂಟಿನವರು ಸನ್ನದ್ಧರಾಗಿದ್ದಾಗ್ಯೂ, ಸದರೀ ಇಲಾಖಾ ನೌಕರರು ಮಾನೇರ ಗುಂಪು ರಸ್ತೆಯಲ್ಲಿ ಅನ್ಯರಿಗೆ ಸ್ಥಳ ಕೊಡದಂತೆ ಹೋಗಿ ಬರುತಲಿದ್ದಾಗ್ಯೂ ಆ ಆಫೀಸಿಗೆ ಕಳುಹಿಸಲ್ಪಡತಕ್ಕ ಇಲಾಖಾ ಕಾಗದ ಪತ್ರಗಳು ಮಾತ್ರ ಕಾಲದಲ್ಲಿ ಮುದ್ರಿಸಿ ಕಳುಹಿಸಲ್ಪಡುವದಿಲ್ಲವೆಂಬದೂ, ಇಲಾಖೆಯವರು ಮಾಡುವ ಸುಸ್ತಿಯಿಂದ ಜರೂರಿಯಾದ ಕೆಲಸಗಳು ನಿಂತು ಹೋಗುತಿವೆ ಯೆಂಬದೂ ಇದುವರೆವಿಗೆ ಯೆಲ್ಲರಿಗೂ ತಿಳಿದ ವಿಷಯವಾಗಿಯೇ ಇತ್ತು. ಪರಂತು ಇದುವರೆವಿಗೂ ಗವರ್ನಮೆಂಟಿನ ದೃಷ್ಟಿಗೆ ಮಾತ್ರ ಬಿದ್ದಿರಲಿಲ್ಲವೆಂದು ತೋರುತಿದೆ ಈಗ ಹ್ಯಾಗೋ ಒಂದು ಯುಕ್ತಿಯು ಅಲ್ಲಿನ ಸ್ಥಿತಿಯಂ ಕುರಿತು ಗವರ್ನಮೆಂಟಿನವರಿಗೆ ತಿಳಿಸಿದ್ದರಿಂದ ಅದರ ಮೇಲೆ ಅವರು, ಇನ್ನು ಮೇಲೆ ಪ್ರಿಂಟಿಗಾಗಿ ಕಳುಹಿಸಲ್ಪಡತಕ್ಕ ಕಾಗದಗಳೆಲ್ಲವೂ ೧೫ ದಿನಗಳೊಳಗಾಗಿ ಛಾಪಿಸಿ ಕಳುಹಿಸಲಿಕ್ಕೆ ತಕ್ಕ ಏರ್ಪಾಡನ್ನು ಮಾಡಬೇಕೆಂಬದಾಗಿ ಅಲ್ಲಿನ ಸೂಪರಿಂಟೆಂಡೆಂಟರಿಗೆ ಹುಕುಂಮಾಡಿರುತ್ತಾರೆಂದು ಕೇಳುತ್ತೇವೆ. ಇದಕ್ಕೆ ಅತ್ಯಲ್ಪರಾಗಿರತಕ್ಕವರ ಸಂಬಳ ಇಜಾಫೆ ವಿನಾ ಬೇರೆ ಯಾವ ಯೇರ್ಪಾಡಾಗಲಿ ಕಾರ್ಯಕಾರಿಯಾಗಾ ದೆಂದು ನಮಗೆ ತೋರುವದಿಲ್ಲವು. ಸಂಬಳ ಇಜಾಫೆಯಾದ ಬಳಿಕ ಆ ಸುಖವನ್ನನುಭವಿಸುವ ದಕ್ಕಾಗಿ ಇನ್ನು ಸ್ವಲ್ಪ ವಿರಾಮ ಅಪೇಕ್ಷಿತವಾಗಿರುವದಿಲ್ಲವೆ? ಮುಖ್ಯವಾಗಿ ಯಂತ್ರವು ತುಕ್ಕು ಹಿಡಿದು ಸಡಿಲವಾಗಿ ಹೋದರೆ ಅದು ಅನುಪಯುಕ್ತವಾಗುವದೇನೂ ಆಶ್ಚರ್ಯವಲ್ಲವು. ಯಂತ್ರ ಕಾರನ ಅಶ್ರದ್ಧೆಯು ಯಂತ್ರನಾಶನಕ್ಕೆ ಕಾರಣವಾಗುವದೆಂಬದು ಸಹಜವಲ್ಲವ?

Mahomedan girl School — ಈ ಪೇಟೆಯ ಕಬ್ಬನ್ ಪೇಟೆಯಲ್ಲಿ ಮುಸಲ್ಮಾನರ ಹುಡುಗಿಯರಿಗಾಗಿ ಪ್ರತ್ಯೇಕ ಪಾಠಶಾಲೆಯೊಂದು ಸ್ಥಾಪಿಸಲ್ಪಟ್ಟಿತೆಂತಲೂ ಈಗ ಅದರಲ್ಲಿ ೧೫ ಜನ ವಿದ್ಯಾರ್ಥಿನಿಯರು [illegible]

ವಿ. ಹೀಗೆಯೇ ಸೂರ್ಯರಶ್ಮಿಯು ಸಹ ಚೆನ್ನಾಗಿ ಸೋಕದೆ ಗೃಹದ ಅಂತರಾಂತರದಲ್ಲಿ ಶೇಖರಯಲ್ಲಿರತಕ್ಕ ರೋಗ ಗಂಧಾನ ಸಭಿಜ್ಞರಾದ ಯಜಮಾನಿಯರ ಜ್ಞಾನಾಭಿವೃದ್ಧಿಗೆ ತಕ್ಕ ಏರ್ಪಾಡುಮಾಡಿದರೆ ಶ್ಲಾಘ್ಯವಾಗಿರುವುದು.

Arrival.—ಈವೂರು ಸೆಂಟ್ರಲ್ ಕಾಲೇಜಿನಲ್ಲಿ ಪ್ರೊಫೆಸರ್ ಕೆಲಸಕ್ಕೂ ಮೈಸೂರು ಮಹಾರಾಜರವರ ಕಾಲೇಜಿನ ಹೆಡ್‌ಮ್ಯಾಸ್ಟರ್ ಕೆಲಸಕ್ಕೂ ಇಂಗ್ಲಾಂಡಿನಿಂದ ಇಬ್ಬರು ಪಂಡಿತರು ಕರೆಯಿಸಲ್ಪಡತಕ್ಕವರಾಗಿರುವಂತೆ ಪೂರ್ವವೇ ಸೂಚಿಸಿದ್ದೆವಷ್ಟೆ. ಇವರಿಬ್ಬರಲ್ಲೊಬ್ಬರು ಪ್ರೊಫೆಸರ್ ಟೇಟಿಯೆಂಬವರು ಇಲ್ಲಿಗೆಬಂದು ಈದಿನ ತಮ್ಮ ಕೆಲಸದ ಛಾರ್ಜನ್ನು ತೆಗೆದುಕೊಳ್ಳುವರೆಂತಲೂ ಇವರು ಬಹಳ ಸಮರ್ಥರೆಂತಲೂ ಇವರಿಗೆ ಲಾಟಿನ್ ಗ್ರೀಕ್ ಸಂಸ್ಕೃತ ವಗೈರೆ ಮೂರು ನಾಲ್ಕು ಭಾಷೆಗಳು ಚೆನ್ನಾಗಿ ಬರುವದೆಂತಲೂ ತಿಳಿಯಬರುತ್ತದೆ.

Elopement.—ಬೆಂಗಳೂರು ಡಿಸ್ಟ್ರಿಕ್ಟ ಹೊಸಕೋಟೆ ತಾಲ್ಲೂಕಿಗೆ ಸೇರಿದ ಶಿವನಾಪುರ ಗ್ರಾಮ ನಿವಾಸಿಯಾದ ಬತಗನಾಡು ಬ್ರಾಹ್ಮಣನ ಮಗಳಾದ ಸುಮಾರ್ ೨೦ ವರುಷಗಳ ವಯಸ್ಸುಳ್ಳ ಯುವತಿಯೊಬ್ಬಳು ಈಗ್ಯೆ ಸ್ವಲ್ಪದಿವಸಗಳಹಿಂದೆ ಕೆಲವು ಒಡವೆಗಳೊಡನೆ ಪರಾರಿಯಾಗಿ ಈವೂರಿಗೆ ಬಂದಂಥೆಯೂ, ಇಲ್ಲಿ ಆಕೆಯಂ ಗೌರವಿಸಿ ಆದರಿಸತಕ್ಕವರೊಬ್ಬರೂ ಯಿಲ್ಲದೇ ಹೋಗಲು ಇಲ್ಲಿಂದ ಮೈಸೂರಿಗೆಹೋಗಿ ಅಲ್ಲಿ ನಾಟಕಾವಲೋಕನಾನಂದವನ್ನನುಭವಿಸುವಬಗ್ಯೆ ತನ್ನ ಬಳಿಯ ಕಾಲುಂಗರವಂ ಫರೋಖ್ತ್ಮಾಡಲುಪ್ರಯತ್ನಿಸಲು ಇದಂ ತಿಳಿದು ಅಲ್ಲಿನ ಪೋಲೀಸಿನವರು ಗುಮಾನಿಯಮೇರೆ ಆಕೆಯಂ ಹಿಡಿದು ಜೋಪಾಸಲಿಯೊಡನೆ ಈವೂರಿಗೆ ಕರೆದುಕೊಂಡು ಬಂದು ತಂದೆಯಮನೆಗೆ ರವಾನಿಸಿದರೆಂತಲೂ ಕೇಳುತ್ತೇವೆ.

Mr. Meenacshya.—ಪುದುಕೋಟೆ ಅರಸರವರು ಇಲ್ಲಿಗೆ ಮೊದಲು ದಯಮಾಡಿದ ಸಂದರ್ಭದಲ್ಲಿ ಇಲ್ಲಿನ ಲೆಜಿಸ್ಲೇಟಿವ್ ಸೆಕ್ರೆಟೇರಿ ಮೆ|| ಮೀನಾಕ್ಷಿಅಯ್ಯರವರ ಬಂಗ್ಲೇಗೆ ದಯಮಾಡಿದ್ದರೆಂತಲೂ, ಅಲ್ಲಿ ಅಯ್ಯರವರುಮಾಡಿದ ಸತ್ಕಾರಗಳಿಂದ ಬಹಳ ಸಂತೃಪ್ತರಾಗಿ ತಮ್ಮ ಸಂಸ್ಥಾನದಲ್ಲಿ ನಡೆಸಬೇಕೆಂದುದ್ದೇಶಿಸಿರುವ ಕೆಲವು ಜ್ಯುಡಿಷಲ್ ಬದಲಾವಣೆಗಳಂ ಕುರಿತು ಅವರೊಡನೆ ಬಹಳಹೊತ್ತು ಮಾತನಾಡುತಲಿದ್ದರೆಂತಲೂ, ಇದಲ್ಲದೆ ಇಲ್ಲಿನ ಮಹಾರಾಜರವರ ಅನುಮತಿಯ ಮೇರೆ ಏತದರ್ಥ ಅಯ್ಯರವರನ್ನು ಪುದುಕೋಟೆಗೆ ಕರೆದುಕೊಂಡುಹೋಗುವರೆಂತಲೂ, ಒಳದೇಶದ ಇಂಗ್ಲಿಷ ಪತ್ರಿಕೆಯೊಂದು ತಿಳಿಸುತಿದೆ. ಇದರಿಂದ ಮೆ|| ಮೀನಾಕ್ಷಯ್ಯಶಾಸ್ತ್ರಿಗಳ ಜ್ಯುಡಿಷಲ್ ಅನುಭವದವಿಷಯದಲ್ಲಿ ಜನರಿಗೊಂದುಅನುಮಾನವುಂಟಾಗಲಿಕ್ಕೆ ಕಾರಣವಾಯಿತು.

Awdry House.—ಶ್ರೀಮನ್ಮಹಾರಾಜರವರು ಪ್ರತಿವರುಷದಲ್ಲಿಯೂ ಈಕಾಲದಲ್ಲಿ ಊಟಕಮಂಡಲಕ್ಕೆ ದಯಮಾಡಿ ಅಲ್ಲಿ ಒಂದುತಿಂಗಳ ಕಾಲ ಬಿಡಮಾಡಿರಬೇಕಾದುದೊಂದು ನಿಯತವ್ಯಾಪಾರವಾಗಿ ಏರ್ಪಟ್ಟದೆಯಷ್ಟೆ. ಇದಕ್ಕೆ ಅನುಕೂಲವಾಗಿ ಮಹಾರಾಜರವರು ತಮ್ಮ ಉಪಯೋಗಾರ್ಥ ೩೦,೦೦೦ ರೂಪಾಯಿಗಳ ಖರೀದಿ ಬಾಳುವ ಒಂದು ಬಂಗ್ಲೆಯನ್ನು ಕೊಂಡುಕೊಂಡಿರುವ ಸಂಗತಿ ಯೆಲ್ಲರಿಗೂ ಪೂರ್ವವೇ ತಿಳಿದಿದೆಯಷ್ಟೆ. ಈಗ ಈಬಂಗ್ಲೆಯ ಕ್ರಯಪತ್ರ ವಗೈರೆ ದಸ್ತಾವೇಜುಗಳೆಲ್ಲ ಇಲ್ಲಿನ ಹುಜೂರ್ ಖಜಾನೆಯಲ್ಲಿ ಭದ್ರಪಡಿಸಲ್ಪಡತಕ್ಕಬಗ್ಯೆ ಕಳುಹಿಸಲ್ಪಟ್ಟರುತಿವೆಂದುಕೇಳುತ್ತೇವೆ. ಇದರ ಉದ್ದೇಶವೇನೋ ಸ್ಪಷ್ಟವಾಗಲಿಲ್ಲವು ಒಂದುವೇಳೆ ಬಂದೋಬಸ್ತಿಯೇ ತಾತ್ಪರ್ಯವಾಗಿದ್ದಪಕ್ಷಕ್ಕೆ ಅನರ್ಘವಾದ ರತ್ನಸಿಂಹಾಸನ ವಿರುವ ಒಂದು ಅರಮನೆಯಲ್ಲಿ ಸದರೀ ಕಾಗದಗಳಿಗೆ ಬಂದೋಬಸ್ತಾದ ಸ್ಥಳ ದೊರೆಯದೆಹೋದಬಗ್ಯೆ ಆಶ್ಚರ್ಯ ಪಡಬೇಕಾಗಿದೆ.

SUMMARY OF NEWS
ವೃತ್ತಾಂತಸಂಗ್ರಹವು.

ಹಿಂದೂ ಮತಸ್ಥನು ಕ್ರಿಸ್ತುಮತವನ್ನು ಸೇರಿದರೆ ಹಿಂದೂ ಮತದಲ್ಲಿದ್ದ ಹೆಂಡತಿಯು ಆತನನ್ನು ಸೇರದೇ ಇದ್ದರೆ ಅಲ್ಲಿನ ಕ್ರಿಸ್ತುಮತಸ್ಥರಲ್ಲಿ ಬೇಕಾದವರನ್ನು ಮದುವೆ ಮಾಡಿಕೊಳ್ಳಬಹುದೇ ಎಂಬದಾಗಿ ಒಂದು ಚರ್ಚೆಯು ಹುಟ್ಟಿದೆ. ಕ್ರಿಸ್ತು ಮತಸ್ಥರಲ್ಲಿ ಒಬ್ಬ ಪತ್ನಿ ಇರುವಾಗ ಇನ್ನೊಬ್ಬ ಪತ್ನಿಯನ್ನು ಮದುವೆ ಮಾಡಿಕೊಳ್ಳಕೂಡದು. ಹಾಗೆ ಮಾಡಿಕೊಂಡವನು ರಾಜದಂಡನೆಗೆ ಗುರಿಯಾಗುವನು ಎಂದಿದೆ. ಆದರೆ ಒಬ್ಬನು ಯಾವಾಗ ಒಂದು ಮತವನ್ನು ಬಿಟ್ಟು ಮತ್ತೊಂದು ಮತಕ್ಕೆ ಸೇರುತ್ತಾನೋ ಅವನು ಮೊದಲಿನ ಮತಕ್ಕೆ ಮೃತಪ್ರಾಯನಾಗಿಯೂ, ಹೊಸದಾಗಿ ಸೇರಿದ ಮತದಲ್ಲಿ ಹುಟ್ಟಿದವನಾಗಿಯೂ, ಆಗುತ್ತಾನೆ. ಏವಂಚ ಇಂತಾವರು ಆ ಮತದಲ್ಲಿ ವಿವಾಹಾದಿಗಳನ್ನುಮಾಡಿಕೊಳ್ಳುವದಕ್ಕೆ ಯಾವತಡೆಯೂ ಇರುವದಿಲ್ಲವು. ಇಷ್ಟಾದಾಗ್ಯೂ ಕೆಲವರು ತಾವುಕೆಡುವದಲ್ಲದೆ ತಮ್ಮ ಭಾರ್ಯಾಪುತ್ರರಂಬೋಧಿಸಿಕೆಡಿಸುತ್ತಾರೆ, ಅವರು ತ್ಯಕ್ತರಾದವರಿಗಾಗಿಶ್ರಮಿಸಲ್ಯಾತಕ್ಕೆ ? ವೃ ಚಿ.

EXTRACTS.

THE BRITISH CONSTITUTION
(ಆಂಧ್ರ ಪ್ರಕಾಶಿಕಾ.)

ಲೋಕದಲ್ಲಿ ಒಂದುದೇಶವು ಸುಖ ಸಮಾಧಾನಸ್ಥಿತಿಯೊಳಿರಲಿಕ್ಕೆ ಅದರ ಶಾಸನತಕ್ಕ ಅಂಗ ಪ್ರಭುತ್ವಕ್ರಮವೇ ಪ್ರಥಮ ಕಾರಣವೆಂದೇರ್ಪಡುತಿದೆ. ತಾದೃಶ ಪ್ರಭುತ್ವಕ್ರಮಕ್ಕೆ ತದ್ದೇಶೀಯ ಜನ ಕ್ಷೇಮಾರ್ಥಕ್ಕಾವಶ್ಯಕವಾದ ಸೌಖ್ಯವೂ, ಅವರ ಪ್ರಾಣಮಾನಗಳ ಸಂರಕ್ಷಣೆಯೂ, ಶಿಲ್ಪ ಕೃಷಿ ವಾಣಿಜ್ಯಾದಿಗಳ ಪ್ರರೋವೃದ್ಧಿಯೂ, ಜನರ ನಾಗರಿಕತಾಭ್ಯಭಿವೃದ್ಧಿಯೂ ಮುಖ್ಯಾಂಗಗಳಾಗಿರುತಿವೆ. ಇಂತಾ ರಾಜ್ಯಾಂಗಗಳಾದ ಕಾರ್ಯಗಳಂ ನಿರ್ವಹಿಸುವಬಗ್ಯೆ ನ್ಯಾಯ ನಿಬಂಧನೆಗಳ ನಿರ್ಮಾಣವೂ ಹಾಗೆ ನಿರ್ಮಿತಗಳಾದ ನ್ಯಾಯನಿಬಂಧನೆಗಳನ್ನು ಪ್ರಬಲ ದುರ್ಬಲ ಸ್ವಪರ ಭೇದಗಳಿಲ್ಲದೆ ನಿಷ್ಪಕ್ಷಪಾತವಾಗಿ ಅಮಲಿನಲ್ಲಿ ತರಬೇಕಾದದ್ದೂ, ಅತ್ಯಂತಾವಶ್ಯಕವಾಗಿರುತಿವೆ. ಆದುದರಿಂದಲೇ ರಾಜ್ಯಧುರಂಧರರಾದ ಪ್ರಭುಗಳಿಗೆಲ್ಲ ಮೇಲ್ಕಂಡ ಯೆರಡೂ ಪ್ರಧಾನಧರ್ಮಗಳೆಂದು ರಾಜನೀತಿಜ್ಞರು ತಾತ್ಪರ್ಯಗೊಂಡಿರುತ್ತಾರೆ. ಯಾವರಾಷ್ಟ್ರದಲ್ಲಿ ಸದರೀ ಎರಡು ಮುಖ್ಯ ಧರ್ಮಗಳು ಅನುಪಹತವಾಗಿ ನಿರ್ವಹಿಸಲ್ಪಡುತಿವೆಯೋ ಅಲ್ಲಿ ಬಲಿಷ್ಠರಿಂದದುರ್ಬಲರಿಗೊಂದುಬಾಧೆಯೂ, ಜನರ ಪ್ರಾಣಮಾನ ಧನಗಳಿಗೆ ಅಪಾಯವೂ, ಚೌರ್ಯಾದಿ ನಷ್ಟಗಳೂ ನೆರಗೊಂಡಿರಲಾರವು ಮತ್ತು ಅಲ್ಲಿನ ಪ್ರಜೆಗಳು ಸುಖಿಗಳಾಗಿ ಅವರ ಮೂಲಕ ದೇಶವು ಅಭಿವೃದ್ಧಿಯನ್ನೈದುವದು. ಅರಸರು ನಿರಂಕುಶಾಧಿಕಾರಿಗಳಾಗಿ ಪ್ರಜಾಸೌಖ್ಯಕ್ಕಿಂತಲೂ ಆತ್ಮ ವೈಭವ ಸುಖ ಸಂತೋಷಗಳಲ್ಲೇ ಅತ್ಯಾಸಕ್ತರಾಗಿ ಸರ್ವ ವಿಷಯಗಳಲ್ಲೂ ತಮ್ಮ ಇಷ್ಟಾನುಸಾರ ಪ್ರವರ್ತಿಸಿದರೆ ಅವರ ರಾಜ್ಯದಲ್ಲಿ ಪ್ರಜಾಕ್ಷೋಭೆಯೂ ತನ್ನಿಮಿತ್ತಕಗಳಾದ ಇತರ ವಿಪತ್ತುಗಳೂ ಉಂಟಾಗಿ ಕ್ಷೀಣದೆಶೆಯನ್ನೈದುವದರಲ್ಲೇನೂ ಸಂದೇಹವಿಲ್ಲವು. ಯಾವಾಗಲು ಒಂದು ರಾಜ್ಯದ ಅರಸನು ಸರ್ವಾಧಿಕಾರಿಯಾಗಿರುವದಕ್ಕಿಂತಲೂ ಪರಿಮಿತಾಧಿಕಾರಿಯಾಗಿರುವದೇ ಸದಾ ಪ್ರಜೆಗಳಿಗೆ ಕ್ಷೇಮಕರವು. ಆದಾಗ್ಯೂ ಜನರ ಆಚಾರ ವ್ಯವಹಾರ ನಾಗರಿಕತಾದಿ ಭೇದಗಳನ್ನನುಸರಿಸಿಯೂ, ದೇಶಕಾಲಸ್ಥಿತಿಯನ್ನನುಸರಿಸಿಯೂ ಪ್ರಭುತ್ವವು ನಾನಾವಿಧವಾಗಿರುವುದು. ಈಗ ಪ್ರಪಂಚದೊಳಿರತಕ್ಕ ರಾಜ್ಯಗಳ ಪ್ರಭುತ್ವಕ್ರಮಗಳೆಲ್ಲವು ಸಾಮಾನ್ಯವಾಗಿ ತ್ರಿವಿಧ ವಾಗಿರುವವು ಇವುಗಳಲ್ಲಿ ಮೊದಲನೆಯದು, ಪಾಲಕನಾಗಿ ಏರ್ಪಡತಕ್ಕ ಅರಸನು ಸರ್ವ ಸ್ವತಂತ್ರಾಧಿಕಾರಯುಕ್ತನಾಗಿ ತನ್ನ ಇಷ್ಟಾನುಸಾರ ಪಾಲಿಸಿದರೆ ಇದು ನಿರಂಕುಶಾಧಿಕಾರ ಪ್ರಭುತ್ವವೆಂದೆನ್ನಿಸಿಕೊಳ್ಳುವದು. ಎರಡನೆಯದು,—ಸಾಧು ಪಾತ್ರಕ್ಕೆ ಸಹ ಒಬ್ಬನು ಅರಸನನ್ನಾಗಿ ನಿಯಮಿಸದೆ ಕೇವಲ ಜನಗಳೇ ಸ್ವತಂತ್ರಿಸಿ ಪ್ರಜಾಪ್ರತಿನಿಧಿಗಳಿಂದ ಪಾಲಿಸಲ್ಪಡುವದಕ್ಕೆ ಜನಸ್ವಾತಂತ್ರ್ಯ ಪ್ರಭುತ್ವವೆಂಬದಾಗಿ ಹೆಸರುಂಟಾಗಿದೆ. ಮೂರನೆಯದು ಅರಸನೂ, ಪ್ರಜೆಗಳೂ ಕೆಲವು ಮಟ್ಟಿಗೆ ಪರಿಮಿತಾಧಿಕಾರಗಳುಳ್ಳವರಾಗಿ ಪರಸ್ಪರ ಅನುಮತಿಯಮೇರೆ ಅವರಿಬ್ಬರೂಸೇರಿನಡೆಸುವ ಪ್ರಭುತ್ವವು ಪರಿಮಿತಾಧಿಕಾರ ಪ್ರಭುತ್ವವೆಂದೆನ್ನಿಸಿಕೊಳ್ಳುತಿದೆ. ಈಗ ನಮಗೆ ಪಾಲಕರಾಗಿ ಏರ್ಪಟ್ಟಿರುವ ಆಂಗ್ಲೇಯರಿಗೆ ಜನ್ಮಸ್ಥಾನವಾದ ಇಂಗ್ಲಾಂಡ್ ದೇಶದ ಪಾಲನಾಕ್ರಮವು ಮೇಲೆ ತಿಳಿಸಿದ ಪರಿಮಿತಾಧಿಕಾರತ್ವದ್ದಾಗಿರುತಿದೆ. ಇಂಡ್ಯಾದೇಶದಲ್ಲಿ ಇಂಗ್ಲಿಷಿನವರು ನಡೆಸುವ ಪ್ರಭುತ್ವವು ಒಂದುಬಗೆಯಾಗಿದ್ದರೂ ಅವರ ಸ್ವದೇಶ ಪಾಲನಾಕ್ರಮವು ತ್ರಿವಿಧಾಂಗಗಳುಳ್ಳದ್ದಾಗಿರುತಿದೆ ಅದರಲ್ಲಿ ಪ್ರಥಮಾಂಗವು ಪಾಲಕನಾದ ಅರಸನು, ದ್ವಿತೀಯಾಂಗವು ರಾಜಪಕ್ಷಾವಲಂಬಿಗಳಾದ ಪ್ರಭುಸಂಘವು, ತೃತೀಯಾಂಗವು, ಪ್ರಜಾ ಪ್ರತಿನಿಧಿಸಂಘವು. ಇವರಲ್ಲಿ ಅರಸ ನೆಷ್ಟರ ಅಧಿಕಾರಗಳುಳ್ಳವನಾಗಿರುವನೋ, ಪ್ರಭುಸಂಘದ ಸ್ವಾತಂತ್ರ್ಯ ವೆಷ್ಟರದೋ, ಪ್ರಜಾ ಪ್ರತಿನಿಧಿ ಸಂಘದವರ್ಯಾವಯಾವ ಅಧಿಕಾರಗಳುಳ್ಳವರಾಗಿರುತ್ತಾರೆಯೋ, ಪ್ರಭುತ್ವವು ಅಲ್ಲಿ ಹ್ಯಾಗೆ ನಿರ್ವಹಿಸಲ್ಪಡುತಿದೆಯೋ ಅದು ಸಂಗ್ರಹವಾಗಿ ಇದರಡಿ ಉದಹರಿಸುತ್ತೇವೆ, ಎಂತೆಂದರೆ—ದೇಶ ಪರಿಪಾಲನಾರ್ಥ ಅರಸನೂ, ಪ್ರಭು ಸಂಘವೂ ಪ್ರಜಾಪ್ರತಿನಿಧಿ ಸಂಘವೂ ಸೇರಿ ಏರ್ಪಟ್ಟಿರುವ ಮಹಾಸಭೆಯು ಬ್ರಿಟಿಷ್ ಪಾರ್ಲಿಮೆಂಟ್ ಯೆಂಬದಾಗಿ ವ್ಯವಹರಿಸಲ್ಪಡುತಿದೆ ಈ ಮಹಾಸಭೆಯವರಿಗೆ ಧರ್ಮಶಾಸನ ನಿರ್ಮಾಣಾಧಿಕಾರವಿದ್ದಾಗ್ಯೂ ಅಂಗೀಕಾರ ಸ್ವಾತಂತ್ರ್ಯವೂ, ಪ್ರಯೋಗಾಧಿಕಾರವೂ ಸಂಪೂರ್ಣವಾಗಿ ಅರಸನಲ್ಲೇ ನೆಲೆಗೊಂಡಿರುವವು. ಇದರಿಂದಲೇ ಅರಸನಿಗೆ ಇನ್ನೂ ಕೆಲವು ಅಧಿಕ ಸ್ವಾತಂತ್ರ್ಯಗಳುಂಟಾಗಲಿಕ್ಕೆ ಅವಕಾಶವುಂಟಾಗಿರುವುದು. ಪರರಾಷ್ಟ್ರದವರೊಡನೆ ಯುದ್ಧಪ್ರಯತ್ನಗಳಂ ಮಾಡುವದಕ್ಕೂ, ಸಂಧಿಮಾಡುವದಕ್ಕೂ, ಇತರವಿಧ ಒಡಂಬಡಿಕೆಗಳಂ ಮಾಡಿಕೊಳ್ಳಲಿಕ್ಕೂ, ಅಧೀನರಾಜ್ಯಗಳಲ್ಲಿ ತಮ್ಮ ತರಫೆ ರಾಯಭಾರಿಗಳಂ ನಿಯಮಿಸಲಿಕ್ಕೂ, ನ್ಯಾಯವಿಚಾರಕ ಸಭೆಯನ್ನೇರ್ಪಡಿಸಲಿಕ್ಕೂ, ಧರ್ಮಾಧಿಕಾರಿಗಳನ್ನು ನಿರ್ಧರಿಸಲಿಕ್ಕೂ, ಅರ್ಹರಾದವರಿಗೆ ಅಲ್ಕಾಬಗಳನ್ನು ಕೊಡುವದಕ್ಕೂ ನಾಣ್ಯಗಳುಹಾಕಿಸುವದಕ್ಕೂ, ತೂಕ ಅಳತೆ ಮೊದಲಾದವು ಏರ್ಪಡಿಸಲಿಕ್ಕೂ, ಕವಾಯಿತಿ ಬದಲಾಯಿಸಲಿಕ್ಕೂ, ಮತ ಪ್ರಚಾರಕರಾದ ಬಿಷಪರುಗಳನ್ನು ಮೊಕರರ್ಮಾಡುವದಕ್ಕೂ, ಅಪರಾಧಿಗಳಅಪರಾಧವು ಕ್ಷಮಿಸಲಿಕ್ಕೂ ಪಾರ್ಲಿಮೆಂಟ್ ಸಭೆಯಂ ಬೇಕಾದಾಗ ಕೂಡಿಸಲಿಕ್ಕೂ ಅಥವಾ ಮೌಕೂಫೆ ಮಾಡುವದಕ್ಕೂ, ಅರಸನು ಸಂಪೂರ್ಣಾಧಿಕಾರ ಯುಕ್ತನಾಗಿರುವನು. ಆದಾಗ್ಯೂ ಈ ಅಧಿಕಾರಗಳನ್ನೆಲ್ಲವು ರಾಜನ ಅಥವಾ ರಾಣಿಯ ಅಂಕಿತದಲ್ಲಿ ಪಾರ್ಲಿಮೆಂಟ್ ಸಭೆಯವರ ಪೈಕಿ ಮಂತ್ರಿ ಸಮಾಜಕ್ಕೆ ಸೇರಿರತಕ್ಕವರೇ ನಿರ್ವಹಿಸುತಲಿರುವರು. ಇದರಿಂದ ಅರಸನಿಗಿರುವ ಅಧಿಕಾರವಲ್ಲ ಸ್ವಲ್ಪಮಟ್ಟಿಗೆ ಕುಂದಿತೆಯಾದುತೆಯೇ ಹೇಳಬಹುದು. ಇತರ ರಾಜರೊಡನೆ ಯುದ್ಧಮಾಡಲಿಕ್ಕೂ ಬಿಡಲಿಕ್ಕೂ ಅರಸನು ಸ್ವತಂತ್ರನಾಗಿದ್ದರೂ ಅವರ ವ್ಯಯವು ಮಾತ್ರ ಕೇವಲ ಪಾರ್ಲಿಮೆಂಟ್ ಸಭೆಯವರ ಅನುಮತಿಯನ್ನನುಸರಿಸಿದ್ದಾಗಿರುವುದು. ಅರಸನಿಗೆ ಸಲ್ಲಬೇಕಾದ ವರ್ಷಾಶನವು ಸಭೆಯಿಂದ ಕಲ್ಪಿತವಾದದ್ದಾಗಿರುವುದು. ಅದಕ್ಕಿಂತ ಜಾಸ್ತಿಯಾಗಿ ಒಂದು ಕಾಸು ಬೇಕಾದಾಗ್ಯೂ ಪಾರ್ಲಿಮೆಂಟ್ ಸಭೆಯವರ ಅನುಮತಿ ವಿನಾ ದೊರೆಯಲಾರದು. ಆದುದರಿಂದ ಅರಸನಿಗುಂಟಾಗಿರುವ ಸ್ವಾತಂತ್ರ್ಯಗಳಲ್ಲಿ ಪ್ರಾಯೇಣ ಅನೇಕ ಮಂತ್ರಾಲೋಚನಾ ಸಭೆಯವರ ಅಂಗೀಕಾರದ ನ್ನನುಸರಿಸಿದವಾಗಿರುತಿವೆ. ಇಂಗ್ಲಿಷಿನವರ ಧರ್ಮಶಾಸ್ತ್ರರೀತ್ಯಾ "ರೈಟ ಆಫ್ ಪ್ರಿಮಜನಿಚರ್" ಅಂದರೆ ಜ್ಯೇಷ್ಠ ಸಂತತಿಯವರಿಗೆ ವಂಶ ಪರಂಪರಾಕ್ರಮವಾಗಿ ಪ್ರಭುತ್ವ ಲಭಿಸುತಲಿರುವುದು. ಪುತ್ರರಾಗಲಿ ಅವರ ಸಂತತಿಯವರಾಗಲಿ ಇಲ್ಲದಿದ್ದರೆ ಜ್ಯೇಷ್ಠಾನುಪೂರ್ವಕವಾಗಿ ಪುತ್ರಿಯರೂ ತತ್ಸಂತತಿಯವರೂ ಪ್ರಭುತ್ವಕ್ಕೆ ಅರ್ಹರಾಗುವರು ಈಕ್ರಮವನ್ನನುಸರಿಸಿಯೇ ಪ್ರಕೃತ ಮಹಾರಾಣಿಯವರಿಗೆ ಇಂಗ್ಲಾಂಡ್ ದೇಶದ ಆಧಿಪತ್ಯ ವುಂಟಾಯಿತೇ ಹೊರ್ತು ಬೇರಲ್ಲವು ಪೂರ್ವಕಾಲದಲ್ಲಿ ಅರಸರಿಗಂ ದೇಶಕ್ಕೂ ಮಹದುಪಕಾರಗಳಂ ಮಾಡಿದ್ದರ ಮೂಲಕ ಪ್ರಶಸ್ತಿಗಳನ್ನೂ, ಭೂಸ್ವಾಮ್ಯಗಳನ್ನೂ ಪಡೆದವರ ಸಂತತಿಯವರು ಅದ್ಯಾಪಿ ರಾಜಕೀಯೋದ್ಯೋಗಗಳಲ್ಲಿದ್ದು ಪ್ರಸಿದ್ಧಿಯನ್ನೈದಿ ರಾಜ್ಯಕ್ಕೊಂದು ಮೇಲನ್ನುಂಟುಮಾಡುವದರ ಮೂಲಕವಾಗಿಯಾಗಲಿ, ಪ್ರಜೆಗಳ ಕ್ಷೇಮಾರ್ಥ ವಿಶೇಷ ಧನವ್ಯಯ ಮಾಡುವದರ ಮೂಲಕವಾಗಿಯಾಗಲಿ, ಧರ್ಮಕಾರ್ಯಗಳಂ ಮಾಡಿ ತಮ್ಮ ಔದಾರ್ಯವಂ ತೋರಿಸುವದರಿಂದಾಗಲಿ, ದೇಶಾಭಿವೃದ್ಧಿಗೆ ನಿಮಿತ್ತಕಗಳಾದ ನೂತನ ಯಂತ್ರನಿರ್ಮಾಣಗಳಂ ಮಾಡಿದದರ ಮೂಲಕವಾಗಲಿ ರಾಜಸನ್ಮಾನವಂ ಹೊಂದಿ ಪ್ರಭು ಪಟ್ಟವಂ ಪಡೆಯತಕ್ಕವರು ಪ್ರಭು ಸಂಘಕ್ಕೆ ಸಭಿಕರಾಗಿ ಮೊಕರರ್ಮಾಡಲ್ಪಡುವರು ಇವರ ಸಮಾಜವನ್ನೇ ಲಾರ್ಡ್ಸ್‌ಗಳ ಸಮಾಜವೆಂದು ಇಂಗ್ಲಿಷಿನವರು ವ್ಯವಹರಿಸುತ್ತಾರೆ. ಈಸಭೆಗೆ ಬಿಷಪ್ಪುಗಳೆಂಬ ಮತಾಚಾರ್ಯರು ಸಹ ಮೆಂಬರುಗಳಾಗಿ ಸೇರುವರು. ಇವರಲ್ಲಿ ಕೆಲವರು ವಂಶಪಾರಂಪರ್ಯವಾಗಿ ಪ್ರಭುವರ್ಗಕ್ಕೆ ಸೇರಿದವರಾಗಿಯೂ ಇನ್ನು ಕೆಲವರು ಅವರ ಜೀವಿತಕಾಲದ ಪರಿಮಿತಿಗೆ ಸೇರಿದವರಾಗಿಯೂ ಇರುತಲಿರುವರು. ಆದಾಗ್ಯೂ ಒಂದು ದಫಾ ಪಾರ್ಲಿಮೆಂಟ್ ಸಭೆಯು ಮೌಕೂಫಾಗಿ ಮರಳಿ ನೆರೆಗೊಳಿಸಲ್ಪಡುವ ಸಂದರ್ಭಗಳಲ್ಲೆಲ್ಲ ಸದರೀ ಲಾರ್ಡ್ಸ್‌ಗಳೆಲ್ಲರೂ ಹೊಸದಾಗಿ ಮೊಕರರ್ಮಾಡಲ್ಪಡಲಿಕ್ಕೆ ಅರ್ಹರಾದವರಾಗಿರುತ್ತಾರೆ. ಲಾರ್ಡ್ಸ್‌ಗಳಲ್ಲಿ ಡ್ಯೂಕ್, ಮಾರ್ಕ್ವಿಸ್, ಅರ್ಲ್, ವೈಕೌಂಟ್, ಬಾರನ್ ಎಂಬದಾಗಿ ಪ್ರಸ್ತಾಪಗಳುಳ್ಳದರಾಗಿಯೂ ವಿಶೇಷ ಭೂಸ್ವಾಮ್ಯಗಳುಳ್ಳವರಾಗಿಯೂ, ಅರಸರಿಗೂ ಪ್ರಜೆಗಳಿಗೂ ಮಧ್ಯವರ್ತಿಗಳಾಗಿಯೂ ಇರುತ ಅರಸರ ಅಧಿಕಾರಗಳು ಪ್ರಜೆಗಳಿಂದಾಗಲಿ, ಪ್ರಜಾ ಸ್ವಾತಂತ್ರ್ಯಗಳು ಅರಸರಿಂದಾಗಲಿ ಆಕ್ರಮಿಸಲ್ಪಡದೆ ಕಾಪಾಡಿಕೊಂಡು ನ್ಯಾಯ ನಿಬಂಧನೆಗಳು ವಗೈರೆ ಉಚಿತಾನುಚಿತವಾಗಿ ನಿರ್ವಹಿಸಲ್ಪಡುವಂತೆ ಮಾಡಿ ರಾಜ್ಯದ ಸ್ಥಿರತ್ವಕ್ಕೆ ಮುಖ್ಯ ಆಧಾರಭೂತರಾಗಿರುತಲಿರುವರು. ಪ್ರಜಾ ಪ್ರತಿನಿಧಿ ಸಂಘದವರು ಜನರಿಂದ ಚುನಾಯಿಸಲ್ಪಟ್ಟವರಾಗಿರುತ್ತಾರೆ ಇವರ ಒಟ್ಟು ಸಂಖ್ಯೆ ೬೭೦ ಮಂದಿ. ಇವರ ಪೈಕಿ ಇಂಗ್ಲಾಂಡ್ ವೇಲ್ಸ್ ಈ ರಾಜ್ಯಗಳಿರುವಲ್ಲಿ ಚುನಾಯಿಸಲ್ಪಟ್ಟು ಮೊಕರರಾಗತಕ್ಕವರು, ಸ್ಕಾಟ್ಲ್ಯಾಂಡಿಗೆ ೭೦, ಐರ್ಲ್ಯಾಂಡಿಗೆ ೧೦೩, ಈ ಪ್ರತಿನಿಧಿಗಳನ್ನು ಚುನಾಯಿಸತಕ್ಕವರಿಗೂ ಚುನಾಯಿಸಲ್ಪಡತಕ್ಕವರಿಗೂ ಕೆಲವು ನಿಬಂಧನೆಗಳೂ ಅರ್ಹತೆಯೂ ಸಾಮಾನ್ಯೇನ ವಿಧಿಸಲ್ಪಟ್ಟಿರುತಿವೆ. ಇವರು ಆಯಾ ತುಕಡಿಯವರೂ, ಪಟ್ಟಣವವರೂ, ಸರ್ವಕಲಾ ಶಾಲೆಯವರೂ ಚುನಾಯಿಸಿ ಮೊಕರರ್ಮಾಡಬಹುದು. ಸರಾಸರಿ ೨೦ ವರುಷಗಳಿಗೆ ಮೇಲ್ಪಟ್ಟ ಪುರುಷರಾಗಿಯೂ ಅರಸರ ರಾಷ್ಟ್ರದ ಸ್ಥಿರನಿವಾಸ ಭಾಗದಲ್ಲಾದರೂ ನಿಯತವಾಗಿ ವಾಸಮಾಡತಕ್ಕವರಾಗಿಯೂ, ಸ್ವತಂತ್ರವಾಗಿ ಜೀವಿಸಲಿಕ್ಕೆ ಶಕ್ತರಾದವರಾಗಿಯೂ ಇರುವವರು ಪ್ರಜೆಗಳು ಚುನಾಯಿಸಿ ಮೊಕರರ್ಮಾಡಬಹುದು. ಈ ರೀತಿ ೭ ಸಂವತ್ಸರಗಳಿಗೊಂದಾವರ್ತಿ ಪ್ರತಿನಿಧಿಗಳುಚುನಾಯಿಸಿ ಮೊಕರರ್ಮಾಡಲ್ಪಡುವರು.

(ಸಶೇಷವು.)

Bangalore:—Printed and published at the Karnatic Press, No. 108, Srinivasa Mandira Road Pettah—1890

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಾಣಿಮವಿವಿಧವೃತ್ತ್ಯುದಯಗಮಾರ್ಗಕರ್ಣಾಟಕಪ್ರಕಾಶನದಾಭಿಧಾಪ್ರಥಿತಸಾಹಿತೀಶೋಭಿತಾ। ವ್ಯಾಪಂಕಹಿತವಾಸರನಿಹಿತಮುದ್ರಣಾಸಕ್ತಸ್ವರ್ದ್ಧಿತಾಸುಪರಿಶೋಭಿತಾಭಿಕಿತಮಾನಸಸುಖಕರೀ।

Vol. XVII.] BANGALORE:—MONDAY, MARCH 24 1890. [No. 12.

ಸಂಪುಟ ೧೭.] ಬೆಂಗಳೂರು:—ಸನ್ ೧೮೯೦ನೇ ಇಸವಿ ಮಾರ್ಚ್ ೨೪ ನೇ ತಾರೀಖ್ ಸೋಮವಾರ. [ಸಂಖ್ಯೆ ೧೨

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಕಾಲ್ ಗಳಿಗೆ	ಸ್ಥಳದವರಿಗೆ ಹಾಸಲಿಲ್ಲದೆ.	ಪರಸ್ಥಳದವರಿಗೆ. ಹಾಸಲ್‌ಸೇರಿ
ಮುಂಗಡಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ ದರಖಾಸ್ತು ಮಾಡಿದ ತಾರೀಖ್ ಮೊದಲು ಒಂದು ತಿಂಗಳೊಳಗಾಗಿ ಚಂದಾ ಮೊಬಲಗು ಕೊಡತಕ್ಕವರಿಗೆ ಮಾತ್ರ ಈ ಅಡ್ವಾನ್ಸ್ ದರದಂತೆ ಪತ್ರಿಕೆ ಕಳುಹಿಸಲ್ಪಡುವದು ...ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತರಿಸಿಕೊಳ್ಳಬಹುದು ... ತಿಂಗಳಿಗಿಂತ ಕಡಮೆ ಕಾಲ ಚಂದಾ ಮೊಬಲಗು ಅಂಗೀಕರಿಸಲ್ಪಡುವದಿಲ್ಲ.

ನೋಟುಗಳು ರವಾನಿಸತಕ್ಕವರು ಮೊದಲು ಕಳುಹಿಸುವ ಅರ್ಧನೋಟು ತಲುಪಿದಬಗ್ಗೆ ನಮ್ಮಕಾಗದವು ಬಂದಮೇಲೆ ಬಾಕೀ ಅರ್ಧ ನೋಟನ್ನು ರವಾನಿಸತಕ್ಕದ್ದು. ಸ್ಟಾಂಪುಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದಾಣೆಮೇರೆ ಡಿಸ್ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅರ್ಧಾಣೆಗಿಂತ ಜಾಸ್ತಿ ಕ್ರಯವುಳ್ಳ ಸ್ಟಾಂಪುಗಳನ್ನು ಕಳುಹಿಸಕೂಡದು. ಡಿಸ್ಕೌಂಟುಯಿಲ್ಲದೆ ಕಳುಹಿಸಲ್ಪಡುವ ನೋಟುಗಳಿಗೆ ಆಷ್ಟು ವಜಾವಣೆಮಾಡಲ್ಪಟ್ಟು ಬಾಕಿ ಮೊಬಲಗು ಲೆಕ್ಕಕ್ಕೆ ವಹಿಸಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯದಫಾ ಪಙ್ಕ್ತಿ ಒಂದಕ್ಕೆ	೦—೨—೦
ಎರಡನೆಯದಫಾ ಪಙ್ಕ್ತಿ ಒಂದಕ್ಕೆ	೦—೧—೦

ಇನ್ಫ್ಲುಯೆಂಜಾ ಯೆಂಬ ವಿಷಮಶೀತಜ್ವರವೆ ಈಗವು ಬಹುವೇಗ ಸಂಚಾರಮಾಡಿಕೊಂಡು ಕಡೆಗೆ ಮದರಾಸಿಗೆಬಂದು ವ್ಯಾಪಿಸಿ ಇರುತಿದೆ. ಈಗ ರಾಯಪುರಂ ಮತ್ತು ವೇಪೇರಿಯಲ್ಲಿ ಸದರೀ ರೋಗದವರಿಂದ ಅನೇಕರು ಕಾಹಿಲೆಯಾಗಿರುತ್ತಾರೆಂದು ಕೇಳಲಿಕ್ಕೆ ಬಹಳ ವಿಷಾದಿಸುತ್ತೇವೆ.

ಆಗ್ರಾ ಡಿಸ್ಟ್ರಿಕ್ಟಿಗೆ ಸೇರಿದ ಒಂದು ಗ್ರಾಮದೊಳು ಕಳೆದ ಡಿಸೆಂಬರ್ ತಿಂಗಳಲ್ಲಿ ದರೋಡೆ ನಡೆಸಿದ ೧೭ಮಂದಿ ಅಪರಾಧಿಗಳ ದಸ್ತಗಿರಿಗೆ ಆವಶ್ಯಕವಾದ ವರ್ತಮಾನವನ್ನು ಕೊಡುವಂತವರಿಗೆ ೧೦೦೦ ರೂಪಾಯಿಗಳ ಇನಾಂ ಕೊಡುವದಾಗಿ ಆಗ್ರಾ ಡಿವಿಜನ್ ಕಮಿಷನರವರು ಘೋಷಿಷ್ಯಾಡಿರುತ್ತಾರೆ.

ದಕ್ಷಿಣ ಆಫ್ರಿಕಾ ದೇಶದ ರಾಜಧಾನಿಯಾದ ನೇಟಾಲ್ ಎಂಬ ಪಟ್ಟಣದಲ್ಲಿ ಇಂಡ್ಯಾ ದೇಶೀಯರಾದ ಆರುಮಂದಿ ಕುಷ್ಠರೋಗಿಗಳು ಕಂಡುಬರಲು ಅವರನ್ನೆಲ್ಲ ಹಿಡಿದು ಮರಳಿ ಇಂಡ್ಯಾ ದೇಶಕ್ಕೇನೆ ವಾಪಸ್ ಕಳುಹಿಸಿ ಬಿಟ್ಟರು. ಕುಷ್ಠರೋಗಿಗಳನ್ನು ಪ್ರತ್ಯೇಕಿಸಬೇಕಾದ ವಿಷಯದಲ್ಲಿ ಅಲ್ಲಿನ ಅಧಿಕಾರಿಗಳು ಕೆಲವು ನಿಬಂಧನೆಗಳಂ ಮಾಡಿ ಜಾರೀಯೊಳು ತಂದಿರುತ್ತಾರೆ.

ಆಸ್ಟ್ರಿಯಾದೇಶದ ರಾಜಧಾನಿಯಾದ ವಿಯನ್ನಾ ಪಟ್ಟಣದೊಳು ದ್ಯಾಗಲೀನಾ ಎಂಬ ಹೆಂಗಸೊಬ್ಬಳು ಕಳೆದ ತಿಂಗಳಲ್ಲಿ ಮೃತಪಟ್ಟಳು. ಮರಣ ಕಾಲದಲ್ಲಿ ಆಕೆಗೆ ವಯಸ್ಸು ೧೦೪ನೆ ವರ್ಷಗಳು, ಆಕೆಯು ಹುಟ್ಟಿದ್ದು ಮೊದಲು ೧೦೯ನೇ ವರ್ಷದಲ್ಲಿ ಒಂದು ದಫಾ ವಿನಾ ಯಾವಾಗಲು ವೈದ್ಯನಚಿಕಿತ್ಸೆಗೆ ಗುರಿಯಾಗಲಿಲ್ಲವು. ಸಾಯುವತನಕ ಆಕೆಗೆ ಜ್ಞಾನ ಪಾಟವವು ಚೆನ್ನಾಗಿಯೇ ಇರುತಲಿತ್ತು.

ಇಂಡೋರಸಂಸ್ಥಾನದಲ್ಲಿ ಪ್ರಸಿದ್ಧನಾದ ತಾಂತ್ಯಾಬಿಲನೆಂಬ ಒಬ್ಬ ಕಳ್ಳನು ಒಬ್ಬ ಕಾನ್ಸ್ಟೇಬಲಿನ ಮೂಗು ಕಚ್ಚಿದನಷ್ಟೆ! ಆಮೇಲೆ ಒಂದುತಿಂಗಳೊಳಗಾಗಿ ಮೂಗು ಕಚ್ಚಿಸಿಕೊಂಡ ಕಾನ್ಸ್ಟೇಬಲನು ಡಾಕ್ಟರ್ ಸ್ಪೆನ್ಸರ್‌ರವರ ಬಳಗೆಬಂದು ತೋರಿಸಲು ಸದರೀ ಡಾಕ್ಟರು ಅವನಿಗೆ ಜ್ಞಾನತಪ್ಪಿಸಿ ಅವನ ನೆತ್ತಿಯ ಒಳಭಾಗದಿಂದ ಸ್ವಲ್ಪ ಚರ್ಮವನ್ನು ಕುಯಿದುಕೊಂಡು ಅವನ್ನು ಮೂಗಿನಮೇಲೆಯಿಟ್ಟು ಕಟ್ಟಿಸಿದ್ದಾಗಿಯೂ ಹೀಗೆಮಾಡಿದ ಒಂದುತಿಂಗಳೊಳಗಾಗಿಯೇ ಯಥಾಪ್ರಕಾರ ಸರಿಯಾಗಿ ಮೂಗುಆದುದೆಂದು ತಿಳಿಯಬರುತದೆ.

ಮುಂಬೈ ಶಹರಿನಲ್ಲಿರುವ ಪಟ್ಟರ್ಸ ಕಂಪೆನಿಯವರ ಆಗಬೋಟುಗಳು ಮುಂಬಯಿ ಅಲಿಬಾಗಯ ಪ್ರತಿ ಬುಧವಾರದಲ್ಲಿಯೂ ತಿರುಗುತ್ತಿರುತವೆಂದು ಸರ್ವರಿಗೂ ವಿದಿತವಿರಬಹುದು. ಕಳೆದ ಬುಧವಾರದ ದಿವಸ ಅವರ ಒಂದಾನೊಂದು ಆಗಬೋಟಿಯು ಸುಮಾರು ೩ಘಂಟೆಯ ಸಮಯದಲ್ಲಿ ಧರಮತರವೆಂಬ ಬಂದರದಲ್ಲಿ ಮನುಷ್ಯರನ್ನು ಹತ್ತಿಸಿಕೊಳ್ಳುವದಕ್ಕೋಸ್ಕರ ನಿಂತಿರುವಾಗ ಧಕ್ಕೆಯಮೇಲಿರುವ ಕೆಲ ಮನುಷ್ಯರನ್ನು ಹತ್ತಿಸಿಕೊಂಡು ಒಂದು ಸಣ್ಣ ಆಗಬೋಟಿಯು ಅದರ ಸಮೀಪದ ಹೋಗುತಿತ್ತು, ಆದರೆ ಅದರಲ್ಲಿ ಧಕ್ಕೆಯಮೇಲಿರುವ ಸರ್ವರನ್ನು ಹತ್ತಿಸಿಕೊಳ್ಳುವದಕ್ಕೆ ಜಾಗವು ಸಂಕೋಚವಾದ್ದರಿಂದ ಒಂದು ಚಿಕ್ಕ ಹಡಗಿನ ಮೇಲೆ ಉಳಿದ ೫೦ ಮನುಷ್ಯರನ್ನು ಹತ್ತಿಸಿ ಅವನ್ನು ಆ ಸಣ್ಣ ಆಗಬೋಟಿಗೆ ಕಟ್ಟಿ ಒಯ್ಯುತ್ತಿದ್ದರು. ಈ ಪ್ರಕಾರ ಆ ಸಣ್ಣ ಆಗಬೋಟಿಯು ಕಟ್ಟಿದ್ದ ಹಡಗ ಸಮೇತ ಬಂದರದಲ್ಲಿ ನಿಂತಿದ್ದ ಆಗಬೋಟಿಯ ಹತ್ತಿರ ಹೋಗುತ್ತಿರುವಾಗ ಆ ಹಡಗು ಮಗುಚಿ ಬಿದ್ದು ಅದರಲ್ಲಿದ್ದ ಮನುಷ್ಯರಲ್ಲಿಂದ ೫೦ ಜನರು ಪ್ರಾಣ ಮುಳುಗಿ ಹೋಗಿ ಅವರ ಪತ್ತೆಯು ಸಿಕ್ಕಲಿಲ್ಲ!! ಉಳಿದವರು ಬದುಕಿದರು.

EXTRACTS

ಕಳೆದ ತಿಂಗಳ ೨ನೇ ತಾರೀಖ್ ಮಂಗಳವಾರದಿವಸರಾತ್ರಿ ಸುಮಾರ್ ಮುಂದ್ಯಮೊಳು ೪ಗಂಟೆಸಮಯದಲ್ಲಿ ಶ್ರೀಮಂತ ರಾವ್‌ಬಹದ್ದರ್ ರಾವ್ ಬಾಳೆಕರರು ಇವರಲ್ಲಿ ಸಿದ್ಧಪುರುಷರಾದ ಲೋಚನ ಸುಕಲಮೆಂಬ ಪಂಡಿತರು ರೀತಿಯಂತೆ ಶ್ರೀ ದುರ್ಗಾದೇವಿಯ ಆರತಿಯನ್ನುಮಾಡಿದರು. ಈ ಉತ್ಸವವನ್ನು ನೋಡುವದಕ್ಕೆ ಊರವಾಸಿಗಳಾದ ಸಭ್ಯ ಗೃಹಸ್ಥರೂ ಮತ್ತು ಬಡಬಗ್ಗರೂ ನೆರದಿದ್ದರು. ಅವರಲ್ಲೊಬ್ಬ ಮುನಸು ಶಿವಚರಣ ಲಾಲಾ ಎಂಬವರು ಐದುಮತ್ಸ್ಯಗಳನ್ನು ಹಿಡಿದರಿಸಿ ಅವುಗಳನ್ನು ೨೦ ತುಂಡುಗಳಾಗ ಮಾಡಿಸಿ ಸರ್ವರಿಗೂ ವಿದಿತವಾಗುವಹಾಗೆ ಒಂದು ಡಬ್ಬಿಯಲ್ಲಿಹಾಕಿ ಬೀಗಮುದ್ರೆಯನ್ನು ಮಾಡಿ ಮದ್ಯ ತುಂಬಿದ ಒಂದುಸೀಸೆಯುಸಮೇತ ಸಿದ್ಧಪುರುಷರಸಮೀಪದಲ್ಲಿ ಕೆಲವು ಅಂತರದಲ್ಲಿ ಮುಂದಟ್ಟು ಬೀಗದಕೈಯನ್ನು ಬಿಹಿರೀಲಾಲ ಕೇಸಳರಾಮ ದುಬೆ ಎಂಬವರ ವಶ್ಯಕೊಟ್ಟರು. ಈ ಪ್ರಕಾರ ಯೆಲ್ಲಾ ಸಿದ್ಧತೆ ಆದ ನಂತರ ಸಿದ್ಧಪುರುಷರು (ಶ್ರೀ ದುರ್ಗಾದೇವಿಕೀಜಯ) ಎಂದು ಉಚ್ಚರಿಸಿ ಮಾಡಿ ಕೆಲವು ಮಂತ್ರಾಕ್ಷತೆಯನ್ನು ಹಾಕಿ ಮಂಗಳಾರತಿಯನ್ನು ಬೆಳಗಿ ಮನಃಪೂರ್ವಕ ದುರ್ಗಾದೇವಿಯ ಸ್ತುತಿಯನ್ನುಮಾಡಿ ಆಡಬ್ಬಿಯನ್ನು ಮತ್ತು ಸೀಸೆಯನ್ನು ತೆರದು ನೋಡುವದಕ್ಕೆ ಹೇಳಿದರು. ಕೂಡಲೇ ಆಡಬ್ಬಿಯಲ್ಲಿ ೨೦ ತುಂಡುಗಳ ಬದಲು ಸಜೀವದ ಮತ್ಸ್ಯಗಳೂ ಸೀಸೆಯಲ್ಲಿ ಮದ್ಯದ ಬದಲು ಕ್ಷೀರವೂ ನೋಡಿ ಅಲ್ಲಿ ಕೂಡಿದ ಜನರೆಲ್ಲರೂ ಸಿದ್ಧಪುರುಷರ ಮಹಿಮೆಗೂ ಮಂತ್ರಸಾಮರ್ಥ್ಯಕ್ಕೂ ಬಹಳ ಕೊಂಡಾಡಿದರು. ಅವರಲ್ಲೊಕ ರಾ|| ರಾ|| ಸಭಾಪತಿ ಬಾಬು ಎಂಬ ನಾಗಪ್ಪೂರ್ ಪೋಲೀಸ್ ಕಚೇರಿಯ ಕಾರಕೂನರು ಆ ಸಜೀವ ಮತ್ಸ್ಯಗಳನ್ನು ತಾವು ನೋಡುತ್ತೇವೆಂದು ಹೇಳಿ ಸಿದ್ಧಪುರುಷರ ಅಪ್ಪಣೆಯಿಂದ ಇಸಗೊಂಡು ಬಂದು ನೀರುತುಂಬಿದ ದೊಡ್ಡಪಾತ್ರೆಯಲ್ಲಿ ಹಾಕಿ ಇಟ್ಟಿದ್ದಾರೆಂತಲೂ ಇದನ್ನು ನೋಡುವದಕ್ಕೆ ಪ್ರತಿನಿತ್ಯವೂ ಜನರು ಗುಂಪುಗುಂಪಾಗಿ ಕೂಡುತ್ತಾರೆಂತಲೂ ತಿಳಿಯಬರುತದೆ. ಮದ್ಯದಬದಲು ನಿರ್ಮಾಣವಾದಿದ ಹಾಲನ್ನು ಅಲ್ಲಿ ಕೂಡಿದ ಜನರೆಲ್ಲರೂ ದುರ್ಗಾದೇವಿಯ ಪ್ರಸಾದವೆಂದು ಸ್ವಲ್ಪಸ್ವಲ್ಪ ಪ್ರಾಶನಮಾಡಿದರಂತೆ. ಈ ರೀತಿಯಲ್ಲಿ ಪಂಡಿತಲೋಚನ ಸುಕುಲ ಇವರವ ಖ್ಯಾತಿಯು ಆ ಇಡೀನ್ಯಾಡಲ್ಲಿ ಹಬ್ಬಿಕೊಂಡಿರುವದು. ಇಂತ ಪುರುಷರು ಈಗಿನಕಾಲದಲ್ಲಿ ಅಪರೂಪವೇ ಆದ್ದರಿಂದ ಇವರು ನಾಸ್ತಿಕರಿಂದತುಂಬಿತ ಹೋಗುವ ಮಹಿಮೆಗಳಲ್ಲಿ ತಿರುಗಿ ತಮ್ಮ ದೇವರಮೇಲಿನ ಭಕ್ತಿಯೂ ತಮ್ಮ ಮಂತ್ರಸಾಮರ್ಥ್ಯವೂ ತೋರಿಸಿದರೆ ನಾಸ್ತಿಕರೆಂದೆನ್ನಿಸಿ ಕೊಳ್ಳುವವರು ತಮ್ಮ ಮತವನ್ನುಬಿಟ್ಟು ಹಿಂದೂ ಜಾತಿಯಿಂದ ಆಸ್ತಿಕರಾಗಲಿಕ್ಕೆ ಪೂರ್ಣ ಭರವಸೆಯನ್ನಿಡುತಿದ್ದರು.—ಕ. ಸು.

ಸರ್ ಮಂಗಳದಾಸ್ ನತ್ಥೂಭಾಯಿ ನಯಿಟ್ ಸಿ. ಎಸ್. ಐ.—ಬೊಂಬಾಯಿ ಪಟ್ಟಣದ ಪ್ರಮುಖರಲ್ಲಿ ಒಬ್ಬರಾದ ಈ ದೊಡ್ಡ ಮನುಷ್ಯರು ಕಪೋಲೀ ಬನಿಯಾ ವರ್ಗಕ್ಕೆ ಸೇರಿದವರು. ಇವರ ಮುತ್ತಜ್ಜಂದಿರು ಈಗ್ಗೆ ೧೫ ಶತಮಾನದಲ್ಲಿ ಕಾಟಿವಾಡದಲ್ಲಿರುವ ಗೋಗಾ ಎಂಬ ಸ್ಥಳದಿಂದ ಇಲ್ಲಿಗೆ ಬಂದು ವಸತಿ ಮಾಡಿದರು. ಈ ಪಟ್ಟಣ ವೃದ್ಧಿಯಾಗುತ ಬಂದಹಾಗೆಲ್ಲಾ ಇವರೂ ಐಶ್ವರ್ಯವಂತರಾಗುತ್ತಾ ಬಂದರು. ಇವರ ತಾಯಿ ಇವರ ಮಕ್ಕಳಾದ ಸೇಟ್ ನತ್ಥೂಭಾಯಿ ರಾಮದಾಸರವರು ಬಹುಕಾಲವಿದ್ದು ಸತ್ತರು. ಇವರ ಮಕ್ಕಳಾದ ಸರ್ ಮಂಗಳದಾಸ್ ನತ್ಥೂಭಾಯಿ ನಯಿಟ್ ಸಿ. ಎಸ್. ಐ ರವರ ೧೧ ನೇ ವರ್ಷದ ವಯಸ್ಸಿನಲ್ಲಿ ಸ್ವರ್ಗಸ್ಥರಾದರು. ಇವರು ಕೆಲವು ಕಾಲ ಇಂಗ್ಲೀಷನ್ನು ಓದಿ ಆಮೇಲೆ ತಮ್ಮ ೧೬ ನೇ ವಯಸ್ಸಿನಲ್ಲಿ ಮುಕ್ತಬಾಯಿಯವರನ್ನು ವಿವಾಹ ಮಾಡಿಕೊಂಡು ವಿಶೇಷ ವರ್ತನದಲ್ಲಿ ಪ್ರವರ್ತಿಸಿದರು. ಇವರಿಗೆ ೩ ಜನ ಗಂಡು ಮಕ್ಕಳು ೨ ಹೆಣ್ಣುಮಕ್ಕಳು ಆದರೆ ಇವರ ಪತ್ನಿಯು ಸ್ವರ್ಗ ಸೇರಿದಾನನ್ನದಲಿವರು. ಇವರು ೧೬ ವರ್ಷವೇ ಸಂಸಾರ ಸುಖವನ್ನನುಭವಿಸಿದರು. ಆಮೇಲೆ ಇವರು ಲಗ್ನ ಮಾಡಿಕೊಳ್ಳದೆ ಜಿತೇಂದ್ರಿಯರಾಗಿದ್ದುಕೊಂಡು ಕಲ್ಯಾಣ ಎಂಬ ಪಟ್ಟಣದಲ್ಲಿ ತಮ್ಮ ಮೃತರಾದ ಹೆಸರು ಉದ್ದೇಶಿಸುವಂತೆ ೭೫೦೦೦ ರೂಪಾಯಿಗಳನ್ನು ಖರ್ಚ ಮಾಡಿ ಒಂದು ಧರ್ಮದ ಆಸ್ಪತ್ರೆಯನ್ನು ಸ್ಥಾಪಿಸಿದರು ೧೮೫೯ನೇ ಇಸವಿಯಲ್ಲಿ ಬೆಂಚ್ ಆಫ್ ಜಸ್ಟೀಸ್‌ನವರಿಗೆ ಕೊಡುತ್ತಿದ್ದ ಬೊಂಬಾಯಿನ ಮ್ಯುನಿಸಿಪಾಲಿಟಿ ಹಣವನ್ನು ಇವರ ವಶಕ್ಕೆ ಕೊಡುವಂತೆ ಮಾಡಿ ಇವರನ್ನು ಜಸ್ಟೀಸ್ ಆಫ್ ಪೀಸ್ ಎಂಬದಾಗಿ ನೇಮಿಸಿದರು.

೧೮೬೦ ರಲ್ಲಿ ಬೊಂಬಾಯಿ ಗವರ್ನರರಾದ ಸರ್ ಬಾರ್ಟಲ್ ಫ್ರೇರ್ ಸಾಹೇಬರವರು ಇವರನ್ನು ಮ್ಯುನಿಸಿಪಲ್ ಟ್ಯಾಕ್ಸ್ ಕಮಿಷನರಾಗಿ ನೇಮಿಸಿದರು. ೧೮೬೨ ರಲ್ಲಿ ಬೊಂಬಾಯಿನಾಟಿಯ ರಾಯಲ್ ಏಷ್ಯಾಟಿಕ್ ಸೊಸೈಟಿ ಮತ್ತು ಬೊಂಬಾಯಿ ಜಾಗ್ರಫಿಕಲ್ ಸೊಸೈಟಿ ಮೆಂಬರಾದರು. ಅದೇವರ್ಷ ತಮ್ಮ ಹೆಸರಿನಿಂದ ಹಿಂದೂಗ್ರಾಜುಯೇಟಿಗೋಸ್ಕರ ಪ್ರಾವಲಿಂಗ್ ವೇತನವನ್ನು ಸ್ಥಾಪಿಸುವದಕ್ಕಾಗಿ ೨೨,೦೦೦ ರೂಪಾಯಿಗಳನ್ನು ಬೊಂಬಾಯಿ ಯೂನಿವರ್ಸಿಟಿಗೆ ಕೊಟ್ಟರು. ೧೮೬೬ ರಲ್ಲಿ ಇವರು ಗವರ್ನರ್ ಜನರಲವರ ಕಾಯಿದೆ ಕೌನ್ಸಿಲಿನಲ್ಲಿ ೪ ವರ್ಷ ಮೆಂಬರಾಗಿದ್ದರು. ೧೮೭೭ ರಲ್ಲಿ ಇವರಿಗೆ ಸಿ. ಎಸ್. ಐ. ಎಂಬ ಬಿರುದನ್ನು ಕುಂಪಣಿಯವರು ದಯಪಾಲಿಸಿದರು. ೧೮೭೫ ರಲ್ಲಿ ನೈಟ್ ಯೆಂಬ ಬಿರುದನ್ನು ಹೊಂದಿದರು. ಇವರು ತಮ್ಮ ಜೀವಿತಕಾಲದಲ್ಲಿ ೨೮ ಲಕ್ಷರೂಪಾಯಿಗಳನ್ನು ಧರ್ಮಕಾರ್ಯಗಳಿಗಾಗಿ ವಿನಿಯೋಗಿಸಿದರು. ಇವರು ತಮ್ಮ ೫೮ನೇ ವರ್ಷದಲ್ಲಿ ರೋಗದಿಂದ ಪೀಡಿತರಾಗಿ ಇನ್ನು ಭೂಲೋಕದ ಸುಖಸರಿಯಲ್ಲವೆಂದು ಸ್ವರ್ಗಲೋಕದ ಸೌಖ್ಯವನ್ನು ಅಂಗೀಕರಿಸಿದಾಗ ಒಂದು ಮರಣ ಶಾಸನವನ್ನು ಬರೆದಿಟ್ಟರು. ಅದರಲ್ಲಿ ಮೊದಲನೇಮಗನಿಗೆ ೧೬ ಲಕ್ಷರೂಪಾಯಿಗಳ ಆಸ್ತಿಯನ್ನೂ ಎರಡನೇ ಮಗನಿಗೆ ೧೮ ಲಕ್ಷ ರೂಪಾಯಿಗಳ ಆಸ್ತಿಯನ್ನೂ ಕಿರೀಮಗನಿಗೆ ೩ ಲಕ್ಷರೂಪಾಯಿಗಳ ಆಸ್ತಿಯನ್ನೂ ಕೊಟ್ಟು ಧರ್ಮಕ್ಕಾಗಿ ೬ ಲಕ್ಷದಿಂದ ೪ ಲಕ್ಷದವರೆಗೆ ವಿನಿಯೋಗಿಸಬೇಕೆಂದು ಬರೆದಿದಾರೆ. ಇವರಲ್ಲಿ ಕೊನೇಮಕ್ಕಳು ಈ ಮರಣಶಾಸನವು ನ್ಯಾಯವಾಗಿಲ್ಲವೆಂದು ಕೋರ್ಟಿನಲ್ಲಿ ದಾವಾ ತಂದಿರುತ್ತಾರೆ ಪ್ರ.—ಸು.

Bangalore — Printed and published at the KARNATIC PRESS, No. 108, Srinivasa Mandira Road Pettah—1890

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XVII | BANGALORE—MONDAY, APRIL 7 1890. [No. 14

ಸಂಪುಟ ೧೭. | ಬೆಂಗಳೂರು:—ಸನ್ ೧೮೯೦ನೇ ಇಸವಿ ಏಪ್ರಿಲ್ ೭ ನೇ ತಾರೀಖು ಸೋಮವಾರ. [ಸಂಖ್ಯೆ ೧೪.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲೀಷು ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ ಪಾವತಿಯಾದರೆ	ಪರಸ್ಥಳದವರಿಗೆ
ಮುಂಗಡ...	8—0—0	9—0—0
ತರುವಾಯ ,,	9—0—0	10—8—0

ಇಂಗ್ಲೀಷು ಅಥವಾ ಕನ್ನಡಭಾಗಗಳಿಗೆ.

ಮುಂಗಡ...	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ ... [illegible]

ಪ್ರಕಟನೆಯ ರಿವಾಜ್.

[illegible] ೦—೨—೦

[illegible] ೦—೧—೦

[illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

[illegible]

... ರೂ ೫ 0—0

[illegible]

ADVERTISEMENTS.

ನೋಟೀಸ್

ಇವರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರಿಗೇ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

		ರೂ. ಅ. ಪೈ
[illegible]	....	೫ ೦ ೦
,, [illegible]		೧ ೧ ೦
,, [illegible]	...	೦ ೪ ೦
,, [illegible]		೧ ೨ ೦
,, [illegible]	...	೦ ೧೨ ೦
,, [illegible]	...	೦ ೮ ೦
,, [illegible] ಗೀತೆ	..	೦ ೧ ೬
,, ಚಾಣಕ್ಯನೀತಿ (ಸಟೀಕ)		೦ ೩ ೦
ವಿಷ್ಣುಸಹಸ್ರನಾಮ [illegible]	...	೦ ೫ ೦
[illegible]	..	೦ ೨ ೦
[illegible]	...	೦ ೨ ೬
[illegible]	...	೦ ೨ ೩
೧ [illegible]	.	೦ ೧ ೦

ಕನ್ನಡ ಗ್ರಂಥಗಳು.

[illegible]	...	೩ ೦ ೦
[illegible]	...	೧ ೮ ೦
[illegible]	...	೧ ೪ ೦
[illegible]	...	೦ ೪ ೦
[illegible]	..	೦ ೪ ೦
[illegible]	...	೦ ೨ ೦
[illegible]	...	೦ ೨ ೬
[illegible]	...	೦ ೩ ೦
[illegible]	...	೦ ೨ ೦
[illegible]	..	೦ ೨ ೦
[illegible]	...	೦ ೨ ೬
[illegible]	...	೧ ೦ ೦
[illegible]	..	೦ ೧೨ ೦

ನೋಟೀಸ್.

ಇವರಿಂದ ನಮ್ಮ ಚಂದಾದಾರರಿಗೂ ಇತರರಿಗೂ ತಿಳಿಸುವದೇನೆಂದರೆ—

ಸನ್ ೧೮೮೯ ನೇ ಇಸವಿ ಡಿಸೆಂಬರ್ ಆಖೈರಿನ ವರೆಗೆ ಚಂದಾ ಬಾಕಿಯನ್ನು ... ಚಂದಾದಾರರ ಹೆಸರುಗಳನ್ನು ಮಾತ್ರ ನಾವು ರಿಜಿಸ್ಟರ್ ಮಾಡಿಕೊಂಡು ... ಪತ್ರಿಕೆ ಕಳುಹಿಸುತ್ತೇವೆ. ... ಪತ್ರಿಕೆಯು ಅಪೇಕ್ಷೆಯಿಲ್ಲದಿದ್ದರೆ ಅಂತವರು ಕೂಡಲೇ ತಮ್ಮ ಅಭಿಪ್ರಾಯವನ್ನು ಮುಂದಾಗಿಯೇ ಕಾರ್ಡಿನಲ್ಲಿ ನಮಗೆ ತಿಳಿಸಬಹುದು. ಪತ್ರಿಕೆಯು ... ಸಾಧ್ಯವಾದಷ್ಟು ಜಾಗ್ರತೆಯಲ್ಲಿ ಚಂದಾ ಮೊಬಲಗನ್ನು ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಬೆಂಗಳೂರು.) ಟಿ. ಸಿ. ಶ್ರೀನಿವಾಸಾಚಾರ್,) ಪ್ರೊಪ್ರೈಟರ್.) ಕರ್ಣಾಟಕ ಪ್ರಕಾಶಿಕಾ.

ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪೆನಿ.

ನೋಟೀಸ್.

ಜೋಡಿಗಾಡಿಗಳು ತಯಾರ್ ಮಾಡುವದಕ್ಕೆ ಗಾಡಿಗಳ ... ದರಖಾಸ್ತುಗಳು ಬೇಕಾಗಿದೆ. ... ಲೋಕೋಮೋಟಿವ್ ಸೂಪರಿಂಟೆಂಡೆಂಟರಿಗೆ ಬರೆದುಕೊಳ್ಳಬೇಕು.

C. P. WHITCOMBE,
Loco & Carr. Supt
S. M. Ry.

ಮೈಸೂರು }
1—4—90 }

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, APRIL 7, 1890.

೧೮೯೦ನೇ ಏಪ್ರಿಲ್ ತಾ॥ ೭ ನೇ ಸೋಮವಾರ.

CONTEMPTUOUS BELIEF.

ಇಂಡ್ಯಾದೇಶದಲ್ಲಿರುವ ಪ್ರಸಿದ್ಧಗಳಾಗಿರುವ ದಿವ್ಯದೇಶಗಳೊಳಗೆ ಶ್ರೀ ವೆಂಕಟಗಿರಿ, ಶ್ರೀರಂಗ, ಕಾಂಚಿ, ಶ್ರೀಮುಷ್ಣ, ನೈಮಿಶಾರಣ್ಯ, ... ಮುಂತಾದ ಪ್ರದೇಶಗಳು ಪುರಾಣ ಪ್ರಸಿದ್ಧಗಳಾಗಿರುತ್ತವೆ. ತತ್ರಾಪಿ ಅಂತಾ ಸ್ವಯಂವ್ಯಕ್ತಗಳಾದ ದಿವ್ಯದೇಶಗಳಲ್ಲಿ, (ಕಲೌ ವೆಂಕಟನಾಯಕಃ) ಎಂಬದಾಗಿ ಈ ಕಲಿಕಾಲದೊಳು ಸಕಲಜನರೂ ತಮ್ಮ ತಮ್ಮ ಇಷ್ಟಾರ್ಥಸಿದ್ಧಿಗಾಗಿ ಉಪಾಸಿಸತಕ್ಕ ಇತರ ಅವತಾರಗಳೊಳಗೆ ಶ್ರೀವೆಂಕಟೇಶ್ವರನೊಬ್ಬನೇ ಮುಖ್ಯನೆಂಬದು ಪುರಾಣ ಪ್ರಸಿದ್ಧವಾಗಿಯೂ ಮಹರ್ಷಿಗಳ ಮತವಾಗಿಯೂ ಇರುತ್ತದೆ. ಹೀಗೆ ಹಿಂದೂಗಳಿಗೆಲ್ಲ ಮುಖ್ಯೋಪಾಸ್ಯನಾದ ವೆಂಕಟರಮಣದೇವರು ಈ ಕಲಿಕಾಲದಲ್ಲಿ ಸಹ ಪ್ರತ್ಯಕ್ಷ ದೈವವಾದುದರಿಂದ ಆತನು ಶುಭಾಶುಭಫಲಗಳನ್ನು ತತ್ಕ್ಷಣದಲ್ಲೇ ಕೊಡುವನೆಂಬ ಭಯವು ಜನರಿಗೆ ಸಾಮಾನ್ಯವಾಗಿ ನೆಲೆಗೊಂಡಿತ್ತು. ಇದಲ್ಲದೆ ಮೆಕಾಲೆ ... ಭಯಭಕ್ತಿಯೊಡನೆ ಅನೇಕ ಪ್ರಬಂಧಪೂರ್ವಕ ... ಇದ್ದರು. ಈ ಶ್ರದ್ಧಾಭಕ್ತಿಯು ಯಾವತ್ಪರ್ಯಂತ ಜನರಿಗೆ ನಿರೂಢವಾಗಿತ್ತೋ ತಾವತ್ಪರ್ಯಂತ ಹಿಂದೂಗಳುವಿನಾ ಅನ್ಯಜಾತಿಯವರು ಬೆಟ್ಟದ ಮೇಲಕ್ಕೆ ಹೋಗುವದಕ್ಕೆ ಅಂಜುತಲಿದ್ದರು. ಹಾಗೆ ... ಹೋದರೆ ಕೂಡಲೇ ಅದರ ಫಲವು ಅವರಿಗೆ ವ್ಯಕ್ತವಾಗುತಲಿತ್ತು. ಕಡೆಗೆ ಈಗಿನ ... ಬೆಟ್ಟದಮೇಲೆ ಬೇಕಾದವರು ಹೋಗಬಹುದೆಂತೆ ... ತಿರುಪತಿ ಬೆಟ್ಟದಮೇಲೆ ... ಶ್ರೀನಿವಾಸನು ಕೂಡಲೇ ದಂಡಿಸುವನೆಂಬ ನಂಬಿಕೆಯೂ ಭೀತಿಯೂ ಜನರಿಗಿರುತ್ತದ್ದರಿಂದ ಯಾತ್ರಾರ್ಥಿಗಳಾಗಿ ಹೋಗತಕ್ಕವರು ತಮ್ಮ ಸಾಮಾನುಗಳನ್ನೆಲ್ಲ ... [illegible]

ದೊಪ್ಪಿಸಿದರೆ ಅದರಲ್ಲಿ ಸ್ವಲ್ಪವಾದರೂ ... ಭಕ್ತಾದಿಗಳ ಸ್ವತ್ತನ್ನ ... ದೇವರು ದಂಡಿಸುವನೆಂಬ ಅಂಜಿಕೆಯು ತಪ್ಪಿ ದೇವರ ಸ್ವತ್ತನ್ನೇ ... ವಾ ದುರುಪಯೋಗಪಡಿಸಿದರೆ ... ವೈಗ್ರ್ಯ ಹುಟ್ಟದ್ದರಿಂದ ದೇವರಸ್ವತ್ತು ... ವಿಧದಿಂ ಖುಲಾಗಲಿಕ್ಕೆ ... ಸ್ವಂತದ್ರವ್ಯವು ನಷ್ಟವಾಗುವದು ... ದಿವ್ಯ ... ಶ್ರೀನಿವಾಸನೇನು ... ನೆಂಬ ಧೈರ್ಯ ... ಈಗ ಶ್ರೀನಿವಾಸನಲ್ಲಿ ಭಕ್ತಿ ಗೌರವವು ತಪ್ಪ ... ಅನೇಕ ವಿಧವಾದ ... ದುಬರುತಿವೆ. ದೇವರಿಗೆ ಶಕ್ತಿ ತಪ್ಪಿಹೋಯಿತೆ ಯಾತಕ್ಕೆ ಹೇಳಬಾರದೆಂತಲೂ, ಅಲೋಪಿತವಾದ ಶಕ್ತಿಯು ... ಕಾಲ ವಿರುವದೆಂತಲೂ ... ಅಂತಾ ಭ್ರಾಂತಿಯು ... ಇಲ್ಲದಿದ್ದರೂ ... ನಿವೃತ್ತಿಯಾಗಿ ... ಹೋಗಬೇಕಾದೀತೆಂತಲೂ ... ಬಹುದು. ... ಸ್ವಾಧೀನವಾಗಿರುವದೆಂಬದು ... ದೇವರು ... ಗಳೂ ತನ್ನಂತ್ರಗಳು ... ಇರುವದರಿಂದ ... ಪ್ರತಿಷ್ಠಿತವಾದ ... ಶಕ್ತಿಯು ... ಭಾವಿಸಬೇಕು. ಇದಲ್ಲದೆ

[illegible]

ಅಂದರೆ ಅರ್ಜುನನಿಗೆ ಶ್ರೀಕೃಷ್ಣನು ಗೀತೋಪದೇಶಮಾಡಿದ ಸಮಯದಲ್ಲಿ ... ಪ್ರಾಣಿಗಳಲ್ಲಿಯೂ ಸಮಾನನಾಗಿರುತ್ತೇನೆ. ನನಗೆ ಪ್ರಿಯಾಪ್ರಿಯರ್‍ಯಾರೂ ಇಲ್ಲವು. ಯಾರು ನನ್ನನ್ನು ಭಕ್ತಿಯೊಡನೆ ಭಜಿಸುವರೋ ಅವರಲ್ಲಿ ನಾನು ಯಾವಾಗಲೂ ಪ್ರಸನ್ನನಾಗಿ ಅವರಲ್ಲೇ ನೆಲೆಗೊಂಡಿರುವೆನು. ಮತ್ತು ಯಾರು ಭಕ್ತಿಯೊಡನೆ ಪತ್ರಪುಷ್ಪ ಫಲತೋಯಗಳನ್ನು ಅರ್ಪಿಸುವರೋ ... ಭಕ್ತಿಪೂರ್ವಕ ... ಗೀಕರಿಸಿ ... ಪ್ರಸನ್ನನಾಗುವೆನೆಂಬದಾಗಿ ತಿಳಿಸಿದಂತೆ ವ್ಯಕ್ತವಾಗುತಿದೆ. ... ಭಯಭಕ್ತಿಗಳು ... ಗಿದ್ದವೋ ಅದುವರಿಗೂ ಶ್ರೀನಿವಾಸನು ಪ್ರತ್ಯಕ್ಷನಾಗುತಲಿದ್ದನು. ಶ್ರೀ ವಿಷ್ಣುಪುರಾಣದಲ್ಲಿಯೂ ಶ್ರೀಭಾಗವತದಲ್ಲಿಯೂ ತಿಳಿಸಿರುವ ಪ್ರಕಾರ ಕಲಿಕಾಲದಲ್ಲಿ ಪ್ರಜೆಗಳೆಲ್ಲರು ... ಭಗವದ್ಭಕ್ತಿವಿಹೀನರಾಗಿ ... ಕರುತಿರುವರಾದುದರಿಂದ ಕಡೆಯಲ್ಲಿ ... ಮುಂದಲವೊಳು ವಿಷ್ಣುಕಲೆಯು ... ಗಿದ್ದು ... ಜೀವ ... ಗಳು ಅವ್ಯಕ್ತಗಳಾಗುವವೆಂಬದಕ್ಕೆ ... ಸೂಚಿಸುತ್ತದೆ. [illegible]

ಕೆಯಿಂದೊಂದಾಗಿ ಈಗ ಪ್ರಾದುರ್ಭವಾಗಿ ನವೆಯುತಲಿರುವಂತೆ ಕಾಣುತಿದೆ. ದೇವರಸ್ವತ್ತನ್ನು ಧರ್ಮಕರ್ತರಾಗಿದ್ದವರೇ ದುರ್ವಿನಿಯೋಗಪಡಿಸಲಾರಂಭಿಸಿದ್ದಕ್ಕಿದೊಂದು ಪ್ರಬಲ ನಿದರ್ಶನವಾಯಿತಷ್ಟೆ. ಅದರಿಂದೀಚೆಗೆ ಕೆಲವರು ದೇವರಹುಂಡಿಯನ್ನು ಒಡೆದು ಮುಸಾರ್ ೫೦—೬೦ ಸಾವಿರ ರೂಪಾಯಿಗಳತನಕ ಲುಟಾಯಿಸಿದರೆಂತಲೂ ಶ್ರೀಮೋಣಿಅವರು ಸತ್ತ್ಯಯಾಗಿ ಈಗಿನ ಮಹಂತರವರು ಅವರಿಗೆಲ್ಲ ಶಿಕ್ಷೆಮಾಡಿಸಿದರೆಂತಲೂ ತಿಳಿಯಲಾದೆವು. ದೇವರ ದ್ರವ್ಯವು ಸಮಸ್ಯೆಷ್ಟ ಸ್ವತ್ತಾದುದರಿಂದ ದೇವರೇ ಪುರುಷಾಕೃತಿಯಿಂದ ಫಿರ್ಯಾದಿ ಮಾಡುವತನಕ ಅವರ ಧನವನ್ನು ಯಾರು ಅಪಹರಿಸಿದಾಗ್ಯೂ ಯಾವರೀತಿಯಿಂದ ಖರ್ಚುಮಾಡಿದಾಗ್ಯೂ ಬಾಧಕವಿಲ್ಲವೆಂಬ ಬರವಸೆ ಜನರಿಗೀಗ ಸಂಪೂರ್ಣವಾಗಿರುವಂತೆ ಕಾಣುತಿದೆ. ಪರಂತು ಪ್ರತಿಮನುಷ್ಯನೂ ಅವನವನ ಜನ್ಮಾಂತರ ಕರ್ಮಸಂಸ್ಕಾರಾನುಗುಣವಾಗಿ ಕಾರ್ಯಕಾರಣ ರೂಪಗಳಾದ ಪುಣ್ಯಗಳಿಂದಲೂ, ದುಷ್ಕಾರಗಳಿಂದಲೂ ಬಹುಪ್ರಕಾರದಿಂ ಮಾಡತಕ್ಕ ಕರ್ಮಗಳಿಗೆ ಅನುಗುಣವಾದ ಫಲಗಳಂ ಆತ ನೆಟಗಾದರೂ ಅನುಭವಿಸದೆಹೋಗಲಾರನು. ಪುಣ್ಯಪಾಪಗಳತ್ಯುತ್ಕಟಗಳಾದಾಗ ಅವುಗಳ ಫಲವು ಶೀಘ್ರದಲ್ಲಿ ಅತಿತ್ವರೆಯಲ್ಲೇ ಸಿದ್ಧಿಸುವದು. ಮುಖ್ಯವಾಗಿ ಹಿಂದೂಧರ್ಮಗಳಿಗೆ ಕ್ಷೀಣದಶೆ ಸಂಭವಿಸಿ ವೇದಶಾಸ್ತ್ರಗಳಿಂದ ತಿಳಿಸಲ್ಪಟ್ಟ ವಿಷಯಗಳೊಳಗೆ ನಮ್ಮವರಿಗೆ ಭಕ್ತಿಶ್ರದ್ಧೆಗಳು ಕಾಲಕ್ರಮದಿಂ ಕಡಿಮೆಯಾಗುತ್ತ ಅನಾದಿಸಿದ್ಧಗಳಾದ ಸದ್ವ್ರತ್ತಗಳೆಲ್ಲವೂ ಬರುಬರು ಕಡೆಗೆ ಅದೃಶ್ಯವಾಗಿಹೋಗುವವೆಂಬದಕ್ಕೆ ಮೇಲೆ ನಾವು ತಿಳಿಸಿದಂತೆ ನಾನಾಪ್ರಕಾರಗಳಾದ ಸೂಚನೆಗಳು ತಲೆದೋರುತಲಿರತಕ್ಕ ಈಕಾಲದಲ್ಲಿ ಹಿಂದೂ ದೇವಸ್ಥಾನಗಳಲ್ಲಿ ಜಮಾಯಿಸತಕ್ಕ ದ್ರವ್ಯಗಳ ಅನನ್ಯವಿನಿಯೋಗಗಳಿಗೆ ಧರ್ಮಕರ್ತರೆಂಬವರಾಗಿಯೂ ಬಗನಷ್ಟಭಕ್ತರೆಂಬದಾಗಿಯೂ ಏರ್ಪಡತಕ್ಕ ಕೆಲವರು ದೈವದ್ರೋಹಿಗಳೂ, ಮಠಗಳಲ್ಲಿ ಸೇರತಕ್ಕ ಧನಸಾಧನಕ್ಕೆ ಮಠಾಧಿಪತಿಗಳೆಂದು ಹೆಸರಿಟ್ಟುಕೊಳ್ಳುವ ಬರತಕ್ಕ ಕಪಟಸನ್ಯಾಸಿಗಳೂ ಕಾರಣಭೂತರಾಗಿ ಏರ್ಪಟ್ಟಿರುವದರಿಂದ ಅವುಗಳು ಮುಂದೆ ಅವರಿಂದಲೇ ನಾಶವನ್ನೈದುವವೆಂದು ದೃಢವಾಗಿ ಹೇಳುವೆವು.

THE MAHANT'S RIGHT OVER THE TIRUPATY TEMPLE.

ಈಚೆಗೆ ತಿರುಪತಿ ಮಹಂತರವರ ಮೇಲೆ ತರಲ್ಪಟ್ಟ ಮೊಕದ್ದಮೆಯಲ್ಲಿ ಮಹಂತರವರೇ ತಿರುಪತಿ ದೇವಸ್ಥಾನಕ್ಕೆ ಯಜಮಾನರೆಂತಲೂ ಅವರ ಆದಾಯ ವ್ಯಯಗಳಿಗೆಲ್ಲ ಅವರೇ ಬಾಧ್ಯಸ್ಥರೆಂತಲೂ, ದೇವಸ್ಥಾನದ ದ್ರವ್ಯವನ್ನು ಅವರು ಇಷ್ಟಬಂದಂತೆ ವಿನಿಯೋಗಿಸಿಕೊಳ್ಳಲಿಕ್ಕೆ ಅವರಿಗೆ ಸ್ವಾತಂತ್ರ್ಯ ವುಂಟೆಂತಲೂ, ಅವರ ತರಫ ವಕೀಲರು ವಾದಿಸಿದರಲ್ಲದೆ ಅದೇ ಭಾವವು ಅನೇಕರಿಗುಂಟಾಗಿರುವಂತೆ ತಿಳಿಯಬರುತಿದೆ. ಇದು ಶುದ್ಧ ತಪ್ಪು ಅಭಿಪ್ರಾಯವೆಂಬದಂ ಮುಂದೆ ನಿರೂಪಿಸುವೆವು. ಹಿಂದೂ ದೇವಾಲಯಗಳ ಆತಳತಗಳನ್ನೆಲ್ಲವಂ ಬ್ರಿಟಿಷ ಗವರ್ನಮೆಂಟಿನವರು ತೊರೆದು ಅವುಗಳ ವಿಚಾರಣಾಧಿಕಾರವು ಯೋಗ್ಯರಾದ ಹಿಂದೂಗಳಿಗೆ ತಕ್ಕ ನಿಬಂಧನೆಗಳೊಡನೆ ಒಪ್ಪಿಸಿದರು. ಪರಂತು ಪ್ರಭುಶಕ್ತಿಯುಳ್ಳ ಗವರ್ನಮೆಂಟಿನವರು ತಮ್ಮ ಸಂಬಂಧವಂ ನಿವೃತ್ತಿಸಿಕೊಂಡಾಗ, ಹಿಂದುವೇಳ ಹಿಂದೂಗಳಿಗಾಗಲಿ, ಇತರರಿಗಾಗಲಿ, ಅವರ ಸಮುದಾಯಕ್ಕೆ ಆವಶ್ಯಕಗಳಾದ ವಿಷಯಗಳನ್ನು ಅವರ ಇಷ್ಟಾನುಗುಣವಾಗಿ ನಡೆಸಿಕೊಳ್ಳಲಿಕ್ಕೆ ಸ್ವಾತಂತ್ರ್ಯವನ್ನುಂಟುಮಾಡಿದರೆ, ಅವರಿಗೆ ಸಂತೋಷಕರವಾಗಿಯೂ ಹಿತಕರವಾಗಿಯೂ ಇರುವದೆಂಬ ಭ್ರಾಂತಿಯೊಂದು ತಲೆದೋರಲಿಕ್ಕೆ ಪ್ರೇರಕವಾಗಿ ಏರ್ಪಟ್ಟ ವಿಷಯವಾಗಿದ್ದೆಂದು ಈಗ ಪ್ರಸ್ತಾಪಿಸಲಾವಶ್ಯಕವಿಲ್ಲವು. ಪ್ರಕೃತ ವಿಚಾರಾರ್ಹವಾದ ತಿರುಪತಿ ದೇವಸ್ಥಾನದ ಆತಳತವನ್ನು ೧೮೪೩ನೇ ಇಸವಿಯಲ್ಲಿ ಶ್ರೀ ಹಾತೀರಾಂಜಿ ಮಠದ ಪೀಠಸ್ಥರಾಗಿಲ್ಲಬ್ಬರಾದ ಶ್ರೀಮಹಂತು ಸೇವಾದಾಸಜೀಯವರಿಗೊಪ್ಪಿಸಿದಾಗ ಆ ದೇವಸ್ಥಾನದ ಕೆಲಸಗಳು ಯೋಗ್ಯವಾಗಿ ಜರಗಬೇಕೆಂಬ ಅಭಿಪ್ರಾಯವೂ, ಅದರ ಸ್ವತ್ತುಗಳಿಗೆ ಯಾವ ಕಾಲದಲ್ಲಿಯೂ ಒಂದು ಕುಂದುಂಟಾಗಕೂಡದೆಂಬ ಕೋರಿಕೆಯೂ ಸರ್ಕಾರದವರಿಗೆ ಸಂಪೂರ್ಣವಾಗಿದ್ದಂತೆ ಅವರು ಧರ್ಮಕರ್ತರಿಗೆ ಮಾಡಿದ ನಿಬಂಧನೆಗಳಿಂದ ಸ್ಪಷ್ಟವಾಗುತಿದೆ. ಸದರೀ ನಿಬಂಧನೆಗಳಂ ನೋಡಿದರೆ ಮಹಂತರು ಕೇವಲ ಗವರ್ನಮೆಂಟಿನವರಿಂದ ನೌಕರರಾದ ಕಾರ್ಯನಿರ್ವಾಹಕರೆಂದೇ ಪರ್ಯವಸಾನವಾಗುತಿದೆಯಲ್ಲದೆ ಅವರಾಗಲಿ ಅವರ ಶಿಷ್ಯಪ್ರಶಿಷ್ಯರಾಗಲಿ ಸಕಲಕ್ಕೂ ಯಜಮಾನರೆಂದೇರ್ಪಡುವದಿಲ್ಲವು. ಆದುದರಿಂದ ಈಗ್ಯೆ ೪೭ ವರುಷಗಳ ಹಿಂದೆ ಗವರ್ನಮೆಂಟಿನವರು ಮಾಡಿದ್ದ ನಿಬಂಧನೆಗಳು ಈಗ ಅನೇಕರಿಗೆ ಮರೆತಿರಬಹುದಲ್ಲದೆ ಅಧುನಿಕರಿಗೆ ತಿಳಿಯದಿರಬಹುದೆಂದೆಣಿಸಿ ಸಕಲರ ತಿಳುವಳಿಕೆಯಬಗ್ಗೆ ಸದರೀ ನಿಬಂಧನೆಗಳಂ ಇದರ ಅಡಿಯಲ್ಲಿ ಪ್ರಕಟಿಸುವದಾಗಿ ತತ್ಕಾಲದಲ್ಲವು ಜನರಿಗೆ ಬಹಳ ಪ್ರಯೋಜನಕರವಾಗಿರಬಹುದೆಂದು ಭಾವಿಸುವೆವು.—

"ತಿರುಮಲೆ ತಿರುಪತಿಯಲ್ಲಿರುವ ಶ್ರೀಹಾತೀರಾಂಜೀಮಠದ ಶ್ರೀಮಹಂತು ಸೇವಾದಾಸಜೀಯವರಿಗೆ.

ದರಿನಿಲ್ಲಾ ೧೮೪೩ನೇ ಇಸವಿ ಏಪ್ರಿಲ್‌ಮಾಹೆ ೨೧ನೇ ತಾರೀಖಿನ ಸೇಂಟ್‌ಜಾರ್ಜ್ ಗವರ್ನರ್ ಬಹದೂರವರ ಮಿನಿಟ್ಸ್ ಅಫ್ ಕನ್ಸಲ್ಟೇಷನ್ ಪ್ರಕಾರ ಶ್ರೀ ತಿರುಮಲೆ ಶ್ರೀವೆಂಕಟೇಶ್ವರಸ್ವಾಮಿ, ತಿರುಪತಿ ಗೋವಿಂದರಾಜಸ್ವಾಮಿ ವಗೈರೇ ದೇವಸ್ಥಾನಗಳ ವಿಚಾರಣೆ ಪರಿಪಾಲನೆ ಮಾಡುವದಕ್ಕೆ ನಿಮ್ಮನ್ನು ವಿಚಾರಣ ಕರ್ತರನ್ನಾಗಿ ನೇಮಕಮಾಡಿ ಸದರೀ ದೇವಸ್ಥಾನದ ವಿಷಯದಲ್ಲಿ ನೀವೀಗ ನಡೆಸಿಕೊಳ್ಳತಕ್ಕಬಗ್ಗೆ ಮುಚ್ಚಳಿಕೆ ಬರೆದುಕೊಡತಕ್ಕ ಕಲಂಗಳು.

೧. ತಿರುಪತಿತಾಲ್ಲೂಕು ತಹಸೀಲ್ದಾರ್‌ಬಳಿಗೆ ನಕಲ್ ಕಳುಹಿಸಲ್ಪಟ್ಟದೆಯಾಗಿ ಅದರಲ್ಲಿ ನೀವು ಕೈಬರಹ ಮಾಡಿಕೊಡತಕ್ಕದ್ದಲ್ಲದೆ ಮುಚ್ಚಳಿಕೆಯಲ್ಲಿ ನಮೂದು ಮಾಡಿದಪ್ರಕಾರ ಸದರಿ ೧೯ ದೇವಸ್ಥಾನಗಳನ್ನು ಅವಕ್ಕೆ ಸೇರಿದ ಇತರ ವಿಷ್ಣು ದೇವಸ್ಥಾನಗಳನ್ನೂ, ಆಯಾ ದೇವಸ್ಥಾನಗಳ ಜಂಡಗಿ ಬೀಗದಕೈಗಳು ವಗೈರೇಗಳನ್ನೂ ನಿಮ್ಮ ಸ್ವಾಧೀನದಲ್ಲಿ ಕೊಟ್ಟು ರಸೀದು ತೆಗೆದುಕೊಳ್ಳುವಂತೆಯೂ, ಇನ್ನು ಕೆಲವು ತಹಸೀಲ್ದಾರ್ ಮುಜಕೂರ್ ಹೆಸರಿಗೆ ಹುಕುಂ ಕಳುಹಿಸಲ್ಪಟ್ಟದೆಯಾಗಿ ಆಪ್ರಕಾರ ನಿಮ್ಮ ಸ್ವಾಧೀನದಲ್ಲಿಟ್ಟುಕೊಂಡು ಕೈಫಿಯತ್ತನ್ನು ಹುಜೂರಿಗೆ ತಿಳಿಸುವದಲ್ಲದೆ ಕಾಲಕಾಲದಲ್ಲಿ ದೇವರಿಗೆ ಪೂಜಾ ನೈವೇದ್ಯ ಮುಂತಾದ ದೇವಸ್ಥಾನದ ಪ್ರತಿವಿಷಯದಲ್ಲಿಯೂ ಮಾಮೂಲಿಮೇರೆ ಯುಕ್ತರೀತಿಯಾಗಿ ನಡೆಸುತ ದೇವಸ್ಥಾನವನ್ನು ಪರಿಪಾಲಿಸುತಬರುವದು.

೨ನೇದು—ದೇವಸ್ಥಾನದ ಜಂಡಗಿಯನ್ನೂ ಇನ್ನೂ ದೇವಸ್ಥಾನಕ್ಕೆ ಬರತಕ್ಕ ಲೇಣೆಯನ್ನೂ ಬಂದೋಬಸ್ತಾಗಿ ಇಟ್ಟಿದ್ದು ದೇವರಿಗೆ ಯಾವಯಾವಕಾಲದಲ್ಲಿ ಅಲಂಕಾರ ಮುಂತಾದವುಗಳಿಗೆ ಏನೇನು ಆಭರಣಗಳು ಮೊದಲಾದವು ಬೇಕಾಗಿರುತವೋ ಅವುಗಳನ್ನು ಕೊಡುತಬರುವದು. ಮತ್ತು ಆಭರಣಗಳು ವಗೈರೇ ಇತರಗಳಾದ ಯಾವ ಕೆಲಸಕ್ಕೂ ಉಪಯೋಗಿಸದೆಯೂ, ಅಪಹರಿಸದೆಯೂ ಜಾಗ್ರತೆಯಾಗಿರತಕ್ಕದ್ದು.

೩ನೇದು—ಪರಷೆಯ ಜನಗಳ ದೆಸೆಯಿಂದ ಬರುವ ಕಾಣಿಕೆಗಳನ್ನೂ ಅಗ್ಗಿಷ್ಠ ವಗೈರೆ ಬಾಬತು ಹಣಗಳನ್ನೂ ಇಟ್ಟುಕೊಂಡು ತಸಡೀಕಪ್ರಕಾರವೂ ಕೆಲಸ ಕಡಮೆ ಬೀಳುವದರಿಂದ ಶಿಲ್ಕು ಇದ್ದು ಇಲ್ಲದಿರುವಕಾಲದಲ್ಲಿ ಆಗಿನ ಮೊಬಲಗಿಗೆ ರಕ್ಕಂತೆಯೂ ಸಹ ದೇವರಿಗೆ ಪೂಜಾ ನೈವೇದ್ಯ ಉತ್ಸವಗಳನ್ನೂ ಶಿಬ್ಬಂದಿಮುಂತಾದ ಖರ್ಚುಗಳನ್ನೂ ನಡಿಸುತಬರುವದಲ್ಲದೆ ಸದರೀ ದೇವಸ್ಥಾನದಲ್ಲಿ ಮರಮತ್ತ ಜಾಸ್ತೀ ಶಿಬ್ಬಂದಿ ಸಂಪ್ರೋಕ್ಷಣೆ ವಗೈರೇ ಖರ್ಚುಮಾಡಿಸಿ ದರೋಬಸ್ತು ಖರ್ಚು ಜಾತಾಮಿಕ್ಕ ಐವಜನ್ನು ಸದರೀ ದೇವಸ್ಥಾನದ ಜಂಡಗಿಯಾಗಿರತಕ್ಕದ್ದು.

೪ನೇದು—ಪರಷೆಯ ಜನಗಳದೆಸೆಯಿಂದ ಬಲಾತ್ಕಾರವಾಗಿ ಯಾದದೂ ವಸೂಲು ಮಾಡಕೂಡದು, ಆದರೆ ಈಗ ಯಾವಪ್ರಕಾರ ದೇವರದರ್ಶನದವಿಷಯದಲ್ಲಿ ಪದ್ಧತಿ ಏರ್ಪಟ್ಟಿರುತದೋ ಆಪ್ರಕಾರ ದೇವರದರ್ಶನವನ್ನಪೇಕ್ಷಿಸುವವರಿಗೆ ಯಾವಕ್ರಮವೂಯಿಲ್ಲದೆ ನಡಿಸುತಬರುವದು.

೫ನೇದು—ಸದರೀ ದೇವಸ್ಥಾನದ ಒಳಗಡೆ ಮಿರಾಶಿದಾರರಾದ ಅರ್ಚಕರು ಆಚಾರ್ಯಪುರುಷರು ವಗೈರೇರೂ, ಜಯ್ಯಂಗಾರ್‍ರು ಕ್ರಮಪ್ರಕಾರ ಅವರವರ ಕೆಲಸಗಳಲ್ಲಿ ಜಾಗ್ರತೆಯಾಗಿ ನಡೆದುಕೊಳ್ಳುತ ಬರುವವರಿಗೆ ಅವರಿಗೆ ಸಲ್ಲತಕ್ಕ ವಗದೂ ಜನಿಸಿ ರುಸುಂ ಸಹ ನಿಲ್ಲಿಸಕೂಡದು, ಮತ್ತು ಅವರುಗಳು ಈಗ ಅನುಭವಿಸತಕ್ಕ ಪ್ರಕಾರ ಗ್ರಾಮಗಳನ್ನೂ ಭೂಮಿಗಳನ್ನೂ ಜಾರೀಯಾಗಿ ನಡಿಸಿಕೊಡು ಬರತಕ್ಕದ್ದು. ಸದರೀ ಕೆಲಸಗಳಲ್ಲಿ ಅಜಾಗ್ರತೆ ಮುಂತಾದ ಸಂಗತಿಗಳು ನಡೆದಿದ್ದಲ್ಲಿ ಸರಕಾರಡೊಳಗಿದುವರಿಗೆ ಆವಿಷಯದೊಳಗೆ ಯಾವರೀತಿ ನಡೆಯುತಬಂತೋ ಅಪ್ರಕಾರ ಮುನಾಸಿಬ ನಡಿಸುತಬರತಕ್ಕದ್ದು.

೬ನೇದು—ಸದರೀ ದೇವಸ್ಥಾನಗಳ ಕೆಲಸಗಳು ಮತ್ತು ಖರ್ಚುಗಳು ಈಬಾಬತು ಲೆಕ್ಕಗಳು ಪಾಯಿಮೇಲೆ ಇಟ್ಟು ಬೇಕಾದಾಗ ತೋರಿಸುವದಕ್ಕೆ ಸಿದ್ಧವಾಗಿಟ್ಟಿರತಕ್ಕದ್ದು.

೭ನೇದು—ನಿಮಗೆ ಬೇಕಾದ ತಸಬೀಹ ಪಟ್ಟಿ, ಇನಾಂಪಟ್ಟಿ, ದೇವಸ್ಥಾನದ ಒಳಗಡೆ ನಡೆಯುವ ಕೆಲಸಗಳು ಅವರಿಗೆ ಸಲ್ಲತಕ್ಕ ರುಸುಂ ವಗೈರೇ ಪಟ್ಟಿ, ಅವರವರಿಗೆ ಸಲ್ಲುವ ಮರ್ಯಾದೆಗಳ ಮಾಮೂಲುನಾಮೆ ೧, ಅರ್ಚಕ ಕಾಣಿಕೆವಿಷಯಗಳಲ್ಲಿ ಲೆಕ್ಕಗಳೂ, ಈಪ್ರಕಾರ ೬ ಬಗೆ ಲೆಕ್ಕಗಳನ್ನು ನಕಲುಮಾಡಿಸಿ ನಿಮಗೆ ಕೊಡುವಂತೆ ತಹಸೀಲ್ದಾರ್ ಮುಜಕೂರರ ಹೆಸರಿಗೆ ಹುಕುಂ ಕಳುಹಿಸಲ್ಪಟ್ಟದೆ. ಆಮೇಲೆ ನೀವು ಕೇಳಿ ತೆಗೆದುಕೊಂಡು ಸದರಹೂ ಪ್ರಕಾರ ನಡಿಸುತ ಬರುವದಲ್ಲದೆ ಇದುವರೆಗೆ ದೇವರಿಗೆ ನಡೆಯುತ ಬರುವ ಧರ್ಮಗಂಗಾಳಗಳು, ಹಾರತಿಗಳು, ಅಬುದ ವಗೈರೆಗಳನ್ನು ನೀವು ಇದೇಮೇರೆ ನಡಿಸುಬರುವದು.

೮ನೇದು—ಉತ್ಸವಗಳು ಮುಂತಾದವು ಸದರೀ ದೇವಸ್ಥಾನಗಳ ರಿವಾಜುಗಳಿಗೆ ವಿರೋಧವಿಲ್ಲದಂತೆಯೂ ತೆಂಗಲೆ ವಡಗಲ ವಿವಾದವಿಷಯದಲ್ಲಿ ನೀವು ಪಕ್ಷಪಾತಮಾಡದೆಯೂ ನ್ಯಾಯರೀತಿಯಾಗಿ ಉತ್ಸವಗಳು ಮುಂತಾದವು ನಡಿಸುತ ಬರುವದು.

೯ನೇದು—ಸದರೀ ದೇವಸ್ಥಾನದ ಕಾರ್ಯಭಾಗ ಮುಂತಾದವನ್ನು ನಡಿಸತಕ್ಕಬಗ್ಗೆ ನೀವೂ ಬಳಿಕ ನಿಮ್ಮಸ್ಥಾನಕ್ಕೆ ನೌಕರರಾಗತಕ್ಕ ಶಿಷ್ಯರೂ ಬಾಧ್ಯಸ್ಥರಾಗಿರತಕ್ಕದ್ದು. ಸದರೀ ಶಿಷ್ಯನು ನೌಕರನಾಗುವದಕ್ಕೆ ಸಾವಕಾಶವಾದಕಾಲದಲ್ಲಿ ನಿಮ್ಮ ಮಠದ ಸಭೆಯವರು ದೇವಸ್ಥಾನಗಳ ಕೆಲಸಗಳನ್ನು ನೋಡಿಕೊಳ್ಳುತ ಬರಬೇಕು.

೧೦ನೇದು—ಮೇಲೆ ವಿವರಿಸಲ್ಪಟ್ಟಮೇಲೆ ನಡಿಸುತಬರುವದಲ್ಲದೆ ಸದರೀ ದೇವಸ್ಥಾನಕ್ಕೆ ಸಂಬಂಧವಾದ ಸಮಸ್ತ ವಿಷಯದಲ್ಲಿಯೂ ಸರಕಾರದವರಿಗೆ ಏನೂ ನಿಮಿತ್ತವಿರುವದಿಲ್ಲವಾಗಿ ಇದುವರೆಗೆ ನಡೆಸುತಬಂದ ಪದ್ಧತಿಯಮೇಲೆ ಇನ್ನು ಮೇಲೆ ನೀವು ಬಾಧ್ಯರಾಗಿರುತ ಕಾಯಿದೆಮೇರೆ ನಡಿಸುತಬರುವದು.

ದಸ್ತಾಗಾ ಚಿತ್ತೂರು, ೧೮೪೩ನೇ ಇಸವಿ, ಜುಲೈ ೧೦ನೇ ತಾರೀಖ್.

Occasional Notes
ನೈಮಿತ್ತಿಕ ವಿಷಯನ್ಯಾಸ.

The proposed voyage of the Czarwitch.—ರಷ್ಯಾ ಚಕ್ರವರ್ತಿಯವರ ಪುತ್ರರು ದಿಸ್ಸೆಂಬರ್ ೬ ಗ್ರೀಕ್ ಪ್ರಿನ್ಸ್ ಯೆಂಬವರೊಡನೆಯೂ ಮುಂದಿನ ಸುತ್ತಲು ಸಂಚರಿಸಿ ನೋಡಬೇಕೆಂಬಕುತೂಹಲ ವುಳ್ಳವರಾಗಿದಾರೆಂದು ರಷ್ಯಾ ಆಸ್ಥಾನ ಮಂಡಲಿಯೊಳೊಂದು ಪ್ರವಾದವುಂಟಾಗಿದೆ. ಪರಂತು ಈ ವೃತ್ತಾಂತವು ಮುಂದೆ ದೃಢಪಡಬೇಕಾಗಿರುತಿದೆ.

Judicial Commissioner of the Central Provinces.—ಮಧ್ಯಪ್ರಾಂತ್ಯಗಳ ಜ್ಯುಡಿಷಲ್ ಕಮಿಷ್ನರರಾದ ಮ್ಯ|| ಆರ್. ಜೆ. ಕ್ರಾಸ್ ವೈಟ್ ಯವರು ಪ್ರಿವಿಲೀಜ್ ರಜಾಮೇಲೆ ಗೈರಹಾಜರಾಗಿರುವಕಾಲದಲ್ಲಿ ಅವರ ಕೆಲಸವನ್ನು ಆಕ್ಟಿಂಗಾಗಿ ನೋಡತಕ್ಕಬಗ್ಗೆ ಬಂಗಾಲ ಸಿವಿಲಸರ್ವಿಸ್ಸಿಗೆ ಸೇರಿದ ಮಿ|| ಜೆ. ಡಬ್ಲ್ಯು ನೀಲ್ ಯೆಂಬವರು ನೇಮಕರಾಗಿದಾರೆಂದು ತಿಳಿಯಲಾದೆವು.

Dinner to Lord Reay.—ಮುಂಬೈ ಗವರ್ನರರಾದ ಲಾರ್ಡ್ ರೇಯವರು ಈವಾರದಲ್ಲಿ ಸ್ವದೇಶಕ್ಕೆ ಪ್ರಯಾಣವಾಗುವರಾದುದರಿಂದ ಅವರು ಸ್ವದೇಶವು ತಲಪಿದಕೂಡಲೇ ಅವರ ರಾಜಕೀಯ ಮಿತ್ರರೆಲ್ಲರೂ ಸೇರಿ ಅವರಿಗೆ ಔತನಮಾಡಿಸಬೇಕೆಂಬ ಸಂಕಲ್ಪವುಳ್ಳವರಾಗಿದಾರೆಂತಲೂ, ಆಕಾಲದಲ್ಲಿ ಅರ್ಲ್ ಆಫ್ ಕಿಂಬರ್ಲೀಯವರು ಅಗ್ರಾಸನವ ವಹಿಸುವವರಾಗಿದಾರೆಂತಲೂ ಕೇಳುತ್ತೇವೆ. ಲಾರ್ಡ್ ರೇಯವರು ತಮ್ಮ ಪ್ರಭುತ್ವಕಾಲದಲ್ಲಿ ಮುಂಬೈ ಪ್ರೆಸಿಡೆನ್ಸಿಯ ಜನರ ವಿಷಯದಲ್ಲಿ ವ್ಯಕ್ತಪಡಿಸಿದ ಪ್ರೀತಿ ಗೌರವಗಳು ಚಿರಸ್ಮರಣೀಯಗಳಾದವೆಂಬದರಲ್ಲೇನೂ ಸಂಶಯ ವಿರಲಾರದು.

A mysterious personage.—ಕಲಿಕತ್ತೆಯಲ್ಲಿ ಪ್ರಸಿದ್ಧವಾಗಲ್ಪಡುವ ಇಂಗ್ಲಿಷವಾರ್ತಾಪತ್ರಿಕೆಗೆ ಒಬ್ಬನು ಬರೆಯುತ್ತಾನೇನೆಂದರೆ- ಕಳೆದವಾರದಲ್ಲಿ ಕಲ್ಕತ್ತೆಗೆ ಒಬ್ಬ ಹೆಂಗಸುಬಂದಿದ್ದಳು, ಅವಳು ಯೆಲ್ಲಿಂದಬಂದವಳೋ ಯಾರಿಗೂ ತಿಳಿಯದು, ಪರಂತು ಅವಳು ಕೈಯಲ್ಲಿ ವಿಶೇಷವಾಗಿ ದ್ರವ್ಯವಿದ್ದಂತೆ ಕಾಣುತಿದೆ. ಅವಳು ಬೀದಿಯಲ್ಲಿ ಸಂಚರಿಸುವಕಾಲದಲ್ಲಿ ಕಾಸೂ ಎರಡಾಣೆ ನಾಣ್ಯಗಳೂ ಚೆಲ್ಲುತಹೋದಳು. ಒಂದುಸಂದರ್ಭದಲ್ಲಿ ಧರ್ಮ ತಲಾಬಳ ದಾರಿಯಲ್ಲಿ ಹೋಗುತಲಿದ್ದ ಒಬ್ಬಾತನಿಗೆ ಒಂದು ಚಿನ್ನದಗಡಿಯಾರವನ್ನೂ ಸರಪಣಿಯನ್ನೂ ಕೊಟ್ಟಂತೆ ಕೇಳುತ್ತೇನೆ. ಮತ್ತೊಂದು ಸಂದರ್ಭದಲ್ಲಿ ಕೆಲವು ನಾಲ್ಕಾಣೆ ನಾಣ್ಯಗಳನ್ನು ಒಬ್ಬ ಪೋಲೀಸ ದರೋಗನಿಗೆ ಕೊಟ್ಟುಹೋದಳು. ಪರಂತು ಅವಳು ಯಾವಳೋ ಯೆಲ್ಲಿಂದಬಂದವಳೋ ಅದ್ಯಾಪಿ ತಿಳಿಯಬರಲಿಲ್ಲವು. ಅವಳು ಈಚೆಗೆ ಕಣ್ಮರೆಯಾದಳು, ಎಂಬದು.

Shaving of Hindu widows.—ಹಿಂದೂ ವಿಧವಾ ಸ್ತ್ರೀಯರಿಗೆ ವಪನ ಮಾಡಿಸಕೂಡದೆಂಬ ವಿಷಯದಲ್ಲಿ ಅನೇಕರು ನಾನಾವಿಧವಾಗಿ ಪ್ರಯತ್ನಪಟ್ಟು ಅದಕ್ಕಾಗಿ ಶಾಸ್ತ್ರ ವಚನಗಳನ್ನು ವೃದ್ಧಾಚಾರವನ್ನು ವ್ಯಕ್ತಪಡಿಸಿ ಯುಕ್ತಿವಾದದಿಂ ಜನರನ್ನು ಒಡಂಬಡಿಸುತಲಿದ್ದಾರೆ. ಹೀಗಿದ್ದಾಗ್ಯೂ ಅವರ ಪ್ರಯತ್ನವು ಸಕಲತ್ರ ಕಾರ್ಯಕಾರಿಯಾಗಲಿಲ್ಲವು. ಮುಂಬೈ ಪಟ್ಟಣದಲ್ಲಿ ಹಿಂದೂಗಳೆಲ್ಲರೂ ಇಂಥಾ ಭಯಂಕರವಾದ ದುಷ್ಕೃತ್ಯವು ತಮ್ಮಲ್ಲಿ ಯಾರೂ ನಡೆಸಕೂಡದೆಂಬದಾಗಿ ಸಭೆ ಸೇರಿ ಕಟ್ಟುಮಾಡಿರುವಂತೆ ಇಂದುಪ್ರಕಾಶ ಪತ್ರಿಕೆ ತಿಳಿಸುತಿದೆ. ಶಾಸ್ತ್ರವಾಗಲಿ, ಆಚಾರವಾಗಲಿ, ರದ್ದುಗಳೇಕಾದರೆ ಸಂಪೂರ್ಣವಾದ ದಯಾನುರಾಗಗಳೇ ಕಾರಣವಾಗಬೇಕಲ್ಲದೆ ಮತ್ತ್ಯಾವದರಿಂದಲೂ ಸಾಧ್ಯವಾಗಲಾರದು. ಸಹಗಮನ ಮೊದಲಾದ ಕ್ರೂರಕೃತ್ಯಗಳಂತೆ ಇದೂ ಒಂದು ಕಾಲದಲ್ಲಿ ಜನರಿಗೆ ವೈಲಕ್ಷಣ್ಯಾ ವೃದ್ಧಿಯಾಗುವಂತೆಲ್ಲ, ತಗ್ಗಿಹೋಗಬಹುದು.

Appointment of a Councillor.—ಟೀಪೂಸುಲ್ತಾನರ ಪ್ರಪೌತ್ರರಲ್ಲೊಬ್ಬರು ಮದರಾಸು ಕೌನ್ಸಿಲಮೆಂಬರಾಗುವರಾಗಿ ನೇಮಕರಾದಂತೆ ಮುಂಬೈ ಇಂದುಪ್ರಕಾಶಪತ್ರಿಕೆ ತಿಳಿಸುತಿದೆ. ಮದರಾಸುಕೋಟೆಯಲ್ಲಿ ಟಿಪ್ಪೂಸುಲ್ತಾನರು ತಮ್ಮ ಮಕ್ಕಳನ್ನು ಲಾರ್ಡ ಕಾರ್ನ

ಪೋಲೀಸ್ ಸಾಹೇಬರವರಿಗೆ ಗಿರವಿಯಾಗಿ ಒಪ್ಪಿಸಿದ ಚಿಕ್ಕ ಬಾಬು ಪ್ರಕಟವಾಗಿ ಕಂಡು ಬರುವದರಿಂದ ಅದು ಸದರೀ ಕೌನ್ಸಿಲರು ಆಗಿಂದಾಗ್ಯೆ ನೋಡುತಲಿರುವರಾದರೆ ತನ್ಮೂಲಕ ಅವರಿಗೆ ಬಹಳ ಮಟ್ಟಿಗೆ ಜಾಗರೂಕತೆಯುಂಟಾಗಬಹುದೆಂದೆಣಿಸುತ್ತೇವೆ. ಕಾಲವು ಅನುಕೂಲಿಸಿದರೆ ಅವರೇ ಮುಂದೆ ಮೈಸೂರು ಸಂಸ್ಥಾನದ ಕೌನ್ಸಿಲ್ ಮೆಂಬರಾಗಿ ಸಹ ಏರ್ಪಡಬಹುದು. ಆಗ್ಯೆ ತಮ್ಮ ಪೂರ್ವಿಕರು ಈ ಸಂಸ್ಥಾನದಲ್ಲಿ ಜರಿಗಿಸಿದ ಕೃತ್ಯಗಳ ಲಾಂಛನಗಳನ್ನು ಇಲ್ಲಿಯೂ ಬಹಳ ವಾಗಿ ನೋಡಬಹುದು. ಏತೇನ ಮುಸಲ್ಮಾನ ಪ್ರಭುಗಳು ಇಂತಹಗಳನ್ನು ನೋಡಿದಹಾಗೆಲ್ಲ ವಿದ್ಯಾವಿವೇಕ ಸಂಪನ್ನರಾಗುವವರಲ್ಲೇನೂ ಸಂದೇಹವಿಲ್ಲವು.

Hindu Religious Congress.—ಈಗ ನಾಲ್ಕೈದು ವರುಷಗಳ ಮೊದಲು ಕಾಂಗ್ರೆಸಿನ ವಿಷಯ ವಿಚಾರದ ಬಗ್ಗೆ ನ್ಯಾಷನಲ್ ಕಾಂಗ್ರೆಸ ವೆಂಬದಾಗಿಯೂ, ಎರಡು ಮೂರು ವರುಷಗಳ ಮೊದಲು ಹಿಂದೂ ಸಮಯಾಚಾರ ಪುನರ್ವಿಮರ್ಶೆಯ ಬಗ್ಗೆ ಸೋಶಿಯಲ್ ಕಾಂಗ್ರೆಸ್ ಎಂಬದಾಗಿಯೂ ಎರಡು ಸಭೆಗಳು ಏಕಕಾಲದಲ್ಲಿ ಪ್ರತಿ ವರುಷದ ಡಿಸೆಂಬರ್ ತಿಂಗಳ ಅಂತ್ಯಭಾಗದಲ್ಲಿ ಆಯಾ ಪ್ರೆಸಿಡೆನ್ಸಿ ರಾಜಧಾನಿ ಪಟ್ಟಣಗಳಲ್ಲಿ ಜರುಗುತಲಿರುವ ಅತಿ ಪ್ರಸಿದ್ಧವಾಗಿದೆಯಷ್ಟೆ. ಇದೇ ಕ್ರಮವನ್ನನುಸರಿಸಿ ಹಿಂದೂ ಮತಾಚಾರ ವಿಮರ್ಶಕ ಸಭೆ ಎಂಬ ಪ್ರತ್ಯೇಕ ಸಭೆಯನ್ನು ಬರುವ ಶರವ್ಮತಿವಿನಲ್ಲಿ ಜೋಧಪುರದಲ್ಲಿ ಜರಿಗಿಸಬೇಕೆಂಬದಾಗಿ ಏರ್ಪಾಡುಮಾಡಿದವರು ಅಪೇಕ್ಷಿಸಿ ಸದರೀ ನೂತನ ಸಭೆಯಲ್ಲಿ ತಮ್ಮನ್ನು ಅಭ್ಯಾಗತರನ್ನಾಗಿ ಅಂಗೀಕರಿಸಬೇಕೆಂಬದಾಗಿ ಕೋರಿರುವಂತೆ ತಿಳಿಯಬರುತಿದೆ. ವಿಚಾರಾರ್ಹವಾಗಿರುವ ವಿಷಯವು ಮಹಸಂಬಂಧವಾದವ್ದಾಗಿಯೂ, ವಿಚಾರಸ್ಥಾನವು ಮಹಕ್ಷೇತ್ರವಾಗಿಯೂ, ವಿಷಯ ವಿಚಾರಕರು ಅನಾಸ್ಥಾಜ್ಞರಾದ ವಿಜಾತೀಯರಾಗಿಯೂ, ಇರುವದರಿಂದ ತತ್ಕಾಲದಲ್ಲಿ ವಿಚಾರವೇಬ ಸಂಭಾಷಣೆಗಳು ಯಾವ ರೀತಿಯಲ್ಲಿ ನಡೆಯುವವೋ ಎಲ್ಲಿ ವಾಸಿಸು ಎಷ್ಟು ಗುವವೋ ಎಂದು ಜನಸಮುದಾಯ ಮಾನ್ಯ ವಿಷಯಕವಾದ ವಿಚಾರಕ್ಕೆ ರಾಜಕೀಯ ವಿಷ್ಲೇಷಣೆ ಸಾಮರಸ್ಯಕಿಯನ್ನು ಪರ್ಯಾಲೋಚಿಸುವ ಅಂತ ಸಂದೇಹಿಸಬೇಕಾದ್ದಾಗಿರುತಿದೆ.

Natives of India now in England.—ಕಸ್ತಲದೊಳು ಇಂಗ್ಲಾಂಡಿನಲ್ಲಿ ಎಷ್ಟೋ ಕಾರ್ಯವಾಗಿಯೂ ವಿದ್ಯಾಭ್ಯಾಸೋದ್ದೇಶಗಳಿಂದಲೂ ಪ್ರವಾಸಿಗರಾಗಿ ಹಿಂದೂಗಳ ಲೆಕ್ಕವನ್ನು ಶೇಖರಿಸಿರುವಾಗ ನ್ಯಾಷನಲ್ ಇಂಡಿಯನ್ ಅಸೋಸಿಯೇಷನ ಸಂಘದವರು ಪ್ರಕಟಿಸಿರುತ್ತಾರೆ, ಹ್ಯಾಗೆಂದರೆ.—ಈಗ್ಯೆ ಮೂರುವರುಷಗಳಿಂದ ಸುಮಾರು ರಾಜ್ಯದಲ್ಲಿ ೧೮೦ ಮಂದಿ ಹಿಂದೂಗಳು ವಾಸವಾಗಿದ್ದಂತೆ ಗೊತ್ತಾಗಿತ್ತು. ಈಗ ಲಂಡನಿನ ಕೆಲವರು ಪಾರಸಿಗಳು ಮತ್ತು ಹಿಂದೂ ಸ್ತ್ರೀಯರಲ್ಲದೆ ೨೦೭ ಜನ ಇಂಡಿಯನ್ನರು ವಾಸವಾಗಿದ್ದಾರೆ. ಮೇಲ್ಕಂಡ ೨೦೭ ಮಂದಿಯಲ್ಲಿ, ೫೩ ಜನ ಬಂಗಾಳದಿಂದಲೂ, ೪೩ ಜನ ಮುಂಬಯಿಯಿಂದಲೂ, ೧೩ ಜನ ಮದರಾಸಿನಿಂದಲೂ, ೩೩ ಜನ ವಾಯವ್ಯ ದೇಶಗಳಿಂದಲೂ, ೩೧ ಜನ ಪಂಜಾಬಿನಿಂದಲೂ, ಐವರು ಮಧ್ಯ ರಾಷ್ಟ್ರಗಳಿಂದಲೂ, ೧೦ ಮಂದಿ ಹೈದರಾಬಾದಿನ ದೇಶ, ಸಿಂಧ, ಕಾಠೇವಾಡಿಯಿಂದಲೂ, ಮೂವರು ಬರ್ಮಾ ದೇಶದಿಂದಲೂ, ನಾಲ್ವರು ಬ್ರಿಟಿಷ್ ದೇಶದಿಂದಲೂ ಹೋಗಿ ಸೇರಿಸಿರುತ್ತಾರೆ. ಮುಂಬಯಿ ಪ್ರೆಸಿಡೆನ್ಸಿಯಿಂದ ಹೋಗಿರುವವರ ಸಂಖ್ಯೆಯು ಇತರ ದೇಶಗಳ ಅಧಿಕವಾಗಿರುತಿದೆ. ಅಲ್ಲಿನ ಸಂಖ್ಯೆಯನ್ನೂ ದೇಶದ ವೈಶಾಲ್ಯವನ್ನೂ ನೋಡಲಾಗಿ ಮದರಾಸಿನವರ ಸಂಖ್ಯೆಯು ಅಲ್ಪವೆಂದೇ ಹೇಳಬೇಕಾಗಿದೆ. ಇದಕ್ಕೆ ಆ ಜನರ ನಾಗರಿಕತಾವಿಹೀನತೆಯೋ ಮುಖ್ಯಕಾರಣವೆಂದು ಭಾವಿಸುತ್ತೇವೆ. ಅಂದರೆ ಪೂರ್ವ ಸಂಪ್ರದಾಯಗಳಲ್ಲಿ ತ್ಯಾಜ್ಯವನ್ನು ಸಂಪೂರ್ಣವಾಗಿ ಇನ್ನು ಮು

ಟ್ಟದಿರುವವರೇ ವೈಲಕ್ಷಣ್ಯಾಭಿವೃದ್ಧಿ ಅವರಿಗೆ ಬಾಧಕಸಾಮಗ್ರಿಯಾಗಿ ಏರ್ಪಟ್ಟಿದೆ.

Sir Madava Row and the Congress.—ರಾಜಾ ಸರ್ ಟಿ. ಮಾಧವರಾಯರವರು ಇದುವರಿವಿಗೂ ನ್ಯಾಷನಲ್ ಕಾಂಗ್ರೆಸ್ಸಿನ ಪ್ರಯತ್ನೋದ್ದೇಶಗಳಿಗೆ ಅನುಕೂಲರಾಗಿದ್ದರೆಂಬ ವಿಷಯವು ಅವರ ಸಂಭಾಷಣೆಗಳಿಂದಲೂ, ಲೇಖನಗಳಿಂದಲೂ ವ್ಯಕ್ತವಾಗಿತ್ತು. ಈಚೆಗೆ ಅವರಿಗೆ ವಯಃ ಪ್ರಯುಕ್ತವಾದ ಮನಃಸ್ವೈರ್ಯವು ತಪ್ಪಲಾರಂಭಿಸಿದ್ದರಿಂದ ಅವರಿಗೆ ತಮ್ಮ ಅಭಿಪ್ರಾಯಗಳಲ್ಲಿರತಕ್ಕ ಪೂರ್ವೋತ್ತರವಿರುದ್ಧಾಂಶಗಳು ಗೊತ್ತಾಗದೆ ಇಂದವು. ಈಚೆಗೆ ಸದರೀ ವೃದ್ಧರಾಜರು ನ್ಯಾಷನಲ್ ಕಾಂಗ್ರೆಸ್ಸಿನ ಮದರಾಸ್ ಸ್ಟ್ಯಾಂಡಿಂಗ್ ಕಮಿಟಿಯ ಸೆಕ್ರೆಟರಿಯವರಿಗೆ ಇದರಡಿ ಕಂಡಂತೆ ಕಾಗದ ಬರೆದಿರುತ್ತಾರೇನಂದರೆ—"ಅಯ್ಯಾ, ನಾನು ಮದರಾಸ್ ಸ್ಟ್ಯಾಂಡಿಂಗ್ ಕಮಿಟಿಯ ಮೆಂಬರ ಸ್ಥಾನದಿಂದ ನಿವೃತ್ತನಾಗಬೇಕೆಂದಪೇಕ್ಷಿಸುತ್ತೇನೆ. ಸದರೀ ಸಭೆಯ ಮೆಂಬರ್‌ಗಳ ಪಟ್ಟಿಯಿಂದ ನನ್ನ ಹೆಸರನ್ನು ಪಜಾ ಮಾಡುವದರ ಮೂಲಕ ಮೇಲ್ಕಂಡ ನನ್ನ ಕೋರಿಕೆಯನ್ನು ಸಫಲಗೊಳಿಸಬೇಕೆಂದು ಪ್ರಾರ್ಥಿಸುತ್ತೇನೆ." ಎಂಬದು. ಇದರಿಂದ ಸರ್ ಮಾಧವರಾಯರವರ ಅಂತರವಾದ ಉದ್ದೇಶವು ಸಹಾ ನೇರವಾಗಿ ಸ್ಪಷ್ಟವಾಗದಿರುವದಲ್ಲದೆ ಕೇವಲ ವಾರ್ಧಕ್ಯರಾಗಿಯೂ ಐಹಿಕ ಸುಖ ಸಂತೋಷಗಳನ್ನು ಚೆನ್ನಾಗಿ ಅನುಭವಿಸಿದವರಾಗಿಯೂ ಇರತಕ್ಕವರಿಗೆಲ್ಲ ಅಭ್ಯಾಸ ಸ್ವಭಾವ ಲೋಕಾಪವಾದವು ತಪ್ಪದಿದ್ದರೆ ಕೇವಲ ನಿಷ್ಪ್ರಯೋಜನವಾಗಿ ದೇಶಕ್ಕೆ ಮತ್ತಾರು ಏನುಪಕಾರಮಾಡತಕ್ಕವರು? ನಾವರಿಯೆವು. ಪ್ರಾಯಶಃ ಸರ್ ಮಾಧವರಾಯರವರು ಪ್ರಜಾಹಿತವಾದ ಮಹಾರಾಜ ಸಭೆಯಾದ ಕಾಂಗ್ರೆಸ್ಸಿನ ಪ್ರಜಾಪಕ್ಷದಲ್ಲಿ ನಿರೀಕ್ಷೆ ಸಂಶಯವುಳ್ಳವರು ತೋರುವದಾಗಿ ಒಂದು ದಿವಸ ಮದರಾಸ್ ಪತ್ರಿಕೆ ತಿಳಿಸುವದು ಅಸಹಜವೆಂದು ನಾವು ಭಾವಿಸಲಾರೆವು.

A Brahmin embracing Mohammedanism.—ಮದರಾಸ್ ಸ್ಟ್ಯಾಂಡರ್ಡ್ ಪತ್ರಿಕೆಯ ವರದಿಗಾರರು ಇದರಡಿ ಕಂಡಂತೆ ಬರೆಯುತ್ತಾರೆ.—ಕುಂಭಕೋಣದ ಸಮೀಪದಲ್ಲಿರುವ ಗ್ರಾಮದ ಬ್ರಾಹ್ಮಣನೊಬ್ಬನು ಮಹಮದೀಯ ಮತಸ್ವೀಕಾರ ಮಾಡಿದನೆಂಬ ಸುದ್ದಿಯೊಂದು ಈಚೆಗೆ ನಮಗೆ ತಲುಪಿದೆ. ಅವನು ಒಬ್ಬ ಪ್ರಸಿದ್ಧ ವಿದ್ವಾಂಸನ ಮಗನು. ತನ್ನ ತಂದೆಯು ಗತಿಸಿದ ನಂತರ ತನ್ನ ಕುಟುಂಬದವರನ್ನು ಪೋಷಿಸಿಕೊಳ್ಳುವದು ಕಷ್ಟವಾಗಿ, ತನ್ನ ತಾಯಿಯು ತನ್ನ ಕುಮಾರನನ್ನು ಮದುವೆ ಮಾಡದೆ ಈ ಪ್ರಕಾರ ಬಿಟ್ಟಿದ್ದಲ್ಲದೆ ಅವನನ್ನು ಕಳೆದುಕೊಂಡು ಅನಾಥೆಯಾಗಿ ವಿಪತ್ತಿನಲ್ಲಿ ಕಂಡಿದ್ದನು. ವಿಮತಾವಲಂಬಿಯಾದ ಬ್ರಾಹ್ಮಣನು ನಾನಾವಿಧವಾಗಿ ಪೀಡಿಸಿ ಮನೆಗೆ ಬರುವಂತೆ ಕರೆದನು. ಇವರು ಅವನು ತನ್ನ ಹೊಸಮತದಲ್ಲಿ ದೃಢವಾದ ನಂಬಿಕೆಯುಳ್ಳವನಾಗಿದ್ದರೂ ಯಾವ ತೊಂದರೆಯೂ ಆಗಲಿಲ್ಲವು. ಈಗ ಜಾತಿಭ್ರಷ್ಟನಾದವನಿಗೂ ಜನ್ಮಾಂತರ ಮಹಮದೀಯನಿಗೂ ಯಾವ ವ್ಯತ್ಯಾಸವೂ ಇರುವದಿಲ್ಲವು. ನೂತನನು ತನನ್ನವಲಂಬಿಸುವಬಳಿಕ ತನು ತಿರಸ್ಕೃತ್ಯಾ ಬ್ರಾಹ್ಮಣರ್ ಎಂಬದಾಗಿ ಅವನಿಗೆ ನಾಮಕರಣವೂ, ಸುನ್ನತಿ ವಗೈರೆ ಇತರ ಕರ್ಮಗಳೂ ಮಾಡಲ್ಪಟ್ಟಿವೆ. ಈಗ ಅವನು ಆ ಮತ ಗ್ರಂಥಾವಲೋಕನದಲ್ಲೇ ನಿರತನಾಗಿರುತಲಿದಾನೆ. ಈಗ್ಯೆ ಎರಡು ತಿಂಗಳ ಹಿಂದೆ ಈ ಬ್ರಾಹ್ಮಣನು ಸ್ವಮತವನ್ನು ಬಿಟ್ಟು ಮಹಮದೀಯ ಮತವನ್ನವಲಂಬಿಸಿದನು. ಅವನು ಬಂದು ಹೊಸಮತದವನ್ನು ನಂಬಿ ಅವಲಂಬಿಸಿದಂದಿನಿಂದ ಬ್ರಾಹ್ಮಣರ ಹಿಂಸೆಗಳಿಗೆ, ಅವಮಾನ ಕ್ಷೋಭೆಗಳಿಗೆ, ಮಹಮದೀಯ ಮತಕ್ಕೆ ಸೇರಿದನೆಂದು ಭಾವಿಸಬೇಕಾದವು. ಅವನ ಕೇವಲ ಮುಸಲ್ಮಾನನಾಗುವದೇ ಆಸಕ್ತ ಮನಸ್ಸಿನವನಂತೆ ತೋರುತಿ ದೆ. ಈ ರೀತಿ ಜಾತಿಭ್ರಷ್ಟರಾಗುವವರಿಗೆ ಪ್ರ

ವೃತ್ತವೇ ಎರಡು ಮತವನ್ನೂ ತೂಕ ಮಾಡಿ, ಪರಸ್ಪರ ತಾರತಮ್ಯವನ್ನು ಕಂಡುಕೊಂಡನು, ಎಂಬದು." ಇಂದು ಮರೆಸಬಿಟ್ಟು ಬೇರೊಂದು ಮತಕ್ಕೆ ಅಧ್ಯಸ್ತವಾಗುವ ಮತ್ತು ಅಜ್ಞಾನವಾದ ಮುಕ್ತಿ ಯೆಂಬ ಯೆರಡಕ್ಷರಗಳನ್ನಾಡಿಸಿ ಬೋಧಗುತ್ತಾರೆಂದು ಹೇಳುವದು ಕುದ್ದಾಂಗ ಸರಿಯಲ್ಲವು. ಮತ್ತು ಈ ಪ್ರಪಂಚದೊಳಗಿರುವ ಸಕಲ ಮತಗಳೂ ಯುಕ್ತಿ ಕಲ್ಪಿತಗಳೆಂಬ ನಂಬಿಕೆಯುಂಟಾದರೆ ಅಂತವರಿಗೆ ಸ್ವಪರ ಭೇದಗಳೇನೂ ಇರಲಾರವು.

LOCAL AND PROVINCIAL NEWS.

ಒಳದೇಶ ಮತ್ತು ತಾಲ್ಲೂಕ್ ಜಾತ್ಯ ವೃತ್ತಾಂತಗಳು.

Revenue Probationer.—ಚೀಫ್ ಜಡ್ಜಿಯವರಾದ ಮಿಸ್ಟರ್ ಬ್ರ್ಯಾಮರ್‌ಯವರ ಪುತ್ರರು ಬ್ರ್ಯಾಮರ್ ಸಾಹೇಬರೇ ಯಷ್ಟೆ. ಇವರಿಗೆ ರೆವಿನ್ಯು ಪ್ರೊಬೇಷನರ್ ಕೆಲಸವಾದಂತೆ ತಿಳಿಯಬರುತಿದೆ. ಇವರು ಯೂರೋಪಿಯನಾದದರಿಂದ ರಕ್ಷಣೆಯು ಬಳಿಕೇ ಕೊಡಲ್ಪಡಬಹುದು. ಯೂರೋಪಿಯನ್ನರು ಸಹ ನೇಟಿವ್‌ಗಳ ತಾಬೇದಾರಿಗೊಳಪಡತಕ್ಕ ಕಾಲವಿಪ್ಪತ್ತು ವಾಯಿತು.

P. W. Account Department.—ಮರಮ್ಮತಿ ಇಲಾಖಾ ಲೆಕ್ಕಗಳ ಎಗ್ಜಾಮಿನರಾದ ಮಿಸ್ಟರ್ ಸಿಂಡಿ ಜಾರ್ಜ್ ಒಕ್ಕರ್ಡಯವರ ರಜವ ಮಾಡೀಮಾಡಿಕೊಂಡ ಗುರ್ರೇತಾರೀಖ ಆಗಾಯಿತು. ೪೦೦ ರೂಪಾಯಿಗಳಿಂದ ಐನ್ನೂರು ರೂಪಾಯಿಗಳವರೆಗೆ ಜಾಸ್ತಿ ಮಾಡಲ್ಪಟ್ಟಂತೆ ಕೇಳುತ್ತೇವೆ. ದೊಡ್ಡ ಉದ್ಯೋಗಸ್ಥರ ಲಾಭವನ್ನು ಗವರ್ನಮೆಂಟವರು ನೋಡುವಹಾಗೆಯೇ ತುರ್ಮಾ ತಾಬೇದಾರಿ ನೌಕರರ ಕ್ಷೇಮಚಿಂತನೆಯನ್ನು ಯಾರಿಗೂ ಬೇಕಾಗಿಲ್ಲವು.

Departure.—ಈಗ ಬಿಸಲು ದಿನೇ ದಿನೇ ಅಧಿಕವಾಗುತಲಿರುವದರಿಂದ ಕರ್ನಲ್ ಸಿ.ಓ.ಬಿ ಪಸಿ ಸೇಂಟ್‌ಜಾರ್ಜ್, ಡಾಕ್ಟರ್ ಮೆಗ್ಗಾನ್, ಮೇಜರ್ ಮ್ಯಾಕಿಂಟೈರ್, ಚೀಫ್ ಜಡ್ಜಿಯವರಾದ ಮಿ.ಸಿ.ಜೆ. ಬ್ರ್ಯಾಮರ್ ವಗೈರೆ ಯೂರೋಪಿಯನ್ ಆಫಿಸರ್‌ಗಳೆಲ್ಲರೂ ಕಚೇರಿಗಳನ್ನು ಮುಚ್ಚಿ ಬಿಟ್ಟು ನೀಲಗಿರಿಗೆ ಹೋಗುವರು. ಬಿಸಲಿಗೆ ಅಂಜುವರಾ ಯೂರೋಪಿಯನ್ನರಿಗೆ ಇಂಥ ಪ್ರಯೋಜನ ಸಹ ಪ್ರಾಪ್ತವಾಗಿದೆ ಇನ್ನು ಹೇಳಬೇಕೇನು?

Conviction.—ಶ್ರೀರಂಗಪಟ್ಟಣದ ಸ್ಟೇಷನ್ ಮ್ಯಾಸ್ಟರಾಗಿದ್ದ ಹೊಸಕೋಟೆ ತಿಪ್ಪಯ್ಯನೆಂಬವನು ಈಗ್ಯೆ ಕೆಲವು ತಿಂಗಳ ಹಿಂದೆ ತನ್ನ ಸ್ಟೇಷನಿಗೆ ಬಂದ ಜನರ ಸಾಮಾನುಗಳನ್ನು ವಿಕ್ರಯಿಸಿ ಸ್ವೋಪಯೋಗ ಪಡಿಸಿಕೊಂಡಿದ್ದ ಕಾರಣ ಆತನಿಗೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ೬ ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದರೆಂದು ತಿಳಿಯಬರುತಿದೆ. ರೈಲ್ವೆ ಇಲಾಖೆಯಲ್ಲಿ ಜರುಗುವ ಅಕ್ರಮಗಳು ಹೊರಗಾಗುವದೆಂಬ ಜ್ಞಾನವು ಅಲ್ಲಿನ ನೌಕರರಿಗಿದ್ದರೆ ಇಂತಾ ಕೃತ್ಯಗಳು ಸ್ವಲ್ಪವಾದರೂ ನಡೆಯಲಾರವು.

Improvement of Bangalore Fort.—ಈ ಪುರದ ಕೋಟೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಮೈಸೂರು ಗವರ್ನಮೆಂಟವರು ಸಕಲಸನ್ನಾಹಗಳನ್ನು ಮಾಡುತಲಿದಾರೆ. ದಕ್ಷಿಣ ಪಶ್ಚಿಮ ಗೋಪುರಗಳಲ್ಲಿ ರಿಪೇರಿ ಮಾಡಲ್ಪಟ್ಟಿವೆಯಲ್ಲದೆ ಬಂದೂಕುಗಳುಳ್ಳ ಟೀಪಸ್ತಂಭವೊಂದು ಮಧ್ಯದಲ್ಲಿ ಸ್ಥಾಪಿಸಲ್ಪಟ್ಟಿದೆ. ಪೂರ್ವದ ಅರಮನೆಯು ಮರಮ್ಮತು ಬಣ್ಣ ಹಾಕಲ್ಪಟ್ಟಿದೆ. ಹಳೇಮನೆಗಳೆಲ್ಲವೂ ಕೆಡವಲ್ಪಡುತಲಿವೆ. ಅಲ್ಲಿ ಹೊಸದಾಗಿ ಮನೆಗಳು ಕಟ್ಟಲ್ಪಡತಕ್ಕವರಿಗೆ ಪಾಲಿಜಬರ್ದಸ್ತ ಕೊಡಲ್ಪಡುವದೆಂದು ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ತಿಳಿಸುತಿದೆ.

The Weather.—ಆ ಪುರದಲ್ಲಿ ಪ್ರತಿ ಮನೆಯಲ್ಲಿಯೂ ಒಬ್ಬರು ಇಬ್ಬರು ಸ್ವಲ್ಪ ಜ್ವರದ ಬಂದು

ವಿಷಮ ಶೀತಜ್ವರದಿಂದ ಪೀಡಿತರಾಗಿ ಮಲಗಿರದ ಇರುವಮನೆಗಳೇ ಅಲ್ಲವು. ಇದಕ್ಕೆ ಸಹಕಾರಿಯಾಗಿ ಉಬ್ಬಳಿ ಜಲಾವ್ ರೋಗವು ಸಹ ಅಲ್ಲಿಯಲ್ಲಿ ಹರಡಿಕೊಂಡು ಇದುವರಿವಿಗೆ ೧೦–೧೫ ಜನ ಮೃತಪಟ್ಟಂತೆ ತಿಳಿಯಬರುತಿದೆ. ಪ್ರಾಣಾಪಾಯಕ್ಕಿಂತ ಬಲಾಬಾಧವು ಅಧಿಕವಾಗಿದೆ. ಜನರನ್ನು ಇರುವ ಸ್ಥಳಗಳಲ್ಲಿ ನಿಲ್ಲಗೊಳಿಸದಂತೆ ಪರಸ್ಥಳಗಳೂ ಯಾತ್ರೆಗಳೂ ಒಂದಾಗಿ ಸೇರಿವೆ. ಜನರ ಅನಾರೋಗ್ಯದ ದೆಸೆಯಿಂದ ಸರ್ಕಾರ ಆಫೀಸುಗಳಲ್ಲಿ ಕೆಲಸಗಳು ಸಲೀಸಾಗಿ ಜರುಗುವದಿಲ್ಲವು. ಲಕೋಟೆಗಳು ಕ್ರಮವಾಗಿ ಬಟವಡೆಯಾಗುವದಿಲ್ಲವು. ಎತ್ತ ನೋಡಿದಾಗ್ಯೂ ಜನರು ಕೆಮ್ಮು, ವದ್ದಾನಿಯೂ, ಇನ್‌ಫ್ಲೂಯೆಂಜಾ ಎಂಬ ಪ್ರತಿಧ್ವನಿಯೂ, ಅಪ್ಪಾ, ಅಮ್ಮಾ ಎಂಬದಾಗಿ ಜನರ ಮೊರೆಗಾಟವೂ ಕೇಳಬರುತಲಿದೆ.

Influenza.—ಇನ್‌ಫ್ಲೂಯೆಂಜಾ ಎಂಬ ಸಾಂಕ್ರಾಮಿಕ ರೋಗದ ನಿದಾನವನ್ನು ಪರೀಕ್ಷಿಸಿ ಮಾಡಿದ ಒಬ್ಬ ವೈದ್ಯನು ಹೇಳುವದೇನಂದರೆ, ಇದು ಆಬಾಲವೃದ್ಧರಿಗೂ ತಾರತಮ್ಯವಿಲ್ಲದೆ ತಗಲುತದೆ. ಸಾಮಾನ್ಯವಾಗಿ ಇದರಿಂದ ಪ್ರಾಣಾಪಾಯವುಂಟಾಗುವದಿಲ್ಲ. ಬಲಹೀನರಾದವರಿಗೆ ಇದು ತಗಲಿದರೆ ಪ್ರಾಣ ಹೋಗುವದುಂಟು. ಮನುಷ್ಯರಿಗೆ ಮಾತ್ರವೇ ಅಲ್ಲದೆ ಮೃಗಗಳಿಗೂ ಕೂಡ ಇದು ಬರುವದುಂಟು. ಇದರ ವಿಷಪರಮಾಣುಗಳು ರಕ್ತದೊಡನೆ ಸೇರಿದಮೇಲೆ ಒಂದುದಿವಸ ಮೊದಲುಗೊಂಡು 2 ವಾರಗಳೊಳಗಾಗಿ ರೋಗಬರುವದು. ಬಂದಮೇಲೆ ೩ ದಿನಸದಿಂದ ೬ ದಿವಸದವರಿಗೂ ಇರುವದು. ಕಣ್ಣು, ಮೂಗು, ಗಂಟಲು, ಶ್ವಾಸಕೋಶಗಳು ಮೊದಲಾದವುಗಳೆಲ್ಲ ವ್ಯಾಧಿಯುಂಟಾಗಿ ಚಳಿಜ್ವರ, ತಲೇನೋವು, ನೆಗಡಿ, ಬಲಹೀನತೆ, ಕೈಕಾಲುನೋವು, ಅಗ್ನಿಮಾಂದ್ಯ ಮೊದಲಾದವುಗಳು ಉಂಟಾಗುವವು. ಕೆಲವು ದಿವಸ ಕೆಮ್ಮು, ಎದೆಯಲ್ಲಿಯೂ ಹೊಟ್ಟೆಯಲ್ಲಿಯೂ ನೋವು, ಉಬ್ಬಸ, ಮುಖ, ಮೂಗು, ತುಟಿ, ಕಣ್ಣು ಇವುಗಳೆಲ್ಲ ಕೆಂಪಗಾಗುವದು. ಇವುಗಳೆಲ್ಲ ಪ್ರಾರಂಭವಾಗುತವೆ. ಕೆಮ್ಮು ೫–೬ ವಾರಗಳವರಿಗೂ ಇರುವದು. ಈರೋಗವು ಗುಣವಾಗಿ ಪ್ರಾಣ ಕೆರಳುವದುಂಟು. ಅಪರ ವಯಸ್ಸಿನಲ್ಲಿರತಕ್ಕವರು ಇದರಿಂದ ಸಾಯುವದುಂಟು. ಈ ರೋಗವು ಕ್ಷಯವಾಗಿ ಪರಿಣಮಿಸುವದುಂಟು. ಇದು ಬಾರದೆ ಇರುವದಕ್ಕೋಸ್ಕರ (ಸಲ್ಫೇಟ್ ಆಫ್ ಕ್ವಿನೈನ್) ಮಾತ್ರೆಗಳನ್ನು ತೆಗೆದುಕೊಳ್ಳುತ್ತಾರೆ.

Postal mismanagement.—ಕಳೆದವರುಷದ ಈ ದಿನದಲ್ಲಿ ಮೈಸೂರು ಅಂಚೆಯು ಇಂಪೀರಿಯಲ್ ಪೋಸ್ಟಿಗೆ ದಾಖಲಾಗಿ ಒಂದು ವರ್ಷವಾಗಿತ್ತು. ಆಕಾಲದಲ್ಲಿ ಮೈಸೂರು ಅಂಚೆಮನೆಗಳು ಎಲ್ಲೆಲ್ಲಿದ್ದವೋ ಆ ಜಾಗಗಳಲ್ಲೆಲ್ಲ ಪೋಸ್ಟಾಫೀಸ್‌ಗಳೂ, ಬ್ರಾಂಚ್ ಪೋಸ್ಟಾಫೀಸ್‌ಗಳು ಸ್ಥಾಪಿಸಲ್ಪಟ್ಟವು. ಲಕೋಟೆಗಳು ಕ್ರಮವಾಗಿ ಬಟವಡೆಯಾಗುವದಿಲ್ಲವೆಂದು ಈ ದೇಶೀಯರು ಪ್ರಕಾರ ಮಾಡಿದ್ದಕ್ಕೆ ಮೇಲ್ವಿಳಾಸ ಬರೆಯುವಲ್ಲಿ ಸ್ಥಳ ಹೆಸರುಗಳನ್ನು ಪೂರ್ಣಕ್ರಮವಾಗಿ ಬರೆಯಲಿಕ್ಕೆ ಜನರಿಗೆ ತಿಳಿಯದಿರುವದರಿಂದ ಲಕೋಟೆಗಳು ಸಕಾಲದಲ್ಲಿ ತಲುಪುವುದು ತಪ್ಪುತ್ತದೆಂದು ಜವಾಬ್ ಕೊಟ್ಟರು. ಕೆಲವು ಭಾಗದಲ್ಲಿ ಅವರ ಜವಾಬ್ ನ್ಯಾಯವೆಂದು ತೋರುತ್ತದೆ. ಈಚೆಗೆ ವಿಚಾರಿಸಲಾಗಿ ಬ್ರಾಂಚ್ ಆಫೀಸ್‌ಗಳಲ್ಲಿ ಪ್ರತಿದಿನವೂ ಬಟವಡೆ ಮಾಡಬೇಕಾದ ಕಾಗದಗಳು ೩ ದಿನಗಳಿಗೊಂದಾವರ್ತಿ ಬರುವ ಬಸ್ತಿನಲ್ಲಿ ಒಟ್ಟಾಗಿ ಬರುತಿರುವಂತೆ ತಿಳಿಯಬರುತಿದೆ. ಮೈಸೂರು ಸರ್ಕಾರದವರ ವಿಚಾರಣೆಯಲ್ಲಿ ಅಂಚೆಯಿದ್ದ ಕಾಲದಲ್ಲಿ ಪ್ರತಿನಿತ್ಯವೂ ಟಪಾಲ್ ರವಾನಿಸಿದ ಕಾಲವು ಒಂದು ಸೇರಿದಕಾಲವೂ ಗಣನೆಗೆ ಬರುತಲಿತ್ತು. ಸದಾ ಇನ್‌ಸ್ಪೆಕ್ಟರ್‌ಗಳು ಗಸ್ತು ಮಾಡುತಲೇಯಿದ್ದರು. ರಸೀದಿಗಳು ಕೊಡಲ್ಪಡುತಲಿದ್ದದರಿಂದ ಅಂಚೆ ಇಲಾಖೆಯವರು ಜಾಗರೂಕರಾಗಿದ್ದರು. ಈಗಲೂ ಬಹಳ ಪ್ರಯಾಸದಿಂ ಅಕ್ರಮಗಳನ್ನು ಕಂಡು ಹಿಡಿದು ಮೇಲ್ಪಟ್ಟ ಅಧಿಕಾರಿಗಳಿಗೆ ಫಿರ್ಯಾದ್ ಮಾಡಬಹುದು, ಒಂದೊಂದು ದೊಡ್ಡ ಪ್ರಯೋಜನಕಾರಿಯಾಗಿ ಪರಿಣಮಿಸಿದೆ.

TELEGRAMS.
ತಂತಿ ವೃತ್ತಾಂತಗಳು.

ಸೇಂಟಪೀಟರ್ಸ್‌ಬರ್ಗ್, ತಾ|| ೩೧ನೇ ಮಾರ್ಚಿ. ...ರ್ಸ್ಯಾ ಚಕ್ರವರ್ತಿಯವರು ತಮ್ಮ ಭಾರ್ಯೆಯೊ... ಇಲ್ಲಿನ ಮಿಲಿಟರಿ ಬಂದೀಖಾನೆಗೆ ದಯಮಾ... ಅಲ್ಲಿದ್ದ ಖೈದಿಗಳನ್ನೆಲ್ಲ ಮಾತನಾಡಿಸಿ, ಅವ... ಸ್ಥಿಗಿರಿಗೆ ಕಾರಣಗಳನ್ನು ಅವರಮೂಲಕ ...ಮಕೊಂಡು ಅವರಕ್ಕಿತಿ ಅರವತ್ತುಮಂದಿ ...ನ್ನು ಬಿಡುಗಡೆಮಾಡುವಂತೆಯೂ, ಇತರರ ...ಯನ್ನು ಕಡಮೆಮಾಡುವಂತೆಯೂ ಹು...ಕೊಟ್ಟರು.

ಕಾನ್‌ಸ್ಟಾಂಟಿನೋಪಲ್, ತಾ|| ೩೧ನೇ ಮಾರ್ಚಿ. ...ಟೆಯೆಂಬ ಪ್ರದೇಶದಲ್ಲಿ ತುರ್ಕೀಯವರಿಗ್ಯೂ ...ರಿಗ್ಯೂ ಕಲಹಗಳಿಗೂ ಅನೇಕ ಘೋರಯು...ಗಳು ಜರುಗಿದವು. ಗ್ರೀಕ್‌ನೊಳರವರು ತು...ಯೋಜಿಂಟರವರ ಕ್ರೀಟಯೆಂಬ ಪ್ರದೇಶವ... ಇನಡಲ್ಲಿದ ಚಕರ ಪಾಚ್ಛಯೆಂಬ ...ಗೆ, ಸೈನಿಕರು ಆಯುಧಪಾಣಿಗಳಾಗಿ ಕ್ರೀಟ ...ಂಬ ಪ್ರದೇಶದಮೇಲೆ ಶೀಘ್ರದಲ್ಲಿ ದಂಡೆತ್ತಿ ...ರುವರೆಂಬದಾಗಿ ಎಚ್ಚರಿಸಿರುತ್ತಾರೆ.

ಅಲಹಾಬಾದ್, ತಾ|| ೩೧ನೇ ಮಾರ್ಚಿ.—ಸೈನಿ... ಆಫಿಸರಗಳಿಗಾಗಿ ನೆರೆಗೊಳಸಲ್ಪಟ್ಟಿರುವ ... ದೇಶಭಾಷಾ ಪರೀಕ್ಷೆಗಳ್ಯಾವುದಕ್ಕಾದರು ಜೋ...ವಳ್ಳಿ ಇಂಡಿಯನ್ ವಾಲಂಟಿಯರ ಆಫಿಸರಗ...ಅರ್ಹರಾಗಿರುವರೆಂದು ಬಹಳ ವಿಚಾರದ್ದೂ ...ಕ ನಿರ್ಧರಿಸಲ್ಪಟ್ಟಿತು.

ಲಂಡನ್, ತಾ|| ೧ನೇ ಏಪ್ರೆಲ್, ಪಾರ್ಲಿಮೆಂಟ ...ಸಭೆಯಲ್ಲಿ ಇಂಡಿಯನ್ ಕೌನ್ಸಿಲ ...ಬಿಲ್ ಅಂದರೆ ಹಿಂದ್ಯದೇಶದ ಮಂತ್ರಾಲೋಚಕ ...ಮೆಯ ಪರಿಷ್ಕರಣಾರ್ಥ ಯೋಜಿಸಲ್ಪಟ್ಟಿರುವ ...ಮಾ ಆಕ್ಟನ್ನು ಕುರಿತು ಈ ಸಂದರ್ಭದಲ್ಲಿ ವಿಚಾ...ಮಾಡಲ್ಪಡುವದೆಂದು ನಿರೀಕ್ಷಿಸಲ್ಪಟ್ಟಿದೆ. ಮ...ಆಕ್ಟಿನಲ್ಲಿ ಮೆಂಬರಗಳ ಚುನಾವಣೆಯಂ...ದಾರ್ಥ್ಯತತ್ತ್ವವಿಷಯದಲ್ಲಿ ಯಾವದೊಂದು ...ಯಮವೂ ಕಂಡುಬಾರದೆ ಹೋದಬಗ್ಗೆ ಮಿ|| ...ಡ್ಲೋಯವರು ಖಂಡಿಸುತ ಹಿಂದು ತಿದ್ದುಪ...ಸೂಚನವಾದ ಹೊಸಕ್ಲಾಜನ್ನು ಸಭೆಯಲ್ಲಿ ಸೂ...ಚಿಸುವವರಾಗಿದಾರೆ. ಮೆಂಬರಗಳ ಚುನಾವಣೆ ...ಕ್ರಮವು ಇಂಡ್ಯ ದೇಶೀಯರಿಗೆ ಅನರ್ಹವಾದ ...ದ್ದಾಗಿಯೂ, ಬ್ರಿಟಿಷ್‌ನವರ ಪ್ರಯೋಜನಗಳಿಗೆ ...ವಿರುದ್ಧವಾದದ್ದಾಗಿಯೂ ಇರುವದರಿಂದ ಮಿ|| ...ಕ್ಲೇಯವರು ಸಿದರೀಭಾಗದಂಬುದಿಸುವರು.

ಲಂಡನ್, ತಾ|| ೩ನೇ ಏಪ್ರೆಲ್.—ಮಹಾರಾಜ್ಞೀ ...ಯವರು ಇಂಗ್ಲಾಂಡಿಗೆ ವಾಪಸ್ ದಯಮಾಡು...ವಕ್ಕೆ ಪೂರ್ವಭಾವಿಯಾಗಿ ಚಕ್ರವರ್ತಿಯವ...ರ ವಿಲ್ಹೆಂ ಯವರನ್ನೂ, ಅವರ ತಾಯಿಯಾದ ...ಚಕ್ರವರ್ತಿನೀಯವರನ್ನೂ ಡಾರ್ಮ್‌ಸ್ಟಾಡ ...ಂಬ ಪ್ರದೇಶದಲ್ಲಿ ಸಂಧಿಸುವರು.

ಬರ್ಲಿನ್, ೩ನೇ ಏಪ್ರೆಲ್, ರಷ್ಯಾ ಚಕ್ರವರ್ತಿ ...ಯವರು ಅಕಸ್ಮಾತ್ತಾಗಿ ಕಾಹಿಲೆಯಾಗಿ ಅವರಿ...ಗೆ ಆಗಿಂದಾಗ್ಯೆ ಮೂರ್ಛೆ ಬರುತಲಿರುವಂತೆ ಇಲ್ಲಿ ...ವಾದವುಂಟಾಗಿದೆ. ಪರಂತು ೩ನೇ ತಾರೀಖು ...ಸೇಂಟಪೀಟರ್ಸ್‌ಬರ್ಗಿನಿಂದ ಬಂದ ವೃತ್ತಾಂ...ದಿಂದ ಚಕ್ರವರ್ತಿಯವರು ಕಾಹಿಲೆಯಾಗಿಲ್ಲ ...ವೆಂದು ತಿಳಿಯಬರುತಿದೆ.

ಬ್ರುಸ್ಸೆಲ್ಸ್, ತಾ|| ೩ನೇ ಏಪ್ರೆಲ್.—ಈಚಿಗೆ ಬಂಕೋ...ಕ್ರಾಮಗಳಲ್ಲಿ ನಡೆಸಲ್ಪಟ್ಟ ದರೋಡೆಗಳಿಗೆ ಸಂ...ಬಂಧಿಸಿದ್ದಬಗ್ಗೆ ಶಿಕ್ಷಿಸಲ್ಪಟ್ಟ ಇಬ್ಬರು ಪ್ರೈದಿ...ಗಳನ್ನು ಪೋಲೀಸ್‌ನವರು ಕೋರ್ಟಿನಿಂದ ಬಂ...ದೀಖಾನೆಯಿಲಿಗೆ ಕರೆದುಕೊಂಡು ಹೋಗುವಾ...ಗ್ಯೆ ಅತಿಬಿಟ್ಟರೂ ತಪ್ಪಿಸಿಕೊಂಡು ಪರಾರಿಯಾ...ದರು. ಜಿಯಲ್‌ಖಾನೆಯ ಪಹರೆಯವರ ನಾಯಕ...ರಾಕನೊಬ್ಬನು ಖೈದಿಗಳನ್ನು ಹಿಂದೆ ಅಟ್ಟಿ...ಕೊಂಡುಹೋದನು. ಪರಂತು ಅವನಕುದುರೆ...ಯು ಬಳಲಿ ನೆಲದಲ್ಲಿಬಿದ್ದು ... ಕಳ...ಕೊಂಡಿದ್ದರಿಂದ ಖೈದಿಗಳು ಕಡೆಗೆ ಸಿಕ್ಕದೆ ತಪ್ಪಿಸಿಕೊಂಡು ಓಡಿಹೋದರು.

ಲಂಡನ್, ತಾ|| ೪ನೇ ಏಪ್ರೆಲ್.—ಇಂಡಿಯನ್ ...ವಿಲ್ ಸರ್ವಿಸ್ ಪರೀಕ್ಷೆಗೆ ಹೋಗತಕ್ಕ ಉಮೇದು...ವಾರರ ವಯೋಪರಿಮಿತಿಯನ್ನು ಹೆಚ್ಚಿಸಿದ ವಿಷಯದಲ್ಲಿ ಸರ್ ಅಲೆಗ್ಸಾಂಡರ ಆರ್ಬತ್‌ನಾಟ್, ಸರ್ ಜೇಂಸ್ ಪೀಲ್, ಸರ್ ಪೀಟರ ಲಂಸ್‌ಡೆನ್, ಸರ್ ಡೋನಾಲ್ಡ್ ಸ್ಟ್ಯುವರ್ಟ್ ಇವರು ಭಿನ್ನಾಭಿಪ್ರಾಯವುಳ್ಳ ಬರೆದ ಮಿನಿಟ್ಸ್ ಪ್ರಯೋಗ ಮಾಡಲ್ಪಟ್ಟವು. ಇವರ ಆಕ್ಷೇಪಣೆಗಳೆಲ್ಲವು ಬ್ರಿಟಿಷ್‌ನವರನ್ನು ಪ್ರತ್ಯೇಕಿಸಿ ನೇಟಿವ್‌ಗಳಿಗೆ ಭಾರೀ ಉದ್ಯೋಗಗಳು ಕೊಡಬೇಕಾಗುವಂತೆ ಪರಿಣಮಿಸುವದೆಂಬದಾಗಿರುತಿದೆ.

ಸೇಂಟ ಪೀಟರ್ಸ್ ಬರ್ಗ್, ತಾ|| ೩ನೇ ಏಪ್ರೆಲ್—ಯೂನಿವರ್ಸಿಟಿ ವಿದ್ಯಾರ್ಥಿಗಳನ್ನೆಲ್ಲ ಒಟ್ಟಾಗಿ ದಸ್ತಗಿರಿ ಮಾಡಿದಬಳಿಕ ಅವರ ಗಲಾಟೆಯು ಉಪಶಮಿಸುತ ಬರುತಲಿದೆ. ಕ್ಯಾಡೇಟರಿಗೂ ವಿದ್ಯಾರ್ಥಿಗಳಿಗೂ ಅನವರತ ವಾಗ್ವಾದಗಳು ಜರುಗುತಲಿವೆ. ಪಂಡಿತರೆಲ್ಲರು ವಿದ್ಯಾರ್ಥಿಗಳು ಘೋಷಿಸುತಲಿರುವರು. ಪ್ರಸಕ್ತ ಪ್ರಯತ್ನವು ಕೆಲವುಮಟ್ಟಿಗೆ ರಾಜಕೀಯವಾದುದಾಗಿರುತಿದೆ. ಪರಂತು ಅದು ಪ್ರತೀಕಾರ ರೂಪವಾದ ಮತ್ತು ಸ್ವೇಚ್ಛಾ ರೂಪವಾದ ನಿಬಂಧನೆಗಳಿಗೆ ವಿರುದ್ಧವಾದುದಾಗಿರುವದು.

ಸೇಂಟ ಪೀಟರ್ಸ್‌ಬರ್ಗ್, ತಾ|| ೬ನೇ ಏಪ್ರೆಲ್—ವಿದ್ಯಾರ್ಥಿಗಳಲ್ಲುಂಟಾದ ತೊಂದರೆಗಳು ಕೇವಲ ಜಾರಿಯವರು ಕೋಪದಿಂ ಪರವಶರಾಗಿ ಹಿಂದು ಪರುಷದ ಪನಕ ಶಾಸ್ತ್ರ ಸೂತ್ರಾರಿಗಳನ್ನೆಲ್ಲ ಮುಚ್ಚಿಬಿಡುವಂತೆ ಪ್ರೇರಿಸುವಲಿವಾರೆ. ವಿದ್ಯಾರ್ಥಿಗಳೆಲ್ಲರೂ ಕಳೆದ ಮಂಗಳವಾರದದಿನ ಯೂನಿವರ್ಸಿಟಿ ತಟ್ಟದಲ್ಲಿ ಸೇರಿ ತಮ್ಮ ಗಲ್ಲಲಗೆ ರಾಜಕೀಯವಾದುದಲ್ಲವೆಂಬದಾಗಿ ನಿರೂಪಿಸತಕ್ಕಬಗ್ಗೆ ನ್ಯಾಯನಿದಿ ತಂಥ ಅಂದರೆ ಚಕ್ರವರ್ತಿಯವರ ಶ್ರೇಯೋಭಿವೃದ್ಧಿನಾ ರೂಪವಾದ ಮಂಗಳವ ಹಾಡಿದರು.

ಬಾತಮಿದಾರರ ಕಾಗದಗಳಲ್ಲಿ ಕಾಣಬರುವ ಅಭಿಪ್ರಾಯಗಳಿಗೆ ಪತ್ರಿಕಾಧಿಪತಿಗಳು ಜವಾಬ್ದಾರರಲ್ಲರು.

CORRESPONDENCE

ಮ|| ಕರ್ಣಾಟಕಪ್ರಕಾಶಿಕಾ ಪತ್ರಿಕಾಧಿಪರವರ ಸನ್ನಿಧಿಗೆ

ಅಯ್ಯಾ.—ಈಗ್ಗೆ ಹತ್ತು ಹದಿನೈದು ವರುಷಗಳ ಹಿಂದೆ ಮೈಸೂರು ರಾಜ್ಯವು ಯಾವ ರೀತಿಯಲ್ಲಿದ್ದಾಗ್ಯೂ ಅದು ಈಚೆಗೆ ಸುಭಿಕ್ಷವಾಗಿ ಬೆಳೆವ ಎಂಬವಕ್ಕೆ ಪ್ರತಿ ಸಂವತ್ಸರದಲ್ಲಿಯೂ ಜನಸಂಖ್ಯೆ ಜಾಸ್ತಿಯಾಗುತಲಿರುವದು, ವಿದ್ಯಾಭಿವೃದ್ಧಿಗೆ ನಿಮಿತ್ತಕಗಳಾದ ವ್ಯಾಪಾರವೂ ಅವಕ್ಕೆ ಸಾಧಕವಾದ ರೈಯಿಲ್ವೆ ವಗೈರೆ ಸೌಕರ್ಯಗಳೂ ವೃದ್ಧಿಯಾಗುತಲಿರುವದೂ ಸಾಕಾದ ದೃಷ್ಟಾಂತಗಳಾಗಿರುತಿವೆ. ಇವಕ್ಕೆ ತಕ್ಕಂತೆ ಇಲ್ಲಿ ನಾನಾವಿಧ ಸುಖ ಪ್ರಾಪ್ತಾಗುವದೊಲ್ಲ, ಇಲ್ಲಿ ಸುಲಭವಾಗಿ ಜೀವನ ಸಾಗುವದೆಂತಲೂ ತಿಳಿದು ಅನೇಕ ದೇಶಸ್ಥರು ಇಲ್ಲಿಗೆ ಬಂದು ಸ್ವರೂಪಾನುಗುಣವಾದ ಒಂದೊಂದು ವೃತ್ತಿಯಂ ಕಲ್ಪಿಸಿಕೊಂಡಿರುತ್ತಾರೆ. ಅವರಲ್ಲಿಯೂ ಈ ದೇಶದವರಲ್ಲಿಯೂ ಸಹ ಬಡವರಾಗಿ ಎಷ್ಟೊ ಹೊಟ್ಟೆಗೆ ಕೂಲಿ ಮಾಡಿ ಜೀವನ ಮಾಡತಕ್ಕವರನೇಕರಿರುತ್ತಾರೆ. ಅವರು ಇಲ್ಲವಾದರೇನು ವೃತ್ತಿ ಸಿಕ್ಕದವೂ ಭಿಕ್ಷಾಟನ ಮಾಡಿ ತನ್ನಾಪೇಕ್ಷ ಪೋಷಿಸುತಲಿವಾರೆ. ಅವರಲ್ಲಿ ಮನೆ ಸೊಂಬುಪದ ಪರನೇಕರು ಅನೇಕ ವಾಸವನ್ನು ತೊರೆದು ದೇಶಾಂತರಗಳಿಗೆ ಹೋಗುತ್ತಾರೆ. ಈ ದೇಶದ ಪ್ರಜಾ ಸಂಖ್ಯೆಯಲ್ಲಿ ಇಂತಹರು ಅಧಿಕರಾಗಿದಾರೆ. ಮೇ ಹೊಟ್ಟೆ ಉಪಪನ್ನರು ಅತ್ಯಲ್ಪರಾಗಿದಾರೆ. ಇವರು ಸುರಕ್ಷಿತರಾಗಿರಬೇಕಾದರೆ ದೇಶವಂ ಪಾಲಿಸತಕ್ಕವರು ಪ್ರಜಾಸಂರಾಗ ವೃತ್ತಿವಂತರಾಗಿಯೂ, ಧನವಂತರುದಾರರಾಗಿಯೂ ಇರಬೇಕು. ಪ್ರಜೆಗಳು ತಮ್ಮ ತಮ್ಮ ಕುಟುಂಬಗಳು ಪ್ಯಾಗೆ ಅವರಿಂ ನೋಡುತ್ತಾರೆಯೋ ಹಾಗೆಯೇ ಆಳತಕ್ಕವರು ತಮ್ಮ ದೇಶದೊಳು ಬೃಹತ್ಸಂಸಾರವನ್ನು ಅಭಿಮಾನದೊಡನೆ ನೋಡಿಕೊಳ್ಳಬೇಕಾದದ್ದು ಅವರ ಕರ್ತವ್ಯವಾಗಿರುತಿದೆ. ಪಾಲಕರು ದಾಕ್ಷಿಣ್ಯರಾಗಿಯೂ, ಧನಿಕರು ಲುಬ್ಧರಾಗಿಯೂ, ಪ್ರಜಾ ಸಂಖ್ಯೆಯು ಅಧಿಕವಾಗಿಯೂ, ವೃತ್ತಿ ನಿಯಮವಿಲ್ಲದೆಯೂ ಯೋಗ್ಯವಾದ ಬಂದವರಿಗೆ ... ಈ ದೇಶದಲ್ಲಿ ಪ್ರಜೆಗಳು ಬಹಳ ವ್ಯಾಕುಲಕರವಾಗಿ ಪರಿಣಮಿಸಿದೆ. ಭಾರೀ ವೇತನಗಳಿಂದಲೂ ಅದು ಸಾಲದ್ದಕ್ಕೆ ಭತ್ತಾ ವಗೈರೆ ಇತರ ಮಸಂಗಗಳಿಂದಲೂ ಸಂತೃಪ್ತರಾಗಿ ಮುಕ್ತಾಯದ ನೇತ್ರದೃಷ್ಟಿ ಕೆಲವರು ಸರ್ಕಾರ ಉದ್ಯೋಗಸ್ಥರನ್ನು ನೋಡಿ ಅನೇಕ ಪ್ರಜೆಗಳೂ ಅವರಂತೆ ಇರುತ್ತಾರೆಂದಾಗಲಿ, ಅಂತವರು ತಮಗಿಂತ ಕಡಮೆ ಸ್ಥಿತಿಯಲ್ಲಿರತಕ್ಕವರಿಗೆ ಸಹಾಯ ಮಾಡುತ್ತಾರೆಂತಲಾಗಲಿ ಭಾವಿಸುವದು ಅಸಹಜವೆಂದೆಣಿಸಬೇಕಾಗಿದೆ. ಬಹುಪ್ರಜೆಗಳು ಜೀವನಕ್ಕಾಗಿ ಶ್ರಮಪಡುತಲಿರುವಾಗ್ಯ ದೇಶವು ಸುಭಿಕ್ಷವಾಗಿದೆಯೆಂದು ಹ್ಯಾಗೆ ಹೇಳಬಹುದು? ಇದಕ್ಕೆ ಕಾರಣವನ್ನು ವಿಚಾರಿಸುವಲ್ಲಿ—ಕಾಲ ವೈಪರೀತ್ಯವಾದಾಗ್ಯೂ, ಬೆಳೆಯು ತೃಪ್ತಿಕರವಾದಾಗ್ಯೂ, ಧಾನ್ಯಗಳ ಬೆಲೆಯಲ್ಲಿ ಇಳಿತವು ಕಾಣಿಸದಿರುತಿದೆ. ಯಾತಕ್ಕೆಂದರೆ, ಬೆಳೆ ಬೆಳೆವತಕ್ಕವರಿಗಿಂತಲೂ ಫಲವನ್ನನುಭವಿಸತಕ್ಕವರ ಸಂಖ್ಯೆಯು ಅಧಿಕವಾಗಿರುವದರಿಂದ ಬೇಕಾದಷ್ಟು ದೇಶದಲ್ಲಿ ಬೆಳೆಯುವದಿಲ್ಲವಾದ್ದರಿಂದ ... ಎರಡನೆಯದು—ಇಲ್ಲಿ ಪುಷ್ಕಳವಾಗಿ ಕಾರ್ಯಗಳಿಲ್ಲದವರಿಗೇ ಸೋಲಿದ್ದರೂ ಧನಾಶೆಯುಳ್ಳ ವರ್ತಕರು ಜಾಸ್ತಿ ಲಾಭ ದೊರೆಯುವದೆಂಬ ಆಶೆಯಿಂದ ಅನ್ಯದೇಶಗಳಿಗೆ ಸಾಗಿಸುವದು ದರಿಂದ ಸುಗ್ಗಿ ಕಾಲದಲ್ಲಿ ಸಹ ನಿತ್ಯ ಚಟಾವಾಗಿ ದಿಕ್ಕಾರಿಗೆ ದುರ್ಭರವಾಗಿ ಜೀವನ ದುಸ್ತರವಾಗಿರುವದು. ಇದರಿಂದೀಗ ಎರಡರಿಗೆ ದೊರೆಯುವ ಕೂಲಿಯು ಅವರ ಜೀವನಕ್ಕೇ ಸಾಲದ್ದಾಗಿರುತಿದೆ. ತದರೆ ಈಗ ಲಕ್ಷ್ಮೀದೇವಿಯ ದ್ರಾಬಲ್ಯವು ಹೆಚ್ಚುತ ಬರುತ್ತಿದ್ದ ದೇಶದೊಳು ಇದ್ದಯಲ್ಲಿ ಯಂತ್ರ ಕಾರ್ಖಾನೆಗಳೂ, ಚಿನ್ನದ ಗಣಿಗಳ ಕೆಲಸಗಳೂ ರೈಲ್ವೇ ಕೆಲಸಗಳೂ ಕೃಷಿಸಲ್ಪಟ್ಟ ಕೆಲಸಗಳಿಗೆ ... ಕೂಲಿದಾರರು ದೊರೆಯದಿರುವಾಗ್ಯೆ ಮೇಲೆ ಕಂಡವಾತು ತುಚ್ಛಂಗೆ ಸುಬರಕ್ಕೆ ಕ್ಷಿಪ್ಪವೇನು ಬಹು ರಾದರು ಬುದ್ಧಿಸಿದರೂ ಬುದ್ಧಿಸಿದರು. ಪರದೇ ಅಂತಹ ಕಾರ್ಖಾನೆಗಳು ರಕ್ತ ರಾವಣದ ಪನಾರ್ಥ ಕೊಡಲಿಯೆಂದು ತೋರುವಲ್ಲವು. ಯಾತಕ್ಕೆಂದರೆ, ಒಬ್ಬನು ಹಿಂದೆ ಐದಕ್ಕೆ ಕೆಲಸ ಮಾಡಿದರೆ ಆಗುವಷ್ಟು ಕಾರ್ಯವನ್ನು ಒಂದು ನಿಮಿಷದಲ್ಲಿ ಯಂತ್ರವು ಸುಲಭವಾಗಿ ನೆರವೇರಿಸುವದರಿಂದ ಅವರ ಕೆಲಸಗಳು ... ಕಠಿಣವಾಗಿಯೂ ಸುಲಭವಾಗಿಯೂ ... ಕೈಕೆಲಸ ನಿರತರಾದರು. ಈ ಸ್ಥಿತಿಯಿಂದ ವೃತ್ತಿಗಳಲ್ಲಿ ಪತ್ತೇಗಾರರು, ಕಮ್ಮಾರರು, ನೇಯಿಗೆಯವರು, ಬೇಸಾಯಗಾರರು ... ನೇಕ ಸಹಸ್ರ ಜನರು ತಮ್ಮ ... ಹಿಂದ ಜೀವನವು ಈಗ ... ದರಿಂದಲೂ, ಸರ್ಕಾರದವರಿಗೆ ... ಕಾದ ಕಂದಾಯ ವಗೈರೆ ... ಸಲ್ಲಿಸಬೇಕಾದ ನಿರ್ಬಂಧವಿದ್ದರೂ ಅದಕ್ಕೆ ತಕ್ಕಂತೆ ಕಸ್ತೂರಿಲ್ಲದೆ ಹೋಗುವದರಿಂದಲೂ ನ್ಯಾಯವಾದ ರಿಯಾಯಿತಿಗಳ್ಯಾವದೂ ಇಲ್ಲದೆ ಹೋದದರಿಂದಲೂ ಅವರಿಗೆ ನಿರೋಧಿಸುವ ಗ್ರಾಮಗಳ ಯಂತ್ರಗಳು ಸೃಷ್ಟಿಯಾಗುತ ಬಂದದರಿಂದಲೂ, ಸವರೀ ಕಸಬುದಾರರೆಲ್ಲರೂ ದಿನೇ ದಿನೇ ಕ್ಷೀಣರಾಗಿ ತಿಯನ್ನೈದುತ ಸೆನಾರ್ಗಳಾಗುತಿರುವಾರೆ. ಇವರೆಲ್ಲ ಈ ಜನರ ಮುದ್ರಣಗೆ ರೇಂಜ ಚಲನಾಶ್ ಮುಕ್ತಿಗಳೂ ಬಹಳ ಮಟ್ಟಿಗೆ ಸಹಾಯಕಗಳಾಗಿರುವವು. ಮುಖ್ಯವಾಗಿ ಯಾವ ವೃತ್ತಿಯಾಗಲಿ ಈಗಿನ ಕಾಲದೊಳು ಬಹಳ ಚಪ್ಪಟವಾಗಿರುವದರಿಂದ ಜನರು ಸಾಮಾನ್ಯೇನ ಜೀವನಕ್ಕಾಗಿ ಬಹಳ ಪೇಚಾಡುವ ಸಂಕಷ್ಟ ಪಡುತಲಿರುವ ಅಂಶವು ಅವರ ಸ್ಥಿತಿಯನ್ನರಿತು ಪ್ರತಿಕ್ರಿಯ ಮಾಡಬೇಕೆಂಬ ಕೋರಿಕೆಯುಳ್ಳ ಪುರುಷನ್ಯಾವನಿಗಾಗಲಿ ವ್ಯಕ್ತವಾಗದಿರಲಾರದು. ಆದುದರಿಂದ ಸರ್ಕಾರದವರು ತಕ್ಕ ಉಪಾಯಗಳಂ ಮಾಡಿ ತಮ್ಮ ಪ್ರಜೆಗಳಲ್ಲಿ ಧನವಂತರೂ ದರಿದ್ರರು ಸಹ ಕ್ಷೇಮವನ್ನು ಹೊಂದುವಂತೆ ಮಾಡಿ ಕೀರ್ತಿಯು ಪಡೆಯಬೇಕೆಂದು ಕೋರುವ,

ಬೆಂಗಳೂರು, } ತಮ್ಮ ವಿಧೇಯನಾದ,
೭ ೩-೯೦ } ... ಕ್ಷೇಮಾಪೇಕ್ಷಕನು

THE MYSORE GAZETTE.
ಮೈಸೂರು ಗೆಜೆಟ.

ಶ್ರೀಮನ್ ಮಹಾರಾಜರವರ ದರ್ಬಾರಿನ ಸರ್ಕಾರದಿಂದ ಕೊಡೋಣವಾದ ಇಷ್ತಿಹಾರ್‌ನಾಮೆಗಳು.

ತಾ|| ೧೭ನೇ ಮಾರ್ಚಿ, ೧೮೯೦—ನಂ ೩೩೩. ೧೮೯೦ನೇ ಇಸವಿ ಮಾರ್ಚಿ ೧೯ನೇ ಮಂಗಳವಾರ ಕಡೆ ಮೊದಲು ೯೨೨—೪ನೇ ನಂಬರು ಹುಕುಮಿನಲ್ಲಿ ಕಂಡ ಈ ಕೆಳಗೆ ನಮೂದು ಮಾಡಲ್ಪಟ್ಟ ನಿಬಂಧನೆಗಳು ಮೈಸೂರು ಕೋಟೆಯಲ್ಲಿ ಮುಖ್ಯವಾಗಿ ಜಾರಿಯಲ್ಲಿರತಕ್ಕಬಗ್ಗೆ ವಿಧಾಯಕ ಮಾಡಲ್ಪಟ್ಟವೆ.

೧ ಸರಕಾರ ಅಥವಾ ಮುನಿಸಿಪಲ್ಟಿಗೆ ಸೇರಿದ ಯಾವ ಮುಂದೆ ಸೇರಲ್ಪಡುವ ಜಮೀನುಗಳ ಮೇಲೆ ಹೊಸ ಕಟ್ಟಡಗಳಿಗೆ ಅನುಮತ ಕೊಡ ಕೂಡದು.

೨ ಪ್ರತಿಷ್ಠಿತ ಹಳೇ ಕಟ್ಟಡಗಳುಬಿಟ್ಟು ಕಟ್ಟಲ್ಪಡುವ ಸಮಯದಲ್ಲಿ ವಿಶೇಷವಾಗಿ ಹಾಳ ಸಂಚಾರಕ್ಕೂ, ಚರಂಡೀನೀರು ಸರಿಯಾಗಿ ಹರಿಯುವದಕ್ಕೂ, ಸಾರ್ವಜನಿಕ ಅಥವಾ ಕಚೇರಿಗಾಗಿ ಮುಂತಾದ್ದು ತೆರಗಾಗುವದಕ್ಕೂ ಅನುಕೂಲಿಸುವಹಾಗೆ ರಸ್ತೆಗಳ ... ಮಾಡುವದಲ್ಲದೆ ... ಕೊಡವದು.

೩ ಸರಕಾರಿಂದಲ್ಲದ ಖಾಲೀಜಮೀನುಗಳು

(ಅ) ಪ್ರತ್ಯೇಕವಾಗಿ ನಿಂಗವವಾದ ಪ್ರವೇಶದಲ್ಲಿದ್ದರೂ ಅಥವಾ ಕಟ್ಟಡಗಳನ್ನು ಕಟ್ಟುವದಕ್ಕೆ ... ಅಂತಹವುಗಳ ... ಕಟ್ಟಡಗಳನ್ನು ಕಟ್ಟಕೂಡದು ಅಥವಾ.

(ಬ) ... ಕಟ್ಟಡ ... ಸ್ವಂತಗಾರರು ... ಕಟ್ಟಡವನ್ನು ಕಟ್ಟುವುದು ಅಪೇಕ್ಷಿಸಲ್ಪಡತಕ್ಕದ್ದು. ಅದಕ್ಕೆ ಹಿಸ್ಸೆಯ ಪಕ್ಷದಲ್ಲಿ ಮನೆಗಳನ್ನು ಕಟ್ಟುವಬಗ್ಗೆ ಸದರಿ ಜಮೀನುಗಳು ಕಾನೂನಿನ ಪ್ರಕಾರ ಸ್ವಾಧೀನಮಾಡಲ್ಪಡತಕ್ಕದ್ದು.

೪ ನಿರಿಷ್ಟ ಖಾಲೀಜಾಗಗಳು ಅವುಗಳ ಮೇಲೆ ಕಟ್ಟಡಗಳನ್ನು ಕಟ್ಟುವವರಿಗೂ ... ಅಸಹ್ಯಕರವಾದ ಗಿಡಗಿಡ್ಡಗಳು ಬೆಳೆಯದಂತೆಯೂ ಉಸ್ತುವಾರಿಯಲ್ಲಿರತಕ್ಕದ್ದು.

೫ ಎಲ್ಲಾ ಹೊಸಕಟ್ಟಡಗಳ ವಿಷಯದಲ್ಲಿ ... ಕಾಮಗಾರಿಗೆ ಶುರುಮಾಡುವದಕ್ಕೆ ಮುಂಚಿತವಾಗಿಯೇ ಉದ್ದೇಶಿಸಲ್ಪಟ್ಟವುಗಳ ಮುಂದೆ ... ಬಿಟ್ಟು ಮನೀರು ಹೋಗುವ ಮತ್ತು ... ನಿರ್ಣಯವಾಗುವ ... ನ ... ಮಂಜೂರಾತನ್ನು ಪಡೆಯತಕ್ಕದ್ದು. ... ಕಟ್ಟುವದಕ್ಕೆ ಮಾಡುವ ... ಅಥವಾ ತಿರಸ್ಕಾರವಾಗಲಿ ಪಡೆಯತಕ್ಕದ್ದು.

೬ ಸ್ವಾಮಿಯ ಜಮೀನುದಾರರು ಪಡೆದ ... ಸೂಚನೆಯಾದಮಟ್ಟಿಗೂ ಕನಿಷ್ಟ ... ವಂತರು ... ಮಾಡತಕ್ಕದ್ದು. ಮತ್ತು ... ಮಾಡುವ ... ಮುನಿಸಿಪಲು ... ಕಳುಹಿಸಿ ಕೊಡಬೇಕು. ಸದರಿ ... ಮೇಲೆಕಂಡ ನಿಬಂಧನೆಗಳು ಜಾರಿಯಲ್ಲಿ ಇರುತ್ತಿರುವದನ್ನು ನೋಡು ... ಆರೋಗ್ಯಸ್ಥಿತಿಯನ್ನೂ ಮತ್ತು ಅವಶ್ಯಕವಾದ ಕಾರ್ಯಗಳನ್ನು ಸಹ ತೋರಿಸುತ್ತಿರಬೇಕು.

೭ ಗವರ್ನಮೆಂಟಿನವರ ಸ್ಪಷ್ಟವಾದ ... ಇಲ್ಲದೆ ಈ ನಿಬಂಧನೆಗಳಿಗೆ ಯಾವ ... ಧವಾದ ವಿನಾಯಿತಿಯೂ ಮಾಡಲ್ಪಡಕೂಡದು.

Bangalore.— Printed and published at the KARNATIC PRESS, No. 108, ... MANTEM ROAD PETTAH—1890.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಕಾಮವಿವಿಧಪ್ರವೃತ್ತ್ಯಾನಗನಗಾರ್ಸ್ವಕರ್ಣಾಟಕಪ್ರಕಾಶನವಲಾಭಿಧಾವ್ಯಕ್ತಸಾಹಿತೀಕಶೋಭಿತಾ | ವ್ಯಗಾಂಕಹಿತವಾಸನೆನಿಹಿತಮುದ್ರಣಾಸನ್ನಸ್ಮೃರ್ತಿ ತಾಸುವರಿಶೋಭತಾದಿಕಶಿವಾಸನಂಸುತುದು॥

Vol. XVII.] ಸಂಪುಟ ೧೭.] BANGALORE—MONDAY, APRIL 14 1890 ಬೆಂಗಳೂರು.—ಸನ್ ೧೮೯೦ನೇ ಇಸವಿ ಏಪ್ರಿಲ್ ೧೪ ನೇ ತಾರೀಖ್ ಸೋಮವಾರ. [No. 15. [ಸಂಖ್ಯೆ ೧೫.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ ಪೋಸ್ಟೇಜ್ ಸಹಿತ.
ಮುಂಗಡವಾಗಿ ಕೊಡತಕ್ಕವರಿಗೆ	8—0—0	9—0—0
ತರುವಾಯ „	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡವಾಗಿ ಕೊಡತಕ್ಕವರಿಗೆ	4—0—0	5—0—0
ತರುವಾಯ „	5—0—0	6—0—0

ಈ ಪತ್ರಿಕೆಗೆ ಚಂದಾವನ್ನು ವಾರ್ಷಿಕ ತಾರೀಖ್ ಮೊದಲು ಒಂದು ತಿಂಗಳೊಳಗಾಗಿ ಚಂದಾ ಮೊಬಲಗು [illegible] ಪತ್ರಿಕೆ [illegible] ಇಂಗ್ಲಿಷ್ [illegible] ಕನ್ನಡ [illegible] ಅಥವಾ [illegible] ತರುತ್ತಿಸಲ್ಪಡುವದು. [illegible] ಚಂದಾ ಮೊಬಲಗು ಅಂಗೀಕರಿಸಲ್ಪಡುವದು.

[illegible] ಅವರನ್ನೂ [illegible] ಚಂದಾ [illegible] ಬಾಕಿ [illegible] ಕಳುಹಿಸತಕ್ಕವರು [illegible] ಮೊಬಲಗಿನ [illegible] ತೆಗೆದುಕೊಳ್ಳಲ್ಪಡುವದು

ಪ್ರಕಟನೆಯ ರಿವಾಜ್.

ಮೊದಲನೆ ಸಾರಿ ಪಂಕ್ತಿ ಒಂದಕ್ಕೆ	೦—೨—	೦
ಎರಡನೆ ಸಾರಿ ಪಂಕ್ತಿ ಒಂದಕ್ಕೆ	೦—೧—೦	

[illegible] ಪತ್ರಿಕೆಯ [illegible] ಪ್ರಕಟನೆಗಳು [illegible] ಪ್ರಕಟಪಡಿಸುವದು [illegible] ಪತ್ರಿಕೆಗೆ [illegible] ಪ್ರಕಟನೆಗಳನ್ನು [illegible] ಈ ಪತ್ರಿಕೆಗೆ [illegible] ನಾವು [illegible] ಪ್ರಕಟಿಸಲಾರೆವು. [illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥಬೇಕಾಗಿರುವವರು ಮೊಬಲಗಿನೊಡನೆ [illegible] ರೂ [illegible] ಹೆಸರಿಗೆ ಬರೆದುಕೊಂಡರೆ [illegible] ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದೆ [illegible] ಕಳುಹಿಸಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಡೆಲಿವರಿ ಪ್ರತಿ ಒಂದಕ್ಕೆ ರೂ 5- 0—0

ಬಿ. ಬಿ. ಸೀತಾರಾಮ [illegible],

[illegible] ಕೋಟ್ ಪೇಟೆ, 41ನೇ ನಂ ಮನೆ

ADVERTISEMNTS.

ನೋಟಿಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ಬಿಕರಿಗೇ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

	ಪೋಸಲ್ ಸಹಿತ ರೂ. ಅ. ಪೈ
ಸಟೀಕಾ ವೈದ್ಯಸಾರ ಸಂಗ್ರಹ	೫ ೦ ೦
„ ಶಿವಗೀತೆ ...	೧ ೧ ೦
„ ಶಿವಾನಂದಲಹರಿ ...	೦ ೪ ೦
„ ಶಿವಲೀಲಾಮೃತ ...	೧ ೨ ೦
„ ಮುಹೂರ್ತದರ್ಪಣ ...	೦ ೧೨ ೦
„ ಬಾಲರಾಮಾಯಣ ...	೦ ೮ ೦
„ ಗೋಪಿಕಾ ಗೀತೆ ..	೦ ೧ ೬
„ ಚಾಣಕ್ಯನೀತಿ (ಸಪರಿಷ್ಕೃತ)	೦ ೩ ೦
ವಿಷ್ಣುಸಹಸ್ರನಾಮ ಸಟೀಕ ...	೦ ೫ ೦
ಸಹಸ್ರನಾಮ ...	೦ ೨ ೦
ಕೃಷ್ಣಕರ್ಣಾಮೃತ ..	೦ ೧ ೬
ತ್ರಿಕಾಂಡ ಅಮರ ಮೂಲ ...	೦ ೨ ೬
೧ ಕಾಂಡ ...	೦ ೧ ೦

ಕನ್ನಡ ಗ್ರಂಥಗಳು.

ಶುಕಸಪ್ತತಿ ಅವ್ವಲ್ ಪ್ರತಿ ...	೩ ೦ ೦
[illegible] ...	೧ ೫ ೦
ಕೃಷ್ಣದೇವರಾಯ ವಿಜಯ ...	೧ ೪ ೦
[illegible] ...	೦ ೪ ೦
[illegible] ...	೦ ೪ ೦
[illegible] ...	೦ ೨ ೬
[illegible] ...	೦ ೨ ೬
[illegible] ...	೦ ೩ ೦
ಸುಧಾಮಚರಿತ್ರೆ ...	೦ ೨ ೦
[illegible] ಚರಿತ್ರೆ .	೦ ೨ ೦
ಬಾಲಕೃಷ್ಣ ಚಿಕಿತ್ಸೆ ...	೦ ೨ ೬
ಮುಹೂರ್ತದರ್ಪಣ ...	೧ ೦ ೦
ಬ್ರಹ್ಮ ವಿಲಾಸ ...	೦ ೧೨ ೦

ನೋಟೀಸ್.

ಇದರಿಂದ ನಮ್ಮ ಚಂದಾದಾರರಿಗೂ ಇತರರಿಗೂ ಪ್ರಕಟಪಡಿಸುವದೇನೆಂದರೆ.—

ಸನ್ ೧೮೮೯ ನೇ ಇಸವಿ ಡಿಸೆಂಬರ್ ಆಖೈರಿನವರಿಗೆ ಚಂದಾ ಬಾಕಿಯನ್ನು ಪೂರಾ ಫೈಸಲ್ಮಾಡಿದತಕ್ಕ ಚಂದಾದಾರರ ಹೆಸರುಗಳನ್ನು ಮಾತ್ರ ನಾವು ರಿಜಿಸ್ಟರ್ ದಾಖಲ್ಮಾಡಿಕೊಂಡು ಈಜನವರಿ ಆಗಾಯಿತು ಪತ್ರಿಕೆ ಕಳುಹಿಸುತ್ತೇವೆ. ಅವರ ಪೈಕಿ ಯಾರಿಗಾದರು ಪತ್ರಿಕೆಯು ಅಪೇಕ್ಷೆ ಇಲ್ಲದಿದ್ದರೆ ಅಂತವರು ಕೂಡಲೇ ತಮ್ಮ ಅಭಿಪ್ರಾಯವನ್ನು ಮೂರುಕಾಸಿನ ಕಾರ್ಡಿನಲ್ಲಿ ನಮಗೆ ತಿಳಿಸಬಹುದು. ಪತ್ರಿಕೆಯು ಅವಶ್ಯಕತೆ ಇರತಕ್ಕವರು ಸಾಧ್ಯವಾದಷ್ಟು ತ್ವರೆಯಲ್ಲಿ ಚಂದಾ ಮೊಬಲಗನ್ನು ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಬೆಂಗಳೂರು, ತಾ ೫ನೇ ಜನವರಿ ೧೮೯೦ — ಟಿ. ಸಿ. ಶ್ರೀನಿವಾಸಾಚಾರ್, ಪ್ರೊಪ್ರೈಟರ್, ಕರ್ಣಾಟಕ ಪ್ರಕಾಶಿಕಾ.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, APRIL 14, 1890.

೧೮೯೦ನೇ ಏಪ್ರಿಲ್ ತಾ॥ ೧೪ ನೇ ಸೋಮವಾರ.

AN UNSYMPATHETIC GOVERNMENT.

ಲೋಕದಲ್ಲಿ ಮುಖಸ್ತುತಿಯೂ ಅನ್ಯತನ್ವೂ ಪ್ರಿಯಕರವಾಗಿರುವಂತೆ ಸತ್ಯವು ಹಿತಕರವಾಗಲಾರದು. ಗತ ಶನಿವಾರದದಿನ ಸೂರ್ಯನು ಮೇಷರಾಶಿಯಂ ಪ್ರವೇಶಿಸಿದನಾಗಿ ವಿಕೃತಿ ಸಂವತ್ಸರವು ಸೌರಮಾನ ರೀತಿಯಾಗಿ ಸಹ ಪ್ರಾರಂಭವಾಯಿತು. ಅದಿ ಭಾಗದಲ್ಲಿಯೇ ಪ್ರಕೃತಿ ಮಂಡಲಕ್ಕೆ ವಿಕೃತಿಯನ್ನುಂಟುಮಾಡುತಲಿರುವ ಈ ನೂತನವರ್ಷವು ಮುಂದೆ ಯಾದ ರೂಪವಾ ಪ್ರಾತೀರ್ಯನ್ನೈದುವದೋ ಎಂಬ ಭೀತಿಯು ನಮ್ಮನ್ನನವರತ ಬಾಧಿಸುತಲಿದೆ. ಭಗವತ್ಕಟಾಕ್ಷವು ದೂರವಾದುದರಿಂದ ಸರ್ವತ್ರ ವಿಚಿತ್ರವಾದ ಅದ್ಭುತರೋಗದ ಪ್ರಾಬಲ್ಯವೂ ತನ್ಮೂಲಕ ಅಗಣಿತವಾದ ಪ್ರಾಣಹಾನಿಯೂ, ತತ್ಪ್ರಯುಕ್ತವಾದ ಜನರ ವಿಲಾಪವೂ ದಿನೇ ದಿನೆ ಹೆಚ್ಚುತಲಿದೆ. ಈ ರೋಗದ ವ್ಯಾಪಕತೆಯು ಬಹುತಪರಿತ ವೃದ್ಧಿಯಾಗುತ ಅದು ಅಪ್ರತೀಕಾರವಾದ ವ್ಯತ್ಯಯವಾಗಿಪರಿಣಮಿಸುತಲಿರುವದರಿಂದ ಅನೇಕರ ಜೀವಿತಾಶೆಯು ಅನಿರೀಕ್ಷಿತವಾಗಿ ನಿವೃತ್ತಿಯಾಗಿ ಕ್ಷಣಕಾಲದಲ್ಲಿ ಅವರವರ ವೃತ್ತಾಂತವು ಕಥಾರೂಪವಾಗಿ ಪರಿಣಮಿಸುತಲಿದೆ. ಇಂತಾ ಪರಿತಾಪಕರವಾದ ದಶೆಯಲ್ಲಿ ಜನರ ಸ್ಥಿತಿಯಂ ಕುರಿತು ಸರ್ವಾಲೋಚಿಸಿದರೇನೋ, ಅದು ಮತ್ತಷ್ಟು ದುಃಖದಾಯಕವಾಗಿರುತಿದೆ, ಯಾವ ಕಾಲದಲ್ಲಿ ಪ್ರಜಾ ಕ್ಷೇಮ ಚಿಂತಕರಾದ ಪಾಲಕರ ಸಹಾಯವೂ, ಅಭಯವೂ, ಅವಶ್ಯಕವಾಗಿರುವದೋ ಅಂತಾ ಸಂದರ್ಭವು ಇದಕ್ಕಿಂತ ಬೇರೊಂದಿರಲಾರದೆಂದೆಣಿಸುತ್ತೇವೆ. ಪ್ರತಿದಿನದಲ್ಲಿಯೂ ಅಪರಿಮಿತವಾಗಿ ಜನರು ತಮ್ಮ ಪ್ರಾಣಗಳಂ ನೀಗುತಲಿದ್ದರೂ ಈ ತಾಪತ್ರಯವೇ ಬೇಕಾಗಿಲ್ಲದಿರುವಂತೆ ಮಹಾರಾಜರವರು ತಮ್ಮ ಪರಿಜನ ಪರಿಚಾರಕರೊಡನೆ ಅನ್ಯರಾಜ್ಯದಲ್ಲಿ ವಿಶ್ರಾಂತಿ ಸುಖವನ್ನನುಭವಿಸುತಿದ್ದಾರೆ ಅವರದಿವಾನರವರುಕೂಡ ಇಲ್ಲಿಯಿಲ್ಲವು. ಇಲ್ಲಿ ಅಶ್ವಿನೀ ದೇವತೆಯಂತೆ ಪ್ರಜಾ ಪ್ರಾಣರಕ್ಷಕರಾಗಿ ಏರ್ಪಟ್ಟಿರುವ ದರ್ಬಾರ್ ಸರ್ಜಿಯನ್ ಡಾಕ್ಟರ್ ಮೆಗ್ಗ್ರಿಯವರು ಇಂತಾ ಕಾಲದೊಳಲ್ಲಿ ಹಾಜರಿದ್ದು ಬೇಕಾದ ಚಿಕಿತ್ಸೆಗಳನ್ನೂ ತತ್ಪ್ರಯುಕ್ತಗಳಾದ ಏರ್ಪಾಡುಗಳನ್ನೂ ಮಾಡುವದಕ್ಕೆ ಬದಲಾಗಿ ಕೇವಲ ಸುಖಾಪೇಕ್ಷೆಯೊಡನೆ ತಾವೂ ಮಹಾರಾಜರಂತೆ ಭಾವಿಸಿ ನೀಲಗಿರಿಯಲ್ಲಿರುತಲಿದ್ದಾರೆ. ರೋಗಿಗಳ ಸಂಖ್ಯೆಯು ಅಧಿಕವಾಗುತಲಿರುವಂತೆಲ್ಲ ಚಿಕಿತ್ಸಕರಿಗೆ ಔದಾಸೀನ್ಯವೂ ಅವರ ದೌರ್ಲಭ್ಯವೂ ವೃದ್ಧಿಯಾಗುತಲಿದೆ. ಮಿ॥ ಆರೋಗ್ಯಂಪಿಳ್ಳೆಯವರು ಜೀವಿಸಿದ್ದಕಾಲದಲ್ಲಿ ಅನೇಕರಿಗೆ ಚಿಕಿತ್ಸೆಮಾಡಿ ಪ್ರಾಣಗಳಂ ಕಾಪಾಡಿದ್ದರೂ ಅವರ ಅಪತ್ಕಾಲದಲ್ಲವರಿಗೆ ತಕ್ಕ ಚಿಕಿತ್ಸಕರೊಬ್ಬರೂ ದೊರೆಯದೇ ಹೋಗಿ ಅವರ ಉತ್ಕ್ರಮಣ ದಶೆಯಲ್ಲಿ ಮಿ॥ ಕಾಸ್ಟಲೋಯವರು ಬಂದನೋಡಿ ತನ್ನು ಜೀವಿತಾಶೆ ಯಿಲ್ಲವಾಗಿ ಪ್ರಯೋಜನವಿಲ್ಲವೆಂದುಸುಡಿದು ಯದುಳ್ಳರಿಗೆ ಅಭಿದಾರಿಯಂಕೊಟ್ಟರು. ಇಂತವರಸ್ಥಿತಿಯೇ ಈ ರೀತಿಯಾಗಿರುವಲ್ಲಿ ರಿಕ್ತರಾಗಿಯೂ, ಅನಾಥರಾಗಿಯೂ ಇರತಕ್ಕವರಗತಿ ಎಂತಿರಬೇಕೋ ಅದಂ ಯಾರಾದರೂ ಊಹಿಸಬಹುದು. ಇದಲ್ಲದೆ ಈ ಪೂರಿನಸ್ಥಿತಿ ಎಂತಿರುವದಂದರೆ—ಪರಗುಡದಿಗೆ ಪರಸ್ಥಳಗಳಂದ ಧಾನ್ಯಗಳು ಬಾರದೇಯಿರುವದರಿಂದ ನಿರಖ್ ದಿನೇದಿನೆ ಹೆಚ್ಚುತಲಿದೆ. ಹೊರಗಿನಿಂದ ಕಟ್ಟಿಗೆಗಾಡಿಗಳು ಬಾರದೆಹೋದದರಿಂದ ಕಾಷ್ಠ ದೌರ್ಲಭ್ಯದಿಂ ಮೃತಪಟ್ಟವರ ದಹನವು ಅತಿ ಪ್ರಯಾಸಕರವಾಗಿ ದುಶ್ಶಕ್ಯ ದುಃಖಕರವಾಗಿದೆ. ಗತವಾರದಲ್ಲಿ ಕಾಷ್ಠವು ಕುದ್ದಾಂಗ ದೊರೆಯದೆಹೋಗಲು ಹಿಂದುಪ್ರೇತವು ದಹನವಾಗದೆ ಒಂದೂವರೆ ದಿನದವರಿಗೆ ಇದ್ದುಬಿಟ್ಟದ್ದು ಬಳಿಕ ಅತಿ ಕ್ರಮದಿಂ ಸಂಸ್ಕಾರವಾಯಿತು. ಈ ಪಟ್ಟಣಿಗೆ ಬೆಣ್ಣೆ, ಮೊಸರು, ಹುಲ್ಲು ಪಗ್ಗೈರೆ ಆವಶ್ಯಕ ಪದಾರ್ಥಗಳು ಬಾರದೆಹೋದದರಿಂದ ಜನರಿಗೆ ಜೀವನವು ದುಸ್ತರವಾಗಿದೆ. ಈಗ ಪ್ರಾಪ್ತವಾಗಿರುವ ವಿಷಮಶೀತಜ್ವರವೂ, ವಾಂತಿಭೇದಿರೋಗವೂ ಏಕಕಾಲದಲ್ಲಿ ಜನರಧೈರ್ಯಕುಂದುಗ್ಗಿಸಿ, ಬಲುಮಂದೋಗಲಾಡಿಸಿ, ಉಲ್ಲಾಸವು ನಾಶಪಡಿಸಿ, ಕಡೆಗೆ ಪ್ರಾಣವನ್ನೇನೀಗಿಸುವದರಿಂದ ಜನರು ಬಹಳ ಭೀತರಾಗಿ ಪುರಪ್ರವೇಶವಾಪ್ರೆಂ ತಮಗೇನು ವಿಪತ್ತು ಪ್ರಾಪ್ತವಾಗುವದೋ ಎಂದುಶಂಕಿಸುತಲಿದ್ದಾರೆ. ಮುಖ್ಯವಾಗಿ ಅರ್ಧಭಾಗ ದೈವಿಕವಾಗಿಯೂ ಮಿಕ್ಕಾರ್ಧಭಾಗ ರಾಜಕೀಯವಾಗಿಯೂ ಏರ್ಪಟ್ಟಿರುವ ಪ್ರಕೃತ ದುರ್ದಶೆಯು ಶೀಘ್ರದಲ್ಲಿ ನಿವೃತ್ತಿಯಾಗುವದರೊಳಗಾಗಿ ನಾವು ನಮ್ಮ ಇಷ್ಟಮಿತ್ರರನ್ನು ಸಜೀವದಿಂ ನೋಡುವೆವೋ ಇಲ್ಲವೋ ಹಾದರಿಯೆವು. ಏನಂದರೆ ಇಂತಾಸ್ಥಿತಿಯಲ್ಲಿ ಅಧಿಕಾರಿಗಳ ಔದಾಸೀನ್ಯವು ಸುಖಾವಹವಲ್ಲವೆಂಬದಾಗಿ ತಿಳಿಸುವಂತೆ ಅತಿಸ್ನೇಹಾವಪಕವಾಯಿಯೆಂದು ಜನರಲ್ಲಿ ನಮಗುಂಟಾಗಿರುವ ಅನುರಾಗವು ಮುಖ್ಯವಾಗಿ ನಮ್ಮನ್ನು ಪ್ರೇರಿಸಿತು. ಐಶ್ವರ್ಯಭಾಗ್ಯದಲ್ಲಿ ಇಂಗ್ಲಿಷ್ ಜಾತಿನೊಳು ಅನುಭವಾರರು, ಕಂಡಾಯವಸೂಲೀವಿಷಯದಲ್ಲಿ ರೈತರು ಬಹಳ ಬಲಾತ್ಕರಿಸುತ ಪೀಡಿಸುತಲಿದ್ದಾರೆಂದು ಕೇಳುವದಕ್ಕೆ ನಾವು ಮತ್ತೂ ವಿಷಾದಿಸುವೆವು, ಹಿದ್ಯಿಕವೇ! ಇವೆಲ್ಲವು ನಿನಗೆ ವಿಲಾಸವಾಗಿದೆಯಲ್ಲವೆ.

THE LATE MR. AROKYAM PILLAY.

ಈ ಪೂರಲ್ಲಿ ಪ್ರಸಿದ್ಧರಾಗಿಯೂ, ಬಹುಮಂದಿಗೆ ಸ್ನೇಹಿತರಾಗಿಯೂ, ರಿಕ್ತರಿಗೆ ಬಹಳ ಉಪಕಾರಿಯಾಗಿಯೂ, ದಾಕ್ಷಿಣ್ಯಾದಿ ಗುಣಗಳುಳ್ಳ ಸ್ನೇಹಪರರಾಗಿಯೂ, ಇದ್ದ ಆನರೇರಿ ಸರ್ಜಿಯನ್ ಮಿ॥ ಆರೋಗ್ಯಂಪಿಳ್ಳೆಯವರು ಕಳೆದ ಮಂಗಳವಾರ ರಾತ್ರಿ ಈಪ್ಪೂರು ಲಾಲಬಾಗ್ ರೋಡಿನೊಳು ವಾಸವಾಗಿದ್ದ ಬಂಗ್ಲೆಯಲ್ಲಿ ಕಾಲಗತಿಯನ್ನೈದಿದರೆಂಬ ವೃತ್ತಾಂತವು ನಾವು ಅನಿರೀಕ್ಷಿತವಾಗಿ ಕೇಳಿ ಬಹಳ ವಿಷಾದಿಸುತ್ತೇವೆ. ಮಿ॥ ಆರೋಗ್ಯಂಪಿಳ್ಳೆಯವರಿಗೆ ಚಿರಕಾಲದಿಂದ ಬಾಸರೋಗ ವೊಂದು ನಿಯತವಾಗಿತುಕೆರಿದ್ದುಗನ್ನು ಕಡೆಯಲ್ಲಿ ಅದಕ್ಕೆ ಈಗಿನ ವಿಷಮಶೀತಜ್ವರವು ಬಹಳಮಟ್ಟಿಗೆ ಸಹಕಾರಿಯಾದುದಂವ,

ಕೇಳುತ್ತೇವೆ. ಇವರ ನೌಕರಿಯು ಮೈಸೂರು ಸರ್ಕಾರದವರಿಗೆ ಬಹಳ ದುರ್ಭರವಾಗಿದ್ದದರಿಂದ ಅವರು ಡಾಕ್ಟರ ಮೆಗ್ಗ್ರಿಯವರ ಪ್ರೇರಣೆಯ ಮೇಲೆ ಕೆಲಸದಿಂ ಇವರಂ ಬಲಾತ್ಕರಿಸಿ ನಿವೃತ್ತಿ ಮಾಡಿದರು. ಬಳಿಕ ಇವರ ಪ್ರಜಾನುರಾಗವೂ ಶಾಂತಸ್ವಭಾವವೂ ಬೇರೊಂದು ಕಡೆ ಅಂದರೆ ಇಲ್ಲಿನ ಮ್ಯುನಿಸಿಪಾಲಿಟಿಯಲ್ಲಿ ಒಂದು ಉದ್ಯೋಗವನು ಜನಗಳ ಪ್ರಾರ್ಥನೆಯ ಮೇಲೆ ಲಭಿಸುವಂತೆ ಮಾಡಿದವು. ಅದು ಸಹ ಡಾಕ್ಟರ್ ಮೆಗ್ಗ್ರಿಯವರ ಉದ್ದೇಶ ಪ್ರಯತ್ನಗಳಿಗೆ ವಿರುದ್ಧವಾಗಿದ್ದದರಿಂದ ಅದಂ ಅವರಿಗೆ ಕೊಡಕೂಡದೆಂದು ಬಹಳವಾಗಿ ತಡೆದರು. ಪರಂತು ದೈವಕೃಪೆಯಿಂದ ಅದು ಕಾರ್ಯಕಾರಿಯಾಗದೆಹೋಯಿತು. ಇವರು ವರ್ಷದ ಮೇಲೆ ನಿವೃತ್ತರಾಗಿ ಕೆಲವು ತಿಂಗಳಾದವು. ಇಷ್ಟರಲ್ಲಿಯೇ ಚಿರಕಾಲಿಕವಾದ ಉದ್ಯೋಗ ಕ್ರಮಫಲವನ್ನನುಭವಿಸಲಿಕ್ಕೆ ಅವಕಾಶವಿಲ್ಲವಂತೆ ಮೆ|| ಪಿಳ್ಳೆಯವರನ್ನು ಮೃತ್ಯುವು ಅಪಹರಿಸಿ ಯೆಲ್ಲರ ಕೋರಿಕೆಯಂ ಕ್ಷಣಕಾಲದಲ್ಲಿ ಭಂಗಗೊಳಿಸಿದುದಾ ಅದರ ಕ್ರೌರ್ಯಕ್ಕಾಗಿ ಎಷ್ಟು ಚಿಂತಿಸಿದಾಗ್ಯೂ ಸಾಲದೇ ಇರುತಿದೆ. ಪರಮ ಆಪ್ತರಾದವರ ವಿಯೋಗದನ್ಯಾವಮಾತು ಹಾಗಿರಲಿ ಅವರ ಕಾಲಾನಂತರ ಅವರಸ್ಮೃತಿಯನ್ನವಲಂಬಿಸಿ ಕೀರ್ತಿಯನ್ನೂ ಗಳಿಸಿದವರ ಸ್ಮರಣೆಯನ್ನೂ ಪ್ರಂಪೂರಣ ಮಾಡತಕ್ಕವರು ಸದರೀ ಕುಟುಂಬದಲ್ಲಿ ದುರ್ಲಭರಾದಬಗ್ಗೆ ವಿಶೇಷ ತಃ ಅನುತಾಪಪಡಬೇಕಾಗಿದೆ. ಮುಖ್ಯವಾಗಿ ಮಿಸ್ಟರ್ ಅರೋಗ್ಯಂ ಪಿಳ್ಳೆಯವರ ಮರಣಕ್ಕಾಗಿ ಅವರ ಬಾಲಕುಟುಂಬವೊಡನೆ ಎಲ್ಲರೂ ವಿಷಾದಿಸಬೇಕಾಗಿರುತಿದೆ. ಈಗ ಮೃತಪಟ್ಟವರಿಗೆ ನಾಲ್ಕೈದು ಮಕ್ಕಳಿರುವರೆಂದು ಕೇಳುತ್ತೇವೆ

ENTERPRISING BENGALEE GIRLS.

ಕಲ್ಕತ್ತಾ ಸ್ಟೇಟ್ಸಮನ್ ಪತ್ರಿಕೆಗೆ ಒಬ್ಬ ಬಾತಮೀದಾರನು ಬರೆಯುತ್ತಾನೇನಂದರೆ,— ಕೇಂಬ್ರಿಡ್ಜ್‌ನಲ್ಲಿರತಕ್ಕ ನ್ಯೂಯರ್ನ್‌ಹಾಂ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಬೇಕೆಂಬ ಕೋರಿಕೆಯೊಡನೆ ಇಬ್ಬರು ಬಂಗಾಳಿ ಕನ್ಯೆಯರು ಇಂಗ್ಲಾಂಡಿಗೆ ಹೊರಡುವ ಸಂಕಲ್ಪ ಪ್ರವೃತ್ತರಾಗಿದಾರೆಂಬ ಅಂಶವಂ ತಮಗೆ ತಿಳಿಸಲಿಕ್ಕೆ ನಾನು ಬಹಳ ಸಂತುಷ್ಟನಾಗಿರುವೆನು. ಇವರ ಪೈಕಿ ಬಿ. ಘರಾಯಿ ಯೆಂಬವರ ಪುತ್ರಿಯು ಎಫ್. ಎ. ಪರೀಕ್ಷೆಯಂ ಕೊಟ್ಟಿರುವಳಲ್ಲದೆ ಇಂದುಮತಿ ಸೇನರ ಪುತ್ರಿಯೂ ಕೂಡ ಗತ ವರುಷದಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯನ್ನೈದಿರುವಳು. ಈ ಇಬ್ಬರು ಬಾಲೆಯರು ಬಹಳ ಪ್ರಜ್ಞಾಶಾಲಿಗಳಾಗಿಯೂ, ಅಸಾಧಾರಣಗಳಾದ ಮೇಧಾಶಕ್ತಿಯುಳ್ಳವರಾಗಿಯೂ, ತರುಣಿಯರಾಗಿಯೂ ಇರುತ್ತಾರೆ. ನ್ಯಾಷನಲ್ ಇಂಡಿಯನ್ ಅಸೋಸಿಯೇಷನ್ ಸಮಾಜದ ಆನರರಿ ಸೆಕ್ರೆಟರಿಯಾದ ಮಿಸ್ ಮಾನಿಂಗ್ ಯವರು ಅವರಿಬ್ಬರ ವಿದ್ಯಾ ಸಂಗ್ರಹಣಾದಿಗಳಿಗೆ ಆವಶ್ಯಕಗಳಾದ ಏರ್ಪಾಡುಗಳನ್ನೆಲ್ಲ ಮಾಡಿ ಈಗ ಇಂಡ್ಯದೇಶದಿಂದ ಹೊರಟು ಬರಬಹುದೆಂದು ಬರೆದಿರುವದರಿಂದ ಅವರು ಶೀಘ್ರದಲ್ಲಿ ಇಂಗ್ಲಾಂಡಿಗೆ ಹೊರಡುವರು. ವಿದ್ಯಾಭ್ಯಾಸಕ್ಕಾಗಿ ಇಂಡ್ಯದೇಶದಿಂದ ಇಂಗ್ಲಾಂಡಿಗೆ ಹೋಗಿ ವಾಸವಾಗಿರತಕ್ಕವರ ಸಂಖ್ಯೆಯನ್ನು ಗತವಾರದಲ್ಲಿ ತಿಳಿಸಿದ್ದೆವಷ್ಟೆ. ಇವರೆಲ್ಲರೂ ಪ್ರಾಯೇಣ ಪೂರ್ವ ವಯಸ್ಕರಾಗಿರುತ್ತಾರೆ. ಇದಲ್ಲದೆ ಇದುವರಿವಿಗೆ ಹೋಗಿ ಬಂದವರೆಲ್ಲರೂ ತರುಣರಾಗಿದಾರೆಯೇ ಹೊರ್ತು ತರುಣಿಯರಸಂಖ್ಯೆ ಅತ್ಯಲ್ಪವಾಗಿರುತಿದೆ. ಇಂದಿರಾ ಠಾಗೂರ್‌ಯವರ ಕುಮಾರ್ತೆಯು ಲಿವರ್‌ಪೂಲ್‌ನಲ್ಲಿ ವಿದ್ಯಾಭ್ಯಾಸ ಮಾಡುತಿರ್ಪಳು. ನೋನಿ ಬಾನರ್ಜಿಯವರ ಪುತ್ರಿಯು ಕೇಂಬ್ರಿಡ್ಜಿನೊಳಗಿರುವ ಗರ್ಟನ್ ಕಾಲೇಜ್‌ನಲ್ಲಿ ವಿದ್ಯಾಭ್ಯಾಸ ಮಾಡುತಲಿರುವಳು. ಬೆಥ್ಯೂಂ ಕಾಲೇಜ್ ಲೇಡೀ ಸೂಪರ್ಇಂಟೆಂಡೆಂಟರಾಗಿರುವ ಚಂದ್ರಮುಖಿ ಘೋಷ್ ಯೆಂಬಾಕೆಯು ಕನಿಷ್ಠ ಸಹೋದರಿ ಸೊಬ್ಬಾಕೆಯು ಸ್ಕಾಚ್ ಮಿಷನ್ ವರ್ಸಿ

ಟಗಳ ಪೈಕಿ ಒಂದರಲ್ಲಿ ವೈದ್ಯಶಾಸ್ತ್ರ ಪ್ರವೀಣಳೆಂಬ ಡಿಗ್ರಿಯಂ ಪಡೆದು ಊರಿಗೆ ವಾಪಸ್ ಬಂದಿರುವಳು. ಈಗ ಯೊರದಿತಕ್ಕ ಬಾರಿಸ್ಟರೊಡನೆ ಮಾನಿತರಾದ ಪ್ಲೀಡರ್ ವಕೀಲರಿಬ್ಬರು ಇಂಗ್ಲಾಂಡಿನೊಳು ಕೆಲವು ತಿಂಗಳ ಕಾಲವನ್ನುಲ್ಲಾಸದಿಂ ಕಳೆಯಬೇಕೆಂಬ ತಾತ್ಪರ್ಯದಿಂದನುವರ್ತಿಸಿ ಹೋಗುವರು, ಎಂಬದು. ಔತ್ತರೇಯ ಸ್ತ್ರೀಯರಿಗುಂಟಾಗಿರುವ ಮನೋದಾರ್ಢ್ಯವೂ, ಉಲ್ಲಾಸವೂ, ಜಾಗರೂಕತೆಯೂ ದಾಕ್ಷಿಣಾತ್ಯರಾದ ಪುರುಷರಿಗಿಲ್ಲದೆ ಹೋದಬಗ್ಗೆ ಬಹಳ ಚಿಂತಿಸಬೇಕಾಗಿದೆ. ಈ ದಕ್ಷಿಣ ಇಂಡಿಯಾ ದೇಶದಿಂದಲೂ, ವಿಲಕ್ಷಣತರರಾದ ನೇಟಿವ್ ಅರಸರ ರಾಜ್ಯಗಳಿಂದಲೂ ಕೆಲವು ಕುಟುಂಬಗಳು ಹೊರಟರೆ ಬಳಿಕ ಈ ಕುತ್ಸಿತಯುಕ್ತಿತ್ವ ವಿಚಾರಕ್ಕೆ ಅವಕಾಶವಿಲ್ಲದಿರುವದಲ್ಲವೆ? ಇಂಗ್ಲಿಷ್ ಪಾರ್ಲಿಮೆಂಟಿನ ಸಭೆಯಲ್ಲಿ ಸ್ಥಾನವಂ ಬಯಸುತಲಿರುವ ಹಿಂದೂಗಳು ಮೊದಲು ಇದಂ ಪರಿಷ್ಕರಿಸಬೇಕು. ರಮಾ ಭಾಯಿಯಂತಹ ಪಂಡಿತಾಂಗನೆಯರ ಸಮೂಹವು ಸಾಮಾನ್ಯೇನ ವೃದ್ಧಿಯಾದ ಹೊರ್ತು ಇಲ್ಲಿನ ಪುರುಷರಿಗೆ ಸ್ವಾತಂತ್ರ್ಯ ಪ್ರಾಪ್ತವಾಗಲಾರದು. ಡೋಬಿಣೀಯುಳ್ಳವಾದ ಕಟ್ಟಳೆಯಂತೆ ಮುಂದೆ ನಮ್ಮ ಸ್ತ್ರೀಯರ ಬಾಯಿಯೇ ನಮಗೊಂದು ಪ್ರಕಾಶವನ್ನುಂಟು ಮಾಡಬೇಕಾಗಿರುವದು. ಇದು ಸಹ ನಮಗೆ ಸೃಷ್ಟಿಯ ಮದೇಶ ಸಂಬಂಧದಿಂದುಂಟಾದ ಮಹತ್ಪ್ರಯೋಜನಗಳಲ್ಲೊಂದಾಗಿರುತಿದೆ

Occasional Notes
ನೈಮಿತ್ತಿಕ ವಿಷಯನ್ಯಾಸ.

Stock in hand—ಮಾರ್ಚಿ ಮಾಹೆ ೩೧ನೇ ತಾರೀಖಿನಲ್ಲಿ, ಮದರಾಸ್ ಉಪ್ಪಿನ ಕೋಠಿಯಲ್ಲಿ ಹದಿನೇಳು ಲಕ್ಷ ಮಣಗಳುಪ್ಪು ಕೈಯಲ್ಲಿ ಶಾಖರಿದುವಂತೆಯೂ ಇದು ಒಂದು ವರುಷದ ಖರ್ಚಿಗೆ ಸಾಕಾಗಿರಬಹುದೆಂದು ನಿರೀಕ್ಷಿಸಲ್ಪಟ್ಟರುವಂತೆಯೂ, ಆದುದರಿಂದ ಉಪ್ಪಿನ ಕೋಠಿಯಲ್ಲೀಗ ಇರತಕ್ಕ ಶಿಬ್ಬಂದಿಯು ಅವರವರಿಗೆ ಈಗಿನಂತೆಯೇ ನಿಲ್ಲಿಸಿದ್ಪರುವದೆಂದಲೂ ಮದರಾಸ್ ಮೆಯಿಲ್ ಪತ್ರಿಕೆ ತಿಳಸುತಿದೆ

Grant of a Jagir,—ಸನ್ ೧೮೫೭ನೇ ಇಸವಿಯಲ್ಲಿ ನಡೆದ ಸಿಪಾಯಿಗಳ ಕಲಹಕಾಲದಲ್ಲಿ ಅನೇಕಜನ ಬ್ರಿಟಿಷ್ ಆಫಿಸರ್‌ಗಳ ಮತ್ತು ಮಕ್ಕಳ ಪ್ರಾಣಗಳಂ ರಕ್ಷಿಸಿದಂತಾ ಸೀಲಕೋಟ ನಿವಾಸಿಯಾದ ಸರ್ದಾರ್ ಹರಿಸಿಂಗ್ ಯೆಂಬವರಿಗೆ ರಾವೀನದಿಯ ದಡದಲ್ಲಿ ೩೦೦ ಎಕ್ರೇಗಳ ಜಮೀನನ್ನು ಜಹಗೀರ್ ರೂಪವಾಗಿ ಕೊಡಬೇಕೆಂದು ಪಂಜಾಬ್ ಗವರ್ನ್‌ಮೆಂಟಿನವರಿಗೆ ಇಂಡ್ಯ ಸರ್ಕಾರದವರು ತಿಳಿಸಿರುವಂತೆ ಕೇಳುತ್ತೇವೆ.

Pleadership Examination—ಕಳೆದ ಫೆಬ್ರವರಿ ತಿಂಗಳಲ್ಲಿ ನಡೆದ ಪ್ಲೀಡರ್ ಪರೀಕ್ಷೆಗೆ ಹೋಗಿದ್ದ ಉಮೇದುವಾರರ ಪೈಕಿ ತೇರ್ಗಡೆಯಾಗದೆ ತಪ್ಪಿಹೋದ ೪೭೦ ಮಂದಿ ಹೋಗಲಾಗಿ ಮಿಕ್ಕ ೧೩೦ ಜನ ಇವರದಿ ಕಂದಂತೆ ತೇರ್ಗಡೆಯಾಗಿರುವರು. ಮದರಾಸ್ ೬೦. ತಿರುಚನಾಪಲ್ಲಿ ೧೭, ಕಳ್ಳಿಕೋಟೆ ೨, ತಿರುನೆಲ್ವೇಲಿ ೧೨, ರಾಜಮಹೇಂದ್ರವರ ೫, ಬರ್ಹಾಂಪೂರ್ ೪, ಬಳ್ಳಾರಿ ೨, ಮಂಗಳೂರ್ ೬, ವಿಜಾಗಪಟ್ಣ ೩.

The Viceroy's letter to the Duke of Connaught—ಡ್ಯೂಕಾಫ್ ಕಾನಾಟಿಯವರು ಇಂಡ್ಯ ದೇಶವಂ ಬಿಟ್ಟು ಹೊರಡು ಸಮಯದಲ್ಲಿ ವೈಸರಾಯಿಯವರು ಅವರಿಗೊಂದು ಕಾಗದ ಬರೆದರೆಂತಲೂ ಅದರಲ್ಲಿ ಇಂಡ್ಯ ದೇಶದೊಳು ಡ್ಯೂಕರವರು ಮಾಡಿದ ಶ್ಲಾಘ್ಯವಾದ ನೌಕರಿಗಳ ಬಗ್ಗೆ ಅವರಿಗೆ ವಂದನೆ ಮಾಡಿ ಮುಂದೆ ಇಂಡ್ಯದೇಶದ ಬಂದೋಬಸ್ತಿಗೂ ಸುಖಾಭಿವೃದ್ಧಿಗೂ ಕಾರಣಭೂತಗಳಾದ ವಿಷಯಗಳಲ್ಲಿ ಅವರು ಗವರ್ನ್‌ಮೆಂಟಿನವರಿಗೆ ಬಂದೋಬಸ್ತ ರವಾದ ಸಹಾಯ ಮಾಡಬೇಕೆಂದು ಕೋರಿರುವದಾಗಿ ನಮೂದಿಸಿದ್ದರೆಂತಲೂ ತಿಳಿಯಬರುತಿದೆ

College of Engineering Madras—ಬರುವ ತಿಂಗಳ ೫ನೇ ತಾರೀಖಿನಲ್ಲಿ ಓವರ್‌ಸಿಯರ್ ದರಗತಿಗೆ ದಾಖಲಾಗತಕ್ಕ ಉಮೇದುವಾರರೆಲ್ಲರಿಗೂ ಯೋಗ್ಯತಾ ನಿರ್ಧಾರಕ ಪರೀಕ್ಷೆಯು ಮದರಾಸ್, ಬರ್ಹಾಂಪೂರ್, ವಿಶಾಖಪಟ್ಣ, ರಾಜಮಹೇಂದ್ರ, ಬಳ್ಳಾರಿ, ಮಚಲೀಪಟ್ಣ, ಕರ್ನೂಲ್, ಕುಂಭಕೋಣ, ನೆಲ್ಲೂರು, ಮಧುರೆ, ಕಳ್ಳಿಕೋಟೆ, ಮಂಗಳೂರು, ಈ ಪ್ರದೇಶಗಳೆಲ್ಲೆಲ್ಲ ಏಕಕಾಲದಲ್ಲಿ ಜರುಗುವದು. ಅದೇ ತಾರೀಖಿನಲ್ಲೇ ಇಂಜಿನಿಯರಿಂಗ್ ಕಾಲೇಜಿಗೆ ಮಿಲಿಟರಿ ವಿದ್ಯಾರ್ಥಿಗಳನ್ನು ದಾಖಲ್ಮಾಡಿಕೊಳ್ಳಲಿಕ್ಕೆ ಬಗ್ಗೆ ಒಂದು ಪರೀಕ್ಷೆ ನಡೆಯುವದೆಂದು ತಿಳಿಯಬರುತಿದೆ.

Mr M. Ratnavelachariyar B A—ಮದರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ಕೆಲವು ಕಾಲ ಅಸಿಸ್ಟೆಂಟ್ ಪ್ರೊಫೆಸರರಾಗಿದ್ದು ಈಗ ಸೀಮಾ ಸರ್ಕಾರದಲ್ಲಿ ಪೋಲಿಸ್ ಅಸಿಸ್ಟೆಂಟ್ ಕಮಿಷನರಾಗಿರತಕ್ಕ ಮೆ|| ರತ್ನವೇಲಾಚಾರಿ ಬಿ. ಎ. ಯವರು ಲಂಡನ್ ಜಿಯಾಲಾಜಿಕಲ್ ಸೊಸೈಟಿಗೆ ಮೆಂಬರಾಗಿ ಚುನಾಯಿಸಲ್ಪಟ್ಟರೆಂತಲೂ, ಸದರೀ ಸೊಸೈಟಿಗೆ ಮೆಂಬರಾಗಿರುವಂತಾ ಗೌರವವಂ ಇದುವರೆಗೆ ಪಡೆದಿರತಕ್ಕವರಲ್ಲಿ ಮೊದಲಿಗರು ಇವರೆಂತಲೂ, ಈ ವೃತ್ತಾಂತವು ಅನೇಕರಿಗೆ ಸಂತೋಷಕರವಾಗಿರಬಹುದೆಂತಲೂ ಮದರಾಸ್ ಹಿಂದೂ ಪತ್ರಿಕೆ ತಿಳಸುತಿದೆ

The publication of official documents—ಇದುವರೆವಿಗೆ ಇಂಡಿಯಾ ಗವರ್ನ್‌ಮೆಂಟಿನವರು ಕೆಲವು ಸರ್ಕಾರಿ ಕಾಗದ ಪತ್ರಗಳನ್ನು ಪ್ರಜೆಗಳ ತಿಳುವಳಿಕೆಯ ಬಗ್ಗೆ ಗೆಜೆಟ್‌ನಲ್ಲಿ ಪ್ರಕಟಮಾಡುತಲಿದ್ದರಷ್ಟೆ. ಮುಂದೆ ಹಾಗೆ ಪ್ರಕಟಿಸಲು ಅವಶ್ಯಕತೆ ಇರುವದಿಲ್ಲವೆಂತಲೂ, ಅದಕ್ಕಾಗಿ ತಗಲುತಿರುವ ಖರ್ಚು ನಿಷ್ಪ್ರಯೋಜನವೆಂದು ಕಂಡು ಬರುವದರಿಂದ ಅದಂ ತಗ್ಗಿಸಬೇಕೆಂತಲೂ ತಿಳಿಸಿ ಇಂಡಿಯಾ ಗವರ್ನ್‌ಮೆಂಟಿನವರು ಪ್ರಾಂತ್ಯ ಗವರ್ನ್‌ಮೆಂಟಿನವರ ಅಭಿಪ್ರಾಯವನ್ನು ಕೇಳಿರುತ್ತಾರೆಂದು ತಿಳಿಯಬರುತಿದೆ. ರಾಜ್ಯಾಡಳಿತ ವಿಷಯಗಳಲ್ಲಿ ಯಥೋಚಿತ ಸಂಬಂಧವನ್ನುಳ್ಳವರು ತಮಗೆ ತಿಳಿಸಿ ಕೊಡಬೇಕೆಂಬುದಾಗಿ ಸಾಮಾನ್ಯೇನ ಪ್ರಜೆಗಳೆಲ್ಲರೂ ವಿವಾದಿಸುತಲಿರುವ ಈ ಸಮಯದಲ್ಲಿ ಇಂತಾ ಏರ್ಪಾಡು ಯುಕ್ತವಾದದ್ದೆಂದು ಯೆಷ್ಟು ಮಾತ್ರವೂ ಹೇಳಕೂಡದು.

Increase of subscription—ಭೌತಿಕಶಾಸ್ತ್ರಜ್ಞಾನಾಭಿವೃದ್ಧಿಯ ಬಗ್ಗೆ ಇಂಡಿಯನ್ ಅಸೋಸಿಯೇಷನ್ ಸಮಾಜಕ್ಕೆ ವಿಜಯನಗರ ಮಹಾರಾಜರವರು ಸಹಾಯಾರ್ಥ ಕೊಟ್ಟ ಚಂದಾ ಮೊಬಲಗನ್ನು ೮,೦೦೦ ರೂಪಾಯಿಗಳಿಂದ ೧೦,೦೦೦ ರೂಪಾಯಿಗಳಿಗೆ ಜಾಸ್ತೀ ಮಾಡಿದರೆಂದು ಒಂದಾನೊಂದು ಕಲ್ಕತ್ತಾ ಪತ್ರಿಕೆ ತಿಳಿಸಿ ಮಹಾರಾಜರವರ ದಾತೃತ್ವವು ಬಹಳವಾಗಿ ಕೊಂಡಾಡುತಿದೆ. ನಮ್ಮ ನೇಟಿವ್ ಸಂಸ್ಥಾನಾಧಿಪತಿಗಳಲ್ಲಿ ಪ್ರಾಯಶಃ ಅನೇಕರು ಸ್ವಂತಮನೆ ಸೇರಿ ಬೀಳುತಲಿರುವಾಗ್ಯೆ ನೆರೆಯವರ ಮನೆಗೆ ಸುಣ್ಣ ಹಾಕಿ ರಿಪೇರಿ ಮಾಡಲಿಕ್ಕೆ ಹೋಗುವಂತಾ ಸ್ವಭಾವವುಳ್ಳವರಾದುದರಿಂದ ತಮ್ಮ ಸಂಸ್ಥಾನಗಳ ಏಳಿಗೆ ಯೆಂತಿದ್ದಾಗ್ಯೂ ಅವರಿಗದು ವಿಶೇಷ ಪರಿಭಾವನೀಯ ಸಂಗತಿಯಾಗಿಲ್ಲವು. ತಮಗೆ ಅನ್ಯತ್ರ ಒಂದು ಪ್ರಾಶಸ್ತ್ಯ ಲಭಿಸುವದಾಗಿದ್ದರೆ ಅದಕ್ಕಾಗಿ ತಮ್ಮ ರಾಜ್ಯ ಕೋಶಗಳಂ ಸಹ ಕಳೆದುಕೊಳ್ಳಲಿಕ್ಕೆ ಸನ್ನದ್ಧರಾಗಿರುವರು.

Hindu Family Women's Association—ಮದರಾಸ್ ಹಿಂದೂ ಪತ್ರಿಕೆಗೆ ಕುಂಭಕೋಣದಿಂದ ಒಬ್ಬ ಬಾತಮೀದಾರನು ಬರೆಯುತ್ತಾನೇನಂದರೆ —ಈ ಊರಿನ ನಿವಾಸಿಗಳಾಗಿರತಕ್ಕ ವೈಲಕ್ಷಣ್ಯವುಳ್ಳ ಮಾನಿತರಾದ ಹಿಂದೂ ಸ್ತ್ರೀಯರು ಕೆಲವರು ಸೇರಿ “ಹಿಂದೂ ಕುಟುಂಬಿನೀ ಸಮಾಜ” ವೆಂಬ ಹೆಸರುಳ್ಳ ಒಂದು ಸಂಘವನ್ನೇರ್ಪಡಿಸಿರುತ್ತಾರೆಂತಲೂ, ಸಂಘದ ಮುಖ್ಯ ಉದ್ದೇಶ

ರವೇ ಅವರ ಮುಖ್ಯೋದ್ದೇಶ್ಯವೆಂತಲೂ, ಇಲ್ಲಿನ ಸರ್ಕಾರಿ ಬಾಲಿಕಾ ಪಾಠಶಾಲೆಯ ಪ್ರಥಮೋಪಾಧ್ಯಾಯಿನಿಯಾದ ಚೆಲ್ಲಮ್ಮನೆಂಬಾಕೆಯು ಸದರೀ ಸಂಘದ ಕಾರ್ಯದರ್ಶಿಯಾಗಿರುವಳೆಂತಲೂ ತಿಳಿಯಬರುತಿದೆ, ಎಂಬದು. ಸ್ತ್ರೀ ವಿದ್ಯಾ ವೈಲಕ್ಷಣ್ಯಕ್ಕೆ ಮಾತೃಸ್ಥಾನವೆನಿಸಿರುವ ಮೈಸೂರಲ್ಲಿ ಇದುವರೆವಿಗೆ ಇಂತಾ ಸಮಾಜವೊಂದು ಪ್ರತ್ಯೇಕ ಏರ್ಪಡದಿರುವದು ಬಹಳ ಆಶ್ಚರ್ಯಕರವಾಗಿದೆ. ಸಕಲಕಲಾ ಕುಶಲರಾದ ಅಲ್ಲಿನ ಕುಲಾಂಗನೆಯರು ಇಂತಾ ಪ್ರತ್ಯೇಕ ಸಭೆಯು ತಮಗೆ ಪ್ರಯೋಜನಕಾರಿಯಾಗಲಾರದೆಂದು ಭಾವಿಸಿದ್ದರೂ ಇರಬಹುದು. ನೇಟಿವ್ ಸಂಸ್ಥಾನಗಳಲ್ಲಿ, ತತ್ರಾಪಿ ಪ್ರಸಿದ್ಧವಾದ ಮೈಸೂರಲ್ಲಿ ಸಮಯಾಚಾರ ಪರಿಷ್ಕರಣ ಪ್ರಯತ್ನವು ಪ್ರಜೆಗಳಿಗಿಲ್ಲದೆ ಹೋದದಕ್ಕಾಗಿ ಅಲ್ಲಿನ ಪತ್ರಿಕೆಯೊಂದು ಬಹಳ ಅನುತಾಪಿಸುತಿದೆ. ಇಂತಾ ಸಂದರ್ಭದಲ್ಲಿ ಸ್ತ್ರೀಯರು ನೇಪಥ್ಯವನ್ನಗಲಿ ಗೋಷ್ಠಿಯಂ ಪ್ರವೇಶಿಸಿದ ಹೊರ್ತು ಯಾವದೂ ಕ್ರಮ ಪಡಲಾರದಾಗಿ ಮುಂದೆ ಬರತಕ್ಕ ಪ್ರತೋದ್ಯೋಗಿಯು ನಾರೀ ಮಂಡಲಾಧೀನವಾಗಿರುವದು.

LOCAL AND PROVINCIAL NEWS
ಸ್ಥಳದೇಶಮುತ್ತು ಪ್ರಾಂತ್ಯಸಂಬಂಧ ವೃತ್ತಾಂತಗಳು.

Obituary—ಪಿನಾಕಪಾಣಿಯವರ ಬಂದರ್ ಸೆಕ್ರೆಟರಿಯವರಾಗಿದ್ದ ಮೆ|| ವೆಲ್ಲಯಂ ಕೃಷ್ಣಯ್ಯನವರ ಪತ್ನಿಯು ಕಳೆದ ಬುಧವಾರದ ದಿನ ಅಕಸ್ಮಾತ್ ಅಲ್ಪಕಾಲ ವ್ಯಾಧಿಪೀಡಿತಳಾಗಿ ದೈವಾಧೀನರಾದರೆಂಬ ವೃತ್ತಾಂತವನ್ನರಿತು ಬಹಳ ವಿಷಾದಪಡುತ್ತೇವೆ. ಆಕೆಯು ಒಳ್ಳೆ ಗುಣವತಿಯೂ ಮತ್ತು ವಿದ್ಯಾವತಿಯೂ ದಸತಿಗಳಾಗಿ ಪತಿಗೆ ಅನುಕೂಲಳಾದ ಭಾರ್ಯೆಯೆನಿಸಿದ್ದಳು. ಆಕೆಗೆ ಇನ್ನೂ ೩೦ ವರುಷಗಳು ಪೂರ್ತಿಯಾಗಿಲ್ಲವು. ಮೆ|| ಕೃಷ್ಣಯ್ಯನವರಿಗೆ ಪ್ರಾಪ್ತವಾದ ಇಂತಾ ಬಾಲ್ಯವಿಯೋಗವು ಮನಸ್ಸಿಗೆ ಅಸಹ್ಯವಾದದ್ದೆಂದು ಯಾರೂ ಹೇಳಬಹುದು. ನಿರಂತರ ಹೃದಯವ್ಯಥಾಕಾರಿಯಾದ ವಿಷಯವಿದಾದುದರಿಂದ ಮೆ|| ಕೃಷ್ಣಯ್ಯನವರು ಒಂದು ವರ್ಷಕಾಲ ಮರುವಿವಾಹ ಮಾಡುವುದಿಲ್ಲವೆಂಬ ಸಂಕಲ್ಪವುಳ್ಳವರಾಗಿದಾರೆಂದು ಕೇಳುತ್ತೇವೆ. ಅವರ ದುಃಖಾಕ್ರಾಂತವಾದ ಹೃದಯಕ್ಕೆ ಪರಿಶಾಂತಿ ಇಲ್ಲದೆ ಹೋದರೆ ಅದು ಕಡೆಗೆ ಅನ್ಯಾಯಕಾರಿಯಾಗುವದೆಂಬದು ಅವರಿಗೆ ತೋರದೆ ಹೋಗಲಾರದು. ಆದಕಾರಣ ಪ್ರತ್ಯೇಕ ಚಿಂತೆಯು ವಿವೇಕಿಗೆ ಯುಕ್ತವಲ್ಲವು

Deficiency in the Taluk Treasury—ಕಳೆದವಾರದಲ್ಲಿ ಮೈಸೂರ್ ತಾಲ್ಲೂಕು ಕಚೇರಿಯಲ್ಲಿ ತಾಂಬ್ರದನಾಣ್ಯಗಳು ೧೦೦ರ ಪೈಕಿ ಕೆಲವು ಗೈರುಹಾಜರಾಗಿ ಬಿದ್ದದ್ದಕ್ಕಾಗಿ ಅಲ್ಲಿನ ಶಿರಸ್ತೇದಾರರನ್ನೂ ಸರಾಫರನ್ನೂ ನಗದಿ ಗುಮಾಸ್ತೆಯನ್ನೂ ಜವಾಬ್ದಾರರನ್ನಾಗಿ ಮಾಡಿ ವಿಚಾರಣೆ ನಡೆಯಿತು. ನಗದೀ ಗುಮಾಸ್ತೆಯು ಎಣಿಕೆಗಳಿಗೆ ತಾಳೆ ಬರುವದೇ ಇಲ್ಲವೋ ನೋಡಿಕೊಳ್ಳುವರಾದ್ದರಿಂದ ಅವರಿಂದ ಯಾವದನ್ನೂ ನಡೆಯಲಿಕ್ಕಿಲ್ಲ. ಶಿರಸ್ತೇದಾರರು ತಾವು ತುಂಬಿದ ಚೀಲಗಳ ಮೊಹರನ್ನು ಮಾತ್ರ ನೋಡಿಕೊಂಡು ಅರ್ಧವಿದ್ದ ಚೀಲಗಳನ್ನು ಲೆಕ್ಕ ಮಾಡಲಿಲ್ಲವೆಂತಲೂ ಅದು ತಮ್ಮ ಕೆಲಸವಾಗಿದ್ದರೂ ಸರಾಫನಿಗೆ ವಹಿಸಿದ್ದರೆಂತಲೂ ಆದುದರಿಂದ ತಮಗೆ ಏನೂ ತಿಳಿಯಲಿಲ್ಲವೆಂತಲೂ ಹೇಳಿದರು. ಐರನ್‌ಸೇಫ್ ಕಾಲದಲ್ಲಿ ಬಹಳ ಗಲಾಟೆಯಾದುದರಿಂದ ಒಂದು ಚೀಲವು ಯಲ್ಲಿ ಸ್ಥಳಾಂತರವಾಯಿತೋ ಗೊತ್ತಿಲ್ಲವೆಂದು ಸರಾಫನು ಹೇಳಿದನು. ಏನುಬ ಸರಾಫನನ್ನೂ ಶಿರಸ್ತೇದಾರರನ್ನೂ ಸಸ್ಪೆಂಡ್ ಮಾಡಿ ಅವರ ಸ್ಥಳಗಳಿಗೆ ಬೇರೇ ಜನರನ್ನು ನೇಮಕ ಮಾಡಿರುವರು. ಇದು ಎಷ್ಟು ದಿವಸದ ಅಧಿಕಾರ ಮಾತ್ರ ಇನ್ನೂ ತಿಳಿಯದು.

Mr Sreenivasachailu R B.—ರಾಯಬಹದೂರ್ ಶ್ರೀನಿವಾಸಾಚಾರ್ಯರವರನ್ನು ಅಂಡರ್ ಸೆಕ್ರೆಟರಿಯಾಗಿ ನೇಮಕ ಮಾಡಿದ ವಿಷಯದಲ್ಲಿ ಕೆಲವು ವೃತ್ತಾಂತ ಪತ್ರಿಕೆಗಳು ಆಕ್ಷೇಪ

ಸುತಿವೆ. ನೌಕರಿಯಲ್ಲಿ ಗುಣದೋಷಗಳು ಭಾವಾನುಗುಣವಾದುದರಿಂದ ಅದರಮೇಲೆ ನಾವೇನೂ ಹೇಳಲಾರೆವು. ಹಾಗಂತು ಮೆ|| ಶ್ರೀನಿವಾಸಾಚಾರ್ಯರ ನೌಕರರಾತಿಯು ತಾತ್ಕಾಲಿಕವಾದದೆಂಬದನ್ನು ಅವರು ಹೈಸ್ಕೂಲಿನಲ್ಲಿಯೇ ಅವರಿಗೆ ಉದ್ದಿಷ್ಟವಾಗಿರುವ ಮುಜರಾಯಿ ಇಲಾಖೆಗೆ ಹೋಗುವರೆಂಬದನ್ನು ಅದುವರಿವಿಗೆ ಈಗ ಮಾಡಲ್ಪಟ್ಟಿರುವ ಏರ್ಪಾಡು ಮುಂಗಾಮಿ ಶಾಶ್ವತ ಯೆಂಬದನ್ನು ತಿಳಿಯದೆ ಕಾರ್ಯಕಾರಣಗಳಂ ಸ್ವತಃ ಕಲ್ಪಿಸಿಕೊಂಡು ಇಲ್ಲದ ವಿಪರೀತಕ್ಕೆ ಅವಕಾಶಕೊಡುವದು ಯುಕ್ತವೆಂದು ಭಾವಿಸಲಾರೆವು.

Influenza and Public offices.—ಈಗ ಕಾಲಸ್ಥಿತಿಯು ಬಹಳ ಪ್ರತಿಕೂಲವಾಗಿ ಇನ್‌ಫ್ಲುಯೆಂಜಾ ರೋಗ ಹಿಂದುಗಡೆಯಲ್ಲೂ, ವಾಂತಿ ಭೇದಿರೋಗವು ಮುಂದುಗಡೆಯಲ್ಲೂ ಜನರು ಬಾಧಿಸುತ ಪ್ರತಿನಿತ್ಯವೂ ಅನೇಕರನ್ನು ಮೃತ್ಯುವಿಗೆ ಈಡುಮಾಡುತ್ತಿರುವದರಿಂದಲೂ, ಪ್ರತಿ [illegible] ರೋಗಪೀಡಿತನಾಗಿರುವದರಿಂದಲೂ [illegible] ಅತ್ಯವಶ್ಯವಾಗಿರ [illegible] ಸರ್ಕಾರಿ ಇಲಾಖೆಗಳಲ್ಲೆಲ್ಲ [illegible] ಉದ್ಯೋಗಸ್ಥರು [illegible] ಸುತಿರುವುದ [illegible] ಮುರದಿ [illegible] ಜನರು [illegible] ಭಾವಿಸ್ಯವಡೆ ಹೋಗಲಿ ರದಿ.

Public offices for the assigned tracts [illegible] ಸುಗಳಿಗಾಗಿ ಪ್ರತ್ಯೇಕ ಒಂದು ಕಟ್ಟಡವಿಲ್ಲದೇ ಇಲ್ಲಿಯವರೆಗೆ ಬಾಡಿಗೆ ಬಂಗ್ಲೆಗಳಲ್ಲಿ ಆಫೀಸು ಮಾಡುತ್ತಲಿದ್ದರು. ಈ ಕೊರತೆಯಂ [illegible] ರೆಸಿಡೆಂಟರವರು ಸಿವಿಲ್ [illegible] ಒಂದು ಪಬ್ಲಿಕ್ ಆಫೀಸು ಕಟ್ಟತಕ್ಕಬಗ್ಗೆ ಒಂದು ಕಟ್ಟಡದ ನಮೂನೆಯಂ ತಯಾರಿಸುವಂತೆ ಎಗ್ಜಿಕ್ಯುಟಿವ್ ಇಂಜನಿಯರಿಗೆ ಹುಕುಂ ಮಾಡಿದರೆಂತಲೂ ಸದರಿ ಕಟ್ಟಡವು [illegible] ಸರಕಾರದವರಲ್ಲಿ ಕಟ್ಟಲ್ಪಡುವದೆಂತಲೂ ಸದರೀ ಮೈದಾನಕ್ಕೆ ಹೊಂದಿಕೊಂಡಿರುವದರಿಂದ ನಿಶ್ಚಿತ ಭಾಗವನ್ನು ನಮಗೆ ಬಿಟ್ಟುಕೊಡುವವರಲ್ಲೇನಾದರೂ [illegible] ಮಹಾರಾಜಾ ಸರ್ಕಾರದವರನ್ನು ಕೇಳಿದರೆಂತಲೂ ಬೆಂಗಳೂರಿನ ಸ್ಪೆಕ್ಟೇಟರ್ ಪತ್ರಿಕೆ ತಿಳಿಸುತ್ತದೆ. [illegible] ಮೈದಾನಕ್ಕೆ ಹೋದಬಳಿಕ ಈಗಿನ ದೇವಸ್ಥಾನವು [illegible] ಯಾಗಬಹುದು. ಮುದರಿಂದ ಬ್ರಿಟಿಷ್ ರೆಸಿಡೆಂಟರವರು ತಮ್ಮ ಉಪಯೋಗಾರ್ಥವೇ ಕೆಂದು [illegible] ಮಹಾರಾಜಾ ಸರ್ಕಾರದವರು ಸನ್ನದ್ಧರಾಗಿರುವಾಗ್ಯೂ ವಾಲೀಜಮಿನನ್ನು ಕೊಡದೆ ಹ್ಯಾಗೆ ವಹಿಸಿನೋ ಯುಕ್ತವೆಂದು ನಮಗೆ ತೋರುವದಿಲ್ಲ. [illegible] ರೆಸಿಡೆಂಟರಿಗೆ ತೋರಬಹುದಾದೀತೆ?

Revenue appeals.—ಡಿಪ್ಯುಟಿ ಕಮಿಷನರುಗಳ ಮೇಲೆ ಬರತಕ್ಕ ರೆವಿನ್ಯೂ ಅಪೀಲ್ ಮೊಕದ್ದಮೆಗಳನ್ನು ಇಬ್ಬರು ಕೌನ್ಸಿಲರುಗಳ ಪೈಕಿ ಒಬ್ಬರು ನಾಡಿನಲ್ಲಿರುವ ಕಾಲದಲ್ಲಿ ಮತ್ತೊಬ್ಬರು ಹಿಂದು ದರ್ಬಾರಿನಲ್ಲಿ ಮಾಡಿ ಫೈಸಲ್ ಮಾಡಬೇಕೆಂಬದಾಗಿ ಮೈಸೂರು ಸರ್ಕಾರದವರು ಈಗ ನಿರ್ಣಯಿಸಿ ಖಾಯಂ ಮಾಡಿರುವರೆಂದು ಕೇಳುತ್ತೇವೆ. ಇದರಿಂದ ಕಕ್ಷಿಗಾರರಿಗೆ ಅನಾನುಕೂಲತೆಯೂ ಅರ್ಥವ್ಯಯವೂ ಬಹಳವಾಗಿ ಕಡಮೆಯಾಗಬಹುದು. ಆದರೆ ಕೆಲಸದ ಗಲಭೆಯು ಕಡಮೆಯಾಗುವ ಕಾಲದಲ್ಲಿ ಮೂವರು ಕೌನ್ಸಿಲರುಗಳನ್ನಿಟ್ಟುಕೊಂಡಿದ್ದು ಈಗ ಕೆಲಸ ಜಾಸ್ತಿಯಾದ ಕಾಲದಲ್ಲಿ ಒಬ್ಬರನ್ನು ವಜಾ ಮಾಡಿ ಇಬ್ಬರಮೇಲೆ ಹೊರಿಸುವದಂ ನೋಡಿದರೆ ಕಬ್ಬು ಸಿಹಿಯಾಗಿದೆಯೆಂದು ಬುಡವನ್ನೇ ಕಿತ್ತು ತಿನ್ನುವಂತಿದೆ. ಮೆ|| ಶಂಬುಶಾಸ್ತ್ರರವರು ವಿಶೇಷ ಶ್ರಮಸಹಿಷ್ಣುವಾಗಿಯೂ ಶ್ರದ್ಧೆಯೊಡನೆ ಕೆಲಸಮಾಡತಕ್ಕವರಾಗಿಯೂ ಇದ್ದರೂ ಅವರಿಗೆ ಯೆರಡು ಮೂರು ಕೆಲಸಗಳ ಗಲಾಟೆಯನ್ನುಂಟುಮಾಡುವದು ಬೇಜಾರಿಗೂ ಅಶ್ರದ್ಧೆಗೂ ಕಾರಣವಾಗುವದರಿಂದ ಯಾರಾದರೊಬ್ಬ ಸಮರ್ಥರಾದ ಪ್ರವೀಣರನ್ನು ಕುಮ್ಮಕ್ಕಾಗಿ ಯಾತಕ್ಕಿಟ್ಟುಕೊಳ್ಳಕೂಡದೋ ನಾವರಿಯೆವು. ಕೌನ್ಸಿಲರುಗಳು ಸಮರ್ಥರಾಗಿ ಏರ್ಪಟ್ಟದರಿಂದ ದಿವಾನರವರಿಗೆ ಸ್ವಲ್ಪವಿಶ್ರಾಂತಿಗೆ ವಿಶೇಷತವಕಾಶವಾಯಿತು. ಹೀಗೆಯೇ ಜವಾಬುದಾರಿಗಳು ಹಂಚಲ್ಪಟ್ಟಂತೆಲ್ಲ ಮೇಲ್ವಿಚಾರಣೆಯು ಸುಲಭವಾಗಿರುವದು.

THE MYSORE GAZETET.
ಮೈಸೂರು ಗೆಜೆಟು.

ಶ್ರೀಮನ್ ಮಹಾರಾಜರವರ ಸಂಸ್ಥಾನ ಬಹದ್ದೂರವರ ಸರ್ಕಾರದಿಂದ ಕೊಡಲ್ಪಟ್ಟ ಇತ್ತೀಚಿನ ಹುಕುಮುಗಳು.

ನಂ|| ೩೩೮. ತಾ|| ೧ನೇ ಏಪ್ರಿಲ್ ೧೮೯೦.—ಬೆಂಗಳೂರು ಡಿಸ್ಟ್ರಿಕ್ಟು ದೇವನಹಳ್ಳಿ ತಾಲ್ಲೂಕು ಅಮಲ್ದಾರ್ ಟಿ. ಬಾಬಾರಾಯರವರಿಗೆ ೧೮೯೦ನೇ ಇಸವಿ ಫಿಬ್ರವರಿ ೩ನೇ ಮಾರ್ಚಿ ೩೧ನೇ [illegible] ೨೦ನೇ ಸೆಪ್ಟಂಬರ್ ಪ್ರೊಸೀಡಿಂಗ್ಸಿನ ನಿಯಮಗಳನುಸರಿಸಿ ಅವರು ಉಪಯೋಗಿಸಿಕೊಂಡ [illegible] ದಿವಸಗಳ [illegible] ರಜಾ ಕೊಡಲ್ಪಟ್ಟಿರುತ್ತದೆ.

ನಂಬ್ರ್ಯಂ ನಂ. ೧೦, ತಾ. ೩ನೇ ಏಪ್ರಿಲ್ ೧೮೯೦.—ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರು ಮಿ. ಪಿ. ಎನ್. ಕೃಷ್ಣಯ್ಯನವರಿಗೆ ೧೮೯೦ನೇ ಇಸವಿ ಏಪ್ರಿಲ್ ೧೦ನೇ ತಾರೀಖ್ ಮೊದಲುಗೊಂಡು ಅಥವಾ ಆ ತರುವಾಯ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ಸ್ವಂತ ಕೆಲಸಗಳ ಬಗ್ಗೆ ಯೆರಡು ತಿಂಗಳ ರಜಾ ಕೊಡಲ್ಪಟ್ಟಿರುತ್ತದೆ. ಮೆ|| ಕೃಷ್ಣಯ್ಯನವರ ಗೈರುಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ಮೆ|| ಸಿ. ಮಾದಯ್ಯನವರು ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ವ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಖ ಕೆಲಸ ನೋಡುವಂತೆ ನೇಮಕರು. ಮೆ|| ಮಾದಯ್ಯನವರು ಇವರ ಕೆಲಸದಮೇಲೆ ನಿಯಮಿಸಲ್ಪಟ್ಟಿರುವ ವರೆಗೆ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ಮೆ|| ಸುಮುಕರಾಯರವರು ಪ್ರೊಬೇಷನರಿ ಸಬ್‌ಡಿವಿಜನ್ ಆಫೀಸರಾಗಿ ನೌಕರರಾಗಿ ಮಾಡಲ್ಪಟ್ಟಿರುತ್ತಾರೆ.

ನೋಕ್ರ್ಯಾಂ ನಂ|| ೧೪.—೧೮೯೦ನೇ ಇಸವಿ ಮಾರ್ಚಿ ೨೦ನೇ ದುರ್ಗಾಂ ಪ್ರೊಬೇಷನ್ನಲ್ಲಿ ಮೈಸೂರು ಡಿಸ್ಟ್ರಿಕ್ಟು ಖಜಾನೆ ಚಾರ್ಜನ್ನು ಮೆ|| ಎನ್. ನಂಜುಂಡಶೆಟ್ಟರವರು ಮೆ|| ಚಿದಂಬರಯ್ಯರವರಿಗೊಪ್ಪಿಸಲು ಅವರದಂ ತೆಗೆದುಕೊಂಡಿರುತ್ತಾರೆ.

ನೋಕ್ರ್ಯಾಂ ನಂ. ೩೦, ತಾ. ೭ನೇ ಏಪ್ರಿಲ್ ೧೮೯೦.—ಗೋವಿಂದನಹಳ್ಳಿ ತಾಲ್ಲೂಕು ಅಮಲ್ದಾರ್ ಬಿ. ರಾಮಸ್ವಾಮಯ್ಯನವರು ಅಜಮಾಯಿಷೀ ತರೀಕ್ ನಂ ೧ನೇ ಗ್ರೇಡು ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರಾಗಿ ನೌಕರರನ್ನಾಗಿ ಮಾಡಲ್ಪಟ್ಟು ಹುಂಗಾಮಿಯಾಗಿ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ. ಇವರು ಕೂಡಲೇ ಕೆಲಸದಮೇಲೆ ಹೋಗಿ ಹಾಜರಾಗತಕ್ಕದ್ದು.

ನೋಕ್ರ್ಯಾಂ ನಂ. ೩೬.—ನಗರ ತಾಲ್ಲೂಕ್ ಅಮಲ್ದಾರ್ ಟಿ. ಎಂ. ನಾರಣಪ್ಪನವರು ಗೋವಿಂದನಹಳ್ಳಿ ತಾಲ್ಲೂಕು ಅಮಲ್ದಾರ್ ವ ೨ನೇ ಕ್ಲಾಸು ಮ್ಯಾಜಿಸ್ಟ್ರೇಟರಾಗಿ ವರ್ಗಮಾಡಲ್ಪಟ್ಟಿರುತ್ತಾರೆ. ಶಿವಮೊಗ್ಗಾ ಡಿ|| ಆಫೀಸ್ ರೆವಿನ್ಯೂ ಶಿರಸ್ತೇದಾರ್ ಕೆ. ಜಿ. ಅನಂತರಾಮಯ್ಯಂಗಾರ್ಯರವರು ವರ್ಗಮಾಡಲ್ಪಟ್ಟ ಟಿ. ಎಂ. ನಾರಣಪ್ಪನವರ ಸ್ಥಾನದಲ್ಲಿ ನಗರತಾಲ್ಲೂಕ್ ಅಮಲ್ದಾರ್ ವ ಮೂರನೇಕ್ಲಾಸ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್‌ತರೀಕ್ ನೌಕರರನ್ನಾಗಿ ಮಾಡಲ್ಪಟ್ಟಿರುತ್ತಾರೆ.

ನೋಕ್ರ್ಯಾಂ, ನಂ. ೪೦.—ಇದರಡಿಕಂಡ ಅಸಿಸ್ಟೆಂಟ್ ಕಮಿಷನರ್‌ಗಳ ವರ್ಗಾವರ್ಗಗಳು ಹುಕುಂ ಮಾಡಲ್ಪಟ್ಟಿರುತಿವೆ. ಬೆಂಗಳೂರಲ್ಲಿ ಕೆಲಸನೋಡುತ್ತಲಿರುವ ಮೆ|| ಬಿ. ಜೆ. ಕೃಷ್ಣಯ್ಯಂಗಾರ್ಯರವರು ಜನರಲ್ ಡ್ಯೂಟಿಯಬಗ್ಗೆ ಹಾಸನ ಡಿಸ್ಟ್ರಿಕ್ಟಿಗೆ ವಾಪಸ್ ಹೋಗತಕ್ಕದ್ದು. ಮೆ|| ಸ್ಟಫಿ ಬಿ. ಕೃಷ್ಣಯ್ಯಂಗಾರ್ಯರವರು ಕೋಲಾರ್ ಡಿಸ್ಟ್ರಿಕ್ಟಿನಿಂದ ಜನರಲ್ ಡ್ಯೂಟಿಯಬಗ್ಗೆ ಮೈಸೂರು ಡಿಸ್ಟ್ರಿಕ್ಟಿಗೆ ವರ್ಗಮಾಡಲ್ಪಟ್ಟಿರುತ್ತಾರೆ. ಮೆ|| ಎಂ. ಅಣ್ಣಾಜಿರಾಯರವರು ಮೈಸೂರು ಡಿಸ್ಟ್ರಿಕ್ಟಿನಿಂದ ಜನರಲ್ ಡ್ಯೂಟಿಬಗ್ಗೆ ಬೆಂಗಳೂರು ಡಿ||ಗೆ ವರ್ಗಮಾಡಲ್ಪಟ್ಟಿರುತ್ತಾರೆ.

LEGAL INTELLIGENCE.
ನ್ಯಾಯ ವಿಷಯಕ ನಿರ್ಣಯಗಳು.

ಇನಾಂದಾರನು ತನ್ನ ಕೈಕೆಳಗಿನ ಒಬ್ಬ ರೈತನಿಗೆ ರಿಜಿಸ್ಟರ್ ಮಾಡಿ ಕಳುಹಿಸಿದ ಒಂದು ಪಟ್ಟೆಯನ್ನು ಆತನು ಅಂಗೀಕರಿಸದೆ ವಾಪಸ್ ಮಾಡಬಹುದೇ ಕೂಡದೆ, ಯೆಂಬ ವಿಚಾರದಲ್ಲಿ.

ವಾದಿ ಸಾಮಿನಾಥಯ್ಯ. ಪ್ರತಿವಾದಿ ವೀರಣ್ಣ.

ಈ ಮೊಕದ್ದಮೆಯಲ್ಲಿ ಇನಾಂದಾರನಾದ ವಾದಿಯು ಪಟ್ಟೆಯನ್ನು ತನ್ನ ರೈತನಾದ ವೀರಣ್ಣನೆಂಬಾತನಿಗೆ ರಿಜಿಸ್ಟರ್ ಮಾಡಿ ಕವರಿನಮೇಲೆ "ಸಾಮಿನಾಥು ಕಳುಹಿಸಿದ ಪಟ್ಟೆ" ಎಂಬದಾಗಿ ಬರೆದು ರವಾನಿಸಿದನು. ಆ ರೀತಿ ರವಾನಿಸಿದ್ದು ಮದರಾಸ್ ರೆವಿನ್ಯೂ ರಿಕವರಿ ಆಕ್ಟಿನ ೯ನೇ ಸೆಕ್ಷನ್ ಪ್ರಕಾರ ಅಂಗೀಕಾರಾರ್ಹವಾದುದೆಂತಲೂ, ಮೇಲೆ ಕಂಡ ಸೆಕ್ಷನ್ ಪ್ರಕಾರ ಅದಂ ಸದರೀ ವೀರಣ್ಣನೆಂಬಾತನು ತೆಗೆದುಕೊಳ್ಳುವಂತೆ ಬಲಾತ್ಕರಿಸಲ್ಪಡಬೇಕೆಂಬದಾಗಿ ವಾದಿ ದಾವಾ ತಂದನು. ರಿಜಸ್ಟರ್ ಮಾಡಿದ ಕವರನ್ನು ತಿರಿಗಿಸಿಬಿಟ್ಟದರಿಂದ ಅವರಲ್ಲಿದ್ದ ಪಟ್ಟೆಯ ಷರತುಗಳು ಆತನಿಗೆ ತಿಳಿದಿರಲಾರದಾಗಿ ಹಾಗೆ ಕಳುಹಿಸಿದ ಪಟ್ಟೆಯು ಕ್ರಮವಾದ ಟೆಂಡರಲ್ಲವೆಂಬದಾಗಿ ಅಭಿಪ್ರಾಯಪಟ್ಟು ಕೋರ್ಟಿನವರು ಮೊಕದ್ದಮೆಯನ್ನು ತಳ್ಳಿಹಾಕಿದರು. ಮ. ಹೈ. ವಾಲ್ಯುಂ ೧೩. ಪುಟ ೨೯೦.

ಒಂದು ಮೊಕದ್ದಮೆಯ ಮಧ್ಯದಲ್ಲಿ ತಿಳಿಸಲ್ಪಟ್ಟ ವಿಷಯಗಳು ಮಾನನಷ್ಟಕ್ಕೆ ಅರ್ಹವಾಗುವದಿಲ್ಲವು.

ವಾ. ನವಾಜಿಮಹೀಶ್ವರ್ ಪ್ರತಿ. ಲಾಲ್‌ಸಾಹೆಬ್‌ದಿದತ್.
" ಲಾಲ್‌ಸಾಹೆಬ್‌ದಿದತ್ " ನವಾಜಿ ಮಹೀಶ್ವರ್

ಒಂದು ವ್ಯಾಜ್ಯದಲ್ಲಿ ಪ್ರತಿವಾದಿಗಳು ದಾಖಲ್ಮಾಡಿದ ಸ್ಟೇಟಮೆಂಟಿನಲ್ಲಿ ಉಪಯೋಗಿಸಿರುವ ಸುಗತಿಗಳು ಅಕ್ರಮವಾದವೆಂತಲೂ, ಅಬದ್ಧವಾದವೆಂತಲೂ, ತನ್ಮೂಲಕ ತನಗೆ ಅವಮಾನವಾಯಿತೆಂತಲೂ, ಅದಕ್ಕಾಗಿ ನಷ್ಟ ಕೊಡಿಸಬೇಕೆಂಬದಾಗಿ ವಾದಿ ಪ್ರತಿವಾದಿಯಮೇಲೆ ದಾವಾ ತಂದನು. ಅಸಲ್ ಕೋರ್ಟಿನವರು ಅದು ಮಾನನಷ್ಟವಾಗುವದಿಲ್ಲವೆಂಬದಾಗಿ ಮೊಕದ್ದಮೆಯನ್ನು ತಳ್ಳಿಹಾಕಿದರು. ಅದರಮೇಲೆ ಅಪೀಲ್ ಮಾಡಲ್ಪಡಲು ಅಕಮದಾಬಾದ್ ಜಾಯಿಂಟ್ ಜಡ್ಜಿಯವರು ಕೋರ್ಟು ಖರ್ಚಿನೊಡನೆ ೧ ರೂಪಾಯಿ ಪರಿಹಾರ ರೂಪವಾಗಿ ಪ್ರತಿವಾದಿ ಕೊಡತಕ್ಕದ್ದೆಂದು ತೀರ್ಮಾನಿಸಿದರು. ಅದರಮೇಲೆ ಪ್ರತಿವಾದಿಯು ಹೈಕೋರ್ಟಿನಲ್ಲಿ ಅಪೀಲ್ ಮಾಡಲು, ಅವರು, ಒಂದು ವ್ಯಾಜ್ಯದ ಮಧ್ಯದಲ್ಲಿ ಅದರ ಸಂರಕ್ಷಣೆಯ ಬಗ್ಗೆ ತಿಳಿಸಲ್ಪಡುವ ಮಾತುಗಳು, ಕ್ರಿಮಿನಲ್ ಪ್ರಾಸಿಕ್ಯೂಷನಿಗೆ ಅರ್ಹವಾದ ಹೊರತು ಇತರ ಸಂದರ್ಭಗಳಲ್ಲಿ ಮಾನನಷ್ಟ ದಾವಾನಿಗೆ ಅರ್ಹವಾಗಲಾರವೆಂಬದಾಗಿ ತೀರ್ಮಾನಿಸಿ ಜಾಯಿಂಟ್ ಜಡ್ಜಿಯವರ ಫೈಸಲನ್ನು ರದ್ದು ಮಾಡಿದರು.—ಮುಂಬೈ ರಿಪೋರ್ಟ್, ವಾಲ್ಯುಂ ೧೪. ಪುಟ ೯೦.

ಒಂದು ಮಠ ಸಂಬಂಧವಾದ ಮೆ.ಶಕ್ಕೆ ಧರ್ಮಕರ್ತನಾಗಿರತಕ್ಕವರು ಮಠ ವಿಷಯಕಗಳಾದ ವ್ಯಯಕ್ಕಾಗಿ ಸಾಲ ಮಾಡಿ ಗತಿಸಲು, ಸದರೀ ಸಾಲದ ಮೊಬಲಗನ್ನು ಧರ್ಮಕರ್ತರ ಆಸ್ತಿಯಿಂದಲೇ ಬದಲಮಾಡಿಕೊಳ್ಳಬೇಕೆ, ಅಲ್ಲಿಗೆ ಮಠದಿಂದ ಕೊಡಬೇಕೆ ಯೆಂಬ ವಿಚಾರ ಬಂಟಾಗಿ ಧರ್ಮಕರ್ತರ ಆಸ್ತಿಯೇ ಆ ಸಾಲಕ್ಕೆ ಗುರಿಯಾಗತಕ್ಕದ್ದೆಂಬದಾಗಿ ನಿರ್ಣಯವಾಯಿತೆಂದೆಂದರೆ:—

ವಾದಿ ಗೋಪಾಲಿ. ಪ್ರತಿವಾದಿ ದತ್ತಸಾಮಿ.

ಪ್ರತಿವಾದಿಯ ತಂದೆಯು ದಕ್ಷಿಣ ಕನ್ನಡ ಜಿಲ್ಲಾವಿನೊಳಗಿರುವ ಒಂದು ಗುರು ಮಠಕ್ಕೆ ಧರ್ಮಕರ್ತನಾಗಿದ್ದನು. ಆ ಕಾಲದಲ್ಲಿ ಮಠದಲ್ಲಿ ಮಠ ವಿಷಯಕಗಳಾದ ಖರ್ಚುಗಳ ಬಗ್ಗೆ ಸಾಲ ಮಾಡಿ ಅದಂ ತೀರಿಸಲಿಕ್ಕೆ ಮುಂಚಿತವಾಗಿಯೇ ಮೃತಪಟ್ಟನು. ಬಳಿಕ ವಾದಿಯು ಪ್ರತಿವಾದಿಯಮೇಲೆ ದಾವಾ ತಂದನು. ಪ್ರತಿವಾದಿಯು ತತ್ಕಾಲದಲ್ಲಿ ಧರ್ಮಕರ್ತನಾಗಿರುವವನಿಂದಲೂ, ಮಠ ಸಂಬಂಧವಾದ ಆಸ್ತಿಯಿಂದಲೂ, ಸಾಲವಂ ಬದಲಮಾಡಿಕೊಳ್ಳತಕ್ಕದ್ದೆಂದು ಅರ್ಜಿಕೊಟ್ಟನು. ಅದು ಕೆಳ ಕೋರ್ಟಿನವರು ಅಂಗೀಕರಿಸಿ ಸಿವಿಲ್ ಪ್ರೊಸಿಡ್ಯುರ್ ಕೋಡ ೩೨ನೇ ಸೆಕ್ಷನ್ ಪ್ರಕಾರ ಆತನನ್ನು ಪ್ರತಿವಾದಿಯಾಗಿ ಸೇರಿಸಿ ಡಿಕ್ರಿ ಕೊಟ್ಟರು. ಅದರಮೇಲೆ ಪ್ರತಿವಾದಿಯು ಡಿಸ್ಟ್ರಿಕ್ಟು ಕೋರ್ಟಿನಲ್ಲಿ ಅಪೀಲ್ ಮಾಡಲು ಅವರೂ ಕೆಳ ಕೋರ್ಟಿನ ಫೈಸಲನ್ನೇ ಕಾಯಂ ಮಾಡಿದರು. ಬಳಿಕ ಎರಡನೇ ಅಪೀಲ್ ಹೈಕೋರ್ಟಿಗೆ ಅಪೀಲಾಗಲು ಆಗ ಅವರು ಪ್ರತಿವಾದಿಗಳ ತಂದೆಯು ಬರೆದುಕೊಟ್ಟ ಪತ್ರದಲ್ಲಿ ಮಠಕ್ಕಾಗಿ ಸಾಲ ಮಾಡಿದಂತೆಯೂ ಮಠದ ಲೆಕ್ಕಗಳಲ್ಲಿ ಅದರ ವಿಷಯಕ್ಕಾಗಿ ಖರ್ಚು ಮಾಡಿದಂತೆಯೂ ಸಮರ್ಥಿಸಲ್ಪಡದಿರುವದರಿಂದ ಹಳೆದ ಧರ್ಮಕರ್ತನಿಂದಲೇ ಆ ಸಾಲದ ಮೊಬಲಗನ್ನು ಬದಲಮಾಡಿಕೊಳ್ಳತಕ್ಕದ್ದೆಂದು ತೀರ್ಮಾನಿಸಿದರು. ಮದರಾಸ್ ರಿಪೋರ್ಟ್ ವಾಲ್ಯುಂ ೧೩ ಪುಟ ೩೩.

ಒಂದು ದೇವಸ್ಥಾನದ ನೌಕರಿಯಲ್ಲಿರತಕ್ಕವರಿಗೆ ನೌಕರಿ ಇನಾಂಗಳಮೇಲಿರತಕ್ಕ ಹಕ್ಕುದಾರಿಯಂ ಕುರಿತ ವಿಚಾರ.

ವಾದಿ ತಾರಾನಾಯಕಿ. ಪ್ರತಿವಾದಿ ಲಕ್ಷ್ಮಣನು.

ಹಿಂದೂ ದೇವಾಲಯಗಳಲ್ಲಿ ಸರ್ವೇಪ್ರಕಾರ ಕೆಲವು ಜನ ವಾರಾಂಗನೆಯರು ಉತ್ಸವ ಕಾಲಗಳಲ್ಲಿ ಸಂಗೀತ ನಾಟ್ಯ ಮೊದಲಾದವು ನಡೆಸತಕ್ಕ ಬಗ್ಗೆ ನೌಕರರಾಗಿರುವದು ಪದ್ಧತಿಯಾಗಿರುತಿದೆಯಷ್ಟೆ. ಇವರ ಹಕ್ಕು ನಿರಾಕರಿಸಲ್ಪಡತಕ್ಕದ್ದೋ ಅಲ್ಲವೆ ಎಂಬ ವಿಚಾರ ಬಂಟಾಗಿ ಅದು ನಿಷೇಧಿಸಲ್ಪಡತಕ್ಕದ್ದಲ್ಲವೆಂದು ಕೋರ್ಟಿನವರು ಅಭಿಪ್ರಾಯಪಟ್ಟರು, ಹ್ಯಾಗೆಂದರೆ:—ಈ ಮೊಕದ್ದಮೆಯಲ್ಲಿ ವಾದಿಯಾದ ತಾರಾನಾಯಕಿ ಯೆಂಬವಳು ಒಂದು ದೇವಸ್ಥಾನದ ನೌಕರಳಾದ ರಾಜಾ ನಾಯಕಿ ಯೆಂಬವಳ ಸಾಕಿತ ಮಗಳಾಗಿರುತ್ತಾಳೆ. ರಾಜಾನಾಯಕಿ ಜೀವಿಸಿದ್ದ ಕಾಲದಲ್ಲಿ ದೇವಸ್ಥಾನದ ನೌಕರಿ ಇನಾಂ ಜಮೀನನ್ನು ಪ್ರತಿವಾದಿಗೆ ಇಳಭೋಗ್ಯ ಮಾಡಿದ್ದಳು. ಅದರ ಹುಟ್ಟುವಳಿಯಿಂದಲೇ ಅಸಲು ಬಡ್ಡೀ ಸೇರಿ ಭೋಗ್ಯದ ಮೊಬಲಗು ತೀರಿಹೋಯಿತು. ಇಷ್ಟರಲ್ಲಿ ಅಡಮಾನ ಹಾಕಿದ ರಾಜಾನಾಯಕಿಯು ಮೃತಪಟ್ಟದರಿಂದ ಅವಳ ಪೋಷಿತ ಪುತ್ರಿಯಾದ ತಾರಾನಾಯಕಿಯು ಭೋಗ್ಯ ಹಾಕಿದ್ದ ಆಸ್ತಿಯನ್ನು ಬಿಡಿಸಿಕೊಳ್ಳುವದಕ್ಕಾಗಿ ಪ್ರತಿವಾದಿಯಮೇಲೆ ದಾವಾ ತಂದಳು. ವೇಶ್ಯಾಂಗನೆಯರಿಗೆ ದತ್ತಾಧಿಕಾರ ವಿಲ್ಲವೆಂಬದರಿಂದ ತಾರಾನಾಯಕಿಗೆ ಸದರೀ ಆಸ್ತಿಯಮೇಲೆ ಹಕ್ಕಿಲ್ಲವೆಂದು ಅಸಲ್ ಕೋರ್ಟಿನವರು ತೀರ್ಮಾನಿಸಿದರು. ಅದರಮೇಲೆ ಹೈಕೋರ್ಟಿಗೆ ಅಪೀಲಾಗಲು ಅಲ್ಲಿನವರು ಆ ತೀರ್ಪನ್ನು ರದ್ದು ಮಾಡಿ ನೌಕರಿ ಇನಾಂ ಜಮೀನುಗಳಲ್ಲಿ ನೌಕರಿ ಮಾಡತಕ್ಕವರಿಗೆ ಹಕ್ಕುಂಟಾಗಿರುವದರಿಂದ ಅವಳು ಸಾಕಿಕೊಂಡವಳೆಂಬ ವಿಷಯವಂ ಕುರಿತು ವಿಮರ್ಶಿಸಲಿಕ್ಕೆ ಕೆಳಕೋರ್ಟಿನವರಿಗೆ ಆವಶ್ಯಕವಿರುವದಿಲ್ಲವೆಂಬದಾಗಿ ಅಭಿಪ್ರಾಯಪಟ್ಟು ಸದರೀ ಮೊಕದ್ದಮೆಗೆ ಸಂಬಂಧಿಸಿದ ಇತರ ವಿಷಯಗಳನ್ನು ವಿಚಾರಿಸುವದಕ್ಕಾಗಿ ಕೆಳಕೋರ್ಟಿಗೆ ಮರಳಿ ರಿಮಾಂಡ್ ಮಾಡಿದರು.—ಮುಂಬೈ ಲಾ ರಿಪೋರ್ಟ್ ವಾಲ್ಯುಂ ೧೪. ಪುಟ ೯೦.

SUMMARY OF NEWS.
ವೃತ್ತಾಂತಸಂಗ್ರಹವು.

ಹಿಂದುಸ್ಥಾನದಲ್ಲಿ ಇಂಗ್ಲಿಷ್ ಚೆನ್ನಾಗಿ ಓದಿದವರು ಕೆಲಸಗಳು ಸಿಕ್ಕದೆ ಕಷ್ಟಪಡುತಲಿದ್ದಾರೆಯಷ್ಟೆ. ಅವರು ಹಿಂದೂಜನಗಳ ಸ್ಥಿತಿರೀತಿಗಳನ್ನು ಅಲಂಕಾರಯುಕ್ತವಾಗಿ ಒಳ್ಳೇ ಇಂಗ್ಲಿಷ್ ಭಾಷೆಯಲ್ಲಿ ಬರೆದು ಅಚ್ಚುಹಾಕಿಸಿ ಯೂರೋಪಿಗೆ ಕಳುಹಿಸಿದಲ್ಲಿ ಹೆಸರುವಾಸಿ ಬರುವದಲ್ಲದೆ ಅರ್ಥಸಂಪಾದನೆಯು ಕೂಡ ಆಗುವದೆಂದು ಸರ್. ಚಾರ್ಲೆಸ್ ಎಲಿಯಾಟಿಯವರು ಹೇಳಿದಾರೆ.

ಬರೋಡೆ ಸಂಸ್ಥಾನದ ಮುಖ್ಯ ಪ್ರಧಾನರಾದ ದಿವಾನ್ ಬಹದೂರ್ ಲಕ್ಷ್ಮಣ ಜಗನ್ನಾಥ ವೈದ್ಯರವರು ಮುಂದಿನ ತಿಂಗಳಲ್ಲಿ ಪೆನ್ಷನ್ ತೆಗೆದುಕೊಳ್ಳುವರು. ಇವರ ಕೆಲಸಕ್ಕೆ ದಿವಾನ್ ಬಹದೂರ್ ಮಣಿಭಾಯಿ ಜಸಭಾಯಿಯವರು ನೇಮಿಸಲ್ಪಟ್ಟಿದ್ದಾರೆ. ಇವರು ಮೇ ಗುರ್ರೇತಾರೀಖಿನಲ್ಲಿ ಆ ಸಂಸ್ಥಾನದಲ್ಲಿ ಮಂತ್ರಿತ್ವವನ್ನು ವಹಿಸುವರು.

ಸರ್ವತ್ರ ಜ್ವರಾದ್ಯುಪದ್ರವಗಳು ಅತ್ಯಧಿಕವಾಗಿ ಜನರು ಉತ್ಸಾಹಶೂನ್ಯರಾಗಿರುವದರಿಂದ ಈವರುಷದಲ್ಲಿ ಹಂಪೆ ವಿರೂಪಾಕ್ಷಪುರದಲ್ಲಿ ನಡೆಯುವ ರಥೋತ್ಸವವು ಸರಿಯಾಗಿ ನಡೆಯಲಾರದೆಂದೆಣಿಸಿದ್ದೆವು ಹಾಗಿಲ್ಲದೆ ಮಾಮೂಲ್ಪ್ರಕಾರ ಎತ್ತುಗಳೂ ಸರಿಯಾಗಿ ಸ್ವಸ್ಥಾನಗಳಿಂ ಬಂದು ಸೇರಿದವು. ಜನರೂ ಬಹುಮಂದಿ ಬಂದಿದ್ದರು.

ಬಳ್ಳಾರಿಯಲ್ಲಿರುವ ಬಾಲಕರೆಲ್ಲರೂ ಸೇರಿ ಕೆಲವು ಸಂವತ್ಸರಗಳಿಂದ ನಡೆಸುತಲಿರುವ ಹಂಪೆ ರಥೋತ್ಸವವು ಈಸಲ ಬಹಳ ವಿಜೃಂಭಣೆಯೊಡನೆ ಮನೋಹರವಾಗಿ ಜರುಗಿತು. ಈ ರಥೋತ್ಸವವು ಇತರ ದೇವರ ರಥೋತ್ಸವಗಳಿಗಿಂತಲೂ ಅತಿಶಯವಾಗಿತ್ತಲ್ಲದೆ ತಾಳೆ ವಾದ್ಯ ನರ್ತನ ವಿನೋದಗಳು ಬಹಳ ಆನಂದಕರವಾಗಿದ್ದವೆಂದು ಕೇಳುತ್ತೇವೆ.

ಮದರಾಸ್ ಗವರ್ನರವರ ಪತ್ನಿಯರಾದ ಕಾನಿಮಾರಾ ದೊರೆಸಾನಿಯವರು ವಿಲಾಯಿತಿಯಲ್ಲಿ ತಮ್ಮ ಪತಿಗಳ ಮೇಲೆ ಕೋರ್ಟಿನಲ್ಲಿ ದಾವೆ ತಂದಿರುತ್ತಾರಷ್ಟೆ. ಈ ಗಂಡಹೆಂಡರ ಜಗಳವನ್ನು ರಾಜೀ ಮಾಡಿಸಬೇಕೆಂದು ಎಷ್ಟೋ ದೊಡ್ಡಮನುಷ್ಯರು ಬಹಳ ಪ್ರಯತ್ನಪಟ್ಟಾಗ್ಯೂ ವ್ಯರ್ಥವಾಯಿತು. ದೊರೆಸಾನಿಯವರ ತರ್ಫಿನಲ್ಲಿ ಮಿಸ್ಟರ್ ಲಾಕ್ವುಡ್ ಕ್ಯೂ. ಸಿ. ಯವರೂ ಕಾನಿಮಾರಾ ಪ್ರಭುಗಳವರ ಕಡೆ ಸರ್. ಚಾರ್ಲ್ಸ್ ರಸಲ್ ದೊರೆಗಳೂ ಮೊಕದ್ದಮೆಯಂ ನಡೆಸುವರು.

ಈಗ ಕೆಲವು ದಿವಸಗಳ ಕೆಳಗೆ ವಿಲಾಯಿತಿಯಲ್ಲಿ ಮಹದೈಶ್ವರ್ಯವಂತನೊಬ್ಬನು ಮೃತನಾದನು. ಇವನ ಆಸ್ತಿಯು ಸುಮಾರು ೪೫,೦೦,೦೦,೦೦೦ ರೂಪಾಯಿಗಳು ಬಾಳುವದು. ಇದಕ್ಕೆ ಬಡ್ಡಿಯೇ ಪ್ರತಿ ನಿತ್ಯವಲ್ಲೂ ೪೫,೦೦೦ ರೂಪಾಯಿಗಳು ಬರುವವು. ಇಂತಾ ಸಾಹುಕಾರನು ತಾನು ಸಾಯುವಕಾಲದಲ್ಲಿ ಹೀಗೆ ವ್ಯಸನಪಟ್ಟನಂತೆ— ಅಯ್ಯೋ, ಈ ನನ್ನ ಐಶ್ವರ್ಯವು ನನಗೆ ಹಿಂಸೆಯನ್ನುಂಟುಮಾಡುವದಲ್ಲದೆ ಸುಖಕಾರಿಯಲ್ಲ. ನಾನು ೫—೬ ಲಕ್ಷರೂಪಾಯಿಗಳನ್ನುಳ್ಳವನಾಗಿ ಮಾತ್ರವಿದ್ದಿದ್ದರೆ ಎಷ್ಟೋ ಸುಖಿಯಾಗಿರುತಲಿದ್ದೆ. ಅನೇಕೋಟ್ಯಂತರ ರೂಪಾಯಿಗಳಿಂದ ನನಗೆ ಬಹಳ ದುರ್ದಶೆಯು ಪ್ರಾಪ್ತವಾಯಿತು. ನನ್ನ ಹಣದಿಂದ ತಯಾರುಮಾಡಲ್ಪಟ್ಟ ಮನೆಗಳೂ, ತೋಟಗಳೂ, ಉದ್ಯಾನಗಳೂ, ಸಮಸ್ತವೂ, ಇತರರ ಭೋಗಕ್ಕೋಸ್ಕರವಾಗಿ ಆದವಲ್ಲವೆ! ನನ್ನೈಶ್ವರ್ಯವನ್ನು ನಾನು ಅನುಭವಿಸುವದಕ್ಕಿಲ್ಲದೆ ಇಂತವರ ಪಾಲಾಗಬೇಕಂದರೆ ನನ್ನ ಹೃದಯವು ಭೇದಿಸುವದಲ್ಲ; ನನಗೆ ಬರತಕ್ಕ ಆದಾಯದಿಂದ ಏನು ಫಲವು? ಮನೆಗಳನ್ನು ಕಟ್ಟಿಸಬೇಕು; ಜಮೀನುಗಳನ್ನು ಕೊಳ್ಳಬೇಕು; ಇಲ್ಲಿ ಭೋಗ್ಯದ ಮೇಲೆ ಸಾಲವನ್ನು ಕೊಡಬೇಕು. ಏನಾದರೂ ಆಗಲಿ; ಇವೆಲ್ಲಪರರಸೌಖ್ಯಕ್ಕಾಗಿ ಈ ಹಣವನ್ನು ಸಂಪಾದಿಸಿಕೊಂಡು ಅವರಿಂದುಂಟಾಗತಕ್ಕ ಕಷ್ಟವೆಲ್ಲ ನಾನು. ಸೌಖ್ಯವನ್ನನುಭವಿಸುವವರ್ಕ್ಕೆ ಪ್ರಾಪ್ತ ಅನ್ಯರು.

EXTRACTS.

ಕವರ್ತಲಾ ಮಹಾರಾಜರವರು ಪ್ರಿನ್ಸ್ ಆಲ್ಬರ್ಟ್ ವಿಕ್ಟರವರನ್ನು ತಮ್ಮ ಸಂಸ್ಥಾನಕ್ಕೆ ಬರಮಾಡಿಕೊಂಡು ಸನ್ಮಾನವನ್ನು ಮಾಡಿದರು. ಈ ಮಹಾರಾಜರವರಿಗೆ ಪಂಜಾಬಿನಲ್ಲಿಯೂ ಅಯೋಧ್ಯೆಯಲ್ಲಿಯೂ ಬಹಳ ವಿಸ್ತಾರವಾದ ಪ್ರದೇಶಗಳು ಸೇರಿರುವವು. ಇವರ ಸಂತತಿಯವರು ಯಾವಾಗ್ಯೂ ಬ್ರಿಟಿಷ್ ಗವರ್ನಮೆಂಟಿಗೆ ವಿಧೇಯರಾಗಿಯೇ ಇರುವರು. ಈಗಿನ ಮಹಾರಾಜರವರ ತಾತಂದಿರು ಮ್ಯೂಟಿನಿಕಾಲದಲ್ಲಿ ಬ್ರಿಟಿಷ್‌ನವರ ಪಕ್ಷವಾಗಿ ಬಹಳ ಪರಾಕ್ರಮದಿಂದ ಕಾದಿದರು. ಇವರಿಗೆ ಬಹುಮಾನಾರ್ಥವಾಗಿ ನೇಟಾಳದ ಸಮೀಪದಲ್ಲಿ ಒಂದು ಜಹಗೀರ್ ಕೊಡಲ್ಪಟ್ಟಿತು. ಈಗಲೂ ಇದರಿಂದ ಬಹಳ ಆದಾಯವು ಬರುತಲಿರುವದು. ಈಗಿನ ಮಹಾರಾಜರವರು ಇನ್ನೂ ಮೈನಾರಿಟಿಯಲ್ಲಿರುವದರಿಂದ ಇವರರಾಜ್ಯದ ಆಡಳಿತಗಳು ಬ್ರಿಟಿಷ್‌ನವರಿಂದಲೇ ನಡೆಸಲ್ಪಡುತಲಿರುವದು. ಇನ್ನು ಸ್ವಲ್ಪದಿವಸಗಳಲ್ಲೇ ಇವರು ತಾವೇ ರಾಜ್ಯಭಾರವನ್ನು ವಹಿಸುವರು. ವಿದ್ಯೆಯಲ್ಲಿ ಬಹಳ ನಿಪುಣರು. ಫ್ರೆಂಚ್ ಭಾಷೆಯನ್ನು ಬಹು ಸರಳವಾಗಿ ಮಾತನಾಡುವರು. ಯಾವ ಸಭೆಯಲ್ಲೂ ಇವರೆ ಪ್ರಮುಖರಾಗಿರತಕ್ಕವರು; ಕುದುರೇ ಸವಾರಿ, ಬೇಟೆ, ಪೋಲೋ ಮುಂತಾದವುಗಳನ್ನು ಬಹಳವಾಗಿ ಅಭ್ಯಾಸಮಾಡಿರುವರು. ಇವಲ್ಲದೆ ರಾಜ್ಯಭಾರ ಕ್ರಮವನ್ನು ವಿಶೇಷವಾಗಿ ತಿಳಿದಿರುವರು. ಇಲ್ಲಿನ ಕಾಡು ಹುಲಿಗಳನ್ನು ಶಿಕಾರಿ ಮಾಡುವದಕ್ಕಾಗಿ ಆಗಾಗ್ಯೆ ಯೂರೋಪಿಯನ್ ದೊಡ್ಡಮನುಷ್ಯರ ಹೋಗುತಲೇ ಇರುವರು. ಲಾರ್ಡ್ ಡಫರಿನ್ನವರೂ ಸರ್ ಫ್ರೆಡರಿಕ್ ರಾಬರ್ಟ್ಸ್ಯವರೂ, ಇನ್ನೂ ಅನೇಕರೂ ಮಹಾರಾಜರ ಆತಿಥ್ಯದಿಂದ ಸಂತುಷ್ಟರಾಗಿರುವರು. ಇವರಿಗೆ ಸಾಲಿಯಾನಾ ೩೦,೦೦,೦೦೦ ರೂಪಾಯಿಗಳು ವರಮಾನವಿರುವದು. ಮಹಾರಾಜರು ಈಗಲೇ ರಾಜಕಾರ್ಯ ನಿರ್ವಹಣೆಯಲ್ಲಿ ಇಷ್ಟು ಸಮರ್ಥರೆನ್ನಿಸಿಕೊಂಡಿರುವಾಗ ಮುಂದೆ ಇವರು ಬಹಳ ಕೀರ್ತಿಯನ್ನು ಪಡೆಯುವದರಲ್ಲಿ ಸಂಶಯವಿಲ್ಲವು.—ವೃ. ಪ.

ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಮೊದಲಾದ ರಾಜಕೀಯ ಸಭೆಗಳಲ್ಲಿ ಸರ್ಕಾರ್ ಉದ್ಯೋಗಸ್ಥರು ಯಾವತ್ತೂ ಸಂಬಂಧಪಡತಕ್ಕದ್ದಾಗಿರಬಾರದೆಂಬ ಅಂಶವು ಈಚೆಗೆ ವೈಸ್‌ರಾಯಿಯವರ ಪರ್ಯಾಲೋಚನೆಗೆ ವಿಷಯವಾಗಲು ಅದಂ ಕುರಿತು ಅವರು ಇದರಡಿಕಂಡಂತೆ ನಿಬಂಧಿಸಿರುವದಾಗಿ ತಿಳಿಯಬರುತಿದೆ:ನುದರೆ,—೧. ಯಾರಾದರೊಬ್ಬ ಸರ್ಕಾರ್ ನೌಕರನು, ರಾಜಕೀಯ ಸಭೆಗಳಿಗೆ ಹೋಗುವದರಿಂದ ಯಾವದಾದರು ಅನ್ಯಾರ್ಥಕಲ್ಪನೆಗೆ ಅವಕಾಶ ಉಂಟಾಗುವದಾಗಿರುವ ಪಕ್ಷಕ್ಕೆ, ಅಥವಾ ಆತನ ಉದ್ಯೋಗಗಳಿಗೆ ಸಂಬಂಧಪಟ್ಟ ಕೆಲಸಗಳಿಗೆ ಬಾಧಕವೆಂದು ಕಂಡುಬರುವಪಕ್ಷಕ್ಕೆ ಆತನು ಅಂತಾ ವಿಚಾರಗಳಿಗೆ ಹೋಗತಕ್ಕದ್ದಲ್ಲವು. ೨. ಮೇಲ್ಕಂಡ ಸಭೆಗಳಿಗೆ ಸಂಬಂಧಪಟ್ಟ ಆಡಳಿತಗಳಲ್ಲಾಗಲಿ ಅಂತಾ ಸಭೆಗಳನ್ನು ಸೇರಿಸುವದರಲ್ಲಾಗಲಿ, ಅಭಿವೃದ್ಧಿಯಲ್ಲಿ ತರುವದರಲ್ಲಾಗಲಿ, ಅವುಗಳಿಗೆ ಸಂಬಂಧಿಸಿದ ವಿಷಯಗಳನ್ನು ಕುರಿತು ಚರ್ಚಿಸುವದರಲ್ಲಾಗಲಿ ಸರ್ಕಾರ್ ಉದ್ಯೋಗಸ್ಥರು ಪ್ರವೃತ್ತಿಯಂ ವಹಿಸಕೂಡದು. ೩. ಆದರೆ ಯಾವನಾದರೊಬ್ಬ ಉದ್ಯೋಗಸ್ಥನು ಸದರೀ ಸಭಾಸಂಬಂಧಗಳಾದ ಯಾವ ಕಾರ್ಯಗಳಲ್ಲಾಗಲಿ ಪ್ರವೇಶಿಸುವದು ಸದರೀ ರೂಲ್ಸಿಗೆ ವಿರುದ್ಧವಾಗಿರುವದೇ ಯೆಂಬ ಅನುಮಾನ ಉಂಟಾದಕಾಲದಲ್ಲಿ ಆ ಅಂಶವನ್ನು ತನ್ನ ಮೇಲ್ಪಟ್ಟ ಅಧಿಕಾರಿಗಳಿಗಾಗಲಿ ಅಥವಾ ಲೋಕಲ್ ಗವರ್ನಮೆಂಟಿನವರಿಗಾಗಲಿ ತಿಳಿಯಪಡಿಸಿ ಸಂದೇಹವಂ ನಿವೃತ್ತಿಸಿಕೊಳ್ಳತಕ್ಕದ್ದು, ಎಂಬದಾಗಿ ಸರ್ಕ್ಯುಲರು ಕೊಡಲ್ಪಟ್ಟು ಜಾರಿಯಲ್ಲಿ ಬಂದಿರುವಂತೆ ತಿಳಿಯಬರುತಿದೆ. ಈ ನಿಬಂಧನೆಗಳಿಂದ ಗವರ್ನಮೆಂಟಿನವರ ಉದ್ದೇಶವು ವ್ಯಕ್ತವಾಗದೆ ಇರುವದಿಲ್ಲವು. ಸಾಮುದಾಯಿಕಗಳಾದ ವಿಷಯಗಳಲ್ಲಿ ಸರ್ಕಾರ್ ನೌಕರರ ಸಂಬಂಧವು ಗವರ್ನಮೆಂಟಿನವರ ಪ್ರಯೋಜನಕ್ಕೆ ಭಂಗಕಾರಿಯೆಂಬ ಅಭಿಪ್ರಾಯವೂ, ಸರ್ಕಾರ್ ನೌಕರರ ಸಂಬಂಧವು ತಪ್ಪುವದರಿಂದ ಮೇಲ್ಕಂಡ ಸಭೆಗಳೂ ದುರ್ಬಲವಾಗಿ ನಶಿಸಿಹೋಗುವದೆಂಬ ತಾತ್ಪರ್ಯವೂ, ಗವರ್ನಮೆಂಟಿನವರ ಉದ್ದೇಶವು ಪ್ರಯತ್ನಗಳು ಹೊರಗಾಗಲಿಕ್ಕೆ ಕಾರಣಭೂತರೆಂದು ಭಾವಿಸಿರುವ ತಮ್ಮ ಉದ್ಯೋಗಸ್ಥರು ನಿರ್ಬಂಧಪಡಿಸಲ್ಪಟ್ಟರೆ ಆಗ ತಮ್ಮ ಆಡಳಿತವು ಗೂಢವಾಗಿರುತ ಜನರ ಆಕ್ಷೇಪಣೆಗಳಿಗೆ ಅವಕಾಶ ವಿರಲಾರದೆಂಬ ಭಾವವೂ ಇರಬಹುದೆಂದು ತೋರುತಿದೆ.

ಇದರಡಿ ಕಂಡ ವಿಚಿತ್ರವಾದ ಒಂದು ವೃತ್ತಾಂತವು ಕಲ್ಕತ್ತಾ ಸ್ಟೇಟ್ಸ್‌ಮನ್ ಪತ್ರಿಕೆ ಪ್ರಕಟಿಸಿರುತಿದೆ:ನುದರೆ.—ಹದಿನೈದು ಹದಿನಾರು ವರುಷಗಳ ವಯಸ್ಸುಳ್ಳ ಮಹಾಂತ್ರಿಕಳಾದ ತರುಣಿಯೊಬ್ಬಳು ಕಲ್ಕತ್ತಾ ಪಟ್ಟಣದ ರಾಜಮಾರ್ಗದಲ್ಲಿ ಮನಸ್ಸಿಗೆ ತಿರುಗುತ ತನ್ನ ಮಂತ್ರಶಕ್ತಿಯಿಂದ ರೂಪಾಯಿಗಳು, ನೋಟುಗಳು, ಭಂಗಾರ ಮೊದಲಾದವು ತೋರಿಸಿ ಜನರು ಆಶ್ಚರ್ಯಪಡಿಸುತಲಿದ್ದಳು. ಇದು ನೋಡುವದಕ್ಕಾಗಿ ಜನರು ಗುಂಪು ಕೂಡಿ ಹೋಗುತಲಿದ್ದರು. ಇದೆಂದು ಉತ್ಪಾತ ಬಂದಪ್ಪಳಿಸಿ ಇದು ಬರುತಿದ್ದರೆ ದೇಶಕ್ಕೆ ಕ್ಷೋಭೆ ಉಂಟಾಗುವದೆಂದು ತಿಳಿದು ಆಕೆಯಂ ಭಾವಿಯಲ್ಲಿ ತಳ್ಳಲೆತ್ನಿಸಿದರು. ಇಷ್ಟರಲ್ಲಿ ಆ ವಿಷಯವು ಕೆಲವರು ಮಹಾರಾಜರಿಗೆ ತಿಳಿದು ಅವರಲ್ಲೊಬ್ಬನು ಆ ಮಾಂತ್ರಿಕಳನ್ನು ತನ್ನ ಮನೆಗೆ ಕರೆದುಕೊಂಡು ಹೋದನು. ಜನರು ಗುಂಪಿನಿಂದ ಅವಳಂ ಕರೆದುಕೊಂಡು ಹೋಗುವದು ಸದರೀ ಸಾಹುಕಾರನಿಗೆ ಪ್ರಯಾಸವಾಗಿ ಕಂಡುಬರಲು ಕೊನೆಗೆ, ಪೋಲೀಸಿನವರಿಗೆ ತಿಳಿಸಿ ಅವರು ಕರೆಯಿಸಿ ಅವರ ಸ್ವಾಧೀನಕ್ಕೊಪ್ಪಿಸಿದನು. ಅವರು ಆಕೆಯಂ ಠಾಣೆಗೆ ಎಳತಂದು ಮುಂದಿನ ಕ್ರಮವಂ ಕುರಿತು ಡೆಪ್ಯುಟಿ ಮ್ಯಾಜಿಸ್ಟ್ರೇಟರನ್ನು ಕೇಳಿದರು. ಮ್ಯಾಜಿಸ್ಟ್ರೇಟರು ಸದರೀ ಹುಡುಗಿಯಂ ಕರೆಸಿ ವಿಚಾರಿಸಲು ಆಕೆಯು ಸ್ವಲ್ಪವೂ ಅಂಜದೆ ಕೇಳಿದ ಪ್ರಶ್ನೆಗಳಿಗೆಲ್ಲ ಧೈರ್ಯವಾಗಿ ಉತ್ತರಗಳನ್ನಿತ್ತಳು. ಏನನ್ನಪ್ಪ ತಾನು ಕಾರ್ಪೊರೇಷನ್ನಿಗೆ ಬಂದಿರುವಾತೆಯೂ ತನಗೆ ಮಾತಾಪಿತೃಗಳ್ಯಾರೂ ಇಲ್ಲವೆಂತಲೂ, ಮಂತ್ರವಿದ್ಯೆಯನ್ನು ತಾನಾಗಿಯೇ ಕಲಿತುಕೊಂಡಳೆಂದೂ ಹೇಳಿದಳು. ಬಳಿಕ ಮ್ಯಾಜಿಸ್ಟ್ರೇಟರು ಆ ಹುಡುಗಿಯಂ ಪೋಲೀಸ್ ಇನ್ಸ್ಪೆಕ್ಟರೊಡನೆ ಐದಸ್ ಸ್ಥಳಕ್ಕೆ ಕಳುಹಿಸಿ ಬಿಡುವಂತೆ ಪೋಲೀಸಿನವರಿಗೆ ಹುಕುಂ ಮಾಡಿದರು. ಅವರದೇ ಪ್ರಕಾರ ಹುಡುಗಿಯನ್ನು ಕರೆದುಕೊಂಡು ಬಂದು ಸ್ಟೇಷನಲ್ಲಿ ಬಿಟ್ಟು ಬೀಗ ಹಾಕಿದರು. ಕೊಠಡಿ ಬಾಗಲು ಬೀಗಹಾಕಿದಾಗಲೆ ಒಳಗಿದ್ದವಳು ಅಂತರ್ಧಾನವಾದಳು. ಸ್ವಲ್ಪ ಹೊತ್ತಿನ ಮೇಲೆ ಆ ಹುಡುಗಿಯು ಸಮೀಪದಲ್ಲಿ ಓಡಿಹೋಗುತಲಿರುವಂತೆ ಜವಾನರಿಗೆ ಕಾಣಿಸಿದ್ದರಿಂದ ಅವರು ಅವಳಂ ಹಿಡಿಯುವದಕ್ಕಾಗಿ ಹಿಂದೆ ಅಟ್ಟಿಕೊಂಡು ಓಡಿ ಹೋಗಲು ಸ್ವಲ್ಪ ದೂರದಲ್ಲಿ ಸಿಕ್ಕುವಂತೆ ಸಿಕ್ಕಿ ಮರಳಿ ಕಾಣಿಸದೆ ಹೋದಳು. ತರುವಾಯ ಸ್ವಲ್ಪ ಹೊತ್ತಿನಮೇಲೆ ತಾನಾಗಿಯೇ ಸ್ಟೇಷನಿಗೆ ಬಂದು ಸಿಪಾಯಿಗಳ ಕೈಲಿ ಸಿಕ್ಕಿಬಿದ್ದು ತಾನು ಕ್ಷುತ್ಪೀಡಿತಳಾಗಿರುವಂತೆಯೂ ತನಗೇನಾದರು ಕೊಡಿಸಬೇಕೆಂಬದಾಗಿಯೂ ಕೇಳಿದಳು. ಅಲ್ಲಿದ್ದವರೊಬ್ಬರೂ ಯೇನೂ ಕೊಡದೆ ಹೋದದರಿಂದ ತನ್ನ ಎರಡು ಕೈಗಳನ್ನೂ ಕಣ್ಣುಗಳನ್ನೂ ಮುಚ್ಚಿಕೊಂಡು ಸ್ವಲ್ಪಹೊತ್ತಿನಮೇಲೆ ಮರಳಿ ತೆಗೆಯುವಾಗ್ಯೆ ಭೋಜನ ಪದಾರ್ಥಗಳೆಲ್ಲವೂ ಹಾಜರಾದವು. ಇದು ಅದ್ಭುತವಾದ ವಿಷಯವಾಗಿರುತಿದೆ.—ಸರಸ್ವತಿ.

ವಿಗ್ರಹಾರಾಧನೆಯ ವಿಷಯದಲ್ಲಿ ಮಾರ್ಚಿ ಮಾಹೆ ೨೫ ನೇ ತಾರೀಖಿನ ಮದರಾಸ್ ಆಂಧ್ರಪ್ರಕಾಶಿಕಾಯೆಂಬ ತೆಲುಗುಪತ್ರಿಕೆಯೊಂದು ಇದರಡಿಕಂಡಂತೆ ಬರೆದಿರುತ್ತದೆ:ನುದರೆ,—ಪ್ರಜೆಗಳು ತಮ್ಮ ತಾಯಿತಂದೆಗಳನ್ನು ನೋಡಿ ಅವರೊಡನೆ ಕೆಲವುಕಾಲ ವಾಸ ಮಾಡಿದ್ದಾಗ್ಯೂ, ಅವರ ಆಕೃತಿಯು ತಮ್ಮ ಮನಸ್ಸಿನಲ್ಲಿ ಪರಿಪೂರ್ಣವಾಗಿದ್ದಾಗ್ಯೂ, ಅವರಮೇಲಿನ ಪ್ರೇಮಾತಿಶಯದಿಂದ ಅವರ ರೂಪವು ಕಣ್ಣಿನೊಳಗಿದ್ದಾಗ ಅವರ ಸ್ಮರಣೆಬಂದು ಆನಂದ ಪಡುವಂತೆ ಗತಿಸಿದವರ ಪಟಗಳನ್ನು ಮನೆಗಳಲ್ಲಿ ಬರೆಸಿಟ್ಟುಕೊಳ್ಳುವದು ಪ್ರಸಿದ್ಧವಾಗಿದೆಯಷ್ಟೆ. ಈ ಭಾವನೆಯಿಂದಲಾದರು, ವೇದಶಾಸ್ತ್ರಗಳಲ್ಲಿ ವಿಧಿಸಲ್ಪಟ್ಟಿರುವ ವಿಗ್ರಹಾರಾಧನೆಯು ಒಳ್ಳೆದೆಂದೆಣಿಸಿ ನಂಬುವದು ಯುಕ್ತವಲ್ಲದೆ ಹಾಗೆ ಮಾಡುವದು ಅಯುಕ್ತವೆಂದು ನುಡಿಯುವದು ವಿವೇಕಿಗಳ ಧರ್ಮವಲ್ಲವು. ಗೃಹಾದಿಗಳ ನಿರ್ಮಾಣಕ್ಕೆ ಶಿಲ್ಪಿಯೊಬ್ಬನು ಅವಶ್ಯಕವಾಗಿರುವಂತೆ, ಚೇತನಾಚೇತನಾತ್ಮಕವಾದ ಈ ವಿಶ್ವವಿಚಿತ್ರ ಪ್ರಪಂಚಕ್ಕೆ ಸೃಷ್ಟಿಕರ್ತನೊಬ್ಬನು ಇಲ್ಲದಿದ್ದಪಕ್ಷದಲ್ಲಿ ಸೃಷ್ಟಿ ಸ್ಥಿತಿಲಯಗಳು ಜರಗಲಾರವಾಗಿ ಕರ್ತನೊಬ್ಬನಿರುವನೆಂತಲೂ, ಆ ಈಶ್ವರನು ಯಾವಾಗಲು ಪ್ರಪಂಚನಿರ್ಮಾಣಕರ್ತನಾಗಿಯೂ ನಿತ್ಯನಾಗಿಯೂ, ಹಾಗೆ ನಿರ್ಮಿಸಬೇಕೆಂದು ಯೋಚಿಸಲಿಕ್ಕೆ ಸರ್ವಜ್ಞನಾಗಿಯೂ, ಉಪಕರಣ ಸಾಮಗ್ರಿಯಿಲ್ಲದೆಯೇ ಸೃಷ್ಟಿಸಲಿಕ್ಕೆ ಸರ್ವಶಕ್ತನಾಗಿಯೂ, ಜೀವಕೋಟಿಗೆ ಅದೃಷ್ಟಾನುರೂಪವಾದ ಶುಭಾಶುಭ ಫಲಗಳನ್ನು ಕೊಡುತ ಅನಂತವಾದ ಕರ್ಮಗಳನ್ನು ಸಾಕ್ಷಿರೂಪನಾಗಿದ್ದು ತಿಳಿದುಕೊಳ್ಳಲಿಕ್ಕೆ ಸರ್ವವ್ಯಾಪಕನಾಗಿಯೂ ಚೇತನಾಚೇತನ ವಸ್ತುಗಳಂ ಸೃಜಿಸಿ ಅವುಗಳಿಗೆ ಶಕ್ತಿಯಂ ಕೊಡಲಿಕ್ಕೆ ಸರ್ವಕಾರಣಭೂತನಾಗಿಯೂ, ಸ್ವೇಚ್ಛೆಯು ತನ್ನ ಸಂಕಲ್ಪದಂತೆ ಜರಗಿಸಲಿಕ್ಕೆ ಸರ್ವೇಶ್ವರನಾಗಿಯೂ ಇರಬೇಕೆಂತಲೂ ಅನುಮಾನಪ್ರಮಾಣದ ಮೇಲೆ ನಾವು ಊಹಿಸಿ ನಂಬಬೇಕಾಗಿರುತಿದೆ. ಇಂತಾ ಸರ್ವವ್ಯಾಪಕನಾದ ಭಗವಂತನ ಮಹಿಮೆಯಂ ವ್ಯಕ್ತಪಡಿಸಲಿಕ್ಕೆ ಆಯಾ ಮತಗಳು ಹೇಳಿದ ಬೇರೊಂದು ವಾಕ್ಯಕ್ಕೆ ಅವರವರ ಅಭಿಪ್ರಾಯವು ಈರೀತಿಯಾಗಿರುವದೇನೋ ಯೆಂಬದಾಗಿ ಊಹಿಸಿ ಅರ್ಥಮಾಡಿ ತಿಳಿದುಕೊಳ್ಳುವದು ಬಹಳ ಪ್ರಯಾಸಕರವಾಗಿದ್ದರೂ ನವನಾಗರಿಕರಾದ ತತ್ವಜ್ಞಾನಿಗಳು ಮಾತ್ರ ಯೆಷ್ಟು ಸುಲಭವಾಗಿ ಅವುಗಳಿಗೆಲ್ಲ ತಮ್ಮ ಅಭಿಪ್ರಾಯಾನುಗುಣವಾಗಿ ಅರ್ಥಕಲ್ಪನೆಮಾಡಿ ಬಾಯಿಗೆಬಂದಂತೆಲ್ಲ ನುಡಿದು ಸಿದ್ಧಾಂತ[illegible]ದರೆನ್ನಿಸಿದಾರೆ. ಈಶ್ವರನು ಋಷಿಗಳ ಮೂಲಕವಾಗಿ ಹೊರಪಡಿಸಿದ ವೇದಶಾಸ್ತ್ರಗಳಿಗೆ ಆರೇಳುಕೋಟಿಯಲ್ಲಿರುವ ಯಾವ ಗ್ರಂಥವೂ ಸಮಾನವಾಗಲಾರದೆಂಬದು ಗತಿ ದ್ವೀಪಾಂತರವಾಸಿಗಳಲ್ಲಿ ಮಹಾ ವಿದ್ವಾಂಸರಾಗಿರತಕ್ಕವರು ಸಹ ತಿಳಿದುಕೊಂಡು ಹಿಂದೂಗಳು ತಮ್ಮ ಗ್ರಂಥಗಳಲ್ಲಿ ತಿಳಿಸಲ್ಪಟ್ಟಿರುವ ವಿಷಯಗಳನ್ನು ಚೆನ್ನಾಗಿ ಅರ್ಥಮಾಡಿ ತಿಳಿದುಕೊಳ್ಳುವದಾದರೆ ಇತರ ಮತಗಳಂ ಪ್ರಶಂಸಿಸಿ ಅದರಲ್ಲಿ ಪ್ರವೇಶಿಸುವದಕ್ಕಾಗಲಿ, ನೂತನ ಮತಗಳಂ ಕಲ್ಪಿಸಿಕೊಳ್ಳುವದಕ್ಕಾಗಲಿ ಪ್ರಯತ್ನ ಪಡಲಾರರೆಂಬದಾಗಿ ಬಹುಕಾಲದ ಹಿಂದೆಯೇ ತಿಳಿಸಿದ್ದರು. ಅಂತಾ ಅಸಮಾನ ಪ್ರತಿಷ್ಠೆಗೆ ಸ್ಥಾನಭೂತವಾಗಿದ್ದ ನಮ್ಮ ಗ್ರಂಥಗಳಲ್ಲಿ ಅಲ್ಪಬುದ್ಧಿಯುಳ್ಳ ನಮ್ಮಂತವರಿಗೆ ಅವುಗಳ ವಿಷಯಗಳು ಪರಸ್ಪರ ವಿರೋಧ ಪ್ರಭಾವಾಗಿಯೂ, ತಾರತಮ್ಯವಾಗಿಯೂ ಇರುವಂತೆ ತೋರುವಾಗ್ಯೆ ನಮ್ಮನ್ನು ಚೆನ್ನಾಗಿ ಶಿಕ್ಷಿಸಿ ಬುದ್ಧಿ ಹೇಳತಕ್ಕ ಮಹರ್ಷಿಗಳಿಗೆ ಆ ವ್ಯತ್ಯಾಸಗಳು ಕಂಡು ಬರದೆ ಹೋದವೆ? ದೀರ್ಘದರ್ಶಿಗಳಾದ ಮತ್ತು ಒಳ್ಳೇ ವಿಚಾರಪರರಾದ ಅವರೇ ತಮ್ಮ ದೋಷವಂ ಸುಲಭವಾಗಿ ಕಂಡು ಹಿಡಿಯಲಿಕ್ಕೆ ಅವಕಾಶ ಕೊಡುವರೆ? ಹಾಗೆ ಯೆಂದಿಗೂ ಅವಕಾಶವನ್ನಿಯ್ಯಲಾರರು. ಅವರ ನಿಜಾಭಿಪ್ರಾಯವು ತಿಳಿದುಕೊಳ್ಳದೆ ಅಪಾರ್ಥ ಮಾಡುವ ದೋಷವು ನಮ್ಮದೇಯೆಂದು ಭಾವಿಸತಕ್ಕದ್ದು.

Bangalore:— Printed and published at the Karnatic Press, No. 108, Srinivasa Mandir Road Pettah—1890

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಶ್ರೀಮದ್ವಿವಿಧಪ್ರವೃತ್ತ್ಯನ್ವಿತಗುಣಾರ್ಥ್ಯಕರ್ಣಾಟಕಪ್ರಕಾಶನಪರಾಭಿಧಾಪತ್ರಿಕಾಹಿತೈಷಿಣೀ [illegible]

Vol. XVII] BANGALORE.—MONDAY, APRIL 21 1890. [No. 16

ಸಂಪುಟ ೧೭] ಬೆಂಗಳೂರು.—ಸನ ೧೮೯೦ನೇ ಇಸವಿ ಏಪ್ರಿಲ್ ೨೧ ನೇ ತಾರೀಖು ಸೋಮವಾರ. [ಸಂಖ್ಯೆ ೧೬.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಷೆಗಳಿಗೆ.

[illegible]	[illegible]	[illegible]
[illegible]	6—0—0	9—0—0
[illegible]	1—0—0	10—8—0

ಇಂಗ್ಲಿಷ್ ಅಥವಾ ಕನ್ನಡವೊಂದಕ್ಕೆ.

[illegible]	4—0—0	7—0—0
[illegible]	0—0	6—0—0

[illegible]

[illegible]

NOTICE

VAIDYASARA SANGRAHA

A TREATISE ON THE PRINCIPLES OF HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

[illegible]

[illegible] ರೂ ೫ 0—0

[illegible]

ಬೆಂಗಳೂರು, [illegible] 41ನೇ ನಂ ಮನೆ.

ADVERTISEMENTS.

ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮು ದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು [illegible] ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

	ಪೋಸ್ಟ್ ಸಹಿತ ರೂ ಆ ಪೈ
[illegible]	೫ ೦ ೦
,, [illegible]	೧ ೦ ೦
,, [illegible]	೦ ೪ ೦
[illegible]	೧ ೨ ೦
,, [illegible]	೦ ೧೨ ೦
,, [illegible]	೦ ೮ ೦
,, [illegible]	೦ ೧ ೬
,, [illegible]	೦ ೬ ೦
[illegible]	೦ ೫ ೦
[illegible]	೦ ೩ ೦
[illegible]	೦ ೧ ೬
[illegible]	೦ ೨ ೬
[illegible]	೧ ೦

ಕನ್ನಡ ಗ್ರಂಥಗಳು

[illegible]	೩ ೦ ೦
[illegible]	೧ ೮ ೦
[illegible]	೧ ೪ ೦
[illegible]	೦ ೪ ೦
[illegible]	೦ ೪ ೦
[illegible]	೦ ೨ ೬
[illegible]	೦ ೨ ೬
[illegible]	೦ ೩ ೦
[illegible]	೦ ೨ ೦
[illegible]	೦ ೨ ೦
[illegible]	೦ ೨ ೬
[illegible]	೧ ೦ ೦
[illegible]	೦ ೧೨ ೦

ನೋಟೀಸ್.

ಇದರಿಂದ ನಮ್ಮ ಚಂದಾದಾರರಿಗೂ ಇತರ ರಿಗೂ ಪ್ರಕಟಿಸುವದೇನೆಂದರೆ —

ಸನ ೧೮೯೦ನೇ ಇಸವಿ [illegible] [illegible] ಚಂದಾ ಬಾಕಿಯನ್ನು [illegible] ಬಾಕಿದಾರರ ಹೆಸರುಗಳನ್ನು ನಾವು [illegible] ಪತ್ರಿಕೆ [illegible] ಅವರ [illegible] ಪತ್ರಿಕೆಯು ಅಪೇಕ್ಷೆ ಇಲ್ಲದಿದ್ದರೆ ಅಂಥವರು ಕೂಡಲೆ ತಮ್ಮ ಅಭಿ ಪ್ರಾಯವನ್ನು [illegible] ತಿಳಿಸಬೇಕಾಗಿಯೂ. [illegible] ಚಂದಾ [illegible] ಕಳುಹಿಸಿ ಕೊಡ ಬೇಕೆಂದು ಕೋರುತ್ತೇವೆ.

ಬೆಂಗಳೂರು ತಾ ೫ನೇ ಜನವರಿ ೧೮೯೦) ಟಿ. ಸಿ. ಶ್ರೀನಿವಾಸಾಚಾರ್, ಪ್ರೊಪ್ರೈಟರ್. ಕರ್ಣಾಟಕ ಪ್ರಕಾಶಿಕಾ.

ವಿಷೂಚಿಕ ಸಂಹಾರಿ.

[illegible] ಗವರ್ನಮೆಂಟಿನಿಂದ ಮಾ ಡಿರುವ [illegible] ಔಷಧ ಈ ಔಷಧಿಯನ್ನು 12 ವರುಷಗಳ ಪರಿಯಂತ ಅಜ ಮಾಯಿಸಿದೆ. ಇದನ್ನು ತೆಗೆದುಕೊಂಡವರಿಗೆಲ್ಲ ಗುಣವಾಗಿರುತ್ತೆ. ಈ ಔಷಧಿ ಪ್ರಯೋಗಿಸಿದ ನಂತರ [illegible] ಆಗುವದು. ಅತಿ [illegible] ದಲ್ಲಿಯೇ ಕ್ರಮವಾಗಿ [illegible]. ಈ ಔ ಷಧಿಯು 5 ವರುಷಗಳ ಪರಿಯಂತ ಕೆಡದೆ ಇ ರ್ತಾಗಿರುವದು. 48 ಮಾತ್ರೆಗಳುಳ್ಳ ಒಂದು ಡಬ್ಬಿಗೆ ಕ್ರಯ 12 ಆಣೆ. ಮಾತ್ರೆ ತೆಗೆದುಕೊ ಳ್ಳುವ ಕ್ರಮವನ್ನು ತಿಳಿಸುವ ಕಾಗದ ಪ್ರತಿ ಡಬ್ಬಿಯಲ್ಲಿಯೂ ಇರುವದು. ಈ ಕೆಳಗೆ ನ [illegible] ಬರೆದುಕೊಂಡಲ್ಲಿ ಬಿನಾಫ್ [illegible]

[illegible]

,, [illegible] ,,

,, [illegible]

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA

MONDAY, APRIL 21 1890

೧೮೯೦ನೆ ಏಪ್ರಿಲ್ ತಾ ೨೧ ನೇ ಸೋಮವಾರ

SHORT SIGHTED POLICY OF THE LOCAL SPECTATOR

ಮದರಾಸ್ ಗವರ್ನಮೆಂಟಿನವರು, [illegible] ವಾದ ಅನೇಕರ ಹಕ್ಕುದಾರಿಗಳನ್ನು [illegible] ಡಾಕ್ಟರ್ ಸಿವಫ್ರಾಸ್ ಎಂಬವರನ್ನು ಡೆಪ್ಯುಟಿ ಅಸಿಸ್ಟೆಂಟ್ ಸರ್ಜನ್ ಜನರಲ್ಲಾಗಿ [illegible] [illegible] ನಿಯಮದಲ್ಲಿ ಮಾಡಿ [illegible] ನೇ ತಾರೀಖಿನ ಇಲ್ಲಿನ ಸ್ಪೆಕ್ಟೇಟರ್ ಪತ್ರಿಕೆ ಯು ಬಹಳ ಅನುತಾಪಿಸುತ್ತೆ, [illegible] ವಾದ [illegible], ಸದರಿ [illegible] ತರದಿಂದ ನೌಕರಿ [illegible] ಬ ಹಳ [illegible], ನೌಕರರನ್ನು ನೇಮಕ ಮಾಡತಕ್ಕ [illegible] ಸಾಮಾನ್ಯವಾಗಿ [illegible] [illegible] ಸಂದರ್ಭದಲ್ಲಿ [illegible] [illegible] ಕರಣ್ಯಾದಿದರೆ [illegible], ಇದು [illegible] ಅವರು [illegible] [illegible] ಪ್ರಥಮ [illegible] [illegible] ಅವರು [illegible] [illegible] ಕೊಳ್ಳಬೇಕೆಂದು [illegible], ಅವ [illegible] ಬುದ್ಧಿ [illegible] ಡಾಕ್ಟರ್ ಸಿವಫ್ರಾಸ್ ಎಂಬವರನ್ನು [illegible] ನೇಮಕ ಮಾಡಿರುವರಾದ್ದರಿಂದ, ಅಂಥಾ [illegible] [illegible] ಸರ್ಜನ್ ಜನರಲ್ ಕೆಲಸಕ್ಕೆ [illegible] ನೇಮಕ ಮಾಡುವವರಿಂದ ಅ [illegible] ತಿಳಿಸುತ್ತಿದೆ. ಇದಲ್ಲದೆ ಸದರೀ ಪತ್ರಿಕೆಯು ಮತ್ತೊಂದು ವಿಷಯ ವನ್ನು ಸೂಚಿಸುವದೇನೆಂದರೆ, ಎಲ್ಲಾ ದೇಶಗಳಲ್ಲಿ ರತಕ್ಕ ಸರ್ಕಾರ್ ಉದ್ಯೋಗಸ್ಥರಿಗೆ [illegible] ಲ್ಪಟ್ಟ ಅಧಿಕಾರಿಗಳ ಅಭಿಮತಕ್ಕನುಸಾರವಾಗಿಯೇ ಉದ್ಯೋಗ ಪದವಿಗಳು [illegible] ಸಂಭವಿಸ ತಕ್ಕ ಸ್ವಭಾವ [illegible] (ಅಂದರೆ ನ್ಯಾಯ ವಾದ ಹಕ್ಕುದಾರಿಯನ್ನು ಅಪೇಕ್ಷಿಸಿ ಸರ್ವಿಸ್ ದಾರರನ್ನು ಮೇಲ್ಪಟ್ಟ ವೇತನ ಮತ್ತು ಅಧಿಕಾರಗಳಲ್ಲಿ ನೇಮಕ ಮಾಡುವದು) [illegible] ಹೃದಯಾನ್ವಿತವಾದ [illegible] ಯಾವ ಕಾರ್ಯವು [illegible] ಇರಬಾರದು. ಬಡ್ತಿ [illegible] ಅವರವರ ಯೋಗ್ಯತೆ ಯನ್ನನುಸರಿಸಿ ಆಗತಕ್ಕದ್ದು. ಪರಂತು ಯಾ ವ ನಿರ್ಣಯ ಪ್ರಕಾರ ಸದರೀ ಯೋಗ್ಯತೆಯು ನಿರ್ಧರಿಸಲ್ಪಡತಕ್ಕದ್ದೋ ಅದು ಶುದ್ಧ ವ್ಯತಿರೇ ಕವಾಗಿರುವದೆಂಬುದು ಮಾತ್ರ ಸ್ಪಷ್ಟವಾಗಿರು ತ್ತದೆ. ನಮಗೆ ತಿಳಿದಿರುವ ಮಟ್ಟಿಗೆ ಅನೇಕ [illegible] ಗಳಲ್ಲಿ [illegible] ವಿಷಯದಲ್ಲಿ ವ್ಯವಸ್ಥಿತಗಳಾದ ನ್ಯಾಯ ನಿಬಂಧನೆಗಳ್ಯಾವ ವೂ ಇರುವದಿಲ್ಲ. ಪ್ರತಿ [illegible] ತನಗೆ ಅಭಿಮತವಾದ ಪದ್ಧತಿಯನ್ನೇ ಅವಲಂಬಿಸು ತ್ತಾನೆ. ಕೆಲವರು ಉದ್ಯೋಗಸ್ಥರ ನೌಕರಿಯ [illegible] ಮುಖ್ಯವಾಗಿ [illegible] ಸುತ್ತಾರೆ. ಇನ್ನು ಕೆಲವರು ತಮಗೆ ಇಷ್ಟರಾಗಿ [illegible] ಇರುವ [illegible] [illegible] ಮೇಲ್ಪಟ್ಟವರ ಹಕ್ಕು ದಾರಿಯನ್ನೆಲ್ಲ ನಿರಾಕರಿಸಿ [illegible] ದಕ್ಕೆ ತರುತ್ತಿರುವರು. ಇತರರು ಕೆಲವರು ನೌಕರಿಯ ಕಾಲವನ್ನೂ ಯೋಗ್ಯತೆಯನ್ನೂ ಸಹ [illegible]. ಹೀಗೆಯೇ [illegible] ಪ್ರಕಾರವಾಗಿರುತ್ತದೆ. ಮುಖ್ಯವಾಗಿ ಪರಿಗ [illegible] ನ್ಯಾಯ ನಿಬಂಧನೆಗಳ್ಯಾವವೂ ಇಲ್ಲದೆ [illegible] ನೌಕರರಲ್ಲಿ ಬಹಳ [illegible] ಅಸಮಾಧಾನ ಅಪ್ರತ್ಯಕ್ಷ [illegible] ಕಾರಣವಾಗುವದು, ಎಂಬದು ಸ್ಪೆಕ್ಟೇಟರ್ ಪತ್ರಿಕೆಯ ಮೇಲಕಂ ಡ ಅಭಿಪ್ರಾಯದಲ್ಲಿ ಲೇಶವಾದರೂ ಸುಳ್ಳೆಂದು ನಾವು ಹೇಳಲಾರೆವು. ಆದು ಈ ಸಂದರ್ಭದಲ್ಲಿ ವಸ್ತುಸ್ಥಿತಿಯು ಸಹಜವಾಗಿ ವ್ಯಕ್ತಪಡಿಸಿರು ತ್ತದೆ, ಪರಂತು ಇಷ್ಟರ ಅಭಿಪ್ರಾಯವನ್ನು ತಾ ನು [illegible] ಪ್ರಥಮ [illegible] ವನ್ನುದ್ದೇಶಿಸಿ ತಿಳಿಸಿರುವದು ಯಾತಕ್ಕೆ [illegible] ಈ ಹಿತೋಪದೇಶಗಳೆಲ್ಲವೂ [illegible] [illegible] ಅವರ [illegible] [illegible] ಉದ್ದಿಷ್ಟವಾದವಾಗಿ ರುತಿವೆ. [illegible] ವಿಷಯದಲ್ಲಿ ಮೇ ಲೆಕಂಡ ಅಕ್ರಮವೇನಾದರೂ ಜರಗಿದ್ದರೆ ಆಗ ಸ್ಪೆ ಕ್ಟೇಟರ್ ಪತ್ರಿಕೆಯು ಇಷ್ಟರ ಕ್ರಮವೇ [illegible] ಸುತಲಿರಲಿಲ್ಲವು. ಪ್ರಕೃತ ಸಂದರ್ಭದಲ್ಲಿ ಕೆಲ [illegible] ಯೂರೋಪಿಯನ್ ಡಾಕ್ಟರುಗಳ ಪ್ರಯೋ ಜನಗಳಿಗೆ [illegible] ವಾದದರಿಂದಲೇ ಸದರೀ ಪತ್ರಿಕೆಯು ಬಹಳ ಅಸಮಾಧಾನ ಪಡುತ್ತಿದೆ. [illegible] ಅನೇಕ [illegible] [illegible] ನೌಕರಿ ಮಾಡಿ [illegible] [illegible] ಅಂಥವರ ಹಕ್ಕುದಾರಿ [illegible] ನೌಕರಿಯೂ [illegible] [illegible] ಯೋಚಿಸಬಾರದಲ್ಲವೆ !

ಒಬ್ಬ ಅಮಲ್ದಾರರನ್ನು ಟೆಂಪರರಿ ಅಸಿಸ್ಟೆಂಟ ರಾಗಿ ಪೋಸ್ಟರನ್ಮಾಡಿ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ವರ್ಗ ಮಾಡಿರುವದಾಗಿ ಗತವಾರದ ಗೆಜೆಟನಲ್ಲಿ ಪ್ರಕಟಿಸಲ್ಪಾಗಿರುತಿದೆ. ಸದರೀ ಇಮ್ಪ್ರೂವರ್ ನಾಮೆಯನ್ನು ಬಹುಶಃ ಸ್ಪೆಕ್ಟೇಟರ್‌ಪತ್ರಿಕೆಯು ನೋಡಿರಬಹುದು. ಆದರೆ ಇದು ಕುರಿತು ಅದರ ಅಭಿಪ್ರಾಯವೇನಿರಬಹುದು! ಹೀಗೆಯೇ ಈಚೆಗೆ ನಡೆದ ಕೆಲವು ಏರ್ಪಾಟುಗಳಲ್ಲವೂ ಬಹಳ ವಿವೇಚನೆಯೊಡನೆ ಮಾಡಲ್ಪಟ್ಟವೆಂಬ ತಾತ್ಪರ್ಯವು ಸದರೀ ಪತ್ರಿಕೆಗೆ ನಿಜವಾಗಿದ್ದರೆ ಬಯಿ ದಂದೆಣಿಸುತ್ತೇವೆ. ಮುಖ್ಯವಾಗಿ ಇದು ವರಿವಿಗೆ ಲಾರ್ಡ ಕಾನಿಮಾರಾಯರ ಪ್ರಭುತ್ವದಲ್ಲುಂಟಾದ ಕೀರ್ತಿಪ್ರತಿಷ್ಠೆಗಳಗಲ್ಲ ಮೂಲನ್ಯೂನ್ಯತೆ ಯುಮಾತ್ರಕ್ಕಂತಾ ಅನಾಲೋಚಿತವಾದ ಅಕ್ರಮ ಕೆಲಸವೆಂದಾಗಿ ಆಕ್ಷೇಪಿಸಿ ಅವರು ಕಾರ್ಯಕ್ರಮವನ್ನು ರದ್ದುಮಾಡಬೇಕೆಂಬದಾಗಿ ಹಾಸ್ಯಸ್ಪಟ್ಟರುವ ಸ್ಪೆಕ್ಟೇಟರ್ ಪತ್ರಿಕೆ ನಿಂದನವಾದ "ಇಮ್ಪ್ರೂವರೀಸರ್" ಎಂಬದು ಈ ಸಂಸ್ಥಾನದ ಪ್ರಭುತ್ವದಲ್ಲಿ ಪ್ರತಿನಿತ್ಯವೂ ಅಪರಿಮಿತವಾಗಿ ಜರುಗುತಲಿರುವಾಗ್ಯೆ ಅದನ್ನುಪೇಕ್ಷಿಸಲಿಕ್ಕೆ ಅದು ಸ್ವಪ್ರಯೋಜನವೆಂಬ ನೇತ್ರರೋಗದಿಂದ ಅಸಮರ್ಥವಾದದ್ದಾಗಿ ನಾವು ಬಹಳ ವಿಷಾದಿಸುತ್ತೇವೆ. ಇಲ್ಲಿನ ಆಡಳಿತಗಳಲ್ಲಿ ವಿವೇಕ ಪ್ರಭುತ್ವಕ್ಕೆ ಕೀರ್ತಿ ಪ್ರದಗಳಾದ ಉತ್ತಮಕಾರ್ಯಗಳುಂಟಾದಾಗಿಯೂ, ಮದರಾಸ್ ಗವರ್ನಮೆಂಟಿನವರ ವರ್ತನೆಯು ಅವರ ಪ್ರತಿಷ್ಠೆಯಂ ಹೋಗಲಾಡಿಸತಕ್ಕದೆಂಬದಾಗಿಯೂ ಪರಿಭಾವಿಸಲ್ಪಡಲಿಕ್ಕೆ ಕಾರಣವು ಜಗತ್ಪ್ರಸಿದ್ಧವಾಗಿರುವಾಗ್ಯೆ ಅವಕ್ಕಾಗಿ ಆಕ್ಷೇಪ ಪಡದೆ ಕೇಳಿಯದಿಲ್ಲವು.

SEPARATION OF REVENUE FROM JUDICIAL FUNCTIONS.

ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಭೆಯವರಿಂದ ಈಗ್ಯೆ ನಾಲ್ಕೈದು ವರ್ಷಗಳ ಮೊದಲು ಕೇಳಿಸಲ್ಪಡುತಲಿರುವ ಅನೇಕ ವಿಷಯಗಳ ಪೈಕಿ ರೆವಿನ್ಯೂ ಅಧಿಕಾರವನ್ನೂ ಮ್ಯಾಜಿಸ್ಟ್ರೀಟ ಅಧಿಕಾರವನ್ನೂ ಏಕತ್ರ ಸೇರಿಸಿರದೆ ಪ್ರತ್ಯೇಕಿಸಬೇಕೆಂಬ ದೊಂದಾಗಿರುತಿದೆ. ಇದರಿಂದ ಜನರಿಗುಂಟಾಗತಕ್ಕ ಸಾಧಕ ಬಾಧಕಾಂಶಗಳನ್ನು ದೇಶಸುಗಿಕರು ತತ್ಕಾಲಗಳಲ್ಲಿ ತಮ್ಮ ಅನುಭವಪೂರ್ವಕ ವಿಸ್ತಾರವಾಗಿ ವಿಚಾರ ಮಾಡಿರುತ್ತಾರೆ. ತತ್ಕಾಲದಲ್ಲಿ ಗವರ್ನಮೆಂಟಿನವರ ಅವಧಾನವನ್ನಾಕರ್ಷಿಸತಕ್ಕವುಗಳಲ್ಲಿ ಇದು ಕೇವಲ ಮುಖ್ಯವಾದುದಾಗಿ ಗಣಿಸಲ್ಪಟ್ಟಿದೆ. ಈ ವಿಷಯದಲ್ಲಿ ದಿವಾನ್ ಬಹದೂರ್ ಆರ್. ರಘುನಾಥರಾಯರವರು ತಮ್ಮ ಅಭಿಪ್ರಾಯವು ವ್ಯಕ್ತಪಡಿಸಿ ಈಗ ನಡೆಗೆಯುಂಟಿರತಕ್ಕ ಪದ್ಧತಿಯು ಆತ್ಯಂತಿಕವಾಗಿ ಮಾರ್ಪಾಟು ಮಾಡಬೇಕಾದದ್ದು ಕೆಟ್ಟದ್ದೆಂದು ಎಣಿಸಲಾದುದೆಂಬದಾಗಿಯೂ, ಸದರೀ ಎರಡು ಅಧಿಕಾರಗಳನ್ನು ಪ್ರತ್ಯೇಕಿಸುವದರಿಂದ ಪ್ರಜೆಗಳ ಪ್ರಾಣ ಮಾನ ಧನಗಳ ಸಂರಕ್ಷಣೆಗೆ ನ್ಯೂನತೆ ಯುಂಟಾಗುವದೆಂದು ತಾವು ಭಾವಿಸುವದಾಗಿಯೂ, ಒಬ್ಬ ತಹಸೀಲ್ದಾರರಿಗೆ ಅವರ ತಾಲ್ಲೂಕಿನಲ್ಲಿರುವ ಮ್ಯಾಜಿಸ್ಟ್ರೀಟರ ಮೇಲೆ ಅಪೀಲ ಅಧಿಕಾರವನ್ನು ಕೊಡುವದರ ಮೂಲಕ ಹಾಲೀ ಇರತಕ್ಕ ಪದ್ಧತಿಯು ಅಭಿವೃದ್ಧಿಯಾಗಬಹುದೆಂದು ತಮಗೆ ತೋರುವದಾಗಿಯೂ, ಈಗಗ್ರಾಮ್ಯಕೋರ್ಟುಗಳ ಶೇಕಸೀಲ್ದಾರರಾಗಿಯೂ, ಡೆಪ್ಯುಟಿ ತಹಸೀಲ್ದಾರರಾಗಿಯೂ, ಡೆಪ್ಯುಟಿ ಕಲೆಕ್ಟರರಾಗಿಯೂ ಪೋಸ್ಟರನ್ಮಾಡಲ್ಪಡುವದರಿಂದ ಇಲಾಖೆಯ ಕಾರ್ಯ ನಿರ್ವಾಹಕೆಯಲ್ಲಿ ಪುರೋವೃದ್ಧಿಯುಂಟಾಗಬಹುದೆಂದು ತಾವು ನಿರೀಕ್ಷಿಸುವುದಕೆಯೂ ಸೂಚಿಸಿರುತ್ತಾರೆ. ಈಗ ನಡೆಗೆಯುಂಟಿರುವ ಕ್ರಮದಲ್ಲುಂಟಾಗಿರುವ ಬಾಧಕಾಂಶಗಳು ಕಾಂಗ್ರೆಸ್ ಸಭೆಗಳಲ್ಲಿ ಅನೇಕಾವರ್ತಿ ನಾನಾ ಪ್ರಕಾರವಾಗಿ ಅನುಮಾನಿಸಲ್ಪಟ್ಟಿದ್ದರೂ ಆದರಲ್ಲುಂಟಾಗಿರುವ ನ್ಯೂನತೆಯು ವಿಷಯದಲ್ಲಿ ಮೇಲೆ ರಘುನಾಥರಾಯರವರು ತಮ್ಮ ಅಭಿಪ್ರಾಯವಿಂತೆಂದರೆ ಸದೆ ನಿರ್ಣೀತವಾದ ಸ್ವಾಭಿಪ್ರಾಯಕ್ಕೆ ಬದ್ಧರಾಗಿರುವಂತೆ ಕಾಣುತಿದೆ. ರಾಯರವರ ನಿರ್ಣಯಕ್ಕೆ ಪ್ರೋತ್ಸಾಹಕಗಳಾದ ಆಧಾರಗಳು ಮಾತ್ರ ಅವರ ಲೇಖನದಿಂ ವ್ಯಕ್ತವಾಗುವದಿಲ್ಲವು. ಈಗ ಮ್ಯಾಜಿಸ್ಟ್ರೀಟುಗಳಿಗೆ ನಾನಾವಿಧ ಅಧಿಕಾರಗಳು ಸೇರಿಸಿ ಕೊಡಲ್ಪಟ್ಟಿರುವದರಿಂದ ಅವರು ಒಂದೆ ನ್ನು ತೃಪ್ತಿಕರವಾಗಿ ಮಾಡುವದಿಲ್ಲವೆಂಬ ಅಂಶ ಪರ್ಯಾಲೋಚನೀಯವಾಗಿರ ತಿದೆ. ಈಗ ನಾವು ನೇಟಿವ್ ಮ್ಯಾಜಿಸ್ಟ್ರೀಟುಗಳನ್ನು ಕುರಿತು ವಿಚಾರ ಮಾಡುವೆವು. ನೇಟಿವ್‌ಮ್ಯಾಜಿಸ್ಟ್ರೀಟುಗಳು ರೆವಿನ್ಯೂ ಆಫಿಸರ್‌ಗಳಾಗಿಯೂ, ಸ್ಯಾನಿಟರಿ ಆಫಿಸರ್‌ಗಳಾಗಿಯೂ, ಪೋಲೀಸಿನವರಿಗೆ ಮೊಕದ್ದಮೆಗಳ ಪತ್ತೆ ಮೊದಲಾದವುಗಳಲ್ಲಿ ಕುಮ್ಮಕ್ಕ ಮಾಡತಕ್ಕರಾಗಿರುವದಲ್ಲದೆ ತಾಲ್ಲೂಕ ಪೋಲೀಸಿಗೆ ಸಂಬಂಧಿಸಿದ ಮೇಲ್ಪಟ್ಟ ವಿಚಾರಣಾಧಿಕಾರಿಗಳಾಗಿರುವದರಿಂದ ಪೋಲೀಸ್ ಅಧಿಕಾರರಾಗಿಯೂ, ಸೀರಾಮತಿ ಕಾಮಗಾರಿಗಳ ವಿಚಾರಣೆ ಮಾಡಬೇಕಾದವರಾಗಿರುವದರಿಂದ ಮರಾಮತ್ ಇಲಾಖೆ ಆಫೀಸರ್‌ಗಳಾಗಿಯೂ, ಇನ್‌ಕಮ್‌ಟ್ಯಾಕ್ಸ್ ವಸೂಲ್ಮಾಡುವದರಿಂದ ಸದರೀ ಟ್ಯಾಕ್ಸ್ ಕಲೆಕ್ಟರಾಗಿಯೂ, ಕೆಲವು ಸಂದರ್ಭಗಳಲ್ಲಿ ವಾರಸ್‌ದಾರರಿಲ್ಲದೆ ಗತಿಸತಕ್ಕವರ ಆಸ್ತಿಗಳಿಗೆ ಹಕ್ಕುದಾರರನ್ನು ವಿಚಾರಿಸಿ ಅದು ಅವರಿಗೊಪ್ಪಿಸಬೇಕಾಗಿರುವದರಿಂದ ಬೇವಾರಸುಸ್ವತ್ತುಗಳ ಸೆಟಲ್‌ಮೆಂಟ್ ಆಫಿಸರ್‌ಗಳಾಗಿಯೂ, ಇನ್ನೂ ಇತರ ಸಂದರ್ಭಗಳಲ್ಲಿ ಜನನ ಮರಣ ರಿಜಿಸ್ಟ್ರಾರಾಗಿಯೂ ಸಹ ಇರುತ್ತಾರೆ. ಇದಲ್ಲದೆ ಪ್ರತಿ ನಿತ್ಯವೂ ಅವರು ಮಾಡಬೇಕಾದ ಚಿಲ್ಲರೆ ಕೆಲಸಗಳು ತಿಳಿಸಕೂಡದಷ್ಟು ಅಪಾರವಾಗಿರುತಿವೆ. ಮುಖ್ಯವಾಗಿ ದೇಶದ ಪ್ರಭುತ್ವಕ್ಕೆ ಸಂಬಂಧಪಟ್ಟ ಸಕಲ ವಿಷಯದಲ್ಲಿಯೂ ಆಮ್ಮೆ ಅಭಿಪ್ರಾಯಕೊಡತಕ್ಕವರಾಗಿರುತ್ತಾರೆ. ವಿದ್ಯಾಭ್ಯಾಸ, ಸಿವಿಲ್ ನ್ಯಾಯಾಡಳಿತ, ಆಬಕಾರಿ, ಮ್ಯುನಿಸಿಪಲ್, ಲೋಕಲ್ ಫಂಡ್ ಬೋರ್ಡ್ ವಗೈರೆ ಬಾಬುಗಳಲ್ಲೆಲ್ಲ ಡಿಸ್ಟ್ರಿಕ್ಟ್ ಸಾಹೇಬರುಗಳು ರಿಪೋರ್ಟುಗಳಿಗೆ ಅವಶ್ಯಕಗಳಾದ ಅಕ್ಷಗಳನ್ನು ಕೇಳಿರಿಸಿ ಕರಾರುವಾಕ್ಕು ತಯಾರ್ಮಾಡಿ ಒದಗಿಸತಕ್ಕ ಭಾರವು ಇವರಿಗೇ ಸೇರಿರುವದು. ಇಂತಾ ಅಸಂಬಂಧಗಳಾದ ಬಹುವಿಧ ಅಧಿಕಾರಗಳೊಂದಾನಾವಿಧ ಹವಾಲ್ದಾರಗಳೂ ಒಬ್ಬ ಆಫಿಸರನಿಗೇಸೇರಿಸಿಕೊಡುವದು ಪರ್ಯವಸಾನದಲ್ಲಿ ಬಹಳ ಕ್ಲೇಶಕ್ಕೆಡೆಯಾಗಿಯೂ, ಜನರಿಗೆ ಹಿಂಸಕರವಾದುದಾಗಿಯೂ ಇರುತಿದೆ. ಅವುಗಳ ಪೈಕಿ ಕೆಲವನ್ನುದಾಹರಿಸಿ ತಿಳಿಸುವೆವು. ಈ ದೇಶದಲ್ಲೀಗ ತಾಲ್ಲೂಕ ಶಿರಸ್ತೇದಾರರಿಗೆ ಸಾಧಾರಣವಾಗಿ ಮ್ಯಾಜಿಸ್ಟ್ರೀಟ ಅಧಿಕಾರ ಕೊಡಲ್ಪಡದಿದ್ದರೂ ಪೂರ್ವದಲ್ಲಿದ್ದ ಪೇಷ್ಕಾರ್‌ಗಳಿಗಲ್ಲ ಸದರೀ ಅಧಿಕಾರ ನಿಯತವಾಗಿರುತಲಿತ್ತು. ಈಗಲು ಪರ್ಮೇಜಿಸ್ಟ್ರೇಟ್ ಶೀಮೆಯಲ್ಲಿ ತಾಲ್ಲೂಕ ಶಿರಸ್ತೇದಾರರಿಗಲ್ಲ ಮ್ಯಾಜಿಸ್ಟ್ರೀಟ ಅಧಿಕಾರಗಳು ಕೊಡಲ್ಪಟ್ಟಿರುತಿವೆ. ಮಾಹೆಯಾನಾ ೩೦-೩೫ ರೂಪಾಯಿಗಳೊಳಗಿಗಿ ಸಂಬಳವುಳ್ಳ ಶಿರಸ್ತೇದಾರರಿಗೂ, ೨೦ ರೂಪಾಯಿಗಳ ಸಂಬಳವುಳ್ಳ ಡೆಪ್ಯುಟಿ ತಹಸೀಲ್ದಾರರಿಗೂ ಸಾಧಾರಣವಾಗಿ ಮ್ಯಾಜಿಸ್ಟ್ರೀಟಿ ಮೊಕದ್ದಮೆಗಳನ್ನೆಲ್ಲ ತಹಸೀಲ್ದಾರರು ರಿಫರ್ ಮಾಡುತ್ತಾರೆ. ಒಂದೊಂದು ಸಂದರ್ಭದಲ್ಲಿ ಸದರೀ ಕೆಲಸಗಳಿಗೆ ಆಕ್ಟಿಂಗ್ ತರೀಕ್ ಪೋಸ್ಟರನ್‌ರಾಗತಕ್ಕವರು ೩೦-೪೦ ರೂಪಾಯಿಗಳ ಸಂಬಳವುಳ್ಳ ಕ್ಲರ್ಕುಗಳಾಗಿರುವದರಿಂದ ೩೦ ಅಥವಾ ೪೦ ರೂಪಾಯಿ ಸಂಬಳದಮೇಲೆ ಅವರೂ ಮ್ಯಾಜಿಸ್ಟ್ರೀಟರಾಗಿ ಅಧಿಕಾರ ಚಲಾಯಿಸಲು ಪಕ್ರಮಿಸುತ್ತಾರೆ. ಇವರಿಗೆ ಕೊಡಲ್ಪಟ್ಟಿರುವ ಅಧಿಕಾರವಾದರೋ ೫೦ ರೂಪಾಯಿಗಳಿಗೆ ಮಿಗದಷ್ಟು ಜುರ್ಮಾನೆಯನ್ನೂ ೬ ತಿಂಗಳಿಗೆ ಅತಿಕ್ರಮಿಸದ ಕೈದ್ ಸಜಾವನ್ನು ವಿಧಿಸಬಹುದಾದ್ದಾಗಿರುತಿದೆ. ಸಾಲಿಯಾನಾ ಲಕ್ಷ ರೂಪಾಯಿಗಳ ಆಯತಿಯುಳ್ಳ ಒಬ್ಬ ಭಾರೀ ಜಮೀನ್ದಾರರನು ಅಥವಾ ಸಾಹುಕಾರನು ತನ್ನ ತಾಬೇದಾರರ ಸಾದ ಕೃತಿವನ್ನಾಗಲಿ, ಅಥವಾ ನೌಕರರನ್ನಾಗಲಿ ಕೋಲಿನಿಂ ಹೊಡೆದ ಪಕ್ಷಕ್ಕೆ ಅವನು ಕೂಡಲೇ ತಹಸೀಲ್ದಾರನಾಗಿ, ಅಂತಾ ಮ್ಯಾಜಿಸ್ಟ್ರೀಟರ ಮುಂದೆ ಬಾದಿ ನಿಲ್ಲಬೇಕಾದವನಾಗಿರುವನಲ್ಲದೆ ಆತನ ದಂಡನೆಗೊಳಗಾಗಬೇಕಾದವನಾಗಿರುತ್ತಾನೆ. ಜಮೀನ್ದಾರನು ಯಾ ಸಾಹುಕಾರನು ದಂಡಿಸಲ್ಪಟ್ಟಿಗೆ ಮೊದಲನೆಯದನಿಗೆ ಆತನ ಕೈಕೆಳಗಿನ ಸಾವಿರಾರುಜನ ರೈತರಲ್ಲಿಯೂ, ಎರಡನೆಯಾತನಿಗೆಸಮಾನರಲ್ಲಿ ಗೌರವಹಾನಿಯುಂಟಾಗಿಹೋಗುವದು. ಅದುದರಿಂದ ಸಾಧ್ಯವಾದ ಪ್ರಯತ್ನಗಳಂಮಾಡಿ ದಂಡನೆಯಿಂದ ತಪ್ಪಿಸಿಕೊಳ್ಳಲಿಕ್ಕೆ ಪ್ರಯತ್ನ ಪಡದಿರಲಾರನು. ಇದು ಹೀಗಿರುವಲ್ಲಿ ಮ್ಯಾಜಿಸ್ಟ್ರೀಟರಾಗಿ ಮೇಲೆ ಕಂಡಂತೆ ಪೋಸ್ಟರನ್‌ರಾಗತಕ್ಕವರು ಕೇವಲ ಸಾಮಾನ್ಯ ಸ್ಥಿತಿಯಿಂದಸರದೀ ದರ್ಜೆಗೆ ಬರತಕ್ಕವರಾಗಿರುವದರಿಂದ ಅವರಿಗೆ ಸಾಮಾನ್ಯವಾದ ಕಾಲದಲ್ಲಿ ತಮ್ಮ ಉದ್ಯೋಗಕ್ಕೆ ಅನುಗುಣವಾದ ಗೌರವವನ್ನೂ ಅದಕ್ಕೆ ಅಂಗಭೂತಗಳಾದ ಯಾನ, ವಸ್ತ್ರ, ಗೃಹ ಪರಿವಾರಾದಿ ಸೌಕರ್ಯಗಳನ್ನು ಕಲ್ಪಿಸಿಕೊಳ್ಳಬೇಕಾಗಿರುವದಲ್ಲದೆ ತಮ್ಮ ಕುಟುಂಬದವರಿಗೆಲ್ಲ ತಮ್ಮ ಗೌರವಾನುಗುಣವಾದ ಸ್ಥಿತಿಯನ್ನುಂಟು ಮಾಡಬೇಕಾದ ನಿರ್ಬಂಧವುಂಟಾಗುತಿದೆ. ಇದಲ್ಲದೆ ಗೃಹಕೃತ್ಯದಲ್ಲಿ ಅನಿರೀಕ್ಷಿತವಾದ ಖರ್ಚು ಬರುವ ಬಾಬುಗಳಗಲ್ಲ ಅವರು ಒಳಪಡಬೇಕಾದವರಾಗಿರುತ್ತಾರೆ. ಈ ಆಫಿಸರುಗಳಿಗತಕ್ಕ ಉತ್ತೇಜಕ ಸಾಮಗ್ರಿಗಳನ್ನೂ ಇವರಸ್ಥಿತಿಯನ್ನು ಪರ್ಯಾಲೋಚಿಸಿನೋಡಿದರೆ ಅವರ ವಾಕ್ಯ ಪ್ರಾಮಾಣಿಕತೆ ಯಿಷ್ಟರದೆಂದು ನಿರ್ಧರಿಸಬಹುದಾಗಿರುತಿದೆ. ಇದು ಹೀಗಿರಲಿ.

ಅಗ್ಯುದಾಗ್ಯ ತಾಲ್ಲೂಕ ಮ್ಯಾಜಿಸ್ಟ್ರೀಟರಿಗೂ, ಅವರ ತಾಬೇದಾರಿ ಉದ್ಯೋಗಸ್ಥರಿಗೂ ತಮ್ಮ ರೆವಿನ್ಯೂ ಕೆಲಸಗಳ ಮೇಲೆ ಸರಕ್ಯಾಪ್ಸೆ ಹೋಗಬೇಕಾದ ಆವಶ್ಯಕತೆ ಯುಂಟಾಗುತಿದೆ ಮಸಲಾ ಒಂದು ತಾಲ್ಲೂಕ ಈ ದೇಶದಲ್ಲಿ ಸ್ವಲ್ಪ ದಾಗಿದ್ದರೂ ಹನ್ ಮೇಜಿಸ್ಟ್ರೇಟ್ ರಾಜ್ಯದಲ್ಲಿ ೫೦-೬೦ ಮೈಲುಗಳ ಘಾಸಲೆಯುಳ್ಳದ್ದಾಗಿರುವದರಿಂದ ಮ್ಯಾಜಿಸ್ಟ್ರೀಟರು ಸರಕ್ಯಾಪ್ಸೆ ಹೋಗಿರತಕ್ಕ ಕಾಲದಲ್ಲಿ ಮೊಕದ್ದಮೆಗಳನ್ನು ಪರ್ಯಾಪ್ತಿಗೆ ಇಟ್ಟುಕೊಂಡು ಅವಕ್ಕೆ ಸಂಬಂಧಪಟ್ಟ ಕಕ್ಷಿಗಾರರನ್ನು ತಾವಿರುವ ಪ್ರದೇಶಕ್ಕೆ ಸೆಳೆಯುತ್ತಾರೆ. ಮ್ಯಾಜಿಸ್ಟ್ರೇಟ ಮೊಕದ್ದಮೆಯಾದರಿಂದ ವಿಧಿಯಿಲ್ಲದೆ ಕಕ್ಷಿಗಾರರು ಎಷ್ಟು ಸಂಕಟವನ್ನಾದರು ಅನುಭವಿಸಿಕೊಂಡು ಒಂದು ಮೂರತೆಯಿಂದ ಮತ್ತೊಂದು ಮೂರಿಗೆ ಸಾಕ್ಷಿಗಳೊಡನೆ ಹೋಗಬೇಕಾಗುತಿದೆ. ಇಂತಾ ಸಂದರ್ಭಗಳಲ್ಲಿ ಆಯಾಖಾದ ಪಕ್ಷಕಾರರು ಮೊಕದ್ದಮೆಗಳನ್ನು ಅಂಗೀಕರಿಸುವದಿಲ್ಲವು ಕ್ರಿಮಿನಲ್ ವ್ಯಾಜ್ಯಗಳಲ್ಲಿ ಸಾಕ್ಷಿಗಳಿಗೆ ಭತ್ತ್ಯ ಸಲ್ಲುವದಿಲ್ಲವು. ಇದಲ್ಲದೆ ವರಕ್ಕಗಳಲ್ಲಿ ಮ್ಯಾಜಿಸ್ಟ್ರೀಟರುಗಳು ಕಾಲಕ್ಕುಪ್ಪ ಯಿಲ್ಲದೆ ಈ ವರ್ಗ ಮಾಡುತ್ತಾರಾಗಿ ಅವರ ಕಾಲವು ನಿರರ್ಥಕವಾಗಿ ಕಕ್ಷಿಗಾರರು ಕಾದಿರಬೇಕಾಗುತಿದೆ. ಈ ವಿಷಯದಲ್ಲಿ ದಿವಾನ್ ಬಹದೂರರವರು ಏನು ಹೇಳುವರೋ ನಾವರಿಯೆವು. ರೆವಿನ್ಯೂ ಕೆಲಸಗಳು ಈಗ ತೃಪ್ತಿಕರವಾಗಿನಡೆಯುದಿದ್ದಲ್ಲವು. ಅನೇಕ ತಾಲ್ಲೂಕಗಳಲ್ಲಿ ತಿಂಗಳುಕಟ್ಲೆ ಕದಾಚಿತ ಸಂವತ್ಸರಗಟ್ಲೆ ಅರ್ಜಿಗಳು ವಿಲೆಯಾಗದೆ ಬಿದ್ದಿರುತಿವೆ. ತಹಸೀಲ್ದಾರರು ನಾನಾವಿಧ ಕೆಲಸಗಳಿಗಿರುವದರಿಂದ ತಾವು ಖುದ್ದು ಮಾಡಬೇಕಾದ ಕೆಲಸಗಳನ್ನೆಲ್ಲ ತಮ್ಮ ತಾಬೇದಾರಿ ಉದ್ಯೋಗಸ್ಥರಿಗೆ ನಿಯಮಿಸುತ್ತಾರಾಗಿ ಅದನ್ನೇ ಅವರು ಪರರ ಪ್ರಯೋಜನವನ್ನಾಗಿ ಭಾವಿಸಿ ತಮ್ಮ ಕೋರಿಕೆಗಳಂ ಸಫಲಗೊಳಿಸಿಕೊಳ್ಳಲಿಕ್ಕೆ ಪ್ರಯತ್ನಪಡುತ್ತಾರೆ. ಹೀಗೆಯೇ ಇನ್ನೂ ಅನೇಕವಿಧ ಅವ್ಯವಸ್ಥೆಗಳಿಗೆ ಅವಕಾಶವುಂಟಾಗುತಿದೆ. ಇವೆಲ್ಲವು ಸುಳ್ಳೆಂಬದಾಗಿ ಮೇಲೆ ರಘುನಾಥರಾಯರವರು ಹೇಳುವರೆ? ಡೆಪ್ಯುಟಿ ಕಲೆಕ್ಟರರಾಗಿರುವಾಗ್ಯೆ ತಮಗೆ ಮದರಾಸಿನಲ್ಲುಂಟಾದ ಅನುಭವವಿಂದಲೇ ಈ ವಿಷಯವು ನಿರ್ಧರಿಸುವದಕ್ಕಾಗುವದಿಲ್ಲವು. ತಹಸೀಲ್ದಾರರುಗಳೂ ಅವರ ತಾಬೇದಾರರೂ ತಮ್ಮ ಕೆಲಸಗಳನ್ನು ಯಾವ ರೀತಿಯಿಂದ ಮಾಡಬೇಕೋ ಆ ಪ್ರಕಾರ ಮಾಡುತ್ತಾರೆಯೋ ಇಲ್ಲವೆ ಎಂಬದು ಅಜಮಾಯಿಷೀ ಮಾಡಿದರೇ ನಾವು ತಿಳಿಸಿದ ಮಾತುಗಳ ಯಥಾರ್ಥ್ಯವು ಬವರಿಗೆ ಗೊತ್ತಾಗಬಹುದು. ಮೇಲ್ಪಟ್ಟ ದರ್ಜೆಯುಳ್ಳ ಮ್ಯಾಜಿಸ್ಟ್ರೀಟುಗಳಿಗೆ ಕೆಳಗಿನ ದರ್ಜೆಯವರಿಗಿರುವಷ್ಟು ರೆವಿನ್ಯೂ ಕೆಲಸಗಳ ಗಡಿಬಿಡಿಯು ಇರುವದಿಲ್ಲವಾದುದರಿಂದ ಅವರ ಮೂಲಕ ಜನರಿಗೆ ವಿಶೇಷ ಬಾಧಕ ವುಂಟಾಗುವದಿಲ್ಲವು. ಏನಂತು ಡಿಸ್ಟ್ರಿಕ್ಟ್ ಕಲೆಕ್ಟರರ ದಿಗಿಯಂತ್ರ ತಹಸೀಲ್ದಾರರಿಗಂತೆ ಅನೇಕವಿಧ ಹವಾಲ್ದಾರಿಗಳೂ ನಾನಾವಿಧಕೆಲಸಗಳೂ ಇರುವದರಿಂದ ತಮಗೆ ಬರತಕ್ಕ ಅಪೀಲ ಮೊಕದ್ದಮೆಗಳನ್ನು ಖುದ್ದು ದರ್ಯಾಫ್ತ ಮಾಡಲಿಕ್ಕೆ ವ್ಯವಧಾನವಿಲ್ಲದೆ ಎಲ್ಲವು ತಮ್ಮ ಅಸಿಸ್ಟೆಂಟರುಗಳಿಗೆ ಒಪ್ಪಿಸಿ ಬಿಡುತ್ತಾರೆ. ಅವರು ಸಾಧ್ಯವಾದಮಟ್ಟಿಗೆ ಕೆಲಸವನ್ನು ಸ್ವತಃ ಇಟ್ಟುಕೊಂಡು ವಿಚಾರಿಸಿ ತಮ್ಮ ತಾಬೇದಾರಿ ಉದ್ಯೋಗಸ್ಥರ ಸುಧಾರಣೆ ಮಾಡುತ್ತಾರೆ. ಹೀಗೆ ಜವಾಬ್ದಾರಿಯು ಬಹುಮುಖವಾಗುವದರಿಂದ ಪಕ್ಷಕಾರರಿಗೆ ತ್ವರಿತ ಸುಖವೂ ಅರ್ಥವ್ಯಯವೂ ಉಂಟಾಗಲಿಕ್ಕೆ ಕಾರಣವಾಗುತಿವೆ. ಏಕೆ ಒಬ್ಬ ಅಧಿಕಾರಿಗೆ ತನ್ನ ಜವಾಬ್ದಾರಿಯು ಹೊರಬಹುದೋ ಅದಕ್ಕಿಂತ ಜಾಸ್ತಿಯಾಗಿಕೊಟ್ಟರೆ ಆತನು ತನ್ನ ಕರ್ತವ್ಯವನ್ನುಪೇಕ್ಷಿಸುವನಲ್ಲದೆ ಅವನಿಂದಲ್ಲದ ಅನರ್ಥಗಳುಂಟಾಗುತ್ತವೆ. ಈ ವಿಷಯದಲ್ಲಿನ್ನೂ ಅನಾನುಕೂಲಗಳಿರುವವು ತಿಳಿಸಿ ವಿಸ್ತರಿಸುವರದು ಇದನ್ನು ಪ್ರತ್ಯೇಕಿಸುವದೇ ಸಾಧಕವೆನ್ನುತ್ತೇವೆ. ಈ ಅನಾನುಕೂಲಗಳನ್ನೆಲ್ಲ ಪರ್ಯಾಲೋಚಿಸಿ ಈ ಸಂಸ್ಥಾನದ ದಿವಾನ್‌ರವರು ಕೆಲವು ನೂತನ ಏರ್ಪಾಟುಗಳು ಮಾಡುತಲಿರುವುದಾಗಿ ತಿಳಿಯಬರುತಿವೆ.

DEATHS FROM INFLUENZA.

ಈಗ ನಡೆದ ಪ್ರಬಲಗೊಂಡಿರುವ ಇನ್‌ಫ್ಲುಯೆಂಜಾ ಬಾಧೆಯಿಂದ ಈ ದೇಶದ ಜನರಿಗೆ ತಮ್ಮ ಪ್ರಾಣಗಳಲ್ಲಿ ನಿರಾಶೆ ಹುಟ್ಟಿದ್ದು ಬಹಳ ಭಯವನ್ನುಂಟುಮಾಡಿರುವುದಾಗಿ ತಿಳಿಯುವದು. ಅವರು ಪ್ರತಿಕ್ಷಣದಲ್ಲಿಯೂ ತಮ್ಮ ಆಪ್ತರಾದವರು ಅಗಲುವರೆಂಬ ಭೀತಿಯಿಂದ ಅವರ ವಿಯೋಗವು ನೋಡಿ ಅನೇಕರ ದುಃಖಿಸುತಲಿರುವುದಾಗಿ ಮಾಡುತಲಿದೆ. ಈ ರೋಗವು ದೇಶದಿಂದ ಕಳೆಯ ಬೇಕೆಂದು ಬಹಳ ಜನರು ದೇವರನ್ನು ಪ್ರಾರ್ಥಿಸುತ್ತಿದ್ದಾರೆ. ಇದರಿಂದ ಮೃತ್ಯುವಿಗೆ ತುತ್ತಾದವರು ಬಹಳ! ಇವರಲ್ಲಿ ಅನೇಕರು ಆಪ್ತರನ್ನು ಕಳೆದುಕೊಂಡು ಸಂಕಟಪಡುತ್ತಾರೆ. ದೇಶದಲ್ಲಿ ಮೃತ್ಯುವಿಗೆ ತುತ್ತಾದವರನ್ನು ಕಳಕೊಂಡು ದುಃಖಿತರಾದವರು ಅನೇಕರು, ಭಾರ್ಯೆಯನ್ನು ಕಳೆದುಕೊಂಡು ಕ್ಲೇಶಪಡತಕ್ಕವರನೇಕರು, ಭರ್ತೃವಿಯೋಗದಿಂದ ದುಃಖಿಸತಕ್ಕವರನೇಕರು, ಮಾತಾಪಿತೃಗಳ ಮರಣಕ್ಕಾಗಿ ಖೇದಪಡತಕ್ಕವರನೇಕರು, ಪುತ್ರಮಿತ್ರಾದಿ ವಿಯೋಗಕ್ಕಾಗಿ ಸಂತಾಪಪಡತಕ್ಕವರನೇಕರು, ಹೀಗೆಯೇ ಪ್ರತಿಯೊಬ್ಬನೂ ವ್ಯಸನಾರ್ಣವದಲ್ಲಿ ಮುಳುಗಿರುವಂತೆ ದೃಷ್ಟಿಯಲ್ಲಿ ಬೀಳುತಲಿದೆ. ಈ ರೋಗವು ಸಂತೋಷವೆಂಬದು ಬಹುದೂರ ದೂರವಾಗಿರುತಿದೆ. ಕಳೆದವಾರದಿಂಬಿಗಿ ಮೃತಪಟ್ಟ ಬಹುಮಂದಿಯ ಪೈಕಿ ಪ್ರತಿಷ್ಠಿತರಾದ ಕೆಲವರ ಹಾಲಗತಿಯನ್ನಿಲ್ಲಿ ತಿಳಿಸಿದರು.

ಮೈಸೂರು ಸಂಸ್ಥಾನದ ಮೆಡಿಕಲ್ ಇಲಾಖೆಗೆ ಸೇರಿದ ಅಸಿಸ್ಟೆಂಟ ಸರ್ಜನ್ ಜೆ. ಎಸ್. ಶಾಸ್ತ್ರಿಗಳವರು ಮಹೇಂದ್ರಕಾಲ ಗತಿಸಿದ ತಾರೀಖ್ ಮಂಗಳವಾರದವರ ಬೆಂಗ್ಳೂರು ಮಧ್ಯದಲ್ಲಿ ರೋಗಪೀಡಿತನಾದ ತಮ್ಮ ಬುದ್ಧಿಯಲ್ಲಿ ಕಾಲಗತಿಯನ್ನೈದಿದ ನೃತಾಂತವು ತಿಳಿಸಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಇವರಿಗೆ ಆಕಸ್ಮಿಕವಾದ ಜನ ಬಾಧೆ ಇದ್ದಿರುವ ಪ್ರಾಪ್ತವಾಯಿತು. ಇವರು ಈ ವರ್ಷ ೨ ನೆಯ ಮಾರ್ಚ್

ನ ಆಸ್ಪತ್ರೆಯಲ್ಲಿ ಕೆಲಸನೋಡುತಲಿದ್ದುದ ರಿಂದ ರೋಗಿಗಳ ಚಿಕಿತ್ಸೆಯ ವಿಷಯದಲ್ಲಿ ತಮ್ಮ ದೇಹಸ್ಥಿತಿಯಂ ಸಹಾಸದ್ಸ್ವಗ್ಯದೆ ಅ ತ್ಯಧಿಕವಾಗಿ ಶ್ರಮಿಸುತಲಿದ್ದರಾಗಿ ಅದು ಮ ತ್ತು ಆಯಾಸಕ್ಕೆ ಕಾರಣವಾಗಿ ಏರ್ಪಟ್ಟಿ ತು. ಇವರಿಗೆ ಈಗ ೫೦ ವರುಷಗಳ ವಯಸ್ಸಾ ಗಿರುವದಲ್ಲದೆ ಮದರಾಸ್ ಮೆಡಿಕಲ್ ಕಾಲೇಜಿನ ಲ್ಲಿ ಬಿ ಡಿಗ್ರೀಯಂ ೧೮೭೦ ನೇ ಇಸವಿಯಲ್ಲಿ ಪಡೆದು ಮೆಡಿಕಲ್ ಇಲಾಖಾ ನೌಕರಿಯಲ್ಲಿ ಪ್ರವೇ ಶವಂ ಸಂಪಾದಿಸಿದರು. ಇವರು ತಮ್ಮ ವೃ ತ್ತಿಯಲ್ಲಿ ವಿಶೇಷ ಕೌಶಲತೆಯಂ ಸಂಪಾದಿಸಿ ಪ್ರಸಿದ್ಧಿಗೆ ಬಂದುದರಿಂದ ಅಸಿಸ್ಟೆಂಟ್ ಸರ್ಜನ್ ವರ್ಗಕ್ಕೆ ಬಡ್ತಿಯಾದರು. ಈ ದೇಶದ ಮನುಷ್ಯರು ಇವರನ್ನು ಮೈಸೂರು ಸರ್ಕಾರದ ಈ ವರ್ಗಕ್ಕೆ ಬಂದರು. ಇವರು ಸ್ವಭಾವತಃ ಸ್ನೇಹಭಾವದ ವ್ಯಕ್ತಿಯಾಗಿಯೂ ಸಹಿಷ್ಣುತೆಯುಳ್ಳವರಾಗಿಯೂ ಶ್ರದ್ಧೆಯಿಂದ ಕೆಲಸ ಮಾಡತಕ್ಕವರಾಗಿಯೂ ಇದ್ದುದರಿಂದ ಇವರ ಮರಣಕ್ಕಾಗಿ ಎಲ್ಲರೂ ಬ ಹುವಾಗಿ ವ್ಯಸನಪಡುತ್ತಾರೆ. ಮೆ|| ಆರೋಗ್ಯಂ ಪಿಳ್ಳೆಯವರೂ ಇವರೂ ಪರಸ್ಪರ ಪ್ರೀತಿ ವಿಶ್ವಾ ಸಗಳಿಗೆ ಪಾತ್ರರಾಗಿದ್ದರು. ಇವರ ಕೊನೆ ಕ್ರಿಯೆ ಯು ಇವರ ಮತ ಸಂಪ್ರದಾಯದಂತೆ ಗುಣವಾಗಿ ಆದಿನ ಸಾಯಂಕಾಲ ಹೊಸೂರು ರೋಡಿನಲ್ಲಿ ರುವ ರೋಮನ್ ಕ್ಯಾಥೋಲಿಕ್ ಸಿಮೆಟ್ರಿಯಲ್ಲಿ ನೆರವೇರಿತೆಂತ ಕೇಳಲಾಯಿತು.

ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಸ್ ಟ್ರಿಜ್ ಡಿಪಾರ್ಟ್ಮೆಂಟ್ ಕೆಲಸದಲ್ಲಿದ್ದ ಮೆ|| ಪಿ. ಸುಬ್ಬಯ್ಯ ನವರು ಈತನೇ ಮಾರ್ಚ ೧೨ ನೇ ತಾ ರೀಖ್ ಗುರುವಾರದ ದಿನ ಬೆಳಿಗ್ಗೆ ಈ ವರು ಪೇ ಟೆಯಲ್ಲಿ ಸ್ವಲ್ಪ ರೋಗದಿಂದ ಮೂ ರು ನಾಲ್ಕು ದಿನಗಳು ಕಾಹಿಲೆಯಾಗಿದ್ದು ಗತಿಸಿ ದರೆಂದು ತಿಳಿದದ್ದು. ಇವರು ಮದರಾಸ್ ರೆವಿ ನ್ಯೂ ಇಲಾಖೆಯಲ್ಲಿ ಬಹುಕಾಲ ನೌಕರಿಮಾಡಿ ಬ ಳಿಕ ಈ ಸಂಸ್ಥಾನದ ನೌಕರಿಯಲ್ಲಿ ಪ್ರವೇಶವಾದ ರು. ಮೊದಲು ಇವರು ಡಿಸ್ಟ್ರಿಕ್ಟ್ ಕೋರ್ಟ್ ಹೆಡ್ ಮುನ್ಷಿ ಯಾಗಿದ್ದು ಕಾಲವಶದಲ್ಲಿ ಇವರಿಗೆ ಡಿ ಪ್ಯೂಟಿ ಕೆಲಸವಾಯಿತು ಗತ ವರುಷದಲ್ಲಿ ಪಿಂಚನಿ ಸಿಕ್ಕು ಕುಮಾರನೊಂದಿಗೆ ವ್ಯಾಪಾರವ್ಯ ವಹಾರದಲ್ಲಿ ಬಹಳ ವಿಶ್ವಾಸನಾಗಿದ್ದ ರು. ಈಗ ಮೂರು ನಾಲ್ಕು ಜನ ಹೆಣ್ಣು ಮ ಕ್ಕಳನ್ನು ಬಿಟ್ಟಿರುವುದು ನಿರ್ಗತಿಕರನ್ನಾಗಿ ಬಿಟ್ಟು ಗತಿಸಿದ್ದಕ್ಕಾಗಿ ನಾವು ಬಹಳ ವಿಷಾದ ಸುತ್ತೇವೆ. ಇವರು ಬಹಳ ಸಾಧುವಾಗಿಯೂ ಸ್ನೇಹಪರರಾಗಿಯೂ ಇದ್ದರು.

ಬೆಂಗಳೂರು ಡಿಸ್ಟ್ರಿಕ್ಟ್ ರಿಜಿಸ್ಟ್ರೇಷನ್ ಇ ನ್ಸ್ಪೆಕ್ಟರ್ ರಾ|| ರಾ|| ಪುಟ್ಟ ಸುಬ್ಬಯ್ಯನವರು ಈ ನೇ ಮಾರ್ಚಿ ತಿಂಗಳ ೧೭ ನೇ ತಾರೀಖು ರಾ ತ್ರಿ ಇಹಲೋಕವಂ ತ್ಯಜಿಸಿದ್ದಕ್ಕೆ ವ್ಯಸನ, ಇವರು ಬಹಳ ಸಮರ್ಥರಾಗಿಯೂ, ರಿಜಿಸ್ಟ್ರೇ ಷನ್ ಕೆಲಸದಲ್ಲಿ ಒಳ್ಳೆ ಅನುಭವ ಶಾಲಿಯಾಗಿಯೂ ವಿಶೇಷರಾಗಿಯೂ ಇದ್ದರು. ಇವರಿಗೆ ಈಗ ವಯ ಸ್ಸು ೫೦ ವರುಷಗಳಿಗಿಂತ ಜಾಸ್ತಿಯಾಗಿಲ್ಲವು. ಮೂರುನಾಲ್ಕು ಜನ ಮಕ್ಕಳೂ ಭಾರ್ಯೆಯೂ ಇರುವರು. ಇವರ ನಿಧನದ ದುಃಖಿಸುವರಾಗಿರುವ ರ ಅವರ ಅನಾಥರನ್ನಾಗಿ ಬಿಟ್ಟು ಗತಿಸಿದ್ದು ಮತ್ತೂ ದುಃಖಕರವಾಗಿರುವದು.

ಇಷ್ಟರಲ್ಲಿ ವಿಕ್ಟೋರಿಯಾ ಜೂಬಿಲಿ ಆಸ್ಪತ್ರೆ ಯ ಹೆಡ್ ನರ್ಸ್ ಶ್ರೀಮತಿ ಅಸ್ಮ ಎಂಬುವರು ಸು ಶ್ರೂಷೆ ಕೆಲಸದಲ್ಲಿ ಭಾಗ ವಹಿಸಿ ಗಳಿಸಿದ ಪ್ರಶಸ್ತಿ ಯು ರೋಗಿಗಳು ಕಡೆಗೆ ಆತ್ಮೀಯತೆಯಾಗಿರುವದು ಹೊ ಗುಣವಿದ್ದವು. ಅಸಿಸ್ಟೆಂಟ್ ಕಮಿಷನರ್ ಮುನ್ಷಿ ರಂಗಸ್ವಾಮಿ ಐಯ್ಯಂಗಾರರವರ ಭಾರ್ಯೆಯು ಗತಿಸಿ ದಂತೆ ಗತವಾದಲ್ಲಿ ತಿಳಿಸಿದ್ದೇವಷ್ಟೆ ಆಕೆಯ ತೀವ್ರ ದಿವಸದ ಬಳಿಕ ಭಾರ್ಯಾವಿಯೋಗದ ವ್ಯಸನದ ದುಃಖದಿಂದ ಮೆ|| ಕೃಷ್ಣರಾಯರವರಿಗೆ ಜ್ವರರೋಗವಾಗಿ ಪರಿಣಮಿಸಿ ಅದು ದಿನೇದಿನೇ ಅಭಿವೃದ್ಧಿಯಾಯಿತು. ಅಪ್ರತೀಕಾರವಾದದ್ದ ರಿಂದ ಡಾಕ್ಟರುಗಳ ಪ್ರಯತ್ನಗಳೆಲ್ಲವು ವಿಫಲ ವಾಗುವದಲ್ಲದೆ, ಅವರ ಇಷ್ಟಮಿತ್ರರ ಶೋಕ ಕೆಯೂ ಭಂಗವಾಗುವಂತೆಯೂ ಪರಿಣಮಿಸಿತಲ್ಲ ದೆ, ಮಾರ್ಚ ಮಾಹೆ ೧೯ ನೇ ತಾರೀಖ್ ಗು ರುವಾರದ ದಿನ ರಾತ್ರಿ ೮ ಘಂಟೆಗೆ ಕಾಲಗತಿಯ ನ್ನೈದಿದರೆಂದು ಕೇಳಿ ನಾವು ಅಲ್ಪವಾಗಿ ವಿಷಾ ದಿಸುವದಿಲ್ಲವು. ಮೆ|| ಕೃಷ್ಣರಾಯರವರು, ದೊಡ್ಡ ಕುಟುಂಬಕ್ಕೆ ಸೇರಿದವರು. ಇವರು ಸ್ವ ಪ್ರಯತ್ನದಿಂದಲೇ ಅಭಿವೃದ್ಧಿಗೆ ಬಂದು ಬಹಳ ವಿದ್ಯಾವಂತರೆಂಬ ಪ್ರಶಸ್ತಿಯಂ ಪಡೆದರು. ಮ ದರಾಸ್ ಯೂನಿವರ್ಸಿಟಿ ಪರೀಕ್ಷೆಗಳ ಪೈಕಿ ಉ ನ್ನತವಾದ ಎಂ. ಎ. ಪರೀಕ್ಷೆಯಂ ತೇರ್ಚಿದರ ಲ್ಲದೆ, ಈ ಸಲ ಎ. ಎಲ್. ಪರೀಕ್ಷೆಗೆ ಸಹ ಹೋ ಗಬೇಕೆಂಬ ಸಂಕಲ್ಪ ಪೂರ್ವಕರಾಗಿದ್ದರು. ಪರಂ ತು ದೈವ ಸಂಕಲ್ಪವು ಅನ್ಯಥಾ ಇದ್ದುದರಿಂದ ಅ ವರ ಉದ್ದೇಶವು ನಿಷ್ಫಲವಾಯಿತು, ಈ ದೊಡ್ಡ ಮನುಷ್ಯರು ಸ್ವಭಾವತಃ ಸರಳ ಹೃದಯರಾಗಿಯೂ, ದಾನ ಶೀಲರಾಗಿಯೂ, ಇದ್ದರು. ಪರೋಪಕಾರಿ ಅವರ ಹೃದಯವು ಬಹಳ ಅದರಿಂದ. ಮೆ|| ಕೃಷ್ಣರಾಯರವ ರು ಯಾವಾಗಲು ಜನರಲ್ಲಿ ವಿಶೇಷತಃ ಸೇರದೆ ತ ಮ್ಮ ಮಕ್ಕಳಿಗೆ ವ್ಯವಹಾರಗಳಿರುತ್ತಿದ್ದರಿಂದ ಅ ವರು ಜನರು ಕಾಣುವುದಕ್ಕೆ ಸ್ನೇಹಪರರಲ್ಲ ವೆಂಬುದು ಮಿತವ್ಯಯ ಮಾಡತಕ್ಕವರಾದದರಿಂ ದ, ಕೃಪಣರೆಂತಲೂ ದೂಷಿಸಬಹುದು. ಅವರ ಅಂತರಂಗವಾದ ಗುಣವನ್ನರಿತವರು ಆ ರೀತಿ ಭಾವಿ ಸದಿರಾರರು. ಇವರ ಮರಣ ಪ್ರಯುಕ್ತವಾ ದ ದುಃಖವನ್ನು ವಿಶೇಷವಾಗಿ ಅನುಭವಿಸಲಿಕ್ಕೆ ವೃದ್ಧೆಯಾದ ತಾಯಿಯೂ, ಅನಾಥರಾದ ಮೂ ರು ನಾಲ್ಕು ಜನ ಎಳೇಮಕ್ಕಳೂ ಏರ್ಪಟ್ಟಿದ ದ್ದರೂ ಇರುವಂತೆ ಕೇಳುತ್ತೇವೆ. ಮುಖ್ಯವಾಗಿ ಈ ಸಂಸ್ಥಾನದ ನೇಟಿವ್ ಉದ್ಯೋಗಸ್ಥರಲ್ಲಿ ಬ ಹಳ ವಿದ್ಯಾವಂತರಾಗಿಯೂ ಉಪಯುಕ್ತರಾಗಿ ಯೂ, ಇದ್ದ ಅಧಿಕಾರಿಯನ್ನು ಕಳೆದುಕೊಂಡದ ಕ್ಕಾಗಿ, ಗವರ್ನ್ಮೆಂಟಿನವರೂ ಪ್ರಜೆಗಳೂ ಸ ಹ ಬಹಳ ವಿಷಾದಿಸಬೇಕಾಗಿರುತ್ತದೆ.

Occasional Notes
ನೈಮಿತ್ತಿಕ ವಿಷಯನ್ಯಾಸ.

Erection of a mosque in Paris.—ಪ್ಯಾರಿಸ್ ಪಟ್ಟಣದಲ್ಲಿ ಮಹಮ್ಮದೀಯರ ಮಸೀ ದೆಯೊಂದು ಹೊಸದಾಗಿ ಕಟ್ಟಲ್ಪಡುವದ ಪ್ರಯ ತ್ನ ನಡೆಯುತ್ತಲಿದೆ ಎಂದು ಒಂದು ಪ್ರವಾದವು ಹಬ್ಬಿರುತ್ತದೆ. ಇದಕ್ಕಾಗಿ ಅಲ್ಲಿರುವ ತುರು ಕರು ಮುಸಲ್ಮಾನರೆಲ್ಲರೂ ಸೇರಿ ಚಂದಾಮಾಡಿ ಎತ್ತಿದ್ದನ್ನು ಜಮಾಯಿಸುತ್ತಿದ್ದಾರೆ. ಅಲ್ಲದೆ ಮೊಬಲಗನ್ನು ಫ್ರೆಂಚ್ ಸರ್ಕಾರದವರು ಒಪ್ಪಿ ಕೊಡುವ ಪ್ರತೀಕ್ಷೆ ಮಾಡಿರುವದಾಗಿ ಕೇಳ ಲಾಯಿತು.

State of Ratnagherry.—ರತ್ನಗಿರಿಯಲ್ಲಿ ಅಂಗಡಿಗಳೆಲ್ಲಾ ಮರಳಿ ಮುಚ್ಚಲ್ಪಟ್ಟಿರುತ್ತವೆ. ಆಸ್ಪತ್ರೆಯ ಕಡೆಗೂ ವಿಷಯದಲ್ಲಿ ಕೆಲವರು ಮ್ಯುನಿಸಿಪಲ್ ಮೆಂಬರುಗಳು ಮಾಡಿದ್ದಾರಾಗಿ ನಮಗೆ ಜನರಿಗೆ ಭಂಗವಾದದ್ದೇ ಇದಕ್ಕೆ ಮು ಖ್ಯಕಾರಣವೆಂದು ತಿಳಿಸಲ್ಪಟ್ಟಿದೆ. ಪಟ್ಟಣದ ಳಗೆ ಅವರು ಬರಬೇಕಾದ ಸರಕುಗಳೆಲ್ಲಾ ಮಂಡಿಯವರು ನಿಲ್ಲಿಸಿ ಬಿಡಬೇಕೆಂಬ ಸಂಕಲ್ಪ ಪ್ರವರ್ತಕರಾಗಿರುವಂತೆ ತೋರುತ್ತದೆ. ಪ್ರಜೆಗಳ ಗೆ ತೊಂದರೆ ಸನ್ನಿಹಿತವಾಗಿರುವದರಿಂದ ಜನಾ ಯಿತು ಪ್ರಯತ್ನಗಳು ಮಾಡಬೇಕಾದುದು ಬಹಳ ಆವಶ್ಯಕವೆಂದು ತಿಳಿಸಲ್ಪಟ್ಟಿರುವಂತೆ ಕೇಳುತ್ತೇವೆ.

The B. L. Examination Scandal.—ಈ ೧೮೯೦ ನೇ ಇಸವಿ ಜನವರಿ ಎರಡನೇ ತಾರೀ ಖಿನಲ್ಲೂ ಅದರ ತರುವಾಯದಲ್ಲೂ ಮದರಾಸಿನಲ್ಲಿ ಜರಗಿದ ಬಿ. ಎಲ್. ಡಿಗ್ರೀ ಪರೀಕ್ಷೆಗೆ ಪರೀಕ್ಷೆಯನ್ನು ಮಾಡಿದ್ದ ೧೮ನೇ ನಂಬರ್ ಉಮೇದುವಾರನು ಫ್ರೆಡರಿಕ್ ಗೇಬ್ರಿಯಲ್ ಫರ್ಚ ಬಿ. ಎ. ಎಂಬಾತ ನು ಸಹಾ ಬಿ. ಎಲ್ ಪರೀಕ್ಷೆಯ ಉಮೇದುವಾ ರರ ಪರೀಕ್ಷಾರ್ಥ ಉದ್ದಿಷ್ಟವಾಗಿದ್ದ ಪ್ರಶ್ನೆಪ ತ್ರಿಕೆಗಳು ಅವರಿಗೆ ಕೊಡಲ್ಪಡುವದಕ್ಕೆ ಮುಂ ಚಿತವಾಗಿಯೇ ಸದರೀ ಪರೀಕ್ಷೆಯಲ್ಲಿ ತಾನೂ ಮೋಸಕರವಾಗಿ ತೇರ್ಗಡೆಯಾಗಲಿಕ್ಕೆ ಶಕ್ತನಾ ಗಬೇಕೆಂಬ ತಾತ್ಪರ್ಯದಿಂದ ಅವುಗಳ ಸಾರಾಂ ಶಗಳನ್ನು ಮೋಸಕರವಾಗಿ ಸಂಪಾದಿಸಿ ಜಾರ ಪಡಿಸಿದ್ದರಿಂದ ಮೇಲ್ಕಂಡ ಫ್ರೆಡರಿಕ್ ಗೇಬ್ರಿಯಲ್ ಫರ್ಚ ಎಂಬಾತನು ಮುಂದೆ ಯೂನಿವರ್ಸಿಟಿ ಪರೀಕ್ಷೆಗಳಿಗೆ ಹೋಗುವದಕ್ಕೆ ಅರ್ಹ ನಾಗಿರದೆಂಬುದಾಗಿ ಸಿಂಡಿಕೇಟಿನವರು ನಿರ್ಣ್ಯ ಸಿ ಫೋರ್ಟ್ ಸೆಂಟ್ ಜಾರ್ಜ್ ಗೆಜೆಟಿನಲ್ಲಿ ಪ್ರಕಟ ಪಡಿಸಿರುತ್ತಾರೆ. ಇದೇ ಕೃತ್ಯದ ನಿಮಿತ್ತ ಹೈಕೋರ್ಟಿನವರು ವಿಚಾರಿಸುವರಾದರೆ ಅವನ ಪರಿಣಾಮವು ಸಂದೇಹವಿಲ್ಲದೆ ಇವನಿಗೆ ಬ ಹಳ ದುಃಖಕರ ಮಾಡುದಾಗಿಯೂ, ಮರಳಿ ಪ ರೀಕ್ಷೆಗೆ ಅವಕಾಶವಾದದ್ದಾಗಿಯೂ ಇರುತ್ತಲಿ ರುವದು. ಪ್ರಕೃತ ಸಂದರ್ಭದಲ್ಲಿ ನಿರ್ಭಾಗ್ಯ ನಾದ ಗೇಬ್ರಿಯಲ್ ಫರ್ಚನನ್ನು ಆತನ ಬೋಧಿಯು ಬಹಳವಾಗಿ ಗೊಂದಿಸುವಂತೆ ಎಳೆಸಬೇಕಾಗಿ ದೆ. ಕಾಲೇಜುಗಳೊಳ್ಳೆಯದ್ದಾಗಿ ಕೆಲವು ವರು ಷಗಳೊಳಗೆ ಈತನ ಮನೆತನದವರಿಂದ ಪ್ರ ಸಿದ್ಧಿಗೂ ಗವರ್ನ್ಮೆಂಟಿನವರ ಮರ್ಯಾದೆಗೂ ಪಾ ತ್ರನಾಗುವನು.

A novel regulation.—ಇಂಡಿಯಾ ಸಂ ಸ್ಥಾನದಲ್ಲಿರತಕ್ಕ ಗವರ್ನರ್ ಜನರಲ್ಲರ ಏಜಂಟ ರವರಾದ ಸೆ|| ಪಿ. ಎಂಬವರಿಂದ ಕೆಂತ ಲ್ಪಟ್ಟಿರುವ ಇದರಡಿ ಕಂಡ ಒಂದು ಸರ್ಕ್ಯುಲರ ನ್ನು ಆಸ್ಟರ್ಲಿ ಹೆರಲ್ಡ್ ಎಂಬ ಪತ್ರಿಕೆಯು ಪ್ರಕಟಿಸಿರುತ್ತದೇನೆಂದರೆ—ರೆಸಿಡೆನ್ಸೀ ಸರಹ ದ್ದಿನೊಳಗೆ ವಾಸವಾಗಿರತಕ್ಕವರೆಲ್ಲರಿಂದಲೂ ಇ ದರಡಿಕಂಡ ನಿಬಂಧನೆಗಳು ಖಂಡಿತವಾಗಿ ಅಂಗೀ ಕರಿಸಲ್ಪಟ್ಟು ಅನುಸರಿಸಲು ತರಲ್ಪಡತಕ್ಕದ್ದೆಂ ದು ಗವರ್ನರ್ ಜನರಲ್ಲರ ಏಜಂಟರವರು ಇದ ರಿಂದಪೇಕ್ಷಿಸುತ್ತಾರೆ. ೧ ಗವರ್ನರ್ ಜನರಲ್ಲರ ರ ಏಜಂಟರವರ ಹುಕುಂ ಮತ್ತು ಅಂಗೀಕಾರ ವಿನಾ ರೆಸಿಡೆನ್ಸಿ ಸರಹದ್ದಿನೊಳಗಾಗಿ ಯಾವ ದೊಂದು ಸಮಾಜವು ಸ್ಥಾಪಿಸಲ್ಪಡಕೂಡದು. ೨ ರೆಸಿಡೆನ್ಸೀ ಸರಹದ್ದಿಗೆ ಸಂಬಂಧಪಟ್ಟಿರುವ ಪಟ್ಟಣ ಜಂಟ್ ಸ್ಟೂಡೆಂಟ್ಸ್ ಅಸೋಸಿಯೇ ಷನ್ ಎಂಬ ಸಂಘವು ಪ್ರಜಾ ಸಾಮುದಾಯಿಕ ವಾದ ಸಂಘವೆಂದು ಪರಿಭಾವಿಸಲ್ಪಡತಕ್ಕದ್ದಲ್ಲ ವು. ಆದಾಗ್ಯೂ ಅದರಲ್ಲಿ ಖುಷಿಬಾಷಿ ಜನಗಳು ಸಹ ಸೇರಿ ತಮಗೆ ಬೇಕಾದಮಟ್ಟಿಗೆ ಪರಸ್ಪರ ಸ್ನಾಹವಿಲ್ಲದವರ ಮಾಡದಿರುವದಕ್ಕೆ ವಿಚಾರ ಮಾಡಬಹುದು. ೩ ಗವರ್ನರ್ ಜನರಲ್ಲರ ಏ ಜಂಟರವರಿಂದ ಮಂಜೂರಾಗದೆ ರೆಸಿಡೆನ್ಸಿ ಸರ ಹದ್ದಿನೊಳಗೆ ಇರತಕ್ಕ ಯಾವದೊಂದು ಸಮಾ ಜಕ್ಕೂ, ರೆಸಿಡೆನ್ಸೀ ಚಟ್ಟಿಗೆ ಸಂಬಂಧಿಸಿ ದಾತ ೧ ವ್ಯಕ್ತಿಗಳಸ್ಥಾನಗಳಿ, ವಿದ್ಯಾರ್ಥಿಯಾ ಗಲಿ, ಮತ್ತೆ ಹೋಗತಕ್ಕ ಚಿಕ್ಕ ಹುಡುಗರಾ ಗಲಿ ಹಾಜರಾಗಕೂಡದು. ಮತ್ತು ಅವರಿಂದ ಮಂಜೂರ್ಮಾಡಲ್ಪಡದೆ ರೆಸಿಡೆನ್ಸೀ ಸರಹದ್ದಿ ನೊಳಗಿರತಕ್ಕ ಸಮಾಜದಲ್ಲಿ ಯಾವ ವಿಷಯ ವನ್ನು ಕುರಿತಾಗಲಿ ವಿಚಾರ ಮಾಡಕೂಡದೆಂಬು ದು. ಇದು ಕೇವಲ ಮೊಗಲ್ ಪ್ರಭುತ್ವದಲ್ಲಿ ಕೆಂತಲ್ಪಡಲಿಕ್ಕೆ ಯೋಗ್ಯವಾದ ಹುಕುಮಾಗಿ ರುತ್ತದೆ. ಇವಂ ಫೋಲಿಟಿಕಲ್ ಏಜಂಟರವರೇ ನು ಸ್ವಶಕ್ತಿಯಿಂದಾಲೋಚಿಸಿ ನಿರ್ಮಿಸಿದ ರೋ ಅಥವಾ ತಮಗಿಂತ ಪ್ರಾಚಕರಾದವರ್ಯಾ ರೊಡನೆ ಯಾವರು ಆಲೋಚಿಸಿ ಮಾಡಿದರೋ ತಿಳಿಯಲಿಲ್ಲವು. ಒಹುಕ ಪೊಲಿಟಿಕಲ್ ಏಜಂ ಟರವರು ತಮ್ಮ ಪಶೀಲೆಯ ಬಲದಿಂದ ಸದರೀ ನಿಬಂಧನೆಗಳನ್ನು ತಮ್ಮಂತೆ ಜಾರಿಯಲ್ಲಿ ತರಬೇ ಕೆಂಬುದಾಗಿ ದುರಾಗ್ರಹವರನ್ನು ಬಲಾತ್ಕರಿಸ ಬಹುದೆಂದು ತೋರುತ್ತದೆ. ಮುಖ್ಯವಾಗಿ ನೇ ಟಿವ್ ಸಂಸ್ಥಾನಗಳಲ್ಲ ಪೊಲಿಟಿಕಲ್ ಏಜಂಟರು ಗಳ ಸ್ವಾತಂತ್ರ್ಯವೂ ಅಧಿಕಾರವೂ ಏಚ್ಚಿಕದ್ದು ವೃತ್ತಿಯೂ ಆಯಾ ಸಂಸ್ಥಾನದ ಅರಸರನ್ನು ದಾಸ್ಯವೃತ್ತಿ ಗೊಳಿಪಡಿಸತಕ್ಕದ್ದಾಗಿರುತ್ತದೆ.

LOCAL AND PROVINCIAL NEWS.
ಒಳದೇಶದ ಮತ್ತು ಪ್ರಾಂತ್ಯದ ವರ್ತಮಾನಗಳು.

Public health in Mysore.—ಈಚೆಗೆ ನಗರ ಮೈಸೂರಲ್ಲಿ ಸಹ ಜ್ವರಾದ್ಯುಪದ್ರವಗಳು ಶರವೇಗದಲ್ಲಿ ಹರಡಿದ್ದು ನ್ಯೂಮೊನಿಯಾ ರೋಗ ದಿಂದ ನಾಲ್ಕೈದುಜನ ಮೃತಪಟ್ಟಂತೆ ಕೇಳು ತ್ತೇವೆ. ಇನ್ನೂ ಕೆಲವರಿಗೆ ತಗಲಿರುವದಾಗಿಯೂ.

The Maharaja's College.—ಮೈಸೂರ ಮಹಾರಾಜರವರ ಕಾಲೇಜ್ ಪ್ರಿನ್ಸಿಪಾಲರಾದ ಮೆ|| ಬಾಬುಯವರು ತ್ವರೆಯಲ್ಲಿ ಎಡ್ಯುಕೇಷನ್ ಸೆಕ್ರೆಟರಿ ಕೆಲಸದ ಚಾರ್ಜನ್ನು ತೆಗೆದುಕೊಳ್ಳುವ ದರಿಂದ ಅವರ ಕೆಲಸಕ್ಕೆ ಗ್ವಾಲಿಯರ್ ಯಾತ್ರೆಯ ನಂತರ ಸೇರಿದ ಮೆ|| ವೀರ್ ಎಂಬವರು ಮೊಕ ದ್ದಾಗಿ ಕ್ಷಿಪ್ರದಲ್ಲಿಯೇ ಬಂದು ಸದರೀ ಕೆಲಸದ ಚಾರ್ಜನ್ನು ವಹಿಸುವರೆಂದು ಕೇಳುತ್ತೇವೆ.

Parakala swamy of Mysore.—ಇಗ ಪ್ಪು ಬ್ರಂಚಿ ಎಂಬ ಸಾಂಕ್ರಾಮಿಕ ರೋಗವು ಕಡೆಗೆ ಸನ್ಯಾಸಿಗಳನ್ನು ಸಹ ಬಿಟ್ಟಿದ್ದಿಲ್ಲವು. ಶ್ರೀ ಪರಕಾಲ ಸ್ವಾಮಿಗಳು ಮೇಲ್ಕಂಡ ರೋಗದಿಂದ ಬಹಳ ಪೀಡಿತರಾಗಿ ಈಗ ಅವರಿಗೆ ಸ್ವಲ್ಪ ಗುಣವಾಗಿರುವಂತೆಯೂ, ಆದರೆ ಕೇವಲ ದುರ್ಬಲರಾಗಿರುವಂತೆಯೂ, ಇವರೊಡನೆ ಮೋ ಲುಕೋಟೆಗೆ ವೈರಮುಡಿಗೆ ಹೋಗಿದ್ದವರನೇಕ ರು ಅಸ್ವಸ್ಥರಾಗಿರುವಂತೆಯೂ ಕೇಳುತ್ತೇವೆ.

The weather.—ಕಾಲಸ್ಥಿತಿಯು ಅತ್ಯಾಪ ದ್ರತಿಕೂಲವಾಗಿಯೇ ಇರುತಲಿದೆ. ಈ ವಾರ ದಲ್ಲೊಂದೆರಡು ಸ್ವಲ್ಪ ಮೋಡವಾದ ಕಲ ವು ದಿನಗಳು ಬಿದ್ದವು. ಅದರಿಂದ ಉಷ್ಣ ವು ಸ್ವಲ್ಪ ತಗ್ಗಿತೆಂದು ಹೇಳಬಹುದಾಗಿದೆ. ಜನರಾರೋಗ್ಯ ವಿಕಲವಾಗಿರುವದು. ಜ್ವರ ಪೀಡೆಯು ಅಧ್ಯಾಪಿ ಕಡಿಮೆಯಾಗಲಿಲ್ಲವು. ಇದರ ಪ್ರಾಬಲ್ಯದಿಂದ ಉಪಾಧಿಯಾಗಿ ಜಂ ತು ಪ್ರಾಣಿಗಳೆಲ್ಲಾ ಅಂಗಡಿಬೀದಿಗೆ ಧಾನ್ಯ ಗಳು ಪ್ರಾಯಶಃ ಬರುವದಿಲ್ಲವು. ಕಟ್ಟಿಗೆ, ಹೊಸ ರು ಪದಾರ್ಥಗಳು ಬಹಳ ತುಟ್ಟಿಯಾ ಗಿಯೂ ದೊರೆಯುವುದು ಪ್ರಯಾಸಕರವಾಗಿ ಯೂ ಇದೆ. ಬಿಸಿಲಿನ ಝಳವು ಪ್ರಾಬಲ್ಯವಾಗು ತಲಿರುವದರಿಂದ ಇಲ್ಲಿನ ವಾಸವು ಜನರಿಗೆ ದು ಸ್ಸಹವಾದದ್ದಾಗಿರುವದು.

The public service.—ಈ ಸಂಸ್ಥಾನದ ಅಮಲ್ದಾರಿ ಮತ್ತು ಅಸಿಸ್ಟೆಂಟ್ ಕಮಿಷನರ್ ಕೆಲಸಗಳಲ್ಲಿ ಕೆಲವು ಬೇರೆ ಏರ್ಪಾಡುಗಳು ನಡೆಸ ಲ್ಪಡುವವೆಂತಲೂ, ನೇಟಿವ್ ರೆವಿನ್ಯೂ ಇಲಾಖೆಯವರಲ್ಲೆಲ್ಲರು ನಿವೃತ್ತಿ ಮಾಡಲ್ಪಟ್ಟು ಅವರ ಸ್ಥಾನದಲ್ಲಿ ಫೂ ರ್ವ ಪರಿಷ್ಕಾರಾದ ಮತ್ತು ಶಕ್ತರಾದವರು ನಿ ಯಮಿಸಲ್ಪಡುವರೆಂತಲೂ, ಕೆಲವು ಸಬ್ ಡಿವಿಜನ್ ಗಳು ಹೊಸದಾಗಿ ಸ್ಥಾಪಿಸಲ್ಪಡುವವೆಂತಲೂ, ಕೆಲವರು ಲಾಯಕ್ಕಾದ ಅಮಲ್ದಾರರು ಅಸಿ ಸ್ಟೆಂಟ್ ಕಮಿಷನರ್ ಕೆಲಸಕ್ಕೆ ಬಡ್ತಿ ಹೊಂದಲ್ಪಡು ವವೆಂತಲೂ, ಮಾರ್ಚ ಮಾಹೆ ೧೬ ನೇ ತಾರೀಖಿನ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ತಿಳಿ ಸುತ್ತದೆ. ಯಾವಯಾವುದೊಂದು ಕೆಲಸ ಜಾರೀ ಯಾದಾಗ್ಗೆ ಇಂತಾ ಪ್ರವರ್ತನೆಗಳು ಆಗಿಂ ದಾಗ್ಗೆ ಬರುತ್ತಿರುವದು ಸ್ವಲ್ಪ ವಿಚಿತ್ರವಾಗಿರು ತ್ತದೆ. ಏನಾದರೂ ಸರ್ವರ ಸ್ಥಾನದಲ್ಲಿ ಅವುಗಳ ಸ್ವ ರೂಪ ಪ್ರಯೋಜನಗಳು ಮುಖ್ಯ ವಿಚಕ್ಷವಾಗಿ ರುವವು.

Abkari department.—ಎಕ್ಸೈಜ್ ಇಲಾ ಖೆಯ ಡಿಸ್ಟ್ರಿಕ್ಟ್ ಪಕ್ಕರೆ ತಾಲೂಕುದಾರಿ ಉದ್ಯೋ ಗಸ್ಥರ ಮೇಲ್ವಿಚಾರಣಾಧಿಕಾರವನ್ನು ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರುಗಳಿಗೆ ಒಪ್ಪಿ ಸಿರುವಂತೆಯೂ, ಇನ್ನುಮೇಲೆ ಇವರ ಮೊಕದ ರಾತಿ ಬದಲೀ ಬರ್ತರಫ್ ಮೊದಲಾದ ಗಡಾಟ ಗಳೆಲ್ಲವೂ ಅವರಿಗೆ ಕೊಡಲ್ಪಟ್ಟಿರುವಂತೆಯೂ ಡೆಪ್ಯುಟಿ ಕಮಿಷನರುಗಳ ಏರ್ಪಾಡಿನ ಮೇಲೆ ಮುಂಚಿನ ಅಧಿಕಾರವನ್ನು ಮಾತ್ರ ಸ್ವತಃ ಉಳಿಸಿಕೊಂಡಿರುವಂತೆಯೂ, ಎಕ್ಸೈಜ್

ಕಮಿಷನರವರು ಈಚೆಗೆ ನಿಬಂಧನೆ ಮಾಡಿರುವ ಹಾಗೆ ಈವಿನಿಂಗ ಮೈಯಿಲ್ ಪತ್ರಿಕೆ ತಿಳಸುತಿದೆ. ಇದರಿಂದ ಕೆಲಸದ ಗಳಾಡಿಯೊಡನೆ ಕಮಿಷನರ ಹಣ ಸ್ವಾತಂತ್ರ್ಯವು ಕೂಡ ಕಡಮೆಯಾದ ಹಾಗಾಗುವದು. ಪರಂತು ಈ ಏರ್ಪಾಡು ಅಷ್ಟರ ತೃಪ್ತಿಕರವಾದದ್ದಲ್ಲವು. ಈ ಇಲಾಖೆಗೆ ಈಗ ಹೊಸದಾಗಿ ೭.೮ ಜನರನ್ನು ನೇಮಕಮಾಡುವ ರೆಂಬರೂ ಇದು ಆಯಾ ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರ ಯಜಮಾನಿಯಲ್ಲಿ ಬಿಡಲ್ಪಟ್ಟಂತೆಯೂ ಕೇಳುತ್ತೇವೆ.

Agricultural implements.—ವ್ಯವಸಾಯವನ್ನು ಈ ದೇಶದಲ್ಲಿ ಅಭಿವೃದ್ಧಿ ಪಡಿಸಬೇಕೆಂಬ ತಾತ್ಪರ್ಯದೊಡನೆ ಮೈಸೂರು ಸರ್ಕಾರದವರು, ಸಾಗುವಳಿ ಉಪಯುಕ್ತಗಳಾದ ಉಪಕರಣಗಳನ್ನು ಕ್ರಯಕ್ಕೆ ತರಿಸಿ, ಅವುಗಳನ್ನು ಕೊಂಡುಕೊಳ್ಳಲಿಕ್ಕೆ ಮೈಸೂರುಪ್ರಾಂತದ ರೈತರಿಗೆಲ್ಲ ಅನುಕೂಲವಾಗುವ ಹಾಗೆ ಕೊಡಿಸ ಬೇಕೆಂದು ಮಾಡಿರುವರೂ ಕಬ್ಬಿನ ಯಂತ್ರಗಳು ಕೆಲವು ಸಹ ಗಣನೀಯ ಸಲು ಬಹಳವಾಗಿ ಆಗುವ ತಾಲ್ಲೂಕುಗಳ ಉಪಯೋಗಾರ್ಥ ತರಿಸುವರೆಂತಲೂ ತಿಳಿಯಬರುತಿದೆ. ಇದು ನಿಜವಾಗಿರುವ ಪಕ್ಷಕ್ಕೆ ಸ್ತುತ್ಯವಾದ ವೃದ್ದೇಶವೆಂದೇ ಹೇಳಬಹುದು. ಈ ಸಾಧನಗಳ ಉಪಯುಕ್ತತೆಯೂ, ಅವು ಉಪಯೋಗಿಸುವ ಕ್ರಮವೂ, ಅವುಗಳಮೂಲಕ ಆಗತಕ್ಕ ಕೂಡವಳಿಯೂ [illegible] ರೈತರಿಗೆ ಕುದ್ಧಾಂಗ ತಿಳಿಯದಾಗಿ ಅವರಿಗೆ ಅದು ಬೇಕಾಗಿ ತರುವದಕ್ಕೆಬಗ್ಗೆ ಸರ್ಕಾರದವರು ಬೇಕಾದ ಏರ್ಪಾಡುಗಳನ್ನು ಮಾಡಬೇಕಾದ್ದು ಸಹ ಅವಶ್ಯಕವೆಂದೆಣಿಸುತ್ತೇವೆ. ಇದಲ್ಲದೆ ಬಡವರಾದ ಅನೇಕಜನ ರೈತರಿಗೆ ಅರ್ಥಸಂಪತ್ತಿಯು ಬಹಳ ಅಲ್ಪವಾಗಿರುವದರಿಂದ ಅಂತವರಿಗೆಲ್ಲ ಸರ್ಕಾರದವರೇ ತಕ್ಕ ಆಧಾರಗಳಮೇಲೆ ಸಾಲಗಳಂಕೊಟ್ಟು ಅನುಕೂಲವಾದಾಗ ಅಲ್ಪ ಬಡ್ಡಿ ಸಹಿತ ತಗದುಕೊಳ್ಳುವದರಮೂಲಕ ಅವರಿಗೆ ಪ್ರೋತ್ಸಾಹವನ್ನುಂಟುಮಾಡವರೆ ಯೋಗ್ಯವಾಗಿರುವದಲ್ಲದೆ ವ್ಯವಸಾಯಾಭಿವೃದ್ಧಿಗೆ ನಿಜವಾಗಿ ಅನುಕೂಲವುಂಟಾಗುವದು.

The Epidemic and charities.—ಈಗ ಈ ಪ್ರಾಂತದಲ್ಲಿ ಇರುವ [illegible] ಮೊದಲಾದ ಅನೇಕವಿಧ ಸಾಂಕ್ರಾಮಿಕ ರೋಗಗಳಿಂದ ಪ್ರತಿ ದಿನವಲ್ಲೂ ಬಹುಮಂದಿ ಮೃತರಾಗುತಲಿದ್ದಾರೆಯಷ್ಟೆ. ಏತದರ್ಥ ಈ ನಗರಾಧಿದೇವತೆಯಾದ ಅಣ್ಣಯಮ್ಮನಿಗೆ ಪ್ರತಿದಿನದಲ್ಲಿಯೂ ಒಬ್ಬೊಬ್ಬರು ಉತ್ಸವವನ್ನು ಅತಿ ವಿಜೃಂಭಣೆಯೊಡನೆ ಜರಿಗಿಸುತಲಿದಾರಲ್ಲದೆ ಪುಷ್ಪ ಮಂಟಪೋದ್ಯಾನಲಂಕಾರಾದಿಗಳು ಬಹಳ ಶ್ಲಾಘ್ಯವಾಗಿಯೂ, ಒಬ್ಬರನ್ನೊಬ್ಬರು ಸೋಲಿಸಬೇಕೆಂಬ ಪ್ರೋತ್ಸಾಹದಿಂದ ಯುಕ್ತವಾಗಿಯೂ ಇರುತಿವೆ. ಇವಲ್ಲದೆ ಪೀಠಾರ್ಚನೆಗಳೂ, ಇತರ ಪ್ರಾರ್ಥನೆಗಳೂ, ಗ್ರಾಮಶಾಂತಿಗಳೂ ಅಪಾರವಾಗಿ ಜರುಗುತಲಿವೆ. ಗತ ಶುಕ್ರವಾರದ ದಿನ ಈ ಊರಿನ ದೊಡ್ಡಪೇಟೆ ವರ್ತಕರೆಲ್ಲರೂ ಸೇರಿ ಭಕ್ತಿ ಶ್ರದ್ಧಾಪೂರ್ವಕವಾಗಿ ಸಾವಿರಾರುಜನ ಬಡಬ್ರಾಹ್ಮಣರಿಗೆ ಅನ್ನಶಾಂತಿ ಮಾಡಿ ಅಣ್ಣಯಮ್ಮನ ಉತ್ಸವವನ್ನು ಮಾಡಿಸಿದರು. ನಿನ್ನೆಯ ದಿನ ತಿಗುಳರೆಲ್ಲ ಮಂಡೀದಾರರೆಲ್ಲರೂ ಸೇರಿ ತಮ್ಮ ದೇವಾಲಯದಲ್ಲಿ ಕೂಡಾ ಬ್ರಾಹ್ಮಣರಿಗೂ, ಲಬ್ಬೇ ವರ್ತಕರು ಮುಸಲ್ಮಾನರಿಗೂ ಅನ್ನಶಾಂತಿ ಮಾಡಿಸಿದರು. ಈ ಸಂದರ್ಭದಲ್ಲಿ ಪ್ರಾಟೆಸ್ಟೆಂಟ್ ಮಿಷನರಿಗಳೂ, ಕ್ಯಾಥೊಲಿಕ್ ಪಾದ್ರಿಗಳೂ ತಮ್ಮ ತಮ್ಮ ಚರ್ಚುಗಳಲ್ಲೇನು ಮಾಡುತಲಿದಾರೆಯೋ ತಿಳಿಯಲಿಲ್ಲವು. ಮುಖ್ಯವಾಗಿ ಇಂತಾ ಸಂದರ್ಭಗಳಲ್ಲಿ ಸರ್ಕಾರದವರು ಸಾಧ್ಯವಾದ ಸಮಯೋಚಿತ ಶಾಂತಿಗಳನ್ನೂ ಮಂತ್ರಾಭಿಷೇಕಾದಿ ಪ್ರಾರ್ಥನೆಗಳನ್ನೂ ಮಾಡಿಸಬೇಕಾದದ್ದು ಕರ್ತವ್ಯವೆಂದೆಣಿಸಿ ಅವರು ದಯತಪ್ಪದೋ ವಿಷಯದಲ್ಲಿ ಚಿಂತಿಸಬೇಕಾಗಿದೆ. ಇದಕ್ಕಾಗಿ ಮ್ಯುನಿಸಿಪಾಲಿಟಿಯಿಂದಲೂ ಸರ್ಕಾರದಿಂದಲೂ ಯಥೋಚಿತ ಸಹಾಯವು ದೊರೆಯಬಾರದು!

TELEGRAMS.

ತಂತಿ ವೃತ್ತಾಂತಗಳು.

ಲಂಡನ್, ತಾ|| ೧೪ನೇ ಏಪ್ರಿಲ್—ಈಸ್ಟರ್ ರಜಾ ಪೂರೈಸಿದಬಳಿಕ ಈದಿನ ಸಾಯಂಕಾಲ ಪಾರ್ಲಿಮೆಂಟ ಸಭೆಯು ನಿವಸಿಸ್ಸಿತು.

ಲಂಡನ್, ತಾ|| ೧೫ನೇ ಏಪ್ರಿಲ್—ಮಿ|| ಕೇಂಬೆಲ್‌ರವರು ಈಜಿಪ್ಟರಾಜ್ಯದ ಸ್ಥಿತಿಯಂಕುರಿತು ಪಾರ್ಲಿಮೆಂಟ ಸಭೆಯಲ್ಲಿ ಪ್ರಸ್ತಾಪಿಸುವಾಗ್ಯೆ ಅವಕ್ಕೆ ಸರ್ ಜೇಂಸ್ ಫರ್ಗಸನ್‌ಯವರು ಈ ಜಿಪ್ಟರಾಜ್ಯದ ಐಶ್ವರ್ಯವು ಬಹಳಮಟ್ಟಿಗೆ ಅಭಿವೃದ್ಧಿಯನ್ನೈದಿರುವದಾಗಿ ಜವಾಬಹೇಳಿದರು. ಮಿ|| ಲಬೋಚೆರ್‌ಯವರಿಗೆ ಉತ್ತರ ಕೊಡವದಾಗಿ ಸದರೀಯವರು ಮತ್ತು ತಿಳಸಿದರೇನಂದರೆ—ಇಂಗ್ಲಾಂಡಿಗೂ ಇತರ ಸಂಸ್ಥಾನಗಳಿಗೂ ನೆಲಗೊಂಡಿರುವ ಸಂಬಂಧವು ಅಬಾಧಿತವಾಗಿದ್ದ ಪಕ್ಷಕ್ಕೆ ಈಜಿಪ್ಟ ರಾಜ್ಯವನ್ನು ಸ್ವಾಧೀನದಲ್ಲಿಟ್ಟುಕೊಂಡಿರುವದು ಅನಾನುಕೂಲವಾದ ಕೆಲಸವಾಗಿದ್ದ್ಯೆ ಇಂಗ್ಲಿಷಿನವರು ತಮ್ಮದೇಶಕ್ಕೂ ಜನಾಂಗಕ್ಕೂ ಗೌರವಾವಹವಾದ ರೀತಿಯಿಂದ ಕೆಲಸವು ನೆರವೇರಿಸಿದರಲ್ಲದೆ ತಮ್ಮ ಉದ್ದೇಶವು ನೆರವೇರುವತನಕ ತಮ್ಮ ಕೆಲಸವಂ ಬಿಡಲಿಕ್ಕೆ ಇಷ್ಟವಿಲ್ಲದವರಾಗಿರುತ್ತಾರೆ. ಗಡೀಪಾರ್ ಮಾಡಲ್ಪಟ್ಟಿದ್ದ ಅರಬಿ ಪಾಷಾ ನೊಡನೆ [illegible] ಅನುಚಿತವಾದದ್ದು ಎಂಬದು.

[illegible] ಮೇಯರವರಿಂದ ನಡಾಪಲ್ಪಟ್ಟ [illegible] ತನ ಕಾಲದಲ್ಲಿ ಡ್ಯೂಕಾಫ್ ಕೇಂಬ್ರಿಡ್ಜ್ ಯವರು [illegible] ಕಮಾಂಡರ್ ಇನ್ ಚೀಫ್ [illegible] ಸದಿಂದ ತಾವು ನಿವೃತ್ತರಾಗುವರೆಂದುಂಟಾಗಿದ್ದ ಪ್ರವಾದವು ನಿಜವಲ್ಲವೆಂಬದಾಗಿ ಹೇಳಿಸಿದರು.

ನಿನ್ನೆಯ ದಿನ [illegible] ಸಭಾಜದಲ್ಲಿ ಮಿ|| [illegible] ಯವರು, [illegible] ಯವರ [illegible] ರಾಜ್ಯದ [illegible] ಸೋಮವಾರ ದಿನ ತಾವು [illegible] ಯಾಪಿಸಿದರು.

ಮುಂಬಯಿ ತಾ|| ೧೮ನೇ ಏಪ್ರಿಲ್—ಗತ ಶನಿವಾರದ ದಿನ ಪೆರಿಯಂಟಲ್ ಎಂಬ ಹೊಗೇ ಹಡಗಿನಲ್ಲಿ ಮುಂಬಯಿ ಗವರ್ನರರಾದ ಲಾರ್ಡ್ ರೇ ಯವರು ತಮ್ಮ ಭಾರ್ಯೆಯೊಡನೆ ಇಂಗ್ಲಾಂಡಿಗೆ ಪ್ರಯಾಣವಾದರು. ಅಪೋಲೋ ಬಂದರಿನಲ್ಲಿ ಗವರ್ನರವರನ್ನು ಸಾಗಕಳುಹಿಸಿ ಅವರಿಗೆ ಪ್ರಸ್ಥಾನ ಶುಭವಾದನಂ ಮಾಡುವದಕ್ಕಾಗಿ ಲಾರ್ಡ್ ಹ್ಯಾರಿಸ್ ಯವರೂ, ಪ್ರಜೆಗಳೂ ಹಾಜರಿದ್ದರು. ಮುಂಬಯಿ ಮ್ಯುನಿಸಿಪಲ್ ಕಾರ್ಪೊರೇಷನ್ನವರಿಂದ ಒಪ್ಪಿಸಲ್ಪಟ್ಟ ವಿಜ್ಞಾಪನ ಪತ್ರಿಕೆಯನ್ನು [illegible] ದಲ್ [illegible] ಯೆಂಬವರು ಓದಿದರು. ಲಾರ್ಡ್ ರೇ ಯವರು ಅದಕ್ಕೆ ಉತ್ತರ ಕೊಡುವಾಗ್ಯೆ ಮುಂಬಯಿಯಲ್ಲಿ ಅವರು ಸುಖಕರವಾಗಿ ಕಳೆದ ಕಾಲವಂ ಕುರಿತು ಪ್ರಸ್ತಾಪಿಸುವಲ್ಲಿ ಅವರ ಹೃದಯವು ಖಿನ್ನವಾಗಿದ್ದಂತೆ ಸ್ಪಷ್ಟವಾಗಿ ಕಂಡುಬಂತು.

ನಿನ್ನೆಯ ದಿನ ರಾತ್ರಿ ಕೊಲಾಬಾಯೆಂಬ ಪ್ರದೇಶದಲ್ಲಿ ನಿಕಟವಾದ [illegible] ಗಳ ಕೆಲವು [illegible] ಸುಟ್ಟುಹೋಯಿತು. ಇದರಿಂದ [illegible] ರೂಪಾಯಿಗಳ ನಷ್ಟ ಉಂಟಾದಂತೆ ತಿಳಿಯಬರುತಿದೆ.

[illegible] ಡಿಸ್ಟ್ರಿಕ್ಟ ಡೆಪ್ಯುಟಿ ಕಲೆಕ್ಟರ [illegible] ಯವರು ತಾವು [illegible] ಪ್ರದೇಶಕ್ಕೆ [illegible] ಕರ ಒಂದು ದಿನ [illegible] ಅವನ್ನು [illegible] ಅವರನ್ನು [illegible] ಗವರ್ನಮೆಂಟವರು ಅವರನ್ನು [illegible] ಡಿಸ್ಟ್ರಿಕ್ಟಿಗೆ ವರ್ಗಮಾಡಿ [illegible]

ಜಾಗೆಯನ್ನು ಕಳೆದು ಕೊಳ್ಳತಕ್ಕದ್ದೆಂದು ಹುಕುಂಮಾಡಿದರು.

ಮುಂಬಯಿ, ತಾ|| ೧೫ನೇ ಏಪ್ರಿಲ್—ಲಾರ್ಡ್ ಹ್ಯಾರಿಸ್‌ಯವರು ನಿನ್ನೆಯದಿನ ಬೆಂಕಿಬಿದ್ದಸ್ಥಳಕ್ಕೆ ಹೋಗಿ [illegible] ಬಳಿಕ [illegible] ಹೊರಟುಹೋದರು. ನಾಷ್ಟದ [illegible] ರೂಪಾಯಿಗಳವರಿವಿಗೆ ನಷ್ಟ ಉಂಟಾದಂತೆ ಅಂದಾಜಾಗಿರುತಿದೆ. ಆದರೆ ಅದರಲ್ಲಿ ನಾಲ್ಕು ಲಕ್ಷರೂಪಾಯಿಗಳು ಇನ್ಷ್ಯೂರೆನ್ಸ್ ಅಂದರೆ ಬೀಮಾ ಮೂಲಕ ಭರ್ತಿಯಾದವು.

ನಿನ್ನೆಯದಿನ ೪೦ ಜನರನ್ನು ಸೆರೆ [illegible] ರಿದ್ದರು. ಆಕಾಲದಲ್ಲಿ ಇನ್ನುಮೇಲೆ ತಮ್ಮ [illegible] ಗೆ ಸೇರಿದವರೊಬ್ಬರೂ [illegible] ಕಾರಣವೆಂಬದಾಗಿಯೂ ಈನಿಬಂಧನೆಗೆ ತಪ್ಪಿ ಯಾರಾದರು ನಡೆದರೆ ಅಂತವರನ್ನು ಕೂಡಲೇ ಬಹಿಷ್ಕೃತರನ್ನಾಗಿ ಮಾಡತಕ್ಕದ್ದೆಂತಲೂ ನಿರ್ಣಯಿಸಿದರು.

ಸಿಂಲಾ, ತಾ|| ೧೪ನೇ ಏಪ್ರಿಲ್—ವೈಸ್‌ರಾಯಿಯವರು [illegible] ತಾರೀಖಿಗೆ [illegible] ನಿಶ್ಚಯಿಸಲ್ಪಟ್ಟಿದೆ.

ಸರ್ [illegible] ಯವರು [illegible] ಗಳ [illegible] ದಿಂದ [illegible] ಪ್ರದೇಶಗಳಲ್ಲಿ [illegible] ದಿಂದ [illegible] ವಾರಗಳೊಳಗಾಗಿ [illegible] ಫಸಲ್ [illegible] ತಿಳಿಸುತ್ತಾರೆ.

ಮತ್ತೆ ಯಾವದೂ ಅವನಿಗಿರದಿನ್ನು ಅವರವರಲ್ಲದು ಆಸ್ಥೆಯ ಅಪ್ರೀತಿಗಿದೇ ಮುಖ್ಯಕಾರಣವು. ಇಂತಾ ದುಃಖ ನಿಮಿತ್ತಕವಾದ ಸ್ಥಿತಿಯಿಂದ ತಪ್ಪಿ ಯಿರಲಿಚ್ಛೈಸುವವನಿಗೆ ಅವಶ್ಯಾಗಿ ಉದರನ್ನರನ್ನಾಗಿಯೆಸುವದಕ್ಕೆ ಸ್ವಪ್ರಯೋಜನಾಪೇಕ್ಷೆ ಯೊಂಬದೇ ಮುಖ್ಯಕಾರಣವಾಗಿರುತ್ತದೆ. ಇದರಿಂದಲೇ ಆಶ್ರಯಿಸಲ್ಪಡತಕ್ಕವರ ಜಾತಿ, ಕುಲ, ಗುಣ ಮುಂತಾದವುಗಳಿಂದುಂಟಾದ ಹೀನತೆಯು ಸಹ ಕದಾಚಿತ ಗಣಿಸದೆ ಪುನರ್ಪರಿಸಬೇಕಾಗುತ್ತದೆ. ನಿರ್ವಾಗ್ಯರಾದವರ ವಿಷಯದಲ್ಲಿ, ಕಳದಾ ಮುಂದವರಿಗಳು, ಅನ್ಯರಿಂದಪೇಕ್ಷಿಸಲ್ಪಡವ ವಸ್ತುಗಳು ತಮಗೆ ಅಸಾಧ್ಯವಾಗಿದ್ದರೂ ಸ್ವಾರ್ಥ ಪ್ರತಿಷ್ಠೆಗೆ ಆಸಿಸು ಅವರ ಅಪೇಕ್ಷೆಯನ್ನು ನೆರವೇರಿಸುವ ಭರವಸೆಯನ್ನಿಯುವವನು ತಮ್ಮ ಕೆಲವರು ಕುತ್ಸಿತರು ನಿರ್ವಾಹವಶ್ಯವಾಗಿ ವಿಷಯ ಅಗಳೆನ್ನುಲ್ಲಿಯ ಈ ಪ್ರತಿವೇದಿಸಿ ವಿನಾಗ, ಪ್ರತಿಜ್ಞೆಯ ಮಾಡಿ ಬಳಿಕ ತಪ್ಪು ಹೀನರಾಗುವ ಜಂಗವಾದುವರು. ಇತರರು ಕೆಲವರು ಮತ್ತು ಮರವನ್ನಾಕ್ರಮಿಸಿ ನಿಮಿತ್ತದಿಂದ ಹಿತ್ಸಪ್ತನಿಷ್ಠವಿನ್ನಲ್ಲಿ ಅವರಿಗೆ ಪ್ರಧಾನವಾದ ಸಂಪತ್ತನ್ನು ಬಿಡದೆ ಕಿಲಕ ನಿವರೆಗಳ ದನಕ ಅವರು ಕಾಣವಾದಲ್ಲಿಲ್ಲ ಎವರ ಪಕ್ಷಪಾತಗಳು ವಿಚಾರಿಸುತಲೂ, ತನ್ನ ತಮ್ಮ ಆನುಪಪತ್ತಿಗಳ ನಿಷೇಧ ಮಾಡಿ ಅವರಿಂದ ಬಾಲ್ಯದ ಮಾತುಗಳನ್ನೆಲ್ಲ ತಿಳಿಕೊಳ್ಳ ಅವರಾವತ ಪರನ ಕೇಳು ವವರಾತೆ ನೆಡಸುತಲೂ, ಅವನ್ನು ವಿಶೇಷ ಪ್ರೀತಿ ಗತಿತರಗಳ ಪರ ಗಪಿಸುವಂತೆ ಕೋಗಲವಾಡುತಲೂ ಇರುತ್ತಾರೆ. ಗ ಇವುಗಳಿಂದ ರಿಕ್ತರ ಕೋರಿಕೆಯು ಚೆನ್ನಾಗಿ ಉದರವಾಗಿ ಉತ್ತರೋತ್ತರ ಅಭಿವೃದ್ಧಿಯನ್ನೈಯುವ ಪು ತನನೆಂದ ಮನ್ನ ಏಕ ಪಾಪಷ್ಟರಾದ ದವರು ಮುಂದೇಲ್ಲಾ ಮನುಷ್ಯರು ಬಹಳಾದವೆ ಏವ ರೀತಿ ಪೀಡನುಸಗಾಗಿದೆ ಟ್ಟನಗಳಿಗೆ ಅವರತೆಯಾಗಿಲ್ಲ ಕಾಮ್ಯೋತಲು, ಅವರು ಹಿಳಿನ ಮಾತುಗಳನ್ನೆಲ್ಲ ದೈವವಾಕ್ಯಂತೆ ಶಿರಸಾವಹಿಸಿ ನೆರವೇರಿಸುವ ಕೆಲಸಗಳನ್ನು ನಿರ್ವಹಿಸುತಲಿರುವರು. ಕಲವರಿಗೆ [illegible] ಚಕ್ರದ ಕಳು ಮುಂದುವರಿದು ಕೊಡವರು ನೋಡಿದರೂ ಅವರು ಸ್ವಾಗ ದಯ ಕೊಡುವವನು ಎಂತವನನ್ನು ದು ಉತ್ತಮರನ್ನಾಗಿ ಮಾಡದವರಲ್ಲಿ ಅಂತಾ ತಕಮನ್ನ ಎನನು ಪ್ರತಿಷ್ಠ ಎಲ್ಲಿಯೂ ಪ್ರಕಟವಾಗುವದು. ಬಗಳ ಯೋಗ್ಯತೆಯಂ ತಿಳಿಸದೆ ಸ್ವಾರ್ಥ ಹಾರ್ದಕರವಿರುವವರಲ್ಲಿ ಸರೀ ಸ್ವಾಭಾವಿಕವಾದದ್ದನ್ನು ನೋಡದೆಗಳಲ್ಲ ಅವರಲ್ಲಿ ಪ್ರೀತಿಯು ಹೃತ್ತಿನಿಸುರುವದರಿ ಕೆಲವು ವಳ ಎಗುಟು ಇಗನ್ನಿನವರು ಮತ್ತು ಕೆಲವುವೇಳೆ ಜ್ಞಾನ ಕದೆ ಇಳ್ಳವೆ, ದರೆಯಲ್ಲಿ ಪ್ರವೇಶಿಸುವರು. ಇನ್ನು ಕೆಲವು ಸಮಯದಲ್ಲಿ ತಿರುಗುವವನು ಅರೋಚಕ ವಿವಿ ಮರ್ಶಿತದ ಪ್ರೀತಿ ಕೆಲವು ಸಂಪದವಲ್ಲಿ ತಾಳಿ ಇಳ್ಳದೆಂದು ನುಡಿಯುವರು ಇದರ ಕೆಲವು ಕಾಲದಲ್ಲಿ ಸಮ ಸಂಬರುತದೆಂದು ಸಮಾಧಾನದ ಡಿಸುವರು. ಇದಕ್ಕೆಂದು ಸಲ ನೆರವೇರದೆ ತಾಳಿಯೆಂದು ಪೊಳ್ಳನು, ಮತ್ತೊಂದವನದಲ್ಲಿ ಬರಲೆ ಯು ತಪಸ್ಸು ನುಡಿಸುತಿರುವರು. ಇದರಿಂದ ಆ ಪ್ರಭುಗಳ ಯೋಗ್ಯತೆಯು ತಿಳಿದು ಕಪಟಗಳಿನ ಆಶಾಶ್ರಿತರು ಬೇರೆ ಒಂದು ಸಮಯದಲ್ಲಿ ತಮ್ಮ ದಾರಿಯನ್ನೇ ಯನ್ನರೂಪಿಸಬೇಕಿರುವದೆ ಈ ಗ ಸಮಯವಿಲ್ಲವೆಂದು ಹೇಳಿ ಕಳುಹಿಸುವರು. ಅಷ್ಟರಲ್ಲಿ ಪೋ ಅವರು ಜೊತ್ತುವನ ಸ್ಥಿತಿ ನಗೆ ಹೋಗ ಏದು ಮಿಸ್ಸರ ಹೊಗಳಸಿಕೊಳ್ಳಬ್ಬೆನಲ್ಲರು ಹೇಗಾದರೂ ಉಳಿದ ಸ್ವಲ್ಪ ಪದಾರ್ಥವನ್ನು ವಶ್ವಸಿಕೊಳ್ಳವೆಂದು. ಅಷ್ಟಕ್ಕೆ ಆಸಕ್ತರನ್ನಲ್ಲದೆ ಆ ಸಿಸ ದಸ್ತರು ಮರಳಿ ಅವರ ವಗೆ ನೋಡದೆ ಎನ್ನು ಮೇಲೆ ತಮ್ಮ ನನೆಗೆ ಬರುವ ಆವ ಅವಶ್ಯಕವಿಲ್ಲವೆಂದು ಹು ಬ್ಬುತಿವು [illegible] ಕೆಲ [illegible] ಮಾಡಿದಾಲೋಕನ ಕ್ರಮ ಅವರವರ ಕಂಡ ರದ. ಇಂ ವ ರನ್ನ ಒಮ್ಮ ಪಕ್ಷಪಾತಗಳಿರತಕ್ಕವರು, ತಮ್ಮ ಬ

ಳಿಗೆ ಬರುವವರ ಗಲಾಟೆಯಂ ತಪ್ಪಿಸಿ ಬಿಡುವದಕ್ಕಾಗಿ ಅವರಮೇಲೆ ಇಲ್ಲದದೋಷಗಳನ್ನು ಹೊರಿಸಿ ಅವರಿಗೆಯೇ ಮರಳಿ ಬಾರಜುಮಂತೆ ಮಾಡುವರು. ಮತ್ತು ಕೆಲವರು ತಮ್ಮ ಆಶ್ರಿತರನ್ನು ತಮ್ಮಬಳಿಯಿಂದ ತಪ್ಪಿಸಿಬಿಡುವವರಿಗಾಗಿ ತಮ್ಮಂತೆ ತಮ್ಮ ಸ್ನೇಹಿತರ ಬಳಗೆ ಯಾವದಾದರೊಂದು ನೆವಂ ಕಳುಹಿಸಿ ಬಿಡುವರು. ಇನ್ನು ಕೆಲವರು ತಮ್ಮಿಂದ ತಮ್ಮ ಆಶ್ರಿತರಿಗೆ ಆಯಾಭಾಗಿ ಪ್ರಯಾಸಿತರು. ಜನಗಳು ತಿಳಿಯಕೆಳ್ಳದರ ಹಾಕುವ ತಾತ್ಪರ್ಯದೇತದನ ಮತ್ತೊಂದುಯನ್ನು ಬಿಡುವವರು ನಿರಾಕರಿಸಲಾರವೆ. ಅವರಿಗೆ ಅಸಂಭವವಾದ ವ್ಯಾಪಾರ ವಿಷಯವು ಹೇಳಿ ಅದು ನಿರ್ವಹಿಸಲ್ಪಟ್ಟ ಪೂರ್ತಿ ಅಪೇಕ್ಷಿತಾಂಶಗಳ ಬಿಡಲಾಗದು. ವಾಗಿ ಮೇಳ ಮರಳಿ ಅವರು ಮುಖ ತೋರಿಸದಿರುವ ತೆ ಮಾಡುವರು. ಹೀಗೆಯೇ ಇನ್ನು ಅನೇಕ ರಕ್ತಿಕವಿಷಯವಾಗಿ ತಮ್ಮ ಆಶ್ರಿತರನ್ನು ತಮ್ಮ ಸಮಾಪದಲ್ಲಿ ನೇರಗೊಳಿಸುವಂತೆ ಮಾಡುವರು. ಏನುತೆ ಎಗ ಎನೀತಿ ಏನಸಗಳ ವರಿಷಿಗೂ ತಮ್ಮನ್ನೇ ಕಾಯುಕೊಂಡಿರುವ ಬಡವರನ್ನು ಸ್ವಲ್ಪವಾದರೂ ಕರುಣೆಯದೆ ಉಪೇಕ್ಷಿಸಿ ಅವರ ವಿಷಯದಲ್ಲಿ ತಾವು ಹೇಳಿದ ಮಾತುಗಳನ್ನು ತಪ್ಪುವವರಿಂದ ಅವರ ತಾಂಬಿಕವರಗಲು ನುಬಡಕ್ಕೆ ಬಡವರನ್ನೇಕೆಸು, ದು ವ್ಯಾಪಾರವು ಮಾನಹಾನಿ ಕರೀದಶ್ರುವ, ಕವೆಗೆ ಬಾಣಬಾನಿ ದಪ್ಪುಗಳನ್ನೆಲ್ಲ ಅನ ಬವಿಸುವ ದೇವರು ಕುರಿತು. ಮಾರಿಯಾನುವಿರುವ ರು ಪ್ರಪಂಚದಲ್ಲಿ ಮನುಷ್ಯರು ಕವುಗೆ ಸುಭವಿಸುವ ಅ ಬ ನುಷ್ಯಗಳುಂಡಷ್ಟ ಸುಖದುಃಖಗಳನ್ನನ ೭ ವಿಸುಗೋ ಒಪ್ಪು ಮಾಡಿದ ದಗಳನ್ನು ಅನ್ಯರೂ ಅನುಭವಿಸಲಿ ಬೇಕಿಸಿತ್ಕಲ್ಲವೆ? ಇವುನವರ ಯ ಲ್ಲದ ನಮ ಬುದ್ಧಿವನ್ನು ಪ್ರವೃತ್ತವಾಗುವದು. ಅನ್ಯರಿಂದ ಕೇವಲ ಲ್ಪಮಾದರ್ಕ್ಕೆಂದ ಚಿರೆ ನಮಗ ಪ್ಯಗೆ ದೋಷ ಮಾಡುವರು? ಅಂಶದಲ್ಲಿ ಸ್ವಪಿಸಲ್ಪಟ್ಟಿರುವ ಜವಾಬಗಳಂತೆ ಮನ ಷನ್ನುತ್ತ ಮನಷ್ಯಾಗಿ ಮಾಡಿ ಪಿಡಿಸ್ಟ್ಬಿನ್ನು ಒಬಿ ಷನಾದ ಸಂಪತ್ಪಾಂದಗಳಂ ತಪ್ಪಿ ಅವನನ್ನು ನೇಕರು ಆತ ಡುಸುವುದೆ ಮಾದ ವ ಬಗನುದೆ ಗೆ ಎದಕ್ಕೆಂತ ಚಿರೆ ವ ಟು ಉದ್ದೇಶವಿರುವದು? ಹೀಗೆ ದೇವಾ ಪ್ರಕಾದಂದ ಉಪಿಸಿದ ಸಂಪತ್ಪ್ರಾವನಗಳಗೆ ಕಸ್ತ್ ವಸಿವೆಯೇಗ ಮಾಡದಿದ್ದರೆ ಮನ್ನ್ ಶಾಸ್ತ್ರ ವಿರುದ್ಧವಾದ ಅನ್ಯಾಯ ಚೇನದು ನ್ಯಾಗಳಗೊಳದರಾದ ವ್ಯವನ್ನನ ಜನಿಸುವಂತೆ ವಾಡಿದರೆ ಅಂದ ರಿಗುವದೂ ವಿ ರೆ ಸ್ಯಾವು ಬಗವನ್ನಿಗ್ರಹಾರ್ಹರಾಗುವರು? ಆದುದರಿಂದ ಉಪಪನ್ನರಾಗಿಯೂ, ಕೀರ್ತಿಕಾಮರಾಗಿಯೂ, ಧಿಕಾರ ಪ್ರಾಜನರಗಳ ನಿಲಯಾಗಿಯೂ, ಕುಲ ರೂಪ ಗುಣ ಶೀಲ ಪ್ರಯುಕ್ತಗಳ ದ ಕೀರ್ತಿ ಪ್ರತಿಷ್ಠೆಗಳು ಕೂ ಬಡವರಾಗಿಯೂ ಇರುವ ಅಧಿಕಾರಿಗಳೇ ನೀವು ಹಾಗಿನಕಾಲದಲ್ಲಿ ಮೂರ್ಖರಾಗಿರುವದರಿಂದ ಅಂತವರೆಲ್ಲರೂ ಯಥಾಶಕ್ತಿ ನಿರೋಪಕಾರ ಮಾಡದೆ ಕಾಲವು ತರುಗೆಮನುಷ್ಯ ಧರ್ಮವನ್ನು ಬಾಧಿಸಿಕೊಂಬದಾಗಿ ಕೋರುವೆವು. ಒಂದುವೇಳೆ ಅದಕ್ಕೆ ಒಪ್ಪದಿದ್ದರೆ ಪ್ರತಿಷ್ಠೆಗೊಳಿಸಿ ದೇನರಿಗೆ ಒಂದು ಲಿಯನ್ನೂ ಮಾಡಿ ಅದು ಮುಟಿಯಿಸಲಾರನೆ ದಾರಿತ್ರ್ಯದಾದಿ ದಕ್ಕೆ ಅವರು ಗ ರಿವಾಡದಿದ್ದರೆ ಅದು ದೊರಲನೆಯುದಕ್ಕಿಂದಲೂ ಕ್ರೀಸ್ತ ದಮ್ಮವ ಗಿ ದ್ದು, ಪ್ರಸಿದ್ಧನೀಯ ವಂದ ಸದ್ಗುಣವಾಗಿಯೂ ದೀನ ದೇವುವಲ್ಲದ್ದಾಗಿಯೂ ನಿಂದಾಸ್ಪದವಾಗಿಯೂ ಇರುವದೊಂದು ಅನ ರರ ಸವಿಂ ದೀನ್ಯಮನುಷ್ಯರನ್ನಿಸಿ ಕೊಂಡಿರುವವರೆಲ್ಲ ರೂ ಮನದೊಳು ಧರಿಸಬೇಕೆಂದು ಕೋರುವೆವು.

Occasional Notes
ನೈಮಿತ್ತಿಕ ವಿಷಯನ್ಯಾಸ

A liberal donation.—ಮೈಸೂರು ನಿವಾಸಿಯಾದ ಮೆಸ್ಟರ್ ಕುರ್ನರ್ ಎಂಬುವರು ಮುಮ್ಮಯಲ್ಲಿ ವಿತರಣೆಗಳಿಗಾಗಿ ದವಾಖಾನೆಯಿಂದ ಸ್ಥಾಪಿಸಲ್ಪಟ್ಟಿರುವ ಕಾಲೇಜಿಗೆ ಒಂದು ಸಾವಿರ ರೂಪಾಯಿಗಳು ಸಹಾಯದ್ರವ್ಯವು ಕೊಟ್ಟಿರುತ್ತಾರೆಂದು ತಿಳಿಯಬರುತಿದೆ.

A bloody offer.—ಈಚೆಗೆ ಕಾಶ್ಮೀರದೇಶದ ರಾಜಧಾನಿಯಾದ ಜಮ್ಮೂಪಟ್ಟಣದಲ್ಲಿ ಒಬ್ಬ ಬ್ರಾಹ್ಮಣನು ತನ್ನ ನಾಲಿಗೆಯನ್ನು ಕುಯಿದು ಕಾಳಿಕಾದೇವಿಗೆ ಒಪ್ಪಿಸಿದನೆಂದು ಕೇಳುತ್ತೇವೆ. ನಾಸಿಕಾ ಛೇದನಕಾರ್ಯವು ಈಚೆಗೆ ಅಗಂಡಾಗ್ಯೆ ನಡೆಯುತಲೇಯಿದೆ.

The Mahant of Tirupaty.—ತಿರುಪತಿ ಸಾಬಕ್ ಮಹಂತರಾದ ಭಗವಾನ್ ದಾಸರನ್ನು ಜೆಯಿಲ್‌ನಿಂದ ಬಿಡುಗಡೆ ಮಾಡಬೇಕೆಂದು ಅನೇಕ ಡಿಸ್ಟ್ರಿಕ್ಟುಗಳಿಂದ ಗವರ್ನರವರಿಗೆ ಪಿ ಟಿಷನ್‌ಗಳು ಬರುತಲಿರುವುದು ಕೇಳುತ್ತೇವೆ. ಹೈದ್ರಾಬಾದಿನಲ್ಲಿ ಮದರಾಸಿನಲ್ಲಿ ಪ್ರಬಲರಾದ ದೊಡ್ಡ ಮನುಷ್ಯರ ರಾಜಾ ನಿತಿ ವೇದವೊಂದು ವಿಷ ಯ ಗವರ್ನರವರಿಗೆ ಕಳುಹಲ್ಪಡುವದೆಂದು ಕೇಳುತ್ತೇವೆ.

Opening of the Railway traffic.—ಈಚೆಗ ಕಂಚು ಸುಂದ ನಂಜನಗೂಡಿನವರಿಗೆ ಹಾಕಲ್ಪಡುವ ರೈಲುರಸ್ತೆಯು ಕಾಮಗಾರಿಯು ಪೂರ್ತಿಯಾಗಿರುವದರಿಂದ ಈ ತಿಂಗಳ ಗುರ್ರೀತಾರಿ ಖರಲ್ಲಿ ವ್ಯಾಪಾರಸಂಬಂಧ ಗಾಡಿಗಳು ನಡೆಸಲ್ಪಡುವವೆಂದು ನಿರೀಕ್ಷಿಸಲ್ಪಟ್ಟಿತ್ತು. ಗುಂಬ ಕರ್ಸ್ಟೇಷನ್ನಿಂದ ಬೆಂದವಾಡದವರಿವಿಗೆ ಪ್ರತಿದಿನವೂ ಎರಡು ಗಾಡಿ ಬಿಡಲ್ಪಡುವವು. ಈ ರಸ್ತೆಯಲ್ಲಿ ಗಾಡಿಗಳು ನಡೆಸಲ್ಪಡುವದಕ್ಕೆ ಪ್ರಾರಂಭವಾದಕೂಡಲೇ ಎಂಜಿನ್‌ಗಳು ವ ನ್ಯಸ್ಟ್ರೈಷನ್ನಲ್ಲಿ ನಡೆಯುವದಕ್ಕೆ ಪಕ್ಕಾ ಏರ್ಪಾಡುಗಳು ಮಾಡಲ್ಪಡುವವು.

A daring theft in the Oudh and Rohilcund Railway.—ಇಷೊಸ್ನೈ ಮತ್ತು ರೊಹಿಲ್‌ಖಂಡ ರೈಲುವೆಮಾರ್ಗದಲ್ಲಿ ನಡೆದ ಕಳವು ಮಾ ಶಿ ಕರಿನವೆಯಿತು. ಪ್ಯಾಗಂದರೈಯಿಂ ಮಹನ ನಜೀಬಬಾದ್ ಸ್ಟೇಷನ್‌ಗೂ ನಾಗಿನಾ ಸ್ಟೇಷನ್‌ಗೂ ಮಧ್ಯೆ ಗಾಡಿ ಹೋಗುತ್ತಿರುವಲ್ಲಿ ಒಬ್ಬ ಮನುಷ್ಯನು ಹೊಗಸದಗಾಡಿಯಲ್ಲಿ ಹತ್ತಿ ಅದರಲ್ಲಿರುತಿದ್ದ ಇಬ್ಬರು ಹುಡುಗರ ಮೈಮೇಲಿದ್ದ ಒಡವೆಗಳನ್ನೆಲ್ಲಾ ಬಿಚ್ಚಿ ಕೊಂಡನು. ಗಾಡಿಯು ನಾಗಿನಾ ಎಂಬ ಸ್ಟೇಷನ್‌ಗೆ ಬಂದ ಮೇಲೆ ಹುಡುಗರು ಅಳುತ್ತ ಪೋಲೀಸ್‌ನವರಿಗೆ ತಿಳಿಸಿದರು. ಪೋಲೀಸ್‌ನವರು ಜನಗಳನ್ನು ಗುಂಪುಗೂಡಿಸಿ ಆ ಸ್ಥಳವನ್ನು ಶೋಧಿಸಬೇಕೆಂದು ಹೇಳಲು ನಡರೀ ಹುಡುಗರು ಕಳ್ಳನನ್ನು ಕಂಡುಹಿಡಿದರು. ಅವನನ್ನು ದಸ್ತಗಿರಿಮಾಡಿ ಪರ್ಯಾಪ್ತ ಮಾಡುವಲ್ಲಿ ತನ್ನ ತಪ್ಪನ್ನು ಒಪ್ಪಿಕೊಂಡು ಒಡವೆಗಳನ್ನು ಪೋಲೀಸ್‌ನವರ ವಶಕ್ಕೆ ಕೊಟ್ಟುಬಿಟ್ಟನಂತೆ.

Railway loan for India.—ಪಶ್ಚಿಮ ಇಂಡಿಯಾ ರೈಲುರಸ್ತೆಯನ್ನು ಗವರ್ನಮೆಂಟಿನವರು ಕೊಂಡುಕೊಳ್ಳಬೇಕೆಂದ ವಿಷಯದಲ್ಲಿ ಹುಟ್ಟಿದ ನುಸಲಿಗಾ ಆಕ್ಟು ಮರಣೇಬಾನರ್ ಪಿಡಲ್ಪಟ್ಟ ಮುಂಜಾಗ್ರತ್ತೆಲ್ಪಟ್ಟದರಿಂದ ಕಂಪ್ನಿಕ್ಸ್ ಪರತ್ಮ್ಮಗಳ ನ್ಯಾಯಸಂಸ ನಡರೀ ಕಂಪನಿಯನ್ನು ಕೊಂಡುಕೊಳ್ಳುವದಕ್ಕೆ ಬೇಕಾದ ಹಣ್ಣು ಸೆಕ್ರೆಟರಿಗಳು ಇಂಗ್ಲಾಂಡ್ ದೇಶದೊಳು ಸಾಲಮಾಡುವದಕ್ಕೆ ೯ ಡಿ ಸಕ್ರೆಟರಿಯವರಿಗೆ ಅಧಿಕಾರ ಉಂಟುಮಾಡಲ್ಪಟ್ಟಿರುವದೆ ಆಸನಲು ಇಂಗ್ಲಾಂಡ್ ಪಾರ್ಲಿಮೆಂಟಿನಲ್ಲಿ ಮಂಡಿಸಲ್ಪಡುವದಲ್ಲದೆ ಈಮೊತ್ತಕ್ಕೆ ಬಡ್ಡಿಯ ದರವು ನ್ಯಾಯ ಸೆಕ್ರೆಟರಿಯವರಿಂದ ಘಂಟಾಯಿಸಲ್ಪಡುವದು. ಈಗ ಕಂಪನಿಯವರು ಬರೆದುಕೊಟ್ಟಿರುವ ಷೇರಿನ ಸಂಖ್ಯೆ ೧೦,೦೦೦ ಷೇರ್‌ಗಳು, ಅವರಪ್ಪಕಿ ವ ಷರದಲ್ಲಿ ಜಿ ರತು, ಭಾಗಕ್ಕೆ ಸೇರಿತಾಮೂರುವರೆಕೋಟಿರೂಪಾಯಿಗಳು, ಉಳಿದ ಷಾರುಗಳಿಗೆ ಮೂರು ರೂಪಾಯಿಗಳು.

A new Urdu paper.—ಹ್ಯಾಷನರ್ ಕರ್ಣಸ್ಕಸಮಾಜದ ಉಪ್ಪೆಂಕ ಪ್ರಮುಖ್ಯಗಳಗೆಯು ಗವರ್ನ್ಮೆಂಟಿನವರ ಕಾರ್ಯದಲ್ಲಿ ಸಹಾಯ ಮತ್ತು ವಾಯವ್ಯದೇಶದ ಮುಸಲ್ಮಾನರು ಸಹ ಬಂಗಾಳೀ ದೇಶದ ಮುಸಲ್ಮಾನರನ್ನನುಸರಿಸುತಲಿದಾರೆ. ಬಂಗಾಳೀದೇಶದ ದೊಡ್ಡಮನುಷ್ಯರಿಂದ ಪ್ರಕಟಿಸಲ್ಪಡುವ ದೇಶಭಾಷಾ ವೃತ್ತಾಂತ ಪತ್ರಿಕೆಗಳಗೆ ತಮ್ಮ ಮತಸ್ಥರನೇಕರು ಚಂದಾದಾರರಾಗಿರುತ ಕಾಂಗ್ರೆಸ್ ಸನಾಜದ ವಿಷಯದಲ್ಲಿ ಒಳ್ಳೆಯ ಅಭಿಪ್ರಾಯ ಪ್ರಬಲವರಾಗಿರುತ್ತಾರೆಂದು ತಿಳಿದು, ಸದರೀ ಸಮಾಜಕ್ಕೆ ಪ್ರತ್ಯರ್ಥಿಗಳಾಗಿರುವಂತವರ ಅಭಿಪ್ರಾಯವನ್ನು ಪ್ರಕಟಿಸಬೇಕೆಂಬ ಉದ್ದೇಶದೊಡನೆ ಮುಸಲ್ಮಾನ್ ಜನರು ಬಂಗಾಳೀ ಭಾಷೆಯಲ್ಲಿ ಸ್ವಾಂತಪತ್ರಿಕೆ ಯೊಂದನ್ನಾರಂಭಿಸಿದರು. ಸದರೀ ಪತ್ರಿಕೆಗೆ ಸುದಾಕರ ಯೆಂದು ಹೆಸರಿಟ್ಟಿರುತ್ತಾರೆ. ಇದಕ್ಕೆ ಹೈಕೋರ್ಟ್ ವಕೀಲರಾಗಿಯೂ ಮುನ್ಸಿಪಲ್ ಕಮಿಷನರಾಗಿಯೂ ಇರುವ ಮೌಲ್ವಿ ಸಿರಾಜುಲ್ ಇಸ್ಲಾಂ ಬಹದೂರೆಂಬವರು ಪ್ರೊಪ್ರೈಟರಾಗಿ ಇರುತ್ತಾರೆಂದು ತಿಳಿಯಬರುತದೆ.

Love ending with life.—ಬಾಲಕನಾದ ಬಂಗಾಳೀ ದೇಶೀಯನೊಬ್ಬನು ಸ್ವಜಾತೀಯರಾದ ಜೀರೆವೊಂದು ಕುಟುಂಬಕ್ಕೆ ಸೇರಿದ ಒಬ್ಬ ಯುವತಿಯ ಪ್ರೀತಿಯಂ ಸಂಪಾದಿಸಿದನು, ಪರಂತು ಅವಳನ್ನು ವಿವಾಹ ಮಾಡಿಕೊಳ್ಳುವದಾವು ಅಸಾಧ್ಯವಾಗಿ ಕಂಡುಬಂದದರಿಂದ ತುದಿ ತ ಯುಗಳನ್ನಗಲಿ ತನ್ನ ಸುಗತ ಕಾತಿಗೆ ಬರುವಂತೆ ಚೋದಿಸಿ ಕರೆದುಕೊಂಡು ಹೋಗಿಬಿಟ್ಟನು. ಈ ಸುಗತ ಪ್ರಾಣಿಸಿನಿರಿಗೆ ತಿಳಿಸಲ್ಪಟ್ಟಿತು. ಸದರೀ ಹುಡುಗನು ಸಪತಾಪಿ ಹೋದವನಾದ ಅವನಮೇಲೆ ಸಿಕಯ ಪ್ರಟಾಪಿಸಿ ತು. ಆದಾಗ್ಯೂ ಅವನು ಸಿಕ್ಕಲಿಲ್ಲವು. ಆ ಹುಡುಗಿಯು ಮೈಲಿದ್ದ ಒಡವೆಗಳನ್ನೆಲ್ಲ ವಾರಿ ಜೀವನ ಮಾಡುತಲಿದ್ದನು, ಪರಂತು ಆ ದು ಹುಡುಗಿಯು ಯೋಗ್ಯಮೇಲೆ ಅವಳನ್ನು ಕಾಪಾಡುವದಕ್ಕೆ ಅಶಕ್ತನಾಗಲು ಅವನಿಬ್ಬರಿಗೂ ಮನಸ್ತಾಪ ಪ್ರಾಪ್ತಿಸಿತು. ಈ ಮಾನಹಾನಿಗೆ ಗುರಿಯಾಗುವದಕ್ಕಿಂತಲೂ ಒಳ್ಳೆಯದೆಂದು ಯೋಚಿಸಿ, ಸರಿ, ಹುಡುಗ ರಿಪ್ಪಿನೂ ಗುತಿದಲ್ಲಿ ಅವಳ ಕುತ್ತಿಗೆಯಂ ಕುಯಿದುಹಾಕಿದನು. ಅವಳ ಮುಖವಂ ನೋಡಿದವರೆಲ್ಲರು ಅವಳು ಬಹಳ ಸುಂದರಿಯಾಗಿರಬೇಕೆಂದು ಹೇಳುತ್ತಾರೆ. ಈ ವೃತ್ತಾಂತವು ಈಗ ದರ್ಯಾಪ್ತಿಯಲ್ಲಿದೆ.

LOCAL AND PROVINCIAL NEWS
ಒಳದೇಶವು ಮತ್ತು ತಾಲ್ಲೂಕು ಕಾಚ ತನ್ವತ್ತಾಂತಗಳು

Middle School Examination.—ಮಿಡಲ್ ಸ್ಕೂಲ್‌ಪರೀಕ್ಷೆಯು ಈವರ ಪ್ರಾರಂಭವಾಗುವದು. ಈ ಪರೀಕ್ಷೆಗೆ ಫೀಯನ್ನು ಕೊಟ್ಟಿರುವ ವಿದ್ಯಾರ್ಥಿಯರೆಲ್ಲರೂ ಬಿಷಪ್‌ಕಾಟನ್ಸ್ ಕಾಲೇಜ್ ಕಟ್ಟಡದಲ್ಲಿಯೂ ಅವರನ್ನು ಪ್ರೇಕ್ಷಕರಾಗಿ ಅಂಗೀಕರಿಸಿರತಕ್ಕ ವಿದ್ಯಾರ್ಥಿಗಳು ಲಂಡನ್ ಮಿಷನ್ ಸ್ಕೂಲಿನಲ್ಲಿಯೂ ಮಿಕ್ಕವರೆಲ್ಲರು ಸೆಂಟ್ರಲ್ ಕಾಲೇಜಿನಲ್ಲಿಯೂ ಪರೀಕ್ಷಿಸಲ್ಪಡುವರು. ಈ ಪರೀಕ್ಷೆಯು ಪ್ರತಿದಿನವೂ ಬೆಳಿಗ್ಗೆ ೧೦ ಘಂಟೆಗೆ ಪ್ರಾರಂಭವಾಗುತದೆ.

The late Mr. P. B. Clerk.—ನಿನ್ನೆಯ ದಿನ ಬೆಳಿಗ್ಗೆ ಈವೂರು ಸೆಂಟ್ರಲ್ ಜೆಯಿಲ್ ಸೂಪರಿಂಟೆಂಡೆಂಟಾಗಿದ್ದ ಮಿ|| ಪಿ. ಬಿ. ಕ್ಲರ್ಕ್ ಎಂಬುವರು ಕಾಲಗತಿಯನ್ನೈದಿದರೆಂಬ ವೃತ್ತಾಂತವು ಕೇಳಲಿಕ್ಕೆ ನಾವು ಬಹಳ ವಿಷಾದಪಡುತ್ತೇವೆ. ಈ ದೊಡ್ಡಮನುಷ್ಯನಿಗೆ ಈಗ್ಗೆ ೬—೭ ದಿನಗಳ ಮೊದಲು ಒಂದು ಕಾಲಿನಲ್ಲಿ ಸ್ವಲ್ಪ ರಣವಾಗಿದ್ದದರಿಂದ, ಅದೇ ಅವರ ಬಹುಸ್ಥಾಪಾರಮ ಸಾವಿ ಕೆಲ ಪ್ರಕಟ್ಟಿಗೆ ರಡೆದಿತ್ತು. ಹಿಂಗಿರುವಲ್ಲಿ ಗತರಾತ್ರೆ ಅವರ ಉಪಾಧಿ ಸ್ಪಷ್ಟವಾಗಿ ಆ ಮಾರನೆಯದಿನ ವ್ಯತಿಪನ್ನಂತೆ ತಿಳಿಬಂದವನ್ನು ಮಿ|| ಕ್ಲರ್ಕ್‌ಯವರು ಪ್ರಾಪ್ತಿ ಮೊಳೇರೆಸಿಕದಲ್ಲಿ ಚಿರಕಾಲ ನೌಕರಿ ಮಾಡಿ ನಿವೃತ್ತರಾಗ ಪೋದ ಕ್ಲರ್ಕ್‌ರವರ ಪುತ್ರರಾದದರಿಂದ ಆ ಹಿಂದಿನ ದಾಕ್ಷಿಣ್ಯದ ಮೇಲೆ ಮಹಾರಾಜಾ ಸರ್ಕಾರದವರು ಇವರಿಗೆ ಅಸಿಸ್ಟೆಂಟ್ ಕಮ್ಮಿಷನರ್ ಕೆಲಸ ಕೊಟ್ಟು ತಮ್ಮ ನೌಕರಿಯಲ್ಲಿಟ್ಟುಕೊಂಡಿದ್ದರು. ಈಚೆಗೆ ಇವರಿಗೆ ಅಸಿಸ್ಟೆಂಟ್ ಕಮ್ಮಿಷನರ್ ವರ್ಜೆಯಿಂದ ಜೆಯಿಲ್ ಸೂಪರಿಂಟೆಂಡೆಂಟ್ ಕೆಲಸಕ್ಕೆ ವರ್ಗವಾಯಿತು. ಇವರು ಬಹುಕುಟುಂಬಿಯಾಗಿಯೂ, ಬಡತಾಪದಿಂದ ಗಿಯೂ ಇದ್ದರಲ್ಲದೆ ವಿಶೇಷ ಗಲಾಟೆ ಕೆಲಸಗಳಗೆ ಸಿಕ್ಕಲು ಶಕ್ತರಲ್ಲದಿದ್ದರು.

The present condition of Mysore.—ಈ ಸಂಸ್ಥಾನವು ದೃಶ್ಯಮಾನವಾದ ಪ್ರಕೃತಸ್ಥಿತಿಗೆ ಬರುವದಕ್ಕೆ ನಾವು ಇದುವರಿವಿಗೆ ನಾನಾವಿಧ ಕಾರಣಗಳನ್ನೂಹಿಸುತಲಿದ್ದೆವು, ಪರಂತು ವಾಹೇ ಮಜಕೂರ್ ಗುರ್ರೀತಾರೀಖಿನ ಸ್ಪೆಕ್ಟೇಟರ್ ಪತ್ರಿಕೆಯಂ ನೋಡಲಾಗಿ ಪ್ರಕೃತಸ್ಥಿತಿಯನ್ನೈದಲಿಕ್ಕೆ ಶ್ರೀಮನ್ಮಹಾರಾಜರವರಿಗೆ ವಿದ್ಯಾಗುರುಗಳಾಗಿದ್ದ ಕರ್ನಲ್ ಮ್ಯಾಲೆಸನ್ ಸರ್ ಜೆ ಡಿ ಗಾರ್ಡನ್, ಮಿ|| ಪೊರ್ಟರ್, ಮಿ|| ಪ್ರೋರ್ಟ್ ಮಿ|| ನರಸಿಂಹಯ್ಯಂಗಾರ್ ಇವರೆಲ್ಲರೂ ಸಂಯುಕ್ತವಾಗಿಯೂ ಪೃಥಕ್ಕಾಗಿಯೂ ಕಾರಣಭೂತರಾದದರಿಂದ ಪಕತ್ವ್ರಯುಕ್ತವಾದ ಖ್ಯಾತಿ ಸ್ಥಿಯವೆಲ್ಲಾ ಅವರಿಗೇ ಸೇರಿದವೆಂದು ಭಾವಿಸಬೇಕಾಗಿರುವಂತೆ ಸ್ಪಷ್ಟವಾಗುತಿದೆ, ಇದು ನಿಜವಾದರೆ ಶ್ರೀ ಮಹಾರಾಜರವರಿಗೆ ಬಾಲ್ಯದಲ್ಲಿ ಇವರ್ಟುಮಂದಿ ಶಿಕ್ಷಕರಾಗಿ ಏರ್ಪಟ್ಟದರಿಂದಲೇ ಅವರೊಬ್ಬೊಬ್ಬರಲ್ಲೊಂದೊಂದು ಗುಣವು ಆರಿಸಿ ಗ್ರಹಿಸಿದಂತೆ ಭಾವಿಸಬೇಕಾಗಿದೆ. ಪರಂತು ರಾಜನಿಷ್ಠವಾದ ಧೈರ್ಯವೊಂದುಮಾತ್ರ ಒಬ್ಬರೂ ಕಲ್ಪಿಸಿದಂತೆ ತೋರುವದಿಲ್ಲವು.

NEWS LETTER
ವೃತ್ತಾಂತಪತ್ರಿಕೆ

ಮೈಸೂರು, ೨ನೇ ಮೇ.—ಈಚೆಗೆ ಮೂರು ನಾಲ್ಕು ದಿನಗಳ ಮೊದಲು ಇಲ್ಲಿ ಬಿಸಿಲಿನ ಝಳವು ದುಸ್ಸಹವಾಗುತಬಂದು, ನಿನ್ನೆ ಮಧ್ಯಾಹ್ನದ ಸಾಯಂಕಾಲ ೪ ಘಂಟೆಗೆ ಮೋಡ ಮುಸುಕಿ ಸಿಡಿಲು ಮಿಂಚುಗಳೊಡನೆ ಆಲೇಕಲ್ ಮಳೆಗೆ ಪ್ರಾರಂಭವಾಗಿ ಅರ್ಧಘಂಟೆಯ ಕಾಲ ಬಲವಾಗಿಬಿತ್ತು.

ಇನ್ಫ್ಲುಯೆಂಜಾ ಯೆಂಬ ವಿಷಮ ಶೀತರೋಗದ ದೆಸೆಯಿಂದ ಪ್ರತಿ ದಿನದಲ್ಲೂ ನಾಲ್ಕು ರುಗ್ಣುಂಡಿ ವ್ಯಾಧಿಪಡುತಲಿದಾರೆ. ನಂಜನಗೂಡು ಪ್ರಾಂತದಲ್ಲಿ ವಾಂತಿಭೇದಿ ರೋಗ ತಲೆದೋರಿದೆ. ಸದರೀ ತಾಲ್ಲೂಕು ಶಿರಸ್ತೇದಾರರಾದ ಮರಿಯಪ್ಪನವರು ಅದೇ ರೋಗದ ದೆಸೆಯಿಂದ ಕಾಲಗತಿಯನ್ನೈದಿದರೆಂದು ಇಲ್ಲಿ ಹೇಳಿಕೊಳ್ಳುತ್ತಾರೆ.

ಈ ತಿಂಗಳ ೯ನೇ ತಾರೀಖಿಗೆ ಶ್ರೀಮನ್ಮಹಾರಾಜರವರ ಸವಾರಿಯು ರಾಜಧಾನಿಗೆ ವಾಪಸು ಬರುವದಾಗಿ ಹೇಳಿಕೊಳ್ಳುತ್ತಾರೆ.

ಅನಮುದೆ ಕಂಟ್ರೋಲರ್ ಕೆಲಸಕ್ಕೆ ಬಂದ ಮಿ|| ಸುಬ್ಬರಾಯ ಅಯ್ಯರವರು ತಮ್ಮ ಹೊಸ ಕೆಲಸದ ಚಾರ್ಜಂ ವಹಿಸಿದ ಮೇಲೆ ಬಂದಿಗಳೊಳಗಾಗಿಯೇ ಪ್ರಾದೇಶಿಕ ರಗಳ ಕಚ್ಚೇರಿಗೆ ಬರುವದಿಲ್ಲವು. ಇವರಚಿತಳತವು ಗತಿಸಿದ ಮಿ|| ಚಿದಂಬರ ಅಯ್ಯರವರಷ್ಟು ಪ್ರಜಾ ರಂಜಕವಾಗಿರದೆಂದು ಜನರು ಆಡಿಕೊಳ್ಳುತ್ತಾರೆ.

ಮಿ|| ಚಿಕ್ಕವೆಂಕಣ್ಣನವರ ಕುಮಾರನ ವಿವಾಹವು ನಿನ್ನೆಯದಿನ ಪ್ರತಿಕರ್ಯವಾಯಿತು. ಅವರ ಕುಮಾರ್ತೆಯ ವಿವಾಹದಲ್ಲಿ ನಡೆಸಲ್ಪಟ್ಟ ವಿಧವಗಳೆಲ್ಲವು ಈ ಶುಭದಲ್ಲಿಯೂ ನಡೆಸಲ್ಪಟ್ಟವು. ನಿನ್ನೆಯದಿನ ಸಾಯಂಕಾಲ ಮಿ|| ವೆಂಕಣ್ಣನವರು ತಮ್ಮ ಆಶ್ರಿತರುಗಳಿಗೆ ಕಲಾಬತ್ ಶಾಲು ಜೋಡಿಗಳನ್ನೂ, ಜರೀ ಕಲಾಬತ್ ಪೇಟಗಳನ್ನು ಬಹುಮಾನವಾಗಿ ಕೊಟ್ಟರು. ಇನ್ನು ಕೆಲವು ಕೆಲಸಗಾರರಿಗೆ ದೀಪಾವಳಿ ಏನವರೆ ದಾಕ್ಷಿಣ್ಯವು ಸಕ್ಕಜನರಿಗಾಶ್ಚರ್ಯವಾಗಿದೆ. ಇದುವರಿವಿಗೆ ಈ ಪ್ರಾಂತದಲ್ಲಿ ಇಷ್ಟು ವೈಭವದಿಂದ ಶುಭಗಳು ಮಾಡಿದವರು ಯಾರೂ ಇಲ್ಲವೆಂದು ಎಲ್ಲರೂ ಹೇಳಿಕೊಳ್ಳುತ್ತಾರೆ. ತುಮಕೂರು ಪ್ರಾಂತದಿಂದ ಬರುತಿರುವ ವಾರ್ತೆಗಳು ಏನೂ ವಿಶೇಷವಾಗಿಲ್ಲವು.

THE MYSORE GAZETTE.
ಮೈಸೂರು ಗೆಜೆಟಿ.

ಶ್ರೀಮನ್ಮಹಾರಾಜರಾಜಸಾಹೇಬ್ ಬಹದೂರವರ ಸರ್ಕಾರದಿಂದ ಹೊರಟಿರುವ ಇಷ್ತಿಹಾರ್‌ನಾಮೆಗಳು.

ನಂ. ೨. ತಾ|| ೨೮ನೇ ಏಪ್ರೆಲ್ ೧೮೯೦—ಸರ್ ೧೮೯೦ನೇ ಇಸವಿ ಮಾರ್ಚ್ ೨೮ನೇ ತಾ|| ಮಧ್ಯಾಹ್ನೋತ್ತರ ಫ್ರೆಂಚ್‌ರಾಕ್ಸ್ ಸಬ್‌ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ಆಫೀಸ್ ಚಾರ್ಜನ್ನು ಮಿಸ್ಟರ್ ಫ್ರಾಂಕ್ ಬಿಕ್ಕ್ಯಾಡಿಯವರಿಂದ ಮೆ|| ಜೆ. ಜಿ. ನಾರ್ಣಯವರು ತೆಗದುಕೊಂಡಿರುತ್ತಾರೆ.

ನಂ. ೩. ಸರ್ ೧೮೯೦ನೇ ಇಸವಿ ಏಪ್ರೆಲ್ ೧೫ನೇ ಮಂಗಳವಾರ ಮಧ್ಯಾಹ್ನೋತ್ತರ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸ್‌ಚಾರ್ಜನ್ನು ಮೆ|| ಸಿ. ಮಾದಯ್ಯನವರು ಮೆ|| ಡಿ. ರಾಮಶೆಟ್ಟಿಯವರಿಗೆ ಒಪ್ಪಿಸಿರುತ್ತಾರೆ.

ನಂ. ೪. ತಾ|| ೨೪ನೇ ಏಪ್ರೆಲ್, ೧೮೯೦—ಮೈಸೂರ್ ಶೀಮೆಯ ಎಕ್ಸೈಜ್ ಕಮಿಷನರ್ ಮಿಸ್ಟರ್ ಆರ್ ವಿಜಯೇಂದ್ರರಾಯರವರಿಗೆ ೯೦ನೇ ಇಸವಿ ಏಪ್ರೆಲ್ ೩೦ನೇ ಮೊದಲ್ಗೊಂಡು ೧೫ ದಿನಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತ್ತದೆ.

ನಂ. ೧೩೮ ತಾ|| ೨೯ನೇ ಏಪ್ರೆಲ್ ೧೮೯೦—ಹಾಸನ ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರ್ ಮೆ|| ಇ. ಎಸ್. ಸುಬ್ಬರಾಯರ್ ಬಿ. ಎ., ಬಿ. ಸಿ. ಇ. ಯವರನ್ನು ಶ್ರೀಮನ್ಮಹಾರಾಜರವರು ಮೈಸೂರ್ ಮೆ|| ಇ. ಚಿದಂಬರಂ ಅಯ್ಯರವರಿಗೆ ಬದಲಾಗಿ ಅರಮನೆ ಇಲಾಖೆ ಇನ್‌ಚಾರ್ಜ್ ಆಫೀಸರರಾಗಿ ನೇಮಿಸಿದ್ದಾರೆ ಇರುತ್ತಾರೆ.

SUMMARY OF NEWS
ವೃತ್ತಾಂತಸಂಗ್ರಹವು.

ಆಸ್ಟ್ರಿಯಾ ದೇಶದಲ್ಲಿ ನೌಕರರಿಗೆ ರಜಾ ವಗೈರೆ ಕೊಡಬಾರದೆಂದು ನಿಶ್ಚಯಿಸಿರುವಂತೆ ತಿಳಿಯಬರುತಿದೆ. ಈವಿಷಯವು ನೌಕರರಿಗೆ ಉತ್ಸಾಹ ಭಂಗವಾಗುವವರಲ್ಲಿ ಬರುತಿದೆ.

ಅಮೇರಿಕಾ ಖಂಡದಲ್ಲಿ ಒಂದು ಕಂಪೆನಿಯವರು ಅಪೇಕ್ಷಿಸಲ್ಪಟ್ಟವರ ಮನೆಗಳಿಗೆಲ್ಲ ಹಾಲಿನ ನಳಿಗಳನ್ನು ಇಟ್ಟು ನಳಿಗಳ ಮೂಲಕ ಹಾಲನ್ನು ಸರಬರಾಯಿ ಮಾಡುತ್ತಾರೆ. ಇದಲ್ಲದೆ ಬೀದಿಗಳಲ್ಲು ಅಲ್ಲಲ್ಲಿಟ್ಟಿರುತ್ತಾರಂತೆ. ಇದರಿಂದ ಕೊಂಡುಕೊಳ್ಳುವವರು ಅಲ್ಲಿಗೆ ಹೋಗಿ ಸುಲಭವಾಗಿ ತೆಗದುಕೊಂಡು ಬರುತ್ತಾರಂತೆ.

ಕಳೆದ ತಿಂಗಳಲ್ಲಿ ಲಂಡನ್ ನಗರದೊಳು ಮೆಸ್ಸರ್ಸ್ ಹಾರ್ವಿ, ಸಭಾಪತಿ ಮೊದಲಿಯಾರ್ ಕಂಪೆನಿಯವರಿಂದ ಸ್ಥಾಪಿಸಲ್ಪಟ್ಟಿರುವ ಅರಳೇ ಯಂತ್ರಕ್ಕೆ ಬೆಂಕಿ ತಗಲಿ ಬೆಂದುಹೋಗಿ ಹದಿನೈದು ಲಕ್ಷ ರೂಪಾಯಿಗಳು ನಷ್ಟವಾದಂತೆ ಅಂದಾಜಾಗಿರುತಿದೆ. ಈನಷ್ಟದಲ್ಲಿ ಒಂದುಭಾಗವನ್ನು ಇನ್‌ಶ್ಯೂರೆನ್ಸ್ ಕಂಪೆನಿಯವರಿಂದ ಪಡೆಯಲ್ಪಡುವದು.

ಯೂರೋಪ್‌ಖಂಡದ ಹ್ಯಾಂಬರ್ಗ್ಸ್ ನಲ್ಲಿರುವ ಒಬ್ಬ ಗೃಹಸ್ಥನು ಕಾಗದಗಳಿಂದ ಒಂದು ಮನೆಯನ್ನು ತಯಾರುಮಾಡಿದಾನೆ. ಇದರ ಮುಂಭಾಗವು ಬಹಳ ವಿಸ್ತಾರವಾಗಿಯೂ ಬೆಂಕಿ ಮುಂತಾದ ಯಾವ ಅಪಾಯ ಉಂಟಾದರೆ ಇಡಾ ಸಂಭವಿಸದಂತೆಯೂ ನಿರ್ಮಿಸಿರುತ್ತಾನೆ. ಇದಲ್ಲದೆ ಇದರಲ್ಲಿರುವ ಅಡಿಗೆಮನೆಯ ಮೇಲ್ಛಾವಣಿಯು ೩೦ ಗಜಗಳ ಎತ್ತರವಾಗಿದೆ.

ಬಂಗಾಳ ಆಧಿಪತ್ಯದಲ್ಲಿರುವ ಪ್ರೊವಿನ್ಸ್ ನೌಕರರಾಗ ೩೫ ವರ್ಷಗಳ ವಯಸ್ಸಿಗೆ ಮೇಲ್ಪಟ್ಟರು ಹುದ್ದೆ ಮಾಡಿಕೊಳ್ಳಕೂಡದೆಂದು ಒಂದುಸರ್ಕ್ಯುಲರ್ ಕೊಟ್ಟಿರುವುದಾಗಿ ಲಾಹೋರ್ ಎಂಬ ಪತ್ರಿಕೆ ಯಿಂದತಿಳಿಯಬರುತಿದೆ. ಇಂತಾಏರ್ಪಾಡಿನಿಂದ ದೇಶದಲ್ಲಿಯೂ ಆದರೆ ಎಲ್ಲರೂ ಕಾಯಕಶ್ರಮಗಳು ಪ್ರಬಲಗಳಾಗುವದಲ್ಲದೆ ತಮ್ಮ ಸುಶೀಲವನ್ನು ನಡೆಸಿಕೊಳ್ಳುವಶಕ್ತಿಯುಳ್ಳವರಾಗಿಯೂ ಆಗುವರು.

ಇಂಡಿಯಾದೇಶದಲ್ಲಿ ಓದುವರಿಗೆ ವಿದ್ಯಾರ್ಥಿಗಳು ಶೇಕಡ ೩ ರ ಮಟ್ಟಿಗೆ ಇದಾರೆ. ವಿದ್ಯಾರ್ಥಿನೀಯರು ಎಲ್ಲಾ ಮತಗಳಲ್ಲೂ ಸಂಸಾರಿ ಶೇಕಡ ೩ ರ ಮೇರಿಗೆ ಇದಾರೆ. ಕ್ರಿಸ್ತರಲ್ಲಿ ಶೇಕಡ ೬೦ ರ ಮೇರಿಗೆ ವಿದ್ಯಾಭ್ಯಾಸ ಮಾಡುತಲಿದಾರೆ. ಪಾರ್ಸಿಯರೂ ಕೂಡ್ದರೂ ಶೇಕಡ ೨ ರ ಮೇರಿಗೆ ವಿದ್ಯಾಭ್ಯಾಸಮಾಡುತ್ತಾರೆ. ಆದರೆ ಬ್ರಾಹ್ಮಣರುಗಳಲ್ಲಿ ಶೇಕಡ ೧೬ ರಮೇರಿಗೂ ಸ್ತ್ರೀ ವಿದ್ಯಾಭ್ಯಾಸ ಉಪಕ್ರಮವಾಗಿದೆ. ಆದರೆ ಸ್ತ್ರೀಯರಲ್ಲಿ ವಿದ್ಯಾಭ್ಯಾಸವು ಶೇಕಡ ೧೭ರಷ್ಟು ಕಡಮೆಯಾಗಿರುವದರಿಂದ ಸಾಮಾನ್ಯವಾಗಿ ಇವರಲ್ಲಿ ಅಜ್ಞಾನವು ವಿಶೇಷವಾಗಿರುವದಕ್ಕೆ ಅವಕಾಶವಾಗಿದೆ. ಪ್ರಥಮತಃ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮಾಡಿಸುವದರಲ್ಲಿ ಸರ್ಕಾರದವರು ಹ್ಯಾಗೆ ಪ್ರೋತ್ಸಾಹ ಉಂಟುಮಾಡಿದರೋ ಹಾಗೆ ಸ್ತ್ರೀವಿದ್ಯಾಭ್ಯಾಸಕ್ಕೂ ತಕ್ಕ ಏರ್ಪಾಡನ್ನು ಮಾಡಿದಹೊರ್ತು ಅಜ್ಞಾನ ವಿಮೋಚನೆಗೆ ಅವಕಾಶವಾಗುವದಿಲ್ಲವು.

ಯೂರೋಪ್ ಖಂಡದಲ್ಲಿ ಏರ್ಡೆಬರ್ಗ್ ಎಂಬ ಗ್ರಾಮದಲ್ಲಿರುವ ಒಬ್ಬ ದೊಡ್ಡ ರೈತನು ಸತ್ತುಹೋದನೆಂದು ಅವನ ಶವವನ್ನು ಒಂದು ಶಾಘಿನ್ನ (ಪೆಣವಿರುವ ಪೆಟ್ಟಿಗೆಯ)ಲ್ಲಿ ಇಟ್ಟು ತೆಗದುಕೊಂಡು ಹೋಗಿ ಸ್ಮಶಾನದಲ್ಲಿ ಇಳಿಸುವಾಗ್ಯೆ ಆ ಪೆಟ್ಟಿಗೆಯಲ್ಲಿದ್ದ ಮನುಷ್ಯನು ಎದ್ದು ಅವನಿಗೆ ಬಹಳ ಛಳಿಯಾಗಿದ್ದದರಿಂದ ಒಬ್ಬ ಮುದುಕಿಯ ಗುಡಿಸಲಿನಲ್ಲಿ ನುಗ್ಗಿಕೊಂಡನು. ಆಗ ಸಾಯಂಕಾಲವಾಗುತಬರಲು ಆ ಪೆಟ್ಟಿಗೆಯಿಂದ ಪಿಶಾಚಿ ಎದ್ದುಬರುತಲಿದೆಯೆಂದು ಮುಂದೆ ಐದುಪದರು ಸಾವಿರ ಸಹಿತ ಭಯಪಟ್ಟು ಓಡಿಹೋಗುತಿದ್ದರು. ಕೆಲವರು ಬಂದೂಕುಗಳನ್ನೂ ಕೋಲುಗಳನ್ನೂ ತೆಗದುಕೊಂಡು ಹೊಡೆಯುವದಕ್ಕೆ ಹೋದರು. ಅಷ್ಟರಲ್ಲೇ ಪಾದರಿಗಳು ಸ್ವಲ್ಪ ತಿಳುವಳಿಕೆಯುಳ್ಳವರಾದದರಿಂದ ಅವರು ಈವಿಷಯವನ್ನು ಕುರಿತು ಯೋಚಿಸಿ ಇದನ್ನು ನೋಡಿದರೆ ಸತ್ತುಹೋದವನು ಮೂರ್ಛೆಯಿಂದಿದ್ದನೇಹೊರತು ಪ್ರಾಣ ಹೋಗಿರಲಿಲ್ಲವೆಂದು ತಿಳಿದುಕೊಂಡು ಈ ಸಂಗತಿಯನ್ನು ಎಲ್ಲರಿಗೂ ತಿಳಿಸುವದರೊಳಗಾಗಿ ಅಲ್ಲಿದ್ದ ಜನಗಳು ಪೆಟ್ಟಿಗೆಯಲ್ಲಿ ಹಾಕಿದ್ದವನನ್ನು ಎಳೆದು ಕೊಂದುಬಿಡುವ ದಲ್ಲದಲ್ಲಿಹಾಕಿಕೊಂಡುಬಿಟ್ಟರು. ಇಂತಾ ಮೂಢತೆಗಳಾದ ಜ್ಞಾನಿಗಳು ಇಂಡಿಯಾ ದೇಶದಲ್ಲಿಯೇ ಇಲ್ಲ, ಇತರ ಕಡೆಗಳಲ್ಲೂ ಇರುವದು ನೋಡಿದರೆ ಆಶ್ಚರ್ಯವಾಗುತದೆ.—ವೃ. ಚಿ.

EXTRACTS

ಸಮುದ್ರಯಾನದಿಂದ ಉಂಟಾಗುವ ಪ್ರಯೋಜನಗಳನ್ನು ಕುರಿತು ಒಂದು ಪತ್ರಿಕೆಯು ಈ ಪ್ರಕಾರ ತಿಳಿಸುತದೆ ಏನುದಲೈ—೧ ಒಳ್ಳೇ ಪ್ರಗಳಲ್ಲಿ ಯಾನಮಾಡುವ ಸ್ಥಳಗಳಿಗೆ ಏನೇನು ಪದಾರ್ಥಗಳನ್ನು ತೆಗದುಕೊಂಡುಹೋಗಬೇಕೋ ಅವುಗಳೂ ಒಂದು ಲೇಖನದಿಂದ ಇನ್ನೊಂದು ದೇಶಕ್ಕೆ ಏನೇನು ತೆಗದುಕೊಂಡು ಹೋಗಬೇಕೋ ಅವುಗಳ ಸರಬರಾಯಿ ನಾನಾವಿಧ ರೀತಿಗಳಿಂದಲೂ ತಿಳಿಯುವದು. ೨. ಹಿತವಾದ ಗಾಳಿಯುಳ್ಳವನೆ ಮತ್ತು ಸಮವಾದ ಸೂರ್ಯರಶ್ಮಿಯಲ್ಲಿರುವದು. ೩. ಯಾವಾಗ್ಯೂ ಧೂಳಿಯಿಂದಲೂ ದುರ್ಗಂಧದಿಂದಲೂ ರಹಿತವಾದ ವಾಯುವನ್ನು ಸೇವಿಸುವದು. ೪. ಸಮುದ್ರದಮೇಲೆ ಬೀಸುವ ವಾಯುವಿನಲ್ಲಿ ಓಜೋನ್ ಎಂಬ ಪದಾರ್ಥವೂ ಉಪ್ಪೂ ಹೆಚ್ಚಾಗಿ ಬೆರಕೆಯಾಗಿರುವದರಿಂದಲೂ ಮತ್ತು ಬಲವಾಗಿ ಗಾಳಿಬೀಸಿದಾಗ ಸಮುದ್ರವನೀರು ಹಠವಾಗಿ ತಗಲಿ ತನ್ಮೂಲಕ ನೀರಿನ ತುಂತುರುಗಳು ಮೇಲೆ ಬೀಳುವದರಿಂದ ಕ್ಷಯ ರೋಗಾದಿಗಳಿಗೆ ಸಾಂತವಾಗಿರುವದು. ೫ ಇದಲ್ಲದೆ ಭೂಮಿಯ ಮೇಲಿನಹಾಗೆ ಸಮುದ್ರದಮೇಲೆ ಒಂದುಕಾಲದಲ್ಲಿ ಉಷ್ಣವಾಗಿಯೂ, ಒಂದು ಕಾಲದಲ್ಲಿ ಶೀತವಾಗಿಯೂ ಇರದೆ ಸಮಶೀತೋಷ್ಣವಾಗಿರುವದು. ಮತ್ತು ಏಡನುವರೇಗೆ ಉತ್ತರದಲ್ಲಿ ಅಗಲಿ, ದಕ್ಷಿಣದಲ್ಲಿಆಗಲಿ ಜಾಗ್ರತೆಯಲ್ಲಿ ಸ್ಟೀಮರ್‌ಗಳು ನಡೆಸುವಾಗ ವಾಯುವು ತಂಪಾಗಿಯೂ ದೇಹಕ್ಕೆ ಆರೋಗ್ಯವಾಗಿಯೂ ಇರುವದು. ೬ ಗಾಳಿಯಲ್ಲಿ ಜಲ ಪರಿಮಾಣಗಳು ಸರ್ವಕಾಲದಲ್ಲೂ ಸೇರಿಕೊಂಡು ಅದು ದೇಹಕ್ಕೆ ಹೋಗುವದರಿಂದ ನಂಜಿನ ಜ್ವರದ ರೋಗಿಗಳಿಗೆ ಅದು ತುಂಬಾ ಆರೋಗ್ಯವನ್ನುಂಟುಮಾಡುವದು. ೭. ನಾವೆಯು ಸರ್ವಕಾಲದಲ್ಲೂ ಚಲನೆಯಲ್ಲಿರುವದರಿಂದ ಶುದ್ಧವಾದ ಗಾಳಿಯು ಸೇವನೆಗೆ ಆಕರವಾಗಿದೆ. ಆದದರಿಂದ ಅಂತಾ ವಾಯುವು ಶರೀರದಮೇಲೆ ಸದಾ ಪ್ರಸರಿಸುವದರಿಂದ ಅತ್ಯಂತ ಆರೋಗ್ಯಕ್ಕೆ ಕಾರಣವಾಗಿದೆ ಎಂದು ತಿಳಿಸುತಿದೆ.

ಮೈಸೂರು ಅರಮನೆ ಕಂಟ್ರೋಲರ್ ಕೆಲಸದಲ್ಲಿ ಇದುವರೆಗೂ ಇದ್ದ ಮಹಾರಾಜಶ್ರೀ ಚದುರಂಬೈಯ್ಯನವರು ಕಾಲಾಧೀನರಾದ ವಿಷಯವನ್ನು ನಾವು ಪೂರ್ವ ಪತ್ರಿಕೆಯಲ್ಲಿ ತಿಳಿಸಿದ್ದೆವಷ್ಟೆ. ಇವರಿಗೆ ಅರಮನೆ ಸಂಬಳ ೩೦೦ ರೂಪಾಯಿಯೂ ಡಿಸ್ಟ್ರಿಕ್ಟು ಟ್ರಜರಿಯಲ್ಲಿ ೩೦೦ರೂಪಾಯಿಯೂ ಒಟ್ಟು ೬೦೦ ರೂಪಾಯಿಗಳು ಸಲ್ಲುತಿತ್ತು. ಇವರಿಗೆ ಕೆಲಸದ ಗಲಾಟೆ ಅರಮನೆಯಲ್ಲಿ ವಿಶೇಷವಾಗಿ ಇರಲಿಲ್ಲ. ಟ್ರೆಜರಿಯಲ್ಲಿ ಸುಮಾರಾಗಿ ಸ್ವಲ್ಪ ಕೆಲಸವಿರುತಿತ್ತು. ಈಕೆಲಸಕ್ಕೆ ಡಿಸ್ಟ್ರಿಕ್ಟಕಮಿಷನರವರ ಗ್ರೇಡಿನಲ್ಲಿ ಕೆಲಸ ಅವಶ್ಯಕತೆಯೇ ಇರಲಿಲ್ಲ. ಆದಾಗ್ಯೂ ದಿವಾನರವರು ಇವರಿಗೆ ಡಿಸ್ಟ್ರಿಕ್ಟ್ ಕಮಿಷನರರವರ ಗ್ರೇಡ್ ಮಾಡಿ ಅಭಿಮಾನದಿಂದ ಇಟ್ಟುಕೊಂಡಿದ್ದರು. ಅರಮನೆ ಕೆಲಸವನ್ನು ಅವರ ಬದಲೀಕೆಲಸ ನೋಡುತಿದ್ದ ಮೆ|| ಒಕ್ಕಲ ವೀರರಾಜೇಅರಸಿನವರು ಯಾವ ಗಲಾಟೆಯೂ ಇಲ್ಲದೆ ತಮ್ಮ ಕೆಲಸದ ಜೊತೆಯಲ್ಲಿ ಇದನ್ನೂ ನೋಡಿಕೊಂಡು ಹೋಗುತಿದ್ದರು. ಇವರಿಗೇನ ಸ್ವಲ್ಪ ಸಂಬಳ ಪ್ರಮೋಷನ್ ಮಾಡಿ ಈಕೆಲಸವನ್ನು ಒಪ್ಪಿಸಬಹುದಾಗಿತ್ತು. ಅಥವಾ ಮ ದಳವಾಯಿ ದೇವರಾಜೇಅರಸಿನವರಿಗಾಗಲಿ ಮ ನಂಜುಂಡರಾಜೇಅರಸಿನವರಿಗಾಗಲಿ ಈಗ ಅವರಿಗೆ ಬರುವ ಸಂಬಳಕ್ಕಿಂತಲೂ ಸ್ವಲ್ಪ ಜಾಸ್ತಿಮಾಡಿ ಈಕೆಲಸಕ್ಕೆ ನೇಮಿಸಿ ಖಜಾನೇಕೆಲಸವನ್ನು ಯಾವಾಗ್ಯೂ ಡಿಸ್ಟ್ರಿಕ್ಟು ಟ್ರಜರಿಗೆ ಕನಿಷ್ಠರವರಿಗೆ ಇದನ್ನು ಒಪ್ಪಿಸಬಹುದಾಗಿತ್ತು. ಆದರೆ ೬೦೦ ರ ಸಂಬಳ ಸರಿಯಾದ ಈ ಮಾರ್ಗಗಳನ್ನೆಲ್ಲ ಬಿಟ್ಟು ಎಗ್ಸಿಕ್ಯೂಟಿವ್ ಇಂಜನೀರ್ ಮ ಸುಬ್ಬರಾಯರವರನ್ನು ಈ ಕೆಲಸಕ್ಕೆ ನೇಮಿಸಿದರು. ನಮ್ಮ ದಿವಾನರವರು ಇಲ್ಲಿಗೂ ಮದರಾಸಿನವರನ್ನೇ ನೇಮಿಸಬೇಕ ಸದರೀ ಕೆಲಸವನ್ನು ಬಾಬಿಕಿನ ಮ|| ವೀರರಾಜೇಅರಸಿನವರು, ಮ|| ಚದುರಂಬೈಯ್ಯನವರ ಸ್ಟೇರ್‌ಹಾಜರಿಕಾಲದಲ್ಲಿ ಅನೇಕಸಾರಿ ಮಂಗಾಮಿಯಾಗಿ ಲೇಶವೂ ಪುಕಾರಿಲ್ಲದೆ ತನ್ನ ಕೆಲಸದ ಜೊತೆಯಲ್ಲಿಯೇ ನೋಡಿದಾರೆ ಈಗಲೂ ನೋಡುತಲಿದಾರೆ ಇವರಿಗೆ ಈಕೆಲಸವು ಯಾತಕ್ಕೆ ಆಗಕೂಡದು. ಅರಮನೆ ಕೆಲಸವನ್ನಾದರೂ ಇವರಿಗೆನಾಡಿ ಹೊಸದಾಗಿ ಅಸಿಸ್ಟೆಂಟರಾಗಿತಕ್ಕೆ ದಿವಾನರವರ ಅಧಿಕ್ರಮ ದಲಿಯವರಲ್ಲಿ ಯಾರಾದರೂ ಒಬ್ಬರನ್ನು ಡಿಟ್ರಜರೀಗ ಹಾಕಕೂಡದೆ? ಅದು ಹಾಗಿರಲಿ ಮ|| ದಳವಾಯಿ ದೇವರಾಜೇಅರಸಿನವರು ಗವರ್ನಮೆಂಟ್ ಸರ್ವಿಸಿನಲ್ಲಿ ಪ್ರೂಫ್ ಮೊದಲ್ತು ಮಾಡಿ ಅನುಭವವುಳ್ಳವರಾಗಿದಾರೆ ಅವರನ್ನು ಈಕೆಲಸಕ್ಕೆ ತರುವದಕ್ಕೆ ಪ್ರತಿಬಂಧಕವೇನು? ಇವರಂತೆಯೇ ಮ|| ನಂಜುಂಡರಾಜೇಅರಸಿನವರು ಇದೇಪ್ರಕಾರ ಅರಮನೆ ಮತ್ತು ಗವರ್ನಮೆಂಟ್ ಕೆಲಸಗಳಲ್ಲಿ ಅನುಭವಸ್ಥರಾಗಿದಾರೆ. ಅವರನ್ನು ಯಾತಕ್ಕೆ ಕರಕೊಂಡು?... ಇದುಹೀಗಿರುತ್ತ ಇರಲು ದಿವಾನರವರು ಶ್ರೀಮನ್ಮಹಾರಾಜರವರಲ್ಲಿ ಸೂಚಿಸಿರಬಹುದು ಅದಕ್ಕೆ ಶ್ರೀಮನ್ಮಹಾರಾಜರವರು ಅತ್ಯಂತ ದಾಕ್ಷಿಣ್ಯ ಪರರಾದ್ದರಿಂದ ಒಪ್ಪಿದ್ದರೂ ಒಪ್ಪಿಸಬಹುದು. ಆದರೆ ಶ್ರೀಮನ್ಮಹಾರಾಜರವರಿಗೆ ಅರಮನೆ ಡಿಸ್ಟ್ರಿಕ್ಟ್ ಕಮಿಷನರವರು ಮಾಡತಕ್ಕ ಕಾರ್ಯ ಗೌರವ ಪ್ರಸ್ವರ್ಯವಾಗಿ ವೇದ್ಯವೇ ಇರಬಹುದು. ಮುಖ್ಯ ಅರಮನೆ ಇಲಾಖೆ ಕೆಲಸವೆಲ್ಲ ಶ್ರೀಮನ್ಮಹಾರಾಜರವರ ಆಜ್ಞಾಪ್ರಕಾರ ನಡೆಯತಕ್ಕದ್ದಾಗಿದೆ ಇದಕ್ಕೆ ಒಬ್ಬ ಡಿಸ್ಟ್ರಿಕ್ಟ ಕಮಿಷನರರವರು ಅವಶ್ಯಕ ಕಾಣುವದಿಲ್ಲ—ವೃ. ಚಿ.

ಮೈಸೂರಿನಲ್ಲಿ ಸ್ಥಾಪಿಸಲ್ಪಟ್ಟಿರುವ ಅರಮನೆ ಕಚೇರಿಯು ಸ್ಥಾಪಿಸಲ್ಪಟ್ಟು ಏನು, ಏಳು ತಿಂಗಳಿಂದ ಇಲ್ಲಿ ಸಿವಿಲ್ ಕೋರ್ಟುಗಳು ಈ ಕಟ್ಟಡದಲ್ಲಿಯೇ ಮಾಡುವದಲ್ಲದೆ ಈಗ ಬೆಂಗಳೂರಲ್ಲಿರತಕ್ಕ ಕಂಟ್ರೋಲರ ಆಫೀಸ್, ಎಜ್ಯುಕೇಷನ್ ಸೆಕ್ರೆಟರಿಯವರ ಆಫೀಸ್, ಪಬ್ಲಿಕ್‌ವರ್ಕ್ಸ್ ಡಿಪಾರ್ಟ್‌ಮೆಂಟ್ ಆಫೀಸ್, ದಿವಾನರ ಕಚೇರಿ ಇವುಗಳೆಲ್ಲಾ ಈ ಕಟ್ಟಡದಲ್ಲೇ ಆಗುವಂತೆ ಏರ್ಪಾಡಾಗಿರುವದು. ಉತ್ತರೋತ್ತರ ಚೀಫ್ ಕೋರ್ಟ್ ಇಲ್ಲಿಗೆ ಬರುವದೆಂದಬಾಗಿಯೂ ವರ್ತಮಾನವಿದೆ. ನಮ್ಮ ದಿವಾನರವರ ಏರ್ಪಾಡುಗಳಲ್ಲಿ ಆಕ್ಷೇಪಣೆಯನ್ನುಂಟುಮಾಡದೆ ಇರತಕ್ಕವುಗಳೇ ಅಪರೂಪ. ಈ ಊರಿನಲ್ಲಿ ಸಿವಿಲ್ ಕೋರ್ಟುಗಳು ಅಥವಾ ಕಚೇರಿಯಲ್ಲಿಯೂ ಕ್ರಿಮಿನಲ್‌ಕೋರ್ಟುಗಳು ಪೂರ್ವದಲ್ಲಿದ್ದ ಸ್ಥಳಗಳಲ್ಲಿಯೇ ಇರುವಹಾಗೆ ಮಾಡಿರತಕ್ಕ ಯೋಚನೆಯೂ, ಬುದ್ಧಿ ಕೌಶಲ್ಯವನ್ನು ತೋರಿಸುತದೆ. ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳೆಲ್ಲಾ ಒಂದೇ ಕಟ್ಟಡದಲ್ಲಿರುವಂತೆ ಏರ್ಪಾಡಾಗಿದ್ದರೆ ಅನೇಕ ಕಕ್ಷಿಗಾರರುಗಳಿಗೂ, ಪ್ಲೀಡರುಗಳಿಗೂ ಎಷ್ಟೋ ಸೌಲಭ್ಯ ಉಂಟಾಗುತಿತ್ತು. ಈಗಿನ ಏರ್ಪಾಡಿನ ಪ್ರಕಾರ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳಿಗೆ ದೂರವಾಗುವದರಿಂದ ಕೋರ್ಟ್ ಕೆಲಸಕ್ಕೂ ಜನಗಳಿಗೂ ಉಂಟಾಗತಕ್ಕ ಅಡಚಣೆಯು ಅನುಭವವೇದ್ಯವಾದದ್ದು. ಬೆಂಗಳೂರು ಕೋರ್ಟುಗಳನ್ನು ಇಲ್ಲಿಗೆ ತರುವದಕ್ಕಿಂತಲೂ ಇಲ್ಲಿರತಕ್ಕ ಎಲ್ಲಾ ಕೋರ್ಟುಗಳನ್ನೂ ಈ ಕಟ್ಟಡದಲ್ಲಿ ಮಾಡತಕ್ಕದ್ದು ಉತ್ತಮ. ಬೆಂಗಳೂರು ಕೋರ್ಟುಗಳನ್ನು ಇಲ್ಲಿಗೆ ತರುವದರಿಂದ ಮತ್ತೊಂದು ಬಾಧಕ ಉಂಟು. ಈ ಸಂಸ್ಥಾನಕ್ಕೆ ಈ ಪಟ್ಟಣವು ರಾಜಧಾನಿಯಾಗಿದ್ದಾಗ್ಯೂ ಬೆಂಗಳೂರು ಈ ಸಂಸ್ಥಾನದಲ್ಲಿ ದೊಡ್ಡ ಪಟ್ಟಣವಾಗಿಯೂ, ಸುಮಾರಾಗಿ ಮಧ್ಯಪ್ರದೇಶವಾಗಿಯೂ ಇರುವದು. ಸದರಿ ಪ್ರಾಂತ್ಯಗಳಿಂದ ಕಕ್ಷಿಗಾರರೇ ಮೊದಲಾದವರು ಬೆಂಗಳೂರಿಗೆ ಬರುವದಕ್ಕಿಂತಲೂ ಮೈಸೂರಿಗೆ ಬರುವದಕ್ಕೆ ವಿಶೇಷವಾಗಿ ಕಷ್ಟಪಡಬೇಕು. ಅದು ಹಾಗಿರಲಿ, ನಮ್ಮ ದಿವಾನರವರ ಉಪೇಕ್ಷೆಯಿಂದ ಕಂಟೋನ್ಮೆಂಟ್ ಪರಾಧೀನವಾಯಿತು. ದೇವಿರೆಡ್ಡಿ ಆ ಸ್ಥಿಯೂ ಹೀಗೆಯೇ ಆಯಿತು. ಬೆಂಗಳೂರು ಕಚೇರಿಗಳನ್ನು ಇಲ್ಲಿಗೆ ತರುವದರಿಂತ ಬೆಂಗಳೂರು ಅಠಾರಾಕಚೇರಿಯು ಅದಕ್ಕೆ ಸೇರಿದ ಕಬ್ಬನ್‌ಪಾರ್ಕ್ ಮೊದಲಾದವುಗಳು ಪರಾಧೀನವಾಗತಕ್ಕಕಾಲವು ಬರುವದು. ಕ್ರಮಕ್ರಮವಾಗಿ ಈಸಂಸ್ಥಾನಕ್ಕೆ ಶಿರೋಭೂಷಣ ಪ್ರಾಯವಾಗಿರತಕ್ಕ ಬೆಂಗಳೂರೇ ಕೈ ತಪ್ಪತಕ್ಕಕಾಲವು ಬರಬಹುದು. ಇಂತಾ ಸ್ಥಿತಿಗೆ ಸಹಕಾರಿಯಾದ ಕೆಲಸಗಳನ್ನು ಮಾಡತಕ್ಕ ಏರ್ಪಾಡು ರಾಜಾಭಿಮಾನಿಗಳಿಗೆ ವಿಷಾದ ಸ್ಥಾನವಾದದ್ದು ಇರುತಾರದು. ಆದದರಿಂದ ಬೆಂಗಳೂರು ಕಚೇರಿಗಳನ್ನು ಮೈಸೂರಿಗೆ ವರ್ಗಮಾಡುವದು ಎಂದಿಗೂ ಸಮ್ಮತವಾದದ್ದಲ್ಲ. ಈ ವಿಷಯದಲ್ಲಿ ಬೆಂಗಳೂರು ಪ್ರಜೆಗಳು ಈ ಸಂಸ್ಥಾನದ ಸರಹದ್ದಿನ ಪ್ರಾಂತದ ಪ್ರಜೆಗಳು ಎಲ್ಲರೂ ಸೇರಿ ಹೀಗೆ ಕಚೇರಿಗಳನ್ನು ವರ್ಗಾಯಿಸುವದರಿಂದ ಉಂಟಾಗುವ ತೊಂದರೆಗಳನ್ನು ಕುರಿತು ಶ್ರೀಮನ್ಮಹಾರಾಜರವರಿಗೂ, ಮತ್ತು ದಿವಾನರವರಿಗೂ ಬರೆದುಕೊಳ್ಳಬೇಕು. ಈವಿಷಯದಲ್ಲಿ ಔದಾಸೀನ್ಯಮಾಡಬಾರದು. ಇಂತಹ ವರ್ಗಾವಣೆಗೆ ತಾತ್ಪರ್ಯಮಾಡಿದ್ದರಿಂದ ದಿವಾನರವರು ಮನಃಪೂರ್ವಕವಾಗಿ ಅದನ್ನು ವರ್ಗಾಯಿಸದೆ ಈಗ ಬೆಂಗಳೂರೇ ಪರಾಧೀನವಾಗತಕ್ಕ ಏರ್ಪಾಡುಗಳಿಗೆ ಸಾಧಕವಾದ ಪ್ರಯತ್ನವನ್ನು ದೂರವಿಟ್ಟಿರುವುದಲ್ಲದೆ ಮಾಡುತಲಿದಾರೆ. ಇದು ಸರಿಯಾದದ್ದಲ್ಲವೆಂದು ಎಲ್ಲಾ ಪ್ರಾಂತ್ಯಗಳಿಂದಲೂ ಪ್ರಜೆಗಳು ಕ್ರಮವಾದ ವಿಜ್ಞಾಪನೆಗಳನ್ನುಮಾಡಿ ತಮ್ಮ ಅನುಕೂಲ್ಯಗಳ ವಿಷಯದಲ್ಲಿ ತಮ್ಮ ತಮ್ಮ ತಾತ್ಪರ್ಯವನ್ನು ತಿಳಿಸುವದು ಕರ್ತವ್ಯವಾದದ್ದು.—ವೃ. ಚಿ.

Bangalore — Printed and published at the Kalmath Press, No. 103, Srinivasa Mandiram Road Pettah—1890

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಶ್ರೀಮದ್ವಿವಿಧವೃತ್ತ್ಯುಪಗವಾರ್ಧ್ಯಕರ್ಣಾಟಕಪ್ರಕಾಶನವರಾಭಿಧಾಪ್ರತಿಕಾಸಾಹಿತೀಶೋಭಿತಾ॥ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ರಿಶಾಸುಪರಿಪೋಷಿತಾ...

Vol. XVII.] BANGALORE:—MONDAY, MAY 12 1890. [No. 19.

ಸಂಪುಟ ೧೭.] ಬೆಂಗಳೂರು:—ಸನ್ ೧೮೯೦ನೇ ಇಸವಿ ಮೇ ೧೨ ನೇ ತಾರೀಖ್ ಸೋಮವಾರ. [ಸಂಚಿಕೆ ೧೯.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಸಾಲ್ ೧ಕ್ಕೆ	ಸ್ಥಳದವರಿಗೆ ನಗದಾಗಿ	ಪರಸ್ಥಳದವರಿಗೆ ಪೋಸ್ಟೇಜ್ ಸಹ
ಮುಂಗಡಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ ದಸ್ತಾವಸ್ತು ಪಡೆದ ತಾರೀಖು ಮೊದಲು ಒಂದು ತಿಂಗಳೊಳಗಾಗಿ ಚಂದಾ ಕೊಡುವವರು ಮುಂಗಡ ಕೊಡುವವರೆಂದು ಭಾವಿಸಲ್ಪಡುವರು. ಈ ಪತ್ರಿಕೆಗೆ ಕಳುಹಿಸುವ ಕಾಗದಗಳು ಇಂಗ್ಲಿಷ್ ಭಾಗದ ವಿಷಯವಾದರೆ ಇಂಗ್ಲಿಷ್ ಎಡಿಟರಿಗೂ ಕನ್ನಡ ಭಾಗದ್ದಾದರೆ ಕನ್ನಡ ಎಡಿಟರಿಗೂ ಕಳುಹಿಸಬಹುದು. ಮೂರು ತಿಂಗಳಿಗಿಂತ ಕಡಮೆ ಚಂದಾ ತೆಗೆದುಕೊಳ್ಳಲ್ಪಡುವದಿಲ್ಲ.

ಪತ್ರಿಕೆಗಳು ರವಾನಿಸತಕ್ಕವರು ಮೊದಲು ಕಳುಹಿಸುವ ಚಂದಾ ಹಣವಲ್ಲದೆ ಬಾಕಿ ಚಂದಾ ನೋಟಿಸನ್ನು ರವಾನಿಸತಕ್ಕದ್ದು. ಚಿಲ್ಲರೆಯಾಗಿ ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದಾಣೆ ಡಿಸ್ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅರ್ಧಾಣೆ ಸ್ಟಾಂಪುಗಳನ್ನು ಮಾತ್ರ ಕಳುಹಿಸತಕ್ಕದ್ದು. ಡಿಸ್ಕೌಂಟಿಲ್ಲದೆ ಕಳುಹಿಸಲ್ಪಡುವ ಹಣಗಳಲ್ಲಿ ಅದು ಪಡೆಯಲ್ಪಡುವ ಮೊಬಲಗಿಗೆ ಲೆಕ್ಕಕ್ಕೆ ಜಮಾ ಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜು.

ಮೊದಲನೇ ಸಾರೆ ಪಂಕ್ತಿ ಒಂದಕ್ಕೆ ೦—೨—೦

ಎರಡನೇ ಸಾರೆ ಪಂಕ್ತಿ ಒಂದಕ್ಕೆ ೦—೧—೦

ಆಮೇಲೆ—ಎರಡಾವರ್ತಿಗಿಂತ ಹೆಚ್ಚಾಗಿ ಪ್ರಕಟಿಸಬೇಕಾದ ನೋಟೀಸ್ ವಗೈರಾಗಳಿಗೆ ಪಂಕ್ತಿ ಒಂದಕ್ಕೆ ಅರ್ಧಾಣೆ ಲೆಕ್ಕ ಪಡೆಯಲಾಗುವದು. ಈ ಪತ್ರಿಕೆಯಲ್ಲಿ ಪ್ರಕಟನೆಗಳನ್ನು ಪ್ರಕಟಿಸಬೇಕೆನ್ನುವವರು ಅವು ಎಷ್ಟಾವರ್ತಿ ಪ್ರಕಟವಾಗಬೇಕೆಂಬುದನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದರೆ ಅವರು ನಿಲ್ಲಿಸಬೇಕೆಂದು ತಿಳಿಸುವವರೆಗೆ ಅವು ಪ್ರಕಟಿಸಲ್ಪಡುವವು. ಹೀಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟವೋ ಅಷ್ಟಕ್ಕೆ ರಿವಾಜಿನ ಪ್ರಕಾರ ಹಣವನ್ನು ಕೊಡಬೇಕಾಗುವದು. ಪ್ರಕಟನೆಗಳನ್ನು ಕಳುಹಿಸುವವರು ಮುಂಗಡ ಹಣ ಕಳುಹಿಸತಕ್ಕದ್ದು. ಪ್ರಕಟನೆಗಳಿಗೆ ಈ ಪತ್ರಿಕೆಯ ಕಾರ್ಯದರ್ಶಿಗೆ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಪ್ರತ್ಯೇಕವಾಗಿ ರಿವಾಜು ಮಾಡಿಕೊಳ್ಳಬೇಕಾದವರು ಮಾನೇಜರನ್ನು ಕಾಣಬಹುದು.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs 5 0-0

ವೈದ್ಯಸಾರ ಸಂಗ್ರಹ.

ಈ ಗ್ರಂಥವು ಬೇಕಾದವರು ಮೊಬಲಗನ್ನು ಮುಂಗಡ ಕಳುಹಿಸತಕ್ಕದ್ದು. ವಿ. ಪಿ. ಮೂಲಕ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ಕಾಗದಗಳಿಗೆ ಸೇರಿ ಕೊಡಲ್ಪಡಲಾರದು.

ಇದರ ಕ್ರಯ—ಪೋಸ್ಟೇಜ್ ಮತ್ತು ಇಂಡಿ ಪೋಸ್ಟ್ ಡಿಟೈಲ್ ಪ್ರತಿ ಒಂದಕ್ಕೆ ರೂ ೫—೦—೦

ಬಿ. ಬಿ. ಪೆಂಕಟಾಚಾರ್,

ಆರ್ಕಾಟ್ ಶ್ರೀನಿವಾಸ ಸ್ವಾಮಿ ದೇವಸ್ಥಾನದ ಬೀದಿ, 41ನೇ ನಂ. ಮನೆ.

ADVERTISEMENTS.

ನೋಟಿಸ್

ಇವರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

	ಪೋಸ್ಟ್ ಸಹಿತ ರೂ. ಆ. ಪೈ
ಸಟೀಕಾ ವೈದ್ಯಸಾರ ಸಂಗ್ರಹ	೫ ೦ ೦
,, ಶಿವಗೀತೆ ...	೧ ೧ ೦
,, ಶಿವಾನಂದಲಹರಿ ...	೦ ೪ ೦
,, ಕಾಲಾಮೃತ ...	೧ ೨ ೦
,, ಮುಹೂರ್ತದರ್ಪಣ ...	೦ ೧೨ ೦
,, ಬಾಲರಾಮಾಯಣ ...	೦ ೪ ೦
,, ಗೋಪಿಕಾ ಗೀತೆ ...	೦ ೧ ೬
,, ಚಾಣಕ್ಯನೀತಿ (ಸುಭಾಷಿತ)	೦ ೬ ೦
ವಿಷ್ಣುಸಹಸ್ರನಾಮ ಪಠ್ಯರಿ ...	೦ ೫ ೦
ಲಕ್ಷ್ಮೀಸಹಸ್ರನಾಮ ...	೦ ೩ ೦
ಕೃಷ್ಣಕರ್ಣಾಮೃತ ...	೦ ೨ ೬
ಶ್ರೀಕಂಠ ಅಮರ ಮೂಲ ...	೦ ೨ ೬
೧ ಕಾಂಡ ...	೦ ೦ ೦

ಕನ್ನಡ ಗ್ರಂಥಗಳು.

ಶುಕಸಪ್ತತಿ ಅಸ್ಸಲ್ ಪ್ರತಿ ...	೩ ೦ ೦
ಟಿಪ್ಪಣಿ ವಿಮರ್ಶೆ ...	೧ ೪ ೦
ಕೃಷ್ಣರಾಜೇಂದ್ರ ವಿಜಯ ..	೦ ೪ ೦
ಪಂಚತಂತ್ರ ಪಾಲಕನೀತಿ ...	೦ ೪ ೦
ಹನುಮದ್ವಿಲಾಸ ...	೦ ೪ ೦
ಕಾಳೀಯಮರ್ದನ ...	೦ ೨ ೬
ಸುವರ್ಣಪರಿಣಯ ...	೦ ೨ ೬
ಸತೀಶಿರೋಮಣಿ ...	೦ ೩ ೦
ಸುಧಾಮಚರಿತ್ರೆ ...	೦ ೨ ೦
ಮೈರಾವಣ ಚರಿತ್ರೆ ...	೦ ೨ ೦
ಬಾಲಗ್ರಹ ಚಿಕಿತ್ಸೆ ...	೦ ೨ ೬
ಮಹಮ್ಮದೀಯ ಲಾ ...	೧ ೦ ೦
ಬ್ರಾಹ್ಮಣ ವಿವಾಹ ...	೦ ೧೨ ೦

ನೋಟಿಸ್.

ಇದರಿಂದ ನಮ್ಮ ಚಂದಾದಾರರಿಗೂ ಇತರರಿಗೂ ಗೊತ್ತುಪಡಿಸುವದೇನೆಂದರೆ:—

ಸನ್ ೧೮೮೯ ನೇ ಇಸವಿ ಡಿಸೆಂಬರ್ ಆಖೈರಿನವರೆಗೆ ಚಂದಾ ಬಾಕಿಯನ್ನು ಪೂರಾ ಫೈಸಲ್ ಮಾಡತಕ್ಕ ಚಂದಾದಾರರ ಹೆಸರುಗಳನ್ನು ಮಾತ್ರ ನಾವು ರಿಜಿಸ್ಟರ್ ದಾಖಲ್ ಮಾಡಿಕೊಂಡು ಈಚೆಗೆ ಪತ್ರಿಕೆ ಕಳುಹಿಸುತ್ತೇವೆ. ಅವರ ಪೈಕಿ ಯಾರಿಗಾದರು ಪತ್ರಿಕೆಯ ಅಪೇಕ್ಷೆ ಇಲ್ಲದಿದ್ದರೆ ಅಂತವರು ಕೂಡಲೇ ನಮ್ಮ ಅಭಿಪ್ರಾಯವನ್ನು ಮೂರು ಕಾಸಿನ ಕಾರ್ಡಿನಲ್ಲಿ ನಮಗೆ ತಿಳಿಸಬಹುದು. ಪತ್ರಿಕೆಯ ಅವಶ್ಯಕತೆ ಇರತಕ್ಕವರು ಸಾಧ್ಯವಾದಷ್ಟು ಜಲ್ದಿ ಚಂದಾ ಮೊಬಲಗನ್ನು ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಬೆಂಗಳೂರು, ತಾ॥ ೫ನೇ ಜನವರಿ ೧೮೯೦. } ಟಿ. ಸಿ. ಶ್ರೀನಿವಾಸಾಚಾರ್, ಪ್ರೊಪ್ರೈಟರ್, ಕರ್ಣಾಟಕ ಪ್ರಕಾಶಿಕಾ.

ಇಷ್ತಿಹಾರ್‌ನಾಮೆ.

ಬೆಂಗಳೂರು, ತಾ॥ ೧ನೇ ಮೇ ೧೮೯೦.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ,—ಬೆಂಗಳೂರು ದೊಡ್ಡಪೇಟೆ ಗುಬ್ಬಿಗಳ ಮತ್ತು ಪೂರ್ವದಲ್ಲಿ ಅಂಚೇಕಚೇರಿ ಇರುತಲಿದ್ದ ಕಟ್ಟಡಕ್ಕೆ ಸೇರಿರುವ ಗಣೇಶನ ಗುಡಿಯಭಾಗ ವಿನಾ ಮಿಕ್ಕ ಭಾಗವೆಲ್ಲವು ಇವರಡಿ ನಮೂದಿಸಿರುವ ಪ್ರಕಾರ ಸನ್ ೧೮೯೦ನೇ ಇಸವಿ ಜೂನ್ ೭ನೇ ತಾರೀಖಿನಲ್ಲಿ ಸದರೀ ಕಟ್ಟಡವಿರುವ ಸ್ಥಳದೊಳು ಈ ಡಿಸ್ಟ್ರಿಕ್ಟ್ ಟ್ರೆಜರಿ ಆಫಿಸರರ ಸಮಕ್ಷಮದೊಳು ಬಹಿರಂಗವಾದ ಹರಾಜ್‌ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನ ದಿನ ಬೆಳಗ್ಗೆ ೧೧ ಘಂಟೆಗೆ ಹರಾಜ್ ಶುರುವಾಗಿ ಜಾಸ್ತಿದರಖಾಸ್ತುದಾರರಿಗೆ ಹರಾಜ್ ನಿಲ್ಲಿಸಲ್ಪಡುವದು.

೧. ಕ್ರಯದಾರನು ತನ್ನ ಸವಾಲ್ ಖೈದಾಗಿ ಹರಾಜ್ ನಿಂತಕೂಡಲೇ ಕ್ರಯದ ಮೊಬಲಗು ಪೈಕಿ ಶೇಕಡಾ ೨೫ ರೂಪಾಯಿಗಳಂತೆ ಡಿಪಾಜಿಟಿಯಾಗಿ ರೊಖ್ಖ ಇಡತಕ್ಕದ್ದು. ಕ್ರಯದ ಮೊಬಲಗು ಪೈಕಿ ಬಾಕೀ ಮೊಬಲಗನ್ನು ಹರಾಜ್ ತಾರೀಖ್ ಲಾಗಾಯತು ೧೫ ದಿನಗಳೊಳಗಾಗಿ ಪಾವತಿ ಮಾಡದೇಯಿದ್ದರೆ ಅವನಿಂದಿಡಲ್ಪಟ್ಟಿರುವ ಠೇವಣಿ ಮೊಬಲಗು ದಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

೨. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆಹೋದರೆ ಅಥವಾ ಕ್ರಯದ ಬಾಕೀ ಮೊಬಲಗನ್ನು ಪಾವತಿ ಮಾಡದಿದ್ದರೆ ಸದರೀ ಕಟ್ಟಡವನ್ನು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಿನಲ್ಲಿ ಮರಳಿ ಹರಾಜ್ ಹಾಕಲ್ಪಡುವದು.

೩. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಖ್ ದರಖಾಸ್ತು ಮಾಡುತ್ತಾರೆಯೋ ಆ ಅಂಶವನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜುಮಾಡಲ್ಪಟ್ಟ ಬರವಣಿಗೆಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿಸಲ್ಪಡುವದು.

೪. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಕಟ್ಟಡದ ಹರಾಜ್ ಖಾಯಮಾದದ್ದಾಗಿರುವದಿಲ್ಲವು.

೫. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನು ದಿವಾನರವರು ಖಾಯಂಮಾಡಿದ ಕೂಡಲೇ ಕಟ್ಟಡವು ಆತನ ಸುಪರ್ದ್ ಮಾಡಲ್ಪಟ್ಟು ಡೆಪ್ಯುಟೀ ಕಮಿಷನರವರಿಂದ ರುಜು ಮೊಹರು ಮಾಡೋಣಾದ ಒಂದು ಸರ್ಟಿಫಿಕೇಟು ಆತನಿಗೆ ಕೊಡಲ್ಪಡುವದು.

೬. ಸದರೀ ಕಟ್ಟಡದ ನಮೂನೆಯು ಬೆಂಗಳೂರು ತಾಲ್ಲೂಕ್ ಕಚ್ಚೇರಿಯಲ್ಲಿ ಅವಲೋಕಿಸುವದಕ್ಕೆ ದೊರೆಯುವದು.

ಕಟ್ಟಡದ ತಪ್ಸೀಲುಗಳು.	ಮಿನ್ನೋಣ್, ಸಲಗೆಗಳು.		ಚೆಕ್ಕುಬಂದಿಗಳು.
ಗಣೇಶನ ಗುಡಿಗೆ ಎದುರಾಗಿದ್ದ ಕಟ್ಟಡ ದೊಡ್ಡಭಾಗವು.	ಮುಮಾರ್	೩೮.	ಉತ್ತರಕ್ಕೆ—ತಮ್ಮ ಲಿಂಗಣ್ಣನವರ ಅಂಗಡಿ ಮತ್ತು ಗರುಡಾಚಾರ್ಯರ ಮನೆ. ಪೂರ್ವಕ್ಕೆ—ರಾಜಬೀದಿ. ದಕ್ಷಿಣಕ್ಕೆ—ಗಣೇಶನ ಗುಡಿ. ಪಶ್ಚಿಮಕ್ಕೆ—ಸ್ಟ್ರೀಟ್ ವೆಂಕಟರಾಮಯ್ಯ ವಗೈರೆ ಮತ್ತು ಕಲ್ಲಪ್ಪನವರ ಮನೆಗಳು.
ಬಾಗಿಲ ಪಡಸಾಲೆ ...	,,	೨೦.	
ಸಣ್ಣ ಬಾಗಿಲ ಪಡಸಾಲೆಯಲ್ಲಿರತಕ್ಕ ಮಣ್ಣು ಮಾಳಿಗೆಯುಳ್ಳ ಕಟ್ಟಡವು.	,,	೪.	
ಗಣೇಶನ ಗುಡಿಗೆ ಬಲಭಾಗದಲ್ಲಿರುವ ಕಟ್ಟಡದ ಸಣ್ಣಭಾಗವು.	,,	೨೦.	ಉತ್ತರಕ್ಕೆ—ಗಣೇಶನ ಗುಡಿ. ಪೂರ್ವಕ್ಕೆ—ರಾಜಬೀದಿ. ದಕ್ಷಿಣಕ್ಕೆ—ಕೋಟ ಗಲ್ಲಿ. ಪಶ್ಚಿಮಕ್ಕೆ—ಸ್ಟ್ರೀಟ್ ವೆಂಕಟರಾಮಯ್ಯ ವಗೈರೆ ಮನೆ.

G. RAGHUNATHA ROW.
For Deputy Commissioner,
Bangalore District.

Bangalore City Municipality.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ನೋಟೀಸ್.

ನಂಬರ್ 79.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ,—

ಬೆಂಗಳೂರು ಷಹರ್ ಮ್ಯುನಿಸಿಪಲ್ ಸರಹದ್ದಿನೊಳಗೆ ವಾರಸುದಾರರಿಲ್ಲದೆ ತಿರುಗಾಡುತಲಿರುವ ನಾಯಿಗಳು ಬರುವ ತಿಂಗಳ ಗುರುತೀ ತಾರೀಖಿನೊಳು ೧೮೯೦ನೇ ಇಸವಿ ಜೂನ್ ತಿಂಗಳ ೧೫ನೇ ತಾರೀಖಿನ ವರೆಗೆ ಕೊಲ್ಲಲ್ಪಡುವವು. ತಮ್ಮ ತಮ್ಮ ನಾಯಿಗಳನ್ನು ಕಾಪಾಡಿಕೊಳ್ಳಬೇಕೆಂಬ ಇಚ್ಛೆಯುಳ್ಳವರೆಲ್ಲರು ಅವುಗಳನ್ನು ಕಟ್ಟಿ ಇಟ್ಟುಕೊಳ್ಳಬೇಕು, ಅಥವಾ ಬೀದಿಗಳಲ್ಲಿ ತಿರುಗಾಡುವದಕ್ಕೆ ಬಿಟ್ಟರೆ ಅವುಗಳಿಗೆ ಕೊರಳುಪಟ್ಟಿ ಹಾಕಬೇಕೆಂದು ಅಪೇಕ್ಷಿಸಲ್ಪಟ್ಟಿರುತ್ತಾರೆ.

ಸಿಟಿ ಮುನಿಸಿಪಲ್ ಕಮಿಷನ್ ಆಫೀಸ್, ಬೆಂಗಳೂರು, ತಾ॥ ೧೦ನೇ ಏಪ್ರಿಲ್ ೧೮೯೦. } A S RAGAVACHARLU,
Vice-President,
City Muni. Commission.

ನೋಟೀಸ್.

ಮನೆಗಳಲ್ಲಿ ಗಿಲಿಟ್ ಮಾಡುವದಕ್ಕೆ ಅನುಕೂಲವಾದ ಬೆಳ್ಳಿ ದ್ರಾವಕವು.

ಈ ಬೆಳ್ಳೀ ದ್ರಾವಕವು ನೈಜವಾದ ಬೆಳ್ಳಿ ತಟ್ಟೆಗಳ ಮೇಲೂ, ತಾಮ್ರ, ಹಿತ್ತಾಳೆ ವಗೈರೆ ವಿಶಿಷ್ಟ ಪದಾರ್ಥಗಳ ಮೇಲೂ ಹಚ್ಚಿ ಉಜ್ಜುವದರ ಮೂಲಕ ಗಿಲಿಟ್ ಮಾಡುವಿಕ್ಕೆ ಬಹಳ ಉಪಯುಕ್ತವಾದದ್ದಾಗಿರುತಿದೆ. ಇದಲ್ಲದೆ ಸದರೀ ದ್ರಾವಕವು ಚಿನ್ನ ಮತ್ತು ಬೆಳ್ಳಿ ಒಡವೆಗಳ ಮಸ್ಸು ತೆಗೆಯಲಿಕ್ಕೂ ಅವುಗಳಿಗೆ ಮೆರುಗು ಕೊಡಲಿಕ್ಕೂ ಸಹ ಪ್ರಯೋಜನಕರವಾದದ್ದು. ಇದರಿಂದ ಇತರವಿಧದಿಂ ಲಭಿಸದಂಥಾ ಕಾಂತಿ ಯುಂಟಾಗುವದು. ಕವಿಸ್ತು ಬಣ್ಣವುಳ್ಳ ಚಿನ್ನಕ್ಕೆ ಉತ್ಕೃಷ್ಟವಾದ ಮೆರುಗು ಪದಾರ್ಥಗಳಿಂದುಂಟಾಗದಂಥಾ ಕಾಂತಿಯನ್ನು ಉಂಟುಮಾಡುವದು. ಶುದ್ಧವಾದ ಬೆಳ್ಳಿ ಮೊದಲೇ ಸದರೀ ದ್ರಾವಕವು ತಯಾರ್ಮಾಡಲ್ಪಟ್ಟದ್ದಾಗಿರುತಿದೆಂಬದಕ್ಕೆ ಬೇಕಾದ ಭರವಸೆ ಕೊಡಲ್ಪಡುವದು. ಇದು ಗಿಲಿಟ್ ಮಾಡುವದಕ್ಕಿಂತ ಬಹಳ ಅಗ್ಗವಾಗಿರುವದು. ಕೊಡಲೇ ಒಂದು ಸೀಸೆಯನ್ನು ತರಿಸಿಕೊಡು ಅದರಿಂದ ಯಾವ ಕೆಡಕೂ ಉಂಟಾಗದಿರುವದನ್ನು ಅಜಮಾಯಿಷೀ ಮಾಡಿ ನೋಡಬಹುದು.

ಇದರ ಕ್ರಯ ಸೀಸೆ ೧ಕ್ಕೆ ೨—೮—೦

ಚಿನ್ನದ ದ್ರಾವಕವು.

ಇದು ಬೆಳ್ಳಿ, ಹಿತ್ತಾಳೆ, ತಾಮ್ರ ವಗೈರೆ ಪದಾರ್ಥಗಳನ್ನು ಗಿಲ್ಟ ಮಾಡಲಿಕ್ಕೆ ಬಹಳ ಉಪಯುಕ್ತವಾಗಿರುವದಲ್ಲದೆ ಶುದ್ಧವಾದ ಭಂಗಾರದಿಂದ ತಯಾರಾದದ್ದಾಗಿರುತಿದೆ. ಬೆಳ್ಳಿ ಆಭರಣಗಳನ್ನು ಗಿಲ್ಟ ಮಾಡಲಿಕ್ಕೆ ಈ ದ್ರಾವಕವು ಕೇವಲ ಪ್ರಯೋಜನಕರವಾಗಿರುವದು.

ಇದರ ಕ್ರಯ ಸೀಸೆ ೧ಕ್ಕೆ ೩—೪—೦

ಬೇಕಾದವರು ಅಜಮೀರ್‌ನಲ್ಲಿರುವ ಬೆಳ್ಳೀ ಕಾರ್ಖಾನೆಯ ಮ್ಯಾನೇಜರಿಗೆ ಬರೆದು ತರಿಸಿಕೊಳ್ಳಬಹುದು.

ವಿನೋಚಕ ಸಮಾಚಾರ.

ಮೈನ್ ಜುಲಾಬಿಗೆ ಗಿಡಮೂಲಿಕೆಯಿಂದ ಮಾಡಿರುವ ಚಾತಕಟ್ಟಿಯವರ ಔಷಧ. ಈ ಔಷಧಿಯನ್ನು 12 ವರುಷಗಳ ಪರಿಯಂತ ಅಜಮಾಯಿಸಿದೆ. ಇದನ್ನು ತೆಗೆದುಕೊಂಡವರಿಗೆಲ್ಲ ಗುಣವಾಗಿರುತ್ತೆ. ಈ ಔಷಧಿ ಪ್ರಯೋಗಿಸಿದ ನಂತರ ಜಲಬಾಧೆ ಯಾಗುವದು. ಅತಿ ಶೀಘ್ರದಲ್ಲಿಯೇ ಕ್ರಮವಾಗಿ ಭೇದಿನಿಲ್ಲುವದು. ಈ ಔಷಧಿಯು 5 ವರುಷಗಳ ಪರಿಯಂತ ಕೆಡದೆ ಚೆನ್ನಾಗಿರುವದು. 48 ಮಾತ್ರೆಗಳುಳ್ಳ ಒಂದು ಡಬ್ಬಿಗೆ ಕ್ರಯ 12 ಆಣೆ ಮಾತ್ರ ತೆಗೆದುಕೊಳ್ಳುವ ಕ್ರಮವನ್ನು ತಿಳಿಸುವ ಕಾಗದ ಪ್ರತಿ ಡಬ್ಬಿಯಲ್ಲಿಯೂ ಇರುವದು. ಈ ಕೆಳಗೆ ನಮೂದಿಸಿರುವ ಮೇಲ್ವಿಳಾಸಕ್ಕೆ ಬರೆದುಕೊಂಡಲ್ಲಿ ಔಷಧಿ ದೊರೆಯುವದು.

ಮ್ಯಾನೇಜರ್—ಚಾರಿಟಬಲ್ ಡಿಸ್ಪೆನ್ಸರಿ, ಕಲ್ಕೋಟಿ
ಮೆಸರ್ಸ್ ಪ್ಯಾಕ್‌ಸೊನಾಶ್ಲ ಕಂಪೆನಿ, ಕಲ್ಕೋಟಿ ತಲಚೆರಿ
„ ಬಾಯಿಸ್ ಕಂಪೆನಿ „
„ ಶಿಪಿ ಕಂಪೆನಿ, ಕೊಚ್ಚಿನ್, ಟ್ರಾವೆಂಕೂರ್.

ದಕ್ಷಿಣಮರಾಠಾ ರೈಲ್ವೇ ಕಂಪನಿ.
ನೋಟೀಸ್.

ಹೊಸಗಾಡಿಗಳು ತಯಾರ ಮಾಡುವದಕ್ಕೂ ಗಾಡಿಗಳ ರಿಪೇರಿಗೂ ಟೆಂಡರ ದರಖಾಸ್ತುದಾರರು ಬೇಕಾಗಿದೆ. ಬಡಗಿಯವರು ಸಹ ಬೇಕು. ಹುಬ್ಬಳ್ಳಿಯಲ್ಲಿರುವ ವರ್ಕಷಾಪ ಡಿವಿಜನ ಅಸಿಸ್ಟೆಂಟ ಲೋಕೋ ಮೋಟಿವ್ ಸೂಪರಿಂಟಂಡೆಂಟರಿಗೆ ಬರೆದುಕೊಳ್ಳಬೇಕು.

ಹುಬ್ಬಳ್ಳಿ, 7—9—90. { C. P. WHITCOMBE, *Loco. & Carr. Supt*

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASHKA.

MONDAY, MAY 12, 1890.

೧೮೯೦ನೇ ಮೇ ತಾ|| ೧೨ ನೇ ಸೋಮವಾರ.

POLICE ATROCITIES.

ರಾಜ ಧರ್ಮಗಳಲ್ಲಿಲ್ಲಾ ದುಷ್ಟ ನಿಗ್ರಹ ಶಿಷ್ಟ ಪರಿಪಾಲನವು ಕೇವಲ ಪ್ರಾಧಾನ್ಯವಾದದ್ದೆಂದು ರಾಜನೀತಿ ಪ್ರತಿಪಾದ್ಯಗಳಾದ ಗ್ರಂಥಗಳಲ್ಲೆಲ್ಲ ಸ್ಪಷ್ಟವಾಗಿ ತಿಳಿಸಲ್ಪಟ್ಟಿರುತಿದೆ. ಹೀಗಿದ್ದಾಗ್ಯೂ ಈಗ ಬ್ರಿಟಿಷರವರ ಪ್ರಭುತ್ವದಲ್ಲಿ ಸದರೀ ಧರ್ಮವು ವೈಯರ್ಥವನ್ನೈದಿ ಅನ್ಯಥಾ ಗ್ರಹಣವನ್ನುಂಟುಮಾಡಿರುವಂತೆ ತೋರುತಿದೆ. ಜನಗಳಿಗೆ ಪ್ರಾಣ, ಮಾನ, ಧನ, ಈ ಮೂರೂ ಸಮಾನವಾಗಿರುವವು. ಇವುಗಳ ಪೈಕಿ ಯಾವದಕ್ಕಾದರೂ ಅನ್ಯರಿಂದ ಒಂದು ಉಪಾಧಿಯುಂಟಾದರೆ ಮಿಕ್ಕ ಯೆರಡೂ ಅದರೊಡನೆ ನಷ್ಟವಾಗುವವು. ಧನಹಾನಿಯಾದರೂ ಕದಾಚಿತ್ ಸಹ್ಯವಾಗಿರುವದು. ಪರಂತು ಮಾನಹಾನಿಯೆಂಬದು ಪ್ರಾಣಹಾನಿ ತುಲ್ಯವಾದದರಿಂದ ಅದಕ್ಕೆ ಉಪಹತಿಯುಂಟುಮಾಡಲ್ಪಟ್ಟರೆ ಅದನ್ನನುಭವಿಸತಕ್ಕವರು ಜೀವಚ್ಛವದೋಪಾದಿಯಲ್ಲಿದ್ದು ಶೀಘ್ರದಲ್ಲೇ ತಮ್ಮ ಆಯುಸ್ಸನ್ನು ಕ್ಷಪೈಸಿಕೊಳ್ಳುವರು. ಆದುದರಿಂದಲೇ ಪ್ರಜೆಗಳ ಪ್ರಾಣಮಾನ ಧನಗಳ ರಕ್ಷಣೆಯು ಪಾಲಕನಾದ ಅರಸನಿಗೆ ಸಂಬಂಧಿಸಿದ್ದಾಗಿರುತಿದೆ. ಇಂಥಾ ಮಹತ್ಕಾರ್ಯಕ್ಕಾಗಿಯೇ ಅರಸನು ಪ್ರಜಾಪಾಲಕರೆಂದರೆ, ಪೋಲೀಸ್‌ನವರನ್ನು ಬೇಕಾದಮಟ್ಟಿಗೆ ಕೆಲಸದಲ್ಲಿ ನೌಕರರನ್ನಿಡುವದು. ಇವರ ಕಾರ್ಯವು ಯಾವಾಗಲೂ ದುಷ್ಟರಿಂದ ಸಜ್ಜನರಿಗೊಂದು ಬಾಧೆಯುಂಟಾಗದಿರುವಂತೆ ನೋಡಿಕೊಂಡು ಒಳದೇಶದ ಬಂದೋಬಸ್ತಿಯಲ್ಲಿ ಜಾಗರೂಕರಾಗಿರುತ್ತ ಜನರ ಪ್ರಾಣಮಾನ ಧನಗಳನ್ನನವರತ ರಕ್ಷಿಸತಕ್ಕದ್ದಾಗಿರುತಿದೆ. ಇಂಥಾ ಸಕಲಜನ ಯೋಗಕ್ಷೇಮಾಭಿವೃದ್ಧಿಗೆ ಕಾರಣಭೂತರಾದ ಸದರೀ ಪೋಲೀಸ್‌ನವರು ಗುಣ ಶೀಲ ಪ್ರಾಮಾಣಿಕತೆ ಮೊದಲಾದವುಗಳಿಂದ ಯೋಗ್ಯರೆನಿಸಿ ಜನಗಳಿಗೆ ಹಿತಕರರಾಗಿರಬೇಕಾದದ್ದು ಅವಶ್ಯಕವೆಂಬದನ್ನು ಯಾರೂ ನಿಷೇಧಿಸಲಾರರಷ್ಟೆ. ಇಂಥಾ ಪೋಲೀಸ್‌ನವರು ಯಾವಾಗಲೂ ಎತ್ತಿನೋಡಿದಾಗ್ಯೂ ಪೋಲಿಗಳಾಗಿರುವ, ಅಕೃತ್ಯಗಳಿಗೆಲ್ಲ ಅಂಥಾ ಪ್ರೇರಕರಾಗಿಯೂ, ಅಪರಾಧಗಳಿಗೆ ಮುಖ್ಯಕರ್ತರಾಗಿಯೂ, ಅಸತ್ಯಗಳಿಗೆ ಅಭಿಮಾನಿಗಳಾಗಿಯೂ, ಪರದ್ರೋಹ ಪರಹಿಂಸಾದಿ ದುಷ್ಕೃತ್ಯಗಳಿಗೆಲ್ಲ ಸಹಾಯಕರಾಗಿಯೂ ಇರುತ್ತಾರೆ. ಪಿಶಾಚನಂತೆ ಇವರು ಅಘಟನ ಘಟನಾ ಸಾಮರ್ಥ್ಯವುಳ್ಳವರು. ಇವರು ಪಾಪಕ್ಕಾಗಿ ಎಳಸುವವರಲ್ಲವು ಇಂತವರೊಂದ ಸಂದರ್ಭದಲ್ಲಿ ಮಾಡತಕ್ಕ ಕ್ರೂರಕೃತ್ಯಗಳನ್ನೂ ನುಡಿಯತಕ್ಕ ಅನೃತಗಳನ್ನೂ ಚಿಂತಿಸಿ ನೋಡಿದರೆ, ಮೈನಸ್ವತನಿವರಿಗಾಗಿ ಪ್ರತ್ಯೇಕ ಒಂದು ಘೋರ ನರಕವು ಸೃಜಿಸಲ್ಪಡಬೇಕಾದದ್ದು ಅವಶ್ಯಕವೆಂದು ಭಾವಿಸುವೆವು. ನಾವು ಕೇವಲ ಮತ್ಸರದಿಂ ಅಂಧರಾಗಿ ಸದರೀ ಜನಗಳನ್ನು ದೂಷಿಸಲಿಕ್ಕೆ ಪ್ರಯತ್ನ ಪಟ್ಟವರಲ್ಲವು. ಮರ್ಯಾದರಾದ ಸದರೀ ಜನರ ವರ್ತನೆಗಳನ್ನು ನೋಡಿ ಕೇಳಿದವರೆಲ್ಲರಿಗೂ ಬಹಳ ಸಂಕಟಪಡದೆ ಇರಲಾರರು. ತಾರತಮ್ಯ ವಿಹೀನರಾದ ಸದರೀ ಜನರ ಕುಲಕ್ಷಯಕ್ಕೆ ಅವರ ಕೃತ್ಯಗಳೇ ಸಹಕಾರಿಗಳಾಗುವವೆಂಬದಕ್ಕೆ ಇದರಡಿ ಕಾಣುವ ಅಂಶವೇ ಸಾಕಾದ ನಿದರ್ಶನವಾಗಿರುತಿದೆ ಏನೆಂದರೆ,—

ಅಮೃತಸರದಲ್ಲಿರುವ ಪೋಲೀಸ್‌ನವರು ಇದುವರೆವಿಗೆ ಸಜಾ ಅನುಭವಿಸಿದವರನ್ನೆಲ್ಲ ಬಹಿರಂಗವಾದ ಪ್ರದೇಶದಲ್ಲಿ ನಿರ್ವಸನರಾಗಿ, ಅಂದರೆ ಬೆತ್ತಲೆಯಾಗಿ ನಿಲ್ಲಿಸಿ ಚಹರೆ ಪಟ್ಟಿಯು ತಯಾರ್ ಮಾಡುತಲಿದ್ದಾರೆ. ಎಷ್ಟೋಕಾಲದ ಹಿಂದೆ ಯಾವ ವಿಧ ತಕ್ಸೀರಿಗಾಗಿ ಎಷ್ಟರ ಅಲ್ಪ ಸಜಾವನ್ನು ಅನುಭವಿಸಿದ್ದಾಗ್ಯೂ ಅಂತವರನ್ನೆಲ್ಲ ಪೋಲೀಸ್‌ನವರು ಏಕಸರ್ವೇಣ ಹಿಡಿದು ಬಹಿರಂಗವಾದ ಸ್ಥಳದಲ್ಲಿ ಮೇಲೆ ಕಂಡಂತೆ ನಿಲ್ಲಿಸಿ ಮಾನಭಂಗಪಡಿಸುತಲಿದ್ದಾರೆ. ಮಾನಿತನಾದ ಒಬ್ಬ ದೊಡ್ಡ ವರ್ತಕನು ಯಾವದೋ ಒಂದು ಅಲ್ಪ ತಕ್ಸೀರಿಗಾಗಿ ಒಬ್ಬ ಆನರರಿ ಮ್ಯಾಜಿಸ್ಟ್ರೇಟರಿಂದ ಜುರ್ಮಾನೆ ಮೂಲಕ ದಂಡಿಸಲ್ಪಡಲು ಆತನು ಅಪೀಲ ಮಾಡಿ ಅದು ರದ್ದು ಮಾಡಿಸಿ ಕೊಂಡನು. ಆದಾಗ್ಯೂ ಆತನನ್ನು ಸಹ ಮಾನಹೀನರಾದ ಪೋಲೀಸ್‌ನವರು ಸೆಳೆದುಕೊಂಡುಬಂದು ನಡುಬೀದಿಯಲ್ಲಿ ಬೆತ್ತಲೆಯಾಗಿ ನಿಲ್ಲಿಸಿ ಚಹರೆಗಳನ್ನು ಅಜಮಾಯಿಷೀ ಮಾಡಿದರು. ಮತ್ತೊಂದು ಸ್ಥಳದಲ್ಲಿ ೧೪ ವರುಷಗಳ ವಯಸ್ಸುಳ್ಳ ಹುಡುಗಿಯೊಬ್ಬಳು ತನ್ನ ಮಾವನ ಮನೆಯಲ್ಲಿದ್ದಾಗ ಒಂದು ಅಲ್ಪ ತಪ್ಪಿತಕ್ಕಾಗಿ ದಂಡಿಸಲ್ಪಟ್ಟಳು. ಅವಳು ಖೈದ ಸಜಾವನ್ನನುಭವಿಸಿ ಬಿಡುಗಡೆಯಾಗಿ ಬಂದ ಬಳಿಕ ತನ್ನ ತೌರು ಮನೆಯಲ್ಲಿ ಗೂಢವಾಗಿ ಕಾಲಹರಣ ಮಾಡುತಲಿದ್ದಳು. ಅವಳನ್ನು ಪೋಲೀಸ್‌ನವರು ಹ್ಯಾಗೋ ಪತ್ತೇ ಮಾಡಿ, ಅಜಮಾಯಿಷೀ ಮಾಡಬೇಕು, ಕಳುಹಿಸಬೇಕೆಂಬದಾಗಿ ಬಲಾತ್ಕರಿಸಿದರು. ಅದಕ್ಕೆ ಅವಳ ತಾಯಿ ತಂದೆಗಳು ಬಹಳವಾಗಿ ಪ್ರಾರ್ಥಿಸಿ ತಮ್ಮ ಮಗಳ ಮಾನವು ಕಳೆಯ ಕೂಡದೆಂದು ಕೇಳಿಕೊಂಡರು. ಒಂದು ಮೊಕದ್ದಮೆಯಲ್ಲಿ ಸ್ತ್ರೀಯು ಅಪರಾಧಿಯಾಗಿ ಸಿಕ್ಕಿದರೆ ಆಗ ಸ್ವಭಾವತಃ ಕ್ರೂರರಾದ ಪೋಲೀಸ್‌ನವರ ಕ್ರೌರ್ಯವು ಮತ್ತಷ್ಟು ವೃದ್ಧಿಯಾಗುವದು ಸಹಜವಷ್ಟೆ. ಮೇಲೆ ಕಂಡ ತಾಯಿ ತಂದೆಗಳ ಪ್ರಾರ್ಥನೆಯು ಸ್ವಲ್ಪವೂ ಸಫಲ್ಯವಾಗದೆ ಆ ಹುಡುಗಿಯನ್ನು ಬಲಾತ್ಕಾರದಿಂದೆಳೆದುಕೊಂಡು ಬಂದು ರಾಜಬೀದಿಯಲ್ಲಿ ನಗ್ನಾಂಗಿಯಾಗಿ ನಿಲ್ಲಿಸಿ ಅವಳ ಅಂಗಾಂಗಗಳಲ್ಲಿದ್ದ ಗುರುತುಗಳನ್ನೆಲ್ಲ ಪ್ರಕಟವಾಗಿ ಶೋಧಿಸಿ ಬರೆದುಕೊಂಡರು. ಬಳಿಕ ಸದರೀ ಹುಡುಗಿಯು ಲಜ್ಜೆಯಿಂದ ಬಾಧಿತಳಾಗಿ ಒಬ್ಬರಿಗೂ ತಿಳಿಸದೆ ಯೆಲ್ಲಿಗೋ ಹೊರಟುಹೋದಳು. ಅವಳ ತಾಯಿ ತಂದೆಗಳಲ್ಲಿ ತಲಾಷ್ ಮಾಡಿದಾಗ್ಯೂ ಇದುವರೆವಿಗೆ ದೊರೆಯದಿರುವದರಿಂದ ತನ್ನ ಮಾನ ಹಾನಿಯು ತಡೆಯಲಾರದೆ ಪ್ರಾಣತ್ಯಾಗ ಮಾಡಿರಬೇಕೆಂತಲೂ, ಅವಳ ಒಡವೆಗಳನ್ನು ಮಾವನಾದವನು ಕೊಡದೆ ಹೋಗಲು ಆ ಮಾವ ಆತನಿಗೆ ತಿಳಿಸದೆ ತೆಗೆದುಕೊಂಡದ್ದರಿಂದ ಆ ಮಾವನು ಫಿರ್ಯಾದಿ ಮಾಡಿ ಅವಳಿಗೆ ಶಿಕ್ಷೆ ಮಾಡಿಸಿರಬಹುದೆಂತಲೂ ಲಾಹೋರ್ ಟ್ರಿಬ್ಯೂನ್ ಎಂಬ ಪತ್ರಿಕೆ ಊಹಿಸುತಿದೆ. ಹೀಗೆಯೇ ಅಮೃತಸರದ ಪೋಲೀಸ್‌ನವರು ಮಾನಿತರಾದವರನ್ನೆಲ್ಲ ಮಾನಭಂಗ ಪಡಿಸಿ, ಇಲ್ಲದ ದುಃಖಕ್ಕೊಳಪಡಿಸುತಲಿರುವಂತೆ ತಿಳಿಯಬರುತಿದೆ. ಕೆಲವರು ರಷುವತ್ತುಗಳ ಮೂಲಕ ಈ ದುಃಖದಿಂ ತಪ್ಪಿಸಿಕೊಂಡರು. ಇವರ ದುಷ್ಕೃತ್ಯದಿಂದ ಜನರಿಗೆ ಬಹಳ ಕ್ಷೋಭೆಯುಂಟಾಗಿರುವಂತೆ ತಿಳಿಯ ಬರುತಿದೆ. ಮುಷಾರ್ ಕಳ್ಳರು ರಾತ್ರಿ ಕಾಲದೊಳು ಮನೆಗಳಲ್ಲಿ ಪ್ರವೇಶಿಸಿ, ಹೆಂಗಸರ ಬಟ್ಟೆಗಳನ್ನೆಲ್ಲ ಬಿಚ್ಚಿ ಅವುಗಳಾದ ಅವರ ಮರ್ಮಾಂಗಗಳಲ್ಲಿ ತನಿಖೆ ಹಿಂಸಿಸುತ ಅವರಿಂದ ಆಸ್ತಿ ವಿಷಯಕವಾದ ವೃತ್ತಾಂತಗಳನ್ನೆಲ್ಲ ತಿಳಿದು ಅವನ್ನೆಲ್ಲ ಅಪಹರಿಸಿಕೊಂಡು ಹೋಗುತಲಿದ್ದರೆಂಬದಾಗಿ ಕೇಳಿದ್ದೆವು. ಸದರೀ ಕಳ್ಳರು ಸಹ ರಾತ್ರಿ ಕಾಲದಲ್ಲಿ ನಾಲ್ಕು ಗೋಡೆಗಳ ನಡುವೆ ಈ ರೀತಿ ಮಾಡುವರು. ಒಂದುವೇಳೆ ಮನೆಯವರು ಸದರೀ ಹಿಂಸೆಗೆ ಒಪ್ಪದಿ ತಾವೇ ವಸ್ತುಸ್ಥಿತಿಯನ್ನು ಹೇಳಿ ಕಾಪಾಡಿದರೆ ಕಳ್ಳರು ಅವರ ಗೋಜಿಗೆ ಹೋಗದೆ ಹೊರಟು ಹೋಗುವದುಂಟು. ಪ್ರಕೃತ ಸಂದರ್ಭದಲ್ಲಿ ಮುಷಾರ ಕಳ್ಳರಿಗಿಂತಲೂ ಕ್ರೂರತರರೆನಿಸಿರುವ ಮಾನಭಕ್ಷಕರು ಅತಿ ನಿಕೃಷ್ಟರೆಂದು ಧಾರಾಳವಾಗಿ ಹೇಳುವೆವು. ಮುಷಾರ ಚೋರರಿಗೆ ದಂಡನೆಯಂ ವಿಧಿಸಿರುವ ಶಿಕ್ಷಾ ಸ್ಮೃತಿಯಲ್ಲಿ ಮಾನಭಂಗಕ್ಕೆ ದಂಡನೆ ಇಲ್ಲದೆ ಹೋಯಿತೆ? ಇದು ಗವರ್ನಮೆಂಟನವರ ತಿಳುವಳಿಕೆಗೆ ಬಾರದಿರಬಹುದೆಂದು ಹ್ಯಾಗೆ ಊಹಿಸಬಹುದು. ಇಂಥಾ ಅಕೃತ್ಯಗಳಿಗೆ ತಕ್ಕ ಪರಿಹಾರವಂ ಗವರ್ನಮೆಂಟನವರು ಮಾಡದಿರುವ ಪಕ್ಷಕ್ಕೆ ಅವರು ಅನುಮೋದಕರೆಂದು ಪ್ರಜೆಗಳು ಭಾವಿಸದಿರಲಾರರು. ಸದಾಗಮನವನ್ನೂ ಅಜಸ್ರ ವೈಧವ್ಯಾನುಭವವನ್ನೂ ಅತಿ ಘಾತುಕ ಕೃತ್ಯಗಳೆಂದು ಭಾವಿಸಿ ಹಿಂದೂಗಳು ಕಠಿಣ ಹೃದಯರೆಂಬದಾಗಿ ದೂಷಿಸುವ ಬ್ರಿಟಿಷ ಸರ್ಕಾರದವರಿಗೆ ಮೇಲೆ ಕಂಡ ತಮ್ಮ ನೌಕರರ ಕೃತ್ಯಗಳು ಮಾತ್ರ ಯಾತಕ್ಕೆ ನೀಚವೆಂದು ತೋರದೆ ಹೋಯಿತೋ ನಾವರಿಯೆವು. ಈ ದೇಶದಲ್ಲಿ ಸಹ ಪೋಲೀಸ್‌ನವರು ಕೆಲವು ಸಂದರ್ಭಗಳಲ್ಲಿ ಪ್ರಜೆಗಳಿಗುಂಟುಮಾಡತಕ್ಕ ನಾನಾವಿಧ ಹಿಂಸೆಗಳು ನಮ್ಮ ತಿಳುವಳಿಕೆಗೆ ಆಗಿಂದಾಗ್ಗೆ ಬರುತಲಿರುತಿವೆ.

Occasional Notes.
ನೈಮಿತ್ತಿಕ ವಿಷಯನ್ಯಾಸ.

Introduction of Income Tax.—ಬರೋಡೇ ಸಂಸ್ಥಾನದಲ್ಲಿ ಶೀಘ್ರದೊಳು ಇನ್‌ಕಂಟ್ಯಾಕ್ಸ ಎಂಬ ಆದಾಯಿನ ಮೇಲಿನ ತೆರಿಗೆ ವಸೂಲೀ ಪದ್ಧತಿಯು ಜಾರೀಯೊಳು ತರಲ್ಪಡುವದೆಂದು ನಿರೀಕ್ಷಿಸಲ್ಪಟ್ಟಿರುವಂತೆ ಟೈಂಸ್ ಪತ್ರಿಕೆಯ ಬಾತಮೀದಾರನೊಬ್ಬಾತನು ಬರೆಯುತ್ತಾನೆ.

A rumour denied.—ಇಂಡ್ಯಾ ಗವರ್ನಮೆಂಟಿನವರು ಕಾಬೂಲ್‌ಅಮೀರರವರಿಗೆ ೫೦,೦೦೦ ರೈಫಲ್ ಎಂಬ ಬಂದೂಕ್‌ಗಳಂ ಇನಾಂ ಕೊಡುವವರಾಗಿದ್ದಾರೆಂದು ಹುಟ್ಟಿದ ಪ್ರವಾದವು ಸುಳ್ಳೆಂದು ಇಂಗ್ಲಿಷಮ್ಯಾನ್ ಎಂಬ ಪತ್ರಿಕೆ ತಿಳಿಸಿ, ಪರಂತು ಅಂತಾ ಇನಾಂ ಕೊಟ್ಟರೆ ಉಚಿತವಾಗಿರುವದೆಂದು ಸಲಹೆ ಕೊಡಲ್ಪಟ್ಟಂತೆ ಕಾಣುತಿದೆಂದು ಹೇಳುತಿದೆ.

The Resident of Travancore.—ತಿರುವಾಂಕೂರ್ ಮತ್ತು ಕೊಚ್ಚಿ ಸಂಸ್ಥಾನಗಳ ರೆಸಿಡೆಂಟರಾದ ಮೆ|| ಜೆ. ಸಿ. ಹಾನಿಂಗ್ಟನ್ ಯವರು ತಮ್ಮ ಕೆಲಸದಿಂದ ನಿವೃತ್ತರಾಗುವರೆಂದ ಬಹುಕಾಲದ ಮೊದಲು ಪ್ರಚುರಗೊಂಡಿದ್ದ ಪ್ರವಾದವು ಈಗ ಸ್ಥಿರವಾಯ್ತು. ಅವರ ಕೆಲಸಕ್ಕೆ ಮದರಾಸ್ ಪ್ರೆಸಿಡೆನ್ಸಿಯ ವಿದ್ಯಾಭ್ಯಾಸದಿಲಾಖಾ ಡೈರೆಕ್ಟರವರಾದ ಮೆ|| ಗ್ರಿಗ್‌ಯವರು ನೇಮಿಸಲ್ಪಡುವರೆಂದು ತಿಳಿಯಬರುತಿದೆ.

The leper legislation.—ಇಂಡ್ಯಾದೇಶದೊಳು ಕುಷ್ಠರೋಗಿಗಳ ವಿಷಯದಲ್ಲಿ ಮಾಡಲ್ಪಟ್ಟ ಶಾಸನವಿದಾ ಆಕ್ಟು ಸದ್ಯಕ್ಕೆ ಜಾರೀಯೊಳು ಬರುವಂತಿಲ್ಲವು, ಯಾತಕ್ಕೆಂದರೆ, ಆಯಾಸ್ಥಳಕ ಗವರ್ನಮೆಂಟಿನವರು ಸದರೀ ಆಕ್ಟಿನ ವಿಷಯದಲ್ಲಿ ತಮ್ಮತಮ್ಮ ಅಭಿಪ್ರಾಯ ಸೂಚಕವಾದ ರಿಪೋರ್ಟುಗಳನ್ನು ಕಳುಹಿಸುವವರೆನುವದಾಗ್ಯೂ ಸದರೀ ರೋಗವು ಸಾಂಕ್ರಾಮಿಕ ಅಥವಾ ಅಲ್ಲವೆಂಬ ಅಂಶವನ್ನು ವಿಲಾಯತಿಯಲ್ಲಿನ ವೈದ್ಯಶಾಸ್ತ್ರಜ್ಞರು ನಿರ್ಣಯಿಸಿ ತಿಳಿಸುವಪರಿಯಂತ ಸದರೀ ವಿಷಯದಲ್ಲಿ ಪ್ರಯತ್ನ ಪಡಕೂಡದೆಂದು ನಿರ್ಣಯಿಸಲ್ಪಟ್ಟಿರುತಿದೆ.

A proposal.—ವಿಲಾಯತಿ ಇಂಗ್ಲಾಂಡಿನಲ್ಲಿಟ್ಟುಕೊಂಡಿರುವ ತೂಕ ಮತ್ತು ಅಳತೆಗಳ ಕ್ರಮವನ್ನು ಬಂಗಾಳೀದೇಶದೊಳು ಅವಲಂಬಿಸುವದು ಸಾಧ್ಯವೇ ಯೆಂಬ ವಿಷಯದಲ್ಲಿ ಇಂಡ್ಯಾ ಗವರ್ನಮೆಂಟನವರು ಅಭಿಪ್ರಾಯ ಕೇಳಿರುತ್ತಾರೆ, ಮತ್ತು ಇಂಗ್ಲಾಂಡದೇಶದಲ್ಲಿ ಜಾರೀಯೊಳಿರುವ ತೂಕ ಮತ್ತು ಅಳತೆಗಳಂ ಇಂಡ್ಯಾದೇಶಕ್ಕೆಲ್ಲ ನ್ಯಾಯವಾದ ತೂಕ ಮತ್ತು ಅಳತೆಯಾಗಿ ಮಾಡಬೇಕೆಂಬ ಯೋಚನೆ ಯುಂಟಾಗಿರುವಂತೆ ಸಹ ಹೇಳಿಕೊಳ್ಳುತ್ತಾರೆ. ಕಾಲಕ್ರಮೇಣ ಯೆಲ್ಲವೂ ಇಂಗ್ಲಿಷ ಮಯವಾಗಬೇಕಾದದು ಸಹಜವಾಗಿಯೇ ಇರುತಿವೆ, ಇಂಡ್ಯಾದೇಶದವರ ವೇಷಭಾಷಾಚಾರ ವ್ಯವಹಾರ ಆಹಾರಾದಿಗಳು ಇಂಗ್ಲಿಷ ಕ್ರಮವನ್ನನುವರ್ತಿಸಿ ನಡೆಯಬರುತಿರುವಲ್ಲಿ ಇದೇನಾಶ್ಚರ್ಯವಲ್ಲವು.

Currency Notes.—ಮಣಿ ಆರ್ಡರ್ ಪಡೆಯತಕ್ಕ ಬಗ್ಗೆ ಪೋಸ್ಟಾಫೀಸುಗಳಿಗೆ ಭಾರೀ ಕ್ರಯವುಳ್ಳ ಕರೆನ್ಸೀ ನೋಟುಗಳು ಹಾಜರ್ಮಾಡಲ್ಪಟ್ಟರೆ ಅಂತವುಗಳ ರಿಜಿಸ್ಟರ್ ಇಡಬೇಕಾದ್ದಾವಶ್ಯಕವೆಂದು ಅನೇಕಾವರ್ತಿ ಪೋಸ್ಟಮಾಸ್ಟರವರ ತಿಳುವಳಿಕೆಗೆ ತರಲ್ಪಟ್ಟದರಿಂದ ಈ ತಿಂಗಳ ೧೫ನೇ ತಾರೀಖ್ ಮೊದಲು ೫೦ ರೂಪಾಯಿಗಳ ಮತ್ತು ಅದಕ್ಕೆ ಮೇಲ್ಪಟ್ಟ ಕ್ರಯವುಳ್ಳ ಕರೆನ್ಸೀ ನೋಟುಗಳು, ಮಣಿ ಆರ್ಡರ್ ಬಗ್ಯಾಗಲಿ, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ ಬಗ್ಯಾಗಲಿ ತರಲ್ಪಟ್ಟರೆ, ವಿಶಿಷ್ಟ ಪೋಸ್ಟಾಫೀಸ್‌ನಲ್ಲೂ ಅವುಗಳನಂಬರ್, ಕ್ರಯ. ತರುವ ಆಸಾಮಿಯ ಹೆಸರು, ಇವುಗಳ ರಿಜಿಸ್ಟರ್ ಇಡಬೇಕಾದ್ದಲ್ಲದೆ ಪ್ರತಿ ಒಂದು ನೋಟಿನಲ್ಲೂ ತರುವವನ ರುಜು

ತ ಕ್ಷೇತ್ರಾವಿಲಾಸ ಕೆಗದುಕೊಳ್ಳತಕ್ಕದ್ದೆಂದು ಇಂಸ್ಪೆಕ್ಟರ ಜೋಸ್ಟಾಫಿಸ ಇಲಾಖೆ ಡೈರೆಕ್ಟರ ಜನರಲವರು ಹುಕುಂ ಮಾಡಿರುತ್ತಾರೆ.

LOCAL AND PROVINCIAL NEWS.
ಪಟ್ಟಣದೇಶನುತ್ತು ತಾಲ್ಲೂಕ ಜಾತಿವೃತ್ತಾಂತಗಳು.

The Maharaja —ಶ್ರೀಮನ್ಮಹಾರಾಜರವರು ತಮ್ಮ ಪರಿಜನ ಪರಿವಾರಕರೊಡನೆ ನೀಲಗಿರಿಯಿಂದ ನಾಳೇ ಬಸರಾಜಧಾನಿಗೆ ವಾಪಸದಯ ಮಾಡುವರೆಂದು ನಿರೀಕ್ಷಿಸಲ್ಪಟ್ಟಿರುತ್ತದೆ.

Police.—ತುಮಕೂರ್ ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರ್ ಪೋಲೀಸ್ ಇನ್ಸ್ಪೆಕ್ಟರ್ ಮ| ವಿಜಯರಂಗಂ ಮೊದಲಿಯಾರ್ರವರು ಸದರೀ ಕೆಲಸದಲ್ಲಿ ಖಾಯಂ ಮಾಡಲ್ಪಟ್ಟರೆಂದು ಕೇಳುತ್ತೇವೆ.

Privilege leave —ಸನ್ ೧೮೯೦ನೇ ಇಸವಿ ಏಪ್ರಿಲ್ ೧೫ನೇ ತಾರೀಖು ೮ ಗಾಯಿತು ಅಥವಾ ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ಕಡೂರ್ ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ್ ಕಮಿಷನರ್ ಮ|| ಸಿ. ರಾಘವೇಂದ್ರರಾಯರವರಿಗೆ ೩ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

Superintendent of the Central Jail ಇಲ್ಲಿನ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟಾಗಿದ್ದ ಮ|| ಎಫ್. ಪ. ಕ್ಕರ್ಕ್ರಯವರು ಗತವಾರದಲ್ಲಿ ಮೃತಪಟ್ಟದರಿಂದ ಅವರ ಕೆಲಸವನ್ನು ಸಾಬಕ್ ಸೂಪರಿಂಟೆಂಡೆಂಟರಾದ ಮತ್ತು ಡಾಕ್ಟರ್ ಸಿವಿಲ್ ಸರ್ಜನ್ ಇವರು ... ತಮ್ಮ ಸ್ವಂತ ಕೆಲಸದೊಡನೆ ಮತ್ತೊಬ್ಬರು ನೇಮಕರಾಗುವತನಕ ನಿರ್ವಹಿಸುತ ಬರಬೇಕೆಂದು ಏರ್ಪಾಡಾಗಿ ಅದೇಪ್ರಕಾರ ಅವರು ಆ ಕೆಲಸವಂ ಸಹ ಈಗ ನೋಡುತಲಿದಾರೆಂದು ತಿಳಿಯಬರುತದೆ.

Extention of leave —ಹೆಗ್ಗದ ದೇವನ ಕೋಟೆ ತಾ| ಅಮಲ್ದಾರ್ ಮ| ರಾಮಯ್ಯಂಗಾರ್ರವರಿಗೆ ೧೮೮೯ನೇ ಇಸವಿ ಡಿಸೆಂಬರ್ ೨೧ನೇ ತಾರೀಖು ೫೧ನೇ ನಂಬರುಳ್ಳ ದಿವಾನರವರ ಆಫೀಸ್ ನೋಟೀಸಿನ ಮೂಲಕ ಕೊಡಲ್ಪಟ್ಟಿದ್ದ ೩ ತಿಂಗಳ ಪ್ರಿವಿಲೇಜ್ ರಜಾ ಇನ್ನೊಂದು ಮೂರು ತಿಂಗಳತನಕ ಜಾಸ್ತಿ ಮಾಡಲ್ಪಟ್ಟಿರುವುದಲ್ಲದೆಯೂ, ರಜಾಮೇಲಿರುವ ಮ| ರಾಮಯ್ಯಂಗಾರ್ರವರ ಸ್ಥಾನದಲ್ಲಿ ಪ್ರೊಬೇಷನರ್ ಅಥವಾ ಮತ್ತೊಬ್ಬರು ನೇಮಕ ಆಗುವತನಕ ಸದರೀ ತಾಲ್ಲೂಕ್ ಶಿರಸ್ತೇದಾರ್ ಸುಬ್ಬಣ್ಣನವರು ಚಾರ್ಜನ್ನು ತೆಗೆದುಕೊಂಡು ಕೆಲಸ ನೋಡುವುದೆಂದೂ ಗವರ್ನಮೆಂಟ್ ಗೆಜೆಟ್ ಮೂಲಕ ತಿಳಿಯಬರುತದೆ.

A police probationer —ಇದು ವರಿವಿಗೆ ಪೋಲೀಸ್ ಇಲಾಖೆ ಕೆಲಸವು ಕೇವಲ ನೀಚವಾದದ್ದೆಂಬ ಅಭಿಪ್ರಾಯವು ಅನೇಕರಿಗೆ ಇರುತ್ತಿತ್ತು. ತ್ರಿಕರಣ ಶುದ್ಧಿಯುಳ್ಳ ವಿವೇಕಿಗಳೆಲ್ಲರೂ ಈಗ ತದ್ವತ್ ಭಾವಿಸುವುದಿಲ್ಲವು. ಪ್ರಜೆಗಳ ಹಿತವನ್ನಪೇಕ್ಷಿಸುತ್ತಿರುವ ಗವರ್ನಮೆಂಟ್ ನೌಕರರಿಗಾಗಿ ಇತರರವರು ತಾವು ಪ್ರವೇಶಿಸುವ ಕೆಲಸಗಳ ಗುಣದೋಷವು ವಿಮರ್ಶಿಸುವಷ್ಟು ಸಹನೆಯುಳ್ಳವರಲ್ಲ ಹಾಗಾದಾಗ್ಯೂ ಈಚೆಗೆ ಬಿ. ಎ. ಪರೀಕ್ಷೆ ಕೊಟ್ಟವರೆಲ್ಲರೂ ಪೋಲೀಸ್ ಇಲಾಖೆಗಳಲ್ಲಿ ನೌಕರಿಗಳನ್ನಂಗೀಕರಿಸುತಲಿದಾರೆ. ಮ| ಶ್ರೀನಿವಾಸರಾವ್ ಬಿ. ಎ. ಎಂಬವರು ಈಚೆಗೆ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಆರುತಿಂಗಳಕಾಲ ಎಕ್ಸ್‌ಟ್ರಾ ಪೋಲೀಸ್ ಇನ್ಸ್ಪೆಕ್ಟರಾಗಿ ಅಜಮಾಯಿಷೀ ತರೀಕೆ ನೇಮಕರಾಗ್ಮಿದ್ದಾರೆಂದು ಕೇಳುತ್ತೇವೆ.

"The Sakalartha Dayini" —ಗೋದಾವರಿ ಡಿಸ್ಟ್ರಿಕ್ಟಿಗೆ ಸೇರಿದ ತುನಿ ಎಂಬ ಪ್ರದೇಶದಲ್ಲಿ ಕಳೆದ ಜನವರಿ ತಿಂಗಳ ಮೊದಲು ಸಕಲಾರ್ಥದಾಯಿನೀ ಎಂಬ ಹೆಸರುಳ್ಳ ಆಂಧ್ರ ಮಾಸ ಪತ್ರಿಕೆಯೊಂದು ತೋಟಕೂರಿ ವೆಂಕಟಾಚಲಂ ಎಂಬವರಿಂದ ಪ್ರಕಟಿಸಲ್ಪಡುತಿದೆ. ಸದರೀ ಪತ್ರಿಕೆಯ ೧, ೨, ೩ನೇ ಸಂಚಿಕೆಗಳು ನಮ್ಮ ಪರಾಮರ್ಶೆಗಾಗಿ ಕಳುಹಿಸಲ್ಪಟ್ಟವು. ಈ ಪತ್ರಿಕೆಯ ಚಂದಾ ವರವು ಪ್ರೋಷಕರಿಗೆ ೧೦ರೂ||, ಸಹಾಯಕರಿಗೆ ೬ ರೂ||, ಚಂದಾದಾರರಿಗೆ ೩ ರೂಪಾಯಿ ಪ್ರಕಾರ ನಿಷ್ಕರ್ಷೆಯಾಗಿರುತಿದೆ. ಈಗ ನಮ್ಮ ಹಸ್ತಗತವಾಗಿರುವ ಮೊದಲುಮೂರು ಸಂಚಿಕೆಗಳಿಂದ ಪ್ರಸಕ್ತ ಪತ್ರಿಕೆಯು ಸಕಲಾರ್ಥವಿಲ್ಲದಿದ್ದರೂ ಏಕಾರ್ಥವನ್ನಾದರೂ ಕೊಡುವದಕ್ಕೆ ಸದ್ಯ ಶಕ್ತವಲ್ಲವಿದೆಯೆಂದು ಭಾವಿಸಬೇಕಾಗಿದೆ. ಪರಂತು ಇದಕ್ಕೆ ದೈವಾನುಗ್ರಹವೂ ಪ್ರಜೆಗಳ ಸಹಾಯವೂ ಲಭಿಸಿ ತನ್ನ ನಾಮವಂ ಅನ್ವರ್ಥ ಗೊಳಿಸಬೇಕೆಂದು ಕೋರುವೆವು

"The Satya Sadhana"—ಚಿತ್ಪಾವನರೆಂಬ ಒಂದು ಪ್ರಭೇದವವರು ಈ ಭರತಖಂಡದಲ್ಲಿ ಪ್ರಸಿದ್ಧರಾಗಿರುವ ಪಂಚದ್ರಾವಿಡ ಪಂಚಗೌಡರೆಂಬ ದಶವಿಧ ಸಮಾಜ್ಯಗೊಳಪಟ್ಟವರಲ್ಲವಿದ್ದರೂ ತಾವೂ ಬ್ರಾಹ್ಮಣೋತ್ತಮರಾದುದರಿಂದ ಇತರ ಬ್ರಾಹ್ಮಣೋತ್ಪತ್ತಿಯು ಪವಿತ್ರಂದಲೇ ಪ್ರಖ್ಯಾತವೆಂತೆ ನಡಿಯುತ ಎಲ್ಲರೂ ತಮ್ಮೊಡನೆ ಸವ್ಯವಹಾರ ಮಾಡಬೇಕೆಂಬದಾಗಿ ಪ್ರಯತ್ನಪಟ್ಟ ವಿಚಾರವು ವೃತ್ತಾಂತ ಪತ್ರಿಕೆಗಳಲ್ಲಿ ವಿಶೇಷವಾಗಿ ಜರುಗುತಲಿದ್ದದರಿಂದಲೂ, ಇವರ ಉತ್ಪತ್ತಿ ಜಾತಿ ಕುಲ ವಿಚಾರಗಳ್ಯಾವವೂ ಗೊತ್ತಿಲ್ಲವೆ ತೋರದವರಿಂದಲೂ, ಈ ಪೂರದಲ್ಲಿ ಸ್ಥಾಪಿಸಲ್ಪಟ್ಟಿರುವ ಬ್ರಾಹ್ಮಣೈಕ್ಯ ಸಭೆಯವರು ಸದರೀ ಜಾತಿಯವರ ಉತ್ಪತ್ತಿಯ ಮೊದಲಾದವು ವಿಚಾರ ಮಾಡಿ ಅನೇಕ ಪ್ರಮಾಣಗಳಿಂದಲೂ ಇತರ ಆಧಾರಗಳ ಮೇಲೂ ಸದರೀ ಚಿತ್ಪಾವನರು ಈ ಭರತಖಂಡದ ದಶವಿಧ ಬ್ರಾಹ್ಮಣರಲ್ಲಿ ಸೇರಿದವರಲ್ಲವೆಂತಲೂ, ಸವ್ಯವಹಾರಾನರ್ಹರೆಂತಲೂ ನಿರ್ಣಯಿಸಿ ಒಂದು ಗ್ರಂಥವನ್ನು ಕನ್ನಡ ಭಾಷೆಯಲ್ಲಿ ಮುದ್ರಿಸಿ ಪ್ರಕಟಿಸಿರುವದು ಈಚೆಗೆ ನಮಗೆ ಕಳುಹಿಸಲ್ಪಡಲು ಅದಂ ನಾವು ಸಂತೋಷದೊಡನೆ ಅಂಗೀಕರಿಸಿದೆವು. ಈ ಪುಸ್ತಕವು ದಿವಿಸ್ತಾರಿಂ ಶ್ರುತಿಗಳುಳ್ಳದ್ದಾಗಿಯೂ ವಿವಾದಾಸ್ಪದವಾಗಿರುವ ಪ್ರಸಕ್ತ ವಿಚಾರಕ್ಕೆ ಆವಶ್ಯಕಗಳಾದ ಬಹುವಿಷಯಗಳುಳ್ಳದ್ದಾಗಿಯೂ ಇರುವದರಿಂದ ಇದಂ ನಾವು ಪೂರ್ಣವಾಗಿ ಓದಿದಾಗ ಪರಿಶೀಲಿಸಿ ನಮ್ಮ ಅಭಿಪ್ರಾಯವು ವ್ಯಕ್ತಪಡಿಸುವೆವು

Obituaries—ಮೈಸೂರಲ್ಲಿ ಪ್ರಸಿದ್ಧ ಸಾಹುಕಾರರಾಗಿದ್ದ ಜೈನ ಮತಸ್ಥರಾದ ಪ್ರಭಾಚಂದ್ರಯ್ಯ ಎಂಬವರು ಈಗ್ಗೆ ಕೆಲವು ದಿನಗಳ ಮೊದಲು ಅಸ್ವಸ್ಥರಾಗಿದ್ದು ಗತಗುರುವಾರದ ದಿನ ಬಂಧವಿಮುಕ್ತರಾಗಿ ಊರ್ಧ್ವಗತಿಯನ್ನೈದಿದರೆಂದು ಕೇಳಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಈ ಸಾಹುಕಾರರು ಸ್ವಭಾವತಃ ಉದಾರರಾಗಿಯೂ, ಉಪಕಾರಿಗಳಾಗಿಯೂ ಇದ್ದರು. ಇವರ ಮಗ ತಿರುವಾಗ್ಗೆ ೩೦ ವರುಷಗಳ ವಯಸ್ಸಾಗಿತ್ತು ಇವರಿಗೆ ಪುತ್ರಸಂತಾನ ವಿರುವುದಾಗಿ ಕೇಳುತ್ತೇವೆ

ಮೈಸೂರಲ್ಲಿರುವ ಪ್ರಸಿದ್ಧ ಕಂಟ್ರಾಕ್ಟರ್ ಕರಾದ ಮಹಾರಾಜಶ್ರೀ ಗುಂಜಾ ನರಸಿಹ್ಮಯ್ಯನವರ ಭಾರ್ಯೆಯು ೪೫ ವರ್ಷದ ಯೌವನವು ಅವಸ್ಥೆಯಿಂದ ಈತ್ತಲ್ಪರದಿಂ ಎಡೆಬಿಡದೆಭಾಗಿದ್ದು ಅದೇ ದಿನ ಕಾಲಗತಿಯನ್ನೈದಿದಳೆಂದು ಕೇಳಿ ವಿಶೇಷತಃ ವಿಷಾದಿಸುವೆವು. ನರಸಿಹ್ಮಯ್ಯನವರು ಬಹಳ ಉದಾರರಾಗಿಯೂ, ವಿನೀತರಾಗಿಯೂ, ಗುಣಾಢ್ಯರಾಗಿಯೂ ಇರುವದರಿಂದ ಈ ದೊಡ್ಡ ಮನುಷ್ಯರಿಗುಂಟಾದ ಭಾರ್ಯಾ ವಿಯೋಗಜನ್ಯವಾದ ಉತ್ಸಾಹ ಭಂಗವು ಚಿಂತನೀಯವಾಗಿರುತದೆ. ಇವರ ಪೋಷಣೆಯಿಂದ ಸಿದ್ಧಾಂತ ವ್ಯಾಕರಣ ಎಂಬ ಸಂಸ್ಕೃತ ಪಾಠಶಾಲೆಯೊಂದು ವ್ಯವಸ್ಥಿತವಾಗಿ ಬಹಳ ಕ್ರಮವಾಗಿ ಶ್ರೀಮಾನ್ ಪಂಡಿತ ಪದ್ಮಸ್ವಾಮಿ ತಿರುಮಲಾಚಾರ್ಯರ ನಿರ್ವಾಹಕತ್ವದಲ್ಲಿ ಜರುಗುತಲಿದೆ. ಮುಖ್ಯವಾಗಿ ಸರ್ವಂ ದುಃಖಮಯವಾದ ಈ ಪ್ರಕೃತ ಮಂಡಲದಲ್ಲಿ ಸುಖಭ್ರಾಂತಿಯು ನಿವೃತ್ತಿಯಾದರೆ ಆಗ ನಿಜಸ್ಥಿತಿಯು ಸ್ವತಃವಿವ ಸ್ಪಷ್ಟವಾಗದೆ ಹೋಗಲಾರದು.

ಪ್ರೀಯುಮಗಿರಿ ಸದಾನಂದ ವರ್ಧನೀ ಸಭಾ.

ಮೇಲುಕೋಟೆ, ತಾ|| ೨೩ನೇ ಏಪ್ರೈಲ್ ೧೮೯೦. ಈ ದಿನ ಸದರಿ ಪ್ರೀಯುಮಗಿರಿ ಸದಾನಂದ ವರ್ಧನೀ ಸಭೆಯಲ್ಲಿ ಹೆಡ್ ಅಸಿಸ್ಟೆಂಟ್ ಕಮಿಷನರ್ ಮ|| ಎ. ಶ್ರೀನಿವಾಸಯ್ಯಂಗಾರ್ರವರು ಹಿಂದೂ ಮತವಿ ಷಯಕವಾದ ವಿಚಾರವಂ ಮಾಡಿದರು. ಅದಕ್ಕೆ ಫ್ರೆಂಚ್‌ರಾಕ್ಸ್ ಸವಡಿವಿಜನ್ ಆಫಿಸರ್ ಮ|| ಡಿ. ನಾಮಕಲ್ ರಾಯರವರು ಸಭಾಧ್ಯಕ್ಷರಾಗಿದ್ದರು. ಆಕಾಲದಲ್ಲಿ ಬಹುಜನ ದೊಡ್ಡಮನುಷ್ಯರೂ ವಿದ್ವಾಂಸರೂ ಇತರರೂ ಬಂದಿದ್ದರು. ಪ್ರಾಸಂಗಿಕರ ಉಪನ್ಯಾಸವು ಬಹಳ ಶ್ರಾವ್ಯವಾಗಿದ್ದದರಿಂದ ಈ ಪತ್ರಿಕೆಯನ್ನೋದತಕ್ಕವರ ತಿಳುವಳಿಕೆಯಬಗ್ಗೆ ಇದರಡಿ ಪ್ರಕಟಿಸುವೆವು.

ಟ್ರಾಕ್ಟ ಅಂಡ್ ಬುಕ್ ಸೊಸೈಟಿಯವರಿಂದ ಪ್ರಕಟಿಸಿ ಫೆಯಿತ್ ಮಾಡಲ್ಪಟ್ಟ ಒಂದು ಸಣ್ಣ ಗ್ರಂಥದಲ್ಲಿ ಜನ್ಮಾಂತರವಂ ಕುರಿತು ವಿಚಾರ ಮಾಡುವಾಗ್ಯೆ ಮನುಷ್ಯನಿಗೊಂದೇ ಜನ್ಮವೇ ಹೊರತು ಅನೇಕಜನ್ಮ ವಿಲ್ಲವೆಂಬದಾಗಿ ನಮೂದಿಸಲ್ಪಟ್ಟಿರುತಿದೆ. ಸದರೀ ಗ್ರಂಥವು ಮೂರು ಕಲುಗಳುಳ್ಳವಾಗಿದುವದು. ಮೊದಲನೆಯ ಕಲಂನಲ್ಲಿ ತಿಳಿಸಲ್ಪಟ್ಟಿರುವದೇನುವದೆ, ಜನ್ಮಾಂತರವು ಸಾಕ್ಷಿಯಿಲ್ಲದ ಬೋಧನೆಯಾಗಿರುತಿದೆ. ಇದು ನಿಜವಾಗಿದ್ದರೆ ಅದಕ್ಕೆ ಜ್ಞಾನಕವು ಸಾಕ್ಷಿಯಾಗಿರಬೇಕು. ಒಬ್ಬ ದೇಶ ಸಂಚಾರಿಯು ಈ ಭರತಖಂಡದೊಳೆಲ್ಲ ಸಂಚಾರ ಮಾಡಿದ ಮೇಲೆ ತಾನು ನೋಡಿದ ನೂತನಗಳಾದ ವಸ್ತುಗಳನ್ನೂ ಜನಗಳನ್ನೂ ಸ್ಮರಿಸಿಕೊಂಡು ಅವುಗಳ ವಿವರಿಸಲಿಕ್ಕೆ ಶಕ್ತನಾಗುತ್ತಾನೆಯೋ ಅದೇ ಪ್ರಕಾರ ಆತ್ಮನಿಗೆ ಸ್ಥಾನಭೂತವಾದ ಶರೀರವೆಂಬ ಪಟ್ಟಣ ಪ್ರಾಯವಾಗಿರುವದರಿಂದ ಆತ್ಮನು ವಿವಿಧ ದೇಹಗಳೆಂಬ ಪಟ್ಟಣಗಳಲ್ಲಿ ಜನ್ಮ ಜನ್ಮಾಂತರಗಳೊಳು ಕ್ರಮಕ್ರಮವಾಗಿ ಪ್ರವೇಶಿಸಿದ್ದಂಟಾದರೆ ಒಂದು ಜನ್ಮದಲ್ಲಿ ಜರಿಗಿದ ವೃತ್ತಾಂತವನ್ನು ಮತ್ತೊಂದು ಜನ್ಮದಲ್ಲಿ ಸ್ಮರಿಸಿಕೊಳ್ಳಲಿಕ್ಕೆ ತದ್ವತ್ ಶಕ್ತನಾಗಿರಬೇಕಷ್ಟೆ. ಪೂರ್ವಜನ್ಮ ವಿಷಯಕವಾದ ಸ್ಮರಣೆಯು ಯಾರಿಗೂ ಬರುವದಿಲ್ಲವು ಎಂಬದು. ಲೌಕಿಕ ದೃಷ್ಟಾಂತದಿಂ ಪರೋಕ್ಷ ವಿಷಯವನ್ನು ಸಾಧಿಸಲಿಕ್ಕೆ ಸಾಧ್ಯವಲ್ಲವು, ನಮಗೆ ಅಗೋಚರನಾದ ಈಶ್ವರನನ್ನು ಲೌಕಿಕ ದೃಷ್ಟಾಂತಗಳಿಂದ ನಿರೂಪಿಸಲಿಕ್ಕಾಗುವದಿಲ್ಲವು. ಮೇಲೆ ಕಂಡ ಪತ್ರಿಕೆಯನ್ನು ಪ್ರಕಟಪಡಿಸಿದ ಕ್ರಿಶ್ಚಿಯನ್ ಮತಸ್ಥರು ದೇವರು ಮನುಷ್ಯನನ್ನು ಸೃಜಿಸಿ ಅವನ ಮೂಗಿನಲ್ಲಿ ತಾನು ಪ್ರಾಣ ವಾಯುವನ್ನು ಒಳಗೆ ಪ್ರವೇಶಿಸುವಂತೆ ಮಾಡಿ ಜೀವನನ್ನಾಗಿ ಮಾಡಿದನೆಂದು ನಂಬಿರುತ್ತಾರೆ. ಹಾಗಾದಪಕ್ಷಕ್ಕೆ ಮನುಷ್ಯ ದೇಹಾಂತರ್ಗತವಾದದ್ದು ವಾಯುವೇ ಹೊರತು ಆತ್ಮನೆನ್ನಿಸಿಕೊಳ್ಳಲಾರದು. ಆದಾಗ್ಯೂ ಅದಕ್ಕೆ ವಿರುದ್ಧವಾಗಿ ಆವಾಯುವನ್ನು ಅವರು ಆತ್ಮನೆಂದು ಹೇಳುವರು. ಹಿಂದೂಗಳಾದ ನಾವು ಆತ್ಮನು ಪ್ರಾಣವಾಯುವಿಗಿಂತ ವಿಲಕ್ಷಣವಾದವನೆಂದು ಹೇಳುತ್ತೇವೆ. ಪ್ರಾಣವಾಯುವು ಆತ್ಮನಿಗೆ ಸಹಕಾರಿಯೆಂತಲೂ, ಈ ಆತ್ಮನು ನಿತ್ಯನಾದ ಕರ್ಮಬದ್ಧನೆಂತಲೂ, ಈಶ್ವರನಿಗೆ ಪರತಂತ್ರನಾಗಿರುವ ನೆಂತಲೂ ಭಾವನಪಟ್ಟಿರುವೆವು. ಪ್ರಾಣವಾಯುವೆಂದರೆ ಆತ್ಮನಿಗೆ ಸಹಕಾರಿಯಾಗಿರುವ ಪಾಂಚಭೌತಿಕವಾದ ವಾಯುವೇ ಹೊರತು ಅನ್ಯಥಾ ಅಲ್ಲವು. ಆದಿಪುರುಷನ ದೇಹಗತವಾದ ಪ್ರಾಣವಾಯುವೇ ನಮ್ಮ ಶರೀರದಲ್ಲಿರುತಿದೆಯಾಗಿ ಪಂಚಭೂತಗಳ ರೊಳ್ಗೊಂಡಿದ ವಾತಸಂಬಂಧವೆಂತಲೇ ಭಾವಿಸಬೇಕಾಗಿರುತಿದೆ. ಮನುಷ್ಯನ ಶರೀರಗತವಾದ ಪ್ರಾಣವಾಯುವು ಆದೇಹವಂ ತ್ಯಜಿಸಿ ಹೊರಬರುವಾಯು ಯಥಾಪ್ರಕಾರ ಮೂಲವಾತ ಭೂತದಲ್ಲಿ ಸೇರಬೇಕಲ್ಲದೆ ಅದಕ್ಕೆ ಬೇರೆ ಗತಿಯಿಲ್ಲವು. ಹಾಗಾದ ಪಕ್ಷಕ್ಕೆ ಪ್ರಧಾನವಾದಿಗಳು ದೇವರುಯಿಲ್ಲವೆಂದು ಹೇಳಿ ಸೃಷ್ಟಿಯು ಪ್ರಕೃತಿಯಿಂದಲೇ ಪ್ರಂಚಾದಂತೆ ಹೇಳುವಪ್ರಕಾರ ಕೇವಲ ನಾಸ್ತಿಕದಲ್ಲಿಯೇ ಪರ್ಯವಸಾನವನ್ನೈದಬೇಕಾಗುವದು. ಈ ರೀತಿ ಅವರಮತದಲ್ಲಿ ಒಂದುಕಡೆ ಪ್ರಚ್ಛನ್ನ ನಾಸ್ತಿಕತೆಯನ್ನೂ ಮತ್ತೊಂದುಕಡೆ ದೇವರುಂಟೆಂಬದಾಗಿ ಆಸ್ತಿಕತೆಯನ್ನೂ ಇನ್ನೊಂದುಕಡೆ ಪ್ರತ್ಯೇಕ ಜೀವನಿರುವನೆಂಬದನ್ನೂ ಅನ್ಯತ್ರ ಆ ಕನನಿತ್ಯತ್ವವನ್ನೂ ಪರಸ್ಪರ ವಿರೋಧವಾಗಿ ಏಕಕಾಲದಲ್ಲಿ ಅವಲಂಬನ ಮಾಡಿರುವದರಿಂದ ಇಂತವರಮತಕ್ಕೆ ನೆಲೆಯಿಲ್ಲದೆಹೋಗುವದು. ಸಶೇಷ

LEGAL INTELLIGENCE.
ನ್ಯಾಯ ವಿಷಯಕ ನಿರ್ಣಯಗಳು.

ತಂತಿ ವೃತ್ತಾಂತವನ್ನು ಸಾಕ್ಷಿಸ್ಥಾನ ಅಂಗೀಕರಿಸಬಹುದೆ?

ಮಾರ್ಚಿ ಮಾಹೆ ೭ನೇ ತಾರೀಖು ಬುಧವಾರದದಿನ ಮದರಾಸ್ ಹೈಕೋರ್ಟಿನಲ್ಲಿ ಚೀಫ್ ಜಸ್ಟಿಸ್ ಯವರೂ ಮ| ಜಸ್ಟಿಸ್ ಪಾರ್ಕರ್‌ಯವರೂ ಕೋರ್ಟು ಮಾಡುತಲಿರುವಲ್ಲಿ ಮ| ಜಗ್ಗಾರಾವ್ ಪಿಳ್ಳೆಯವರು, ಕೊಯಂಬತ್ತೂರು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಿಂದ ಶಿಕ್ಷಿಸಲ್ಪಟ್ಟಿರುವ ೭ ಮಂದಿ ಖೈದಿಗಳು ಆ ಹೈ ಕೋರ್ಟ್ ಕೋರ್ಟನಲ್ಲಿ ಮಾಡಿರುವ ಅಪೀಲ್ ವ್ಯವಸ್ಥೆಯಾಗುವತನಕ ಅವರು ಜಾಮೀನ್ ಮೇಲೆ ಬಿಡಲಿಕ್ಕೆ ಹುಕುಂ ಕೊಡಬೇಕೆಂಬದಾಗಿ ಒಂದು ಅರ್ಜಿಯನ್ನು ಅವರ ತರಫ್ ಹಾಜರ್ಮಾಡಿದರು. ಈಗ ಬಿಸಲು ಕಾಲದ ರಜಾ ನಿಮಿತ್ತದಿಂದ ಸದರೀ ಸೆಷನ್ ಕೋರ್ಟು ಮುಚ್ಚಲ್ಪಟ್ಟಿರುತಿದೆಯಾಗಿ ಅದು ಮರಳಿ ನಿಷನಾಗುವ ತನಕ ಅಪೀಲ್ ವ್ಯವಸ್ಥೆಯಾಗಲಾರದೆಂತಲೂ, ಖೈದಿಗಳನ್ನು ಜಾಮೀನ್ ಮೇಲೆ ಈಗ ಬಿಡದಿದ್ದರೆ ತಾವಶ್ಯಯಂತ ಅವರು ನಿರ್ಬಂಧದೊಳಿರಬೇಕಾಗುವದೆಂತಲೂ, ಅವರು ಬೇಕಾದ ಜಾಮೀನ್ ಕೊಡಲಿಕ್ಕೆ ಸಿದ್ಧರಾಗಿದಾರೆಂತಲೂ, ಮ| ಜಗ್ಗಾರಾವ್ ಪಿಳ್ಳೆಯವರು ವಾದಿಸಿ ಅದಕ್ಕೆ ಆಧಾರವಾಗಿ, ಅಪೀಲನ್ನು ಸೆಷನ್ ಕೋರ್ಟನಲ್ಲಿ ದಾಖಲ್ಮಾಡಿದೆ ಯೆಂಬದಾಗಿ ರುಜುವಾತಬಗ್ಗೆ ಖೈದಿಗಳ ತರಫ್ ಸ್ಥಳದ ವಕೀಲರಾದ ನರಸಯ್ಯರೆಂಬವರಿಂದ ತಮಗೆ ಕಳುಹಿಸಲ್ಪಟ್ಟ ತಂತಿ ವೃತ್ತಾಂತವನ್ನು ಜಡ್ಜಿಗಳ ರೂಬರೂ ಹಾಜರ್ಮಾಡಿದರು. ಅದರಮೇಲೆ ಚೀಫ್ ಜಸ್ಟಿಸ್‌ಯವರ ಅಭಿಪ್ರಾಯವಪ್ಪರೇನಂದರೆ,—ಅಪೀಲ್ ದಾಖಲ್ಮಾಡಲ್ಪಟ್ಟದ್ದಕ್ಕೆ ತಂತಿ ವೃತ್ತಾಂತ ಮಾತ್ರ ಸಾಕಾದ ರುಜುವಾತ್ತಾಗಲಾರದು. ಕ್ರಮವಾಗಿ ಸರ್ಟಿಫೈ ಮಾಡಲ್ಪಟ್ಟ ಅಪೀಲ್ ನಕಲ್ ದಾಖಲ್ಮಾಡಿದ ಹೊರ್ತು ಪ್ರಸಕ್ತ ವಿಚಾರದಲ್ಲಿ ಯಾವ ಹುಕುಂ ಕೊಡಲ್ಪಡಲಾರದೆಂಬದು. ಇದರಿಂದ ತಂತಿ ವೃತ್ತಾಂತವು ಸಾಕಾದ ರುಜುವಾತಿಗೆ ಅರ್ಹವಾದದ್ದಲ್ಲವೆಂದೇರ್ಪಟ್ಟಿತು.

SUMMARY OF NEWS.
ವೃತ್ತಾಂತಸಂಗ್ರಹವು.

ಬಂಗಾಳದೇಶದ ಪ್ರಾಂತದ ಒಂದು ಪಟ್ಟಣದಲ್ಲಿ ಮನೆಗಳಲ್ಲಿ ಸಾಕಲ್ಪಟ್ಟಿರುವ ಗಿಣಿಗಳು ಮೊದಲಾದ ಪಕ್ಷಿಗಳಿಗೆ ಇನ್‌ಫ್ಲುಯೆನ್‌ಜಾ ಎಂಬ ಜ್ವರವು ತಗಲಿ ಅವುಗಳಲ್ಲಿ ಅನೇಕವು ಮೃತಪಟ್ಟವೆಂತೆ ತಿಳಿಯಬರುತಿದೆ.

ಪಾಲುವನಲ್ಲಿ ಒಬ್ಬ ತರುಣನಿಗೆ ಹುಚ್ಚುನಾಯಿ ಕಡಿದದ್ದರಿಂದ ೭—೮ ದಿವಸದಮೇಲೆ ರಾತ್ರಿಯಲ್ಲಿ ಹೆಂಡತಿಯು ಸಂಗಡ ಮಲಗಿರಲಾಗಿ ಗಂಡನಿಗೆ ಹುಚ್ಚೇರಿ ಆಕೆಯನ್ನು ಕಚ್ಚಿ ಚೂರುಮಾಡಿ ಬಿಟ್ಟಿದ್ದನು.

ಯೂರೋಪಿನಲ್ಲಿ ಮತ್ತೊಂದು ಚಮತ್ಕಾರವಾದ ರೋಗ ಉಪ್ಪನ್ನಿಸಿದೆ. ಆರೋಗ ಬಂದವರು ಮೂರು ದಿವಸಗಳಿಂದ ೭ ಗಳವರಿದಿವಸವಿಗೆ ಗಾಢ ನಿದ್ರೆಯೊಳಗಿದ್ದು ಅದರಲ್ಲಿಯೇ ಮೃತಪಡುತ್ತಾರಂತೆ. ಆಯುರ್ಬಲವಿದ್ದಪಕ್ಷಕ್ಕೆ ರೋಗವು ಗುಣವಾಗಿ ಬದುಕುವರು. ಇದು ಸಾಂಕ್ರಾಮಿಕ ರೋಗವಾಗಿದ್ದಪಕ್ಷಕ್ಕೆ ಇಲ್ಲಿಯೂ ವ್ಯಾಪಿಸದೆ ಹೋಗಲಾರದು

ಬಂಗಾಳ ದೇವಸ್ಥಾನವನ್ನು ಮ್ಯೂನಿಸಿಪಾಲಿಟಿಯವರೇ ತಮ್ಮ ಖರ್ಚಿನಿಂದ ಕಟ್ಟಿಸಿಕೊಡಬೇಕೆಂತ ನಿಶ್ಚಯವಾಯಿತು. ಯಾವ ಕಲೆಕ್ಟರು ಈ ಅಪರಾಧವನ್ನು ಮಾಡಿದರೋ ಅವರು ಇತ್ತೀಚ್ಚಗೆ ಉಳಿದರು. ಸರ್ಕಾರದವರ ಉದಾರತ್ವವನ್ನು ನೋಡಿ! ಜನರ ಹಣದ ಮೇಲಿಂದ ಪುನಃ ದೇವಸ್ಥಾನವನ್ನು ಕಟ್ಟಿಸುತ್ತಾರೆ.

ದಾಮೋದರ ಠಾಕೂರ್ ಸಾಹೇಬರವರಿಗೆ ಮನೆಗಳು ಅಸ್ವಸ್ಥವಾಗಿ ಇರುವಂತೆಯೂ ಚಿಕಿತ್ಸೆ ಮಾಡಲಿಕ್ಕೆ ಒಬ್ಬ ಡಾಕ್ಟರ್ ಬಂದಿರುವಂತೆಯೂ ಆ ಡಾಕ್ಟರಿಗೆ ಫೀ ಯಾಸೆ ಘಸುಂ ದಿನ ೧೫೦ ರೂಪಾಯಿಗಳಂತೆ ನಿಷ್ಕರ್ಷೆಯಾಗಿರುವಂತೆಯೂ ತಿಳಿಯಬರುತ್ತದೆ.

ರುಶ್ಯಾದಿನಲ್ಲಿಯೂ ಅದರ ಆಗಿದಾಸ ಪ್ರಾಂತಗಳಲ್ಲಿಯೂ ಈಗ ಸಂಭವಿಸಿರುವ ಕ್ಷಾಮದ ದೆಸೆಯಿಂದ ಸಂಕಟ ಪಡುತಲಿರುವ ರಿಕ್ತರಾದವರ ಸಹಾಯಾರ್ಥ ಹೈದರಾಬಾದ್ ನಿಜಾಮರವರು ಸ್ವಂತವಾಗಿ ೨೫,೦೦೦ ರೂಪಾಯಿಗಳಂ ಕೊಟ್ಟರೆಂದು ತಿಳಿಯಬರುತ್ತದೆ.

ಜಯಪುರದ ಸ್ಮಾಲ್ ಕಾಸ್ ಮ್ಯಾಜಿಸ್ಟ್ರೇಟ್ ಆಕು ಕೋಡ ಮುಕರ್ಜಿ ಯೆಂಬ ಬ್ರಾಹ್ಮಣನೊಬ್ಬನು ತನ್ನ ಅಜ್ಜಿಯನ್ನು ಖೂನಮಾಡಿದ್ದಕ್ಕಾಗಿ ೮ ವರ್ಷಗಳ ಕಠಿಣ ಸಜಾ ವಿಧಿಸಲ್ಪಟ್ಟನಂತರ ಕೋರ್ಟಿನಮುಂದೆ ವಿದ್ಯಾ ವೈದ್ಯಗಳು ನಿರರ್ಥಕವು.

ಪತಿಯು ಮುಂದೆ ಆತನ ಗೌರವಕ್ಕಾಗಿ ಜಗ್ಗಿಸತಕ್ಕ ತಲೆಯನ್ನು ತುಚ್ಛನಾದ ನಾಪಿತನ ಮುಂದೆ ಜಗ್ಗಿಸಿ ಅವನ ಕೈಗೆ ತಮ್ಮ ತಲೆಯನ್ನು ಕೊಟ್ಟು ತಮಗೆ ಶಿರೋಭೂಷಣವಾದ ಕೂದಲುಗಳನ್ನು ತೆಗೆಸಿಕೊಳ್ಳುವದು ಶುದ್ಧ ಅನ್ಯಾಯವಲ್ಲವೆ? ಈ ಅಂಶಗಳನ್ನೆಲ್ಲ ಬ್ರಾಹ್ಮಣಸ್ತ್ರೀಯರು ತಿಳಿದುಕೊಂಡು ಇಂತಾ ಕಲ್ಪಿತವಾದ ಅನ್ಯಾಯಕರ್ಮಕ್ಕೆ ಬದ್ಧರಾಗದೆ ವರ್ತಿಸಬೇಕು.

ಈಗ ಜರ್ಮನಿ, ಗ್ರೇಟ್‌ಬ್ರಿಟನ್, ಫ್ರಾನ್ಸ್, ಇಟಲಿ, ಆಸ್ಟ್ರಿಯಾ ಈ ಐದು ದೇಶಗಳಲ್ಲಿಯೂ ಸೇರಿ ೫೦ ಕೋಟಿ ಹೆಂಗಸರು ತಮ್ಮ ತಮ್ಮ ಗೌರವಾನುಗುಣವಾದ ವೃತ್ತಿಗಳಂ ಕಲ್ಪಿಸಿಕೊಂಡು ಸ್ವತಂತ್ರವಾಗಿ ಜೀವನ ಮಾಡುತಲಿರುವಂತೆ ತಿಳಿಯಬರುತ್ತದೆ. ಈ ದೇಶೀಯರಲ್ಲಿಯೂ ಕೆಲವು ಕೂದ್ರಜಾತಿ ಸ್ತ್ರೀಯರು ಸ್ವತಂತ್ರವಾದ ಜೀವನವು ಕಲ್ಪಿಸಿಕೊಂಡು ಸುಖವಾಗಿದಾರೆ.

EXTRACTS

ಇಂಗ್ಲಿಷ್ ಡಾಕ್ಟರುಗಳ ಕೈಕೆಳಗೆ ಇರತಕ್ಕ ಆಸ್ಪತ್ರೆಗಳ ಡಾಕ್ಟರುಗಳು ಮಂಡಿತರಾಗಿದ್ದಾಗ್ಯೂ ದ್ರವ್ಯಸಹಾಯವು ತುಂಬಾ ಇದ್ದಾಗ್ಯೂ ಪ್ರಜೆಗಳ ನಂಬಿಕೆಗೆ ಪಾತ್ರವಾಗಿಲ್ಲ. ಅನೇಕಜನಗಳಿಗೆ ತಮ್ಮ ವೈದ್ಯರಲ್ಲಿ ಇರುವ ನಂಬಿಕೆಯು ಸ್ಪತ್ರೆಯವರಲ್ಲಿಲ್ಲ. ಇದಕ್ಕೆ ಕಾರಣವೇನು? ಈ ಆಸ್ಪತ್ರೆಗಳ ಮುಖ್ಯ ಅಧಿಕಾರಿಗಳು ಸರಿಯಾಗಿ ಮೇಲ್ವಿಚಾರಣೆ ತೆಗೆದುಕೊಳ್ಳದೆ ಇರುವದೇ ಮುಖ್ಯಕಾರಣ. ಅನೇಕಜನ ಆಸ್ಪತ್ರೆ ಅಸಿಸ್ಟೆಂಟರೇ ಮೊದಲಾದ ಔಷಧ ಕೊಡತಕ್ಕ ಜನಗಳು ಔಷಧಗಳನ್ನು ಮಾರಿಕೊಂಡು ಅಥವಾ ತಮಗೆ ಬೇಕಾದವರಿಗೆ ವಿನಿಯೋಗಿಸಿಕೊಂಡು ಔಷಧಕ್ಕೋಸ್ಕರ ಆಸ್ಪತ್ರೆಗೆ ಬರತಕ್ಕವರಿಗೆ ಒಳ್ಳೇ ಔಷಧಗಳನ್ನು ಕೊಡುವದಿಲ್ಲ. ಈ ಅಂಶವನ್ನು ಡಾಕ್ಟರುಗಳು ಪರೀಕ್ಷೆ ಮಾಡುವದಕ್ಕೆ ಉಪಕ್ರಮ ಮಾಡಿದಹೊರ್ತು ಈ ಆಸ್ಪತ್ರೆಗಳಿಗಾಗಿ ಆಗತಕ್ಕ ಖರ್ಚಿಗೆ ಸಾರ್ಥಕ್ಯ ಉಂಟಾಗಲಾರದು.—ವೃ. ಪ.

ಕ್ರಿಸ್ಮಸ್‌ಹಬ್ಬದಲ್ಲಿ ರಷ್ಯಾದೇಶ ನಿವಾಸಿಗಳಾದ ತರುಣಿಯರು (೧೬ ವರ್ಷಕ್ಕೆ ಕಡಿಮೆಯಾಗಿಲ್ಲದಿರತಕ್ಕವರು) ಮುಂದೆ ತಮಗೆ ಸಂಭವಿಸಬಹುದಾದ ಕಷ್ಟ ಸುಖಗಳಿಗೆ ಸಮಭಾಗಿಯಾಗ ಬೇಕಾದ ಪತಿಯ ವಿಷಯವನ್ನು ತಿಳಿಯಬೇಕೆಂದು ತಮ್ಮ ಮನೋಗತವನ್ನು ಯಾರಿಗೂ ತಿಳಿಸದಂತೆ ಅರ್ಧರಾತ್ರಿಯಲ್ಲಿ ಎದ್ದು, ದೊಡ್ಡ ದೊಡ್ಡ ಎರಡು ಕನ್ನಡಿಗಳನ್ನು ಸಮಿಪದಲ್ಲಿ ಇರಿಸಿ ಅವುಗಳ ಮಧ್ಯೆ ತಾನು ಕೂತುಕೊಂಡು ತನ್ನ ಉಭಯಪಾರ್ಶ್ವಗಳಲ್ಲೂ, ಒಂದೊಂದು ದೀಪವನ್ನು ಹೃತಿಸುವರು. ತಮಗೆ ಘಟಿಸತಕ್ಕವನು ತಮಗೆ ಅನುರೂಪನಾಗಿರುವ ಪತ್ನಿಯಲ್ಲಿ ಆ ಕನ್ನಡಿಗಳಲ್ಲಿ ೧೨ ದೀಪಗಳು ಕಾಣು

ವಂತೆ; ಅಂತವನ ಪ್ರತಿಬಿಂಬವುಕೂಡ ಆ ಕನ್ನಡಿಯಲ್ಲಿ ಕಾಣುವದಂತೆ, ಅಲ್ಲದೆ ಮೊದಲೇ ಇಬ್ಬರು ಊಟ ಮಾಡುವದಕ್ಕೆ ಬೇಕಾದ ಸಾಮಾನುಗಳನ್ನೆಲ್ಲ ಸಿದ್ಧಪಡಿಸಿಕೊಂಡು ಇಂತವಳು ತಾನು ಊಟಕ್ಕೆ ಮೊದಲು ಮಾಡಿದಕೂಡಲೆ ಇವಳಕೂಡನೆ ಮುಂದೆ ಇವಳಿಗೆ ಪತಿಯಾಗತಕ್ಕವನ ಆಕಾರವು ಕೂಡಲೂ ಬಂದಿರುವಂತೆ ಕಾಣುವದು ಎಂಬ ಇತೀ ಮೊದಲಾದ ನೂರಾರು ಪದ್ಧತಿಗಳು ರಷ್ಯಾದೇಶದ ಕ್ರಿಸ್ತರಲ್ಲಿರುವದು.

ಲಂಡನ್ ಪಟ್ಟಣದಲ್ಲಿರುವ ಜೂಸಲ್ಲೀ ಎಂಬ ಬೀದಿಯ ೬ನೇ ನಂಬರ್ ಮನೆಯಕೆಳಭಾಗದಲ್ಲಿ ಮೂವರುಸ್ತ್ರೀಯರುವಾಸವಾಗಿರುತ್ತಾರೆ. ಇವರು ಸುಂದರರಾಗಿಯೂ ಸ್ವಚ್ಛವಾದ ಮುಖಗಳುಳ್ಳವರಾಗಿಯೂ ಅಲಂಕೃತರಾದವರಾಗಿಯೂ ಇರುತ್ತಾರೆ. ಇವರು ಪ್ರತಿದಿನದಲ್ಲಿಯೂ ಪುರುಷರಿಗೆ ಕ್ಷೌರ ಮಾಡಿ ಜೀವಿಸುವರು. ಈ ಕಸಬಿನಲ್ಲಿ ಪುರುಷರಿಗಿಂತ ಬಹಳ ಕುಶಲರಾಗಿರುವರು. ಈ ಮೂವರೂ ಸೇರಿ ಈಗ್ಗೆ ಮೂರು ನಾಲ್ಕು ದಿನಗಳ ಹಿಂದೆ ೫೩ ಮಂದಿಗೆ ಹಜಾಮತ್ ಮಾಡಿದರು. ಇವರು ಬಹಳ ಉತ್ಕೃಷ್ಟವಾದ ರೀತಿಯಿಂದ ಕ್ಷೌರ ಮಾಡುವದು ನೋಡಿ ಗಂಡುಸರೆಲ್ಲರೂ ಆಶ್ಚರ್ಯ ಪಡುತಲಿದಾರೆ. ಈ ಮೂವರುಮಂದಿ ಸ್ತ್ರೀಯರನ್ನೂ ಒಬ್ಬ ಸಾಹುಕಾರನು ನೌಕರಿಗಿಟ್ಟುಕೊಂಡಿರುವನು. ಇತರ ಹೆಂಗಸರಿಗೆ ಈ ವಿದ್ಯೆಯಂ ಕಲಿಸುವದಕ್ಕಾಗಿ ಸದರೀ ಸಾಹುಕಾರನು ಒಂದು ಇಷ್ಟಿಹಾರ್ ಮೂಲಕ ಈ ಕಸಬನ್ನು ಕಲಿತುಕೊಳ್ಳಲಿಕ್ಕೆ ಇಚ್ಛೆಯುಳ್ಳವರೆಲ್ಲರೂ ಮೇರೆ ಕಾಣತಕ್ಕವರಿಗೆ ದರವಾನ್ನು ಮಾಡಿಕೊಂಡರೆ ಅವರಿಗೆ ವಾರ ೧ಕ್ಕೆ ೧೦—೧೫ ರೂಪಾಯಿಗಳ ಪ್ರಕಾರ ಸಂಬಳ ಕೊಡಲ್ಪಡುವದೆಂದು ಘಾಯಿಷ್ ಮಾಡಿದ್ದನು. ಅದರ ಪ್ರಕಾರ ಇದುವರಿವಿಗೆ ೧೦೨ ಅರ್ಜಿಗಳು ಆತನಬಳಿಗೆ ಬಂದಿರುತ್ತವೆ. ಇದಲ್ಲದೆ ೫೩ ಜನ ಉಮೇದುವಾರರು ಸಹ ಬಂದು ಕೆಲಸ ಕಲಿತುಕೊಳ್ಳುವೆನೆಂದು ಅಪೇಕ್ಷಿಸುತ್ತಾರೆ. ಪ್ರತಿದಿನದಲ್ಲೂ ಸದರೀ ಸಾಹುಕಾರನ ಮನೆಯಬಾಗಿಲಿನಲ್ಲಿ ಬಹುಮಂದಿ ಗಂಡುಸರು ಕ್ಷೌರಾರ್ಥ ಗುಂಪುಗುಂಪಾಗಿ ಬರುತಲಿದಾರೆಂದು ಇಂಗ್ಲಿಷ್‌ಪತ್ರಿಕೆಯಿಂದ ತಿಳಿಸುತ್ತದೆ. ಈ ವಿಷಯವನ್ನು ಮುಂಬೈ ಪ್ರಾಂತದ ಹಜಾಮರು ನಿಗೆಯುಳ್ಳವರಾಗತಕ್ಕದ್ದಾಗಿರುತ್ತದೆ.

ಚೀನಾದೇಶದ ಚಕ್ರವರ್ತಿಯು ಒಂದುದಿನ ಸವೇಷಧಾರಿಯಾಗಿ ಪಟ್ಟಣವನ್ನು ಸಂಚಾರಮಾಡುತ್ತಿದ್ದಾಗ ಒಬ್ಬ ಭಿಕ್ಷುಕನು ವೃದ್ಧನಾದ ಒಬ್ಬ ಮನುಷ್ಯನಬೋಣನ್ನು ಕಸ್ತರಿಸುತಿದ್ದನು. ಆಗ ಚಕ್ರವರ್ತಿಯು ಜುಗುಪ್ಸೆಯಾಗಿ ಆತನಬಳಿಗೆಹೋಗಿ ತನ್ನ ಬಲವನ್ನೆಲ್ಲವುಪ್ಪ ಅಧಿಕ್ಷುಕನಿಗೆ ಒಂದು ಏಟನ್ನು ಹಾಕಿದನು. ಚೀನಾದೇಶದಲ್ಲಿ ಭಿಕ್ಷುಕರ ಪ್ರಾಬಲ್ಯವು ಬಹಳಜಾಸ್ತಿಯಾಗಿದೆ. ಭಿಕ್ಷುಕನವರು ಕೂಡ ಅವರನ್ನು ಕಂಡರೆ ಹೆದರುತ್ತಾರೆ. ಹೀಗಿರಲಾಗಿ ಆ ಭಿಕ್ಷುಕನಿಗೆ ಏಟುಬಿದ್ದಕೂಡಲೇ ನೂರಾರು ಜನ ಭಿಕ್ಷುಕರು ಸೇರಿ ವೇಷಧಾರಿಯಾದ ಆ ಚಕ್ರವರ್ತಿಯನ್ನು ಅಟ್ಟಿಕೊಂಡುಹೋದರು. ಆತನು ಸಮೀಪದಲ್ಲಿದ್ದ ಒಬ್ಬನ ಮನೆಯಲ್ಲಿ ಹೊಕ್ಕೊಂಡನು. ಕೂಡಲೆ ಭಿಕ್ಷುಕರುಬಂದು ಆ ಮನೆಯನ್ನು ಸುತ್ತಿಕೊಂಡು ಅವನನ್ನುಬಿಡದೆ ಇದ್ದರೆ ನಿನ್ನ ಮನೆಯನ್ನು ನೆಲಸಮ ಮಾಡುತ್ತೇವೆಂದು ಹೆದರಿಸಿದರು. ಆ ಮನೆಯ ಯಜಮಾನನು ಆತನನ್ನು ಒಪ್ಪಿಸಿಬಿಡುವದರಲ್ಲಿದ್ದನು. ಅಷ್ಟರೊಳಗಾಗಿ ಈ ಚಕ್ರವರ್ತಿಯು ಸ್ವಲ್ಪಹೊತ್ತು ಪುರಸತ್ತಾಗುವಂತೆ ಮಾಡಿ ಒಬ್ಬ ಸೇವಕನನ್ನು (?) ಒಂದು ಚೀಟನ್ನು ತನ್ನ ಸೇನಾಧಿಪತಿಗೆ ಬರೆದು ಸೇನೆಯನ್ನು ತರಿಸಿಕೊಂಡು ಈ ಭಿಕ್ಷುಕರ ಗುಂಪನ್ನು ದಸ್ತಗಿರಿ ಮಾಡಿ ಅವರಲ್ಲಿ ಬಹಳ ತಪ್ಪಿತಸ್ಥರೆಂದು ರುಜುವಾತಾದವರಿಗೆ ಮರಣದಂಡನೆಯನ್ನು ವಿಧಿಸಿದನು. ಈ ಹ್ಯಾರನು ಅವರವರ ಜೀವನವನ್ನು ಅವರು ಸಂಪಾದಿಸಿಕೊಳ್ಳುವದಕ್ಕೋಸ್ಕರ ಕೈಕಾಲು ಬಿಟ್ಟು ಮೊದಲಾದವುಗಳನ್ನು ಕೊಟ್ಟ

ಇರಲಾಗಿ ಅವುಗಳನ್ನು ಸದ್ವ್ಯಾಪಾರಗಳಲ್ಲಿ ವಿನಿಯೋಗಿಸದೆ ಸೋಮಾರಿ ಜನವೆಂದೆಲೂ ದುರ್ವ್ಯಾಪಾರವೆಂದಲೂ ಜೀವಿಸುವದು ದೊಡ್ಡ ಅಪರಾಧವೆಂದು ಗಣಿಸಬೇಕು.

ದೇವನಾಥರಾಪ ಬಹದೂರರವರಿಗೆ ಸೇರಿರುವ ಠಾಣದಿಂದ ಸಾಲ ತೀರಿಸುವಬಗ್ಗೆ ಒಂದು ಮುತ್ತಿನ ಅಂಗಿ, ಒಂದು ನವರತ್ನ ಖಚಿತವಾದ ದವಾಲಿ ಒಂದು ಮಕರಕಂಠಿ, ಈ ಮೂರನ್ನೂ ಹರಾಜ್ ಮಾಡಿಸಬೇಕೆಂದು ಶ್ರೀಮನ್ಮಹಾರಾಜರವರನ್ನು ಕೇಳಿಕೊಂಡದ್ದರಿಂದ ಅವರು ಈ ಕೆಲಸವನ್ನು ಅರಮನೆ ಅಧಿಕಾರಿಗಳು ನಡೆಸುವಂತೆ ಅಪ್ಪಣೆ ಮಾಡಿದರು. ಕಳೆದ ತಿಂಗಳ ೩೦ನೇ ತಾರೀಖಿನಿಂದ ಹರಾಜಾಗುವಂತೆ ಪ್ರಕಟನೆಯು ಆಯಿತು. ಪ್ರಥಮತಃ ಹರಾಜ್ ಮೂರುದಿವಸ ನಡೆಯಬೇಕೆಂದು ಉದ್ದೇಶವಿತ್ತು. ಮುತ್ತಿನ ಅಂಗಿಯಲ್ಲಿ ಸುಮಾರು ೨೩ ಸಾವಿರ ಮುತ್ತಿನವರಿಗಳು ಇತ್ತು. ಕೆಲವುಜನ ವರ್ತಕರು ಮುತ್ತಿಗೆ ಒಂದು ರೂಪಾಯಿಪ್ರಕಾರ ತೆಗದುಕೊಳ್ಳುವಂತ ದೇವನಾಥರಾವ ಬಹದೂರರವರಲ್ಲಿ ಪ್ರಸ್ತಾಪ ಮಾಡಿದ್ದರೆಂತೆಯೂ ತಿಳಿಯಬರುತ್ತದೆ. ದವಾಲಿ ಮಕರಕಂಠಿ, ಇವೆರಡಕ್ಕೂ ೫೦ ಸಾವಿರ ರೂಪಾಯಿ ಅಂದಾಜ್ ಹಾಕಿತ್ತು. ಹರಾಜ್ ಉಪಕ್ರಮದಲ್ಲೇ ನಮ್ಮ ವಿರ್ವಾಣರವರ ಬೀಗರಾದ ಪಿ. ರಾ॥ ಅಂಬಳೇ ಪಂಡಿತರವರು ಬೀಡಿತಮಾಡುವದಕ್ಕೆ ಪ್ರಾರಂಭಮಾಡಿದರು. ಇದರಿಂದ ಅನೇಕರು ಬಲವಾದ್ದರೋಲದ ನಮಗೆ ಯಾತಕ್ಕೆಂದು ಈ ಸಂಪಗೆ ಬರುವದೇ ಸರಿಯಲ್ಲವೆಂದು ಭಾವಿಸಿ ಕೊಳ್ಳಲಿಲ್ಲ. ಮಕರಕಂಠಿಯೂ ದವಾಲಿಯೂ ಇವರುನೂರಿದ ೯೬ ಸಾವಿರ ರೂಪಾಯಿ ಬೀಡಿಗೆ ನಿಂತುಬಿಟ್ಟಿತು. ಮುತ್ತಿನ ಅಂಗಿಗೆ ಇವರು ಬೀಡಿಮಾಡದೆ ಇದ್ದದರಿಂದಲೂ ಇತರರು ಇದಕ್ಕೆ ಪ್ರವೇಶಿಸದೆ ಇದ್ದದರಿಂದಲೂ ಒಬ್ಬ ಮುಸ್ಲಿನಿಯವರು ೧೫ಸಾವಿರ ರೂಪಾಯಿ ಬೀಡಿಗೆ ನಿಂತಂತೆ ತಿಳಿಯಬರುತ್ತದೆ.—ವ್ಯ. ಪ.

ಜೈಲುಗಳಲ್ಲಿಯೂ ಲಾಕಪ್‌ಗಳಲ್ಲಿಯೂ ಸಜಾ ಅನುಭವಿಸುವ ಮತ್ತು ವರ್ಯಾಪ್ತಿಯಲ್ಲಿರುವ ವ್ಯಕ್ತಿಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ರವಾನಿಸುವಾಗಿನ ವಿಷಯದಲ್ಲಿ ಬಂದೀಖಾನೆಗಳ ಇನ್ಸ್‌ಪೆಕ್ಟರ್ ಜನರಲ್ಲವರು ಹುಕುಂ ಮಾಡಿರುತ್ತಾರೇನಂದರೆ:—ಇಂತಾ ವ್ಯಕ್ತಿಗಳು ಯಾರಾದರೂ ಪ್ರಬಲ ಕಾಯಿಲೆಯಿಂದ ಕೃಶರಾದವರ ಪಕ್ಷದಲ್ಲಿ ಅಂತವರನ್ನ ಜೈಲ್ ಆಸ್ಪತ್ರೆ ಇರುವ ಕಡೆಗಳಲ್ಲಿ ಅಂತಾ ಆಸ್ಪತ್ರೆಗೆ ರವಾನಿಸಬೇಕು. ಜೈಲ್ ಆಸ್ಪತ್ರೆ ಇಲ್ಲದಿರುವ ಸ್ಥಳಗಳಲ್ಲಿ ಲೋಕಲ್‌ಫಂಡು ವೈದ್ಯರ ಸಹಾಯವನ್ನು ಅಪೇಕ್ಷಿಸತಕ್ಕದ್ದು. ಸಜಾ ಅನುಭವಿಸುವ ಯಾವ ವರ್ಯಾಪ್ತಿಯಲ್ಲಿರುವ ಯಾವ ವ್ಯಕ್ತಿಯನ್ನೂ ಪ್ರಯಾಣ ಮಾಡಲಿಕ್ಕೆ ಅರ್ಹನಾಗಿರುತ್ತಾನೆಂದು ಲಾಕಪ್ ಚಾರ್ಜಿನಲ್ಲಿರುವ ಅಧಿಕಾರಿಯು ಸಿದ್ಧನೋತಿಕ ವೃತ್ತಿಪಡುವವರಿಗೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ತನಿಖೆಬಗ್ಗಾಗಲಿ ಇತರೆಕಲಸದಬಗ್ಗಾಗಲಿ ಕಳುಹಿಸಕೂಡದು. ಸಂಶಯಾಸ್ಪದವಾದ ಸಂದರ್ಭಗಳಲ್ಲಿ ಸದರೀ ಲಾಕಪ್ ಅಧಿಕಾರಿಗಳು ಮೆಡಿಕಲ್ ಅಧಿಕಾರಿಯ ಅಭಿಪ್ರಾಯವನ್ನು ಬರವಣಿಗೆಮೂಲಕ ಅಪೇಕ್ಷಿಸಿ ಆತನ ಅಭಿಪ್ರಾಯವನ್ನು ಲಿಖಿತಮೂಲಕಪಡೆಯತಕ್ಕದ್ದು. ಪ್ರಯಾಣ ಮಾಡುತ್ತಿರುವಲ್ಲಿ ಮಾರ್ಗದಲ್ಲಿ ಕಾಹಿಲೆಯಾಗುವ ವ್ಯಕ್ತಿಗಳ ವಿಷಯದಲ್ಲಿಯೂ ಇದೇ ಮುಂಜಾಗ್ರತೆಗಳನ್ನನುಸರಿಸಬೇಕು. ಪ್ರತಿ ಮೊಕದ್ದಮೆ ಸಂಗತ್ಯಾನುಸಾರ ಗುಡಿಯಲ್ಲಾಗಲಿ ಇತರ ವಿಧವಾಗಿಯಾಗಲಿ ಅಂತಾವ್ಯಕ್ತಿಯನ್ನ ಅತ್ಯಂತ ಸಮೀಪದಲ್ಲಿರುವ ಆಸ್ಪತ್ರೆಗೆ ರವಾನಿಸಬೇಕು. ಈಗ ಪ್ರಯುಕ್ತ ಪ್ರತಿ ತಾಲ್ಲೂಕಿನಲ್ಲೂ ಆಸ್ಪತ್ರೆಗಳು ಸ್ಥಾಪಿಸಲ್ಪಟ್ಟಿರುವದರಿಂದ ಮೇಲಿನ ಹುಕುಮನ್ನು ಜಾರೀಮಾಡುವ ವಿಷಯದಲ್ಲಿ ಯಾವ ವಿಘ್ನವಾದ ತೊಂದರೆಯೂ ಇರಲಾರದೆಂದು ಇನ್ಸ್‌ಪೆಕ್ಟರ್ ಜನರಲ್‌ರವರು ತಾತ್ಪರ್ಯಪಡುತ್ತಾರೆ. ಈ ಹುಕುಮನ್ನು ಮುದ್ರಿತವಾಗಿ ಜಾರೀಮಾಡಿರುವ ವಿಷಯದಲ್ಲಿ ಲಾಕಪ್ ವ

ಸದ ಲಾಕಪುಗಳ ಚಾರ್ಜಿನಲ್ಲಿರುವ ಉದ್ಯೋಗಸ್ಥರು ಜವಾಬ್ದಾರರಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಬಂದೀಖಾನೆಗಳ ಛಾರ್ಜಿನಲ್ಲಿರತಕ್ಕ ಅಧಿಕಾರಿಗಳೆಲ್ಲರೂ ಮುಖ್ಯವಾಗಿಗಮನಿಸತಕ್ಕದ್ದು.

ಜಾತಿಯನ್ನು ಕಳೆದುಕೊಳ್ಳದೆ ಇಂಗ್ಲಂಡಿಗೆ ತಮ್ಮ ಮಗನನ್ನು ಕಳುಹಿಸಬೇಕೆಂದು ಡಾಕ್ಟರಿಗೊಂದ ಒಬ್ಬ ದೊಡ್ಡ ಮನುಷ್ಯರಿಗೆ ಡಾಕ್ಟರ್ ಬೈಡಿನರ್‌ಯವರು ಬರೆದಿದಾರೇನಂದರೆ,- ಸ್ಟೀಮರ್ ಯಾನೆ ಹಡಗುಗಳಲ್ಲಿ ೧ನೇ ಯಾ ೨ನೇ ತರಗತಿ ಕೊಟ್ಟಡಿಯನ್ನು ತೆಗದುಕೊಳ್ಳಬೇಕು. ಇದರಲ್ಲಿ ೮—೪ ಮಂದಿಗೆ ಅನುಕೂಲವಾದ ಸ್ಥಳವಿರಬೇಕು. ಹಿಂದುಗಳಲ್ಲದವರು ಇವರ ಭೋಜನ ಕಾಲದಲ್ಲಿ ನೋಡದಿರುವಂತೆ ಒಂದು ದೊಡ್ಡ ಮೇಜನ್ನು ಹಾಕಿರಬೇಕು. ಚಿಕಿತ್ಸೆಕ್ಕೆ ಹೆಚ್ಚು ನೀರಿಕ್ಕೂಡದಬೇಕು. ಸ್ನಾನದ ಬಗ್ಗೆ ಮತ್ತು ಮೂತ್ರ ವಿಸರ್ಜನದಬಗ್ಗೆ ಪ್ರತ್ಯೇಕವಾದ ಕೊಠಡಿಗಳಿದ್ದರೆ ಒಳ್ಳೇದು. ಅಡಿಗೆಮಾಡುವ ಸ್ಥಳಕ್ಕೂ ಹಡಗಿನ ಪಲಿಗೆಗಳಿಗೂ ಸಂಬಂಧವಿಲ್ಲದೆ ಇರಬೇಕು. ಕಷ್ಟವಿದ್ದಾದರೆ ಒಳ್ಳೇದು. ಇಲ್ಲಿ ಮಣ್ಣು ಗಡಿಗೆಗಳಲ್ಲಿ ನೀರಿಟ್ಟಿದ್ದು ಏಡನ್ ಮೊದಲಾದ ಮುಖ್ಯಸ್ಥಳಗಳಲ್ಲಿ ಭರ್ತಿಮಾಡಿಕೊಳ್ಳಬೇಕು. ಅಡಿಗೆಯವನು ಬುದ್ಧಿಶಾಲಿಯಾಗಿಯೂ ಧೈರ್ಯಶಾಲಿಯಾಗಿಯೂ ಇರಬೇಕು. ಜಗಳಗಂಟಿಯಾಗ ಬಾರದು. ತನ್ನ ಮತಾಚಾರಗಳಿಗೆ ವಿರುದ್ಧವಾದ ವಾತುಗಳಿಂದ ಕೋಪವುಂಟಾಗತಕ್ಕವನಾಗಬಾರದು. ಸೌಶೀಲ್ಯ ವುಳ್ಳವನಾಗಿರಬೇಕು. ಸದಾ ಧರ್ಮಾನುಸಾರ ನಡೆಯತಕ್ಕವನಾಗಿರಬೇಕು. ಪ್ರಯಾಣ ಮಾಡುವ ದೊಡ್ಡಮನುಷ್ಯರ ಮಕ್ಕಳು ಸಹ ಮೇಲ್ಕಂಡಂತೆ ವರ್ತಿಸಬೇಕಲ್ಲದೆ ಲಂಡನ್ ಪಟ್ಟಣ ಸೇರಿದಮೇಲೆ ಮೊದಲೇ ಪರಿಚಿತಿಯನ್ನು ಕಳೆದುಕೊಂಡು ಇವರನ್ನೂ ತಮ್ಮ ಜೊತೆಗೆ ಸೇರಿಸಿಕೊಳ್ಳಲಿಕ್ಕೆ ಯತ್ನಿಸುವ ಜನಗಳ ಸಹವಾಸ ಮಾಡದಿರಬೇಕು. ಶುಷ್ಕವಾದ ಆಹಾರ ಪದಾರ್ಥಗಳನ್ನೂ ಫಲಗಳನ್ನೂ ಸಿದ್ಧವಾಗಿ ಹಡಗಿನಲ್ಲಿ ಜಮಾಯಿಸಿ ಕೊಳ್ಳಬೇಕು. ಒಂದು ಕಷ್ಟಿಣದ ಒಲೆಯನ್ನೂ ತೆಗದುಕೊಂಡು ಹೋಗಬೇಕು. ಇಂಗ್ಲೆಂಡಿಗೆ ಸೇರಿದವಾಗ ನಾನಾಗಲಿ ನನ್ನ ಮಗನಾಗಲಿ ಅವರನ್ನು ಬರಮಾಡಿ ಕೊಳ್ಳುವೆವು. ಪಿ ಅಂಡ್ ಓ ಕಂಪೆನಿಯವರ ಸಂಗಡ ಏರ್ಪಾಡುಗಳನ್ನು ಮಾಡಿದರೆ ತ್ರೀನೆ ನೀವೇ ಚೆನ್ನಾಗಿಯೆಹೋಗಿ ತಕ್ಕ ಏರ್ಪಾಡುಗಳನ್ನು ಮಾಡಿ ಮಾರ್ಗದಲ್ಲಿ ನಡೆಯತಕ್ಕ ರೀತಿಯನ್ನು ಕುರಿತು ಹಡಗಿನ ಯಜಮಾನನ ಕೈಯಲ್ಲಿ ಕಾಗದ ಬರೆದುಕೊಡಬೇಕು. ಈ ಕಾಗದದ ಪ್ರಕಾರ ನಡೆದಬಗ್ಗೆ ಪ್ರಯಾಣ ಮಾಡಿದವರ ರುಜು ಮತ್ತು ಹಡಗಿನ ಯಜಮಾನನ ಅತ್ಯ ರುಜುವಿನ ಸಹಿತ ಕಾಗದವನ್ನು ನನಗೆ ಕೊಡಬೇಕು. ಹಡಗಿನ ಬಾಜಾರಿಯಾನೆ ಬಾಡಿಗೆಯಲ್ಲಿ ಆಹಾರದ ಖರ್ಚು ಸೇರಿರುವದಾದ್ದರಿಂದ ಆಹಾರದ ಹಸೀ ಪದಾರ್ಥಗಳು ಹಡಗಿನವರಿಂದಲೇ ಕೊಡಲ್ಪಡುವವು ನೀವೇ ಆ ಪದಾರ್ಥಗಳನ್ನು ತೆಗದುಕೊಂಡು ಹೋಗುವದು ಅನ್ಯಾಯವೆಂದು ನಿಮಗೆ ತೋರುವದಕ್ಕೆ ಹೋಗಬಾರದು. ಇದರಿಂದ ಹಡಗಿನ ಬಾಡಿಗೆ ಕಡಿಮೆಯಾಗಲಾರದು. ಇಂಡಿಯಾದಲ್ಲಿದ್ದಾಗ ಧರಿಸುವ ಉಡುಪನ್ನು ಧರಿಸುತ್ತಿರೋ ಅಂತಾ ಉಡುಪನ್ನೇ ಇಂಗ್ಲಂಡಿನಲ್ಲಿಯೂ ಧರಿಸಬೇಕೆಂಬುದು ನನ್ನ ತಾತ್ಪರ್ಯ, ಆದರೆ ಇಂಗ್ಲೆಂಡಿನ ಚಳಿಕಾಲಕ್ಕಾಗಿ ಹೆಚ್ಚು ಕಂಬಳಿಗಳನ್ನು ತರಬೇಕು. ಇತರ ದೇಶದ ಪದಾರ್ಥಗಳಿಂದ ಮಾಡಿದ ಉಡುಪನ್ನು ತಮ್ಮ ವೃತಿಗಳು ಧರಿಸಕೂಡದೆಂದು ಬೋಧಪುರದ ಮಹಾರಾಜರು ಮಾಡಿರುವ ಹುಕುಂ ನನಗೆ ಬಹಳ ಸಮ್ಮತವಾಗಿದೆ. ಯೂರೋಪಿಯನ್ ಕ್ರಮದ ಉಡುಪುಗಳಂ ಧರಿಸುವದು ಹಿಂದೂಗಳಿಗೆ ಚೆನ್ನಾಗಿರಲಾರದು, ಎಂಬದು.

Bangalore :— Printed and published at the Karnataka Press, No. 199, Sarvagna Mandiram Road Pettah—1890

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಕಾಮವಿವಿದವೃತ್ತ್ಯುಪಗಮಾರ್ಥಕರ್ನಾಟಕಪ್ರಕಾಶನಪರಾಭಿಧಾಪ್ರತಿಪತ್ರಿಕಾಹಿತಾಶೋಭಿತಾ॥ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ವಿಶಾಸುಪರಿಪೋಷಿತಾದಿಶತಿಮಾನಸಂಸಂಮುದಂ

Vol. XVII] BANGALORE—MONDAY, MAY 19 1890 [No. 20.

ಸಂಪುಟ ೧೭.] ಬೆಂಗಳೂರು—ಸನ್ ೧೮೯೦ನೇ ಇಸವಿ ಮೇ ೧೯ ನೇ ತಾರೀಖ್ ಸೋಮವಾರ. [ಸಂಖ್ಯೆ ೨೦

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಕಾಲ್ ಗಳ್ಳ	ಸ್ಥಳದವರಿಗೆ ಹಾಕಲ್ಪಡದೆ	ಪರಸ್ಥಳದವರಿಗೆ ಹಾಸಲ್‌ಸೇರಿ
ಮುಂಗಡವಾಗಿ ಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡ ಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ ದಸ್ತಾವಜು ಮಾಡಿದ ತಾರೀಖ್ ಮೊದಲು ಒಂದು ತಿಂಗಳೊಳಗಾಗಿ ಚಂದಾ ಹಣವನ್ನು ಕಳುಹಿಸದವರಿಗೆ ಪಾತ್ರಿಪೆ ಅಡ್ವಾನ್ಸ್ ದರದಂತೆ ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತರಿಸಿಕೊಳ್ಳಬಹುದು. ಮೂರು ತಿಂಗಳಿಗಿಂತ ಕಡಿಮೆಯಾಗಿ ಚಂದಾ ಹಣವನ್ನು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ಮೊದಲು ಕಳುಹಿಸುವ ಅರ್ಧಭಾಗವು ತಲುಪಿದ್ದಕ್ಕೆ ನಮ್ಮ ಕಾಗದವು ಬಂದ ಕೂಡಲೆ ಬಾಕಿ ಅರ್ಧ ನೋಟನ್ನು ರವಾನಿಸತಕ್ಕದ್ದು. ಮನಿಆರ್ಡರ್ ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಡಿಸ್‌ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅರ್ಧಾಣೆಗಿಂತ ಹೆಚ್ಚಿನ ಸ್ಟಾಂಪುಗಳನ್ನು ಕಳುಹಿಸಕೂಡದು. ಡಿಸ್‌ಕೌಂಟ್ ಇಲ್ಲದೆ ಕಳುಹಿಸಲ್ಪಡುವ ಮೊಬಲಗಿನಲ್ಲಿ ಅದು ವಜಾಮಾಡಲ್ಪಟ್ಟು ಮಿಕ್ಕ ಮೊಬಲಗು ಲೆಕ್ಕಕ್ಕೆ ದಾಖಲ್ಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯದಕ್ಕೆ ಪಙ್ಕ್ತಿ ಒಂದಕ್ಕೆ	೦—೨—೦
ಎರಡನೆಯದಕ್ಕೆ ಪಙ್ಕ್ತಿ ಒಂದಕ್ಕೆ	೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟುಸಾರೆ ಪ್ರಕಟಿಸಬೇಕಾದರೂ ಪಙ್ಕ್ತಿ ಒಂದಕ್ಕೆ ೧ ಆಣೆಯಂತೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಖಾಯಿಮಾಗಿ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟುವರ್ಷ ಖಾಯಿಮ್ ಮಾಡಲ್ಪಡಬೇಕೋ ಆ ಅಂಶವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಪಕ್ಷಕ್ಕೆ ಅವರು ನಮಗೆ ನಿಲ್ಲಿಸುವಂತೆ ಬರೆಯುವತನಕ ಅವು ಪ್ರಕಟಿಸುತ್ತಿದ್ದು ಹೀಗೆ ಎಷ್ಟುವರ್ಷ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲೆಕಂಡ ದರದಂತೆ ಕಿಮ್ಮತ್ತ್ ವಸೂಲ್ಮಾಡಲ್ಪಡುವದು. ಪ್ರಕಟನೆಸುವಿಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆಯಾ ಶನಿವಾರದಿನ ಮಧ್ಯಾಹ್ನ ೨ ಘಂಟೆ ಒಳಗಾಗಿ ಕಳುಹಿಸಬೇಕು. ಪ್ರಕಟನೆಸುವಿಗ್ಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುಮಾಡಿ ದಸ್ತೂರು ಯಾವ ಕಾಗದವನ್ನು ಪ್ರಕಟಿಸಲಾರೆವು. ನಿರಾಕರಿಸಲ್ಪಟ್ಟ ಕಾಗದಗಳು ಮರುವಾಪಸ್ ಕಳುಹಿಸಲ್ಪಡಲಾರವು.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 0-0

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜು ಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದಸ್ತಾವೇಜುಗಳಿಗೆ ಸಿಕ್ಕೀ ಕೊಡಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ದೇಖಲ್ ಪ್ರತಿ ಒಂದಕ್ಕೆ ರೂ 5- 0—0

ಟಿ. ಬಿ. ವೆಂಕಟಾಚಾರ್,

ಅಕೌರ್. ಆಸ್ಪತ್ರಿ ರೋಡ್ ಪೇಟೆ, 41ನೇ ನಂ ಮನೆ.

ADVERTISEMNTS

ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ಬಿಕರಿಗೇ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು

ಸಂಸ್ಕೃತ ಗ್ರಂಥಗಳು.

	ಹಾಸಲ್ ಸೇರಿ ರೂ. ಆ ಪೈ
ಸಟೀಕಾ ವೈದ್ಯಸಾರ ಸಂಗ್ರಹ ...	೫ ೦ ೦
,, ಶಿವಗೀತೆ ...	೧ ೧ ೦
,, ಶಿವಾನಂದಲಹರಿ ..	೦ ೪ ೦
,, ಕಾಲಾಮೃತ ..	೧ ೨ ೦
,, ಮುಹೂರ್ತದರ್ಪಣ .	೦ ೧೨ ೦
,, ಬಾಲರಾಮಾಯಣ ..	೦ ೮ ೦
,, ಗುರುಪಿತಾ ಗೀತೆ .	೦ ೧ ೬
,, ಚಾಣಕ್ಯನೀತಿ (ಸಂಪೂರ್ಣ)	೦ ೩ ೦
ವಿಷ್ಣುಸಹಸ್ರನಾಮ ವ್ಯಾಖ್ಯೆ .	೦ ೫ ೦
ಸೂರ್ಯಸಹಸ್ರನಾಮ ...	೦ ೩ ೧
ಕೃಷ್ಣಕರ್ಣಾಮೃತ ...	೦ ೨ ೬
ತ್ರಿಶತೀ ಜೀವನ ಪೂಜಾ ...	೦ ೨ ೩
೧ ಕಾಂಡ ..	೦ ೧೧ ೯

ಕನ್ನಡ ಗ್ರಂಥಗಳು.

ಶುಕಸಪ್ತತಿ ಅಪ್ಪಿಲ್ ಪ್ರತಿ .	೩ ೦ ೦
ಬಿಟಿಪೀ ದಮ್ಮಯಿ	೦ ೮ ೦
ವೃಷಭೇಂದ್ರ ವಿಜಯ .	೧ ೪ ೦
ಪಂಚಾಬಾದ ಚಾಲುಕೀ ..	೦ ೪ ೦
ಹನುಮದ್ವಿಲಾಸ ..	೦ ೪ ೦
ಕಾಳೀಯಮರ್ದನ ..	೦ ೨ ೬
ಸುಭದ್ರಾಪರಿಣಯ ...	೦ ೨ ೬
ಶಶಿರೇಖಾ ಪರಿಣಯ .	೦ ೩ ೦
ಸುಧಾಮಚರಿತ್ರೆ .	೦ ೨ ೦
ವೈರಾಮಾಣ ಚರಿತ್ರೆ	೦ ೭ ೧
ಬಾಲಗ್ರಹ ಚಿಕಿತ್ಸೆ .	೦ ೨ ೬
ಮಹನ್ನುರ್ಡ ಲಾ ...	೧ ೦ ೦
ಭ್ರಾಂತಿ ವಿಲಾಸ ...	೦ ೧೨ ೦

ನೋಟೀಸ್.

ಇದರಿಂದ ನಮ್ಮ ಚಂದಾದಾರರಿಗೂ ಇತರರಿಗೂ ಪ್ರಕಟಪಡಿಸುವದೇನಂದರೆ —

೧೮೮೯ ನೇ ಇಸವಿ ಡಿಸೆಂಬರ್ ಆಖ್ಯೆರಿನವರಿವಿಗೆ ಚಂದಾ ಬಾಕಿಯನ್ನು ಪೂರಾ ಫೈಸಲ್ಮಾಡಿರತಕ್ಕ ಚಂದಾದಾರರ ಹೆಸರುಗಳನ್ನು ಮಾತ್ರ ನಾವು ರಿಜಿಸ್ಟರ್ ದಾಖಲ್ಮಾಡಿಕೊಂಡು ಈಜನವರಿ ಲಾಗಾಯತು ಪತ್ರಿಕೆ ಕಳುಹಿಸುತ್ತೇವೆ. ಅವರ ಪೈಕಿ ಯಾರಿಗಾದರು ಪತ್ರಿಕೆಯ ಅಪೇಕ್ಷೆ ಇಲ್ಲದಿದ್ದರೆ ಅಂತವರು ಕೂಡಲೇ ತಮ್ಮ ಅಭಿಪ್ರಾಯವನ್ನು ಮೂರುಕಾಸಿನ ಕಾರ್ಡಿನಲ್ಲಿ ನಮಗೆ ತಿಳಿಸಬಹುದು. ಪತ್ರಿಕೆಯ ಆವಶ್ಯಕತೆ ಇರತಕ್ಕವರು ಸಾಧ್ಯವಾದಷ್ಟು ತ್ವರೆಯಲ್ಲಿ ಚಂದಾ ಮೊಬಲಗನ್ನು ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಬೆಂಗಳೂರು. ತಾ ೫ನೇಜನವರಿ ೧೮೯೦. } ಟಿ. ಸಿ. ಶ್ರೀನಿವಾಸಾಚಾರ್, ಪ್ರೊಪ್ರೈಟರ್. ಕರ್ನಾಟಕ ಪ್ರಕಾಶಿಕಾ.

ಇಸ್ತಿಹಾರ್‌ನಾಮೆ.

ಬೆಂಗಳೂರು, ತಾ|| ೧ನೇ ಮೇ ೧೮೯೦.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವ ದೇನಂದರೆ,—ಬೆಂಗಳೂರು ದೊಡ್ಡಪೇಟೆಯಲ್ಲಿರುವ ಮತ್ತು ಪೂರ್ವದಲ್ಲಿ ಅಂಚೇಕಚ್ಚೇರಿ ಇರುತಲಿದ್ದ ಕಟ್ಟಡಕ್ಕೆ ಸೇರಿರುವ ಗಣೇಶನ ಗುಡಿಯಭಾಗ ವಿನಾ ಮಿಕ್ಕ ಭಾಗವೆಲ್ಲವು ಇದರಡಿ ನಮೂದಿಸಿರುವ ಪ್ರಕಾರ ಸನ್ ೧೮೯೦ನೇ ಇಸವಿ ಜೂನ್ ೨ನೇ ತಾರೀಖಿನಲ್ಲಿ ಸದರೀ ಕಟ್ಟಡವಿರುವ ಸ್ಥಳದೊಳು ಈ ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸರರ ಸಮಕ್ಷಮದೊಳು ಬಹಿರಂಗವಾದ ಹರಾಜ್‌ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನ ದಿನ ಬೆಳಗ್ಗೆ ೧೧ ಘಂಟೆಗೆ ಹರಾಜ್ ಶುರುವಾಗಿ ಬಿಡ್‌ದರಖಾಸ್ತುದಾರರಿಗೆ ಹರಾಜ್ ನಿಲ್ಲಿಸಲ್ಪಡುವದು.

೨. ಕ್ರಯದಾರನು ತನ್ನ ಸವಾಲ್ ಬೈದಾಗಿ ಹರಾಜ್ ನಿಂತಕೂಡಲೇ ಕ್ರಯದ ಮೊಬಲಗುಪೈಕಿ ಶೇಕಡಾ ೨೫ ರೂಪಾಯಿಗಳಂತೆ ಡಿಪಾಜಿಟಿಯಾಗಿ ಠೇವಣಿ ಇಡತಕ್ಕದ್ದು. ಕ್ರಯದ ಮೊಬಲಗುಪೈಕಿ ಬಾಕೀ ಮೊಬಲಗನ್ನು ಹರಾಜ್ ತಾರೀಖ್ ಲಾಗಾಯಿತು ೧೫ ದಿನಗಳೊಳಗಾಗಿ ಪಾವತಿ ಮಾಡದೇಹೋದ್ದರೆ ಅವರಿಂದಿಡಲ್ಪಟ್ಟಿರುವ ಠೇವಣಿ ಮೊಬಲಗು ದಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

೩. ಅಂತಾ ಡಿಪಾಜಿಟಿ ಮೊಬಲಗನ್ನು ಕೊಡದೆಹೋದರೆ ಅಥವಾ ಕ್ರಯದ ಬಾಕೀ ಮೊಬಲಗನ್ನು ಪಾವತಿ ಮಾಡದಿದ್ದರೆ ಸದರೀ ಕಟ್ಟಡವು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಿನಲ್ಲಿ ಮರಳಿ ಹರಾಜ್ ಹಾಕಲ್ಪಡುವದು.

೪ ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮೂಕ್ಕಾಲೀಕರ ಪರವಾಗಿ ದರಖಾಸ್ತು ಮಾಡುತ್ತಾರೆಯೋ ಆ ಅಂಶವನ್ನು ನಮೂದಿಸತಕ್ಕದ್ದು. ಮೂಕ್ಕಾಲೀಕರಾಗಿದ್ದಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜುಮಾಡಲ್ಪಟ್ಟ ಬರವಣಿಗೆಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿಸಲ್ಪಡುವದು.

೫ ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಕಟ್ಟಡದ ಹರಾಜ್ ಖಾಯಮಾದದ್ದಾಗಿರುವದಿಲ್ಲವು.

೬. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನು ದಿವಾನರವರು ಖಾಯಂಮಾಡಿದ ಕೂಡಲೇ ಕಟ್ಟಡವು ಆತನ ಸುಪರ್ದ್ ಮಾಡಲ್ಪಟ್ಟು ಡೆಪ್ಯುಟೀ ಕಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರ್ಟಿಫಿಕೇಟು ಆತನಿಗೆ ಕೊಡಲ್ಪಡುವದು.

೭. ಸದರೀ ಕಟ್ಟಡದ ನಮೂನೆಯು ಬೆಂಗಳೂರು ತಾಲ್ಲೂಕ್ ಕಚ್ಚೇರಿಯಲ್ಲಿ ಅಜಮಾಯಿಷಿಗೆ ದೊರೆಯುವದು.

ಕಟ್ಟಡದ ತಪ್ಸೀಲ್‌ಗಳು	ವಿಸ್ತೀರ್ಣ, ಸರಿಗಜಗಳು.		ಚಕ್ಕುಬಂದಿಗಳು.
ಗಣೇಶನ ಗುಡಿಗೆ ಎಡಪಾರ್ಶ್ವದಲ್ಲಿರತಕ್ಕ ದೊಡ್ಡಭಾಗವು	ಸುಮಾರ್	೧೬೯.	ಉತ್ತರಕ್ಕೆ—ದೊಮ್ಮ ಲಿಂಗಣ್ಣನವರ ಅಂಗಡಿ ಮತ್ತು ಗರುಡಾಚಾರ್ಯರ ಮನೆ. ಪೂರ್ವಕ್ಕೆ—ರಾಜಬೀದಿ. ದಕ್ಷಿಣಕ್ಕೆ—ಗಣೇಶನ ಗುಡಿ. ಪಶ್ಚಿಮಕ್ಕೆ—ಪ್ಲೀಡರ್ ಸೀತಾರಾಮಯ್ಯನವರ ಮತ್ತು ಕಲ್ಲಪ್ಪನವರ ಮನೆಗಳು.
ಖಾಲೀ ಜಮೀನ್	,,	೩೦	
ಸದರೀ ಖಾಲೀ ಜಮೀನಿನಲ್ಲಿರತಕ್ಕ ಮಣ್ಣು ಮಾಳಿಗೆಯುಳ್ಳ ಕಟ್ಟಡವು	,,	೪.	
ಗಣೇಶನ ಗುಡಿಗೆ ಬಲಭಾಗದಲ್ಲಿರುವ ಕಟ್ಟಡದ ಸಣ್ಣಭಾಗವು	,,	೪೦	ಉತ್ತರಕ್ಕೆ—ಗಣೇಶನ ಗುಡಿ. ಪೂರ್ವಕ್ಕೆ—ರಾಜಬೀದಿ. ದಕ್ಷಿಣಕ್ಕೆ—ಸಣ್ಣ ಗಲ್ಲಿ. ಪಶ್ಚಿಮಕ್ಕೆ—ಪ್ಲೀಡರ್ ಸೀತಾರಾಮಯ್ಯನವರ ಮನೆ.

G. RAGHUNATHA ROW,
For Deputy Commissioner,
Bangalore District.

Bangalore City Municipality

ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿ

ನೋಟೀಸ್.

ನಂಬರ್ 79

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

ಬೆಂಗಳೂರ್ ಷಹರ್ ಮ್ಯೂನಿಸಿಪಲ್ ಸರಹದ್ದಿನೊಳಗೆ ವಾರಸ್‌ದಾರರಿಲ್ಲದೆ ತಿರುಗಾಡುತಲಿರುವ ನಾಯಿಗಳು ಬರುವ ತಿಂಗಳ ಗುರೀ ತಾರೀಖ ಮೊದಲು ೧೮೯೦ನೇ ಇಸವಿ ಜೂನ್ ತಿಂಗಳ ೧೫ನೇ ತಾರೀಖಿನ ವರಿವಿಗೆ ಕೊಲ್ಲಲ್ಪಡುವವು. ತಮ್ಮ ತಮ್ಮ ನಾಯಿಗಳನ್ನು ಕಾಪಾಡಿಕೊಳ್ಳಬೇಕೆಂಬ ಇಚ್ಛೆಯುಳ್ಳವರೆಲ್ಲರು ಅವುಗಳನ್ನು ಕಟ್ಟಿಇಟ್ಟುಕೊಳ್ಳಬೇಕು, ಅಥವಾ ಬೀದಿಗಳಲ್ಲಿ ತಿರುಗಾಡುವದಕ್ಕೆ ಬಿಟ್ಟರೆ ಅವುಗಳಿಗೆ ಕೊರಳುಪಟ್ಟಿ ಹಾಕಬೇಕೆಂದು ಅಪೇಕ್ಷಿಸಲ್ಪಟ್ಟಿರುತ್ತಾರೆ.

ಸಿಟಿ ಮ್ಯೂನಿಸಿಪಲ್ ಕಮಿಷನ್ ಆಫೀಸ್ ಬೆಂಗಳೂರು, ತಾ|| ೩೦ನೇ ಏಪ್ರಿಲ್ ೧೮೯೦ } A. S. RAGAVACHARLU, *Vice President, City Muni Commission*

ಸೂಚನೆ.

ಮನೆಗಳಲ್ಲಿ ಗಿಲಿಟ್ ಮಾಡುವದಕ್ಕೆ ಅನುಕೂಲವಾದ ಬೆಳ್ಳಿ ದ್ರಾವಕವು.

ಈ ಬೆಳ್ಳೀ ದ್ರಾವಕವು ನೈಜವಾದ ಬೆಳ್ಳಿ ತಟ್ಟೆಗಳ ಮೇಲೂ, ತಾಮ್ರ, ಹಿತ್ತಾಳೆ ವಗೈರೆ ವಿಶಿಷ್ಟ ಪದಾರ್ಥಗಳ ಮೇಲೂ ಹಚ್ಚಿ ಉಜ್ಜುವದರ ಮೂಲಕ ಗಿಲಿಟ್ ಮಾಡುವಿಕ್ಕೆ ಬಹಳ ಉಪಯುಕ್ತವಾದದ್ದಾಗಿರುತ್ತದೆ. ಇದಲ್ಲದೆ ಸದರೀ ದ್ರಾವಕವು ಚಿನ್ನ ಮತ್ತು ಬೆಳ್ಳಿ ಒಡವೆಗಳ ಮಷ್ಟ ತೆಗೆಯುವಿಕೆಕ್ಕೂ ಅವುಗಳಿಗೆ ಮೆರುಗು ಕೊಡುವಿಕೆಕ್ಕೂ ಸಹ ಪ್ರಯೋಜನಕಾರಿಯಾದದ್ದು. ಇದರಿಂದ ಇತರವಿಧದಿಂ ಲಭಿಸದಂತಾ ಕಾಂತಿ ಯುಂಟಾಗುವದು. ಕಪಿಲ್ಯಾ ಬಣ್ಣವುಳ್ಳ ಚಿನ್ನಕ್ಕೆ ಉತ್ಕೃಷ್ಟವಾದ ಮೆರುಗು ಪದಾರ್ಥದಿಂದುಂಟಾಗದಂತಾ ಕಾಂತಿಯನ್ನು ಉಂಟುಮಾಡುವದು. ಶುದ್ಧವಾದ ಬೆಳ್ಳಿ ಯುಂಡಲೇ ಸದರೀ ದ್ರಾವಕವು ತಯಾರ್ಮಾಡಲ್ಪಟ್ಟದ್ದಾಗಿರುತ್ತದೆಂಬದಕ್ಕೆ ಬೇಕಾದ ಭರವಸೆ ಕೊಡಲ್ಪಡುವದು. ಇದು ಗಿಲಿಟ್ ಮಾಡುವದಕ್ಕಿಂತ ಬಹಳ ಅಗ್ಗವಾಗಿರುವದು. ಕೂಡಲೇ ಒಂದು ಸೀಸೆಯನ್ನು ತರಿಸಿಕೊಂಡು ಅದರಿಂದ ಯಾವ ಕೆಡಕೂ ಉಂಟಾಗದಿರುವದನ್ನು ಅಜಮಾಯಿಷೀ ಮಾಡಿ ನೋಡಬಹುದು

ಇದರ ಕ್ರಯ ಸೀಸೆ ೧ ಕ್ಕೆ ೨—೪—೦

ಚಿನ್ನದ ದ್ರಾವಕವು.

ಇದು ಬೆಳ್ಳಿ, ಹಿತ್ತಾಳೆ, ತಾಮ್ರ ವಗೈರೆ ಪದಾರ್ಥಗಳನ್ನು ಗಿಲ್ಟು ಮಾಡಲಿಕ್ಕೆ ಬಹಳ ಉಪಯುಕ್ತವಾಗಿರುವದಲ್ಲದೆ ಶುದ್ಧವಾದ ಬಂಗಾರದಲ್ಲಿ ತಯಾರಾದದ್ದಾಗಿರುತ್ತದೆ. ಬೆಳ್ಳಿ ಆಭರಣಗಳನ್ನು ಗಿಲ್ಟು ಮಾಡಲಿಕ್ಕೆ ಈ ದ್ರಾವಕವು ಕೇವಲ ಪ್ರಯೋಜನಕಾರಿಯಾಗಿರುವದು.

ಇದರ ಕ್ರಯ ಸೀಸೆ ೧ ಕ್ಕೆ ೩—೮—೦

ಬೇಕಾದವರು ಅಜಮೀರ್‌ನಲ್ಲಿರುವ ಬೆಳ್ಳೀ ಕಂಪೆನಿಯ ಮ್ಯಾನೇಜರಿಗೆ ಬರೆದು ತರಿಸಿಕೊಳ್ಳಬಹುದು.

Bangalore City Municipality.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಸನ್ ೧೮೯೦ನೇ ಇಸವಿ ಮೇ ೨೩ನೇ ತಾರೀಖ್ ಶುಕ್ರವಾರ ಪ್ರಾತಃಕಾಲ ೭½ ಘಂಟೆಗೆ ಸಿಟಿ ಮ್ಯುನಿಸಿಪಲ್ ಸಭಿಕರು ತಮ್ಮ ಆಫೀಸ್ ಕಟ್ಟಡದಲ್ಲಿ ಸಭೆಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳ ಯಾದಿಯು.

೧. ಸನ್ ೧೮೯೦ನೇ ಇಸವಿ ಏಪ್ರಿಲ್ ತಿಂಗಳ ಬಾಬತು ಚಾಲತಿನಗದು ಜಮಾ ಖರ್ಚು ಲೆಕ್ಕ ಮತ್ತು ಮರಣಲೆಕ್ಕಗಳು.

೨. ಸಾಂಕ್ರಾಮಿಕ ರೋಗಗಳು ತಗಲದೆಯಿರತಕ್ಕ ವಿಷಯದಲ್ಲಿ ಕಟ್ಟಡಗಳ ತಯಾರೀಬಗ್ಗೆ ಹಿಡಿದ ಮೊತ್ತದಪೈಕಿ ಮ್ಯುನಿಸಿಪಾಲಿಟಿಯವರು ವಹಿಸಬೇಕಾದ ಅರ್ಧಭಾಗ ೪,೨೦೪ ರೂಪಾಯಿಗಳನ್ನು ಖಜಾನೆಗೆ ಕಳುಹಿಸಿಕೊಡಬೇಕೆಂದು ಅಪೇಕ್ಷಿಸಿ ಮೈಸೂರು ಕಂಟ್ರೋಲರವರು ಬರೆದ ಸನ್ ೧೮೯೦ನೇ ಇಸವಿ ಏಪ್ರಿಲ್ ೨ನೇ ಮುಕ್ಕಾಂ ೩೪೨ನೇ ನಂ. ಲೆಟರ್.

೩. ಆಕ್ಟ್ರಾಯಿ ವಿಷಯದಲ್ಲಿ ಕೆಲವು ಅಂಶಗಳನ್ನು ಸಿಟಿ ಪೋಲೀಸ್‌ನವರ ಆಲೋಚನೆಗೆ ತಂದು ಸಿವಿಲ್ ವ ಮಿಲಿಟರಿ ಸ್ಟೇಷನ್ ಮ್ಯುನಿಸಿಪಲ್ ಪ್ರೆಸಿಡೆಂಟರವರು ಬರೆದ ಸನ್ ೧೮೯೦ ನೇ ಇಸವಿ ಮೇ ಮಾಹೆ ೧ನೇ ಮುಕ್ಕಾಂ ೧೨೪ನೇ ನಂಬರ್‌ಲೆಟರ್.

೪. ಸನ್ ೧೮೯೦ನೇ ಇಸವಿ ಸೆಪ್ಟಂಬರ್ ೩೦ನೇ ತಾರೀಖಿಗೆ ಬೈವಾಗುವ ಛಪ್ಪಾಡಿ ಬಾಬತು ಮ್ಯುನಿಸಿಪಲ್ ಲೆಕ್ಕಗಳ ಆಡಿಟರಿಗೆ ಕೊಡಬೇಕಾದ ರುಸುಂ ವಿಷಯದಲ್ಲಿ ಬೋರ್ಡಿನವರು ಮಾಡಿದ ನಿರ್ಣಯವನ್ನು ಆಲೋಚಿಸಬೇಕೆಂದು ಅಪೇಕ್ಷಿಸಿ ಮೈಸೂರು ಕಂಟ್ರೋಲರವರು ಬರೆದ ಸನ್ ೧೮೯೦ನೇ ಇಸವಿ ಏಪ್ರಿಲ್ ೨೮ನೇ ಮುಕ್ಕಾಂ ೨೯೦ನೇ ನಂಬರ್ ಲೆಟರ್.

೫. ಮೃತಪಟ್ಟ ಮ. ಎಸ್. ಆರೋಗ್ಯಸ್ವಾಮಿ ಪಿಳ್ಳೆಯವರ ಸ್ಥಾನದೊಳು ಬೆಂಗಳೂರಲ್ಲಿ ರೋಗಿಗಳ ಮನೆಗಳಿಗೆ ಹೋಗಿ ಚಿಕಿತ್ಸೆ ಮಾಡುವದಕ್ಕೆ ಒಬ್ಬ ಮೆಡಿಕಲ್ ಆಫೀಸರನ್ನು ನೇಮಕಮಾಡಬೇಕೆಂದು ಮಿಸ್ಟರ್ ಅಣ್ಣಯ್ಯನವರು ತಿಳಿಸಿದ ಅಂಶ.

ಬೆಂಗಳೂರು, ೧೬ನೇ ಮೇ ಸನ್ ೧೮೯೦. } A. S. RAGHAVACHARLU, *Vice-President City Municipal Commn*

ಕರ್ಣಾಟಕ ಪ್ರಕಾಶಿಕೆ.

THE KARNATAKA PRAKASIKA.

MONDAY, MAY 19, 1890.
೧೮೯೦ನೇ ಮೇ ತಾ॥ ೧೯ ನೇ ಸೋಮವಾರ.

THE CITY MUNICIPAL VICE PRESIDENTSHIP.

ಬೆಂಗಳೂರು ಷಹರ್ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಾಗಿದ್ದ ರಾಯ ಬಹದೂರ್ ಮ॥ ರಾ॥ ರಾ॥ ಶ್ರೀನಿವಾಸಾಚಾರ್ಯರವರಿಗೆ ಗವರ್ನಮೆಂಟ್ ಅಂಡರ್ ಸೆಕ್ರೆಟರಿಕೆಲಸವಾಗಿ ಅವರು ತಮ್ಮ ಹಿಂದಿನ ಕೆಲಸವು ಬಿಟ್ಟುಹೋದವು. ಮೊದಲು ಸದರೀ ಕೆಲಸಕ್ಕೆ ಇದುವರೆವಿಗೆ ಕಾಯಮಾಗಿ ಯಾರೂ ನೇಮಕರಾಗದಿರುವದರಿಂದ ಬಹುಶಃ ಅದು ಮ್ಯುನಿಸಿಪಲ್ ಕಮಿಷನರ್‌ಗಳಲ್ಲೇ ಒಬ್ಬರಿಗೆ ಕೊಡಲ್ಪಡುವದೆಂಬ ನಂಬಿಕೆಯು ಅನೇಕರಿಗೆ ನಿರೂಢವಾಗಿರುತ್ತದೆ. ತತ್ರಾಪಿ ಮ್ಯುನಿಸಿಪಲ್ ಕಮಿಷನರ್‌ಗಳಲ್ಲೊಬ್ಬರಾಗಿರುವ ಮಹಾರಾಜಶ್ರೀ ಎ. ಎಸ್. ರಾಘವಾಚಾರ್ಯರು ಬಹಳ ಸಮರ್ಥರಾಗಿಯೂ, ನ್ಯಾಯನಿಷ್ಠರಾಗಿಯೂ, ಉಚಿತ ಸ್ವಭಾವವುಳ್ಳವರಾಗಿಯೂ ಇರುವರಲ್ಲದೆ ಪೂರ್ವದಲ್ಲಿ ಒಂದೆರಡಾವರ್ತಿ ಮ॥ ಶ್ರೀನಿವಾಸಾಚಾರ್ಯರವರ ಗೈರ್‌ಹಾಜರೀಕಾಲದಲ್ಲಿ ವೈಸ್ ಪ್ರೆಸಿಡೆಂಟ್ ಕೆಲಸವು ಆಕ್ಟಿಂಗ್ ತರೀಕ್ ತೃಪ್ತಿಕರವಾಗಿ ನಿರ್ವಹಿಸುತಲಿದ್ದದರಿಂದಲೂ, ಅವರೇ ಈ ಸಂದರ್ಭದಲ್ಲೂ ಸದರೀ ಕೆಲಸವನ್ನು ಆಕ್ಟಿಂಗ್ ತರೀಕ್ ನೋಡುತಲಿರುವದರಿಂದಲೂ, ನ್ಯಾಯತಃ ಅವರಿಗೇ ಕಾಯಮಾಗಬಹುದೆಂಬದಾಗಿ ಎಲ್ಲರೂ ನಿರೀಕ್ಷಿಸುತಲಿದ್ದಾರೆ. ಪರಂತು ಮ॥ ರಾಘವಾಚಾರ್ಯರನ್ನು ಡೆಪ್ಯುಟಿ ಕಮಿಷನರವರ ಶಿಫಾರಸ್ಸಿನ ಮೇಲೆ ಗವರ್ನಮೆಂಟಿನವರು ಹುಗಾಮಿಯಾಗಿ ನೇಮಕರ್ ಮಾಡಿದ ವಿಷಯದಲ್ಲಿ ಬಳದೇಶದ ಒಂದೆರಡು ಇಂಗ್ಲಿಷ್ ಮತ್ತು ಕನ್ನಡ ಪತ್ರಿಕೆಗಳೂ, ಮೈಸೂರು ಪ [illegible] ಪ್ರಿಸಾವಸ್ಥೆ [illegible] ದಾಗ ದೂಷಿಸುತ ಮ॥ ರಾಘವಾಚಾರ್ಯರಿಗೆ ಮ್ಯುನಿಸಿಪಲ್ ಕೆಲಸಗಳ ಅನುಭವವೇ ಸಾಲದೆಂತಲೂ, ಇಂತಾ ಅನುಭವ ಶೂನ್ಯರಾದವರನ್ನು ಕೆಲಸದಲ್ಲಿ ನೇಮಕಮಾಡಿ ತನ್ಮೂಲಕ ಅನೇಕಸಾವಿರ ಜನಗಳ ಆರೋಗ್ಯ ಭಾಗ್ಯಕ್ಕೆ ನ್ಯೂನತೆಯನ್ನುಂಟುಮಾಡಿದ್ದು ಅವಿವೇಕವೆಂತಲೂ ನಾನಾಪ್ರಕಾರವಾಗಿ ದೂಷಿಸುತಲಿವೆ. ಮ॥ ರಾಘವಾಚಾರ್ಯರಿಗೆ ಮ್ಯುನಿಸಿಪಲ್ ಅನುಭವವಿಲ್ಲವೆಂಬದು ಕೇವಲ ಭ್ರಾಂತಿಜನ್ಯವಾದದ್ದೇ ಹೊರತು ಆ ಪದ ವಿಷಯಕವಾದ ಜ್ಞಾನ ಯಥೋಚಿತವಿರುವಂತೆವರು ಆರೀತಿ ನುಡಿಯಲಾರರು. ಆದರೆ ಸದರೀ ವೃತ್ತಾಂತ ಪತ್ರಿಕೆಗಳು ಗವರ್ನಮೆಂಟಿನವರ ಏರ್ಪಾಡನ್ನು ಆಕ್ಷೇಪಿಸುವ ವಿಷ್ಯಂಭಣೆಯಲ್ಲಿ ತಮ್ಮ ಅಭಿಪ್ರಾಯಗಳ ಯುಕ್ತಾಯುಕ್ತತೆಗಳಂ ಪರಿಶೀಲಿಸುವಷ್ಟು ಸಹನೆಯನ್ನೂ ವಿರಾಮವನ್ನೂ ತೆಗದುಕೊಳ್ಳದೆ ದುಡುಕಿದಬಗ್ಗೆ ನಾವು ಬಹಳ ವಿಷಾದಿಸುವೆವು. ಈಗ ಕೆಲಸದಲ್ಲಿರತಕ್ಕವರ ಅರ್ಹತಾ ಪ್ರಯುಕ್ತವಾದ ವಿವಾದವಂತಿರಲಿ. ಮಾರ್ಚ್ ಮಾಹೆ ೧೭ನೇ ತಾರೀಖಿನ ಬಳದೇಶದ ಸ್ಪೆಕ್ಟೇಟರ್ ಪತ್ರಿಕೆಯಲ್ಲಿ ಇಲ್ಲಿನ ಷಹರ್ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಕೆಲಸವು ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಪೂರ್ವದೊಳು ಸಿವಿಲ್ ಸರ್ಜನ್ ರಾಗಿದ್ದ ಡಾಕ್ಟರ್ ಲಿಂಕ್ ಎಂಬವರಿಗೆ ಕೊಡಲ್ಪಡುವದೆಂಬದಾಗಿ ಮರಳಿ ತಿಳಿಸಲ್ಪಟ್ಟದೆಯೆಂತಲೂ ಈ ಅಂಶವು ನಿಜವಾದದ್ದಾಗಿರುವ ಪಕ್ಷಕ್ಕೆ ಸದರೀ ಏರ್ಪಾಡು ಅಂಗೀಕರಿಸತಕ್ಕದ್ದೆಂತಲೂ ಪ್ರಕಟಿಸಲ್ಪಟ್ಟಿರುತ್ತದೆ. ಈ ವಿಧವಾದ ಏರ್ಪಾಡು ಯೆಂದಿಗೂ ನಿಜವಾಗಕೂಡದೆಂದು ಕೋರುವೆವು. ಬಹುಶಃ ಡಾಕ್ಟರ್ ಲಿಂಕ್ ಯವರ ನೇಮಕರಾತಿಯ ವಿಷಯದಲ್ಲಿ ಗವರ್ನಮೆಂಟಿನವರು ಪರರ ದಾಕ್ಷಿಣ್ಯ ನಿರ್ಬಂಧಗಳಿಗೆ ಗುರಿಯಾಗಿರಬಹುದೆಂದು ಎಣಿಸುತ್ತೇವೆ. ಈ ಪ್ರಾಂತ ಷಹರ್ ನಿವಾಸಿಗಳು ಹಿಂದೂಗಳೆಂಬದನ್ನೂ, ಅವರ ಜಾತಿಮತ ಸಂಪ್ರದಾಯಗಳಿಗೆ ಡಾಕ್ಟರ್ ಲಿಂಕ್‌ಯವರು ಬಾಹ್ಯರೆಂಬದನ್ನೂ ಅವರ ಸಮಾಗಮವು ಹಿಂದುಗಳಿಗೆ ಪ್ರತಿದಿನದಲ್ಲಿಯೂ ಪ್ರಾಪ್ತವಾಗುತಲಿರುವದೆಂಬದನ್ನೂ ಗವರನ್ಮೆಂಟಿನವರು ನಿಗೇಯಲ್ಲಿಟ್ಟಿರಬೇಕಾದ್ದು ಆವಶ್ಯಕವೆಂದು ಭಾವಿಸುವೆವು. ಪೂರ್ವದಲ್ಲಿ ಡಾಕ್ಟರ್ ಆರಿಯವರೊಬ್ಬರೇ ಪೇಟೆ ಮತ್ತು ಕಂಟೋನ್ಮೆಂಟ್ ಮ್ಯುನಿಸಿಪಾಲಿಟಿಗಳೆರಡಕ್ಕೂ ಪ್ರೆಸಿಡೆಂಟರಾಗಿದ್ದ ಕಾಲದಲ್ಲಿ ಷಹರಿನ ಪುರೋಭಿವೃದ್ಧಿಯ ವಿಷಯದಲ್ಲಿಯೂ ಜನಗಳ ಯೋಗಕ್ಷೇಮಾಭಿವೃದ್ಧಿಯ ವಿಷಯದಲ್ಲಿಯೂ ಅವರು ಐದಂಪರ್ಯ್ಯೇಣ ತೋರಿಸಿದ ಅಶ್ರದ್ಧೆಯೂ, ನೇಟಿವ್‌ಗಳ ವಿಷಯದಲ್ಲಿ ವ್ಯಕ್ತಪಡಿಸಿದ ಅಗೌರವವೂ, ಪಕ್ಷಪಾತವೂ ಜಗತ್ಪ್ರಸಿದ್ಧಗಳಾಗಿಯೇ ಇವೆ. ಆದೊರ್ದ್ಧ ಮನುಷ್ಯರ ಆವಳಿಗಳು ನೇಟಿವ್‌ಗಳ ಚಿನಸ್ಮರಣೆಗೆ ವಿಷಯವಾಗದೆ ಹೋಗಲಿಲ್ಲವು. ಇದಲ್ಲದೆ ಇವರ ಸಂಬಂಧ ನಿವೃತ್ತಿಯನ್ನು ಪ್ರಜೆಗಳು ಆತುರವಾಗಿ ಕೋರುತಲಿದ್ದರು. ಕಡೆಗೆ ದೈವ ಕೃಪೆಯಿಂದ ಮ್ಯುನಿಸಿಪಾಲಿಟಿಗಳೆರಡೂ ಪ್ರತ್ಯೇಕಿಸಲ್ಪಟ್ಟು ಅವುಗಳಿಗೆ ಪ್ರತ್ಯೇಕವಾಗಿ ಇಬ್ಬರು ಪ್ರೆಸಿಡೆಂಟುಗಳು ನೇಮಕರಾದ ಕಾಲದಲ್ಲಿ ಷಹರ್ ಮ್ಯುನಿಸಿಪಾಲಿಟಿಗೆ ಮ॥ ಶ್ರೀನಿವಾಸಾಚಾರ್ಯರವರು ವೈಸ್ ಪ್ರೆಸಿಡೆಂಟರಾಗಿ ನೇಮಕರಾದರು. ಈ ದೊಡ್ಡ ಮನುಷ್ಯರು ಕಳೆದ ೧೦—೧೨ ವರುಷಗಳ ಕಾಲವಿಂ ತಮ್ಮ ಕೆಲಸವನ್ನು ಪ್ರಜೆಗಳಿಗೆ ಹಿತಕರವಾಗಿಯೂ, ಗವರ್ನಮೆಂಟಿನವರಿಗೆ ಉಚಿತಕರವಾಗಿಯೂ, ತಮಗೆ ಕೀರ್ತಿಕರವಾಗಿಯೂ ಏರುವಂತೆ ನಿರ್ವಹಿಸಿ ಅದರಿಂದ ನಿವೃತ್ತರಾದರು. ಮ॥ ಶ್ರೀನಿವಾಸಾಚಾರ್ಯರ ಆವಳಿಯಲ್ಲಿ ಷಹರ್ ಅಭಿವೃದ್ಧಿಯ ಬಗ್ಗೆ ಮಾಡಲ್ಪಟ್ಟ ಕೆಲವು ಕಾರ್ಯಗಳ ಮೇಲೆ ಅವರನ್ನು ಕೆಲವರು ದೂಷಿಸಿದಾಗ್ಯೂ ದೂಷಿಸಬಹುದು. ಲೋಕದಲ್ಲಿ ಸಾಮಾನ್ಯವಾಗಿ ಜನಗಳೆಲ್ಲರನ್ನೂ ರಂಜಿಸುವದೆಂಬುದು ಯಾರಿಗೂ ಸಾಧ್ಯವಲ್ಲವಾಗಿ ಆದರಿಂದ ಅಸಮಾಧಾನ ಪಟ್ಟವರೂ ಅನೇಕರಿರಬಹುದು. ಪರಂತು ಮ॥ ಶ್ರೀನಿವಾಸಾಚಾರ್ಯರವರು ಮಾಡಿದ ಹುಗಾಮಿ ಏರ್ಪಾಡುಗಳು ಸಹ ಪ್ರಜೆಗಳಿಗೆ ಶಾಶ್ವತವಾದ ಪ್ರಯೋಜನವನ್ನುಂಟುಮಾಡತಕ್ಕವಾಗಿದ್ದವೆಂಬ ಅಂಶವು ಸ್ಪಷ್ಟವಾಗಿರುತ್ತದೆ. ಇವರ ಮ್ಯುನಿಸಿಪಲ್ ಆಡಳಿತವು ಗವರ್ನಮೆಂಟಿನವರಿಗೂ ಜನರಿಗೂ ಸಹ ತೃಪ್ತಿಕರವಾಗಿಯೂ ಫಲಪ್ರದವಾಗಿಯೂ ಇತ್ತೆಂಬದಕ್ಕೆ ಅವರಿಗೆ ಇಂಡ್ಯ ಗವರ್ನಮೆಂಟಿನವರು ದಯಪಾಲಿಸಿದ ಪ್ರಶಸ್ತಿಯೇ ಸಾಕಾದ ದೃಷ್ಟಾಂತವಾಗಿರುತ್ತದೆ. ಇಷ್ಟರ ಪ್ರಯೋಜನವು ನೇಟಿವ್ ಒಬ್ಬರು ವೈಸ್ ಪ್ರೆಸಿಡೆಂಟರಾಗಿದ್ದದರಿಂದಲೇ ಲಭಿಸಿತಲ್ಲದೆ ಅನ್ಯಥಾ ಸಿಕ್ಕಿಸಲಿಲ್ಲವು. ವೈಸ್‌ಪ್ರೆಸಿಡೆಂಟರಾಗಿರತಕ್ಕವರು ಯೂರೋಪಿಯನ್ ಡಾಕ್ಟರಾಗಿರಬೇಕೆಂಬ ನಿರ್ಬಂಧವೇನೂ ಕಾಣಿಸಲಿಲ್ಲವು. ನಗರ ಶುಚಿತ್ವದ ವಿಷಯದಲ್ಲಿ ಬೇಕಾದ ಸಲಹೆಗಳನ್ನು ಕೊಡುವದಕ್ಕೂ ಆವಶ್ಯಕಗಳಾದ ಏರ್ಪಾಡುಗಳನ್ನು ಮಾಡಲಿಕ್ಕೂ ಪ್ರತ್ಯೇಕ ಸಾನಿಟರಿ ಇನ್‌ಸ್ಪೆಕ್ಟರೊಬ್ಬರಿರುವದಲ್ಲದೆ ಸೀನಿಯರ್ ಸರ್ಜನ್‌ಯವರು ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ಸಹ ಇರುವದರಿಂದ ಈ ವಿಷಯದಲ್ಲಿ ವೈಸ್ ಪ್ರೆಸಿಡೆಂಟರವರ ಕರ್ತವ್ಯವೇನೂ ಯಿರುವದಿಲ್ಲವು. ಹಿಂದೂಗಳ ವಾಸಗೃಹಗಳಿಗೆ ಒಂದೊಂದು ಕಾಲದಲ್ಲಿ ವೈಸ್ ಪ್ರೆಸಿಡೆಂಟರೇ ಖುದ್ದು ಹೋಗಿ ಅಜಮಾಯಿಷೀ ಮಾಡಬೇಕಾದ ಆವಶ್ಯಕತೆ ಯುಂಟಾಗುತ್ತದೆ. ಅಂತಾ ಸಂದರ್ಭದಲ್ಲಿ ಯೂರೋಪಿಯನ್ ವೈಸ್ ಪ್ರೆಸಿಡೆಂಟರಿಗೆ ಜನಗಳು ಸ್ವಲ್ಪವೂ ಅವಕಾಶ ಕೊಡಲಾರರು. ಅವರ ಮೇಲೆ ಆಗ್ರಹವುಂಟಾಗಿ ತಮ್ಮ ಅಧಿಕಾರ ಬಲವನ್ನು ದುರ್ಬಲರಾದ ಜನರ ಮೇಲೆ ಚಲಾಯಿಸದೆ ತಿರುವರು ಆಗ ಅವರಿಬ್ಬರಿಗೂ ಪರಸ್ಪರ ಅನ್ಯೋನ್ಯಭಾವವು ತಪ್ಪಿ ಕಡೆಗೆ ವಿಷಮವಾಗಿ ಪರಿಣಮಿಸುವದು. ಮುಖ್ಯವಾಗಿ ಗವರ್ನಮೆಂಟಿನವರಿಗೆ ಅನ್ಯಜಾತಿಯವರೊಬ್ಬರನ್ನು ನಿಯಮಿಸಬೇಕೆಂಬ ತಾತ್ಪರ್ಯವಿರುವದೆಂಬದಂ ನಾವು ನಂಬಲಾರೆವು. ಆದಾಗ್ಯೂ ಅಂತಾ ಸೂಚನೆಯನ್ನು ಸ್ವಪ್ರಯೋಜನೋದ್ದೇಶದಿಂದ ತಾವೆಯಾರಾದರೂ ಮಾಡಿ ಆ ನಿರ್ಬಂಧಕ್ಕೆ ಗವರ್ನಮೆಂಟಿನವರು ಒಳಪಡುವಪಕ್ಷಕ್ಕೆ ೬೨,೦೦೦ ಪ್ರಜೆಗಳನ್ನು ವ್ಯರ್ಥವಾದ ಸಂಕಟಗಳಿಗೂ, ನಿರ್ಬಂಧಗಳಿಗೂ, ತನ್ಮೂಲಕ ಅಪದೂರಿಗೂ ಗುರಿಮಾಡಿದಂತಾಗುವದರಲ್ಲಿ ಸಂಶಯವಿಲ್ಲ. ನೇಟಿವ್‌ಗಳನ್ನು ಕಂಡರೆ ಹೀಯಾಳಿಸುತ ಲಾಘವದಿಂ ಕಾಣುತಲಿದ್ದ ಯೂರೋಪಿಯನ್‌ಗಳು ಈಗ ನೇಟಿವ್‌ಗಳ ಪಾಲಕರಾಗಿರಲಿಕ್ಕೆ ಸಹ ಒಡಂಬಡತಕ್ಕವರಾಗಿರುವದು ಕಾಲ ಮಹಿಮೆಯೆಂದು ಹೇಳಬೇಕಾಗಿರುತ್ತದೆ.

BRAHMINS PAST AND PRESENT

[COMMUNICATED.]

ಪೂರ್ವಕಾಲದಲ್ಲಿ ಬ್ರಾಹ್ಮಣರು ಯಾವಪರದೆ ಸೆಯಿಂದ ವಿಶೇಷವಾಗಿ ಅನ್ಯರ ಗೌರವ ಸತ್ಕಾರಗಳಿಗೆ ಪಾತ್ರರಾಗಿದ್ದರೋ, ತತ್ಸಂತತಿಯವರಾದ ವರ್ತಮಾನ ಕಾಲದವರಿಗೆ ಅಂತಾ ಗೌರವ ಸತ್ಕಾರಗಳು ಯಾವ ನಿಮಿತ್ತದಿಂ ತಪ್ಪಿ ಅವರು ಅನ್ಯಜಾತಿಯವರ ದೂಷಣ ತಿರಸ್ಕಾರಗಳಿಗೆ ಪಾತ್ರರಾಗಬೇಕಾಯಿತೋ, ಪೂರ್ವಿಕರ ಪ್ರಾಶಸ್ತ್ಯಗಳು ಮರಳಿ ಈಗಿನವರಿಗೆ ಪ್ರಾಪ್ತ್ಯಗಳ್, ಯೆಂಬ ವಿಷಯವು ಈಗ್ಯೆ ಕೆಲವುಕಾಲದ ನೊಡಲು ನಮ್ಮ ವಿಚಾರಕ್ಕೆ ಅರ್ಪಣವಾಗಿರಲು ಅದಂ ಕುರಿತು ನಾವು ಅಲ್ಪಾಪಿ ಪರ್ಯಾಲೋಚಿಸುತ್ತಲಿದೇವೆ. ಹೀಗಿರುವಲ್ಲಿ ಪ್ರಸಕ್ತ ವಿಷಯ ಮಂತ್ರಿತ ನಮ್ಮ ಮಿತ್ರರೊಬ್ಬರು ಕಳುಹಿಸಿದ ಒಂದು ಲೇಖನವನ್ನಿದರಟ ಅಮೂಲಾಗ್ರ ಪ್ರಕಟಿಸುವದಾಗಿ ಅದರಿಂದ ಅವರ ಅಭಿಪ್ರಾಯವೆಲ್ಲರಿಗೂ ವ್ಯಕ್ತವಾಗಬಹುದು.

"ಪೂರ್ವಕಾಲದಲ್ಲಿ ಬ್ರಾಹ್ಮಣರಿಗುಂಟಾಗಿದ್ದ ಗೌರವ ಪುರಸ್ಕಾರಗಳು ಅನ್ಯರೊಬ್ಬರಿಗೂ ಇರಲಿಲ್ಲವೆಂಬದೂ, ಪರರು ಅವರಿಗೆ ಜನ್ಮವೆತ್ತುವಷ್ಟಂತೆ ಇನ್ಯಾರಿಗೆ ಭಯಪಡುತಲಿರಲಿಲ್ಲವೆಂಬದೂ ನಮ್ಮ ಪೂರ್ವ ಗ್ರಂಥಗಳಿಂದಲೂ ಪ್ರಸಿದ್ಧ ವಾಕ್ಯಗಳಿಂದಲೂ ಸ್ಪಷ್ಟವಾಗುತ್ತದೆ. ಸಾರ್ವಭೌಮರಾದ ಚಕ್ರವರ್ತಿಗಳೂ, ರಾಜಾಧಿರಾಜರೂ ಬ್ರಾಹ್ಮಣರಲ್ಲಿ ಬಹಳ ಭಯಭಕ್ತಿಗಳುಳ್ಳವರೆ ವರ್ತಿಸುತಲಿದ್ದರೆಂಬದಾಗಿ ಪೂರ್ವದೃಷ್ಟಾಂತಗಳಿಂದ ಧಾರಾಳವಾಗಿ ನುಡಿಯಬಹುದು. ಇಂತಾಸ್ಥಿತಿಯು ತತ್ಸಂತತಿಯವರಾದ ಈಗಿನ ಬ್ರಾಹ್ಮಣರಿಗೆ ಕಡ್ಡಾಂಗವಾಗಿತಪ್ಪಿ ಅನ್ಯಜಾತಿಯವರು ಕೇವಲ ಅಮರ್ಯಾದೆಯಿಂದ ಅವರು ಕಾಣುವಂತೆ ಪರಿಣಮಿಸಿದೆ. ಪೂರ್ವದಲ್ಲಿ ರಾಜಾಧಿರಾಜರು ಮೊದಲು ಎಲ್ಲರೂ ವಿಪ್ರರಂ ಹ್ಯಾಗೆ ಬಹುಮಾನಿಸಿ ಕೊಂಡಾಡುತಲಿದ್ದರೋ ಈಗ ಹಾಗೆಯೇ ಅವರೆಲ್ಲರೂ ವಿಪ್ರನಿಂದೆಗಳಸದೆ ದೂಷಿಸಲುದ್ಯುಕ್ತರಾಗಿದ್ದಾರೆ. ಕಡೆಗೆ ಯಾವದಾದರೊಂದು ಸರ್ಕಾರಿ ಉದ್ಯೋಗಕ್ಕೆ ಖಾಲಿಯಾದರೆ ಅಥವಾ ನೂತನವಾಗಿ ಕಲ್ಪಿಸಲ್ಪಟ್ಟರೆ ಅದಕ್ಕೆ ದರಖಾಸ್ತು ಮಾಡತಕ್ಕವರಪೈಕಿ ಬ್ರಾಹ್ಮಣೇತರರಿಗೆ ಶ್ರೇಷ್ಠತ್ವವು ಕೊಡಲ್ಪಡುವದೆಂದು ಬಹಿರಂಗವಾಗಿ ಸರ್ಕಾರೀ ಗೆಜೆಟ್‌ಗಳಮೂಲಕ ಘೋಷಿಸ್ ಮಾಡುವಂತೆ ಕೂಡಿರಿದೆ. ಕ್ರೈಸ್ತ ಪಾದ್ರಿಗಳಾದ ಶ್ವೇತರು "ಯಾರನ್ನು ನಂಬಿದರೂ ಬ್ರಾಹ್ಮಣನಂ ನಂಬಬಾರದೆಂದು" ದೂಷಿಸುವರು, ಬಲಿಜಿಗರಾದ ನಾಯುಡರವರು "ಬಾಪನ ಮುಂಡಾಕೊಡುಕುಲು" ಎಂಬದಾಗಿ ನಿಂದಿಸುವರು. ಮೊದಲಿಯಾರ್ ಪಿಳ್ಳೆ ಮೊದಲಾದವರು "ಪಾಪಾರ ಶವಡಿಯಾ ಮುಗಣ್" ಎಂಬದಾಗಿ ತಿರಸ್ಕರಿಸುವರು. ಮುಸಲ್ಮಾನರು "ಅರೇ ಬಮ್ಮನ್ ಬಾಂಬೋತ್" ಎಂಬದಾಗಿ ಅಲ್ಲಗಳೆಯುವರು. ಜಂಗಮರು "ಹಾರವನೆಂದು" ತಾತ್ಸಾರಮಾಡುವರು. ಈರೀತಿ ಬ್ರಹ್ಮದ್ವೇಷಿಗಳ ಪ್ರಾಬಲ್ಯವು ಹೆಚ್ಚುತಬರಲು ಅನ್ಯದೇಶದಿಂದಲ್ಲಿಗೆ ಬಂದು ಪ್ರಭುಗಳಾಗಿ ಏರ್ಪಟ್ಟಿರುವ ಇಂಗ್ಲೀಯರು ಸಹ "ಡ್ಯಾಂ ಡಿ ಬ್ರಾಮಿನ್ಸ್" ಎಂಬದಾಗಿ ನುಡಿದು ಬ್ರಾಹ್ಮಣರಂ ಅಗೌರವಪಡಿಸಲೆತ್ನಿಸಿರುತ್ತಾರೆ. ಹೀಗೆ ಯಾರು ನೋಡಿ

ಬ್ರಾಹ್ಮಣ ವಿಪ್ರರಿಂ ತುಚ್ಛವಾದ ಮಾತುಗಳಿಂದ ಅವಮಾನಪಡಿಸಿ ತಿರಸ್ಕರಿಸುವವರಾಗಿದ್ದಾರೆ ಹೊರ್ತು ಸ್ವಲ್ಪವಾದರೂ ಗೌರವಿಸತಕ್ಕ ಗುಣಂ ನಾವು ಕಾಣೆವು. ಇಂತಾ ಚಿಂತನೀಯವಾದ ದಶೆಯು ಯಾತರಿಂದ ಹ್ಯಾಗೆ ಪ್ರಾಪ್ತವಾಯಿತೋ, ಅದಂ ಪರಿಹರಿಸುವದಕ್ಕೇನು ಪ್ರತಿಕ್ರಿಯೆ ಮಾಡಬೇಕೋ ಅದಂ ಬ್ರಾಹ್ಮಣರೆಲ್ಲರೂ ಆಲೋಚಿಸಬೇಕಾದ್ದು ಕೇವಲ ಆವಶ್ಯಕವಾಗಿರುತಿದೆ. ನಾವು ಹಿಂದುಗಳಾದುದರಿಂದ ಹಿಂದೂ ಧರ್ಮಶಾಸ್ತ್ರಗಳಲ್ಲಿ ತಿಳಿಸಲ್ಪಟ್ಟಿರುವ ವಿಧಿ ನಿಷೇಧಗಳಿಗೆ ಬದ್ಧರಾಗಿ ಅದಂ ನಂಬಿ ಪ್ರವರ್ತಿಸಬೇಕಾದವರಾಗಿರುತ್ತೇವೆ. ಆದುದರಿಂದ ಪುರುಷನು ತನ್ನ ಕರ್ಮಾನುಗುಣವಾದ ಫಲವನ್ನನುಭವಿಸಬೇಕೆಂಬ ಸಿದ್ಧಾಂತವನ್ನಾವಾಗಲೂ ಹೃದಯದಲ್ಲಿ ಧರಿಸಬೇಕಾದವರಾಗಿರುತ್ತೇವೆ. ಶ್ರೀ ಮದ್ಭಾಗವತದೊಳಗೆ ಒಂದು ಪ್ರಕರಣದಲ್ಲಿ—

«ಪ್ರಶ್ನೋ... ಸ್ವಾಹಾ ... ಸರ್ವತ್ರ ... ತೇನ ॥»

ಅಂದರೆ ಪ್ರ... ಹಿಂದ ಸುಖದ ... ಮಾತು ... ಕರ್ಮ ... ಅನುಭವಿಸ ... ದ ಈಗ ... ವರ್ತನೆಗೆ ... ಕಾರಣಗಳಿ... ನುಡಿಬಹುದು. ... ಕಾಲದಲ್ಲಿ ಬ್ರಾಹ್ಮಣರು ಕೇವಲ ... ವರ್ತಿಸುತ ಲಿದ್ದರಿಂದಲೇ ಅವರಿಗೆ ಇತರಾಪೇಕ್ಷೆಯಾ ಸುಖಸಂತೋಷಗಳಿಲ್ಲ, ... ಅನವಚ್ಛಿನ್ನವಾಗಿ ... ಬೋಧಿಸ... ವಜ್ರ ... ಬ್ರಾಹ್ಮಣಂ ... ಅಂದರೆ, ... ದುನಿಗ್ರಹವು, ತಪಸ್ಸು, ಶಾಸ್ತ್ರಾನುಭವದ ಜ್ಞಾನವು, ಆಸ್ತಿಕ್ಯವು, ಇವು ಬ್ರಾಹ್ಮಣನಿಗೆ ಸ್ವಭಾವಕರ್ಮಗಳೆಂದು ಶ್ರೀ ಜಗದ್ಗುರುವಿನ ಗೀತೆಯಲ್ಲಿ ತಿಳಿಸಲ್ಪಟ್ಟಿರುತಿದೆ. ಈ ಕರ್ಮಗಳನ್ನು ಪೂರ್ವದಲ್ಲಿ ಬ್ರಾಹ್ಮಣರೆಲ್ಲರೂ ತಪ್ಪದೆ ಆಚರಿಸುತಲಿದ್ದರೆಂಬುದಕ್ಕೆ ಸ್ವಲ್ಪಮಾತ್ರವೂ ಸಂಶಯವಿಲ್ಲವು. ಇಂತಾ ವಿಪ್ರೋತ್ತಮರು ಮನೋವಾಕ್ಕಾಯಗಳಿಂದ ಪರಿಶುದ್ಧರಾಗಿದ್ದುದರಿಂದ ಅವರಿಗೆ ಮನಃಪ್ರಸನ್ನತೆಯೂ, ಇಂದ್ರಿಯನಿಗ್ರಹನಿಗ್ರಹಶಕ್ತಿಯೂ, ದೀರ್ಘಾಯುಷ್ಯವೂ, ತ್ರಿಕಾಲಿಕ ಜ್ಞಾನವೂ, ಸಿದ್ಧಿಸಿದ್ದವು. ಇಂತವರ ತಪೋಬಲಕ್ಕೂ, ಬ್ರಹ್ಮತೇಜಸ್ಸಿಗೂ ರಾಜಾಧಿರಾಜರು ಮೊದಲು ಭೀತರಾಗಿ ವರ್ತಿಸುತ ಬಹಳ ಗೌರವಿಸುತಲಿದ್ದರು. ರಾಜಮಹಾತ್ಮನಾದ ವಿಶ್ವಾಮಿತ್ರರು ವಸಿಷ್ಠರ ಬಳಿಯಲ್ಲಿದ್ದ ನಂದಿನೀ ಧೇನುವನ್ನು ಅಪಹರಿಸಲೆತ್ನಿಸಿ ತಮ್ಮ ತಪೋಬಲದಿಂದಾರ್ಜಿಸಿದ್ದ ಅಸ್ತ್ರಶಸ್ತ್ರಗಳನ್ನೆಲ್ಲಾ ಅವರಮೇಲೆ ಪ್ರಯೋಗಿಸಲು ಆ ಮಹರ್ಷಿಯು ತಮ್ಮ ಬ್ರಹ್ಮದಂಡವನ್ನಭಿಮಂತ್ರಿಸಿ ಪ್ರಯೋಗಿಸಲು ಅದು ಸಕಲ ಅಸ್ತ್ರಶಸ್ತ್ರಗಳನ್ನೂ ಆಕರ್ಷಿಸಿ ವಿಶ್ವಾಮಿತ್ರರು ಸೋತರು. ತರುವಾಯ ವಿಶ್ವಾಮಿತ್ರರು ಎಷ್ಟುನಿಶ್ಚಯವಾಗಿ ವಸಿಷ್ಠರಂ ಜಯಿಸಬೇಕೆಂದೆತ್ನಿಸಿದರೂ ಅವರಿಗದು ಸಾಧ್ಯವಾಗದೆ ಹೋಗಲು ರಾಜರ್ಷಿಯು, ತಾವು ತಪೋನಿಷ್ಠರಾಗಿದ್ದು ವಸಿಷ್ಠರಂತೆ ಬ್ರಹ್ಮರ್ಷಿಯಾಗಬೇಕೆಂದು «ಧಿಗ್ಬಲಂ ಕ್ಷತ್ರಿಯಬಲಂ ಬ್ರಹ್ಮತೇಜೋಬಲಂಬಲಂ | ಏಕೇನಬ್ರಹ್ಮದಂಡೇನ ಸರ್ವಾಸ್ತ್ರಾಣಿಹತಾನಿಮೇ ||» ಅಂದರೆ ಕ್ಷತ್ರಿಯಬಲವು ನಿಂದಿಸತಕ್ಕದ್ದು. ಬ್ರಹ್ಮತೇಜೋರೂಪವಾದ ಬಲವು ಬಹಳ ಶ್ರೇಷ್ಠವಾದದ್ದು. ಈಗ ಒಂದು ಬ್ರಹ್ಮದಂಡದಿಂದಲೇ ನನ್ನ ಸಕಲಾಸ್ತ್ರಗಳೂ ಜಯಿಸಲ್ಪಟ್ಟವೆಂಬವಾಗಿ ನುಡಿದು ದುಃಖಿಸುತ ತಪಸ್ಸು ಮಾಡಲಾರಂಭಿಸಿದರು. ಇದಲ್ಲದೆ ವಸಿಷ್ಠರಬಳಿ ಯಿದ್ದ ಕಾಮಧೇನುವು ಸಹ ಇದೇ ಅರ್ಥವಂ ಪ್ರಕಾರಾಂತರವಾಗಿ ವ್ಯಕ್ತಪಡಿಸಿರುತಿದೇನುದರೆ,—«ನಬಲಂ ಕ್ಷತ್ರಿಯಸ್ಯಾಹುರ್ಬ್ರಾಹ್ಮಣೋಬಲವತ್ತರಃ| ಬ್ರಹ್ಮಬ್ರಹ್ಮಬಲಂದಿವ್ಯಂಕ್ಷತ್ರಾತ್ತುಬಲವತ್ತರಂ» ಅಂದರೆ, ಕ್ಷತ್ರಿಯನ ಬಲವು ಅತ್ಯಲ್ಪವಾದದ್ದು, ಬ್ರಾಹ್ಮಣನ ಬಲವು ಅತಿ ಬಲಿಷ್ಠವಾದದ್ದು, ಆದುದರಿಂದ ಬ್ರಹ್ಮಬಲದ ಮುಂದೆ ಕ್ಷತ್ರಿಯ ಬಲವು ನಿಷ್ಪ್ರಯೋಜಕವಾದದ್ದೆಂದು ಪಂಡಿತರ ಅಭಿಪ್ರಾಯವಾಗಿರುತಿದೆ. ವಿದುರ ನೀತಿಯಲ್ಲಿ ಕೂಡ ಇದೇ ಅಂಶವು ತಿಳಿಸಲ್ಪಟ್ಟಿರುತಿದೇನಂದರೆ «ಆಹಾಧ್ಯತಿಂ ... ತಕಃ | ಕ್ರೋಧ ... ರಾಜನ್ ... ಬ್ರಾಹ್ಮಣೋಪಹಂತಿರಾಜನ್» ಅಂದರೆ,—ಆಶೆಯು ಧೈರ್ಯವನ್ನೂ, ಯಮನು ಶರೀರವನ್ನೂ, ಕ್ರೋಧವು ವಿವೇಕವನ್ನೂ, ಲುಬ್ಧತ್ವವು ಯಶಸ್ಸನ್ನೂ, ಅಸಂರಕ್ಷಣೆಯು ಪಶುಗಳನ್ನೂ, ಕುಪಿತನಾದ ಬ್ರಾಹ್ಮಣನು ಅರಸನನ್ನೂ, ಸಂಹರಿಸದಿರಲಾರರೆಂದು ಭಾವವು. ಪೂರ್ವ ಕಾಲದಲ್ಲಿ ಬ್ರಾಹ್ಮಣರು ಅನ್ಯತಿಶಯವಾದ ತಪಶ್ಶಕ್ತಿಯೂ, ಅಸದೃಶವಾದ ತೇಜೋಬಲವೂ ವುಳ್ಳವರಾಗಿದ್ದದರಿಂದಲೇ ಅವರು ದಿಕ್ಕರಿಸದೆಲ್ಲರೂ ಭಯಪಡುತಲಿದ್ದರು. ಇಂತಾ ತಪಶ್ಶಕ್ತಿಯು ತಪ್ಪಂತಿತಿಯವರಿಗೆ ಯಾವಾಗ ತಪ್ಪಲಾರಂಭಿಸಿತೋ ಅದು ಮೊದಲು ಅವರು ಅನ್ಯಜಾತಿಯವರು ಅಗೌರವ ಪಡಿಸಲೆತ್ನಿಸಿದರು. ಮತ್ತು, ಯಥಾಕಾಷ್ಠಮಯೋಹಸ್ತೀಯಥಾಚರ್ಮಮಯೋಮೃಗಃ | ಯಶ್ಚವಿಪ್ರೋನಧೀಯಾನಸ್ತ್ರಯಸ್ತೇ ನಾಮಬಿಭ್ರತಿ | ಯಥಾಷಂಡೋಫಲಃಸ್ತ್ರೀಷುಯಥಾ ಗೌರ್ಗವಿಚಾಫಲಾ|ಯಥಾಚಾಜ್ಞೇಫಲಂದಾನಂತಥಾವಿಪ್ರೋನೃಚೋಫಲಃ' ಅಂದರೆ, ದಾರುಮಯವಾದ ಆನೆಯೂ ಚರ್ಮಮಯವಾದ ಮೃಗವೂ ವೇದಾಧ್ಯಯನ ಮಾಡದ ವಿಪ್ರನೂ ನಾಮಧಾರಿಗಳಲ್ಲದೆ ಗಜ, ಮೃಗಬ್ರಾಹ್ಮಣನಿಗಿರಬೇಕಾದಶಕ್ತಿಯು ಅವರಲ್ಲಿರಲಾರದು. ಸ್ವರೂಪತಃ ಅವರು ನಿಷ್ಪ್ರಯೋಜಕರೆಂದು ತಾತ್ಪರ್ಯವು. ಸ್ತ್ರೀಯರಲ್ಲಿ ನಪುಂಸಕನು ಹ್ಯಾಗೆ ನಿಷ್ಪ್ರಯೋಜಕನೋ, ವೃಷಭವಿಲ್ಲದ ಗೋಸಮೂಹವು ಹ್ಯಾಗೆ ನಿಷ್ಪ್ರಯೋಜಕವೋ, ಅಜ್ಞಾನಿಗೆ ಮಾಡಲ್ಪಟ್ಟ ದಾನವು ಹ್ಯಾಗೆ ನಿಷ್ಫಲವೋ ಅದೇ ಪ್ರಕಾರ ಅಧ್ಯಯನ ಮಾಡದ ಬ್ರಾಹ್ಮಣನು ನಿಷ್ಪ್ರಯೋಜಕನೆಂದು ಭಾವವು. ಈ ರೀತಿ ಮಾನವ ಧರ್ಮಶಾಸ್ತ್ರದಲ್ಲಿ ತಿಳಿಸಲ್ಪಟ್ಟಿರುತಿದೆ. ದಾರು ಚರ್ಮಮಯಗಳಾದ ಗಜವ್ಯಾಘ್ರ ಮೊದಲಾದ ಆರಣ್ಯಕ ಕೃತಕ ಮೃಗಗಳನ್ನು ಬಾಲಕರು ನಿರ್ಭೀತರಾಗಿ ಮುಟ್ಟಿಕೊಂಡು ಅವುಗಳೊಡನೆ ಸರಸವಾಡುತ ಕಡೆಗೆ ಎಸೆದು ಅವುಗಳ ಕೈಕಾಲುಗಳನ್ನು ಹ್ಯಾಗೆ ಮುರಿದು ವಿರೂಪಗೊಳಿಸುವರೋ ತದ್ವತ್ ಅಜ್ಞಾನಿಗಳಾದ ಅನ್ಯಜಾತಿಯವರು ಬ್ರಹ್ಮತೇಜೋ ವಿಹೀನರಾದ ಬ್ರಾಹ್ಮಣರನ್ನು ನಿಂದಿಸುವರು. ಮೇಲೆ ಕಂಡ ಶ್ಲೋಕಗಳಲ್ಲಿ ಅಧ್ಯಯನ ಮಾಡದ ವಿಪ್ರನು ನಿಷ್ಪ್ರಯೋಜಕ ನೆಂಬದಾಗಿ ತಿಳಿಸಲ್ಪಟ್ಟಿದೆ ಯಷ್ಟೆ. ಹಾಗಿಲ್ಲದೆ ನಾಮಮಾತ್ರಕ್ಕೆ ಅಧ್ಯಯನ ಮಾಡುವವರಿಂದೇನೂ ಪ್ರಯೋಜನವುಂಟಾಗಲಾರದು ಮನುಧರ್ಮ ಶಾಸ್ತ್ರದಲ್ಲಿ (ಆಚಾರಾದ್ವಿಚ್ಯುತೋವಿಪ್ರೋ ನವೇದಫಲಮಶ್ನುತೆ ಆಚಾರೇಣತುಸಂಯುಕ್ತಸ್ಸಂಪೂರ್ಣ ಫಲಭಾಗ್ಭವೇತ್| ಆಚಾರಪರಮೋಧರ್ಮ ಶ್ರುತ್ಯುಕ್ತಸ್ಸ್ಮಾರ್ತಏವಚ | ತಸ್ಮಾದಸ್ಮಿನ್ಸದಾಯುಕ್ತೋನಿತ್ಯಂಸ್ಯಾದಾತ್ಮವಾನ್ದ್ವಿಜಃ||) ಅಂದರೆ ಶ್ರುತಿಸ್ಮೃತಿ ಚೋದಿತಗಳಾದ ಆಚಾರಗಳನ್ನುಬಿಟ್ಟ ವಿಪ್ರನು ವೇದಾಧ್ಯಯನ ಮಾಡಿದಾಗ್ಯೂ ಅದರ ಫಲವನ್ನನುಭವಿಸಲಾರನು. ಪರಂತು ಸದಾಚಾರವುಳ್ಳವನು ಕಷ್ಟಫಲಗಳನ್ನು ತಪ್ಪದೆ ಅನುಭವಿಸುವದರಲ್ಲಿ ಸ್ವಲ್ಪಮಾತ್ರವೂ ಸಂಶಯವಿಲ್ಲವು. ಶ್ರುತಿಸ್ಮೃತಿ ಪ್ರತಿಪಾದ್ಯಗಳಾಗಿರುವ ಆ ಧರ್ಮಸಂಪ್ರದಾಯಗಳು ಶ್ರೇಷ್ಠಗಳಾದುದರಿಂದ ಅಂತಾ ಧರ್ಮವಿಹೀನರಾದ ವಿಪ್ರರು ವೇದಾಧ್ಯಯನ ಮಾಡಿದವರಾಗಿದ್ದಾಗ್ಯೂ ಅವರಲ್ಲಿ ಬ್ರಹ್ಮತೇಜೋಬಲವು ದುರ್ಲಭವಾಗಿರುವದು. ಶ್ಲಾಘ್ಯವಾದ ಬ್ರಾಹ್ಮಣರಲ್ಲಿದ್ದ ಮಹಿಮೆಗಳೆಲ್ಲವು ಈಗ ಕಾಲಕ್ರಮೇಣ ಲಯಿಸುತ ಬರುವದರಿಂದ ಅವರು ವೃತ್ತಿವ್ಯವಸ್ಥೆಯಿಲ್ಲದೆ ಕೇವಲ ಹೇಳಲಾಸ್ಪದವಾದ ದಶೆಗೆ ಬಂದದ್ದನ್ನೂ ಅದರಿಂದುಂಟಾಗಿರುವ ಅನರ್ಥಗಳನ್ನೂ ಮತ್ತೊಂದು ಸಂದರ್ಭದಲ್ಲಿ ವಿವರಿಸುವೆವು."

A LECTURE.

ಹಿಂದೂಮತ ವಿಚಾರವು.

(ಕಳೆದವಾರದ ಶೇಷವು)

ನಿತ್ಯನಾದ ಆತ್ಮನು ಒಂದು ದೇಹದಲ್ಲಿ ಪ್ರವೇಶಿಸಬೇಕಾದರೆ ಅದೊಂದು ಸ್ಥಳದಲ್ಲಿದ್ದು ಪ್ರವೇಶಿಸಬೇಕಲ್ಲದೆ ಅನ್ಯಥಾ ಸಾಧ್ಯವಲ್ಲವು. ಮೊದಲು ಹಿಂದುಕದೊಳಿದ್ದ ಆತ್ಮನಿಗೆ ತನ್ನ ಪೂರ್ವಸ್ಥಿತಿಯ ಜ್ಞಾಪಕ ವಿದ್ದೀತಷ್ಟೆ. ಹಾಗಿಲ್ಲದಮೇಲೆ ಒಂದು ದೇಹದಲ್ಲಿದ್ದು ಅದು ತ್ಯಜಿಸಿದ ತರುವಾಯ ಪೂರ್ವದೇಹ ಸಂಬಂಧಜ್ಞಾನವು ಅವರ ದೇಹಸ್ಥಿತಿಯಲ್ಲಿ ಜ್ಞಾಪಕ ಬರುವದಿಲ್ಲವು. ಪಿತ್ರಾಧಿಕ್ಯದಿಂ ಮನುಷ್ಯನಿಗೆ ಬುದ್ಧಿಭ್ರಂಶವಾದರೆ ಜ್ಞಾನೇಂದ್ರಿಯಕ್ಕೆ ಕೊರತೆಯುಂಟಾಗಿ, ಇಹಜನ್ಮದಲ್ಲಿ ನೋಡಿ ಕೇಳಿದ ಅಂಶಗಳನ್ನಾತನು ಮರೆತುಹೋಗುವದು ಸ್ವಾಭಾವಿಕವಾಗಿರುತಿದೆ. ಮತ್ತು ಸಾಧಾರಣವಾಗಿ ಬಹುಕಾಲದ ಹಿಂದೆ ನೋಡಿ ಕೇಳಿದ್ದ ವಿಷಯಗಳು ಮರೆತುಹೋಗುವದು ಜನರಿಗೆ ಸಹಜಗುಣವಾಗಿರುತಿದೆ. ಇಹಜನ್ಮದಲ್ಲೇ ಈ ರೀತಿಯಾಗಿರುವಲ್ಲಿ ಈ ದೇಹ ನಶಿಸಿದಮೇಲೆ ಜನ್ಮಾಂತರ ಜ್ಞಾಪಕ ಹ್ಯಾಗೆ ವುಂಟಾದೀತು ? ಇದಕ್ಕೆ ಸಮಾಧಾನವನ್ನು ಪೂರ್ವಪಕ್ಷದವರೇ ತಿಳಿಸಬೇಕಾಗಿರುತಿದೆ. ಇಂದ್ರಿಯ ನಿಷ್ಠಗಳಾದ ವ್ಯಾಪಾರಗಳು ಆ ಇಂದ್ರಿಯಗಳಿಗೆ ಲೋಪವುಂಟಾದರೆ ಕ್ಷಣೆತ್ತರೇ ನಾಶವನ್ನೈದುವವು. ಹ್ಯಾಗೆಂದರೆ, ಅಂಧನಿಗೆ ದೃಷ್ಟಿಪಾಟವವು ತಪ್ಪುತಿದೆ. ಕಿವುಡನಿಗೆ ಕೇಳುವಶಕ್ತಿಯಿಲ್ಲವು. ಹುಚ್ಚನಿಗೆ ಜ್ಞಾನವು ಶೂನ್ಯವಾಗುತಿದೆ. ಶರೀರವೂ ತದಂಗಭೂತಗಳಾದ ಇಂದ್ರಿಯಗಳೂ ತನ್ನಿಷ್ಠಗಳಾದ ವ್ಯಾಪಾರಗಳೂ ನಷ್ಟವಾದಬಳಿಕ ಜ್ಞಾನ ಮತ್ತು ಜ್ಞಾಪಕವು ಹ್ಯಾಗೆ ನೆಲೆಗೊಂಡಿರುವದು ? ಮಾತೃಗರ್ಭದಲ್ಲಿ ಅನುಭವಿಸಿದ ಯಾತನೆಯಾಗಲಿ ಜನಿಸಿದಮೇಲೆ ಶೈಶವಾವಸ್ಥೆಯಲ್ಲಿ ಅನುಭವಿಸಿದ ದುಃಖಗಳಾಗಲಿ ಯಾರಿಗಾದರೂ ಜ್ಞಾಪಕವಿರುವದೋ ಎಂಬದಾಗಿ ಯುಕ್ತಿವಾದಗಳಿಂದಲೇ ಪರಪಕ್ಷದವರು ಆಕ್ಷೇಪಿಸುತ್ತಾರೆ. ಈ ವಾದವು ಹಾಗಿರಲಿ. ದೇವರು ಮನುಷ್ಯನನ್ನು ಒಂದೇಸಾರಿ ಸೃಜಿಸಿ ಒಂದೇಸಾರಿ ಸಂಹರಿಸುತ್ತಾನೆಂದು ಹೇಳುತ್ತಾರಷ್ಟೆ. ಆದೇವರು ಸರ್ವ ನೀತಿಮಂತನಾಗಿಯೂ, ಧರ್ಮಿಷ್ಟನಾಗಿಯೂ, ವೈಷಮ್ಯ ನೈರ್ಘೃಣ್ಯ ರಹಿತನಾಗಿಯೂ, ಕರುಣಾಶಾಲಿಯಾಗಿಯೂ,ನಿಷ್ಪಕ್ಷಪಾತಿಯಾಗಿಯೂ ಇರುವನೆಂಬದಂ ಪರಪಕ್ಷದವರು ಸಹ ಒಪ್ಪಿಕೊಂಡಿರುತ್ತಾರಷ್ಟೆ. ಹಾಗಾದಮೇಲೆ ಆ ದೇವರು ಒಬ್ಬನನ್ನು ರೂಪವಂತನನ್ನಾಗಿಯೂ ಮತ್ತೊಬ್ಬನನ್ನು ಕುರೂಪಿಯನ್ನಾಗಿಯೂ, ಅನ್ಯನೊಬ್ಬನನ್ನು ಥೋರಿಯನ್ನಾಗಿಯೂ, ದಿವಕೊಬ್ಬನನ್ನು ಧೃಷ್ಟನನ್ನಾಗಿಯೂ, ಇನ್ನೊಬ್ಬನನ್ನು ಐಶ್ವರ್ಯವಂತನನ್ನಾಗಿಯೂ, ಬೇರೊಬ್ಬನನ್ನು ದರಿದ್ರನನ್ನಾಗಿಯೂ, ಈ ರೀತಿ ನಾನಾವಿಧವಾಗಿ ಸೃಷ್ಟಿಸಲು ಕಾರಣವೇನು ? ಹಾಗೆ ಮಾಡುವದು ಅವನ ಇಚ್ಛೆ ಎಂದು ಅವರು ಹೇಳಬಹುದು. ಆದರೆ ನಿಷ್ಪಕ್ಷಪಾತಿಯಾದ ದೇವರಲ್ಲಿ ಪಕ್ಷಪಾತವು ಸಿದ್ಧವಾಗಿ, ಮೊದಲು ಹೇಳಿದ ಅವನ ಗುಣಗಳಿಗೆ ವಿರೋಧವುಂಟಾಗುತಿದೆ. ಪಕ್ಷಪಾತವುಳ್ಳವನು ದೇವರು ಹ್ಯಾಗಾದಾನು? ಆಕಾರಣದ ಅವರ ಮತಕ್ಕೆ ಸರಿಯಿಲ್ಲವೆಂದು ಮೊದಲು ಹೇಳಿದ ಮಾತು ಊರ್ಜಿತವಾಯಿತು. ಶಾಸ್ತ್ರ ಹೇಳುವದೇನಂದರೆ,ಕರ್ಮ ಅನಾದಿಯಾದುದರಿಂದ ಅವನವನ ಕರ್ಮಾನುಸಾರನಾಗಿ ಅವನವನು ಹುಟ್ಟುತ್ತಾನಾಗಿ ದೇವರಲ್ಲಿ ಪಕ್ಷಪಾತವಿಲ್ಲವೆಂಬುವದು ಸ್ಪಷ್ಟವಾಗುತಿದೆ. ಇದರಿಂದ ಜನ್ಮಾಂತರಗಳು ಅನೇಕ ಲೋಕಗಳಲ್ಲಿ ಪುಣ್ಯಪಾಪಾನುಸಾರವಾಗಿ ಉಂಟಾಗುತಿವೆ. ದೇವರ ಸ್ವವಾಕ್ಯದ ನಮ್ಮ ವೇದಗಳಲ್ಲಿ ಹೇಳಿರುವ ತತ್ವದಿಂದ ಸಕಲ ವಿಷಯವೂ ಸಮಂಜಸವಾದೀತೇ ಹೊರ್ತು ಲೌಕಿಕ ಯುಕ್ತಿಗಳಿಂದ ಯೆಂದಿಗೂ ಸಮಂಜಸವಾಗಲರಿಯದು ಇದು ಹಾಗಿರಲಿ. ಗಾಳಬಂದಾಗ ತೂರಿಕೊಳ್ಳಬೇಕೆಂಬ ೩ ನೇ ಕಲಮಿನ ಆದಿಯಲ್ಲಿ, ಈಜನ್ಮದಲ್ಲೇ ಜಾಗರೂಕನಾಗಿ ನಡೆದು ಸದ್ಗತಿಯನ್ನು ಸಂಪಾದಿಸಿಕೊಳ್ಳಬೇಕೆಂದು ಬರೆದುದ್ದಾರೆ. ಹಾಗೆ ಬರೆದ ಅವರ ಮೇಲೆ ಕಂಡುಕ ಹೇಳುವ ನಾವು ಸಹ ವಯಸ್ಕರಾಗಿರುವವರಿಂದ ಜಾಗರೂಕರಾಗಿ ಇದ್ದು ಸದ್ಗತಿಯನ್ನು ಸಂಪಾದಿಸಿಕೊಳ್ಳಬಹುದು. ಆದರೆ ಗರ್ಭದಲ್ಲೂ ಹುಟ್ಟಿದಕೂಡ್ಲೆಯೂ ಸಾಯುವ ಮಕ್ಕಳು ಜಾಗರೂಕತೆಯಿಂದ ಇದ್ದು ಸದ್ಗತಿಯಂ ಸಂಪಾದಿಸಿಕೊಳ್ಳುವಬಗೆ ಹ್ಯಾಗೆ? ಆ ಮಕ್ಕಳಿಗೆ ಈಜನ್ಮವು ಅನರ್ಥಕವಾಗಿ,ಜನ್ಮಾಂತರವುಇಲ್ಲದೆಹೋದರೆ ಅವರಗತಿಯೇನಾಗಬೇಕು? ಮತ್ತು ಪಾಪಿಷ್ಟನಿಗೆ ನಿತ್ಯ ನರಕವೆಂತಲೂ, ಸುಕೃತಿಗೆ ನಿತ್ಯಸ್ವರ್ಗವೆಂತಲೂ, ಅವರು ಹೇಳುತ್ತಾರಾಗಿ ಇಂತಾ ಮಕ್ಕಳಿಗೆ ಯಾವದೂ ಇಲ್ಲದಾಯಿತಷ್ಟೆ. ನಿತ್ಯ ನರಕವಂ ನಿಯಮಿಸುವ ದೇವರು ಕ್ರೂರನು, ಕರುಣಾಹೀನನು, ಇಂತವನಿಗೆ ಕರುಣಾಶಾಲಿಯೆಂಬ ಬಿರುದೇ ಸಲ್ಲತಕ್ಕದ್ದಲ್ಲವಾಯಿತು. ಪಾಪವಿಲ್ಲದ ಮನುಷ್ಯನೇ ಪ್ರಾಯಶಃ ಲೋಕದಲ್ಲಿ ಇಲ್ಲವಾದ್ದರಿಂದ ಎಲ್ಲರಿಗೂ ನಿತ್ಯನರಕವೇ ಪ್ರಾಪ್ತವಾಗಬೇಕಾಯಿತು. ಆಃ ! ಇಂತಾ ಕರುಣಾಮತ ಯಾರಿಗೂಬೇಡ, ಈ ಬಳಿ ಇನ್ನೊಂದು ಸಂಗತಿಹೇಳಬೇಕಾದ್ದದೇನಂದರೆ— ಕ್ರಿಸ್ತನು ಹುಟ್ಟಿ ಮನುಷ್ಯರ ಪಾಪಗಳನ್ನೆಲ್ಲಾ ಹೋಗಲಾಡಿಸಿದನೆಂದು ಅವರೇ ಹೇಳುತ್ತಾರೆ. ಆದರೆ ತರುವಾಯ ಲೋಕದಲ್ಲಿ ಪಾಪಗಳೇ ಇಲ್ಲದಾಯಿತಷ್ಟೆ. ಇಂತಾ ಶಾಸ್ತ್ರ ಭ್ರಮಜನ್ಯವಾಗಿಯೂ, ಒಂದು ಯುಕ್ತಿವಾದವಾಗಿಯೂ ಇರದೇ ಶೇಷಹೊರ್ತು ತತ್ವವೇ ಅವರಿಗೆ ತಿಳಿಯದೆಂದು ಎಣಿಸಬೇಕಾಗಿದೆ ಆದುದರಿಂದನಿಷ್ಪ್ರಯೋಜಕವಾದ ಯುಕ್ತಿವಾದಗಳನ್ನುಬಿಟ್ಟು ನಮ್ಮ ಸತ್ಯವೇದಗಳು ಬೋಧಿಸುವ ಪರಮತತ್ವಗಳನ್ನು ಗ್ರಹಿಸಿ ತಮ್ಮನ್ನೇ ತಾವು ತಿದ್ದಿಕೊಳ್ಳುವದು ಅವರಿಗೆ ಅತ್ಯಂತ ಆವಶ್ಯಕವಾಗಿದೆ. ಈ ಪ್ರಕಾರ ಅನೇಕ ಮನುಷ್ಯರು ತಮ್ಮ ಮನಸ್ಸಿಗೆ ತೋರಿದಹಾಗೆ ಲೌಕಿಕ ಯುಕ್ತಿವಾದಗಳನ್ನು ಮಾಡಿ ಮೋಸಹೋಗಿ ಕೊನೆಗೆ ತಾವೇ ನಾಚಿಕೊಳ್ಳಬೇಕಾಗುತಿದೆ ನಮ್ಮಮತಕ್ಕೂ ಅವರಮತಕ್ಕೂ ಪರಸ್ಪರ ವಿರುದ್ಧ ವಿಶೇಷಭೇದಗಳನ್ನು ಮುಂದೆಹೇಳುವೆವು. ೩ ನೇ ಕಲಂನಲ್ಲಿ ಜನ್ಮಾಂತರ ಪ್ರಯೋಜನವಿಲ್ಲದ ಬೋಧೆಯಾಗಿದೆಯೆಂದು ಮುಂತಾಗಿ ಬರೆದಿರುತ್ತಾರೆ. ಜನ್ಮಾಂತರವೆಂಬುವದು ತತ್ವವಿಷಯ ಅಥವಾ ವೈದಿಕವಿಷಯವೇ ಹೊರ್ತು ಲೌಕಿಕವಿಷಯವಲ್ಲವು. ಇದಕ್ಕೆ ಲೌಕಿಕಯುಕ್ತಿಗಳು ಕೆಲಸಕ್ಕೆ ಬಾರವು. ಆದಕಾರಣ ಒಂದನೇ ಕಲಂನಲ್ಲಿ ಹೇಳಿದ ನಿದರ್ಶನಗಳೇ ಸಾಕಾಗಿದೆ. ೩ ನೇ ಕಲಂನಲ್ಲಿ ಜನ್ಮಾಂತರವು ಮೋಸಗೊಳಿಸುವ ಬೋಧನೆಯೆಂದು ಬರೆದಿದ್ದಾರೆ. ಇದು ೧, ೨ ನೇ ಕಲಂಗಳ ಉತ್ತರದಿಂದಲೇ ತಿರಸ್ಕೃತವಾಗಿದೆ. ಮತಭೇದ ವಿಶೇಷವಾದ್ದೇನುದರೆ,—ಪ್ರಪಂಚ ಹುಟ್ಟಿ ೬೦೦೦ ವರುಷಗಳಾಯಿತೆಂದು ಅವರು ಹೇಳುವದರಿಂದ ಅವರ ಮತ ಅದರಿಂದೀಚೆಗೆ ಮನುಷ್ಯರ ಮನಸ್ಸಿಗೆ ತೋರಿದಹಾಗೆ ಹುಟ್ಟಿದ್ದೆಂಬುವದು ಸ್ಪಷ್ಟವಾಗುತಿದೆ. ಕ್ರಿಸ್ತಮತ ಬೋಧನೆ ತತ್ವಸ್ಥಿತಿಗೆ ವಿರೋಧವಾಗಿರುವದ್ದರಿಂದ ಆ ಬೋಧನೆ ತತ್ವವಲ್ಲವೆಂದು ಹೇಳಬೇಕಾಗಿರುತ್ತೆ, ಮತ್ತು

ಆ ಮತದಲ್ಲಿ ದೇವರು ಪ್ರಪಂಚ ಆದಿಪುರುಷನನ್ನೂ ಆದಿಸ್ತ್ರೀಯನ್ನೂ ಸೃಷ್ಟಿಸಿದಾಗ್ಯೂ, ಅವರನ್ನು ದೇವರಿಗೆ ದ್ವೇಷಿಯಾದ ಸೈತಾನನು ಬುದ್ಧಿ ಕೆಡಿಸಿದಂತೆಯೂ, ಹೇಳುತ್ತಾರೆ. ದೇವರೊಬ್ಬನೇ ಅದ್ವಿತೀಯನೂ, ಅನುಪಮನನೂ, ಅಪ್ರತಿಮನೂ, ಪರಿಪೂರ್ಣಕಾಮನೂ, ಸಮಸ್ತಶಕ್ತಿಯುತನೂ, ಆಗಿರುವನೆಂದು ಅವರೂ ನಾವೂ ಹೇಳುತ್ತಿರುವಲ್ಲಿ ಸೈತಾನನೆಂಬೊಬ್ಬನು ಆ ದೇವರಿಗೆ ಸಮಾನನಾಗಿ ಶತ್ರುವಾಗಿ ಪ್ರತಿಭಟಿಸಿ ದೇವರು ಮಾಡಿದ ಕೆಲಸವನ್ನು ಕೆಡಿಸುವದಕ್ಕೆ ಅರ್ಹನಾಗಿದ್ದನೆಂದು ಅವರು ಹೇಳುವ ಮಾತು ಎಷ್ಟು ಅಸಂಗತವೋ ಮತ್ತು ಎಷ್ಟು ಮಟ್ಟಿಗೆ ನಂಬತಕ್ಕದ್ದೋ ಅದಂ ಸರ್ವರೂ ತಾವೇ ತಿಳಿದುಕೊಳ್ಳಬಹುದು. ಕ್ರಿಶ್ಚ್ಯನ ವಿಲ್ಲಜವರು ತಮ್ಮ ಲೌಕಿಕ ಯುಕ್ತಿವಾದಗಳನ್ನು ನಮ್ಮ ಜನಗಳಿಗೆ ಬೋಧಿಸಿ ನಮ್ಮವರಲ್ಲಿ ಮೂಢರಾದವರು ಅದನ್ನು ಕೇಳಿ ಭ್ರಮಿಸಿ ಕೆಟ್ಟುಹೋದದ್ದಕ್ಕೋಸ್ಕರ ನಾವು ಎಷ್ಟು ವ್ಯಸನಪಟ್ಟರೂ ಸಾಲದು. ಮತ್ತು ನಮ್ಮ ಜನಗಳ ದುರ್ದೈವಕ್ಕೂ ಅದನ್ನು ನಿವಾರಣೆ ಮಾಡುವದಕ್ಕೆ ಅವಕಾಶವಿಲ್ಲದೆ ಇರುವ ನಮ್ಮ ದೌರ್ಭಾಗ್ಯಕ್ಕೂ ನಾವು ಅಧಿಕವಾದ ಸಂತಾಪಪಡಬೇಕಾಗಿದೆ. ಇನ್ನೊಂದಾವರ್ತಿ ವಿಗ್ರಹಾರಾಧನವು ನ್ಯಾಯೋಚಿತವೆಂಬ ಸಂಗತಿಯನ್ನೂ, ನಮ್ಮ ವರ್ಣಾಶ್ರಮ ಧರ್ಮಗಳು ಯುಕ್ತವಾದವೆಂಬದನ್ನೂ, ಆಯಾ ವರ್ಣಾಶ್ರಮಧರ್ಮದಿಂದ ವಿಶಿಷ್ಟರಿಗೂ ಸಮಾನವಾದ ಸದ್ಗತಿಯುಂಟೆಂಬದನ್ನೂ, ನಮ್ಮ ಮತದಿಂದ ಕೆಟ್ಟು ಹೋದವರನ್ನು ತಿದ್ದಿ ನಮ್ಮ ಮತಕ್ಕೇನೆ ಸೇರಿಸಿಕೊಳ್ಳುವ ಮತ್ತು ಮುಂದೆ ಯಾರೂ ಕೆಡದಹಾಗೆ ಮಾಡತಕ್ಕ ಸ್ಥೈರ್ಯವನ್ನೂ, ಮಾನವರಿಗೆ ಸಾಧಾರಣವಾಗಿ ಇರತಕ್ಕ ಭ್ರಾತೃಭಾವ, ಔದಾರ್ಯವಾದ ಮೈತ್ರಿ, ಪರಸ್ಪರ ಪ್ರೀತಿ ವಿಶ್ವಾಸಗಳು ಏಕಮತ್ಯ ಇವುಗಳನ್ನು ಕುರಿತು ವಿಚಾರ ಮಾಡುವೆವು. ವೇದಗಳಲ್ಲಿ ತಿಳಿಸಲ್ಪಟ್ಟಿರುವ ತತ್ವಜ್ಞಾನವನು ಹೊಂದಿ "ಏಕಸ್ಯಾವ ದಾನಘುಂಶೀತಃ" ಎಂಬ ಪ್ರಮಾಣ ಪ್ರಕಾರ ಎಲ್ಲರೂ ಸುಖವಾಗಿರಬೇಕೆಂಬುವದೇ ನಮ್ಮ ಪ್ರಾರ್ಥನೆಯಾಗಿರುತ್ತದೆ

Occasional Notes
ನೈಮಿತ್ತಿಕ ವಿಷಯನ್ಯಾಸ.

Capture of elephants.—ಈ ಬೆಗೆತಾಕಾನ್ಯಾಂತದ ಕೆಡ್ಡಾವಿನಲ್ಲಿ ಮಿ. ಸೇನಿ ಯೆಂಬವರು ೫೪೨ ಆನೆಗಳಂ ಹಿಡಿದಿರುತ್ತಾರೆಂದು ತಿಳಿಯಬರುತ್ತದೆ.

Crops in Bengal.—ಬಂಗಾಳೇ ದೇಶದಲ್ಲಿ ಅತಿವೃಷ್ಟಿಯು ದೆಸೆಯಿಂದ ರಾಬಿ ಮೊದಲಾದ ಫಸಲುಗಳು ಸ್ವಲ್ಪಮಟ್ಟಿಗೆ ಕೆಟ್ಟುಹೋದವು. ಕೆಲವು ಡಿಸ್ಟ್ರಿಕ್ಟುಗಳಲ್ಲಿ ವರ್ಷ ಸಾಲದೆ ಕಸಕಸೆ ಫಸಲ್ ಕೆಟ್ಟು ಹೋಯಿತು.

Influenza.—ಕೊಡಗು ದೇಶದಲ್ಲಿ ಇನ್ಫ್ಲುಯೆನ್ಜಾ ಯೆಂಬ ವಿಷಮಶೀತರೋಗವು ಇನ್ನು ಬಲವಾಗಿಯೇ ವ್ಯಾಪಿಸಿಕೊಂಡು ಅಲ್ಲಿಯಲ್ಲಿ ಪ್ರಾಣಹಾನಿಗಳನ್ನುಂಟುಮಾಡುತಲಿರುವಂತೆ ಕೇಳುವದಕ್ಕೆ ವಿಷಾದಿಸುತ್ತೇವೆ.

A rumour.—ವಾಯುವ್ಯದೇಶದ ಲೆಫ್ಟಿನೆಂಟ್ ಗವರ್ನರಾದ ಸರ್ ಆಕ್ಲಂಡ್ ಕಾಲ್ವಿನ್ ಯವರು ತಮ್ಮ ಉದ್ಯೋಗವಂ ಬಿಟ್ಟು ನಿವೃತ್ತಿಸುಖಮಂ ಪಡೆಯುವಲ್ಲಿ ಅವರ ಕೆಲಸವು ಈಗ ಬರ್ಮಾದೇಶದಲ್ಲಿರುವ ಸರ್ ಚಾರ್ಲಸ್ ಕ್ರಾಸ್ ವೈಟಿಯವರಿಗೆ ಕೊಡಲ್ಪಡುವದೆಂದು ಹಿಂದಾನೊಂದು ಪತ್ರಿಕೆ ತಿಳಿಸುತ್ತದೆ.

Collection of revenue by postal orders.—ಪೋಸ್ಟಾಫೀಸ್ ಮಣಿಆರ್ಡರ್ ಮೂಲಕ ಸರ್ಕಾರ್ ಕಂದಾಯವನ್ನು ವಸೂಲ್ಮಾಡುವ ಪದ್ಧತಿಯನ್ನು ಕೆಲವು ಡಿಸ್ಟ್ರಿಕ್ಟುಗಳಲ್ಲಿ ಅಜಮಾಯಿಷೀ ಮಾಡಬೇಕಾಗಿದೆಯಾಗಿ ಅಂತಾ ಡಿಸ್ಟ್ರಿಕ್ಟುಗಳಲ್ಲಿ ಸದರೀ ಪದ್ಧತಿಯನ್ನು ಬರುವ ಆಗಸ್ಟು ಲಾಗಾಯಿತು ಆಚರಣೆಯಲ್ಲಿ ತರತಕ್ಕದ್ದೆಂದು ಪೋಸ್ಟುಮಾಸ್ಟರ್ ಜನರಲರವರು ಹುಕುಂ ಕೊಟ್ಟಿರುತ್ತಾರೆ.

Manufacture of arms.—ಕಾಬೂಲ್ ಅಮೀರವರು ತಮ್ಮ ದೇಶದೊಳಗಿರುವ ಕಾರ್ಖಾನೆಯಲ್ಲಿ ಆಯುಧಗಳು, ಮದ್ದು, ಕೋವಿ, ತೋಫೆ ವಗೈರೆ ಯುದ್ಧ ಸಾಮಗ್ರಿಗಳನ್ನು ಕೇವಲ ಆತುರದೊಡನೆ ತಯಾರ್ಮಾಡಿಸುತಲಿರುವರಲ್ಲದೆ ಕಾಬೂಲ್ ಗವರ್ನರಾದ ತಮ್ಮ ಮಕ್ಕಳನ್ನು ಅಲ್ಲಿ ಕೆಲಸ ಮಾಡುತಲಿರುವ ಇಂಗ್ಲಿಷ್ ಕೆಲಸಗಾರರಿಂದ ಶಾಸ್ತ್ರೀಯವಾಗಿ ಕೆಲಸಗಳನ್ನು ಮಾಡಿಸತಕ್ಕದ್ದೆಂದು ಎಚ್ಚರಿಸುತಲಿರುವಂತೆ ಹಿಂದಾನೊಂದು ಪತ್ರಿಕೆ ತಿಳಿಸುತ್ತದೆ.

Construction of a railway.—ಮೊರ್ವಿ ಸಂಸ್ಥಾನದ ಠಾಕೂರ್ ಸಾಹೇಬರವರು ಕಾಟಿವಾಡಿಯಲ್ಲಿ ರೆಯಿಲ್ ರಸ್ತೆ ಹಾಕಿಸಬೇಕೆಂದು ಯೋಚಿಸಿ ಯಿರುವಂತೆ ಹೇಳಿಕೊಳ್ಳುತಲಿದ್ದಾರೆ. ನಗರಿನಿಂದ ರಾಜಕೋಟೆವರಿವಿಗೆ ರೆಯಿಲ್ ರಸ್ತೆ ಹಾಕಿಸಬೇಕಾದ ವಿಷಯದಲ್ಲಿ ನವಾನಗರದ ಅರಸರೊಡನೆ ಕಾಗದಪತ್ರಗಳು ನಡೆಯುತಲಿವೆ. ವಧ್ವಾನಿಗೂ ಊಂಗಾ ಸಂಸ್ಥಾನಕ್ಕೂ ರೆಯಿಲ್ ರಸ್ತೆ ಹಾಕಿಸಬೇಕೆಂಬದು ಸಹ ಠಾಕೂರ್ ಸಾಹೇಬರವರ ಅಭಿಪ್ರಾಯವಾಗಿದೆ.

A request refused.—ಪ್ರಿನ್ಸ್ ಬಿಸ್ಮಾರ್ಕರವರು ಜರ್ಮನೀದೇಶದ ಪ್ರಧಾನ ಮಂತ್ರಿಯಾಗಿದ್ದ ಕಾಲದಲ್ಲಿ ಅವರಿಗೆ ಬರೆದ ಕೆಲವು ಕಾಗದಗಳನ್ನೂ ತನ್ನ ವಶಕ್ಕೆ ಕೊಟ್ಟದ್ದ ಕೆಲವು ದಸ್ತಾವೇಜುಗಳನ್ನೂ ವಾಪಸ್ ಕಳುಹಿಸಿ ಕೊಡಬೇಕೆಂದು ಜರ್ಮನೀ ಚಕ್ರವರ್ತಿಯವರು ಸಾಬಕ್ ಮಂತ್ರಿಯವರನ್ನು ಕೇಳಲಾಗಿ ಅವರು ಕೊಡುವದಿಲ್ಲವೆಂದು ಹೇಳಿದರಲ್ಲದೆ ಅವುಗಳನ್ನು ಹೊರಪಡಿಸುವದಾಗಿ ಸಹ ಬೆದರಿಸುವಂತೆ ಬೇರ್ಲಿನ್ನಿಂದ ಬಂದ ತಂತಿ ವೃತ್ತಾಂತದ ಮೂಲಕ ತಿಳಿಯಬರುವದಾಗಿ ಹಿಂದಾನೊಂದು ಪತ್ರಿಕೆ ಹೇಳುತ್ತದೆ.

Charges against a Superintendent of police.—ಲಾಹೂರ್ ಟ್ರಿಬ್ಯೂನ್ ಎಂಬ ಪತ್ರಿಕೆಯು ಅಮೃತಸರದ ಪೋಲೀಸ್ ಸೂಪರಿಂಟೆಂಡೆಂಟರ ಮೇಲೆ ದೋಷಾರೋಪಣೆ ಮಾಡುತ್ತಿದೇನಂದರೆ,—ಮಿ|| ವಾರ್‌ಬರ್ಟನ್‌ಯವರು ಮುಖ್ಯ ಸಂಗತಿಗಳಂ ಹೇಳುವಂತೆ ಅಮೃತಸರದ ಜನಗಳಂ ಬಲಾತ್ಕರಿಸುತ್ತಾರೆ. ಸದರೀ ಯವರು ೭೦,೦೦೦ ರೂಪಾಯಿಗಳ ನಗದಿ ಯುಳ್ಳವರಾಗಿರುತ್ತಾರೆ, ಅವರ ಪೈಕಿ ೫೫,೦೦೦ ರೂಪಾಯಿಗಳು ಅಮೃತಸರದ ಜನಗಳಿಂದ ಸುಲಿಗೆ ಮಾಡಿದ್ದು. ಈ ಸಾಲಗಳ ಪೈಕಿ ಬಹು ಭಾಗವನ್ನು ರುಜು ಮಾಡುವದಕ್ಕೆ ನಾವು ಸನ್ನದ್ಧರಾಗಿರುತ್ತೇವೆ. ಅವೆಲ್ಲ ನಮಗೆ ತಿಳಿಯುವದು, ಎಂಬದು ಮಿ|| ವಾರ್‌ಬರ್ಟನ್‌ಯವರಮೇಲೂ ಅವರ ತಾಬೇದಾರರಮೇಲೂ ಪ್ರಬಲಗಳಾದ ಬೇರೆಬೇರೆ ದೋಷಗಳು ತಿಳಿಪ್ಪಟ್ಟಿರುತ್ತವೆ. ಅವರನ್ನು ಕೂಡಲೇ ಸಸ್ಪೆಂಡ್ ಮಾಡಬೇಕೆಂದು ಲೆಫ್ಟಿನೆಂಟ್ ಗವರ್ನರವರಿಗೆ ಅಪೇಕ್ಷೆಮಾಡಿಕೊಂಡಿರುತ್ತಾರೆ. ಈ ವಿಷಯ ಪ್ರಬಲವಾಗುತ ಬಂತು, ಆದುದರಿಂದ, ಸದರೀ ಟ್ರಿಬ್ಯೂನ್ ಪತ್ರಿಕಾ ಕರ್ತರಮೇಲೆ ಫಿರ್ಯಾದ್ ಮಾಡಿ ದೋಷ ವಿಮುಕ್ತರಾಗಬೇಕೆಂದು ಸರ್ ಜೇಂಸ್ ಲೈಯಲ್ ಯವರು ಮಿ|| ವಾರ್‌ಬರ್ಟನ್ ಯವರಿಗೆ ಹುಕುಂ ಮಾಡುವದು ವಿನಾ ಬೇರೇ ಕರ್ತವ್ಯ ಕಾಣಲಿಲ್ಲವು.

Circulation of forged notes.—ಅಲಹಾಬಾದ್ ಪಯೋನಿಯರ್ ಪತ್ರಿಕೆಯಲ್ಲಿ ತಿಳಿಸಲ್ಪಟ್ಟಿರುವ ದೇನಂದರೆ,—ಉತ್ತರ ಇಂಡಿಯಾದೇಶದ ಪೈಕಿ ಅನೇಕ ಪ್ರದೇಶಗಳೊಳು ಸೃಷ್ಟನೆ ನೋಟುಗಳು ಚಲಾವಣೆಯಲ್ಲಿರುತ್ತವೆ ಯೆಂಬದಕ್ಕೆ ಅನೇಕ ನಿದರ್ಶನಗಳು ಈಚೆಗೆ ಕಂಡುಬರುತ್ತವೆ, ಪರಂತು ಕಾಬಾರೀ ಮತ್ತು ಜಾಡಿಪಿಲಿ ಅಧಿಕಾರಿಗಳು ತಾತ್ಕಾಲಿಕವಾಗಿಯಾದರು ಇಂತಾ ತಕ್ಸೀರಗಳಂ ಅಡಗಿಸುವರು. ಎರಡು ಮೊಕದ್ದಮೆಗಳಲ್ಲಿ ಅಪರಾಧಿಗಳನ್ನು ಅಲಹಾಬಾದ್ ಹೈಕೋರ್ಟಿನವರು ಶಿಕ್ಷಾರೀತಿಯಿಂದ ದಂಡಿಸಿದರು. ಚಿದಂಬರಲಾಲ್ ಯೆಂಬಾತನು ಕಾನ್‌ಪುರದಲ್ಲಿ ೫೦೦ ರೂಪಾಯಿಗಳ ನೋಟುಗಳಂ ಸೃಷ್ಟನೆ ಮಾಡಿದಬಗ್ಗೆ ದಸ್ತಗಿರಿ ಮಾಡಲ್ಪಟ್ಟನು. ಠಾಕೂರು ದಾಸ್ ಎಂಬಾತನು ಮೀರಟ್‌ಪುರದಲ್ಲಿ ಅದೇ ತಕ್ಸೀರ್‌ಬಗ್ಗೆ ಆಪಾದಿಸಲ್ಪಟ್ಟನು. ಸದರೀ ಬನಾವಟ್ ನೋಟುಗಳು ಕೈಯಿಂದ ಮಾಡಲ್ಪಟ್ಟವು. ಅದರಲ್ಲಿನ ಹಿಂದೀ ಅಕ್ಷರಗಳು ಸುಮಾರ್ ಸರಿಯಾಗಿದ್ದರೂ ಇಂಗ್ಲಿಷ್ ಅಕ್ಷರಗಳೂ ರುಜುವೂ ನೋಡುವಾಗ್ಯೇನೇ ಬನಾವಟೆಯೆಂದು ಸ್ಪಷ್ಟವಾಗಿ ಕಾಣುತ್ತವೆ. ಸದರೀ ನೋಟುಗಳನ್ನು ತೆಗೆದುಕೊಂಡ ವರ್ತಕರು ದೇಶಭಾಷೆಯ ಅಕ್ಷರಗಳು ಮಾತ್ರ ನೋಡಿದವರಾದರು. ಕಾನ್‌ಪುರದ ಸೆಷನ್ಸ್ ಜಡ್ಜಿಯವರು ಚಿದಂಬರಲಾಲ್ ಯೆಂಬವನಿಗೆ ಯಾವಜ್ಜೀವ ದ್ವೀಪಾಂತರವಾಸ ಮಾಡುವ ದಂಡನೆ ವಿಧಿಸಿದರು. ಪರಂತು ಹೈಕೋರ್ಟಿನವರು ಸದರೀ ದಂಡನೆಯನ್ನು ೧೦ ವರ್ಷಗಳ ಕಠಿಣಸಜಾವಿಗೆ ಬದಲಾಯಿಸಿದರು. ಠಾಕೂರ್ ದಾಸ್ ಯೆಂಬವನಿಗೆ ವಿಧಿಸಲ್ಪಟ್ಟ ೧೪ ವರ್ಷಗಳ ಕಠಿಣ ಖೈದ್ ಸಜಾ ಹೈಕೋರ್ಟಿನವರಿಂದ ಕಾಯಂಮಾಡಲ್ಪಟ್ಟಿತು

LOCAL AND PROVINCIAL NEWS.
ಸ್ಥಳದೇಶಮತ್ತುತಾಲ್ಲೂಕ್‌ಜಾತಿವೃತ್ತಾಂತಗಳು

The Dewan.—ಈ ಸಂಸ್ಥಾನದ ದಿವಾನರವರಾದ ಮಿ|| ಶೇಷಾದ್ರಿಅಯ್ಯರ್ ಸಿ. ಎಸ್. ಐ. ಯವರು ಗತ ಶುಕ್ರವಾರದಿನ ಮೈಸೂರಿಂದ ಈವೂರಿಗೆ ದಯಮಾಡಿದರು. ಇವರು ಇನ್ನೆರಡುವಾರಗಳತನಕ ಇಲ್ಲಿಯೇ ಇರುವರೆಂದು ಕೇಳುತ್ತೇವೆ.

Dismissal of a Police Inspector.—ಚಿತ್ರದುರ್ಗ ಡಿಸ್ಟ್ರಿಕ್ಟು ಹಿವಕ್ಯಾನಿಬನ್ ಪೋಲೀಸ್ ಇನ್ಸ್‌ಪೆಕ್ಟರ್ ಮಿ|| ವೆಂಕಟಾಚಾರ್ಯರೆಂಬವರನ್ನು ಯಾವದೋ ಒಂದು ಕಾರಣದಮೇಲೆ ಇನ್ಸ್‌ಪೆಕ್ಟರ್ ಜನರಲ್ಲವರು ಬರ್ತರಫ್‌ಮಾಡಿದರೆಂದು ಕೇಳುತ್ತೇವೆ. ಕಾರಣಮಾತ್ರ ಚೆನ್ನಾಗಿ ಹೊರಗಾಗದಿರುವದರಿಂದ ನ್ಯಾಯಾನ್ಯಾಯಗಳೆರಡನ್ನೂ ಹೇಳುವದಕ್ಕಾಗುವದಿಲ್ಲವು.

Mill accident.—ಈ ನಗರದಲ್ಲಿ ಸ್ಥಾಪಿಸಲ್ಪಟ್ಟಿರುವ ಬಿನ್ನಿಯವರ ಕಂಬ್ಳೀ ಕಾರ್ಖಾನೆಯಲ್ಲಿ ಕಳೆದ ಶುಕ್ರವಾರದಿವಸ ೧೬ ವರುಷಗಳ ವಯಸ್ಸುಳ್ಳ ಬಾಲಕನೊಬ್ಬನು ಕೆಲಸ ಮಾಡುತಲಿರುವಾಗ್ಯೆ ಅಕಸ್ಮಾತ್ತಾಗಿ ಅವನಕೈ ಯಂತ್ರಕ್ಕೆ ಸಿಕ್ಕಿ ಮುರಿದುಹೋಗಲು ಅವನು ಕೂಡಲೇ ಚಿಕಿತ್ಸಾರ್ಥ ಆಸ್ಪತ್ರೆಗೆ ಕಳುಹಿಸಲ್ಪಟ್ಟನೆಂದು ತಿಳಿಯಲಾದೆವು.

The weather.—ಗತವಾರದಿಂದೀಚೆಗೆ ಒಂದೆರಡಾವರ್ತಿ ಯಥೋಚಿತ ಮಳೆಯಾಯಿತಲ್ಲದೆ ಸಾಯಂಕಾಲವೇಳೆಯಲ್ಲಿ ಮೋಡ ಗುಡುಗು ಮಿಂಚುಗಳು ವರ್ಷಪತನ ಪ್ರತ್ಯಾಶೆಯನ್ನುಂಟುಮಾಡುತಲಿವೆ. ಆದರೆ ಅವುಗಳ ವಿರೋಧಿಯಾದ ಘಾಳಿಯು ಕ್ಷಣಮಾತ್ರದಲ್ಲಿ ಅಂತಾ ಪ್ರತ್ಯಾಶೆಯನ್ನೆಲ್ಲ ಹೋಗಲಾಡಿಸಿ ಆಕಾಶವು ನಿರ್ಮಲವದಿಸಿ ತಾನೂ ಮರೆಯಾಗುತಿದೆ. ಈಗ ಬಿಸಿಲು ದಾರುಣವಾಗಿ ಸಂಚಾರವು ದುಸ್ಸಹವಾಗಿದೆ. ಅಲ್ಲಿಯಲ್ಲಿ ಉಷ್ಣಜಾತ ರೋಗವು ಯಥೋಚಿತ ಇರುತಲಿದೆ. ಇನ್ಫ್ಲುಯೆಂಜಾ ವಿನ ಗದ್ದಲವು ಕುದ್ರಾಂಗ ಅರಿಗಿತುಬದಾಗಿ ತಮ್ಮಾಯಿದ್ವನಿಯ ಉಪಶಾಂತಿಯಿಂದ ನುಡಿಯಬಹುದಾಗಿದೆ. ಪದಾರ್ಥಗಳ ನಿರಖುಮಾತ್ರ ಏಕರೂಪವಾಗಿದೆ.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ ಮಹಾರಾಜರಾಜಾಸಾಹೇಬ್ ಬಹದೂರವರ ಸರ್ಕಾರದಿಂದ ಹೊರಟಿರುವ ಇಷ್ತಿಹಾರ್‌ನಾಮೆಗಳು.

ಮೊಕ್ಕಾಂ ನಂ. ೫೯೮ ತಾ|| ೬ನೇ ಮೇ ೧೮೯೦— ತುಮಕೂರ್ ಡಿಸ್ಟ್ರಿಕ್ಟು ಕೊರಟಗೆರೆ ಸಬ್ ತಾಲ್ಲೂಕ್ ಡೆಪ್ಯುಟಿ ಅಮಲ್ದಾರ್ ತಿರುನಾರಣಯ್ಯಂಗಾರ್ರವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು [illegible] ದಿನಗಳ ಪ್ರಿವಿಲೇಜರಜಾ ಕೊಡಲ್ಪಟ್ಟಿರುತ್ತದೆ. ಮಧುಗಿರಿ ತಾಲ್ಲೂಕ್ ಶಿರಸ್ತೇದಾರ್ ಚೆನ್ನಪ್ಪಪಿಳ್ಳೆಯವರು ತಿರುನಾರಣಯ್ಯಂಗಾರ್ರವರ ಗೈರಹಾಜರಿಯಲ್ಲಿ ಅಥವಾ ಮತ್ತೊಂದುಹುಕುಂ ಕೊಡಲ್ಪಡುವತನಕ ಕೊರಟಗೆರೆ ಡೆಪ್ಯುಟಿ ಅಮಲ್ದಾರ್ ವ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಮೊಕರರ್ಮಾಡಲ್ಪಟ್ಟಿರುತ್ತಾರೆ.

ಮೊಕ್ಕಾಂ ನಂ. ೫೯೩—ಕೋಲಾರ್ ಡಿಸ್ಟ್ರಿಕ್ಟು ಚಿಂತಾಮಣಿ ತಾಲ್ಲೂಕ್ ಅಮಲ್ದಾರ್ ವೆಂಕಟಪ್ಪಯ್ಯರವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು ಮೂರುದಿನಗಳ ಪ್ರಿವಿಲೇಜರಜಾ ಕೊಡಲ್ಪಟ್ಟಿರುತ್ತದೆ. ಚಿಂತಾಮಣಿ ತಾಲ್ಲೂಕ್ ಶಿರಸ್ತೇದಾರ್ ಗಂಗಾಧರಪ್ಪನವರು ವೆಂಕಟಪ್ಪಯ್ಯರವರ ಗೈರ್‌ಹಾಜರಿಯಲ್ಲಿ ಅಥವಾ ಮತ್ತೊಂದುಹುಕುಂ ಕೊಡಲ್ಪಡುವತನಕ ಸದರೀ ತಾಲ್ಲೂಕ್ ೫ನೇ ಗ್ರೇಡ್ ಅಮಲ್ದಾರ್ ವ ಮೂರನೇಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಮೊಕರರ್ಮಾಡಲ್ಪಟ್ಟಿರುತ್ತಾರೆ.

ಮೊಕ್ಕಾಂ ನಂ. ೫೯೫—ಚಿತ್ರದುರ್ಗ ಡಿಸ್ಟ್ರಿಕ್ಟು ಪೋಲೀಸ್ ಅಸಿಸ್ಟೆಂಟ್ ಕಮಿಷನರ್ ವಿ. ವಿ. ಎನ್. ಗೋಪಾಲಯ್ಯಂಗಾರ್ರವರಿಗೆ ೧೮೯೦ನೇ ಇಸವಿ ಏಪ್ರಿಲ್ ೧೭ನೇ ಮಕರ್ಮ ಲಾಗಾಯಿತು ಮೂವತ್ತೈದು ದಿನಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತ್ತದೆ

ನಂ. ೧೪.—ಎಡತೊರೆ ಡೆಪ್ಯುಟಿಅಮಲ್ದಾರ್ ಅಳಸಿಂಗರಯ್ಯಂಗಾರ್ರವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು ಇಪ್ಪತ್ತು ದಿನಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತ್ತದೆ.

ನಂ. ೧೬.—ಕೋಲಾರ್ ಡಿಸ್ಟ್ರಿಕ್ಟು ಬಾಗೇಪಲ್ಲಿತಾಲ್ಲೂಕ್ ಅಮಲ್ದಾರ್ ಪಿ. ಸೀತಾರಾಮಯ್ಯನವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಒಂದು ತಿಂಗಳ ಕಾಮಿದೇರಜಾ ಕೊಡಲ್ಪಟ್ಟಿರುತ್ತದೆ. ಗುಡಿಬಂಡೆ ರೇಂಜ್ ಡೆಪ್ಯುಟಿ ಅಮಲ್ದಾರ್ ಸ ಲಾಂ ಮೊದಲಿಯಾರವರು, ರಜಾ ಮೇಲೆ ಸೀತಾರಾಮಯ್ಯನವರು ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಗುಡಿಬಂಡೆ ಸಬ್ ತಾಲ್ಲೂಕ್ ಸೇರಿ ಬಾಗೇಪಲ್ಲಿ ತಾಲ್ಲೂಕ್ ಅಮಲ್ದಾರ್ ವ ಮೂರನೇಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಮೊಕರರ್ಮಾಡಲ್ಪಟ್ಟಿರುತ್ತಾರೆ.

ಮೊಕ್ಕಾಂ ನಂ. ೫೯೩, ತಾ|| ೧೧ನೇ ಮೇ. ಹಾಸನ ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರ್ ಮಿ|| ಇ. ಆರ್ ಸುಬ್ಬರಾಯರವರನ್ನು ಮೈಸೂರು ಅರಮನೆ ಇಲಾಖಾ ಇನ್‌ಚಾರ್ಜ್ ಆಫೀಸರನ್ನಾಗಿ ಮೈಸೂರು ಸರ್ಕಾರದವರು ಮೊಕರರ್ಮಾಡಿದ್ದರಿಂದ ಅವರು ಸದರೀ ಡಿವಿಜನ್ ಚಾರ್ಜನ್ನು ೯೦ನೇ ಇಸವಿ ಏಪ್ರಿಲ್ ೨೮ನೇ ಮಕರ್ಮ ದಿನ ಮಧ್ಯಾಹ್ನತ್ಪರ ಅಸಿಸ್ಟೆಂಟ್ ಇಂಜನಿಯರ್ ಮಿ|| ಸಿ. ಎ ಮಹದೇವಶಾಸ್ತ್ರಿಗಳವರಿಗೆ ಒಪ್ಪಿಸಿರುತ್ತಾರೆ. ಅಸಿಸ್ಟೆಂಟ್ ಇಂಜನಿಯರ್ ಮಿ|| ಎ ಗೋವಿಂದಾಚಾರ್ಯರವರು ೯೦ನೇ ಇಸವಿ ಏಪ್ರಿಲ್ ೩ನೇ ಮಕರ್ಮ ಪೂರ್ವಾಹ್ನದಲ್ಲಿ ಹಾಸನ ಡಿವಿಜನ್ ಚಾರ್ಜನ್ನು ಮಿ|| ಮಹದೇವಶಾಸ್ತ್ರಿಗಳಿಂದ ತೆಗೆದುಕೊಂಡಿರುತ್ತಾರೆ.

ನಂ. ೧೮೯೦ನೇ ಇಸವಿ ಜನವರಿ ೧೧ನೇ ಮಕರ್ಮ ಮೈಸೂರ್ ಗೆಜೆಟ್ ಎರಡನೇಭಾಗದ ೧ನೇ ಪುಟದಲ್ಲಿ ಪ್ರಕಟಿಸಲ್ಪಟ್ಟಿರುವ ೧೮೮೯ ನೇ ಇಸವಿ ಡಿಸಂಬರ್ ೧೮ನೇ ಮಕರ್ಮ ಇಸ್ತಿಹಾರ್‌ನಾಮೆಯನ್ನು ಬದಲಾಯಿಸಿ ಇದರಮೂಲಕ ಪ್ರಕಟಿಸುವದೇನಂದರೆ,—ಇನ್ಫ್ಲುಯೆಂಜಾ ಎಂಬ ವಿಷಮಶೀತಜ್ವರವು ಪ್ರಚುರವಾಗಿರುವದರಿಂದ ಮೈಸೂರ್ ಲೋಕಲ್‌ಸರ್ವಿಸ್ ಮತ್ತು ಪ್ಲೀಡರ್‌ಗಳ ಪರೀಕ್ಷೆಗಳು ೧೮೯೦ನೇ ಇಸವಿ ಆಗಸ್ಟು ೧೧ನೇ ತಾರೀಖ್ ಮತ್ತು ಆಲಾಗಾಯಿತು ಮುಂದೆ ಬರುವ ತಾರೀಖುಗಳವರಿವಿಗೆ ನಿಲ್ಲಿಸಲ್ಪಟ್ಟಿರುತ್ತವೆ.

Bangalore :— Printed and published at the KARNATIC PRESS, No. 114, SRINIVASA MANDIRA ROAD PETTAH—1890.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಿಯಾಮವಿದಿತಸ್ವನ್ಯತ್ಯ್ಯಪಗಮಾರ್ಥ್ಯಕರ್ಣಾಟಕಪ್ರಕಾಶನವಲಾಘದಾಪ್ರತಿಪಸಾಹಿತೀಶೋಭಿತಾ॥ವ್ಯಗಾಂಕಹಿತವಾಸರೆಸಿಮಿತಮುದ್ರಣಾಸಜ್ಜನೈರ್ವಿಕಾಸುವರಿಬೋಧಿತಾಜಕತಿವಸಸುಸುಮುದಂ॥

Vol. XVII] BANGALORE — MONDAY, MAY 26 1890 [No. 21.

ಸಂಪುಟ ೧೭.] ಬೆಂಗಳೂರು:—ಸರ್ ೧೮೯೦ನೇ ಇಸವಿ ಮೇ ೨೬ ನೇ ತಾರೀಖ್ ಸೋಮವಾರ. [ಸಂಚಿಕೆ ೨೧.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ ಅಂಚೆಯಿಲ್ಲದೆ	ಪರಸ್ಥಳದವರಿಗೆ ಅಂಚೆಯ ಹೊರತು
ಮುಂಗಡಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡ ಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

[illegible]

ಪ್ರಕಟನೆಯ ರಿವಾಜ.

ಮೊದಲನೆಯ ದಫಾ ಪಂಕ್ತಿ ಒಂದಕ್ಕೆ	೦—೨—೦
ಎರಡನೆಯ ದಫಾ ಪಂಕ್ತಿ ಒಂದಕ್ಕೆ	೦—೧—೦

[illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ

[illegible]

ಇದರ ಕ್ರಯ—ಟಪ್ಪಾಲು ಮತ್ತು [illegible]

[illegible]

ADVERTISEMENTS

ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರಿಗೇ ಸಿದ್ಧವಾಗಿ[illegible] ಬೇಕಾದವರು ವೊಬಲಗು ಕಳುಹಿಸಿ ತರಿಸಿಕೊಳ್ಳಬಹುದು

ಸಂಸ್ಕೃತ ಗ್ರಂಥಗಳು.

	ಟಪ್ಪಾಲ್ ಸಹ ಕ್ರಯ
ಸಟೀಕಾ ಸ್ವರ್ಗಸಾರ [illegible]	೫ ೦ ೦
,, [illegible]	೧ ೦ ೦
,, ಶಿವಾನಂದಲಹರಿ	೦ ೮ ೦
,, [illegible]	೧ ೨ ೦
,, [illegible]	೦ ೧೨ ೦
,, [illegible]	೦ ೪ ೦
,, [illegible]	೦ ೧ ೬
,, [illegible]	೦ ೩ ೦
[illegible]	೦ ೫ ೦
[illegible]	೦ ೩ ೦
[illegible]	೦ ೨ ೬
[illegible]	೦ ೨ ೬
೧ [illegible]	೦ ೧ ೦

ಕನ್ನಡ ಗ್ರಂಥಗಳು.

[illegible]	೩ ೦ ೦
[illegible]	೧ ೪ ೦
[illegible]	೧ ೮ ೦
[illegible]	೦ ೮ ೦
[illegible]	೦ ೮ ೦
[illegible]	೦ ೨ ೬
[illegible]	೦ ೨ ೬
[illegible]	೦ ೩ ೦
[illegible]	೦ ೨ ೦
[illegible]	೦ ೨ ೦
[illegible]	೦ ೨ ೦
[illegible]	೧ ೦ ೦
[illegible]	೦ ೧೨ ೦

ನೋಟೀಸ್.

ಇದರಿಂದ ನಮ್ಮ ಚಂದಾದಾರರಿಗೂ ಇತರರಿಗೂ ಪ್ರಕಟಪಡಿಸುವದೇನೆಂದರೆ —

ಸರ್ ೧೮೮೯ ನೇ ಇಸವಿ ಡಿಸೆಂಬರ್ ಆಖೈರಿನವರಿಗೆ ಚಂದಾ ಬಾಕಿಯನ್ನು ಪೂರಾ ಫೈಸಲ್ಮಾಡತಕ್ಕ ಚಂದಾದಾರರ ಹೆಸರುಗಳನ್ನು ಮಾತ್ರ ನಾವು ರಿಜಿಸ್ಟರ್ ದಾಖಲ್ಮಾಡಿಕೊಂಡು ಈಜನವರಿ ಆಗಾಯತು ಪತ್ರಿಕೆ ಕಳುಹಿಸುತ್ತೇವೆ ಅವರ ಪೈಕಿ ಯಾರಿಗಾದರೂ ಪತ್ರಿಕೆಯ ಅಪೇಕ್ಷೆ ಇಲ್ಲದಿದ್ದರೆ ಅವರು ಕೂಡಲೇ ನಮ್ಮ ಅಭಿಪ್ರಾಯವನ್ನು ಮೂರುಕಾಸಿನ ಕಾರ್ಡಿನಲ್ಲಿ ನಮಗೆ ತಿಳಿಸಬಹುದು. ಪತ್ರಿಕೆಯ ಅಪೇಕ್ಷಿತ ಇರತಕ್ಕವರು ಸಾಧ್ಯವಾದಷ್ಟು ಬೇಗ ಚಂದಾ ವೊಬಲಗನ್ನು ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ

ಬೆಂಗಳೂರು, ತಾ ೫ನೆ ಜನವರಿ ೧೮೯೦ — ಟಿ ಸಿ ಶ್ರೀನಿವಾಸಯ್ಯಂಗಾರ್, ಪ್ರೊಪ್ರೈಟರ್, ಕರ್ಣಾಟಕ ಪ್ರಕಾಶಿಕಾ

ನೋಟೀಸ್,

ಮನೆಗಳಲ್ಲಿ ಗಿಲಿಟ್ ಮಾಡುವದಕ್ಕೆ ಅನುಕೂಲವಾದ ಬೆಳ್ಳಿ ದ್ರಾವಕವು.

ಈ ಬೆಳ್ಳೀ ದ್ರಾವಕವು ನೈಜವಾದ ಬೆಳ್ಳಿ ತಟ್ಟೆಗಳ ಮೇಲೂ ತಾಮ್ರ, ಹಿತ್ತಾಳೆ ವಗೈರೆ ಏಳೆಷ್ಟು ಪದಾರ್ಥಗಳ ಮೇಲೂ ಹಚ್ಚಿ [illegible] ಗಿಲಿಟ್ ಮಾಡುವುದಕ್ಕೆ ಬಹಳ ಉಪಯುಕ್ತವಾದದ್ದಾಗಿರುತ್ತದೆ ಇದಲ್ಲದೆ ಸದರೀ ದ್ರಾವಕವು ಚಿನ್ನ ಮತ್ತು ಬೆಳ್ಳಿ ಒಡವೆಗಳ ಮಬ್ಬು ತೆಗೆಯುವದಕ್ಕೂ ಅವುಗಳಿಗೆ ಮೆರುಗು ಕೊಡುವದಕ್ಕೂ ಸಹ ಪ್ರಯೋಜನಕರವಾದದ್ದು ಇದರಿಂದ ಇತರವಿಧಾನ [illegible] ಕಾಂತಿ ಯುಂಟಾಗುವದು. ಕಡಿಮೆ ಬಣ್ಣವುಳ್ಳ ಚಿನ್ನಕ್ಕೆ ಉತ್ಕೃಷ್ಟವಾದ ಮೆರುಗು ಪದಾರ್ಥಗಳಿಂದುಂಟಾಗುವಂಥಾ ಕಾಂತಿಯನ್ನು ಉಂಟುಮಾಡುವದು ಶುದ್ಧವಾದ ಬೆಳ್ಳಿ ಮೇಲೆ ಸದರೀ ದ್ರಾವಕವು ತಯಾರಾಗಿರುತ್ತದೆ [illegible] ಭರವಸೆ ಕೊಡಲ್ಪಡುವದು ಇದು ಗಿಲಿಟ್ ಮಾಡುವದಕ್ಕಿಂತ ಬಹಳ ಅಗ್ಗವಾಗಿರುವದು. ಕೊಡಲೆ ಒಂದು ಸೀಸೆಯನ್ನು ತರಿಸಿಕೊಂಡು ಅದರಿಂದ ಯಾವ ಲಾಭವು ಉಂಟಾಗಿರುವದನ್ನು ಅಜಮಾಯಿಷಿ ಮಾಡಿ ನೋಡಬಹುದು

ಇದರ ಕ್ರಯ ಸೀಸೆ ೧ಕ್ಕೆ ೨—೪—೦

ಚಿನ್ನದ ದ್ರಾವಕವು.

ಇದು ಬೆಳ್ಳಿ, ಹಿತ್ತಾಳೆ, ತಾಮ್ರ ವಗೈರೆ ಪದಾರ್ಥಗಳನ್ನು ಗಿಲ್ಟು ಮಾಡುವದಕ್ಕೆ ಬಹಳ ಉಪಯುಕ್ತವಾಗಿರುವದಲ್ಲದೆ ಶುದ್ಧವಾದ ಬಂಗಾರದಲ್ಲಿ ತಯಾರಿಸಲ್ಪಟ್ಟಿರುತ್ತದೆ [illegible] ಗಿಲ್ಟು ಮಾಡುವದಕ್ಕೆ ಈ ದ್ರಾವಕವು ಕೇವಲ ಪ್ರಯೋಜನಕರವಾಗಿರುವದು

ಇದರ ಕ್ರಯ ಸೀಸೆ ೧ಕ್ಕೆ ೩—೮—೦

ಬೇಕಾದವರು [illegible] ಬೆಳ್ಳೀ [illegible] ಗೆ ಬರೆದು ತರಿಸಿಕೊಳ್ಳಬಹುದು.

ದಕ್ಷಿಣಮಹಾರಾಷ್ಟ್ರರೈಲ್ವೇಕಂಪನಿ.

ಸ್ಟೇಶನರೀ ಬಾಬತುನಾನಾತರದ ಸಾಮಾನುಗಳು.

ಸರ್ ೧೮೯೧ನೇ ಇಸವಿ ಜೂನ್ ೧ ನೆ ತಾರೀಖಿನಲ್ಲಿ ಪ್ರಾರಂಭವಾಗುವ ಸಾಲಿಗೆ, ಸ್ವದೇಶದ ಪುಸ್ತಕಗಳ ಮತ್ತು ತಯಾರೀ ಸಾಮಾನುಗಳ ಸರಬರಾಜಿ ಬಗ್ಗೆ ದರಖಾಸ್ತುಗಳು ಬರಮಾಡಿಕೊಳ್ಳಲ್ಪಡುವವು.

ದರಖಾಸ್ತುಗಳನ್ನು, ದರಖಾಸ್ತುದಾರರ ಷೆಡ್ಯೂಲಿನ ಛಾಪು ನಮೂನೆಯಲ್ಲಿ ಬರೆದು ಕಳುಹಿಸತಕ್ಕದ್ದು. ನಾನಾತರದ ಸಾಮಾನುಗಳ ವಿವರದಲ್ಲಿ ಸದರೀ ನಮೂನೆಯನ್ನು ಹುಬ್ಬಳ್ಳಿಯಲ್ಲಿ ಇರುವ ಸ್ಟೋರ್‌ಕೀಪರಿಂದಲೂ, ಕಾಗದ ವಗೈರೆಗಳ ವಿಷಯದೊಳು ಧಾರ್ವಾಡದಲ್ಲಿರುವ ಆಫೀಸಿಂದಲೂ ನಮೂನೆ ಒಂದಕ್ಕೆ ೪ ಆಣೆ ರುಸುಂಕೊಟ್ಟು ಪಡೆಯತಕ್ಕದ್ದು.

ನಾನಾ ತರದ ಸಾಮಾನುಗಳನ್ನು ಧೋರಿಧು[illegible], ಹುಬ್ಬಳ್ಳಿ ಅಥವಾ ಬೆಂಗಳೂರು ಕೋಠಿಗಳಲ್ಲಿ ಒಪ್ಪಿಸತಕ್ಕದ್ದು. ದರಖಾಸ್ತು ಮಾಡತಕ್ಕವರು ಯಾವ ಕೆಲವು ಅಥವಾ ಕೋಠಿಗಳಿಗಾಗಿ ಕೆಮಗೆ ನಮೂನೆಗಳು ಬೇಕೋ ಅದನ್ನು ಅಪೇಕ್ಷಿಸುವಾಗ ತಿಳಿಸತಕ್ಕದ್ದು. ಕಾಗದ ವಗೈರೆ ಸಾಮಾನುಗಳನ್ನೆಲ್ಲ ಧಾರ್ವಾಡದಲ್ಲಿನ ಸದರೀ ಕೋಠಿಯಲ್ಲಿ ಒಪ್ಪಿಸತಕ್ಕದ್ದು

ನಾನಾತರದ ಸಾಮಾನುಗಳ ಮತ್ತು ಕಾಗದ ವಗೈರೆಗಳ ಸರಬರಾಯಿಬಗ್ಗೆ ಮಾಡಲ್ಪಡುವ ದರಖಾಸ್ತುಗಳ ಒಪ್ಪಿಗೆಪಟ್ಟ ಮತ್ತು ಷರತ್ತು-

ಗಳು ದರಖಾಸ್ತುದಾರರ ಪ್ರತಿಯೊಂದು ಷೆಡ್ಯೂಲ್ ಪಟ್ಟಿಯಮೊಗದಲೂ ಕಳುಹಿಸಲ್ಪಡತಕ್ಕದ್ದು. ನಾನಾತರದ ಸಾಮಾನುಗಳವಿಷಯದಲ್ಲಿ ಬೇಕಾದ ವರ್ತಮಾನಗಳನ್ನು ಹುಬ್ಬಳ್ಳಿ ಮತ್ತು ಬೆಂಗಳೂರಲ್ಲಿರುವ ಸ್ಟೋರ್ ಕೀಪರುಗಳಿಂದಲೂ, ಕಾಗದ ವಗೈರೆ ಸಾಮಾನುಗಳ ವಿಷಯದಲ್ಲಿ ಬೇಕಾದ ವರ್ತಮಾನಗಳನ್ನು ಧಾರ್ವಾಡದಲ್ಲಿರುವ ಆಫೀಸಿಂದಲೂ ತಿಳಿದುಕೊಳ್ಳಬಹುದು

ದರಖಾಸ್ತುಗಳನ್ನು ಅಂಗೀಕರಿಸುವ ವಿಷಯದಲ್ಲಿ ಜೂನ್ ೧೬ನೇ ತಾರೀಖು ಆಖೈರಾಗಿರುವದು. ದರಖಾಸ್ತುಗಳನ್ನು ಲಕೋಟೆಯಲ್ಲಿ ಹಾಕಿ ಮೊಹರ್‌ಮಾಡಿ, "ಸಾಮಾನುಗಳು ಅಥವಾ ಕಾಗದ ವಗೈರೆ ಸಾಮಾನುಗಳ ಬಗ್ಗೆ ದರಖಾಸ್ತು" ಎಂದು ಮೇಲ್ಗಡೆ ಬರೆದು ಧಾರ್ವಾಡದಲ್ಲಿರುವ ದಕ್ಷಿಣ ಮಹಾರಾಷ್ಟ್ರ ರೈಲ್ವೆ ಏಜಂಟರ ಹೆಸರಿಗೆ ರವಾನಿಸತಕ್ಕದ್ದು.

ಕಂ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನೇಯಾಗಲಿ ಅಂಗೀಕರಿಸುವದಕ್ಕೆ ಏಜಂಟರವರು ಬದ್ಧರಾಗಿರುವದಿಲ್ಲವು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA

MONDAY, MAY 26, 1890.

೧೮೯೦ನೇ ಮೇ ತಾ॥ ೨೬ ನೇ ಸೋಮವಾರ.

A QUEER POLICY.

ಈ ಸಂಸ್ಥಾನದ ಇಲಾಖಾ ಮುಖ್ಯಾಧಿಕಾರಿಗಳು ವಿಲಕ್ಷಣವಾದ ಒಂದು ನೂತನ ಸಿದ್ಧಾಂತವಂ ಕಲ್ಪಿಸಿಕೊಂಡು ಅನುಷ್ಠಾನದಲ್ಲಿ ತರಲಾರಂಭಿಸಿದ್ದಾರೇನಂತರೆ—ಯಾವದಾದರೊಂದು ಇಲಾಖೆಯಲ್ಲಿ ಕೆಲಸ ಖಾಲಿಯಾದರೆ ಸ್ವಲ್ಪದಲ್ಲಿ ಅದನ್ನು ಭರ್ತಿಮಾಡದೆ ಅಮಾನತ್ ಇಟ್ಟಿರುತ್ತಾರೆ. ಹೀಗಿಡುವದಕ್ಕೆ ಕಾರಣವು ಸ್ಪಷ್ಟವಾಗಿಯೇ ಯಿದೆ, ಆದರೆ ಇಸುಂ ಖಾಲಿಯಾದಮಾತ್ರಕ್ಕೆ ಆತನ ಕೆಲಸವು ವಜಾ ಆಗುವದಿಲ್ಲವಾದುದರಿಂದ ಆ ಕೆಲಸವನ್ನು ಸಹ ಅನ್ಯನೊಬ್ಬನು ವಿಧಿಯಿಲ್ಲದೆ ನಡಸಬೇಕಾಗುತ್ತದೆ. ಅಥವಾ ಮಾಡಿದಾಗ್ಯೂ ಪ್ರಯೋಜನ ವೇನಾದರೂ ಉಂಟಾಗುವದೆ ಯಂದರೆ ಅದೇನೂ ಇಲ್ಲವು. ಮುಂದೆ ಬರತಕ್ಕವನ ಪ್ರಯೋಜನಕ್ಕೆ ಭಂಗ ಉಂಟಾಗುವದರಿಂದ ಹಿಂದಿನವನ ಕಲವ ಅಮಾನತ್ ಇಡಲ್ಪಟ್ಟು ಹೊಸಬನಿಗೆ ಕೆಲಸ ಖಾಯಮಾದಲಂ ಗಾಯಿತು ಸೇರಿಸಿ ಕೊಡಲ್ಪಡುತ್ತದೆ ಏತನ್ಮಧ್ಯೆ ಯೋಗಾಮಿಯಾಗಿ ಕೆಲಸ ನೋಡಿದವರು ಏನಾದರು ರುಸುಮನ್ನಪೇಕ್ಷಿಸಿದರೆ ಅದು ಅಧಿಕಾರಿಗಳು ನಿರಾಕರಿಸುವರಲ್ಲದೆ ಖಾಲಿಯಾದ ಇಸುಂ ನೌಕರಿಯಲ್ಲಿದ್ದು ಪ್ರಿವಿಲೀಜ್ ರಜಾಮೇಲೆ ಗೈರಹಾಜರಾಗಿದ್ದರೆ ಆಕಾಲದಲ್ಲಿ ಅತನ ಕೆಲಸವನ್ನು ಇತರರು ಹ್ಯಾಗೆ ನಿರ್ವಹಿಸುವರೋ ಅದರಂತೆ ಭಾವಿಸಿ ಯಾತಕ್ಕೆ ಮಾತಕಾಡಬಾರದೆಂದು ಹೇಳಿ ಸಮಾಧಾನಮಾಡುವರು. ಖಾಲೀಯಾದ ಉದ್ಯೋಗಗಳನ್ನು ಬಹಿರಂಗವಾಗಿ ವಿಲೇವಾರಿಮಾಡದೆ ತುಂಬಿಯಿಂದೀಸಿ ಅದುಹಾಗಿಯೇ ಕೆಲವು ಕಡೆಗೆ ಗೂಢವಾಗಿ ಬೇಕಾದವರಿಗೆ ಹಿಂದಿನ ಜಾಗೀ ತುಂಬಿಸೊಡನೆ ಕೊಡುವ ನಿಯಮವೇರ್ಪಟ್ಟಿದೆ. ಇದಂ ನಾವು ನಿರಂತರವಾಗಿ ಸು

ಹಿದವರಲ್ಲವೆ. ಜವಾನರವರ ಅಥವಾ ವರ್ನ್ಯಾಕ್ಯುಲರ್ ಮತ್ತು ಇಂಗ್ಲಿಷ್ ರಿಕಾರ್ಡುಕೀಪರ ಕೆಲಸಗಳೇ ಸಾಕಾದ ದೃಷ್ಟಾಂತವಾಗಿರುತಿವೆ. ಈಗ ಖಾಲಿಯಾಗಿರುವ ಡಿಸ್ಟ್ರಿಕ್ಟ್ ಸೆಂಟ್ರಲ್ ರಿಕಾರ್ಡುಕೀಪರ್‌ಕೆಲಸ ಸಹ ಮೇಲೆಕಂಡ ನಮ್ಮ ಅಭಿಪ್ರಾಯವನ್ನು ದೃಢಪಡಿಸದಿರಲಿಲ್ಲವು. ಈಗ ಸದರೀ ಕೆಲಸಗಳಿಗೆ ಅನೇಕದರಖಾಸ್ತುಗಳು ಕೊಡಲ್ಪಟ್ಟಿರುವಂತೆ ಕೇಳುತ್ತೇವೆ. ಪರಂತು ಅವುಗಳೆಲ್ಲವು ಹರಕು ಕಾಗದಗಳ ಬುಟ್ಟಿಯಲ್ಲಿ ಸೇರುವದೇನೂ ಆಶ್ಚರ್ಯವಲ್ಲವು. ಮುಖ್ಯವಾಗಿ ಇಂಥಾ ಸಿದ್ಧಾಂತವು ಆಶ್ರಿತರಿಗೆ ಪ್ರಯೋಜನಕಾರಿಯಾಗಿದ್ದಾಗ್ಯೂ ಅನಾಥರಾದ ತಾಬೇದಾರಿ ಉದ್ಯೋಗಸ್ಥರ ನಿರುತ್ಸಾಹಗಳಿಗೂ ವೈಮನಸ್ಯಕ್ಕೂ ಅಪ್ರಸಿದ್ಧಿಗೂ ಕಾರಣವಾಗದಿರಲಾರದು. ಆದುದರಿಂದ ಅಧಿಕಾರಿಗಳು ತಮ್ಮ ಸಿದ್ಧಾಂತವನ್ನು ತಿದ್ದುಪಾಟು ಮಾಡಬೇಕೆಂದು ಬಡನೌಕರ ಮಾಸೇರ ಪ್ರತಿನಿಧಿತ್ವೇನ ಪ್ರಾರ್ಥಿಸುವೆವು.

OFFICIAL CHANGES.

ಮೈಸೂರು ಡಿಸ್ಟ್ರಿಕ್ಟ್ ಸೆಷನ್ಸ ಜಡ್ಜಿಯವರಾದ ಮ|| ಎಸ್. ದೇವಾಜಿ ರಾಯರವರು ಅವರ ಅಪೇಕ್ಷಾನುಸಾರ ಚೀಫ್‌ಕೋರ್ಟ ರಿಜಿಸ್ಟ್ರಾರಾಗಿ ವಾಪಸ ಹೋಗಲಿಕ್ಕೆ ಹುಕುಂ ಕೊಡಲ್ಪಟ್ಟಿರುತ್ತಾರೆ. ಶಿವಮೊಗ್ಗ ಡಿಸ್ಟ್ರಿಕ್ಟಿನ ಸೆಷನ್ಸ ಜಡ್ಜಿಯವರಾದ ಮ|| ಟಿ. ನರಹರಿರಾವ್ ಎಂ. ಎಲ್. ಯವರು ಮ|| ದೇವಾಜಿ ರಾಯರವರಿಗೆ ಬದಲಾಗಿ ಮೈಸೂರ ಡಿಸ್ಟ್ರಿಕ್ಟ ಸೆಷನ್ಸ ಜಡ್ಜಿ ಕೆಲಸಕ್ಕೆ ವರ್ಗವಾಗಿ ಕೂಡಲೆ ಹೋಗಿ ಕೆಲಸದ ಮೇಲೆ ಹಾಜರಾಗತಕ್ಕದ್ದೆಂದು ಹುಕುಂ ಕೊಡಲ್ಪಟ್ಟಿರುತ್ತಾರೆ. ತುಮಕೂರ ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರ್ ಮ|| ಸಿ. ಕ್ರಿಸ್ ಯವರು ಶಿವಮೊಗ್ಗ ಡಿಸ್ಟ್ರಿಕ್ಟಿನ ಸೆಷನ್ಸ ಜಡ್ಜಿಯಾಗಿ ಶಿವಮೊಗ್ಗೆಗೆ ವರ್ಗ ಮಾಡಲ್ಪಟ್ಟಿರುತ್ತಾರಲ್ಲದೆ ಇವರು ಏನೂ ಮೇಲೆ ಕಂಡವರಿಬ್ಬರೂ ತಮ್ಮತಮ್ಮ ಕೆಲಸಗಳ ಚಾರ್ಜನ್ನು ತೆಗೆದುಕೊಂಡರೆಂದು ತಿಳಿಬಂದಿದೆ. ತುಮಕೂರ ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರ್ ಕೆಲಸವಂ ನಡೆಯಬೇಕಾದವರು ಫಲಾನೆಯವರೆಂದು ವ್ಯವಸ್ಥೆಯಾಗದೆ ಅದ್ಯಾಪಿ ವಿವಾದದೊಳಿರುವದರಿಂದ ಅದು ಇನ್ನೂ ವಿಲೇವಾರಿಯಾಗದೆ ತಡೆದಿರಲಿಕ್ಕೆ ಕಾರಣವಾಗಿದೆ. ಏತನ್ಮಧ್ಯೆ ಕಂಟ್ರೋಲರ್ ಮ|| ರಂಗಸ್ವಾಮಯ್ಯಂಗಾರ್ಯರವರು ಅದಕ್ಕೆ ಪ್ರಯತ್ನ ಮಾಡುತ್ತಲಿದಾರೆಂತಲೂ ಅವರಿಗೆ ಈಗಲೆ ೪೦೦ ರೂಪಾಯಿಗಳು ಸಲ್ಲುತ್ತಲಿರುವದರಿಂದ ಬಹುಶಃ ಅವರಿಗೆ ಲಭಿಸಿದರೂ ಲಭಿಸಬಹುದೆಂತಲೂ ಕೇಳುತ್ತೇವೆ.

ಕೋಲಾರ ಹೈಸ್ಕೂಲ ಹೆಡ್ ಮ್ಯಾಸ್ಟರ ಮಿ. ಜೆನ್ನಿಂಗ್ ಯವರಿಗೆ ಗೋಲ್ಡ್ ಫೀಲ್ಡ್ಸನಲ್ಲಿ ಪೊಲೀಸ ಇನ್‌ಸ್ಪೆಕ್ಟರ ಕೆಲಸ ಮಾಡದರಿಂದ ಇದರಡಿ ಕಂಡ ವರ್ಗಾವರ್ಗಿಗಳು ಜಾರೀಯಲ್ಲಿ ಬರುವಂತೆ ಮಂಜೂರ್ಮಾಡಲ್ಪಟ್ಟಿರುತಿದೆ. ಹಾಸನದ ಹೈಸ್ಕೂಲ ಮಾಸ್ಟರ ಮ|| ಶ್ರೀನಿವಾಸಯ್ಯಂಗಾರ್ ಬಿ. ಎ. ಯವರು ಕೋಲಾರ ಹೈಸ್ಕೂಲ ಹೆಡ್ ಮ್ಯಾಸ್ಟರ ಕೆಲಸಕ್ಕೂ, ಮ|| ಜೆ. ಅರಬುತಿನಾಥಿ ಯವರು ಚಿತ್ರದುರ್ಗದ ಹೈಸ್ಕೂಲ ಹೆಡ್‌ಮ್ಯಾಸ್ಟರ ಕೆಲಸಕ್ಕೂ, ಮ|| ಸಿ. ಕೃಷ್ಣರಾಯರವರು ಚಿಕ್ಕಮಗಳೂರ ಸ್ಕೂಲ ಹೆಡ್ ಮ್ಯಾಸ್ಟರ ಕೆಲಸಕ್ಕೂ ವರ್ಗವಾಗಿರುತ್ತಾರೆ.

ಶಿವಮೊಗ್ಗ ಡಿಸ್ಟ್ರಿಕ್ಟ ಹೆಡ್‌ಕ್ವಾರ್ಟರ ಇನ್‌ಸ್ಪೆಕ್ಟರ ಹನುಮಂತರಾಯರವರು ಬರತರಫ್ ಮಾಡಲ್ಪಟ್ಟ ವಿದ್ವಾನ್ ವೆಂಕಟಾಚಾರ್ಯರವರಿಗೆ ಬದಲಾಗಿ ಚಿತ್ರದುರ್ಗಕ್ಕೂ, ಶಿವಮೊಗ್ಗ ಡಿಸ್ಟ್ರಿಕ್ಟ ಪೊಲೀಸ್ ಆಫೀಸ್ ಹೆಡ್ ಮುನಷಿ ಸುಬ್ಬರಾಯರವರು ಹನುಮಂತರಾಯರವರಿಗೆ ಬದಲಾಗಿ ಸದರೀ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ ಇನ್‌ಸ್ಪೆಕ್ಟರ್ ಕೆಲಸಕ್ಕೆ ವರ್ಗ ಮಾಡಲ್ಪಟ್ಟಿರುವರು. ಕಡೂರ ಡಿಸ್ಟ್ರಿಕ್ಟ ಹೆಡ್‌ಕ್ವಾರ್ಟರ ಇನ್‌ಸ್ಪೆಕ್ಟರ ಕೆಲಸವನ್ನು ಈಗ್ಯೆ ಕೆಲವುಕಾಲದಿಂದ ಆಕ್ಟಿಂಗಾಗಿ ನೋಡುತಲಿರುವ ಕೃಷ್ಣರಾಯರವರು ಅದೇ ಕೆಲಸದಲ್ಲಿ ಕಾಯಂ ಮಾಡಲ್ಪಟ್ಟಿರುತ್ತಾರೆ. ಬೆಂಗಳೂರು ಪೊಲೀಸ ಟ್ರೇನಿಂಗ್ ಸ್ಕೂಲ ಚಾರ್ಜನಲ್ಲಿರುತಲಿರುವ ಆಕ್ಟಿಂಗ್ ಹೆಡ್‌ಕ್ವಾರ್ಟರ ಇನ್‌ಸ್ಪೆಕ್ಟರ ಹುಸೇನ್ ಅಲ್ಲೀಬೇಗ ಯವರು ಸದರೀ ಕೆಲಸದಲ್ಲಿ ಕಾಯಂ ಮಾಡಲ್ಪಟ್ಟಿರುವರು. ಕೋಲಾರ ಡಿಸ್ಟ್ರಿಕ್ಟ ಚಿಂತಾಮಣಿ ತಾ|| ಪೊ|| ಇನ್‌ಸ್ಪೆಕ್ಟರ ಕೃಷ್ಣರಾಯರವರು ಜಮೇದಾರ ದರ್ಜೆಗೆ ಕಂಷರಾ ಮಾಡಲ್ಪಟ್ಟು ತುಮಕೂರು ಡಿಸ್ಟ್ರಿಕ್ಟಿಗೂ, ತುಮಕೂರ ಡಿಸ್ಟ್ರಿಕ್ಟಿಗೆ ಸೇರಿದ ಜಯರಾಮರಾವ್ ಎಂಬವರು ಇನ್‌ಸ್ಪೆಕ್ಟರ ದರ್ಜೆಗೆ ಬಡ್ತಿಯಾಗಿ ಕೋಲಾರ ಡಿಸ್ಟ್ರಿಕ್ಟಿಗೂ, ಕೋಲಾರ ಡಿಸ್ಟ್ರಿಕ್ಟಿಗೆ ಸೇರಿದ ಇನ್‌ಸ್ಪೆಕ್ಟರ ಶ್ರೀಪತಿರಾಯರವರು ಜಮೇದಾರ ದರ್ಜೆಗೆ ಕಂಷರಾವಾಗಿ ತುಮಕೂರ ಡಿಸ್ಟ್ರಿಕ್ಟಿಗೂ, ಸದರೀ ಡಿಸ್ಟ್ರಿಕ್ಟಿಗೆ ಸೇರಿದ ಜಮೇದಾರ ಗೌಸಖಾನನು ಇನ್‌ಸ್ಪೆಕ್ಟರ ಕೆಲಸಕ್ಕೆ ಬಡ್ತಿಯಾಗಿ, ಕೋಲಾರ ಡಿಸ್ಟ್ರಿಕ್ಟಿಗೂ, ಈ ರೀತಿ ವರ್ಗಾವರ್ಗಿಗಳು ನಡೆದಿರುವಂತೆ ಒಳದೇಶದ ಸ್ಪೆಕ್ಟೇಟರ ಪತ್ರಿಕೆ ತಿಳಿಸುತಿದೆ. ಇವಿಷ್ಟಿದ್ದಾಗ್ಯೂ ದೊಡ್ಡ ಉದ್ಯೋಗಗಳಲ್ಲಿ ಬದಲಾವಣೆಗಳನ್ನು ನಾತ್ರ ಏಬ್ಬರೂ ತಿಳಿಸತಕ್ಕವಿಲ್ಲವು.

THE NATAKA KATHA RATNAMALA.

ಈ ಭರತಖಂಡದ ಪುರಾತನ ಕವಿವರ್ಯರೊಳೊಬ್ಬನೆನಿಸಿದ ಕಾಳಿದಾಸ ಮಹಾಕವಿ ಪ್ರಣೀತವಾದ ಶಾಕುಂತಲ, ಮಾಳವಿಕಾಗ್ನಿಮಿತ್ರ, ಮತ್ತು ವಿಕ್ರಮೋರ್ವಶೀಯಗಳೆಂಬ ಮೂರು ನಾಟಕಗಳಲ್ಲಿ ತಿಳಿಸಲ್ಪಟ್ಟಿರುವ ವೃತ್ತಾಂತವನ್ನು, ಮೂಲಭಾಷಾ ನಿಬದ್ಧವಾಗಿರುವ ನಾಟಕ ಮರ್ಯಾದೆಗಳಂ ತ್ಯಜಿಸಿ ಸುಲಭವಾದ ಶೈಲಿಯಲ್ಲಿ ಕಥಾರೂಪವಾಗಿ ಇಲ್ಲಿನ ಸೆಂಟ್ರಲ್ ಕಾಲೇಜ್‌ನಲ್ಲಿ ಅಸಿಸ್ಟೆಂಟ ಮ್ಯಾಸ್ಟರಾಗಿರುವ ಮ|| ರಾ|| ಎಸ್. ಶ್ರೀನಿವಾಸರಾವ್ ಬಿ. ಎ. ಯವರು ಬರೆದು, ನಾಟಕ ಕಥಾ ರತ್ನಮಾಲೆ ಎಂಬ ಅಂಕಿತದಿಂದೊಂದು ಗ್ರಂಥವಂ ಮುದ್ರಿಸಿ ಪ್ರಕಟಿಸಿರುತ್ತಾರೆ. ಸದರೀ ಗ್ರಂಥದ ಪ್ರತಿಯೊಂದು ಗತವಾರದಲ್ಲಿ ಮ|| ರಾ|| ಶ್ರೀನಿವಾಸರಾಯರಿಂದ ನಮಗೆ ಕಳುಹಿಸಲ್ಪಡಲದಂ ನಾವು ಬಹಳ ಸಂತೋಷ ಗೌರವ ಪುರಸ್ಸರವಾಗಿ ಪರಿಗ್ರಹಿಸಿದೆವು. ನಾವಿದಂ ವಿಶೇಷತಃ ಗೌರವಿಸಲಿಕ್ಕೆ ಕಾರಣವೇನೆಂದರೆ, ಷೇಕ್ಸ್‌ಪಿಯರ್ ಎಂಬ ಇಂಗ್ಲಿಷ್ ಕವಿಶ್ರೇಷ್ಠನಿಂದ ವಿರಚಿತವಾಗಿರುವ ಶೃಂಗಾರ ಶೋಕರಸ ಪ್ರಧಾನಗಳಾದ ಮೂವತ್ತಾರು ವಿವಿಧನಾಟಕಗಳ ಕಥಾಭಾಗವನ್ನು, ಬಾಲಕರು ಸುಲಭವಾಗಿ ಓದಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗಿರಬೇಕೆಂಬ ಕುತೂಹಲದೊಡನೆ ಚಾರ್ಲ್ಸ ಲ್ಯಾಂಬ್ ಎಂಬವರು ರಚಿಸಿದ ವಾಕ್ಯಗ್ರಂಥವನ್ನು ನಾವು ಓದಿದ ಕಾಲದೊಳು ಏತತ್ಸಮಾನರೀತಿಯಲ್ಲಿ ಪುರಾತನಗಳಾದ ಸಂಸ್ಕೃತ ನಾಟಕಗಳ ಕಥಾಭಾಗಗಳಂ ಸಹ ಗದ್ಯರೂಪವಾಗಿ ಬರೆದರೆ ಹಿಂದೂ ಬಾಲಕರಿಗೆ ಬಹಳ ಉಪಯುಕ್ತವಾಗಿರುವದೆಂದೆಣಿಸಿ ತದರ್ಥ ಪ್ರಯತ್ನಪಟ್ಟೆವು. ಆದರೆ ಬಹುವಿಧ ಅನಾನುಕೂಲಗಳ ದೆಸೆಯಿಂದ ನಮ್ಮ ಕೋರಿಕೆಯು ನಮ್ಮಲ್ಲೇ ಲೀನವಾಗಿ ನಮ್ಮ ಪ್ರಯತ್ನವು ಪ್ರಾರಂಭದಲ್ಲೇ ಭಗ್ನವಾದದ್ದು ದಾಕ್ಷಿಣಾತ್ಯರಿಗೇನೂ ಆಶ್ಚರ್ಯಕರವಾದುದಲ್ಲವು. ಹೀಗಿರುವಲ್ಲಿ ನಮಗೆ ಜನಿಸಿದ್ದ ಅಭಿಪ್ರಾಯವೇ ನಮ್ಮ ಮಿತ್ರರಾದ ಮಹಾಶಯರು ಶ್ರೀನಿವಾಸರಾಯರವರ ಹೃದಯದಲ್ಲಿಯೂ ಅಂಕುರಿಸಿ ಆದೊಂದು ಕ್ರಿಯಾರೂಪವಾಗಿ ಪರ್ಯವಸಾನವನ್ನೈದಿದಬಗ್ಗೆ ಗೌರವಿಸಬೇಕಾಗಿರುತದೆ. ಪ್ರಸಕ್ತ ಗ್ರಂಥವು ಡೆಮ್ಮಿ ೧೬ ಫಾರಂಗಳು, ಅಂದರೆ ೧೨೮ ಪುಟಗಳುಳ್ಳದ್ದಾಗಿರುತಿದೆ. ಇದು ಎಲ್ಲರೂ ಸುಲಭವಾಗಿ ಪಡೆಯಲಿಕ್ಕೆ ಅನುಕೂಲಿಸುವಂತೆ ಕ್ರಯವನ್ನು ಸಹ ಅಲ್ಪವಾಗಿಟ್ಟಿರುತ್ತಾರೆ. ಈ ಗ್ರಂಥವು ರಚಿಸುವದರಲ್ಲಿ ಮೂಲ ಗ್ರಂಥಗಳೊಳು ತಿಳಿಸಲ್ಪಟ್ಟಿರುವ ವಿಶೇಷ ಶೃಂಗಾರರಸ ಪ್ರಧಾನವಾಗಿರತಕ್ಕ ಅಂಶಗಳನ್ನೂ ಕಥಾ ಸಂದರ್ಭಕ್ಕೆ ಅನಾವಶ್ಯಕವಾದ ವಿಷಯಗಳನ್ನೂ ತ್ಯಜಿಸಿ, ಮೂಲಗ್ರಂಥಗಳಲ್ಲಿರುವ ಕೆಲವು ವಿಷಯ ಕ್ರಮಗಳನ್ನು ಕಥಾಸಂದರ್ಭಕ್ಕಾಗಿ ಬದಲಾಯಿಸಿ ಬರೆಯಬೇಕಾಯಿತು. ಈ ಗ್ರಂಥವನ್ನು ಗ್ರಂಥಕರ್ತರ ಪ್ರಾರ್ಥನೆಯ ಮೇರೆ ಮದರಾಸ್ ಪ್ರೆಸಿಡೆನ್ಸಿ ಕಾಲೇಜ ಕನ್ನಡ ಪಂಡಿತರಾದ ಬ್ರಹ್ಮಶ್ರೀ ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಗಳು ಪರಿಶೋಧಿಸಿರುತ್ತಾರೆ. ಇದು ಮುದ್ರಿಸುವ ಕಾಲದಲ್ಲಿ ಬಹಳ ಅಶುದ್ಧ ತೋರಿಸಲ್ಪಟ್ಟಿರುವದಕ್ಕೆ ೯ ಪುಟಗಳ ಶುದ್ಧಾಶುದ್ಧ ಪತ್ರಗಳು ಅವರ ಪೂರ್ವಭಾಗದಲ್ಲಿ ಸೇರಿಸಲ್ಪಟ್ಟಿರುವದೇ ಸಾಕಾದ ನಿದರ್ಶನವಾಗಿರುವದಲ್ಲದೆ ಇದು ಗ್ರಂಥಕರ್ತರ ಪರಿಶ್ರಮವನ್ನೂ ಮುದ್ರಾಕ್ಷರಾಲಯಾಧಿಕಾರಿಗಳ ಗೌರವವನ್ನೂ ವ್ಯರ್ಥಗೊಳಿಸತಕ್ಕದ್ದಾಗಿರುತಿದೆಂದು ತಿಳಿಸಲಿಕ್ಕೆ ಬಹಳ ವಿಷಾದಿಸುತ್ತೇವೆ. ಇನ್ನು ವಾಕ್ಯ ಶೈಲಿಯನ್ನೂ ಶಬ್ದ ಪ್ರಯೋಗಗಳನ್ನೂ ಕುರಿತ ನಮ್ಮ ಅಭಿಪ್ರಾಯವಂ ಮತ್ತೊಂದು ಸಂದರ್ಭದಲ್ಲಿ ತಿಳಿಸುವೆವು.

MARRIAGE LIFE

[COMMUNICATED]

ಈ ಭೂಲೋಕದಲ್ಲಿ ಮಾನವ ಜನ್ಮವನ್ನೆತ್ತಿದವರೆಲ್ಲರೂ ಐಹಿಕ ಸುಖವೆಂದರೆ ಈ ಪ್ರಾಪಂಚಿಕ ಸುಖ ಸಂತೋಷಗಳಂ ಕೋರತಕ್ಕವರಾಗಿರುವದರಿಂದ ಅವರು ಸಕಲ ಪ್ರಯತ್ನದಿಂದಲೂ ಅನುಕೂಲೆಯಾಗಿಯೂ, ಅನುರೂಪೆಯಾಗಿಯೂ, ಸುಗುಣವತಿಯಾಗಿಯೂ ಇರುವ ಭಾರ್ಯೆಯಂ ಪಡೆಯಬೇಕಾದುದು ಅತ್ಯಾವಶ್ಯಕವಾಗಿರುತಿದೆ. ಪ್ರಥಮ ತೃತೀಯ ತುರೀಯಾಶ್ರಮಧರ್ಮಗಳಂದ ಪುರುಷನಿಗೆ ಸಿದ್ಧಿಸಬಹುದಾದ ಸಕಲ ಐಹಿಕಾಮುಷ್ಮಿಕ ಸುಖ ಸಂತೋಷಗಳು ಗೃಹಸ್ಥಾಶ್ರಮದಲ್ಲೇ ಲಭಿಸುವವು. ಇಂಥಾ ಸಕಲ ಸುಖ ಸಂತೋಷಹೇತುಭೂತವಾದ ಗೃಹಸ್ಥಾಶ್ರಮಕ್ಕೆ ಮತವಿಯೋರ್ವಳೇ ಅಲಂಕಾರ ಭೂತಳಾಗಿರುವಳು. ಕುಲಸತಿಯಾದವಳು ಪ್ರತಿಕೂಲೆಯಾಗಿದ್ದಾಗ ಅವಳ ಪತಿ ಯೆಷ್ಟು ಕಲಿವಿಯುಳ್ಳವನಾಗಿದ್ದರೂ, ಭೋಗೋಪಕರಣಗಳುಳ್ಳವನಾಗಿದ್ದರೂ ಅವನಿಗೆ ಈ ಪ್ರಪಂಚವೇ ನಿಸ್ಸಾರವಾದದ್ದಾಗಿಯೂ, ದುಃಖರೂಪವಾದದ್ದಾಗಿಯೂ ತೋರದೆ ಹೋಗಲಾರದು. ಈ ವಿಷಯವಂ ಕುರಿತು ಈವಿಧವಾಗಿಯೇ ಫಿಲಿಪ್ ಗಿಲ್‌ಬರ್ಟ್ ಹಾಮರ್ಟನ್ ಯೆಂಬೊಬ್ಬ ಶಾಸ್ತ್ರಜ್ಞರು ಇಂಗ್ಲಿಷ್ ಭಾಷೆಯಲ್ಲಿ ರಚಿಸಿದ "ಹ್ಯೂಮನ್ ಇಂಟರ್‌ಕೋರ್ಸ್" ಅಂದರೆ ಮಾನುಷ ಸಹವಾಸವೆಂಬ ಹೆಸರುಳ್ಳ ಬಾದು ಗ್ರಂಥದಲ್ಲಿ ಬರೆಯಲ್ಪಟ್ಟಿರುತದೆ. ಭಾರ್ಯೆಯೆಂದು ವ್ಯವಹರಿಸಲ್ಪಡಲಿಕ್ಕೆ ಅನುರೂಪೆಯಾದ ಸಾಧ್ವಿಯೊಬ್ಬಳು ನಿಜವಾಗಿ ಯೆಲ್ಲಿರುವಳೋ ತಿಳಿಯದು. ಅಂಥಾ ಲಲನಾನ್ವೇಷಣಕ್ಕಾಗಿ ಯೆಷ್ಟು ಸಂಕಟಗಳನ್ನನುಭವಿಸಿದಾಗ್ಯೂ, ಯೆಷ್ಟು ವ್ಯಯವಾದಾಗ್ಯೂ ಲಕ್ಷ್ಯವೆಣಿಸದೆ ಭೂಮಂಡಲವನ್ನೆಲ್ಲ ತಿರಿಗಿ ಅಂಥವಳಂ ಸಂಪಾದಿಸಬೇಕಾದ್ದು ಪುರುಷನಿಗೆ ಮುಖ್ಯ ಧರ್ಮವಾಗಿರುತಿದೆ. ಶ್ರೀಮನ್ಮಹಾಭಾರತದಲ್ಲಿ ಭಾರ್ಯೆ ಯೆಂತವಳಾಗಿರಬೇಕೋ, ಅವಳ ಧರ್ಮವು ಯದ್ರೂಪವಾಗಿರಬೇಕೋ, ಆಕೆಯಿಂದುಂಟಾಗುವ ಸುಖವು ಯಾವ ತೆರನಾದದ್ದೋ, ಅವಳಮೂಲಕ ಲಭಿಸುವಂಥಾ ಪ್ರಯೋಜನವು ಯದ್ವಿಧವಾದದ್ದೋ, ಈ ವಿಷಯಗಳಂ ಕುರಿತು ಬರೆಯಲ್ಪಟ್ಟಿರುವ ನಿಬಂಧನೆಗಳೂ, ತತ್ಸೂಚಕಗಳಾದ ಇತಿಹಾಸಗಳೂ ಮುಖ್ಯವಾಗಿ ಪರಿಭಾವಿಸಲ್ಪಡತಕ್ಕದ್ದಾಗಿರುತಿವೆ. ಏತಕ್ಕೆಂದರೆ ನಮ್ಮ ಪುರಾಣಗಳಲ್ಲಿಯೂ ಇತಿಹಾಸಗಳಲ್ಲಿಯೂ, ಶಾಸ್ತ್ರಗಳಲ್ಲಿಯೂ ತಿಳಿಸಲ್ಪಟ್ಟಿರುವ ಅಂಶಗಳನ್ನೇ ಈಗ ಯೂರೋಪ ಅಮೇರಿಕಾ ಖಂಡಗಳಲ್ಲಿ ಪ್ರಸಿದ್ಧರೆನಿಸಿರುವ ಅನ್ಯದೇಶ ಶಾಸ್ತ್ರಜ್ಞರು ಸಹ ಬರೆದಿರುತ್ತಾರೆ. ಈಗ ಪಾಶ್ಚಾತ್ಯರಾದ ಶಾಸ್ತ್ರಜ್ಞರ ಮಾತುಗಳನ್ನೂ ಅಪರಲೇಖನಗಳನ್ನೂ ನಮ್ಮವರು ನಂಬಿ ಗೌರವಿಸಿ ಗಮನಿಸುವಂತೆ ನಮ್ಮ ಪೂರ್ವಿಕರ ವಿವಾಹ ಸಂಬಂಧಗಳಾದ ಏರ್ಪಾಟುಗಳಂ ನಂಬಿ ಗೌರವಿಸುವದಿಲ್ಲವು. ಇಂಗ್ಲಿಷ ಮೊದಲಾದವರಲ್ಲಿ ನಡೆದುಬರುವ ವೈವಾಹಿಕ ಕ್ರಮಗಳೇ ನಮ್ಮಲ್ಲಿಯೂ ನಡೆಗೊಂಡಿರುತಿವೆ. ವಿವಾಹವಿಷಯದಲ್ಲಿ ನಮ್ಮ ಶಾಸ್ತ್ರಾಚಾರಗಳನ್ನೇ ಅನ್ಯ ದೇಶೀಯರಾದ ವಿದ್ವಾಂಸರು ಕೂಡ ಬರೆದಿರುತ್ತಾರೆಂಬದಂ ತಕ್ಕ ಆಧಾರಗಳೊಡನೆ ನಿರೂಪಿಸಿದರೆ ಆಗಲಾದರೂ ನಮ್ಮ ನವನಾಗರಿಕರು ಅದಂ ನಂಬುವರೋ ಇಲ್ಲವೋ ನೋಡಬೇಕೆಂಬ ಕುತೂಹಲದಿಂ ಪ್ರಸಕ್ತವಿಷಯವಂ ಕುರಿತು ಉಭಯತಃ ಪರಿಶೀಲಿಸಿ ಬರೆಯಬೇಕೆಂದುದ್ಯುಕ್ತರಾಗಿರುವದರಿಂದ ಇದಕ್ಕೆಲ್ಲರೂ ತಮ್ಮ ಸಮಾಧಾನವಂ ಕೊಡಬೇಕೆಂದು ಕೋರುವೆವು.

ಮಹಾ ಭಾರತದಲ್ಲಿ—ಸಾಭಾರ್ಯಾ ಯಾಗೃಹೇದಕ್ಷಾ ಸಾಭಾರ್ಯಾ ಯಾ ಪ್ರಜಾವತೀ | ಸಾಭಾರ್ಯಾ ಯಾ ಪತಿಪ್ರಾಣಾ ಸಾಭಾರ್ಯಾ ಯಾ ಪತಿವ್ರತಾ | ಅರ್ಧಂ ಭಾರ್ಯಾ ಮನುಷ್ಯಸ್ಯ ಭಾರ್ಯಾ ಶ್ರೇಷ್ಠತಮಸ್ಸಖಾ | ಭಾರ್ಯಾಮೂಲಂ ತ್ರಿವರ್ಗಸ್ಯ ಭಾರ್ಯಾಮೂಲಂ ತರಿಷ್ಯತಃ || ಭಾರ್ಯಾವಂತಃ ಕ್ರಿಯಾವಂತಸ್ಸಭಾರ್ಯಾ ಗೃಹಮೇಧಿನಃ | ಭಾರ್ಯಾವಂತಃ ಪ್ರಮೋದಂತೇ ಭಾರ್ಯಾವಂತಃ ಶ್ರಿಯಾನ್ವಿತಾಃ | ಸಖಾಯಃ ಪ್ರವಿವಿಕ್ತೇಷು ಭವಂತ್ಯೇತಾಃ ಪ್ರಿಯಂವದಾಃ | ಪಿತರೋ ಧರ್ಮಕಾರ್ಯೇಷು ಭವಂತ್ಯಾರ್ತಸ್ಯ ಮಾತರಃ | ಕಾಂತಾರೇಷ್ವಪಿ ವಿಶ್ರಾಮೋ ಜನಸ್ಯಾಧ್ವನಿಕಸ್ಯ ವೈ | ಯಃ ಸದಾರಃ ಸ ವಿಶ್ವಾಸ್ಯಸ್ತಸ್ಮಾದ್ದಾರಾಃ ಪರಾ ಗತಿಃ ||

ಅಂದರೆ—ಯಾವಳು ಗೃಹಕೃತ್ಯ ವಿಷಯಗಳಲ್ಲಿ ದಕ್ಷಳಾಗಿರುವಳೋ, ಯಾವಳು ತನ್ನ ಪತಿಯನ್ನೇ ಪ್ರಾಣವನ್ನಾಗಿ ಭಾವಿಸುವಳೊ, ಯಾವಳು ಮಹಾ ಸಾಧ್ವಿಯೆನಿಸಿರುವಳೋ ಅವಳೇ ನಿಜವಾದ ಭಾರ್ಯೆಯಾಗಿರುವಳು. ಸತಿಯು ಸ್ನೇಹಿತರೆಲ್ಲರಿಗಿಂತಲೂ ಸರ್ವೋತ್ತಮಳಾದ ಮಿತ್ರಳಾಗಿಯೂ, ಧರ್ಮಾರ್ಥ ಕಾಮಗಳೆಂಬ ತ್ರಿವರ್ಗಕ್ಕೆ ಆಧಾರಭೂತಳಾಗಿಯೂ, ಮೋಕ್ಷಕ್ಕೆ ಸಹಕಾರಿಯಾಗಿಯೂ, ಯಾಗಾದಿ ಕರ್ಮಗಳಿಗೆ ಭಾಗಿಯಾಗಿಯೂ ಇರುವಳು. ಇಂಥಾ ಭಾರ್ಯೆಯುಳ್ಳ ಪುರುಷನು ಸತ್ಕರ್ಮಾರ್ಹನಾಗಿಯೂ, ಗೃಹಸ್ಥನಾಗಿಯೂ, ಸಂಪತ್ಸಂತೋಷಗಳುಳ್ಳವನಾಗಿಯೂ ಇರುವನು. ಪ್ರಿಯಂವದೆಯಾದ ಭಾರ್ಯೆಯು ಪುರುಷನಿಗೆ ಸಂತೋಷ ಕಾಲಗಳಲ್ಲಿ ಸ್ನೇಹಿತಳಾಗಿಯೂ, ಧರ್ಮಕಾರ್ಯಾಚರಣೆಯಲ್ಲಿ ಪಿತೃಸಮಾನಳಾಗಿಯೂ, ರೋಗಪೀಡಿತನಾಗಿರುವ ಕಾಲದಲ್ಲಿ ಕ್ಷೇಮವಂ ಕೋರುವ ವೈದ್ಯರೂಪಿಯಾಗಿಯೂ, ದುಃಖ ಮತ್ತು ಸಂಕಟವೇಳೆಯಲ್ಲಿ ಅಂತಃ ಅನುಕಂಪಿಸಿ ಪ್ರತಿಕ್ರಿಯೆಗಳನ್ನರಿಯುವಂತೆ ಜನನೀಸ್ವರೂಪಳಾಗಿಯೂ ಘೋರಾರಣ್ಯದಲ್ಲಿ ತಿರುಗತಕ್ಕ ಮಾರ್ಗಸ್ಥನಿಗೆ ಸಹ ಅಲ್ಲಿ ವಿಶ್ರಾಂತಿ ಸುಖವನ್ನುಂಟುಮಾಡತಕ್ಕ ಉಪಚಾರಿಣಿಯಾಗಿಯೂ, ಬುದ್ಧಿ ಪ್ರಮಾದಾದಿ ಸಮಯಗಳಲ್ಲಿ ಹಿತವಂ ಬೋಧಿಸಿ ತಿದ್ದಿ ಕ್ರಮಪಡಿಸುವಂತಾ ಗುರುಪ್ರಾಯಳಾಗಿಯೂ ಇರುವಳು. ಗೃಹಸ್ಥನಾದವನು ಸಕಲರಿಂದಲೂ ಗೌರವಿಸಲ್ಪಡುತ್ತಾನಾಗಿ ಭಾರ್ಯೆಯು ಪುರುಷನಿಗೆ ಪರಮಗತಿಗೆ ಮಾರ್ಗದರ್ಶಿನೀಯಾಗಿರುವಳು. ಗೃಹಸ್ಥನಾದವನಿಗೆ ಸ್ವತಃ ಸುಖ ಪಡಲಿಕ್ಕೂ ಪರರು ಸುಖಪಡಿಸಲಿಕ್ಕೂ ಅವಕಾಶವಿರುವಂತೆ ಇತರ ಆಶ್ರಮಗಳಲ್ಲಿರತಕ್ಕವರಿಗಿರಲಾರದು. ನಿಜವಾದ ಕುಲಕಾಂತೆಯು ಇಷ್ಟುವಿಧವಾಗಿ ವರ್ತಿಸುತ ಸರ್ವಪ್ರಕಾರದಿಂದಲೂ ತನ್ನ ಪತಿಗೆ ಹೃದಯೋಲ್ಲಾಸವಂ ಘಟಯಿಸುವ ಸುಕಲ್ಪ ಪ್ರಯತ್ನಗಳುಳ್ಳವಳಾಗಿರುವದರಿಂದ ಇಂಥಾ ಭಾರ್ಯೆಯನ್ನೈದಲಿಕ್ಕೆ ಸಕಲ ಪ್ರಯತ್ನಗಳಂ ಮಾಡಬೇಕಾದದ್ದು ಸುಖವಂ ಬಯಸತಕ್ಕವರೆಲ್ಲರಿಗೂ ಪರಮಧರ್ಮವೆಂದೆಣಿಸಬೇಕಾಗಿರುತಿದೆ. ಇದುವರಿವಿಗೂ ನಾವು ಉದಹರಿಸಿದ ಇಂಗ್ಲಿಷ್ ಗ್ರಂಥಕರ್ತರು ಭಾರತದಲ್ಲಿ ತಿಳಿಸಲ್ಪಟ್ಟಿರುವ ಅಂಶಗಳನ್ನೇ ತಮ್ಮ ಗ್ರಂಥಗಳಲ್ಲಿಯೂ ತಿಳಿಸಿರುತ್ತಾರೇನೆಂದರೆ—ಸಂಘಪ್ರಯುಕ್ತವಾದ ನಿರ್ಬಂಧಗಳನ್ನೂ, ಕೃತ್ರಿಮಗಳನ್ನೂ ಹೊಂದದೆಯೂ, ಯೋಗ್ಯಳಾಗಿಯಾಗಿರುವಂತಾ ಸಂಕಟವನ್ನನುಭವಿಸದಂತೆಯೂ ಇರುವಂತೆ ಅವುಗಳ

ಪ್ರಕಟಿಸಿ ಸಂತೋಷ ಪಡಿಸುವಂತಾ ಭಾರ್ಯೆಯನ್ನು ಸರ್ವದಾ ಪ್ರತೋಭೋಗದಲ್ಲಿ ಪಡೆದಿರುವುದು ಭಾಗ್ಯದೊಡನೆಯೂ ಅವಿಚ್ಛಿನ್ನವಾದ ಸುಖಸಂತೋಷಗಳೊಡನೆಯೂ, ಯಾವದನ್ನು ಸರಿನೋಡಿದರೂ ಅದು ಸರಿಹೋಗಲಾರದು. ನೀನು ಒಂಟಿಯಾಗಿರುವಾಗ್ಯೆ ಯೆಷ್ಟು ಸ್ವೇಚ್ಛೆಯಿಂದ ಚರಿಸಬಹುದೋ ನಿಜವಾದ ಭಾರ್ಯೆಯೊಡನೆ ಸಹ ಅದೇ ರೀತಿ ಚರಿಸಬಹುದು. ನಿನ್ನ ಮನೋಭಾವನನ್ನು ಇತರರಿಗಿಂತ ನಿನ್ನ ಮಡದಿಯು ಅತಿ ಸುಲಭವಾಗಿ ಅರಿತುಕೊಳ್ಳುವಳು. ನೀನು ಶ್ರಮಾನದಿಂದಿದ್ದರೂ ಆಕೆ ಚಿಂತೆಗೊಳ್ಳುವೆ ನಿನ್ನ ಶಕ್ತಿ ಕಲಿತು ಮಾತನಾಡಲಿಕ್ಕೆ ಇದು ಸಮಯವಿದೆ ಯೆಂದು ತಿಳಿದು ಅಂತಾ ನಿನ್ನ ಉಲ್ಲಾಸಕಾಲವು ನಿಮಗೆಯೊಡನೆ ನಿರೀಕ್ಷಿಸುತ್ತಲಿರುವಳು. ಅವಳ ಪ್ರೀತಿ ಯೆಂಬದು ಯಾವಾಗಲು ಅಚಲಿತವಾದದೆಂಬದಂ ನೀನು ತಿಳಿಯದವನಲ್ಲವು. ನಿನಗೂ ನಿನ್ನ ಬಂಧ್ಯೆಗೂ ಪ್ರಬಲವಾಗಿರುವ ಸ್ವಭಾವಭೇದದಲ್ಲಿ ಆಕೆಯು ಅಧಿರುಚಿಯಂ ಗೃಹ್ಣಿಗೊಳಿಸುವಳು. ಸುಸ್ಮೃತಿ ಸಂಬಂಧಗಳಾದ ದುಃಖವೂ, ಜ್ವರ ಕಾಲಿಕಗಳಿಂದ ವ್ಯಾಕುಲತ್ವ ಸಂಬವಿಸುವಾಗ ಉಪ್ಪಮಸ್ವಭಾವವುಳ್ಳ ಸ್ತ್ರೀ ಇರಿಗೆ ಸ್ಯೆಸವಾಗಿರತಕ್ಕ ಸಹನೆಯು, ಸಹ್ಯಾಸವೂ, ಧೈರ್ಯವೂ ಪ್ರಸಿದ್ಧವಾಗಿರುತ್ತವೆ. ಪುರುಷರಿಗೆ ಇತರ ಅಭಿಮಾನಗಳಿಂ ಬ ಅಚಲಿತಗಳಾದ ಬಲಗಳಿಗೆ ಅವರು ಅವಾ ರಭಿಕರಿಸುತ್ತಾರೆ, ಎಂಬದು ದಾಂಪತ್ಯ ಕಾರಣಗಳಿಂಬ ಪ್ರರುಷ ಕಾಗಳಿಗೆ ಯಾವಾಗಲು ಪರಸ್ಪರ ಎಲ್ಲೀದ ... ಬಾದಾಗ ಭಾರ್ಯೆಯೂ ಧರ್ಮವೂ ಸ್ವ ... ಅಂತಾ ವಿನಯವುಳ್ಳ ಗಳು ಮಾನವ ... ಭೀರುವದೆಂದು ಬಾರದಲ್ಲಿ ತಿಳಿಸಲ್ಪಟ್ಟಿರುತಿದೆ.

[illegible]

ಅಂದರೆ, —ಅನುರಾಗವುಳ್ಳ ಬಂಧ್ಯೆಯು ಅತ್ಯಂತಹಿತೆ ಸುಖ ಸಂಪದ ಸಿನಾಗಿರುವಳು ಪ್ರತಿಕೂಲದ ಭಾರ್ಯೆಯು ವಿಷದಂತೆ ಕಂಟಕಳಾಗಿ ಸಕಲವಿಧ ತಾಪತ್ರಯಗಳನ್ನೂ, ನಿದುರೆಯನ್ನು, ಅಪ್ರತಿಹತವಾದ ದುಃಖ ಹಾನಿ ... ಕವಿಗೆ ... ತಪ್ಪದೆ ಪ್ರಾಪ್ತಿಗೊಳಿಸುವಳು, ಎಂಬುದಾಗಿಯು ಮುಖ್ಯವಾಗಿ ಯೀಗ ಪ್ರರುಷನ ಸ ... ಗಳೆಲ್ಲ ಸ್ತ್ರೀಯರಿಗೆ ... ಸುಖವನ್ನು ಪಡೆ ... ಉತ್ತಮಳಿಂದ ಸತಿಯೋರನ್ನಳಿಂ ಯಾವಾಗ ... ದಿಂದ ಮಾತ್ರ ... ಸಾಧ್ಯವಿಲ್ಲವು. ಅಂತಾ ಬಿದ್ದಿ ... ದಿಂದಾದನಂತರ ... ಎಂಬುದು ... ಭಾರ್ಯೆಯರ ... ವರ್ತನವನ್ನು ಅವರಿಗೆ ಸುಸ್ಮೃತಿಯು ... ಇದ್ದು ಮೂ ... ಅಂಶಗಳು ಮುಂದೆ ಕ್ರಮವಾಗಿ ವಿವರಿಸಲ್ಪಡುವವು.

Occasional Notes
ನೈಮಿತ್ತಿಕ ವಿಷಯಗಳು.

The East Coast Railway —ಈಸ್ಟಕೋಸ್ಟು ರೈಲ್ವೆಯಿಂ ಅಂದರೆ ಪೂರ್ವ ಸಮುದ್ರತೀರದ ರೈಲಿನ ಸರ್ವೆ ಕೆಲಸ ಕಟ್ಟಕ್ ಮೊದಲು ಬೆಜವಾಡವರೆಗಿನಿಗೆ ತೀರಿಬಂದದರಿಂದ ವರ್ಷಕಾಲ ತೀರಿದಕೂಡಲೇ ಮುಟ್ಟೇ ಕಾಮಗಾರಿಗೆ ಪ್ರಾರಂಭಿಸಲ್ಪಡುವದು.

Rebellion in Brazil —ಬ್ರೆಸಿಲಿ ದೇಶಕ್ಕೆ ಸೇರಿದ ಪ್ರಾಂತ ಸಂಸ್ಥಾನದ ಪ್ರಜೆಗಳು ಗವರ್ನಮೆಂಟಿನವರ ಮೇಲೆ ಬಂಡಾಯವೆದ್ದಿರುವ ಕಲಹದಲ್ಲಿ ಅಲ್ಲಿನ ಸೈನ್ಯ ಸಹ ಸೇರಿರುವದಾಗಿ ಈಚಿಗೆ ರಂತಿವೃತ್ತಾಂತ ಬಂದಿರುವಂತೆ ತಿಳಿಯ ಬರುತಿದೆ.

Relief works —ಗವರ್ನರ್ ಪ್ರಾಂತದಲ್ಲಿ ವರ್ಷಾಭಾವದಿಂದ ಪಸಲಿಗಳು ಒಣಗಿಹೋಗಿ ತನ್ಮೂಲಕ ಜೀವನೋಪಾಯವಿಲ್ಲದೆ ಸಂಕಟಪಡುತಲಿರುವ ಜನಗಳ ಸಹಾಯಾರ್ಥ ಮಾಯಿಸೂರುದೇಶದ ಗವರ್ನಮೆಂಟಿನವರು ಕ್ಷಾಮನಿವಾರಕ ಕಾಮಗಾರಿಗಳನ್ನು ಪಕ್ರಮಿಸುವವ ರಾಗಿರುತ್ತಾರೆ. ಕುಮಾಯೂನ್ ಪ್ರಾಂತದಲ್ಲಿ ಪಸಲಿಗಳು ಹೋಗಿರುವದರಿಂದ ಅಲ್ಲಿಯೂ ಸದರೀ ಕಾಮಗಾರಿಗಳು ಪ್ರಾರಂಭಿಸಲ್ಪಡುವವು.

The Amir of Dongola expelled —ಈಜಿಪ್ಟ ದೇಶದೊಳಗಣ ಡಾಂಗೋಲಾ ಸಂಸ್ಥಾನದ ಅಮೀರರವರು ವಾಡಿಹಾಲ್ಫಾ ಯೆಂಬ ಪ್ರದೇಶದಲ್ಲಿರುವ ಬ್ರಿಟಿಷ್ ಮತ್ತು ಈಜಿಪ್ಟ ಸೇನೆಯಮೇಲೆ ಬಿದ್ದು ಹೊಡೆಯುವಂತೆ ಮಹದಿಯವರು ಕೊಟ್ಟ ಹುಕುಮನ್ನು ನಿರಾಕರಿಸಿದ ರೆಂಬ ಕಾರಣದಮೇಲೆ ಅಮೀರರನ್ನು ಅಲ್ಲಿನ ಪ್ರಜೆಗಳು ಓಡಿಸಿ ಬಿಟ್ಟರೆಂದಾಗಿ ಕೈರೋ ಪಟ್ಟಣದಿಂದ ಬಂದ ತಂತಿ ವೃತ್ತಾಂತದ ಮೂಲಕ ತಿಳಿಯಬರುತಿದೆ.

Starting of a new Vernacular paper. ಕಲ್ಕತ್ತೆಯೊಳು ವಿದ್ಯಾವಂತರಾದ ಹಿಂದೂಗಳು ಕೆಲವರು ಸೇರಿ ಹಿ ಪಿ ಭಾಷೆಯಲ್ಲಿ ವಾರಪತ್ರಿಕೆ ಯೊಂದನ್ನು ನೂತನವಾಗಿ ಪ್ರಾರಂಭಿಸಿರುವರೆಯೂ, ನ್ಯಾಷನಲ್ ಕಾಂಗ್ರೆಸ್ ಸಭೆಯು ಪ್ರತ್ಯಕ್ಷ ವಿರೋಧಿಯಾದ ಮಂಗಲಾಸಿಯೆಂಬ ಪತ್ರಿಕೆಯ ಮುದ್ರಾಕ್ಷರವಾಲೆಯಿಂದ ಸದರೀ ಹೊಸಪತ್ರಿಕೆಯು ಹೊರಡಿಸಲ್ಪಡುವದೆಂತಲೂ ತಿಳಿಯ ಬರುತಿದೆ. ಪರಂತು ಈ ನೂತನಪತ್ರಿಕೆಯ ಉದ್ದೇಶವಾತ್ರ ಹೊರಗಾಗಲಿಲ್ಲವು.

Present of a gold watch.— ಘನವನ್ನು ಹೊಂದಿದ ಮದರಾಸ್ ಗವರ್ನರವರು, ಈಚೆಗ ಅಲ್ಲಿ ಸ್ಥಾಪಿಸಲ್ಪಟ್ಟ ಪ್ರೀ ಕ್ರಿಶ್ಚಿಯನ್ ಮತ್ತು ಟೆಕ್ನಿಕಲ್ ಇನ್ಸ್ಟಿಟ್ಯೂಟ್, ಅಂದರೆ ಪ್ರಜೆಗಳ ಉಪಯೋಗಾರ್ಥವಾದ ಸರಸ್ವತೀ ಭಂಡಾರ ಮತ್ತು ಕಸಬುದಾರೀ ವಿದ್ಯಾಶಾಲೆಯ ಕಟ್ಟಡದ ಅಸ್ತಿಭಾರವಂ ಹಾಕಿದ ಸಂದರ್ಭದ ಜ್ಞಾಪಕಾರ್ಥ ರಾಪ್ ಬಹದೂರ್ ಆರ್ ಮ ಧನಕೋಟಿ ಮೊದಲಿಯಾರ್ ರವರಿಗೆ ಸುಂದರವಾದ ಒಂದು ಚಿನ್ನದ ಗಡಿಯಾರವನ್ನು ಬಹುಮಾನವಾಗಿ ಕಳುಹಿಸಿರುತ್ತಾರೆಂದು ತಿಳಿದೆವು

LOCAL AND PROVINCIAL NEWS
ಪಳದೇಶ ಮತ್ತು ತಾಲ್ಲೂಕು ವಾರ್ತಾವೃತ್ತಾಂತಗಳು

The weather —ಈಚೆಗೆ ಎರಡು ಮೂರು ದಿನಗಳ ಹೊರತು ವರ್ಷಸೂಚನೆ ಇಲ್ಲವು. ಸಕೆ ಹೆಚ್ಚಿರುವುದೆ ರೋಗಾದ್ಯುಪದ್ರವಗಳು ಹೆಚ್ಚಿಲ್ಲವು. ದಾರಗಳು ಇಳಿಯಲಿಲ್ಲವು ಒಳ್ಳೆಯ ಅಕ್ಕಿ ಸಿಕ್ಕುವದಿಲ್ಲವು ಹೆರಗಿನಿಂದ ಬರುವ ಜನಿಸಿಗಳು ಬಹು ಇಳಿದ ಕೂಡಲೆ ಮಾರಿಹೋಗುತಿವೆ ಫ್ರಂಟ್ ರೇಟ್, ಅಂದರೆ ಸ್ವತಂತ್ರವಾದ ವ್ಯಾಪಾರವಹಲ ಇಡಕ್ಕುಂತಲ್ಲ ಕೇಳಿಲ್ಲವು

A curious selection.—ಮದರಾಸಿನಲ್ಲಿ ಸಿವಿಲ್ ಸರ್ವಿಸ್ ಪರೀಕ್ಷೆಗೆ ಸೇರಿದ ಸಂಸ್ಕೃತಭಾಷೆಗೆ ಪರೀಕ್ಷಕರಾಗಿ ಮಿ ||ಕೈಯಮ್‌ ಹಿಲ್ಲೀಲ್ಡಿಂ ಬರ್ ಸ ಯೆಂಬವರು ಚುನಾಯಿಸಲ್ಪಟ್ಟಂತೆ ಕೇಳ್‌ದರ್ ಟ್ರಿಬ್ಯೂನ್ ಪತ್ರಿಕೆ ಸಂತೋಷಿಸುತಿದೆ. ಮಹಮ್ಮದೀಯರೊಬ್ಬರು ಯೂನಿವರ್ಸಿಟಿ ಸಂಸ್ಕೃತಭಾಷಾ ಪರೀಕ್ಷಕರಾಗಿ ಚುನಾಯಿಸಲ್ಪಡುವದಕ್ಕೆ ಇದೇ ಪ್ರಾರಂಭವು. ಇವರ ಯೋಗ್ಯತೆಯೂ ಫಲಪ್ರದವಾಗನೆನ್ನು ಮುಂದೆ ತಿಳಿಯಬೇಕಾದದ್ದಾಗಿರುತಿದೆ

Defamation —ಕ್ಲೋಸೆಟಿ ಅಮುಲೆದಾರರಮೇಲೆ ಒಬ್ಬ ವರ್ತಕನು ತಾನಿದ್ದ ಮಾನನಷ್ಟ ನೋಡದ್ದಮಯನ್ನು ಅವರ ಕೋರಿಕೆಯ ಮೇಲೆ ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರು ವಿಚಾರಿಸಿ ವಜಾ ಮಾಡಿಬಿಟ್ಟರೆಂತಲೂ, ಕಕ್ಷಿಗಾರರಿಬ್ಬರೂ ಪರಸ್ಪರ ಸಮಾಧಾನವಾದರೆಂತಲೂ ಒಳದೇಶದಪತ್ರಿಕೆಯೊಂದು ತಿಳಿಸುತಿದೆ. ಉಭಿಷ್ಟಮ ತೂಳಿಯಲ್ಯಾಕೆ, ಕಾಲ್ಗಳಂ ತೊಳೆಯಲ್ಯಾಕೆ ?

The Tailor's deputation —ಕಳೆದ ಶುಕ್ರವಾರದದಿನ ಶ್ರೀಮನ್ಮಹಾರಾಜರವರ ಸವಾರೀ ಚಾಮುಂಡೀಬೆಟ್ಟಕ್ಕೆ ಎಳದರುವಲ್ಲಿ ಅಲ್ಲಿ ಸುಮಾರು ೧೦೦ ಮಂದಿ ಮೈಸೂರು ದರ್ಜೆಯವರು ಕಾದಿದ್ದು ತಾವು ಪೂರ್ವದಿಂದ ಕೊಡುತ್ತಿದ್ದವೆಲ್ಲವೆಂತಲೂ ಹಾಲೀ ಮೊಕರರಾಗಿರುವ ಕಂದಾಯವನ್ನು ತಪ್ಪಾರ್ಥವಾಗಿ ಮಾಡಿಸುವಂತೆ ಅಪ್ಪಣೆ ಕೊಡಿಸಬೇಕೆಂತಲೂ ಹೇಳಿಕೊಂಡದ್ದಕ್ಕೆ ಶ್ರೀಮನ್ಮಹಾರಾಜರವರು ಆಗಲಾರದೆಂದು ಅಪ್ಪಣೆ ಕೊಡಿಸಿದ್ದಾಗಿ ತಿಳಿದೆವು.—ಸ್ವ ಚೆ

Queen's birthday.—ಘನವಸ್ಸೈದಿದಶ್ರೀ ವಿಕ್ಟೋರಿಯಾ ಮಹಾರಾಜ್ಞೀ ಇಂಡ್ಯ ಚಕ್ರವರ್ತಿನೀಯವರಿಗೆ ಗತ ಶನಿವಾರದದಿನ ಎಪ್ಪತ್ತೊಂದನೆಯ ವರ್ಷ ವರ್ಧಂತೀ ಮಹೋತ್ಸವದಿನ ವಾದುದರಿಂದ ಪಜ್ಞೆ ಯಿಲಾರ್ಥ ಆಸಿನ ಸರ್ಕಾರಿ ಇಲಾಖೆಗಳೆಲ್ಲ ರಜಾ ಕೊಡಲ್ಪಟ್ಟಿತಲ್ಲದೆ ರಾಂತಾ ಸಂತೋಷ ಸಮುದಾಯದಲ್ಲಿ ಆಕೆಯವರಿಗೂ ಅವರ ಸಂತತಿಯವರಿಗೂ ಶ್ರೀಭಗವಂತನು ಹೀಗೆಯೇ ಅವಿಚ್ಛಿನ್ನಾಯುರಾರೋಗ್ಯ ಸಂಪತ್ಸುಪ್ರಭವ ವೈಭವಗಳನ್ನಭಿವೃದ್ಧಿಗೊಳಿಸಿ ಚಿರಕಾಲ ತಮ್ಮ ಪ್ರಜೆಗಳನ್ನು ನಿರತಿಶಯ ಸುಖ ಸಂತೋಷ ಸ್ವಾತಂತ್ರ್ಯಗಳೊಡನೆ ಕಾಪಾಡುತಲಿರುವಂತೆ ಅನುಗ್ರಹಿಸ ಬೇಕೆಂದು ರಾಜಭಕ್ತಿ ಕೃತಜ್ಞತಾದಿ ಭಾವದೊಡನೆ ಪ್ರಾರ್ಥಿಸುತ್ತೇವೆ.

Re admission into caste —ಮೈಸೂರು ಹಳೇ ಅಗ್ರಹಾರದ ವಾಸಸ್ಥನಾದ ಒಬ್ಬ ಹುಡುಗನು ಈಗ್ಯೆ ೩ ತಿಂಗಳೊಳಗೆ ತಪ್ಪಿಸಿಕೊಂಡು ಹೋದದ್ದಾಗಿಯೂ, ಈಚೆಗೆ ಒಬ್ಬ ಮುಸಲ್ಮಾನನು ಆ ಹುಡುಗನನ್ನು ಮಾತಾಪಿತೃಗಳಲ್ಲಿಗೆ ಕರೆದುಕೊಂಡುಬಂದು ಸದರೀ ಹುಡುಗನು ಕೆಲಕಾಲ ತನ್ನಲ್ಲಿ ಬಂದು ಸೇರಿದ್ದಾಗಿಯೂ, ಅವನಿಗೆ ತಾನೇ ಅನ್ನಾದಿಗಳನ್ನು ಕೊಟ್ಟು ಸಂರಕ್ಷಣೆಮಾಡಿದ್ದಾಗಿಯೂ ತಿಳಿಸಿದನು. ಇಂತಾ ಹುಡುಗನನ್ನು ಪುನಃ ಜಾತಿಗೆ ಸೇರಿಸಿಕೊಳ್ಳಬಹುದೇ ಎಂಬ ವಿಚಾರ ಉಂಟಾಗಿ ಶೃಂಗೇರೀ ಮಠಕ್ಕೆ ಬರೆದುಕೊಂಡದ್ದರಮೇಲೆ ಸೇರಿಸಿಕೊಳ್ಳಬಹುದೆಂತ ಸ್ವಾಮಿಗಳು ಅಪ್ಪಣೆಕೊಡಿಸಿದರಂತೆ. ತರವಾಯ ಈ ಹುಡುಗನನ್ನು ಸೇರಿಸಿಕೊಂಡರು. ಇದರ ದೆಸೆಯಿಂದ ಮಗುವಾಗ್ಯ ಸೇರಿಸಿಕೊಂಡ ಬ್ರಾಹ್ಮಣನಿಗೆ ಜನಗಳಿಂದ ಉಂಟಾಗಿರುವದಾಗಿ ತಿಳಿಯಬರುತ್ತೆ

The Havyaka Subodha of Bombay --ಮುಂಬೈ ರಾಜಧಾನಿಯಲ್ಲಿಯ್ಯೆ ಐದು ವರುಷಗಳ ಕಾಲದಿಂದಲು ಪ್ರತಿವಾರದಲ್ಲಿಯೂ ಪ್ರಕಟಿಸಲ್ಪಡುತಲಿದ್ದ ಹವ್ಯಕ ಸುಬೋಧವೆಂಬ ಕನ್ನಡ ಪತ್ರಿಕೆಯು ಅಕಸ್ಮಾತ್ತಾಗಿ ನಿಲ್ಲಿಸಲ್ಪಟ್ಟಿತೆಂಬ ವೃತ್ತಾಂತವು ಕೇಳಲಿಕ್ಕೆ ನಾವು ಬಹಳವಿಷಾದಪಡುತ್ತೇವೆ ನಮ್ಮ ಸಹಕಾರಿಕವಾದ ಸದರೀ ಪತ್ರಿಕೆಗೆ ಇಂತಾ ವಿಪತ್ತು ಸಂಭವಿಸುವದೆಂದು ನಾವು ಸ್ವಲ್ಪವೂ ನಿರೀಕ್ಷಿಸದಿದ್ದದರಿಂದ ಅದಕ್ಕೆ ಅನಿರೀಕ್ಷಿತವಾದ ಅಕಾಲ ಮರಣವು ಪ್ರಾಪ್ತವಾದಂತೆ ನುಡಿಯಬೇಕಾಗಿರುತಿದೆ. ಇದು ೧೮೮೫ ನೇ ಇಸವಿಯಲ್ಲಿ ಪ್ರಾರಂಭಿಸಲ್ಪಟ್ಟದ್ದು ಮೊದಲು ಯೆರಡು ಸಂವತ್ಸರಗಳಕಾಲದೊಳಗ್ಗಾಗಿ ಬಹಳ ಅಭಿವೃದ್ಧಿಸ್ಥಿತಿಗೆ ಬಂದು ಕ್ರಮೇಣ ಬಲಿಷ್ಠವಾದದ್ದಾಗಿಯೂ ಪ್ರಜಾಭಿಮಾನವುಳ್ಳದ್ದಾಗಿಯೂ ಪರ್ಯವಸಾನವಾಯಿತು. ಪ್ರಸಕ್ತ ಪತ್ರಿಕೆಗೆ ಅರ್ಹರಾದವರು ಸಹ ಬಹಳ ತೃಪ್ತಿಕರವಾಗಿದ್ದಂತೆ ಕೇಳುತ್ತೇವೆ. ಹ್ಯಾಗಂದರೆ, ಬರುವಂತ ಚಂದಾದಾರರು ಎಂದೆರಡು ವರುಷಗಳ ಚಂದಾ ಮೊಬಲಗು ಮುಂದಾಗಿಯೇ ಪಾವತಿ ಮಾಡಿ ಪ್ರೋತ್ಸಾಹ ಪಡಿಸುತಲಿದ್ದರಲ್ಲದೆ ಧನಿಕರಾದವರನೇಕರು ಸಹಾಯದ್ರವ್ಯವು ಕೊಡುತಲಿದ್ದರು. ಹವ್ಯಕ ಜನರ ಪುರೋಭಿವೃದ್ಧಿಯ ವಿಷಯದಲ್ಲಿ ಸದರೀ ಪತ್ರಿಕೆಯು ಬಹಳದೂರ ಶ್ರಮಪಟ್ಟು ಅವರ ದೋಷಗಳನ್ನೆಲ್ಲ ಅವರಿಗೆ ವ್ಯಕ್ತಪಡಿಸಿ ವಿವೇಕವನ್ನುಂಟುಮಾಡಿದ್ದರಿಂದ ಅವರಿಗೊಂದು ಪ್ರಬಲಸಾಧನ ವೆನಿಸಿತ್ತು. ಮುಖ್ಯವಾಗಿ ದೇಶಭಾಷಾ ವೃತ್ತಾಂತಪತ್ರಿಕೆಗಳಿಗೆ, ತತ್ರಾಪಿ ಕನ್ನಡಪತ್ರಿಕೆಗಳಿಗಿರುವ ಪ್ರೋತ್ಸಾಹವನ್ನೂ ಪ್ರಾಚುರ್ಯವನ್ನೂ ಪರಿಭಾವಿಸಿ ನೋಡಲಾಗ ಅಲ್ಲಿಯಲ್ಲಿ ವ್ಯತಿರೇಕವಾಗಿರುವ ಒಂದೆರಡು ಪತ್ರಿಕೆಗಳಿಗೆಕೂಡ ಇಂತಾ ದುರ್ದಶೆಯು ವಿಲಕ್ಷಣವಾದ ಈಗಿನಕಾಲದಲ್ಲಿ ಪ್ರಾಪ್ತವಾಗುವದೇನೂ ಆಶ್ಚರ್ಯವಲ್ಲವು.

Medical and Engineering Scholarships.—ಶ್ರೀಮನ್ ಮಹಾರಾಜಾ ಸರ್ಕಾರದವರ ಮುಂದಾಲೋಚನೆಯಂ ಪಡೆದ ವಿದ್ಯಾಭ್ಯಾಸದ ಇಲಾಖಾ ಸೆಕ್ರೆಟರಿಯವರು ಘೋಷಿಸಿ ಮಾಡಿರುತ್ತಾರೇನಂದರೆ,— ಈ ಸಂವತ್ಸರದಲ್ಲಿ ಇಂಜನಿಯರಿಂಗ ಪರೀಕ್ಷೆಗೂ ಮೆಡಿಕಲ್ ಪರೀಕ್ಷೆಗೂ ಪೂನೆ ಮದರಾಸಿ ವಗ್ಯೆರೆ ಪ್ರಾಂತಗಳಿಗೆ ಹೋಗಿ ಓದತಕ್ಕ ವಿದ್ಯಾರ್ಥಿಗಳು ಮೂವರಿಗೆ ವಿದ್ಯಾರ್ಥಿವೇತನಗಳಂ ಕೊಡುವಂತೆ ಮಹಾರಾಜಾ ಸರ್ಕಾರದವರು ನಿಷ್ಕರ್ಷಿಸಿರುತ್ತಾರೆ. ಇಂಜನಿಯರಿಂಗ ಪರೀಕ್ಷೆಗೆ ಓದುವ ವಿದ್ಯಾರ್ಥಿಗಳ ವೇತನವು ಮಾಹೆಯಾನಾ ೨೫ ರೂಪಾಯಿಗಳಾಗಿರುತಿವೆ. ಈ ಮೊಬಲಗು ಮದರಾಸ್ ಇಂಜನಿಯರಿಂಗ ಕಾಲೇಜನಲ್ಲಿ ಓದತಕ್ಕವರಾಗಿದ್ದರೆ ಮೂರು ವರುಷಗಳ ತನಕಲೂ, ಪೂನೆ ಶಾಸ್ತ್ರ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮಾಡತಕ್ಕವರಾಗಿದ್ದರೆ ಅವರಿಗೆ ಮೂರುವರುಷಗಳ ತನಕಲೂ ಕೊಡಲ್ಪಡುತಲಿರುವದು. ಭೌತಿಕ ಅಥವಾ ಗಣಿತ ಶಾಸ್ತ್ರಗಳಲ್ಲಿ ತೇರ್ಗಡೆಯಾದ ಗ್ರಾಡ್ಯುಯೇಟಿಗಳು ಇತರರಿಗಿಂತ ಶ್ರೇಷ್ಠತ್ವೇನ ಗಣಿಸಲ್ಪಡುವರು. ಮೆಡಿಕಲ್ ಕಾಲೇಜ ವಿದ್ಯಾರ್ಥಿಗಳಿಗೆ ಸಹ ಮೇಲೆ ಕಂಡಂತೆಯೇ ೨೫ ರೂಪಾಯಿಗಳು ನಿಷ್ಕರ್ಷೆಯಾಗಿ ಮದರಾಸ್ ಮೆಡಿಕಲ್ ಕಾಲೇಜನಲ್ಲೋದತಕ್ಕವರಿಗೆ ೫ ವರುಷಗಳ ತನಕಲೂ, ಮುಂಬೈ ಗ್ರಾಂಟ ಮೆಡಿಕಲ್ ಕಾಲೇಜನಲ್ಲೋದತಕ್ಕವರಿಗೆ ೫ ವರುಷಗಳ ತನಕಲೂ ಮೇಲೆ ತಿಳಿಸದಂತೆಯೇ ಕೊಡಲ್ಪಡುವದು. ಇತರ ವಿದ್ಯಾರ್ಥಿಗಳಿಗಿಂತಲೂ ಬಿ ಎ. ಅಥವಾ ಎಫ್. ಎ. ಪರೀಕ್ಷೆಗಳಂ ಕೊಟ್ಟವರು ಶ್ರೇಷ್ಠರಾಗಿ ಗಣಿಸಲ್ಪಡುವರು ಈ ವೇತನಗಳಂ ಪಡೆಯತಕ್ಕಂತಾ ವಿದ್ಯಾರ್ಥಿಗಳೆಲ್ಲರೂ ಮೈಸೂರು ದೇಶೀಯರಾಗಿರಬೇಕಲ್ಲದೆ ಅವರು ತಮ್ಮವಯಸ್ಸು ಜಾತಿ, ಕಸಬು ತಂದೆಯ ಹೆಸರು ಮೊದಲಾದವು ತಪಸೀಲಾಗಿ ದರಖಾಸ್ತಿನಲ್ಲಿ ನಮೂದಿಸತಕ್ಕದ್ದು. ಚುನಾಯಿಸಲ್ಪಟ್ಟ ಉಮೇದವಾರರೆಲ್ಲರೂ ತಮ್ಮ ಶರೀರ ದಾರ್ಢ್ಯದ ವಿಷಯವಲ್ಲಿ ತೃಪ್ತಿಕರವಾದ ಮೆಡಿಕಲ್ ಸರ್ಟಿಫಿಕೇಟನ್ನು ಹಾಜರ್ಮಾಡತಕ್ಕದ್ದು. ವಿದ್ಯಾರ್ಥಿಗಳು ಸ್ಕೂಲಿಗಳಲ್ಲಿ ಓದುತಲಿರುವಕಾಲದಲ್ಲಿ ಅವರನಡತೆಗಳನ್ನೂ ಅಭಿವೃದ್ಧಿಯನ್ನೂ, ಕುರಿತು ಆಯಾ ಕಾಲೇಜ ಪ್ರಿನ್ಸಿಪಾಲರವರು ಮಾಡುವ ಅನುಕೂಲವಾದ ರಿಪೋರ್ಟನ್ನನುಸರಿಸಿಯೂ ಕಾಲಕ್ಕೆ ತಕ್ಕಂತೆ ಜರಗತಕ್ಕ ಪರೀಕ್ಷೆಗಳಲ್ಲಿ ತೇರ್ಗಡೆ ಯಾಗತಕ್ಕವನ್ನನುಸರಿಸಿಯೂ ಮೇಲೆ ಕಂಡ ಸ್ಕಾಲರ್ ಷಿಪ್‌ಗಳು ಲಭಿಸತಕ್ಕವಾಗಿರುತಿವೆ. ಸದರೀ ಸ್ಕಾಲರ್ ಷಿಪ್‌ಗಳಿಗೆ ದರಖಾಸ್ತು ಮಾಡತಕ್ಕವರೆಲ್ಲ ಯೋಗ್ಯತಾ ಪತ್ರಿಕೆಗಳೊಡನೆ ೧೮೯೦ನೇ ಇಸವಿ ಜೂನ್ ೧೦ನೇ ತಾರೀಖಿಗೆ ವಿಹಾರದಂತೆ ಎಡ್ಯುಕೇಷನ್ ಸೆಕ್ರೆಟರಿಯವರ ಆಫೀಸಿಗೆ ತಮ್ಮ ಅರ್ಜಿಗಳನ್ನು ಕಳುಹಿಸಬೇಕಲ್ಲದೆ ಕಾಲೇಜಗಳ ವಿದ್ಯಾರ್ಥಿಗಳಾಗಿದ್ದರೆ ತಮ್ಮ ಪ್ರಿನ್ಸಿಪಾಲ್ ಅಥವಾ ಹೆಡ್ ಮಾಸ್ಟರ್ ಮೂಲಕ ರವಾನಿಸತಕ್ಕದ್ದು ಎಂಬದು. ಮೇಲೆ ಕಂಡ ನಿಯಮಗಳೆಲ್ಲವೂ ಬಹಳ ಸ್ತ್ರುತ್ಯಗಳಾಗಿರುತಿವೆ ಪರಂತು, ಅವುಗಳ ಪ್ರಕಾರ ಆಚರಣೆಯೊಳು ಮಾತ್ರ ಅಪವಾದ ದಲ್ಲದವೇಕೆಂದು ಕೋರುತ್ತೇವೆ.

SUMMARY OF NEWS
ವೃತ್ತಾಂತಸಂಗ್ರಹವು.

ಈ ತಿಂಗಳ ಮೊದಲನೇ ತಾರೀಖಿನಲ್ಲಿ ಭರದ್ವಾಜ ಮಹಾರಾಜರವರ ಉಪನಯನೋತ್ಸವವು ಅತಿ ವಿಸ್ತರಣೆಯಿಂದ ನೆರವೇರಿತು.

ನಾಸ್ತಿಕವಾದಿಗಳೆಂದು ಪ್ರಸಿದ್ಧ ಗಿರುವ ಮಿ|| ಬ್ರಾಡ್ಲಾಸಾಹೇಬರವರು ಥಿಯೊ ಸಾಫಿಕಲ್ ಸೊಸೈಟಿಯೆಂಬ ಸಂಘವನ್ನು ಸೇರಲು ನಿಶ್ಚಯಿಸಿರುತ್ತಾರೆಂದು ತಿಳಿಯಬರುತ್ತೆ.

ಅಮೆರಿಕಾ ದೇಶದಲ್ಲಿ ಒಬ್ಬ ಹೆಂಗ ಸ್ಗೆ ೧೮೬೭ ನೇ ಇಸವಿಯಿಂದ ಈ ಹೋತಿ ನ ವರಿ ಗೆ ೯ ಲಗ್ನಗಳನ್ನು ಮಾಡಿಕೊಂಡಳ ಹಾಲಿ ಈಗ ಹಿಡನ ಪತಿಗಳು ಜೀವದಿಂದಿದ್ದಾ ಇತ್ತ ಲಾಗಿಯೇ ೯ ನೇ ಲಗ್ನವಾಯಿತು.

ಹೈದರಾಬಾದ್ ನಿಜಾಮರು ತಮ್ಮ ಗರಕ್ಷ ಕರಾದ ಮೇಜರ್ ನವಾಬ್ ಅಫಸೂರ್‌ಜ ರವ ರಿಗೆ ನಿರುತರ ಪ್ರೀತಿ ಸೂಚನಾರ್ಥ ರೂ ಪಾಯಿಗಳ ಬೆಲೆ ಬಾಳುವ ಒಂದು ಗಡಿ ಯಾರ,ಸ ರಪಣಿಯನ್ನು ಕೊಟ್ಟಿದ್ದಾಗಿ ಕೇಳುತ್ತೆ.

ಇಷ್ಟು ದಿವಸಗಳ ವರಿಗೆ ಬಂಗಾಳಿ ಜನರು ಬಹಳ ಬಂದರೋರರಂತೆ ಯುರೋಪಿ ಯರು ಮೊಟ್ಟಸುತ್ತಿದ್ದರು.ಆದರೆ ಈಚೆಗೆ ಕೆಲ ಯುರೋ ಪಿಬ ಜನರು ಬಂಗಾಳಿಯವರಿಗಿಂತ ಲು ಹೆಚ್ಚು ತುಂಬರೆಂತೆ ನಿರ್ಣಯ ಮಾಡಿ ದೆ.

ಒಬ್ಬ ಬೈರಾಗಿಯ ಸಂಗಡ ಬಹಳ ಕಾ ಲದಿಂದ ಒಂದು ನಾಯಿಯು ಇತ್ತು. ಅದು ಅ ಮ ರಣ ಕಾಲಾನಂತರ ಒಬ್ಬ ಗೃಹಸ್ಥನಿಗೆ ಸ್ತು. ಇದರ ವಿಶೇಷ ಗುಣವೇನಂದರೆ, ಏನಾದ ರೂ ವಿವ ಸಬೇಕಾದವಕ್ಕಾನ್ನಹಾಕಿದರೂಮುಟ್ಟ ಲ್ಲ.

ನಾಬಕು ಈ ಮೈಸೂರುದೇಶದಲ್ಲಿ ರೆ ಸಿಟ ರಾಗಿದ್ದು ಈಗ ಹೈದರಾಬಾದಿನಲ್ಲಿ ರೆಸಿಡೆ ಂಟರಾ ಗಿರುವ ಮಿ|| ಫಿಟ್ಸಿರಾಟ್ರಿಕ್‌ಯವರ ಕು ರ್ತ ಯು ಇಂಗ್ಲಂಡಿನಲ್ಲಿ ಮೃತವಟ್ಟಳೆಂಬವಿ ವಕ ರವಾದ ವರ್ತಮಾನ ಇಂಡಿಯಾದೇಶಕ್ಕೆ ತ ಲುಪಿದೆ.

ಗುಜರಾತಿ ಪತ್ರಿಕೆಯ ಎಡಿಟರಾದ ವ ರಾ|| ಇಚ್ಛಾರಾಂ ಎಂಬವರು ತಮ್ಮ ಜಾತಿ ಪ್ರತಿ ಪ್ರಕಾರ ಮಿತ್ರರೊಬ್ಬರು ಮೃತಪಟ್ಟ ದಲ್ಲಿ ತಮ್ಮ ಹಿತೆಯನ್ನು ಜೋಳಸದಿದ್ದ ಬರಿ ಅ ವರ ಮತಸ್ಥರೆಲ್ಲರೂ ಸೇರಿ ಅವರಿಗೆ ಬಹಿ ಷ್ಕರ ಹಾಕುವ ವಿಚಾರದಲ್ಲಿದಾರಂತೆ.

ವಲದಾಬ್ ತಾಲ್ಲೂಕಿನಲ್ಲಿ ಒಂದು ಕೋ ಯಿ ರುತ್ತದೆ. ಮಾರ್ಗದಿಂದ ಯಾರಾದರೂ ದು ರೆಯಮೇಲೆ ಸವಾರನಾಗಿ ಹೋಗುವ ನ್ನು ನೋಡಿದರೆ ಥಕ್ಕನೆ ಕೆಳಗಿಳಿದು ಬಂದು ಆತನ ನ್ನಿಳಿಸಿ ತಾನು ಸವಾರನಾಗಿ ಕುದುರೆಯನ್ನು ಓಡಿಸಿ ತನ್ನ ಮನಸ್ಸಿಗೆ ಸಮಾಧಾನವಾದಮೇಲೆ ತಿರುಗಿ ಆ ಸವಾರನ ಹತ್ತರ ಬಂದು ಕುದುರೆಯನ್ನು ಬಿಟ್ಟು ಕೊಟ್ಟು ಓಡಿ ಹೋಗುತ್ತದೆ!

ಕುರುಂದವಾಡಿ ಸಂಸ್ಥಾನದಲ್ಲಿ ಇರುವಂತಾ ಒಬ್ಬ ಅಮಲ್ದಾರನು ತನ್ನ ಅಮಲಿನ ಜೋರಿನಿಂದ, ಒಬ್ಬ ಬಡಮನುಷ್ಯನ ಸುಂದರಿಯಾದ ಹೆಂಡತಿಯಮೇಲೆ ಜುಲುಂ ವಗೈರೆ ಮಾಡಿ ಅವಳನ್ನು ಸ್ವಾಧೀನಮಾಡಿಕೊಂಡನು. ಅನಂತರ ಇವಳು ಬಹಳಪ್ರಿಯತರವಾಗಿಕಂಡುಬಂದದರಿಂದಈ ಅಮಲ್ದಾರನು ಗಂಡಹೆಂಡರ ಮುರಾಗಡೆಯನ್ನು ಮಾಡಿ, ಸುಖವಾಗಿ ಭೋಗಿಸುತ್ತಿದ್ದಾನೆ!!

ಸಿಬೇರ್ಲ ಎಂಬ ದ್ವೀಪದಲ್ಲಿ ಒಂದು ವಿಧವಾದ ಫಲವು ಸಿಕ್ಕುವದು, ಇದು ಅವಳಿ ತೆಂಗಿನ ಕಾಯಿನಂತೆ ಕಾಣುವದು. ತೊಳದಲ್ಲಿ ೩ ಪಟ್ಟು ದಾಗೀರುವದು. ಸುತ್ತ ಅಳತೆಯಲ್ಲಿ ೩ ಅಂಗುಲವಿರುವದು ಮರವು ಉದ್ದದಲ್ಲಿ ಸಾಧಾರಣವಾಗಿ ೧೦೦ ಅಡಿಗಳಿರುವದು. ಈ ವಿಧವಾದ ಮರಗಳು ಇದುವರಿವಿಗೂ ಮತ್ತ್ಯಾವ ಸ್ಥಳದಲ್ಲೂ ಇರುವಂತೆ ತಿಳಿಯಬರಲಿಲ್ಲವು. ಈ ಫಲದಲ್ಲಿ ವಿಷ ನಿವಾರಣೆ ಮಾಡತಕ್ಕ ಶಕ್ತಿ ಇರುವದಾಗಿ ತಿಳಿಯಬರುತ್ತೆ.

ಇಂದೂರ್ ಮಹಾರಾಜರವರ ಅಳಿಯನಾದ ರಾಜಾ ಗೋವಿಂದರಾವ್ ಬೋಲಿಯರ್ ಯೆಂಬಾತನು ತನ್ನ ನೌಕರರಿಗೆ ಕ್ರಮವಾಗಿ ಕೊಡಬೇಕಾದ ಸಂಬಳಗಳನ್ನು ಕೊಡದೆ ಉದಾಸೆ ಮಾಡುತಲಿದ್ದದರಿಂದ ಈಚೆಗೆ ಅವರೆಲ್ಲರೂ ಆತನಮೇಲೆ ತಿರಿಗಿಬಿದ್ದು ಅವನನ್ನು ಕಟ್ಟಿಗೆಯಿಂದ ಪ್ರಹರಿಸಿ ಖೂನಿ ಮಾಡಿದರು. ಹೈದರಾಬಾದಿನಲ್ಲಿಯೂ ಮುಂಬೈಯಲ್ಲಿಯೂ ಇದ್ದ ಕಾಲದಲ್ಲಿ ತನ್ನ ಭಾರ್ಯೆಯಂ ಹಿಂಸಿಸಿದ ಧೀರನು ಪ್ರಾಯಶಾ ಈತನಾಗಿಯೇ ಇರಬಹುದೆಂದು ತೋರುತಿದೆ.

ಬಾಲಸೋರಿನಲ್ಲಿ ಈಚೆಗೆ ಒಬ್ಬ ಬ್ರಾಹ್ಮಣ ಹುಡುಗಿಗೂ ಒಬ್ಬ ಕ್ಷತ್ರಿಯಜಾತಿ ಹುಡುಗನಿಗೂ ವಿವಾಹವು ಜರಿಗಿತು. ಬ್ರಾಹ್ಮಣರು ಕ್ಷತ್ರಿಯ ವೈಶ್ಯ ಶೂದ್ರಜಾತಿ ಸ್ತ್ರೀಯರನ್ನು ವಿವಾಹ ಮಾಡಿಕೊಳ್ಳಬಹುದಾದ ಆಚಾರವು ಯುಗಾಂತರದಲ್ಲಿ ನೆರೆಗೊಂಡಿದ್ದು ಈಕಲಿಯುಗದಲ್ಲಿ ನಿಷೇಧಿಸಲ್ಪಟ್ಟಿರುತಿದೆ. ಪರಂತು ಬ್ರಾಹ್ಮಣ ಸ್ತ್ರೀ ಕ್ಷತ್ರಿಯನನ್ನು ವಿವಾಹ ಮಾಡಿಕೊಳ್ಳಲಿಕ್ಕೆಲ್ಲಿಯೂ ಆಧಾರವಿರುವದಿಲ್ಲವು. ಈಗಕಾಲವು ಹಿಮೆಯಿಂದ ಇಂತಾ ಅದ್ಭುತಗಳನ್ನುಎಷ್ಟೋನೋಡಬೇಕಾದವರಾಗಿದೇವೆ—ಆ. ಪ್ರ

ಮಾತಾಡುವ ಗಿಳಿಯು —ವೆಸ್ಟ್ ಇಂಡಿಯಾದೊಳಗೆ ಎಂಭತ್ತೇಳು ವರ್ಷದ ಒಂದು ಗಿಳಿಯು ಇರುತ್ತ, ಈಗ್ಯೆ ಅದರ ಕಾಣುಗಳು ಮಂದವಾಗಿರುತ್ತವೆ ಆಗಿಳಿಯು ಫ್ರೆಂಚ್‌ಭಾಷೆಯನ್ನು, ಮತ್ತು ಕಿಂಚಿತ್ ಇಂಗ್ಲಿಷ್ ಭಾಷೆಯನ್ನು ಮಾತಾಡುತ್ತಿದ್ದು, ಸ್ಪ್ಯಾನಿಷ್ ವ್ಯಾಕರಣ ಮತ್ತು ಭೂಗೋಳಗಳ ಜ್ಞಾನವಿರುತಿದೆ. ಆ ಗಿಳಿಯುಅಮೆರಿಕಾವಿನೊಳಗಿನ ಸ್ವಾತಂತ್ರ್ಯಕ್ಕೋಸ್ಕರವಾಗಿ ಆದ ಲಾಡಾಯಿಯ ವರ್ಣನೆಯನ್ನು ಮಾಡುತಿದೆ ಮತ್ತು ಆ ಸಮಯದಲ್ಲಿ ನಾನು ಒಬ್ಬ ಪ್ರೇಕ್ಷಕನಿದ್ದೆನೆಂದು ಸಹ ಹೇಳುತ್ತದೆ.

ಚಮತ್ಕಾರ — ಜಸ್ಸೋರ್ ಸಬ್ ಡಿವಿಜನ್ನಿಲ್ಲಿಯ ಜನಗ್ಗಪು ಇಲ್ಲಿ ಚಾತಚ್ ಎಂಬ ಹೆಸರಿನ ವಕೀಲನು ಕೋರ್ಟಿನಲ್ಲಿಯೇ ಮರಣಪಟ್ಟನು. ನಂತರ ಅವನ ಪ್ರೇತವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಚಿತೆಗೆ ಅಗ್ನಿ ಹಚ್ಚಿದ ಮೇಲೆ ದೊಡ್ಡ ಶಬ್ದವಾಗಿ ಆ ಪ್ರೇತವು ೧೦೦ ಫೂಟ ಮೇಲಕ್ಕೆ ಹಾರಿ ಸಮೀಪದಲ್ಲಿದ್ದ ನದಿಯಲ್ಲಿಬಿದ್ದು ಮುಳುಗಿ ಯಾರಿಗೂಕಾಣದೆಹೋಯಿತು ಈ ಚಮತ್ಕಾರವನ್ನು ಕಂಡು ಅಲ್ಲಿನ ಯಾವತ್ತು ಜನರು ಬಹಳ ವಿಚಾರದಲ್ಲಿದಾರೆ

ಬಂಗಾಳದಲ್ಲಿ “ಕುಲೀನ ಬ್ರಾಹ್ಮಣ” ಎಂಬದೊಂದು ಜಾತಿಯುಂಟು ಆ ಜಾತಿಯ ಪ್ರಕಾರ ೧೦ ವರುಷದ ಒಬ್ಬ ಹುಡುಗನ ಲಗ್ನವು ಮೊನ್ನೆಮೊನ್ನೆ ಆಯಿತು ಒಬ್ಬ ಗೃಹಸ್ಥನ ಈ ಹುಡುಗನಿಗೆತನ್ನ ಒಡಹುಟ್ಟಿದ ಸೋದರತ್ತೆಯರನ್ನು ೪ ಜನ ತಂಗಿಯರನ್ನೂ, ತನ್ನ ಹೊಟ್ಟೆಯಲ್ಲಿ ಜನಿಸಿದ ೪ ಮಕ್ಕಳನ್ನು, ಒಟ್ಟಿಗೆ ೧೪ ಜನ ಹುಡಿಗಿಯರನ್ನೂ ಮದುವೆ ಮಾಡಿಕೊಟ್ಟನು ಒಬ್ಬೊಬ್ಬ ಈ ಮಧಿಮಗಳು ೩ ತಿಂಗಳ ವಯಸ್ಸಿನವಳಾಗಿರುತ್ತಾಳೆ, ಮತ್ತೊಬ್ಬ ಮದಿಮಗಳು ೬೦ ವರ್ಷಗಳ ವಯಸ್ಸಿನವಳಿರುತ್ತಾಳೆ. ಈ ಜಾತಿಯೊಳಗೆ ಪುಸ್ಕಳ ಮದಿಗಿಯರು ಲಗ್ನದ ಕಾಲಕ್ಕೆ ಒಬ್ಬನಿಗೇನೆ ಮಾಲೆಯನ್ನು ಹಾಕಿದರೆ ಅವರವರತಂಗಿಯರು ಅವನನ್ನೇ ಲಗ್ನವಾಗಬೇಕು, ಇಲ್ಲದಿದ್ದರೆ ಲಗ್ನ ಮಾಡಿಕೊಳ್ಳದೆ ಸಾಯುವ ವರಿವಿಗೆ ಇರಬೇಕು ಚಂದ್ರೋದಯ

EXTRACTS

ವಿಧಿ ಅನುಲ್ಲಂಘನೀಯವಾದದ್ದು.

ಮಗ ದೇಶಕ್ಕೆ ಸೇರಿದ ಒಂದಾನೊಂದು ಗ್ರಾಮದಲ್ಲಿ ಶಶಿಭೂಷಣನೆಂಬ ಬ್ರಾಹ್ಮಣನೊಬ್ಬನು ಇಂದುಮುಖಿ ಎಂಬ ಭಾರ್ಯೆಯನ್ನೂ ಸೋಮದತ್ತನೆಂಬ ಪುತ್ರನನ್ನೂ ಪಡೆದು ಅವರೊಡನೆ ಸುಖದಿಂ ಜೀವಿಸುತಿದ್ದನು, ಒಂದುದಿನ ರಾತ್ರಿ ಆ ಬ್ರಾಹ್ಮಣನು ತನ್ನ ಭಾರ್ಯಾಪುತ್ರರೊಡನೆ ಶಯನಗೃಹದಲ್ಲಿ ಮಲಗಿರುವಾಗ್ಯೆ ಅದರ ಬಾಗಿಲಿನ ಅಡ್ಡ ತೊಲೆಯಲ್ಲಿ ಒಂದು ಕರೀ ಹಗ್ಗವು ನೇತಾಡುತಲಿದ್ದದಂ ನೋಡಿದನು. ಅದಂ ಲಕ್ಷ್ಯಡೊಳದೆ ಯಾವದೋ ಹಗ್ಗವೆಂದು ಭಾವಿಸಿ ಮಲಗಿಕೊಂಡನು, ಪರಂತು ಅವನಿಗೆ ನಿದ್ರೆಬಾರದೆ ಹೊರಳಾಡುತಲಿದ್ದದರಿಂದ ಮರಳಿ ಅದೇ ಹಗ್ಗವನ್ನು ನೋಡುವಲ್ಲಿ ಅದು ಪೂರ್ವಕ್ಕಿಂತಲೂ ಬಹಳ ಉದ್ದನಾಗಿದ್ದಂತೆ ತೋರಿಬಂತು ಆ ಹಗ್ಗವನ್ನು ಇಲಿ ಸೆಳೆದುಕೊಂಡು ಬಂದಿರಬಹುದೆಂದೆಣಿಸಿ ಇನ್ನು ಸ್ವಲ್ಪ ಹೊತ್ತು ಕಣ್ಣು ಮುಚ್ಚದೆ ಅದನ್ನೇ ನೋಡುತಲಿರುವಲ್ಲಿ ಅದು ಕೃಷ್ಣಸರ್ಪವೆಂದೇರ್ಪಟ್ಟಿತು ತನ್ನ ಭಾರ್ಯೆಯನ್ನೂ ಮಗನನ್ನೂ ಎಬ್ಬಿಸಿ ಅದಂ ಸಂಹರಿಸುವದಕ್ಕಾಗಿ ಪ್ರಯತ್ನಪಡುವದರೊಳಗಾಗಿ ಸದರೀ ಹಾವು ಕೆಳಗೆ ಬಿದ್ದು ಆತನ ಭಾರ್ಯೆಯನ್ನೂ ಪುತ್ರನನ್ನೂ ಏಕಕಾಲದಲ್ಲಿ ಕಚ್ಚಿ ಓಡಿಹೋಯಿತು. ಇದಂ ನೋಡಿ ಬ್ರಾಹ್ಮಣನು ಭೀತನಾಗಿ ಆ ಸರ್ಪವನ್ನು ಸಂಹರಿಸುವದಕ್ಕಾಗಿ ಅದಂ ಹಿಮ್ಮೆಟ್ಟಿ ಹುಡುಕುತ ಹೊರಟನು. ಇಷ್ಟರಲ್ಲೇ ಅವನ ಭಾರ್ಯಾಪುತ್ರರಿಬ್ಬರೂ ಮೃತಪಟ್ಟರು. ಆ ಹಾವು ಆ ಕೊಪ್ಪಡಿ ಬಾಗಿಲಿನ ಸಂದಿನಲ್ಲಿ ದಾರಿ ಹೊರಗೆ ಹೋಯಿತು ಅದಂ ಬಿಡದೆ ಹುಡಿಕಿಕೊಂಡು ಹೋಗುತಲಿರುವಲ್ಲಿ ಅದು ಬ್ರಾಹ್ಮಣನಿಗೆ ವ್ಯಾಘ್ರರೂಪವಾಗಿ ಕಾಣಿಸಿತಲ್ಲದೆ, ಅಲ್ಲಿ ಉಳುತಲಿದ್ದ ಒಬ್ಬ ಬೇಸಾಯಗಾರನನ್ನು ಕೊಂದು ಹಾಕಿತು ಸದರೀ ಹುಲಿಯನ್ನು ಸಂಹರಿಸಬೇಕೆಂಬ ಅಭಿನಿವೇಶದೊಡನೆ ಬ್ರಾಹ್ಮಣನೂ ಇತರರೂ ಅದಂ ಅಟ್ಟಿಕೊಂಡು ಹೋಗುವಾಗ್ಯೆ ಅದು ಕಾಡು ಎಮ್ಮೆಯಂತೆ ಕಾಣಿಸಿ, ಅಲ್ಲಿದ್ದ ಒಬ್ಬ ಬಾಲಕನನ್ನು ತನ್ನ ಕೊಂಬುಗಳಿಂದ ತಿವಿದು ಕೊಂದು ಹಾಕಿದ್ದನ್ನು ಕಂಡರು ಇಂತಾ ದುಷ್ಟಮೃಗವನ್ನು ಪ್ರಾಣದೊಡನೆ ಬಿಡುವದು ಯುಕ್ತವಲ್ಲವೆಂದು ಬಗೆದು ಅದನ್ನು ಕೊಲ್ಲಲಿಕ್ಕೆ ಪ್ರಯತ್ನಪಟ್ಟರು ಇಷ್ಟರಲ್ಲಿಯೇ ಸದರೀ ಎಮ್ಮೆಯು ಒಬ್ಬ ವೃದ್ಧನಂತೆ ಕಾಣಿಸಿದ್ದರಿಂದ, ಆಗ ಬ್ರಾಹ್ಮಣನು ಆತನಿಗೆ ಸಾಷ್ಟಾಂಗವಾಗಿ ಎರಗಿ ಆತನು ಯಾರೆಂದು ಕೇಳಿದನು. ಅದಕ್ಕೆ ಮುದುಕನು ಸುಲಭವಾಗಿ ಉತ್ತರ ಹೇಳಲಿಲ್ಲವು. ಬಳಿಕ ಶಶಿಭೂಷಣನು ಬಹಳ ಬಲಾತ್ಕರಿಸಿದ್ದರ ಮೇಲೆ ವೃದ್ಧನು ನಾನೇ ವಿಧಿ ಯೆನ್ನತಕ್ಕವನೆಂತಲೂ, ಯಾವರೀತಿಯಿಂದ ಪ್ರಾಣಿಗಳುಸಾಯಬೇಕೆಂದು ಭಗವತ್ಸಂಕಲ್ಪವಾಗಿರುತಿದೆಯೋ ಅಂತಾ ದೈವಾಜ್ಞೆಯನ್ನು ಆಚರಣೆಯಲ್ಲಿ ತರತಕ್ಕವನು ನಾನೇಯೆಂಬದಾಗಿ ತಿಳಿಸಿದನು. ಇದಂ ಕೇಳಿದ ಕೂಡಲೆ ವಿಪ್ರನಿಗೆ ತನ್ನ ಮರಣಸ್ವರೂಪವನ್ನು ಸಹ ಕೇಳಿ ತಿಳಿದುಕೊಳ್ಳಬೇಕೆಂಬ ಕುತೂಹಲ ಹುಂಟಾದುದರಿಂದ ಆ ವೃದ್ಧನು ನೋಡಿ, ಅಯ್ಯಾ ವಿಧಿಪುರುಷನೆ! ನಾನು ಯಾವತೆರದಿಂದೀಜನ್ಮವಂ ಬಿಡುವೆನು? “ಅದಂ ದಯಾಪ್ರಕೃಪೆಯೊಡನೆ ನನಗೆ ಅರುಹಬೇಕು” ಎಂಬದಾಗಿ ಬಹಳ ವಿನೀತನಾಗಿ ಪ್ರಾರ್ಥಿಸಿದನು ಆಗ ವೃದ್ಧನು “ಅಯ್ಯಾ ಭ್ರಾಂತನೇ, ನೀನು ಕೇಳಿದ ಅಂಶವು ಕೇವಲ ಗೂಢವಾದವದ್ದರಿಂದ ನಿನಗೆ ತಿಳಿಸಲಿಕ್ಕೆ ಯೋಗ್ಯವಾದದ್ದಲ್ಲವು” ಎಂಬದಾಗಿ ಉತ್ತರ ಹೇಳಿದನು. ಆಗ ಬ್ರಾಹ್ಮಣನು ಬಹಳವಾಗಿ ಪ್ರಾರ್ಥಿಸಿ ಅವನು ಬಿಡದೆ ಹೋದದರಿಂದ ವೃದ್ಧನು ಆ ಬ್ರಾಹ್ಮಣನು ನೋಡಿ “ನೀನು ಗಂಗಾನದಿಯಲ್ಲಿ ಮೊಸಳೆಯ ದೆಸೆಯಿಂದ ನಾಶವನ್ನೈದುವಿ” ಎಂದು ಹೇಳಿ ಅಂತರ್ಧಾನವಾದನು. ಇದು ಕೇಳಿದ ಕೂಡಲೆ ಬ್ರಾಹ್ಮಣನು ತನ್ನ ಮನೆಗೆ ಹಿಂದಿರಿಗಿ ಬಾರದೆ ಪೂರ್ವದಿಕ್ಕಿನಲ್ಲಿ ಗಂಗಾನದಿ ಇಲ್ಲದ ಒಂದು ದೇಶಕ್ಕೆ ಹೋಗಿ ನೆಲೆಸಿದನು. ಅಲ್ಲಿನ ಅರಸನು ಸಂತಾನ ಹೀನನಾಗಿ ಬಹಳ ಚಿಂತಾಕ್ರಾಂತನಾಗಿದ್ದ ವರ್ತಮಾನವಂ ತಿಳಿದು ಆತನಬಳಿಗೆಹೋಗಿ ಮಹಾರಾಜನೇ! ನನಗೆ ಅನೇಕ ಪಾವನ ಮಂತ್ರಸಿದ್ಧಿ ಯುಂಟಾಗಿರುವದರಿಂದ ಆ ಮಂತ್ರ ಬಲದಿಂ ಪುತ್ರಹೀನರು ಸಹ ಸಂತಾನ ಸುಖವನ್ನು ಅನುಭವಿಸುವರಾಗಿ ನೀನು ನನಗೆ ಅಪ್ಪಣೆಯಿತ್ತರೆ ಮಂತ್ರ ಪುರಶ್ಚರಣೆಯಂ ಮಾಡುವೆನು. ಅದರಿಂದ ನಿಮಗೆ ಮಹಾ ರಾಜಲಕ್ಷಣ ಯುಕ್ತನಾದ ಮಗನೊಬ್ಬನು ಹುಟ್ಟುವನೆಂದು ವಿಜ್ಞಾಪಿಸಿದನು. ಅರಸನು ಸದರೀ ಮಾತುಗಳನ್ನು ಕೇಳಿ ಆನಂದಭರಿತನಾಗಿ ಅದೇಪ್ರಕಾರ ನಡಿಸುವಂತೆ ಅಪ್ಪಣೆಯಿತ್ತು ಸಿ ನಿರ್ಜನವಾದ ಒಂದು ಅರಣ್ಯಕ್ಕೆ ಆತನು ಮಂತ್ರ ಪುರಶ್ಚರಣೆಯ ಬಗ್ಗೆ ಕಳುಹಿಸಿದನು. ಹೀಗಿರುವಲ್ಲಿ ದೈವಾನುಗ್ರಹದಿಂ ಕಾಲಕಾಲಕ್ಕೆ ನ್ಯಾಯವಾಗಿ ಒಬ್ಬ ಪುತ್ರನು ಜನಿಸಿದನು. ಸದರೀ ಬಾಲಕನು ಪ್ರವರ್ಧಮಾನನಾಗಿ ಅವನ ವಿದ್ಯಾಭ್ಯಾಸಕ್ಕಾಗಿ ಮೇಲೆ ಕಂಡ ಬ್ರಾಹ್ಮಣನನ್ನೇ ವಿದ್ಯಾಗುರುವನ್ನಾಗಿ ನಿಯಮಿಸಿದನು. ಆ ಬಾಲಕನಿಗೆ ಗುರುಕುಲವಾಸ ಪೂರ್ತಿಯನ್ನೈದಿದ್ದರಿಂದ ಪ್ರಾಪಂಚಿಕ ಜ್ಞಾನ ಸಂಪಾದನಾರ್ಥ ಅವನು ದೇಶಾಟನ ಮಾಡಲಿಕ್ಕೆ ಸಲು ಬ್ರಾಹ್ಮಣನು ಅನುವರ್ತಿಸ ಬೇಕೆಂಬದಾಗಿ ಅವನು ಅರಸನು ಬಹಳ ಬಲಾತ್ಕರಿಸಿದನು. ಶಶಿಭೂಷಣನು ತಾನು ಬೇಕಾದಸ್ಥಳಗಳಿಗೆಹೋಗುವದಕ್ಕೆ ಸನ್ನದ್ಧನಾಗಿರುವಂತೆಯೂ ಪರಂತು ಗಂಗಾತೀರಕ್ಕೆ ಮಾತ್ರ ಹೋಗುವದಿಲ್ಲವೆಂತಲೂ ನುಡಿದನು. ರಾಜನು ಅದರ ಕಾರಣವಂ ಬ್ರಾಹ್ಮಣನ ಮೂಲಕ ಅರಿತು ಮಂದಸ್ಮಿತನಿಂ ಗಂಗಾತೀರಕ್ಕೆ ಹೋಗಬೇಕಾದುದಿಲ್ಲವೆಂದು ನಿಯಮಿಸಿದನು ಅನಂತರ ರಾಜಪುತ್ರನು ತನ್ನ ವಿದ್ಯಾ ಗುರುವಿನೊಡನೆ ದೇಶ ಸಂಚಾರಾರ್ಥ ಹೊರಟು ಬಹುಸ್ಥಳಗಳನ್ನು ನೋಡಿಕೊಳ್ಳುತ್ತು ಕಡೆಗೆ ತನಗೆ ಗಂಗಾತೀರಕ್ಕೆ ಹೋಗಬೇಕೆಂಬ ಕುತೂಹಲ ವಿರುವಂತೆ ವ್ಯಕ್ತಪಡಿಸಿದನು. ಅದುಕೇಳಿ ಬ್ರಾಹ್ಮಣನು ತಾನು ಸಂಗಡ ಬರುವದಿಲ್ಲವೆಂತಲೂ ಬೇಕಾದರೆ ಒಂಟಿಯಾಗಿ ಹೋಗಬಹುದೆಂತಲೂ ರಾಜಪುತ್ರನಿಗೆ ತಿಳಿಸಿದನು. ಆಗಲಾ ರಾಜಕುಮಾರನು, ಅಯ್ಯಾ ವಿಪ್ರೋತ್ತಮನೆ ಮೊಸಳೆಯು ಜಲಚರ ವಾದುದರಿಂದ ದಡದಮೇಲೆ ಬಂದು ನಿನಗೆ ಯಾವ ಅಪಾಯವನ್ನು ಏನು ಮಾಡುವದು? ಇದಕ್ಕಾಗಿ ನೀನು ಭಯಪಡತಕ್ಕದ್ಯಾತಕ್ಕೆ? ಯೆಂಬದಾಗಿ ನುಡಿದು ವಿಪ್ರನ ಸಮಾಧಾನಗೊಳಿಸಿದನು. ಅನುಕೂಲವಾದ ಒಂದು ದಿನದಲ್ಲಿ ರಾಜಪುತ್ರನು ಗಂಗಾನದಿಗೆ ಸ್ನಾನಾರ್ಥ ಹೋಗಲು ಬ್ರಾಹ್ಮಣನನ್ನು ತನ್ನ ಸಂಗಡ ಬರುವಂತೆ ಬಲಾತ್ಕರಿಸಿ ನೀನು ದಡದ ಮೇಲೆ ಕುಳಿತು ಸಂಕಲ್ಪಮಂತ್ರವು ಹೇಳುತಾವನ್ಮಾತ್ರದಿಂದ ನಿನಗೆ ಒಂದು ಅಪಾಯ ಪ್ರಾಪ್ತವಾಗಲಾರದೆಂಬದಾಗಿ ಹೇಳಿದನು ಅದುಕೇಳಿ ಬ್ರಾಹ್ಮಣನು ಬಹಳ ಅತೃಪ್ತಿಯೊಡನೆ ಗಂಗಾನದೀಗೆ ರಾಜಪುತ್ರನ ಸಂಗಡ ಹೋದನು ಅಲ್ಲಿ ಸಾವಿರಾರುಜನ ಬಂದು ಸ್ನಾನಮಾಡುತಲಿದ್ದದು ನೋಡಿ ರಾಜಪುತ್ರನು ಧೈರ್ಯವನ್ನವಲಂಬಿಸಿ ನೀರಿನೊಳಗಿಳಿದು ಮಂತ್ರಗಳನ್ನು ಹೇಳುವಂತೆ ತನ್ನ ಗುರುವಂ ಪ್ರಾರ್ಥಿಸಿದನು ದಡದ ಮೇಲೆ ಕುಳಿತಿದ್ದ ಶಶಿಭೂಷಣನು ಮಂತ್ರಗಳನ್ನು ಹೇಳಲುಪಕ್ರಮಿಸಲು ಅಲ್ಲಿ ಜನಗಳ ಗದ್ದಲದಿಂ ರಾಜಪುತ್ರನಿಗೆ ಕೇಳಿಸದೆಹೋದವು ಕೂಡಲೇ ಆ ಯುವರಾಜನ ಸುತ್ತಲೂ ಆತನ ಅನುಚರರೆಲ್ಲರೂ ವಲಯಾಕಾರವಾಗಿ ನಿಂತುಕೊಳ್ಳುತ್ತು ಅವರ ಮಧ್ಯದಲ್ಲಿ ಬಂದುನಿಂತು ಮಂತ್ರವನ್ನು ಹೇಳಿದರೆ ವಿನಹ ಏನೂ ಉಂಟಾಗಲಾರದೆಂದು ಹೇಳಿ ಆತನು ಒಡಂಬಡಿಸಿ ತಮ್ಮ ವ್ಯೂಹ ಮಧ್ಯದೊಳು ನಿಲ್ಲಿಸಿಕೊಂಡು ಮಂತ್ರಗಳಂ ಹೇಳಿಸಿದರು. ಅದು ಪೂರೈಸಿದ ಕೂಡಲೆ ರಾಜಪುತ್ರನು ಆ ವಿಪ್ರನು ನೋಡಿ ಅಯ್ಯಾ ಬ್ರಾಹ್ಮಣೋತ್ತಮನೆ! ನಾನೇ ವಿಧಿಯನ್ನತಕ್ಕವನು. ಎಂಬದಾಗಿ ನುಡಿಯುತ ಮೊಸಳೆಯ ಆಕೃತಿಯಂ ತಾಳಿ, ಅವನನ್ನು ನದಿಯಲ್ಲಿ ಸೆಳೆದುಕೊಂಡು ಹೋಗಿಬಿಟ್ಟನು. ಏತೇನ ಮನುಷ್ಯನಿಗುಂಟಾಗತಕ್ಕ ಶುಭಾ ಶುಭ ಫಲಗಳು ಅವನ ಕರ್ಮಾಧೀನವಾಗಿರುವದರಿಂದ ಅಂತಾ ಫಲಗಳನ್ನನುಭವಿಸದಿರಲಿಕ್ಕೆ ಯಾವ ಪ್ರಯತ್ನ ಮಾಡಿದಾಗ್ಯೂ ಅದು ಮೇಲೆ ಕಂಡಂತೆಯೆಂದಿಗಾದರೂ ನಿಷ್ಫಲವಾಗದಿರಲಾರದು.

Bangalore — Printed and published at the Karnatic Press, No. 114, Srinivasa Mandirum Road Pettah—1890

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಾಣಾನು ವಿವಿಧವೃತ್ತ್ಯಾ [illegible] ಕರ್ಣಾಟಕಪ್ರಕಾಶನ [illegible] ॥ [illegible]

Vol XVII] BANGALORE — MONDAY, JUNE 2 1890 [No. 22.

ಸಂಪುಟ ೧೭.] ಬೆಂಗಳೂರು — ಸನ್ ೧೮೯೦ನೇ ಇಸವಿ ಜೂನ್ ೨ ನೇ ತಾರೀಖ್ ಸೋಮವಾರ. [ಸಂಖ್ಯೆ ೨೨.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲೀಷ್ ಮತ್ತು ಕನ್ನಡಭಾಗಗಳಿಗೆ.

ವರ್ಷಕ್ಕೆ	ಸ್ಥಳೀಯರಿಗೆ ಅಂಚೆಯಿಲ್ಲದೆ	ಪರಸ್ಥಳೀಯರಿಗೆ ಅಂಚೆಯಿಂದ
ಮುಂಗಡವಾಗಿ ಕೊಡತಕ್ಕವರಿಗೆ	9—0—0	9—0—0
ತರುವಾಯ ,,	9—0—0	10—8—0

ಇಂಗ್ಲೀಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡ ಕೊಡತಕ್ಕವರಿಗೆ	4—0—0	5—0—0
ತರುವಾಯ ,,	5 0 0	6 0—0

ಈ ಪತ್ರಿಕೆಗೆ ದರಖಾಸ್ತು ಮಾಡಿದ ತಾರೀಖ್ [illegible]

[illegible]

ಜಾಹೀರಾತು ರಿವಾಜ್.

ಮೊದಲು [illegible] ಸಾಲಿಗೆ	೦—೨ ೦
ಎರಡನೆ [illegible] ಸಾಲಿಗೆ	೦—೧ ೦

ಸೂಚನೆ—[illegible]

[illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥದಲ್ಲಿ [illegible] ರೋಗಗಳಿಗೆ [illegible] ಔಷಧಗಳು [illegible]

ಇದರ ಕ್ರಯ—ಬೆಂಗಳೂರಿಗೆ ಮತ್ತು ಅಂಚೆ ಹಾಸಲ್ ಸಹಿತ ಪ್ರತಿ ಒಂದಕ್ಕೆ ರೂ ೫ 0—0

ಟಿ ವಿ ವೆಂಕಟಾಚಾರ್,

ಬೆಂಗಳೂರು [illegible] ಪೇಟೆ, ೪೧ನೇ ನಂ ಮನೆ

ADVERTISEMENTS

ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು [illegible] ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು

ಸಂಸ್ಕೃತ ಗ್ರಂಥಗಳು.

ಪುಸ್ತಕ	ಪ್ರತಿ ೧ಕ್ಕೆ
[illegible] ಸಂಗ್ರಹ	[illegible]
,, [illegible]	೧ ೧ ೦
,, [illegible]	೦ ೪ ೦
,, [illegible]	೧ ೯ ೦
,, [illegible]	೦ ೧೨ ೦
,, [illegible]	೦ ೮ ೦
,, [illegible]	೦ ೧ ೬
,, [illegible]	೦ ೩ ೦
[illegible]	೦ ೧೪ ೦
[illegible]	೦ ೨ ೦
[illegible]	೦ [illegible]
[illegible]	೦ ೨ [illegible]
[illegible]	೦ ೧ ೦

ಕನ್ನಡ ಗ್ರಂಥಗಳು.

ಪುಸ್ತಕ	ಕ್ರಯ
[illegible]	೨ ೦ ೦
[illegible]	೧ ೪ ೦
[illegible]	೧ ೪ ೦
[illegible]	೦ [illegible] ೦
[illegible]	೦ ೪ ೦
[illegible]	೦ [illegible]
[illegible]	೦ [illegible]
[illegible]	೦ ೧ ೦
[illegible]	೦ ೨ ೦
[illegible]	೦ [illegible]
[illegible]	೦ ೨ [illegible]
[illegible]	೧ ೦ ೦
[illegible]	೦ ೧ ೦

ನೋಟೀಸ್.

ಇದರಿಂದ ನಮ್ಮ ಚಂದಾದಾರರಿಗೂ ಇತರರಿಗೂ ತಿಳಿಯಪಡಿಸುವದೇನೆಂದರೆ — ೧೮೮೯ನೇ ಇಸವಿ ಡಿಸೆಂಬರ್ [illegible] ಚಂದಾದಾರರ ಹೆಸರುಗಳನ್ನು [illegible] ರಿಜಿಸ್ಟರ್ [illegible] ಪತ್ರಿಕೆ ಕಳುಹಿಸುತ್ತೇವೆ [illegible] ಪತ್ರಿಕೆಯು [illegible] ಬಾಕಿ [illegible] ಕಾರ್ಡಿನಲ್ಲಿ [illegible] ತಿಳಿಸಬಹುದು. ಪತ್ರಿಕೆಯ [illegible] ಮೊಬಲಗನ್ನು ಕಳುಹಿಸಿ [illegible] ಬೇಕೆಂದು ಕೋರುತ್ತೇವೆ

ಬೆಂಗಳೂರು.) ಟಿ ಸಿ ಶ್ರೀನಿವಾಸಾಚಾರ್,
ತಾ. [illegible] (ಪ್ರೊಪ್ರೈಟರ್
೧೮೯೦) ಕರ್ಣಾಟಕ ಪ್ರಕಾಶಿಕಾ

ನೋಟೀಸ್.

ಮನೆಗಳಲ್ಲಿ ಗಿಲೀಟ್ ಮಾಡುವದಕ್ಕೆ ಅನುಕೂಲವಾದ ಬೆಳ್ಳಿ ದ್ರಾವಕವು.

ಈ ಬೆಳ್ಳಿ ದ್ರಾವಕವು [illegible] ತಾಮ್ರ, ಹಿತ್ತಾಳೆ ವಗೈರೆ [illegible] ಗಿಲೀಟು ಮಾಡುವದಕ್ಕೆ [illegible] ಇದಲ್ಲದೆ ಈ ದ್ರಾವಕವು ಚಿನ್ನ ಮತ್ತು ಬೆಳ್ಳಿ ಒಡವೆಗಳ [illegible] ಇದರಿಂದ [illegible] ಶುದ್ಧವಾದ ಬೆಳ್ಳಿ [illegible] ಇದು ಗಿಲೀಟ್ ಮಾಡುವದಕ್ಕಿಂತ [illegible]

ಇದರ ಕ್ರಯ ಸೀಸೆ ೧ಕ್ಕೆ ೨—೮—೦

ಚಿನ್ನದ ದ್ರಾವಕವು.

ಇದು ಬೆಳ್ಳಿ, ಹಿತ್ತಾಳೆ, ತಾಮ್ರ ವಗೈರೆ [illegible] ಶುದ್ಧವಾದ ಬಂಗಾರದಲ್ಲಿ [illegible]

ಇದರ ಕ್ರಯ ಸೀಸೆ ೧ಕ್ಕೆ ೩—೮—೦

[illegible] ಬೆಳ್ಳಿ [illegible]

ದಕ್ಷಿಣಮಹಾರಾಷ್ಟ್ರ ರೈಲ್ವೇ ಕಂಪೆನಿ.

ಸ್ಟೋರ್ಸ್ ಬಾಬತ್ತ ನಾನಾತರಹ ಸಾಮಾನುಗಳು

ಸನ್ ೧೮೯೦ನೇ ಇಸವಿ ಜೂನ್ ೧೬ನೇ ತಾರೀಖಿನಿಂದ [illegible] ಸ್ವದೇಶದ [illegible] ಸಾಮಾನುಗಳ [illegible] ದರಖಾಸ್ತುಗಳು ಬರಮಾಡಿಕೊಳ್ಳಲ್ಪಡುತ್ತವೆ

ದರಖಾಸ್ತುಗಳನ್ನು ದರಖಾಸ್ತುದಾರರ [illegible] ನಮೂನೆಯಲ್ಲಿ ಬರೆದು ಕಳುಹಿಸತಕ್ಕದ್ದು. ನಾನಾತರಹ ಸಾಮಾನುಗಳ ವಿಷಯದಲ್ಲಿ [illegible] ನಮೂನೆಯನ್ನು ಹುಬ್ಬಳ್ಳಿಯಲ್ಲಿ [illegible] ಕಾಗದ ವಗೈರೆ [illegible] ಧಾರ್ವಾಡದಲ್ಲಿರುವ [illegible] ತೆಗೆದುಕೊಳ್ಳತಕ್ಕದ್ದು.

ನಾನಾ ತರಹ ಸಾಮಾನುಗಳನ್ನು [illegible] ಹುಬ್ಬಳ್ಳಿ ಅಥವಾ ಬೆಂಗಳೂರು [illegible] ದರಖಾಸ್ತು [illegible] ಅಥವಾ [illegible] ತಿಳಿಸತಕ್ಕದ್ದು. ಕಾಗದ ವಗೈರೆ ಸಾಮಾನುಗಳನ್ನೆಲ್ಲ ಧಾರ್ವಾಡದಲ್ಲಿ [illegible] ಒಪ್ಪಿಸತಕ್ಕದ್ದು

ನಾನಾತರಹ ಸಾಮಾನುಗಳ ಮತ್ತು ಕಾಗದ ವಗೈರೆಗಳ [illegible] ದರಖಾಸ್ತುಗಳ [illegible] ಮತ್ತು ಷರತ್ತುಗಳು ದರಖಾಸ್ತುದಾರರ ಪ್ರತಿಯೊಂದು ದೆ [illegible] ಕಳುಹಿಸಲ್ಪಡತಕ್ಕದ್ದು. ನಾನಾತರಹ ಸಾಮಾನುಗಳ ವಿಷಯದಲ್ಲಿ ಬೇಕಾದ ವರ್ತಮಾನಗಳನ್ನು ಹುಬ್ಬಳ್ಳಿ ಮತ್ತು ಬೆಂಗಳೂರಲ್ಲಿರುವ ಸ್ಟೋರ್ ಕೀಪರ್‌ಗಳಿಂದಲೂ ಕಾಗದ ವಗೈರೆ ಸಾಮಾನುಗಳ ವಿಷಯದಲ್ಲಿ ಬೇಕಾದ ವರ್ತಮಾನಗಳನ್ನು ಧಾರ್ವಾಡದಲ್ಲಿರುವ ಅಧಿಕಾರಿಯಿಂದಲೂ ತಿಳಿದುಕೊಳ್ಳಬಹುದು.

ದರಖಾಸ್ತುಗಳನ್ನು ಅಂಗೀಕರಿಸುವ ವಿಷಯದಲ್ಲಿ ಜೂನ್ ೧೬ನೇ ತಾರೀಖ್ ಆಖೈರಾಗಿರುವದು. ದರಖಾಸ್ತುಗಳನ್ನು ಲಕೋಟೆಯಲ್ಲಿ ಹಾಕಿ ಮೊಹರುಮಾಡಿ, "ಸಾಮಾನುಗಳು ಅಥವಾ ಕಾಗದ ವಗೈರೆ ಸಾಮಾನುಗಳ ಬಗ್ಗೆ ದರಖಾಸ್ತು" ಎಂದು ಮೇಲ್ಗಡೆ ಬರೆದು ಧಾರ್ವಾಡದಲ್ಲಿರುವ ದಕ್ಷಿಣ ಮಹಾರಾಷ್ಟ್ರ ರೈಲ್ವೆ ಏಜೆಂಟರ ಹೆಸರಿಗೆ ರವಾನಿಸತಕ್ಕದ್ದು.

ಕಡಿಮೆ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನೇಯಾಗಲಿ ಅಂಗೀಕರಿಸುವದಕ್ಕೆ ಏಜೆಂಟರವರು ಬದ್ಧರಾಗಿರುವದಿಲ್ಲವು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JUNE 2, 1890

೧೮೯೦ನೇ ಜೂನ್ ೨ ನೇ ಸೋಮವಾರ

ON HINDU MARRIAGE SYSTEM No II.

ಹಿಂದೂ ವಿವಾಹಪದ್ಧತಿ.

ಪುರುಷನು ಅನುಕೂಲೆಯಾದ ಭಾರ್ಯೆಯಂ ಪಡೆಯುವದು ಐಹಿಕ ಸುಖ ಸಂತೋಷಗಳಲ್ಲಿ ಬಹಳ ಶ್ರೇಷ್ಠವಾದದ್ದೆಂದು ಗತಸಂಚಿಕೆಯಲ್ಲಿ ತಿಳಿಸಿದ್ದೇವಷ್ಟೆ. ಅಂತಾ ಭಾರ್ಯೆಯಂ ಸಂಪಾದಿಸಬೇಕಾದುದು ಪ್ರಥಮ ಧರ್ಮವಾಗಿರುತ್ತದೆ. ಈಗ ಇಂಗ್ಲೀಷ್ ವಿದ್ಯೆ ಕಲಿತವರನೇಕರಿಗೆ ಇಂಗ್ಲೀಷಿನವರಲ್ಲಿ ನಡೆಯುತ್ತಿರುವ ವೈವಾಹಿಕ ಪದ್ಧತಿಯು ಬಹಳ ಶ್ರೇಷ್ಠವಾದದ್ದೆಂಬ ಭಾವನೆಯೂ, ಕದಾಚಿತ್ತಾಗಿ ವಿವಾಹ ಮಾಡಿಕೊಂಡವರು ಬಹಳ ಸುಖವನ್ನು ಅನುಭವಿಸುತ್ತಾರೆಂಬ ತಾತ್ಪರ್ಯವೂ ಸಾಮಾನ್ಯವಾಗಿ ಉಂಟಾಗಿರುವದು ಸ್ಪಷ್ಟವಾಗುತ್ತದೆ. ಅನೇಕರು ಇಂತಾ ತಾತ್ಪರ್ಯವು ವ್ಯಕ್ತಪಡಿಸಿ, ಆ ಕ್ರಮವನ್ನು ಹಿಂದೂ ಸಮುದಾಯದ ಪರಿಷ್ಕರಣ ಪ್ರವರ್ತಕರು ನಮ್ಮಲ್ಲಿಯೂ ಪ್ರಚಾರದಲ್ಲಿ ತರಬೇಕೆಂಬ ಉತ್ಸಾಹ ಪೂರ್ಣರಾಗಿದ್ದಾರೆ. ಅಂತಾ ವಿವಾಹವ ಮಾಡಿಕೊಳ್ಳುವದರಿಂದ ಸುಖ ಸಂತೋಷಗಳುಂಟಾಗುವವೋ ಇಲ್ಲವೋ ಎಂಬ ಅಂಶವು ಮೊದಲು ವಿಚಾರಿಸತಕ್ಕದ್ದಾಗಿರುತ್ತದೆ. ಸ್ತ್ರೀಪುರುಷರಿಬ್ಬರೂ ಪ್ರಾಪ್ತ ವಯಸ್ಕರಾದ ಮೇಲೆ ಪರಸ್ಪರ ರೂಪಗುಣ ಶೀಲಸ್ವಭಾವ [illegible] ವ್ಯಾಮೋಹಾತಿಶಯ [illegible] ವಿವಾಹಮಾಡಿಕೊಳ್ಳುವದು ಇಂಗ್ಲೀಷಿನವರ ಪದ್ಧತಿ ಯೆಂಬುದು ಎಲ್ಲರಿಗೂ ತಿಳಿದ ಅಂಶವಾಗಿಯೇ ಇರುತ್ತದೆ. ಈ ಕ್ರಮವು ನಮ್ಮವರೊಳು ಪೂರ್ವಕಾಲದಲ್ಲಿ ಆಚರಿಸಿದ್ದಂತೆ ಸೀತಾ, ರುಕ್ಮಿಣಿ, ಶಕುಂತಲಾ, ಸುಭದ್ರಾ, ದಮಯಂತೀ ಮೊದಲಾದ ರಾಜಕನ್ಯೆಯರ ವೃತ್ತಾಂತಗಳ ಮೂಲಕ ಸ್ಪಷ್ಟವಾಗುತ್ತದೆ.

ಅದಾಗ್ಯೂ ಇಂತಾ ಗಾಂಧರ್ವ ವಿವಾಹಗಳಿಂದುಂಟಾದ ಪ್ರಯೋಜನಾ ಪ್ರಯೋಜನಗಳನ್ನು ಬಹುಕಾಲಾನಂತರ ಈಗ ನಾವು ವಿವರಿಸಲಿಕ್ಕೆ ತಕ್ಕ ಸಾಧನ ಸಂಪತ್ತುಗಳು ದುರ್ಲಭಗಳಾಗಿವೆ ಪರಂತು ಸ್ಮೃತಿಕಾರರು ಬಹುವಿಧ ವಿವಾಹಗಳಲ್ಲಿ ಗಾಂಧರ್ವ, ಆಸುರ, ಪೈಶಾಚಾದಿಗಳಂ ಶ್ರೇಷ್ಠತ್ವೇನ ನುಡಿಯದೆ ಅವುಗಳಿಗೆ ಅಧಿಕಾರಿ ಭೇದವಂ ಕಲ್ಪಿಸಿರುವವರಿಂದ ಅದಕ್ಕೇನೂ ಪ್ರಬಲವಾದ ಉದ್ದೇಶವಿರಬಹುದೆಂದು ತೋರುತ್ತದೆ. ಈಗಿನ ಕಾಲವಲ್ಲಿ ಅಂತಾ ವಿವಾಹಕ್ರಮಗಳು ಮನೋನಿಗ್ರಹವಿಲ್ಲದ ಸ್ತ್ರೀ ಪುರುಷರಿಗೆ ಪ್ರಬಲ ದುಃಖಕಾರಿಯಾಗಿ ಕ್ವಚಿತ್ ಪರಿಣಮಿಸದೆ ಹೋಗಲಾರದೆಂದೆಣಿಸಿ ಅದು ಪ್ರಬಲ ಹಾನಿಕರವಾದದ್ದೆಂದು ಸಹ ನುಡಿದಿರುತ್ತಾರೆ. ಈ ತಾತ್ಪರ್ಯವು ಕೇವಲ ಪೂರ್ವ ಸಂಪ್ರದಾಯೈಕ ಶರಣ್ಯರಾದ ನಮ್ಮವರಿಗೆ ಮಾತ್ರ ವುಂಟಾದದ್ದಾದರೆ ಭ್ರಾಂತಿ ಕಲ್ಪಿತವೆಂದು ನುಡಿಯಬಹುದು. ಪರಂತು ನಮಗೆ ನಾಗರಕತಾ ಪ್ರವರ್ತನಕ್ಕೆ ಪ್ರಥಮೋಪಾಧ್ಯಾಯರೆನಿಸಿರುವ ಇಂಗ್ಲೀಷಿನವರಲ್ಲಿ ಪೂರ್ವಿಕರೂ ಆಧುನಿಕರೂ ಮೇಲೆ ಹೇಳಿದ ಪದ್ಧತಿಯನ್ನನುಸರಿಸಿ ವಿವಾಹ ಮಾಡಿಕೊಂಡವರು ಬಹುವಿಧ ದುಃಖಗಳನ್ನನುಭವಿಸಿದಾರೆಂಬದಕ್ಕೆ ಅನೇಕ ನಿದರ್ಶನಗಳು ದೊರೆಗೊಂಡಿರುತ್ತವೆ. ಪೂರ್ವಿಕರಲ್ಲಿ ಪ್ರಸಿದ್ಧ ಕವಿಗಳೆನಿಸಿ (ಈಗಲೂ ಅಂತವರ ಗ್ರಂಥಗಳು ಸಕಲರಿಂದಲೂ ಪಠನೀಯಗಳಾಗಿ) ಕೊಂಡಾಡಲ್ಪಡುತಲಿರುವ, ಷೆಲ್ಲಿ, ಬೈರನ್ ಗೊಯಿತಿ ಮೊದಲಾದವರನೇಕರು ಸದರೀ ಪದ್ಧತಿಯನ್ನನುಸರಿಸಿ ವಿವಾಹ ಮಾಡಿಕೊಂಡಿದ್ದರೂ ಬಹಳ ದುಃಖಗಳನ್ನನುಭವಿಸಿದರೆಂದು ತಿಳಿಯಬರುತ್ತದೆ. ಷೆಲ್ಲಿ ಯೆಂಬವನು ಹ್ಯಾರಿಯೆಟ್ಟ ಯೆಂಬವಳನ್ನು ವಿವಾಹಮಾಡಿಕೊಳ್ಳಲಿಕ್ಕೆ ಮುಂದೆ ಆಕೆ ನೋಡುವದಕ್ಕೆ, ಸುಂದರಳಾಗಿಯೂ, ಬಹಳ ವಾಗ್ಮಿಯಾಗಿಯೂ, ಪಂಡಿತೆಯಾಗಿಯೂ, ಆಕೆ ಯಾವಾಗಲೂ ಬಹಳ ಶುಭ್ರಗಳಾದ ವಸ್ತ್ರಗಳಂ ಧರಿಸತಕ್ಕವಳಾಗಿಯೂ, ಗಂಭೀರಾಕೃತಿಯುಳ್ಳವಳಾಗಿಯೂ, ಪ್ರಿಯಂವದೆಯಾಗಿಯೂ ಮನೋಹರವಾದ ಧ್ವನಿಯೊಡನೆ ರಸಭಾವಗರ್ಭಿತವಾಗಿ ಪಠನಾದಿ ದಕ್ಷವಳಾಗಿಯೂ, ಸಂಗೀತ ಶಾಸ್ತ್ರ ವೇತ್ತಳಾಗಿಯೂ, ಯಿದ್ದಂತೆ ಕಂಡುಬರಲು ಆಕೆಯಂ ಮೋಹಿಸಿ ತಾನು ವಿವಾಹ ಮಾಡಿಕೊಂಡಂತೆಯೂ, ವಿವಾಹಕಾಲದೊಳು ಅವಳಲ್ಲಿ ತನಗುಂಟಾಗಿದ್ದ ಪ್ರೀತಿ ವಿಶ್ವಾಸಗಳು ಕ್ಷಿಪ್ರವಾಗಿಯೇ ನಶಿಸಿ, ಕವಿತ್ವದಲ್ಲಿಯೂ, ವೇದಾಂತ ಶಾಸ್ತ್ರದಲ್ಲಿಯೂ ನಿಪುಣೆಯೆನಿಸಿರುವ ಮತದಿಯೊಬ್ಬಳು ಲಭಿಸದ ದುಃಖವು ಮಾನವನ್ನಂಟ ಸದರೀ ಎರಡು ಗುಣಗಳೂ ತನ್ನ ಭಾರ್ಯೆಯಲ್ಲಿಲ್ಲವೆಂಬದಾಗಿ ಅವಳಂ ಪೋಷಿಸಲಾರಂಭಿಸಿದನು. ಕಡೆಗು ಷೆಲ್ಲಿಗೂ ಹ್ಯಾರಿಯೆಟ್ಟಗೂ ವೈಮನಸ್ಯವು ದಿನೇದಿನೇ ವೃದ್ಧಿಯಾಗಿ ಅವಳು ಆತ್ಮಹತ್ಯ ಮಾಡಿಕೊಂಡು ಮೃತಪಟ್ಟಳು. ಲಾರ್ಡ ಬೈರನ್ ಎಂಬಾತನು ಗುಣವತಿಯಾಗಿಯೂ, ವಿದ್ಯಾವತಿಯಾಗಿಯೂ, ಇರುವ ಸ್ತ್ರೀಯು ಭಾರ್ಯೆಯಾಗಿರುವದರಿಂದ ಪುರುಷನು ಬಹಳ ಸುಖಪಡಬಹುದೆಂಬ ಭ್ರಮೆಯೊಡನೆ ತನ್ನ ಭಾರ್ಯೆಯಂ ವಿವಾಹಮಾಡಿಕೊಳ್ಳಲಿಕ್ಕೆ ಮುಂಚಿತವಾಗಿಯೇ ಸಕಲ ಗುಣ ಸಂಪನ್ನೆಯಾಗಿರಬೇಕೆಂದು ಹುಡುಕುತ್ತ, ಸಕಲ ವಿದ್ಯಾಪಾರಂಗತಳಾಗಿಯೂ, ಸಕಲಶಾಸ್ತ್ರವೇತ್ತಳಾಗಿಯೂ, ಅನುಪಮ ಸುಪತ್ನಿಂತೋಷದ(?) ಗಳುಳ್ಳವಳಾಗಿಯೂ, ಸನ್ಮಾರ್ಗ ಪ್ರವರ್ತನೆಗೆ ಮಾರ್ಗದರ್ಶಕಗಳಾಗಿಯೂ, ಸುಗುಣಾತಿಶಯಗಳಿಂದ ಪ್ರಶಂಸನೀಯಳಾಗಿಯೂ, ಅಪ್ರತಿಹತ ಚರ್ಯೆಯುಳ್ಳವಳಾಗಿಯೂ ಇದ್ದವಳಂ ಬಹುಕಾಲ ಉಪಾಸನೆ ಮಾಡಿ ವಿವಾಹ ಮಾಡಿಕೊಂಡನು. ಇಂತಾ ಭಾರ್ಯೆಯಂ ಪಡೆಯಲಿಕ್ಕೆ ಬೈರನ್ ಯೆಷ್ಟು ಕಾಲದ ತನಕ ನಿರೀಕ್ಷಿಸಿ ಶ್ರಮಪಟ್ಟನೋ ಅಷ್ಟರ ಕಾಲ ತನ್ನ ಭಾರ್ಯೆಯೊಡನೆ ಸುಖೋಪಜೀವಿಸಲಿಲ್ಲವು. ದಂಪತಿಗಳಿಗೆ ಅನ್ಯೋನ್ಯೈಕಮತ್ಯವೆಂಬ ಒಂದು ಮುಖ್ಯ ವಸ್ತುವು ಇಲ್ಲದೆ ಹೋದಾಗ ಭಾರ್ಯೆ ಯೆಷ್ಟರ ವಿದ್ಯಾವತಿಯಾಗಿದ್ದಾಗ್ಯೂ, ಸುಗುಣವತಿ ಯೆನಿಸಿದ್ದರೂ, ಎಲ್ಲದೂ ನಿಷ್ಪ್ರಯೋಜಕವೆಂಬ ಅಂಶವನ್ನರಿಯದೆ, ವಿದ್ಯಾಪ್ರವೀಣತೆಯೂ ಸುಗುಣಗಳೂ ಸಕಲ ಸುಖ ಸಂಪಾದಕಗಳೆಂಬ ತಾತ್ಪರ್ಯದಿಂ ವಿವಾಹ ಮಾಡಿಕೊಂಡ ಬೈರನ್ ಯೆಂಬವನ ಗೃಹಕೃತ್ಯ ವಿಷಯಗಳು ಅಸಮಾಧಾನಕರಗಳಾಗಿದ್ದವೆಂತಲೂ, ಸದರೀ ಭಾರ್ಯೆಯ ಮೂಲಕ ಆತನು ಸಕಲವಿಧ ಕಷ್ಟಗಳನ್ನನುಭವಿಸಿ ಅಗೌರವಕ್ಕೊಳಗಾಗಿ ಮತ್ತೊಂದು ವಿವಾಹ ಮಾಡಿಕೊಳ್ಳುವ ತನಕ ವಿವಾಹ ಸಂಬಂಧವಾದ ಸುಖಲೇಶವೂ ಲಭಿಸದೆ ಹೋಯಿತೆಂತಲೂ ಜನಗಳು ನುಡಿಯುತಲಿದ್ದರು. ಗೊಯಿತಿ ಯೆಂಬವನು ಈ ವಿಷಯದಲ್ಲಿ ಅನೇಕ ಜನ ಸ್ತ್ರೀಯರಿಗೆ ಕಷ್ಟವನ್ನುಂಟುಮಾಡಿ ತಾನೂ ದುಃಖಪಟ್ಟಂತೆ ತಿಳಿಯಬರುತ್ತದೆ. ಪೂರ್ವಿಕರಲ್ಲಿ ಸದರೀ ಪದ್ಧತಿಯನ್ನನುಸರಿಸಿ ವಿವಾಹ ಮಾಡಿಕೊಂಡವರನೇಕರು ಪ್ರಬಲ ದುಃಖಗಳನ್ನನುಭವಿಸಿದರೆಂದು ಕೇಳುತ್ತೇವೆ. ಈಗಿನವರಲ್ಲಿಯೂ ಸದರೀ ವಿವಾಹಪ್ರಯುಕ್ತವಾದ ದುಃಖಗಳು ದುಸ್ಸಹವಾಗಿರುವಂತೆ ಭರ್ತೃಭಾರ್ಯೆಯರ ಕಲಹಪ್ರಯುಕ್ತವಾದ ಫಿರ್ಯಾದಿಗಳು ತಿಳಿಸದಿರಲಿಲ್ಲವು. ಡೈವೋರ್ಸ್ ಆಕ್ಟನ್ನನುಸರಿಸಿ ಎಷ್ಟುಜನ ಗಂಡಸರು ತಮ್ಮ ಭಾರ್ಯೆಯರನ್ನು ತ್ಯಜಿಸುತ್ತಾರೆ ನೋಡಿದರಾ! ಎಷ್ಟು ಜನ ಸ್ತ್ರೀಯರು ಸದರೀ ಕಾನೂನನ್ನನುಸರಿಸಿ ತಮ್ಮ ಗಂಡಂದಿರನ್ನು ತೊರೆದುಬಿಡುತ್ತಾರೆ! ಈ ಕಾರಣಗಳನ್ನನುಸರಿಸಿ ಯೂರೋಪ್ ದೇಶೀಯರ ವಿವಾಹ ಪದ್ಧತಿ ಶ್ರೇಷ್ಠವಾದದ್ದೆಂದು ಯೆಷ್ಟುಮಾತ್ರವೂ ನುಡಿಯಲಿಕ್ಕಾಗುವದಿಲ್ಲವು. ಇದಲ್ಲದೆ ಯೂರೋಪಿಯನ್ನರಲ್ಲಿ ಪ್ರಬುದ್ಧರಾದರೂ ವಿವಾಹವಿಲ್ಲದೆ ಕನ್ಯೆಯೆಂತಲೂ ಬ್ರಹ್ಮಚಾರಿಣಿಯೆಂತಲೂ ಹೆಸರಿಟ್ಟುಕೊಂಡು ಸಕಲ ದುಷ್ಕೃತ್ಯಗಳನ್ನೂ ಮಾಡುವ ಹುಡಿಗಿಯರಿಗಾಗಿ ಅವರ ತಾಯಿ ತಂದೆಗಳು ವರ್ತಿಸತಕ್ಕ ಮಾರ್ಗಗಳು ಈ ದೇಶೀಯರಿಗೆ ಅತಿ ನೀಚವಾಗಿ ತೋರದೆ ಹೋಗಲಾರವು. ಸ್ತ್ರೀಯನ್ನು ವರಿಸಲಿಕ್ಕೆ ಅನೇಕ ಯೌವನ ಪುರುಷರು ಬರತಕ್ಕ ಸಮಯದಲ್ಲಿ ಕೆಲವು ಅವಿವೇಕಗಳು ಜರುಗುತ್ತವೆ. ವಿಶ್ವಾಮಿತ್ರಪರಾಶರಪ್ರಭೃತಯೋ ವಾತಾಂಬುಪರ್ಣಾಶನಾಃ | ತೇಪಿಸ್ತ್ರೀಮುಖಪಂಕಜಂ ಸುಲಲಿತಂ ದೃಷ್ಟ್ವೈವ ಮೋಹಂಗತಾಃ || ಶಾಲ್ಯನ್ನಂ ಸಘೃತಂ ಪಯೋದಧಿಯುತಂ ಯೇ ಭುಂಜತೇ ಮಾನವಾಃ | ತೇಷಾಮಿಂದ್ರಿಯನಿಗ್ರಹೋ ಯದಿ ಭವೇದ್ವಿಂಧ್ಯಸ್ತರೇತ್ಸಾಗರಂ || ಅಂದರೆ ವಾತೋದಕ ಫಲಪರ್ಣಾದಿಗಳಂ ಗ್ರಹಿಸಿ ಜೀವಿಸುತಲಿದ್ದ ವಿಶ್ವಾಮಿತ್ರ ಪರಾಶರ ಪ್ರಭೃತಿಗಳು ಸ್ತ್ರೀಯರ ಸುಂದರಮುಖಕಮಲವೀಕ್ಷಣದಿಂ ಮೋಹಿತರಾಗಿ ತಮ್ಮ ತಪೋಮಹಿಮೆಯನ್ನೆಲ್ಲ ಹೋಗಲಾಡಿಸಿಕೊಂಡಿರುವಾಗ್ಯೆ ಹಾಲು ಮೊಸರು ತುಪ್ಪ ಮೊದಲಾದವುಗಳೊಡನೆ ಶಾಲ್ಯನ್ನವಂ ಭುಂಜಿಸತಕ್ಕ ಮಾನವರಿಗೆ ಇಂದ್ರಿಯ ನಿಗ್ರಹ ವುಂಟಾದಾಗ ವಿಂಧ್ಯ ಪರ್ವತವು ಸಮುದ್ರದಲ್ಲಿ ತೇಲುವದಲ್ಲವೆ ಎಂಬದಾಗಿ ಭರ್ತೃಹರಿ ಮಹರ್ಷಿಯು ಬರೆದಿರುತ್ತಾರೆ. ಅನ್ನ ಮೊದಲಾದ ಶಾಕಾಹಾರ ವುಳ್ಳವರೇ ಆರೀತಿಯಾಗಿರುವಲ್ಲಿ ಮಾಂಸಾದಿ ಆಹಾರಗಳನ್ನೂ ಮದ್ಯಾದಿ ಪಾನಗಳನ್ನೂ ಮಾಡತಕ್ಕವರಿಗೆ ಯೆಷ್ಟರಮಟ್ಟಿಗೆ ಇಂದ್ರಿಯನಿಗ್ರಹವಿರುವದೋ ಅದಂ ಈ ಲೇಖನವನ್ನೋದತಕ್ಕವರೇ ಯೋಚಿಸಬಹುದು. ನಾವು ಹಿಂದೆ ತಿಳಿಸಿದ ಹ್ಯಾಮರ್ಟನ್ ಯೆಂಬ ಗ್ರಂಥಕರ್ತರು ಅನೇಕ ಸಂವತ್ಸರಗಳ ಕಾಲ ಈ ವಿಷಯವಂ ಮುಖ್ಯವಾಗಿ ಪರಿಶೀಲನೆಮಾಡಿ ವಿವಾಹದಲ್ಲಿ ಯಾವ ರೀತಿಯಾಗಿ ಪ್ರವರ್ತಿಸಿದರೆ ಭರ್ತೃಭಾರ್ಯೆಯರಿಗೆ ಸಂಪೂರ್ಣಸುಖ ವುಂಟಾಗುವದೋ ಅದು ಇದುವರಿವಿಗೆ ಯಾರಿಗೂ ತಿಳಿಯದೆಂಬ ತಾತ್ಪರ್ಯ ಪಟ್ಟಿರುತ್ತಾರೆ. "ಅಜ್ಞಾತಂ ಕರ್ಮಕೃತ್ಯಾಚ ಕ್ಲೇಶೋನಾಸ್ತ್ಯತ್ರ ಹೀಯತೆ ||" ಎಂಬದಾಗಿ ಶ್ರೀ ಮಾರ್ಕಂಡೇಯರು ಹೇಳಿರುವದರಿಂದ ವಿಚಾರಪೂರ್ವಕ ಒಂದು ಸಿದ್ಧಾಂತಕ್ಕೆ ಬಾರದ ತಿಳಿಯದವರ ಪದ್ಧತಿಯನ್ನನುಸರಿಸಿದರೆ ಸಂಕಟಗಳಿಂದಗೂ ನಿವೃತ್ತಿಯಾಗಲಾರದು. ಮೇಲೆ ಕಂಡ ಅಂಶಗಳನ್ನು ವಿಚಾರಿಸಿ ಯೋಚಿಸಲಾಗಿ ಯೂರೋಪಿಯನ್ನರ ಪದ್ಧತಿ, ಅಂದರೆ ವಯಸ್ಸು ಬಂದ ಬಳಿಕ ಸ್ವತಃ ವರಿಸಿಕೊಳ್ಳುವ ಸ್ವಾತಂತ್ರ್ಯವು ತರಳಹೃದಯರಾದ ನಮ್ಮ ಬಾಲಕರಿಗೂ, ಬಾಲೆಯರಿಗೂ ಕಲ್ಪಿಸಿ, ಲೋಕಜ್ಞಾನನಭಿಜ್ಞರಾದ ಅವರು ಸ್ವೇಚ್ಛಾನುಗುಣವಾಗಿ ವರ್ತಿಸುವದಕ್ಕೆ ಸಾಕಾದ ಅವಕಾಶವನ್ನು ದೊರಿಗುಂಟುಮಾಡಿ, ಹಾಗೆ ಕೇವಲ ಅವರು ಸ್ವಸಂತೋಷಾರ್ಥ ತಾರತಮ್ಯವಿಲ್ಲದೆ ವರ್ತಿಸುವದಂ ನೋಡಿ ಸಂತೋಷಿಸಬೇಕೆಂದು ಕೋರುವ ಆಧುನಿಕರ ಅಭಿಪ್ರಾಯವು ನಿರಾಕ್ಷೇಪಣೀಯವಾಗಿ ಅಂಗೀಕರಿಸತಕ್ಕದಲ್ಲವೆಂದು ಮುಂದೆಯಾದರು ತೋರದೆ ಹೋಗಲಾರದು. ಮುಂದೆ ಹಿಂದೂ ವೈವಾಹಿಕ ಪದ್ಧತಿಯು ಅಂಗೀಕಾರಾರ್ಹವಾದದ್ದೋ ಅಲ್ಲವೆ ಯೆಂಬದಂ ಕುರಿತು ವಿಚಾರ ಮಾಡುವೆವು.

Occasional Notes
ನೈಮಿತ್ತಿಕ ವಿಷಯನ್ಯಾಸ.

A liberal gift.—ಬಳ್ಳಾರಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಸನ್ಮಾರ್ಗ ಸಮಾಜಕ್ಕೆ ರಾಯಬಹದೂರ್ ಎ. ಸಭಾಪತಿ ಮುದಲಿಯಾರ್ರವರು ೧,೦೦೦ ರೂಪಾಯಿಗಳು ಸಹಾಯದ್ರವ್ಯ ಕೊಟ್ಟರೆಂದು ಕೇಳಿ ಸಂತೋಷಿಸುತ್ತೇವೆ.

An appointment sanctioned.—ಇಂಡ್ಯ ಗವರ್ನಮೆಂಟ ಪಾರ್ಲಿಮೆಂಟಿಗೆ ಡೆಪ್ಯುಟಿ ಸೆಕ್ರೆಟರಿ ಯೊಬ್ಬರಿರಬೇಕೆಂದು ಮಾಡಲ್ಪಟ್ಟ ಶಿಫಾರಸನ್ನು ಇಂಡ್ಯ ಸ್ಟೇಟ್ ಸೆಕ್ರೆಟರಿ ಯವರು ಮಂಜೂರ್ಮಾಡಿರುತ್ತಾರೆ.

Suicide.—ಹಿಂದೂ ಬಾಲೆಯರು ಮೂವರು ಆತ್ಮಹತ್ಯ ಮಾಡಿಕೊಳ್ಳಬೇಕೆಂದು ಕೃತಸಂಕೇತ ವುಳ್ಳವರಾಗಿ, ಬಾಂಪುರದ ರೆಯಿಲ್ಸ್ಟೇಷನ ಬಳಿ ರೆಯಿಲ್ರಸ್ತೆಯಲ್ಲಿ ಕಬ್ಬಿಣದಮೇಲೆ ಮಲಗಿಕೊಳ್ಳಲು ಗಾಡಿಬಂದು ಸದರೀ ಮೂವರ ತಲೆಗಳನ್ನು ತುಂಡುಮಾಡಿ ಹೊರಟುಹೋಯಿತು

H. H. the Maharaja of Vizianagaram ವಿಜಯ ನಗರದ ಮಹಾರಾಜರವರು ನೀಲಗಿರಿಯಲ್ಲಿ ಒಂದು ಬಂಗ್ಲೆ ಕೊಂಡುಕೊಂಡಿದಾರೆಯಷ್ಟೆ. ಸದರೀ ಕಟ್ಟಡವು ಈಗ ಪೂರಾ ದುರಸ್ತು ಮಾಡಲ್ಪಡುತ್ತದೆ. ಮಹಾರಾಜರವರು ಇನ್ನು ಒಂದು ವಾರದೊಳಗಾಗಿ ಅಲ್ಲಿಗೆ ದಯಮಾಡುವರೆಂದು ನಿರೀಕ್ಷಿಸಲ್ಪಟ್ಟಿದೆ

Offer of a liberal contribution.—ಕಲ್ಕತ್ತೆಯ ವಾಸಸ್ಥರಾದ ಬಾಬು ಗಿರೀಶ್ಚಂದ್ರನಾಥ ಘೋಷ್ಯೆಂಬವರು, ಮೂಗರು ಮತ್ತು ಕಿವುಡರ ವಿದ್ಯಾಭ್ಯಾಸಬಗ್ಗೆ ಒಂದು ಶಾಲೆಯಂ ಕಟ್ಟಿಸುವದಕ್ಕಾಗಿ ಭೂಮಿ ಮೊತ್ತವಂ ಕೊಡುವದಾಗಿ ತಿಳಿಸಲು ಬಂಗಾಳೆ ಗವರ್ನಮೆಂಟಿನವರು ಅದಂ ಉಚಿತರೀತಿಯಿಂದಂಗೀಕರಿಸಿದರು.

Influenza.—ಪುದುಚ್ಚೇರಿಯಲ್ಲಿ ಇನ್ಫ್ಲುಯೆಂಜಾ ಎಂಬ ವಿಷಮಶೀತ ರೋಗ ವ್ಯಾಪಿಸಿರುವದರಿಂದ ಸದರೀ ಗವರ್ನಮೆಂಟಿನವರು ಅಲ್ಲಿನ ಪಾಠಶಾಲೆಗಳಿಗೆಲ್ಲ ಕಳೆದ ತಿಂಗಳ ೨೮ ನೇ ತಾರೀಖ್ ಮೊದಲು ಈ ದಿನವವರಿವಿಗೆ ಯೆಂಟು ದಿನಗಳ ರಜಾ ಕೊಟ್ಟಿರುತ್ತಾರೆ. ರೋಗದ ಬಾಧೆಯಿಂದ ವಿದ್ಯಾರ್ಥಿಗಳು ಪಾಠಶಾಲೆಗೆ ಬಾರದೆ ನಿಂತುಹೋದರೆ ರಜಾ ಕೊಡಲ್ಪಟ್ಟಂತೆಯೆ.

Export of Indian tea stopped.—ಇಂಡ್ಯ ದೇಶದಲ್ಲಿ ಬೆಳಯು ಕಾಬೂಲಿ ಷಹರಿಗೆ ರವಾನ್ಯಾಗುವ ಟೀಯ ಮೇಲೆ ಅಮೀರರವರು ಖಂಡಿತವಾಗಿ ಸುಂಕ ವಸೂಲ್ಮಾಡುವದರಿಂದ ಸದರೀ ಪದಾರ್ಥದ ರಫ್ತು ನಿಂತು ಹೋಯಿತೆಂತಲೂ, ಈ ವಿಷಯದಲ್ಲಿ ಗವರ್ನಮೆಂಟಿನವರು ಔದಾಸೀನ್ಯವಂ ವಹಿಸಿರುವದು ಸರಿಯಲ್ಲವೆಂತಲೂ ಕಾಂಗ್ರಾ ವ್ಯವಸಾಯಗಾರರು ಫಿರ್ಯಾದಿ ಹೇಳುವದು ಉಚಿತವಾಗಿಯೇ ಇರುತ್ತದೆ.

Suicide.—ಮದರಾಸಿಗೆ ಸೇರಿದ ತಿರುವಲ್ಲಿಕ್ಕೇಣಿಯಲ್ಲಿ ಹದಿನಾಲ್ಕು ವರ್ಷಗಳ ವಯಸ್ಸುಳ್ಳ ಬ್ರಾಹ್ಮಣ ಹುಡಿಗಿಯೊಬ್ಬಳು, ತನ್ನ ಅತ್ತೆಯ ಮನೆಯವರಿಂದ ತನಗೆ ಉಂಟುಮಾಡಲ್ಪಟ್ಟ ಬಹುವಿಧ ಹಿಂಸೆಯನ್ನು ತಡೆಯಲಾರದೆ ಆಚೆ ಶುಕ್ರವಾರದದಿನ ರಾತ್ರಿ ದೇವಸ್ಥಾನದ ಮುಂದುಗಡೆಯಲ್ಲಿರುವ ಭಾವಿಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಳೆಂದು ಮದರಾಸು ಪತ್ರಿಕೆಯೊಂದು ತಿಳಿಸುತ್ತದೆ.

The Indian Civil Service examinations.—ಕಳೆದ ತಿಂಗಳ ೨೩ ನೇ ತಾರೀಖಿನಲ್ಲಿ, ಹೌಸ್ ಆಫ್ ಕಾಮನ್ಸ್ ಸಮಾಜದೊಳು ಸರ್ ಜಾನ್ ಗಾರ್ಸ್ಟಿ ಯವರು ಒಂದಂಶಕ್ಕೆ ಜವಾಬ ಹೇಳುವಲ್ಲಿ, ಇಂಡ್ಯ ದೇಶದ ಸಿವಿಲ್ ಸರ್ವಿಸ್ ನೌಕರಿಯ ಬಗ್ಗೆ ನಡೆಸಲ್ಪಡುವ ಪರೀಕ್ಷೆಯೊಳು ಶಾಸ್ತ್ರ ಸಂಬಂಧವಾದ ಪ್ರಶ್ನೆಗಳಿಗೆ ಕೊಡಲ್ಪಡುವ ಉತ್ತರಗಳಿಗೆ ಅಧಿಕವಾಗಿ ಮಾರ್ಕುಗಳು ಕೊಡುವದಕ್ಕೆ ಈಚೆಗೆ ಹೊಸದಾಗಿ ರಚಿಸಲ್ಪಟ್ಟಿರುವ ನಿಬಂಧನೆಗಳಲ್ಲಿ ಅವಕಾಶ ವುಂಟುಮಾಡಲ್ಪಡಬಹುದೆಂದು ತಿಳಿಸಿದರು.

Embracing Christianity.—ಗುಜರಾವತಿ ಪೇಟೆಯಲ್ಲಿ ಬಾಲಕಿಸನ್ ಎಂಬ ಹೆಸರುಳ್ಳ ರೆಯಿಲ್ವೆ ಗಾರ್ಡ ಒಬ್ಬನು ಕ್ರಿಸ್ತುಮತವನ್ನವಲಂಬಿಸಲು ಅಲ್ಲಿರುವ ಹಿಂದೂಜನರಲ್ಲಿ ಬಹಳ ಅಸಮಾಧಾನ ವುಂಟಾಯಿತು. ಅರ್ಥಾನ್ವಯದ(?) ಮೂಲಕ ಹಿಂದೂಗಳು ಒಂದು ಕಡೆಯಲ್ಲೂ ಮುಸಲ್ಮಾನರು ಮತ್ತೊಂದು ಕಡೆಯಲ್ಲೂ ಸದರೀ ಬಾಲಕಿಸನ್ ಯೆಂಬಾತನನ್ನು ತಮ್ಮ ತಮ್ಮ ಮತಕ್ಕೆ ಸೇರಿಸಿಕೊಳ್ಳಬೇಕೆಂದು ಯತ್ನಿಸುತ್ತಿದ್ದರೆಂದು ಉತ್ತರದೇಶದ ಪತ್ರಿಕೆಯೊಂದು ತಿಳಿಸುತ್ತದೆ.

Leave and appointment.—ಬಂಗಾಳೆ ಲೆಫ್ಟಿನೆಂಟ ಗವರ್ನರವರಾದ ಸರ್ ಸ್ಟುವರ್ಟ ಬೇಲಿಯವರು ತಮ್ಮ ಕೆಲಸದಿಂದ ನಿವೃತ್ತರಾಗುವದಕ್ಕೆ ಪೂರ್ವಭಾವಿಯಾಗಿ ಆರುತಿಂಗಳ ಫರ್ಲೋರಜಾ ಪಡೆಯಬೇಕೆಂದು ಯೋಚಿಸುತಲಿರುವರೆಂತಲೂ, ಅವರ ಕೆಲಸವನ್ನು ಹೈದರಾಬಾದ ರೆಸಿಡೆಂಟರಾದ ಮೆ|| ಫಿಲಿಪ್ ಹ್ಯಾಟ್ರಿಕ್ಯವರು ನೋಡುವರೆಂತಲೂ, ಇವರ ಕೆಲಸಕ್ಕೆ ಆಕ್ಟಿಂಗ್ ಫಾರಿನ್ ಸೆಕ್ರೆಟರಿಯಾದ ಮೆ|| ಕನ್ನಿಂಗ್ಹ್ಯಾಂಯವರು ನೇಮಕರವಮಾಡಲ್ಪಡುವರೆಂತಲೂ ಸರಿಯಾದ ಮಾರ್ಗದಿಂದ ತಿಳಿಯಬರುವದಾಗಿ ದಬಿಕ್ ಟ್ರ್ಯಾಂಸ್ ಪತ್ರಿಕೆ ಹೇಳುತ್ತದೆ.

A question of law.—ಈ ತಿಂಗಳ ೩ ನೇ ತಾರೀಖಿನೊಳು, ಹುಗ್ಲಿ ಡಿಸ್ಟ್ರಿಕ್ಟ ಕೋರ್ಟಿನಲ್ಲಿ ಕಾನೂನ್ ಸಂಬಂಧವಾದ ಒಂದು ಪ್ರಬಲ ವಿಷಯ ವಿಚಾರ ಮಾಗುವದೇನಂದರೆ,— ಗೌರಿ ಬಾಬು ಎಂಬ ಕ್ಷತ್ರಿಯನೊಬ್ಬನು ಈಶ್ವರಬಾಬು ಎಂಬಾತನ ಜಿಂದಗಿಯ ವಿಚಾರಣಾಧಿಕಾರವಂ ಪಡೆಯುವದಕ್ಕಾಗಿ ಅರ್ಜಿ ಕೊಟ್ಟನು. ಸದರೀ ಜಿಂದಗಿ ಯೆರಡು ಲಕ್ಷ ರೂಪಾಯಿಗಳುಳ್ಳದ್ದು. ಇದರಲ್ಲಿ ನಿರ್ಣಯಿಸಲ್ಪಡಬೇಕಾದ ಅಂಶವೇನಂದರೆ, ಈ ಜಿಂದಗಿಗೆ ಬಕ್ಷ್ಯದಾರನು ತಂದೆಯ ಸೋದರಿಯ ಮಗಳ ಮಗನೇ ಅಲ್ಲವೆ ತಂದೆಯ ಸೋದರಮಾವನ ಮೊಮ್ಮಗನೆಯೆಂಬದು. ಉಭಯ ಪಕ್ಷದವರ ವಾದಕ್ಕೂ ಮಿತಾಕ್ಷರವೆಂಬ ಧರ್ಮಶಾಸ್ತ್ರವೇ ಆಧಾರವಾಗಿರುತ್ತದೆ.

Celebration of the Queen's birthday.—ಮಹಾರಾಜ್ಞೀ ಯವರ ವರ್ಷವರ್ಧಂತಿ ದಿನ ಪ್ರಾತಃಕಾಲ ಭಾವನಗರ ಸಂಸ್ಥಾನದಲ್ಲಿ ೧೦೧ ತೋಪುಗಳು ಹಾರಿಸಲ್ಪಟ್ಟವಲ್ಲದೆ ಸೈನ್ಯಗಳ ರಿವ್ಯೂ ಸಹ ನಡೆಯಿತು. ಪಲಾಟಗಳಿಗೆಲ್ಲ(?) ರಜಾ ಕೊಡಲ್ಪಟ್ಟಿತು. ಆ ದಿನ ಸಾಯಂಕಾಲ ಮಹಾರಾಜರವರೂ ಸಂಸ್ಥಾನದ ಉದ್ಯೋಗಸ್ಥರೂ ವಿಕ್ಟೋರಿಯಾ ಪಾರ್ಕೆಂಬ ತೋಟದಲ್ಲಿ ಸೇರಿ, ಹೊಸದಾಗಿ ಒಂದು ತೋಪು ಹಾಕಿಸಿದರು. ಅದರಲ್ಲಿ ಮಹಾರಾಜರವರು ತಮ್ಮ ಕೈಯಿಂದ ಒಂದು

ಹೊಸಿಯನ್ನು ನಾಟಿದರು. ಸದರೀ ಹೊಸ ಹೊಲಿನಲ್ಲಿ ಆಯಾ ಜಾತಿಯವರಿಗೆ ಫಲಾಹಾರ ಸ್ಥಾನಗಳಂ ಕಲ್ಪಿಸುವದಕ್ಕಾಗಿ ಮಹಾ ರಾಜರವರು ೫,೦೦೦ ರೂಪಾಯಿಗಳ ಖರ್ಚು ಮಾಡು ಹುಕಹುಕುಂ ಕೊಟ್ಟರು.

LOCAL AND PROVINCIAL NEWS.

ಸ್ವದೇಶವರ್ತಮಾನಾಂತರ ವೃತ್ತಾಂತಗಳು.

Re-opening of the College.—ಬೇಸಿಗೆ ಕಾಲದ ವ್ರಯುಕ್ತ ಕೊಡಲ್ಪಟ್ಟಿದ್ದ ರಜಾ ಪೂರೈಸಿದ್ದರಿಂದ ಈದಿನದ ಮೊದಲು ಸೆಂಟ್ರಲ್ ಕಾಲೇಜ್ ಮೊದಲ ವಿಷಸ್ತ ವಾಡಲ್ಪಟ್ಟ ಪಾಠವು ಚರ್ನಗಳಿಗೆ ಉಪಕ್ರಮವಾಗುವದು.

The weather.—ಈಚೆಗೆ ಒಂದುವಾರದ ಹಿಂದೆ ಯಾವಾಗಲೂ ಮೋಡ ಮಸುಕುತಲಿದ್ದ, ಆಗಿಂದಾಗ್ಯೆ ಸ್ವಲ್ಪ ತುಂತುರು ಮಳೆಯೂ ಬೀಳುತಲಿದೆ. ಒಲವಾದ ವರ್ಷವಿಲ್ಲದ್ದು ಸೆಖೆ ಬ್ಯಾಯಕ ತಪ್ಪಿತೆಂದು ಹೇಳಬಹುದು. ಕೆರೆ ಕುಂಟೆಗಳಲ್ಲಿ ನೀರು ಸ್ವಲ್ಪವಾಗಿದೆ. ಪದಾರ್ಥಗಳ ಧಾರಣೆಗಳು ಸ್ವಲ್ಪವೂ ಇಳಿಯಲಿಲ್ಲದ್ದು ಕಾಳಗಾಯ್ಯಪದಾರ್ಥಗಳು ಅಲ್ಲಿಯಲ್ಲಿ ಇರಲೇ ಇರುತಿವೆ. ದನಗಳಿಗೆ ನೀರೂ ಮೇವೂ ಸಾಮಾನ್ಯವಾಗಿ ಸಿಕ್ಕುತಿವೆ.

Appointments to the District office.—ಬೆಂಗಳೂರು ಡಿಸ್ಟ್ರಿಕ್ಟ್ ಜಂಟಿಮಾಜಿಸ್ಟ್ರೇಟ್ ಹುದ್ದೆ ಮುನಿಸು ವೆ|| ಸಜಾ ಕೈರನಸವರಿಗೆ ತುರ್ತು ಕೆಲಸ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಶನರ್ ಫ್ರೊರ್ಸ್ಟ್ ರ ಕೆಲಸವಾದದರಿಂದ ಅವರ ಕೆಲಸವು [illegible] ಸಾಹೇಬರಿಗೆ ಕೊಡಲ್ಪಟ್ಟಿತೆಂಬ, ಅವರ ಕೆಲಸವು ರೆಲಿವ್ ಕಾನೆಸ್ಟಂಟ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಿಗೆ ಕೊಡಲ್ಪಟ್ಟಿತೆಂತಲೂ ಕೇಳುತ್ತೇವೆ.

Census Commissioner.—ಬರುವ ಫೆಬ್ರವರಿ ತಿಂಗಳಲ್ಲಿ ನಡೆಯತಕ್ಕ ಖಾನೇಷುಮಾರಿಯು ಈ ಸಂಸ್ಥಾನದಲ್ಲಿಯೂ ಜನರ ಬೇಕಾಗಿರುವದರಿಂದ ತನರ್ಪ ಮುಂಚಿತವಾಗಿ ನಡೆಸಬೇಕಾದ ಏರ್ಪಾಡುಗಳನ್ನು ಕುರಿತು ಆಲೋಚಿಸತಕ್ಕಬಗ್ಗೆ ಮಿ|| ವಿ. ಎನ್. ನರಸಿಮ್ಮಯ್ಯಂಗಾರ್ಯರವರನ್ನು ಮೈಸೂರು ಸರ್ಕಾರದವರು ಸೆನ್ಸಸ್ ಕಮಿಷನರಾಗಿ ವೇತರದಿಂದಿ ಉದ್ದೇಶನುಂಗುದ್ದಕ್ಕೆ ನಡೆಯತಕ್ಕ ಕಾನ್‌ಫರೆನ್ಸ್ಗೆ ಕಳುಹಿಸಿದ್ದಾರೆ. ಸೆನ್ಸಸ್ ಕಮಿಷನರ ಜವಾಬ್ದಾರಿಯು ಇನ್ನೂ ಗೊತ್ತಾಗಿಲ್ಲದ್ದು ಮಿಸ್ಟರ್ ನರಸಿಮ್ಮಯ್ಯಂಗಾರ್ಯರವರ ವಿಷಯವು ಇಷ್ಟು ಕಾಲದ ಮೇಲೆ ದೇರದ ಚಿತ್ತಕ್ಕೆ ಬಂದು ಅವರನ್ನು ಅನುಗ್ರಹಿಸಬೇಕೆಂಬ ಸಂಕಲ್ಪ ಬಂದು ದಾಬಗ್ಗೆ ನಾವು ಸಂತೋಷಿಸುವೆವು.

A murder.—ಮುಳಬಾಗಲು ತಾಲ್ಲೂಕು ನಡೇವರಾಮಸಂದ್ರವೆಂಬ ಗ್ರಾಮದಲ್ಲಿ ಒಬ್ಬ ಬ್ರಾಹ್ಮಣನು ತನ್ನ ಭಾರ್ಯೆಯು ರೂಪವತಿಯಾಗಿಲ್ಲದೆ ಬಹಳ ಕರಿಗೆ ಮುದ್ದದರಿಂದ ಅವಳು ತನ್ನ ವಿರೋಧಿಬ್ರಾಹ್ಮಣರಿಗೆ ಅನುಸರಿಸಿ ಭಾವಿಸಿ ಅವಳನ್ನು ವನಕೆಯಿಂದ ಕಡಿದುಹಾಕಿ ತನ್ನ ಅಣ್ಣನಿಗೆ ತಿಳಿಸಿದನಂತೆ ಬಳಿಕ ಅಣ್ಣನು ತಮ್ಮನೊಡಗೂಡಿ ಅವಳನ್ನು ಸೋದರ ನಾತ್ಸಲ್ಯದಿಂದವನು ಬಚಾಯಿಸುವದಕ್ಕಾಗಿ ಅವನೊಡನೆ ಸದರೀ ಮುರ್ದೆಯನ್ನು ತಮ್ಮ ಮನೆಯ ಹಿತ್ತಿಲಿನಲ್ಲಿ ಹಿಪ್ಪೆಯ ಕೆಳಗೆ ಅದರಲ್ಲಿ ಹೂಳಿಟ್ಟರು. ಈ ಕೃತ್ಯವು ಯಿರಡು ಮೂರು ದಿನಗಳವರೆಗೆ ಹೊರಗಾಗದೆ ಗೂಢವಾಗಿತ್ತು. ಹೀಗಿರುವಲ್ಲಿ ಸದರೀ ಮುರ್ದೆಯ ಕೈಯೊಂದನ್ನು ನಾಯಿಯು ಕೆಡೆಯೆಳೆದುಕೊಂಡು ಹೊರಗೆ ಹಾಕಿತು. ಅದೇಪ್ರಕಾರದಲ್ಲಿರತಕ್ಕ ವೃತ್ತಾಂತವೆಲ್ಲ ಹೌತಾರ ಮನೆಯವರಿಗೆ ತಿಳಿಯಬರಲು ಅವರು ಆಗ ಹೋಗನವೇಲೆ ಪೋಲೀಸಿನವರಿಗೆ ರಿಪೋರ್ಟನ್ನು ಮಾಡಿದ್ದರಮೇಲೆ ಆ ಅಣ್ಣತಮ್ಮಂದಿರಿಬ್ಬರನ್ನು ಹಿಡಿದಿದ್ದಲ್ಲದೆ ಅವರ ಮನೆಯನ್ನು ಅಗೆಯಾಗಿ ಹುಡುಕಲಾಗಿ ಮುರ್ದೆಯ ಇತರ ಭಾಗಗಳೆಲ್ಲವು ದೊರಕಿದವು. ಮೊಕದ್ದಮೆಯು ಈಗ ಮೊದಲು ವಿಚಾರಣೆಯಲ್ಲಿದೆ. ಮೋಹವು ಎಂತಾ ಅವಿವೇಕವಾಗಿದ್ದರು ಮನುಷ್ಯನನ್ನು ಏಳಪಡಿಸದಿರುವದಿಲ್ಲವು.

Defamation.—ಅನುಮತಾಂತರಾದ ಮತ್ತು ತಾರತಮ್ಯಜ್ಞಾನವಿಲ್ಲದ ಬಾಲಕರನ್ನೆಲ್ಲ ಸ್ವರೂಪ ಯೋಗ್ಯತೆ ಇಲ್ಲದಿರುವಾಗಜಾಬ್ದಾರಿಯು ಹುದ್ದೆತಕ್ಕ ಕೆಲಸಗಳಲ್ಲಿದೆ ಎಕರಸ್ಮಾದುವ ತಾಲ್ಲೂಕು ಕುರ್ಕೃತ್ಯಂತರಕೆಟ್ಟದ್ದು ಜೀರೋಪಚರವಾರದು. ಇದು ಮತ್ತೆ ಈಗಿನ ಅಮಲ್ದಾರರಾದ್ಯಕ್ಕೆ ಬಗ್ಗೆಯುಂ ಬಾಲಕರಾಗಿಯೂ ಅನಿರೀಕ್ಷಿತವಾಗಿ ಲಭಿಸಿದ ಅಧಿಕಾರ ಭಾಗ್ಯಗಳಿಂಯುಕ್ತಾಯುಕ್ತ ವಿವೇಚನೆ ಇಲ್ಲದೆ ಉಪಯೋಗಿಸತಕ್ಕವರಾಗಿಯೂ ಸ್ವಪ್ರತಿಷ್ಟೆಯಿಂದ ಪರರು ಅತ್ಯಂತ ನೀಚರನ್ನಾಗಿ ನೋಡುವುದು ಉಪಾಸೀನರಾಗಿಯೂ ಇರುತ್ತಾರೆ. ಇಂತವರು ತಾಲ್ಲೂಕುಗಳಲ್ಲಿ ನಡೆದ ಫಿರ್ಯಾದುಗಳು ಕ್ರಿಮಿನಲ್ ಕೋರ್ಟುಗಳ ಕಡತ ಬಾರದೆ ನ್ಯಾಯಬುದ್ಧಿಯಿಂದ ಕೊಡುವದಿಲ್ಲವು. ಗತವಾರದಲ್ಲಿ ಕ್ರಿಮಿನಲ್ ಮೊಕದ್ದಮೆಯ ವೈಶ್ಯರತ್ನ ಕಡೆಗೆ ಅವರ ವ್ಯವಹಾರವನ್ನು ತಿಳಿಸುವೆನೆಷ್ಟು ಈಚೆಗೆ ದೇವನಹಳ್ಳಿ ತಾಲ್ಲೂಕು ಅಮಲ್ದಾರರು ನಂಜುಂಡಪ್ಪ ಒಬ್ಬ ಪೂಜಾರಿಯನ್ನು ತಮ್ಮ ಕಾರ್ಯಕ್ರಮದಿಂದ ಬೂಟ್ಸಿನಿಂದ ಒದೆದರೆಂತಲೂ ಅದರಮೇಲೆ ಅವನು ಬೆಂಗಳೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಲ್ಲಿ ಕ್ರಿಮಿನಲ್ ಚಾರ್ಜ್ ಪ್ರಾಸಿಕ್ಯೂಷನ್ ಮಾಡಿದನೆಂತಲೂ, ಮ್ಯಾಜಿಸ್ಟ್ರೇಟರವರು ಫಿರ್ಯಾದಿಯ ಕೈಯಿಂದ ತೆಗದುಕೊಂಡು ಮೊಕದ್ದಮೆಯನ್ನು ಅವರ್‌ಸೀನ ನಾಡಿದರೆಂತೆಲೂ ತಿಳಿಯಬರುತಿದೆ. ಇದರ ವ್ಯವಹಾರವನ್ನು ಮುಂದಿನ ವಾರದಲ್ಲಿ ತಿಳಿಸುವೆವು.

A good selection.—ವಿದ್ಯಾಭ್ಯಾಸದ ಇಲಾಖೆ ಸೆಕ್ರಿಟರಿಯವರ ಆಫೀಸ್ ಮ್ಯಾನೇಜರ್ ಮಿಸ್ಟರ್ ಚೆನ್ನಯ್ಯನವರಿಗೆ ಆರ್ಕಿಯಾಲಾಜಿಕಲ್ ಇಲಾಖೆಯಲ್ಲಿ ಶಾಸನಗಳನ್ನು ಫೋಟೋಗ್ರಾಫ್ ತೆಗೆಯತಕ್ಕ ಕೆಲಸ ಒಂದು ಭಾರ್ಗವಿಂದಲೂ ಇರುತಲಿತ್ತಲ್ಲದೆ ಅವರಿಗೆ ಅದಕ್ಕಾಗಿ ಪ್ರತ್ಯೇಕ ರುಸುಂ ಸಹ ಕೊಡಲ್ಪಡುತಲಿತ್ತು. ಮಿ|| ರೈಸ್ ಯವರಿಗೆ ವಿದ್ಯಾಭ್ಯಾಸದ ಇಲಾಖಾ ಅಧಿಕಾರ ತಪ್ಪಿಹೋದದರಿಂದ ಆರ್ಕಿಯಾಲಾಜಿಕಲ್ ಕೆಲಸಗಳಿಗೆ ಫೋಟೊಗ್ರಾಫರೊಬ್ಬರನ್ನು ಪ್ರತ್ಯೇಕ ನಿಯಮಿಸಬೇಕಾದ ಅವಶ್ಯಕತೆ ಯುಂಟಾಯಿತು. ಮಿ|| ಚೆನ್ನಯ್ಯನವರು ಫೋಟೋಗ್ರಾಫ್ ತೆಗೆಯುವದರಲ್ಲಿ ಬಹಳ ಅನುಭವಶಾಲಿಯಾಗಿಯೂ ಚಿರಕಾಲ ಮಿ|| ರೈಸ್‌ಯವರ ತಾಬೆಯಲ್ಲಿದ್ದು ಅವರ ಕೆಲಸ್ವಭಾವಗಳನ್ನೆಲ್ಲ ಅರಿತವರಾಗಿಯೂ ಇರುವದರಿಂದ ಸದರೀ ಕೆಲಸಕ್ಕೆ ಅವರನ್ನೇ ಮಿಸ್ಟರ್ ರೈಸ್‌ಯವರು ಚುನಾಯಿಸಿ ಮೊಕರರ್ಮಾಡಿದರಲ್ಲದೆ ಅವರಿಗೂ ಅವರಲ್ಲೀ ಇರಬೇಕೆಂಬ ಕುತೂಹಲವು ಬಹಳ ವಿದ್ದಂತೆ ತೋರುತಿದೆ. ಈ ಏರ್ಪಾಡಿನಿಂದ ಮಾಡಲ್ಪಡಲು ಮ್ಯಾನೇಜರ್‌ಕೆಲಸವು ಖಾಲಿಯಾದದರಿಂದ ಈಗಿನ ಸೆಕ್ರಿಟರಿಯವರಾದ ಮಿ|| ಬಾಬಾಯವರು ಲೆಜಿಸ್ಲೇಟಿವ್ ಇಲಾಖಾ ಟ್ರಾನ್ಸ್‌ಲೇಟರಾದ ಮಿ|| ವಾಸುದೇವರಾಯರು ಚುನಾಯಿಸಿ ಗವರ್ನಮೆಂಟಿನವರಿಗೆ ಸಿಫಾರಸ್ಸು ಮಾಡಲು ಅವರು ಅದಂ ಮಂಜೂರ್ಮಾಡಿದರು. ಮಿ|| ವಾಸುದೇವರಾಯರು ಈದಿನ ತಮ್ಮ ಹೊಸ ಕೆಲಸದ ಚಾರ್ಜನ್ನು ಮಿ|| ಚೆನ್ನಯ್ಯನವರಿಂದ ತೆಗೆದುಕೊಳ್ಳುವರು. ೧೮೮೮ನೇ ಇಸವಿಯಲ್ಲಿ ಲೆಜಿಸ್ಲೇಟಿವ್ ಇಲಾಖೆಯು ಹೊಸದಾಗಿ ಸ್ಥಾಪಿಸಿಲ್ಪಟ್ಟ ಕಾಲದಲ್ಲಿ ಸೆಂಟ್ರಲ್ ಕಾಲೇಜ್ ಪ್ರಿನ್ಸಿಪಾಲರಾದ ಮಿ|| ಕುಕ್‌ಯವರ ಸಿಫಾರಸ್ಸಿನಮೇಲೆ ಸಾಬಕ್ ಲೆಜಿಸ್ಲೇಟಿವ್ ಸೆಕ್ರಿಟರಿಯವರಾದ ಮಿ|| ಮಂಕು ವರದಯ್ಯಂಗಾರ್ಯರವರು ಪ್ರಕೃತ ಟ್ರಾನ್ಸ್‌ಲೇಟರ್ ಕೆಲಸದಲ್ಲಿ ಮಿ|| ವಾಸುದೇವರಾಯರು ಮೊಕರರ್ಮಾಡಿದರು. ಇವರು ಕಾಲೇಜಿನಲ್ಲಿ ಎಫ್.ಏ. ಕ್ಲಾಸ್ ತರಗತಿಯಲ್ಲಿ ಓದುತಲಾಗಿದ್ದ ಕಾಲದವರೆಗೆ ಇವರು ಮಾಡಿದ ಕ್ಲಾಸ್ಫಸ್ಟ್‌ವಾದ ನೌಕರಿಯು ಅವರ ತರಗತಿಯಿಂದ ಶೀಘ್ರವಾಯೂ ಗತಕ್ಕ ಬಾಲಕರ ಸಂಖ್ಯೆಯಿಂದ ವ್ಯಕ್ತವಾಗದಿರಲಿಲ್ಲವು. ಇವರು ಸ್ವಭಾವತಃ ಉಪಶಾಂತರಾಗಿಯೂ ಬಹಳ ಸಮರ್ಥರಾಗಿಯೂ ಇರುವದರಿಂದ ಇವರು ನೌಕರಿಮಾಡಿದ ಇಲಾಖೆಗಳಲ್ಲೆಲ್ಲ ತಮ್ಮ ಮೇಲ್ಪಟ್ಟ ಅಧಿಕಾರಿಗಳಿಗೆ ಸುಪ್ರೀತಿಯನ್ನುಂಟುಮಾಡಿ ಅವರ ಪ್ರೀತಿ ವಿಶ್ವಾಸಗಳಂ ಸಂಪೂರ್ಣವಾಗಿ ಸಂಪಾದಿಸಿರುತ್ತಾರಾಗಿ ಮುಂದೆಯೂ ವಿದ್ಯಾಭ್ಯಾಸದ ಇಲಾಖಾ ಸೆಕ್ರಿಟರಿಯವರ ನಂಬಿಕೆಗೂ ವಿಶ್ವಾಸಕ್ಕೂ ಪಾತ್ರರಾಗದೆ ಹೋಗಲಾರರು. ಇವರು ಅವರುದಾರಿ ಸನ್ನಿಹಿತರಲ್ಲಿ ಶೀಘ್ರವೇಯಾಗಿರುವದರಿಂದ ಸಮಯಬಂದಕಾಲದಲ್ಲಿ ಇವರ ಯೋಗ್ಯತೆಯನ್ನೂ ಸುಗುಣಗಳನ್ನೂ ಮಿ|| ಬಾಬಾಯವರು ಗವರ್ನಮೆಂಟಿನವರ ಅವಧಾನಕ್ಕೆ ತರುವದರಲ್ಲಿಷ್ಟು ನಾವು ಸ್ವಲ್ಪವೂ ಸಂಶಯಿಸಲಾರೆವೆಂದೇಳುತ್ತೇವೆ. ಮುಂದೆ ಇವರಿಗೆ ಮಾಹೆಯಾನಾ ೭೦ ರೂಪಾಯಿಗಳ ಸಂಬಳ ಕೊಡಲ್ಪಡುವದು.

THE MYSORE GAZETTE.

ಮೈಸೂರು ಗೆಜೆಟ್.

ಶ್ರೀಮನ್ ಮಹಾರಾಜರವರ ಹುಜೂರ್ ಸರ್ಕಾರದಿಂದ ಹೊರಟಿರುವ ಇಸ್ತಿಹಾರ್‌ನಾಮೆಗಳು.

ನಂ. ೬೮ ತಾ|| ೨೦ ನೇ ಮೇ.—ತೀರ್ಥಹಳ್ಳಿ ತಾಲ್ಲೂಕ್ ಅಮಲ್ದಾರ್ ಮಂಕ ಸುಬ್ಬಯ್ಯನವರು ಅನುಭವಿಸಿಕೊಳ್ಳುವ ತಾರೀಖ್ ಮೊದಲು ಆರು ವಾರಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಶಿವಮೊಗ್ಗಾ ಡಿ|| ಕ|| ರ ಆಫೀಸ್ ಜೂನಿಯರ್ ಹೆಡ್ ಮುನ್ಷಿ ಎನ್. ಸುಬ್ಬರಾಯರವರು ಅಮಲ್ದಾರರ ಗೈರ್‌ಹಾಜರೀ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ತೀರ್ಥಹಳ್ಳಿ ತಾಲ್ಲೂಕ್ ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ಮೊಕರರ್.

ನಂ. ೭೦, ತಾ|| ೨೨ ನೇ ಮೇ.—ಕೋಲಾರ ಡಿ|| ಅ ಕಮಿಷನರ್ ಮತ್ತು ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ|| ಕುಪ್ಪುಸ್ವಾಮಿ ಮೊದಲಿಯಾರವರು, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೩೫೨ ನೇ ಸೆಕ್ಷನ್ ನಿಬಂಧನೆಗಳನ್ನನುಸರಿಸಿ ಫಿರ್ಯಾದಿಗಳ ಮತ್ತು ಸಾಕ್ಷಿಗಳ ಸಾಕ್ಷ್ಯವನ್ನು ಸ್ವದಸ್ತೂರ್ ಇಂಗ್ಲಿಷ್ ಬಾಷೆಯಲ್ಲಿ ತೆಗದುಕೊಳ್ಳುವದಕ್ಕೆ ಹುಕುಂ ಕೊಡಲ್ಪಟ್ಟಿರುತ್ತಾರೆ.

ನಂ. ೭೧, ತಾ|| ೨೩ನೇ ಮೇ.—ಎರೇ ಕ್ಲಾಸ್ ಅಸಿಸ್ಟೆಂಟ್ ಅಸಿಸ್ಟೆಂಟ್ ಎನ್. ಆರ್. ಪೊನ್ನುಸಾಮಿ ಪಿಳ್ಳೆಯವರು ಅರ್ಹತೆಯಿಂ ಪಡೆಯುವದಕ್ಕೆ ಬೇಕಾದ ಪರೀಕ್ಷೆಯಂ ಕೊಟ್ಟು ತೇರ್ಗಡೆಯಾಗಿರುತ್ತಾರಾಗಿ, ೧೮೯೦ ನೇ ಇಸವಿ ಮಾರ್ಚ್ ೨ ನೇ ತಾರೀಖ್ ಮೊದಲು ೨ ನೇ ತರಗತಿಯಿಂದ ಒಂದನೇ ತರಗತಿ ಅಸ್ಪಿಟಲ್ ಅಸಿಸ್ಟೆಂಟ್ ಕೆಲಸಕ್ಕೆ ಬಡ್ತಿ ಮಾಡಲ್ಪಟ್ಟಿರುತ್ತಾರೆ.

ನಂ ೩೩, ತಾ|| ೨೩ ನೇ ಮೇ.—ಬಿ. ಡಿ. ರಾಘವೇಂದ್ರರಾವ್, ಎಲ್. ಎಂ. ಎಸ್. ಯವರು ೧೮೯೦ ನೇ ಏಪ್ರಿಲ್ ೨ನೇ ತಾರೀಖ್ ಮೊದಲು ಆರು ತಿಂಗಳ ಕಾಲ ಅಜಮಾಯಿಷೀ ತರೀಖ್, ೨ ನೇ ಗ್ರೇಡ್ ಅಸಿಸ್ಟೆಂಟ್ ಸರ್ಜನ್ಯರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ನಂ. ೩೪, ತಾ|| ೨೩ನೇ ಮೇ.—ಕ್ಯೋಣ್ ಪೇಟೆ ತಾಲ್ಲೂಕ್ ಅಮಲ್ದಾರ್ ನೈಜಾಮುದ್ದೀನ್ ಅಲೀಖಾನರು ಅನುಭವಿಸಿಕೊಳ್ಳುವ ತಾರೀಖ್ ಮೊದಲು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಚೆನ್ನಪಟ್ಟಣ ಡೆಪ್ಯುಟಿ ಅಮಲ್ದಾರ್ ಬಾದಾಮಿ ಕೃಷ್ಣರಾಯರು, ತಮ್ಮ ಸ್ವಂತ ಕೆಲಸದೊಂದಿಗೆ ನಿಜಾಮುದ್ದೀನ್ ಅಲೀಖಾನರು ರಜಾದಲ್ಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಕ್ಯೋಣ್‌ಪೇಟೆ ತಾಲ್ಲೂಕು ಚಾರ್ಜಿನಲ್ಲಿರತಕ್ಕದ್ದು.

LEGAL INTELLIGENCE.

ನ್ಯಾಯ ವಿಷಯಕ ನಿರ್ಣಯಗಳು.

INDIAN CASES IN ENGLAND.

ಶ್ರೀಮನ್ಮಹಾರಾಜ್ಞೀಯವರ ಪ್ರಿವಿ ಕೌನ್ಸಿಲ್‌ನಲ್ಲಿ ವಿಮರ್ಶೆಯಿಂದ ಇಂಡ್ಯಾದೇಶದ ಮೊಕದ್ದಮೆಗಳು.

ವಾದಿ ದರ್ಬಂಗಾ ಮಹಾರಾಜರವರು, ಪ್ರತಿವಾದಿ ದರ್ಬಂಗಾ ಮ್ಯುನಿಸಿಪಾಲಿಟಿಯು ಪ್ರಸಿದ್ಧರು. ಈ ಮೊಕದ್ದಮೆಯು ಮೊಜಫರ್‌ಪೂರ್ ಡಿಸ್ಟ್ರಿಕ್ಟ್ ಜಡ್ಜಿಯವರ ಫೈಸಲನ್ನು ರುದ್ದು ಮಾಡಿ ೧೮೮೮ ನೇ ಇಸವಿ ಜನವರಿ ೬ರ ನೇ ತಾರೀಖಿನಲ್ಲಿ ಬಂಗಾಳ ಹೈಕೋರ್ಟಿನವರು ಕೊಟ್ಟ ಫೈಸಲಿನಮೇಲೆ ಮಾಡಲ್ಪಟ್ಟಅಪೀಲಾಗಿರುತಿದೆ. ಅಪೀಲ್ ವಾದಿಯ ತರಫ್ ಮಿ|| ಕೌವಿ ಮತ್ತು ಮಿ|| ಬ್ರಾನ್ಸನ್ ಇವರಿಬ್ಬರು ಹಾಜರಾಗಿದ್ದರು. ಅಪೀಲ್ ಪ್ರತಿವಾದಿಯ ತರಫ್ ಮಿ|| ರಾಬರ್ಸನ್ ಮತ್ತು ಮಿ|| ಮೆರ್ಡಿನ್ ಯವರು ಹಾಜರಾಗಿದ್ದರು. ಪ್ರಸಕ್ತ ಮೊಕದ್ದಮೆಯು ಸ್ವಲ್ಪಕಾಲದ ವರೆವಿಗೆ ಉಭಯ ಕಕ್ಷಿಯವರು ವಾದಿಸಿದ ಬಳಿಕ ನಿರ್ಧಾರಿತೀಯವಾದ ವಿಚಾರವೊಂದು ತಲೆದೋರಿತೆನಂದರೆ, ಈಗ ದರ್ಬಂಗಾ ಮ್ಯುನಿಸಿಪಾಲಿಟಿಯವರ ಸ್ವಾಧೀನದೊಳಗಿರುವ ತುಂಡು ಜಮೀನ್ ಅಪೀಲ್ ವಾದಿಗೆ ಸಂಬಂಧಿಸಿದ್ದಾಗಿರುವದರಿಂದ ೧೮೭೮ ನೇ ಇಸವಿಯಲ್ಲಿ ದರ್ಬಂಗಾ ಮಹಾರಾಜರವರು ಮೈನರಾಗಿದ್ದಾಗ ಅವರ ಆಸ್ತಿಗಳ ವಿಚಾರಣೆಕರ್ತರಾಗಿ ಯೇರ್ಪಟ್ಟವರ ಮೂಲಕ ನ್ಯಾಯವಾಗಿ ಹೊಂದಲ್ಪಟ್ಟದೆ, ಎಂಬದು. ಸದರೀ ಜಮೀನನ್ನು ಮ್ಯುನಿಸಿಪಾಲಿಟಿಯವರು ೬೦೦ ರೂಪಾಯಿಗಳ ತನಕ ಖರ್ಚು ಮಾಡಿ ಪಬ್ಲಿಕ್ ಘಾಟ್ ಅಂದರೆ ಜನರು ದಡಗಿನಿಂದ ಇಳಿಯುವದಕ್ಕಾಗಿ ಸೋಪಾನವಂತೆ ಒಂದುಕಟ್ಟಡವನ್ನು ಕಟ್ಟಿಸಿದರು. ಈಗ ಸರ್ ರಿಚರ್ಡ್ ಕೌಚ್ ಯೆಂಬವರು, ಹೈಕೋರ್ಟಿನವರು ಮತ್ತು ಡಿ.ಜಡ್ಜಿಯವರು ಮಾಡಿದ್ದ ಫೈಸಲನ್ನು ರದ್ದುಮಾಡಿ, ವಾದಿಯು ಪ್ರತಿವಾದಿಗೆ ಸದರೀ ಘಾಟ ನಿರ್ಮಾಣದಬಗ್ಗೆ ಮ್ಯುನಿಸಿಪಾಲಿಟಿಯವರು ಖರ್ಚುಮಾಡಿದ್ದ ೬೦೦ ರೂಪಾಯಿಗಳನ್ನು ಕೊಟ್ಟು ಜಮೀನನ್ನು ಸ್ವಾಧೀನ ಪಡಿಸಿಕೊಳ್ಳತಕ್ಕದ್ದೆಂತಲೂ, ಕೆಳಗಿನ ಯೆರಡುಕೋರ್ಟುಗಳ ಖರ್ಚು ಈ ಕೋರ್ಟಿನ ಅಪೀಲ್ ಖರ್ಚು ಸಹ ವಾದಿಗೆ ಪ್ರತಿವಾದಿ ಮೂಲಕ ಸಲ್ಲತಕ್ಕದ್ದೆಂತಲೂ ನಿರ್ಣಯಿಸಿದರು.

SUMMARY OF NEWS.

ವೃತ್ತಾಂತಸಂಗ್ರಹವು.

ಆಸ್ಟ್ರಿಯಾದೇಶದ ಚಕ್ರವರ್ತಿಗಳು ಆಕ್ಸ್ಯಂತ ಬಡವರಾದವರಲ್ಲಿ ೧೨ ಜನಗಳನ್ನು ಕರೆಯಿಸಿ ಅವರಿಗೆ ಪಾದಪ್ರಕ್ಷಾಳನಮಾಡಿ ಪ್ರತಿ ಒಬ್ಬರಿಗೂ ಒಂದೊಂದು ಥೈಲಿ ದ್ರವ್ಯವನ್ನು ಕೊಟ್ಟು ಗೌರವಾಗಿ ಕಳುಹಿಸಿದರು. ಇದು ಆದೇಶದ ಅರಮನೆಯಲ್ಲಿ ನಡೆಯತಕ್ಕ ಅನಾದಿಸಿದ್ಧವಾದ ಆಚಾರವಂತೆ.

ಹತ್ತೀಗಿಡದ ಕಡ್ಡಿಗಳಲ್ಲಿ ಸೆಣಬಿನ ನಾರಿನ ಹಾಗೆ ಒಂದು ತರಹಾ ನಾರು ಇರುವಂತೆಯೂ ಅದನ್ನು ಯಂತ್ರ ಸಹಾಯದಿಂದ ಶುದ್ಧಮಾಡಿದರೆ ಥಳಥಳಿಸುವ ಮೃದುವಾದ ರೇಶ್ಮೆ ಧಾರಗಳಂತೆ ಧಾರಗಳು ಸಿಕ್ಕುವದಾಗಿಯೂ ಅಮೆರಿಕಾ ಖಂಡದಲ್ಲಿರುವ ನ್ಯೂಯಾರ್ಕ್ ಕಾರ್ಖಾನೆಗಳಲ್ಲಿ ಇವುಗಳನ್ನು ತಯಾರ್ಮಾಡುವಂತೆಯೂ ತಿಳಿಯಬಂದಿದೆ.

ಕಡ್ ಸಂಸ್ಥಾನಕ್ಕೆ ಸೇರಿದ ಒಬ್ಬ ಜೈನನು ಒಂದು ಬೌದ್ಧ ದೇವಾಲಯವನ್ನು ಕಟ್ಟಿಸುತ್ತೇನೆಂದು ಆಬಗ್ಗೆ ತಾನು ೧೫೦೦ ರೂಪಾಯಿ ಕೊಡುವೆನೆಂದು ಪ್ರವಾದವನ್ನುಂಟುಮಾಡಿ ಅದಕ್ಕಾಗಿ ಇತರರಿಂದ ಸಹಾಯವನ್ನು ಬೇಕ್ಷಿಸಿದನು. ಬೌದ್ಧಮತಾಭಿಮಾನಿಗಳು ೪೦೦೦ ರೂಪಾಯಿಗಳವರೆಗೂ ದ್ರವ್ಯಸಹಾಯ ಮಾಡಿದರು. ಆ ದ್ರವ್ಯವನ್ನು ಅಪಹರಿಸಿಕೊಂಡು ಆತನು ಪರಾರಿ

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಕಾಶನಿಪಿತಸನ್ನೃತ್ಯಸಗಮಾರ್ಗಕರ್ಣಾಟಕಪ್ರಕಾಶನಪರಾಭಿಧಾಪ್ರಥಿತಸಾಹಿತೀಶೋಭಿತಾ॥ ವ್ಯಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ನಿಕಾಮಪರಿಪೋಷಿತಾದಿಶತಿಮಾನಸಾನಂದಂ॥

Vol. XVII | BANGALORE—MONDAY, JUNE 9 1890 | No. 23.

ಸಂಪುಟ ೧೭. | ಬೆಂಗಳೂರು—ಸನ್ ೧೮೯೦ನೇ ಇಸವಿ ಜೂನ್ ೯ ನೇ ತಾರೀಖು ಸೋಮವಾರ. | ಸಂಚಿಕೆ ೨೩.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಸಾಲ್ ೧ಕ್ಕೆ	ಸ್ಥಳೀಯರಿಗೆ ಅಂಚೆಯಿಲ್ಲದೆ	ಪರಸ್ಥಳದವರಿಗೆ ಸಹ ಅಂಚೆ
ಮುಂಗಡವಾಗಿ ಕೊಟ್ಟರೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡ ಕೊಟ್ಟರೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ [illegible]

[illegible]

ಪ್ರಕಟನೆಯ ರಿವಾಜಿ.

ಮೊದಲನೆ ಸರತಿಗೆ ಪಂಕ್ತಿ ಒಂದಕ್ಕೆ ೦—೨—೦

ಎರಡನೆಯ ಸರತಿಗೆ ಪಂಕ್ತಿ ಒಂದಕ್ಕೆ ೦—೧—೦

[illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥವು [illegible] ಸುಲಭವಾಗಿ [illegible] ದವಾಖಾನೆಗಳಿಗೆ ಸಿಗೇ ಕೊಡಲ್ಪಡುವದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಪೋಸ್ಟೇಜ್ ಸಹಿತ ಪ್ರತಿ ಒಂದಕ್ಕೆ ರೂ ೫ 0—0

ಟಿ ಬಿ ವೆಂಕಟಾಚಾರ್,

ಬೆಂಗಳೂರ್, ಅಪ್ಪಾಜಿರಾವ್ ಪೇಟೆ, 11ನೇ ನಂ ಮನೆ

ADVERTISEMENTS

ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರಿಗೇ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

	ರೂ	ಆ	ಪೈ
[illegible]	೫	೦	೦
,, [illegible]	೧	೧	೦
,, [illegible]	೦	೮	೦
,, [illegible]	೧	೨	೦
,, [illegible]	೦	೧೨	೦
,, [illegible]	೦	೪	೦
,, [illegible]	೦	೧	೬
,, [illegible]	೦	೩	೦
[illegible]	೦	೫	೦
[illegible]	೦	೨	೦
[illegible]	೦	[illegible]	೬
[illegible] ಅಮರ [illegible]	೦	೨	೬
೧ ಕಾಂಡ	೦	೧	೦

ಕನ್ನಡ ಗ್ರಂಥಗಳು.

[illegible]	೩	೦	೦
[illegible]	೧	೪	೦
[illegible]	೧	೮	೦
[illegible]	೦	೮	೧
[illegible]	೦	೮	೦
[illegible]	೦	೨	೬
[illegible]	೦	೨	೬
[illegible]	೦	೩	೦
[illegible]	೦	೨	೦
[illegible]	೦	೨	೦
[illegible]	೦	೧	೬
[illegible]	೧	೦	೦
[illegible]	೦	೧೨	೦

ನೋಟೀಸ್.

ಇದರಿಂದ ನಮ್ಮ ಚಂದಾದಾರರಿಗೂ ಇತರರಿಗೂ ಪ್ರಕಟಿಸುವದೇನೆಂದರೆ —

ಸನ್ ೧೮೮೯ನೇ ಇಸವಿ ಡಿಸೆಂಬರ್ ಆಖೈರಿನ ವರೆಗೆ ಚಂದಾ ಬಾಕಿಯನ್ನು ಪೂರಾ ಸಲ್ಲಿಸಿದ್ದ ದಿವಸಕ್ಕೆ ಚಂದಾದಾರರ ಹೆಸರುಗಳನ್ನು ಈಗ ನಾವು ರಿಜಿಸ್ಟರ್ ದಾಖಲೆಗಳನ್ನು [illegible] ಪತ್ರಿಕೆ ಕಳುಹಿಸುತ್ತೇವೆ. ಅವರ ಪ್ರತಿ ಯಾರಿಗಾದರು ಪತ್ರಿಕೆಯ ಅಪೇಕ್ಷೆ ಇಲ್ಲದಿದ್ದರೆ ಅಂತವರು ಕೂಡಲೇ ತಮ್ಮ ಅಭಿಪ್ರಾಯವನ್ನು ಮೂರುಕಾಸಿನ ಕಾರ್ಡಿನಲ್ಲಿ ನಮಗೆ ತಿಳಿಸಬಹುದು. ಪತ್ರಿಕೆಯ ಆವಶ್ಯಕತೆ ಇರತಕ್ಕವರು ಸಾಧ್ಯವಾದಷ್ಟು ಶೀಘ್ರದಲ್ಲಿ ಚಂದಾ ಮೊಬಲಗನ್ನು ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಬೆಂಗಳೂರು,
ತಾ ೫ನೇ ಜನವರಿ
೧೮೯೦.

ಟಿ. ಸಿ. ಶ್ರೀನಿವಾಸಾಚಾರ್,
ಪ್ರೊಪ್ರೈಟರ್,
ಕರ್ಣಾಟಕ ಪ್ರಕಾಶಿಕಾ.

ನೋಟೀಸ್.

ಮನೆಗಳಲ್ಲಿ ಗಿಲಿಟ್ ಮಾಡುವದಕ್ಕೆ ಅನುಕೂಲವಾದ ಬೆಳ್ಳಿ ದ್ರಾವಕವು.

ಈ ಬೆಳ್ಳೀ ದ್ರಾವಕವು ಸ್ವಚ್ಛವಾದ ಬೆಳ್ಳಿ ತಟ್ಟೆಗಳ ಮೇಲೆ, ತಾಮ್ರ, ಹಿತ್ತಾಳೆ ವಗೈರೆ ವಿಶಿಷ್ಟ ಪದಾರ್ಥಗಳ ಮೇಲೂ ಸಹ ಉಜ್ಜುವದರ ಮೂಲಕ ಗಿಲಿಟ್ ಮಾಡುವುದಕ್ಕೆ ಬಹಳ ಉಪಯುಕ್ತವಾದದ್ದಾಗಿರುತ್ತದೆ. [illegible] ದ್ರಾವಕವು ಚಿನ್ನ ಮತ್ತು ಬೆಳ್ಳಿ ಒಡವೆಗಳ ಮಬ್ಬು ತೆಗೆಯುವದಕ್ಕೂ ಅವುಗಳ ಮೆರುಗು ಕೊಡಲಿಕ್ಕೂ ಸಹ ಪ್ರಯೋಜನಕರವಾದದ್ದು. ಇದರಿಂದ ಇತರವಿಧದ ಹೊಳಪಿನಂತಹ ಕಾಂತಿ ಉಂಟಾಗುವದು. ಕನ್ನಡಿ ಬಣ್ಣ ವಸ್ತು ಚೆನ್ನಕ್ಕೆ ಉತ್ಕೃಷ್ಟವಾದ ಮೆರುಗು ಪದಾರ್ಥಗಳ ಉಪಯೋಗದಂತಹ ಕಾಂತಿಯನ್ನು ಉಂಟುಮಾಡುವದರ [illegible] ಬೆಳ್ಳಿ ಬಿಂದಿಗೇ ಸಹರಿ ದ್ರಾವಕವು [illegible] ಕಾರಕವಾದ ಜಿಡ್ಡು ಬೇಕಾದ ವಸ್ತು ಗೊಳ್ಳುವದು. ಇದು ಗಿಲಿಟ್ ಮಾಡುವದಕ್ಕಿಂತ ಒಳ್ಳೆ ಅನ್ವವಾಗಿರುವದು. ಕೂಡಲೇ ಒಂದು ಸೀಸೆಯನ್ನು ತರಿಸಿಕೊಂಡು ಅದರಿಂದ ಯಾವ ಕೆಡಕು ಉಂಟಾಗದುವದನ್ನು ಪರೀಕ್ಷಿಸಿ ನೋಡಬಹುದು.

ಇದರ ಕ್ರಯ ಸೀಸೆ ೧ಕ್ಕೆ ೧—೮—೦

ಚಿನ್ನದ ದ್ರಾವಕವು.

ಇದು ಬೆಳ್ಳಿ, ಹಿತ್ತಾಳೆ, ತಾಮ್ರ ವಗೈರೆ ಪದಾರ್ಥಗಳನ್ನು ಗಿಲ್ಟು ಮಾಡಲಿಕ್ಕೆ ಬಹಳ ಉಪಯುಕ್ತವಾಗಿರುವದಲ್ಲದೆ ಶುದ್ಧವಾದ ಭಂಗಾರದಲ್ಲಿ ತೋರುವಂತಾಗಿರುತ್ತದೆ. ಬೆಳ್ಳಿ ಆಭರಣಗಳನ್ನು ಗಿಲ್ಟು ಮಾಡಲಿಕ್ಕೆ ಈ ದ್ರಾವಕವು ಹೆಚ್ಚು ಪ್ರಯೋಜನಕರವಾಗಿರುವದು.

ಇದರ ಕ್ರಯ ಸೀಸೆ ೧ಕ್ಕೆ ೩—೮—೦

ಬೇಕಾದವರು [illegible] ಬೆಳ್ಳೀ ಕಾರ್ಖಾನೆಯ ಮ್ಯಾನೇಜರಿಗೆ ಬರೆದು ತರಿಸಿಕೊಳ್ಳಬಹುದು.

ದಕ್ಷಿಣಮಹಾರಾಷ್ಟ್ರ ರೈಲ್ವೇ ಕಂಪೆನಿ.

ಸ್ವದೇಶದ ಬಾಬತು ನಾನಾತರದ ಸಾಮಾನುಗಳು.

ಸನ್ ೧೮೯೦ನೇ ಇಸವಿ ಜೂನ್ ೧ನೇ ತಾರೀಖಿನಲ್ಲಿ ಪ್ರಾರಂಭವಾಗುವ ಸಾಲಿಗೆ, ಸ್ವದೇಶದ ಹುಟ್ಟುವಳಿ ಮತ್ತು ತಯಾರೀ ಸಾಮಾನುಗಳ ಸರಬರಾಯಿಬಗ್ಗೆ ದರಖಾಸ್ತುಗಳು ಬರಮಾಡಿಕೊಳ್ಳಲ್ಪಡುವವು.

ದರಖಾಸ್ತುಗಳನ್ನು, ದರಖಾಸ್ತುದಾರರ ಪ್ರತಿನಿಧಿ ಬಾಬು ನಮೂನೆಯಲ್ಲಿ ಬರೆದು ಕಳುಹಿಸತಕ್ಕದ್ದು. ನಾನಾತರದ ಸಾಮಾನುಗಳ ವಿಷಯದಲ್ಲಿ ಸದರೀ ನಮೂನೆಯನ್ನು ಹುಬ್ಬಳ್ಳಿಯಲ್ಲಿ ಇರುವ ಸ್ಟೋರ್ ಕೀಪರರಿಂದಲೂ, ಕಾಗದ ವಗೈರೆಗಳ ವಿಷಯದಲ್ಲಿ ಧಾರ್ವಾಡದಲ್ಲಿರುವ ಏಜೆಂಟರಿಂದಲೂ ನಮೂನೆ ಒಂದಕ್ಕೆ ೪ ಆಣೆ ಕೊಟ್ಟು ಪಡೆಯತಕ್ಕದ್ದು.

ನಾನಾ ತರದ ಸಾಮಾನುಗಳನ್ನು, ಸ್ಟೋರ್ಸ್ ಡಿಪಾರ್ಟ್ಮೆಂಟಿನ ಹುಬ್ಬಳ್ಳಿ ಅಥವಾ ಬೆಂಗಳೂರು ಕೋಠಿಗಳಲ್ಲಿ ಒಪ್ಪಿಸತಕ್ಕದ್ದು. ದರಖಾಸ್ತು ಮಾಡತಕ್ಕವರು ಯಾವ ಕೋಠಿ ಅಥವಾ ಕೋಠಿಗಳಿಗಾಗಿ ತಮಗೆ ನಮೂನೆಗಳು ಬೇಕೆಂಬದನ್ನು ಅಪೇಕ್ಷಿಸುವಾಗ ತಿಳಿಸತಕ್ಕದ್ದು. ಕಾಗದ ವಗೈರೆ ಸಾಮಾನುಗಳನ್ನೆಲ್ಲ ಧಾರ್ವಾಡದಲ್ಲಿನ ಸದರೀ ಕೋಠಿಯಲ್ಲಿ ಒಪ್ಪಿಸತಕ್ಕದ್ದು.

ನಾನಾತರದ ಸಾಮಾನುಗಳ ಮತ್ತು ಕಾಗದ ವಗೈರೆಗಳ ಸರಬರಾಯಿಬಗ್ಗೆ ಮಾಡಲ್ಪಡುವ ದರಖಾಸ್ತುಗಳ ಪಟ್ಟಿಯೊಡನೆ ಮತ್ತು ಷರತ್ತುಗಳು ದರಖಾಸ್ತುದಾರರ ಪ್ರತಿಯೊಂದು ಪ್ಯಾಕ್ ಪಟ್ಟಿಯನ್ನುಗಡಲೂ ಕಳುಹಿಸಲ್ಪಡತಕ್ಕದ್ದು. ನಾನಾತರದ ಸಾಮಾನುಗಳ ವಿಷಯದಲ್ಲಿ ಬೇಕಾದ ವರ್ತಮಾನಗಳನ್ನು ಹುಬ್ಬಳ್ಳಿ ಮತ್ತು ಬೆಂಗಳೂರಿನಲ್ಲಿರುವ ಸ್ಟೋರ್ ಕೀಪರರಿಂದಲೂ ಕಾಗದ ವಗೈರೆ ಸಾಮಾನುಗಳ ವಿಷಯದಲ್ಲಿ ಬೇಕಾದ ವರ್ತಮಾನಗಳನ್ನು ಧಾರ್ವಾಡದಲ್ಲಿರುವ ಏಜೆಂಟರಿಂದಲೂ ತಿಳಿದುಕೊಳ್ಳಬಹುದು.

ದರಖಾಸ್ತುಗಳನ್ನು ಅಂಗೀಕರಿಸುವ ವಿಷಯದಲ್ಲಿ ಜೂನ್ ೧೬ನೇ ತಾರೀಖು ಆಖೈರಾಗಿರುವದು. ದರಖಾಸ್ತುಗಳನ್ನು ಲಿಫಾಫೆಯಲ್ಲಿ ಹಾಕಿ ಮೊಹರುಮಾಡಿ, "ಸಾಮಾನುಗಳು ಅಥವಾ ಕಾಗದ ವಗೈರೆ ಸಾಮಾನುಗಳ ಬಗ್ಗೆ ದರಖಾಸ್ತು" ಎಂದು ಮೇಲ್ಗಡೆ ಬರೆದು ಧಾರ್ವಾಡದಲ್ಲಿರುವ ದಕ್ಷಿಣ ಮಹಾರಾಷ್ಟ್ರ ರೈಲ್ವೆ ಏಜೆಂಟರ ಹೆಸರಿಗೆ ರವಾನಿಸತಕ್ಕದ್ದು.

ಕಂ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನೇಯಾಗಲಿ ಅಂಗೀಕರಿಸುವದಕ್ಕೆ ಏಜಂಟರವರು ಬದ್ಧರಾಗಿರುವದಿಲ್ಲವು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JUNE 9, 1890.

೧೮೯೦ನೇ ಮೇ ಜೂನ್ ೯ ನೇ ಸೋಮವಾರ.

A TECHNICAL SCHOOL FOR MYSORE.

ಇಂಡ್ಯದೇಶದಲ್ಲಿ ವಿದ್ಯಾಭ್ಯಾಸ ಮಾಡುವದು ಜೀವನಾ ಸಂಪಾದನಕ್ಕಾಗಿಯೇ ಎಂಬ ತಾತ್ಪರ್ಯ ಚಿರಕಾಲದಿಂದ ನಡೆಗೊಂಡಿತ್ತು. ಈ ಜೀವಿಕೆಯು ರಾಜದ್ವಾರ ಮುಖದಲ್ಲಲ್ಲದೆ ಅನ್ಯತ್ರ ದುರ್ಲಭವಾಗಿಯೂ, ರಾಜವಲ್ಲಭರ ಆಭಿಮುಖ್ಯದಿಂದಲೇ ಲಭಿಸತಕ್ಕದ್ದಾಗಿತ್ತು. ನಮ್ಮ ಪಾಶ್ಚಾತ್ಯ ಸಹೋದರರು ಈ ದೇಶದ ಪ್ರಭುತ್ವಕ್ಕೆ ಬಂದಮೇಲೆ ಇತರವಿಧವಾದ ಜೀವನೋಪಾಯಗಳು, ಅಂದರೆ ಲಾಯರರು ವೊದಲಾದ ಕಸಬುಗಳು ಏರ್ಪಟ್ಟವು. ಇದಕ್ಕೆ ಮೊದಲು ಸರ್ಕಾರಿ ನೌಕರಿ ಅಂದರೆ ಕೇವಲ ಸೇವಾವೃತ್ತಿಯೊಂದೇ ಇತ್ತು. ಬ್ರಿಟಿಷ್ ರಾಜ್ಯಭಾರವನ್ನು ಸಾಕ್ಷಾತ್ತಾಗಿ ಅನುಭವಿಸುವ ದೇಶಗಳಲ್ಲಿ ಸಹ ಈ ಇತರವಿಧವಾದ ಜೀವನೋಪಾಯಗಳು ಜನಗಳಿಂದ ಅನುಸರಿಸಲ್ಪಟ್ಟು ಸ್ವಲ್ಪಕಾಲವಾಗಿರುತ್ತದೆ. ಪಾಶ್ಚಾತ್ಯ ರಾಜ್ಯ ಸಂಬಂಧವನ್ನು ಪರಂಪರೆಯಾ ಉಳ್ಳ ಮೈಸೂರು ಮೊದಲಾದ ದೇಶಗಳಲ್ಲಿ ನ್ಯಾಯವಿಮರ್ಶ ವೈಲಕ್ಷಣ್ಯಗಳು ಹೆಚ್ಚಿದಮೇಲೆ ಲಾಯರರ ಕಸಬ ಏರ್ಪಟ್ಟಿತು. ಪರಂತು ಆ ವಿಭಾಗದಲ್ಲಿ ಇಂಗ್ಲಿಷ್ ಭಾಷೆಯನ್ನಭ್ಯಸಮಾಡಿ ನ್ಯಾಯ ನಿಬಂಧನಾ ಶಾಸ್ತ್ರಗಳಲ್ಲಿ ಪರೀಕ್ಷೆ ಕೊಟ್ಟವರಿಗೆ ಮಾತ್ರ ಲಭಿಸತಕ್ಕದ್ದಾಗಿತ್ತು. ಈಚೆಗೆ ಕೇವಲ ಕನ್ನಡ ಭಾಷೆಯಲ್ಲಿ ಪರೀಕ್ಷೆ ಏರ್ಪಟ್ಟು ಅನೇಕರು ಈ ಜೀವಿಕೆಯನ್ನವಲಂಬಿಸಿರುತ್ತಾರೆ. ಪುನಃ ಅವರ್ಥಿತ ಭಿನ್ನಿಸಿ ಇಂಗ್ಲಿಷ್ ಭಾಷೆಗೇನೇ ಪ್ರಾಶಸ್ತ್ಯ ಉಂಟಾಗಿರುತ್ತೆ. ವಿದ್ಯಾ ವೈದುಷ್ಯಗಳಲ್ಲದೆ ಜೀವನೋಪಾಯಗಳನ್ನು ಹುಡುಕುತಲಿರುವ ಜನ

ಳು ಈ ದೇಶದ ಜನಸಂಖ್ಯೆಯಲ್ಲಿ ಹೆಚ್ಚುಮಂದಿ ಇರುತ್ತಾರೆ. ಇ[illegible]ವರು ಸಕಲ ವರ್ಣಗಳಲ್ಲಿಯೂ ಇರುತ್ತಾರೆ. ಉತ್ತಮ ವರ್ಣದವರಿಗೆ ಕಾಮಾಟ ಮೊ[illegible]ದ ದಿನಕೂಲಿ ಕೆಲಸಗಳನ್ನು ಮಾಡುವದು ಸಾಧ್ಯವಲ್ಲವು. ಇಂಥವರಿಗೆ ಜೀವನ ಕಲ್ಪಿಸುವಂಥ ಬಹು ಅವಶ್ಯಕವಾಗಿದೆ. ಈಗ ಇವರುಗಳೆಲ್ಲರೇ ಶುದ್ಧವಾಗಿ ದೊಡ್ಡವಾದ ಯಾಚನಾ ವೃತ್ತಿಯಲ್ಲಿ ಕೂಡ ಜೀವಿಸಲಿರಿಯದೆ ಕ್ಷುಧಾಪೀಡಿತರಾಗುತಲಿದಾರೆ. ವಿದ್ಯಾ ವೈದುಷ್ಯಗಳುಳ್ಳವರಿಗು ಸಹ ರಾಜದ್ವಾರದಲ್ಲಿ ಅಥವಾ ಅಧಿಕಾರರ ಕಸಬಿನಲ್ಲಿ ಜೀವನವು ಸಾಧ್ಯವಲ್ಲವು. ರಾಜರಿಗೆ ಪ್ರಜಾರಂಜನೆ ಎಂದಲ್ಲವೆ ರಾಜ ರೆಂಬ ಹೆಸರು? ಆದ್ದರಿಂದ ಪ್ರಜಾವರಿಯ ಅನವರತ ಅವಶ್ಯಕಗಳಾದ ಏರ್ಪಾಡುಗಳನ್ನು ಮಾಡುವದು ರಾಜರ ಮುಖ್ಯಧರ್ಮವು. ಒಂದು ಮಾರ್ಗದಲ್ಲಿ ಜನಗಳಿಗೆ ಜೀವನ ಕಷ್ಟವಾದರೆ ಮತ್ತೊಂದು ಮಾರ್ಗವನ್ನು ಹುಡುಕಬೇಕು. ಬ್ರಿಟಿಷ್ ರಾಜ್ಯಕ್ಕೆ ಸೇರಿದ ಮುಂಬೈ ಪ್ರಾಂತದಲ್ಲಿ ಜನಗಳಿಗೆ ಕಸಬುದಾರೀ ವಿದ್ಯಾಭ್ಯಾಸವನ್ನು ಕಲಿಸುವ ಬಗ್ಗೆ ಪಾಠಶಾಲೆಗಳು ಏರ್ಪಾಡಾಗಿರುತ್ತವೆ. ನಮ್ಮ ದೇಶದವರಲ್ಲಿ ಅನೇಕರು ಪ್ರಾಚೀನರು ಒಂದೊಂದು ಕಸಬುದಾರೀ ವಿದ್ಯೆಯಲ್ಲಿ ಅತ್ಯಂತ ಚತುರರಾಗಿರಲಿಲ್ಲವೆ? ನಮ್ಮ ಹಿಂದೂ ಜನಗಳಿಗೆ ಸ್ವಭಾವಸಿದ್ಧವಾದ ಗೋಪನ ಅಂದರೆ ಮುಚ್ಚಿಡುವಂಥ ರಿಂದಲ್ಲವೆ ಆ ಕೌಶಲ್ಯವು ಈಗ ಮಾಯವಾಯಿತು! ನಗರದ ಸೀರೆ ಗುಂಡಿಗಳು, ದಾವಣಗೆರೆ ಕಂಬಳಿಗಳು, ಚೆನ್ನಪಟ್ಟಣದ ಹಿತ್ತಾಳೆ ಪಾತ್ರೆಗಳು ಇವುಗಳೆಲ್ಲ [illegible]ಗಳಾಗಿಲ್ಲವೆ? ಇದಲ್ಲದೆ ನಮ್ಮ ಜನಗಳು ಇತರ ಕಸಬುಗಳನ್ನು ಕಲಿಯುವದಕ್ಕೆ ಬುದ್ಧಿ ಸಾಮರ್ಥ್ಯವುಳ್ಳವರಾಗಿದಾರೆ. ಈಗ ಪಶ್ಚಿಮದೇಶದಿಂದ ಇಲ್ಲಿಗೆ ತರಿಸುತ್ತಿರುವ ಹಲವು ಬಗೆ ಯಂತ್ರಗಳನ್ನು ಮಾಡುವರೀತಿ, ಮತ್ತು ಇವುಗಳನ್ನು ನಡೆಸುವ ಕ್ರಮ, ಇವುಗಳಲ್ಲಿ ಜನಗಳು ತಯಾರಾದಲ್ಲಿ ಈ ದೇಶಕ್ಕೆ ಬೇಕಾದ ಯಂತ್ರಗಳನ್ನು ಇಲ್ಲಿಯೇ ಮಾಡಿಸಿ ಕಡಿಮೆ ಬೆಲೆಗೆ ನಮ್ಮ ಇಡಿಯಾದೇಶದಲ್ಲಿ ಸಿಕ್ಕುವಹಾಗೆ ಮಾಡಬಹುದು. ಮತ್ತು ಯಂತ್ರಗಳನ್ನು ನಡೆಸುವ ಕ್ರಮವನ್ನು ನಮ್ಮ ಜನಗಳು ಕಲಿತುಕೊಂಡಲ್ಲಿ ಇತರರ ಸಹಾಯಾಪೇಕ್ಷೆ ಇಲ್ಲದೆ ಇಂಬಾಲದ [illegible], ತೊಗಲು ಮೊದಲಾದ ಕಚ್ಚಾ ಸಾಮಗ್ರಿಗಳು ನಮ್ಮ ದೇಶವನ್ನು ಬಿಟ್ಟು ಪಶ್ಚಿಮದೇಶಕ್ಕೆ ರಫ್ತು ಮಾಡಲ್ಪಟ್ಟು ಅಲ್ಲಿಂದ ಉಪಯೋಗಾರ್ಹವಾದ ಸಾಮಾನುಗಳಾಗಿ ಪುನಃ ಇಲ್ಲಿಗೆ ಬರುತವೆ. ಇವುಗಳೆಲ್ಲ ಇಲ್ಲಿಯೇ ತಯಾರಾಗುವ ವಿದ್ಯೆಯನ್ನು ಏತಕ್ಕೆ ಕಲಿಯಬಾರದು? ಕಾಗದವನ್ನು ಹೊರಗಿನಿಂದ ತರಿಸುವದಕ್ಕೆ ಬದಲಾಗಿ ಉತ್ತಮವಾದ ಗ್ರಾಗದಗಳನ್ನು ಇಲ್ಲಿಯೇ ಏತಕ್ಕೆ ತಯಾರ್ಮಾಡಬಾರದು, ಇತ್ಯಾದಿ ಕಸಬುಗಳನ್ನು ಕಲಿತವರಿಂದ ಬಹುಜನಗಳಿಗೆ ಜೀವನೋಪಾಯ ಲಭಿಸುವದರಲ್ಲಿ ಏನೂ ಸಂದೇಹವಿಲ್ಲ. ಆದರೆ ಜನಗಳು ಈಬಗ್ಗೆ ತಾನೇ ಅರ್ಥವ್ಯಯಮಾಡಿ ಅಭ್ಯಾಸ ಮಾಡ್ಯಾರೆಂದರೆ ಅರ್ಥಾಭಾವವತ್ತ್ತಿ ಯುಳ್ಳವ ಪೀಡಿತರಾಗುತಲಿದಾರೆ. ನಮ್ಮ ಮಧ್ಯದಲ್ಲಿ ವಿರಳರಾಗಿದ್ದಾಗ್ಯೂ ಅಲ್ಲಲ್ಲಿ ಕಂಡುಬರುವ ಧನಿಕರು ತಮ್ಮಧನಕ್ಕೆ ಹೆಚ್ಚು ಬಡ್ಡಿ ಬರತಕ್ಕ ದಾರಿಯನ್ನು ಹುಡುಕುತಲಿದಾರೆಯೇ ಹೊರತು ತಮಗೆ ಬಡ್ಡಿ ಕಡಿಮೆಯಾದರೂ ಪ್ರಜಾಜೀವನ ದೇಶಾಭಿವೃದ್ಧಿ ಇವುಗಳಿಗೆ ಸಹಾಯಕವಾದ ಕಾರ್ಯಗಳನ್ನು ಮಾಡುವದಿಲ್ಲ. ಆದ್ದರಿಂದ ಈ ಕ್ರಮವನ್ನು ರಾಜರು ವಹಿಸುವದು ಅವಶ್ಯಕ ಧರ್ಮವೆಂದು ಹೇಳುತ್ತೇವೆ.

ತಿರುವಾಂಕೂರಿನ ಮಹಾರಾಜರು ತಮ್ಮ ಜನಗಳಿಗೆ ಕಸಬುದಾರೀವಿದ್ಯೆಯನ್ನು ಕಲಿಸುವಕ್ಕೆ ಅನುಕೂಲಮಾಡಿರುತ್ತಾರೆಂದು ಕೇಳಿ ಸಂತೋಷಪಡುತ್ತೇವೆ. "ಅಲ್ಪಾರಂಭಃ ಕ್ಷೇಮಕರಃ" ಎಂಬಂತೆ ಈಪ್ರಯತ್ನವು ಕ್ರಮವಾಗಿ ವೃದ್ಧಿಯನ್ನೈದಿ ಜನಗಳು ಸುಖ ಪಡಬೇಕೆಂದು ಕೋರುತ್ತೇವೆ. ನಮ್ಮ ಮೈಸೂರು ರಾಜ್ಯವು ದರಖಾಸ್ತಿನಲ್ಲಿಯೂ, ಪ್ರಜಾ ಸಂಖ್ಯೆಯಲ್ಲಿಯೂ, ಉವದತ್ತಿಯಲ್ಲಿಯೂ ತಿರುವಾಂಕೂರಿಗಿಂತ ಅಧಿಕವಾದದರಿಂದ ಇಲ್ಲಿಯೂ ನಮ್ಮ ಶ್ರೀಮನ್ಮಹಾರಾಜರವರು ಇಂತಾ ಒಂದು ಪ್ರಯತ್ನ ಮಾಡಿ ದೇಶಕ್ಕೆ ಪ್ರಧಾನ ಪಟ್ಟಣಗಳಾದ ಬೆಂಗಳೂರು ಮೈಸೂರು ಈ ಸ್ಥಳಗಳಲ್ಲಿ ಶಾಲೆಗಳನ್ನು ಏರ್ಪಡಿಸಿ ಪಶ್ಚಿಮದೇಶದಿಂದ ಅಭ್ಯಾಸ ಮಾಡಿಸಿರತಕ್ಕ ಜನಗಳನ್ನೂ ಈಬಗ್ಗೆ ಬೇಕಾದ ಯಂತ್ರಗಳನ್ನೂ ತರಿಸಿ ನೇಮಿಸಿಕೊಳಿಸಿ ಜನಗಳಿಗೆಲ್ಲಾ ವಿದ್ಯಾಭ್ಯಾಸ ಮಾಡಿಸಿ ಅರ್ಹರೈತವಿದ್ಯಾರ್ಥಿಗಳಿಗೆ ಪಾತ್ರರಾಗುವದು ಯುಕ್ತವಾಗಿಯೂ ಮತ್ತು ಆವಶ್ಯಕವಾಗಿಯೂ ಇದೆ. ಈ ಶಿಲ್ಪಗಳನ್ನು ಅಭ್ಯಾಸ ಮಾಡುವಕ್ಕೆ ಅಪೇಕ್ಷಿಸುವ ಜನಗಳು ಅನುಸಾರವಾಗಿದ್ದವರಿಕ್ಕೆ ಅಂತವರಿಗೆ ವಿದ್ಯಾರ್ಥಿ ವೇತನಕೊಡಬಾರದು ಶ್ರೀಮನ್ಮಹಾರಾಜರವರ ಮತ್ತು ದಿವಾನರವರ ದಯಾದೃಷ್ಟಿ ನಮ್ಮ ಅವಶ್ಯಕ ವಾದದ್ದು. ಈ ವಿಷಯವನ್ನು ನಮ್ಮ ಶ್ರೀಮನ್ಮಹಾರಾಜರವರ ಮತ್ತು ದಿವಾನರವರ ದಯಾದೃಷ್ಟಿ ನಕ್ಕೆ ಸೂಚಿಸುವೆವು.

LOCAL AND PROVINCIAL NEWS
ಸ್ಥಳದೇಶದವುಗಳ ಮತ್ತು ಪ್ರಾಂತ್ಯದ ವರ್ತಮಾನಗಳು

A Virgin Re-marrying.—ಈ ಪೂರ್ವದಲ್ಲಿ ಬ್ರಾಹ್ಮಣರವ್ಯಕ್ತಿ ಒಂದು ಬಗೆಯವರಲ್ಲಿ ಈಪವಿತ್ರ ಕನ್ಯಾ ಪುನರ್ವಿವಾಹ ನಡೆಯುವದಾಗಿ ಪ್ರಸ್ತಾವಿಸಿದೆ. ಇದು ನಿರ್ವಿಘ್ನವಾಗಿ ನಡೆದ ಪಕ್ಷದಲ್ಲಿ ಇವರ ಧೈರ್ಯಶೀಲತೆಯನ್ನೆಲ್ಲ ಮುಂದಿನವಾರದಲ್ಲಿ ತಿಳಿಸುವೆವು.

The Resident.—ಈಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಸರ್ ಆಲಿವರ್ ಸೆಂಟ್ ಜಾನ್ ರವರು ಈ ತಿಂಗಳ ೫ನೇ ತಾರೀಖು ಮಂಗಳವಾರ ದಿವಸ ಮೈಸೂರಿನಿಂದ ಆರ್ದರೆ ಯಿಂದ ಪ್ರಯಾಣ ಬೆಳೆಸಿದರು. ಮಾಮೂಲಿನ ೧೫ ತೋಪುಗಳು ಹಾರಿಸಲ್ಪಟ್ಟವು.

Leave.—ಕೌನ್ಸಿಲ್ ಶಿರಸ್ತೇದಾರರ ಈ ಸಂಸ್ಥಾನದ ದಿವಾನರವರ ಮ॥ ಕೋರ್ಟಿನ ಹೆಡ್ ಕ್ಲಾರ್ಕ್ ಎಸ್. ಎಸ್. ಐ. ಯವರು ಒಂದು ವಾರದ ರಜಾ ಪಡೆದು ಮದರಾಸಿಗೆ ಹೋಗುವ ಪ್ರಯುಕ್ತ ಅವರ ಕೆಲಸವನ್ನು ಶ್ರೀಮಾನ್ ಮಹಾರಾಜರವರ ಕೌನ್ಸಿಲರುಗಳಾದ ಮ॥ ವಿ. ಪಿ. ಮಾಧವರಾವ್, ಬಿ. ಏ. ರವರು ಸಹ ನೋಡಿಕೊಳ್ಳುತ್ತಿದಾರೆಂದು ತಿಳಿಯಬರುತ್ತೆ.

Mr. Subramanya Iyer.—ಚೀಫ್ ಕೋರ್ಟ್ ನಲ್ಲಿ [illegible] ಯವರು ಪ್ರಿನ್ಸಿಪಾಲ್ ಅಸಿಸ್ಟೆಂಟ್ ಜನರಲ್ ಆಫೀಸಿನಲ್ಲಿ ಈ [illegible] ಜನರಲ್ ಸಾಹೇಬರಿಗೆ ಅಸಿಸ್ಟೆಂಟಾಗಿ ಕೆಲಸ ನೋಡಲು ಹೋಗುವುದಾಗಿ ಖಾಯಂ ರಲ್ಲಿ ಮಾಡಲ್ಪಟ್ಟಿರುತ್ತಾರೆಂದು ತಿಳಿಯಬರುತ್ತೆ.

A disappointment.—ಈ ಸಂಸ್ಥಾನದ ದಿವಾನರು ಮ॥ ಕೆ. ಶೇಷಾದ್ರಿ ಅಯ್ಯರ್, ಸಿ. ಎಸ್. ಐ. ಯವರು ದೊಡ್ಡಬಳ್ಳಾಪುರದ ತಾಲ್ಲೂಕಿಗೆ ಹೋಗಿ [illegible] ಹಾಕಿದ ಹಿಂದೂಸ್ತಾನಿ ಪೈಲಿಗೆ ಕ್ಷೇತ್ರವನ್ನು ನೋಡುವುದಕ್ಕಾಗಿ ಬರುತಾರೆಂತ ಅಲ್ಲಿನ ಅಮಲ್ದಾರರಾದ ಮ॥ ಕೃಷ್ಣರಾವ್ ರವರು ಸಕಲ ಸನ್ನಾಹಗಳನ್ನು ಸಿದ್ಧಪಡಿಸಿಕೊಂಡಿದ್ದರಂತೆ. ಆದರೆ ದಿವಾನರವರ ಸವಾರಿ ಚಿಕ್ಕಬಳ್ಳಾಪುರದಲ್ಲಿಯೇ ನಿಂತಿದ್ದರಿಂದ ಅವರು ಭಗ್ನ ಮನಸ್ಕರಾದರೆಂದು ಕೇಳುತ್ತೇವೆ.

Thefts.—ಈಚೆಗೆ ಈ ಪಟ್ಟಣದ ಪೋಲೀಸ್ ಬಂದೋಬಸ್ತಿಯು ಬಹಳ ಶಿಥಿಲವಾಗಿದೆ. ಈ ಪಟ್ಟಣದಲ್ಲಿ ಸರಕಾರಿ ಜೋಡಿ ಜೋಡಿ ಅಧಿಕಾರಿಗಳ ಮನೆಗಳಲ್ಲಿಯೇ ಕಳ್ಳತನ ಮಾಡಿದರೆ ಇತರ ಜನರ ಮನೆಗಳನ್ನು ಅಂದರೆ ಡೆಪ್ಯುಟಿ ಅಸಿಸ್ಟೆಂಟ್ ಕಮಿಷನರ್ ಮ॥ ಕೃಷ್ಣಸ್ವಾಮಯ್ಯಂಗಾರ್ ರವರ ಮನೆಯಲ್ಲಿ ವಸ್ತುಗಳು, ಶ್ರೀಮುಖ ಮಹಾರಾಜರ ಕಾಲೇಜ್ ಮ॥ ಬೆಂಗಳೂರಿನವರ ಮನೆಯಲ್ಲಿ ಕೆಲ ವಸ್ತುಗಳು, ದಿವಾನರ ಮನೆಯಲ್ಲಿ ಕೆಲವು ಬಟ್ಟೆಗಳು ಸಹ ಕಳುವಾಗಿರುವದಾಗಿಯೂ ಅವು ಇದ್ಯಾಪಿ ಪತ್ತೆಯಾಗಿರುವದಿಲ್ಲವೆಂದಲೂ ಪತ್ತೆಗೋಸ್ಕರ ಬಹಳ ತರದೂದುಗಳು ನಡೆಸುತ್ತಿದಾರೆಂದೂ ತಿಳಿಯಬರುತ್ತೆ.

Appointment and transfer.—ಮೈಸೂರು ಟರ್ಕ್ ಮ್ಯಾಜಿಸ್ಟ್ರೇಟ್ ಮ॥ ತಿರುಮಲಾಚಾರ್ಯರನ್ನು ತುಮಕೂರು ಡಿಸ್ಟ್ರಿಕ್ಟ್ ಡಿಪ್ಯೂಟಿಕಮಿಷನರ ಕೆಲಸಕ್ಕೆ ಬಡ್ತಿ ಮಾಡಿದ್ದರೆಂದು ಹೊಸದಲು ಪ್ರವೇಶವಿರುತ್ತೆ. ಈಚೆಗೆ ನಮಗೆ ತಿಳಿಯಬಂದ ವರ್ತಮಾನದಲ್ಲಿ ಮ॥ ತಿರುಮಲಾಚಾರ್ಯರನ್ನು ಚಿತ್ರದುರ್ಗದ ಡಿ॥ ಕಮಿಷನರ ಕೆಲಸಕ್ಕೂ ಅಲ್ಲಿನ ಡಿ. ಕಮಿಷನರ್ ಮ॥ ವಿ. ಮೊಸ[illegible]ಯ್ಯಂಗಾರ್ ರವರನ್ನು ತುಮಕೂರು ಡಿಸ್ಟ್ರಿಕ್ಟಿಗೂ ವರ್ಗ ಮಾಡಿರುತ್ತಾರೆಂತ ತಿಳಿಯಬರುತ್ತೆ.

Struck by lightning.—ಈಚೆಗೆ ತುಮಕೂರಿನ ಒಂದು ವಾರದ ಒಳಗೆ ನಾಗದ ತಾಲ್ಲೂಕ್ ಸೋಲೂರು ಹೋಬಳಿ ಒಂದು ಗ್ರಾಮದ [illegible] ದಲ್ಲಿ ವೃದ್ಧರು ಹುಡುಗರು ಒಬ್ಬ ಪೋಲೀಸ್ ಕಾನ್ಸ್ಟೆಬಲ್ ಸಹ ಮಳೆ ಬಂದದ್ದರಿಂದ ಒಂದು ಗುಡಿನ ಕೆಳಗೆ ಇರಲು ಒಂದು [illegible] ದಾದ ಒಂದು ವಜ್ರ ಬೀಳುವದರಿಂದ ಇಬ್ಬರು ಹುಡುಗರೂ ಅವನೂ ಅಕಸ್ಮಾತ್ತಾಗಿ ಸತ್ತರು ಒಬ್ಬ ವೃದ್ಧರ ಮೊಮ್ಮಗನಿಗೆ ಶರೀರವೆಲ್ಲ ಸುಟ್ಟು ಹೋಗಿ ಪ್ರಾಣ ಸ್ವಲ್ಪವಿತ್ತು. ಅವನನ್ನು ಮನೆಗೆ ತೆಗೆದುಕೊಂಡು ಹೋಗಿ ಚಿಕಿತ್ಸೆ ಮಾಡಿದರೂ ಅವನು ಆ ದಿವಸ ಬದುಕಿರಲಿಲ್ಲ ಮೃತಪಟ್ಟನೆಂದು ತಿಳಿಯಬರುತ್ತೆ.

Deaths by lightning.—ಈಚೆಗೆ ಸುಮಾರು ೫-೬ ದಿವಸಗಳ ಮುಂಚೆ ದೊಡ್ಡಬಳ್ಳಾಪುರದ ತಾಲ್ಲೂಕಿನ [illegible] ಗ್ರಾಮದಲ್ಲಿ [illegible] ಗಳ ಇಬ್ಬರ ಹೆಣ್ಣು ಹುಡುಗರು ಸಹ ಕುರಿ ಮೇಯಿಸುವದಕ್ಕಾಗಿ ಬಂದಿದ್ದ [illegible] ಮನೆಗೆ ಬರುವಾಗ ಒಂದು ದೊಡ್ಡ ಮಳೆ ಬಂದದ್ದರಿಂದ ಸುಮಾರು ಒಂದು ಮರದ ಕೆಳಗೆ ನಿಂತಿದ್ದರಂತೆ. [illegible] ಸಿಡಿಲು ಬಿದ್ದು ಇಬ್ಬರು ಹುಡುಗರು ಸತ್ತರು. [illegible] ಈ ಮೃತ್ಯುವಿನ [illegible] ಹುಡುಗರು ಜನಮಹಿಮೆ [illegible] ಸದ್ದು ಈ ಮೂವರು ಒಂದೇ ಮರಣವನ್ನು ಹೊಂದಿದರು.

Death by snake bite.—ಈಚೆಗೆ ೩-೪ ದಿವಸಗಳ ಮುಂಚೆ ನಗರ ಸಿಟಿ ತಾಲ್ಲೂಕ್ ಕೈ[illegible] ಒಂದು ಗ್ರಾಮದಲ್ಲಿ [illegible] ಎಂಬವನು ರಾತ್ರಿ ಮಲಗಿದ್ದನು. ತನ್ನ ಹುಡುಗನನ್ನು ಕೂಗಿದನು. ಅವನು ಬಂದು ನೋಡಲು ಕಾಲಿನ ಮೇಲೆ ಏನೋ ಕಚ್ಚಿದಂತೆ ಇದೆ ಎಂದು ಹೇಳಿದನಂತೆ. ದೀಪ ತೆಗೆದುಕೊಂಡು ಬಂದು ನೋಡಲು ಮನೆಯೆಲ್ಲ ಹುಡುಕಿದರೂ ಏನೂ ಕಾಣಲಿಲ್ಲ. ಸ್ವಲ್ಪ ಹೊತ್ತಿನಲ್ಲಿ ವಿಷ ಏರಿ ಆ ಮನುಷ್ಯ ಸತ್ತು ಹೋದನು. ಮರು ದಿವಸ ಹಾಸಿಗೆ ತೆಗೆದು ನೋಡಲು ಅದರ ಕೆಳಗೆ ಒಂದು ಕಂಬಳಿಯನ್ನು ತೆಗೆದು ನೋಡಲು ಅದರಲ್ಲಿ ಒಂದು ನಾಗರಹಾವು ಇತ್ತು. ಅದನ್ನು ಕೊಲ್ಲುವದಕ್ಕೋಸ್ಕರ ಅಟ್ಟಲು ಹಾವು ತಪ್ಪಿಸಿಕೊಂಡು ಓಡಿಹೋಯಿತು.

The weather.—ಈ ವಾರವೆಲ್ಲ ಬಿಸಿಲಿನ ತೀಕ್ಷ್ಣತೆಯು ಬಹಳವಾಗಿ ಕಡಮೆಯಾಗಿರುತ್ತದೆ. ಆಗ್ಯಾಗ್ಯೆ ಮೋಡ ಮುಸುಕಿದ ಗಾಳಿಯಿಂದ ತುಂತುರು ಮಳೆಗಳು ಬೀಳುತ್ತಲೇ ಇದ್ದು ಒಂದೆರಡು ದಿವಸ ಸ್ವಲ್ಪ ಹೆಚ್ಚು ಮಳೆಯಾದದ್ದಲ್ಲದೆ ಅಕಾಲದಲ್ಲಿ ಗ್ರಾಮಾಂತರಗಳಲ್ಲಿಯೂ ಮಳೆ ಬಿದ್ದಂತೆ ತಿಳಿಯಬರುತದೆ. ರೈತರು ಉಳುಮೆ ಕೆಲಸ ಮಾಡುತ್ತ ಹಾರಕ, ಎಳ್ಳು, ಹುರಳಿ ಭತ್ತ ಮೊದಲಾದವುಗಳನ್ನು ಬಿತ್ತುತಿದಾರೆ. ರೋಗಾದ್ಯುಪದ್ರವಗಳು ಬಹಳವು ಕ್ಷೀಣವಾಗಿದ್ದಾಗ್ಯೂ ನಗರ ಪೇಟೆಯಲ್ಲಿಯೂ ಗ್ರಾಮಾಂತರದಲ್ಲಿಯೂ [illegible] ದೇವತೆಯನ್ನಿಟ್ಟು ಶಾಂತಿಯನ್ನು ಮಾಡುತಲೇ ಇದಾರೆ.

University Examinations for 1890.—ಈ ಸಂವತ್ಸರದ ಮದರಾಸು ಯೂನಿವರ್ಸಿಟಿ ಪರೀಕ್ಷೆಗೆ ಈ ಮೈಸೂರು ದೇಶದ ನೇಟಿವ್ ರೆಸಿಡೆನ್ಸಿಯ ಹೆಡ್ ಕ್ಲಾರ್ಕ್ ಚೀಫ್ ಕೋರ್ಟ್ ಜಡ್ಜಿ ಯವರ ಮ॥ ರಾಮಚಂದ್ರಯ್ಯರ್ ಬಿ. ಎಲ್. ಯವರು ಲಾ ಪರೀಕ್ಷೆಗೂ, ತುಮಕೂರು ಡಿಸ್ಟ್ರಿಕ್ಟ್ ಹೆಡ್ ಮ್ಯಾಸ್ಟರ್ [illegible] ಯವರು ಎಂ. ಎ. ಪರೀಕ್ಷೆಗೂ ಗಣಿತ ಶಾಸ್ತ್ರದ ಪರೀಕ್ಷೆಗೂ, ಸೆಂಟ್ರಲ್ ಕಾಲೇಜ್ ಪ್ರೊಫೆಸರ್ [illegible] ನಾಯಡರವರು ಅರಬ್ಬಿ ಭಾಷೆ ಪರೀಕ್ಷೆಗೂ, ಚೀಫ್ ಕೋರ್ಟ್ ಟ್ರಾನ್ಸ್ಲೇಟರ್ ಎಂ. ಎಸ್. ಪುಟ್ಟಣ್ಣ ಬಿ. ಎ. ಯವರು ಕನ್ನಡ ಭಾಷಾ ಪರೀಕ್ಷೆಗೂ ಪರೀಕ್ಷಕರಾಗಿ ನೇಮಿಸಲ್ಪಟ್ಟರೆಂತ ಕೇಳುವದಕ್ಕೆ ಸಂತೋಷಪಡುತ್ತೇವೆ.

NEWS LETTER
ವೃತ್ತಾಂತಪತ್ರಿಕೆ

ಬೆಂಗಳೂರು, ತಾ॥ ೬ನೇ ಜೂನ್ ೧೮೯೦.

ಈಚೆಗೆ ಈ ಪ್ರಾಂತದೊಳಗೆ ಸಕಾಲ ವೃಷ್ಟಿಯಿಂದ ಹೊಳೆ ಮೊದಲಾದ ಜಲಾಶಯಗಳು ತುಂಬುತ್ತಿರುತ್ತವೆ. ತೃಣಜಲ ಸಮೃದ್ಧಿಯುಳ್ಳದ್ದಾಗಿ ವನ ಕಲ ಗಳು ಸುಖವಾಗಿರುತವೆ. ಇಲ್ಲಿಗೆ ಸಮೀಪದಲ್ಲಿರುವ ಮೈಸೂರು ಗೇಟು, ಶ್ರೀರಂಗಪಟ್ಟಣ ಮುಂತಾದ ಸ್ಥಳಗಳಲ್ಲಿ ಜ್ವರಾದಿ ರೋಗಗಳು ಇದ್ದರೂ [illegible] ಈಗ ಕಡಿಮೆಯಾಗಿ ಆರೋಗ್ಯ ವಿಷಯದಲ್ಲಿಯೂ ಅಂತಾ ಶೀಘ್ರವಾದ ರೋಗಗಳಿಲ್ಲದೆ ಜನರೋಗ್ಯವು ತೃಪ್ತಿಕರವಾಗಿದೆ ಎಂದು ತಿಳಿಯಬರುತ್ತೆ. ಈ ಸಂವತ್ಸರ ಈ ಪ್ರಾಂತ್ಯದಲ್ಲಿ ವಿಶೇಷವಾಗಿ ಮದುವೆಗಳು ನಡೆಯುತವೆ. ಅವುಗಳಲ್ಲಿ ಒಂದು ವರ್ಷದ ಒಂಬತ್ತು ಕನ್ಯಾ ಕೊಡುವ ಹೆತ್ತವರಿಗೂ, ವರರಾದ ಬಾಲಕರಿಗೂ ಇದೆ ತಾವಿನ ಬಗ್ಗೆ ವಿಶೇಷವಾದ ವಯಸ್ಸಿನವರನ್ನು ಮಾಡುವದು ಪದ್ಧತಿಯ ಆದರೆ ಈ ನಾಡು ವಿವಾಹಗಳೆ ಅತ್ಯಾಶ್ಚರ್ಯಕರವಾಗಿದೆ.

ಮ್ಯುನಿಸಿಪಾಲಿಟಿ.—ಇಲ್ಲಿನ ಮ್ಯುನಿಸಿಪಾಲಿಟಿಯ ಸ್ಥಿತಿಯು ಕುರಿತು ಯೆಷ್ಟು ಬರೆದರೂ ಸಾಲದಾಗಿದೆ. ಇದು ದೀಪದಹಾಗೆ ನಿಧಾನವಾಗಿ ಹೀಗೆ ಉರಿದು ಇಲ್ಲಿನ ಕೆಲವು ಮುಖ್ಯಸ್ಥರ ಪ್ರಯತ್ನದಿಂದ ಸಾಗುವದಕ್ಕೆ ಮುಂದೆ ಇದರ ವಿಷಯದಲ್ಲಿ ಹೆಚ್ಚು ಬ್ರಾಹ್ಮಣ ಜನಗಳೆಲ್ಲ ಸೇರಿ ಸ್ವಂತ ಅಭ್ಯಾಸದಿಂದ ತಮ್ಮ ಮನೆಗಳ ಮುಂದುಗಡೆ ಬಹಳ ಕೊಳಕಾಗಿದ್ದು ರೋಗಗಳನ್ನುಂಟುಮಾಡುವ ಚರಂಡಿಗಳನ್ನು ಶೋಧಿಸಲು ಗುಡಿಸುವದಕ್ಕಾಗಿ ಇಲ್ಲಿನ ಕೆಲವರ ಬೇಡಿಕೆಯಿಂದ "ಊರ್ಬಿಡು ಬಿಟ್ಟು" ಎಂಬದೊಂದು ವಿರಾಸಿಯನ್ನು ತೆಗೆದುಕೊಂಡು ಭಕ್ತಿಯಿಂದ ಈ ಕೆಲಸವನ್ನು ತಮ್ಮ ಜನ್ಮಸಾರ್ಥಕವೆಂಬ ಭಕ್ತಿಯಿಂದಲು ಕೆಲವರು ಹೊರಡುವರು. ವಿಶೇಷ ಕಾಲಗಳಲ್ಲಿ ಸದರೀ ಯವರು ಈ ಊರನ್ನೆಲ್ಲ ಶುಚಿ ಮಾಡುತಲಿದ್ದರು. ಇದಕ್ಕಾಗಿ ಬಿದ್ದ ಬೀಳುವ ದಿನಗಳ ಕೆಲವು ಇದವರಿಗೆ ಮರಾಸಿ ರೂಪವಾಗಿಯೂ ಧಾರ್ಮಿಕರಾಗಿಯೂ ಇರುತಲಿತ್ತು. ಇಂತಾ ಏರ್ಪಾಡಿನಿಂದ ಈ ನಗರವು ಮ್ಯುನಿಸಿಪಾಲಿಟಿಯುಳ್ಳ ಇತರ ಸ್ಥಳಗಳಿಗಿಂತಲೂ ಅಧಿಕವಾಗಿ ಶೋಭಿಸುತಲಿತ್ತು. ಈ ಕಾರಣದಿಂದಲೇ ವೈದಿಕರಾದ ಇಲ್ಲಿನ ಬ್ರಾಹ್ಮಣರಿಗೆ ಕೊಂಚವು ಯಾವುದು ಮಾಡಬಾರದೆಂಬ ರಾಜನೀ

ಕೆಲ ದಿನಗಳ ಹಿಂದೆ ಇಲ್ಲಿಗೆ ಮ್ಯುನಿಸಿಪಲ್ ಏರ್ಪಾಟು ಜಾರಿಯಲ್ಲಿ ತಾರದೆ ನಿಲ್ಲಿಸಲ್ಪಟ್ಟಿತ್ತು. ಆದಾಗ್ಯೂ ರಾತ್ರಿವೇಳೆಯೊಳು ಬೀದಿದೀಪಗಳಿಂದ ಅನುಕೂಲವನ್ನೂ ಜನಾರೋಗ್ಯಕ್ಕೆ ಅನುಕೂಲವಾಗಿ ಒಂದು ನೇಟಿವ್ ವೈದ್ಯಶಾಲೆಯು ಸ್ಥಾಪಿಸಲ್ಪಡಬೇಕೆಂತಲೂ, ಈಸ್ಕೂಲಾಭಿವೃದ್ಧಿಗೆ ಮುಖ್ಯಗಳಾದ ವೇದಶಾಸ್ತ್ರ ಪಾಠಶಾಲೆಗಳ ಅಭಿವೃದ್ಧಿಗಾಗಿಯು ಮ್ಯುನಿಸಿಪಲ್ ಏರ್ಪಾಟು ಆವಶ್ಯಕವೆಂದು ಇದರಿಂದ ಪೂರ್ವದೊಳಿದ್ದ ಕ್ರಮವು ತಪ್ಪಲಾರದೆಂತಲೂ [illegible] ಬೋಧಿಸಲ್ಪಟ್ಟ ಪ್ರಮುಖರಾದ ಕೆಲವರ ಮಾತು [illegible] ದಾರಿದ್ರ್ಯವು [illegible] ಮ್ಯುನಿಸಿಪಲ್ [illegible] [illegible]

[illegible]

ಸ್ವರಸ್ವಾಮಿ ದೇವಸ್ಥಾನಕ್ಕೂ ಅಲ್ಲಿನ ಅಧಿಕಾರಿಗಳಾಗಿದ್ದ ಮ|| ರಾ|| ಅಣ್ಣಾದೊರೆ ಅಯ್ಯಂಗಾರ್ಯರವರಿಗೆ ಇಲ್ಲಿಗೂ ವರ್ಗವಾಗಿ ಸುಮಾರು ಹತ್ತು ತಿಂಗಳಾದವು. ಇಲ್ಲಿನ ಪೂರ್ವಸ್ಥಿತಿಯು ಸಮಸ್ತರಿಗೂ ತಿಳಿದೇ ಇರುವದಷ್ಟೆ. ದೇವರ ಸ್ಥಿತಿಯನ್ನೂ ಉತ್ಸವಾದಿಗಳ ವ್ಯವಸ್ಥೆಯನ್ನೂ ವಿಚಾರಣಾ ಕ್ರಮವನ್ನೂ ನೋಡಿ ಸಂತೋಷಿಸದಿರುವರೇ ಅಪೂರ್ವರು. [illegible] ಇದಾವ [illegible] ಅತಿ [illegible] ದವೆಂದು ಭಾವಿಸಲ್ಪಟ್ಟ [illegible] ಎಲ್ಲ [illegible] ದಾಯಗಳಿಂದ [illegible] ಶ್ರೀ ಕೃಷ್ಣರಾಜಒಡೆಯರು [illegible]

[illegible]

ಪದರ್ಶಕ್ಕಾಗಿ ನಾವೇನೂ ದೋಷ ಹೇಳುವದಿಲ್ಲವು. ಅಂಥಾ ಅನ್ಯದೇಶದ ವಿದ್ಯೆಯಿಂದ ನಾವು ಯಾವ ಪ್ರಯೋಜನವನ್ನು ಹೊಂದಬೇಕೋ ಅದನ್ನು ಬಿಟ್ಟು ಅದು ಕೊಂಡಿರುವಷ್ಟಕ್ಕೆ ಅಭಿಸಿದ ಮಾತ್ರದಿಂದಲೇ ವೈದಿಕರು ತಮ್ಮ ಜಾತಿಕುಲ ಮರ್ಯಾದೆಗಳಲ್ಲಿ ಅನಾಸ್ಥೆಯು ಸ್ವದೇಶ ಭಾಷೆಯೊಳು ಅಶ್ರದ್ಧೆಯೂ, ತಮ್ಮ ಶಾಸ್ತ್ರ ಮುಂತಾದವುಗಳಲ್ಲಿ ಅನಾದರವೂ ಹುಟ್ಟಿ ಅದರಿಂದ ಪರವಿದ್ಯೆಯೊಳು ಆಶ್ಚರ್ಯೆಯೂ, ಪರಮತದೊಳು ಅಭಿನಿವೇಶವೂ, ವಿಜಾತೀಯರ ಆಹಾರ ವಿಹಾರಗಳಲ್ಲಿಯೂ, ಸವತಗಳಲ್ಲಿಯೂ, ಅಭಿರುಚಿಯೂ, ವಿಶೇಷ ಹೇಳಲ್ಯಾಕೆ, ತಾವು ಯಾವ ಜಾತಿಯವರೋ ಅಂತಾ ಜಾತಿಯವರೆಂದು ಅನ್ಯರಿಂದ ಕರೆಯಲ್ಪಡುವದನ್ನು ಸಹ ಲೋಪವಾಗಿ ಯೋಚಿಸುವಹಾಗೆ ಪರಿಣಮಿಸಿರುತ್ತೆ. ಈಗಿನ ನಮ್ಮ ಬಾಲಕರು ವಿಜಾತೀಯವಾದ ಸಂಪ್ರದಾಯಗಳನ್ನು ಪರಿಗ್ರಹಿಸುವದರಲ್ಲಿ ತಮಗೆ ಎಷ್ಟು ಆವಶ್ಯಕವೋ ಸ್ವಜಾತೀಯ ಸಂಪ್ರದಾಯಗಳನ್ನು ತ್ಯಜಿಸುವದರಲ್ಲಿ ಸಹ ಅಷ್ಟು ಉತ್ಸಾಹಶಾಲಿಗಳಾಗಿರುತ್ತಾರೆ. [illegible]

[illegible]

ಈ ವೃತ್ತಿಯೊಂದು ಶಾಲೆಯ ಮೊದಲನೇ ತರಗತಿ ವಿದ್ಯಾರ್ಥಿಗೆ ಒಂದೊಂದು ರೂಪಾಯಿ ಕ್ರಯವುಳ್ಳ ೧ ಕರ್ಣಾಟಕ ವ್ಯವಸ್ಥಾಕೃತಿ ಎಂಬ ಪುಸ್ತಕವನ್ನು ಸಭೆಯ ಹೆಸರಿನಿಂದ ಬಹುಮಾನ ಮಾಡುವಂತೆ ಇಲ್ಲಿನ ಗವರ್ನಮೆಂಟ್ ಸ್ಕೂಲ್ ಹೆಡ್ ಮ್ಯಾಸ್ಟರ್ ಮ|| ರಾ|| ಯಂ. ಜಿ. ಕಾಮೈಯ್ಯಂಗಾರ್ಯರವರನ್ನು ಸಭಿಕರು ಪ್ರೇರಿಸಿದಂತೆಯೂ, ಅವರು ಒಪ್ಪಿಕೊಂಡು ಸಭೆಯವರಿಗಾಗಿ ಆರೀತಿ ನಡೆಸುವದಾಗಿಯೂ ಸಹ ಈಗ್ಯೆ ಕೆಲವು ತಿಂಗಳುಗಳ ಹಿಂದೆ ಮೈಸೂರ್ ಗಜೆಟಿನಲ್ಲಿ ಪ್ರಾಮಿಸ್ ಆಗಿತ್ತಷ್ಟೆ. ಈಗ ಆರೀತಿ ಎಲ್ಲಾ ಸ್ಕೂಲುಗಳಲ್ಲೂ ಸುಮಾರು ೫೦ ಮಂದಿ ವಿದ್ಯಾರ್ಥಿಗಳು ಬಹುಮಾನಾರ್ಹರಾಗಿ ತೇರ್ಗಡೆಯಾಗಿರುವಂತೆಯೂ, ಅವರುಗಳಿಗೆಲ್ಲ ಬಹುಮಾನ ಪುಸ್ತಕಗಳನ್ನು ಕಳುಹಿಸಿಕೊಡುವದಕ್ಕೋಸ್ಕರ ಕೂಡಲೆ ಇದರ ಸಭಾಧಿಪತಿ ಸಭೆಯು ಕೇಳುವದಾಗಿಯೂ ವರ್ತಮಾನವಿದೆ.

ಆಶ್ಚರ್ಯ.—ಈಗ್ಯೆ ಸುಮಾರು ೧೫ ದಿನಗಳ ಹಿಂದೆ ಹಿಂದಿನ ಮಧ್ಯಾಹ್ನ ೩ ಘಂಟೆಯ ಸಮಯದಲ್ಲಿ ಇಲ್ಲಿಗೆ ಸಮೀಪವಾದ ನಾಗಮಂಗಲ ತಾಲ್ಲೂಕು ಚಿಣ್ಯ ಗ್ರಾಮದ ಹತ್ತಿರವಿರುವ ಅದವಿ ಕಟ್ಟೆಯೆಂಬ ಸಣ್ಣ ಕೆರೆಯ ಕಡೆಯಿಂದ ಅಂತರಿಕ್ಷದಿಂದ ಒಂದು ವಿಧವಾದ ಶಬ್ದವೂ ಧಾರೆಯು ಇಳಿಯಿತು. ಅನಂತರ ಸದರೀ ಧಾರೆಯು ಆನೆಯ ಸೊಂಡಿಲಿನಂತೆ ಮೇಲುಭಾಗ ದಪ್ಪನಾಗಿಯೂ ಕೆಳಭಾಗ ಸಣ್ಣದಾಗಿಯೂ ಕಾಣಿಸಿತು. ಕೂಡಲೇ ಅದು ಒಂದು ಚಕ್ರರೂಪವಾಗಿ ಆಕಾಶಕ್ಕೂ ಭೂಮಿಗೂ ಏಕಾಕಾರವಾಗಿ ದೊಡ್ಡ ತುರಾಯಿ ಕುಂಭದಂತೆ ಅಧೋಭಾಗ ದಪ್ಪನಾಗಿಯೂ ಮೇಲೆ ಸಣ್ಣದಾಗಿಯೂ ಕಾಣ್ಬರಿಸಿತು. ಕೊನೆಗೆ ಅದು ಘೋರವಾದ ಜ್ವಾಲ ಯೊಡಗೂಡಿದ ಸುಳಿಗಾಳಿಯಂತೆ ಪರಿಣಮಿಸಿ ತಾನು ಬಿದ್ದ ಸ್ಥಳದ ಭೂಮಿಯನ್ನು ೧—೫ ಗಜ ಆಳಕೊರೆದು ಆಸಮೀಪದೊಳು ಮೇಯುತಲಿದ್ದ ೩—೪ ಎಮ್ಮೆಗಳನ್ನು ೬—೭ ಕುರಿಗಳನ್ನು ನಾಶಮಾಡಿ ಸದರೀ ಅದವಿ ಕಟ್ಟೆಯಲ್ಲಿದ್ದ ನೀರನ್ನು ಕಳಿಕೆ ಅರ್ಧಭಾಗದವರೆಗೂ ಶೋಷಿಸಿ ಅಲ್ಲಿಂದ ಉತ್ತರಾಭಿಮುಖವಾಗಿ ಪಶ್ಚಿಮಾಭಿಮುಖವಾಗಿ ಹೊರಟು ಮಾರ್ಗದೊಳು ಸಿಕ್ಕಿದ್ದನ್ನು ಧ್ವಂಸಮಾಡುತ ಚಿಣ್ಯದ ಕೆರೆಯನ್ನು ಪ್ರವೇಶಿಸಿ ಅದನ್ನು ಅಲ್ಲೋಲ ಕಲ್ಲೋಲವಮಾಡಿ, ಆಮೈರಿಗೆ ಕಾಂತರೂಪವಾಗಿ ತಮಗೆ ಮುಪ್ಪಿನ ದೇಹವಿಂದ ಒಂದು ಸರ್ಪಾಕೃತಿಯಾಗಿ ಅಂತರಿಕ್ಷವನ್ನೇರಿತು. ಆ ಮೇಲೆ ಅದೆಲ್ಲಾಗಲೊ ತನೆ ಅಗೋಚರವಾದ ಸುದ್ಧಿ ಸ್ಥಿತಿಯಾಯಿತು.

ಕೊಪ್ಪದಿಂದ.—ಶ್ರೀ ಯದುಗಿರಿ ಸದಾನಂದ ವರ್ಧಿನೀ ಸಭಾ ಮೂಲಧನವನ್ನು ಇತರರ ದಿನಗಳನ್ನು ಮುರಿಸ್ಥಿರವಾಗಿ ಬಿಟ್ಟು ಬೇಕಾದವರಿಗೆ ಸಾಲ ಕೊಡುವದರ ದ್ವಾರಾ ವೃದ್ಧಿಯಂತೆ ನಡೆಸಿಕೊಂಡು ಮೂಲಧನವನ್ನು ಅಭಿವೃದ್ಧಿಪಡಿಸುವುದಕ್ಕೆ ಬದಲು ಈ ಊರಿನಲ್ಲಿ ಸದರೀ ಸಭೆಯ ಪರಿಶಿಷ್ಟದ ೧ ಬ್ಯಾಂಕು ಏರ್ಪಾಟುಮಾಡಿದರೆ ಲಾಭಕರವಾಗಿಯೂ ಜನಗಳು ತಮ್ಮ ದ್ರವ್ಯ ಸಂರಕ್ಷಣೆಯ ವಿಷಯದಲ್ಲಿ ಆಸಕ್ತರಾಗಿರುವದನ್ನು ತಮ್ಮ ಸ್ವಂತ ಖರ್ಚು ವೆಚ್ಚಗಳಿಗಾಗಿ ಉಳಿಯುವದನ್ನು ಹಿಂದು ಕಡೆ ಭದ್ರವಾಗಿ ಇಡಿಸುವದೂ ಸಹ ಸಂದೇಹವಿಲ್ಲದೆ ಬಹಳ ಯುಕ್ತವಾದ ಕರ್ತವ್ಯವಾಗಿರುತ್ತೆ. ಹಣಗಳನ್ನು ಸುರಕ್ಷಿತವಾಗಿಡುವದಕ್ಕೆ ಬ್ಯಾಂಕೇ ಅತ್ಯುತ್ತಮ ಸ್ಥಳವಾಗಿರುವದು. ಯಾಕೆಂದರೆ, ಅವುಗಳಲ್ಲಿ ಠೇವಣಿ ಮಾಡುವವರಿಗೆ ಬಡ್ಡಿ ದೊರೆಯುವದು. ಜನಗಳು ತಮ್ಮ ಸಮಯಾನುಸಾರ ಯಾವಾಗಲಾದರೂ ಅಂಥಾ ಬ್ಯಾಂಕುಗಳೊಳು ಸುಲಭವಾಗಿಯೂ ಬಿಟ್ಟಾಗಿಯೂ ಹಣವನ್ನು ಸಂಪಾದಿಸಿಕೊಂಡು ತಮ್ಮ ಪರರು ತೀರಿಸ ಸುಕರಕೊಂಡು ಕೊಡುವಾಗ ಸಾಲ ತೀರಿಸಿಕೊಳ್ಳಬಹುದು. ಆದಕಾರಣ ಅಂತವರಿಗೆಲ್ಲ ಇದು ಮಹದುಪಕಾರ ರೂಪವಾಗಿರುತ್ತೆ. ಆದರೆ, ಇದುವರಿವಿಗೆ ಸ್ಥಾಪಿತವಾಗಿರುವ ಈ ದೇಶದ ಅನೇಕ ನೇಟಿವ್

[illegible]

ಶ್ರೀ ಯದುಗಿರಿ ಸದಾನಂದವರ್ಧಿನೀ ಸಭಾ.—ಈ ಸಭೆಯ ಮುಖ್ಯ ಅಭಿವೃದ್ಧಿಯೊಳು ನಡೆಯುತಿದೆ. ಮ|| ರಾ|| ಪ್ರಿಂಚಿಪಾಲ್ ಸದವಿಚಾರ ಆಕ್ಷಿಸರಿಂದ ದಿ|| ನಾಮಕರಿಯಾದ ಮುಖ್ಯ ದೇವಿ ಮನುಷ್ಯರು ಈಚೆಗೆ ಸಭೆಯ ಮೆಂಬರ್ ಗಳಾದ ಪೋಷಕರಾಗಿ ಸೇರಿರುತ್ತಾರೆ. ಶ್ರೀ ಯದುಗಿರಿ ಸಂಪನ್ನ ನದಿ ಮತ್ತು ಲಾಭದಿಂದ ಇದು ಇತರೋತ್ಸವಗಳ [illegible] ಅಭಿವೃದ್ಧಿಸ್ಥಿತಿಗೆ ಬಂದು ದಿನೇ ಉದ್ದೇಶಗಳನ್ನು ನೆರವೇರಿಸ ಬೇಕೆಂದು ಕೋರುತ್ತೇವೆ.

ಬಹುಮಾನ.—ಇಲ್ಲಿನ ಶ್ರೀ ಯದುಗಿರಿ ಸದಾನಂದವರ್ಧಿನೀ ಸಭೆಯವರು ಈ ದೇಶದ ವಿದ್ಯಾರ್ಥಿಗಳಲ್ಲಿ ಪ್ರೋತ್ಸಾಹಕರೆಂದು ಪ್ರಸಿದ್ಧರೇ ಯನ್ನೆ. ಇವರು ಕಳೆದ ಫಿಬ್ರವರಿ ತಿಂಗಳಲ್ಲಿ ನಡೆದ ಮೈಸೂರು ದೇಶೀಯಪರೀಕ್ಷೆಗೆ ಈ ದೇಶದ ಸರ್ಕಾರೀ ಮತ್ತು ಗ್ರಾಂಟ್ ಇನ್ ಎಯಿಡ್ ಪಾಠಶಾಲೆಗಳಿಂದ ಹೋಗಿ ಪ್ಯಾಸಾದವರಲ್ಲಿ ಅಂ

ಬ್ಯಾಂಕುಗಳಲ್ಲಿ ಇಂಗ್ಲಿಷ್ ಬ್ಯಾಂಕುಗಳಿಗಿಂತ ಬಡ್ಡಿಯು ಬಹು ಮಿಜಾರಿಯಾಗಿ ಬೀಳುತ್ತೆಂಬೆಲೂ, ಸಾಲಿಯಾನಾ ಶೇಕಡಾ ೧೪ ರೂಪಾಯಿಗಳಿಗೆ ಕಮ್ಮಿ ಯಿಲ್ಲವೆಂತಲೂ, ಒಂದೊಂದುವೇಳೆ ೬೦–೭೦ ರೂಪಾಯಿಗಳ ವರಿವಿಗೂ, ಕೆಲ ಬಡ್ಡಿ ಲೆಕ್ಕವಾಗುವಂತೆಯೂ ತಿಳಿಯಬರುತ್ತೆ. ಇಂತಾ ಸಂದರ್ಭಗಳೊಳು ಬ್ಯಾಂಕುಗಳು ಜನಗಳಿಗೆ ಉಪಕಾರಿಯಾಗುವದಕ್ಕೆ ಬದಲು ಅಪಕಾರಿಗಳಾಗಿ ಪರಿಣಮಿಸುತಿದೆ. ಈ ಅಪರಿಮಿತವಾದ ಬಡ್ಡಿ ದರವು ಕೊನೆಗೆ ದೇಣೆದಾರರನ್ನು ನಾಶಮಾಡದೆ ಬಿಡಲಾರದು. ಬ್ಯಾಂಕಿನ ತಗಾದೆಯಂತೆ ಅವನು ಹಣ ಸಂದಾಯ ಮಾಡುವದಕ್ಕೆ ಅಶಕ್ತನಾಗಿ ಆದರಿಂದ ಬ್ಯಾಂಕಿನ ಅಭಿವೃದ್ಧಿಗೂ ಸಹ ಆಟಂಕ ಸಂಭವಿಸದಿರಲಾರದು. ಆದಕಾರಣ ಪ್ರಕೃತ ಇಲ್ಲಿನ ಬ್ಯಾಂಕನ್ನು ಸ್ಥಾಪಿಸಬೇಕೆಂದಿರುವ, ಭಾಗಸ್ಥರೂ, ಡೈರೆಕ್ಟರುಗಳೂ, ಮ್ಯಾನೇಜಿಂಗ್ ಯಾನೇ ಏಜೆಂಟರು ಸಹ ಈ ವಿಷಯದಲ್ಲಿ ನಿಗಾ ಯಿಟ್ಟು ತಮಗೂ ದೇಣೇದಾರರಿಗೂ ಅನುಕೂಲಗಳಾದ ಮತ್ತು ಲಾಭತರವಾದ ರೀತಿಯಿಂದ ಸರಿಯಾದ ನಿಬಂಧನೆಯೊಡನೆ ಸ್ಥಾಪಿಸಿದರೆ ಉತ್ತಮವಾಗಿರುವದು.

ವಿದ್ಯಾಭಿವೃದ್ಧಿ.—ಬಹುಕಾಲಾರಭ್ಯ ಇಲ್ಲಿನ ನಿವಾಸಿಗಳ ವಿದ್ಯಾಭಿವೃದ್ಧಿಯ ಅನುಕೂಲತೆಗಾಗಿ ಸರ್ಕಾರದವರಿಂದ ಸ್ಥಾಪಿಸಲ್ಪಟ್ಟಿರುವ ಇಲ್ಲಿನ ಸಂಸ್ಕೃತ ಪಾಠಶಾಲೆಯೂ, ಗೌರ್ನಮೆಂಟ್ ಕನ್ನಡ ಪಾಠಶಾಲೆಯೂ, ಬಾಲಿಕಾ ಪಾಠಶಾಲೆಯೂ ಬಹಳ ಅಭಿವೃದ್ಧಿಯೊಳಿರುತ್ತೆ. ಈಚೆಗೆ ಇವುಗಳಿಗೆಲ್ಲ ದ್ರವ್ಯಸಹಾಯವು ಹೆಚ್ಚಿ ಈಗ ಮಾಹೆಯಾನಾ ಮೊದಲನೆಯದಕ್ಕೆ ೭೨ ರೂಪಾಯಿಗಳೂ, ಎರಡನೇದಕ್ಕೆ ಸುಮಾರು ೧೨೨ ರೂಪಾಯಿಗಳೂ ಬಾಲಿಕಾ ಸ್ಕೂಲಿಗೆ ೩೦ ರೂಪಾಯಿಗಳವರಿವಿಗೂ ದೊರೆಯುತಲಿವೆ. ಇದಲ್ಲದೆ ಕನ್ನಡ ಸ್ಕೂಲಿನಲ್ಲಿ ರಾತ್ರಿಕಾಲದೊಳು ಸುಮಾರು ೬೦–೭೦ ಮಂದಿ ವಿದ್ಯಾಭ್ಯಾಸ ಮಾಡುತಲಿರುತ್ತಾರೆ. ಈಚೆಗೆ ಇಲ್ಲಿನ ಮಹನೀಯ ದೊಡ್ಡಮನುಷ್ಯರು ಕೆಲವರು ಸೇರಿ ರಾಜವಿದ್ಯೆಯಾದ ಇಂಗ್ಲಿಷಿಗಾಗಿ ೧ ಪಾಠಶಾಲೆಯನ್ನು ಸುಮಾರು ೧ ವರುಷವಾಗಾಯಿತು ಸ್ಥಾಪಿಸಿರುತ್ತಾರೆ. ಇದಕ್ಕೆ ಮ|| ರಾ|| ಜಹಗೀರ್ದಾರ್ ಬಿ. ತಿರುಮಲಾಚಾರ್ಯರವರು ಸ್ವಂತದಿಂದ ತುಂಬಾ ದ್ರವ್ಯಸಹಾಯವನ್ನು ಮಾಡುತಲಿರುವದಾಗಿ ತಿಳಿಯಬರುತ್ತೆ. ಈ ಶಾಲೆಯ ಸಹಾಯಕ್ಕಾಗಿ ಸರ್ಕಾರದಿಂದ ಕೂಡ ಏನಾದರೆ ಸಹಾಯ ದೊರೆಯಬಹುದೆಂದು ನಿರೀಕ್ಷಿಸಲ್ಪಟ್ಟಿದೆ. ಮೆ|| ತಿರುಮಲಾಚಾರ್ಯರವರ ಈ ವಿಧವಾದ ವಿದ್ಯಾಭಿಮಾನಕ್ಕೆ ತಕ್ಕ ಅನುಕೂಲ್ಯವನ್ನು ಭಗವಂತನು ಮಾಡಬೇಕು.

SUMMARY OF NEWS

ವೃತ್ತಾಂತಸಂಗ್ರಹವು.

ಡೆಕ್ಕಾ ಎಂಬ ಹೊಗೇಹಡಗು ಲಂಡನ್ ಪಟ್ಟಣದಿಂದ ಕಳೆದ ತಿಂಗಳು ೨೯ನೇ ತಾರೀಖಿನದಿನ ಹೊರಟು ಮೇ ೧೬ನೇ ತಾರೀಖಿನದಿನ ಕೆಂಪುಸಮುದ್ರದಲ್ಲಿ ಮುಳಗಿಹೋದಂತೆ ತಂತಿ ವರ್ತಮಾನದಿಂದ ತಿಳಿಯಬರುತಿದೆ.

ಕಾಟವಾಡಿಗೆ ಸೇರಿದ ಬಾಬ್ರಾ ಎಂಬ ಗ್ರಾಮದಲ್ಲಿರುವ ಒಬ್ಬ ಹೆಂಗಸು ೩ ತಲೆಗಳುಳ್ಳ ಒಂದು ಗಂಡುಮಗುವನ್ನು ಹೆತ್ತಳು. ಆದರೆ ಅದು ಹುಟ್ಟಿದವತನೆ ಯಮಲೋಕದಲ್ಲಿ ತನ್ನ ರೂಪವನ್ನು ತೋರಿಸುವದಕ್ಕೆ ಹೋಯಿತಂತೆ

ಮಧ್ಯಪ್ರಾಂತ್ಯದಲ್ಲಿ ಕಣ್ವಸಗೋತ್ರಕ್ಕೆ ಸಂಬಂಧಪಟ್ಟ ಹನ್ನೆರದುವರುಷದ ಒಬ್ಬ ಹುಡುಗಿಯು ಪ್ರಬುದ್ಧಳಾಗುವದಕ್ಕೆ ಮುಂಚೆ ತನ್ನ ಅತ್ತೆಸುಗಡ ಜಗಳವಾಡಿಕೊಂಡು ತವರಮನೆಗೆ ಬಂದು ಕ್ರಮವಾಗಿ ಮುಂಡನ ಮಾಡಿಸಿಕೊಂಡು ಕುಂಕುಮಕ್ಕೆ ಬದಲಾಗಿ ಗೋಪೀಚಂದನ ಅಂಗಾರವನ್ನು ಹಚ್ಚಿಕೊಳ್ಳುತ್ತಾಳಂತೆ. ಆಹಾ! ಇವಳಿಗೆ ಇದರಮೇಲೆ ಎಷ್ಟು ಆಶೆಯಿತ್ತೋ.

ಉತ್ತರಾದಿ ಮಠದ ಸ್ವಾಮಿಗಳು ಮತವಿಚಾರದಲ್ಲಿ ವ್ಯತ್ಯಾಸವಾಗಿ ತಾತ್ಪರ್ಯವುಳ್ಳ ಒಬ್ಬ ಆಚಾರ್ಯನನ್ನು ಬಹಿಷ್ಕರಿಸಿದ್ದರು. ರಾಘವೇಂದ್ರಮಠದ ಸ್ವಾಮಿಗಳು ಆ ಆಚಾರ್ಯರನ್ನು ತಮ್ಮ ಶಿಷ್ಯವರ್ಗಕ್ಕೆ ಸೇರಿಸಿಕೊಂಡರು. ಇದರಿಂದ ಈಉಭಯ ಮಠೀಯರಿಗೂ ಪರಸ್ಪರ ಸವ್ಯವಹಾರತಪ್ಪಿ ಅನೇಕ ಕುಟುಂಬಗಳಲ್ಲಿ ನಾನಾವಿಧವಾದ ತೊಂದರೆಗಳು ಉಂಟಾಗಿ ಶುಭಶೋಭನಾದಿಗಳಿಗೆ ಅಡಚಣೆ ಉಂಟಾಗಿರುವಂತೆ ತಿಳಿಯಬರುತದೆ. ಮತ ಸಿದ್ಧಾಂತಗಳ ವಿಷಯದಲ್ಲಿ ವ್ಯತ್ಯಾಸವಾದ ಅಭಿಪ್ರಾಯ ಉಂಟಾದ ಮಾತ್ರದಿಂದಲೇ ಸವ್ಯವಹಾರಕ್ಕೂ ಕೊಡುವದಕ್ಕೂ ತರುವದಕ್ಕೂ ಯಾವ ಪ್ರತಿಬಂಧಕವೂ ಇಲ್ಲದಂತೆ ಆಚಾರ್ಯರುಗಳು ಏರ್ಪಾಡು ಮಾಡತಕ್ಕಕಾಲಕ್ಕೆ ಸಮೀಪಿಸುತಲಿವೆ, ಈ ವಿಷಯದಲ್ಲಿ ಸ್ವಾಮಿಗಳು ಶಿಷ್ಯರು ಎಲ್ಲರೂ ಎಷ್ಟು ಜಾಗ್ರತೆಯಾಗಿ ಮನಸ್ಸುಕೊಟ್ಟರೆ ಅಷ್ಟು ಒಳ್ಳೇದು

ಕಾಶ್ಮೀರ್ ಮಹಾರಾಜರವರ ಖಜಾನೆಯು ನೀರಿನ ಹಾಗೆ ವ್ಯಯವಾಗಿ ಗಿಲಿಜಿಟ್ ವರೆಗೆ ರಸ್ತೆಯೂ ಮತ್ತು ಅಲ್ಲಿಯ ಕೋಟೆಯೂ ದುರಸ್ತಿಆದ ಮೇಲೆ ಮಹಾರಾಜರ ಸಂಬಂಧವಾಗಿ ಚಾಕಸೀ ಆಖೀತಾಗಿ ತೋರುತ್ತದೆ. ಪತ್ರಕರ್ತರು ಸಂಶಯಗೊಂಡಂತೆ ಮಹಾರಾಜರಿಗೆ ಪದಚ್ಯುತ ಮಾಡುವ ಸಂಗತಿಯಲ್ಲಿ ತಂದ ಕ್ಷುಲ್ಲಕ ಆರೋಪದ ಮೂಲ ಬೀಜವಂ ಕುರಿತು ಅಲ್ಲಿಯ ಶೀಮೆಯ ಬಂದೋಬಸ್ತಿ ಆದ ಕೂಡಲೇ ನಿಜಾತ ಮಾಡುವರು. ಈ ನ್ಯಾಯದಿಂದ ಸರಕಾರದವರಿಗೆ ಶಿಫಾರಸ್ ಸಿಕ್ಕಲಿಕ್ಕಿಲ್ಲ. ಮತ್ತು ತಿಜೋರಿಯ ಖರ್ಚಾದ ಹಣವು ತುಂಬಿ ಬರುವದು ಸಹ ಕಠಿಣವೇ. ಇವರ ದೇಶದಿಂದ ಅಲ್ಲಿಯ ನೌಕರರ ತಲಬನಲ್ಲಿ ಶೇಕಡಾ ೧೫ ರಂತೆ ಕಡಿಮೆಯಾಯೀತೆಂದು ಕೇಳುತ್ತೇವೆ ಸರಿಯೆ?! ಈಗ ಮಾತ್ರ ನಮ್ಮ ಸರಕಾರದವರು ತಾವು ನ್ಯಾಯಮತರೆನ್ನಿಸಿ ಕೊಳ್ಳುವ ಪ್ರಯತ್ನ ಮಾಡದೆ ಇರುವ ಮತ್ತುಮವೆ.—ಕ ಸು

ಸಾತಾರೆಯಲ್ಲಿ ಕೃಷ್ಣೀ ಯೆಂಬ ಹೆಸರುಳ್ಳ ೧೪ ವರುಷ ಪ್ರಾಯದ ಒಬ್ಬ ಹುಡುಗಿಯು ತನ್ನ ತಲೆಯಮೇಲಿನ ಕೂದಲುಗಳನ್ನು ತೆಗಿಸಿ ತಲೆಯಮೇಲೆ ಚಂಡಿಕೆಯನ್ನು ಇಟ್ಟು ಪುರುಷರಂತೆ ಮೈಮೇಲೆ ವಸ್ತ್ರಗಳನ್ನು ಧರಿಸುತ್ತಿದ್ದಳು. ಮತ್ತು ಈ ವೇಷಧಾರಿಯಾದ ಹುಡುಗಿಯು ಒಬ್ಬ ಕ್ರಿಶ್ಚನ್ ಅಂಗಡಿಯಲ್ಲಿ ಚಾಕರಿಗೆ ನಿಂತು ವೇಳೆಸಾಧಿಸಿವಾಗ್ಯೆ ಅವನ ಅಂಗಡಿಯಲ್ಲಿ ಕೈಗೆ ಸಿಕ್ಕಿದ್ದನ್ನು ಎತ್ತಿ ಹಾಕುತಲಿದ್ದಳು ಒಂದು ದಿವಸ ಅಂಗಡಿಯ ಮಾಲಿಕನಿಗೆ ಇವಳು ಕಳವು ಮಾಡಿದ ಬಗ್ಯೆ ಸಂಶಯ ಬಂದು ಇವಳನ್ನು ಹಿಡಿದಾಗ ಮಾಲಿಕನ ಮುಂದೆ ತಾನು ಹಿಂದೆ ಕಳವು ಮಾಡಿದ್ದನ್ನು ಸಹ ಹೇಳಿದಳು. ಮಾಲಿಕನು ಇವಳನ್ನು ಪೋಲೀಸಿನವರ ಕೈಗೆ ಕೊಟ್ಟನು ಪೋಲೀಸಿನವರಿಗೆ ಈ ವೇಷಧಾರಿ ಪುರುಷನ ಭಾಷಣದ ಮೇಲಿಂದ ಇವಳು ಹೆಂಗಸಿರಬಹುದೆಂದು ಸಂಶಯ ಬಂದು ವಿಚಾರಿಸಲಾಗಿ ಅದರಂತೆ ಒಪ್ಪಿಕೊಂಡಳು. ಈ ಹೆಂಗಸಿಗೆ ಕಳವು ಮಾಡಿದ ಅಪರಾಧಕ್ಕಾಗಿ ಮ್ಯಾಜಿಸ್ಟ್ರೇಟರು ಒಂದು ತಿಂಗಳ ಕಾರಾಗೃಹದ ಶಿಕ್ಷೆಯನ್ನು ವಿಧಿಸಿದರು. ಇದರಮೇಲಿಂದ ಸ್ತ್ರೀಯರೊಳಗೆ ಸಹ ವೇಷಗಾರಿಕೆಯರೂ ಧೈರ್ಯಗಾತಿಕೆಯರೂ ಇದ್ದಾರೆಂದು ಕಾಣುತ್ತದೆ.

ಟರ್ಕಿ ಸುಲ್ತಾನರ ದರಬಾರಿನಲ್ಲಿ ಇವ್ಹಾನಾಫ್ ಎಂಬ ಹೆಸರಿನ ರಷ್ಯಾದ ವಕೀಲರ ಹೆಂಡತಿಯು ಮತ್ತು ಮಗಳು ಕೂಡ ಹಾದಿಯ ಮೇಲಿಂದ ಹೋಗುತ್ತಿರುವಾಗ ೮–೫ ಮಂದಿ ಅಲ್ಲಿಯ ನೌಕರರು ನೋಡಿ ಹಿಡಿದು ಒತ್ತಾಯದಿಂದ ಅವರನ್ನು ಮುಟ್ಟಿದ್ದರು ; ಇದರಿಂದ ಅವರನ್ನು ಕೆಲಸದಿಂದ ಬಿಡಿಸಿದ್ದರು. ಮರುದಿವಸವೇ ಮಾರ್ಷಲ್ ಕೋರ್ಟಿನವರಿಂದ ಅವರ ವಿಚಾರವಾಗಿ ಆರುತಿಂಗಳ ವರಿಗೆ ಹದ್ದುಪಾರ ಮಾಡಬೇಕೆಂಬ ಶಿಕ್ಷೆಯನ್ನು ವಿಧಿಸಲ್ಪಟ್ಟಿತು. ಇದರ ನಿಃ ಈ ಶಿಕ್ಷೆಯ ನಂತರ ಟ್ರಿಪೋಲಿ ಎಂಬಲ್ಲಿ ಜನ್ಮಪರ್ಯಂತರ ಹದ್ದುಪಾರ ಮಾಡಬೇಕೆಂತ ಸುಲ್ತಾನರ ಅಪ್ಪಣೆಯಾಗಿದೆ. ಎಂಥ ಕಠಿಣ ಶಿಕ್ಷೆಯು? ಈ ನಮ್ಮ ಹಿಂದುಸ್ಥಾನದಲ್ಲಿ ಸಹ ಅನೇಕ ಗೋಲ್ಬರರು ಹಿಂದೂ ಸ್ತ್ರೀಯರನ್ನು ಮುಟ್ಟಿದ ಸಂಗತಿಯು ಒಂದೆರಡಾವರ್ತಿ ಕೇಳಬಂದಿತ್ತು. ಆದರೆ ಆ ತಪ್ಪಿತಕ್ಕೋಸ್ಕರ ಈ ತೆರದ ಕಠಿಣಶಿಕ್ಷೆಯಾದದ್ದು ಯಾರಕೇಳುವಿಕೆಯಲ್ಲಿರುವದೋ! ಕ ಸು.

ಬಂಗಾಲದೊಳಗೆ ಬರ್ದ್ವಾನ್ ಪುರದ ಕಾಯಸ್ಥಜಾತಿಯಜನರು ಮದುವೆಯೊಳಗೆ ಮಿತಿಯಿಂದ ಖರ್ಚು ಮಾಡಬೇಕೆಂಬುವ ಬಗ್ಯೆ ಈ ಕೆಳಗಿನ ನೇಮಗಳನ್ನು ಮಾಡಿದ್ದಾರೆ.—

೧. ಹುಡುಗಿಯ ತಂದೆಯು ಅವಳ ಮದುವೆಗಾಗಿ ತನ್ನ ೬ ತಿಂಗಳ ಉತ್ಪನ್ನಕ್ಕಿಂತ ಹೆಚ್ಚು ಖರ್ಚನ್ನು ಮಾಡಬಾರದು.

೨. ಪ್ರಿತಿಯು ಒಬ್ಬಳೇ ಮಗಳಿದ್ದರೆ ಅಂತವಳ ಮದುವೆಗಾಗಿ ತನ್ನ ೧ ವರ್ಷದ ಉತ್ಪನ್ನಕ್ಕಿಂತ ಹೆಚ್ಚು ಖರ್ಚನ್ನು ಮಾಡಬಾರದು.

೩ ಅಳಿಯನ ಪಾಲಕನಿಗೆ ರೋಕ್ ಹಣವನ್ನು ಕೊಡುವ ಕುರಿತು ಅಥವಾ ಅಳಿಯನಿಗೆ ಅಭ್ಯಾಸ ಮಾಡಿಸುವ ಕುರಿತು ಏನೂ ಕರಾರ್ ಮಾಡಬಾರದು.

೪. ಮದುವೆಯಲ್ಲಿ ಮಾಡತಕ್ಕ ಖರ್ಚಿನ ಅರ್ಧ ಹಣವನ್ನು ಆಭರಣಗಳಿಗೋಸ್ಕರ ಖರ್ಚು ಮಾಡಬೇಕು. ನಿಂತ ಭಾಗವನ್ನು ಭೋಜನಕ್ಕೋಸ್ಕರ ಮಾಡಬೇಕು.

೫ ಈ ಮೇಲಿನ ನೇಮಗಳನ್ನು ಯಾರು ಪಾಲಿಸುವದಿಲ್ಲವೋ ಅಂತವರನ್ನು ಜಾತಿಯಿಂದ ಹೊರಗೆ ಹಾಕಲಾಗುವದು. ಎಲ್ಲ ಕಡೆಯ ಸಾಮಾಜಿಕ ಸುಧಾರಕರು ಈ ಮೇಲಿನಂತೆ ನೇಮಗಳನ್ನು ಮಾಡಿಕೊಳ್ಳಬೇಕು. ಆದರೆ ದ್ರವ್ಯದ ದುರುಪಯೋಗವನ್ನು ತಕ್ಕಮಟ್ಟಿಗೆ ಕಡಿಮೆ ಮಾಡಿದಾಗುವದು—ಚಂದ್ರೋದಯ.

ಪಂಡಿತ ರಮಾಬಾಯಿಯವರು ಪ್ರವಾಸದ ಮೇಲೆ ಮುಂಬಯಿಯಿಂದ ಹೊರಟವರು ಈಗ ಈ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಬಂದಿರುತ್ತಾರೆ. ಅವರು ತಾವು ಮುಂಬೈಯಲ್ಲಿ ಸ್ಥಾಪಿಸಿದ ಶಾರದಾ ಸದನಕ್ಕೆ ವಿಧವಾ ವಿದ್ಯಾರ್ಥಿಯರನ್ನು ಸಂಗ್ರಹಿಸುವ ಕಾರ್ಯಾರ್ಥವಾಗಿ ಇಲ್ಲಿಗೆ ಬಂದಿರುವದಾಗಿ ನುಡಿಯುತ್ತಾರೆ. ಈ ಜಿಲ್ಲೆಯು ಅವರ ಜನ್ಮ ಭೂಮಿ ಎಂಬದು ಸರ್ವರಿಗೂ ವಿದಿತವಾಗಿರಬೇಕ್ಕೆ ಸಾಕು. ಆದರಿವರು ಆ ಪೈಕಿ ಉಡುಪಿ ತಾಲ್ಲೂಕಿನ ಮಾಳಗ್ರಾಮದ ಗಂಗೆ ನೀರು ಎಂಬಲ್ಲಿ ಜನಿಸಿದ್ದು ಎಂಬದು ಕೆಲವೇ ಜನರಿಗೆ ಮಾತ್ರ ಗೊತ್ತಿರಬಹುದು. ಈಗ ತನ್ನ ಹುಟ್ಟು ಊರಾದ ಸದರೀ ಗಂಗೇ ನೀರಿಗೆ ಕಳೆದ ೯ ನೇ ತಾರೀಖಿನ ಶುಕ್ರವಾರದಲ್ಲಿ ಬಂದು ಅಲ್ಲಿಂದ ಸಮೀಪದ ಇರುವ ಕಾರ್ಕಳಕ್ಕೆ ಆ ಪಟ್ಟಣ ನಿವಾಸಿಗಳ ಆಮಂತ್ರಣ ಪ್ರಕಾರ ಚಿತ್ತೈಸಿದರು. ಅಲ್ಲಿ ಅವರಿಗೆ ಬಹಳ ಆದರ ಉಪಚಾರಗಳಿಂದ ಸ್ವಾಗತಮಾಡಿ ಒಂದು ಮಾನಪತ್ರವು ಕೊಡಲ್ಪಟ್ಟಿತು. ಇನ್ನು ಮಂಗಳೂರಿಂದಲೂ ಉಡುಪಿಯಿಂದಲೂ ನಿಮಂತ್ರಣೆಗಳು ಕಳುಹಿಸಿರುವದರಿಂದ ಆ ಪುರಗಳಿಗೆ ತೆರಳುವವರಿದ್ದಾರೆ. ಈ ಜಿಲ್ಲೆಯ ಎಲ್ಲ ಜನರು ಅವರಿಗೆ ನಮ್ಮ ರಮಾಬಾಯಿ, ನಮ್ಮ ರಮಾಬಾಯಿ ಎಂಬ ಭಾವನೆಯಿಂದ ಅವರ ಸಂಬಂಧವಾಗಿ ಬಹಳ ಸ್ವಾಭಿಮಾನ ಪಡುತ್ತಾರೆ. ಮತ್ತು ಅವರ ಆಗಮನದ ಉದ್ದೇಶವನ್ನು ಅತಿ ತೃಪ್ತಿಕರವಾಗಿ ಕೈಗೂಡಿಸಿಕೊಡುವ ವಿಷಯದಲ್ಲಿ ಹೆಚ್ಚು ಆತುರವುಳ್ಳವರಾಗಿರುತ್ತಾರೆ ಇಲ್ಲಿಯು ಅವರಕೆಲಸ ತೀರಿದಬಳಿಕ ಮೈಸೂರಿಗೆ ಪ್ರಯಾಣಮಾಡುವರು. ಕ ಸು.

EXTRACT

ಇದುವರೆಗೂ ಅಷ್ಟಗ್ರಾಮದ ಡಿಸ್ಟ್ರಿಕ್ಟ್ ಸೆಷನ್ ಜಡ್ಜಿಗಳಾಗಿದ್ದ ಮೆ|| ಹೇಮಾಜಿರಾಯರವರಿಗೆ ಅವರ ಯಾಚಿಸಿದಂತೆ ಯಥಾಪ್ರಕಾರವಾಗಿ ಚೀಫ್‌ಕೋರ್ಟು ರಿಜಿಸ್ಟ್ರಾರ್‌ಕೆಲಸ ಕೊಡಲ್ಪಟ್ಟಿರುತದೆಂದು ಮೈಸೂರು ಗೆಜೆಟಿನಲ್ಲಿ ಶಾಯಿಷಿ ಮಾಡಲ್ಪಟ್ಟಿರುತದೆ. ಆದರೆ ರಿಜಿಸ್ಟ್ರಾರ್ ಕೆಲಸವು ಸಬ್ ಜಡ್ಜೀಕೆಲಸದ ಗ್ರೇಡಿಗೆ ಸಮಾನವಾದದ್ದೇಹೊರ್ತು ಮತ್ತೆ ಬೇರೆ ಅಲ್ಲ. ಹೀಗೆ ಕಮ್ಮೀ ಗ್ರೇಡಿಗೆ ಸಮಾನವಾದ ರಿಜಿಸ್ಟ್ರಾರ್ ಕೆಲಸಕ್ಕೆ ಸೆಷನ್ ಜಡ್ಜಿಗಳಾಗಿದ್ದವರು ಹಿಂದುಮೇಳೆ ಅಪೇಕ್ಷಿಸಿಪಟ್ಟಾಗ್ಯೂ ನಮ್ಮ ದಿವಾನರವರು ಇದನ್ನು ಮಂಜೂರ್‌ಮಾಡಿದ್ದು ನೋಡಿದರೆ ಆಶ್ಚರ್ಯವಾಗಿ ತೋರುತಿದೆ. ಒಳ್ಳೇದು ನಮ್ಮ ದಿವಾನರವರು ಪೂರ್ವದಲ್ಲಿ ಡೆಪ್ಯೂಟೀಕಮಿಷನರಾಗಿದ್ದರು. ಈಗ ಅವರು ಯಥಾಪ್ರಕಾರ ಈ ದಿವಾನಗಿರಿ ಸಂಬಳ ತೆಗದುಕೊಂಡು ಡೆಪ್ಯೂಟೀ ಕಮಿಷನರ್‌ಕೆಲಸ ನೋಡುತ್ತೇವೆಂದು ಹೇಳಿದರೆ ನಮ್ಮ ಮಹಾರಾಜಾ ಸರ್ಕಾರದವರು ಒಪ್ಪುವ ಪಕ್ಷದಲ್ಲಿ ಇದೂ ಆಗಬಹುದು. ನಮ್ಮ ದಿವಾನರವರ ಆಡಳಿತದಲ್ಲಿ ಇಂತಾ ನೂತನವಾದ ನಡವಳಿಕೆ ಏರ್ಪಾಡುಗಳೇ ನಡೆಯುವವು. ಇದಲ್ಲದೆ ಮೆ|| ಹೇಮಾಜಿರಾಯರು ರಿಜಿಸ್ಟ್ರಾರಾಗಿದ್ದಾಗ್ಯೂ ಸೆಷನ್ ಜಡ್ಜಿಕೆಲಸದಲ್ಲಿದ್ದಾಗ ಸಲ್ಲುತ್ತಿದ್ದ ೪೦೦ ರೂಪಾಯಿಗಳ ಸಂಬಳವೇ ಸಲ್ಲುತ್ತಿರುವದು. ಇಷ್ಟು ಭಾರೀಸಂಬಳವನ್ನು ತೆಗದುಕೊಂಡು ಕೆಲಸದ ಗಲಾಟೆಯಿಲ್ಲದೆ ಇರತಕ್ಕ ರಿಜಿಸ್ಟ್ರಾರ್‌ಕೆಲಸಕ್ಕೆ ಇವರನ್ನು ನೇಮಿಸಿರುವದು ನಮ್ಮದಿವಾನರವರ ರಾಜ್ಯಭಾರದಲ್ಲಿ ಏನೂ ಆಶ್ಚರ್ಯಕರವಾದದ್ದಲ್ಲ. ಈ ರಿಜಿಸ್ಟ್ರಾರ್‌ಕೆಲಸವನ್ನು ೨೦೦ ರೂಪಾಯಿ ಸಂಬಳ ತೆಗೆಯುತಲಿದ್ದ ಅಧಿಕಾರಿಗಳು ಇದುವರಿಗೆ ನೋಡುತ್ತಾ ಇರಲಿಲ್ಲವೆ? ಈಗ ಅದೇ ಕೆಲಸಕ್ಕೆ ೪೦೦ ರೂಪಾಯಿ ಸಂಬಳ ಉಳ್ಳವರನ್ನು ನೇಮಿಸುವದಕ್ಕೆ ಕಾರಣವೇನು? ಸೆಷನ್ ಜಡ್ಜಿಗಳಾಗಿ ಇವರು ಮಾಡಿದ ಕೆಲಸವು ಸಮರ್ಪಕವಾಗಿದ್ದರೆ ಅವರನ್ನು ಈ ಕೆಲಸಕ್ಕೆ ತರುವದಕ್ಕೆ ಕಾರಣವೇ ಇಲ್ಲ. ಅವರು ಮಾಡಿದ ಕೆಲಸವು ಅಸಮರ್ಪಕವಾಗಿದ್ದರೆ ಅವರನ್ನು ಡಿಸ್ಮಿಸ್ ಮಾಡಿಸುವದು ಉತ್ತಮ. ಇವೆರಡೂ ಇಲ್ಲದೆ ಅವರ ಕೆಲಸಕ್ಕೂ ಬೇರೆ ನಿಯೋಜಿಸಿ ಅವರಿಗೆ ಅದೇ ಸಂಬಳವನ್ನು ಕೊಡುವದು ನಮ್ಮ ದಿವಾನರವರಿಗೆ ಮಾತ್ರ ಯುಕ್ತವಾಗಿ ತೋರಿರಬಹುದು. ಅದು ಹ್ಯಾಗಾದರೂ ಇರಲಿ. ಮುಖ್ಯ ಇವರ ದಿವಾನಗಿರಿಯಲ್ಲಿ ಯಾರ್ಯಾರು ಯಾವಯಾವ ಬಾಬುಗಳಲ್ಲಿ ಪರಿಶ್ರಮ ಉಳ್ಳವರೋ ಯಾರ್ಯಾರನ್ನು ಯಾವಯಾವ ಬಾಬಿನಲ್ಲಿಟ್ಟರೆ ಕೆಲಸಗಳು ಲೀಲಾಜಾಲವಾಗಿ ನಡೆಯುತ್ತವೋ ಎಂಬ ಅಂಶಗಳ ವಿಮರ್ಶೆಯು ಇಲ್ಲವೆಂದು ತೋರುತ್ತದೆ. ಹ್ಯಾಗಂದರೆ— ಮೆ|| ಹೇಮಾಜಿರಾಯರು ಪೂರ್ವದಲ್ಲಿ ರಿಜಿಸ್ಟ್ರಾರಾಗಿದ್ದರು. ಅಂತಾವರು ಜಡ್ಜೀ ಕೆಲಸವನ್ನು ನಿರ್ವಹಿಸುವದಕ್ಕೆ ಶಕ್ತರೇ ಅಶಕ್ತರೇ ಎಂಬ ಅಂಶವನ್ನು ಯೋಚಿಸದೇ ನೇಮಿಸಿದರು. ಇದರಿಂದ ಉಂಟಾಗಿದ್ದ ಅನಾನುಕೂಲಗಳು ಅನುಭವಸಿದ್ಧವಾದವು ಈಗ ಅವರೂ ಹ್ಯಾಗಾದರೇನು ಸಂಬಳ ಬರುತ್ತಿದ್ದರೆ ಸರಿ ಎಂದು ಪೂರ್ವದ ಕೆಲಸವನ್ನೇ ಅಂಗೀಕರಿಸಿದರು. ಸಬ್ ಜಡ್ಜಿಗಳಾಗಿದ್ದ ಮೆ|| ಕೃಸ್ ಸಾಹೆಬರವರಿಗೆ ಏಕಾಏಕಿ ಡೆಪ್ಯೂಟೀ ಕಮಿಷನರ್ ಕೆಲಸವನ್ನು ಕೊಟ್ಟರು. ಇವರಿಗೆ ಜುಡಿಷಲ್ ಬಾಬಿನಲ್ಲಿರುವ ಪಾಂಡಿತ್ಯ ರೆವಿನ್ಯೂ ಬಾಬಿನಲ್ಲಿ ಇಲ್ಲದ್ದರಿಂದ ಅಲ್ಲಿನ ತಾಮೇದಾರೀ ನೌಕರರ ಪ್ರಾಬಲ್ಯವು ಅಧಿಕವಾಗಿ ಅವರ ವ್ಯಾಮೋಹಗಳಿಂದ ಅಪಹಾರ ತಿಳಿಸುವದಕ್ಕೋಸ್ಕರ ಬಂದವರಿಗೆಲ್ಲಾ ಕಿರುಕುಳಗಳು ಹೆಚ್ಚಾಗಿದ್ದವು. ಇನ್ನು ಕೆಲವರು ಬಿ. ಎಲ್ ಪ್ಯಾಸ್ ಮಾಡಿ ಜಡ್ಜಿಗಳಾಗಿದ್ದು ಜುಡಿಷಲ್ ಬಾಬಿನಲ್ಲಿ ಗಟ್ಟಿಗರಾಗಿದ್ದವರನ್ನೆಲ್ಲಾ ರೆವಿನ್ಯೂ ಲೈನಿಗೆ ತಂದಿದಾರೆ. ಇವರಿಗೆ ಈ ಬಾಬಿನಲ್ಲಿ ಮಾಹಿಯತ್ತು ಜುಡಿಷಲ್ ಬಾಬಿನಲ್ಲಿ ಒದಗುವಷ್ಟು ಇಲ್ಲ—ವೃ. ಬೋ.

Bangalore — Printed and published at the KARNATIC PRESS, No. 114, SRINIVASA MANDIRAM ROAD, PETTAH—1890.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XVII] BANGALORE.—MONDAY, JUNE 16 1890 [No 24.

ಪುಸ್ತಕ ೧೭ | ಬೆಂಗಳೂರು — ಸನ್ ೧೮೯೦ನೇ ಇಸವಿ ಜೂನ್ ೧೬ ನೇ ತಾರೀಖ್ ಸೋಮವಾರ. [ಸಂಚಿಕೆ ೨೪

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚ ದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡದ ಭಾಗಗಳಿಗೆ

[illegible]

ಇಂಗ್ಲಿಷ್ ಅಥವಾ ಕನ್ನಡದ ಭಾಗಗಳಿಗೆ.

[illegible]

ಪ್ರಕಟನೆಯ ರಿವಾಜ್.

[illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

[illegible]

ADVERTISEMENTS

ನೋಟೀಸ್

ಇದರ ಕೆಳಗೆ ಬರೆದಿರುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು [illegible] ಬಿಕ್ಕಲ್ಸಾಗುವವು.

ಸಂಸ್ಕೃತ ಗ್ರಂಥಗಳು.

[illegible]

ಕನ್ನಡ ಗ್ರಂಥಗಳು.

[illegible]

ನೋಟೀಸ್

ಇದರಿಂದ ಸಮಸ್ತ [illegible]

[illegible]

ಬೆಂಗಳೂರು) [illegible]
[illegible]) ಕರ್ಣಾಟಕ ಪ್ರಕಾಶಿಕಾ.

ನೋಟೀಸ್.

ಮನೆಗಳಲ್ಲಿ ಗಿಲೀಟ್ ಮಾಡುವದಕ್ಕೆ ಅನುಕೂಲವಾದ ಬೆಳ್ಳಿ ದ್ರಾವಕವು.

ಈ ಬೆಳ್ಳಿ ದ್ರಾವಕವು ಸೈಜವಾದ ಬೆಳ್ಳಿ [illegible] ಗಿಲೀಟ್ ಮಾಡುವದಕ್ಕಿಂತ ಬಹಳ [illegible] ಕೂಡಲೇ ಒಂದು ಸೀಸೆಯನ್ನು [illegible]

ಇದರ ಕ್ರಯ ಸೀಸೆ ೧ ಕ್ಕೆ ೨—೮—೦

ಚಿನ್ನದ ದ್ರಾವಕವು.

ಇದು ಬೆಳ್ಳಿ, ಹಿತ್ತಾಳೆ, ತಾಮ್ರ ಮತ್ತು [illegible]

ಇದರ ಕ್ರಯ ಸೀಸೆ ೧ ಕ್ಕೆ ೩—೪—೦

[illegible]

Bangalore City Municipality

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ

ನಂಬರ್ ೧೮೨

ಸನ್ ೧೮೯೦ನೇ ಇಸವಿ ಜೂನ್ ತಾರೀಖ್ [illegible] ನೇ ಮಂಗಳವಾರ ಪ್ರಾತಃಕಾಲ ೭½ ಘಂಟೆಗೆ ಸಿಟಿ ಮ್ಯುನಿಸಿಪಲ್ ಸಭಾಸದರು ತಮ್ಮ [illegible] ಕಚೇರಿಯಲ್ಲಿ ಸಭೆ ಸೇರುವಾಗ ಅವರ ಆಲೋಚನೆಗೆ ಒಪ್ಪಿಸುವ ವಿಷಯಗಳ ಯಾದಿ.

೧. ಸನ್ ೧೮೯೦ನೇ ಇಸವಿ ಮೇ ತಿಂಗಳ [illegible] ಲೆಕ್ಕ ಮತ್ತು ಜಮಾ ಲೆಕ್ಕಗಳು.

೨. ಸಿಟಿ ಮ್ಯುನಿಸಿಪಾಲಿಟಿಯ ೧೮೮೯—೯೦ [illegible] ಲೆಕ್ಕಗಳು.

೩. [illegible]

೪. [illegible]

೫ ಸಿಟಿ ಮ್ಯುನಿಸಿಪಾಲಿಟಿಯ ೧೮೯೦—೯೧ [illegible] ಮೈಸೂರು ಗವರ್ನ್‌ಮೆಂಟ್ ಪ್ರೊಸೀಡಿಂಗ್ಸ್

೬ ಸನ್ ೧೮೯೯—೯೦ನೇ ಇಸವಿಯ ಬಡ್ಜೆಟ್ ಪ್ರಕಾರ ಉಳಿದ ಹಣವನ್ನು ಉಪಯೋಗ ಪಡಿಸಿಕೊಳ್ಳುವ ವಿಷಯದಲ್ಲಿ [illegible] ೯೦ನೇ ಇಸವಿ ಮೇ ೧೬ನೇ ತಾರೀಖಿನ [illegible] ನೇ ನಂಬರಿನ ಮೈಸೂರು ಗವರ್ನ್‌ಮೆಂಟ್ ಪ್ರೊಸೀಡಿಂಗ್ಸ್.

೭. [illegible] ಸಾಂಕ್ಷನ್ ಮಾಡಿ ಬಂದ ೯೦ನೇ ಇಸವಿ ಜೂನ್ [illegible] ನೇ ತಾರೀಖಿನ [illegible] ನೇ ನಂಬರಿನ ಮೈಸೂರು ಗವರ್ನ್‌ಮೆಂಟ್ ಪ್ರೊಸೀಡಿಂಗ್ಸ್.

೮ ಬೆಂಗಳೂರು [illegible] ಕೆಲಸಕ್ಕೆ [illegible] ಮಿಸ್ಟ್ರೆಸ್ [illegible] ವಿಷಯದಲ್ಲಿ ಸೀನಿಯರ್ ಸರ್ಜನರಿಂದ ಬಂದ ೯೦ನೇ ಇಸವಿ ಮೇ [illegible] ನೇ ತಾರೀಖಿನ [illegible] ನೇ ನಂಬರ್ [illegible] ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ೯೦ನೇ ಇಸವಿ [illegible] ನೇ ಜೂನ್ [illegible] ನೇ ನಂಬರ್ ಚಾಕೀಟ

ಬೆಂಗಳೂರು,) A S RAGHAVACHARLU,
[illegible] ಜೂನ್,) *Vice President,*
ಸನ್ ೧೮೯೦) *City Municipal Commn.*

ನೋಟೀಸ್

ಮೈಸೂರು [illegible] ಚೀಫ್‌ಕೋರ್ಟಿನಲ್ಲಿ ಸನ್ 1890ನೇ ಇಸವಿ ಮಿಸಲೇನಿಯಸ್ ನಂ 94

ಅರ್ಜೀದಾರರು

[illegible]

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ,—

[illegible] 23 ಜನರು [illegible] ಸನ್ 1890ನೇ ಇಸವಿ [illegible]

[illegible] II [illegible]

By the Court

[illegible]) S. [illegible] Row,
೯೦ 1890ನೇ [illegible]) *Registrar*

ನೋಟೀಸ್.

ಮೈಸೂರು ಮಹಾರಾಜರ ಮಿಲ್ಲಿಗೆ ಆರುತಿಂಗಳ ಪರಿಮಿತಿಗೂ ತಿಂಗಳು 1 ಕ್ಕೆ 350 ಪಲ್ಲ ಒಳ್ಳೆ ಧಾರವಾಡದ ಗೋಧಿ ಸಪ್ಲೈ ಮಾಡತಕ್ಕಂತಾವರು ಯಾವ ಯಾವ ಬರದ ಪೇರಿಗೆ ಕೊಡುವದಕ್ಕೆ ಇಚ್ಛೈಸುತ್ತಾರೋ ಅಂತಾ ದರಖಾಸ್ತುಗಳನ್ನು ಇದೇ ಇಸವಿ ಜೂನ್ 20 ನೇ ತಾರೀಖಿನೊಳಗಾಗಿ ಕಳುಹಿಸಿ ಕೊಡತಕ್ಕದ್ದು. ಅಥವಾ ಮೊಖ್ತಾಗಿ ಯಾದರೂ ಮಿಲ್ ಸೆಕ್ರಟರಿಯವರಲ್ಲಿ ಬರಹಮೂಲಕ ಕೊಡತಕ್ಕದ್ದು. ಪ್ರತಿ ದರಖಾಸ್ತುದಾರನು ದರಖಾಸ್ತಿನ ಸಂಗಡ 2 ಸೇರು ಗೋಧಿಯನ್ನು ಮಾದ್ರಿಗಾಗಿ ಒಂದು ಚೀಲದಲ್ಲಿ ಹಾಕಿ ಕಳುಹಿಸಿ ಕೊಡತಕ್ಕದ್ದು. ಅಥವಾ ಮೊಖ್ತಾ ಹಾಜರ್ ಮಾಡತಕ್ಕದ್ದು. ದರಖಾಸ್ತು ಸಂಗಡ 100 ರೂಪಾಯಿ ಡಿಪಾಜಿಟ್ ಹಾಜರ್ಮಾಡತಕ್ಕದ್ದು.

3 ನೇ ಜೂನ್ 1890. } Secretary
ಬೆಂಗಳೂರು. }

ಪ್ರಕಟನ.

ಸನ್ ೧೮೯೦ನೇ ಇಸವಿಯ ಪರೀಕ್ಷೆಗೆ ಉಪಯೋಗವಾಗುವ ಸಟೀಕ ಜೈಮಿನಿ ೧ನೇ ಸಂಧಿಯಿಂದ ೧೧ನೇ ಸಂಧಿಯ ವರಿವಿಗೆ ಪ್ರತಿ ೧ಕ್ಕೆ ಟಪಾಲ್ ಹಾಸಲ್ ಸಹಿತ ಕ್ರಯ ೧-೧೧-೬ ಟೀಕು ತಾತ್ಪರ್ಯ ವಿವರಣ ಸಹಿತ ರಾಜಶೇಖರ ವಿಲಾಸ (ಅಯಿದು ಆಶ್ವಾಸಗಳಿಗೆ ಮಾತ್ರ) ಟಪಾಲ್ ಹಾಸಲ್ ಸಹಿತ ಕ್ರಯ ೨-೦-೦ ಇವು ಕ್ರಯಕ್ಕೆ ಸಿದ್ಧವಾಗಿವೆ. ವ್ಯಾಲ್ಯೂಪೇಬಲ್ ಮೂಲಕ ತರಿಸಿಕೊಳ್ಳಬಹುದು. ೨-೩ನೇ ಭಾಗಗಳು ಮುದ್ರಿಸಲ್ಪಡುತಿರುವವು ಭಾಗ ೧ಕ್ಕೆ ಟಪಾಲ್ ಹಾಸಲ್ ಸಹಿತ ೨-೮-೦. ಚಂದಾ ಮುಂದಾಗಿಯೇ ಕಳುಹಿಸಬೇಕು.

ಉ. ದಕ್ಷಿಣಾಮೂರ್ತಿಶಾಸ್ತ್ರಿ.

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JUNE 16, 1890.

೧೮೯೦ನೇ ಜೂನ್ ೧೬ ನೇ ಸೋಮವಾರ

SANSCRIT EDUCATION.

ನಮ್ಮ ಪತ್ರಿಕಾ ವಾಚಕರಲ್ಲೊಬ್ಬರು ಈ ದೇಶದಲ್ಲಿ ನಡಿಯುತಲಿರುವ ಸಂಸ್ಕೃತ ವಿದ್ಯಾಭ್ಯಾಸದ ವಿಷಯವಾಗಿ ನಮಗೆ ಕಳುಹಿಸಿದ ಲೇಖನವನ್ನು ಇದರಡಿ ಪ್ರಕಟಿಸುತ್ತೇವೆ. ಅದು ಹ್ಯಾಗಂದರೆ ;—

ಈ ಮೈಸೂರು ದೇಶದಲ್ಲಿ ಸಂಸ್ಕೃತ ವಿದ್ಯಾಭ್ಯಾಸವು ಬಹುಕಾಲದಿಂದ ನಡೆಯುವದರಿಂದ ಸಂಸ್ಕೃತ ವಿದ್ಯೆಗೆ ಈ ದೇಶವು ರಕ್ಕ ಮಟ್ಟಿಗೆ ಪ್ರಸಿದ್ಧಿಹೊಂದಿರುತ್ತದೆ. ಇದಕ್ಕೆ ನಿದರ್ಶನವಾಗಿ ಮೈಸೂರು ಮೇಲುಕೋಟೆ ಬೆಂಗಳೂರು ಮುಂತಾದ ಸ್ಥಳಗಳಲ್ಲಿ ಪ್ರಬಲವಾದ ಸಂಸ್ಕೃತ ಪಾಠಶಾಲೆಗಳು ಸ್ಥಾಪಿತವಾಗಿ ಬಹುಜನ ವಿದ್ಯಾರ್ಥಿಗಳು ಓದುತಲಿರುತ್ತಾರೆ. ಈ ಪಾಠಶಾಲೆಗಳಲ್ಲಿ ಸಾಹಿತ್ಯ,ತರ್ಕ, ಸ್ವಲ್ಪಮಟ್ಟಿಗೆ ವ್ಯಾಕರಣ, ಸಾಂಖ್ಯ ಮೊದಲಾದವುಗಳನ್ನು ಹೇಳುತಿರುವದಲ್ಲದೆ, ಋಗ್ಯಜುಸ್ಸಾಮವೇದಗಳ ಅಧ್ಯಯನವೂ ಯಥೋಚಿತ ನಡಿಯುತಲಿದೆ. ಈ ಮೇಲೆಹೇಳಿದ ಶಾಸ್ತ್ರ ಮೊದಲಾದವುಗಳನ್ನು ವಿದ್ಯಾರ್ಥಿಗಳು ಬಹು ಸಂವತ್ಸರಗಳು ಓದಿ ಉತ್ತಮ ಪರೀಕ್ಷೆಗಳನ್ನು ಕೊಟ್ಟು ಬಂದ ನಂತರ, ತರ್ಕ ವ್ಯಾಕರಣಾದಿಗಳನ್ನು ಎಷ್ಟು ಓದಿದವರಾದಾಗ್ಯೂ, ಬ್ರಾಹ್ಮಣರಿಗೆ ಆವಶ್ಯಕವಾಗಿ ತಿಳಿಯಬೇಕಾದ ವೈದಿಕ ಕರ್ಮಗಳಿಗೆ ಸಂಬಂಧಪಟ್ಟ ಧರ್ಮಶಾಸ್ತ್ರಗಳ ಗಂಧವೇ ಇಲ್ಲದೆ ಇರುತ್ತಾರೆ. ಇದು ಸಂಸ್ಕೃತ ವಿದ್ಯಾಭ್ಯಾಸದಲ್ಲಿ ದೊಡ್ಡ ನ್ಯೂನತೆಯೆಂದು ಹೇಳಬೇಕಾಗಿದೆ. ಸಾಹಿತ್ಯ ತರ್ಕ ಮೊದಲಾದವುಗಳನ್ನು ಎಷ್ಟು ಓದಿದರೆ ಏನು ? ತಾನು ಮಾಡಬೇಕಾದ ನಿತ್ಯ ನೈಮಿತ್ತಿಕ ಕರ್ಮಗಳ ಸ್ವರೂಪಜ್ಞಾನವೇ ಇಲ್ಲದೇ ಹೋದರೆ ಅಂತವನು ಬ್ರಾಹ್ಮಣನೆಂದು ಹೇಳಿಸಿಕೊಂಡು ಪ್ರಯೋಜನವಿಲ್ಲವು. ಪಂಡಿತರೆಂಬದಾಗಿ ಅನ್ನಿಸಿಕೊಂಡಿರುವವರನ್ನು ಧರ್ಮಶಾಸ್ತ್ರಗಳ ವಿಷಯದಲ್ಲಿ ಏನಾದರೂ ಪ್ರಶ್ನೆ ಮಾಡಿದರೆ, ಹೇಳುವದಕ್ಕೆ ತಿಳಿಯದೆ "ಉಭಾವೃಂದ್ಯ ಅಂದರೆ ಭೋಭ್ರಾವೃಂದ" ಎಂಬ ಗಾದೆಯಂತೆ ನಾವು ಕೇಳುವದೊಂದಾದರೆ ಅವರು ಹೇಳುವದೊಂದಾಗುವದು ಪ್ರಸಿದ್ಧವೇ ಇದೆ. ಇದರಿಂದ ಧರ್ಮಶಾಸ್ತ್ರ ವೇತ್ತೃಗಳಾದವರು ಯಾರೂ ಯಿಲ್ಲವೆಂಬ ಅಭಿಪ್ರಾಯ ನಮ್ಮದಲ್ಲ ಆದರೆ ಅಂತಾ ಪಂಡಿತರು ಕೇವಲ ವಿರಳರಾಗಿರುತ್ತಾರೆಂಬುವದರಲ್ಲಿ ಸಂಶಯವಿಲ್ಲವು. ಇದಕ್ಕೆ ದೃಷ್ಟಾಂತವಾಗಿ ಈಗ್ಯೆ ೮—೯ ಸಂವತ್ಸರಗಳ ಹಿಂದೆ, ಶ್ರೀ ಉತ್ತರಾದಿ ಮಠದ ಸ್ವಾಮಿಗಳವರು ಮದರಾಸಿಗೆ ದಯಮಾಡಿದ್ದಾಗ್ಯೆ ಅಲ್ಲಿ ಧರ್ಮಶಾಸ್ತ್ರ ವಿಷಯದಲ್ಲಿ ಏನೋ ಒಂದು ಪ್ರಬಲ ಚರ್ಚೆ ನಡೆಯಬೇಕಾಗಿ ಬಂದು ಅದಕ್ಕಾಗಿ ಶ್ರೀಗಳವರು ಹೈದರಾಬಾದ್, ಮೈಸೂರು, ಮತ್ತು ಬೊಂಬಾಯಿ ಮೊದಲಾದ ಪ್ರಾಂತಗಳಿಂದ ಸುಮಾರು ೪೦ ಜನ ಪಂಡಿತರುಗಳನ್ನು ಕರಿಸಿ ವಿಚಾರ ನಡಿಸಲುಪಕ್ರಮಿಸಲು, ಅವರುಗಳ ವೈಶಿಷ್ಟ್ಯ ಪಂಡಿತರೆನ್ನಿಸಿಕೊಂಡವರನೇಕರಿದ್ದಾಗ್ಯೂ ಧರ್ಮಶಾಸ್ತ್ರ ವಿಷಯಗಳಲ್ಲಿ ಬೇಕಾದ ಜ್ಞಾನವನ್ನು ಸಂಪಾದಿಸದೆ ಹೋಗಿರುವ ನ್ಯೂನತೆಯನ್ನು ಕಂಡು ಇಂತವರ ಸಂಗದ ಪ್ರಯೋಜನವಿಲ್ಲವೆಂದೆಣಿಸಿ ಗ್ವಾಲಿಯರ ಸಂಸ್ಥಾನದ ಸಮೀಪ ವಿದ್ವಾಂಸರಾದ ಅನುಭವಶಾಲಿಗಳನ್ನು ಯೋಗ್ಯವಾಗಿ ಕರೆಯಿಸಿ ಅವರಮೂಲಕ ಪ್ರಕೃತ ಚರ್ಚೆಯನ್ನು ಏನೋ ಒಂದು ವಿಧವಾಗಿ ಪರ್ಯವಸಾನ ಹೊಂದಿಸಿಕೊಳ್ಳಬೇಕಾಯಿತು. ಆದ್ದರಿಂದ ನಮ್ಮ ವೈದಿಕರಲ್ಲಿರುವ ಈ ವಿಧವಾದ ಪ್ರಬಲ ನ್ಯೂನತೆಯನ್ನು ಸರ್ವ ಪ್ರಯತ್ನದಿಂದಲೂ ನಿವಾರಣ ಮಾಡಿಕೊಳ್ಳಬೇಕಾದ್ದು ಕೇವಲ ಕರ್ತವ್ಯವಾಗಿರುತ್ತದೆ ಯಾಕೆಂದರೆ, ಈಕಾಲದಲ್ಲಿ ಆಧುನಿಕ ವಿದ್ಯಾಭ್ಯಾಸ ಲಕ್ಷ್ಯವನ್ನು ಹೊಂದಿರುವ ಅನೇಕ ಲೌಕಿಕರೂ ಅವರವರ ಸಹಚರರೊಳಗಿರತಕ್ಕ ಕೆಲವರಿಂದ ವೈದಿಕ ಪಂಡಿತರುಗಳು ಸಹ ನಮ್ಮ ಆಚಾರ ವ್ಯವಹಾರಗಳಲ್ಲಿ ದೇಶ ಕಾಲೋಚಿತವಾದ ಕೆಲವು ಬದಲಾವಣೆಗಳನ್ನು ಮಾಡಬೇಕೆಂಬ ಕಾತುರದಿಂದ, ಧರ್ಮಶಾಸ್ತ್ರ ವಿಚಾರ ಮಾಡುತ ತಮ್ಮ ತಮ್ಮ ಉದ್ದೇಶ್ಯವಾದ ಬದಲಾವಣೆಗಳನ್ನು ಮಾಡುವದಕ್ಕೆ ಶಾಸ್ತ್ರಾಧಾರ ವಿದ್ದುದಾಗಿ ಹೇಳುತ ಆ ವಿಷಯದಲ್ಲಿ ಅನೇಕ ಗ್ರಂಥಗಳನ್ನು ಛಾಪಿಸಿ ಪ್ರಸಿದ್ಧಿ ಪಡಿಸುತಲಿದ್ದಾರೆ. ಇವುಗಳನ್ನು ಓದತಕ್ಕವರೆಲ್ಲ ಅವರಂತೆ ನಡೆಯಲುಪಕ್ರಮಿಸುತಲಿದ್ದಾರೆ. ನಮ್ಮ ವೈದಿಕರಾದರೋ ತಾವು ಸಹ ಅವರುಗಳಂತೆ ಧರ್ಮಶಾಸ್ತ್ರ ಪರಿಶ್ರಮವನ್ನು ಚನ್ನಾಗಿ ಮಾಡಿ, ಮೇಲೆ ಹೇಳಿದ ಆಧುನಿಕರ ಪ್ರಯತ್ನಗಳು ಅಶಾಸ್ತ್ರೀಯವಾದದ್ದೆಂದು ಪಕ್ಷದಲ್ಲಿ ಅಂತಾವುಗಳನ್ನು ಸಪ್ರಮಾಣವಾಗಿ ಖಂಡಿಸಿ, ನಮ್ಮ ಶಿಷ್ಟಾಚಾರವನ್ನು ಕಾಪಾಡಿಕೊಳ್ಳುವ ಪ್ರಯತ್ನವು ಮಾಡದೆ ಯಾರಾದರೂ ಆ ವಿಷಯಗಳಲ್ಲಿ ಏನಾದರೂ ಕೇಳಿದರೆ ಅವರಮೇಲೆ ಕೋಪ ಮಾಡಿಕೊಳ್ಳುವರಲ್ಲದೆ, ನಮಗೆ ಯಾರಾದರೂ ದ್ರವ್ಯ ಕೊಡುವವರಾದರೆ ನಾವು ಧರ್ಮಶಾಸ್ತ್ರಗಳನ್ನು ನೋಡುತ್ತೇವೆಂತಲೂ, ಹಾಗೆಯಾದಾಗ್ಯೂ ದ್ರವ್ಯಸಹಾಯ ಮಾಡಲು ಯಾರೂ ಇಲ್ಲದಿದ್ದರೆ, ಧರ್ಮಶಾಸ್ತ್ರ ಸಿಕ್ಕುವದಿಲ್ಲವೆಂತಲೂ, ಅಂತವುಗಳನ್ನು ತರಿಸಿ ಕೊಡುತ್ತೀರೆಂದು ಹೇಳಿದರೆ, ಅಚ್ಚು ಹಾಕಿದ ಗ್ರಂಥಗಳು ಪ್ರತಿಷ್ಠೆಗಳಂತೆ ಹೇಳುತ ಏನೇನೋ ಕಾರಣವನ್ನು ಹೇಳುವ ಯುಕ್ತಿ ಮಾಡುತ್ತಾ, ಪರಂತು ಮೇಲೆ ಹೇಳಿದ ಆಧುನಿಕರ ಪ್ರಯತ್ನಗಳನ್ನು ಮಾತ್ರ ಮನಸ್ಸು ಬಂದಹಾಗೆ ದೂಷಿಸುತ ಕಾಲಯಾಪನೆ ಮಾಡುತಲಿದ್ದಾರೆ. ಇದು ಸಾಧಿಸಬೇಕೆನ್ನಿಸಿಕೊಳ್ಳುವವರಿಗೆ ಸರಿಯಾದ್ದಲ್ಲವು. ಬ್ರಾಹ್ಮಣರಲ್ಲಿ ಮುಖ್ಯರುಗಳು ಮೊದಲು ಮಾಡಬೇಕಾದ ಅಂದರೆ ಮುಖ್ಯವಾಗಿ ಆಚಾರಪ್ರವೃತ್ತಿಯಿಂದ ಜೀವನಮಾಡುತಲಿರುವವರು, ಧರ್ಮಶಾಸ್ತ್ರಗಳ ಮುಟ್ಟಿಯೇ ತಿಳಿಯದಿರಲ್ಲವು. ಅಂತವರು ಸ್ವಭಾವತಃ ಧರ್ಮಶಾಸ್ತ್ರ ವಿಷಯಗಳಲ್ಲೇನಾದರೂ ತಿಳಿಯಬೇಕಾದರೆ, ವೈದಿಕ ವಿದ್ಯಾ ನಿರತರಾಗಿರತಕ್ಕವರೆಂದು ಭಾವಿಸಲ್ಪಟ್ಟಿರುವವರನ್ನು ಕೇಳುವದು ಸಹಜವಾಗಿರುತ್ತೆ. ಕೇಳುವವರಿಗೆ ಸರಿಯಾಗಿ ಹೇಳುವದಕ್ಕೆ ಧರ್ಮಶಾಸ್ತ್ರ ಪರಿಚಯ ಚನ್ನಾಗಿ ಮಾಡಿದ ಹೊರತು ಸಾಧ್ಯವಲ್ಲವು. ಅಂತಾ ಧರ್ಮಶಾಸ್ತ್ರಗಳನ್ನು ಈ ದೇಶದಲ್ಲಿ ಸ್ಥಾಪಿಸಲ್ಪಟ್ಟ ಪ್ರಬಲ ಸ್ಥಿತಿಯಲ್ಲಿರುತಲಿವೆ ಯೆಂದು ಹೇಳುವರಿರುವ ಯಾವ ಸಂಸ್ಕೃತ ಪಾಠಶಾಲೆಯಲ್ಲೂ ಹೇಳುತಿರುವಾತ ನಮ್ಮ ತಿಳುವಳಿಕೆಗೆ ಇದುವರಿವಿಗೆ ಬಂದಿರುವದಿಲ್ಲವು. ಮೈಸೂರು ಪಾಠಶಾಲೆಯಲ್ಲಿ ಧರ್ಮಶಾಸ್ತ್ರಗಳ ಪಾಠ ಹೇಳುವದಕ್ಕಾಗಿ ಒಂದು ತರಗತಿ ಏರ್ಪಟ್ಟ ಕೆಲವು ಕಾಲ ನಡೆಯುತಲಿದ್ದು ಅನಂತರ ಆ ತರಗತಿ ಅನಾವಶ್ಯಕವೆಂದು ತೆಗದು ಹಾಕಿದ್ದಂತೆ ಕೇಳುತ್ತೇವೆ. ಇದು ನಿಜವಾಗಿದ್ದ ಪಕ್ಷದಲ್ಲಿ, ಈ ಕೆಲಸ ಸರಿಯಾದದ್ದಲ್ಲವೆಂದು ಯಾರೂ ಹೇಳದಿರಲಾರರು.

ಮುಖ್ಯವಾಗಿ ಬ್ರಾಹ್ಮಣನಿಗೆ ತನ್ನ ನಿತ್ಯನೈಮಿತ್ತಿಕ ಕರ್ಮಗಳಲ್ಲಿ ಸರಿಯಾದ ಜ್ಞಾನವಿರಬೇಕಾದದ್ದು ಆವಶ್ಯಕವಾಗಿರುವಲ್ಲಿ ಅದಕ್ಕೆ ಸಂಬಂಧಪಟ್ಟ ಧರ್ಮಶಾಸ್ತ್ರಗಳನ್ನು ಬಿಟ್ಟು ಸಾಹಿತ್ಯ, ತರ್ಕ, ವ್ಯಾಕರಣ ಮೊದಲಾದವನ್ನು ಹೇಳಿ ಪ್ರಯೋಜನವೇನು. ಇವುಗಳಿಂದ ಬಹುಮಾನ್ಯ ಸನ್ಮಾನ ಉಂಟಾಗುವದರಲ್ಲಿ ಸಂದೇಹವಿಲ್ಲ. ಹಾಗ್ಯೂ ಬ್ರಾಹ್ಮಣ ಧರ್ಮಗಳು ಸರಿಯಾಗಿ ನಡೆಯುವದು ತದ್ಧರ್ಮಶಾಸ್ತ್ರ ಪರಿಶ್ರಮದಿಂದ ನಮ್ಮ ದೇಶದಲ್ಲಿರುವ ರಾಜಕೀಯ ಸಂಸ್ಕೃತ ಪಾಠಶಾಲಾಧಿಕಾರಿಗಳೆಲ್ಲ ನಮ್ಮ ಪ್ರಾರ್ಥನೆ ಏನಂದರೆ, - ಪ್ರತಿ ಪಾಠಶಾಲೆಯಲ್ಲಿಯೂ, ಇತರ ಶಾಸ್ತ್ರಾಭ್ಯಾಸದಂತೆ ಧರ್ಮಶಾಸ್ತ್ರಗಳನ್ನು ಸಾಂಗವಾಗಿ ಹೇಳಿಸಿ, ಅದಕ್ಕಾಗಿ ಒಳ್ಳೇ ಪಂಡಿತನನ್ನು ನಿಯಮಿಸಿ ವಿದ್ಯಾರ್ಥಿಗಳು ಪಾಠಶಾಲೆ ಬಿಟ್ಟು ಬರುವಾಗ್ಯೆ ಅವರುಗಳು ತರ್ಕ ವ್ಯಾಕರಣಾದಿಗಳಲ್ಲಿ ಎಷ್ಟು ಪಾಂಡಿತ್ಯ ಸಂಪಾದಿಸಿರುತ್ತಾರೋ ಅದಕ್ಕೆ ಸಮಾನವಾದ ಪಾಂಡಿತ್ಯ ಧರ್ಮ ಶಾಸ್ತ್ರಗಳಲ್ಲಿಯೂ ಸಂಪಾದಿಸಿಕೊಂಡು ಬರ ಹೇಳಿದರೆ, ನಮ್ಮ ದೇಶದ ಕಲ್ಯಾಣಕ್ಕೆ ಬಹಳ ಸಹಕಾರಿಯಾಗಿ ನಮ್ಮ ಶಿಷ್ಟಾಚಾರ ಮೊದಲಾದವುಗಳು ಉಪವರ್ತನವಾಗಿ ನಿಲ್ಲ ಪದಕ್ಕೆ ಕಾರಣವಾಗುತ್ತೆ. ಹಾಗಿಲ್ಲದೆ ಇದುವರಿವಿಗೆ ಉಪೇಕ್ಷಿಸಿದಂತೆ ಮುಂದಕ್ಕೂ, ಧರ್ಮಶಾಸ್ತ್ರಗಳು ಪಾಠಶಾಲೆಗಳಲ್ಲಿ ಉಪೇಕ್ಷಿಸಲ್ಪಡುವದಾದರೆ ನಮ್ಮ ಬ್ರಾಹ್ಮಣ್ಯ ನಿಂದುವದು ಕೇವಲ ಕ್ಷೀಣದಶೆಗೆ ಬಂದು ಜನಗಳು ನಮ್ಮ ಧರ್ಮ ಕರ್ಮಗಳಲ್ಲಿ ಸ್ವೇಚ್ಛೆಯಿಂದ ಪ್ರವರ್ತಿಸಲಾರಂಭಿಸಿ ಕೊನೆಗೆ ಬ್ರಾಹ್ಮಣ್ಯವೆಂಬುದು ಇತರ ವರ್ಣದಲ್ಲಿ ಐಕ್ಯವಾಗಿ ಹೋಗುವಂತೆ ತೋರುತದೆ. ಹಾಗಾದ್ದಕ್ಕೆ ಅಂತಾ ವಾಗದಂತೆ ಈ ಕಾಲಾಧ್ಯಕ್ಷರು ಈ ವಿಷಯವನ್ನು ಲಕ್ಷ್ಯಕ್ಕೆ ತೊಳ್ಳು ಆಯಾ ಪಾಠಶಾಲೆಗಳಲ್ಲಿ ತಕ್ಕ ಏರ್ಪಾಡುಗಳು ಮಾಡಬೇಕೆಂದು ನಂಬುತ್ತೇವೆ" ಎಂಬದು.

ಸದರೀ ಲೇಖಕರು ನಮ್ಮ ವೈದಿಕ ಪಂಡಿತರಲ್ಲಿರುವ ಧರ್ಮಶಾಸ್ತ್ರ ಸಭಿಜ್ಞತೆಯನ್ನು ಕುರಿತು ಪಟ್ಟಿರುವ ಅಭಿಪ್ರಾಯವನ್ನೆಲ್ಲ ನಾವು ಅನುಮೋದಿಸದೆ ಹೋದಾಗ್ಯೂ ಪಾಠಶಾಲೆಗಳಲ್ಲಿ ಧರ್ಮ ಶಾಸ್ತ್ರಗಳನ್ನು ಹೇಳತಕ್ಕ ಬಗ್ಗೆ ಒಂದು ತರಗತಿಯನ್ನು ಕಲ್ಪಿಸಿ ಅದರಲ್ಲಿ ಪರೀಕ್ಷೆ ಕೊಡತಕ್ಕವರಿಗೆ ಉತ್ತಮವಾದ ಸಂಭಾವನೆ ಕೊಡುವಂತೆ ಏರ್ಪಾಡು ಮಾಡುವದು ಬಹಳ ಉತ್ತಮವಾದದ್ದಾಗಿಯೂ ಬಹಳ ಆವಶ್ಯಕವಾಗಿಯೂ ಇರುವದೆಂದು ನಾವು ಹೇಳದೇ ಇರಲಾರೆವು.

Occasional Notes
ನೈಮಿತ್ತಿಕ ವಿಷಯನ್ಯಾಸ.

The next commander in Chief of Madras—ಈಗ ಮದರಾಸು ಕಮಾಂಡರ್ ಇನ್ ಚೀಫಾಗಿರುವ ಸರ್ ಚಾರ್ಲ್ಸ್ ಆರ್ಬತ್‌ನಾಟ್ ಯವರಿಗೆ ಬದಲಾಗಿ ಜನರಲ್ ಹಾರ್ನಾತ್ ಎಂಬವರು ಗೊತ್ತಾಗಿದ್ದಾರೆಂದು ತಿಳಿಯ ಬರುತಿದೆ.

A charitable citizen.—ಈಚೆಗೆ ತಿರುನಲ್ವೇಲಿ ಡಿಸ್ಟ್ರಿಕ್ಟಿನಲ್ಲಿ ಅಗ್ನಿಪ್ರವೇಶದಿಂ ಅನೇಕ ಸಹಸ್ರಜನರು ನಿಲ್ಲಲಿಕ್ಕೆ ಸ್ಥಳವಿಲ್ಲದೆಯೂ ಅನ್ನಾಹಾರಾದಿಗಳಿಗೆ ವಸತಿಯಿಲ್ಲದೆಯೂ ಕ್ಲೇಶ ಪಡುತಲಿದ್ದಾರೆಂಬ ವಿಷಯವು ಕೇಳಿ ಅವರ ಸಹಾಯಾರ್ಥ ಮದರಾಸಿನಲ್ಲಿ ಪ್ರಸಿದ್ಧ ಧಾರ್ಮಿಕರಾದ ಸರ್ ಸವಳೇ ರಾಮಸ್ವಾಮಿ ಮೊದಲಿಯಾರವರು ವಿಶೇಷವಾಗಿ ದ್ರವ್ಯವನ್ನು ವಸ್ತ್ರಗಳನ್ನು ಕಳುಹಿಸಿಕೊಟ್ಟರೆಂಬದಾಗಿ ಕೇಳಿ ನಾವು ಬಹಳ ಸಂತೋಷಿಸುವೆವು.

Postal reform in Travancore.—ತಿರುವಾಂಕೂರ್ ಸಂಸ್ಥಾನದವರು ತಮ್ಮ ಸಂಸ್ಥಾನದಲ್ಲಿ ಬ್ರಿಟಿಷ್ ಗವರ್ನಮೆಂಟಿನವರಂತೆ, ಪೋಸ್ಟ್ ವಿಷಯದಲ್ಲಿ ಜನರಿಗೆ ಕಲ್ಪಿಸಲ್ಪಟ್ಟಿರುವ ಅನುಕೂಲ್ಯಗಳನ್ನೆಲ್ಲವನ್ನು ಅಂದರೆ ಮಣಿಆರ್ಡರ್ ಪಾರ್ಸಲ್, ಬುಕ್ ಪೋಸ್ಟ್, ರಿಜಿಸ್ಟರ್ ಮೊದಲಾದ ಪ್ರಕಾರಗಳನ್ನೆಲ್ಲ ಮಾಡಿದ್ದರಿಂದ ಆ ಪತ್ರಗಳನ್ನು ಬ್ರಿಟಿಷ್ ಗವರ್ನಮೆಂಟವರು ಮಾಂಡಲೀಕರೆಂದು ಕೇಳಿಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ತಿರುವಾಂಕೂರಿಗಿಂತ ಗೌರವದಲ್ಲಿಯೂ, ವಿಸ್ತಾರದಲ್ಲಿಯೂ, ಪ್ರಾಬಲ್ಯದಲ್ಲಿಯೂ ಹೆಚ್ಚಾದ ಈ ಸಂಸ್ಥಾನದಲ್ಲಿ ಅಂತಾ ಏರ್ಪಾಡುಗಳೊಂದೂ ಸರಿಯಾಗಿ ಹೋದದ್ದು ಜನರ ದುರದೃಷ್ಟವೇ ಅಲ್ಲದೆ ಅದರ ರಹಸ್ಯವೇನೆಂದು ತಿಳಿಯಲ್ಲವು.

Lunacy.—ಈ ದೇಶದ ಹಿಂದುಗಳ ಆರೋಗ್ಯ ಶಾಸ್ತ್ರದ ಅಭಿಪ್ರಾಯಗಳು ವಿನ್ಯಾಸಗಳಾಗಿವೆ ಕೆಲವರು ಸದರೀ ರೋಗವು ಸಾಂಕ್ರಾಮಿಕವೆಂತಲೂ, ಇನ್ನೂ ಕೆಲವರು ಇಲ್ಲವೆಂತಲೂ ತಾತ್ಪರ್ಯ ಪಟ್ಟಿರುತ್ತಾರೆ ಈ ವಿಷಯ ನಿಶ್ಚಯ ನ್ಯಾಯಸ್ಥಾಪನೆಗಾಗಿ ಇಂಡಿಯಾ ಗವರ್ನಮೆಂಟವರು ಸದರೀ ವಿಷಯ ಕವಾದ ರಿಪೋರ್ಟು ಒಪ್ಪಿಸುವಂತೆ ಅಪ್ಪಣೆ ಮಾಡಿರುತ್ತಾರೆ. ಈಗ ಚೀನಾದೇಶದಲ್ಲಿ ಕುಷ್ಠರೋಗವು ಎಂಬ ವಿಧಗಳಾಗ ಗಣಿಸಲ್ಪಟ್ಟ ಆ ಪುಗಳ್ಳ ಪ್ರವರ್ತನ ಸಾಂಕ್ರಾಮಿಕವೆಂದೂ, ನಂತರ ವಾದದ ಪ್ರವಾಗಿ ಅನುಭವಿಸಿ ಬರತಕ್ಕವೆಂತಲೂ ಎಂದು ಡಾಕ್ಟರ ಕರೆಗಳ ಶತ ವಾಯು ನಿಶ್ಚಯಿಸಿರುತ್ತಾರೆ. ಆದೇಶದಲ್ಲಿ ಸದರೀ ರೋಗಪೀಡಿತರನ್ನೆಲ್ಲ ಪ್ರತ್ಯೇಕವಾದ ಒಂದು ಗ್ರಾಮಕ್ಕೆ ಕಳುಹಿಸುತ್ತಾರೆ.

The new Sub-inspector of Kumbakonam.—ಕಳೆದ ತಿಂಗಳ ೩೦ನೇ ತಾರೀಖಿನಲ್ಲಿ ಕುಂಭಕೋಣ ನಗರದ ಶ್ರೀ ಶಂಕರ ಭಗವತ್ಪಾದಾಚಾರ್ಯರವರು, ಬ್ರಹ್ಮ ಸಾಕ್ಷಾತ್ಕಾರದ ನೈಪುಣ್ಯದಿಂದ ಅವರು ಸ್ವೋದರಾನಿಯಾಗಿ ತೀರ್ಥ ಪೀಠಕ್ಕೆ ಬಂದವರನ್ನು ಆನಾಯಿಸಿ ಅವರಿಗೆ ಅಭ್ಯುದಯವನ್ನು ಗತಿಸಿದರೆಂದು ತಿಳಿಸುತ್ತೇವೆ. ಈಗ ಸದರೀ ದಿಗ್ವಿಜಯ ಸ್ವಾಮಿಗಳು ೧೨ ವರ್ಷಗಳ ವಯಸ್ಸುಳ್ಳ ಬಾಲಕರಾಗಿಯೂ ಸಾಮಾನ್ಯವಾದ ಒಂದು ಕುಟುಂಬಕ್ಕೆ ಸೇರಿದವರಾಗಿಯೂ ಇರುವುದಾಗಿ ತಿಳಿಯ ಬರುತದೆ. ಮನೋನಿಗ್ರಹವು ಮಾಡಲಾರದ ಬಾಲಕರಿಗೆಲ್ಲ ಬಾಲ್ಯದಲ್ಲೇ ಸನ್ಯಾಸ ಮಾಡಿಸಿ ಆಯಾ ಪೀಠಗಳನ್ನಿತ್ತು ಅವರನ್ನು ಅನೇಕ ಸಹಸ್ರ ಪ್ರಜೆಗಳ ಯೋಗಕ್ಷೇಮಗಳಿಗೆ ವಿಚಾರಣ ಕರ್ತರನ್ನಾಗಿ ಮಾಡುವದಾಚ್ಛಾದಿಯುಳ್ಳ ಮಠಾಧಿಪತ್ಯವು ಕೊಡುವದರಿಂದುಂಟಾಗುವ ಬಾಧಕಗಳನ್ನು ಇದುವರಿವಿಗೆ ನಾವು ಅನೇಕಾವರ್ತಿ ಸೂಚಿಸಿದ್ದಾಗ್ಯೂ ಫಲಿಸಿದುದಿಲ್ಲವು. ಪರಂತು ಜನಗಳು ಈ ವಿಷಯದ ಪರಿಭಾವಿಸಿ ಸ್ವತಃ ಒಂದು ಏರ್ಪಾಡು ಮಾಡುವ ತನಕ ಹೀಗೆಯೇ ಮಠಗಳು ಯೋಗ್ಯರ ಕೈತಪ್ಪಿ ಹೋಗುವವು.

LOCAL AND PROVINCIAL NEWS.

ಸ್ವದೇಶವರ್ತಮಾನ ಮತ್ತು ತಾಲ್ಲೂಕು ವರ್ತಮಾನವೃತ್ತಾಂತಗಳು.

The Resident.—ಈ ಸಂಸ್ಥಾನದ ರೆಸಿಡೆಂಟಾದ ಆನರಬಲ್ ಸರ್ ಆಲಿವರ್ ಸೆಂಟ್‌ಜಾನ್ ರವರು ಜನವರಿಯಾತಿ ರಾಜಕಾರ್ಯದಮೇಲೆ ಮೈಸೂರು ಮಹಾರಾಜರವರನ್ನು ಕಾಣುವದಕ್ಕೋಸ್ಕರವಾದ ದಸರಾಕಾಲ ಆಗಸ್ಟಿನಲ್ಲಿ [illegible] ಮೈಸೂರಿಗೆ ದಯಮಾಡಿಸುವರೆಂದು ಕೇಳುತ್ತೇವೆ.

A Tragedy.—[illegible] ಯಾರ್ಕ್‌ಷೈರ್ ರಿಜಿಮೆಂಟಿಗೆ ಸೇರಿದ ಒಬ್ಬ ಸೋಲ್ಜರು ತನ್ನ ಟಿಂಬಕೊಂಡಿಗೆ ಜಗಳವಾಡಿ ಕೋಪದಿಂದ ಅವಳನ್ನು ಬಯೊನೆಟಿನಿಂದ ಸುಟ್ಟು ಕೆಲವು ನಿಮಿಷಗಳಮೇಲೆ ಅವಳು ಮೃತಪಟ್ಟಳಂತೆ. ಇವಳಿಗಾಗಿ ಸದರೀ ಸೋಲ್ಜರನ್ನು ಮೈಸೂರಿನಲ್ಲಿ [illegible] ವಿಚಾರಣೆ ನಡೆಯುತ್ತಿರುವದಾಗಿ ತಿಳಿಯುತ್ತದೆ.

Colonel Magrath.—[illegible]

Mr. Hanumantha Row.—[illegible] ದಿವಾನ್ ಬಹದೂರ್ [illegible] ೪೦೦ ರೂಪಾಯಿ [illegible] ಕೇಳುತ್ತೇವೆ.

The Dewan.—ಈ ಸಂಸ್ಥಾನದ ದಿವಾನರಾದ [illegible] ಶೇಷಾದ್ರಿ ಅಯ್ಯರವರು [illegible]

Deletions.—[illegible] ತಿಳಿಸಿದ್ದೇವಷ್ಟೆ. [illegible] ಶಿಷ್ಟಾಗಿ ವರ್ತಮಾನ ಕೇಳುತ್ತೇವೆ. ಇವರೀ [illegible] ಮಾಡ್ಯೇನೆಂದು ನಂಬುತ್ತೇವೆ.

Cheating.—[illegible] ತಾಲ್ಲೂಕು [illegible] ನಲ್ಲಿ [illegible] ಒಂದು ಕಂಪನಿ [illegible] ಸುಮಾರು ೩,೦೦೦ ರೂಪಾಯಿಗಳನ್ನು [illegible]

ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರಿಂದ [illegible] ಕೆಲವು ಜನರು [illegible] ಕೋರ್ಟಿನಲ್ಲಿ ನಾಜರಾಗಿದ್ದರು [illegible] ವಾರಂಟು ಹುಟ್ಟಿರುವದಾಗಿ ಕೇಳುತ್ತೇವೆ.

Suicide.—[illegible] ಬೆಳ್ಳಾರಿ ತಾಲ್ಲೂಕು [illegible] ತಿಳಿಯಬರುತ್ತದೆ. [illegible] ತಿಳಿಯುತ್ತದೆ.

Theft.—[illegible]

Suicide.—[illegible]

Religious Funds.—[illegible]

ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿಯೂ ಅಪರಾಧಿಗಳಮೇಲೆ ನಡೆದ ಕ್ರಿಮಿನಲ್ ಮೊಕದ್ದಮೆ ನಡೆಯುತ್ತಿರುವದಾಗಿ ಕೇಳುತ್ತೇವೆ.

Rape.—[illegible] ಸುಮಾರು ೨–೩ ತಿಂಗಳ ಹಿಂದೆ ಮಾಗಡಿ ತಾಲ್ಲೂಕಿಗೆ ಸೇರಿದ ಒಂದು ಗ್ರಾಮದಲ್ಲಿ ಒಬ್ಬ ಮುಸಲ್ಮಾನರ ಸುಮಾರು ೧೨–೧೪ ವರುಷಗಳ ವಯಸ್ಸಿನವಳ ಒಬ್ಬಳು ಮನೆಯಲ್ಲಿರುವಾಗ ಹಗಲು ಸುಮಾರು [illegible] ಒಬ್ಬ ಮುಸಲ್ಮಾನ [illegible] ಈ ತಿಂಗಳ [illegible] ನೇ ತಾರೀಖಿನಲ್ಲಿ [illegible] ಕೋರ್ಟಿನಲ್ಲಿ [illegible] ಅಪರಾಧಿಗಳ [illegible] ಅಪರಾಧಿಗಳಿಗೆ [illegible]

A Virgin Widow Remarried.—[illegible] ಗೌರೀಬಿದನೂರು ತಾಲ್ಲೂಕು [illegible] ನಾಗೇಶರಾಯರ [illegible] ಶ್ರೀನಿವಾಸಪುರ ತಾಲ್ಲೂಕು [illegible] ಸುಬ್ಬಯ್ಯನ ಮಗ ಕೃಷ್ಣ [illegible] ವಿವಾಹವಾದ [illegible] ನಾಗೇಶರಾಯರ [illegible] ಈ ವಿವಾಹವು [illegible]

CORRESPONDENCE

ಪತ್ರಿಕೆಗೆ ಬಂದ ಕಾಗದಗಳು.

ಮೈಸೂರಿನಲ್ಲಿ ಮುಸಲ್ಮಾನರಿಗೆ [illegible] ತಿಂಗಳಲ್ಲಿ [illegible] ಒಬ್ಬ ಬಾಲಕನಿಗೆ [illegible] ಶೃಂಗೇರಿ ಮಠದವರು [illegible] ಕೆಲವರು [illegible]

ವರು ಆಕ್ಷೇಪಿಸುತ್ತಲಿರುವದಾಗಿಯೂ ನಿಮ್ಮ ಕಳೆದ ವಾರದ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಶೃಂಗೇರಿ ಮಠದಿಂದ ಯಾವ ತಾರೀಖಿನಲ್ಲಿ ಯಾವವಿಧವಾದ ಆಜ್ಞೆಯಾದಬಗ್ಗೆ ಹುಟ್ಟಿದೆ. ಅದನ್ನು ಪತ್ರಿಕೆಯಲ್ಲಿ ಪ್ರಕಟಿಸುವದಕ್ಕೆ ಯಾರ ಮೂಲಕ ಆಧಾರ ದೊರೆಯಿತು. ಯಾವ ಬಾಲಕನ ವಿಷಯವಾಗಿ ಮೇಲೆ ಕಂಡಮೇರೆ ಆಗಿದೆ. ಈ ಅಂಶ ಶ್ರೀ ಸಂಸ್ಥಾನದ ಶಿಷ್ಯವರ್ಗಕ್ಕೆ ಇದುವರಿಗೆ ಯಾವತರಹ ಬರುವದಿಲ್ಲವಾದ್ದರಿಂದ ಇದರ ತಪ್ಪೊಪ್ಪನ್ನು ಕಂಡಲ್ಲಿ ತಿಳಿಯಬೇಕಾಗಿ ಕೋರುತ್ತೇನೆ.

ಪ್ರಕೃತ ವಿಷಯದಲ್ಲಿ ಇಲ್ಲಿಂದ ಯಾವಾಗ ಅಪ್ಪಣೆ ಕೊಟ್ಟಿರುವದಿಲ್ಲ. ಯಾರೋ ಬೇಕೆಂತ ಈ ವರ್ತಮಾನ ಹುಟ್ಟಿಸಿರುವಂತೆ ತೋರುವದರಿಂದ ತಾವು ಕೂಡಲೇ ಇದರ ತಪ್ಪೊಪ್ಪ ಬರೆಯುವದಲ್ಲದೆ ಪತ್ರಿಕೆಯಲ್ಲಿ ಈ ಅಂಶ ಪ್ರಕಟಿಸಬೇಕಾಗಿ ಕೋರುತ್ತೇನೆ.

ಶೃಂಗೇರಿ, 6—6—90. ಸುಬ್ರಹ್ಮಣ್ಯಶಾಸ್ತ್ರಿ, ಏಜಂಟ್.

ಒಬ್ಬ ಬಾಲಕನು ಮುಸಲ್ಮಾನರಲ್ಲಿ ಕೆಲವು ಕಾಲವಿದ್ದು ಮರಳಿ ಪ್ರಾಯಶ್ಚಿತ್ತ ಪೂರ್ವಕ ಸ್ವಮತದಲ್ಲಿ ಸೇರಿದ ಅಂಶವನ್ನು ಮೈಸೂರು ವೃತ್ತಾಂತ ಚಿಂತಾಮಣಿ ಪತ್ರಿಕೆ ಪ್ರಕಟಿಸಿ ಇಂಥಾ ವಿಷಯದಲ್ಲಿ ಶ್ರೀಮಠದವರು ಉದಾರ ಹೃದಯ ಪೂರ್ವಕವಾಗಿ ಪ್ರಾಯಶ್ಚಿತ್ತಗಳಂ ವಿಧಿಸಿ ಸಮ್ಮಾನಿಸುವದಕ್ಕೆ ಅನುಷ್ಠೆಯನ್ನಿತ್ತಬಗ್ಗೆ ಅವರನ್ನು ಬಹಳ ಕೊಂಡಾಡಿರುತ್ತದೆ. ಆದದರಿಂದ ಸದರೀ ಪತ್ರಿಕೆಯಲ್ಲಿ ತಿಳಿಸಲ್ಪಟ್ಟ ಅಂಶಗಳಿಗೆ ಸದರೀ ಪತ್ರಿಕೆಯೇ ಜವಾಬು ಕೊಡಬೇಕಾಗಿ ರುತ್ತದೆ.—ಎಡಿಟರ್.

THE MYSORE GAZETTE.

ಮೈಸೂರು ಗೆಜೆಟು.

ಶ್ರೀಮನ್ಮಹಾರಾಜರವರ ಸರಕಾರದ ಹುಕುಮಿನಂತೆ ಪ್ರಕಟಿಸಲ್ಪಟ್ಟದ್ದು.

ನಂ. ೪೯. ತಾ॥ ೪ ನೇ ಜೂನ್ ೧೮೯೦—ಚಿತ್ರದುರ್ಗ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಶಾ॥ ಆಮಲ್ದಾರ್ ಗುಂಡಪ್ಪನವರಿಗೆ ಅವರು ಪಡೆಯಬೇಕಾದ ತಾರೀಖು ಆಗಾಯತು ಒಂದು ತಿಂಗಳು ಹದಿನೈದು ದಿನಗಳ ಪ್ರಿವಿಲೇಜ್ ರಜಾ ಮಂಜೂರು ಮಾಡಿದೆ. ಅವರ ಕೆಲಸಕ್ಕೆ ಬದಲು ಹೊಸದುರ್ಗ ತಾ॥ ಡೆಪ್ಯುಟಿ ಅಮಲ್ದಾರ್ ಅಬ್ದುಲ್ ರಹಿಮಾನ್ ಷೇರಿಫ್ ರವರು ನಿಯಮಿಸಲ್ಪಟ್ಟಿರುತ್ತಾರೆ.

ನಂ. ೫೦. ತಾ॥ ೩ ನೇ ಜೂನ್ ೧೮೯೦—ಮೈಸೂರು ಡಿಸ್ಟ್ರಿಕ್ಟ್ ಮತ್ತು ಸೆಷನ್ ಕೋರ್ಟಿನ [illegible] ಜವಾನ್ನ ನಂ [illegible] ೧೦ ರಲ್ಲಿ ಮ್ಯಾ॥ ಟಿ. ನರಸಿಂಹರಾಯರವರು ನೇಮಿಸಿರುತ್ತಾರೆ.

ನಂ. ೫೧. ತಾ॥ ೬ ನೇ ಜೂನ್ ೧೮೯೦—ಸಿವಿಲ್ ಡಿಸ್ಟ್ರಿಕ್ಟ್ ಡೆಪ್ಯುಟಿ ಮ್ಯಾಜಿಸ್ಟ್ರೇಟರಾದ ಮೆ॥ ಸ್ವಾಮಿ ರಾಯರವರಿಗೆ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ ೩೬ ನೇ ಸೆಕ್ಷನ್ ಅನುಸರಿಸಿ ಸಬ್ ಮ್ಯಾಜಿಸ್ಟ್ರೇಟ್ ನಡೆಸುವ ಅಧಿಕಾರ ಕೊಡಲ್ಪಟ್ಟಿರುತ್ತದೆ.

ನಂ. ೫೨. ತಾ॥ ೭ ನೇ ಜೂನ್ ೧೮೯೦—ಮೆ॥ ವಿ. ಎನ್. ನರಸಿಂಹಯ್ಯಂಗಾರ್ಯರವರು ಮೈಸೂರು ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟಿರುತ್ತಾರೆ.

ನಂ. ೬೦. ತಾ॥ ೯ ನೇ ಜೂನ್ ೧೮೯೦—ಚಿತ್ರದುರ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮೆ॥ ವಿ. ಪಿ. ಮಾಧವರಾಯರವರಿಗೆ ಜೂನ್ ತಿಂಗಳು ೪ ನೇ ತಾರೀಖು ಆಗಾಯತು ಒಂದು ತಿಂಗಳ ರಜಾ ಕೊಟ್ಟಿರುವದರಿಂದ ಸದರೀ ತಾರೀಖಿನಲ್ಲಿ ಆ ಡಿಸ್ಟ್ರಿಕ್ಟ್ ಚಾರ್ಜನ್ನು ಅಸಿಸ್ಟೆಂಟ್ ಕಮಿಷನರ್ ಮೆ॥ ಎನ್. ಚೆಲುವಯ್ಯಂಗಾರ್ಯರವರಿಗೆ ಒಪ್ಪಿಸಿರುತ್ತಾರೆ.

ನಂ. ೬೦. ತಾ॥ ೯ ನೇ ಜೂನ್ ೧೮೯೦—ಸಾಗರ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟರಾದ ಮೆ॥ ಕೃಷ್ಣಸ್ವಾಮಯ್ಯಂಗಾರ್ಯರಿಗೆ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ ೧೨ ಮತ್ತು ೩೬ ನೇ ಸೆಕ್ಷನ್

ಅನುಸರಿಸಿ ಸೆಕೆಂಡ್ ಕ್ಲಾಸ್ ಮ್ಯಾಜಿಸ್ಟ್ರೇಟಿ ಅಧಿಕಾರವೂ, ಸೆಷನ್ ಕಮಿಟ್ಟಿ ಮಾಡುವದಕ್ಕೆ ಅಧಿಕಾರವೂ ಕೊಡಲ್ಪಟ್ಟಿರುತಿವೆ.

ನಂ. ೬೩ ತಾ|| ೧೦ ನೇ ಜೂನ್ ೧೮೯೦—ಗುಬ್ಬಿ ತಾ|| ಅಮಲ್‌ದಾರ್ ಕುಶೀರವಾಚಾರ್ಯರು, ಮತ್ತು ತಿಪಟೂರು ತಾ|| ಅಮಲ್‌ದಾರ್ ಲಕ್ಷ್ಮಿ ನಾರಾಯಣರು ಇವರುಗಳಿಗೆ ರೆಮಿಲ್ಸೀ ಆಕ್ಟ್ ಅನುಸರಿಸಿ ಸೆಕೆಂಡ್ ಕ್ಲಾಸ್ ಮ್ಯಾಜಿಸ್ಟ್ರೇಟಿ ಅಧಿಕಾರ ಕೊಡಲ್ಪಟ್ಟಿರುತಿದೆ.

ನಂ. ೬೬. ತಾ|| ೧೦ ನೇ ಜೂನ್ ೧೮೯೦—ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮಿ. ಕ್ರಿಸ್ ಸಾಹೇಬರವರು ತಮ್ಮ ಡಿಸ್ಟ್ರಿಕ್ಟ್ ಚಾರ್ಜನ್ನು ಕಳೆದ ಮೇ ತಿಂಗಳ ೩೧ ನೇ ತಾರೀಖಿನಲ್ಲಿ ಅಸಿಸ್ಟೆಂಟ್ ಕಮಿಷನರ್ ಮಿ|| ಪಂಚನದ ರಾಯರವರಿಗೆ ಒಪ್ಪಿಸಿರುತ್ತಾರೆ

ನಂ. ೬೮. ತಾ|| ೧೦ ನೇ ಜೂನ್ ೧೮೯೦—ಹೊಸಕೋಟೆ ತಾ|| ಅಮಲ್‌ದಾರ್ ವೆಂಕಟರಮಣಯ್ಯನವರಿಗೆ ಅವರುಪಯೋಗಿಸಿ ಕೊಳ್ಳುವ ತಾರಾರೀಖ್ ಲಾಗಾಯತು ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಡಲ್ಪಟ್ಟಿರುತಿದೆ.

ವಿದ್ಯಾಭ್ಯಾಸದ ಇಲಾಖಾ ವರ್ಗಾವರ್ಗಿಗಳು.

ತಾ|| ೬ ನೇ ಜೂನ್ ೧೮೯೦ ನೇ ಇಸವಿ

ಉತ್ತರ ಸರ್ಕಲ್ ಸ್ಕೂಲ್ ಡೆಪ್ಯುಟಿ ಇನ್ಸ್ಪೆಕ್ಟರ್ ಮಿ|| ನಾಥಮುನಿ ನಾಯಡರವರು ಅವರ ಹಾಲೀ ಸಂಬಳದ ಮೇಲೆ ಬೆಂಗಳೂರು ಗವರ್ನ್ಮೆಂಟ್ ಸಂಸ್ಕೃತ ಡಿಪೋ ಕ್ಯೂರೇಟರ್ ಕೆಲಸಕ್ಕೆ ವರ್ಗ.

ಅವರ ಕೆಲಸಕ್ಕೆ ಶಿವಮೊಗ್ಗ ಕಾಲೇಜ್ ಫಸ್ಟ್ ಅಸಿಸ್ಟೆಂಟ್ ಮಾಸ್ಟರಾದ ಮೆ|| ಡಿ. ಸುಬ್ಬಯ್ಯ ಬಿ. ಎ. ಯವರು ಅವರ ಹಾಲೀ ಸಂಬಳದ ಮೇಲೆ ವರ್ಗ.

ಮೈಸೂರಲ್ಲಿ ಶ್ರೀಮನ್ಮಹಾರಾಜರವರ ಸಂಸ್ಕೃತ ಪಾಠಶಾಲಾ ಸೂಪರಿಂಟೆಂಡೆಂಟರಾದ ಮೆ|| ರಂಗಾಚಾರ್ಯರು ಸಂಸ್ಕೃತ ಪಾಠಶಾಲೆಗಳ ಎರಡನೇ ಗ್ರೇಡ್ ಡೆಪ್ಯುಟಿ ಇನ್ಸ್ಪೆಕ್ಟರಾಗಿ ೧೦೦ ರೂ|| ಲಾ|| ೧೫೦ ವರೆಗೆ ಬಡ್ತಿಯಾಗುವ ಸಂಬಳ ನಿಶಿ ಜೂನ್ ಗುರ್ರೀ ಲಾಗಾಯತು ನೇಮಕ ಮಾಡಲ್ಪಟ್ಟಿರುತ್ತಾರೆ.

ಮೈಸೂರಲ್ಲಿ ಮಹಾರಾಜರವರ ಕಾಲೇಜ್ ಅಸಿಸ್ಟೆಂಟ್ ಮಾಸ್ಟರಾದ ಮೆ|| ಎಂ. ಶ್ರೀನಿವಾಸ ರಾವ್ ಬಿ. ಎ. ಯವರು ಮೆ|| ಡಿ. ಸುಬ್ಬಯ್ಯನವರಿಗೆ ಬದಲಾಗಿ ಶಿವಮೊಗ್ಗ ಕಾಲೇಜಿಗೆ ವರ್ಗ

ಹುಜೂರ್ ಖಜಾನೆಯ ಮೆ|| ಎ. ವೆಂಕಟೇಶಯ್ಯ ಬಿ. ಎ. ಯವರು, ಶ್ರೀನಿವಾಸ ರಾಯರಿಗೆ, ಬದಲಾಗಿ ಮೈಸೂರು ಕಾಲೇಜಿಗೆ ವರ್ಗ. ಅವರು ೩ ನೇ ಗ್ರೇಡ್ ಜ್ಯೂನಿಯರ್ ಅಸಿಸ್ಟೆಂಟ್ ಮಾಸ್ಟರುಗಳ ತರಗತಿಯಲ್ಲಿ ೫೦ ರೂಪಾಯಿ ಲಾಗಾಯಿತು ೮೦ ರವರಿವಿಗೆ ಬಡ್ತಿಯಾಗುವ ಸಂಬಳವನ್ನು ಪಡೆಯತಕ್ಕದ್ದು.

ಮರಾಮತ್ತಿ ಇಲಾಖಾ ಬಡ್ತಿಗಳು.

ತುಮಕೂರು ಡಿವಿಜನ್ ೩ ನೇ ಗ್ರೇಡ್ ಅಸಿಸ್ಟೆಂಟ್ ಇಂಜನಿಯರಾದ ಮೆ|| ಬಿ. ಪಿ. ರಾಘವಲು ನಾಯಡರವರು ೮೯ ನೇ ಇಸವಿ ಅಕ್ಟೋಬರ್ ೩ ನೇ ತಾರೀಖ್ ಲಾಗಾಯತು ೨ ನೇ ಗ್ರೇಡ್ ಅಸಿಸ್ಟೆಂಟ್ ಇಂಜನಿಯರ್ ಕೆಲಸಕ್ಕೆ ಬಡ್ತಿ.

ಚಿತ್ರದುರ್ಗ ಡಿವಿಜನ್ ೧೨೨ ರೂಪಾಯಿ ಸಂಬಳದ ಅಪ್ರೆಂಟಿಸ್ ಇಂಜನಿಯರಾದ ಮೆ|| ಕೃಷ್ಣಯ್ಯಂಗಾರ್ಯರವರು ೧೫೦ ರೂಪಾಯಿ ಸಂಬಳಕ್ಕೆ ೯೦ ನೇ ಇಸವಿ ಏಪ್ರಿಲ್ ಗುರ್ರೀ ಲಾಗಾಯತು ಬಡ್ತಿ.

SUMMARY OF NEWS.
ವೃತ್ತಾಂತಸಂಗ್ರಹವು.

ಮುಂಬೈಯಲ್ಲಿ ಸಿರಿಸಾ ಎಂಬ ಒಂದು ಹೊಗೆ ಹಡಗು ಸುಟ್ಟುಹೋಯಿತು. ೩ ಲಕ್ಷರೂಪಾಯಿ ನಷ್ಟವಾಯಿತು.

ಪ್ಯಾರಿಸ್ ಪಟ್ಟಣದಲ್ಲಿನ ಜನಗಳಲ್ಲಿ ೬೨,೦೦೦ ಮಂದಿ ಬೌದ್ಧಮತದವರಾಗಿರುವದಾಗಿ ತಿಳಿಯಬರುತಿದೆ.

ಮುಂಬೈಯಲ್ಲಿ ಮತ್ತೊಂದು ಅರಳೆಯಂತ್ರವು ಸುಟ್ಟುಹೋಯಿತು. ೧೩ ಲಕ್ಷರೂಪಾಯಿಗಳು ನಷ್ಟ ಸಂಭವಿಸಿರುತಿದೆ.

ಬಧಿರರು, ಮತ್ತು ಮೂಕರಿಗೆ ವಿದ್ಯಾಭ್ಯಾಸ ಮಾಡಿಸುವಬಗ್ಗೆ ಕಲ್ಕತ್ತೆಯಲ್ಲಿ ಒಂದು ಶಾಲೆಯನ್ನು ಏರ್ಪಡಿಸುವದಾಗಿ ತಿಳಿಯಬರುತ್ತೆ.

ಬಂಗಾಳೆಯಲ್ಲಿರುವ ಶ್ರೀರಾಮ ಪುರದ ಒಬ್ಬ ವೃದ್ಧಬ್ರಾಹ್ಮಣನು ತನ್ನ ದಿನಗಳನ್ನೆಲ್ಲ ಮತ ಸಂಬಂಧದಲ್ಲಿದ್ದು ಕಡೆಗೆ ಕ್ರಿಶ್ಚಿಯನ್ ಮತವನ್ನು ಅವಲಂಬಿಸಿದನಂತೆ.

ಹೈದರಾಬಾದಿನಲ್ಲಿರುವ ಬಾಲಕೀ ದೇವದಾಸ್ ಎಂಬ ಸಾಹುಕಾರನು ಖೋಟಾ ದಸ್ತಾವೇಜ ತಂದದ್ದರಮೇಲೆ ಛಾರ್ಜಿಗಿ ೧ ವರ್ಷ ಸಾದಾ ಖೈದನ್ನೂ ೧ಲಕ್ಷ ರೂಪಾಯಿ ಜುರ್ಮಾನೆಯನ್ನೂ ವಿಧಿಸಿರುತ್ತಾರೆ.

ಮದರಾಸ್ ಗವರ್ನರಾದ ಲಾರ್ಡ್ ಕಾನಿಮಾರಾಯವರು ಶೀಘ್ರದಲ್ಲಿ ವಿಲಾಯಿತಿಗೆಹೋಗುವದಾಗಿಯೂ ಅವರಿಗೆ ಬದಲಾಗಿ ಸರ್‌ಜಾನ್ ಸ್ಟೂವರ್ಟ್ ಯೆಂಬವರು ಬರುವದಾಗಿಯೂ ಪ್ರವಾದವುಂಟಾಗಿದೆ.

ಹಿಂದುಸ್ತಾನದಲ್ಲಿ ಈಗ ೪೦ ವರ್ಷಗಳೊಳಗೆ ೪೦ ಕೋಟಿ ರೂಪಾಯಿಗಳ ಕಿಮ್ಮತಿನ ವಿಲಾಯಿತಿಯ ಅಶಿವೆಗಳು ಮಾರಾಟವಾಯಿತೆಂದು ಗೊತ್ತಾಗುತಿದೆ. ಹೀಗಾದಮೇಲೆ ಹಿಂದುಸ್ತಾನದ ಜನರು ಕೊಳ್ಳಲದ್ದಕ್ಕಾಗಿ ಅಳುವದೇ ಯೋಗ್ಯವು

ಕೊಚ್ಚಿ ಸಂಸ್ಥಾನದ ಯಳೆಯರಾಜರು ಕೆಲವು ದಿನಗಳ ಹಿಂದೆ ಕಾಶಿಯಲ್ಲಿ ಮೃತಪಟ್ಟರಷ್ಟೆ. ಅವರ ಜೊದಗಿ ಹರಾಜ್ ಮಾಡಿ ಅದರಿಂದ ಉತ್ಪತ್ತಿಯಾದ ದ್ರವ್ಯವನ್ನೆಲ್ಲ ವಿದ್ಯಾಭ್ಯಾಸ ಮೊದಲಾದ ಧರ್ಮಖರ್ಚಿಗೆ ಕೊಟ್ಟಂತೆ ತಿಳಿಯಬರುತಿದೆ.

ಸೂರತ್ ಎಂಬ ಪಟ್ಟಣಕ್ಕೆ ಒಬ್ಬ ಹೆಂಗಸು ಬಂದಿರುತ್ತಾಳಂತೆ, ಈಕೆಯು ೧೫ ವರುಷಗಳಿಂದ ನೀರು ವಿನಾ ಇನ್ಯಾವ ಆಹಾರವೂ ತೆಗದುಕೊಳ್ಳುವದಿಲ್ಲವಂತೆ ಆದರೂ ದೇಹದಾರ್ಢ್ಯ ಚೆನ್ನಾಗಿರುವದಾಗಿ ತಿಳಿಯಬರುತಿದೆ.

ಬಂಗಾಳಾ ಕೋರ್ಟಿನಲ್ಲಿ ನೇಟಿವ್ ದೇಶದ ಮನುಷ್ಯರಪೈಕಿ ಇಬ್ಬರು ಭಾರೀ ಡಿವಿಜನ್‌ಗಳ ಕಲೆಕ್ಟರುಗಳಾಗಿಯೂ, ಇಬ್ಬರು ಡಿಸ್ಟ್ರಿಕ್ಟುಮತ್ತು ಸೆಷನ್‌ಜಡ್ಜಿಗಳಾಗಿಯೂ ಇಬ್ಬರು ಅಸಿಸ್ಟೆಂಟ್ ಮ್ಯಾಜಿಸ್ಟ್ರೇಟಿಗಳಾಗಿಯೂ ಹತ್ತು ಜನ ಸ್ಟ್ಯಾಟ್ಯೂಟರಿ ಸಿವಿಲಿಯನ್‌ಗಳಾಗಿಯೂ ಇರುವಂತೆ ಒಂದಾನೊಂದುಪತ್ರಿಕೆ ತಿಳಿಸುತಿದೆ.

ಕಲ್ಕತ್ತೆ ಪಟ್ಟಣದಲ್ಲಿ ಕಳೆದ ಬೃಹಸ್ಪತಿವಾರರಾತ್ರಿ ಸುಮಾರು ೯ ಘಂಟೆವೇಳೆಯಲ್ಲಿ ಆಕಾಶದಲ್ಲಿ ಒಂದು ತೇಜೋಮಯವಾದ ದೊಡ್ಡಗುಂಡು ಹೋಗುತಿರುವದು ಕಂಡುಬಂದು ಅದು ಕೊನೆಗೆ ಬಹಳ ಘರ್ಜನೆ ಯೊಡನೆ ಒಡೆದು ಆಕಾಲದಲ್ಲಿ ಸೂರ್ಯ ಉದಯಿಸಿದಂತೆ ಪ್ರಕಾಶವುಂಟಾಗಿ ಕೊನೆಗೆ ಕಣ್ಣಿಗೆ ಕಾಣದೆಹೋಯಿತೆಂದು ಒಂದಾನೊಂದುಪತ್ರಿಕೆ ತಿಳಿಸುತಿದೆ.

ಮುಂಬೈ ಪ್ರಾಂತದಲ್ಲಿ ಒಬ್ಬ ಸರದಾರ ಹುಲಿಯ ಬೇಟೆಗಾಗಿ ಹೋಗಿರಲು ಒಂದು ದೊಡ್ಡ ಹುಲಿ ಆತನನ್ನಟ್ಟಿಕೊಂಡು ಬರುವಲ್ಲಿ ಆತನು ಕೂಡ್ಲೇ ಒಂದು ಮರವನ್ನುಹತ್ತಿ ಅಲ್ಲಿಂದ ಸದರೀ ಹುಲಿಯನ್ನು ಗುಂಡಿನಿಂದ ಹೊಡೆಯಲು ಅದಕ್ಕೆ ರೋಷಹತ್ತಿ ಸದರೀ ಬೇಟೆಗಾರನು ಹತ್ತಿಯಿದ್ದ ಮರವನ್ನು ಘಟ್ಟಿಯಾಗಿ ಅಲ್ಲಾಡಿಸಲು ಆತನಿಗೆ ಡಂಗಾ ಬಲತಪ್ಪಿ ಕೆಳಕ್ಕೆಬೀಳಲು ಹುಲಿಯು ಆತನ ಕುತ್ತಿಗೆಯನ್ನುಹಿಡಿದು ಒಡನೆ ಹಾಗೆಯೇ ಬಿಟ್ಟುಹೋಯಿತ್ತಾಗಿ ಮುಂಬೈಪತ್ರಿಕೆ ತಿಳಿಸುತಿದೆ.

ಬಂಗಾಳಾಧಿರಾಜ್ಯದ ರಂಗಪೂರ್ ಜಿಲ್ಲಾದಲ್ಲಿರುವ ಪೋಸ್ಟ್‌ಮಾಸ್ಟರೊಬ್ಬನು ಕಲ್ಕತ್ತೆಯಿಂದ ಒಬ್ಬ ನಗಗಳ ವ್ಯಾಪಾರಿಬಳಿ ಕೆಲವು ನಗಗಳನ್ನು ಭಾಂಗೀಮೂಲಕ ತರಿಸಿಕೊಂಡನು. ಈ ಭಾಂಗಿ ಇವನಿಗೆ ಸೇರಿದಕೂಡಲೇ ಅದರಲ್ಲಿರುವ ನಗಗಳಿಗೆ ಪ್ರತಿಯಾಗಿ ತಾಮ್ರದ ಚೂರುಗಳನ್ನು ಸೇರಿಸಿ ಮೊದಲಿನಂತೆಯೇ ಇಬಿಲ್ಲದ ರೀತಿಯಲ್ಲಿಮಾಡಿ ಈ ಭಾಂಗಿ ನನಗೆ ಅವಶ್ಯಕವಿಲ್ಲವೆಂದು ವಾಪಸ್ ಮಾಡಿದನಂತೆ. ಆದರೆ ಈ ಕೃತ್ಯವು ಹೊರಪಟ್ಟು ಇವನಿಗೆ ೭ ವರ್ಷ ಕಠಿಣಸಜಾ ವಿಧಿಸಿದರು. ಮುಖ್ಯ ಪೋಸ್ಟ್ ಮ್ಯಾಸ್ಟರಾಗಿರತಕ್ಕವರು ಒಳ್ಳೇನಡವಳಿಕೆಯುಳ್ಳವರಾಗಿದ್ದರೆ ತಾನೆ ಕೃತಕೃತ್ಯರಾಗುವರು.

ಬೆಳಗಾಂ ಡಿಸ್ಟ್ರಿಕ್ಟ್ ಡೆಪ್ಯುಟಿ ಕಲೆಕ್ಟರ್ ರಾ|| ಬ. ಗುರುಸಿದ್ದಪ್ಪಣ್ಣ ಗಿಲಗಂಜೆ ಇವರು ಪ್ರಿನ್ಸ್ ಆಲ್ಬರ್ಟ್ ವಿಕ್ಟರನವರ ಸ್ಮಾರಕ ಮಾಡುವದಕ್ಕೋಸ್ಕರ "ಲ್ಯಾಂಡ್ ಇಂಪ್ರೂವಿಂಗ್‌ಫಂಡ್" (ಹೊಲದ ಸುಧಾರಣೆಯ ಫಂಡ) ನ್ನು ವಸೂಲ್ ಮಾಡಲಿಕ್ಕೆ ಹುಕುಂ ಕೊಟ್ಟ ಪ್ರಕಾರ ಅಥಣೀ, ಮತ್ತು ಚಿಕ್ಕೋಡಿ ತಾಲ್ಲೂಕುಗಳಲ್ಲಿ ಅಲ್ಲಿನ ಮಾಮಲೇದಾರ್, ಶಿರಸ್ತೇದಾರ್, ಫೌಜದಾರ್ ದಿ ಇತ್ಯಾ ಸರ್ಕಾರದ ಅಮಲ್‌ದಾರರು ಜನರಿಗೆ ಉಪದ್ರವ ಕೊಟ್ಟು ಅವರ ಕಡೆಯಿಂದ ಸುಮಾರು ೬—೭ ಸಾವಿರ ರೂಪಾಯಿ ಕೂಡಿಸಿದ್ದರಂತೆ. ಈ ವರ್ತಮಾನವು ವರಿಷ್ಠ ಅಮಲ್‌ದಾರರಿಗೆ ತಿಳಿಯಬಂದು ಅವರು ಅದನ್ನು ಗವರ್ನರವರ ಕಿವಿಗೆ ಹಾಕಲಾಗಿ ಗವರ್ನರವರು "ಸರ್ಕಾರ್ ಕಾಮದಾರರು ಸರ್ಕಾರದ ಮಂಜೂರನ್ನು ಪಡೆಯದೆ ಸ್ಮಾರಕ ವಗೈರೆ ಮಾಡುವದಕ್ಕೆ ಫಂಡನ್ನು ಕೂಡಿಸಬಾರದು" ಯೆಂದು ಠರಾವ್ ಮಾಡಿರುತ್ತಾರೆಂದು ಬೆಳಗಾಂ ಸಮಾಚಾರ ಕರ್ತರು ಬರೆಯುತ್ತಾರೆ. ನಮ್ಮ ಸಮಾಚಾರ ಬಂಧುಗಳು ತಮ್ಮ ಬರಹದಲ್ಲಿ ಯೆಷ್ಟು ಉಪ್ಪುಹುಳಿ ಕೂಡಿಸಿರುವರೋ ತಿಳಿಯದು—ಚಂದ್ರೋದಯ

ಬನಾರಸ್ ಮ್ಯೂನಿಸಿಪಾಲಿಟಿಯೊಳಗೆ ರಾಜಾ ಶಿವಪ್ರಸಾದರವರು ಮಡಿವಾಳರು ಗಂಗಾನದಿಯೊಳಗೆ ತಮ್ಮ ವಸ್ತ್ರಗಳನ್ನು ಶೆಳೆಯ ತರುವದಾರಿಯಲ್ಲಿ ಅವರ ಕಡೆಯಿಂದ ಒಂದು ಗಂಟಿಗೆ ಒಂದು ಮಡ್ಡಿನಂತೆ ಸುಂಕವನ್ನು ತೆಗೆದುಕೊಳ್ಳಬೇಕೆಂದು ಸೂಚನೆ ಮಾಡಿದನು. ಈ ವರ್ತಮಾನವನ್ನು ಕೇಳಿ ಊರೊಳಗಿನ ನೂರಾರು ಮಡಿವಾಳರು ಸಿಟ್ಟಿನಿಂದ ಉರಿಯುತ್ತಾ, ತಮ್ಮ ಮೇಲೆ ಸುಂಕವನ್ನು ಕೂಡಿಸಬಾರದು, ಎಂದು ಹೇಳುವದಕ್ಕೋಸ್ಕರ ಮ್ಯೂನಿಸಿಪಾಲಿಟಿಯ ಮುಂದಿರಕ್ಕೆ ಬಂದು ಕೂಡಿದರು. ಈ ಮಡಿವಾಳರು ಬಹಳ ಗದ್ದಲ ಮೆಬ್ಬಿಸುತ್ತಾರೆಂದು ನೋಡಿ ರಾಜಾ ಶಿವಪ್ರಸಾದರು ಇವರನ್ನು ಹೊರಗೆ ಹಾಕುವದಕ್ಕೆ ಮ್ಯಾಜಿಸ್ಟ್ರೇಟರಿಗೆ ಹೇಳಿದರು. ಆದ್ದರಿಂದ ಅಲ್ಲಿನ ಮಡಿವಾಳರೆಲ್ಲರು ಕೂಡಿ ತಾವ್ಯಾರೂ ರಾಜಾ ಶಿವಪ್ರಸಾದರ ಬಟ್ಟೆಗಳನ್ನು ಶೆಳೆದುಕೊಂಡು ಬರಬಾರದು. ಒಂದುವೇಳೆ ಯಾರಾದರೂ ಸೆಳೆದುಕೊಂಡು ಬಂದರೆ ಅಂಥವರಿಗೆ ೧೨ ವರ್ಷಗಳ ವರಿಗೆ ಜಾತಿಯಿಂದ ತೆಗೆಯುವದಲ್ಲದೆ ೫೦ ರೂಪಾಯಿಗಳ ದಂಡವನ್ನು ಮಾಡಲಾಗುತ್ತದೆ ಎಂದು ತಮ್ಮೊಳಗೆ ಠರಾವು ಮಾಡಿಕೊಂಡಿದ್ದಾರೆ! ಇ ಥಾ ಕಟ್ಟುಗಳಿಂದ ಒಮ್ಮೊಮ್ಮೆ ಎ ಥಾ ಬಿಕ್ಕಟ್ಟು ಬರುತ್ತದೆ!!

EXTRACT.

ಶಿವಮೊಗ್ಗೆಯಲ್ಲಿ ದೊಡ್ಡ ಮರಗಳೆಂಬ ಒಂದು ತರಹಾ ಮರಗಳಿರುತ್ತವೆ, ಇದರ ನಾರಿನಿಂದ ಮೋಂಬತ್ತಿಗಳನ್ನು ಮಾಡುತ್ತಾರೆ ಇಂತಾ ಮೋಂಬತ್ತಿಗಳು ಕೆಲವು ಮೈಸೂರಲ್ಲಿ ನಡೆದ ಅಗ್ರಿಕಲ್ಚರಲ್ ಎಗ್ಜಿಬಿಷನ್ನಲ್ಲಿ ಶಿವಮೊಗ್ಗೆ ಅಮಲ್ದಾರರು ತರಿಸಿ ಪ್ರದರ್ಶನೆ ಮಾಡಿಸಿದ್ದರು. ಸೀಮೆಯಿಂದಬರತಕ್ಕ ಮೋಂಬತ್ತಿಗಳಿಗಿಂತ ಪ್ರಾಣಿಗಳ ಕೊಬ್ಬಿನಿಂದ ಮಾಡಲ್ಪಟ್ಟವುಗಳಾದ್ದರಿಂದ ಅನೇಕರು ಅವುಗಳನ್ನು ಉಪಯೋಗಿಸುವದರಲ್ಲಿ ಮನಸ್ಸಿಲ್ಲ. ಅಲ್ಪ ಸ್ವಲ್ಪ ಬಂಡವಾಳಗಳುಳ್ಳವರು ಒಂದು ಕಂಪನಿಯನ್ನು ಮಾಡಿ ಕೊಂಡು ಇದರಿಂದ ಮೋಂಬತ್ತಿಮಾಡತಕ್ಕ ಕಾರಖಾನೆಗಳನ್ನಿಟ್ಟು ಕೆಲಸಗಳನ್ನು ಸರಿಯಾಗಿ ನಡೆಸಿದರೆ ಎಷ್ಟೋಲಾಭ ಉಂಟಾಗುವದು. ಹಾಗೆ ನಾವು ಮಾಡದೇ ಉದಾಸೀನರಾಗಿಯೇ ಇದ್ದ ಪಕ್ಷದಲ್ಲಿ ಆಂಗ್ಲೇಯರಲ್ಲಿ ಯಾರಾದರೂ ಒಬ್ಬರು ಈ ಕೆಲಸಕ್ಕೆ ತಮ್ಮ ಬಂಡವಾಳವನ್ನು ಹಾಕಿ ಲಾಭವನ್ನು ತಾವೇ ಅನುಭವಿಸುವರು. ಆದದರಿಂದ ನಮ್ಮ ದೇಶೀಯರಲ್ಲಿ ಯಾರಾದರೂ ದ್ರವ್ಯಸ್ಥರು ಇದನ್ನು ಉಪಕ್ರಮಿಸಿ ಲಾಭವನ್ನು ಹೊಂದುವರೆಂದು ನಂಬಿದೇವೆ.

ಪೂನೇ ವಾಸಸ್ಥನಾದ ನಾನಾ ನಾರಾಯಣ ಘೋಲ್ ಎಂಬ ಒಬ್ಬ ಕುರುಡನು ಕಳೆದ ಮಾರ್ಚಿ ತಿಂಗಳಲ್ಲಿ ವಕೀಲ್ ಪರೀಕ್ಷೆಯನ್ನು ಕೊಟ್ಟನು ಈತನು ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಕೊಡುವಲ್ಲಿ ಮೆ|| ಲೀ ವಾರ್ನರ್ ಎಂಬ ಸಾಹೆಬರು ಈತ ಹೇಳಿದ್ದನ್ನು ಬರೆಯುವಬಗ್ಗೆ ಒಬ್ಬ ಮನುಷ್ಯನನ್ನು ಸಂಪಾದಿಸಿಕೊಟ್ಟರು. ಯೂನಿವರ್ಸಿಟಿ ಪರೀಕ್ಷೆಯಲ್ಲಿ ತೇರ್ಗಡೆಯಾದ ತರುವಾಯ ಬರೋಡೆಯ ಮಹಾರಾಜರವರು ಇವನು ನ್ಯಾಯಪುಸ್ತಕಗಳನ್ನು ಕೊಂಡುಕೊಳ್ಳುವ ಬಗ್ಗೆ ಈತ ಓದುತಲಿದ್ದ ಕಾಲೇಜಿನ ಪ್ರಿನ್ಸಿಪಲರವರ ಸಿಫಾರಸಿನ ಮೇಲೆ ೫೦೦ ರೂಪಾಯಿಗಳನ್ನು ಸಹಾಯ ಮಾಡಿದನು. ಮತ್ತು ಕೊಲ್ಹಾಪುರದ ಸರ್ಕಾರದಿಂದ ೧೫ ರೂಪಾಯಿಗಳ ವಿದ್ಯಾರ್ಥಿವೇತನವು ಕೊಡಲ್ಪಟ್ಟಿತು ಈತನು ಜಾರಿಸ್ ಪ್ರೂಡೆನ್ಸ್ಎಂಬ ಶಾಸ್ತ್ರವಲ್ಲಿ ಪ್ರಥಮ ಪರೀಕ್ಷೆಯನ್ನು ಕೊಟ್ಟದ್ದರಮೇಲೆ ಎಲ್. ಎಲ್. ಪರೀಕ್ಷೆಗೆ ಸೇರಿಸಿಕೊಳ್ಳಬೇಕೆಂದು ಸಿಂಡಿಕೇಟ್ ಎಂಬ ಸಮಾಜಕ್ಕೆ ಬರೆದಿರುವಲ್ಲಿ ಅವರು ಒಪ್ಪಲಿಲ್ಲ. ಆದ್ದರಿಂದ ತಾನೇ ಮನೆಯಲ್ಲಿ ಓದಿಕೊಂಡು ಪರೀಕ್ಷೆಕೊಟ್ಟು ಈಗ ಪೂನೆಯ ಕೋರ್ಟುಗಳಲ್ಲಿ ಪ್ರಾಕ್ಟೀಸ್ ಮಾಡುವಬಗ್ಗೆ ಮುಂಬೈಹೈಕೋರ್ಟಿಗೆ ದರಖಾಸ್ತು ಕೊಟ್ಟಿರುತ್ತಾನೆ—ದ್ವ ಚಂ.

ಮದರಾಸ್ ಹೈಕೋರ್ಟಿನಲ್ಲಿ ಒಂದು ಖೂನೀ ಮೊಕದ್ದಮೆಯಲ್ಲಿ ಅಪರಾಧಿಯು ಸೆಷನ್ ಜಡ್ಜಿಯವರು ತನಗೆವಿಧಿಸಿದ ಮರಣದಂಡನೆಯಮೇಲೆ ಮಾಡಿದ ಅಪೀಲ್ ತೀರ್ಮಾನವಾಯಿತು ಸಜಾ ಕಾಯಂ ಮಾಡಲ್ಪಟ್ಟಿತು. ಮೊಕದ್ದಮೆಯ ಸ್ವಭಾವವೇನಂದರೆ:—

ಅಪರಾಧಿಯು ಹೆಂಡತಿಯನ್ನು ಬಿಟ್ಟು ೨-೩ ವರ್ಷಗಳಿಂದ ಪ್ರತ್ಯೇಕ ವಾಸ ಮಾಡುತ್ತಿದ್ದನು ಹೆಂಡತಿಯ ಸ್ವಭಾವ ಇವಳನ್ನು ಇಟ್ಟುಕೊಂಡಿದ್ದನೆಂದು ಆತನಮೇಲೆ ಜೆನ್ಯಶ್ರವನಾಗಿದ್ದನು. ೧೮೯೦ ನೇ ಇಸವಿ ಏಪ್ರಿಲ್ ೧ ನೇ ತಾರೀಖಿನಲ್ಲಿ ಮಧ್ಯಾಹ್ನ ಭೋಜನಕ್ಕೆ ಕೂಡುವಾಗ ಸವರೀಭಾವನು ಮಗಳನ್ನು ಕರೆಯುವಂತೆ ಹುಡುಗನನ್ನುಕಳುಹಿಸಿದನು ಹುಡುಗ ಬರುತ್ತಿರುವಲ್ಲಿ ಅಪರಾಧಿಯು ಅವನನ್ನು ಕಂಡು ಹಿಡಿದುಕೊಂಡು ತನ್ನ ಮನೆಯ ಒಳಕ್ಕೆ ಹೋದನು ಇದನ್ನು ಬಾಗಲಲ್ಲಿದ್ದ ಒಬ್ಬ ಮುದುಕಿಯು ನೋಡಿದಳು. ಒಳಗೆ ಹೊಡದ ಶಬ್ದವಾದದರಿಂದ ಈ ಮುದುಕಿ ಮಗುವನ್ನು ಕೊಂದು ಹಾಕುತ್ತಾನೆಂದು ಕೂಗಿಕೊಂಡಳು. ಅದನ್ನು ಕೇಳಿ ಈ ಹುಡುಗನ ತಂದೆಯೂ ಅವನ ಮಾವನುಸಹಬಂದಬಂದರು. ಬಾಗಲಲ್ಲಿ ಕೂಗುವಲ್ಲಿ ಅಪರಾಧಿ ಮಾತನಾಡಲಿಲ್ಲ. ಬಾಗಲನ್ನು ತೆಗಿಯಲಿಲ್ಲ. ತರುವಾಯ ಸಿಬ್ಬಂದಿಯನ್ನು ತರುವಾಗ್ಯೆ ಬಾಗಲನ್ನು ತೆಗೆದು ಈಚಿಗೆ ಓಡಿಬಂದನು. ಅವನನ್ನು ಹಿಡಿದುಕೊಂಡು ಒಳಗೆಹೋಗಿ ನೋಡುವಲ್ಲಿ ಹುಡುಗನ ತಲೆ ಜಜ್ಜಿ ರಕ್ತಪ್ರವಾಹವಾಗಿತ್ತು. ಹುಡುಗನ ತಂದೆಗೂ ಅಪರಾಧಿಗೂ ಬಹಳವಾಗಿ ದ್ವೇಷವಿದ್ದ ಸಂಗತಿ ಫ್ರೂರಾದ ಜಾನಾತಾಯಿತು. ಅಪೀಲ್ ಡಿಸ್ಮಿಸ್ ಆಯಿತು.

Bangalore :— Printed and published at the KALYATIC PRESS, No. 111, SRNIVASA MANDILAM ROAD, PETTAH—1890

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಕಾಮವಿಚಿತ್ರನೃತ್ಯಸುಗಮಾರ್ಥ್ಯಕರ್ಣಾಟಕಪ್ರಕಾಶನಪಟಾಭಿಧಾಪ್ರಥಿತಸಾಹಿತೀಶೋಭಿತಾ। ನೃಗಾಂಕಹಿತಪಾಸರೆನಿಹಿತಮುದ್ರಣಾಸಜ್ಜನೈರ್ವಿಶಾಸುಪರಿಪೂರಿತಾದಿಶತಿಮಾನಸಂಸುಮುದಂ॥

Vol XVII } ಸಂಪುಟ ೧೭.]

BANGALORE—MONDAY, JUNE 23 1890.

ಬೆಂಗಳೂರು — ಸನ್ ೧೮೯೦ ನೇ ಇಸವಿ ಜೂನ್ ೨೩ ನೇ ತಾರೀಖ್ ಸೋಮವಾರ.

[No. 25. [ಸಂಚಿಕೆ ೨೫.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಸಾಲ್ ೧ಕ್ಕೆ	ಸ್ಥಳದವರಿಗೆ ಹರಕೊಳ್ಳದೆ	ಪರಸ್ಥಳದವರಿಗೆ ಪೋಸ್ಟೇಜ್ ಸಹಿತ
ಮುಂಗಡಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡಕೆ ಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ [illegible] ಪಾವತಿ [illegible] ಪಡೆದ [illegible] ಚಂದಾ [illegible] ತಿಳಿಸಿ [illegible] ಪತ್ರಿಕೆ ಕ [illegible] ಇಂಗ್ಲಿಷ್ [illegible] ಕನ್ನಡ [illegible] ಅಥವಾ ಎರಡನ್ನೂ [illegible] ಮೂರು ತಿಂಗಳಿಗಿಂತ ಕಡಮೆ [illegible] ಚಂದಾ [illegible]

[illegible] ಮೊದಲು [illegible] ಸರ್ಟಿಫಿಕೇಟ್ [illegible] ಕಳುಹಿಸತಕ್ಕವರು [illegible] ಬಿಲ್ [illegible] ಕಳುಹಿಸತಕ್ಕದ್ದು [illegible]

ಪ್ರಕಟನೆಯ ರಿವಾಜ್.

ಮೊದಲನೆ ದಫಾ ಪಂಕ್ತಿ ೧ಕ್ಕೆ	೦—೨—೦	
ಎರಡನೇ ದಫಾ ಪಂಕ್ತಿ ೧ಕ್ಕೆ	೦—೧—೦	

[illegible] ಎಷ್ಟು [illegible] ಪಂಕ್ತಿ ಒಂದಕ್ಕೆ [illegible] ಈ ಪತ್ರಿಕೆಯಲ್ಲಿ [illegible] ಪ್ರಕಟನೆಗಳು [illegible] ಪ್ರಕಟಿಸುತ [illegible] ಪ್ರಕಟನೆಗಳನ್ನು [illegible] ಪ್ರಕಟನೆಗಳಿಗೆ [illegible] ಪತ್ರಿಕೆಗೆ [illegible] ಕಳುಹಿಸಲ್ಪಡಲಾರವು

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜು ಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಕಳುಹಿಸಿ ಕೊಡಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಪುಸ್ತಕ ಕೊಡಲ್ಪಡಲಾರದು

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಪೋಸ್ಟೇಜ್ ಪ್ರತಿ ಒಂದಕ್ಕೆ ರೂ 5 0—0

ಟಿ ಏ [illegible]ಚಾರ್,

ಬೆಂಗಳೂರ್ ಪಿಲ್ಲೆ [illegible] 41ನೇ ನಂ ಮನೆ

ADVERTISEMENTS

ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

	ರೂ	ಆ	ಪೈ
ಸಟೀಕಾ ವೈದ್ಯಸಾರ ಸಂಗ್ರಹ	೫	೦	೦
,, ಶಿವಗೀತೆ	೧	೧	೦
,, ಶಿವ ಸಹಸ್ರನಾಮ	೦	೪	೦
,, ರಘುವಂಶ	೧	೨	೦
,, ಮುಕುಂದಮಾಲಾ	೦	೧೨	೦
,, ಬಾಲರಾಮಾಯಣ	೦	೪	೦
,, ಗೋಪಿಕಾ ಗೀತ	೦	೧	೬
,, ಚಾಣಕ್ಯನೀತಿ (ಸುಭಾಷಿತ)	೦	೩	೦
ವಿಷ್ಣುಸಹಸ್ರನಾಮ ಪತ್ರಿಕೆ	೦	೫	೦
ಸೂರ್ಯಸಹಸ್ರನಾಮ	೦	೨	೧
ಕೃಷ್ಣಕರ್ಣಾಮೃತ	೦	೭	೬
ತ್ರಿಕಾಂಡ ಅಮರ ಮೂಲ	೦	೩	೬
೧ ಭಾಗ	೦	೧	೦

ಕನ್ನಡ ಗ್ರಂಥಗಳು.

ಶುಕಸಪ್ತತಿ ಅನ್ವಯ ಪ್ರತಿ	೩	೦	೦
ಬಿ.ಎ. ದಸ್ತು	೧	೪	೦
ವೃಷಭೇಂದ್ರ ವಿಜಯ	೧	೪	೦
ದುಷ್ಟ [illegible]	೦	೪	೦
ಹನುಮದ್ವಿಲಾಸ	೦	೪	೦
ಕಾಳಿಯಮರ್ದನ	೦	೨	೬
ಸುಭದ್ರಾಪರಿಣಯ	೦	೨	೬
ಶಶಿರೇಖಾ ಪರಿಣಯ	೦	೩	೦
ಸುದಾಮಚರಿತ್ರ	೦	೨	೦
ಮೈರಾವಣನ ಚರಿತ್ರೆ	೦	೨	೦
ಬಾಲಗ್ರಹ ಚಿಕಿತ್ಸೆ	೦	೨	೬
ಮನುಸ್ಮೃತಿ ಲಘು	೧	೦	೦
ಭ್ರಮರ ವಿಲಾಸ	೦	೧೨	೦

ನೋಟೀಸ್.

ಇದರಿಂದ ನಮ್ಮ ಚಂದಾದಾರರಿಗೂ ಇತರರಿಗೂ ಶ್ರುತಪಡಿಸುವದೇನೆಂದರೆ —

ಸನ್ ೧೮೮೯ ನೇ ಇಸವಿ ಡಿಸೆಂಬರ್ ಆಖೈರಿನವರಿವಿಗೆ ಚಂದಾ ಬಾಕಿಯನ್ನು ಪೂರಾ ಫೈಸಲ್ಮಾಡಿರತಕ್ಕ ಚಂದಾದಾರರ ಹೆಸರುಗಳನ್ನು ಮಾತ್ರ ನಾವು ರಿಜಿಸ್ಟರ್ ದಾಖಲ್ಮಾಡಿಕೊಂಡು ಈಜನವರಿ ಲಾಗಾಯತು ಪತ್ರಿಕೆ ಕಳುಹಿಸುತ್ತೇವೆ ಅವರ ಪೈಕಿ ಯಾರಿಗಾದರು ಪತ್ರಿಕೆಯು ಅಪೇಕ್ಷೆ ಇಲ್ಲದಿದ್ದರೆ ಅಂತವರು ಕೂಡಲೇ ತಮ್ಮ ಅಭಿಪ್ರಾಯವನ್ನು ಮೂರುಕಾಸಿನ ಕಾರ್ಡಿನಲ್ಲಿ ನಮಗೆ ತಿಳಿಸಿಬಿಡಬಹುದು. ಪತ್ರಿಕೆಯು ಆವಶ್ಯಕತೆ ಇರತಕ್ಕವರು ಸಾಧ್ಯವಾದಷ್ಟು ತ್ವರೆಯಲ್ಲಿ ಚಂದಾ ಮೊಬಲಗನ್ನು ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಬೆಂಗಳೂರು. } ಟಿ ಸಿ. ಶ್ರೀನಿವಾಸಾಚಾರ್,
ತಾ ೫ನೇ ಜನವರಿ } ಪ್ರೊಪ್ರೈಟರ್.
೧೮೯೦ } ಕರ್ಣಾಟಕ ಪ್ರಕಾಶಿಕಾ

ನೋಟೀಸ್.

ಮನೆಗಳಲ್ಲಿ ಗಿಲಿಟ್ ಮಾಡುವದಕ್ಕೆ ಅನುಕೂಲವಾದ ಬೆಳ್ಳಿ ದ್ರಾವಕವು.

ಈ ಬೆಳ್ಳೀ ದ್ರಾವಕವು ನೈಜವಾದ ಬೆಳ್ಳಿ ತಟ್ಟೆಗಳ ಮೇಲೂ, ತಾಮ್ರ, ಹಿತ್ತಾಳೆ ವಗೈರೆ ವಿಶಿಷ್ಟ ಪದಾರ್ಥಗಳ ಮೇಲೂ [illegible] ಉಜ್ಜುವದರ ಮೂಲಕ ಗಿಲಿಟ್ ಮಾಡಲಿಕ್ಕೆ ಬಹಳ ಉಪಯುಕ್ತವಾದದ್ದಾಗಿರುತ್ತದೆ. ಇದಲ್ಲದೆ ಸದರೀ ದ್ರಾವಕವು ಚಿನ್ನ ಮತ್ತು ಬೆಳ್ಳಿ ಒಡವೆಗಳ ಮಸ್ತು ಕೆಡಿಸುವ [illegible] ಅವುಗಳಿಗೆ ಮರುಗು ಕೊಡಲಿಕ್ಕು ಸಹ ಪ್ರಯೋಜನಕರವಾದದ್ದು. ಇದರಿಂದ ಇತರ [illegible] [illegible] ಕಾಂತಿ [illegible] ಬಣ್ಣ [illegible] ಪದಾರ್ಥಗ [illegible] ಕಾಂತಿಯನ್ನು [illegible] ಬೆಳ್ಳಿ [illegible] ಸದರೀ ದ್ರಾವಕವು [illegible] ಬೇಕಾದ ಭರವಸೆ [illegible] ಗಿಲಿಟ್ ಮಾಡುವದಕ್ಕಿಂತ [illegible] ಕೆಡದೇ ಒಂದು [illegible] ಅದರಿಂದ ಯಾವ ಕೆಡಕೂ ಉಂಟಾಗ [illegible] ಅಜಮಾಯಿಸೀ ಮಾಡಿ ನೋಡಬಹುದು

ಇದರ ಕ್ರಯ ಸೀಸೆ ೧ಕ್ಕೆ ೨—೮—೦

ಚಿನ್ನದ ದ್ರಾವಕವು.

ಇದು ಬೆಳ್ಳಿ, ಹಿತ್ತಾಳೆ, ತಾಮ್ರ ವಗೈರೆ ಪದಾರ್ಥಗಳನ್ನು ಗಿಲ್ಟು ಮಾಡಲಿಕ್ಕೆ ಬಹಳ ಉಪಯುಕ್ತವಾಗಿರುವದಲ್ಲದೆ ಶುದ್ಧವಾದ ಬಂಗಾರದಲ್ಲಿ ತಯಾರಾದದ್ದಾಗಿರುತ್ತದೆ [illegible] ಗಿಲ್ಟು ಮಾಡಲಿಕ್ಕೆ ಈ ದ್ರಾವಕವು ಕೇವಲ ಪ್ರಯೋಜನಕರವಾಗುವದು

ಇದರ ಕ್ರಯ ಸೀಸೆ ೧ಕ್ಕೆ ೩—೪—೦

ಬೇಕಾದವರು ಇದಡಿ [illegible] ಬೆಳ್ಳೀ ಕಾರ್ಖಾನೆಯ ಮ್ಯಾನೇಜರಿಗೆ ಬರೆದು ತರಿಸಿಕೊಳ್ಳಬಹುದು.

ಪ್ರಕಟನೆ.

ಸನ್ ೧೮೯೦ನೇ ಇಸವಿಯ ಪರೀಕ್ಷೆಗೆ ಉಪಯೋಗವಾಗುವ ಸಟೀಕ ಜೈಮಿನಿ ೧ನೇ ಸಂಧಿಯಿಂದ ೧೧ನೇ ಸಂಧಿಯ ವರಿವಿಗೆ ಪ್ರತಿ ೧ಕ್ಕೆ ಬಹಾರಿ ಪೋಸಲ್ ಸಹಿತ ಕ್ರಯ ೧—೧೧—೬ ಟೀಕು ತಾತ್ಪರ್ಯ ವಿವರಣ ಸಹಿತ ರಾಜಶೇಖರ ವಿಲಾಸ (ಆರೂ ಆಶ್ವಾಸಗಳಿಗೆ ಮಾತ್ರ) ಟಪಾಲ್ ಪೋಸಲ್ ಸಹಿತ ಕ್ರಯ ೨—೦—೦ ಇವು ಕ್ರಯಕ್ಕೆ ಸಿದ್ಧವಾಗಿವೆ. ವ್ಯಾಲ್ಯೂಪೇಬಲ್ ಮೂಲಕ ತರಿಸಿಕೊಳ್ಳಬಹುದು. ೨-೩ನೇ ಭಾಗಗಳು ಮುದ್ರಿಸಲ್ಪಡುತ್ತಿರುವವು ಭಾಗ ೧ಕ್ಕೆ ಟಪಾಲ್ ಪೋಸಲ್ ಸಹಿತ ೨—೪—೦. ಚಂದಾ ಮುಂದಾಗಿಯೇ ಕಳುಹಿಸಬೇಕು.

ಉ. ದಕ್ಷಿಣಾಮೂರ್ತಿಶಾಸ್ತ್ರಿ.

ನೋಟೀಸ್.

ಮೈಸೂರು ಮಹಾರಾಜರ ಮಿಲ್ಲಿಗೆ ಆರುತಿಂಗಳ ವರಿವಿಗೂ ತಿಂಗಳು 1 ಕ್ಕೆ 350 ಪಲ್ಲ ಒಳ್ಳೆ ದಾರವಾದ ಗೋಧಿ ಸಪ್ಲೈ ಮಾಡತಕ್ಕಂತಾವರು ಯಾವ ಯಾವ ದರದ ಮೇರಿಗೆ ಕೊಡುವದಕ್ಕೆ ಒಪ್ಪುತ್ತಾರೋ ಅಂತಾ ದರಖಾಸ್ತುಗಳನ್ನು ಇದೇ ಇಸವಿ ಜೂನ್ 30ನೇ ತಾರೀಖಿನೊಳಗಾಗಿ ಕಳುಹಿಸಿ ಕೊಡತಕ್ಕದ್ದು. ಅಥವಾ ಮೊಖ್ತಾವಾಗಿ ಯಾದರೂ ಮಿಲ್ ಸೆಕ್ರೆಟರಿಯವರಲ್ಲಿ ಬರಹಮೂಲಕ ಕೊಡತಕ್ಕದ್ದು. ಪ್ರತಿ ದರಖಾಸ್ತುದಾರನು ದರಖಾಸ್ತಿನ ಸಂಗಡ 2 ಶೇರು ಗೋಧಿಯನ್ನು ಮಾದರಿಗಾಗಿ ಒಂದು ಚೀಲದಲ್ಲಿ ಹಾಕಿ ಕಳುಹಿಸಿ ಕೊಡತಕ್ಕದ್ದು. ಅಥವಾ ಮೊಖ್ತಾ ಹಾಜರ್ ಮಾಡಿಸತಕ್ಕದ್ದು.

ದರಖಾಸ್ತು ಸಂಗಡ 100 ರೂಪಾಯಿ ಡಿಪಾಜಿಟ್ ಹಾಜರ್ಮಾಡತಕ್ಕದ್ದು.

3 ನೇ ಜೂನ್ 1890. } Secretary.
ಬೆಂಗಳೂರು. }

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JUNE 23, 1890.

೧೮೯೦ನೇ ಮೇ ಜೂನ್ ೨೩ ನೇ ಸೋಮವಾರ.

HINDU MARRIAGE SYSTEM.

No III.

ಹಿಂದೂ ವೈವಾಹಿಕ ಪದ್ಧತಿಯಂಕುರಿತು ೩ನೇ ಅಂಕ

ಸಾಮಾನ್ಯವಾಗಿ ಇಂಗ್ಲಿಷಿನವರಲ್ಲಿ ನೆರೆಗೊಂಡಿರುವ ವೈವಾಹಿಕ ಕ್ರಮವನ್ನು ತಿಳಿಸಿ, ತನ್ಮೂಲಕ ಅವರು ಅನುಭವಿಸುವಂತಾ ಸುಖ ಸಂತೋಷಗಳ ಸ್ವರೂಪಗಳು ಸಾಧ್ಯವಾದನುಬ್ಬಗೆ ತಕ್ಕ ನಿದರ್ಶನಗಳೊಡನೆ ನಿರೂಪಿಸಿ, ಕಡೆಗೆ ಅದು ಹಿಂದೂಗಳಿಗೆ ಅನುಗುಣವಾದದ್ದಲ್ಲವೆಂದು ಹಿಂದಿನ ಅಂಕದಲ್ಲಿ ನಿದರ್ಶನಮಾಡಿದ್ದೇವಷ್ಟೆ. ಹಿಂದೂವೈವಾಹಿಕ ಶಾಸ್ತ್ರ ಪದ್ಧತಿಯಂಕುರಿತು ವಿಚಾರಮಾಡುವದಕ್ಕೆ ಮುಂಚಿತವಾಗಿ ಆಶಾಸ್ತ್ರಕಾರರ ವಿಷಯವಾಗಿ ಜನಗಳಿಗೆ ಸ್ವಲ್ಪ ತಿಳಿಸಬೇಕಾದದ್ದು ಅತ್ಯಾವಶ್ಯಕವಾಗಿರುತ್ತದೆ. ಯೂರೋಪ್ ಅಮೇರಿಕಾ ಖಂಡಗಳಲ್ಲಿ ಪ್ರಸಿದ್ಧರೆನಿಸಿದ್ದ ಶಾಸ್ತ್ರಜ್ಞರ ಸಿದ್ಧಾಂತಗಳಲ್ಲಿ ವಿಶೇಷ ನಂಬಿಕೆಯನ್ನಿಡಲಿಕ್ಕೆ ಅವಕಾಶ ವಿರುವದಿಲ್ಲವು. ಯಾತಕ್ಕೆಂದರೆ ಬೇರೆಬೇರೆ ಶಾಸ್ತ್ರಜ್ಞರು ಒಂದೇ ವಿಷಯದಲ್ಲಿ ಬಹಳ ಭಿನ್ನಾಭಿಪ್ರಾಯಗಳುಳ್ಳವರಾಗಿರುತ್ತಾರೆ. ಒಂದೇವಿಷಯದಲ್ಲಿ ಹೀಗೆ ಮನುಷ್ಯರ ತಾತ್ಪರ್ಯಗಳು ಭಿನ್ನಗಳಾಗಿರುವಲ್ಲಿ ಅಂತಾ ತಾತ್ಪರ್ಯಗಳೆಲ್ಲವು ನಿರಾಧಾರಗಳಾಗಿಯಾದರೂ ಇರಬೇಕು, ಅಥವಾ ಅವುಗಳ ಪೈಕಿ ಒಂದುಮಾತ್ರ ನಿಜವಾದದ್ದಾಗಿಯಾದರೂ ಇರಬೇಕೇಹೊರತು ಎಲ್ಲವೂ ನಿಜವಾದವೆಂದು ನುಡಿಯಲಾಗದು. ಹೀಗೆ ಒಂದು ವಿಷಯದಲ್ಲಿ ಪರಸ್ಪರ ವಿರುದ್ಧಗಳಾದ ಭಿನ್ನಾಭಿಪ್ರಾಯಗಳುಂಟಾಗಲಿಕ್ಕೆ ಜನಗಳ ಅಜ್ಞಾನವಿನಾ ಬೇರೊಂದೂ ಕಾರಣವಲ್ಲವು. ಇದಲ್ಲದೆ ಸದರೀ ಪಾಶ್ಚಾತ್ಯರ ಶಾಸ್ತ್ರ ಸಿದ್ಧಾಂತಗಳು ಆಗಿಂದಾಗ್ಯೆ ಬದಲಾಯಿಸುತಲಿರುತ್ತಿವೆಯಲ್ಲದೆ ಹೀಗೇ ಎಂದು ನಿರ್ಧಾರವಾಗಿ ಬಂದು ನಿಲಕಡೆಗೆ ಬಂದದ್ದೊಂದೂ ಇಲ್ಲವು. ಕೆಲವುಕಾಲದ ಹಿಂದೆ ಪ್ರಮಾಣತ್ವೇನ ಗ್ರಹಿಸಲ್ಪಟ್ಟದ್ದ ಶಾಸ್ತ್ರಗಳೂ ಸಿದ್ಧಾಂತಗಳೂ ಈಗ ವ್ಯವಹಾರದೊಳಿಲ್ಲದಿವೆ. ಈಗ ನೆಲೆಗೊಂಡಿರತಕ್ಕವು ಮುಂದೆ ಸ್ವಲ್ಪಕಾಲದ ತರುವಾಯ ಅನಾವಶ್ಯಕಗಳಾಗಿರುವವು. ಅವರಿಗೆ ವ್ಯವಸ್ಥಿತವಾದ ಜ್ಞಾನವುಂಟಾಗದೆಹೋದದರಿಂದಲೇ ಈರೀತಿ ಆಗಿಂದಾಗ್ಯೆ ಅಭಿಪ್ರಾಯಗಳು ಮಾರುತ್ತಿವೆಯಲ್ಲದೆ ನಿಜಸ್ಥಿತಿಯು ವ್ಯಕ್ತವಾಗಿದ್ದರೆ ಅವೆಂದಿಗೂ ಬದಲಾಯಿಸಲ್ಪಡುತ್ತಲಿರಲಿಲ್ಲವು. ಆದಕಾರಣ ಯೂರೋಪ್ ಅಮೇರಿಕಾಖಂಡಗಳ ಶಾಸ್ತ್ರಜ್ಞರು ಪ್ರಾಚೀನ ಸ್ವಭಾವಧರ್ಮಗಳನ್ನು ಕುರಿತು ವಿಚಾರ ಮಾಡತ

ಕ್ಯವರಾಗಿದಾರೆಯೋ ಯೂರೋಪ್ ನಿಜವಾದ ಒಂದು ಸಿದ್ಧಾಂತವನ್ನವಲಂಬಿಸಿದವರಲ್ಲವೆಂದು ನ ಡಿಯುವೇಕಾಗಿದೆ. ಯಾವನು ಇಂದ್ರಿಯನಿಗ್ರಹವು ಮಾಡಿ ತಪಸ್ಸಂಪನ್ನನಾಗಿ ಮನೋದಾರ್ಢ್ಯದೊಡನೆ ಪರಮಾತ್ಮನನ್ನುದ್ಧ್ಯಾನಿಸುವನೋ ಅವನಿಗೆ ತ್ರೈಕಾಲಿಕ ಜ್ಞಾನವೂ ದೃಷ್ಟಿಗೆ ಗೋಚರಗಳಾದ ಸ್ವಭಾವ ಧರ್ಮಗಳನ್ನು ಗ್ರಹಿಸುವ ಬುದ್ಧಿ ಸಾಧನವೂ, ಜ್ಞಾನದೃಷ್ಟಿಯೂ ಉಂಟಾಗುವದೆಂದು ಆರ್ಯರ ಶ್ರುತಿ ಪುರಾಣೇತಿ ಹಾಸಾದಿಗಳೆಲ್ಲವು ಉದ್ಘೋಷಿಸುತಲಿವೆ. ಹಿಂದೂ ವಿವಾಹ ಪದ್ಧತಿಯನ್ನೇರ್ಪಡಿಸಿದ ಮನು, ಪರಾಶರ ಯಾಜ್ಞವಲ್ಕ್ಯಾದಿ ಸ್ಮೃತಿ ಕರ್ತರೂ, ಜ್ಯೋತಿಶ್ಶಾಸ್ತ್ರಜ್ಞರಾದ ವರಾಹ ಮಿಹಿರಾಚಾರ್ಯರು, ಭಾಸ್ಕರಾಚಾರ್ಯರು ಮೊದಲಾದವರೂ, ಬಹಳ ತಪೋನಿಷ್ಠಾಗರಿಷ್ಠರೆಂಬದಾಗಿಯೂ, ಜ್ಞಾನದೃಷ್ಟಿಯುಳ್ಳವರೆಂತಲೂ ತಿಳಿಸಲ್ಪಟ್ಟಿರುತಿದೆ. ಇಂತಾ ಮಹನೀಯರ ವಾಕ್ಯಗಳನ್ನು ಅಪದ್ಧವೆಂದು ನಾವು ಹ್ಯಾಗೆ ನಿರಾಕರಿಸಬಹುದು? ಜ್ಞಾನದೃಷ್ಟಿಯಿಂದವರು ಅಪರೋಕ್ಷ ವಿಷಯ ನಿರ್ಣಯ ಮಾಡಿ ತಿಳಿಸಿದ ಅಂಶಗಳನ್ನು ಯಥಾರ್ಥಗಳಲ್ಲವೆಂದು ನುಡಿಯಲಿಕ್ಕೆ ಒಂದು ಶಬ್ದ ವಿನಾ ನಮಗೆ ಬೇರೆ ಯಾವವಿಧ ಆಧಾರಗಳೂ ಇಲ್ಲವು. ಪರಂತು ಈಗಿನ ಕಾಲದಲ್ಲಿ ಇಂಗ್ಲಿಷ್ ಭಾಷಾಭ್ಯಾಸ ಮಾಡಿದವರು, ಸ್ವಾನುಭವದಮೇಲೂ ಊಹೆಯಿಂದಲೂ ನಿರ್ಣಯವಿಲ್ಲದೆ ಅನ್ಯ ದೇಶೀಯನೊಬ್ಬನು ನುಡಿಯುವ ಮಾತನ್ನು ಗೌರವಿಸಿ ನಂಬುವಂತೆ ನಮ್ಮ ಶಾಸ್ತ್ರಕಾರರ ಮಾತುಗಳನ್ನು ಪುರಸ್ಕರಿಸಲಾರರು. ಭೂಮಿಗೂ ಸೂರ್ಯ ಮಂಡಲಕ್ಕೂ ಮಧ್ಯೆ ಅನೇಕಲಕ್ಷಮೈಲುಗಳ ಅಂತರವಿರುವದೆ ಯೂರೋಪಿಯನ್ನರು ತಿಳಿಸಿದ ಮಾತ್ರಕ್ಕೆ ಅದೆಲ್ಲರಿಗೂ ಪರಮ ಪ್ರಮಾಣವಾಗಿ ಏರ್ಪಟ್ಟದೆ ಪರಂತು ಆ ರೀತಿ ತಿಳಿಸಿದವರು ನೋಡಿ ಅಳತೆ ಮಾಡಿದವರಲ್ಲದಿದ್ದರೂ ಯಾವದೇ ಒಂದು ಪ್ರಬಲ ಆಧಾರದಮೇಲೆ ಯಂತ್ರೋಪಕರಣಗಳ ಸಹಾಯದಿಂ ನುಡಿದವರೇ ಹೊರತು ಕಣ್ಣು ಮುಚ್ಚಿಕೊಂಡು ಬರೆದಿಟ್ಟವರಲ್ಲವು ಅದಾಗ್ಯೂ ಅದೇ ರೀತಿ ನಮ್ಮ ಶಾಸ್ತ್ರಜ್ಞರು, ಗ್ರಹಚಾರಕ್ಕೂ, ಮನುಷ್ಯರಿಗೂ, ಇತರ ಜೀವರಾಶಿಗಳಿಗೂ, ಸಸ್ಯಾದಿಗಳಿಗೂ ಸಂಕ್ರಮಣ ಸಂಬಂಧವಿರುವದರಿಂದ ಅವುಗಳನ್ನನುಸರಿಸಿ ಫಲಾಫಲಗಳುಂಟಾಗುತಿವೆಯೆಂದು ಪ್ರತಿ ಗ್ರಂಥದಲ್ಲಿ ವಿಶದವಾಗಿ ತಿಳಿಸಿದ್ದರೂ ಅದುನಮ್ಮವರು ಲಕ್ಷ್ಯದೊಳಿಡದೆ, ಜ್ಯೋತಿಷವೇ ಸುಳ್ಳೆಂಬದಾಗಿ ವಾದಿಸಲುಪಕ್ರಮಿಸಿದಾರೆ. ಮೇಘಾವರಣವಾದ ಕಾಲದಲ್ಲಿ ಕೆಲವು ಪೈರುಗಳು ಕೆಟ್ಟುಹೋಗುವದೂ, ಗಿಡಗಳಲ್ಲಿರುವ ಬದನೇಕಾಯಿಗಳು ಉದುರಿಹೋಗುವದೂ, ಗೆಣಸುಮೊದಲಾದ ಮೂಲವರ್ಗಗಳು ಹುಳತುಹೋಗುವದೂ ಪ್ರಸಿದ್ಧವಾಗಿಯೇ ಇರುತಿವೆ. ಭೂಮಿಯಲ್ಲಿರತಕ್ಕ ಸಸ್ಯಾದಿಗಳಿಗೂ ಅಂತರಿಕ್ಷದಲ್ಲಿ ಚರಿಸತಕ್ಕ ಮೇಘಗಳ ವ್ಯಾಪಾರಕ್ಕೂ ಯಾವ್ವಿಧ ಸಂಬಂಧವೂ ಇಲ್ಲದಿರವೇಕಷ್ಟೆ ಇದು ಅನುಭವ ವಿರುದ್ಧವಾದ ವಿಷಯವಾಗಿರುತಿದೆ. ಅದೇ ರೀತಿ ಪದಾರ್ಥಗಳಿಗೂ, ತತ್ತ್ವಜ್ಞಾನರಾಶಿಗಳಿಗೂ ಆಯಾಗ್ರಹಗಳಿಗೂ ಫಲಾನುಸಂಬಂಧವಿರುವದೆಂದು ನಮ್ಮವರು ತಿಳಿಸಿದರೆ ಅದು ನಂಬುವವರಿಲ್ಲವು. ಶಮದಮಾದಿಗಳೊಡನೆ ತಪಸ್ಸು ಮಾಡತಕ್ಕವರಿಗೆ ಜ್ಞಾನದೃಷ್ಟಿಯುಂಟೆಂಬದಂ ಪೂರ್ವದಲ್ಲಿ ಯೂರೋಪಿನೊಳು ಅನೇಕ ಸಿದ್ಧಾಂತ ಪ್ರವರ್ತಕರು ಸ್ವಾನುಭವದಿಂದಂಗೀಕರಿಸಿರುತ್ತಾರೆ. ಈಗಲೂ ಆಧುನಿಕರನೇಕರು ಸದರೀ ಅಂಶವನ್ನು ಒಪ್ಪಿಕೊಳ್ಳುತ್ತಾರೆ. (ಮೆಸಮೆರಿಸಮ್) ಎಂಬ ಆಕರ್ಷಕ ವಿಧಾನ ಕ್ರಮವನ್ನರಿಯುವ ಶಾಸ್ತ್ರಕ್ರಮವಂ ಶೋಧಿಸಿ ಅಭ್ಯಸಿಸಿದವರೆಲ್ಲರೂ ಇಂತಾ ದಿವ್ಯದೃಷ್ಟಿಯೊಂದುಂಟುಬವಾಗಿ ನಂಬಿದಾರೆ. ಆದುದರಿಂದ ನಮ್ಮ ಪೂರ್ವಿಕರಿಗೆ ಅಂತಾ ದಿವ್ಯದೃಷ್ಟಿಯಿದ್ದಿರಬಹುದೆಂದು ಸುಲಭವಾಗಿ ನಂಬಬಹುದಾಗಿದೆ. ಅಂತಾ ಜ್ಞಾನಿಗಳಿಂದ ವಿಧಾಯಕವಾದ ಕ್ರಮಪಟದೊಂದು ವಿವಾಹವಾದರೂ ಈಗಿನ ಕಾಲದಲ್ಲಿ ಜರುಗುವದಿಲ್ಲವಾದುದರಿಂದಲೇ ಅನೇಕ ಪ್ರಮಾದಗಳೂ ದುಃಖಗಳೂ ಪ್ರಾಪ್ತವಾಗುತಿವೆ. ಶಾಸ್ತ್ರಕ್ರಮವನ್ನರಿಯದೆಯೂ, ಅರಿತು ಅದನ್ನು ಉಪೇಕ್ಷಿಸಿಯೂ ಇಷ್ಟಾನುಸಾರ ಮಾಡತಕ್ಕ ವಿವಾಹದಲ್ಲಿ ಯದೋಚಿತ ನಷ್ಟಗಳೂ ಪ್ರತ್ಯವಾಯಗಳೂ ಪ್ರಾಪ್ತವಾದಮಾತ್ರಕ್ಕೆ ಸದರೀ ಶಾಸ್ತ್ರವನ್ನು ಸುಳ್ಳೆಂದಾಗಲಿ, ಅಥವಾ ಅವುಗಳಿಂದ ಪ್ರತಿಪಾದ್ಯಗಳಾದ ಪದ್ಧತಿಗಳು ಅಕ್ರಮಗಳೆಂದಾಗಲಿ ಹ್ಯಾಗೆ ನುಡಿಯಬಹುದು? ಮಸಲಾ ಇಂಗ್ಲಿಷ್ ಡಾಕ್ಟರಗಳು ಬಹಳ ಶ್ರದ್ಧೆಯೊಡನೆ ತಮ್ಮ ಬುದ್ಧಿ ಕೌಶಲ್ಯವನ್ನೆಲ್ಲ ವಿನಿಯೋಗಿಸಿ ಚಿಕಿತ್ಸೆ ಮಾಡುತ್ತಾರೆ. ಇವರು ಚಿಕಿತ್ಸೆ ಮಾಡಿದವರಲ್ಲೆಷ್ಟುಜನಕ್ಕೆ ಜಾಡ್ಯ ನಿವೃತ್ತಿಯಾಗವೆ ಹೋಗಿರಲಿಲ್ಲವು. ಇದರಿಂದಲೆ ಸದರೀ ಶಾಸ್ತ್ರವನ್ನು ಸುಳ್ಳೆಂದು ನುಡಿಯುವದಕ್ಕಾಗುವದಿಲ್ಲವು. ವೈದ್ಯನಿಗೆ ರೋಗಸ್ವರೂಪವು ತಿಳಿಯದೆ ಹೋಗುವದರಿಂದಲೂ ಅದಕ್ಕೆ ತಕ್ಕ ಔಷಧವು ಕೊಡಲ್ಪಡದೆ ಹೋದದರಿಂದಲೂ ರೋಗವು ಗುಣವಾಗಲಿಲ್ಲವೆಂದು ನಾವು ಭಾವಿಸಬೇಕೇ ಹೊರತು ವೈದ್ಯಶಾಸ್ತ್ರವನ್ನು ಅಪದ್ಧವೆಂದೆಷ್ಟುಮಾತ್ರವೂ ನುಡಿಯಕೂಡದು. ಮುಖ್ಯವ ಗಿನವು ಶಾಸ್ತ್ರಗಳನ್ನು ಚೆನ್ನಾಗಿ ಪರಿಶೀಲನೆಮಾಡದೆ ಹೇಳತಕ್ಕವರ ಮಾತಿನಮೇಲೆ ಅಪದ್ಧವೆಂದು ನುಡಿಯಲಿಕ್ಕೆ ಅವಕಾಶ ವಾಗಿರುತೇ ಹೊರತು ಶಾಸ್ತ್ರಗಳೆಂದಿಗೂ ಸುಳ್ಳಾಗಲಿಲ್ಲವು. ತಮದರಿಂದ ಶಾಸ್ತ್ರೀಯವಾಗಿ ಮಾಡಲ್ಪಟ್ಟ ವಿವಾಹದಲ್ಲಿ ಪತಿಭಾರ್ಯೆಯರೊಬ್ಬರಿಗೂ ಸಂಪೂರ್ಣ ಸುಖ ಪ್ರಾಪ್ತವಾಗುವದೋ ಇಲ್ಲವೋ ಎಂಬ ಅಂಶವಂ ಮುಂದೆ ತಿಳಿಸುವೆವು.

Occasional Notes
ನೈಮಿತ್ತಿಕ ವಿಷಯನ್ಯಾಸ

A new German Hospital.—ಲ್ಯೂಡರ್ ಟೆಂಪ್ಲ ದವ ಸಾಲ್ಟನ್ಸ್ಟೆಂಬೆ ಮಿಷನರಿ ಸಂಘದವರ ವಿಚಾರಣೆಯಲ್ಲಿ ಜಾಂಜಿಬಾರಿನೊಳು ಹೊಸದಾಗಿ ಕಟ್ಟಲ್ಪಡತಕ್ಕ ಜರ್ಮನ್ ಆಸ್ಪತ್ರೆಯ ಫಂಡಿಗೆ ಜರ್ಮನೀ ಚಕ್ರವರ್ತಿಯವರು ೨೫೦೦ ಮಾರ್ಕಗಳನ್ನು ಕೊಟ್ಟರೆಂದು ಕೇಳುತ್ತೇವೆ (ಮಾರ್ಕ ೧ಕ್ಕೆ ೬ ೧೦ ೦)

Mr Eardley Norton.—ಪಾರ್ಲಿಮೆಂಟ್ ಸಭೆಯ ಮೆಂಬರುಗಳ ಮುಂದಿನ ಚುನಾವಣೆಯಲ್ಲಿ ಸರ್ ವಿಲಿಯಂ ವೆಡ್ಡರ್ ಬರ್ನಯವರಂತೆ ಮಿ॥ ಅರ್ಡ್ಲೀ ನಾರ್ಟನಯವರುಕೂಡ ಚುನಾಯಿಸಲ್ಪಡತಕ್ಕವರಲ್ಲೊಬ್ಬರಾಗಿ ಏರ್ಪಡ ಬಹುದೆಂದು ಕಲ್ಕತ್ತಾ ಸ್ಟೇಟ್ಸ್ಮನ್ ಪತ್ರಿಕೆ ತಿಳಿಸುತಿದೆ. ಹೌಸಾಫ್ ಕಾಮನ್ಸ್ ಸಮಾಜದಲ್ಲಿ ಮಿ॥ ನಾರ್ಟನಯವರ ಪ್ರವೇಶಕ್ಕೆ ಅವಕಾಶ ದೊರೆತುದಾದರೆ ಇಂಡ್ಯದೇಶೀಯ ವಿಷಯಕವಾದ ಅವರ ಅನುಭವವು ಸಾರ್ಥಕವಾಗಬಹುದು

The Legislative Council.—ಈ ದಫೆ ನ್ಯಾಯನಿರ್ಮಾಯಕ ಸಮಾಜದವರು ಸಿಂಲಾವಿನೊಳು ಸಭೆ ಸೇರತಕ್ಕ ಸಮಯದಲ್ಲಿ ಇದರಡಿ ಕಂಡ ಮುಸವಿದಾ ಆಕ್ಟುಗಳು ಅವರ ಪರ್ಯಾಲೋಚನೆಗೆ ತರಲ್ಪಡುವವು—ಸೆಕೆಂಡುಮುಸವಿದಾಆಕ್ಟು, ಕ್ಯಾಟಲ್ ಟ್ರೆಸ್ಪ್ಯಾಸ್ ಮತ್ತು ರಿಫರ್ ಮೇಟರಿ ಸ್ಕೂಲ್ ಆಕ್ಟು ಇವುಗಳನ್ನು ತಿದ್ದುಪಾಡುಮಾಡುವಬಗ್ಗೆ ಹುಟ್ಟಿದ ಮುಸವಿದಾಗಳು. ಮದರಾಸ್ ಸ್ಮಾಲ್‌ಕಾಜಕೋರ್ಟ ಆಕ್ಟಿನ ಮುಸವಿದೆಯು ಏನಾಯಿತೋ ಇದ್ಯಾಪಿ ತಿಳಿಯಲಿಲ್ಲವು

A strange incident.—ಬೆಂಗಾಳಿ ಪ್ರೆಸಿಡೆನ್ಸಿಯಲ್ಲಿ ಚಕ್ರವರ್ತಿ ಎಂಬ ವಕೀಲನೊಬ್ಬನು ಒಂದು ಮ್ಯಾಜಿಸ್ಟ್ರೇಟ ಕೋರ್ಟನೊಳಗೊಂದು ಮೊಕದ್ದಮೆಯನ್ನು ಕುರಿತು ವಾದಿಸುತಲಿರುವಾಗ್ಯೆ ಅಕಸ್ಮಾತ್ತಾಗಿ ಕೆಳಗೆಬಿದ್ದು ಮೂರ್ಛ ಹೋದನು. ಅಷ್ಟರಲ್ಲೇ ಡಾಕ್ಟರನ್ನು ಕರೆಯಿಸಿ ಆಜಮಾಯಿಷಿ ಮಾಡಿಸಲಾಗಿ ಆತನು ಮೃತನಾಗಿರುವನೆಂದು ಸದರೀ ಡಾಕ್ಟರ್ ತಿಳಿಸಿದನು. ಬಳಿಕ ಆ ವಕೀಲನ ಇಷ್ಟಮಿತ್ರರೆಲ್ಲರೂ ಬಂದು ಮೃತದೇಹವನ್ನು ದಹನದಬಗ್ಗೆ ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಚಿತೆಗೆಮೇಲಿಟ್ಟು ಬೆಂಕಿ ಹಚ್ಚುವಾಗ್ಯೆ ದೊಡ್ಡ ಮೋಡವ ನೆ ಒಂದು ಕೂಗು ಬಂತು. ಕೂಡಲೇ ಚಿತೆಯಮೇಲಿಡಲ್ಪಟ್ಟದ್ದ ಶವವು ೧೨ ಅಡಿಗಳ ವರಿಕೆ ಮೇಲಕ್ಕೆ ಹಾರಿ ಸಮೀಪದಲ್ಲಿ ಪ್ರವಹಿಸುತಲಿದ್ದ ಒಂದು ನದಿಯಲ್ಲಿ ಬಿದ್ದು ಅದೃಶ್ಯವಾಯಿತೆಂದು ಅಲ್ಲಿನ ಬಾತಮೀದಾರನು ಬರೆಯುತ್ತಾನೆ.

The young Maharaja of Murbhunj.—ಮೂರ್‌ಭುಂಜ್ ಎಂಬ ಸಂಸ್ಥಾನದ ಮಹಾರಾಜರವರು ಕಲ್ಕತ್ತಾ ಯೂನಿವರ್ಸಿಟಿಯ ಎಫ್ ಎ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾರೆ. ಇವರಿಗೆ ಈಗ ೧೮ ವರುಷಗಳ ವಯಸ್ಸಾಗಿರುತಿದೆ ಸಂಸ್ಥಾನಾಧಿಪತಿಗಳಲ್ಲಿ ಯೂನಿವರ್ಸಿಟಿ ಪರೀಕ್ಷೆಯನ್ನಿತ್ತು ತೇರ್ಗಡೆಯಾದವರೆ ಇವರೇ ಮೊದಲನೆಯವರಾಗಿರುತ್ತಾರೆ. ಇತರ ಸಂಸ್ಥಾನಾಧಿಪತಿಗಳು ಇಂಗ್ಲಿಷ್ ವಿದ್ಯಾಭ್ಯಾಸಕ್ಕಾಗಿ ಅನೇಕಲಕ್ಷ ರೂಪಾಯಿಗಳು ವ್ಯಯ ಮಾಡಾಗ್ಯೂ ಕಡೆಗೆ ಯಾವುದಾದ ಲಾಭವನ್ನೂ ಇಲ್ಲದೆ ಹೋದದಕ್ಕೆ ಅನೇಕ ದೃಷ್ಟಾಂತಗಳರದಿರಲಿಲ್ಲವು. ತಮಗೆ ಲಭಿಸಿದ ಮಹಾರಾಜ ಪದವಿಗೆ ಷಿಕಾರಿ, ಪೋಲೊ, ಲಾನ್‌ಟೆನಿಸ್, ಕ್ರಿಕೆಟ್ ಮೊದಲಾದವೇ ಮುಖ್ಯ ಲಕ್ಷಣಗಳೆಂದು ಇತರರಂತೆ ಮೇಲೆಕಂಡ ಮಹಾರಾಜಪುತ್ರರು ಭಾವಿಸದೆ ತಮ್ಮ ವಿದ್ಯಾಭ್ಯಾಸಕ್ಕೆ ಒಂದು ಶಾಶ್ವತವಾದ ಗೌರವವನ್ನುಂಟುಮಾಡಿದ ಬಗ್ಗೆ ನಾವು ಸಂತೋಷಿಸುತ್ತೇವೆ.

A Distinguished visitor.—ಒಂದು ಕಾಲದಲ್ಲಿ ಈ ಮೈಸೂರುರಾಜ್ಯಕ್ಕೆ ಪಾಲಕರಾಗಿಯೂ ಬ್ರಿಟಿಷ ಗವರ್ನಮೆಂಟಿನವರಿಗೆ ಪ್ರಬಲ ವಿರೋಧಿಯಾಗಿಯೂ ಇದ್ದ ಟೀಪ್ಪೂ ಸುಲ್ತಾನರವರ ಪ್ರಪೌತ್ರರಾದ ಮಹಮ್ಮದ್ ಫರುಕಷಾಯವರು ತಮ್ಮ ಪ್ರಪಿತಾಮಹರ ಕಬರಸ್ತಾನವನ್ನು ನೋಡುವ ಉದ್ದೇಶ್ಯ ಶ್ರೀರಂಗಪಟ್ಟಣಕ್ಕೆ ಬರುವವರಾಗಿದಾರೆಂದು ತಿಳಿಯಬರುತಿದೆ. ಈಗ ಮದರಾಸ್ ಗವರ್ನಮೆಂಟ್ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಮೆಂಬರಾಗಿರುವ ಆನರೆಬಲ್ ಹುಮಾಯುನ್ ಜಾ ಬಹದೂರವರುಕೂಡ ಸುಲ್ತಾನರವರ ಪ್ರಪೌತ್ರರಾಗಿದ್ದರೂ ಅವರಿಗೆ ಮೇಲೆಕಂಡಂತೆ ತಮ್ಮ ಪೂರ್ವಿಕರ ಕಬರಸ್ತಾನವನ್ನು ನೋಡಬೇಕೆಂಬ ಶ್ರದ್ಧಾಜಾಡ್ಯವು ಇದುವರಿವಿಗೆ ಪ್ರಾಪ್ತವಾಗದೆ ಹೋದದ್ದು ಬಹಳ ಆಶ್ಚರ್ಯ ಪಡತಕ್ಕ ವಿಷಯವಾಗಿರುತಿದೆ. ಸುಲ್ತಾನರವರಿಗೆ ಪ್ರತ್ಯಕ್ಷ ವಿರೋಧಿಗಳಾಗಿದ್ದ ಬ್ರಿಟಿಷರವರು ತತ್ಸಂತತಿಯವರಾದ ತಮ್ಮನ್ನೀಗ ಗೌರವಿಸಿ ಮುತ್ಸದ್ದಿಗಳಲ್ಲೊಬ್ಬರನ್ನಾಗಿ ಅಂಗೀಕರಿಸಿರುವದರಿಂದಲೇ ಮಿ॥ ಹುಮಾಯುನ್ ಜಾ ಯವರು ಸಂತೃಪ್ತರಾಗಿರುವಂತೆ ತೋರುತಿದೆ

A refined lady.—ಮದರಾಸ್ ಪ್ರೆಸಿಡೆನ್ಸಿಯಲ್ಲಿ ವಾಸವಾಗಿರುವ ಮುದಲ್ಯಾರ್ ಜಾತಿಗೆ ಸೇರಿದ ತರುಣಿಯೊಬ್ಬಳು ತಾನು ಪಡೆದ ವಿದ್ಯಾಭ್ಯಾಸವು ಸಾರ್ಥಕವಾಗುವಂತೆ ತಾನು ವಾಸವಾಗಿದ್ದ ಮನೆಯ ಯಜಮಾನನಿಗೆ ಗೂಢವಾಗಿ ಒಂದು ಕಾಗದವಂ ಬರೆದುಕಳುಹಿಸಿದಳು. ಅಕಸ್ಮಾತ್ತಾಗಿ ಸದರೀ ಕಾಗದವು ಆಯಜಮಾನನ ಭಾರ್ಯೆಯ ಕೈಯಲ್ಲಿ ಸಿಕ್ಕಲು ಅವಳದಂ ಲೇಖಕಳ ಅತ್ತೆಯ ಕೈಯಲ್ಲಿ ಕೊಟ್ಟಳಂತೆ ಬಳಿಕ ಅದನ್ನವಳು ತನ್ನ ಕುಮಾರನ ವಶಕ್ಕೆಕೊಡಲಾಗಿ ಆವನದಂ ಬಿಚ್ಚಿನೋಡಿ ಬಹಳ ಚಿಂತಾಕ್ರಾಂತನಾಗಿ ತನ್ನಭಾರ್ಯೆಯ ದುಶ್ಚೇಷ್ಟೆಯನ್ನವಳ ತಾಯಿ ತಂದೆಗಳಿಗರುಹಿ ತಾನು ಕಟ್ಟಿದ್ದ ಮಂಗಳಸೂತ್ರವಂ ಸಹ ಬಿಡದೆ ಆಕೆಯಮೇಲಿದ್ದ ಒಡವೆಗಳನ್ನೆಲ್ಲವಂ ಕಿತ್ತುಕೊಂಡು ರಿಜಿಸ್ಟ್ರಾರ್ ಆಫೀಸಿಗೆ ಹೋಗಿ ತನಗೂ ತನ್ನಭಾರ್ಯೆಗೂ ಇದುವರಿವಿಗೆ ನೆರೆಗೊಂಡಿದ್ದ ವಿವಾಹ ಸಂಬಂಧವು ನಿವೃತ್ತಿಯಾದಂತೆ ಒಂದುದಸ್ತೈವೇಜು ಬರೆದು ರಿಜಿಸ್ಟರ್‌ಮಾಡಿಸಿ ಬಿಟ್ಟಬಳಿಕ, ಆ ಹುಡಿಗಿಯು ಯಥಾಪ್ರಕಾರವು ಮನೆಯ ಯಜಮಾನನಲ್ಲೇ ಬಂದು ಸೇರಿದ್ದಳೆಂದು ತಿಳಿಯಬರ ತಿದೆ. ಸ್ವಂತಪುರುಷನನ್ನು ವಂಚಿಸಿ ಪರಪುರುಷನನ್ನಾಶ್ರಯಿಸಿದ್ದೀಯಳೆಯ ವಿದ್ಯಾಪ್ರಯುಕ್ತವಾದ ಪೌರುಷವಾಯ ಫಲವೆಂದೆಣಿಸುವೆವು. ಜನರಿಗೆ ಉತ್ತೇಜಕ ನಾವು ಗ್ರಗಳಾದಾಗ ವಿಷಯ ವಿಮುಖತೆಯುಂಟಾಗುವದು ಬಹಳ ಪ್ರಯಾಸವು

Payment to Indian newspapers.—ಮುಂಬೈ ಟೈಂಸ್ ಆಫ್ ಇಂಡ್ಯಾ ಪತ್ರಿಕೆಗೆ ಉರ್ದ ಪಕ್ಷದಿಂದ ಬಂದ ತಂತಿ ವೃತ್ತಾಂತದಮೂಲಕ ತಿಳಿಯಬರುವದೇನಂದರೆ—ಈಚೆಗೆ ಹೌಸಾಫ್ ಕಾಮನ್ಸ ಸಮಾಜದಲ್ಲಿ ಮಿ॥ ಬ್ರಾಡ್ಲಾ ಯವರು ಅಂಡರ್ ಸೆಕ್ರೆಟರಿಯವರಾದ ಸರ್ ಜಾನ್ ಗಾರ್ಸ್ಟ ಯವರನ್ನು ಕುರಿತು, ಇಂಡ್ಯ ಗವರ್ನಮೆಂಟಿನವರು ಇಂಡ್ಯದೇಶದ ವೃತ್ತಾಂತ ಪತ್ರಿಕೆಗಳಿಗ್ಯಾವದಕ್ಕಾದರೂ ದ್ರವ್ಯಸಹಾಯ ಮಾಡುತ್ತಾರೆಯೆ; ಹಾಗೆ ಮಾಡಿದ್ದರೆ ಅವರ ಉದ್ದೇಶವೇನು, ಸ್ಟೇಟ ಸೆಕ್ರೆಟರಿಯವರ ತಿಳುವಳಿಕೆಯುತ್ತ ಎಂದಾದರೂ ಶಿಫಾರಸಾದವರು ಕೊಡಲ್ಪಟ್ಟಿತೆ? ಸರಕಾರಿ ಪತ್ರಿಕೆಯಾಗಿ ತಕ್ಷವನ್ನವಲಂಬಿಸಿ ವಿಚಾರ ಮಾಡುವದಕ್ಕೋಸ್ಕರ ಟೈಂಸ್ ಆಫ್ ಇಂಡ್ಯಾ ಪತ್ರಿಕೆಗೇನಾದರೂ ಹಣವು ಸೂಚಿಸಲ್ಪಟ್ಟಿರುತಿದೆಯೆ, ಈ ವಿಷಯವಂ ಕುರಿತ ಕಾಗದ ಪತ್ರಗಳೇನಾದರೂ ಇದ್ದರೆ ಅವುಗಳನ್ನು ಸಭಿಕರ ಮುಂದಿಡಲಿಕ್ಕಾಗುವದೆ ಎಂಬದಾಗಿ ಕೇಳಿದರು. ಅದಕ್ಕೆ ಸರ್ ಜಾನ್ ಗಾರ್ಸ್ಟ ಯವರು ಯಾವ ವೃತ್ತಾಂತ ಪತ್ರಿಕೆಗಳಿಗಾಗಲಿ, ಗವರ್ನಮೆಂಟಿನವರು ದ್ರವ್ಯಸಹಾಯ ಮಾಡಿದ ಅಂಶವೂ, ಟೈಂಸ್ ಆಫ್ ಇಂಡ್ಯಾ ಪತ್ರಿಕೆಯಂ ಕುರಿತು ಅವರು ಮೇಲೆ ಕಂಡಂತೆ ಕೇಳಿದ ಆ ಅಂಶವೂ ತಮಗೆ ತಿಳಿಯದೆಂತಲೂ, ಪ್ರಸಕ್ತ ವಿಚಾರಕ್ಕೆ ಸಂಬಂಧಪಟ್ಟ ಕಾಗದಪತ್ರಗಳೊಂದೂ ತಮ್ಮಲ್ಲಿಲ್ಲವೆಂತಲೂ ಜವಾಬುಕೊಟ್ಟರು. ಟೈಂಸ್ ಆಫ್ ಇಂಡ್ಯಾ ಪತ್ರಿಕೆಯು ಇದರಮೇಲೆ ವಿಚಾರ ಮಾಡುತ ಇವೆಲ್ಲವು ಮಿಸ್ಟರ್ ಬ್ರಾಡ್ಲಾ ಯವರ ಸೃಷ್ಟನೆಯೆಂಬದಾಗಿ ತಿಳಿಸುತಿದೆ

A Deputy Magistrate in trouble.—ಬೆಂಗಾಲ್ ಪ್ರೆಸಿಡೆನ್ಸಿಗೆ ಸೇರಿದ ಡಾಕಾ ಪಟ್ಟಣದಲ್ಲಿ ಡಿಪ್ಟಿ ಮ್ಯಾಜಿಸ್ಟ್ರೇಟನೊಬ್ಬನು ಒಂದು ದಿನ ಅರ್ಧರಾತ್ರಿವೇಳೆಯಲ್ಲಿ ಒಬ್ಬ ಚೀನಾದೇಶಸ್ಥನ ಮನೆಗೆ ಹೋಗಿ ಅವನ ಭಾರ್ಯೆಯಂ ತನ್ನ ಬಳಿಗೆ ಕಳುಹಿಸಬೇಕೆಂದು ಕೇಳಿದನು. ಅದಕ್ಕವನು ಒಡಂಬಡದೆ ಹೋಗಲು ಮ್ಯಾಜಿಸ್ಟ್ರೇಟನು ಅವನನು ಪ್ರಹರಿಸಿ ಹೊರಟುಹೋದನು. ಈಗ ಪೆಟ್ಟು ತಿಂದವನು ಅವನಮೇಲೆ ಕ್ರಿಮಿನಲ್ಲಿ ಫಿರ್ಯಾದಿ ಮಾಡಿದಾನೆಂದು ಕೇಳುತ್ತೇವೆ. ಇಂತಾ ಅಕ್ರಮಗಳು ಅನೇಕ ಪ್ರದೇಶಗಳಲ್ಲಿ ಜರುಗುತಲಿವೆ. ಕೆಲವು ಜನ ದೊಡ್ಡಮನುಷ್ಯರೆಂಬ ಹೆಸರಿಟ್ಟುಕೊಂಡಿರತಕ್ಕವರು ತಮ್ಮ ಐಶ್ವರ್ಯ ಅಧಿಕಾರ ಪ್ರಾಬಲ್ಯಾದಿಗಳನ್ನು ಮೆಚ್ಚಿ ಸ್ತ್ರೀಯರು ತಾವಾಗಿ ಮೋಹಿಸಿ ಬರುವರೆಂಬ ಭ್ರಾಂತಿಯೊಡನೆ, ಅವರು ವಾಸವಾಗಿರುವ ಮನೆಗಳ ಮುಂದೆ ಕಾಲ ಕ್ಲುಪ್ತಿ ಇಲ್ಲದೆ ಬೇಕಾದಂತೆ ಅಲಂಕರಿಸಿಕೊಂಡು ಡಾಕಾರ್ಟಗಳಲ್ಲಿ ಕುಳಿತು ಸಂಚರಿಸತಕ್ಕವರನ್ನು, ಅವರ ಮನೋಭಾವವನ್ನರಿಯದೆ ಸಂಸಾರಿಗಳನ್ನೆಲ್ಲ ಕುಲಟೆಯರೆಂದು ಭಾವಿಸಿ ಅವೇಳೆಗಳಲ್ಲಿ ಯಾರು ಬೇಡ ವೆಂದ ಅವರ ಮನೆಗಳಿಗೆ ಹೋಗಿ ಪ್ರಹರಗಳಿಗೆ ಒಳಪಡುವರಿಗೆ ಬಗ್ಗರಾಗಿ ಹೋಗತಕ್ಕವರನ್ನೂ ಅನೇಕವಾಗಿ ನಾವು ಕಂಡು ಕೇಳಿರುವೆವು. ಇಂತವರನ್ನೆಲ್ಲ ಮುಚ್ಚಿಕೆಟ್ಟು ಅವರ ಅಧಿಕಾರಸ್ಥಾನಗಳಲ್ಲಿ ಬಹಿರಂಗವಾಗಿ ತಂದು ನಿಲ್ಲಿಸಿದರೆ ಆ ಅವರ ಯೋಗ್ಯತೆಯೂ ಅವರಿಗೆ ಅಧಿಕಾರವನ್ನಿತ್ತವರ ಯೋಗ್ಯತೆಯೂ ಸಹಸ್ಪಷ್ಟವಾಗುವದು

Early marriages in the Madura District.—ಮದುರಾ ಡಿಸ್ಟ್ರಿಕ್ಟಿನಲ್ಲಿ ಬಾಲ್ಯ ವಿವಾಹಗಳು ಅನಿಯತವಾಗಿ ನಡೆಯುತಿವೆ ಯೆಂ

ಇದರಿಂದ ಕೆಲವು ವಿವಾಹ ಪರಂಪರೆಗಳೇನು ಶಾದ ನಿದರ್ಶನಗಳಾಗಿರುತಿವೆ. ಈಚೆಗೆ ೫ ವರುಷಗಳ ವಯಸ್ಸುಳ್ಳ ಒಬ್ಬ ಹುಡಿಗಿಯು ೪ ವರುಷಗಳ ವಯಸ್ಸುಳ್ಳ ಒಬ್ಬ ಹುಡುಗನಿಗೆ ಕೊಡಲ್ಪಟ್ಟು ವಿವಾಹ ನಡೆಯಿತು. ೭ ವರುಷಗಳ ಹುಡಿಗಿಯನ್ನು ೧೨ ವರುಷಗಳ ಹುಡುಗನಿಗೆ ಕೊಟ್ಟರು. ಹೀಗೆಯೇ ೩ ವರುಷಗಳ ವಯಸ್ಸುಳ್ಳ ಒಂದು ಹೆಣ್ಣು ಮಗುವನ್ನು ೪ ವರುಷದ ಹುಡುಗನಿಗೆ ಕೊಟ್ಟು ವಿವಾಹ ಮಾಡಿದರು. ೧೪ ತಿಂಗಳ ಮಗುವು ೯ ವರುಷ ವಯಸ್ಸುಳ್ಳವನಿಗೂ, ೪ ವರುಷದ ಹುಡುಗಿಯನ್ನು ೧೨ ವರುಷದ ಹುಡುಗನಿಗೂ ೧೧ ವರುಷದ ಹುಡಿಗಿಯನ್ನು ಹನ್ನೊಂದುವರೆ ವರುಷದ ಬಾಲಕನಿಗೂ ಕೊಟ್ಟು ವಿವಾಹ ಜರಿಗಿಸಿದರು. ಪ್ರಾಯೇಣ ಈ ವಿವಾಹಗಳೆಲ್ಲವೂ ಅಗ್ರವರ್ಣದವರಲ್ಲಿಯೇ ಜರುಗಿದವಾಗಿರುತಿವೆ ಬೆಂಗಾಳ್ ಪ್ರೆಸಿಡೆನ್ಸಿಗೆ ಸೇರಿದ ಹಾ[illegible] ಡಿಸ್ಟ್ರಿಕ್ಟು ರಾಮಕೃಷ್ಣಪುರದಲ್ಲಿ ೩೦ ವರುಷಗಳ ವಯಸ್ಸುಳ್ಳವನು ಒಬ್ಬನಿಗೆ ೨೫ ವರುಷದ ಒಂದು ಮಗುವನ್ನು ಕೊಟ್ಟು ವಿವಾಹ ನಡೆಸಿದರೆಂದು ಕೇಳುತ್ತೇವೆ ಇನ್ನೆಲ್ಲವೂ ಕಾಲವಾಹಿನಿಯಲ್ಲಿದೆ ಹೇಳಲ್ಲವು

A [illegible] — ಮದರಾಸಿನ ಆ[illegible]ಗಳ ಥಿಯಾಸಫಿಸ್ಟರ ಅಡೆಯಾರು ಎಂಬ ಪ್ರದೇಶದ ಮಠಕ್ಕೆ [illegible] ಪ್ರತಿ ವರ್ಷವೂ [illegible] ಮಹಾರವ ಒಂದು ಪಕ್ಷಿ [illegible] ಒಂದು ಕಾಗದವು ಬರಿಸು[illegible] ಅದನ್ನು ಮದರಾಸಿಗೆ [illegible] ಮೊದಲಿಗೆ ಕಳುಹಿಸಲು ಸದರಿ ಪಕ್ಷಿಯು [illegible] ಸರಿಯಾಗಿ [illegible] ಇದರಿಂದ ಆ [illegible] ಶಿಷ್ಯರ [illegible] ಸದರಿ ಪಕ್ಷಿಯು [illegible] ಬಹುಕಾಲ [illegible] ದ್ರವ್ಯವನ್ನು [illegible] ಯುರೋಪುದೇಶಕ್ಕೆ [illegible] ದೇಶಗಳಲ್ಲಿ [illegible] ಪ್ರತಿಯೊಂದು ಪಟ್ಟಣಕ್ಕೆ ಕಳುಹಿಸುವಿಕೆಗೆ ಸಾಧಕವಾಗಿ ಇಂತಾ ಸಾಧಾರಣದ ಪಕ್ಷಿಗಳು [illegible] ಆನೇಕಗಳಲ್ಲಿ ಈ ಪಕ್ಷಿಗಳು ಒಂದು [illegible] ವ್ಯಾಪಾರಗಳನ್ನೆಲ್ಲ ನಡೆಸುತಿವೆ [illegible] 'ಅಭ್ಯಾಸ ಸಾಧಿಸದಿದ್ದರೆ' ಎಂಬದಾಗಿ ಯಾವವಿದ್ಯೆಯನ್ನಾದರು ಅಭ್ಯಸಿಸಿದಾಗ್ಯೂ ಸಾರ್ಥಕವಾಗದೆ ಹೋಗುವದು

In [illegible] — ಈ [illegible] ಪ್ರದೇಶದಲ್ಲಿ ಒಬ್ಬ ಪುರುಷನು [illegible] ರಾತ್ರಿಕಾಲದಲ್ಲಿ [illegible] ಗನೆಯರ ಮನೆಗೆ [illegible] ಮನೆಗೆ ಬರುತಿದ್ದನಂತೆ ಅವನ ಭಾರ್ಯೆಯು ತನ್ನ ಗಂಡನ ದುಶ್ಚರಿತ್ರೆಯು ತಪ್ಪುವದಕ್ಕಾಗಿ ನಾನಾ ಪ್ರಯತ್ನಗಳು ಮಾಡಿ ಅವ್ಯಗ ಳೆಲ್ಲವೂ ನಿಷ್ಪಲವಾಗಿ [illegible] ಯನ್ನು ಕಟಕಿ ತೆರೆದ್ದಾಗ ಅವನು ಸನ್ಮಾರ್ಗಕ್ಕೆ ತಂದಳು. ಹ್ಯಾಗಂದರೆ — ಒಂದು ದಿನ ವಾಡಿಕೆಪ್ರಕಾರ ತನ್ನ ಗಂಡನು ಮನೆಗೆ ಬರುವ ಸಮಯದಲ್ಲಿ, ಬಂದವನು ತನ್ನ ಗಂಡನೆಂದು ತಿಳಿದಾಗ್ಯೂ ಬೆರೊಬ್ಬ ಪುರುಷನ ನಾಮವನ್ನುಚ್ಚರಿಸಿ ಹಾ ! ನನ್ನ [illegible] ಎಂದು ಕೂಗುತ ಬಾಗಿಲು ತೆಗೆದಳು [illegible] ಮಾತುಗಳು ಕೇಳಿದ ಕೂಡಲೇ ಅವಳ ಗಂಡನ ಎದೆಯು ಸೀಳಿಹೋಯಿತಲ್ಲದೆ ಆದುವರೆಗು ತನ್ನ ಭಾರ್ಯೆಯು ಪಾತಿವ್ರತ್ಯವನ್ನು ಬಿಡಲಾರಳೆಂಬ ನಿರ್ಧಾರವಕ್ಕಾಗಿ ಮನೆಯಲ್ಲೇ ಭಾರ್ಯೆಯನ್ನು [illegible] ಯರ್ಣಿಸುತ್ತ ಕಾಲಯಾಪನೆಯಲ್ಲಿದ್ದದರಿಂದ ಅವನ ದುರ್ವೃತ್ತಿಯು ಕ್ರಮೇಣ ತಪ್ಪಿಹೋಗಿ ಬಳಿಕ ಕ್ರಮವಾಗಿ ಭಾರ್ಯೆಯೊಡನೆ ಸಂಸಾರ ಮಾಡುತಲಿದ್ದನೆಂಬದಾಗಿ ಮದರಾಸ್ ಪತ್ರಿಕೆಯೊಂದು ತಿಳಿಸುತಿದೆ. ಸ್ತ್ರೀಯರು ಇಷ್ಟವಿಷ್ಟ ! ಈರೀತಿ ಮಾಡುವದೂ [illegible] ಇಲ್ಲದಿದ್ದರೆ ಮಧ್ಯಮ ತಿಪ್ಪಯ್ಯ ಭಾವನು ಪತಿಗೆ ತೋರ್ಪಡಿಸಿ ಅನ್ಯಾಯವಾದ ನಂಬಿಕೆಯನ್ನುಂಟುಮಾಡಿ ಬಳಿಕ ತನ್ನ ಇಷ್ಟಾನುಸಾರ ವರ್ತಿಸತಕ್ಕ ಮಹಾನುಭಾವರೂ ಅನೇಕ ರಿರುವರು

Formation of a new society [illegible] ಬೆಂಗಾಲ್ ಪ್ರೆಸಿಡೆನ್ಸಿಗೆ ಸೇರಿದ [illegible] ಪಟ್ಟಣದಲ್ಲಿ ಹೊಸ ಸಮಾಜ ಒಂದು ಸ್ಥಾಪಿಸಲ್ಪಟ್ಟಿರುತಿದೆ. ಸದರೀ ಸಮಾಜದ ಮುಖ್ಯೋದ್ದೇಶ್ಯವೇನಾದರೆ — ಸೌಲ ಸಮಾದಿ ಮದುವೆ ಮಾಡತಕ್ಕವರ ಮನೆಗಳಗೂ, ಕನ್ಯಾ ಶುಲ್ಕವನ್ನು, ಶಕ್ತ್ಯಾ ಮೀರಿ ಅಪೇಕ್ಷಿಸತಕ್ಕವರ ಮನೆಗಳಗೂ, ನಿವಾಹಕಾಲದಲ್ಲಿ, ವಿಶೇಷತಃ ಗಣವಾರ ಇಟ್ಟರೆ ಮದುವೆ ಮಾಡಿಕೊಳ್ಳುವೆವೆಂದು ಕನ್ಯಾ ಪಿತೃಗಳು ನಿರ್ಬಂಧ ಪಡಿಸುವಂತಾ ಕಠಿಣ ಹೃದಯರಾದವರ ಮನೆಗಳಗೂ [illegible] ಗಳಿಗೆ ಒಬ್ಬರೂ ಹೋಗಕೂಡದೆಂಬದಾಗಿ ಕಟ್ಟುಪಾಡು ಮಾಡಿಕೊಂಡು ಅದರಂತೆ ಯೆಲ್ಲರೂ ವರ್ತಿಸಬೇಕಾಗಿರುತಿದೆ ಈ ವಿಷಯದಲ್ಲಿ ಮದರಾಸು [illegible] ಪತ್ರಿಕೆಯು ಅಭಿಪ್ರಾಯಪಡುವದೇನೆಂದರೆ — ಮೇಲೆ ಕಂಡ ಸಮಾಜದವರ ಉದ್ದೇಶ್ಯಗಳು ಬಹಳ ಶ್ಲಾಘ್ಯವಾಗಿರುತಿವೆ. ಇದೇರೀತಿ ಜನರ ದ್ರವ್ಯವನ್ನು ಅಪಹರಿಸಿ [illegible] ಮಾಡುವಂತಾ ದೊಡ್ಡ ಜನಗಳ ಮನೆಗಳಗೂ [illegible] ಅಸಮಾಪ, ಕಾ[illegible] ಸಾಕ್ಷ್ಯ [illegible] ತಕ್ಕವರ ಮನೆಗಳಗೂ, ಮದ್ಯಪಾನ ಸೇವಿಸುವ [illegible] ತಕ್ಕವರ ಗೃಹಗಳಿಗೂ, [illegible] ಯುಕ್ತವಾಗಿದ್ದರೂ, ಪರೋಪಕಾರ [illegible] ಕೆಲಸ ಬಿಟ್ಟು [illegible] ಮನೆಗಳಗೂ, [illegible] ಅನಿಷ್ಟಗಳಾದಕೃತ್ಯಗಳನ್ನು ಬಗೆಯುವರಿಗೆ [illegible] ಮನೆಗಳಗೂ, ಒಬ್ಬರೂ ಹೋಗಕೂಡದೆಂಬ ಕಟ್ಟುಪಾಡು [illegible] ಪಕ್ಷಕ್ಕೆ [illegible] ಈ ಪ್ರಪಂಚದ್ಲ ಜನಗಳೆಲ್ಲ [illegible] ಗಳಲ್ಲವೂ ಸ್ವಲ್ಪಮಟ್ಟಿಗೆ ಉಪಶಮಿಸಬಹುದೆಂದು ನಂಬುತ್ತೇವೆ ಇದಲ್ಲದೆ ಆತ್ಮರಕ್ಷ್ಯೆ ಮಾಡಿಕೊಳ್ಳತಕ್ಕವನ ಧನವು ಒಬ್ಬರೂ ಮುಟ್ಟದೆ [illegible] ಮಾಡಿಕೊಳ್ಳುವರು ಸಹ ಬಹಳಮಟ್ಟಿಗೆ ಕಡಮೆಯಾಗುವವೆಂಬದು ನಮ್ಮ ಅಭಿಪ್ರಾಯ [illegible] ಮೇಲೆ ತಿಳಿಸಲ್ಪಟ್ಟಂತೆ [illegible] ಗಳೆಲ್ಲರೂ ಐಕಮತ್ಯವೊಡನೆ ಕಟ್ಟುಪಾಡು [illegible] ಅದರಂತೆ ವರ್ತಿಸುವರಾದರೆ [illegible] ಶಾಸ್ತ್ರಗಳೂ ನ್ಯಾಯ ನಿಬಂಧನೆಗಳೂ ಅನವಶ್ಯಕಗಳಾಗಬಹುದು. ಅಂತಾ ಐಕಮತ್ಯವೇ ಎಂದು [illegible] ಗಳಲ್ಲಿ ಈಗ ವ್ಯರ್ಥವಾದ [illegible] ಶಾಸ್ತ್ರಗಳಲ್ಲಿ ವಿದ್ಯಾಭ್ಯಾಸ [illegible] ಆಚಾರಗಳು ಅನಾಗರಿಕತ್ವ, ಪರಸ್ಪರ ಈರ್ಷ್ಯಾಸೂಯೆಗಳು ಹೆಚ್ಚಿ ಒಬ್ಬರನ್ನು ಕಂಡರೆ ಮತ್ತೊಬ್ಬರು [illegible] ಸರಿಕಟ್ಟ ಕಾರಣವಾಯಿತು. ಈಗ ನಷ್ಟವಾಗಿರುವ ಅಂತಾ ಐಕಮತ್ಯವೆಂದೆಂದು [illegible] ಪಕ್ಷಕ್ಕೆ ನಮ್ಮ ಸಮಾಜವು ಪೂರ್ವದಂತ ಮಹೋನ್ನತ ಸ್ಥಿತಿಗೆ ಬರುವದರಲ್ಲೇನೂ ಸಂಶಯವಿರಲಾರದೆಂದೆಣಿಸುತ್ತೇವೆ ನಮ್ಮ ಸಾಮಾಜಿಕಸ್ಥಿತಿಯು ಕ್ರಮಪಡುವಿಕ್ಕೆ ಈಗ ಪ್ರಬಲಿಸಿರುವ ಪ್ರತಿಬಂಧಕಗಳೆಲ್ಲವು [illegible] ತ್ತ್ಯಾಗವೇಕಾಗಿರುತಿದೆ

LOCAL AND PROVINCIAL NEWS.

ಒಳದೇಶವರ್ತಮಾನಗಳು ತಾಲ್ಲೂಕ್‌ಜಾತಿವೃತ್ತಾಂತಗಳು.

The Education Secretary — ಈತಿಂಗಳ ಅಂತ್ಯದಲ್ಲಿ ಎಜ್ಯುಕೇಷನ್ ಸೆಕ್ರೆಟೇರಿಯಾದ ಮ|| ಬಾಮಯ್ಯನವರು ಮೈ[illegible] ಯ ಪಾಠಶಾಲೆಗಳ ತನಿಖೆಯ ಬಗ್ಗೆ ಸರ್ಕ್ಯೂಟ್ ಹೋಗುವರೆಂದು ಕೇಳುತ್ತೇವೆ

The weather — ಈಸ್ಥಳದಲ್ಲಿ ಒಂದೆರಡು ವಾರಗಳ ಮೊದಲು ಮಳೆಯು ಅತ್ಯಧಿಕವಾಗಿದ್ದಲ್ಲದೆ ಬಿಸಿಲು ಬಹಳಮಟ್ಟಿಗೆ ಕಡಮೆಯಾಗಿದೆ ಕಳೆದ ಮಂಗಳವಾರದ ದಿನ ಸಾಯಂಕಾಲ [illegible] ದ ಸೂರ್ಯಗ್ರಹಣವುಂಟಾದಾಗ ಹವಾ [illegible] ಬದಲಾಯಿಸಿದ. ರೋಗಾದ್ಯುಪದ್ರವಗಳು ಪಟ್ಟಣದಲ್ಲಿ ವಿಶೇಷವಾಗಿರುವದಿಲ್ಲವು [illegible] ಗಳ ಸಿಡಿಸಿ ಹರಡಲಾಗಿದೆ

The sold [illegible] trial — ಈ ವರ್ಷ [illegible] ಬಾರಿನಲ್ಲಿ ಈಸ್ಥಳದ ಸ್ವಲ್ಪ ದಿವಸಗಳ ಹಿಂದೆ ಯೂರೋಪಿಯನ್ ಸೋಲ್ಜರನೊಬ್ಬನು [illegible] ತನ್ನ ಭಾರ್ಯೆಯನ್ನು ಕೊಂದದ್ದ[illegible] ಅವನು ಡಿಸ್ಟ್ರಿಕ್ಟ್ ಕೋರ್ಟಿನ [illegible] ಅಂದರೆ ಮಿಲಿಟರಿ ಇಲಾಖೆಯವರಿಂದಲೇ ವಿಚಾರಿಸ್ಪ ಮಾಡಲ್ಪಡತಕ್ಕದ್ದೆಂದು ವ್ಯವಸ್ಥೆಯಾಗಿರುವಂತೆ ತಿಳಿಯಬರುತಿದೆ

The late Mr. Dee — ಈಸ್ಥಳದ ಬಹುಕಾಲದ [illegible] ಕಾಲೇಜಿನಗಳಲ್ಲಿ [illegible] ಪ್ರಸಿದ್ಧರಾಗಿದ್ದ ಆಫೀಸರು ಮ|| ಎಂ ಡೀ ಯವರು ಮೈಸೂರಲ್ಲ ಕಾಲಗತಿಯನ್ನೈದಿದರೆಂದು ಕೇಳಲಿಕ್ಕೆ ನಾವು ಬಹಳ ವಿಷಾದಿಸುವೆವು. ಇವರು ಗತ ವರುಷದಲ್ಲಿ ಮೈಸೂರೊಳು ನಡೆದ ಪರ್ಷಿಕರ ಗಲಾಟೆಯಲ್ಲಿ ಅವರ [illegible] ವಹಿಸಿ [illegible] ಗವರ್ನಮೆಂಟಿನವರ ಅತ್ಯಂತಕ್ಕೆ ಕಾರಣಭೂತರಾಗಿ [illegible] ಅಪ್ರಸನ್ನತೆಗೆ ಗುರಿಯಾದರು. ಇವರು ಬಹಳ ಸಮರ್ಥರಾಗಿಯೂ ಉಪಕಾರಶೀಲರಾಗಿಯೂ ಇದ್ದು ಮಧ್ಯ ವಯಸ್ಸಿನಲ್ಲಿ ಗತಿಸಿದ್ದಕ್ಕಾಗಿ ಯೆಲ್ಲರೂ ವಿಷಾದಿಸಬೇಕಾಗಿರುತಿದೆ.

The Dewan — ಈ ಸಂಸ್ಥಾನದ ದಿವಾನರಾದ ಮ|| ಶೇಷಾದ್ರಿ ಅಯ್ಯರವರು ಗತ ಗುರುವಾರದ ದಿನ [illegible] ಮದರಾಸಿನಿಂದ ಈ ಪಟ್ಟಣಕ್ಕೆ ದಯಮಾಡಿದರು. ಈ ಪಟ್ಟಣದಿಂದ ಹೊರಟ [illegible] ವಾಸದವರಿಗೆ [illegible] ನಿವೃತ್ತಿಯಾಗಿ ಸುಖವಾಗಿ [illegible] ಈ ಅ[illegible] ತೋಟಗಳು [illegible] ಸಮುದ್ರ ತೀರದ [illegible] ಆರೋಗ್ಯಕ್ಕೆ ಆವಶ್ಯಕವೆಂದು ಅವರಿಗೆ ತೋರಿದಾಗ್ಯೂ [illegible] ಕಾರ್ಯನಿರ್ವಹಕರೆಂಬ [illegible] ಜವಾಬ್ದಾರಿಯು ಅನ್ಯರು ಸುಲಭವಾಗಿ ನಿರ್ವಹಿಸಲಾರದವುಗಳಾಗಿ [illegible] ರೆಂದು ಸುನೀವರಸುತ್ತೇವೆ ಇನ್ನು ಅವರಿಗೆ ಉದ್ಯೋಗದ ಶ್ರಮದಿಂದ ಯಾರಿಗೆ ತಾನೆ ಸಾಧ್ಯವಾಗುವದು ?

THE MYSORE GAZETTE

ಮೈಸೂರು ಗಜೆಟು.

[illegible]

ನಂ ೭೦ ತಾ ೧೩ ನೇ ಜೂನ್ ೧೮೯೦— ಕಡೂರು ಡಿಸ್ಟ್ರಿಕ್ಟು ಪೊಲೀಸು ಅಸಿಸ್ಟೆಂಟ್ ಕಮಿಷನರ್ ಮ|| ಓ. ಆರ್ ದಬ್ಲ್ಯು ವೆವರ್ ಯವರಿಗೆ ೧೮೯೦ ನೇ ಇಸವಿ ಜೂನ್ ೩೦ ನೇ ನೇ ತಾರೀಕು ಆಗಿ [illegible] ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

ನಂ ೭೧ — ಶಿವಮೊಗ್ಗಾ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಸರ್ಜನ್ ಮ|| ಸಿ ರಾಜಾರಾಮಯ್ಯನವರಿಗೆ ೧೮೯೦ ನೇ ಜೂನ್ ಗುರುವಾರ [illegible] ಅವರು ಪ್ರಯಾಣ ಹೊರಡುವ ತಾರೀಖ್ ಮೊದಲು ೩೦ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

ನಂ ೭೨ — ಕೋಲಾರ ಡಿಸ್ಟ್ರಿಕ್ಟು ಚಿಂತಾಮಣಿ ತಾಲ್ಲೂಕ್ ಅಮಲ್ದಾರ್ ವೆಂಕಟಪ್ಪ ಯವರಿಗೆ ೧೮೯೦ ನೇ ಇಸವಿ ಮೇ ೬ ನೇ ತಾರೀಖ್ ೭ ನೇ ನೇ ನಂಬರುಳ್ಳ ಇಸ್ತಿಹಾರ್ ಮೂಲಕ ಕೊಡಲ್ಪಟ್ಟಿದ್ದ ೬೦ ದಿನಗಳ ಪ್ರಿವಿಲೇಜ್ ರಜಾ ಒಂದು ತಿಂಗಳ ತನಕ ಜಾಸ್ತೀ ಮಾಡಲ್ಪಟ್ಟಿರುತಿದೆ

ನಂ. ೭೩ — ಬಾಗೇಪಲ್ಲಿ ತಾಲ್ಲೂಕ್ ಅಮಲ್ದಾರ್ ಶೀತಾರಾಮಯ್ಯನವರಿಗೆ ೧೮೯೦ ನೇ ಇಸವಿ ಮೇ ೧೮ ನೇ ಮಕ್ಕಾಂ ೧೬ ನೇ ನಂಬರುಳ್ಳ ಇಸ್ತಿಹಾರ್ ಮೂಲಕ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಡಲ್ಪಟ್ಟಿದ್ದ ರಜಾ ಇನ್ನೂ ಎರಡು ತಿಂಗಳ ತನಕ ಜಾಸ್ತೀ ಮಾಡಲ್ಪಟ್ಟಿರುತಿದೆ.

ನಂ. ೭೪ ತಾ ೧೬ ನೇ ಜೂನ್ ೧೮೯೦— ಮಾಲೂರಿಗೆ ತಾಲ್ಲೂಕ್ ಅಮಲ್ದಾರ್ ಎಸ್ ಶ್ರೀನಿವಾಸಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಆಗಾಯಿತು ಯೆರಡು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ ಸದರೀ ತಾಲ್ಲೂಕ್ ಶಿರಸ್ತೇದಾರ್ ನೀಲಕಂಠಯ್ಯನವರು, ಅಮಲ್ದಾರರ ಗೈರ್‌ಹಾಜರೀ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಆ ತಾಲ್ಲೂಕ್ ಚಾರ್ಜನ್ನು ನೋಡತಕ್ಕದ್ದಲ್ಲದೆ ಅವರಿಗೆ ೩ ನೇ ಕ್ಲಾಸ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತಿವೆ

ನಂ ೭೫ ತಾ ೧೮ ನೇ ಜೂನ್ ೧೮೯೦— ಚಿತ್ರದುರ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಮ|| ಬಿ ಕೆ. ಮಂಕಿ ನರಸಯ್ಯಂಗಾರ್ಯರವರು ತುಮಕೂರ್ ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

ನಂ ೭೬. — ಮ|| ತಿರುಮಲಾಚಾರ್ ಬಿ ಎಲ್ ಯವರು ೪ ನೇ ಕ್ಲಾಸ್ ಡೆಪ್ಯುಟಿ ಕಮಿಷನರ್ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಾಗಿ ನೇಮಕ ಮಾಡಲ್ಪಟ್ಟಿರುತ್ತಾರೆ.

ಪಬ್ಲಿಕ್ ವರ್ಕ್ಸ್ ಇಲಾಖಾ ಇಸ್ತಿಹಾರ್‌ನಾಮೆ.

ಮೈಸೂರು ಪಬ್ಲಿಕ್ ವರ್ಕ್ಸ್ ಇಲಾಖೆಯ ಇಂಜನಿಯರುಗಳ ಗ್ರೇಡಿನಲ್ಲಿ ಇದರಡಿ ನಮೂದಿಸಲ್ಪಟ್ಟ ತಾರೀಖ್‌ಗಳ ಆಗಾಯಿತು ಬದ್ಲಿಗಳು ಮಾಡಲ್ಪಟ್ಟಿರುತಿವೆ

ಶಿವಮೊಗ್ಗಾ ಡಿವಿಜನ್, ಮ|| ವಿ ಎಸ್. ಮಹಾಲಿಂಗಾಚಾರ್ಯರವರು, ೨ ನೇ ಗ್ರೇಡ್ ಅಸಿಸ್ಟೆಂಟ್ ಇಂಜನಿಯರ್ ಕೆಲಸದಿಂದ ೧ ನೇ ಗ್ರೇಡ್ ಅಸಿಸ್ಟೆಂಟ್ ಇಂಜನಿಯರ್ ಕೆಲಸಕ್ಕೆ, ೧೮೮೯ ನೇ ಇಸವಿ ಅಕ್ಟೋಬರ್ ೨೫ ನೇ ಮಕ್ಕಾಂ ಆಗಾಯಿತು. (ಖಾಯಂ) ನಿವೃತ್ತರಾದ ಮ|| ಜೆ. ಬಿ ಬಾಲ್ಯ ಯವರಿಗೆ ಬದಲಾಗಿ.

ಹೆಸಿಡೆನ್ಸೀ ಡಿವಿಜನ್, ಮ|| ಸಿ. ಎಂ. ಅನಂದ ತೀರ್ಥರಾವ್, ೩ ನೇ ಗ್ರೇಡ್ ಅಸಿಸ್ಟೆಂಟ್ ಇಂಜನಿಯರ್ ಕೆಲಸದಿಂದ ೨ ನೇ ಗ್ರೇಡ್ ಅಸಿಸ್ಟೆಂಟ್ ಇಂಜನಿಯರ್ ಕೆಲಸಕ್ಕೆ, ೪೯ ನೇ ಇಸವಿ ಅಕ್ಟೋಬರ್ ೨೫ ನೇ ಮಕ್ಕಾಂ ಆಗಾಯಿತು (ಖಾಯಂ)

ಬೆಂಗಳೂರು ಡಿವಿಜನ್, ಮ|| ವಿ ಅರುಣಾಚಲ ಮುದಲಿಯಾರ್, ೧ ನೇ ಗ್ರೇಡ್ ಸ್ಸ್ಯುಪರ್ ವೈಜರ್ ಕೆಲಸದಿಂದ ಅನರಿರಿ ಅಸಿಸ್ಟೆಂಟ್ ಇಂಜನಿಯರ್ ಕೆಲಸಕ್ಕೆ. ೧೮೯೦ ನೇ ಇಸವಿ ಏಪ್ರಿಲ್ ಗುರ್ರೀ ಆಗಾಯಿತು. (ಅನರಿರಿ)

ಕೋಲಾರ್ ಡಿವಿಜನ್, ಮ|| ವೈ. ಶ್ರೀನಿವಾಸರಾಯರು, ೪ ನೇ ಗ್ರೇಡ್ ಎಗ್ಜಿಕ್ಯೂಟಿವ್ ಇಂಜನಿಯರ್ ಕೆಲಸದಿಂದ ೩ ನೇ ಗ್ರೇಡ್ ಎಗ್ಜಿಕ್ಯೂಟಿವ್ ಇಂಜನಿಯರ್ ಕೆಲಸಕ್ಕೆ, ೧೮೯೦ ಏಪ್ರಿಲ್ ೨೫ ನೇ ಮಕ್ಕಾಂ ಆಗಾಯಿತು, (ತಾತ್ಕಾಲಿಕವಾಗಿ) ಪೊಲೀಸ್ ಇಲಾಖೆಗೆ ವರ್ಗ ಮಾಡಲ್ಪಟ್ಟ ಮ|| ಐ ಆರ್ ಸುಬ್ಬರಾಯರಿಗೆ ಬದಲಾಗಿ

ಹಾಸನ ಡಿವಿಜನ್ ಮ|| ಎ ಗೋವಿಂದಾಚಾರ್ಲ್, ೧ ನೇ ಗ್ರೇಡ್ ಅಸಿಸ್ಟೆಂಟ್ ಇಂಜನಿಯರ್ ಕೆಲಸದಿಂದ ೪ ನೇ ಗ್ರೇಡ್ ಎಗ್ಜಿಕ್ಯೂಟಿವ್ ಇಂಜನಿಯರ್ ಕೆಲಸಕ್ಕೆ, ೧೮೯೦ ನೇ ಇಸವಿ ಏಪ್ರಿಲ್ ೨೫ ನೇ ತಾ ಆಗಾಯಿತು, (ತಾತ್ಕಾಲಿಕವಾಗಿ)

SUMMARY OF NEWS
ವೃತ್ತಾಂತಸಂಗ್ರಹವು.

ವಿಲಾಯಿತಿ ಯೊಳಗೆ ಒಬ್ಬ ಮನುಷ್ಯನು ತನಗೆ ಹುಟ್ಟಿದ ಶಿಶುವು ಬಹಳ ಅಳುತ್ತದೆಂದು ಕೋಪಿಷ್ಠನಾಗಿ ಒಂದು ದೊಣ್ಣೆಯಿಂದಹೊಡೆದು ಕೊಂದುಹಾಕಿದನಂತೆ!

ಯೂರೋಪಿಯನ್ ಜನರು ಘಟ್ಟಿಯಾಗಿ ಕೊರಳನ್ನಿ ಕಟ್ಟಿಕೊಳ್ಳುವ ಒಂದು ಪಟ್ಟಿಯಿಂದ ಕಣ್ಣುಗಳು ವೇಗ ಮಂದವಾಗುತವೆಂದು ಒಬ್ಬ ಜರ್ಮನೀ ಡಾಕ್ಟರ್ ಅಭಿಪ್ರಾಯಪಡುತ್ತಾನೆ

ಶ್ರೀಮತು ಇಂಡಿಯಾ ಚಕ್ರವರ್ತಿನೀಯವರು ಈಚೆಗೆ ಇಂಡಿಯಾದೇಶಕ್ಕೆಬಂದಿದ್ದ ತಮ್ಮ ಮೊಮ್ಮಕ್ಕಳಾದ ಆಲ್ಬರ್ಟ್ ವಿಕ್ಟರವರಿಗೆ ಡ್ಯೂಕ್ ಆಫ್ ಕ್ಲಾರೆನ್ಸ್ ಅಂಡ್ ಅವರ್‌ಡೇಲ್ ಅಂಡ್ ಎರಲ್ ಆಫ್ ಅಥ್ಲೋನ್ ಎಂಬ ಬಿರುದಾಂಕಿತವನ್ನು ದಯಪಾಲಿಸಿದರೆಂದು ತಿಳಿಯಬರುತಿದೆ.

ಕುಷ್ಠರೋಗಿಗಳಿಗೆ ಚಿಕಿತ್ಸೆ ಮಾಡುವ ಬಗ್ಗೆ ಡಾಕ್ಟರ್ ಉನ್ನಾ ಎಂಬುವರು ಕಂಡುಹಿಡಿದಿರುವ ರೀತಿಯನ್ನು ಕಲ್ಕತ್ತಾ ಲೆಪರ್ ಆಸ್ಪೈಲಂನಲ್ಲಿ ಅನುಸರಿಸಲಿಕ್ಕೆ ಪ್ರಾರಂಭಿಸಿರುವದಾಗಿಯೂ, ಇತರ ಸಂಘದವರು ಸಹ ಸದರೀ ಔಷಧಗಳನ್ನು ತರಿಸಲಿಕ್ಕೆಎತ್ನಿಸಿರುವದಾಗಿಯೂತಿಳಿಯಬರುತಿದೆ.

ಕಲ್ಲಿದ್ದಲನ್ನು ಅಗಿಯುವಬಗ್ಗೆ ತತ್ಕಾಲದೊಳು ಇಂಡ್ಯಾದೇಶದಲ್ಲಿ ೭೯ ಇದ್ದಲು ಗಣಿಗಳಲ್ಲಿ ಕೆಲಸ ಜರುಗುತಲಿದೆ. ಈ ಪೈಕಿ ೬೩ ಬಂಗಾಳೆಯಲ್ಲಿಯೇ ಇರುತಿವೆ. ಇವುಗಳಲ್ಲಿ ಸರಾಸರಿ ೫೩೦೦೦ ಮಂದಿ ಜೀವನ ಮಾಡುತ್ತಾರೆ. ೧೮೮೮ ನೇ ಇಸವಿಗೆ ಮುಗಿದ ಹತ್ತು ವರ್ಷಗಳಲ್ಲಿ ೬೭೮ ಲಕ್ಷ ಮಣ ಕಲ್ಲಿದ್ದಲು ತೆಗೆಯಲ್ಪಟ್ಟಿತು.

ರಾವಲ್‌ಪಿಂಡಿಯಲ್ಲಿ ಬಾಲಕಿಸೆನ್‌ದಾಸ್ ಎಂಬ ಒಬ್ಬ ಹಿಂದುವು ಮಹಮ್ಮದ್ದಮತವನ್ನು ಅಂಗೀಕರಿಸಿದ್ದರಿಂದ ಅಲ್ಲಿನ ಹಿಂದೂಜನರೆಲ್ಲರೂ ಬಹಳ ವಿಷಾದಿಸುತ್ತಾರಂತೆ. ಆದರೆ ಆತನಿಗೆ ಹಿಂದೂ ಮತದ ದೋಷವೂ ಮಹಮ್ಮದ್ ಮತದ ಸ್ವಾರಸ್ಯವೂ ಚೆನ್ನಾಗಿ ತಿಳಿಗೆ ಬತ್ತಿರಬಹುದೆಂದೆಣಿಸುತ್ತೇವೆ.

ಕಾಗದವನ್ನು ನೂಲಿನ ಎಳೆಗಳಂತೆ ಕತ್ತರಿಸಿ ಅದನ್ನು ತಲೆದಿಂಬಿಗಾಗಲಿ ಹಾಸಿಗೆಗಳಿಗಾಗಲಿ ಉಪಯೋಗಿಸಿದ ಪಕ್ಷದಲ್ಲಿ ಅದು ಮೃದುವಾಗಿಯೂ ದೇಹಕ್ಕೆ ತಂಪಾಗಿಯೂ ಇರುವದಂತೆ. ಆದರೆ ನ್ಯೂಸ್ ಪೇಪರ್ ಕಾಗದಗಳು ಇದಕ್ಕೆ ಉಪಯೋಗವಾಗುವದಿಲ್ಲ. ಯಾಕೆಂದರೆ ಅದರಲ್ಲಿ ಒಂದುವಿಧವಾದದುರ್ವಾಸನೆಇರುವದು

ದರ್ಬಂಗಾದಿನಲ್ಲಿ ಒಂದು ಹಿಂದೂದೇವಾಲಯವನ್ನು ಕಿತ್ತುಹಾಕಿದ್ದಕ್ಕೋಸ್ಕರ ನಡೆಯುತಲಿರುವ ಗಡಬಿಡಿ ನಮ್ಮ ವಾಚಕರಿಗೆ ಗೊತ್ತಿರಬಹುದಷ್ಟೆ. ಈಬಗ್ಗೆ ನಿದಾಯವನ್ನು ಹೊಂದುವದಕ್ಕೋಸ್ಕರ ಹಿಂದೂಗಳು ಜನಗಳಿಂದ ದ್ರವ್ಯಸಹಾಯವನ್ನು ಪಡೆಯುವದಕ್ಕೆ ಒಂದು ಪ್ರಬಲ ಕಮಿಟಿಯನ್ನು ಏರ್ಪಡಿಸಿಕೊಂಡಿರುವದಾಗಿ ಕೇಳುತ್ತೇವೆ.

ಉಪ್ಪಿನಮೇಲಿನ ತೆರಿಗೆಯು ಹೆಚ್ಚಿದಕ್ಕೆ ಮುಂಚೆ ಖರ್ಚಾಗುತಲಿದ್ದದಕ್ಕಿಂತಲೂ ಕಳೆದ ವರ್ಷದಲ್ಲಿ ೩,೩೮,೯೪,೦೦೦ ಮಣ ಉಪ್ಪು ಕಡಮೆಯಾಗಿ ಖರ್ಚಾದಂತೆ ಸರ್ಕಾರೀ ಲೆಕ್ಕಗಳಿಂದ ತಿಳಿಯ ಬರುತಿದೆ. ಪ್ರಜೆಗಳ ನಿತ್ಯ ಜೀವನಕ್ಕೆ ಅತ್ಯಾವಶ್ಯಕವಾಗಿರತಕ್ಕ ಉಪ್ಪಿನ ಉಪಯೋಗಕ್ಕೆ ಇಷ್ಟು ನಿರೋಧವನ್ನುಂಟುಮಾಡಿರುವದು ಅಕ್ರಮವು

ಹಾರಿಯುವವನ್ನು ಹೊಡಿಯುವಬಗ್ಗೆ ರಷ್ಯಾದವರಮೇಲೆ ದಂಡೆತ್ತಿಕೊಂಡು ಹೋಗುವದು ನಿಶ್ಚಯವಾದಮೇಲೆ ಆಕಾಲದಲ್ಲಿ ತಾನು ಮೊದಲು ಹೋಗುವೆನೆಂದು ಒಬ್ಬನು ಇಂಗ್ಲೆಂಡಿನಲ್ಲಿಆದ ಒಂದು ದೊಡ್ಡಸಭೆಯಲ್ಲಿ ತಿಳಿಸಿದನು. ಯಾಕೆಂದರೆ, ಅವನು ಜಾರಿಯವರುಜನರಹಕ್ಕುಗಳನ್ನು ಮುಳುಗಿಸುತ್ತಾರೆಂದನು. ಹಾಗಾದರೆ ಹಿಂದೂಜನರ ಹಕ್ಕುಗಳನ್ನು ಮುಳುಗಿಸುವವರಲ್ಲಿ ಪ್ರಯತ್ನವ್ಯಾಕೆ?

ಮೈಮನ್‌ಸಿಂಗಿಗೆ ಸೇರಿದ ರಾಮಗೋಪಾಲಪುರದ ಜಮೀನ್ದಾರ್ ಬಾಬೂಜೋತೀಂದ್ರಕಿಶೋರರಾಯಿ ಚೌಧ್ರಿ ಎಂಬ ದೊಡ್ಡಮನುಷ್ಯರು ತಮ್ಮ ಸ್ಥಳದಲ್ಲಿ ಒಂದು ಕಸಬುದಾರೀ ಪಾಠಶಾಲೆಯನ್ನು ಸ್ಥಾಪಿಸುವದಾಗಿಯೂ, ಸದರೀ ಶಾಲೆಗೆ ಗಾಣೀಕಿಶೋರ್ ಕಸಬುದಾರೀ ಪಾಠಶಾಲೆಯೆಂದು ಹೆಸರಿಟ್ಟು ಇದರ ಖರ್ಚಿನ ಬಗ್ಗೆ ಪ್ರತಿವರುಷದಲ್ಲಿ ೫೦೦೦ ರೂಪಾಯಿಗಳನ್ನು ಕೊಡುವರೆಂತಲೂ ಒಂದಾನೊಂದು ಪತ್ರಿಕೆ ತಿಸುತಿದೆ

ಒಬ್ಬ ಬಂಗಾಳಾ ದೇಶದ ವಾಸಸ್ಥನು ತನ್ನ ಹೆಂಡತಿಯು ತನ್ನ ಸ್ವಾಧೀನಕ್ಕೆ ಬಾರದೆ ಯಿದ್ದ ಪಕ್ಷದಲ್ಲಿ ಮದುವೆ ಖರ್ಚು ೧೦೦೦ ರೂಪಾಯಿಗಳನ್ನು ಕೊಡಿಸಬೇಕೆಂದು ಕೋರ್ಟನಲ್ಲಿ ದಾವೇ ಮಾಡಿದನು. ಹೆಂಡತಿಯು ವಿದ್ಯಾವಂತೆಳಾಗಿರುತ್ತಾಳೆ. ಆದದರಿಂದಲೇ ತನ್ನ ಗಂಡನಬದತನ, ಮೌಢ್ಯ, ಪೈಶ್ಯ, ವಿರೂಪ, ಕ್ರೂರವಾದ ನಡತೆ, ಇವುಗಳನ್ನು ನಮೂದಿಸಿ ಕೋರ್ಟನವರ ಸಹಾಯವನ್ನಪೇಕ್ಷಿಸಿದಳು.

ನಲವತ್ತು ವರ್ಷಗಳ ಸರಾಸರಿ ಲೆಕ್ಕದ ಮೇರೆ ವರ್ಷ ೧ಕ್ಕೆ ಒಂದುಕೋಟಿ ರೂಪಾಯಿಗಳ ವಿಲಾಯತಿ ವಸ್ತ್ರಗಳು ಈ ಹಿಂದೂಸ್ಥಾನದಲ್ಲಿ ಖರ್ಚಾದಂತೆ ತಿಳಿಯಬರುತಿದೆ. ಈರೀತಿ ಪರರಾಜ್ಯಕ್ಕೆ ಇಲ್ಲಿನ ಹಣವೆಲ್ಲಾ ಹೋದದ್ದಾದರೆ ಇಲ್ಲಿನ ಜನರು ಹೊಟ್ಟೆಗಿಲ್ಲದೆ ಬಳಲುತ್ತಾರೆಂಬದರಲ್ಲಿ ಆಶ್ಚರ್ಯವೇನು? ವಿಲಾಯತಿ ವ್ಯಾಪಾರಸ್ಥರಿಗೆ ಇದೊಂದು ದ್ರವ್ಯದ ಗಣಿಯಾಗಿದೆ.

ಐರ್ಲಂಡಿನ ಅಲ್‌ಸ್ಟರ್‌ನಲ್ಲಿ ಜಾನ್ ರಿಚ್ಚರ್ಡ್‌ಸನ್ ಎಂಬಾತನು ೧೮೬೭ನೇ ಇಸವಿಯಲ್ಲಿ ೬೦೦೦ ಎಕ್ರೆಯ ಪ್ರದೇಶವನ್ನು ಕೊಂಡುಕೊಂಡು ಅಲ್ಲಿ ಮನೆಗಳನ್ನು ಕಟ್ಟಿಸಿ ಅದಕ್ಕೆ ಬ್ರಿಸ್ ಬ್ರೂಕ್ ಎಂಬ ಹೆಸರನ್ನಿಟ್ಟು ಅಲ್ಲಿ ಮದ್ಯದ್ರವ್ಯವನ್ನು ಸೇವನೆ ಮಾಡದಿರತಕ್ಕವರನ್ನೇ ಒಕ್ಕಲಿಟ್ಟರುವನು. ಈಗ ಅಲ್ಲಿ ೬,೦೦೦ ಜನರಿರುವರು. ಈ ಸ್ಥಳದಲ್ಲಿ ಮದ್ಯದ್ರವ್ಯ ಅಂಗಡಿಗಳೂ ಪೋಲೀಸ್ ಸಿಬ್ಬಂದಿಯೂ ಇಲ್ಲವೇಯಿಲ್ಲ ಈ ದೊಡ್ಡ ಮನುಷ್ಯರು ಕಳೆದವಾರದಲ್ಲಿ ಗತಿಸಿದರು.

ಗಂಜಾಂ ಜಿಲ್ಲೆಯಲ್ಲಿ ನಿಯೋಗಿ ಮತದ ಬ್ರಾಹ್ಮಣನೊಬ್ಬನು ಯೂನಿವರ್ಸಿಟಿ ಪರೀಕ್ಷೆ ಮಾಡಿದೆನೆಂದು ಸುಳ್ಳು ಹೇಳಿ ಒಬ್ಬ ಹುಡುಗಿಯನ್ನು ಮದುವೆ ಮಾಡಿಕೊಂಡನು. ಆ ಮೇಲೆ ನಿಜಸ್ಥಿತಿಯನ್ನು ತನ್ನ ಮಾವನಿಗೆ ತಿಳಿಸಿದನು. ಈ ಸಂಗತಿ ತಿಳಿದ ಒಡನೆ ಮಾವನೂ ಮದವಣಗಿತ್ತಿಯೂ ವಿಶೇಷವಾಗಿ ಚಿಂತಿಸಿದರಂತೆ. ಇದನ್ನು ನೋಡಿದರೆ ಸಾವಿರ ಸುಳ್ಳನ್ನಾದರೂ ಹೇಳಿ ಒಂದು ಮದುವೇ ಮಾಡಬೇಕೆಂಬ ಅವಿವೇಕವಾದ ಗಾದೆಯು ಇನ್ನೂ ಹೋಗಲಿಲ್ಲವಲ್ಲಾ ಎಂದು ನಾವು ಆಶ್ಚರ್ಯ ಪಡುತ್ತೇವೆ

ಈ ವರ್ಷದ ಓರಿಯಂಟಲ್ ಕಾಂಗ್ರೆಸ್ ಸಭೆಯು ಲಂಡನ್ ಪಟ್ಟಣದಲ್ಲಿ ಸೇರುವದು. ಇದು ಬರುವ ಸೆಪ್ಟಂಬರ್ ೧ ರಿಂದ ೧೨ ರವರೆವಿಗೆ ನಡೆಯುವದು. ಕಳೆದ ವರ್ಷದಲ್ಲಿ ಇಂಡಿಯಾದೇಶದಿಂದ ಮ|| ರಾಘುನವರು ಪ್ರತಿನಿಧಿಗಳಾಗಿಹೋಗಿದ್ದು, ಸಮುದ್ರಯಾನವನ್ನು ಮಾಡಿದ್ದಕ್ಕಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಂಡರು ಈ ವರ್ಷದಲ್ಲಿ ಯಾರು ಹೋಗುವರೋ ಇನ್ನೂ ತಿಳಿಯಲಿಲ್ಲವು. ಹೋಗಿಬಂದು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವದಕ್ಕಿಂತಲೂ ಹೋಗದಿರುವದೇ ಉತ್ತಮವು.

ಈಗ ಕೆಲವುದಿವಸಗಳಹಿಂದೆ ಲಾಹೋರಿನಲ್ಲಿ ಉಂಟಾದ ಬಿರುಗಾಳಿಯಿಂದ ಈಮುಂದಿನ ಅನರ್ಥಗಳು ಸಂಭವಿಸಿದವು. ಏಳುವರ್ಷದ ಬಾಲೆಯೊಬ್ಬಳು, ಎರಡುವರ್ಷದ ಒಂದು ಹೆಣ್ಣು ಮಗುವು, ತೂರಿಹೋಗಿ ಬಾವಿಯಲ್ಲಿಬಿದ್ದು ಮುಳುಗಿಹೋದರು. ಒಂದುವರ್ಷದ ಬಾಲಕನೊಬ್ಬನು ಮಾಳಿಗೆಯಮೇಲಿಂದ ಕೆಳಗೆಬಿದ್ದು ಸತ್ತನು ಮತ್ತೊಂದು ಬಾಲೆಯು ರಸ್ತೆಯಲ್ಲಿ ಯಾರೂ ಮೈದಾನಿನಲ್ಲಿಯೂ ಉರುಳಿಕೊಂಡುಹೋಗಿ ಶವವು ಮಾರನೆಯದಿವಸ ನದೀ ತೀರದಲ್ಲಿ ಸಿಕ್ಕಿತು.

ಬೊಂಬಾಯಿ ಪ್ರೆಸಿಡೆನ್ಸಿಗೆ ಸೇರಿದ ಪಿಣ್ಯಾಂ ಎಂಬ ಪಟ್ಟಣದಲ್ಲಿ ಕೆಲವರು ನೇಟಿವ್ ದೊಡ್ಡ ಮನುಷ್ಯರು ಸೇರಿ ಒಂದು ಫಂಡನ್ನು ಏರ್ಪಡಿಸಿ ಪ್ರಿನ್ಸ್ ಆಲ್ಬರ್ಟ್ ವಿಕ್ಟರವರ ವ್ಯವಸಾಯ ದ್ರವ್ಯವೆಂದು ಕರೆದಿರುವರು ವ್ಯವಸಾಯವನ್ನು ಸರ್ವಪ್ರಕಾರದಲ್ಲಿಯೂ ವೃದ್ಧಿಪಡಿಸುವದೇ ಇವರ ಉದ್ದೇಶವಾಗಿರುತಿದೆ ಈಮೂಲದಿಂದ ಬಂತಕ್ಕಬಡ್ಡಿಗೆ ವ್ಯವಸಾಯವನ್ನು ಪ್ರೋತ್ಸಾಹಗೊಳಿಸುವಂತೆ ಕೆಲಸಮಾಡತಕ್ಕವರಿಗೆ ಬಹುಮಾನವನ್ನು ಕೊಡುವದೇ ಸಾಫಲ್ಯವೆಂದು ಏರ್ಪಡಿಸಿರುವರು.

ಚಿಕಾಗೋಪಟ್ಟಣದಲ್ಲಿ ಜಮಖಾನವನ್ನು ತಯಾರ್‌ಮಾಡುವ ಕಾರ್ಖಾನೆಯೊಂದರಲ್ಲಿ ಜಮಖಾನವನ್ನು ನೇಯುವಾಗ್ಯೆ ವಿದ್ಯುಚ್ಛಕ್ತಿಯನ್ನು ಪ್ರಯೋಗಿಸಿ ಕೆಲಸವನ್ನು ಬಹಳಜಾಗ್ರತೆಯಲ್ಲಿ ನಡೆಸುತಲಿರುವರು. ಒಂದು ದಿವಸವೆಲ್ಲ ಕಷ್ಟಪಟ್ಟು ಕೈಯಿಂದ ನೇಯುವದಾದರೆ ೫೦ ಗಜವಾಗುವದು ಬಹಳಪ್ರಯಾಸವಾಗುವದು. ಆದರೆ ಈಗ ವಿದ್ಯುಚ್ಛಕ್ತಿಯಿಂದ ಒಂದು ನಿಮಿಷದಲ್ಲಿ ೮ ಗಜವನ್ನು ನೇಯುತಿರುವರು ಮುಂದೆ ಜಮಖಾನಗಳು ಸುಲಭವಾಗಿ ದೊರೆಯಲು ಶುಭಸೂಚಕವಾಗಿರುವದು

ಕಳೆದವಾರದಲ್ಲಿ ಮುಂಬೈ ಪಟ್ಟಣದೊಳು ಸುಲ್ತಾನ್‌ಅಲಿ ಮುಸುಬ್ಬಿನ್ ಎಂಬಾತನು ಬಿಬಿಬ ಜಾರ ರಸ್ತೆಯಲ್ಲಿ ಹೋಗುತಲಿದ್ದಾಗ ಸವಿನಾದವ ಸ್ಲಿನ ಒಂದು ಅಂಗಡಿಯಲ್ಲಿ ಹುಸೇನ್‌ಜಾನ್ ಎಂಬ ಸ್ತ್ರೀಯು ವ್ಯಾಪಾರವನ್ನು ಮಾಡುತಲಿದ್ದುದನ್ನು ಕಂಡು ಒಡನೆಯೇ ಅವಳಬಳಿಗೆಹೋಗಿ ಅಕೆಯ ಭುಜದಮೇಲೆ ತನ್ನ ಕೈಯನ್ನು ಹಾಕಿಕೊಂಡು ಚುಂಬಿಸಿ ನೀನು ನನ್ನಪತ್ನಿಯನ್ನು ಪೋಲುವದ್ದರಿಂದ ನಿನ್ನಲ್ಲಿಇಷ್ಟು ಸ್ನೇಹವನ್ನು ತೋರಿಸುವೆನು ಯೆಂದು ಹೇಳಿದನು. ಕೂಡಲೇ ಇದು ಕೋರ್ಟನಲ್ಲಿ ತೀರ್ಮಾನವಾಗಿ ೫ ರೂಪಾಯಿಗಳ ದಂಡವನ್ನು ತೆತ್ತನು.

ಅಮೇರಿಕಾ ದೇಶದಲ್ಲಿರುವ ಚಾನ್ಸೀಡೀಯನೊಬ್ಬನು ಕನೆಕ್ಟಿಕಟ್ಟನ ವರ್ತಮಾನಪತ್ರಿಕೆಯೊಂದರಲ್ಲಿ ವಿಚಿತ್ರವಾದ ಈ ಪ್ರಸಿದ್ಧಪತ್ರಿಕೆಯನ್ನುಪ್ರಕಟಿಸಿರುವನು. ಚತುರಾಂಗನು ಸ್ವಂತದ ಕ್ರಿಯೆಯಾದ ಮನೇಬಿಯರ್ ತರುಣಿ ಯೊಬ್ಬಳನ್ನು ವರಿಸಬೇಕೆಂದಿರುವನು. ಚತುರಾಂಗನು ಬಹಳ ಧನಿಕನಾಗಿರುವದರಿಂದ ಇವನನ್ನು ವರಿಸತಕ್ಕವಳು ಯಾವ ಕೆಲಸವನ್ನೂ ಮಾಡಲಾವಶ್ಯಕವಿಲ್ಲವು. ತಾನೇಬಟ್ಟೆಗಳನ್ನು ಒಗೆದು ಅಡಿಗೆಯನ್ನುಮಾಡುವನು, ತಾನೇ ಸಮಸ್ತ ಕೆಲಸವನ್ನು ಮಾಡಿಕೊಳ್ಳುವನು. ಆದರೆ ಪತ್ನಿಯಾದವಳು ಅಲಂಕಾರ ಯುಕ್ತಳಾಗಿ ಕುಳಿತುಕೊಂಡು ಪತಿಗೆ ಆನಂದವನ್ನುಂಟುಮಾಡುವದು ಅಕೆಯಕೆಲಸವಾಗಿರುತಿದೆ

ವಿಲಾಯತಿಯಲ್ಲಿ ಸ್ತ್ರೀಯರಿಗೆ ಅನುಕೂಲ್ಯವನ್ನುಂಟುಮಾಡಬೇಕೆಂದು ಈಗ ೩೦ರ ವರ್ಷಗಳಿಳಗೆ ಪೋಸ್ಟಾಫೀಸ್‌ಗಳಲ್ಲಿ ಗುಮಸ್ತೇಕೆಲಸಗಳಿಗೆ ಸ್ತ್ರೀಯರನ್ನು ನಿಯಮಿಸಬೇಕೆಂದು ಏರ್ಪಡಿಸಿ, ಅದೇರೀತಿಯಲ್ಲಿ ಈಗಲೂ ನಡೆದು ಬರುವದು. ಪೋಸ್ಟು ಆಫೀಸಿಗೆ ಹೋದವರು ಈಚೆಗೆ ಆಸ್ತ್ರೀಯರೊಡನೆ ವಿಶೇಷ ಮಾತನಾಡಲುಪಕ್ರಮಿಸಲು ಆಸ್ತ್ರೀಯರು ತಮ್ಮಕೆಲಸಕ್ಕೆ ನಿರೋಧ ಪ್ರಾಪ್ತವಾಗುವದೆಂದು ಮಾತನಾಡಲು ಈಗ ಸಮಯವಿಲ್ಲವೆಂದು ಹೇಳಲಾಗಿ ಪುರುಷರಲ್ಲಿ ಕೆಲವರು ತಮ್ಮನ್ನು ಅವಮಾನಪಡಿಸಿದರೆಂದು ಮೇಲಕ್ಕೆ ರಿಪೋರ್ಟುಮಾಡಿ ಸ್ತ್ರೀಯರ ಈ ಹಕ್ಕನ್ನು ರದ್ದುಮಾಡಿಸಬೇಕೆಂದಿರುವಂತೆ ಕೇಳುತ್ತೇವೆ. ಇದು ಒಳ್ಳೇದೆ.

ಚಾಂದಾ ಜಿಲ್ಲೆಯ ಒಂದು ನದೀ ತೀರದಲ್ಲಿದ್ದ ಮರದ ಕೆಳಗೆ ಒಬ್ಬ ಮನುಷ್ಯನು ವಿಶ್ರಾಂತಿಗಾಗಿ ಬಂದು ಕೂತುಕೊಂಡಿದ್ದನು. ಆ ಸಮಯದಲ್ಲಿ ಒಂದು ಹಸು ನೀರು ಕುಡಿಯುವದಕ್ಕೋಸ್ಕರ ನದೀ ತೀರಕ್ಕೆ ಬರಲು ಆ ಸ್ಥಳದಲ್ಲಿ ಒಂದು ಮೊಸಳೆಯು ನೀರಿನಿಂದ ಮೇಲಕ್ಕೆ ತಲೆ ಎತ್ತಿಕೊಂಡು ಬಾಯಿ ಬಿಟ್ಟುಕೊಂಡಿತ್ತು. ಮರದ ಕೆಳಗಿದ್ದ ಮನುಷ್ಯನು ಅದರುವನ್ನು ಕಾಪಾಡುವದಕ್ಕೋಸ್ಕರ, ಮೊಸಳೆಯಮೇಲೆ ಒಂದು ಕಲ್ಲನ್ನು ಬೀರಲು ಅದು ಇನ್ನೊಂದು ಕಡೆಗೆ ತಲೆ ತಿರಿಗಿಸಿಕೊಂಡಿತು. ಅಷ್ಟರಲ್ಲಿ ಹಸುವನ್ನು ಹಿಡಿಯುವದಕ್ಕೋಸ್ಕರ ಹೊಂಚುಹಾಕಿಕೊಂಡಿದ್ದ ಹುಲಿಯು ಹಸುವಿನಮೇಲೆ ಹಾರಲು ದೈವಾಧೀನದಿಂದ ಗುರಿತಪ್ಪಿ ಆ ಮೊಸಳೆಯಮೇಲೆ ಬಿತ್ತು. ಆಗ ಮೊಸಳೆಗೂ ಹುಲಿಗೂ ಬಹಳ ಕಲಹ ಉಂಟಾಗಿ ಕಡೆಗೆ ಎರಡೂ ತಮ್ಮ ಶೌರ್ಯವನ್ನು ಯಮನ ಮುಂದೆ ತೋರಿಸುವದಕ್ಕೆ ಹೊರಟವು ಬಡಪಾಯಿಯಾದ ಹಸುವೇನೋ ಅಕಾಲ ಮೃತ್ಯುವಿನಿಂದ ತಪ್ಪಿಸಿಕೊಂಡಿತು.

ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾಗದ ವಿದ್ಯಾರ್ಥಿಗಳ ಸಂಖ್ಯೆಯು ಪ್ರತಿ ವರ್ಷದಲ್ಲಿಯೂ ಹೆಚ್ಚುತಲಿರುವದು ಕಳ್ಕತ್ತಾ ಮದರಾಸ್ ದೇಶದಲ್ಲಿ ಎರಡು ವರ್ಷಗಳಿಂದ ಈಚೆಗೆ ಬಹುಜನ ವಿದ್ಯಾರ್ಥಿಗಳು ತೇರ್ಗಡೆಯಾಗದೇ ಉಳಿದುಕೊಳ್ಳುವರು. ತೇರ್ಗಡೆಯಾಗದ ವಿದ್ಯಾರ್ಥಿಗಳು ಅನೇಕಸ್ವಾರಾಗಿರುವರ್ಕ. ಅವರು ಪ್ರಶ್ನೆ ಪತ್ರಿಕೆಗಳು ಬಹಳ ಕಠಿನವಾಗಿದ್ದವೆಂದು ಪ್ರಶ್ನೆಪತ್ರಿಕೆಗಳ ವಿಷಯದಲ್ಲಿ ಆಕ್ಷೇಪಿಸಲು ಅವಕಾಶವಿಲ್ಲವು ಪ್ರತಿವರ್ಷದ ಹಾಗೆಯೇ ಉಪಾಧ್ಯಾಯರು, ತೇರ್ಗಡೆಯಾಗಲು ಅಯೋಗ್ಯರಾಗಿ ತೋರಿದವರನ್ನು ಪ್ರೈವೇಟಿನಲ್ಲಿ ತನ್ನ ದರಖಾಸ್ತನ ಕಳುಹಿಸುವಂತೆ ಹೇಳಿ ತನ್ನ ಸ್ಕೂಲಿಕ ಪ್ರತಿ ವರ್ಷದಲ್ಲಿಯೂ ಇಂತಹವರ ಸಂಖ್ಯೆಯನ್ನು ವೃದ್ಧಿಮಾಡ ಬರಿಸುವರು. ಸನ್ ೧೮೮೮ ನೇ ವರ್ಷದಲ್ಲಿ ೬೮೮ ವಿದ್ಯಾರ್ಥಿಗಳು ಪ್ರೈವೇಟಿನಲ್ಲಿ ದರಖಾಸ್ತುಗಳನ್ನು ಕಳುಹಿಸಿದ್ದರು ಕಳೆದ ವರ್ಷದಲ್ಲಿ ಸ್ವಲ್ಪ ಕಡಮೆಯಾಗಿ ೫೦೦ ಮಂದಿ ಕಳುಹಿಸಿದರು. ಈ ದುಷ್ಪದ್ಧತಿಯನ್ನು ಜಾಗ್ರತೆಯಲ್ಲಿ ನಿಲ್ಲಿಸತಕ್ಕದ್ದು ಪ್ರತಿಯೊಬ್ಬ ಉಪಾಧ್ಯಾಯರಿಗೂ ಆವಶ್ಯಕವಾಗಿರುತಿದೆ.

ಜರ್ಮನಿ ದೇಶದ ಚಕ್ರವರ್ತಿಯವರು ತಮ್ಮ ಹೆಂಡತಿ ಮಕ್ಕಳು ಸಮೇತರಾಗಿ ಊಟಕ್ಕೆ ಕುಳಿತುಕೊಂಡಾಗ ಅವರ ಯೆದುರಿನಲ್ಲಿ ಮಗನಾದ ಪ್ರಿನ್ಸ್ ಆಗಸ್ಟ್ ವಿಲಿಯಂ ಎಂಬವರು ಚೂರಿಯನ್ನಾ ಮುಳ್ಳನ್ನಾ ಅಥವಾ ಚಮಚವನ್ನು ಉಪಯೋಗಿಸದೆ ತನ್ನ ಕೈಯಿಂದ ಅನ್ನವನ್ನುತಿನ್ನುವದನ್ನು ನೋಡಿ ಚಕ್ರವರ್ತಿಯವರು ಸಿಟ್ಟಾಗಿ ಇನ್ನು ಮುಂದೆ ಹಾಗೆ ಮಾಡಬಾರದೆಂದು ಹೇಳಿದರು. ಆದರೆ ಆ ಹುಡುಗನು ಅದಕ್ಕೆ ಲಕ್ಷ್ಯಕೊಡದೆ ಯಾವಾಗಲೂ ಕೈಯಿಂದಲೇ ಊಟಮಾಡುತಿದ್ದನು. ಒಂದುದಿವಸ ಚಕ್ರವರ್ತಿಯವರು ಇವನನ್ನುನೋಡಿ ತಮ್ಮ ಸಂಗಡ ಕೂಡಬಾರದೆಂತಲೂ ಮೇಜಿನಕೆಳಗೆ ಕೂತುಕೊಂಡು ನಾಯಿಯಂತೆ ತಿನ್ನಬೇಕೆಂತಲೂ ಸಿಟ್ಟಿನಿಂದ ತಿಳಿಸಿದ್ದನ್ನು ಮಗನು ಕಿವಿಗೊಟ್ಟು ಕೇಳಿ ಕುರ್ಚಿಯಮೇಲಿಂದ ಎದ್ದು ತನ್ನ ಮೈಮೇಲಿನ ವಸ್ತ್ರಗಳನ್ನು ತೆಗೆದುಹಾಕಿ ಮೇಜಿನ ಕೆಳಗೆ ಕುಳಿತನು. ಇದನ್ನು ನೋಡಿ ಚಕ್ರವರ್ತಿಯವರು ಹೀಗ್ಯಾಕೆಮಾಡಿದೆಯೆಂದುಕೇಳಿದ್ದಕ್ಕೆ ಅವನು ನಾಯಿ ಮರಿಗಳಿಗೆ ಉಡಿಗೆ ತೊಡಿಗೆಗಳಿರುತ್ತವ್ಯೋ? ಅವು ಬತ್ತಲೆ ಇರುತ್ತವೆಂದು ನಾನೂ ಹಾಗೆಯೇ ಮಾಡಿದೆನೆಂದು ನುಡಿದನು.

Bangalore -- Printed and published at the Karnatic Press, No. 114, Srinivasa Mandiram Road, Pettah—1890

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning

[illegible]

Vol. XVII] BANGALORE—MONDAY, JUNE 30 1890. [No 26.

ಸಂಪುಟ ೧೭] ಬೆಂಗಳೂರು — ಸನ್ ೧೮೯೦ನೇ ಇಸವಿ ಜೂನ್ ೩೦ ನೇ ತಾರೀಖ್ ಸೋಮವಾರ [ಸಂಚಿಕೆ ೨೬

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಮುಂಗಡ	9—0—0	9—0—0
ಹಿಂದಾಗಿ	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ

ಮುಂಗಡ	4—0—0	5—0—0
ಹಿಂದಾಗಿ	5—0—0	6—0—0

[illegible]

ಜಾಹೀರಾತು ನಿಯಮ

[illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs. 3 0 0

ವೈದ್ಯಸಾರ ಸಂಗ್ರಹ

[illegible]

ADVERTISEMENTS

ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರಶಾಲೆಯಲ್ಲಿ ಮಾರಾಟಕ್ಕೆ ಸಿದ್ಧವಾಗಿವೆ. ಬೇಕಾದವರು ವೆಲೆಯನ್ನು ಕಳುಹಿಸಿ ತರಿಸಿಕೊಳ್ಳಬಹುದು

ಸಂಸ್ಕೃತ ಗ್ರಂಥಗಳು

	ರೂ ಆ ಪೈ
[illegible]	೪ ೦ ೦
[illegible]	೧ ೦ ೦
[illegible]	೦ ೮ ೦
[illegible]	೧ ೨ ೦
[illegible]	೦ ೧೨ ೧
[illegible]	೦ ೪ ೦
[illegible]	೦ ೧ ೬
[illegible]	೦ ೨ ೦
[illegible]	೨ ೫ ೦
[illegible]	೦ ೩ ೦
[illegible]	೦ ೧ ೨
[illegible]	೦ ೨ ೧
[illegible]	೦ ೧ ೦

ಕನ್ನಡ ಗ್ರಂಥಗಳು.

[illegible]	೩ ೦ ೦
[illegible]	೦ ೪ ೦
[illegible]	೦ ೮ ೦
[illegible]	೦ ೮
[illegible]	೧ ೮ ೦
[illegible]	೦ ೨ ೧
[illegible]	೦ ೨ ೬
[illegible]	೦ ೩ ೦
[illegible]	೦ ೦ ೦
[illegible]	೦ ೨ ೦
[illegible]	೦ ೨
[illegible]	೧ ೦ ೦
[illegible]	೦ ೧೨ ೦

ನೋಟೀಸ್.

ಇದರಿಂದ ನಮ್ಮ ಚಂದಾದಾರರಿಗೂ ಇತರರಿಗೂ ಪ್ರಕಟಿಸುವದೇನೆಂದರೆ —

ಸನ್ ೧೮೮೯ನೇ ಇಸವಿ [illegible] ಬಾಕಿಯನ್ನು [illegible] ನಾವು ರಿಜಿಸ್ಟರ್ [illegible] ಪತ್ರಿಕೆ ಕಳುಹಿಸುತ್ತೇವೆ [illegible] ಪತ್ರಿಕೆಯು [illegible] ಪತ್ರಿಕೆಯು [illegible] ತಳುಹಿಸಿ [illegible] ಕೋರುತ್ತೇವೆ.

ಬೆಂಗಳೂರು, ತಾ ೩೦ನೇ ಜೂನ್ ೧೮೯೦ | ಎ ಸಿ ಶ್ರೀನಿವಾಸಾಚಾರ್, ಪ್ರೊಪ್ರೈಟರ್ [illegible]

ನೋಟೀಸ್

ಮನೆಗಳಲ್ಲಿ ಗಿಲಿಟ್ ಮಾಡುವದಕ್ಕೆ ಅನುಕೂಲವಾದ ಬೆಳ್ಳಿ ದ್ರಾವಕವು.

ಈ ಬೆಳ್ಳಿ ದ್ರಾವಕವು [illegible] ತಾಮ್ರ, ಹಿತ್ತಾಳೆ [illegible] ಗಿಲಿಟ್ ಮಾಡುವದಕ್ಕೆ [illegible] ಇದರಿಂದ [illegible] ಗಿಲಿಟ್ ಮಾಡುವದಕ್ಕಿಂತ [illegible]

ಇದರ ಕ್ರಯ ಸೀಸೆ ೧ ಕ್ಕೆ ೦—೮—೦

ಚಿನ್ನದ ದ್ರಾವಕವು.

[illegible] ತಾಮ್ರ [illegible]

ಇದರ ಕ್ರಯ ಸೀಸೆ ೧ ಕ್ಕೆ ೩—೮—೦

[illegible] ತರಿಸಿಕೊಳ್ಳಬಹುದು.

ಪ್ರಕಟನೆ

ಸನ್ ೧೮೯೦ನೇ ಇಸವಿಯ ಪರೀಕ್ಷೆಗೆ ಉಪ [illegible] ಪ್ರತಿ ೧ಕ್ಕೆ [illegible] ೧—೧೧—೬ [illegible] ತಾತ್ಪರ್ಯ ವಿವರಣ ಸಹಿತ ರಾಜಶೇಖರ ವಿಲಾಸ (ಆಯಾ ಆಶ್ವಾಸಗಳಿಗೆ ಮಾತ್ರ) [illegible] ಸಹಿತ ಕ್ರಯ ೨—೦—೦ ಇವು ಮುದ್ರಿತವಾಗಿ ಸಿದ್ಧವಾಗಿವೆ. [illegible] ಭಾಗ ೧ಕ್ಕೆ [illegible] ೨—೪—೦ [illegible]

ನಾಟಕ ಕಥಾ ರತ್ನಮಾಲೆ.

[illegible] ಮಹಾಕವಿ ಕಾಳಿದಾಸ ಪ್ರಣೀತವಾದ ಸಂಸ್ಕೃತ ನಾಟಕಗಳ ಕಥೆಗಳು [illegible] ಕನ್ನಡ ವಿದ್ಯಾರ್ಥಿಗಳಿಗೆ [illegible] ಕನ್ನಡದಲ್ಲಿ [illegible] ಬೆಂಗಳೂರು [illegible] ಎಸ್ ಶ್ರೀನಿವಾಸ ರಾವ್, ಬಿ ಎ ಯವರಿಂದ ರಚಿಸಲ್ಪಟ್ಟಿರುತ್ತೆ. ಇದರ ಕ್ರಯ [illegible]

ಮ. ರಾ. ಎಸ್ [illegible] ಬರೆದು ತರಿಸಿಕೊಳ್ಳಬಹುದು. ಈಗ ವಿಶೇಷವಾಗಿ [illegible] ಪ್ರತಿಗಳು ದೊರೆಯಲಾರವು.

ನೋಟೀಸ್.

ಮೈಸೂರು ಶೀಮೆಯ ಚೀಫ್ ಕೋರ್ಟ್‌ನಲ್ಲಿ ೧೮೯೦ನೇ ಇಸವಿ ಮಿಸಲೇನಿಯಸ್ ಪಿ ಸಂ ೧೨೪.

ಅರ್ಜಿದಾರರು

ಚಿತ್ರದುರ್ಗದ ಶುಭೋದಯ ಕಂಪನಿಗೆ ಸೇರಿದ ಮೆಂಬರುಗಳಾದ.

೧ನೇ ಪಡಿನಾಳು ಈರಪ್ಪ, ೨ನೇ ಬಸಪ್ಪ, ೩ನೇ ಕುಚ್ಚಂಗಿ [illegible] ಮುನಿಯಪ್ಪ, ೪ನೇ ಬಳೇ ಕರಿಬಸಪ್ಪ, ೫ನೇ ಗುತ್ತಿ ರುದ್ರಪ್ಪ, ೬ನೇ ಗುರು ಸಿದ್ದಪ್ಪ, ೭ನೇ ಬಸಪ್ಪ, ೮ನೇ [illegible], ೯ನೇ ರುದ್ರಪ್ಪ, ೧೦ನೇ [illegible], ೧೧ನೇ ಸಿದ್ದಲಿಂಗಪ್ಪ, ೧೨ನೇ [illegible], ೧೩ನೇ ಚನ್ನಬಸಪ್ಪ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ,—

ಚಿತ್ರದುರ್ಗದ ಶುಭೋದಯ ಕಂಪನಿಗೆ ಸೇರಿದ ಮೆಂಬರುಗಳಾದ [illegible] ಪಡಿನಾಳು ಈರಪ್ಪನವರ್ಗೆರೇರು, ಈಗ ೪—೧೦ ತಿಂಗಳಿಂದಾಗಿ [illegible] ಇಲ್ಲದೇಲೂ ಮೆಂಬರ್ಗಳಿಗೆ [illegible] ಕಂಪೆನಿ [illegible] ಬರುವದರಿಂದ ಮೆಂಬರ್ಗಳಿಗೆ ಬಹಳ ನಷ್ಟ ಸಂಭವಿಸುವದರಿಂದ ಕಂಪೆನಿ [illegible] ಮಾಡಿಸಬೇಕೆಂದು [illegible] ಅರ್ಜಿ ಕೊಟ್ಟಿರುತ್ತಾರೆ. ಇದರ [illegible] ಸನ್ ೧೮೯೦ನೇ ಇಸವಿ ಜುಲೈ ತಿಂಗಳು ೪ನೇ ತಾರೀಖ್ ಶುಕ್ರವಾರ [illegible] ಬೆಳಿಗ್ಗೆ ೧೧ ಘಂಟೆಗೆ ಆ [illegible] ಅವರ ಕಡೆ [illegible] ಹಾಜರಾಗಿ [illegible] ಆಕ್ಷೇಪಣೆಗಳನ್ನು ತಿಳಿಯಪಡಿಸಬಹುದು.

By the Court,

ತಾ|| 20ನೇ ಜೂನ್ ಸನ್ 1890ನೇ ಇಸವಿ } S HANUMANTHA ROW, Registrar.

ನೋಟೀಸ್.

ಮೈಸೂರು ಶೀಮೆಯ ಚೀಫ್ ಕೋರ್ಟ್‌ನಲ್ಲಿ. ೧೮೯೦ನೇ ಇಸವಿ ಮಿಸಲೇನಿಯಸ್ ಪಿ ಸಂ ೧೨೫,

ಅರ್ಜಿದಾರರು

ಚಿತ್ರದುರ್ಗದ ಶ್ರೀ ನಗರೇಶ್ವರಸ್ವಾಮಿ [illegible] ಮಹಾರಾಜಾ ಕಂಪೆನಿಗೆ ಸೇರಿದ ಮೆಂಬರುಗಳಾದ

೧ನೇ ಪಡಿನಾಳು ಈರಪ್ಪ, ೨ನೇ [illegible] ಬಸಪ್ಪ, ೩ನೇ ಕುಚ್ಚಂಗಿ [illegible] ಮುನಿಯಪ್ಪ, ೪ನೇ [illegible] ಸಿದ್ದಲಿಂಗಪ್ಪ, ೫ನೇ ಗುತ್ತಿ ರುದ್ರಪ್ಪ, ೬ನೇ [illegible], ೭ನೇ ಪಡಿನಾಳು [illegible], ೮ನೇ [illegible], ೯ನೇ [illegible] ರುದ್ರಪ್ಪ, ೧೦ನೇ [illegible]

ಇದರಿಂದ ಸಮಸ್ತಜನರಿಗೂ ತಿಳಿಯಪಡಿಸುವದೇನೆಂದರೆ—ಚಿತ್ರದುರ್ಗದ ಶ್ರೀ ನಗರೇಶ್ವರ

ಸ್ವಾಮಿ ಪ್ರೋಹಿತ ಶ್ರೀರ್ಮ ಮಹಾರಾಜಾ ಕಂಪನಿ ಮೆಂಬರುಗಳಾದ ಪಡಿನಾಳು ಈರಪ್ಪ ವಗೈರೇರು ಈಗ ೪—೧೦ ತಿಂಗಳ ಲಾಗಾಯ್ತು ಕಾಲುವ್ ವಸೂಲಿ ಇಲ್ಲದೆಲೂ ಮೆಂಬರುಗಳಿಗೆ ಸಹಾಯ ಚುನಾಯಿಸದೆಲೂ ಕಂಪನಿ ನೌಕರರ ತಲಬಿಗಾಗಿ ಶಿಲ್ಕಿನಲ್ಲಿ ಇದ್ದ ಮೊಬಲಗನ್ನು ಖರ್ಚು ಹಾಕಿಕೊಳ್ಳುತ್ತಾ ಬರುವದರಿಂದ ಮೆಂಬರ್‌ಗಳಿಗೆ ಬಹಳ ನಷ್ಟ ಸಂಭವಿಸಿದಕಾರಣ ಈ ಕಂಪನಿ ವ್ಯಂದವ ಮಾಡಿಸಬೇಕೆಂದು ವಗೈರೆ ಅರ್ಜಿ ಕೊಟ್ಟಿರುತ್ತಾರೆ ಇದರ ವ್ಯವಸ್ಥೆ ಬಗ್ಗೆ ೧೮೯೦ನೇ ಇಸವಿ ಜುಲೈ ತಿಂಗಳು ೪ನೇ ತಾರೀಖು ಮಂಗಳವಾರ ಹಿಯರಿಂಗ್ ಮುಕರರ್ ಮಾಡಿಯದೆ. ಆ ತಾರೀಖು ದಿವಿ ೧೧ ಘಂಟೆಗೆ ಆಕ್ಷೇಪಣೆ ಇರತಕ್ಕವರೆಲ್ಲರು ಅವರೇಆಗಲಿ ಅವರ ತರಫ ಮೊಖ್ತ್ಯಾರ್ ವಹಿಸಿದ ಅಡ್ವೋಕೇಟುಗಳಾಗಲಿ ಈ ಕೋರ್ಟ್ ರೂಬರೂವ್ ಹಾಜರಾಗಿ ಅವರವರ ಆಕ್ಷೇಪಣೆಗಳನ್ನು ತಿಳಿಯಪಡಿಸಬಹುದು.

By the Court,

ತಾ||೨೦ನೇ ಮಾಹೆ ಜೂನ್ ಸ 1890ನೇ ಇಸವಿ } S. Hanuma Row, *Registrar*

ನೋಟೀಸ್.

ಮೈಸೂರುಶೀಮೆಯ ಚೀಫ್‌ಕೋರ್ಟಿನಲ್ಲಿ ೧೮೯೦ನೇ ಇಸವಿ ಮಿಸಲೇನಿಯಸ್ ನಂ ೧೧೪ ಅರ್ಜಿದಾರರಾದ

ಮುಳಬಾಗಲ್ ತಾಲ್ಲೂಕ್ ಯಲ್ದೂರ ಕೋಟೆ ರಾಮಸ್ವಾಮಿ ದ್ರವ್ಯಸಹಾಯ ಕಂಪನಿ ಮೆಂಬರುಗಳಾದ ನಾನ್ಯಾಚಾರಿ ವಗೈರೇರು

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ

ಮೇಲೆಕಂಡ ನ್ಯಾನಾಚಾರಿ ವಗೈರೇರು, ಮೇಲ್ಕಂಡ ಕಂಪನಿ ಮೆಂಬರುಗಳಿಂದ ಕಾಲ್ಸ ಸರಿಯಾಗಿ ವಸೂಲ್ ಬಾರದೆ ಇರುವದರಿಂದ ಕಂಪನಿ ಅಭಿವೃದ್ಧಿಗೆ ಬರುವದಕ್ಕೂ ಕಂಪನಿ ಕೆಲಸಗಳು ನಡೆಯುವದಕ್ಕೂ ಅವಕಾಶವಿಲ್ಲವಾಗಿ ಕಂಪನಿ ವ್ಯಂದವ ಮಾಡಿಸಬೇಕೆಂದು ವಗೈರೆ ಅರ್ಜಿ ಕೊಟ್ಟಿ ಇದಾರೆ. ಇದರ ವ್ಯವಸ್ಥೆ ಬಗ್ಗೆ ೧೮೯೦ನೇ ಇಸವಿ ಜುಲೈ ತಿಂಗಳ ೧೫ನೇ ತಾರೀಖು ಮಂಗಳವಾರ ಹಿಯರಿಂಗ್ ಮುಕರರ್ ಮಾಡಿ ಇದೆ, ಆ ತಾರೀಖು ದಿವಿ ೧೧ ಘಂಟೆಗೆ ಈ ಕೋರ್ಟ್ ರೂಬರೂವ್ ಆಕ್ಷೇಪಣೆ ಇರತಕ್ಕವರೆಲ್ಲರೂ ಅವರೇಆಗಲಿ ಅವರತರಫ ಮೊಖ್ತ್ಯಾರ್ ಪಡೆದ ಅಡ್ವೋಕೇಟುಗಳಾಗಲಿ ಹಾಜರಾಗಿ ಅವರವರ ಆಕ್ಷೇಪಣೆಗಳನ್ನು ತಿಳಿಸಬಹುದು.

By the Court,

ತಾ||೨೪ನೇ ಮಾಹೆ ಜೂನ್ ಸ 1890ನೇ ಇಸವಿ } S. Hanuma Row, *Registrar*

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA

MONDAY, JUNE 30, 1890

೧೮೯೦ನೇ ಜೂನ್ ೩೦ ನೇ ಸೋಮವಾರ

OFFICAL CHANGES

ಈ ವಾರದ ಮೈಸೂರು ಗೆಜೆಟಿನ ದೆಸೆಯಿಂದ ಈ ಸಂಸ್ಥಾನದ ದಿವಾನರಾದ ಮ ಕೆ ಶೇಷಾದ್ರಿ ಅಯ್ಯರ್ ಕೆ ಸಿ. ಎಸ್. ಐ ಯವರಿಗೆ ನಾಳೆಯ ಮೊದಲು ೩ ತಿಂಗಳ ಪ್ರಿವಿಲೇಜ ರಜಾ ಕೊಡಲ್ಪಟ್ಟಿರುವಂತೆಯೂ, ಅವರ ಗೈರಹಾಜರೀಕಾಲದಲ್ಲಿ ಚೀಫ್‌ಕೋರ್ಟ್ ಪ್ಯುಸ್ನೆ ಜಡ್ಜಿಯದರಾದ ಮ|| ಟಿ ಆರ್ ಎ ತುಂಬುಚೆಟ್ಟಿರವರು ದಿವಾನ್ ಕೆಲಸವನ್ನು ಆಕ್ಟಿಂಗ್ ತರೀಕ್ ನೋಡುವಂತೆಯೂ ಶ್ರೀಮನ್ಮಹಾರಾಜರವರು ಮಂಜೂರ್ಮಾಡಿರುವದಾಗಿ ತಿಳಿಯಬರುತಿದೆ. ಮ|| ತುಂಬುಚೆಟ್ಟಿರವರು ಇತರ ಕೆಲಸದ ಮೇಲಿರುವ ಕಾಲದಲ್ಲಿ, ಲೆಜಿಸ್ಲೆಟಿವ್‌ಸೆಕ್ರೆಟರಿ ಮತ್ತು ಗವರ್ನಮೆಂಟ್ ಅಡ್ವೋಕೇಟುರಾದ ಮ|| ವಿಶಾನಾಕ್ಷಿ ಅಯ್ಯರವರು ಚೀಫ್‌ಕೋರ್ಟ್ ಪ್ಯುಸ್ನೆ ಜಡ್ಜಿ ಕೆಲಸವನ್ನು ಆಕ್ಟಿಂಗ್ ತರೀಕ್ ನೋಡುತಿರುವಂತೆಯೂ ಇವರ ಕೆಲಸವನ್ನು ಈಗ ಡೇಪ್ಯುಟಿ ಕೋರ್ಟ್ ರಿಜಿಸ್ಟ್ರಾರಾಗಿರುವ ಮ ಬೇವೂರಿ ರಾಮರವರು ಹಂಗಾಮಿಯಾಗಿ ನಿರ್ವಹಿಸುವಂತೆಯೂ, ಹಿಂದೆ ಮೈಸೂರು ಟೌನ್ ಮ್ಯಾಜಿಸ್ಟ್ರೇಟರಾಗಿ ನೌಕರರಾಗಿದ್ದು ಇದುವರಿವಿಗೆ ಅಲ್ಲಿಗೆ ಹೋಗಿ ಕೆಲಸದ ಚಾರ್ಜನ್ನು ತೆಗದುಕೊಳ್ಳದೆ ಇಲ್ಲೇ ಇರುತಲಿರುವ ಮ|| ಸುಬ್ಬರಾಯರವರು ಮರಳಿ ಚೀಫ್‌ಕೋರ್ಟ್ ರಿಜಿಸ್ಟ್ರಾರಾಗಿ ಆಕ್ಟಿಂಗ್ ತರೀಕ್ ನೌಕರರಾದಂತೆಯೂ, ಈ ವಿಷಯಗಳೆಲ್ಲವು ನಾಳೇದಿನವೇ ಜಾರಿಗೆ ತರಲ್ಪಡುವದೆಂತಲೂ ತಿಳಿಯಬರುತಿದೆ ಮ|| ಶೇಷಾದ್ರಿಅಯ್ಯರವರು ಈ ಸಂಸ್ಥಾನದ ದಿವಾನರಾಗಿ ೪೩ನೇ ಇಸವಿಯಲ್ಲಿ ನೌಕರರ್ಮಾಡಲ್ಪಟ್ಟದರಿಂದ ಗತ ೭ ವರುಷಗಳಕಾಲದಲ್ಲಿ ಸ್ವಂತ ಕೆಲಸಕ್ಕಾಗಿ ರಜಾ ತೆಗದುಕೊಂಡವಕ್ಕಿದೇ ಪ್ರಥಮಾವರ್ತಿಯಾಗಿರುತಿದೆ. ೮೨—೮೮ನೇ ಇಸವಿಯಲ್ಲಿವರು ಒಂದೆರಡು ತಿಂಗಳಕಾಲ ಈದೇಶ ವಾಸವನ್ನಗಲಿದ್ದರೂ ಆಗ ಮಹಾರಾಜರವರು ಉತ್ತರದೇಶ ಸಂಚಾರಾರ್ಥ ಹೊರಟಕಾಲದಲ್ಲಿ ಅವರ ಸವಾರಿಯಸಂಗಡ ಹೋಗಿದ್ದರೇಹೊರತು ಪ್ರತ್ಯೇಕವಾಗಿ ಯೆಲ್ಲಿಗೂ ಹೋಗಿರಲಿಲ್ಲವು ಆಕಾಲದಲ್ಲಿಯೂ ಈಗಿನಕ್ರಮದಂತೆಯೇ ಏರ್ಪಾಡುಗಳು ಮಾಡಲ್ಪಟ್ಟಿದ್ದವು ಪ್ರಸಕ್ತ ಸಂದರ್ಭದಲ್ಲಿ ಲೆಜಿಸ್ಲೆಟಿವ್ ಸೆಕ್ರೆಟರಿ ಕೆಲಸದಲ್ಲಿ ಕೂಡ ಬದಲಾವಣೆಯದೋಚಿತ ಮಾಡಬೇಕಾದ ಆವಶ್ಯಕತೆ ಯುಂಟಾದಂತೆ ತೋರುತಿದೆ ಮ|| ಶೇಷಾದ್ರಿಅಯ್ಯರವರು ನಿರ್ವಾಹವಿಲ್ಲದೆ ರಜಾ ಪಡೆದು ಇಲ್ಲಿನವಾಸವ ತೊರೆದು ಕೆಲವುಕಾಲ ಅನ್ಯದೇಶವಲ್ಲಿಯಾದರೂ ವ್ಯಾಸಂಗ ರಹಿತರಾಗಿ ವಾಸಮಾಡಬೇಕಾದಂತೆ ಅವರ ಶರೀರಸ್ಥಿತಿಯವರು ಬಲವಾಗಿಪ್ಪರಿಸಿದ್ದರಿಂದಲೇ ಅವರಿಗಾರೀತಿ ಮಾಡಬೇಕಾಯಿತೇಹೊರತು ಇಲ್ಲವಾದರೆ ತಮ್ಮಜವಾಬ್ದಾರಿಯ ಸ್ಥಿತರರಿಗೀರೀತಿ ಒಪ್ಪಿಸಿ ನಿರ್ಭರರಾಗಿರಲಾರರು "ಶರೀರಮಾದ್ಯಂಖಲುಧರ್ಮಸಾಧನಂ" ಎಂಬವಾಗಿ ಸುಖ ಸಂತೋಷಾನುಭವಗಳಗೆಲ್ಲ ಶರೀರವೇ ಆಧಾರಭೂತವಾದುದರಿಂದ ಅಂತಾ ಶರೀರಾರೋಗ್ಯಕ್ಕೆ ಯಾವಾಗ ಲೋಪ ವುಂಟಾಗುತಿದೆಯೊ ಆಗ ಇತರ ಎಲ್ಲ ಪ್ರತ್ಯಾಶೆಗಳೂ ಕಡಮೆಯಾಗುವದು ಸ್ವಾಭಾವಿಕವಾಗಿರುತಿದೆ ದಿವಾನರವರು ತಮ್ಮ ರಜಾಕಾಲವನ್ನು ಬ್ಯಾಂಗಳೂರ್ ಪ್ರಾಂತಗಳಲ್ಲಿಯೂ ಬಳಿಕ ತಾಮ್ರಪರ್ಣೀತೀರದಲ್ಲಿಯೂ ಕಳೆಯಬೇಕೆಂದುದ್ದೇಶಿಸಿದಾರೆಂದು ಕೇಳುತ್ತೇವೆ. ಮ|| ತುಂಬುಚೆಟ್ಟರವರು ಸೀನಿಯರ್ ಕೌನ್ಸಿಲರಾಗಿಯೂ ಹಿಂದೆ ಒಂದಾವರ್ತಿ ಆಕ್ಟಿಂಗ್ ದಿವಾನರಾಗಿದ್ದು ಕೆಲಸ ನೋಡಿದವರಾಗಿಯೂ ಇರುವದರಿಂದ ಪ್ರಸಕ್ತದಸಂದರ್ಭದಲ್ಲಿ ಸಹ ಮಹಾರಾಜರವರು ಹಿಂದಿನ ಕ್ರಮವನ್ನನುಸರಿಸಿ ಅವರನ್ನೇ ನೌಕರರ್ಮಾಡಿದುತೆತೋರುತಿದೆ. ಇದರಿಂದ ಮುಂದೆ ಯಾವಾಗಲಾದರು ದಿವಾನಗಿರಿಯು ಖಾಲಿಯಾಗುವಸಂದರ್ಭದಲ್ಲಿ ಮ|| ತುಂಬುಚೆಟ್ಟರವರಿಗುಂಟು ಮಾಡಲ್ಪಟ್ಟದ್ದ ಜಾತಿ ಮತಸ್ಥರಿಯುಕ್ತವಾದ ಅನರ್ಹತೆಯು ಮುಂದೆ ಪರಿಭಾವನೀಯವಲ್ಲವೆಂದೇ ವರ್ಣಿಸಬೇಕಾಯಿತು. ಮುಖ್ಯವಾಗಿ ಮ|| ತುಂಬುಚೆಟ್ಟರವರ ಕಾರ್ಯಶಕ್ತಿಯಲ್ಲಿಜನಗಳಿಗೆ ನ್ಯಾಯವಿಮರ್ಶೆಯು ತ್ವರೆಯಾಗಿ ಲಭಿಸುವದೆಂಬ ಭರವಸೆಯು ಜನಗಳಿಗೆಲ್ಲ ಬಹಳ ವುಂಟಾಗಿರುತಿದೆ ಈಗಿನ ಇತರ ಏರ್ಪಾಡುಗಳೆಲ್ಲವು ತಾತ್ಕಾಲಿಕಗಳಾದುದರಿಂದ ಅವುಗಳು ಕುರಿತು ನಾವು ಬಿಳಿಸಬೇಕಾದದ್ದು ಸದ್ಯಕ್ಕೆ ಒಂದೂ ಇರುವದಿಲ್ಲವು ಪರಂತು ಗವರ್ನಮೆಂಟ್ ಅಡ್ವೋಕೇಟ್ ಕೆಲಸದ ವಿಷಯದಲ್ಲಿ ಯಾವ ಏರ್ಪಾಡೂ ನಡೆಸಲ್ಪಡದಿರುವದರಿಂದ ಅದು ಮುಂದೆ ಲೆಜಿಸ್ಲೆಟಿವ್ ಸೆಕ್ರೆಟರಿಯವರೇ ತಮ್ಮ ಇತರ ಕೆಲಸಗಳೊಡನೆ ನೋಡತಕ್ಕದ್ದೋ ಅಥವಾ ಪೂರ್ವದಂತೆ ಬೇರೆ ಒಬ್ಬರುಪ ಗಾಮಿಯಾಗಿ ನಿಯಮಿಸಲ್ಪಡತಕ್ಕದ್ದೋ ಅದುಇದುವರಿವಿಗೂ ವ್ಯವಸ್ಥೆಯಾಗಿರಲಿಲ್ಲ. ಬಹುಶಃ ಈ ಏರ್ಪಾಡು ಮುಂದಿನವಾರದೊಳಗಾಗಿ ಹೊರಗಾಗುವದೆಂದು ನಂಬುತ್ತೇವಲ್ಲವೆ

HINDU MARRIAGE SYSTEM No. IV

ಹಿಂದೂ ವೈವಾಹಿಕ ಪದ್ಧತಿ ಮಂಕುರಿತು ೪ನೇ ಅಂಕೆ

ಶಾಸ್ತ್ರೀಯವಾಗಿ ಮಾಡಲ್ಪಡುವ ವಿವಾಹದಲ್ಲಿ ಭರ್ತೃ ಭಾರ್ಯೆಯರಿಬ್ಬರಿಗೂ ಸಂಪೂರ್ಣ ಸುಖ ವುಂಟಾಗುವದೇ ಇಲ್ಲವೋ ಎಂಬ ಅಂಶವನ್ನೀವಾರದಲ್ಲಿ ತಿಳಿಸುವಂತೆ ಪ್ರತಿಜ್ಞೆ ಮಾಡಿದ್ದೆವಷ್ಟೆ. ಸದರೀ ವಿಷಯವು ಕುರಿತು ಇದರಡಿ ಸ್ವಲ್ಪಮಟ್ಟಿಗೆ ವಿಚಾರ ಮಾಡುವೆವು.

ಯಾವ ಜನರಲ್ಲಿ ಜಾರತ್ವವು ಮಹಾಪಾತಕವೆಂಬ ಭಾವವು ಲೇಶವೂ ಇಲ್ಲದೆ ವಿವಾಹ ಪದ್ಧತಿಗಳು ಏರ್ಪಡಿಸಲ್ಪಟ್ಟಿರುವವೋ ಆಜನರು ಬಹಳ ನಾಗರಕತೆಯುಳ್ಳವರೆಂಬ ಜ್ಞಾನವು ಈಗ ಸಾರ್ವತ್ರಿಕವಾಗಿ ನೆಲಗೊಂಡಿರುತಿದೆ. ಜಾರತ್ವದಿಂ ಬಹು ಅನರ್ಥಗಳುಂಟಾಗುವದಲ್ಲದೆ ನಾನಾವಿಧ ಸಂಕಟಗಳಿಗೆ ಕಾರಣವಾಗಿರುವದು ಆದುದರಿಂದ ಅಂತಾ ಜಾರತ್ವಕ್ಕೆ ಅವಕಾಶವಿಲ್ಲದಂತಾ ಪದ್ಧತಿಯುಳ್ಳ ವಿವಾಹಕ್ರಮಗಳನ್ನು ಅಂಗೀಕರಿಸಬೇಕಾದದ್ದು ಧ್ರೀಯಸ್ಕಾಮಿಗಳಿಗೆಲ್ಲ ಮುಖ್ಯದರ್ಶನವಾಗಿರುತಿದೆ (ಅಕೇಶೋಬಿನ್ನರುಚಿಃ) ಎಂಬದಾಗಿ ಜನರ ಅಭಿಪ್ರಾಯಗಳೂ ತದನುಗುಣಗಳಾದ ಆಚಾರಗಳೂ, ಪ್ರವೃತ್ತಿಗಳೂ ಭಿನ್ನಗಳಾಗಿದ್ದಾಗ್ಯೂ ಭರ್ತೃ ಭಾರ್ಯೆಯರಿಬ್ಬರೂ ಒಂದೇ ವಿಧವಾದ ಅಥವಾ ಸಮಾನವಾದ ಮನೋಭಾವವುಳ್ಳವರಾಗಿದ್ದರೆ ಆಗ ಅವರಿಬ್ಬರಿಗೂ ಪರಸ್ಪರ ಪ್ರೀತಿ ವಿಶ್ವಾಸಗಳೂ ಸುಖ ಸಂತೋಷಗಳೂ ನೆಲಗೊಂಡಿರುವವು ಹಾಗಿಲ್ಲದೆ ಅವರ ಮನೋಭಾವವು ಪರಸ್ಪರ ವಿರುದ್ಧಗಳಾಗಿ ವ್ಯತ್ಯಾಸವನ್ನು ಹೊಂದಿದರೆ ಆಗ ಅವರ ಕುಟುಂಬ ನಿರ್ವಹಣವು ಬಹು ದುಃಖಗಳಿಗಾಕರವಾಗಿರುವವು. ಹ್ಯಾಗಂದರೆ, ಬಹಳ ಕಾಮಾತುರಳಾಗಿರುವ ಸ್ತ್ರೀಗೆ ವಿರಾಗಿಯಾದ ಪುರುಷನೊಬ್ಬನು ಪತಿಯಾಗಿ ದೊರಕಿದರೂ, ವೈರಾಗ್ಯದೆ ಲಾಸಕ್ತಿಯುಳ್ಳ ಸ್ತ್ರೀಗೆ ಕಾಮಾತುರನಾದ ಪುರುಷನು ಲಭಿಸಿದರೂ ಪರಸ್ಪರ ಸೌಖ್ಯವು ದುರ್ಲಭವಾಗಿರುವದೆಂಬದರಲ್ಲಿಸ್ವಲ್ಪವಾದರೂ ಸಂದೇಹವಿಲ್ಲವು ಹಾಗೆಯೇ ಪರರಿಗೆ ಉಪಕಾರವು ಮಾಡಿ ಕೀರ್ತಿಯಂ ಸಂಪಾದಿಸಬೇಕೆಂಬ ಅಪೇಕ್ಷೆಯುಳ್ಳ ಪುರುಷನಿಗೆ ಪರಮ ಲುಬ್ಧೆಯಾದ ಸ್ತ್ರೀ ಭಾರ್ಯೆಯಾಗಿದ್ದರೆ ಅವರಿಬ್ಬರಿಗೂ ಸ್ನೇಹವು ನೆಲೆಯಾಗಿರುವದೆ? ಲೌಕಿಕಕ್ಕೂ ದಾಕ್ಷಿಣ್ಯಕ್ಕೂ, ಸೌಂದರ್ಯಕ್ಕೂ ಪಾತಿವ್ರತ್ಯಕ್ಕೂ, ವಿದ್ಯೆಗೂ ಐಶ್ವರ್ಯಕ್ಕೂ, ಸೌಮನಸ್ಯೇನ ನಿತ್ಯ ವೈರತ್ವ ವುಂಟಾಗಿರುವದು ಪ್ರಸಿದ್ಧವಷ್ಟೆ ಆಕಾರಣ ಲುಬ್ಧಳಾದ ಭಾರ್ಯೆಗೂ ಯಶಸ್ಕಾಮಿಯಾದ ಪುರುಷನಿಗೂ ಯಾವಾಗಲು ಸಂಬಂಧವು ಸರಸವಾಗಿರಲಾರದು. ಅಶಿಯು ಪೈರ್ಯವನ್ನೂ, ಯಮನು ಶರೀರವನ್ನೂ, ಕೋಪವು ಸಂಪತ್ತನ್ನೂ ಲೋಭವು ಕೀರ್ತಿಯನ್ನೂ, ನಾಶಪಡಿಸುವದೆಂಬದಾಗಿ ವಿಸ್ತರವಾಕ್ಯ ವಿರುವದು. ಕೆಲವರು ಸ್ತ್ರೀಯರು ಬಹಳ ದುಷ್ಟಸ್ವಭಾವವುಳ್ಳ ಪುರುಷರಲ್ಲೇ ಅನುರಕ್ತರಾಗಿರುವರು ಅಂತವರಿಗೆ ಕೇವಲ ಸಾಧುಗಳಾದವರು ಪತಿಗಳಾಗಿದ್ದರೆ ಜಾರತ್ವಕ್ಕೆ ಅವಕಾಶವು ಅತ್ಯಂತ ಸನ್ನಿಹಿತವಾಗಿರುವದು. ಈ ರೀತಿಯಾಗಿಯೇ ಭರ್ತೃಭಾರ್ಯೆಯರ ಗುಣಗಳು ಪರಸ್ಪರ ವಿರುದ್ಧಗಳಾಗಿರುವ ಸಂದರ್ಭಗಳಲ್ಲಿ ಅವರ ದಾಂಪತ್ಯವು ಅತಿ ದುಃಖ ದಾಯಕವಾಗಿರುವದು. ಅವರಿಗೆ ಆನುಕೂಲ್ಯವೆಂಬಿಗೂ ಲಭಿಸಲಾರದು. ಅವರಿಗೆ ಸಂಸೃತಿಯಲ್ಲಿ ಸುಖವು ವ್ಯರ್ಥವು. ಇಂತಾ ಕಾರಣಗಳನ್ನು ಪರಿಭಾವಿಸಿಯೇ ಲೋಕಹಿತಂಕರರೂ ಪ್ರವರ್ತಕರಾದ ಮತ್ತು ತ್ರಿಕಾಲಿಕಜ್ಞಾನ ಪೂರ್ಣರಾದ ಮಹರ್ಷಿಗಳು ಸ್ವಭಾವದವರ್ಗಗಳನ್ನು ಚೆನ್ನಾಗಿ ಪರ್ಯಾಲೋಚಿಸಿ ತದನುಗುಣಗಳಾದ ವಿವಾಹ ಕ್ರಮಗಳನ್ನೂ, ತತ್ತದಬಕಾರಿ ಲಕ್ಷಣಗಳನ್ನೂ, ಅವುಗಳಿಗೆ ಯೋಗ್ಯಗಳಾದ ಕಾಲ ನಿಯಮವನ್ನೂ ನಿಬದ್ಧಿಸಿ, ಅವುಗಳಿಗೆ ಪೋಷಕವಾಗಿ ಜ್ಯೋತಿಶ್ಶಾಸ್ತ್ರ ಸಂಬಂಧವಾದ ನಿಬಂಧನಗಳನ್ನುಂಟುಮಾಡಿರತ್ತಾರೆ. ಅಂತಾ ವಿವಾಹ ಕ್ರಮಗಳನ್ನೂ, ಜ್ಯೋತಿಶ್ಶಾಸ್ತ್ರ ನಿಯಮಗಳನ್ನೂ ಮುಂದೆ ವಿವರಿಸುವೆವು. ಪರಂತು ಜ್ಯೋತಿಷ್ಯರೀತ್ಯಾ ರಾಶಿ ಗಣ ಗೃಹ ಮೈತ್ರಿ ನಾಡಿ ಮೊದಲಾದ ಕೂಟಗಳನ್ನೂ ಕನ್ಯಾಸ್ವರೂಪವನ್ನರುಹುವ ಸಾಮುದ್ರಿಕ ಲಕ್ಷಣಗಳನ್ನೂ ಚೆನ್ನಾಗಿ ಪರಿಶೀಲಿಸಿ ಸಕಲಗುಣಗಳೂ ಪರಿಪೂರ್ಣಗಳಾಗಿದ್ದರೆ ಆಗಬರ್ತೃಭಾರ್ಯೆಯರಿಬ್ಬರೂ ಸಕಲಸುಖಸಂತೋಷಗಳುಳ್ಳವರಾಗಿಯೂ, ದಾಂಪತ್ಯಾನುಕೂಲ್ಯ ವುಳ್ಳವರಾಗಿಯೂ, ಏಜನ್ಯ ಸೌಶೀಲ್ಯಾದಿ ಗುಣಗಳುಳ್ಳವರಾಗಿಯೂ, ಇರುವರೆಂಬದಾಗಿ ತಿಳಿಸಲ್ಪಟ್ಟಿರುತಿದೆ. ಮೇಲೆ ಕಂಡ ಮೂವತ್ತಾರು ಗುಣಗಳಲ್ಲಿ ಎಷ್ಟು ಕಡಮೆಯಾಗುವದೋ ಅಷ್ಟು ದಂಪತಿಗಳ ಸುಖ ಸಂತೋಷಗಳಲ್ಲಿ ಕೊರತೆ ಯುಂಟಾಗದೆ ಹೋಗಲಾರದು ಈಗ ನಮ್ಮವರು ಮಾಡುವ ವಿವಾಹಗಳಲ್ಲಿ ಈ ಗುಣಗಳನ್ನೆಲ್ಲವು ಲೋಪವಿಲ್ಲದೆ ಪರಿಶೋಧಿಸಿ ಮಾಡತ್ತಾರೆಯೋ? ಒಂದೆರಡು ಕೂಟಗಳು ಅನುಕೂಲಗಳಾಗಿದ್ದು. ವಿಕ್ಕಾದ ಪ್ರಶ್ನೆಯ ವಿರುದ್ಧಗಳೆಂದು ಕಂಡುಬಂದರೂ ಅದು ಉಪ್ಪೇಕ್ಷಿಸಲ್ಪಟ್ಟು ವಿವಾಹವು ಜರಿಗಿಸುತ್ತಾರೆ ಎಂತಾ ಪರಿಣಾಮಗಳಲ್ಲಿ ದಂಪತಿಗಳಿಗೆ ಸಕಲ ಸುಖ ಸಂತೋಷಗಳೂ ವುಂಟಾಗಬೇಕಾದರೆ ಹ್ಯಾಗೆ ಸಿದ್ಧಿಸುವದು? ಕುಮಾರ್ತೆಯರ ಕ್ಷೇಮವನ್ನೇ ಸತತಕ್ಕ ತಾಯಿತಂದೆಗಳು ತಾವ್ರಬುದ್ಧಿಯಿಂದ ವರನ ಐಶ್ವರ್ಯವನ್ನೂ, ಬಳಿಕ ವಿದ್ಯೆಯನ್ನೂ ವಯಸ್ಸನ್ನು ರೂಪವನ್ನು ಅನಂತರ ಕುಲಶೀಲವನ್ನೂ ಕಡ್ಡಾಯ ವರ ಪರಿಮಾಣವನ್ನೂ ಕಡೆಗೆ ದಾಂಪತ್ಯಾನುಕೂಲ್ಯವನ್ನೂ ಪರ್ಯಾಲೋಚಿಸತಕ್ಕವರಾಗಿ ವಿವಾಹವೇರ್ಪಡಿಸಿ ಪರಿಗಣನೀಯಗಳಾದ ನಿಯಮಗಳ್ಯಾವದಕ್ಕೂ ಅವರು ಅವಮಾನ ಕೊಡುವದಿಲ್ಲವೆ ವಿವಾಹಕ್ಕೆ ಧನ ವಿಷಯಗಿ ಕನ್ಯಾಶುಲ್ಕವನ್ನೂ ಆಭರಣಗಳನ್ನು ಪ್ರಥಮದಲ್ಲಿ ನಿಷ್ಕರ್ಷಿಸಿಕೊಳ್ಳುವವರಲ್ಲವರು ಆಸಕ್ತಿಯುಳ್ಳವರಾಗಿರುತ್ತಾರೆ. ಮುಖ್ಯವಾಗಿ ಯೆಲ್ಲರೂ ಅವಶ್ಯ ನೋಡತಕ್ಕಾಗಿರುವ ಅಷ್ಟಾದಶ ಗುಣಗಳಲ್ಲಿ ಒಂದೆರಡು ವಿನಾ ವಿಕ್ಕವು ಲೋಪವಾಗಿರುವ ಬಾಲಿಕೆಗೆ ದಸಾಕಾಂಕ್ಷಿಗಳಾದ ಕನ್ಯಾಪಿತೃಗಳು ತಮ್ಮ ಮಗಳನ್ನಿತ್ತು ವಿವಾಹ ಮಾಡುವದಾದರೆ ಶ್ರೇಷ್ಠಗುಣಗಳಾದ ಸುಖಸಂತೋಷಗಳು ಮಾತ್ರವೇ ಆ ದಂಪತಿಗಳಿಗೆ ಸುಸ್ಥಿರವೇ ಆಗುವವು ಸ್ತ್ರೀಯರು ಅವರವರ ಸ್ವಭಾವನ್ನನುಸರಿಸಿಯೂ, ಶರೀರ ತತ್ವವನ್ನನುಸರಿಸಿಯೂ, ಸ್ತ್ರೀಯರು ನಾಲ್ಕು ಪ್ರಭೇದಗಳುಳ್ಳವರಾಗಿರುತ್ತಾರೆ. ಅಂತೆ ಪುರುಷರು ಕೂಡ ನಾಲ್ಕು ಭೇದಗಳುಳ್ಳವರಾಗಿಯೂ ತದನುಗುಣವಾದ ಅಂಗಪ್ರಮಾಣಗಳುಳ್ಳವರಾಗಿಯೂ ಇರುವರು ಯಾವಜಾತಿ ಸ್ತ್ರೀಯರಿಗೆ ಅನುಗುಣವಾದ ಯಾವಜಾತಿ ಪುರುಷರು ಪತಿಗಳಾಗಿ ಲಭಿಸಿದರೇ ಅವರಿಗೆ ಸಾಂಸಾರಿಕ ಸುಖವು ಲಭಿಸುವದು ಹಾಗಿಲ್ಲದೆ ವಿಷಮಜಾತಿ ಸಂಬಂಧವು ಮಾಡಿದರೆ ಅದರಿಂದ ಉದ್ದಿಷ್ಟಸುಖವು ಸ್ವಲ್ಪವೂ ಸಿದ್ಧಿಸಲಾರದು ಅಂತಾ ಸಂದರ್ಭಗಳಲ್ಲಿ ಪತಿವೇದ್ಯಗಳಾದ ವರಾವರರಿಬ್ಬರಲ್ಲಿ ಯಾರು ಬೇಕಾದರೂ ಅನ್ಯಾಸಕ್ತರಾಗಿ ಪ್ರವರ್ತಿಸಬಹುದು ಆದಕಾರಣ ಕನ್ಯೆಯ ಭವಿಷ್ಯತ್ಸುಖ ಸಂತೋಷ ಪ್ರಿಯವ ವೈಭವಗಳನ್ನು ತೋರುವಂತಾ ಮಾತಾಪಿತೃಗಳಾಗಲಿ ಇಷ್ಟ ಬಾಂಧವರಾಗಲಿ ಅವಳನ್ನು ದಾನ ಪೂರ್ವಕ ಅನ್ಯನೊಬ್ಬನಿಗೆ ಕೊಡಬೇಕಾದ ಸಂದರ್ಭದಲ್ಲಿ ಮುಖ್ಯವಾಗಿ ನೋಡಬೇಕಾದದ್ದೇನ ದರೆ,—

ಶ್ಲೋ|| ಅದೌ ಕುಲಂ ಪರೀಕ್ಷೇತ ತತೋ ವಿದ್ಯಾಂ ತತೋ ವಯಃ | ಶೀಲಂ ಧನಂ ತತೋ ರೂಪಂ ದೇಶಂ ಪಶ್ಚಾದ್ವಿವಾಹಯೇತ್ || ಪರ್ಯಾಲೋಚ್ಯ ತು ವಿದ್ಯಾ ರೂ ಪಿಂ ಸರ್ವಮನ್ವಹಂ | ಶೀಲಾದಿ ಸರ್ವಗುಣ ವರಾ ಸಂಪಾದನೆ ಪರ||

ಅಂದರೆ, ವಿವಾಹದಲ್ಲಿ ಪ್ರತಿಗ್ರಹೀತನಾದ ವರನ ಕುಲವನ್ನು ಮೊದಲು ...

'ಪೂರ್ವಕ ಕ್ರಮವಾಗಿ ಅವನ ವಿದ್ಯೆ, ವಯಸ್ಸು,' ಶೀಲ, ಧನ, ರೂಪ, ದೇಶ ಮೊದಲಾದವನ್ನೂ ಪರೀಕ್ಷಿಸಿ ಅವುಗಳೆಲ್ಲವೂ ಉತ್ತಮವಾಗಿದ್ದೊಡೆ ಆಗ ಅವನಿಗೆ ದಾನ ಮಾಡಬೇಕೆಂಬದಾಗಿ ನಿರ್ಣಯಿಸಲ್ಪಟ್ಟಿರುತ್ತಿದೆ. ಮತ್ತು ವರನು ನಿರ್ಧನನಾಗಿದ್ದರೂ ಅವನು ಧಾರ್ಮಿಕನಾಗಿ, ಅಂದರೆ ಗೃಹಸ್ಥಾಶ್ರಮ ಪ್ರಯುಕ್ತವಾದ ಸುಖ ದುಃಖಗಳನ್ನನುಭವಿಸುವದಕ್ಕೆ ಸನ್ನದ್ಧನಾಗಿ ವಯೋವಿದ್ಯಾ ರೂಪ ಗುಣಗಳುಳ್ಳವನಾಗಿದ್ದರೆ ಅವನು ದಾನಾರ್ಹನಾಗುವನಲ್ಲದೆ ಕೇವಲ ರೂಪ ವಯೋಧನಗಳನ್ನು ಮಾತ್ರ ಪ್ರಧಾನ್ಯವಾಗಿ ಪರಿಗಣಿಸಿ ಕೊಡಕೂಡದು. ಇಂಥ ಹೆಣ್ಣಿನ ವರನ ವರಣದಲ್ಲಿ—

ಶ್ಲೋ|| ಕನ್ಯಾವರಯತೇ ರೂಪಂ ಮಾತಾವಿತ್ತಂಪಿತಾಶ್ರುತಂ | ಬಾಂಧವಾಃಕುಲಮಿಚ್ಛಂತಿ ಮೃಷ್ಟಾನ್ನಮಿತರೇ ಜನಾಃ||

ಕನ್ಯೆಯು ವರನರೂಪವನ್ನೂ, ತಾಯಿಯು ಅವನ ಐಶ್ವರ್ಯವನ್ನೂ, ತಂದೆಯು ವಿದ್ಯೆಯನ್ನೂ, ಬಂಧುಗಳು ಕುಲವನ್ನೂ, ಇತರ ಜನರು ಮೃಷ್ಟಾನ್ನವನ್ನೂ ಮುಖ್ಯವಾಗಿ ಅಪೇಕ್ಷಿಸುವರು. ಹೀಗಿದ್ದಾಗ್ಯೂ ಯುವತಾವಿಗಳಾಗಿ ಭಕ್ತ್ಯಾಭ್ಯಾಸದ ಇಹಪರ ಸುಖವು ಕೋರತಕ್ಕವರು ತಂದೆಯು ಮತ್ತು ಇಷ್ಟ ಬಂಧುಗಳ ಅಭೀಷ್ಟಗಳನ್ನೇ ವಿಶೇಷ ಗೌರವಿಸಬೇಕಾಗಿರುತ್ತದೆ. ಮುಂದಿನವಾರದಲ್ಲಿ ದಾನ ಪಾತ್ರದ ಸ್ವರೂಪಗಳನ್ನು ಸಾಧ್ಯವಾದ ಮಟ್ಟಿಗೆ ವಿವರಿಸಿ ತಿಳಿಸುವೆ.

Occasional Notes
ನೈಮಿತ್ತಿಕ ವಿಷಯನ್ಯಾಸ.

Sanction accorded—ಹೊಸ ಸಮುದ್ರ ತೀರದಲ್ಲಿ ಹೊಸ್ತ ಅಳತೆಯಮೇಲೆ ಸರ್ವೆ ಡಿಪಾರ್ಟ್‌ಮೆಂಟನ್ನು ನಿರ್ಮಿಸುವಂತೆ ಇಂಡ್ಯಾ ಸ್ಟೇಟ್ ಸೆಕ್ರೆಟರಿಯವರು ಮಂಜೂರ್ ಮಾಡಿರುತ್ತಾರೆ.

Election—ಜೋಧಪುರದ ಮಹಾರಾಜರವರು ಮುಂಬೈನಗರ ಸ್ಥಾಪಿಸಲ್ಪಟ್ಟಿರುವ ಆರ್ಟ್ ಸೊಸೈಟಿ ಯೆಂಬ ಸಂಘಕ್ಕೆ ಯಾವದಾ ಮುಖ್ಯ ಪಟ್ರನ್ ಎಂಬದಾಗಿ ಚುನಾಯಿಸಲ್ಪಟ್ಟಿರುತ್ತಾರೆ.

Introduction of the reduced postal rates—ಇಂಗ್ಲಾಂಡಿನಲ್ಲಿ ಈಚೆಗೆ ಕಡಿಮೆಮಾಡಲ್ಪಟ್ಟ ಅಂಚೆಹಾಸಲ್ ದರಗಳು ಏ ರಡು ತಿಂಗಳೊಳಗಾಗಿ ಇಂಡ್ಯಾದೇಶದೊಳು ಪ್ರಚುರ ಜಾರಿಯೊಳು ತರಲ್ಪಡಬಹುದು.

The German Emperor's visit to England—ಬರುವ ಆಗಸ್ಟ್ ತಿಂಗಳ ಎರಡನೇ ವಾರದೊಳು ಜರ್ಮನಿಯ ಚಕ್ರವರ್ತಿಯವರು ಇಂಗ್ಲಾಂಡದೇಶಕ್ಕೆ ಹೋಗುವರೆಂದು ಜನಗಳು ತಿಳಿಸುತ್ತಾರೆ.

Knighthood accorded—ಕಲ್ಕತ್ತಾ ಹೈಕೋರ್ಟ ಜಡ್ಜಿಯಾಗಿದ್ದ ಕೊಬ್ಬರಿಗಿಂತ ಈಚೆಗೆ ಪೆನ್ಷನ್ ಮೇಲೆ ನಿವೃತ್ತಿಯಾದ ಜಸ್ಟಿಸ್ ಮಿಸ್ತ್ರಿ ರಮೇಶಚಂದರ್ ಮಿತ್ರರವರಿಗೆ ಕೆ. ಸಿ. ಎಸ್. ಐ. ಎಂಬ ಪ್ರಶಸ್ತಿ ಕೊಡಲ್ಪಟ್ಟಿರುತ್ತದೆ.

A Concession—ಹಿಂದೂಗಳಲ್ಲಿ ಗಂಡನ ಹೆಸರನ್ನು ಹೆಂಡತಿಯೂ, ಹೆಂಡತಿಯ ಹೆಸರನ್ನು ಗಂಡನೂ ಹೇಳುವವಾಡಿಕೆ ಪ್ರಾಯಶ ಇಲ್ಲವಾಗಿ ಮುಂದಿನ ಸೆನ್ಸಸ್ಸಿನಲ್ಲಿ ಖಾನೇಷುಮಾರಿ ಲೆಕ್ಕ ತೆಗೆಯುವಾಗ ಆ ವಿಷಯದಲ್ಲಿ ಜನಗಳ ಇಷ್ಟಾನುಸಾರ ನಡೆದುಕೊಳ್ಳಬಹುದೆಂದು ಗವರ್ನಮೆಂಟಿನವರು ನಿರ್ಣಯಿಸಿರುತ್ತಾರೆ.

A meeting—ಕಲ್ಕತ್ತೆಯೊಳಗಿರುವ ಕುಲೀನಬ್ರಾಹ್ಮಣರು ಈಚೆಗೆ ಒಂದು ಸಭೆಸೇರಿ ತಮ್ಮ ಸಿನಾಹ್ಯನೆಸೇರಿವಹ್ಯೇತಗಳ ಸ್ತ್ರೀಧನದಬಗ್ಗೆ ಏಕೋಳೆ ಭಂಗಾರ, ಎಂಕೊಳೆಪೆಳ್ಳಿ, ನಗದು ೫೦ ರೂಪಾಯಿಗಳು, ಇವುಗಳಿಗೆ ಹೆಚ್ಚಾಗಿ ಅಪೇಕ್ಷಿಸಕೂಡದೆಂದು ಒಂದು ನಿರ್ಣಯ ಮಾಡಿಕೊಂಡಿರುತ್ತಾರೆ.

Discovery of silver ore.—ರಷಿಯಾ ದೇಶದ ದಕ್ಷಿಣಭಾಗದಲ್ಲಿ ಒಂದುಸಭೆಯು ಕೆಳದೊಳು ಬೆಳ್ಳಿ ಮಣ್ಣು ಕಂಡುಬಂದು ಅದನ್ನು ಶೋಧಿಸಿ ನೋಡುವಲ್ಲಿ ಸೀಸದ ನಾಲ್ವತ್ತೈದರಮೇರೆ ಕಲ್ಮಷ ರಹಿತವಾದ ಬೆಳ್ಳಿ ಸಿಕ್ಕುತ್ತಿದೆಯೆಂದು ತಿಳಿಯಬಂದು ಇನ್ನು ಚನ್ನಾಗಿ ಪರೀಕ್ಷಿಸಿ ನೋಡತಕ್ಕಬಗ್ಗೆ ಇಂಜನಿಯರುಗಳು ಅಲ್ಲಿಗೆ ಕಳುಹಿಸಲ್ಪಟ್ಟಿರುತ್ತಾರೆ.

A swimmer drowned.—ಈ ಜಾವದಲ್ಲಿ ವಿಶೇಷ ಸಮರ್ಥ ನನ್ನಿಸಿದ್ದ ಬಂಗಾಳೀದೇಶದ ವನೊಬ್ಬನು, ಎನ್ನ ಷೀಪಣಪಕರಿಂದವರು ಎಷ್ಟುಹೇಳಿದಾಗ್ಯೂ ಲಕ್ಷ್ಯವಿಲ್ಲದೆ, ಮ್ಯಾನ್ಚೆಸ್ಟರ ಸಿಂಗಪೂರಿನಲ್ಲಿ ಅಪಾಯಕರವಾದ ಸುಳಿಗಳುಳ್ಳ ಒಂದು ನದಿಯಲ್ಲಿಳಿದು ಅದರ ದಾಟಿಕೊಂಡು ಹೋಗ ಬೆತ್ನಿಸುವಲ್ಲಿ ಮರಳಿ ಮೇಲಕ್ಕೇಳಲೇ ಇಲ್ಲವೆಂದು ಆದೇಶದ ಪತ್ರಿಕೆಯೊಂದು ತಿಳಿಸುತ್ತದೆ.

Payment of war indemnity—ಕೆಲವು ಸಂವತ್ಸರಗಳ ಹಿಂದೆ ರಷಿಯಾದೇಶಕ್ಕೂ ತುರ್ಕಿದೇಶಕ್ಕೂ ನಡೆದ ಯುದ್ಧದಲ್ಲಿ ಪರಾಜಿತರಾದ ತುರ್ಕಿಯವರು ರಷಿಯಾ ಸರ್ಕಾರಕ್ಕೆ ಕೊಡಬೇಕಾದ ವ್ಯವಸ್ಥೆಯಾದ ಯುದ್ಧಖರ್ಚಿನ ಬಾಬ್ತಿಗೆ ೧೦ ಲಕ್ಷ ಪೌಂಡುಗಳು ಈಗ ಕೊಡಬೇಕಾಗಿ ತುರ್ಕೀ ಸರ್ಕಾರದವರು ತಮ್ಮ ಸಂಘ ನಡೆಯುತ್ತಿರುವ ರಷಿಯಾದೇಶದ ರಾಯಭಾರಿಯವರಿಗೆ ತಿಳಿಸಿರುತ್ತಾರೆ.

Suicide—ಚಾಮರಾಜನಗರ ನಿವಾಸಿಯಾದ ೩೦ನೆ ವರ್ಷದ ಒಬ್ಬ ವಿದ್ಯಾರ್ಥಿಯೊಬ್ಬನು ಕಳೆದ ಸಂವತ್ಸರದಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆ ಕೊಟ್ಟು ತೇರ್ಗಡೆಯಾಗಿ, ಈ ಸಂವತ್ಸರ ಎಫ್. ಎ. ಪರೀಕ್ಷೆಗೆ ಹೋಗಬೇಕಾದವನಾಗಿದ್ದನು. ಪರಂತು ಅದಕ್ಕೆ ಆವಶ್ಯಕವಾದಷ್ಟು ಓದಿಲ್ಲವಾಗಿ ಪರೀಕ್ಷೆಗೆ ಹೋಗಲಿಲ್ಲ. ಅದಾಗ್ಯೂ ಸ್ನೇಹಿತರ ದೂಷಣ ತಿರಸ್ಕಾರಗಳಿಂ ಸಹಿಸಲಿಕ್ಕಾಗದೆ ಮನಸ್ಸಿಗೆ ಅಟಿಸಿಕೊಂಡು ಆತ್ಮಹತ್ಯ ಮಾಡಿಕೊಂಡನಂತೆ.

Drink as as a miles—ಈಚೆಗೆ ತಿರುಚನಾಪಳ್ಳಿಯೊಳು ಕತ್ತಲು ಸಾರಿನಿಂದ ದೇಶೀಗುರ್ತ ಹಾಕಲೆತ್ನಿಸಲು ಅದು ಅಲ್ಲಿನ ಜನರ ತಿಳುವಳಿಕೆ ನಡೆಸಲು ಹಾರಿಸಿದ ಗುರ್ತವೆಂದು ಕೆಲವರು ಸಾರವಿಲ್ಲವೆಂದು ನಿರಾಕರಿಸಿ ಅವರಾಜ್ಯವಾದಯತ್ನಗಳಿಂದ ಕತ್ತಲಾಗನ್ನು ಸಹಯೋಗಿಸುವದರಮೂಲಕ ಸದರೀ ಕಾರ್ಯಕ್ಕೆ ಬಹಳ ಅನುಕೂಲ ಯುಂಟಾಗುವದೆಂದು ಮದರಾಸು ಹಾಸ್ಪಿಟಲ ಕಮಿಷನರವರು ಅಭಿಪ್ರಾಯಪಟ್ಟ ವಿವರದ ಕತ್ತಲುಗಳು ಚಿಕಿತ್ಸೆಯ ಪ್ರಕರಣ ಪ್ರತಿ ಕೇವಲ ನಿಸ್ಸಾರವಾದವು ಹಿಂದೂಗಳ್ಳ ಉತ್ತಮ ಜಾತಿಯವರು ಅಭಿಪ್ರಾಯ ಪಟ್ಟಿದ್ದಾರೆ ಅವರ ಹಾಲನ್ನು ದೇವರಿಗೂ ತೀರ್ಥಕ್ಕೆ ಉಪಯೋಗಿಸುವವರನು ಇತರ ಕಾರ್ಯಗಳಿಗೆ ಬಂದಾಗ ಅನುಮಾನ ಸಮಾಧಾನಮಾಡಿದರೆ ಯಾಗುವದು

Suicide—ಸುಂಟಿಕೊಪ್ಪದೊಳು ಒಂದು ಮೋಹಕಶಾಲೆಯಲ್ಲಿ ಓದುತಿದ್ದ ವಿದ್ಯಾರ್ಥಿಯೊಬ್ಬನು ಜೀವಿತದ ರಜಾದಿನಗಳು ಮುಗಿದಮೇಲೆ ತಾನು ಪಾಠಗಳಂ ಚನ್ನಾಗಿ ಓದಿಕೊಳ್ಳದಿದ್ದಲ್ಲಿ ಎಂಬ ಕಾರಣದಮೇಲೆ ಪಾಠಶಾಲೆಗೆ ಹೋಗುವದಕ್ಕೆ ಅಸಮಾಧಾನವು ವ್ಯಕ್ತಪಡಿಸಲು ಅವನ ತಾಯಿಯು ಹಿಂದಿನಾರವರ ಅನವಾನಕೊಟ್ಟು ಅವರೊಳಗಾಗಿ ಪಾಠಗಳು ಚನ್ನಾಗಿ ಓದಿಕೊಂಡು ಪರೀಕ್ಷೆಗೆ ಹೋಗಬೇಕೆಂದು ಹೇಳಿದಳು ಸದರೀ ಮಾತಿಗೆ ಶ್ರಾವಣ ಯಾಗುವದಕ್ಕೆ ಮುಂಬರದ ತಾಯಿಯು ಮಗನಿಗೆ ಮಾಡಿದ ಪ್ರಾರ್ಥನೆಯಿಂದು ಜನ್ಮಾಂತರಕೊಡಲು ಮಗನು ಅವಳ್ಕೆ ಉತ್ತರಕೊಡದೆ ಮೌನಾಶ್ರಯನಾಗಿದ್ದನು ತಾಯಿಯಾಡಿದ ವಿಶ್ವಾಸನೆಯು ಮಾಡಿಕೊಂಡ. ಪೋಲೀಸ್ಸ್ ಖವರೀಳು ಮೊದಲು ಮಾಡುವವ್ಯ ನು ನ್

Suicide—... (see above)

ತೀರಿಸಿಕೊಂಡು ಭೋಜನಕ್ಕೆಬಾರದೆ ಮನೆಯಿಂದ ಹೊರಟು ಸಮೀಪದಲ್ಲಿರುವ ರೈಲ್ವೆ ಮಾರ್ಗದಲ್ಲಿ ಅಡ್ಡವಾಗಿ ಮಲಗಿಕೊಳ್ಳಲು ಕೂಡಲೇ ಬಂದ ರೈಲುಗಾಡಿಯು ಅವನಮೇಲೆ ಹಾದುಹೋಗಿ ಅವನು ಕೊಲ್ಲಲ್ಪಟ್ಟನು.

LOCAL AND PROVINCIAL NEWS.
ಒಳದೇಶವಾರ್ತಾಪ್ರಾಂತಿಕವೃತ್ತಾಂತಗಳು.

The Legislative Secretary—ಲೆಜಿಸ್ಲೇಟಿವ್ ಸೆಕ್ರೆಟರಿಯವರಾದ ಮೀನಾಕ್ಷಿ ಅಯ್ಯರವರು ಸ್ವಂತ ಕೆಲಸದಮೇಲೆ ಹೈದರಾಬಾದಿಗೆ ನಿನ್ನೇದಿನ ಹೋದರೆಂದು ಕೇಳುತ್ತೇವೆ. ಇವರು ವಾಪಸ್ ಬರುವದಕ್ಕೆ ಪ್ರಾಯಶಃ ಒಂದುವಾರ ಹಿಡಿಯಬಹುದೆಂದು ತೋರುತ್ತದೆ.

Literary patronage—ಪ್ರಸಿದ್ಧ ಇಂಗ್ಲಿಷ್ ನಾಟಕದರಿಂದ ಸರ್ ಮಾನಿಯರ್ ವಿಲ್ಯಂಸ್ ಯೆಂಬವರಿಂದ ಈಚೆಗೆ ಇಂಗ್ಲಿಷ್ ಭಾಷೆಯಲ್ಲಿ ರಚಿಸಲ್ಪಟ್ಟಿರುವ ಬೌದ್ಧಮತ ವಿಷಯಕವಾದ ಗ್ರಂಥದ ೫೦ ಪ್ರತಿಗಳನ್ನು ಮೈಸೂರು ಸರ್ಕಾರದವರು ತೆಗೆದುಕೊಂಡು ಪ್ರೋತ್ಸಾಹ ಗೊಳಿಸಿದರೆಂದು ಕೇಳಲಾಗಿದೆ.

Removal of offices—ಸರ್ಕಾರಿ ಇಲಾಖೆಗಳಿಗಾಗಿ ಮೈಸೂರಲ್ಲಿ ಈಗ ಕಟ್ಟಲ್ಪಡುತ್ತಿರುವ ಕಟ್ಟಡದ ಕಾಮಗಾರಿಗಳೆಲ್ಲ ಸಂಪೂರ್ಣವಾಗಿ ಪೂರೈಸುತ ಬಂದದರಿಂದ ನಾಳೆಯಿನ ಮೈಸೂರಲ್ಲಿರತಕ್ಕ ಸಿವಿಲ್ ಕೋರ್ಟುಗಳೆಲ್ಲವು ಸದರೀ ಹೊಸಕಟ್ಟಡಕ್ಕೆ ವರ್ಗಮಾಡಲ್ಪಡುವವೆಂದು ತಿಳಿಯಬರುತ್ತದೆ. ಪರಂತು ಇಲ್ಲಿಂದ ಹೋಗತಕ್ಕ ಕಾಲವಾಗ್ರ ನಿಷ್ಕಲಷ್ಟವಾಗದೆಯದೆ.

Visitors road—ಪ್ರಿನ್ಸ್ ಆಲ್ಬರ್ಟ್ ವಿಕ್ಟರವರು ಮೈಸೂರಿಗೆ ದಯಮಾಡಿದ್ದ ವಿಶೇಷ ಸಂದರ್ಭದ ಜ್ಞಾಪಕಾರ್ಥ ಅವರ ಅಂಕಿತದಲ್ಲಿ ಮೈಸೂರಿನೊಳು ಹೊಸದಾಗಿ ನಿರ್ಮಿಸಲ್ಪಟ್ಟಿರುವ ರಸ್ತೆಯ ಉಭಯ ಪಾರ್ಶ್ವಗಳಲ್ಲಿಯೂ ೨೫,೦೦೦ ರೂಪಾಯಿಗಳ ಲಾಗವಹಿನಿಂದ ಕಟ್ಟಡ ಕಟ್ಟಿಸತಕ್ಕವುಗಳನ್ನು ಹಾಕುವದಾಗಿಹಾಡಿದರೂ ಇದೆ, ವನಿನಿಗೆ ಸದರೀ ರಸ್ತೆಗಾಗಿ ೫೫,೦೦೦ ರೂಪಾಯಿಗಳ ಆಗುವದು ತಗಲಿರುವದೆಂದೂ ಮೈಸೂರ್ ಹೆರಲ್ಡ್ ಪತ್ರಿಕೆ ತಿಳಿಸುತ್ತದೆ.

Mr B K Vencatavarada Iyengar—ಚಿತ್ರದುರ್ಗದ ಡಿಪ್ಯುಟಿ ಕಮೀಷನರ್ ಮಿಸ್ಟರ್ ಬಿ. ಕೆ. ವೆಂಕಟವರದಯ್ಯಂಗಾರ್ಯರವರು ಮನೆಗೆ ಬಂದು ತಮ್ಮ ಕೆಲಸದ ಚಾರ್ಜನ್ನು ತೆಗೆದುಕೊಳ್ಳುವದಕ್ಕಾಗಿ ಮೊನ್ನೆ ದಿನ ಅಲ್ಲಿಗೆ ಬಂದವರಾಗಿ ನಿರೀಕ್ಷಿಸಲ್ಪಟ್ಟದ್ದರಿಂದ ಅವರನ್ನು ಸ್ವಾಗತ ಮಾಡುವುದಕ್ಕಾಗಿ ಜನರೆಲ್ಲಾ ಅಲ್ಲಿ ಸಿದ್ಧರಾಗಿದ್ದರು, ವಿಮಾನಗಳನ್ನೆಲ್ಲ ಪ್ರಕಟಪಡಿಸದೆ ಮಾಡಲ್ಪಟ್ಟಿತ್ತಂತೆ ಅಲ್ಲಿಂದಬಂದ ಪ್ರತಿನಿಧಿಯೊಬ್ಬನು ತಿಳಿಸುತ್ತಾನೆ.

An enquiry—ದೇವನಹಳ್ಳಿ ಅಸಿಸ್ಟೆಂಟ್ ಸರ್ಜನ್ ಯಾವಾಗಲು ತಮ್ಮಬಳಿಗೆ ಬರುವ ರೋಗಿಗಳನ್ನುದಾಸೀನ ಮಾಡಿ ಸರಿಯಾಗಿ ಚಿಕಿತ್ಸೆ ಮಾಡದೆ ಬೇಸರವನ್ನು ತೋರಿಸುತ್ತಾರೆ ಅಂತವರಿಗೆ ಮಾತ್ರ ಶ್ರದ್ಧೆಯಿಂದ ಚಿಕಿತ್ಸೆ ಮಾಡುವ ಬಗ್ಗೆ ಔಷಧಗಳಂ ಕೊಡುತ್ತಾರೆಂತ ಒಬ್ಬ ವರ್ತಕನು ಸೀನಿಯರ್ ಸರ್ಜನರವರ ತನಕ ಹೋಗಲು ಅವರವರ ಮೇಲೆ ದೂರುತ್ತಿಯಂ ವಿಚಾರಿಸಿ ತಮಗೆ ತಿಳಿಸಬೇಕೆಂದು ಬೆಂಗಳೂರು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರವರಿಗೆ ಬರೆದಿರುತ್ತಾರೆ. ಅದನ್ನನುಸರಿಸಿ ಡಿಪ್ಯುಟಿ ಕಮೀಷನರವರು ತಮ್ಮ ಜನರಲ್ ಅಸಿಸ್ಟೆಂಟರಾದ ಮಿ|| ಆಣ್ಣಾಜೀರಾಯರವರನ್ನು ದೇವನಹಳ್ಳಿಗೆ ಕಳುಹಿಸಿರುವ ಬಗ್ಗೆ ಕಳುಹಿಸಿದಾರೆಂತಲೂ ತಿಳಿಯಬರುತ್ತದೆ. ಇದರ ಪರಿಣಾಮ ಮುಂದೆ ತಿಳಿಸುವೆವು.

Obituary.—ಶ್ರೀರಂಗಪಟ್ಟಣದ ಮುನಸಿಫರಾಗಿದ್ದ ಮ|| ರಾ|| ನರಸಿಂಹಯ್ಯಂಗಾರ್ಯರವರು ಕಳೆದ ಮಂಗಳವಾರ ಪ್ರಾತಃಕಾಲದಲ್ಲಿ ವಾಂತಿಭೇದಿ ಯಿಂದ ಮೃತಪಟ್ಟರೆಂದು ಕೇಳಿ ಬಹಳ ವಿಷಾದಿಸುವೆವು. ಇವರು ಬಹುಕಾಲ ನಗರ ಡಿವಿಜನ್ನಲ್ಲಿ ಮುನಸಿಫರಾಗಿದ್ದು ಈಚೆಗೆ ಅಷ್ಟಗ್ರಾಮ ಡಿವಿಜನಿಗೆ ವರ್ಗಮಾಡಲ್ಪಟ್ಟರು. ಇವರು ಬಹಳ ಸಮರ್ಥರಾಗಿಯೂ ವಿನೀತರಾಗಿಯೂ ನಿಸ್ಪೃಹರಾಗಿಯೂ ಇದ್ದದರಿಂದ ಇಂಥಾವರಿಗೆ ಮಧ್ಯ ವಯಸ್ಸಿನಲ್ಲಿ ಅಕಾಲಮೃತ್ಯುವು ಪ್ರಾಪ್ತವಾದದಕ್ಕಾಗಿ ಬಹಳ ವಿಷಾದಿಸುವೆವು. ಇವರ ಸಹೋದರರಲ್ಲಿ ಒಬ್ಬರು ಅಸಿಸ್ಟೆಂಟರಾಗಿಯೂ ಮತ್ತೊಬ್ಬರು ಮುನಸಿಫರಾಗಿಯೂ ಈ ಗವರ್ನಮೆಂಟ್ ನೌಕರಿಯಲ್ಲಿರುತ್ತಿದಾರೆ. ಈ ದೊಡ್ಡಮನುಷ್ಯರ ಮರಣ ಪ್ರಯುಕ್ತ ಮೈಸೂರಲ್ಲಿ ಮುನಸಿಫ್ ಕೋರ್ಟ ಮತ್ತು ಸಬ್‌ಜಡ್ಜ್ ಕೋರ್ಟ ಕಳೆದ ಮಂಗಳವಾರದದಿನ ಮುಚ್ಚಲ್ಪಟ್ಟಿದ್ದವು.

Photograph—ದರ್ಬಾರ್ ಬಕ್ಷಿಯರಾದ ರಾಯಬಹದೂರ್ ಎ. ನರಸಿಂಹಯ್ಯಂಗಾರ್ಯರವರಿಗೆ ಇಲ್ಲಿನ ಸ್ತ್ರೀಯರ ಪುರೋಭಿವೃದ್ಧಿಯ ವಿಷಯದಲ್ಲಿ ಇರತಕ್ಕ ಉತ್ಸಾಹವು ಲೋಕೋತ್ತರವಾದದ್ದು. ಫೋಟೋಗ್ರಾಫಿನ ವಿಷಯದನ್ನು ಸ್ತ್ರೀಯರಿಗೂ ತಿಳಿಸಬೇಕೆಂಬ ಉದ್ದೇಶದಿಂದ ಮೆ|| ಅಂಜನಾಹೇಬರನ್ನು ಕೇಳಿಕೊಂಡು ಶ್ರೀಮತಿ ಮಹಾರಾಣಿಯವರ ಬಾಲಿಕಾಪಾಠಶಾಲೆಯಲ್ಲಿನ ವಿದ್ಯಾರ್ಥಿನೀಯವರಿಗೋಸ್ಕರ ಕಳೆದ ಮಂಗಳವಾರ ಪ್ರಾತಃಕಾಲದಲ್ಲಿ ಟರ್ನರ್ ಹಾಲಿನಲ್ಲಿ ಪ್ರತ್ಯೇಕವಾಗಿ ಒಂದು ಉಪನ್ಯಾಸವನ್ನು ಮಾಡಿಸಿ ಫೋಟೋಗ್ರಾಫಿನ ವಿಷಯವನ್ನು ತಿಳಿಸಿದರು. ಆಕಾಲದಲ್ಲಿ ವೆಸ್ಲಿಯನ್ ಮಿಷನ್ ಬಾಲಿಕಾ ಪಾಠಶಾಲೆಯಲ್ಲಿನ ದೊಡ್ಡ ವಿದ್ಯಾರ್ಥಿನೀಯರನ್ನೂ ಕರಿಸಿದ್ದರು. ಯೆಂದು ಮೈಸೂರು ಹೆರಾಲ್ಡ್ ಪತ್ರಿಕೆ ಹೇಳುತ್ತದೆ. ಇದೇರೀತಿ ಈದಿನ ಸಾಯಂಕಾಲ ಸೆಂಟ್ರಲ್ ಕಾಲೇಜ್ ವಿದ್ಯಾರ್ಥಿಗಳಗೂ ಇತರ ಸ್ಕೂಲ್ ವಿದ್ಯಾರ್ಥಿಗಳಿಗೂ ಸದರೀ ಯಂತ್ರಸ್ವರೂಪವನ್ನು ಮೆ|| ಅಂಜನಾಯರು ಉಪನ್ಯಾಸ ಮಾಡಿ ತೋರಿಸುವರೆಂದು ಕೇಳುತ್ತೇವೆ. ಇಲ್ಲಿನ ಹಲವ್ ನಿವಾಸಿಗಳಿಗೆ ಆ ಯಂತ್ರವ್ಯಾಪಾರವನ್ನು ನೋಡಬೇಕೆಂಬ ಕುತೂಹಲವು ಬಹಳವಿರುವದರಿಂದ ಸದರೀ ಸಾಹೇಬರವರು ಇಲ್ಲಿಯೂ ಒಂದಾವರ್ತಿ ಜನರು ಕರೆಯಿಸಿ ತೋರಿಸಿದರೆ ಚನ್ನಾಗಿರುವದು.

Excise Department—ಮೈಸೂರು ಸೀಮೆಯಲ್ಲಿ ಅಬಕಾರಿ ಹುಟ್ಟುವಳಿಯನ್ನು ವೃದ್ಧಿಪಡಿಸಬೇಕೆಂಬ, (ಅಂದರೆ ಜನರಿಗೆ ಮದ್ಯಪಾನದಲ್ಲಿ ಸೌಕರ್ಯವನ್ನುಂಟುಮಾಡಿ ಪ್ರೋತ್ಸಾಹ ಪಡಿಸಬೇಕೆಂಬ) ತಾತ್ಪರ್ಯದೊಡನೆ ಮೈಸೂರು ಸರ್ಕಾರದವರು, ಸದರೀ ಇಲಾಖೆಯನ್ನು ಪ್ರಬಲಪಡಿಸಿ ಅದಕ್ಕಾಗಿ ಸಬ್ ಕಮಿಷನರರನ್ನು ನೇಮಕಮಾಡಿ ಅವರಿಗೆ ಭಾರೀ ಶಿಬ್ಬಂದಿಗಳನ್ನಿತ್ತು ಅವರ ಪಲವ್ ವಗ್ಗೆರೆ ಬಗ್ಗೆ ಕಳೆದ ಏಪ್ರಿಲ್ ತಿಂಗಳಲ್ಲಿ ಆಗುತಲಿದ್ದ ೫೫,೭೭೦ ರೂಪಾಯಿಗಳ ಖರ್ಚನ್ನು ೬೮,೮೭೭ ರೂಪಾಯಿಗಳ ತನಕ ಜಾಸ್ತೀ ಮಾಡಿದರಲ್ಲದೆ ಇನ್ನೂ ಶಿಬ್ಬಂದಿಗಳನ್ನು ಹೆಚ್ಚಿಸಿ ಅವರವರಿಗೆ ಪಗಾರ್ ಇಜಾಫೆ ಮಾಡಬೇಕೆಂಬ ಸಂಕಲ್ಪವುಳ್ಳವರಾಗಿದಾರೆಂತಲೂ, ಸದರೀ ಇಲಾಖೆಯ ಮೂಲಕ ಸಾಲೀಯಾನಾ ಹುಟ್ಟುವಳಿ ಯಾಗುವ ೩೮,೫೫೦ ರೂಪಾಯಿಗಳು ಜಾತಾ ಉಳಿದ ೯,೫೦೦ ರೂಪಾಯಿಗಳನ್ನು ಗವರ್ನಮೆಂಟಿನವರು ಪ್ರತಿ ಸಂವತ್ಸರದಲ್ಲಿಯೂ ಪ್ರೊವಿನ್ಷಿಯಲ್ ರೆವಿನ್ಯೂವಿನಿಂದ ಕೊಡುತಿರುವರೆಂತಲೂ ತಿಳಿಯಬರುತ್ತದೆ. ಈ ಬಾಬ್ತಿನಲ್ಲಿ ಗವರ್ನಮೆಂಟಿನವರು ತಮ್ಮ ಕೈಯಿಂದ ಹೆಚ್ಚು ಹಣಗಳನ್ನು ಹೋಗಲಾಡಿಸಿಕೊಂಡಾಗ್ಯೂ ಇದರಿಗೆ ಅದೊಂದು ನಷ್ಟರೂಪವಾಗಿ ತೋರದಿರುವದು ಪ್ರಜೆಗಳ ಭಾಗ್ಯವೆಂತಲೇ ಭಾವಿಸಬೇಕಾಗಿರುತ್ತದೆ.

THE MYSORE GAZETTE
ಮೈಸೂರು ಗೆಜೆಟ್.

ಶ್ರೀಮನ್ ಮಹಾರಾಜರಾಜಶ್ರೀಯವರ ಸರ್ಕಾರದಿಂದ ಕೊಡಲ್ಪಟ್ಟ ಇಷ್ತಿಹಾರನಾಮೆಗಳು

ನಂ|| ೪೯. ಮೈಸೂರು, ತಾ|| ೨೦ನೇ ಜೂನ್ ೧೮೯೦—ಘನವನ್ನೈತ್ರಿದ ಶ್ರೀಮನ್ಮಹಾರಾಜರವರು ದಿವಾನ್ ಮ|| ಕೆ. ಶೇಷಾದ್ರಿ ಅಯ್ಯರವರಿಗೆ, ೧೮೯೦ನೇ ಇಸವಿ ಜೂಲೈ ಗುರ್ರೀ ಲಾಗಾಯತು ಮೂರು ತಿಂಗಳಪ್ರಿವಿಲೇಜ ರಜಾವನ್ನು ಮಂಜೂರ್ಮಾಡಿರುವರಲ್ಲದೆ, ಚೀಫ್‌ಕೋರ್ಟ್‌ಜಡ್ಜಿಯವರಾದ ಮ|| ಟಿ. ಆರ್. ಎ. ತುಂಬುಚೆಟ್ಟಿರವರನ್ನು ಮ|| ಶೇಷಾದ್ರಿ ಅಯ್ಯರವರ ಗೈರುಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ದಿವಾನ್ ಕೆಲಸವನ್ನು ಆಕ್ಟಿಂಗಿ ತರೀಕ್ ನೋಡುವಂತೆ ನೇಮಕಮಾಡಿರುತ್ತಾರೆ.

ನಂ|| ೪೦ ತಾ|| ೨೧ನೇ ಜೂನ್ ೧೮೯೦—೧೮೯೦ನೇ ಇಸವಿ ಜೂನ್ ೧೦ನೇ ತಾರೀಖಿನಿಂದ ಹರಾನ್ಹದಲ್ಲಿ ಮೈಸೂರು ಟೌನ್‌ಮ್ಯಾಜಿಸ್ಟ್ರೇಟ ಕೋರ್ಟಿನ ಚಾರ್ಜನ್ನು ಮ|| ಬಿ ತಿರುಮಲಾಚಾರ್ಯರವರು ಮ|| ಬಿ ಕೃಷ್ಣಯ್ಯಂಗಾರ್ಯರಿಗೆ ಒಪ್ಪಿಸಲು ಅವರಿಂದ ತೆಗೆದುಕೊಂಡಿರುತ್ತಾರೆ.

ನಂ|| ೪೧. ತಾ|| ೨೧ನೇ ಜೂನ್ ೧೮೯೦—ಗುಂಡಲ್‌ಪೇಟೆತಾಲ್ಲೂಕ ಅಮಲ್ದಾರ್ ಇವರಿಗೆ ೧೮೯೦ನೇ ಇಸವಿ ಫೆಬ್ರವರಿ ೨೭ನೇ ತಾರೀಖು ೪೭ನೇ ನಂಬರುಳ್ಳ ಇಷ್ತಿಹಾರ್ ಮೂಲಕ ಮೆಡಿಕಲ್ ಸರ್ಟಿಫಿಕೇಟಿನಮೇಲೆ ಕೊಡಲ್ಪಟ್ಟಿದ್ದ ರಜಾ ಇನ್ನೊಂದು ತಿಂಗಳ ತನಕ ಜಾಸ್ತೀ ಮಾಡಲ್ಪಟ್ಟಿರುತ್ತದೆ.

ನಂ|| ೪೨ ಹಾಸನ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಸರ್ಜನ್ ಮ|| ಸಿ. ಎನ್ ಅಚ್ಯುತರಾವ ರವರು, ಮೈಸೂರು ಗವರ್ನಮೆಂಟ್ ಸೀನಿಯರ್ ಸರ್ಜನ್‌ರವರ ಕಮ್ಮಿಷನರವರ ಚೀಫ್ ಅಸಿಸ್ಟೆಂಟ್‌ಕೆಲಸವನ್ನು ಆಕ್ಟಿಂಗ್‌ತರೀಕ್ ನೋಡತಕ್ಕಬಗ್ಗೆ ಬೆಂಗಳೂರುಡಿಸ್ಟ್ರಿಕ್ಟಿಗೆ ವರ್ಗಮಾಡಲ್ಪಟ್ಟಿರುತ್ತಾರೆ. ೧೮೯೦ನೇ ಇಸವಿಮೇ ೨೯ನೇ ತಾರೀಖಿನ ಪೂರ್ವಾಹ್ನದಲ್ಲಿ ಸದರೀಯವರು ಮೇಲ್ಕಂಡ ಕೆಲಸದ ಚಾರ್ಜನ್ನು ತೆಗೆದುಕೊಂಡಿರುತ್ತಾರೆ.

ನಂ. ೪೩—ಹೊಸಕೋಟೆ ತಾಲ್ಲೂಕ್ ಅಮಲ್ದಾರ್‌ರವರು ೧ ತಿಂಗಳ ಪ್ರಿವಿಲೇಜ್ ರಜಾಮೇಲೆ ಗೈರ್‌ಹಾಜರಿರುವದರಿಂದ ಸದರೀ ತಾಲ್ಲೂಕ ಶಿರಸ್ತೇದಾರ್ ಸುಬ್ಬರಾಯರವರು ಅತಾಲ್ಲೂಕಿನಚಾರ್ಜಿನಲ್ಲಿರುವಕಾಲದಲ್ಲಿ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಹುಗಮಿಯಾಗಿ ಕೊಡಲ್ಪಟ್ಟಿರುತ್ತವೆ.

ನಂ. ೪೪ ತಾ|| ೨೩ನೇ ಜೂನ್ ೧೮೯೦—ಹೆಗ್ಗಡದೇವನ ಕೋಟೆ ತಾಲ್ಲೂಕ ಆಕ್ಟಿಂಗ್ ಅಮಲ್ದಾರ್ ಕುಮಾರಸ್ವಾಮಿನಾಯಕ್ ಬಿ. ಎ. ಯವರು ಹೆಡ್ಸ್ ಅಮಲ್ದಾರರಾಗಿ ಕಾಯಂ ಮಾಡಲ್ಪಟ್ಟು ೧೮೯೦ನೇ ಇಸವಿ ಫೆಬ್ರವರಿ ಗುರ್ರೀ ಲಾಗಾಯತು ತಾತ್ಕಾಲಿಕವಾದ ಅಮಲ್ದಾರರಾಗಿದ್ದಂತೆ ವಿಗಣಿಸಲ್ಪಟ್ಟಿರುವರು

ನಂ. ೪೫—ಮ|| ಸಿ ಕೃಷ್ಣಯವರು ೧೮೯೦ನೇ ಇಸವಿ ಜೂನ್ ೭ನೇ ತಾರೀಖಿನ ಪೂರ್ವಾಹ್ನದಲ್ಲಿ ನಗರದಡಿವಿಜನ್ ಸಿವಿಲ್‌ಕೋರ್ಟು ಚಾರ್ಜನ್ನು ವಹಿಸಿದರು.

ನಂ|| ೬ ತಾ|| ೧೯ನೇ ಜೂನ್ ೧೮೯೦—ಸೆ ೧೮೯೦ನೇ ಇಸವಿ ಜೂನ್ ೧೨ನೇ ಮಧ್ಯಾಹ್ನ ಕುಕ್ಕವಾಡದಿನಡಿವಿಜನ್ನದಲ್ಲಿ ಮ|| ಜಾನ್ ವೇಸ್, ಎಂ. ಎ ಯವರು ಮೈಸೂರು ಮಹಾರಾಜರವರ ಕಾಲೇಜಿನಚಾರ್ಜನ್ನು ತೆಗೆದುಕೊಂಡಿರುತ್ತಾರೆ

ಮೈಸೂರು ಮರಮತಿ ಇಲಾಖಾ ಇಂಜನಿಯರ್ ಗ್ರೇಡಿನಲ್ಲಿ ಈ ಕೆಳಗೆ ನಮೂದಿಸುವ ತಾರೀಖ್‌ಗಳ ಲಾಗಾಯತು ಇದರಡಿ ಕಂಡ ಬಡ್ತಿಗಳು ಮಾಡಲ್ಪಟ್ಟಿರುತ್ತವೆ ಏನೆಂದರೆ—

ಚಿತ್ರದುರ್ಗ ಡಿವಿಜನ್, ಮ|| ಬಿ. ರಂಗರಾಯರವರು ೩ನೇ ಗ್ರೇಡ್ ಅಸಿಸ್ಟೆಂಟ್ ಇಂಜನಿಯರ್ ಸ್ಥಾನದಿಂದ ೨ನೇ ಗ್ರೇಡ್ ಅಸಿಸ್ಟೆಂಟ್ ಇಂಜನಿಯರ್ ಕೆಲಸಕ್ಕೆ, ೧೮೮೯ ಇಸವಿ ಡಿಸೆಂಬರ್ ೩೧ನೇ ತಾರೀಖು ಲಾಗಾಯತು ಬಡ್ತೀ ಮಾಡಲ್ಪಟ್ಟ ಮ|| ಎ ಗೋವಿಂದಾಚಾರ್ಯರವರಿಗೆ ಬದಲಾಗಿಯೂ, ಮೈಸೂರು ಡಿವಿಜನ್, ಮ|| ಪಿ. ಎ. ನಾರಿಸ ಯವರು ೩ನೇ ಗ್ರೇಡ್ ಅಸಿಸ್ಟೆಂಟ್ ಇಂಜನಿಯರ್ ಕೆಲಸದಿಂದ ೨ನೇ ಗ್ರೇಡ್ ಇಂಜನಿಯರ್ ಕೆಲಸಕ್ಕೆ ಮೇಲೆ ಕಂಡ ತಾರೀಖು ಲಾಗಾಯತು ಸದರೀ ಪಿ. ರಂಗರಾಯರವರಿಗೆ ಬದಲಾಗಿಯೂ ಬಡ್ತೀ ಮಾಡಲ್ಪಟ್ಟಿರುತ್ತಾರೆ

SUMMARY OF NEWS
ವೃತ್ತಾಂತಸಂಗ್ರಹವು

ಉದ್ಯೋಗಗಳ ಲಕ್ಷಣವನ್ನು ಸಕಲರಿಗೂ ತೋರ್ಪಡಿಸುವದಕ್ಕಾಗಿ ಲೀಡ್ಸ್ ದಲ್ಲೀ ಬೋಂಬಾಯಿಪಟ್ಟಣದಲ್ಲಿ ಶಾಶ್ವತವಾಗಿರುವಂತೆ ಒಂದು ವಸ್ತುಪ್ರದರ್ಶನ ಶಾಲೆಯನ್ನು ಸ್ಥಾಪಿಸಬೇಕೆಂದು ಸೂಚಿಸಿರುವರು.

ಕಲ್ಕತ್ತೆಯಲ್ಲಿರುವ ಮರ್ಕೆಂಟೈಲ್ ಬ್ಯಾಂಕಿನಲ್ಲಿ ೧೫ ವರುಷಗಳಿಂದ ಕ್ಯಾಷ್‌ಕೀಪರಾಗಿದ್ದ ಕರ್ಮಚಾರಿ ಸೆನ್ ಎಂಬುವರು ಈ ಮಧ್ಯೆ ಸದರೀ ಬ್ಯಾಂಕಿನಲ್ಲಿ ಸುಮಾರು ನಾಲ್ಕುಲಕ್ಷ ರೂಪಾಯಿಗಳವರಿಗೆ ಅಪಹರಿಸಿಕೊಂಡು ಪರಾರಿಯಾದರೆಂದು ತಿಳಿಯಬರುತ್ತೆ.

ಈಚೆಗೆ ಕಲ್ಕತ್ತೆ ಪಟ್ಟಣದಲ್ಲಿ ಬಿದ್ದ ಮಳೆಯ ರಭಸವು ತಮ್ಮ ನಿಂತ ವತ್ತರಿಂದ ಹೊರಬರಲಾರದೆ ಕಿನ್ನುತನ ನಗರಗಳನ್ನು ಕದ್ದುಕೊಂಡ ಸಂಗತಿಯು ಮೇಜಿಸ್ಟ್ರೇಟರಲ್ಲಿ ವಿಚಾರಣೆ ಆಗಿ ಅವರಿಗೆ ೯ ತಿಂಗಳು ಕಠಿಣಶಿಕ್ಷೆಯಾಯಿತು.

ಅಮೇರಿಕಾದೇಶದ ಸ್ತ್ರೀಯರು, ಹಿಂದೂ ಸ್ತ್ರೀಯರಂತೆ ಸೀರೆಯನ್ನುಡಲು ಪ್ರಾರಂಭಿಸಿರುವರು ಹಿಂದುಗಳಲ್ಲಿ ಪುರುಷರು ಯುರೋಪಿಯರಂತೆ ವಸ್ತ್ರವನ್ನು ಧರಿಸಲು ಆರಂಭಿಸಿದರೆ, ಅಮೇರಿಕಾದವಲ್ಲ ಸ್ತ್ರೀಯರು ಹಿಂದುಗಳಂತೆ ಸೀರೆಯನ್ನುಡುವದು ಆಶ್ಚರ್ಯವಾಗಲಾರದು.

ಬಂಗಾಳದಲ್ಲಿರುವ ಹಿಂದಾನೆಂಬ ಮುದ್ರಾಕ್ಷರಶಾಲೆಯಲ್ಲಿ ೯೫ ವರುಷ ವಯಸ್ಸಿನವರಿಗಿಂತಲೂ ಹೆಚ್ಚು ಶಾಕಕಕ್ಕೆ ಕೆಲಸದಲ್ಲಿದ್ದ ಒಬ್ಬನು ೧೦೦ ವರುಷ ವಯಸ್ಸು ಈಚೆಗೆ ಕಳೆದನೆಂದು ತಿಳಿಯಬರುತ್ತದೆ. ಬಹಳ ಕಷ್ಟವಾದ ಅಚ್ಚು ಶಾಕಕಕ್ಕೆ ಕೆಲಸ ಮಾಡತಕ್ಕವನು ಈ ಕಾಲದಲ್ಲಿ ಇಷ್ಟವರುಷ ಜೀವಿಸಿರುವದು ಬಹಳ ಆಶ್ಚರ್ಯ.

ಬೆಳಗಾಂನಲ್ಲಿ ಕೆಲವು ದಿವಸಗಳಕೆಳಗೆ ಒಬ್ಬ ಪಂಚಮರವನು ಹೊಸನುಂಟಾಗಿ ಲಡಕ್ಕೆ ನಾಸ್ತಿತಾಂತ್ರಿ ಮಾಡವೇಕೆಂದು ಕೆಲ್ಪಗಿನ ಬ್ರಾಹ್ಮಣರನ್ನು ವ್ಯಾಪರಿಸಿದನು ದರುವಾರು ಅನುಮಾನ ಬ್ರಾಹ್ಮಣರ ಹೋಗಿ ವಾಸ್ತುಶಾಂತಿಮಾಡಿಸಿ ಅಲ್ಲಿ ಅದಿನಮಾಡಿಕೊಂಡು ಹೋದರೆಂದು "ಚಿಕಿತ್ಸಕ" ಎಂಬ ಪತ್ರಿಕೆಗೆ ಒಬ್ಬ ಬಾತಮಿದಾರನು ತಿಳಿಸಿರುತ್ತಾನೆ

ವಿದ್ಯುಚ್ಛಕ್ತಿಯನ್ನು ಸಮಸ್ತ ಕೆಲಸಗಳಲ್ಲಿಯೂ ಪ್ರಯೋಗಿಸಿ ಅಲ್ಪಕಾಲದಲ್ಲಿ ಮಹತ್ಕಾರ್ಯವನ್ನು ದೊರೆಯುವದು ಅಮೇರಿಕಾ ದೇಶೀಯರ ಸ್ವಭಾವವಾಗಿರುವದೆಂದು ಸಮಸ್ತರಿಂದಲೂ ಎಣಿಸಲ್ಪಟ್ಟಿರುವದು, ಆದರೆ, ಕೈಗಾರಿಗಳನ್ನು ವಿದ್ಯುಚ್ಛಕ್ತಿಯಿಂದ ನಡೆಸುವ ವಿಷಯದಲ್ಲಿ ರಷ್ಯಾ ದೇಶೀಯರು ತಾವೇ ಅಮೇರಿಕಾ ದೇಶೀಯರಿಗೆ ಮೇಲು ಕಾರ್ಯವನ್ನು ಹಾಕಿಕೊಂಡಂತೆ ತೋರುತ್ತದೆ. ಸೇಂಟಪೀಟರ್ಸ್‌ಬರ್ಗ್‌ನಿಂದ ಅರ್ಕೆಂಜಲ್ ಎಂಬ ಸ್ಥಳಕ್ಕೆ ಸುಮಾರು ೩೦೦ ಮೈಲಿಗಳು, ಮೈಲಿಗಕ್ಕೆ ಟಿಸ ನಿನ ರಸ್ತಾಮಿಗಳಂತೆ ವಿದ್ಯುಚ್ಛಕ್ತಿಯಿಂದ ಕೈಗಾರಿಗಳು ನಡೆಯಲನುಕೂಲಿಸುವ ಮಾರ್ಗವನ್ನು ರೆಯಾರುಮಾಡುವದಕ್ಕಿರುವರು

ನ್ಯೂಯಾರ್ಕ್ ಪಟ್ಟಣದಲ್ಲಿ ಗುರುಟಕ್ಕರ್‌ರವರು ತಮ್ಮ ಕಾರ್ಯಸಿದ್ಧಿಯಾಗಲು ಒಂದು ಸಂಘವನ್ನು ಕಾಯುವವನ್ನು ಹುಡುಕಿರುವರು ಜನರು ದಾರಿಯಲ್ಲಿ ಹೋಗುತ್ತಲಿರುವಾಗ್ಗೆ ಆವಶ್ಯಕತೆ ಆಗಿ ಒಂದು ಜೋಬಿಗೆ ಕೈಯನ್ನು ಹಾಕಿದ ಪಕ್ಷದಲ್ಲಿ ಮಾಲೀಕನಿಗೆ ತಿಳಿದು ರಮ್ಮ ಆರಾಮಗವಾಗಲೂ ಆಗಬಹುದು. ಅವರ ನೂತನ ಉಪಾಯವೇನೆಂದರೆ,—ದಾರಿಯಲ್ಲಿ ಜನಭರಿತವಾದ ಸ್ಥಳದಲ್ಲಿ ಒಬ್ಬ ಮನುಷ್ಯನ ಬಟ್ಟೆಗೆ ಕರ್ಲೋರೀನ್ ಎಸ್ಸೆಯನ್ನು ಚಿಲ್ಲಿ ಹಿಡಿದಕಷ್ಟಿಯಿಂದ ಪಕ್ಕದ ಒಪೊಳ ಪತ್ರಿಕೊಂಡವಾಲದಲ್ಲಿ ಮಾಲೀಕನಿಗೆ ಸಹಾಯವನ್ನುಮಾಡಿ ಚೀಟಿಯನ್ನು ಅರಿಸುವ ಕ್ರಮದಿಂದ ಒಂದು ಏರ್ಪಾಡನ್ನಿಟ್ಟದನ್ನು ಅವರೆ ರಿರುವರು. ಆದರೆ ಈ ಕೆಲಸವನ್ನು ಮಾಡುವವರಲ್ಲಿ ಇದುವರೆಗೂ ಯಾರೂ ಸಿಕ್ಕಲಿಲ್ಲ. ಆದಿನದಲ್ಲಿ ಇಲ್ಲಿನವರು ಜಾಗರೂಕರಾಗಿರಬೇಕಿದ್ದು

ಈಗ ಬ್ರಾಹ್ಮಣಜಾತಿಯಲ್ಲಿ ಒಂದು ಹೀನತವರು ಐನಕ್ಯಾಂಡಾಧೀಪತಿಯವರಿಗೆ ಸಲ್ಲಿಸಿಕೊಳ್ಳ ಪ್ರಕಾರ ಸಂಪ್ರದಾಯಗಳು ಸೂರಾರು ವರುಷಗಳಿಂದ ನಿರುಪಿಕ್ಕಾಗಿರುವದು ಸರಿಯಷ್ಟೆ ಈ ವಿಷಯದಲ್ಲಿ ಸೂರತ ಜಿಲ್ಲೆಯಲ್ಲಿರುವ ಮೋಟಬೀಂಬ ಗ್ರಾಮದಲ್ಲಿರುವ ಬ್ರಾಹ್ಮಣರಲ್ಲಿ ಒಬ್ಬರು ಎಂಬ ಖ್ಯಾತಿ ದನವರಲ್ಲಿ ಸಂಬಂಧ ಬೆಳಸಿಕೊಂಡು ನಿಷ್ಕ್ರಯಿಸಿಕೊಂಡಿರಾರಂತೆ. ಆದರೆ ಈ ಗ್ರಾಮಕ್ಕಿಗೆ ಮೋಟ ಯಾಬಂದಾಗಿ ಬೇಸರು ತವರು ಸ್ವಾಭಾವಿಕ ವಿದ್ವತ್ತಾಗಿಯಾಗಿಯೂ ವಿದ್ಯಾವಂತರಾಗಿಯೂ ಅನೇಕರು ಗವರ್ನಮೆಂಟು ನೌಕರರಾಗಿಯೂ ಇದ್ದಾರೆ. ಇವರೆಲ್ಲರೂ ಏಕೀಭವಿಸಿ ಬ್ರಾಹ್ಮಣ ಸಮುದಾಯವನ್ನು ಎಲ್ಲರೂ ಒಬ್ಬರಿಗೊಬ್ಬರು ಸಂಬಂಧಗಳನ್ನು ಬೆಳಸುವುದಾಗಿ ಜೀವನಾಧಾರ ಮಾಡಿಕೊಳ್ಳಬೇಕಲ್ಲದೆ ನಮ್ಮತಮ್ಮ ಹುಣಗಳಲ್ಲಿರುವ ವೃದ್ಧರಿಂತೂ ಇದು ಸರಿಯಾಗಿದೆಯೆಂದು ಅನ್ನಿಸಿಕೊಂಡಿರುವರು.—ಸ್ವ. ಬಿ.

EXTRACT

ಇದುವರೆವಿಗೂ ಮರಣಾನಂತರಕ್ಕೆ ಶಕ್ತಿಯ ಮನುಷ್ಯನಲ್ಲಿ ಮಗ್ಗ ರಾಗ, ನಾಡಿಗಳಿಗೂ, ಕಿರುಮಿರೆಗಳಿಗೂ, ಎಷ್ಟೊ ಬಹು ದಾಗಿರುವ ದು ಯ ರ ಆ ಅನೇಕ ವಿಧ ಪ್ರ ನಿಗಳಲ್ಲಿ ಪಾಠವಾಗುವುದರ ಮನುಷ್ಯನ ಗಾ ಸ್ಪರ್ಶಪ್ರ ಸರ್ಧನ ಆಗುವನು. ಅದ, ದೊ ಪ್ರದ್ಯುನ್ನ ಯುಂಬನೇ ಸ್ವರವನ್ನು ಮಾಡಿ ಹೀನವಾಕ್ಕೆ ಬುದು ಬಂದ್ರು ಈಗ ದೇಶ ಗಾಗಿರುವದು. ಈಗ ಎರಡು ವರ್ಷಗಳ ಕೆಳಗೆ ಮ ಎರ್ಡಸನ, ಈ ಯಂತ್ರವನ್ನು ನಿರ್ಮಿಸಿ, ಅದರಲ್ಲಿ ಒಂದನ್ನು ಮ ಅರ್ ಸಿ ಸಿ ಯ ಬೀಯಾ ದೇಶಕ್ಕೆ ಬಂದು ಕಳುಹಿಸಿ. ಬಂದ, ಅದರ ಪ್ರಯೋಜನವನ್ನು ಇಲ್ಲಿನವರಿಗೆ ತಿಳಿಸುತ್ತಲಿರುವರು. ಕಳೆದ ಶುಕ್ರವಾರ ಸಾಯಂಕಾಲ ಮೈಸೂರು ಶ್ರೀಮನ್ಮಹಾರಾಜರವರ ಅಪ್ಪಣೆ ಮೇರೆಗೆ ಮ|| ಅರ್ ಸಾಹೇಬರು, ಅರಮನೆಯಲ್ಲಿ ಈ ಯಂತ್ರದ ವಿಷಯವಾಗಿ ಅದ್ಭುತವಾದ ಒಂದು ಉಪನ್ಯಾಸವನ್ನು ಮಾಡಿ, ಈ ಯಂತ್ರವು ನಮಗಿರುವ ಪ್ರಯೋಜನವನ್ನು ವಿಶದವಾಗಿ ತಿಳಿಸಿದರು. ಮೈಸೂರು ಪಟ್ಟಣದಲ್ಲಿ ಪ್ರಸಿದ್ಧರಾಗಿರತಕ್ಕ ಸಮಸ್ತ ಯೂರೋಪಿಯನ್ನರೂ ದೊಡ್ಡ ಮನುಷ್ಯರೂ, ನೇಟಿವ್ ಅಧಿಕಾರಿಗಳೂ ಕೂಡ, ಅರಮನೆಗೆ ಕರೆಯಲ್ಪಟ್ಟಿದ್ದರು. ಫೋನೋಗ್ರಾಫ್ ಎಂಬುವದು ಬಹುಚಮತ್ಕಾರವಾಗಿರುವದಲ್ಲದೆ ಅದನ್ನು ಉಪಯೋಗಿಸತಕ್ಕ ರೀತಿಯು ಬಹು ಸರಳವಾಗಿರುವದು. ನಾವು ಯಾವ ಶಬ್ದವನ್ನು ಮಾಡಿದಾಗ್ಯೂ, ಅದನ್ನು ಚರ್ಮದವರಕ್ಕೆ ಭಾಗದಲ್ಲಿ, ಸೂಚೆಯಿಂದ ಒಂದು ಪದಾರ್ಥವನ್ನು ಚುಚ್ಚಿದ ರೀತಿಯಲ್ಲಿ ಆಗುವ ಬದಲಾಗಿ ನಾವು ನುಡಿಯತಕ್ಕ ಪದಾದಿಗಳಿಗೆ ಕ್ಕನುಗುಣವಾಗಿ, ಆ ಯಂತ್ರದಿಂದ ಬರತಕ್ಕ ಧ್ವನಿಯೂ ಕೂಡ ಚಿತ್ತರವಾಗಿಯೂ ಅಥವಾ ತಗ್ಗಾಗಿಯೂ ಇರುವದು ಸ್ತೋತ್ರಗೀತ ನಲ್ಲಿ ನಾವು ಮಾಡಿದ ಶಬ್ದಗಳೆಲ್ಲಾ ಮನುಷ್ಯನ ಕರ್ಣ ದಂತೆ ಫ (Wax drum) ಯಂತಿರುವ ಒಂದು ಕನ್ನಡಿಯನ್ನು ಸೇರಿ, ಅಲ್ಲಿಂದ ಮುಂದೆ ಪರಿಚ್ಛೇದವಾಗಿರುವ ಒಂದು ಮೇಣಕ್ಕೆ ತಲುಪುವಂತೆ ಮಾಡಿರುವರು. ಈ ಯಂತ್ರವು ಕೆಲಸಕ್ಕೆ ಉಪಯೋಗಿಸುವ ಮಾಡಲು ಸಿದ್ಧಪಡಿಸಿಕೊಂಡಮೇಲೆ ಅಲ್ಲಿ ಮಾಡಿದ ಧ್ವನಿಯೊಂದು ತಪ್ಪದನ್ನು ಸಂಪೂರ್ಣವಾಗಿ ಹಿಂತಿರುಗಿಸುವದು ಹ್ಯಾಗೆಂದರೆ, —ಕಳೆದ ಶುಕ್ರವಾರ ರಾತ್ರಿ ಮ|| ಅರ್ ಸಾಹೇಬರು ಆ ಯಂತ್ರದಲ್ಲಿ ಕೆಮ್ಮಿದರು, ಶೀಟಿಯನ್ನು ಹಾಕಿದರು ನಕ್ಕರು; ಕೊನೆಗೆ ಒಂದು ಉಪನ್ಯಾಸವನ್ನು ಮಾಡಿದರು. ಇನ್ನು ಸ್ವಲ್ಪ ಹೊತ್ತಿನ ಮೇಲೆ ಆ ಯಂತ್ರವೂ ಕೂಡ ಕೆಮ್ಮಿ ಶೀಟಿಯನ್ನು ಹಾಕಿ, ನಕ್ಕು, ಅದರಂತೆಯೇ ಉಪನ್ಯಾಸವನ್ನು ಮಾಡಿತು. ಅನಂತರ ಶ್ರೀಮನ್ಮಹಾರಾಜರವರ ಅಪ್ಪಣೆಯನುಸಾರವಾಗಿ ಮ|| ಶೇಷಣ್ಣನವರು ಕನ್ನಡದಲ್ಲಿಯೂ, ಹಿಂದೂಸ್ಥಾನಿಯಲ್ಲಿಯೂ ಗಾನವನ್ನು ಮಾಡಿದರು. ಸ್ವರವೆತ್ತ ಯಂತ್ರವೂ, ಅದರಂತೆಯೇ ಗಾನವನ್ನು ಮಾಡಿತು. ಕಡೆಗೆ ೩—೬ ಜನ ದೊಡ್ಡ ಮನುಷ್ಯರು ಸುತ್ತಲಿದ್ದ ಸೂಚಕವಾದ ಕರತಲ ಧ್ವನಿಯನ್ನು ಮಾಡಿ ಚಪ್ಪಾಳೆಯನ್ನು ತಟ್ಟಿದರೆ, ಇದೇ ರೀತಿ ನಲ್ಲಿ ಯಂತ್ರವೂ ಕೂಡ ಮಾಡಿತು

ಮುಂದೆ ಈ ಸ್ಪಾ ನೋಗ್ರಾಫ ವಿದ ಆಗ ಉಪಯೋಗಿಸುವ ಅನೇಕವಾಗಿರುವದು ಮಾತ್ರವಲ್ಲದೆ ಮಹಾತ್ಮರಾದವರು ತಪ್ಪು ಸಾಯುವವರಕ್ಕೆ ಪ್ರಯೋಜನ ಎರಡು ಅವರ ಉಪನ್ಯಾಸವನ್ನು (ಆಯಂತ್ರ) ಕ್ಕೆ ಹೇಳಿ ಇಟ್ಟುಕೊಂಡರೆ ನಾವು ವಾಕ್ಯಗಳನ್ನು ಕೇಳಬಹುದು ... ಉಪನ್ಯಾಸವನ್ನು ಕೇಳಬಹುದು ...

ಈ ಆಶ್ಚರ್ಯಯುಕ್ತವಾದ ಯಂತ್ರವು ಮ|| ಎಡಿಸನ್ ಸಾಹೇಬರಿಂದ ನಿರ್ಮಿಸಲ್ಪಟ್ಟಿತು ಇವರು ಈಗ ೪೩ ವರ್ಷಗಳವರೆಗಿನವರು. ಇಷ್ಟು ಚಿಕ್ಕ ಪ್ರಾಯದಲ್ಲೇ ಇವರು ೮೦ ನೂತನ ವಸ್ತುಗಳನ್ನು ನಿರ್ಮಿಸಿರುವರು ಪ್ರಪಂಚದಲ್ಲಿ ಇವರು ಬಹುಪ್ರಸಿದ್ಧರಾಗಿಯೂ ವಿದ್ಯಾವಿಶೇಷರಾಗಿಯೂ ಇದ್ದು ಈಗ ಈ ಲೋಕದಲ್ಲಿರತಕ್ಕ ಮಹನೀಯರಲ್ಲೊಬ್ಬರೆನ್ನಿಸಿಕೊಂಡಿರುವರು ಮಿಸ್ಟರ್ ಅರ್ ಸಾಹೇಬರು ಈ ಯಂತ್ರವನ್ನು ಸಮಸ್ತಜನರಿಗೆಲ್ಲ ತಿಳಿಸುವದಕ್ಕಾಗಿ ಕಳೆದ ಸೋಮವಾರದಿನ ಮೈಸೂರು ಟೌನ್‌ಹಾಲಿನಲ್ಲಿ ಒಂದು ಉಪನ್ಯಾಸವನ್ನು ಮಾಡಿದರು.—ಸ್ವ. ನೆ.

Bangalore :—Printed and published at the Karnataka Press, No. 114, Sultan Market Road, Pettah.—1890

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning

[illegible]

Vol XVII] BANGALORE—MONDAY, JULY 7, 1890 [No 27.

ಸಂಪುಟ ೧೭.] ಬೆಂಗಳೂರು — ಸನ್ ೧೮೯೦ನೇ ಇಸವಿ ಜುಲೈ ೭ ನೇ ತಾರೀಖು ಸೋಮವಾರ. [ಸಂಚಿಕೆ ೨೭.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯು ಚಂದಾ ವರಗಳು,

ಇಂಗ್ಲಿಷ್ ಮತ್ತು ಪತ್ರಿಕೆಯಾಗಳಿಗೆ

[illegible]

[illegible]	8—0—0	9—0—0
[illegible] ,,	9—0—0	10—8—0

ಇಂಗ್ಲಿಷ್ ಬಿಡು ಕನ್ನಡಯಾಗಳಿಗೆ.

[illegible]	4—0—0	5—0—0
[illegible]	5—0—0	6—0—0

[illegible]

ಪ್ರಕಟನೆಯ ರಿವಾಜ್

[illegible] ೦—೨—೦

[illegible] ೦—೧—೦

[illegible]

NOTICE.

VAIDYASARA SANGRAHA

A TREATISE ON THE [illegible] OF HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

[illegible]

ADVERTISEMENTS

ನೋಟೀಸ್

ಇವರಡಿ [illegible] ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು [illegible] ಸದ್ಯವಾಗಿವೆ [illegible]

ಸಂಸ್ಕೃತ ಗ್ರಂಥಗಳು

[illegible]

ಕನ್ನಡ ಗ್ರಂಥಗಳು.

[illegible]

ನೋಟೀಸ್.

[illegible]

ಬೆಂಗಳೂರು [illegible]

ನೋಟೀಸ್.

ಮನೆಗಳಲ್ಲಿ ಗಿಲಿಟ್ ಮಾಡುವದಕ್ಕೆ ಅನುಕೂಲವಾದ ಬೆಳ್ಳಿ ದ್ರಾವಕವು.

[illegible]

ಇದರ ಕ್ರಯ ಸೀಸೆ ೧ಕ್ಕೆ ೩—೮—೦

ಚಿನ್ನದ ದ್ರಾವಕವು

[illegible]

ಇದರ ಕ್ರಯ ಸೀಸೆ ೧ಕ್ಕೆ ೩—೮—೦

[illegible]

ಪ್ರಕಟನೆ

[illegible]

ನಾಟಕ ಕಥಾ ರತ್ನಮಾಲೆ

[illegible]

[illegible] ಬರೆದು ತರಿಸಿಕೊಳ್ಳಬಹುದು. [illegible]

ನೋಟೀಸ.

ದಕ್ಷಿಣ ಮಹಾರಾಷ್ಟ್ರ ರೆಯಿಲ್ವೆ ಕಂಪೆನಿ

ಕೆಲಸಕ್ಕೆ ಬಾರದ ಆಯುದಗಳ ಮತ್ತು ಯಂತ್ರ ಸಾಮಾನುಗಳ ಹರಾಜ್.

ದಕ್ಷಿಣ ಮಹಾರಾಷ್ಟ್ರ ರೆಯಿಲ್ವೆ ಕಂಪೆನಿಯ ಹರಾಜದಾರರು, ಕೆಲಸಕ್ಕೆ ಅನುಕೂಲವಿಲ್ಲದ ಗುದ್ದಲಿಗಳು, ಬನಿಕೆಗಳು, [illegible] ಕಬ್ಬಿಣದ ಮಂಕರಿಗಳು, [illegible] ಕಬ್ಬಿಣದ [illegible] ಆಯುದಗಳ ಪೆಟ್ಟಿಗೆಗಳು, [illegible] ನಾನಾ ಅಳತೆಗಳುಳ್ಳ ಕಬ್ಬಿಣದ [illegible] ಚಕ್ರಗಳ ಯಂತ್ರವು, [illegible] ಇವೆಲ್ಲವು ಸೇರಿ ಕೆಲವು ಅನುಪಯುಕ್ತಗಳಾದ ಆಯುದಗಳೂ ಯಂತ್ರಗಳೂ, ೧೮೯೦ ನೇ ಇಸವಿ ಜುಲೈ ೧೭ನೇ ತಾರೀಖು ಮಧ್ಯಾನ್ಹ ಒಂದು ಘಂಟೆಗೆ, ಬೆಂಗಳೂರು ಸಿಟಿ ಸ್ಟೇಷನ [illegible] ರೆಯಿಲ್ವೆ ಕಟ್ಟಡಗಳ [illegible] ಹರಾಜ್ ಮೂಲಕ ವಿಕ್ರಯಿಸುವರು.

ನಗದು ಹಣ ಹಾಜರ್ಕಾರರಲ್ಲಿ.

ನೋಟೀಸ್.

ಮೈಸೂರು [illegible] ೧೮೯೦ನೇ ಇಸವಿ [illegible] ಅರ್ಜಿದಾರರು

ಸುಬ್ಬಯ್ಯ ವಗೈರೆ.

[illegible]

By the Court,

[illegible] Registrar

ನೋಟೀಸು

ಮೈಸೂರು ಸೀಮೆಯ ಜಿಲ್ಲೆ ಕೋರ್ಟಿನಲ್ಲಿ.
೧೮೯೦ನೇ ಇಸವಿ ಮಿಸಲೇನಿಯಸ್ ಪಿಟಿಸನ್ ನಂ. ೧೧೮/
ಅರ್ಜದಾರರು
ಅಹೋಬಲರಾವ್ ವಗೈರೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—

ಮೇಲ್ಕಂಡ ಅಹೋಬಲರಾವ್ ವಗೈರೇರು ನೆಲಮಂಗಲ ತಾಲ್ಲೂಕು ಮುತ್ತುಕೂರು ಗ್ರಾಮದಲ್ಲಿ ಇರುವ ಶ್ರೀನಿವಾಸ ಪ್ರೇರಿತ ವಿವಾಹಾದಿ ಸಹಾಯಾಬ್ಧಿ ಸಮಾಜದ ಕಂಪೆನಿಯ ಮೆಂಬರ್‌ಗಳಿಂದ ೬ ತಿಂಗಳ ಆಗಾಯಿತು ಕಾಲ್ಸ ವಸೂಲಾಗದೆ ಸರ್ವಿಸ್ ಆಗಿ ಇರುವ ಪಾಲಿಸಿಗಳಿಗೆ ಸಹಾಯ ಕೊಡಲು ಯತ್ನವಿಲ್ಲದ್ದರಿಂದ ಅವರಗಳ ಆಗುವದೆ ಬಹಳವಾಗಿ ಇರುವ ಕಾರಣ ಕಂಪನಿಯನ್ನು ಬಂದ ಮಾಡಿಸಿ ಲಿಕ್ವಿಡೇಟರನ್ನು ನೇಮಕ ಮಾಡಿಸಬೇಕೆಂದು ವಗೈರೆ ಅರ್ಜಿ ಕೊಟ್ಟಿರುತ್ತಾರೆ. ಇದರ ಇತ್ಯರ್ಥದಬಗ್ಗೆ ೧೮೯೦ನೇ ಇಸವಿ ಜುಲೈ ತಿಂಗಳ ೧೫ನೇ ತಾರೀಖ್ ಹಿಯರಿಂಗ್ ನೇಮಕವಾಗಿರುತ್ತದೆ. ಆ ತಾರೀಖು ದಿವಸ ೧೧ ಘಂಟೆಗೆ ಆಕ್ಷೇಪಣೆ ಇರತಕ್ಕವರೆಲ್ಲರು ಅವರೇ ಆಗಲಿ ಅವರ ತರಫ ವೊಕಾಲತ್ಯಾಗ ವಹಿಸಿದ ಅಡ್ವೊಕೇಟರಾಗಲಿ ಈ ಕೋರ್ಟಿನ ರೂಬರೂಬ ಹಾಜರಾಗಿ ಅವರವರ ಆಕ್ಷೇಪಣೆಗಳನ್ನು ತಿಳಿಯಪಡಿಸಬಹುದು

By the Court,
ತಾ||27ನೇ ಮಾಹೆ ಜೂನ್ 1890ನೇ ಇಸವಿ — S. Hamajee Row, Registrar

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASHIKA

MONDAY, JULY 7, 1890

೧೮೯೦ನೇ ಜುಲೈ ೭ ನೇ ಸೋಮವಾರ

HINDU MARRIAGE SYSTEM
No V.

ಹಿಂದೂ ವೈವಾಹಿಕ ಪದ್ಧತಿ ಸಂಬಂಧಿತು ೫ನೇ ಅಂಕ

ಹಿಂದಿನ ಅಂಕದಲ್ಲಿ ನಾವು ತಿಳಿಸಿದ್ದಂತೆ ಈಗ ದಾನ ದಾಕ್ಷ ದೇಯ ಸ್ವರೂಪವನ್ನಿದರಡಿ ವಿವರಿಸುವೆವೆಂತೆಂದರೆ — ಲೋಕದಲ್ಲಿ ದಾನವೆಂಬದು ಸರ್ವೋತ್ಕೃಷ್ಟವಾದುದೆಂದು ಸಕಲ ಶಾಸ್ತ್ರಗಳೂ ಉದ್ಘೋಷಿಸುತಿವೆ. ಅವುಗಳ ಪೈಕಿ ಕನ್ಯಾದಾನವೆಂಬದು ಐಹಿಕಾಮುಷ್ಮಿಕ ಸುಖ ಸಂದಾಯಕವಾಗಿ ಉಭಯ ಕುಲದವರಿಗೂ ಶ್ರೇಯಸ್ಪದವಾದುದಾಗಿರುವದು. ದಾನ ಶಬ್ದವನ್ನು ಅಂಗೀರಸರು ವಿವೇಚನೆ ಮಾಡುವಲ್ಲಿ ಆತ್ಮಪೋಷವನ್ನು ಅನ್ಯನಿಗೆ ಸಂಕಲ್ಪ ಪೂರ್ವಕ ಕೊಡುವದಕ್ಕೆ ದಾನವೆಂಬ ವ್ಯವಹಾರ ಪ್ರಾಪ್ತಿಯುಂಟೆಂಬದಾಗಿ ಅರ್ಥ ನಿರ್ಣಯ ಮಾಡಿರುತ್ತಾರೆ ಒಬ್ಬನ ದೋಷವನ್ನು ಅಂಗೀಕರಿಸಿ ತನ್ಮೂಲಕ ಅವನು ಪಾಪ ವಿಮುಕ್ತನನ್ನಾಗಿ ಮಾಡಿ, ಪ್ರತಿಗ್ರಹೀತವಾದ ದೋಷವನ್ನು ನಿವೃತ್ತಿಸಿಕೊಳ್ಳಬೇಕೆಂಬ ಪಶ್ಚಾತ್ತಾಪವೂ ತಪ್ಪ್ರಯುಕ್ತವಾದ ಪ್ರವೃತ್ತಿಯೂ ಪ್ರಾಪ್ತಿಸತಕ್ಕವನು ದಾನ ಪರಿಗ್ರಹಾರ್ಹನೆನಿಸುವನಲ್ಲದೆ, ಅನ್ಯರ ಸ್ವತ್ತು ದೊರೆತ ಮಾತ್ರಕ್ಕೆ ಸಂತೋಷಿಸತಕ್ಕವನು ಯೋಗ್ಯನಾಗಲಾರನು. ಯಾವನು ಶಕ್ತಿಯುಕ್ತನಾಗಿ ತನ್ನ ಮುಕ್ತಿಗೆ ಪ್ರಯತ್ನಪಡುವನೊ ದಾತನನ್ನು ಸಹ ದೋಷಮುಕ್ತನನ್ನಾಗಿ ಮಾಡಲೆತ್ನಿಸುವನೋ ಅಂಥವನನ್ನೇ ಹುಡುಕಿ ದಾನ ಮಾಡಬೇಕೆಂದು ಶ್ರೀ ಮಹಾಭಾರತದಲ್ಲಿ ತಿಳಿಸಲ್ಪಟ್ಟಿರುತಿದೆ. ಕೆಲವರು ಅಧ್ಯಯನ ಮಾಡಿರುವವರನ್ನು ಶಾಸ್ತ್ರಜ್ಞರನ್ನು ದಾನಾರ್ಹರೆಂದು ಭಾವಿಸಿ ಅಂತವರಿಗೆ ದಾನ ಮಾಡುವರು. ಅಧ್ಯಯನವಾಗಲಿ ಶಾಸ್ತ್ರಜ್ಞಾನವಾಗಲಿ, ಪ್ರತಿಗ್ರಹಕ್ಕೆ ಅರ್ಹತೆಯನ್ನುಂಟುಮಾಡಲಾರದೆಂದು ಯಾಜ್ಞವಲ್ಕ್ಯರು ಅಭಿಪ್ರಾಯ ಪಟ್ಟಿರುತ್ತಾರೆ ಇದಲ್ಲದೆ ಕೇವಲ ತಪೋನಿಷ್ಠನಾದವನೂ ವಿದ್ಯಾವಂತನಾದವನೂ ದಾನಪರಿಗ್ರಹಕ್ಕೆ ಅರ್ಹನಲ್ಲವೆಂದು ಭೃಗುಮಹರ್ಷಿಯು ಮತವಾಗಿರುತಿತೆ. ದಾನಪ್ರತಿಗ್ರಹಕ್ಕೆ ಮೇಲೆಕಂಡ ಯೆಲ್ಲ ಗುಣಗಳೂ ಅವಶ್ಯ ಉಪಾದೇಯಗಳಾಗಿರುವವು. ಈಗ ಅನೇಕರು ತಮ್ಮ ಹೆಣ್ಣು ಮಕ್ಕಳನ್ನು ಕೊಡುವಾಗ್ಯೆ ವರನ ಲಕ್ಷಣಗಳನ್ನು ಸ್ವಲ್ಪವೂ ಪರ್ಯಾಲೋಚಿಸದೆ ಅವನು ಧನಿಕನಾಗಿದ್ದ ಮಾತ್ರಕ್ಕೆ ಸಂತೃಪ್ತರಾಗಿ ಅವನ ಇತರ ಗುಣಗಳನ್ನು ಸಹ್ಯಗ್ಯೆಯದೆ ವರ ಸಾಮ್ಯವಿಲ್ಲದಿದ್ದರೂ ಕನ್ಯೆಯರು ಕೊಟ್ಟು ವಿವಾಹ ಮಾಡಿಸುತ್ತಾರೆ. ಮತ್ತು ಕೆಲವರು ಅನುಬಂಧಕ್ಕಾಗಿ ಬೇಬಾಡುತ್ತ, ವರನ ಅಸಮರ್ಥತೆಯನ್ನು ಚಿಂತಿಸದೆ ತಮ್ಮ ಬಂಧುಗಳಲ್ಲಿ ಒಬ್ಬನಿಗೆ ಕೊಡುವರು. ಇನ್ನು ಕೆಲವರು ಮಗಳಮೇಲಿನ ಪ್ರೇಮಾತಿಶಯದಿಂ ಆಕೆಯನ್ನಗಲಿರಲಾರದೆ ತಮ್ಮಲ್ಲಿಯೇ ಇಟ್ಟುಕೊಳ್ಳಬೇಕೆಂಬ ಭ್ರಾಂತಿಯೊಡನೆ ತಮ್ಮನ್ನೇ ಶರಣಾಗತನಾಗಿ ನಂಬಿಬಂದಿರುವವಳ್ಕೆ ಯೋಗ್ಯನಾದ ಒಬ್ಬ ಅನಾಥನನ್ನು ನೋಡಿ ಅವನ ಇತರ ಗುಣಗಳನ್ನು ಚಿಂತಿಸದೆ ಕನ್ಯೆಯಂ ಕೊಟ್ಟು ತಮ್ಮ ಬಳಿಯಲ್ಲಿಯೇ ಅವರಿಬ್ಬರನ್ನೂ ಇಟ್ಟುಕೊಳ್ಳುವರು ಇವರು ಮಾಡುವ ದಾನಗಳಾಗಲಿ, ಅವು ಪರಿಗ್ರಹಿಸತಕ್ಕವರಾಗಲಿ ಯೋಗ್ಯತೆನಿಸಿಕೊಳ್ಳಲಾರರೆಂಬವಾಗಿಯೂ,ಬಹು ಪುತ್ರವಂತರಾಗಿಯೂ, ಪ್ರತ್ಯುಪಕಾರ ಮಾಡಲಾರದವರಾಗಿಯೂ, ಉಪವೃತ್ತಿ ಯುಳ್ಳವರಾಗಿಯೂ ಇರತಕ್ಕವರಿಗೆ ಯಾವಾಗಲು ದಾನ ಕೊಡಲಾಗದೆಂಬದಾಗಿಯೂ ಸಂವರ್ತಕರು ಸಹ ದೃಢವಾಗಿ ಹೇಳಿರುತ್ತಾರೆ ರಿಕ್ತನಾಗಿಯೂ, ಅಂದರೆ ದಾತನ ದಾನವನ್ನು ಪುರಸ್ಕರಿಸಿ ಗೌರವಿಸತಕ್ಕವನಾಗಿಯೂ,ಶ್ರೋತ್ರಿಯನಾಗಿಯೂ, ಆಹಿತಾಗ್ನಿಯಾಗಿರುವವನ ಸಂತತಿಗೆ ಸೇರಿದವರಾಗಿಯೂ ಇರತಕ್ಕವರನ್ನೇ ಹುಡುಕಿ ದಾನ ಮಾಡಬೇಕೆಂದು ತಿಳಿಸಿ, ಶ್ರೋತ್ರಿಯ ಲಕ್ಷಣಗಳು ಬ್ರಹ್ಮವೈವರ್ತದಲ್ಲಿ ವಿವರಿಸಲ್ಪಟ್ಟಿರುತಿವೆ, ಜನ್ಮದಿಂ ಬ್ರಾಹ್ಮಣ್ಯವೂ,ಉಪನಯನಾದಿ ಸಂಸ್ಕಾರಾದಿಗಳಿಂದ ದ್ವಿಜತ್ವವೂ, ವಿದ್ಯೆಯಿಂದ ವಿಪ್ರತ್ವವೂ,ಈ ಮೂರೂ ಸೇರಿದ್ದರೆ ಆಗ ಶ್ರೋತ್ರಿಯತ್ವವೂ ತಪ್ಪದೆ ಲಭಿಸಿರುವದೆಂದು ಸಹ ಸದರೀ ಬ್ರಹ್ಮವೈವರ್ತದಲ್ಲಿ ತಿಳಿಸಲ್ಪಟ್ಟಿರುತಿದೆ. ಇನ್ನು ದಾನಕ್ಕೆ ಅಪಾತ್ರರನ್ನು ವಿವರಿಸುವೆವು ಆತ್ಮ ಪ್ರತಿಷ್ಠೆಗಾಗಿಯೂ, ಪರಭೀತಿಗಾಗಿಯೂ, ಪ್ರತ್ಯುಪಕಾರಾರ್ಥವಾಗಿಯೂ, ದಾನ ಮಾಡಕೂಡದು. ಸಂಗೀತಗಾರನಿಗೂ, ಹಾಸ್ಯಗಾರನಿಗೂ, ಅನಾಚಾರ ಪ್ರವೃತ್ತನಿಗೂ, ಗರ್ವಿಷ್ಠನಿಗೂ, ಉನ್ಮತ್ತನಿಗೂ, ಚೋರನಿಗೂ, ನಿಂದಿತನಿಗೂ, ಮೂಗನಿಗೂ, ವರ್ಣಹೀನನಿಗೂ, ಅಸಮಾನವರ್ಣನಿಗೂ,ಅಂಗಹೀನನಿಗೂ, ತುಚ್ಛನಿಗೂ,ದುರ್ಜನನಿಗೂ,ದುಷ್ಕುಲಪ್ರಸೂತನಾದವನಿಗೂ, ವ್ರತನಿಷ್ಠನಲ್ಲದ ಅಸಂಸ್ಕೃತನಾದವನಿಗೂ, ಶ್ರೋತ್ರಿಯ ನಲ್ಲದವನಿಗೂ, ಬ್ರಹ್ಮಕರ್ಮ ತೇಜಸ್ಸುಗಳಿಲ್ಲದವನಿಗೂ, ಯದ್ವಿಧದಾನಗಳೂ ಕೊಡಕೂಡದೆಂತಲೂ, ತಪ್ಪಿ ಕನ್ಯಾದಾನವು ಮನಸ್ಸಿನಿಂದ ಸಹ ಸ್ಮರಿಸತಕ್ಕದ್ದಲ್ಲವೆಂತಲೂ, ಯಾವ ಸಂದರ್ಭದಲ್ಲಿಯೂ ಸದರೀ ಜನಗಳು ದಾನಕ್ಕೆ ಅನರ್ಹರೆಂತಲೂ ಶ್ರೀ ಮಹಾಭಾರತದಲ್ಲಿ ಬರೆಯಲ್ಪಟ್ಟಿರುತಿದೆ. ಇಂತವರಿಗೆ ಮಾಡಿದ ದಾನವು ನಿಷ್ಫಲಗಳಲ್ಲದೆ ಮುಂದೆ ಮಹದನರ್ಥಗಳಿಗೆ ಕಾರಣವಾಗದೆ ಹೋಗುವದಿಲ್ಲವು.

Occasional Notes
ನೈಮಿತ್ತಿಕ ವಿಷಯನ್ಯಾಸ.

Two Royal visitors to India.—ರಷಿಯಾ ಸಂಸ್ಥಾನದ ಯುವರಾಜರೂ ಅವರ ಸಹೋದರರೂ ಬರುವ ನವಂಬರ್ ತಿಂಗಳ ಮಧ್ಯಭಾಗದಲ್ಲಿ ಮುಂಬೈ ಪಟ್ಟಣಕ್ಕಾಗಿ ಆಫಘನ್ ಪಟ್ಟಣದವರಲ್ಲಿ ಬರುವರು ಹಾಗೂ ಇಂಗ್ಲಿಷ ಸರ್ಕಾರಕ್ಕೆ ವರ್ತಮಾನ ಬಂದಿರುತಿದೆ

A suggestion approved.—ದೇಶದ ಶಾಸ್ತ್ರಗಳಲ್ಲಿಯೂ ಶಸ್ತ್ರವಿದ್ಯೆಯಲ್ಲಿಯೂ ಪರೀಕ್ಷೆಕೊಟ್ಟು ಉತ್ತೀರ್ಣರಾಗುವಂತವರಿಗೆ ಡಿಪ್ಲೊಮಾಸ್ ಅಂದರೆ ಪ್ರಶಸ್ತಿಯಂ ಕೊಡಬೇಕಾದದ್ದು ಎಂಬದಾಗಿ ಮದರಾಸ್ ಯೂನಿವರ್ಸಿಟಿಯವರು ಮಾಡಿದ ಶಿಫಾರಸ್ಸನ್ನು ಇಂಡಿಯಾ ಗವರ್ನ್‌ಮೆಂಟನವರು ಮಂಜೂರ್ಮಾಡಿರುತ್ತಾರೆ

A memorial awaited.—ಸರಕುಗಳಿಂತ ಳುಹಿಸತಕ್ಕವರ ಲಾಭದಮೇಲೆ ತೆರಿಗೆ ಏರ್ಪಡಿಸು ಮಾಡುವದಕ್ಕೆ ಬಂಗಾಳ ಆವಿಷಯದಲ್ಲಿ ವ್ಯಾಪಾರ ಸಂಘದವರ ಅರ್ಜಿಯನ್ನು ಇಂಡಿಯಾ ಗವರ್ನ್‌ಮೆಂಟನವರು ನಿರೀಕ್ಷಿಸುತಲಿದ್ದಾರೆ ಈಗ ಆಕ್ಷೇಪಣೆಗೆ ಗುರಿಯಾಗಿರುವ ಒಟ್ಟು ಮೊಬಲಗು ಪ್ರಾಯಶಃ ಎರಡುಲಕ್ಷ ರೂಪಾಯಿಗಳಿಗಿಂತ ಅಧಿಕವಾಗಿರಲಾರದು.

Invention of another machine.—ಅಮೆರಿಕಾದೇಶದೊಳು ಯಂತ್ರ ನಿರ್ಮಾಣಕಾರ್ಯದಲ್ಲಿ ಪ್ರಸಿದ್ಧಿಯಂ ಪಡೆದಿರುವ ಎಡಿಸನ್ ಯೆಂಬವನು ಈಗ ಒಂದು ವಿಚಿತ್ರ ಯಂತ್ರವನ್ನು ನಿರ್ಮಾಣಮಾಡುತಲಿದ್ದಾನೆ ಇದರ ಶಕ್ತಿಯಿಂದ ಹಿಂದು ಪೂರ್ವದಲ್ಲಿರುವಾತನ ಮುಖಭಾವವನ್ನು ಬೇರೆಯ ಕಡೆಯಿಂದ ನೋಡುವದಕ್ಕೆ ಸಾಧ್ಯವಾಗುವದು.

A ludicrous punishment.—ಬರ್ಮಾದೇಶದಪೈಕಿ ಒಂದು ಸ್ಥಳದಲ್ಲಿ ಒಬ್ಬ ಮ್ಯಾಜಿಸ್ಟ್ರೇಟರು ಕೋರ್ಟು ಮಾಡುತ್ತಿರುವಲ್ಲಿ ಪಂಕಾ ಸೆಳೆಯುತಲಿದ್ದವನು ನಿದ್ರೆಹೋಗಿಬಿಟ್ಟ, ಪಂಕಾ ನಿಂತುಹೋದದು ಕಂಡು ಮ್ಯಾಜಿಸ್ಟ್ರೇಟರು ಕೋಪಗೊಂಡು ತಮ್ಮ ಸ್ಥಾನದಿಂದ ಯೆದ್ದು ಬಂದು ಪಂಕಾಸೆಳೆಯುವವನ ಕುತ್ತಿಗೆಯಂ ಹಿಡಿದು ಸೆಳೆಕೊಂಡುಹೋಗಿ ಅವನು ತನ್ನ ಕುರ್ಚಿಯಮೇಲೆ ಕುಳ್ಳಿರಿಸಿ ಮೊಕದ್ದಮೆಗಳು ಫೈಸಲ್ಯಾಗುವವರೆಗೂ ತಾನು ಪಂಕಾ ಸಳೆಯ ಲೆತ್ನಿಸಿದನು ಕಂಡಾ ಕೋರ್ಟಿನಲ್ಲಿದ್ದವರೆಲ್ಲರು ಆ ಕಾರ್ಯಾತಿಶಯಕ್ಕಾಗಿ ಬಹಳ ಆಶ್ಚರ್ಯಪಟ್ಟರಂತೆ

Capture of dacoits.—ಬರ್ಮಾ ದೇಶವನ್ನು ಬ್ರಿಟಿಷ ಆಧಿಪತ್ಯಕ್ಕೆ ಸೇರಿಸಿಕೊಂಡದ್ದು ಮೊದಲು ಪ್ರಸಿದ್ಧರಾದ ಇಬ್ಬರು ದರೋಡೆಕೋರರು ದಸ್ತಗಿರಿ ಮಾಡಿಕೊಟ್ಟವರಿಗೆ ಒಬ್ಬನಿಗೆ ೫,೦೦೦ ರೂಪಾಯಿಗಳು, ಮತ್ತೊಬ್ಬನಿಗೆ ೩,೦೦೦ ರೂಪಾಯಿಗಳು ಈಮೇರೆ ಇನಾಂಗಳು ಕೊಡುವದಾಗಿ ಗವರ್ನ್‌ಮೆಂಟನವರು ಘೋಷಿಸ್ ಮಾಡಿದ್ದದರಿಂದಲೇ ಸದರೀ ಇಬ್ಬರು ಕಳ್ಳರ ದಸ್ತಗಿರಿಯಲ್ಲಿ ಸರ್ಕಾರಕ್ಕೆ ಉಂಟಾಗಿದ್ದ ಆವಶ್ಯಕತೆಯು ಸ್ಪಷ್ಟವೆಂದು ತಿಳಿಯಬಹುದು ಇವರನ್ನು ಹಿಡಿಯುವದಕ್ಕಾಗಿ ಮಿಲಿಟರಿ ಮತ್ತು ಪೊಲೀಸ್ ಸೈನ್ಯವು ಯಾವಾಗಲು ಅಲ್ಲಿಯಲ್ಲಿ ಸಂಚರಿಸುತಲೇ ಇದ್ದವು. ಪರಂತು ಪ್ರಯೋಜನವಾಗದೆ ಯಿಲ್ಲದೆಹೋಯಿತು ಈಚೆಗೆ ಸದರೀ ಇಬ್ಬರು ಕಳ್ಳರೂ ಮೆ|| ಮ್ಯಾಗ್ಗ್ರನ್ ಯೆಂಬವನಿಂದ ದಸ್ತಗಿರಿ ಮಾಡಲ್ಪಟ್ಟು ಬಂದೋಬಸ್ತಿಯಿಂದ ಜೇಲಿನಲ್ಲಿಡಲ್ಪಟ್ಟಿರುತ್ತಾರೆ

A report contradicted.—ಹಿಂದೆ ಹೈದರಾಬಾದ ಸಂಸ್ಥಾನದ ಪ್ರಧಾನ ಮಂತ್ರಿಯವರಾಗಿದ್ದ ಸರ ಸಾಲಾರ್‌ಜಂಗರವರ ಕುಟುಂಬಕ್ಕೆ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳಲ್ಲುಂಟಾಗಿದ್ದ ಅಧಿಕಾರವನ್ನು ನಿಜಾಂ ಸರ್ಕಾರದವರು ವಾಪಸ ತೆಗದುಕೊಂಡರೆಂತಲೂ, ಸದರೀ ಕುಟುಂಬಕ್ಕೆ ಸೇರಿದ ಸೈನ್ಯವನ್ನು ಸಹ ವಾಪಸ ತೆಗದುಕೊಳ್ಳಬೇಕೆಂಬ ಆಲೋಚನೆಯುಂಟಾಗಿದೆಯೆಂತಲೂ ಹುಟ್ಟಿದ ಪ್ರವಾದವು ಸುಳ್ಳೆಂದು ತಾಜಾ ಟೈಂಸ್ ಪತ್ರಿಕೆ ವಿಳಸುವದಲ್ಲದೆ ಅಸಲ್ ಮೊಕದ್ದಮೆಗಳಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಅಧಿಕಾರಗಳು ಯಥಾರೀತಿಯಲ್ಲಿ ಸ್ಥಳಾಧಿಕಾರಿಗಳಿಂದ ನಡೆಸಲ್ಪಡುವವು, ಪರಂತು ನಿಜಾಮರವರು ಗವರ್ನ್‌ಮೆಂಟನವರ ಅಭಿಪ್ರಾಯಾನುಗುಣವಾಗಿ ಸದರೀ ಸ್ಥಳಾಧಿಕಾರಿಗಳ ನಿರ್ಣಯದಮೇಲೆ ಬರುವ ಅಪೀಲ್‌ಗಳೆಲ್ಲ ಹೈಕೋರ್ಟಿಗೆ ಹೋಗಬೇಕೇಹೊರತು ಕಾರ್ಯನಿರ್ವಾಹಕ ಸಭೆಯವರಿಗೆ ಹೋಗತಕ್ಕದ್ದಲ್ಲವೆಂದು ನಿರ್ಣಯಿಸಿರುವದಾಗಿ ತಿಳಿಸುತಿದೆ.

LOCAL AND PROVINCIAL NEWS.
ಸ್ಥಳದೇಶ ಮತ್ತು ತಾಲ್ಲೂಕು ಸಂಬಂಧ ವೃತ್ತಾಂತಗಳು.

Presentation of Books.—ಬ್ರಿಟಿಷ ರೆಸಿಡೆಂಟರಾದ ಸರ ಆಲಿವರ್ ಸೆಂಟ್ ಜಾನ್ ಯವರು ಬೌರಿಂಗ್ ಇನ್ಸ್ಟಿಟ್ಯೂಟ್ ಯೆಂಬಸಂಘಕ್ಕೆ ಇಂಡಿಯಾ ಗೆಜೆಟಿಯರನ್ನು ಇನಾಮಾಗಿ ಕೊಟ್ಟಿರೆಂಬದಾಗಿ ತಿಳಿಯಲಾದೆವು. ಇದು ೧೪ ಪುಸ್ತಕಗಳುಳ್ಳದ್ದಾಗಿರುತಿದೆ

A novel decision.—ಮಗಳನ್ನು ಕೆಡಿಸಿದನೆಂಬದಾಗಿ ಜಿಲ್ಲೆಕೋರ್ಟಿನಲ್ಲಿ ಮಾನನಷ್ಟಕ್ಕೆ ದಾವಾ ತೆಗದುಕೊಂಡು ಹೋದ ಒಬ್ಬ ಮನುಷ್ಯನ ಮೊಕದ್ದಮೆಯಲ್ಲಿ ಮಾನನಷ್ಟ ಹೊಂದಿದ ಹುಡಿಗಿಯು ಮೃತಪಟ್ಟದ್ದರಿಂದ, ನಷ್ಟವೂ ಕೂಡ ಅವಳೊಂದಿಗೇ ಹೋಯಿತೆಂದು ಮೊಕದ್ದಮೆ ಫೈಸಲ್ಮಾಡಿದರಂತೆ

The weather.—ಗತವಾರದವೊದಲು ಈ ಸ್ಥಿತಿಯು ಪೂರ್ವದಂತೆ ಮರಳ ಬದಲಾದಿಸಿವೆ ಬಿಸಿಲು ಪ್ರಬಲಿಸಿ ವರ್ಷಸೂಚನೆ ಯೇನೂ ಕಾಣಬರುವದಿಲ್ಲವು ಅನಾಜುಗಳ ನಿರಖ್ ಜಾಸ್ತಿಯಾಗುತಲಿದೆ, ಪರಸ್ಥಳಗಳಿಂದ ಪ್ರತಿದಿನವೂ ಬಂಡಿಗಳು ವಿಶೇಷವಾಗಿ ಬರುತಲಿದ್ದಾಗ್ಯೂ ಪರಸ್ಥಳಗಳಿಗೆ ರಫ್ತಾಗುತಲಿರುವದರಿಂದ ಬೆಲೆ ಕಡಿಮೆಯಾಗಲಿಲ್ಲ ರೋಗಾಮ್ಯ ಪದ್ರವಗಳು ಯಥೋಚಿತವಾಗಿವೆ. ಫಸಲ ಸಾಮಾನ್ಯವಾಗಿ ಚನ್ನಾಗಿರುವಂತೆಯೂ ತೃಣವು ಸಮೃದ್ಧಿಯುಂಟೆಂತಲೂ ತಿಳಿಯಬರುತಿದೆ

Formation of an additional Munsiff's Court.—ಈ ಪಟ್ಟಣದ ಪೈಕಿ ಕೆಂಗೇರಿ ಪೇಟೆಯಲ್ಲಿ ಮುಖ್ಯಗಿರುವ ಮುನಸೀಫರ ವರ್ಗಾವರ್ಗಿ ದೇಶದಿಂದ ಆತ್ರೂರಲ್ಲಿ ಪ್ರೊಫೆಸಮತೆ ಜಾಸ್ತಿ ಮುನಸೀಫಕೋರ್ಟು ಒಂದು ಫ್ರೆಸ್ಪುರದಲ್ಲಿ ಸ್ಥಾಪಿಸಲ್ಪಡುವದೆಂದು ತಿಳಿಯಬರುತಿದೆ ಇದುವರೆವಿಗೆ ಸದರೀ ಕೋರ್ಟು ಎರಡಾವರ್ತಿ ನೆಲೆಗೊಂಡು ವಜಾ ಮಾಡಲ್ಪಟ್ಟಿತು ಪ್ರಸಕ್ತ ಏರ್ಪಟ್ಟಿರುವ ಡಿಸ್ಟ್ರಿಕ್ಟ್ ಕೋರ್ಟ ಸದ್ಯಃ ಸ್ಥಾಪಿಸುವ ಆಲೋಚನೆಯು ಗವರ್ನ್‌ಮೆಂಟನವರಿಗಿಲ್ಲವೆಂದೇ ಸ್ಪಷ್ಟವಾಗುತಿದೆ

President's allowance.—ಮೈಸೂರ ಮ್ಯುನಿಸಿಪಲ್ ಪ್ರೆಸಿಡೆಂಟರು ತಮ್ಮ ಪ್ರೆಸಿಡೆಂಟರಿಗೆ ಸಾಲೀಯಾನಾ ೨,೦೦೦ ರೂಪಾಯಿಗಳನ್ನು ರುಸುಂ ತರೀಕ ಮ್ಯುನಿಸಿಪಲ್ ಫಂಡಿನಿಂದ ಕೊಡಬೇಕೆಂಬದಾಗಿ ಗವರ್ನ್‌ಮೆಂಟನವರು ತಿಳಿಸಿದ ಅಭಿಪ್ರಾಯವನ್ನು ಮೀಟಿಂಗನಲ್ಲಿ ಚರ್ಚಿಸಿ ಆ ಬಗ್ಗೆ ಪ್ರೊಸೀಡಿಂಗ್ಸ ಮಾಡಿ ಅಷ್ಟರ ರುಸುಂ ಕೊಡುವದಕ್ಕೆ ಫಂಡ ಸಾಲದೆಂದು ತಿಳಿಯಪಡಿಸಿದರು ಅದರಮೇಲೆ ಗವರ್ನ್‌ಮೆಂಟನವರು ಈಚೆಗೆ ಜಾರಿಯಲ್ಲಿ ಹೊಂದ ೧೮೯೦ನೇ ಇಸವಿಯ ೬ನೇ ರೆಗ್ಯುಲೇಷನ ಅನುಸರಿಸಿ ಮುಂದೆ ಮಾಹೆಯಾನಾ ೨೦೦ ರೂಪಾಯಿಗಳನ್ನು ಮ್ಯುನಿಸಿಪಲ್ ಫಂಡಿನಿಂದ ಕ್ರಮವಾಗಿ ಪ್ರೆಸಿಡೆಂಟರಿಗೆ ಕೊಡತಕ್ಕದ್ದೆಂದು ಪೂರ್ವದ ಹುಕುಮನ್ನೇ ಕಾಯಂ ಮಾಡಿದರೆಂಬದಾಗಿ ತಿಳಿಯಲಾದೆವು.

The Census.—ಬರುವ ಫೆಬ್ರವರಿ ತಿಂಗಳಲ್ಲಿ ಜರಗಬೇಕಾದ ಖಾನೆಷುಮಾರಿಯ ಬಗ್ಯೆ ಪೂರ್ವಭಾವಿಯಾಗಿ ಮಾಡಬೇಕಾದ ಏರ್ಪಾಡುಗಳನ್ನೆಲ್ಲ ಜರಿಗಿಸುವದಕ್ಕಾಗಿ ಸೆನ್ಸಸ್ ಸುಪರಿಂಟೆಂಡೆಂಟರೊಬ್ಬರು ನೇಮಕರಾದ ಅಂಶವನ್ನೂ ಆ ಕೆಲಸ ಮಿ ವಿ ಎನ್ ನರಸಿಂಹಯ್ಯಂಗಾರ್ರವರಿಗೆ ಕೊಡಲ್ಪಟ್ಟಿತೆಂಬ ಅಂಶವನ್ನೂ ಹಿಂದಿನ ಪತ್ರಿಕೆಯಲ್ಲೇ ತಿಳಿಸಿದ್ದೆವಷ್ಟೆ. ಈಗ ಅವರಿಗೆ ಬೇಕಾದ ಶಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಿಕ್ಕೆ ಗವರ್ನ್‌ಮೆಂಟನವರು ಮಂಜೂರ್ಮಾಡಿದಾರೆಂತಲೂ ಮುಂದೆ ನಡೆಯಬೇಕಾದ ಏರ್ಪಾಡುಗಳನ್ನೆಲ್ಲ ಈಗಲೇ ಮಾಡಲುಪಕ್ರಮಿಸಿದಾರೆಂತಲೂ ತಿಳಿಯಬರುತಿದೆ ಸೆನ್ಸಸ್ ಆಫೀಸಿಗೆ ಗೊತ್ತಾಗಿರುವ ಶಿಬ್ಬಂದಿಗಳು ಕೆಲಸ ಪ್ರಾರಂಭಮಾಡುತಲಿರುವಂತೆ ತಿಳಿಯಬರುತಿದೆ

Amrutasnu pady.—ಈ ಚೆಗೆ ಕರ್ನಲ್ ಹಿಲಿ ಸಾಹೇಬರವರು ಅಮೃತಸರದಿಂದ ಕ್ವಾಷ್ಯಾವಾರ ಒಂದು ವಿಧ ಭತ್ತವನ್ನು ತರಿಸಿ ಮೈಸೂರು ಸರ್ಕಾರದವರಿಗೆ ಕಳುಹಿಸಿದ್ದರಲ್ಲದೆ ಅವರದನ್ನು ಹಾಸನ ಡಿಪ್ಯುಟಿ ಕಮಿಷನರವರಿಗೆ ಕಳುಹಿಸಿ ಆ ಡಿಸ್ಟ್ರಿಕ್ಟಿನಲ್ಲಿರುವ ಆಲೂರು(?) ನಲ್ಲಿ ಬೆಳೆಯಿಸಿ ಅವರ ಅಭಿವೃದ್ಧಿಯನ್ನು ತಮಗೆ ತಿಳಿಸಬೇಕೆಂಬದಾಗಿ ಹುಕುಂ ಮಾಡಿರುತ್ತಾರೆಂದು ಕೇಳುತ್ತೇವೆ.

THE MYSORE GAZETTE
ಮೈಸೂರು ಗೆಜೆಟ್.

ಶ್ರೀಮನ್ ಮಹಾರಾಜರವರ ಸರಕಾರದವರ ಹುಕುಂನಿಂದ ಹೊರಡಿಸಿದ ಇಷ್ತಿಹಾರುಗಳು.

ನಂ|| ೯೨, ೩೦ನೇ ಜೂನ್—ಹುದ್ದೆಯನ್ನು ಹೊಂದಿದ ಶ್ರೀಮನ್ಮಹಾರಾಜರವರು, ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾದ ಮಿ. ಪಿ. ಎಸ್. ಕೃಷ್ಣಮೂರ್ತಿ, ಬಿ. ಎ. ಯವರನ್ನು, ಮೆ|| ತುಬುಶೆಟ್ಟಿಯವರು ಬೇರೆ ಕೆಲಸದ ಮೇಲೆ ಗೈರುಹಾಜರಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ, ಚೀಫ್ ಕೋರ್ಟ್ ಜಡ್ಜಿಯಾಗಿ ಬದಲೀ ನೋಡುವಂತೆ ನೇಮಕ ಮಾಡಿರುತ್ತಾರೆ.

ಹಾಗೆಯೇ ಮೇಲ್ಕಂಡ ಶ್ರೀಮನ್ಮಹಾರಾಜರವರು, ಚೀಫ್ ಕೋರ್ಟ್ ಜಡ್ಜಿಯಾಗಿದ್ದ ಮಿ. ಎ. ರಾಮಚಂದ್ರ ಅಯ್ಯರವರನ್ನು, ಚೀಫ್ ಕೋರ್ಟಿನಿಂದ ಮೆ|| ತುಬುಶೆಟ್ಟಿಯವರು ಗೈರುಹಾಜರಿರುವ ಕಾಲದಲ್ಲಿ, ಶ್ರೀಮನ್ಮಹಾರಾಜರವರ ಕೌನ್ಸಿಲಿನಲ್ಲಿ ಒಬ್ಬ ಮೆಂಬರಾಗಿ ನೇಮಕ ಮಾಡಿರುತ್ತಾರೆ.

ಘನವನ್ನು ಹೊಂದಿದ ಶ್ರೀಮನ್ಮಹಾರಾಜರವರು, ಮಹಾರಾಜರವರ ವಿದ್ಯಾಭಿವರ್ಧಕ ಸಮಾಜದ 'ನವಸಂಸ್ಕೃತಿ'ಯ, ೧೯೧೯ನೇ ಇಸವಿ ಜುಲೈ ೪ನೇ ತಾರೀಖಿನಲ್ಲಿ ಮಂಜೂರ್ ಮಾಡಲ್ಪಟ್ಟ ನಿಬಂಧನೆಗಳ ಪ್ರಕಾರ ೩ನೇ ನಿಬಂಧನೆಗೆ ಬದಲಾಗಿ ಈ ಕೆಳಕಂಡ ನಿಬಂಧನೆಯನ್ನು ಸೇರಿಸತಕ್ಕದ್ದೆಂದು ಹುಕುಂ ಮಾಡಿರುತ್ತಾರೆ.

"ಪ್ರೆಸಿಡೆಂಟರು ವೈಸ್ ಪ್ರೆಸಿಡೆಂಟರು ಮತ್ತು ವಿದ್ಯಾಭಿವರ್ಧಕ ಸಮಾಜದ ಕೆಲಸಗಳು ನಡೆಯುವ ಕ್ರಮವನ್ನು ವಿಧಿಸತಕ್ಕದ್ದು. ಅಂತಾ ಪ್ರೆಸಿಡೆಂಟರು ಮತ್ತು ಆ ಕಾಲದಲ್ಲಿ ಕೌನ್ಸಿಲ್ ಮೆಂಬರಾಗಿರುವವರ ಪೈಕಿ ಒಬ್ಬರು ಗೈರುಹಾಜರಿಯಲ್ಲಿ, ಹಾಜರಿರುವ ಮೆಂಬರುಗಳ ಪೈಕಿ ಹಿರಿಯರಾದವರು ಪ್ರೆಸಿಡೆಂಟರ ಕೆಲಸವನ್ನು ನೋಡತಕ್ಕದ್ದು."

ನಂ. ೯೬, ೨೨ನೇ ಜೂನ್.—ಸನ್ ೧೯೨೦ನೇ ಇಸವಿ ಜೂನ್ ೨೨ನೇ ತಾರೀಖು ಮಧ್ಯಾಹ್ನದ ಮೇಲೆ ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸ್ ಚಾರ್ಜನ್ನು ಮಿ. ಅನಂತರಾಯರು ಕೊಟ್ಟು ಅಸಿಸ್ಟೆಂಟ್ ಕನ್ಸರ್ವೇಟರ್ ಮಿ. ಸಿ. ನಾರಾಯಣ ರಾಯರವರು ವಹಿಸಿರುತ್ತಾರೆ.

ನಂ. ೯೭.—ಸ್ಯಾನಿಟರಿ ಇಂಜನಿಯರ್ ಮಿ. ಸ್ಟ್ಯಾಂಡಿಶ್ ಲೀ ಯವರು ಮೈಸೂರು ಮ್ಯುನಿಸಿಪಾಲಿಟಿ ವೈಸ್ ಪ್ರೆಸಿಡೆಂಟಾಗಿ ನೇಮಕ ಮಾಡಲ್ಪಟ್ಟಿರುತ್ತಾರೆ.

ನಂ. ೯೧, ೨ನೇ ಜುಲೈ.—ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮೆ|| ವಿ. ಪಿ. ಮಾಧವರಾವ್, ಬಿ. ಎ. ಯವರಿಗೆ ಸನ್ ೧೯೨೦ನೇ ಇಸವಿ ಜೂನ್ ೯ನೇ ಮುಕ್ಕಾಂ ೭೬ನೇ ನಂಬರ್ ಇಷ್ತಿಹಾರ್ ಮೂಲಕ ಕೊಡಲ್ಪಟ್ಟ ಪ್ರಿವಿಲೆಜ್ ರಜಾ ಎರಡು ತಿಂಗಳು ಜಾಸ್ತಿ ಮಾಡಲ್ಪಟ್ಟಿರುತ್ತದೆ.

೨. ಅಸಿಸ್ಟೆಂಟ್ ಕಮಿಷನರ್ ಮೆ|| ಎಸ್. ಬಿ. ಲಕ್ಷ್ಮಣಯ್ಯಂಗಾರ್ಯರವರು ಮೆ|| ಮಾಧವರಾಯರವರ ಗೈರುಹಾಜರಿ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ವ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ನೇಮಕ ಮಾಡಲ್ಪಟ್ಟಿರುತ್ತಾರೆ.

೩. ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾದ ಮೆ|| ಅಬ್ದುಲ್ ರಹಿಮಾನ್ ಯವರು ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ವ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ವರ್ಗ ಮಾಡಲ್ಪಟ್ಟಿರುತ್ತಾರೆ.

೪. ಮೆ|| ಸಿ. ಮಾದಯ್ಯನವರು, ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ, ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ವ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ನೇಮಕ ಮಾಡಲ್ಪಟ್ಟಿರುತ್ತಾರೆ.

೫. ಈಗ ರಜಾ ಮೇಲಿರುವ ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ವ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾದ ಮೆ|| ಪಿ. ಎಸ್. ಪುಟ್ಟಣ್ಣಯ್ಯನವರು ಕೆಲಸದ ಮೇಲೆ ಹಾಜರಾಗಿ ಕೂಡಲೇ ಹಾಸನ ಡಿಸ್ಟ್ರಿಕ್ಟ್ ಚಾರ್ಜು ವಹಿಸತಕ್ಕದ್ದೆಂದು ಹುಕುಂ ಮಾಡಲ್ಪಟ್ಟಿರುತ್ತದೆ.

ನಂ. ೯೫.—ಮಿ. ಕೆ. ಸ್ವಾಮಿ ಅಯ್ಯರ್, ಸಿ. ಎಸ್. ಐ. ಯವರು, ಸನ್ ೧೯೨೦ನೇ ಇಸವಿ ಜೂನ್ ೩೦ನೇ ತಾರೀಖಿನ ಮಧ್ಯಾಹ್ನದ ಮೇಲೆ ದಿವಾನ್ ಆಫೀಸ್ ಚಾರ್ಜನ್ನು ಕೊಟ್ಟು ಮೆ|| ಟಿ. ಆರ್. ಎ. ತಂಬುಶೆಟ್ಟಿಯವರು ವಹಿಸಿರುತ್ತಾರೆ.

ನಂ. ೯೬.—ಎದುರಿಗೆ ಬರುವ ಮುನಸೀಫರುಗಳ ಬಡ್ತಿಗಳು ಮತ್ತು ನೇಮಕಗಳಿಗೆ ಹುಕುಂ ಮಾಡಲ್ಪಟ್ಟಿರುತ್ತವೆ—

ಬಡ್ತಿಗಳು

೧. ಮೆ|| ತಿರುನಾರಣಾಚಾರ್, ಬಿ. ಎ. ಬಿ. ಎಲ್. ಯವರು ೨ನೇ ತರಗತಿಯಿಂದ ೧ನೇ ತರಗತಿಗೆ.
೨. ಮೆ|| ಎ. ಎಸ್. ಸಿಂಗ್ರಾಚಾರ್, ೩ನೇ ತರಗತಿಯಿಂದ ೧ನೇ ತರಗತಿಗೆ.
೩. ಮೆ|| ಸಿ. ಬಿ. ಶೇಷಗಿರಿರಾವ್ (೩ನೇ ತರಗತಿಯಲ್ಲಿ ಬದಲೀ ನೋಡುವ) ೨ನೇ ತರಗತಿ ಮುನಸೀಫರಾಗಿರತಕ್ಕದ್ದು.
೪. ಮೆ|| ಟಿ. ಬಿ. ವಾಲ್ಟರ್ ರೋಡ್, ೩ನೇ ತರಗತಿಯಿಂದ ೨ನೇ ತರಗತಿಗೆ.
೫. ಮೆ|| ಬಿ. ಶ್ರೀನಿವಾಸರಾವ್, ೩ನೇ ತರಗತಿಯಿಂದ ೨ನೇ ತರಗತಿಗೆ.
೬. ಮೆ|| ಬಿ. ವೆಂಕಟಾಚಾರ್, ೩ನೇ ತರಗತಿಯಿಂದ ೨ನೇ ತರಗತಿಗೆ.

ಈ ಬಡ್ತಿಗಳು ೧೯೨೦ನೇ ಜುಲೈ ೧ನೇ ತಾರೀಖು ಮೊದಲು ಜಾರಿಗೆ ಬರತಕ್ಕದ್ದು.

ನೇಮಕಗಳು.

೧. ಮೆ|| ಬಿ. ರಾಮಸ್ವಾಮಯ್ಯಂಗಾರ್ಯರು ೩ನೇ ತರಗತಿ ಮುನಸೀಫರಾಗಿರತಕ್ಕದ್ದು.
೨. ಕಡೂರು ಡಿಸ್ಟ್ರಿಕ್ಟ್ ರೆವಿನ್ಯೂ ರಿಜಿಸ್ಟ್ರಾರ್ ಮೆ|| ಸಿ. ರಾಮರಾಯರವರು ೩ನೇ ತರಗತಿ ಮುನಸೀಫರಾಗಿರತಕ್ಕದ್ದು.
೩. ಮೆ|| ಅಡ್ವೋಕೇಟ್ ... ೩ನೇ ತರಗತಿ ಮುನಸೀಫರಾಗಿರತಕ್ಕದ್ದು.

ನಂ. ೯೭.—ಎದುರಿಗೆ ಬರುವ ಮುನಸೀಫರುಗಳ ವರ್ಗಗಳು ಮತ್ತು ಸ್ಥಳ ನಿಯಾಮಕಗಳು ಹುಕುಂ ಮಾಡಲ್ಪಟ್ಟಿರುತ್ತವೆ—

೧. ಮೆ|| ಸಿ. ರಾಮರಾಯರು ಯಳಂದೂರು ಮುನಸೀಫರಾಗಿರತಕ್ಕದ್ದು.
೨. ಮೆ|| ಬಿ. ವೆಂಕಟಾಚಾರ್ಯರು ಯಳಂದೂರಿನಿಂದ ನಂಜನಗೂಡಿಗೆ.
೩. ಮೆ|| ಎ. ಎಸ್. ಸಿಂಗ್ರಾಚಾರ್ಯರು ನಂಜನಗೂಡಿನಿಂದ ಬೆಂಗಳೂರಿಗೆ.
೪. ಮೆ|| ಬಿ. ರಾಮಸ್ವಾಮಯ್ಯಂಗಾರ್ಯರು ಬೆಂಗಳೂರು ಅಡಿಷನಲ್ ಮುನಸೀಫರಾಗಿರತಕ್ಕದ್ದು.
೫. ಮೆ|| ಎ. ಅನಂತರಾಮಯ್ಯನವರು ನೆಲಮಂಗಲದ ಮುನಸೀಫರಾಗಿರತಕ್ಕದ್ದು.
೬. ಮೆ|| ಬಿ. ವೆಂಕಟರಾಮಯ್ಯನವರು ನೆಲಮಂಗಲದಿಂದ ಚಿಕ್ಕಮಗಳೂರಿಗೆ.
೭. ಮೆ|| ಟಿ. ಬಿ. ವಾಲ್ಟರ್ ರೋಡ್ ಯವರು ಚಿಕ್ಕಮಗಳೂರಿನಿಂದ ಹಾಸನಕ್ಕೆ.
೮. ಮೆ|| ಯು. ಮಂಗಪತಿ ನಾಯುಡು ಯವರು ಹಾಸನದಿಂದ ಚಿತ್ರದುರ್ಗಕ್ಕೆ.
೯. ಮೆ|| ತಿರುಮಲಾಚಾರ್, ಬಿ. ಎ. ಬಿ. ಎಲ್. ಯವರು ಚಿತ್ರದುರ್ಗದಿಂದ ಶಿವಮೊಗ್ಗೆಗೆ.
೧೦. ಮೆ|| ಸಿ. ಬಿ. ಶೇಷಗಿರಿರಾಯರು ಶಿವಮೊಗ್ಗೆಯಿಂದ ಶ್ರೀರಂಗಪಟ್ಟಣಕ್ಕೆ.

ನಂ. ೯೮.—ಅಂಚೆ ಇಲಾಖೆ ಮೆ|| ಮರಿಗಂಗಯ್ಯನವರು ೧೯೨೦ನೇ ಇಸವಿ ಜುಲೈ ೧ನೇ ತಾರೀಖು ಮೊದಲುಗೊಂಡು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ. ೯೪, ೪ನೇ ಜುಲೈ.—ಡೆಪ್ಯುಟಿ ಕಮಿಷನರ್ ಮೆ|| ಬಿ. ತಿರುಮಲಾಚಾರ್, ಬಿ. ಎಲ್. ಯವರು, ೧೯೨೦ನೇ ಇಸವಿ ಜೂನ್ ೨೩ನೇ ತಾರೀಖು ಮಧ್ಯಾಹ್ನದ ಮೇಲೆ ಚಿತ್ರದುರ್ಗ ಡಿಸ್ಟ್ರಿಕ್ಟ್ ಚಾರ್ಜು ವಹಿಸಿದರು.

ನಂ. ೯೯.—೧೯೨೦ನೇ ಮಾರ್ಚಿ ೨೬ನೇ ತಾರೀಖು ಮೊದಲು ಜಾರಿಗೆ ಬರುವಂತೆ ಫ್ರೇಜರ್‌ಪೇಟೆ ಸಬ್‌ಡಿವಿಜನ್ ಪೊಲೀಸ್ ಅಸಿಸ್ಟೆಂಟ್ ಕಮಿಷನರ್ ಮೆ|| ಜೆ. ಜೆ. ನಾಷ್‌ಯವರಿಗೆ, ೧೯೨೦ನೇ ಇಸವಿ ಏಪ್ರಿಲ್ ೧೭ನೇ ಮುಕ್ಕಾಂ ೯೧ನೇ ನಂಬರ್ ಗವರ್ನಮೆಂಟ್ ಇಷ್ತಿಹಾರ್ ಮೂಲಕ ಕೊಡಲ್ಪಟ್ಟ ಮೂರು ತಿಂಗಳ ಫರ್ಲೋ ರಜಾ ಜತೆಯಲ್ಲಿ ಮತ್ತು ಎರಡು ತಿಂಗಳಿಗೆ ಜಾಸ್ತಿ ಮಾಡಲ್ಪಟ್ಟಿರುತ್ತದೆ.

ನಂ|| ೧೦೦.—ಮಿಲಿಟರಿ ಸೆಕ್ರೆಟರಿಯವರ ಅಸಿಸ್ಟೆಂಟರಾದ ಮೆ|| ದೇವರಾಜೇ ಅರಸಿನವರು ೧೯೧೯ನೇ ಡಿಸೆಂಬರ್ ೨ನೇ ತಾರೀಖಿನಲ್ಲಿ ಕೆಲಸದ ಮೇಲೆ ಹಾಜರಾದರಾಗಿ, ೧೯೨೦ನೇ ಇಸವಿ ಫೆಬ್ರವರಿ ೨೬ನೇ ಮುಕ್ಕಾಂ ೯೦೫ನೇ ನಂಬರ್ ಇಷ್ತಿಹಾರ್ ಮೂಲಕ ಮಂಜೂರ್ ಮಾಡಲ್ಪಟ್ಟ ರಜಾ ಪೈಕಿ ಉಳಿದ ದಿವಸಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ.

SUMMARY OF NEWS
ವೃತ್ತಾಂತಸಂಗ್ರಹವು.

ಚೋರಗಾಡಿನಲ್ಲಿ ನಾಯರ್ ಜಾತಿಯವನೊಬ್ಬನು ಒಬ್ಬ ನಾರೀಮಣಿಯನ್ನು ಮೋಹಿಸಿದ್ದು, ಕಡೆಗೆ ಆಶಾಭಂಗವಾದ್ದರಿಂದ, ಅವನು ತನ್ನ ಮನೆಯ ಹಿತ್ತಲಿನ ತೋಟದಲ್ಲಿ ಹಳ್ಳ ತೋಡಿ ಅದರಲ್ಲಿ ಸೌದೆ ಹಾಕಿ ಬೆಂಕಿ ಹತ್ತಿಸಿ ಕಡೆಗೆ ಅಗ್ನಿ ಪ್ರವೇಶ ಮಾಡಿಕೊಂಡನು.

ಇಂಗ್ಲೆಂಡಿನ ಪಾರ್ಲಿಮೆಂಟ್ ಸಭಾಸದರಿಗೆ ಯಾರಾದರು ವಿಜ್ಞಾಪನಾ ಪತ್ರಗಳನ್ನು ಬರೆದುಕೊಂಡರೆ ಅದು ೩ ಪೌನ್ಗಳ ತೂಕಕ್ಕಿಂತ ಹೆಚ್ಚಾಗಿರಕೂಡದು. ಒಂದುವೇಳೆ ಹೆಚ್ಚಾಗಿದ್ದರೆ ಇಂಡಿಯನ್ ಪೋಸ್ಟಾಫೀಸಿನವರು ಅದನ್ನು ವಾಪಸ್ ಮಾಡುತ್ತಾರೆ.

ಅಮೇರಿಕಾ ಖಂಡದಲ್ಲಿರುವ ನಯಾಗರ ಎಂಬ ಜಲಪಾತದ ಪ್ರವಾಹದಲ್ಲಿ ಶೇಖರಿಸಿಕೊಂಡು ಬರುವ ದೊಡ್ಡ ಮಾದರಿಯ ಮಂಜುಗಡ್ಡೆಗಳು ಕಲ್ಲಂಗಡಿ ಹಣ್ಣಿನಷ್ಟು ಗಾತ್ರವಿರುತ್ತವೆ. ಸಣ್ಣ ಹಣ್ಣುಗಳು ನಿಂಬೇ ಹಣ್ಣಿನಷ್ಟು ಗಾತ್ರವಿರುತ್ತವೆ. ಅಲ್ಲಿ ಮಾಮೂಲು ವರ್ಷಕ್ಕೆ ೩ ಬೀಡು ಬೀಳುತ್ತವೆಂದು ಅನುಭವಕ್ಕೆ ಬಂದಿದೆ.

ಅಮೇರಿಕಾದಲ್ಲಿ ಒಬ್ಬ ಯಂತ್ರಜ್ಞನು ಒಂದು ಟೆಲಿಫೋನನ್ನು ತಯಾರು ಮಾಡಿದ್ದಾನೆ. ಅದರೊಳಗೆ ಫೋಟೋಗ್ರಾಫ್ ತೆಗೆಯುವಂತೆ ಒಂದು ಯಂತ್ರವಿರುತ್ತದೆ. ಆ ಯಂತ್ರಕ್ಕೆ ಕೀಲಿ ಕೊಟ್ಟರೆ ತಕ್ಷಣ ಮಾತನಾಡುವ ಟೆಲಿಫೋನಿನ ಭಾಗವನ್ನು ತೆರೆದು ನೋಡುತ್ತಾ ಕೂತಿರುವ ಒಂದು ಛಾಯೆಯು ಎದುರಿಗೆ ಬರುವರಿಗೆಲ್ಲಾ ಕಾಣುತ್ತಿರುತ್ತದೆ.

ಉತ್ತರ ಮತ್ತು ದಕ್ಷಿಣ ಅಮೇರಿಕಾ ಖಂಡಗಳ ಮಧ್ಯೆ ಪನಾಮಾ ಎಂಬ ಒಂದು ಭೂಸಂಧಿ ಇದೆಯಷ್ಟೆ. ಇದನ್ನು ಅಗೆದು ಇದಕ್ಕೆ ಪಶ್ಚಿಮದಲ್ಲಿರುವ ಪೆಸಿಫಿಕ್ ಸಾಗರವನ್ನೂ ಪೂರ್ವದಿಕ್ಕಿನಲ್ಲಿರುವ ಅಟ್ಲಾಂಟಿಕ್ ಸಾಗರವನ್ನೂ ಕೂಡಿಸಬೇಕೆಂದು ಫ್ರೆಂಚ್ ಕಂಪೆನಿಯವರು ೩ ಕೋಟಿ ರೂಪಾಯಿಗಳ ಅಂದಾಜು ಮಾಡಿ ತಮ್ಮ ಸರ್ಕಾರಕ್ಕೆ ತಿಳಿಸಿರುತ್ತಾರೆ.

ಪೆನ್ಷನ್ ಪಡೆದುಕೊಂಡ ಸರ್ಕಾರದ ನೌಕರರನ್ನು ದಿನಗೂಲಿಯಾಗಿ ಏನಾದರು ಸರ್ಕಾರೀ ಕೆಲಸದಲ್ಲಿ ಇಟ್ಟುಕೊಳ್ಳಬಹುದೋ ಬಾರದೋ ಎಂಬದಾಗಿ ಫಾರೆಸ್ಟ್ ಕನ್ಸರ್ವೇಟರಿಗೆ ಅನುಮಾನ ಬಂದು ಈ ವಿಷಯದಲ್ಲಿ ಗವರ್ನ್ಮೆಂಟಿನವರ ಸಲಹೆ ಕೇಳುವದಕ್ಕಾಗಿ ಮೇಲಕ್ಕೆ ಬರೆದಿರಲು ಗವರ್ನಮೆಂಟಿನವರು ಪೆನ್ಷನ್‌ದಾರರನ್ನು ದಿನಗೂಲಿಯಾಗಿ ಇಟ್ಟುಕೊಳ್ಳಬಹುದೆಂದು ಅಭಿಪ್ರಾಯ ಕೊಟ್ಟರು.

ಯುರೋಪ್ ಅಮೇರಿಕಾ ಖಂಡಗಳಲ್ಲಿ ಮಹಮ್ಮದೀಯರ ಮತ ವ್ಯಾಪಿಸುತ್ತಿದೆ ಎಂಬ ವಾದ ಇದೆ ಎಂಬದಾಗಿ ತಿಳಿದು ಕೊಂಡು ವೆಸ್ಟ್‌ಮಿನಿಸ್ಟರ್ ಲಾ ಸ್ಕೂಲ್ ಕೆಲಸದಲ್ಲಿದ್ದ ರಿಯಾಜ್ ಅಲೀ ಶಾ ಎಂಬುವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು ಪಾದ್ರಿಗಳಂತೆ ತಾವು ಬೋಧಿಸುವದಕ್ಕೆ ಅಮೇರಿಕಾ ಖಂಡಕ್ಕೆ ಹೊರಡುವದಾಗಿದ್ದಾರೆ. ಇವರಂತೆ ಅಹಮದಾಬಾದ್ ಹುಸೇನ್ ಸಾಹೇಬರು ಕೂಡ ಯುರೋಪ್ ಖಂಡಕ್ಕೆ ಹೊರಡುವರಂತೆ.

ವಿದ್ಯಾರ್ಥಿಗಳು ತಾವು ಪರೀಕ್ಷೆಯಲ್ಲಿ ತೇರ್ಗಡೆಯಾಗಲಿಲ್ಲವೆಂಬ ಚಿಂತೆಯಿಂದ ಆತ್ಮಹತ್ಯೆಯನ್ನು ಮಾಡಿಕೊಳ್ಳುವ ಪದ್ಧತಿಯು ದಿನೇದಿನೇ ವೃದ್ಧಿಯಾಗುತ್ತಲಿರುವದು. ಕಲ್ಕತ್ತಾ ಪಟ್ಟಣದಲ್ಲಿ ಹೈಕೋರ್ಟ ಟ್ರಾನ್ಸಲೇಟರ್ ಬಾಬು ಗೋವಿಂದ ಚಂದ್ರದಾಸ್ ಯವರ ಮನೆಯಲ್ಲಿ ೨೨ ವರ್ಷದ ವಿದ್ಯಾರ್ಥಿಯೊಬ್ಬನು ಕಳೆದ ಎಫ್. ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಲಿಲ್ಲವೆಂದು ಗೂಢವಾಗಿ ಅಫೀಮನ್ನು ತಿಂದು ಪ್ರಾಣವನ್ನು ಬಿಟ್ಟಂತೆ ತಿಳಿದು ಬರುತ್ತಿದೆ.

ಶ್ರೀರಾಮಪುರದ ಇಂಗ್ಲೀಷ್ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಲಿದ್ದ ೧೪ ವರ್ಷದ ಬಾಲಕನೊಬ್ಬನು ಅಕ್ರಮಕ್ಕೋಸ್ಕರವಾಗಿ ಆಗಾಗ್ಗೆ ಶಿಕ್ಷೆ ಕಲ್ಪಿಸುತ್ತಲಿರಲು, ತನ್ನ ಉಪಾಧ್ಯಾಯನ ಮೇಲಿನ ಹೊಟ್ಟೆ ಕಿಚ್ಚನ್ನು ತೀರಿಸಿಕೊಳ್ಳುವದಕ್ಕಾಗಿ, ಚೂರಿಯನ್ನು ತೆಗೆದುಕೊಂಡು ಅವನ ಕೆಳ ಹೊಟ್ಟೆಯಲ್ಲಿ ತಿವಿದನು. ಉಪಾಧ್ಯಾಯನು ಸ್ವಲ್ಪ ದಿವಸಗಳಲ್ಲೇ ಮೃತಪಟ್ಟನು. ಶಿಷ್ಯನ ವಿಷಯ ತೀರ್ಮಾನವಾಗುತ್ತಿರುವದು.

ಕಾಶಿಯೊಳಗಿನ ಪಂಡಿತರಾದ ಮಹಾಮಹೋಪಾಧ್ಯಾಯ ಬಾಮದೇವಶಾಸ್ತ್ರಿ ಎಂಬ ದೊಡ್ಡ ಜ್ಯೋತಿಶ್ಶಾಸ್ತ್ರಕೋವಿದರು ಕಳೆದ ತಿಂಗಳ ೭ನೇ ತಾರೀಖಿನ ದಿನ ಕಾಲವಶ್ಯರಾದರು. ಇವರ ಕೀರ್ತಿಯು ಹಿಂದೂಸ್ಥಾನದಲ್ಲಿ ಮಾತ್ರವಲ್ಲ, ಪರದೇಶದಲ್ಲಿ ಕೂಡ ಹಬ್ಬಿತ್ತು. ಇವರು ಕಾಶಿಯ ಸಂಸ್ಕೃತ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದು ಇವರ ವಿದ್ವತ್ತಿಗಾಗಿ ಇವರಿಗೆ ಸರ್ಕಾರದಿಂದ 'ಮಹಾಮಹೋಪಾಧ್ಯಾಯ' ಮತ್ತು ಸಿ. ಐ. ಇ. ಈ ಎರಡು ದೊಡ್ಡ ಬಿರುದುಗಳ ದೊರೆತಿದ್ದವು.

ಕಳೆದು ಹೋದ ಮಾ ಲಾಬೂಚೇರಿ ಎಂಬ ದೊಡ್ಡ ಮನುಷ್ಯರ ತೋಟದ ಜಮೀನಿನಲ್ಲಿ ರೈಲ್ವೆ ರಸ್ತೆಯು ಹಾಕುವಾಗ, ಆ ತೋಟವು ಎರಡು ಭಾಗವಾಗಿ ಹೋಯಿತು. ಆ ಕಾರಣದಿಂದಲೇ ಆ ರೈಲ್ವೆ ಕಂಪೆನಿಯವರು ಮಾಲೀಕರಿಗೆ ೩೦,೦೦೦ ಪೌನ್ ಅಂದರೆ ೩,೦೦,೦೦೦ ರೂಪಾಯಿಗಳ ನಷ್ಟವನ್ನು ಕಟ್ಟಿ ಕೊಟ್ಟರು. ಆದರೆ ತಮ್ಮ ತೋಟದ ಮಧ್ಯದಲ್ಲಿ ಹೀಗೆ ರೈಲ್ ಹೋಗುವದರಿಂದ ತಮಗೆ ವಿಶೇಷ ಲಾಭವಾಗಿರುವದೆಂದು ಆ ದೊಡ್ಡ ಮನುಷ್ಯರು ಸದರೀ ಹಣವನ್ನು ರೈಲ್ವೇ ಕಂಪೆನಿಯವರಿಗೆ ವಾಪಸ್ ಮಾಡಿದಾರಂತೆ.

ಪುಣೆ ಜಿಲ್ಲಾ ಹವೇಲಿ ತಾಲ್ಲೂಕಿನಲ್ಲಿ ಬಾಣೇರ ಎಂಬ ಹಳ್ಳಿಯಲ್ಲಿ ಒಂದಾನೊಂದು ದಿವಸ ಹೊಲದಲ್ಲಿ ದಾರಿಯ ಜೋಳದಪೈರು ಹೊತ್ತು ಮುಳುಗುವ ಸಮಯದಲ್ಲಿ ಮಳೆ ಬರಲಾರಂಭಿಸಲು ವಿಶ್ರಾಂತಿಗೋಸ್ಕರ ಅಲ್ಲಿರುವ ಒಂದು ಗುಡಿಸಲಿನಲ್ಲಿ ಮಾತುಗಳನ್ನಾಡುತ್ತ ಕೂತಿರುವ ೯

ಜನ ಪಕ್ಕಲಿಗರಲ್ಲಿ ೩ ಮಂದಿಗೆ ನುಂಚಾಬದ್ದು ತತ್ಕ್ಷಣವೇ ಮೃತಪಟ್ಟರಂತೆ. ಇಬ್ಬರು ಪ್ರಜ್ಞೆ ತಪ್ಪಿ ಬಿದ್ದವರು ಬಹಳ ಕಷ್ಟಸ್ಥಿತಿಯಲ್ಲಿರುತ್ತಾರಂತೆ. ಒಂದು ಎತ್ತೂ ಸಹ ಸತ್ತು ಹೋಯಿತಂತೆ.

ತಂತಿಯ ಮೂಲಕ ಸಮಾಚಾರವನ್ನು ಕಳುಹಿಸಬಹುದಲ್ಲದೆ, ಚಿತ್ರಗಳನ್ನು ಕಳುಹಿಸುವದೂ ಸಾಧ್ಯವಾಗಿರುವದು. ಆದರೆ, ನಿನ್ನೆಯದಿನ ಯೂರೋಪಿನಲ್ಲಿ ಒಂದು ಯುದ್ಧವು ನಡೆದಿದ್ದ ಪಕ್ಷದಲ್ಲಿ ಇಂಡಿಯಾದೇಶದಲ್ಲಿ ಈದಿವಸದ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಲನುಕೂಲಿಸುವಂತೆ ಆ ಯುದ್ಧದ ಪ್ರತಿಬಿಂಬವನ್ನು ತಂತಿಯ ಮೂಲಕ ಕಳುಹಿಸಬಹುದು. ಈರೀತಿಯಲ್ಲಿ ಕಳುಹಿಸಲ್ಪಟ್ಟಿರುವ ವಿಲಾಯತಿಯಲ್ಲಿ ಸಮುದ್ರತೀರದಲ್ಲಿರುವ ಒಂದಾನೊಂದು ಕಟ್ಟಡದ ಪ್ರತಿಛಾಯವನ್ನು ನಾವು ನೋಡಿದೇವೆ.

ಸೊಕೊಟಾಯ ಎಂಬ ಸ್ಥಳದಲ್ಲಿ ಮೇಜರ್ ವಾನಿ ಓಜಾಸ್ಸ್ ಎಂಬುವನು, ಕೆಲವು ರುಂಟರನ್ನು ಸೇರಿಸಿಕೊಂಡು, ಅಲ್ಲಿನ ಪ್ರಿನ್ಸು ಯವರನ್ನೂ, ಮಂತ್ರಿಗಳನ್ನೂ ವಧಿಸಿ, ಸರ್ಕಾರದ ಅಧಿಕಾರಗಳನ್ನೆಲ್ಲ ಬದಲಾಯಿಸಬೇಕೆಂದು ಪ್ರಯತ್ನಿಸುತ್ತಲಿದ್ದ ಗುಟ್ಟು ರಟ್ಟಾಗಿ, ಮೇಜರ್ ವಾನಿಓಜಾಸ್ಸ ಯವನನ್ನು ಗುಂಡಿನಿಂದ ಹೊಡೆಯುವದೆಂತಲೂ ಅವನ ಕಡೆ ಸೇರಿದ್ದವರಲ್ಲಿ ಪ್ರತಿ ಒಬ್ಬನಿಗೂ ೬ ತಿಂಗಳು ಮೊದಲು ೯ ವರ್ಷಗಳವರಿವಿಗೂ ಕಠಿಣ ಸಜಾ ಎಂತಲೂ, ಅಲ್ಲಿನ ಅಧಿಕಾರಿಗಳು ವಿಧಿಸಿರುವರು.

ಕೆಲವುದಿವಸಕಾರಭ್ಯ ಶರೀರದವೆ ೬ ವರ್ಷ ದಿಂದ ಮಾತ್ರ ಜನಿಸಿರುವ ಒಬ್ಬ ವಿಲಾಯತಿಯ ಸ್ತ್ರೀಯಳನ್ನು ಮುಂಬೈಯಲ್ಲಿರುವ "ಗೈಟಿ" ನಾಟಕ ಶಾಲೆಯಲ್ಲಿ ತೋರಿಸಿಟ್ಟಿದ್ದಾರೆ. ಸೊಂಟ ಹಿಡಿದು ಕೆಳಗಿನ ಭಾಗವೇ ಜನ್ಮತಃ ಅವಳಿಗಿಲ್ಲವು. ಇವಳು ತನ್ನನ್ನು ನೋಡಲಿಕ್ಕೆ ಬಾದವರ ಸಂಗಡ ಸಾತಿನಾಡುತ್ತಾಳೆ. "ಸೇಕಹ್ಯಾಂಡ್" ಸಹ ಕೊಡುತ್ತಾಳೆ. ಈ ಆಶ್ಚರ್ಯವನ್ನು ನೋಡಲಿಕ್ಕೆ ಬಹುಜನರು ಪ್ರತಿನಿತ್ಯವು ಹೋಗುತಲಿರುತ್ತಾರೆ. ಹೆಂಗಸರು ಸಹ ಹೋಗುತ್ತಾರೆ. ಕೆಲವರು ಮೂಢರು ಮಾತ್ರ ಇದೊಂದು ಅವತಾರಿಕವನ್ನುಂಟುಮಾಡೆಳಿಸಿ ಆ ಹುಡುಗಿ ಸ್ತ್ರೀಯಳನ್ನು ಪೂಜಿಸುತ್ತಾರಂತೆ.

ಆಸ್ಟ್ರೇಲಿಯಾ ದೇಶದಲ್ಲಿ ಸಿಡ್ನೀ ನಗರದ ಹಾಗೆ ಪ್ರತಿ ಒಬ್ಬರು ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕೋಸ್ಕರ ಪಾಠಶಾಲೆಗಳಿಗೆ ಕಳುಹಿಸಬೇಕೆಂದು ಒಂದು ರೂಲ್ ನಿಯಾಯಕವಾಗಿದೆ. ಹೀಗೆ ಇರುವಾಗ "ಅನ್ನನ್ನ ಬಟ್ಟೆಬಟ್ಟೆ" ಎಂದು ಹೇಳುವ ಮೇರೆ ತಿನ್ನುವದಕ್ಕೆ ಮಾರ್ಗವಿಲ್ಲದ ಒಬ್ಬಾನೊಬ್ಬ ಮನುಷ್ಯನಿಗೆ ೧೦ ಜನ ಮಕ್ಕಳಿದ್ದರು. ಆ ಮಕ್ಕಳನ್ನು ಸ್ಕೂಲ್ ಫೀ ಕೊಟ್ಟು ಸ್ಕೂಲಿಗೆ ಕಳುಹಿಸುವದಕ್ಕೆ ಮಾರ್ಗವಿಲ್ಲದೆ ಹೋಗಲು, ಸ್ಕೂಲ್ ಫೀ ಕೊಡುವದಕ್ಕೆ ತನಗೆ ಶಕ್ತಿ ಇಲ್ಲವೆಂದು ಹೇಳಿಕೊಂಡಾಗ್ಯೂ ಅಲ್ಲಿನ ನ್ಯಾಯಾಧಿಪತಿಯು ಸ್ವಲ್ಪವಾದರೂ ಅವನ ಹಾರಿದ್ರ್ಯ ದೋಷವನ್ನು ನೋಡಿ ಕನಿಕರ ಪಡದೆ, ಒಂದು ತಿಂಗಳ ಕಠಿಣಸಜಾ ವಿಧಿಸಿದನಂತೆ.

ಬಿಕಾರಿಯಲ್ಲಿ ಪ್ರಸಿದ್ಧರಾದ ಮೆ|| ಮರ್ರೆಸಾಹೆಬರು ಈಗ ಹಿಂದೆ ಕೆಲವು ವಾರಗಳ ಹಿಂದೆ, ಬಂಗಾಳಾದಲ್ಲಿ ಕಾಡು ಹುಲಿಯ ಬೇಟೆಗಾಗಿ ಹೊರಟು ಜೊತೆಯಲ್ಲಿ ತಮ್ಮ ಮಗಳನ್ನು ಕರೆದುಕೊಂಡು ಹೋದರು. ಅಲ್ಲಿ ಬಿಕಾರಿ ಮಾಡುತ್ತಲಿರುವಾಗ್ಗೆ ಒಂದು ಗಂಡು ಹುಲಿಯು ಅಕಸ್ಮಾತ್ತಾಗಿ ಬಂದು, ಮೇಲಕ್ಕೆ ಹಾರಿ, ಕುದುರೆಯನ್ನೂ, ಅದರಮೇಲೆ ಕೂತಿದ್ದ ಮರ್ರೆ ಸಾಹೇಬರನ್ನೂ ತಳ್ಳಿತು. ಇವರು ಕೆಳಗೆ ಬೀಳುವದರೊಳಗಾಗಿಯೇ ಹಿಂದೆ ಇದ್ದ ಇವರ ಮಗಳು ಹುಲಿಗೂ ತನ್ನ ತಂದೆಯ ಶರೀರಕ್ಕೂ ಮಧ್ಯೆ ನಿಂತು, ಅವರಿಗೆ ಹುಲಿಯಿಂದ ಇತರ ಹಿಂಸೆಯಾಗದಂತೆ ಕಾಪಾಡಬೇಕೆಂದು ಎತ್ನಿಸಲು, ತಯಾದ ರಹಿತಳಾಗಿದ್ದುದರಿಂದ ತನ್ನ ಬಳಿಯಲ್ಲಿದ್ದ ನಾಯನ್ನು ಬಿಟ್ಟು ಹುಲಿಯನ್ನು ಓಡಿಸಿ ಅನಂತರ ನೀರನ್ನು ಹುಡುಕಿ ತಂದು ತಂದೆಯನ್ನು ಎಬ್ಬಿಸಿದಳು.

ಬನ್ನೂ ನಿವಾಸಿಗಳಾದ ಹಿಂದುಗಳಿಗೂ ಮಹಮ್ಮದೀಯರಿಗೂ ಮನಸ್ತಾಪವು ಈಚೆಗೆ ವೃದ್ಧಿಯಾಗುತ್ತಲಿರುವದಲ್ಲದೆ, ಹೀಗೆಯೇ ಇನ್ನೂ ಸ್ವಲ್ಪ ಕಾಲ ವಿರುವದಾದರೆ ಅನರ್ಥಕಾರಿಯಾಗುವದರಲ್ಲಿ ಸಂಶಯವಿಲ್ಲವೆಂದು ತೋರುತ್ತದೆ. ಮೈರ್ಖಾನ್ ಎಂಬ ಮಹಮ್ಮದೀಯನೊಬ್ಬನು ಹಿಂದೂ ಬಾಲೆಯೊಬ್ಬಳನ್ನು ಗೂಢವಾಗಿ ಅಪಹರಿಸಿಕೊಂಡು ಹೋಗಿ ಬಲಾತ್ಕಾರದಿಂದ ತನ್ನ ಮತಕ್ಕೆ ಸೇರಿಸಿಕೊಳ್ಳಲು ಪ್ರಯತ್ನಿಸಿದನು. ಇದನ್ನು ತಿಳಿದ ಆ ಬಾಲೆಯ ಕಡೆಯವರು ಅಲ್ಲಿನ ಡೆಪ್ಯುಟಿ ಕಮ್ಮಿಷನರವರಿಗೆ ಅರ್ಜಿಯನ್ನು ಬರೆಯಲು, ಮೈರ್ಖಾನನು ಆ ಬಾಲೆಯನ್ನು ಅವರ ಮನೆಗೆ ಕಳುಹಿಸಿ ಬಿಡಬೇಕೆಂದು ಹುಕ್ಕುಂ ಮಾಡಿದರು. ಆದರೆ, ಮೈರ್ಖಾನನು ಇದಕ್ಕೆ ಒಡಂಬಡದಿರಲು, ಸರ್ಕಾರದವರು ಈತನನ್ನು ಹಿಡಿಸಿ, ಆ ತರುಣಿಯನ್ನು ಬಿಡುಗಡೆ ಮಾಡಿದರು. ಈ ಕಾರಣದಿಂದ ಪರಸ್ಪರ ವೈರವು ವೃದ್ಧಿಯಾಗುತ್ತಲಿರುವದು.

ಸಿಂಗಪುರದ ಜನರು ಗ್ರಾಮ್ಯತನದಲ್ಲಿ ಏನು ಅನರ್ಥ ಸಂಭವಿಸುವದೋ ಎಂದು ಭೀತರಾಗಿರುವರು. ಬಹು ಪ್ರಾಮ್ಯಮತಸ್ಥನಾಗಿಯೂ, ಪ್ರಸಿದ್ಧ ವರ್ತಕನಾಗಿಯೂ ಸಿಂಗಪುರದ ಮ್ಯುನಿಸಿಪಲ್ ಕಮ್ಮಿಷನರಾಗಿಯೂ, ಇರುವ ಸೈಯ್ಯದ್ ಮಹಮ್ಮದ್ ಅಲ್ಸಗಾಪ್ ಎಂಬಾತನನ್ನು ಸರ್ಕಾರದವರು ಈಗ ಜೈಲಿನಲ್ಲಿಟ್ಟಿರುವರು. ಕಾರಣವೇನೆಂದರೆ — ಈಗ ಕೆಲವು ದಿವಸಗಳ ಕೆಳಗೆ ಈಜಿಪ್ಟ್ ದೇಶದಿಂದ ಯೂರೇಷಿಯನ್ ತರುಣಿಯೊಬ್ಬಳು ತಂದೆ ತಾಯಿಗಳೊಡನೆ ಸಿಂಗಪುರಕ್ಕೆ ಬಂದಳು. ಅಲ್ಲಿಂದ ಮುಂದೆ ಪ್ರಯಾಣಕ್ಕೆ ಹೋಗಲು ಅನುಕೂಲಿಸದೆ ಸ್ವಲ್ಪ ಕಾಲ ಅಲ್ಲಿಯೇ ತಂಗಿದ್ದರು. ಆ ಯೂರೇಷಿಯನ್ ರಿಗೂ, ಈ ಮಹಮ್ಮದೀಯ ದೊಡ್ಡ ಮನುಷ್ಯನಿಗೂ ಕೆಲವು ದಿವಸಗಳು ನಡೆದವು. ಈ ಮಧ್ಯೆ ಈತನು ಆ ಯೂರೇಷಿಯನ್ ತರುಣಿಯನ್ನು ಮೋಹಿಸಿ, ಗುಟ್ಟಾಗಿ ಮದುವೆಯಾದ್ದಲ್ಲದೆ, ಸ್ವಲ್ಪ ದಿವಸಗಳ ಮೇಲೆ ಬ್ರೂಣಹತ್ಯೆ ಮಾಡಲೆತ್ನಿಸಿದನು. ಈಗ ಗುಟ್ಟು ರಟ್ಟಾಗಿರುವದು.

ದಕ್ಷಿಣ ಹೈದರಾಬಾದಿನಲ್ಲಿ ನಿಜಾಮ್ ಸರ್ಕಾರದವರು ಪಾಲಿ ಹಿಡಿದು ಹೋಗುತ್ತಿರುವಾಗ್ಯೆ ಎಮರಿಗೆ ಮೂರು ಬಂದಿ ತಂದು ಮುಂದೆ ನ್ಯಾಯಾಧೀಶರು ಟಾಂಗೆಯಲ್ಲಿ ಕುಳಿತು ಬರುತ್ತಿದ್ದರು. ಆದರೆ ಜನ ರೂಢಿಯ ಪ್ರಕಾರ ನಿಜಾಮರ ಸ್ವಾರಿಯನ್ನು ನೋಡಿದ ಕೂಡ್ಲೆ ಈ ತಾಂಪ್ರ ಮುಖಸ್ಥರು ಟಾಂಗೆಯಿಂದ ಕೆಳಗೆ ಇಳಿದು ನಿಜಾಮರಿಗೆ ನಮಸ್ಕರಿಸಲಿಲ್ಲವೆಂದು ಬಂದು ನಿಜಾಮರ ಹತ್ತಿರ ಇದ್ದ ಒಬ್ಬ ಸಿದ್ದೀ ಜಾತಿಯ ಶಿಪಾಯಿಯು ರೋಷವಟ್ಟು ತನ್ನ ಕೈಯಲ್ಲಿದ್ದ ಹಿರಿದ ಕತ್ತಿಯಿಂದ ಟಾಂಗೆಯಲ್ಲಿ ಕೂತಿದ್ದ ಜನರಿಗೆ ಹೊಡೆದನು. ಅದರಿಂದ ಆ ಹಾಂಗೆಯು ಹೊರಳಿಬಿದ್ದು ಅದರಲ್ಲಿಯ ಜನರಿಗೆ ವಿಶೇಷ ಘಾಯಗಳು ಆಗಿರುತ್ತವೆ. ಇದಕ್ಕಾಗಿ ನಿಜಾಮು ಸಾಹೇಬರು ಇನ್ನೂ ತಮ್ಮ ದುಃಖವನ್ನು ಪ್ರದರ್ಶಿಸಲಿಲ್ಲ, ಅಥವಾ ಈ ಸಿದ್ದೀ ಶಿಪಾಯಿಗೆ ಶಿಕ್ಷೆಯನ್ನು ಮಾಡಲಿಲ್ಲ. ಆದ್ದರಿಂದ ಅಲ್ಲಿಯ ಯುರೋಪಿಯನ್ನರೊಳಗೆ ಬಹಳ ಅಸಮಾಧಾನ ಉಂಟಾಗಿರುತ್ತದೆ ಎಂದು ಪುಣೇ ವೈಭವಕರ್ತರು ಬರೆಯುತ್ತಾರೆ.

EXTRACTS

ಒಂದಾನೊಂದು ಪತ್ರಿಕೆಯ ಹಿಂದೂ ಜಾತಿ ಬಾತಮೀದಾರನೊಬ್ಬನು ಬರೆಯುತ್ತಾನೇನೆಂದರೆ — ಢಾಕಾ ಡಿಸ್ಟ್ರಿಕ್ಟಿಗೆ ಸೇರಿದ ಬಯರೋಡಿ ಎಂಬ ಸ್ಥಳದಲ್ಲಿ ಪ್ರಸಿದ್ಧನಾದ ವಿರಾಗಿಯೊಬ್ಬನಿರುತಲಿದ್ದನು. ಆತನಿಗೆ ವಯಸ್ಸು ೧೫೭ ವರ್ಷಗಳು. ಆತನು ಈಚೆಗ ಸಮಾಧಿಯಂ ಸೇರಿದನು. ಆತನ ಹೆಸರು ಲೋಕನಾಥ ಘೋಷಾಲ್ ಎನ್ನುವರು. ಆತನು ಜಾತಿಯಲ್ಲಿ ಬ್ರಾಹ್ಮಣನು, ಪಶ್ಚಿಮ ಬಂಗಾಳ ದೇಶದವನು. ಈ ಮಹಾತ್ಮನು ಹನ್ನೊಂದನೆಯ ವರ್ಷದಲ್ಲಿ ಉಪನಯನವಾದ ಕೂಡಲೆ ಮನೆಯಂ ಬಿಟ್ಟುಹೊರಟು ಅವಧೂತಾಶ್ರಮವು ಸ್ವೀಕರಿಸಿ, ಅರಣ್ಯಗಳಲ್ಲೂ ಪರ್ವತ ಪ್ರಾಂತಗಳಲ್ಲೂ ಸಂಚರಿಸುತ ಭಗವಧ್ಯಾನಪರನಾಗಿರುತಲಿದ್ದನೆಂದು ಹೇಳುತ್ತಾರೆ. ಈತನು ಮಕ್ಕಾವಿಗೆ ಹೋಗಿ ಅಲ್ಲಿ ಶಿವದರ್ಶನ ಮಾಡಿಕೊಂಡು ಬಂದನು. ಠರುವಾಯ ತಿಬೆಟಿ, ಕಾಬೂಲ್, ಚೈನಾ, ಸಿಲೋನ್, ಮೊದಲಾದ ದೇವತಾ ಸಾನ್ನಿಧ್ಯವಿರುವ ಸ್ಥಳಗಳೆಲ್ಲ ಹೋಗಿ ಬಂದನು. ತಿಬೆಟಿನಲ್ಲಿ ಅನೇಕ ಪ್ರಳಯಗಳನ್ನೂ ಅನೇಕಸೃಷ್ಟಿಯನ್ನೂ ನೋಡಿದ ವಯೋವೃದ್ಧರಾದ ಮಹಾ ಪ್ರಾಜ್ಞ ಋಷಿಗಳು ಸಾತಿಶಯಗಳನ್ನೆಲ್ಲ ನಿರ್ಮಿಸಿ ಈಶ್ವರನ ಧ್ಯಾನದಲ್ಲಿ ಕೇವಲ ಆಸಕ್ತರಾದ ಮಹಾತ್ಮರ ದರ್ಶನವು ತನಗಾಯಿತೆಂದು ಹೇಳುತ್ತಾರೆ. ಕಡೇ ಕಾಲದಲ್ಲಿ ಏಕಾಂಗಿಯಾಗಿ ಜನಬಾಹುಳ್ಯವಿಲ್ಲದ ಒಂದು ಸಣ್ಣ ಗ್ರಾಮದಲ್ಲಿ ವಾಸ ಮಾಡುತಲಿದ್ದನು. ಅಲ್ಲಿನ ಜನರು ಬಹಳ ಗೌರವದಿಂದ ನೋಡುತಲಿದ್ದರು. ರೋಗಿಗಳ ಸಂಕಟ ಪರಿಹಾರ ಮಾಡುವದರಲ್ಲಿ ಆತನ ಶಕ್ತಿಯು ಅದ್ಭುತವಾದದ್ದು. ಬಹಳ ಸದಭ್ಯರೆನಿಸಿರುವ ಡಾಕ್ಟರುಗಳಿಗೆ ಅಸಾಧ್ಯವಾದ ರೋಗಗಳನ್ನು ಔಷಧವಿಲ್ಲದೆ ತನ್ನ ಹಸ್ತಸ್ಪರ್ಶದಿಂದ ನಿವೃತ್ತಿ ಮಾಡುತಲಿದ್ದನು. ರೋಗಿಯನ್ನು ತನ್ನ ಕೈಯಿಂದ ಮುಟ್ಟಿ ನಿನಗೆ ರೋಗ ನಿವೃತ್ತಿಯಾಯಿತು ಎಂದು ಹೇಳಿದ ಕೂಡಲೇ ಅದೇ ರೀತಿ ಯಾಗಿ ಸಕಲ ಸೌಖ್ಯವೂ ಉಂಟಾಗುತಲಿದ್ದು ವಿದ್ಯಾವಂತರಾದ ಬಂಗಾಳಿಗಳು ಸಹ ಹೀಗೆಯೇ ನಂಬಿದ್ದರು. ಈ ಸಿದ್ಧಪುರುಷನು ಶಿಷ್ಯರಿಗೆ ಉಪದೇಶ ಮಾಡದೆ ದೇಹ ತ್ಯಜಿಸಿದನು. ಈ ಬ್ರಹ್ಮಚಾರಿಯ ಮಹಾತ್ಮ್ಯವನ್ನು ದೇಶಭಾಷಾ ವೃತ್ತಾಂತ ಪತ್ರಿಕೆಗಳು ಬಹುಮಾನಿಸುತ್ತಿರುವವೆಂದು.

ನ್ಯಾಯ ಶಾಸ್ತ್ರದಲ್ಲಿ ಪರಿಣತರಾಗಿರತಕ್ಕವರು ಈ ಮುಂದಿನ ಅಂಶವನ್ನು ಯಾವ ರೀತಿಯಲ್ಲಿ ತೀರ್ಮಾನಿಸಿರುವರೋ ಸಿದ್ಧಪಡಿಸಿಯವು. — ೧೮೫೦ ನೇ ಇಸವಿಯಲ್ಲಿ ನ್ಯೂಯಾರ್ಕ್ ಪಟ್ಟಣದ ವರ್ತಕನಾದ ಖಿಂಟ್ ಆಫ್ ಸ್ಟೂವರ್ಟ್ ಎಂಬವನು ಅಕಸ್ಮಾತ್ತಾಗಿ ಅದೃಶ್ಯನಾದನು. ಆ ಸ್ಥಳದ ಸಮೀಪ ತೀರದಲ್ಲಿ ಈತನ ವಸ್ತ್ರಗಳೂ, ಗಡಿಯಾರವೂ, ಜೇಬಿನಲ್ಲಿ ಕೆಲವು ಹಣವೂ ಕಂಡು ಇದ್ದವು. ಇವನ್ನು ತಿಳಿದ ಆತನ ಪತ್ನಿಯೂ ಮಕ್ಕಳೂ, ಇವರಲ್ಲದೆ ಇತರರು ಸಹ ನಾಪತ್ತೆಯಾಗಿ ಹೋದ ಆತನು ಆ ನದಿಯಲ್ಲಿ ಬಿದ್ದು ಹೋಗಿರಬಹುದೆಂದು ನಿರ್ಧರಿಸಿದರು. ಸ್ವಲ್ಪ ದಿವಸಗಳ ತರುವಾಯ ದಡದ ಬಳಿಯಲ್ಲಿ, ಗುರುತಿಲ್ಲದೆ ಕೊಳತಿದ್ದ ಶವವೊಂದು ಸಿಕ್ಕಲು, ಆತನ ಪತ್ನಿಯು ಇದೇ ತನ್ನ ಪತಿಯ ದಾಗಿರುವದೆಂದು ಊಹಿಸಿ, ಅದನ್ನು ದಹನ ಮಾಡಿದಳು. ಛೆರಿಟಿ ಆಫ್ ಸ್ಟೂವರ್ಟ್ ಎಂಬುವನು ಸತ್ತನೆಂದು ತಿಳಿಯಲು ಅಲ್ಲಿನ ಲೈಫ್ ಇನ್ಷೂರೆನ್ಸ್ ಕಂಪನಿಯವರು ೩,೦೦೦ ಪೌನ್ ಗಳನ್ನು ಈ ವಿಧವೆಗೆ ಕೊಟ್ಟರು. ಇನ್ನೂ ಸ್ವಲ್ಪ ದಿವಸಗಳ ತರುವಾಯ ಈಕೆಯು ಮತ್ತೊಂದು ಸ್ಥಳಕ್ಕೆ ಹೋಗಿ ಅಲ್ಲಿ ೧೮೬೫ ನೇ ಇಸವಿಯಲ್ಲಿ ಮತ್ತೊಬ್ಬನನ್ನು ವರಿಸಿದಳು. ಈ ಎರಡನೇ ಮದುವೆಯಿಂದ ಈಕೆಗೆ ೫ ಮಕ್ಕಳು ಆಗಿರುವರು. ಇವರಲ್ಲಿ ಕಿರಿಯ ಮಗಳಿಗೆ ಈಗ ೧೪ ವರ್ಷಗಳು. ಸತ್ತುಹೋದನೆಂದು ಎಲ್ಲರೂ ಭಾವಿಸಿದ್ದ ಈತನು ಈಗ ಬಂದು ತನ್ನ ಆಸ್ತಿಯನ್ನೆಲ್ಲಾ ಕೊಡಬೇಕೆಂದು ತನ್ನ ಪೂರ್ವದ ಯುವತಿಯನ್ನು ಕೇಳುತ್ತಾನೆ. ಈತನು ಕಾರಣಾಂತರಗಳಿಂದ ಇಷ್ಟು ವರ್ಷಗಳು ಯೂರೋಪಿನಲ್ಲಿ ಇದ್ದಂತೆಯೂ ಮುಖ್ಯವಾಗಿ ಗ್ರೀಸ್ ದೇಶದಲ್ಲಿ ಇದ್ದಂತೆಯೂ ಹೇಳುವದಲ್ಲದೆ, ನಿಜಾಂಶವನ್ನು ಹೇಳಲು ಒಡಂಬಡುವದಿಲ್ಲ. ಈಕೆಯ ಎರಡನೇ ಮದುವೆಯು ನ್ಯಾಯಬದ್ಧವೆ? ಎರಡನೇ ಪತಿಯಿಂದ ಹುಟ್ಟಿದ ಮಕ್ಕಳು ತಮ್ಮ ತಂದೆಯ ಸ್ವತ್ತುಗಳಿಗೆ ಬಾಧ್ಯರೆ? ಲೈಫ್ ಇನ್ಷ್ಯೂರೆನ್ಸ್ ಕಂಪನಿಯವರ ವಿಷಯವೇನು? ಛೆರಿಟಿ ಸ್ಟೂವರ್ಟ್ ಎಂಬವನಿಗೆ ಅವನ ಆಸ್ತಿಗಳು ಸಲ್ಲತಕ್ಕವುಗಳೆ? ಇವುಗಳನ್ನೆಲ್ಲಾ ನಿಶ್ಚೈಸತಕ್ಕದ್ದು ಜಡ್ಜಿಯವರಿಗೆ ಸೇರಿರುವದು. ಆದರೆ, ಸ್ಟೂವರ್ಟ್ ಎಂಬಾತನು ಯಾರೋ ಒಬ್ಬ ಸ್ತ್ರೀಯಲ್ಲಿ ಅನುರಾಗ ಯುಕ್ತನಾಗಿ, ತಾನು ಸತ್ತನೆಂದು ಸುಳ್ಳು ವರ್ತಮಾನವನ್ನು ಹುಟ್ಟಿಸಬೇಕೆಂದು, ಜನರನ್ನು ಹೀಗೆ ವಂಚಿಸಿ, ಈ ರೀತಿಯಲ್ಲಿ ನಡೆಸಿರಬಹುದೆಂದು ಅಮೆರಿಕಾ ದೇಶದ ಗೂಢಚಾರರು ಈ ಸಂಗತಿಯನ್ನು ಯೂರೋಪ್ ದೇಶದಲ್ಲಿ ವಿಚಾರಿಸುತ್ತಲಿರುವರು. ಮೊದಲನೇ ಪತ್ನಿಯು ಜೀವದಳಾಗಿರುವಾಗಲೇ ಇವನು ದ್ವಿತೀಯ ವಿವಾಹವನ್ನು ಈ ರೀತಿಯಾದ ವಂಚಕೆಯಿಂದ ನಡೆಸಿಕೊಂಡಿರುವದಾದರೆ ಇವನು ಸ್ವತ್ತಿಗೂ ಅನರ್ಹನಾಗಿಯೇ ಇರುವನು.

ಕೈಗಾರಿಕೆ ವಿದ್ಯೆಯಲ್ಲೂ ಶರೀರ ಶ್ರಮದಿಂದ ಆಗತಕ್ಕ ಕೆಲಸದಲ್ಲೂ ನಮ್ಮವರಿಗೆ ಉಂಟಾಗಿರುವ ಲೋಪವನ್ನು ಪರಿಹರಿಸಬೇಕೆಂದು ಯೋಚಿಸಿ ಬರೋದೆ ಗಾಯಕವಾಡ ಮಹಾರಾಜರವರು ನವರೀ ಪೇಟೆಯ ವಿದ್ಯೆಗಳಂ ಕಲಿಸುವದಕ್ಕಾಗಿ ಒಂದು ಶಾಲೆಯನ್ನು ಸ್ಥಾಪಿಸಬೇಕೆಂದು ಉದ್ದೇಶಿಸಿರುತ್ತಾರೆಂದು ಕೇಳುವದಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಈ ಕೆಲಸಕ್ಕೆ ಮಿ|| ಗುಜ್ಜರ್ ಎಂಬುವರನ್ನು ನಿಯಮಿಸಿರುತ್ತಾರೆ. ಇವರಿಗಿಂತ ಸದ ಘನವಂತರು ಯಾರು ಸಿಕ್ಕಲಾರರು. ಈ ದೊಡ್ಡ ಮನುಷ್ಯರು ಇಂಗ್ಲೆಂಡಿನಲ್ಲಿ ಈ ವಿದ್ಯೆಯನ್ನು ಅಭ್ಯಸಿಸಿರುತ್ತಾರೆ. ಇವರಿಗೆ ಬಟ್ಟೆಯ ಕೆಲಸ ಚೆನ್ನಾಗಿ ತಿಳಿಯುವದು. ಇವರಿಗೆ ಅನೇಕ ಕೆಲಸಗಳು ಇವರಿಗೆ ಅನುಭವ ಪೂರ್ವಕವಾದ ಜ್ಞಾನವು ಎಂದು ಪ್ರಶಸ್ತಿ ಪತ್ರಗಳನ್ನು ಕೊಟ್ಟಿರುವರು. ಇವರು ಇನ್ನು ವಿದ್ಯಾಭ್ಯಾಸಗಳನ್ನು ಕಲಿಸುವ ಶಾಲೆಯಲ್ಲಿ ಬಡಗಿ ಕೆಲಸ, ಕಬ್ಬಿಣದ ಕೆಲಸ, ಕಸಬಿಗಳ ಕೆಲಸ, ಬಣಗಿ ಕೆಲಸ, ನೇಯುವದು, ಇವು ಮೊದಲಾದವುಗಳನ್ನು ಹೇಳಿಕೊಡುವರು. ಕೈಗಾರಿಕೆಯ ಪದಾರ್ಥಗಳು ಹುಟ್ಟಿಸಲ್ಪಡುವವೆಂಬುದರಲ್ಲಿ ಸಂದೇಹವಿಲ್ಲವು. ನಮಗೆ ತಿಳಿಯಬರುವ ಪಟ್ಟಿಗೆಗಾಯಕವಾಡ ಮಹಾರಾಜರವರು ಈ ಭಾಗದಲ್ಲಿ ಎಷ್ಟು ದ್ರವ್ಯವನ್ನಾದರೂ ವ್ಯಯ ಮಾಡುವದಕ್ಕೆ ಸಿದ್ಧರಾಗಿದ್ದಾರೆ. ಮಹಾರಾಜರವರು ಮೇಲಿನ ಶಿಕ್ಷಣ ವಿಷಯದ ಬಗ್ಗೆ ಯೂರೋಪ್ ದೇಶಕ್ಕೂ ಅಮೆರಿಕಾ ದೇಶಕ್ಕೂ ವಿದ್ಯಾರ್ಥಿಗಳಾದ ಮೂರು ನಾಲ್ಕು ಮಂದಿ ಬಾಲಕರನ್ನು ಕಳುಹಿಸಿ, ವಿಶೇಷ ಖರ್ಚಿಲ್ಲದೆಯೂ, ಅನ್ಯದೇಶಗಳಿಂದ ತರಿಸಬೇಕಾದ ಆವಶ್ಯಕತೆ ಇಲ್ಲದೆಯೂ ಇರುವ ಪದಾರ್ಥಗಳ ತಯಾರಿಗೆ ಬೇಕಾದ ವಿದ್ಯೆಗಳಂ ಕಲಿತು ಬರುವಂತೆ ಮಾಡುವರೆಂದು ಕೋರುತ್ತೇವೆ. ಇದು ಇಂಡ್ಯಾ ದೇಶಕ್ಕೆ ಕೇವಲ ಆವಶ್ಯಕವಾದದ್ದು. ಈ ಲೋಪವನ್ನು ಇಂಡ್ಯಾ ದೇಶದ ದೊಡ್ಡ ದೊಡ್ಡ ಅರಸರೂ ಪ್ರಮುಖರೂ ಎರಡು ಪಕ್ಷ ಒಂದು ಭಾಗದಲ್ಲಾದರೂ ಪರಿಹರಿಸುವದಕ್ಕೆ ಶಕ್ತರಾಗಿರುತ್ತಾರೆ. ಇಂಡ್ಯಾ ದೇಶದಲ್ಲಿ ಶಾರೀರಕ ಶ್ರಮದಿಂದ ಆಗಬೇಕಾದ ಕೆಲಸಗಳನ್ನು ಜೀವಿಸುವಂತೆ ಮಾಡುವದಾವು ನಮಗೆ ಕೇವಲ ಮುಖ್ಯವಾದದ್ದು. ಕಾಂಗ್ರೆಸುಗಳಿಂತಲೂ, ಕಾನ್ಫರೆನ್ಸುಗಳಿಂತಲೂ ಹೆಸರಿಟ್ಟುಕೊಂಡು ನಾವು ವೃಥಾ ನಮ್ಮ ಶಾರೀರಕ ಮಾನಸಿಕ ಶ್ರಮವನ್ನೆಲ್ಲ ವ್ಯರ್ಥ ಮಾಡುವದಕ್ಕಿಂತಲೂ ಮೇಲೆ ತಿಳಿಸಲ್ಪಟ್ಟಂತೆ ದೇಶದಮತ್ತು ಪ್ರಜೆಗಳ ಕ್ಷೇಮಾಭಿವೃದ್ಧಿಗೆ ಆವಶ್ಯಕಗಳಾದ ಕಾರ್ಯಗಳಂ ಮಾಡುವದುಚಿತವೆಂದು ತೋರುತಿದೆ.

Bangalore.—Printed and published at the Karnataka Press, No. 114, Srinivasa Mandiram Road, Pettah—1890

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XVII] BANGALORE —MONDAY, JULY 14, 1890 [No 28.

ಸಂಪುಟ ೧೭ | ಬೆಂಗಳೂರು — ಸನ್ ೧೮೯೦ನೇ ಇಸವಿ ಜೂಲೈ ೧೪ ನೇ ತಾರೀಖ್ ಸೋಮವಾರ. | ಸಂಚಿಕೆ ೨೮.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಮುಂಗಡ ವರ್ಷಕ್ಕೆ	8—0—0	9—0—0
[illegible]	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ

ಮುಂಗಡ ವರ್ಷಕ್ಕೆ	4—0—0	5—0—0
[illegible]	5—0—0	6—0—0

[illegible]

ಪ್ರಕಟನೆಯ ದರಗಳು

[illegible]

NOTICE

VAIDYASARA SANGRAHA

A TREATISE ON THE [illegible] OF HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

[illegible]

ಬೆಲೆ ಅಂಚೆ ಕೂಲಿ ಸಹಿತ ಒಂದಕ್ಕೆ ರೂ 5 0—0

[illegible]

ADVERTISEMENTS.

ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ಬಿಕರಿಗೆ ಸಿದ್ಧವಾಗಿವೆ. [illegible]

ಸಂಸ್ಕೃತ ಗ್ರಂಥಗಳು.

[illegible]

ಕನ್ನಡ ಗ್ರಂಥಗಳು

[illegible]

ನೋಟೀಸ್.

ಇದರಿಂದ ನಮ್ಮ ಚಂದಾದಾರರಿಗೂ ಇತರರಿಗೂ ತಿಳಿಸುವದೇನೆಂದರೆ — [illegible]

ಬೆಂಗಳೂರು ತಾ ೧೪ನೇ ಜುಲೈ ೧೮೯೦ } [illegible] ಕರ್ಣಾಟಕ ಪ್ರಕಾಶಿಕಾ

ನೋಟೀಸ್.

ಮನೆಗಳಲ್ಲಿ ಗಿಲಿಟ್ ಮಾಡುವದಕ್ಕೆ ಅನುಕೂಲವಾದ ಬೆಳ್ಳಿ ದ್ರಾವಕವು.

ಈ ಬೆಳ್ಳಿ ದ್ರಾವಕವು ನೈಜವಾದ ಬೆಳ್ಳಿ [illegible] ಇದರಿಂದ [illegible] ಇದು ಗಿಲಿಟ್ ಮಾಡುವದಕ್ಕಿಂತ [illegible]

ಇದರ ಕ್ರಯ ಸೀಸೆ ೧ ಕ್ಕೆ ೨—೮—೦

ಚಿನ್ನದ ದ್ರಾವಕವು.

ಇದು ಬೆಳ್ಳಿ, ಹಿತ್ತಾಳೆ, ತಾಮ್ರ ಮಣ್ಣಿನ ಪದಾರ್ಥಗಳ [illegible]

ಇದರ ಕ್ರಯ ಸೀಸೆ ೧ಕ್ಕೆ ೩—೮—೦

[illegible]

ನಾಟಕ ಕಥಾ ರತ್ನಮಾಲೆ.

ಈ ನೂತನವಾದ ಗ್ರಂಥವು [illegible] ಸಂಸ್ಕೃತ ನಾಟಕಗಳ [illegible] ಬೆಂಗಳೂರು ಸೆಂಟ್ರಲ್ ಕಾಲೇಜ್ ಅಸಿಸ್ಟೆಂಟ್ ಮಿ॥ ಬಿ. ಎಸ್. ಶ್ರೀನಿವಾಸ ರಾವ್, ಬಿ ಎ. [illegible]

ನೋಟೀಸ್

ವಿಕ್ಟೋರಿಯಾ [illegible]

ಕೆಲಸಕ್ಕೆ ಬಾರದ ಆಯುಧಗಳ ಮತ್ತು ಯಂತ್ರ ಸಾಮಾನುಗಳ ಹರಾಜು.

ದಕ್ಷಿಣ [illegible] ಕೆಲಸಕ್ಕೆ ಬಾರದ [illegible] ಯುದ್ಧಗಳ ಚಕ್ರಗಳು, ಬಂಡಿಗಳು, [illegible] ಗುಂಡು [illegible] ಇವೆಲ್ಲವು ಸೇರಿ ಕೆಲವು ಅನುಪಯುಕ್ತಗಳಾದ ಆಯುಧಗಳೂ ಯಂತ್ರಗಳೂ, ೧೮೯೦ನೇ ಇಸವಿ ಜುಲೈ ೧೭ನೇ ತಾರೀಖ್ ಮಧ್ಯಾಹ್ನ ಒಂದು ಘಂಟೆಗೆ, ಬೆಂಗಳೂರು [illegible] ಪಬ್ಲಿಕ್ ಹರಾಜ್ ಮೂಲಕ ವಿಕ್ರಯಿಸುವರು. ನಗದು ಹಣ ಹಾಜರ್ ಮಾಡಬೇಕು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA

MONDAY, JULY 14, 1890

೧೮೯೦ನೇ ಜುಲೈ ೧೪ ನೇ ಸೋಮವಾರ.

BIRTH OF A ANOTHER PRINCE

ಈ ವಿಕೃತಿ ಸಂವತ್ಸರ ಜ್ಯೇಷ್ಠ ಕೃಷ್ಣ [illegible] ಮಂಗಳವಾರದ ದಿನ ಬೆಳಗ್ಗೆ [illegible] ಲಗ್ನದಲ್ಲಿ ಶ್ರೀಮನ್ಮಹಾರಾಜ ರಾಜಾ [illegible] ಒಡೆಯರ್ ಬಹದ್ದೂರವರಿಗೆ [illegible] ಪುತ್ರೋತ್ಸವವಾದ ಶುಭ ವೃತ್ತಾಂತವು [illegible] ಇಲ್ಲಿಗೆ ತಿಳಿಯಬರಲು, [illegible]

ಗಿಹುಚೆಲ್ಪಟ್ಟಿತು ಮಧ್ಯಾಹ್ನಾನಂತರ ಸರ್ಕಾರಿ ಶಾಲೆಗಳಿಗೂ ನ್ಯಾಯಸ್ಥಳಗಳಿಗೂ ರಜಾಕೊಡಲ್ಪಟ್ಟಿತಲ್ಲದೆ ಆ ರಾತ್ರಿ ಕಲ್ಯಾಣೀ ಮೈದಾನಿನಲ್ಲಿಯೂ, ಕೋಟೆಯಲ್ಲಿಯೂ ಇತರ ಭಾಗಗಳಲ್ಲಿಯೂ ದೀಪೋತ್ಸವವು ನಡೆಸಲ್ಪಟ್ಟಿತು. ಮುಖ್ಯವಾಗಿ ಮೈಸೂರು ರಾಜವಂಶಕ್ಕೆ ಬಹುಕಾಲದಿಂದಂ ಟಾಗಿದ್ದ ಪ್ರಬಲತರವಾದ ಕೊರತೆಯು ಪ್ರಕೃತ ಮಹಾರಾಜರವರ ಕಾಲದಲ್ಲಿ ನಿವೃತ್ತಿಯಾದ ಬಗ್ಗೆ ಯೆಲ್ಲರೂ ಸಂತೋಷಿಸಬೇಕಾಗಿರುತ್ತದೆ. ಶ್ರೀಮನ್ಮಹಾರಾಜಾ ಚಾಮರಾಜೇಂದ್ರ ಒಡೆಯರವರು ೧೮೬೩ನೇ ಇಸವಿ ಫೆಬ್ರವರಿ ೨೨ನೇ ತಾರೀಖಿನಲ್ಲಿ ಅವತರಿಸಿದ್ದರಿಂದ ಈಗ ಅವರಿಗೆ ೨೭ ವರುಷಗಳ ವಯಸ್ಸಾಗಿರುವದು. ೧೮೭೮ನೇ ಇಸವಿ ಮೇ ೬ನೇ ತಾರೀಖಿನಲ್ಲಿ ವಿವಾಹ ಮಹೋತ್ಸವವು ಜರಿಗಿತು. ರಾಜ್ಯಾಧಿಪತ್ಯವಂ ಸ್ವಯಂ ಪರಿಗ್ರಹಿಸುವದಕ್ಕೆ ಪೂರ್ವಭಾವಿಯಾಗಿ ಅಂದರೆ ೧೮೮೧ನೇ ಇಸವಿ ಮಾರ್ಚ್ ೧೧ನೇ ತಾರೀಖಿನಲ್ಲಿ ಜ್ಯೇಷ್ಠಪುತ್ರಿಯಾದ ಜಯಲಕ್ಷ್ಮಮ್ಮಣ್ಣಿಯವರು ಅವತರಿಸಿದರು. ೧೮೮೩ನೇ ಇಸವಿ ಜೂನ್ ೮ನೇ ತಾರೀಖಿನಲ್ಲಿ ಕೃಷ್ಣಾಜಮ್ಮಣ್ಣಿಯವರುದ್ಭವಿಸಿದರು. ೧೮೮೪ನೇ ಇಸವಿ ಜೂನ್ ೪ನೇ ತಾರೀಖಿನಲ್ಲಿ ಯುವರಾಜರಾಗಿಯೂ ಕರ್ಣಾಟ ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗಿಯೂ ಇರುವ ಶ್ರೀಕೃಷ್ಣರಾಜ ಒಡೆಯರವರು ಪ್ರಾದುರ್ಭವಿಸಿದರು. ೧೮೮೬ನೇ ಇಸವಿ ನವಂಬರ್ ೨೬ನೇ ತಾರೀಖಿನಲ್ಲಿ ತೃತೀಯ ಪುತ್ರಿಯಾದ ಚೆಲುವಾಜಮ್ಮಣ್ಣಿಯವರು ಜನಿಸಿದರು. ೧೮೮೮ನೇ ಇಸವಿ ಜೂನ್ ೫ನೇ ತಾರೀಖಿನಲ್ಲಿ ದ್ವಿತೀಯ ಪುತ್ರರಾದ ಕಂಠೀರವ ನರಸರಾಜ ಒಡೆಯರವರುದ್ಭವಿಸಿದರು. ಸದ್ಯೋಜಾತರಾದ ಪ್ರಕೃತ ರಾಜಪುತ್ರರು ಮೂರನೆಯವರಾಗಿರುವದರಿಂದ ಅನರ್ಘ್ಯವಾದ ಈ ರಾಜವಂಶವು ತ್ರಿಸಂಖ್ಯಾತ್ಮಕಗಳಾದ ಪುತ್ರ ಪುತ್ರೀ ರತ್ನಗಳಿಂದಲಂಕೃತವಾಗಿ ಕಣ್ಗೊಳಿಸುತ್ತೆ ಪ್ರಕೃತಿ ಮಂಡಲಕ್ಕೆ ನೇತ್ರಾನಂದಕರವಾಗಿಯೂ ಹೃದಯೋಲ್ಲಾಸಕರವಾಗಿಯೂ ಇರುವದು. ಅತಿಪಿತೃವಾತ್ಸಲ್ಯ ಪೆಸಂಪನ್ನ ಹೃದಯರಾದ ನಮ್ಮ ಮಹಾರಾಜರವರಿಗೆ ಸ್ವಕುಟುಂಬ ಸದೃಶರಾದ ಪ್ರಜೆಗಳಲ್ಲಿ ಅನುರಾಗವು ವೃದ್ಧಿಯಾಗಲಿಕ್ಕೆ ರಾಜವಂಶದ ಉತ್ತರೋತ್ತರಾಭಿವೃದ್ಧಿಯೇ ಮುಖ್ಯಕಾರಣವಾದುದೆಂಬ ನಂಬಿಕೆಯೊಡನೆ ಯೆಲ್ಲರೂ ಅದನ್ನೇ ಅನವರತ ಅಂತಃಕರಣ ಅವರ ಶ್ರೇಯಃಪ್ರಾರ್ಥನೆಯಂ ಮಾಡುತಲಿದ್ದಾರೆ. ಪ್ರಸಕ್ತ ಶುಭೋದಂತವನ್ನಶೇಷ ಪ್ರಜೆಗಳಿಗೂ ತಿಳಿಯಪಡಿಸಿ ತನ್ಮೂಲಕ ತಮ್ಮ ಸಂತೋಷದಲ್ಲಿ ಅವರನ್ನು ಭಾಗಭಾಕ್ಕಗಳನ್ನಾಗಿ ಮಾಡಬೇಕೆಂಬ ಕುತೂಹಲದೊಡನೆ ಶ್ರೀಮನ್ಮಹಾರಾಜಾ ಸರ್ಕಾರದವರು ಇದರಡಿ ಕಂಡ ಇಸ್ತಿಹಾರ್‌ನಾಮೆಯಂ ಪ್ರಕಟಿಸಿ ಮಾಡಿರುತ್ತಾರೆ:—

ಇಸ್ತಿಹಾರ್‌ನಾಮೆ.

ಮೊಕ್ಕಾಂ ಮೈಸೂರ್, ತಾ|| ೮ನೇ ಜೂಲೈ ೧೮೯೦.

೪ ಘನವನ್ನು ಹೊಂದಿದ ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರಿಗೆ, ಸನ್ ೧೮೯೦ನೇ ಇಸವಿ ಜೂಲೈ ೮ನೇ ತಾರೀಖ್ ಮಂಗಳವಾರ ಪ್ರಾತಃಕಾಲ ೮—೩೦ ಘಂಟೆಯಲ್ಲಿ ಪುತ್ರೋತ್ಸವವಾದ ಶುಭಸಮಾಚಾರವನ್ನು ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲು ಶ್ರೀಮನ್ಮಹಾರಾಜಾ ಸರ್ಕಾರದವರು ಬಹಳವಾಗಿ ಸಂತೋಷಿಸುತ್ತಾರೆ, ಪರಮ ಶುಭಕರವಾದ ಈ ಸಂದರ್ಭದ ಗೌರವಾರ್ಥ ಈ ಸಂಸ್ಥಾನದ ದರೋಬಸ್ತು ಕಚೇರಿಗಳಲ್ಲಿಯೂ ಬರುವ ಮಂಗಳವಾರ ೧೯ನೇ ತಾರೀಖ್ ರಜಾ ದಿವಸದಂತೆ ಆಚರಿಸಲ್ಪಡತಕ್ಕದ್ದೆಂಬದಾಗಿ ಶ್ರೀಮನ್ಮಹಾರಾಜಾ ಸರ್ಕಾರದವರು ಆಜ್ಞಾಪಿಸುತ್ತಾರೆ."

ಹುಕುಂ ಬಮೋಜಿಬ್,

ಟಿ. ಆನಂದರಾವ್

ಚೀಫ್ ಸೆಕ್ರೆಟರಿ.

ಇದಕ್ಕೆ ಸೇರಿದಂತೆ ಪ್ರಕೃತ ಸಂದರ್ಭದಲ್ಲಿ ಮತ್ತೊಂದು ಶುಭ ವೃತ್ತಾಂತವನ್ನಿದರಡಿ ತಿಳಿಸಲಿಕ್ಕೆ ನಾವು ಅತ್ಯಂತ ಉತ್ಸಾಹಪೂರ್ಣರಾಗಿರುತ್ತೇವೆ, ಏನಂದರೆ.—

ಈಚೆಗೆ ಕಚ್ ಬಿಹಾರಿ ಸಂಸ್ಥಾನದ ಮಹಾರಾಜರವರಿಗೆ ಮರಳಿಯೊಂದು ಪುತ್ರರತ್ನವು ಜನಿಸಿ ಆಬಗ್ಗೆ ಪ್ರಬಲ ಉತ್ಸವಗಳು ನಡೆಯುತಲಿರುವಂತೆಯೂ, ಈ ಆವಿಶೇಷ ಸಂದರ್ಭದ ಬಗ್ಗೆ ಬಹುವಿಧ ದಾನ ಧರ್ಮಗಳು ನಡೆಸಲ್ಪಡುತಲಿರುವಂತೆಯೂ, ಸರ್ಕಾರ್ ಇಲಾಖೆಗಳಿಗೆಲ್ಲ ನಾಲ್ಕುದಿನಗಳ ರಜಾ ಕೊಡಲ್ಪಟ್ಟಂತೆಯೂ ಮಹಾರಾಜರವರು ಪ್ರಜೆಗಳಿಗೆ ಪ್ರಯೋಜನಕಾರಿಯಾಗಿರುವ ಕೆಲಸಗಳಿಗಾಗಿ ಬಹಳ ಅರ್ಥವ್ಯಯ ಮಾಡುವಂತೆ ಹುಕುಂ ಕೊಟ್ಟಿರುತ್ತಾರೆಂಕಲೂ ತಿಳಿದು ಈ ಸಮಯದಲ್ಲಿ ಸದರೀ ಮಹಾರಾಜರವರ ಪ್ರಜಾನುರಾಗವನ್ನೂ ಉಚಿತಜ್ಞತೆಯನ್ನೂ, ಔದಾರ್ಯವನ್ನೂ ಬಹಳ ಕೊಂಡಾಡುವೆವು.

THE LATE Mr. W. A. PORTER

ಈದೇಶದಲ್ಲಿ ಬಹುಕಾಲ ಶ್ರೀಮನ್ಮಹಾರಾಜರವರಿಗೆ ವಿದ್ಯಾ ಗುರುಗಳಾಗಿಯೂ ತರುವಾಯ ಅವರಪ್ರೈವೇಟ ಸೆಕ್ರೆಟರಿಯಾಗಿಯೂ ಇದ್ದು ಈಗ್ಯೆ ಮೂರುನಾಲ್ಕು ಸಂವತ್ಸರಗಳಹಿಂದೆ ಈ ದೇಶವಂಬಿಟ್ಟು ಸ್ವದೇಶಕ್ಕೆ ಹೊರಟುಹೋದ ಮಿ|| ಡಬ್ಲ್ಯು ಎ. ಪೋರ್ಟರ್‌ಯವರು ಕಳೆದತಿಂಗಳಲ್ಲಿ ಸ್ಕಾಟ್ಲ್ಯಾಂಡನೊಳು ಕಾಲಗತಿಯನ್ನೈದಿದರೆಂಬ ವೃತ್ತಾಂತವಂ ಕೇಳಿ ಬಹಳ ವಿಷಾದಿಸುವೆವು. ಮಿ|| ಪೋರ್ಟರ್‌ಯವರ ಬೋಧಕಶಕ್ತಿಯೂ ವಿದ್ಯಾಪ್ರಯುಕ್ತವಾದ ಖ್ಯಾತಿಯೂ ಇಂಗ್ಲಾಂಡ್ ಮತ್ತು ಇಂಡ್ಯದೇಶಗಳಲ್ಲಿ ಬಹಳ ಪ್ರಸಿದ್ಧಗಳಾಗಿದ್ದವು. ಇವರು ೧೫ ವರುಷಗಳ ಕಾಲಕ್ಕಿಂತ ಜಾಸ್ತಿಯಾಗಿ ಕುಂಭಕೋಣಂ ಕಾಲೇಜ್ ಪ್ರಿನ್ಸಿಪಲರಾಗಿದ್ದದಲ್ಲದೆ ಆಕಾಲದೊಳವರ ಕೈಕೆಳಗೆ ತರಬೇತಿಯಾದವರೆಲ್ಲರೂ ಬಹಳ ವಿದ್ಯಾವಂತರಾಗಿ ದೊಡ್ಡಪದವಿಯಲ್ಲಿರುತಲಿರುವರು. ಇದಲ್ಲದೆ ಸದರೀಕಾಲೇಜಿಗೆ ಈಗ ಪ್ರಖ್ಯಾತಿಯು ಕೀರ್ತಿ ಪ್ರಶಸ್ತ್ಯಗಳಿಗೆಲ್ಲ ಪ್ರಸಕ್ತದೊಡ್ಡಮನುಷ್ಯರೇ ಮುಖ್ಯ ಕಾರಣಭೂತರಾಗಿರುವರು. ಇವರ ಮರಣ ವೃತ್ತಾಂತವು ಅವರ ಶಿಷ್ಯರಿಗೂ ಅವರ ಇಷ್ಟಮಿತ್ರರಿಗೂ ತತ್ರಾಪಿ ಶ್ರೀಮನ್ಮಹಾರಾಜರವರಿಗೂ ವಿಶೇಷ ಖೇದವನ್ನುಂಟುಮಾಡದೆ ಹೋಗಿರಲಾರದೆಂದೆಣಿಸುತ್ತೇವೆ. ಗತಿಸಿದವರ ಸ್ಮರಣೆಯಂ ಶ್ರೀಮನ್ಮಹಾರಾಜರವರು ಯದೃಚ್ಛವಾಗಿಲ್ಲಿ ಊರ್ಜಿತಪಡಿಸುವರೋ ತಿಳಿಯಲಿಲ್ಲವು. ಸದರೀಯವರು ತಮಗೆ ವಿದ್ಯಾಗುರುಗಳಾಗಿದ್ದ ಗೌರವಾರ್ಥವಾಗಿಯಾದರೂ ಅಥವಾ ತಮ್ಮಂತಾವರು ಅವರಿಗೆ ಶಿಷ್ಯರಾಗಿದ್ದ ಗೌರವಾರ್ಥವಾಗಿಯಾದರೂ ಅವರ ಹೆಸರಿನಲ್ಲಿ ಈ ಪ್ರಾಂತ್ಯಗಳು ಒಂದು ಸ್ಕಾಲರ್‌ಷಿಪ್ಸ ಹೊಂದಿ ಅಂದರೆ ಪಟ್ಟಣಗಳಂತ ಬಂದು ಓದತಕ್ಕ ಅನಾಥರಾದ ಬಾಲಕರಿಗೆಲ್ಲ ಅನ್ನಾಹಾರಗಳ ಅನುಕೂಲ್ಯಕ್ಕಾಗಿ ವಿದ್ಯಾರ್ಥಿಗಳ ಶಾಲೆಯಂ ಸ್ಥಾಪಿಸಿದರೆ ಬಹಳ ಶ್ಲಾಘ್ಯವಾಗಿಯೂ ಗೌರವಾವಹವಾಗಿಯೂ ಲೋಕ ಹಿತಕರವಾಗಿಯೂ ಇರುವದೆಂದು ನಂಬುತ್ತೇವೆ.

Occasional Notes
ನೈಮಿತ್ತಿಕ ವಿಷಯನ್ಯಾಸ.

Taking of the Census—ಸನ್ ೧೮೯೧ನೇ ಇಸವಿ ಫೆಬ್ರವರಿ ೨೬ನೇ ತಾರೀಖ್‌ರಾತ್ರಿ ಇಂಡ್ಯದೇಶದಲ್ಲಿ ಜನಸಂಖ್ಯಾ ಲೆಕ್ಕ ತೆಗೆಯಲ್ಪಡುವದು.

Survey of a line of Railway.—ಮದರಾಸ್‌ನಿಂದ ನೆಲ್ಲೂರಿಗೆ ನೇರ್‍ಗೆ ಒಂದು ರೈಲುರೋಡ್ ಸ್ಥಾಪಿಸುವ ಉದ್ದೇಶವೊಡನೆ ಕ್ಷಿಪ್ರದಲ್ಲಿ ಅದರ ಸರ್ವೇ ಕೆಲಸಕ್ಕೆ ಪ್ರಾರಂಭಿಸಲ್ಪಡುವದೆಂದು ಕೇಳುತ್ತೇವೆ.

Utilisation of disbanded regiments ಈಚೆಗೆ ಒಡೆದುಹಾಕಲ್ಪಟ್ಟ ಮದರಾಸ್ ನೇಟಿವ್ ರಿಜಮೆಂಟುಗಳ ಶಿಪಾಯಿಗಳಂ ಮದರಾಸ್ ಪಟ್ಟಣದ ಪೋಲೀಸ್ ಶಿಬ್ಬಂದಿಯಲ್ಲಿ ಒಂದೆರಡನೇ ತರಗತಿ ಕಾನ್‌ಸ್ಟೇಬಲ್‌ಗಳಾಗಿ ಸೇರಿಸಿಕೊಳ್ಳುವಂತೆ ತಿಳಿಯಲಾದೆವು.

A recommendation approved—ನೀಲಗಿರಿಯಲ್ಲಿ ತಪ್ಪುಗಳಂ ವೃದ್ಧಿಪಡಿಸುವ ಕೆಲಸವು ಪ್ರಯೋಜನಕರವಾಗಿ ಕಂಡುಬರಲಿಲ್ಲವೆಂಬ ಕಾರಣದಮೇಲೆ ಅದನ್ನು ಕೆಗದುಹಾಕಬೇಕೆಂದು ಬೋರ್ಡಿನವರು ಮಾಡಿದ ಶಿಫಾರಸ್ಸನ್ನು ಮದರಾಸ್ ಗವರ್ನ ಮೆಂಟಿನವರು ಮಂಜೂರ್ಮಾಡಿರುತ್ತಾರೆ.

Strike of London Postmen and Policemen.—ಈಚೆಗೆಲಂಡನ್‌ಪಟ್ಟಣದ ಅಂಚೆ ಜವಾನರೂ ಪೋಲೀಸ್ ಶಿಬ್ಬಂದಿಗೆ ಸೇರಿದವರೂ ಒಗ್ಗಟ್ಟಿನಿಂದ ಕೆಲಸಗಳಿಗೆ ಹೋಗದೆ ಮುಷ್ಕರವಾದುದಲಿದ್ದು ಈಚೆಗೆ ಮರಳಿ ಸಮಾಧಾನಗೊಂಡು ತಮ್ಮತಮ್ಮ ಕೆಲಸಗಳಿಗೆ ಹೋಗುವದರಾಗಿದ್ದಾರೆ.

Dacoity—ಈತಿಂಗಳ೧ನೇ ತಾರೀಖ್‌ರಾತ್ರಿ ರುಗೂರ್ ಬಳಿ ಒಂದು ಗ್ರಾಮಕ್ಕೆ ಒಬ್ಬ ವರ್ತಕನು ಭತ್ತಾ ಖರೀದಿ ಮಾಡುವದಕ್ಕಾಗಿ ಹೋಗಿರಲು ಆಕಾಲದಲ್ಲಿ ದರೋಡೆಕಳ್ಳರು ಸದರೀ ಗ್ರಾಮಕ್ಕೆ ಇಳಿದಿದ್ದು ಅಲ್ಲಿನವರನೇಕರನ್ನು ಹೊಡೆದು ಘಾಯಪಡಿಸಿ ಸದರೀ ವರ್ತಕನಲ್ಲಿದ್ದ ೧೫೦೦ ರೂಪಾಯಿಗಳನ್ನು ದೋಚಿಕೊಂಡುಹೋದರು.

A reward sanctioned—ರೆವಿನ್ಯೂ ಸರ್ವೆ ಕ್ಲಾರ್ಕುಗಳು ರೈತರಿಂದ ರುಷುವತ್ ಪಡೆಯುವದಾಗಿ ತಿಳಿಯಬಂದು ಅದನ್ನು ಪತ್ತೇದಾರಿ ಅಂತವರೆಲ್ಲರನ್ನೂ ದಂಡನೆಗೆ ಗುರಿಮಾಡಿಸಿದ ವಿಷಯದಲ್ಲಿ ಬಳ್ಳಾರಿ ಪೋಲೀಸ್ ಇನ್‌ಸ್ಪೆಕ್ಟರ್ ಪಿ. ಎಸ್. ಶ್ರೀನಿವಾಸಾಚಾರ್ಯರೆಂಬವರು ಮಾಡಿದ ಮೆಹನತ್ತಿಗಾಗಿ ಅವರಿಗೆ ೧೦೦ ರೂಪಾಯಿಗಳು ಇನಾಂ ಕೊಡುವಂತೆ ಮದರಾಸ್ ಗವರ್ನಮೆಂಟಿನವರು ಹುಕುಂಕೊಟ್ಟಿರುತ್ತಾರೆ.

A brutal murder.—ಭರದ್ವಾರ್ ಡಿಸ್ಟ್ರಿಕ್ಟಿಗೆ ಸೇರಿದ ಕುಲ್ನಾ ಯೆಂಬಗ್ರಾಮದಲ್ಲಿ ಒಬ್ಬ ರೈತನಿಗೆ ಹದಿನಾಲ್ಕು ವರ್ಷಗಳ ವಯಸ್ಸುಳ್ಳ ತನ್ನ ಮಗಳು ದುರ್ನಡತೆ ಯುಳ್ಳವಳಾಗಿದ್ದಳೆಂಬ ಸಂಶಯ ಪ್ರಬಲವಾಗಿ ಕೋಪಗೊಂಡು ಮಗಳ ಕುತ್ತಿಗೆಯಮೇಲೂ ಮೈಮೇಲೂ ಹೊಡೆದು ಕೊಂದುಹಾಕಿ ಅಲ್ಲಿಂದ ನೆಟ್ಟಗೆ ಪೋಲೀಸ್ ಸ್ಟೇಷನಿಗೆಹೋಗಿ ತಾನುಮಾಡಿದ ಕೃತ್ಯವನ್ನು ತಾನೇ ತಿಳಿಸಿದನು. ಈಗ ಮೊಕದ್ದಮೆ ದರ್ಯಾಪ್ತಿಯಲ್ಲಿದೆ.

Sanction accorded—ಸಾಲಿಯಾನಾ ೧೧೫,೦೦೦ ರೂಪಾಯಿಗಳ ಖರ್ಚೊಡನೆ, ಮದರಾಸ್ ಪ್ರೆಸಿಡೆನ್ಸಿಯಲ್ಲಿ ರೆವಿನ್ಯೂ ಇನ್‌ಸ್ಪೆಕ್ಟರ್‌ಗಳ ಅಧಿಕಾರವಂ ಬಲಪಡಿಸಿ ಅವರಸಂಖ್ಯೆಯಂ ಅಧಿಕ ಪಡಿಸಬೇಕೆಂದು ಮದರಾಸ್ ಗವರ್ನಮೆಂಟಿನವರು ತಿಳಿಸಿದ ಅಭಿಪ್ರಾಯವಂ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಮಂಜೂರ್ಮಾಡಿ, ರೆವಿನ್ಯೂ ಇನ್‌ಸ್ಪೆಕ್ಟರ್‌ಗಳು ಮಾಡುವ ಕೆಲಸಗಳ ಮೇಲ್ವಿಚಾರಣೆ ಇಡಬೇಕಾದ ವಿಷಯದಲ್ಲಿ ತಕ್ಕ ಪ್ರಯತ್ನ ನಡೆಸಬೇಕೆಂದು ಮದರಾಸ್‌ಗವರ್ನಮೆಂಟಿಗೆ ತಿಳಿಸಿದ್ದಾರೆ.

A practice condemned—ಹಳ್ಳಗಳು ತೋಡಿಸಿ ಕಾಡಾನೆಗಳಂ ಅದರೊಳು ಬೀಳುವಂತೆ ಉಪಾಯಮಾಡಿ ಹಾಗೆ ಬಿದ್ದಮೇಲೆ ಹಿಡಿಯುವಪದ್ಧತಿಯಿಂದ ಅನೇಕ ಆನೆಗಳು ಸತ್ತುಹೋಗುವಲ್ಲೂ ಬಲವಾದ ಘಾಯಗಳು ಆಗುತಲೂ ಇರುವದರಿಂದ ಅಂತಾ ಕೆಟ್ಟ ವಾಡಿಕೆಯನ್ನು ತಪ್ಪಿಸಬೇಕೆಂದು ಆನೆಗಳಂ ಹಿಡಿಯುವದಕ್ಕಾಗಿ ಮೈಸೂರು ಸಂಸ್ಥಾನದ ನೌಕರಿಗೆ ಬಂದಿರುವ ಮಿ|| ಸಾಂಡರ್ಸನ್‌ಯವರು ಅಭಿಪ್ರಾಯಪಡಲು ಮೈಸೂರು ಅಧಿಕಾರಿಗಳು ಆನೆಗಳಂ ಹಿಡಿಯುವದರಲ್ಲಿ ಹಳ್ಳಗಳಂ ಉಪಯೋಗಿಸಬೇಡವೆಂದು ಖೆಡ್ಡಾ ಇಲಾಖೆಗೆ ಹುಕುಂ ಕೊಟ್ಟಿರುತ್ತಾರೆಂದು ತಿಳಿಯಬರುತಿದೆ.

A specific order.—ಸರ್ಕಾರ್ ಉದ್ಯೋಗಸ್ಥರು ಜಹಗೀರ್‌ಗಳಂ ಪಡೆಯುವ ವಿಷಯದಲ್ಲಿ ಇಂಡ್ಯ ಗವರ್ನಮೆಂಟಿನವರು ಮಾಡಿರುವ ನಿರ್ಣಯವು ಒಂದೊಂದುಕಡೆ ಒಂದೊಂದು ವಿಧವಾಗಿರುವದರಿಂದ, ಸನ್ ೧೮೮೫ನೇ ಇಸವಿ ಮೇ ೧೩ನೇ ತಾರೀಖಿನ ೨೧—೭೯೩—೮೬ ಈನಂಬರುಳ್ಳ ವಿಲಾಯಿತಿ ಇಲಾಖಾ ಸರ್ಕ್ಯುಲರ್ ಹುಕುಮಿನ ೫ನೇ ಪ್ಯಾರಾದಲ್ಲಿ ಬರುವ (ನೌಕರಿಯ ಬಗ್ಗೆ ಉಪಯೋಗವಾದರೂ ಸರಿ) ಎಲ್ಲಕರಗಳ ಆಫೀಸರ್‌ಗಳೆಂಬ ಮಾತುಗಳು ಮೇಲ್ಪಟ್ಟ ತರಗತಿ ವಿಶಿಷ್ಟ ಆಫೀಸರ್‌ಗಳಿಗೂ ಅನ್ವಯಿಸುತಿದೆಯೆಂದು ಇಂಡ್ಯಗವರ್ನಮೆಂಟಿನವರು ವಿಶೇಷವಾಗಿ ಒಂದು ಹುಕುಂ ಕೊಟ್ಟಿರುತ್ತಾರೆ.

A swayamvara proclaimed—ಫಿರೋಜಪುರ ನಿವಾಸಿಯಾದ ಲಾಲಾ ದನಪತಿರಾವ್ ಎಂಬವರು, ಮಹಾಭಾರತದಲ್ಲಿ ಪ್ರಸಿದ್ಧಿಯಂ ಪಡೆದಿರುವ ದ್ರೌಪದೀಯಂತಾ ರೂಪವೂ ವಿದ್ಯಾಬಲವೂ ಳ್ಳ ತನ್ನ ಕುಮಾರ್ತೆಯನ್ನು ಸ್ವಯಂವರದ ಮೂಲಕ ಕನ್ಯಾದಾನ ಮಾಡುವದಾಗಿ ಪ್ರಕಟಿಸಿ ದೂರ ದೇಶದಲ್ಲಿರುವ ಕ್ಷತ್ರಿಯರಾಜಕುಮಾರರಿಗೆ ಆಹ್ವಾನ ಪತ್ರಿಕೆಗಳಂ ಕಳುಹಿಸಿರುತ್ತಾರೆಂದು ಒಂದಾನೊಂದು ದೇಶಭಾಷಾ ವೃತ್ತಾಂತಪತ್ರಿಕೆ ತಿಳಿಸುತಿದೆ. ಇಂತಾ ವಿವಾಹಕ್ರಮವು ಪೂರ್ವಕಾಲದಲ್ಲಿ ಕ್ಷತ್ರಿಯರೊಳು ನಡೆಯುತಲಿದ್ದದ್ದೇ ಹೊರತು ನೂತನಪದ್ಧತಿಯಲ್ಲವು.

A warning to gold smiths.—ಮದರಾಸಿನಲ್ಲಿ ಸುಬ್ರಹ್ಮಣ್ಯಾಚಾರಿ ಯೆಂಬ ಪಾಂಚಾಳನೊಬ್ಬಾತನು ೧೮ ತಿಂಗಳಹಿಂದೆ ಕಂಬಿಮಾಡುವದಕ್ಕಾಗಿ ಒಬ್ಬರಿಂದ ತನ್ನ ವಶಕ್ಕೆ ಕೊಡಲ್ಪಟ್ಟಿದ್ದ ಒಂದು ಚಿನ್ನದ ಕಮ್ಮಲನ್ನು ಮಾರಿ ದಾರನಿಗೆ ಕ್ರಮವಾಗಿ ಪಾಪ ಸ್ವಾಧಕೆ, ಜೀತಿಮೊಬ್ಬಳು ತನ್ನವಶಕ್ಕೆ ಕೊಟ್ಟಿದ್ದ ಒಂದು ಒಡವೆಗಾಗಿ ಸದರೀ ಕಮ್ಮಲನ್ನು ಅವಳಿಗೆ ಈ ತಾಗಿ ಕೊಟ್ಟುಬಿಟ್ಟಂತೆ ಹೇಳಲ್ಪಟ್ಟು ಮೊಕದ್ದಮೆ ಆತನಮೇಲೆ ರುಜುವಾಗಲು ಪ್ರ್ಯಾಜಿಸ್ಟ್ರೇಟರು ಆತನಿಗೆ ೨೫ ರೂಪಾಯಿಗಳಜುರ್ಮಾನೆ ಅದನ್ನು ಕೊಡದೆ ಹೋದರೆ ಒಂದು ತಿಂಗಳ ಕಠಿಣಶಿಕ್ಷೆ ಸಜಾ ವಿಧಿಸಿದರೆಂತಲೂ, ಪಾಂಚಾಳಜಾತಿಯವರೆಲ್ಲರು ಬಹಳ ಜಾಗರೂಕರಾಗಿರಬೇಕೆಂತಲೂ ಮದರಾಸ್ ಮೆಯಿಲ್‌ಪತ್ರಿಕೆಯು ಎಚ್ಚರಿಸುತಿದೆ. ಪಾಂಚಾಳರಲ್ಲಿ ಅನೇಕರು ಮೇಲಿನಂತೆ ದುಷ್ಕೃತ್ಯವನ್ನು ತಮ್ಮ ಕಸಬಿನಲ್ಲಿ ಒಂದುಭಾಗವಾಗಿ ಯೆಣಿಸಿ ನಡೆಸುತಬರುವ ಮೋಸಕೃತ್ಯಗಳುಪಟೇ ಮರಾಡೀಮನೆಗಳು ಕಟ್ಟಿಕೊಂಡು ಸುಖ ಜೀವಿಗಳಾಗಿ ತಿರುಗಾಡುತಲಿದ್ದಾರೆ.

A curious story—ಇದರಡಿಬರುವ ವಿಚಿತ್ರವಾದ ಒಂದು ವಿಷಯವನ್ನು ಹೈದರಾಬಾದ್ ದೇಶಭಾಷಾ ವೃತ್ತಾಂತಪತ್ರಿಕೆ ಯೊಂದು ಪ್ರಚುರ ಮಾಡುತಿದೇನಂದರೆ —ಚಂದ್ರಘಾಟಿಯಲ್ಲಿರುವ ಯುರೋಪಿಯನ್ ದೊಡ್ಡಮನುಷ್ಯನೊಬ್ಬಾತನ ಮಗಳು ತನ್ನ ತಂದೆಯ ಮನೆಯ ಗೇಟಿಬಾಗಲಲ್ಲಿರುವ ಪಹರೆಯವನಪೈಕಿ ಒಬ್ಬನಾದ ಒಬ್ಬ ಅರಬಿಯವನನ್ನು ನೋಡಿ ಮೋಹಿಸಿದಳು. ಈರೀತಿ ಅವನಲ್ಲಿ ಆಕೆಗೆ ಉಂಟಾದ ಮೋಹಾತಿಶಯಕ್ಕೆ ಕಾರಣವಂ ವಿಚಾರಿಸಲಾಗಿ ಅವನು ಚೆನ್ನಾಗಿ ಹಾಡತಕ್ಕವನೆಂದು ತಿಳಿದುಬಂತು. ಅವರಜಾತಿಸಂಪ್ರದಾಯಾನುಗುಣವಾಗಿ ಅರಬ್‌ಜಾತಿ ಪ್ರಮುಖರೊಬ್ಬನು ನಿಕಾ ಪ್ರಸ್ತವಂ ನಡೆಸಿದನು, ಖಾಜಿಯವನು ಈ ವಿವಾಹವನ್ನು ಪದ್ಧತಿಪ್ರಕಾರ ರಿಜಸ್ಟರ್ ದಾಖಲೆ ಮಾಡಲಿಲ್ಲವು, ಪರಂತು ಸದರೀ ಯುರೋಪಿಯನ್ ತರುಣಿಯು ಗಂಡನಬಳಿಗೆಹೋಗಿ ಸೇರಿಕೊಂಡಳು. ಅವನ ಸಾನೀ ಪಹರೆಯವರೆಲ್ಲರುಸೇರಿ ಆಕೆಗೆ

ಸ್ವಾರ್ಧಕವಾಗಿ ಚಂದಾಮೂಲಕ ೭,೦೦೦ ರೂಪಾಯಿಗಳು ಜಮಾಮಾಡಿದರು. ಇದರಿಂದ ಆಶ್ರಮ ತಾಯಿತಂದೆಗಳಿಗೆ ಬಹಳ ಅನುಕೂಲವಾಗಿದೆ, ಎಂಬದು.

LOCAL AND PROVINCIAL NEWS.
ಸ್ಥಳದೇಶಮತ್ತು ತಾಲ್ಲೂಕುಗಳ ವರ್ತಮಾನಗಳು.

The Bangalore Mahomedan Association—ಬೆಂಗಳೂರು ಮಹಮದಿಯನ್ ಸಂಘದವರು ಶ್ರೀಮನ್ಮಹಾರಾಜರವರಿಗೆ ಪುತ್ರೋತ್ಸವವಾದ ಶುಭ ವೃತ್ತಾಂತವು ಕೇಳಿ ತಮಗುಂಟಾದ ಸಂತೋಷಾತಿಶಯವು ತಂತಿಮೂಲಕ ಮಹಾರಾಜರ ಸನ್ನಿಧಿಯಲ್ಲಿ ವಿಜ್ಞಾಪಿಸಿದರೆಂದು ಕೇಳುತ್ತೇವೆ.

The weather.—ಈಗ ಕಾಲಸ್ಥಿತಿಯು ಅನುಕೂಲವಾಗಿಯೂ ಮನೋಹರವಾಗಿಯೂ ಇಲ್ಲವು ಮಳೆಯ ಬಾಹುಲ್ಯದಿಂದ ಜನಗಳಿಗೆ ಆರೋಗ್ಯವು ಕಡಮೆಯಾಗಿದೆಯಲ್ಲದೆ ಕಪಾಟಿತ ಕುಂತುರು ಹಳಿಗಳು ಕೆಲವು ಎಳಸಿ ಬೀಳುತಲಿವೆ ಹೊರತು ಬಿಸ್ತಗಳಿಂದ್ಯಾವ ಪ್ರಯೋಜನವೂ ಕಾಣಿಸಲಿಲ್ಲವು.

Compensation.—ಈ ಪ್ರಾಂತ್ಯದಲ್ಲಿರುವ ಶ್ರೀಮನ್ಮಹಾರಾಜರವರ ಅರಮನೆಯು ಕಂಪೌಂಡನ್ನು ವಿಸ್ತರಿಸುವಬಗ್ಗೆ ಈಚೆಗೆ ಜಾಗವನ್ನು ಹೊಸದಾಗಿ ತೆಗೆದುಕೊಳ್ಳಲ್ಪಟ್ಟ ಜನಗಳಿಗಾಗಿ ಗವರ್ನಮೆಂಟಿನವರು ಅವರಿಗೆ ೬ ಸಾವಿರ ರೂಪಾಯಿಗಳು ಕಾಂಪೆನ್ಸೇಷನ್ ಕೊಟ್ಟರೆಂದಾಗಿ ಕೇಳುತ್ತೇವೆ.

Erection of new buildings.—ಈಗ ಮೈಸೂರಿನಲ್ಲಿ ಹೊಸದಾಗಿ ಕಟ್ಟಲ್ಪಟ್ಟಿರುವ ಸರ್ಕಾರಿ ಕಟ್ಟಡಗಳಲ್ಲಿ ವಿಶಿಷ್ಟ ಇಲಾಖೆಗಳಿಗೂ ಸ್ಥಳವಿಲ್ಲದ್ದರಿಂದ ಅಲ್ಲಿನ ಕೆಲವು ಬಗ್ಗೆಯ, ಬಳಿ ಏನು ಹೊಸ ಬಗ್ಗೆಗಳು ಕಟ್ಟಬೇಕೆಂಬ ಉದ್ದೇಶವು ಸರ್ಕಾರದವರಿಗೆ ಉಂಟಾಗಿದೆ ಹೊರತೂ ಅವುಗಳ ಸ್ಥಳ ಒಂದು ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ಲರ ಆಫೀಸಿಗೂ ಮತ್ತೊಂದು ರಿವಿನ್ಯೂ ಸೆಕ್ರೆಟರಿ ಆಫೀಸಿಗೂ ಉಪಯೋಗಿಸಬೇಕೆಂದೂ ತಿಳಿಯಬರುತ್ತದೆ.

Reduction in the Railway fare.—ಬರುವ ತಿಂಗಳ ಮೊದಲನೇ ತಾರೀಖು ಮೊದಲು ದಕ್ಷಿಣ ಮಹಾರಾಷ್ಟ್ರ ರೈಲ್ವೆ ಇದರ ಬೆಲೆಯ ಟಿಕೆಟುಗಳ ದರವನ್ನು ಕಡಿಮೆಮಾಡುವ ಸಂಬಂಧ ಪ್ಯಾಸೆಂಜರುಗಳಿಗೆ ತೆರವನ್ನಾಗಿ ತಿಳಿಯಬರುತ್ತದೆ. ಇದರಿಂದ ಸವರಿ ಪರಿಗೆ ಪ್ರಯಾಣಿಕರಿಗೆ ಬಹಳ ಸೌಕರ್ಯವು ಕಲ್ಪಿಸಿದಂತಾಗುವುದು. ಪರಿಮಿತಿಗೆ ವಿಶೇಷ ಪ್ರಯಾಣಿಕರ ಸಂಖ್ಯಾಧಿಕ್ಯವು ಉಂಟಾಗುವ ಸಂಭವಗಳಿಗನುಸಾರವಾಗಿ ಪ್ರತಿಕ್ರಿಯೆ ಏನೂ ಕಾಣಿಸಲಿಲ್ಲವು. ಪರವೂ ದೃಷ್ಟಿವಿಶೇಷ ಹಾಕಿದವೆಂಬುದರ ತಿಳಿಯಬೇಕಾದುದೇ ಇಲ್ಲವು.

An appointment.—ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಭೌತಿಕ ಶಾಸ್ತ್ರವು ಬೋಧಿಸುವ ಉಪಾಧ್ಯಾಯರಿಗೆ ಸಹಾಯಕರಾಗಿ ಇದ್ದುದರಿಂದ ಆ ವಿದ್ಯಾರ್ಥಿಗಳಿಗೆ ಪರಿಪಡಿಸುವ ಬಗ್ಗೆ ಎಜ್ಯುಕೇಷನ್ ಸೆಕ್ರೆಟರಿಯವರು ಈ ವರುಷ ಸೆಂಟ್ರಲ್ ಕಾಲೇಜಿನಲ್ಲಿ ಬಿ. ಎ. ದ ರ್ಜೆಗೆ ಕೂಡ್ರಿಸಿ ಫಸ್ಟ್ ಕ್ಲಾಸ್ ತೇರ್ಗಡೆಯಾದ ತಿರುಮಲ ರಾಮಯ್ಯ ನೆಂಬವರನ್ನು ಸವರೀಶ ಪ್ರೊಫೆಸರ್ ರ್ಯಾಯರನ್ನಾಗಿ ಮಾಡಿದ್ದಾರೆಂದು ಅದ್ದಕ್ಕೆ ಏರಿಸಿ ಮಾಡಿದ್ದರೆಂದು ಕೇಳಲಾದೆವು. ಈ ಬಾಬು ಯವರು ಅಂತಾ ಕೆಲಸಗಳನ್ನೆಲ್ಲ ನಡಿಸಿ ನಿವೃತ್ತಿಸುತ್ತ ಬರುತಲಿದ್ದಾರೆಂಬದು ಕೇಳಿ ಸಂತೋಷಿಸುವೆವು.

An honorarium.—ಸನ್ ೧೮೮೭ ನೇ ಇಸವಿಯಲ್ಲಿ ನಡೆದ ಲಾರ್ಡ್ ಕೆಲೋನಿಯಲ್ ಮತ್ತು ಇಂಡಿಯನ್ ಎಗ್ಜಿಬಿಷನ್‌ನಲ್ಲಿ ಈ ದೇಶದಿಂದ ಕಳುಹಿಸಲ್ಪಟ್ಟ ಪ್ರದರ್ಶನ ವಸ್ತುಗಳ ಚಾರ್ಜನ್ನು ವಹಿಸಿದ್ದ ಕರ್ನಲ್ ಲೀಮಾರಿಯರವರು ಆಗ ಮಾಡಿದ ಶ್ಲಾಘ್ಯವಾದ ಸೇವೆಯನ್ನು ಪರಿಭಾವಿಸಿ ಅವರಿಗೆ ಮೊದಲನೆ ೧,೫೦೦ ರೂಪಾಯಿಗಳು ಕೊಡಬೇಕೆಂದು ಮಹಾರಾಜಾ ಸರ್ಕಾರದವರು ಪರ್ಯಾಲೋಚಿಸಿ ಅದು ಮಂಜೂರು ಮಾಡುವಂತೆ ಇಂಡಿಯಾ ಗವರ್ನಮೆಂಟಿನವರನ್ನು ಪ್ರಾರ್ಥಿಸುವಂತೆ ರೆಸಿಡೆಂಟರಿಗೆ ಒಂದು ಲೆಟರ್ ಬರೆದಿದಾರೆಂತಲೂ ಅವರು ಸದರೀ ಗವರ್ನಮೆಂಟಿನವರ ಅಭಿಪ್ರಾಯವು ಪ್ರೋಬಸಿ ಇಂಡ್ಯಾ ಗವರ್ನಮೆಂಟಿನವರಿಗೆ ಬರೆದಿದಾರೆಂತಲೂ ತಿಳಿಯಬರುತ್ತದೆ.

The late Attara buildings.—ಈಗ ಆಫೀಸು ದೊಡ್ಡ ಬೆಟ್ಟದ ಮೇಲಿರುವ ಮತ್ತು ಪೂರ್ವದಲ್ಲಿ ಅಂಚೆ ಇಲಾಖೆಯವರ ಸುಪರ್ದಿನಲ್ಲಿದ್ದ ಕಟ್ಟಡವನ್ನು ಮೈಸೂರು ಸರ್ಕಾರದವರು ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿಗೆ ಸುಪುರ್ದ ಹರಾಜ್ ಹಾಕಿಸಲು ಅದು ೧೫೦೦ ರೂಪಾಯಿಗಳಿಗೆ ಅಷ್ಟರ ಸವಾಲಾಗಿ ಗವರ್ನಮೆಂಟಿನವರ ಮಂಜೂರಾತಿಯ ಬಗ್ಗೆ ಕಳುಹಿಸಲ್ಪಟ್ಟಿರುವಂತೆ ತಿಳಿಯಬರುತ್ತದೆ. ಈ ಕಟ್ಟಡದಲ್ಲಿ ಅಷ್ಟು ಬೆಲೆಬಾಳುವ ಆವರಣವಿಲ್ಲದಿದ್ದರೂ ಸ್ಥಳ ಕಿರಿದಾಗಿಯೂ ಹರಾಜ್ ಮೊಬಲಗನ್ನು ಜಾಸ್ತಿ ಮಾಡಿಸಿರಬಹುದೆಂದೇನು ತೋರಲಿಲ್ಲವೆ ಧರಮಾಸ್ತು ದಾರರ ಅಜ್ಞಾನವು ಸರಕಾರ ಕೆಲವರುಮಟ್ಟಿಗೆ ಸಹಕಾರಿಯಾಗಿರಬಹುದೆಂದು ತೋರುತ್ತದೆ.

Assumption of charges.—ಮೈಸೂರು ಗವರ್ನಮೆಂಟಿನ ಲೆಜಿಸ್ಲೇಟಿವ್ ಸೆಕ್ರೆಟರಿ ಮತ್ತು ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲರಾದ ಬ್ಯಾರಿಸ್ಟರ್ ಮ. ವಿಶಾಲಾಕ್ಷಿಯ್ಯರವರು ಚೀಫ್ ಕೋರ್ಟ್ ಮೂರನೇ ಜಡ್ಜಿಯಾಗಿ ಆಕ್ಟಿಂಗ್ ತರೀಕ್ ನುರಳ ನೇಮಕರ್ತ್ರಾಕಲ್ಪಟ್ಟಿರುವದರಿಂದ ಅವರು ತಮ್ಮ ಕೆಲಸದ ಚಾರ್ಜನ್ನು ಚೀಫ್ ಕೋರ್ಟ್ ರಿಜಿಸ್ಟ್ರಾರ್ ಮ. ಎಸ್. ಹೇಮಾದ್ರಿ ರಾಯರವರಿಗೆ ವಹಾಜೇ ಮುಚಕೂರ್ ೧೦ನೇ ತಾರೀಖ್ ಗುರುವಾರವದಿನ ಪ್ರಾರ್ಹನ್ನದಲ್ಲಿ ಒಪ್ಪಿಸಿ ಜಡ್ಜಿಕೆಲಸದ ಚಾರ್ಜನ್ನು ತೆಗೆದುಕೊಂಡರು. ಮ. ವಿಶಾಲಾಕ್ಷಿ ಅಯ್ಯರವರು ಚೀಫ್ ಕೋರ್ಟ್ ಜಡ್ಜಿಯಾಗಿ ಆಕ್ಟಿಂಗಾಗಿ ನೇಮಿಸಿದ್ದರೂ ಎರಡನೇ ದರ್ಜೆಯಾಗಿರುತ್ತಾರೆ. ಇದಲ್ಲದೆ ಇವರು ಲೆಜಿಸ್ಲೇಟಿವ್ ಸೆಕ್ರೆಟರಿಯಾಗಿ ಕಳೆದ ಫೆಬ್ರುವರಿ ತಿಂಗಳಲ್ಲಿ ನೇಮಕರಾದರು.

The Mysore Chief Court.—ಮಿಸ್ಟರ್ ಸಿ. ಜಿ. ಶ್ಯಾಮರಯ್ಯನವರು ಹದಿನ ಯಲು ತಿಂಗಳ ಫರ್ಲೋ ರಜಾ ತೆಗೆದುಕೊಂಡು ಇನ್ನಿ ಕೆಲವೇ ನುರಳ ನಿಜದ ನೌಕರಿಯ ಬಗ್ಗೆ ವಾಪಸ್ ಬರುವದಿಲ್ಲವೆಂದು ಏರ್ಪಟ್ಟಿರುವದರಿಂದ ಅವರ ಕೆಲಸವು ಮುದರಾಸ್ ಹೈಕೋರ್ಟ್ ಜಡ್ಜಿಗಳಗಳಲ್ಲಿ ಒಬ್ಬರಾದ ಮ. ಫ್ರಾಂಕ್ ವಿಲ್ಕಿನ್ಸನ್ ಎಂಬವರಿಗೆ ಕೊಡಲ್ಪಡಬಹುದೆಂಬದಾಗಿ ಮದರಾಸ್ ಮೈಲ್ ಪತ್ರಿಕೆ ತಿಳಿಸುತ್ತದೆ. ಇದಲ್ಲದೆ ಈಗ ಕೆಲವು ಕಾಲದಿಂದ ಈ ಕೆಲಸವನ್ನು ನಿವೃತ್ತರಾಗುವ ಕರ್ನಲ್ ಬ್ರೈಸ್ ಕ್ವಾರ್ಕ್ ಯವರು ಸವ ನವರೀ ಕೆಲಸಕ್ಕೆ ಒಬ್ಬ ಉದ್ಯೋಗಸ್ಥರೆಂಬದಾಗಿ ಪ್ರವಾದ ಹುಟ್ಟಿದೆ. ಮುಖ್ಯವಾಗಿ ಈ ಕೇಷಾಪ್ರಿ ಅಯ್ಯರವರ ಗೈರ್ಹಾಜರಿ ಕಾಲದಲ್ಲಿ ಶ್ರೀಮನ್ಮಹಾರಾಜರವರು ಅವರೊಡನೆ ಆಲೋಚಿಸದೆ ಸ್ವತಂತ್ರಿಸಿ ವಿಲೆಮಾಡುವರೆಂಬ ನಂಬಿಕೆಯು ನಮಗೆ ಸ್ವಲ್ಪವೂ ಇಲ್ಲವು.

Salaries of certain state officers.—ಸಾನಿಟರಿ ಇಂಜನಿಯರ್ ಮ|| ಸ್ಟ್ಯಾಂಡಿಷ್‌ಲೀಯವರು ಮೈಸೂರ್ ಮ್ಯುನಿಸಿಪಲ್ ಪ್ರೆಸಿಡೆಂಟಾಗಿ ನೇಮಕರ್ತ್ರಾಕಲ್ಪಟ್ಟಿರುವದರಿಂದ ಅವರಿಗೆ ವಹಾಜೇ ಮೈಸೂರು ಮ್ಯುನಿಸಿಪಾಲಿಟಿಯಿಂದ ೫೦ ರೂಪಾಯಿಗಳು ಮಾಸಿಕ ಕೊಡಲ್ಪಡುವದಲ್ಲದೆ ಅವರ ಸ್ವಂತ ಚಾಕರಿಯ ತಲಬು ದೇವಿನ ತಿಂಗಳು ಒಂದಕ್ಕೆ ಈಗ ೨೫೦ ರೂಪಾಯಿಗಳು ಸಲ್ಲುತಲಿರುವಂತೆ ತಿಳಿಯಬರುತದೆ. ಈಗ ಅಫೀಷಿಯೇಟಿಂಗ್ ದಿವಾನರಾಗಿರುವ ಮ|| ಟಿ. ಆರ್. ಎ. ತಂಬುಚೆಟ್ಟಿರವರಿಗೆ ಪ್ರೊವೆನ್ಸಲ್ಲಿ ಕೌನ್ಸಿಲರ್ ರುಸುಂಕೆರಿ ೧೫೦ ರೂಪಾಯಿಗಳು ಕೊಡಲ್ಪಡುತಲಿದ್ದವು. ಈಗ ೧೫೦ ರೂಪಾಯಿಗಳು ಜಾಸ್ತಿನಿಂ ೩೦೦ ರೂಪಾಯಿಗಳ ತಲಬ ಪಡೆಯುವರು. ಮಿಸ್ಟರ್ ರಾಮಚಂದ್ರ ಅಯ್ಯರವರು ಕೌನ್ಸಿಲ್ ಮೆಂಬರಾಗಿ ನೇಮಕರಾಗಿರುವದರಿಂದ ಅವರಿಗೆ ಮಿಸ್ಟರ್ ತಂಬುಚೆಟ್ಟಿರವರು ಪಡೆಯುತಲಿದ್ದ ಇನ್ನೂರ ಐವತ್ತು ರೂಪಾಯಿಗಳ ರುಸುಂ ಕೊಡಲ್ಪಡುವದು.

Defamation.—ಈಗ್ಗೆ ಕೆಲವು ವರ್ಷಗಳ ಹಿಂದೆ ಮಹಾರಾಜರವರ ಸ್ಪಿನ್ನಿಂಗ್ ಮತ್ತು ಮ್ಯಾನ್ಯುಫ್ಯಾಕ್ಚರಿಂಗ್ ಕಂಪೆನಿಯ ವಿಷಯದಲ್ಲಿ ಬೆಂಗಳೂರು ಸ್ಪೆಕ್ಟೇಟರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿದ್ದ ಒಂದುಕಥೆ ತನಗೆ ಮಾನನಷ್ಟಕರವಾದದ್ದೆಂದು ಭಾವಿಸಿ ಡೆಪ್ಯುಟಿ ಪೋಸ್ಟ್ ಪತ್ರಿಕಾಧಿಕಾರಿಯಾದ ಮ || ಸೇಸಯ್ಯನವರು ಸದರೀ ಪತ್ರಿಕಾಧಿಕಾರರಮೇಲೆ ಮಾನನಷ್ಟ ಮೊಕದ್ದಮೆ ತಂದು ಅದು ಅನೇಕ ತಿಂಗಳವರಿವಿಗೆ ವಿಚಾರಣೆಯಾಗುತಲಿದ್ದು ಕಡೆಗೆ ಒಂದು ರಾಜಿಯಾಗಿ ವ್ಯವಸ್ಥೆಯಾದದ್ದು ಪ್ರಪಂಚಕ್ಕೆಲ್ಲ ಜ್ಞಾಪಕವಿದ್ದುದು. ಈಗ ಮರಳಿ ಮಿಸ್ಟರ್ ಹೇಮಾಯರು ಸ್ಪೆಕ್ಟೇಟರ್ ಪತ್ರಿಕಾ ಲೇಖಕರ ಮೇಲೆ ಮತ್ತೊಂದು ಮಾನನಷ್ಟ ಮೊಕದ್ದಮೆಯು ತರಬೇಕೆಂದಿರುವುದಾಗಿ ತಿಳಿಯುವದು. ವಹಾಜೇ ಮುಚಕೂರ್ ೩ನೇ ತಾರೀಖಿನ ಸ್ಪೆಕ್ಟೇಟರ್ ಪತ್ರಿಕೆಯಲ್ಲಿ ಮ|| ಹೇಜೆಯವರು ತಮ್ಮನ್ನು ಸಿವಿಲ್ ವ ನಿಲಿಟರಿ ಸ್ಟೇಷನಿನ ಮ್ಯುನಿಸಿಪಲ್ ಕಮಿಷನರಾಗಿ ಚುನಾಯಿಸಬೇಕೆಂಬವಾಗಿ ಅಲ್ಲಿನ ನಿವಾಸಿಗಳಿಗೆ ಬರೆದಿದ್ದ ಒಂದು ಕಾಗದವನ್ನು ಹಾಸ್ಯಮಾಡಿ ಬರೆದು ಪ್ರಕಟಿಸಿದ್ದು ಅವರಿಗೆ ಅಗೌರವ ಮತ್ತು ಖೇದವನ್ನುಂಟುಮಾಡಿದ್ದರಿಂದ ಈಗ ಅರೀತಿ ಪ್ರವರ್ತಿಸುವದರಾಗಿ ಹಾದೆಂತಲೂ ವಿಳಿದೇಶದ ಇಂಗ್ಲಿಷ್ ಪತ್ರಿಕೆಯೊಂದು ತಿಳಿಸುತ್ತದೆ. ಪ್ರಯೋಜನ ಈ ದೇಶದಲ್ಲಿ ಕಟ್ಟಾಲಮೇಳು ಜೀವಿಸಿರುವ ವೃತ್ತಾಂತಪತ್ರಿಕೆಗಳಲ್ಲಿ ಮಾನನಷ್ಟ ದೋಷವಿಮುಕ್ತವಾದ ಸ್ಥಿತಿಯೂ ಇಲ್ಲವು.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜಾಸಾಹೇಬ್ ಬಹದೂರವರ ಸರ್ಕಾರದಿಂದ ಕೊಡಲ್ಪಟ್ಟ ಹುಕುಮುಗಳು.

ನಂ. ೧೦೯ ತಾ|| ೫ನೇ ಜೂಲೈ ೧೮೯೦.—ಫಾರೆಸ್ಟ್ ಪ್ರೊಬೇಷನರ್ ಮ|| ಕೆ. ಶಾಮಯ್ಯಂಗಾರ್ಯರವರು ಶಿವಮೊಗ್ಗೆಯಿಂದ ಮೈಸೂರು ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

ನಂ. ೧೧೭—ಹೊನ್ನಾಳಿ ತಾಲ್ಲೂಕ್ ಅಮಲ್ದಾರ್ ಅಜಿಜುಲ್ಲಾ ಯಮಗೋಯವರಿಗೆ ೧೮೯೦ನೇ ಇಸವಿ ಮಾರ್ಚಿ ೩ನೇ ಮುಕರ್ರು ೩೧ನೇ ನಂಬರುಳ್ಳ ಈ ಆಫೀಸ್ ಇಷ್ತಿಹಾರ್ ನಾಮೆಯ ಮೂಲಕ ಕೊಡಲ್ಪಟ್ಟಿದ್ದ ೪೫ ದಿವಸಗಳ ರಜಾ ಇದರಿಂದ ಮೂರು ತಿಂಗಳ ವರಿವಿಗೆ ಜಾಸ್ತಿ ಮಾಡಲ್ಪಟ್ಟಿರುತ್ತದೆ.

ಮೊಕ್ತಾಂ ನಂ. ೮—ಮೈಸೂರು ಚೀಫ್ ಕೋರ್ಟ್ ಚೀಫ್ ಜಡ್ಜಿಯಾದ ಮ. ಸಿ. ಜಿ. ಶ್ಯಾಮರ್ ಯವರಿಗೆ, ಸಿವಿಲ್ ಲೀವ್ ಕೋಡಿನ್ನನುಸರಿಸಿ ಕೊಡಲ್ಪಡಬಹುದಾದ ಮಾಮೂಲಿ ಸರ್ಟಿಫಿಕೆಟ್ ರಜಾವಿನೊಡನೆ ವಹಾಜೇ ಮುಚಕೂರ್ ೧೦ನೇ ತಾರೀಖ್ ಲಾಗಾಯತು ೭ ತಿಂಗಳ ಫರ್ಲೋರಜಾ ಕೊಡಲ್ಪಟ್ಟಿರುತ್ತದೆ.

ಮೊಕ್ತಾಂ ನಂ. ೯—ಘನವನ್ನು ಹೊಂದಿದ ಶ್ರೀಮನ್ಮಹಾರಾಜರವರು ಇವರಡಿ ಕಂಡ ನೇಮಕರಾತಿಗಳನ್ನು ಮಂಜೂರ್ ಮಾಡಿರುತ್ತಾರೆ.—ಚೀಫ್ ಕೋರ್ಟ್ ಜಡ್ಜಿಯವರಾದ ಮ. ಎ. ರಾಮಚಂದ್ರಯ್ಯರವರು, ಮ || ಶ್ಯಾಮರ್‌ಯವರು ರಜಾಮೇಲೆ ಗೈರ್ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚೀಫ್ ಜಡ್ಜಿ ಕೆಲಸವನ್ನು ಆಕ್ಟಿಂಗ್ ತರೀಕ್ ನೋಡುತಲಿರುವಂತೆ ನೇಮಕರ್. ಲೆಜಿಸ್ಲೇಟಿವ್ ಸೆಕ್ರೆಟರಿ ಮ|| ವಿಶಾಲಾಕ್ಷಯ್ಯರ್, ಬ್ಯಾರಿಸ್ಟರ್ ಅಟ್ ಲಾ ಯವರು, ಮ|| ಎ. ರಾಮಚಂದ್ರಯ್ಯರವರು ಚೀಫ್ ಜಡ್ಜಿ ಕೆಲಸವು ನೋಡುತಲಿರುವ ತನಕ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರಿವಿಗೆ ಜಡ್ಜಿ ಕೆಲಸವನ್ನು ಆಕ್ಟಿಂಗ್ ತರೀಕ್ ನೋಡುತಲಿರುವಂತೆ ನೇಮಕರ್.

ನಂ|| ೧೧೭. ತಾ|| ೨ನೇ ಜೂಲೈ ೧೮೯೦.—ಇವರಡಿ ಕಂಡ ಫಾರೆಸ್ಟ್ ಆಫೀಸರ್‌ಗಳ ಬಡ್ತಿಗಳು ಮಂಜೂರ್ ಮಾಡಲ್ಪಟ್ಟಿರುತವೆ. ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕನ್ಸರ್ವೇಟರ್‌ಗಳಾದ ಮ. ಎಸ್. ಎ. ಬಾಲ್ಟೂರಾಯರವರು, ಮತ್ತು ವೈ. ಸೀತಾರಾಮಯ್ಯನವರು, ೧೮೯೦ನೇ ಇಸವಿ ಜೂನ್ ೩ನೇ ತಾರೀಖು ಲಾಗಾಯತು ೩ನೇ ಗ್ರೇಡ್ ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರುಗಳಾಗಿರತಕ್ಕದ್ದು.

ನಂ. ೧೧೯. ಮ|| ಪಿ. ಪಂಚನದರಾಯರವರು ೧೮೯೦ ನೇ ಇಸವಿ ಜೂಲೈ ಗುರ್ರೇ ತಾರೀಖಿನ ಪ್ರಾರ್ಹನ್ನದಲ್ಲಿ ತುಮಕೂರ್ ಡಿಸ್ಟ್ರಿಕ್ಟ್ ಮತ್ತು ಟ್ರಿಜರಿ ಚಾರ್ಜನ್ನು ಮ|| ಬಿ. ಕೆ. ನಂಕಟವರದಯ್ಯಂಗಾರ್ಯರವರಿಗೊಪ್ಪಿಸಿರುತ್ತಾರೆ.

ನಂ. ೧೨೦ ತಾ|| ೯ ನೇ ಜೂಲೈ ೧೮೯೦.—ಚೀಫ್ ಕೋರ್ಟ್ ರಿಜಿಸ್ಟ್ರಾರ್ ಮ|| ಹೇಮಾದ್ರಿ ರಾಯರವರು, ಮ|| ವಿಶಾಲಾಕ್ಷಿ ಅಯ್ಯರವರು, ಚೀಫ್ ಕೋರ್ಟ್ ಜಡ್ಜಿ ಕೆಲಸವು ನೋಡುತಲಿರುವ ತನಕ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ದಿವಾನರವರ ಲೆಜಿಸ್ಲೇಟಿವ್ ಸೆಕ್ರೆಟರಿ ಆಫೀಸ್ ಚಾರ್ಜಿನಲ್ಲಿ ಹುಗಾಮಿಯಾಗಿ ರತಕ್ಕದ್ದಲ್ಲದೆ ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲಾಗಿ ಸಹ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ನೇಮಕರ್. ಸಬ್‌ಜಡ್ಜಿ ಮ. ಎಸ್. ಆರ್. ಸುಬ್ಬರಾಯರವರು ಮ|| ಹೇಮಾದ್ರಿರಾಯರವರು ಇತರ ಕೆಲಸದಮೇಲೆ ಗೈರ್ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚೀಫ್ ಕೋರ್ಟ್ ರಿಜಿಸ್ಟ್ರಾರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ನೇಮಕರ್.

ನಂ. ೧೨೩—ಮ|| ಸಿ. ಜಿ. ಶ್ಯಾಮರ್‌ಯವರು ರಜಾಮೇಲೆ ಗೈರ್ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮ|| ಎ. ರಾಮಚಂದ್ರಯ್ಯರವರನ್ನು ಮೈಸೂರು ಚೀಫ್ ಕೋರ್ಟಿನ ಚೀಫ್ ಜಡ್ಜಿಯಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ನೇಮಕರ್ತ್ರಾಕಲ್ಪಟ್ಟಿರುತ್ತಾರೆ. ೧೮೮೩ನೇ ಇಸವಿಯ ಮೈಸೂರ್ ಚೀಫ್ ಕೋರ್ಟ್ ರೆಗ್ಯುಲೇಷನ್ ೧೮೯೦ನೇ ಸೆಕ್ಷನಿನಲ್ಲಿ ನಮೂದಾಗಿರುವ ಅಧಿಕಾರಗಳು ಅವರಿಗೆ ಕೊಡಲ್ಪಟ್ಟಿರುತವೆ.

ನಂ. ೧೨೪—ಮ|| ಸಿ. ಜಿ. ಶ್ಯಾಮರ್‌ಯವರು ರಜಾಮೇಲೆ ಗೈರ್ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮ|| ಎ. ರಾಮಚಂದ್ರಯ್ಯನವರು, ಮೈಸೂರು ಶೀಮೆಯ ಬಂದೀಖಾನೆಗಳ ಇನ್‌ಸ್ಪೆಕ್ಟರ್ ಜನರಲ್ಲರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ನೇಮಕರ್ತ್ರಾಕಲ್ಪಟ್ಟಿರುತ್ತಾರೆ.

ಮೈಸೂರು ದಿವಾನರಿಗೆ ಸೀನಿಯರ್ ಪರ್ಸನಲ್ ಅಸಿಸ್ಟೆಂಟ್ ಮ|| ಬಿ. ಎ. ತಿರುಮಲ ಅಯ್ಯಂಗಾರ್ಯರವರು ೧೮೯೦ನೇ ಇಸವಿ ಫೆಬ್ರುವರಿ ಗುರ್ರೇ ತಾರೀಖ್ ಲಾಗಾಯತು ಒಂದನೇ ಗ್ರೇಡಿನಿಂದ ಎರಡನೇ ಗ್ರೇಡಿಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ.

CORRESPONDENCE.

ಮಹಾರಾಜಶ್ರೀ ಪತ್ರಿಕಾಧಿಪತಿಗಳವರ ಸನ್ನಿಧಿಗೆ.

ಬೆಂಗಳೂರಲ್ಲಿ ಕೆಲವು ದಿವಸದ ಹಿಂದೆ ಒಂದು ಬ್ರಾಹ್ಮಣ ವಿಧವಾ ವಿವಾಹವಾಯಿತೆಂದು ಕೇಳಿ ವಿಷಾದಿಸಿ ಮುಂದೆಯಾದರೂ ನಮ್ಮ ಬ್ರಾಹ್ಮಣ ಜನಗಳಿಗೆ ಕ್ಷೇಮ ಉಂಟಾಗಬೇಕೆಂದು ಚಿಂತಿಸಿ ಆ ವಿಷಯದಲ್ಲಿ ಒಂದು ಪ್ರಸಂಗವು ಮಾಡಬೇಕೆಂದಿರಲು ಅವಕಾಶವಿಲ್ಲದೆ ಹೋಯಿತು. ಆದ್ದರಿಂದ ಈ ಪತ್ರಿಕಾಮುಖೇನ ಪ್ರಕಟಿಸುವೆನು, ತಾವು ದಯಮಾಡಿ ತಮ್ಮ ಪತ್ರಿಕೆಯಲ್ಲಿ ಈ ಪ್ರಕಟನೆಗೆ ಅವಕಾಶವು ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಈಗಿನ ನಮ್ಮ ಹಿಂದೂ ಜನರು ಅನೇಕರು ಸ್ವಶಾಸ್ತ್ರ ತತ್ವಜ್ಞಾನ ಹೀನರಾಗಿ ಕೇವಲ ಐಹಿಕ ಭೋಗಗಳಲ್ಲಿಯೇ ಮನಸ್ಸು ಕೊಟ್ಟವರಾಗಿ ನಾನಾವಿಧವಾದ ಅಲಾಭ ಕ್ಲೇಶಗಳಿಗೆ ಗುರಿಯಾಗುತಲಿದಾರೆ. ದಿವಾನ್ ಬಹದೂರ್ ರಘುನಾಥರಾಯರವರು ವಿಧವಾವಿವಾಹ ವಿಷಯದಲ್ಲಿ ಉದ್ಯುಕ್ತರಾಗಿ ಅದು ಶಾಸ್ತ್ರೀಯವೆಂದು ತೋರಿಸುವಕ್ಕೆ ಒಂದು ಗ್ರಂಥವು ಪ್ರಕಟನೆ ಮಾಡಿದರು. ಅದರಿಂ ಮೂಢರು ಪ್ರೇರಿತರಾಗಿ ಕುರುಡುತನದಿಂದ ವಿಧವಾ ವಿವಾಹಗಳಂ ಮಾಡಿ ಅನೇಕವಾದ ಅಲಾಭಕ್ಲೇಶಗಳಂ ಅನುಭವಿಸುತಲಿದಾರೆ. ಆ ರಾಯರ ಮತಸ್ಥರೇ ಆ ಪ್ರಕಟನೆಗೆ ವ್ಯಾಕಸಪ್ಟ ೧೮೮೩ನೇ ಇಸವಿಯಲ್ಲಿ ಪಂಡಿತ ಸಾಂಬನ ಶ್ರೀನಿವಾಸಾಚಾರ್ಯರು ಕಾಟಿ ಸುಬ್ಬರಾಯರು ಸಹ ಆ ಗ್ರಂಥವನ್ನು ಖಂಡನೆ ಮಾಡಿ ಅದು ಅಶಾಸ್ತ್ರೀಯವೆಂದು ಇನ್ನೊಂದು ಗ್ರಂಥವು ರಿವ್ಯೂ ಯೆಂಬದಾಗಿ ಇಂಗ್ಲೀಷಿನಲ್ಲಿ ಪ್ರಕಟಿಸಿದಾರೆ. ಅದನ್ನು ನೋಡಿದರೆ ವಿಧವಾ ವಿವಾಹವು ಎಷ್ಟು ಅಸಂಗತವೊ, ಅಯೋಗ್ಯವೊ, ಅಧೋಗತಿ ಹೇತುವೊ ಅದು ತಿಳಿಯಬಂದೀತು. ಬೇಕಾದವರು ಕಂಟೋನ್ಮೆಂಟಿನಲ್ಲಿರುವ ಕಾಟಿ ಸುಬ್ಬರಾಯರಿಗೆ ಬರೆದು ಆ ಗ್ರಂಥವು ತರಿಸಿಕೊಂಡು ನೋಡಬಹುದು. ಈ ಕಾಲದ ಅನೇಕರಿಗೆ ಇಂಗ್ಲೀಷ್ ಶಬ್ದದಲ್ಲಿ ಗೌರವ ಹುಟ್ಟುವ ಹಾಗೆ ಇತರ ಭಾಷಾ ಶಬ್ದದಿಂದ ಹುಟ್ಟುವದಿಲ್ಲವಾಗಿ ಅವರೂ ಆ ಗ್ರಂಥವು ಇಂಗ್ಲೀಷಿನಲ್ಲಿಯೇ ಬರೆದು ಇದಾರೆ. ಸಂಸ್ಕೃತ ಭಾಷೆಯೇ ಮಿಕ್ಕ ಸಕಲ ಭಾಷೆಗಳಿಗೂ ಮೂಲವಾಗಿರುವದಂ ಇಂಗ್ಲೀಷಿನವರೇ ಒಪ್ಪಿದ್ದಾಗ್ಯೂ, ಅನೇಕನಿದರ್ಶನಗಳಿಂದ ಸಿದ್ಧವಾದಾಗ್ಯೂ ಅದನ್ನು ಅಭ್ಯಾಸಮೆಬುವದೂ ಅಜ್ಞಾನವು ಬಹಳವೂ ಈರೀತಿಯಾಗಿ ಪರಿಣಮಿಸಿ ಇದೆ ಯಾವನರ ಕಾಲದಿಂದೀಚೆಗೆ ನಮ್ಮ ಹಿಂದೂ ಜನಗಳು ಧರ್ಮದಿಂದ ಕ್ಷೀಣಿಸಿ ಕ್ಷೀಣಿಸಿ ಜ್ಞಾನಹೀನರಾಗಿ ಈಗಿನವರಿಗೂ ಅಕ್ಷೀಣಗತಿ ತಪ್ಪದೆ ಇಷ್ಟರ ಮಟ್ಟಿಗೆ ಪರಿಣಮಿಸಿದೆ. ಇದಕ್ಕೆ ನಮ್ಮ ಪಾಪವೇ ಹೇತುವಾಗಿದೆ, ಅದು ಹಾಗಿರಲಿ.

ಮುಖ್ಯ ನಮ್ಮ ಶಾಸ್ತ್ರದಲ್ಲಿ ಕನ್ಯಾದಾನ ಹೇಳಿದೆಯೇ ಹೊರ್ತು ವಿಧವಾದಾನ ಹೇಳಿರುವದಿಲ್ಲ. ವಿಧವೆ ಕನ್ಯೆಯಾದರೂ ವಿಧವಾತ್ವ ಹೋಗುವದಿಲ್ಲ ಶಾಸ್ತ್ರದಲ್ಲಿ ವಿಧವಾ ಕನ್ಯಾದಾನವು ಹೇಳಲಿಲ್ಲ. ವಿವಾಹವಾದಮೇಲೆ ಶಾಸ್ತ್ರತಃ ಕನ್ಯಾತ್ವವೇ ಇಲ್ಲವೆಂಬದಂ ಆ ರಾಯರು ಮುಂತಾದವರು ಗ್ರಹಿಸಲಿಲ್ಲ. "ಕನ್ಯಾಂ ಕನಕಸಂಪನ್ನಾಂ" ಯೆಂಬದಾಗಿ ಹೇಳಿದೆಯೇ ಹೊರ್ತು "ವಿಧವಾವಿವಸುಸಂಪನ್ನಾಂ" ಎಂದು ಹೇಳಲಿಲ್ಲ "ನಪರದಾರಾನ್ ಗಚ್ಛೇತ್" ಎಂಬದಾಗಿ ಪರಪುರುಷನ ಭಾರ್ಯಾ ಸಂಪರ್ಕ ಪಾಪವೆಂದು ಶ್ರುತಿ ಹೇಳುತೆ ವಿಧವಾ ಪರಿಗ್ರಹ ಪರದಾರಾ ಪರಿಗ್ರಹವೇ ಆಗಿ ಪಾಪವೇ ಯಾಗುತದೆ. ರಘುನಾಥರಾಯರು ಮುಂತಾದವರು ಬಾಲವಿಧವಾತ್ವಕಾರುಣ್ಯವು ಪರ್ಯಾಲೋಚಿಸಿ ಉದಾರ ಹೃದಯರಾಗಿ ವಿಧವಾ ವಿವಾಹಕಾರ್ಯಕ್ಕೆ ಉದ್ಯೋಗಿಸಿದ್ದಕ್ಕೆ ಅವರ ವಿಷಯದಲ್ಲಿ ಕನಿಕರಿಸಬೇಕಾಗಿದ್ದರೂ ಅವರ ಅವಿವೇಚನಕ್ಕೆ ವಿಷಾದಿಸಬೇಕಾಗಿದೆ

"ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತ" ಯೆಂಬ ಪ್ರಕಾರ ಮುಂದಾಗುವ ಸ್ವರ್ಗ ಪರ್ಯಂತವಾದ ಐಹಿಕಭೋಗಗಳೂ "ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ" ಎಂಬ ಪ್ರಕಾರ ನಶ್ವರವೆಂಬ ಜ್ಞಾನಮೆಂಬ ಶಾಸ್ತ್ರ ಭಾಗವನ್ನು ಆ ರಾಯರು ಮುಂತಾದವರು ಪರಿಶೋಧಿಸಲಿಕ್ಕೆ ಅವರಿಗೆ ಮನಸ್ಸು ಹುಟ್ಟದೆ ಹೋದದ್ದು ನಮ್ಮ ದೌರ್ಭಾಗ್ಯವಾಗಿದೆ. ನಾವುಗಳು ಶಾಸ್ತ್ರಬದ್ಧರೇ ಹೊರ್ತು ಪ್ರತ್ಯಕ್ಷ ಪ್ರಮಾಣ ಬದ್ಧರಾದ ನಾಸ್ತಿಕರಲ್ಲವು ಅನುಮಾನ ಪ್ರಮಾಣ ಬದ್ಧರಾದ ಸಂಶಯಾತ್ಮರಲ್ಲವು. ಪ್ರತ್ಯಕ್ಷಾನುಮಾನ ಪ್ರಮಾಣಗಳಿಂದ ಕಣ್ಣಿಗೆ ಕಾಣುವದನ್ನು ಮನಸ್ಸು ಊಹಿಸುವಷ್ಟು ಸಿದ್ಧಿಸೀತೇ ಹೊರ್ತು ಅತೀಂದ್ರಿಯ ವಿಷಯಗಳು ಸಿದ್ಧಿಸಲಾರವು ಅತೀಂದ್ರಿಯ ವಿಷಯಗಳು ಯಾವವೆಂದರೆ, ಜಗತ್ಕಾರಣನಾದ ಈಶ್ವರ, ಬ್ರಹ್ಮ, ಇಂದ್ರ, ಶಕ್ತಿಗಳು, ದೇವತೆಗಳು, ಯಕ್ಷ ಕಿನ್ನರ ಗಂಧರ್ವಾದಿಗಳು, ಲೋಕಲೋಕಾಂತರಗಳು, ಬ್ರಹ್ಮಾಂಡ ಬ್ರಹ್ಮಾಂಡಾಂತರಗಳು, ಜನ್ಮ ಜನ್ಮಾಂತರಗಳು, ಇತ್ಯಾದಿ ವಿಷಯಗಳು ಅಸಂಖ್ಯಾತವಾದವುಗಳು ಶಬ್ದಬಲದಿಂದ ಅಂದರೆ ವೇದಶಾಸ್ತ್ರಗಳಿಂದ ಗ್ರಹಿಸಲ್ಪಟ್ಟವೆಯೇ ಹೊರ್ತು ಪ್ರತ್ಯಕ್ಷಾನುಮಾನ ಪ್ರಮಾಣಗಳಿಂದ ಗ್ರಹಿಸಲ್ಪಟ್ಟವುಗಳಲ್ಲವು. ಅಂಥಾ ಶಬ್ದವಾಚ್ಯ ವಸ್ತುಗಳು ಇರುವದರಿಂದಲೇ ಆ ಶಬ್ದಗಳು ಹುಟ್ಟಿವೆಯೇ ಹೊರ್ತು ಇಲ್ಲದಿದ್ದರೆ ಹುಟ್ಟಲು ಕಾರಣವಿಲ್ಲವು. ಇಷ್ಟು ಶಬ್ದರಾಶಿಗಳಂ ಒಬ್ಬ ಮನುಷ್ಯನು ಕಲ್ಪಿಸುವದು ಸಾಧ್ಯವಲ್ಲವು. ಕಲ್ಪಿಸಿದರೂ ಅಂಥಾ ಮನುಷ್ಯನಿಗೆ ಅದರಿಂದೇನೂ ಪ್ರಯೋಜನವಿಲ್ಲವು. ಆದುದರಿಂದ ನಾವು ಶಬ್ದಪ್ರಮಾಣ ಬದ್ಧರೆಂದರೆ ವೇದಶಾಸ್ತ್ರ ಬದ್ಧರಾಗಿದೇವೆ, ಆ ವೇದಗಳು ಇತರ ಮತ ಗ್ರಂಥಗಳಂತೆ ಯುಕ್ತಿಗಳಲ್ಲದೆ ದೇವರ ಸ್ವವಾಕ್ಯಗಳಾಗಿ ಅಪೌರುಷೇಯಗಳಾಗಿ ನಿತ್ಯ ನಿರ್ದೋಷಗಳಾಗಿ ಇರುತವಾದ್ದರಿಂದ ಅವು ತತ್ವವನ್ನು ಯಥಾರ್ಥವಾಗಿ ಬೋಧಿಸುತವೆ. ಜೀವಾತ್ಮನಿತ್ಯನೆಂದಲೂ ಕರ್ಮಬದ್ಧನೆಂದಲೂ ಅವುಗಳು ಬೋಧಿಸುವದರಿಂದಲೇ ಪಾಪ, ಪುಣ್ಯ, ಧರ್ಮ, ಅಧರ್ಮ, ನರಕ, ಸ್ವರ್ಗ, ಮೋಕ್ಷ, ಜನ್ಮಜನ್ಮಾಂತರಾದ್ಯಾದಿಗಳೆಲ್ಲ ಸಫಲವಾಗಿ ಸಿದ್ಧಿಸುತವೆ. ಕ್ರಿಸ್ತ ಮತದಲ್ಲಿ ಗ್ರಂಥವು ಮನುಷ್ಯನಿಗೆ ದೇವರು ಪ್ರಾಣವಾಯುವನ್ನು ಮೂಗಿನಲ್ಲಿ ಊದಿದನೆಂದು ಹೇಳಿದೆ. ಇದರಿಂದ ಅದು ವಾಯುವೇ ಹೊರ್ತು ಆತ್ಮನಲ್ಲವೆಂದು ಆಗುತದೆ. ಆ ಪ್ರಾಣವಾಯುವೇ ಆತ್ಮವೆಂದು ಹೇಳಿದರೂ ಅದಕ್ಕೆ ನಿತ್ಯತ್ವ ಇಲ್ಲದೆ ಆದಿ ಪ್ರಾರಂಭವಾದ್ದರಿಂದ ಆದಿ ಪ್ರಾರಂಭವಾದದ್ದೆಲ್ಲ ಅಂತ್ಯ ಸಿದ್ಧವಾಗಿರುವದರಿಂದ ಅಂಥಾ ಆತ್ಮಕ್ಕೆ ಅಂತ್ಯ ಪ್ರಾಪ್ತಿಯಾಗುತ್ತೆಂದು ಹೇಳಬೇಕಾಗಿ ಅವುಗಳಿಗೆ ಪಾಪ ಪುಣ್ಯ ಸ್ವರ್ಗ ನರಕಾದ್ಯಾದಿಗಳೂ ದೇವರೂ ಸಹ ಇಲ್ಲದ ನಾಸ್ತಿಕವಾದವೆಂದು ಹೇಳಬೇಕಾಗಿದ್ದರೂ ಅದಕ್ಕೆ ಪಾಪ ಪುಣ್ಯ ಸ್ವರ್ಗ ನರಕಾದ್ಯಾದಿಗಳು ಪ್ರಾಪ್ತವು ಅವರೇ ಹೇಳುತ ಪರಸ್ಪರ ವಿರುದ್ಧಗಳಾಗಿ ಅವರ ಮತ ಅಸಂಗತವಾಗಿ ಅಪತ್ಯವಾಗಿರುತದೆ ಇಂಥಾ ಅಸಂಗತಗಳು ಅನ್ಯರ ಮತದಲ್ಲಿ ಎಷ್ಟೋ ಇರುತವೆ. ಅವರು ನಮ್ಮ ಮತ ಚಂದವಾಗಿ ಬಿಂಬಿಸಿ ಹೊಗಳುವದರಿಂದ ದೇವತಾ ವೇದಶಾಸ್ತ್ರಗಳನ್ನು ನುರಿತು ಹೇಳಿದವಷ್ಟು ಜ್ಞಾನಕವಮೇಲೂ ಊಹೆಮೇಲೂ ಯುಕ್ತಿಯಮೇಲೂ ಒಂದುಮತವು ಸೃಷ್ಟಿಮಾಡಿಕೊಂಡವರಾಗಿದಾರೆ. ಈಶ್ವರನೂ ಪ್ರವಾಹರೂಪವಾದ ಪ್ರಪಂಚವು ಸಹ ಅನಾದ್ಯಂತರಹಿತಗಳಾಗಿರುವಲ್ಲಿ ಅವರು ಪ್ರಪಂಚ ಹುಟ್ಟಿ ಐದುಸಾವಿರ ವರುಷಗಳಾಯಿತೆಂದು ಕಲಿಯುಗಾದಿ ಹಿಡಿದು ಮಾತಾಡುವವರಾಗಿ ಪೂರ್ವಸ್ಥಿತಿಯೆಲ್ಲ ಮರೆತು ಹೋದವರಾಗಿದಾರೆ ಯದ್ಯಾ ದೇಶದವರು ಊಟಕ್ಕೆ ನಾಸ್ತಿಕರಾಗಿರುವದರಿಂದ ಆ ವಿಷಯದಲ್ಲಿ ಸುಶಿಕ್ಷಿತ ತರ್ಕಬದ್ಧಿಂಸು. ಈ ಪ್ರಕಾರ ನಮ್ಮ ಶಾಸ್ತ್ರ ವೇದಶಾಸ್ತ್ರವಾಗಿ ಯಥಾರ್ಥವಾಗಿ ನಾವು ಅಂಥಾ ಶಾಸ್ತ್ರಬದ್ಧರಾಗಿ ಇರುವದ್ದರಿಂದ ಆ ಶಾಸ್ತ್ರ ನಿಷಿದ್ಧವಾದ ವಿಧವಾ ವಿವಾಹವನ್ನು ಮಾಡುವದರಿಂದ ನಾವು ಪಾಪಿಷ್ಟರಾಗದೆ ಐಹಿಕಾಮುಷ್ಮಿಕಗಳಿಲ್ಲದೆ ನಿರ್ಗತಿಕರಾಗಿ ಅಧೋಗತಿಯಂ ಹೊಂದಬೇಕಾದವರಾಗುವೆವು. ಇನ್ನು ಮುಂದಾದರೂ ನಮ್ಮ ಜನಗಳು ಯಿಷ್ಟು ತಿಳಿದುಕೊಂಡು ಅಪಾರವಾದ ಸಂಸಾರ ಸಮುದ್ರವು ತರಿಸಿ ಕೃತಾರ್ಥರಾಗಬೇಕೆಂಬ ಮಹತ್ತರವಾದ ಆಶೆಯಿಂದ ಇದನ್ನು ಬರೆದೇನೆ

ಬಾಲ್ಯದಲ್ಲಿ ವಿಧವಾತ್ವ ಸಂಭವಿಸಿದರೆ ಅವರಿಗೆ ಈ ಕಾಲದಲ್ಲಿ ಬ್ರಹ್ಮಚರ್ಯವೊಂದೇ ವಿಹಿತವಾಗಿರುತದೆ. ಬ್ರಹ್ಮಚರ್ಯವೆ ದರೆ ಪುರುಷರಿಗೇ ಹೊರ್ತು ಸ್ತ್ರೀಗೆ ಬ್ರಹ್ಮಚರ್ಯವಿಲ್ಲವೆಂದು ಕೆಲವರು ತಿಳಿಯದೆ ಹೇಳುತ್ತಾರೆ. ಪತಿವಿಯೋಗಾನಂತರ ಸ್ತ್ರೀಗೆ ಬ್ರಹ್ಮಚರ್ಯವೆಂದರೆ ಪುರುಷರಲ್ಲಿ ಬ್ರಹ್ಮಚಾರಿ ಹ್ಯಾಗೆ ವರ್ತಿಸುತ್ತಾನೆ ಹಾಗೆ ವರ್ತಿಸಬೇಕೆಂದು ಅರ್ಥವಾಗಿರುವದನ್ನು ಅಂಥಾ ಪ್ರಶ್ನೆ ಮಾಡುವವರು ತಿಳಿದುಕೊಳ್ಳತಕ್ಕದ್ದಾಗಿರುತವೆ. ಅಲ್ಲದೆ ಸಾಧಿಸಲಿಯದೆ, ಕಾಮವಂ ಮನಸ್ಸಿನ ಉಪವಸ್ತ್ರದಲ್ಲಿ ಗೂಢಚಾರಿಣಿಗಳಾಗುವದಕ್ಕಿಂತ ವೇಶ್ಯಾಸ್ತ್ರೀಯರಂತೆ ವರ್ತಿಸುವದು ಮೇಲು ಗಂಡುದರನ್ನುಳ್ಳ ಸ್ತ್ರೀಯರೇ ಜಾರಿಣೀಯರಾಗುತ್ತಾರೆ. ಕೆಡುವವರು ಹ್ಯಾಗಾದರೂ ಕೆಡದೇ ಕೆಡುತ್ತಾರೆ "ಅಂತಃಪ್ರಚ್ಛನ್ನ ಪಾಪಾನಾಂ ಶಾಸ್ತಾವೈವಸ್ವತೋಯಮಃ" ಎಂಬದಾಗಿ ನಾವು ತೃಪ್ತರಾಗಬೇಕೇ ಹೊರ್ತು ನಮ್ಮ ಅಜ್ಞಾನ ಪ್ರಯತ್ನಗಳಿಂದ ಏನು ಕೂಡಬಾರದು ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ ದೈವಂ ಪ್ರಧಾನಮಿತಿ ಕಾಪುರುಷಾವದಂತಿ । ದೈವಂ ನಿಹತ್ಯ ಕುರು ಪೌರುಷಮಾತ್ಮಶಕ್ತ್ಯಾ ಯತ್ನೇಕೃತೇ ಯದಿನಸಿದ್ಧ್ಯತಿ ಕೋತ್ರದೋಷಃ ॥ ಎಂಬ ಪ್ರಮಾಣಪ್ರಕಾರ ನಾನು ನನ್ನ ಯತ್ನವು ಮಾಡಿದೆ ಇದಲಾರವನಾಗಿದ್ದೇನೆ. ಸರ್ವರೂ ಕ್ಷಮಿಸಬೇಕು.

ಆಲ್ಕೊಂಡಪಲ್ಲಿ ಶ್ರೀನಿವಾಸಯ್ಯಂಗಾರಿ

SUMMARY OF NEWS

ವೃತ್ತಾಂತಸಂಗ್ರಹವು

ಕಾಶ್ಮೀರ ಮಹಾರಾಜರವರಿಗೆ ಶರೀರಾರೋಗ್ಯದಲ್ಲಿ ಕೊರತೆ ಯುಂಟಾಗಿರುವಂತೆ ಹೇಳುತ್ತಾರೆ.

ಕೆಲವು ದಿನಗಳ ಮೊದಲು ಸಿಂಧುನದಿಯಲ್ಲಿ ನೀರಿನ ಗುರುತಿಗಿಂತಲೂ ೨೯ ಅಡಿ ಎತ್ತರ ನೀರು ಹರಿಯುತಲಿದೆ.

ತಿರುವಾಂಕೂರು ಮಹಾರಾಜರವರ ವಿಶೇಷಾರ್ಜಿ ವೈಕಂ ಮತ್ತು ಕೊಟ್ಟಾಯ ಪ್ರಾಂತಕ್ಕೆ ಪ್ರಯಾಣ ಹೊರಟಿರುತ್ತಾರೆ

ಬೇಸಿಗೆಯ ಬಗ್ಗೆ ಕೊಡಲ್ಪಟ್ಟ ರಜಾ ತೀರಿ ಈದಿನ ಮದರಾಸ್ ಕ್ರಿಶ್ಚಿಯನ್ ಕಾಲೇಜ್ ಮುಂತಾದ ಕಾಲೇಜುಗಳು ತೆರೆಯಲ್ಪಡುವವು.

ಒರಿಸ್ಸಾ ದೇಶದ ಕೇಂದುಝರ ಸಂಸ್ಥಾನದ ಬಲಕರವಾದ ಮಹಾರಾಜರು ಕಲ್ಕತ್ತಾ ಯೂನಿವರ್ಸಿಟಿ ಎಫ್. ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾರೆ

ಕೃಷ್ಣಾ ಡಿಸ್ಟ್ರಿಕ್ಟ್ ಡಿಪ್ಯೂಟಿ ಕಲೆಕ್ಟರಾದ ಸುಂದರ ವೇದಾಚಲಂ ಯೆಂಬವರು ಲಂಚ ತೆಗೆದುಕೊಂಡರೆಂದು ತನಿಖೆ ಮಾಡಲ್ಪಟ್ಟದ್ದು ಈಗ ಕೆಲಸದಿಂದ ಉದ್ಯೋಗಕ್ಕೆ ನಿಲುಪಿಸಲ್ಪಟ್ಟಿರುತ್ತಾರೆ

ಎರಡನೇ ತರಗತಿ ಗಾಡಿಯಲ್ಲಿ ರನ್ನ ಪತಿಯೂ ಸಹ ಈಸ್ಟಿಂಡಿಯಾ ರೈಲ್ವೆ ಗಾಡಿಯಲ್ಲಿ ಹೋಗುತಲಿದ್ದ ಬಂಗಾಳಿ ದೇಶದ ಹೆಂಗಸೊಬ್ಬಳನ್ನು ಅದೇ ದೇಶದ ದೊರೆಗಳಿಬ್ಬರು ಅಗೌರವ ಪಡಿಸಿದ ಬಗ್ಗೆ ಮೂರುತಿಂಗಳು ಕಠಿಣಶಿಕ್ಷೆ ವಿಧಿಸಲ್ಪಟ್ಟರು

ಮದರಾಸಿನಲ್ಲಿ ಪ್ರಸಿದ್ಧ ವರ್ತಕರಾಗಿರುವ ಮೆಸರ್ಸ್ ಹಾಜಿ ಅಬ್ದುಲ್ ಸೇಟ್ ಕಂಪನಿಯವರ ಕೋಠಿಗೆ ಆದಿತ್ಯವಾರದ ದಿನ ಬೆಂಕಿ ಬಿದ್ದು ಕೋಠಿ ಪೆಟ್ಟಿಗೆಗಳ ಕರೆ ಸಹ ಸುಟ್ಟು ಭಸ್ಮವಾಯಿತು

ಆದಿತ್ಯವಾರ ಮತ್ತು ಸೋಮವಾರದಲ್ಲಿ ನಕ್ಷತ್ರಗಳ ಸೇರಿದ ಹೊಗ್ಲಿ ಇನ್ನು ಆರೆಂಬ ಡಿಸ್ಟ್ರಿಕ್ಟುಗಳಲ್ಲಿ ಅನುಸ್ಯೂತವಾಗಿ ಬಿದ್ದ ಮಳೆ ನಷ್ಟದ ಬೆಳೆ ಮುಂತಾದ ಕೆರೆ ಕುಂಟೆಗಳೆಲ್ಲ ತುಂಬಿ ನದಿಗಳಲ್ಲಿ ಅಧಿಕ ಪ್ರವಾಹ ಹರಿಯುತಲಿದೆ. ಹಳ್ಳಿಗಳೆಲ್ಲವು ನೀರಿನಲ್ಲಿ ಮುಳುಗಿ ಹೋಗಿವೆ

ಆಂಧ್ರ ದೇಶಕ್ಕೆ ಉಂಟಾಗಿರುವ ಲೋಕಲ್ ಸಿಸ್ಥಿತಿಯ ಬಗ್ಗೆ, ಮುಂದೆ ನಾಲ್ಕು ವರುಷಗಳ ಕಾಲದಲ್ಲಿ ಈ ದೇಶಕೊಳು ತಯಾರಾಗಬೇಕಾದ ರೈಲ್ವೆ ರಸ್ತೆಯ ಏರ್ಪಾಟನ್ನು ಪಿಲಾಯಿತಿ ಸರ್ಕಾರಕ್ಕೆ ತಿಳಿಸುತ್ತಾರೆ. ಅದು ಈಗ ಸ್ವೀಕರಿಸಲ್ಪಡದೆ

ಬಂಗಾಳೀ ದೇಶಕ್ಕೆ ಸೇರಿದ ತಹಿರ್ಪುರದ ನಿವಾಸಿಯಾದ ರಾಜಾ ಸಸಿಶೇಖರೇಶ್ವರ ರಾಯರು ಪಶು, ದಾರಿದ್ರ್ಯದಿಂದ ಬಲಹೀನವಾದ ದನಗಳು ಮೇಯುವದಕ್ಕಾಗಿ ಗಂಗಾನದೀ ತೀರದಲ್ಲಿ ಅತಿ ವಿಸ್ತಾರವಾದ ಹುಲ್ಲು ಗಾವಲ್ ಭೂಮಿಯನ್ನು ದಾನ ಮಾಡಿರುತ್ತಾರೆ.

ಇಂಗ್ಲೆಂಡ್ ದೇಶಕ್ಕೂ ಫ್ರಾನ್ಸ್ ದೇಶಕ್ಕೂ ಮಧ್ಯೆ ಇರುವ ಇಂಗ್ಲೀಷ್ ಚಾನಲ್ ಎಂಬ ಸಮುದ್ರದ ಕೆಳಗಡೆ ಒಂದು ಮಾರ್ಗವು ಕಲ್ಪಿಸಿ ಸದರೀ ಎರಡು ದೇಶವನ್ನು ಸೇರಿಸಬೇಕೆಂದು ಉಂಟಾಗಿದ್ದ ಆಲೋಚನೆ ಇಂಗ್ಲೀಷ್ ಜನರಲ್ಲಿ ಈಗ ವೃದ್ಧಿಯಾಗುತ ಬರುತಲಿದೆ. ಯೇತಕ್ಕೆಂದರೆ ಹೌಸಾಫ್ ಕಾಮನ್ಸ್ ಸಮಾಜದಲ್ಲಿ ಈ ಪ್ರಯತ್ನಕ್ಕೆ ಪ್ರತ್ಯರ್ಥಿಗಳಾದವರ ಸಂಖ್ಯೆ ಕಡಮೆಯಾಗಿ ಹೋಗಿದೆ.

ಆರ್ಕಾಟ್ ನವಾಬರವರು ಈ ದಿನ ದಕ್ಷಿಣ ಇಂಡಿಯಾ ರೈಲ್ವೆಮಾರ್ಗವಾಗಿ ಸ್ಪೆಷಲ್ ಟ್ರೇನ್ನಲ್ಲಿ ನಾಗೂರಿಗೆ ಹೋಗಿ ಅದೇ ತಿಂಗಳ ೨೭ನೇ ತಾರೀಖಿನ ದಿನ ಮದರಾಸ್ ರಿಟರ್ನ್ ಸ್ಪೆಷಲಿನಲ್ಲಿ ವಾಪಸ್ ಬರುವರು. ಇವರು ಹೋಗುವ ಕಾಲ ವಾಪಸ್ ಬರುವ ಕಾಲದಲ್ಲೂ ಹಾದಿಯಲ್ಲಿ ರಕ್ಷಣೆಯ ಪೋಲೀಸ್ ಸವಾರರಿಗೂ ಮದರಾಸ್ ಕಲೆಕ್ಟರವರಿಗೂ ಗವರ್ನ್ಮೆಂಟಿನವರು ಹುಕುಂ ಕೊಟ್ಟಿರುತ್ತಾರೆ

ಬಂಗಾಳೀ ದೇಶದ ಸೊಬ್ಬಾತನು ಹನ್ನೊಂದು ವರುಷಗಳ ವಯಸ್ಸಿನ ತನ್ನ ಹೆಂಡತಿಯ ಮರಣಕ್ಕೆ ಕಾರಣವಾಗುವಂತೆ ಸಂಭೋಗಿಸಿದನೆಂದು ಅಪಾದಿಸಲ್ಪಟ್ಟು ಸೆಷನ್ ಕಮಿಟಿ ಮಾಡಲ್ಪಟ್ಟಿರುತ್ತಾನೆ. ಹಿಂದುಗಳ ವಿವಾಹದಲ್ಲಿ ಸಮ್ಮತಿಯ ಕಾಲ ಪರಿಮಾಣವನ್ನು ಹೆಚ್ಚಿಸಬೇಕೆಂದು ಇಂಡ್ಯಾ ಗವರ್ನ್ಮೆಂಟಿಗೆ ಅರ್ಜಿ ಕೊಡುವದಕ್ಕಾಗಿ ಅಲ್ಲಿನ ಪ್ರಜೆಗಳಾದ ನೇಟಿವ್ ದೊಡ್ಡ ಮನುಷ್ಯರೆಲ್ಲರ ಸೇರಿ ಒಂದು ಸಭೆ ಸೇರುವವರಾಗಿರುತ್ತಾರೆ.

ಎಟ್ಟಿಯಾಪುರದ ಜಮೀನ್ದಾರಿಯನ್ನು ಕೋರ್ಟ್ ಆಫ್ ವಾರ್ಡ್ಸ್ ಅಂದರೆ ಸರ್ಕಾರದಿಂದ ನೇಮಕ ಮಾಡಲ್ಪಡುವ ಅಧಿಕಾರಿಗಳ ಸ್ವಾಧೀನಕ್ಕೆ ಕೊಡಬೇಕೆಂದು ಬೋರ್ಡ್ ರೆವಿನ್ಯೂನವರು ಮಾಡಿದ ತೀರ್ಮಾನವನ್ನು ಗವರ್ನ್ಮೆಂಟಿನವರು ಮಂಜೂರ್ಮಾಡಿರುತ್ತಾರೆ. ಜಮೀನ್ದಾರರು ೧೮೮೯ನೇ ಇಸವಿ ಮೇ ತಿಂಗಳ ಮೂರ್ನೇ ತಾರೀಖಿನಲ್ಲಿ ಕಾಲಗತಿಯಂ ಹೊಂದಿದರು. ಅವರಿಗೆ ೧೧ ವರ್ಷಗಳ ವಯಸ್ಸಿನ ಪುತ್ರನೊಬ್ಬನಿದ್ದಾನೆ ಆತನೇ ಜಮೀನ್ದಾರಿಗೆ ಹಕ್ಕುದಾರನು. ಸದರೀ ಬಾಲಕನನ್ನು ಮದರಾಸಿಗೆ ಕರೆದುಕೊಂಡು ಬಂದು, ಕಂಗೊಂಡಿ ವಗೈರೆ ಸಣ್ಣ ಜಮೀನ್ದಾರರಿಗೆ ವಿದ್ಯಾ ಗುರುಗಳಾಗಿರುವ ಮಿ॥ ರಾಪ್ಸನ್ ಎಂಬವರ ವಶದಲ್ಲಿ ಬಿಟ್ಟಿರುವರು.

ಪ್ರಸ್ತುತಕಾಲದಲ್ಲಿ ... ಸಂಸ್ಥಾನಗಳ ಸುತ್ತ ... ಎಂಬ ಪ್ರದೇಶದ ಧರ್ಮ ಸ್ಥಾಪಿಸುವದು ... ಗವರ್ನ್ಮೆಂಟಿಗೆ ... ಬರೆದುಕೊಳ್ಳಬೇಕೆಂದು ಯೋಚಿಸುತಲಿದಾರೆ ಈ ಕಾರ್ಯಕ್ಕೆ ಹಿಡಿಯಬಹುದಾದ ಖರ್ಚುಗಳನ್ನು ನಮ್ಮ ಮಹಾರಾಜರವರು ವಹಿಸುವರು. ಮಹಾರಾಜರವರ ಮಾತೃಶ್ರೀಯವರ ಏನು ಮುಂದೆ ... ಬಹಳ ... ಪ್ರಭುತ್ವವನ್ನು ನಮ್ಮ ರಾಜ್ಯದಲ್ಲಿನ ಕೆಲವು ಮುಸಲ್ಮಾನರು ಪಡಿಸಿದ್ದರಿಂದ ಮಹಾರಾಜರವರು ಕೋಪಗೊಂಡರು. ಈ ವಿಷಯದಲ್ಲಿ ಮಹಾರಾಜರವರಿಗೆ ಕೋರ್ಟುಗಳಲ್ಲಿ ನ್ಯಾಯವು ಸಿಕ್ಕಲಿಲ್ಲವು. ಪ್ರತಿ ಕೋರ್ಟಿನವರು ಸದರೀ ವ್ಯವಹಾರವು ಕೇವಲ ಕ್ರೋಧ ಸ್ವಭಾವದಲ್ಲಿನ ... ಪಟ್ಟರು ... ಸದರೀ ವಸ್ತುಗಳು ಸ್ವಭಾವವಿಷಯದಲ್ಲಿ ... ಅಭಿಪ್ರಾಯವು ಮುಖ್ಯವೆಂದು ಹೇಳಬಹುದು

BANGALORE.—Printed and published at the KARNATAKA PRESS, No. 111, SRINIVASA MANDIRAM ROAD, PETTAH.—1890

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಕಾಶವಿದಪ್ರಸ್ವತ್ಯ್ಯಸಗಪಾರ್ಥ್ಯಕರ್ಣಾಟಕಪ್ರಕಾಶನಪದಾಭಿಧಾಪ್ರತಸಾಹಿತ್ಯಶೋಭಿತಾ। ಸ್ವಗಾಂಕಹಿತವಾಸರೆನಿಹಿತಮುದ್ರಣಾಸಜ್ಜನೈರ್ಹಿತಾಸುಪರಿಪೋಷಿತಾದಿಶತಿಮಾನಸಂಸುಖಂ॥

Vol. XVII] BANGALORE—MONDAY, JULY 21, 1890. [No. 29.

ಸಂಪುಟ ೧೭.] ಬೆಂಗಳೂರು:—ಸನ್ ೧೮೯೦ನೇ ಇಸವಿ ಜುಲೈ ೨೧ ನೇ ತಾರೀಖ್ ಸೋಮವಾರ. [ಸಂಚಿಕೆ ೨೯.

ಕರ್ನಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಕಾಲ್ ಗಳ್ಳಿ	ಸ್ಥಳದವರಿಗೆ ಸಾಕಲಿಲ್ಲದೆ	ಪರಸ್ಥಳದವರಿಗೆ ಪೋಸ್ಟೇಜಿ
ಮುಂಗಡಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ ದರಗಳನ್ನು ಮಾರಿದ ತಾರೀಖ್ ನೋಡದ ಒಂದು ತಿಂಗಳ ಒಳಗಾಗಿ ಚಂದಾ ಹಣವನ್ನು ಕಳುಹಿ ಅನಂತರವಾಗಿ ಮಾತ್ರ ಅರ್ಜಿ ದಯ ಪತ್ರಿಕೆ ಕಳುಹಿಸುವರು. [illegible] ಇಂಗ್ಲಿಷ್ ಭಾಗ ಕನ್ನಡ ಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. [illegible]

[illegible]

ಪ್ರಕಟನೆಯ ರಿವಾಜ್.

ಮೊದಲನೆಯದಸಾ ಪಟ್ಟಿ ಒಂದಕ್ಕೆ	೦—೩—೦
ಎರಡನೆಯ ದಫಾ ಪಟ್ಟಿ ಒಂದಕ್ಕೆ	೦—೧—೦

[illegible]

NOTICE.

VAIDYASARA SANGRAHA

A TREATISE ON THE ELEMENTS OF

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

[illegible]

ಇದರ ಕ್ರಯ—ಪೋಸ್ಟೇಜ್ ಮತ್ತು ಅಂಚೆ ಖರ್ಚು ಸೇರಿ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. [illegible]

[illegible] 11ನೇ ನಂ. [illegible]

ADVERTISEMENTS.

ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

		ಪೋಸ್ಟೇಜ್ ಸಹಿತ ರೂ. ಆ. ಪೈ
ಸಟೀಕಾ ವೈದ್ಯಸಾರ ಸಂಗ್ರಹ	....	೫ ೦ ೦
,, ಶಿವಗೀತೆ	...	೧ ೦ ೦
,, ಶಿವಾನಂದಲಹರಿ	...	೦ ೪ ೦
,, ಕಾಲಾಮೃತ		೧ ೨ ೦
,, ಮುಕುಂದದರ್ಪಣ		೦ ೧೨ ೦
,, ಬಾಲರಾಮಾಯಣ	...	೦ ೮ ೦
,, [illegible]	...	೦ ೧ ೬
,, ಚಾಣಕ್ಯನೀತಿ (ಸುಭಾಷಿತ)		೦ ೩ ೦
ವಿಷ್ಣುಸಹಸ್ರನಾಮ ಪತ್ರಿಕೆ	...	೦ ೫ ೦
ಸೂರ್ಯಸಿದ್ಧಾಂತ	...	೦ ೨ ೦
ಕೃಷ್ಣಕರ್ಣಾಮೃತ	...	೦ ೨ ೬
ತ್ರಿಶತೀ ಅಮರ ಮೂಲ	...	೦ ೨ ೬
೧ ಕಾಂಡ	...	೦ ೦ ೦

ಕನ್ನಡ ಗ್ರಂಥಗಳು.

ಬಸವಪ್ಪ ಅವರ ಕೃತಿ	...	೩ ೦ ೦
ಚಿತ್ರರೋ ದೀಪ್ಯಾ	..	೦ ೮ ೦
ವೈದಿಕ ಹಿಂದು ವಿವಾಹ	...	೦ ೪ ೦
ಮಂತ್ರಪಾಠ ಮಾಲಿಕೆ	...	೦ ೪ ೦
ಹನುಮಾದ್ವಿಲಾಸ	...	೦ ೪ ೦
ಕಾಲೀಯ ಮರ್ದನ	..	೦ ೨ ೬
[illegible]	.	೦ ೨ ೬
ಶಕುಂತಲಾ ನಾಟಕ	..	೦ ೩ ೦
ಸುದಾಮ ಚರಿತ್ರೆ	..	೦ ೨ ೦
ಮೈರಾವಣನ ಕಾಳಗ	..	೦ ೨ ೦
ಬಾಲಕರ ಚಿತ್ರ	..	೦ ೨ ೬
ಪತಿವ್ರತಾ ಶಿಕ್ಷೆ	...	೦ ೦ ೦
[illegible]	...	೦ ೧೨ ೦

ನೋಟೀಸ್.

ಮನೆಗಳಲ್ಲಿ ಗಿಲಿಟ್ ಮಾಡುವುದಕ್ಕೆ ಅನುಕೂಲವಾದ ಬೆಳ್ಳಿ ದ್ರಾವಕವು.

ಈ ಬೆಳ್ಳಿ ದ್ರಾವಕವು ಸ್ವಚ್ಛವಾದ ಬೆಳ್ಳಿ ಹಿತ್ತಾಳೆ [illegible] ತಾಮ್ರ ಹಿತ್ತಾಳೆ ಪತ್ರೆ ವಿಶಿಷ್ಟ ಪದಾರ್ಥಗಳ ಮೇಲೂ [illegible]

[illegible]

ಇದರ ಕ್ರಯ ಸೀಸೆ ೧ ಕ್ಕೆ ೦—೪—೦

ಚಿನ್ನದ ದ್ರಾವಕವು.

ಇದು ಬೆಳ್ಳಿ, ಹಿತ್ತಾಳೆ, ತಾಮ್ರ ಪಗೈರೆ ಪದಾರ್ಥಗಳನ್ನು ಗಿಲ್ಟ್ ಮಾಡಲಿಕ್ಕೆ ಬಹಳ ಉಪಯುಕ್ತವಾಗಿರುವದಲ್ಲದೆ ಶುದ್ಧವಾದ ಭಂಗಾರದಲ್ಲಿ ತಯಾರಾಗಿರುತ್ತದೆ. ಬೆಳ್ಳಿ ಆಭರಣಗಳನ್ನು ಗಿಲ್ಟ್ ಮಾಡಲಿಕ್ಕೆ ಈ ದ್ರಾವಕವು ಕೇವಲ ಪ್ರಯೋಜನಕರವಾಗಿರುವದು.

ಇದರ ಕ್ರಯ ಸೀಸೆ ೧ ಕ್ಕೆ ೩—೪—೦

ಬೇಕಾದವರು [illegible] ಕಳುಹಿಸಿ ತರಿಸಿಕೊಳ್ಳಬಹುದು.

ಕೊಡಗು ಫಾರೆಸ್ಟ್ ಇಲಾಖಾ.

ನೋಟೀಸ್.

ಸನ್ 1890ನೇ ಇಸವಿ ಜುಲೈ ತಾರೀಖ್ 10ರಲ್ಲು.

ಇದರಡಿ ನಮೂದಿಸಿದ ಕೋರಿ ಪಗೈರೆ ಸಾಮಾನುಗಳು ಹುಣಸೂರು ಡಿಪೋದಲ್ಲಿ ಸನ್ 1890 ನೇ ಇಸವಿ ಆಗಸ್ಟ್ ತಾರೀಖ್ 21 ರಲ್ಲಿ ಹರಾಜ್ ಹಾಕಲ್ಪಡುತ್ತವೆ.

ಶ್ರೀಗಂಧದ ಕೊರಡುಗಳು	450 ...13800	ಅಡಿ.
ಹೊನ್ನೆ ಪಗೈರೆ	580 ..15300	,,
ಸ್ಲೀಪರ್	6750... 8550	,,
ಶ್ರೀಗಂಧದ ಮರ ಕೊಯಿದ ತುಂಡುಗಳು	770... 1160	,,
ಅಕೇಷಿಯಾ ಪಟ್ಟೆ ಮರ	28960...	

ಶರ್ತು:—ಸನ್ 1889ನೇ ಇಸವಿ ಡಿಸೆಂಬರ್ ತಾರೀಖ್ 19 ನಂಬರ್ 33ರ ಚೀಫ್ ಕಮಿಷನರ್ ಸಾಹೇಬರವರ ನೋಟಿಫಿಕೇಷನ್ ಮೇರೆ ನುರಿವ ಕ್ರಯದ ಪೈಕಿ ಶೇಕಡ ಹತ್ತರಷ್ಟು ಮೊಬಲಗನ್ನು ಹರಾಜ್ ಕಾಲದಲ್ಲಿ ಪಾವತಿ ಮಾಡಿ ಬಾಕೀ ಮೊಬಲಗನ್ನು ಹರಾಜ್ ತಾರೀಖು ಲಗಾಯತು 30 ದಿನಗಳೊಳಗೆ ಪಾವತಿ ಮಾಡತಕ್ಕದ್ದು.

J. McKie,

ಡಿಪ್ಟಿ ಕನ್ಸರ್ವೇಟರ್.

Bangalore City Municipality

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಸನ್ ೧೮೯೦ನೇ ಇಸವಿ ಜುಲೈ ತಾರೀಖ್ ೨೬ನೇ ಶನಿವಾರ ಪ್ರಾತಃಕಾಲ ೭½ ಘಂಟೆಗೆ ಸಿಟಿ ಮ್ಯುನಿಸಿಪಲ್ ಸಭಾಸದರು ತಮ್ಮ ಆಫೀಸಿನಲ್ಲಿ ಸಭೆ ಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳ ಯಾದಾಸ್ತು.

೧. ಸನ್ ೧೮೯೦ನೇ ಇಸವಿ ಜೂನ್ ಮಾಹೆ ಬಾಬತು ನಗದು ಜಮಾಖರ್ಚು ಮತ್ತು ಮರಾಮತ್ತುಗಳು.

೨. ಮ್ಯುನಿಸಿಪಲ್ ಆಫೀಸಿನಲ್ಲಿ ಇಂಗ್ಲಿಷ್ ಮತ್ತು ನೇಟಿವ್ ಬ್ಯಾಂಡ್ ವಾದ್ಯಗಳ ಬಾರಿಸುವ ವಿಷಯದಲ್ಲಿ ಜವಾಬು ಖರ್ಚುಗಳನ್ನು ಕೋರಿರುವ ಕಾಗದ.

೩. ಕನ್ನಡ ಹುಡುಗರ ಪಾಠಶಾಲೆಗೆ ಬೇಕಾಗುವ ಬುಕ್ಕುಗಳು ಪಗೈರೆಯನ್ನು ಕೊಂಡುಕೊಳ್ಳತಕ್ಕದ್ದನ್ನು ಕುರಿತು ಮೈಸೂರು ಗವರ್ನಮೆಂಟ್ ವಿದ್ಯಾಭ್ಯಾಸ ಇಲಾಖಾ ಸೆಕ್ರೆಟರಿ ಅವರು ಬರೆದ ೧೮೯೦ನೇ ಇಸವಿ ಜುಲೈ ೭ನೇ ಮುಕ್ಕಾಂ ೬೦೩೭ನೇ ನಂಬರ್ ಲೆಟರ್.

೪. ಮ್ಯುನಿಸಿಪಲ್ ಸರಹದ್ದಿನೊಳಗಿನ ಆಕ್ಟ್ರಾಯ್ ಠಾಣ್ಯಗಳಿಗೆ ಕೊಡಬೇಕಾದ ಮೊಬಲಗನ್ನು ಕುರಿತು ಮೈಸೂರು ಚೀಫ್ ಇಂಜನಿಯರ್ ಅವರು ಬರೆದ ಸನ್ ೧೮೯೦ನೇ ಇಸವಿ ಜುಲೈ ೪ನೇ ಮುಕ್ಕಾಂ ೩೪೪೦ನೇ ನಂಬರ್ ಲೆಟರ್.

೫. ಮೈಸೂರು ಶ್ರೀಮನ್ಮಹಾರಾಜರವರಿಗೆ ಮೂರನೇ ಕುಮಾರರು ಜನಿಸಿದ ಸಂದರ್ಭದಲ್ಲಿ ಕಚೇರಿ ಪಗೈರೆ ಮುಚ್ಚಿದ್ದು ಬಗ್ಗೆ ಕುರಿತು [illegible].

೬. ಮ್ಯುನಿಸಿಪಲ್ ಕಂಟ್ರಾಕ್ಟರುಗಳು ರುಜುವಾತುಪಡಿಸಿದ ಕಾನೂನು ಅನುಸರಿಸಿ ಸಾಕ್ಷ್ಯ ದಸ್ತಾವೇಜ್ ಪಗೈರೆ ಆಗಬೇಕಾಗಿರುವ ಪತ್ರಗಳು.

೭. ಸಂದಂಗಿಶೆಟ್ಟಿ ಪಾಳ್ಯದಲ್ಲಿ ಕಾರ್ಪೊರೇಷನ್ ಸ್ಥಳ ಮಾಡುವ ವಿಷಯದಲ್ಲಿ ಡಿಸ್ಟ್ರಿಕ್ಟ್ ಇಂಜನಿಯರ್‌ ಅವರು ಬರೆದ ಕುರಿತು ಕಾಗದ ಲೆಟರ್.

೮. ಈ ಸಾಲಿನಲ್ಲಿ ಮ್ಯುನಿಸಿಪಾಲಿಟಿಗೆ ಸೇರಿದ ಹುಲ್ಲುಗಾವಲು ಜಮೀನುಗಳನ್ನು ಹರಾಜ್ ಮಾಡಿದ ಪಟ್ಟಿಗಳು.

೯. ಈ ಪಟ್ಟಣದಲ್ಲಿ ಬಾಡಿಗೆ ಗಾಡಿಗಳು ಹೋಗುವದಕ್ಕೆ ಒಂದು ಸ್ಥಳ ಏರ್ಪಾಟು ಮಾಡಬೇಕೆಂದು ಮ್ಯುನಿಸಿಪಲ್ ಕಮಿಷನರ್ ಮಿ। ದೊಡ್ಡ ಮುನಿಯಪ್ಪನವರು ಬರೆದ ಲೆಟರ್.

೧೦. ನಿಶ್ಚಯಿಸಲ್ಪಡಬೇಕಾದ ವಿಷಯಗಳು.

ಸನ್ ೧೮೯೦—೯೧ನೇ ಇಸವಿಯ ಬಾಬತು ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ಬಜೆಟ್ ಅಂದಾಜ್ ಪಟ್ಟಿಯನ್ನು ಮುಜುರ್ಮಾಡಿ ಮೈಸೂರು ಗವರ್ನಮೆಂಟಿನವರು ೧೮೯೦ನೇ ಇಸವಿ ಮೇ ಮಾಹೆ ೯ನೇ ತಾರೀಖಿನಲ್ಲಿ ನಡೆಸಿದ ೧೪೬—೩೪ನೇ ನಂಬರ್ ಪ್ರೊಸೀಡಿಂಗ್ಸ್, ಸರ್ಕ್ಯುಲರ್ ನಂಬರ್ ೩೦.

ಜಾಸ್ತಿ ಅಂಶಗಳು.

ಬೆಂಗಳೂರು ಪಟ್ಟಣದಲ್ಲಿ ಹಾರೀಜೊಳು ಶರಪೇಟೆಯು ಆಲೋಚಿಸಲ್ಪಟ್ಟದ್ದು ಮುಸಲಿದಾಪ್ರಮಾ ಅಂದರೆ ಉಪನಿಬಂಧನೆಗಳಲ್ಲಿ ಉಂಟಾದ ಒಂದು ದೋಷವನ್ನು ಬಿಟ್ಟು ಮಾಡುವದಕ್ಕಾಗಿ ಅದನ್ನು ವಾಪಸು ಮಾಡಿ ರೆಜಿಸ್ಟರ್ ಸೆಕ್ರೆಟರಿಯವರು ಬರೆದ ಸನ್ ೧೮೯೦ನೇ ಇಸವಿ ಫೆಬ್ರವರಿ ೧೩ನೇ ಮುಕ್ಕಾಂ ೨೧೯ನೇ ನಂಬರ್ ಲೆಟರ್.

ಬೆಂಗಳೂರು, ೧೮ನೇ ಜುಲೈ ೧೮೯೦ } **A. S. Raghavachariar,** *Vice-President, City Municipal Commn.*

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JULY 21, 1890.

೧೮೯೦ನೇ ಜುಲೈ ೨೧ನೇ ಸೋಮವಾರ.

MIGHTY CHANGES OF TIME.

"ಉತ್ಕೃಷ್ಟ ಪ್ರತಿವಸ್ತುವಿನ ಸ್ವಭಾವಿ ಕ್ಷಣಿಕ ವಿಘಟಿತ" ಎಂಬುದೆ ಶ್ವೇತಪ್ಪ ಯಾಗಿ ಮಹರ್ಷಿಗಳಲ್ಲಿ ಪ್ರವರ್ತಿಸತಕ್ಕವರೆಲ್ಲರು ಅತ್ಯಂತಿಕವಾಗಿ ಶ್ರುತಿಪಡಿಸತಕ್ಕದ್ದೆಂದು ಶಾಸ್ತ್ರ ನಿರ್ಧರಿಸಿದ್ದಾಗ್ಯೂ "ಕಾಲಸ್ಯ ಕುಟಿಲಾಗತಿಃ" ಎಂಬುದೇ ಕಾಲಗತಿಯು ಸಾಕ್ಷಾತ್ ಪ್ರತ್ಯಕ್ಷಮಾಗಿರುವದರಿಂದ ಅದು ಸಕಲಶಾಸ್ತ್ರಗಳನ್ನೂ ಮೀರುವದಾಗಿ ಅದ್ಭುತಕಾರಕವಾದ ಸ್ವಕಾರ್ಯವನ್ನು ನಡೆಸುವದಾಗಿ ವಿಚಾರಿಸಿದರೆ ಸರ್ವವ್ಯಾಪಕವಾಗಿ ತೋರಿಸುತ್ತದೆ. ಈಗ್ಗೆ ಹತ್ತು ಸಂವತ್ಸರಗಳಿಂದೀಚೆ, ಪ್ರಸ್ತುತವಾದ ವಿಷಯವನ್ನು ಕುರಿತು ಮುಖ್ಯವಾದ ಮ್ಯುನಿಸಿಪಲ್ ಆದಿ ಕೇಳತಕ್ಕವರು ಮಾತಾ

ಕರಣವಾದವನ್ನಾಗಿ ಭಾವಿಸಿ, ನುಡಿಯುವವರ ಜಿಹ್ವಾಚ್ಛೇದನ ದಂಡಿಸಬೇಕೆನ್ನುವಷ್ಟು ವಿಶ್ವೇಷಪೂರ್ಣರಾಗಿದ್ದರು. ಈಗ ಅಂತಾ ಭಾವವು ಶಾಲಾ ಮಹಿಮೆಯಿಂದ ಬಹಳಮಟ್ಟಿಗೆ ಕಡಮೆಯಾಗಿ ಈ ಯಾವ ಪುಣ್ಯಫಲಗಳನ್ನೂ ಅರಿಯದ ಅತಿ ಬಾಲವಿತಂತುಗಳಿಗೆ ಮರಳಿ ವಿವಾಹ ಮಾಡಿಸುವದನುಚಿತವಲ್ಲವೆಂಬ ತಾತ್ಪರ್ಯವು ಸರ್ವತ್ರ ಹಬ್ಬಾಗುತಲಿದೆ. ಮುಗ್ಧೆಯರಾದ ವಿತಂತುಗಳ ಸ್ಥಿತಿ ಪರಿಷ್ಕರಣ ಪರ್ಯವಸಾನವು ಅತ್ಯಂತ ಆತುರದೊಡನೆ ಪತಿಹೀನರಾದ ಪ್ರಬುದ್ಧರೆಲ್ಲರೂ ನಿರೀಕ್ಷಿಸುತ ತಮಗೆ ಕಾಲವು ಯಾವಾಗ ಸಹಕಾರಿಯಾಗುವದೋ ಯೆಂದು ಚಿಂತಿಸುತಲಿದ್ದಾರೆ ವಿನಿಮಯವೇ ಮುಖ್ಯ ಧರ್ಮವೆಂದೇ ವರ್ಟ್ಟಿರುವ ಕಾಲಕ್ಕೆ ಅವರ ಉದ್ದೇಶಪೂರ್ತಿಯಾಗ್ಯದ್ದು ವದೇನೂ ಅಸಾಧ್ಯವಲ್ಲವು. ಸ್ತ್ರೀಯರಾದವಳು ಸಾಮಾನ್ಯೇನ ಒಬ್ಬನ ಅಧೀನದೊಳಿರುತ ಗೃಹಿಣಿಯೆನಿಸಿಕೊಂಡು ಸಾಧ್ವಿಯಾಗಿ ಪರಪುರುಷ ಸಂದರ್ಶನ ಸಂಭಾಷಣಾದಿಗಳಂ ತೊರೆದು ತನ್ನ ಪತಿಯೇ ಪರಮಗುರುವೆಂಬದಾಗಿ ಭಾವಿಸಿ ವರ್ತಿಸುತಲಿದ್ದಂತ ಗತಿಸಿದವರನೇಕರನ್ನು ಶ್ರದ್ಧಾಜಡರನ್ನಾಗಿಯೂ, ಲೌಕಿಕ ಸುಖ ಬಾಹ್ಯರನ್ನಾಗಿಯೂ, ವೈಲಕ್ಷಣ್ಯ ವಿಹೀನರನ್ನಾಗಿಯೂ, ಕಡೆಗೆ ಈಗಿನ ಕಾಲಕ್ಕೆ ಅಪ್ರಯೋಜಕರನ್ನಾಗಿಯೂ ಭಾವಿಸುವಂತೆ ಕಾಲಗತಿಯಿಂದೇ ವರ್ಟ್ಟಿತು. ಪೂರ್ವದಲ್ಲಿ ಗೃಹವರ್ತಿನೀಯರಾಗಿರುವದು ಗೌರವವೆಂದು ತೋರಿತ್ತು. ಈಗ ಸ್ತ್ರೀ ಸಾಮಾನ್ಯ ಲಕ್ಷಣವಾದ ಲಜ್ಜೆಯಂ ತೊರೆದು ಜಾತಿ ಭೇದವಂ ಗಣಿಸದೆ ಸಭಾಮಧ್ಯದಲ್ಲಿ ಪ್ರಸಂಗಿಕರಾಗಿ ನಿಂತು ಉಪನ್ಯಾಸವಮಾಡುವಣವೇ ಪ್ರೌಢಾಂಗನಾಲಕ್ಷಣವೆಂದು ಭಾವಿಸಿ, ಅದಂ ಯೆಲ್ಲರೂ ಕೊಂಡಾಡುವಂತೆ ಪರಿಣಮಿಸಿದೆ. ಹಿಂದೆ ಸ್ತ್ರೀಯರಿಗೆ ಪಾಚನ ಸಮ್ಮಾರ್ಜನ ಪೇಷಣಾದಿ ಕಾರ್ಯಗಳು ಗೃಹಕೃತ್ಯಗಳಾಗಿಯೂ ಕರ್ತವ್ಯಗಳಾಗಿಯೂ ತೋರಿದ್ದವು. ಈಗಲಾದರೋ ಅವುಗಳಿಗೆ ಅಧಿಕಾರಿ ತಾರತಮ್ಯವು ಗಣಿಸಲ್ಪಟ್ಟು ಅತಿ ನೀಚಗಳಾದ ಸದರೀ ಕೃತ್ಯಗಳು ದಾಸ್ಯಗಳು ಮತ್ತು ವೈಲಕ್ಷಣ್ಯ ಭಂಜಕಗಳಂಬಿಬಿದಾಯಾನು ತರವೋರಿ, ಲೇಖನ ಪಠನ ಜೇಲನಪ್ರಸಂಗ ಪರ್ಯಟನಾದಿ ಕಾರ್ಯಗಳೇ ಭೂಷಣಗಳೆಂಬದಾಗಿ ಗಣಿಸಲ್ಪಡುತಲಿವೆ. ಹಿಂದೆ ಮಿತಭಾಷಿತ್ವವು ಪತಿವ್ರತಾ ಧರ್ಮತ್ವೇನ ಭಾವಿಸಲ್ಪಡುತಲಿತ್ತು. ಈಗ ಅತಿ ಭಾಷಿತ್ವವು ವಾಗ್ಮಿತೀ ರೂಪವಾಗಿ ಪ್ರಶಂಸಾರ್ಹವಾಗಿದೆ. ಪೂರ್ವದಲ್ಲಿ ಅರಸಿನ ಕುಂಕುಮಾಭರಣಾದಿಗಳು ಸುವಾಸಿನೀ ಲಕ್ಷಣತ್ವೇನ ಗ್ರಹಿಸಲ್ಪಟ್ಟಿದ್ದವು. ಈ ಕಾಲದಲ್ಲಿ ಅವುಗಳತ್ಯಾಗವೇ ನಾಗರಕ ಲಕ್ಷಣತ್ವೇನಗ್ರಹಿಸಿ ಕೊಂಡಾಡಲ್ಪಡುತಲಿದೆ. ಹಿಂದೆ ಮಹಾಭಾರತ ರಾಮಾಯಣಾದಿ ಕಥಾಶ್ರವಣವು ಪುಣ್ಯಸಂಪಾದಕತ್ವೇನ ತೋರಿತ್ತು. ಪ್ರಕೃತದಲ್ಲಿ ಅವು ಕಾಲಯಾಪನ ಹೇತುವೆಂತಲೂ, ಲೋಕಯಾತ್ರಾ ಪ್ರವರ್ತಕರಿಗವು ಅಭಿವೃದ್ಧಿ ಭಂಜಕವೆಂತಲೂ ಎಣಿಸಲ್ಪಡುತಿವೆ. ಈಗ ಅದಕ್ಕೆ ಬದಲಾಗಿ ಅರ್ಥ ಸಂಪಾದಕಗಳಾದ ಆಧುನಿಕ ಕುಶಲ ವಿದ್ಯೆಗಳನ್ನಭ್ಯಸಿಸಿ ಪ್ರಸಿದ್ಧಿಗೆಬರಬೇಕೆಂಬ ಪ್ರವೃತ್ತಿ ಮಾತ್ರವೇ ಪ್ರಚುರಗೊಂಡಿದೆ. ಸ್ವಕುಲ ಕ್ರಮಾಗತವಾದ ಮತ್ತು ಶಿಷ್ಟಜನಾನುಮೋದಿತಗಳಾದ ಪೂರ್ವ ಪದ್ಧತ್ಯನುಸರಣವು ಶ್ಲಾಘ್ಯ ವೆಂಬದಾಗಿ ಗಣಿಸಲ್ಪಟ್ಟಿತ್ತು. ಈಗಲಾದರೋ ಶಿಷ್ಟ ಜನ ಸ್ಥಾನದಲ್ಲಿ ಇಂಗ್ಲಿಷ್ ನವರೂ, ಪೂರ್ವ ಪದ್ಧತಿಗೆ ಬದಲು ಆತ್ಮಸುಖಸಂತೋಷ ಹೇತುಭೂತಗಳಾದ ನವೀನ ಪದ್ಧತಿಗಳೂ ಸದರಿವವು. ಹೀಗೆಯೇ ದೃಶ್ಯಗಳಾದ ಅನೇಕ ವಿನಿಮಯಗಳು ಕಡೆದೋರಿ ಅನ್ಯಗಳೆಲ್ಲವುಗಳೂ ಗ್ರಾಹ್ಯಗಳಾಗಿ ಅಂಗೀಕರಿಸಲ್ಪಟ್ಟಿರುತಿವೆ. ಇದೇ ರೀತಿ ಪುರುಷರಲ್ಲಿಯೂ ಬಹು ಭೇದಗಳು ಕಂಡುಬರುತಿವೆ. ಜನರ ವೇಷಭಾಷಾಚಾರಗಳನೇಕವಾಗಿ ಭಿನ್ನಿಸಿ ಇಚ್ಛೆಗಳಿಗೆ ಏರ್ಪಡುತಬಂದವು. ಆಹಾರ ನಿಯಮವು ಪರಿಗಣಿಸೀಯುವಲ್ಲದೆ ಹೋದಿತು. ಹಿಂದೆ ದಾಸ್ಯಗಳಾಗಿದ್ದವೆಲ್ಲವು ಗ್ರಾಹ್ಯಗಳಾಗಿಯೂ, ನಿಂದನೀಯಗಳೆಲ್ಲವೂ ನುಡನೀಯಗಳಾಗಿಯೂ ಪರಿಣಮಿಸಿದವು. ಮುಖ್ಯವಾಗಿ ಈಗ್ಯೆ ಹತ್ತು ಇಪ್ಪತ್ತು ವರುಷಗಳಹಿಂದೆ ಇದ್ದು ಗತಿಸಿದವರಸ್ಥಿತಿಗೂ, ವರ್ತಮಾನ ಕಾಲಿಕರ ಸ್ಥಿತಿಗೂ, ಪೂರ್ವಿಕರ ಅಭಿಪ್ರಾಯಗಳಿಗೂ ಆಧುನಿಕರ ತಾತ್ಪರ್ಯಗಳಿಗೂ ಇರುವ ಭೇದಗಳಂ ಪರಾಮರ್ಶಿಸಿ ನೋಡಿದರೆ ಕಾಲಗತಿಯ ವೈಚಿತ್ರ್ಯಕ್ಕಾಗಿ ಆಶ್ಚರ್ಯಪಡಬೇಕಾಗಿದೆ. ಆದರೆ ಗೋಚರಗಳಾದ ಇಷ್ಟರ ಪ್ರಭೇದಗಳೆಲ್ಲವೂ ಪೂರ್ವಿಕರಿಗೆ ದೂಷ್ಯಗಳಾಗಿಯೂ, ವರ್ತಮಾನ ಕಾಲಿಕರಿಗೆ ಶ್ಲಾಘ್ಯಗಳಾಗಿಯೂ ಇರುವದರಿಂದ ಹಿಂದಿನವರು ಈಗಿನವರನ್ನು ಭ್ರಷ್ಟರೆಂದು ನುಡಿಯುವದಕ್ಕೂ ಈಗಿನವರು ಪೂರ್ವಿಕರನ್ನು ಶ್ರದ್ಧಾಜಡರಾದ ಮೂಢರೆಂದು ನಿಂದಿಸಲಿಕ್ಕೂ ಕಾರಣವಾಯಿತು. ಏತಂಚ ಅನಿಚ್ಛನ್ನ ಪ್ರವಾಹರೂಪವಾದ ಕಾಲಗತಿಯಿಂದುಂಟಾಗುವ ವಿನಿಮಯಗಳಿಗೆಲ್ಲ "ಲೋಕಾಚಾರಕಾರಣಂ ರಾಜಾಚಾರಕಾರಣಂ । ಇತಿತೆಸಂಶಯೊವಾ ಭೂಪ್ರಾಜಾಕಾಲಸ್ಯಕಾರಣಂ" ಎಂಬದಾಗಿ ಧರ್ಮಿಕನೆಮುಖ್ಯಕಾರಣನೆನ್ನಿಸಿಕೊಳ್ಳದಿರಲಾರನು.

HINDU MARRIAGE SYSTEM No VI.

ಹಿಂದೂ ವೈವಾಹಿಕ ಪದ್ಧತಿಯಂಕುರಿತು ೬ನೇ ಅಂಕ

ಇನ್ನೂ ಷೋಡಶವಿಧ ವ್ಯರ್ಥ ದಾನಗಳನ್ನಿದರಡಿತಿಳಿಸುವೆವು. ಅವುಗಳ್ಯಾವವೆಂದರೆ, ಕೆಲವು ಕಾಲ ಯೋಗವಾಗಪಪತ್ನನುಸರಿಸಿ ವೃದ್ಧಿಯ ನ್ನೈದದೆ ಭ್ರಷ್ಟನಾದವನಿಗೆ ದಾನ ಕೊಡುವಣ, ಅನ್ಯಾಯಾರ್ಜಿತವಾದ ವಸ್ತುವನ್ನುದಾನ ಕೊಡುವದು. ಪತಿತನು ಚೋರನಾದ ಬ್ರಾಹ್ಮಣನು, ಅನೃತವಂ ನುಡಿಯುವ ಗುರುವು, ದಾಸಕೃತ್ಯಾನುರಕ್ತನಾದ ದ್ವಿಜನು, ಕೃತಘ್ನನು, ಗ್ರಾಮಪುರೋಹಿತನು, ವೇದ ವಿಕ್ರಯ ಮಾಡತಕ್ಕವನು, ವೃಷಲನು, ದ್ಯೂತಗಾರನು, ಮದ್ಯಪಾನ ಮಾಡುವವನು, ಬ್ರಹ್ಮಬಂಧುವಾದವನು, ಋತುಮತಿಯಳಂ ವಿವಾಹ ಮಾಡಿಕೊಂಡವನು, ಸ್ತ್ರೀಯರು, ಪರಿಚಾರಕರು, ಇವರಿಗ್ಯಾವಾಗಲು ಮಾಡತಕ್ಕ ದಾನಗಳು ದೂಷ್ಯಗಳೆಂದು ಶ್ರೀ ಮಹಾ ಭಾರತದಲ್ಲಿ ಕಂಠತಃ ನಿಷೇಧಿಸಲ್ಪಟ್ಟಿರುತಿದೆ. ಆದರೆ ಇವುಗಳನ್ನೊನತಕ್ಕವರು ಸಾಮಾನ್ಯ ದಾನವಲ್ಲವೇ ಯೊರ್ತು ಕನ್ಯಾದಾನಪರವಲ್ಲವೆಂದು ಒಂದುವೇಳೆ ಅಭಿಪ್ರಾಯ ಪಡಬಹುದು. ಭೂಹಿರಣ್ಯ ಗೋದಾನಾದಿಗಳಿಗೆ ಇಷ್ಟರ ನಿಯಮಗಳುಂಟುಮಾಡಲ್ಪಟ್ಟಿರುವಾಗ್ಯೆ ಸರ್ವೋತ್ತಮವಾದ ಕನ್ಯಾದಾನದ ವಿಷಯದಲ್ಲಿ ಇನ್ನೆಷ್ಟರ ನಿಯಮವನ್ನು ಕನ್ಯಾಪಿತೃಗಳು ಅನುಸರಿಸಬೇಕಾಗಿರುವದೋ ಅದು ಅಭಿಜ್ಞರೇ ಆಲೋಚಿಸಬಹುದು. ಸತ್ಪಾತ್ರದಲ್ಲಿ ಮಾಡುವ ದಾನವು ಎಷ್ಟರ ಪುಣ್ಯಕಾರಿಯೋ ಅಪಾತ್ರದಲ್ಲಿ ಮಾಡುವ ದಾನ ಸಹ ಅಷ್ಟರ ಪಾಪಹೇತುವಾಗುವದು ಅಪಾತ್ರರಿಗೆ ಕೊಡುವದೂ ಅವರಿಂದಕೆಗೆದುಕೊಳ್ಳುವದೂ ಬಹಳ ಕೆಟ್ಟದ್ದು. ಆದುದರಿಂದ ದಾನ ಮಾಡಲಿಕ್ಕೆ ಪೂರ್ವಭಾವಿಯಾಗಿ ವಿಮರ್ಶಿಸಬೇಕಾಗಿರುವ ದಾನ ಪಾತ್ರದೇಯ ಸ್ವರೂಪಗಳನ್ನು ಚನ್ನಾಗಿ ಪರಿಶೀಲಿಸದೆ, ಕ್ವಚಿತ ಧನಾಕಾಂಕ್ಷೆಯಿಂದಲೂ, ಕೆಲವು ವೇಳೆಯಲ್ಲಿ ರೂಪ ಲಾವಣ್ಯಾದಿಗಳಿಂದಲೂ ಬದ್ಧರಾಗಿ ದುರ್ನೀತರಿಗೆ ಕನ್ಯಾದಾನ ಮಾಡುವದರಿಂದ ಅಂತಾ ಪರಿಣಾಮಗಳು ವಿರುದ್ಧಫಲದಾಯಕಗಳಾದರೆ ವೈವಾಹಿಕ ಕ್ರಮವೇ ತಪ್ಪೆಂದಾಗಲಿ, ಅಥವಾ ವ್ಯವಸ್ಥಾಪಕರು ಅಜ್ಞಾನಿಗಳೆಂತಲಾಗಲಿ, ಅಥವಾ ತ್ರೈಕಾಲಿಕ ಜ್ಞಾನಶೂನ್ಯರಿಂದ ಮಾಡಲ್ಪಟ್ಟ ಸದರೀ ನಿಯಮಗಳು ಈಗಿನ ಕಾಲಕ್ಕೆ ಅನರ್ಹಗಳೆಂದಾಗಲಿ ನುಡಿಯುವದಕ್ಕಾಗುವದಿಲ್ಲವು.

WHO IS A FRIEND ?

ಗತವಾರದಲ್ಲಿ ನಮ್ಮ ಮಿತ್ರರ ವ್ಯಕ್ತಿ ಯೊಬ್ಬರೊಡನೆ ಕೆಲವು ರಾಜಕೀಯ ವಿಷಯಗಳಂ ಕುರಿತು ವಿಚಾರ ಮಾಡುವಾಗ್ಯೆ ಅವರು ಮಧ್ಯೆ ಸಾಮಾನ್ಯೇನ ಕೇಳಿದ ಮೂರು ಪ್ರಶ್ನೆಗಳನ್ನೂ ಅವುಗಳಲ್ಲಿ ಕೇವಲ ಮುಖ್ಯವಾದ ಮೊದಲನೆಯದಕ್ಕೆ ನಾವುಕೊಟ್ಟ ಉತ್ತರವನ್ನೂ ಇದರಡಿ ಪ್ರಕಟಿಸುವೆವು. ಪ್ರಶ್ನೋತ್ತರರೂಪವಾದ ನಮ್ಮ ಬ್ಬರವರ್ತನವು ಪ್ರಾಯೇಣ ಎಲ್ಲರಿಗೂ ಸಂಬಂಧಿಸಿದ್ದಾಗಿಯೂ ತಿಳಿಯತಕ್ಕದ್ದಾಗಿಯೂ ಇರುವದರಿಂದ, ಸದರೀವಿಚಾರವು ಈ ಪತ್ರಿಕೆಯನ್ನೋದತಕ್ಕವರಿಗೆ ಯಥೋಚಿತಉತ್ಸಾಹವನ್ನುಂಟುಮಾಡದಿರಲಾರದೆಂದುನಂಬುತ್ತೇವೆ. ನಮ್ಮಮಿತ್ರರಾದ ಎ ಎಂಬವರು ನಮ್ಮನ್ನುಕುರಿತು ಪ್ರಶ್ನೆ ಮಾಡಿದ್ದೇನಂದರೆ, "ಅಯ್ಯಾ, ತಾವುತಿಳಿಸಿದ ರಾಜನಿಷ್ಠೆಯು ಕೇವಲ ಕೊಂಡಾಡತಕ್ಕದ್ದೇಸರಿ ಪರಂತು ಆರೀತಿವರ್ತಿಸತಕ್ಕವರು ಮಾತ್ರ ಕೇವಲ ದುರ್ಲಭರಾಗಿರುತ್ತಾರೆ. ಆದಾಗ್ಯೂ ಒಬ್ಬನ ಸ್ನೇಹಕ್ಕೆ ಪಾತ್ರನಾಗತಕ್ಕವನೆಂತವನಾಗಿರಬೇಕು? ಲೋಕದಲ್ಲಿ ಸರ್ವೋತ್ತಮಸ್ಥಿತಿಯಲ್ಲಿರತಕ್ಕ ಮನುಷ್ಯನು ತನ್ನ ಸ್ಥಿತಿಗೆ ವಿರೋಧವಿಲ್ಲದೆ ಯಾವ ರೀತಿಯಿಂದ ವರ್ತಿಸತಕ್ಕದ್ದು? ಅವಕ್ಕಿಂತ ಕಡಮೆಯಾದ ಸ್ಥಿತಿಯಲ್ಲಿರತಕ್ಕವನೂ ಸಾಮಾನ್ಯ ಸ್ಥಿತಿಯಲ್ಲಿರತಕ್ಕವನೂ ಯಾವರೀತಿಯಿಂದ ವರ್ತಿಸಬೇಕು?" ಎಂಬದು, ಉತ್ತರ- ಅಯ್ಯಾ ಮಿತ್ರನೇ, ಈಗ ತಾವುಕೇಳಿದ ಪ್ರಶ್ನೆಗಳು ಸಾಮಾನ್ಯಗಳಾದವಲ್ಲವು, ಅವು ಉತ್ತರೋತ್ತರ ಪ್ರಶ್ನೆಗಳಿಗೂ ತರ್ಕಗಳಿಗೂ ಅವಕಾಶವನ್ನೀಯುತಿವೆ. ಆದರೂ ನಮ್ಮ ಬುದ್ಧ್ಯನುಗುಣವಾಗಿ ಉತ್ತರವು ಹೇಳುವೆವು ಅವಧಾನಪೂರ್ವಕವಾಗಿ ಲಾಲಿಸಿರಿ. ತಮ್ಮ ಮೊದಲನೆಯ ಪ್ರಶ್ನೆಯಲ್ಲಿ ತಿಳಿಸಲ್ಪಟ್ಟ ಅತಿ ಗಹನವಾದ ಸದರೀ ಪ್ರಬಲ ವಿಷಯದಲ್ಲಿ ಪಂಡಿತರ ಮತಗಳು ನಾನಾಪ್ರಕಾರಗಳಾಗಿರುತಿವೆ. ಅವುಗಳಲ್ಲಿಯೂ ಸಾಫಲ್ಯವೈಫಲ್ಯಗಳಿಂದಲೂ ಲಾಘವ ಗೌರವಗಳಿಂದಲೂ, ಅಧಿಕಾರಿಗಳ ಸ್ವರೂಪ ತಾರತಮ್ಯಗಳಿಂದಲೂ ನಾನಾ ಭೇದಗಳುಂಟಾಗುತಿವೆ. ಅವುಗಳಂ ಯಥಾಶಕ್ತಿ ನಿರೂಪಿಸುವೆವಲ್ಲದೆ ಸಮ್ಮ ಮತವನ್ನೂ ಪ್ರಕೃತ ಸಂದರ್ಭದಲ್ಲಿ ನಿರ್ಧರಿಸಿ ತಿಳಿಸುವೆವು ಹ್ಯಾಗಂದರೆ.—

"ಸರ್ವಸ್ವಸಮಾನೇಮಸಜ್ಜಿತ" ಎಂಬನ್ಯಾಯದಿಂದ ಜಾತಿ ಕುಲ ವಿದ್ಯಾ ವಿತ್ತ ವಯೋವಸ್ಥಾದಿ ಗುಣಸಾಮ್ಯವನ್ನು ಪಡೆದನೇಜನಗಳ ಸ್ನೇಹಕ್ಕೆ ಪಾತ್ರನಾಗಿರುವನೆಂದು ಕೆಲವರ ಮತವಾಗಿರುತಿದೆ.

೨ ಹಿಂದೂ ಮುಂದೂ ಏಕರೂಪವಾದ ಸುಚೇಷ್ಟೆಯುಳ್ಳವನೇ ಸ್ನೇಹ ಯೋಗ್ಯನೆಂಬದಾಗಿ ಇನ್ನೂ ಕೆಲವರ ಅಭಿಪ್ರಾಯವಾಗಿರುತಿದೆ.

೩. ಮಿತ್ರರ ಸುಖದುಃಖಗಳಲ್ಲಿ ತಾತ್ವಿಕವಾಗಿ ಸಮಾನವಾದ ಸಂತೋಷ ದುಃಖಗಳನ್ನು ಪಡೆಯುತಲಿರುವಿಕೆಯೇ ಮಿತ್ರಲಕ್ಷಣನೆಂಬದಾಗಿ ಬೇರೆ ಕೆಲವರ ತಾತ್ಪರ್ಯವಾಗಿರುತಿದೆ

೪. ಮಿತ್ರನು ತನ್ನ ಅರ್ಥ ನರ್ಥ ಪ್ರಾಪ್ತಿ ಸಾಧನಗಳನ್ನು ಸ್ವಯಂ ತಿಳಿಯದಿದ್ದರೂ ನಾನಾವಿಧೋಪಾಯಗಳಿಂದ ತಾನು ಅವು ತಿಳಿದುಕೊಳ್ಳುತ, ಅವುಗಳ ಪ್ರಾಪ್ತಿ ನಿವೃತ್ತಿಗಳಿಗೆ ತಕ್ಕ ಸಾಧನಗಳಲ್ಲಿ ಅವನಿಗೆ ತಿಳಿಸುವದೇ ಅನವರತವೂ ಸ್ವಯಮೇವ ಜಾಗರೂಕನಾಗಿರುವಿಕೆಯೇ ಮಿತ್ರ ಲಕ್ಷಣ ವೆಂಬದಾಗಿ ಅನ್ಯರು ಕೆಲವರ ಸಿದ್ಧಾಂತವಾಗಿರುತಿದೆ.

೫. ಮಿತ್ರನಲ್ಲಿರುವ ಗುಣವನ್ನಾದರೂ ದೋಷವನ್ನಾದರೂ ವಿಮರ್ಶಿಸದೆ ಅವನ ಮನೋರಂಜನಕ್ಕಾಗಿ ಸರ್ವಪ್ರಕಾರದಿಂದಲೂ ಅವನನ್ನನುಸರಿಸುತಲಿರುವಣವೇ ಮೈತ್ರಿಯ ಗುಣವೆಂಬದಾಗಿ ಮತ್ತು ಕೆಲವರು ಭಾವಪಟ್ಟಿರುತ್ತಾರೆ.

೬ ತನಗೆ ಭೋಗ್ಯಗಳಾದ ಸರ್ವ ವಿಷಯಗಳನ್ನೂ ಮಿತ್ರಾರ್ಥವಾಗಿ ವಿನಿಯೋಗಿಸುವಿಕೆಯೇ ಸ್ನೇಹಲಕ್ಷಣವೆಂಬದಾಗಿ ಬೇರೆ ಕೆಲವರು ನುಡಿಯುತ್ತಾರೆ.

೭. "ಲೋಕೋಭಿನ್ನರುಚಿಃ" ಎಂಬ ನ್ಯಾಯದಿಂ ಪ್ರತಿಮನುಷ್ಯನ ಗುಣಾಭಿರುಚಿ ಸ್ವಭಾವಾದಿಗಳು ಭಿನ್ನಭಿನ್ನಗಳಾಗಿದ್ದರೂ ಸ್ವೀಯಗಳಾದವುಗಳನ್ನೆಲ್ಲ ಶುದ್ಧವಾಗಿ ತ್ಯಜಿಸಿ ಮಿತ್ರಸಂಬಂಧಿಗಳಾದವುಗಳನ್ನೇ ಅಭಿನಂದಿಸಿ ಪರಿಗ್ರಹಿಸುತಲಿರುವಣವೇ ಸ್ನೇಹವೆಂಬದಾಗಿ ಇತರರು ಕೆಲವರು ಹೇಳುತ್ತಾರೆ

೮. ಸರ್ವಕಾಲಗಳಲ್ಲಿಯೂ ಮಿತ್ರನ ರಹಸ್ಯಗಳನ್ನು ಗೋಪನವಮಾಡುವದು ಮಿತ್ರ ಧರ್ಮವೆಂಬುವವರು ಕೆಲವರು.

೯. ಭಯ ಪ್ರಮಾದಾದಿಗಳಿಂದಲಾದರೂ ದುಷ್ಕಾರ್ಯಾಭಿನಿವೇಶದಿಂದಲಾದರೂ ರಾಗದಿಂದಲಾದರೂ ಮಿತ್ರನು ಅಕಾರ್ಯಗಳಲ್ಲಿ ಪ್ರವರ್ತಿಸುತಿದ್ದರೆ ಅದು ತಾನು ಪ್ರಕಟಪಡಿಸದೆ ಹಿತೋಪದೇಶಗಳಿಂದ ಯಾವಚ್ಛಕ್ತಿ ಅದನ್ನು ನಿವಾರಿಸಲಿಕ್ಕಿಸುವಣವೇ ಸ್ನೇಹ ಧರ್ಮವೆಂಬದಾಗಿಸ್ವಲ್ಪಮಂದಿಯ ಭಾವನೆಯಾಗಿರುತಿದೆ.

೧೦. ಅನವರತವೂ ಮಿತ್ರಪ್ರಕೃತಿ ರೂಪವಾದ ವಾಕುಗಳಿಂದ ಸಂತೃಪ್ತಿ ಪಡಿಸುತಲಿರುವದೇ ಸುಸ್ನೇಹಲಕ್ಷಣವೆಂಬದಾಗಿ ಇನ್ನೂ ಸ್ವಲ್ಪಮಂದಿಯ ಅಭಿಪ್ರಾಯವಾಗಿರುತಿದೆ.

೧೧. ಮಿತ್ರನ ಸಂಪದ್ದಶೆಯಲ್ಲಿ ತಾನು ಪ್ರಯೋಜನವನ್ನಪೇಕ್ಷಿಸದೆ ಆತನಿಗೆ ಕಷ್ಟದಶೆಯು ಪ್ರಾಪ್ತವಾದಾಗ ಅವನಿಗೆ ಸರ್ವ ಸಹಾಯಗಳನ್ನೂ ಮಾಡಿ ಸಂತೋಷಪಡಿಸುವದೇ ಸ್ನೇಹಲಕ್ಷಣವೆಂಬದಾಗಿ ಕೆಲವರೂ,

೧೨. ಸುಹೃತ್ಪ್ರಾಣರಕ್ಷಣಾರ್ಥವಾಗಿ ಸ್ವಪ್ರಾಣಗಳನ್ನು ತೃಣಸೋಪಾಯದಲ್ಲಿ ನೆನಸಿ ಅದರ ಅಭಿಮಾನವು ತೊರೆಯುವದೇ ಸ್ನೇಹವೆಂಬದಾಗಿ ಇನ್ನು ಕೆಲವರೂ,

೧೩. ಕುಲ ಜಾತಿ ವಯೋವಸ್ಥಾಧಿಕ್ಯ ಧನಾಧಿಕ್ಯಾದಿ ಸ್ವೋತ್ಕರ್ಷವ ಗಣಿಸದೆ ನಿಹೀನರೊಡನೆ ಅಭೇದವ ಗೈಯುತಲಿರುವಣವೇ ಮಿತ್ರಧರ್ಮವೆಂಬದಾಗಿಮತ್ತು ಕೆಲವರೂ,

೧೪. ಮಿತ್ರನ ಸೌಖ್ಯಕ್ಕೋಸ್ಕರ ತಾವು ಯಾವಾಗ್ಯೂ ಶ್ರಮವು ಸಹಿಸುತಲಿರುವದೇ ಪ್ರಿಯನ ಗುಣವೆಂದು ಬೇರೆ ಕೆಲವರೂ,

೧೫ ಕದಾಚಿತ್ ಮಿತ್ರನಿಂದ ತಮಗೆ ಅಪಕಾರ ಪ್ರಾಪ್ತವಾದರೂ ಅದು ಸಹ್ಯೆ ಗೈಯದೆ ಏಕರೂಪವಾದ ಪ್ರೀತಿಯಂ ಪಡೆದಿರುವಣವೇ ಇಷ್ಟಲಕ್ಷಣವೆಂಬದಾಗಿ ಅನ್ಯರು ಕೆಲವರೂ, ಈ ಪ್ರಕಾರ್ಯ ನುಡಿಯುತ್ತಾರೆ.

ಹೀಗೆ ಪಂಡಿತರ ವಾದಗಳು ಭಿನ್ನಭಿನ್ನಗಳಾಗಿಯೂ, ಕೆಲವು ಗುಣಗಳಿಂದ ಗ್ರಾಹ್ಯಗಳಾಗಿಯೂ, ಕೆಲವು ದೋಷಗಳಿಂದ ತ್ಯಾಜ್ಯಗಳಾಗಿಯೂ ಇರುತಿವೆ. ವಿಷಯ ನಿರ್ಣಯದಲ್ಲಿ ಶಾಸ್ತ್ರಲೋಕ ತತ್ವಜ್ಞಾನವು ಮುಖ್ಯಾಪೇಕ್ಷಿತಗಳಾಗಿರುವದರಿಂದ ಅದು ಮೊದಲೇ ಚೆನ್ನಾಗಿ ಪಡೆಯಬೇಕು. ಇದರಲ್ಲಿ ಶಾಸ್ತ್ರ ಸಹಕಾರರಹಿತವಾದಲೋಕವೂ, ಲೋಕ ನಿರಪೇಕ್ಷಿತವಾದ ಶಾಸ್ತ್ರವೂ ಅಪ್ರಶಸ್ತಗಳಾಗಿರುತಿವೆ. ಇದಕ್ಕಾಗಿ ಶಾಸ್ತ್ರಲೋಕ ತತ್ವವನ್ನು ವಿಚಾರಿಸುವಲ್ಲಿ ಗುಣ ದೋಷಗಳು ಶಾಸ್ತ್ರೀಯ ವಿಧಿ ನಿಷೇಧ ಪ್ರಯೋಜಕಗಳಾಗಿಯೂ ಲೌಕಿಕಾನರ್ಥಾನರ್ಥ ನಿಮಿತ್ತಗಳಾಗಿಯೂ ಇರುವದರಿಂದ ಅವು ಕಾಲದೇಶ ಕರ್ತೃಪುರುಷ ಅವಸ್ಥಾದಿಗಳುತ್ಯಾಗೋಪಾದಾನ ವಿಷಯಗಳಾಗುತಿವೆಯೇ ಹೊರ್ತು ನಿಯತಸ್ವರೂಪಗಳಲ್ಲವೆಂದು ಸ್ಪಷ್ಟವಾಗುತಿದೆ. ಮತ್ತು ಪುರುಷರ ಅಭಿಸಂಧ್ಯುದ್ದೇಶ್ಯಗಳಂ ಯುಕ್ತವಾದ ವಿಮರ್ಶೆಯಿಂದರಿತು ತತ್ಪ್ರಯೋಜ್ಯಗಳಾದ ಪುರುಷಕಾರ್ಯಗಳಲ್ಲಿ ಉಚಿತಾನುಚಿತ ಭಾವವು ಪಡೆಯಬೇಕು. ಆಗ ಪುರುಷನಗುಣಾಗುಣಗಳು ಗೋಚರಗಳಾಗದೆ ಹೋಗಲಾರವು. ಆದುದರಿಂದ ಪ್ರೇಮ, ಪ್ರಮಾದ, ಲೋಭ, ರಾಗ, ದ್ವೇಷ, ಅಸೂಯಾದಿ ದೋಷಾಕ್ರಾಂತ ಹೃದಯರಾದ ಜನರ ಮೈತ್ರಿಯು ಪ್ರಕೃತ ವಿಚಾರಕ್ಕೆ ವಿಷಯವೆಂದು ತಿಳಿಯಬಹುದು. ಇದರಿಂದ ಪ್ರತಿಮನುಷ್ಯನ ಗುಣಾಗುಣ ನಿರ್ಧಾರವಿಯಂ ಮಾಡಿ ತರುವಾಯ ಸ್ನೇಹಸ್ವರೂಪವು ವಿಮರ್ಶಿಸಬೇಕು. ಹಾಗಿಲ್ಲದೆ ಕೇವಲ ಮನುಷ್ಯಮಾತ್ರದವರ ಮೈತ್ರಿಯನ್ನು ಕುರಿತು ವಿಚಾರಿಸಿದರೆ ಹಾರ ಚೋರ ಕಿರಾತ ಚಾರ್ವಾಕ ಲುಬ್ಧಪಿಶುನ, ಘಾತುಕ ಜನ ಮೊದಲಾದ ದುರ್ಜನ

ದ ಸ್ನೇಹವು ಲಕ್ಷ್ಯಕೋಟಿಗೆ ಸೇರುವದರಿಂದ ಉನ್ನತ ದೊಷಿತವಾದ ಅದು ನಿರೂಪಣಾರ್ಹವಾಗಲರಿಯದು. ಆದುದರಿಂದ ಸತ್ಪುರುಷಗುಣ ನಿರ್ಣಯಾನಂತರ ಉತ್ತಮವಾದ ತದೀಯ ಪ್ರವೃತ್ತಿಯ ಸ್ವರೂಪವನ್ನು ಸಹ ನಿಶ್ಚಯಿಸಬೇಕೆಂದು ಕೆಲವರು ಅಭಿಪ್ರಾಯಪಡಬಹುದು. ಆದಿಯಲ್ಲಿ ನಿನ್ನ ಪ್ರಶ್ನೆಯು ಪುರುಷ ಸ್ವರೂಪ ವಿಷಯಕವಲ್ಲವು, ಪರಂತು ಸ್ನೇಹಸ್ವರೂಪ ವಿಷಯಕವಾದದ್ದು. ಅದು ಸಾಮಾನ್ಯಾಕಾರದಿಂದಲೇ ಕೇಳಲ್ಪಟ್ಟದ್ದಾಗಿರುತ್ತದೆ. ಅದಕ್ಕೆ ಪುರುಷ ಗುಣಾಗುಣಗಳಂ ನಿರೂಪಿಸಬೇಕಾದ ಆವಶ್ಯಕತೆ ಏನೂ ಇರುವದಿಲ್ಲವು. ಸತ್ಪುರುಷರ ಸ್ನೇಹವಾಗಿದ್ದರೆ ಸನ್ಮೈತ್ರಿಯೆನ್ನಿಸಿಕೊಳ್ಳುತ್ತದೆ, ದುರ್ಜನರದಾದರೆ ಅಸನ್ಮೈತ್ರಿಯೆನ್ನಿಸಿಕೊಳ್ಳುತ್ತದೆ. ಸರ್ವತ್ರ ಅದರ ಸ್ವರೂಪವು ಏಕರೂಪವಾಗಿಯೇ ಇರುವದು ಈ ಕಾರಣದಿಂದ ಸಾಮಾನ್ಯೇನ ಸ್ನೇಹವೆಂಬುವದು ಮನೋವೃತ್ತಿರೂಪವಾದದ್ದು. ಆ ವೃತ್ತಿಯು ಅಭಿಮತವಸ್ತು ವಿಷಯದಲ್ಲಿ ಚೆನ್ನಾಗಿ ಲಗ್ನವಾಗಿ ಅದರ ಸಮಾಗಮದಲ್ಲಿ ನಿಶಿಷ್ಟವಾದ ಸಂತೋಷವನ್ನೂ ವಿಯೋಗದಲ್ಲಿ ಅಧಿಕ ದುಃಖವನ್ನೂ ಹೊಂದುತಲೂ, ಯಾವಾಗ್ಯೂ ಪ್ರಿಯಜನ ಗುಣಸ್ಮರಣ ಪ್ರಾಪ್ತವಾದಗಳಿಂದಾಹ್ಲಾದವನ್ನೈದುತಲೂ, ಪ್ರಿಯಜನರ ಯೋಗಕ್ಷೇಮಗಳನ್ನಪೇಕ್ಷಿಸುತ ಅವರ ಹಿತವಂ ಮಾಡುತಲೂ ಇರುವದಲ್ಲದೆ ತಜ್ಜನ್ಯ ವಾದ ಸರ್ವ ವಿಷಯಗಳಲ್ಲಿ ನಿರುಪಾಧಿಕವಾದ ಸ್ವೀಯತಾಧ್ಯವಸಾಯವೇ ಮೈತ್ರಿಯೆಂದು ಭಾವಿಸಬೇಕಾಗಿರುತ್ತದೆ.

NATAKAKATHA RATNAMALA.

ಈ ಪ್ರಾಂತ ಸೆಂಟ್ರಲ್ ಕಾಲೇಜ ಅಸಿಸ್ಟೆಂಟ ಮಾಸ್ತರ್ ಮೆ|| ಶ್ರೀನಿವಾಸರಾವ್ ಬಿ. ಎ. ಯವರಿಂದ ರಚಿತವಾದ ನಾಟಕಕಥಾ ರತ್ನಮಾಲೆಯ ವಿಷಯಕವಾದ ನಮ್ಮ ಅಭಿಪ್ರಾಯವನ್ನು ಕೆಲ ಪುರುಸೊತ್ತಿಗೆ ಪೂರ್ವವೇ ವ್ಯಕ್ತಪಡಿಸಿದ್ದೆವಷ್ಟೆ. ಪುಸ್ತಕ, ಘನವೆಂಬುವರಿಗೆ ನಾವು ಪುನಃ ಗ್ರಹಿಸಿ ನೋಡಿದ್ದಲ್ಲಿ ಮೂಲ ಗ್ರಂಥಗಳ ಕಥಾಭಾಗಾಂತರಕ್ಕೆ ಯತ್ಕಿಂಚಿತ್ ಲೋಪ ಬಾರದಂತೆಯೂ, ಕವಿ ಸಮಯಕ್ಕೆ ಅವಿರುದ್ಧವಾಗಿಯೂ, ಆದಿ ಕವಿಗಳ ತಾತ್ಪರ್ಯಾನುಸಾರವಾಗಿಯೂ, ಸಾಧ್ಯವಾದಮಟ್ಟಿಗೆ ಅವುಗಳನ್ನನುವರ್ತಿಸಿರು ರಚನೆ ನಿಪುಣತೆಯುಗಳಿಂದ ಸುಸ್ಕೃತ ವರ್ಣನೆಗಳನ್ನು ಯೆಲ್ಲರೂ ಅರಿಯುವಂತೆ ಸುಲಭವಾಗಿ ವ್ಯಕ್ತಪಡಿಸಿರುತ್ತಾರೆ. ಇದಲ್ಲದೆ ಮೆ|| ಶ್ರೀನಿವಾಸರಾಯರವರು ಸಂಸ್ಕೃತ ಭಾಷೆಯಲ್ಲಿ ಈವರೆಗೆ ಸಂಪಾದಿಸಿರುವ ಜ್ಞಾನವೆಲ್ಲ ಇಲ್ಲಿಯಲ್ಲಿ ಅನುಭವಕ್ಕೆ ಸಿಗಿಸಿರುವ ಶಬ್ದಪ್ರಯೋಗಗಳು ಚಿಕ್ಕವನುಷ್ಟಿಗೆ ಯೋಗ್ಯ ಪ್ರಶಸ್ತವಾಗಿರುತ್ತವೆ ವಾಕ್ಯಶೈಲಿಯು ಕರ್ಣಾಟ ಭಾಷಾಭ್ಯಾಸಗಳಿಗೆ, ತತ್ರಾಪಿ ಪ್ರಥಮಾಭ್ಯಾಸಿಗಳಾಗುತಲಿರುವ ಹಿಂದೂ ಬಾಲಿಯರಿಗೆ ಅನುಕೂಲವಾಗಿಯೂ, ಗ್ರಾಹ್ಯವಾಗಿಯೂ ನೀತಿಬೋಧಕವಾಗಿಯೂ, ವಿದ್ಯಾರ್ಥಿಗಿದ್ದಷ್ಟೂ ಹಿತಕರ ಗುಣ ಶೀಲಸ್ವಭಾವಗಳನ್ನುಂಟುಮಾಡತಕ್ಕವಾಗಿಯೂ ಇರುವದರಿಂದ ಈ ಸಣ್ಣ ಪುಸ್ತಕವು ಕನ್ನಡ ಪಾಠಶಾಲೆಗಳಲ್ಲಿ ವಾಕ್ಯ ಗ್ರಂಥವನ್ನಾಗಿರಿಸತಕ್ಕ, ಯೂನಿವರ್ಸಿಟಿಯವರು ಮೆಟ್ರಿಕ್ಯುಲೇಷನ್‌ಗೆ ಪರೀಕ್ಷಾ ಗ್ರಂಥವನ್ನಾಗಿ ಅಂಗೀಕರಿಸತಕ್ಕ ಅರ್ಹವಾಗಿರುತ್ತದೆಂದು ಧಾರಾಳವಾಗಿ ಹೇಳುವೆವು ಪ್ರಕೃತಪ್ರಯತ್ನಕ್ಕೆ ತಕ್ಕ ಪ್ರೋತ್ಸಾಹವೂ ಪ್ರಯೋಜನವೂ ಮೆ|| ಶ್ರೀನಿವಾಸರಾಯರಿಗುಂಟಾಗಿ ಅವ್ರು ಅವರ ಭವಿಷ್ಯತ್ಪ್ರಯತ್ನಗಳಿಗೆ ಉತ್ತೇಜಕ ಸಾಮಗ್ರಿಗಳಾಗಬೇಕೆಂತಲೂ, ಹೀಗೆಯೇ ವಿದ್ಯಾವಂತರಾದವರೆಲ್ಲರೂ ತಮ್ಮ ಕಷ್ಟಾರ್ಜಿತವಾದ ವಿದ್ಯಾವೈದಗ್ಧ್ಯವನ್ನು ನಾನಾಪ್ರಕಾರಗಳಿಂದ ಅನ್ಯರ ವಿಷಯದಲ್ಲುಪಯೋಗಿಸುತ ಬರಬೇಕೆಂತಲೂ ಕೋರುವೆವು. ಮೆ|| ಶ್ರೀನಿವಾಸ ರಾಯರವರು ಇನ್ನೂ ಕೆಲವು ನಾಟಕಗಳನ್ನು ಇದೇ ರೀತಿ ಭಾಷಾಂತರ ಮಾಡಿ ಪ್ರಕಟಿಸಬೇಕೆಂಬ ಉದ್ದೇಶವುಳ್ಳವರಾಗಿರುವಂತೆ ಕೇಳಿ ಸಂತೋಷಿಸುವೆವು.

Occasional Notes
ನೈಮಿತ್ತಿಕ ವಿಷಯನ್ಯಾಸ.

Influenza.—ಇನ್‌ಫ್ಲ್ಯುಯೆನ್ಜಾ ಯೆಂಬವಿಷಮ ಶೀತರೋಗವು ಈಗ ಬೆರ್ಮಾಡ್ವೀಪದಲ್ಲಿ ಪ್ರಬಲಗೊಂಡು ಸದರಿ ಗವರ್ನಮೆಂಟ ಮಂತ್ರಾಲೋಚಕ ಸಭೆಯ ಮೆಂಬರ್‌ಗಳೆಲ್ಲರು ರೋಗಪೀಡಿತರಾಗಿರುವದರಿಂದ ಮಂತ್ರಾಲೋಚಕ ಸಭೆಯ ಕೆಲಸಗಳೆಲ್ಲವು ನಿಂತುಬಿದ್ದವೆ.

The Viceroy's visit to Patiala.—ವೈಸರಾಯ್ ಸಾಹೇಬರವರು ತಮ್ಮ ಯೇಮಂತರು ತುಸುಂಚಾರಕಾಲದಲ್ಲಿ ಪತಿಯಾಲಾ ಸಂಸ್ಥಾನಕ್ಕೆ ಹೋಗಿ, ಮಹಾರಾಜರವರಿಗೆ ಅವರ ರಾಜ್ಯಕಾರ್ಯನಿರ್ವಹಣೆಯಲ್ಲಿ ಸಂಪೂರ್ಣಾಧಿಕಾರವನ್ನು ಕೊಟ್ಟಿರುವಂತೆ ಕ್ರಮವಾಗಿ ಪ್ರಸಿದ್ಧಪಡಿಸುವರು.

Washed away by floods.—ಭರತ್‌ಪೂರ್ ಸಂಸ್ಥಾನದಲ್ಲಿ ಅತಿ ವೃಷ್ಟಿಯಿಂದುಂಟಾದ ಪ್ರವಾಹದ ದೆಸೆಯಿಂದ ಯೆಂಭತ್ತು ಗ್ರಾಮಗಳು ಸಂಪೂರ್ಣವಾಗಿ ಕೊಚ್ಚಲ್ಪಟ್ಟು ಹೋದವಲ್ಲದೆ ನಕ್ರಿ ಯೆಂಬ ಗ್ರಾಮ ಹೋದಲಿದ್ದ ಸ್ಥಳದ ಗುರ್ತೇ ಸಿಕ್ಕಲಿಲ್ಲವಂತೆ. ಅಲ್ಲಿನ ಸ್ಥಿತಿಯಂ ನೋಡುವದಕ್ಕಾಗಿ ಲೆಫ್ಟಿನೆಂಟ ಗವರ್ನರವರು ಆದಿನ ಅಲ್ಲಿಗೆ ಪ್ರಯಾಣಮಾಡುವವರಾಗಿದ್ದಾರೆ.

Death of a Rani.—ಕಾಶ್ಮೀರ ಸಂಸ್ಥಾನದ ಸೇನಾಧಿಪತಿಯಾಗಿರುವ ರಾಜಾ ಅಮರಸಿಂಗರವರ ಪ್ರಧಾನ ರಾಣಿಯವರು ಈತಿಂಗಳ ೭ನೇ ತಾರೀಖು ಮಧ್ಯಾಹ್ನದ ಪರ ಜಮ್ಮೂ ಪಟ್ಟಣದಲ್ಲಿ ಮೃತರಾದರು. ಅವರಿಗೆ ಒಂದು ಗಂಡುಮಗು, ಒಂದು ಹೆಣ್ಣುಮಗು ಇರುತ್ತವೆ ತಮ್ಮಿನ ಮೃತಪಟ್ಟವರ ಗೌರವಾರ್ಥ ಅಂಗಡಿಗಳೆಲ್ಲವು ಮುಚ್ಚಲ್ಪಟ್ಟವು.

Murder.—ಕಲ್ಕತ್ತೆಯಲ್ಲಿ ಒಬ್ಬಾಕೆ ಹದಿನಾಲ್ಕು ವರ್ಷಗಳ ವಯಸ್ಸುಳ್ಳ ಹುಡುಗಿಯು ಮನೆಗಳ ಹಿತ್ತಲಿನಲ್ಲಿ ತನ್ನ ಜಾರ ಪುರುಷನನ್ನು ಕರೆಯಿಸಿ ತಾನು ಮಲಗಿಕೊಳ್ಳುವ ಕೊಠಡಿಯಲ್ಲಿ ಬಚ್ಚಿಟ್ಟಿದ್ದು ತನ್ನ ಗಂಡನು ಮಲಗಿಕೊಂಡು ನಿದ್ರೆಹೋಗುತ್ತಲ್ಲಿ ಅವನನ್ನು ಖೂನಿ ಮಾಡುವಂತೆ ಬೋಧಿಸಿ ಕೊಲ್ಲಿಸಿದಳು. ಈ ಮೊಕದ್ದಮೆ ಈಗ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ವಿಚಾರಣೆಯೊಳಗದೆ, ಎಂದು ಕಲ್ಕತ್ತಾ ಪತ್ರಿಕೆಯೊಂದು ತಿಳಿಸುತ್ತದೆ.

An African tree.—ಆಫ್ರಿಕಾದೇಶದ ಗಿಡಗಳಲ್ಲೊಂದು ಯೆಂದಿರುತ್ತದೆ. ಅದೇನಂದರೆ ಒಂದು ಮರವಾಗಿ ವನದೇವತೆಯ ಅರಮನೆಯೋ ಯೆಂಬಂತೆ ಯಲ್ಲಿರುತ್ತದೆ. ಅದು ಉದ್ದದಲ್ಲಿ ಎಪ್ಪತ್ತಡಿಗಿಂತ ಹೆಚ್ಚಾಗಿ ಬೆಳೆಯುವದಿಲ್ಲವು. ಅದರ ರೆಂಬೆಗಳು ಉದ್ದವಾಗಿ ಪಕ್ಕಗಳಲ್ಲಿ ಹೊರಡುತವೆ ಇದರ ಬುಡದಷ್ಟು ದಪ್ಪ ಇರುವದಿದಿಗೆ ನೋಡಿದಲ್ಲಿ ಯಾವ ಗಿಡಕ್ಕೂ ಇಲ್ಲವು ವಿಚಿತ್ರವಾದ ಈ ಗಿಡಗಳಮೈಕಿ ಯೊಂದರ ಬುಡದ ಸುತ್ತಳತೆಯು ನಾನ್ನೂರತ್ತಡಿಯದೆ ಮತ್ತೊಂದಾಗಿದ್ದು ಅದನು ಪಕ್ಷ ಪ್ರಯಾಣಗಳದಾಗಬೇಕೆಂದು ಕಾಣುತ್ತದೆ. ಇದರ ಪತ್ರ್ಯವು ಕಾಗದ ತಯಾರಿಗೆ ಉಪಯೋಗಿಸಲ್ಪಡುತ್ತದೆ.

Coercive processes.—ನೆಲ್ಲೂರು ಡಿಸ್ಟ್ರಿಕ್ಟಿನೊಳು ಸನ್ ೧೮೮೯—೯೦ನೇ ಇಸವಿಯ ಬಾಬತು ಸರ್ಕಾರಿ ಕಂದಾಯ ಬಾಕಿ ೭,೫೫,೬೩೪ ರೂಪಾಯಿಗಳಾಗಿ, ಬಲಾತ್ಕಾರಪೂರ್ವಕ ಜಪ್ತಿ ಹರಾಜ್ ಮೂಲಕ ಬಾಕಿಗಳಂ ವಸೂಲ್ಮಾಡುವದೆಂದು ೧,೪೮,೯೫೭ ಹುಕುಂಗಳುಹುಟ್ಟಿದವು ಇವುಗಳಮೈಕಿ ೧,೭೫,೭೩೫ ರೂಪಾಯಿಗಳಿಗಾಗಿ ೧೭೬೯ ಮಂದಿ ಬಾಕೀದಾರರ ಜಮೀನುಗಳು ಜಪ್ತಿ ಮಾಡಲ್ಪಟ್ಟವು ಪರಂತು ಹರಾಜಾಗುವದಕ್ಕೆ ಮುಂಚಿತವಾಗಿಯೇ ಅನೇಕರು ಬಾಕಿಗಳಂ ಕೊಟ್ಟು ಫೈಸಲ್ಮಾಡಿದರು. ೭,೪೯೭ ರೂಪಾಯಿಗಳ ಬಾಕೀಬಗ್ಗೆ ೧,೪೩೭ ಮಂದಿಯ ಜಮೀನುಗಳು ಹರಾಜ್ ಮಾಡಲ್ಪಟ್ಟವು.

ನೋಟೀಸ್.

ಈಪತ್ರಿಕೆಯ ಚಂದಾದಾರರುಗಳಿಗೆ ಇದರಿಂದ ಆಶ್ಚರ್ಯಾಗಿ ಶುಶ್ರುತಪಡಿಸುವದೇನಂದರೆ,—

ಚಂದಾದಾರರೆಲ್ಲರು ಅವರವರ ಚಂದಾ ಹೊಬಲಗನ್ನು ಮುಂಗಡವಾಗಿ ಕಳುಹಿಸಿಕೊಡಬೇಕೆಂದು ಈ ಸಂವತ್ಸರದ ಪ್ರಾರಂಭ ಮೊದಲು ಆಗಿಂದಾಗ್ಯೆ ಈ ಪತ್ರಿಕೆಯಲ್ಲಿ ಪ್ರಕಟನೆಯ ಮೂಲಕವಾಗಿ ತಿಳಿಸುತಲಿದ್ದಾಗ್ಯೂ ಅನೇಕರು ಅದಕ್ಕೆ ನಿಗಾ ಕೊಡದೆ ಮೌನವನ್ನವಲಂಬಿಸಿರುತ್ತಾರಾಗಿ ಅಂತವರೆಲ್ಲರಿಗೂ ನಾವು ಪುನಃ ತಿಳಿಸುವದೇನಂದರೆ,— ಬಾಕೀದಾರರೆಲ್ಲರಿಗೂ ಅವರವರ ಬಾಕಿ ತಪ್ಸೀಲನ್ನು ಪೋಸ್ಟುಕಾರ್ಡ್ ಮೂಲಕ ಈ ವಾರದಲ್ಲಿ ತಿಳಿಸುವವು ಅದು ತಲಪಿದ ಕೂಡಲೇ ಅದರಲ್ಲಿ ನಮೂದಿರುವ ಬಾಕೀಹೊಬಲಗನ್ನು ಕಳುಹಿಸಿಕೊಡಬೇಕು. ಹಾಗೆ ಮಾಡಬಹೇಕ್ಷಿಸಿದವರ ಪತ್ರಿಕೆ ಕೂಡಲೇ ನಿಲ್ಲಿಸಲ್ಪಡುವ್ಬಾಕೀ ವಸೂಲೀಪಿಸುಯದಲ್ಲಿತಕ್ಕ ತರದೂದ್ ನಡೆಸಲ್ಪಡುವದು. ಚಂದಾ ಹಣವಸೂಲಿಲ್ಲದೆ ಪತ್ರಿಕೆಯನ್ನು ನಡೆಸುವದು ಸುತರಾಂ ಅಸಾಧ್ಯವಾದ ಕೆಲಸವೆಂದು ನಮ್ಮ ಚಂದಾದಾರರು ಖಂಡಿತವಾಗಿ ತಿಳಿಯಬಹುದು. ಕೂಡಲೇ ಬಾಕೀದಾರರೆಲ್ಲ ಇದಕ್ಕೆ ಅವಧಾನ ಕೊಡಬೇಕೆಂದು ಮತ್ತೊಂದಾವರ್ತಿ ಪ್ರಾರ್ಥಿಸುವೆವು.

ಬೆಂಗಳೂರು, ತಾ ೩೦ನೇಜೂನ್ ೧೮೯೦ — ಪ್ರೊಪ್ರೈಟರ್. ಕರ್ಣಾಟಕ ಪ್ರಕಾಶಿಕಾ

LOCAL AND PROVINCIAL NEWS.
ಒಳದೇಶದ ಮತ್ತು ತಾಲ್ಲೂಕ್‌ಜಾತಿವೃತ್ತಾಂತಗಳು

The Resident.—ಕಳೆದವಾರದಲ್ಲಿ ಈ ಸಂಸ್ಥಾನದ ಬ್ರಿಟಿಷ ರೆಸಿಡೆಂಟರಾದ ಕರ್ನಲ್ ಸರ್ ಓಲಿವರ್ ಸೇಂಟ ಜಾನ್‌ರವರಿಗೆ ಶರೀರಾಲಸ್ಯವುಂಟಾಗಿದ್ದು ಈಗ ಆರೋಗ್ಯಸ್ಥಿತಿಯಲ್ಲಿ ವಾರೆಂದು ಕೇಳುತ್ತೇವೆ.

A public holiday.—ಈವರೆಗೆ ಶ್ರೀಮನ್ಮಹಾರಾಜರವರಿಗೆ ಪುತ್ರೋತ್ಸವವಾದ ಸಂತೋಷಾರ್ಥ ಕಳೆದ ಶನಿವಾರದದಿನ ಈಸಂಸ್ಥಾನದ ವಿಶಿಷ್ಟಇಲಾಖೆಗಳಿಗೂ ಮಿಲಿಟರಿಸಿವಿಲ್‌ಕೋರ್ಟುಗಳಿಗೂ ರಜಾ ಕೊಡಲ್ಪಟ್ಟಿತು.

The Chief Court.—ಈಸಂಸ್ಥಾನದ ಚೀಫಕೋರ್ಟು ಜಡ್ಜಿಯಾದ ಮೆ|| ಸಿ. ಜೆ. ಕೃಷ್ಣಮರವರು ತಾವು ನಡೆಯುತ್ಕೊಂಡಿರುವ ರಜಾಕಾಲದಲ್ಲಿ ಇಂಗ್ಲಾಂಡಿಗೆ ಹೋಗುವದಿಲ್ಲವೆಂತಲೂ ಪರಂತು ಇಂಡ್ಯಾದೇಶದಲ್ಲೇ ಕಳೆಯುವರೆಂತಲೂ ಹೇಳಿಕೊಳ್ಳುತ್ತಾರೆ.

Late train.—ಕಳೆದ ಬೃಹಸ್ಪತಿವಾರದದಿನ ರೈಲ್ವೆ ಕಾಲಾತೀತವಾಗಿ ರೆಯಿಲ್‌ಗಾಡಿ ಬಂದದಕ್ಕೆ ಕಾರಣವು ವಿಚಾರಿಸಲಾಗಿ ಅರ್ಕೋಣಕ್ಕೂ ವೇಲೂರಿಗೂ ಮಧ್ಯೆ ರಸ್ತೆಯಲ್ಲಿ ತೊಂದರೆಯುಂಟಾಗಿ ಅದರಿಂದ ಕಾಲವಿಳಂಬವಾಯಿತೆಂದು ತಿಳಿಯಬರುತ್ತದೆ.

The Maharaja.—ನೂತನವಾಗಿ ಜನಿಸಿದ ಶ್ರೀಮನ್ಮಹಾರಾಜರವರು ಈದಿನ ಸಾಯಂಕಾಲ ನಾಲ್ಕುವರೆಗಂಟೆಗೆ ತಮ್ಮ ದಿವಾನರು ಮೊದಲಾದವರೊಡನೆ ಈಪ್ರಾಂತಕ್ಕೆ ದಯಮಾಡುತ್ತಾರಾಗಿ ಅವರನ್ನು ಉಚಿತ ಮರ್ಯಾದೆಯೊಡನೆಬರಮಾಡಿಕೊಳ್ಳತಕ್ಕಬಗ್ಯೆ ಏರ್ಪಾಡುಗಳು ಮಾಡಲ್ಪಟ್ಟಿರುತ್ತವೆ.

The weather.—ಈಗ ಶುದ್ಧಾಂಗವಾಗಿ ಮಳೆ ಇಲ್ಲದೆ ಸರಾಗ ಕೆಲವುಗಳು ನಿಂತುಹೋಗಿ ಬಹಳ ಜಂತೆಗೆ ಅವಕಾಶ ವುಂಟಾಗಿದೆ. ವರ್ಷ ಸೂಚನೆಗಳು ಅಧಿಕವಾಗಿ ಕಂಡುಬಂದಾಗಲೂ ಮಳೆಯು ನೆಲದಮೇಲೆ ಬೀಳುವದಕ್ಕೆ ಅನುವಾಗಿಸುತಲಿದೆ ಇನ್ನೂ ಹದಿನೈದು ದಿನಗಳ ವರಿವಿಗೆ ಮಳೆಯು ಬಾರದಿರುವ ಪಕ್ಷಕ್ಕೆ ಜ್ವಾರ ಬರುವದರಲ್ಲೇನೂ ಸಂಶಯವಿಲ್ಲವು. ನಿನ್ನೆಯ ದಿನ ಸಾಯಂಕಾಲ ಧೂಳು ಅಡಗುವಂತೆ ಕೆಲವ ಹನಿಗಳು ಬಿದ್ದವು.

CORRESPONDENCE

ಮ||ರಾ||ಕರ್ಣಾಟಕಪ್ರಕಾಶಿಕಾ ಎಡಿಟರವರ ಸನ್ನಿಧಿಗೆ.

ಅಯ್ಯಾ,-ಈ ಎಡೆಹಳ್ಳಿ ಸಬ್‌ಡಿವಿಜನ್ ಮುನಸೀಫರವರಾದ ಮೆ|| ಬಿ. ವೆಂಕಟಾಚಾರ್ಯರವರು ಮಾಹೇ ಮಜಕೂರ್ ತಾ|| ೧೫ರಲ್ಲಿ ಹೆಡಮುನಿಸೀಫಿಗೆ ತಮ್ಮಕೋರ್ಟಿನ ಚಾರ್ಜನ್ನು ಕೊಟ್ಟು ನಂಜನಗೂಡಿಗೆ ಪ್ರಯಾಣ ಸನ್ನದ್ಧರಾದರು.

ಇವರು ೧೮೮೪ನೇ ಆಗಸ್ಟು ತಿಂಗಳಲ್ಲಿ ಈ ಕೋರ್ಟಿಗೆ ಮುನಸೀಫರಾಗಿ ದಯಮಾಡಿದರು. ಆರಭ್ಯ ಇವರಿಗೆ ತಮ್ಮ ಉದ್ಯೋಗ ನಿರ್ವಹಣೆಯಲ್ಲಿ ಕೇವಲ ಸಮಾಧಾನ ಚಿತ್ತರಾಗಿ ಕಕ್ಷಿಗಾರರಿಗಾಗಲಿ ಸಾಕ್ಷಿಗಳಿಗಾಗಲಿ ಯಾವವಿಧವಾದ ತೊಂದರೆಗಳೂ ಸಂಭವಿಸದಂತೆ ಅತಿ ಶೀಘ್ರದಲ್ಲಿ ಕೇಸುಗಳಂ ಫೈಸಲ್ಮಾಡುತಿದ್ದದಲ್ಲದೆ ವಾದಿಗಳಿಗೂ ಪ್ಲೀಡರುಗಳಿಗೂ ಮತ್ತು ಸಾಕ್ಷಿಗಳಿಗೂ ಅತಿ ಸರಳಹೃದಯವನ್ನು ತೋರಿಸುತ ಮೃದು ವಾಕ್ಯಗಳಿಂದ ಸಂತೋಷ ಪಡಿಸುತಲಿದ್ದರು. ಇವರ ಕೋಪವು ನಮ್ಮ ದೃಗ್ಗೋಚರಕ್ಕೆ ಬಂದದ್ದಿಲ್ಲವು ಇವರ ಡಿಕ್ರಿಗಳಮೇಲೆ ಬಹುಶಃ ಅಪೀಲೇ ಇಲ್ಲ, ಒಂದುವೇಳೆ ಅಪೀಲುಗಳು ದಾಖಲಾದರೆ ೧—೨ನೇ ಅಪೀಲ್ ಕೋರ್ಟುಗಳಲ್ಲಿಯೂ ಕೂಡ ಇವರ ಜಡ್ಜಿಮೆಂಟನ್ನೇ ಶ್ಲಾಘಿಸಿ ಇವರ ಡಿಕ್ರಿಯನ್ನೇ ಕಾಯಂ ಮಾಡುತಿರುತ್ತಾರೆ. ಇದೂ ಅಲ್ಲದೆ ಇವರು ಚಿತ್ತೈಸಿದ ಮೊದಲು ಸಾಲೀನಾಲ ನಂಬರುಗಳು ಪೈಲಿಗೆ ಹೆಚ್ಚಾಗುತ ಕೋರ್ಟು ಹುಟ್ಟುವಳಿಯೂ ಜಾಸ್ತಿಯಾಗುತ ಬಂದಿದೆ. ಇದರಿಂದಲೇ ಇವರ ನಿಸ್ಪೃಹತೆ ನಿಷ್ಪಕ್ಷಪಾತತ್ವ ಸಹ ವ್ಯಕ್ತವಾಗುವದರಿಂದ ಇವರ ಉದ್ಯೋಗ ಧರ್ಮದ ವಿಷಯದಲ್ಲಿ ಹೆಚ್ಚು ಹೇಳುವ ಆವಶ್ಯಕತೆ ಇರುವದಿಲ್ಲವು. ಈ ವಾಸ್ತವ ನಿಜವನ್ನು ತಿಳಿಯಲಪೇಕ್ಷೆಯುಳ್ಳವರು ಇವರು ಬರುವದಕ್ಕೆ ಮುಂಚೆ ಮತ್ತು ಇವರು ಬಂದನಂತರನಡೆಯುವ ಕೋರ್ಟುಸ್ಥಿತಿಮತ್ತು ಕೋರ್ಟು ಸಾದಿಲ್ವಾರು ಲೆಕ್ಕಗಳನ್ನು ನೋಡಬಹುದು.

ಉದ್ಯೋಗಧರ್ಮವಂತಿರಲಿ ಹೀಗಿಸ್ತು, ಸಾಮಾಜಿಕ ವಿಷಯಗಳಲ್ಲಾದರೂ, ಇವರು ಆಗಾಗ್ಯೆ ಈ ಪ್ರಾಂತ ಗವರ್ನಮೆಂಟ ಕನ್ನಡ ಸ್ಕೂಲಿಗೆ ದಯಮಾಡಿ ವಿದ್ಯಾರ್ಥಿಗಳಂ ಪರೀಕ್ಷಿಸಿ ಅವರಿಗೆ ಸನ್ಮಾರ್ಗ ವಿಷಯಗಳನ್ನು ಬೋಧಿಸುತ ಬಹುಮಾನವನ್ನು ಪಾಲಿಸುತ ವಿದ್ಯಾಲಾಭಕ್ಕೆ ಬಾಲಕರಿಗೆ ಮುಖ್ಯ ಉತ್ತೇಜಕರಾಗಿದ್ದರು. ಆವಾರಣ ಮೈಸೂರು ದೇಶದ ಕನ್ನಡ ಸ್ಕೂಲುಗಳ ಪೈಕಿ ಈ ಸ್ಕೂಲೇ ಶ್ರೇಷ್ಠತೆಯನ್ನು ಸಿಕೊಂಡಿತು. ಪ್ರತಿ ವರ್ಷವೂ ನಡೆಯುವ ಲೋಕಲ್ ಪರೀಕ್ಷೆಯಲ್ಲಿ ತೇರ್ಗಡೆಯಾಗುವ ವಿದ್ಯಾರ್ಥಿಗಳ ಸಂಖ್ಯೆಯೇ ಈ ಉಪನ್ಯಾಸಕ್ಕೆ ಪ್ರಬಲ ಸಾಕ್ಷ್ಯವಾಗಿದೆ. ಆಯಾಯ ವರ್ಷ ನಡೆದ ಪರೀಕ್ಷೆ ವಿವರವನ್ನು ಗೆಜೆಟುಗಳಿಂದ ತಿಳಿದುಕೊಳ್ಳಬಹುದು

ಪ್ಲೀಡರ್ ಪ್ರಾಕ್ಟೀಸಿನ ವಿಷಯದಲ್ಲಿ ಮಾತಾಡಿದ್ದಕ್ಕೆ ಆ ಶೋಧಿಸ ಬೇಕೆಂಬ ಒಂದು ನಿಯಮ ಏರ್ಪಾಡಾದ್ದರಿಂದ ಶಾಸ್ತ್ರಸಹಾಯವಿಲ್ಲದ ಕನ್ನಡ ಪ್ಲೀಡರ್‌ಗಳು ಸರ್ಕಾರ ಗ್ರೇಡಿನಲ್ಲಿದ್ದಾಗ್ಯೂ ವಿದ್ಯಾರ್ಥಿಗಳಾದ ಅಡ್ವೋಕೇಟರನ್ನಾದರು ಹಿಂಬಾಲಿಸಲೆಂಬ ಧೈರ್ಯವುಳ್ಳವರಾಗಿದ್ದಾರೆಯಲ್ಲದೆ ಪ್ಲೀಡರ್ ಉದ್ಯೋಗ ಸ್ಥಿತಿಯೂ ಅದರ ಧರ್ಮವೂ ಕೋರ್ಟು ಗೌರವವೂ ಇವರಿಗೆ ಚೆನ್ನಾಗಿ ತಿಳಿಯಬಂದಿದೆ ಇದೂ ಅಲ್ಲದೆ ತಮ್ಮ ಕೋರ್ಟು ನೌಕರರಿಗೆಲ್ಲ ಬಡ್ತಿ ಮಾಡಿಸಿದರು, ಇನ್ನೂ ಮಾಡತಕ್ಕವರಾಗಿಯೂ ಇದ್ದರು.

ಇದು ಕೇವಲ ಸಂಗ್ರಹವು, ಒಂದುಕಡೇ ಮಾತೊ ಮಸ್ತು ಜುಗ್ಗಿ. ಇಲ್ಲಿನ ನಿವಾಸಿಗಳೆಲ್ಲರು ಈ ಮುನಸೀಫರವರು ಬಿಜಮಾಡಿದ ಮೊದಲು ಖಿನ್ನ ನಾಗರಿಕರಾಗಿರುತ್ತಾರೆ, ಹ್ಯಾಗಂದರೆ—

"ಸ್ವಾಮಿಪತ್ಯಂಚವರ್ಷಾಣಿ" ಎಂಬ ನಿಯಮಕ್ಕೆ ಒಳಪಟ್ಟ ೪ ಅಥವಾ ೫ನೆವರ್ಷದ ಬಾಲಕರು ದೊಡ್ಡವರನ್ನು ಕಂಡಕೂಡಲೆ ನಮಸ್ಕಾರವೆಂದು ಉಚ್ಚರಿಸಿ ಕೈಮುಗಿಯುತ್ತಾರೆ. ಈ ಅಪ್ರಾಪ್ತವಯಸ್ಸಿನವರಾದ ಬಾಲಕರಿಗೆ ಸಹ ಇಂತಾ ಸದಭ್ಯಾಸವು ಈ ಮುನಸಫರವರ ಬೋಧನೆಯಿಂದ ಉಂಟಾಗಿದೆ. ಏತೇನ ಮೆ|| ಮುನಸಫರವರು ಆಬಾಲವೃದ್ಧರಲ್ಲಿಯೂ ಪೂರ್ಣ ದಯೆಯುಳ್ಳವರಾಗಿ ವಿಶಿಷ್ಟರನ್ನೂ ಸನ್ಮಾರ್ಗಪ್ರವಿಷ್ಟರನ್ನಾಗಿ ಮಾಡುತಿದ್ದರೆಂಬುವದು ಅತಿಶಯೋಕ್ತಿಯಾಗುವದಿಲ್ಲವು. ಈ ಕೋರ್ಟು ಸರಹದ್ದಿಗೊಳಪಟ್ಟಯೆಲ್ಲ ಗ್ರಾಮಸ್ಥರಿಗೂ ಈ ಗ್ರಾಮಸ್ಥರಿಗೂ ಕೂಡ ಈ ಮುನಸಫರವರೇ ಇಲ್ಲಿರಬೇಕೆಂಬ ಅಪೇಕ್ಷೆ ಇನ್ನೂ ತಪ್ಪಲಿಲ್ಲ. ಆದರೆ ಸರ್ಕಾರದ ಅಪ್ಪಣೆಗೆ ಮರಿಲ್ಲವಾದ್ದರಿಂದ ಸದ್ಗುಣವಿಶಿಷ್ಟರಾದ ಈ ಮುನಸಫರವರ ನಿರ್ಗಮನವು ಅಸ್ಮದಾದಿಗಳ ಮನಸ್ಸಿಗೆ ವ್ಯಥೆಕಾರಿಯಾಯಿತು, ಇದು ನಮ್ಮಗಳ ದುರಾದೃಷ್ಟವಲ್ಲವೆ. ಮೆ|| ಮುನಸಫರವರಿಗಾದರೊ ಪ್ರಮೋಷನ್‌ಮೇಲೆ ಒಳ್ಳೇ ಜಾಗಾ ಅನುಕೂಲಿಸಿತೆಂಬ ಸಂತೋಷವುಂಟಾಗಿರುವದರಿಂದ ಅದನ್ನು ನೋಡಿ ನಾವೂ ಕೂಡ ಸಂತೋಷಿಸುತ್ತೇವೆ. ಇವರಿಗೆ ಕೂಡಲೆ ಮಹತ್ಪದವಿಯನ್ನುಂಟುಮಾಡುತ ಆಯುರಾರೋಗ್ಯ ಭಾಗ್ಯವನ್ನು ಕೃಪೆ ಮಾಡಲೆಂದು ಸರ್ವಚೈತನ್ಯಾತ್ಮಕ ಶ್ರೀ ಶ್ರೀಕಂಠೇಶ್ವರನನ್ನು ಪ್ರತಿಕ್ಷಣ ಪ್ರಾರ್ಥಿಸುತ್ತಿರುವ,

ತಮ್ಮವಿಧೇಯನಾದ,
ಸಜ್ಜನಾಭಿಲಾಷಿ.

SUMMARY OF NEWS
ವೃತ್ತಾಂತಸಂಗ್ರಹವು.

ಇಂಡ್ಯರಾಜ್ಯದ ವೈಸ್‌ರಾಯ್‌ಯವರಾದ ಲಾರ್ಡ್ ಲ್ಯಾನ್ಸ್‌ಡೌನಿಯವರ ಪತ್ನಿಯವರು ಈತಿಂಗಳ ೧೫ನೇ ತಾರೀಖಿನಲ್ಲಿ ಸ್ವದೇಶ ಗಮನೋದ್ಯುಕ್ತರಾಗಿ ಹೊರಟರು.

ಹೈದರಾಬಾದ ನಿಜಾಮರವರ ಸೋದರಿಯರಿಬ್ಬರಿಗೂ ವಿವಾಹ ನಿಶ್ಚಯವಾಗಿ ಅದಕ್ಕೆ ಆವಶ್ಯಕಗಳಾದ ಸಾವಿಭಾಗಗಳಂ ಮಾಡುವಂತೆ ನಿಜಾಮರವರು ಹುಕುಂ ಕೊಟ್ಟಿರುತ್ತಾರೆ.

ಹೈದರಾಬಾದ ಸಂಸ್ಥಾನದ ಸಾಬಕ ಪೇಷ್ಕಾರ್ ಮಹಾರಾಜಾ ನರೇಂದ್ರಪ್ರಶಾದ್‌ರವರ ಪೌತ್ರರಾದ ರಾಜಾ ಕಿಷನ್ ಪ್ರಸಾದ್ ಯೆಂಬವರ ಜಹಗೀರುಗಳಪೈಕಿ ಕೆಲವನ್ನು ಅವರಿಗೆ ತಪ್ಪಿಸುವ ಪ್ರಯತ್ನಗಳು ನಡೆಯುತಲಿರುವದಾಗಿ ದಕ್ಷಣ ಟೈಂಸ್‌ಪತ್ರಿಕೆ ತಿಳಿಸುತಿದೆ.

ಕಳೆದ ತಿಂಗಳ ೧೪ನೇ ತಾರೀಖಿನೊಳು ದೆಹಲೀ ಸ್ಟೇಷನ್ನಲ್ಲೂ ಅದರ ಆಸುಪಾಸು ಪ್ರದೇಶಗಳಲ್ಲೂ ಮಿಡತೆಹುಳಗಳ ದಾಳಿ ಬಂದುಸೇರಿತು. ಆದಿನ ಮಧ್ಯಾನ್ಹದಮೇಲೆ ಮಣ್ಣು ಗಾಳಿ ಬಲವಾಗಿ ಬೀಸಿದ್ದರಿಂದ ಸದರೀ ಹುಳಗಳಂದು ಚದರಿಸಲ್ಪಟ್ಟು ಹೊರಟುಹೋಗಿ ಅದರ ಬಾಧೆಗೆ ಅವಕಾಶತಪ್ಪಿತು.

ಅಜಮೀರನಲ್ಲಿ ವಾಂತಿಬೇದಿರೋಗ ತಲೆದೋರಿದೆ. ಸದರೀ ಷಹರಿನಲ್ಲಿ ಜಲಾಧಾರ ವುಂಟುಮಾಡಲ್ಪಟ್ಟದ್ದಾಗ್ಯೂ ಅಲ್ಲಿಂದ ಬರುವನೀರನ್ನು ಬಟ್ಟೆ ಪಾತ್ರೆ ಪದಾರ್ಥಗಳಂ ತೊಳೆಯುವದಕ್ಕೆ ಉಪಯೋಗಿಸಿಕೊಳ್ಳುತ್ತಾರೆಯೇಹೊರತು ಕುಡಿಯುವದಿಲ್ಲವು. ಕುಡಿಯುವದಕ್ಕೆ ಬಾವಿಗಳಂ ವಶಪಡಿಸಿಕೊಳ್ಳುತ್ತಾರೆ.

ಮುಸಲ್ಮಾನರ ಹಬ್ಬ ಸಮೀಪಿಸಿ ಬರುತಲಿರುವದರಿಂದ ದೆಹಲಿ ಪ್ರಾಂತದಲ್ಲಿ ಸದರೀ ಜನರು ಹಬ್ಬದಕಾಲದಲ್ಲಿ ತಮ್ಮತಮ್ಮ ಮನೆಗಳೊಳು ಗೋಹತ್ಯ ಮಾಡುವದಕ್ಕೆ ಹುಕುಂ ಕೊಡಬೇಕೆಂದು ಕೇಳುತಲಿವಾರೆ ಹಿಂದುಗಳಾದರೊ ಸುತರಾಂ ಪಶುವಧೆ ಮಾಡುವದಕ್ಕೆ ಹುಕುಂ ಕೊಡಕೂಡದೆಂದು ಅನೇಕ ಅರ್ಜಿ ಬರೆಸುಕೊಳ್ಳುತ ಆಮೇರೆ ಖಂಡಿತವಾದ ಹುಕುಂ ಕೊಡಬೇಕೆಂದು ಪ್ರಾರ್ಥಿಸುತಲಿವಾರೆ.

THE MYSORE GAZETTE
ಮೈಸೂರು ಗೆಜೆಟ್.

ಶ್ರೀಮನ್ ಮಹಾರಾಜಾಧಿರಾಜಾಸಾಹೆಬ್ ಬಹದ್ದೂರವರ ಸರ್ಕಾರದಿಂದ ಹೊರಡಿಸಿದ ಇಸ್ತಿಹಾರ್‌ನಾಮೆಗಳು.

ನಂ ೧೧೯, ತಾರೀಖ್ ೭ನೇ ಜೂಲೈ ೧೮೯೦–ತುಮಕೂರುಡಿಸ್ಟ್ರಿಕ್ಟು ಪೊಲೀಸ್ ಅಸಿಸ್ಟೆಂಟ್ ಕಮಿಷನರ್ ಮೆ|| ಎ. ನರಸಿಂಹಯ್ಯಂಗಾರ್ರವರಿಗೆ, ೧೮೯೦ನೇ ಇಸವಿ ಜೂನ್ ೩ನೇ ತಾರೀಖ್ ಲಾಗಾಯಿತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾ|| ಮೊದಲು ಒಂದುತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತದೆ. ಆಕ್ಟಿಂಗ ಅಸಿಸ್ಟೆಂಟ ಕಮಿಷನರ್ ಮೆ|| ನಂಜುಂದರಾಜೇ ಅರಸಿನವರು ಮೆ|| ನರಸಿಂಹಯ್ಯಂಗಾರ್ರ ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಪೊಲೀಸ್ ಇಲಾಖಾ ಚಾರ್ಜಿನಲ್ಲಿರತಕ್ಕದ್ದು.

ನಂ ೧೨೦.—ಸನ್ ೧೮೯೦ನೇಇಸವಿ ಏಪ್ರಿಲ್ ೨೭ನೇ ಮಕರ್ರಂ ಲಾಗಾಯಿತು ಇದರಡಿ ಕಂಡ ಫಾರೆಸ್ಟ ಆಫಿಸರುಗಳ ಮುಂಗಾಮಿ ಬಡ್ತಿಗಳು ವ ವರ್ಗಾವರ್ಗಿಗಳು ಮಂಜೂರ್ಮಾಡಲ್ಪಟ್ಟಿರುತಿವೆ. ಶಿವಮೊಗ್ಗ ಡಿ|| ಒಂದನೇ ಗ್ರೇಡ ಫಾರೆಸ್ಟ ಅಸಿಸ್ಟೆಂಟ್ ಕನ್ಸರವೇಟರ್ ಮೆ|| ಬಿ. ಪಿ. ಲೋರಿಯವರು ಮೆ|| ಸಿ. ಎಂ. ರಪ್ಸಲಿಯವರು ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಆಕ್ಟಿಂಗ ತರೀಕ ಫಾರೆಸ್ಟ್ ಸೂಪರಿಂಟೆಂಡೆಂಟರಾಗಿ ಇರತಕ್ಕದ್ದಲ್ಲದೆ ಶಿವಮೊಗ್ಗ ಡಿ ಫಾರೆಸ್ಟಗಳ ಚಾರ್ಜಿನಲ್ಲೇ ಇದ್ದು ಕೆಲಸ ನೋಡತಕ್ಕದ್ದು. ಮೈಸೂರು ಡಿಸ್ಟ್ರಿಕ್ಟು ೩ನೇ ಗ್ರೇಡ ಫಾರೆಸ್ಟ ಅಸಿಸ್ಟೆಂಟ ಕನ್ಸರ್ವೇಟರ್ ಮೆ|| ಸಿ. ನಾರಾಯಣರಾಯರವರು ಮೆ|| ಬಿ ಪಿ ಲೋರಿಯವರಿಗೆ ಬದಲಾಗಿ ಒಂದನೇ ಗ್ರೇಡ ಫಾರೆಸ್ಟ ಅಸಿಸ್ಟೆಂಟ ಕನ್ಸರ್ವೇಟರಾಗಿ ಆಕ್ಟಿಂಗ ತರೀಕ ಕೆಲಸ ನೋಡಬೇಕಲ್ಲದೆ ನೌಕರಿಬಗ್ಗೆ ಬೆಂಗಳೂರುಡಿಸ್ಟ್ರಿಕ್ಟಿಗೆ ವರ್ಗಮಾಡಲ್ಪಟ್ಟಿರುತ್ತಾರೆ. ಫಾರೆಸ್ಟ ಸಬ ಅಸಿಸ್ಟೆಂಟ ಕನ್ಸರ್ವೇಟರ್ ಮೆ|| ಬಿ ರಾಮಸ್ವಾಮಯ್ಯನವರು ಮೂರನೇ ಗ್ರೇಡ ಫಾರೆಸ್ಟ ಅಸಿಸ್ಟೆಂಟ ಕನ್ಸರ್ವೇಟರಾಗಿ ಆಕ್ಟಿಂಗ ತರೀಕ ಮೆ|| ನಾರಾಯಣರಾಯರಿಗೆ ಬದಲಾಗಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟಗಳ ಚಾರ್ಜಿನೊಳದ್ದು ಕೆಲಸ ನೋಡತಕ್ಕದ್ದು.

ನಂ. ೧೧೨, ತಾ|| ೯ನೇ ಜೂಲೈ ೧೮೯೦–೯೦ನೇ ಇಸವಿ ಜೂಲೈ ೩ನೇ ಮಕರ್ರಂ ೯೪ನೇ ನಂಬರುಳ್ಳ ಈ ಆಫೀಸ ಇಸ್ತಿಹಾರ ನಾಮೆಯ ಮೂಲಕ [illegible] ಮೆ|| ಮರಿಗುಂಗಯ್ಯನವರಿಗೆ ಕೊಡಲ್ಪಟ್ಟಿದ್ದ ಒಂದು ತಿಂಗಳ ಪ್ರಿವಿಲೇಜ ರಜಾ ೯೦ನೇ ಇಸವಿ ಜೂಲೈ ೪ನೇ ತಾರೀಖಿನಿಂದಲಾಗಾಯಿತು ೨೮ ದಿನಗಳಿಗೆ ತಗ್ಗಿಸಲ್ಪಟ್ಟಿರುತದೆ.

ನಂ ೧೧೫. ಚಿತ್ರದುರ್ಗ ತಾಲ್ಲೂಕ ಅಮಲ್ದಾರ್ ಸಿ ಎನ್. ಚೌಡಪ್ಪನವರಿಗೆ ೯೦ನೇ ಇಸವಿ ಮೇ ೨೨ನೇ ಮಕರ್ರಂ ಲಾಗಾಯಿತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ೨೨ ದಿನಗಳ ಪ್ರಿವಿಲೇಜ ರಜಾಕೊಡಲ್ಪಟ್ಟಿರುತದೆ.

ನಂ. ೧೧೩.—ಬೌರಿಂಗಪೇಟೆ ತಾಲ್ಲೂಕ ಚಾರ್ಜಿನಲ್ಲಿರತಕ್ಕ ಡೆಪ್ಯುಟಿ ಅಮಲ್ದಾರ್ ವಿ. ಎನ್. ಗೋಪಾಲರಾಯರಿಗೆ, ಸನ್೧೮೯೦ನೇ ಇಸವಿ ಜೂಲೈ ೫ನೇ ಮಕರ್ರಂ ಲಾಗಾಯಿತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ಒಂದುತಿಂಗಳ ಪ್ರಿವಿಲೇಜ ರಜಾ ಕೊಡಲ್ಪಟ್ಟಿರುತದೆ. ಮಾಲೂರ್ ತಾಲ್ಲೂಕ ಶಿರಸ್ತೇದಾರ್ ನಾರಾಯಣಸ್ವಾಮಿನಾಯುಡುರವರು ವಿ ಎನ್. ಗೋಪಾಲರಾಯರವರ ಗೈರುಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಬೌರಿಂಗಪೇಟೆ ತಾಲ್ಲೂಕ ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ ಕೆಲಸ ನೋಡುವಂತೆ ನೇಮಕರ್ಮಾಡಲ್ಪಟ್ಟಿರತಾರೆ.

ನಂ. ೧೧೪–ಅಸಿಸ್ಟೆಂಟ ಕಮಿಷನರ್ ಮಿಸ್ಟರ್ ಬಿ. ನಾರಾಯಣಯ್ಯಂಗಾರ್ರವರಿಗೆ ೧೮೯೦ನೇ ಜೂಲೈ [illegible]ತಾರೀಖ್ ಲಾಗಾಯಿತು ಹತ್ತುದಿನಗಳ ಪ್ರಿವಿಲೇಜರಜಾ ಕೊಡಲ್ಪಟ್ಟಿರುತಿದೆ.

ನಂ ೧೧೫, ತಾ|| ೧೧ನೇ ಜೂಲೈ ೧೮೯೦–೧೮೯೦ನೇ ಇಸವಿ ಜೂನ್ ೬ನೇ ಮಕರ್ರಂ ೨೦೦-೧-೩೬ನೇನಂಬರುಳ್ಳ ಪ್ರೊಸೀಡಿಂಗ್ಸ್ ಮೂಲಕ ಹಾಸನ ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ ಕಮಿಷನರ್ ಮೆ|| ದಳವಾಯಿ ದೇವರಾಜೇ ಅರಸಿನವರಿಗೆ ಕೊಡಲ್ಪಟ್ಟಿದ್ದ ಹತ್ತು ದಿವಸಗಳ ಕ್ಯಾಜ್ಯುಯಲ್ ರಜಾ ಬಗರ್ ಕಲಮ್ ರಜಾವಿಗೆ ಬದಲಾಯಿಸಲ್ಪಟ್ಟು ಮೂರುತಿಂಗಳ ವರಿವಿಗೆ ಜಾಸ್ತಿಮಾಡಲ್ಪಟ್ಟಿರುತಿದೆ.

ನಂ ೧೧೬, ತಾ|| ೧೧ನೇ ಜೂಲೈ ೧೮೯೦–ಮಹಾರಾಜಕಾಲೇಜ್ ೮ನೇ ತಾರೀಖಿನ ಪ್ರಾರಂಭದಲ್ಲಿ ಮೆ|| ಎ. ಎನ್. ಕೃಷ್ಣಮೂರ್ತಿ ಬಿ. ಎ.ರವರು [illegible] ಚಾರ್ಜನ್ನು ಮೆ|| [illegible] ವರಿಗೆ ಒಪ್ಪಿಸಿ ಆ ರಜವನ್ನು [illegible]ಯಾಗಿ ತೆಗೆದುಕೊಂಡಿರುತ್ತಾರೆ.

ಮೊತ್ಕಂ ನಂ ೧೦, ತಾ ೧೨ನೇ ಜೂಲೈ ೧೮೯೦–೧೮೯೦ನೇ ಇಸವಿಯ ೩ನೇ ರೆಗ್ಯುಲೇಷನಿಂದ ತಿದ್ದುಪಡಿಯಾದ ೧೮೮೪ನೇ ಇಸವಿ ಮೈಸೂರು ಚೀಫಕೋರ್ಟ ರೆಗ್ಯುಲೇಷನಿನ ೨೦ನೇ ಸೆಕ್ಷನ ಅನುಸರಿಸಿ ಮೈಸೂರ ಗವರ್ನಮೆಂಟಿನವರು, ಚೀಫಕೋರ್ಟಿನವರಿಗೆ ಆಯಾ ಡಿಸ್ಟ್ರಿಕ್ಟ ಕೋರ್ಟಗಳ ಸಂಬಂಧ ಸಕಲ ಸಿವಿಲ್ ಅಧಿಕಾರವನ್ನೂ ಡಿಸ್ಟ್ರಿಕ್ಟ ಕೋರ್ಟಿನ ಸಾಧಾರಣ ಅಪೀಲ್ ಕ್ರಿಮಿನಲ್ ಅಧಿಕಾರವನ್ನೂ ಕೊಟ್ಟಿರುವದಲ್ಲದೆ, ಇದರಿಂದ ಬೆಂಗಳೂರು, ಕೋಲಾರ ವ ತುಮಕೂರ್ ಈ ೩ ಸಿವಿಲ್ ಡಿಸ್ಟ್ರಿಕ್ಟಗಳನ್ನು ಅಧಿಕಾರ ಸಂಬಂಧವಾಗಿ ಸೇರಿಸಿ ಮೊಕದ್ದಮೆ ಸದರೀ ಸ್ಥಳ ಸರಹದ್ದಿನೊಳಗಾಗಿ ಮೇಲ್ಕಂಡ ಅಧಿಕಾರಗಳನ್ನು ಚೀಫಕೋರ್ಟಿನವರು ಚಲಾಯಿಸತಕ್ಕದ್ದೆಂಬದಾಗಿ ಘೋಷಿಸಿ ಪ್ರಕಟಿಸುತ್ತಾರೆ (೨) ಸದರೀ ರೆಗ್ಯುಲೇಷನಿನ ೧೨ನೇ ಸೆಕ್ಷನ್ ಪ್ರಕಾರ ಮೈಸೂರು ಗವರ್ನಮೆಂಟಿನವರು ಹಿಂದಿನ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟಿರುವ ಸರಹದ್ದುಗಳೊಳಗಾಗಿ ಯಾವದಾದರು ಸಿವಿಲ್ ಯಾ ಕ್ರಿಮಿನಲ್ ಸಂಬಂಧವಾದ ಕೋರ್ಟಿನ ಫೈಸಲಿಗಳು ಹುಕುಂಗಳು ಅಥವಾ ಶಿಕ್ಷೆಗಳಿಂದ ಅಪೀಲುಗಳಮೇಲೆ ಬರುವಂತಾದನ್ನು [illegible] ಡಿಸ್ಟ್ರಿಕ್ಟ್ ಯಾ ಸೆಷನ್ಸ ಕೋರ್ಟಿನಿಂದ [illegible] ನಿರ್ಣಯಪ್ರಕಾರ [illegible] ಅಪೀಲ್ ಮೊಕದ್ದಮೆಗಳನ್ನು ದರ್ಯಾಪ್ತುಮಾಡಿ ಫೈಸಲ್ಮಾಡತಕ್ಕ ಅಧಿಕಾರವನ್ನು ಚೀಫಕೋರ್ಟಿನವರಿಗೆ [illegible].

ನಂ ೧೧೮—೧೮೯೦ನೇ ಇಸವಿ ಏಪ್ರಿಲ್ ೨ನೇ ಮಕರ್ರಂ ಮೊತ್ಕಂ ೧೧ನೇ ನಂಬರ ಗವರ್ನಮೆಂಟ ಇಸ್ತಿಹಾರನಾಮೆಯ ಮೂಲಕ ಹಾಸನ ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರ್ ಮೆ|| ಎ. ಎನ್. ಕ್ರಾಕ್ಫೋರ್ಡ್‌ರವರಿಗೆ ಸ್ಪೆಷಲ್ ಕೆಲಸದ ಒಳ್ಗೆ ಕೊಡಲ್ಪಟ್ಟಿದ್ದ ಎರಡು ತಿಂಗಳ ರಜವನ್ನು ಸಿವಿಲ್ ಲೀವ್ ಕೋಡ್ ೧೨೦ ನೇ ಸೆಕ್ಷನ್ ಪ್ರಕಾರ ಬಗರ್ ಕಲಮ್ ರಜವಿಗೆ ಬದಲಾಯಿಸಿ ಸದರೀ ರಜಾ ಇದರಿಂದ ಎರಡು ತಿಂಗಳ ತನಕ ಅಥವಾ ಅವರು ತಮ್ಮ ಕೆಲಸಕ್ಕೆ ವಾಪಸ್ ಹೋಗಬಹುದಾದ ಸಮೀಪದ ತಾರೀಖಿನವರಿವಿಗೆ ಜಾಸ್ತೀ ಮಾಡಲ್ಪಟ್ಟಿರುತಿದೆ.

ನಂ. ೧೨೨, ತಾರೀಖ್ ೧೬ನೇ ಜೂಲೈ ೧೮೯೦–೧೮೯೦ನೇ ಇಸವಿ ೩ನೇ ರೆಗ್ಯುಲೇಷನ್ನಿಂದ ತಿದ್ದುಪಡಿಯಾದ ೧೮೮೪ನೇ ಇಸವಿ ಮೈಸೂರ ಚೀಫಕೋರ್ಟ ರೆಗ್ಯುಲೇಷನಿನ ೧೨ನೇ ಸೆಕ್ಷನ್ ಪ್ರಕಾರ ಇದರಿಂದ ಮೈಸೂರು ಗವರ್ನಮೆಂಟಿನವರು ಹುಕುಂ ಮಾಡುವದೇನೆಂದರೆ—ಸದರೀ ರೆಗ್ಯುಲೇಷನಿನ ೧೨ನೇ ಸೆಕ್ಷನ್ ಪ್ರಕಾರವಾಗಲಿ, ಅಥವಾ ತತ್ಕಾಲದಲ್ಲಿ ಜಾರಿಯೊಳಿರುವ ಇತರ ಇನ್ಯಾವ ಕಾನೂನ್ ಅನುಸರಿಸಿಯಾಗಲಿ ಚೀಫಕೋರ್ಟಿಗೆ ಕಲ್ಪಿಸಲ್ಪಟ್ಟಿರುವ ಸಾಧಾರಣ ಸಿವಿಲ್ ವ ಕ್ರಿಮಿನಲ್ ಅಧಿಕಾರವನ್ನು ಚಲಾಯಿಸುವಲ್ಲಿ ಸದರೀ ಕೋರ್ಟಿನ ಒಬ್ಬ ಜಡ್ಜಿಯಿಂದ ಕೊಡಲ್ಪಡುವ ಫೈಸಲ್‌ಗಳು, ಇವುಗಳ ಮೇಲಿನ ಅಪೀಲುಗಳು, ದಾಖಲೆಗಳು, ಪುನರ್ವಿಮರ್ಶೆಯ ಬಗ್ಗೆ ಅರ್ಜಿಗಳು, ಇವುಗಳನ್ನು ಮೇಲೆ ಕಂಡ ಚೀಫಕೋರ್ಟಿನ ಮೂರು ಜಡ್ಜಿಗಳುಳ್ಳ ಫುಲ್ ಬೆಂಚ್‌ನವರು ಅಂದರೆ ಮೂವರು ಜಡ್ಜಿಗಳು ಸಮುದಾಯವಾಗಿ ವಿಚಾರಿಸಿ ವಿಮರ್ಶಿಸತಕ್ಕದ್ದು.—ಎಂಬದು.

ನಂ. ೧೨೦, ತಾ|| ೧೪ನೇ ಜೂಲೈ ೧೮೯೦–ಮೈಸೂರ ರೆವಿನ್ಯೂ ಸರ್ವೆ ಅಸಿಸ್ಟೆಂಟ ಸೂಪರಿಂಟೆಂಡೆಂಟ್ ಮೆ|| ಟಿ. ಎಸ್. ಮಾಕೆಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ೩ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

ನಂ ೧೨೨ - ಶ್ರೀರಂಗಪಟ್ಟಣ ತಾಲ್ಲೂಕ ಅಮಲ್ದಾರ್ ಲಕ್ಷ್ಮೀನಾರಣಪ್ಪನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ಎರಡು ತಿಂಗಳ ಪ್ರಿವಿಲೇಜ ರಜಾ ಕೊಡಲ್ಪಟ್ಟಿರುತಿದೆ. ಮೈಸೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಆಫೀಸ್ ರೆವಿನ್ಯೂ ಶಿರಸ್ತೇದಾರ್ ಟಿ ರಾಮಚಂದ್ರರಾಯರವರು ಲಕ್ಷ್ಮೀನಾರಣಪ್ಪನವರು ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಶ್ರೀರಂಗಪಟ್ಟಣ ತಾಲ್ಲೂಕ ೫ ನೇ ಗ್ರೇಡ್ ಅಮಲ್ದಾರ್ ವ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ ತರೀಕ ಕೆಲಸ ನೋಡುವಂತೆ ನೇಮಕ ಮಾಡಲ್ಪಟ್ಟಿರುತ್ತಾರೆ.

ನಂ. ೧೨೪ - ಚಿತ್ರದುರ್ಗ ಡಿಸ್ಟ್ರಿಕ್ಟು ಆಕ್ಟಿಂಗ ಅಸಿಸ್ಟೆಂಟ ಕಮಿಷನರ್ ಮಿಸ್ಟರ್ ಬಿ. ರಾಮಸ್ವಾಮಿ ಅಯ್ಯರ್ ಬಿ. ಎ ಯವರು ಮೆ|| ದಳವಾಯಿ ದೇವರಾಜೇ ಅರಸಿನವರು ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಜನರಲ್ ಡ್ಯೂಟಿ ಬಗ್ಗೆ ಹಾಸನ ಡಿಸ್ಟ್ರಿಕ್ಟಿಗೆ ವರ್ಗಮಾಡಲ್ಪಟ್ಟಿರುತ್ತಾರೆ.

ನಂ. ೧೨೫, ತಾ ೧೬ನೇ ಜೂಲೈ ೧೮೯೦–೯೦ನೇ ಇಸವಿ ಜೂಲೈ ೮ನೇ ಮಕರ್ರಮಿನ ಪ್ರಾರಂಭದಲ್ಲಿ ಮೈಸೂರ್ ಜೇಲ್ ಡಿಸ್ಟ್ರಿಕ್ಟ್ ಅಧಿಕಾರ ಹಸ್ತಾಂತರವನ್ನು ಮೆ|| ಸಿ. ಪ ಶ್ರೀನಿವಾಸ ಯರು ಮೆ|| ಎ ರಾಮಚಂದ್ರ ಅಯ್ಯರ್ ಬಿ. ಎಲ್. ರವರಿಗೆ ಒಪ್ಪಿಸಿರುತ್ತಾರೆ.

ನಂ. ೧೨೬-ಮೆ|| ಸಿ ವಿಶಾಲಾಕ್ಷಯ್ಯ [illegible] ಯವರು ೯೦ನೇ ಇಸವಿ ಜೂಲೈ ೧೧ನೇ ತಾರೀಖಿನ ಪ್ರಾರಂಭದಲ್ಲಿ ರಿಜಿಸ್ಟ್ರೇಷನ್ ಇನಸ್ಪೆಕ್ಟರ್ ಜನರಲ್, ಮೈಸೂರು ಜಾಯಿಂಟ್ ಸ್ಟಾಕ ಕಂಪೆನಿಗಳ ರಿಜಿಸ್ಟ್ರಾರ್, ಲಿಟರರಿ ಸೊಸೈಟಿ ಮತ್ತು ಗವರ್ನಮೆಂಟ್ ಅಡ್ವೋಕೇಟ್, ಈ ಕೆಲಸಗಳ ಚಾರ್ಜನ್ನು [illegible] ರವರಿಗೂ ಒಪ್ಪಿಸಿ ರಜವನ್ನು ತೆಗೆದುಕೊಂಡಿರುತ್ತಾರೆ.

ನಂ ೧೨೭—೧೮೯೦ನೇ ಇಸವಿಯ ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನಿನ ೪ನೇ ಸೆಕ್ಷನ್ ಅನುಸರಿಸಿ ಬಿ ರಾಮಸ್ವಾಮಯ್ಯಂಗಾರ್ರವರು ೯೦ನೇ ಇಸವಿ ಜೂಲೈ ೩ನೇ ಮಕರ್ರಂ ೯೭ನೇ ನಂಬರುಳ್ಳ ಇಸ್ತಿಹಾರ್ ಮೂಲಕ ಬೆಂಗಳೂರು ಅಡಿಷನಲ್ ಮುನಸಫರಾಗಿ ನೇಮಕ ಮಾಡಲ್ಪಟ್ಟಿರುವದರಿಂದ ಅವರು ಬೆಂಗಳೂರಿನಲ್ಲಿ ಕೋರ್ಟ ಮಾಡತಕ್ಕದ್ದೆಂದು ಹುಕುಂ ಮಾಡಲ್ಪಟ್ಟಿರುತ್ತಾರಲ್ಲದೆ ಸದರೀ ರೆಗ್ಯುಲೇಷನಿನ ೫ನೇ ಸೆಕ್ಷನ್ ಅನುಸರಿಸಿ ಬೆಂಗಳೂರು ಮುನಸಫರ ಅಧಿಕಾರಕ್ಕೆ ಒಳಪಟ್ಟಿರುವ ತಾಲ್ಲೂಕುಗಳಮೇಲೆ ತಮ್ಮ ಅಧಿಕಾರವನ್ನು ಚಲಾಯಿಸಲಿಕ್ಕೆ ಅಧಿಕಾರ ಕೊಡಲ್ಪಟ್ಟಿರುತ್ತಾರೆ. ಚೀಫಕೋರ್ಟಿನವರು ಆಗಿಂದಾಗ್ಯೆ ಸದರೀ ಇಬ್ಬರು ಮುನಸಫಗಳಿಗೂ ಕೆಲಸವನ್ನು ಹಂಚಿಕೊಡುವರು.

BANGALORE:—Printed and published at the KARNATIC PRESS, No. 114, SREENIVASA MANDIRAM ROAD, PETTAH.—1890.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಶಾಮವಿವಿದಪ್ರವೃತ್ತ್ಯುಪಗವಾರ್ಥ್ವಕರ್ಣಾಟಕಪ್ರಕಾಶನದಾಭಿಸಾಪ್ರಥಿತಸಾಹಿತೀಶೋಭಿತಾ॥ ಮೃಗಾಂಕಹಿತವಾಸರೆನಿಹಿತಮುದ್ರಣಾಸಜ್ಜನ್ಯೈರ್ಪ್ರಿಶಾಸುವರಿಶೋಧಿತಾಜಿಕತಿಮಾನಸಂಸಂಮುದಂ॥

Vol. XVII.] BANGALORE:—MONDAY, JULY 28, 1890. [No. 30.

ಸಂಪುಟ ೧೭.] ಬೆಂಗಳೂರು:—ಸನ್ ೧೮೯೦ನೇ ಇಸವಿ ಜುಲೈ ೨೮ ನೇ ತಾರೀಖು ಸೋಮವಾರ. [ಸಂಚಿಕೆ ೩೦.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಸಾಲ್ ೧ಕ್ಕೆ	ಸ್ಥಳದವರಿಗೆ ಹಾಕಲಿಲ್ಲದೆ	ಪರಸ್ಥಳದವರಿಗೆ ಹಾಸಲುಸಹಿತ
ಮುಂಗಡಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ ದಯಮಾಡಿ ವಹಿಸಿದ ತರುವಾಯ ಬೇಡ [illegible] ಪತ್ರಿಕೆ [illegible] ಇಂಗ್ಲಿಷ್ [illegible] ಮೂರು ತಿಂಗಳಿಗಿಂತ ಕಡಮೆ [illegible].

ನೋಟೀಸುಗಳು [illegible] ಪತ್ರಿಕೆ [illegible] ಕೊಡತಕ್ಕವರು [illegible] ಪ್ರಕಟಿಸುವ [illegible].

ಪ್ರಕಟನೆಯ ರಿವಾಜು.

ಮೊದಲನೇ ಸಾರಿ ಪ್ರತಿ ಸಾಲಿಗೆ ೦—೨—೦

ಎರಡನೇ ಸಾರಿ ಪ್ರತಿ ಸಾಲಿಗೆ ೦—೧—೦

[illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗನ್ನು ಕೊಡತಕ್ಕದ್ದು [illegible] ಕೊಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ [illegible].

ಇದರ ಕ್ರಯ—ವ್ಯಾಲ್ಯೂ ಮತ್ತು ಅಂಚೆ ಹಾಸಲು ಸಹಿತ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್,

ಬೆಂಗಳೂರು, ಅಕ್ಕಿಪೇಟೆ [illegible] ಪೇಟೆ, 41ನೇ ನಂ. ಮನೆ.

ADVERTISEMENTS.

ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ಬಿಕರಿಗೇ ಸಿದ್ಧವಾಗಿವೆ ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

		ಹಾಸಲ್ ಸಹಿತ ರೂ. ಅ. ಪೈ
ಸಟೀಕಾ ವೈದ್ಯಸಾರ ಸಂಗ್ರಹ	...	೪ ೦ ೦
,, ಶಿವಗೀತೆ	...	೧ ೧ ೦
,, ಶಿವಾನಂದಲಹರಿ	...	೦ ೮ ೦
,, ಕಾಲಾಮೃತ	...	೧ ೨ ೦
,, ಮುಕುಂದಮಾಲಾ	...	೦ ೧೨ ೦
,, ಬಾಲರಾಮಾಯಣ	...	೦ ೪ ೦
,, ಗೋಪಿಕಾ ಗೀತೆ	...	೦ ೧ ೬
,, ಚಾಣಕ್ಯನೀತಿ (ಸುಭಾಷಿತ)	...	೦ ೬ ೦
ವಿಷ್ಣುಸಹಸ್ರನಾಮ ವಗೈರೆ	...	೦ ೪ ೦
ಸೂರ್ಯಸಹಸ್ರನಾಮ	...	೦ ೩ ೦
ಕೃಷ್ಣಕರ್ಣಾಮೃತ	...	೦ ೨ ೮
ಪ್ರಾಂತ ಅಮರ ಮೂಲ	...	೦ ೨ ೬
೧ ಕಾಂಡ	...	೦ ೧ ೦

ಕನ್ನಡ ಗ್ರಂಥಗಳು.

ಬಸವಪ್ಪಶಾಸ್ತ್ರಿ ಅವರ್ಗಳ ಕೃತಿ	..	೩ ೦ ೦
ಬಿಜ್ಜಳ ಮಹಾ	...	೧ ೪ ೦
ಶ್ರೀಕೃಷ್ಣೇಂದ್ರ ವಿಜಯ	...	೧ ೮ ೦
ಪಂಚತಂತ್ರ ಮಾಲಿನಿ	..	೦ ೮ ೦
ಕಮಲಾವಿಲಾಸ	...	೦ ೮ ೩
ಕಾಳಿದಾಸಮರ್ದನ	..	೦ ೨ ೬
ಸುಭದ್ರಾಪರಿಣಯ	..	೦ ೨ ೬
ಶಕುಂತಲಾ ಪರಿಣಯ	...	೦ ೩ ೦
ಸುಧಾಮಚರಿತ್ರೆ	...	೦ ೨ ೦
ಪುರಂದರದಾಸರ ಚರಿತ್ರೆ	..	೦ ೯ ೦
ಬಾಲಗ್ರಹ ಚಿಕಿತ್ಸೆ	...	೦ ೨ ೬
ಮಹಮ್ಮದ ಅಲಿ	...	೧ ೭ ೦
ಛಂದೋ ವಿಲಾಸ	...	೦ ೧೨ ೦

ನೋಟೀಸ್.

ಮನೆಗಳಲ್ಲಿ ಗಿಲೀಟ್ ಮಾಡುವದಕ್ಕೆ ಅನುಕೂಲವಾದ ಬೆಳ್ಳಿ ದ್ರಾವಕವು.

ಈ ಬೆಳ್ಳೀ ದ್ರಾವಕವು ಸ್ವಭಾವದ ಬೆಳ್ಳಿ ತಟ್ಟೆಗಳ ಮೇಲೂ, ತಾಮ್ರ, ಹಿತ್ತಾಳೆ ವಗೈರೆ ವಿಶಿಷ್ಟ ಪದಾರ್ಥಗಳ ಮೇಲೂ ಹಚ್ಚಿ ಉಜ್ಜುವದರ ಮೂಲಕ ಗಿಲೀಟು ಮಾಡುವದಕ್ಕೆ ಒಳ್ಳೆ ಉಪಯುಕ್ತವಾದದ್ದಾಗಿರುತ್ತದೆ. ಇದಲ್ಲದೆ ಸದರೀ ದ್ರಾವಕವು ಚಿನ್ನ ಮತ್ತು ಬೆಳ್ಳಿ ಒಡವೆಗಳ ಮಸ್ಸು ಹೋಗಿಸುವದಕ್ಕೂ ಅವುಗಳಿಗೆ ಮೆರುಗು ಕೊಡುವದಕ್ಕೂ ಸಹ ಪ್ರಯೋಜನಕರವಾದದ್ದು. ಇದರಿಂದ ಇತರವಿಧ[illegible] ಹಾಳುಮಾಡದೆ ಕಾಂತಿ ಉಂಟಾಗುವದು. ಕಪ್ಪು ಬಣ್ಣವುಳ್ಳ ಬೆಳ್ಳಿಗೆ ಉತ್ಕೃಷ್ಟವಾದ ಮೆರುಗು ಪದಾರ್ಥಗಳಿಂದುಂಟಾದಂತಾ ಕಾಂತಿಯನ್ನು ಉಂಟುಮಾಡುವದರ [illegible] ಶುದ್ಧವಾದ ಬೆಳ್ಳಿ [illegible] ಸದರೀ ದ್ರಾವಕವು [illegible] ಬೇಕಾದ ಭರವಸೆ ಕೊಡಲ್ಪಡುವದು. ಇದು ಗಿಲೀಟು ಮಾಡುವದಕ್ಕಿಂತ ಬಹಳ ಅಗ್ಗವಾಗಿರುವದು. ಕೊಡಲೇ ಒಂದು ಸೀಸೆಯನ್ನು ತರಿಸಿಕೊಡು ಅದರಿಂದ [illegible] ದನ್ನು ಅಜಮಾಯಿಷಿ ಮಾಡಿ ನೋಡಿಯಿರಿ.

ಇದರ ಕ್ರಯ ಸೀಸೆ ೧ಕ್ಕೆ ೦—೪—೦

ಚಿನ್ನದ ದ್ರಾವಕವು.

ಇದು ಬೆಳ್ಳಿ, ಹಿತ್ತಾಳೆ, ತಾಮ್ರ ವಗೈರೆ ಪದಾರ್ಥಗಳನ್ನು ಗಿಲ್ಟ್ ಮಾಡುವದಕ್ಕೆ ಬಹಳ ಉಪಯುಕ್ತವಾಗಿರುವದಲ್ಲದೆ ಶುದ್ಧವಾದ ಬಂಗಾರದಲ್ಲಿ ತಯಾರಾದದ್ದಾಗಿರುತ್ತದೆ ಬೆಳ್ಳಿ ಆಭರಣಗಳನ್ನು ಗಿಲ್ಟ್ ಮಾಡಲಿಕ್ಕೆ ಈ ದ್ರಾವಕವು ಕೇವಲ ಪ್ರಯೋಜನಕರವಾಗಿರುವದು.

ಇದರ ಕ್ರಯ ಸೀಸೆ ೧ಕ್ಕೆ ೩—೮—೦

ಬೇಕಾದವರು ಅಡಿಯಲ್ಲಿರುವ ಬೆಳ್ಳೀ ಕಾರ್ಖಾನೆಯ ಮ್ಯಾನೇಜರಿಗೆ ಬರೆದು ತರಿಸಿಕೊಳ್ಳಬಹುದು.

ಕೊಡಗು ಫಾರೆಸ್ಟ್ ಇಲಾಖಾ.

ನೋಟೀಸ್.

ಸನ್ 1890ನೇ ಇಸವಿ ಜುಲೈ ತಾರೀಖ್ 10ರಲ್ಲು.

ಇದರಡಿ ನಮೂದಿಸಿದ ಕೊಲೆ ವಗೈರೆ ಸಾಮಾನುಗಳು ಮುಣಸೂರು ಡಿಪೋದಲ್ಲಿ ಸನ್ 1890ನೇ ಇಸವಿ ಆಗಸ್ಟ್ ತಾರೀಖ್ 21 ರಲ್ಲಿ ಹರಾಜ್ ಹಾಕಲ್ಪಡುತ್ತವೆ.

ತ್ಯಾಗದ ತೊಲೆಗಳು	450 .. 13800	ಅಡಿ.
ಬೊಂಬೆ ವಗೈರೆ	580...15300	,,
ಸ್ಲೀಪರ್	6750... 8550	,,
ತ್ಯಾಗದ ಮರ ಕೊಯಿದ ಸಾಮಾನ್	770... 1160	,,
ಆರೀಸಾಲು ಪಟ್ಟೆ ಮರ	28900...	

ಷರಾ:—ಸನ್ 1889ನೇ ಇಸವಿ ಡಿಸೆಂಬರ್ ತಾರೀಖ್ 19 ನಂಬರ್ 53ರ ಚೀಫ್ ಕಮಿಷನರ್ ಸಾಹೇಬರವರ ನೋಟಿಫಿಕೇಷನ್ ಮೇರೆ ಮರದ ಕ್ರಯದ ಪೈಕಿ ಶೇಕಡ ಪತ್ತರಷ್ಟು ಮೊಬಲಗನ್ನು ಹರಾಜ್ ಕಾಲದಲ್ಲಿ ಪಾವತೀ ಮಾಡಿ ಬಾಕೀ ಮೊಬಲಗನ್ನ ಹರಾಜ್ ತಾರೀಖು ಮೊದಲುಗೊಂಡು 30 ದಿನಗಳೊಳಗೆ ಪಾವತೀ ಮಾಡತಕ್ಕದ್ದು.

J. Mc'Kee,

ಡಿಪ್ಟಿ ಕನ್ಸರ್ವೇಟರ್.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JULY 28, 1890.

೧೮೯೦ನೇ ಜುಲೈ ೨೮ನೇ ಸೋಮವಾರ

THE DRAFT VACCINATION REGULATION.

ಶ್ರೀಮನ್ಮಹಾರಾಜಾ ಸರ್ಕಾರದವರು ಈಗ ಸ್ಮಾಲ್‌ಪಾಕ್ಸ್‌ವ್ಯಾಕ್ಸಿನೇಷನ್ ವಿಷಯಕವಾದ ಒಂದು ಮುಸವಿದಾ ನಿಬಂಧನೆಯನ್ನು ರಚಿಸಿ ರಾಜ್ಯದ ಆವರಣದಲ್ಲಿ ಜಾರೀಯೊಳು ತರಬೇಕೆಂಬ ತಾತ್ಪರ್ಯವುಳ್ಳವರಾಗಿ ಅದರ ವಿಷಯದೊಳು ಸಾಮಾನ್ಯೇನ ಪ್ರಜೆಗಳ ಅಭಿಪ್ರಾಯಗಳನ್ನು ಮುಂದಾಗಿ ಅರಿಯುವ ಕುತೂಹಲದೊಡನೆ ಸದರೀ ಮುಸವಿದಾ ನಿಬಂಧನೆಯನ್ನು ಈಗ್ಯೆ 2 ವಾರಗಳಿಂದ ಮೈಸೂರು ಗಜೆಟಿನಲ್ಲಿ ಪ್ರಕಟಿಸಿ ಮಾಡಿರುತ್ತಾರೆ. ಈ ನಿಬಂಧನೆಯನ್ನು ವಿಶೇಷತಃ ಜಾರೀಯಲ್ಲಿ ತರುವದರೊಳು ಸರ್ಕಾರದವರ ಮುಖ್ಯೋದ್ದೇಶವೇನೆಂದರೆ—ಸಾಂಕ್ರಾಮಿಕ ರೂಪವಾದ ಸ್ಫೋಟಕವು ಒಂದೊಂದು ಕಾಲ ವಿಶೇಷದಲ್ಲಿ ಸರ್ವತ್ರ ಪ್ರಬಲಗೊಂಡು ಅದು ಒಬ್ಬರಿಂದೊಬ್ಬರಿಗೆ ವ್ಯಾಪಿಸುತ ಅದಕ್ಕೆ ಅನುಕೂಲವಾದ ಅನೇಕ ಪ್ರಜೆಗಳು ಮೃತಪಡುತಲಿರುವಂತಹುದು ಪ್ರಸಿದ್ಧವಾಗಿಯೇ ಇರುತಿದೆ. ಈ ವ್ಯಾಧಿಯು ವ್ಯಾಪಕತೆಯನ್ನು ಸಾಧ್ಯವಾದ ಮಟ್ಟಿಗೆ ಈ ದೇಶದಲ್ಲಿ ತಗ್ಗಿಸಿ ತತ್ಪ್ರಯುಕ್ತವಾದ ಪ್ರಾಣಹಾನಿಯಂ ತಪ್ಪಿಸಬೇಕೆಂಬದು ಸರ್ಕಾರದವರ ಪ್ರಥಮೋದ್ದೇಶವಾಗಿರುತಿದೆ. ಒಬ್ಬ ಮನುಷ್ಯನ ಜೀವಿತಕಾಲದಲ್ಲಿ ಯಾವಾಗಲಾದರೊಂದಾವರ್ತಿ ಸದರೀ ಸಿಡುಬು ರೋಗವು ಪ್ರಾಪ್ತವಾಗದೆ ಹೋಗುವದಿಲ್ಲವೆಂಬದು ಸಾಮಾನ್ಯ ವಿಧಿಯಾಗಿ ಗ್ರಹಿಸಬೇಕು. ಇಂತಾ ರೋಗದ ವ್ಯಾಪಕತೆಯಂ ತಡೆಯುವಬಗ್ಯೆ ಅದು ಸ್ವಾಭಾವಿಕವಾಗಿ ಏಳುತದಕ್ಕೆ ಮುಂದಾಗಿಯೇ ಮೊದಲು ಎಬ್ಬಿರತಕ್ಕವರ ಸ್ಫೋಟಕದ ಹಾಲನ್ನು ತೆಗದು ಅದರಿಂದ ದೃಢಾಂಗರಾದವನಿಗೆ ಸಿಡುಬುಹಾಕುವ ಪದ್ಧತಿಯು ಬಹುಕಾಲದಿಂದ ನಡೆದು ಬರುತಲಿದೆ, ಈ ಕ್ರಮವು ಪ್ರಕೃತಿ ಭೇದದಿಂದ ಕದಾಚಿತ್ ಅನರ್ಥಾವಹನವಾಗಿ ಪರಿಣಮಿಸುವದನ್ನಾಲೋಚಿಸಿ ಮನುಷ್ಯಸಂಬಂಧವಾದ ಸ್ಫೋಟಕದ ಹಾಲಿನಿಂದ ಸಿಡುಬು ಹಾಕುವದು ನಿರೋಧಿಸಬೇಕಲ್ಲವೆ ಮುಖ್ಯವಾಗಿ ಗೋ ಸಂಬಂಧವಾದ ಹಾಲಿನಿಂದ ಸಿಡುಬು ಹಾಕಿಸತಕ್ಕದ್ದನ್ನು ಬಲಾತ್ಕರಿಸಬೇಕೆಂಬದು ಅವರ ಎರಡನೆಯ ಉದ್ದೇಶವಾಗಿರುತಿದೆ. ಈ ಕಾಲದಲ್ಲಿ ಪ್ರಜೆಗಳು ಪ್ರಸಕ್ತ ನಿಬಂಧನೆಯ ಸಾಧಕ ಬಾಧಕಾಂಶಗಳನ್ನರಿತು ಆಲೋಚಿಸಿ ತಮ್ಮ ಅಭಿಪ್ರಾಯವಂ ತಿಳಿಯಪಡಿಸುವದಕ್ಕೆ ಪೂರ್ವಭಾವಿಯಾಗಿ ಈ ರೋಗ ವಿಷಯಕವಾದ ಕೆಲವು ಅಂಶಗಳನ್ನರಿಯಬೇಕಾದದು ಆವಶ್ಯಕವೆಂದೆಣಿಸಿ ಅವುಗಳನ್ನಿದರಡಿ ಪ್ರಕಟಿಸುವೆವು ಈ ಉಪಾಧಿಯು ಕೇವಲ ಆಶ್ಚರ್ಯಕರವಾದುದಾಗಿಯೂ, ಅನೇಕ ಪ್ರಭೇದಗಳುಳ್ಳದ್ದಾಗಿಯೂ ಸರ್ವದಾ ಮನುಷ್ಯನಿಗೆ ಭೀತಿಯನ್ನುಂಟುಮಾಡತಕ್ಕದ್ದಾಗಿಯೂ ಇರುತಿದೆ. ಈ ರೋಗವು ಪ್ರಬಲಿಸಿದಾಗ ಮನುಷ್ಯನ ದೇಹವಾದ್ಯಂತವು ಸಣ್ಣಸಣ್ಣ ಗುಳ್ಳೆಗಳಿಂದ ತುಂಬಿರುವದು, ಹೀಗೆ ಏಳುವ ಗುಳ್ಳೆಗಳ ಕೀವನ್ನು ತೆಗದು ಬೇರೊಬ್ಬನ ರಕ್ತದಲ್ಲಿ ಬೆರೆಸಿದರೆ ಕೆಲವು ದಿನಗಳ ತನಕ ಹೊರಗೆ ಏನೂ ಕಾಣಿಸದಿದ್ದರೂ ಬಳಿಕ ಅವನಿಗೆ ಜ್ವರ ವುಂಟಾಗಿ ಕ್ರಮೇಣ ಬೊಬ್ಬೆಗಳೆದ್ದು ಮೊದಲು ಯಾವ ಗುಳ್ಳೆಯಿಂದ ಕೀವು ಎತ್ತಿ ಸಿಡುಬು ಹಾಕಲ್ಪಟ್ಟಿತೋ ಬಳಿಕ ತದ್ಗುಣವಾದ ಗುಳ್ಳೆಗಳಾಗಿ ಪರಿಣಮಿಸುತಿದೆ, ಏವಂಪರ್ಯೇಣ ಸಿಡುಬು ಹಾಕಿಸುವದರಿಂದ ಅದರ ವಿಷವು ದೇಹತತ್ವದಲ್ಲಿ ವ್ಯಾಪಿಸಿ ಕೆಲವು ಕಾಲದವರೆಗೇ ನಮ್ಮ ಉರಿಮೊದಲಾದವು ವುಂಟಾಗುತದಲ್ಲದೆ ಮೊದಲು ಪ್ರಾಪ್ತವಾದವರಿಗೆ ಅದು ಯಾವಸ್ವಭಾವವೊದವೆಯೂ ಗುಣಗಳೊದವೆಯೂ ಕಾಣಿಸುವದೋ ಅದೇವಿಧ ಸ್ವಭಾವಗುಣಗಳೊಡನೆ ಆರೋಗ್ಯಸ್ಥಿತಿಯುಳ್ಳಿರತಕ್ಕವರಿಗೂ ಕಾಣಿಸುವದು. ಪ್ರಸಕ್ತಜಾತ್ಯವು ಕ್ರಿಸ್ತುಜನಿಸಿದಂದಿಟುನೂರು ಸಂವತ್ಸರಗಳವರಿಗೂ ಯೂರೋಪ್ ದೇಶೀಯರಿಗೆ ತಿಳಿದಿರಲಿಲ್ಲವು. ಕ್ರಿಸ್ತು ಶಕಕ್ಕೆ ಸಾವಿರ ಸಂವತ್ಸರಗಳಿಗೆ ಪೂರ್ವ ಸದರೀರೋಗವು ಈದೇಶದಲ್ಲಿಯೂ ಚೀನಾದೇಶದಲ್ಲಿಯೂ ಇರುತಲಿದ್ದಂತೆ ಅನೇಕ ದಾಖಲೆಗಳಿಂದ ಸ್ಪಷ್ಟವಾಗುತಿದೆಯಾಗಿ ಅದು ಸುಮಾರುಮೂರುಸಾವಿರ ಸಂವತ್ಸರಗಳಿಗೆ ಮೇಲ್ಪಟ್ಟದ್ದಾಗಿರುವದೆಂದು ಯೋಚಿಸಬೇಕಾಗಿದೆ. ಈ ವ್ಯಾಧಿಯು ಮಹಮದ್

ಜನಿಸಿದ ಸಂವತ್ಸರದಲ್ಲಿ ಅರಬೀದೇಶದಲ್ಲಿ ಪ್ರಾರಂಭವಾದಂತೆಯೂ, ಬಳಿಕ ಅರಬ್ಬೀದೇಶೀಯರು ಯುದ್ಧಕ್ಕಾಗಿ ಯಲ್ಲಿಗೆ ಹೋದರೂ ಅಲ್ಲಿಗೆಲ್ಲ ಆ ರೋಗವು ಅವರನ್ನನುವರ್ತಿಸಿ ಹೋಗುತಲಿದ್ದಂತೆಯೂ,'ಮೂರ್ಸ್ ಎಂಬ ಜನಗಳು ಸ್ಪೇಯಿನ್‌ದೇಶಕ್ಕೆ ಹೋದಾಗ ಅಲ್ಲಿ ಪ್ರಥಮತಃ ಸ್ಫೋಟಕೋಪದ್ರವವು ತಲೆದೋರಿ ಅದರಿಂದ ಅನೇಕ ಪ್ರಜೆಗಳು ಮೃತಪಟ್ಟಂತೆಯೂ ಅರಬೀದೇಶೀಯರ ವೈದ್ಯ ಗ್ರಂಥಗಳಿಂದ ತಿಳಿಯಬರುತಿದೆ. ತರುವಾಯ ಅನೇಕ ದೇಶೀಯರು ಭಯಂಕರವಾದ ವ್ಯಾಧಿಯಿಂದ ಬಹುಕಾಲದ ತನಕ ತಪ್ಪಿ ಜೀವಿಸುತಲಿದ್ದರೂ ಕಡೆಗೆ ಅದು ಸರ್ವತ್ರ ವ್ಯಾಪಿಸಿ ಒಬ್ಬರನ್ನೂ ಹಿಂಸಿಸದೆ ಬಿಡಲಿಲ್ಲವು. ಅಮೆರಿಕಾ ಖಂಡದವರಿಗೆ ನಾನೂರು ಸಂವತ್ಸರಗಳಿಗೆ ಹಿಂದೆ ಇದರ ಹೆಸರೇ ತಿಳಿದಿರಲಿಲ್ಲವು. ಹೀಗಿರುವಾಗ್ಯೆ ದಕ್ಷಿಣ ಅಮೆರಿಕಾ ಖಂಡಕ್ಕೆ ಸೇರಿದ ಮೆಕ್ಸಿಕೋ ಪಟ್ಟಣದಲ್ಲಿ ಸದರೀ ರೋಗ ಪೀಡಿತನಾದ ನೀಗ್ರೋ ಜಾತಿಯವನೊಬ್ಬನು ಬಂದು ಸೇರಲು ಅವನ ಮೂಲಕ ಅದು ಅನ್ಯತ್ರ ವ್ಯಾಪಿಸಿ ಕೆಲವು ಕಾಲದಲ್ಲಿಯೇ ಅದರಿಂದ ೩೫,೦೦,೦೦೦ ಪ್ರಜೆಗಳು ನಾಶವಾದರು. ಇದೇರೀತಿಯಾಗಿ ಮತ್ತೊಂದುದೇಶದಲ್ಲಿ ಈವ್ಯಾಧಿ ಆಕಸ್ಮಿಕವಾಗಿ ಸಂಭವಿಸಿ ಆದೇಶದ ಒಟ್ಟುಜನಸಂಖ್ಯೆಯಲ್ಲಿ ತ್ರಿಸ್ವೇಕಭಾಗವು ಅಂದರೆ ೧೬,೦೦೦ ಮಂದಿಗಿಂತ ಅಧಿಕವಾಗಿ ಮೃತಪಟ್ಟಂತೆ ತಿಳಿಯಬರುತಿದೆ. ಡೆನ್ಮಾರ್ಕ್ ದೇಶದಲ್ಲಿ ಇದಕ್ಕೆ ಪ್ರತಿಕ್ರಿಯೆ ಮಾಡುವದಕ್ಕೆ ಪೂರ್ವದೊಳು ಪ್ರತಿಸಂವತ್ಸರದಲ್ಲಿಯೂ ೬,೦೦೦ ಮಂದಿಗಿಂತ ಜಾಸ್ತಿಯಾಗಿ ಮೃತಪಡುತಲಿದ್ದರು. ಆ ಸರ್ಕಾರದವರು ಅದರ ಪ್ರತಿ ಕ್ರಿಯೆಯನ್ನು ಕಾನೂನುಮೂಲಕ ಬಲಾತ್ಕರಿಸಲಾರಂಭಿಸಲು ಕ್ರಮೇಣ ಸ್ವಲ್ಪ ಕಾಲದಲ್ಲಿಯೇ ಅದರ ವ್ಯಾಪಕತೆಯೂ ತನ್ಮೂಲಕವಾದ ಪ್ರಾಣಹಾನಿಯೂ ಬಹಳಮಟ್ಟಿಗೆ ಉಪಶಮಿಸಿದಂತೆ ತಿಳಿಯಬರುತಿದೆ. ಭಯಂಕರವಾದ ಈವ್ಯಾಧಿಯ ಪ್ರಾರಂಭ ಲಕ್ಷಣಗಳನ್ನೂ, ಅದರ ವೃದ್ಧಿ ಕ್ರಮಗಳನ್ನೂ, ಅದರ ವಿವಿಧಸ್ವಭಾವಗಳನ್ನೂ ಅದರ ಪರಿಣಾಮ ರೂಪವನ್ನೂ ಅರಿಯದಿರತಕ್ಕ ಮನುಷ್ಯರೇ ಈದೇಶದಲ್ಲಿ ದುರ್ಲಭರಾಗಿರುವದರಿಂದ ಅದರಲಕ್ಷಣ ವಿವರಣವಿಲ್ಲಿ ಅನಾವಶ್ಯಕವಾಗಿ ರುತಿದೆ. ಇದಕ್ಕೆ ಕಂಡುಹಿಡಿಯಲ್ಪಟ್ಟ ಪ್ರತಿಕ್ರಿಯೆಯು ದೈವಾನುಗ್ರಹದಿಂದ ಸಫಲವಾಗಲು ಅದಂ ಪ್ರಜಾಹಿತಂಕರಣಪ್ರವರ್ತಕರಾದ ಸಂಸ್ಕೃತದವರೆಲ್ಲರೂ ತಮ್ಮರಾಜ್ಯಾದಳಿತಗಳಲ್ಲಿ ಜಾರಿಯಲ್ಲಿಕೆಂದು ಪ್ರಜೆಗಳಿಗೆ ಕ್ಷೇಮವನ್ನುಂಟುಮಾಡುತಲಿವಾರೆ. ಅದು ಯಾವದಂದರೆ, ವಾಕ್ಸಿನೇಷನ್‌ಯಾನೆ ಸ್ಫೋಟಕಪಾಕುವಣ. ವಾಕ್ಸಿನೇಷನ್ ಎಂಬಶಬ್ದವು ಲ್ಯಾಟಿನ್ ಭಾಷೆಯಿಂದ ಗ್ರಹಿಸಲ್ಪಟ್ಟದ್ದಾಗಿರುತಿದೆ. ಸದರೀ ಶಬ್ದದ ರೂಪ ನಿಷ್ಪತ್ತಿಯಂ ನೋಡಲಾಗಿ ಆದಿಯಲ್ಲಿ ವಾಕಾ ಅಂದರೆ ಪಶುವು ಅಥವಾ ಆಕಳೆಂಬ ಅರ್ಥವುಳ್ಳ ಒಂದು ಶಬ್ದದಿಂದ ವಾಕ್ಸಿನೇಷನ್ ಶಬ್ದವು ರೂಢಿಯಲ್ಲಿಬಂದಂತೆ ಕಾಣುತಿದೆ. ಪಶುಗಳಿಂದ ಗ್ರಹಿಸಲ್ಪಟ್ಟದ್ದೆಂದು ಇದರ ಮುಖ್ಯಾರ್ಥವು ಕೆಲವುಸಮಯಗಳಲ್ಲಿ ದನಗಳಿಗೆ ತತ್ರಾಪಿ ಹಾಲು ಕೊಡುವಆಕಳುಗಳ ಕೆಚ್ಚಲಿಗೆ ಪಕ್ಷ್ಮಲತೊಟ್ಟಿಗೆಮಾತ್ರ ಸಂಭವಿಸುವಕೌಪಾಕ್ಸ್ ಯಾನೆ ಶಿಥಿಲ ರೋಗದಿಂದ ಶೇಕೆಗೆಯೋಗಾದ ಹಾಲನ್ನು ಮನುಷ್ಯರ ಶರೀರದಲ್ಲಿ ಪ್ರವೇಶಿಸುವಂತೆ ಮಾಡಿದರೆ ಸ್ಫೋಟಕವು ಶುದ್ಧಾಂಗ ನಿವೃತ್ತಿಯಾಗುವದು, ಅಥವಾ ಅದರ ವ್ಯಾಪಕತೆಯಂ ಮಿತಪಡಿಸುತಿದೆ. ಮಹದಾಶ್ಚರ್ಯಕರವಾದ ಈವಿಧಾನವನ್ನು ಡಾಕ್ಟರ್ ಜೆನ್ನರ್ ಎಂಬ ಒಬ್ಬ ದೊಡ್ಡ ಚಿಕಿತ್ಸಕರು ಮೊದಲು ಕಂಡುಹಿಡಿದು ಲೋಕ ರಕ್ಷಣಾರ್ಥ ಅವರು ಅದಂ ಪ್ರಚಾರದೊಳು ತಂದರಾಗಿ ಅವರಿಂದ ಮನುಷ್ಯ ಸಮುದಾಯಕ್ಕುಂಟಾದ ಮೇಲನ್ನು ಅನವರತ ಸ್ಮರಿಸುತಲಿರಬೇಕಾಗಿರುತಿದೆ. ಯೂರೋಪ ದೇಶದಲ್ಲಿ ಗೋಪಾಲಕರೆಲ್ಲರೂ ಒಟ್ಟಾಗಿ ಬಂದು ಪಾಳ್ಯದೊಳು ವಾಸವಾಗಿದ್ದರೆಂತಲೂ,ಅವರು ಯಾವಾಗಲು ಆಕಳ ಮಂದೆಗಳಲ್ಲಿ ನಿಯತವಾಗಿರುತಲಿದ್ದದರಿಂದ ಕದಾಚಿತ್ ಪಶುಗಳಿಗೆ ಸಂಭವಿಸುತಲಿದ್ದ ಸ್ಫೋಟಕ ಸ್ಪರ್ಶ ಸಂಬಂಧದಿಂದ ಅವರಿಗೆ ಸದರೀ ರೋಗವು ಎಂದಿಗೂ ಬರಲಿಲ್ಲವೆಂತಲೂ ಸದರೀ ಡಾಕ್ಟರವರು ಬರೆದಿರುತ್ತಾರೆ. ಪಶುಗಳ ಕೆಚ್ಚಲಿನ ಮೇಲೆ ಕಾಣಿಸುವ ಬೊಬ್ಬೆಗಳಿಂದ ಹಾಲು ಹಿಂಡುವವರಿಗೆ ಸಹ ಆ ವ್ಯಾಧಿ ಸಕೃತ್ ವ್ಯಾಪಿಸುವದುಂಟು. ಡಾಕ್ಟರ್ ಜೆನ್ನರ್‌ಯವರು, ಸಾಧಾರಣವಾದ ಸ್ಫೋಟಕದ ಹಾಲನ್ನು ಕತ್ತಿಯ ಕೊನೆಯಲ್ಲಿ ತೆಗದು ಗೋ ಸಂಬಂಧವಾದ ಸ್ಫೋಟಕವುಳ್ಳ ಮನುಷ್ಯನ ಶರೀರದಲ್ಲಿ ತಾಕಿಸಲು ಅವರಿಗೆಸ್ಫೋಟಕವು ಏಳದೇ ಇದ್ದುದರಿಂದಗೋಪಾಲಕರಿಗುಂಟಾಗಿದ್ದ ಅಭಿಪ್ರಾಯವು ಸರಿಯಾದುದೆಂದು ನಿಶ್ಚೈಸಿ, ಸಾಂಕ್ರಾಮಿಕರೂಪವಾದ ಮತ್ತು ಮಲಿನವಾದ ಸ್ಫೋಟಕದ ಹಾಲನ್ನು ಒಬ್ಬ ಮನುಷ್ಯನ ಶರೀರದಿಂದ ತೆಗದು ಮತ್ತೊಬ್ಬ ಮನುಷ್ಯನಿಗೆ ಉಪಯೋಗಿಸಿದರೆ ಪ್ರಕೃತಿ ಭೇದದಿಂದಲೂ ಕಾಲಭೇದದಿಂದಲೂ ವಿರುದ್ಧ ಕ್ರಮಗಳಿಂದಲೂ ಜನರಿಗುಂಟಾಗತಕ್ಕ ಸಂಕಟವೂ ಪ್ರಾಣಹಾನಿಯೂ ನಿವೃತ್ತಿಯಾಗುವದೆಂಬ ನಿಷ್ಕರ್ಷೆಯೊಡನೆ ನೂತನವಾದ ಸದರೀ ಕ್ರಮವನ್ನು ಸರ್ವತ್ರ ಪ್ರಚಾರದೊಳು ತರಲೆತ್ನಿಸಿದರು. ಮುಖ್ಯವಾಗಿ ಮೈಸೂರ್ ಸರ್ಕಾರದವರು ಜಾರೀಯಲ್ಲಿ ತರಲುದ್ದೇಶಿಸಿರುವ ರೆಗ್ಯುಲೇಷನಿನ ಮುಖ್ಯ ಸಿದ್ಧಾಂತವನ್ನಿದರಡಿ ಶೋಧೀಕರಿಸಿ ತಿಳಿಸುವೆವಾಗಿ ಇದರಿಂದ ಅದರ ಪ್ರಯೋಜನಗಳನ್ನೆಲ್ಲರೂ ಪರ್ಯಾಲೋಚಿಸಿ ತಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಬೇಕೆಂದು ಕೋರುತ್ತೇವೆ, ಏನಂದರೆ,—ಸ್ಫೋಟಕವುಳ್ಳ ಒಬ್ಬ ಮನುಷ್ಯನ ಶರೀರದಿಂದ ತತ್ಸಂಬಂಧವಾದ ಕೀವನ್ನು ತೆಗದು ಆರೋಗ್ಯಸ್ಥಿತಿಯೊಳಿರತಕ್ಕ ಮತ್ತೊಬ್ಬನ ಭುಜಗಳಲ್ಲಿ ಚುಚ್ಚಿ ಒಳಗೆ ಪ್ರವೇಶಿಸುವಂತೆ ಮಾಡುವದರಿಂದ ಅವನಿಗೂ ಅದೇ ರೀತಿಯಾದ ಸ್ಫೋಟಕವು ಏಳುವದು. ಆದರೆ ಇದರಿಂದ ಪ್ರಬಲನಾಶವೊಂದು ಸಂಭವಿಸದಿರುವದಿಲ್ಲವು, ಅದು ಯಾವದಂದರೆ, ಸದರೀ ಮನುಷ್ಯ ಸಂಬಂಧವಾದ ಸ್ಫೋಟಕದ ಹಾಲಿನಿಂದ ತಿದುಬು ಹಾಕಲ್ಪಟ್ಟ ಮನುಷ್ಯನಿಗೆ ಭುಜಗಳ ಮೇಲೆ ಬೊಬ್ಬೆಗಳೆದ್ದು ಅಷ್ಟರೊಡನೆ ನಿಲ್ಲದೆ ಶರೀರಮಾದ್ಯಂತವು ಬೊಬ್ಬೆಗಳೆದ್ದು ತನ್ಮೂಲಕ ಸ್ವಾಭಾವಿಕವಾಗಿ ಸ್ಫೋಟಕ ಏಳತಕ್ಕವರಿ ಗುಂಟಾಗುವಷ್ಟು ಯಾತನೆಯೂ ಕದಾಚಿತ್ ಪ್ರಾಣಹಾನಿಯೂ ಅವರಿಗೂ ಪ್ರಾಪ್ತವಾಗುತಿವೆ. ಮತ್ತು ಆತನ ಉಚ್ಛ್ವಾಸನಿಶ್ವಾಸಾದಿಗಳಿಂದುಂಟಾಗುವ ರೋಗಕಾರಿಯಾದ ಘಾಳಿಯು ಇತರರ ಶರೀರದಲ್ಲಿ ವ್ಯಾಪಿಸುವದರಿಂದ ಆರೋಗ್ಯಸ್ಥಿತಿಯಲ್ಲಿರತಕ್ಕವರಿಗೂ ಅದೇ ಪ್ರಕಾರ ಪ್ರಾಪ್ತವಾಗಿ ಒಬ್ಬರಿಂದೊಬ್ಬರಿಗೆ ವ್ಯಾಪಿಸಿ ಕಡೆಗೆ ದೇಶವಾದ್ಯಂತವೂ ಪ್ರಸರಿಸುತ್ತಿದೆ. ಆದುದರಿಂದ ಕೇವಲ ಅಪಾಯಕರವಾದ ಮನುಷ್ಯ ಸಂಬಂಧವಾದ ಹಾಲಿನಿಂದ ತಿದುಬು ಹಾಕುವ ಪದ್ಧತಿಯನ್ನು ಶುದ್ಧಾಂಗವಾಗಿ ನಿಲ್ಲಿಸಿ ಮೇಲೆ ನಾವು ತಿಳಿಸಿದ ವ್ಯಾಕ್ಸಿನೇಷನ್ ಅಂದರೆ, ಗೋ ಸಂಬಂಧವಾದ ಹಾಲಿನಿಂದ ತಿದುಬು ಹಾಕುವದನ್ನೇ ಬಲಾತ್ಕಾರ ಪೂರ್ವಕ ಈ ದೇಶದಲ್ಲಿ ಆವಶ್ಯಕಗಳಾದ ಪ್ರದೇಶಗಳೊಳು ತಕ್ಕ ನಿಬಂಧನೆಗಳೊಡನೆ ಜಾರಿಯಲ್ಲಿ ತರಬೇಕೆಂಬದೇ ಮಹಾರಾಜಾ ಸರ್ಕಾರದವರ ಸಂಕಲ್ಪವಾಗಿರುತಿದೆ. ಜನರಿಗೆ ಪ್ರಸಕ್ತ ಪದ್ಧತಿಯಿಂದುಂಟಾಗುವ ಪ್ರಯೋಜನಗಳನ್ನು ತಕ್ಕ ದೃಷ್ಟಾಂತಗಳೊಡನೆ ಮುಂದೆ ನಿರೂಪಿಸುವೆವಲ್ಲದೆ ಮಸವಿದಾ ರೆಗ್ಯುಲೇಷನಿನಲ್ಲಿರುವ ಸಾಧಕ ಬಾಧಕಾಂಶಗಳನ್ನು ಪಸ ಸಾಧ್ಯವಾದ ಮಟ್ಟಿಗೆ ತಿಳಿಸುವೆವು.

WHO IS A FRIEND?

ಎ.—ಅಯ್ಯಾ, ಎಡಿಟರವರೆ, ನನ್ನ ಮೊದಲನೆಯ ಪ್ರಶ್ನೆಗೆ ತಾವುಕೊಟ್ಟ ವಿಸ್ತಾರವಾದ ಉತ್ತರದಿಂ ನಾನು ಬಹಳ ಸಂತೃಪ್ತನಾದೆನು. ಅಭಿಜ್ಞರಾದ ತಮ್ಮ ನಿರೂಪಣದಿಂ ಮಿತ್ರಲಕ್ಷಣಗಳಂ ನಾನು ಚೆನ್ನಾಗಿ ತಿಳಿದವನಾದೆನು. ಆದರೆ ಈಗ ತಾವು ತಿಳಿಸಿದ ಮತ ಭೇದಗಳನ್ನು ನಿರಾಕರಿಸಿ ತಮ್ಮ ತಾತ್ಪರ್ಯವಂ ಸ್ಥಾಪಿಸಿದರೋ ಅಥವಾ ಅವುಗಳಂತೆ ಇದೂ ಒಂದೆಂದು ಭಾವಿಸಿ ತಿಳಿಸಿದರೋ?

ಎಡಿ.—ಆಯಾ ಮತಗಳನ್ನು ಪ್ರತ್ಯೇಕ ಪ್ರತ್ಯೇಕ ನಿರೂಪಿಸಿದ್ದೆವಷ್ಟೆ. ಕೆಲವಲ್ಲಿ ಗುಣದೋಷ ಸಾಮ್ಯ, ಇತರ ಕೆಲವಲ್ಲಿ ಗುಣಾಧಿಕ್ಯ, ಕೆಲವಲ್ಲಿ ದೋಷಾಧಿಕ್ಯ, ಈರೀತಿ ಇರುವದರಿಂದ ಅವುಗಳಪೈಕಿ ಸಾರಾಂಶವನ್ನುಮಾತ್ರ ಗ್ರಹಿಸಿ ನಮ್ಮ ತಾತ್ಪರ್ಯವೆಂದು ಮೈತ್ರಿಯ ಸ್ವರೂಪವಂ ನಿರ್ಣೈಸಿದೆವು. ಆದುದರಿಂದ ನಮ್ಮ ಭಾವವು ಆಯಾ ಮತಗಳ ಖಂಡನ ರೂಪವೆಂದೆನ್ನಿಸಿಕೊಳ್ಳಬಾರದು, ಆದರೆ ಅವಂ ಸಂಪೂರ್ಣವಾಗಿ ಪರಿಗ್ರಹಿಸಿದೆವೆಂತಲೂ ತಾವು ಎಣಿಸಲಾಗದು. ಕೆಲವು ಅಂಶಗಳಲ್ಲಿ ಅವುಗಳನ್ನನುಸರಿಸಿಯೇ ಇರುವದು. ಮುಖ್ಯವಾಗಿ ನಮ್ಮಿಬ್ಬರ ತರ್ಕಕ್ಕೆ ದೋಷರಹಿತವಾದ ಮೈತ್ರಿಯ ಗುಣನಿರೂಪಣವೂ ಅದರಿಂದ ನಿರ್ಣೀತಾಂಶಜ್ಞಾನವೂ ಅಪೇಕ್ಷಿತವಾಗಿರುವದರಿಂದ ಪರಮತ ನಿರಸನೇಚ್ಛೆಯು ನಮಗೆ ಸ್ವಲ್ಪವೂ ಇಲ್ಲವು, ಸರ್ವದಾ ಸ್ವಾಭಿಮಾನವಂ ತ್ಯಜಿಸಿ ಗುಣಾಂಶಗಳನ್ನೇ ಆರಿಸಿ ತೆಗದುಕೊಳ್ಳುತ ದೋಷವಂ ಗಣಿಸದೆ ಅದಂ ಶುದ್ಧಾಂಗ ತೊರೆಯುವ ಸಂಕಲ್ಪ ವುಳ್ಳವರಾಗಿರುವದರಿಂದ ಇಂತಾ ನಮ್ಮ ಅಭಿಪ್ರಾಯವನ್ನೇ ತಾವುಸಹ ಅನುಮೋದಿಸುವರೆಂಣಿಸುವೆವು.

ಎ—ಆಗಲಿ, ಒಳ್ಳೇದು ಇತರಗಳಾದ ನನ್ನ ಎರಡುಮೂರನೇಪ್ರಶ್ನೆಗಳಗುತ್ತರಗಳಂಪೇಳಿರಿ

ಎಡಿ--ಲೋಕದಲ್ಲಿ ಸರ್ವೋತ್ತಮವಾದ ಸ್ಥಿತಿಯಲ್ಲಿರತಕ್ಕವನು ಮಹೀಪತಿಯೊಬ್ಬನು ವಿನಾ ಅನ್ಯನಲ್ಲವು. ಆತನು ಸಕಲ ಜನಗಳಿಂದ ಗೌರವಿಸಲ್ಪಡತಕ್ಕವನಾಗಿಯೂ, ಅಭಿಮಾನಿಸಲ್ಪಡತಕ್ಕವನಾಗಿಯೂ ಇರುತ್ತಾನೆ. ಆತನಮಹಿಮೆಯೂ ಗೌರವವೂ ಉಪಯುಕ್ತತೆಯು ಸಹ ಸರ್ವೋತ್ತಮಗಳಾಗಿರುತಿವೆಯೆಂದು ಶಾಸ್ತ್ರಗಳು ನುಡಿಯುತಿವೆ. ಇದಕ್ಕೆ ಲೋಕವೂ ಸಾಕ್ಷಿಯಾಗಿರುತಿದೆ. ಅಂತವನು ಉತ್ಕೃಷ್ಟಗಳಾದ ಸದರೀ ಮೂರು ವಿಷಯಗಳಿಗೂ ಸರ್ವಕಾಲ ಸರ್ವಾವಸ್ಥೆಗಳಲ್ಲಿಯೂ ಸರ್ವ ವಿಷಯಗಳಿಂದಲೂ ಹಾನಿ ಯುಂಟಾಗದಂತೆ ಆತ್ಮಪ್ರಜ್ಞೆಯೆಂಬ ಪ್ರಬಲವಾದ ನೇತ್ರದಿಂ ಅನವರತವೂ ಪ್ರಕಟ, ಅಪ್ರಕಟ, ವಿರೋಧ, ಮಿತ್ರ, ತಟಸ್ಥರೂಪಗಳಾದವುಗಳನ್ನೆಲ್ಲ ಸಾಕ್ಷಾತ್ಕರಿಸುತ ಜಾಗರೂಕನಾಗಿ ನಿಗ್ರಹಾನುಗ್ರಹ ಶಕ್ತಿಗಳನ್ನು ಸ್ವಯಮೇವ ಕೈಗೊಳ್ಳುತ ಕೇವಲ ದಾಕ್ಷಿಣ್ಯ ಪರವಶನಾಗದೆ ಶೌರ್ಯ, ಪ್ರಸಾದ, ಕರ್ಕಶತ್ವ, ಸಾರಳ್ಯ, ಮೌನ, ವಾಚಾಲಕತ್ವ, ಲೌಲ್ಯ, ದಾತೃತ್ವ, ಮೌಢ್ಯ, ವಿವೇಕ, ನಿಸ್ಪೃಹತ್ವ, ಅತ್ಯಾಶೆ, ನಿರೋಧ, ಉಚ್ಛೃಂಖಲತ್ವ, ಅತಿಶಂಕಾ, ವಿಶ್ವಾಸ, ಆಸಕ್ತಿ, ನೈರ್ಭರ್ಯ, ಆಸ್ತಿಕತ್ವ, ನಾಸ್ತಿಕತ್ವ, ಆಲಸ್ಯ, ಪಟುತ್ವ, ಅನೃತ, ಸತ್ಯವಾದಿತ್ವ, ನಿರ್ಘೃಣತ್ವ, ಕಾರುಣ್ಯಾದಿ ಪರಸ್ಪರ ವಿರುದ್ಧ ಭಾಗಗಳನ್ನೆಲ್ಲ ಕಾಲ ದೇಶ ಕಾರ್ಯ ಜನಾನುಗುಣವಾಗಿ ವಹಿಸುತ ಸ್ವಕಾರ್ಯದೊಳು ದೃಷ್ಟಿಯಿಟ್ಟು ವರ್ತಿಸಬೇಕು, ಪರಸ್ಪರ ವಿರುದ್ಧಗಳಾದ ಮೇಲೆಕಂಡ ದ್ವಂದಗಳವಿಷಯವಾಗಿಯೋ ಜನಗಳೆಲ್ಲರೂ ನಾನಾವಿಧ ನೀತಿಶಾಸ್ತ್ರಗಳಿಂದ ಬೇಕಾದ ಮಟ್ಟಿಗೆ ನಿರೂಪಿಸಲ್ಪಟ್ಟವೆಯಾಗಿ ಅವುಗಳ ವಿಚಾರವಿಲ್ಲಿ ಅನಾವಶ್ಯಕವಾಗಿರುತಿದೆ ಮುಖ್ಯವಾಗಿ ಸ್ವತಸ್ಸಿದ್ಧವಾದ ಪ್ರಕಾಶಗುಣವುಳ್ಳ ನಿಮ್ಮಜ್ಞಾನದಿಂದಲೂ ಶಾಸ್ತ್ರ ಸಹಕಾರದಿಂದಲೂ ಈ ಅಂಶಗಳನ್ನೆಲ್ಲಸೂ ತಾವೇ ತಿಳಿದಿರುವಿರೆಂದು ನಂಬುತ್ತೇವೆ. ಹೀಗೆಯೇ ಮಧ್ಯಮರು ಸಾಮಾನ್ಯರು ಸಹ ಅವರವರ ಯೋಗ್ಯತಾನುಗುಣವಾಗಿಯೂ, ಪ್ರಕೃತ್ಯೋಚಿತವಾಗಿಯೂ ಸ್ವಪ್ರಯೋಜನ ಸಾಧಕವಾಗಿಯೂ ಹೇಳಲ್ಪಟ್ಟ ಯೆಲ್ಲಾ ಗುಣಗಳನ್ನೂ ಪಡೆದಿರಬೇಕು. ಮೇಲೆ ತಿಳಿಸಲ್ಪಟ್ಟ ದ್ವಂದ್ವ ಗುಣಗಳಲ್ಲಿ ಏಕೈಕಮಾತ್ರ ಪರರಾಗಿರತಕ್ಕವರು ಕೇವಲ ದುಷ್ಟರಾಗಿಯೂ, ಅಥವಾ ಕೇವಲ ಜಡರಾಗಿಯೂ ಭಾವಿಸಲ್ಪಡುವರೆಂಬದರಲ್ಲೇನೂ ಸಂಶಯ ವಿಲ್ಲಾರದು.

ಎ—ಪಂಡಿತ ಜನಾಭಿಮತವಾದ ತಮ್ಮ ಉತ್ತರವು ನನಗೆ ಬಹಳ ವಿವೇಕವನ್ನುಂಟುಮಾಡಿತು. ಇಂತಾ ವ್ಯಕ್ತಿಯು ಯಾತಕ್ಕೆ ಸಾಮಾನ್ಯವಾಗಿ ಎಲ್ಲರಲ್ಲಿಯೂ ನೆಲೆಗೊಳ್ಳುವದಿಲ್ಲವು?

ಎಡಿಟರ್.—ದೋಷ ಲೇಶಸಂಬಂಧವೂ ಯಿಲ್ಲದೆ ಸರ್ವಗುಣ ಸಂಪತ್ತಿಯುಳ್ಳವಿಷಯವು ಈ ಪ್ರಪಂಚದಲ್ಲಿ ಬಹಳ ದುರ್ಲಭವಾಗಿರುತಿದೆಂಬದಂ ಯೆಲ್ಲರೂ ಅರಿತೇಯಿದಾರೆ. ಸರ್ವ ಗುಣಾಗುಣ ವಿವೇಚನೆಯಂ ಮಾಡಿ ವರ್ತಿಸುವಂತಾ ಅವಿಗೀತ ವೃತ್ತಿಯುಳ್ಳವರು ಬಹಳ ದುರ್ಲಭರಾದುದರಿಂದ ತಾದೃಶ ಗುಣಗಳು ಎಲ್ಲರಿಗೂ ಲಭಿಸಬೇಕೆಂದರೆ ಹ್ಯಾಗೆ ಸಾಧ್ಯವಾಗುವದು. ಯಾವದೋ ಒಂದು ಜನ್ಮಾಂತರ ಪುಣ್ಯ ಪರಿಪಾಕದಿಂ ಏತದ್ವಿಧವಾದ ಮಹತ್ಪದವಿಯು ಪ್ರಾಪ್ತವಾದವಾಪ್ರದಿಂದಲೇ ಮೇಲೆಕಂಡ ಗುಣಗಳೆಲ್ಲವಂ ಆಸ್ಥಾನದಲ್ಲಿ ನಿರೀಕ್ಷಿಸಿ ತತ್ಪ್ರಯುಕ್ತವಾದ ಫಲನಿರೀಕ್ಷಣೆಯಂ ಮಾಡುವದು ಕೇವಲ ನಮ್ಮ ಅವಿವೇಕವಂದೆಣಿಸುತ್ತೇವೆ. ಇನ್ನುನಾವು ಉದ್ದಿಷ್ಟ ವಿಷಯಾಭಿಮುಖರಾಗುವದುಒಳ್ಳೇದು.

Occasional Notes.
ನೈಮಿತ್ತಿಕ ವಿಷಯನ್ಯಾಸ.

The Resident of Cashmere—ಕಾಶ್ಮೀರ ಸಂಸ್ಥಾನದ ರೆಸಿಡೆಂಟರಾದ ಕರ್ನಲ್ ನಿಸ್ಬೆಟಿಯವರ ದೇಹಸೌಖ್ಯದಲ್ಲಿ ಬಹಳ ಕೊರತೆಯುಂಟಾಗಿದೆಯೆಂದು ಸಿವಿಲ್ ವ ಮಿಲಿಟರಿ ಗೆಜೆಟ್ ಪತ್ರಿಕೆತಿಳಿಸುತಿದೆ.

Hydrophobia—ಈಚೆಗೆ ಯೆಂದುದಿನ ಸಿರೆಹಾರ್ದ್ವೀಪದೊಳಗಣ ಗ್ವಾಲಿಯೆಂಬ ಪ್ರದೇಶದೊಳು ಸುಮಾರ್ ೩೦ ಮಂದಿಯನ್ನು ಹುಚ್ಚುನಾಯಿ ಕಚ್ಚಿತು. ಶ್ವಾನವಿಷ ಚಿಕಿತ್ಸೆಯಲ್ಲಿ ಅತಿಚತುರಳೆನಿಸಿರ್ದ ಸಿಂಗಳಜಾತಿ ಹೆಂಗಸೊಬ್ಬಳು ಅವರೆಲ್ಲರಿಗೂ ಔಷಧಕೊಟ್ಟು ಚಿಕಿತ್ಸೆಮಾಡುತಲಿದಾಳಂತೆ.

A railway hospital.—ನಿಜಾಂ ಸರ್ಕಾರದ ರೆಯಿಲ್‌ರಸ್ತೆಯೂ ಬಳ್ಳಾರಿ ಕೃಷ್ಣಾ ರೆಯಿಲ್ ರಸ್ತೆಯೂ ಬೆಜವಾಡದಲ್ಲಿ ಸಂಧಿಸುತದೆಯಾಗಿ ಅಲ್ಲಿಯೊಂದು ರೆಯಿಲ್ವೆ ಆಸ್ಪತ್ರೆಯಂ ಸ್ಥಾಪಿಸುವದಾವಶ್ಯಕವೆಂದು ಕಂಡುಬಂದು ಅದರ ಕಟ್ಟಡಗಳಬಗ್ಯೆ ಬೇಕಾದ ಜಮೀನನ್ನು ಪಡೆಯತಕ್ಕದ್ದೆಂದು ಮದರಾಸ್ ಗವರ್ನಮೆಂಟನವರು ಹುಕುಂಮಾಡಿರುತ್ತಾರೆ

The retirement rule.—ಐವತ್ತೈದು ವರ್ಷಗಳ ವಯಸ್ಸಾದಮೇಲೆ ನೌಕರಿಯಿಂದ ನಿವೃತ್ತರಾಗಬೇಕೆಂದು ವಿಧಿಸುವ ನಿಬಂಧನೆಯು ಈಸ್ಟಿಂಡಿಯನ್ ರೆಯಿಲ್ವೇ ಇಲಾಖೆಯಲ್ಲಿ ಕೂಡಲೇ ಜಾರೀಯೊಳು ತರಲ್ಪಡುವದಾಗಿರುವದರಿಂದ ಸದರೀ ಇಲಾಖೆಯೊಳು ಬಹುಕಾಲದಿಂದಲು ನೌಕರಿಯೊಳಿರುವಂತವರನೇಕರು ನೌಕರಿಗಳಂ ಬಿಡಬೇಕಾಗುವದು.

Change of faith—ಕಚ್ ಬೇಹಾರಿನಲ್ಲಿ ಮುಸಲ್ಮಾನರು ಕೆಲವರು ಬ್ರಹ್ಮಸಮಾಜಕ್ಕೆ ಸೇರಿರುವವಲ್ಲದೆ ತಮ್ಮಗ್ರಾಮದೊಳು ಒಂದು [illegible] ಸಮಾಜವಂ ಸ್ಥಾಪಿಸಿರುತ್ತಾರೆ. ಕಚ್ ಬೆಹಾರಿನಲ್ಲಿರುವ ಬ್ರಹ್ಮಸಮಾಜಕ್ಕೆ ಸೇರಿದ ಬಂಗಾಳೀ ದೇಶದ ಮತಬೋಧಕನೊಬ್ಬನಿಗೆ ಸದರೀ ಮುಸಲ್ಮಾನಜನರು ತಮ್ಮ ಮುಲ್ಲಾವಿಗೆ ತೋರಿಸುವ ಭಕ್ತಿ ಗೌರವಗಳಂ ತೋರಿಸುತಲಿದಾರೆ.

A wonderful escape.—ಈಚೆಗೆ ಕೆಲವು ದಿನಗಳಹಿಂದೆ ಈಸ್ಟರ್ನ್ ಬೆಂಗಾಲ್ ರೆಯಿಲ್ವೆ [illegible]ರ್ಗದೊಳು ಗಾಡಿಹೋಗುತ್ತಿರುವಲ್ಲಿ ರಸ್ತೆಯಲ್ಲಿ ಯೆರಡು ಕಬ್ಬಿಣಕಂಬಿ ಮಧ್ಯೆಯೊಂದು ಮಗು ಮಲಗಿದ್ದದಂ ಗಾಡಿ ನಡೆಸುವವನು ದೂರದಿಂದ ನೋಡಿ ಗಾಡಿಯನ್ನು ನಿಲ್ಲಿಸುವದಕ್ಕೆಪ್ರಯತ್ನಪಟ್ಟನು. ಪರಂತು ಸಾಧ್ಯವಾಗದೆ ಗಾಡಿಹೊರಟು ಹೋಯಿತು. ಮಲಗಿದ್ದ ಮಗುವಿಗೆ ಯಾವಭಾಗದಲ್ಲೂ ತೊಂದರೆಯುಂಟಾಗಲಿಲ್ಲವೆಂದು [illegible]ಗ್ಯರೆಉತ್ತರದೇಶದಪತ್ರಿಕೆಯೊಂದುತಿಳಿಸುತಿದೆ.

ನೋಟೀಸ್.

ಈ ಪತ್ರಿಕೆಯ ಚಂದಾದಾರರುಗಳಿಗೆ ಇದರಿಂದ ಆಖೈರಾಗಿ ಪ್ರಕಟಪಡಿಸುವದೇನಂದರೆ,—

ಚಂದಾದಾರರೆಲ್ಲರು ಅವರವರ ಚಂದಾ ಹಣಗಳನ್ನು ಮುಂಗಡವಾಗಿ ಕಳುಹಿಸಿಕೊಡಬೇಕೆಂದು ಈ ಸಂವತ್ಸರದ ಪ್ರಾರಂಭ ಮೊದಲು ಆಗಿಂದಾಗ್ಯೆ ಈ ಪತ್ರಿಕೆಯಲ್ಲಿ ಪ್ರಕಟನೆಯ ಮೂಲಕವಾಗಿ ತಿಳಿಸುತಲಿದ್ದಾಗ್ಯೂ ಅನೇಕರು ಅದಕ್ಕೆ ನಿಗಾ ಕೊಡದೆ ಮೌನವನ್ನವಲಂಬಿಸಿರುತ್ತಾರಾಗಿ ಅಂತಹರೆಲ್ಲರಿಗೂ ನಾವು ಮರಳಿ ತಿಳಿಸುವದೇನಂದರೆ,— ಬಾಕೀದಾರರೆಲ್ಲರಿಗೂ ಅವರವರ ಬಾಕಿ ತಪ್ಸೀಲನ್ನು ಪೋಸ್ಟ್‌ಕಾರ್ಡ್ ಮೂಲಕ ಈ ವಾರದಲ್ಲಿ ತಿಳಿಸುವೆವು. ಅದು ತಲಪಿದ ಕೂಡಲೇ ಅದರಲ್ಲಿ ನಮೂದಿರುವ ಬಾಕೀ ಹಣಗಳನ್ನು ಕಳುಹಿಸಿಕೊಡಬೇಕು. ಹಾಗೆ ಮಾಡಲು ಉಪೇಕ್ಷಿಸಿದವರ ಪತ್ರಿಕೆ ಕೂಡಲೇ ನಿಲ್ಲಿಸಲ್ಪಟ್ಟು ಬಾಕೀ ವಸೂಲೀವಿಷಯದಲ್ಲಿ ತಕ್ಕ ತರದೂದು ನಡೆಸಲ್ಪಡುವದು. ಚಂದಾ ಹಣವಸೂಲಿಲ್ಲದೆ ಪತ್ರಿಕೆಯನ್ನು ನಡೆಸುವದು ಸುತರಾಂ ಅಸಾಧ್ಯವಾದ ಕೆಲಸವೆಂದು ನಮ್ಮ ಚಂದಾದಾರರು ಖಂಡಿತವಾಗಿ ತಿಳಿಯಬಹುದು. ಕೂಡಲೇ ಬಾಕೀದಾರರೆಲ್ಲ ಇದಕ್ಕೆ ಅವಧಾನ ಕೊಡಬೇಕೆಂದು ಮತ್ತೊಂದಾವರ್ತಿ ಪ್ರಾರ್ಥಿಸುವೆವು.

ಬೆಂಗಳೂರು,
ತಾ ೨೨ ನೇ ಜೂಲೈ
೧೮೯೦ } ಪ್ರೊಪ್ರೈಟರ್ ಕರ್ನಾಟಕ ಪ್ರಕಾಶಿಕಾ.

LOCAL AND PROVINCIAL NEWS.
ಸ್ಥಳೀಯ ಮತ್ತು ಪ್ರಾಂತ್ಯಗಳ ಸಮಾಚಾರ ವೃತ್ತಾಂತಗಳು

His Highness the Maharaja.— ಘನವುಳ್ಳ ಶ್ರೀಮನ್ಮಹಾರಾಜರವರು ನಿನ್ನೆಯ ದಿನ ಮಧ್ಯಾನ್ಹ ೧ ಘಂಟೆ ೪೫ ನಿಮಿಷಕ್ಕೆ ಮೈಸೂರು ಟ್ರೈನಿನಲ್ಲಿ ಮೈಸೂರಿಗೆ ದಯಮಾಡಿದರೆಂದು ತಿಳಿಯಬರುತಿದೆ. ಹೀಗೆ ಏಕಾಏಕಿ ಪ್ರಯಾಣ ಮಾಡುವದಕ್ಕುಂಟಾದ ಕಾರಣ ಗೊತ್ತಾಗಲಿಲ್ಲವು.

The Civil Court of Mysore.— ಹಿಂದೆ ನಾವು ತಿಳಿಸಿದ್ದ ಪ್ರಕಾರ ಮೈಸೂರು ಡಿಸ್ಟ್ರಿಕ್ಟಿಗೆ ಸಂಬಂಧಿಸಿದ ಸಿವಿಲ್ ಕೋರ್ಟುಗಳೆಲ್ಲವೂ ಆ ಊರಿನಲ್ಲಿ ಹೊಸದಾಗಿ ಕಟ್ಟಲ್ಪಟ್ಟಿರುವ ಹೊಸ ಕಟ್ಟಡಕ್ಕೆ ಈ ತಿಂಗಳ ೧೭ನೇ ತಾರೀಖಿನಲ್ಲಿ ವರ್ಗ ಮಾಡಲ್ಪಟ್ಟವೆಂತಲೂ ಸದರೀ ಕೋರ್ಟುಗಳಿಗೆ ಅಲ್ಲಿನ ಸ್ಥಳವು ಸರಿಹೋಗದಂತೆಯೂ ಊರಿನಿಂದ ಹೋಗುವದಾಗಿ ವ್ಯವಹಾರವಾಗಿರುವ ಲಾಯರುಗಳಿಗೆ ಸುತರಾಂ ಸ್ವಲ್ಪ ಅನಾನುಕೂಲತೆಯಾಗುತ್ತೇವೆ. ಇದರಿಂದ ಯೋಗ್ಯವಾಗಿ ಬೇರೆ ಕಟ್ಟಡಗಳನ್ನು ಕಟ್ಟುವ ಆಲೋಚನೆ ಸಹ ಪ್ರಭುಗಳಿಗಿರುವಂತೆ ತಿಳಿಯಬರುತಿದೆ.

Obituary.— ಈ ಊರಿನಲ್ಲಿರುವ ಅಡ್ವೊಕೇಟುಗಳಲ್ಲೊಬ್ಬರಾಗಿಯೂ, ಮಹರ್ ಮ್ಯುನಿಸಿಪಲ್ ಕಮ್ಮಿಷನರುಗಳಲ್ಲೊಬ್ಬರಾಗಿಯೂ ಬಹಳ ಮಂದಿಗೆ ಪರಿಚಿತರಾಗಿಯೂ ಕೇವಲ ಸಮರ್ಥರಾಗಿಯೂ ಇದ್ದ ಮ॥ ರಾ॥ ಬಿ. ಗಿರಿರಾಯಮಂಗಲಿಯಾರ್ರವರು ಈಗ್ಯೆ ಸ್ವಲ್ಪ ದಿನಗಳಿಂದ ಕಾಹಿಲೆಯಾಗಿದ್ದು ಮಾಹೇ ಮಜಕೂರ್ ೨೧ ನೇ ತಾರೀಖು ಸೋಮವಾರದ ದಿನ ಈ ಊರಿನಲ್ಲೇ ಕಾಲಗತಿಯನ್ನೈದಿದರೆಂಬದು ತಿಳಿಸಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಇವರು ಬಹಳ ದಿವಸ ಮೊದಲು ವಕೀಲರಾಗಿರುತ ಕಕ್ಷಿಗಾರರ ಪ್ರೀತಿಗೌರವ ನಂಬಿಕೆಗಳಿಗೆ ಪಾತ್ರರಾಗಿರುತಲಿದ್ದುದರಿಂದ ಇವರ ಮರಣವು ವಿಷಾದಿಸತಕ್ಕದ್ದಾಗಿರುತಿದೆ. ಇವರಿಗೆ ಗತಿಸುವಾಗ್ಯೆ ಸುಮಾರ್ ೪೫ ವರುಷಗಳಾಗಿತೆಂದು ಶಾಸ್ತ್ರಿಯಾಗಿ ಬಯಸುದೆಂದು ಹೇಳುತ್ತೇವೆ.

The races.— ಈ ಸಲದ ಕುದುರೇ ಪಂದ್ಯಗಳು ಪ್ರಾರಂಭಿಸಲ್ಪಟ್ಟು ಇದುವರಿವಿಗೆ ೩ ದಿನಗಳು ದಿನ ಬಿಟ್ಟು ದಿನ ಜರಿಗಿದವು. ಪ್ರತಿ ದಫೆಯಲ್ಲಿಯೂ ಜನಗಳು ಘಾಳಿಯನ್ನೂ ಜನಸಮ್ಮರ್ದವನ್ನೂ ಕದಾಚಿತ್ ಮಳೆಯನ್ನು ಸಹ ಸಡ್ಡೆಗೈಯ್ಯದೆ ಅವರವರಿಗೆ ತಕ್ಕ ಅಂತಸ್ತುಗಳೊಡನೆ ಬಹುಜನ ಹೋಗಿ ಬರುತಲಿದ್ದಾರೆ. ಈ ಸಲದ ಪಂದ್ಯಗಳಲ್ಲಿ ಮ॥ ದಳವಾಯಿ ದೇವರಾಜೇ ಅರಸಿನವರ ಕುದುರೆ ಯೊಂದೂ ಅವರ ತಮ್ಮಂದಿರ ಕುದುರೆ ಯೊಂದೂ ಗೆದ್ದದರಿಂದ ಮೊದಲನೆಯವರಿಗೆ ೫,೦೦೦ ರೂಪಾಯಿಗಳ ಇನಾಮೂ, ಎರಡನೆಯವರಿಗೆ ೧,೦೦೦ ರೂಪಾಯಿಗಳೂ ಇನಾಮು ಬಂದಂತೆ ತಿಳಿಯಬಂದಿವೆ. ಇನ್ನೂ ಎರಡು ದಿನಗಳು ಪಂತಗಳು ನಡೆಯುವವು. ದಿವಾನ್ ಮ॥ ಕೆ. ಶೇಷಾದ್ರಿ ಅಯ್ಯರವರು ಸಹ ಸ್ವಂತವಾಗಿ ೧,೦೦೦ ರೂಪಾಯಿಗಳು ಇನಾಮಾಗಿ ಕೊಟ್ಟರೆಂತಲೂ, ಸದರೀ ಇನಾಂ ಮ॥ ಘೋರ್‌ಮರ್ ಯೆಂಬವರಿಗೆ ಬಂತೆಂತಲೂ ತಿಳಿಯಬರುತಿದೆ.

The Namakaranam ceremony.— ಆಷೇ ಶನಿವಾರದ ದಿನ ಶ್ರೀಮನ್ಮಹಾರಾಜರವರ ತೃತೀಯ ಪುತ್ರನವರಿಗೆ ನಾಮಕರಣೋತ್ಸವವು ಮೈಸೂರಲ್ಲಿ ರಾಜ ಗೌರವಾನುಗುಣವಾಗಿ ನೆರವೇರಿಸಿತೆಂಬೂ ಮಹಾರಾಜರವರು ತಮ್ಮ ಗುರುಸಾನ್ನಿಧ್ಯದಲ್ಲಿ ನಾಮೋಚ್ಚಾರಣವನ್ನು ತಮ್ಮ ಪುತ್ರರಿಗೆ ರಾಜ ಒಡೆಯರೆಂಬದಾಗಿ ನಾಮಕರಣವು ಮಾಡಿದರೆಂಬದಾಗಿಯೂ ತಿಳಿಯಬರುತಿದೆ. ಆಕಾಲದಲ್ಲಿ ಬಂದಿದ್ದವರಿಗೆಲ್ಲರಿಗೂ ಗೌರವಾನುಗುಣವಾಗಿ ಅರಮನೆ ಮೊದಲಾದ ಸಾವಿರಾರು ರೂಪಾಯಿಗಳ ಬೆಲೆಯ ಸವರ್ನಗಳಾಗಿಯೂ ರೂಪಾಯಿಗಳಾಗಿಯೂ ಬಹುಮಾನ ಕೊಡಲ್ಪಟ್ಟಿತೆಂತಲೂ, ಆ ನಗರದ ೧೨ ದಿನ ನಿತ್ಯ ಹರ್ಷದಾಯಕವಾದ ಪ್ರದೇಶಗಳಲ್ಲಿ ವಿಪ್ರರಿಗೆ ಸಮಾರಾಧನೆ ನಡೆಸಲ್ಪಟ್ಟಿತೆಂತಲೂ ಈ ಸಂತೋಷ ಸೂಚಕವಾದ ಮಹೋತ್ಸವದ ಜನನ ಗೌರವಾರ್ಥವಾಗಿ ಈ ಸಂಸ್ಥಾನದ ಬಂದೀಖಾನೆಗಳಲ್ಲಿ ಸಜಾ ಅನುಭವಿಸುತ ಈ ಸಂಪ್ರದಾಯದ ವಿದ್ಯೆ ಇಗೆ ವಾಯಿದೆ ಮುಗಿಯತಕ್ಕ ಖೈದಿಗಳೆಲ್ಲರನ್ನು ಬಿಡುಗಡೆ ಮಾಡಿಸಿದರೆಂತಲೂ, ಈ ಜಾತಕರ್ಮ ನಾಮಕರಣ ಮಹೋತ್ಸವಕ್ಕಾಗಿ ಸುಮಾರ್ ೪೦ ಸಾವಿರ ರೂಪಾಯಿಗಳ ವರಿವಿಗೆ ಖರ್ಚಾಗಿರಬಹುದೆಂದು ಅಂದಾಜಾಗಿರುತಿದೆಂತಲೂ ಕೇಳಿ ಸಂತೋಷಿಸುವೆವು.

The weather.— ಸಕಲಭಾಗದಲ್ಲಿಯೂ ಕಾಲಸ್ಥಿತಿಯು ಜನಗಳಿಗೆ ಪ್ರತಿಕೂಲವಾಗಿಯೂ ಚಿಂತನೀಯವಾಗಿಯೂ ಇರುತದೆ. ಡಿಸ್ಟ್ರಿಕ್ಟುಗಳಿಂದ ಬರುವ ವೃತ್ತಾಂತಗಳು ನೋಡಲಾಗಿ ಸುತರಾಂ ತೃಪ್ತಿಕರವಾಗಿರುವದಿಲ್ಲವು. ಸರ್ವತ್ರ ವರ್ಷಾಪೇಕ್ಷೆಯು ಅತ್ಯಧಿಕವಾಗಿದೆ. ಸರ್ಕಾರಿಯಾಗಿ ಹೊರಡುವ ರಿಪೋರ್ಟನ್ನು ಕಾಲಸ್ಥಿತಿಯು ಧೈರ್ಯವನ್ನುಂಟುಮಾಡತಕ್ಕದ್ದಾಗಿದ್ದರೂ ಪ್ರತ್ಯೇಕವಾಗಿ ಬರುವ ಸ್ವಂತಕಾಗದಗಳು ನೋಡುವಲ್ಲಿ ಹೊಡೆಯನೆಂದು ನಂಬಿಕೊಡದ್ದಾಗಿದೆ. ಪರಂತು ಸರ್ಕಾರೀ ಎಂಬ ಶಬ್ದಮಾತ್ರದಿಂದ ಬೇಕಾದರೆ ಅದು ಗೌರವಿಸಬಹುದು. ಇದಕ್ಕೆ ದೃಷ್ಟಾಂತವಾಗಿ ಸರ್ಕಾರೀ ರಿಪೋರ್ಟಿನೊಳು ಹಾಸನ ಕಡೂರು ವಗೈರೆ ಡಿಸ್ಟ್ರಿಕ್ಟುಗಳಲ್ಲಿ ಬೆಳೆದಿರುವ ಪೈರುಗಳು ಬಹಳ ಚೆನ್ನಾಗಿರುವಂತೆಯೂ ಕಾಲಸ್ಥಿತಿ ಅನುಕೂಲವಾಗಿರುವಂತೆಯೂ ಬರೆಯಲ್ಪಟ್ಟಿರುತಿದೆ. ಇದೇ ಡಿಸ್ಟ್ರಿಕ್ಟಿನ ಸ್ಥಿತಿಯನ್ನು ೧೨ನೇ ಮಾಹೇ ಮಜಕೂರ್ ೨೩ ನೇ ತಾರೀಖು ಬಂದ ಪತ್ರಿಕೆಯು ತಿಳಿಸುತದೇನಂದರೆ,— ಹಾಸನ ಪ್ರಾಂತದಲ್ಲಿ ಸುತರಾಂ ಮಳೆಯಿಲ್ಲದೆ ಇರುವದರಿಂದ ಮುಂಗಾರಿನಲ್ಲಿ ಬಿತ್ತಿದ್ದ ಬೆಳೆಗಳೆಲ್ಲವೂ ಒಣಗುತಲಿವೆ. ಈ ಕಾರಣದಿಂದ ಆ ಪ್ರಾಂತದ ನಿವಾಸಿಗಳು ಘಾಲ್ಗುಣ ಶುದ್ಧ ಪೌರ್ಣಮೀ ದಿನ ಮಾಡತಕ್ಕ ಕಾಮನಹಬ್ಬವನ್ನು ಈಗಲೇ ಮಾಡಲು ಪ್ರಾರಂಭಿಸಿರುತಾರೆ" ಎಂಬದು. ಹೀಗೆಯೇ ಈ ಥಾದೃಶವ ವಸ್ತುಸ್ಥಿತಿ ತಿಳಿಯುವ ಪಕ್ಷಕ್ಕೆ ಹಾಸನ ಪ್ರಾಂತಗಳಿಗೆ ಸಹಾಯಕರಾಗಿ ಮಿಕ್ಕ ಡಿಸ್ಟ್ರಿಕ್ಟಿನವರೂ ಸೇರಬೇಕಾಗಿರುವದೆಂಬದರಲ್ಲಿ ಸ್ವಲ್ಪವಾತ್ರವೂ ಸಂಶಯವಿರಲಾರದು.

Mr. C. G. Plumer.— ಚೀಫ್ ಕೋರ್ಟ್ ಚೀಫ್‌ಜಡ್ಜಿಯವರಾಗಿದ್ದು ಈಗ ರಜಾ ಪಡೆದು ಊರಿನಲ್ಲಿಯೇ ಇರುವ ಮ॥ ಸಿ. ಜಿ. ಪ್ಲ್ಯುಮರ್ ಯವರು ಅನಿರೀಕ್ಷಿತವಾಗಿ ತಮ್ಮ ಕೆಲಸವಂ ಬಿಟ್ಟ ಅಂಶವು ಅನೇಕರಿಗೆ ಅನೇಕವಿಧ ಶಂಕೆಗಳಿಗೆ ಕಾರಣವಾಗಿದೆಯೆಂದು ಹಿಂದಿನ ಪತ್ರಿಕೆಯಲ್ಲಿ ತಿಳಿಸಿದ್ದೆವಷ್ಟೆ. ಈ ಬಗ್ಗೆ ಉಂಟಾಗಿರುವ ಪ್ರವಾದರೀತ್ಯಾ ಮ॥ ಪ್ಲ್ಯುಮರ್ ಯವರ ಅಸಮಾಧಾನ ಪ್ರಯುಕ್ತವಾದ ಕಾರಣವು ಶ್ರೀಮನ್ಮಹಾರಾಜರಿಂದ ನಿವೃತ್ತಿಸಲ್ಪಟ್ಟಂತೆಯೂ ಅವರ ಆಜ್ಞಾನುಸಾರ ಮ॥ ಪ್ಲ್ಯುಮರ್ ಯವರು ಕ್ಷಿಪ್ರದಲ್ಲೇ ತಮ್ಮ ಕೆಲಸದ ಚಾರ್ಜನ್ನು ತೆಗೆದು ಕೊಳ್ಳುವರೆಂತಲೂ ತಿಳಿಯಬರುತಿದೆ. ಇದೊಂದು ವೇಳೆ ನಿಜವಾಗಿ ಪರಿಣಮಿಸುವ ಪಕ್ಷಕ್ಕೆ ಈ ವಿಷಯದಲ್ಲಿ ಜನಗಳಿಂದ ಮಾಡಲ್ಪಟ್ಟ ವಿಚಾರವೆಲ್ಲವು ಕೇವಲ ವಾಗಾಡಂಬರ ರೂಪವಾಗಿ ಪರಿಣಮಿಸುವಂತಾಗುವದು. ಈ ಕೆಲಸವನ್ನು ಭರ್ತಿಮಾಡಬೇಕಾದ ವಿಷಯದಲ್ಲಿ ಭಿನ್ನಾಭಿಪ್ರಾಯಗಳುಂಟಾಗಿರುತಿವೆ.

THE MYSORE GAZETTE
ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜರವರ ಸರ್ಕಾರದಿಂದ ಹೊರಡಿಸಿದ ಇಸ್ತಿಹಾರುಗಳು.

ನಂ. ೧೪೯—ತಾ॥ ೧೮ನೇ ಜೂಲೈ ೧೮೯೦—ಸರ್ಕಾರ್ ೧೮೯೦ನೇ ಇಸವಿಯ ೧ನೇ ರೆಗ್ಯುಲೇಷನ್ ಮೂಲಕ ತಿದ್ದುಪಡಿಯಾದ ೧೮೭೧ನೇ ಇಸವಿಯ ಮ್ಯುನಿಸಿಪಲ್ ರೆಗ್ಯುಲೇಷನ್‌ಗಳ ೧೧ (೨) ನೇ ಸೆಕ್ಷನ್ ಪ್ರಕಾರ ಶ್ರೀಮನ್ಮಹಾರಾಜಾ ಸರ್ಕಾರದವರು, ಮ॥ ಪಿ ಎಸ್. ರಾಘವಾಚಾರ್ಯರವರನ್ನು ತತ್ಕಾಲದಲ್ಲಿ ಬೆಂಗಳೂರ್ ಷಹರ್ ಮ್ಯುನಿಸಿಪಲ್ ಕಮ್ಮಿಷನಿನ ವೈಸ್ ಪ್ರೆಸಿಡೆಂಟರಾಗಿ ನೇಮಕ ಮಾಡಿರುತ್ತಾರೆ.

ನಂ. ೧೫೦—ತಾ॥ ೧೯ನೇ ಜೂಲೈ ೧೮೯೦.— ರೆವಿನ್ಯೂ ಸರ್ವೆ ಪ್ರೊಬೇಷನರ್ ಮ॥ ಕೆ. ಶ್ರೀನಿವಾಸರಾಯರವರು ಮ॥ ಜೆ. ಎಲ್ ಸಾಕೆಯವರು ೩ ತಿಂಗಳ ಪ್ರಿವಿಲೇಜ್ ರಜಾ ಮೇಲೆ ಗೈರಹಾಜರಾಗಿರುವ ಕಾಲದಲ್ಲಿ ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟರವರ ಹೆಡ್‌ಕ್ವಾರ್ಟರ್ ಆಫೀಸ್ ಚಾರ್ಜಿನಲ್ಲಿರತಕ್ಕದ್ದು.

ನಂ. ೧೫೧—ಬಾಗೇಪಲ್ಲಿ ತಾಲ್ಲೂಕ್ ಅಮಲ್ದಾರ್ ಪಿ ಸೀತಾರಾಮಯ್ಯನವರಿಗೆ ೧೮೯೦ನೇ ಇಸವಿ ಜೂನ್ ೧೨ನೇ ಮಾರ್ಚ್ ೩೧ನೇ ನಂಬರಿನ ಇಸ್ತಿಹಾರ್‌ನಾಮೆಯ ಮೂಲಕ ಮೆಡಿಕಲ್ ಸರ್ಟಿಫಿಕೇಟಿನಮೇರೆ ಕೊಡಲ್ಪಟ್ಟದ್ದ ಮೂರು ತಿಂಗಳ ರಜಾ ಇದರಿಂದ ಇನ್ನೊಂದು ತಿಂಗಳ ತನಕ ಜಾಸ್ತೀ ಮಾಡಲ್ಪಟ್ಟಿರುತದೆ. ಸೀತಾರಾಮಯ್ಯನವರ ಗೈರ್‌ಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಗುಡಿಬಂಡೆಯ ಡೆಪ್ಯುಟಿ ಅಮಲ್ದಾರ್ ಗುಲಾಂ ಮೊಹಿದ್ದೀನ್ ಯವರು ಬಾಗೇಪಲ್ಲಿ ತಾಲ್ಲೂಕ್ ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ನೇಮಕ ಮಾಡಲ್ಪಟ್ಟಿರುತ್ತಾರೆ. ಚಿಕ್ಕಬಳ್ಳಾಪುರದ ತಾಲ್ಲೂಕ್ ಶಿರಸ್ತೇದಾರ್ ಎಸ್ ಶಾಮರಾಯರವರು ಗುಲಾಂ ಮೊಹಿದ್ದೀನ್ಯವರಿಗೆ ಬದಲಾಗಿ ಗುಡಿಬಂಡೆ ಡೆಪ್ಯುಟಿ ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸನೋಡುವಂತೆ ನೇಮಕ ಮಾಡಲ್ಪಟ್ಟಿರುತ್ತಾರೆ.

ನಂ. ೧೫೨. ತಾ॥ ೧೮ನೇ ಜೂಲೈ ೧೮೯೦— ತುಮಕೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮ್ಮಿಷನರ್ ಮ॥ ಪಿ. ಪಂಚನದರಾಯರವರಿಗೆ ಮಾಹೇ ಮಜಕೂರ್ ೨೧ನೇ ತಾರೀಖ್ ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ಎರಡು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ

ನಂ. ೧೫೩—ಹುಣಸೂರು ತಾಲ್ಲೂಕ್ ಅಮಲ್ದಾರ್ ಟಿ. ಎಚ್. ಮಿಯರ್ ಕಮಾಲುದ್ದೀನ್ ಅಲ್ಲೀಖಾನರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ೨೦ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ. ತಾಲ್ಲೂಕ್ ಶಿರಸ್ತೇದಾರ್ ಕೃಷ್ಣಪ್ಪನವರು, ಟಿ. ಎಚ್. ಮಿಯರ್ ಕಮಾಲುದ್ದೀನ್ ಅಲ್ಲೀಖಾನರು ರಜಾಮೇಲೆ ಗೈರ್ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಹುಣಸೂರು ತಾಲ್ಲೂಕ್ ಅಮಲ್ದಾರ್ ವ ಮೂರನೇ ಕ್ಲಾಸ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ನೇಮಕ ಮಾಡಲ್ಪಟ್ಟಿರುತ್ತಾರೆ.

ನಂ. ೧೫೪—ತಾ॥ ೧೯ ನೇ ಜೂಲೈ ೧೮೯೦ ಮ॥ ಸಿ. ಮಾದಯ್ಯನವರು ಹಾಸನ ಡಿಸ್ಟ್ರಿಕ್ಟ ನ ಟ್ರೆಜರಿ ಚಾರ್ಜನ್ನು ೧೮೯೦ನೇ ಇಸವಿ ಜೂಲೈ ೮ ನೇ ಮರ್ಚಂ ಪೂರ್ವಾನ್ಹದಲ್ಲಿ ಮ॥ ಪಿ. ಎಚ್. ಪೂರ್ಣಯ್ಯನವರಿಗೊಪ್ಪಿಸಿರುತ್ತಾರೆ.

ನಂ. ೧೫೫—ಮ॥ ಎಸ್. ಹೇಮಾಜಿ ರಾಯರವರು ಚೀಫ್‌ಕೋರ್ಟ್ ರಿಜಿಸ್ಟ್ರಾರ್ ಕೆಲಸದ ಚಾರ್ಜನ್ನು ೧೮೯೦ ನೇ ಇಸವಿ ಜೂಲೈ ೧೮ ನೇ ಮರ್ಚಂ ದಿನ ಅಪರಾಹ್ನದಲ್ಲಿ ಮ॥ ಎಸ್. ಆರ್. ಸುಬ್ಬರಾಯ ಅಯ್ಯರವರಿಗೊಪ್ಪಿಸಿರುತ್ತಾರೆ.

ನಂ. ೧೫೬—ಮಳವಳ್ಳಿ ತಾಲ್ಲೂಕ್ ಅಮಲ್ದಾರ್ ಎಂ. ರಾಮಸ್ವಾಮಿ ಅಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ೧೫ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ. ತಾಲ್ಲೂಕ್ ಶಿರಸ್ತೇದಾರ್ ಸುಬ್ಬಣ್ಣನವರು ಎಂ. ರಾಮಸ್ವಾಮಿ ಅಯ್ಯರವರ ಗೈರ್ಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಮಳವಳ್ಳಿ ತಾಲ್ಲೂಕ್ ಅಮಲ್ದಾರ್ ವ ಮೂರನೇ ಕ್ಲಾಸ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ನೇಮಕ ಮಾಡಲ್ಪಟ್ಟಿರುತ್ತಾರೆ.

ನಂ. ೧೫೭.—ಮದರಾಸ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಶಾಸ್ತ್ರಾಭ್ಯಾಸ ಮಾಡುತಲಿದ್ದ ಇದಡಿ ಕಂಡ ವಿದ್ಯಾರ್ಥಿಗಳು ಸದರೀ ಕಾಲೇಜಿನಿಂದ ೩ ನೇ ಕ್ಲಾಸ್ ಆಸ್ಪತ್ರೆ ಅಸಿಸ್ಟೆಂಟರಾಗಿ ದಲಿಕ್ಕೆ ಲಾಯಖ್ ಸರ್ಟಿಫಿಕೇಟನ್ನು ಪಡೆದದ್ದರಿಂದ ೧೮೯೦ ನೇ ಇಸವಿ ಜೂನ್ ೨೮ ನೇ ತಾರೀಖ್ ಲಾಗಾಯಿತು, ೩ ನೇ ಕ್ಲಾಸ್ ಆಸ್ಪತ್ರೆ ಅಸಿಸ್ಟೆಂಟುಗಳಾಗಿ ನೇಮಕ ಮಾಡಲ್ಪಟ್ಟಿರುತ್ತಾರೆ —ಪಿ. ಎಸ್. ರಾಮಚಂದ್ರ ಅಯ್ಯರ್, ಎಸ್ ಕೃಷ್ಣಸ್ವಾಮಿ ಅಯ್ಯರ್, ಕೆ. ಅಬ್ದುಲ್ ಕುದೂಸ್, ಪಿ. ಲಕ್ಷ್ಮೀಪತಿ, ಎಂ. ಗುಂಡಪ್ಪ.

ನಂ ೧೫೮—ಕೋಲಾರ್ ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟ್ ಮ॥ ಸ. ರಾಘವಾಚಾರ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ಆರುವಾರಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ. ಅಸಿಸ್ಟೆಂಟ್ ಕಮ್ಮಿಷನರ್ ಮ॥ ಕೆ. ರಾಮಾನುಜಯ್ಯಂಗಾರ್ಯರವರು ಮ॥ ರಾಘವಾಚಾರ್ಯರವರ ಗೈರ್‌ಹಾಜರೀ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಮಾಡಲ್ಪಡುವತನಕ ಕೋಲಾರ್ ಡಿಸ್ಟ್ರಿಕ್ಟ್ ಪೊಲೀಸ್ ಇಲಾಖಾ ಇನ್‌ಚಾರ್ಜ್ ಆಫೀಸರಾಗಿ ನೇಮಕ ಮಾಡಲ್ಪಟ್ಟಿರುತ್ತಾರೆ.

ನಂ. ೧೫೯— ಸನ್ ೧೮೮೯ನೇ ಇಸವಿ ಮೇ ೧೦ನೇ ಮರ್ಚಂ ೩೭ನೇ ನಂಬರಿನ ಇಸ್ತಿಹಾರ್ ನಾಮೆಯನ್ನು ರದ್ದು ಮಾಡಿ ಮೈಸೂರು ಬಾರ್ ಇಲಾಖೆಗೆ ಸಂಬಂಧಪಟ್ಟ ನಾನಾ ಹುದ್ದೆಗಳು ಳ್ಳವರಿಗೆಲ್ಲ ಇದಡಿ ಕಂಡಂತೆ ಪಗಾರಗಳ ದರ್ಜೆ ಮರಳಿ ಪರಿಷ್ಕರಿಸಿ ವ್ಯವಸ್ಥೆ ಮಾಡಲ್ಪಟ್ಟಿರುತಿದೆ.—

ಮೂವತ್ತು ವರುಷಗಳ ಕರುವಾಯ ಮೆಡಿಕಲ್ ಸರ್ಟಿಫಿಕೇಟಿನಮೇಲೆ ನಿವೃತ್ತರಾಗತಕ್ಕವರಿಗೆ ಮಾಹೇ ೧೮ ರೂಪಾಯಿ ಕಮಾಂಡೆಂಟುಗಳಿಗೆ ೩೦ ; ರಿಸಾಲ್ದಾರರಿಗೆ ೪೦ ; ಅಡ್ಜುಟಂಟುಗಳಿಗೆ ೨೫ ; ಸುಬೇದಾರರುಗಳಿಗೆ ೧—೨ನೇ ತರಗತಿಗಳವರಿಗೆ ಕ್ರಮವಾಗಿ ೧೫, ೧೨½ ; ಜಮೇದಾರರುಗಳಿಗೆ ೧, ೨ನೇ ತರಗತಿಗಳವರಿಗೆ ಕ್ರಮವಾಗಿ ೮, ೭

ನೋಟೀಸ್.

ಈ ಪತ್ರಿಕೆಯ ಚಂದಾದಾರರುಗಳಿಗೆ ಇದರಿಂದ ಆಪ್ತರಾಗಿ ಪ್ರಕಟಿಸುವದೇನಂದರೆ,—

ಚಂದಾದಾರರೆಲ್ಲರು ಅವರವರ ಚಂದಾ ಹಣಗಳನ್ನು ಮುಂಗಡವಾಗಿ ಕಳುಹಿಸಿ ಕೊಡಬೇಕೆಂದು ಈ ಸಂವತ್ಸರದ ಪ್ರಾರಂಭ ಮೊದಲು ಆಗಿಂದಾಗ್ಯೆ ಈ ಪತ್ರಿಕೆಯಲ್ಲಿ ಪ್ರಕಟನೆಯ ಮೂಲಕವಾಗಿ ತಿಳಿಸುತಲಿದ್ದಾಗ್ಯೂ ಅನೇಕರು ಅದಕ್ಕೆ ನಿಗಾ ಕೊಡದೆ ಮೌನವನ್ನವಲಂಬಿಸಿರುತ್ತಾರಾಗಿ ಅಂತಹವರೆಲ್ಲರಿಗೂ ನಾವು ಮರಳಿ ತಿಳಿಸುವದೇನಂದರೆ,— ಬಾಕೀದಾರರೆಲ್ಲರಿಗೂ ಅವರವರ ಬಾಕಿ ತಪ್ಸೀಲನ್ನು ಪೋಸ್ಟುಕಾರ್ಡು ಮೂಲಕ ಈ ವಾರದಲ್ಲಿ ತಿಳಿಸುವೆವು ಅದು ತಲಪಿದ ಕೂಡಲೇ ಅದರಲ್ಲಿ ನಮೂದಿರುವ ಬಾಕೀ ಹಣಗಳನ್ನು ಕಳುಹಿಸಿಕೊಡಬೇಕು. ಹಾಗೆ ಮಾಡಲು ಉಪೇಕ್ಷಿಸಿದವರ ಪತ್ರಿಕೆ ಕೂಡಲೇ ನಿಲ್ಲಿಸಲ್ಪಟ್ಟು ಬಾಕೀ ವಸೂಲಿ ವಿಷಯದಲ್ಲಿ ತಕ್ಕ ತರದೂದು ನಡೆಸಲ್ಪಡುವದು. ಚಂದಾ ಹಣವಿಲ್ಲದೆ ಪತ್ರಿಕೆಯನ್ನು ನಡೆಸುವದು ಸುತರಾಂ ಅಸಾಧ್ಯವಾದ ಕೆಲಸವಂದು ನಮ್ಮ ಚಂದಾದಾರರು ಬಲ್ಲವರಾಗಿ ತಿಳಿಯುವರು. ಕೂಡಲೇ ಬಾಕೀದಾರರೆಲ್ಲ ಇವಕ್ಕೆ ಅವಧಾನ ಕೊಡಬೇಕೆಂದು ಮತ್ತೊಂದಾವರ್ತಿ ಪ್ರಾರ್ಥಿಸುವೆವು.

ಬೆಂಗಳೂರು,
ತಾ|| ೨೮ ನೇ ಜೂಲೈ
೧೮೯೦

ಶ್ರೀಧರ
ಕರ್ಣಾಟಕ ಪ್ರಕಾಶಿಕಾ.

LOCAL AND PROVINCIAL NEWS.
ಒಳದೇಶದ ಮತ್ತು ತಾಲ್ಲೂಕು ಜಾತಿ ವೃತ್ತಾಂತಗಳು

His Highness the Maharaja.— ಘನವಂತರಾದ ಶ್ರೀಮನ್ಮಹಾರಾಜ ರಾವ್ ಸಾಹೇಬ ಬಹದ್ದೂರರವರು ನಿನ್ನೆಯ ದಿನ ಮಧ್ಯಾಹ್ನ ೧ ಘಂಟೆ ೪೫ ನಿಮಿಷಕ್ಕೆ ಮಯಿಸೂರಿನಿಂದ ಬೆಂಗಳೂರಿಗೆ ದಯಮಾಡಿಸಿದರೆಂದು ತಿಳಿಯಬರುತ್ತದೆ. ಹೀಗೆ ಏಕಾಏಕಿ ಪ್ರಯಾಣ ಮಾಡುವದಕ್ಕೆ ಕಾರಣ ಗೊತ್ತಾಗಲಿಲ್ಲವು.

The Civil Court at Mysore.—ಪೂರ್ವದಲ್ಲಿ ನಾವು ತಿಳಿಸಿದ್ದ ಪ್ರಕಾರ ಮೈಸೂರು ಡಿಸ್ಟ್ರಿಕ್ಟಿಗೆ ಸಂಬಂಧಿಸಿದ ಸಿವಿಲ್ ಕೋರ್ಟುಗಳೆಲ್ಲವೂ ಆ ನಗರದಲ್ಲಿ ಈಚೆಗೆ ಹೊಸದಾಗಿ ಕಟ್ಟಲ್ಪಡುವ ಹೊಸ ಕಟ್ಟಡಕ್ಕೆ ಈ ತಿಂಗಳ ೧೨ನೇ ತಾರೀಖಿನಲ್ಲಿ ವರ್ಗ ಮಾಡಲ್ಪಟ್ಟವೆಂತಲೂ ಸದರೀ ಕೋರ್ಟುಗಳಿಗೆ ಅಲ್ಲಿನ ಸ್ಥಳವು ಸರಿಹೋಗದಂತೆ ಅನಾನುಕೂಲದ ಜಾಗವಾದುದರಿಂದ ವ್ಯವಹಾರಸ್ಥರಾಗಿರುವ ಅರ್ಜಿದಾರರಿಗೆ ಸುತರಾಂ ಸ್ಥಳ ಸಾಲದೆಂತಲೂ ಕೇಳುತ್ತೇವೆ. ಇದರಿಂದ ಹೊಸದಾಗಿ ಬೇರೆ ಕಟ್ಟಡಗಳನ್ನು ಕಟ್ಟುವ ಆಲೋಚನೆ ಸಹ ಪ್ರಾರಂಭಗಳಾಗಿರುವಂತೆ ತಿಳಿಯಬರುತ್ತದೆ.

Obituary.—ಈಮುನ್ನರಲ್ಲಿರುವ ಅಡ್ವೊಕೇಟುಗಳಲ್ಲೊಬ್ಬರಾಗಿಯೂ, ಸದರ್ ಮ್ಯುನಿಸಿಪಲ್ ಕಮಿಷನರುಗಳಲ್ಲೊಬ್ಬರಾಗಿಯೂ ಬಹಳ ಮಂದಿಗೆ ಪರಿಚಿತರಾಗಿಯೂ ಕ್ಷೇಮ ಸಮರ್ಥರಾಗಿಯೂ ಇದ್ದ ಮ|| ರಾ|| ಬೆಂಗಳೂರು ಮದಲಿಯಾರ್ರವರು ಈಗ್ಯೆ ಸ್ವಲ್ಪದಿನಗಳಿಂದ ಕಾಹಿಲೆಯಾಗಿದ್ದು ನಾಮೋಮದಕಲೊ ಎಂಬ ತಾರೀಖು ಸೋಮವಾರದ ದಿನ ಈ ಊರಲ್ಲೇ ಕಾಲಗತಿಯನ್ನೈದಿದರೆಂಬದು ತಿಳಿಸಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಇವರು ಬಹಳ ದಿನ ಸರಕಾರದಲ್ಲಿ ವಕೀಲರಾಗಿರುತ ಕಕ್ಷಿಗಾರರ ವಿಶ್ವಾಸಕ್ಕೂ ಗೌರವ ಸಂಬಂಧಗಳಿಗೆ ಪಾತ್ರರಾಗಿರುತಲಿದ್ದುದರಿಂದ ಇವರ ಮರಣವು ವಿಷಾದಿಸತಕ್ಕದ್ದಾಗಿರುತ್ತದೆ ಇವರಿಗಿರುವ ಪುತ್ರರಿಗೆ ದೇವರು ಸಮಾಧಾನವನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸುತ್ತೇವೆ.

The races.—ಈಸಲದ ಕುದುರೇ ಪರತ್ತುಗಳು ಪ್ರಾರಂಭಿಸಲ್ಪಟ್ಟು ಇದುವರಿವಿಗೆ ೩ ದಿನಗಳು ದಿನ ಬಿಟ್ಟು ದಿನ ಜರುಗಿದವು. ಪ್ರತಿ ದಫೆಯಲ್ಲಿಯೂ ಜನಗಳು ಘನಾಳಿಯನ್ನೂ ಜನ ಸಮ್ಮರ್ದವನ್ನೂ ಕದಾಚಿತ್ ಮಳೆಯನ್ನು ಸಹ ಸಹಿಸಿ ಗೈಯ್ಯದೆ ಅವರವರಿಗೆ ಶಕ್ಯ ಅಂತಸ್ತುಗಳೊಡನೆ ಬಹುಜನ ಹೋಗಿ ಬರುತಲಿದಾರೆ. ಈಸಲದ ಪರತ್ತುಗಳಲ್ಲಿ ಮ ದಳವಾಯಿ ದೇವರಾಜೇ ಅರಸಿನವರ ಕುದುರೆ ಯೊಂದೂ ಅವರನೆವ್ಕಂದರ ಕುದುರೆ ಯೊಂದೂ ಗೆದ್ದದರಿಂದ ಮೊದಲನೆಯವರಿಗೆ ೫,೦೦೦ ರೂಪಾಯಿಗಳ ಇನಾಮೂ, ಎರಡನೆಯವರಿಗೆ ೧,೦೦೦ ರೂಪಾಯಿಗಳೂ ಇನಾಮೂ ಬಂದಂತೆ ತಿಳಿಯಬಂದಿವೆ. ಇನ್ನೂ ಎರಡು ದಿನಗಳು ಪರತ್ತುಗಳು ನಡೆಯುವವು ದಿವಾನ್ ಮ|| ಕೆ. ಶೇಷಾದ್ರಿ ಅಯ್ಯರವರು ಸಹ ಸ್ವಂತವಾಗಿ ೧,೦೦೦ ರೂಪಾಯಿಗಳು ಇನಾಮಾಗಿ ಕೊಟ್ಟರೆಂತಲೂ, ಸದರೀ ಇನಾಂ ಮ|| ಘೋರ್‌ಮರ್ಯಾಂಬವರಿಗೆ ಬಂತೆಂತಲೂ ತಿಳಿಯಬರುತಿದೆ.

The Namakaranam ceremony.—ಆಷೇತನಿವಾರದ ದಿನ ಶ್ರೀಮನ್ಮಹಾರಾಜರವರ ಪ್ರಥಮ ಪುತ್ರರವರಿಗೆ ನಾಮಕರಣೋತ್ಸವವು ಮೈಸೂರಲ್ಲಿ ರಾಜ ಗೌರವಾನುಗುಣವಾಗಿ ನೆರವೇರಿಸಿತೆಯೂ ಮಹಾರಾಜರವರು ತಮ್ಮ ಗುರುಸಾನ್ನಿಧ್ಯದಲ್ಲಿ ಶಾಸ್ತ್ರೋಕ್ತವಿಧಾನದಿಂ ತಮ್ಮ ಪುತ್ರರಿಗೆ ರಾಜ ಒಡೆಯರೆಂಬದಾಗಿ ನಾಮಕರಣವು ಮಾಡಿದರೆಂಬದಾಗಿಯೂ ತಿಳಿಯಬರುತಿವೆ. ಆ ಕಾಲದಲ್ಲಿ ಬಂದಿದ್ದವರಿಗೆಲ್ಲರಿಗೂ ಗೌರವಾನುಗುಣವಾಗಿ ಬರಮು ಮುಂತಾದ ವಸ್ತುಗಳ ತನಕ ಸರದಾರರಿಗೂ ರೂಪಾಯಿಗಳಾಗಿಯೂ ಧಾರೆ ದತ್ತವಾಗಿ ಕೊಡಲ್ಪಟ್ಟವೆಂತಲೂ, ಆ ವಾರದ ೩ ದಿನ ನಿಷ್ಟಲ್ಮಷವಾದ ಪ್ರತಿಷ್ಠಿತಗಳಲ್ಲಿ ಎಲ್ಲಾ ಮಠಸ್ಥರಿಗೂ ಸಂತಾರಾಧನೆ ನಡೆಸಲ್ಪಟ್ಟಿತೆಂತಲೂ ಈ ಸಂತೋಷ ಸೂಚಕವಾದ ಮಹೋತ್ಸವದ ಜನ ಗೌರವಜ್ಞಾತಕಾರ್ಯ ಈ ಸಂಸ್ಥಾನದ ಬಹು ಸ್ಥಾನಗಳಲ್ಲಿ ಸಹಾನುಭವಿಸುತ ಈ ಸಂಪತ್ಸರದ ಆಯ್ಯರಿಗೆ ವಾಯಿದೆ ಮುಗಿಯತಕ್ಕ ಪ್ರಜೆಗಳಿಗೆಲ್ಲ ಬಿಡುಗಡೆ ಮಾಡಿಸಿದರೆಂತಲೂ, ಈ ಜಾತಕರಣ ನಾಮಕರಣ ಮಹೋತ್ಸವಕ್ಕಾಗಿ ಸುಮಾರು ೪೦ ಸಾವಿರ ರೂಪಾಯಿಗಳ ವರಿವಿಗೆ ಖರ್ಚಾಗಿರಬಹುದೆಂದು ಅಂದಾಜಾಗಿರುತಿದೆಂತಲೂ ಕೇಳಿ ಸಂತೋಷಿಸುವೆವು.

The weather.—ಸಕಲಭಾಗದಲ್ಲಿಯೂ ಆಕಾಲಸ್ಥಿತಿಯು ಜನಗಳಿಗೆ ಪ್ರತಿಕೂಲವಾಗಿಯೂ ಚಿಂತನೀಯವಾಗಿಯೂ ಇರುತ್ತದೆ. ೮೫ ಡಾಕ್ಟ್ರ ರಿಪೋರ್ಟುಗಳಿಂದ ಬರುವ ವೃತ್ತಾಂತಗಳು ನೋಡಲಾಗಿ ಸುತರಾಂ ತೃಪ್ತಿಕರವಾಗಿರುವದಿಲ್ಲವು. ಸರ್ವತ್ರ ವರ್ಷಾಪೇಕ್ಷೆಯು ಎದ್ದು ಕಾಣುತ್ತದೆ. ಸರ್ಕಾರಿಯಾಗಿ ಪ್ರಾಯಶಃ ಗುಂಡ್ಲುಪೇಟೆಯಲ್ಲಿ ಕಾಲಸ್ಥಿತಿಯು ಧೈರ್ಯವನ್ನುಂಟುಮಾಡತಕ್ಕದ್ದಾಗಿದ್ದರೂ ಪ್ರತ್ಯೇಕವಾಗಿ ಬರುವ ಸ್ವಂತ ತಾಗದಗಳು ಬೇರೆ ವಿಧವಾಗಿ ಬರೆಯುವದು ನಂಬತಕ್ಕದ್ದಾಗಿವೆ. ಪರಸ್ಪರ ಸರ್ಕಾರಿ ಎಂಬ ಶಬ್ದವಾಗ್ರಹ ಬೇರೆಯಾದರೆಂದು ಗ್ರಹಿಸಬಹುದು. ಇದಕ್ಕೆ ದೃಷ್ಟಾಂತವಾಗಿ ಸರ್ಕಾರಿ ರಿಪೋರ್ಟುಗಳು ಹಾಸನ ಕಡೂರು ಮೈಸೂರು ಡಿಸ್ಟ್ರಿಕ್ಟುಗಳಲ್ಲಿ ಬೆಳೆಯುತ್ತಿರುವ ಪೈರುಗಳು ಬಹಳ ಚೆನ್ನಾಗಿರುವಂತೆಯೂ ಕಾಲಸ್ಥಿತಿ ಅನುಕೂಲವಾಗಿರುವಂತೆಯೂ ಬರೆಯಲ್ಪಟ್ಟಿರುತ್ತವೆ. ಇದೇ ಡಿಸ್ಟ್ರಿಕ್ಟಿನ ಸ್ಥಿತಿಯು ೮ ನೇ ತಾರೀಖಿನ ಪತ್ರಿಕೆಯು ತಿಳಿಸುತಿವೆ ಏನೆಂದರೆ,—ಹಾಸನ ಪ್ರಾಂತದಲ್ಲಿ ಸುತರಾಂ ಮಳೆಯಿಲ್ಲದೆ ಇರುವದರಿಂದ ಮುಂಗಾರಿನಲ್ಲಿ ಬಿತ್ತಿದ್ದ ಹೊಲಗಳೆಲ್ಲವೂ ಒಣಗುತಲಿವೆ. ಈ ಕಾರಣದಿಂದ ಆ ಪ್ರಾಂತದ ನಿವಾಸಿಗಳು ಘಾಲ್ಗುಣದಷ್ಟು ಪಾಳು ಬಿದ್ದ ದಿನ ಮಾತಕ್ಕೆ ಕಾಮನಷ್ಟುವನ್ನು ಈಗಲೇ ಮಾಡಲು ಪ್ರಾರಂಭಿಸಿರುತ್ತಾರೆ" ಎಂಬದು. ಹೀಗೆಯೇ ಕಾಫಿ ಪ್ರದೇಶವನ್ನೆಲ್ಲಾ ತಾಳಿಯುವ ಪಕ್ಷಕ್ಕೆ ಹಾಸನ ಪ್ರಾಂತ್ಯಗಳಿಗೆ ಸಹಾಯಕರಾಗಿ ಮಿಕ್ಕ ಡಿಸ್ಟ್ರಿಕ್ಟಿನವರೂ ಸೇರಬೇಕಾಗಿರುವವೆಂಬದರಲ್ಲಿ ಸ್ವಲ್ಪಮಾತ್ರವೂ ಸಂಶಯವಿರಲಾರದು.

Mr. C. G. Plumer.—ಚೀಫ್ ಕೋರ್ಟ್ ಚೀಫ್‌ಜಡ್ಜಿಯವರಾಗಿದ್ದು ಈಗ ರಜಾಪಡೆದು ಈ ಊರಲ್ಲಿಯೇ ಇರುವ ಮ ಸಿ. ಜಿ. ಪ್ಲೂಮರ್ ಯವರು ಅನಿರೀಕ್ಷಿತವಾಗಿ ತಮ್ಮ ಕೆಲಸವಂ ಬಿಟ್ಟ ಅಂಶವು ಅನೇಕರಿಗೆ ಅನೇಕವಿಧ ಶಂಕೆಗಳಿಗೆ ಕಾರಣವಾಗಿದೆಯೆಂದು ಹಿಂದಿನ ಪತ್ರಿಕೆಯಲ್ಲಿ ತಿಳಿಸಿದ್ದೆವಷ್ಟೆ. ಈಚೆಗೆ ಉಂಟಾಗಿರುವ ಪ್ರವಾದರೀತ್ಯಾ ಮ|| ಪ್ಲೂಮರ್‌ಯವರ ಅಸಮಾಧಾನ ಪ್ರಯುಕ್ತವಾದ ಕಾರಣವು ಶ್ರೀಮನ್ಮಹಾರಾಜರಿಂದ ನಿವೃತ್ತಿ ಸಲ್ಪಟ್ಟಂತೆಯೂ ಅವರ ಆಜ್ಞಾನುಸಾರ ಮ|| ಪ್ಲೂಮರ್ ಯವರು ಶೀಘ್ರವಲ್ಲೇ ತಮ್ಮ ಕೆಲಸದ ಚಾರ್ಜನ್ನು ರೆಗಡು ಕೊಳ್ಳುವರೆಂತಲೂ ತಿಳಿಯಬರುತಿದೆ. ಇದೊಂದು ವೇಳೆ ನಿಜವಾಗಿ ಪರಿಣಮಿಸುವ ಪಕ್ಷಕ್ಕೆ ಈ ವಿಷಯದಲ್ಲಿ ಜನಗಳಿಂದ ಮಾಡಲ್ಪಟ್ಟ ವಿಚಾರವೆಲ್ಲವು ಕೇವಲ ವಾಗಾಡಂಬರ ರೂಪವಾಗಿ ಪರಿಣಮಿಸುವಂತಾಗುವದು. ಈ ಕೆಲಸವನ್ನು ಭರ್ತಿಮಾಡಬೇಕಾದ ವಿಷಯದಲ್ಲಿ ಭಿನ್ನಾಭಿಪ್ರಾಯಗಳುಂಟಾಗಿರುತಿವೆ.

THE MYSORE GAZETTE
ಮೈಸೂರು ಗಜೆಟ್.

ಶ್ರೀಮನ್ ಮಹಾರಾಜರವರು ಬಹದೂರರವರ ಸರ್ಕಾರದಿಂದ ಕೊಡೋಣವಾದ ಇಷ್ತಿಹಾರನಾಮೆಗಳು.

ನಂ. ೧೯೯.—ತಾ|| ೧೮ನೇ ಜೂಲೈ ೧೮೯೦ರ ೧೮೯೦ನೇ ಇಸವಿಯ ೧ನೇ ರೆಗ್ಯುಲೇಷನ್ ಮೂಲಕ ತಿದ್ದುಪಡಿಯಾದ ೧೮೭೧ನೇ ಇಸವಿಯ ಮ್ಯುನಿಸಿಪಲ್ ರೆಗ್ಯುಲೇಷನ್‌ಗಳ ೧೧ (ಎ) ನೇ ಸೆಕ್ಷನ್‌ಪ್ರಕಾರ ಶ್ರೀಮನ್ಮಹಾರಾಜಾ ಸರ್ಕಾರದವರು, ಮ|| ಏ ಎಸ್. ರಾಘವಾಚಾರ್ಯರವರನ್ನು ತತ್ಕಾಲದಲ್ಲಿ ಬೆಂಗಳೂರ್ ಷಹರ್ ಮ್ಯುನಿಸಿಪಲ್ ಕಮಿಷನಿನ ವೈಸ್ ಪ್ರೆಸಿಡೆಂಟ ರಾಗಿ ನೇಮಕ ಮಾಡಿರುತ್ತಾರೆ.

ನಂ. ೧೯೦.—ತಾ|| ೧೬ನೇ ಜೂಲೈ ೧೮೯೦.—ರೆವಿನ್ಯೂ ಸರ್ವೆ ಪ್ರೊಬೇಷನರ್ ಮ ಕೆ. ಶ್ರೀನಿವಾಸರಾಯರವರು ಮ ಜೆ. ಏಲ್ ಮಾರ್ಕೆಯವರು ೩ ತಿಂಗಳ ಪ್ರಿವಿಲೀಜ್‌ರಜಾ ಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟರವರ ಹೆಡ್‌ಕ್ವಾರ್ಟರ್ ಆಫೀಸ್ ಚಾರ್ಜಿನಲ್ಲಿರತಕ್ಕದ್ದು.

ನಂ. ೧೯೩. ಬಾಗೇಪಲ್ಲಿ ತಾಲ್ಲೂಕ್ ಅಮಲ್‌ದಾರ್ ಏ ಸೀತಾರಾಮಯ್ಯನವರಿಗೆ ೧೮೯೦ನೇ ಇಸವಿ ಜೂನ್ ೧೫ನೇ ಮಾರ್ಚ್ ೩೩ನೇ ನಂಬರು ಇಸ್ತಿಹಾರ್‌ನಾಮೆಯ ಮೂಲಕ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಡಲ್ಪಟ್ಟದ್ದ ಮೂರು ತಿಂಗಳ ರಜಾ ಇದರಿಂದ ಇನ್ನೊಂದು ತಿಂಗಳತನಕ ಜಾಸ್ತೀ ಮಾಡಲ್ಪಟ್ಟಿರುತಿದೆ. ಸೀತಾರಾಮಯ್ಯನವರ ಗೈರುಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಗುಡಿಬಂಡೆಯ ಡೆಪ್ಯುಟಿ ಅಮಲ್‌ದಾರ್ ಗುಲಾಂ ಮೊಹಿದ್ದೀನವರು ಬಾಗೇಪಲ್ಲಿ ತಾಲ್ಲೂಕ್ ಅಮಲ್‌ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ನೇಮಕರಾಗಿಸಲ್ಪಟ್ಟಿರುತ್ತಾರೆ. ಚಿಕ್ಕಬಳ್ಳಾಪುರದ ತಾಲ್ಲೂಕ್ ಶಿರಸ್ತೇದಾರ್ ಎನ್ ಶಾಮರಾಯರವರು ಗುಲಾಂ ಮೊಹಿದ್ದೀನವರಿಗೆ ಬದಲಾಗಿ ಗುಡಿಬಂಡೆ ಡೆಪ್ಯುಟಿ ಅಮಲ್‌ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ನೇಮಕರಾಗಿಸಲ್ಪಟ್ಟಿರುತ್ತಾರೆ.

ನಂ. ೧೯೬. ತಾ|| ೧೮ನೇ ಜೂಲೈ ೧೮೯೦.—ತುಮಕೂರು ಡಿಸ್ಟ್ರಿಕ್ಟ ಅಸಿಸ್ಟೆಂಟ ಕಮಿಷನರ್ ಮ ಏ. ಪಂಚನದರಾಯರವರಿಗೆ ಮಾರ್ಚ್ ಮಹಿನೆ ೨೮ನೇ ತಾರೀಖು ಲಗಾಯಿತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲು ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತದೆ.

ನಂ. ೧೯೯.—ಹುಣಸೂರು ತಾಲ್ಲೂಕ್ ಅಮಲ್‌ದಾರ್ ಟಿ. ಎನ್. ಮಿಯರ್ ಕಮಾಲುದ್ದೀನ್ ಅಲ್ಲಿಯಾನರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಗಾಯಿತು ೩೦ ದಿನಗಳ ಪ್ರಿವಿಲೀಜ್‌ರಜಾ ಕೊಡಲ್ಪಟ್ಟಿರುತಿದೆ. ತಾಲ್ಲೂಕ್ ಶಿರಸ್ತೇದಾರ್ ಕೃಷ್ಣಪ್ಪನವರು, ಟಿ. ಎನ್. ಮಿಯರ್ ಕಮಾಲುದ್ದೀನ್ ಅಲ್ಲಿಯಾನರು ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಹುಣಸೂರು ತಾಲ್ಲೂಕ್ ಅಮಲ್‌ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ನೇಮಕರಾಗಿಸಲ್ಪಟ್ಟಿರುತ್ತಾರೆ.

ನಂ. ೧೯೭.—ತಾ|| ೧೯ ನೇ ಜೂಲೈ ೧೮೯೦ ಮ|| ಸಿ. ಮಾದಯ್ಯನವರು ಹಾಸನ ಡಿಸ್ಟ್ರಿಕ್ಟಿನ ಟ್ರೆಜರಿ ಚಾರ್ಜನ್ನು ೧೮೯೦ನೇ ಇಸವಿ ಜೂಲೈ ೪ ನೇ ಮಾರ್ಚ್ ಪೂರ್ವಾಹ್ನದಲ್ಲಿ ಮ|| ಪಿ. ಎನ್. ಪೂರ್ಣಯ್ಯನವರಿಗೆ ಒಪ್ಪಿಸಿರುತ್ತಾರೆ.

ನಂ. ೧೯೪.—ಮ|| ಎಸ್. ಹೇಮಾದ್ರಿ ರಾಯರವರು ಚೀಫ್‌ಕೋರ್ಟ್ ರಿಜಿಸ್ಟ್ರಾರ್ ಕೆಲಸದ ಚಾರ್ಜನ್ನು ೧೮೯೦ ನೇ ಇಸವಿ ಜೂಲೈ ೧೮ ನೇ ಮಾರ್ಚಿನ ಅಪರಾಹ್ನದಲ್ಲಿ ಮ|| ಎಸ್. ಆರ್. ಸುಬ್ಬರಾಯ ಅಯ್ಯರವರಿಗೊಪ್ಪಿಸಿರುತ್ತಾರೆ.

ನಂ. ೧೫೦.—ಮಳವಳ್ಳಿ ತಾಲ್ಲೂಕ್ ಅಮಲ್‌ದಾರ್ ಎಂ. ರಾಮಸ್ವಾಮಿ ಅಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಗಾಯಿತು ೧೫ ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತಿದೆ. ತಾಲ್ಲೂಕ್ ಶಿರಸ್ತೇದಾರ್ ಸುಬ್ಬಣ್ಣನವರು ಎಂ. ರಾಮಸ್ವಾಮಿ ಅಯ್ಯರವರ ಗೈರುಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಮಳವಳ್ಳಿ ತಾಲ್ಲೂಕ್ ಅಮಲ್‌ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ನೇಮಕರಾಗಿಸಲ್ಪಟ್ಟಿರುತ್ತಾರೆ.

ನಂ. ೧೫೮.—ಮದರಾಸ್ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಶಾಸ್ತ್ರಾಭ್ಯಾಸ ಮಾಡುತಲಿದ್ದ ಇದರಡಿ ಕಂಡ ವಿದ್ಯಾರ್ಥಿಗಳು ಸದರೀ ಕಾಲೇಜಿನಿಂದ ೩ ನೇ ಕ್ಲಾಸ್ ಆಸ್ಪತ್ರೆ ಅಸಿಸ್ಟೆಂಟರಾಗಿ ಅರ್ಹತೆಯ ಸರ್ಟಿಫಿಕೇಟನ್ನು ಪಡೆದದ್ದರಿಂದ ೧೮೯೦ ನೇ ಇಸವಿ ಜೂನ್ ೨೪ ನೇ ತಾರೀಖು ಲಗಾಯಿತು, ೩ ನೇ ಕ್ಲಾಸ್ ಆಸ್ಪತ್ರೆ ಅಸಿಸ್ಟೆಂಟುಗಳಾಗಿ ನೇಮಕರಾಗಿಸಲ್ಪಟ್ಟಿರುತ್ತಾರೆ —ಸಿ. ಎಸ್. ರಾಮಚಂದ್ರ ಅಯ್ಯರ್, ಎಸ್ ಕೃಷ್ಣಸ್ವಾಮಿ ಅಯ್ಯರ್, ಕೆ. ಅಬ್ದುಲ್‌ಕುದೂಸ್, ಪಿ. ಲಕ್ಷ್ಮೀಪತಿ, ಎಂ. ಗುಂಡಪ್ಪ.

ನಂ. ೧೫೪.—ಕೋಲಾರ್ ಡಿಸ್ಟ್ರಿಕ್ಟ ಪೊಲೀಸ್ ಸೂಪರಿಂಟೆಂಡೆಂಟ ಮ|| ಸಿ. ರಾಘವಾಚಾರ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲು ಆರುವಾರಗಳ ಪ್ರಿವಿಲೀಜ್‌ರಜಾ ಕೊಡಲ್ಪಟ್ಟಿರುತಿದೆ. ಅಸಿಸ್ಟೆಂಟ ಕಮಿಷನರ್ ಮ|| ಹೆಚ್. ರಾಮಾನುಜಯ್ಯಂಗಾರ್ರವರು ಮ|| ರಾಘವಾಚಾರ್ಯರವರ ಗೈರುಹಾಜರೀ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಮಾಡಲ್ಪಡುವತನಕ ಕೋಲಾರ್ ಡಿಸ್ಟ್ರಿಕ್ಟ ಪೊಲೀಸ್ ಇಲಾಖಾ ಇನ್‌ಚಾರ್ಜ್ ಆಫೀಸರಾಗಿ ನೇಮಕರಾಗಿಸಲ್ಪಟ್ಟಿರುತ್ತಾರೆ.

ನಂ. ೧೫೯.— ಸನ್ ೧೮೮೯ನೇ ಇಸವಿ ಮೇ ೧೦ನೇ ಮಾರ್ಚ್ ೩೨ನೇ ನಂಬರುಳ್ಳ ಇಸ್ತಿಹಾರ್‌ನಾಮೆಯನ್ನು ರದ್ದು ಮಾಡಿ ಮೈಸೂರು ಜಾಬ್ ಇಲಾಖೆಗೆ ಸಂಬಂಧಪಟ್ಟ ನಾನಾ ಹೋದಾಗಳು ಭರ್ತಿಗೆಲ್ಲ ಇದರಡಿ ಕಂಡಂತೆ ದರ್ಜೆಗಳ ದರವು ಮರಳಿ ಪರಿಷ್ಕರಿಸಿ ವ್ಯವಸ್ಥೆ ಮಾಡಲ್ಪಟ್ಟಿರುತಿದೆ.—

ಮೂವತ್ತು ವರುಷಗಳ ಸೇವಾಯು ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ನಿವೃತ್ತರಾಗತಕ್ಕವರಿಗೆ ಮಾಸೇ ಒಕ್ಕೊಕ್ಕರ ಮಾಸಿಕ ಪೆಂಷನುಗಳಿಗೆ ೩೦; ರಿಸಾಲೆದಾರರಿಗೆ ೪೦; ಅಡ್ಜುಟೆಂಟುಗಳಿಗೆ ೧೨½; ಸಾಮೇದಾರರುಗಳಿಗೆ ೧–೨ನೇ ತರಗತಿಗಳವರಿಗೆ ಕ್ರಮವಾಗಿ ೧೫, ೧೨½; ಜಮೇದಾರರುಗಳಿಗೆ ೧, ೨ನೇ ತರಗತಿಗಳವರಿಗೆ ಕ್ರಮವಾಗಿ ೪, ೩,

ಷವಲ್ದಾರ್ ಮೇಜರಿಗೆ ೬೪, ೫೪, ೫೦; ಸಿಪಾಯಿಗಳಿಗೆ ೧, ೨ನೇ ತರಗತಿಗಳ ಪ್ರಕಾರ ೮, ೭೪; ಟ್ರಂಪೆಟರ್‌ಗಳು ಮೊದಲಾದವರಿಗೆ ೧, ೨ನೇ ತರಗತಿಗಳ ಪ್ರಕಾರ ೧೪, ೭೪ ರೂಪಾಯಿಗಳು.

ನಂ. ೧೬೪||.—ತಾ|| ೨೨ನೇ ಜೂಲೈ ೧೮೯೦-ನೇ ೧೮೪೯ ನೇ ಇಸವಿ ಫೆಬ್ರುವರಿ ೫ ನೇ ಮಾರ್ಚ್ ೧೮೯೦, ೭೧೪೦—೭೧—೨೦೦ ನೇ ನಂಬರುಳ್ಳ ಸರಕ್ಯುಲರ್ ಪ್ರೊಸೀಡಿಂಗ್ಸ್ ಮೂಲಕ ಘಾಯಿಷ್ ಮಾಡಲ್ಪಟ್ಟಿರುವ ಮರಳಿ ಪರಿಷ್ಕೃತವಾದ ನಿಬಂಧನೆಗಳ ೧ ನೇ ನಿಬಂಧನೆಯ ನಿಯಮವನ್ನನುಸರಿಸಿ, ಮೈಸೂರ್ ದಿವಾನರವರ ಚೀಫ್ ಸೆಕ್ರೆಟರಿಯವರಾದ ಮ|| ಟಿ. ಆನಂದರಾವ್ ಬಿ. ಎ. ಯವರಿಗೆ, ೧೮೯೦ ನೇ ಇಸವಿ ಜೂಲೈ ೨೨ ನೆ. ತಾರೀಖ್ ಲಾಗಾಯತು ಹತ್ತು ದಿವಸಗಳ ಕ್ಯಾಜ್ಯುಯಲ್ ರಜಾ ಕೊಡಲ್ಪಟ್ಟಿರುತಿದೆ. ೨. ೨೮ ರೂಲಿನ ನಿಯಮವನ್ನನುಸರಿಸಿ ಚಿಕ್ಕಬಳ್ಳಾಪುರ ಮುನ್ಸಫ್ ಇ. ಸಿ. ಶಿವಜ್ಞಾನಂ ಪಿಳ್ಳೆಯವರಿಗೆ ೯೦ ನೇ ಇಸವಿ ಜೂನ್ ೨೦ ನೇ ಮಾರ್ಚ್ ೧೮೯೦ ಲಾಗಾಯತು ೯ ದಿನಗಳ ಕ್ಯಾಜ್ಯುಯಲ್ ರಜಾ ಕೊಡಲ್ಪಟ್ಟಿರುತಿದೆ. ರಾಯಲ್ ಇಂಜನಿಯರ್ ಲೆಫ್ಟಿನೆಂಟ್ ಕರ್ನಲ್ ಸಿ. ಬರ್ನ ಯವರು ೨ ನೇ ಕ್ಲಾಸ್ ಸೂಪರಿಂಟೆಂಡಿಂಗ್ ಇಂಜನಿಯರ್ ಕೆಲಸದಿಂದ ಒಂದನೇ ಕ್ಲಾಸ್ ಸೂಪರಿಂಟೆಂಡಿಂಗ್ ಇಂಜನಿಯರ್ ಕೆಲಸಕ್ಕೆ ಮಾಹೇ ಮಜಕೂರ್ ೨೮ ನೇ ತಾರೀಖ್ ಮೊದಲು ಅಥವಾ ಕರ್ನಲ್ ಪೆನ್ನಿ ವಿಕಯುವರು, ಚೀಫ್ ಇಂಜನಿಯರ್ ವ ಗವರ್ನಮೆಂಟ್ ಸೆಕ್ರೆಟರಿ ಕೆಲಸಗಳ ಚಾರ್ಜ್‌ಗಳನ್ನು ವಹಿಸುವ ತಾರೀಖ್ ಮೊದಲು ಬಡ್ತೀ ಮಾಡಲ್ಪಟ್ಟಿರುತ್ತಾರೆ.

SUMMARY OF NEWS.
ವೃತ್ತಾಂತಸಂಗ್ರಹವು.

ಅಮೆರಿಕಾದೇಶದಲ್ಲಿ ಗೊಂಬೆಗಳಿಗೆ ವಿದ್ಯುಲ್ಲತೆಯುಶಕ್ತಿಯ ಯೋಗದಿಂದ ಮಾತಾಡಲಿಕ್ಕೆ ಬರುವಂತೆ ಮಾಡಿರುತ್ತಾರಂತೆ.

ಕಲ್ಕತ್ತೆಯೊಳಗೆ ಈವರ್ಷ ೧೪ ಕೋಟಿ ರೂಪಾಯಿಗಳ ಬೆಲೆಯುಳ್ಳ ಬೀವಿಗೆ ಕಡ್ಡಿ ಪೆಟ್ಟಿಗೆಗಳು ನಾರ್ವೆ ಮತ್ತು ಸ್ವೀಡನ್‌ನಿಂದ ಬಂದಿರುವವು.

ಈಚೆಗೆ ವಾಂತಿಭೇದಿರೋಗವು ಮದರಾಸ್ ರಾಯಪುರಪ್ರಾಂತದಲ್ಲಿ ತಲೆದೋರಿ ಕೆಲವರುಮ್ಯತಪಟ್ಟರು. ಅವರಲ್ಲಿ ಫ್ರೀಚರ್ಚ್‌ಮೋರ್ಸಿಂಗ್ ಸ್ಕೂಲಿನಲ್ಲಿ ಓದುತಲಿದ್ದ ಹುಡುಗಿಯೊಬ್ಬಳು.

ಪಂಡಿತ ರಮಾಬಾಯಿ ಯವರು ವಿಧವೆಯರ ವಾಸದಬಗ್ಗೆ ಒಂದು ಕಟ್ಟಡವ ಕಟ್ಟಿಸುವ ಕಾರ್ಯಕ್ಕಾಗಿ ೫೦,೦೦೦ ರೂಪಾಯಿಗಳು ಜಮಾ ಮಾಡಿರುತ್ತಾರೆ.

ಮಾಹೆಯಾನಾ ೨,೦೦೦ ರೂಪಾಯಿಗಳ ಖರ್ಚಿನಲ್ಲಿ, ಮುಂಬೈಯೊಳು ೫೦೦ ಮಂದಿ ಕುಷ್ಠರೋಗ ಪೀಡಿತರಾದವರ ವಾಸಕ್ಕಾಗಿ ಒಂದು ಜಹಜು ಕಟ್ಟಲ್ಪಡುವದು.

ಅಮೆರಿಕಾ ಖಂಡದ ಯುನೈಟೆಡ್ ಸ್ಟೇಟ್ಸ್ ಎಂಬ ದೇಶದಲ್ಲಿ ಈಚೆಗೆ ತೆಗೆದ ಖಾನೇಸುಮಾರಿ ಲೆಕ್ಕದಿಂದ ಸದರೀ ದೇಶದ ಪ್ರಜಾಸಂಖ್ಯೆಯು ೬,೪೫,೦೦,೦೦೦ ವೆಂದು ತಿಳಿಯಬರುತಿದೆ.

ಜಾವಾ ನಡುಗಡ್ಡೆಯ ಪಶ್ಚಿಮಕ್ಕೆ ಜೂಲೈ ೧೧ ನೇ ತಾರೀಖಿನ ದಿವಸ ಭೂಕಂಪವಾದ್ದರಿಂದ ಆಸ್ಟ್ರೇಲಿಯಾ ದೊಳಗಿನ ಎಲ್ಲ ತಂತಿಯಂತ್ರಗಳು ಹರಿದುಹೋಗಿ ಬದ್ದಿರುತ್ತವೆಂದು ಗೊತ್ತಾಗುತ್ತದೆ.

ವಿಲಾಯತಿಯಲ್ಲಿ ಪಾರ್ಲಿಮೆಂಟಿನ ಒಬ್ಬ ಸಭಾಸದರಾಗಿರುವ ಮ|| ಬೋಮಂಟ್ ಎಂಬವರು ಯಾರ್ಕ್ ಮತ್ತು ನ್ಯೂಕ್ಯಾಸಲ್‌ನೊಳಗಿನ ಕೂಲಿಕಾರರ ಮಕ್ಕಳಿಗೆ ಧರ್ಮಾರ್ಥ ವಿದ್ಯಾಭ್ಯಾಸ ಮಾಡಿಸುವದಕ್ಕೆ ೭೫ ಲಕ್ಷ ರೂಪಾಯಿಗಳನ್ನು ಕೊಟ್ಟಿರುವರು.

ಚೀನಾ ಸರ್ಕಾರದವರು ಅಫೀಮು ಮತ್ತು ಅದರ ಮೇಲಿನ ಸುಂಕವನ್ನು ಜಾಸ್ತೀ ಮಾಡಿದ್ದರಿಂದ ಮುಂಬೈ ಪ್ರಾಂತದಲ್ಲಿ ಬೆಳೆಯುವ ಅದರ ಗೆ ಬೇಸಾಯದಲ್ಲಿ ಗಿರಾಕಿ ತಪ್ಪಿ ಹೋಗಿ ಮುಂಬೈಯಲ್ಲಿನ ಯಂತ್ರದ ಕಾರ್ಖಾನೆ ದಾರರಿಗೆ ಬಹಳ ನಷ್ಟ ಸಂಭವಿಸುನಂತಿದೆ.

ನಾಗಪುರ ದಲ್ಲಿರುವ ಒಂದು ಶಿವದೇವಸ್ಥಾನದ ಅಮ್ಮನವರಿಗೆ ಮೂವತ್ತುಸಾವಿರ ರೂಪಾಯಿಗಳ ಬಾಗುವದರಲ್ಲಿ ಕೆಂಪು ಕಿರೀಟ ಒಂದು ತಯಾರಾಗಿಬಂದು ಅದನ್ನು ಅಮ್ಮನವರಿಗೆ ಸಮರ್ಪಿಸಿ ವಿಶೇಷ ವಿಭವದೊಡನೆ ಉತ್ಸವ ಮಾಡಿಸಿದರು.

ಈ ತಿಂಗಳ ೨೨ ನೇ ತಾರೀಖಿನಲ್ಲಿ ಮದರಾಸ್‌ನೊಳು ಮರಳಿ ಪಟ್ಟಾಗಿ ಮಳೆ ಬಿತ್ತು, ಇನ್ನು ಮಳೆಯ ಸೂಚನೆಗಳು ಕಾಣಬರುತಿವೆ. ಈ ಮಳೆಯಿಂದಮೇಲೆ ನೊಣಗಳ ಕಾಟ ತಪ್ಪಿರಬಹುದು ಎಂದು ಹೇಳಬಹುದು. ಇದನ್ನು ಬಹಳ ಕ್ಷೇಮವೆಂದು ಹೇಳಬೇಕು.

ಮದರಾಸ್‌ನಲ್ಲಿ ಇಕನಾಮಿಕ್ಸ್ ಇಲಾಖಾ ಮ್ಯಾನೇಜರಾಗಿದ್ದ ಗೋವಿಂದರಾವ್ ಎಂಬವರು ತಮ್ಮ ಇಲಾಖೆಯಲ್ಲಿ ನಡೆಸಿದ ಕೆಲವು ಅಕ್ರಮಗಳ ಬಗ್ಗೆ ಈಚೆಗೆ ನಸ್ಪೆಂಡ ಮಾಡಲ್ಪಟ್ಟಿದ್ದರು. ಈತನು ಏಕಾಏಕಿ ಮೃತಪಟ್ಟದಕ್ಕೆ ಕಾರಣ ಸಂಶಯಾಸ್ಪದವಾಗಿದೆ.

ಮದರಾಸ್‌ನಲ್ಲಿ ಒಂದು ವರ್ತಕನಿಗೆ ಬಂದ ಕೆಲವು ಕೆಂಪು ಬಣ್ಣದ ಬಟ್ಟೆಗಳ ಥಾನಗಳಮೇಲೆ ಅವು ಒಂದೊಂದು ಇಷ್ಟು ಗಜವುಳ್ಳದ್ದೆಂದು ಗುರ್ತುಹಾಕಲ್ಪಡದೆ ಇದ್ದಬಗ್ಗೆ ಮದರಾಸ್ ಕಲೆಕ್ಟರ್‌ವರು ವ್ಯಾಪಾರವಿಷಯದಲ್ಲಿ ಈಚೆಗೆ ಹುಟ್ಟಿರುವ ಕಾನೂನ್ ಅನುಸರಿಸಿ ಸದರೀ ವರ್ತಕನಿಗೆ ೧೦ ರೂಪಾಯಿಗಳ ಜುರ್ಮಾನೆ ವಿಧಿಸಿದರು.

ಜಗನ್ನಾಥದಲ್ಲಿ ೮ ಜನ ಹಿಂದುಗಳು ಮೋಕ್ಷಪ್ರಾಪ್ತಿಯಾಗಬೇಕೆಂದು ಯಾತ್ರೆಗೂ ತೇರಿನ ಕಂತೆ ರಥದ ಗಾಲಿಗಳ ಎದುರಿಗೆ ಮಲಗಿಕೊಂಡು ಸತ್ತರಾದರು. ಆತ್ಮಹತ್ಯ ಮಾಡಿಕೊಂಡರೆ ನರಕಪ್ರಾಪ್ತಿ ಯಾಗುವದೆಂದು ನಮ್ಮ ಶಾಸ್ತ್ರಗಳಲ್ಲೇ ಇರುವಾಗ ಇದು ಎಂಥಾ ಮೋಕ್ಷಪ್ರೋ ದೇವರಿಗೆ ವೇದ್ಯ.

ಹಿಂದೂ ದರ್ಶನೀಯ ದೇಶಕರಾದ ಪ್ರಸಿದ್ಧ ಶ್ರೀನರ್ಮ ಸ್ವಾಮಿಯವರು ಗೋವಧೆ ಮಾಡುವವರಿಂದ ಆಗುವ ಹಾನಿಗಳನ್ನು ಪ್ರಬಲ ಜನರಿಗೆ ತಿಳಿಸಿಕೊಡುವದಕ್ಕೂ ಮತ್ತು ಗೋವಧೆಯನ್ನು ಹಿಂದುಸ್ಥಾನದಲ್ಲಿ ನಿಲ್ಲಿಸುವದಕ್ಕೆ ಪಾರ್ಲಿಮೆಂಟ್ ಸಭೆಯ ಮೆಂಬರರಿಗೆ ವಿನಂತಿ ಮಾಡಿಕೊಳ್ಳುವದಕ್ಕೂ ಶೀಘ್ರವಾಗಿ ವಿಲಾಯತಿಗೆ ಹೋಗುವರಾಗಿದ್ದಾರೆ.

ಯೂರೋಪ್ ಖಂಡದಲ್ಲಿರುವ ಹಂಗೇರಿಯಾ ಎಂಬ ದೇಶದಲ್ಲಿ ಕೆಲವುಜನ ಸ್ತ್ರೀಯರು ತಮ್ಮ ಗಂಡಂದಿರಿಗೆ ವಿಷಪ್ರಯೋಗಮಾಡಿ ಕೊಂದುಹಾಕಿದರಂತೆ. ಅವರಲ್ಲಿ ೮ ಜನಗಳಿಗೆ ಮರಣ ದಂಡನೆಯನ್ನೂ, ೩ ಜನಗಳಿಗೆ ೧೫ ವರುಷಗಳ ಕಠಿಣ ಸಜಾವನ್ನೂ ವಿಧಿಸಿದರಂತೆ. ನಾಗರೀಕದಶೆಯಲ್ಲಿರುವ ಯೂರೋಪ್ ಖಂಡದವರೂ ಕೂಡ ಹೀಗೆ ಪ್ರವರ್ತಿಸಿದ್ದು ನೋಡಿದರೆ ಆಶ್ಚರ್ಯವಾಗುತ್ತದೆ.

ಈಚೆಗೆ ಹೊಸದಾಗಿ ೩ನೇತರಗತಿ ಪ್ರಯಾಣಸ್ಥರ ಗಾಡಿಗಳು ಕೆಲವು ತಯಾರಾಗಿದೆ. ಅವುಗಳಲ್ಲಿ ಹೆಂಗಸರಿಗೆ ದೇಹಬಾಧಾನಿವೃತ್ತಿಗೆ ಅನುಕೂಲ ಮಾಡಲ್ಪಟ್ಟಿದೆ. ರೈಲುದಾರಿಗೆ ಹೋಗುವ ಮೇಯಿಲ್‌ಟ್ರೈನಿನಿಗೆ ಈಚೆಗೆ ಒಂದುಗಾಡಿ ತಗಲಿಸಿದರು. ಸಧ್ಯಃ ಈತರದ ಗಾಡಿಯೊಂದು ಪ್ರತಿದಿನವೂ ಮೆಯಿಲ್‌ಟ್ರೈನಿನಿಗೂ ಸೇರಿಸಲ್ಪಡುವದು. ಕ್ರಮೇಣ ಪ್ರಯಾಣಸ್ಥರ ಗಾಡಿಗಳೆಲ್ಲಕ್ಕೂ ಒಂದೊಂದರಮೇಲೆ ಸೇರಿಸಲ್ಪಡುವವು.

ಈ ತಿಂಗಳ ೧೯ ನೇ ತಾರೀಖಿನಲ್ಲಿ ಬಿರುಗಾಳಿಯು ವಿಶಾಖಪಟ್ಟಣ, ವಿಸಿಗಾಪಟ್ಟಣ ಯೆಂಬ ಸ್ಥಳದಲ್ಲಿ ಸಮುದ್ರದಲ್ಲಿ ಎದ್ದದ್ದರಿಂದ, ಬರುತ್ತಿದ್ದ ಹಡಗೀ ದೋಣಿಗಳು ಮುಗ್ಗಿ ಹೋಗಿ, ಕಷ್ಟ್ಯಾದಿ ಪದಾರ್ಥಗಳನ್ನೊಳಗೊಂಡು ದೋಣಿಗಳು ಮುಳುಗಿ, ಒಡೆದು ಹೋದದ್ದಲ್ಲದೆ ಅವುಗಳಲ್ಲಿದ್ದ ಸಾಮಾನುಗಳು ಹಣ ಕಾಸು ಕೂಡ ನಷ್ಟವಾದವು. ಮತ್ತು ಆ ಸ್ಥಳಗಳಲ್ಲಿದ್ದ ಜನರಲ್ಲಿ ಸುಮಾರು ೨೦೦ ಜನಗಳ ವರೆಗೂ ಯಮನ ಗೃಹಪ್ರವೇಶವನ್ನು ಮಾಡಿದರೆಂದು ನ್ಯೂಯಾರ್ಕಿನಿಂದ ಬಂದ ತಂತೀ ವರ್ತಮಾನದಿಂದ ತಿಳಿಯಬರುತಿದೆ.

ಈ ತಿಂಗಳ ೧೩ನೇ ತಾರೀಖಿನಲ್ಲಿ ಮದರಾಸ್‌ನೊಳು ಮಾರಿ ಎಂಬ ಕೋಜಮಾನನೊಬ್ಬನು ಪ್ರೊಸ್ಸನ್ ಎಂಬವನನ್ನು ಇಟಗೆ ಕಲ್ಲಿನಿಂದ ಮುಖದಮೇಲೆ ಹೊಡೆದು ಮೂರು ಹಲ್ಲುಗಳನ್ನು ಮುರಿದು ಹಾಕಿದ ತಪ್ಪಿತದಬಗ್ಗೆ ಅಪರಾಧಿ ಮಾರಿಯೆಂಬವನು ಚೀಫ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಆಪಾದಿಸಲ್ಪಟ್ಟನು. ಪರಂತು ಇವನು ತಕ್ಸೀರ್‌ನಡೆಸಲ್ಪಟ್ಟದ್ದಾಗಿಯೂ ವಕೀಲರಲ್ಲಿ ತಾನುಊರಲ್ಲಿಲ್ಲವೆಂದು ರುಜುಮಾಡಲೆತ್ನಿಸಿದನು. ಮ್ಯಾಜಿಸ್ಟ್ರೇಟರು ಅಪರಾಧಿಯಮೇಲೆ ತಕ್ಸೀರ್ ಸ್ಥಿರಪಡಿಸಿ ಅವನಿಗೆ ೬ತಿಂಗಳ ಕಠಿಣಕೈದ್ ಸಜಾ ವಿಧಿಸಿದರು.

ಹಿಂದಿನ ಪತ್ರಿಕೆಯಲ್ಲಿ ತಿಳಿಸಲ್ಪಟ್ಟಿದ್ದಂತೆ, ಪೆಲಂಪಿಸ್ಟ್ರಿಕ್ಟಿಗೆ ಸೇರಿದ ಪಾಲಕೋಡೆಂಬಗ್ರಾಮದಲ್ಲಿ ಹಿಂದೂಗಳಿಗೂ ಮುಸಲ್ಮಾನರಿಗೂ ಕಲಹ ಪ್ರಾಪ್ತವಾಗಿ ಅದರಲ್ಲಿ ಪೂರ್ಣಯೆಂಬವನು ಕೊಲ್ಲಲ್ಪಟ್ಟನು. ಈಕಲಹಕ್ಕೆ ಮುಖ್ಯ ಪ್ರವರ್ತಕರಾದ ಮುಸಲ್ಮಾನರಲ್ಲಿ ೧೯ ಮಂದಿ ದಸ್ತಗಿರಿ ಮಾಡಲ್ಪಟ್ಟು ಸೆಷನ್ಸ್‌ಕಮಿಟ್ ಮಾಡಲ್ಪಟ್ಟಿರುತ್ತಾರೆ. ಈ ಜನಗಳಮೇಲೆ ಖೂನಿ ಮೊದಲಾದ ತಕ್ಸೀರುಗಳು ಆಪಾದಿಸಲ್ಪಟ್ಟವೆ. ಅಪರಾಧಿಗಳಲ್ಲಿ ಒಬ್ಬನು ಪ್ರಾರ್ಥಿಸಿದಂತೆ ತಿರುವಟ್ಟೂರ್ ತಾಲ್ಲೂಕಿನಲ್ಲಿ ನಡೆದ ವಿಚಾರಣೆ ಯೊಂದು ಮೊಕದ್ದಮೆ ಸಹ ಮುಂದಿನ ಸೆಷನ್ಸ್‌ನಲ್ಲಿ ದರ್ಯಾಪ್ತಿಮಾಡಲ್ಪಡುವದು.

ಭರವ್ಯಾಕ್ ಸದರ್ ಸ್ಟೇಷನ್‌ಗೆ ಸೇರಿರುವ ಬಾರ್ನ್‌ಪೂರ್ ಎಂಬ ಗ್ರಾಮದಲ್ಲಿ ೮ ವರ್ಷದ ಬಾಲೆ ನನ್ನೊಬ್ಬಳು ವಯೋಧಿಕನ ಅಪ್ಪಣೆಯಿಂದ ಪ್ರಕಾರ ವಿವಾಹವಾಗಿದ್ದಳಂತೆ. ಆ ಹುಡುಗಿಯ ತಂದೆಯು ಅವಳಿಗೆ ೩ ವರ್ಷದ ವಯಸ್ಸಿನಲ್ಲೇ ಮದುವೆ ಮಾಡಿದನು. ಮದುವೆ ಆದ ೬ ತಿಂಗಳಲ್ಲೇನೇ ಆಬಾಲೆಯು ಋತುವಾದಳಂತೆ. ಆದರೆ ಆ ಹುಡುಗಿಗೆ ಯಾವದಾದರೂ ರೋಗವಿಂದ ಹೀಗಾಯಿತೇನೋ ಎಂದು ತಂದೆಯು ಒಬ್ಬ ನೊಬ್ಬ ಡಾಕ್ಟರಿಗೆ ತೋರಿಸಿ ಕೇಳಲು, ಅವನು ಡಾಕ್ಟರವರು ಆ ಬಾಲೆಗೆ ಯಾವ ರೋಗವೂ ಇಲ್ಲವೆಂದು ಹೇಳಿದರಂತೆ. ಹೀಗೆ ಮೂರು ವರ್ಷದ ಬಾಲೆಗೆ ವಯಸ್ಕರಾದವರಿಗ ಯಾವಮೇಲೆ ಅಂಗಾಂಗಗಳು ಸ್ಪುಟವಾಗಿರುತ್ತವೋ ಅವರಂತೆ ಎಲ್ಲಾ ಸ್ಫುಟವಾಗಿರುತ್ತದಂತೆ.

ಬಂಗಾಳಾಧಿಪತ್ಯದಲ್ಲಿರುವ ಚೆನ್ಸೂರಿನಿಂದ ಪ್ರಂಚೋಪಾಲನೆಂಬುವನು ಒಬ್ಬ ಸುಂದರಸ್ತ್ರೀಯನ್ನು ಪುಸಲಾಯಿಸಿ ಕಲ್ಕತ್ತಾ ಪಟ್ಟಣಕ್ಕೆ ಕರೆದುಕೊಂಡು ಬರುವದಕ್ಕಾಗಿ ರೈಲಿನಲ್ಲಿ ಕೂತುಕೊಂಡು ಬರುತ್ತಿರುವಾಗ, ಮಧ್ಯಮಾರ್ಗದಲ್ಲಿ ಪ್ರೇಂಕರ್‌ಕಾಂತಿ ಜೋಗಿ ಎಂಬುವನು ಇವರು ಕೂತಿದ್ದ ಸ್ಥಳಕ್ಕೆ ಬಂದು ಅತ್ಯಂತ ವಿಸ್ಮಯವನ್ನುಂಟುಮಾಡಿಕೊಂಡು ಬಂದು; ಊರಿಗೆ ಎಲ್ಲರೂ ಇಳಿದು ಹೋದಮೇಲೆ, ಆ ಪ್ರೇಂಕರ್‌ಕಾಂತಿ ಜೋಗಿ ಎಂಬುವನು ಇವರಿಗೆ ಒಂದು ಸ್ಥಳ ಕೊಟ್ಟು ಬಹಳ ಪ್ರೀತಿಯಿಂದ ಕಾಣುತ್ತಿದ್ದನು. ಪ್ರಂಚೋಪಾಲನೆಂಬುವನು ಈ ಜೋಗಿಯು ಸ್ತ್ರೀ ಇಷ್ಟೈ ರದ್ದು ಪ್ರೀತಿಯಾಗಿ ಕಾಣುತ್ತಾನೆ, ಇವನನ್ನು ಕೊಂದುಹಾಕಿ ವಿಸ್ಮಯಿ ನಿರುಪಾಧಿಕವಾಗುತ್ತದೆಂದು ಯೋಚಿಸಿ ಕೊಂದು, ಅದರುಳಿ ಶೈ ಚಲಾಯಿಸಿದನು. ಕೊನೆಗೆ ಅಲಿಪೂರು ಸೆಷನ್ಸ್‌ಕೋರ್ಟಿನಲ್ಲಿ ವಿಚಾರಣೆ ಆಗಿ ಅಪರಾಧಿಗೆ ೭ ವರುಷ ಕಠಿಣಸಜಾ ವಿಧಿಸಿದರು.

ಆಹೇಮಾದಬಾದೊಳು ಪುಣೆ ಷಹರಿನಲ್ಲಿ ಒಂಭತ್ತುವರ್ಷಗಳ ವಯಸ್ಸುಳ್ಳ ಒಬ್ಬ ಹುಡುಗಿಯು ಒಂಭತ್ತುತಿಂಗಳ ವಯಸ್ಸಿನ ಗಂಡುಮಗು ಒಂದೂ ಅತಿ ಕ್ರೂರವಾದರೀತಿಯಲ್ಲಿ ಖೂನಿಮಾಡಲ್ಪಟ್ಟರು ಹ್ಯಾಗೆಂದರೆ, ಸದರೀ ಮಕ್ಕಳಿಬ್ಬರೂ ಪ್ರತಿದಿನವೂ ಒಬ್ಬ ಮಾರ್ವಾಡಿಯ ಮಕ್ಕಳೆಸಂಗಡ ಆಡುವದಕ್ಕಾಗಿ ಆತನ ಮನೆಗೆ ಹೋಗುತಲಿದ್ದವು. ಮಂಗಳವಾರದಿವಸ ಮಕ್ಕಳು ಯಿದಿನಂತೆ ಆಟವಿಲ್ಲ ಮನೆಗೆ ಬರಲಿಲ್ಲವು. ಬುದವಾರದದಿನ ಪೋಲೀಸ್‌ನವರಿಗೆ ವರ್ತಮಾನಕೊಡಲ್ಪಟ್ಟಿತು. ಅವರು ಬಂದು ಮಾರ್ವಾಡಿಯುವನ ಮನೆಯನ್ನು ಶೋಧಿಸಿಮಾಡಿದರು ಒಂದರ ಮೇಲೆಯೊಂದು ಯೆರಡು ಪೆಟ್ಟಿಗೆಗಳು ಸ್ವಲ್ಪಮರೆಯಾಗಿ ಇಟ್ಟಿದ್ದವು. ಅವುಗಳನ್ನು ತೆಗೆದು ಸಿ ನೋಡುವಲ್ಲಿ ಕೆಳಗಿನ ಪೆಟ್ಟಿಗೆಯಲ್ಲಿ ಇಬ್ಬರ ಮುರ್ದೆಗಳು ಸಿಕ್ಕಿದವು ಮೇಲಿನ ಪೆಟ್ಟಿಗೆಯಲ್ಲಿ ಕಟ್ಟಿಗೆ ಇದ್ದ ಸಾಮಾನುಗಳು ತುಂಬಿದ್ದವು. ಸದರೀ ಹುಡುಗಿ ಮನೆಯಿಂದ ಹೊರಡುವಾಗ ಅವಳ ಅದರ ಮೈಮೇಲೆ ೧೦೦ ರೂಪಾಯಿಗಳು ಬಾಳುವಷ್ಟು ಒಡವೆಗಳಿದ್ದವು. ಅವುಗಳಲ್ಲೊಂದಾದರೂ ಮತ್ತಾವದೂ ಸಿಕ್ಕಲಿಲ್ಲವು.

EXTRATS

DEATH OF THE RAJAH OF PITTAPORE.

ಪಿಟ್ಟಾಪುರ ಸಂಸ್ಥಾನದ ಅರಸರಾದ ವೆಂಕಟ ಮಹಾಪತಿ ಗಂಗಾಧರ ರಾಮರಾವ್ ಎಂಬವರು ಕಳೆದ ಮಂಗಳವಾರದ ದಿನ ರಾತ್ರಿ ಪಿಟ್ಟಾಪುರ ಕೋಟೆಯಲ್ಲಿ ಕಾಲವಶರಾದರು. ಇವರ ಮರಣವು ಅನಿರೀಕ್ಷಿತವಲ್ಲವು, ಕಳೆದ ಮೂರು ವರ್ಷಗಳ ಕಾಲದ ಮೊದಲು ಇವರು ಮೂತ್ರಕೋಶ ಸಂಬಂಧವಾದ ರೋಗಾನುಭವದಲ್ಲಿರುತಲಿದ್ದರು. ಕೆಲವು ಕಾಲದ ಹಿಂದೆ ಇವರು ಮದರಾಸಿಗೆ ಬಂದು ಡಾಕ್ಟರ್ ಬ್ರಾಂಕನ್‌ರವರಿಂದ ಚಿಕಿತ್ಸೆ ಮಾಡಿಕೊಳ್ಳುತಲಿದ್ದರು, ಪರಂತು ಚಿಕಿತ್ಸೆ ಕ್ರಮವು ಕೇವಲ ಬಾಧಾ ಶಮನವಾಗಿ ತಿಳದು ಅವರನ್ನು ಬಿಟ್ಟು ಲೋಕ ಪಾವನಿಯಾದ ಗಂಗಾನದೀ ತೀರದಲ್ಲಿ ವಾಸ ಮಾಡುವದುಚಿತವೆಂದೆಣಿಸಿ ತಮ್ಮ ಸ್ವೀಕೃತ ಪುತ್ರನಿಂದೊಡಗೂಡಿ ಕಾಶಿಗೆ ಹೊರಟು ಹೋದರು. ಅಲ್ಲಿನ ಹವಾ ಪುತ್ರನಿಗೆ ಅನುಕೂಲಿಸದೆ ಅವರು ವಾಪಸ್ ಹೊರಟುಬಂದುಬಿಟ್ಟರು. ಅರಸರವರು ಕಾಶಿಯಲ್ಲಿ ಆರು ತಿಂಗಳ ಕಾಲ ವಾಸ ಮಾಡುತಲಿದ್ದು, ತಮಗೆ ರೋಗ ನಿವೃತ್ತಿಯುಂಟಾದಂತೆ ತಿಳಿದು ಪಿಟ್ಟಾಪುರಕ್ಕೆ ಹಿಂತಿರುಗಿಬಂದರು. ಅಲ್ಲಿಗೆ ಬಂದಮೇಲೆ ಮರಳಿ ಕೇವಲ ಅಸ್ವಸ್ಥರ ಕಿಯುಂಟಾಗಿ ಮೃತಪಟ್ಟರು. ಇವರ ಹಿರಿಯರು ಯಿರುವ ಸಂಸ್ಥಾನ ಕಾಲಕ್ಕಿಂತಲೂ ಅಧಿಕವಾಗಿಯೇ ಪಿಟ್ಟಾಪುರ ಜಮೀನ್‌ದಾರಿಯನ್ನು ಅನುಭವಿಸುತಿದ್ದರೆ ಸನ್ ೧೭೭೦ ನೇ ಇಸವಿಯಲ್ಲಿ ರಾಮಚಂದ್ರರಾಯನ್ನು ಎಂಬವರಿಗೆ ಕೊಡಲ್ಪಟ್ಟದ್ದು ಮೊದಲು ಸದರೀ ಯವರ ವಂಶವು ಐಶ್ವರ್ಯದ ಲ್ಲೂ ಗೌರವದಲ್ಲೂ ವೃದ್ಧಿಯಾಗುತಬಂದರು. ಈಗ ೩೭೦ ಸಮ್ಮೆರಿಗಳ ವಿಸ್ತೀರ್ಣ ವುಳ್ಳ ದೇಶವೂ, ೧,೪೪,೦೮೧ ಪ್ರಜೆಯೂ ಉಳ್ಳವಾಗಿದೆ. ಇದರ ಜಮೀನ್‌ದಾರಿಯಲ್ಲಿ ಲೆವಿ ಮ್ಯಾದ ಹುಟ್ಟುವಳಿಯು ಎಂಟು ಲಕ್ಷದ ಲಕ್ಷ ರೂಪಾಯಿಗಳಾಗುತಿವೆ. ಮೃತಪಟ್ಟ ಅರಸರವರು ವೃದ್ಧರವಾದ ದೈವಭಕ್ತಿಯುಳ್ಳವರು, ಕಾಶೀಗೂ ರಾಮೇಶ್ವರಕ್ಕೂ ಅನೇಕಾವರ್ತಿ ತೀರ್ಥಯಾತ್ರೆ ಮಾಡಿದರ್ತಾರೆ. ಧರ್ಮಚಿಂತಯುಳ್ಳವರು, ಕಾಶಿ ನಾಣಾವಿನಲ್ಲಿ ಎಂಬ ಬೈಸ್ಕೂಲ್ ಮತ್ತು ಒಂದು ಬಾಲಿಕಾ ಪಾಠಶಾಲೆಯಂ ಸ್ಥಾಪಿಸಿದರು. ಬಂಗಾಳೆ ಕ್ಷಾಮದಲ್ಲಿ ೧೦,೦೦೦ ರೂ|| ಗಳು ಕೊಟ್ಟರು. ಇವರಿಗೆ ಯೇಳುಮಂದಿ ಹೆಂಡತಿಯರು, ಅವರ ಪೈಕಿ ಐದುಮಂದಿ ಜೀವಿಸಿರುತ್ತಾರೆ. ಒಬ್ಬನೇ ಒಬ್ಬ ಮಗನಿರುತ್ತಾನೆ. ಈತನು ನ್ಯಾಯ್ಯವಾದ ಪುತ್ರನಲ್ಲವೆಂದು ಸ್ವೀಕೃತ ಪುತ್ರನು ಹೇಳುತ್ತಾರೆ. ಈ ವಿಷಯ ಪ್ರೈಕೋರ್ಟಿನವರ ಸ್ವಾಧೀನಕ್ಕೆ ಕಳುಹಿಸಲ್ಪಡುವದೆಂದು ನಿರೀಕ್ಷಿಸಲ್ಪಟ್ಟಿದೆ.

BANGALORE.—Printed and published at the KALYANIK PRESS, No. 114, SRINIVASA MANDIRAM ROAD, PETTAH.—1890.

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಕಾಮವಿವಿದಪ್ರವೃತ್ತ್ಯಪಗಮಾರ್ಥ್ಯಕರ್ನಾಟಕಪ್ರಕಾಶನಪರಾಭಿಧಾಪ್ರಸಿತಸಾಹಿತೀಃಖೋಷಿತಾ। ಮೃಗಾಂಕಪಕ್ಷವಾಸರೇನಿಮಿತಮುದ್ರಣಾಸಜ್ಜಸ್ತೈರ್ಥಿ ಕಾಸುಪರಿಪೋಷಿತಾದಿಶತಿಮಾನಸಂಸುಮಂಗಳಂ॥

Vol. XVII] BANGALORE—MONDAY, AUGUST 4, 1890. [No. 31.

ಸಂಪುಟ ೧೭.] ಬೆಂಗಳೂರು:—ಸನ್ ೧೮೯೦ನೇ ಇಸವಿ ಆಗಸ್ಟ್ ೪ ನೇ ತಾರೀಖು ಸೋಮವಾರ. [ಸಂಖ್ಯೆ ೩೧.

ಕರ್ನಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಸಾಲ್ ಒಕ್ಕೆ	ಸ್ಥಳದವರಿಗೆ ಟಪಾಲಿಲ್ಲದೆ	ಪರಸ್ಥಳದವರಿಗೆ ಟಪಾಲ್ ಸಹಿತ
ಮುಂಗಡವಾಗಿ ಕೊಡುವವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡ ಕೊಡುವವರಿಗೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ [illegible] ತಾರೀಖಿನ ಒಳಗಾಗಿ ಚಂದಾ ಮೊಬಲಗು ಕಳುಹಿ [illegible] ದರದ ಪತ್ರಿಕೆ ಕಳುಹಿಸಲ್ಪಡುವದು. [illegible] ಇಂಗ್ಲಿಷ್ [illegible] ಕನ್ನಡಭಾಗವನ್ನಾಗಲಿ [illegible] ತೆಗೆದುಕೊಳ್ಳಬಹುದು. [illegible] ತಿಂಗಳಿಗಿಂತ ಕಡಿಮೆ [illegible] ಚಂದಾ [illegible] ಅಂಗೀಕರಿಸಲ್ಪಡಲಾರದು.

[illegible] ಬಂದ [illegible] ಅಥವಾ [illegible] ಡಿಸ್ಕೌಂಟ್ [illegible] ಡಿಸ್ಕೌಂಟ್ [illegible] ಮೊಬಲಗಿನಲ್ಲಿ [illegible] ಲೆಕ್ಕಕ್ಕೆ [illegible]

ಪ್ರಕಟನೆಯ ರಿವಾಜ್.

ಮೊದಲನೆ ಸಾರಿಗೆ ಪಙ್ಕ್ತಿ ಒಂದಕ್ಕೆ		0—2—0
ಎರಡನೆಯದಕ್ಕೆ ಪಙ್ಕ್ತಿ ಒಂದಕ್ಕೆ		0—1—0

ಷರಾ—[illegible] ಈ ಪತ್ರಿಕೆಯಲ್ಲಿ [illegible] ಸ್ಪಷ್ಟವಾಗಿ ತಿಳಿಸತಕ್ಕದ್ದು. [illegible] ಪ್ರಕಟಿಸಲ್ಪಟ್ಟ [illegible] ಪ್ರಕಟನೆಗಳನ್ನು [illegible] ಈ ಪತ್ರಿಕೆಗೆ [illegible] ಕಳುಹಿಸಲ್ಪಡಲಾರವು.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥವಪೇಕ್ಷೆಯುಳ್ಳವರು ಮೊಬಲಗನ್ನು [illegible] ಕಳುಹಿಸಲ್ಪಡುವದು. ಮೊಬಲಗು ಇಲ್ಲದ [illegible] ಕೊಡಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್

ಟೇಬಲ್ ಪ್ರತಿ ಒಂದಕ್ಕೆ ರೂ 5- 0—0

ಟಿ. ಬಿ. ವೆಂಕಟಾಚಾರ್,

[illegible]

ADVERTISEMENTS.

ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಪಸ್ತಕ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

	ಟಪಾಲ್ ಕೂಲಿ ರೂ. ಆ. ಪೈ
ಸಟೀಕಾ [illegible] ಸಂಗ್ರಹ ...	೫ ೦ ೦
,, [illegible] ...	೧ ೧ ೦
,, [illegible] ...	೦ ೪ ೦
,, [illegible] ...	೧ ೨ ೦
,, [illegible] ...	೧ ೧೨ ೦
,, [illegible] ರಾಮಾಯಣ ...	೦ ೮ ೦
,, [illegible] ಗೀತೆ ...	೦ ೧ ೬
,, [illegible] (ಸಾಭಾಷ್ಯ)	೦ ೬ ೦
[illegible] ಸಹಸ್ರನಾಮ ವಗೈರೆ ...	೦ ೫ ೦
[illegible] ನಾಮ ..	೦ ೩ ೧
[illegible] ಮೃತ ...	೦ ೨ ೬
ತ್ರಿಕಾಂಡ ಅಮರ ಮೂಲ ...	೦ ೨ ೬
೧ ಕಾಂಡ ...	೦ ೧ ೩

ಕನ್ನಡ ಗ್ರಂಥಗಳು.

[illegible] ಪ್ರತಿ ..	೩ ೦ ೦
[illegible] ..	೧ ೮ ೦
[illegible] ...	೧ ೪ ೦
[illegible] .	೦ ೪ ೦
[illegible] ...	೦ ೪ ೦
[illegible] ...	೦ ೨ ೬
[illegible] ಪರಿಣಯ ..	೦ ೨ ೬
[illegible] ಪರಿಣಯ ...	೦ ೩ ೦
[illegible] ಚರಿತ್ರೆ ...	೦ ೨ ೦
[illegible] ಚರಿತ್ರೆ ...	೦ ೭ ೦
[illegible] ಚಿಕಿತ್ಸೆ ..	೦ ೨ ೬
[illegible] ...	೧ ೦ ೦
[illegible] ವಿಲಾಸ ...	೦ ೧೨ ೦

ನೋಟೀಸ್.

ಮನೆಗಳಲ್ಲಿ ಗಿಲಿಟ್ ಮಾಡುವದಕ್ಕೆ ಅನುಕೂಲವಾದ ಬೆಳ್ಳಿ ದ್ರಾವಕವು.

ಈ ಬೆಳ್ಳಿ ದ್ರಾವಕವು [illegible] ತಟ್ಟೆಗಳ [illegible] ತಾಮ್ರ, ಹಿತ್ತಾಳೆ ವಗೈರೆ [illegible] ಗಿಲಿಟ್ ಮಾಡು [illegible] ಉಪಯುಕ್ತವಾಗಿರುತ್ತದೆ. [illegible] ದ್ರಾವಕವು ಬೆಳ್ಳಿ ಮತ್ತು ಬೆಳ್ಳಿ [illegible] ಇದರಿಂದ [illegible] ಗಿಲಿಟ್ ಮಾಡುವದಕ್ಕಿಂತ [illegible]

ಇದರ ಕ್ರಯ ಸೀಸೆ ೧ ಕ್ಕೆ ೨—೮—೦

ಚಿನ್ನದ ದ್ರಾವಕವು.

ಇದು ಬೆಳ್ಳಿ, ಹಿತ್ತಾಳೆ, ತಾಮ್ರ ವಗೈರೆ ಪದಾರ್ಥಗಳನ್ನು ಗಿಲ್ಟ್ ಮಾಡಲಿಕ್ಕೆ ಬಹಳ ಉಪಯುಕ್ತವಾಗಿರುವದು. [illegible] ಶುದ್ಧವಾದ ಬಂಗಾರದಲ್ಲಿ ತಯಾರಾದದ್ದಾಗಿರುತ್ತದೆ. ಬೆಳ್ಳಿ ಆಭರಣಗಳನ್ನು ಗಿಲ್ಟ್ ಮಾಡಲಿಕ್ಕೆ ಈ ದ್ರಾವಕವು ಕೇವಲ ಪ್ರಯೋಜನಕರವಾದದ್ದು.

ಇದರ ಕ್ರಯ ಸೀಸೆ ಒಂದಕ್ಕೆ ೩—೪—೦

ಬೇಕಾದವರು [illegible] ಬೆಳ್ಳಿ [illegible] ಯ ವ್ಯಾಪಾರಿಗೆ ಬರೆದು ತರಿಸಿಕೊಳ್ಳಬಹುದು.

ಕೊಡಗು ಫಾರೆಸ್ಟ್ ಇಲಾಖಾ.

ನೋಟೀಸ್.

ಸನ್ 1890ನೇ ಇಸವಿ ಜುಲೈ ತಾರೀಖ್ 10ರಲ್ಲು.

ಇದರಡಿ ನಮೂದಿಸಿದ ತೋರೆ ವಗೈರೆ ಸಾಮಾನುಗಳು [illegible] ಡಿಪೋದಲ್ಲಿ ಸನ್ 1890ನೇ ಇಸವಿ ಆಗಸ್ಟ್ ತಾರೀಖ್ 21 ರಲ್ಲಿ ಹರಾಜ್ ಹಾಕಲ್ಪಡುತ್ತವೆ.

ತ್ಯಾಗದ ತೋಲೆಗಳು	450...13800	ಅಡಿ.
[illegible] ವಗೈರೆ	580...15300	,,
[illegible]	0750... 8550	,,
[illegible] ಮರ ಕುಯಿದ ಸಾಮಾನು	770... 1160	,,
[illegible] ಮರ	28910...	

ಷರಾ:—ಸನ್ 1889ನೇ ಇಸವಿ ಡಿಸೆಂಬರ್ ತಾರೀಖ್ 19 ನಂಬರ್ 53ರ ಚೀಫ್ ಕಮಿಷನರ್ ಸಾಹೇಬರವರ ನೋಟಿಫಿಕೇಶನ್ ಮೇರೆ ಮರದ ಕ್ರಯದ ಪೈಕಿ ಕಾಲದ ಹತ್ತರಷ್ಟು ಮೊಬಲಗನ್ನು ಹರಾಜ್ ಕಾಲದಲ್ಲಿ ದಾಖಲು ಮಾಡಿ ಬಾಕೀ ಮೊಬಲಗನ್ನ ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗೆ ದಾಖಲು ಮಾಡತಕ್ಕದ್ದು.

J. Mc'Kee,
ಡಿಪ್ಟಿ ಕನ್ಸರ್ವೇಟರ್.

ನೋಟೀಸ್.

ಮೈಸೂರು ಶೀಮೆಯ ಚೀಫ್ ಕೋರ್ಟಿನಲ್ಲಿ ಸನ್ 1890ನೇ ಇಸವಿ ಮಿಸಲೇನಿಯಸ್ ಪಿ॥ ನಂಬರ್ 166

ಅರ್ಜಿದಾರರು

ಗೌರಿಬಿದನೂರು ತಾಲ್ಲೂಕು ನಾಮಗೊಂಡ್ಲುನಲ್ಲಿ ಇರುವ ಶ್ರೀ ಲಕ್ಷ್ಮೀ ಕೃಷ್ಣನಿಧಿ ಕಂಪೆನಿ ಷೇರ್‌ದಾರ್ ವೆಂಕಟಾದ್ರಿ ವಗೈರೇರು.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ:—

ಮೇಲ್ಕಂಡ ವೆಂಕಟಾದ್ರಿ ವಗೈರೇರು ಮೇಲ್ಕಂಡ ಕಂಪೆನಿ ವೈಂಡಪ್ ಮಾಡಬೇಕೆಂದು ಷೇರ್‌ದಾರ್ ನಿಬಂಧನೆ ಮಾಡಿ [illegible] ರುವದರಿಂದಲೂ, ಕೆಲವು ಷೇರ್‌ದಾರರು ಕಂಪೆನಿಯವರ ಮೇಲೆ ಸಿವಿಲ್ ಅಥವಾ ಕ್ರಿಮಿನಲ್‌ನಲ್ಲಿ ದಾವಾ ವಗೈರೆ ಹೂಡಿ [illegible] ಮಾಡಿಸಬೇಕೆಂದು ಪ್ರಯತ್ನಿಸುವದರಿಂದಲೂ ಕಂಪೆನಿ ವೈಂಡಪ್ ಮಾಡಿಸಿ ಈಗ ನೇಮಕದರಾಗಿರುವ ಲಿಕ್ವಿಡೇಟರ್ ವೆಂಕಟಾದ್ರಿಯವರ ಜೊತೆಗೆ ಬಿ. ಕೃಷ್ಣರಾಯರನ್ನ ಜಾಯಿಂಟ್ ಲಿಕ್ವಿಡೇಟರಾಗಿ ನೇಮಕ ಮಾಡಬೇಕೆಂದು ವಗೈರೆ ಅರ್ಜಿ ಕೊಟ್ಟಿರುತ್ತಾರೆ. ಇದರ ವಿಚಾರಣೆಬಗ್ಗೆ ೧೮೯೦ನೇ ಇಸವಿ ಆಗಸ್ಟ್ ತಿಂಗಳು ೧೨ನೇ ತಾರೀಖ್ ಮಂಗಳವಾರ ಹಿಯರಿಂಗ್ ಮುಕರರ್ ಮಾಡಿದೆ. ಆ ತಾರೀಖ್ ದಿವ 11 ಘಂಟೆಗೆ ಆಕ್ಷೇಪಣೆ ಇರತಕ್ಕವರೆಲ್ಲರು ಅವರೇ ಆಗಲಿ ಅವರ ತರಫ್ ಮೊಖ್ತ್ಯಾರ್ ಪಡೆದ ಅಡ್ವೋಕೇಟರೇ ಆಗಲಿ ಈ ಕೋರ್ಟ್ ರೂಬರೂಬ್ ಹಾಜರಾಗತಕ್ಕದ್ದು.

By the Court,

ತಾ॥ 18ನೇ ಮಾಹೆ ಜುಲೈ 1890 } S. R. Subbaraya Iyer,
Registrar

ನೋಟೀಸ್.

ಮೈಸೂರು ಶೀಮೆಯ ಚೀಫ್ ಕೋರ್ಟಿನಲ್ಲಿ ಸನ್ 1890ನೇ ಇಸವಿ ಮಿಸಲೇನಿಯಸ್ ಪಿ॥ ನಂಬರ್ 115

ಅರ್ಜಿದಾರರು)

ಚಿಂತಾಮಣಿ ತಾಲ್ಲೂಕು ಶ್ರೀನಿವಾಸಪುರದಲ್ಲಿರುವ ಜನಾರ್ದನ ಕಂಪೆನಿ ಷೇರ್‌ದಾರ್ ನಂಜುಂಡಯ್ಯ ವಗೈರೇರು.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ:—

ಮೇಲ್ಕಂಡ ನಂಜುಂಡಯ್ಯ ವಗೈರೇರು— ಮೇಲ್ಕಂಡ ಕಂಪೆನಿ ಪ್ರೆಸಿಡೆಂಟ್ ಸುಬ್ಬರಾಯಪ್ಪ ವಗೈರೇರು ಕಂಪೆನಿ ವೈಂಡಪ್ ಆಗಬೇಕಾದ್ದಾಗ್ಯೂ ಆಗಿ ಇರುವಂತೆಯೂ ಆತಳತೆ ನಡೆಯುವದಿಲ್ಲವೆಂತಲೂ ನೋಟೀಸ್ ಕೊಟ್ಟಿರುವದಲ್ಲದೆ ಲೆಕ್ಕಗಳು ಕೇಳಿದರೆ ತೋರಿಸದೇಲೂ ಹಣಗಳು ಕೊಡದೇಲೂ ಕಂಪೆನೀಲಿದ್ದ ನಗದು ಮೊಬಲಗು ಗಿರಿವಿ ನಗಗಳು ಮತ್ತು ಸರ್ಕಾರದ ಟ್ರೆಜರೀಲಿದ್ದ ಹಣ ಸಹ ತೆಗೆದುಕೊಂಡು ತಮ್ಮ ಸ್ವಂತಕ್ಕೆ ಉಪಯೋಗಿಸಿ ಕೊಳ್ಳುತ್ತಾರಾದ್ದರಿಂದ ಕಂಪೆನಿ ವೈಂಡಪ್ ಮಾಡಿಸಬೇಕೆಂದು ವಗೈರೇ ಅರ್ಜಿ ಕೊಟ್ಟಿರುತ್ತಾರೆ. ಇದರ ವಿಚಾರಣೆ ಬಗ್ಗೆ ಸನ್ 1890ನೇ ಇಸವಿ ಆಗಸ್ಟ್ 19ನೇ ತಾರೀಖ್ ಮಂಗಳವಾರ ಹಿಯರಿಂಗ್ ಮುಕರರ್ ಮಾಡಿ ಇದೆ. ಆ ತಾರೀಖ್ ದಿವ 11 ಘಂಟೆಗೆ ಆಕ್ಷೇಪಣೆ ಇರತಕ್ಕವರೆಲ್ಲರೂ ಅವರೇ ಆಗಲಿ, ಅವರ ತರಫ್ ಮೊಖ್ತ್ಯಾರಿ ಪಡೆದ ಅಡ್ವೋಕೇಟರಾಗಲಿ ಈ ಕೋರ್ಟ್ ರೂಬರೂಬ್ ಹಾಜರಾಗತಕ್ಕದ್ದು.

By the Court,

ತಾ॥ 18ನೇ ಮಾಹೆ ಜುಲೈ 1890 } S. R. Subbaraya Iyer.
Registrar.

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, AUGUST 4, 1890.

೧೮೯೦ನೇ ಆಗಸ್ಟ್ ೪ನೇ ಸೋಮವಾರ

SOCIAL REFORM.

ಬಳ್ಳಾರಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಸನ್ಮಾರ್ಗ ಸಮಾಜವೆಂಬ ಒಂದು ಸಂಘದಲ್ಲಿ ಸದರೀ ಸ್ಥಳದ ಮ್ಯೂನಿಸಿಪಲ್ ಸ್ಕೂಲ್ ಹೆಡ್‌ಮಾಸ್ಟರಾಗಿಯೂ ಆ ಸಮಾಜದ ಒಬ್ಬ ಮೆಂಬರಾಗಿಯೂ ಇರುತಲಿರುವ ಮಿ॥ ಎ. ಸಿ. ಪ್ರಣತಾರ್ತಿಹರ ಅಯ್ಯರ್ ಬಿ. ಎ. ಎಂಬವರು, ಈಚೆಗೆ ಹಿಂದೂ ಸಮುದಾಚಾರ ಪರಿಷ್ಕರಣ ವಿಷಯವಾಗಿ ಉಪನ್ಯಾಸ ಮಾಡಿ, ಈಗ ಹಿಂದೂ ಸಮಾಜದಲ್ಲಿ ನೆಲೆಗೊಂಡಿರುವ ಅನೇಕವಿಧ ಕೆಡುಕುಗಳ ಪೈಕಿ

ಕೇವಲ ಪ್ರಾಧಾನ್ಯಗಳೆಂದು ಭಾವಿಸಿದ ಇವರಡಿ ಕಂಡ ಒಂಭತ್ತು ವಿಷಯಗಳು ಕೂಡಲೇ ಪರಿಷ್ಕರಣಾರ್ಹಗಳಾಗಿರುವಂತೆಯೂ, ಹಿಂದೂಗಳ ಶ್ರೇಯೋಭಿವೃದ್ಧಿಯಂ ಕೋರತಕ್ಕವರೆಲ್ಲರೂ ಅವುಗಳ ನಿವೃತ್ತಿಯ ವಿಷಯದಲ್ಲಿ ಸಾಧ್ಯಗಳಾದ ಏರ್ಪಾಡುಗಳನ್ನೆಲ್ಲ ಮಾಡಿ ಕ್ರಮಪಡಿಸಬೇಕಾದುದು ಕೇವಲ ಆವಶ್ಯಕವೆಂಬದಾಗಿಯೂ ತಿಳಿಸಿದಂತೆ ಕೇಳಲಾದೆವು ಮೇಲೆಕಂಡ ಅಯ್ಯರವರು ನಮೂದಿಸುವ ಪ್ರಬಲ ದೋಷಗಳು ಯಾವವೆಂದರೆ:—

೧. ವಾರಾಂಗನೆಯರನ್ನು ವಿವಾಹಾದಿ ಕಾಲಗಳಲ್ಲಿಯೂ, ಭಗವದುತ್ಸವಾದಿ ಕಾಲಗಳಲ್ಲಿಯೂ ಕರೆಯಿಸಿ ನೃತ್ತ ಗೀತ ವಾದ್ಯಗಳಂ ಮಾಡಿಸುವದಂ ನಿಲ್ಲಿಸತಕ್ಕದ್ದು.

೨. ಹಿಂದೂ ಸ್ತ್ರೀಯರು ತಮ್ಮ ಗೃಹಗಳಲ್ಲಿ ಮಾನಹಾನಿಕರಗಳಾದ ಹಾಡುಗಳನ್ನು ಹಾಡುವ ವಾಡಿಕೆಯಂ ತೊಲಗಿಸತಕ್ಕದ್ದು.

೩. ನೂತನವಾಗಿ ಪ್ರಬುದ್ಧಳಾದ ಹುಡಿಗಿಯನ್ನು ಬಹುಮಂದಿ ಪುರುಷರ ಮುಂದೆ ಕುಳ್ಳಿರಿಸಿ ಆಕೆಯನ್ನೆಲ್ಲರೂ ನೋಡುವಂತೆ ಮಾಡುವ ಅತಿತುಚ್ಛವಾದಪದ್ಧತಿಯಂ ನಿವೃತ್ತಿಸತಕ್ಕದ್ದು.

೪. ರಜಸ್ವಲೆಯಾದವರು ಬಹಿರಂಗವಾಗಿ ಹೊರಗೆ ಸಂಚರಿಸುತ್ತ ತಟಾಕಾದಿಗಳಿಗೆ ಹೋಗಿ ಸ್ನಾನ ಮಾಡುವಂತ ದುರಾಚಾರವು ನಿವೃತ್ತಿಸತಕ್ಕದ್ದು.

೫ ಸ್ತ್ರೀಯರು ಹೊರಗೆ ಸಂಚರಿಸತಕ್ಕ ಕಾಲದಲ್ಲಿ ಛತ್ರಿಯನ್ನೂ ಪಾದರಕ್ಷಗಳನ್ನೂ ಉಪಯೋಗಿಸದೆಹೋಗುವದಂ ಅಭ್ಯಾಸಪಡಿಸತಕ್ಕದ್ದು.

೬. ಸ್ತ್ರೀಯರು ಇತರ ಸಂಪ್ರದಾಯದವರೊಡನೆ ಸಹವಾಸ ಸಹಭೋಜನ ಸಲ್ಲಾಪಾದಿಗಳಂ ನಡೆಸುವಂತೆ ಮಾಡತಕ್ಕದ್ದು.

೭. ಬ್ರಾಹ್ಮಣರೆಲ್ಲರು ತಮ್ಮಲ್ಲಿ ನೆಲಗೊಂಡಿರುವ ಅಂತರಾಳಿಕ ಪ್ರಭೇದಗಳನ್ನೆಲ್ಲ ತೊರೆದು ಪರಸ್ಪರ ಸಂಬಂಧವು ಬೆಳಸತಕ್ಕದ್ದು.

೮. ಕೆಲವು ಕಾಲದಮೇಲೆ ಪ್ರಮಾತಸ್ಪರ್ಶ ಸಂಬಂಧವು ಮಾಡತಕ್ಕದ್ದು.

೯. ವಿವಾಹವಿರ್ಚನ್ನು ಮಿತಪಡಿಸತಕ್ಕದ್ದು.

ಮೇಲೆ ಕಂಡ ಒಂಭತ್ತು ವಿಷಯಗಳ ಪೈಕಿ ಕೆಲವು ದೇಶ ಜಾತಿ ಮತ ಕುಲ ಸಂಪ್ರದಾಯಗಳಿಗೆ ಸಂಬಂಧಿಸಿದವಾಗಿಯೂ, ಇನ್ನೂ ಕೆಲವು ಹಿಂದೂ ಸಮುದಾಯಕ್ಕೆ ಸಾಮಾನ್ಯೇನ ಸೇರಿದವಾಗಿಯೂ ಇರುತಿವೆ. ಪ್ರಾಯೇಣ ಇವುಗಳೆಲ್ಲವೂ ಆದಿಯಲ್ಲಿ ಸದುದ್ದೇಶಗಳಿಂದೇರ್ಪಟ್ಟು ಕಡೆಗೆ ಅವಿಚಾರಪರರಲ್ಲದೆ ಶ್ರದ್ಧಾಜಡರಿಂದ ಅತ್ಯಾಚಾರವಾಗಿ ಅಂಗೀಕರಿಸಲ್ಪಟ್ಟದರಿಂದ ಅವು ಈಗಿನ ನವನಾಗರಕರಿಗೆ ದುಸ್ಸಹವಾದ ದುರಾಚಾರಗಳಾಗಿ ಕುಟಿಲಿದವು. ಇವುಗಳಲ್ಲೊಕ್ಕೆ ಮೊದಲನೆಯದು ಜಾತಿ ಮತ ತಾರತಮ್ಯಗಳಿಲ್ಲದೆ ಯೆಲ್ಲರಲ್ಲಿಯೂ ನೆಲಗೊಂಡಿರುವ ಪುರಾತನ ಪದ್ಧತಿಯಾಗಿರುತಿದೆ. ತಾಫೋ ಎಂಬುವದು ಸಂತೋಷಕಾಲಗಳಲ್ಲಿಯೂ ಭಕ್ತಿ ವಿಶ್ವಾಸಗಳನ್ನು ವ್ಯಕ್ತಪಡಿಸಬೇಕಾದ ಸಂದರ್ಭಗಳಲ್ಲಿಯೂ ಜರಿಗಿಸಲ್ಪಡತಕ್ಕದ್ದಾಗಿರುತಿದೆ. ಇದನ್ನು ಮೌಕೂಫ಼ೆ ಮಾಡಬೇಕಾಗಿದ್ದರೆ ಮೊದಲು ಅನಿಷ್ಟ ನಿವೃತ್ತಿಯನ್ನೂ ಬಳಿಕ ಇಷ್ಟಪ್ರಾಪ್ತಿಯನ್ನೂ ಕುರಿತು ನಿರ್ಣಯಿಸಬೇಕಾಗಿರುತಿದೆ. ಈ ವಿಷಯದಲ್ಲಿ ವಿರುದ್ಧವಾಗಿ ಯಾರು ಏನು ಹೇಳದಾಗ್ಯೂ ವಾರಾಂಗನೆಯರು ದುವೃತ್ತಿಯುಳ್ಳವರೆಂತಲೂ ಅಂತವರ ಸಹವಾಸವು ಸಲ್ಲಾಪಾದಿಗಳಿಂದ ಅಪವಿತ್ರರಾಗುವರು. ಇತರರಿಗೂ ಪ್ರಂಟಾಗಿ ತನ್ಮೂಲಕ ಅವರೂ ಕೆಟ್ಟುಹೋಗುವರೆಂತಲೂ, ಆದ್ದರಿಂದ ಅವರನ್ನು ಆತ್ಯಂತಿಕ ಕೋಪದಿಂದ ಬಿಡಬೇಕಲ್ಲದೆ ಅವರಿಗೆ ಪುರಮಧ್ಯದಲ್ಲಿ ವಾಸ ಮಾಡಲಿಕ್ಕೆ ಸಹ ಅವಕಾಶ ಕೊಡಕೂಡದೆಂಬದಾಗಿರುತಿದೆ. ಪುಂಸತ್ವವು ಯಾವಾಗಲಾದರು ಪರಸ್ತ್ರೀಗಮನಕ್ಕೆ ಅವಕಾಶ ಕೊಡದಿದ್ದುದರಿಂದ ಅವನ್ನೇ ನಿವೃತ್ತಿಸಿಕೊಳ್ಳುವದು ಉತ್ತಮವೆಂದು ಹೇಳತಕ್ಕವರ ವಾದವಂತೆಯೇ ಮೇಲೆ ಕಂಡವರ ಪಕ್ಷವನ್ನೂ ಭಾವಿಸಬೇಕಾಗಿರುತಿದೆ. ಪರಂತು ಸಂತಾನವನ್ನೂ ಸಾಂಸಾರಿಕ ಸುಖವನ್ನೂ ಸಾಮಾನ್ಯೇನ ಪುರುಷರೆಲ್ಲರೂ ಅಪೇಕ್ಷಿಸದಿರುವದಿಲ್ಲವಾಗಿ ಅಂತವರಿಗೆ ಪುಂಸತ್ವವೆಂಬದು ಹ್ಯಾಗೆ ಆವಶ್ಯಕವೋ ತದ್ವತ್ ಸರಸತೆ, ಸದತೆ, ನಾಗರಿಕತೆ, ಅನುರಾಗ, ಔದಾರ್ಯ ಮೊದಲಾದ ಅನೇಕ ಸಾಂಸಾರಿಕ ಗುಣಗಳಂ ಪಡೆದು ತನ್ಮೂಲಕ ಸುಖಪಡಬೇಕೆಂಬ ಕೋರಿಕೆಯುಳ್ಳವರಿಗೆ ಮೇಲೆಕಂಡ ತಾಫೆಯೂ ಆವಶ್ಯಕವೆಂದು ತೋರದೆ ಹೋಗಲಾರದು. ಭಗವದುತ್ಸವಾದಿ ಕಾಲಗಳಲ್ಲಿ ವಾರಾಂಗನೆಯರಂ ಕರೆಯಿಸಿ ಅವರಮೂಲಕ ದೇವರಿಗೆ ಆರತಿ ಮೊದಲಾದ ಸೇವೆಗಳಂ ಮಾಡಿಸುವದು ದೇವರಿಗೆ ವ್ಯಭಿಚಾರವಂ ಕಲಿಸಲಿಕ್ಕಲ್ಲವು, ಪರಂತು ನಾವು ಪ್ರಿಯನಾದ ಅರಸನಿಗೆ ಹ್ಯಾಗೆ ಷೋಡಶೋಪಚಾರಗಳಂ ಮಾಡುವೆವೋ ಹಾಗೆಯೇ ರವಸ್ಥಿಕನಾದ ಭಗವಂತನಿಗೂ ನಕಲೀಸ್ವತಿಶಯವಾಗಿ ನಮ್ಮ ಭಕ್ತಿ ಪ್ರದರ್ಶನಾರ್ಥವು ಮಾಡುತ್ತೇವೆ. ಇದರಿಂದ ಆತನಿಗೇನು ಪ್ರಯೋಜನವೆಂದಾಗಲಿ ನಮಗೇನು ಪ್ರತಿಫಲವೆಂದಾಗಲಿ ಕೇಳುವ ಪ್ರಶ್ನೆಗೆ ವಿ (ಪ್ರಾರಾಧನಾತ) ಮದನ್ನನುಸರಿಸಿದ ಉತ್ತರವಾಗಿರುತಿದೆ. ಈ ವಾರಾಂಗನಾ ಸಮೂಹವು ಯಾವಕಾಲದಲ್ಲಿ ಯಾರಿಂದ ಯಾವ ವ್ಯಪದೇಶದೊಡನೆ ಮೊದಲು ಏರ್ಪಟ್ಟತೊ ಅದಂ ಸ್ವಲ್ಪವಿಚಾರಮಾಡುವಣ— ಸ್ತ್ರೀಯರಿಗೆ ವೈವಾಹಿಕ ಕ್ರಮವು ಯಾವಕಾಲದಲ್ಲಿ ನೆಲೆಗೊಂಡಿತೋ ಆಕಾಲದಲ್ಲಿಯೇ ಸ್ವೀಯಾ, ಪರಕೀಯಾ, ಸಾಮಾನ್ಯಾ ಯೆಂಬ ಮೂರು ಪ್ರಭೇದವನ್ನೇರ್ಪಡಿಸಬೇಕಾಯಿತು. ಶಾಸ್ತ್ರಚೋದಿತಗಳಾದ ವಿವಾಹ ಸಾರ ಪರಿಣೀತಳಾದ ಕುಲಕಾಂತೆಯು ಸ್ವೀಯಳೆನಿಸಿಕೊಳ್ಳುವಳಾದುದರಿಂದ ಅವಳು ಸ್ವಸುಖಾರ್ಥ ಗ್ರಾಹ್ಯಳಾದವಳಾಗಿಯೂ, ಪರಸ್ತ್ರೀಯು ಸರ್ವಾತ್ಮನಾ ತ್ಯಾಜ್ಯಳಾಗಿಯೂ, ಸಾಮಾನ್ಯೆಯು ಮಿತ ಗ್ರಾಹ್ಯಳಾಗಿಯೂ ಭಾವಿಸಲ್ಪಟ್ಟರುತಿದೆ. ಸಾಮಾನ್ಯ ಭೇದವು ಇಲ್ಲದಿರುವಾತ ಯೂರೋಪಿಯರುಗಳಲ್ಲಿಯೂ, ಅರಬ್ಬೀದೇಶಸ್ಥರಲ್ಲಿಯೂ ಇತರರು ಕೆಲವರಲ್ಲಿಯೂ, ಕುಲಾಂಗನೆಯರೇ ಪೋಲೀಸಂದವರಕರ್ತವ್ಯಗಳನ್ನೆಲ್ಲ ಜರಿಗಿಸಲಿಕ್ಕೆ ಸನ್ನದ್ಧರಾಗಿರುವದರಿಂದ ಅವರಿಗೆ ಸಾಮಾನ್ಯೆಯರ ಆವಶ್ಯಕತೆಯಿರುವದಿಲ್ಲವು. ಇದು ನಾವು ನೋಡಿ ಸವರೀಜನರ ಆಚಾರವನ್ನೂ, ಅದರಿಂದುಂಟಾಗುವ ಅನರ್ಥಗಳನ್ನೂ ಚಿಂತಿಸಿ ನಾವು ಬಹಳ ನಿಂದಿಸುತಲಿರುವಾಗ್ಯೂ ನಮ್ಮಲ್ಲಿ ತಾದೃಶ ದೋಷಗಳಿಗೆ ಅವಕಾಶವಿಲ್ಲದಂತೆ ನೆಲೆಗೊಳಿಸಲ್ಪಟ್ಟಿರುವ ಪದ್ಧತಿಯನ್ನೇತಕ್ಕೆ ದೂಷಿಸಬೇಕೋ ನಾವರಿಯೆವು. ಪೂರ್ವಕಾಲದೊಳಿದ್ದ ಮಹಾರಾಜರುಗಳೂ ವರ್ಷಿಗಳೂ ಈ ಕ್ರಮವಂ ಸ್ಥಾಪಿಸಿ ಅದರ ವಿವ್ಯಾಖ್ಯಾನ ಆಚಾರ ವ್ಯವಹಾರಾದಿ ಕ್ರಮಗಳನ್ನೆಲ್ಲವು ವಿಧಿಸಿದಂತೆ ಧರ್ಮಶಾಸ್ತ್ರಗಳಿಂದ ಸ್ಪಷ್ಟವಾಗುತಿದೆ. ಮೆ|| ಪ್ರಣತಾರ್ಥ ಅಯ್ಯರವರ ತಾತ್ಪರ್ಯಾನುಗುಣವಾಗಿ ಈ ಪದ್ಧತಿಯು ಮುಂದೆ ಅಧಿಕಾನರ್ಥಕ್ಕೆ ಕಾರಣವಾಗುವದೆಂದು ನುಡಿಯುವ ಪಕ್ಷಕ್ಕೆ ಏಷ್ಟರಮಟ್ಟಿನ ಭೋಜನ ದಾನಾದಿಗಳ ವಿಷಯದಲ್ಲೀಗ ಪ್ರಂಟಾಗಿರುವ ಪ್ರಮಾದಗಳನ್ನೂ ಅದರಿಂದುಂಟಾಗುವ ಅನರ್ಥಗಳನ್ನೂ ಯಾವ ರೀತಿಯಿಂದ ಪರಿಹರಿಸಿ ವರ್ಧಿಷ್ಣುಗಳಾದ ನಮ್ಮ ಬಾಲಕರಿಗೆ ಮೇಲನ್ನುಂಟುಮಾಡಬೇಕಾದದ್ದು ಆವಶ್ಯಕವಾಗಿರುತಿದೆಯೋ ಅಷ್ಟರಮಟ್ಟಿಗೆ ಅದೇ ಕ್ರಮವನ್ನನುಸರಿಸಿ ವಾರಾಂಗನೆಯರ ವಿಷಯವನ್ನೂ ಕ್ರಮಪಡಿಸಬಹುದು. ಅತಶ್ಚಕ್ಷಣರಾದ ಅಯ್ಯರವರೇ ತಮ್ಮನ್ನು ನಾವು ಈಗ ಕೇಳುವದೇನಂದರೆ,— ಈಗ ಭವನಗಳು ಅರ್ಣ್ವಾಯುಗಳಾಗಿಯೂ ಅಲ್ಪಪುಷ್ಟಿಯುಳ್ಳವರಾಗಿಯೂ, ಅಲ್ಪಶಕ್ತಿಯುಳ್ಳವರಾಗಿಯೂ ನಷ್ಟವಾಗುತಲಿರುವುದು ತಾವೇ ಒಪ್ಪಿಕೊಳ್ಳುವದರಿಂದ ಇದಕ್ಕೆ ಅಮಿತವಾದ ಭೋಜನ ಪಾನಾದಿಗಳು ಕಾರಣವೇ ಅಲ್ಲದೆ ಯಾವಾಗಲಾದರು ಹಿಂದು ವಿಶೇಷಕಾಲದಲ್ಲಿ ಕಾದಾಚಿತ್ಯವಾಗಿ ಕಲಿಯಿಸಲ್ಪಡತಕ್ಕ ವಾರಾಂಗನೆಯರು ಕಾರಣಭೂತರೆ? ಮೊದಲನೇ ದುರಾಚಾರವು ಯೆರಡನೆಯದಕ್ಕಿಂತಲೂ ಅಧಿಕವಾಗಿ ಪ್ರಬಲ ನಷ್ಟವನ್ನುಂಟುಮಾಡುತಲಿರುವಾಗ್ಯೆ ಮೊದಲು ಅದಂ ಪರಿಷ್ಕರಿಸುವ ಪ್ರಯತ್ನವಂ ಮಾಡಬೇಕೆಂದು ಸಮಯಾಚಾರ ಪರಿಷ್ಕರಣ ಪ್ರವರ್ತಕರಿಗೆ ಸದರೀ ಅಯ್ಯರವರು ಯಾತಕ್ಕೆ ತಿಳಿಸಿ ಕೊಡಲಿಲ್ಲವೋ ನಾವರಿಯೆವು. ಸಂಗೀತ ಶಾಸ್ತ್ರಗಳನ್ನು ಪುರುಷರೇ ಅಭ್ಯಸಿಸಿ ಯಾಗಲಿ ಅಥವಾ ತಮ್ಮ ಕುಲಕಾಂತೆಯರಿಗೆ ಕಲಿಸಿ ಅವರ ಮೂಲಕವಾಗಿ ಯಾಗಲಿ ಯಾತಕ್ಕೆ ಸಂತೋಷಪಡಬಾರದೆಂಬದಾಗಿ ಮೇಲೆ ಕಂಡ ಪ್ರಣತಾರ್ಥರವರ ಸಿದ್ಧಾಂತಾನುಯಾಯಿಗಳಾದ ಕೆಲವರ ತಾತ್ಪರ್ಯವಾಗಿರುತಿದೆ. ಮೊದಲು ಕತ್ತೆಗಳು ಅಗಸರಿಗೆ ಮೈಲು ಬಟ್ಟೆಗಳನ್ನು ಹೊರುವದಕ್ಕೆ ಮಾತ್ರ ಯೋಗ್ಯಗಳಾದ ಜಂತುವೆನಿಸಿಕೊಂಡಿದ್ದರೂ ಕಾಲಕ್ರಮೇಣ ಅವು ತುರಗನ್ನಾದಪನ್ನಗಳಾಗಿ ಏರ್ಪಟ್ಟು ದೊಡ್ಡ ಮನುಷ್ಯರ ವಾಹನಾದಿಗಳಾಗಿ ಯೋಗ್ಯಗಳಾಗಿರುವದು ಹೇಗ್ಯಪ್ರೊ ಆದಂತೆ ಸಾಮಾನ್ಯೆಯರಿಗಾಗಿ ಕಲ್ಪಿಸಲ್ಪಟ್ಟ ವೃತ್ತಿಯನ್ನು ಕುಲಕಾಂತೆಯರಿಗೆ ಕಲಿಸಿ ಅವರನ್ನು ಗಾಯಕಿಯರನ್ನಾಗಿ ಮಾಡಿ ಅವರ ಮೂಲಕ ಆನಂದಿಸುವದು ಅಷ್ಟರ ಯೋಗ್ಯವಾಗಿರುತದೆ. ನಿರಾಸನೀಯರಿಗೆ ಸಹಜವಾದ ನಿರ್ಲಜ್ಜೆಯೆಂಬ ... ಗೃಹಿಣಿಯರಿಗೂ ಪ್ರಾಪ್ತವಾದರೆ ಅವರನ್ನು ಸಾಮಾನ್ಯೆಯರಂತೆ ನೋಡಬೇಕೆಂಬ ಕುತೂಹಲವು ಈಗ ಅನೇಕರಿಗೆ ಹುಟ್ಟಿರುವದು. ಕ್ರಾಶನಲ್ಲಿ ಯಾವದೊ ಒಂದು ವಿಶೇಷ ಸಂದರ್ಭಗಳೊಳು ಫಲಾನ ಯವರ ಸಂಗೀತವಾಯಿತೆಂತಲೂ ಫಲಾನೆಯವರ ನಾಟಕವಾಯಿತೆಂತಲೂ ವ್ಯವಹಾರ ಪ್ರಬಗಿತ್ತು. ಈಗ ಪ್ರೈವೇಟ್ ವೃತ್ತಿಗಳ ಗುರ ಬಂದಮೇಲೆ ಸದರೀ ಕ್ರಮವು ದೂಷ್ಯವೆಂಬ ಭಾವವು ನೆಲೆಗೊಂಡು, ಅದಕ್ಕೆ ಬದಲಾಗಿ ಫಲಾನೆ ಕ್ಲಬ್ಬಿನಲ್ಲಿ ಹಿರಿಯ ಫಲಾನೆ ದೊಡ್ಡ ಮನುಷ್ಯರ ಮಗಳು ವೀಣೆಬಾರಿಸಿದಳು, ಫಲಾನೆಯವರ ಸೊಸೆ ಪಿಟೀಲುಬಾರಿಸಿದಳು, ಎಂದು ಸಾರ್ವಳವಾಗಿ ಪೇಳಿಕೊಳ್ಳುವಂತೆ ಪರಿಣಮಿಸಿದೆ. ಮುಖ್ಯವಾಗಿ ಯಾವಯಾವ ತರಗತಿಯವರಿಗೆ ಯಾವಯಾವ ವೃತ್ತಿಗಳು ಆಚಾರ್ಯರಿಂದ ಪೂರ್ವಿಕರಿಂದ ಕಲ್ಪಿಸಲ್ಪಟ್ಟರುತಿದೆಯೋ ಅದನ್ನು ವರಿಗೆ ವಹಿಸಿ ಅನ್ಯರಿಗೆ ದಾಟಿಸುವದರಿಂದ ಬಹುವಿಧ ಅನರ್ಥಗಳುಂಟಾಗುತಿದೆಂಬ ಅಂಶವನ್ನು ಮೆ॥ ಪ್ರಣತಾರ್ಥರವರ ಅಯ್ಯರವರು ಯೋಚಿಸಿ ನೋಡದವರಾಗಿ ಬಹಳ ಚಿಂತಿಸುತ್ತೇವೆ. ಈಗಲೇ ಪಾಠಸ್ತ್ರೀ ಸಮೂಹವು ಬಹಳ ನಿಷ್ಪಾಪಿಸಲಿನ್ಯಾರಿಸಿ ತಮಗೆ ಕುಲವಿದ್ಯೆಗಳಾದ ನೃತ್ಯವನ್ನು ನಾಟಕ ರೂಪೇಣ ಪುರುಷರೂ, ಗೀತ ವಾದ್ಯಗಳನ್ನು ಪ್ರೌಢಸ್ತ್ರೀಯರೂ ಪೇಣ ಕುಲಕಾಮಿನಿಯರೂ ಆಕ್ರಮಿಸಿದ್ದರಿಂದ ತಮ್ಮನ್ನು ಕರೆಯತಕ್ಕವರಿಲ್ಲವೆಂಬದಾಗಿ ನೈರಾಶ್ಯವು ಹೊಂದಿ ಅವರೆಲ್ಲರೂ ಪಿಚ್ಚಿಬ್ಬಳಾಗಿ ತಮ್ಮ ಕಸುಬುಗಳನ್ನುಬಿಟ್ಟು ಏವಂವಿಧರಾಗಿ ಸಾಂಸಾರಿಕ ಧರ್ಮಗಳನ್ನಂಗೀಕರಿಸುತ್ತಾರೆ. ಮುಖ್ಯವಾಗಿ ಈಗಿನವರ ತಾತ್ಪರ್ಯದಂತೆ ಸದರೀ ಸಮೂಹದವರನ್ನು ಮುಂದರಿಗೊತ್ತಿಸಿ ಅವರ ಸ್ಥಾನಾಪನ್ನರಾಗಿ ನಮ್ಮ ಹೆಣ್ಣುಮಕ್ಕಳನ್ನು ಪ್ರವರ್ತಕರನ್ನಾಗಿ ಮಾಡಬೇಕೆಂಬಿರುವ ಕೋರಿಕೆಯು ಪಕ್ವವಾಸವನು. ಕಡೆಗೆ ನಾವು ಈಗ ಅನ್ಯರು ನೋಡುತಲಿರುವದಕ್ಕೆ ಸಮಾನವಾದದ್ದಾಗಿಯಾದರೂ ಅಥವಾ ಅಧಿಕವಾದದ್ದಾಗಿಯಾದರೂ ಪರಿಣಮಿಸುವದೆಂಬದರಲ್ಲಿ ಸ್ವಲ್ಪ ಮಾತ್ರವೂ ಸಂಶಯವಿಲ್ಲವು. ಮೆ॥ ಪ್ರಣತಾರ್ಥರವರ ಅಯ್ಯರವರ ಜೀವನಾನುಗುಣವಾಗಿ ದುಷ್ಯವೆಂದು ತೋರಿರುವ ಇತರದೋಷಗಳಿಗೆಲ್ಲ ಕ್ರಮವಾಗಿ ಮುಂದೆ ಉತ್ತರವಂ ಹೇಳುವೆವು.

THE DRAFT VACCINATION REGULATION.

ಈಗ ಶ್ರೀಮನ್ಮಹಾರಾಜಾ ಸರ್ಕಾರದವರ ಪಬ್ಲಿಕಾರೋಗ್ಯನೆಯಲ್ಲಿರತಕ್ಕ ಸ್ಪೋಟಕ ನಿವಾರಕವಾದ ಹಸವಿದು ನಿಬಂಧನೆಯನ್ನು ಜಾರಿಯಲ್ಲಿ ತರಬೇಕಾದ್ದಕ್ಕೆ ಉಂಟಾಗಿರುವ ಅವರ ಉದ್ದೇಶವನ್ನೂ ಮಸೂಚಿಕಾ ಸಂಬಂಧವಾದ ಕೆಲವು ಅಂಶಗಳನ್ನೂ ಗತವಾರದಲ್ಲಿ ತಿಳಿಸಿ, ಮನುಷ್ಯ ಸಂಬಂಧವಾದ ಸ್ಫೋಟಕದ ಹಾಲಿನಿಂದ ತಿದುಬು ಹಾಕುವ ಅಪಾಯಕರವಾದ ದುಷ್ಪದ್ಧತಿಯನ್ನು ಸರ್ವಾಂಗವಾಗಿ ನಿಲ್ಲಿಸಿ ವ್ಯಾಕ್ಸಿನೇಷನ್ ಮೂಲಕ ಅಂದರೆ ಗೋ ಸಂಬಂಧವಾದ ಹಾಲಿನಿಂದ ತಿದುಬು ಹಾಕುವದರಿಂ ಜನರಿಗುಂಟಾಗುವ ಪ್ರಯೋಜನಗಳನ್ನು ತಕ್ಕ ದೃಷ್ಟಾಂತಗಳೊಡನೆ ಈ ವಾರದಲ್ಲಿ ತಿಳಿಸುವಂತೆ ಪ್ರಕಟಿಸಿದ್ದೆವಷ್ಟೆ. ಈಗ ಅದಂ ಕುರಿತು ಸ್ವಲ್ಪವು ಬೃಗೆ ವಿಚಾರಮಾಡುವೆವು. ತಿದುಬು ಹಾಕುವದರಿಂದ, ಸ್ವಾಭಾವಿಕವಾಗಿ ಬಳಿತಕ್ಕ ಸ್ಫೋಟಕಕ್ಕೇನಾದರು ವಡೆಯುಂಟಾಗುವದೇ ಯೆಂದು ವಿಚಾರದಲ್ಲಿ ಚಿಂತಿಸಬಹುದು. ಇದುವರಿವಿಗೂ ಪ್ರಸಿದ್ಧರಾಗಿಯೂ ಅನುಭವಶಾಲಿಗಳಾಗಿಯೂ ಇರತಕ್ಕ ಡಾಕ್ಟರುಗಳ ಸಿದ್ಧಾಂತರೀತ್ಯಾ ನಿವಾರಣೆಯಾಗುವ ಹಾಗೆ ಭಾವಿಸಬೇಕಾಗಿರುತಿದೆ. ಪರಂತು ಕೆಲವು ಪ್ರಕರಣಗಳಲ್ಲಿ ಸದರೀ ಡಾಕ್ಟರುಗಳ ಸಿದ್ಧಾಂತಕ್ಕೆ ವ್ಯತಿರೇಕಗಳು ಸಹ ಪ್ರಬಿಸಿರುತಿವೆ. ತಿದುಬು ಹಾಕುವದರಿಂದ ಅನೇಕರಿಗೆ ಸ್ಫೋಟಕವು ಬಿಳುವದಿಲ್ಲವೆಂಬದು ನಿರ್ಣೀತಾಂಶವಾಗಿದ್ದಾಗ್ಯೂ, ಈಗ ನಂಬಿಸಿಯೂ ಮುಂದೆ ಸಂಭವಿಸುವದಾಗಿಯೂ ಇದ್ದರೂ, ಕೆಲವರ ವಿಷಯದಲ್ಲಿ ಮಾತ್ರ ತಿದುಬು ಹಾಕುವಣವು ಸ್ವಾಭಾವಿಕವಾಗಿ ಬಳಿತಕ್ಕ ಸ್ಫೋಟಕಕ್ಕೆ ಸಂಪೂರ್ಣ ನಿವಾರಕವಾಗಲಾರದು. ತಿದುಬು ಹಾಕಲ್ಪಟ್ಟ ಶರೀರದ ಯಾರಿಗಾದರೂ ಸ್ಫೋಟಕ ಸ್ಪರ್ಶವಾದ ಪಕ್ಷದಲ್ಲಿ ಆಗ ಅದು ಅಷ್ಟು ಪ್ರಬಲವಾಗಿರಲಾರದೆಂತಲೂ, ಪ್ರಾಣಹಾನಿಯನ್ನುಂಟುಮಾಡಲಾರದೆಂತಲೂ ದೃಢವಾಗಿ ನಂಬಬಹುದು. ತಿದುಬು ಹಾಕುವಣವು ಸ್ಫೋಟಕವೇಳಲಿಕ್ಕೆ ತಡೆಯಾಗದಮೇಲೆ ಅದರಿಂದೇನು ಪ್ರಯೋಜನವೆಂದು ಯಾರಾದರು ಕೇಳಬಹುದು. ಒಂದುಸಲ ಸ್ಫೋಟಕವೆದ್ದವರಿಗೆ ಏರಡನೇ ಆವರ್ತಿಯೂ ಕಾಣಿಸಿ ಬಳುವಂತೆ ಕೆಲವರಿಗೆ ತಿದುಬು ಹಾಕಿದಾಗ್ಯೂ ಸ್ಫೋಟಕವೂ ಪ್ರತ್ಯೇಕವಾಗಿ ಸ್ವತಃ ಬಿಳುವದುಂಟು, ಆದಕಾರಣ ಈ ವ್ಯಾಧಿಯು ಪ್ರಾಣಾಪಾಯಕರವಾದುದರಿಂದ ಯಾರಾಗಲಿ ತಿದುಬು ಹಾಕಿಸಿದರೆ ತನ್ಮೂಲಕ ಏಷ್ಟರ ಪ್ರಯೋಜನ ಪ್ರಂಟಾಗುವದೋ ಅದಂ ಯೆಲ್ಲರೂ ವಿಚಾರಿಸಿ ತಿಳುಕೊಳ್ಳಬೇಕಾದದ್ದು ಆವಶ್ಯಕವಾಗುತಿದೆ. ಶ್ರೀಮನ್ಮಹಾರಾಜ್ಞೀಯವರ ಇಂಗ್ಲೆಂಡ್ ಶ್ಯಾನರಲ್ ಮತ್ತು ಅ(ರ್ಜಿ)ಷ್ಟ್ರೇಲಿಯಾ ಕ್ಕಾಲದ ೧೮೭೦ ಮೊದಲು ಮುಖ ಪೈಕಿ ಗತ ಇಪ್ಪತ್ತು ಸಂವತ್ಸರ ಕಾಲದಲ್ಲಿ ಮಡಿದವರ ಮಾತ್ರವೇ ಸ್ಫೋಟಕದಿಂದ ವ್ಯತಿರಿಕ್ತವಾಗಿ ತಿಳಿಯಬರುತಿದೆ. ಇಂಗ್ಲೆಂಡ್ ನವರ ಪ್ರಭುತ್ವಕ್ಕೊಳಪಟ್ಟಿರುವ ಇತರ ರಾಜ್ಯಗಳಲ್ಲಿ ಗತ ಇಪ್ಪತ್ತು ಸಂವತ್ಸರಗಳ ಕಾಲದೊಳು ತಿದುಬು ಹಾಕಲ್ಪಟ್ಟ ೬,೦೦೦ ಮಂದಿಯ ಪೈಕಿ ಒಬ್ಬನು ಮಾತ್ರವೇ ಸ್ಫೋಟಕದಿಂದ ಮೃತನಾಗಿದ್ದಾಗಿ ವ್ಯಕ್ತವಾಗುತಿದೆ. ಕಳೆದ ಇಪ್ಪತ್ತು ವರುಷಗಳ ಕಾಲದಲ್ಲಿ ಸಿಲೋನ್ ದ್ವೀಪದೊಳು ಮೂಡಾವರ್ಷ ಮಸೂಚಿಕಾ ಜಾಡ್ಯಪೀಡಿತರಾಗಿ ತಿದುಬು ಹಾಕದ ೯,೧೪೫ ಮಂದಿಯ ಪೈಕಿ ೩,೦೪೪ ಜನ ಮೃತರಾದರು ಹಾಗೂ ಉಪಾಧಿಯಿಂ ಮೃತಪಟ್ಟರೆಂತಲೂ ಮತ್ತೊಂದು ಸಂದರ್ಭದೊಳು ಸ್ಫೋಟಕವು ಸದರೀ ದ್ವೀಪದಲ್ಲಿ ಪ್ರಬಲಗೊಂಡು ಅನೇಕರು ನಷ್ಟವಾದಾಗ ಅಲ್ಲಿ ಮೊಕ್ಕಾಂ ಮಾಡಿದ್ದ ಇಂಗ್ಲಿಷ್ ಸೈನಿಕರಲ್ಲಿ ನಾಲ್ವರು ಮಾತ್ರವೇ ಹತರಾದರೆಂತಲೂ ತಿಳಿಯಬರುತಿದೆ. ಇಂತಾ ಅನೇಕ ನಿದರ್ಶನಗಳಿಂದ ಮನುಷ್ಯ ಸಮುದಾಯಕ್ಕೆ ತಿದುಬುಹಾಕುವದರ ಮೂಲಕ ಪ್ರಂಟಾಗುವ ಕ್ಷೇಮವು ಅಗ್ರಟಕವಾಗಿರುವದೆಂಬದು ಸಾಮಾನ್ಯೇನ ಎಲ್ಲರೂ ತಿಳಿಯಬೇಕಾದದ್ದು ಯೋಗ್ಯವಾಗಿರುತಿದೆ. ಮತ್ತು ಗವರ್ನಮೆಂಟಿನವರು, ಪ್ರಜಾಹಿತಂಕರತಕ್ಕ ಪ್ರವರ್ತ

ವಾದುದರಿಂದ ಪ್ರಜಾಸಾಮಾನ್ಯವಾದ ಯೋಗಕ್ಷೇಮವು ಹೃದಯದೊಳ್ ಧರಿಸಿ ಘೋರವಾದ ಮತ್ತು ಮೃತ್ಯುಪ್ರದವಾದ ವ್ಯಾಧಿಯಿಂದ ಜನರಂ ತಪ್ಪಿಸಿ ಕಾಪಾಡಬೇಕಾದದ್ದು ಅವರ ಧರ್ಮವೆಂದೆಣಿಸಿ ಪ್ರಸಕ್ತ ಮಸೂದಾ ನಿಬಂಧನೆಗಳನ್ನು ವಿಶೇಷ ಕ್ರಮಗಳೊಡನೆ ಜಾರಿಯಲ್ಲಿ ತರಬೇಕೆಂಬ ಪ್ರಯತ್ನವುಳ್ಳವರಾಗಿರುತ್ತಾರೆ. ಈಗ ಉದ್ದೇಶಿತವಾಗಿರುವ ಮಸೂದಾ ನಿಬಂಧನೆಯು ೧೮೮೦ನೇ ಇಸವಿಯ ೧೩ನೇ ನಂಬರ್ ಮ್ಯಾಜಿಸ್ಟ್ರೇಟ್ ಆಕ್ಟನ್ನನುಸರಿಸಿ ಮಾಡಲ್ಪಟ್ಟದ್ದಾಗಿರುತ್ತದೆ. ಸದರಿ ಆಕ್ಟನ್ನೂ ಮೈಸೂರು ಸರ್ಕಾರದವರ ಮಸೂದೆಯನ್ನೂ ನಾವು ಹೋಲಿಸಿ ನೋಡಲಾಗಿ ನಮಗೆ ವಿಶೇಷ ಭೇದಗಳ್ಯಾವವೂ ಕಂಡುಬರಲಿಲ್ಲವು. ಪರಂತು ಇಂಗ್ಲಿಷ್ ಆಕ್ಟಿನಲ್ಲಿ ವಿಧಿಸಲ್ಪಟ್ಟಿರುವ ಶಿಕ್ಷಾ ಪರಿಮಾಣಗಳೆಲ್ಲವು ಬಹಳಮಟ್ಟಿಗೆ ಇಲ್ಲಿನ ಮಸೂದೆಯಲ್ಲಿ ತಗ್ಗಿಸಲ್ಪಟ್ಟಿರುತ್ತವೆ. ವ್ಯಾಗಂದರೆ, ಪ್ರಸಕ್ತ ಆಕ್ಟಿನ ೬ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟಿರುವಂತೆ ಈ ಆಕ್ಟಿನ ನಿಯಮಗಳು ಲಗಾವಾಗತಕ್ಕ ಯಾತರದಿಂದಲೊಂದು ಸ್ಥಳೀಯ ಪ್ರದೇಶದಲ್ಲಿ [illegible] ಸುಂಕವಾದ [illegible] ನಿಂದ ತಿರುಬಿ [illegible] ಗಳನ್ನು ವಿಷ ಟಸಲ್ಪಟ್ಟಿರುತ್ತದೆ. ಹೀಗೆ ತಿರುಬಿ [illegible] ವಿನ [illegible] ದಿನಗಳು ಕಳೆಯುವವರೆಗೆ ಪೂರ್ವದ ಅಂತಃ ಪ್ರದೇಶವನ್ನು [illegible] ಕಳೆ ಬರ್ಕ್ಷಕ [illegible] ಸರ್ಟಿಫಿಕೇಟ್ ಹೊಂದದೇ ಪ್ರವೇಶಿಸಕೂಡದು. ಹಾಗೆ ಸರ್ಟಿಫಿಕೇಟ್ ಕೊಡತಕ್ಕ ಮೆಡಿಕಲ್ ಆಫೀಸರು ಗವರ್ನಮೆಂಟಿನವರಿಂದ ಮೊಕರರ್ ಮಾಡಲ್ಪಟ್ಟವನಾಗಿರತಕ್ಕದ್ದಲ್ಲದೆ ಸದರೀ ಸರ್ಟಿಫಿಕೇಟಿನಲ್ಲಿ ಹೇಳಿರುವ ಮನುಷ್ಯನ ಸುಪರ್ದಿ ಅಥವಾ ಸವಾರಿಗಾಡಿಯಿಂದ [illegible] ವ್ಯಾಧಿ ಕಪ್ಪು ಅಸ್ಪೃಶ್ಯ [illegible] ನಮೂದಿಸಿರತಕ್ಕದ್ದು. ಈ ನಿಬಂಧನೆಗೆ ಪ್ರತಿಕೂಲವಾಗಿ [illegible] ವರ್ತಿಸಿದರೆ ಅಂತಃ ಮನುಷ್ಯನು ಮೂರು ತಿಂಗಳಿಗೆ ಮೀರದ ಒಂದು ವಾಯಿದೆಯು [illegible] ಸಾಧಾರಣ ಶಿಕ್ಷೆ ಸಜಾ ಮೂಲಕವಾಗಿ ಯಾಗಲಿ ಅಥವಾ [illegible] ರೂಪಾಯಿಗಳ ಜುಲ್ಮಾನೆಯ ಮೂಲಕವಾಗಿಯಾಗಲಿ, ಅಥವಾ ಎರಡರ ಮೂಲಕವಾಗಿಯಾಗಲಿ ದಂಡಿಸಲ್ಪಡತಕ್ಕದ್ದೆಂದು ನಿಷ್ಕರ್ಷಿಸಲ್ಪಟ್ಟಿರುತ್ತದೆ. ಇದೇ ವಿಷಯದಲ್ಲಿ ಮೈಸೂರು ಮಸೂದಾ ನಿಬಂಧನೆಯೊಳು ಶಿಕ್ಷೆ ಸಹಾ [illegible] ಜುಲ್ಮಾನೆ ಮೊಬಲಗು ಮಾತ್ರ ವಾಯಿದೆ ತಗ್ಗಿಸಲ್ಪಟ್ಟಿರುತ್ತದೆ. [illegible] ಸದರೀ ಆಕ್ಟಿನ ೧೮ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟಿರುವಂತೆ ವಿಷ್ಣು [illegible] ಸುಪರ್ದಿ [illegible] ಅಥವಾ [illegible] ನೋಟೀಸುಗಳಿಗೆ ಯಾರು ಜವಾಬ್ ಕೊಡದೆ ಅಥವಾ ಸ್ವತಃ ಹಾಜರಾಗದೆ ಅವರ [illegible] ಉಲ್ಲಂಘಿಸುತ್ತಾರೆಯೋ, ಅಂಥವರು ಆರು ತಿಂಗಳಿಗೆ ಕಡಮೆ ಇಲ್ಲದ ಸಾಧಾರಣ ಶಿಕ್ಷೆ ಮೂಲಕವಾಗಿಯಾಗಲಿ ೧,೦೦೦ ರೂಪಾಯಿಗಳ ಜುಲ್ಮಾನೆ ಮೂಲಕವಾಗಿಯಾಗಲಿ, ಅಥವಾ ಎರಡರ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಡತಕ್ಕದ್ದೆಂದು ನಮೂದಾಗಿರುತ್ತದೆ. ಹೊಸ ನಿಬಂಧನೆಯಲ್ಲಿ ಶಿಕ್ಷೆ ಸಹಾವನ್ನು ತೆಗೆದುಹಾಕಿ ಜುಲ್ಮಾನೆ ಮೊಬಲಗು ೫೦ ರೂಪಾಯಿಗೆ ತಗ್ಗಿಸಲ್ಪಟ್ಟಿರುತ್ತದೆ. ಹೀಗೆಯೇ ಜನರ ಅನುಕೂಲ್ಯವನ್ನು ಬಹಳವಾಗಿ ಆಲೋಚಿಸಿ ಮುದವೆಯಲ್ಲಿ ಶಿಕ್ಷೆ ಬಾಗವನ್ನೆಲ್ಲ ಸಜಾ ಮಾಡಿ ಸಾಧ್ಯವಾದ ಮಟ್ಟಿಗೆ ಜುಲ್ಮಾನೆಯನ್ನು ತಗ್ಗಿಸಿರುತ್ತಾರೆ. ಇದಲ್ಲದೆ ಹಿರಿಯ ಹಾಕುವವರಲ್ಲಿ ಯಾವನಿಗೆ ಹಾಲನ್ನು ಉಪಯೋಗಿಸಬೇಕೋ ಅದನ್ನು ಹೊಂದಿ ತಿಳಿಸುವ ಸ್ವಾತಂತ್ರ್ಯವನ್ನು ಮಕ್ಕಳ ತಂದೆ ತಾಯಿಗಳಿಗೂ ಗಾರ್ಡಿಯರ್ನ ಯಾನೆ ಪೋಷಕರಿಗೂ ಕೊಟ್ಟುಮಾಡಿರುತ್ತಾರೆ. ಜನಗಳ ಅನುಕೂಲ್ಯವನ್ನು ಪರಿಭಾವಿಸಿ ಪ್ರತಿ ವ್ಯಾಕ್ಸಿನೇಟರ್ ಸ್ಟೇಷರ್ ಅಂದರೆ, ಹಿರಿಯ ಹಾಕತಕ್ಕ ಸ್ಥಾನಗಳಲ್ಲೆಲ್ಲ ಸರ್ಕಾರದ ಪರವೆ ವ್ಯಾಕ್ಸಿನೇಟರುಗಳನ್ನು ನಿಯಮಿಸುವುದಲ್ಲದೆ ಅಂಥವರ ರುಸುಂ ವಿಷಯವನ್ನು ಸಹ ಜನಗಳಿಗೆ ಬಾಧೆ ಇಲ್ಲದಂತೆ ನಡೆಸುತ್ತಾರೆ. ಖಾಸಗಿಯಾದ ವ್ಯಾಕ್ಸಿನೇಟರುಗಳು ಮನಸ್ಸಿಗೆ ರುಸುಂಗಳನ್ನು ಏರಿಸದೇ ಮಾಡದಂತೆ ಅವರ ದರ ಸಹ ಮುಂದೆ ನಿಷ್ಕರ್ಷಿಸಲ್ಪಡುವದು. ಮುಖ್ಯವಾಗಿ ಪ್ರಸಕ್ತ ಮಸೂದಾ ನಿಬಂಧನೆಯು ಅಂದರೆ [illegible] ಕೆಲವು ವಿಷಯಗಳಲ್ಲಿ ಜನಗಳಿಗೆ [illegible] ದಾಗ್ಯೂ ಸ್ [illegible] ಜನಗಳ ಕ್ಷೇಮಾಭಿವೃದ್ಧಿಯನ್ನು ಉದ್ದೇಶಿಸಿದ್ದಾಗಿರುತ್ತದೆ. ಅದುದರಿಂದ ಈ ನಿಬಂಧನೆಯನ್ನು ಈಗಿರುವ ರೀತಿಯಲ್ಲಿ ಜಾರಿಯಲ್ಲಿ ತರುವ ವಿಷಯಕ್ಕೆ ಏನೂ ಆಕ್ಷೇಪಣೆ ಇರಲಾರದೆಂದೆಣಿಸುತ್ತೇವೆ.

THE LATE PRINCE SUBRAMANYA RAJE URS.

ಶ್ರೀಮನ್ಮಹಾರಾಜರವರು ಆಬೂ ಪರ್ವತದ ವ್ಯಾಸ್ಥ [illegible] ನಿಂದ ಹಿಂತಿರುಗಿ ಬರುವಾಗ ಹಾದಿಯಲ್ಲಿ ಹರಿದ್ವಾರದಿಂದ ಅನಿರೀಕ್ಷಿತವಾಗಿ ರಾಜಧಾನಿಗೆ ದಯಮಾಡಿದರೆಂಬುದೂ ಆದರ ನಿಜವಾದ ಕಾರಣವು [illegible] ಗತವಾರದ ಪತ್ರಿಕೆಯಲ್ಲಿ ತಿಳಿಸಿದ್ದೆವಷ್ಟೆ. [illegible] ಮಹಾರಾಜರವರ ಇಂತಾ ಅನಿರೀಕ್ಷಿತ ಪ್ರಯಾಣವು ನಾವು ನಿಜಾಂಶರ [illegible] ಮಾಡಿದ್ದೇನೆಂದರೆ, — ಶ್ರೀಮನ್ಮಹಾರಾಜರವರ ಅಣ್ಣಂದಿರಾದ ಮ|| ರಾ|| ಸುಬ್ರಹ್ಮಣ್ಯರಾಜೇ ಅರಸಿನವರು ಆಗ್ಗೆ ಕೆಲವು ಕಾಲದಿಂದಲೂ ಬಹುಮೂತ್ರ ರೋಗದಿಂದಲೂ, ರಾಜರೋಗದಿಂದಲೂ ಸಂಕಟಪಡುತ ಬಹಳ ದುರ್ಬಲರಾಗಿರುವ [illegible] ಅವರಿಗೆ ಮಾಡಲ್ಪಟ್ಟ ಚಿಕಿತ್ಸೆಗಳೆಲ್ಲವು ಸಫಲಗಳಾಗದಿದ್ದ ಬರೆಯಲಾಗಿ ಪ್ರತಿಕೂಲಿಸುತ [illegible] ಚಿಕಿತ್ಸಕರಿಗೆ ಅವರ ಸಂಪೂರ್ಣ ದೇಹದ ವೃದ್ಧಿಯು [illegible] ಬುದ್ಧಿಯೂ, ಅವರು ಕೂಡಲೇ ಮಹಾರಾಜರವರಿಗೆ ತಮ್ಮ ಸ್ಥಿತಿಯಂ ತಂತಿ ಮೂಲಕ ವಿಜ್ಞಾಪಿಸಿದರೆಂಬುದೂ, ಅದು ನೋಡಿದ ಕೂಡಲೇ ಮಹಾರಾಜರವರು ಅತ್ಯಂತ ಬೇಗನಾಗಿ ರಾಜಧಾನಿಗೆ ದಯಮಾಡಿಸಿದರೆಂಬುದೂ ತಿಳಿಯಬಹುದು. ಕೇವಲ ಅಸಮಾಧಾನಪರವಾದ ಸದರೀ ವಿಷಯವನ್ನರಿತದ್ದು ಮೊದಲು ನಮ್ಮ ಹೃದಯವು ಪರಿತಪಿಸುತ ಯಾವ ಕ್ಷಣದ [illegible] ಶ್ರವಣ [illegible] ಕೇಳಬೇಕಾದ ದುರ್ಘಟನೆ [illegible] ಸಂಭವಿಸುವದೋ ಎಂದು ಶಂಕಿಸುತ್ತಿದ್ದೆವು. ಕಡೆಗೆ ನಮ್ಮ ನಿರೀಕ್ಷೆಯಂತೆಯೇ ಮಿಸ್ಟರ್ ಸುಬ್ರಹ್ಮಣ್ಯರಾಜೇ ಅರಸಿನವರು ಕಳೆದ ಮಂಗಳವಾರದ ದಿನ ಹಗಲು ೧೧ ಘಂಟೆ ಸಮಯಕ್ಕೆ ರಾಜಪುತ್ರರಾದ [illegible] ಸಹೋದರರೆಲ್ಲರೂ [illegible] ವೃತ್ತಾಂತವು ಕೇಳಿ [illegible] ಶ್ರೀಮನ್ಮಹಾರಾಜರವರ ಅಯೋಗ್ಯ ಮುಂಗಡ [illegible] ಕಳುಹಿಸಲ್ಪಟ್ಟ ಸಂಗತಿಗಳಿಂದಾಗುತ್ತ ಅತಿ ಶೋಕನೀಯವಾದ ಅವರ ಸ್ಥಿತಿಯನ್ನು ಮುಖತಃ ನೋಡಿ ಸಂತೈಸುವದು ನೋಡುವವರು ಅವರ ಪ್ರಜೆಗಳಾದ ನಮ್ಮ ಮಂದಭಾಗ್ಯವೆಂದು ಭಾವಿಸುತ್ತೇವೆ. ಶ್ರೀಮನ್ಮಹಾರಾಜರವರ ಸಹೋದರರಾದ ಮ|| ರಾ|| ಗೋಪಾಲರಾಜೇ ಅರಸಿನವರ ವಿಯೋಗದಿಂದಾದ ದುಃಖವು ಜನರ ಹೃದಯದಲ್ಲಿ ಅದ್ಯಾಪಿ ನಿವೃತ್ತಿಯಾಗದಿರುವಾಗ್ಯೂ ಈಗ ಮತ್ತೊಬ್ಬರು [illegible] ಪೂರ್ವ ವಯಸ್ಸಿನಲ್ಲಿಯೇ ಗತಿಸಿದರೆಂಬುದು ತಿಳಿಸಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಅತಿ [illegible] ಯವರಿಗೆ ಪ್ರಾಣಾಂತವಾದ ಈ ವ್ಯಾಧಿರೋಗವು ವಂಶಸ್ಥವಾಗಿದ್ದು ದುರ್ಬಲಿನಿ ಮತ್ಯಾವ ಕಾರಣವೂ ತೋರುವುದಿಲ್ಲವು. ಇವರು ಅಪುತ್ರವಂತರಾಗಿ ಗತಿಸಿದ್ದು ಮತ್ತಷ್ಟು ದುಃಖಕ್ಕೆ ಕಾರಣವಾಗಿದೆ. ಮ|| ಸುಬ್ರಹ್ಮಣ್ಯರಾಜೇ ಅರಸಿನವರು ಒಂದು ಸಂವತ್ಸರ ಕಾರ್ತಿಕ ಬಹುಳ ಸಪ್ತಮಿ ದಿನ ಜನಿಸಿದರಾಗಿ ಗತಿಸುವಾಗ್ಯೆ ಇವರಿಗೆ ೨೨ ವರ್ಷಗಳವಯಸ್ಸಿಗಿಂತ ಹೆಚ್ಚೂ ವಾಸ್ತವ್ಯವಾಗಿರಲಿಲ್ಲವು. ಮೊದಲು ಇವರು ಶ್ರೀಮನ್ಮಹಾರಾಜರವರೊಡನೆ ರಾಯಲ್‌ಸ್ಕೂಲ್‌ನಲ್ಲಿ ವಿದ್ಯಾಭ್ಯಾಸಮಾಡುತ್ತಲಿದ್ದರು. ಈ ರಾಜಪುತ್ರರು ಸ್ವಭಾವತಃ ಬಹಳ ಸುಶೀಲರಾಗಿಯೂ, ಉದಾರರಾಗಿಯೂ, ಗಂಭೀರರಾಗಿಯೂ ಸೌಶೀಲ್ಯ ಕರುಣೆಯೂ ಇದ್ದುದರಿಂದ ಶ್ರೀಮನ್ಮಹಾರಾಜರವರಿಗೆ ಅವರಲ್ಲಿ ನಿರತಿಶಯವಾದ ಪ್ರೀತಿ ಗೌರವಗಳುಂಟಾಗಿರಲಿಕ್ಕೂ, ಸರ್ವಾವಸ್ಥೆಯಲ್ಲಿಯೂ ಅವರನ್ನಗಲದಿರಲಿಕ್ಕೂ ಕಾರಣವಾಗಿತ್ತು. ಅಪ್ರತೀಕಾರವಾದ ಇವರ ವಿಯೋಗದ ಪ್ರಜೆಗಳಿಗೆ ಮಹಾ ದುಃಖಕಾರಿಯಾಗಿರುವಲ್ಲಿ ಸಹಾವಾಗಲು ಅಣ್ಣರಾಗಿದ್ದಂತ ಮಹಾರಾಜರವರಿಗೆ ಸ್ಮರಿಸಿದಾಗಲೆಲ್ಲ ಇವರ ವಿಶ್ಲೇಷವು ಅತಿದುಸ್ಸಹವಾಗಿರುವದೆಂಬುದೇನೂ ಆಶ್ಚರ್ಯವಲ್ಲವು. ಮುಖ್ಯವಾಗಿ ಮಹಾರಾಜರವರ ಜನನಿಯವರಿಬ್ಬರಿಗೆ ಪೂರ್ವ ವಯಸ್ಸಿನಲ್ಲಿಯೇ ವೈಧವ್ಯವುಂಟಾದುದ್ದೂ, ತಮ್ಮ ಇಬ್ಬರು ಸುಪುತ್ರರನ್ನು [illegible] ಅನುಭವಿಸಿದ್ದು ಬಹಳ ಖೇದಕರವಾದ ವಿಷಯವಾಗಿರುತ್ತದೆ. ಮ|| ರಾ|| ಸುಬ್ರಹ್ಮಣ್ಯರಾಜೇ ಅರಸಿನವರ ಪಾರ್ಥಿವದೇಹಕ ಕ್ರಿಯೆಗಳೆಲ್ಲವು ಅವರಿಬ್ಬರ ಮಾನ್ಯತೆ ಸಕಲ ರಾಜ ಮರ್ಯಾದೆಗಳೊಡನೆ ಕ್ರಮವಾಗಿ ಜರುಗಿದವಲ್ಲದೆ ಮೃತದೇಹವು ದಹನಭೂಮಿಗೆ ಸಾಗಿಸಲ್ಪಟ್ಟಾಗ ಅರಮನೆ ಆಫೀಸರುಗಳು ಸವಾರಿಯವರೂ ಅನುಸರಿಸಿ ಹೋದರು. ಅರಮನೆ ಉದ್ಯೋಗಿಗಳು ಹಿಂಬಾಲಿಸಿ ಹೋಗಿದ್ದ ಬೀದಿಗಳು ಅಲ್ಲಿಗೆ ಹೋಗಿದ್ದವರಿಗೆಲ್ಲ ದುಃಖವಾಗಿ ಕಾಣುತ್ತ [illegible] ಸ್ಪಷ್ಟವೆಂತಲೂ, ಗತಿಸಿದವರ ಗೌರವಾರ್ಥ ದಿನ ಮೈಸೂರ್ ಷಹರ್‌ನಲ್ಲಿರುವ ಸರ್ಕಾರ್ ಆಫೀಸುಗಳೆಲ್ಲವೂ ಮುಚ್ಚಲ್ಪಟ್ಟಿದ್ದವೆಂತಲೂ ತಿಳಿದುಬರುತ್ತದೆ. ಶ್ರೀಮನ್ಮಹಾರಾಜರವರು ಸ್ವಲ್ಪ ವೈರಾಗ್ಯವನ್ನವಲಂಬಿಸಿ ಬಂಧುವರ್ಗದವರನ್ನೆಲ್ಲ ಸಮಾಧಾನಗೊಳಿಸಿ, ಅನಿರ್ವಾಯುಕ್ತವಾದ ನಷ್ಟಕ್ಕಾಗಿ ಅವರ ಹೃದಯದಲ್ಲಿ ನಿರೋಧವಾಗಿರುವ ಅವರು ನಿವಾರಿಸಿಕೊಳ್ಳಬೇಕೆಂಬುದಾಗಿ ಸ್ವಭಾವತಃ ವಿವೇಕಿಗಳಾದ ಅವರಿಗೆ ನಾವು ಪ್ರತ್ಯೇಕ ತಿಳಿಸಬೇಕಾಗಿಲ್ಲವು.

PALMISTRY.

ಈಗಿನ ಕಾಲದವರು ಜ್ಯೋತಿಷದ ಫಲಾಫಲಗಳನ್ನು ಹ್ಯಾಗೆ ನಂಬುವದಿಲ್ಲವೋ ಅದೇ ಪ್ರಕಾರ ಹಿಂದೂ ಸಾಮುದ್ರಿಕ ಶಾಸ್ತ್ರವನ್ನು ಸಹ ಸುತರಾಂ ನಂಬದೆ, ಅದು ಕೇವಲ ಬುದ್ಧಿಭರರಾದ ಕಲ್ಪಿಸಲ್ಪಟ್ಟ ಕೃತ್ರಿಮ ಗ್ರಂಥವೆಂಬುದಾಗಿ ಅನೇಕರು ಅಭಿಪ್ರಾಯ ಪಟ್ಟವರಾಗಿರುತ್ತಾರೆ. ನಮ್ಮ ಯಾವ ಶಾಸ್ತ್ರವನ್ನಾಗಲಿ ಗುರುಮುಖದಿಂ ಕಲಿತು ಸಮಗ್ರವಾಗಿ ಅಭ್ಯಾಸಿಸಿ, ದುಷ್ಟ ನಿಯೋಗದಬಿಸಿ ಅನುಭವನಾಗಿದೆ ಸನ್ನಾಕ್ಷ ಪಡಿಸಿದ್ದಂಥ ಕಂಪನಿ ತೆವರು ಮಲ್ಯರಾದರೆ ಇಗ [illegible] ಸಲ್ಲಿಗೆ ಅನ್ಯಗಳಲ್ಲಿ ಜನರಿಗೆ ಅವಿಶ್ವಾಸವು ನ್ಯಾನ ವ್ರಂಟಾಗುವದೇನೂ ಆಶ್ಚರ್ಯವಲ್ಲವು. ಆಂಗ್ಲರ ವಿದ್ಯಾಭ್ಯಾಸಿಗಳಾದವರು ತಾವು ನಂಬಿಬಿಸುವ ಶಾಸ್ತ್ರವನ್ನು ತಮ್ಮ ಜೀವನ ಸಾಧನಕ್ಕಾಗಿ ಯಾವಾಗೂ ಉಪಯೋಗಿಸಿಕೊಳ್ಳಲಾರರು, ಮತ್ತು ಅಂಥವರ ಬಾರಂಬದವರಿಗೆ ಲಭಿಸಬೇಕಾದ ಪ್ರಯೋಜನಗಳೂ ಇಲ್ಲವೆಂದು ಭಾವಿಸುವರು. ಪ್ರಸಕ್ತ ಸಾಮುದ್ರಿಕ ಶಾಸ್ತ್ರವನ್ನು ನಮ್ಮವರು ನಂಬದೆ ಹೋಗ್ಯೂ ಅದರ ವಿಷಯದಲ್ಲಿ ಪಾಶ್ಚಾತ್ಯರಾದ ಪಂಡಿತರನೇಕರು ಬಹಳ ಗೌರವವುಳ್ಳವರಾಗಿರುತ್ತಾರೆ. ಪ್ರೊಫೆಸರ್ ಬರಾರ್ನ್ ಎಂಬವರು ಈಗ್ಗೆ ನೂರಾರು ವರುಷಗಳ ಹಿಂದೆ ಶಾರೀರಕ ಲಕ್ಷಣವಿವೇಚನವೆಂಬ ಒಂದು ಗ್ರಂಥವನ್ನು ಮಾಡಿದರೆಂತಲೂ, ಸದರೀ ಗ್ರಂಥದಲ್ಲಿ ಶರೀರ ಸಿದ್ಧಗಳಾದ ಗುರುತುಗಳು ಮನೋಗುಣಗಳು, ತತ್ಪ್ರಯುಕ್ತಗಳಾದ ಪ್ರವೃತ್ತಿಗಳು, ಶರೀರಾವಯವ ಮುವಲಾದ ವಿಷಯಗಳನ್ನು ಸಮಗ್ರವಾಗಿ ವಿಚಾರಮಾಡಿರುತ್ತಾರೆಂತಲೂ ಇದಲ್ಲದೆ ಜ್ಯೋತಿಷ ಮತ್ತು ಗ್ರಹಗತಿಗಳಿಂದುಂಟಾಗತಕ್ಕ ಶಾರೀರಕ ಲಕ್ಷಣ ಭೇದಗಳನ್ನು ಸಹ ವಿಶದಪಡಿಸಿರುತ್ತಾರೆಂಬುದೂ ತಿಳಿಯಬರುತ್ತದೆ. ಈ ಸಾಮುದ್ರಿಕ ಲಕ್ಷಣಗಳಂ ಮಿಸ್ಟ್ರೆಸ್ ಕಾರ್ಟ್, ಸೆಂಟ್‌ಹಿಲ್, ಮಿಸ್‌ಬಾರ್ಗ ಎಂಬ ಇಂಗ್ಲಿಷ್ ಥಿಯರಿಸ್ಟುಗಳೂ ಮೊಕರರ್ ಅರ್ಲ್ ಪಕ್ಕೆರಿ ಸರದಾರರೂ ಚೆನ್ನಾಗಿ ಅಭ್ಯಸಿಸಿ ಅದರಲ್ಲಿ ಪಾಂಡಿತ್ಯವಂ ಸಂಪಾದಿಸಿ ಪ್ರಸಿದ್ಧಿಯನ್ನೈದಿದ್ದರು. ಪರಂತು ಪ್ರತ್ಯಕ್ಷದಲ್ಲಿ ಪಾಶ್ಚಾತ್ಯರಂತೆ ಹಸ್ತಲಕ್ಷಣಗಳಂ ತಿಳದು ಶುಭಾ ಶುಭಗಳನ್ನರುಹುವಂತ ಸಮರ್ಥರಾದ ಹಿಂದೂ ಸಾಮುದ್ರಿಕ ಶಾಸ್ತ್ರಜ್ಞರಾದವರ್ಯಾರಾದರು ಇರುವರೇ ಎಂಬ ಪ್ರಶ್ನೆ ಯುಂಟಾಗಬಹುದು. ಈ ಪ್ರಶ್ನೆಗೆ ಮ|| ರಾ|| ಎನ್. ಸೋಮಬರು ಅಯ್ಯರೆಂಬುವರು ಕರ್ನಲ್ ಅಲ್‌ಕಾಟ್ ಯವರಿಗೆ ಬರೆದ ಜವಾಬಿನಲ್ಲಿ ತಿಳಿಸುತ್ತಾರೇನಂದರೆ—ಸಾಮಾನ್ಯವಾಗಿ ಸಾಮುದ್ರಿಕ ಲಕ್ಷಣಗಳನ್ನರಿತವರು ಈ ತಂಜಾವೂರು ಪ್ರಾಂತದಲ್ಲಿ ಸಿಗದಿರುವವರಿಲ್ಲವು. ಪ್ರೋತ್ಸಾಹವಿಲ್ಲದೆ ಸದರೀ ಶಾಸ್ತ್ರವು ಸರ್ವಾಂಗ ನಷ್ಟವಾದಂತೆ ಹೇಳಬಹುದು. ನನ್ನ ಊರಲ್ಲಿ ಕೆಲವರಿಗೆ ದೇವಾಲಯನ ಮಾಡುವ ಯಾತ್ರಿಕರುಗಳು ಕೆಲವರು ಅವರ ಹಸ್ತಗಳನ್ನು ಪರೀಕ್ಷಿಸಿ ಭೂತಭವಿಷ್ಯದ್ವರ್ತಮಾನ ಫಲಗಳನ್ನು ಸ್ಪಷ್ಟವಾಗಿ ಹೇಳುತ್ತಾರೆ. ಈಗ್ಗೆ ಕೆಲವು ವರುಷಗಳ ಹಿಂದೆ ಇಲ್ಲಿಗೆ ಸಮೀಪದಲ್ಲಿರುವ ಒಂದು ಗ್ರಾಮದಲ್ಲಿ ಮಲಯಾಳ ದೇಶದವನೊಬ್ಬನು ಆರುತಿಂಗಳ ಕಾಲ ನಿಯತವಾಗಿ ವಾಸ ಮಾಡುತಲಿದ್ದನಲ್ಲದೆ ಆತನು ಸಾಮುದ್ರಿಕದಲ್ಲಿ ಬಹು ಚತುರನೆನಿಸಿದ್ದನು. ಸದರೀ ಪಂಡಿತನು ಅರ್ಧಘಂಟೆಯ ಕಾಲದಲ್ಲಿ ಹತ್ತು ಹನ್ನೆರಡು ಜನರ ಕೈಗಳನ್ನು ಪರೀಕ್ಷಿಸಿ ನಾನಾ ಫಲಗಳನ್ನು ಎಲ್ಲರೂ ಆಶ್ಚರ್ಯಪಡುವಂತೆ ತಿಳಿಸುತಲಿದ್ದನು. ನನ್ನ ಸಹೋದರನ ಕೈಯನ್ನು ಆತನು ನೋಡಿ ಆಸ್ತಿಯನ್ನೆಲ್ಲ ಮಾರಿಬಿಟ್ಟು ನಿನ್ನ ಮಗನ ಪೋಷಣೆಗೋಸ್ಕರ ನೀ ಎಂಬುದಾಗಿ ನುಡಿದನು. ಅದು ನಿಜವಾಗಿಯೇ ಪರಿಣಮಿಸಿ ನನ್ನ ಸಹೋದರನು ತನ್ನ ಆಸ್ತಿಯನ್ನೆಲ್ಲ ಕಳೆದುಕೊಂಡು ಆತನ ಮಗನಿಗೆ ಪರಸ್ಥಳದೊಳೊಂದು ಇಲಾಖೆಯಲ್ಲಿ ಹೊಸದಾಗಿ ಕೆಲಸ ಸಿಕ್ಕಿದುದರಿಂದ ಆವನಿರುವ ಸ್ಥಳಕ್ಕೆ ನಾಳೆಯ ದಿನ ಹೊರಟು ಹೋಗತಕ್ಕವನಾಗಿದ್ದಾನೆ, ಎಂಬದು. ಈ ವಿಷಯದಲ್ಲಿ ತಿಳಿಸಬೇಕಾಗಿರುವ ಇನ್ನೂ ಕೆಲವು ಅಂಶಗಳನ್ನು ಮುಂದಿನ ವಾರದ ವರೆಗೆ ನಿಲ್ಲಿಸಿರುತ್ತೇವೆ.

THE MYSORE LAND REVENUE RULES.

೧೮೮೮ನೇ ಇಸವಿಯ ೪ನೇ ನಂಬರ್ ರಿಗ್ಯುಲೇಷನಾದ ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡಿನ ೨೩೩ನೇ ಸೆಕ್ಷನ್ ಮೂಲಕ ಪ್ರದಾನ ಮಾಡಲ್ಪಟ್ಟಿರುವ ಅಧಿಕಾರಗಳನ್ನು ಜರಾಯಿಸುವ ಬಗ್ಗೆ ಶ್ರೀಮನ್ಮಹಾರಾಜಾ ಸರ್ಕಾರದವರು ರೆವ್ಯೂನ್ಯೂ ಹೊಸ ರೆವಿನ್ಯೂ ನಿಬಂಧನೆಗಳು ಗತವಾರದ ಮೈಸೂರ್ ಗೆಜೆಟಿನಲ್ಲಿ ಘೋಷಿಸಲಾಗಿರುತ್ತವೆ. ರೆವಿನ್ಯೂಕೋಡ್ ೧೮೮೯ನೇ ಇಸವಿ ಏಪ್ರಿಲ್ ತಿಂಗಳ ಸುಗ್ರೀವಾಜ್ಞೆಯಿನಲ್ಲಿ ಜಾರಿಗೆ ತರಲ್ಪಟ್ಟದ್ದರಿಂದ ಆ ಆಗಾಮಿಯ ಇರುವರಿನಿಗೆ ೧೫ ತಿಂಗಳ ಕಾಲವಾಯಿತು. ಈಗ ಘೋಷಿಸಿದಾದ ರೂಲ್ಸುಗಳನ್ನು ಇದುವರೆವಿಗೆ ಗವರ್ನಮೆಂಟಿನವರು ಪ್ರಕಟಿಸದೆ ಇದ್ದದರಿಂದ ರೆವಿನ್ಯೂ ಕೋಡ್ ಜಾರಿಯಲ್ಲಿ ಬಾರದಿದ್ದಂತಿತ್ತು. ಈಗ ಜನರು ರೆವಿನ್ಯೂ ಕೋಡನ್ನು ನಂಬಿ ವ್ಯವಹರಿಸಲಿಕ್ಕೆ ಅವಕಾಶ ವುಂಟಾಯಿತು. ಪ್ರಸಕ್ತ ರೂಲ್ಸಿನ್ನು ಅನೇಕ ಸಂಗತಿಗಳು ಸ್ಪಷ್ಟವಾಗಿ ತಿಳಿಸಲ್ಪಟ್ಟಿರುತಿವೆಯಲ್ಲದೆ ಇವು ಕನ್ನಡದಲ್ಲಿ ಪ್ರಕಟಿಸಲ್ಪಟ್ಟ ಬಳಿಕ ವಿಚಾರಪರರಾದ ಜನಗಳು ಪೂರ್ವದ ಕ್ರಮಕ್ಕೂ ಈಗ ಇರುವದಕ್ಕೂ ಇರುವ ಭೇದಗಳನ್ನು ಸುಲಭವಾಗಿ ಕಂಡುಕೊಳ್ಳಬಹುದು. ಪ್ರಸಂಗತ್ವ ವಿಲಕ್ಷಣವಾಗಿ ಭೇದಿಸುವಂಥ ಹಲವು ಸಹರ್ಷಗಳಿಗೆ ವ್ಯಾಜ್ಯವೂ ಮತ್ತೆಲ್ಲವೂ

ಅಧಿಕವಾಗುವದೂ, ಬೆಲೆಯುಳ್ಳ ಪದಾರ್ಥಗಳನ್ನು ಸರ್ಕಾರದವರು ಸ್ವಂತವಾಗಿ ಭಾವಿಸುವದೂ, ಅವರಿಗೆ ತಾದೃಶ ಭಾವನೆ ಹೆಚ್ಚುದುದೆಲ್ಲ ಪ್ರಜೆಗಳಿಗೆ ನಿರ್ಬಂಧವು ಅಧಿಕವಾಗುವದೂ ಸ್ವಾಭಾವಿಕವಾಗಿರುತಿವೆ. ಮರಲಂ ಕಲ್ಲು ಆರಿಸಿಕೊಳ್ಳುವದೂ ಮಣ್ಣು ತೆಗದುಕೊಳ್ಳುವದೂ ಇದುವರಿವಿಗೆ ಸುಲಭಸಾಧ್ಯವಾಗಿದ್ದವು ಈಗ ಅವುಗಳಿಗೆ ಗಿರಾಕಿಹೆಚ್ಚಲು ನಿರ್ಬಂಧವು ವೃದ್ಧಿಯಾಯಿತು. ಪ್ರಾಯಿಕಃ ತೃಣಕಾಷ್ಟ ಜಲಸಮೃದ್ಧಿಯೆಂಬದಕ್ಕೆಬದಲಾಗಿ ಅವುಗಳಿಗೆ ದೌರ್ಲಭ್ಯ ನ್ನುಟಾದಂತೆ ಹೇಳುವಕಾಲವೀಗ ಪ್ರಾಪ್ತವಾಗುತಲಿದೆ. ಇದನ್ನು ವಿವರಿಸಿ ಬರೆಯಲಿಕ್ಕೆ ನಮಗೆ ಬಹಳ ಇಷ್ಟವಿದ್ದಾಗ್ಯೂ ಅವಕಾಶವನ್ನು ನಿರೀಕ್ಷಿಸಬೇಕಾಗಿರುತಿದೆ.

THE MADWAS AND THE BELLARY "SARASWATHI".

ಶ್ರೀಮದ್ವೈಷ್ಣವರಾದ ಬ್ರಾಹ್ಮಣರಲ್ಲಿ ಮಧ್ವರು ಕೇವಲ ದುರಭಿಮಾನಿಗಳೆಂತಲೂ ಜ್ಞಾನರಹಿತ ಕರ್ಮಠರೆಂತಲೂ, ಮಠಾಧಿಪತಿಗಳೆಂಬ ಕಬ್ಬುಮಾತ್ರದಿಂದ ಅವಿಚಾರವಾಗಿ ಒಳಪಟ್ಟು ವ್ಯರ್ಥಗಳಾದ ಕಾಯಕ್ಲೇಶವನ್ನೇ ಮಾಡುವಂತಾ ಪಾಮರರೆಂತಲೂ ಕಳೆದ ತಿಂಗಳ ೨೯ನೇ ತಾರೀಖುಳ್ಳ ಬಳ್ಳಾರಿ ಸರಸ್ವತಿ ಎಂಬ ಪತ್ರಿಕೆಯು ಕಂಠೋಕ್ತವಾಗಿ ದೂಷಿಸುತ, ಜಯತೀರ್ಥ ಮಧ್ವಾಚಾರ್ಯರು, ಅವರ ಭಕ್ತಿ ಗೌರವಗಳಿಗೆ ನಿಮಿತ್ತರಾದ ಶ್ರೀ ವಾದಿರಾಜಸ್ವಾಮಿಗಳು, ಅವರ ಬೃಂದಾವನ ಪ್ರತಿಷ್ಠಾ ಮಹಾತ್ಮ್ಯ, ಅದರ ಮಾರಣಾಕ್ರಮ, ಅವರ ವಿಷಯದಲ್ಲಿ ಉತ್ತರಾದಿಸ್ವಾಮಿಗಳ ವೈಮನಸ್ಯ, ಮ|| ರಾ ವಿಜಯೀಂದ್ರರಾಯರವರಿಗೆ ಅವರಲ್ಲಿರುವ ಅಭಿನಿವೇಶ, ಅವರಿಗೆ ಮಾನನಷ್ಟ ಮೊಕದ್ದಮೆಗಳು, ಅದರಮೇಲೆ ಕೋರ್ಟಿನವರ ತೀರ್ಮಾನಗಳು ಮುಂತಾದವುಗಳನ್ನು ಕುರಿತು ವಿಶೇಷತಃ ಇಂಗ್ಲೀಷಿನಲ್ಲಿ ವಿಚಾರ ಮಾಡಿರುತಿವೆ. ಈಗ ಇರತಕ್ಕ ಕಾಲದೇಶ ಸ್ಥಿತಿಯನ್ನೂ ಜನರ ಜ್ಞಾನಾಭಿವೃದ್ಧಿಯನ್ನೂ, ಅವರು ಕೇವಲ ವಿಚಾರಪರರಾಗಿರುವದನ್ನೂ ನೋಡಿದರೆ ಮೇಲೆ ಹೇಳಿದ ವಿಷಯಗಳು ಇತರರಿಗೆ ಹಾಸ್ಯಾಸ್ಪದಗಳಾಗಿಯೂ ಸಿದ್ಧಾಂತಾವಲಂಬಿಗಳಿಗೆ ಅಗೌರವಕಾರಿಯಾಗಿಯೂ ಇರುತಿದೆ. ಮಧ್ವಮತಕ್ಕೆ ಈ ದೇಶವು ಮಾತೃಸ್ಥಾನವಾಗಿರುವದರಿಂದ ಆ ಮತಸ್ಥರೆಲ್ಲರೂ ಏಕಮತ್ಯಾದಿ ಗುಣಗಳೊಡನೆ ವರ್ತಿಸಿ ತಮ್ಮ ಸಂಪ್ರದಾಯ ಪರಿಷ್ಕರಣದಲ್ಲಿ ಶ್ರದ್ಧೆಯುಂಟಾಗಿಸಿ ಅನಾವಶ್ಯಕಗಳಾದ ಮತ್ತು ಅಸೂಯಾಜನಕಗಳಾದ ದೂಷಣ ತಿರಸ್ಕಾರಗಳಿಗೆ ಗುರಿಯಾಗದಿರಬೇಕೆಂದು ಕೋರುತ್ತೇವೆ.

Occasional Notes.
ನೈಮಿತ್ತಿಕ ವಿಷಯನ್ಯಾಸ.

Cholera at Mecca.—ಮಕ್ಕಾ ಪ್ರಾಂತದಲ್ಲಿ ವಾಂತಿಭೇದಿ ರೋಗ ವ್ಯಾಪಿಸಿ ಪ್ರತಿ ದಿನದಲ್ಲೂ ನೂರುಮಂದಿ ಮೃತಪಡುತಲಿದ್ದಾರೆಂದು ತಂತಿ ವರ್ತಮಾನದ ಮೂಲಕ ತಿಳಿಯಬರುತಿದೆ.

Purchase of rice.—ಜೆಡ್ಡಾದ್ವೀಪದಲ್ಲಿ ಹೆಸ್ಸರ್ಗಭಾವದಿಂದ ದುರ್ಭಿಕ್ಷ ತಲೆದೋರಿರುವದರಿಂದ ಅಲ್ಲಿಗೆ ಕಳುಹಿಸುವದಕ್ಕಾಗಿ ರಂಗೂನಿನಲ್ಲಿ ಬಹಳವಾಗಿ ಅಕ್ಕಿ ಖರೀದಿ ಮಾಡಲ್ಪಡುತಿದೆಯೆಂದು ಅಲ್ಲಿನಪತ್ರಿಕೆಯೊಂದು ವರದಿಮಾಡುತಿದೆ.

Birth of a prince.—ಕಳೆದ ತಿಂಗಳ ೩೧ನೇ ತಾರೀಖಿನಲ್ಲಿ ಘನವಂ ಪಡೆದ ಬರೋಡೆಯ ಮಹಾರಾಣಿಯವರಿಗೆ ಪುತ್ರೋತ್ಸವವಾಗಿ ರಾಣಿಯವರೂ ಮಗುವೂ ಕ್ಷೇಮವಾಗಿ ಇದ್ದಾರೆಂದು ತಿಳಿದು ಸಂತೋಷಿಸುತ್ತೇವೆ. ಮಹಾರಾಜರವರಿಗೆ ಈಗ ಜನಿಸಿದವರು ಮೂರನೇ ಪುತ್ರರು.

Recovery of stolen property.—ಈಚೆಗೆ ಕೆಲವುದಿನಗಳಹಿಂದೆ ತಿರುವಾಂಕೂರ್ ಸಂಸ್ಥಾನದದೇವಸ್ಥಾನದ ಖಜಾನೆಯಲ್ಲಿಡಲ್ಪಟ್ಟದ್ದ ಕೆಲವು ಬೆಚ್ಚ ದಳಗಳು ಕಳವಾಗಿತ್ತಷ್ಟೆ, ಸದರೀ ದಳಗಳೂ ದೇವಸ್ಥಾನಕ್ಕೆ ಸಂಬಂಧಪಟ್ಟ ಇತರ ಬೆಲೆಯುಳ್ಳ ಪದಾರ್ಥಗಳೂ ಮಧುರೆಯಲ್ಲಿ ಒಬ್ಬ ನೇಟಿವ್ ವರ್ತಕನಲ್ಲಿದ್ದು ಸಿಕ್ಕಿದವೆಂದು ತಿಳಿಯಬರುತಿದೆ.

Railway enterprise.—ರಾಂಪುರದ ಸಂಸ್ಥಾನದವರು ಭೋಜಪುರದಿಂದ ರಾಂಪುರಕ್ಕೂ ಮತ್ತು ಮುರದಾಬಾದಿಗೂ ರೈಲುಮಾರ್ಗವಂ ಕಲ್ಪಿಸುವದಕ್ಕೆ ಹಿಡಿಯಬಹುದಾದ ೫೦ ಲಕ್ಷ ರೂಪಾಯಿಗಳ ಬಂಡವಾಳವಂ ಕೊಡುವದಕ್ಕೆ ಒಪ್ಪಿಕೊಳ್ಳಲು ಬಂಗಾಳ ಮತ್ತು ವಾಯವ್ಯದೇಶದ ರೈಲ್ವೆ ಕಂಪೆನಿಯವರು ಸದರೀ ರಸ್ತೆಯಂ ಹಾಕುವದಕ್ಕೆ ಒಪ್ಪಿ ಸನ್ನದ್ಧರಾಗಿರುವಂತೆ ತಿಳಿಯಲಾದೆವು.

A heavy suit.—ಹೈದರಾಬಾದ ಸರ್ಕಾರದವರು ಸರ್ದಾರ್ ದಿಲೆರ್‌ಜಂಗ್ ಯೆಂಬವರಮೇಲೆ ೫೦ ಲಕ್ಷರೂಪಾಯಿಗಳಿಗೆ ಸಿವಿಲ್‌ದಾವೆ ತರುವವರಾಗಿರುತ್ತಾರೆಂತಲೂ, ಈಬಗ್ಗೆ ಮುಂಬೈಯಲ್ಲಿರುವ ಪ್ರಸಿದ್ಧರಾದ ಒಬ್ಬ ಲಾಯರ್ ಮೊಕರ‍್ರರ್ ಮಾಡಲ್ಪಟ್ಟದರಿಂದ ಪ್ರತಿ ಕಕ್ಷಿಯವರು ಕಲ್ಕತ್ತಾ ಮತ್ತು ಮದರಾಸಿನಲ್ಲಿರುವ ಲಾಯರ್‌ಗಳ ಪೈಕಿ ಪ್ರಾಪಕರಾಗಿರತಕ್ಕವರನ್ನು ನಿಯಮಿಸುರುತ್ತಾರೆಂತಲೂ ಕೇಸರಿ ಹಿಂದ್ ಎಂಬಪತ್ರಿಕೆ ತಿಳಿಸುತಿದೆ.

New coinage for Hyderabad.—ಹೈದರಾಬಾದ್ ಸಂಸ್ಥಾನದೊಳು ಈಗ ಜಾರಿಯಲ್ಲಿರುವ ನಾಣ್ಯಗಳನ್ನು ತಪ್ಪಿಸಿ ಒಳ್ಳೆಯ ನಮೂನೆಯಲ್ಲಿ ಹೊಸ ನಾಣ್ಯಗಳಂ ಟಾಕಿಸಬೇಕೆಂದು ಸದರೀ ಸರ್ಕಾರದವರು ಆಲೋಚಿಸಿ, ಅದಕ್ಕೆ ಆವಶ್ಯಕಗಳಾದ ಯಂತ್ರೋಪಕರಣಗಳನ್ನು ಇಂಗ್ಲಾಂಡಿನಿಂದ ತರಿಸುವಂತೆಯೂ, ಅವುಗಳನ್ನಿಟ್ಟು ಕೆಲಸ ಜರಿಗಿಸುವದಕ್ಕೆ ಅನುಕೂಲವಾದ ಕಟ್ಟಡವಂ ಕಟ್ಟಿಸುವಂತೆಯೂ ಮಂಜೂರ್ಮಾಡಿರುತ್ತಾರೆಂತಲೂ, ಅದು ಶೀಘ್ರವಾಗಿ ಜಾರೀಯೊಳು ಬರುವದೆಂತಲೂ ತಿಳಿಯಬರುತಿದೆ.

Enclosing of half anna stamps for reply.—ಕಲ್ಕತ್ತೆಯೊಳು ಒಬ್ಬಾತನು ಬೇರೆಯೊಬ್ಬನಿಗೆ ಒಂದು ಕಾಗದ ಬರೆದು ಅದಕ್ಕೆ ಜವಾಬ ನಿರೀಕ್ಷಣೆಯಿಂದ ಅರ್ಧಾಣೆ ಲೇಬಿಲನ್ನು ಸದರೀ ಲಕೋಟೆಯಲ್ಲಿ ಅಡಕಮಾಡಿ ಕಳುಹಿಸಿದನು. ಲಕೋಟೆಯು ಬಹಳ ಭಾರವಾಗಿದ್ದದರಿಂದ ಅದು ಪೋಸ್ಟ್‌ಆಫೀಸಿನವರಿಗೆ ಕಂಡುಬಂದು ಅವರು ಲಕೋಟೆಯನ್ನು ಒಡೆದು ನೋಡಿ, ಅರ್ಧ ಆಣೆ ಲೇಬಿಲ್ ಬೆಲೆಯುಳ್ಳ ಪದಾರ್ಥವಾದುದರಿಂದ ಪೋಸ್ಟಾಫೀಸ್ ರೂಲ್ ಅನುಸರಿಸಿ ರಿಜಿಸ್ಟರ್ ಮಾಡಬೇಕಾದ್ದು ಆವಶ್ಯಕವೆಂದು ನಿರ್ಣಯಿಸಿ ಆಸಾಮಿಯಿಂದ ರಿಜಿಸ್ಟ್ರೇಷನ್ ರುಸುಮಿಗೆ ಯೆರಡರಷ್ಟು ವಸೂಲ್ ಮಾಡಿದರಂತೆ.

A remark by the Chief Justice of Madras.—ಒಂದು ಕ್ರಿಮಿನಲ್ ಮೊಕದ್ದಮೆಯಲ್ಲಿ ದಂಡಿಸಲ್ಪಟ್ಟ ಒಬ್ಬ ಮನುಷ್ಯನನ್ನು, ಅಪೀಲ್ ಪರ್ಯವಸಾನದ ನಿರೀಕ್ಷಣೆಯಿಂದ ಜಾಮೀನ್‌ಮೇಲೆ ಖುಲಾಸೆ ಮಾಡಬೇಕೆಂದು ಮೆ|| ಸುಬ್ರಹ್ಮಣ್ಯ ಯವರು ಮದರಾಸ್ ಹೈಕೋರ್ಟ್ ಚೀಪ್ ಜಡ್ಜಿಯವರ ಮುಂದೆ ಪ್ರಸ್ತಾಪಿಸುವಲ್ಲಿ ಚೀಪ್ ಜಸ್ಟಿಸ್ ಯವರು ಸದರೀ ಮೊಕದ್ದಮೆಯ ಕಾಗದ ಪತ್ರಗಳಂ ನೋಡಿ, ಆ ಮೊಕದ್ದಮೆಯು ಕೆಳಕೋರ್ಟಿನಲ್ಲಿ ೬ತಿಂಗಳ ಕಾಲ ಪರ್ಯಾಪ್ತಿ ನಡೆದಂತೆ ತಿಳಿದು ಆ ರೀತಿ ಕಾಲಹರಣ ಮಾಡುವದು ಬಹಳ ಕೆಟ್ಟ ಪಾಡಿಕೆಯೆಂದು ತಿಳಿಸಿದರು.

A report contradicted.—ಬಂಗಾಳದಲೆಫ್ಟಿನೆಂಟ ಗವರ್ನರಾದ ಸರ್ ಸ್ಟೂವರ್ಟ್ ಬೇಲಿಯವರು ಕೆಲಸದಿಂದ ನಿವೃತ್ತರಾಗುವರೆಂತಲೂ, ಅವರಸ್ಥಾನಕ್ಕೆ ಈಗ ಹೈದರಾಬಾದ್ ರೆಸಿಡೆಂಟರಾಗಿರುವ ಸರ್ ಡೆನಿಸ್ ಫಿಡಿಜ್ ಪ್ಯಾಟ್ರಿಕ್‌ಯವರು ನಿಯಮಿಸಲ್ಪಡುವರೆಂತಲೂ ಹುಟ್ಟಿದ ಪ್ರವಾದವು ನಿರಾಧಾರವಾದದ್ದೆಂತಲೂ, ಸರ್ ಸ್ಟೂವರ್ಟ್ ಬೇಲಿಯವರ ನೌಕರಿಯು ಪಾಯಿದೇಕಾಲವು ಇನ್ನು ಒಂದುಸಂವತ್ಸರಕ್ಕಿಂತಲು ಜಾಸ್ತಿಯಾಗಿರುವದರಿಂದ ಅದಕ್ಕೆ ಮುಂಚಿತವಾಗಿ ನೌಕರಿಯಂ ಬಿಡಬೇಕಾದ ಕಾರಣಗಳು ಯಾವದಾದರು ಪ್ರಾಪ್ತವಾಗದಪಕ್ಷಕ್ಕೆ ತಮ್ಮನೌಕರಿಯವಾಯಿದೆ ಪೂರ್ತಿಯಾಗುವತನಕ ಕೆಲಸದಲ್ಲಿರುವರೆಂತಲೂ ಮುಂಬೈ ಗೆಜೆಟಿಪತ್ರಿಕೆ ತಿಳಿಸುತಿದೆ.

The barber question.—ವಿಧವಾ ವಿವಾಹ ಕಾರ್ಯ ಪ್ರವರ್ತಕರ ಪ್ರೇರಣೆಯ ಮೇಲೆ, ಕೆಲವು ತಿಂಗಳ ಹಿಂದೆ ಮುಂಬೈ ಪ್ರಾಂತದ ಹಜಾಮರು ಗುಂಪುಗೂಡಿ ಹಿಂದೂ ವಿಧವೆಯರಿಗೆ ತಮ್ಮ ಜನರ ಪೈಕಿ ಯಾರೂ ಕ್ಷೌರ ಮಾಡಕೂಡದೆಂದು ಒಂದು ಸಂಕೇತ ಮಾಡಿಕೊಂಡರಷ್ಟೇ ಮುರಾಬ ಎಂಬ ಪ್ರದೇಶದಲ್ಲಿನ ಹಜಾಮರು ಸಹ ಸಭೆ ಸೇರಿ ವಿಧವೆಯರಿಗೆ ತಮ್ಮ ಜನರ ಪೈಕಿ ಯಾರೂ ಕ್ಷೌರ ಮಾಡಕೂಡದೆಂತಲೂ ಹಾಗೆ ಯಾವನಾದರು ಮಾಡಿದರೆ ಅಂತವನು ಚಂಡಾಳನಾಗಿ ಎಣಿಸಲ್ಪಡುವನಲ್ಲದೆ ತಾನು ಮಾಡಿದ್ದು ತಪ್ಪೆಂದು ಹೇಳಿ ಪ್ರಾಯಶ್ಚಿತ್ತ ಪೂರ್ವಕ ತನ್ನನ್ನು ಕುಲಕ್ಕೆ ಸೇರಿಸಿಕೊಳ್ಳಬೇಕೆಂದು ಕೇಳಿಕೊಂಡಾಗ್ಯೂ ಸೇರಿಸಕೂಡದೆಂತಲೂ ತೀರ್ಮಾನಿಸಿದರು.

Raising of salt revenue.—ಈಚೆಗೆ ಕೆಲವುಸಂವತ್ಸರಗಳವೊದಲು ಉಪ್ಪಿನಮೇಲಿನ ತೀರ್ವೆಯು ಸೇರಕ್ಕೆ ೨ ರೂಪಾಯಿಗಳಮೇಲೆ ಹೆಚ್ಚಿಸಲ್ಪಟ್ಟಿರುತಿದೆಯಷ್ಟೆ. ಆದಾಗ್ಯೂ ಮದರಾಸ್‌ಪ್ರೆಸಿಡೆನ್ಸಿಯೊಳು ಸನ್ ೧೮೮೮—೮೯ನೇ ಸಣ್ಕಾರ್ ಸಾಲಿನಲ್ಲಿ ಉಪ್ಪಿನ ಹುಟ್ಟುವಳಿಯಲ್ಲಿ ೩೫ಲಕ್ಷರೂಪಾಯಿಗಳು ಜಾಸ್ತಿ ಕಂಡುಬಂದಿರುತಿವೆ. ಸಾಲವಾಗಿ ಉಪ್ಪು ಮಾರುವವರಮೂಲಕ ಹಿಂದಿನ ಸಂವತ್ಸರಕ್ಕಿಂತಲೂ ೧೧ ಲಕ್ಷರೂಪಾಯಿಗಳು ಜಾಸ್ತಿಯಾಗಿ ಬಾಕೀ ಬಿದ್ದಿರುತಿವೆ. ಉಪ್ಪಿನಕ್ರಯವನ್ನು ಜಾಸ್ತಿ ಮಾಡಿದ್ದರಿಂದ ಸದರೀ ಪ್ರೆಸಿಡೆನ್ಸಿಯ ಜನರು ಅದರಖರ್ಚು ತಗ್ಗಲಿಲ್ಲವು ಪೂರ್ವಕ್ಕಿಂತಲೂ ಜಾಸ್ತಿಯಾಗಿಯೇ ಇದೆ. ಹೀಗಿದ್ದಾಗ್ಯೂ ಕಾಲಕ್ರಮೇಣ ಮಣ ಒಂದಕ್ಕೆ ಈಗಿನ ಸರಾಸರಿ ಇರುವ ನಾಲ್ಕುಮುಕ್ಕಾಲಾಣೆ ದಾರಣೆಗಿಂತಲೂ ಕಡಿಮ್ಮೆ ಮಾಡಲ್ಪಡುವದೆಂದು ಇಂಡ್ಯ ಸ್ಟೇಟ್ ಸೆಕ್ರೆಟರಿಯವರು ಅಭಿಪ್ರಾಯಪಡುತ್ತಾರೆ. ಎಕ್ಸೈಜ್ ಕ್ರಮ ಜಾರೀಯೊಳು ತರಲ್ಪಡುವದಕ್ಕೆ ಹಿಂದೆ ಮಣ ೧ಕ್ಕೆ ಮೂರಾಣೆ ದಾರಣೆ ಇರುತಲಿತ್ತು.

A substitute for gunpowder.—ತೋಪ್ ಮದ್ದಿಗೆ ಬದಲು ಈಚೆಗೆ ಯೊಂದು ಪದಾರ್ಥ ಕಂಡು ಹಿಡಿಯಲ್ಪಟ್ಟಿರುತಿದೆ. ಅದರಲ್ಲಿ ಶಬ್ದ ಹೊಗೆ ಯಾವದೂ ಉಂಟಾಗುವದಿಲ್ಲವು. ಅದಕ್ಕೆ ಬೆಂಕಿ ದಬ್ಬುವದಿಲ್ಲವು. ಅದು ಹತ್ತಿಕೊಳ್ಳುವದಿಲ್ಲವು, ಪರಂತು ರಾಸ್ತ್ರ ಸಹಾಯದಿಂದ ಇದುವರಿವಿಗೆ ಕಂಡು ಹಿಡಿಯಲ್ಪಟ್ಟ ಅತಿ ಬಲಿಷ್ಟವಾದ ಮತ್ತು ಬೆಂಕಿ ಹತ್ತಿಕೊಳ್ಳುವ ವಸ್ತುಗಳ ಶಕ್ತಿಗಿಂತಲೂ ಅಧಿಕವಾದ ಶಕ್ತಿಯೊಡನೆ ತೋಪುಗಳಿಂದ ಮತ್ತು ಬಂದೂಕ್‌ಗಳಿಂದ ಗುಂಡುಗಳಂ ಹೊರಪಡಿಸುತಿದೆ. ಈ ಹೊಸಪದಾರ್ಥವು ಒಂದು ತರಹ ದ್ರಾವಕ. ಮುನ್ನೂರು ಬಿಂದು ಸದರೀ ದ್ರವ್ಯವನ್ನು ಉಕ್ಕಿನಲ್ಲಿ ಮಾಡಲ್ಪಟ್ಟ ಒಂದು ಸಣ್ಣ ಕೊಳವಿಯಲ್ಲಿ ಹಾಕಿ ಅದನ್ನು ರೈಫಿಲ್ ಬಂದೂಕಿನ ನಳಿಗೆ ಸೇರಿಸಿ ಯಿಡಲ್ಪಟ್ಟಿತ್ತು. ಒಂದು ಹಿಡವೆ ಕುದುರೆಯನ್ನು ಸೆಳೆದರೆ ಒಂದು ತೊಟ್ಟು ದ್ರಾವಕ ಗುಂಡಿನ ಹಿಂಭಾಗದಿಂದ ನಳಿಯೊಳಗೆ ಬಿದ್ದು ಗಾಳಿಯ ಸಂಬಂಧ ವುಂಟಾಗಿ, ತೋಪುಮದ್ದಿಗಿಂತಲೂ, ಅಧಿಕಬಲ ಮತ್ತು ವೇಗದೊಡನೆ, ಪರಂತು ಶಬ್ದ, ಹೊಗೆ ಇಲ್ಲದೆ, ಗುಂಡನ್ನು ಹೊರಪಡಿಸುತಿದೆ. ಇಂತಾ ಹೊಸ ಮಾರ್ಗವಂ ಕಂಡು ಹಿಡಿದವನಿಗೆ ಹತ್ತುಸಾವಿರ ಫ್ರಾಂಕುಗಳು ಇನಾಂ ಕೊಡಲ್ಪಟ್ಟವು. ದಿನಗಳಿಗೆ ಶಾಸ್ತ್ರಜ್ಞಾನವೂ ನಾಗರಿಕತೆಯೂ ವೃದ್ಧಿಯಾಗುವಂತೆಲ್ಲ ಬುದ್ಧಿವಿಕಾಸವನ್ನೈದುವದೇನೂ ಆಶ್ಚರ್ಯವಲ್ಲವು.

ನೋಟೀಸ್.

ನಮ್ಮ ಚಂದಾದಾರರಿಗೆ ಇದರಿಂದ ನಾವು ಜ್ಞಾಪಿಸುವ ದೇನಂದರೆ—

ಕಳೆದತಿಂಗಳ ೨೮ನೇ ತಾರೀಖಿನ ಪತ್ರಿಕೆಯ ಮೂಲಕ ನಾವು ತಿಳಿಸಿದಂತೆ ಗತಿಸಿದ ಎರಡು ವಾರಗಳಲ್ಲಿ ನಮ್ಮ ಚಂದಾದಾರರಪೈಕಿ ಬಾಕಿದಾರರಾಗಿರುವವರೆಲ್ಲರಿಗೂ ಅವರವರಬಾಕಿಗಳಂ ನಮೂದಿಸಿ ಪೋಸ್ಟುಕಾರ್ಡ ಬರೆದಿರುತ್ತೇವೆಯಾಗಿ ಬಾಕೀದಾರರೆಲ್ಲರು ಸದರೀ ಕಾರ್ಡನ್ನು ನೋಡಿದಕೂಡಲೆ ಅವರಲ್ಲಿ ಕಾಣಿಸಲ್ಪಟ್ಟಿರುವ ಚಂದಾ ಬಾಕೀ ಮೊಬಲಗನ್ನು ಕಳುಹಿಸಕೊಡಬೇಕೆಂದು ಕೋರುತ್ತೇವೆ. ಹಾಗೆ ಮಾಡಲು ಉಪೇಕ್ಷಿಸಿದವರ ವಿಷಯದಲ್ಲಿ ನಮ್ಮ ಕರ್ತವ್ಯವನ್ನು ಹಿಂದಿನ ಪತ್ರಿಕೆಯಮೂಲಕ ತಿಳಿಸಿರುತ್ತೇವೆಯಾಗಿ ಪ್ರಾಜ್ಞರಾದವರಿಗೆ ಮರಳಿ ಸೂಚಿಸುವಣವು ಅನಾವಶ್ಯಕವಾಗಿರುವದು.

೪...೮—೯೦ ಪ್ರೊಪ್ರೈಟರ್,

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕ್‌ಜಾತಿವೃತ್ತಾಂತಗಳು.

A municipal contribution.—ಹಾಸನದಲ್ಲಿ ಕಟ್ಟಲ್ಪಡತಕ್ಕ ಜ್ಯೂಬಿಲಿ ಸ್ಟೂಡೆಂಟ್ಸ್ ಹೋಂ ಎಂಬ ಕಟ್ಟಡಕ್ಕೆ ಹಾಸನದ ಮ್ಯುನಿಸಿಪಾಲಿಟಿಯವರು ೫೦೦ ರೂಪಾಯಿಗಳ ಸಹಾಯ ದ್ರವ್ಯ ಕೊಟ್ಟರೆಂದು ತಿಳಿಯಬರುತಿದೆ.

Survey.—ಕೋಲಾರ್ ಡಿಸ್ಟ್ರಿಕ್ಟಿಗೆ ಸೇರಿದ ಮಾಲೂರ್ ತಾಲ್ಲೂಕಿನಲ್ಲಿ ಸರ್ವೆ ಪ್ರಮಾಣಿಯು ಪೂರೈಸಿದ್ದರಿಂದ ಒಟ್ಟು ತಾಲ್ಲೂಕ್ ಜಮಾಬಂದಿಯು ಲಕ್ಷ ರೂಪಾಯಿಗಳ ತನಕ ಜಾಸ್ತಿಯಾದಂತೆ ಕೇಳುತ್ತೇವೆ. ನೇಟಿವ್ ಪ್ರಭುತ್ವವು ಬ್ರಿಟಿಷ್ ನವರ ಆಳಿಕೆಕ್ಕಿಂತ ಲಾಭಕಾರಿಯೆಂದು ನುಡಿಯಲಿಕ್ಕೆ ಮೇಲೆ ಕಂಡದ್ದೊಂದೇ ಸಾಕಾದ ನಿದರ್ಶನವಾಗಿರುತಿದೆ.

Repairing of a temple.—ಈ ಪಡಿರು ಜಿಲ್ಲೆಯಲ್ಲಿರುವ ವೆಂಕಟರಮಣಸ್ವಾಮಿ ದೇವಸ್ಥಾನವು ಬಹಳ ಶಿಥಿಲವಾಗಿದ್ದದರಿಂದ ಅದನ್ನು ದುರಸ್ತು ಮಾಡುವ ಬಗ್ಗೆ ಮೈಸೂರ್ ಸರ್ಕಾರದವರು ೧೧೩೦೦ ರೂಪಾಯಿಗಳು ಸಾಂಕ್ಷನ್ ಮಾಡಿರುತ್ತಾರೆಂತಲೂ ಬೆಂಗಳೂರು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರವರು ವಿಚಾರಣೆಯಲ್ಲಿ ನಿರತರಾಗುತಲಿದೆಯೆಂತಲೂ ತಿಳಿಯಬರುತಿದೆ.

The Dewan's residence.—ಈ ಸಂಸ್ಥಾನದ ದಿವಾನರುಗಳು ಪ್ರಾಚೀನ ಕಚ್ಚೇರಿಗೆ ಬಂದು ಕೆಲಸ ಮಾಡತಕ್ಕ ಕಾಲವು ಅಲ್ಪವಾಗಿಯೂ, ಮನೆಗಳಲ್ಲಿರುತ ಕೆಲಸ ನೋಡುವ ಕಾಲವು ಅಧಿಕವಾಗಿಯೂ ಇರುವದರಿಂದ ದಿವಾನರವರ ಬಂಗ್ಲೆಗೆ ಸೇರಿದಂತೆ ೪,೭೦೦ ರೂಪಾಯಿಗಳ ಲಾಗವಡಿನಲ್ಲಿ ಆಫೀಸ್‌ಬಗ್ಗೆ ಒಂದು ಪ್ರತ್ಯೇಕ ಕಟ್ಟಡ ಕಟ್ಟುವ ಆಲೋಚನೆ ಯುಂಟಾಗಿರುವಂತೆ ತಿಳಿಯಬರುತಿದೆ.

History of services.—ಶ್ರೀಮನ್ಮಹಾರಾಜಾ ಸರ್ಕಾರದವರ ನೌಕರಿಯಲ್ಲಿರತಕ್ಕ ಗೆಜೆಟೆಡ್ ಆಫಿಸರಿಗಳನೌಕರಿಗಳನ್ನೆಲ್ಲ ಚರಿತ್ರರೂಪವಾಗಿ ಮರಳಿ ಪರಿಷ್ಕರಿಸಿ ಮುದ್ರಿಸಬೇಕೆಂಬ ಆಲೋಚನೆಯು ಸರ್ಕಾರದವರಿಗುಂಟಾಗಿರುವಂತೆ ತಿಳಿಯಬರುತಿದೆ. ಈಸಲ ಪ್ರಕಟಿಸಲ್ಪಡುವ ಪುಸ್ತಕದಲ್ಲಿ ಸರ್ವಿಸಿನಲ್ಲಿ ಮೆ|| ರಿಕೆಟ್ಸ್‌ಯವರು ಮೊದಲನೆಯವರಾಗಿಯೂ, ಮೆ|| ಕೇಂಬರ್‌ಯವರು ಎರಡನೆಯವರಾಗಿಯೂ ದಾಖಲಾಗಿರತಕ್ಕವರಾಗಿರುತ್ತಾರೆ.

Attempt at a double murder.—ಈವೂರು ಷಹರ್ ನಿವಾಸಿಯಾದ ವಾಜರವನೊಬ್ಬನು ತನ್ನತಂದೆಯ ಮತ್ತು ಸವತಿ ತಾಯಿಯ ಕುತ್ತಿಗೆಗಳನ್ನು ಮಚ್ಚಿನಿಂದ ಕಡಿದನೆಂತಲೂ ಅವರು ಮೃತಪಡದಿದ್ದಾಗ್ಯೂ ಜಖಂ ಅಧಿಕವಾಗಿ ಆಸ್ಪತ್ರಿಯಲ್ಲಿ ಅಪಾಯಕರವಾದ ಸ್ಥಿತಿಯಲ್ಲಿರುತಲಿದ್ದಾರೆಂತಲೂ ತಿಳಿಯಬರುತಿದೆ. ಅವರಾಧಿಗೂ ಅವನ ಸವತಿ ತಾಯಿಗೂ ದ್ವೇಷ ವುಂಟಾಗಿ ತಂದೆಯು ಭಾರ್ಯೆಯ ಪಕ್ಷವಾಗಿದ್ದದರಿಂದ ಅವರಿಬ್ಬರನ್ನೂ ಮೇಲೆ ಕಂಡಂತೆ ಕೊಲ್ಲಲಿಕ್ಕೆ ಪ್ರಯತ್ನಿಸಿದನೆಂದು ತಿಳಿಯಲಾದೆವು.

BANGALORE:—Printed and published at the KARNATIC PRESS, No. 114, SRINIVASA MANDIRAM ROAD, PETTAH.—1890.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಕಾಮವಿವಿಧಪ್ರವೃತ್ತ್ಯವಗಮಾರ್ಥಕರ್ಣಾಟಕಪ್ರಕಾಶನವರಾಭಿಧಾಪ್ರಥಿತಸಾಹಿತೀಶೋಭಿತಾ॥ಮೃಗಾಂಕಹಿತವಾಸರೆನಿಹಿತಮುದ್ರಣಾಸಜ್ಜನೈರ್ದ್ದಿಶಾಸುಪರಿಪೋಷಿತಾದಿಶತಿಮಾನಸಂಸಂಮುದಂ॥

Vol XVII] BANGALORE — MONDAY, AUGUST 11, 1890 [No 32.

ಸಂಪುಟ ೧೭.] ಬೆಂಗಳೂರು — ಸನ್ ೧೮೯೦ನೇ ಇಸಿವಿ ಆಗಸ್ಟ್ ೧೧ ನೇ ತಾರೀಖ್ ಸೋಮವಾರ. [ಸಂಚಿಕೆ ೩೨.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ ಹಾಸಲಿಲ್ಲದೆ	ದರಸ್ಥಳದವರಿಗೆ ಹಾಸಲ್‌ಸೇರಿ
ಮುಂಗಡಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ ದಸ್ಕತ್ತು ಮಾಡಿದ ತಾರೀಖು ಮೊದಲು ಒಂದು ತಿಂಗಳೊಳಗಾಗಿ ಚಂದಾ ಮೊಬಲಗು ಕಳುಹುವಂತಾವರಿಗೆ ಮಾತ್ರ ಮೇಲೆ ಬರೆದ ದರದ ಮೇಲೆ ಪತ್ರಿಕೆ ಕಳುಹಿಸಲ್ಪಡುವದು ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು ಮುಂದು ತಿಂಗಳಿಗಿಂತ ಕಡಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು

ನಿಂ ಮುಗಳು ರವಾನಿಸತಕ್ಕವರು ಮೊಬಲು ಕಮಿಷನು ವ ಅದ ನಂಬರು ಹಲದುಗ್ಗೆ ರವಕ್ಕಕಾಗದವು ಬಿಡ ಕೊಡುವ ಬಾಕೀ ಅಥ ನೋಟನ್ನು ರವಾನಿಸತಕ್ಕದ್ದು ಲೇಬಲ್‌ಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದುಅರೆಮೇರೆ ಡಿಸ್ಕೌಂಟ್ ಸಹ ಕಳುಹಿಸತಕ್ಕದ್ದು ಆಫೀಸಿಗೆ ಬರಬೇಕಾದ ಮನಿ ಲೆಬಲ್‌ಗಳನ್ನು ಕಳುಹಿಸಕೂಡದು ಡಿಸಕೌಂಟ ಇಲ್ಲದೆ ಕಳುಹಿಸಲ್ಪಡುವ ಮೊಬಲಗಿನಲ್ಲಿ ಅದು ಪಡೆಯಬೇಕಾದ್ದು ಮಿಕ್ಕನೊಬಲು ಲೆಕ್ಕಕ್ಕೆ ದಾಖಲ್ಮಾಡಿಕೊಳ್ಳಲ್ಪಡುವದು

ಪ್ರಕಟನೆಯ ರಿವಾಜ್.

ಮೊದಲನೆಯದಫಾ ಪಙ್ಕ್ತಿ ಒಂದಕ್ಕೆ ೦—೨—೦

ಎರಡನೆಯದಫಾ ಪಙ್ಕ್ತಿ ಒಂದಕ್ಕೆ ೦—೧—೦

ಜರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟುಸಲ ಫಾಯಿಸ್ ಮಾಡಿದಾಗ್ಯೂ ಪಙ್ಕ್ತಿ ಒಂದಕ್ಕೆ ೧ಆಣೆಯಂತೆ ಲೆಕ್ಕ ಮಾಡಲ್ಪಡುವದು ಈ ಪತ್ರಿಕೆಯಲ್ಲಿ ಫಾಯಿಸ್ ಮಾಡುವ ಬಗ್ಗೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಫಾಯಿಸ್ ಮಾಡ ಬೇಕೆಂಬೋ ಅಂಶವನ್ನು ಸ್ಪಷ್ಟವಾಗಿ ತಿಳಿಸತಕ್ಕದು ಇಲ್ಲದಿದ್ದಕ್ಕೆ ಅವರು ನಮಗೆ ನಿಲ್ಲಿಸುವಂತೆ ಬರೆಯುವವರೆಗೆ ಅವು ಪ್ರಕಟಿಸುತಲಿದ್ದು ಹೀಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲೆ ಕಂಡ ದರದಂತೆ ಕಿಮ್ಮತ್ತ್ ವಸೂಲ್ಮಾಡಲ್ಪಡುವದು ಪ್ರಕಟನೆಯಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆಯಾ ಶನಿವಾರದ ಮಧ್ಯಾಹ್ನ ೨ ಘಂಟೆ ಒಳಗಾಗಿ ಕಳುಹಿಸಬೇಕು ಪ್ರಕಟನೆ ಬಗ್ಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದ ೧೦ ತ ಕಲ್ಪಿಸುವ ಅಪೇಕ್ಷೆಯಾಗಲಿ ನಾವು ಪ್ರಾಮುಖ್ಯವಾಗಲೆಂದು ತಿಳಿದುಕೊಳ್ಳುವುದಾದ ದಕೊಳ್ಳು ಪತ್ರಗಳನ್ನು ಪ್ರಕಟಿಸಲಾರೆವು ಸಿವಾಕ ಳಲ್ಪಟ್ಟ ಕಾಗದಗಳು ಮರಳಾವಸ್ ಕಳುಹಿಸಲ್ಪಡಲಾರವು

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

☞ *Price including Postage Rs 5 0-0*

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜು ಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೊಡಲ್ಪಡುವದು ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸಿಗೆ ಕೊಡಲ್ಪಡಲಾರದು

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಜೊತೆಯಲ್ ಪ್ರತಿ ಒಂದಕ್ಕೆ ರೂ ೫ ೦—೦

ಟಿ. ಬಿ. ವೆಂಕಟಾಚಾರ್,

ಬೆಂಗಳೂರ್, ಲಕ್ಷ್ಮಿ ರೋಡ್ ಪೇಟೆ, 41ನೇ ನಂ ಮನೆ

ADVERTISEMENTS

ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ಬಿಕರಿಗೇ ಸಿದ್ಧವಾಗಿವೆ ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

	ಹಾಸಲ್ ಸೇರಿ ರೂ. ಆ. ಪೈ
ಸಟೀಕಾ ವೈದ್ಯಸಾರ ಸಂಗ್ರಹ	೫ ೦ ೦
,, ಶಿವಗೀತೆ	೧ ೧ ೦
,, ಶಿವಾನಂದಲಹರಿ	೦ ೭ ೦
,, ಕಾಲಾಮೃತ	೧ ೨ ೦
,, ಮುಹೂರ್ತದರ್ಪಣ	೦ ೧೨ ೦
,, ಬಾಲರಾಮಾಯಣ	೦ ೪ ೦
,, ಗೋಪಿಕಾ ಗೀತೆ	೦ ೧ ೬
,, ಚಾಣಕ್ಯನೀತಿ (ಸುಭಾಷಿತ)	೦ ೬ ೦
ವಿಷ್ಣುಸಹಸ್ರನಾಮ ವಗೈರೆ	೦ ೫ ೦
ಸೂರ್ಯಸಹಸ್ರನಾಮ	೦ ೩ ೦
ಕೃಷ್ಣಕರ್ಣಾಮೃತ	೦ ೧ ೬
ತ್ರಿಕಾಂಡ ಅಮರ ಮೂಲ	೦ ೨ ೬
೧ ಕಾಂಡ	೦ ೧ ೦

ಕನ್ನಡ ಗ್ರಂಥಗಳು.

ಕಸವೃತ್ತಿ ಅಪ್ಪೀಲ್ ಪ್ರತಿ	೩ ೦ ೦
ಡಿಟೋ ದೊಡ್ಡು	೧ ೪ ೦
ವೃಷಭೇಂದ್ರ ವಿಜಯ	೧ ೭ ೦
ಪಂಚ ಪಾಪ ಜಾಲರೀತಿ	೦ ೭ ೦
ಹನುಮದ್ವಿಲಾಸ	೦ ೭ ೦
ಕಾಳಿಯಮರ್ದನ	೦ ೨ ೬
ಸುಭದ್ರಾಪರಿಣಯ	೦ ೨ ೬
ಶಶಿರೇಖಾ ಪರಿಣಯ	೦ ೩ ೦
ಸುಧಾಮಚರಿತ್ರೆ	೦ ೨ ೦
ಮೈರಾವಣನ ಚರಿತ್ರೆ	೦ ೨ ೦
ಬಾಲಗ್ರಹ ಚಿಕಿತ್ಸೆ	೦ ೨ ೬
ಮಹಮ್ಮದನ್ ಲಾ	೧ ೦ ೦
ಭಂಗ ವಿಲಾಸ	೦ ೧೨ ೦

ನೋಟೀಸ್.

ಮನೆಗಳಲ್ಲಿ ಗಿಲಿಟ್ ಮಾಡುವದಕ್ಕೆ ಅನುಕೂಲವಾದ ಬೆಳ್ಳಿ ದ್ರಾವಕವು.

ಈ ಬೆಳ್ಳಿ ದ್ರಾವಕವು ನೈಜವಾದ ಬೆಳ್ಳಿ ತಟ್ಟೆಗಳ ಮೇಲೂ, ತಾಮ್ರ ಹಿತ್ತಾಳೆ ವಗೈರೆ ವಿಶಿಷ್ಟ ಪದಾರ್ಥಗಳ ಮೇಲೂ ಕಟ್ಟೆ ಉಜ್ಜುವದರ ಮೂಲಕ ಗಿಲಿಟ್ ಮಾಡುವದಕ್ಕೆ ಬಹಳ ಉಪಯುಕ್ತವಾದದ್ದಾಗಿರುತ್ತದೆ ಇದಲ್ಲದೆ ಸದರೀ ದ್ರಾವಕವು ಚಿನ್ನ ಮತ್ತು ಬೆಳ್ಳಿ ಒಡವೆಗಳ ಮಟ್ಟ ತೆಗೆಯಲಿಕ್ಕೂ ಅವುಗಳಿಗೆ ಮೆರುಗು ಕೊಡಲಿಕ್ಕೂ ಸಹ ಪ್ರಯೋಜನಕರವಾದದ್ದು ಇದರಿಂದ ಇತರವಿಧದಿಂ ಥಳಥಳಿಸುವಂತಾ ಕಾಂತಿ ಯುಂಟಾಗುವದು ಕನಿಷ್ಠ ಬೆಳ್ಳಿ ಪಾತ್ರೆ ಚೆನ್ನಕ್ಕೆ ಉತ್ಕೃಷ್ಟವಾದ ಮೆರುಗು ಪದಾರ್ಥಗಳಿಂದುಂಟಾಗದಂತಾ ಕಾಂತಿಯನ್ನು ಉಂಟುಮಾಡುವದು ಶುದ್ಧವಾದ ಬೆಳ್ಳಿ ಮುಂತಾದ ಸದರೀ ದ್ರಾವಕವು ತಯಾರಿಸಲ್ಪಟ್ಟದ್ದಾಗಿರುವದೆಂಬದಕ್ಕೆ ಯಾವ ಬರವಣಿಗೆ ಕೊಡಲ್ಪಡುವದು ಇದು ಗಿಲಿಟ್ ಮಾಡುವದಕ್ಕಿಂತ ಬಹಳ ಅಗ್ಗವಾಗಿರುವದು ಕೂಡಲೇ ಒಂದು ಸೀಸೆಯನ್ನು ತರಿಸಿಕೊಂಡು ಅದರಿಂದ ಯಾವ ಕೆಡಕೂ ಉಂಟಾಗ ದಿರುವದನ್ನು ಅಜಮಾಯಿಷಿ ಮಾಡಿ ನೋಡಬಹುದು

ಇದರ ಕ್ರಯ ಸೀಸೆ ೧ ಕ್ಕೆ ೨—೮—೦

ಚಿನ್ನದ ದ್ರಾವಕವು.

ಇರು ಬೆಳ್ಳಿ, ಹಿತ್ತಾಳೆ, ತಾಮ್ರ ವಗೈರೆ ಪದಾರ್ಥಗಳನ್ನು ಗಿಲ್ಟು ಮಾಡಲಿಕ್ಕೆ ಬಹಳ ಉಪಯುಕ್ತವಾಗಿರುವದಲ್ಲದೆ ಶುದ್ಧವಾದ ಭಂಗಾರದಲ್ಲಿ ತಯಾರಾದದ್ದಾಗಿರುತ್ತದೆ ಬೆಳ್ಳಿ ಆಭರಣಗಳನ್ನು ಗಿಲ್ಟು ಮಾಡಲಿಕ್ಕೆ ಈ ದ್ರಾವಕವು ಕೇವಲ ಪ್ರಯೋಜನಕರವಾಗಿರುವದು

ಇದರ ಕ್ರಯ ಸೀಸೆ ೧ಕ್ಕೆ ೩—೮—೦

ಬೇಕಾದವರು ಬೆಂಗಳೂರಿನಲ್ಲಿರುವ ಬೆಳ್ಳೀ ಕಾರ್ಖಾನೆಯ ಮ್ಯಾನೇಜರಿಗೆ ಬರೆದು ತರಿಸಿಕೊಳ್ಳಬಹುದು.

ಮೈಸೂರು ಪಬ್ಲಿಕ್ ವರ್ಕ್ಸ್ ಇಲಾಖಾ,

ಸೆಂಟ್ರಲ್ ಆಫೀಸ್

ಬೆಂಗಳೂರು, 7ನೇ ಆಗಸ್ಟು 1890.

ನೋಟೀಸ್

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ —

ಬೆಂಗಳೂರಿಂದ ಹಿಂದೂಪುರದ ಬಳಿ ಇರುವ ಮೈಸೂರು ಸರಹದ್ದು ವರಿವಿಗೆ ರೆಯಿಲ್ ರಸ್ತೆ ಹಾಕುವದಕ್ಕೆ ಮಾಡಬೇಕಾದ ಪ್ರತಿಯೊಂದು ತರಹ ಕಾಮಗಾರಿಗಳ ದರಗಳನ್ನು ತೋರಿಸಿ ಒಂದು ಷೆಡ್ಯೂಲ್ ಪಟ್ಟಿಯ ನಮೂನೆಯಲ್ಲಿ ದರಖಾಸ್ತುಗಳು ಟೆಂಡರ್ದಲ್ಲಿ ಅಪೇಕ್ಷಿಸಲ್ಪಡುವವು. ಕಾಮಗಾರಿಯು ಅಯಿದುಮೈಲ್‌ಗಳಿಗೆ ಒಂದು ಸೆಕ್ಷನಿನಂತೆ ಕೊಡಲ್ಪಡುವದು. ದರಖಾಸ್ತು ಮಾಡುವದಕ್ಕೆ ಇಷ್ಟಪಡುವವರು ತಾವು ಯಾವ ಸೆಕ್ಷನಿಗೆ ಅಥವಾ ಸೆಕ್ಷನ್‌ಗಳಿಗೆ ದರಖಾಸ್ತು ಕೊಡಬೇಕೆಂದು ಯೋಚಿಸುತ್ತಾರೆಯೋ ಅಂತಾ ಸೆಕ್ಷನ್ ಅಥವಾ ಸೆಕ್ಷನ್‌ಗಳನ್ನು ಖುದ್ದು ನೋಡಿ ಬರುವದು ಒಳ್ಳೆಯದು. ಸದರೀ ಮಾರ್ಗದಲ್ಲಿ ಯಾವಸೆಕ್ಷನಿಗೆ ದರಖಾಸ್ತು ಕೊಟ್ಟಾಗ್ಯೂ ಅಂತಾಸೆಕ್ಷನ್ನಲ್ಲಿನ ವಿಶಿಷ್ಟ ಕಾಮಗಾರಿಯೂ ಅದಕ್ಕೆ ಸೇರಿದ್ದಾಗಿರುವದು, ಪರಂತು ಪತ್ರ ನೆಟಗೆ ಸೇರಿರುವದಿಲ್ಲವು

(Signed) W McHUTCHIN,

Asstt Chief Engineer,

of Mysore.

ನೋಟೀಸ್.

ಮೈಸೂರುಶೀಮೆಯ ಚೀಫ್‌ಕೋರ್ಟನಲ್ಲಿ

ಸನ್ 1890ನೇ ಇಸಿವಿ ಮಿಸಲೇನಿಯಸ್ ಪಿ॥ ನಂಬರ್ 158

ಅರ್ಜದಾರರು

ಬಾಗೇಪಲ್ಲಿ ತಾಲ್ಲೂಕ್ ಗೂಳೂರು ಧರ್ಮಸಹಾಯ ರಾಜಧಾನಿ ಕಂಪೆನಿ ಲಿಮಿಟೆಡ್ ಷೇರ್ ದಾರರು ಮತ್ತು ನೌಕರರಾದ ನಾರಣಪ್ಪ ವಗೈರೇರು

ಇದರಿಂದ ಸಮಸ್ತಜನರಿಗೂ ತಿಳಿಯಪಡಿಸುವದೇನಂದರೆ —

ಮೇಲ್ಕಂಡ ನಾರಣಪ್ಪ ವಗೈರೇರು ಮೇಲ್ಕಂಡ ಕಂಪೆನಿಯ ಷೇರ್‌ದಾರ್‌ಗಳು ಶಾಲ್ಗಳು ಕೊಡದೆ ಹೋದ್ದರಿಂದ ಸಹಾಯಗಳು ಸಲ್ಲುವದಕ್ಕೆ ಇಲ್ಲದೆ ಕೆಲವು ಷೇರ್‌ದಾರರು ತಮಗೆ ಬರತಕ್ಕ ಹಣಕ್ಕಾಗಿ ಕಂಪೆನಿಯಮೇಲೆ ದಾವಾಗಳು ಮಾಡಿ ಕಂಪೆನೀಲಿ ಇದ್ದ ಹಣವನ್ನ ಜಪ್ತಿ ಮಾಡಿಸಿ ಇರುವದ್ದರಿಂದ ಈ ಮೊಬಲಗು ಇವರಿಗೆ ಸಂದುಹೋದರೆ ಮುಂದೆ ೩ ಸಾವಿರದವರಿಗಿಗು ಇರತಕ್ಕ ಷೇರ್‌ದಾರ್ರಿಗೆಲ್ಲ ನಷ್ಟ ಸಂಭವಿಸುವದ್ದರಿಂದ ಕಂಪೆನಿ ವೈಂಡ್‌ಅಪ್ ಮಾಡಿಸಿ ಬ್ಯಾಲೆನ್ಸಿಗು ಮೊಬಲಗು ಹಂಚಬೇಕೆಂದು ವಗೈರೆ ಅರ್ಜಿ ಕೊಟ್ಟಿರುತ್ತಾರೆ ಇದರ ಇತ್ಯರ್ಥದ ಬಗ್ಗೆ ಸನ್ 1890ನೇ ಇಸಿವಿ ಆಗಸ್ಟ್ ತಿಂಗಳು 12ನೇ ತಾರೀಖ್ ಮಂಗಳವಾರ ಹಿಯರಿಂಗ್ ಮೊಕರರ್ ಮಾಡಿ ಇದೆ. ಆ ತಾರೀಖ್ ದಿವಿ 11 ಘಂಟೆಗೆ ಆಕ್ಷೇಪಣೆ ಇರತಕ್ಕವರೆಲ್ಲರೂ ಅವರೇ ಆಗಲಿ ಅವರಗಳತರಫ್ ಮೊಖ್ತ್ಯಾರಿ ಪಡೆದ ಅಡ್ವೋಕೇಟರಾಗಲಿ ಕೋರ್ಟಿನ ರೂಬರೂವ್ ಹಾಜರಾಗತಕ್ಕದ್ದು.

By the Court,

25ತಾ॥ನೇ ಮಾಹೆ ಜುಲೈ 1890 } S. R Subbaraya Iyer, *Registrar.*

ನೋಟೀಸ್.

ಮೈಸೂರು ಶೀಮೆಯ ಚೀಫ್ ಕೋರ್ಟನಲ್ಲಿ

ಸನ್ 1890ನೇ ಇಸಿವಿ ಮಿಸಲೇನಿಯಸ್ ಪಿ॥ ನಂಬರ್ 159

ಅರ್ಜದಾರು)

ಗೌರಿ ಬಿದನೂರು ತಾಲ್ಲೂಕು ಮಂಚೇನಹಳ್ಳಿ ಶ್ರೀ ಲಕ್ಷ್ಮೀ ಕಳಾನಿಧಿ ಆಂಜನೇಯಸ್ವಾಮಿ ಸಹಾಯ ಕಂಪೆನಿ ಲಿಮಿಟೆಡ್ ಪ್ರೆಸಿಡೆಂಟ್ ಎನ್. ಲಕ್ಷ್ಮಣರಾವ್

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—

ಮೇಲ್ಕಂಡ ಎನ್. ಲಕ್ಷ್ಮಣರಾವ್ ವಗೈರೇರು— ಮೇಲ್ಕಂಡ ಕಂಪೆನಿಯು ಸಹಾಯ ಕೊಡತಕ್ಕದ್ದು ಒಂದು ಭಾಗವು, ಲೇವಾದೇವಿ ನಡೆಸತಕ್ಕದ್ದು ಒಂದು ಭಾಗವು, ಈಪ್ರಕಾರ ಎರಡು ಭಾಗಗಳೆಂತಲೂ, ಮೊದಲನೇ ಭಾಗದಲ್ಲಿ ಫಂಡು ಕಮ್ಮಿ, ಸಹಾಯ ತೆಗದುಕೊಳ್ಳತಕ್ಕವರು ಜಾಸ್ತಿ, ಶಾಲ್ಸ ವಸೂಲಾಗುವದಿಲ್ಲ, ಮುಂದೆ ಕಂಪೆನಿ ಕೆಲಸ ನಡೆಯುವದಕ್ಕೆ ಅವಕಾಶವಿಲ್ಲವೆಂತಲೂ, ಕೆಲವುಷೇರ್‌ದಾರು ಕಂಪೆನಿಮೇಲೆ ದಾವಾಗಳು ಮಾಡಿ ಜಡ್ಜಿಮೆಂಟಿಗೆ ಮುಂಚೆ ಕಂಪೆನೀಲಿ ಇದ್ದ ಹಣ ಜಫ್ತೀಮಾಡಿಸಿ ಇದಾರೆ, ಇನ್ನು ಕೆಲವರು ದಾವಾ ಮಾಡುವದಕ್ಕೆ ಸಿದ್ಧರಾಗಿ ಇವಾರೆ, ಆದ್ದರಿಂದ ಕಂಪೆನಿಯ ಮೊದಲುಭಾಗವನ್ನು ಮಾತ್ರ ವೈಂಡಪ್ ಮಾಡಿಸಬೇಕೆಂದು ವಗೈರೆ ಅರ್ಜಿ ಕೊಟ್ಟು ಇದಾರೆ. ಇದರ ಇತ್ಯರ್ಥದ ಬಗ್ಗೆ ಸನ್ 1890 ಇಸಿವಿ ಆಗಸ್ಟು ತಿಂಗಳು 19ನೇ ತಾರೀಖ್ ಮಂಗಳವಾರ ಹಿಯರಿಂಗ್ ಮೊಕರರ್ಮಾಡಿ ಇದೆ. ಆ ತಾರೀಖ್ ದಿವಿ 11 ಘಂಟೆಗೆ ಆಕ್ಷೇಪಣೆ ಇರತಕ್ಕವರೆಲ್ಲರು ಅವರೇ ಆಗಲಿ ಅವರ ತರಫ್ ಮೊಖ್ತ್ಯಾರೀ ಪಡೆದ ಅಡ್ವೋಕೇಟರೇಆಗಲಿ ಈಕೋರ್ಟಿನ ರೂಬರೂವ್ ಹಾಜರಾಗತಕ್ಕದ್ದು.

By the Court,

ತಾ॥ 25ನೇ ಮಾಹೆ ಜುಲೈ 1890 } S R. Subbaraya Iyer *Registrar*

ನೋಟೀಸ್.

ಮೈಸೂರುಶೀಮೆಯ ಚೀಫ್‌ಕೋರ್ಟನಲ್ಲಿ.

ಸನ್ 1890ನೇ ಇಸಿವಿ ಮಿಸಲೇನಿಯಸ್

ಪಿಟಿಷನ್ ನಂಬರ್ 134.

ಅರ್ಜಿದಾರರು,

ಸೂರ್ಯನಾರಣಪ್ಪ ವಗೈರೇರು,

ಇದರಿಂದ ಸಮಸ್ತಜನರಿಗೂ ತಿಳಿಯಪಡಿಸುವದೇನಂದರೆ

ಮೇಲ್ಕಂಡ ಸೂರ್ಯನಾರಣಪ್ಪ ವಗೈರೇರು ಕ್ಯಾಲನೂರು ಶ್ರೀ ವೇಣು ಗೋಪಾಲಸ್ವಾಮಿ ಪ್ರೇರೇಪಿತ ಕಲ್ಯಾಣ ತರಂಗಿಣೀ ಕಂಪೆನಿಯ ಷೇರ್‌ದಾರರು ಕಾಲ್ಸು ಕೊಡದೆ ಕಂಪೆನಿ ಆಡಳತಗಳೆಲ್ಲ ನಿಂತು ಹೋಗಿರುತ್ತೆಂತಲೂ, ಕಂಪೆನಿ ರೂಲ್ಸಿಗೆ ವಿರೋಧವಾಗಿ ಸೇವಿಂಗ್ಸ್ ಬ್ಯಾಂಕಿನಲ್ಲಿಯಿದ್ದ ಮೊಬಲಗುವೈಕಿ ಹತ್ತುಸಾವಿರ ರೂಪಾಯಿಗಳು ಮುನೇಗೌಡವಗೈರೇರು ತೆಗದುಕೊಂಡು ಖಿಲಲ್ಮಾಡಿ ಇರುವದಲ್ಲದೆ ಕೆಲವುಜನ ಷೇರ್‌ದಾರರು ಕಂಪೆನಿಮೇಲೆ ದಾವಾಮಾಡಿ ಸೇವಿಂಗ್ಸ್ ಬಾಂಕಿನಲ್ಲಿ ಬಾಕೀಯಿದ್ದ (5) ಐದುಸಾವಿರ ರೂಪಾಯಿಗಳು ಜಪ್ತಿಮಾಡಿಸಿ ಇದಾರೆಂತಲೂ ಕಂಪೆನಿ ವೈಂಡಪ್ ಮಾಡಿಸಬೇಕೆಂದುವಗೈರೆ ಅರ್ಜಿ ಕೊಟ್ಟಯಿದಾರೆ. ಇದರ ವಿಮರ್ಶೆಬಗ್ಯೆ 1890ನೆ ಇಸವಿ ನೆವ್ಹೆಂಬರ್ ತಿಂಗಳು 2 ನೇತಾರೀಖು ಮಂಗಳವಾರ ಹಿಯರಿಂಗ್ ಮೊಕರರ್ಮಾಡಿಯದೆ. ಆತಾರೀಖು ದಿವಿ 11ಘಂಟೆಗೆ ಆಕ್ಷೇಪಣೆ ಇರತಕ್ಕವರೆಲ್ಲರು ಅವರೇಆಗಲಿ ಅವರವೊಕಾಲ್ಯತ್ವ ಹಿಸಿದ ಅಡ್ವೋಕೇಟರೇಆಗಲಿ ಈ ಕೋರ್ಟ್ ರೂಬರೂಪ ಹಾಜರಾಗಬೇಕು.

By the Court,

ತಾ॥2ನೇ ಮಾಹೆ ಆಗಸ್ಟು 1890. S. R. Subbaraya Iyer, *Registrar.*

ನೋಟೀಸ್.

ಮೈಸೂರ್‌ಶೀಮೆಯ ಚೀಫ್‌ಕೋರ್ಟಿನಲ್ಲಿ.
ಸರ್ 1890ನೇ ಇಸವಿ ಮಿಸಲೇನಿಯಸ್
ಪಿಟಿಷನ್ ನಂಬರ್ 136.

ಅರ್ಜಿದಾರರು.
1. ಕೃಷ್ಣಪ್ಪ
2. ಸಿದ್ಧಲಿಂಗಪ್ಪ
3. ಚಿಕ್ಕ ನಂಜೈಯ್ಯ

ಕೌಂಟರ್ ಅರ್ಜಿದಾರರು
ಮ್ಯಾನೇಜರ್ ನಂಜಪ್ಪ ವಗೈರೆ

ಇದರಿಂದ ಸಮಸ್ತಜನರಿಗೂ ತಿಳಯಪಡಿಸುವದೇನಂದರೆ—

ಮೇಲ್ಕಂಡ ಕೃಷ್ಣಪ್ಪ ವಗೈರೇರು, ಶಿಡ್ಲಘಟ್ಟದಲ್ಲಿರುವ ಕಲ್ಯಾಣಾಭಿವೃದ್ಧಿ ಕಂಪೆನಿಯ ಷೇರ್‌ದಾರರು ರೂಲ್ಸುಪ್ರಕಾರ ಡೊನೇಷನ್ ಮತ್ತು ಕಾಲ್ಸು ಮೊಬಲಗು ಕೊಟ್ಟಗ್ಯೂ ಕಂಪೆನಿ ಅಧಿಕಾರಿಗಳು ನೂರಾರು ಷೇರ್‌ದಾರರಿಗೆ ಸಹಾಯ ದ್ರವ್ಯಕೊಡದೆ ಹೋದ್ದರಿಂದ ಅನೇಕ ಷೇರ್‌ದಾರರು ಕಾಲ್ಸುಗಳು ಕೊಡದೆ ಬಿಟ್ಟರುತ್ತಾರೆಂತಲೂ, ಕಂಪೆನಿ ನೌಕರರಿಗೆ ಕಂಪೆನಿ ಮೂಲಧನದಿಂದ ಬಟವಾಡೆ ಆಗುವದರಿಂದ ಬಹಳ ಲುಕ್ಸಾನು ಆಗುತದೆಂತಲೂ, ಕಂಪೆನಿ ವೈಂಡಪ್ ಮಾಡಿಸಬೇಕೆಂದು ವಗೈರೆ ಅರ್ಜಿಕೊಟ್ಟಿರುತ್ತಾರೆ. ಇದರ ಇತ್ಯರ್ಥದಬಗ್ಯೆ 1890ನೇ ಇಸವಿ ಆಗಸ್ಟು ತಿಂಗಳು 19ನೇತಾರೀಖ್ ಮಂಗಳವಾರ ಹಿಯರಿಂಗ್‌ಮೊಕರರ್ಮಾಡಿಯದೆ. ಆತಾರೀಖುದಿವಿ 11ಘಂಟೆಗೆ ಆಕ್ಷೇಪಣೆ ಇರತಕ್ಕವರೆಲ್ಲರು ಅವರೇಆಗಲಿ ಅವರ ಅಡ್ವೋಕೇಟರಾಗಲಿ ಈಕೋರ್ಟ್ ರೂಬರೂಪ ಹಾಜರಾಗಬೇಕು.

ತಾ॥ 2ನೇ ಆಗಸ್ಟು 1890ನೇ ಇಸವಿ.

By the Court,
S. R. Subbaraya Iyer,
Registrar,

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, AUGUST 11, 1890
೧೮೯೦ನೇ ಆಗಸ್ಟು ೧೧ ನೇ ಸೋಮವಾರ

MEETING OF THE LAND LORDS.

ಕಳೆದ ಜುಲೈ ತಿಂಗಳ ೩೦ನೇ ತಾರೀಖ್ ಬುಧವಾರದ ದಿನ ಮದರಾಸ್ ಮೌಂಟ್ ರೋಡ್ನಲ್ಲಿರತಕ್ಕ ಶ್ರೀ ಬೊಬ್ಬಿಲಿ ಸಂಸ್ಥಾನದ ಅರಸರವರ ಗೋಪಾಲಬಾಗ್ ಎಂಬ ರಾಜ ಮಂದಿರದಲ್ಲಿ ಒಂದು ದೊಡ್ಡ ಸಭೆ ಸೇರಿತ್ತು. ಸದರೀ ಸಭೆಗೆ ಬಹುಮಂದಿ ಜಮೀನ್ದಾರರು, ಮಿರಾಸಿದಾರರು, ಜಹಗೀರ್‌ದಾರರು, ಶ್ರೋತ್ರಿಯದಾರರು, ಇನಾಂದಾರರು, ದೇವಸ್ಥಾನಗಳ ಧರ್ಮಕರ್ತರು, ಮಸಜಿದುಗಳ ಮುತವಲ್ಲಿಯರು, ಮಠಾಧಿಪತಿಗಳು, ರಯುತವಾರೀ ಹಕ್ಕುದಾರರು ಮೊದಲಾದವರೆಲ್ಲರೂ ಬಂದಿದ್ದರು. ಆ ಕಾಲದಲ್ಲಿ ವೆಂಕಟಗಿರಿ ಅರಸರವರು ಸಭಾಧ್ಯಕ್ಷರಾಗಿದ್ದು ಶ್ಲಾಘ್ಯವಾದ ಉಪನ್ಯಾಸವಂ ಮಾಡಿದರು. ಸದರೀ ಅರಸರವರು ತತ್ಕಾಲದಲ್ಲಿ ಗವರ್ನಮೆಂಟಿನವರಿಂದ ಜಮೀನ್ದಾರರಿಗೆ ಸಾಮಾನ್ಯೇನ ಉಂಟಾಗಿರುವ ನಿರ್ಬಂಧಗಳನ್ನು ತಕ್ಕ ನಿವರ್ತನಗಳೊಡನೆ ಹೊರಪಡಿಸಿ ತತ್ಪರಿಹಾರಾರ್ಥ ಮಾಡಬೇಕಾದ ಕೆಲವು ಏರ್ಪಾಡುಗಳನ್ನು ವಿವರಿಸಿರುತ್ತಾರೆ. ಇಂತಾ ಸಭೆ ಯೊಂದು ಈ ಸಂಸ್ಥಾನದಲ್ಲಿ ಆವಶ್ಯಕವೇ ಯೆಂದು ಆಲೋಚಿಸಿ ನೋಡಲಾಗಿ, ಸದರೀ ಸಭೆಗೆ ಬಂದಿದ್ದ ರಾಮನಾಥಪುರ, ಪಾಲೂರ್, ಚಿಟ್ಟಿವೋಲೆ, ಬಂಗಾರುಪಾಳ್ಯ, ತಿರೂರ್ ವಗೈರೆ ಜಮೀನ್ದಾರರ ತರಗತಿಗೆ ಸೇರಿರುವಂತವರು ಇಲ್ಲಿ ಬಹಳವಾಗಿಲ್ಲದಿದ್ದರೂ ಭಾರೀ ಸರ್ವಮಾನ್ಯಗಳನ್ನನುಭವಿಸುವ ರಾಜಪಿಂಡೆಗಳೂ, ಮಠಾಧಿಪತಿಗಳೂ, ಜಹಗೀರುದಾರ್‌ಗಳೂ ಅನೇಕರಿರುತ್ತಾರೆ. ಇವರಿಗೆ ಈ ಸಂಸ್ಥಾನದಲ್ಲುಂಟಾಗಿರುವ ನಿರ್ಬಂಧಗಳು ಪ್ರಾಯಶಃ ತತೋಽವ್ಯಧಿಕವಾಗಿರುತಿವೆ. ಗ್ರಾಮನೌಕರರ ಬದಲೀ ಬರತರಫೆವಿಷಯಗಳಲ್ಲಿಯೂ ಕೆಂದಿ ಮೆರಾಬ್ ಹುಟ್ಟುವಳೀ ವಿಷಯದಲ್ಲಿಯೂ ಆಗಿಂದಾಗ್ಯೆ ತಾಲ್ಲೂಕು ಅಧಿಕಾರಿಗಳು ಕೊಡತಕ್ಕ ತೊಂದರೆಗಳ ವಿಷಯದಲ್ಲಿಯೂ, ಇಲ್ಲಿನ ಜಮೀನ್ದಾರರಿಗೆ ಬಹಳ ಸಂಕಟಗಳು ಪ್ರಾಪ್ತವಾಗಿರುತಿವೆ. ರೈತರಿಂದ ಕಂದಾಯಗಳನ್ನು ವಸೂಲ್ಮಾಡುವದಕ್ಕೆ ರೆವಿನ್ಯೂ ರಿಕವರಿ ಆಕ್ಟು ಇದ್ದೂ ಇವರಭಾಗದಲ್ಲಿ ಪ್ರಯೋಜನವಿಲ್ಲದಂತಿವೆ. ಇವರೆಲ್ಲರೂ ಅನೇಕಾವರ್ತಿ ಮೈಸೂರಲ್ಲಿ ಸಭೆಸೇರಿ ಸರ್ಕಾರದವರಿಗೆ ಕೆಲವುಅಂಶಗಳನ್ನು ಅರಿಕೆ ಮಾಡಿದಾಗ್ಯೂ ಅವೈಕಿ ಯಾವದೂ ಸಫಲವಾಗಲಿಲ್ಲವು. ಮರಳಿ ಸಭೆ ಸೇರಲಿಕ್ಕೆ ಕಳೆದ ಅಕ್ಟೋಬರ್ ತಿಂಗಳಲ್ಲಿ ನಡೆದ ಮೈಸೂರು ದರಬಾರ್ ವರ್ತಕರ ಕೂಟದಂತೆ ಎಲ್ಲಿ ಭಾವಿಸಲ್ಪಡುವದೋ ಯೆಂಬ ಶಂಕೆ ಯುಳ್ಳವರಾಗಿರುತ್ತಾರೆ. ಮುಖ್ಯವಾಗಿ ಜನರ ಉದ್ದೇಶ ಪ್ರಯತ್ನಗಳು ಶ್ಲಾಘ್ಯಗಳಾಗಿಯೂ ಉಪಯುಕ್ತಗಳಾಗಿಯೂ ಇದ್ದವು. ಅಂತವುಗಳನ್ನು ಪ್ರೋತ್ಸಾಹ ಪಡಿಸತಕ್ಕವರ ಅಭಾವದಿಂದಲೂ ಇರತಕ್ಕವರ ವಿರುದ್ಧಾರ್ಥ ಕಲ್ಪನೆಯಿಂದಲೂ ಕಾಲದೇಶಸ್ಥಿತಿಯನ್ನಾಲೋಚಿಸಿ ಯೆಂತಾ ನಿರ್ಬಂಧಗಳನ್ನಾದರೂ ಅನುಭವಿಸಿಕೊಂಡು ಅವರವರು ತಮ್ಮ ತಮ್ಮ ಪ್ರಾಣ ಮಾನಗಳಂ ಕಾಪಾಡಿಕೊಳ್ಳುವದೇ ಪರಮ ಲಾಭವೆಂದೆಣಿಸಿರುತ್ತಾರೆ.

DEATH OF THE HOLKAR'S YOUNG BROTHER

ಕಳೆದ ತಿಂಗಳ ೨೮ ನೇ ತಾರೀಖಿನಲ್ಲಿ ಈಗ ರಾಜ್ಯಧುರವಂ ಕೈಗೊಂಡಿರುವ ಹೋಲ್ಕರ್ ಮಹಾರಾಜರವರ ಕನಿಷ್ಠಸೋದರರಾದ ಬಾಲಾಸಾಹೆಬ ಯಶೋವಂತರಾಯರವರು ಕಾಲಗತಿಯನ್ನೈದಿದರೆಂಬ ವೃತ್ತಾಂತವಂ ಕೇಳಿ ಬಹಳ ವಿಷಾದಿಸುತ್ತೇವೆ. ಈರಾಜಪುತ್ರರು ಮೃತವಡುವದಕ್ಕೆ ಕೆಲವು ದಿನಗಳ ಮೊದಲು ಕಠಿಣವಾದ ಜ್ವರ ರೋಗಾನುಭವದಲ್ಲಿರುತಲಿದ್ದರು. ಇವರ ಮರಣದದೆಸೆಯಿಂದ ಇವರಕುಟುಂಬಕ್ಕೆ ಬಹಳ ಕಷ್ಟ ಪ್ರಾಪ್ತವಾದುದರಿಂದ ಅದಕ್ಕಾಗಿ ನಾವು ಬಹಳ ಅನುತಪಿಸುತ್ತೇವೆ. ಇವರು ಬಹಳ ವಿವೇಕಿಯಾಗಿಯೂ ಶಾಂತಸ್ವಭಾವುಳ್ಳವರಾಗಿಯೂ ಇದ್ದರು. ಇಂದೂರಲ್ಲಿರುವ ರಾಜಕುಮಾರ ಕಾಲೇಜ್ ಪಾಠಶಾಲೆಯೊಳು ತಮ್ಮ ಸಹೋದರರೊಡನೆ ವಿದ್ಯಾ ವ್ಯಾಸಂಗವಂಗೈಯುತಲಿದ್ದರು. ಗೃಹಕೃತ್ಯ ಸಂಬಂಧವಾದ ಮನಸ್ತಾಪಗಳಂ ವ್ಯವಸ್ಥೆಮಾಡುವ ವಿಷಯದಲ್ಲಿ ಇವರು ಅವಲಂಬಿಸಿದ ಮಾರ್ಗದಿಂದ ಕೇವಲ ವಿವೇಕಿ ಯೆನ್ನಿಸಿಕೊಂಡರು. ಇಂತಾ ಸದ್ಗುಣ ಪರಿಪೂರ್ಣರಾದವರ ಮರಣವಂಕುರಿತು ಯೋಚಿಸಲಾಗಿ ಅದು ಅವರ ತಾಯಿಯಾದ ಮಹಾರಾಣೀ ರಾಧಾಬಾಯಿಯವರಿಗೂ ಅವರಭಾರ್ಯೆಯವರಿಗೂ ಪ್ರಬಲನಷ್ಟವೆಂದು ಹೇಳಬೇಕಾಗಿರುತಿದೆ. ಭ್ರಾತೃನಿಯೋಗ ಜನ್ಯವಾದ ದುಃಖದಿಂದ ಹೋಲ್ಕರ್ ಮಹಾರಾಜರವರು ಕೇವಲ ಖಿನ್ನರಾಗಿ ಸೋದರವಾತ್ಸಲ್ಯದಿಂ ಮೃತಪಟ್ಟವರ ವಿಷಯದಲ್ಲಿ ವಿಶೇಷ ಗೌರವವನು ವ್ಯಕ್ತಗೊಳಿಸಿದರು. ಇದು ಸಹಜಧರ್ಮವಾಗಿರುವಲ್ಲಿ ಹೋಲ್ಕರ್ ಮಹಾರಾಜರವರು ಮಾಡಬೇಕಾದ ಕಾರ್ಯವೊಂದಿರುತಿದೆ, ಅದರವಂ ಮಾಡುವರೆಂಬುದರಲ್ಲಿ ನಮಗೆ ಸ್ವಲ್ಪವೂ ಸಂಶಯವಿಲ್ಲವು. ದುಃಖಭಾಜನರಾದ ತಮ್ಮ ಸಹೋದರರ ಕುಟುಂಬದವರ ವಿಷಯದಲ್ಲಿ ಪ್ರೀತಿ ಗೌರವಗಳಂ ತೋರಿಸಬೇಕು. ಹೋಲ್ಕರ್ ಮಹಾರಾಜರವರ ಕುಟುಂಬದಲ್ಲಿ ಎಂತಾ ಮನಸ್ತಾಪಗಳಿದ್ದರೂ, ಯಶೋವಂತರಾಯರವರ ಜೀವಿತಕಾಲದಲ್ಲಿ ಮಹಾರಾಜರವರಿಗೆ ಅವರಿಂದ ಯಾವವಿಧ ಬಾಧೆಯೂ ಉಂಟಾಗಲಿಲ್ಲವೆಂದು ನಮಗೆ ತಿಳಿಯಬಂದಿರುತಿದೆ. ಆದುದರಿಂದ, ಹೋಲ್ಕರ್ ಮಹಾರಾಜರವರು ಅನಾಥವಾದ ತಮ್ಮ ಸೋದರರ ಕುಟುಂಬಕ್ಕೆ ತಮಗೆ ಸಾಧ್ಯವಾದ ಸಹಾಯಗಳಂ ಮಾಡುವದರಮೂಲಕ ಅವರಿಗೆ ಸಮಾಧಾನವನ್ನೂ ಸುಖವನ್ನೂ ಉಂಟುಮಾಡಬೇಕೆಂದು ನಾವು ಕೋರುತ್ತೇವೆ. ಮೃತಪಟ್ಟ ಯಶೋವಂತರಾಯರವರಿಗೆ ಮೂವರುಮಕ್ಕಳಿರುವರಲ್ಲದೆ ಅವರೆಲ್ಲರು ಮಹಾರಾಜರವರ ಕೃಪೆಗೆ ವಿಷಯರಾಗಿರುತ್ತಾರೆ.

PALMISTRY.

ಗತವಾರದಲ್ಲಿ ಸಾಮುದ್ರಿಕ ಶಾಸ್ತ್ರ ವಿಷಯಕವಾದ ಕೆಲವು ಅಂಶಗಳಂ ನಾವು ತಿಳಿಸಿದ್ದೆವಷ್ಟೆ. ಸದರೀ ಶಾಸ್ತ್ರವು ಮೊದಲು ಹುಟ್ಟಿದ ಬಗೆಯನ್ನೂ ಅದರಪ್ರಭೇದಗಳನ್ನೂ, ಅದರಿಂದ ಜನರಿಗುಂಟಾಗುವ ಪ್ರಯೋಜನಗಳನ್ನೂ ಇದರಡಿ ತಿಳಿಸುತ್ತೇವೆ. ಗ್ರಹಗತಿಗಳ ಬಲಾಬಲಗಳಂ ಗುಣಿಸಿ ಫಲಗಳನ್ನು ತಿಳಿಸತಕ್ಕ ಜ್ಯೋತಿಷ್ಕರ ಸಿದ್ಧಾಂತವುತೆಯೂ, ಮನುಷ್ಯನ ಕಪೋಲದ ಆಕಾರವು ಹಿಡದು ಆತನ ಗುಣಗಳನ್ನು ನಿಶ್ಚೈಸಿ ತಿಳಿಸತಕ್ಕವರ ನಿಯಮವಂತೆಯೂ, ಮುಖಭಾವದಿಂದ ಮನೋಭಾವವಂ ತಿಳದುಕೊಳ್ಳತಕ್ಕಂತವರ ಸೂತ್ರವಂತೆಯೂ ಈ ಸಾಮುದ್ರಿಕವು ಹಸ್ತಗಳಲ್ಲಿರತಕ್ಕ ರೇಖಾ ಲಕ್ಷಣಗಳಿಂದ ಭೂತಭವಿಷ್ಯದ್ವರ್ತಮಾನ ಫಲಗಳನ್ನು ಬೋಧಿಸತಕ್ಕ ಸಾಂಕೇತಿಕ ಶಾಸ್ತ್ರವಾಗಿರುತಿದೆ. ಈ ಶಾಸ್ತ್ರವು ಈಶ್ವರನು ಪಾರ್ವತಿಗೆ ಉಪದೇಶಿಸಿದ್ದಾಗಿಯೂ ತಂತ್ರಶಾಸ್ತ್ರದಲ್ಲೊಂದು ಭಾಗವಾಗಿಯೂ ಇರುತಿದೆಯಲ್ಲದೆ ಇದು ಕಡೆಗೂ ಅವರೀರ್ವರ ಪ್ರಶ್ನೋತ್ತರರೂಪವಾಗಿರುವದು. ಈಶ್ವರನಿಗೆ “ಸಮುದ್ರ” ಎಂಬ ವಿಶೇಷನಾಮ ಪ್ರಾಪ್ತವಾಗಿರುವದರಿಂದ ತತ್ಸಂಬಂಧವಾದದಕ್ಕೆ ಸಾಮುದ್ರಿಕ ವೆಂಬ ವ್ಯವಹಾರವೇರ್ಪಟ್ಟಂತೆ ತೋರುತಿದೆ. ಲಕ್ಷಣಯಾ ಗಾಂಭೀರ್ಯಗುಣದಿಂದ ಸದರೀ ವಿಶೇಷಣವು ಈಶ್ವರನಿಗೆ ಅನ್ವಯಿಸಿತು ಸಾಧಾರಣವಾಗಿ ಮನುಷ್ಯನ ಶರೀರವನ್ನು ಹನ್ನೆರಡು ವಿಧಗಳಿಂದ ಪರೀಕ್ಷಿಸಬಹುದು, ಹ್ಯಾಗಂದರೆ,— ೧ ಕ್ಷೇತ್ರ, (ಶರೀರ) ೨ ಮೃಜ, (ತೇಜಸ್ಸು) ೩ ಸ್ವರ, (ಶ್ವಾಸ) ೪ ಸಾರ, (ಶಕ್ತಿ) ೫ ಸಂಹಿತ, (ಬಂಧ) ೬ ಸ್ನೇಹ, (ಕಾಂತಿ) ೭ ವರ್ಣ, ೮ ಅನೂಕ, (ಮುಖಭಾವ) ೯ ಉನ್ಮಾನ, (ಔನ್ನತ್ಯ) ೧೦ ಮಾನ, (ಬಲ) ೧೧ ಪ್ರಕೃತಿ, (ಗುಣ) ೧೨ ಗತಿ, (ನಡತೆ) ಇವುಗಳ ಪೈಕಿ ಮೊದಲನೆಯದಾದ ಕ್ಷೇತ್ರದಲ್ಲಿ, ಅರಕಾಲು, ಕಾಲ್ಬೆರಳುಗಳು, ಮೊಣಕಾಲು ಕೆಳಗಿನ ಎಲುಬುಗಳು, ಮೊಣಕಾಲುಗಳು, ತೊಡೆಗಳು, ಪಿರ್ರೆ, ನಡುವು, ಉದರ, ಹೊಕ್ಕಳು, ಚರ್ಮದ ಮಡತೆಗಳು, ಸ್ತನಾಗ್ರಗಳು, ಎದೆ, ಕುತ್ತಿಗೆ, ಕೊಂಕಳುಗಳು, ತೋಳುಗಳು, ಗುದ, ಕೈಗಳು, ಗದ್ದ, ತುಟಿಗಳು, ನಾಲಿಗೆ, ಮುಖ, ಕಿವಿಗಳು, ಕೆನ್ನೆ, ಮೂಗು, ಕಣ್ಣುಗಳು, ಕಪೋಲ, ಲಲಾಟ, ಮತ್ತು ತಲೆ, ಈ ಅಂಗಗಳ ಲಕ್ಷಣ ವಿವರಣಗಳೆಲ್ಲವೂ ಅಡಗಿರುತಿವೆ. ಇವುಗಳ ಪೈಕಿ ಹಸ್ತಗಳಲ್ಲಿರತಕ್ಕ ರೇಖಾ ಪ್ರಮಾಣಗಳನ್ನೂ ತಲ್ಲಕ್ಷಣಗಳನ್ನೂ ಮುಖ್ಯವಾಗಿ ಪ್ರಸಕ್ತ ಸಾಮುದ್ರಿಕ ಶಾಸ್ತ್ರವು ಬೋಧಿಸತಕ್ಕದ್ದಾಗಿರುತಿದೆ. ದೃಷ್ಟಾಂತಕ್ಕಾಗಿ ಇದರಡಿಯಿಂದೆರಡುಲಕ್ಷಣಗಳನ್ನು ತಿಳಿಸುವೆವು ಹ್ಯಾಗಂದರೆಯಾವಾಗಲು ಸಾಮುದ್ರಿಕ ಲಕ್ಷಣಗಳನ್ನು ನೋಡತಕ್ಕವರು ಪುರುಷರ ಬಲಅಂಗೈಯನ್ನೂ, ಸ್ತ್ರೀಯರ ಎಡ ಅಂಗೈಯನ್ನೂ ನೋಡತಕ್ಕದ್ದು. ಮತ್ಸ್ಯಾಕೃತಿಯುಳ್ಳ ರೇಖೆಗಳು ಅಂಗಯ್ಯಲ್ಲಿದ್ದರೆ ಆ ಮನುಷ್ಯನು ಧನಿಕನಾಗಿಯೂ ಬಹು ಪುತ್ರವಂತನಾಗಿಯೂಇರುವನು. ತ್ರಾಸಿನ ಆಕಾರದಂತಾಗಲಿ ವಜ್ರಾಯುಧವಂತಾಗಲಿ ರೇಖೆಗಳಿದ್ದರೆ, ಆ ಮನುಷ್ಯನು ವ್ಯಾಪಾರ ಮೂಲಕ ಜೀವಿಸತಕ್ಕವನಾಗಿಯೂ ಧನಿಕನಾಗಿಯೂ ಇರುವನು. ಧನುರಾಕೃತಿಯುಳ್ಳ ರೇಖೆಯಿದ್ದರೆ, ಅಥವಾ ಗದೆ, ಅಷ್ಟಕೋಣ, ಕಮಲನಾಳ, ಈ ಆಕಾರಗಳುಳ್ಳ ರೇಖೆಗಳು ಕಂಡುಬಂದರೆ ಆ ಮನುಷ್ಯನು ಕ್ರಮವಾಗಿ, ಶಸ್ತ್ರಜೀವಿಯಾಗಿಯೂ ರಾಜ್ಯಾಧಿಪತಿಯಾಗಿಯೂ, ಅಥವಾ ಚಕ್ರವರ್ತಿಯಾಗಿಯೂ, ಇರುವನು. ಶಂಖ, ಚಕ್ರ ಧ್ವಜಾಕಾರಗಳುಳ್ಳ ರೇಖೆಗಳಿದ್ದರೆ ಸದರೀ ಮನುಷ್ಯನು ಕ್ರಮವಾಗಿ ಪ್ರಜ್ಞಾಶಾಲಿಯಾಗಿಯೂ ಪಂಡಿತನಾಗಿಯೂ ವೈದಿಕನಾಗಿಯೂಇರುವನು. ತ್ರಿಶೂಲಾಕಾರವುಳ್ಳ ರೇಖೆಯಿದ್ದರೆ ಆ ಮನುಷ್ಯನು ಅರಸನಾಗಿಯೂ ದಾನಶೀಲನಾಗಿಯೂ, ಕರ್ಮಠನಾಗಿಯೂ, ದೇವಬ್ರಾಹ್ಮಣ ಸತ್ಕಾರದಲ್ಲಿ ಆಸಕ್ತಿಯುಳ್ಳವನಾಗಿಯೂ ಇರುವನು. ಅಂಕುಶ ಮತ್ತು ಕುಂದರಾಕೃತಿಗಳುಳ್ಳ ರೇಖೆಗಳಿದ್ದರೆ ಅವನು ಚಕ್ರವರ್ತಿಯಾಗುವನು. ಪರ್ವತ ಅಥವಾ ಘಟಾಕೃತಿಯುಳ್ಳ ರೇಖೆಗಳಿದ್ದರೆ ಒಬ್ಬ ದೊಡ್ಡ ರಾಜನಿಗೆ ಪ್ರಧಾನಿಯಾಗಿರುವನು. ಸೂರ್ಯ ಚಂದ್ರರು, ತ್ರಿಕೋಣ, ಗ್ರಹ, ಆನೆ, ಕುದರೆ ಮನುಷ್ಯಾಕೃತಿಗಳುಳ್ಳ ರೇಖೆಗಳಿದ್ದರೆ ಆತನು ಐಶ್ವರ್ಯವಂತನಾಗಿಯೂ ಭೋಗಿಯಾಗಿಯೂ ಇರುವನು ಇದೇರೀತಿಯಾಗಿ ಪ್ರತಿ ಅಂಗಗಳಲ್ಲಿಯೂ ಇರತಕ್ಕ ರೇಖೆಗಳನ್ನನುಸರಿಸಿ ಮನುಷ್ಯನ ಸುಖದುಃಖಗಳೂ, ಸಂಪದ್ದಾರಿದ್ರ್ಯಗಳೂ, ಆಯುರ್ದಾಯಗಳೂ, ಸುಗುಣದುರ್ಗುಣಗಳೂ, ನಿರ್ಧರಿಸಿ ತಿಳಿಸಲ್ಪಡುತಿವೆ. ಇದೇ ಕ್ರಮದಲ್ಲಿ ಸ್ವರಶಾಸ್ತ್ರವೊಂದೇರ್ಪಟ್ಟು ತನ್ಮೂಲಕ ಅನೇಕ ಶುಭಾಶುಭಗಳು ತಿಳಸಲ್ಪಡಬಹುದಾಗಿರುತಿದೆ. ಮುಖ್ಯವಾಗಿ ಈ ಶಾಸ್ತ್ರಗಳನ್ನಭ್ಯಸಿಸತಕ್ಕವರು ಇಲ್ಲದೆಯೂ ಅವರಿಗೆ ತಕ್ಕ ಪ್ರೋತ್ಸಾಹವಿಲ್ಲದೆಯೂ ಹೋಗಿ ಎಲ್ಲವೂ ನಶಿಸಿಹೋದದರಿಂದಲೇ ಇವುಗಳಲ್ಲಿ ಜನಗಳಿಗೆ ನಂಬಿಕೆ ತಪ್ಪಿಹೋಗಲಿಕ್ಕೆ ಕಾರಣವಾಯಿತೇ ಹೊರತು ಶಾಸ್ತ್ರಗಳೇ ಸುಳ್ಳೆಂದು ಹೇಳಲಾಗದು.

SOCIAL REFORM.—No II

ಲೋಕ ಹಿತೈಷಿಯಾದ ಮಿ॥ ಗ್ರಾ॥ ಪ್ರಣತಾರ್ತಿಹರ ಅಯ್ಯರವರ ಭಾವನಾನುಗುಣವಾಗಿ ನಮ್ಮ ಸಮಯಾಚಾರಗಳಲ್ಲೀಗ ಪ್ರತಿಕ್ರಿಯಾಪೇಕ್ಷಿತವಾಗಿರುವಂತೆ ತೋರುವ ಎರಡನೆಯ ದೋಷವಾದ ಮನೆಗಳಲ್ಲಿ ಬಡ ಹಾಡುಗಳನ್ನು ಹಾಡತಕ್ಕ ದುಸ್ಸ್ಥಿತಿಯಂ ನಿರೋಧಿಸಬೇಕೆಂಬ ವಿಷಯದಲ್ಲೀಗ ನಾವು ತಿಳಿಸುವದೇನುದರೆ:—ಸಾಮಾನ್ಯವಾಗಿ ಹಿಂದೂಗಳಾಗಿರತಕ್ಕವರೆಲ್ಲರ ಮನೆಗಳಲ್ಲೂ ಮೇರೆ ತಿಳಿಸಲ್ಪಟ್ಟಂತೆ ಬಡಹಾಡುಗಳು ಹಾಡಲ್ಪಡುತಿವೆಯೋ ಅಥವಾ ದೇಶಾಚಾರ ಭೇದಗಳಿಂದ ಸದರೀ ಪದ್ಧತಿ ನೆರೆಗೊಂಡಿರುತಿದೆಯೋ? ಅದರಿಂದ ನಮ್ಮ ಸಮುದಾಯಕ್ಕುಂಟಾಗಿರುವ ಹಾನಿಯಸ್ವರೂಪವೆಂತಾದ್ದು? ಇವುಗಳನ್ನು ಕುರಿತು ನಾವು ವಿಚಾರ ಮಾಡಬೇಕಾಗಿರುತಿದೆ. ಪ್ರಾಯಶಃ ಕೆಲವು ಕಡೆಗಳಲ್ಲಿ ಹೋಲೀಹಬ್ಬದ ಸಂದರ್ಭದಲ್ಲಿಯೂ ವಿವಾಹಾದಿಗಳಲ್ಲಿ ಬೀಗರನ್ನು ಪರಸ್ಪರ ಪರಿಹಾಸ್ಯಮಾಡುವ ಸಂದರ್ಭದಲ್ಲಿಯೂ, ಆರೀತಿ ಹಾಡುವವಾಡಿಕೆ ನೆರೆಗೊಂಡಿರುತಿದೆಯೇಹೊರತು ಅವುಗಳನ್ನ ಸರ್ವದೇಶ ಸರ್ವಕಾಲಾವಸ್ಥೆಗಳಲ್ಲಿಯೂ ಕಾಲಹರಣ ಕ್ಕೊಂದುಸಾಧನವಾಗಿ

ಹಬ್ಬರೂ ಅಂಗೀಕರಿಸಿರುವದಿಲ್ಲವು. ಹೋಳಿ ಹಬ್ಬ ಪ್ರಯುಕ್ತವಾದ ಬಂದ ಹಾಡುಗಳನ್ನು ಹಾಡುವ ಪದ್ಧತಿಯಂ ಕುರಿತು ಹಿಂದೆ ಅನೇಕಾ ವರ್ತಿ ನಾವು ತಿಳಿಸಿರುತ್ತೇವೆ. ಮುಸಲ್ಮಾನರ ಲ್ಲಿ ಮೊಹರಂ ಹಬ್ಬದಲ್ಲಿಯೂ ಕ್ರಿಶ್ಚಿಯನ್ನರಲ್ಲಿ ಕೆಲವು ಇತರ ಸಂದರ್ಭಗಳಲ್ಲಿಯೂ ಮಸ್ಕರಿಗಳನ್ನು ಮಾಡುವ ವಾಡಿಕೆಯುಂಟು. ಅಂತಾ ಸಂದರ್ಭಗಳಲ್ಲಿ ಅವರ ಹಾಡುಗಳೂ ಮಾತುಗಳೂ ಅವುಗಳಿಗೆ ತಕ್ಕಂತೆಯೇ ಇರುವವು. ವಿವಾಹಾದಿ ಕಾಲಗಳಲ್ಲಿ ಬೀಗರನ್ನೊಬ್ಬರಿಗೊಬ್ಬರು ಮಸ್ಕರಿಮಾಡುವದು ಸಂತೋಷಾರ್ಥವಲ್ಲದೆ ಅದರಿಂದ ಒಂದು ಹಾನಿಯನ್ನುಂಟುಮಾಡಬೇಕೆಂಬ ಭಾವದಿಂದಲ್ಲವು. ತಮಾಷೆ, ಮಸ್ಕರಿ ಮೊದಲಾದ ಕೆಲಸಗಳಿಂದ ಮನಸ್ಸಂತೋಷ ಪಡಿಸಿಕೊಳ್ಳುವಣವು ಲೌಕಿಕರಿಗೆ ಧರ್ಮವಲ್ಲದೆಹೋಗಲಾರದು, ಅದರಿಂದ ಯಾವ ಹಾನಿಯೂ ಲೋಕಕ್ಕೆ ಉಂಟಾಗುವದಿಲ್ಲವು. ಸನ್ಯಾಸಿಯಾದವನಿಗೆ ಅದು ಅನುಚಿತವಾಗಿದ್ದಾಗ್ಯೂ ಸಂಸಾರಿಗೆ ಉಚಿತವೆಂದು ತೋರದಿರಲಾರದು. ಲೋಕದಲ್ಲಿ ಸಾಮಾನ್ಯೇನ ಪುರುಷರು ಉತ್ತಮ ಮಧ್ಯಮ ಅಧಮರೆಂಬ ಮೂರು ತರಗತಿಯವರಾಗಿ ಏರ್ಪಟ್ಟಿರುವದರಿಂದ ಅವರವರ ಯೋಗ್ಯತೆಗಳೂ, ವೇಷಭಾಷಾ ಚಾರಗಳೂ ಅಭಿರುಚಿಗಳೂ ಆಯಾ ತರಗತಿಗಳನ್ನನುಸರಿಸಿರುವವು. ಉತ್ತಮಪುರುಷ ನೊಂದು ಭಾವವು ವ್ಯಕ್ತಪಡಿಸಬೇಕಾಗಿದ್ದರೆ ಅಧಮ್ನಾತನು ತಕ್ಕ ಅಲಂಕಾರದೊಡನೆ ಭಾವಗರ್ಭಿತವಾಗಿ ವಾಕ್ಯಮಾಡಿ ರೀತಿಯಲ್ಲಿ ತಿಳಿಸುವನು, ಮನೋಹರಗಳಾದ ವಸ್ತ್ರಾದಿ ಆಭರಣಗಳಿಂದ ವಿಭೂಷಿತರಿಗೆ ನೇತ್ರಾನಂದವನ್ನುಂಟುಮಾಡುವನು ಸಹಜಗುಣವಾಗಿರುತ್ತದೆ. ಹೀಗೆಯೇ ಮಧ್ಯಮರದು ಮಧ್ಯಮವಾಗಿಯೂ ಅಧಮರದು ಕುಪ್ಸನೀಚವಾಗಿಯೂ ಅಶ್ರಾವ್ಯವಾಗಿಯೂ ಇರುವವು. ಮೇಲೆ ಕಂಡಂತೆ ಬಂದ ಹಾಡುಗಳನ್ನು ಅಧಮಜಾತಿಯವರ್ಯಾರಾದರು ಹಾಡಿದಾಗ್ಯೂ, ಅಂತವರ ಸಹವಾಸದಿಂದ ಇತರ ತರಗತಿಯವರ್ಯಾರಾದರು ಕ್ವಚಿತ್ ಹಾಡಿದಾಗ್ಯೂ ಅದರಿಂದ ನಮ್ಮ ಸಮುದಾಯಕ್ಕೇ ಹಾನಿಯುಂಟಾಗುವದೆಂದೆಣಿಸಿ ಚಿಂತಿಸುತ ಪ್ರತಿಕ್ರಿಯೆಯು ಸ್ವಪೇಕ್ಷಿಸುವಂತೆ ತೋರುತಿದೆ. ಇದು ಸ್ವಮತಗುಣಾನನವಿಜ್ಞನಾದ ಅದಮನೊಬ್ಬನು ಜಾತಿ ಭ್ರಷ್ಟನಾದವಾ ಸ್ಪರ್ಶದಿಂದ ಆರುತಿವೇಕೆಮ್ಮವೋ ಎಂತೆ ಭಾವಿಸಿ ಅದಂ ಮರಳಿ ಪರಿಷ್ಕರಿಸಲ್ ಕೆಂಗುಳಪೇಕ್ಷಿಸಿ ಪ್ರಯತ್ನಪಡುವಂತಿರುತದೆ. ಅದುದರಿಂದ ಇದು ಪ್ರತಿಕ್ರಿಯಾಪೇಕ್ಷಿತವಾದ ದೋಷಕ್ಕೆನಥಾನಿರಲ್ಪಡತಕ್ಕದ್ದಲ್ಲವು.

ನಮ್ಮಲ್ಲೀಗ ನಡೆಗೊಂಡು ಲಕ್ಷೋಪಣೀಯವಾಗಿರುವ ಮೂರನೆಯ ದೋಷವಾದ ನೂತನವಾಗಿ ಋತುವಾದ ಹುಡುಗಿಯನ್ನು ಬಹುಮಂದಿ ಪ್ರಪುರುಷರಮುಂದೆ ಕುಳ್ಳಿರಿಸಿ ಎಲ್ಲರೂನೋಡುವಂತೆ ಮಾಡುವ ಅತಿ ತುಚ್ಛವಾದ ಪದ್ಧತಿಯಂ ನಿವೃತ್ತಿಸಬೇಕೆಂಬ ತಾತ್ಪರ್ಯವನ್ನಾಲೋಚಿಸಲಾಗಿ ಅದು ಕೇವಲ ಶಿಷ್ಟಾಚಾರ ಸಂಪ್ರದಾಯ ವನ್ನನುಸರಿಸಿದ್ದಾಗಿ ಕಂಡುಬರುತಿದೆ. ಪ್ರಾಗಂಧ್ರ—ದ್ರಾವಿಡದೇಶದಲ್ಲಿ ಸದರೀ ಪದ್ಧತಿಯು ಮೊದಲು ಹುಟ್ಟಿ ಅದು ಕ್ರಮೇಣ ಮಹಾರಾಷ್ಟ್ರ ಆಂಧ್ರ ಕರ್ಣಾಟ ಮೊದಲಾದ ದೇಶಗಳಿಗೆಲ್ಲ ವ್ಯಾಪಿಸಿದಂತೆ ತೋರುತಿದೆ. ಋತುವಾದನಂತರ ವಿವಾಹ ಮಾಡತಕ್ಕ ಆಚಾರವು ಶೂದ್ರರಲ್ಲಿ ಸಾರ್ವತ್ರಿಕವಾಗಿ ನಡೆಗೊಂಡಿರುವದರಿಂದಲೂ, ಬಳಿಕ ಬಹುರಂಗವಾಗಿ ನಡೆಯುವ ವಿವಾಹಕಾಲಗಳಲ್ಲಿ ತಮಗಳಾದ ವಿನೋದಗಳನ್ನು ಮಾಡುವ ಪದ್ಧತಿ ಇರುವದರಿಂದಲೂ ಇದನ್ನನುಸರಿಸಿಯೇ ಮೇಲೆ ಕಂಡ ಆಚಾರವು ಮೊದಲು ದ್ರಾವಿಡದೇಶದ ವೆಳ್ಳಾಳರು, ಪಿಳ್ಳೆಯರು, ಮೊದಲಿಯಾರ್ರು ಮೊದಲಾದವರಲ್ಲಿ ನಡೆಗೊಂಡಿತು. ಇದಲ್ಲದೆ ಕನ್ಯೆಯ ಪ್ರಥಮಾರ್ತವವನಿಷದಲ್ಲಿ ಶಾಸ್ತ್ರಕಾರರು ಬಹು ನಿಯಮಗಳನ್ನಿರಿಸಿ ಅಸಳ ಋತುವಾಗುವಕಾಲವು ಒಳ್ಳೆಯದಾಗಿಲ್ಲದೆ ಕದಾಚಿತ್ ಅಶುಭವಾಗಿದ್ದರೆ—

ಶೊ॥ ದುರ್ದಿನೇಷ್ವಾತ್ತುಚೈರಾದ್ಯರಜೋದರ್ಶನೆ ಸಂಕ್ರಾಂಥ
ಕೇಶಕ್ರಥಿಷ್ಟೌಗ್ನಿಸ್ವಂತರಾತ್ಮಭೌಮದಿನೇಷ್ವಪಿ

ರೆಚನೆಕೋಗಾತಿಸ್ಯತ್ ॥ ಪ್ರಥಮಾಸುತನಿಧ್ನಾತಾ ಶುಭಸಲಯಾಮ್ಯತ್ರಿಪ್ರೋತ್ರೋರಗೆ । ಷ್ಯೇಕದ್ವಿತ್ರಿ ಚತುಸ್ಪದಾನಿಯುವತಿರ್ದದ್ಯಾತ್ಕ್ರಮಾದಾರ್ತವೆ ॥ ಸಂಧ್ಯೋಪಪ್ಲವಪರ್ವಶೋಭನಧಾ ರಿಕ್ತಾಸ್ಟಮಿ ದ್ವಾದಶೀ ಷಷ್ಠೀವಿಷ್ಟಿವಿಷಾವಮಾದಿಸಮಗಾ ದುಷ್ಟರ್ಕ್ಷಸಂಸ್ಥೋದವಾ ॥ ದಾಕ್ಷಾಯಣಿ ದುರ್ಭಗಾ ಹೃತೋ ಜನ್ಮರಾಶಿರ್ನಾಗಾಯೋಗಾದಿ ಶರ್ವರ್ಯ ಕರ್ ॥ ಸಾಧಕರ್ತ್ಯಂ ಕಾರಮಸ್ತುನಿಷಮನಂ ಕನ್ಯಾರ್ಥ್ಯಮಧ್ಯೇಷ್ಟಕ್ಕತಾ ॥

ಎಂಬದಾಗಿ ದುರ್ಜ್ಯಾರ ತಿಥಿ ನಕ್ಷತ್ರ ಕಾಲಗಳ ಫಲಗಳನ್ನೂ, ಆರ್ತವ ಕಾಲದಲ್ಲಿ ಕನ್ಯೆ ಯುಟ್ಟಿರುವ ವಸ್ತ್ರದ ಸ್ವರೂಪವನ್ನೂ, ಅವುಗಳಫಲಗಳನ್ನೂ, ಬೇರಾಗಿ ದಸುಟ್ಟಗೆ ತಿಳಿಸಿರುತ್ತಾರೆ. ಪರಂತು ಅವುಗಳನ್ನೆಲ್ಲವು ಇಲ್ಲಿಬರೆಯುವದರಿಂದ ಶಾಖಾಚಂಕ್ರಮಣನ್ಯಾಯವಾಗಿ ಉಪ್ಪಸ್ತ ವಿಚಾರಕ್ಕೆ ನಾವು ಬಹಳ ದೂರವಾಗುವೆವೆಂದೆಣಿಸಿ ಗ್ರಂಥ ಬಾಹುಳ್ಯದ ಭೀತಿಯಿಂದ ಸನ್ನಿಷಿದ್ಧಿಸಿ ಮುಂದೆ ವಿಚಾರ ಮಾಡುವೆವು. ಈ ಪುರಾಣಗಳು ಸಾಧಾರಣವಾಗಿ ಶಾಸ್ತ್ರಬದ್ಧರಾದ ಪರಿಗಲ್ಲ ಉದ್ವಿಗ್ನಗಳಾಗಿಯೂ ಗ್ರಾಹ್ಯಗಳಾಗಿಯೂ ಯಿರುವದರಿಂದ ಪ್ರೈಸರದಕೂಡಲೇ ಜ್ಯೋತಿಷ್ಯನಬಳಿಗೆ ಹೋಗಿ ತಿಥಿವಾರನಕ್ಷತ್ರಶುದ್ಧಿಯಂ ಕುರಿತು ಪ್ರಶ್ನೆ ಮಾಡತಕ್ಕ ವಾಡಿಕೆಯು ಹಿಂದೂಗಳಾದವರೆಲ್ಲರಲ್ಲಿಯೂ ಅವ್ಯಾಪಿ ನಡೆಗೊಂಡಿರುತಿವೆ. ಅಶುಭಗಳಾದ ತಿಥಿ ವಾರ ನಕ್ಷತ್ರಗಳಲ್ಲಿ ಮೈನೆರದ ಹುಡಿಗಿಗೆ ತದ್ದೋಷ ಪರಿಹಾರಾರ್ಥ ಶಾಂತಿಹೋಮ ನಡಸುವದೂ ದಾನಗಳುಕೊಡುವದೂ ಶಾಸ್ತ್ರೋಕ್ತವಾದ ವಾಡಿಕೆಯಾಗಿರುತಿದೆ. ಶಾಂತಿಗಳು ಬರ್ತ್ರೂ ಭಾರ್ಯೆಯರಿಬ್ಬರೂಸೇರಿ ಮಾಡಿಕೊಳ್ಳಬೇಕಾಗಿರುವದರಿಂದಲೂ ಅವುಗಳೆಲ್ಲವು ಮಂತ್ರ ಕ್ರಿಯಾಕಲಾಪರೂಪಗಳಾಗಿರುವದರಿಂದಲೂ ಆ ಕಾಲದಲ್ಲಿ ಪುರುಷರಸಾನ್ನಿಧ್ಯಾಸ್ಪೆ ನಿರ್ಬಂಧವಿಲ್ಲದೆ ಆವಶ್ಯಕವಾಗಿರುತಿವೆ. ಇದಲ್ಲದೆ ಸ್ತ್ರೀಯರು ಉಷ್ಣದೇಶದಲ್ಲಿ ಜನಗಳು ದುರ್ಬಲರಾಗಿರುವದರಿಂದಲೂ ಪ್ರಕೃತಿ ಭೇದದಿಂದಲೂ ಕಾಲಭೇದದಿಂದಲೂ ಹುಡುಗಿಯರು ಅನಿರೀಕ್ಷಿತವಾಗಿ ಅಕಾಲಗಳಲ್ಲಿ ಮೈನೆರೆಯುವದರಿಂದ ಅಂತಾ ಸಮಯಗಳು ದಾವಾಗಲು ಶುದ್ಧವಾಗಿರಲಾರದೆಂಬದಾಗಿಯೂ ಅದೂ ಒಂದು ಶುಭರೂಪವಾದುದರಿಂದ ಆ ಕಾಲದಲ್ಲಿ ಬೇಕಾದ ಇಷ್ಟಬಂಧುಗಳು ಬಂದೊದಗಲಾರರೆಂಬದಾಗಿಯೂ ಭಾವಿಸಿ ಕೆಲವರು ತಮ್ಮ ಮಕ್ಕಳ ಮೇಲಣ ವಾತ್ಸಲ್ಯಾತಿಶಯದಿಂ ಅವರಿಗೆ ಬೇಕಾದ ವಿನೋದಗಳನ್ನೆಲ್ಲ ಮಾಡಿ ನೋಡಬೇಕೆಂಬ ಕುತೂಹಲದೊಡನೆ ತಮ್ಮ ಇಷ್ಟಮಿತ್ರರೆಲ್ಲರೂ ನೆರದಿರುವಂತಾ ಯಾವದಾದರು ಇತರ ವಿಶೇಷಸಂದರ್ಭಗಳಲ್ಲಿ ನಿರ್ದಿಷ್ಟವಾದ ಒಂದು ಶುಭ ತಿಥಿ ವಾರ ನಕ್ಷತ್ರದೊಳು ಮೈನೆರದಳೆಂಬದಾಗಿ ಹೆಸರಿಟ್ಟು ಆಕೆಗೆ ನಡೆಸಬೇಕಾದ ವಿನೋದಗಳನ್ನೆಲ್ಲ ಹೆಂಗಸರು ಮಾಡತಕ್ಕ ಪದ್ಧತಿಯು ನಡೆಗೊಂಡಿರು. ಋತುವಾಗದ ಕನ್ಯೆಯರ ವಿಷಯದಲ್ಲಿ ಪ್ರವರ್ತಿಸಿದ ಸದರೀ ಆಚಾರವು ಕ್ರಮೇಣ ದ್ರಾವಿಡ ದೇಶದಲ್ಲಿ ಋತುವಾದ ಹೆಣ್ಣು ಮಾಡು ಸಹ ಅನುಸರಿಸಲ್ಪಡಲಿಕ್ಕೆ ಪಕ್ರಮವಾಯಿತು. ಏತನ್ಮಧ್ಯೆ ಸದರೀ ವಿನೋದಗಳೆಲ್ಲವು ಸ್ತ್ರೀಯರು ತಮ್ಮ ಸಂತೋಷಾರ್ಥ ಮನೆಗಳಲ್ಲಿ ಪ್ರತ್ಯೇಕ ನಡಸತಕ್ಕವಾಗಿರುತಿವೆಯೇ ಹೊರತು ಅವುಗಳಿಗೂ ಪುರುಷರಿಗೂ ಯಾವುದಸಂಬಂಧವಿರುವಂತೆ ಕಾಣಿಸಲಿಲ್ಲವು. ಆದಕಾರಣ ಸಮಗೆ ವಾನಸಾನಿಕರವೆಂದು ಹೇಳುವ ಮ॥ ರಾ॥ ಪ್ರಣತಾರ್ತಿಹರ ಅಯ್ಯರವರ ತಾತ್ಪರ್ಯವು ಸಾಮುದಾಯಕವಾದದ್ದೆಂದು ಎಣಿಸಲಾಗದು. ಮೇಲೆ ಕಂಡ ದ್ರಾವಿಡದೇಶ ಸಂಪ್ರದಾಯವು ಕ್ರಮೇಣ ಮಹಾರಾಷ್ಟ್ರದೇಶಕ್ಕೆ ವ್ಯಾಪಿಸಿ ಅಲ್ಲಿನವರು ಕೂಡ ಋತುವಾದಕಾಲದಲ್ಲಿ ಮೂರುದಿವಸಗಳವರಿವಿಗೆ ಆ ಹುಡುಗಿಗೆ ನಾನಾವೇಷಗಳನ್ನು ಹಾಕಿ ವಿನೋದಗಳನ್ನುಮಾಡಿ ನೋಡುವ ವಾಡಿಕೆ ನಡೆಗೊಂಡಿರುತಿವೆ. ಆ ದೇಶೀಯರಲ್ಲಿ ಮುಸಲ್ಮಾನರ ಆಚಾರ ವ್ಯವಹಾರಗಳು ಕೆಲವು ಕಾಲಗತಿಯಿಂದ ಸಂಬಂಧಿಸಿರುತಿದೆ. ಪ್ರಾಗುಂಡರೆ ಇವರಿಗೆ ಉಟ್ಟಿಪ್ಪಟ್ಟ ದೋಷವು ಉಧ್ರದೇಶೀಯರಿಕೆ ಸ್ವಲ್ಪವಣವಲ್ಲವು. ಉತ್ತರ ವರ್ಣದವಳಿನಿಸಿದ ಮಹಾರಾಷ್ಟ್ರ ಸ್ತ್ರೀಯರೊಳು ನೀರು ತರುವಾಗ್ಯೂ ತನ್ನ ಕರಗನ್ನು ನಲ್ಲಿನಿಂದ ಕಟ್ಟಿಕೊಂಡು ಬರುವವಾಡಿಕೆಯಿದೆ. ಇಂತಾ ಅಭಿರುಚಿ ಭೇದಗಳಿಂದ ಋತುವಾದಕನ್ಯೆಗೆ ಮುಸಲ್ಮಾನರಂತೆ ಬೇಬೇವೇಷಹಾಕುವ ಪದ್ಧತಿ ಸಹ ಅವರಲ್ಲಿ ವಿಶೇಷವಾಗಿವುಂಟು. ಇದಲ್ಲದೆ ನಾಯುಡರು ಮೊದಲಾದವರಲ್ಲಿ ಹತ್ತು ಹನ್ನೆರಡು ದಿನಗಳ ತನಕ ಇಂತಾ ವಿನೋದಗಳು ಜರುಗುವದುಂಟು. ಮುಖ್ಯವಾಗಿ ಪ್ರಸಕ್ತ ಪದ್ಧತಿಯು ಜನರ ಉತ್ಸಾಹ ಉಪಪತ್ತಿಗಳನ್ನನುಸರಿಸಿದ್ದಾಗಿರುತಿದೆಯೇ ಹೊರತು ಇದರಿಂದಲೇ ನಮ್ಮ ಸಮುದಾಯವು ಕ್ಷಯಿಸುತಿದೆಂದು ಭಾವಗೊಂಡು ಅದಕ್ಕಾಗಿ ಇತರ ಕರ್ತವ್ಯಗಳಂತೊರೆದು ಪ್ರಯತ್ನಪಡುವದು ವಿಶೇಷ ಆವಶ್ಯಕವೆಂದು ಅಯ್ಯರವರಿಗೆ ತೋರಿದ್ದಕ್ಕಾಗಿ ನಾವುಬಹಳ ಆಶ್ಚರ್ಯ ಪಡಬೇಕಾಗಿರುತಿದೆ.

Occasional Notes
ನೈಮಿತ್ತಿಕ ವಿಷಯನ್ಯಾಸ.

Maharaja Dhulip sing.—ದುಲೀಪಸಿಂಗ್ ಮಹಾರಾಜರವರು ಈಗ ಫ್ರೆಂಚ್ ರಾಜ್ಯದ ರಾಜಧಾನಿಯಾದ ಪೇರಿಸ್ ಪಟ್ಟಣದಲ್ಲಿ ಪಾರ್ಶ್ವವಾಯು ರೋಗ ಪೀಡಿತರಾಗಿ ಕೇವಲ ಅಪಾಯಸ್ಥಿತಿಯೊಳರುತ್ತಾರೆ. ಇವರ ಕೊಮಾರರಾದ ಪ್ರಿನ್ಸವಿಕ್ಟರ್ ಸಿಂಗರವರೂ ಎರಡನೇ ಭಾರ್ಯೆಯವರೂ ಸಮೀಪದಲ್ಲಿರುತ್ತಾರೆ.

Premature retirements.—ಸರ್ಕಾರ್ ನೌಕರರು ಉಚಿತಕಾಲಕ್ಕೆ ಮುಂಚಾಗಿ ಕೆಲಸವು ಬಿಡುವ ವಾಡಿಕೆಯಂ ತಪ್ಪಿಸಬೇಕಲ್ಲದೆ, ಬಹುಕಾಲದ ಮೊದಲು ನೌಕರಿಯಲ್ಲಿರುವಂತವರು ಅಧಿಕವಾದ ಪೆನ್ಶನ್ ಪಡೆಯುವದಕ್ಕೆ ಬೇಕಾದ ಅಲ್ಪಕಾಲದ ವರಿವಿಗೆ ನೌಕರಿಯಲ್ಲಿರುವಂತೆ ಅವರಿಗೆ ಅವಕಾಶ ಕೊಡಬೇಕೆಂದು ಮದರಾಸ್ ಗವರ್ನಮೆಂಟಿನವರು ಇಲಾಖೆಗಳ ಮೊಖ್ತೇಸರರುಗಳಿಗೆ ತಿಳಿಸತಕ್ಕದ್ದೆಂದು ಹುಕುಂಮಾಡಿರುತ್ತಾರೆ.

Imitation rubies.—ಈಚೆಗೆ ಯೂರೋಪುಖಂಡದಲ್ಲಿನ ಶಿಲ್ಪಿಗಳು ಕೆಲವರು ಕೆಂಪುಬಣ್ಣದ ರತ್ನಗಳಿಂದ ಕೆಂಪು ರಳಗಳಂತೆ ಮಾಡಿ, ಇಂಡಿಯಾ ಮತ್ತು ಚೀನಾ ದೇಶಗಳಲ್ಲಿ ವಕ್ಕರಮೂಲಕ ಮಾರಿಸುತಲಿದ್ದಾರೆ. ಇದು ಸುಲಭವಾದ ಮೋಸಕೃತ್ಯವಾದುದರಿಂದ ಕನ್ನಡಿ ರಳಗಳಂ ಕೊಂಡುಕೊಳ್ಳುವವರ ಮೂಲಕ ಉಂಟಾಗಬಹುದಾದ ನಷ್ಟಕ್ಕೆ ಪ್ರಜೆಗಳು ಗುರಿಯಾಗದಿರಬೇಕೆಂದು ಹಿಂದೂನೊಂದು ಪತ್ರಿಕೆ ಎಚ್ಚರಿಸುತಿದೆ.

The Calcutta child wife case.—ಈಚೆಗೆ ಕಲ್ಕತ್ತೆಯೊಳು ಹರಿಮೋಹನಮೈತ್ರಿ ಯೆಂಬಾತನು ಋತುವಾಗದ ತನ್ನ ಭಾರ್ಯೆಯೊಡನೆ ಸಂಭೋಗಿಸಿ, ತನ್ಮೂಲಕ ಉಂಟಾದ ಅಪ್ರತೀಕಾರವಾದ ರೋಗದವೆಸೆಯಿಂದ ಸದರೀ ಹುಡುಗಿ ಮೃತಪಡಲು ಹರಿಮೋಹನಮೈತ್ರಿಯೆಂಬಾತನು ಮ್ಯಾಜಿಸ್ಟ್ರೇಟರಿಂದ ಕಲ್ಕತ್ತಾ ಹೈಕೋರ್ಟ್ ಸೆಷನ್ಸ್ ಕಮಿಟಿ ಮಾಡಲ್ಪಟ್ಟು ಅಲ್ಲಿ ತನ್ನ ಅಪರಾಧವನ್ನು ಒಪ್ಪಿಕೊಂಡದರಿಂದ ಜಡ್ಜಿಯವರು ಈ ಮೊಕದ್ದಮೆಯ ಸ್ವರೂಪವಂ ಚೆನ್ನಾಗಿ ಪರ್ಯಾಲೋಚಿಸಿ ಅಪರಾಧಿಗೆ ಸುಲಭವಾಗಿ ಒಂದುವರ್ಷದ ಕಠಿಣಕೈದ್ ಸಜಾ ವಿಧಿಸಿದರು.

Exchange of wives.—ರಂಗಪುರದ ಪ್ರಮುಖ[illegible]ರಿಬ್ಬರು ತಮ್ಮ ಭಾರ್ಯೆಯರು ಪರಸ್ಪರಿಗೊಬ್ಬರು ಪರಿವರ್ತನ ಮಾಡಿಕೊಂಡದರಿಂದ ಅಲ್ಲಿನ ಹಿಂದೂಗಳಲ್ಲಿ ಉತ್ತಮ ಜಾತಿಯವರು ಬಹಳ ಅಸಮಾಧಾನ ಪೂರ್ವವಾಗಿದಾರೆಂತಲೂ, ಸದರೀ ಇಬ್ಬರು ಪ್ರಮುಖರೂ ಬಹಿರಂಗವಾಗಿ ವೈದಿಕ ಕ್ರಿಯಾಪೂರ್ವಕ ಉದ್ದಿಷ್ಟ ಕಾರ್ಯವಂ ನೆರವೇರಿಸಿಕೊಂಡರೆಂತಲೂ, ಸದರೀ ಹೆಂಗಸರಿಬ್ಬರೂ ಕೇವಲ ಸಂತುಷ್ಟ ಹೃದಯರಾಗಿ ತಮ್ಮ ತಮ್ಮ ನೂತನ ಪ್ರಿಯರು ಸೇರಿ ಸುಖಾನುಭವದಲ್ಲಿರುತಲಿದ್ದಾರೆಂತಲೂ, ಇಂತಾ ವಾಡಿಕೆ ರಂಗಪುರದಲ್ಲಿ ಬಹುಕಾಲದ ಮೊದಲು ನೆಲಗೊಂಡಿದೆಯೆಂದು ಅವರು ಹೇಳುವವಾಗಿಯೂ ಸಿವಿಲ್ ಮ ಮಿಲಿಟರಿ ಗಜೆಟ್ ಪತ್ರಿಕೆ ತಿಳಿಸುತಿದೆ. ಇದರಿಂದದುರಾಚಾರಗಳಿಗೆಲ್ಲ ಉತ್ತರ ದೇಶವು ಮಾತೃಸ್ಥಾನವೆಂಬದು ಮತ್ತಷ್ಟು ದೃಢಪಡುತಿದೆ.

Raising of marriageable age.—ಈಚೆಗೆ ಕಲ್ಕತ್ತೆಯೊಳು ಹರಿಮೋಹನಮೈತ್ರಿಯೆಂಬಾತನು ಪ್ರೌಢೆಯಾಗದ ತನ್ನ ಭಾರ್ಯೆಯೊಡನೆ ಭೋಗಿಸಲು ಅದರಿಂದುಂಟಾದ ರೋಗದ ದೆಸೆಯಿಂದ ಆ ಹುಡುಗಿ ಮೃತಪಟ್ಟದ್ದು, ಸದರೀ ಪಟ್ಟಣದೊಳು ಮೂವತ್ತೈದು ವರ್ಷಗಳ ವಯಸ್ಸಿನವನೊಬ್ಬನು ಒಂಭತ್ತು ತಿಂಗಳ ಮಗುವನ್ನು ವಿವಾಹ ಮಾಡಿಕೊಂಡದ್ದು, ಇತ್ಯಾದಿ ದುಷ್ಕೃತ್ಯಗಳು ಬಹಳ ನಡೆಯುವದರಿಂದ, ವಿವಾಹ ಯೋಗ್ಯಕಾಲವನ್ನು ಒಂದು ಕಾನೂನ್ ಮೂಲಕ ನಿರ್ಣಯಿಸಬೇಕೆಂದು ವೃತ್ತಾಂತ ಪತ್ರಿಕೆಗಳು ಉದ್ಘೋಷಿಸುತಲಿವೆ. ಇದು ಕೇವಲ ಆವಶ್ಯಕವಾದ ಕಾರ್ಯವೆಂಬುದರಲ್ಲಿ ಎಳ್ಳಷ್ಟು ಮಾತ್ರವೂ ಸಂಶಯವಿರಲಾರದು. ಮೇಲೆ ತಿಳಿಸಲ್ಪಟ್ಟ ದುರಾಚಾರಗಳು ಸಾಮಾನ್ಯವಾಗಿ ಉತ್ತರದೇಶದಲ್ಲಿ ಸರ್ವತ್ರ ವ್ಯಾಪಿಸಿದ್ದಾಗ್ಯೂ ಬಂಗಾಳೇ ದೇಶವು ಅವುಗಳಿಗೆ ಜನ್ಮಭೂಮಿಯಾಗಿ ಕಾಣುತಿದೆ. ಶಾಸ್ತ್ರವಿರುದ್ಧಾಚಾರವು ಯಾರಿಂದ ಯಾರಮೂಲಕ ತಪ್ಪಿಸಲ್ಪಟ್ಟಾಗ್ಯೂ ಅದರಿಂದ ಯಾವವಿಧ ಬಾಧಕವೂ ತೋರಬರುವದಿಲ್ಲವು.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕ್ ಜಾತ್ ವೃತ್ತಾಂತಗಳು.

H. H. the Maharaja.—ಮಾಹೇ ಮಜಕೂರ್ ೧೯ನೇ ತಾರೀಖಿನಲ್ಲಿ ಶ್ರೀಮನ್ಮಹಾರಾಜರವರು ಮದರಾಸಿಗೆ ದಯಮಾಡಿ ಅಲ್ಲಿ ಕೆಲವು ದಿವಸಗಳತನಕ ಇದ್ದು ವಾಪಸ್ ಬರುವವರಾಗಿದ್ದಾರೆಂದು ಕೇಳುತ್ತೇವೆ. ಯಾತಕ್ಕಾಗಿರಬಹುದು?

A reference library.—ಮಹಾರಾಣಿಯವರ ಬಾಲಿಕಾ ಪಾಠಶಾಲೆಯ ಪ್ರೌಢಶಕ್ಕೆ ವಿದ್ಯಾರ್ಥಿನೀಯರ ಉಪಯೋಗಾರ್ಥ ಸದರೀ ಸ್ಕೂಲಿನಲ್ಲಿ ಒಂದು ಲೈಬ್ರರಿ ಅಂದರೆ ಪುಸ್ತಕ ಭಂಡಾರವನ್ನು ನೆಲೆಗೊಳಿಸುವದಕ್ಕಾಗಿ ಗವರ್ನಮೆಂಟಿನವರು ೩೦೦ ರೂಪಾಯಿಗಳನ್ನೂ ಅದರ ವಿಚಾರಣೆ ವಗೈರೆ ಖರ್ಚುಗಳಿಗಾಗಿ ಸಾಲೀಯಾನಾ ೧೫೦ ರೂಪಾಯಿಗಳನ್ನೂ ಮಂಜೂರ್ ಮಾಡಿದಾರೆಂತಲೂ ತಿಳಿಯಲಾದೆವು.

Mr. L. Ricketts.—ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ಲವರಾದ ಮೆ॥ ಎಲ್. ರಿಕೆಟ್ಸ್ ಯವರು ತಮ್ಮ ಕೆಲಸದಿಂದ ನಿವೃತ್ತರಾಗುವದಕ್ಕೆ ಮುಂಚಿತವಾಗಿ ಬರುವ ಅಕ್ಟೋಬರ್ ಗುರ್ರೇ ಲಾಗಾಯಿತು ಆರುತಿಂಗಳ ಫರ್ಲೋಗಜಾ ತೆಗದುಕೊಳ್ಳುವವರಾಗಿದಾರೆಂತಲೂ, ಅವರಕೆಲಸಕ್ಕೆ ಮೈಸೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರವರಾಗಲಿ ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಾಗಲಿ ನೇಮಕರಾಗ್ಯಾರೆಂಬ ಸುದ್ದಿ ಊಹ್ಯವಾದ ವುಂಟಾಗಿರುತಿದೆ.

Mr. S. Narayana Row.—ಮೈಸೂರು ಚೀಫ್‌ಕೋರ್ಟ್ ಅಡ್ವೊಕೇಟರಾದ ಮೆ॥ ಎಸ್. ನಾರಾಯಣ ರಾಯರವರು ಈಗ್ಯೆ ಕೆಲವು ಕಾಲದ ಹಿಂದೆ, ಕೋಲಾರದ ಮುನಸಫರಾಗಿ ನೇಮಕರಾಗಲ್ಪಟ್ಟರಷ್ಟೆ. ಇವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು ಮರಳಿ ಪೂರ್ವದಂತೆ ವಕಾಲತ್ ಮಾಡಲಾರಂಭಿಸಿದಾರೆಂದು ತಿಳಿಯಲಾದೆವು. ಮುನಸಫ್ ಕೆಲಸದಲ್ಲಿದ್ದ ನಿರ್ಬಂಧವೂ ನಿಯತ ಆಯತಿಯೂ ಸದರೀ ಕೆಲಸವಂ ಬಿಡುವಂತೆ ಪ್ರಾಯಶಃ ಅವರಂ ಪ್ರೇರಿಸಿರಬಹುದೆಂದು ತೋರುತಿದೆ.

Suicide.—ಗತ ಶುಕ್ರವಾರದ ದಿನ ತುಮಕೂರು ಡಿಸ್ಟ್ರಿಕ್ಟ್ ಪೋಲೀಸ್ ಅಸಿಸ್ಟೆಂಟ್ ಕಮಿಷನರವರು ಪೋಲೀಸ್ ಜಮೇದಾರನೊಬ್ಬನನ್ನು ಯಾವದೋ ಒಂದು ತಪ್ಪಿನಬಗ್ಯೆ ಬರತರಫ್ ಮಾಡಲು ಅವನಿಗೂ ಅಸಿಸ್ಟೆಂಟರಿಗೂ ವಾಗ್ವಾದಗಳು ಜರಿಗಿ ಅವರಮೇಲೆ ಅವನು ಒಂದು ಚಾಕಿನಿಂದ ಅಸಿಸ್ಟೆಂಟರನ್ನು ತಿವಿಯಲೆತ್ನಿ

ದನೆಂತಲೂ ಅಷ್ಟರಲ್ಲಿ ಸವಿಾಪದೊಳಿದ್ದ ಒಬ್ಬ ಕಾನ್ಸ್ಟೆಬಲ್ ತಡೆಯುವದಕ್ಕೆ ಹೋದಾಗ ಅವನನ್ನು ಕೂಡ ಬಲವಾಗಿ ತಿವಿದು ಜಖಂ ಮಾಡಿದನೆಂತಲೂ ಬಳಿಕ ಪೋಲೀಸಿನವರು ಬಂದು ದಸ್ತಗಿರಿ ಮಾಡಿ ಲಾಕಪ್ಪಿನೊಳಿಡಲು ಅಲ್ಲಿ ಕುತ್ತಿಗೆಯಂ ಕುಯಿದುಕೊಂಡು ಆತ್ಮಹತ್ಯೆ ಮಾಡಿಕೊಂಡನೆಂತಲೂ ತಿಳಿಯಬರುತಿದೆ.

The City Municipal Presidentship ಇದುವರಿವಿಗೂ ಷಹರ್ ಮ್ಯೂನಿಸಿಪಲ್ ಪ್ರೆಸಿಡೆಂಟ್ ಕೆಲಸವನ್ನು ಮುನಾಸಬ್ ರುಸುಂ ಪಡೆಯುತ ಡಿಪ್ಟಿ ಕಮ್ಮಿಷನರವರೇ ನೋಡತಕ್ಕ ವಾಡಿಕೆ ನಡೆಗೊಂಡಿದೆಯಷ್ಟೆ, ೧೮೯೦ನೇ ಇಸವಿಯ ೧ನೇ ರೆಗ್ಯುಲೇಷನಿನ ೧೧ನೇಸೆಕ್ಷನ್ ೧ನೇಕಲಂ ಅನುಸರಿಸಿ ಸದರೀ ಉದ್ಯೋಗವನ್ನು ಪ್ರತ್ಯೇಕಿಸಿ ಈಗ ಇರತಕ್ಕ ವೈಸ್ ಪ್ರೆಸಿಡೆಂಟ್ ಕೆಲಸವನ್ನು ವಾಕೂಫವಾಡಿ ಮೇಲೆಕಂಡಂತೆ ಪ್ರತ್ಯೇಕ ಒಬ್ಬ ಅಧೀನರನ್ನು ಮೊಕರರ್ರುಮಾಡುವ ತಜವಿಜ್ ನಡೆಯುತಲಿರುವದಲ್ಲದೆ ಸದರೀ ಕೆಲಸವು ಕೋಲಾರ್ ಡಿ|| ಪೋಲೀಸ್ ಸೂಪರಿಂಟೆಂಡೆಂಟರಾಗಿಯೂ ಲೇಟ್ ದಿವಾನ್ ಮ|| ರಂಗಾಚಾರ್ಯರವರ ಪುತ್ರರಾಗಿಯೂ ಇರುವ ಮ|| ಸಿ. ರಾಘವಾಚಾರ್ಯರಿಗೆ ಉದ್ದೇಶಿಸಲ್ಪಟ್ಟದೆಯೆಂತಲೂ ಈಗ ಅವರು ಆರುವಾರಗಳ ರಜಾಮೇಲೆ ಇರುವದರಿಂದ ಅದುಪೂರೈಸಿದಕೂಡಲೇ ಮರಳಿ ಕೋಲಾರಕ್ಕೆ ಹೋಗುವ ಸಂಭವವಿಲ್ಲವೆಂತಲೂ ತಿಳಿಯಲಾದೆವು. ಇವರು ಇದುವರಿವಿಗೆ ಅಂಡರ್‌ಸೆಕ್ರೆಟರಿಯಾಗಿಯೂ, ಬೆಂಗಳೂರು ಮೈಸೂರು ಡಿಸ್ಟ್ರಿಕ್ಟುಗಳಲ್ಲಿ ಪೋಲೀಸ್ ಸೂಪರಿಂಟೆಂಡೆಂಟರಾಗಿಯೂ ಇದ್ದು ಈಗ ಮ್ಯೂನಿಸಿಪಲ್ ಪ್ರೆಸಿಡೆಂಟ್ ಕೆಲಸಕ್ಕೆ ಬರುವರೆಂಬದು ನಂಬತಕ್ಕದ್ದಾಗಿ ತೋರಲಿಲ್ಲವು.

Execution of J. Nicholls —ಯಾರ್ಕ್‌ಷೈರ್ ರಿಜಮೆಂಟಿನ ೨ನೇ ಬಟಾಲಿಯನಿಗೆ ಸೇರಿದ ಜೇಂಸ್ ನಿಕಾಲೆಸ್ ಎಂಬ ಸೋಲ್ಜರೊಬ್ಬನು ಕಳೆದ ಜೂನ್‌ತಿಂಗಳ ೧೦ನೇ ತಾರೀಖಿನಲ್ಲಿ ತನ್ನ ಭಾರ್ಯೆಯನ್ನು ಮನಃಪೂರ್ವಕವಾಗಿ ಖೂನ್ ಮಾಡಿದ್ದರಿಂದ ಮಿಲಿಟರಿ ಲಾ ಪ್ರಕಾರ ಕೋರ್ಟ್ ಮಾರ್ಷಲ್ ವಿಚಾರಣೆಯಲ್ಲಿ ಆತನಮೇಲೆ ತಪ್ಪು ಸಾಬೀತಾಗಿ ಜಡ್ಜಿಗಳೆಲ್ಲರೂ ಅವನಿಗೆ ಮರಣದಂಡನೆಯಂವಿಧಿಸಲು,ಗವರ್ನರ್‌ಜನರಲ್ಲವರ ಮಂಜೂರಾತಿಯಮೇಲೆ ಕಳೆದ ಗುರುವಾರದದಿನ ಬೆಳಿಗ್ಯೆ ೭ಘಂಟೆಗೆ ಸರಿಯಾಗಿ ಈವೂರು ಸೆಂಟ್ರಲ್ ಜೆಯಿಲ್ ಕಂಪೌಂಡಿನಲ್ಲಿ ಸದರೀ ನಿಕಾಲಸ್ ಎಂಬಾತನು ತನ್ನ ರಿಜಮೆಂಟಿಗೆ ಸೇರಿದವರ ಮುಂದೆ ಗಲ್ಲಿಗೆ ಹಾಕಲ್ಪಟ್ಟನು. ಈ ಅಪರಾಧಿಯು ಮನಃಪೂರ್ವಕವಾಗಿ ತನ್ನ ಭಾರ್ಯೆಯನ್ನು ಕೊಂದಂತೆ ಕಡೆಗೂ ಒಪ್ಪಿಕೊಳ್ಳಲಿಲ್ಲವು. ನಿಕಾಲಸ್ ತನ್ನ ಪರಿಣಾಮವು ಗೊತ್ತಾಗುವ ತನಕ ಧೈರ್ಯವಾಗಿದ್ದನು. ಗಲ್ಲಿಗೆ ಹಾಕಬೇಕಾದ ವಿಷಯ ನಿರ್ಣಯವಾಗಿ ಮರಣಶಾಸನವು ಓದಲ್ಪಟ್ಟ ಬಳಿಕ ಬಹಳ ಆರ್ತನಾಗಿ ಕಳವಳಗೊಂಡು ದುಃಖಿಸುತಲಿದ್ದನು. ಕಡೆಗೆ ಅದೂ ನಿವೃತ್ತಿಯಾಗಿ ಅದರ ಹಿಂದಿನ ರಾತ್ರಿ ಸುಖವಾಗಿ ನಿದ್ರೆ ಹೋದನಂತೆ. ಗುರುವಾರದದಿನ ಬೆಳಿಗ್ಯೆ ೪½ ಘಂಟೆಗೆ ಸರಿಯಾಗಿ ಅವನನ್ನು ಎಬ್ಬಿಸಿ ಅವನಿಗೆ ಭೋಜನಾದಿಗಳನ್ನುಮಾಡಿಸಿ ಬಳಿಕ ೬ಘಂಟೆಗೆ ಸರಿಯಾಗಿ ಅವನು ಕಂಪೆನಿ ಯಾಡಿಗಾಡಿಯಲ್ಲಿ ರಿಜಮೆಂಟ್ ಪಹರೆಯವರೊಡನೆಸೆಂಟ್ರಲ್‌ಜೆಯಿಲಿಗೆ ತರಲ್ಪಟ್ಟನು. ಬಳಿಕ ರಿಜಮೆಂಟಿನವರೆಲ್ಲರೂ ಬಂದು ವಧಾಸ್ಥಾನದ ಸುತ್ತಲೂ ಅರ್ಧಚಂದ್ರಾಕಾರವಾಗಿ ಸಾಲ್ಗೊಂಡು ನಿಂತುಕೊಂಡರು. ಸದರೀ ರಿಜಮೆಂಟಿನ ಅಡ್ಜುಟೆಂಟ್ ಜನರಲ್ ವಗೈರೆ ಉದ್ಯೋಗಸ್ಥರೆಲ್ಲರೂ ಬಂದು ಹಾಜರಾದರು. ಅಡ್ಜುಟೆಂಟ್ ಜನರಲ್ ಹಾರಿಸ್ ಎಂಬವರು ಮರಣಶಾಸನವನ್ನು ಘಟ್ಟಿಯಾಗಿ ಮತ್ತೊಂದುಸಲ ಓದಿದರು. ಅನಂತರ ಕೆಲವು ನಿಮಿಷಗಳ ತನಕ ಬಹಳ ನಿಶ್ಶಬ್ದವಾಗಿತ್ತು. ಆ ಕಾಲದಲ್ಲಿ ಅಪರಾಧಿಯಮುಖದಲ್ಲಿಮೃತ್ಯುಪ್ರ ಆಸನ್ನವಾದ ಅಂಕವು ಸ್ಪಷ್ಟವಾಗಿ ವ್ಯಕ್ತವಾಗುತಲಿತ್ತು. ತರುವಾಯ ಜೆಯಿಲ್ ಸೂಪರಿಂಟೆಂಡೆಂಟರವರು ಅಪರಾಧಿಯಂ ನೋಡಿ ನೀನು ತಿಳಿಸಬೇಕಾದದ್ದೇನಾದರುಇದ್ದರೆ ತಿಳಿಸುವಂತೆ ಹೇಳಿದರು. ಆಗ ನಿಕಾಲಸ್ ತಾನು ಅರುಹಬೇಕಾದದ್ದೊಂದೂ ಇರುವದಿಲ್ಲವೆಂತಲೂ ತನ್ನ ಸ್ವಿಚ್ಛಾಕರ್ತನ ಬಳಿಗೆ ತಾನೀಗ ಶುದ್ಧಾಂತಃಕರಣದೊಡನೆ ಪ್ರಯಾಣೋನ್ಮುಖನಾಗಿರುವದರಿಂದ ನಿರ್ದೋಷ್ಟನಾದ ತಾನು ಅಲ್ಲಿ ತಕ್ಕ ಫಲವನ್ನು ಪಡೆಯದೆ ಹೋಗಲಾರನೆಂದು ನಂಬಿದ್ದೇನೆಂತ ತಿಳಿಸಿದನು. ಕೂಡಲೇ ಅವನ ತಲೆಗೂ ಮುಖಕ್ಕೂ ಸಹ ಕರೀ ಕುಲ್ಲಾಯಿಯೊಂದು ಹಾಕಲ್ಪಟ್ಟಿತು. ನೇಣು ಹಾಕುವವನು ಗಂಟುಗಳನ್ನು ಕುತ್ತಿಗೆಗೆ ಸರಿಯಾಗಿ ಬಿಗಿಸಿ ಕ್ರಮಪಡಿಸಿದನು. ಆಗ ಅಲ್ಲಿಗೆ ಬಂದಿದ್ದ ಚಾಪ್ಲೇನ್‌ಯವರು (ಪಾದಿರಿ) ಮರಣಾಂಗವಾದ ಭಗವತ್ಪ್ರಾರ್ಥನೆಯನ್ನೋದಿದರು. ಕೂಡಲೇ ಹಗ್ಗವು ಸೆಳೆಯಲ್ಪಡಲು ನಿರಾಯಾಸನಾಗಿ ಮೂರು ಕ್ಷಣಗಳೊಳಗಾಗಿ ಪ್ರಾಣವಾಯುವು ಹೊರಟುಹೋಯಿತು. ಶವವು ಅರ್ಧಘಂಟೆಯ ಕಾಲ ಹಾಗೆಯೇ ನೇತಾಡುತಲಿತ್ತು. ಜೆಯಿಲ್ ರೂಲ್ಸಿನ್ನನುಸರಿಸಿ ಅದನ್ನು ಕೆಳಗೆ ಇಳಿಸಿ ಪೆಟ್ಟಿಗೆಯಲ್ಲಿ ಹಾಕಿ ಮೊದಲುಬಂದ ಗಾಡಿಯಲ್ಲೇ ಹೊಸೂರು ರೋಡಿನಲ್ಲಿರುವ ಖನನ ಭೂಮಿಗೆ ಸಾಗಿಸಿದರು. ಕಡೆಗೆ ಯಾವ ಮರ್ಯಾದೆಯೂ ಇಲ್ಲದೆ ಖನನ ಭೂಮಿಯಲ್ಲಿ ದೂರವಾಗಿಯೂ ಪ್ರತ್ಯೇಕವಾಗಿಯೂ ಇರುವ ಒಂದು ಸ್ಥಾನದಲ್ಲಿ ಶವವು ದಫನ್ ಮಾಡಲ್ಪಟ್ಟಿತು. ಈತನಿಗೆ ಪ್ರಾಪ್ತವಾದ ಮರಣಶಿಕ್ಷೆಯಂ ಕುರಿತು ಅಲ್ಲಿಗೆ ಬಂದಿದ್ದವರೊಬ್ಬರಾದರು ಚಿಂತಿಸಿದವರಲ್ಲವು ಮುಖ್ಯವಾಗಿ ಜೇಂಸ್ ನಿಕಾಲಸ್ಸಿನ ನಾಟಕವು ಎರಡು ತಿಂಗಳ ಕಾಲ ಜರಿಗಿ ಇಬ್ಬರ ಪ್ರಾಣಹಾನಿಗಳೊಡನೆ ಮೇಲೆ ಕಂಡಂತೆ ೧೮೯೦ನೇ ಇಸವಿ ಆಗಸ್ಟ ೭ನೇ ತಾರೀಖಿನ ಬೆಳಿಗ್ಯೆ ಮುಕ್ತಾಯವಾದಂತೇಪಹಿಟ್ಟಿತು. ಈಗ ಈತನಿಗೆ ೨೬ವರುಷಗಳ ವಯಸ್ಸೆಂದು ತಿಳಿಯಬರುತಿದೆ.

SUMMARY OF NEWS.

ವೃತ್ತಾಂತಸಂಗ್ರಹವು.

ಬ್ರಾಹ್ಮಣರು ಕರ್ಮಗಳಲ್ಲಿ ವೃಷಭೋತ್ಸರ್ಜನ ಮಾಡಿ ಬಿಡುವ ಗೂಳಿಗಳನ್ನು ಕೊಲ್ಲತಕ್ಕದ್ದು ತಕ್ಸೀರಾಗಿ ಏರ್ಪಡುವದಾಗಿದೆ.

ಕಪರ್ತೊಲಾ ಮಹಾರಾಜರವರು ಸಿಮ್ಲಾಪಟ್ಟಣದಲ್ಲಿರುವ ಮೆಸಾನಿಕ್ ಲಾಜ್ಜಿಗೆ ಸೇರಿ, ಇತರ ನೇಟವ್ ಮತ್ತು ಯೂರೋಪಿಯನ್ ಮೆಂಬರೊಡನೆ ತಾವೂ ಸೋದರಪ್ರೇಮವನ್ನು ವ್ಯಕ್ತಪಡಿಸಿದರು.

ಒಬ್ಬ ಯೂರೋಪಿಯನ್ ಪೈರೆವಾಕ್ ಸ್ತ್ರೀಯು ಎರ್ವೆ ಎಂಬ ನದಿಗೆ ೧೨೦ ಅಡಿಗಳ ಎತ್ತರವಾಗಿ ಕಟ್ಟಿರುವ ಸೇತುವೆಯ ಮೇಲ್ಭಾಗದಲ್ಲಿ ನಿಂತುಕೊಂಡು ಕೆಳಕ್ಕೆ ದುಮುಕಿ ಯಾವ ದೇಹದ ಅಪಾಯವೂ ಆಗದಂತೆ ಸುಖವಾಗಿ ಬಂದಳಂತೆ.

ಬರುವ ಡಿಸೆಂಬರ್ ತಿಂಗಳಲ್ಲಿ ಕಲ್ಕತ್ತಾ ಪಟ್ಟಣದಲ್ಲಿ ನಡಿಯಬೇಕಾದ "ನ್ಯಾಷನಲ್ ಕಾಂಗ್ರೆಸ್" ಎಂಬ ಸಭೆಗೆ ಹೋಗಬಹುದಾದ ಸ್ತ್ರೀ ಪ್ರತಿನಿಧಿಗಳನ್ನು ಸತ್ಕರಿಸುವದಕ್ಕಾಗಿ, ಕಲ್ಕತ್ತಾ ಪಟ್ಟಣದಲ್ಲಿ ಕೆಲವರುಸ್ತ್ರೀಯರನ್ನುಚುನಾಯಿಸಿ ಒಂದು ಕಮಿಟಿಯನ್ನು ಏರ್ಪಡಿಸಿರುತ್ತಾರೆ.

ಮಗುರದಲ್ಲಿರುವ ಮಹಮದೀಯರಲ್ಲಿ ಸಾವಿರಾರುಜನರು ಹಿಂದುಗಳಂತೆ ಸಾಲಿಗ್ರಾಮಗಳನ್ನು ಪೂಜಿಸುತ, ನಾನಾವಿಧವಾದ ಹಿಂದುಗಳ ಮತ ಪದ್ಧತಿಗಳನ್ನು ಅನುವರ್ತಿಸುತಲಿರುವಂತೆ ಜಲಸ್ಸೂರಿನಲ್ಲಿರುವ "ಸಾಮಿಲಾನಿ" ಎಂಬ ಪತ್ರಿಕೆಯು ತಿಳಿಸುತಿದೆ.

ವಿದ್ಯಾಭ್ಯಾಸಕ್ಕಾಗಿ ವಿಲಾಯತಿಗೆ ಹೋಗುತಲಿರುವ ಹಿಂದುಗಳ ಸಂಖ್ಯೆಯು ದಿನೇದಿನೇ ಹೆಚ್ಚುತಲಿರುವದರಿಂದ ಲಂಡನ್ ಪಟ್ಟಣದಬಳಿಯಲ್ಲಿ ಹಿಂದುಗಳಿಗಾಗಿಯೇ ಪ್ರತ್ಯೇಕ ಒಂದು ನಿವೇಶನವನ್ನು (Colony) ಏರ್ಪಡಿಸಬೇಕೆಂದು ಉತ್ತರದೇಶದ ದೊಡ್ಡಮನುಷ್ಯರು ಕೆಲವರು ಪ್ರಯತ್ನಿಸುತಲಿರುತ್ತಾರೆ.

ಬೆಲ್ಜಿಯಂನೊಳಗೆ ೫೫೦ ವಿದ್ಯಾಲಯಗಳಿರುತವೆ; ಆದರೆ ೧,೩೬,೦೦೦ ಸುರಾಲಯಗಳಿರುತವೆ. ವಿದ್ಯಾಲಯಗಳಗೋಸ್ಕರ ೬೫ ಲಕ್ಷರೂಪಾಯಿಗಳು ಖರ್ಚಾಗುತವೆ. ಆದರೆ ಸುರಾಪಾನಕ್ಕೋಸ್ಕರ ೧ ಕೋಟಿ ೩೫ ಲಕ್ಷ ರೂಪಾಯಿಗಳು ಖರ್ಚಾಗುತವೆ. ವಿದ್ಯಾದೇವಿಗಿಂತ ಸುರಾದೇವಿಗೆ ಹೆಚ್ಚು ಜಯವು ಶಿಕ್ಕಿರುತವೆ.

ವಿಲಾಯಿತಿಯಲ್ಲಿ ಈಗ ಒಂದು ವಿಧವಾದ ರೋಗವು ಹುಟ್ಟಿರುತಿದೆ. ಇದು ಸ್ವಲ್ಪಮಟ್ಟಿಗೆ ಸಾಂಕ್ರಾಮಿಕವಾಗಿದ್ದರೂ, ಪ್ರಾಣನಾಶಕರವಾದುವಲ್ಲವು. ಈ ರೋಗವು ಅಂಕುರಿಸಿದ ಒಂದು ವಾರದ ವರಿವಿಗೂ, ವಿಶೇಷವಾಗಿ ಜ್ವರವೂ ತಲೆಯ ನೋವೂ ಬಂದು ಕಣ್ಣು ತೆರೆಯದಂತೆಯೂ, ಕಿವಿ ಕೇಳಿಸದಂತೆಯೂ ಆಗುವದು. ಪ್ರಾಪ್ತಕಾಲ ಹೊರತು ರೋಗವು ಶಮನವಾಗುವುದು, ಯಾವ ಔಷಧವೂ ಪ್ರಯೋಗಿಸಲ್ಪಡುವದಿಲ್ಲ. ಈ ರೋಗದಲ್ಲಿ ವಿಚಿತ್ರವಾದ ಅಂಶ ಒಂದಿರುತಿದೆ. ಪುರುಷರನ್ನು ಬಹಳವಾಗಿ ಪೀಡಿಸುವದಿಲ್ಲ. ಅವಿವಾಹಿತರಾಗಿಯೂ, ದರ್ಮನಿಷ್ಟರಾಗಿಯೂ ಇರುವವರನ್ನು ಮುಟ್ಟುವದಿಲ್ಲ ವ್ಯಭಿಚಾರಿಗಳನ್ನು ಹಿಡಿಯಲು ಈಪೀಗ ಸಮರ್ಥವಾದ ರೋಗವು ಇದನ್ನು ಸೇಪ್ಷೀವಸ್ ಎಂದು ಕರೆಯುತ್ತಾರೆ.

ಬರ್ಲಿನ್‌ಪಟ್ಟಣದಲ್ಲಿ ಲಾವೆರಿನಿಯಾ ಮೆರ್ಲಿಯೆಂಬ ಸ್ತ್ರೀಯು, ಗರ್ಭಕೋಶದಲ್ಲಿನ ಒಂದಾನೊಂದು ವ್ಯಾಧಿಯಿಂದ ಈಗ ಕೆಲವುದಿವಸಗಳ ಕೆಳಗೆ ಮೃತಳಾದಳು. ಮನೆಯವರು ಶವವನ್ನು ತಕ್ಕಬಟ್ಟೆಗಳನ್ನು ಹಾಕಿ ಒಂದು ಪೆಟ್ಟಿಗೆಯಲ್ಲಿ ಇರಿಸಿ ಅದನ್ನು ಬೇರೆಯೊಂದು ಮನೆಯಲ್ಲಿ ಮಡಗಿದ್ದರು. ಮೂರನೆಯದಿವಸ ಶವವನ್ನು ಸಮಾಧಿಗೆ ತೆಗೆದುಕೊಂಡು ಹೋಗುವದಕ್ಕಾಗಿ ಅಲ್ಲಿಹೋಗಿನೋಡಲು, ಶವವು ಪೆಟ್ಟಿಗೆಯಿಂದ ಹೊರಗೆಬಿದ್ದಿತ್ತು. ಶವಕ್ಕೆ ಸುತ್ತಿದ್ದ ಬಟ್ಟೆಯೆಲ್ಲ ತೆಗೆದುಹಾಕಿತ್ತು. ಆಕೆಯದ ಮಗ್ಗುಲಲ್ಲೇ ೭—೮ ತಿಂಗಳ ಮೊಗುಒಂದು ಆಗತಾನೆ ಜನನವಾಗಿಬಿದ್ದಿತ್ತು. ಆಸ್ತ್ರೀಯು ಪುನಃ ಜೀವವಂತಳಾಗಿ ಶವದ ಪೆಟ್ಟಿಗೆಯನ್ನು ತೆಗೆದುಕೊಂಡು ಮುಂಚಿನ ಉಡುಪುಗಳನ್ನೆಲ್ಲ ತೆಗೆದುಹಾಕಿ ಪ್ರಸವವಾದಮೇಲೆ ಸತ್ತಂತೆ ಅಲ್ಲಿನವರು ತಿಳಿದಿರುವರು.—ವೃ. ಸ.

ಚೀನಾ ದೇಶದ ರಾಜರ ಪ್ರತಿನಿಧಿಯಾಗಿ "ಚೈನೀಸ್ ಅಂಬರ್" ಎಂದು ಈಗ ಕೆಲವು ದಿವಸಗಳ ಕೆಳಗೆ ಒಬ್ಬನು ಇಂಡಿಯಾ ದೇಶಕ್ಕೆ ಬಂದು ವೈಸ್‌ರಾಯಿಯವರಿಂದ ತಕ್ಕ ಮರ್ಯಾದೆಯಂ ಹೊಂದಿ, ತನ್ನ ದೇಶಕ್ಕೆ ವಾಪಸ್ ಹೋರಡಲು ಮಧ್ಯ ಮಾರ್ಗದಲ್ಲಿ ಟಿಬೆಟ್ ದೇಶದ ಒಬ್ಬನೊಬ್ಬ ಗುರುವು ಇವರ ಬಳಿಗೆ ಬಂದು ಕಾಣಿಕೆಯನ್ನು ಅಪೇಕ್ಷಿಸಿದಂತೆಯೂ, ಅವನ್ನು ಕೊಡಲು ಆತನು ಸಮ್ಮತಿಸದಿದ್ದುದರಿಂದ ಕೆಲವರು ಟಿಬೆಟದೇಶೀಯರು ಅವನನ್ನು ಕೊಂದುಹಾಕಿದಂತೆಯೂ ತಿಳಿದುಬರುತಿವೆ ಚೀನಾದೇಶೀಯರು ರಾಜಾಜ್ಞೆಯೇ ದೈವಾಜ್ಞೆಯೆಂತಲೂ,ಅದನ್ನುಲ್ಲಂಘಿಸುವದು ಮಹಾ ಪಾಪಕೃತ್ಯವೆಂತಲೂ ತಮ್ಮ ರಾಜನಾಗಲೀ, ಆತನ ಪ್ರತಿನಿಧಿಯಾಗಲಿ, ಪೂಜಾಯೋಗ್ಯರೆಂತಲೂ ಭಾವಿಸಿರುವರೆಂಬುವದು ಪ್ರಸಿದ್ಧವಾಗಿದ್ದರೂ, ಪ್ರತಿನಿಧಿಯು ಈ ರೀತಿಯಲ್ಲಿ ವಧಿಸಲ್ಪಟ್ಟಿರುವದು ಆಶ್ಚರ್ಯವಾಗಿರುವದು. ಇದು ನಿಜವಾಗಿರುವದಾದರೆ ಚೀನಾದೇಶದ ರಾಜರು ತಕ್ಕ ಪ್ರತಿಕ್ರಿಯೆಯನ್ನು ಮಾಡದಿರತಕ್ಕವರಲ್ಲ.

ಗತಿಸಿದ ಸುಬ್ರಹ್ಮಣ್ಯರಾಜೆ ಅರಸಿನವರ ಮರಣಕ್ಕೆ ವಿಚಿತ್ರವಾದ ಕಾರಣಗಳು ಹುಟ್ಟಿರುತವೆ. ನೇಟವ್ ಸಂಸ್ಥಾನಗಳಲ್ಲಿ ರಾಜವಿಗೆಸಹೋದರರೇ ಮೊದಲಾದ ಸವಿಾಪ ಬಂಧುಗಳಿರುವದರೆ ಬ್ರಿಟಿಷನವರ ಅಭಿವೃದ್ಧಿಗೆ ಕುಂದಕವೆಂತಲೂ, ಈಕಾರಣದಿಂದ ಆಸರ್ಕಾರದವರು ಯೂರೋಪಿಯನ್ ಡಾಕ್ಟರುಗಳನ್ನು ನೇಟವ್ ರಾಜ್ಯಗಳಿಗೆ ಕಳುಹಿಸಿ, ಸಮಯವಾದಹಾಗೆಲ್ಲ ಅಲ್ಲಿನ ಮುಖ್ಯ ಜನರನ್ನು ಔಷಧಗಳಿಂದ ಕೊಲ್ಲಿಸುತ್ತಾರೆಂತಲೂ, ಅದೇರೀತಿಯಲ್ಲಿ ಡಾಕ್ಟರ್ ಬೆನ್ಸನ್ ಸಾಹೆಬರು ಪ್ರಿನ್ಸ್ ಗೋಪಾಲರಾಜೆ ಅರಸಿನವರನ್ನೂ, ಈಗ ಪ್ರಿನ್ಸ್ ಸುಬ್ರಹ್ಮಣ್ಯರಾಜೇ ಅರಸಿನವರನ್ನೂ ಸಾಯುವಂತೆ ಮಾಡಿದರೆಂತಲೂ ಅನೇಕರು ಹೇಳಿಕೊಳ್ಳುವದನ್ನು ಕೇಳಲು ಕೇವಲ ವಿಷಾದವಾಗುತದೆ. ಮೈಸೂರು ಪಟ್ಟಣದವರೇ ಪೂರ್ವಾಪರ ಜ್ಞಾನವಿಲ್ಲದೆ ಹೀಗೆ ಹೇಳಿಕೊಂಡರೆ ಹಳ್ಳಿಗಾಡಿನವರ ವಿಷಯವನ್ನು ಹೇಳತಕ್ಕದ್ದೇನು.—ವೃ. ಪ.

THE MYSORE GAZETTE.

ಮೈಸೂರು ಗೆಜೆಟ್.

ಶ್ರೀಮನ್ ಮಹಾರಾಜರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಷ್ತಿಹಾರ್‌ನಾಮೆಗಳು.

ನಂ. ೧೭೨—ತಾ ೧ ನೇ ಆಗಸ್ಟು ೧೮೯೦—ಎಡಹಳ್ಳಿ ಮುನ್‌ಸಫ್ ರಾಮರಾಯರವರಿಗೆ ಒಬ್ಬ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತಿವೆ.

ನಂ ೧೭೩—ತಾ ೩ ನೇ ಆಗಸ್ಟ್, ೧೮೯೦—ಬೆಂಪೆಕೋರ್ಟಿನಅಡ್ವೋಕೇಟರಾದ ಹೆಚ್. ತಿಮ್ಮಕೃಷ್ಣರಾವ್ ಬಿ. ಎ. ಬಿ. ಎಲ್. ಯವರು, ರಾಜೀನಾಮೆ ಕೊಟ್ಟ ಎಸ್. ನಾರಾಯಣ ರಾಯರವರಿಗೆ ಬದಲಾಗಿ ೩ ನೇ ಕ್ಲಾಸ್ ಮುನ್‌ಸಫರಾಗಿ ಮೊಕರರ್ರುಮಾಡಲ್ಪಟ್ಟು ಕೋಲಾರಕ್ಕೆ ಪೋಸ್ಟು ಮಾಡಲ್ಪಟ್ಟಿರುತ್ತಾರೆ

೧೭೬ ತಾ ೮ ನೇ ಆಗಸ್ಟ ೧೮೯೦—೧೮೭೦ನೇ ಇಸವಿಯ ೧೦ನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ ೮ ನೇ ಸೆಕ್ಷನ್ ಅನುಸರಿಸಿ, ಬೆಂಗಳೂರಿಂದ ಹಿಂದೂಪುರದವರಿಗೆ ರೆಯಿಲ್ ರಸ್ತೆ ಹಾಕತಕ್ಕ ಬಗ್ಯೆ ಬೇಕಾಗಿರುವ ಜಮೀನುಗಳೆಲ್ಲವು ಮೇಲೆ ಕಂಡ ಆಕ್ಟನ್ನನುಸರಿಸಿ ಕಂಪೆನ್ಸೇಷನ್ ಕೊಟ್ಟು ಗವರ್ನಮೆಂಟಿನವರಿಂದ ತೆಗೆದುಕೊಳ್ಳಲ್ಪಡುವದಾಗಿ ಮೇಲೆ ತಿಳಿಸಲ್ಪಟ್ಟ ರೆಯಿಲ್ ರಸ್ತೆ ಕಾಮಗಾರಿಯನ್ನು ಈಗ ನಡೆಸುತಲಿರತಕ್ಕವರು, ತಮ್ಮಕಾಮಗಾರಿಯನ್ನು ಜರಿಗಿಸುವಾಗ್ಯೆ ಜನಗಳು ಯಾವವಿಧದಿಂದಲೂ ಅವರನ್ನು ತಡೆಮಾಡಕೂಡದೆಂಬದಾಗಿ ಅಂತಾಜಮೀನುಗಳಿಗೆ ಸಂಬಂಧಪಟ್ಟವರಿಗೆಲ್ಲ ಇದರಿಂದ ತಿಳಿಸಲ್ಪಟ್ಟಿರುತಿದೆ

ವಿದ್ಯಾಭ್ಯಾಸದ ಇಲಾಖೆ.

ತಾ ೨೬ ನೇ ಜೂಲೈ ೧೮೯೦—೧೮೯೧ ನೇ ಇಸವಿ ಫೆಬ್ರವರಿ ತಿಂಗಳಲ್ಲಿ ನಡೆಯುವ ಮೈಸೂರು ದೇಶೀಯಪರೀಕ್ಷೆಗಳು ಪೂರೈಸಿದನಂತರ, ಸವರೀಪರೀಕ್ಷೆಗಳು ನವಂಬರ್‌ತಿಂಗಳಲ್ಲಿ ನಡೆಸಲ್ಪಡುತಿವೆ. ಮತ್ತು ನವಂಬರ್ ೨೮ ನೇ ತಾರೀಖು ಭಾನುವಾರ ವಾರದಲ್ಲಿ ೨೫ ನೇ ತಾರೀಖಿನಲ್ಲಿ ಆರಂಭಿಸಲ್ಪಡುತಿವೆ.

ಸರ್ ೧೮೯೧ ನೇ ಇಸವಿ ಫೆಬ್ರವರಿ ತಿಂಗಳಲ್ಲಿ ನಡೆಯುತಕ್ಕ ಮೈಸೂರು ದೇಶೀಯ ವಿದ್ಯಾರ್ಥಿ ಪರೀಕ್ಷೆಗೆ ಬಾಲಕೀಯರು ಬರುವಂತೆ ಪ್ರೋತ್ಸಾಹ ಪಡಿಸುವದಕ್ಕೋಸ್ಕರ ಪರೀಕ್ಷಾ ಗ್ರಂಥವಾದ ಪದ್ಯಸಾರದಲ್ಲಿ ನಿಯಮಿಸಲ್ಪಟ್ಟಿರುವಭಾಗಗಳಿಗೆ ಬದಲಾಗಿ ಸಾವಿತ್ರೀ ಚರಿತ್ರೆ, ಅಥವಾ ಕಾವ್ಯಕುಂಜ, ಇದು ಸಂಪೂರ್ಣವಾಗಿ ಪರೀಕ್ಷಾಗ್ರಂಥವನ್ನಾಗಿ ತೆಗೆದುಕೊಳ್ಳಬಹುದು. ಸ್ತ್ರೀಗ್ರಂಥಗಳನ್ನ ಭಾಷಾ ಗ್ರಂಥವಾಗಿ ತೆಗೆದುಕೊಳ್ಳುವವರು ಸರ್ ೧೮೯೦ ನೇ ಇಸವಿ ಅಕ್ಟೋಬರ್ ತಿಂಗಳು ೧ ನೇ ತಾರೀಖಿನೊಳಗಾಗಿ ಮೈಸೂರು ದೇಶೀಯ ಪರೀಕ್ಷೆಗಳ ರಿಜಿಸ್ಟ್ರಾರವರಿಗೆ ತಿಳಿಸತಕ್ಕದ್ದು.

BANGALORE —Printed and published at the KARNATIC PRESS, No. 114, SRINIVASA MANDIRAM ROAD, PETTAH —1890.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಾಮವಿವಿಧಸ್ಪೃಶ್ಯತ್ಯುಪಗಮಾರ್ಥ್ಯಕರ್ನಾಟಕಪ್ರಕಾಶನಪರಾಭಿದಾಪ್ರಥಿತಸಾಹಿತೀಶೋಭಿತಾ॥ ವ್ಯಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ಧಿಶಾಸುವರಿವೊಬತಾದಿಕತಿಮಾನಸಂಸುಮದಾ॥

Vol. XVII] ಸಂಪುಟ ೧೭.]

BANGALORE—MONDAY, AUGUST 18, 1890.

ಬೆಂಗಳೂರು:—ಸನ್ ೧೮೯೦ನೇ ಇಸವಿ ಆಗಸ್ಟ್ ೧೮ ನೇ ತಾರೀಖ್ ಸೋಮವಾರ.

[No 33. [ಸಂಚಿಕೆ ೩೩.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಕಾಲ ಲೆಕ್ಕ	ಸ್ಥಳದವರಿಗೆ ಹಾಸಲಿಲ್ಲದೆ	ಪರಸ್ಥಳದವರಿಗೆ ಹಾಸಲ್‌ಸೇರಿ
ಮುಂಗಡಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ ದರವನ್ನು ವರಾಡಿನ ತಾರೀಖ್ ಮೊದಲು ಒಂದು ತಿಂಗಳೊಳಗಾಗಿ ಬಂದಾ ಮೊಬಲಗು ಕಳುಹಿ [illegible] ಪತ್ರಿಕೆ [illegible] ಕಳುಹಿಸಲ್ಪಡುವದು. [illegible] ಇಂಗ್ಲಿಷ್ [illegible] ಕನ್ನಡ [illegible] ಅಥವಾ [illegible] ತರುಕೊಳ್ಳಬಹುದು [illegible] ಬಾಕಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

ಸಿಯಂತುಗಳು ರವಾನಿಸತಕ್ಕವರು ಮೊದಲು [illegible] ಬಂದ ಕೂಡಲೆ ಬಾಕೀ ಅರ್ಡ ನೋಟನ್ನು ರವಾನಿಸತಕ್ಕದ್ದು. [illegible] ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಡಿಸ್ಕೌಂಟ್ ಸಹ [illegible] ಕಳುಹಿಸತಕ್ಕದ್ದು. ಅರ್ಧಾಣೆಗಿಂತ ಹೆಚ್ಚಿನ [illegible] ಡಿಸ್ಕೌಂಟ್ [illegible] ಕಳುಹಿಸಲ್ಪಡುವ [illegible] ಮಿಕ್ಕ [illegible] ಲೆಕ್ಕಕ್ಕೆ [illegible]

ಪ್ರಕಟನೆಯ ರಿವಾಜ್.

ಮೊದಲನೆಸಲದಾ ಪಂಕ್ತಿ ಒಂದಕ್ಕೆ ೦—೨—೦

ಎರಡನೆಯ ಸಲ ಪಂ ಒಂದಕ್ಕೆ ೦—೧—೦

ಸೂ—ಎರಡಾವರ್ತಿಗಿಂತ ಹೆಚ್ಚಿನದಾಗಿ ಎಷ್ಟು ತರಹ [illegible] ಮಾಡಿದಾಗ್ಯೂ ಪಂಕ್ತಿ ಒಂದಕ್ಕೆ ೧ ಆಣೆ ಯಂತೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ [illegible] ಪ್ರಕಟನೆಗಳು ಕಳುಹಿಸುವವರು [illegible] ಮಾಡಬೇಕೆಂದು [illegible] ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದಲ್ಲಿ ಅವರು [illegible] ಪ್ರಕಟಿಸುತ್ತಿದ್ದು ಹಾಗೆ [illegible] ಪ್ರಕಟಿಸಲ್ಪಟ್ಟ [illegible] ಮೇಲೆ [illegible] ಮಾಡಲ್ಪಡುವದು [illegible] ಪ್ರಕಟನೆಗಳನ್ನು [illegible] ಪತ್ರಿಕೆಗೆ [illegible] ಕಳುಹಿಸಿ [illegible] ನಾವು [illegible] ಪ್ರಕಟಿಸುವ [illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥಕ್ಕೆ [illegible] ವರ ಹೆಸರಿಗೆ ಬರೆದುಕೊಂಡರೆ [illegible] ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ [illegible] ಗಳಿಗೆ ಪಿ. ಪಿ. ಕೊಡಲ್ಪಡಲಾರದು

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಚೇರಿಲ್ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್,

ಬೆಂಗಳೂರ್, ಅಸ್ಪತ್ರಿ ರೋಡಾ ಪೇಟೆ, 41ನೇ ನಂ, ಮನೆ

ADVERTISEMENTS.

ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ಬಿಕರಿಗೇ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

	ಹಾಸಲ್ ಸೇರಿ ರೂ ಆ. ಪೈ
ಸಟೀಕಾ ವೈದ್ಯಸಾರ ಸಂಗ್ರಹ	೫ ೦ ೦
,, ಶಿವಗೀತೆ ...	೧ ೧ ೦
,, ಶಿವಾನಂದಲಹರಿ ...	೦ ೮ ೦
,, ಕಾಲಾಮೃತ .	೧ ೨ ೦
,, ಮುಹೂರ್ತದರ್ಪಣ ...	೦ ೧೨ ೦
,, ಬಾಲರಾಮಾಯಣ ...	೦ ೪ ೦
,, ಗೋಪಿಕಾ ಗೀತೆ	೦ ೧ ೬
,, ಬಾಲಶಿಕ್ಷಾನೀತಿ (ಸುಭಾಷಿತ)	೦ ೬ ೦
ವಿಷ್ಣುಸಹಸ್ರನಾಮ ಪದ್ಯರೆ ..	೦ ೫ ೦
ಸುಗ್ರಸಹಸ್ರ ನಾಮ ...	೦ ೩ ೧
ಕೃಷ್ಣಕರ್ಣಾಮೃತ ...	೦ ೧ ೬
ತ್ರಿಕಾಂಡ ಅಮರ ಮಾಲ ..	೦ ೨ ೬
೧ ಕಾಂತ ...	೦ ೧ ೦

ಕನ್ನಡ ಗ್ರಂಥಗಳು.

ಕುಶಲಸ್ಮೃತಿ ಅವ್ವಲ್ ಪ್ರತಿ ...	೩ ೦ ೦
ಟಿಪ್ಪೋ ದುಯ್ಯಂ ..	೧ ೪ ೦
ನೃಸಿಂಹೇಂದ್ರ ವಿಜಯ ..	೧ ೮ ೦
ಪಂಚತಂತ್ರ ಬಾಲಬೋಧೆ ...	೦ ೮ ೦
ಸಮುದ್ರಮಥನ ...	೦ ೮ ೦
ಕಾಳಿಂಗಮರ್ದನ ..	೦ ೨ ೬
ಸುಭದ್ರಾಪರಿಣಯ ..	೦ ೨ ೬
ಶಶಿರೇಖಾ ಪರಿಣಯ .	೦ ೩ ೦
ಸುದಾಮಚರಿತ್ರೆ ..	೦ ೨ ೦
ಮೈರಾವಣನ ಕಾಳಗ ..	೦ ೨ ೦
ಬಾಲಗ್ರಹ ಚಿಕಿತ್ಸೆ .	೦ ೨ ೬
ಸುಹಸ್ಮಾರ್ಗ ಲಾಭ .	೧ ೦ ೦
ಭ್ರಾಂತಿ ವಿಲಾಸ .	೦ ೧೨ ೦

ನೋಟೀಸ್.

ಮನೆಗಳಲ್ಲಿ ಗಿಲಿಟ್ ಮಾಡುವದಕ್ಕೆ ಅನುಕೂಲವಾದ ಬೆಳ್ಳಿ ದ್ರಾವಕವು.

ಈ ಬೆಳ್ಳೀ ದ್ರಾವಕವು ನೈಜವಾದ ಬೆಳ್ಳಿ ತಟ್ಟೆಗಳ ಮೇಲೂ, ತಾಮ್ರ, ಹಿತ್ತಾಳೆ ವಗೈರೆ ವಿಶಿಷ್ಟ ಪದಾರ್ಥಗಳ ಮೇಲೂ ಸುಟ್ಟು ಉಜ್ಜುವದರ ಮೂಲಕ ಗಿಲಿಟ್ ಮಾಡುವದಕ್ಕೆ ಬಹಳ ಉಪಯುಕ್ತವಾದದ್ದಾಗಿರುತ್ತಿದೆ. ಇದಲ್ಲದೆ ಸದರೀ ದ್ರಾವಕವು ಚಿನ್ನ ಮತ್ತು ಬೆಳ್ಳಿ ಒಡವೆಗಳಿಗೆ ಮತ್ತು [illegible] ಮೆರುಗು ಕೊಡಲಿಕ್ಕು ಸಹ ಪ್ರಯೋಜನಕರವಾದದ್ದು. ಇದರಿಂದ ಇತರವಿಧವಿಲಕ್ಷಣವಾದ ಕಾಂತಿ ಯುಂಟಾಗುವದು. ಕೆಲವು ಬಣ್ಣವುಳ್ಳ ಚಿನ್ನಕ್ಕೆ ಉತ್ಕೃಷ್ಟವಾದ ಮೆರುಗು ಕೊಡುವದೇ [illegible] ಕಾಂತಿಯುಳ್ಳ [illegible] ಶುದ್ಧವಾದ ಬೆಳ್ಳಿ ಒಂದಲ್ಲೇ ಸದರೀ ದ್ರಾವಕವು ತಯಾರಾಗಿ [illegible] ಬರವಸೆ ಕೊಡಲ್ಪಡುವದು. ಇದು ಗಿಲಿಟ್ ಮಾಡುವದಕ್ಕಿಂತ ಬಹಳ ಅಗ್ಗವಾಗಿರುವದು. ಕೂಡಲೇ ಒಂದು ಸೀಸೆಯನ್ನು ತರಿಸಿಕೊಂಡು ಅವರಿಂದ ಯಾವ ಕೆಡಕೂ ಉಂಟಾಗದಿರುವದನ್ನು ಅಜಮಾಯಿಷಿ ಮಾಡಿ ನೋಡಬಹುದು.

ಇದರ ಕ್ರಯ ಸೀಸೆ ೧ ಕ್ಕೆ ೨—೪—೦

ಚಿನ್ನದ ದ್ರಾವಕವು.

ಇದು ಬೆಳ್ಳಿ, ಹಿತ್ತಾಳೆ, ತಾಮ್ರ ವಗೈರೆ ಪದಾರ್ಥಗಳನ್ನು ಗಿಲ್ಟ್ ಮಾಡಲಿಕ್ಕೆ ಬಹಳ ಉಪಯುಕ್ತವಾಗಿರುವದಲ್ಲದೆ ಶುದ್ಧವಾದ ಭಂಗಾರದಲ್ಲಿ ತಯಾರಾದದ್ದಾಗಿರುತ್ತಿದೆ. ಬೆಳ್ಳಿ ಆಭರಣಗಳನ್ನು ಗಿಲ್ಟ್ ಮಾಡಲಿಕ್ಕೆ ಈ ದ್ರಾವಕವು ಕೇವಲ ಪ್ರಯೋಜನಕರವಾಗಿರುವದು.

ಇದರ ಕ್ರಯ ಸೀಸೆ ೧ಕ್ಕೆ ೩—೮—೦

ಬೇಕಾದವರು ಅಜಮಾಯಿಷಿನಲ್ಲಿರುವ ಬೆಳ್ಳೀ ಕಾರ್ಖಾನೆಯ ಮ್ಯಾನೇಜರಿಗೆ ಬರೆದು ತರಿಸಿಕೊಳ್ಳಬಹುದು.

ಮೈಸೂರು ಮಹಾರಾಜರವರ ಅರಳೇ ಯಂತ್ರದ ಕಾರ್ಖಾನೆ.

ನೋಟೀಸ್.

ಮೈಸೂರು ಮಹಾರಾಜರವರ ಅರಳೆ ಯಂತ್ರದ ಕಾರ್ಖಾನೆಯಲ್ಲಿ ಹೊಸ ನಮೂನೆ ಯಂತ್ರದ ಮೂಲಕ ಉತ್ತಮವಾದ ಗೋಧಿ ಹಿಟ್ಟು, ರವೆ, ಹೊಟ್ಟು ತಯಾರ್ಮಾಡಲ್ಪಟ್ಟು, ಪೇಟೆಯಲ್ಲಿರುವ ಸದರೀ ಕಾರ್ಖಾನೆಗೆ ಸೇರಿದ ಷಾಪುಗಳಲ್ಲಿಯೂ, ಬೆಂಗಳೂರುಕಂಟೋನ್ಮೆಂಟನಲ್ಲಿ ಒಬ್ಬರೇ ಏಜೆಂಟರಾಗಿರುವ ಸಾಲಿಯಾ ಮಹಮ್ಮದ್ ಕಾಸಿಂಸೇಠಿಯವರ ಡಿಸ್ಪೆನ್ಸರಿ ರಸ್ತೆಯಲ್ಲಿರುವ ಷಾಪಿನಲ್ಲಿಯೂ ಮಾರಲ್ಪಡುತಿವೆ.

ಮೈಸೂರು ಪಬ್ಲಿಕ್ ವರ್ಕ್ಸ್ ಇಲಾಖಾ ಸೆಂಟ್ರಲ್ ಆಫೀಸ್

ಬೆಂಗಳೂರು, 7ನೇ ಆಗಸ್ಟ್ 1890.

ನೋಟೀಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯುವ ವಿಷಯವದೇನಂದರೆ:—

"ಬೆಂಗಳೂರಿಂದ ಹಿಂದೂಪುರದ ಬಳಿ ಇರುವ ಮೈಸೂರು ಸರಹದ್ದು ವರಿವಿಗೆ ರೆಯಿಲ್ ರಸ್ತೆ ಹಾಕುವದಕ್ಕೆ ಮಾಡಬೇಕಾದ ಪ್ರತಿಯೊಂದು ತರಹೆ ಕಾಮಗಾರಿಗಳ ದರಗಳನ್ನು ಕೋರಿಸಿ ಒಂದು ಷೆಡ್ಯೂಲ್ ಪಟ್ಟಿಯ ನಮೂನೆಯಲ್ಲಿ ದರಖಾಸ್ತುಗಳು ಕ್ಷಿಪ್ರದಲ್ಲಿ ಅಪೇಕ್ಷಿಸಲ್ಪಡುವವು. ಕಾಮಗಾರಿಯು ಅಡಿಮೈಲುಗಳಿಗೆ ಒಂದು ಸೆಕ್ಷನಿನಂತೆ ಕೊಡಲ್ಪಡುವದು. ದರಖಾಸ್ತು ಮಾಡುವದಕ್ಕೆ ಇಚ್ಛಿಸುವವರು ತಾವು ಯಾವ ಸೆಕ್ಷನಿಗೆ ಅಥವಾ ಸೆಕ್ಷನ್‌ಗಳಿಗೆ ದರಖಾಸ್ತು ಕೊಡಬೇಕೆಂದು ಯೋಚಿಸುತ್ತಾರೆಯೊ ಅಂತಾ ಸೆಕ್ಷನ್ ಅಥವಾ ಸೆಕ್ಷನ್‌ಗಳನ್ನು ಖುದ್ದು ನೋಡಿ ಬರುವದು ಒಳ್ಳೆಯದು. ಸದರೀ ಮಾರ್ಗದಲ್ಲಿ ಯಾವನೊಬ್ಬನಿಗೆ ದರಖಾಸ್ತು ಕೊಟ್ಟಾಗ್ಯೂ ಅಂತಾ ಸೆಕ್ಷನ್ನಿನ ವಿಶಿಷ್ಟ ಕಾಮಗಾರಿಯೂ ಅದಕ್ಕೆ ಸೇರಿದ್ದಾಗಿರುವದು, ಮರುತು ಪರ್ಮನೆಂಟಿಗೆ ಸೇರಿರುವದಿಲ್ಲ"

(Signed) W. McHUTCHIN,
Asst. Chief Engineer,
of Mysore.

Bangalore City Municipality

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಸನ್ ೧೮೯೦ನೇ ಇಸವಿ ಆಗಸ್ಟ್ ತಾರೀಖ್ ೨೨ನೇ ಶುಕ್ರವಾರ ಪ್ರಾತಃಕಾಲ ೭½ ಘಂಟೆಗೆ ಸಿಟಿ ಮ್ಯುನಿಸಿಪಲ್ ಸುಭೆಯವರು ತಮ್ಮ ಆಫೀಸ್ ಕಟ್ಟಡದಲ್ಲಿ ಸಭೆಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳ ಯಾದಾಸ್ತು.

೧. ಸನ್ ೧೮೯೦ನೇ ಇಸವಿ ಜುಲೈ ಮಾಹೇ ಬಾಬತು ನಗದು ಜಮಾಖರ್ಚು ಮತ್ತು ಮರಾಮತ್ತು ಲೆಕ್ಕಗಳು.

೨. ಮಿಸ್ಟರ್ ಪಿ. ಚೆಂಗಲ್ರಾಯ ಮೊದಲಿಯಾರ್ರವರ ಮರಣದ ದೆಸೆಯಿಂದ ಉಂಟಾದ ಖಾಲೀಯನ್ನು ಭರ್ತಿ ಮಾಡತಕ್ಕ ಬಗ್ಗೆ ಒಬ್ಬ ಮ್ಯುನಿಸಿಪಲ್ ಕಮಿಷನರ ಚುನಾವಣೆ.

೩. ಮುಂದೆ ಬರತಕ್ಕ ಖಾನೇಷುಮಾರಿಯ ವಿಚಾರವನ್ನು ಕುರಿತು ಸೆನ್ಸಸ್ ಸೂಪರಿಂಟೆಂಡೆಂಟರವರು ಮುಲಕ್ಕೊಫೀಸಗಳಿಗೆ ಬರೆದ ೧೮೯೦ನೇ ಇಸವಿ ಜುಲೈ ೨೮ನೇ ಮುಕಾಂ ೫ನೇ ನಂಬರ ಸರ್ಕ್ಯುಲರ್

೪. ಮ್ಯುನಿಸಿಪಲ್ ಒಂದೆರಡನೇ ಡಿವಿಜನ್‌ಗಳಲ್ಲಿ ಹೊಸದಾಗಿ ಸಣ್ಣ ರಸ್ತೆಗಳನ್ನು ಹಾಕತಕ್ಕ ಬಗ್ಗೆ ಪಡೆಯಬೇಕಾಗಿರುವ ಜಮೀನುಗಳ ಪಟ್ಟಿ.

೫. ೧೮೯೦ನೇ ಇಸವಿ ಜುಲೈ ೧೨ನೇ ಮುಕಾಂ ಪ್ರಕಟಿತ ಮೈಸೂರ್ ಗೆಜೆಟಿನಲ್ಲಿ ಪ್ರಕಟಿಷ್ ಮಾಡಲ್ಪಟ್ಟಿರುವ ಡ್ರಾಫ್ಟ್ ವ್ಯಾಕ್ಸಿನೇಷನ್ ಮತ್ತು ಸ್ಮಾಲ್‌ಪಾಕ್ಸ್ ವಿಷಯಕವಾದ ಮುಸವಿದಾ ನಿಬಂಧನೆಗಳನ್ನು ಕುರಿತ ವಿಚಾರ.

೬. ಚರ್ಚ್ ಆಫ್ ಇಂಗ್ಲಾಂಡಿನ ಜನಾನಾ ಮಿಷನಿಗೆಸೇರಿದ ಮಿಸ್ ಎ. ಎಮ್. ಸ್ಮಿತ್ ಯೆಂಬವರು ಕಬ್ಬನ್ ಪೇಟೆಯಲ್ಲಿರುವ ಮಹಮ್ಮದನ್ ಬಾಲಿಕಾಪಾಠಶಾಲೆಗೆ ಸಹಾಯದ್ರವ್ಯವನ್ನು ಕೊಡಬೇಕೆಂಬದಾಗಿ ಬರೆದ ಅರ್ಜಿಯನ್ನು ಕಳುಹಿಸಿ ಸ್ಕೂಲ್ ಡೆಪ್ಯುಟಿ ಇನ್‌ಸ್ಪೆಕ್ಟರ್ ಬರೆದ ೧೮೯೦ನೇ ಇಸವಿ ಆಗಸ್ಟ್ ೬ನೇ ಮುಕಾಂ ೩೫ನೇ ನಂಬರ್ ಲೆಟರ್.

೭. ಬೆಂಗಳೂರ್ ಪಟ್ಟಣದಲ್ಲಿ ಜಲವಸತಿ ಯನ್ನು ಅಭಿವೃದ್ಧಿ ಪಡಿಸಬೇಕಾದದನ್ನು ಕುರಿತ ಯಾದಾಸ್ತು.

೮. ಎಣ್ಣೆಯಂತ್ರದ ಕಾರ್ಖಾನೆಯ ಸುತ್ತಲೂ ದೌಳೀಗೋಡೆಯನ್ನು ಹಾಕಬೇಕಾದ ವಿಷಯವನ್ನು ಕುರಿತು ಚೀಫ್ ಇಂಜನೀಯರಿಂದ ಬಂದ ಕಳೆದ ಜೂನ್ ತಿಂಗಳ ೧೯ನೇ ಮುಕಾಂ ವುಳ್ಳ ೨೬೬೬ನೇ ನಂಬರ್ ಲೆಟರ್, ಮತ್ತು ಅದೇ ವಿಷಯದಲ್ಲಿ ಮಿಸ್ಟರ್ ಹೆಚ್. ಹಾರಿಸನ್‌ಯವರು ಮಾಹೇ ಮಜಕೂರ್ ೧೧ನೇ ತಾರೀಖಿನಲ್ಲಿ ಬರೆದ ಲೆಟರ್.

ಬೆಂಗಳೂರು, ೭ನೇ ಆಗಸ್ಟ್ ಸನ್ ೧೮೯೦ } A. S. RAGHAVACHARLU,
Vice-President,
City Municipal Commn.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, AUGUST 18, 1890.

೧೮೯೦ನೇ ಆಗಸ್ಟ್ ೧೮ ನೆ. ಸೋಮವಾರ.

OFFICE HOURS.

ಕಚೇರಿ ಜಾತಿ ನೌಕರರುಮಾನೇರು ಕಾಲಕ್ಕನುಸಾರ ಪ್ರಕಾರ ಕಚೇರಿಗೆ ಹೋಗಿ ನೌಕರಿ ಮಾಡತಕ್ಕ ವಿಷಯದಲ್ಲಿ ಮೈಸೂರ್ ಗವರ್ನಮೆಂಟ್ ಪಬ್ಲಿಕ್ ವರ್ಕ್ಸ್ ಸೆಕ್ರೆಟರಿಯಾದ ಕರ್ನಲ್ ಬರ್ನ್ ಯವರು ಈಚೆಗೊಂದು ಹುಕುಂ ಕೊಟ್ಟಿರುತ್ತಾರೆಂಬಲ್ಲ, ಅದು ಕೇವಲ

ಶ್ಲಾಘ್ಯವಾಗಿರುವದರಿಂದ ದಿವಾನರು ಸಹ ಅವರಂತೆ ಮತ್ತೊಂದು ಹುಕುಂ ಕೊಟ್ಟು ನೌಕರಿ ಮಾನೇರ ಹಾಜರಾತಿಯನ್ನು ಕ್ರಮಪಡಿಸಬೇಕಾದದ್ದು ಯುಕ್ತವೆಂತಲೂ ಮದರಾಸು ಮಹಜನ್ ೧೫ ನೇ ತಾರೀಖಿನ ಬಳದೇಶದ ಎಗ್ಜಾಮಿನರ್ ಪತ್ರಿಕೆಯು ತಿಳಿಸುತ್ತದೆ. ಈಗಿನ ಕಾಲವೇಶ ವಿದ್ಯಮಾನಗಳಿಂದ ಸದರೀ ಗುಕುಂ ಹೊಸದೆಂದು ಜನರು ಭಾವಿಸುವಂತೆ ಪರಿಣಮಿಸಿದ ಬಗ್ಗೆ ಆಶ್ಚರ್ಯಪಡಬೇಕಾಗಿದೆ. ಹಿಂದೂ ಮುಸಲ್ಮಾನ್ ಅರಸರ ಪ್ರಭುತ್ವಗಳಲ್ಲಿಯೂ ಈ ಬಗ್ಗೆ ಖಂಡಿತವಾದ ಕಾಲನಿಯಮವಿಲ್ಲದೆ ಹೋಗಲಿಲ್ಲವು. ಬ್ರಿಟಿಷ ಆಳ್ವಿಕೆಯಲ್ಲಿ ಹಿಂದಿನ ಕಾಲ ಪರಿಮಾಣವಂ ಬದಲಾಯಿಸಿ ಅಖಂಡವಾದ ಒಂದು ಕಾಲವನ್ನು ನೆರೆಗೊಳಿಸಿದರು. ಸದರೀ ಕ್ರಮವು ಈ ರಾಜ್ಯದಲ್ಲಿ ಅದ್ಯಾಪಿ ಕೆಲವೆಕಡೆ ನಡೆಯುತಲಿದೆ. ಬ್ರಿಟಿಷ ಆಳ್ವಿಕೆಯಲ್ಲಿ, ತತ್ಪಿಸರ್ ರಿಚರ್ಡ್ಸ್ ಮೀಡ್ ಸಾಹೇಬರವರು ಚೀಫ್ ಕಮಿಷನರಾಗಿದ್ದ ಕಾಲದೊಳು ಅವರಿಗೆ ಸರ್ಕಾರದಿಂದ ಗವರ್ನಮೆಂಟ್ ಹೌಸ್ ಎಂಬದಾಗಿ ಪ್ರತ್ಯೇಕ ಬಂಗ್ಲೆ ಯೊಂದು ಕೊಡಲ್ಪಟ್ಟದರಿಂದ ಅದರಲ್ಲಿ ಒಂದು ಭಾಗವನ್ನು ತಮ್ಮ ಆಫೀಸಿಗೆ ಉಪಯೋಗಿಸಿಕೊಂಡು ಅಲ್ಲಿ ಪ್ರತಿನಿತ್ಯವೂ ಕಾಲ ಕ್ಲುಪ್ತಿಯಿಂದ ಕೆಲಸ ಮಾಡುತಲಿದ್ದರು. ಸರ್ಕಾರ್ ಹವೇಲಿಯಲ್ಲಿ ವಾಸವಾಗಿರುವ ರವರ ಆಫೀಸರ್‌ಗಳೂ ಅದೇರೀತಿ ನಡೆಸುವದು ವಾಡಿಕೆಯಾಗಿರುತ್ತದೆ. ಶ್ರೀಮನ್ಮಹಾರಾಜರವರಿಗೆ ದೌಲತ್ ಒಪ್ಪಿಸಲ್ಪಟ್ಟ ಬಳಿಕ ಚೀಫ್ ಕಮಿಷನರ ಸ್ಥಾನವನ್ನು ಅಂಗೀಕರಿಸಿದ್ದ ಸಿ. ರಂಗಚಾರ್ಯರವರು ಕಾಲ ಕ್ಲುಪ್ತಿಯನ್ನೂ ದಿವಾರಾತ್ರಿಯೆಂಬ ಭೇದವನ್ನೂ ಗಣಿಸದೆ ಇಷ್ಟಬಂದಾಗ ಕೆಲಸ ಮಾಡುತಲಿದ್ದದರಿಂದ ಇತರ ಆಫೀಸರ್‌ಗಳು ಸಹ ಅವಕಾಶ ದೊರೆತಾಗೆಲ್ಲ ಅವರನ್ನನುಕರಿಸಲಾರಂಭಿಸಿದರು. ಕಡಿಗೆ ಆಫೀಸರ್‌ಗಳೇ ಅಲ್ಲವು ಇಲಾಖಾ ವೆಂಬ್ಟಿಂಪರರುಗಳೂ ಕೂಡ ಅದರಂತೆ ನಡೆಯಲಾರಂಭಿಸಿದರು. ನೇಟಿವ್ ಆಫೀಸರ್‌ಗಳಿಗೆ ಬರುತ ಬರುತ ಸುಖವು ಅತ್ಯಂತಾಪೇಕ್ಷಿತವಾಗಿ ಏರ್ಪಟ್ಟದರಿಂದ ಯೂರೋಪಿಯನ್ನರಂತೆ ಕೆಲವು ಆಹಾರಗಳಿಂದ ೧೦ ಘಂಟೆಗೆ ಮುಂಚಿತವಾಗಿ ಭೋಜನ ಮಾಡುವದು ಅವರಿಗೆ ಅಸಾಧ್ಯವಾಗಿ ಪರಿಣಮಿಸಿತು. ಅಯ್ಯೋ ಪಾಪ! ಇಂತವರು ಭೋಜನಾತ್ಪೂರ್ವ ಕಚ್ಚೇರಿಗೆ ಬರುವದಕ್ಕೆ ಹ್ಯಾಗೆ ಶಕ್ತರಾಗುವರು? ಭೋಜನಾನಂತರ ಆಯಾಸವೂ ಸುಂದರ ಪ್ರಾಸ್ವಾಭಾವಿಕವಾದುದರಿಂದ ಕಚ್ಚೇರಿಗೆ ಹೋಗುವದಕ್ಕೆ ಅಶಕ್ತತೆಯು ಹೆಚ್ಚಿ ಮನೆಯಲ್ಲೇ ಕೆಲಸ ನೋಡುವದಕ್ಕೆ ಪ್ರಾರಂಭವಾಗಿ ತಮ್ಮ ತಾಬೇದಾರರನ್ನೆಲ್ಲ ಮನೆಗೆ ಕರೆಯಿಸಿಕೊಂಡು ಅವಕಾಶ ದೊರೆತಾಗ ಕದಾಚಿತ್ ಅವರಿಂದ ಬೇಕಾದ ಕೆಲಸಗಳನ್ನು ಮಾಡಿಸಿಕೊಳ್ಳುವ ಆಚಾರ ಪ್ರಚುರ್ಯಕ್ಕೆ ಬಂದು ಆದುದರಿಂದ ಈ ಕಾಲಕ್ಕೆ ಮೇರೆ ಕಂಡ ಹುಕುಂ ಕೊಡಬೇಕಾದದ್ದು ಆವಶ್ಯಕವೆಂದು ತೋರಿಬರುತ್ತಿದೆ. ಪರಂತು ಇಂತಾ ಹುಕುಂ ಮೆ|| ತಂಬುಶೆಟ್ಟರವರ ಆಕ್ಟಿಂಗ್ ದಿವಾನಗಿರಿಯಲ್ಲಿ ಒಂದುವೇಳೆ ಜಾರೀಯಲ್ಲಿ ಬಂದರೂ ಬರಬಹುದು. ಇದು ಖಂಡಿತವಾಗಿ ಜಾರೀಯೊಳು ಬರುವಾಗ್ಯೆ ಇಲ್ಲಿನ ಆವಳತದಲ್ಲಿಟ್ಟು ಬದಲು ಬದಲಿಗಳು ಪ್ರಾಪ್ತವಾಗಬೇಕಾಗಿರುವದೋ ಯೆಂದು ಯೋಚಿಸುತ್ತೇವೆ.

A WIDOW MARRIAGE

ಕಳೆದ ಜುಲೈ ತಿಂಗಳ ೧೭ನೇ ತಾರೀಖಿನಲ್ಲಿ ಅಹಮದಾಬಾದಿನೊಳು ಒಂದು ವಿಧವಾ ವಿವಾಹವು ನಡೆಯಿತೆಂದು ತಿಳಿಯಬರುತ್ತದೆ. ಸದರೀ ವಿವಾಹವು ಸ್ವಲ್ಪ ಪ್ರಯಾಸದಿಂದಲೇ ನಡೆಯಿತು. ಬಾಯಿ ಹಿರಾಬಾಯಿ ಎಂಬ ಹೆಸರುಳ್ಳ ಒಬ್ಬ ಹುಡುಗಿಗೆ ಮೊದಲು ವಿವಾಹವಾದಾಗ ೫ ಸಂವತ್ಸರಗಳು, ಆಕೆಗೆ ವೈಧವ್ಯವು ಪ್ರಾಪ್ತವಾದಾಗ ಎಂಟು ವರುಷಗಳ ವಯಸ್ಸಾಗಿತ್ತು. ಬಳಿಕ ಕೆಲವು ಕಾಲದಲ್ಲಿಯೇ ಅವಳ ಮಾತಾಪಿತೃಗಳಿಬ್ಬರೂ ಕಾಲಗತರಾದ್ದರಿಂದ ಸಕಲವಾಯು ಬನಿರ್ವಹಣ ಭಾರವನ್ನೆಲ್ಲ ವಹಿಸಿದ್ದ ಆಕೆಯ ಅಣ್ಣನಿಂದಲೇ ಅವಳು ಪೋಷಿಸಲ್ಪಡುತಲಿದ್ದಂತೆ ವ್ಯಕ್ತವಾಗುತ್ತದೆ. ಆ ಕಾಲದಲ್ಲಿ ಅವಳು ಈ ಪ್ರಾಪಂಚಿಕ ಜ್ಞಾನಶೂನ್ಯಳಾಗಿರುತಲಿದ್ದದ್ದೇನೂ ವಿಶೇಷವಲ್ಲವು. ಲೌಕಿಕ ಸುಖ ಬಾಧ್ಯಳಾದ ಆಹುಡುಗಿಯು ಒಂದು ದೊಡ್ಡ ಪಟ್ಟಣದಲ್ಲಿ ವಸಿಸುತಲಿದ್ದಾಗ್ಯೂ ಘೋರವಾದ ಒಂದು ಕಾಂತಾರಮಧ್ಯದಲ್ಲಿದ್ದಂತೆ ಚಿಂತಿಸುತಲಿದ್ದಳು. ಆಕೆಯ ವಾಸಸ್ಥಾನವು ರಮ್ಯಹರ್ಮ್ಯವಾಗಿದ್ದರೂ ಅದು ಗಿರಿ ಗಹ್ವರಗಳಂತೆ ಅವಳಿಗೆ ಘೋರವಾಗಿ ಕಂಡುಬರುತಲಿತ್ತು. ಬಹುಜನ ಮಧ್ಯದಲ್ಲಿರುತಲಿದ್ದಾಗ್ಯೂ ಏಕಾಂಗಿಯಾಗಿ ನಿರ್ಜನಪ್ರದೇಶದಲ್ಲಿದ್ದಂತೆ ವಿಷಾದಿಸುತಲಿದ್ದಳು. ಷಡ್ರಸಯುಕ್ತಗಳಾದ ಭೋಜ್ಯವರ್ಗಗಳೆಲ್ಲವು ಅವಳಿಗೆ ಕಂದಮೂಲಗಳಂತೆ ನೀರಸಗಳಾಗಿರುತಲಿದ್ದವು. ಇಂತಾ ದುಸ್ಸಹವಾದ ಸಂತಾಪದಿಂ ಕ್ಲಿಷ್ಟಾಂಗಿಯಾಗಿ ನಿರ್ವೇದದಿಂದ ಅಂತಃ ಪರಿತಪಿಸುತಲಿದ್ದ ಸದರೀ ಮುಗ್ಧೆಗೆ ಅವಳ ನೆರೆಮನೆಯಲ್ಲಿ ವಾಸವಾಗಿದ್ದ ಮಾಧವರಾವ್ ಎಂಬಾತನ ಅನ್ಯಕೋಪಮಾನಗಳಾದ ಸರಸವಾಕ್ಯಗಳು ಹೃದಯಾಹ್ಲಾದಕಗಳಾಗಿ, ಮೋಹಾಂಕುರವು ಫಲಪ್ರದವಾಗುವದಕ್ಕುಪಕ್ರಮಿಸಲು ಆತನು ವಿವಾಹ ಮಾಡಿಕೊಳ್ಳುವಂತೆ ಅವಳಿಗೆ ಅಭಯವನ್ನಿತ್ತು ಸಂತಾಪವಂ ನಿವೃತ್ತಿಗೈದನು. ಸದರೀ ಮಾಧವರಾಯನು ಸ್ವಲ್ಪ ಒಳ್ಳೆ ಸ್ಥಿತಿಯಲ್ಲಿರತಕ್ಕವನಾಗಿದ್ದರೂ ಆಹುಡುಗಿಯ ಮೇಲಣ ಮೋಹಾತಿಶಯದಿಂದಲೋ ಅವಳ ಸ್ಥಿತಿಯಂ ನೋಡಿ ಅನುತಾಪಿಸಿ ಅದಂ ನಿವೃತ್ತಿಸಿ ಅವಳಿಗೆ ಸುಖಸಂತೋಷಗಳನ್ನುಂಟುಮಾಡುವದರ ಮೂಲಕ ಉತ್ತರೋತ್ತರ ತನಗೆ ಲಭಿಸಬಹುದಾದ ಪುಣ್ಯಕೀರ್ತಿಗಳಿಗೆ ಪಾತ್ರನಾಗಬೇಕೆಂಬ ಉತ್ಕಂಠೆಯಿಂದಲೋ ಆಬಾಲವಿಧವೆಯನ್ನು ವಿವಾಹಮಾಡಿಕೊಳ್ಳಬೇಕೆಂಬ ಸಂಕಲ್ಪ ಪೂರ್ವಕವಾಗಿ ಅದಕ್ಕೆ ಬೇಕಾದ ಪ್ರಯತ್ನಗಳನ್ನೆಲ್ಲ ಗೂಢವಾಗಿ ಮಾಡುತಲಿದ್ದನಲ್ಲದೆ ಸದರೀ ಹುಡುಗಿಯು ಕೂಡ ಸಾಧುಸ್ವಭಾವಳಾಗಿ ಅದಕ್ಕೊಡಂಬಟ್ಟಳು. ಪರಂತು ಬಂಧುಗಳ ಆಗ್ರಹವೂ ಆಚಾರನಿಷ್ಠೆಯೂ ಸಹ ಅವಳಿಗೆ ಬಹಳ ಮಟ್ಟಿಗೆ ನಿರುತ್ಸಾಹವನ್ನುಂಟುಮಾಡದಿರಲಿಲ್ಲವು. ಆದಾಗ್ಯೂ ಗರ್ವಮ ಎನವರ ಸಹಾಯದೊಳು ದೃಢವಾದ ನಂಬಿಕೆಯುಳ್ಳವಳಾಗಿ ಕಾಲವನ್ನಿರೀಕ್ಷಿಸುತಲಿದ್ದು ಈಚೆಗೆ ಅಹಮದಾಬಾದಿಗೆ ಹೋಗಿ ಅಲ್ಲಿನ ಪೋಲೀಸಿನವರ ಸಹಾಯವಂ ಪಡೆದು ಮರಳಿ ವಿವಾಹಮಾಡಿಕೊಂಡಳು. ಅವಳ ಬಂಧುಮಿತ್ರರೆಲ್ಲರೂ ಆಗ್ರಹದಿಂ ಅವಳಿಬ್ಬರನ್ನೂ ಕೊಲ್ಲುವಂತೆ ಪ್ರಯತ್ನಿಸಿದರು. ಬಳಿಕ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಸಹಾಯವಂ ಪಡೆದು ಸ್ವಸ್ಥಾನಕ್ಕೆ ಹೋಗಿ ಈಗ ಪರಮ ಉತ್ಸಾಹದಿಂದಿರುವರೆಂದು ವರ್ತಮಾನ ತಿಳಿಯಬರುತ್ತದೆ.

THE SARADA SADANA

ಅಭಿನವ ವೈಲಕ್ಷಣ್ಯದಿಂ ವಿಖ್ಯಾತಳಾಗಿರುವ ಪಂಡಿತ ರಮಾಬಾಯಿಯೆಂಬಾಕೆಯು ಭರತಖಂಡದ ಸ್ತ್ರೀಯರ ದುಃಖನಿವೃತ್ತಿಯ ಬಗ್ಗೆ ಅವರ ಉತ್ತರೋತ್ತರ ಶ್ರೇಯೋಭಿವೃದ್ಧಿಗಾಗಿಯೂ ಶಾರದಾ ಸದನವೆಂಬ ಒಂದು ಸ್ತ್ರೀಸಂಘವಂ ಸ್ಥಾಪಿಸಿ ಅನೇಕರ ಪ್ರೋತ್ಸಾಹದಿಂ ಅದಂ ತೃಪ್ತಿಕರವಾಗಿ ನಡೆಸುತಲಿದ್ದಾಳೆಂಬದು ಇದಕ್ಕೆ ಪೂರ್ವವೇ ಅನೇಕ ಪ್ರಕರಣಗಳಲ್ಲಿ ತಿಳಿಸಿದ್ದೇವಷ್ಟೆ. ಪ್ರಸಕ್ತ ಶಾರದಾ ಸದನವು ಸ್ಥಾಪಿಸುವದರಲ್ಲಿ ಪ್ರಥಮ ಪ್ರವರ್ತಕರ ಮುಖ್ಯೋದ್ದೇಶವೇನೆಂದರೆ,—ಭರತಖಂಡದ ಸ್ತ್ರೀಯರು ಕೂಡ ಸ್ವತಂತ್ರರಾಗಿ ಯಾವದಾದರೊಂದು ವೃತ್ತಿಯನ್ನವಲಂಬಿಸಿ ಜೀವಿಸಲಿಕ್ಕೆ ಶಕ್ತರಾಗುವಂತೆ ಅವರು ತಯಾರಾಗಬೇಕೆಂಬದು. ಸದರೀ ಉದ್ದೇಶದಿಂದಲೇ ಈಗ ಸ್ಥಾಪಿಸಲ್ಪಟ್ಟಿರುವ ಶಾರದಾಸದನದಲ್ಲಿ ಸ್ತ್ರೀಯರಿಗೆ ವಿದ್ಯಾಭ್ಯಾಸ ಮಾಡಿಸುವದಲ್ಲದೆ ಕೈಕಸಬಿನ ಕೆಲಸಗಳು ಕೂಡ ಕಲಿಸಲ್ಪಡುತಲಿವೆ. ಪ್ರಸಕ್ತ ಸದನವು ಬ್ರಾಹ್ಮಣ ವಿಧವೆಯರಿಗಾಗಿಯೇ ಉದ್ದಿಷ್ಟವಾಗಿರುತ್ತದೆ. ಪತಿಹೀನರಾಗಿಯೂ, ಅನನ್ಯಗತಿಕರಾಗಿಯೂ ಇರುವ ಬ್ರಾಹ್ಮಣ ವಿಧವೆಯರುಗಳು ವೈಧವ್ಯವೆಂಬ ದುಷ್ಟ ಪಿಶಾಚಾವಿಷ್ಟರಾಗಿ, ಇಷ್ಟವಿರುದ್ಧ ನಿರ್ಬಂಧವೆಂಬ ಕ್ರೂರಸರ್ಪದಿಂ ಪೀಡಿಸಲ್ಪಡುತ್ತ, ದುರಾಚಾರವೆಂಬ ಕಾರಾಗೃಹದಲ್ಲಿ ಲೌಕಿಕಸುಖ ವಿಮುಕ್ತರಾಗಿ ಯಾವಜ್ಜೀವವೂ ಕಾಲವಂ ಕಳೆಯುವದು ಪ್ರಸಿದ್ಧವಾಗಿರುವದರಿಂದ ಅಂತವರನ್ನು ಮೇಲೆಕಂಡ ದುಃಖವಂ ನಿವೃತ್ತಿಸಿ ಯಥೋಚಿತ ಸುಖ ಸಂತೋಷಗಳನ್ನವರೂ ಇತರರಹಾಗೆ ಅನುಭವಿಸುವಂತೆ ಮಾಡಬೇಕೆಂಬ ಕೋರಿಕೆಯೂ ಪ್ರಯತ್ನವೂ ಅಧಿಕವಾಗುತಲಿವೆ. ಆದುದರಿಂದ ಸುವಾಸಿನಿಯರಿಗೆ ಯಾವದಾದರು ಸಂಕಟಗಳಿದ್ದರೆ ಅದಂ ನಿವೃತ್ತಿಸಿ ಸುಖಜೀವನವನ್ನುಂಟುಮಾಡಲಿಕ್ಕೆ ಅವರ ಪತಿಗಳೂ, ಪತಿ ಸಂಬಂಧವುಳ್ಳವರೂ ಸನ್ನದ್ಧರಾಗಿರುವವರಿಂದ ಅವರ ಕೋರಿಕೆಗಳೆಲ್ಲವೂ ಪತಿಯ ಜ್ಞಾಪ್ತಿಯಲ್ಲಿ ಪರಿಪೂರ್ಣವಾಗುವವು. ಆದರೆ ವಿಧವೆಯರುಗಳ ದುಃಖ ನಿವೃತ್ತಿಗೂ, ಇಷ್ಟ ಸಂಪಾದನೆಗೂ, ಜವಾಬ್ದಾರಿಯಂ ವಹಿಸಿ, ತಾವಿದ್ದೇವೆಂದು ಧೈರ್ಯವನ್ನುಂಟುಮಾಡಿ ಮುಂದೆ ಬಂದು ನಿಲ್ಲತಕ್ಕವರು ದುರ್ಲಭರಾದುದರಿಂದಲೂ, ಅವರ ದುಃಖ ನಿವೃತ್ತಿಯು ಕಾಮದಾಯಕವಾದದ್ದಾದುದರಿಂದಲೂ ಅವರಲ್ಲಿ ಅನುರಕ್ತರಾಗಿರತಕ್ಕವರೆಲ್ಲರು ಸಾಧ್ಯವಾದಮಟ್ಟಿಗೆ ಅನುಕೂಲಗಳಾದ ಮಾರ್ಗಗಳಿಂದವರ ಸಂತೃಪ್ತಿಗೊಳಿಸಲಿಕ್ಕೆ ಪ್ರಯತ್ನ ಪಡಬೇಕಾದುದು ಅವರಿಗೆ ಮಾನುಷಧರ್ಮವಾಗಿರುತ್ತದೆ. ಅನ್ನ ಕೊಡತಕ್ಕದ್ದಾಗಿಯೂ, ಜವಾಬ್ದಾರಿಯುಳ್ಳದ್ದಾಗಿಯೂ, ಕಷ್ಟಯುಕ್ತವಾದದ್ದಾಗಿಯೂ, ಅನುಷ್ಠೇಯವಾದದ್ದಾಗಿಯೂ ಇರುವ ಒಂದು ಪ್ರಾಣವನ್ನು ಪೋಷಣೆಗೆ ಅದಕ್ಕೆ ಸುಸ್ಥಿರ ಮಾಡುವ ಮಾತ್ರದಿಂದಲೇ ದೇವೇಂದ್ರಾದಿಗಳಿಗೆ ಸಹ ಅಸಾಧ್ಯಗಳಾದ ಕೋಟಿ ಯಜ್ಞಾ ಫಲವು ತಪ್ಪದೆ ಸಿದ್ಧಿಸುವದೆಂದು ನಮ್ಮ ಶಾಸ್ತ್ರಗಳು ಸಾರಿ ಹೇಳುತಲಿರುವಾಗ್ಯೆ ಪ್ರತಿಬಂಧಕಳಾಗಿಯೂ, ಸ್ವಬಂಧುಗಳ ತಿರಸ್ಕಾರಕ್ಕೆ ಗುರಿಯಾದವರಾಗಿಯೂ, ಸದ್ಗುಣಿಗಳಾಗಿಯೂ, ವಿವಿಧ ವಸ್ತ್ರಾಭರಣಾದ್ಯಲಂಕಾರಾದಿಗಳಂ ಮನಸೋಇಚ್ಛೆ ಧರಿಸಲಿಕ್ಕೆ ಅರ್ಹರಾದವರಾಗಿಯೂ ಅನುರಕ್ತರಾದವರ ಅಭೀಷ್ಟಗಳೆಲ್ಲವನ್ನು ನೆರವೇರಿಸಲಿಕ್ಕೆ ಬಹಳ ಉಪಯುಕ್ತರಾದವರಾಗಿಯೂ ಇರತಕ್ಕ ವಿಧವೆಯರುಗಳ ಆರ್ತ ನಿವೃತ್ತಿಯಿಂದ ಪುರುಷರಿಗಿನ್ನೆಷ್ಟು ಪುಣ್ಯಕೀರ್ತಿಗಳು ಲಭಿಸುವವೋ ಅದು ನಿರೂಪಿಸುವ ಸಮರ್ಥಗಳಾದ ಶಬ್ದಗಳಿಲ್ಲವೆ ಹೊಂದಬಗ್ಗೆ ಸದರೀ ಸದನಾಧಿಷ್ಠಾನ ದೇವತೆಯಾದ ವಾಗ್ದೇವಿಯು ಸಹ ಕದಾಚಿತ್ ನಿರೂಪಿಸಲಾರಳೆಂದೆಣಿಸುತ್ತೇವೆ. ಈಗ್ಯೆ ಒಂದು ವರುಷದ ಹಿಂದೆ ಸ್ಥಾಪಿಸಲ್ಪಟ್ಟ ಈ ಶಾರದಾ ಸದನದಲ್ಲಿ ಇದುವರಿನಿಗೆ ಹದಿನೈದುಜನ ಬ್ರಾಹ್ಮಣ ವಿಧವೆಯರುಗಳು ನಿಯತವಾಗಿರುತಲಿದ್ದಾರೆ. ಇವರಲ್ಲದೆ ಕೆಲಸಗಳಂ ಕಲಿತುಕೊಳ್ಳುವಬಗ್ಗೆ ಪಾಠಶಾಲೆಗೆ ಹೋಗುವವರಂತೆ ಪ್ರತಿನಿತ್ಯವೂ ಸದನಕ್ಕೆ ಬರುವಂಥವರು ಅನೇಕರಿರುತ್ತಾರೆ. ವಿಧವೆಯರುಗಳಿಗುದ್ದಿಷ್ಟವಾದ ಸದರೀ ಸದನದಲ್ಲಿ ಅವರೊಡನೆ ಕನ್ಯೆಯರೂ, ಸುವಾಸಿನಿಯರೂ ದಾಖಲ್ಮಾಡಿಕೊಳ್ಳಲ್ಪಡುತ್ತಾರೆ. ಇದರಲ್ಲಿ ಸೇರಬೇಕಾದ ತಾತ್ಪರ್ಯ ವುಳ್ಳವರೆಲ್ಲರೂ ದಾಖಲಾಗುವದಕ್ಕೆ ಮುಂಚಿತವಾಗಿ ತಮ್ಮ ವರ್ತನವು ನಿರ್ದುಷ್ಟವಾದದ್ದೆಂಬದಾಗಿ ದೊಡ್ಡವರಿಂದ ನಿರೂಪಿಸತಕ್ಕದ್ದು. ದಾಖಲಾಗತಕ್ಕವರನ್ನು ಸದರಿ ಕಮಿಟಿಯವರು ನಾನಾಪ್ರಕಾರಗಳಿಂದ ಚೆನ್ನಾಗಿ ಪರೀಕ್ಷಿಸಿ ಅವರ ವರ್ತನವು ತಮಗೆ ತೃಪ್ತಿಕರವಾಗಿ ಕಂಡುಬಂದ ಬಳಿಕಲೇ ಅವರು ದಾಖಲ್ಮಾಡಿಕೊಳ್ಳಲಿಕ್ಕೆ ಆಜ್ಞಾಪಿಸುವರು. ಇದರಲ್ಲಿ ಸೇರತಕ್ಕವರು ಬಡವರಾಗಿದ್ದರೆ ಅಂತವರು ಮಾಹೆಯಾನಾ ಗೊತ್ತಾಗಿರುವ ರುಸುಮನ್ನು ಕೊಡಬೇಕಲ್ಲದೆ ರಿಕ್ತರಾದವರಿಗ್ಯೆ ವಸಿಡ್ಜಾಧನವೂ ಇರುವದಿಲ್ಲವು. ಅವರದರಲ್ಲಿರತಕ್ಕ ಕಾಲದಲ್ಲಿ ಅವರ ಪಠನಕ್ರಮ ಧರ್ಮಾಚಾರಗಳಿಗೆಷ್ಟು ಮಾತ್ರವೂ ಭಂಗವಿಲ್ಲದೆ ಕಾಪಾಡಲ್ಪಡುವದೆಂಬದಕ್ಕೆ ಬೇಕಾದ ಭದ್ರವಾದ ಏರ್ಪಾಡುಗಳೆಲ್ಲವು ಮಾಡಲ್ಪಟ್ಟಿರುವಂತೆ ತಿಳಿಯಬರುತ್ತದೆ. ಮುಖ್ಯವಾಗಿ ಪ್ರಪಂಚದಲ್ಲಿ ಅನುಭವಿಸಲ್ಪಡುವ ಇತರ ಸೌಖ್ಯಗಳೆಲ್ಲಕ್ಕಿಂತಲೂ ಜ್ಞಾನಸಂಪಾದನೆಯಿಂದುಂಟಾಗುವ ಸೌಖ್ಯವು ಅಸಾಧಾರಣವಾದುದರಿಂದ ಈ ಅನಾಥರಾದ ವಿಧವೆಯರುಗಳ ವಿಷಯದೊಳೆಲ್ಲರೂ ಕನಿಕರದೊಡನೆ ಸಹಾಯ ಮಾಡಬೇಕಾದದ್ದು ಆವಶ್ಯಕವಾಗಿರುತ್ತದೆ.

TOBACCO CULTURE

ತಂಬಾಕೆಂಬ ಹೊಗೆಸೊಪ್ಪಿನ ವಿಷಯವಾಗಿ ಮದರಾಸ್ ಆಂಧ್ರಪ್ರಕಾಶಿಕಾ ಪತ್ರಿಕೆಯು ಗತವಾರದಲ್ಲಿ ವಿಚಾರಮಾಡಿರುತ್ತದೆಯಾಗಿ ಅದರಿಂದ ತಂಬಾಕಿನ ಉತ್ಪತ್ತಿಯೂ ಪ್ರಚಾರವೂ ಉಪಯುಕ್ತತೆಯೂ ಇಷ್ಟೆಂದು ವ್ಯಕ್ತವಾಗುವದು. ಪ್ರಸಿದ್ಧವಾದ ಈ ವ್ಯಸನವು ದೇಶದಲ್ಲಿ ಹಿಂದೆ ಅದರ ವ್ಯಾಪಕತೆ ಯೆಷ್ಟರಮಟ್ಟಿಗೆ ಇತ್ತೆಂಬದನ್ನು ಸಹ ಸೇರಿಸಿ ಈ ಪತ್ರಿಕೆಯನ್ನೋದತಕ್ಕವರ ತಿಳುವಳಿಕೆಯ ಬಗ್ಗೆ ಇದರಡಿ ಪ್ರಕಟಿಸುವೆವು, ಹ್ಯಾಗಂದರೆ—

ಪೂರ್ವದಲ್ಲಿ ತಂಬಾಕೆಂಬ ಹೆಸರುಳ್ಳ ಒಂದು ಪದಾರ್ಥವು ಈಶ್ವರ ಸೃಷ್ಟಿಯಲ್ಲಿರುವದೆಂದಾಗಲಿ ಅದು ಜನರಿಗುಪಯುಕ್ತವಾದದ್ದೆಂದಾಗಲಿ ಯುರೋಪಖಂಡದವರ್‍ಯಾರಿಗೂ ತಿಳಿದಿರಲಿಲ್ಲವು. ಯಾತಕ್ಕೆಂದರೆ, ಸದರಿ ಗಿಡವು ಅಮೇರಿಕಾಖಂಡಕ್ಕೆ ಸೇರಿದ್ದಾದುದರಿಂದ ಇತರ ಖಂಡಗಳಲ್ಲಿ ಅದರ ಪ್ರಚಾರವಿರಲಿಲ್ಲವು. ತಂಬಾಕ್ ೧೬ನೇಯ ಶತಮಾನದಲ್ಲಿ ಪ್ರಥಮತಃ ಅಮೇರಿಕಾಖಂಡದಿಂದ ಯೂರೋಪಿಗೆ ತೆಗೆದುಕೊಂಡು ಹೋಗಲ್ಪಟ್ಟಂತೆ ತಿಳಿಯಬರುತ್ತದೆ. ತರುವಾಯ ೧೬೦೨ನೆಯ ಇಸವಿಯಲ್ಲಿ ಅಮೇರಿಕಾಖಂಡಕ್ಕೆ ಸೇರಿದ ವರ್ಜಿನಿಯಾ ರಾಜ್ಯದಿಂದ ಇಂಗ್ಲೆಂಡ್ ದೇಶಕ್ಕೆ ತರಲ್ಪಟ್ಟಿತು. ಪರಂತು ಇದನ್ನು ಯಾರೂ ಆದರಿಸಲಿಲ್ಲವು. ಅದಕ್ಕೆ ಪೂರ್ವವೇ ಇಂಡ್ಯಾ ದೇಶದಲ್ಲಿ ತಂಬಾಕ್ ಇದ್ದಂತೆ ಮೊಗಲಾಯಿ ಚಕ್ರವರ್ತಿಯಾದ ಜಹಾಂಗೀರನವರ ಚರಿತ್ರೆಯಿಂದ ಸ್ಪಷ್ಟವಾಗುತ್ತದೆ. ಪರಂತು ಈಗಿನಂತೆ ಆಗ್ಯೆ ವಿಶೇಷವಾಗಿ ಉಪಯೋಗಿಸಲ್ಪಡುತಲಿರಲಿಲ್ಲವು. ಈ ಹೊಗೆಸೊಪ್ಪು ಪೋರ್ಚುಗೀಸ್ ರಾಜಧಾನಿಯಿಂದ ಪ್ರಷ್ಯಾ ರಾಜ್ಯಕ್ಕೆ ತರಲ್ಪಟ್ಟು ಅಲ್ಲಿಂದ ಏನಾಪುರದ ಬಳಿ ಗುಂಗಾನದಿಯ ಬಂದಾನೊಂದು ದೀವಿಯಲ್ಲಿ ಮೊದಲು ಬೆಳೆ ಮಾಡಲ್ಪಟ್ಟಿತು. ಟರ್ಕಿ ಪ್ರಾಂತ್ಯದಲ್ಲಿ ಬೆಳೆಯತಕ್ಕ ಸಿರಿಯಾ ಹೊಗೆಸೊಪ್ಪು ಅದರ ಸಂಬಂಧವಾದದ್ದೆಂದು ಜನಗಳು ಹೇಳುತ್ತಾರೆ. ಕೃಷ್ಣಾ ಗೋದಾವರಿ ನದಿಗಳ ಲಂಕೆಗಳಲ್ಲಿ ಬೆಳೆಯತಕ್ಕ ಹೊಗೆಸೊಪ್ಪು ದಕ್ಷಿಣ ಇಂಡ್ಯಾ ದೇಶದೊಳಗೆಲ್ಲ ಶ್ರೇಷ್ಠವಾದದ್ದಾಗಿರುತ್ತದೆ. ೧೭೮೦ನೇ ಇಸವಿಯೊಳು ಮಚ್ಲಿಬಂದರಿನಲ್ಲಿ ಪ್ರಭುತ್ವ ಮಾಡುತಲಿದ್ದ ವಾರಂಗಲ್ ದೇಶದ ಭೂಮಿನಿ ಅರಸರು ಮುಂಬೈ ಪ್ರೆಸಿಡೆನ್ಸಿಗೆ ಸೇರಿದ ಕೇರಾ ಡಿಸ್ಟ್ರಿಕ್ಟಿನಿಂದ ತಂದಂತೆ ತಿಳಿಯಬರುತ್ತದೆ. ಆಫ್ರಿಕಾ ಖಂಡದಲ್ಲಿರತಕ್ಕ ಅರಣ್ಯವಾಸಿಗಳು ಇದರ ಉಪಯುಕ್ತತೆಯಂ ೨೦೦೦ ವರುಷಗಳ ಹಿಂದೆಯೇ ಕಂಡುಕೊಂಡಿದ್ದರು. ಈ ಹೊಗೆಸೊಪ್ಪು ಅನೇಕ ರೋಗಗಳಿಗೆ ಉಪಯುಕ್ತವಾದ ವಿಷಯದ ಔಷಧಿ ಎಂಬದಾಗಿ ಧರ್ಮಂತ್ರಿ ನಿಘಂಟಿನಲ್ಲಿ ಬರೆಯಲ್ಪಟ್ಟಿದೆಯಲ್ಲದೆ ಮಯೋದರ ಜಾಡ್ಯಕ್ಕೆ ಶ್ರೇಷ್ಠವಾದ ಔಷಧವೆಂದು ಗುಣಪಠವೆಂಬ ಗ್ರಂಥದಲ್ಲಿ ತಿಳಿಸಲ್ಪಟ್ಟಿರುತ್ತದೆ. ಚುಟ್ಟ ಹಿಡಿಯುವದು, ನಶ್ಯ ಸೇದುವದು, ತಾಂಬೂಲದೊಡನೆ ಅಗಿಯುವದು, ಇವುಗಳ ವಿಷಯವಾಗಿ ಸದರೀ ಗ್ರಂಥಗಳೇನೂ ತಿಳಿಸುವದಿಲ್ಲವು. ಚುಟ್ಟ ಹಿಡಿಯತಕ್ಕ ಆಚಾರವು ಮುಸಲ್ಮಾನರಿಂದ ನಮಗೆ ಅನುಸರಿಸಿ ಬಂದಂತೆ ಹೇಳಬಹುದಾಗಿದೆ, ಹ್ಯಾಗಂದರೆ, ಅವರು ಹೊಗೆಸೊಪ್ಪಿನೊಡನೆ ಶರ್ಕರೆ,

ಶೋಜಾಹೂವು ಮೊದಲಾದ ಪರಿಮಳ ದ್ರವ್ಯಗಳನ್ನು ಸೇರಿಸಿ ಪಕ್ವಮಾಡಿ ಬಳಸುತ್ತಾರೆ. ಈಗ ಬರ್ಮ್ಮಾ ರಾಜ್ಯದಲ್ಲಿ ಸ್ತ್ರೀ ಪುರುಷರೆಲ್ಲರೂ ಸಾಧಾರಣವಾಗಿ ಮಕ್ಕಳು ಮೊದಲು ಬಹಳವಾಗಿ ಚುಟ್ಟ ಹಿಡಿಯುತ್ತಾರೆ. ಕೂರ್ಗುದೇಶಗಳಲ್ಲಿ ತಾಂಬೂಲದೊಡನೆ ಸೇವಿಸದಿರತಕ್ಕವರು ದುರ್ಲಭರು. ಕೆಳಗಿನ ಕರ್ಣಾಟಕ ದೇಶೀಯರು ನಸ್ಯರೂಪವಾಗಿಯೂ, ಆಂಧ್ರದೇಶೀಯರು ಚುಟ್ಟ ರೂಪವಾಗಿಯೂ, ಮಲೆಯಾಳ ದೇಶೀಯರು ತಾಂಬೂಲೋಪಕರಣ ರೂಪವಾಗಿಯೂ ವಿಶೇಷತಃ ಉಪಯೋಗಿಸುವರೆಂತ ತಿಳಿಯುಬರುತಿದೆ. ಹೊಗೇಸೊಪ್ಪು ನಸ್ಯಕ್ಕಾಗಿಯೂ, ಅಗಿಯುವದಕ್ಕಾಗಿಯೂ ಬಹಳ ಬಳಕೆಯಾಗುತಲಿರಲಿಲ್ಲವು. ಯಾವಾಗ ಒಬ್ಬರನ್ನೊಬ್ಬರು ಚುಟ್ಟ ಹಿಡಿಯುವದಕ್ಕೆ ಪ್ರಾರಂಭಿಸಿ ಅದು ಪ್ರಚಾರದೊಳು ಬಂದಿತೋ ಆಗಲೇ ಹೊಗೇಸೊಪ್ಪಿನ ಬೆಳೆಯು ಜಾಸ್ತಿಯಾಗುತ್ತ ಬಂದಂತೆ ಕಾಣುತಿದೆ. ೧೮೫೦ನೇ ಇಸವಿಯಲ್ಲಿ ಲಕ್ಷ ಎಕ್ರೆಗಳ ಜಮಾನಿನಲ್ಲಿ ಸದರೀ ಪೈರು ಬೆಳೆಯಲ್ಪಟ್ಟು ೧೮೭೮ನೇ ಇಸವಿಯಲ್ಲಿ ೫ ಲಕ್ಷ ಎಕ್ರೆಗಳವರೆಗೆ ಜಾಸ್ತಿಯಾಯಿತು. ಈಗ ಸರಾಸರಿ ಹತ್ತು ಲಕ್ಷ ಎಕ್ರೆಗಳಲ್ಲಿ ಹೊಗೇಸೊಪ್ಪು ತಂಬಾಕ್ ಸಾಗುವಳಿಯಾಗುವದೆಂದು ಸರ್ಕಾರಿ ಲೆಕ್ಕಗಳಮೂಲಕ ಸ್ಪಷ್ಟವಾಗುತಿದೆ. ಇದರ ಬೆಳೆಯು ಮದರಾಸ್ ಪ್ರೆಸಿಡೆನ್ಸಿಗೆ ಸೇರಿದ ಗೋದಾವರೀ ನದೀತೀರದಲ್ಲಿ ಅಧಿಕವಾಗಿರುವದು. ಬೆಂಗಾಲ್ ಪ್ರೆಸಿಡೆನ್ಸಿಗೆ ಸೇರಿದ ಬಿಹಾರ್ ಪ್ರಾಂತದಲ್ಲಿ ೩,೫೦೦ ಎಕ್ರೆಗಳ ತನಕ ತಂಬಾಕ್ ಸಾಗುವ [illegible] ಕೇಳುತ್ತೇವೆ. ಸರ್ಕಾರದವರ ಪ್ರೋತ್ಸಾಹದಿಂದ ಪ್ರುವೆ [illegible] ಹೊಗೇಸೊಪ್ಪಿನ ಬೆಳೆಗೆ ಜನರು ವಿಶೇಷ [illegible] ದಿಂದ ಅಲ್ಲಿ ಅದರ ಉತ್ಪತ್ತಿಯು ಜಾಸ್ತಿಯಾಗಿರುತಿದೆ. ಅಲ್ಲಿ ತಯಾರಾಗತಕ್ಕ ಹೊಗೇಬತ್ತಿಗಳು ಅಮೇರಿಕಾ ಮತ್ತು ಆಸ್ಟ್ರೇಲಿಯಾ ಖಂಡಗಳಿಗೆ ಬಹಳವಾಗಿ ರಫ್ತಾಗುತಲಿವೆ. ತಿರಹೂತಿನಲ್ಲಿ ಕಾಶೀರಾಜ [illegible] ತೆಗಳಲ್ಲಿ ತಯಾರಾಗುವ ಚುಟ್ಟಗಳು ಸ್ಥಳ್ಯಗಳಿಂದ ಉರವು [illegible] ಗಿಸ್ಪುತಿದೆ. ಮದರಾಸ್, ಕೊಯಮುತ್ತೂರ್, ತಿರುಚಿನಾಪಲ್ಲಿ, ದಿಂಡಿಗಲ್, ಈ ಪ್ರದೇಶಗಳಲ್ಲಿ ಬೆಳೆಯುವ ಹೊಗೆಸೊಪ್ಪು ಒಳ್ಳೇ ವಾಸನೆಯುಳ್ಳದ್ದಾಗಿರುವದು. ಸಿಂಧು ನದಿಯ ಸಂಗಮಸ್ಥಾನದಲ್ಲಿಯೂ ಕೇರಾ ಡಿಸ್ಟ್ರಿಕ್ಟಿನಲ್ಲಿಯೂ ಬೆಳೆಯುವ ಹೊಗೇಸೊಪ್ಪಿನಲ್ಲಿ ಮುಸಲ್ಮಾನರು ಗುಡಾಕ್ ತಯಾರು ಮಾಡುತ್ತಾರೆ. ೧೮೭೮ನೇ ಇಸವಿಯಲ್ಲಿ ಮದರಾಸ್ ಪ್ರೆಸಿಡೆನ್ಸಿಯಿಂದ ೧೫೮,೩೩೦ ಪೌಂಡುಗಳ ತಿರುಚಿನಾಪಲ್ಲಿ ಹೊಗೆಸೊಪ್ಪು ಅನ್ಯದೇಶಗಳಿಗೆ ರಫ್ತಾಗಿರುತ್ತದಲ್ಲದೆ ೧೮೮೯ನೇ ಇಸವಿಯಲ್ಲಿ ೩,೮೧,೮೦೨ ಪೌಂಡುಗಳ ಮಟ್ಟಿಗೆ ತಂಬಾಕ್ ರಫ್ತಾಗಿರುತಿದೆ. ಯೂರೋಪ್ ದೇಶದಿಂದ ಪ್ರಯೋಗ್ಯಗತಕ್ಕ ಜನಗಳಲ್ಲಿ ಹೊಗೇಸೊಪ್ಪು ಮುಸ್ಸವಾಧಾನವಿಸಿ ಸ್ವಾಧೀನ [illegible] ಉತ್ತೇಜಕ ಸಾಮಗ್ರಿ [illegible] ತಿರುಚಿನಾ ಪಲ್ಲಿ ವಿಷಯದಲ್ಲಿ ಸಹ ಹೀಗೆ. ನಾವು ಹೆಚ್ಚಿಗೆ ಹೊಗೆಸೊಪ್ಪನ್ನು ಚೆನ್ನಾಗಿ ಸಿದ್ಧಮಾಡಿ [illegible] ಗಿದ್ದ ಪರಿಪಕ್ವವಾಗುವದೆಂತಲೂ ಹಾಳಿನ ಬಾಯಿಯಲ್ಲಿ ಸ್ವಲ್ಪ ಅದರ ಪುಡಿಯನ್ನು ಹಾಕಿದರೆ ಕೂಡಲೇ ಅದು ಮುದುರಿಕೊಂಡು ಪ್ರಾಣವು ಬಿಡುವದೆಂತಲೂ ತಿಳಿಯಬರುತಿದೆ. ಇಷ್ಟರ ಹಾನಿಯುಳ್ಳ ಸದರೀ ಮತ್ತೆತೆಯು ವಿಷಯುಕ್ತವಾದುದರಿಂದ ಅದನ್ನು ಉಪಯೋಗಿಸುವದು ಕೆಟ್ಟದೆಂದು ಈಚೆಗೆ ಅನೇಕ ಇಂಗ್ಲಿಷ್ ಡಾಕ್ಟರ್‌ಗಳು ಅಭಿಪ್ರಾಯ ಪಡುತ್ತಾರೆ, ಎಂಬದು.

ಈ ದೇಶದಲ್ಲಿ ಹಿಂದೂ ಸುಲ್ತಾನರ ಆಳ್ವಿಕೆಗೆ ಸೊಪ್ಪು ಅದು ಎಷ್ಟೆರಮಟ್ಟಿಗೆ ಉತ್ಪತ್ತಿಯಾಗಿ ಅದು ಯಾವರೀತಿಯಲ್ಲಿ ಜನರು ಬಳಸುತಿದ್ದರೋ ಅದನ್ನು ನಿಷ್ಕೃಷ್ಟವಾಗಿ ತಿಳಿಯಲಿಕ್ಕೆ ಸಾಧ್ಯವಲ್ಲದಿದ್ದರೂ ಬಹಳವಾಗಿ ಸಿಗುವಯಾಗುತಲಿತ್ತೆಂತಲೂ ಅದು ಯೆಲ್ಲರೂ ಉಪಯೋಗಿಸುತಲಿದ್ದರೆಂತಲೂ ಟೀಪೂ ಸುಲ್ತಾನರ

ಹುಕುಂನಾಮೆಯಿಂದ ತಿಳಿಯಬರುತಿದೆ. ಈಗ ಈ ದೇಶದಲ್ಲಿ ೨೦,೬೫೦ ಎಕರೆಗಳ ಜಮೀನ್ ಸಾಗುವಳಿಯಲ್ಲಿರುತಿದೆ. ಇದರ ಪೈಕಿ ಹಾಸನ ಡಿಸ್ಟ್ರಿಕ್ಟಿನಲ್ಲಿ ೭,೯೫೩ ಎಕ್ರೆಗಳು ಸಾಗುವಳಿಯಲ್ಲಿರುತಿದೆ. ಕಡೂರು ಡಿ|| ನಲ್ಲಿ ೭,೦೦೦ ಎಕ್ರೆಗಳು ಸಾಗುವಳಿಯಾಗುತ್ತ. ಇದರಿಂದ ಮಲನಾಡಿನಲ್ಲಿ ಹೆಚ್ಚು ಸಾಗುವಳಿಯೆಂದು ಗೊತ್ತಾಗುವದಲ್ಲದೆ ಒಟ್ಟು ೫,೦೬೭,೩೬೪ ಎಕ್ರೆಯ ಹವಾಂ ಜನಿಸಿಯ ಸಾಗುವಳಿಗೆ ಇದು ವಾಡಿಕೆ ಯಾಗಿರುವದರಿಂದ ಹೆಚ್ಚು ಸಾಗುವಳಿಯಾಗುತಿದೆಂದು ಹೇಳಬೇಕು. ಚುಟ್ಟ ಹಿಡಿಯುವದೇ ಆಗಲಿ ಅಡಿಕೆ ಯೆಲೆಯೊಡನೆ ಸೇರಿಸಿ ಅಗೆಯುವದಾಗಲಿ, ಅನಾರೋಗ್ಯಕಾರಿಯೆಂತಲೂ, ಪರದಲ್ಲಿ ಪಾಪ ನಿಮಿತ್ತವೆಂತಲೂ ತಿಳಿಸಿ ಅದರ ಆಮದು ರಫ್ತು ಮೊದಲಾದವನ್ನೆಲ್ಲ ಸುಲ್ತಾನರು ಬಲವಾಗಿ ನಿಷೇಧಿಸಿರುತ್ತಾರೆ. ಆದಾಗ್ಯೂ ಈ ದೇಶವು ಬೆಳೆ ಪ್ರಾಂತವಾದುದರಿಂದ ಇಲ್ಲಿ ನಸ್ಯ ಸೇದುವದೂ ಯಲೇ ಅಗಿಯುವದು ಸಹ ಈಗಲೂ ಅಧಿಕವಾಗಿರುತಿದೆ. ನಸ್ಯಕ್ಕೆ ಚುಟ್ಟದ ಪುರದ ತಂಬಾಕು ಬಹಳ ಶ್ರೇಷ್ಠವಾಗಿರುವದು. ಸಾಬಕ್ ಮ.ಹ.ರಾ.ರಾ. ಸರ್ಕಾರದವರು ಪುರ್ಣ ತಂಬಾಕು ಅಂದರೆ ನೀಳವೆಲೆ ಹೊಗೇಸೊಪ್ಪನ್ನು ಅನಾವಿಯಿಲ್ಲದಿಸಿ ಕವಾಯಿಬೀ ಮಾಡಿಸುತಲಿದ್ದರು. ಈಗಲೂ ಬೆಂಗಳೂರು ಮೈಸೂರು ಪಟ್ಟಣಗಳಲ್ಲಿ ಇದರಮೇಲೆ ಆಕ್ಟ್ರಾಯಿ ಎಂಬ ಪಟ್ಟಿ ತೀರ್ವೆಯು ವಸೂಲ್ಮಾಡಲ್ಪಡುತಿದೆ. ಈಗ ವಿಸ್ತಾರ ಸ್ಟೋರ್ ಹುಡುಗರೂ ವಯಃಪರಿಪಾಕ, ನಾಚಿಕೆ ಬಿಟ್ಟು, ಗೌರವಗಳನ್ನು ತೊರೆದು ಹಾಳಾಗಿ ಬೀಡಾಬಟ್ಟೆಗೆ ಹೊಗೇಸೊಪ್ಪನ್ನು ನಾನಾರೀತಿಯಾಗಿ ಉಪಯೋಗಿಸುತಲಿರುವದರಿಂದ, ಉತ್ಪತ್ತಿ, ಪ್ರಚಾರ, ಉಪಯೋಗ ಇವುಗಳ ವಿಷಯದಲ್ಲಿ ಇತರ ಸಂದರ್ಭಗಳಿಗಿಂತಲೂ ಇತರ ದೇಶಗಳಿಗಿಂತಲೂ ಈ ಮೈಸೂರು ದೇಶವು ಪ್ರಸಿದ್ಧಿಯನ್ನೈದಿದ್ದಾಗಿರುತಿದೆ.

Occasional Notes
ನೈಮಿತ್ತಿಕ ವಿಷಯನ್ಯಾಸ.

Floods at Cawnpore.—ಕಾನ್‌ಪುರದ ಬಳಿ ಗಂಗಾನದಿಯ ಪ್ರಬಲ ಪ್ರವಾಹದ ದೆಸೆಯಿಂದ, ಕಾನ್‌ಪುರಕ್ಕೂ ಲಕ್ನೋ ಪಟ್ಟಣಕ್ಕೂ ಮಧ್ಯೆ ರೈಲ್‌ರಸ್ತೆಯು ಅಡಿಮೇಲಾಗಿ ಕೊಚ್ಚಲ್ಪಟ್ಟು ಪ್ರಯಾಣಸ್ಥರಗಾಡಿಗಳ ಸಂಚಾರ ನಿಂತಿರುತಿದ್ದ, ದವಸ ಕಲ್ಲು ಬಸ್ತುಗಳ ಮೂಟೆಗಳೆಲ್ಲವು ಬಂದುಕವೆಯಿಂದ ಮತ್ತೊಂದು ಕಡೆ ಸಾಗಿಸಲ್ಪಡುತಲಿವೆಯೆಂದು ಈಚೆಗೆ ತಿಳಿಯಬರುತಿದೆ.

Fetters of criminals.—ಜೈಲುಗಳ ಸಾಬಕ್ ಇನ್ಸ್‌ಪೆಕ್ಟರ್ ಜನರಲ್‌ರವರಾದ ಕರ್ನಲ್ ಸಿ. ಪೋರ್ಟ್ರಿಯಸ್‌ರವರು ಮಾಡಿದ ಶಿಫಾರಸ್ಸನ್ನನುಸರಿಸಿ ಜೈಲಿನಲ್ಲಿ ಅಪರಾಧಿಗಳಿಗೆ ಬೇಡಿ ಹಾಕುವದಾದಿಕೆ ತಪ್ಪಿಸಲ್ಪಟ್ಟವು. ಪರಂತು ಕೆಲವು ಸಂದರ್ಭಗಳಲ್ಲಿ ಅದಕ್ಕೆ ಬದಲು ಕಬ್ಬಿಣದ ದೇಹಬ್ಬಗಳಂ ಪ್ರದಗಳು ಧರಿಸಬೇಕಾಗಿರುವದೆಂದು ಮದರಾಸ್ ಪತ್ರಿಕೆಯೊಂದರಮೂಲಕ ತಿಳಿಯಲಾದೆವು.

Maharaja Dhuleepsingh.—ಮಹಾರಾಜಾ ದುಲೀಪ್‌ಸಿಂಗರವರು ಈಗ ಪಾರ್ಶ್ವವಾಯುರೋಗ ಪೀಡಿತರಾಗಿ ಪೇರಿಸ್ ಪಟ್ಟಣದಲ್ಲಿ ಒಂದು ಆಸ್ಪತ್ರೆಯಲ್ಲಿರುತಲಿರುವರೆಂದೂ. ಇವರು ತಾವು ಮಾಡಿದ ಅಪರಾಧವನ್ನು ಕ್ಷಮಿಸಬೇಕೆಂದು ಮಹಾರಾಜ್ಞೀಯವರಿಗೆ ಒಂದು ವಿಜ್ಞಾಪನಪತ್ರಿಕೆಯನ್ನು ಬರೆಸಿದರೆಂದು ಹೇಳಿಕೊಳ್ಳುತಲಿದಾರೆ. ಅವರ ಮಕ್ಕಳು ಸ್ವಲ್ಪ ಗುಣ ಕುದುರುವದಕ್ಕೋಸ್ಕರ ದೇಹ ಬದಲಾವಣೆಯನ್ನು ಇಂಗ್ಲಾಂಡಿಗೆ ಕರೆದುಕೊಂಡುಹೋಗಬೇಕೆಂಬ ಇಷ್ಟವುಳ್ಳವರಾಗಿದಾರೆಂದು ಅಲ್ಲಿನ ಪತ್ರಿಕೆಗಳಮೂಲಕ ತಿಳಿಯುಬರುತಿದೆ.

Cow killing.—ಈಚೆಗೆ ಪರ್ಬಂಗಾ ಸಂಸ್ಥಾನದೊಳು ಬಕ್ರೀದ್ ಹಬ್ಬದ ಕಾಲದಲ್ಲಿ ಮುಸಲ್ಮಾನರು ಒಂದು ಹಸುವನ್ನು ವಧಿಸುವ ಪ್ರಯತ್ನ ನಡೆಸುತಲಿದ್ದ ಅಂಶ ಅಲ್ಲಿನ ಹಿಂದೂಜನರಿಗೆ ತಿಳಿಯಬಂದು ಅವರೆಲ್ಲ ಗುಂಪುಗೂಡಿ ದೊಣ್ಣೆಗಳಂ ಹಿಡಿದುಕೊಂಡು ಹೋಗಿ ಜುಲುಮಿನಿಂದ ಸದರೀ ಆಕಳನ್ನು ಬಿಡಿಸಿಕೊಂಡು ಬಂದರಲ್ಲದೆ ಇಂತಾ ದುಷ್ಕೃತ್ಯಗಳಂ ನಡೆಸುವ ಮುಸಲ್ಮಾನರಿಗೆ ಪೂರಾ ಶಿಕ್ಷೆ ಮಾಡಬೇಕೆಂದು ಯೋಚಿಸುತಲಿರುವಲ್ಲಿ ಮ್ಯಾಜಿಸ್ಟ್ರೇಟರು ಪೋಲೀಸಿನವರೊಡನೆ ಅಲ್ಲಿಗೆಬಂದು ಗದ್ದಲವನ್ನಡಗಿಸಿದರೆಂದು ಆಂಗ್ಲಭಾಷಾ ಪತ್ರಿಕೆಯೊಂದು ತಿಳಿಸುತಿದೆ.

Bridging the Godavery.—ಪಂಚವಟಿಯೆಂಬದನ್ನು, ನಾಸಿಕದೊಡನೆ ಸೇರಿಸುವದಕ್ಕಾಗಿ ಗೋದಾವರೀನದಿಗೆ ಸೇತುವೆ ಕಟ್ಟಿಸಬೇಕೆಂಬ ಉದ್ದೇಶದೊಡನೆ ಈ ತಿಂಗಳ ೯ನೇ ತಾರೀಖ್ (ರಾತ್ರಿ) ನಾಸಿಕದಲ್ಲಿ ಒಂದು ಸಭೆಸೇರಿತು. ಆಕಾಲದಲ್ಲಿ ಅಲ್ಲಿನ ಮ್ಯೂನಿಸಿಪಾಲಿಟಿಯವರು ೫೦,೦೦೦ ರೂಪಾಯಿಗಳು ಕೊಡುವದಾಗಿ ಒಪ್ಪಿಕೊಂಡರು. ಈ ಕೆಲಸ ಪೂರ್ತಿಯಾಗುವದಕ್ಕೆ ಬೇಕಾದ ಉಳಿದ ೪೦,೦೦೦ ರೂಪಾಯಿಗಳಂ ನೇಟಿವ್ ಅರಸರುಗಳು ಮತ್ತು ಪ್ರಮುಖರ ಸಹಾಯದಮೂಲಕ ಕೇಳಿದ ಮಾಡಬೇಕೆಂದು ಅಲ್ಲಿನ ಡೆಪ್ಯುಟಿ ಕಲೆಕ್ಟರರು ಪ್ರಯತ್ನ ಪಡುತಲಿದಾರೆ.

Village Munsiffs.—ಗ್ರಾಮದ ಮುನಸಫಗಳ ವೊಕದ್ದಮೆ ವಿಷಯದಲ್ಲಿ ಮದರಾಸ್ ಗವರ್ನಮೆಂಟಿನವರು ಇದರಡಿ ಬರುವ ನಿಬಂಧನೆಯು ಮಾಡಿರುತ್ತಾರೆ—ಸರ್ ೧೮೮೯ನೇ ಇಸಿವಿಯ ಮದರಾಸ್ ಆಕ್ಟು (ಗ್ರಾಮಕೋರ್ಟು ಆಕ್ಟು) ೨ನೇ ಸೆಕ್ಷನ್ ಅನುಸರಿಸಿ, ಕಲೆಕ್ಟರಗಳು, ಗ್ರಾಮಕೋರ್ಟಿನ ಅಧಿಕಾರ ಸರಹದ್ದಿಗೆ ಒಳಪಟ್ಟಿರುವ ಯಾವದಾದರೊಂದು ಗ್ರಾಮದಲ್ಲಿ ರೆವಿನ್ಯೂ ಕಂದಾಯವಂ ವಸೂಲ್ಮಾಡತಕ್ಕಬಗ್ಗೆ ನಿಯಮಿಸಲ್ಪಟ್ಟಿರುವವರಲ್ಲಿ ಯಾರನ್ನಾದರೂ ಬೇಕಾದರೆ ಅಂಥವರನ್ನು ಮೊಕದ್ದಮೆಗೆ ಬೇಕು. ಮತ್ತು ಗ್ರಾಮ ಮುನಸಫರ ಕೆಲಸಗಳಂ ನಡೆಸುವ ಪರಾಗತವಾದ ಹಕ್ಕಾಗಿರುವ ಸಂದರ್ಭಗಳಲ್ಲಿ ಅಂತಾ ಹಕ್ಕು ಸಂಬಂಧಿಸಿರುವವರಿಗೇನೆ ಕೊಡತಕ್ಕದ್ದು, ಎಂಬದು.

Coinage in Native States.—ಒಬ್ಬಾನೊಂದು ಪತ್ರಿಕೆಯ ಬಾತಿವಿಹಾರನೊಬ್ಬನು ನೇಟಿವ್ ಸಂಸ್ಥಾನಗಳಲ್ಲಿ ಛಾಪಿಸಲ್ಪಡುವ ಚಲಾವಣೆ ನಾಣ್ಯಗಳ ವಿಷಯದಲ್ಲಿ ತಿಳಿಸುವ ಅಭಿಪ್ರಾಯವೇನೆಂದರೆ, ನೇಟಿವ್ ಸಂಸ್ಥಾನಾಧಿಪತಿಗಳು ತಮ್ಮ ಸ್ವಂತ ನಾಣ್ಯಗಳಂ ತಮ್ಮದೇಶದೊಳು ಚಲಾವಣೆಯಲ್ಲಿಟ್ಟುಕೊಂಡಿರಬೇಕೆಂದು ಅಪೇಕ್ಷಿಸುವಪಕ್ಷಕ್ಕೆ ಸದರೀ ನಾಣ್ಯಗಳಲ್ಲಿ ತಮ್ಮ ಪ್ರತಿಮೆಯನ್ನಿಟ್ಟುಕೊಂಡು ಗುಣದಲ್ಲೂ ತೂಕದಲ್ಲೂ ಇಂಗ್ಲೀಷ ಡೇಶದಲ್ಲಿನ ಬ್ರಿಟಿಷ್ ನಾಣ್ಯಗಳಿಗೆ ಎಲ್ಲಭಾಗದಲ್ಲೂ ಸಮನಾಗಿ ಮಾಡಬೇಕೆಂದು ನೇಟಿವ್ ಸಂಸ್ಥಾನಾಧಿಪತಿಗಳಿಗೆ ಗವರ್ನಮೆಂಟಿನವರು ತಿಳಿಸಬೇಕೆಂಬದು. ನೇಟಿವ್ ಸಂಸ್ಥಾನಗಳ ನಾಣ್ಯಗಳು ಹರ್ ಮ್ಯಾಜಿಸ್ಟ್ರೇಸ್ ದೇಶದಲ್ಲಿ ಚಲಾವಣೆಯಾಗುವಪಕ್ಷಕ್ಕೆ ಸದರೀ ಬಾತಿವಿಹಾರನು ತಿಳಿಸುವ ಅಭಿಪ್ರಾಯವು ಶ್ಲಾಘ್ಯವಾದದ್ದು.

Artificial coffee.—ಕೃತ್ರಿಮ ಪದಾರ್ಥಗಳೂ, ಕಾಫಿಗಳೂ ತಯಾರ್ಮಾಡಲ್ಪಟ್ಟು ವ್ಯಾಪಾರಕ್ಕೆ ಹೊರಗೆ ಬಿಡಲ್ಪಟ್ಟಿರುವಂತೆಯೇ ನಾನಾವಿಧ ಬೀಜಧಾನ್ಯಗಳಂ ಹುರಿದು ಪುಡಿಮಾಡಿ ಅದರಿಂದ ಕಾಫೀಬೀಜಗಳು ಸಹ ತಯಾರ್ಮಾಡಲ್ಪಡುವದಕ್ಕೆ ಉಪಕ್ರಮವಾಗಿ ಅದಕ್ಕೆ ಆವಶ್ಯಕಗಳಾದ ಯಂತ್ರೋಪಕರಣಗಳು ಸಿದ್ಧವಾಗಿ ಮಾರಲ್ಪಡುತಿವೆ. ಸದರೀ ಯಂತ್ರದ ಕ್ರಯ ೫೦ ಪೌಂಡುಗಳು. ಈ ಯಂತ್ರವು ದಿನ ಒಂದಕ್ಕೆ ಅರ್ಧಟನ್ ಬೀಜವನ್ನು ಇಳಿಸುವದಕ್ಕೆ ಶಕ್ತವಾಗಿದೆ. ಇದರ ಲಾಭದಂತೆ ಒಂದು ಪೌಂಡ್ ಸಾಚಾ ಕಾಫೀಬೀಜದ ಕ್ರಯವು ಮೇಲಿತಿಳಿಸಿದ ಕೃತ್ರಿಮ ಬೀಜದ ಕ್ರಯಕ್ಕಿಂತಲೂ ಐದರಷ್ಟು ಅಧಿಕವಾಗಿರುತಿದೆ. ಈ ಬನಾವಟ ಬೀಜದಲ್ಲಿ ಸಾಚಾ ಬೀಜವನ್ನು ರಕ್ತಸ್ಯ್ಟು ಬೆರೆಸಿದರೆ ಸಾಧಾರಣವಾಗಿ ಅದನ್ನು ಕಂಡುಹಿಡಿಯುವದು ಪ್ರಕೇವಲ ಕಷ್ಟಸಾಧ್ಯವಾದ ಕಾರ್ಯವಾಗಿರುವುದು.

ನೋಟೀಸ್.

ಈಚೆಗೆ ನಮ್ಮ ಚಂದಾದಾರರಿಗೆಲ್ಲ ನಾವು ಬರೆದ ಪೋಸ್ಟ್ ಕಾರ್ಡುಗಳಿಗೆ ಅನೇಕರು ಬಿಗೇ ಕೊಟ್ಟು ತಮ್ಮ ಬಾಕೀಗಳಂ ಕಳುಹಿಸಿದಬಗ್ಗೆ ಅವರ ವಿಷಯದಲ್ಲಿ ನಾವು ಬಹಳ ಕೃತಜ್ಞರಾಗಿರುತ್ತೇವೆ. ಅವರಂತೆಯೇ ಇತರ ಬಾಕೀದಾರರು ಸಹ ಕೂಡಲೇ ಬಾಕೀಗಳಂ ಕಳುಹಿಸಿ ನಮಗೆ ಸಾಧ್ಯವಾದ ಸಹಾಯ ಮತ್ತು ಪ್ರೋತ್ಸಾಹವನ್ನುಂಟುಮಾಡಬೇಕೆಂದು ಕೋರುತ್ತೇವೆ. ಉಪೇಕ್ಷಿಸಿದವರ ವಿಷಯದಲ್ಲಿ ನಮ್ಮ ಕರ್ತವ್ಯವಂ ಹಿಂದಿನ ಪತ್ರಿಕೆಯ ಮೂಲಕ ತಿಳಿಸಿದ್ದೇವೆ.

ಬೆಂಗಳೂರು,
ತಾ|| ೧೮ನೇ ಆಗಸ್ಟು
೧೮೯೦.

ಪ್ರೊಪ್ರೈಟರ್,
ಕರ್ಣಾಟಕಪ್ರಕಾಶಿಕಾ.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕುಜಾತಿವೃತ್ತಾಂತಗಳು.

A circular.—ಮೈಸೂರು ಸಂಸ್ಥಾನದ ಕಂಟ್ರೋಲರವರು ಗೆಜೆಟೆಡ್ ಆಫೀಸರ್‌ಗಳೆಲ್ಲ ಅವರವರ ಸರ್ವಿಸಗಳನ್ನೆಲ್ಲ ಕ್ರಮವಾಗಿ ಬರೆದು ಕಳುಹಿಸಬೇಕೆಂಬದಾಗಿ ಒಟ್ಟು ಸರ್ಕ್ಯುಲರ್ ಕೊಟ್ಟಿರುತ್ತಾರೆಂತಲೂ ಅವರ ಸರ್ವಿಸಗಳ ಸಂಗ್ರಹೀತಗ್ರಂಥವು ಶೀಘ್ರದಲ್ಲೇ ಮುದ್ರಿಸಲ್ಪಡುವದೆಂತಲೂ ತಿಳಿಯಬರುತಿದೆ.

Accident at the Bangalore City Station.—ಮಾಜೀ ಮಜಕೂರಿ ೧೩ನೇ ತಾರೀಖ್ ಶುಕ್ರವಾರದದಿನ ಮಧ್ಯಾನ್ಹ ೧೨ ಘಂಟೆಗೆ ಮೈಸೂರಿಂದ ಬಂದ ರೈಲುಗಾಡಿಗೂ ಅದಕ್ಕೆ ಪೂರ್ವದಲ್ಲಿ ಪುನಃಬಂದಬಂದು ಸ್ಟೇಷನ್ ಪ್ಲ್ಯಾಟ್‌ಫಾರಂನಲ್ಲಿ ನಿಂತಿದ್ದಗಾಡಿಗೂ ದಹುಂಬಿಸಿಮಾಡಿ ಅಕಸ್ಮಾತ್ತಾಗಿ ಧಕ್ಕಾ ಆಯಿತೆಂತಲೂ. ಅಸಿಸ್ಟೆಂಟ್ ಟ್ರಾಫಿಕ್ ಮ್ಯಾನೇಜರ್ ವೆ|| ಕಾರ್ಟರ್ ಯವರಿಗೆ ಸ್ವಲ್ಪ ಜಖಮಾಯಿತೆಯೂ ಅವರೀಗ ಡಾಕ್ಟರ್ ಮೆಗ್ಗ್ರಾರ್ ಯವರ ಚಿಕಿತ್ಸೆಯಲ್ಲಿರುತಲಿದಾರೆಂತಲೂ ಇವರು ವಿನಾ ಮತ್ತ್ಯಾರಿಗೇನೂ ತೊಂದರೆ ಯುಂಟಾಗಿಲ್ಲವೆಂತಲೂ ತಿಳಿಯಲಾದೆವು.

Distribution of Vaccination Manual.—ಮೈಸೂರ್ ಗವರ್ನಮೆಂಟಿನವರು ತಮ್ಮ ಪ್ರಭುತ್ವ ಕ್ರಮದೊಳು ನ್ಯೂನತೆಯೆಂದು ಭಾವಿಸಿ ಜಾರಿಯಲ್ಲಿ ತರಬೇಕೆಂದೆಣಿಸಿರುವ ಸ್ಫೋಟಕ ವಿಷಯಕವಾದ ಮಸವಿದಾ ನಿಬಂಧನೆಗಳು ರೆಜಿಸ್ಟರ್ ಇಂಗ್ಲಿಷಿಯಿಂದ ಭಾಷಾಂತರ ಮಾಡಲ್ಪಟ್ಟು ಗತವಾರದ ಗೆಜೆಟಿನಲ್ಲಿ ಪ್ರಕಟಿಸಲ್ಪಟ್ಟಿರುತಿದೆ. ಹಿಂದೆನಾವು ತಿಳಿಸಿದಂತೆ ಸದರೀ ರೆಗ್ಯುಲೇಷನನ್ನು ಪರ್ಯಾಲೋಚಿಸಿ ಪ್ರಜೆಗಳು ತಮ್ಮ ಅಭಿಪ್ರಾಯವನ್ನೂ ಅದರ ಆವಶ್ಯಕತಾನಾವಶ್ಯಕತೆಯನ್ನು ತಿಳಿಸಲಿಕ್ಕೆ ಅನುಕೂಲಿಸುವಂತೆ ಅದಂ ಮುಂದಿನವಾರದಲ್ಲಿ ಪ್ರಕಟಿಸುವೆವು. ಏತನ್ಮಧ್ಯೆ ಗವರ್ನಮೆಂಟಿನವರು ಡಾಕ್ಟರ್ ಮೆಗ್ಗ್ರಾರ್ ಯವರ ಶಿಫಾರಸ್ಸಿನಮೇರೆ ಡಾಕ್ಟರ್ ಬೆಲ್ಲ್ಯೂ ಎಂಬವರು ರಚಿಸಿದ ಸ್ಫೋಟಕಸಂಗ್ರಹವೆಂಬ ಗ್ರಂಥದ ಪ್ರತಿಗಳನ್ನು ಖರೀದಿಗೆತಗದು ಪ್ರಚಾರಪಡಿಸುತಲಿದಾರೆಂದು ಕೇಳುತ್ತೇವೆ. ಅದನ್ನೇ ಒಬ್ಬ ನೇಟಿವ್ ಬರೆದರೆ ಅದು ನೋಡತಕ್ಕವರು ದೊರೆಯುವದು ದುರ್ಲಭವು. ಅಕುಟಿಲ ಹೃದಯದಿಂ ಗುಣದೋಷ ವಿಮರ್ಶೆಮಾಡಿ ಸಿಫಾರಸ್ ಮಾಡತಕ್ಕವರು ಅದಕ್ಕಿಂತ ದುರ್ಲಭವು. ಕೂಡಲೇ ಅದಂ ಗೌರವಿಸಿ, ಉದಾರಹೃದಯದೊಡನೆ ಪ್ರೋತ್ಸಾಹವನ್ನುಂಟುಮಾಡತಕ್ಕವರು ಮತ್ತೂ ದುರ್ಲಭವು.

An important question affecting Municipalities.—ಮ್ಯೂನಿಸಿಪಲ್ ಬೋರ್ಡಿನ ಅಧಿಕಾರಿಗಳು ಮನೆಗಳ ಕಂದಾಯ ಬಾಕೀ ವಸೂಲೀ ವಿಷಯದಲ್ಲಿ ಇದುವರಿವಿಗೆ ಅನುಭವಿಸುತಿದ್ದ ಒಂದು ಸುಲಭೋಪಾಯವು ಈಗ ಭಾಗವಷ್ಟೆಯಿತೆಂದು ಎಣಿಸಬೇಕಾಗಿದೆ ಹ್ಯಾಗೆಂದರೆ,

ಈಚೆಗೆ ಮದರಾಸಿನಲ್ಲಿ ಮ್ಯೂನಿಸಿಪಲ್ ತೆರಿಗೆಯಬಗ್ಗೆ ಒಂದು ಮನೆಯ ಕದವನ್ನು ಸದರೀ ಇಲಾಖೆಯವರು ಕಿತ್ತುಕೊಂಡು ಹೋಗಲು ಈ ಮೊಕದ್ದಮೆಯು ಕಡೆಗೆ ಅಲ್ಲಿನ ಹೈಕೋರ್ಟಿನವರಿವಿಗೆ ಹೋಗಿ ಪ್ರಬಲ ಚರ್ಚೆ ನಡೆದು, ಅಲ್ಲಿ, ಮನೆಗಳ ಕದಗಳು ಚರವೆಂದಗಿಯಲ್ಲವಾಗಿ ಮ್ಯೂನಿಸಿಪಾಲಿಟಿಯವರು ಕಂದಾಯದ ಬಾಕೀಬಗ್ಯೆ ಅವುಗಳಂ ಕಿತ್ತುಕೊಂಡು ಹೋಗುವಣವು ಅಕ್ರಮವೆಂದು ನಿರ್ಣಯವಾಗಿರುತಿದೆ. ಈ ತೀರ್ಮಾನವನ್ನು ಇಲ್ಲಿನ ಪಟ್ಟೇಕಾರ್ ಸಾಹುಜಿಗಳ ಪುಣ್ಯ ವಿಶೇಷವೆಂದೆಣಿಸಬೇಕಾಗಿರುತಿದೆ.

Census operations.—ಬರುವ ಫೆಬ್ರವರಿ ತಿಂಗಳಲ್ಲಿ ನಡೆಯುವ ಖಾನೇಷುಮಾರಿ ಕೆಲಸಕ್ಕೆ ಬೇಕಾದ ಶಿಬ್ಬಂದಿಗಳನ್ನೆಲ್ಲ ಹೊಸದಾಗಿ ಮೊಕರರ್ಮಾಡುವದರಿಂದ ಗವರ್ನಮೆಂಟಿಗೆ ದುಬಾರಾ ಖರ್ಚಾಗುವದೆಂತಲೂ, ಅದಕ್ಕೆ ಬದಲಾಗಿ ಆಯಾ ಸರ್ಕಾರ್ ಖಿಲಾಖೆಗಳಲ್ಲಿರತಕ್ಕ ನೌಕರರನ್ನೆಲ್ಲ ಅವರ ಕೆಲಸಗಳಿಗೆ ಬಾಧಕವಿಲ್ಲದಂತೆ ಇದಕ್ಕೂ ಕುಮ್ಮಕ್ ಮಾಡುವಂತೆ ನಿಯಮಿಸಿ ಇಲಾಖಾಧಿಕಾರಿಗಳಿಗೆ ಹುಕುಂ ಮಾಡಿ ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್‌ಗಳ ತಾಬೆಯಲ್ಲಿಡಬೇಕೆಂತಲೂ, ಸೆನ್ಸಸ್ ಸೂಪರಿಂಟೆಂಡೆಂಟರವರು ಗವರ್ನಮೆಂಟಿನವರನ್ನು ಕೇಳಿರುವದಾಗಿ ತಿಳಿಯಬರುತಿದೆ. ಸದರೀ ಏರ್ಪಾಡು ಬಹಳ ಶ್ಲಾಘ್ಯವೆಂತಲೇ ಭಾವಿಸುವೆವು. ಹೊಸದಾಗಿ ಒಬ್ಬ ಇಸಮನ್ನು ಹಂಗಾಮಿಯಾಗಿ ಮೊಕರರ್ಮಾಡಿ ಕೆಲಸ ಮುಗಿದ ಬಳಿಕ ಮನೆಗೆ ಹೋಗೆಂದು ಸುಮ್ಮನೆ ಕಳುಹಿಸುವದರ ಮೂಲಕ ಆತನಿಗೊಂದು ಅನುತ್ಸಾಹವನ್ನೂ ಸಂಕಟವನ್ನೂ ಹುಟ್ಟುಮಾಡುವದಕ್ಕೆ ಬದಲು ಪ್ರತಿ ಇಲಾಖೆಯಿಂದಲೂ ಮುನಾಸಬ್ ಇಸಂಗಳನ್ನು ಗೊತ್ತುಮಾಡಿ ಅವರಿಗೆ ಮೆಹನತಾನಾ ಯಥೋಚಿತ ರುಸುಂ ಸೇರಿಸಿ ಕೊಟ್ಟರೆ ಕೆಲಸವು ಸುಲಭವಾಗಿ ಜಾಸ್ತೀ ಖರ್ಚಿಲ್ಲದೆ ಪೂರೈಸುವದಾದುದರಿಂದ ಇದು ಗವರ್ನಮೆಂಟಿನವರು ಯುಕ್ತವಾಗಿ ಆಲೋಚಿಸಿ ಜವಾಬ್ ಕೊಡುವರೆಂದು ನಂಬುತ್ತೇವೆ. ಇದಲ್ಲದೆ ಮುಂದೆ ನಡೆಯಬೇಕಾಗಿರುವ ಕೆಲಸಗಳ ಗಲಾಟೆಗಳನ್ನಾಲೋಚಿಸಿದರೆ ಈಗಿರುವ ಸೆನ್ಸಸ್ ಇಲಾಖಾ ಶಿಬ್ಬಂದಿ ಕುಮ್ಮಾಂಗ ಸಾಲದ್ದೆಂದು ಹೇಳಬಹುದಾಗಿರುತಿದೆ.

An appeal dismissed — ಈ ಸಂಸ್ಥಾನದ ದಿವಾನರವರೂ, ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಾದ ಮೆ|| ವಿ. ಪಿ. ಮಾಧವರಾಯರವರೂ ರಜಾಮೇಲೆ, ಪಶ್ಚಿಮಸಮುದ್ರ ತೀರದ ಬಳಿ ಕೋತಾರ್ಲು ಎಂಬ ಪ್ರದೇಶದಲ್ಲಿರುತಲಿರುವದು ಪ್ರಸಿದ್ಧ ವಿಷಯವಾಗಿರುತಿದೆಯಷ್ಟೆ. ಈಚೆಗೆ ಸ್ವಲ್ಪದಿನಗಳಹಿಂದೆ ಸದರೀ ಇಬ್ಬರುದೊಡ್ಡಮನುಷ್ಯರೂ ಅಲ್ಲಿ ಪರ್ವತಶಿಖರದಿಂದಬೀಳುವ ಪ್ರವಾಹದಲ್ಲಿ ಸ್ನಾನಾರ್ಥಹೋಗಿರುವಲ್ಲಿ ಅವರ ಸಂಗಡಹೋದ ಒಬ್ಬ ಬ್ರಾಹ್ಮಣನೂ, ಮೂವರುಜವಾನರೂ ಸದರೀ ನಿರ್ಝರದಲ್ಲಿ ಸ್ನಾನ ಮಾಡಲೆತ್ನಿಸುವಲ್ಲಿ ಅಲ್ಲಿದ್ದ ಪೊಲೀಸ್ ಜವಾನನೊಬ್ಬನು ಎರಡುತಿಂಗಳ ಕಾಲದವರಿವಿಗೆ ಪ್ರಾತಃಕಾಲದಲ್ಲಿ ಯೂರೋಪಿಯರ್ಗಳು ಮಾತ್ರವೇ ಸ್ನಾನ ಮಾಡತಕ್ಕದ್ದು ಹೊರತು ನೇಟಿವ್‌ಗಳಿಗೆ ಅವಕಾಶವಿಲ್ಲವೆಂದು ತಿಳಿಸಿದನು, ಆದಾಗ್ಯೂ ಸದರೀ ನಾಲ್ವರೂ ಇತರರೊಡನೆ ಸ್ನಾನಪ್ರಯತ್ನ ಮಾಡಿದರು. ಇವಕ್ಕೆ ಕೆಲವು ದಿನಗಳ ಹಿಂದೆ ಎರಡುತಿಂಗಳ ಕಾಲದವರಿವಿಗೆ ಬೆಳಗಿನ ಹೊತ್ತು ಯೂರೋಪಿಯರ್ಗಳು ಮಾತ್ರವೇ ಸ್ನಾನ ಮಾಡತಕ್ಕದ್ದೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಹುಕುಂ ಸಾದರ್ಮಾಡಿದ್ದರು. ಇವಕ್ಕೆ ವ್ಯತಿರಿಕ್ತವಾಗಿ ಸ್ನಾನ ಮಾಡಿದ ನಾಲ್ವರೂ ದಸ್ತಗಿರಿಯಿಂದ ಕಳವು ಪ್ರಯತ್ನ ಮಾಡಿದರೆಂದು ಆಪಾದಿಸಲ್ಪಟ್ಟು ತಿರುನಲ್ವೇಲಿ ಜಾಯಿಂಟ್ ಮ್ಯಾಜಿಸ್ಟ್ರೇಟರಿಂದ ದರ್ಯಾಫ್ತು ಮಾಡಲ್ಪಡುತಲಿದ್ದಾರೆ. ಹೀಗಿರುವಲ್ಲಿ ಈ ತಿಂಗಳ ೧೧ನೇ ತಾರೀಖಿನಲ್ಲಿ ಬ್ಯಾರಿಸ್ಟರ್ ಮೆ|| ವೆಡರ್ಬರ್ನ್ ಯವರು ಮದರಾಸ್ ಹೈಕೋರ್ಟನೊಳು ಅಪರಾಧಿಗಳ ತರಫ ಪ್ರಮಾಣಪತ್ರಿಕೆಯ ಪೂರ್ವಕ ಅರ್ಜಿಕೊಟ್ಟು, ತಮ್ಮ ಕಕ್ಷಿಗಾರರ ಮೇಲೆ ತರಲ್ಪಟ್ಟಿರುವ ಮೊಕದ್ದಮೆಯು ಅಲ್ಲಿವಿಚಾರಣೆಯಾದರೆ ತಮಗೆನಿಷ್ಪಕ್ಷಪಾತವಾದ ನ್ಯಾಯಸಿಕ್ಕುವದಿಲ್ಲವೆಂತಲೂ, ಈಗ ದರ್ಯಾಪ್ತು ಮಾಡುತಲಿರುವ ಮ್ಯಾಜಿಸ್ಟ್ರೇಟರು ಈಕಲಹಕ್ಕೆಸಂಬಂಧಪಟ್ಟವರಾಗಿರುವದರಿಂದ ಸದರೀ ಮೊಕದ್ದಮೆಯನ್ನು ಬೇರೆಯೊಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಕೋರ್ಟಿಗೆ ವರ್ಗ ಮಾಡಬೇಕೆಂತಲೂ, ಪ್ರಾರ್ಥಿಸಿದರು. ಈ ಅರ್ಜಿಯು ಕಾಲಾತೀತವಾಗಿ ಬಂದಿರುತಿದೆ. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಲಿ ಜಾಯಿಂಟ್ ಮ್ಯಾಜಿಸ್ಟ್ರೇಟರಾಗಲಿ ಪಕ್ಷಪಾತ ತೋರಿಸುವರೆಂಬ ಭಯ ತಮಗಿಲ್ಲವು. ಆದುದರಿಂದ ಅರ್ಜಿದಾರರ ಪ್ರಾರ್ಥನೆಯಂತೆ ಮೊಕದ್ದಮೆಯನ್ನು ವರ್ಗ ಮಾಡುವದಕ್ಕಾಗುವದಿಲ್ಲವೆಂದು ಅರ್ಜಿಯನ್ನು ಡಿಸ್ಮಿಸ್ ಮಾಡಿದರೆಂದು ಮದರಾಸ್ ಮೆಯಿಲ್ ಪತ್ರಿಕೆಯ ಮೂಲಕ ತಿಳಿಯಲಾದೆವು.

SUMMARY OF NEWS.
ವೃತ್ತಾಂತಸಂಗ್ರಹವು.

ರಷ್ಯಾ ದೇಶದಿಂದ ೧೦ ಲಕ್ಷ ಯಹೂದಿ ಜನರನ್ನು ಹೊರಗೆಹಾಕುವಬಗ್ಯೆ ಒಂದು ಹೊಸಕಾಯಿದೆಯು ತಯಾರ್ಮಾಡುತಲಿದ್ದಾರಂತೆ.

ಅಮೆರಿಕಾ ದೇಶದಿಂದ ಇಂಗ್ಲಾಂಡಿಗೆ ಬರುತಲಿದ್ದ ಒಂದು ಹಡಗಿಗೆ ಬೆಂಕಿ ಬಿದ್ದು ಸುಟ್ಟುಹೋಯಿತು. ಈ ಹಡಗಿನಲ್ಲಿ ನೂರಾರು ಪಶುಗಳು ಭಸ್ಮವಾದವು. ಅದರಲ್ಲಿ ಕುಳಿತಿದ್ದ ಜನಗಳು ತಪ್ಪಿಸಿಕೊಂಡರು. ಆದರೆ ಹಡಗಿನ ಎಜಮಾನನು ಮಾತ್ರ ಮೃತಪಟ್ಟನಂತೆ.

ದಮಾಸ್ಕಸ್ಸಿಗೂ ಬೇರೂಟಿಗೂ ಮಧ್ಯೆ ಒಂದು ಗುಹೆ ಇರುವದಾಗಿಯೂ ಅಲ್ಲಿ ವಸ್ತ್ರ ನವರತ್ನ ಖಚಿತವಾದ ಒಂದು ಮಂಚವು ಸಿಕ್ಕಿರುವದಾಗಿಯೂ ಇದು ಇಂಗ್ಲಂಡ್‌ದೇಶದ ರಾಣಿಯಾದ ಎಲೀನರ್ ಎಂಬವರದೆಂದು ಅಲ್ಲಿರುವ ಶಾಸನವು ತಿಳಿಯಪಡಿಸುವದಾಗಿಯೂ ಈ ಮಂಚವು ೧೨೭೦ನೇ ಇಸವಿಯಲ್ಲಿ ಈ ಗುಹೆಗೆ ತರಲ್ಪಟ್ಟಂತೆ ಆ ಶಾಸನವೇ ವ್ಯಕ್ತಪಡಿಸುವದಾಗಿಯೂ ಒಂದಾನೊಂದು ಇಂಗ್ಲಿಷ್‌ಪತ್ರಿಕೆಯು ತಿಳಿಸುತದೆ.

ಅಮೆರಿಕಾ ದೇಶದ ನ್ಯೂಯಾರ್ಕಿನಲ್ಲಿ, ಬಹುವಿವಾಹೇಚ್ಛುವೆಂದು ಪ್ರಸಿದ್ಧಳಾಗಿರುವ ಪುಣ್ಯವತಿಯೊಬ್ಬಳಿರುವಳು. ಈಕೆಯು ಪ್ರಕೃತದಲ್ಲಿ ವೆಸ್ಟರ್ ಎಂಬಾತನಿಗೆ ಪತ್ನಿಯಾಗಿರುವಳು. ಈಕೆಯ ವಯಸ್ಸು ೩೬ ಆದರೂ ೮ ವರ್ಷಕಾಲದಲ್ಲಿ ೯ ಸಾರಿ ಮದುವೆ ಮಾಡಿಕೊಂಡಿರುವಳು. ಈಕೆಯನ್ನು ಮೊದಲನೇಸಾರಿ ವರಿಸಿದ್ದವನೆ, ೪ ವರ್ಷಗಳ ನಂತರ ಅವಳನ್ನೇ ಮೋಹಿಸಿ ಪುನಃ ವರಿಸಿರುವನಂತೆ. ವರ್ಷ ೧ಕ್ಕೆ ಒಬ್ಬ ಪತಿಯೆ ?

ಅರೇಬ್ ದೇಶೀಯರ ಪದ್ಧತಿಯು ಅತಿ ವಿಚಿತ್ರವಾಗಿರುವದು ; ಮದುವೆಯನ್ನು ಮಾಡಿಕೊಳ್ಳಬೇಕೆಂದಿರುವವನು, ಮದುವೆಯಾದ ದಿವಸ ಮೊದಲುಮಾಡಿ, ತಿಂಗಳು ೧ಕ್ಕೆ ಇಷ್ಟೆಂದು ಕ್ಲುಪ್ತವಾದ ಮೊಬಲಗನ್ನು ಅತ್ತೆಯ ಮನೆಯವರಿಗೆ ಸಲ್ಲಿಸುತ್ತ ಬರಬೇಕು. ಆದರೆ ಯಾವಾಗ ತನ್ನ ಪತ್ನಿಯು ತನ್ನನ್ನು ಬಿಡುವಳೋ, ಆಗ ಅತ್ತೆಯ ಮನೆಯವರು ತಾವು ತೆಗದುಕೊಂಡಿದ್ದ ದ್ರವ್ಯವನ್ನೆಲ್ಲ ಅಳಿಯನಿಗೆ ವಾಪಸುಕೊಡಬೇಕಂತೆ.

ಕಳೆದ ವರ್ಷ ಬಂಗಾಳೆಯಲ್ಲಿ ೪೦ ಸಾವಿರ ಜನರ ವರಿವಿಗೂ ಮೃತರಾದರು. ಪ್ರತಿವರ್ಷದಲ್ಲಿಯೂ, ಈ ಪ್ರಾಂತದಲ್ಲೇ ಬಹು ಜನರು ಸಾಯುತಲಿರುವದಕ್ಕೆ, ಅಲ್ಲಿ ಸರ್ಪವೇ ಮೊದಲಾದ ವಿಷ ಜಂತುಗಳೂ, ಹುಲಿ ಕಿರುಬ ಮೊದಲಾದ ದುಷ್ಟ ಮೃಗಗಳೂ ಮಯವಾಗಿರುವದೇ ಮುಖ್ಯಕಾರಣವೆಂದು ತಿಳಿದುಬರುತದೆ. ಆದರೂ ೧೦ ಸಾವಿರ ಜನರು ಆತ್ಮಹತ್ಯವನ್ನು ಮಾಡಿಕೊಂಡರೆಂಬ ವರ್ತಮಾನವು, ಭೀತಿಯನ್ನು ಹುಟ್ಟಿಸುವದು. ಹೀಗೆ ಆತ್ಮಹತ್ಯವನ್ನು ಮಾಡಿಕೊಂಡವರಲ್ಲಿಯೂ ಸ್ತ್ರೀಯರ ಸಂಖ್ಯೆಯೇ ಅತ್ಯಧಿಕವಾಗಿರುವದು.

ರಷ್ಯಾ ಚಕ್ರವರ್ತಿಗಳಾದ ಜಾರ್‌ಯವರ ಸಹೋದರರೊಬ್ಬರು ಅಲ್ಲಿ ಸೈನ್ಯಾಧಿಪತಿಗಳಾಗಿರುವರಷ್ಟೆ. ಸೈನಿಕರಲ್ಲಿ ಈಚೆಗೆ ಬಹಳವಾಗಿ ಅಕ್ರಮಗಳು ನಡೆಯುತಿರುವದಾಗಿಯೂ, ಅನೇಕ ಪದಾರ್ಥಗಳು ಅನ್ಯಾಯವಾಗಿ ನಾಶವಾಗುತಲಿರುವದಾಗಿಯೂ ಈ ಸೈನಿಕರು ವಿಧಿಗೆ ವಿರೋಧವಾಗಿ ಬಹಳ ದೊಂಬಿಮಾಡುತಲಿರುವದಾಗಿಯೂ ಇವರು ತಮ್ಮ ಸಹೋದರರಾದ ಜಾರ್‌ಯವರಿಗೆ ತಿಳಿಸಿ ಇವುಗಳನ್ನೆಲ್ಲ ಕ್ರಮಪಡಿಸಬೇಕೆಂದು ಬಹಳ ಬಲಾತ್ಕರಿಸಿದ್ದರಿಂದ ಚಕ್ರವರ್ತಿಗಳು ಅತಿ ಕೋಪಗೊಂಡು ತಮ್ಮ ಸಹೋದರರನ್ನು ಡಿಸ್ಮಿಸ್ ಮಾಡಿದರಂತೆ. ಈಕಾರಣದಿಂದ ಅವರಿಬ್ಬರಿಗೂ ಮನಸ್ತಾಪವು ಬಹಳವಾಗಿರುವದಂತೆ.

ಅಮೆರಿಕಾ ದೇಶದಲ್ಲಿ ಒಂದು ಜಾತಿಯ ನರಭಕ್ಷಕ ಮರವಿರುವದೆಂದು ಇತ್ತಲಾಗಿ ಶೋಧಹತ್ತಿದೆ. ಒಬ್ಬ ಸರದಾರನು ಒಂದು ದಿನ ತನ್ನ ನಾಯಿಯೊಂದಿಗೆ ಕಾಡಿನಲ್ಲಿ ಬೇಟೆಗೆ ಹೋಗುವಾಗ್ಯೆ ತನ್ನ ಹಿಂದೆ ನಾಯಿ ಕೂಗುತ ನರಳುತಲಿರುವದನ್ನು ಕೇಳಿ ಅದನ್ನು ಹುಡುಕಲು ಒಂದು ವೃಕ್ಷದ ಬೇರು ಕೊಂಬೆಗಳ ಜಾಲದಲ್ಲಿ ಸಿಲುಕಿಬಿದ್ದಿತ್ತು. ಅದನ್ನು ಬಿಡಿಸುವದಕ್ಕಾಗಿ ಯಜಮಾನನು ಪ್ರಯತ್ನಿಸಲು ಅವನ ಮೈ ಕೈ ಸೀಳಿಹೋಗಿ ರಕ್ತ ಸುರಿಯಿತು. ಅಷ್ಟರಲ್ಲಿ ಆ ಬಡನಾಯಿಯ ಶರೀರದಲ್ಲಿದ್ದ ರಕ್ತವನ್ನೆಲ್ಲ ಆವೃಕ್ಷವು ಹೀರಿಕೊಂಡು ಪ್ರಾಣನಷ್ಟಮಾಡಿ ಅದರ ಅಸ್ತಿ ಚರ್ಮಗಳನ್ನು ಮಾತ್ರ ಬಿಸುಟಿತೆಂದು ತಿಳಿಯಬರುತಿದೆ.

ಈ ಲೋಕದಲ್ಲಿ ಕೆಲವರು ೧೨೦-೧೩೦ ವರ್ಷಗಳ ವರಿವಿಗೂ ಜೀವಿತರಾಗಿರುವರಲ್ಲದೆ, ದೃಢಕಾಯಿಗಳಾಗಿಯೂ ಇರುವರೆಂಬುದನ್ನು ಬಹುಜನರು ಕೇಳಬಲ್ಲರು. ಹೀಗೆ ಬಹುಕಾಲ ಬದುಕುವವರು ಯಾವ ರೀತಿಯಲ್ಲಿ ನಡೆಯುತಲಿರುವರೋ ಅದನ್ನು ತಿಳಿಯುವದರಿಂದ ಇತರರೂ, ಅವರಂತೆಯೇ ಪ್ರವರ್ತಿಸಿ, ಅಕಾಲದಲ್ಲಿ ಮೃತರಾಗದಂತಿರಲು ಸ್ವಲ್ಪಮಟ್ಟಿಗಾದರೂ ಜಾಗರೂಕರಾಗಿರಬಹುದೆಂಬ ಉದ್ದೇಶದಿಂದ ವೈಯನಾ ಪಟ್ಟಣದಲ್ಲಿರುವ ಆರೋಗ್ಯವಿಚಾರಕ ಸಮಿಯವರು ಒಂದು ಸರ್ಕ್ಯುಲರನ್ನು ತಯಾರ್ ಮಾಡಿಸಿ, ಜರ್ಮನೀ ದೇಶಗಳಲ್ಲಿರುವ ಸಮಸ್ತ ವೃದ್ಧರಿಗೂ ಒಂದೊಂದುಸರ್ಕ್ಯುಲರನ್ನು ಕಳುಹಿಸಿ, ಅವರವರು ಆಚರಿಸುತ್ತಲಿರುವ ಪದ್ಧತಿಗಳನ್ನೂ, ಸ್ವಭಾವಗಳನ್ನೂ, ಬುದ್ಧಿ ಪೂರ್ವಕವಾಗಿ ಕೆಲಸ ಮಾಡುವ ಕಾಲವನ್ನೂ, ಇವರು ವಿಶ್ರಾಂತಿ ಪಡೆಯತಕ್ಕ ಕ್ರಮವನ್ನೂ, ಧರಿಸಿಕೊಳ್ಳುವ ವಸ್ತ್ರಗಳ ವಿಷಯಗಳನ್ನೂ, ಇವೇ ಮೊದಲಾದ ಇನ್ನೂ ಅನೇಕ ಸಂಗತಿಗಳನ್ನೂ ಆ ಸಭೆಗೆ ತಿಳಿಸಬೇಕೆಂದು ಕೇಳಿಕೊಂಡಿರುವರು.

ಮನುಷ್ಯನ ಯುಕ್ತಿಯು ಪ್ರವರ್ತಿಸದೆ ಯಿರುವಕಾರ್ಯವು ಯಾವದು ತಾನೇ ಇರುವದು. ಈಗ ೧-೨ ವಾರಗಳಕೆಳಗೆ ಅಮೆರಿಕಾದೇಶದಲ್ಲಿ ಒಬ್ಬ ಪುರುಷನು ತನಗನುರೂಪಳಾದ ಯುವತಿಯೊಬ್ಬಳನ್ನು ವರಿಸಬೇಕೆಂದು ತಕ್ಕ ಸನ್ನಾಹಗಳನ್ನು ಮಾಡಿಕೊಂಡಿದ್ದು ಒಂದು ವಿಮಾನವನ್ನು ತಯಾರ್ಮಾಡಿ ಅದರಲ್ಲಿ ತಾನೂ ತನ್ನಪತ್ನಿಯಾಗುವ ಯುವತಿಯೂ ಕುಳಿತುಕೊಂಡು ಬೇಕಾದಷ್ಟು ಭೋಜನ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು ವಿವಾಹ ಮಾಡಿಸುವದಕ್ಕಾಗಿ ಒಬ್ಬ ಪಾದ್ರಿಗಳನ್ನೂ ಕೆಲವರು ಇತರ ದೊಡ್ಡಮನುಷ್ಯರನ್ನೂ ಅದರಲ್ಲಿ ಕುಳ್ಳಿರಿಸಿಕೊಂಡು ಆಕಾಶಮಾರ್ಗದಲ್ಲಿ ತನ್ನ ವಿಮಾನವನ್ನುಬಿಟ್ಟು ಬಹುದೂರಹೋದಮೇಲೆ ಅಲ್ಲಿ ಪಾಣಿಗ್ರಹಣವನ್ನು ಮಾಡಿಕೊಂಡು ಅಲ್ಲಿದ್ದವರನ್ನೆಲ್ಲ ಭೋಜನಾದಿಗಳಿಂದ ತೃಪ್ತಿಪಡಿಸಿದನಂತರ ವಿಮಾನವನ್ನು ಕೆಳಗಿಳಿಸಿ ಅಲ್ಲಿದ್ದ ಇತರರನ್ನು ಭೂಮಿಯಮೇಲೆಬಿಟ್ಟು ಈ ದಂಪತಿಗಳು ವಿಮಾನದಲ್ಲೇ ಅಂತರಿಕ್ಷದಲ್ಲಿ ಸಂಚರಿಸುತ್ತ ಸ್ವೇಚ್ಛೆಯಾಗಿ ವಿಹರಿಸಿ ಮಾರನೇದಿವಸ ಪ್ರಾತಃಕಾಲದಲ್ಲಿ ಗೃಹಪ್ರವೇಶವನ್ನು ಮಾಡಿದರು. ಯೌವನವು ಇನ್ನೂ ಯಾವರೀತಿಯಲ್ಲಿ ಪ್ರವರ್ತಿಸುವದೋ ?

EXTRATS

ದಕ್ಷಿಣಪ್ರಾಂತದ ರೈತರು ಮುಂಬೈ ಸರ್ಕಾರಕ್ಕೆ ಒಂದು ಅರ್ಜಿಯನ್ನು ಬರೆದು ಅದರಲ್ಲಿ ಅವರು ಕೆಳಗೆ ಬರೆದ ವಿನಂತಿಗಳನ್ನು ತಿಳಿಸಿಕೊಂಡಿರುತ್ತಾರೇನಂದರೆ;—

೧ ಭೂಮಿಯಮೇಲಿನ ತೆರಿಗೆಯನ್ನು ಕಡಮೆ ಮಾಡಬೇಕು, ಮತ್ತು ಕಾಯಂ ತೆರಿಗೆ ಹಾಕುವ ಪದ್ಧತಿಯನ್ನು ಪ್ರಾರಂಭಿಸಬೇಕು.

೨. ಪಶುದುಃಖಗಳ ನಿವಾರಣೆ ಮಾಡಬೇಕು.

ಈ ಅರ್ಜಿಗೆ ಪುನೆ ಮತ್ತು ಠಾಣೆ ಜಿಲ್ಲೆಗಳ ಪೈಕಿ ೩,೦೦೦ಕಿಂತ ಜಾಸ್ತಿಯಾಗಿಯೇ ರೈತರ ಸಹಿಗಳು ಕಳುಹಿಸಲ್ಪಟ್ಟಿರುತಿದೆ. ಈ ಉದ್ಯೋಗವು ಸ್ತುತ್ಯವಿರುತಿದೆ. ಆದದರಿಂದ ಬಡರೈತರಿಗೆ ಈ ಉದ್ಯೋಗಕ್ಕೆ ಉತ್ತೇಜನವನ್ನೂ ಸಹಾಯವನ್ನೂ ಮಾಡಿದ ಸದ್ಗೃಹಸ್ಥರ ಉಪಕಾರಗಳನ್ನು ಎಷ್ಟು ವರ್ಣಿಸಿದರೂ ಸ್ವಲ್ಪವೇ ಇರುತಿದೆ. ನಮ್ಮ ಕರ್ಣಾಟಕಪ್ರಾಂತದ ರೈತರು ಸಹ ಇಂತಾ ಅರ್ಜಿಯನ್ನು ಯಾಕೆಮಾಡಬಾರದು —ಚಂ.

ಹುಲಿಯ ಮರಿಗೆ ಎಷ್ಟು ಹಾಲು ಹಾಕಿ ಸಾಕಿದರೂ ಅದು ತನ್ನ ದುಷ್ಟಸ್ವಭಾವವನ್ನು ಸರ್ವಥಾ ಬಿಡುವದಿಲ್ಲ. ಅದರಂತೆ ಕಾಬೂರ್ ಅಮೀರರಿಗೆ ನಮ್ಮ ಸರಕಾರದವರು ಎಷ್ಟು ದ್ರವ್ಯವನ್ನೂ ನಜರ್ ಕಾಣಿಕೆಗಳನ್ನೂ ಕೊಟ್ಟರೂ ಅವರು ನಮ್ಮ ಸರಕಾರದೊಡನೆ ಸ್ನೇಹಭಾವದಿಂದ ವರ್ತಿಸುವದಿಲ್ಲೆಂಬುವದು ಅನುಭವಸಿದ್ಧವಾದ ಮಾತು. ಈ ದಿವಸದ ತನಕ ನಮ್ಮ ಸರಕಾರದವರು ಅಮೀರರ ಸ್ನೇಹಕ್ಕೋಸ್ಕರ ಕೋಟ್ಯಾವಧಿ ರೂಪಾಯಿಗಳನ್ನು ಹಾಳುಮಾಡಿಕೊಂಡರು. ಆದರೂ ಅಮೀರರು ನಮ್ಮ ಸರಕಾರದವರಿಗೆ ತಮ್ಮ ತಿರಸ್ಕಾರವನ್ನೇ ತೋರಿಸುತ್ತಾರೆ ಮೊನ್ನೆ ಮೊನ್ನೆ ನಮ್ಮ ವೈಸ್‌ರಾಯರು ಅಮೀರರಿಗೆ ಪತ್ರ ಬರೆದು ನಾವು ಉತ್ತರ ಪ್ರಾಂತಗಳಿಂದ ಕಾಬೂಲಿಗೆ ಕಳುಹಿಸಿದಂತಾ ಬಂದೀವಾನರನ್ನು ನೀವು ದಿನ ಬಳಗ್ಯೆ ಹಿಂಡುಹಿಂಡಾಗಿ ತರಿಸಿ ಬಹಳ ಕ್ರೂರತೆಯಿಂದ ಕೊಲ್ಲಿಸಿದಿರಿ ಎಂದು ಕೇಳಿ ನಮಗೆ ವ್ಯಸನವಾಗುತ್ತದೆ. ಇದೇ ಪ್ರಕಾರ ನೀವು ಅಧಮತನದ ಕೆಲಸಗಳನ್ನು ಮಾಡಿದರೆ ನಾವು ನಿಮಗೆ ಕಾಣಿಕೆಗಳನ್ನು ಕೊಡಲಿಕ್ಕಿಲ್ಲವೆಂದು ತಿಳಿಸಿದ್ದರು. ಇದಕ್ಕೆ ಅಮೀರರು ಅಬ್ದುರೆಹಿಮಾನರು ಉದ್ಧತನದಿಂದ ಇಲ್ಲಿ ಯಾವ ಪ್ರಸಂಗಕ್ಕೆ ಏನುಮಾಡಬೇಕೆಂಬುವ ಬಗ್ಯೆ ನಿಮ್ಮಗಿಂತ ನನಗೆ ಸಹಸ್ರ ಪಾಲು ಚನ್ನಾಗಿ ತಿಳಿಯುತ್ತದೆ. ನೀವು ನನ್ನ ದೇಶಬಿಟ್ಟು ದೂರವಿದ್ದದರಿಂದ ನನ್ನ ದೇಶದ ಸ್ಥಿತಿಯ ಜ್ಞಾನವು ನಿಮಗೆ ರವಷ್ಟಾದರೂ ಇಲ್ಲ. ನೀವು ಬಾಯಿ ಮುಚ್ಚಿಕೊಂಡು ಸುಮ್ಮನೆ ಕೂತರೆ ಲೇಸು. ನನ್ನಕಕ್ಕನಮಗನಾದ ಇಸ್ಹಾಕನೆಂಬ ದಂಗೆ ಖೋರನ ಹಾವಳಿಯ ಶಾಂತಿಯಬಗ್ಯೆ ನಾನು ಆಪ್ರಕಾರ ಮಾಡಿದೆನುಎಂದು ಉತ್ತರವನ್ನು ಕೊಟ್ಟಿರುತ್ತಾರೆ. ಈ ಉತ್ತರವನ್ನು ಅಮೀರಸಾಹೇಬರು ತಾವು ಬ್ರಿಟಿಷನವರನ್ನು ದ್ವೇಷಿಸುವ ಧ್ವನಿಯಿಂದ ಬರೆದಿದ್ದಾರೆಂತಲೂ, ಮತ್ತು ಈ ಪತ್ರದಲ್ಲಿ ರಷಿಯರ್ನರ ಮತ್ತು ಇಂಗ್ಲಿಷನವರ ರಾಜ್ಯನೀತಿಯನ್ನು ತುಲನೆಮಾಡಿ ರಷಿಯರ್ನರನ್ನು ಅಮೀರರು ಬಹಳ ಶ್ಲಾಘಿಸಿರುತ್ತಾರೆಂತಲೂ ಆಗಸ್ಟ್ ೫ನೇ ತಾರೀಖಿನ ಬೊಂಬೈ ಗೆಜೆಟ್ ಪತ್ರಕ್ಕೆ ಅದರ ಬಾತಮೀದಾರನು ತಿಳಿಸಿರುತ್ತಾನೆ.—ವಾ. ಚಂ.

BANGALORE —Printed and published at the KARNATIC PRESS, No. 114, SRINIVASA MANDIRAM ROAD, PETTAH.—1890.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಕಾಶಮಾನಿದಮ್ಪ್ರನ್ಯಶ್ಯಪಗವಾರ್ತ್ಯಕರ್ಣಾಟಕಪ್ರಕಾಶನನಾ೦ದಾಪ್ರತಿಪತಿಸ್ಥಿತಿತೀಶೋಭಿತಾ। ಮೃಗಾಂಕಹಿತವಾಸರೇನಿಯತಮುದ್ರಣಾಸಜ್ಜನೈರ್ದ್ದ್ರಿಕಾಸುಪಂಸ್ಕೂಪ್ಷತಾದಿಕಶಿವಾನಸುಸುಂಮುದ॥

Vol XVII] BANGALORE — MONDAY, AUGUST 25, 1890. [No 34.

ಸಂಪುಟ ೧೭.] ಬೆಂಗಳೂರು — ಸನ್ ೧೮೯೦ನೇ ಇಸಿವಿ ಆಗಸ್ಟ್ ೨೫ ನೇ ತಾರೀಖ್ ಸೋಮವಾರ. [ಸಂಚಿಕೆ ೩೪.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ ಮತ್ತು ಕನ್ನಡಭಾಗಗಳಿಗೆ.

	ಸಾಲ್ ಒಕ್ಕೆ	ಸ್ಥಳದಾರಿಕೆ ಪಂಸ್ಥೆ (ಪೋಸ್ಟೇಜ್) ಸಹಿತ
	ಮುಂಗಡ	ಹಿಂದಾಗಿ
ಮುಂಗಡವಾಗಿ ಕೊಡುವರಿಗ	8—0 0	9—0—0
ತರುವಾಯ ,,	9—0—0	10—8—0

ಇಂಗ್ಲಿಷ ಅಥವಾ ಕನ್ನಡಭಾಗಗಳಿಗೆ.

ಮುಂಗಡವಾಗಿ ಕೊಡುವರಿಗ	1—0—0	5—0—0
ತರುವಾಯ ,,	5—0 0	6 0—0

ಈ ಪತ್ರಿಕೆಗೆ [illegible]

ನೋಟೀಸ್ [illegible]

[illegible]

ಪ್ರಕಟನೆಯ ರಿವಾಜ್.

ಮೊದಲನೆಸಾರಿಗೆ ಪ್ರತಿ ಒಂದು ಲೈನಿಗೆ ೦—೨—೦
ಎರಡನೇದ ಸಾರಿ ಮೊದಲು ಒಂದಕ್ಕೆ ೦ ೧—೦

[illegible]

NOTICE.

VAIDYASARA SANGRAHA

A TREATISE ON THE [illegible] OF

HINDU MEDICINE

☞ Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥಾರ್ಥವು [illegible] ಬೇಕಾದವರು [illegible] ಕೊಡಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಸಾಕಲ್ ಪೋಸ್ಟೇಜ್ ಪ್ರತಿ ಒಂದಕ್ಕೆ ರೂ 5- 0—0

ಟಿ. ಬಿ ವೆಂಕಟಾಚಾರ್,

[illegible], ಆಸ್ಪತ್ರೆ ರೋಡ್ ಪೇಟೆ, 41ನೇ ನಂ ಮನೆ

ADVERTISEMENTS

ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರಿಗೇ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

		ಪೋಸ್ಟೇಜ್ ಸಹಿತ ರೂ. ಆ ಪೈ
ಗಟೀಕಾ [illegible] ಸಂಗ್ರಹ	...	೪ ೦ ೦
,, [illegible]	..	೧ ೧ ೦
,, [illegible]	...	೦ ೮ ೦
,, [illegible]	.	೧ ೨ ೦
,, [illegible]	..	೦ ೧೨ ೦
,, [illegible]	...	೦ ೪ ೦
,, [illegible]	..	೦ ೧ ೬
,, [illegible]		೦ ೬ ೦
[illegible]	..	೦ ೯ ೦
[illegible]	..	೦ ೩ ೦
[illegible]	..	೦ ೧ ೬
[illegible]	...	೦ ೨ ೬
[illegible]	...	೦ ೧ ೦

ಕನ್ನಡ ಗ್ರಂಥಗಳು.

[illegible] ಪ್ರತಿ	..	೨ ೦ ೦
[illegible]	..	೧ ೪ ೦
[illegible]	..	೦ ೮ ೦
[illegible]	.	೦ ೮ ೦
[illegible]	..	೦ ೮ ೦
[illegible]	...	೦ ೨ ೬
[illegible]	.	೦ ೨ ೬
[illegible]	...	೦ ೩ ೦
[illegible]	..	೦ ೨ ೦
[illegible]	...	೦ ೨ ೦
[illegible]	..	೦ ೨ ೬
[illegible]	..	೧ ೦ ೦
[illegible]	.	೦ ೧೨ ೦

ನೋಟೀಸ್.

ಮನೆಗಳಲ್ಲಿ ಗಿಲೀಟ್ ಮಾಡುವದಕ್ಕೆ ಅನುಕೂಲವಾದ ಬೆಳ್ಳಿ ದ್ರಾವಕವು.

ಈ ಬೆಳ್ಳಿ ದ್ರಾವಕವು [illegible] ಗಿಲೀಟ್ ಮಾಡುವ [illegible] ಇದರ ಕ್ರಯ ಸೀಸೆ ೧ ಕ್ಕೆ ೨—೮—೦

ಚಿನ್ನದ ದ್ರಾವಕವು.

ಇದು ಬೆಳ್ಳಿ, ಹಿತ್ತಾಳೆ, ತಾಮ್ರ ವಗೈರೆ ಪದಾರ್ಥಗಳನ್ನು ಗಿಲ್ಟು ಮಾಡಲಿಕ್ಕೆ ಬಹಳ ಉಪಯುಕ್ತವಾಗಿರುವ [illegible] ಬಿದ್ದವಾರ ಭಂಡಾರದಲ್ಲಿ [illegible] ಆಭರಣಗಳನ್ನು ಗಿಲ್ಟು ಮಾಡಲಿಕ್ಕೆ ಈ ದ್ರಾವಕವು ಕೇವಲ ಪ್ರಯೋಜನಕಾರಿಯಾಗಿರುವದು

ಇದರ ಕ್ರಯ ಸೀಸೆ ೧ ಕ್ಕೆ ೩—೮—೦

ಬೇಕಾದವರು [illegible] ಬೆಳ್ಳಿ ಕಾರ್ಖಾನೆಯ ಮ್ಯಾನೇಜರಿಗೆ ಬರೆದು ತರಿಸಿಕೊಳ್ಳಬಹುದು.

ಮೈಸೂರು ಮಹಾರಾಜರವರ ಅರಳೀ ಯಂತ್ರದ ಕಾರ್ಖಾನೆ.

ನೋಟೀಸ್.

ಮೈಸೂರು ಮಹಾರಾಜರವರ ಅರಳೀ ಯಂತ್ರದ ಕಾರ್ಖಾನೆಯಲ್ಲಿ ಹೊಸ ನಮೂನೆ ಯಂತ್ರದ ಮೂಲಕ ಉತ್ತಮವಾದ ಗೋಧಿ ಹಿಟ್ಟು, ರವೆ, ಹೊಟ್ಟು ತಯಾರಾಗುತ್ತದೆ. ಪೇಟೆಯಲ್ಲಿರುವ ಸದರೀ ಕಾರ್ಖಾನೆಗೆ ಸೇರಿದ ಷಾಪುಗಳಲ್ಲೂ, ಬೆಂಗಳೂರು ಕಂಟೋನ್ಮೆಂಟಿನಲ್ಲಿ ಒಬ್ಬರೇ ಏಜಂಟರಾಗಿರುವ ಸಾಲಿಯಾ ಮಹಮ್ಮದ್ ಕಾಸಿಂ ಸೇಟ್ ರವರ ಡಿಸ್ಪೆನ್ಸರಿ ರಸ್ತೆಯಲ್ಲಿರುವ ಷಾಪಿನಲ್ಲೂ ದೊರೆಯುತ್ತವೆ,

ಮೈಸೂರು ಪಬ್ಲಿಕ್ ವರ್ಕ್ಸ್ ಇಲಾಖಾ,
ಸೆಂಟ್ರಲ್ ಆಫೀಸ್
ಬೆಂಗಳೂರು, 7ನೇ ಆಗಸ್ಟು 1890.

ನೋಟೀಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ.—

ಬೆಂಗಳೂರಿಂದ ಹಿಂದೂಪುರದ ಬಳಿ ಇರುವ ಮೈಸೂರು ಸರಹದ್ದು ವರಿವಿಗೆ ರೈಲ್ವೆ ರಸ್ತೆ ಹಾಕುವದಕ್ಕೆ ಮಾಡಬೇಕಾದ ಪ್ರತಿಯೊಂದು ತರಹೆ ಕಾಮಗಾರಿಗಳ ದರಗಳನ್ನು ತೋರಿಸಿ ಅಂಚು ಪಟ್ಟೀ ನಮೂನೆಯಲ್ಲಿ ದರಖಾಸ್ತುಗಳು ಷರತ್ತಲ್ಲಿ ಅಪೇಕ್ಷಿಸಲ್ಪಡುವದು. ಕಾಮಗಾರಿಯು ಅಯಿದು ಮೈಲಿಗಳಿಗೆ ಒಂದು ಸೆಕ್ಷನಂತೆ ಕೊಡಲ್ಪಡುವದು. ದರಖಾಸ್ತು ಮಾಡುವದಕ್ಕೆ ಇಷ್ಟಪಡುವವರು ತಾವು ಯಾವ ಸೆಕ್ಷನಿಗೆ ಅಥವಾ ಸೆಕ್ಷನ್ನುಗಳಿಗೆ ದರಖಾಸ್ತು ಕೊಡಬೇಕೆಂದು ಯೋಚಿಸುತ್ತಾರೆಯೋ ಅಂತಾ ಸೆಕ್ಷನ್ ಅಥವಾ ಸೆಕ್ಷನ್ನುಗಳನ್ನು ಖುದ್ದು ನೋಡಿ ಬರುವದು ಒಳ್ಳೆಯದು. ಸದರೀ ಮಾರ್ಗದಲ್ಲಿ ಯಾವನೊಬ್ಬನಿಗೆ ದರಖಾಸ್ತು ಕೊಟ್ಟಗ್ಯೂ ಅಂತಾ ಸೆಕ್ಷನ್ನಲ್ಲಿನ ವಿಶಿಷ್ಟ ಕಾಮಗಾರಿಯೂ ಅದಕ್ಕೆ ಸೇರಿದ್ದಾಗಿರುವದು, ಪರಂತು ಪಸ್ತ್ರ ರೆಂಟಿಗೆ ಸೇರಿರುವದಿಲ್ಲವು

(Signed) W McHUTCHIN,
Asst Chief Engineer,
of Mysore

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA

MONDAY, AUGUST 25, 1890

೧೮೯೦ನೇ ಆಗಸ್ಟು ೨೫ನೇ ಸೋಮವಾರ

SOCIAL REFORMS.

ಮಿ॥ ಮಲಬಾರಿಯವರ ಹಿಂದೂಸಮಯಾಚಾರ ಪರಿಷ್ಕರಣ ಪ್ರಯತ್ನೋದ್ದೇಶಗಳೆಲ್ಲವು ಸದ್ಯಃ ಉಪಶಮಿಸಿದವೆಂದು ಭಾವಿಸಿದ್ದೆವು. ಇದಲ್ಲದೆ ಅವರು ವಿಧವಾಹಿತಕರಣದ್ದೋಶವೊದನೆ ಶಾರೀರವಾನಸಿಕ ಶ್ರಮಗಳನ್ನು ಬಹಳ ಮಟ್ಟಿಗೆ ಅನುಭವಿಸಿ ತನ್ನಿವೃತ್ತಿಯಬಗ್ಯೆ ವಃಷ್ಯ ಕೆಲವುಕಾಲ ವಿಶ್ರಾಂತಿಸುಖವಂ ಕೋರಿ ಅಜ್ಞಾತವಾಸವನ್ನು ಮಾಡುವರೆನ್ದಂತೆ ನಂಬಿದ್ದೆವು. ಏತಕ್ಕೆಂದರೆ, ಪ್ರಸಕ್ತವಿಷಯಕ್ಕೆ ಸಂಬಂಧಪಟ್ಟಂತೆ ಈಗ್ಯೆ ಕೆಲವುಕಾಲದವರೆಗೂ ವೃತ್ತಾಂತ ಪತ್ರಿಕೆಗಳ್ಯಾವದರಲ್ಲಿಯೂ ಅವರ ಪ್ರಸ್ತಾವವೇನೂ ಕಂಡುಬರಲಿಲ್ಲವು. ಮಿ॥ ಮಲಬಾರಿಯವರು ಕೆಲವು ಕಾಲದಹಿಂದೆಯೇ ಸಮಯಾಚಾರ ಪರಿಷ್ಕರಣ ವಿಷಯದಲ್ಲಿ ತಮಗೆ ಸಾಧ್ಯವಾದದ್ದನ್ನೆಲ್ಲ ಲೋಪವಿಲ್ಲದೆ ಮಾಡಿಮುಗಿಸಿ ಮುಂದೆ ತಮ್ಮಿಂದಾಗಬೇಕಾದದ್ದೊಂದೂ ಬಾಕಿ ಇರುವದಿಲ್ಲವೆಂತಲೂ, ಇನ್ನುಮೇಲೆ ಸದರೀವಿಷಯದ ವ್ಯವಸ್ಥೆ ಮಾಡಿಕೊಳ್ಳಬೇಕಾದದ್ದು ಪ್ರಮುಖರಾದ ಹಿಂದೂಗಳ ಕರ್ತವ್ಯವಾಗಿರುವದೆಂತಲೂ ತಿಳಿಸಿದ್ದಂತೆ ನಮ್ಮ ಜ್ಞಾಪಕದಲ್ಲಿದೆ. ಸಹನೆಯೊಡನೆ ಸದರೀವಿಷಯ ವಿಮರ್ಶಾಧಿಕಾರವಂ ಹಿಂದೂಗಳಿಗೇ ಒಪ್ಪಿಸಿ ಅವರು ಸ್ವಸ್ಥರಾದಬಗ್ಯೆ ನಾವು ಬಹಳ ಸಂತುಷ್ಟರಾಗಿದ್ದೆವು. ಬ್ರಿಟಿಷರವರ ಚಿರಕಾಲಿಕ ಪ್ರಭುತ್ವದಿಂದಲೂ ಅನ್ಯದೇಶೀಯರ ಅನವರತ ಸಮಾಗಮಸಂಬಂಧಾದಿಗಳಿಂದಲೂ, ಈಗ ಜನಗಳ ಆಚಾರವ್ಯವಹಾರಾದಿ ಪ್ರಯಗಳಲ್ಲಿ ವೈಲಕ್ಷಣ್ಯವುಂಟಾಗಿ ಅವು ಭಿನ್ನಭಿನ್ನಗಳಾಗಿರುವದರಿಂದಲೂ, ನಮ್ಮ ಸಮಯಾಚಾರ ವ್ಯವಹಾರಾದಿಗಳಲ್ಲಿ ಅನ್ಯದೇಶೀಯರಿಗೆ ಕಂಡುಬರಬಹುದಾದ ನ್ಯೂನತೆಗಳನ್ನೆಲ್ಲವು ಅವರು ನಮಗೆ ತೋರಿಸಿ ಪರಿಷ್ಕರಿಸುವರೆಂಬ ನಿರೀಕ್ಷಣೆಯು ಪ್ರಾಯಶಃ ಅನೇಕರಿಗೆ ಹುಟ್ಟಿರಲಿಲ್ಲವು. ಪರಂತು, ಅನ್ಯದೇಶೀಯರೆಷ್ಟು ತಿಳುವಳಿಕೆಯುಳ್ಳವರೆನಿಸಿಕೊಂಡಿದ್ದರೂ, ಎಷ್ಟರ ಸಮರ್ಥರೆನಿಸಿಕೊಂಡಿದ್ದರೂ, ಅವರಾಗಲಿ ಮಿ॥ ಮಲಬಾರಿಯವರಾಗಲಿ, ಬಹು ದಿವಸ ವಿಚಾರಿ ಪರ್ಶಿಸಲಿಕ್ಕೆ ಸಾಧ್ಯವಾಗಲಾರದು. ನಮ್ಮ ಸಮಯಾಚಾರಗಳಲ್ಲಿ ಕಾಲದೇಶ ಜನಭೇದಗಳಿಂದ ನೆಲೆಗೊಂಡು ಅಂಧಪರಂಪರೆಯಾಗಿ ಅನುವರ್ತಿಸಿ ಬರುತಲಿರುವ ಪ್ರತ್ಯಕ್ಷ ಪ್ರಬಲ ಹಾನಿಕರಗಳಾದ ಕೆಲವು ದೋಷಗಳನ್ನು ಮಿ॥ ಮಲಬಾರಿಯವರು ಎಡಬಿಡದೆ ನಮಗೆ ತೋರಿಸಿ ಅವುಗಳ ವಿಷಯದಲ್ಲಿ ನಾವು ಸಾಧ್ಯವಾದ ಪ್ರತಿಕ್ರಿಯೆಗಳಂ ಮಾಡಬೇಕೆಂಬದಾಗಿ ಪದೇಪದೇ ತಿಳಿಸುತಲಿದ್ದರು. ಅವರು ತಮ್ಮ ಕರ್ತವ್ಯವನ್ನು ಅಷ್ಟಕ್ಕೇ ನಿಲ್ಲಿಸಿರುವದಾದರೆ ಅವರಿಗೆಲ್ಲರೂ ಕೃತಜ್ಞರಾಗಿರಬೇಕಾದದ್ದು ಸಹಜವೆಂದೆಣಿಸುವೆವು. ಆದರೆ ಅನ್ಯಮತಾವಲಂಬಿಗಳಾದವರು ಹಿಂದೂ ಸಮಾಜದಲ್ಲಿ ಪ್ರಮುಖರಾದವರಿಗೊಪ್ಪಿಸಿದ್ದರೆ ಅವರು ಪ್ರಜಾಭಿಪ್ರಾಯವನ್ನರಿತು ಕಾಲೋಚಿತವಾಗಿ ಯಾವ ಏರ್ಪಾಡುಗಳನ್ನು ಮಾಡುವವರಾದರು ಕರ್ತರಾಗಬಹುದೇ ಹೊರತು ಅನ್ಯರೆಂದಿಗೂ ಸಮರ್ಥರಾಗಲಾರರು. ಮಿ॥ ಮಲಬಾರಿಯವರು ಈಗ ಇಂಗ್ಲಾಂಡಿನಲ್ಲಿ ತಮ್ಮ ಕಕ್ಷಿಗೆ ಪೋಷಕವಾಗಿ ಪ್ರಬಲವಾದ ಪ್ರಜಾಭಿಪ್ರಾಯವಂ ಕೆರಳಿಸಿ ತನ್ಮೂಲಕ ಒಂದು ಕಾರ್ಯಭಾಗವನ್ನು ಜರಗಿಸುವ ಬಗ್ಯೆ ತಮ್ಮ ಯಾವತ್ಕಾಲವನ್ನೂ ವಿನಿಯೋಗಿ

ಸುತಲಿದಾರೆಂದು ಕೇಳಲಿಕ್ಕೆ ನಾವು ಬಹಳ ಅಸಮಾಧಾನಪಟ್ಟವರಾಗಿದ್ದೇವೆ. ಅವರ ಪ್ರಕೃತ ಪ್ರಯತ್ನವು ನಮ್ಮಂತೆ ಅನೇಕರಿಗೆ ಅನಿಷ್ಟಕರವಾಗಿ ತೋರಬಹುದು. ಅವರಿಗೀಗ ಉಂಟಾಗಿರುವ ಕೋರಿಕೆಯು ಸ್ವಲ್ಪವಾದರೂ ಸಿದ್ಧಿಸುವಂತೆ ನಮಗೆ ತೋರಲಿಲ್ಲವು. ಇಂಡ್ಯಾ ದೇಶೀಯರಿಗೆ ಮೇಲುಂಟು ಗವರ್ನಮೆಂಟಿನ ಮೇಲಧಿಕಾರಿಯವರ ಒಂದುದ್ದೇಶವಾಗಿದ್ದರೂ, ಹಿಂದೂಗಳೇ ಅಸಾಧ್ಯವೆಂದು ಭಾವಿಸಿ ತೊರೆದಿದ್ದ ನಿಯಮಗಳನ್ನೆಲ್ಲ ತಾವು ಪ್ರವರ್ತಿಸಿ ವ್ಯವಹಾರದೊಳು ತಂದು, ಸಾಮಾನ್ಯೇನ ಇಂಡ್ಯಾ ದೇಶಕ್ಕೆ ಒಂದು ಮಹತ್ಪ್ರಯೋಜನವನ್ನುಂಟುಮಾಡಿದ ಮತ್ತು ಫಲಾಕಾಂಕ್ಷೆಯಿಲ್ಲದ ಲೋಕೋಪಕಾರಿ ಎಂಬ ಪ್ರಶಸ್ತಿಯನ್ನು ಯಾವ ರೂಪವಾಗಿ ಯಾದರೂ ಕಾರ್ಯತಃ ಪಡೆದು, ಗತಿಸಿದ ಮನುವೊದಲಾದ ಮಹನೀಯರೊಡನೆ ತಮ್ಮ ಹೆಸರೂ ರೂಢವಾಗಿ ವ್ಯವಹರಿಸಲ್ಪಡಬೇಕೆಂಬ ಕೋರಿಕೆಯು ಅವರಿಗಿರುವಂತೆ ತಪ್ಪುಪ್ರಮಾಣಗಳು ಕೆಲವರು ಹೇಳಬಹುದಾಗ್ಯೂ ಇವರು ಆ ರೀತಿ ಭಾವಿಸಬಹುದು. ಇವರು ಈಗ ಇಂಗ್ಲಾಂಡಿನಲ್ಲಿ ಇವರಿಗೆ ಕಂಡ ವಿಷಯಗಳು ಕೆಳಕಂಡ ಷರತುಗಳಿಂದ ತೋರಿಬರುತ್ತಿರುವಂತೆ ತಿಳಿದುಬರುತ್ತದೆ. ಹೇಗೆಂದರೆ —

೧ ಇಂಡಿಯನ್ ಪೀನಲ್ ಕೋಡಿನ ೩೭೫ ನೇ ಸೆಕಷನಿನ ವಿನಾಯಿತಿಯನ್ನು ರದ್ದುಮಾಡಿ, ಸಮ್ಮತಿಗೆ ಗೊತ್ತಾಗಿರುವ ೧೦ ವರುಷಗಳ ವಯಃಪರಿಮಾಣವನ್ನು ೧೨ ವರುಷಗಳೆಂದು ಬದಲಾಯಿಸಬೇಕಾದದ್ದು;

೨ ವಿವಾಹ ಸಂಬಂಧವಾದ ಹಕ್ಕುದಾರಿಯನ್ನು ಕುರಿತಾಗಲಿ ಅಥವಾ ಭಾರ್ಯೆಯು ಪತಿಯ ಮನೆ ವಿಷಯದಲ್ಲಾಗಲಿ ದಾವಾ ಮಾಡುವದಕ್ಕೆ ಅವಕಾಶವಿಲ್ಲವೆಂಬದಾಗಿ ನಿರ್ಬಂಧಿಸುವದರ ಮೂಲಕ ಸಿವಿಲ್ ಪ್ರೊಸಿಜ್ಯೂರ್ ಕೋಡನ್ನು ತಿದ್ದುಪಡಿ ಮಾಡಬೇಕಾದದ್ದು;

೩. ಬಾಲ್ಯದಲ್ಲಿ ವಿವಾಹ ಮಾಡಿಕೊಂಡವರು ಪ್ರಾಪ್ತ ವಯಸ್ಕರಾಗಿ ಯುಕ್ತಾಯುಕ್ತ ವಿವೇಚನ ಜ್ಞಾನ ಸಂಪಾದ ಬಳಿಕ ಏದುಂಬಳಿಕೆಯನ್ನು ಅವರು ಸ್ವತಃ ರದ್ದು ಮಾಡುವದಕ್ಕೆ ಅವಕಾಶವುಂಟಾಗಿರುವಂತೆ ವೈವಾಹಿಕ ನಿಬಂಧನೆಯನ್ನು ಕ್ರಮಪಡಿಸತಕ್ಕದ್ದು. ೧೨ ವರುಷಗಳೊಳಗಾಗಿ ವಿವಾಹವಾದ ಹುಡುಗಿಯು, ರಜಸ್ವಲೆಯಾಗುವ ಪೂರ್ವ ಯಾವಾಗಲಾದರೂ ಮತ್ತು ಅವಳಿಗೆ ೧೨ ಅಥವಾ ೧೮ ವರುಷಗಳ ವಯಸ್ಸಾದ ಬಳಿಕ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮುಂದೆ ಕ್ರಮವಾಗಿ ಪ್ರಮಾಣ ಮಾಡುವದರ ಮೂಲಕ ತನ್ನ ವಿವಾಹವನ್ನು ರದ್ದು ಮಾಡಿಕೊಳ್ಳಬಹುದೆಂಬದಾಗಿ ನಿಯಮವಾಗಬೇಕಾದ್ದು. ಹಾಗೆ ಮ್ಯಾಜಿಸ್ಟ್ರೇಟರ ಮುಂದೆ ಪ್ರಮಾಣಪೂರ್ವಕವಾದ ಕೈಫಿಯತ್ತನ್ನು ಕೊಡತಕ್ಕ ಕಾಲದ್ದು ಸದರೀ ಹುಡುಗಿಯ ಗಂಡನು ಜೀವಿಸಿರಲಿ ಅಥವಾ ಮೃತಪಟ್ಟಿರಲಿ ಅಂತಾ ಕೈಫಿಯತ್ತನ್ನು ಕೊಡಲಿಕ್ಕೆ ಶಕ್ತಳಾಗಿರುವಂತೆ ಮಾಡತಕ್ಕದ್ದು. ಈ ರೀತಿ ಮಾಡಿದರೆ ಹಾಗೆ ಇಚ್ಛಿಸುವಂಥಾ ಬಾಲವಿಧವೆಯರು ವೈಧವ್ಯಾನುಭವ ನಿರ್ಬಂಧದಿಂದ ಸ್ವತಃ ವಿಮುಕ್ತಳಾಗಲಿಕ್ಕೆ ಅವಕಾಶ ಪ್ರಾಪ್ತಗಿರುವದು. ೪

೪. ಇಂಡ್ಯಾ ದೇಶದಲ್ಲಿ ಮಹಾಪತ್ನಿಗಳು ತಮ್ಮ ಮಕ್ಕಳ ವಿವಾಹವನ್ನು ನಮಗೆ ಇಷ್ಟಬಂದ ಕಾಲದ ವರೆಗೆ ನಿಲ್ಲಿಸಿಡಲಿಕ್ಕೆ ಶಕ್ತರಾಗುವಂತೆಯೂ, ಹೆತ್ತವರ ವಿಷಯದಲ್ಲಿ ವಿರುದ್ಧವಾಗಿ ವರ್ತಿಸತಕ್ಕ ನೆರೆಹೊರೆಯವರು ಸ್ವಜಾತೀಯರಾಗಲಿ ಮಾಡುವ ಯಾವದಾದರು ಕೃತ್ಯಗಳನ್ನು ಕೋರ್ಟಿನವರ ಆಜ್ಞೋಲ್ಲಂಘನ ರೂಪವಾದ ಮತ್ತು ಜನರ ನೆಮ್ಮದಿಗೆ ಲೋಪ ಪ್ರಯತ್ನ ಮಾಡುತ್ತಾ ಶಿಕ್ಷೆಗೆ ರೂಪವಾಗಿ ಭಾವಿಸುವಂತೆಯೂ ನಿಬಂಧಿಸತಕ್ಕದ್ದು.

೫ ಮರಳಿ ವಿವಾಹ ಮಾಡಿಕೊಳ್ಳುವುದು ಹಿಂದೂ ವಿಧವೆಯರಿಗೆ ಸಿ೫೬ ನೆ ಶಿಪಾಯಿ ಹಕ್ಕಿಯ ವಿಷಯದಲ್ಲಿ ೧೮೫೬ನೇ ಇಸವಿಯ ಪುನರ್ವಿವಾಹ ವಿಷಯವನ್ನು ಕುರಿತ ಕಾನೂನಿನಲ್ಲಿ ನಮೂದಾಗಿರುವ ನಿಯಮವನ್ನು ೧೮೫೬ನೇ ಇಸವಿಯಲ್ಲಿ ಇಂಡ್ಯಾ ಸರ್ಕಾರದವರು ಬದಲಾಯಿಸುವಂತೆ ಮಾಡಿದ್ದು ಕಾಂಗ್ರೆಸ್ಸಿನ ಮಾಡಿದ್ದ ಪ್ರಕಾರ ವಿಧವಾ ವಿವಾಹಗಳು, ತನಗೆ ಪೂರ್ವಪತಿಯಿಂದ ಮರಣಶಾಸನ ಮೂಲಕ ಕೊಡಲ್ಪಟ್ಟಿದ್ದಕ್ಕೆ ಬಾಧ್ಯತೆಗಳಿದ್ದರೂ ಅನುಭವಿಸುವದಕ್ಕೆ ಶಕ್ತಳಾಗುವಂತೆ ಸದರೀ ಕಾನೂನನ್ನು ತಿದ್ದುಪಡಿ ಮಾಡತಕ್ಕದ್ದು;

೬ ಪುನರ್ವಿವಾಹ ಕರ್ಮವನ್ನು ಸುಲಭವಾಗಿಯೂ, ವಿಶೇಷ ಖರ್ಚಿಲ್ಲದೆಯೂ ಮಾಡುವದಕ್ಕೆ ಹೇಗೆಂದರೆ, —ಪ್ರತ್ಯೇಕ ರಿಜಿಸ್ಟ್ರಾರ್ ಮುಂತಾದವರು ಪ್ರಮಾಣಗಳನ್ನು ಮಾಡುವದು, ಅಥವಾ ಬ್ರಹ್ಮಸಮಾಜಕ್ಕೆ ಸೇರಿದವರ ವಿವಾಹ ಕಾನೂನಿನ ಪ್ರಯೋಜನವು ಹಿಂದೂ ಸ್ತ್ರೀಯವಾದ ವಿವಾಹ ಕ್ರಮವನ್ನು ಅನುಸರಿಸಲಿಕ್ಕೆ ಇಷ್ಟಪಡದವರ ಅಥವಾ ಅಶಕ್ತರಾದವರ ನಿಮಿತ್ತವೂ ಅನ್ವಯಿಸುವಂತೆ ಮಾಡತಕ್ಕದ್ದು,

೭ ದೇಶಭಾಷೆಗಳ ಆಧಾರದ ಮೇಲೆ ಸಿಂಗಾಪುರದ ಮೂರು ಜಿಲ್ಲೆಗಳಲ್ಲಿ ಸುಧಾರಣೆಗೆ ಪ್ರಚುರಪಡಿಸಲ್ಪಟ್ಟ ವಿಧಿಯನ್ನು ಸುಮಾರು ನಿಯಮಗಳಲ್ಲದೆ, ಸಾರ್ವತ್ರಿಕ ಸಭೆಯಲ್ಲಿ ಸಂಪೂರ್ಣವಾಗಿ ಸೇರಿಸಲ್ಪಟ್ಟ ೩೭೫ ನೇ ಹೊರ ಅಂಶವನ್ನು ಉಳಿಸಿ, ೩೩೦—೩೩ ನೇ ಸೆಕ್ಷನುಗಳ ನಿಯಮಗಳನ್ನು ಜನರಿಗೆ ಚೆನ್ನಾಗಿ ತಿಳಿಯಪಡಿಸಲಿಕ್ಕೆ ತಕ್ಕ ಪ್ರಯತ್ನಗಳನ್ನು ಮಾಡುವದು ಕರ್ತವ್ಯವಾಗಿ ಇದರಲ್ಲಿ ಕರ್ತವ್ಯ ಮಾಡತಕ್ಕದ್ದು,

೮. ವಿಧುರರು ಮರು ವಿವಾಹ ಮಾಡಲು ಹೋಗುವ ಪ್ರತಿಸಂಸ್ಥೆಯ ಪ್ರಯತ್ನ ಮುಂತಾದವುಗಳನ್ನು ಸರ್ಕಾರದ ಸಹಾಯದಿಂದ ಪ್ರೋತ್ಸಾಹಿಸಬೇಕು, ಇದರಲ್ಲಿಯೂ ಸ್ತ್ರೀ ಪ್ರಯತ್ನಗಳನ್ನು ಗಮನಿಸತಕ್ಕದ್ದು,

೯ ಹೆತ್ತ ಹೆಣ್ಣುಮಕ್ಕಳು ಸುವರ್ಣಕಾರರಿಗೆ ಮೇಲ್ಪಟ್ಟು ಸ್ಕೂಲಿನಲ್ಲಿ ಓದತಕ್ಕ ವಿದ್ಯಾರ್ಥಿಯರಿಗೆ ವಿಶೇಷ ಸೌಕರ್ಯಗಳನ್ನುಂಟುಮಾಡತಕ್ಕದ್ದಲ್ಲದೆ, ವೈದ್ಯ ಮೊದಲಾದ ಶಾಸ್ತ್ರಾಭ್ಯಾಸಗಳನ್ನು ಮಾಡಿ ಪ್ರಸಿದ್ಧಿಗೆ ಏರತಕ್ಕವರಿಗೆ ಎಲ್ಲ ಪ್ರೋತ್ಸಾಹವನ್ನುಂಟುಮಾಡಿ ಸಾಧ್ಯವಾದ ಮಟ್ಟಿಗೆ ಅನುಗ್ರಹಗಳನ್ನು ಕೊಡತಕ್ಕದ್ದು ಅವಶ್ಯಕವಾಗಿರುತ್ತದೆ, ಎಂಬದು.

CONVERTION TO BUDDHISM

ವಿಜಯವಾಡ ತಿರುವಲ್ಲಿಕ್ಕೇಣಿಯಲ್ಲಿ ವಾಸವಾಗಿದ್ದ ಗತಿಸಿದ ಶಂಕರಾಚಾರ್ಯರ ಪುತ್ರರಲ್ಲೊಬ್ಬರಾದ ಚಕ್ರವರ್ತಿ ಕೃಷ್ಣಮಾಚಾರ್ಯರೆಂಬವರು ಈಗ್ಗೆ ಹಿಂದೆ ೫ ವರುಷಗಳ ಹಿಂದೆ ಇಂಗ್ಲಾಂಡಿಗೆ ಹೋಗಿ ಅಲ್ಲಿನ ಸಿರಿಂಗ್ಟನ್ ಕಾಲೇಜಿನಲ್ಲಿ ಕೃಷಿ ಶಾಸ್ತ್ರವನ್ನಭ್ಯಸಿಸಿ ಸ್ವಲ್ಪಕಾಲವಾಗಿದ್ದಲ್ಲಿ ಕೊಲಂಬೋ ನಗರಕ್ಕೆ ಬಂದು ಸ್ವದೇಶಕ್ಕೆ ಪ್ರಯಾಣ ಬರುವಾಗ್ಯೆ ಮಾರ್ಗಮಧ್ಯದಲ್ಲಿ ಸಿಲೋನ್ ದ್ವೀಪಕ್ಕೆ ಹೋಗಿ ಅಲ್ಲಿ ಬೌದ್ಧದೀಕ್ಷೆಯನ್ನು ಸ್ವೀಕರಿಸಿದವರಾಗಿರುವದಾಗಿ ಪತ್ರಿಕೆಯೊಂದು ತಿಳಿಸುತ್ತದೆ. ಈ ವಿಷಯವು ಸಾಮಾನ್ಯವಾಗಿದ್ದರೂ ವಿಶೇಷ ವಿಚಾರಕ್ಕೆ ಅವಕಾಶ ಪಟ್ಟದ್ದಾಗಿರುವದು. ಇವರು ತಮ್ಮ ಶ್ರೀವೈಷ್ಣವಮತವನ್ನು ಯಾತಕ್ಕೆ ತ್ಯಜಿಸಿದರು? ಇಂಗ್ಲಾಂಡಿನಲ್ಲಿ ಪ್ರಾಬಲ್ಯದಲ್ಲಿರುವ ಕ್ರಿಶ್ಚಿಯನ್ ಮತಾನ್ವೇಷಕ್ಕೆ ಅವರು ಏಕೆ ಹೋಗಲಿಲ್ಲ? ಇವರಿಗೆ ಬೌದ್ಧಮತದಲ್ಲಿ ಅಭಿರುಚಿ ಹ್ಯಾಗೆ ಹುಟ್ಟಿಯಿತು? ಶ್ರೀವೈಷ್ಣವ ಸ್ವಾಮಿಗಳೊಡನೆ ಇವರಿಗೆ ಸತ್ಯತತ್ವಗಳು ಹ್ಯಾಗೆ ಪ್ರಚುರವಾಗುವದು? ಪ್ರಶ್ನೆಗಳು ಸರಿಯಾಗಿ ಸ್ವಲ್ಪ ಆಲೋಚಿಸಬೇಕಾಗಿರುತ್ತದೆ. ಇವರು ಶ್ರೀವೈಷ್ಣವಮತವನ್ನು ತ್ಯಜಿಸಲಿಕ್ಕೆ ಕಾರಣವೇನಿರಬಹುದೆಂದರೆ, —ಈ ಮತದ ಮುಖ್ಯವಾದ ಪಿತರ ಮಧ್ಯದಲ್ಲಿದ್ದರೂ ಬಹುವಿಧ ನಿಯಮಗಳಿಗೂ ನಿರ್ಬಂಧಗಳಿಗೂ ಒಳಪಡಬೇಕಾದದ್ದಾಗಿರುವದರಿಂದ, ತಾವು ಆ ನಿಯಮನಿರ್ಬಂಧಗಳಿಗೆ ಬದ್ಧರಾಗಿರಲಿಕ್ಕೆ ಇಷ್ಟವಿಲ್ಲದ್ದು ಸದರೀ ಕೃಷ್ಣಮಾಚಾರ್ಯರು ಇಂಗ್ಲಾಂಡಿಗೆ ಹೋದದ್ದರಿಂದ ಅದು ತಮಗೆ ಅಸಾಧ್ಯವೆಂದು ಭಾವಿಸಿ ಬಿಟ್ಟಂತೆ ಕಾಣುತ್ತದೆ. ಇಂಡ್ಯಾ ದೇಶದಲ್ಲಿ ಜನಿಸಿ ಮಂಕ ಹಿರಿಯರಿಂದವಾಗಿ ಹಿಂದೂವೆನಿಸಿಕೊಂಡಿದ್ದ ಇವರಿಗೆ ಮದ್ಯಪಾನವೂ ಮಾಂಸಭಕ್ಷಣವೂ ಅನಿವಾರ್ಯವಾಗಿ ತೋರಬಂದದರಿಂದ ಅವುಗಳಿಗೆ ಸಂಪೂರ್ಣ ಆಶ್ರಯಸ್ಥಾನವಾದ ಕ್ರಿಶ್ಚಿಯನ್ ಮತವನ್ನವಲಂಬಿಸದೆ ತ್ಯಜಿಸಿರಬಹುದು. ಬೌದ್ಧ ಸಿದ್ಧಾಂತಕ್ಕೆ ಸಂಪೂರ್ಣವಿರುದ್ಧವಾಗಿರತಕ್ಕ ಕ್ರಿಶ್ಚಿಯನ್ ಮತಸ್ಥರು ಸಹ ಈಗ ನಾಗರಿಕರಾಗಿಯೂ ತತ್ವಾನ್ವೇಷಣ ಪರರಾಗಿಯೂ ಇರುವುದರಿಂದ ಬೌದ್ಧಮತವನ್ನವಲಂಬಿಸುತ ಬರುವವರಿಂದಲೂ, ಬೌದ್ಧರ ಉಪದೇಶವು ಭೌತಿಕಶಾಸ್ತ್ರ ನಿರೂಪಣೆಗೆ ಅನುಗುಣವಾದದ್ದಾಗಿರುವದರಿಂದಲೂ, ಹಿಂದೂ ತತ್ವಗಳಿಗೆ ಅನಿರುದ್ಧವಾದದ್ದಾಗಿರುವದರಿಂದಲೂ ಇಂಡ್ಯಾ ದೇಶಕ್ಕೆ ಅನ್ಯರಾದ ಇದರಕ್ಕೆ ಸದರೀ ಮತಸ್ಥರ ಜಾತಿ ನಿಯಮಗಳು ಬಾಧಕವಾಗಿಸದವರಾಗಿರುವದರಿಂದಲೂ, ಇತರ ಮತಾಪೇಕ್ಷೆಯ ಮೇಲೆ ಕೂಡುವರಿಗೆ ಬೌದ್ಧಮತವು ಶ್ಲಾಘ್ಯವೆಂದು ತೋರಿದ್ದೇನೂ ಆಶ್ಚರ್ಯವಲ್ಲವು. ಪ್ರಕೃತ ಮತಸ್ಥರೊಡನೆ ಇವರಿಗೆ ಸಹವಾಸ ಸಂಭವಿಸುವವರು ಹ್ಯಾಗೆ ಅಸಾಧ್ಯವೆ ಎಂದರೂ ಯುಕ್ತವಿದ್ದ ವರಿಗೆ ಬೌದ್ಧಮತದ ನಿಯಮಗಳನ್ನು ಲೇಶವಲ್ಲದೆ ಅನುಸರಿಸುತ್ತಿದ್ದರೆ, ಬಹುಶಃ ಹಿಂದೂಗಳು ಮನುಷ್ಯಕ್ಕೆ ಎಳಿಸಿಕೊಳ್ಳುವ ಪ್ರಶಂಸೆಗೆ ಗುರುಗಳು ಅವರು ಅಂತಾ ಈ ಜಾತಿ ನಿಯಮವನ್ನು ಅನುಸರಿಸದವರು ಬೌದ್ಧಮತಾನುಸರಣವಾಗಿಯೂ, ಯಾವ ಸಂಬಂಧಕ್ಕೂ ತಮ್ಮ ವಿಶೇಷ ನಿಯಮಗಳಿಗೆ ಒಳಗಾಗಿಯೂ ಇದರಿಂದ ಕೇಡಿಲ್ಲ ಹಾಗೆಯೇ ಪ್ರತ್ಯೇಕವಾಗಿ ಲಭಿಸುವ ಪ್ರಯೋಜನವನ್ನು ಸ್ವಾರ್ಥವನ್ನು ಪೂರೈಸಿಕೊಳ್ಳುವವರು ಬೌದ್ಧರ ಹೇಳುತ್ತಿರುವ ಅವುಗಳು ಎಲ್ಲರಿಗಿಂತ ಹೆಚ್ಚು ಸ್ವಾತಂತ್ರ್ಯ ಎನ್ನುತ್ತಾರೆ.

LEGAL OATHS

ನ್ಯಾಯಸ್ಥಾನಗಳಲ್ಲಿ ಸಾಕ್ಷಿಗಾರರಿಂದಲೂ ಪ್ರತಿವಾದಿಗಳಿಂದಲೂ ಪ್ರಮಾಣಗಳನ್ನು ಮಾಡಿಸುವ ಕ್ರಮವು ಈಗ್ಗೆ ಬಹುಕಾಲದ ಹಿಂದಿನಿಂದ ಅನುವರ್ತಿಸಿ ಬರುತ್ತದೆ. ಇಂಗ್ಲಿಷ್ ಸರ್ಕಾರದವರು ಬಂದವರು ಅಥವಾ ಮಹಮ್ಮದೀಯರ ಆಡಳಿತದವರ ನಂತರ ನ್ಯಾಯಸ್ಥಾನಗಳಲ್ಲಿ ಪ್ರಮಾಣ ಮಾಡಿಸುತ್ತಿದ್ದ ಸಂಪ್ರದಾಯಕ್ಕೆ ಸರಿಕೊಂಡು ಪ್ರಾಣಿಕೊಡುವರನ್ನು ತಕ್ಕದ್ದಲ್ಲವು. ಕ್ರಿಶ್ಚಿಯನ್‌ರು ಪ್ರಮಾಣ ಮಾಡುವಾಗ್ಗೆ ಜಗತ್ಕರ್ತನ ಹೆಸರು ಮತ್ತು ಸತ್ಯವನ್ನು ಹೇಳುವಂತೆ ಸಾಕ್ಷಿಗೆ ಬೈಬಲ್ ಪುಸ್ತಕವನ್ನು ಮುಟ್ಟಿ ಪ್ರಮಾಣ ಮಾಡುತ್ತಾರೆ ಬಹ ಮುಸಲ್ಮಾನರು ಜಗತ್ಕರ್ತನ ಮತ್ತು ಖುರಾನಿನ ಸ್ಮರಿಸುವರು ಹಿಂದೂಗಳು ಸರ್ವಚೈತನ್ಯಸ್ವರೂಪವಾದ ಜಗದೀಶನನ್ನು ಸ್ಮರಿಸುವರು. ಈ ಪ್ರಮಾಣ ಹಿಂದೂ ಮತಕ್ಕೆ ಅನುರೂಪವಾದದ್ದಾಗಿದ್ದರೂ ಸಿಂಹಳ ಮಠಗಳಿಗೂ ಸಮಸ್ತಕ್ಕೂ ವಾದವಾಗಿರುತ್ತದೆ. ಅದುದರಿಂದಲೇ ಬೌದ್ಧರು ಇದಕ್ಕೆ ಆಕ್ಷೇಪಿಸಿದರು. ಹಿಂದೂ ಹಿರಿಯರು ಕೂಡ ಮೇಲೆ ಕಂಡ ವಾಕ್ಯವನ್ನೇ ಸ್ವೀಕರಿಸುತ್ತಾರೆ. ಹೀಗಿರುವ ಸಂದರ್ಭದಲ್ಲಿ ಹಿಂದೂವೆನಿಸದ ಒಬ್ಬ ನಾಸ್ತಿಕನು ಕೋರ್ಟಿನಲ್ಲಿ ಪ್ರಮಾಣ ಮಾಡುವಾಗ್ಯೆ ಪರಲೋಕದ ಸೂಚಿಕೆಯು ತನಗಿಲ್ಲವೆಂದು ಹೇಳಿದನು. ಮತ್ತೊಂದು ಸಂದರ್ಭದಲ್ಲಿ ಸಾಕ್ಷ್ಯ ಹೇಳುವ ವೊಬ್ಬನು ಪ್ರಮಾಣ ಮಾಡುವಾಗ್ಗೆ ಜಗತ್ತನ್ನು ಸೃಷ್ಟಿಸಿದ್ದ ಒಂದು ಗೋಚರ ವಸ್ತುವನ್ನು ನಂಬಲಿಕ್ಕಾಗದು ಆದರೂ ಇದೇ ನನ್ನ ಪ್ರಮಾಣವೆಂದು ಹೇಳಿದನಂತೆ. (ಇದರ ಅಭಿಪ್ರಾಯವೇನೆಂದರೆ, ಸೂಕ್ಷ್ಮರೂಪನಾದ ಪರಮಾತ್ಮನು ನಿತ್ಯವಾದ್ದರಿಂದ ಅದೇ ಬುದ್ಧಿಯು ಅನಿತ್ಯವೆಂಬ ಭಾವವು) ಇದು ಹೀಗಿರಲಿ. ನಮಗಂ ದೇಶದಲ್ಲಿ ಬೌದ್ಧರು ಮಾಡುವ ಪ್ರಮಾಣ ಕ್ರಮಗಳಿಂದ ಆ ಮತದವರ ತಾತ್ಪರ್ಯ ನಮಗೆ ವ್ಯಕ್ತವಾಗುತ್ತದೆ ಪ್ರಮಾಣ ಮಾಡತಕ್ಕವರು ಬುದ್ಧನ ವಿಗ್ರಹದ ಮುಂದೆ ಹೋಗಿ ನಿಂತುಕೊಂಡು ಈ ವಿಷಯದಲ್ಲಿ ಸತ್ಯವಾಗಿ ಬಂದು ನಿಂತಿರತಕ್ಕ ನಾನು ಪ್ರತಿಜ್ಞೆ ಮಾಡುವದೇನಂದರೆ, ನಾನು ಯಾವ ಪಕ್ಷವನ್ನಾಗಲಿ ಅವಲಂಬಿಸುವದಿಲ್ಲವು, ಯಾವ ದಾಕ್ಷಿಣ್ಯಕ್ಕೂ ಬದ್ಧನಲ್ಲವು. ನಾನು ನುಡಿಯುವದು ಸತ್ಯವಲ್ಲವಿದ್ದರೆ ಅನ್ಯರ ನಿರ್ಣಯಕ್ಕೆ ಅವಕಾಶವನ್ನುಂಟುಮಾಡಿದರೆ ನನ್ನ ಮಾತುಗಳು ಸುಳ್ಳಾದವಾದದ್ದಾಗಿದ್ದರೆ ಯಾವ ಪಾಪಿಷ್ಠವಾದ ಜಂತುಗಳ ಜನ್ಮದಲ್ಲಿ ನಾನೀಗ ನಿಂತಿರುವೆನೋ, ಅಂತಾ ಜಂತುವು ದ್ವಾದಶತತ್ವದೊಂದಿಗೆ ನನ್ನನ್ನು ಶಿಕ್ಷಿಸಲಿ, ನಾನು ನೋಡದಿರುವದನ್ನು ನೋಡಿದುದಾಗಿ ಹೇಳಿದರೆ, ತಿಳಿಯದಂತ ನನ್ನು ತಿಳಿದಂತೆ ನುಡಿದರೆ, ನಾನು ದಂಡನಾರ್ಹನಾಗುವೆನು, ಎಂದು ಪ್ರಮಾಣ ಮಾಡುತ್ತಾರಂತೆ ಹೀಗೆಯೇ ನಾನಾವಿಧ ನಿಯಮಗಳನ್ನೊಳಗೊಂಡಿರುವ ಪ್ರತಿಜ್ಞೆಗಳನ್ನು ಮಾಡುವಂತೆ ತಿಳಿಯಬರುತ್ತದೆ. ಮುಖ್ಯವಾಗಿ ತೀರ್ಥಕವಳ್ಳಿ ಅನೇಕ ಮರಗಳೂ, ಮರಸ್ಥಳಗಳೂ ಜನಗಳೂ ನಾಪ್ರಕಾರಗಳಾಗಿದ್ದಾಗ್ಯೂ ನಮಗೆ ಒಳ್ಳೆಯ ಪರಿಣಾಮವೂ ಜನ್ಮರಾಹಿತ್ಯವೂ ಪ್ರಾಪ್ತವಾಗಬೇಕೆಂಬ ಅಪರಮಾಪೇಕ್ಷೆಯಾಗಿರುವಂತೆ ತೋರುತ್ತದೆ.

Occasional Notes
ಪ್ರಾಸಂಗಿಕ ವಿಷಯಗಳು.

Cholera— ಮೈಸೂರು ಪಟ್ಟಣದ ಅನೇಕ ಸ್ಥಳಗಳಲ್ಲಿ ಕಾಲರಾ ರೋಗವು ಹೆಚ್ಚಾಗುತ್ತಿರುವದೆಂದು ಕೇಳುವದಕ್ಕೆ ವಿಷಾದಿಸುತ್ತೇವೆ.

Locusts — ಚಾಮರಾಜಪುರದ ಪ್ರಾಂತ್ಯದಲ್ಲಿ ಮಿಡತೆಗಳು ಒಂದು ಬೇಸಾಯದ ಫಸಲುಗಳು ಬಹಳ ಮಟ್ಟಿಗೆ ನಾಶವಾಗುತ್ತಿವೆಯೆಂದೂ ಅದರ ನಿವೃತ್ತಿಯನ್ನು ಅಧಿಕಾರಿಗಳು ಸಾಧ್ಯವಾದ ಪ್ರಯತ್ನಗಳನ್ನು ಮಾಡುತ್ತಿರುವಂತೆಯೂ ತಿಳಿಯುತ್ತದೆ.

Prevention of Small Pox — ಕಲ್ಕತ್ತೆಯ ಒಬ್ಬ ಹಿಂದೂ ವೈದ್ಯನು, ಸಿಡುಬಿನ ರೋಗವನ್ನು ಗುಣಪಡಿಸುವ ವಿಷಯದಲ್ಲಿ ಪ್ರಚಲಿತವಾಗಿರುವ ಕ್ರಮವನ್ನು ಬದಲಿಸಿ ಹೊಸ ರೀತಿಯಿಂದ ರೋಗನಿವಾರಣೆ ಮಾಡುವ ಔಷಧವನ್ನು ಕಂಡುಹಿಡಿದಿರುವದಾಗಿ ಪತ್ರಿಕೆಯೊಂದು ತಿಳಿಸುತ್ತದೆ.

A pension fund —ಮೈಸೂರು ಸರ್ಕಾರದವರು ಸರ್ಕಾರಿ ಉದ್ಯೋಗಸ್ಥರ ಕುಟುಂಬಕ್ಕಾಗಲಿ ಮೃತಪಟ್ಟವರ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಮುಂದೆ ಜೀವನಕ್ಕೆ ಅಥವಾ ಪೆನ್ಷನ್ ಕೊಡುವದಕ್ಕೆ ಏರ್ಪಾಡು ಮಾಡಲಿಲ್ಲವೆಂದು ತಿಳಿದು ಅವರ ಪ್ರತಿನಿಧಿಗಳು ಕೊಡತಕ್ಕ ನಿಯಮವನ್ನು ಸದರೀ ಜನರಿಗಾಗಿ ಪೆನ್ಷನ್ ಫಂಡನ್ನೇರ್ಪಡಿಸಬೇಕೆಂದು ಯೋಚಿಸುತ್ತಿರುವದಾಗಿ ತಿಳಿಯಬರುತ್ತದೆ.

The Leper Relief Fund—ಮುಂಬಯಿ ಪಟ್ಟಣದಲ್ಲಿ ಕುಷ್ಠರೋಗ ಪೀಡಿತರಾದವರ ಸಂಕಟ ಪರಿಹಾರಾರ್ಥ ಸ್ಥಾಪಿಸಲ್ಪಟ್ಟಿರುವ ಫಂಡನ್ನು ವೃದ್ಧಿಪಡಿಸುವ ಉದ್ದೇಶದೊಡನೆ ಸದರೀ ಪ್ರಿನ್ಸ್ ಆಫ್ ವೇಲ್ಸ್ ರವರು ಜನಗಳ ತಿಳುವಳಿಕೆಯ ಬಗ್ಗೆ ಒಂದು ಪ್ರಕಟನೆ ಕೊಟ್ಟಿರುತ್ತಾರೆ ಸದರೀ ಫಂಡಿಗೆ ಇದುವರೆಗೆ ಚಂದಾಮೂಲಕ ೮೦,೦೦೦ ಸಾವಿರ ರೂಪಾಯಿಗಳವರೆಗೆ ವಸೂಲಾಗಿದೆ. ಇನ್ನು ಅಧಿಕ ಹಣವು ಬೇಕಾಗಿದೆಯೆಂದು ಆ ಪ್ರಾಂತದ ಪತ್ರಿಕೆಯೊಂದು ತಿಳಿಸುತ್ತದೆ.

An extraordinary suit—ಈಚೆಗೆ ಶ್ರೀರಾಜಪುರದ ಡಿಸ್ಟ್ರಿಕ್ಟ್ ಕೋರ್ಟುಗಳಲ್ಲೊಂದರಲ್ಲಿ ಒಬ್ಬನು ತನ್ನ ಹೆಂಡತಿಯನ್ನು ಬೇರೆಯೊಬ್ಬರು ಸೆಳೆಕೊಂಡುಹೋದದ್ದಾಗಿ ಆ ದವರಮೇಲೆ ಕ್ರಿಮಿನಲ್ ದಾವೆ ತಂದು ವಿಚಾರಣೆ ನಡೆಯುತ್ತಿರುವಲ್ಲಿ ತನ್ನ ಹೆಂಡತಿಯನ್ನು ಎಳೆದೊಯ್ದವರನ್ನು ಅಪರಾಧಿಗಳೆಂದು ತಾನು ಅಪಾದನೆ ಮಾಡಿದ್ದರು ವಂತೆಯೂ, ಅಸತಿ ವೇಶ್ಯೆಯಾದ ಹೆಂಗಸರನ್ನು ಕೊಟ್ಟು ಬಿಡಿಸಿಕೊಳ್ಳುವವರಿಗೆ ಅದರ ಬದ್ಧಿಯ ಬಗ್ಗೆ ಆಕೆಯನ್ನು ಅಪರಾಧ ತನ್ನ ಸ್ವಾಧೀನದಲ್ಲಿಟ್ಟುಕೊಂ

...ರಬೇಕೆಂತಲೂ ತಿಳಿಸಿದನು. ಕೋರ್ಟಿನವ ರು ಕೇವಲ ಹಾಸ್ಯಾಸ್ಪದವಾದ ಈವಾದವು ಕೇ ಳತಕ್ಕೊಡದೆ ಮೊಕದ್ದಮೆಯು ತೆಳ್ಳಿಹಾಕಿದರು.

Murder.—ತಿರುವಾಂಕೂರು ಸಂಸ್ಥಾನಕ್ಕೆ ಸೇರಿದ ಪದ್ಮನಾಭ ಪುರದ ಮುನಸಫ್ ಕೋರ್ಟಿ ನಲ್ಲಿ ಒಂದು ಮೊಕದ್ದಮೆಯೊಳು ವಾದಿ ಪ್ರತಿ ವಾದಿಗಳಾದವರಿಗೆ ಪ್ರಬಲ್ಯೇಷ ವುಂಟಾಗಿದ್ದು ಸದರೀ ಮೊಕದ್ದಮೆಯು ಅವರಿಬ್ಬರ ಪೈಕಿ ಯೊಬ್ಬನಿಗೆ ಅನುಕೂಲವಾಗಿ ವ್ಯವಸ್ಥೆಯಾಯಿ ತು. ಅವರಮೇಲೆ ಸೋತವನು, ಗೆದ್ದವನು ದಾ ರಿಯಲ್ಲಿ ಹೋಗುತ್ತಿರುವಲ್ಲಿ ಅವನು ನಿದಕೊಂ ಡು [illegible] ಕತ್ತಿಗೊಂಬಲ್ಲಿ ತಿವಿದನು. ಅವನು ಅಲ್ಲೇ ಪ್ರಾಣಬಿಟ್ಟನಂತೆ.

Pollution of Indian river.—ಕಲ್ಕತ್ತೆ ಯೊಳು ಪ್ರಾಕೃತಿಕ ಆರೋಗ್ಯ ರಕ್ಷಣೆ ಯ ಬಗ್ಗೆ ಮೀಟಿಂಗ್ ನಡೆಸಿದವರು, [illegible] ನದಿಗಳ ನೀರನ್ನು ಕೆಡಿಸುವ ವಿಷಯದಲ್ಲಿ, [illegible] ಗಂಗಾನದಿಯು [illegible] ಮುಖ್ಯ ವಾಗಿ [illegible] [illegible] ಸಿರುತ್ತಾರೆ.

A remark by the Chief Justice.—[illegible] ಮೊಕದ್ದಮೆಗಳಲ್ಲಿ [illegible] ಮೊಕದ್ದಮೆಯು [illegible] ಗೊಳಿಸುತ್ತಾರೆ. ಈ ವಿಷಯದಲ್ಲಿ ಇಂಗ್ಲೀಷ ದೇಶದೊಳು, [illegible] ಮೊಕದ್ದಮೆಯು [illegible] ಕಾಲವು ವ್ಯರ್ಥವಾಗುವದಲ್ಲದೆ [illegible] ಬ್ಯಾರಿಸ್ಟರಿಗಳು ಬಹಳ ಹಣ ಸಂಪಾದಿಸುತ್ತಾರೆ ದ ಕ್ಷ ಕಾರಣ ವಿನಾ ಆಗಿಂತ ಬಹಳ [illegible] ಸಲ್ಲದೇಕು, ಎಂಬದು. ವಕೀಲರಿಗೆ ನಿಯಮ ದಲ್ಲಿ ಉಂಟುಮಾಡಲ್ಪಟ್ಟಿರುವ ನಿರ್ಬಂಧಗಳು ಮೀರದು ತಪ್ಪಿಸಲ್ಪಟ್ಟರೆ ಸ್ವದೇಶೀಯ ಜನ ರಿಗೆ ಬಹಳ ಉಪಕಾರವಾಗುವದು.

LOCAL AND PROVINCIAL NEWS.
ಸ್ಥಳೀಯ ಮತ್ತು ಪ್ರಾಂತ ವರ್ತಮಾನಗಳು.

The weather.—ಗತವಾರದಲ್ಲಿ ಈ ಪ್ರಾಂತ್ಯದಲ್ಲಿ ಸೂರ್ಯರಶ್ಮಿ ಇಲ್ಲದೆ ತುಂತುರು ಹನಿಗಳು ಬೀಳುತಲೂ ಚಳಿ ಅಧಿಕವಾಗಿರುತ್ತಿದ್ದಿತು. ಮಳೆಯು ಸಾಲದು. ಸಾಗುವಳಿಗೆ ಸ ಕ್ಷರ [illegible] ಕೆರೆಕಟ್ಟೆಗಳು ತುಂಬುವಷ್ಟು ಮಳೆಯು ಈ ಸಾಲಿನಲ್ಲಿ ದುರ್ಲಭವೆಂದು ತೋರುತ್ತದೆ.

University Examinations.—ಬರುವ ಡಿಸೆಂಬರ್ ತಿಂಗಳಲ್ಲಿ ಜರಗತಕ್ಕ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್ ಎಫ್. ಎ. ಪರೀಕ್ಷೆಗಳಿಗೆ ಹೋಗತಕ್ಕ ಉಮೇದವಾರರ ಅರ್ಜಿಯನ್ನು ಕೊಡತಕ್ಕ ಮಾಡತಕ್ಕ ಬಗ್ಗೆ ಸದರೀ ವಿದ್ಯಾರ್ಥಿಗ ಳೆಲ್ಲ ಆಯಾ ಸ್ಥಳದ ಸೆಂಟ್ರಲ್ ಕಾಲೇಜಿನಲ್ಲಿ ಪರೀಕ್ಷೆ ಜರುಗುವದಲ್ಲದೆ ಇದರಲ್ಲಿ ಸೇರಬೇಕಾ ಗತಕ್ಕವರು ಮಾಡಿರುವ ಮೇಲ್ಕಂಡ ಪರೀಕ್ಷೆಗಳಿ ಗೆ ತಮ್ಮ ಅರ್ಜಿಗಳನ್ನು ಕಳುಹಿಸುವರು.

Revertion.—ಬೆಂಗಳೂರು ಡಿಸ್ಟ್ರಿಕ್ಟ ಜ್ಯುಡಿಷಿಯಲ್ ರೆವಿನ್ಯೂ ಮುನ್ಸಿಫ್ ಮಿ|| ನಂಜುಂಡಯ್ಯ ನವರು ತುಮಕೂರು ಡಿಸ್ಟ್ರಿಕ್ಟ ಡೆಪ್ಯುಟಿ ಪೊಲೀಸ್ ಇನ್ಸ್‌ಪೆಕ್ಟರಾಗಿ ನೇಮಕವಾಗಿದ್ದರಷ್ಟೆ. ಇವರು ಪುನಃ ರೆವಿನ್ಯೂ ಮುನ್ಸಿಫ ಕೆಲಸಕ್ಕೆ ವಾಪಸ್ ಹೋಗತಕ್ಕದ್ದೆಂದು ಇನ್ಸ್ಪೆಕ್ಟರ್ ಜನರಲ್ ರವರು ಹುಕುಂ ಮಾಡಿರುವರೆಂದು ತಿಳಿಯಲಾದಲ್ಲಿ ಅವರ ಕೆಲಸಕ್ಕೆ ಇನ್ಸ್ಪೆಕ್ಟರ್ ಮಿ|| ಸಾಲಾರ್ ಖಾನರು ನೇಮಕರಾದರಂತೆ.

A new District Court.—ಈಗ ಚೀಫ್ ಕೋರ್ಟ್ ಜಡ್ಜಿಗಳಿಗೆ ಒರಿಜಿನಲ್ ಮೊಕದ್ದಮೆ ಗಳ ನಡವಳಿಯು ಅಧಿಕವಾಗುತ್ತ ಬರುವದರಿಂದ ಅವರು ಇತರ ಅಪೀಲ್ ಮೊಕದ್ದಮೆಗಳಿಗೆ ವಿಶೇಷ ಅವಧಾನ ಕೊಡುವದಕ್ಕೆ ಅವಕಾಶ ವಿಲ್ಲದ್ದರಿಂದಲೂ, ಈ ಪುರದಲ್ಲಿ ಪ್ರತ್ಯೇಕ ಡಿಸ್ಟ್ರಿಕ್ಟ ಕೋರ್ಟು ಸ್ಥಾಪನಾದ ಪಕ್ಷದಲ್ಲಿ ನೆರವಾಗುವದೆಂದು ವೆಂ ಕಂಡು ವೆ|| ರಾಮಚಂದ್ರಯ್ಯರವರು ಗವ ರ್ನ್ಮೆಂಟಿಗೆ ತಿಳಿಸಿದ್ದರ ಮೇಲೆ ಅದು ಬರುವ ತಿಂಗಳಲ್ಲಿ ಸ್ಥಾಪಿಸಲ್ಪಡುವದೆಂದು ಕೇ ಳುತ್ತೇವೆ. ಜಡ್ಜಿ ಯಾರು ಎಂಬದು ನಿಶ್ಚ ಯವಾಗಿ ತಿಳಿಯಲಿಲ್ಲವು.

Reception of H. H. the Maharaja of Mysore.—ಶ್ರೀಮನ್ಮಹಾರಾಜರವರು ಬ್ಲಾಕ್ ಅವೆ ಆಭ್ಯಂತರ ದಿನ ರಾತ್ರಿ ಮದರಾಸಿಗೆ ಹೊ ರಟು [illegible]. ಸೋಮವಾರದ ದಿನ ಬೆಳ ಗ್ಗೆ ಹೆಮಿಲ್ಟನ್ ಮೇಯರ್ ನೇತೃತ್ವದ ವರ್ಗ ಸೇರುವದಕ್ಕೆ ಪ್ರಧಾನಿಯಾಗಿ ಘನ ವುಳ್ಳ ವಿಜಯನಗರದ ಮಹಾರಾಜರವರು ರೈಲ್ವೆಸ್ಟೇಷನಿಗೆ ದಯಮಾಡಿ ಮೈಸೂರು ಮ ಹಾರಾಜರವರನ್ನು ಎದುರುಗೊಂಡು ಉಚಿತರೀತಿ ಯಿಂದ ಬರಮಾಡಿಕೊಂಡು ಇಬ್ಬರು ಮಹಾ ರಾಜರುಗಳೂ ಗಾಡಿಯಲ್ಲಿ ಕುಳಿತು ಮಹಾರಾಜರ ಬಂಗ್ಲೆಗೆ ದಯಮಾಡಿದರು. ಮರುದಿನ ವಿಜಯನಗರದ ಮಹಾರಾಜರವರು ಮೈಸೂರು ಮಹಾರಾಜರವರ ದರ್ಶನಾರ್ಥ ಅವರ ವಾಸಸ್ಥಾ ನಕ್ಕೆ ದಯಮಾಡಿದ್ದರು. ಅವರ ಮರುದಿವಸ ಮೈಸೂರು ಮಹಾರಾಜರವರು ವಿಜಯನಗರದ ಮಹಾರಾಜರವರ ಬಂಗ್ಲೆಗೆ ದಯಮಾಡಿದ್ದರು.

The Chief Court.—ಚೀಫ್ ಕೋರ್ಟ್ ಚೀಫ್ ಜಡ್ಜಿಯವರಾಗಿದ್ದ ಮಿ|| ಸಿ. ಜೆ. ಕ್ರ್ಯಾಮರ್ ವರು ಈ ಸಂಸ್ಥಾನದ ನೌಕರಿಯಿಂದ ನಿವೃತ್ತ ರಾಗುವಂತೆ ವ್ಯವಸ್ಥೆಯಾಗಿ ಅವರಿಗೆ ಗವರ್ನ್ಮೆಂಟಿನವರು ಎರಡು ವರ್ಷದ ಫರ್ಲೋ ರಜಾವನ್ನು ಮಂಜೂರಾಗಿ ಕೊಟ್ಟು ಅವರು ಪಾಪಸ್ ಆದಕೂಡಲೆ ಮುಖ್ಯಾಧಿಕಾರಿ ಯಾಗಿದ್ದು ಮಾಡಿದ ಶ್ಲಾಘ್ಯವಾದ ನೌಕರಿ ಯು ಬಹುಕಾಲವಾಗಿ ಕೂಡಿದ ಪ್ರಯೋಜನ ಗಳು ಬಹಳ ಮಾಸಿಕ ೧,೦೦೦ ರೂಪಾಯಿಗಳ ಪೆನ್ಷನ್ ಕೊಟ್ಟು ಮಾಡಿ ಕೊಟ್ಟಿದ್ದಾರಷ್ಟೆ. ಇವರ ಕೆಲಸ ವು ಈಗಿನ ಡೆಪ್ಯುಟಿ ಜಡ್ಜಿ ಮಿ|| ತಂಬು ಚೆಟ್ಟಿಯವರಿಗೆ ಕೊಡಲ್ಪಡುವದಲ್ಲದೆ ಇವರಿಗೆ ಮಾ ಸಿಕವಾಗಿ ೩,೦೦೦ ರೂಪಾಯಿಗಳ ಸಂಬಳ ಕೊ ಡಲ್ಪಡುವದೆಂದೂ, ಇವರ ಸ್ಥಾನಕ್ಕೆ ವಿದ್ವಾಂಸರ ರು ಒಬ್ಬರು ಬರುವ ಕೂಡಲೇ ನಿಯಮಿತರಾಗುವರೆಂ ದೂ ತಿಳಿಯಬರುತ್ತದೆ.

The late Mr. E. Sidney Smith.—ಈವರು ಆಫೀಸುಗಳಲ್ಲಿ ಪ್ರಸಿದ್ಧರಾಗಿ ಯೂ ಹಳಬರಾಗಿಯೂ ಕಷ್ಟಗಾರರ ಸೇವೆಗೆ ವಿಷಯವಾದವರಾಗಿಯೂ ಇರತಕ್ಕವರಲ್ಲದೆ ಬಹು ಬೇಗನೆ ಗತಿಸಿದರಲ್ಲ, ಕದಾಚಿತ್ ತಮ್ಮ ಕಸುಬನ್ನು ಬಿಟ್ಟು ವೃತ್ತ್ಯಂತರಗಳನ್ನವಲಂಬಿಸು ತಲೂ ಬರುವಂತೆ ಕಾಣುತ್ತದೆ. ಈಗ್ಗೆ ಕೆಲವು ದಿವಸಗಳಹಿಂದೆ ಮಿ|| ಡಿ. ಯವರೂ ಮಿ|| ಚೆಂ ಗಲ್ವರಾಯಮೊದಲಿಯಾರ್ರವರೂ ಕಾಲಗತಿಯ ನ್ನೈದಿದಂತ ತಿಳಿಸಿದ್ದೆವಷ್ಟೆ. ಈವಾರದಲ್ಲಿ ಪ್ರ ಸಿದ್ಧರಾಗಿದ್ದ ಅಡ್ವೊಕೇಟ್ ಮಿ|| ಇ. ಸಿಡ್ನೀ ಸ್ಮಿತ್ ಯವರು ಕಳೆದ ಬುಧವಾರದ ದಿನ ರಾತ್ರಿ ಸ ನಿಕ್ ವ ನಿಟಿಟಿಸ್ಟ್ರೇಷನ್ ರೆಜಿಮೆಂಟ್ ಟೌನಿ ನಲ್ಲಿನಕ್ಕೆ ಗ್ರಾಂಡ್ ಫೀಲ್ಡ್ ಯೆಂಬ ಬಂಗ್ಲೆಯಲ್ಲಿ ಕಾಲವಶರಾದರೆಂಬದು ತಿಳಿಸುವುದಕ್ಕೆ ನಾವು ಬಹ ಳ ವಿಷಾದಿಸುತ್ತೇವೆ. ಇವರಿಗೀಗ ೬೫ ವರು ಷಗಳ ವಯಸ್ಸಾಗಿರುತ್ತದೆ. ಇವರು ಪ್ರಜೆ ಗಳಲ್ಲಿ ಸ್ನಿಗ್ಧರಾಗಿಯೂ ಅಭಿಮಾನವುಳ್ಳವರಾ ಗಿಯೂ ಇದ್ದದರಿಂದ ಇವರ ಮರಣಕ್ಕಾಗಿ ಪ್ರ ಜೆಗಳು ಎಲ್ಲರೂ ವಿಷಾದಿಸದಿರಲಾರರು. ಮಿ|| ಸ್ಮಿತ್ ಸ್ಮಿತಿಯವರು ಗತಿಸುವದಕ್ಕೆ ಹಿಂದೆ ನಾ ಲ್ಕೈದು ದಿನಗಳವರೆಗೆ ಸಹ ಕೋರ್ಟಿಗೆ ಬಂದು ಮೊಕದ್ದಮೆಗಳನ್ನು ನಡಿಸಿದರು. ಮುಖ್ಯವಾ ಗಿ ಹಾರ್ಟ್ ಡಿಸೀಜ್ ಎಂಬ ವ್ಯಾಧಿಯಿಂದ ಗತಿಯನ್ನೈದಿದರೆಂದು ಪ್ರವಾದವು.

Postal Rules.—ಈ ವಾರದ ಮೈಸೂರು ಗೆಜೆಟಿನಲ್ಲಿ ಮೈಸೂರು ಸರ್ಕಾರದವರು, ಪೋಸ್ಟ್ ಮ್ಯಾಜಿಸ್ಟ್ರೇಟ್ ಪೋಸ್ಟ್ ಮೂಲಕ ಕಳುಹಿಸತಕ್ಕ ಸ್ಟಾಂಪ್ ಸರ್ಕಾರೀ ಸರ್ವೀಸ್ ಸರ್ಕಾರೀ ಕಾಗದ ಗಳಸಂಗಡ ಸರ್ಕಾರಿ ಉದ್ಯೋಗಸ್ಥರು ತಮ್ಮ ಸ್ವಂತ ಕಾಗದಗಳನ್ನು ಸೇರಿಸಿ ರವಾನಿಸಕೂ ಡದೆಂಬದಾಗಿ ಮರಳಿ ಜ್ಞಾಪಿಸಿ ಹುಕುಂ ಕೊಟ್ಟಿರುತ್ತಾರೆ. ಈ ಹುಕುಮನ್ನು ಜಾರಿ ಯಲ್ಲಿ ತರದಷ್ಟು ಅಕ್ರಮವೆಂಬದಾಗಿ ನಾವು ಭಾ ವಿಸಲಾರೆವು. ಈ ಹುಕುಮಿನ ಉದ್ದೇಶವು ಸರ್ಕಾರೀ ಯಲ್ಲದ ಇತರ ಕಾಗದಗಳು ಹಾಸ ಲಿಲ್ಲದೆ ರವಾನಿಸಲ್ಪಡಕೂಡದೆಂಬದಾಗಿರುವದು. ಹಾಗೆಯೇ ಸರ್ಕಾರೀ ಕಾಗದಗಳಿಗೆ ಇತರರು ದೊರವಾಗಿ ಹಾಸಲ್ ತೆರುವದು ಅಕ್ರಮವೆಂದು ತೋರಬೇಕಷ್ಟೆ. ಮುಸ್ಲಿಂ, ಇನಾಂದಾರರು ಪಟೇಲ್‌ದಾರರು, ಗ್ರಾಮದಲ್ಲಿ ಮುಖಂಡರಾದವ ರು, ಇಂಥವರಿಗೆ ಸರ್ಕಾರೀ ಕಾಗದಗಳು ಮು ಫತ್ ರವಾನೆಯಾಗುತ್ತವೆ. ಅವರು ಕೊಡತಕ್ಕ ಜವಾಬುಗಳಿಗೆ ಮಾತ್ರ ಅವರು ಹಾಸಲ್ ಕೊಟ್ಟು ಕಳುಹಿಸಬೇಕಾಗಿರುವದು. ಇದರಲ್ಲಿ ನ್ಯಾಯ ವೆಷ್ಟಿದೆಯೋ ನಾವರಿಯೆವು. ಅರ್ಜಿದಾರರು ಹಾ ಸಲ್ ಕೊಟ್ಟು ಅರ್ಜಿಗಳನ್ನು ರವಾನಿಸಿದರೆ ಸ ರ್ಕಾರದವರು ಬಗೆ ಹಾಸಲ್‌ನಿಂದ ಬಿಡುಗಡೆಯಾ ದಿ ಕಳುಹಿಸುತ್ತಾರೆ. ಹಾಗೆಯೇ ಮೇಲ್ಕಂಡ ಇನಾಂ ಪಟೇಲ್‌ದಾರರ ಪೋಷಣೆ ಎಷ್ಟುಮಾತ್ರ ವೂ ಇಲ್ಲದೆ, ಅಪ್ರಾಪ್ತ ಲೆಕ್ಕಗಳು, ಜನನ ಮರ ಣ ರಿಜಿಸ್ಟರುಗಳು, ಸೆನ್ಸಸ್ ರಿಪೋರ್ಟುಗಳು ಸರ್ಕಾರಿಯಾಗಿ ರವಾನಿಸಲ್ಪಟ್ಟಮೇಲೆ ಅವುಗ ಳಿಗೆ ಕೊಡಲ್ಪಡುವ ಜವಾಬುಗಳಿಗೆ ಮಾತ್ರ ಹಾ ಸಲ್ ತೆಗೆದುಕೊಳ್ಳುವರು. ಸರ್ಕಾರದವರು ಉ ಭಯಪಕ್ಷದವರ ನ್ಯಾಯವನ್ನೂ ಆಲೋಚಿಸಿದ ರೆ ಯೋಗ್ಯವಾಗಿರುವದು.

Theft in a temple.—ಕಾಲಗತಿಗೆ ತಕ್ಕಂ ತೆ ದೈವದ್ರೋಹಿಗಳೂ ಕಳವೆಯಾಗುತ ಬರುವಂತೆ ಕಾಣುತ್ತದೆ. ಈ ಕಾಲಯುಗದಲ್ಲಿ ಸಹ ಮೆಕ ಬಾಟಲ್, ಪ್ರಭಾಟಲ್, ಘುಟಕಾಟಲ ಮೊದಲಾ ದ ಕೆಲವು ಸ್ವಯಂ ವ್ಯಕ್ತಸ್ಥಳಗಳಾಗಿಯೂ ಜ ನಗಳ ಭಕ್ತಿ ಗೌರವಗಳಿಗೆ ಪಾತ್ರವಾಗಿಯೂ ಪರಪ್ರಸಾದ ಸ್ಥಾನಗಳಾಗಿಯೂ ಇರುವದರಿಂದ ಅಲ್ಲಿಗೆ ಯಾತ್ರಾರ್ಥಿಗಳಾದ ಜನಗಳು ಬಹುಮಂ ದಿಯೋಗಿ ಬರುವದರಿಂದ ಅಲ್ಲಿ ಅನರು ಮಾಡು ವ ಕಾಣಿಕೆ ಪ್ರಾರ್ಥನೆಗಳಿಂದ ದ್ರವ್ಯವು ಅಪರಿಮಿತ ವಾಗಿ ಜಮಾಯಿಸುತ್ತಿದ್ದು, ಅದನ್ನು ಕಾಪಾಡಿ ಉಚಿತವಾಗಿ ವಿನಿಯೋಗಿಸುವಂತೆ ಧರ್ಮಕರ್ತ ರ ದೌರ್ಭಾಗ್ಯದಿಂದ ದುರ್ವಿನಿಯೋಗವಾಗಲಿಕ್ಕೂ ಕಾರಣವಾಗುವದಲ್ಲದೆ ಕದಾಚಿತ್ ಚೋರರವಶ ವಾಗುವದಕ್ಕೆ ಸಹ ಅವಕಾಶವಾಗುತ್ತದೆ. ಜ್ಯೋ ಗುವದೆ—ತಿರುಪತಿ ದೇವಸ್ಥಾನದಲ್ಲಿ ಧ್ವಜಸ್ತಂ ಭದ ಕೆಳಗಿಡಲ್ಪಟ್ಟಿದ್ದ ದ್ರವ್ಯವನ್ನು ದುಷ್ಟ ರವರು ಸ್ವಂತಕ್ಕೆ ಬಳಸಿಕೊಂಡರೆಂದು ಅವರ ಮೇಲೆ ಆರೋಪಣೆಯಾಗಿ ಕಡೆಗೆ ಅವರು ಈಗ ತಿರುಚನಾಪಳ್ಳಿ ಜೆಯಿಲಿನಲ್ಲಿ ಸಜಾ ಅನುಭವಿಸು ತಲಿದ್ದಾರೆಯಷ್ಟೆ. ಹಾಗೆಯೇ ಮದರಾಸ್ ೧೮೭೦ ತಾರೀಖಿನ ದಿನ ಚೋಳಂಗಿಪುರದಲ್ಲಿರುವ ಶ್ರೀನೃ ಸಿಂಹಸ್ವಾಮಿಯವರಿಗೆ ಸೇರಿದ ೮೦,೦೦೦ ರೂಪಾಯಿ ಗಳ ಆಭರಣಗಳು ಕಳವಾದಂತೆಯೂ, ಶ್ರೀ ರಂಗದಲ್ಲಿ ದೇವಸ್ಥಾನಕ್ಕೆ ಸೇರಿದ ೧೬,೦೦೦ ರೂ ಪಾಯಿಗಳನ್ನು ಅದರ ಧರ್ಮಕರ್ತರು ಅಪಹ ರಿಸಿದರೆಂದು ಫಿರ್ಯಾದಾಗಿ ಅದರಮೇಲೆ ಮ ಧುರೆ ಡಿಸ್ಟ್ರಿಕ್ಟ ಜಡ್ಜಿಯವರು ಸದರೀ ಮೊ ಬಲಗನ್ನು ಧರ್ಮಕರ್ತರಿಂದ ವಸೂಲ್ಮಾಡಿ ಅದ ರನ್ನು ಬರತಕ್ಕ ವಸಾದಬೇಕೆಂಬದಾಗಿ ಹುಕುಂ ಮಾಡಿದರೆಂಬದಾಗಿಯೂ ತಿಳಿಯಲಾದೆವು. ಇ ವಲ್ಲದೆ ಈಗ ತಿರುಪತಿಯಲ್ಲಿ ಮಳೆಯಿಲ್ಲದೆ ಯೂ ಕುಡಿಯಲಿಕ್ಕೆ ನೀರಿಲ್ಲದೆಯೂ ಅಲ್ಲಿಯ ಲ್ಲಿ ಕನ್ನಡೋರಿ ಮೊದಲಾದ ಉಪದ್ರವಗಳಿ ಗೆ ಪ್ರಸಕ್ತಿಯುಳ್ಳದಾಗಿಯೂ ಇರುವಂತೆ ತಿಳಿಯಬ ರುತ್ತದೆ. ಇಂಥಾ ಸ್ವಯಂವ್ಯಕ್ತಸ್ಥಳಗಳಲ್ಲಿ ಜರುಗುವ ಅಕ್ರಮಗಳು ಅವ್ಯಕ್ತಗಳಾಗಿಯೇ ಇರುತ್ತವೆ.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ ಮಹಾರಾಜಾಬಹದ್ದೂರ್ ಬಹದ್ದೂರವರ ಸರ್ಕಾರದಿಂದ ಹೊರಹೋದ ಇಷ್ತಿಹಾರ್‌ನಾಮೆಗಳು

ನಂ. ೧೨೦. ತಾ|| ೧೯ನೇ ಆಗಸ್ಟ್ ೧೮೯೦—ಸರ್ಕಾರಿ ಕಾಗದ ಪತ್ರಗಳನ್ನು ಹಾಸಲಿಲ್ಲದೆ ಸ ರ್ಕಾರೀಯಾಗಿ ಸರ್ವೀಸ್ ಮಾಡಿ ಕಳುಹಿಸತಕ್ಕ ವಿ ಷಯದಲ್ಲಿ ಪೋಸ್ಟ್‌ಲ್ ರೂಲ್ಸ್ ಗಳಿಗೆ ತಮಾಂ ಸರ್ಕಾರ್ ನೌಕರರೂ ಮುಖ್ಯವಾಗಿ ಗಮನಿ ಕೊಡತಕ್ಕದ್ದು.

೨ ಹಾಸಲಿಲ್ಲದೆ ಮೈಸೂರು ಸರ್ಕಾರಿಯಾ ಗಿ ಕಳುಹಿಸಲ್ಪಡುವ ಲಕೋಟೆ ಮತ್ತು ಬಂಡ್ಲು ಗಳಲ್ಲಿ ಫಕ್ತ ಸರ್ಕಾರೀ ಕಾಗದಪತ್ರ ಮುಂತಾದ ವು ಮಾತ್ರವೇ ಅಡಗಿರತಕ್ಕದ್ದು. ಸರ್ಕಾರಿ ಅಥವಾ ಸೆಮಿ ಅಫಿಷಿಯಲ್ ಕಾಗದ ಪತ್ರಗಳನ್ನು ಕಳುಹಿಸುವವರ ಸಂಗಡ ಸ್ವಂತ ಕಾಗದಗಳು ಸದರೀ ಕಾಗದ ಪತ್ರಗಳೊಂದಿಗಾಗಲಿ ಅಥವಾ ಅವುಗಳ ಲಕೋಟೆಯಲ್ಲಿ ಯಾಗಲಿ ರವಾನಿಸ ಲ್ಪಡಕೂಡದು, ಡೆಪ್ಯುಟಿ ಕಮಿಷನರುಗಳು, ತ ಇಲಾಖೆಗಳ ಮುಖ್ಯ ಅಧಿಕಾರಿಗಳು, ಅವರ ಪರ ತಾಬೇದಾರರು ಈ ನಿಬಂಧನೆಗಳಿಗೆ ಪೂರಾ ನಿಗಾ ಕೊಡತಕ್ಕದ್ದೆಂದು ಹುಕುಂ ಮಾಡಬೇಕು.

ನಂ. ೧೯೦. ತಾ|| ೧೮ನೇ ಆಗಸ್ಟು ೧೮೯೦—ಶಿವಮೊಗ್ಗಾ ಡಿಸ್ಟ್ರಿಕ್ಟ ಅಸಿಸ್ಟೆಂಟ್ ಕಮಿಷ ನರ್ ಮಿ|| ಜೆಹೆಚ್. ಎ. ನಂಜುಂಡಯ್ಯನವರಿಗೆ ಅ ವರು ಪಡೆದುಕೊಂಡಿರುವ ತಾರೀಖ್ ಲಾಗಾಯಿ ತು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪ ಟ್ಟಿರುತ್ತದೆ.

ನಂ. ೧೯೧.—ಕ್ರಿಮಿನಲ್ ಪ್ರೊಸಿಜ್ಯುರ್ ಕೋಡ ೧೨ನೇ ಸೆಕ್ಷನ್ ಅನುಸರಿಸಿ, ಹಾಸನ ಡಿ|| ಮಂಜರಾಬಾದ್ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಸಿ. ನಾರಾಯಣರಾಯರವರಿಗೆ ಎರಡನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡ ಲ್ಪಟ್ಟಿರುತ್ತದೆಯಲ್ಲದೆ ಈ ಸಾಲ ಆಕ್ಟೋಬರ್‌ನ ಸಂಗಾತಿ ಪೆರೀಕ್ ೧೮೯೦ನೇ ಇಸವಿಯ ೧೩ನೇ ನಂಬರ್ ಪ್ರಿವೆನ್ಷನ್ ಆಫ್ ಕಂಟ್ರಾಕ್ಟ್ ಆಕ್ಟನ್ನನುಸ ರಿಸಿ ಅರ್ಜಿಗಳನ್ನು ವಿಚಾರಿಸಿ ಮಾಡತಕ್ಕ ಅ ಧಿಕಾರ ಸಹ ಕೊಡಲ್ಪಟ್ಟಿರುತ್ತದೆ.

ನಂ. ೧೯೨. ತಾ|| ೧೫ನೇ ಆಗಸ್ಟು ೧೮೯೦—ಬೆಂಗಳೂರು ತಾಲ್ಲೂಕ್ ಅಮಲ್ದಾರ್ ಬಿ. ಸೀತಾ ರಾಮಯ್ಯನವರಿಗೆ ೧೮೯೦ನೇ ಇಸವಿ ಆಗಸ್ಟು ೬ನೇ ಮಾರ್ಚ್ ಲಾಗಾಯಿತು ಹದಿನೈದು ದಿನಗ ಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ನಂ. ೧೯೪.—ತುರುವೇಕೆರೆ ಡೆಪ್ಯುಟಿ ಅಮಲ್ದಾರ್ ಮಹಮದ್ ಅಜೀಜರವರಿಗೆ ೧೮೯೦ನೇ ಇ ಸವಿ ಜುಲೈ ೧೮ನೇ ಹುಕುಂ ೧೩೩ನೇ ನಂ ಬರ್ ಇಸ್ತಿಹಾರ್‌ಮೂಲಕ ಕೊಡಲ್ಪಟ್ಟಿದ್ದ ರಜಾ

ಸ್ಯದು ದಿನಗಳ ಪ್ರಿವಿಲೇಜ್ ರಜಾ ಎರಡು ತಿಂಗಳು ಏಳು ದಿನಗಳ ತನಕ ಜಾಸ್ತೀ ಮಾಡಲ್ಪಟ್ಟಿರುತ್ತದೆ.

ನಂ. ೧೯೪.—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ ೧೦ನೇ ಸೆಕ್ಷನ್ ಅನುಸರಿಸಿ ಇವರಡಿಕಂಡ ಅಮಲ್ದಾರರಿಗೆ ರೆಯಿಲ್ವೇ ಆಕ್ಟಿಗೊಳಪಟ್ಟ ಕೇಸ್ಗಳನ್ನು ವಿಚಾರಿಸಿ ಫೈಸಲ್ಮಾಡತಕ್ಕ ಬಗ್ಗೆ ಎರಡನೇ ಕ್ಲಾಸ್ ಮ್ಯಾಜಿಸ್ಟ್ರೇಟರ ಸಾಧಾರಣ ಅಧಿಕಾರಗಳು ಇದರಿಂದ ಕೊಡಲ್ಪಟ್ಟಿರುತ್ತದೆ.

ಹರೀಕೆರೆ ತಾ|| ಅಮಲ್ದಾರ್ ಶ್ರೀನಿವಾಸರಾಯರವರು.

ಕಡೂರು ತಾ|| ಅಮಲ್ದಾರ್ ಶ್ರೀನಿವಾಸರಾಯರವರು.

ಹೊಳಲ್ಕೆರೆ ತಾ|| ಅಮಲ್ದಾರ್ ಕೇಶವಯ್ಯಂಗಾರ್ರವರು.

ದಾವಣಗೆರೆ ತಾ|| ಅಮಲ್ದಾರ್ ಕೃಷ್ಣರಾಯರವರು.

ನಂ. ೧೯೨.—ತಾ|| ೧೬ನೇ ಆಗಸ್ಟು ೧೮೯೦ ಇವರಡಿ ಕಂಡ ಬದಲಾವಣೆಗಳು ಹುಕುಂ ಮಾಡಲ್ಪಟ್ಟಿರುತ್ತವೆ. ಡೆಪ್ಯುಟಿ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮೆ|| ವಿ. ಪಿ. ಮಾಧವರಾಯರವರು ಶಿವಮೊಗ್ಗ ಡಿಸ್ಟ್ರಿಕ್ಟಿನಿಂದ ಬೆಂಗಳೂರು ಡಿಸ್ಟ್ರಿಕ್ಟಿಗೆ,—ಡೆಪ್ಯುಟಿ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮೆ|| ಅಬ್ದುರ್ರಹಿಮಾನರವರು ಬೆಂಗಳೂರು ಡಿಸ್ಟ್ರಿಕ್ಟಿನಿಂದ ಶಿವಮೊಗ್ಗ ಡಿಸ್ಟ್ರಿಕ್ಟಿಗೆ ಮೆ|| ಸ್ಟರ್ ಮಾಧವರಾಯರವರು ಒಂದು ಕೆಲಸದಿಂದ ಬಿಡುಗಡೆ ಮಾಡಿದಕೂಡಲೇ ಕೆಲಸದಮೇಲೆ ಹೋಗಿ ಹಾಜರಾಗತಕ್ಕದ್ದು.

ನಂ. ೧೯೩.—ಮೈಸೂರು ಚೀಫ್ ಕೋರ್ಟ್ ಚೀಫ್ ಜಡ್ಜಿಯವರಾದ ಮೆ|| ಸಿ. ಜೆ. ಕ್ಯಾಂಡಿ ಯವರಿಗೆ ೧೮೯೦ನೇ ಇಸವಿ ಜೂಲೈ ೩ನೇ ಮಾರ್ಕ೧೯ ಎ. ನಂಬರುಳ್ಳ ಇಸ್ತಿಹಾರ್ನಾಮೆಯ ಮೂಲಕ ಕೊಡಲ್ಪಟ್ಟಿದ್ದ ಫರ್ಲೋ ರಜಾ ೯ನೇ ಇಸವಿ ಫೆಬ್ರವರಿ ೨೪ನೇ ಮಾರ್ಕ೧೯ ವರಿವಿಗೆ ಇದರಿಂದ ಜಾಸ್ತೀ ಮಾಡಲ್ಪಟ್ಟಿರುತ್ತದೆ.

ನಂ. ೧೯೪.—ಫ್ರಾಂಟಿಯರ್ಸ್ ಸರವೆಜಿಲ ಪೋಲೀಸ್ ಅಸಿಸ್ಟೆಂಟ್ ಕಮಿಷನರ್ ಮೆ|| ಜೆ. ಜೆ. ನಾರ್ಥ್ ಯವರಿಗೆ ೯ನೇ ಇಸವಿ ಏಪ್ರಿಲ್ ೧೭ ಮತ್ತು ಜೂಲೈ ೩ನೇ ಮಾರ್ಕ೧೯ ಉಳ್ಳ ಇಸ್ತಿಹಾರ್ನಾಮೆಗಳ ಮೂಲಕ ಕೊಡಲ್ಪಟ್ಟಿದ್ದ ನಾಲ್ಕು ತಿಂಗಳ ಫರ್ಲೋ ರಜಾ ಇದರಿಂದ ಇನ್ನೂ ಮೂರು ತಿಂಗಳ ತನಕ ಜಾಸ್ತೀ ಮಾಡಲ್ಪಟ್ಟಿರುತ್ತದೆ.

೧೯೪—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ ೧೦ನೇ ಸೆಕ್ಷನ್ ಅನುಸರಿಸಿ ಇವರಡಿ ಕಂಡ ಮುನ್ಸಫರುಗಳಿಗೆ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಒಂದನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ

(೧) ಹಾಸನದ ಮುನ್ಸಫ್ ಮೆ|| ಟಿ. ಜೆ. ಪ್ಯಾಟರ್ಸನ್.

(೨) ಚಿತ್ರದುರ್ಗದ ಮುನ್ಸಫ್ ಮೆ|| ಎ. ಮಂಗನಯನಾಯುಡು.

(೩) ತುಮಕೂರ ಮುನ್ಸಫ್ ಮೆ|| ಎಸ್. ವರದರಾಜಯ್ಯಂಗಾರ್ರು.

(೪) ಚಿಕ್ಕಮಗಳೂರು ಮುನ್ಸಫ್ ಮೆ|| ಪಿ. ವೆಂಕಟಾರ್ಯರವರು.

ನಂ. ೨೦೧. ತಾ|| ೧೯ನೇ ಆಗಸ್ಟ್ ೧೮೯೦—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ ೧೦ನೇ ಸೆಕ್ಷನ್ ಅನುಸರಿಸಿ, ಚಿಕ್ಕ ಮಗಳೂರು ಮುನ್ಸಫ್ ಮತ್ತು ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಪಿ. ವೆಂಕಟಾರ್ಯರವರಿಗೆ ೧೮೭೫ನೇ ಇಸವಿಯ ೩೧ನೇ ನಂಬರ್ ಬ್ರೀಚ್ ಆಫ್ ಕಂಟ್ರ್ಯಾಕ್ಟ್ ಆಕ್ಟನ್ನ ನುಸರಿಸಿ ಮೊಕದ್ದಮೆಗಳನ್ನು ಬರ್ತ್ಫ್ ಮಾಡುವದಕ್ಕೆ ಅಧಿಕಾರವು ಈ ಸಾರೆ ಆರ್ಡರ್ ವರಿವಿಗೆ ಹುಂಗಾಮಿ ತರೀಕ್ ಕೊಡಲ್ಪಟ್ಟಿರುತ್ತದೆ.

ನಂ. ೧೩೭.—ಕೋಲಾರ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಮೆ|| ಸಿ. ರಾಮಚಾರ್ಲು ಬಿ. ಎ. ಯವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಏಡದು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

SUMMARY OF NEWS.

ವೃತ್ತಾಂತಸಂಗ್ರಹವು.

ಜಾಂಜಿಬಾರಿನ ಕಡೆಗೆ ದೋಣಿಗಳ ಕಡೆಯಿಂದ ಪತ್ರಗಳನ್ನು ಮುಟ್ಟಿಸುತ್ತಾರೆ. ಈ ದೋಣಿಗಳು ೬ ತಾಸಿನಲ್ಲಿ ೧೮೨ ಮೈಲುಗಳ ದೂರ ಹೋಗುತವೆ!

ಒಬ್ಬ ಫ್ರೆಂಚ್ ಸೀಯು ಬಡವರಾದ ಫ್ರೆಂಚ್ ಸರ ಹುಡುಗರ ಉಪನಯನಕ್ಕೆ ಹುಡಿಗಿಯರ ವಿವಾಹಕ್ಕೂ ಹತ್ತು ಸಾವಿರ ರೂಪಾಯಿಗಳನ್ನು ಇಟ್ಟು ಅವರ ಬಡ್ಡಿಯನ್ನು ವಿನಿಯೋಗಿಸುವ ಕೆ ಏರ್ಪಾಡು ಮಾಡಿದ್ದಾನೆ.

ಸೇಂಟ್ ಪೀಟರ್ಸ್ ಬರ್ಗ್ ಎಂಬ ಪಟ್ಟಣದಲ್ಲಿ ಒಬ್ಬ ಸ್ತ್ರೀಯು ಅನಾಥರಾದ ಮಕ್ಕಳನ್ನು ಹತ್ತಿ ದಾಳಿ, ಅವುಗಳಲ್ಲಿ ಒಂದು ೪೦೦ ರೂಪಾಯಿಗಳ ತೋಳನ್ನೂ, ಮತ್ತೊಂದು ೩೦ ರೂಪಾಯಿಗಳ ತೋಳವೂ ಇವೆಯಂತೆ.

ತುರ್ಕೀ ಸುಲ್ತಾನರವರಿಗೆ ವಿವಾಹಿತರಾದ ಅನೇಕ ಹರಿಗಳು ಹುಡಿಯರು ಇದ್ದಾರೆ, ಬಲ್ಯಮುಂದಿಯೂ, ಸಾಮಾನ್ಯವಾಗಿ ಅವರಪ್ರೀತಿಗೆ ವಿಧವೆಯರಾದ ಅನ್ನಾದಿ ಇನಿತ್ತು ಮಂದಿಯ ಗನರೂ ಇನುತ್ತಾರೆ. ಈ ಜನರ ಚಾಕರಿಯನ್ನು ಪಡಬೆಯು ಬಗ್ಗೆ ೫೦೦ ನುಂದಿ ಹೆಂಗಸರಿದ್ದು ಟ್ಟಿರುತ್ತಾರೆ. ತುರ್ಕೀ ಸಂಸ್ಥಾನದ ಸೌಕರಿಯ ನ್ಲಿರತಕ್ಕವರ ಪೈಕಿ ಮೇಲೆ ತಿಳಿಸಿದವರಿಗೆ ನಾಲ್ಕನೇ ಕ್ರಮವಾಗಿ ಪಲಗಳು ಸಲ್ಲುತ್ತಿರುತ್ತವೆ.

ಟಿಹಾಂಟಿಪೆಕ್ ಎಂಬ ಭೂಸಂಧಿಯಲ್ಲಿ ಅತ್ಯಾಶ್ಚರ್ಯವಾದ ಪುಷ್ಪ ಒಂದು ಸಿಕ್ಕಿರುವುದು. ಇದರ ಮರವು, ಸ್ವಲ್ಪ ದೆಟ್ಟಾ ಕವಚಮಾದರೂ, ಇಲ್ಲಿನ ಸೀಬೇ ಮರದಂತಿರುವದು. ಬೆಳಗ್ಗೆ ಬೆಳ್ಳಗಿರುವದು ಮಧ್ಯಾಹ್ನ ೨ ಘಂಟೆಯಲ್ಲಿ ಕೆಂಪಾಗುವದು. ರಾತ್ರಿಯಲ್ಲಿ, ರಾತ್ರಿಯನ್ನೇ ಹೋಲುವದು! ಈ ರೀತಿಯಲ್ಲಿ ಕಾಲಾನುಸಾರವಾಗಿ ಬಣ್ಣವನ್ನು ಸ್ವತಃ ಬದಲಾಯಿಸುತ್ತಿರುವ ಈ ಪುಷ್ಪದ ಗಂಧವನ್ನು ಮಧ್ಯಾಹ್ನದಲ್ಲಿ ಮತ್ತಿನಾವಾಗಲೂ ತಿಳಿಯಲಿಕ್ಕಿಲ್ಲವು!

ಪಶ್ಚಿಮ ತುರ್ಕಿಸ್ಥಾನದಲ್ಲಿ ಪಾಠಶಾಲೆಗಳು ಬಹಳ ಇಲ್ಲದಿರುವದರಿಂದ ರಷ್ಯಾಗವರ್ನಮೆಂಟನವರು, ನೂತನವಾದ ಒಂದು ಪದ್ಧತಿಯನ್ನು ಏರ್ಪಡಿಸಿರುವರು. ಅದೇನೆಂದರೆ.—ರೈಲ್ ಗಾಡಿಗಳನ್ನೇ ವಿದ್ಯಾಶಾಲೆಗಳನ್ನಾಗಿ ಮಾಡಿ, ಅಲ್ಲಿ ಒಬ್ಬ ಉಪಾಧ್ಯಾಯರನ್ನು ನೇಮಿಸಿ ಊರೂರುಗಳಿಗೆ ಗಾಡಿಯನ್ನು ಕಳುಹಿಸುವರು. ಈ ಗಾಡಿಯು ಒಂದು ಸ್ಥಳವನ್ನು ಸೇರಿದ ಮೇಲೆ ವಿದ್ಯಾಭ್ಯಾಸವನ್ನು ಮಾಡತಕ್ಕೆವರಿರುವವರು ಅಲ್ಲಿ ಹೋಗಿ ಪಾಠವನ್ನು ಹೇಳಿಸಿಕೊಂಡಮೇಲೆ ಆ ವಿದ್ಯಾರ್ಥಿಗಳನ್ನು ಅಲ್ಲೇ ಬಿಟ್ಟು, ಮುಂದಿನ ಸ್ಥಳಕ್ಕೆ ಪ್ರಯಾಣ ಮಾಡಿ ಅಲ್ಲೂ ಇದೇರೀತಿಯಲ್ಲಿ ಪಾಠ ಹೇಳುತ್ತಾ, ಇದೇರೀತಿಗೆ, ಬಾಕಾಲೆಯೇ ಊರಿಂದೂರಿಗೆ ಪ್ರಯಾಣ ಮಾಡುತ್ತಾ, ವಿದ್ಯಾಭ್ಯಾಸವನ್ನು ಮಾಡಿಸುತ್ತಿರುವರು.

ಅಲಿಪುರದಲ್ಲಿ ಒಬ್ಬ ಮಹಮ್ಮದೀಯನು ಒಬ್ಬ ದೊಡ್ಡ ಸಾಹುಕಾರನ ಮನೆಯ ಒಂದು ಪಾರ್ಶ್ವದಲ್ಲಿ ಬಾಡಿಗೆಯನ್ನು ಕೊಟ್ಟುಕೊಂಡು ತನ್ನ ಪತ್ನಿಯೊಡನೆ ಸುಖವಾಗಿದ್ದನು. ಕೆಲವುದಿನಗಳ ತರುವಾಯ ಆಮನೆಯ ಯಜಮಾನನಿಗೂ ತನ್ನ ಪತ್ನಿಗೂ ಸಂಬಂಧವಿರುವದೆಂದು ಸ್ರಾಹಿಸಿ ಆಕೆಯನ್ನು ಬೇರೆ ಮನೆಗೆ ಕರೆಯಲು ಬರಲಿಲ್ಲ ಮೆಂದು ತಾನೇ ಆಮನೆಯನ್ನು ಬಿಟ್ಟುಹೋಗಿ ದೂರ ವಾಸಮಾಡುತ್ತ ನಡೆಸಿ ವಾರದೆಯಂದು ವನ ಆಕೆಯ ಸೌಂದರ್ಯವನ್ನು ಕೆಡಿಸುವದಕ್ಕಾಗಿ ಎಂದು ಅಂಗಳಕ್ಕೆ ಹೋಗಲು ಅಲ್ಲಿ ಅವಳನ್ನು ಕಂಡು ಒಂದು ದೊಡ್ಡ ಕತ್ತಿಯಿಂದ ತಲೆಯನ್ನು ಹೊಡೆದುಕೊಂಡನು. ಇದು ರುಜುವಾತಾಗಿ ಅವನನ್ನು ನೇಣಿನ ಮೇಲೆ ಕಳುಹಿಸುವಂತೆ ತೀರ್ಮಾನವಾಯಿತು.

ಅಮೆರಿಕಾ ಖಂಡದಲ್ಲಿರುವ ರೋಮಾ ಎಂಬ ಸ್ಥಳದಲ್ಲಿ ಒಂದು ದಿನರಾತ್ರಿ ಬಾಲಚುಕ್ಕೆಯು ಹಾಗೆ ಒಂದು ನಕ್ಷತ್ರವು ಪ್ರಕಾಶವಾಗಿ ಕಾಣುವದಕ್ಕೆ ಉಪಕ್ರಮವಾಯಿತು. ಆಮೇಲೆ ಅದು ಅಂತರಿಕ್ಷದಲ್ಲಿ ವೇಗವಾಗಿ ನಡೆಯುವದಕ್ಕೆ ಉಪಕ್ರಮವಾದಾಗ ಅದರಿಂದ ಕಿಡಿಗಳು ಉದುರುತ ಲಿದ್ದದಲ್ಲದೆ ಸಿಡಿಲಿನಂತೆ ಶಬ್ದಕೂಡ ಆಗುತಿತ್ತು. ಹಾಗೆ ಅದು ಪ್ಯುಬ್ಲೋಗೋ ಎಂಬ ಸ್ಥಳದಲ್ಲಿರುವ ಒಂದು ಅರಣ್ಯದಲ್ಲಿ ಬಿದ್ದಿದ್ದರಿಂದ ಕೆಲವು ಚೂರುಗಳಲ್ಲಿ ಒಂದು ದೊಡ್ಡ ಚೂರು ಸಿಕ್ಕಿತು. ಅದು ೧೧೦ ಪೌಂಡು ಅಥವಾ ೧೩ ಮಣಗಳ ತೂಕವಿತ್ತು. ಅದನ್ನು ಒಡೆದು ನೋಡುವಾಗ್ಯೆ ಕಬ್ಬಿಣ ಸುಣ್ಣ ಮಣ್ಣು ಕಲ್ಲು ಮುಂತಾದ ಪದಾರ್ಥಗಳು ತುಂಬಿದ್ದವಂತೆ.

ಅಮೆರಿಕಾ ಖಂಡದಲ್ಲಿರುವ ಕ್ಯಾಲಿಫೋರ್ನಿಯಾ ಎಂಬ ಭಾಗದಲ್ಲಿ ಪ್ರಪಂಚದಲ್ಲಿರುವ ವೃಕ್ಷಗಳೆಲ್ಲಕ್ಕೂ ಕೆಲವು ಮರಗಳು ಬಹಳ ದೊಡ್ಡವಾಗಿಯೂ, ಅನೇಕವರ್ಷಗಳು ಬೆಳೆದಿರುವವಾಗಿಯೂ ಇರುವವು. ಇಂತಾ ಮರಗಳು ಒಂದುರಸ್ತೆಯ ಫಾರ್ಸ್ಟ್ ನಲ್ಲಿ ಕೆಲವು ಇವೆ. ಇವುಗಳಲ್ಲಿ ಒಂದು ಹೋಟೆಲನ್ನು ಏರ್ಪಡಿಸಿದ್ದಾರೆ. ಹ್ಯಾಗೆಂದರೆ, ಒಂದು ಮರದಲ್ಲಿರುವ ಪೊಟರೆಯು ವಿಸ್ತಾರವಾಗಿದೆ. ಅದರಲ್ಲಿ ಪ್ರಯಾಣಿಕರು ವಿಶ್ರಮಿಸಿಕೊಳ್ಳುವದಕ್ಕಾಗಿ ಕುರ್ಚಿಗಳನ್ನೂ ಸೋಫಾಗಳನ್ನೂ ಹಾಕಿದಾರೆ ಮತ್ತು ಅನುಭವ ಕೊಠಡಿಗಳ ಕೆಳಗೆ ಊಟಮಾಡುವದಕ್ಕೆ ಸ್ಥಳಗಳನ್ನು ಏರ್ಪಾಡುಮಾಡಿದಾರೆ. ಮತ್ತು ಅದರ ಸುತ್ತುಮುತ್ತು ಇರುವ ಮರಗಳ ಪೊಟರೆಗಳಲ್ಲಿ ಮಲಗಿಕೊಳ್ಳುವವರಿಗೆ ಮಂಚಗಳನ್ನು ಹಾಕಿ ಕೊಠಡಿಗಳನ್ನಾಗಿ ಏರ್ಪಾಡುಮಾಡಿದಾರೆ. ಇದಲ್ಲದೆ ಇನ್ನೂ ಸ್ವಲ್ಪದೂರದಲ್ಲಿರುವ ಮರಗಳ ಪೊಟರೆಗಳು ಹೋಟೆಲಿಗೆ ನೇಮಿಸಿರುವ ನೌಕರರ ವಾಸದ ಮನೆಗಳಾಗಿವೆ.

ಯೂರೋಪ್ ಖಂಡದಲ್ಲಿ ಈಗ ನೂತನವಾದ ಮೂರು ಗಾನವಾದ್ಯ ವಿಶೇಷಗಳು ತಯಾರಾಗಿವೆ. ಅವುಗಳಲ್ಲಿ ಮೊದಲನೇದು ಅಗಾಧವಾದ ಪಿಟೀಲು. ಇದು ೧೪ ಅಡಿಗಳ ಉದ್ದ ೪½ ಅಡಿಗಳ ಅಗಲವಿದೆ. ಇದನ್ನು ಒಂದು ಯಂತ್ರದಮೇಲೆ ಇಟ್ಟಿರುತ್ತಾರೆ. ನುಡಿಸತಕ್ಕವರು ಆ ಯಂತ್ರದಮೇಲೆ ಕೂತುಕೊಂಡು ಅದ್ಭುತವೇಗದಿಂದ ಪಟಲದಮೇಲೆ ದಿಕ್ಕನ್ನು ಎಳೆಯುತ್ತಾ ನುಡಿಸುತ್ತಾರೆ. ಮೆಕ್ಯಾನಿಕಲ್ ಎಂಬ ಮತ್ತೊಂದು ವಾದ್ಯವು ಇದು ಹೊಗೆಯಂತ್ರದ ಸಹಾಯದಿಂದ ನುಡಿಸಲ್ಪಡುವದು. ಇದರ ಗಾನವು ನಾಲ್ಕು ಮೈಲುಗಳಿಗೆ ಚೆನ್ನಾಗಿ ಕೇಳಲ್ಪಡುವದು. ಇನ್ನಲ್ಲದೆ ಇಪರೀಷಿಯದಲ್ಲಿ ಒಬ್ಬನು ಪಿಯಾನೋ ಪೆಟ್ಟಿಗೆಯನ್ನು ತಯಾರುಮಾಡಿದಾನೆ ಅವನು ಅದನ್ನು ತನ್ನ ಮೂಗಿನಲ್ಲಿಟ್ಟುಕೊಂಡು ನುಡಿಸುವಾಗ ಬಾಯಿಯಲ್ಲಿ ಚುಟ್ಟಾ ಸೇದುವವನಾಗಿ ಹಾಡುವವನಾಗಿ ಅಥವಾ ಊಟಮಾಡುವವನಾಗಿ ಒಂದುವೇಳೆ ಪಾನಾದಿಗಳನ್ನು ಮಾಡುವವನಾಗಿ ಯಾವದಕ್ಕೂ ಅಡ್ಡಿಯಾಗದಂತೆ ಆಕೊಳವೆಯನ್ನು ನುಡಿಸುತಲೇ ಇರುವನಂತೆ.—ಚಿ.

EXTRATS

ಕಳೆದ ಸೋಮವಾರದಲ್ಲಿ ಹಿರಿಯೋಬೆಳತ್ತೂರ ಹಿರೀಮಳ್ಳಿ ಎಂಬ ಗ್ರಾಮದಲ್ಲಿ ಒಬ್ಬ ಒಕ್ಕಲಿಗನು ಗದ್ದೇ ಬದು ಹಾಕುತ್ತಾ ಇರುವಾಗ ಅಲ್ಲಿ ಒಂದು ನಾಗರಹಾವು ಮಲಗಿತ್ತು. ಇದನ್ನು ಕಾಣದೆ ಬದುಹಾಕುವದಕ್ಕೆ ಅಗೆಯುವಾಗ ಗುದ್ದಲಿಯೇಟು ಹಾವಿನ ಮಧ್ಯಭಾಗಕ್ಕೆ ಬಿದ್ದು ಎರಡು ತುಂಡಾಯಿತು. ತುಂಡಾದಮೇವ್ಯು ಬಂದು ಇವನ ಕಾಲನ್ನು ಕಚ್ಚಿ ತಾನೂ ಸತ್ತುಹೋಯಿತು. ಅಲ್ಲಿ ಇವನು ಕೂಗಿಕೊಳ್ಳಲು ಅಕ್ಕಪಕ್ಕದಲ್ಲಿದ್ದ ರೈತರು ಓಡಿಬಂದು ಇವನಿಗೆ ವಿಷ ಏರದಹಾಗೆ ಕಾಲನ್ನು ಭದ್ರವಾಗಿ ಕಟ್ಟಿ ಆಮೇಲೆ ಇವನನ್ನು ಹೊತ್ತುಕೊಂಡು ಆಸ್ಪತ್ರಿಗೆ ಕರೆದುಕೊಂಡು ಬಂದರು. ಆಸ್ಪತ್ರಿ ಅಸಿಸ್ಟೆಂಟ್ ರವರು ಇವನ ಕಾಲನ್ನು ಗಾಯಮಾಡಿ ವಿಷರಕ್ತವನ್ನು ತೆಗೆದುದಲ್ಲದೆ ಒಂದು ಕೋಳಿಯನ್ನು ತೆಗೆದುಕೊಂಡು ಬಂದು ಅದರ ಪುಕ್ಕಗಳನ್ನು ತರಿದು ಅದರ ಪೃಷ್ಠಭಾಗದಲ್ಲಿ ಸ್ವಲ್ಪ ಗಾಯಮಾಡಿ ಅದನ್ನು ಕಚ್ಚಿದಸ್ಥಳದಲ್ಲಿ ಸೇರಿಸಿ ಹಿಡಿಯಲು ವಿಷದ ಪ್ರಭಾವವು ಅದಕ್ಕೆಹತ್ತಿ ಸತ್ತುಹೋಯಿತು. ಆಮೇಲೆ ಆಗಿದ್ದ ಸ್ಥಳಕ್ಕೆ ಇನ್ನು ಕೆಲವು ಔಷಧಗಳನ್ನು ಹಾಕಿ ಗುಣಪಡಿಸಿದರಂತೆ.—ವೃ. ಚಿಂ.

ನಮ್ಮ ದಯಾಳುಗಳಾದ ಇಂಗ್ಲಿಷ್ ಸರಕಾರದವರು ಕಾಶ್ಮೀರದ ದಿವಂಗತ ಮಹಾರಾಜರ ದ ಪ್ರತಾಪಸಿಂಗರಿಗೆ ತಿರಿಗಿ ಅವರ ಪಟ್ಟದಮೇಲೆ ಕೂಡಿಸಿ ಅವರರಾಜ್ಯಾಧಿಕಾರಗಳ ಸ್ವಲ್ಪಭಾಗವನ್ನು ಕೊಡುವದಾಗಿದಾರೆಂದು ಕಲ್ಕತ್ತೆಯ ಅಮೃತಬಜಾರ್ಪತ್ರಿಕಾ ಕರ್ತರು ಬರೆಯುತ್ತಾರೆ. ಮೊನ್ನೆಮೊನ್ನೆ ಪ್ರತಾಪಸಿಂಗ್ ಮಹಾರಾಜರನ್ನು ಶ್ರೀನಗರಕ್ಕೆ ಕರೆದುಕೊಂಡು ಹೋದದ್ದು ಇದೇ ಕಾರಣಕ್ಕಾಗಿಯೇ ಎಂದು ಈ ಪತ್ರಿಕಾ ಕರ್ತರು ನಿಶ್ಚಯಾತ್ಮಕವಾಗಿ ತಿಳಿಸುತ್ತಾರೆ. ಈ ವರ್ತಮಾನವು ನಿಜವಾದರೆ ಹಿಂದುಸ್ಥಾನದ ತುಂಬೆಲ್ಲಾ ಆನಂದವು ಉಂಟಾಗದೇ ಬಿಡುವ ಅಂಶವಲ್ಲಿ ಸಂದೇಹವಿಲ್ಲ. ಇನ್ನು, ಇದೆಲ್ಲಾ ನಮ್ಮ ಹಿಂದುಸ್ಥಾನದ ಅಭಿಮಾನಿಗಳೂ ಹಿತಕರ್ತರೂ ಆಗಿರುವ ಮಿ ಬ್ರಾಡ್ಲಾ ದೊರೆಗಳೆಂಬ ಪಾರ್ಲಿಮೆಂಟ್ ಸಭಾಸದರು ಪಟ್ಟ ಅವಿಶ್ರಾಂತ ಶ್ರಮದ ಫಲವಾಗಿರುವದರಿಂದ, ಹಿಂದುಸ್ಥಾನದ ನಿವಾಸಿಗಳಾದ ನಾವೆಲ್ಲರೂ ಅವರ ಉಪಕಾರಗಳನ್ನು ಕಾಯಾವಾಚಾ ಮನಸ್ಸಿನಿಂದ ಸ್ಮರಿಸತಕ್ಕದ್ದು.

ಈಗ ಸ್ವಲ್ಪ ರಾತ್ರಿಗಳ ಹಿಂದೆ ಬಂದಾಗೊಮ್ಮೆ ರಾತ್ರಿ ಪಾರ್ಲಿಮೆಂಟ್ ಸಭೆಯಲ್ಲಿ ಮೆ|| ಬ್ರಾಡ್ಲಾ ಸಾಹೇಬರು ಅಂಡರ್ ಸೆಕ್ರೆಟರಿಗಳಾದ ಸರ್ ಜಾನ್ಗಾರ್ಸ್ಟ್ ದೊರೆಗಳಿಗೆ ಮುಧ್ಯ ಹಿಂದುಸ್ಥಾನದ ಪೊಲಿಟಿಕಲ್ ಏಜಂಟರು ತಮ್ಮ ಕೈಕೆಳಗೆ ಇರುವಂಥಾ ಸಂಸ್ಥಾನಿಕರಿಗೆ ಹೋದ ಮೇ ತಿಂಗಳಲ್ಲಿ ಕಳುಹಿಸಿದ ಒಂದು ಗುಪ್ತಹುಕುಮಿನ (ಸರ್ಕ್ಯುಲರಿನ) ಬಗ್ಗೆ ಪ್ರಶ್ನೆ ಮಾಡಿದರು. ಅಗ್ಗೆ ಅಂಡರ್ ಸೆಕ್ರೆಟರಿಗಳು ನಿಶ್ಚಯ ವಾಡಿಕೆಯ ಮೇರೆಗೆ ನನಗೆ ಗೊತ್ತಿಲ್ಲ ನಾನು ಈ ಬಗ್ಗೆ ಕೋರ್ವನಾಡಿ ಉತ್ತರ ಕೊಡುವೆನು, ಎಂದು ಹೇಳಿ ಕೊಂಡರು. ಈ ಗುಪ್ತ ಸರ್ಕ್ಯುಲರ್ ಹೋದ ವಾರದ ಅಮೃತಬಜಾರ್ ಪತ್ರಿಕೆಯಲ್ಲಿ ಪ್ರಸಿದ್ಧವಾಗಿರುತ್ತದೆ. ಅದನ್ನು ಓದಿದರೆ ಪೊಲಿಟಿಕಲ್ ಏಜಂಟರ ಪರಿಪಾಲನ ಬೋಗಸಾದು ಪದ್ಧತಿಯು ಸ್ಪಷ್ಟವಾಗಿ ಕಾಣುತ್ತದೆ. ಅದರಿಂದ ಅದನ್ನು ಇಲ್ಲಿ ಕೊಡುವೆವು.

೧. ಏಜಂಟ್ ಅಥವಾ ಸಬ್ ಏಜಂಟರ ಅಪ್ಪಣೆಯನ್ನು ಪಡೆಯದೆ ಮಧ್ಯಹಿಂದುಸ್ಥಾನದಲ್ಲಿಯಾವ ಸಂಸ್ಥಾನಿಕರೂ ಅಮೃತಬಜಾರ್ ವರ್ತಮಾನ ಪತ್ರಿಕೆಗೆ ಚಂದಾದಾರಾಗಬಾರದು.

೨. ಈ ಸಂಸ್ಥಾನಿಕರ ಕೈಕೆಳಗಿರುವ ಯಾವ ನೌಕರರೂ ಅಮೃತಬಜಾರ್ ಪತ್ರಿಕೆಯನ್ನು ಓದಬಾರದು, ಅಥವಾ ಆ ಪತ್ರಿಕಾ ಪತ್ರಸ್ವಾಮಿ ಹಾರವನ್ನು ಅಥವಾ ಚಾಡಿಕಾರಗಳನ್ನು ಕಳುಹಿಸಬಾರದು.

೩. ಮಧ್ಯ ಹಿಂದುಸ್ಥಾನದ ಯಾವ ಸಂಸ್ಥಾನದಲ್ಲಾಗಲಿ ಜಾಹೀರ್ ಸಭೆಗಳಾಗುತವೆಂಬ ಅಥವಾ ರಾಜಕೀಯ ಚಳುವಳಿಯು ನಡೆಯುತದೆಂಬ ವರ್ತಮಾನದ ಗಾಳಿಯು ಕಿವಿಗೆ ಮುಟ್ಟಿದ ಕೂಡಲೇ ಪೋಲೀಸರು ಆ ಸ್ಥಳಕ್ಕೆ ಹೋಗಿ ವಿಚಾರವನ್ನು ಮಾಡತಕ್ಕದ್ದು.

೪. ಯಾವದಾದರಾಗಲಿ ಹಿಂದುಸ್ಥಾನದ ನ್ಯಾಷನಲ್ ಸಭೆಯ ಏಜಂಟರಾಗಲಿ ಅಥವಾ ಬಂಗಾಳದ ವರ್ತಮಾನಪತ್ರಿಕೆಗಳ ಗುಪ್ತ ರೀತಿಯಿಂದ ಬಾತಮಿದಾರರು ಹೆಚ್ಚುತ್ತಾರೆಂದು ಸಂಶಯಬಂದ ಕೂಡಲೇ ಅಂತಾ ಜನರನ್ನು ಎತ್ತಿ ತಾಸುಗಳ ಒಳಗಾಗಿ ಸಂಸ್ಥಾನ ಬಿಟ್ಟು ಹೊರಗೆ ಹಾಕಬೇಕು ಎಂಬದು

BANGALORE:—Printed and published at the KARNATAK PRESS, No. 115, SRINIVASA MANDIRAM ROAD, PETTAH.—1890.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಕಾಮನಿವಿವಪ್ರುವ್ಯೈಪಗವಾರ್ತ್ಯಕರ್ಣ್ಯಾಟಕಪ್ರಕಾಶನಸಲಾಧಿದಾಪ್ರುತಸಾಹಿತೀಶೋಭಿತಾ॥ವ್ಯಗಾಂಕಹಿತಸಾಸರೆನಿಹಿರಮುದ್ರಣಾಸಜ್ಜನ್ಯರ್ದ್ವಿಕಾಸುಪವಿಶೋಭಿತಾದಿಕತಿಮಾನಸಂಸುಮುಕು॥

Vol. XVII] ಸಂಪುಟ ೧೭.]

BANGALORE —MONDAY, SEPTEMBER 1, 1890.

ಬೆಂಗಳೂರು — ಸನ್ ೧೮೯೦ನೇ ಇಸವಿ ಸೆಪ್ಟೆಂಬರ್ ೧ ನೇ ತಾರೀಖು ಸೋಮವಾರ.

[No. 35. [ಸಂಚಿಕೆ ೩೫.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಸಾಲ ಒಕ್ಕೆ	ಸ್ಥಳದವರಿಗೆ	ಪರಸ್ಥಳದವರಿಗೆ ಪೋಸ್ಟೇಜ್ ಸಹಿತ
ಮುಂಗಡವಾಗಿ ಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡವಾಗಿ ಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ ಚಂದಾವನ್ನು ಕಳುಹಿಸ [illegible] ಬಂದು ತಿಂಗಳೊಳಗಾಗಿ [illegible] ಅವರಿಗೆ ಪತ್ರಿಕೆ [illegible] ಇಂಗ್ಲಿಷ್ [illegible] ಕನ್ನಡ [illegible] ಅಂಚೆ [illegible] ಸಮಾಚಾರಗಳನ್ನು [illegible] ಕಳುಹಿಸಿ [illegible] ಅರ್ಥವಾಗುವ [illegible] ಪ್ರಕಟಿಸತಕ್ಕ [illegible] ಒಪ್ಪಿಸಿಕೊಳ್ಳುವದಿಲ್ಲ [illegible]

ಪ್ರಕಟನೆಯ ನಿಬಂಧನೆ

ಮೊದಲನೆ ಸಾರಿಗೆ ಪ್ರತಿ ಒಂದಕ್ಕೆ 0—2—0

ಎರಡನೆ ಸಾರಿಗೆ ಪ್ರತಿ ಒಂದಕ್ಕೆ 0—1—0

[illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥವು [illegible] ಬೇಕಾದವರು [illegible]

ಇದರ ಕ್ರಯ—ಪ್ರಾಕೃತ ಮತ್ತು ಅಂಚೆ ಖರ್ಚು ಸಹಿತ ಪ್ರತಿ ಒಂದಕ್ಕೆ ರೂ 5- 0—0

ಟಿ. ಬಿ. ವೆಂಕಟಾಚಾರ್,

ಬೆಂಗಳೂರು, ಅಪ್ಪಾಜಿ ರಾವ್ ಪೇಟೆ, 41ನೇ ನಂ ಮನೆ

ADVERTISEMENTS

ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರಿಗೇ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು

ಸಂಸ್ಕೃತ ಗ್ರಂಥಗಳು.

	ರೂ. ಆ. ಪೈ
ಸಟೀಕಾ ವ್ಯಾಸಾರ ಸಂಗ್ರಹ	೫ ೦ ೦
,, ಪ್ರನೀತಿ	೧ ೧ ೦
,, ವಿವಾಹ ಪಟಲ	೦ ೮ ೦
,, ಕಾಲಾಮೃತ	೧ ೨ ೦
,, ಮುಹೂರ್ತ ದರ್ಪಣ	೦ ೧೭ ೦
,, ಬಾಲರಾಮಾಯಣ	೦ ೪ ೦
,, ಶಿವಗೀತಾ ಗೀತೆ	೦ ೧ ೬
,, ಬಾಲ್ಯನೀತಿ (ಸ್ವಲ್ಪ ಟೀಕ)	೦ ೬ ೦
ವಿಷ್ಣುಸಹಸ್ರನಾಮ ಪತ್ರಿಕೆ	೧ ೫ ೦
ಸೂರ್ಯಸಹಸ್ರನಾಮ	೦ ೩ ೦
ಕೃಷ್ಣಕರ್ಣಾಮೃತ	೦ ೧ ೬
ತ್ರಿಕಾಂಡ ಅಮರ ಮೂಲ	೦ ೨ ೬
೧ ಕಾಂಡ	೦ ೧ ೦

ಕನ್ನಡ ಗ್ರಂಥಗಳು.

ಕುಸುಮಾವತಿ ಅಷ್ಟೀಲಾ ಪ್ರತಿ	೩ ೦ ೦
ಡಿಟೋ ದಪ್ಪ	೧ ೪ ೦
ಸ್ತ್ರೀಪತಿ ಒಪ್ರ ವಿಜಯ	೧ ೮ ೦
ಪಂಚ ರಾಣಿ ಮಾಲಿಕೆ	೦ ೮ ೦
ಹನು ಮ ದ್ವಿಲಾಸ	೦ ೮ ೦
ಕ ೀಚಕಮರ್ದನ	೦ ೨ ೬
ಸುಗ್ರೀವ ಪಟ್ಟಾಭಿ	೦ ೨ ೬
ನಳಚರಿತ್ರೆ ಪರೀಕ್ಷೆ	೦ ೩ ೦
ಸ ರಾಮಚರಿತ್ರೆ	೦ ೨ ೦
ಮೈರಾವಣನ ಚರಿತ್ರೆ	೦ ೨ ೦
ಬಾಲ ಚಿಕಿತ್ಸೆ	೦ ೨ ೬
ವ ಸ್ತ್ರವರ್ಣ ಲಾ	೧ ೦ ೦
ಭ ಗ್ರಂಥ ವಿಲಾಸ	೦ ೧೨ ೦

ನೋಟೀಸ್.

ಮನೆಗಳಲ್ಲಿ ಗಿಲೀಟ್ ಮಾಡುವದಕ್ಕೆ ಅನುಕೂಲವಾದ ಬೆಳ್ಳಿ ದ್ರಾವಕವು

ಈ ಬೆಳ್ಳೀ ದ್ರಾವಕವು ನೈಜವಾದ ಬೆಳ್ಳಿ ತಟ್ಟೆಗಳ ಮೇಲೆ, ತಾಮ್ರ, ಹಿತ್ತಾಳೆ ನಿಕ್ಕಲ್ ವಿಸ್ಮತ್ ಪಾತ್ರೆಗಳ ಮೇಲೂ ಹಚ್ಚಿ ಉಜ್ಜುವದರ ಮೂಲಕ ಗಿಲೀಟ್ ಮಾಡುವದಕ್ಕೆ ಬಹು ಉಪಯುಕ್ತವಾದದ್ದಾಗಿರುತ್ತದೆ. ಇದಲ್ಲದೆ ಸವೆದ [illegible] ವಸ್ತುಗಳಿಗೂ [illegible] ಕೊಡಲಿಕ್ಕೆ [illegible] ಇದರಿಂದ [illegible] ಬೆಳ್ಳಿ [illegible] ಹೊಸದು [illegible] ಶುದ್ಧವಾದ ಬೆಳ್ಳಿ [illegible] ಸದರೀ ದ್ರಾವಕವು [illegible] ಗಿಲೀಟ್ ಮಾಡುವದಕ್ಕಿಂತ ಬಹಳ [illegible] ಕೆಲವು ದಿವಸ [illegible] ತರಿಸಿಕೊಡು ಅದರಿಂದ [illegible]

ಇದರ ಕ್ರಯ ಸೀಸೆ ೧ ಕ್ಕೆ ೨—೮—೦

ಚಿನ್ನದ ದ್ರಾವಕವು.

ಇದು ಬೆಳ್ಳಿ, ಹಿತ್ತಾಳೆ, ತಾಮ್ರ ಮೊದಲಾದ ಪದಾರ್ಥಗಳನ್ನು ಗಿಲ್ಟು ಮಾಡಲಿಕ್ಕೆ ಬಹಳ ಉಪಯುಕ್ತವಾಗಿರುವದಲ್ಲದೆ ಶುದ್ಧವಾದ ಚಿನ್ನದಲ್ಲಿ ತಯಾರಾದದ್ದಾಗಿರುತ್ತದೆ ಬೆಳ್ಳಿ ಪದಾರ್ಥಗಳನ್ನು ಗಿಲ್ಟು ಮಾಡಲಿಕ್ಕೆ ಈ ದ್ರಾವಕವು ಕೇವಲ ಪ್ರಯೋಜನಕರವಾಗಿರುವದು

ಇದರ ಕ್ರಯ ಸೀಸೆ ಒಕ್ಕೆ ೩—೮—೦

ಬೇಕಾದವರು ಅಡವಿಕರೆಯಲ್ಲಿರುವ ಬೆಳ್ಳೀ ಕಾರ್ಖಾನೆಯ ಮ್ಯಾನೇಜರಿಗೆ ಬರೆದು ತರಿಸಿಕೊಳ್ಳಬಹುದು.

ಮೈಸೂರು ಮಹಾರಾಜರವರ ಅರಳೀ ಯಂತ್ರದ ಕಾರ್ಖಾನೆ.

ನೋಟೀಸ್.

ಮೈಸೂರು ಮಹಾರಾಜರವರ ಅರಳಿ ಯಂತ್ರದ ಕಾರ್ಖಾನೆಯಲ್ಲಿ ಹೊಸ ನಮೂನೆ ಯಂತ್ರದ ಮೂಲಕ ಉತ್ತಮವಾದ ಗೋಧಿ ಹಿಟ್ಟು, ರವೆ, ಹೊಟ್ಟು ತಯಾರಾಗಿರುವದು. ಪೇಟೆಯಲ್ಲಿರುವ ಸದರೀ ಕಾರ್ಖಾನೆಗೆ ಸೇರಿದ ಷಾಪುಗಳಲ್ಲಿಯೂ, ಬೆಂಗಳೂರು ಕಂಟೋನ್ಮೆಂಟಿನಲ್ಲಿ ಒಬ್ಬರೇ ಏಜಂಟಾಗಿರುವ ಸಾಹಿಬಾ ಮಹಮ್ಮದ್ ಕಾಸಿಂ ಸೇಟಿಯವರ ಡಿಸ್ಪೆನ್ಸರಿ ರಸ್ತೆಯಲ್ಲಿರುವ ಷಾಪಿನಲ್ಲಿಯೂ ಮಾರಲ್ಪಡುತ್ತವೆ.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, SEPTEMBER 1, 1890

೧೮೯೦ನೇ ಸೆಪ್ಟೆಂಬರ್ ೧ನೇ ಸೋಮವಾರ

ARRACK SHOPS

ಸಾಧಾರಣವಾಗಿ ನೀರು ವಗೈರೆ ಇತರ ದ್ರವ ಪದಾರ್ಥಗಳಿಂದ ಮಿಶ್ರವಾದ ಷರಾಬನ್ನು ಬಿಕರಿ ಮಾಡುವದು ಬಿಟ್ಟು ಕುಡಿಸಬೇಕೆಂಬ ಉದ್ದೇಶದೊಡನೆ ಶ್ರೀಮನ್ಮಹಾರಾಜಾ ಸರ್ಕಾರದವರು ಈ ಬೆಗೆ ಕೊಟ್ಟ ಹುಕುಂ ಕಳೆದ ತಿಂಗಳ ೨ನೇ ತಾರೀಖು ಲಾಗಾಯಿತು ಊರ್ಜಿತ ನಡವಳಿಕೆಗೆ ಜಾರಿಯಲ್ಲಿ ತರಲ್ಪಟ್ಟಿತು. ಇದನ್ನನುಸರಿಸಿ ಇನ್ನು ಮುಂದೆ ಷರಾಬ್ ದುಕಾನುಗಳಲ್ಲಿ ಬೆರಸತಕ್ಕ ನೀರು ಮೊದಲಾದವುಗಳ್ಯಾವವೂ ಇಡಲ್ಪಡಲಿಕ್ಕೆ ಅವಕಾಶ ವಿರಲಾರದು. ಷರಾಬಿನೊಡನೆ ಇತರ ಪದಾರ್ಥಗಳನ್ನು ಸೇರಿಸಿದರೆ ಅದರ ಜೋರು ತಪ್ಪಿ ನಿಷಾ ಕಡಮೆಯಾಗುವದರಿಂದ ಅಂತಾ ಪದಾರ್ಥಗಳನ್ನು ಬರಿಸುವದರಮೂಲಕ ಜನಗಳ ಸುಖಾನುಭವಕ್ಕೆ ನ್ಯೂನತೆಯುಂಟು ಮಾಡುತ್ತಾಗುವದಾಗಿ ನಿಷಾವುಳ್ಳ ಅಸ್ಸಲವಾದ ಷರಾಬನ್ನು ಅವರಿಗೆ ಒದಗಿಸಿ ಸಹಾಯ ಮಾಡಬೇಕೆಂಬದೂ, ಷರಾಬ್ ಅಂಗಡಿಗಳಲ್ಲಿ ಅಪ್ಪುಗಳು ವಿನಾ ಇತರ ದ್ರವ ಪದಾರ್ಥಗಳನ್ನಿಡುವದರಿಂದ ಅದು ಮಿಶ್ರಮಾಡಲ್ಪಡಲಿಕ್ಕೆ ಅವಕಾಶವೂ ಅನುಮಾನವೂ ಪ್ರಬಲಾಗುವದಾಗಿ ಅಸ್ಸಟ್ಟಕ್ಕೆ ಸಹ ಆಸ್ಪದವಿಲ್ಲದಿರಬೇಕೆಂಬದೂ ಮೈಸೂರು ಸರ್ಕಾರದವರ ಮುಖ್ಯೋದ್ದೇಶ್ಯವಾಗಿ ರುವಂತೆ ತೋರುತ್ತಿದೆ ಈಗಿನಕಾಲದಲ್ಲಿ ಜನರಿಗೆ ಮದ್ಯಪಾನದೊಳಗಿನ್ನು ವ್ಯಂಗ್ಯವಿಲ್ಲದೆ ಹೋದಾಗ್ಯೂ ಅದು ಗ್ರಾಹ್ಯಗಳಾದ ಪಾನೀಯಗಳಲ್ಲೊಂದೆಂಬದಾಗಿ ಭಾವಿಸಲ್ಪಟ್ಟಿದ್ದಾಗ್ಯೂ ಇನ್ನೂ ಅನೇಕರಿಗೆ ಅದರ ವಿಸರ್ಜನ ದಾಖಲವೂ ಅಭಿರುಚಿಯೂ ಇಲ್ಲವಿರುತ್ತದೆ. ಇದಲ್ಲದೆ ಷರಾಬಿನಲ್ಲಿ ನೀರೇ ಕಾಂತಿ ಮಿಶ್ರಮಾಡಿದರೆ ಅದರವೇಗವು ಕಡಮೆಯಾಗಿ ನಿಷಾ ತಗ್ಗಬಹುದೇ ಹೊರತು ಅದರಿಂದ ವಿಶೇಷ ಬಾಧಕ ಉಂಟಾಗುವಂತೆ ನಮಗೆ ತೋರಲಿಲ್ಲವು. ಸರ್ಕಾರದವರಿಗೆ ಪರಾವೆ ಪ್ರಿನ್ಸಿಪಲ್ ವಿಷಯದಲ್ಲಿಯೂ ಅದರ ಹಾರಿಸುವಿಕೆಯ ವಿಷಯದಲ್ಲಿಯೂ ಅದರ ಉತ್ಸಾಹದಲ್ಲಿಯೂ ಇರುವಷ್ಟು ಶ್ರದ್ಧಾಭಕ್ತಿಯು ಇತರವಿಷಯಗಳಲ್ಲಿಲ್ಲದೆ ಹೋದಬಗ್ಗೆ ಬಹಳ ಆಶ್ಚರ್ಯ ಪಡಬೇಕಾಗಿರುತ್ತದೆ. ಮಸಾಲೆ ಎಣ್ಣೆ ತುಪ್ಪ ಹಾಲು ವಗೈರೆ ಪದಾರ್ಥಗಳು ಪ್ರವರವಾದ ಪಾದವಾಗಿದ್ದರೂ, ಅವು ಮನುಷ್ಯ ಸಾಮಾನ್ಯರಿಗೆ ಅತ್ಯಾವಶ್ಯಕಗಳಾಗಿಯೂ ಭೋಜ್ಯಪದಾರ್ಥಗಳಲ್ಲಿ ಅನವರತ ಮಿಶ್ರವಾಗತಕ್ಕವಾಗಿಯೂ, ಕೇವಲ ನಿರ್ದೋಷವಾಗಿಲ್ಲದಿದ್ದರೆ ಪ್ರಬಲ ಬಾಧಕಗಳನ್ನುಂಟುಮಾಡತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಮಿಶ್ರಮಾಡಿ ಸ್ವತಸಿದ್ಧವಾದ ಗುಣವು ಕೆಡಿಸುವದರಿಂದ ಅನೇಕರಿಗೆ ರೋಗಾದ್ಯುಪದ್ರವಗಳು ಪ್ರಾಪ್ತವಾಗಿ ಬಹಳ ಸಂಕಟ ಪಡುತ್ತಾರೆಂಬದು ತಿಳಿಯದ ಅಂಶವಲ್ಲವು. ಅಂಗಡಿಗಳಲ್ಲಿ ಸದರೀ ಪದಾರ್ಥದೊಳು ಬೆರೆಯುವಂತಾ ವಿರುದ್ಧ ಸಾಮಗ್ರಿಗಳು ಅನೇಕವಾಗಿ ಇಡಲ್ಪಟ್ಟಿರುತ್ತವೆ. ಅವನ್ನು ಕೇಳತಕ್ಕವರೊಬ್ಬರೂ ಇಲ್ಲವು. ಮುಖ್ಯವಾಗಿ ಗವರ್ನಮೆಂಟಿನವರು ತಮಗೆ ತೋರಿದ ಮಾರ್ಗವೇ ಸರಾಜ್ಞೇಪಣೆಯವಾದದ್ದೆಂಬ ಭಾವನೆಯೊಡನೆ ಪ್ರಭುತ್ವವು ನಡೆಸತಕ್ಕವರಾಗಿದ್ದಾರೆಯೇ ಹೊರತು ತಮ್ಮ ಕಾರ್ಯಗಳಲ್ಲಿರುವ ಗುಣದೋಷಗಳನ್ನೂ, ಸಾಧಕ ಬಾಧಕಗಳನ್ನೂ ಪರ್ಯಾಲೋಚಿಸಿದರೆ ಹೋಗುವದೂ ಪ್ರಜೆಗಳ ಅದೃಷ್ಟ ವಿಶೇಷವೆಂತಲೇ ಭಾವಿಸಬೇಕಾಗಿರುತ್ತದೆ.

Occasional Notes

ನೈಮಿತ್ತಿಕ ವಿಷಯನ್ಯಾಸ.

Public health in London.—ಈಚೆಗೆ ಲಾರ್ಡ್ ಪಟ್ಟಣದಲ್ಲಿ ಉಬಾಧೆ ಜಾಲಾವ ಅತಿಸಾರ ರೋಗಗಳು ಪ್ರಬಲಿಸಿ ತನ್ಮೂಲಕ ಗತವಾರದಲ್ಲಿ ೧೨ಜನ ಮೃತಪಟ್ಟಂತೆ ತಿಳಿಯಬರುತ್ತದೆ.

The potato blight in Ireland.—ಐಯರ್ಲ್ಯಾಂಡ್ ರಾಜ್ಯದಲ್ಲಿ ಉರಳಗಡ್ಡೆ ಫಸಲು ಕುದ್ದಾಂಗ ನಷ್ಟವಾದಂತೆ ಲ್ಯಾಂಡ್ ಕಮಿಷನ್ನರವರ ರಿಪೋರ್ಟಿನ ಮೂಲಕ ತಿಳಿಯಲಾದೆವು.

Typhoid fever at Agra.—ಆಗ್ರಾ ಪಟ್ಟಣದಲ್ಲಿ ವಿಷಮಶೀತಜ್ವರೋಪದ್ರವವು ಪ್ರಬಲಿಸಿ ಅದರಿಂದ ೧೨ ಜನ ಸೋಲ್ಜರುಗಳು ಆಸ್ಪತ್ರೆಯಲ್ಲಿ ಸಖ್ತ ಕಾಹಿಲೆಯಾಗಿದ್ದಾರೆಂತಲೂ, ಈಗ ಶುಷ್ಕವಾದ ಜಲಾಭಾವದಿಂ ಭಾವಿಗಳಿಂದ ಸೇದಲ್ಪಡುವ ಕಶ್ಮಲೋದಕವು ಸದರೀ ರೋಗದ ವ್ಯಾಪಕತೆಗೆ ಕಾರಣವೆಂದು ಭಾವಿಸಲ್ಪಟ್ಟದೆಯೆಂತಲೂ ತಿಳಿಯಬರುತ್ತದೆ.

An extraordinary incident.—ಹೊಸೆಗಬಾದ್ ಡೆಪ್ಯುಟೀಕಮಿಷನರವರ ಕೋರ್ಟಿನಲ್ಲಿ ಕಳೆದತಿಂಗಳ ೨೧ನೇ ತಾರೀಖಿನೊಳು ವಿಚಿತ್ರವಾದ ವಿಷಯವೊಂದು ಪ್ರಾಪ್ತವಾಯಿತೇನೆಂದರೆ—ಮ್ಯಾಜಿಸ್ಟ್ರೇಟರವರು ಕೋರ್ಟಿನಲ್ಲಿ

ಕೊಳಕಿರುವಾಗ್ಯೆ ಯಾವನೋಬ್ಬ ಮನುಷ್ಯನು ಅವರ ಸಮೀಪಕ್ಕೆ ಹೋಗಿ ಎಲೆಯಲ್ಲಿ ಕಟ್ಟಲ್ಪಟ್ಟದ್ದ ಒಂದು ಪದಾರ್ಥವನ್ನು ಕೈಯಲ್ಲಿ ಕೊಟ್ಟು ಬಿಚ್ಚಿ ನೋಡುವಂತೆ ಹೇಳಲು ಆ ಪರದೇಶಿಕ ನೋಡುವಾಗ್ಯೆ ತಂದುಕೊಟ್ಟವನು ಪುರ್‍ಯ್ಯಯಮಾಗು ಕಾಣದೆತಪ್ಪಿಸಿಕೊಂಡ ಕಂ ತುಬುಕಿಲ್ಲದೆ ಅಕೃತ್ಯದ ಫಲತಾಂಶವನ್ನು ಅನುಭವಿಸಲಿಕ್ಕೆ ತಾನು ಸ್ವತಃ ಕೋರ್ಟಿಗೆ ಬಂದಂತೆ ಸದರೀ ಮನುಷ್ಯನು ಮ್ಯಾಜಿಸ್ಟ್ರೇಟರಿಗೆ ತಿಳಿಸಿದನು.

Hindoo widow marriage.—ಆಚೇ ಕನಿಷ್ಠಾರದ ದಿನ ಮುಂಬೈ ಪಟ್ಟಣದಲ್ಲಿ ಬ್ರಾಹ್ಮಣ ಪಂತದ ವಿವಾಹವೊಂದು ಅತಿ ವಿದ್ಯುಂಭಣೆಯಾಗಿ ನಡೆಯಿತೆಂದು ತಿಳಿಯಬರುತದೆ. ಒಂದ ಒಬ್ಬ ವಿಧವೆಯಾಗಿದ್ದ ಸೋಮುಗಲ್ಯಪಂ ಪುನಃ ವಿವಾಹಕ್ಕೆ ವರನ ಸುಂದರಿದಿಸದುತಾಳ ವಯಸ್ಸು ೨೧ ವರುಷಗಳೆಂತಲೂ ಈಕೆಯ ೬ ನೆಯ ವಯಸ್ಸಿನಲ್ಲಿ ಪ್ರಥಮ ಪತಿಯು ಮೃತಪಟ್ಟನೆಂತಲೂ ಅದು ಮೊದಲು ಹದಿನ್ನೆದು ವರುಷಗಳ ಕಾಲ ಸ್ವಧರ್ಮ ಪ್ರಯುಕ್ತವಾದ ಪ್ರತೋಷ ವಾಸದಿಂದಲೂ ಅಂದ ಶುದ್ಧ ಸನ್ಯಾಸಿನಿಯಂತೆ ಇದ್ದಳೆಂತಲೂ ತಾದೃಶಭಾವನೆಯು ಅಜ್ಞಾನಪ್ರೇರಿತವಾದದ್ದೆಂದು ತೋರಿ ಚೆಗಲಾಲ್ ಎಂಬವನನ್ನು ಈಗ ವಿವಾಹ ಮಾಡಿಕೊಂಡಳೆಂತಲೂ ತಿಳಿಯಲಾದೆವು. ಪ್ರಸಕ್ತ ವಿವಾಹವು ಮುಂಬೈಯಲ್ಲಿ ಮೆ|| ಮಾಧವದಾಸ್ ಯವರ ಬಂಗ್ಲೆಯಲ್ಲಿ ನಡೆಯಿತು.

Mutiny of school boys.—ಕಲ್ಕತ್ತೆಗೆ ಸಮೀಪದಲ್ಲಿರುವ ಚೆಸುರಾ ಎಂಬ ಪ್ರದೇಶದೊಳಗಿರುವ ಫ್ರೀಚರ್ಚ್ ಕಾಲೇಜಿನಲ್ಲಿದ್ದ ನೇಟಿವ್ ಉಪಾಧ್ಯಾಯರೊಬ್ಬರು ನೌಕರಿಯಿಂದ ತಗ್ಗಿಸಲ್ಪಡಲು ಅವರ ಪಕ್ಷವನ್ನವಲಂಬಿಸಿ ಸದರೀ ಕಾಲೇಜ್ ವಿದ್ಯಾರ್ಥಿಗಳೆಲ್ಲರೂ ಒಗ್ಗಟ್ಟಾಗಿ ಕಾಲೇಜ್ ಪ್ರಿನ್ಸಿಪಲರನ್ನ ಧಿಕ್ಕರಿಸಿ ಮಾತ್ರ ಕಳೆದ ತಿಂಗಳ ೨೩ನೇ ತಾರೀಖಿನವರೆಗೆ ಕಲಹಿಸಿದರೆಂಬದಾಗಿಯೂ, ಡಿಸ್‌ಮಿಸ್ ಮಾಡಲ್ಪಟ್ಟ ಉಪಾಧ್ಯಾಯರ ಮೊಕದ್ದಮೆಯ ವಿಷಯದಲ್ಲಿ ವಿದ್ಯಾರ್ಥಿಗಳ ಅಕ್ಷೇಪಣೆಯು ಅಧಿಕಾರ ರಹಿತವಾದುದಾಗಿದ್ದದರಿಂದ ಅದು ಪ್ರಿನ್ಸಿಪಲರ ಮನೋನಿಶ್ಚಯವಂ ಬದಲಾಯಿಸಲಾರದೇ ಹೋಗಲು ಕಾಲೇಜ್ ತರಗತಿ ವಿದ್ಯಾರ್ಥಿಗಳೆಲ್ಲರು ಒಟ್ಟಾಗಿ ತಮ್ಮ ಪುಸ್ತಕಗಳನ್ನೆಲ್ಲ ಬಿಸಾಕಿ ಪ್ರಿನ್ಸಿಪಲರನ್ನಗೌರವಿಸಿ ಕಾಲೇಜನ್ನು ಬಿಟ್ಟು ಹೊರಟುಹೋದರೆಂಬದಾಗಿಯೂ ಅವರೆಲ್ಲರೂ ನಾಲ್ಕು ದಿವಸಗಳು ಕಳೆದಬಳಿಕ ಮರಳಬಂದು ಕಾಲೇಜಿಗೆ ಸೇರಬೇಕೆಂದು ಬಯಸಲು ಪ್ರಿನ್ಸಿಪಲರವರು ಪ್ರಸಕ್ತ ಕಲಹಕ್ಕೆ ಕಾರಣಭೂತರಾದವರನ್ನು ಯಾವ ರೀತಿಯಿಂದಾಗಲಿ ಮರಳ ಸೇರಿಸಿಕೊಳ್ಳುವದಿಲ್ಲವೆಂದು ತಿಳಿಸಿದ್ದರಿಂದ ಇನ್ನೂ ಒಂದಕ್ಕೆ ಸಹಾಯ್ಯಗಳ ಪ್ರಕಾರ: ಪಾರ್ಶ್ವಕ ವಸೂಲ್ಯಾತಿ ಬಳಿಕ ಅವರನ್ನೆಲ್ಲ ಸೇರಿಸಿಕೊಂಡರೆಂಬದಾಗಿಯೂ ತಿಳಿಯಬರುತದೆ.

Birth of a second son to H. H. the Gaekwar.—ಬರೋಡೆ ಸಂಸ್ಥಾನದ ಮಹಾರಾಜರಾದ ಶ್ರೀ ಸಯಾಜಿರಾವ್ ಗಾಯಕವಾಡರವರಿಗೆ ಈಚೆಗೆ ದ್ವಿತೀಯಪುತ್ರರುದ್ಭವಿಸಿದರೆಂಬ ಶುಭ ವೃತ್ತಾಂತವು ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವಲ್ಲದೆ ಈ ಮಹೋತ್ಸವ ಕೋಸ್ಕರವಾಗಿ ಈಗ್ಗೆ ಹದಿನೈದು ದಿನಗಳನವರೆಗೂ ರಾಜಧಾನಿಯು ವಿವಿಧೋತ್ಸವಗಳಿಂದ ಕಂಗೊಳಿಸುತ ಲಿದ್ದಂತೆಯೂ ಸಂತರ್ಪಣೆಗಳಾಗಿಯೂ ನಡೆಸಿದಂತೆಯೂ, ಜೈಲುಗಳಲ್ಲಿ ಬಹುದಿವಸದಿಂದ ಇಡಲ್ಪಟ್ಟ ಸಜಾ ದುಃಖಿಗಳನ್ನಂಗೀಕರಿಸಿ ಮಹಾರಾಜರವರು, ಅವರವರಿಗೆ ತಕ್ಕಂತೆಲ್ಲ ಬಹುಮಾನಗಳನ್ನು ಕೊಟ್ಟು ಸಂತೃಪ್ತಿ ಪಡಿಸಿದರೆಂಬದಾಗಿಯೂ ಈಗ ಜನಿಸಿದಪುತ್ರರಿಗೆ ಶಿವಾಜೀರಾವ್ ಉರಫ್ ಅಪ್ಪಾ ಸಾಹೇಬರೆಂಬದಾಗಿ ನಾಮಕರಣ ಮಾಡಿದರೆಂತಲೂ ಮಹಾರಾಜರಿಗುಂಟು

ದ ಸಂತೋಷವೆಲ್ಲವಂ ತಮ್ಮದೆಂತಲೇ ಪ್ರಜೆಗಳೆಲ್ಲರೂ ಭಾವಿಸಿ ನಾನಾರೀತಿಯಿಂದ ಕೊಂಡಾಡುತಲಿದ್ದಾರೆಂತಲೂ, ಪ್ರಜೆಗಳ ಸುಖ ಸಂತೋಷಗಳೇ ತಮ್ಮದೆಂದು ಗಾಯಕವಾಡರವರು ಸಹ ಪರಿಭಾವಿಸಿ ತದಭಿವೃದ್ಧಿಯಲ್ಲಿಯೇ ಆಸಕ್ತರಾಗಿದ್ದಾರೆಂತಲೂ ನಮ್ಮ ಬರೋಡೆ ಬಾತಮೀದಾರನು ಬರೆಯುತ್ತಾನೆ. ನಿಜವಾಗಿ ಘೂರ್ಜರರು ಅದೃಷ್ಟ ಶಾಲಿಗಳೆಂಬದಕ್ಕೇನೂ ಸಂಶಯವಿಲ್ಲವು.

Lord Lansdowne's advices.—ಈಗಿನವೈಸರಾಯಿಯವರಾದ ಲಾರ್ಡ್ ಲ್ಯಾನ್ಸ್‌ಡೌನ್ ಯವರು ಕಾಶ್ಮೀರದ ಮಹಾರಾಜರವರಿಗೆ ತಿಳಿಸಿದ ಇದರದಿ ಕಂಡ ವಾತುಗಳು ಸಾಮಾನ್ಯವಾಗಿ ಇಂಡ್ಯದೇಶದ ನೇಟಿವ್ ಸಂಸ್ಥಾನಾಧಿಪತಿಗಳೆಲ್ಲರು ಸರ್ವಕಾಲವಲ್ಲಿಯೂ ಜ್ಞಾಪಕದೊಳಿಟ್ಟರತಕ್ಕವಾಗಿರುತಿವೆ, ಏನಂದರೆ—"ನಿಮ್ಮ ರಾಜ್ಯವು ಫಲಭರಿತವಾದುದಾಗಿ ವಿಶೇಷ ಆದಾಯಯುಳ್ಳದ್ದಾಗಿದ್ದರೂ, ನಿಮ್ಮ ಖಜಾನೆಯು ಖಾಲೀಯಾಗಿಯೇ ಇರುತಿದೆ. ಸಂಸ್ಥಾನಕ್ಕೆ ಸೇರಿದ ಪ್ರತಿ ಆಫೀಸಿನಲ್ಲಿಯೂ ಪ್ರತಿ ಇಲಾಖೆಯಲ್ಲಿಯೂ ದುಷ್ಪವರ್ತಿಗಳೂ ಅಕ್ರಮಗಳೂ ಪ್ರಬಲಿಸಿರುತಿವೆ. ತಮ್ಮ ಆಸ್ಥಾನವೆಂಬದು ಯಾವಾಗಲೂ ತುಚ್ಛರಾದ ಮತ್ತು ಅಯೋಗ್ಯರಾದ ಆಶ್ರಿತರಿಂದ ಪರಿವೇಷ್ಟಿತವಾದುದಾಗಿರುತಿದೆ. ತಮ್ಮ ಸಂಸ್ಥಾನದಲ್ಲಿ ಅನುಸ್ಯೂತವಾಗಿ ನಡೆದು ಬರುತಲಿರುವ ಅಕ್ರಮ ಪ್ರಭುತ್ವವೆಂಬದು ಡಿಕೇಡಿನ ಕೇವಲ ಸಹಾಯಕರವಾದುದಾಗಿಯೂ ಚಿಂತನೀಯವಾದದ್ದಾಗಿಯೂ ಇರುತಿದೆ, ಎಂಬದು" ಪ್ರಾಯೇಣ ಒಂದೊಂದು ನೇಟಿವ್ ಸಂಸ್ಥಾನದ ಸ್ಥಿತಿಯು ಒಂದೊಂದು ವಿಧದಲ್ಲಿ ಮೇಲೆ ತಿಳಿಸಲ್ಪಟ್ಟಂತೆಯೇ ಇರುತಿದೆ. ಆದುದರಿಂದ ನಮ್ಮ ನೇಟಿವ್ ಸಂಸ್ಥಾನಾಧಿಪತಿಗಳೆಲ್ಲರೂ ಕಾಶ್ಮೀರ ಮಹಾರಾಜರನ್ನು ಅನವರತ ಸ್ಮರಿಸಿಕೊಂಡು ಪುರೋದೃಷ್ಟಿ ಯುಳ್ಳವರಾಗಬೇಕೆಂದು ಕೋರುತ್ತೇವೆ. ಕಾಲು ಜಾರಿಬಿದ್ದರೆ ಕಲಾ ಒಂದು ಕಲ್ಪಿತ್ತು ಮಾಕಲಿಕ್ಕೆ ಅನೇಕರೇರ್ಪಡದೆ ಹೋಗಲಾರರು.

LOCAL AND PROVINCIAL NEWS
ಸ್ವದೇಶಮತ್ತು ತಾಲ್ಲೂಕ್‌ಜಾತಿ ವೃತ್ತಾಂತಗಳು.

Superintendent of Post offices.—ಸೌಬ್ ಅಂಚೇ ಬೆಕ್ಸ್ ಮ್ಯಾ॰ ಮರಿಗೌಡ್ಯೆಯನವರನ್ನು ಇಂಪೀರಿಯಲ್ ಪೋಸ್ಟಾಫೀಸ್‌ಗಳ ಸೂಪರಿಂಟೆಂಡೆಂಟರಾಗಿ ನೇಮಕಮಾಡಿರುವುತೆ ಇಂಡ್ಯ ಗವರ್ನಮೆಂಟಿನವರು ಗತವಾರದ ಇಂಡ್ಯ ಗೆಜೆಟಿಮೂಲಕ ಪ್ರಯಿಸ್ಸಿದಿರುತ್ತಾರೆ.

Hindupur Ry extension.—ಈ ವ್ರಾಂದ ಹಿಂದೂಪುರದ ತನಕ ಹಾಕಲ್ಪಡತಕ್ಕ ರೈಲ್ವೆ ದಸ್ತೈಯ ಕಾಮಗಾರಿಯಬಗ್ಯೆ ಕಂಟ್ರಾಕ್ಟರಿಗಳು ತಮ್ಮ ದರಖಾಸ್ತುಗಳನ್ನು ಕೊಡುವದಕ್ಕೆ ಮುಂಚಿತವಾಗಿ ರಸ್ತೆಯ ಸ್ಥಿತಿಯನ್ನರಿಯುವ ಬಗ್ಯೆ ಅದನ್ನ ಪರಿಶೀಲಿಸಬೇ ಕಾದುದು ಲಿಖಾರೆಂತಲೂ, ರಸ್ತೇಕಾಮಗಾರಿಯು ಸಾಧ್ಯವಾದಷ್ಟು ತೀವ್ರವಾಗಿ ನಡೆಯುವದೆಂತಲೂ ತಿಳಿಯಬರುತಿದೆ.

Arrival of H. H. the Maharaja.—ಶ್ರೀಮನ್ಮಹಾರಾಜರವರು ತಮ್ಮ ಪರಿವಾರದೊಡನೆ ಗತ ಬುಧವಾರದ ದಿನ ಬೆಳಗ್ಯೆ ಮದರಾಸಿನಿಂದ ಇಲ್ಲಿಗೆ ಛಾಪಸು ದಯಮಾಡಿದರು. ಮದರಾಸಿನಲ್ಲಿ ಉಬಾಕಿ ಜಾರಾವ ರೋಗವು ವ್ಯಾಪಿಸಿ ಅಲ್ಲಿನ ಸ್ಥಿತಿಯು ಅತೃಪ್ತಿಕರವಾಗಿರುವದರಿಂದ ಮಹಾರಾಜರವರು ಉದ್ದೇಶಿಸಿದ್ದ ಕಾಲಕ್ಕಿಂತ ಮುಂಚಿತವಾಗಿಯೇ ಹೊರಟು ಬರಬೇಕಾಯಿತೆಂದು ತಿಳಿಯಲಾದೆವು.

The City Municipal Board.—ಗತವಾರದಲ್ಲಿ ಬೆಂಗಳೂರು ಪಟ್ಟಣ ಮುನಿಸಿಪಲ್ ಬೋರ್ಡಿನವರು ಸಭೆಸೇರಿದ್ದ ಕಾಲದೊಳು, ಮ್ಯಾನಿಸಿಪಲ್ ಕಮ್ಮಿಷನರಾಗಿದ್ದು ಗತಿಸಿದ ಮಾ|| ಚಂಗಲರಾಯ ಮುದಲಿಯಾರ್ರವರು ಮ್ಯಾನಿಸಿಪಾಲಿಟಿಗೆ ಮಾಡಿದ ಶ್ಲಾಘ್ಯವಾದ ನೌಕರಿಯನ್ನೂ ಅವರ ದುರಣದಿಂದ ಅದಕ್ಕುಂಟಾದ ನಷ್ಟವನ್ನೂ ನಮೂದಿಸಿ ತಮ್ಮ ಖೇದವನ್ನು ವ್ಯಕ್ತಪಡಿಸ್ಸವರ ಕುಟುಂಬಕ್ಕೆ ತಿಳಿಯಪಡಿಸಬೇಕೆಂಬದಾಗಿ ತೀರ್ಮಾನಿಸಿದರೆಂದು ಅರಿಯಲಾದೆವು.

Abolition of the elective system.—ಈಗ ಸಿವಿಲ್ ವ ಮಿಲಿಟರಿ ಸ್ಟೇಷನ್ ಮ್ಯಾನಿಸಿಪಾಲಿಟಿಯಲ್ಲಿ ನೆರೆಗೊಂಡಿರುವಂತಾ ಮೆಂಬರುಗಳನ್ನು ಪ್ರಜೆಗಳು ಚುನಾಯಿಸಿ ನೇಮಕರಗ್ಯಾತತಕ್ಕ ಕ್ರಮವು ತೃಪ್ತಿಕರವಾಗಿ ನಡೆಯದ್ದರಿಂದ ಅದಂ ಮುಂದಿನವರುದಡ ಲಾಗಾಯಿತು ಮುಕ್ತಾಯ ಮಾಡಬೇಕೆಂಬ ಅಭಿಪ್ರಾಯವು ರೆಸಿಡೆಂಟರಿಗುಂಟಾಗಿ ಅದಂ ಪರಿಷ್ಕಾರ ಈ ಸಂವತ್ಸರದ ಆಕ್ಟೋಬರಿನ ತನಕ ನಿಲ್ಲಿಸಿಟ್ಟಿರುವದಾಗಿ ಮ್ಯಾನಿಸಿಪಲ್ ಬೋರ್ಡಿನವರು ತಿಳಿಸಿರುತ್ತಾರಂತೆ

The weather.—ಗತ ಮಂಗಳವಾರದದಿನ ರಾತ್ರಿ ಅನಿರೀಕ್ಷಿತವಾಗಿ ವರ್ಷಕ್ಕೆ ಉಪಕ್ರಮಿಸಿ ಮಾರನೆಯದಿನಬೆಳಗ್ಯೆ ೪ ಘಂಟೆಯವರಿವಿಗೆ ಎಡಬಿಡದೆ ಮಳೆ ಬೀಳುತಲಿತ್ತು ಆರಾತ್ರಿ ಸುಮಾರ್ ೮—೫ ಅಂಗುಲ ಮಳೆಯಾದಂತೆ ಲೆಕ್ಕವಾಗಿದೆ ಇದಲ್ಲದೆ ಕೆರೆಗಳಿಗೂ ಭಾವಿಗಳಿಗೂ ಬೇಕಾದಷ್ಟು ನೀರು ಬಂದಿರುತಿದೆ. ಈಗ ವರ್ಷಸೂಚನೆಯೇನೂ ಕಂಡುಬರುವದಿಲ್ಲವು. ಕಾಲಸ್ಥಿತಿಯು ಆರೋಗ್ಯವಾಗಿಯೂ ಮನೋಹರವಾಗಿಯೂ ಇರುತಿದೆ ಪೇಟೆಯಲ್ಲಿ ಪದಾರ್ಥಗಳ ನಿರಖ್ ಸಹಸ್ವಲ್ಪ ಮಟ್ಟಿಗೆ ಕಡಮೆಯಾಗಿರುತಿದೆ.

Revenue Probationer.—ಅವ್ವೊಕೇಟ್ ಮಿ॥ ಬಸವಾರಾಧ್ಯರೆಂಬವರು ಈಗ್ಯೆ ಕೆಲವು ಕಾಲವಮೊದಲು ಮೈಸೂರು ಕೋರ್ಟುಗಳಲ್ಲಿ ವಕಾಲತ್ ಮಾಡುತಲಿದ್ದು ಅದು ಅವರಿಗೆ ಪ್ರಯೋಜನಕರವಾಗದೆ ಹೋಗಲು ಮೈಸೂರು ಗವರ್ನಮೆಂಟಿನವರು ಅವರನ್ನು ರೆವಿನ್ಯೂ ಪ್ರೊಬೇಷನರಾಗಿ ನೇಮಕರಮಾಡಿದರೆಂದು ಸ್ವದೇಶದ ಇಂಗ್ಲಿಷ್ ಪತ್ರಿಕೆಯೊಂದು ತಿಳಿಸುತಿದೆ. ಇವರು ಪ್ರಾರ್ಥನೆಯಸ್ಥರಾಗಿಯೂ ಮದರಾಸ್ ಯೂನಿವರ್ಸಿಟಿಯಲ್ಲಿ ಯೆರಡು ಡಿಗ್ರಿಗಳನ್ನು ಪಡೆದವರಾಗಿಯೂ, ಇರುತ್ತಾರೆ. ಇವರು ಸ್ವತಂತ್ರವೃತ್ತಿಯನ್ನಗಲಿ ಪಾರತಂತ್ರ್ಯವಂ ಐಚ್ಛಿಕವಾಗಿ ಕೋರಿ ಸ್ವೀಕರಿಸಿ ಕೊಂಡದಕ್ಕಾಗಿ ಚಿಂತಿಸುತ್ತೇವೆ

The Dewan.—ಈಸಂಸ್ಥಾನದ ದಿವಾನರವರಾದ ಮಿ॥ ಶೇಷಾದ್ರಿ ಅಯ್ಯರವರು ತತ್ಕಾಲದಲ್ಲಿ ತಿರುವನಂತಪುರದೊಳು ಅಲ್ಲಿನ ಮಹಾರಾಜರವರ ಆತಿಥ್ಯದೊಳಿರುವರೆಂತೆಯೂ ಅವರಿಗೀಗ ಸಂಪೂರ್ಣಾರೋಗ್ಯವುಂಟಾಗಿ ದೃಢಾಂಗರಾಗಿರುವಂತೆಯೂ ಅಲ್ಲಿನ ಪತ್ರಿಕೆಯೊಂದು ತಿಳಿಸುತಿದೆ. ಇವರು ಪ್ರಾಯಶಃ ಈ ತಿಂಗಳ ಆಖೈರೊಳಗಾಗಿ ಇಲ್ಲಿಗೆ ಬಂದು ತಮ್ಮ ಕೆಲಸದ ಚಾರ್ಜನ್ನು ತೆಗೆದುಕೊಳ್ಳುವರೆಂಬದಾಗಿ ನಿರೀಕ್ಷಿಸಲ್ಪಟ್ಟಿದೆ ಇವರ ಸಂಗಡ ಹೋಗಿದ್ದ ಮಿ॥ ವರಾಧವರಾಯರವರು ಮಾತ್ರ ಈ ವಾರದಲ್ಲಿ ಬಂದು ಡಿಪ್ಯುಟಿ ಕಮಿಷನರ್ ರೆವಿನ್ಯೂ ಕಮಿಷನರ್ ಕೆಲಸದ ಚಾರ್ಜನ್ನು ವಹಿಸುವರೆಂದು ತಿಳಿಯಬರುತಿದೆ

Pension to Municipal Servants.—ಮ್ಯಾನಿಸಿಪಲ್ ನೌಕರರ ಪೆನ್ಶನ್ ವಿಷಯದಲ್ಲಿ ರೆಸಿಡೆಂಟರವರು ಇಂಡ್ಯ ಗವರ್ನಮೆಂಟಿನವರಿಗೆ ತಿಳಿಸಿರುವದೇನಂದರೆ, ೧೮೯೦ ನೇ ಇಸವಿ ಏಪ್ರಿಲ್ ೧ನೇ ತಾರೀಖಿಗೆ ತರುವಾಯ ಮ್ಯಾನಿಸಿಪಲ್ ನೌಕರರಾಗಿ ದಾಖಲಾಗತಕ್ಕವರು ಪೆನ್ಶನಿಗೆ ಅರ್ಹರಾಗಿರುವರಲ್ಲದೆ ಈ ಪೆನ್ಶನ್ ಫಂಡಿಗೆ ಅವರ ಸಂಬಳಗಳಲ್ಲಿ ಮಾಮೂಲಾಯಿ ಪ್ರಕಾರ ಕಟಾವ್ ಮಾಡಲ್ಪಡತಕ್ಕದ್ದೆಂಬದು. ಇದನ್ನನುಸರಿಸಿ ನೌಕರರಿಗೆ ಪೆನ್ಶನ್ ಕೊಡಬೇಕೆಂಬ ಸಾಮಾನ್ಯಾಭಿಪ್ರಾಯವಂ ಇಂಡ್ಯಗವರ್ನಮೆಂಟಿನವರು ಮಂಜೂರ್‌ಮಾಡಿ ಇನ್ನು ಮುಂದೆ ಪೆನ್ಶನ್ ಭಾರವನ್ನು ಮ್ಯಾನಿಸಿಪಲ್ ಫಂಡ್ಸ್ ಬಳಿಯಮೇಲೆ ಹೊರಿಸತಕ್ಕ ವಿಷಯದಲ್ಲಿ ಬೋರ್ಡಿನವರು ಬಹಳ ಜಾಗರೂಕರಾಗಿರಬೇಕೆಂದೆಚ್ಚರಿಸಿರುವರಲ್ಲದೆ ಬ್ರಿಟಿಷ್ ಬರ್ಮ್ಹ ರಾಜ್ಯದ ಮ್ಯಾನಿಸಿಪಾಲಿಟಿಗಳಲ್ಲಿ ನೆರೆಗೊಂಡಿರುವ ಪದ್ಧತಿಯನ್ನಿಲ್ಲಿಯೂ ಜಾರಿಯಲ್ಲಿ ತಂದರೆ ಯುಕ್ತವಾಗಿರುವದೆಂದು ಸೂಚಿಸಿರುತ್ತಾರೆ.

THE MYSORE GAZETTE
ಮೈಸೂರು ಗೆಜೆಟ್.

ಶ್ರೀಮತ್ ಮಹಾರಾಜರಾಜಾಸಾಹೇಬ್ ಬಹದೂರರ ಸರ್ಕಾರದಿಂದ ಕೊಡಲ್ಪಟ್ಟ ಇಸ್ತಿಹಾರ್‌ನಾಮೆಗಳು.

ನಂ. ೨೦೩ ತಾ|| ೨೦ನೇ ಆಗಸ್ಟ್ ೧೮೯೦—ಅರಸೀಕೆರೆ ತಾಲ್ಲೂಕು ಅಮಲ್ದಾರ್ ಅಹಮದ್ ಅಲ್ಲೀಖಾನರು ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ ೩೫೭ನೇ ಸೆಕ್ಷನ್ ಅನುಸರಿಸಿ ರೆಯಿಲ್ವೇ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಹೇಳಿಕೆಯಾತಗಳನ್ನು ಸ್ವಹಸ್ತದಿಂದ ಇಂಗ್ಲಿಷ್ ಭಾಷೆಯಲ್ಲಿ ತೆಗೆದುಕೊಳ್ಳಲಿಕ್ಕೆ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ನಂ ೨೦೫ ತಾ ೨೩ನೇ ಆಗಸ್ಟ್ ೧೮೯೦—ಚಿತ್ರದುರ್ಗ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮೆ|| ಎನ್. ವೆಂಕಟಾಚಾರ್ಯರವರಿಗೆ ಅವರು ಪಡೆಯಬೇಕೆನುವ ತಾರೀಖ್ ಲಾಗಾಯಿತು ಮೆಡಿಕಲ್ ಸರ್ಟಿಫಿಕೇಟಿನಮೇಲೆ ಯೆರಡುತಿಂಗಳ ರಜಾ ಕೊಡಲ್ಪಟ್ಟಿರುತಿದೆ.

ನಂ. ೨೦೬—ಮೈಸೂರು ಜನರಲ್ ಆಸ್ಪತ್ರಿಗೆ ಸೇರಿದ ಅಸಿಸ್ಟೆಂಟ್ ಸರ್ಜನ್ ಮೆ|| ಟಿ. ಎ. ಅರ್ಮುಗಂ ಮೊದಲಿಯಾರ್ರವರಿಗೆ ೯ನೇ ಇಸವಿ ಆಗಸ್ಟ್ ೧೩ನೇ ೧೮೯೦ ಲಾಗಾಯಿತು ಅಥವಾ ಅವರು ಪ್ರಯಾಣ ಹೊರಡುವ ತಾರೀಖ್ ಮೊದಲು ೨೦ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತದೆ

ನಂ. ೨೦೭ ತಾ|| ೨೫ನೇ ಆಗಸ್ಟ್ ೧೮೯೦—ಅತ್ತಿಕುಪ್ಪೆ ತಾಲ್ಲೂಕ್ ಅಮಲ್ದಾರ್ ಎಸ್. ಕೃಷ್ಣಮೂರ್ತಿ ರಾಯರವರಿಗೆ ಅವರು ಪಡೆಯಬೇಕೆನುವ ತಾರೀಖ್ ಲಾಗಾಯಿತು ಯೆಂಟು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

ನಂ ೨೧೪, ತಾ ೨೭ನೇ ಆಗಸ್ಟ್ ೧೮೯೦—ಬೆಂಗಳೂರು ತಾಲ್ಲೂಕ್ ಅಮಲ್ದಾರ್ ಬಿ ಸೀತಾರಾಮಯ್ಯನವರು ೪ ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನರಾಗಿ ಆಕ್ಟಿಂಗ್ ತರೀಕ್ ನೇಮಕರಮಾಡಲ್ಪಟ್ಟು, ಮೆ|| ಹೆಚ್. ವಿ. ನಂಜುಂಡಯ್ಯನವರು ರಜಾಮೇಲೆ ಗೈರ್‌ಹಾಜರಾಗಿರುವ ಕಾಲವಲ್ಲಿ, ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಜನರಲ್ ಡ್ಯೂಟಿಯಬಗ್ಯೆ ಶಿವಮೊಗ್ಗ ಡಿಸ್ಟ್ರಿಕ್ಟಿಗೆ ಕಳುಹಿಸಲ್ಪಟ್ಟಿರುವರಲ್ಲದೆ, ಅವರು ಕೂಡಲೇ ಹೋಗಿ ಕೆಲಸದಮೇಲೆ ಹಾಜರಾಗತಕ್ಕದ್ದು. ಮೈಸೂರು ತಾಲ್ಲೂಕ್ ಅಮಲ್ದಾರ್ ಮೆ|| ಚೆಂಗಯ್ಯಶೆಟ್ಟಿ ಬಿ ಎ. ಯವರು ನಾಲ್ಕನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನರಾಗಿ ಆಕ್ಟಿಂಗ್ ತರೀಕ್ ನೇಮಕರ್ಮಾಡಲ್ಪಟ್ಟು ಮೆ|| ಎನ್. ವೆಂಕಟಾಚಾರ್ಯರವರು ರಜಾಮೇಲೆ ಗೈರ್‌ಹಾಜರಾಗಿರುವ ಕಾಲವಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಜನರಲ್ ಡ್ಯೂಟಿಯಬಗ್ಯೆ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ಕಳುಹಿಸಲ್ಪಟ್ಟಿರುವರಲ್ಲದೆ ಅವರು ಕೂಡಲೇ ಕೆಲಸದಮೇಲೆ ಹೋಗಿ ಹಾಜರಾಗತಕ್ಕದ್ದು.

ನಂ. ೨೧೫—ಆಫಿಷಿಯೇಟಿಂಗ್ ಅಸಿಸ್ಟೆಂಟ್ ಕಮಿಷನರ್ ಮೆ|| ಬಿ. ಸೀತಾರಾಮಯ್ಯನವರಿಗೆ ಶಿವಮೊಗ್ಗ ಡಿಸ್ಟ್ರಿಕ್ಟಿನ ಸರಹದ್ದಿನಲ್ಲಿ ಚಲಾಯಿಸತಕ್ಕಬಗ್ಯೆ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಇದರಿಂದ ಕೊಡಲ್ಪಟ್ಟಿರುತಿದೆ. ಆಫಿಷಿಯೇಟಿಂಗ್ ಅಸಿಸ್ಟೆಂಟ್ ಕಮಿಷನರ್ ಮೆ|| ಎ. ಚೆಂಗಯ್ಯ ಶೆಟ್ಟರವರಿಗೆ ಚಿತ್ರದುರ್ಗ ಡಿ|| ಸರಹದ್ದಿನಲ್ಲಿ ಚಲಾಯಿಸತಕ್ಕಬಗ್ಯೆ ಯೆರಡನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತಿದೆ.

ನಂ. ೨೧೬—ದೊಡ್ಡಬಳ್ಳಾಪುರ ತಾಲ್ಲೂಕ್ ಅಮಲ್ದಾರ್ ಕುಪ್ಪುರಾಮ ನಾಯಕರವರು ಹಂಗಾಮಿಯಾಗಿ ಬೆಂಗಳೂರು ತಾಲ್ಲೂಕಿಗೆ ವರ್ಗ ಮಾಡಲ್ಪಟ್ಟಿರುತ್ತಾರಲ್ಲದೆ, ಅವರು ಕೂಡಲೇ ಕೆಲಸದಮೇಲೆಹೋಗಿ ಹಾಜರಾಗತಕ್ಕದ್ದು.

LEGAL INTELLIGENCE.
ನ್ಯಾಯನಿರ್ಣಯಗಳು.

ಗುಂಪಿಗೆ ಸೇರಿ ದೊಂಬಿ ನಡೆಸಿದ್ದು.

ತಿರುನೆಲ್ವೇಲಿ ಡಿಸ್ಟ್ರಿಕ್ಟು ಜಾಯಿಂಟ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ.

೧೮೯೯ನೇ ಇಸವಿಯ ೪೧ನೇ ನಂಬರ್ ಮೊಕದ್ದಮೆ.

ಫಿರ್ಯಾದಿ—ಮಹಾರಾಣೀ ಸಾರ್ವಭೌಮ ಚಕ್ರವರ್ತಿನೀಯವರು.

ವಕೀಲರು—ಪ್ರೋಸಿಕ್ಯೂಟಿಂಗ್ ಪೋಲೀಸ್ ಆಫೀಸರ್ ಸುಬ್ರಹ್ಮಣ್ಯಪಿಳ್ಳೆ ವಗೈರೆಯವರು ೪ ಜನ.

ಪ್ರತಿವಾದಿಗಳು—೧ನೇ ಶಿವ, ೨ನೇ ಲಿಂಗನಾಯಕ, ೩ನೇ ಮುರ್ತಾಖಾನ್, ೪ನೇ ರಾಮಸ್ವಾಮಿ.

ಜಡ್ಜಿಗಳು—ತಿರುನಲ್ವೇಲಿ ಡಿಸ್ಟ್ರಿಕ್ಟು ಕಲೆಕ್ಟರ್ ವ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟ್ ಮಿ|| ಎ. ಜೆ. ಎ. ಟ್ರಿವರ್ ಹಿಂದಾರವರು ವಗೈರೆ ಹನ್ನೊಂದು ಜನ.

ಚಾರ್ಜಿ—ಇಂಡಿಯನ್ ಪಿನಲ್‌ಕೋಡ್ ೧೪೭ ಮತ್ತು ೧೪೩ ನೇ ಸೆಕ್ಷನ್‌ಗಳನ್ನನುಸರಿಸಿ ಅಕ್ರಮವಾದ ಒಂದು ಕೂಟವನ್ನು ಸೇರಿ ದೊಂಬಿ ನಡೆಸಿದ್ದು.

ತೀರ್ಮಾನ—ತಪ್ಪೀದೆ ಸಾಬೀತಾಗಿ,

ಶಿಕ್ಷೆ—ನಾಲ್ಕು ತಿಂಗಳ ಫೈನ್ ಕಟ್ಟಿ ನೋಡದಿದ್ದರೆ ತಿಂಗಳ ಸಾಧಾರಣ ಫೈನ್, ಮತ್ತು ಮೂರು ತಿಂಗಳ ಕಾಲ ಕಠಿಣ ಫೈನ್.

ಫೈಸಲು.

(೧) ಸದರೀ ನಾಲ್ಕು ಜನ ಅಪರಾಧಿಗಳೂ ದಸ್ತಗಿರಿ ಮಾಡಲ್ಪಡದ ಇನ್ನೂ ಇತರರು ಕೆಲವರು ತಿರುನೆಲ್ವೇಲಿ ಕಳೆದ ಜೂಲೈ ೨೩ ನೇ ತಾರೀಖಿನಲ್ಲಿ ಇಂಡಿಯನ್ ಪಿನಲ್‌ಕೋಡ್ ೧೪೭ ಮತ್ತು ೧೪೩ ನೇ ಸೆಕ್ಷನ್‌ಗಳ ಪ್ರಕಾರ, ಅಕ್ರಮ ಕೂಟಕ್ಕೆ ಸೇರಿ ದೊಂಬಿ ನಡೆಸಿದ ಬಗ್ಗೆ ವಿಚಾರಿಸಲ್ಪಟ್ಟಿರುತ್ತಾರೆ.

(೨) ಈ ಮೊಕದ್ದಮೆಯ ಸಾರಾಂಶವೇನೆಂದರೆ, ತಿರುನಲ್ವೇಲಿ ಡಿಸ್ಟ್ರಿಕ್ಟಿಗೆ ಸೇರಿದ ಕೊರ್ಟ್ರಾಲ ಎಂಬ ಪ್ರದೇಶದಲ್ಲಿ ಒಂದು ಗುಡ್ಡದಿಂದ ಜಲಪಾತವಾಗಿ ನೀರು ಹರಿಯುತಲಿದೆಯಾಗಿ ಇದರಲ್ಲಿ ಯೂರೋಪಿಯನ್‌ಗಳು ನೇಟಿವ್‌ಗಳು ಸಹ ಸ್ನಾನ ಮಾಡಬೇಕಾಗಿರುತ್ತದೆ. ಯೂರೋಪಿಯನ್‌ಗಳು ಬೆಳಿಗ್ಗೆ ೯|| ಘಂಟೆಯವರೆಗೂ ನೇಟಿವ್‌ಗಳು ಮಿಕ್ಕ ಕಾಲದಲ್ಲಿಯೂ ಸ್ನಾನಮಾಡತಕ್ಕ ವಾಡಿಕೆಯಾಗಿರುತ್ತದೆ. ಕಳೆದ ಜೂಲೈ ತಿಂಗಳ ೨೩ನೇ ತಾರೀಖಿನ ದಿನ ಬೆಳಿಗ್ಗೆ ಸದರೀ ಹೊಳೆಯೊಳ್ಳಗೆ ಗದ್ದಲವುಂಟಾಗಿ, ಆ ಕಾಲದಲ್ಲಿ ಸ್ಥಳನಿವಾಸಿಯಾದ ಮಿ ಕ್ಯಾರ್ಕ್ ಎಂಬ ಕಾಫಿ ಪ್ಲಾಂಟರೊಬ್ಬ ಮಿ ಕೃಷ್ಣಯ್ಯರ್ ಎಂಬಾತನ ಭಾರ್ಯೆಯನ್ನು ಹೊಡೆದನೆಂಬದಾಗಿ ತಿಳಿಸಲ್ಪಟ್ಟಿತು. ಅದೇ ದಿನ ಸಾಯಂಕಾಲ ಒಂದು ಮೀಟಿಂಗ್ ನಡೆದು (ಎಗ್ಜಿಬಿಟ್ ಬಿ) ಆ ಸಭೆಯಲ್ಲಿದ್ದವರೆಲ್ಲರು ಮಿ|| ಕ್ಯಾರ್ಕ್ ಎಂಬಾತನ ನಡತೆಯ ವಿಷಯದಲ್ಲಿ ಆಗ್ರಹ ಸೂಚಕವಾದ ತೀರ್ಮಾನಗಳನ್ನು ಮಾಡಿ ಮೇಲೆ ಹೇಳಿದ ಹೊಳೆಗೆ ಬೆಳಿಗ್ಗೆ ೯|| ಘಂಟೆಗೆ ಮುಂಚಿತವಾಗಿ ಹೋಗುವವರಲ್ಲಿ ಯೂರೋಪಿಯನ್‌ಗಳೂ ನೇಟಿವ್‌ಗಳೂ ಇರತಕ್ಕ ಬಾಧ್ಯತೆಗಳ ಕುರಿತು ವಿಚಾರ ಮಾಡಿದರು. ಇತರ ಸಭೆಗಳಾದ ತೀರ್ಮಾನಗಳನ್ನೂ ಅಗ್ಗಿ ಪ್ರಸ್ತಾಪ ಸುತ್ತಲಿದ್ದ ಜನರ ಅಪಮಾನಾನಂತರವನ್ನೂ ಪರ್ಯಾಲೋಚಿಸಿ, ಸ್ಥಳದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು, ಹೊಳೆಗೆ ಹೋಗಿ ಸ್ನಾನ ಮಾಡುವ ಹಕ್ಕುದಾರಿಯನ್ನೊಂದುವೇಳೆ ಯೂರೋಪಿಯನ್‌ಗಳು ಮುನ್ನೆಲರವಾಗಿ ಹಿಡಿದು ಆ ರೀತಿ ಮಾಡಿಯುವ ಪಕ್ಷಕ್ಕೆ ಜನರ ನೆಮ್ಮದಿಗೆ ಭಂಗವುಂಟಾಗ ಬಹುದೆಂಬ ನಿರೀಕ್ಷಣೆಯಿಂದನ ಕೆಲವು ಪೋಲೀಸ್ ಕಾನ್‌ಸ್ಟೇಬಲ್‌ಗಳನ್ನು ಸದರೀ ಸ್ಥಳಕ್ಕೆ ಕಳುಹಿಸಿದರು. ಜೂಲೈ ೨೩ ನೇ ತಾರೀಖಿನ ದಿನ ಬೆಳಿಗ್ಗೆ ೬ ಘಂಟೆಗೆ ಮುಂಚಿತವಾಗಿ ಏತದರ್ಥ ನಿಯಮಿಸಲ್ಪಟ್ಟಿದ್ದ ಸ್ಟೇಷನ್ ಹೌಸ್ ಆಫೀಸರೂ ಫಿರ್ಯಾದಿ ತರಫ್ ೧–೩ನೇ ಸಾಕ್ಷಿಗಳೂ ವಾಟರ್‌ಫಾಲಿಗೆ ಉಸ್ತುವಾರಿಯ ಬಗ್ಗೆ ಹೋಗಿದ್ದರು. ಮಿ|| ಕ್ಯಾರ್ಕ್ ಎಂಬಾತನು ಅದೇ ದಿನ ಬೆಳಿಗ್ಗೆ ಸ್ವಲ್ಪ ಗಲಭೆಯುಂಟಾಗಬಹುದೆಂದು ಭಾವಿಸಿ ಪೋಲೀಸಿನವರ ಸಹಾಯವನ್ನಪೇಕ್ಷಿಸಿದನು. ಆ ಪ್ರದೇಶಕ್ಕೆ ಪೋಲೀಸಿನವರು ಹೋಗಿ ಸ್ನಾನ ಮಾಡತಕ್ಕ ಕಾಲದಲ್ಲಿ ನಾಲ್ಕು ಜನ ಅಪರಾಧಿಗಳು ಮೈಸೂರು ದೇಶೀಯರಾದ ಇತರ ಆರು ಜನರೊಡನೆ ಸೇರಿಕೊಂಡು ಕೆಲವರು ದಂಡಧಾರಿಗಳಾಗಿ (ಇವರೆಲ್ಲರೂ ತಿರ್ತ್ಕಾಲದಲ್ಲಿ ಕೊರ್ಟ್ರಾಲಂನೊಳು ವಾಸ್ತವ್ಯ ಮಾಡಿದ್ದ ಮೈಸೂರ್ ದಿವಾನರವರ ಆಶ್ರಿತರಾಗಿಯೂ ನೌಕರರಾಗಿಯೂ ಇರುತ್ತಾರೆ) ಸ್ನಾನಾರ್ಥ ವಾಟರ್‌ಫಾಲಿಗೆ ಬಂದರು. ಮಿ|| ಕ್ಯಾರ್ಕ್‌ಗಾಗಲಿ ಅಥವಾ ಇತರ ಯೂರೋಪಿಯನ್‌ಗಳಿಗಾಗಲಿ ಸ್ನಾನಾರ್ಥ ಬರುವ ಪಕ್ಷಕ್ಕೆ ದೊಂಬಿಯಾಗಬಹುದೆಂದು ಪೋಲೀಸಿನವರು ಭಯಪಟ್ಟು ೯|| ಘಂಟೆಯ ತನಕ ಹೊಳೆಯೊಳ್ಳಬಾರದೆಂದು ಪ್ರವೇಶಿಸತಕ್ಕದೆಂಬದಾಗಿ ಅವರಿಗೆ ಖಂಡಿತವಾಗಿ ಹೇಳಿ ತಡೆದು ಬಿಟ್ಟರು. ಪರಂತು ಪೋಲೀಸಿನವರ ಮಾತುಗಳು ಲಕ್ಷ್ಯದೊಳಕೊಳ್ಳಲಿಲ್ಲವು. ಫಿರ್ಯಾದಿ ತರಫ್ ೨ ನೆಯ ಸಾಕ್ಷಿಯಾದ ೪೨೮ ನೇ ನಂಬರ್ ಪೋಲೀಸ್ ಕಾನ್‌ಸ್ಟೇಬಲ್ ಶಂಕರಲಿಂಗಂ ಪಿಳ್ಳೆ ಎಂಬಾತನನ್ನು ಸದರೀ ನಾಲ್ವರು ಅಪರಾಧಿಗಳೂ ಇತರ ಮೈಸೂರಿನವರು ಸಹ ಸೇರಿ ತಳ್ಳಿಬಿಟ್ಟು ಸ್ನಾನಘಟ್ಟದ ಸುತ್ತಲೂ ಕಟ್ಟಲ್ಪಟ್ಟಿದ್ದ ಆವರಣದೊಳಗೆ ಪ್ರವೇಶಿಸಿ ಸ್ನಾನಮಾಡಲಾರಂಭಿಸಿದ್ದನ್ನು ಸ್ಟೇಷನ್ ಹೌಸ್ ಆಫೀಸರ್ ಸುಬ್ರಹ್ಮಣ್ಯ ಪಿಳ್ಳೆಯು, ತತ್ಕಾಲದಲ್ಲಿ ಜನರ ಸಮಾಧಾನದ ಪಾಲಿಸತಕ್ಕ ವಿಷಯದಲ್ಲಿ ಆಲೋಚಿಸುವದಕ್ಕಾಗಿ ಕೊರ್ಟ್ರಾಲಕ್ಕೆ ಬಂದಿದ್ದ ಸಬ್ ಮ್ಯಾಜಿಸ್ಟ್ರೇಟರಿಗೆ ಒದನೇ (ಎಗ್ಜಿಬಿಟ್ ಎ) ರಿಪೋರ್ಟ್ ಬರೆದು ರವಾನಿಸಿದನು. ೮ ಘಂಟೆಗೆ ಪೂರ್ವವೇ ಸಬ್ ಮ್ಯಾಜಿಸ್ಟ್ರೇಟರಿಗೆ ರಿಪೋರ್ಟು ತಲಪಲು ಅವರು ಕೂಡಲೇ ಆ ಪ್ರದೇಶಕ್ಕೆ ಹೊರಟುಹೋದರು. ಆಗ ಸ್ನಾನಘಟ್ಟವನ್ನು ಸದರೀ ನಾಲ್ಕು ಜನ ಅಪರಾಧಿಗಳೂ ಇತರ ಮೈಸೂರಿನವರೂ ಆಕ್ರಮಿಸಿಕೊಂಡಿದ್ದದನ್ನೂ, ಅನೇಕ ಪ್ರದೇಶದಲ್ಲಿರತಕ್ಕವರೂ ಪರದೇಶದವರೂ ಗುಂಪು ಗುಂಪಾಗಿ ಬಂದು ನುಗ್ಗುತಲಿದ್ದದನ್ನೂ ಸಬ್ ಮ್ಯಾಜಿಸ್ಟ್ರೇಟರು ನೋಡಿದರು. ಇದ್ದವರಲ್ಲಿ ಯೇ ಮಿ|| ಕ್ಯಾರ್ಕ್ ವಗೈರೆ ಇತರ ಕೆಲವರು ಯೂರೋಪಿಯನ್‌ಗಳು ಸ್ನಾನಾರ್ಥ ಅಲ್ಲಿಗೆ ಬಂದು ಸೇರಿದರು. ಯೂರೋಪಿಯನ್‌ರು ಸ್ನಾನಮಾಡುವ ತಮ್ಮ ಹಕ್ಕುದಾರಿಯನ್ನು ಹಿಡಿದು ಬಲಾತ್ಕರಿಸುವರಾದರೆ ಸಮಾಧಾನಕ್ಕೆ ಲೋಪವುಂಟಾಗುವದೆಂದಾಲೋಚಿಸಿ ಮ್ಯಾಜಿಸ್ಟ್ರೇಟರು ಅಪರಾಧಿಗಳು ಮೊದಲಾದವರಿಗೆಲ್ಲ ಸ್ನಾನಘಟ್ಟ ಬಿಟ್ಟು ಹೊರಗೆ ಹೋಗುವಂತೆ ಹುಕುಂ ಮಾಡಿದಾಗ್ಯೂ ಅವರವನ್ನು ಬಿಡ್ಡಾಂಗ ಸಡ್ಡೆಗೆಯ್ಯಲಿಲ್ಲವು. ಆ ಕಾಲದಲ್ಲಿ ಸಾಮಾನ್ಯೇನ ಅಪರಾಧಿಗಳದ್ದ ರೀತಿಯನ್ನೂ ಅವರ ನಡತೆಯನ್ನೂ ಸಬ್ ಮ್ಯಾಜಿಸ್ಟ್ರೇಟರು ಕಂಡು ೯|| ಘಂಟೆಗೆ ಮುಂಚಿತವಾಗಿ ಸ್ನಾನಮಾಡುವ ಹಕ್ಕುದಾರಿಯನ್ನು ಯೂರೋಪಿಯನ್‌ಗಳು ವಹಿಸುವ ಸಂದರ್ಭದಲ್ಲಿ ಬಲಾತ್ಕಾರದ ಪ್ರಸಂಗ ದೊಂಬಿನಡೆಸಬೇಕೆಂಬ ನಿಶ್ಚಯದೊಡನೆ ಅವರು ಸ್ನಾನಕ್ಕಾಗಿ ಬಂದುದೆಂದು ನಿರ್ಣಯಿಸಿದರು. ಸಬ್ ಮ್ಯಾಜಿಸ್ಟ್ರೇಟರು, ಯೂರೋಪಿಯನ್‌ಗಳು ಸ್ನಾನಘಟ್ಟದಲ್ಲಿ ಪ್ರವೇಶಿಸುವದರಿಂದ ನೆಮ್ಮದಿಗೆ ಭಂಗವುಂಟಾಗಬಹುದಾಗಿ ಆಲೋಚಿಸಿ ಆ ಕಡೆಗೆ ಹೋಗಬಾರದೆಂದು ಅವರಿಗೆ ತಿಳಿಸಿ ಅಲ್ಲಿನ ವೃತ್ತಾಂತಗಳನ್ನೆಲ್ಲ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಿಗೆ ರಿಪೋರ್ಟು ಮಾಡುವಂತೆ ಅವರಿಗೆ ಪಾರ್ಥನೆಮಾಡಿದರು. ಅದನ್ನನುಸರಿಸಿ ಅಲ್ಲಿದ್ದ ಯೂರೋಪಿಯನ್‌ಗಳೆಲ್ಲರು ಸ್ನಾನ ಮಾಡದೆ ವಶರಾಗಿಲ್ಲದೆ ಹೊರಟುಹೋದರು. ಸಬ್ ಮ್ಯಾಜಿಸ್ಟ್ರೇಟರೂ ಸದರೀ ಪ್ರದೇಶದಿಂದ ಹೊರಟುಹೋಗಿ ಆದಿನದ (ಎಗ್ಜಿಬಿಟ್ ಸಿ) ಹಾಳೆಯಲ್ಲಿ ನಡೆದ ಯಾವತ್ತನ್ನು ಸ್ಪಷ್ಟವಾಗಿ ವಿವರಿಸಿ ರಿಪೋರ್ಟನ್ನು ಬರೆದು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಿಗೆ ರವಾನಿಸಿದರು.

೩. ಫಿರ್ಯಾದಿಗೆ ಕಾರಣಭೂತಗಳಾದ ಮುಖ್ಯಾಂಶಗಳು ಇಷ್ಟೇಯಾಗಿರುತ್ತವೆ.

೪. ಅಪರಾಧಿಗಳ ವಾದವೇನೆಂದರೆ—ದಿವಾನರವರ ನೌಕರರಾದ ೧—೩ನೇ ಅಪರಾಧಿಗಳು ಸ್ನಾನಾರ್ಥ ಸುಮಾರು ೬—೭ ಘಂಟೆಗೆ ಸರಿಯಾಗಿ ಹೊಳೆಗೆ ಹೋದರೆಂದೂ, ತಾವು ಸ್ನಾನಘಟ್ಟದ ಪ್ರವೇಶಿಸುವಾಗ್ಯೆ ಕದನವನ್ನು ಯಾರಾದರೂ ತಡೆಯದೆಹೋದದರಿಂದ ಸ್ನಾನಮಾಡಿಕೊಂಡು ಹೊರಟುಹೋದುದೆಯೂ ಆ ಕಾಲದಲ್ಲಿ ದೊಂಬಿಯಾಗಲಿ ಅಕ್ರಮಕೂಟವಾಗಲಿ ನಡೆಯಲಿಲ್ಲವೆಂದೂ ತಿಳಿಸಿದರು.

೫. ಪ್ರಕೃತಸಂದರ್ಭದಲ್ಲಿ ಹೊಳೆಯೊಳು ಸ್ನಾನಮಾಡತಕ್ಕಂತಾ ಹಕ್ಕುದಾರಿಯು ಯೂರೋಪಿಯನ್‌ಗಳಿಗೆ ಇರುವದಿಲ್ಲವೆಂದಾಗಲಿ ವಿಶೇಷ ಸಂದರ್ಭಗಳಲ್ಲಿ ವಿನಾ ಪ್ರತಿದಿನ ಬೆಳಿಗ್ಗೆ ೯|| ಘಂಟೆಯ ತನಕ ನೇಟಿವ್‌ಗಳನ್ನು ವಿನಾಯಿಸಿ ಯೂರೋಪಿಯನ್‌ಗಳು ಸ್ನಾನಮಾಡತಕ್ಕ ವಾಡಿಕೆಯು ಅನೇಕ ಕೆಲವು ಸಂವತ್ಸರಗಳಿಂದ ನೆಲಗೊಂಡಿರತಕ್ಕ ಅಂಶವನ್ನಾಗಲಿ ಅಪರಾಧಿಗಳು ನಿಷೇಧಿಸಿದವರಲ್ಲವು. ನೇಟಿವ್‌ಗಳೂ ಯೂರೋಪಿಯನ್‌ಗಳೂ ಸೇರಿ ಸ್ನಾನಮಾಡತಕ್ಕ ಕಾಲದಲ್ಲಿ ಉಂಟಾಗಬಹುದಾದ ಕಲಹಗಳನ್ನೂ ತೊಂದರೆಗಳನ್ನೂ ನಿವಾರಿಸುವ ಉದ್ದೇಶದಿಂದ ೧೮೮೦ನೇ ಇಸವಿಯಲ್ಲಿ ಏತದರ್ಥ ಒಂದು ಕಾಲನಿಯಮವನ್ನುಂಟುಮಾಡಿ ಬೆಳಿಗ್ಗೆ ೯|| ಘಂಟೆಯತನಕ ಯೂರೋಪಿಯನ್‌ಗಳ ಸ್ನಾನಕಾಲವೆಂತಲೂ, ತರುವಾಯ ಬೇಕಾದಾಗ ನೇಟಿವ್‌ಗಳು ಸ್ನಾನಮಾಡಬಹುದೆಂತಲೂ, ನೋಟೀಸುಕೊಟ್ಟರು. ಈ ನೋಟೀಸು ಮಿಸ್ಟರ್ ಲೀ ವಾರ್ನರ್‌ರವರ ಅಧಿಕಾರ ಧರ್ಮದಲ್ಲಿ ಕೊಡಲ್ಪಟ್ಟದ್ದೇ ಅಲ್ಲವೇ ಎಂಬ ಅಂಶವು ಕೇವಲ ಅಲ್ಪವಾದದ್ದಾಗಿರುತ್ತದೆ. ಪರಂತು ವಿಚಾರಣೆಗಿನ ಹಿನ್ನಲೆಯಿಂದ (ಎಗ್ಜಿಬಿಟ್ ಬಿ) ೧೮೮೦ನೇ ಇಸವಿಯಲ್ಲಿ ಮಾತ್ರವಲ್ಲ ಸದರೀ ನಿರ್ಬಂಧವನ್ನು ಅದುವರೆಗೂ ಸ್ಥಳವಾಸಿಗಳಾದ ನೇಟಿವ್‌ಗಳೂ ಆಗಿಂದಾಗ್ಗೆ ಕೊರ್ಟ್ರಾಲಕ್ಕೆ ಬರತಕ್ಕ ನೇಟಿವ್‌ಗಳು ಸಹ ಅನುಮಾನಿಸದೆಯೂ ವಿರೋಧಿಸದೆಯೂ ಅಂಗೀಕರಿಸಿ ಅದರಂತೆ ನಡೆಯುತ್ತಲೂ ಬಂದಿರುವರೆಂದು ಸ್ಪಷ್ಟವಾಗುತ್ತದೆ. ಸ್ನಾನಾರ್ಥವಾಗಿ ಬರತಕ್ಕ ಯೂರೋಪಿಯನ್‌ಗಳಿಗೆ ಹೊಳೆಯಲ್ಲಿ ಬೇಕಾದ ವಸತಿ ಯುಂಟುಮಾಡಲ್ಪಟ್ಟತಲ್ಲದೆ ಯೂರೋಪಿಯನ್ ಹೆಂಗಸರ ಉಪಯೋಗಾರ್ಥ ಹೊಳೆಯ ಮುಂಭಾಗದಲ್ಲಿ ಆವರಣಸಹ ಕಟ್ಟಲ್ಪಟ್ಟಿತು.

(೬) ಉಭಯಪಕ್ಷದ ಸಾಕ್ಷಿಗಳ ಕೈಫಿಯತ್ತನ್ನು ವಿಮರ್ಶಿಸಿ ನೋಡಲಾಗಿ ಇಂಡಿಯನ್ ಪಿನಲ್‌ಕೋಡಿನ ೧೪೩ ವ ೧೪೭ ನೇ ಸೆಕ್ಷನ್‌ಗಳ ಪ್ರಕಾರ ದಂಡನೀಯಗಳಾದ ತಪ್ಪಿನಗಳಿಗೆ ಕಾರಣವೆನಿಸಿದ ಜನರಿಂದ ನೋಡಲು ಅಂಕುರಿಸಿದಂತೆ ಸ್ಪಷ್ಟವಾಗುತ್ತದೆ. ಅಥವಾ ಅಕ್ರಮೋದ್ದೇಶದೊಡನೆ ಇವರೆಲ್ಲರೂ ಗುಂಪುಯಾದಂತೆ ನಿರ್ಧಾರಮಾಡುತ್ತದೆ. ಫಿರ್ಯಾದಿ ತರಫ್ ಸಾಕ್ಷಿಗಳ ಕೈಫಿಯತ್ತಿನಿಂದ ಮಾತ್ರವಲ್ಲದೆ ಪ್ರತಿವಾದಿಗಳ ತರಫ್ ಸಾಕ್ಷಿಗಳ ಕೈಫಿಯತ್ತಿನಿಂದ ಸಹ ಆ ದಿನ ಬೆಳಿಗ್ಗೆ ಸದರೀ ಹೊಳೆಯಲ್ಲಿ ಅಥವಾ ಪಕ್ಷ ೫ ಜನ ಮೈಸೂರಿನವರು ಇದ್ದಂತೆ ವ್ಯಕ್ತವಾಗುತ್ತದೆ. (೭) ಗುರ್ತಿಸಲ್ಪಟ್ಟ ರಿಪೋರ್ಟಿನಿಂದ ಹದಿನಾರು ಜನ ಇದ್ದಂತೆ ನಿರ್ಧಾರವಾಗುತ್ತದೆ. ಸಬ್ ಮ್ಯಾಜಿಸ್ಟ್ರೇಟರವರು ಪ್ರಮಾಣದಿಂದ ೫ ಮಂದಿ ಮಾತ್ರ ಇದ್ದಂತೆ ಹೇಳಿದರು. ಪ್ರತಿವಾದಿಗಳ ಪೈಕಿ ಒಬ್ಬನಾದ ೩ ನೇ ಮುರ್ತಾಖಾನ್ ಎಂಬವನು ೫ ಜನ ಇದ್ದಂತೆ ಒಪ್ಪಿಕೊಂಡಿರುವದಲ್ಲದೆ ಸದರೀ ಅಂಶವು ಡಿಫೆನ್ಸು ೩ನೇ ಸಾಕ್ಷಿಯ ಕೈಫಿಯತ್ತಿನಿಂದ ದೃಢವಡುತ್ತದೆ. ದೊಂಬಿ ನಡೆಯಲಿಕ್ಕೆ ಸ್ವಲ್ಪ ಹೊತ್ತಿಗೆ ಮುಂಚಿತವಾಗಿ ೫—೬ ನೇ ಸಾಕ್ಷಿಗಳಾದ ಇಬ್ಬರು ಬ್ರಾಹ್ಮಣ ಜಾತಿ ಅಧಿಕಾರಿಯವರೂ ಮತ್ತೊಬ್ಬ ಬ್ರಾಹ್ಮಣನೂ ಹಾಜರಿದ್ದಂತೆ ಇತರ ಡಿಫೆನ್ಸ್ ಸಾಕ್ಷಿಗಳ ಕೈಫಿಯತ್ತಿನಿಂದ ರುಜುವಾತಾಗುತ್ತದೆ.

(೭) ೪ ಜನ ಅಪರಾಧಿಗಳೂ ಅವರ ಸ್ನೇಹಿತರೂ ಹೊಳೆಗೆ ಹೋಗುವದಕ್ಕುಂಟಾದ ಅಕ್ರಮವಾದ ಸಾಮಾನ್ಯೋದ್ದೇಶ್ಯವು ಎರಡನೆಯ ಕಾರಣವಾಗಿರುತ್ತದೆ. ಇದೇ ಈ ಮೊಕದ್ದಮೆಯಲ್ಲಿ ಬಹಳ ಮುಖ್ಯವಾದ ಅಂಶವಾಗಿರುವುದು. ಅಪರಾಧಿಗಳು ತಾವು ಹೊಳೆಗೆ ಹೋದದ್ದೇನೂ ಅಕ್ರಮವಲ್ಲವೆಂದೂ ತಮ್ಮ ಹಕ್ಕಿಗೆ ಯನ್ನನುಸರಿಸಿ ದ್ವಾರದಲ್ಲಿ ಸ್ನಾನ ಮಾಡಬೇಕೆಂದು ಕೋರಿಕೆಯಿಂದಲೇ ಹೋದರೆಂಬದೂ ತಿಳಿಸಿದರು. ಮಿ|| ಲೀವಾರ್ನರ್ ರವರ ನೋಟೀಸ್ ಪ್ರಕಾರ ಯೂರೋಪಿಯನ್‌ಗಳಿಗಾಗಿ ವಿಶೇಷವಾದ ಕಾಲದಲ್ಲಿ ಸ್ನಾನಮಾಡಲಿಕ್ಕೆ ಹಕ್ಕೊಂಟುಬದನ್ನು ಸ್ವೀಕರಿಸಬೇಕೆಂಬ ಅಕ್ರಮವಾದ ಸಮಾನೋದ್ದೇಶದೊಡನೆ ಸದರೀ ನಾಲ್ವರು ಅಪರಾಧಿಗಳೂ ಇತರ ಮೈಸೂರಿನವರು ಸಹ ಹೊಳೆಗೆ ಬಂದರೆಂಬದು ಅವಶ್ಯಕವಾಗಿ ಹರಿ ಸದರೀ ಹಕ್ಕನ್ನು ಬಲಾತ್ಕಾರವಾಗಿಯಾಗಲಿ, ಬಲಾತ್ಕರಿಸುವಂತೆ ತೋರಿಸುವದರ ಮೂಲಕವಾಗಿಯಾಗಲಿ, ಹೊಂದುವ ಬೇಕೆಂಬ ತಾತ್ಪರ್ಯವು ಸದರೀ ಜನಗಳಿಗೆ ಇರದೆ ಹೋಗಲಿಲ್ಲವೆಂಬದೂ ಫಿರ್ಯಾದಿಯ ವಾದವಾಗಿರುತ್ತದೆ. ಅಪರಾಧಿಗಳಾಗಲಿ, ಸಾಮಾನ್ಯವಾದ ಸ್ಥಳ ದರ ಸ್ಥಳಗಳವರಾದ ನೇಟಿವ್‌ಗಳಾಗಲಿ, ೯|| ಘಂಟೆಗೆ ಪೂರ್ವದಲ್ಲಿ ಹೊಳೆಗೆ ಹೋಗಿ ಸ್ನಾನಮಾಡುವದಕ್ಕೆ ನ್ಯಾಯವಾದ ಹಕ್ಕಿರುವದಿಲ್ಲವೆಂದು ಫಿರ್ಯಾದಿಯು ಬುದ್ಧಿಪೂರ್ವಕವಾಗಿ ನಿರಾಕರಿಸಲಿಲ್ಲವು. ಅಥವಾ ಅಂತಾ ಹಕ್ಕು ತಮಗಿರುವದಾಗಿ ಅವರು ಭಾವಿಸಿದ್ದು ಅಕ್ರಮವೆಂದು ಹೇಳಲಿಲ್ಲವು. ಪರಂತು ಸಕಲ ಜನಗಳ ಅನುಮತಿಯಿಂದಲೇ ಯೂರೋಪಿಯನ್‌ಗಳಿಗೆ ಪ್ರತ್ಯೇಕವಾಗಿ ನಿಯಮಿಸಲ್ಪಟ್ಟಿದ್ದ ಕಾಲದಲ್ಲಿ ಅಂದರೆ ಬೆಳಿಗ್ಗೆ ೯|| ಘಂಟೆಗೆ ಮುಂಚೆ ಹೊಳೆಗೆ ಇತರರಾರೂ ಹೋಗಕೂಡದೆಂಬ ಪದ್ಧತಿಯು ನೆಲಗೊಂಡಿರುವಾಗ್ಯೂ ಅಂತಾ ಪದ್ಧತಿಯನ್ನು ಅಪರಾಧಿಗಳು ಇದುವರೆಗೆ ಜೂಲೈ ೨೩ ನೇ ತಾರೀಖಿನ ಬೆಳಿಗ್ಗೆ ಪ್ರಥಮವಾಗಿ ಉಲ್ಲಂಘಿಸಿದ್ದು ಸೂಚಿತ: ಅಪರಾಧಿಗಳ ವಿರುದ್ಧಾಭಿಪ್ರಾಯವು ನಿರೂಪಿಸತಕ್ಕ ಅನೇಕ ಅಂಶಗಳಲ್ಲಿ ಒಂದಾಗಿರುತ್ತದೆಂದು ವಾದಿಸಲ್ಪಟ್ಟಿತು.

೮. ಅಪರಾಧಿಗಳೂ ಮೈಸೂರು ದೇಶೀಯರಾದ ಇತರರೂ ಮೇಲೆ ತಿಳಿಸಲ್ಪಟ್ಟಂತೆ ನ್ಯಾಯವಿರುದ್ಧವಾದ ಪುರಾಲೋಚನೆ ಯುಂಟಾಗಿತ್ತೆಯೆಂಬ ಅಂಶವು ವಿಮರ್ಶಿಸುವಾಗ್ಯೆ ಅದರ ಹಿಂದಿನ ದಿವಸ ಜರಿಗಿದ ಅಂಶಗಳನ್ನೂ ಮೀಟಿಂಗ್‌ಕಾಲದಲ್ಲಿ ಮಾಡಲ್ಪಟ್ಟ ನಿರ್ಣಯಗಳ ಅಭಿಪ್ರಾಯವನ್ನೂ, ವಾಟರ್ ಫಾಲಿನಲ್ಲಿ ಅಪರಾಧಿಗಳಸ್ಥಿತಿ ಮತ್ತು ಅವರ ಸಾಧಾರಣ ನಡತೆಯನ್ನೂ, ಅವರ ಹೇಳಿಕೆಗಳಿಂದ ಸ್ಥಾನೀಯವಾಗಿ ಕಾಣಿಸಿದ ಹೃದಯದಲ್ಲುಂಟಾದ ಭಾವವನ್ನೂ ನಾವು ಆಲೋಚಿಸಬೇಕಾಗಿರುತ್ತದೆ.

ಈ ಫೈಸಲನ್ನು ಆಮೂಲಾಗ್ರ ಪ್ರಕಟಿಸಿಕ್ಕೆ ಈ ಪತ್ರಿಕೆಯಲ್ಲಿ ಅವಕಾಶವು ಸಾಲದಿರುವುದರಿಂದ ಅದರ ಉತ್ತರಾರ್ಧವನ್ನು ಮುಂದಿನವಾರದ ತನಕ ನಿಲ್ಲಿಸಿರುವೆವು.

ಅಳಿಯನ ಅನುಮತಿಯಿಲ್ಲದೆ ಮಗಳನ್ನು ತವರುಮನೆಗೆ ಕರೆದುಕೊಂಡು ಹೋಗುವದಯುಕ್ತವೇ ಅಲ್ಲವೆ ಯೆಂಬದಂಕುರಿತು—ಗಂಡನಮನೆಯಲ್ಲಿದ್ದ ೧೫ ವರುಷಗಳ ವಯಸ್ಸುಳ್ಳ ಒಬ್ಬ ಹುಡುಗಿಯನ್ನು ಆಕೆಯ ತಂದೆಯು ಚೌಲಕ್ಕೋಸ್ಕರ ಹಬ್ಬಕ್ಕಾಗಿ ತನ್ನಮನೆಗೆ ಕರೆದುಕೊಂಡು ಹೋದನು. ಹಾಗೆ ಕರೆದುಕೊಂಡು ಹೋಗಕೂಡದೆಂಬದಾಗಿ ಅಳಿಯನೆನ್ನು ನಿಷೇಧಿಸಿದಾಗ್ಯೂ ಅವನನ್ನು ಲಕ್ಷ್ಯವಿಲ್ಲದೆ ಬಲಾತ್ಕಾರದಿಂ ಕರೆದುಕೊಂಡುಹೋದದರಿಂದ ಅಳಿಯನು ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದು ಮಾಡಿದನು. ಕುವೆಂಪಾಪತೆಯ ಕುಮಾರಿಯ ಯೋಗಕ್ಷೇಮಕ್ಕೆ ಬಾಧ್ಯನಾದವನಾಗಿರುವದರಿಂದಲೂ ಅವನಿಗೆ ಕೆಟ್ಟ ಉದ್ದೇಶವ್ಯಾವುದೂ ಇಲ್ಲದ್ದರಿಂದಲೂ ಪ್ರತಿವಾದಿಗೆ ಶಿಕ್ಷೆ ಕೊಡಲಿಕ್ಕೆ ಅವಕಾಶವಿಲ್ಲವೆಂದು ಹೇಳಿ ದಾವೆಯನ್ನು ತಳ್ಳಿಹಾಕಿದರು. ಬಳಿಕ ಫಿರ್ಯಾದಿಯು ಅದರಮೇಲೆ ಹೈಕೋರ್ಟಿಗೆ ಅರ್ಜಿ ಕೊಡಲು ಅವರದು ಪರ್ಯಾಲೋಚಿಸಿ ಸ್ತ್ರೀಯ ಮನುಷ್ಯರ ಸಂರಕ್ಷಣೆ ಗಂಡನ ಸ್ವಾಧೀನದಿಂದ ಅವಳ ಅನುಮತಿಯಿಲ್ಲದೆ ತಂದೆಯಾದವನು ಮಗಳನ್ನು ಕದ್ದು ಕೊಂಡುಹೋದದರಿಂದ ತಪ್ಪುಮಾಡಿದ ಸೆಕ್ಷನ್ ೪೯೮ ಪ್ರಕಾರ ಶಿಕ್ಷೆ ಮಾಡಿದರು.

ಹೋಗುತ್ತಾನೆಂತಲೂ, ಅವನಿಗೆ ಒಳ್ಳೆಯ ಉದ್ದೇಶವಿತ್ತೇ ಅಥವಾ ಕೆಟ್ಟ ವೃದ್ಧೇಶವಿತ್ತೇ ಎಂಬ ಅಂಶವು ಸದರೀ ಸೆಕ್ಷನ್ನಿನ ಪ್ರಕಾರ ನಿರ್ಣಯಿಸಲ್ಪಡತಕ್ಕದ್ದಲ್ಲವೆಂತಲೂ ತಿಳಿಸಿ ಪ್ರತಿವಾದಿಗೆ ಸಮ್ಮನ್ ಜಾರಿಮಾಡಬೇಕೆಂದು ಈಚೆಗೆ ತೀರ್ಮಾನಿಸಿದರು. (ಇಂಡಿಯನ್ ಲಾ ರಿಪೋರ್ಟ್ಸ್, ಕಲ್ಕತ್ತಾ ಸೀರಿಸ್, ವಾಲ್ಯುಂ ೧೭ ಪುಟ ೬೯೪) ಹೀಗೆಯೇ ತಂದೆಯ ಸಮ್ಮತಿಯಿಲ್ಲದೆ ಒಂದು ಸಣ್ಣ ಹುಡುಗನನ್ನು ಆತನ ಮನೆಯಿಂದ ತಾಯಿಯು ಕರೆದುಕೊಂಡುಹೋಗುವದು ಸಹ ತಪ್ಪಾಗುತ್ತದೆ. (ಇ. ಲಾ. ರಿ. ವಾಲ್ಯುಂ V, ಪುಟ ೯೩೭— ಕಲ್ಕತ್ತಾ ಹೈಕೋರ್ಟ್ ಫುಲ್ ಬೆಂಚಿನವರ ತೀರ್ಮಾನು) ಮುಖ್ಯವಾಗಿ ಈ ನಿರ್ಣಯವು ದುರ್ಮಾರ್ಗಿಗಳಾದ ಅಳಿಯಂದರೂ ಅತ್ತೆಮಾವಂದರು ಸಹ ಅನವರತ ಜ್ಞಾಪಕದಲ್ಲಿಡತಕ್ಕದ್ದಾಗಿರುತ್ತದೆ. ಇದರಿಂದ ಹೆಂಗಸರು ಬದಸದಾಳ್ವ ಮೆಂಬೇಕಿಸಬೇಕಾಯಿತು.

ಜೀವನಾಂಶದ ಬಾಧ್ಯತೆ.

ಹಿಂದೂ ಧರ್ಮಶಾಸ್ತ್ರ.—(ಬಾಹಾಯಿಂದ) ಹಿಂದೂ ಧರ್ಮಶಾಸ್ತ್ರಕ್ಕೆ ಬದ್ಧನಾದ A ಎಂಬವನಿಗೆ B C. D. ಎಂಬ ಮೂವರು ಕುಮಾರರಿದ್ದರು. ಅವರಲ್ಲಿ ಸರ್ವಜ್ಯೇಷ್ಠನಾದ B ಎಂಬವನು E. ಎಂಬವಳನ್ನು ವಿವಾಹಮಾಡಿಕೊಂಡು ಏಕಕುಟುಂಬದಲ್ಲಿ ವಾಸಮಾಡುತಲಿದ್ದನು. ಹೀಗಿರುವಾಗ್ಯೆ ತಂದೆಯಾದ A. ಎಂಬವನು ಜೀವಿಸಿರುವಾಗಲೇ ಅಪ್ರಬುದ್ಧಳಾದ F. ಎಂಬ ಭಾರ್ಯೆಯನ್ನು ಬಿಟ್ಟು ಮೃತನಾದನು. ಎಂಬವನಿಗೆ ಪಿತ್ರಾರ್ಜಿತ ಆಸ್ತಿಯೇನೂ ಇರಲಿಲ್ಲವು ಆದಾಗ್ಯೂ ಸ್ವಾರ್ಜಿತಧನದಿಂದ ವಿತಂತುವಾದ ಸೊಸೆಯನ್ನೂ C. D. ಎಂಬ ಇಬ್ಬರು ಕುಮಾರರನ್ನೂ ಕಾಪಾಡುತಲಿದ್ದನು. ಬಳಿಕ ಸ್ವಲ್ಪ ಚರಜೊದಗಿಯನ್ನು ತನ್ನ ಮಕ್ಕಳಿಗೆ ಕೊಟ್ಟು . ಎಂಬ ತನ್ನ ಸೊಸೆಯನ್ನು ತನ್ನಂತೆಯೇ ಕಾಪಾಡುತಲಿರಬೇಕೆಂಬದಾಗಿ ಮಕ್ಕಳಿಗೆ ಆಜ್ಞಾಪಿಸಿ ಕಾಲವಶನಾದನು. ತರುವಾಯ C. D ಎಂಬವರು E ಎಂಬ ಅಣ್ಣನ ಭಾರ್ಯೆಯನುಪೇಕ್ಷಿಸಲು ಆಕೆಯು ಅವರಿಬ್ಬರಮೇಲೆ ಜೀವನಾಂಶದ ಬಗ್ಯೆ ಕಲ್ಕತ್ತಾ ಹೈಕೋರ್ಟಿನಲ್ಲಿ ಫಿರ್ಯಾದ್ ಮಾಡಿದಳು. ಪ್ರತಿವಾದಿಗಳು ತಮಗೆ ಚರಜೊದಿಗಿ ವಿನಾ ಸ್ಥಾವರವೇನೂ ಇಲ್ಲದ್ದರಿಂದಲೂ, E. ಎಂಬಾಕೆಯ ಗಂಡನಾದ B. ಎಂಬವನು ತನ್ನ ತಂದೆ ಜೀವಿಸಿರುವಾಗಲೇ ಮೃತಪಟ್ಟದ್ದರಿಂದಲೂ ಜೀವನಾಂಶಕ್ಕೆ ವಾದಿ ಯೆಳ್ಳಷ್ಟುಮಾತ್ರವೂ ಅರ್ಹಳಾಗಲಾರಳೆಂದು ವಾದಿಸಿದರು. ಇದರ ಮೇಲೆ ಕಲ್ಕತ್ತಾ ಹೈಕೋರ್ಟಿನವರು ತೀರ್ಮಾನಿಸಿದರೇನೆಂದರೆ—A ಎಂಬವನ ಆಸ್ತಿಯು ಸ್ಥಿರಚರ ರೂಪವಾದದ್ದೇ ಎಂಬ ವಿಷಯವನ್ನು ಕುರಿತು ವಿಚಾರ ಮಾಡಬೇಕಾದ ಆವಶ್ಯಕವೇನೂ ಇರುವದಿಲ್ಲವು. ಪರಂತು ಆಸ್ತಿಗಳೆರಡಕ್ಕೂ ಭೇದವಿಲ್ಲದ್ದರಿಂದಲೂ ಅಣ್ಣನ ಭಾರ್ಯೆಯು ಸಂರಕ್ಷಿಸಬೇಕಾದದ್ದು ಸದರೀ C D. ಎಂಬವರಿಗೆ ಧರ್ಮವಾಗಿರುತಿವೆಯೆಂತಲೂ ವಿತಂತುವಿನ ಸಂರಕ್ಷಣೆಯು ಕೇವಲ ಧರ್ಮತ್ವೇನ ಮೃತಪಟ್ಟ A. ಎಂಬ ತಂದೆಯೇ ಭಾವಿಸಿದ್ದನೆಂತಲೂ ಆತನ ಚರಜೊದಗಿಯು ಜೀವನಾಂಶಕ್ಕೊಳಪಟ್ಟದ್ದಾಗಿ C. D. ಎಂಬ ಕುಮಾರರಿಬ್ಬರ ಸ್ವಾಧೀನದಲ್ಲಿರುವದರಿಂದಲೂ E. ಎಂಬ ವಿತಂತುವಿಗೆ ನ್ಯಾಯವಾದ ಜೀವನಾಂಶ ಕೊಡಲಿಕ್ಕೆ ಸದರೀ C. D. ಎಂಬವರಿಬ್ಬರು ಬದ್ಧರಾಗಿರುತ್ತಾರೆಂತಲೂ ಈಚೆಗೆ ತೈಸಲ್ಮಾಡಿದರು. (ಇಂಡಿಯನ್ ಲಾ ರಿಪೋರ್ಟ್ಸ್, ಕಲ್ಕತ್ತಾ ಸೀರೀಸ್, ೧೭ ನೇ ವಾಲ್ಯುಂ ೩೩೩ ನೇ ಪುಟವು ನೋಡತಕ್ಕದ್ದು) ಇದರಿಂದ ಒಬ್ಬನ ಜೊದಿಗಿಯು ಸ್ಥಿರರೂಪವಾದದ್ದಾಗಿರಲಿ ಅಥವಾ ಚರ ರೂಪವಾದದ್ದಾಗಿರಲಿ, ಜೀವನಾಂಶ ಕೊಡಬೇಕಾದ ಸಂದರ್ಭದಲ್ಲಿ ಅದಕ್ಕೆ ಅದು ಗುರಿಯಾಗದೆ ಹೋಗಲಾರದು. ಈಗಿನ ಸಮಯಾಚಾರ ವ್ಯವಸ್ಥಾ ಪಕರ ಕೋರಿಕೆಯು ಈಡೇರುವ ಪಕ್ಷಕ್ಕೆ ಇಂತಾ ವ್ಯಾಜ್ಯಗಳೇ ಮುಂದೆ ಹುಟ್ಟಲಾರವು.

TELEGRAMS.

ತಂತಿ ವೃತ್ತಾಂತಗಳು.

ಬರುವ ಸೆಪ್ಟಂಬರ್ ತಿಂಗಳಲ್ಲಿ ಪ್ರಿನ್ಸ್ ಫರ್ಡಿನ್ಯಾಂಡ್ ರವರು ರೋಮಾನಿಯಾ ಅರಸರವರಿಗೆ ನೈಟ್ ಆಫ್ ದಿ ಗಾರ್ಟರ್ ಎಂಬ ಪ್ರಶಸ್ತಿಯನ್ನು ಕೊಡುವುದಕ್ಕೆ ಬಗ್ಯೆ ಬಕಾರೆಸ್ಟ್ ಪಟ್ಟಣಕ್ಕೆ ಹೋಗುವರೆಂಬದಾಗಿ ವೈಯನಾ ಪತ್ರಿಕೆಗಳು ತಿಳಸುತಿವೆ.

ಕಾನ್‌ಸ್ಟಾಂಟಿನೋಪಿಲ್ ತಾ॥ ೩ ನೇ ಆಗಸ್ಟ್.—ಆರ್ಮೀನಿಯಾ ಪ್ರಾಂತದ ಸ್ಥಿತಿಯು ಕೇವಲ ಭಯಂಕರವಾಗಿರುತಿದೆ. ಮುಸಲ್ಮಾನರು ಆರ್ಮೀನಿಯಾ ಜನಗಳ ಮೇಲೆ ಆಗ್ರಹಗೊಂಡಿರುವದಲ್ಲದೆ, ಆಯುಧಪಾಣಿಗಳಾಗಿ ಅವರನ್ನು ಎದುರಿಸುವರೆಂಬ ಭೀತಿಯು ಬಹಳವಾಗಿ ಉಂಟಾಗಿರುತಿವೆ.

ಲಂಡನ್, ೩೦ ನೇ ಆಗಸ್ಟ್—ತುರ್ಕೀ ಸರ್ಕಾರದವರು ಕೊಟ್ಟ ಒಂದು ಸರ್ಕ್ಯುಲರಿಗೆ ಲಾರ್ಡ್ ಸಾಲಿಸ್‌ಬರಿಯವರು ಜವಾಬ್ ಕೊಡುವಾಗ್ಯೆ, ದೇಶಾಭಿವೃದ್ಧಿಯ ಬಗ್ಯೆ ಉದ್ದಿಷ್ಟವಾದ ಕಾರ್ಯವು ಸ್ಥಿರಪಡುವ ತನಕ ಬ್ರಿಟಿಷ್ ಸೈನ್ಯವು ಈಜಿಪ್ಟ್ ರಾಜ್ಯವನ್ನು ಬಿಟ್ಟು ಹೋಗಲಾರದೆಂದು ತಿಳಸಿದರು.

ಸೇಂಟ್ ಪೀಟರ್ಸ್‌ಬರ್ಗ್, ೨೮ ನೇ ಆಗಸ್ಟ್—ಜರ್ಮನೀ ಚಕ್ರವರ್ತಿಯವರಾದ ವಿಲ್ಲಿಯಂ ಯವರು ನಿಶ್ಚಯದ ಆದ್ಯೆಲಾಗಿ ಜಾರ್ ಯವರ ಭೇಟಿ ಮಾಡಿಕೊಂಡು ಹೊರಟುಬರುವಾಗ್ಯೆ ಜಾರ್ ಯವರು ಚಕ್ರವರ್ತಿಯವರಿಗೆ ಶುಭವಾದದನವು ಮಾಡಿ ತಮಗೆ ಸ್ವದೇಶಯಾತ್ರೆಯು ಕಷ್ಟಾಭ್ಯಾಸ ದಯಪ್ರದವಾಗಿರಬೇಕೆಂದು ಕೋರುವಂತೆ ತಿಳಸಿದರು.

ಸಿಮ್ಲಾ, ತಾ ೨೮ ನೇ ಆಗಸ್ಟ್—ಈ ದಿನ ಸೇರಿದ ನ್ಯಾಯಸಿಧಾಯಕಸಭೆಯಲ್ಲಿ ಸರ್ ಜಾರ್ಜ್ ಛಸ್ ನೀಯವರು ಅಗ್ರಾಸನವ ವಹಿಸಿದ್ದರು ವೈಸರಾಯ್ ಯವರು ಪಂಗೀ ಎಂಬ ಸ್ಥಳದಿಂದ ಸಿಮ್ಲಾದಿಗೆ ಹೋಗುವಾಗ್ಯೆ ಕಾಲಸ್ಮೃತಿಯು ಏಕಾಏಕಿ ಬದಲಾಯಿಸಿ ಸ್ವಲ್ಪ ಜ್ವರವು ಅವರಿಗೆ ಪ್ರಾಪ್ತವಾಗಿ ಅಸ್ವಸ್ಥರಾಗಿರುವಂತೆ ತಿಳಿಯಬರುತಿದೆ. ಈ ಮೀಟಿಂಗನಲ್ಲಿ ೪೦ ನೇ ಇಸವಿಯ ಕರ್ಣ್ಸೀ ಆಕ್ಟನ್ನು ತಿದ್ದುಪಾಡುಮಾಡುವ ಬಗ್ಯೆ ಹುಟ್ಟಿದ ಮಸವಿದೆಯು ಮಂಜೂರಾಗಿ ಜಾರೀಯಲ್ಲಿ ತರಲ್ಪಟ್ಟಿತು ನಮ್ಮಕ್ ವಿಷಯಕವಾದ ಕಾನೂನನ್ನೂ ೪೩ ನೇ ಇಸವಿ ಇಂಡಿಯನ್ ಎಮಿಗ್ರೇಷನ್ ಆಕ್ಟನ್ನೂ ತಿದ್ದುಪಾಡು ಮಾಡತಕ್ಕ ಮಸವಿದಾ ಆಕ್ಟುಗಳು ಸೆಲೆಕ್ಟ್ ಕಮ್ಮಿಟಿಯವರು ಒಂದು ತಿಂಗಳ ತರುವಾಯ ತಮ್ಮ ಅಭಿಪ್ರಾಯವು ತಿಳಿಸತಕ್ಕ ಬಗ್ಯೆ ಅವರಿಗೆ ಒಪ್ಪಿಸಲ್ಪಟ್ಟವು.

ಕ್ಯೇರೋ, ತಾ॥ ೨೬ ನೇ ಆಗಸ್ಟ್—ಬೆಲೂಚಿಸ್ತಾನ್ ರಾಜ್ಯದ ಜಾಂಜಿಬಯರ್ ಆವಳಿತದಲ್ಲಿ ಕ್ಷಿಪ್ರದೊಳು ಕೆಲವು ಮುಖ್ಯ ಬದಲಾವಣೆಗಳು ನಡೆಯುವದಾಗಿರುವಂತೆ ಅಲ್ಲಿನ ಬಾತಮೀದಾರನೊಬ್ಬನು ಮಾರ್ನಿಂಗ್‌ಪೋಸ್ಟ್ ಎಂಬ ಪತ್ರಿಕೆಗೆ ಬರೆಯುತ್ತಾನೆ.

ಬ್ರಸ್ಸೆಲ್ಸ್, ತಾ, ೨೮ ನೇ ಆಗಸ್ಟ್—ಬೆಲ್ಜಿಯಂ ರಾಜ್ಯದಲ್ಲಿ ಇದ್ದಲು ಗಣಿಗಳ ನೌಕರರು ಒಗ್ಗಟ್ಟಾಗಿ ಕಲಹಿಸಿ ತಮ್ಮ ನೌಕರಿಗಳನ್ನು ಬಿಟ್ಟಿರುವರಲ್ಲದೆ ಇವರೊಡನೆ ೧೩,೦೦೦ ಜನ ಸೇರಿರುವರು. ಇದಲ್ಲದೆ ಗಣಿಗಳ ವಿಷಯಕವಾದ ನಿಬಂಧನೆಗಳನ್ನು ಪರಿಷ್ಕರಿಸಬೇಕೆಂದು ಕೋರಿರುವರಲ್ಲದೆ ತಮಗೆ ಸಿಕ್ಕತಕ್ಕ ಸ್ವಾತಂತ್ರ್ಯವನ್ನುಂಟುಮಾಡಬೇಕೆಂದು ಅಪೇಕ್ಷಿಸುತ್ತಾರೆ.

ಮುಂಬೈ, ತಾ॥ ೩೦ ನೇ ಆಗಸ್ಟ್—ಕಾಮಾ ಆಸ್ಪತ್ರೆಯ ವ್ಯವಸ್ಥಾಪಕರಾದ ಮೆ॥ ಪೆಸ್ತಂಜಿ ಹಾರ್ಮಸ್‌ಜಿ ಕಾಮಾ ಎಂಬವರು ಸ್ತ್ರೀ ವಿದ್ಯಾಭಿವೃದ್ಧಿಗಾಗಿ ಮುಂಬೈ ಯೂನಿವರ್ಸಿಟಿಯವರಿಗೆ ಕೆಲವು ಷರತ್ತುಗಳ ಮೇಲೆ ೨೪,೦೦೦ ರೂಪಾಯಿಗಳಂ ಕೊಟ್ಟಿರುವರಲ್ಲದೆ ಅವರು ತಿಳಿಸತಕ್ಕ ಷರತ್ತುಗಳನ್ನು ಕುರಿತು ಯೂನಿವರ್ಸಿಟಿ ಸೆನೆಟಿಗಳು ಮುಂದಿನ ಮೀಟಿಂಗನಲ್ಲಿ ವಿಚಾರ ಮಾಡುವರು.

SUMMARY OF NEWS.

ವೃತ್ತಾಂತಸಂಗ್ರಹವು.

ಫ್ರಾನ್ಸ್ ದೇಶದ ಕೆಲವು ಪ್ರದೇಶಗಳಲ್ಲಿ ಜನಸಂಖ್ಯೆಯು ದಿನೇದಿನೇ, ಕ್ಷಯಿಸುತಲಿರುವದರಿಂದ ಅಲ್ಲಿನ ಸರ್ಕಾರದವರು, ಪ್ರಜೆಗಳ ಸಂಖ್ಯೆಯನ್ನು ವೃದ್ಧಿಪಡಿಸಬೇಕೆಂದು ಬಡವರಾದವರಿಗೆ ದ್ರವ್ಯಸಹಾಯವನ್ನು ಮಾಡಿ ಕನ್ಯೆಯನ್ನು ಹುಡುಕಿ ವಿವಾಹವನ್ನು ಮಾಡಿಸುತಲಿರುವರು.

ವೆಸ್ಟ್ ಕ್ಯಾಮಲ್ ಎಂಬ ಪ್ರದೇಶದಲ್ಲಿರುವ ಐದುವರ್ಷಗಳ ವಯಸ್ಸುಳ್ಳ ಒಂದಾನೊಂದು ಗಂಡುಮಗುವಿನ ಆಕಾರವು ಆಶ್ಚರ್ಯವನ್ನುಂಟುಮಾಡುವದು. ಈಮಗುವು ಎತ್ತರದಲ್ಲಿ ೪ ಅಡಿಗಳೂ ತೂಕದಲ್ಲಿ ಸುಮಾರು ೩ ಮಣಗಳೂ, ಇರುವದು. ಇದಲ್ಲದೆ ಸೊಂಟದ ಅಳತೆಯು ೩೭ ಅಂಗುಲ, ಎದೆಯು, ೩೯, ರಟ್ಟೆ ೧೩, ತೊಡೆ ೨೩, ಮೊಣಕಾಲುಕೆಳಗೆ ೧೫॥, ತೋಳನಗಾತ್ರ ೧೧, ಮುಂಗೈ ೧೦॥, ಅಂಗುಲಗಳುಳ್ಳ ಈಮಗುವು ದೊಡ್ಡವನಾದರೆ ಏನಾಗುತ್ತದೆ. ಇದೊಂದು ದೊಡ್ಡ ವಿಚಿತ್ರವಾಗಿರಬಹುದು.

ಚೀನಾದೇಶದ ಚಕ್ರವರ್ತಿಗಳು ಒಂದೇಪುರದಲ್ಲಿ ಮಾಡಲ್ಪಟ್ಟಿರುವ ಮಂಚದಮೇಲೆ ಮಲಗುವರಂತೆ. ಈ ಮಂಚದ ಒಳಭಾಗದಲ್ಲಿ ಚಿನ್ನದ ರೇಖೆಗಳೂ ದಂತದಪಾಕವೂ ಬಿಡಾಯಿಸಲ್ಪಟ್ಟಿರುವವು. ಚೀನಾದೇಶದಲ್ಲಿ ಚಕ್ರವರ್ತಿಗಳ ತಂದೆತಾಯಿಗಳು ಕೂಡ ಮಗನಾದರೂ ಚಕ್ರವರ್ತಿಯ ಮುಂದಿಂದ ವಿಶೀತರಾಗಿರಬೇಕು. ಇವರುಸಹ ಮಗನಮುಂದೆ ಮದನಸ್ಕಾರಕ ಮೊಣಕಾಲನ್ನೂರಬೇಕು ಚಕ್ರವರ್ತಿಯ ತಮ್ಮಂದಿರೂ, ಸಾಮಾನ್ಯ ಪ್ರಜೆಗಳೂ ಈ ವಿಷಯದಲ್ಲಿ ಭೇದವೇ ಇಲ್ಲವು.

ರುಕ್ಮಾಬಾಯಿಯು ಸೀಮೆಯಲ್ಲಿ ಈಚೆಗೆ ಬಹು ಅಭಿವೃದ್ಧಿಗೆ ಬಂದಿರುವದಾಗಿ ತಿಳಿಯಬರುತಿದೆ. ಆಕೆಯ ಬುದ್ಧಿ ಕೌಶಲ್ಯವನ್ನೂ, ವೈದಗ್ಧ್ಯವನ್ನೂ ನೋಡಿ, ಅಲ್ಲಿನ ಜನರು ಆಶ್ಚರ್ಯಯುಕ್ತರಾಗಿರುವದಲ್ಲದೆ, ಆಕೆಯ ಉಪನ್ಯಾಸಗಳನ್ನು ಕೇಳುವದಕ್ಕಾಗಿ ಜನರು ಗುಂಪುಗುಂಪಾಗಿ ಸೇರುತಲಿರುವರು. ಒಗ ೧—೩, ವಾರಗಳ ಹಿಂದೆ, ಈಕೆಯು ಬ್ರಿಸ್ಟಲ್ ಪಟ್ಟಣದಲ್ಲಿ ಈ ದೇಶೀಯರೊಳು ರೂಢಿಯಾಗಿರುವ ಬಾಲ್ಯವಿವಾಹವನ್ನು ಕುರಿತು ಉಪನ್ಯಾಸ ಮಾಡಿದ ಕಾಲದಲ್ಲಿ, ಜನಜನ ದೊಡ್ಡ ಮನುಷ್ಯರು ಬಂದಿದ್ದು, ಈಕೆಗೆ ಇಂಗ್ಲಿಷ್ ಭಾಷೆಯಲ್ಲಿರುವ ವ್ಯುತ್ಪತ್ತಿಯನ್ನೂ, ವಾಕ್ಚಾತುರ್ಯವನ್ನೂ, ನಮ್ರತೆಯನ್ನೂ, ಸೌಶೀಲ್ಯವೇ ಮೊದಲಾದ ಗುಣಗಳನ್ನೂ ನೋಡಿ ಬಹಳ ಸಂತುಷ್ಟರಾದರಂತೆ.

ಇಂಡಿಯಾದೇಶದಿಂದ, ವ್ಯಾಸಂಗಕ್ಕೋಸ್ಕರವಾಗಿ ಆಫ್ರಿಕಾಖಂಡದ ಜಾಂಜಿಬಾರಿಗೆ ಬಹು ಜನರು ಹೋಗುತಲಿರುವರಲ್ಲದೆ, ಅಲ್ಲೇ ವಾಸವಾಗಿಯೂ ಇರುವರು. ಇವರು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಮಾಡಿಸಲು ಮಾರ್ಗವಿಲ್ಲದೆ, ಮಾಡಿದ ಪ್ರಯತ್ನವೆಲ್ಲವು ನಿರರ್ಥಕವಾಗುತ್ತ ಬಂದರೂ, ಕೊನೆಗೆ ಜಾಂಜಿಬಾರ್ ಬ್ರಿಟಿಷರವರಿಗೆ ಸೇರಲಾಗಿ, ಅಲ್ಲಿನವರು ಕರ್ನಲ್ ಇವಾನ್ ಸ್ಮಿತ್ ಸಾಹೇಬರವರ ಸಹಾಯದಿಂದ ಹೊಸದಾಗಿ ಇಂಗ್ಲಿಷ್ ಪಾಠಶಾಲೆಯನ್ನು ಅಲ್ಲಿ ಸ್ಥಾಪಿಸಬೇಕೆಂದು ತಕ್ಕ ಏರ್ಪಾಡುಗಳನ್ನೆಲ್ಲ ಮಾಡಿಕೊಂಡಿರುವರು. ಇದಲ್ಲದೆ ಕಳೆದ ತಿಂಗಳ ೩ ನೇ ತಾರೀಖಿನಲ್ಲಿ ಬ್ರಿಟಿಷ್ ಇಂಡಿಯನ್ ಜನರೆಲ್ಲರೂ ಸಭೆ ಸೇರಿ ತಮ್ಮ ಉದ್ದೇಶವನ್ನು ನೆರವೇರಿಸುವದಕ್ಕಾಗಿ ಚಂದಾ ಹಾಕಿ ಆಗಲೇ ೬೫,೦೦೦ ರೂಪಾಯಿಗಳನ್ನು ಕೂಡಿಸಿರುವರು. ಇದಕ್ಕಾಗಿ ಅಲ್ಲಿನ ಸುಲ್ತಾನರವರು ಕೂಡ ೧೨೦೦ ರೂಪಾಯಿಗಳನ್ನು ಕೊಟ್ಟರು. ಅಂತೂ ಈವರ್ಷದ ಆಖೈರಿನೊಳಗಾಗಿ ಜಾಂಜಿಬಾರಿನಲ್ಲಿ ಇಂಗ್ಲಿಷ್ ಶಾಲೆಯೊಂದು ಸ್ಥಾಪಿಸಲ್ಪಡುವದು.

ಪ್ಯಾಕೆಟ ಕಾನಾಟಿ ಯವರ ಜ್ಞಾಪಕಾರ್ಥವಾಗಿ ಪೂನಾಪಟ್ಟಣದಲ್ಲಿ ಮಿಂಡಿನ ಕಾಲೇಜ್ ಒಂದನ್ನು ಸ್ಥಾಪಿಸಬೇಕೆಂದು ಅಲ್ಲಿನವರು ಯತ್ನಪಟ್ಟು ಗವರ್ನಮೆಂಟಿನವರ ಸ್ವಾಂಕ್ಷನ್ನು ಕೇಳಲಾಗಿ, ಅವರು ಸಮ್ಮತಿಸಲಿಲ್ಲವೆಂದು ತಿಳಿಯಬರುತಿದೆ. ಯಾತಕ್ಕೆ? ನೇಟಿವರು ಅಲ್ಲಿ ವೈದ್ಯ ಸಂಬಂಧವಾದ ವಿದ್ಯೆಯನ್ನು ಚನ್ನಾಗಿ ಕಲಿತು, ಯೂರೋಪಿಯನ್‌ರಂತೆಯೇ ಪರೀಕ್ಷೆಗಳಲ್ಲಿ ತೇರ್ಗಡೆಮಾಡಿದರೆ, ಜನರಲ್, ಸರ್ಜನ್, ಕಮಾಂಡರ್ ಕೆಪ್ಟನ್, ಲೆಫ್ಟಿನೆಂಟ್, ಮೊದಲಾದ ದೊಡ್ಡ ಅಧಿಕಾರಗಳನ್ನು ನೇಟಿವ್‌ಜನಗಳಿಗೂ ಕೊಡ ಬೇಕಾದೀತೆಂತಲೋ? ಅಥವಾ ಯೂರೋಪಿಯನ್ನರಿಗಿಂತಲೂ ಬ್ರಿಟಿಷರವರ ಪೋಷಣೆಯಿಂದಲೇ ಕ್ರಮವಾಗಿ ಅಭಿವೃದ್ಧಿಗೆ ಬರುತಲಿರುವ ನೇಟಿವ್ ಜನರು ಎಷ್ಟುಮಾತ್ರಕ್ಕೂ ರಾಜದ್ರೋಹಿಗಳಾಗತಕ್ಕವರಲ್ಲವೆಂಬುವದು ಇನ್ನೂ ಸಂಶಯಾಸ್ಪದವಾಗಿರುವದರಿಂದಲೋ?

ಜಮಖಂಡಿಯ ಬಳಿಯಲ್ಲಿ ಅತಿ ದುಷ್ಟವಾಗಿದ್ದ ಒಂದಾನೊಂದು ಹುಲಿಯು ಬಹು ದಿವಸಗಳಿಂದಲೂ ಆಪ್ರಾಂತದ ಜನರನ್ನು ವಿಶೇಷವಾಗಿ ಪೀಡಿಸುತ್ತ, ರಾತ್ರಿಕಾಲಗಳಲ್ಲಿ ಊರೊಳು ಪ್ರವೇಶಿಸಿ ದನಗಳನ್ನೂ, ಮನುಷ್ಯರನ್ನೂ ಯಥೇಚ್ಛವಾಗಿ ಧ್ವಂಸಮಾಡುತ್ತ ಬರಲು, ಜನರು ಹಗಲಿನಲ್ಲಿಯೂ ಹೊರಗೆ ಹೋಗಲು ಸಂಶಯಪಡುತ ಬಹಳ ಭೀತರಾಗಿರುತಲಿದ್ದರು. ಹೀಗಿರುವಲ್ಲಿ ದೇಶಪಾಂಡೆ ನಿವಾಸಿಯಾದ ರಾಮಗತಿಸಿಂಗ್ ಎಂಬವರು ಕೈಯಲ್ಲಿ ಒಂದು ಕತ್ತಿಯನ್ನೂ, ಒಂದು ದೊಣ್ಣೆಯನ್ನೂ ತೆಗೆದುಕೊಂಡು ಒಂಟಿಯಾಗಿ ಕಾಡನ್ನು ಪ್ರವೇಶಿಸಲು, ನಿರೀಕ್ಷಿಸಿದ್ದಂತೆ ಹುಲಿಯು ಬಂದು ಆತನಮೇಲೆಬೀಳಲು ಉಪಕ್ರಮಿಸಿತು. ಆಗ ಆತನು ಕತ್ತಿಯಿಂದ ಬಲವಾಗಿ ಹೊಡೆದುದರಿಂದ್ದರನ್ನು ಕೊಡಲು, ತತ್ಕ್ಷಣವೇ ಮುರಿದು ಹೋಯಿತು ಈ ಪೆಟ್ಟನ್ನು ತಿಂದು ಗಾಯದ ಉರಿಯನ್ನು ಸಹಿಸಲಾರದೆ ರೋಷಾವೇಶದಿಂದ ಹುಲಿಯು ಬಂದು ಅವನ ಮೈಮೇಲೆ ಬಿದ್ದು ಕಡಿದಿದ್ದನ್ನು ನೋಡಿ ಹಿಂಜರಿಯದೇ, ಕೈಯಲ್ಲಿದ್ದ ದೊಣ್ಣೆಯಿಂದಲೇ ಅದರ ತಲೆಯಮೇಲೆ ಹೊಡೆದು ಕೊಂದು, ತನ್ನ ನ್ಯಾಯವನ್ನೂ ಗಾಯ ಮಾಡಿಸಿಕೊಂಡು, ಬಹು ಜನಗಳಿಗೆ ಉಪಕಾರವನ್ನು ಮಾಡಿದನು. ಈ ಹುಲಿಯು ೯॥ ಅಡಿಗಳುದ್ದ ಇದ್ದಿತು.

ಮುಳೆಯನ್ನು ಗೊಬ್ಬರಕ್ಕಾಗಿ ಉಪಯೋಗಿಸುವದು ವಿಶೇಷ ಪ್ರಯೋಜನಕರವಾದದ್ದೆಂದು, ಬಂಗಾಳೆಯ ವ್ಯವಸಾಯದ ಇಲಾಖಾ ಡೈರೆಕ್ಟರವರ ರಿಪೋರ್ಟಿನಿಂದ ತಿಳಿಯಬರುವದು ಬಂಗಾಳೆಯಲ್ಲಿ ಮೂಳೆಗಳನ್ನು ಪುಡಿ ಮಾಡುವದಕ್ಕಾಗಿ ಅನೇಕ ಯಂತ್ರಗಳು ಏರ್ಪಟ್ಟಿರುವವು. ಇವುಗಳೆಲ್ಲಾ ಇಲ್ಲಿನವರೇ ತಮ್ಮ ಸ್ವಂತ ಯುಕ್ತಿಯಿಂದ ತಯಾರ್ ಮಾಡಿಕೊಂಡಿರತಕ್ಕವು ಅಧಿಕವಾಗಿರುತಿವೆ. ಮೂಳೆಯ ಪುಡಿಯನ್ನು ಸಾಮಾನ್ಯವಾಗಿ ರೈಲ್ ಮಾರ್ಗವಿರತಕ್ಕ ಅನೇಕ ಪ್ರದೇಶಗಳಿಗೆ ಕಳುಹಿಸುವದಲ್ಲದೆ ವಿಲಾಯಿತಿಗೆ ಅತ್ಯಧಿಕವಾಗಿರವಾನಿಸಿರುವರು. ಜನರು ತಮಗೆ ವಿಶೇಷ ಆದಾಯಕರವಾದದ್ದನ್ನು ಸ್ವತಾ ಉಪಯೋಗಿಸಿಕೊಳ್ಳದೇ ಬಿಟ್ಟಿರುವದು ಅನುಚಿತವು. ಇತರವಾದ ಗೊಬ್ಬರಕ್ಕಿಂತಲೂ, ಇದು ಬತ್ತ, ಕಬ್ಬು, ಉಲುಗಡ್ಡೆ, ಗೋಧಿ, ಮೊದಲಾದವುಗಳಿಗೆ ಅವಶ್ಯಕವಾದದ್ದೆಂದು ಅಲ್ಲಿಯಲ್ಲಿ ಪರೀಕ್ಷಿಸಿರುವರು. ಭರದ್ವಾನದಲ್ಲಿ ೧ ತಾಕಿನ ಜಮೀನಿಗೆ ಮೂಳೆಯ ಗೊಬ್ಬರವನ್ನೂ, ಅದರ ಪಕ್ಕದಲ್ಲೇ ಮತ್ತೊಂದಕ್ಕೆ ಸಾಮಾನ್ಯವಾದ ಗೊಬ್ಬರವನ್ನೂ ಎರಡರಂತೆ ಹಾಕಿ ಗೋಧಿಯನ್ನು ಬಿತ್ತಲಾಗಿ ಮೂಳೆಯ ಗೊಬ್ಬರವನ್ನು ಹಾಕಿದ್ದ ಭೂಮಿಯಲ್ಲಿ೧೦೪ಪೌಂಡ್ ತೂಕ ಗೋಧಿಯು ಬೆಳೆಯಿತು. ಮತ್ತೊಂದರಲ್ಲಿ ೮೪೦ ಪೌಂಡ್ ತೂಕ ಮಾತ್ರವಾಯಿತು, ಎಂಬದಾಗಿ ಮೈಸೂರು ವೃತ್ತಾಂತಪತ್ರಿಕೆತಿಳಸುತಿದೆ.

Bangalore.—Printed and published at the Karnatic Press, No. 114, Srinivasa Mandliam Road, Pettah.—1890.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಶ್ರೀಮದ್ವಿವಿಧಪ್ರವೃತ್ತ್ಯುಪಗಮಾರ್ಥಂ ಕರ್ಣಾಟಕಪ್ರಕಾಶನಪರಾಭಿಧಾನಪ್ರಥಿತಸೌಹಿತೀಶೋಭಿತಾ । ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ದ್ಯಾಸು ಪರಿಪೋಷಿತಾದಿಶಶಿಮಾನಸಂಸುಮುದೇ ।

Vol. XVII.} BANGALORE—MONDAY, SEPTEMBER 8, 1890 [No. 36.

ಸಂಪುಟ ೧೭.] ಬೆಂಗಳೂರು:—ಸರ್ ೧೮೯೦ನೇ ಇಸವಿ ಸೆಪ್ಟೆಂಬರ್ ೮ ನೇ ತಾರೀಖ್ ಸೋಮವಾರ. [ಸಂಖ್ಯೆ ೩೬.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಸಾಲ್ ಒಕ್ಕೆ	ಸ್ಥಳದವರಿಗೆ ಟಪಾಲಿಲ್ಲದೆ.	ಪರಸ್ಥಳದವರಿಗೆ ಟಪಾಲ್ ಸೇರಿ
ಮುಂಗಡಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ ದಸ್ತಾವೇಜು ಮಾಡಿದ ತಾರೀಖ್ ಮೊದಲು ಒಂದು ತಿಂಗಳೊಳಗಾಗಿ ಚಂದಾ ಮೊಬಲಗು ಕಳುಹಿಸದವರಿಗೆ ಮಾತ್ರವೆ ಅಡ್ವಾನ್ಸ್ ದರದಂತೆ ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತರಿಸಿಕೊಳ್ಳಬಹುದು. ಮೂರು ತಿಂಗಳಿಗಿಂತ ಕಡಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ಮೊದಲು ಕಳುಹಿಸುವ ಅರ್ಧನೋಟು ತಲುಪಿದ್ದಕ್ಕೆ ನಮ್ಮ ಕಾಗದವು ಬಂದ ಮೇಲೆ ಬಾಕೀ ಅರ್ಧ ನೋಟನ್ನು ರವಾನಿಸತಕ್ಕದ್ದು. ಬೇರೆ ಊರಿನವರು ಕಳುಹಿಸತಕ್ಕವರು ರೂಪಾಯಿಗೆ ಒಂದು ಆಣೆಯಂತೆ ಡಿಸ್ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅಂಚೆ ಸ್ಟಾಂಪುಗಳನ್ನು ಕಳುಹಿಸಕೂಡದು. ಡಿಸ್ಕೌಂಟ್ ಇಲ್ಲದೆ ಕಳುಹಿಸಲ್ಪಡುವ ಮೊಬಲಗಿನಲ್ಲಿ ಅದು ಕಡಿಮೆಯಾದ್ದಷ್ಟು ಮೊಬಲಗು ಲೆಕ್ಕಕ್ಕೆ ಜಮಾ ಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯದಫಾ ಪಙ್ಕ್ತಿ ಒಂದಕ್ಕೆ	೦—೨—೦
ಎರಡನೆಯದಫಾ ಪಙ್ಕ್ತಿ ಒಂದಕ್ಕೆ	೦—೧—೦

ಸೂ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ತರ್ತ ಪ್ರಕಟನೆ ಮಾಡಿದಾಗ್ಯೂ ಪಙ್ಕ್ತಿ ಒಂದಕ್ಕೆ ಒಂದಾಣೆಯಂತೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಸಾರ್ವಜನಿಕ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಪ್ರಕಟನೆ ಮಾಡಲ್ಪಡಬೇಕೋ ಆ ಸಂಖ್ಯೆಯನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಪಕ್ಷಕ್ಕೆ ಅವುಗಳು ನಮಗೆ ಸ್ಪಷ್ಟವಾದ ಬರೆಯುವತನಕ ಅವು ಪ್ರಕಟಿಸಲ್ಪಡುವದು. ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟವುಗಳಿಗ್ಯೂ ಮೇಲ್ಕಂಡ ದರದಂತೆ ರಸ್ತುತ್ ವಸೂಲ್ಮಾಡಲ್ಪಡುವದು. ಪ್ರಕಟನೆಯಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆಯಾ ಸೋಮವಾರದ ಮುನ್ನಾಳ್ ೩ ಘಂಟೆ ಒಳಗಾಗಿ ಕಳುಹಿಸಬೇಕು. ಪ್ರಕಟನೆಗಳು ಈ ಪತ್ರಿಕೆಗೆ ಕಳುಹಿಸತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುವಾತು ಕೊಡಲ್ಪಟ್ಟ ಅನಾಮಧೇಯ ಕಾಗದಗಳನ್ನು ಪ್ರಕಟಿಸಲಾರೆವು. ನಿರಾಕರಿಸಲ್ಪಟ್ಟ ಕಾಗದಗಳು ವಾಪಸ್ ಕಳುಹಿಸಲ್ಪಡಲಾರವು.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 0-0

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನ ಸಹಿತ ಈ ಕೆಳಗೆ ರುಜು ಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ಕಾಗದಗಳಿಗೆ ಸಿರ್ಕ ಕೊಡಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಸೇರಿ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್,

ಬೆಂಗಳೂರು, ಅಪ್ಪಾಜಿ ರೋಡ್ ಪೇಟೆ, 41ನೇ ನಂ. ಮನೆ.

ADVERTISEMENTS.

ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ಬಿಕರಿಗೇ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

		ಹಾಸಲ್ ಸೇರಿ ರೂ. ಅ. ಪೈ
ಸಟೀಕಾ ವೈದ್ಯಸಾರ ಸಂಗ್ರಹ	...	೫ ೦ ೦
,, ಶಿವಗೀತೆ	...	೧ ೧ ೦
,, ಶಿವಾನಂದಲಹರಿ	...	೦ ೮ ೦
,, ಕಾಲಾಮೃತ	...	೧ ೨ ೦
,, ಮುಕುಂದದರ್ಪಣ	...	೦ ೧೨ ೦
,, ಬಾಲರಾಮಾಯಣ	...	೦ ೪ ೦
,, ಗೋಪಿಕಾ ಗೀತೆ	...	೦ ೧ ೬
,, ಚಾಣಿಕ್ಯನೀತಿ (ಸುಭಾಷಿತ)	...	೦ ೬ ೦
ವಿಷ್ಣುಸಹಸ್ರನಾಮ ವ್ಯಾಖ್ಯೆ	...	೨ ೫ ೦
ಸೂರ್ಯಸಹಸ್ರನಾಮ	...	೦ ೩ ೮
ಕೃಷ್ಣಕರ್ಣಾಮೃತ	...	೦ ೨ ೬
ತ್ರಿಕಾಂಡ ಅಮರ ಮಾಲ	...	೦ ೨ ೬
೧ ಕಾಂಡ	...	೦ ೧ ೦

ಕನ್ನಡ ಗ್ರಂಥಗಳು.

ಶುಕಸಪ್ತತಿ ಅವ್ವಲ್ ಪ್ರತಿ	...	೩ ೦ ೦
ಡಿಟೋ ದುಯ್ಯಂ	...	೧ ೪ ೦
ವೃಷಭೇಂದ್ರ ವಿಜಯ	...	೧ ೮ ೦
ಪಂಚಬಾಣ ಬಾಲಲೀಲೆ	...	೦ ೮ ೦
ಹನುಮದ್ವಿಲಾಸ	...	೦ ೮ ೦
ಕಾಳಿಯಮರ್ದನ	...	೦ ೨ ೬
ಸುಭದ್ರಾಪರಿಣಯ	...	೦ ೨ ೬
ಶಶಿರೇಖಾ ಪರಿಣಯ	...	೦ ೩ ೦
ಸುನಾಮಚರಿತ್ರೆ	...	೦ ೨ ೦
ಮೈರಾವಣನ ಚರಿತ್ರೆ	...	೦ ೨ ೦
ಬಾಲಗ್ರಹ ಚಿಕಿತ್ಸೆ	...	೦ ೨ ೬
ಮನುಷ್ಯಾರ್ಕ ಲಾ	...	೧ ೦ ೦
ಬಾಂಕಿ ವಿಲಾಸ	...	೦ ೧೨ ೦

ನೋಟೀಸ್.

ಮನೆಗಳಲ್ಲಿ ಗಿಲಿಟ್ ಮಾಡುವದಕ್ಕೆ ಅನುಕೂಲವಾದ ಬೆಳ್ಳಿ ದ್ರಾವಕವು.

ಈ ಬೆಳ್ಳೀ ದ್ರಾವಕವು ನೈಜವಾದ ಬೆಳ್ಳಿ ತಟ್ಟೆಗಳ ಮೇಲೂ, ತಾಮ್ರ, ಹಿತ್ತಾಳೆ ವಗೈರೆ ವಿವಿಧ ಪದಾರ್ಥಗಳ ಮೇಲೂ ಪಟ್ಟಿ ಉಜ್ಜುವದರ ಮೂಲಕ ಗಿಲಿಟ್ ಮಾಡುವುದಕ್ಕೆ ಬಹಳ ಉಪಯುಕ್ತವಾದದ್ದಾಗಿರುತ್ತದೆ. ಇದಲ್ಲದೆ ಸದರೀ ದ್ರಾವಕವು ಚಿನ್ನ ಮತ್ತು ಬೆಳ್ಳಿ ಒಡವೆಗಳ ಮಸ್ತು ತೇಜಸ್ಸಿಗೂ ಅವುಗಳಿಗೆ ಮೆರುಗು ಕೊಡುವುದಕ್ಕೂ ಸಹ ಪ್ರಯೋಜನಕರವಾದದ್ದು. ಇದರಿಂದ ಇತರವಿಧದ ಫಲಕದಂತಹ ಕಾಂತಿ ಯುಂಟಾಗುವದು. ಕಪ್ಪಾದ ಬಣ್ಣಕ್ಕೆ ಚಿನ್ನಕ್ಕೆ ಉತ್ಕೃಷ್ಟವಾದ ಮೆರುಗು ಪದಾರ್ಥಗಳುಂಟಾಗದಂತಹ ಕಾಂತಿಯನ್ನು ಉಂಟುಮಾಡುವದು. ಶುದ್ಧವಾದ ಬೆಳ್ಳಿ ಮುಂದೇ ಸದರೀ ದ್ರಾವಕವು ತಯಾರ್ಮಾಡಲ್ಪಟ್ಟದ್ದಾಗಿರುತ್ತದೆಂಬದಕ್ಕೆ ಬೇಕಾದ ಪರವಾನೆ ಕೊಡಲ್ಪಡುವದು. ಇದು ಗಿಲಿಟ್ ಮಾಡುವದಕ್ಕಿಂತ ಬಹಳ ಅಗ್ಗವಾಗಿರುವದು. ಕೂಡಲೇ ಒಂದು ಸೀಸೆಯನ್ನು ತರಿಸಿಕೊಂಡು ಅದರಿಂದ ಯಾವ ಕೆಡಕೂ ಉಂಟಾಗದಿರುವದನ್ನು ಅಜಮಾಯಿಷಿ ಮಾಡಿ ನೋಡಬಹುದು.

ಇದರ ಕ್ರಯ ಸೀಸೆ ೧ ಕ್ಕೆ ೨—೮—೦

ಚಿನ್ನದ ದ್ರಾವಕವು.

ಇದು ಬೆಳ್ಳಿ, ಹಿತ್ತಾಳೆ, ತಾಮ್ರ ವಗೈರೆ ಪದಾರ್ಥಗಳನ್ನು ಗಿಲ್ಟು ಮಾಡಲಿಕ್ಕೆ ಬಹಳ ಉಪಯುಕ್ತವಾಗಿರುವದಲ್ಲದೆ ಶುದ್ಧವಾದ ಭಂಗಾರದಲ್ಲಿ ತಯಾರಾದದ್ದಾಗಿರುತ್ತದೆ. ಬೆಳ್ಳಿ ಆಭರಣಗಳನ್ನು ಗಿಲ್ಟು ಮಾಡಲಿಕ್ಕೆ ಈ ದ್ರಾವಕವು ಕೇವಲ ಪ್ರಯೋಜನಕರವಾಗಿರುವದು.

ಇದರ ಕ್ರಯ ಸೀಸೆ ೧ಕ್ಕೆ ೩—೮—೦

ಬೇಕಾದವರು ಅಜಮೀರ್‌ನಲ್ಲಿರುವ ಬೆಳ್ಳೀ ಕಾರ್ಖಾನೆಯ ಮ್ಯಾನೇಜರಿಗೆ ಬರೆದು ತರಿಸಿಕೊಳ್ಳಬಹುದು.

ಮೈಸೂರು ಮಹಾರಾಜರವರ ಅರಳೇ ಯಂತ್ರದ ಕಾರ್ಖಾನೆ.

ನೋಟೀಸ್.

ಮೈಸೂರು ಮಹಾರಾಜರವರ ಅರಳೆ ಯಂತ್ರದ ಕಾರ್ಖಾನೆಯಲ್ಲಿ ಹೊಸ ನಮೂನೆ ಯಂತ್ರದ ಮೂಲಕ ಉತ್ತಮವಾದ ಗೋಧಿ ಹಿಟ್ಟು, ರವೆ, ಹೊಟ್ಟು ತಯಾರ್ಮಾಡಲ್ಪಟ್ಟು, ಪೇಟೆಯಲ್ಲಿರುವ ಸದರೀ ಕಾರ್ಖಾನೆಗೆ ಸೇರಿದ ಷಾಪುಗಳಲ್ಲೂ, ಬೆಂಗಳೂರು ಕಂಟೋನ್ಮೆಂಟಿನಲ್ಲಿ ಒಬ್ಬರೇ ಏಜಂಟರಾಗಿರುವ ಸಾಲಿಯಾ ಮಹಮ್ಮದ್ ಕಾಸಿಂಸೇಟಿಯವರ ಡಿಸ್ಪೆನ್ಸರಿ ರಸ್ತೆಯಲ್ಲಿರುವ ಷಾಪಿನಲ್ಲೂ ಮಾರಲ್ಪಡುತ್ತಿವೆ.

ನೋಟೀಸ್.

ಮೈಸೂರುಶೀಮೆಯ ಚೀಫ್‌ಕೋರ್ಟನಲ್ಲಿ.

ಸರ್ 1890ನೇ ಇಸವಿ ಮಿಸಲೇನಿಯಸ್ ಪಿಟಿಷನ್ ನಂಬರ್ 1388.

ಅರ್ಜಿದಾರರು.

ಲಿಕ್ವಿಡೇಟರು ವೆಂಕಟಸುಬ್ಬ ಮೊದಲಿಯಾರ್

ಇದರಿಂದ ಬೆಂಗಳೂರಲ್ಲಿರುವ ಕರ್ಣಾಟಕ ಬ್ಯಾಂಕ್ ಷೇರ್‌ದಾರರಿಗೆ ತಿಳಿಯಪಡಿಸುವದೇನಂದರೆ—

ಮೇಲ್ಕಂಡ ಲಿಕ್ವಿಡೇಟರ್ ವೆಂಕಟಸುಬ್ಬ ಮೊದಲಿಯಾರ್, 1889ನೇ ಇಸವಿ ಮಿಸಲೇನಿಯಸ್ ನಂಬರ್ 31ರಲ್ಲಿ ಆರ್ಡರಾಗಿರುವಪ್ರಕಾರ ಭಾಗಸ್ಥರು ಡಿಕ್ರಿ ಹಂಚಿಕೊಳ್ಳತಕ್ಕಬಗ್ಗೆ ಅಥವಾ ಡಿಕ್ರಿಗಳನ್ನು ಹರಾಜ್‌ಮಾಡಿ ಬಂದ ಹಣವನ್ನು ಹಂಚಿಕೊಳ್ಳತಕ್ಕಬಗ್ಗೆ ವಿೂಟಿಂಗ್‌ಮಾಡಿ ತಿಳಿಸತಕ್ಕಬಗ್ಗೆ ಭಾಗಸ್ಥರು ವಿೂಟಿಂಗಿಗೆ ಸೇರುವದಿಲ್ಲವೆಂತಲೂ ಬ್ಯಾಂಕಿಗೆ ವಸೂಲಾಗಬೇಕಾದ ಡಿಕ್ರಿಗಳು ತಮಗೆ ವಸೂಲಾಗುವದಿಲ್ಲವಾದ್ದರಿಂದ ಏನುಬೇಕಾದರೂ ಮಾಡಿಕೊಳ್ಳಬಹುದೆಂದು ಭಾಗಸ್ಥರು ಹೇಳುತ್ತಾರೆಂತಲೂ, ಡಿಕ್ರಿಗಳನ್ನು ಜಾರಿ ಮಾಡುವದಕ್ಕೂ ಮತ್ತು ಲಿಮಿಟೇಷನ್ ಬಾರಾಗದೆ ಬಾಯಿದೇಲಿಸುವದಕ್ಕೂ 500ರೂಪಾಯಿವರಿವಿಗೆ ಸಾಲವಾಗಿರುತ್ತೇಕೆಲೂ, ಬಾಡಿಗೆ ಕೊಡುವದಕ್ಕೇ ಇಲ್ಲದೆ ಬ್ಯಾಂಕ್ ತಮ್ಮ ಮನೇಲಿಯೇ ಇಟ್ಟುಕೊಂಡಿರುವದಾಗಿಯೂ, ನೌಕರರಿಗೆ ಸಂಬಳ ಕೊಡುವದಕ್ಕಿಲ್ಲದೆ ಒಬ್ಬರನ್ನ ಇಟ್ಟುಕೊಂಡು ಬಾಕಿಯವರನ್ನೆಲ್ಲ ವಜಾಮಾಡಿರುವದಾಗಿಯೂ, ಈ ಕಾರಣಗಳಿಂದ ಈಗ ಜಾರೀಲಿರುವ ಡಿಕ್ರಿಗಳುವಿನಾ ಬಾಕೀದೆಲ್ಲ ಹರಾಜ್‌ಮಾಡಿಸಿ ಬಂದ ಹಣದಲ್ಲಿ ಸಾಲತೀರಿಸಿ ಮಿಕ್ಕ ಹಣವನ್ನ ಭಾಗಸ್ಥರಿಗೆಲ್ಲ ಹಂಚಬಹುದೆಂದು ಅರ್ಜಿಕೊಟ್ಟಿರುತ್ತಾರೆ. ಇದರ ಇತ್ಯರ್ಥದಬಗ್ಗೆ 1890ನೇ ಇಸವಿ ಸೆಪ್ಟೆಂಬರ್ ತಿಂಗಳು 30ನೇ ತಾರೀಖ್ ಮಂಗಳವಾರ ಹಿಯರಿಂಗ್ ನಿಶ್ಚಯಮಾಡಿಯದೆ. ಆಕ್ಷೇಪಣೆಯಿರತಕ್ಕವರೆಲ್ಲರೂ ಅವರೇ ಆಗಲಿ ಅವರತರಫ್ ವಕೀಲ್ಯಾರ್‌ಪಡೆದ ಅಡ್ವೋಕೇಟರಾಗಲಿ ಆತಾರೀಖ್ ದಿವಿ 11ಘಂಟೆಗೆ ಈಕೋರ್ಟ್ ರೂಬರೂ ಹಾಜರಾಗಿ ತಿಳಿಯಪಡಿಸಬಹುದು.

ತಾ॥ 19ನೇ ಆಗಸ್ಟು 1890ನೇ ಇಸವಿ.

By the Court,

S. R. Subbaraya Iyer,

Registrar.

ನೋಟೀಸ್.

ಮೈಸೂರು ಶೀಮೆಯ ಚೀಫ್ ಕೋರ್ಟನಲ್ಲಿ.

ಸರ್ 1890ನೇ ಇಸವಿ ಮಿಸಲೇನಿಯಸ್ ಪಿ॥ನಂಬರ್ 38—

ಇದರಿಂದ ಚಿಂತಾಮಣಿ ತಾಲ್ಲೂಕ್ ಅಧ್ಯಗಿರಿ ಶ್ರೀ ಕೋದಂಡರಾಮಭಕ್ತರ ಕಾರ್ಯ ಸಾಧನ ಸಹಾಯ ಕಂಪೆನಿಗೆ ಸಂಬಂಧಪಟ್ಟ ಸಬಸ್ಕ್ರೈಬರಗಳು ಯಾ ಷೇರ್‌ದಾರ್ ವಗೈರೆಯರಿಗೆ ತಿಳಿಯಪಡಿಸುವದೇನಂದರೆ :—

ಮೇಲ್ಕಂಡ ಕಂಪೆನಿಗೆ ಹಾಲಿ ನೌಕರರಾಗಿ ಇರುವ ಲಿಕ್ವಿಡೇಟರಗಳು ಷೇರ್‌ದಾರರುಗಳಿಗೆ ಬರಬೇಕಾದ ಮೊಬಲಗು ಹಂಚಿಕೆ ಲಿಸ್ಟು ಹಾಜರ್‌ಮಾಡಿರುತ್ತಾರೆ. ಈ ವಿಷಯದಲ್ಲಿ ಆರ್ಡರ್ ಮಾಡತಕ್ಕಬಗ್ಗೆ ಸರ್ 1890ನೇ ಇಸವಿ ಸೆಪ್ಟೆಂಬರ್ ತಿಂಗಳ ೨ನೇ ತಾರೀಖ್ ಮಂಗಳವಾರ ಹಿಯರಿಂಗ್ ಮೊಕರರ್ಮಾಡಿಯದೆ. ಆತಾರೀಖ್ ದಿವಿ 11ಘಂಟೆಗೆ ಸದರೀ ಕಂಪೆನಿಗೆ ಸಂಬಂಧಪಟ್ಟ ಸಬಸ್ಕ್ರೈಬರಗಳು ಯಾ ಷೇರ್‌ದಾರರು ಮುಂತಾದ ವಿಶಿಷ್ಟ ಜನರು ಅವರೇ ಆಗಲಿ ಅವರತರಫ್ ಕ್ರಮವಾಗಿ ವಕಾಲತ್ ಪಡೆದ ಅಡ್ವೋಕೇಟರಾಗಲಿ ಈಕೋರ್ಟ್ ರೂಬರು ಹಾಜರಾಗತಕ್ಕದ್ದು.

ತಾ॥ 15ನೇ ಮಾಹೆ ಆಗಸ್ಟು 1890.

By the Court,

S R. Subbaraya Iyer,

Registrar.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, SEPTEMBER 8, 1890.

೧೮೯೦ನೇ ಸೆಪ್ಟೆಂಬರ್ ೮ನೇ ಸೋಮವಾರ.

FORMATION OF DISTRICT COURT.

ಈ ವಾರದ ಮೈಸೂರ್ ಗೆಜೆಟಿನ ದೆಸೆಯಿಂದ ಈವೂರಲ್ಲಿ ಪ್ರಾವರ್ತಂಕೆಯೋಂದು ಡಿಸ್ಟ್ರಿಕ್ಟ್ ವ ಸೆಷನ್ಸ್‌ಕೋರ್ಟು ಬರುವ ಸೋಮವಾರದ ಮೊದಲು ಸ್ಥಾಪಿಸಲ್ಪಡುವದಾಗಿ ವ್ಯವಸ್ಥೆಯಾಗಿರುವಂತೆ ತಿಳಿಯಬರುತ್ತದೆ. ಈರಾಜ್ಯವು ಹಿಂದೆ ಶ್ರೀಮನ್ಮಹಾರಾಜರಿಗೊಪ್ಪಿಸಲ್ಪಟ್ಟಮೇಲೆ ಮೊದಲಿದ್ದ ಜ್ಯುಡಿಷಲ್‌ಕಮೀಷನರವರ ಕೋರ್ಟಿನ ಜಾಗಮಾಡಲ್ಪಟ್ಟ ಚೀಫ್‌ಕೋರ್ಟ್ ಸ್ಥಾಪಿಸಲ್ಪಟ್ಟಿತು. ಬಳಿಕ ಕೆಲವುದಿವಸಗಳಮೇಲೆ ಸದರೀ ಕೋರ್ಟಿಗೆ ಮೂವರು ಜಡ್ಜಿಗಳರಪೇಕ್ಷಾದ ಅವಶ್ಯಕತೆ ಯುಂಟಾಗಿ ಬಡಸ್ಟರ್ ನ ಆಡಳಿತಕಾಲದಲ್ಲಿ ಈ ಪ್ರಾಂತ್ಯದಲ್ಲಿ ನೆಲಗೊಂಡಿದ್ದ ಸುಪೀರಿಯರ್ ಡಿವಿಜನ್ ಡಿಸ್ಟ್ರಿಕ್ಟ್ ವ ಸೆಷನ್ ಕೋರ್ಟನಿಂದ ಪ್ರಯೋಜನ ವಿಲ್ಲವೆಂದು

ಭಾವಿಸಿ ಅದು ವಜಾಮಾಡಲ್ಪಟ್ಟಿತಲ್ಲದೆ ಸದರೀ ಕೋರ್ಟಿನವರು ಚಲಾಯಿಸುತಲಿದ್ದ ಅಧಿಕಾರಗಳು ಚೀಫಕೋರ್ಟಿನವರಿಗೆ ಉಂಟುಮಾಡಲ್ಪಟ್ಟವು. ಅದುಮೊದಲು ಬೆಂಗಳೂರ್ಯ ಡಿಸ್ಟ್ರಿಕ್ಟಿನಲ್ಲೂ ಇತರ ಡಿಸ್ಟ್ರಿಕ್ಟುಗಳಲ್ಲಿಯೂ ಕೋರ್ಟುಗಳು ಬದಲಾಯಿಸಲ್ಪಡುತಲಿರುತಿವೆ. ಮುನಸಫ್ ಕೋರ್ಟುಗಳಲ್ಲದೆ ಯೆಲಹಂಕದ ಮುನಸಫಕೋರ್ಟು ದೊಡ್ಡ ಬಳ್ಳಾಪುರಕ್ಕೆ ಹೋಗಿ ಅಲ್ಲಿ ತಂಗಲಿಕ್ಕೆ ಇಷ್ಟವಿಲ್ಲದೆ ಕೋಲಾರಪೇಟೆಗೆ ಹೊರಟು ಮಧ್ಯೆ ನೆಲಮಂಗಲದಲ್ಲಿ ಇದು ವರಿವಿಗೆ ನಿಂತಿದೆ. ಈಚೆಗೆ ಅಲ್ಲಿಗೆ ರಿಪೇರಿ ರಸ್ತೆ ಹಾಕಲ್ಪಡಲು ಅಲ್ಲಿಂದ ಕ್ಯಾಂಪುಪೇಟೆಗೆಹೋಗ ತಕ್ಕದ್ದೋ ಅಥವಾ ಬೆಂಗಳೂರು ಕೋರ್ಟಿನೊಡನೆ ಐಕ್ಯವಾಗ ಬೇಕೋ ಯೆಂದಾಲೋಚಿಸುತಲಿದೆ. ಇಲ್ಲಿನ ಮುನಸಫಕೋರ್ಟು, ಅಡಿಷನಲ್ ಮುನಸಫಕೋರ್ಟನ್ನು ಕಳೆದುಕೊಂಡಾಗ್ಯೂ ಆದರ ಮುನಸಫರನ್ನು ಮಾತ್ರ ಸಂರಕ್ಷಿಸುತಲಿದೆ. ಕಂಟೋನ್ಮೆಂಟ್ ಕೋರ್ಟುಗಳು ತಮ್ಮ ಅಧಿಕಾರಗಳನ್ನು ವೃದ್ಧಿಪಡಿಸಿ ಕೊಳ್ಳುತಲಿವೆ. ಈಗ ರೂಪ್ಯದ್ದೇಶದೊಡನೆ ಪ್ರಸಕ್ತ ಕೋರ್ಟನ್ನು ಗವರ್ನಮೆಂಟಿನವರು ಸ್ಥಾಪಿಸಿದರೋ ಸದರೀ ಉದ್ದೇಶವು ಸಾರ್ವಜನೀನವಾದ ಆವ ಕಾರ್ಯವನ್ನುಂಟುಮಾಡತಕ್ಕದ್ದಾಗಿರುವದಿಲ್ಲವು. ಇಂಡ್ಯ ದೇಶದ ಇತರ ನೇಟಿವ್ ಸಂಸ್ಥಾನಗಳಲ್ಲಿ ಅಲ್ಲಿನ ಪದ್ಧತಿಪ್ರಕಾರವಾಗಿಯೂ, ಬ್ರಿಟಿಷ ರಾಜ್ಯದಲ್ಲಿ ಅಲ್ಲಿನಕ್ರಮವನ್ನನುಸರಿಸಿಯೂ ಸಿವಿಲ್ ವ ಜುಡಿಷಲ್ ಆಡಳಿತವು ನಿರ್ಣೀತವಾಗಿ ಚಲಿಸದೆ ನಡೆದು ಬರುತಲಿದೆ. ಈಸಂಸ್ಥಾನದಕ್ರಮವು ಸದರೀಯವರ ಕ್ರಮಗಳಿಗೂ ಭಿನ್ನವಾದದ್ದಾಗಿರುವದರಿಂದ ಇಲ್ಲಿನ ಪ್ರಭುತ್ವ ವೈಚಿತ್ರ್ಯಕ್ಕೆ ತಕ್ಕಂತೆ ಅದೂ ಪೃಥಕವಾದದ್ದಾಗಿದೆ.

A PROPOSAL.

ಸಾಧಾರಣವಾಗಿ ಲೋಕದಲ್ಲಿ ಧನವೆಂಬದು ಶ್ರೇಷ್ಠವಾದದ್ದಾದಾಗ್ಯೂ ಕಾಲ ದೇಶ ಸ್ಥಿತಿಗತಿಗಳನ್ನರಿತು ಸತ್ಪಾತ್ರಗಳಲ್ಲಿ ಮಾಡಲ್ಪಡತಕ್ಕವು ವಿಶೇಷತಃ ಕೊಂಡಾಡಲ್ಪಡತಕ್ಕವಾಗಿಯೂ ಚಿರಕಾಲ ನೆಲೆಗೊಂಡಿರತಕ್ಕವಾಗಿಯೂ ಇರುತಿವೆ. ತತ್ರಾಪಿ ಉತ್ತರೋತ್ತರ ಫಲದಾಯಕವಾದ ಜ್ಞಾನಸಂಪಾದನ ವಿಷಯದಲ್ಲಿ ಮಾಡಲ್ಪಡುವಸಹಾಯವು ಅಕ್ಷಯವಾದ ಜಲನಿಧಿಯಂತೆ ಎಂದಿಗೂ ನಶಿಸಲಾರದು. ಈಪುರದ ಸಿವಿಲ್ ವ ಮಿಲಿಟರಿಸ್ಟೇಷನಿನಲ್ಲಿ ಈಗಿರತಕ್ಕವರಲ್ಲಿ ಪ್ರಮುಖರಾಗಿಯೂ ಸತ್ಕಾರ್ಯಗಳಿಂದ ಕೀರ್ತಿಶಾಲಿಗಳಾದವರಾಗಿಯೂ ಇರುವ ರಾಯಬಹದ್ದೂರ್ ಮ|| ರಾ|| ಆರ್ಕಾಡು ನಾರಾಯಣಸ್ವಾಮಿ ಮುದಲಿಯಾರ್ರವರು ಜನರಲ್ ಬಜಾರಿನಲ್ಲಿಯೂ ಹಲಸೂರಿನಲ್ಲಿಯೂ ಪ್ರತ್ಯೇಕವಾಗಿ ಎರಡುಸ್ಕೂಲುಗಳನ್ನು ಸ್ಥಾಪಿಸಿರುವದೂ, ಅವುಗಳಲ್ಲಿ ಅನೇಕಜನ ವಿದ್ಯಾರ್ಥಿಗಳೂ ವಿದ್ಯಾರ್ಥಿನೀಯರೂ, ವಿದ್ಯಾಭ್ಯಾಸಂಗವು ಮಾಡುತಲಿರುವದೂ ಪ್ರಯೇಣ ಎಲ್ಲರೂ ತಿಳಿದ ವಿಷಯವಾಗಿದೆ. ಈಗ ಕಂಟೋನ್ಮೆಂಟ್ ಡಿಕನ್ಸನ್‌ರೋಡಿನಲ್ಲಿ ಹಿಂದೆ ಕಂಪ್ನಿ ಕಾರ್ಖಾನೆಯಿದ್ದ ಪ್ರದೇಶದೊಳು ಮತ್ತೊಂದು ದೊಡ್ಡಸ್ಕೂಲನ್ನು ಕಟ್ಟಿಸಬೇಕೆಂಬ ಆಲೋಚನೆ ಯುಳ್ಳವರಾಗಿದಾರೆಂಬ ಅಂಶವು ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಸಿವಿಲ್ ವ ಮಿಲಿಟರಿ ಸ್ಟೇಷನಿನಲ್ಲಿ ಹಿಂದೂಗಳ ವಿದ್ಯಾಭಿವೃದ್ಧಿಯ ಬಗ್ಯೆ ಮೆ|| ನಾರಾಯಣಸ್ವಾಮಿ ಮುದಲಿಯಾರ್ರವರು ಬಹಳ ದಿನಪ್ರಯ ಮಾಡಿರುವದರಿಂದ ಅಲ್ಲಿನವರೆಲ್ಲರೂ ಅವರ ವಿಷಯದಲ್ಲಿ ಬಹಳ ಕೃತಜ್ಞರಾಗಿರಬೇಕೆಂದೆಣಿಸುತ್ತೇವೆ. ಇಲ್ಲಿನ ಸಿಟೀ ಸ್ಟೇಷನಿನಲ್ಲಿ ಜನಗಳ ಆನುಕೂಲ್ಯಕ್ಕೆ ಬಹಳವಾಗಿ ಕ್ಯಾಂಟೋನ್ಮೆಂಟ್ಟಿಗೆ ಹೋಗತಕ್ಕವರು ಕಡಮೆಯಾದುದರಿಂದ ಅಲ್ಲಿನ ಸತ್ರಗಳೆಲ್ಲರಿಗೂ ಪ್ರಯೋಜನಕರವಾಗದಿರುವದರಿಂದ ಅದು ಪರಿಭಾವಿಸಿ ಇಲ್ಲಿನ ರೈಲ್ವೇ ಸ್ಟೇಷನಿಗೆ ಸೇರಿದಂತೆ ಉದಾರರಾದ ಮಾನ್ಯರು ಯಾರಾದರೂ ಸ್ವಂತ ಲಾಗವಡಿನಿಂದ ಹೊಸದಾಗಿ ಒಂದು ಸತ್ರವು ಕಟ್ಟಿಸುತಲಿದ್ದಾರೆ. ಮುಖ್ಯವಾಗಿ ದ್ರವ್ಯಾರ್ಜನೆಗೆ ಸದ್ವಿನಿಯೋಗವೇ ಉತ್ತಮಲಕ್ಷಣವು.

Occasional Notes
ನೈಮಿತ್ತಿಕ ವಿಷಯನ್ಯಾಸ.

The Cashmere Railway.—ಕಾಶ್ಮೀರದೇಶಕ್ಕೆ ರೈಲು ರಸ್ತೆ ಹಾಕಬೇಕೆಂದು ಯೋಚಿಸಲ್ಪಟ್ಟ ಅದರಸರ್ವೇಬಗ್ಯೆ ಏರ್ಪಾಡಾಗಿರುತಿದೆ. ಆಕಾರ್ಯಕ್ಕೆ ಹಿಡಿಯಬಹುದಾದ ಖರ್ಚಿನಲ್ಲಿ ಮೂರರಲ್ಲೊಂದುಭಾಗವನ್ನು ಇಂಡ್ಯಾ ಗವರ್ನಮೆಂಟಿನವರೂ ಉಳಿದ ಯೆರಡುಭಾಗವನ್ನು ಮಹಾರಾಜಾ ಸರ್ಕಾರದವರೂ ವಹಿಸುವದಾಗಿ ನಿಶ್ಚಯಿಸಲ್ಪಟ್ಟಿದೆ.

A Dewan assaulted.—ಕಳೆದ ತಿಂಗಳ ೩ನೇ ತಾರೀಖಿನಲ್ಲಿ ಕಾಶಿ ಮಹಾರಾಜರವರ ದಿವಾನರವರು ಸವಾರಿ ಹೋಗುತ್ತಿರುವಲ್ಲಿ ದುಷ್ಕರ್ಮ ಪ್ರವರ್ತಕರಾದ ಕೆಲವರು ಗುಂಪುಗೂಡಿಬಂದು ದಿವಾನರವರಗಾಡಿಯಂ ಮುತ್ತಿಕೊಂಡು ದೊಣ್ಣೆಗಳಿಂದ ಹೊಡೆಯಲಿಕ್ಕೆ ಸಿದ್ಧರಾದರೆಂತಲೂ ಅವರಿಗೆ ಕೂಡಲೇ ಸಹಾಯಕರು ಬಂದದರಿಂದ ಸ್ವಲ್ಪ ಘಾಯದೊಡನೆ ದಿವಾನರವರು ತಪ್ಪಿಸಿಕೊಂಡು ಹೊರಟುಹೋದರೆಂತಲೂ ತಂತಿವಾರ್ತೆಯಿಂದ ತಿಳಿಯಬರುತಿದೆ.

A suggestion.—ಹಿಂದೂಗಳಿಗೂ ಮುಸಲ್ಮಾನರಿಗೂ ಬಹುಕಾಲದಿಂದಲು ಅನುವರ್ತಿಸಿ ಬಂದಿರುವ ಪ್ರಾಣಹಾನಿಕರವಾದ ದ್ವೇಷಾಸೂಯೆಗಳಂ ತಪ್ಪಿಸಿ ಅವರಲ್ಲಿ ಅನ್ಯೋನ್ಯಭಾವವನ್ನುಂಟುಮಾಡುವ ಕಾರ್ಯಕ್ಕಾಗಿ ಒಂದು ಸಾರ್ವಜನಿಕ ಸಮಾಜವನ್ನೇರ್ಪಡಿಸಬೇಕೆಂದು ಹಿಂದೂನೊಂದು ಪತ್ರಿಕಾಲೇಖಕರು ತಿಳಿಸುವ ಅಭಿಪ್ರಾಯವು ಶ್ಲಾಘ್ಯವಾಗಿರುತಿದೆ. ಪರಂತು ಸಾಕ್ಷಾದ್ವಿರುದ್ಧಪಕ್ಷಗೆ ಸೇರಿದ ಮುಸಲ್ಮಾನರು ಅನ್ಯರೊಡನೆ ಸೇರತಕ್ಕ ಅಂಶವಾತ್ರ ಯಾವಾಗಲು ಸಂದೇಹಿಸತಕ್ಕದ್ದಾಗಿರುತಿದೆ.

An important judgment.—ಈಚೆಗೆ ಕಲ್ಕತ್ತಾ ಹೈಕೋರ್ಟಿನಲ್ಲಿ ಜೀವನಾಂಶದಬಗ್ಯೆ ತರಲ್ಪಟ್ಟ ಒಂದು ಮೊಕದ್ದಮೆಯಲ್ಲಿ, ವ್ಯಭಿಚಾರಿಣಿಯಾಗಿ ಹೋಗುವ ಹೆಂಡತಿ ವಿಕಂತುಗಳಿಗೆ ಜೀವನಾಂಶ ಕೊಡಬೇಕೆಂದು ಕೇಳುವಬಾಧ್ಯತೆ ಇಲ್ಲವೆಂದು ಸದರೀ ಕೋರ್ಟಿ ಚೀಫ್ ಜಸ್ಟಿಸುಯವರೂ ಜಸ್ಟಿಸ್ ಗುರುದಾಸಬಾನರ್ಜಿಯವರೂ ಸೇರಿ ತೀರ್ಪು ಕೊಟ್ಟಿರುವಂತೆ ಒಂದಾನೊಂದು ಪತ್ರಿಕೆತಿಳಿಸುತಿದೆ. ಇದು ಕೇವಲ ಶ್ಲಾಘ್ಯವಾಗಿಯೂ ಮತ್ತು ಶಾಸ್ತ್ರ ಸಮ್ಮತವಾಗಿಯೂ ಇರುತಿದೆ.

An extraordinary *freaks*.—ಈತಿಂಗಳ ಗುರ್ರೇತಾರೀಖಿನಲ್ಲಿ ಅಲಹಾಬಾದಿನೊಳು ಒಂದು ವಿಚಿತ್ರಸಂಗತಿ ನಡೆಯಿತೇನಂದರೆ, ಗ್ವಾಲಿಯರ್‌ನಿಂದ ಒಬ್ಬ ಬ್ರಾಹ್ಮಣಹುಡುಗನು ಅಲ್ಲಿಗೆಬಂದು ಅಲ್ಲಿನ ಮಿಷನರಿಯೊಬ್ಬನ ಬಳಿಗೆ ಹೋಗಿ ತಾನು ಕ್ರಿಸ್ತುಮತವಂ ಸೇರಬೇಕೆಂದು ಹೇಳಲಾಗಿ ಅವನ ತಾಯಿತಂದೆಗಳೂ ಬಂಧುಮಿತ್ರರೂ ಸೇರಿ ಸದರೀ ಹುಡುಗನನ್ನು ಜುಲುಮಿನಿಂದ ಮಿಷನರಿಗಳ ಕಡೆಯಿಂದ ಸೆಳೆದುಕೊಂಡು ಹೊರಟುಹೋದರು. ಮಿಷನರಿಗಳು ತಮ್ಮ ಮೇಲೆ ಜುಲುಂ ನಡೆಸಿದ್ದಾಗಿ ಸದರೀ ಜನಗಳ ಮೇಲೆ ಕ್ರಿಮಿನಲ್‌ದಾವೆಮಾಡಲು ಕಲಹಕ್ಕೆ ಮುಖ್ಯಪ್ರವರ್ತಕರಾದವರು ದಸ್ತಗಿರಿಯಿಂದ ಆಪಾದಿಸಲ್ಪಟ್ಟು ದರ್ಯಾಪ್ತಿಗೆ ಗುರಿಯಾಗಿರುತ್ತಾರೆ, ಎಂಬದು.

Purchase of silver.—ಅಮೆರಿಕಾ ಖಂಡಕ್ಕೆಸೇರಿದ ಯುನೈಟೆಡ್ ಸ್ಟೇಟ್ಸ್ ಸರ್ಕಾರದವರು ನಾಣ್ಯಗಳಂ ಛಾಪಿಸುವ ಉದ್ದೇಶದೊಡನೆ ಸಂವತ್ಸರಕ್ಕೆ ಐವತ್ನಾಲ್ಕುಕೋಟಿ ಔನ್ಸ್ ತೂಕ ಬೆಳ್ಳಿ ಖರೀದಿಮಾಡುವದಕ್ಕೆ ಬದಲಾಗಿ ಪ್ರತಿ ತಿಂಗಳಲ್ಲೂ ನಾಲ್ಕೂವರೆಕೋಟಿ ಔನ್ಸ್ ತೂಕ ಬೆಳ್ಳಿ ಖರೀದಿ ಮಾಡತಕ್ಕದ್ದೆಂದು ನಿರ್ಣಯಿಸಿರುತ್ತಾರೆ. ಸದರೀ ಸರ್ಕಾರದವರು ಈಚೆಗೆ ಮಾಡಿದ ಈಹೊಸ ನಿಬಂಧನೆಯು ದೆಸೆಯಿಂದಲೇ ಈಚೆಗೆ ಒಂದೆರಡುತಿಂಗಳವೊದಲು ಸವರನ್ನಿನ ಬೆಲೆ ಇಳಿಯುತ ಬರುತಲಿದೆಯೆಂದು ಸಾಮಾನ್ಯವಾಗಿ ಯೆಲ್ಲರೂ ತಿಳಿಯಬಹುದು. ಇನ್ನು ಒಂದೆರಡು ತಿಂಗಳೊಳಗಾಗಿ ಸವರನ್ನಿನಕ್ರಯ ಹನ್ನೊಂದುರೂಪಾಯಿಗಳಿಗೆ ಇಳಿಯುವದರಲ್ಲಿ ಯಾವ ಸಂಶಯವೂ ಇಲ್ಲವು.

ಸದರ್ನ್‌ಮರಾಠಾ ರೈಲ್ವೆಗೆ ಸೇರಿದ ಮೈಸೂರು ಸ್ಟೇಟ್ ರೈಲ್‌ವೆ.

ನೋಟೀಸ್.

ಇದರಿಂದ ತಿಳಿಯಪಡಿಸುವದೇನಂದರೆ —

ಮಂಡ್ಯದಿಂದ ಬೆಂಗಳೂರಿಗೆ ಇದೇ ಇಸವಿ ಏಪ್ರಿಲ್ ೨೭ನೇ ತಾರೀಖಿನ ೪೮ನೇ ನಂಬರ್ ಇನ್‌ವಾಯಿಸಿನಲ್ಲಿ ಕಂಡಂತೆ, ರಾಮಸ್ವಾಮಿ ಎಂಬಾತನಿಗೆ ಟ್ರೈನಿನಲ್ಲಿ ಕಳುಹಿಸಲ್ಪಟ್ಟ ಮೂರು ವ್ಯಾಗನ್‌ಗಳು, ಸುಣ್ಣಕಲ್ಲು ಈನೋಟೀಸ್ ಒಂದನೇ ತಾರೀಖು ಮಧ್ಯಾನ್ಹದೊಳಗಾಗಿ ಸದರೀ ರಾಮಸ್ವಾಮಿ ಯೆಂಬಾತನು ಆದರವರಿಗೆ ಆಗತಕ್ಕ ಯೆಲ್ಲಾ ಚಾರ್ಜನ್ನು ಕೊಟ್ಟು ತೆಗದುಕೊಳ್ಳದೆ ಹೋದಲ್ಲಿ ಬೆಂಗಳೂರು ಸಿಟಿ ಸ್ಟೇಷನ್ನಿನಲ್ಲಿ ಹರಾಜ್ ಹಾಕಲ್ಪಡುತ್ತೆ.

ಟ್ರಾಫಿಕ್ ಮ್ಯಾನೇಜರ ಆಫೀಸ್, ಧಾರವಾಡ, ೪ನೇ ಸಪ್ಟಂಬರ್	ಜೇಮ್ಸ್ ಸ್ಟ್ರೀಟ್, ಟ್ರಾಫಿಕ ಮ್ಯಾನೇಜರ್

LOCAL AND PROVINCIAL NEWS
ಒಳದೇಶಮತ್ತು ತಾಲ್ಲೂಕುವಾರ್ತಾವೃತ್ತಾಂತಗಳು

The Bangalore District.—ಕಳೆದ ಶುಕ್ರವಾರದದಿನ ಪ್ರಾತಃಕಾಲ ೧೧ ಘಂಟೆಗೆ ಸರಿಯಾಗಿ ಈಡಿಸ್ಟ್ರಿಕ್ಟ ಕಾಯಂ ಡೆಪ್ಯುಟಿ ಕಮಿಷನರಾದ ಮೆ|| ಎ ಪಿ. ಮಾಧವರಾಯರವರು ಡಿಸ್ಟ್ರಿಕ್ಟು ಮತ್ತು ಟ್ರಿಜರಿಚಾರ್ಜಗಳನ್ನು ಮೆ|| ಅಬ್ಬಾಜಿರಾಯಮಾನವರವರಿಂದ ತೆಗದುಕೊಂಡರು.

The new Municipality of Kadaba.—ಗುಬ್ಬಿ ತಾಲ್ಲೂಕ ಕಡಬದ ಮ್ಯುನಿಸಿಪಾಲಿಟಿಗೆ ಈಚೆಗೆ ಹೊಸದಾಗಿ ನೇಮಕರಾದ ೭ ಜನ ಮೆಂಬರ್‌ಗಳನ್ನು ತುಮಕೂರ್ ಡಿಸ್ಟ್ರಿಕ್ಟು ಡೆಪ್ಯುಟಿಕಮಿಷನರವರ ಶಿಫಾರಸ್ಸನ್ನನುಸರಿಸಿ ಗವರ್ನಮೆಂಟಿನವರು ಮಂಜೂರ್ಮಾಡಿದಂತೆ ಅರಿಯಲಾದೆವು.

The weather in Mercara.—ಮಡಿಕೇರಿ ಪ್ರಾಂತದಲ್ಲಿ ಸಮೃದ್ಧವಾಗಿ ಮಳೆ ಇಲ್ಲದೆ ಇದೆ. ವರ್ಷದ ಸೂಚನೆಗಳೇನೂ ಕಡಮೆಯಾಗಲಿಲ್ಲವು. ವರ್ಷಾಭಾವದಿಂದ ತರೀಫಸಲ್ ವಿಷಯವಾಗಿ ಜನಗಳೆಲ್ಲರು ಬಹಳ ಚಿಂತಿಸುತಲಿರುವಂತೆಯೂ ಶೀಘ್ರವಾಗಿ ಯಥೋಚಿತವಾದರೂ ಮಳೆಯಾಗದಿದ್ದರೆ ಫಸಲ್ ನಷ್ಟವಾಗಿ ವರ್ತಕರು ರೈತರು ಬಹಳ ನಷ್ಟಕ್ಕೆ ಗುರಿಯಾಗುವರೆಂಬದಾಗಿಯೂ ಅಲ್ಲಿಂದ ಬಂದ ಕಾಗದಗಳ ಮೂಲಕ ತಿಳಿಯಲಾದೆವು.

The Resident.—ಈಸಂಸ್ಥಾನದ ಬ್ರಿಟಿಷ ರೆಸಿಡೆಂಟರಾದ ಸರ್. ಓಲಿವರ್‌ಸೆಂಟ್ ಜಾನ್‌ಯವರು ೩ ತಿಂಗಳ ರಜಾಮೇಲೆ ಸ್ವದೇಶಕ್ಕೆ ಹೋಗುವವರಾಗಿದಾರೆಂತಲೂ ಅವರ ಗೈರುಹಾಜರಿಕಾಲದಲ್ಲಿ ಪೂರ್ವದೊಳಲ್ಲ ಅಸಿಸ್ಟೆಂಟ್ ರೆಸಿಡೆಂಟರಾಗಿದ್ದು ಈಗ ಇಂಡ್ಯ ಗವರ್ನಮೆಂಟಿನ ಫಾರೀನ್ ಸೆಕ್ರೆಟರಿಯಾಗಿರುವ ಮ್ಯ|| ಕನ್ನಿಂಗ್‌ಹಾಂಯವರು ರೆಸಿಡೆಂಟ್ ಕೆಲಸವು ಆಕ್ಟಿಂಗ್ ತರೀಕ ನೋಡುವರೆಂತಲೂ ಪ್ರವಾದವುಂಟಾಗಿರುವಂತೆ ಒಳದೇಶದ ಸ್ಪೆಕ್ಟೇಟರ್‌ಪತ್ರಿಕೆ ತಿಳಿಸುತಿದೆ. ಇದರ ನಿಜಸ್ಥಿತಿ ಹೇಗಿರುವದೋ ತಿಳಿಯಲಿಲ್ಲವು.

Coffee prospects.—ಕೊಡಗುಪ್ರಾಂತದಲ್ಲಿ ಕಾಫೀಪೈರು ಪುಷ್ಪವಲ್ಲಿಯೇ ಪಕ್ವಕ್ಕೆ ಬರಬಹುದೆಂದು ತೋರುತಿದೆ. ಮುಂಬಿನವರುಷದಲ್ಲಿ ಅಂದರೆ ೧೮೯೦–೯೧ನೇ ಇಸವಿಯಲ್ಲಿ ಈಗಿನ ವರ್ಷದ ಲಕ್ಷ್ಯದಿಂದ ನಾನಾ ಪ್ರಕಾರ ಕಾಫೀ ಫಸಲಿಗೆ ಬಂಧಕ ವುಂಟಾಗಬಹುದೆಂದೆಣಿಸುತ್ತೇವೆ. ಈಗಲೇ ಯೆಲೆಹೋಗ ಪ್ರಾಪ್ತವಾಗಿರುವದಲ್ಲದೆ ಈಗ ನಾಟಲ್ಪಟ್ಟಿರುವ ಯೆಳೆಗಿಡಗಳೆಲ್ಲವು ಒಣಗುತಲಿವೆ. ಇವುಗಳನ್ನೆಲ್ಲ ನೋಡಲಾಗಿ ಕೊಡಗುದೇಶದ ಮುಖ್ಯವ್ಯಾಪಾರಕ್ಕೆ ಹಾನಿಯುಂಟಾಗುವಂತೆ ತೋರುತಿದೆ.

Promotion in the Public Service.—ಮೈಸೂರ್ ಚೀಫಕೋರ್ಟಿನ ಟ್ರಾನ್ಸ್‌ಲೇಟರ್ ಮಹಾರಾಜಶ್ರೀ ನರಸಿಂಗರಾಯರೆಂಬವರು ಚೆನ್ನಪಟ್ಟಣದ ಸಬ್ ತಾಲ್ಲೂಕ್ ಡೆಪ್ಯುಟಿ ಅಮಲ್‌ದಾರರಾಗಿ ನೇಮಕರಾಗಿದ್ದಲ್ಪಟ್ಟು ಕೂಡಲೇ ಹೋಗಿ ಜಾರ್ಜು ತೆಗದುಕೊಳ್ಳುವಂತೆ ನಿಯಮಿಸಲ್ಪಟ್ಟರುವರೆಂತಲೂ ಇವರಿಗೆ ಈಗ ೬೦ ರೂಪಾಯಿಗಳ ತಲಬಿತ್ತೆಂತಲೂ ಮುಂದೆ ೫೦ ರೂಪಾಯಿಗಳ ತಲಬೂ, ೧೫ ರೂಪಾಯಿಗಳ ಹಾರ್ಸ ಅಲೋವೆನ್ಸೂ ದೊರೆಯುವದೆಂತಲೂ, ಕೆಲವು ವರುಷಗಳಹಿಂದೆಯೇ ಇವರು ಮೈಸೂರ್ ಲೋಕಲ್‌ಸರ್ವಿಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾರೆಂತಲೂ ತಿಳಿಯಬರುತಿದೆ.

The Dewan.—ಈ ಸಂಸ್ಥಾನದ ದಿವಾನರಾದ ಮೆ|| ಕೆ. ಶೇಷಾದ್ರಿ ಅಯ್ಯರವರು ಈ ತಿಂಗಳ ೨೫ನೇ ತಾರೀಖಿಗೆ ಸರಿಯಾಗಿ ಇಲ್ಲಿಗೆ ವಾಪಸ್ ಬರುವರೆಂದು ನಿರೀಕ್ಷಿಸಲ್ಪಟ್ಟಿದೆ, ಮತ್ತು ಅವರು ಬಂದ ಕೂಡಲೇ ಮೆ|| ಗಂಬುಶೆಟ್ಟಿರವರು ಚೀಫಕೋರ್ಟಿಗೆ ವಾಪಸ್ ಹೋಗುವರಲ್ಲದೆ ಮೆ|| ಶ್ರೀನಿವಾಸಯವರ ಗೈರುಹಾಜರಿ ಪ್ರಯುಕ್ತ ಖಾಲಿಯಾದ ಚೀಫ್‌ಜಡ್ಜಿ ಕೆಲಸದ ಚಾರ್ಜನ್ನು ಮೆ|| ರಾಮಚಂದ್ರಯ್ಯರವರಿಂದ ತೆಗದುಕೊಳ್ಳುವರೆಂತಲೂ, ಮೆ|| ಎ ಎನ್. ಕೃಷ್ಣಮೂರ್ತಿಗಳವರು ಆಕ್ಟಿಂಗ ತರೀಕ ಮೂರನೇ ಜಡ್ಜಿಯಾಗಿರುವರೆಂತಲೂ ಮೆ|| ಮೀನಾಕ್ಷಿ ಅಯ್ಯರವರು ತಮ್ಮ ಪೂರ್ವದ ಕೆಲಸಕ್ಕೆ ವಾಪಸ್ ಹೋಗುವರೆಂತಲೂ ತಿಳಿಯಬರುತಿದೆ.

An accident.—ಅಸಿಸ್ಟೆಂಟ್ ಸರ್ಜನ್‌ಯಾದ ಮೆ|| ಅಚ್ಯುತರಾಯರವರು, ಗತ ಬುಧವಾರದ ದಿನ ಸಾಯಂಕಾಲ ಕುದುರೆಗಾಡಿಯಲ್ಲಿ ಕುಳಿತು ಸ್ವೈರಾಧ್ಯದಂ ಮಾಡುತ ಲೇಟ್ ದಿವಾನ್ ಮೆ|| ಕೃಷ್ಣಮನಾಯಡರವರ ಬಂಗ್ಲೇ ರೋಡಿನಲ್ಲಿ ಹೋಗುವಾಗ್ಯ ಗಾಡಿಗೆ ಕಟ್ಟಿದ್ದ ಮತ್ತು ಅವರು ಈಚೆಗೆ ಹೊಸದಾಗಿ ತೆಗೆದ ಕುದುರೆಯು ಅಸ್ವಾಧೀನವಾಗಿ ಗಾಡಿಯನ್ನು ಕೆಡುವಲು ಅದರಲ್ಲಿದ್ದವರು ಕೆಳಗೆಬಿದ್ದು ಅವರ ಬಲಗೈ ಮುಂಗೈ ಕದಲಿಹೋಗಿ ಬಹಳ ಅಸ್ವಸ್ಥರಾಗಿದಾರೆಂತಲೂ, ಡಾಕ್ಟರ್ ಫರ್ನಾಂಡೆಜ್‌ಯವರು ಚಿಕಿತ್ಸೆ ಮಾಡುತಲಿದಾರೆಂತಲೂ ತಿಳಿಯಲಾದೆವು. ಮನುಷ್ಯನಿಗೆ ಯಾವದರಲ್ಲಿ ವಿಶೇಷವಾಗಿ ಮೋಹವುಂಟಾಗುತಿದೆಯೋ ಅದೇ ಆತನ ಅಪಾಯಕ್ಕೆ ಕಾರಣವಾಗದೆ ಹೋಗುವದಿಲ್ಲವು.

The next representative assembly.—ಬರುವ ಅಕ್ಟೋಬರ್ ತಿಂಗಳಲ್ಲಿ ಮೈಸೂರೊಳು ನಡೆಯತಕ್ಕ ಪ್ರಜಾ ಪ್ರತಿನಿಧಿ ಸಮಾಜಕ್ಕೆ ಮೆಂಬರ್‌ಗಳಾಗಿ, ಮೆ|| ಮರಿಗಂಗಯ್ಯನವರೂ, ಮ|| ರಾ|| ಅಣ್ಣಯಪ್ಪ ಶೆಟ್ಟರವರೂ ಮ್ಯುನಿಸಿಪಲ್ ಬೋರ್ಡಿನವರಿಂದ ಚುನಾಯಿಸಲ್ಪಟ್ಟದಾರೆಂದು ಕೇಳುತ್ತೇವೆ. ಇನ್ನು ಲೇಟ್ ಪೇಯರ್ಸ್ ಅಸೋಸಿಯೇಷನ್ನವರು ತಮ್ಮ ಸಂಘದ ಪ್ರತಿನಿಧಿಯಾಗಿ ಯಾರನ್ನು ಚುನಾಯಿಸಬೇಕೆಂದಿದಾರೆಯೋ ತಿಳಿಯಲಿಲ್ಲವು. ದಳ್ಳಾಳಿಗಳನ್ನೂ ಗಂಡಿಗೆ ಅಂಗಡಿಯವರನ್ನೂ ಚಿಲ್ಲರೆ ಅಂಗಡಿಯವರನ್ನೂ ಚುನಾಯಿಸಿ ಅವರ ಯೋಗ್ಯತೆಗೆ ಮೀರಿದ ಜವಾಬ್ದಾರಿಯಂ ಕೊಟ್ಟು [illegible]ಸುವದರಿಂದ ಉದ್ದೇಶ ಭಂಗವೂ ವರದಿ ಹೇಳಿಸುವ ಧಾರ್ಷ್ಟ್ಯವಾಗದೆ ತಪ್ಪಲಾರದು, ಆದಕಾರಣ ಮೆಂಬರ್‌ಗಳು ಈ ಅಂಶಗಳಂ ಚೆನ್ನಾಗಿ ಆಲೋಚಿಸಿ ಪ್ರತಿನಿಧಿಗಳನ್ನೇರ್ಪಡಿಸಿದರೆ ಯುಕ್ತವಾಗಿರುವದು.

Assistant Commissioners.—ಈಗ ಮೈಸೂರ್ ಗವರ್ನಮೆಂಟಿನಲ್ಲಿ ನೆರೆಗೊಂಡಿರುವ ಅಸಿಸ್ಟೆಂಟ್ ಕಮಿಷನರ್ ಕೆಲಸವು ಮೂರು [illegible] ಗತಿಗಳುಳ್ಳದ್ದಾಗಿರುತಿದೆಯಲ್ಲದೆ ೫೦೦ ರೂಪಾಯಿಗಳ ತಲಬುಳ್ಳ ೧ನೇ ತರಗತಿಯಲ್ಲಿ ಇಬ್ಬ[illegible]

೪೦೦ ರೂಪಾಯಿಗಳುಳ್ಳ ಎರಡನೇ ತರಗತಿಯಲ್ಲಿ ಆರುಮಂದಿಯೂ, ೩೦೦ ರೂಪಾಯಿಗಳುಳ್ಳ ಮೂರನೇ ತರಗತಿಯಲ್ಲಿ ಮೊದಲು ಮಂದಿಯೂ, ೨೫೦ ರೂಪಾಯಿಗಳುಳ್ಳ ನಾಲ್ಕನೇ ತರಗತಿಯಲ್ಲಿ ಹನ್ನೊಂದು ಮಂದಿಯೂ, ಇರುವಂತೆ ತಿಳಿಯಬರುತಿದೆ. ಇದಲ್ಲದೆ ಕೆಲವರು ಬಿಗರ್ ಇಲಾಖೆಗಳಲ್ಲಿ ಇಲಾಖಾಧಿಕಾರಿಗಳಿಗೆ ಅಸಿಸ್ಟೆಂಟುಗಳೆನಿಸಿಕೊಂಡು ಕೆಲಸ ನೋಡುತಲಿರುತ್ತಾರೆ. ಅಂತವರಿಗೆ ಬದಲಾಗಿ ಆಕ್ಟಿಂಗ್ ತರೀಖಿಗಾಗಿ ಕೆಲವರೂ ಅದವರಾಯಿಟ್ಟೇ ತರೀಖಾಗಿ ಕೆಲವರೂ ನಿಯಮಿಸಲ್ಪಟ್ಟಿರುತ್ತಾರೆ. ಆದರೆ ಮೇಲೆ ನಾವು ತಿಳಿಸಿದವರೆಲ್ಲರೂ ಖಾಯಂ ಲವಾಜಮೆಗೆಸೇರಿದವರಾಗಿರುತ್ತಾರೆ. ಹೀಗೆ ಇನ್ನೆಷ್ಟುಜನ ವಾಖಲಾಗಬೇಕೋ ತಿಳಿಯಲಿಲ್ಲವು.

Increase of pay.—ಈಚೆಗೆ ಈ ಸಂಸ್ಥಾನದ ನೌಕರಿಯಲ್ಲಿರತಕ್ಕ ಕೆಲವರು ದೊಡ್ಡ ಉದ್ಯೋಗಸ್ಥರಿಗೆ ಪದ್ಧತಿಪ್ರಕಾರ ಸಾಲಿಯಾನಾ ತಲಬ್ ಇಜಾಫೆಯಾದಲ್ಲದೆ ಸ್ವಲ್ಪ ಕೂಡ ಆಗಿದೆ. ಅವರುಗಳು ಯಾರೆಂದರೆ,—ಚೀಫ್ ಸೆಕ್ರೆಟರಿ ಮ|| ಶ್ರೀನಿವಾಸರಾವ್ ಬಿ. ಎ. ಯವರು ೪೦೦ ರೂಗಳಿಂದ ೧೦೦೦ ರೂಪಾಯಿಗಳು, ಮ|| ವಿ. ಪಿ. ಮಾಧವರಾಯರವರಿಗೆ ೧೦೦ ರೂಪಾಯಿ ಬಿಗಳಿಂದ ೧೫೦೦, ಮ|| ಟಿ. ನರಸಿಂಹಾಯ್ಯಂಗಾರರಿಗೆ ೪೦೦ ರೂ, ಗಳಿಂದ ೧೦೦ ರೂ|| ಮ|| ಕೃಷ್ಣಮೂರ್ತಿ ರವರಿಗೆ ೪೦೦ ರೂ, ಗಳಿಂದ ೧೦೦೦ ರೂ|| ಮ|| ರಂಗಸ್ವಾಮಿ ಅಯ್ಯಂಗಾರ್ಯರಿಗೆ ೪೦೦ ರಿಂದ ೧೦೦೦ ರೂ|| ಮ|| ಪ್ರಾಣನಾಥಯ್ಯರವರಿಗೆ ೪೦೦ ರೂ|| ಗಳಿಂದ ೧೦೦೦ ರೂ ಮ|| ವಿ. ಕೆ. ವೆಂಕಟವರದಯ್ಯಂಗಾರ್ಯರಿಗೆ ೬೦೦ ರೂ ಇಂದ ೪೦೦ ರೂ ಈ ರೀತಿ ಗ್ರೇಡ್ ಸ್ಕೇಲ್ ಬಡ್ತಿ ಮಾಡಲ್ಪಟ್ಟಿರುತ್ತಾರೆ. ಇದಲ್ಲದೆ ಕ್ರಿಮಿನಲ್ ರಿಜಿಸ್ಟ್ರಾರ್ ಮ|| ನರಸಿಂಹಯ್ಯಂಗಾರ್ಯರಿಗೆ ಸಹ ೪೦೦ ರೂ|| ಗಳಿಂದ ೧೦೦೦ ರೂಪಾಯಿಗಳ ವರಕೆ ತಲಬ್ ಬಡ್ತಿಯಾಗಿರುತಿದೆ. ಈ ನೇಮಕಗಳೆಲ್ಲವು ಮ|| ಕೃಷ್ಣಮೂರ್ತಿಗಳು ಬೇರೆ ಕೆಲಸಕ್ಕೆ ಹೋದದರಿಂದ ಉಂಟಾದವೆಂದು ತೋರುತಿದೆ.

The District Court.—ಕೆಲವು ಸಂವತ್ಸರಗಳ ಹಿಂದೆ ಸರಕಾರದ ಮಾಡಲ್ಪಟ್ಟ ಸಂಬಂಧ ಡಿಸ್ಟ್ರಿಕ್ಟ್ ನ ಸೆಷನ್ಸ್ ಕೋರ್ಟನ್ನು ಈ ತಿಂಗಳ ಆಖೈರಿನೊಳಗಾಗಿ ಅದೇ ಕಟ್ಟಡದೊಳಗೇಸ್ಥಾನದಲ್ಲಿ ಮರಳಿ ಸ್ಥಾಪಿಸುವಂತೆ ವ್ಯವಸ್ಥೆಯಾಗಿ ಅದಕ್ಕೆ ಈಗ ಆಕ್ಟಿಂಗ್ ಚೀಫ್ ಜಡ್ಜಿಯಾದ ಮಿಸ್ಟರ್ ರಾಮಚಂದ್ರ ಅಯ್ಯರವರು ಶಿಬ್ಬಂದಿಗಳ ಮೊಕರರಾತಿ ವಗೈರೆ ವಿಷಯಗಳನ್ನೆಲ್ಲ ಮಾಡುತಲಿರುತ್ತಾರೆಂತಲೂ, ಇದಲ್ಲದೆ, ಈ ಸಂದರ್ಭದಲ್ಲಿ ನೌಕರಿಗಳಿಗಾಗಿ ಅನೇಕರು ದರಖಾಸ್ತು ಮಾಡುತಲಿದ್ದಾರೆಂತಲೂ, ಆದರೆ ಗ್ರಾಜ್ಯುಯೇಟುಗಳಿಗೆ ವಿನಾ ಅನ್ಯರ್ಯಾರಿಗೂ ಕೆಲಸಕೆ ಅವಕಾಶವಿಲ್ಲದಂತಾಗಿ ಚೀಫ್ ಜಡ್ಜಿಯವರು ನಿಬಂಧಿಸಿರುತ್ತಾರೆಂತಲೂ, ಇಂತಾ ನಿಬಂಧನೆಯು ಅನೇಕರ ಪ್ರತ್ಯೇಕ ಜಂಗರಾರಿಯಾಗಿ ಪರಿಣಮಿಸಿದೆಯೆಂತಲೂ ಕೇಳುತ್ತೇವೆ. ಏತದರ್ಥ ಸ್ಥಳಾನುಕೂಲ್ಯವೂ ಕಲ್ಪಿಸಲ್ಪಡುತ್ತಲೂ ಈ ಡಿಸ್ಟ್ರಿಕ್ಟ್ ಅಫಿಸ್ ಕಟ್ಟಡದಲ್ಲಿರುವ ಸಿಟಿ ಮ್ಯುನಿಸಿಪಲ್ ಬೋರ್ಡ್ ಆಫೀಸ್ ಕಚೇರಿಯಲ್ಲಿ ಖಾಲಿಯಾಗಿರುವ ಮಿಲಿಟರಿ ಸ್ಟೋರಿಗೆ ವರ್ಗ ಮಾಡಲ್ಪಡುವದೆಂತಲೂ, ಆಸ್ಥಳದಲ್ಲಿ ಮುನಸಿಫ್ ಕೋರ್ಟು, ಅನಂತಸ್ಥಾನದಲ್ಲಿ ಸಬ್‌ಜಡ್ಜಿ ಕೋರ್ಟು ಏರ್ಪಡಿಸಲ್ಪಡುವವೆಂತಲೂ ಕೇಳುತ್ತೇವೆ. ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯಾದ ಮ|| ಟಿ. ನರಸಿಂಹಯ್ಯರವರು ಇಲ್ಲಿಗೆ ವರ್ಗ ಮಾಡಲ್ಪಟ್ಟು ಈತಿಂಗಳ ೧೫ ನೇ ತಾರೀಖಿನಲ್ಲಿ ಇಲ್ಲಿಗೆ ಬಂದು ಚಾರ್ಜ್ ತೆಗೆದುಕೊಳ್ಳುವರೆಂದು ತಿಳಿಯಬರುತಿದೆ.

LEGAL INTELLIGENCE

ನ್ಯಾಯನಿರ್ಣಯಗಳು.

ಅಕ್ರಮಗುಂಪಿಗೆ ಸೇರಿ ದೊಂಬಿ ನಡೆಸಿದ್ದು. ತಿರುನಲ್‌ವೇಲಿ ಡಿಸ್ಟ್ರಿಕ್ಟ್ ಜಾಯಿಂಟ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ.

1890ನೇ ಇಸವಿಯ 41ನೇ ನಂಬರ್ ಮೊಕದ್ದಮೆ.

ಫಿರ್ಯಾದಿ—ಮಹಾರಾಜ್ಞಿ ಇಂಡ್ಯಾಚಕ್ರವರ್ತಿನಿಯವರು.

ಸಾಕ್ಷಿಗಳು—ಪ್ರೊವಿನ್ಸ್ ಸ್ಪೆಷಲ್ ಪೊಲೀಸ್ ಆಫಿಸರ್ ಸುಬ್ರಹ್ಮಣ್ಯಪಿಳ್ಳೆ ವಗೈರೆ ಆರುಜನ.

ಪ್ರತಿವಾದಿಗಳು—೧ನೇ ಜೋಸಫ್, ೨ನೇ ಲಿಂಗನಾಡಾರ್, ೩ನೇ ಮುತ್ತುಕರ್ಪನ್, ೪ನೇ ರಾಮಸ್ವಾಮಿ.

ಸಾಕ್ಷಿಗಳು—ತಿರುನಲ್‌ವೇಲಿ ಡಿಸ್ಟ್ರಿಕ್ಟ್ ಕಲೆಕ್ಟರ್ ವ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮ|| ಜಿ. ಹೆಚ್. ಎ. ಟ್ರೈವರ್ ಸಿಯವರು ವಗೈರೆ ಹನ್ನೊಂದು ಜನ.

ತಕ್ಸೀರ್—ಇಂಡಿಯನ್ ಪೀನಲ್ ಕೋಡ್ ೧೪೩ ಮತ್ತು ೧೪೭ ನೇ ಸೆಕ್ಷನ್ಗಳನ್ನನುಸರಿಸಿ ಅಕ್ರಮವಾದ ಒಂದು ಗುಂಪಿನ್ನ ಸೇರಿ ದೊಂಬಿ ನಡೆಸಿದ್ದು.

ಪರಿಣಾಮ—ತಕ್ಸೀರ್ ಸಾಬೀತಾಗಿ,

ದಂಡನೆ—ನಾಲ್ಕು ತಿಂಗಳ ಸ್ಟ್ರೈಟ್ ಸಜಾ ಕೊಡಲಿಲ್ಲ ಹಿಂಗಳ ಸಾಧಾರಣ ಸ್ಟ್ರೈಟ್, ಮಿಕ್ಕ ಮೂರು ತಿಂಗಳು ಕಠಿಣ ಸ್ಟ್ರೈಟ್.

ಸ್ಟೇಟಸ್.

(ಕಳೆದವಾರದ ಶೇಷ)

೯. ೨೬ ನೇ ತಾರೀಖಿನ ದಿನ ಬೆಳಿಗ್ಗೆ ಮ|| ಕ್ಯಾರ್ಕ್ ಎಂಬಾತನು ವಕೀಲಿ ಕೃಷ್ಣಯ್ಯರ್ ಎಂಬಾತನ ಭಾರ್ಯೆಯಮೇಲೆ ಜುಲುಂ ನಡೆಸಿದಂತೆ ತಿಳಿಸಲ್ಪಡುವದರಿಂದ ಅದು ಜನಗಳಿಗೆ ಆಗ್ರಹವನ್ನುಂಟುಮಾಡಿ, ಅದೇ ದಿನ ಸಾಯಂಕಾಲ ನಡೆದ ಮೀಟಿಂಗಿನಲ್ಲಿ ತೀವ್ರವಾದ ವಿಷಯಗಳನ್ನು ಮಾಡುವಂತೆ ಪರಿಣಮಿಸಿತು. ಮೀಟಿಂಗಿನ ೩ ನೇ ತೀರ್ಮಾನದಲ್ಲಿ ಹೊಳೆಯಲ್ಲಿ ಸ್ನಾನ ಮಾಡತಕ್ಕ ವಿಷಯದಲ್ಲಿ ನೇಟಿವ್‌ಗಳಿಗೂ ಯೂರೋಪಿಯನ್ನರಿಗೂ ಇರುವ ಪರಸ್ಪರ ಹಕ್ಕು ಬಾಧ್ಯತೆಯ ಕುರಿತು ವಿಚಾರ ನಡೆದು ಮ|| ಕ್ಯಾರ್ಕಿನ ನಡತೆಯ ವಿಷಯವಾಗಿ ಬಹಳ ಖಂಡಿಸಲ್ಪಟ್ಟಿತು. ಬಳಿಕ ಮಾಡಲ್ಪಟ್ಟ ತೀರ್ಮಾನವೇನೆಂದರೆ.—

ಈಗ ಮ|| ಕ್ಯಾರ್ಕಿನಿಂದ ನಡೆಸಲ್ಪಟ್ಟ ಇಂತಾ ಅವಮಾನ ಕರಗಳಾದ ಕೃತ್ಯಗಳಿಂದ ಪ್ರಜೆಗಳನ್ನು ತಪ್ಪಿಸಿ ಸುರಕ್ಷಿಸುವ ಬಗ್ಗೆ ತಕ್ಕ ಏರ್ಪಾಡುಗಳಂಮಾಡತಕ್ಕದ್ದು. ಕಲೆಕ್ಟರ್ ನಿರ್ಣಯವು, ಮ|| ಲೀವಾರ್ನರ್ ಎಂಬವರು ಕೇವಲ ಯೂರೋಪಿಯನ್ನರಗಳ ಸೌಕರ್ಯಾರ್ಥ ಕೊಡಲ್ಪಟ್ಟಿರುವದು ನ್ಯಾಯವಿರುದ್ಧವಾದ ನೋಟೀಸು ಒಂದು ಹಿಂದೂ ಸ್ತ್ರೀಮೇಲೆ ಮ|| ಕ್ಯಾರ್ಕ್ ಎಂಬಾತನು ಜುಲುಂ ನಡೆಸಲಿಕ್ಕೆ ಉಪಯೋಗವಾಯಿತು, ಎಂಬದು. ಪ್ರೊಸೀಡಿಂಗ್ಸ್ ಮೂಲಕ ಅಂಗೀಕರಿಸಿದವದನ್ನೂ ಸದರೀ ಎರಡು ನಿರ್ಣಯಗಳನ್ನೂ ನೋಡಿದಾಗ ನೇಟಿವ್‌ಗಳು ವಿನಾಯಿಸಿ, ಯೂರೋಪಿಯನ್ನರಗಳು ಮಾತ್ರ ಅದುವರಿವಿಗೂ ಪ್ರತಿನಿತ್ಯ ೯ ಘಂಟೆಯ ತನಕ ಹೊಳೆಗೆ ಬಂದು ಸ್ನಾನಮಾಡಿ ಹೋಗುತಲಿದ್ದಂತಾ ಸಾಡಿಕೆಯು ನೆಲೆಗೊಂಡಿತ್ತೆಂಬದಾಗಿ ಸ್ಪಷ್ಟವಾಗುತಿದೆ. ಸಾಮಾನ್ಯವಾಗಿ ಅಪರಾಧಿಗಳ ನಡತೆಯನ್ನೂ, ತತ್ರಾಪಿ ಅವರ ದೇಶೀಯರು ವಗೈರೆ ಷುಮಾರು ೫೦ ಮಂದಿಯು ಮರಿದಿನ ಗುಂಪು ಕೂಡಿಕೊಂಡು ಮಾರನೆಯ ದಿನ ಬೆಳಿಗ್ಗೆ ಹೊಳೆಗೆ ಬಂದು ಅಕ್ರಮಿಸಿದ್ದನ್ನೂ ನೋಡಲಾಗಿ ಹಿಂದಿನ ದಿನದಲ್ಲಿ ಮಾಡಿದ ನಿರ್ಣಯಗಳನ್ನು ಸಾರ್ಥಕ ಪಡಿಸಿ ಮ|| ಲೀವಾರ್ನರ್‌ಯವರ ನೋಟೀಸನ್ನು ಉಲ್ಲಂಘಿಸಬೇಕೆಂಬ ಸಂಕಲ್ಪವೊಂದೇ ಬಂದಂತೆ ಸ್ಪಷ್ಟವಾಗುತಿದೆಯೇ ಹೊರ್ತು ಕೇವಲ ಸ್ನಾನಾರ್ಥ ಬಂದವರೆಂದು ಭಾವಿಸಲಿಕ್ಕಾಗುವದಿಲ್ಲವು.

೧೦. ಈ ಅಕ್ರಮಕೂಟದಲ್ಲಿ ಅಪರಾಧಿಗಳೂ ಇತರ ಮೈಸೂರಿನವರೂ ವಿಶೇಷವಾಗಿ ಸಮಾವೇಶಗೊಂಡದ್ದಕ್ಕೆ ಮೈಸೂರು ರೀತಿಯ ಪೆಪ್ಯುಟಿ ಕಮ್ಮಿಷನರ್ ಮ|| ಎ. ಪಿ. ಮಾಧವರಾಯರವರು ಮೀಟಿಂಗಿಗೆ ಹೋಗಿದ್ದದೂ, ಮೀಟಿಂಗಿನ ವೃತ್ತಾಂತವನ್ನು ತಾತ್ಕಾಲಿಕವಾಗಿ ಬಂದಿರುವಂತಾ ಸ್ವದೇಶಾಭಿಮಾನಿಯಾದ ಮೈಸೂರು ದಿವಾನರಿಗೆ ತಿಳಿಯಪಡಿಸತಕ್ಕದ್ದೆಂದು ಆಮೀಟಿಂಗಿನಲ್ಲಿ ತೀರ್ಮಾನಿಸಿದ್ದೂ ಕಾರಣಗಳಾಗಿ ಏರ್ಪಟ್ಟವು. ಇದಲ್ಲದೆ ಅಪರಾಧಿಗಳೂ ಇತರ ಮೈಸೂರಿನವರೂ ದಿವಾನರ ಮತ್ತು ಡೆಪ್ಯುಟಿ ಕಮ್ಮಿಷನರ ಆಶ್ರಿತರಾಗಿಯೂ ನೌಕರರಾಗಿಯೂ ಇರುವದರಿಂದ ಸದರೀ ಮೀಟಿಂಗಿನ ತೀರ್ಮಾನಗಳೆಲ್ಲವು ತಮ್ಮ ಯಜಮಾನರ ಮುಖದಿಂದ ಮೇಲೆ ನಡೆಯಿಸಲ್ಪಡುವದಾಗಿ ಅವುಗಳನ್ನು ಜಾರಿಯಲ್ಲಿ ತರುವದು ತಮ್ಮ ಕರ್ತವ್ಯವೆಂದು ಸ್ವತಃ ನಿಶ್ಚಯಿಸಿಕೊಂಡು ಮೇಲೆ ಕಂಡರೀತಿ ವರ್ತಿಸಿದಂತೆ ತೋರುತಿದೆ. ಈಗ ಸದ್ಯಃ ಇಷ್ಟರ ಮಟ್ಟಿಗೆ ತಿಳಿಸಿದರೆ ಸಾಕಾಗಿರುತಿದೆ ಯೇನೆಂದರೆ—ದೊಂಬಿ ನಡೆದ ತರುವಾಯ ಡೆಪ್ಯುಟಿಕಮ್ಮಿಷನರವರು ಕೆಲವು ರಿಪೋರ್ಟರಗಳ ಮಾತುಗಳು ಬಹಳ ಕಠಿಣವಾದವಾಗಿರುವದ್ದರಿಂದಾಕ್ಷೇಪಿಸಿ ಉಪಶಾಂತವಾದ ರೀತಿಯಲ್ಲಿರಬೇಕೆಂದು ಬರೆದು ಕಳುಹಿಸಿದರು.

೧೧. ಈ ಅಂಶಗಳೆಲ್ಲವೂ ಅಪರಾಧಿಗಳು ಬೆಳಗಿನ ಹೊತ್ತು ಸ್ನಾನಕ್ಕಾಗಿಯೇ ಹೊಳೆಗೆ ಹೋಗಿದ್ದರೆಂಬ ಸಿದ್ಧಾಂತವನ್ನು ಸಂಪೂರ್ಣವಾಗಿ ನಿರಾಕರಿಸತಕ್ಕವಾಗಿರುತಿವೆ. ಬೆಳಿಗ್ಗೆ ೯ ಘಂಟೆಗೆ ಪೂರ್ವದಲ್ಲಿ ನೇಟಿವ್‌ಗಳಿಗೆ ಸ್ನಾನಮಾಡುವದಕ್ಕುಂಟಾಗಿರುವ ಅಥವಾ ಉಂಟಾಗಿರುವಂತೆ ಭಾವಿಸಲ್ಪಟ್ಟಿರುವ ಹಕ್ಕುದಾರಿಯನ್ನು ನಿರ್ಬಂಧ ರೂಪವಾಗಿ ಯಾಗಲಿ ಅಥವಾ ನಿರ್ಬಂಧಿಸುವಂತೆ ತೋರ್ಪಡಿಸುವ ರೀತಿಯಲ್ಲಾಗಲಿ ಸ್ಥಾಪಿಸಕೂಡದೆಂಬ ಅಭಿಪ್ರಾಯ ಪುಳ್ಳವರಾಗಿದ್ದರೆಂಬ ಅಂಶವು ಪೊಲೀಸಿನವರ ಮೇಲೆ ನಡೆಸಲ್ಪಟ್ಟ ಜುಲುಂನಿಂದಲೂ ಅಪರಾಧಿಗಳಿಗೆ ಸೇರಿದವರು ಕೆಲವರು ತಮ್ಮ ಕೈಗಳಲ್ಲಿ ದೊಣ್ಣೆಗಳನ್ನು ಹಿಡಿದುಕೊಂಡು, ಯಾರಾದರು ಯೂರೋಪಿಯನ್ನಿಂದ ಪ್ರಾಪ್ತವಾದಲ್ಪವತಕ್ಕ ಅವಮಾನದಿಂ ತಪ್ಪಿಸಿ ಜನರು ಕಾಪಾಡಬೇಕೆಂಬದಾಗಿ ಹಿಂದಿನ ದಿನದ ಮೀಟಿಂಗಿನಲ್ಲಿ ಮಾಡಲ್ಪಟ್ಟ ತೀರ್ಮಾನವನ್ನನುಸರಿಸಿ ಮೇಲೆ ಕಂಡಂತೆ ವರ್ತಿಸಿದ್ದರಿಂದಲೂ ಸ್ಪಷ್ಟವಾಗದೆ ಹೋಗಲಿಲ್ಲವು. ಅಪರಾಧಿಗಳಿಗೆ ಹಿಂದಿನದಿನ ಜರುಗಿದ ವಿಷಯಗಳೂ, ಹೊಳೆಗೆಯೂರೋಪಿಯನ್ನರುಗಳು ಬಹುತರ ಬರುವರೆಂಬದೂ ತಿಳಿಯದೆಹೋಗಿರಲಿಲ್ಲವು. ಅಪರಾಧಿಗಳು ಜುಲ್ಮಿಯಿಂದ ಹೊಳೆಯ ಸ್ನಾನಘಟ್ಟವನ್ನು ಆಕ್ರಮಿಸಿಕೊಂಡದ್ದು ಮಾತ್ರವಲ್ಲದೆ ಪೊಲೀಸಿನವರೂ ಮ್ಯಾಜಿಸ್ಟ್ರೇಟರೂ ಮಾಡಿದ ಹುಕುಮುಗಳನ್ನೂ ಅವರಹಿತವಾಕ್ಯವನ್ನೂ ಕೇಳದೆ, ಸ್ನಾನಾರ್ಥ ಬಂದಿದ್ದಂತಹ ಎಗ್ಜಿಬಿಟ್ B ಯಲ್ಲಿ ಕಂಡಿರುವ ಯೂರೋಪಿಯನ್ ದೊಡ್ಡಮನುಷ್ಯರ ಮುಂದೆ ಅಕ್ರಮವಾಗಿ ವರ್ತಿಸಿದ್ದನ್ನು ನೋಡಲಾಗಿ ಇವೆಲ್ಲವೂ ತಮ್ಮ ಹಕ್ಕುದಾರಿಯನ್ನು ಬಲಾತ್ಕಾರದಿಂದ ಅಥವಾ ಬಲಾತ್ಕಾರವನ್ನು ವ್ಯಕ್ತಪಡಿಸುವದರ ಮೂಲಕ ಕಾಪಾಡಿಕೊಳ್ಳಬೇಕೆಂಬ ಅಭಿಪ್ರಾಯವಿತ್ತೆಂಬುದು ಬೇಕಾದ ಮಟ್ಟಿಗೆ ನಿರೂಪಿಸುತಿವೆ. ಡೆಪ್ಯುಟಿ ಕಮ್ಮಿಷನರಿಗೆ ತಮ್ಮ ನೌಕರನು ಹೊಳೆಯಲ್ಲಿರುವ ಅಂಶವು ತಿಳಿಯಬಂದ ಕೂಡಲೇ, ಅವರು ದಸಗಳಗುಂಟಾಗಿದ್ದ ಆಗ್ರಹವನ್ನು ನೋಡಿ ಭಯಪಟ್ಟು ತಮ್ಮಕಡೆಯವರೂ ಸ್ನಾನಘಟ್ಟವನ್ನು ಪ್ರವೇಶಿಸದರೆ ನೆಮ್ಮದಿಗೆ ಭಂಗ ಉಂಟುಮಾಡುವವರಾಗುವರೆಂಬದಾಗಿ ತಿಳಿದು ಕಾನೂನಿಗೆ ವಿರುದ್ಧವಾಗಿ ನಡೆಯಬೇಕಾದ್ದಿಲ್ಲವೆಂದು ಅಪರಾಧಿಗಳಿಗೆ ಹೇಳಿ ಕಳುಹಿಸಿದರೆಂಬ ಅಂಶವನ್ನು ಅವರೇ ಅಂಗೀಕರಿಸಿರುತ್ತಾರೆ. ಪ್ರಬಲವಾದ ದೊಂಬಿ ನಡೆಯದಿದ್ದದ್ದು ಅಪರಾಧಿಗಳ ಶಾಂತಸ್ವಭಾವದಿಂದಲ್ಲವು ವರುಂದ ಯೂರೋಪಿಯನ್ನರಗಳು, ಸ್ನಾನ ಮಾಡುವದಕ್ಕೆ ತಮಗುಂಟಾದ ಹಕ್ಕುದಾರಿಯನ್ನೂ ಅಧಿಕಾರವನ್ನೂ ಹಿಡಿದು ಸ್ನಾನ ಮಾಡಬೇಕೆಂದು ಬಲಾತ್ಕರಿಸದೆ ಮ್ಯಾಜಿಸ್ಟ್ರೇಟರ ಮಾತಿನ ಪ್ರಕಾರ ತಮ್ಮ ಸ್ನಾನಪ್ರಯತ್ನವಾದ ಉಲ್ಲಾಸವಂ ತೊರೆದು ವಾಪಸ್ ಹೊರಟು ಹೋದದರಿಂದಲೇ ವಿಶೇಷ ಗದ್ದಲೆಗೆ ಅವಕಾಶವಿಲ್ಲವಾಯಿತು.

೧೨. ಅಪರಾಧಿಗಳ ನಡತೆಯೂ ಸ್ಥಿತಿಯೂ, ಸ್ಟೇಷನ್ ಹೌಸ್ ಆಫೀಸರ ಹೃದಯದಲ್ಲಿ ಒಬ್ಬ ಮ್ಯಾಜಿಸ್ಟ್ರೇಟಿನ ಸಹಾಯವು ಪಡೆಯಬೇಕೆಂಬ ಭಾವನೆಯನ್ನುಂಟುಮಾಡಿತಲ್ಲದೆ ಮ್ಯಾಜಿಸ್ಟ್ರೇಟರಿಗೂ ಕೂಡ ಕಲಹಕ್ಕೆ ಅವಕಾಶವಿಲ್ಲದಂತೆ ಮಾಡಲಿಕ್ಕೆ ಯೂರೋಪಿಯನ್ನರಗಳನ್ನು ಸ್ನಾನ ಮಾಡದವಾಗೆ ವಾಪಸ್ ಹೋಗುವಂತೆ ಹೇಳಿ ಸಮಾಧಾನ ಪಡಿಸಿ ಕಲಹ ನಿಮಿತ್ತಕರಾದ ಅಪರಾಧಿಗಳ ಚರ್ಯೆಗಳನ್ನು ಕುರಿತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ (ಎಗ್ಜಿಬಿಟ್ ಬಿ.) ಮೂಲಕ ರಿಪೋರ್ಟು ಮಾಡುವದು ಅವಶ್ಯಕವೆಂದು ತೋರಿತು.

೧೪. ಮ|| ಕ್ಯಾರ್ಕ್ ಎಂಬಾತನಿಗೂ ಸಹ ಪೊಲೀಸಿನವರ ಸಹಾಯವನ್ನು ಅಪೇಕ್ಷಿಸುವ ಆವಶ್ಯಕತೆಯು ತೋರಬಂತು. ಅಪರಾಧಿಗಳೂ ಅವರ ಸ್ನೇಹಿತರೂ ಕೇವಲ ಸ್ನಾನ ಮಾಡತಕ್ಕ ಉದ್ದೇಶವುಳ್ಳವರಾಗಿದ್ದು ಜನಗಳ ಸಮಾಧಾನವನ್ನು ಭಂಗಗೊಳಿಸಬೇಕೆಂಬ ಇರಾದೆ ಇರುವಂತೆ ವ್ಯಕ್ತಪಡಿಸದೆ ಇರುವದಾದರೆ ಇಷ್ಟು ಜನ ಇಷ್ಟರ ಏರ್ಪಾಡುಗಳಿಗೆ ಆವಶ್ಯಕತೆ ಇದ್ದಿರಲಾರದು. ನಾಲ್ಕು ಜನ ಅಪರಾಧಿಗಳಿಗೂ ಇತರರಿಗೂ ಬೆಳಿಗ್ಗೆ ೯ ಘಂಟೆಗೆ ಪೂರ್ವದಲ್ಲಿ ಸ್ನಾನ ಮಾಡಲಿಕ್ಕೆ ನ್ಯಾಯವಾಗಿರುವ ಅಥವಾ ನ್ಯಾಯವಾಗಿರುವಂತೆ ಭಾವಿಸಲ್ಪಟ್ಟಿರುವ ಹಕ್ಕುದಾರಿಯನ್ನು ಬಲಾತ್ಕಾರರೂಪವಾಗಿ ಅಥವಾ ಬಲಾತ್ಕಾರವನ್ನು ತೋರ್ಪಡಿಸುವದರ ಮೂಲಕ ಕಾಪಾಡಿಕೊಳ್ಳಬೇಕೆಂಬ ಅಭಿಪ್ರಾಯವೂ ಇಬ್ಬರಿಬ್ಬರು ಮೇಲೆ ಯೂರೋಪಿಯನ್ ರ ಮೇಲೆ ತಮ್ಮ ಉದ್ದೇಶವಂತೆ ಜುಲುಂ ನಡಿಸಿದ್ದೂ ಇಂಡಿಯನ್ ಪೀನಲ್‌ಕೋಡ್ ೧೪೬ ನೇ ಸೆಕ್ಷನ್ ಪ್ರಕಾರ ದೊಂಬಿ ನಡೆಸಿದ ತಕ್ಸೀರಿಗೆ ಅಪರಾಧಿಗಳನ್ನು ಗುರಿ ಮಾಡಿದವು.

SUMMARY OF NEWS.

ವೃತ್ತಾಂತಸಂಗ್ರಹವು.

ಗ್ವಾಲಿಯರ್‌ನಲ್ಲಿ ಕಸಾಯಿಯವನೊಬ್ಬನು ಒಂದು ಗೋವಧೆಮಾಡಿದತಪ್ಪಿಗೆದಬಗ್ಗೆ ನಾಲ್ಕು ವರುಷಗಳ ಕಠಿಣಕೈದ ಸಜಾ ವಿಧಿಸಲ್ಪಟ್ಟನು.

ಜಾಮನಗರ ಮತ್ತು ಭಾವನಗರ ಡಿಸ್ಟ್ರಿಕ್ಟುಗಳಲ್ಲಿ ವಾಂತಿಭೇದಿರೋಗ ಪ್ರಬಲಗೊಂಡು ಆಚೇವಾರದಲ್ಲಿ ೫೦೦ ಮಂದಿ ಮೃತಪಟ್ಟರು.

ಅರೇಬಿಯಾದೇಶದಲ್ಲಿ ಕ್ಷಾಮಪೀಡಿತರಾದವರ ಸಹಾಯಾರ್ಥ ಘನವಂತರಾದ ಹೈದರಾಬಾದ್ ನಿಜಾಮರವರು ೫೫೦೦ ರೂಪಾಯಿಗಳು ಕೊಟ್ಟಿರುತ್ತಾರೆ.

ಕಳೆದಸಂವತ್ಸರದೊಳು ಬಂಗಾಳೇದೇಶದಲ್ಲಿಯೇ ನಾಲ್ವತ್ತುಸಾವಿರಮಂದಿ ಕಾಡುಮೃಗಗಳಿಂದ ಕೊಲ್ಲಲ್ಪಟ್ಟರು. ಇದು ಪ್ರಜೆಗಳು ಆಯುಧಗಳಂ ಧರಿಸುವ ವಿಷಯದಲ್ಲಿ ರಚಿಸಲ್ಪಟ್ಟಿರುವ ನಿರ್ಬಂಧಪೂರ್ವಕವಾದ ಕಾನೂನಿನ ಫಲವೆಂದೆಣಿಸಬೇಕಾಗಿರುತಿದೆ.

ಬಂಗಾಳದಲ್ಲಿ ೭೦ ವರ್ಷದ ಮುದುಕನೊಬ್ಬನು ೧೨ ವರ್ಷದ ಒಬ್ಬ ಬಾಲೆಯನ್ನು ಹುಡುಕಿ ವಿವಾಹ ಮಾಡಿಕೊಳ್ಳಬೇಕೆಂದು ಇಚ್ಛೈಸಿ ಆಬಾಲೆಯನ್ನೂ ಅವಳತಾಯಿಯನ್ನೂ ಕರೆದುಕೊಂಡುಹೋಗಿ, ಪತಿಯೊಡನೆ ಬಾಳುತಲಿರುವ ೨೦ವರ್ಷದ ತನ್ನ ಮಗಳಮನೆಯಲ್ಲಿ ಮದುವೆಮಾಡಿಕೊಂಡನು.

ಇಂಗ್ಲಂಡಿನಲ್ಲಿ ಒಬ್ಬಳಿಗಿಂತ ಹೆಚ್ಚು ಹೆಂಡರನ್ನು ಮದುವೆಯಾಗಬಾರದೆಂದು ಕಾಯಿದೆಯಾಗಿದೆ. ಹೀಗಿದ್ದು ಒಬ್ಬನು ಐದುಮಂದಿ ಹೆಂಡರನ್ನು ತಗಿರುತ್ತಾನೆಂದು ಅವನ ಮೇಲೆ ಖಟ್ಲೆ ನಡಿಯಿತು. ಆದರೆ ಬೌಕಸಿ ಮಾಡುವಾಗ್ಯೆ ಮತ್ತೂ ೧೩ಮಂದಿ ಹೆಂಡರನ್ನು ಮದುವೆಯಾಗಿ ಬೇರೆ ಬೇರೆ ಸ್ಥಳದಲ್ಲಿ ಇಟ್ಟಿರುತ್ತಾನೆಂದು ಪ್ರಕಾರ ಹೊರಟಿತು.

ಹಿಂದೆ ಪ್ರೋವ್ಯರ್‌ಗರ್ ಮಹಾರಾಣಿಯವರು ಧರಿಸುತಲಿದ್ದ ಅತ್ಯಮೌಲ್ಯವಾದ ಕೆಲವು ಆಭರಣಗಳನ್ನು ಈಗ ಸಿಕಂದರಾಬಾದಿನಲ್ಲಿರುವ ಒಬ್ಬ ವರ್ತಕನು ೪ ಲಕ್ಷ ರೂಪಾಯಿಗಳನ್ನು ಕೊಟ್ಟು ತರಿಸಿಕೊಂಡಿರುವನು. ಇವುಗಳೆಲ್ಲ ಆಕೃತಿಯಲ್ಲಿ ಒಂದೇ ವಿಧವಾಗಿಯೂ ಅತಿಸುಂದರವಾಗಿಯೂ ಇರುವ ಒಂದು ಮುತ್ತಿನಹಾರವು. ಈಹಿಂದು ಆಭರಣಕ್ಕೆ ೫೦ ಲಕ್ಷರೂ ನಾಯಗಳಕ್ರಯವಂತೆ.

ಭಾವಿಸಿ ಅದು ವಜಾಮಾಡಲ್ಪಟ್ಟಿತಲ್ಲದೆ ಸದರೀ ಕೋರ್ಟಿನವರು ಚಲಾಯಿಸುತಲಿದ್ದ ಅಧಿಕಾರಗಳು ಚೀಫ್‌ಕೋರ್ಟಿನವರಿಗೆ ಉಂಟುಮಾಡಲ್ಪಟ್ಟವು. ಅದುಮೊದಲು ಗಿಂದಾಗ್ಯೆ ಈ ಡಿಸ್ಟ್ರಿಕ್ಟಿನಲ್ಲೂ ಇತರ ಡಿಸ್ಟ್ರಿಕ್ಟುಗಳಲ್ಲಿಯೂ ಕೋರ್ಟುಗಳು ಬದಲಾಯಿಸಲ್ಪಡುತಲಿರುತಿವೆ. ಮುನಸಫ್ ಕೋರ್ಟುಗಳಲ್ಲಿ ಯಲಹಂಕದ ಮುನಸಫ್‌ಕೋರ್ಟು ದೊಡ್ಡಬಳ್ಳಾಪುರಕ್ಕೆ ಹೋಗಿ ಅಲ್ಲಿ ತಂಗಲಿಕ್ಕೆ ಇಷ್ಟವಿಲ್ಲದೆ ಕ್ಲೋಸ್‌ಪೇಟೆಗೆ ಹೊರಟು ಮಧ್ಯೆ ನೆಲಮಂಗಲದಲ್ಲಿ ಇದುವರಿವಿಗೆ ನಿಂತಿದೆ. ಈಚೆಗೆ ಅಲ್ಲಿಗೆ ರೈಲುರಸ್ತೆ ಹಾಕಲ್ಪಡಲು ಅಲ್ಲಿಂದ ಕ್ಲೋಸ್‌ಪೇಟೆಗೆಹೋಗತಕ್ಕದ್ದೋ ಅಥವಾ ಬೆಂಗಳೂರು ಕೋರ್ಟಿನೊಡನೆ ಐಕ್ಯವಾಗ ಬೇಕೋ ಯೆಂದಾಲೋಚಿಸುತಲಿದೆ. ಇಲ್ಲಿನ ಮುನಸಫ್‌ಕೋರ್ಟು, ಅಡಿಷನಲ್ ಮುನಸಫ್‌ಕೋರ್ಟನ್ನು ಕಳೆದುಕೊಂಡಾಗ್ಯೂ ಅದರ ಮುನಸಫರನ್ನುಮಾತ್ರ ಸಂರಕ್ಷಿಸುತಲಿದೆ. ಕಂಟೋನ್ಮೆಂಟ್ ಕೋರ್ಟುಗಳು ತಮ್ಮ ಅಧಿಕಾರಗಳನ್ನು ವೃದ್ಧಿಪಡಿಸಿ ಕೊಳ್ಳುತಲಿವೆ. ಈಗ ಯಾವ ಉದ್ದೇಶದೊಡನೆ ಪ್ರಸಕ್ತ ಕೋರ್ಟನ್ನು ಗವರ್ನಮೆಂಟಿನವರು ಸ್ಥಾಪಿಸಿದರೋ ಸದರೀ ಉದ್ದೇಶವು ಸಾರ್ವಜನೀನವಾದ ಅನುಕೂಲ್ಯವನ್ನುಂಟುಮಾಡತಕ್ಕದ್ದಾಗಿರುವದಿಲ್ಲವು. ಇಂಡ್ಯ ದೇಶದ ಇತರ ನೇಟಿವ್ ಸಂಸ್ಥಾನಗಳಲ್ಲಿ ಅಲ್ಲಿನ ಪದ್ಧತಿಪ್ರಕಾರವಾಗಿಯೂ, ಬ್ರಿಟಿಷ ರಾಜ್ಯದಲ್ಲಿ ಅಲ್ಲಿನಕ್ರಮವನ್ನನುಸರಿಸಿಯೂ ಸಿವಿಲ್ ವ ಜುಡಿಶಲ್ ಆಡಳಿತವು ನಿರ್ಣೀತವಾಗಿ ಚಲಿಸದೆ ನಡೆದು ಬರುತಲಿವೆ. ಈಸಂಸ್ಥಾನದ ಕ್ರಮವು ಸದರೀಯ ಕತುಕ್ರಮಗಳಿಗೂ ಭಿನ್ನವಾದದ್ದಾಗಿರುವದರಿಂದ ಇಲ್ಲಿನ ಪ್ರಭುತ್ವ ವೈಜಾತ್ಯಕ್ಕೆತಕ್ಕಂತೆ ಅವೂ ವ್ಯತ್ಯಸ್ತವಾಗಿಹೋಗಿವೆ.

A PROPOSAL.

ಸಾಧಾರಣವಾಗಿ ಲೋಕದಲ್ಲಿ ಧನವೆಂಬದು ಶ್ರೇಷ್ಠವಾದದ್ದಾದಾಗ್ಯೂ ಕಾಲ ದೇಶ ಸ್ಥಿತಿಗತಿಗಳನ್ನರಿತು ಸತ್ಪಾತ್ರಗಳಲ್ಲಿ ಮಾಡಲ್ಪಡತಕ್ಕದು ವಿಶೇಷತಃ ಕೊಂಡಾಡಲ್ಪಡತಕ್ಕದ್ದಾಗಿಯೂ, ಚಿರಕಾಲ ನೆಲೆಗೊಂಡಿರತಕ್ಕದ್ದಾಗಿಯೂ ಇರುತಿವೆ. ತಥಾಪಿ ಉತ್ತರೋತ್ತರ ಫಲದಾಯಕವಾದ ಜ್ಞಾನಸಂಪಾದನ ವಿಷಯದಲ್ಲಿ ಮಾಡಲ್ಪಡುವ ಸಹಾಯವು ಎಲ್ಲಕ್ಕೂ ಶ್ರೇಷ್ಠವಾದ ಬುದ್ಧಿಯೆಂತೆ ಎಂದಿಗೂ ನೆನಸಲಾರೆವು. ಈಪ್ರೂರು ಸಿವಿಲ್ ವ ಮಿಲಿಟರಿಸ್ಟೇಷನಿನಲ್ಲಿ ಈಗಿರತಕ್ಕವರಲ್ಲಿ ಪ್ರಮುಖರಾಗಿಯೂ ಸತ್ಕಾರ್ಯಗಳಿಂದ ಕೀರ್ತಿಶಾಲಿಗಳೆನ್ನಿಸಿಕೊಂಡವರಾಗಿಯೂ ಇರುವ ರಾಯಬಹದೂರ್ ಮ|| ರಾ|| ಆರ್ಕಾಟು ನಾರಾಯಣಸ್ವಾಮಿ ಮುದಲಿಯಾರ್ರವರು ಜನರಲ್ ಬಜಾರಿನಲ್ಲಿಯೂ ಹಲಸೂರಿನಲ್ಲಿಯೂ ಪ್ರತ್ಯೇಕವಾಗಿ ಎರಡುಸ್ಕೂಲುಗಳನ್ನು ಸ್ಥಾಪಿಸಿರುವದೂ, ಅವುಗಳಲ್ಲಿ ಅನೇಕಜನ ವಿದ್ಯಾರ್ಥಿಗಳೂ ವಿದ್ಯಾರ್ಥಿನೀಯರೂ, ವಿದ್ಯಾಭ್ಯಾಸಂಗವಂ ಮಾಡುತಲಿರುವದೂ ಪ್ರಯೋಗ ಎಲ್ಲರೂ ತಿಳಿದ ವಿಷಯವಾಗಿದೆ. ಈಗ ಕಂಟೋನ್ಮೆಂಟ್ ಡಿಕೆನ್ಸನ್ ರೋಡಿನಲ್ಲಿ ಹಿಂದೆ ಕಂಪ್ನಿ ಕಾರ್ಯಾನೆಯಿದ್ದ ಪ್ರದೇಶದೊಳು ಮತ್ತೊಂದು ದೊಡ್ಡಸ್ಕೂಲನ್ನು ಕಟ್ಟಿಸಬೇಕೆಂಬ ಆಲೋಚನೆಯುಳ್ಳವರಾಗಿದಾರೆಂಬ ಅಂಶವಂ ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಸಿವಿಲ್ ವ ಮಿಲಿಟರಿ ಸ್ಟೇಷನಿನಲ್ಲಿ, ಹಿಂದೂಗಳ ವಿದ್ಯಾಭಿವೃದ್ಧಿಯ ಬಗ್ಗೆ ಮ|| ನಾರಾಯಣಸ್ವಾಮಿ ಮುದಲಿಯಾರ್ರವರು ಬಹಳ ಧನವ್ಯಯ ಮಾಡಿರುವದರಿಂದ ಅಲ್ಲಿನವರೆಲ್ಲರೂ ಅವರ ವಿಷಯದಲ್ಲಿ ಬಹಳ ಕೃತಜ್ಞರಾಗಿರಬೇಕೆಂದೆಣಿಸುತ್ತೇವೆ. ಇಲ್ಲಿನ ಸಿಟೀ ಸ್ಟೇಷನಿನಲ್ಲಿ ಜನಗಳ ಆಮದ್‌ರಫ್ತು ಬಹಳವಾಗಿ ಕಂಟೋನ್ಮೆಂಟಿಗೆ ಹೋಗತಕ್ಕವರು ಕಡಮೆಯಾದುದರಿಂದ ಅಲ್ಲಿನ ಛತ್ರಗಳೆಲ್ಲರಿಗೂ ಪ್ರಯೋಜನಕರವಾಗದಿರುವದರಿಂದ ಅದು ಹರಿಭಾವೆನ, ಎಲ್ಲಿನ ರೈಲ್ವೇ ಸ್ಟೇಷನಿಗೆ ಸೇರಿದಂತ ಉಪನನ್ನರಿಂದ ಧಾರ್ಮಿಕರೊಬ್ಬರು ಸ್ವಂತ ಲಾಗವಡಿನಿಂದ ಹೊಸದಾಗಿ ಒಂದು ಛತ್ರವಂ ಕಟ್ಟಿಸುತಲಿದಾರೆ. ಮುಖ್ಯವಾಗಿ ದ್ರವ್ಯಾರ್ಜನೆಗೆ ಸದ್ವಿನಿಯೋಗವೇ ಉತ್ತಮಲಕ್ಷಣವು.

Occasional Notes
ನೈಮಿತ್ತಿಕ ವಿಷಯನ್ಯಾಸ.

The Cashmere Railway.—ಕಾಶ್ಮೀರದೇಶಕ್ಕೆ ರೈಲುರಸ್ತೆ ಹಾಕಬೇಕೆಂದು ಯೋಚಿಸಲ್ಪಟ್ಟ ಅದರಸರ್ವೇಬಗ್ಗೆ ಏರ್ಪಾಡಾಗಿರುತಿದೆ. ಈಕಾರ್ಯಕ್ಕೆ ಹಿಡಿಯಬಹುದಾದ ಸರ್ಚಿನಲ್ಲಿ ಮೂರರಲ್ಲೊಂದುಭಾಗವನ್ನು ಇಂಡ್ಯ ಗವರ್ನಮೆಂಟಿನವರೂ ಉಳಿದ ಯೆರಡುಭಾಗವನ್ನು ಮಹಾರಾಜಾ ಸರ್ಕಾರದವರೂ ವಹಿಸುವದಾಗಿ ನಿಷ್ಕರ್ಷೆಯಾಗಿದೆ.

A Dewan assaulted.—ಕಳೆದ ತಿಂಗಳ ೩ನೇ ತಾರೀಖಿನಲ್ಲಿ ಕಾಶಿ ಮಹಾರಾಜರವರ ದಿವಾನರವರು ಸವಾರಿ ಹೋಗುತ್ತಿರುವಲ್ಲಿ ದುರ್ಮಾರ್ಗ ಪ್ರವರ್ತಕರಾದ ಕೆಲವರು ಗುಂಪುಗೂಡಿಬಂದು ದಿವಾನರವರಗಾಡಿಯಂ ಮುತ್ತಿಕೊಂಡು ದೊಣ್ಣೆಗಳಿಂದ ಹೊಡೆಯಲೆತ್ನಿಸಿದರೆಂತಲೂ ಅವರಿಗೆ ಕೂಡಲೇ ಸಹಾಯಕರು ಬಂದದರಿಂದ ಸ್ವಲ್ಪ ಗಾಯದೊಡನೆ ದಿವಾನರವರು ತಪ್ಪಿಸಿಕೊಂಡು ಹೊರಟುಹೋದರೆಂತಲೂ ತಂತಿಮೂಲಕ ತಿಳಿಯಬರುತಿದೆ.

A suggestion.—ಹಿಂದೂಗಳಿಗೂ ಮುಸಲ್ಮಾನರಿಗೂ ಬಹುಕಾಲದಿಂದಲೂ ಅನುವರ್ತಿಸಿ ಬಂದಿರುವ ಪ್ರಾಣಹಾನಿಕರವಾದ ದ್ವೇಷಾಸೂಯಗಳಂ ತಪ್ಪಿಸಿ ಅವರಲ್ಲಿ ಅನ್ಯೋನ್ಯಭಾವವನ್ನುಂಟುಮಾಡುವ ಕಾರ್ಯಕ್ಕಾಗಿ ಒಂದು ಸಾರ್ವಜನಿಕ ಸಮಾಜವನ್ನೇರ್ಪಡಿಸಬೇಕೆಂದು ಒಂದಾನೊಂದು ಪತ್ರಿಕಾಲೇಖಕರು ತಿಳಿಸುವ ಅಭಿಪ್ರಾಯವು ಶ್ಲಾಘ್ಯವಾಗಿರುತದೆ. ಪರಂತು ಸಾಕ್ಷಾತ್ಪ್ರತಿರುದ್ಧಕಕ್ಷಿಗೆ ಸೇರಿದ ಮುಸಲ್ಮಾನರು ಅನ್ಯರೊಡನೆ ಸೇರತಕ್ಕ ಅಂಶಮಾತ್ರ ಯಾವಾಗಲು ಸಂದೇಹಿಸತಕ್ಕದ್ದಾಗಿರುತಿದೆ.

An important judgment.—ಈಚೆಗೆ ಕಲ್ಕತ್ತಾ ಹೈಕೋರ್ಟಿನಲ್ಲಿ ಜೀವನಾಂಶದಬಗ್ಗೆ ತರಲ್ಪಟ್ಟ ಒಂದು ಮೊಕದ್ದಮೆಯಲ್ಲಿ, ವ್ಯಭಿಚಾರಿಣಿಯಾಗಿ ಹೋಗುವ ಹೆಂಡತಿ ವಿಶೇಷತಃ ಗಂಡನಿಗೆ ಜೀವನಾಂಶ ಕೊಡಬೇಕೆಂದು ಕೇಳುವಬಾಧ್ಯತೆ ಇಲ್ಲವೆಂದು ಸದರೀ ಕೋರ್ಟ್ ಚೀಫ್ ಜಸ್ಟಿಸಿಯವರೂ ಜಸ್ಟಿಸ್ ಗುರುದಾಸಬಾನರ್ಜಿಯವರೂ ಸೇರಿ ಫೈಸಲ್ ಕೊಟ್ಟಿರುವಂತೆ ಒಂದಾನೊಂದು ಪತ್ರಿಕೆತಿಳಿಸುತಿದೆ. ಇದು ಕೇವಲ ನ್ಯಾಯ್ಯವಾಗಿಯೂ ಮತ್ತು ಶಾಸ್ತ್ರ ಸಮ್ಮತವಾಗಿಯೂಇರುತಿದೆ.

An extraordinary *fracas*.—ಈತಿಂಗಳ ೩ನೇ ತಾರೀಖಿನಲ್ಲಿ ಅಲಹಾಬಾದಿನೊಳು ಒಂದು ವಿಚಿತ್ರಸಂಗತಿ ನಡೆಯಿತೆನ್ನುವರು, ಗ್ವಾಲಿಯರ್‌ನಿಂದ ಒಬ್ಬ ಬ್ರಾಹ್ಮಣಹುಡುಗನು ಅಲ್ಲಿಗೆ ಬಂದು ಅಲ್ಲಿನ ಮಿಷನರಿಯೊಬ್ಬನ ಬಳಿಗೆ ಹೋಗಿ ತಾನು ಕ್ರಿಸ್ತಮತವಂ ಸೇರಬೇಕೆಂದು ಹೇಳಲಾಗಿ ಆತನ ತಾಯಿತಂದೆಗಳೂ ಬಂಧುಮಿತ್ರರೂ ಸೇರಿ ಸದರೀ ಹುಡುಗನನ್ನು ಜುಲುಂನಿಂದ ಮಿಷನರಿಗಳಕಡೆಯಿಂದ ಸೆಳೆದುಕೊಂಡು ಹೊರಟುಹೋದರು. ಮಿಷನರಿಗಳು ತಮ್ಮ ಮೇಲೆ ಜುಲುಂ ನಡೆಸಿದ್ದಾಗಿ ಸದರೀ ಜನಗಳ ಮೇಲೆ ಕ್ರಿಮಿನಲ್‌ದಾವೆಮಾಡಲು ಕಲಹಕ್ಕೆ ಮುಖ್ಯಪ್ರವರ್ತಕರಾದವರು ದಸ್ತಗಿರಿಯಿಂದ ಆಪಾದಿಸಲ್ಪಟ್ಟು ದರ್ಯಾಪ್ತಿಗೆ ಗುರಿಯಾಗಿರುತ್ತಾರೆ, ಎಂಬದು.

Purchase of silver.—ಅಮೇರಿಕಾ ಖಂಡಕ್ಕೆಸೇರಿದ ಯುನೈಟೆಡ್ ಸ್ಟೇಟ್ಸ್ ಸಂಸ್ಥಾನದವರು ನಾಣ್ಯಗಳಂ ಟಂಕಿಸುವ ಉದ್ದೇಶದೊಡನೆ ಸಂವತ್ಸರಕ್ಕೆ ಐವತ್ತುನಾಲ್ಕುಕೋಟಿ ಔನ್ಸ್ ತೂಕ ಬೆಳ್ಳಿ ಖರೀದಿಮಾಡುವದಕ್ಕೆ ಬದಲಾಗಿ ಪ್ರತಿ ತಿಂಗಳಲ್ಲೂ ನಾಲ್ಕೂವರೆಕೋಟಿ ಔನ್ಸ್ ತೂಕ ಬೆಳ್ಳಿ ಖರೀದಿ ಮಾಡತಕ್ಕದ್ದೆಂದು ನಿರ್ಣಯಿಸಿರುತ್ತಾರೆ. ಸದರೀ ಸಂಸ್ಥಾನದವರು ಈಚೆಗೆ ಮಾಡಿದ ಈಹೊಸ ನಿಬಂಧನೆಯು ದೆಸೆಯಿಂದಲೇ ಈಚೆಗೆ ಒಂದೆರಡುತಿಂಗಳಿಂದಲು ಸುವರ್ಣದ ಕ್ರಯ ಇಳಿಯುತ ಬರುತಲಿದೆಯೆಂದು ಸಾಮಾನ್ಯವಾಗಿ ಯೆಲ್ಲರೂ ತಿಳಿಯಬಹುದು. ಇನ್ನು ಒಂದೆರಡು ತಿಂಗಳೊಳಗಾಗಿ ಸುವರ್ಣಕ್ರಯ ಹನ್ನೊಂದುರೂಪಾಯಿಗಳಿಗೆ ಇಳಿಯುವದರಲ್ಲಿ ಯಾವ ಸಂಶಯವೂ ಇಲ್ಲವು.

ಸದರ್ನ್ ಮಹರಾಷ್ಟ್ರ ರೈಲ್ವೆಗೆ ಸೇರಿದ
ಮೈಸೂರು ಸ್ಟೇಟ್ ರೈಲ್ವೆ
ನೋಟೀಸ್.

ಇದರಿಂದ ತಿಳಿಯಪಡಿಸುವದೇನಂದರೆ.—
ಮಂಡ್ಯದಿಂದ ಬೆಂಗಳೂರಿಗೆ ಇದೇ ಇಸವಿ ಏಪ್ರಿಲ್ ೨೬ನೇ ತಾರೀಖಿನ ೧೮ನೇ ನಂಬರ್ ಇನ್‌ವಾಯಿಸ್‌ನಲ್ಲಿ ಕಂಡಂತೆ, ರಾಮಸ್ವಾಮಿ ಎಂಬಾತನಿಗೆ ರೈಲಿನಲ್ಲಿ ಕಳುಹಿಸಲ್ಪಟ್ಟ ಮೂರು ವ್ಯಾಗನ್‌ಗಳು, ಸುಣ್ಣಕಲ್ಲು ಈ ಮಾಹೆ ೨೦ನೇ ತಾರೀಖು ಮಧ್ಯಾನ್ಹದೊಳಗಾಗಿ ಸದರೀ ರಾಮಸ್ವಾಮಿ ಯೆಂಬಾತನು ಅವರಿವಿಗೆ ಆಗತಕ್ಕ ಡೆಮರೇಜ್ ಚಾರ್ಜನ್ನು ಕೊಟ್ಟು ತೆಗದುಕೊಳ್ಳದೆ ಹೋದಲ್ಲಿ ಬೆಂಗಳೂರು ಸಿಟಿ ಸ್ಟೇಷನ್‌ನಲ್ಲಿ ಹರಾಜ್ ಹಾಕಲ್ಪಡುತ್ತೆ.

ಟ್ರಾಫಿಕ್ ಮ್ಯಾನೇಜರ ಆಫೀಸ್, ಧಾರವಾಡ, ೩ನೇ ಸಪ್ಟಂಬರ ೧೮೯೦. | ಬೆಂಜ್ ಕ್ರೇಗ್, ಟ್ರಾ|| ಮ್ಯಾನೇಜರ್

LOCAL AND PROVINCIAL NEWS.
ಒಳದೇಶದಮತ್ತು ತಾಲ್ಲೂಕಿನ ಪ್ರವೃತ್ತಾಂತಗಳು

The Bangalore District.—ಕಳೆದ ಶುಕ್ರವಾರದವಿನ ಪ್ರಾತಃಕಾಲ ೧೧ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ್ ಕಾಯಂ ಡೆಪ್ಯುಟಿ ಕಮಿಷನರಾದ ಮೆ|| ಸಿ. ಪಿ. ಮಾಧವರಾಯರವರು ಡಿಸ್ಟ್ರಿಕ್ಟ್ ಮತ್ತು ಟ್ರಿಜರಿಚಾರ್ಜುಗಳನ್ನು ಮೆ|| ಅಬ್ದುಲ್ ರಹಮಾನರವರಿಂದ ತೆಗದುಕೊಂಡರು.

The new Municipality of Kadaba.—ಗುಬ್ಬಿ ತಾಲ್ಲೂಕ ಕಡಬದ ಮ್ಯುನಿಸಿಪಾಲಿಟಿಗೆ ಈಚೆಗೆ ಹೊಸದಾಗಿ ಮೆಂಬರಾದ ೭ ಜನ ಮೆಂಬರ್‌ಗಳನ್ನು ತುಮಕೂರ್ ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರವರ ಶಿಫಾರಸ್ಸನ್ನನುಸರಿಸಿ ಗವರ್ನಮೆಂಟನವರು ಮಂಜೂರ್ಮಾಡಿದುದಾಗಿ ಅರಿಯಲಾದೆವು.

The weather in Mercara.—ಮಡಿಕೇರಿ ಪ್ರಾಂತದಲ್ಲಿ ಸುಮಾರಂಗವಾಗಿ ಮಳೆ ಇಲ್ಲದೆ ಇದೆ. ಪರಂತು ವರ್ಷ ಸೂಚನೆಗಳಲ್ಲೇನೂ ಕಡಮೆಯಾಗಲಿಲ್ಲವು. ವರ್ಷಾಭಾವದಿಂದ ತರೀ ಬಿನಸಸಿ ವಿಷಯವಾಗಿ ಜನಗಳೆಲ್ಲರು ಬಹಳ ಚಿಂತಿಸುತಲಿರುವಂತೆಯೂ ಶೀಘ್ರವಾಗಿ ಯಥೋಚಿತವಾದ ಮಳೆಯಾಗದಿದ್ದಲ್ಲಿ ಫಸಲ್ ನಷ್ಟವಾಗಿ ದನ್ನಿಂದ ಕೃಷಿಕರು ಬಹಳ ನುಕ್ಸಾನಿಗೆ ಗುರಿಯಾಗುವರೆಂಬದಾಗಿಯೂ ಅಲ್ಲಿಂದ ಬಂದ ಕಾಗದಗಳ ಮೂಲಕ ತಿಳಿಯಲಾದೆವು.

The Resident.—ಈಸಂಸ್ಥಾನದ ಬ್ರಿಟಿಷ ರೆಸಿಡೆಂಟರಾದ ಸರ್. ಓಲಿವರ್ ಸೆಂಟ್ ಜಾನ್‌ಯವರು ೩ ತಿಂಗಳ ರಜಾಮೇಲೆ ಸ್ವದೇಶಕ್ಕೆಹೋಗುವವರಾಗಿದಾರೆಂತಲೂ ಅವರ ಗೈರುಹಾಜರಿಕಾಲದಲ್ಲಿ ಪೂರ್ವದೊಳಿದ್ದ ಅಸಿಸ್ಟೆಂಟ್ ರೆಸಿಡೆಂಟರಾಗಿದ್ದು ಈಗ ಇಂಡ್ಯ ಗವರ್ನಮೆಂಟಿನ ಫಾರೆನ್ ಸೆಕ್ರಟೆರಿಯಾಗಿರುವ ಮೆ|| ಕನ್ನಿಂಗ್ಹಾಮ್‌ಯವರು ರೆಸಿಡೆಂಟ್ ಕೆಲಸವಂ ಅಕ್ಟಿಂಗ್ ತರೀಕ್ ನೋಡುವರೆಂತಲೂ ಪ್ರವಾದ ಪ್ರಚುರಗಿರುವುದಾಗಿ ಒಳದೇಶದ ಪ್ರತ್ಯೇಕಪತ್ರಿಕೆ ತಿಳಿಸುತಿದೆ. ಇದರ ನಿಜಸ್ಥಿತಿ ಯೆಂತರದೋ ತಿಳಿಯಬಿಲ್ಲವು.

Coffee prospects.—ಕೊಡಗುಪ್ರಾಂತದಲ್ಲಿ ಕಾಫೀಪೈರು ಶೀಘ್ರದಲ್ಲಿಯೇ ಪಕ್ವಕ್ಕೆ ಬರಬಹುದೆಂದು ತೋರುತಿದೆ. ಮುಂಚಿನವರುಷದಲ್ಲಿ ಅಂದರೆ ೧೮೮೯—೯೦ನೇ ಇಸವಿಯಲ್ಲಿ ಈಗಿನ ವರ್ಷದ ಲಭ್ಯದಂತೆ ನಾನಾ ಪ್ರಕಾರ ಕಾಫೀ ಫಸಲಿಗೆ ಬಾಧಕ ಮುಂಟಾಗಬಹುದೆಂದೆಣಿಸುತ್ತೇವೆ. ಈಗಲೇ ಯಿಲೀರೋಗ ಪ್ರವೃತ್ತವಾಗಿರುವದಲ್ಲದೆ ಈಗ ನಾಟಲ್ಪಟ್ಟಿರುವ ಯೆಳೆಗಿಡಗಳೆಲ್ಲವು ಒಣಗುತಲಿವೆ. ಇವುಗಳನ್ನೆಲ್ಲ ನೋಡಲಾಗಿ ಕೊಡಗುದೇಶದ ಮುಖ್ಯವ್ಯಾಪಾರಕ್ಕೆ ಹಾನಿಯುಂಟಾಗುವಂತೆ ತೋರುತಿದೆ.

Promotion in the Public Service.—ಮೈಸೂರ್ ಚೀಫ್‌ಕೋರ್ಟ್ ಟ್ರಾನ್ಸ್‌ಲೇಟರ್ ಮಹಾರಾಜಶ್ರೀ ನರಸಿಂಗರಾಯರೆಂಬವರು ಚೆನ್ನಪಟ್ಟಣದ ಸಬ್ ತಾಲ್ಲೂಕ್ ಡೆಪ್ಯುಟಿ ಅಮಲ್ದಾರರಾಗಿ ಮೊಕರರ್ಮಾಡಲ್ಪಟ್ಟು ಕೂಡಲೇಹೋಗಿ ಚಾರ್ಜು ತೆಗದುಕೊಳ್ಳುವಂತೆ ನಿಯಮಿಸಲ್ಪಟ್ಟಿರುವರೆಂತಲೂ ಇವರಿಗೆ ಈಗ ೬೦ ರೂಪಾಯಿಗಳ ತಲಬಿತ್ತೆಂತಲೂ ಮುಂದೆ ೭೦ ರೂಪಾಯಿಗಳ ತಲಬೂ, ೧೫ ರೂಪಾಯಿಗಳ ಹಾರ್ಸ್ ಅಲೋವೆನ್ಸೂ ದೊರೆಯುವದೆಂತಲೂ, ಕೆಲವು ವರುಷಗಳಹಿಂದೆಯೇ ಇವರು ಮೈಸೂರ್ ಲೋಕಲ್‌ಸರ್ವಿಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾರೆಂತಲೂ ತಿಳಿಯಬರುತಿದೆ.

The Dewan.—ಈ ಸಂಸ್ಥಾನದ ದಿವಾನರಾದ ಮ|| ಕೆ. ಶೇಷಾದ್ರಿ ಅಯ್ಯರವರು ಈ ತಿಂಗಳ ೨೦ನೇ ತಾರೀಖಿಗೆ ಸರಿಯಾಗಿ ಇಲ್ಲಿಗೆ ವಾಪಸ್ ಬರುವರೆಂದು ನಿರೀಕ್ಷಿಸಲ್ಪಟ್ಟಿದೆ, ಮತ್ತು ಅವರು ಬಂದ ಕೂಡಲೇ ಮ|| ತುಂಬುಚೆಟ್ಟಿರವರು ಚೀಫ್‌ಕೋರ್ಟಿಗೆ ವಾಪಸ್ ಹೋಗುವರಲ್ಲದೆ ಮೆ|| ಪ್ಯಾಟರ್ಸನ್‌ಯವರ ಗೈರ್‌ಹಾಜರಿ ಪ್ರಯುಕ್ತ ಖಾಲೀಯಾದ ಚೀಫ್‌ಜಡ್ಜಿ ಕೆಲಸದ ಚಾರ್ಜನ್ನು ಮೆ|| ರಾಮಚಂದ್ರಯ್ಯನವರಿಂದ ತೆಗದುಕೊಳ್ಳುವರೆಂತಲೂ, ಮೆ|| ಪಿ. ಎನ್. ಕೃಷ್ಣಮೂರ್ತಿಗಳವರು ಅಕ್ಟಿಂಗ್ ತರೀಕ್ ಮೂರನೇ ಜಡ್ಜಿಯಾಗಿರುವರೆಂತಲೂ ಮೆ|| ವಿರೂಪಾಕ್ಷ ಅಯ್ಯರವರು ತಮ್ಮ ಪೂರ್ವದ ಕೆಲಸಕ್ಕೆ ವಾಪಸ್ ಹೋಗುವರೆಂತಲೂ ತಿಳಿಯಬರುತಿದೆ.

An accident.—ಅಸಿಸ್ಟೆಂಟ್ ಸರ್ಜನ್ ಮೆ|| ಅಚ್ಯುತರಾಮಯ್ಯರವರು, ಗತ ಬುಧವಾರದಿನ ಸಾಯಂಕಾಲ ಕುದುರೆಗಾಡಿಯಲ್ಲಿ ಕುಳಿತು ಸ್ವಶರೀರಾರೋಗ್ಯವಂ ಮಾಡುತ ಲೇಡಿ ದಿವಾನ್ ಮೆ|| ಕೃಷ್ಣಮನಾಯುಡರವರ ಬಂಗ್ಲೇರೋಡಿನಲ್ಲಿಹೋಗುವಾಗ್ಯೆ ಗಾಡಿಗೆ ಕಟ್ಟಿದ್ದ ಮತ್ತು ಅವರು ಈಚೆಗೆ ಹೊಸದಾಗಿ ತೆಗದ ಕುದುರೆಯು ಅಸ್ವಾಧೀನವಾಗಿ ಗಾಡಿಯನ್ನು ಕೆಡುವಲು ಅದರಲ್ಲಿದ್ದವರು ಕೆಳಗೆಬಿದ್ದು ಅವರ ರೆಟ್ಟೆಯಮೂಳೆ ಮುರಿದುಹೋಗಿ ಬಹಳ ಅಸ್ವಸ್ಥರಾಗಿದಾರೆಂತಲೂ, ಡಾಕ್ಟರ್ ಫರ್ನಾಂಡೆಜ್‌ಯವರು ಚಿಕಿತ್ಸೆ ಮಾಡುತಲಿದಾರೆಂತಲೂತಿಳಿಯಲಾದೆವು. ಮನುಷ್ಯನಿಗೆ ಯಾವದರಲ್ಲಿ ವಿಶೇಷವಾಗಿ ಮೋಹವುಂಟಾಗುತಿದೆಯೋ ಅದೇ ಆತನ ಅಪಾಯಕ್ಕೆ ಕಾರಣವಾಗದೆ ಹೋಗುವದಿಲ್ಲವು.

The next representative assembly.—ಬರುವ ಅಕ್ಟೋಬರ್ ತಿಂಗಳಲ್ಲಿ ಮೈಸೂರೊಳು ನಡೆಯತಕ್ಕ ಪ್ರಜಾ ಪ್ರತಿನಿಧಿ ಸಮಾಜಕ್ಕೆ ಮೆಂಬರ್‌ಗಳಾಗಿ, ಮೆ|| ಮರಿಗಂಗಯ್ಯನವರೂ, ಮ|| ರಾ|| ಅಣ್ಣಯ್ಯಪ್ಪ ಶೆಟ್ಟರವರೂ ಮ್ಯುನಿಸಿಪಲ್ ಬೋರ್ಡಿನವರಿಂದ ಚುನಾಯಿಸಲ್ಪಟ್ಟಿದಾರೆಂದು ಕೇಳುತ್ತೇವೆ ಇನ್ನು ರೇಟ್‌ಪೇಯರ್ಸ್ ಅಸೋಸಿಯೇಷನ್ನವರು ತಮ್ಮ ಸಂಘದ ಪ್ರತಿನಿಧಿಯಾಗಿ ಯಾರನ್ನು ಚುನಾಯಿಸಬೇಕೆಂದಿದಾರೆಯೋ ತಿಳಿಯಲಿಲ್ಲವು. ದಳ್ಳಾಳಿಗಳನ್ನೂ ಗಂಡಿಗೆ ಅಂಗಡಿಯವರನ್ನೂ ಚೀಟಿ ಅಂಗಡಿಯವರನ್ನೂ ಚುನಾಯಿಸಿ ಅವರ ಯೋಗ್ಯತೆಗೆ ಮೀರಿದ ಜವಾಬ್ದಾರಿಯಂ ಕೊಟ್ಟು [illegible]ಸುವದರಿಂದ ಉದ್ದೇಶ ಭಂಗವೂ [illegible]ನವೂ ಪ್ರಾಪ್ತವಾಗದೆ ತಪ್ಪಲಾರದು, [illegible]ರಣ ಮೆಂಬರ್‌ಗಳು ಈ ಅಂಶಗಳಂ ಚೆನ್ನಾಗಿ ಆಲೋಚಿಸಿ ಪ್ರತಿನಿಧಿಗಳನ್ನೇರ್ಪಡಿಸಿದರೆ ಯುಕ್ತವಾಗಿರುವದು.

Assistant Commissioners.—[illegible] ಮೈಸೂರ್ ಗವರ್ನಮೆಂಟಿನಲ್ಲಿ ನಡೆಗೊಂಡಿರುವ ಅಸಿಸ್ಟೆಂಟ್ ಕಮಿಷನರ್ ಕೆಲಸವು ಮೂರು ತರಗತಿಗಳುಳ್ಳವಾಗಿರುತಿದೆಯಲ್ಲದೆ ೫೦೦ ರೂಪಾಯಿಗಳ ತಲಬುಳ್ಳ ೧ನೇ ತರಗತಿಯಲ್ಲಿ ಇಬ್ಬ[illegible]

೪೦೦ ರೂಪಾಯಿಗಳುಳ್ಳ ಎರಡನೇ ತರಗತಿಯಲ್ಲಿ ಆರುಮಂದಿಯೂ, ೩೦೦ ರೂಪಾಯಿಗಳುಳ್ಳ ಮೂರನೇ ತರಗತಿಯಲ್ಲಿ ಮೆಂಟುಮಂದಿಯೂ, ೨೫೦ ರೂಪಾಯಿಗಳುಳ್ಳ ನಾಲ್ಕನೇ ತರಗತಿಯಲ್ಲಿ ಹನ್ನೊಂದು ಮಂದಿಯೂ, ಇರುವಂತೆ ತಿಳಿಯಬರುತ್ತದೆ. ಇದಲ್ಲದೆ ಕೆಲವರು ಟಿಗಸ್ ಇಲಾಖೆಗಳಲ್ಲಿ ಇಲಾಖಾಧಿಕಾರಿಗಳಿಗೆ ಅಸಿಸ್ಟೆಂಟುಗಳೆನಿಸಿಕೊಂಡು ಕೆಲಸ ನೋಡುತ್ತಲಿರುತ್ತಾರೆ. ಅಂತವರಿಗೆ ಬದಲಾಗಿ ಆಕ್ಟಿಂಗ್ ತರೀಖಿಗಾಗಿ ಕೆಲವರೂ ಅದನ್ನೂಯಿಟೀ ತರೀಖಾಗಿ ಕೆಲವರೂ ನಿಯಮಿಸಲ್ಪಟ್ಟಿರುತ್ತಾರೆ. ಅವರ ಮೇಲೆ ನಾವು ತಿಳಿಸಿದವರೆಲ್ಲರೂ ಬಾಯಿಂ ಲವಾಜಮೆಗೆ ಸೇರಿದವರಾಗಿರುತ್ತಾರೆ. ಹೀಗೆ ಇನ್ನೆಷ್ಟು ಜನ ದಾಖಲಾಗಬೇಕೋ ತಿಳಿಯಲಿಲ್ಲವು.

Increase of pay.—ಈಚೆಗೆ ಈ ಸಂಸ್ಥಾನದ ನೌಕರಿಯಲ್ಲಿರತಕ್ಕ ಕೆಲವರು ದೊಡ್ಡ ಉದ್ಯೋಗಸ್ಥರಿಗೆ ಪದ್ಧತಿಪ್ರಕಾರ ಸಾಧಾರಣವಾದ ಹೆಚ್ಚು ಸಂಬಳಗಳು ಕೊಡಲ್ಪಟ್ಟಿರುವಂತೆ ಗೊತ್ತಾಗಿದೆ. ಅವರುಗಳು ಯಾರೆಂದರೆ,—ಚೀಫ್ ಸೆಕ್ರೆಟರಿ ಮೆ॥ ತನುದವಾಸ್ ಸಿ. ಎ. ರವರು ೪೦೦ ರೂಗಳಿಂದ ೧೨೦೦ ರೂಪಾಯಿಗಳು, ಮೆ॥ ಸಿ. ಎ. ಮಾಧವರಾಯರವರಿಗೆ ೧೦೦ ರೂಪಾ ಹೆಗ್ಗಳಿಂದ ೧೨೦೦, ಮೆ॥ ಟಿ. ನರಸಿಂಹಯ್ಯಂಗಾರ್ ೪೦೦ ರೂ, ಗಳಿಂದ ೧೦೦ ರೂ॥ ಮೆ॥ ಕೃಷ್ಣಯ್ಯಂಗಾರ್ ೪೦೦ ರೂ॥ ಗಳಿಂದ ೧೦೦ ರೂ॥ ಮೆ॥ ರಂಗಸ್ವಾಮಿ ಅಯ್ಯಂಗಾರ್ ೪೦೦ ರಿಂದ ೧೦೦ ರೂ॥ ಮೆ॥ ಪ್ರಾಣನಾಥಯ್ಯರವರಿಗೆ ೧೦೦ ರೂ॥ ಗಳಿಂದ ೧೦೦ ರೂ ಮೆ॥ ಬಿ. ಕೆ. ವೆಂಕಟವರದಯ್ಯಂ ೧೦೦ ರೂ ಮೆ॥ ಬಿ. ಕೆ. ವೆಂಕಟವರದಯ್ಯಂಗಾರ್ಗೆ ೬೦೦ ರೂ ಇಂದ ೪೦೦ ರೂ. ಈ ರೀತಿ ಗ್ರೇಡ್ ಬಟ್ಟೇ ಮಾಡಲ್ಪಟ್ಟಿರುತ್ತಾರೆ. ಇದಲ್ಲದೆ ಗವರ್ನಮೆಂಟ್ ಪ್ರಕಾರ ಪಬ್ಲಿಕ್ ಸರ್ವಿಸ್ ಮೈಸೂರು ರೆಸಿಡೆನ್ಸಿ ಮೆಂಬರ ರವರಿಗೆ ಸಹ ೪೦೦ ರೂ॥ ಗಳಿಂದ ೧೦೦ ರೂಪಾಯಿಗಳ ತನಕ ಹೆಚ್ಚು ಬಟ್ಟೆ ಯಾಗಿರುತ್ತದೆ. ಈ ಏರ್ಪಾಡುಗಳೆಲ್ಲಾ ಮೆ॥ ಕೃಷ್ಣಮೂರ್ತಿಗಳು ದಿವಾನ್ ಕೆಲಸಕ್ಕೆ ಹೋದ ಕೂಡಲೆ ಪ್ರಾಯಶಃ ತೆರೆಯುತ್ತವೆ.

The District Court.—ಕೆಲವು ಸಂಸ್ಥಾನದವರ ಹಿಂದೆ ನೌಕರಿಯ ಮಾರಲ್ಪಟ್ಟ ಸಬ್ ಡಿವಿಷನ್ ದರ್ ಡಿಸ್ಟ್ರಿಕ್ಟು ನ ನೇರಲ್ ಕೋರ್ಟ್ ನ್ನು ಈ ತಿಂಗಳ ಆಖೈರಿಗಾಗಿ ಅಂತೆ ಕಟ್ಟಲೇಬೇಕೆಂದ್ದವರಲ್ಲಿ ಮರಳಿ ಸ್ಥಾಪಿಸುವಂತೆ ವ್ಯವಸ್ಥೆಯಾಗಿ ಬಲಿಷ್ಠ ಈಗ ಆಕ್ಟಿಂಗ್ ಚೀಫ್ ಜಡ್ಜಿಯಾದ ಮಿಸ್ಟರ್ ರಾಮಚಂದ್ರ ಅಯ್ಯರವರು ತಿದ್ದುಪಡಿಗಳ ಹೊಸರೀತಿ ಪತ್ರಿಕೆ ಬಿಡಿ ನಿವಾಸಗಳನ್ನೆಲ್ಲ ಮಾಡಿಸಿದ್ದಾರೆಂತಲೂ, ಬದಲಿಗೆ ಈ ಸಂದರ್ಭದಲ್ಲಿ ನೌಕರಿಗಳಿಗಾಗಿ ಅನೇಕರು ದಾವಾಗಳು ಮಾಡುತ್ತಲಿದ್ದಾರೆಂತಲೂ, ಅವರ ಗುಡ್ಡಗುಡ್ಡೆಗಳಿಗೆ ವಿವಾ ಅನ್ವಯಿಸಿಗಳು ಕೆಲಸಕೆ ಅವಕಾಶವಿಲ್ಲದಾಗ ಚೀಫ್ ಜಡ್ಜಿಯವರು ನಿಯಮಿಸುತ್ತಾರೆಂತಲೂ, ಬಂದಾ ಬಿಟ್ಟ ನಮ್ಮ ಅನೇಕರ ಪ್ರತ್ಯೇಕ ಜಾಗತಾದಿವಾಗಿ ವಿರಾಮಟ್ಟವೆಂತಲೂ ಕೇಳುತ್ತೇವೆ. ಏತತ್ಪದಸ್ಥಳನುಕೂಲವೆ ಕಾರ್ಪೊರೇಷನ್ ಈ ಡಿಸ್ಟ್ರಿಕ್ಟು ಅಸಿಸ್ಟ್ಯಾಂಟು ಸಬ್ ಜಡ್ಜ್ ನ್ಯಾಯ ನೀರ್ಣಯ ಕೋರ್ಟಿನಲ್ಲಿ ಇರಾ ಯರಾಗಿರುವ ಮಿಲಿಟರಿ ಸ್ಟೇಷನಿಗೆ ವರ್ಗ ಮಾಡಲ್ಪಡುತ್ತಾರೆಂತಲೂ, ಅಸಿಸ್ಟೆಂಟ್ ಡಿಸ್ಟ್ರಿಕ್ಟ್ ಕೋರ್ಟ್, ಅನಂತಪುರದಲ್ಲಿ ಸಬ್‌ಡಿವಿಷನ್ ಕೋರ್ಟ್ ಏರ್ಪಾಡಿಸಲ್ಪಡುವವೆಂತಲೂ ಕೇಳುತ್ತೇವೆ. ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯಾದ ಮೆ॥ ಬಿ ನರಸಿಂಹಯ್ಯರವರು ಇಲ್ಲಿಗೆ ವರ್ಗ ಮಾಡಲ್ಪಟ್ಟು ಈ ತಿಂಗಳ ೧೫ ನೇ ತಾರೀಖಿನಲ್ಲಿ ಇಲ್ಲಿಗೆ ಬಂದು ಚಾರ್ಜ್ ತೆಗೆದುಕೊಳ್ಳುವರೆಂದು ತಿಳಿಯಬರುತ್ತದೆ.

LEGAL INTELLIGENCE
ನ್ಯಾಯನಿರ್ಣಯಗಳು.

ಅಕ್ರಮಗುಂಪಿಗೆ ಸೇರಿ ದೊಂಬಿ ನಡೆಸಿದ್ದು. ತಿರುನಲ್ವೇಲಿ ಡಿಸ್ಟ್ರಿಕ್ಟು ಜಾಯಿಂಟ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ.

೧೮೯೦ನೇ ಇಸವಿ ೧೧ನೇ ನಂಬರ್ ಮೊಕದ್ದಮೆ

ಫಿರ್ಯಾದಿ—ಮಹಾರಾಜ್ಞಿ ಚಕ್ರವರ್ತಿನಿಯವರು
ಸಾಕ್ಷಿಗಳು—ಪೋಲೀಸ್ ಸ್ಟೇಷನ್ ಹೌಸ್ ಆಫೀಸರ್ ಸುಬ್ರಹ್ಮಣ್ಯ ವಗೈರೆಯರು ಆರುಜನ.
ಪ್ರತಿವಾದಿಗಳು—೧ನೇ ಬೀಸ, ೨ನೇ ಲಿಂಗನಾಯಕ, ೩ನೇ ಪೆರುಮಾಳ್, ೪ನೇ ಶಾಮಶಾಸ್ತ್ರಿ
ಸಾಕ್ಷಿಗಳು—ತಿರುನಲ್ವೇಲಿ ಡಿಸ್ಟ್ರಿಕ್ಟು ಕಲೆಕ್ಟರ್ ವ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟ್ ಮೆ॥ ಜೆ. ಬೆಬ್ ಎ ಟ್ರಿವರ್ ಸಾಹೇಬರವರು ವಗೈರೆ ಹನ್ನೊಂದು ಜನ
ತಕ್ಸೀರ್—ಮರ್ಯಾದಾ ಪಿನಲ್ ಕೋಡ್ ೧೪೭ ಮತ್ತು ೧೪೮ ನೇ ಸೆಕ್ಷನ್‌ಗಳನ್ನುಸಾರ ಅಕ್ರಮವಾದ ಒಂದು ಗುಂಪಿನ್ನ ಸೇರಿ ದೊಂಬಿ ನಡೆಸಿದ್ದು
ಸಾಬೀತಾದ—ತಕ್ಸೀರು ಸಾಬೀತಾಗಿ,
ದಂಡನೆ—ನಾಲ್ಕು ತಿಂಗಳ ಸ್ಟ್ರೀಟ್ ಸಜಾ ಮೊದಲನೆ ಮೂರು ಜನರಿಗೆ ಇವುಗಳ ಸ್ಟ್ರೀಟ್, ಮಿಕ್ಕ ಮೂರು ತಿಂಗಳ ಕಾಲ ಕಠಿಣ ಸ್ಟ್ರೀಟ್

ಫೈಸಲ್.
(ಕಳೆದವಾರದ ಶೇಷ)

೯. ೨೬ ನೇ ತಾರೀಖಿನ ದಿನ ಬೆಳಿಗ್ಗೆ ಮೆ॥ ಕ್ಯಾಷ್ ಎಂಬಾತನು ನಿಶೀತ್ ಕೃಷ್ಣಯ್ಯರ್ ಎಂಬಾತನ ಬಾಗ್ಯೆಯ ಮೇಲೆ ಜುಲುಂ ನಡೆಸಿದಂತೆ ತಿಳಿಸಲ್ಪಡುವವರಿಂದ ಅದು ಜನಗಳಿಗೆ ಅಗ್ರಸದನ್ನುಂಟುಮಾಡಿ, ಅದೇ ದಿನ ಸಾಯಂಕಾಲ ನಡೆದ ನಿವಾಟಿಂಗನ್ನು ತೀರ್ಮಾನಗಳನ್ನು ಮಾಡುವುದಕ್ಕೆ ದಾರಿ ಉಂಟುಮಾಡಿತು. ನಿವಾಟಿಂಗನ ೩ ನೇ ತೀರ್ಮಾನದಲ್ಲಿ ಹೊಳೆಯಲ್ಲಿ ಸ್ನಾನ ಮಾಡತಕ್ಕ ವಿಷಯದಲ್ಲಿ ನೋಟಿಸ್‌ಗಳಿಗೂ ಯೂರೋಪಿಯರ್‌ಗಳಿಗೂ ಇರುವ ಪರಸ್ಪರ ಹಕ್ಕುದಾರಿಯ ಕುರಿತು ವಿವಾದ ನಡೆದು ಮೆ॥ ಕ್ಯಾಷ್‌ನ ನಡತೆಯ ವಿಷಯವಾಗಿ ಖಂಡಿಸಿ ಮಾಡಲ್ಪಟ್ಟಿತು. ಬಳಿಕ ಮಾಡಲ್ಪಟ್ಟ ತೀರ್ಮಾನವೇನೆಂದರೆ —

ಈಗ ಮೆ॥ ಕ್ಯಾಷ್‌ನಿಂದ ನಡೆಸಲ್ಪಟ್ಟ ಬಂಡಿ ಅವಮಾನ ಕರಗಳಾದ ಕೃತ್ಯಗಳಿಂದ ಪ್ರಜೆಗಳನ್ನು ರಕ್ಷಿಸಿ ಸುರಕ್ಷಿಸುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡತಕ್ಕದ್ದು ಅವಶ್ಯವೆಂದು ಈ ಸಭೆಯು ನಿರ್ಣಯಿಸಿ ಈ ವಿಷಯದಲ್ಲಿ ಮೆ॥ ಲೀವಾನಿಂಗ್ ಎಂಬುವರು ಕೇವಲ ಯೂರೋಪಿಯರ್‌ಗಳ ಸೌಕರ್ಯಾರ್ಥ ಕೊಡಲ್ಪಟ್ಟಿರುವ ಹುಕ್ಕು ನ್ಯಾಯವಿರುದ್ಧವಾದ ನೋಟಿಸ್ ಇರುವುದರಿಂದ ಸಿಕ್ಕುವ ಮೇಲೆ ಮೆ॥ ಕ್ಯಾಷ್ ಎಂಬಾತನು ಜುಲುಂ ನಡೆಸಲಿಕ್ಕೆ ಉಪಯೋಗವಾಯಿತು, ಎಂದು. ಪ್ರೊಸೀಡಿಂಗ್ಸ್ ಮೂಲಕ ಅಂಗೀಕರಿಸಿರುವವನ್ನು ನಡೆದ ಎರಡು ನಿರ್ಣಯಗಳನ್ನೂ ನೋಡಿದಾಗ ನೇಟಿವ್‌ಗಳು ನಿವಾಸಿಸಿ, ಯೂರೋಪಿಯರ್‌ಗಳು ಮಾತ್ರ ಅದುವರೆವಿಗೂ ಪ್ರತಿನಿತ್ಯ ೯॥ ಘಂಟೆಯ ತನಕ ಹೊಳೆಗೆ ಬಂದು ಸ್ನಾನಮಾಡಿ ಹೋಗುತ್ತಿದ್ದರೆಂದು ಚಾಚಿಕೆಯು ನೆರೆಗೊಂಡಿತ್ತೆಂಬುದಾಗಿ ಸ್ಪಷ್ಟವಾಗುತ್ತದೆ. ಸಾಮಾನ್ಯವಾಗಿ ಅಪರಾಧಿಗಳ ನಡತೆಯನ್ನೂ, ತಪ್ಪು ಅವರ ಪೇಟೆಯ ಮುಸ್ಲಿರೆ ಘೋಷ್ಯಾ ಬಂದು ಮಂದಿಯ ಪತಿವಿನ ಗುಂಪು ಕೂಡಿಕೊಂಡು, ಮಾರನೇ ದಿನ ಬೆಳಿಗ್ಗೆ ಹೊಳೆಗೆ ಬಂದು ಆಕ್ರಮಿಸಿದ್ದನ್ನು ನೋಡಿದಾಗ ಹಿಂದಿನ ದಿನದಲ್ಲಿ ಮಾಡಿದ ನಿರ್ಣಯಗಳನ್ನು ಸಾರ್ಥಕ ಪಡಿಸಿ ಮೆ॥ ಲೀವಾನಿಂಗ್‌ರವರ ನೋಟೀಸನ್ನು ಉಲ್ಲಂಘಿಸಬೇಕೆಂಬ ಸಂಕಲ್ಪದಿಂದರೆ ಬಂದಂತೆ ಸ್ಪಷ್ಟವಾಗುತ್ತದೆಯೋ ಹೊರತು ಕೇವಲ ಸ್ನಾನಾರ್ಥ ಬಂದವರೆಂದು ಭಾವಿಸಲಿಕ್ಕಾಗುವುದಿಲ್ಲವು.

೧೦. ಈ ಅಕ್ರಮ ಕೂಟದಲ್ಲಿ ಅಪರಾಧಿಗಳೂ ಇತರ ಮೈಸೂರಿನವರ ಬೆಂಬಲದ ನನ್ನುಂಬಿಗ ಬಂದವರಿಕ್ಕೆ ಮೈಸೂರು ಕೆ. ತೀ. ಬೆಯ ಡೆಪ್ಯುಟಿ ಕಮ್ಮಿಷನರ್ ಮೆ॥ ಎ. ಎ. ಮಾಧವರಾಯರವರು ನಿವಾಟಿಂಗಿಗೆ ಹೋಗಿದ್ದರಷ್ಟೆ. ಮೀಟಿಂಗಿಗೆ ನಡೆಸಿದವನ್ನು ತಾತ್ಪರ್ಯ ಪಡಿಸಿಗೆ ಬಿಡುವುದು ಆ ಸ್ವರೋಕ್ತಿಯನ್ನು ನಿರ್ಮಾಣ ಮೈಸೂರು ಎವಾನಿಗೆ ತಿಳಿದು ಪಡಿಸದೆಲ್ಲದೆ ಅವರ ಪೈಸಲನ್ನು ತೀರ್ಮಾನಿಸಿದ್ದು ಕಾರಣಗಳಾಗಿ ಎರಡಷ್ಟು. ಇದಲ್ಲದೆ ಅಪರಾಧಿಗಳೂ ಇತರ ಮೈಸೂರಿನವರೂ ಅವರ ಮಾತ್ರು ಡೆಪ್ಯುಟಿ ಕಮ್ಮಿಷನರ ಅಭಿಪ್ರಾಯವೂ ನಾಯಕರಾಗಿಯೂ ಇರುವವರಿಂದ ನಡೆದ ನಿವಾಟಿಂಗಿನ ತೀರ್ಮಾನಗಳನ್ನು ತಮ್ಮ ಯಜಮಾನರ ಮುಖ್ಯವಿನ ಮೇಲೆ ನಡೆಸಲ್ಪಡುವುದಾಗಿ ಅವುಗಳನ್ನು ಜಾರಿಯಲ್ಲಿ ತರುವುದು ತಮ್ಮ ಕರ್ತವ್ಯವೆಂದು ಸ್ವತಃ ನಿಷ್ಕರ್ಷಿಸಿಕೊಂಡು ಮೇಲೆ ಕಂಡರೀತಿ ವರ್ತಿಸಿದಂತೆ ತೋರುತ್ತದೆ. ಈಗ ಸದ್ಯಃ ಇಷ್ಟರ ಮಟ್ಟಿಗೆ ತಿಳಿಸಿದರೆ ಸಾಕಾಗಿರುತ್ತದೆ ಯೇನೆಂದರೆ—ದೊಂಬಿ ನಡೆದ ಕೆಲವಾಯಿ ಡೆಪ್ಯುಟಿಕಮ್ಮಿಷನರವರು ಕೆಲವು ರೆಜೊಲ್ಯೂಷನ್‌ಗಳ ಮಾತ್ರಗಳು ಬಹಳ ಕಠಿಣವಾದವಾಗಿರುವವೆಂದಾಕ್ಷೇಪಿಸಿ ಉಪಶಾಂತವಾದ ರೀತಿಯಲ್ಲಿರಬೇಕೆಂದು ಬರೆದು ಕಳುಹಿಸಿದರು.

೧೧. ಈ ಅಂಶಗಳೆಲ್ಲವೂ ಅಪರಾಧಿಗಳು ಬೆಳಗಿನ ಹೊತ್ತು ಸ್ನಾನಕ್ಕಾಗಿಯೇ ಹೊಳೆಗೆ ಹೋಗಿದ್ದರೆಂಬ ಸಿದ್ಧಾಂತವನ್ನು ಸಂಪೂರ್ಣವಾಗಿ ನಿರಾಕರಿಸತಕ್ಕವಾಗಿರುತ್ತವೆ. ಬೆಳಿಗ್ಗೆ ೯॥ ಘಂಟೆಗೆ ಪೂರ್ವದಲ್ಲಿ ನೇಟಿವ್‌ಗಳಿಗೆ ಸ್ನಾನಮಾಡುವುದಕ್ಕುಂಟಾಗಿರುವ ಅಥವಾ ಉಂಟಾಗಿರುವಂತೆ ಭಾವಿಸಲ್ಪಟ್ಟಿರುವ ಹಕ್ಕುದಾರಿಯನ್ನು ನಿರ್ಬಂಧ ರೂಪವಾಗಿ ಯಾಗಲಿ ಅಥವಾ ನಿರ್ಬಂಧಿಸುವಂತೆ ತೋರ್ಪಡಿಸುವ ರೀತಿಯಲ್ಲಾಗಲಿ ಸ್ಥಾಪಿಸಿಕೊಳ್ಳಬೇಕೆಂಬ ಅಭಿಪ್ರಾಯ ವುಳ್ಳವರಾಗಿದ್ದರೆಂಬ ಅಂಶವು ಪೋಲೀಸಿನವರ ಮೇಲೆ ನಡೆಸಲ್ಪಟ್ಟ ಜುಲುಮಿನಿಂದಲೂ ಅಪರಾಧಿಗಳಿಗೆ ಸೇರಿದವರು ಕೆಲವರು ತಮ್ಮ ಕೈಗಳಲ್ಲಿ ದೊಣ್ಣೆಗಳನ್ನು ಹಿಡಿದುಕೊಂಡು, ಯಾರಾದರು ಯೂರೋಪಿಯನ್ನಿಂದ ಸ್ನಾನಮಾಡಲ್ಪಡುವದಕ್ಕೆ ಅವಕಾಶವನ್ನು ತಪ್ಪಿಸಿ ಜನರು ಕಾದಾಡಬೇಕೆಂದಾಗಿ ಒಂದನೇ ದಿನದ ನಿವಾಟಿಂಗ್‌ನಲ್ಲಿ ಮಾಡಲ್ಪಟ್ಟ ತೀರ್ಮಾನವನ್ನನುಸರಿಸಿ ಮೇಲೆ ಕಂಡಂತೆ ವರ್ತಿಸಿದ್ದರಿಂದಲೂ ಸ್ಪಷ್ಟವಾಗದೆ ಹೋಗಲಿಲ್ಲವು. ಅಪರಾಧಿಗಳಿಗೆ ಬಂಧನದ ಜರಿಗಿದ ವಿಷಯಗಳೂ, ಹೊಳೆಯ ಯೂರೋಪಿಯರ್‌ಗಳು ಬರುವ ಬರಬೇಕೆಂಬುದೂ ತಿಳಿಯದೇ ಹೋಗಿರಲಾರದು. ಅಪರಾಧಿಗಳು ಜುಲ್ಮಿಯಿಂದ ಹೊಳೆಯನ್ನು ಸ್ವಾಧೀನಪಡಿಸಿಕೊಂಡದ್ದು ಮಾತ್ರವಲ್ಲದೆ ಪೋಲೀಸಿನವರೂ ಮ್ಯಾಜಿಸ್ಟ್ರೇಟರೂ ಮಾಡಿದ ಹುಕುಮನ್ನು ಅವರು ಧಿಕ್ಕರಿಸಿದ್ದನ್ನೂ ಕೇಳಿದೆ, ಸ್ನಾನಾರ್ಥ ಬಂದಿದ್ದವರೆಂತೆ ಎಗ್ಸಿಬಿಟ್ B ಯಲ್ಲಿ ಕಂಡಿರುವ ಯೂರೋಪಿಯರ್ ದೊಡ್ಡವನು ನಿಷೇಧಿತ ಘಂಟೆ ಅಕ್ರಮವಾಗಿ ವರ್ತಿಸಿದ್ದನ್ನು ನೋಡಲಾಗಿ ಇವೆಲ್ಲವೂ ತಮ್ಮ ಹಕ್ಕುದಾರಿಯನ್ನು ಬಲಾತ್ಕಾರದಿಂದ ಅಥವಾ ಬಲಾತ್ಕಾರವನ್ನು ವ್ಯಕ್ತಪಡಿಸುವವರ ಮೂಲಕ ಸ್ಥಾಪಿಸಿಕೊಳ್ಳಬೇಕೆಂಬ ಅಭಿಪ್ರಾಯವಿತ್ತೆಂಬುದು ಬೇಕಾದ ಮಟ್ಟಿಗೆ ನಿರೂಪಿಸುತ್ತವೆ. ಡೆಪ್ಯುಟಿ ಕಮ್ಮಿಷನರು ತಮ್ಮ ನೌಕರರನ್ನು ಹೊಳೆಯ ಬಳಿಗೆ ಕಳುಹಿಸಿದ್ದು ಯೂರೋಪಿಯರ್‌ಗಳ ದಿನಗಳಂತೆ ಆಗಿದ್ದವನು ನೋಡಿ ಭಯಪಟ್ಟು ತಮ್ಮ ಕವೆಯವರೂ ಸ್ನಾನಪಟ್ಟರು(ದ) ಬೇಸಿದರೆ ನಮ್ಮಲ್ಲಿಗೆ ಬಂಗ ಉಂಟುಮಾಡುವರಾಗುವರೆಂದಾಗಿ ತಿಳಿದು ಕಾನೂನಿಗೆ ವಿರುದ್ಧವಾಗಿ ನಡೆಯಬೇಕಾದ್ದಿಲ್ಲವೆಂದು ಅಪರಾಧಿಗಳಿಗೆ ಹೇಳಿ ಕಳುಹಿಸಿದರೆಂಬ ಅಂಶವನ್ನು ಅವರೇ ಅಂಗೀಕರಿಸಿರುತ್ತಾರೆ. ಪ್ರಬಲವಾದ ದೊಂಬಿ ನಡೆಯದಿದ್ದದ್ದು ಅಪರಾಧಿಗಳ ಶಾಂತಸ್ವಭಾವದಿಂದಲ್ಲವು ವರದು ಯೂರೋಪಿಯರ್‌ಗಳು, ಸ್ನಾನಮಾಡುವದಕ್ಕೆ ತಮಗುಂಟಾದ ಹಕ್ಕುದಾರಿಯನ್ನು ಆಚರಿಸತಕ್ಕ ಹಿಡಿದು ಸ್ನಾನಮಾಡಬೇಕೆಂದು ಬಲಾತ್ಕರಿಸದೆ ಮ್ಯಾಜಿಸ್ಟ್ರೇಟರ ಮಾತಿನ ಪ್ರಕಾರ ತಮ್ಮ ಸ್ನಾನಪ್ರಯತ್ನವಾದ ಉಲ್ಲಾಸವು ತೊರೆದು ವಾಪಸ್ ಹೋದ್ದರಿಂದಲೇ ವಿಶೇಷ ಗದ್ದಲಕ್ಕೆ ಅವಕಾಶವಿಲ್ಲದಾಯಿತು.

೧೨. ಅಪರಾಧಿಗಳ ನಡತೆಯೂ ಸ್ಥಿತಿಯೂ, ಸ್ಟೇಷನ್ ಹೌಸ್ ಆಫೀಸರ ಹೃದಯದಲ್ಲಿ ಭಯಪಟ್ಟು ಮ್ಯಾಜಿಸ್ಟ್ರೇಟರ ಸಹಾಯವು ಪಡೆಯಬೇಕೆಂಬ ಬಯಕೆಯನ್ನುಂಟುಮಾಡಿತಲ್ಲದೆ ಮ್ಯಾಜಿಸ್ಟ್ರೇಟರ ಬರಿಗೂ ಕಾವ ಕಳಿಸಿದ್ದಕ್ಕೆ ಅವಕಾಶವಿಲ್ಲದಂತೆ ಮಾಡಿತಿಕ್ಕೆ ಯೂರೋಪಿಯರ್‌ಗಳನ್ನು ಸ್ನಾನ ಮಾಡದವರಾಗಿ ವಾಪಸ್ ಹೋಗುವಂತೆ ಹೇಳಿ ಸಮಾಧಾನ ಪಡಿಸಿ ಕಲಹ ನಿಮಿತ್ತಕರವಾದ ಅಪರಾಧಿಗಳ ಚರ್ಯೆಗಳನ್ನು ಕುರಿತು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಿಗೆ (ಎಗ್ಸಿಬಿಟ ಬಿ) ಪೂರ್ವಕ ರಿಪೋರ್ಟ್ ಮಾಡುವದು ಆವಶ್ಯಕವೆಂದು ತೋರಿತು.

೧೩. ಮೆ॥ ಕ್ಯಾಷ್ ಎಂಬಾತನಿಗೂ ಸಹ ಪೋಲೀಸಿನವರ ಸಹಾಯವನ್ನು ಅಪೇಕ್ಷಿಸುವ ಆವಶ್ಯಕತೆಯು ತೋರಬಂತು. ಅಪರಾಧಿಗಳೂ ಅವರ ಸ್ನೇಹಿತರೂ ಕೇವಲ ಸ್ನಾನ ಮಾಡತಕ್ಕ ಉದ್ದೇಶವುಳ್ಳವರಾಗಿದ್ದು ಜನಗಳ ಸಮಾಧಾನವನ್ನು ಭಂಗಗೊಳಿಸಬೇಕೆಂಬ ಇರಾದೆ ಇರುವಂತೆ ವ್ಯಕ್ತಪಡಿಸದೆ ಇರುವರಾದರೆ ಬದಲಿಗೆ ಬಿಷ್ಟರ ಪರ್ವಾನುಗಳಿಗೆ ಆವಶ್ಯಕತೆ ಇದ್ದಿರಲಾರದು. ನಾಲ್ಕುಜನ ಅಪರಾಧಿಗಳಿಗೂ ಇತರರಿಗೂ ಬೆಳಿಗ್ಗೆ ೯ ಘಂಟೆಗೆ ಪೂರ್ವದಲ್ಲಿ ಸ್ನಾನ ಮಾಡಲಿಕ್ಕೆ ನ್ಯಾಯವಾಗಿರುವ ಅಥವಾ ನ್ಯಾಯವಾಗಿರುವಂತೆ ಭಾವಿಸಲ್ಪಟ್ಟಿರುವ ಹಕ್ಕುದಾರಿಯನ್ನು ಬಲಾತ್ಕಾರರೂಪವಾಗಿ ಅಥವಾ ಬಲಾತ್ಕಾರವನ್ನು ತೋರ್ಪಡಿಸುವವರ ಮೂಲಕ ಸ್ಥಾಪಿಸಿಕೊಳ್ಳಬೇಕೆಂಬ ಅಭಿಪ್ರಾಯವೂ ಇಬ್ಬರಿಬ್ಬರು ಪೋಲೀಸಿನವರ ಮೇಲೆ ತಮ್ಮ ಉದ್ದೇಶವಾಕ ೧೪೭ ನೇ ನಡೆಸಿದ ಇಂಡಿಯನ್ ಪಿನಲ್‌ಕೋಡ್ ೧೪೭ನೇ ಸೆಕ್ಷನ್ ಪ್ರಕಾರ ದೊಂಬಿ ನಡೆಸಿದ ತಕ್ಸೀರಿಗೆ ಅಪರಾಧಿಗಳನ್ನು ಗುರಿ ಮಾಡಿದನ್ನು.

SUMMARY OF NEWS.
ವೃತ್ತಾಂತಸಂಗ್ರಹವು.

ಗ್ವಾಲಿಯರ್‌ನಲ್ಲಿ ಕನಾಡಿಯಾವನೊಬ್ಬನು ಒಂದು ಗೋವಧೆಮಾಡಿದ ತಪ್ಪಿಗೋಸ್ಕರ ನಾಲ್ಕು ವರುಷಗಳ ಕಠಿಣ ಶಿಕ್ಷೆಯ ಸಜಾ ವಿಧಿಸಲ್ಪಟ್ಟನು.

ಜಾಮನಗರ ಮತ್ತು ಭಾವನಗರ ಡಿಸ್ಟ್ರಿಕ್ಟುಗಳಲ್ಲಿ ವಾಂತಿಭೇದಿರೋಗ ಪ್ರಬಲಗೊಂಡು ಆಚೇವಾರದಲ್ಲಿ ೩೦ ಮಂದಿ ಮೃತಪಟ್ಟರು.

ಆರೇಬಿಯಾದೇಶದಲ್ಲಿ ಪ್ರಾಮುಖ್ಯತೆಯ ಸಹಾಯಾರ್ಥ ಘನನಂಬಿಕೆಯ ಹೈದರಾಬಾದ್ ನಿಜಾಮುರವರು ೫೦೦೦ ರೂಪಾಯಿಗಳು ಕೊಟ್ಟಿರುತ್ತಾರೆ.

ಕಳೆದಸಂವತ್ಸರದೊಳು ಬಂಗಾಳದೇಶದಲ್ಲಿ ನಾಲ್ವತ್ತು ಸಾವಿರಮಂದಿ ಹಾವುಗಳಿಂದ ಕೊಲ್ಲಲ್ಪಟ್ಟರು. ಇದು ಪ್ರಜೆಗಳು ಆಯುಧಗಳಂ ಧರಿಸುವ ವಿಷಯದಲ್ಲಿರಚಿಸಲ್ಪಟ್ಟಿರುವ ನಿರ್ಬಂಧಪೂರ್ವಕವಾದ ಕಾನೂನಿನ ಬಲದಿಂದಲೇ ಆಗಿರುತ್ತದೆ.

ಬಂಗಾಳದಲ್ಲಿ ೩೦ ವರ್ಷದ ಮುದುಕನೊಬ್ಬನು ೧೦ ವರ್ಷದ ಒಬ್ಬ ಬಾಲೆಯನ್ನು ಮದುವೆ ವಿವಾಹ ಮಾಡಿಕೊಳ್ಳಬೇಕೆಂದು ಆಕ್ಷೇಪಿಸಿ ಆಮಾದಿಯನ್ನೂ ಅವಳತಾಯಿಯನ್ನೂ ಕರೆದುಕೊಂಡುಹೋಗಿ, ಪತಿಯೊಡನೆ ಬಾಳುತ್ತಿರುವ ೩೦ ವರ್ಷದ ತನ್ನ ಮಗಳ ಮನೆಯಲ್ಲಿ ಮದುವೆಮಾಡಿಕೊಂಡನು.

ಇಂಗ್ಲೆಂಡಿನಲ್ಲಿ ಒಬ್ಬ ಹೆಂಗಸು ಹೆಚ್ಚು ಜೀವರನ್ನು ಮದುವೆಯಾಗಬಾರದೆಂದು ಕಾಯಿದೆಯಾಗಿದೆ. ಹೀಗಿದ್ದು ಒಬ್ಬನು ಐದುಜನ ಹೆಂಡರನ್ನು ಆಗಿರುತ್ತಾನೆಂದು ಅವನ ಮೇಲೆ ಖಟ್ಲೆ ನಡೆಯಿತು. ಅವರ ಚೌಕಾಸಿ ಮಾಡುವಾಗ್ಯೆ ಮುಕ್ತಿಗೆ ಗತಿಯಂದ ಹೆಂಡರನ್ನು ಮದುವೆಯಾಗಿ ಬೇರೆ ಬೇರೆ ಸ್ಥಳದಲ್ಲಿ ಇಟ್ಟಿರುತ್ತಾನೆಂದು ಪ್ರಕಾಶಪಟ್ಟಿತು.

ಹಿಂದೆ ಪ್ರೋಫ್ಯಾರ್ಗರ್ಲ ಮಹಾರಾಣಿಯವರು ಧರಿಸುತಲಿದ್ದ ಅತ್ಯ ಮೌಲ್ಯವಾದ ಕೆಲವು ಆಭರಣಗಳನ್ನು ಈಗ ಸಿಕಂದರಾಬಾದಿನಲ್ಲಿರುವ ಒಬ್ಬ ವರ್ತಕನು ೪ ಲಕ್ಷ ರೂಪಾಯಿಗಳನ್ನು ಕೊಟ್ಟು ಖರಿಸಿಕೊಂಡಿರುವನು. ಇವುಗಳಲ್ಲಿ ಅತ್ಯತಿಯಲ್ಲಿ ಒಂದೇ ವಿಧವಾಗಿಯೂ ಅತಿಸುಂದರವಾಗಿಯೂ ಇರುವ ಒಂದು ಮುತ್ತಿನಹಾರವಿರುವುದು. ಈ ಒಂದು ಆಭರಣಕ್ಕೆ ಎಳ್ಪ ಲಕ್ಷದ ರೂಪಾಯಿಗಳಾಗುವುವು.

ಯಾರೂ ಸರಕಾರದ ಪರವಾನಿಗೆಯನ್ನು ತೆಗದುಕೊಳ್ಳದೆ ಗೋವಧೆ ಮಾಡಬಾರದು. ಮತ್ತು ಗೋದಮಾಂಸ ವಿಕ್ರಯ ಮಾಡಬಾರದೆಂದು ಪಂಜಾಬ್ ಸರ್ಕಾರದವರು ಹುಕುಂ ಮಾಡಿರುತ್ತಾರೆ. ಇದರಿಂದ ಎಷ್ಟೋ ಗೋವುಗಳ ಜೀವವು ರಕ್ಷಣೆ ಯಾಗುವದೆಂದು ನೋಡಿ ನಮಗೆ ಆನಂದ ಉಂಟಾಗುತ್ತದೆ. ಮೊನ್ನೆ ಹೋದ "ಬಕರೀದ್" ದೊಳಗೆ ೫೦ ಗೋವುಗಳ ವಧೆ ಮಾಡುವದಕ್ಕೆ ಪರವಾನಿಗೆಯನ್ನು ಬೇಡಿಕೊಂಡಾಗ್ಯೂ ೫ ಗೋವುಗಳನ್ನು ಮಾತ್ರ ವಧ ಮಾಡಲಿಕ್ಕೆ ಸರ್ಕಾರದವರು ಹುಕುಂ ಕೊಟ್ಟರು.

ಕಾಬೂಲಅಮೀರರು ಇಂಗ್ಲೀಷನವರು ತಮ್ಮ ರಾಜ್ಯದಲ್ಲಿ ರೇಲ್ವೆ ತರಬಾರದೆಂದು ಅರ್ಜಿ ಮಾಡಿರುತ್ತಾರೆ. ಇದರಂತೆ ತನ್ನ ಕೈಕೆಳಗಿನ ಸಂಸ್ಥಾನಿಕರಿಗೆ ಸಹ ಸರ್ಕ್ಯೂಲರ್ ಕೊಟ್ಟಿರುತ್ತಾರೆ. ಮತ್ತು ಕಾಬೂಲ್ ದೇಶದಿಂದ ಹಿಂದುಸ್ಥಾನಕ್ಕೆ ಮಾರಲಿಕ್ಕೆ ತರುವ ಕುದುರೆಗಳನ್ನು ಸಹಾ ಒಯ್ಯಗೊಡಬಾರದೆಂದು ಹುಕುಂ ಮಾಡಿದುಕೆ ವರ್ತಮಾನವದೆ. ಮತ್ತು ತನ್ನ ಕೋಟೆಗಳಲ್ಲಿ ೫೦೦ ಮಂದಿಯನ್ನು ಹೆಚ್ಚಾಗೆ ಇರಿಸಿ ತೋಫೆಗಳ ದುರಸ್ತಿ ನಡಿಸಿರುತ್ತಾರೆಂದು ಅತ್ತಕಡೆಗೆ ವರ್ತಮಾನವದೆ.

ಬಂಗಾಳಪ್ರಾಂತದ ದರ್ಭಂಗಾ ಪಟ್ಟಣದಲ್ಲಿನ ಒಂದಾನೊಂದು ಹಿಂದೂ ದೇವಾಲಯವನ್ನು ಕಾರಣಾಂತರಗಳಿಂದ ಅಲ್ಲಿನ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರವರು ಕೆಡಿಸಿದ ಕಾಲದಲ್ಲಿ ಮಹಮ್ಮದೀಯರು ಸರ್ಕಾರದವರ ಪಕ್ಷವಾಗಿದ್ದರೆಂಬ ದ್ವೇಷದಿಂದ ಅಲ್ಲಿನ ಹಿಂದುಗಳು ಕಳೆದ ವಾರದಲ್ಲಿ ಹುಸ್ಸೇನ್ ಎಂಬ ಮಹಮ್ಮದೀಯನೊಬ್ಬನು ಒಂದು ಹಸುವನ್ನು ಯಜ್ಞಮಾಡಬೇಕೆಂದು ಅಲ್ಲಿನ ಮ್ಯಾಜಿಸ್ಟ್ರೇಟರನ್ನು ಕೇಳದನೆಂದು ಜಮೀನ್ದಾರರೇ ಮೊದಲಾದ ಬಹುಜನ ಹಿಂದುಗಳು ದೊಂಬಿಮಾಡಿ ಮಹಮ್ಮದೀಯರಮೇಲೆಬಿದ್ದು ಅವಾಂತರಮಾಡಲಾಗಿ ೨೦ಜನ ಹಿಂದುಗಳನ್ನು ಹಿಡಿದು ಕೈದಿನಲ್ಲಿಮಡಗಿರುವದಲ್ಲದೆ ೮ಜನರಿಗೆ ವಾರಂಟನ್ನು ಕಳುಹಿಸಿರುವರು

THE MYSORE GAZETTE.
ಮೈಸೂರು ಗೆಜೆಟು.

ಶ್ರೀಮನ್ಮಹಾರಾಜರಾಜಾಸಾಹೇಬ್ ಬಹದೂರವರ ಸರ್ಕಾರದಿಂದ ಹೊರಟಿರುವ ಇಷ್ತಿಹಾರ್‌ನಾಮೆಗಳು.

ನಂ|| ೨೧೮—ಬೆಂಗಳೂರು ಡಿಸ್ಟ್ರಿಕ್ಟು ಡೆ|| ಕಮಿಷನರಾದ ಮ|| ಅಬ್ದುಲ್ ರಹಮಾನಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ೩ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

ನಂ. ೨೧೯. ತಾ|| ೩ನೇ ಸೆಪ್ಟೆಂಬರ್ ೧೮೯೦ ಹುಣಸೂರು ತಾ|| ಅಮಲ್ದಾರ್ ವಿಠಲರಾವ್ ಬಿಡ್ಕರ್ ಅಲ್ಲಿನವರಿಗೆ ೯೦ ನೇ ಇಸವಿ ಜೂಲೈ ೧೮ ನೇ ಮಾರ್ಚ ೧೪೧ ನೇ ನಂ. ಇಷ್ತಿಹಾರ್ ಮೂಲಕ ಕೊಡಲ್ಪಟ್ಟಿದ್ದ ೨೦ ದಿವಸಗಳ ಪ್ರಿವಿಲೇಜ್ ರಜಾವನ್ನು ೯೦ ನೇ ಇಸವಿ ಸೆಪ್ಟೆಂಬರ್ ೨ ನೇ ತಾರೀಖ್ ಲಾಗಾಯಿತು ಸದರೀಯವರು ಉಪಯೋಗಿಸಿಕೊಳ್ಳಲಿಕ್ಕೆ ಹುಕುಂ ಕೊಡಲ್ಪಟ್ಟಿರುತ್ತಾರೆ.

ನಂ. ೨೨೦—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ ೧೨ ನೇ ಸೆಕ್ಷನ್ ಅನುಸರಿಸಿ ಕೋಲಾರ್ ಮುನ್ಸಫ್ ಮ|| ತಿಮ್ಮಕೃಷ್ಣರಾವ್, ಬಿ. ಎ. ಬಿ. ಎಲ್. ಯವರಿಗೆ ೯೧ ನೇ ಇಸವಿ ಜನವರಿ ತನಕ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟಿ ಅಧಿಕಾರಗಳು ಕೊಡಲ್ಪಟ್ಟಿರುತಿವೆ.

ನಂ. ೨೨೨—ಬೆಂಗಳೂರು ಡಿ|| ಟ್ರೆಜರಿ ಛಾರ್ಜನಲ್ಲಿರತಕ್ಕ ಅಸಿಸ್ಟೆಂಟ್ ಕಮಿಷನರ್ ಮ|| ಎಸ್. ವೈದ್ಯನಾಥಯ್ಯರವರಿಗೆ ಮಾರ್ಚಿ ಮಹಿನೆ ೩ ನೇ ತಾರೀಖ್ ಲಾಗಾಯಿತು ೧೮ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ. ಮ|| ವೈದ್ಯನಾಥಯ್ಯರವರು ರಜಾ ಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಬೆಂಗಳೂರು ಡಿ|| ಅಸಿಸ್ಟೆಂಟ್ ಕಮಿಷನರ್ ಮ|| ಅಣ್ಣಾಜೀರಾಯರವರು ಡಿಸ್ಟ್ರಿಕ್ಟು ಛಾರ್ಜನಲ್ಲಿರುವರು.

ನಂ|| ೨೨೪—ಅಮಲ್ದಾರ್ ಕುಪ್ಪುಸ್ವಾಮಿನಾಯಡರವರ ಗೈರುಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚೆನ್ನಪಟ್ಟಣ ಸಬ್ ತಾ|| ಡೆಪ್ಯುಟಿ ಅಮಲ್ದಾರ್ ಬಾದಾಮಿ ಕೃಷ್ಣರಾಯರವರು ೫ನೇ ಕ್ಲಾಸ್ ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ. ಬಿ. ಕೃಷ್ಣರಾಯರವರು ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚೀಫ್‌ಕೋರ್ಟ್ ಟ್ರಾನ್ಸ್ಲೇಟರ್ ಡಿ. ನರಸಿಂಗರಾಯರವರು ಚೆನ್ನಪಟ್ಟಣ ಸಬ್ ತಾ|| ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ|| ೨೨೫—ಅರಸೀಕೆರೆ ತಾ|| ಅಮಲ್ದಾರ್ ಮತ್ತು ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಹಮದಲ್ಲಿಯವರು ಇತರ ಕೆಲಸದಮೇಲಿರತಕ್ಕ ಮ|| ಚೆಂಗಯ್ಯಶೆಟ್ಟಿರವರಿಗೆ ಬದಲಾಗಿ ಮೈಸೂರು ತಾಲ್ಲೂಕಿಗೆ ಹಂಗಾಮಿಯಾಗಿ ವರ್ಗ ಮಾಡಲ್ಪಟ್ಟಿರುತ್ತಾರೆ. ಅಹಮದಲ್ಲಿಯವರು ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಶ್ರೀರಂಗಪಟ್ಟಣದ ಅಮಲ್ದಾರ್ ಆರ್. ಮಾಧವರಾಯರವರು ಅರಸೀಕೆರೆ ತಾ|| ೫ ನೇ ಗ್ರೇಡ್ ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ. ಮೈಸೂರು ಡಿ|| ಪ್ರೊಬೇಷನರ್ ಕೃಷ್ಣ ಅರಸಿನವರು ಸದರೀ ಮಾಧವರಾಯರವರು ಗೈರುಹಾಜರಾಗಿರುವಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಶ್ರೀರಂಗಪಟ್ಟಣ ಸಬ್ ತಾ|| ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಮ|| ಟಿ. ಪರಮಶಿವಯ್ಯರ್ ಬಿ. ಎ. ಯವರು ಸಂಸ್ಕೃತ ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರ್ ಮ|| ಎಸ್. ರಂಗಾಚಾರ್ಯರವರೂ ಮೈಸೂರು ದೇಶೀಯ ಪರೀಕ್ಷಾ ಕಮಿಟಿಯ ಮೆಂಬರುಗಳಾಗಿ ನಿಯಮಿಸಲ್ಪಟ್ಟಿರುತ್ತಾರೆ.

ನಂ ೨೨೬ ತಾ|| ೬ನೇ ಸೆಪ್ಟೆಂಬರ್ ೧೮೯೦—೯೦ನೇ ಇಸವಿಯ ೨ನೇ ರೆಗ್ಯುಲೇಷನ್‌ಮೂಲಕ ತಿದ್ದುಪಡಿಯಾದ ೮೪ನೇ ಇಸವಿಯ ಮೈಸೂರ್ ಚೀಫ್‌ಕೋರ್ಟ್ ರೆಗ್ಯುಲೇಷನಿನ ೧೨ನೇ ಸೆಕ್ಷನ್ ಪ್ರಕಾರ ಶ್ರೀಮನ್ಮಹಾರಾಜಾ ಸರ್ಕಾರದವರು ಆಜ್ಞಾಪಿಸುವ ದೇನೆಂದರೆ—೧೮೯೦ನೇ ಇಸವಿ ಜೂಲೈ ೧೨ನೇ ಮಾರ್ಚ ೧೨ನೇ ನಂಬರುಳ್ಳ ಇಷ್ತಿಹಾರಿನಿಂದ, ರೆವಿನ್ಯೂ ಡಿಸ್ಟ್ರಿಕ್ಟುಗಳಾದ ಬೆಂಗಳೂರು, ಕೋಲಾರ ವ ತುಮಕೂರು, ಇವುಗಳ ಸ್ಥಳ ಸರಹದ್ದುಗಳಲ್ಲಿ ಚಲಾಯಿಸತಕ್ಕ ಬಗ್ಗೆ ಚೀಫ್‌ಕೋರ್ಟನವರಿಗೆ ಪ್ರಂಟು ಮಾಡಲ್ಪಟ್ಟ ಒಂದು ಡಿಸ್ಟ್ರಿಕ್ಟು ಕೋರ್ಟಿನ ಸಾಧಾರಣ ಅಸಲಿ ಸಿವಿಲ್ ಅಧಿಕಾರವೂ, ಒಂದು ಸೆಷನ್ಸ್ ಕೋರ್ಟಿನ ಸಾಧಾರಣ ಅಸಲಿ ಕ್ರಿಮಿನಲ್ ಅಧಿಕಾರವೂ ೧೮೯೦ನೇ ಇಸವಿ ಸೆಪ್ಟೆಂಬರ್ ೧೫ನೇ ತಾರೀಖ್ ಲಾಗಾಯಿತು ಸದರೀ ಚೀಫ್‌ಕೋರ್ಟನವರಿಂದ ವಾಪಸ್ ತೆಗದುಕೊಳ್ಳಲ್ಪಟ್ಟಿರುತಿವೆ. ಸದರೀ ತಾರೀಖ್ ಮೊದಲು ಮತ್ತು ಆತಾರೀಖ್ ತರುವಾಯ ೧೮೮೩ನೇ ಇಸವಿಯ ಮೈಸೂರು ಸಿವಿಲ್‌ಕೋರ್ಟು ರೆಗ್ಯುಲೇಷನಿನ ನಿಯಮಗಳ ಪ್ರಕಾರ "ನಂದೀದುರ್ಗ ಡಿವಿಜನ್ ಡಿಸ್ಟ್ರಿಕ್ಟು ಕೋರ್ಟ್" ಎಂಬ ಹೆಸರಿನಲ್ಲಿ ಒಂದು ಡಿಸ್ಟ್ರಿಕ್ಟು ಕೋರ್ಟ್ ಬೆಂಗಳೂರಲ್ಲಿ ಸ್ಥಾಪಿಸಲ್ಪಡುವದಲ್ಲದೆ ಅದರ ಸ್ಥಳಾಧಿಕಾರ ಸರಹದ್ದಿಗೆ ಮೇಲೆ ಕಂಡ ರೆವಿನ್ಯೂ ಡಿಸ್ಟ್ರಿಕ್ಟುಗಳಾದ ಬೆಂಗಳೂರು ಕೋಲಾರ್ ವ ತುಮಕೂರು ಸೇರಿರುತಿವೆ. ಸದರೀ ಮೂರು ಡಿಸ್ಟ್ರಿಕ್ಟುಗಳು ಕ್ರಿಮಿನಲ್ ಪ್ರೊಸಿಡ್ಯೂರ್‌ಕೋಡನ್ನನುಸರಿಸಿ ಒಂದು ಸೆಷನ್ಸ್ ಡಿವಿಜನ್ನಾಗಿ ಭಾವಿಸಲ್ಪಡತಕ್ಕದ್ದಲ್ಲದೆ ಸದರೀ ಕೋಡಿನ ೯ನೇ ಸೆಕ್ಷನ್ ಅನುಸರಿಸಿ "ನಂದೀದುರ್ಗಡಿವಿಜನ್ ಸೆಷನ್ಸ್‌ಕೋರ್ಟ್" ಎಂಬದಾಗಿ ಕರೆಯಲ್ಪಡತಕ್ಕ ಒಂದು ಕೋರ್ಟ್ ಅಲ್ಲಿ ಸ್ಥಾಪಿಸಲ್ಪಡತಕ್ಕದ್ದು. ೧೮೯೦ ನೇ ಇಸವಿ ಸೆಪ್ಟೆಂಬರ್ ೧೫ನೇ ತಾರೀಖಿನ ತರುವಾಯ ಸಿವಿಲ್ ಸ್ವಭಾವವುಳ್ಳ ವಿಶಿಷ್ಟದಾವೆಗಳಲ್ಲಿಯೂ ನಡವಳಿಗಳಲ್ಲೂ ಒಂದು ಡಿಸ್ಟ್ರಿಕ್ಟು ಕೋರ್ಟಿನ ಸಾಧಾರಣ ಅಸಲಿ ಸಿವಿಲ್ ಅಧಿಕಾರವೂ ಒಂದು ಸೆಷನ್ಸ್ ಕೋರ್ಟಿನ ಸಾಧಾರಣ ಅಸಲ್ ಕ್ರಿಮಿನಲ್ ಅಧಿಕಾರವೂ ಸದರೀನಂದೀದುರ್ಗ ಡಿವಿಜನ್ ವ ಸೆಷನ್ಸ್ ಜಡ್ಜಿಯವರಿಂದಸದರೀ ಡಿವಿಜನಿನ ಸ್ಥಳಾಧಿಕಾರ ಸರಹದ್ದಿನೊಳಗೆ ಚಲಾಯಿಸಲ್ಪಡತಕ್ಕದ್ದು.

ನಂ. ೨೨೭—೯೦ ನೇ ಇಸವಿ ೨ ನೇ ರೆಗ್ಯುಲೇಷನಿನ ಮೂಲಕ ತಿದ್ದುಪಡಿಯಾದ ಮೈಸೂರ್ ಚೀಫ್‌ಕೋರ್ಟ್ ರೆಗ್ಯುಲೇಷನಿನ ೧೨ನೇ ಸೆಕ್ಷನ್ ಪ್ರಕಾರ ಮೈಸೂರ್ ಸರ್ಕಾರದವರು, ನಂದೀದುರ್ಗ ಡಿವಿಜನಿಗೆ ಸೇರಿರತಕ್ಕ ರೆವಿನ್ಯೂ ಡಿಸ್ಟ್ರಿಕ್ಟುಗಳಾದ ಬೆಂಗಳೂರು ಕೋಲಾರ ವ ತುಮಕೂರ್ ಇವುಗಳ ಸ್ಥಳ ಸರಹದ್ದುಗಳೊಳಗೆ ತಾಬೇದಾರಿಯಾದ ಯಾವದಾದರು ಸಿವಿಲ್ ವ ಕ್ರಿಮಿನಲ್ ಕೋರ್ಟುಗಳಿಂದ ಮಾಡಲ್ಪಟ್ಟ ಫೈಸಲೆಗಳು, ಹುಕುಂಗಳು, ಡಿಕ್ರಿಗಳು, ಯಾ ಸೆಂಟೆನ್ಸ್ ಯಾನೆ ತಕ್ಸೀರ್‌ನಾಮೆಗಳು, ಇವುಗಳ ಮೇಲೆ ಕಾನೂನನ್ನನುಸರಿಸಿ ಒಂದು ಡಿಸ್ಟ್ರಿಕ್ಟ್ ಕೋರ್ಟನವರಿಂದ ಅಂಗೀಕರಿಸಲ್ಪಡಬಹುದಾದಂತಾ ವಿಶಿಷ್ಟ ಅಪೀಲುಗಳನ್ನು ವಿಚಾರಿಸಿ ನಿರ್ಣೈಸುವ ಅಧಿಕಾರವನ್ನು ಚೀಫ್ ಕೋರ್ಟನವರಿಗೆ ಮತ್ತೊಂದು ಹುಕುಂ ಕೊಡುವ ತನಕ ಉಳುಪಮಾಡಿರುತ್ತಾರಲ್ಲದೆ ಸದರೀ ಚೀಫ್‌ಕೋರ್ಟನವರಿಗೆ ಇದರಿಂದ ಉಳುಪಮಾಡಿರತಕ್ಕ ಅಪೀಲ್ ಅಧಿಕಾರವು ನಂದೀದುರ್ಗ ಡಿವಿಜನ್ ಡಿಸ್ಟ್ರಿಕ್ಟ್ ಯಾ ಸೆಷನ್ಸ್ ಕೋರ್ಟಿನವರಿಂದ ಚಲಾಯಿಸಲ್ಪಡತಕ್ಕದು. ಪರಂತು ಅಂತಾ ಡಿಸ್ಟ್ರಿಕ್ಟು ಯಾ ಸೆಷನ್ಸ್ ಕೋರ್ಟನವರು ವಿಚಾರಿಸಿ ವ್ಯವಸ್ಥೆ ಮಾಡತಕ್ಕ ಬಗ್ಗೆ ಚೀಫ್‌ಕೋರ್ಟನವರು ಅವರಿಗೆ ವರ್ಗ ಮಾಡಬಹುದಾದ ಅಪೀಲ್ ಮೊಕದ್ದಮೆಗಳ ವಿಷಯದಲ್ಲಿ ಮೇಲೆ ಕಂಡ ನಿಯಮ ವಿಧುವದಿಲ್ಲವು.

ನಂ. ೨೨೮—೯೦ ನೇ ಇಸವಿ ಸೆಪ್ಟೆಂಬರ್ ೧೫ನೇ ತಾರೀಖ್ ಲಾಗಾಯಿತು ಮೈಸೂರ್ ಡಿಸ್ಟ್ರಿಕ್ಟು ವ ಸೆಷನ್ಸ್ ಜಡ್ಜಿಯಾದ ಮ|| ಟಿ. ನರಹರಿರಾವ್ ಎಂ. ಎ. ಯವರು ನಂದೀದುರ್ಗ ಡಿವಿಜನ್ ಡಿಸ್ಟ್ರಿಕ್ಟು ವ ಸೆಷನ್ಸ್ ಜಡ್ಜಿಯರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಮೈಸೂರು ಸಬಾರ್ಡಿನೇಟ ಜಡ್ಜಿಯರಾದ ಮ|| ಸಿ. ಶ್ರೀನಿವಾಸಯ್ಯಂಗಾರ್ರವರು ಬೆಂಗಳೂರಿಗೆ ವರ್ಗಮಾಡಲ್ಪಟ್ಟ ಮ|| ಟಿ. ನರಹರಿರಾಯರವರಿಗೆ ಬದಲಾಗಿ ಮೈಸೂರ್ ಡಿಸ್ಟ್ರಿಕ್ಟ ವ ಸೆಷನ್ಸ್ ಜಡ್ಜಿಯರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರಲ್ಲದೆ ೧೧ ನೇ ತಾರೀಖಿನಲ್ಲಿ ಅಥವಾ ತತ್ಪೂರ್ವ ಮ|| ನರಹರಿರಾಯರವರನ್ನು ಕೆಲಸದಿಂದ ಬಿಡುಗಡೆಮಾಡುವಂತೆ ಹುಕುಂ ಮಾಡಲ್ಪಟ್ಟಿರುತ್ತಾರೆ.

ಮೈಸೂರು ಡಿಸ್ಟ್ರಿಕ್ಟು ಅ ಕಮಿಷನರ್ ಮ|| ಸ್ಟಿವರ್ ರಾಮಸ್ವಾಮಯ್ಯರ್ ಬಿ. ಎ. ಬಿ. ಎಲ್. ಯವರು ವರ್ಗವಾದ ಮ|| ಸಿ. ಶ್ರೀನಿವಾಸಯ್ಯಂಗಾರ್ರವರಿಗೆ ಬದಲಾಗಿ ತತ್ಕಾಲದಲ್ಲಿ ೩ನೇ ಗ್ರೇಡ ಮೈಸೂರು ಸಬ್ ಜಡ್ಜಿಯರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. ೨೨೯—೧೮೮೩ನೇಇಸವಿ ಜೂಲೈ ೬ನೇ ಮಾರ್ಚ ಮೊಕ್ಕಾಂ ನಂಬರ್ ೧೫೫೦, ೧೮೮೮ನೇ ಇಸವಿ ಮಾರ್ಚ ೬ ನೇ ಮಾರ್ಚ ಮೊ|| ನಂಬರ್ ೨೩೪೧ ವುಳ್ಳ ಇಷ್ತಿಹಾರ್ ನಾಮೆಗಳನ್ನು ರದ್ದುಮಾಡಿ ೮೨ನೇ ಇಸವಿ ಕ್ರಿಮಿನಲ್ ಪ್ರೊಸಿಡ್ಯೂರ್‌ಕೋಡ್ ೨೬ ಮತ್ತು ೨೩೪ನೇ ಸೆಕ್ಷನ್‌ಗಳ ನಿಯಮಗಳನ್ನನುಸರಿಸಿ ಇವರಡಿ ಕಂಡ ತಕ್ಸೀರ್‌ಗಳು ನಂದೀದುರ್ಗ ಡಿವಿಜನ್ ಸೆಷನ್ಸ್ ಕೋರ್ಟನವರಮುಂದೆ ಬೆಂಗಳೂರಲ್ಲಿ ವಿಚಾರಿಸಲ್ಪಡುವಾಗ ೫ ಮಂದಿ ಜೂರಿಗಳಿಂದ ನಡಸಲ್ಪಡತಕ್ಕದ್ದು.

(೧)	ಇಂ|| ಪೀ|| ಕೋಡ್ ೩೭೯—೩೮೦ ಮತ್ತು ೩೮೧ ನೇ ಸೆಕ್ಷನ್‌ಪ್ರಕಾರದ ಕಳವು.	
(೨)	ಡಿಟೊ	೩೮೭ ಮತ್ತು ೩೮೯ನೇ ಸೆಕ್ಷನ್‌ಗಳಪ್ರಕಾರ ಸುಲಿಗೆ.
(೩)	ಡಿಟೊ	೩೯೨ರಿಂದ ೩೯೫ ರ ವರಿಗಿನ ಮತ್ತು ೩೯೭ರಿಂದ ೪೦೨ ವರಿಗಿನ ಸೆಕ್ಷನ್‌ಗಳನ್ನನುಸರಿಸಿ ಚೋರಿ ಯಾ ದರೋಡೆ ಕಳವು.
(೪)	ಡಿಟೊ	೪೧೧–೪೧೨ ಮತ್ತು ೪೧೪ ನೇ ಸೆಕ್ಷನ್‌ಗಳನ್ನನುಸರಿಸಿ ಕಳವು ಮಾಲುಗಳನ್ನು ತೆಗದುಕೊಳ್ಳುವದು.
(೫)	ಡಿಟೊ	೪೫೧–೪೫೨—೪೫೪ ರಿಂದ ೪೫೯ ರ ವರಿಗಿನ ಮತ್ತು ೪೬೨ ಈ ಸೆಕ್ಷನ್‌ಗಳ ಪ್ರಕಾರ ಕನ್ನಚೋರಿ ವಗೈರೆ
(೬)	ಡಿಟೊ	೪೨೯ರಿಂದ ೪೩೩ ರವರಿಗಿನ ಮತ್ತು ೪೩೫ರಿಂದ ೪೪೦ ರವರಿಗಿನ ಸೆಕ್ಷನ್‌ಗಳ ಪ್ರಕಾರ ಕೆಡುಕು.
(೭)	ಡಿಟೊ	ಮೇಲೆ ಕಂಡ ತಕ್ಸೀರುಗಳ ಪೈಕಿಯಾವದಕ್ಕಾದರು ಪ್ರಯತ್ನಮಾಡುವದು.
(೮)	ಡಿಟೊ	೪೧೩ನೇ ಸೆಕ್ಷನ್ ಪ್ರಕಾರ ಕಳವು ಮಾಲಿನಲ್ಲಿ ಮಾಮೂಲಾಗಿ ವ್ಯಾಪಾರಮಾಡುವದು.

ಇತರ ತಕ್ಸೀರುಗಳಿಗೆ ಸಂಬಂಧಪಟ್ಟ ಮೊಕದ್ದಮೆಗಳ ವಿಚಾರಣೆಯು ಅಸ್ಸೆಸರುಗಳ ಸಹಾಯದಿಂದ ನಡೆಸಲ್ಪಡತಕ್ಕದ್ದು.

ನಂ ೨೩೦—ಮಾಹೇಮಜಕೂರ್ ೬ನೇ ತಾರೀಖುಳ್ಳ ೨೨೬ನೇ ನಂಬರ್ ಇಷ್ತಿಹಾರನ್ನನುಸರಿಸಿ ನಂದೀದುರ್ಗ ಡಿವಿಜನ್ ಸೆಷನ್ಸ್‌ಕೋರ್ಟಿನ ಮುಂದೆ ನಡೆಯತಕ್ಕ ವಿಚಾರಣೆಗಳೆಲ್ಲವು, ಯಾವಾಗಲಾದರು ಕೋಲಾರ್ ಯಾ ತುಮಕೂರಲ್ಲಿ ಗಳಲ್ಲಿ ನಡೆಯುವದಾದರೆ ಆಗ ಅಸ್ಸೆಸರುಗಳ ಸಹಾಯದೊಡನೆ ನಡಸಲ್ಪಡತಕ್ಕದ್ದು.

ನಂ ೨೩೧—ಮ|| ಎಸ್. ರಾಮಸ್ವಾಮಯ್ಯರವರು ೯೦ ನೇ ಇಸವಿ ಸೆಪ್ಟೆಂಬರ್ ೧೫ನೇ ಮುದ್ದಂಲಾಗಾಯಿತು ನಂದೀದುರ್ಗ ಡಿವಿಜನ್ ಪಬ್ಲಿಕ್ ಪ್ರಾಸಿಕ್ಯೂಟರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ. ೮೨ನೇ ಇಸವಿ ಕ್ರಿಮಿನಲ್ ಪ್ರೊಸಿಡ್ಯೂರ್‌ಕೋಡಿನ ೪೯೨ನೇ ಸೆಕ್ಷನ್ ಅನುಸರಿಸಿ ಈ ಸಂಸ್ಥಾನದ ಯಾವದಾದರೂ ಸೆಷನ್ಸ್ ಕೋರ್ಟುಗಳಿಂದ ವಿಧಿಸಲ್ಪಟ್ಟ ಸಜಾಗಳ ಮೇಲಣ ಅಪೀಲುಗಳಿಗಾಗಿ ಕೊಡಲ್ಪಡತಕ್ಕಾದ ತಮಾಂ ನೋಟಿಸ್‌ಗಳನ್ನೂ, ಸದರೀ ಕೋಡಿನ ೫೦೬ನೇ ಸೆಕ್ಷನ್ನನುಸರಿಸಿ ಪಬ್ಲಿಕ್ ಪ್ರಾಸಿಕ್ಯೂಟರಿಗೆ ಕೊಡಬೇಕಾದ ನೋಟೀಸನ್ನು ಬರಮಾಡಿಕೊಳ್ಳಲಿಕ್ಕೆ ಇದರಿಂದ ಸದರೀ ರಾಮಸ್ವಾಮಯ್ಯರವರಿಗೆ ಅಧಿಕಾರ ಪ್ರಂಟು ಮಾಡಲ್ಪಟ್ಟಿರುತ್ತಾರೆ.

ನಂ. ೨೩೨—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ ೧೨ ನೇ ಸೆಕ್ಷನ್ ಅನುಸರಿಸಿ ಸದರೀ ಕೋಡಿನ ೩ ನೇ ಷೆಡ್ಯೂಲಿನಲ್ಲಿ ತಿಳಿಸಿರುವ ಪ್ರಕಾರ ಬೆಂಗಳೂರು ಸಬಾರ್ಡಿನೇಟ ಜಡ್ಜಿ ಮ|| ಎನ್. ಅನಂತಸ್ವಾಮಿ ರಾಯರವರಿಗೆ ೧ ನೇ ಕ್ಲಾಸ್ ಮ್ಯಾಜಿಸ್ಟ್ರೇಟಿ ಸಾಧಾರಣ ಅಧಿಕಾರಗಳು ಕೊಡಲ್ಪಟ್ಟಿರುತಿವೆ.

ನಂ. ೨೩೩—ಮೈಸೂರು ಡಿಸ್ಟ್ರಿಕ್ಟು ಪೋಲೀಸ್ ಅಸಿಸ್ಟೆಂಟ್ ಕಮಿಷನರ್ ಮತ್ತು ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಮ. ಕೆ. ಮಹಮ್ಮದಲ್ಲಿಯವರು ಅದೇ ಡಿಸ್ಟ್ರಿಕ್ಟಿನಲ್ಲಿ ಜನರಲ್ ಡ್ಯೂಟಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ. ಕಡೂರು ಡಿ|| ಪೋಲೀಸ್ ಅಸಿಸ್ಟೆಂಟ್ ಕಮಿಷನರ್ ಮ|| ಪಿ. ಆರ್. ಡಬ್ಲ್ಯೂ ಪೆವರಾಲಿಯವರು ಪೋಲೀಸ್ ನೌಕರಿಯ ಬಗ್ಗೆ ಮೈಸೂರಿಗೆ ವರ್ಗಮಾಡಲ್ಪಟ್ಟಿರುತ್ತಾರೆ. ಮ|| ಚಾರ್ಜ ಡನ್ನಿಂಗ್ ಯವರು ಬದಮಾಯಿಷೀ ತರೀಕ್ ಕಡೂರು ಡಿ|| ಪೋಲೀಸ್ ಅಸಿಸ್ಟೆಂಟ್ ಕಮಿಷನರಾಗಿ ಕೆಲಸ ನೋಡುವುದಕೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

BANGALORE.—Printed and published at the KARNATIC PRESS, No. 114, SRINIVASA MANDIRAM ROAD, PETTAH.—1890.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಶ್ರೀಮನುನಿಪಿನಸ್ತ್ರನ್ಯವ್ಯಪಗನಾರ್ಥಕರ್ಣಾಟಕಪ್ರಕಾಶನಪರಾಭಿಧಾಪ್ರತ್ರಿಕಸಾಹಿತೀಶೋಭಿತಾ। ವ್ಯಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ಧಿತಾಸುಪರಿಜ್ಞಾಪಿತಾದಿಕತಿಮಾನಸುಸುಖದಾ॥

Vol. XVII] BANGALORE:—MONDAY, SEPTEMBER 15, 1890 [No. 37.

ಸಂಪುಟ ೧೭.] ಬೆಂಗಳೂರು:—ಸನ್ ೧೮೯೦ನೇ ಇಸವಿ ಸೆಪ್ಟೆಂಬರ್ ೧೫ ನೇ ತಾರೀಖು ಸೋಮವಾರ. [ಸಂಚಿಕೆ ೩೭.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಕಾಲ್ ಅಂಕ್ಕೆ		ಸ್ಥಳೀಯವರಿಗೆ	ಪರಸ್ಥಳದವರಿಗೆ ಅಂಚೆಕೂಲಿ ಸಹಾ
ಮುಂಗಡಕೊಡತಕ್ಕವರಿಗೆ		8—0—0	9—0—0
ತರುವಾಯ	,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡ ಕೊಡುವರಿಗೆ		4—0—0	5—0—0
ತರುವಾಯ	,,	5—0—0	6—0—0

ಈ ಪತ್ರಿಕೆಗೆ [illegible] ತಾರೀಖು [illegible] ಒಂದು ತಿಂಗಳ [illegible] ಹಣವು [illegible] ಪತ್ರಿಕೆ ಕಳುಹಲ್ಪಡ [illegible] ಇಂಗ್ಲಿಷ್ [illegible] ಕನ್ನಡ [illegible] ಅಥವಾ ಎರಡನ್ನಾಗಲಿ ತರಿಸಿಕೊಳ್ಳಬಹುದು. [illegible]

ನೋಟುಗಳು [illegible] ಸನ್ನದರ್ಥ [illegible] ಬಾಕೀ [illegible] ಪತ್ರಿಕೆ [illegible] ಬರೆದು [illegible] ಬೆಂಗಳೂರು [illegible]

ಪ್ರಕಟನೆಯ ರಿವಾಜ್.

ಮೊದಲನೆಯದಕ್ಕೆ ಸಾಲ್ಕೆ ಒಂದಕ್ಕೆ 0—2—0

ಎರಡನೆಯದಕ್ಕೆ ಸಾಲ್ಕೆ ಒಂದಕ್ಕೆ 0—1—0

[illegible] ಈ ಪತ್ರಿಕೆಯಲ್ಲಿ [illegible] ಪ್ರಕಟಿಸಲ್ಪಟ್ಟ [illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥವು [illegible] ಮೊಬಲಗು ಕಳುಹಿಸ [illegible] ಇಲ್ಲದ [illegible]

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ನಾಕಲ್ ಕೂಲಿ ಪ್ರತಿ ಒಂದಕ್ಕೆ ರೂ 5—0—0

ಬಿ. ಬಿ. ವೆಂಕಟಾಚಾರ್,

[illegible], ಬಸ್ಸಾಪುರ ರೋಡ್ ನಂ 41ನೇ ನಂಬರ್.

ADVERTISEMENTS

ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ಬಿಕರಿಗೇ ಸಿದ್ಧವಾಗಿವೆ ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

		ರೂ. ಆ. ಪೈ
ಸಟೀಕಾ ವ್ಯಾಸಕಾರ ಸಂಗ್ರಹ	....	[illegible]
,, ಶಿವಗೀತೆ	...	[illegible]
,, ಶಿವಾನಂದಲಹರಿ	...	[illegible]
,, ಕಾಲಾಮೃತ	..	[illegible]
,, ಮುಹೂರ್ತದರ್ಪಣ	...	[illegible]
,, ಬಾಲರಾಮಾಯಣ	...	[illegible]
,, [illegible] ಗೀತೆ	...	[illegible]
,, [illegible] ಗೀತೆ (ಸಂಗ್ರಹಿತ)		[illegible]
ವಿಷ್ಣುಸಹಸ್ರ ನಾಮ ಪತ್ರಿಕೆ	...	[illegible]
ಸೂರ್ಯಸಹಸ್ರ ನಾಮ	...	[illegible]
ಕೃಷ್ಣಕರ್ಣಾಮೃತ	...	[illegible]
ತ್ರಿಕಾಂಡ ಅಮರ ಮೂಲ	...	[illegible]
[illegible]	...	[illegible]

ಕನ್ನಡ ಗ್ರಂಥಗಳು.

[illegible] ಅಪ್ಪಾಜಿ ಪ್ರತಿ	..	[illegible]
[illegible]	...	[illegible]
ಕೃಷ್ಣದೇವೇಂದ್ರ ವಿಜಯ	...	[illegible]
[illegible]	..	[illegible]
[illegible]	...	[illegible]
[illegible]	...	[illegible]
[illegible] ಪರಿಣಯ	...	[illegible]
[illegible] ಪರಿಣಯ	...	[illegible]
ಸುಧಾಮಚರಿತ್ರೆ	..	[illegible]
[illegible] ಚರಿತ್ರೆ	...	[illegible]
[illegible]	...	[illegible]
[illegible]	....	[illegible]
[illegible] ವಿಲಾಸ	...	[illegible]

ನೋಟೀಸ್.

ಮನೆಗಳಲ್ಲಿ ಗಿಲಿಟ್ ಮಾಡುವದಕ್ಕೆ ಅನುಕೂಲವಾದ ಬೆಳ್ಳಿ ದ್ರಾವಕವು.

ಈ ಬೆಳ್ಳಿ ದ್ರಾವಕವು [illegible] ತಾಮ್ರ, ಹಿತ್ತಾಳೆ ವಗೈರೆ [illegible] ಮೇಲಿಂ [illegible] ಮೂಲಕ ಗಿಲಿಟ್ [illegible] ಉಪಯುಕ್ತವಾದದ್ದಾಗಿರುತ್ತದೆ. [illegible] ದ್ರಾವಕವು [illegible] ಇದರಿಂದ [illegible] ಗಿಲಿಟ್ ಮಾಡುವದಕ್ಕಿಂತ [illegible]

ಇದರ ಕ್ರಯ ಸೀಸೆ ೧ಕ್ಕೆ [illegible]

ಚಿನ್ನದ ದ್ರಾವಕವು.

ಇದು ಬೆಳ್ಳಿ, ಹಿತ್ತಾಳೆ, ತಾಮ್ರ ವಗೈರೆ ಪದಾರ್ಥಗಳನ್ನು ಗಿಲ್ಟ್ ಮಾಡುವದಕ್ಕೆ ಬಹಳ ಉಪಯುಕ್ತವಾಗಿರುವದಲ್ಲದೆ ಶುದ್ಧವಾದ ಭಂಗಾರದಷ್ಟು ತೇಜಸ್ಸಾಗಿರುತ್ತದೆ ಬೆಳ್ಳಿ ಆಭರಣಗಳನ್ನು ಗಿಲ್ಟ್ ಮಾಡುವದಕ್ಕೆ ಈ ದ್ರಾವಕವು ಕೇವಲ ಪ್ರಯೋಜನಕರವಾಗಿರುವದು.

ಇದರ ಕ್ರಯ ಸೀಸೆ ೧ಕ್ಕೆ [illegible]

ಬೇಕಾದವರು [illegible] ಬೆಳ್ಳೀ [illegible] ಮ್ಯಾನೇಜರಿಗೆ ಬರೆದು ತರಿಸಿಕೊಳ್ಳಬಹುದು.

ಮೈಸೂರು ಮಹಾರಾಜರವರ ಅರಳೇ ಯಂತ್ರದ ಕಾರ್ಖಾನೆ.

ನೋಟೀಸ್.

ಮೈಸೂರು ಮಹಾರಾಜರವರ ಅರಳೆ ಯಂತ್ರದ ಕಾರ್ಖಾನೆಯಲ್ಲಿ ಹೊಸ ನಮೂನೆ ಯಂತ್ರದ ಮೂಲಕ ಉತ್ತಮವಾದ ಗೋಧಿ ಹಿಟ್ಟು, ರವೆ, ಹೊಟ್ಟು ತಯಾರುಮಾಡಲ್ಪಟ್ಟು, ಪೇಟೆಯಲ್ಲಿರುವ ಸದರೀ ಕಾರ್ಖಾನೆಗೆ ಸೇರಿದ ಷಾಪುಗಳಲ್ಲೂ, ಬೆಂಗಳೂರು ಕಂಟೋನ್ಮೆಂಟಿನಲ್ಲಿ ಒಬ್ಬರೇ ಏಜೆಂಟರಾಗಿರುವ ಸಾಲಿಯಾ ಮಹಮ್ಮದ್ ಶಾ ಸಿಂಸೇಡಿಯವರ ಡಿಸ್ಪೆನ್ಸರಿ ರಸ್ತೆಯಲ್ಲಿರುವ ಷಾಪಿನಲ್ಲೂ ಮಾರಲ್ಪಡುತ್ತಿವೆ.

ನೋಟೀಸ್.

ಮೈಸೂರು ಶೀಮೆಯ ಚೀಫ್ ಕೋರ್ಟಿನಲ್ಲಿ. ಸನ್ 1890ನೇ ಇಸವಿ ಮಿಸಲೇನಿಯಸ್ ಪಿಟಿಷನ್ ನಂಬರ್ 191.

ಅರ್ಜೀದಾರರು

ದೇವನಹಳ್ಳಿ ತಾಲ್ಲೂಕು ನರಿಗೇನಹಳ್ಳಿಯಲ್ಲಿ ಇರುವ ಸೌಮ್ಯ ಕೇಶವ ಸ್ವಾಮಿ ರಾಜಧಾನೀ ಕಲ್ಯಾಣ ಸಹಾಯನಿಧಿ ಕಂಪೆನಿ ಮೆಂಬರುಗಳಾದ ಸಂಗೀತ ನಂಜುಂಡ ಶಾಸ್ತ್ರಿ ವಗೈರೇರು.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ:—

ಸಂಗೀತ ನಂಜುಂಡಶಾಸ್ತ್ರಿ ವಗೈರೇರು—ಮೇಲ್ಕಂಡ ಕಂಪೆನಿಯಲ್ಲಿ ಹಣ ಕಮ್ಮಿಯಾಗಿದೆ ಕಾಲ್ಸು ನಡೆಯಲಾಗುವದಿಲ್ಲ. ಸಹಾಯ ಕೊಡುವದಕ್ಕೆ ಹಣ ಸಾಲದು. ಇಬ್ಬರು ಷೇರ್‌ದಾರರು ಕಂಪೆನಿಮೇಲೆ ದಾವಾಮಾಡಿ ಅಪ್ಪೈಕಿ ಒಬ್ಬರು ಕಂಪೆನೀಲಿ ಇದ್ದ ಹಣವನ್ನು ಡಿಕ್ರಿ ಜಪ್ತೀ ಮಾಡಿಸಿಯಿದ್ದಾರೆ. ಇವರುಗಳ ಮಟ್ಟಿಗೆ ಹಣ ಸಂದಾಯವಾದರೆ ಬಾಕಿ ಷೇರ್‌ದಾರರಿಗೆಲ್ಲ ನಷ್ಟ ಸಂಭವಿಸುವದರಿಂದ ಕಂಪೆನಿ ವೈಂಡಪ್ ಮಾಡಿಸಬೇಕೆಂದು ವಗೈರೆ ಅರ್ಜಿ ಕೊಟ್ಟಿದ್ದಾರೆ. ಇದರ ಇತ್ಯರ್ಥದಬಗ್ಯೆ ಸನ್ 1890ನೇ ಇಸವಿ ಸೆಪ್ಟೆಂಬರ್ ತಿಂಗಳ 16ನೇ ತಾರೀಖು ಮಂಗಳವಾರ ಹಿಯರಿಂಗ್ ಮುಕರ್ರರು ಮಾಡಿದೆ. ಆ ತಾರೀಖು ದಿವಸ 11 ಘಂಟೆಗೆ ಆಕ್ಷೇಪಣೆ ಇರತಕ್ಕವರೆಲ್ಲರೂ ಅವರೇ ಆಗಲಿ ಅವರ ತರಫ್ ಮೊಖ್ತ್ಯಾರ್ ವಹಿಸಿದ ಅಡ್ವೊಕೇಟರಾಗಲಿ ಈ ಕೋರ್ಟ ರೂಬರು ಹಾಜರಾಗತಕ್ಕದ್ದು.

ತಾ॥ 23ನೇ ಮಾಹೆ ಆಗಸ್ಟು 1890

By the Court,

S. R. Subbaraya Iyer,

Registrar.

ನೋಟೀಸ್.

ಮೈಸೂರುಶೀಮೆಯ ಚೀಫ್‌ಕೋರ್ಟಿನಲ್ಲಿ. ಸನ್ 1890ನೇ ಇಸವಿ ಮಿಸಲೇನಿಯಸ್ ಪಿಟಿಷನ್ ನಂಬರ್ 209.

ಅರ್ಜೀದಾರರು

ಚಿಂತಾಮಣಿ ತಾಲ್ಲೂಕ್ ಚಾಂದ್ರಹಳ್ಳಿ ಬಾಲಾಜೀದಯ ವಿವಾಹ ಕಂಪನಿ ರಿಕಾರ್ಡ್‌ಕೀಪರ್ ಕೃಷ್ಣಪ್ಪ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ—

ಮೇಲ್ಕಂಡ ರಿಕಾರ್ಡ್‌ಕೀಪರ್ ಕೃಷ್ಣಪ್ಪನು, ಚಾಂದ್ರಹಳ್ಳಿ ಬಾಲಾಜೀದಯ ವಿವಾಹ ಕಂಪನಿಯ ಕೆಲವು ನೌಕರರಮೇಲೆ ಕೆಲವು ಷೇರ್‌ದಾರರು ಕ್ರಿಮಿನಲ್ ಫಿರ್ಯಾದಿನಮೇಲೆ ವಾರಂಟಿನ ಮೂಲಕ ದಸ್ತಗಿರಿ ಆಗಿತಿದ್ದು ಕೋಲಾರ ಡಿಸ್ಟ್ರಿಕ್ಟ್ ಜನರಲ್ ಅ॥ ಕ್ಕ ಮತ್ತು ಫಸ್ಟ್‌ಕ್ಲಾಸ್ ಮೇಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆ ಆಗುತ್ತಿರುವದಲ್ಲದೆ ಒಂದು ಮೊಕದ್ದಮೇಲಿ ಅವರಿಗೆ ಶಿಕ್ಷೆ ಸಹ ಆಗಿರುತ್ತೆಂತಲೂ, ಉಳಿದವ ಆಕೌಂಟೆಂಟರು ಜವಾನರು ಮುಂತಾದವರಿಗೆ ಸಂಬಳ ಕೊಡತಕ್ಕವರಿಲ್ಲದೆ ಜೀವನೋಪಾಯಕ್ಕಾಗಿ ಅವರವರ ಇಷ್ಟಬಂದಕಡೆ ಹೊರಟು ಹೋದರೆಂತಲೂ, ಕೆಲವು ಷೇರ್‌ದಾರರು ಕೋಲಾರ ಚಿಕ್ಕಬಳ್ಳಾಪುರ ಬೆಂಗಳೂರು ಈ ಮುನಸೀಫ್ ಕೋರ್ಟುಗಳಲ್ಲಿಯು ಬೆಂಗಳೂರು ಸಬ ಕೋರ್ಟಿನಲ್ಲೂ ಕಂಪೆನಿಮೇಲೆ ಡಿಕ್ರಿಗಳು ಪಡೆದು ಕಂಪೆನಿ ಆಸ್ತಿಯನ್ನು ಜಪ್ತಿ ಹರಾಜುಗಳು ಮಾಡಿಸಿ ಕೆಲವು ತೆಗೆದುಕೊಂಡು ಹೋಗಿರುತ್ತಾರೆಂತಲೂ, ರಿಜಿಸ್ಟರ್ ಮುಂತಾದ್ದು ಇಡುವದಕ್ಕೆ ಪೆಟ್ಟಿಗೆಗಳು ಸಹ ಇಲ್ಲದೆ ಕಂಪನಿ ಇರತಕ್ಕ ಮನೆ ಶಿಥಿಲವಾಗಿ ಮಳೆಯಿಂದ ನೀರು ಸುರಿದು ಕಾಗದಪತ್ರಗಳೆಲ್ಲ ನೆನದು ನಾಶವಾಗುತ್ತಾಯಿದೆ, ಇನ್ನು ಕಂಪನಿ ನಡಿಯುವಹಿಲ್ಲವಾದ್ದರಿಂದ ವೈಂಡಪ್ ಮಾಡಿಸಬೇಕೆಂತಲೂ, ಈಗಲೂ ಕಂಪೆನಿ ಬಾಬತು 21,500 ರೂಪಾಯಿನ ಆಸ್ತಿ ಇರುತ್ತೆ, ಅಪ್ಪೈಕಿ ಕೆಲವು ಜಪ್ತಿ ಹರಾಜಾಗಿ ಇರುವದಲ್ಲದ ಕೆಲವು ಮೊಬಲಗು ಡಿಕ್ರೀದಾರರಿಗೆ ಜಾಮೀನ್ ಮೇಲೆ ಸಂದಿರುತ್ತೆಂತಲೂ ವಗೈರೆ ಅರ್ಜಿಕೊಟ್ಟು ಇರುತ್ತಾರೆ. ಈ ಅರ್ಜೀದಾರ ಕೃಷ್ಣಪ್ಪನ್ನ ಈಗ ಪ್ರಕೃತದಲ್ಲಿ ಪ್ರೊವಿಷನಲ್ ಲಿಕ್ವಿಡೇಟರಾಗಿ ಮುಕರರ್ ಮಾಡಿರುತ್ತೆ, ದುಸ್ತು ಮುಂದಿನಕ್ರಮಗಳು ನಿಲ್ಲಿಸುವುದಕ್ಕೆ ಮೇಲ್ಕಂಡ ಕೋಲಾರ ಚಿಕ್ಕಬಳ್ಳಾಪುರ ಬೆಂಗಳೂರು ಈ ಮುನಸಿಫ್ ಕೋರ್ಟುಗಳಿಗೂ ಮತ್ತು ಬೆಂಗಳೂರು ಸಬ್ ಕೋರ್ಟಿಗೂ ಆರ್ಡರ್ ಮಾಡಿ ಇರುವದಲ್ಲದೆ ಈ ಅರ್ಜಿ ಇತ್ಯರ್ಥದಬಗ್ಯೆ ಸನ್ 90ನೇ ಇಸವಿ ಸೆಪ್ಟೆಂಬರ್ ತಿಂಗಳು 30ನೇ ತಾರೀಖಿನಲ್ಲಿ ಹಿಯರಿಂಗ್ ಮುಕರರ್ ಮಾಡಿ ಯಿದೆ. ಆ ತಾರೀಖ್ ದಿವಸ 11 ಘಂಟೆಗೆ ಈ ಕೋರ್ಟಿನ ರೂಬರೂ ಆಕ್ಷೇಪಣೆ ಇರತಕ್ಕವರೆಲ್ಲರೂ ಅವರುಗಳೇ ಆಗಲಿ ಅವರ ಕಡೆ ಮೊಖ್ತ್ಯಾರ್ ವಹಿಸಿದ ಅಡ್ವೊಕೇಟುಗಳೇ ಆಗಲಿ ಹಾಜರಾಗತಕ್ಕದ್ದು.

ಬತಾ॥ 3 ನೇ ಸೆಪ್ಟೆಂಬರ್ 1899ನೇ ಇಸವಿ.

By the Court,

S. R. Subbaraya Iyer,

Registrar.

ದಕ್ಷಿಣ ಮಹಾರಾಷ್ಟ್ರ ರೇಲ್ವೆ.
ಮೈಸೂರು ಸ್ಟೇಟ ರೇಲ್ವೆ ಸಹ

ಪ್ರಕಟನೆ.

ಮೂರನೇ ತರಗತಿ ಪ್ರಯಾಣಸ್ಥರ
ಹಾಸಲಿನ ದರ.

ಪ್ರಕಟಿಸುವದೇನೆಂದರೆ —
೧೮೯೦ ನೇ ಇಸವಿ ಅಕ್ಟೋಬರ ತಿಂಗ
೧ನೇ ತಾರೀಖು ಬುಧವಾರದ ಲಾಗಾಯತು
... ಹುಬ್ಬಳ್ಳಿ–ಮೈಸೂರ್ ಭಾಗದ
ಮೇಲೆ ಮೂರನೇ ತರಗತಿ ಪ್ರಯಾಣಸ್ಥರ
ಹಾಸಲಿನ ದರ ... ದ್ದೈಯಿಂದ ... ಪೈಗೆ ಕಡಿಮೆ
ಮಾಡಲ್ಪಡುವದು.

ಧಾರವಾಡ, ೧೦ನೇ ಸೆಪ್ಟಂಬರ ೧೮೯೦. } ಜೇಂಸ್ ಕ್ರೇಕ್, ಟ್ರಾಫಿಕ್ ಮ್ಯಾನೇಜರ.

ಕರ್ಣಾಟಕ ಪ್ರಕಾಶಿಕಾ.

KARNATAKA PRAKASIKA
... 15, 1890
...

... STATION MUNICIPALITY.

... ಮಿಲಿಟರಿ ಸ್ಟೇಶನ್ನಲ್ಲಿ ಜ ... ರಕ್ಷಣೆಯ ಬಗ್ಗೆ ರೆಸಿಡೆಂಟರವರಿ ... ಗವರ್ನಮೆಂಟಿನವರಿಗೂ ಹಾಗದ ... ಗಳು ಜರುಗಿ, ಅದಕ್ಕಾಗಿ ತಗಲಬಹುದಾದ ಖರ್ಚಿನ ಅಂದಾಜ್ ಪಟ್ಟಿಯನ್ನು ಕಳುಹಿಸ ಬೇಕೆಂದು ಇತ್ಯ ಗವರ್ನಮೆಂಟಿನವರು ಅಪೇಕ್ಷಿಸಿದ್ದರ ಮೇಲೆ ಅನೇರೀತಿ ಕಳುಹಿಸಲ್ಪಟ್ಟದೆಯೆಂದು ತಿಳಿಯಬರುತಿದೆ. ಇದಕ್ಕಾಗಿ ಸ್ಟೇಶನ್ ಮ್ಯುನಿಸಿಪಾಲಿಟಿಯವರು ದ್ರವ್ಯಸಹಾಯ ಮಾಡಬೇಕೆಂಬದಾಗಿಯೂ, ಒಂದುಲಕ್ಷ ರೂಪಾಯಿಗಳತನಕ ತೆರಿಗೆಗಳನ್ನು ಜಾಸ್ತೀ ಮಾಡುವದರಮೂಲಕ ಹುಟ್ಟುವಳಿಯನ್ನಭಿವೃದ್ಧಿಮಾಡಲಿಕ್ಕೆ ಬೇಕಾದಏರ್ಪಾಡುಗಳನ್ನು ಮಾಡಬೇಕೆಂಬದಾಗಿಯೂ ಮ್ಯುನಿಸಿಪಲ್ ಪ್ರೆಸಿಡೆಂಟರಿಗೆ ರೆಸಿಡೆಂಟರು ಈಚೆಗೆ ಬರೆದಿರುವದಾಗಿ ಕೇಳುತ್ತೇವೆ. ಈ ಸಂದರ್ಭದಲ್ಲಿ ಮ್ಯುನಿಸಿಪಲ್ ಇಲಾಖೆಯ ನೌಕರಿಯಾಗಿರ ಪಗಾರಗಳು ಸಹ ಸ್ವಲ್ಪಮಟ್ಟಿಗೆ ತಗ್ಗಿಸಲ್ಪಡತಕ್ಕದ್ದೆಂದು ನಿಶ್ಚಯವಾಗಿರುತಿದೆ. ಬ್ರಿಟಿಷ ಸೈನ್ಯಗಳ ಪ್ರಯೋಜನಾರ್ಥ ಕಲ್ಪಿಸಲ್ಪಡತಕ್ಕ ಜಲವಸತಿಗಾಗಿ ತಗಲುವ ಖರ್ಚಿನ ಭಾರವನ್ನು ಸಾಮಾನ್ಯವಾಗಿ ಜನಗಳಮೇಲೆ ಹೊರಿಸಬೇಕಾದದಕ್ಕೆ ಏನುಕಾರಣವೋ ವ್ಯಕ್ತವಾಗುವದಿಲ್ಲವು. ಮ್ಯುನಿಸಿಪಾಲಿಟಿಯವರಿಂದ ವಸೂಲ್ಮಾಡಲ್ಪಡತಕ್ಕ ದ್ರವ್ಯವು ಯುಕ್ತವಾಗಿಯೂ, ವಿವೇಕದೊಡನೆಯೂ, ಮಿತವಾಗಿಯೂ ವ್ಯಯ ಮಾಡಲ್ಪಡುತಿದ್ದರೆ ಇಂತಾ ವಿಶೇಷ ಖರ್ಚುಬಾಬ್ತುಗಳಿಗಾಗಿ ಜೋಡಿಸಿಡತಕ್ಕದು ಸತಬೇಕಾದದ್ದೂ, ತದರ್ಥ ಅವರು ಜನರು ನಿರ್ಬಂಧಿಸಬೇಕಾದದ್ದೂ ಅವಶ್ಯಕವಿರಲಾರದು. ಜನಗಳಿಂದ ವಸೂಲಾಗತಕ್ಕ ದ್ರವ್ಯವೆಲ್ಲವೂ ಅವರಿಗಾಗಿಯೇ ಖರ್ಚಾಗತಕ್ಕದೆಂದು ಹೇಳುವದಕ್ಕಾಗುವದಿಲ್ಲವು. ಮ್ಯುನಿಸಿಪಾಲಿಟಿಯಲ್ಲಿ ಸಾಮಾನ್ಯವಾಗಿ ಖರ್ಚುಬಾಬುಗಳೆಲ್ಲವು ಪ್ರೆಸಿಡೆಂಟರ ಇಷ್ಟಾನುಗುಣವಾಗಿಯೂ, ಮೆಂಬರ್‌ಗಳ ಉತ್ಸಾಹಾನುಗುಣವಾಗಿಯೂ ಕುದುರತಕ್ಕವಾಗಿರುತಿವೆ. ಅವುಗಳ ಆವಶ್ಯಕತಾನಾವಶ್ಯಕತೆಗಳಂ ಕುರಿತು ನಡೆಯತಕ್ಕ ವಿಚಾರವು ಸಮರ್ಪಕವೆಂದು ನುಡಿಯುವದಕ್ಕಾಗುವದಿಲ್ಲವು. ಇಂತಾ ಸ್ಥಿತಿಯಲ್ಲಿ ಪ್ರಜೆಗಳ ಹಕ್ಕುದಾರಿಯಂ ಸುರಕ್ಷಿಸತಕ್ಕಬಗ್ಗೆ ಅವರಿಂದ ಚುನಾಯಿಸಲ್ಪಡುವ ಮೆಂಬರ್‌ಗಳೇ ಬೋರ್ಡಿನಲ್ಲಿ ವಿಷಯ ವಿಮರ್ಶಕರಾಗಿ ಏರ್ಪಟ್ಟಿರುತ್ತಾರೆ. ಇವರು ಪ್ರಜೆಗಳ ಹಿತವನ್ನೇ ಕುರಿತು ವಾದಿಸತಕ್ಕವರೆಂಬ ಭಾವವು ಗವರ್ನಮೆಂಟನವರಿಗೆ ನಿಯತವಾಗಿರುವದರಿಂದ ಸದರೀ ಮೆಂಬರ್‌ಗಳಿಗೂ ಗವರ್ನಮೆಂಟನವರಿಗೂ ಉಂಟಾಗಿರುವ ಮಣಿಯಿತೀ ಭಾವವು ತೃಪ್ತಿಕರವಾದದ್ದಾಗಿರುವದಿಲ್ಲವು. ಲಾರ್ಡ ರಿಪ್ಪನ್ನಯನರ ಪ್ರಭುತ್ವಕಾಲದಲ್ಲಿ ಕಲ್ಪಿಸಲ್ಪಟ್ಟ ಸ್ವದೇಶ ಪರಿಪಾಲನಾ ಕ್ರಮವು ಇಲ್ಲಿನ ಸಿವಿಲ ಮ ಮಿಲಿಟರಿ ಸ್ಟೇಶನ್ನಲ್ಲಿಯೂ ಜಾರೀಯಲ್ಲಿ ತರಲ್ಪಟ್ಟು ಅದ್ಯಾಪಿ ನಡೆಯುಬರುತಿದೆ. ಮ್ಯುನಿಸಿಪಲ್ ಕಮ್ಮಿಶನರ್‌ಗಳನ್ನು ಪ್ರಜೆಗಳೇ ಚುನಾಯಿಸಿ ಪೋಕರರ್ಮಾಡಿರುತ್ತಾರೆ. ಪೋಕರರಾದ ಮೆಂಬರ್‌ಗಳು ತಮ್ಮನ್ನು ಚುನಾಯಿಸತಕ್ಕ ವಿಷಯದಲ್ಲಿ ಬಹಳ ಸಾಹಸಗಳನ್ನು ಮಾಡಿ ದಾಕ್ಷಿಣ್ಯದಿಂದ ಕಡೆಗೆ ಕಮ್ಮಿಷನರಾಗಿ ಏರ್ಪಡುತ್ತಾರೆ. ಇವರು ಅತಿ ಸಾಹಸದಿಂದ ಸಂಪಾದಿಸಿದ ನೂತನಾಧಿಕಾರ ಪದದಲ್ಲಿ ಪ್ರಜೆಗಳಿಗೆ ಮಾಡಿದ ಉಪಕಾರವು ಫಲಾವತೆ ಮಗೊತ್ತಾಗುವದಿಲ್ಲವು ಹಿಂದೆ ಜಾರೀಯಲ್ಲಿದ್ದ ಆಕ್ಟ್ರಾಯಿ ತೆರಿಗೆಯು ವಜಾ ಮಾಡಲ್ಪಟ್ಟಿದ್ದು ಅದು ರೂಪಾಂತರವನ್ನು ಹೊಂದಿ ಜನಗಳ ಭಾರವನ್ನು ತಗ್ಗಿಸದೆ ಹೋಯಿತು. ಈಗ ಪರೆನ್ಯಾಜಸ್ಟ್ರೇಲ್ ಕೀಮೆಯಲ್ಲಿರತಕ್ಕ ವಿಶಿಷ್ಟ ತೆರಿಗೆಗಳೂ ಮಿಲಿಟರಿ ಸ್ಟೇಶನ್ನಲ್ಲಿ ನೆಲೆಗೊಂಡಿರುತಿವೆ. ಅದಾಗ್ಯೂ ಯಾವ ಕಾಲದಲ್ಲಿ ಎಷ್ಟು ಎಷ್ಟು ಪ್ರಮಾಣದ ತೆರಿಗೆಯು ಹೊರಿಸಲ್ಪಡುವದೋ ಎಂಬ ಭೀತಿಯು ಜನಗಳಿಗೆ ತಪ್ಪಲಿಲ್ಲವು. ಈ ಪ್ರಪಂಚವು ಪಂಚಭೂತಾತ್ಮಕವಾಗಿದ್ದಾಗ್ಯೂ ಕಾಲಗತಿಯಿಂದ ಪಂಚಭೂತಗಳ ಪ್ರಮಾಣಗಳು ಸಹ ತೀರ್ವೆಗಳಿಗೊಳಪಟ್ಟು ಅತಿ ಪ್ರಯಾಸದಿಂ ಹೊಂದಬೇಕಾಗುತಿರುವದು. ಜನಗಳಸ್ಥಿತಿ ಹೀಗಿದ್ದಾಗ್ಯೂ ಮ್ಯುನಿಸಿಪಲ್ ಆಡಳಿತವನ್ನು ಸಹ ತೃಪ್ತಿಕರವಾಗಿ ನಿರ್ವಹಿಸಲಿಕ್ಕೆ ನೇಟಿವ್‌ಗಳು ಅಸಮರ್ಥರೆಂಬ ಭಾವವು ರೆಸಿಡೆಂಟರಿಗೆ ತೋರಿ ಈಗ ನೆಲಗೊಂಡಿರತಕ್ಕ ಚುನಾವಣೇ ಪದ್ಧತಿಯು ತೃಪ್ತಿಕರವಾಗಿ ನಡೆಯಲಿಲ್ಲವೆಂತಲೂ, ಈ ಸಂವತ್ಸರ ಆಖೈರತನಕ ನೋಡಿ ಬಳಿಕ ಮಾರ್ಪಾಡು ಮಾಡಬೇಕೆಂಬ ಅಭಿಪ್ರಾಯ ಪ್ರಕಟನರಾಗಿರುತ್ತಾರೆಂತಲೂ ಹಿಂದೆಯೇ ತಿಳಿಸಿದ್ದೆವಷ್ಟೆ. ಮುಖ್ಯವಾಗಿ ಜನಗಳ ಪ್ರಯೋಜನ ವಿಷಯಮ ಕುರಿತು ಪರಿಭಾವಿಸಿ ನೋಡಿದರೆ ನೇಟಿವ್‌ಗಳಿಗೆ ಸ್ವಾತಂತ್ರ್ಯವಿದ್ದೂ ಇಲ್ಲವೆಂದು ಭಾವಿಸಬೇಕಾಗಿರುತಿದೆ. ಸ್ವಪ್ರಯೋಜನಾಪೇಕ್ಷೆಯೂ ಸಮಯೋಚಿತಾನುವರ್ತನವೂ ನೆಲಗೊಂಡಿರುವ ತನಕ ನಮ್ಮವರಿಗೆ ಯೆಷ್ಟರ ಮಟ್ಟಿಗೆ ಹೊಸ್ತವವ ಪ್ರಯೋಜನಾಗ್ಯೂ ಅವರದನ್ನು ಸರ್ವಜನ ಸಮ್ಮತವಾಗಿ ಉಪಯೋಗಿಸುವರೆಂದು ತಿಳಿಸಲಿಕ್ಕೆ ನಮ್ಮ ಅನುಭವವು ಅವಕಾಶಕೊಡುವದಿಲ್ಲವು. ಪ್ರಪಂಚ ಮೇಲೆ ತಿಳಿಸಿದಂತೆ ಜಲವಸತಿಯ ಬಗ್ಗೆ ಹೊಸ ತೆರಿಗೆಯನ್ನು ವಿಧಿಸುವದಕ್ಕೆ ಬದಲು ಅನಾವಶ್ಯಕಗಳಾದ ಖರ್ಚುಬಾಬ್ತುಗಳನ್ನು ಕಡಮೆಮಾಡಬೇಕೆಂತಲೂ, ಪ್ರಸಕ್ತ ಖರ್ಚನ್ನು ಗವರ್ನಮೆಂಟನವರೇ ವಹಿಸಬೇಕಾದ್ದು ಆವಶ್ಯಕವೆಂತಲೂ ಪ್ರಜಾ ಹಿತಂಕರಣಾರ್ಥ ಪ್ರವರ್ತಿಸತಕ್ಕ ಮ್ಯುನಿಸಿಪಲ್ ಕಮ್ಮಿಷನರ್‌ಗಳು ಮೀಟಿಂಗಿನಲ್ಲಿ ಸಾಧ್ಯವಾದ ಮಟ್ಟಿಗೆ ಖಂಡಿಸಲಿಕ್ಕೆ ಹಿಂಜರಿಯಲಾರರೆಂದು ನಂಬುತ್ತೇವೆ.

CUSTOMS OF MANY COUNTRIES.

ಸಾಧಾರಣವಾಗಿ ದೇಶಭೇದದಿಂದಲೂ ಪ್ರಕೃತಿಭೇದದಿಂದಲೂ ಆಚಾರಗಳಲ್ಲಿ ಅನೇಕ ಭೇದಗಳೇರ್ಪಡುತಿವೆಯಲ್ಲದೆ, ಪ್ರಾಂತ್ಯವೊಂದರ ದೇಶೀಯರಲಾಚಾರವ್ಯವಹಾರಗಳುಮತ್ತೊಂದುದೇಶೀಯರಿಗೆ ವಿಜಾತೀಯಗಳಾಗಿಯೂ ಆಶ್ಚರ್ಯಕರಗಳಾಗಿಯೂ, ಕಡಾಚಿತ್ ದೂಷ್ಯಗಳಾಗಿಯುತೋರದಿರುವದಿಲ್ಲವು. ಪರಂತು ಯಾವ ಆಚಾರವಾಗಲಿ ಯಾವದೋ ಒಂದು ಪ್ರಬಲ ಕಾರಣದಿಂದೇರ್ಪಟ್ಟು ಅವಿದಿತವಾದ ಅರ್ಥವುಳ್ಳದ್ದಾಗಿರುವದೆ ಹೊರ್ತು ನಿರರ್ಥಕವಾಗಿ ಪ್ರಾಯಶಃ ಯಾವದೂ ಕುದುರಲಾರದು. ಅವುಗಳ ಕಾರ್ಯಕಾರಣಗಳಂ ಪರ್ಯಾಲೋಚಿಸತಕ್ಕವರು ವಿಚಾರಪರರೆಂತಲೂ, ಕಾರ್ಯಕಾರಣಗಳು ವ್ಯಾಗಿದ್ದಾಗ್ಯೂ ಬಹುದಿನಾನುಷ್ಠಿತಗಳಾದವಾಗಿದ್ದರೆ ಅವುಗಳ ಔಚಿತ್ಯವಂ ಕುರಿತು ವಿಚಾರ ಮಾಡಬೇಕಾದ ಆವಶ್ಯಕವೇನೂ ಇರುವದಿಲ್ಲವೆಂದುಭಾವಿಸಿ ಅವಂ ಪರಿಗ್ರಹಿಸಿ ತದ್ವತ್ ನಡೆಯತಕ್ಕವರು ಶ್ರದ್ಧಾಜಡರೆಂತಲೂ ಕರೆಯಲ್ಪಡುತ್ತಾರೆ. ಕಾರ್ಯಕಾರಣಗಳಂಕುರಿತು ಆಲೋಚಿಸಿ ಅವು ಬುದ್ಧಿಯಲ್ಲಿ ಸ್ಫುರಿಸದೆ ಹೋದಮಾತ್ರದಿಂದಲಾಗಲಿ, ಅಥವಾ ವ್ಯಕ್ತವಾಗಿ ತಕ್ಕ ನಿದರ್ಶನಗಳಿಂದ ಗೋಚರವಾಗದೆ ಹೋದಮಾತ್ರದಿಂದಲಾಗಲಿ ಅವುಗಳೆಲ್ಲವನ್ನೆನಿರರ್ಥಕಗಳೆಂದು ಭಾವಿಸಿ ತೊರೆಯುವವಕ್ಕಿಂತಲೂ, ತಮಗೂ ತಮ್ಮ ಸಂಬಂಧಿಗಳಿಗೂ ಅಬಾಧಿತವಾಗಿದ್ದರೆ ಅವಂ ಪರಿಗ್ರಹಿಸುವದರಿಂದ ಯಾವ ಪ್ರತ್ಯವಾಯವೂ ಕಾಣಿಸಲಿಲ್ಲವು. ಒಂದುವೇಳೆ ಅನುಲ್ಲಂಘನೀಯವಾದ ಪ್ರಬಲ ವಿಧಿಯಿಂದೇರ್ಪಟ್ಟು ಕ್ವಚಿತ್ ಬಾಧಕವಾಗಿ ಕಂಡುಬಂದಾಗ್ಯೂ ಪ್ರಮಾಣಕರನ್ಯಾರಿ ಜನರವಂಕುರಿತು ಚಿಂತಿಸಿ ಪ್ರಯೋಜನವಿಲ್ಲವು. ಆದುದರಿಂದ ನಾನ್ಯ ಯಾವದನ್ನೂ ಏಕಾಏಕಿ ನಿಂದಿಸುವದಕ್ಕಾಗುವದಿಲ್ಲವು. ಹಿಂದೂಗಳಲ್ಲಿ ಪೂಜ್ಯರಾಗಿಯೂ ವಯೋವೃದ್ಧರಾಗಿಯೂ ಇರತಕ್ಕವರನ್ನು ನೋಡಿದಕೂಡಲೆ ಸಾಷ್ಟಾಂಗವಾಗಿ ಕೆಳಗೆ ಬಿದ್ದು ಪ್ರಣಾಮಮಾಡುವ ಆಚಾರವು ನೆಲೆಗೊಂಡಿರುತಿದೆ ಚೀನಾದೇಶೀಯರು ದೊಡ್ಡವರನ್ನು ಸಂಧಿಸಿದಾಗ ಕುಮಾರ್ಹ್ಯೆ ಅಥವಾ ಗಾಡಿಯಿಂದ ಕೆಳಗೆ ಇಳಿದುಬಿಡುತ್ತಾರೆ ಅರೇಬಿಯಾದೇಶದಲ್ಲಿ ಕೆನ್ನೆಗಳೊಂದಕ್ಕೊಂದು ತಗಲುವಂತೆ ಸೇರಿಸುವ ಪದ್ಧತಿಯುಂಟು. ಜರ್ಮನೀದೇಶದಲ್ಲಿ ಸಹೋದರರು ಏಕತ್ರಸೇರಿದಾಗ ಪರಸ್ಪರ ಚುಂಬನಮಾಡುವವಾಡಿಕೆ ನೆರೆಗೊಂಡಿದೆ. ಹಾಗೆಯೇ ಆಸ್ಟ್ರಿಯರ ಕೈಗಳನ್ನು ಮುದ್ದಿಡುವದು ಕೇವಲ ಮರ್ಯಾದಾರೂಪವಾಗಿ ತದ್ದೇಶೀಯರು ಭಾವಿಸುತ್ತಾರೆ. ಜಪಾನ್‌ದೇಶೀಯರು ದೊಡ್ಡವರಂ ಕಂಡ ಕಾಲದಲ್ಲಿ ಕಾಲ್ಗಳಲ್ಲಿರುವ ಕೆರಮಂ ತ್ಯಜಿಸಿ ಅಡ್ಡವಾಗಿ (×) ಕೈಗಳಂಜೋಡಿಸಿಕೊಂಡು "ತಮ್ಮನ್ನು ಕಾಪಾಡಬೇಕು" ಎಂಬದಾಗಿ ಘಟ್ಟಿಯಾಗಿ ಕೂಗುವರು. ಬರ್ಮಾ ದೇಶೀಯರು ಮರ್ಯಾದಾ ಸೂಚಕವಾಗಿ ಅನ್ಯರಮುಖವನ್ನು ಘ್ರಾಣಿಸ ಪರಿಮಳವಾಗಿವೆಯೆಂದು ನುಡಿದು ಬಳಿಕ ಆಘ್ರಾಣಿಸಬೇಕೆಂದು ಕೇಳುತ್ತಾರೆ. ದಕ್ಷಿಣ ಸಮುದ್ರತೀರ ಪ್ರಾಂತದಲ್ಲಿರುವ ಕೆಲವು ದ್ವೀಪವಾಸಿಗಳು ಒಬ್ಬರಿಗೊಬ್ಬರು ಮರ್ದನ ಮಾಡುವ ಕ್ರಮವು ಬಹಳ ವಿಚಿತ್ರವಾದದ್ದಾಗಿರುತಿದೆ, ಹ್ಯಾಗೆಂದರೆ, ಅವರುತಮ್ಮ ಸ್ನೇಹಿತರಂ ಕಂಡಾಗ ಅವರ ತಲೆಯಮೇಲೆ ಒಂದು ಗಡಿಗೆ ನೀರನ್ನು ಸುರಿಯುತ್ತಾರೆ. ಇವಲ್ಲದೆ ಸದರೀ ಜನಗಳಲ್ಲಿ ಮತ್ತೊಂದು ವಿಧ ಆಚಾರವಿರುವದೇನಂದರೆ—ತಾವಾಗಿ ಕಂಡವರು ನೋಡಿದಾಗ ಕೂಡಲೇ ತಮ್ಮ ಕೈಯಲ್ಲಿ ಉಗಿದು ಅದು ಚೆನ್ನಾಗಿ ಉಜ್ಜಿ ಅವಂ ಮುಖದಮೇಲೆ ಒರೆಸುವ ಪದ್ಧತಿ ಯೇರ್ಪಟ್ಟಿರುತಿದೆ ಆಸ್ಟ್ರೇಲಿಯಾ ಖಂಡದಲ್ಲಿರುವ ನೇಟಿವ್‌ಗಳು ಇಷ್ಟಮಿತ್ರರ ಪರಸ್ಪರ ಸಮಾಗಮ ಕಾಲಗಳಲ್ಲಿ ಒಬ್ಬರ ನಾಲಿಗೆಯಂ ಮತ್ತೊಬ್ಬರು ತಿವಿದುಕೊಳ್ಳುವರು. ಅರಬ್ಬೀಜನಗಳು ಏಕ ಕಾಲದೊಳೊಬ್ಬರನ್ನೊಬ್ಬರು ಘಟ್ಟಿಯಾಗಿ ಆಲಿಂಗನ ಮಾಡಿಕೊಂಡು ಕುಶಲಪ್ರಶ್ನೆಯಂ ಮಾಡುತ ಮುದ್ದಾಡುವದು ವಾಡಿಕೆಯಾಗಿರುತಿದೆ. ಈ ಕ್ರಮವು ಇಂಗ್ಲಿಷ್‌ನವರಲ್ಲಿ ಸಹ ನೆರೆಗೊಂಡಿರುತಿದೆ. ತುರ್ಕೀಯವರು ತಮ್ಮ ಕೈಗಳನ್ನು ಅಡ್ಡವಾಗಿ ಎದೆಯಮೇಲೆ ಜೋಡಿಸಿಟ್ಟು ನಮ್ರ ಭಾವದೊಡನೆ ವಂದನ ಮಾಡುವರು. ಈ ರೀತಿ ಮಾಡುವದರಿಂದ ತನಗೂಡಿದ್ದವನಾದ ಅನ್ಯನಂ ಮುಟ್ಟದಯೇ ತನ್ನ ಮರ್ಯಾದೆಯಂ ವ್ಯಕ್ತಪಡಿಸುವಂತಾಗುತಿದೆ ಮಾರಿಷ್ ಜನಗಳು ಸ್ನೇಹಿತರ ಬಳಿಗೆ ಕುದುರೆಯಮೇಲೆ ದವಡಾಯಿಸಿಕೊಂಡು ಹೋಗಿ ಬಂದೂಕುಗಳನ್ನು ಹಾರಿಸುತ ತಮ್ಮ ಸ್ನೇಹಿತರಿಗೆ ತಾವು ಮಾಡಬೇಕಾದ ಮರ್ಯಾದೆಗಳನ್ನೆಲ್ಲ ಕೊರತೆ ಇಲ್ಲದಂತೆ ತಾವು ಮಾಡಿದಂತೆ ವ್ಯಕ್ತಪಡಿಸುವರು. ಮುಖ್ಯವಾಗಿ ಇವುಗಳೆಲ್ಲವು ನಮಗೆವಿಚಿತ್ರವಾಗಿ ಕಂಡುಬಂದರೂ ಅವರವರಿಗೆ ತಕ್ಕಅರ್ಥವೂ ಗೌರವವೂ ಇಲ್ಲದಿರುವದಿಲ್ಲವು.

JOINT STOCK COMPANIES IN MYSORE.

ಮೈಸೂರುದೇಶದೊಳು ಸ್ಥಾಪಿಸಲ್ಪಟ್ಟಿರುವ ಜಾಯಿಂಟ ಸ್ಟಾಕ್ ಕಂಪನಿಗಳ ಆಡಳಿತಗಳನ್ನು ಕುರಿತು ಸದರೀ ಕಂಪನಿಗಳ ರಿಜಿಸ್ಟ್ರಾರ್ರವರು ಮಾಡಿದ ಸನ್ ೧೮೮೯–೯೦ನೇ ಸಾಲಿನ ರಿಪೋರ್ಟನ್ನಲ್ಲಿ ಮಹಾರಾಜಾ ಸರ್ಕಾರದವರು ವಿಮರ್ಶೆಮಾಡಿ ತಿಳಿಸುವ ಅಭಿಪ್ರಾಯವೇನಂದರೆ :—

ಈ ಸಾಲಿನಲ್ಲಿ ೮೦ ಹೊಸ ಕಂಪನಿಗಳು ಅಥವಾ ಅಸೋಸಿಯೇಶನ್‌ಗಳು ಸ್ಥಾಪಿಸಲ್ಪಟ್ಟವು, ಮತ್ತು ಸಾಲ್ ಮುಗಿಯುವಿನಲ್ಲಿ ೧೩೫ ಕಂಪನಿಗಳು ನೆಲೆಗೊಂಡಿದ್ದವು. ಮೇಲಿನಂತೆ ರಿಜಿಸ್ಟರ್ ಮಾಡಲ್ಪಟ್ಟ ಹೊಸ ಕಂಪನಿಗಳಲ್ಲಿಕೆ ಯಾರದು ಆಡಳಿತವನ್ನು ಪ್ರಾರಂಭಿಸುವದಕ್ಕೆ ಪೂರ್ವವೇ ಒಡೆದು ಹಾಕಲ್ಪಟ್ಟವು, ಮೂರು ವಾಲಂಟೇರಿ ವೈಂಡಪ್ ಮಾಡಲ್ಪಟ್ಟವು, ಒಂದು ಹಿಂದೆಯಿದ್ದ ಕಂಪನಿಯೊಡನೆ ಸೇರಿಸಲ್ಪಟ್ಟಿತು. ಹಿಂದೆಯಿದ್ದ ೧೩೫ ಕಂಪನಿಗಳಲ್ಲಿಕೆ ೩೮ ವಾಲಂಟೇರಿ ವೈಂಡಪ್ ಅಥವಾ ಚೀಫ್‌ಕೋರ್ಟ್ ಹುಕುಂ ಅನುಸರಿಸಿ ವೈಂಡಪ್ ಮಾಡಲ್ಪಟ್ಟವು. ಇವು ಜಾತಾ ಒಟ್ಟು ೧೧೫ಕಂಪನಿಗಳು ಸದರೀ ಸಾಲ್ ಆಖೈರನಲ್ಲಿ ಆಡಳಿತ ನಡೆಸುತಲಿದ್ದವು.

೨. ಈ ಕಂಪನಿಗಳಲ್ಲಿಕೆ ಅನೇಕ ೧೮೮೯ನೇ ಜೂಲೈ ತಿಂಗಳಿಂದೀಚೆಗೆ ಏರ್ಪಟ್ಟಾದವು, ಅವುಗಳಲ್ಲಿಕೆ ೬೨ ಕೋಲಾರ್ ಡಿಸ್ಟ್ರಿಕ್ಟಿಗೆ ಸೇರಿರುತಿವೆ. ಈ ಕಂಪನಿಗಳು ನಿರಾಧಾರವಾದ ಉದ್ದೇಶಗಳೊಡನೆ ಮಾಡಲ್ಪಟ್ಟವೆಂತಲೂ, ಇವುಗಳ ಆಡಳಿತಕ್ರಮಗಳು ಕ್ರಮೇಣ ಭಾಗಸ್ಥರಿಗೆ ನಷ್ಟವನ್ನುಂಟುಮಾಡಬಹುದಾಗಿದೆ ಯಂತಲೂ ಗವರ್ನಮೆಂಟನವರ ಅವಧಾನಕ್ಕೆ ತರಲ್ಪಟ್ಟು ಅದರಮೇಲೆ ಗವರ್ನಮೆಂಟನವರು ಅದರ ತನಿಖೆಯಬಗ್ಗೆ ಕೆಲವರು ಆಫೀಸರ್‌ಗಳನ್ನು ಒಂದು ಕಮಿಟಿಯಾಗಿ ಯೇರ್ಪಡಿಸಿ, ಈ ಕಂಪನಿಗಳಿಗೆ ಚಂದಾದಾರರಾಗುವದರಿಂದ ಉಂಟಾಗಬಹುದಾದ ನಷ್ಟವನ್ನುಕುರಿತು ಅಡ್ವರ್ಟೈಸ್ ಮತ್ತು ಇತರ ಮೂಲಕ ಚಂದಾದಾರರಿಗೆ ಎಚ್ಚರಿಕೆ ಕೊಟ್ಟರು. ಇದು ಹೀಗಿರುವಲ್ಲಿ ಅನೇಕ ಕಂಪನಿಗಳು ಹಿಸ್ಸೇದಾರರ ಕೋರಿಕೆಯಮೇರೆ ಚೀಫ್‌ಕೋರ್ಟ್ ಹುಕುಂ ಅನುಸರಿಸಿ ವೈಂಡಪ್ ಮಾಡಲ್ಪಟ್ಟದರಿಂದ ಕಮಿಟಿಯವರು ಮಾಡಬೇಕಾದ ವಿಚಾರಣೆಯು ಅನಾವಶ್ಯಕವಾಗಿ ಪರ್ಯವಸಿತು.

೩. ರಿಪೋರ್ಟಿನ ೧೧ನೇ ಪ್ಯಾರಾನಲ್ಲಿ, ಕಂಪನಿಯ ಆಕ್ಟಿನ ನಿಬಂಧನೆಗೆ ವ್ಯತಿರಿಕ್ತವಾಗಿ ನಡೆದ ಬಗ್ಗೆ ಪ್ರಾಸಿಕ್ಯೂಷನ್ ಮಾಡಲ್ಪಡಲಿಲ್ಲವೆಂದು ರಿಜಿಸ್ಟ್ರಾರವರು ತಿಳಿಸುವದರಿಂದ ತನ್ಮೂಲಕ ಅವಕ್ಕೆ ಅವಕಾಶ ಪ್ರಾಪ್ತವಾಗಿರಲಿಲ್ಲವೆಂದು ಊಹಿಸಬೇಕಾಗಿರುತಿದೆ. ಪರಂತು ರಿಪೋರ್ಟಿನ ಎ ಗುರ್ತುಳ್ಳ ಅಪೆಂಡಿಕ್ಸನ್ನಲ್ಲಿ ಈ ಮಾರ್ಜಿನಲ್ಲಿ ತಿಳಿಸಲ್ಪಡುವ ೭ ಸಿ ಗ ಳಾ ಚೇರಿ ಆ ನೇ ಕ ಕಂ ಪ ನಿ ಗ ಳೂ

1 ಶ್ರೀನಿವಾಸಪುರದ ಸಿ ವಿಂಗ್ಸ್‌ಬ್ಯಾಂಕ್
2 ಬೆಂಗಳೂರು ಪೇಟಾ ಮರ್ಚ್ಯಂಟ್ಸ್‌ಬ್ಯಾಂಕ್
3 ನೆಲಮಂಗಲ ಮಂಗಳಪುರಿ ಬ್ಯಾಂಕ್.
4 ತುಮಕೂರು ಶ್ರೀಕಂಠರಾಜೇಂದ್ರಬ್ಯಾಂಕ್.
5 ಹಾಸನ ಕರ್ನಾಟಕ ಬ್ಯಾಂಕ್.
6 ಮೈಸೂರು ಧರ್ಮಾಭಿವೃದ್ಧಿ ಬ್ಯಾಂಕ್
7 ಮೈಸೂರು ಬ್ಯಾಂಕ್.

ಕಂಪನೀಸ್ ಆಕ್ಟಿನ ೬೫ನೇ ಸೆಕ್ಷನ್ ಪ್ರಕಾರ ಸಾಲೀಯಾನಾ ಹಿಸ್ಸೇದಾರರ ಪಟ್ಟಿಯನ್ನು ರಿಜಿಸ್ಟ್ರಾರವರಿಗೆ ಕಳುಹಿಸುವದಕ್ಕೆ ತಪ್ಪಿಹೋದಂತೆ ನಮೂದ್ ಮಾಡಲ್ಪಟ್ಟಿರುತಿದೆ. ಮತ್ತು ಸದರೀ ಆಕ್ಟಿನ ೬೭ನೇ ಸೆಕ್ಷನ್ನಲ್ಲಿ ಮೇಲಿನಂತೆ ತಪ್ಪಿಹೋದ ಕಂಪನಿಗಳಿಗೆ, ಹಾಗೆ ತಪ್ಪಿದ ಕಾಲದಲ್ಲಿ ದಿನ ಒಂದಕ್ಕೆ ೫೦ ರೂಪಾಯಿಗಳ ಜುರ್ಮಾನೆ ವಿಧಿಸಲ್ಪಟ್ಟಿರುತಿದೆ. ಸದರೀ ಜುರ್ಮಾನೆಗಳು ಯಾತಕ್ಕೋಸ್ಕರ ವಸೂಲ್ಮಾಡಲ್ಪಡಲಿಲ್ಲವೋ ಅದಕ್ಕೆ ಕಾರಣ ತಿಳಿಸತಕ್ಕದ್ದು.

೪. ಕಂಪನೀಸ್ ಆಕ್ಟಿನ ...ನೇ ಸೆಕ್ಷನ್ನನ್ವಯ ಪ್ರತಿ ಕಂಪನಿಯೂ ... ಕ್ರಮವಾಗಿ

ಕನಿಷ್ಠೀ ಮಾಡಲ್ಪಟ್ಟ ಒಂದು ಬ್ಯಾಲೆನ್ಸ್‌ಷೀಟ ನ್ನು ರಿಜಿಸ್ಟ್ರಾರವರಿಗೆ ಕಳುಹಿಸತಕ್ಕದ್ದೆಂತಲೂ, ಹಾಗೆ ಮಾಡುವದಕ್ಕೆ ತಪ್ಪಿದರೆ ೧,೦೦೦ ರೂಪಾಯಿ ಜುರ್ಮಾನೆಯೆಂತಲೂ ವಿಧಿಸಲ್ಪಟ್ಟಿರುತ್ತದೆ. ಈ ಭಾಗದಲ್ಲಿ ಸಹ ಅನೇಕ ಕಂಪೆನಿಗಳು ತಪ್ಪಿಹೋಗಿರುತ್ತವೆ. ಬ್ಯಾಲೆನ್ಸ ಸೀಟುಗಳುಂ ಕಳುಹಿಸುವದಕ್ಕೆ ತಪ್ಪಿಹೋದ ಕಂಪೆನಿಗಳ ಡೈರಕ್ಟರುಗಳುಂ ಅವುಂ ಕಳುಹಿಸುವಂತೆ ಕೇಳಬೇಕಾಗಿಯಾದರೂ ಅವರು ಕೊಟ್ಟ ಜವಾಬಾದರು ರಿಪೋರ್ಟಿನಲ್ಲಿ ತಿಳಿಸಲ್ಪಡಲಿಲ್ಲವು. ಈ ವಿಷಯವನ್ನು ಕುರಿತು ಈಗ ರಿಪೋರ್ಟ ಮಾಡಬೇಕಾದ್ದು.

೫ ಕೆಲವು ಕಂಪೆನಿಗಳಲ್ಲಿ ಮಾತ್ರ ಹುಟ್ಟಿದ ನಷ್ಟ ತಿಳಿಸಲ್ಪಟ್ಟಿತು. ಪರಂತು ಅಂತಾ ನಷ್ಟ ಒಂದು ಸಂವತ್ಸರಕ್ಕೋ ಅಥವಾ ಕಮ್ಮಿ ಕಾಲಕ್ಕೋ ಅದು ಸ್ಪಷ್ಟವಾಗಿಲ್ಲವು. ಇತರ ಕಂಪೆನಿಗಳ ವಿಷಯದಲ್ಲಿ ನಷ್ಟ ತಿಳಿಸಲ್ಪಡಲಿಲ್ಲವು, ಮತ್ತು ರಿಪೋರ್ಟ ಮಾಡಲಿಲ್ಲವೆಂದು ನಮೂದು ಮಾಡಲ್ಪಟ್ಟಿರುತ್ತದೆ, ಹಾಗೆ ಮಾಡದೆ ಇರುವದಕ್ಕೆ ಕಾರಣ ತಿಳಿಸಲ್ಪಡಲಿಲ್ಲವು.

೬. ಅನೇಕ ಕಂಪೆನಿಗಳು ಸನ್ ೧೮೮೮-೮೯ ನೇ ಇಸವಿಯಲ್ಲಿ ರಿಜಿಸ್ಟರಾಗಿದ್ದಾಗ್ಯೂ ಅವುಗಳ ವಸೂಲಾದ ಬಂಡವಾಳದ ಮೊತ್ತ ಎಷ್ಟೆಂದು ತಿಳಿಸಲ್ಪಡಲಿಲ್ಲವೆಂದು ನಮೂದಾಗಿರುತ್ತದೆ. ಅದು ತಿಳಿಸತಕ್ಕದ್ದೆಂದು ರೆಜಿಸ್ಟ್ರಾರವರು ಕಂಪೆನಿಗಳ ಡೈರಕ್ಟರುಗಳುಂ ಕೇಳಿಕೊಳ್ಳಬೇಕೆಂಬ ಅಂಶವು ಕುರಿತು ರಿಪೋರ್ಟ ಮಾಡತಕ್ಕದ್ದು.

೭. ಈ ಕಂಪೆನಿಗಳು ಕಂಪೆನೀಸ್ ಆಕ್ಟಿನ ನಿಬಂಧನೆಗಳ ಪ್ರಕಾರ ಖಚಿತವಾಗಿ ಆಚರಿಸತಕ್ಕ ರೆಸೂಟಿಸಿ ಯೆಂಬ ವಿಷಯದಲ್ಲಿ ರಿಜಿಸ್ಟ್ರಾರವರು ನಿಗಾ ಇಡುವರೆಂದು ನಿರೀಕ್ಷಿಸಲ್ಪಟ್ಟಿರುತ್ತಾರೆ, ಮತ್ತು ಆಕ್ಟನ್ನನುಸರಿಸಿ ಒಂದು ಕಂಪೆನಿ ರಿಜಿಸ್ಟರಾಗುವದಕ್ಕೆ ಪೂರ್ವ, ಯಾವ ಉದ್ದೇಶಗಳಮೇಲೆ ಕಂಪೆನಿ ಕೆಲಸಗಳು ನಡೆಸುವಂತೆ ಯೋಚಿಸಲ್ಪಟ್ಟಿದೆಯೊ ಅವು ಯೋಗ್ಯವಾದವೆಂತಲೂ, ಆರ್ಟಿಕಲ್ಸ ಆಫ ಅಸೋಸಿಯೇಷನ್ ಮೂಲಕ ಹಿಸ್ಸೇದಾರರಿಗೆ ಕೊಡಲ್ಪಟ್ಟಿರುವ ಭರವಸೆಗಳು ಸ್ವಭಾವತಃ ಮೋಸಕರವಲ್ಲವೆಂತಲೂ ತೃಪ್ತಿಕರವಾಗಿ ತಿಳಿದುಕೊಳ್ಳಬೇಕು, ಎಂಬದು.

Occasional Notes
ನೈಮಿತ್ತಿಕ ವಿಷಯವ್ಯಾಸ.

The cost of the Burmese war.—ಬ್ರಹ್ಮದೇಶದ ಯುದ್ಧದ ಬಗ್ಗೆ ನಾಲ್ಕುತ್ತಾರು ಕೋಟಿ ರೂಪಾಯಿಗಳು ಖರ್ಚಾದಂತೆ ಅಂದಾಜಾಗಿದೆ. ಇಂಡ್ಯದೇಶದ ಜನಗಳ ಭಾಗಕ್ಕೆ ಈ ಭಾರೀ ಮೊತ್ತವು ಸಮುದ್ರದಲ್ಲಿ ಹಾಕಿದಂತಾಯಿತು. ಬಡವರಾದ ಇಂಡ್ಯದೇಶೀಯರಿಗೆ ಈ ಭಾರಿ ಮೊತ್ತದಿಂದ ಎಷ್ಟು ಮೇಲನ್ನುಂಟುಮಾಡಬಹುದು, ಎಂದು ಅಮೃತಬಜಾರ್‌ಪತ್ರಿಕೆ ಅಭಿಪ್ರಾಯಪಡುವದು ನ್ಯಾಯ್ಯವಾಗಿಯೇ ಇದೆ.

A liberal donation.—ಪಟ್ಟಿಯಾಲಾ ಮಹಾರಾಜರವರು ಲಾಹೋರು ಯೆಂಬ ಪ್ರದೇಶದೊಳು ಸ್ಥಾಪಿಸಬೇಕೆಂದು ಯೋಚಿಸಲ್ಪಟ್ಟಿರುವ ಕಾಲೇಜ ಸಾಹಾಯ್ಯ ಸಹಾಯಾರ್ಥವಾಗಿ ಒಂದು ಲಕ್ಷ ಅರವತ್ತು ಸಾವಿರ ರೂಪಾಯಿಗಳು ಕೊಟ್ಟಿರುತ್ತಾರೆ. ಇದರಿಂದ ಮಹಾರಾಜರವರು ತಮ್ಮ ಪ್ರಜೆಗಳ ವಿದ್ಯಾಭಿವೃದ್ಧಿ ವಿಷಯದಲ್ಲಿ ಅಂತರವಾದ ಅಕ್ಕರೆಯುಳ್ಳವರೆಂದು ವ್ಯಕ್ತವಾಗುತ್ತದೆ.

A decision of the Government.—ಇಂಡ್ಯ ದೇಶದ ಸರಹದ್ದು ಪ್ರಾಂತದ ಸಂರಕ್ಷಣೆಯ ಬಗ್ಗೆ ವಿಶೇಷ ತಯಾರಿಯೊಂದ ಬ್ರಿಟಿಷರವರ ಮುಖದಿಂದಗೆ ಕೊಡಲ್ಪಟ್ಟ ನೇಟಿವ್ ಸಂಸ್ಥಾನಗಳ ಸೇನೆಯು ವಿಶಿಷ್ಟ ಸರ್ಕಾರೀ ಕಾಗದ ಪತ್ರಗಳಲ್ಲೂ "ಇಂಪೀರಿಯಲ್ ಸರ್ವಿಸ್ ಕೋರ್" ಅಥವಾ "ಇಂಪೀರಿಯಲ್ ಸರ್ವಿಸ್ ಟ್ರೂಪ್ಸ್" ಎಂಬ ಹೆಸರಿನಿಂದ ಕರೆಯಲ್ಪಡತಕ್ಕದ್ದೆಂದು ಇಂಡ್ಯ ಗವರ್ನಮೆಂಟಿನವರು ನಿರ್ಣಯಿಸಿರುತ್ತಾರೆ.

A rumour.—ಮುಂದಿನ ವರ್ಷದಲ್ಲಿ ಬಂಗಾಳದೇಶದಲ್ಲಿನ ವಿದ್ಯಾವಂತರಾದ ಹೆಂಗಸರು ಕೆಲವರು ಸೇರಿ, ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಭೆಯ ತರಫಿನಲ್ಲಿ ಇಂಗ್ಲಾಂಡಿಗೆ ಹೋಗಿ ಈಗ ಸದರೀ ಸಾಮಾಜಿಕರು ಅಪೇಕ್ಷಿಸುವ ಹೊಸ ವಿಧಾಯಗಳನ್ನು ಕುರಿತು ಉಪನ್ಯಾಸಮಾಡುವದರ ಮೂಲಕ ಆ ದೇಶದಲ್ಲಿನ ಹೆಂಗಸರ ಅನುಕೂಲವು ಸಂಪಾದಿಸಿ ತನ್ಮೂಲಕ ತಮ್ಮ ಕಾರ್ಯಸಿದ್ಧಿಯಂ ಪಡೆಯಬೇಕೆಂದು ಯೋಚಿಸುತ್ತಲಿದ್ದಾರೆಂದು ಒಂದು ಪ್ರವಾದ ಹುಟ್ಟಾಗಿರುವಂತೆ ಇಂಡಿಯನ್ ಮಿರರ್ ಪತ್ರಿಕೆ ತಿಳಿಸುತ್ತದೆ.

Income Tax.—ಅನ್ಯ ಸಂಸ್ಥಾನಗಳಿಂದ ವ್ಯಾಪಾರ ಸಂರಕ್ಷಣೆಯ ಬಗ್ಗೆ ನೌಕರರಾಗಿ ಬಂದಿರುವ ಅಧಿಕಾರಿಗಳು ತಮ್ಮ ಸರ್ಕಾರದಿಂದ ಪಡೆಯುವ ಸಂಬಳ ಮತ್ತು ರುಸುಂಗಳ ಮೇಲೆ ಇನ್‌ಕಂಟ್ಯಾಕ್ಸ್ ಎಂಬ ಆದಾಯದ ತೆರಿಗೆ ವಿನಾಯಿಸಲ್ಪಟ್ಟಿರುತ್ತದೆಯಷ್ಟೆ. ಸದರೀ ವಿನಾಯಿತಿಯು ಮೇಲಿನ ಅಧಿಕಾರಿಗಳ ಇಲಾಖಾ ಜನರು ತಮ್ಮ ಗವರ್ನಮೆಂಟಿನಿಂದ ಪಡೆಯುವ ಸಂಬಳಗಳು ಮತ್ತು ರುಸುಂಗಳಿಗೆ ಸಹ ಅನ್ವಯಿಸುವಂತೆ ಭಾವಿಸತಕ್ಕದ್ದೆಂದು ಇಂಡ್ಯ ಗವರ್ನಮೆಂಟಿನವರು ಬರೆದ ಲೆಟರನ್ನು ಮದರಾಸ್ ಗವರ್ನಮೆಂಟಿನವರು ಜನರಲ್‌ಕೆರಿಗೆಯ ಕಮಿಷನರ್‌ಗಳಿಗೆ ಕಳುಹಿಸಿರುತ್ತಾರೆ.

Floods in Bengal.—ಅಮೃತ ಬಜಾರ್ ಪತ್ರಿಕೆ ತಿಳಿಸುವದೇನಂದರೆ—ಬಂಗಾಳದೇಶವಾದ್ಯಂತ ಜಲಮಯವಾಗಿದೆ. ಇದರಿಂದ ಉಂಟಾದ ಸಂಕಟಗಳನ್ನು ವಿವರಿಸಲು ಸಾಧ್ಯವಲ್ಲದೆ ಇದೆ, ಪ್ರತಿಸಂವತ್ಸರದಲ್ಲೂ ಜಲಪ್ರಳಯವುಂಟಾಗಿ ಸರ್ವ ಸಮೃದ್ಧಿಯುಳ್ಳ ದೇಶವು ನಾಶವಾಗುತ್ತಿದೆ. ಬಂಗಾಳದೇಶದಲ್ಲಿಕೆ ಬಹುಭಾಗದಲ್ಲಿ ಜನರು ಆಹಾರವಿಲ್ಲದೆ ಸಂಕಟಪಡುತ್ತಲಿದ್ದಾರೆ. ಅವರವರಲ್ಲಿದ್ದ ಅಲ್ಪಸ್ವಲ್ಪ ಸಹ ಪ್ರವಾಹದಲ್ಲಿ ಕೊಚ್ಚಿಕೊಂಡುಹೋದವು. ಸಾವಿರಾರ ಗ್ರಾಮಗಳು ಸಂಪೂರ್ಣವಾಗಿ ನಾಶವಾಗಿ ಹೋಗಿದವು. ಲಕ್ಷಾಂತರಜನರು ವಾಸಗೃಹಗಳಿಲ್ಲದೆಯೂ ತಿನ್ನುವದಕ್ಕಿಲ್ಲದೆಯೂ ಸಾಯುವ ಸ್ಥಿತಿಯಲ್ಲಿದ್ದಾರೆ. ಅನೇಕ ಪ್ರದೇಶಗಳೊಳು ಪಸಲುಗಳು ಸಂಪೂರ್ಣವಾಗಿ ನಾಶವನ್ನೈದಿದವು. ಜನಗಳು ಹುಲ್ಲಿನಬೀಜದಿಂದ ಪ್ರಾಣಧಾರಣವಂ ಮಾಡಿಕೊಳ್ಳುತ್ತಿರುತ್ತಾರೆ. ಎತ್ತ ನೋಡಿದರೂ ಕಷ್ಟಕಾಲ ಪ್ರಾಪ್ತವಾಯಿತೆಂಬ ಶಬ್ದವೇ ಪ್ರಬಲವಾಗಿದೆ, ಎಂಬದು.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕುಜಾತಿವೃತ್ತಾಂತಗಳು.

Holidays.—ಬರುವ ಬುಧ ಗುರುವಾರಗಳೆರಡುದಿವಸಗಳೂ ಗೌರೀ ಗಣೇಶನಹಬ್ಬವಾದದರಿಂದ ತಪ್ಪ್ರಯುಕ್ತ ಸರ್ಕಾರ್ ಇಲಾಖೆಗಳಿಗೆಲ್ಲ ಸದರೀ ಯೆರಡುದಿವಸಗಳೂ ರಜಾ ಕೊಡಲ್ಪಡುವದು.

Reduction of Railway fares.—ಈ ಪತ್ರಿಕೆಯ ಎನೇ ಪುಟದಲ್ಲಿ ಪ್ರಕಟಿಸಿರುವ ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯವರ ನೋಟೀಸ್ ದೆಸೆಯಿಂದ ೩ನೇ ತರಗತಿ ಪ್ರಯಾಣಸ್ಥರ ದರವನ್ನು ಮೈಲು ೧ಕ್ಕೆ ೨ ೧/೪ ಪೈಗಳಿಂದ ೨ ಪೈಗಳಿಗೆ ಕಡಿಮೆ ಮಾಡಿರುವಂತೆಯೂ ಈ ಹೊಸ ಏರ್ಪಾಡು ಬರುವ ತಿಂಗಳ ಗುರ್ತ್ರೀ ತಾರೀಖ್ ಮೊದಲು ಜಾರೀಯಲ್ಲಿ ಬರುವದೆಂತಲೂ ತಿಳಿಯಬರುತ್ತದೆ.

H. H. the Maharaja's departure.—ಶ್ರೀಮನ್ಮಹಾರಾಜರವರು ತಮ್ಮ ಪರಿವಾರದೊಡನೆ ನಾಳೆಯದಿನ ಮೈಸೂರಿಗೆ ದಯಮಾಡುವರೆಂದು ನಿಷ್ಕರ್ಷೆಯಾಗಿರುತ್ತದೆ. ಆಫೀಷಿಯೇಟಿಂಗಿ ದಿವಾನರಾದ ಮೆ|| ರಂಗಾಚಾರ್ಲುರವರು ಮಹಾರಾಜರವರ ಸವಾರಿಯೊಡನೆ ಹೋಗುವರೆಂತಲೂ ಕಾಯಂ ದಿವಾನರವರು ವಾಪಸ್ ಬಂದು ತಮ್ಮ ಕೆಲಸದ ಚಾರ್ಜನ್ನು ತೆಗೆದುಕೊಳ್ಳುವ ತನಕ ಅಲ್ಲಿಯೇ ಇರುವರೆಂತಲೂ ತಿಳಿಯಬರುತ್ತದೆ.

The garden party at the Maharaja's palace.—ಗತ ಶುಕ್ರವಾರದದಿನ ಸಾಯಂಕಾಲ ಶ್ರೀಮನ್ ಮಹಾರಾಜರವರ ಅರಮನೆ ಕಾಂಪೌಂಡಿನಲ್ಲಿ ಗಾರ್ಡನ್ ಪಾರ್ಟಿನಡೆಯಿತು. ಅದಕ್ಕೆ ಮಹಾರಾಜರವರ ಅಪೇಕ್ಷಾನುಗುಣವಾಗಿ ಈ ಸಂಸ್ಥಾನದ ದೊಡ್ಡ ಅಧಿಕಾರಿಗಳೆಲ್ಲರೂ ಹೋಗಿದ್ದರು. ಪರಂತು ಆಕಾಶವು ನಿರ್ಮಲವಾಗಿರದೆ ಮೇಘಾವರಣವಾಗಿ ಮಳೆಯಸೂಚನೆ ಕಂಡುಬಂದುದರಿಂದ ವಿಶೇಷ ಸಂಭ್ರಮಗಳಿಗೆ ಅವಕಾಶವಿಲ್ಲದೆಹೋಯಿತು. ಆದಾಗ್ಯೂ ಬ್ಯಾಂಡ್ ಮಗ್ಗೆರೆ ಕೆಲವು ವಿನೋದಗಳು ನಡೆದವು.

Mr. C. Raghavacharlu, B. A.—ಕೋಲಾರ ಡಿಸ್ಟ್ರಿಕ್ಟ ಪೊಲೀಸ್ ಸೂಪರಿಂಟೆಂಡೆಂಟರಾದ ಮ|| ಸಿ. ರಾಘವಾಚಾರ್ಲು ಬಿ.ಎ. ಯವರು ಈಚೆಗೆ ಉಪಯೋಗಿಸಿಕೊಂಡಿದ್ದ ರಜಾ ಪೂರೈಸಿದ್ದರಿಂದ ಅವರು ಬೆಂಗಳೂರು ಡಿಸ್ಟ್ರಿಕ್ಟ ಪ್ರಜರಿ ಇನ್‌ಚಾರ್ಜ ಆಫೀಸರಾದ ಮ|| ವೈದ್ಯನಾಥಯ್ಯರವರಿಗೆ ಬದಲಾಗಿ ನೌಕರರ್ನ್ಮಾಡಲ್ಪಟ್ಟು ಗತ ಶುಕ್ರವಾರದ ದಿನ ಕೆಲಸದ ಚಾರ್ಜನ್ನು ಅಸಿಸ್ಟೆಂಟ ಕಮಿಷನರ್ ಮ|| ಅನ್ನಾಜೀರಾಯರವರಿಂದ ತೆಗೆದುಕೊಂಡಂತೆ ತಿಳಿಯಲಾದೆವು.

Visit of the Czarewitch to Mysore.—ರಷ್ಯ ಚಕ್ರವರ್ತಿಯವರ ಜ್ಯೇಷ್ಠ ಪುತ್ರರವರು ಈಗ ದೇಶಾಟನಮಾಡಿ ಆಯಾದೇಶಗಳಲ್ಲಿರುವ ವಿಶೇಷಾಂಶಗಳನ್ನು ಸಾಕ್ಷಾತ ನೋಡಿ ತಿಳಿದುಕೊಳ್ಳಬೇಕೆಂಬ ಕೋರಿಕೆಯೊಡನೆ ರಾಜ್ಯದಿಂ ಪ್ರೊರಟು ಯೂರೋಪ್ಖಂಡದ ಪ್ರಸಿದ್ಧ ಪಟ್ಟಣಗಳನ್ನೆಲ್ಲ ನೋಡುತ್ತ ಕಡೆಗೆ ಇಂಡ್ಯದೇಶಕ್ಕೆ ಬರುವರೆಂತಲೂ ಆಕಾಲದಲ್ಲಿ ಈ ಮೈಸೂರು ರಾಜ್ಯಕ್ಕೆ ಸಹ ಬರುವ ತಾತ್ಪರ್ಯವುಳ್ಳವರಾಗಿದ್ದಾರೆಂತಲೂ ಪ್ರವಾದ ಹುಟ್ಟಾಗಿರುವಂತೆ ಒಳದೇಶದ ಸ್ಪೆಕ್ಟೇಟರ್‌ಪತ್ರಿಕೆಯು ತಿಳಿಸುತ್ತದೆ. ಇದೆಷ್ಟರಮಟ್ಟಿಗೆ ನಿಜವೋ ನಾವರಿಯೆವು.

Census Assistant Superintendent.—ದಿವಾನರವರ ಪ್ರೈವೇಟ ಸೆಕ್ರೆಟರಿ ಆಂದರೆ, ಅವರ ಜ್ಯೇಷ್ಠಪುತ್ರರಾದ ಮ|| ದೊರೆಸಾಮಿ ಅಯ್ಯರವರು ಸೆನ್ಸಸ್ ಅಸಿಸ್ಟೆಂಟ ಸೂಪರಿಂಟೆಂಡೆಂಟರಾಗಿ ನೌಕರರ್ಮಾಡಲ್ಪಟ್ಟಂತೆ ತಿಳಿಯಬರುತ್ತದೆ. ದಿವಾನರವರಿಗೆ ಪ್ರೈವೇಟ ಸೆಕ್ರೆಟರಿಯಾಗಿರತಕ್ಕವರು ಅಸಿಸ್ಟೆಂಟ ಕಮಿಷನರಾಗಿ ನೌಕರರಾಗುವದು ಈ ಸಂಸ್ಥಾನದಲ್ಲಿ ಕೆಲವು ಕಾಲದಿಂದ ನಡೆದುಬರುವ ವಾಡಿಕೆಯಾಗಿರುವದರಿಂದ ಇದಕ್ಕಾಗಿ ಆಶ್ಚರ್ಯ ಪಡಬೇಕಾದುದಿಲ್ಲವು. ಆದರೆ ಬಾಲ್ಯ ವಯಸ್ಸಿನಲ್ಲಿ ಮ|| ದೊರೆಸಾಮಿ ಅಯ್ಯರವರಿಗಿಂತಾ ಉನ್ನತಾಧಿಕಾರವು ಪ್ರಾಪ್ತವಾದಬಗ್ಗೆ ಸಂತೋಷಿಸುವೆವು.

District Judge of Nandydroog.—ಈ ದಿನ ನಂದಿದುರ್ಗ ಡಿವಿಜನ್ ಸೆಷನ್‌ಕೋರ್ಟ್ ಸ್ಥಾಪಿಸಲ್ಪಟ್ಟು ಕ್ರಮವಾಗಿ ಕೆಲಸಕ್ಕೆ ಪ್ರಾರಂಭವಾಗುವದು. ಮ|| ಟಿ. ನರಹರಿರಾಯರವರು ಕಳೆದ ಗುರುವಾರದ ದಿನ ಈ ಊರಿಗೆ ಬಂದರು. ಈ ದಿನ ತಮ್ಮ ಕೆಲಸದ ಚಾರ್ಜನ್ನು ತೆಗೆದುಕೊಂಡು ಚೀಫ ಕೋರ್ಟಿನಲ್ಲಿ ಇದುವರಿವಿಗೂ ಸೆಷನ್ ವಿಚಾರಣೆ ನಡೆಯುತ್ತಲಿದ್ದ ಪೂರ್ವಭಾಗದ ಹಾಲಿನಲ್ಲಿಯೇ ಕೋರ್ಟ ಮಾಡುವರು. ಈ ಕೋರ್ಟಿಗೆ ೫೦೦—೮—೦ ರೂಪಾಯಿಗಳ ತನಕ ಬೇಕಾದ ಟಿಬ್ಬಂದಿಗಳನ್ನೆಲ್ಲ ಆಫೀಷಿಯೇಟಿಂಗ್ ಚೀಫ ಜಡ್ಜಿಯವರೇ ಮ|| ಕೇಶವರಾಯರವರ ಸಲಹೆಯಮೇಲೆ ಚುನಾಯಿಸಿ ನೇಮಿಸಿರುವರೆಂತಲೂ ಅವರೆಲ್ಲರೂ ಚೀಫ ಕೋರ್ಟಿನಲ್ಲಿ ನೌಕರಿಯಲ್ಲಿದ್ದವರೆಂತಲೂ ತಿಳಿಯಬರುತ್ತದೆ. ಕೋರ್ಟಿನ ಲವಾಜಮೆಯು ಪೂರ್ವಕ್ಕಿಂತಲೂ ಬಹಳ ತಗ್ಗಿಸಲ್ಪಟ್ಟಿದೆಯೆಂದು ಕೇಳುತ್ತೇವೆ.

A warning.—ಕೆಲವು ದಿನಗಳಹಿಂದೆ ಚಿತಪಾವನ ಜಾತಿಯವರ ವಿಷಯಕವಾಗಿ ರಚಿಸಲ್ಪಟ್ಟ ಸರ್ವಸಂಧಿತವೆಂಬ ಒಂದು ಗ್ರಂಥವನ್ನು ಕುರಿತ ನಮ್ಮ ಅಭಿಪ್ರಾಯವನ್ನು ಕಳೆದ ೧೦ನೇ ತಾರೀಖಿನ ಪತ್ರಿಕಾಮೂಲಕ ತಿಳಿಸಿರುತ್ತೇವಷ್ಟೆ. ಇದಕ್ಕೆ ಪ್ರತ್ಯರ್ಥಿಗಳಾದವರು ಬೆಂಗಳೂರು ಬ್ರಾಹ್ಮಣಐಕ್ಯವರ್ಧಕಸಭೆಯ ಮುಖ್ಯ ಪ್ರವರ್ತಕರಿಗೆ ಯಾವವಿಧದಿಂದಲಾದರು ಮಾನಭಂಗವನ್ನುಂಟುಮಾಡಬೇಕೆಂದು ಪ್ರಯತ್ನ ಪಡುತಲಿರುವಂತೆ ಒಳದೇಶದ ಬಾತಮಿದಾರರು ತಿಳಿಸುತ್ತಾರೆ. ಪ್ರತಿ ಕಕ್ಷಿಯವರು ಕರುಗಿರುವ ಗ್ರಂಥರೂಪವಾದ ಆಧಾರಗಳಿಂದ ತಮ್ಮ ಕಾರ್ಯಸಿದ್ಧಿಯಂ ಪಡೆಯುವದು ಉಚಿತವೇ ಹೊರ್ತು ಅನ್ಯಥಾ ಪ್ರವರ್ತಿಸಿದರೆ ಅದರಿಂದ ಪ್ರಬಲ ಸಂಕಟಕ್ಕೆ ಗುರಿಯಾಗುವರೆಂದು ಎಚ್ಚರಿಸುತ್ತೇವೆ.

The late Mr. Lovery.—ಕೊಡಗು ಚೀಫ ಕಮಿಷನರವರ ಆಫೀಸ ಮ್ಯಾನೇಜರಾದ ಮಿಸ್ಟರ್ ಬಿ. ಜೆ. ಲೌರಿಯವರು ಗತ ಬುಧವಾರದ ದಿನರಾತ್ರಿ ೯ ಘಂಟೆಯಸಮಯದಲ್ಲಿ ಈ ಊರು ಸಿವಿಲ್ ಮಿಲಿಟರಿ ಸ್ಟೇಷನಿನಲ್ಲಿರತಕ್ಕ ಸ್ವಂತಬಂಗ್ಲೆಯಲ್ಲಿ ಕಾಲಗತಿಯನ್ನೈದಿದರೆಂಬದಂ ತಿಳಿಸಲಿಕ್ಕೆ ನಾವು ವಿಷಾದಿಸುತ್ತೇವೆ. ಇವರಿಗೀಗ ೪೯ ವರುಷಗಳ ವಯಸ್ಸೆಂದು ತಿಳಿಯಬರುತ್ತದೆ. ಈಗ ಗತಿಸಿದ ದೊಡ್ಡಮನುಷ್ಯರು ಪೂರ್ವದಲ್ಲಿ ನೆಲೆಗೊಂಡಿದ್ದ ಅದಾಲತ್ ಕೋರ್ಟ ಮುನಸಫರಾಗಿದ್ದ ಮ|| ಲೌರಿ ಯೆಂಬವರ ಮೊಮ್ಮಗನೆಯುಕುಮಾರರಾಗಿಯೂ ಈಗ ದಿವಾನರ ಆಫೀಸ್ ಮ್ಯಾನೇಜರಾಗಿರುವ ಮ|| ಲೌರಿಯವರ ಸೋದರರಾಗಿಯೂ ಇರುತ್ತಾರೆ. ಈ ರಾಜ್ಯವು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಲ್ಪಡುವದಕ್ಕೆ ಪೂರ್ವದಲ್ಲಿ ಈಗ ಕಾಲಗತಿಯನ್ನೈದಿದ ಮ|| ಬಿ. ಜೆ. ಲೌರಿಯವರು ಇಡಾಂ ಸೂಪರಿಂಟೆಂಡೆಂಟ ಆಫೀಸಿನಲ್ಲಿ ಒಂದು ಜವಾಬ್ದಾರಿಯುಳ್ಳ ಕೆಲಸದೊಳಿದ್ದು ತರುವಾಯಕೊಡಗು ಚೀಫಕಮಿಷನರ್ ಆಫೀಸ್ ಮ್ಯಾನೇಜರ್ ಕೆಲಸಕ್ಕೆ ವರ್ಗಮಾಡಲ್ಪಟ್ಟರು. ಅದುಮೊದಲು ಇಲ್ಲಿಗೆ ಬಂದ ರೆಸಿಡೆಂಟರುಗಳ ಪ್ರೀತಿ ಗೌರವ ನಂಬಿಕೆಗೆ ಪಾತ್ರರಾಗಿ ಸ್ವಸಾಮರ್ಥ್ಯದಿಂ ಅವರೆಲ್ಲರ ಹೃದಯಗಳಲ್ಲಿಯೂ ಒಳ್ಳೇ ಅಭಿಪ್ರಾಯವನ್ನುಂಟುಮಾಡಿದ್ದರು. ಸರ್ ಹಾರಿ ಪ್ರೆಂಡರ್ ಗಾಸ್ಟ್ ಯವರು ಸದರೀ ಯವರಲ್ಲಿ ವಿಶೇಷ ನಂಬಿಕೆಯನ್ನೂ ಗೌರವವನ್ನೂ ಇಟ್ಟು ಕೆಲವು ಮುಖ್ಯ ವಿಷಯಗಳನ್ನೆಲ್ಲ ಇವರೊಡನೆ ಅಂತರಂಗವಾಗಿ ಆಲೋಚಿಸುತಲಿದ್ದರಂತೆ. ಈಚೆಗೆ ಈ ದೇಶದ ಪ್ರಾಣನಾಶಕ್ಕೆ ನಿಮಿತ್ತಕವಾಗಿ ಸರ್ವತ್ರ ವ್ಯಾಪಿಸಿದ್ದ ಇನ್‌ಫ್ಲ್ಯುಯೆಂಜಾ ಯೆಂಬ ವಿಷಮ ಶೀತಜ್ವರವು ತಗಲಿ ಅದು ದೈವಯೋಗದಿಂ ಸಹ್ಯಃ ಗುಣವಾದಾಗ್ಯೂ ಅದರ ವ್ಯಾಪಕತೆಯು ಪ್ರಕಾರಾಂತರೇಣ ಫಲದಾಯಕವಾಗದೆ ಹೋಗಲಿಲ್ಲವು. ಆದಾರಣ್ಯ ಮ|| ಲವರಿಯವರ ಶರೀರದಾರ್ಢ್ಯವು ದಿನೇದಿನೇ ಕ್ಷೀಣಿಸುತ್ತ ದೌರ್ಬಲ್ಯದಿಂ ಹೃದಯ ವೇದನೆಯುಂಟಾಗಿ ಕಡೆಗೆ ಅದರಿಂದಲೇ ಮೃತಪಟ್ಟರೆಂದು ಕೇಳುತ್ತೇವೆ. ಮುಖ್ಯವಾಗಿ ಸ್ನೇಹಪರರಾಗಿಯೂ ಉತ್ಸಾಹಿಯಾಗಿಯೂ ವಿನೀತರಾಗಿಯೂ ಸಾಧುವಾಗಿಯೂ ಇದ್ದ ಈ ದೊಡ್ಡಮನುಷ್ಯರಿಗೆ ಪ್ರೌಢ ವಯಸ್ಸಿನಲ್ಲೇ ಇಂತಾ ಅಕಾಲ ಮೃತ್ಯು ಪ್ರಾಪ್ತವಾದ ಬಗ್ಗೆ ವಿಷಾದಿಸುವೆವು. ಇವರ ಖನನಕ್ರಿಯೆಯು ಶನಿವಾರದಿನ ಸಾಯಂಕಾಲ ನಡೆಯಿತಲ್ಲದೆ ಇವರ ಗೌರವಾರ್ಥ ಸೆಕ್ರೆಟರಿಯವರು ತಮ್ಮ ಆಫೀಸಿಗೆ ಒಂದು ದಿನ ರಜಾಕೊಟ್ಟಂತೆ ಕೇಳಲಾದೆವು.

CORRESPONDENCE.

ಮ|| ರಾ|| ಕರ್ಣಾಟಕಪ್ರಕಾಶಿಕಾ ಎಡಿಟರವರ ಸನ್ನಿಧಿಗೆ

ಅಯ್ಯಾ,—ಈ ಕೆಳಗೆ ನಾನು ನಮೂದಿಸತಕ್ಕ ಸಂತೋಷವಾರ್ತೆಯನ್ನು ತಮ್ಮ ಘನವಾದ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂತ ಕೋರುತ್ತೇನೆ. "ಕೊತವಾಲ ಪಾರ್ಟಿಶಾಲೆ" ಎಂಬ ಶಾಲೆಯು ಪರೀಕ್ಷಿತದ ವ್ಯಾಜ್ಯಕ್ಕಾಗಿ ನಮ್ಮ ಮೈಸೂರು ದೇಶೀಯರು ಪಟ್ಟ ಪ್ರಯತ್ನವೆಲ್ಲ ಹೊಂದಿದಮನ್ನು ನ್ಯಾಯ ದೇವತೆಗಳಾದ ತಮಗೆ ಈ ಮಾನಿತರು ತಿಳಿಸ

ಕಿನ ಪ್ರಜೆಗಳೆಲ್ಲ ಕೇವಲ ಖಿನ್ನರಾಗಿರುತಿದ್ದು ಸದರೀ ಕೇಸು ಹೈಕೋರ್ಟಿಗೆ ಅಪೀಲಾಗಿ ಪ್ರಥಮದಲ್ಲೇ ಈ ಕೇಸಿಗಾಗಿ ನ್ಯಾಯಪ್ರಭುವಾದ ಮದರಾಸ್ ಹೈಕೋರ್ಟ್ ಚೀಫ್ ಜಡ್ಜಿಯವರು ಮಾಡಿದ ಪ್ರಸಂಗಗಳಿಂದಲೇ ಇಲ್ಲಿನ ಪ್ರಜೆಗಳು ಸಂತೋಷಯುಕ್ತರಾಗಿ ಅಪೀಲ್‌ಕೋರ್ಟಿನ ಇತ್ಯರ್ಥವನ್ನು ಕೇಳಲಿಕ್ಕೆ ಕೇವಲಾತುರರಾಗಿದ್ದರು.

ಈಚಿನ ತೀರ್ಪಿನ ೧೨ನೇ ತಾರೀಖಿನ ಹಿಂದೂ ಪೇಪರಿನಲ್ಲಿ ಸದರೀ ಸಂಕ್ಷಿಪ್ತ ಶ್ಯಾಷಿಆದದ್ದನ್ನು ನೋಡಿ ಇಲ್ಲಿನ ಪ್ರಜೆಗಳು ಪಟ್ಟ ಆನಂದವನ್ನು ನಾನು ಇಷ್ಟೆಂತ ಅರಿಕೆಮಾಡಲಿಕ್ಕೆ ಸಾಧ್ಯವಿಲ್ಲವಾಗಿರುತ್ತಾದಾಗ್ಯೂ ಈ ಸಂತೋಷದಲ್ಲಿ ನಡೆದ ಉತ್ಸವವಿಷ್ಯಕೆ ಕೆಲವು ಭಾಗವಂ ಮಾತ್ರ ಅರಿಕೆ ಮಾಡಿಕೊಳ್ಳುತ್ತೇನೆ. ಈ ದಿನಸಾಯಂಕಾಲ ೫ ಘಂಟೆಗೆ ಮಾಲೂರ್ ರೀಡಿಂಗರೂಮಿನ ಹಾಲಿನಲ್ಲಿ ಇಲ್ಲಿನ ವಾಸಸ್ಥರಾದ ಮ|| ರಾ|| ಲಿಂಗಪ್ಪಯ್ಯ ವೀರಶೆಟ್ಟಿ ವಗೈರೆ ದೊಡ್ಡ ಮನುಷ್ಯರ ಕೋರಿಕೆಯ ಪ್ರಕಾರ ಮ|| ರಾ|| ಅಮಲ್ದಾರರು ೧|| ಗೋಪಾಲಾಚಾರ್ಲು ಮುಂತಾದವರು, ಶಿರಸ್ತೇದಾರರು ಪಾಲಸಾಟಿ ನಾರಾಯಣಸ್ವಾಮಿನಾಯುಡರವರು, ಪೊಲೀಸ್ ಇನ್ಸ್‌ಪೆಕ್ಟರ್ ಕೃಷ್ಣರಾಯರವರು, ಫಾರೆಸ್ಟ್ ರೇಂಜರ್ ಕೃಷ್ಣಸ್ವಾಮಿಅಯ್ಯರ್‌ರವರು, ಆಸ್ಪತ್ರಿ ಅಸಿಸ್ಟೆಂಟ್ ಕೃಷ್ಣಸ್ವಾಮಿನಾಯುಡುರವರು, ಇನ್ನು ಈ ಸಭಾವಲ್ಲಿ ಇರತಕ್ಕ ಅನೇಕ ದೊಡ್ಡ ಮನುಷ್ಯರು ಸಹ ಒಂದು ಸಭೆ ಸೇರಿದರು. ಆ ಕಾಲದಲ್ಲಿ ಆ ಸ್ಥಳದಲ್ಲಿ ಹಾಕಿದ್ದ ಆಸನಗಳಿಂದಲೂ ಹಬ್ಬಿದ್ದ ದೀವಿಗೆಗಳಿಂದಲೂ ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತಿದ್ದ ಶುಭಸಮಾಚಾರಗಳಿಂದಲೂ ಕಸಬದಾರರು ಮಾಡತಕ್ಕ ಕ್ಲಾರನೆಟ್ ವಗೈರೆ ವಾದ್ಯಗಳಿಂದಲೂ ಆಸ್ಥಾನವು ಕೇವಲ ರಮಣೀಯವಾಗಿ ಕಂಗೊಳಿಸುತಿತ್ತು. ಆ ಕಾಲದಲ್ಲಿ ಕ್ರಿಶ್ಚಿಯನ್ ಸ್ಕೂಲ್ ಮ್ಯಾನೇಜರ್ ಮ|| ಲಿಂಗಪ್ಪಯ್ಯನವರು ಎದ್ದು ನಿಂತುಕೊಂಡು ಅಲ್ಲಿ ಸೇರಿದ್ದ ಸಾವಿರಾರು ಜನಗಳಿಗೆ ಸಂತೋಷಕಾರಣವನ್ನು ಸೂಚಿಸಿದರು. ಅದನ್ನೇ ತಹಸೀಲ್ದಾರ್ ಅಲ್ಲಿ ಸೇರಿದ್ದ ಜನಗಳಿಗೆಲ್ಲ ತಿಳಿಸಬೇಕೆಂತ ಮಹಾರಾಜಶ್ರೀ ಶಿರಸ್ತೇದಾರ್ ನಾರಾಯಣಸ್ವಾಮಿನಾಯುಡರವರು ಪ್ರೋತ್ಸಾಹಪಡಿಸಿದ್ದರಮೇಲೆ ಪೊಲೀಸ್ ಇನ್ಸ್‌ಪೆಕ್ಟರ್ ಮ|| ರಾ|| ಕೃಷ್ಣರಾಯರವರು ಎದ್ದು ನಿಂತುಕೊಂಡು ಈ ಕೆಳಗಿನಂತೆ ಉಪನ್ಯಾಸವನ್ನು ಮಾಡಿದರು.

ದೊಡ್ಡ ಮನುಷ್ಯರುಗಳಿರಾ, ಕೋಟ್ಯಾಲಯೆಂಬ ಸ್ಥಳವು ಹಿಂದೂಜನಗಳಿಗೆ ಯೋಗ್ಯವಾದ ತಾಂಬ್ರಪರ್ಣೀನದಿಯ ಉತ್ಪತ್ತಿಸ್ಥಳ. ಅಲ್ಲಿ ದೇವಸ್ಥಾನವಿರುತ್ತದೆ. ಇಂಡಿಯಾದೇಶದಲ್ಲಿರತಕ್ಕ ಹಿಂದೂಗಳೆಲ್ಲ ಅದು ಕೇವಲ ಪುಣ್ಯಸ್ಥಳವೆಂತಲೂ, ಮತ್ತು ಆರೋಗ್ಯ ಭೂಮಿಯೆಂತಲೂ ಅನಾದಿಯಿಂದಲೂ ಆಚರಿಸಿಕೊಂಡು ತೀರ್ಥಯಾತ್ರೆಗಳು ಹೋಗುತ್ತಾಯಿವೆ. ಅದರಂತೆಯೇ ನಮ್ಮ ದಿವಾನ್‌ಸಾಹೇಬರವರ ಮ|| ರಾ|| ಮಾಧವರಾಯರವರು ಸಹ ಆರೋಗ್ಯಾರ್ಥವಾಗಿಯೂ ತೀರ್ಥಸ್ನಾನ ದೇವತಾದರ್ಶನಾರ್ಥವಾಗಿಯೂ ಸಹ ಕೆಲವು ದಿವಸಗಳಕೆಳಗೆ ಅಲ್ಲಿಗೆ ದಯಮಾಡಿದ್ದರು. ಆ ಕಾಲದಲ್ಲಿ ಒಬ್ಬ ಸ್ತ್ರೀಯರ್ ಕೃಷ್ಣಯ್ಯರ್ ಎಂಬಾತನ ಹೆಂಡತಿ ಪ್ರಾತಃಕಾಲದಲ್ಲಿ ಸ್ನಾನಮಾಡುತಿದ್ದವಳನ್ನು ಕಂಡು ಅಲ್ಲಿ ವಾಸವಾಗಿರತಕ್ಕ ಕಾಫಿಪ್ಲಾಂಟರ್ ಮೆ|| ಕ್ಲಾರ್ಕ್ ಎಂಬಾತನು ಕೇವಲ ಅವಮಾನಕರವಾಗಿ ಆಕೆಯನ್ನು ರೆಟ್ಟೆ ಹಿಡಿದು ಎಳೆದು ಸೆಳೆದುಕೊಂಡು ಬಂದದ್ದನ್ನು ಸಮೀಪದಲ್ಲಿದ್ದ ಆಕೆಯ ಗಂಡನು ತನ್ನ ಹೆಂಡತಿಗೆ ಆದ ಅಕ್ರಮ ಜುಲುಮನ್ನು ಚೆನ್ನಾಗಿ ನೋಡಿ ಮೊರೆಯಿಟ್ಟುಕೊಂಡದ್ದರಮೇಲೆ ಈ ಅಕೃತ್ಯಕ್ಕಾಗಿ ಮತಾಭಿಮಾನಿಗಳಾದ ದೊಡ್ಡ ಮನುಷ್ಯರೆಲ್ಲ ಅಲ್ಲಿ ಒಂದು ಮೀಟಿಂಗ್ ಮಾಡಿ ಮದರಾಸ್ ಗವರ್ನ್‌ಮೆಂಟಿಗೆ ಒಂದು ಮೆಮೋರಿಯಲ್ ರವಾನಿಸಿದರು. ಕೃಷ್ಣಯ್ಯರ್ ತನ್ನ ಹೆಂಡತಿ ಮೇಲೆ ನಡೆದ ಜುಲುಂ ಕೇಸು ದಾವೇ ಮಾಡಿಕೊಂಡ ಆತನ ಗುಣಾತಿಶಯವು ವರ್ಣಿಸಲಿಕ್ಕೆ ನಾಚಿಕೆಯಾಗಿದೆ.

ಅದೇ ಅಗ್ರಹಾರವನ್ನು ಮನಸ್ಸಿನಲ್ಲಿಟ್ಟುಕೊಂಡು ವಾಗಿಮಾಡಿದನೇ ದಿನ ಪ್ರಾತಃಕಾಲ ಸ್ನಾನಾರ್ಥ ಮಾಡುತಿದ್ದ ಪ್ರಕಾರ ಹೋಗಿದ್ದ ನಮ್ಮ ದಿವಾನ್ ಸಾಹೇಬರವರ ಮತ್ತು ಮಾಧವರಾಯರವರ ಕಡೆ ನೌಕರರನ್ನು ಅಲ್ಲಿನ ಯೂರೋಪಿಯರ್ಳ ಪ್ರೋತ್ಸಾಹದಿಂದ ಅಲ್ಲಿನ ಸರ್ಕಾರದವರು ಪ್ರಾತಃಕಾಲ ೯ ಘಂಟೆ ವರಿವಿಗೂ ಯೂರೋಪಿಯರು ಸ್ನಾನ ಮಾಡಬೇಕೆಂತ ನಿಷ್ಕರ್ಷೆಯಾಗಿದ್ದ ಕಾಲದಲ್ಲಿ ಅಕ್ರಮವಾಗಿ ಈ ಕಾಪಾಡಿಕಾಸ್ನ್ಯ ವಗೈರೆ ೬ ಜನ ಮೈಸೂರಿನವರು ಬಂದರು, ಇದು ಅಕ್ರಮ ಕೂಡ ಮತ್ತು ದೊಂಬಿ ಯೆಂತಲೂ ಛಾರ್ಜ್ ಮಾಡಿದರು. ಅದನ್ನೇ ಊಹಿಸಿ ಅಲ್ಲಿನ ಜಾಯಿಂಟ್ ಮ್ಯಾಜಿಸ್ಟ್ರೇಟರು ಅವರಿಗೆ ಶಿಕ್ಷೆ ವಿಧಿಸಿದರು. ಇದು ಕೇವಲ ಅಂದ ಪರುಪರೆ ಯಾಯಿತು. ಇದರಮೇಲೆ ಮದರಾಸ್ ಹೈಕೋರ್ಟಿಗೆ ಅಪೀಲ್ ದಾಖಲಾಗಿ ಸತ್ಯಪ್ರಭುಗಳಾದ ಹೈಕೋರ್ಟ್ ಚೀಫ್ ಜಡ್ಜಿಯವರು ಮೇಲಿನ ಸ ಡಳಿತವೆಲ್ಲ ತಪ್ಪೆಂತ ಎಣಿಸಿ ಸದರೀ ಸೆಂಟೆನ್ಸನ್ನು ಶ್ಯಾಷ್ ಮಾಡಿದಾರೆ.

ಮುಖ್ಯವಾಗಿ ನಾನು ಇಲ್ಲಿ ತಿಳಿಸ ಬೇಕಾದ್ದೇನೆಂದರೆ, ಪ್ರಾತಸ್ನಾನವೂ ದೇವತಾರಾಧನೆಯೂ ಪುಣ್ಯತೀರ್ಥದ ಆವಶ್ಯಕತೆಯೂ ಹಿಂದೂಗಳಿಗೆ ವೇದೋಕ್ತವಾದ ಕರ್ಮವಾಗಿರತಕ್ಕದ್ದರಲ್ಲಿ ಕೇವಲ ಪುಣ್ಯತೀರ್ಥವಾಗಿಯೂ ದೇವಸ್ಥಾನವಾಗಿಯೂ ಇರತಕ್ಕ ತಾಂಬ್ರಪರ್ಣೀ ನದಿಯ ಉತ್ಪತ್ತಿಸ್ಥಾನವನ್ನು ಅಂತಾ ಕರ್ಮಬದ್ಧರಲ್ಲದೆ ಇತರಕ್ಕೆ ಯೂರೋಪಿಯನರು ಆಕ್ರಮಿಸಿಕೊಂಡು ಹಿಂದೂ ಜನಗಳ ಆಚಾರಕ್ಕೆ ತೊಂದರೆ ನಡಿಸಿದ ಸಂಗತಿಯಲ್ಲಿ, ಹಿಂದೂಗಳೆಲ್ಲ ಈ ನಡವಳಿಕೆಯು ಶ್ರೀಮನ್ಮಹಾರಾಜ್ಞೀ ವಿಕ್ಟೋರಿಯಾ ಎಂಪ್ರೆಸ್ ಚಕ್ರವರ್ತಿನೀಯವರು ಈ ದೇಶೀಯರಾದ ಹಿಂದೂಗಳ ಮತ್ತು ಮತಗಳನ್ನು ನೆತ್ತಲ್ಲವೆ ಕಾಪಾಡುತ್ತೇವೆ ಮ ೧೮೫೮ನೇ ಇಸವಿಯಲ್ಲಿ ಮಾಡಿರತಕ್ಕ ಸತ್ಯಸಂಕಲ್ಪಕ್ಕೆ ವಿರೋಧವಾಗಿರುತ್ತೆಂತ ಎಣಿಸಿದ್ದಾಗ್ಯೂ ಯೂರೋಪಿಯನರೇ ಮುಖ್ಯಸ್ಥರಾಗಿ ಹಿಡಿದಿರತಕ್ಕ ಈ ಕೇಸಿನಲ್ಲಿ ಹಿಂದೂಗಳಿಗೆ ನ್ಯಾಯ ಸಿಕ್ಕುತ್ತೋ ಇಲ್ಲವೋ ಯೆಂಬ ಸಂಶಯಗ್ರಸ್ತರಾಗಿದ್ದರು. ನ್ಯಾಯಪ್ರಭುವಾದ ಚೀಫ್ ಜಡ್ಜಿ ಸಾಹೇಬರವರು ಕೊಟ್ಟ ಜೈಸಲ್ ನೋಡಿ ಇಂಡ್ಯ ದೇಶದ ಸಮಸ್ತ ವರ್ಣದವರೂ ಶ್ರೀ ವಿಕ್ಟೋರ್ಯಾ ಮಹಾರಾಣಿಯವರ ಆಳಿಕೆಯಲ್ಲಿ ಯಾರಿಗೂ ಪಕ್ಷಪಾತವಿಲ್ಲವಾದ ಅನ್ಯಾಯ ನಡೆಯಲಾರದೆಂತಲೂ ಅವರ ದೌಲತ್ ಶಾಶ್ವತವಾಗಿರಬೇಕೆಂತಲೂ ದೃಢವಾದ ನಂಬಿಕೆಯಿಂದ ದೇವರನ್ನು ಪ್ರಾರ್ಥಿಸುತ್ತಾರೆ. ಇಂತಾದ್ದರಲ್ಲಿ ಆ ಸಂತೋಷಕ್ಕೆ ಹೆಚ್ಚು ಭಾಗಿಗಳಾದ ನಾವುಗಳು ನಮ್ಮ ಪದ್ಧತಿಯನ್ನು ಊರ್ಜಿತ ನಡಿಸಿ ನಮ್ಮಗಳಿಗೆ ಅನ್ಯಾಯವಾಗಿ ಉಂಟಾಗಿದ್ದ ಕಷ್ಟವನ್ನು ಪರಿಹರವಾಡಿದ ಸತ್ಯಪ್ರಭುಗಳಾದ ಚೀಫ್ ಜಡ್ಜಿಯವರ ಶ್ರೇಯೋಭಿವೃದ್ಧಿಗಾಗಿಯೂ ಇಂಡ್ಯ ಚಕ್ರವರ್ತಿನೀಯವರ ದೌಲತ್ ಶಾಶ್ವತವಾಗಿರಬೇಕೆಂತಲೂ ದೇವರನ್ನು ಪ್ರಾರ್ಥಿಸಿ ನಮ್ಮ ಸಂತೋಷವನ್ನು ಸೂಚಿಸತಕ್ಕದ್ದು ನಮ್ಮಗಳಿಗೆ ಮುಖ್ಯ ಕರ್ತವ್ಯವಾಗಿದೆ, ಎಂಬದು.

ಈ ರೀತಿ ಉಪನ್ಯಾಸ ಮಾಡಿ ಮುಗಿದ ಕೂಡಲೇ ಅಲ್ಲಿ ಸೇರಿದ್ದ ಜನಗಳೆಲ್ಲ ಕರತಾಡನ ಮಾಡಿದರು. ಮಿಷನ್‌ಸ್ಕೂಲ್ ಮ್ಯಾಸ್ಟರ್ ಮ|| ರಾ|| ಲಕ್ಷ್ಮೀನಾರಾಯಣಪ್ಪನವರು ಯೆದ್ದು ಈ ಉಪನ್ಯಾಸಕ್ಕಾಗಿ ಸಭಾಸದರ ಕಡೆಯಿಂದ ಸಂತೋಷ ಸೂಚಕವಾದ ಕೃತಜ್ಞತೆಯನ್ನು ಒಪ್ಪಿಸಿದರು. ಅನಂತರ ಶುಭವಾದ್ಯಗಳೆಲ್ಲ ಮಾಡಲ್ಪಟ್ಟವು. ಅಲ್ಲಿ ಸೇರಿದ್ದ ದೊಡ್ಡ ಮನುಷ್ಯರಿಗೆಲ್ಲ ಪುಷ್ಪಗಂಧ ತಾಂಬೂಲ ಸಕ್ಕರೆ ಹಂಚಲ್ಪಟ್ಟವು ಇವೆಲ್ಲ ಪೂರೈಸುವ ವರಿವಿಗೆ ರಾತ್ರಿ ೯ ಘಂಟೆ ಆಯಿತು. ಇದರಂತೆ ಇಂಡ್ಯದೇಶದ ಎಲ್ಲ ಸ್ಥಳಗಳಲ್ಲೂ ನಡೆದಿರತಕ್ಕ ಸಂತೋಷೋತ್ಸವದ ಪರಿಧಿಪಡಿಸುವಿನನ್ನು ಕೇಳಲಿಕ್ಕೆ ಅಪೇಕ್ಷೆಯುಳ್ಳವನಾಗಿರುವ, ತಮ್ಮ ವಿಧೇಯನಾದ,

ಮಾಲೂರು ನಿವಾಸಿ.

LEGAL INTELLIGENCE

ನ್ಯಾಯನಿರ್ಣಯಗಳು.

ಅಕ್ರಮಗುಂಪಿಗೆ ಸೇರಿ ದೊಂಬಿ ನಡಿಸಿದ್ದು. ತಿರುನಲ್ವೇಲಿ ಡಿಸ್ಟ್ರಿಕ್ಟ್ ಜಾಯಿಂಟ್ ಮ್ಯಾಜಿಸ್ಟ್ರೇಟರ ಫೈಸಲಿಮೇಲಿಣ ಮದರಾಸ್ ಹೈಕೋರ್ಟಿನವರ ತೀರ್ಮಾನ

ಅಪೀಲಾಂಟರುಗಳು—೧ನೇ ಗೌಡ, ೨ನೇ ಲಿಂಗನಾಯಕ, ಕಿಸ್ತಪ್ಪಯ್ಯರ್, ೫ನೇ ಕಾಮಸಾಸ್ತ್ರಿ.

ಅಪೀಲ್ ಪ್ರತಿವಾದಿ—ಮಹಾರಾಜ್ಞೀ ಇಂಡ್ಯ ಚಕ್ರವರ್ತಿನೀಯವರು

ತಕ್ಸೀರ್—ಇಂಡಿಯನ್ ಪೀನಲ್‌ಕೋಡ್ ೧೪೩ ಮತ್ತು ೧೪೭ ನೇ ಸೆಕ್ಷನ್‌ಗಳಿಗನ್ನನುಸರಿಸಿ ಅಕ್ರಮವಾದ ಒಂದು ಕೂಟಕ್ಕೆ ಸೇರಿ ದೊಂಬಿ ನಡೆಸಿದ್ದು

ಸಾಬಿತಾದ—ತಕ್ಸೀರ್ ಸಾಬೀತಾಗಿ,

ದಂಡನೆ—ನಾಲ್ಕು ತಿಂಗಳ ಕೈದ್ ಅಥವಾ ಹೊರವನ್ನು ಒಂದು ತಿಂಗಳ ಸಾಧಾರಣ ಕೈದ್, ಮತ್ತು ಮೂರು ತಿಂಗಳ ಕಾಲ ಕಠಿಣ ಕೈದ್

ಫೈಸಲ್

ಕೋರ್ಟಿನಲ್ಲಿ ಒಕಾಲತಂಗಿರೆಯ ಮೊಕದ್ದಮೆಯಲ್ಲಿ ಮದರಾಸ್ ಹೈಕೋರ್ಟಿನವರು ಕೊಟ್ಟ ತೀರ್ಮಾನದ ಸ್ವಾರಂದರೆ, ಪಿರ್ಯಾದಿನಲ್ಲಿ ತಿಳಿಸಲ್ಪಟ್ಟ ಅಂಶಗಳನ್ನೆಲ್ಲ ಕುರಿತು ಯೋಚಿಸುವಲ್ಲಿ ಅಪರಾಧಿಗಳು ಜುಲುಂ ನಡಿಸಿದ್ದಾಗಿ ನೌಕರಿಮೇಲಿದ್ದ ಪೊಲೀಸ್ ಕಾನ್ಸ್‌ಟೇಬಲ್‌ಗಳೊಬ್ಬರು ಮಾತ್ರ ಹೇಳುತ್ತಾರೆ. ತಹಸೀಲ್ದಾರರು ಅಲ್ಲಿ ಹಾಜರಿದ್ದ ಕಾಲದೊಳಗೆ ಜುಲುಂ ಯಾವದೂ ತೋರಿಸಲ್ಪಡಲಿಲ್ಲವು. ಹಿಂದೆ ನಡೆದ ಮಿಟಿಂಗಿನ ನಿರ್ಣಯಕ್ಕೆ ಅನುಸಾರವಾಗಿ ಅಪರಾಧಿಗಳು ನಡೆಯುತ್ತೇವೆಂಬದಕ್ಕೆ ರುಜುವಾತೆ ಇಲ್ಲವು. ಅಂತಾ ನಿರ್ಣಯಗಳು ಮಾಡಲ್ಪಟ್ಟ ಮೀಟಿಂಗಿನಲ್ಲಿ ಅಪರಾಧಿಗಳು ಹಾಜರಿದ್ದು ಕೆಲಸಗಳು ಜರುಗಿಸಿದರೆಂಬದಕ್ಕೆ ರುಜುವಾತೆ ಇಲ್ಲವು ಸದರೀ ಸ್ಥಳದಲ್ಲಿ ಹಿಂದೆ ನಡೆದ ಪ್ರೊಸೀಡಿಂಗನರು ನೌಕರಿಯಮೇಲೆ ಹಾಜರಿಲ್ಲವಾಗಿ ಅಪರಾಧಿಗಳು ಜುಲುಂ ನಡೆಸುವ ಉದ್ದೇಶದಿಂದವನೆ ಅಲ್ಲಿಗೆ ಹೋಗಿರಲಾರರು. ಯಾವ ಆಕ್ಷೇಪಣೆಯೂ ಇಲ್ಲದೆ ನಡೆದುಬಂದ ಪದ್ಧತಿಗೆ ಅಪರಾಧಿಗಳು ಜಾಗನನ್ನುಂಟುಮಾಡಿದರೆಂದು ಜಾಯಿಂಟ್ ಮ್ಯಾಜಿಸ್ಟ್ರೇಟರು ತಿಳಿಸುವ ಅಭಿಪ್ರಾಯದ ವಿಷಯದಲ್ಲಿ, ನೇಟಿವ್‌ಗಳು ಬೆಳಗ್ಗೆ ೯ ಘಂಟೆಗೆ ಮುಂಚೆ ಅಲ್ಲಿಗೆ ಸ್ನಾನಕ್ಕೆ ಹೋಗಕೂಡದೆಂದು ೧೮೮೭ನೇ ಇಸವಿಯಲ್ಲಿ ಮೆ|| ಲೀ ವಾರ್ನರರು ಹುಕುಂ ಕೊಡತಕ್ಕದಕ್ಕೆ ಅವರಿಗೆ ಸ್ವಾಗ ಅಧಿಕಾರ ವ್ಯಂಟಾಯಿತೋ ಅದು ವಿಚಾರಾರ್ಹವಾಗಿದೆ ಸದರೀ ಹುಕುಂ ಅಕ್ರಮವಾದುದರಿಂದ, ಜುಲುಂ ನಡೆಸಲ್ಪಟ್ಟಿದ್ದ ಪಕ್ಷದಲ್ಲಿ, ಪೀನಲ್‌ಕೋಡಿನ ಪ್ರಕಾರ ಅದು ತಕ್ಸೀರಾಗುವದಿಲ್ಲವು. ಪೊಲೀಸಿನವರ ಸಾಕ್ಷ್ಯವು ಒಂದಕ್ಕೊಂದು ವ್ಯತ್ಯಾಸವಾಗಿದೆ ಮತ್ತು ಅತಿಶಯೋಕ್ತಿಯಾಗಿ ಕಾಣುತದೆ ನಮ್ಮ ಮುಂದೆ ಹಾಜರುವ ಸಾಕ್ಷ್ಯಗಳ ಮೇಲೆಯಿಂದ ಜುಲುಂ ನಡೆಸಲ್ಪಟ್ಟಿತೆಂತ ನಂಬುವದಕ್ಕೆ ಅವಕಾಶವಿಲ್ಲವು. ಈ ಮೊಕದ್ದಮೆಯ ಮೇಲೆಯಿಂದ ಉಂಟಾದ ಗದ್ದಲವನ್ನು ಯೋಚಿಸಿಯೂ, ಈ ಮೊಕದ್ದಮೆಯನ್ನು ದರ್‍ಯಾಫ್ತು ಮಾಡುವದಕ್ಕೆ ಒಬ್ಬ ಅಫಸರನನ್ನು ನಿಯಮಿಸಬೇಕಾದ್ದಾವಶ್ಯಕವೆಂದು ಯೆಣಿಸಲ್ಪಟ್ಟದರಿಂದಲೂ, ಆ ಕೆಲಸಕ್ಕೆ ವಿಶೇಷ ಅನುಭವವುಳ್ಳ ಒಬ್ಬ ಅಫಸರನನ್ನು ನಿಯಮಿಸಬೇಕಾಗಿತ್ತು. ಅಪರಾಧಿಗಳ ವರದ ಅಪೀಲನ್ನು ಅಂಗೀಕರಿಸಿ, ಅವರಿಗೆ ವಿಧಿಸಲ್ಪಟ್ಟ ಸಜಾವನ್ನು ರದ್ದು ಮಾಡಿ ಅವರು ಖುಲಾಸೆ ಮಾಡಿರುತ್ತೇವೆ, ಎಂಬದು.

SUMMARY OF NEWS

ವರ್ತಮಾನಸಂಗ್ರಹವು.

ಈಗ ಕೆಲವು ದಿವಸಗಳ ಹಿಂದೆ ರಾವಲ್ಪಿಂಡಿಯಲ್ಲಿ ಸರ್ಕಾರ್ ನೌಕರನಾಗಿದ್ದ ಕ್ಲಾರ್ಕ್ ನೊಬ್ಬನು ಕಾರಾಧೀನನಾಗಲು, ಆತನ ಪತ್ನಿಯು ತನ್ನ ಪತಿಯ ನೌಕರಿಯನ್ನು ತನಗೆ ಕೊಡಿಸಬೇಕೆಂದು ಗವರ್ನ್‌ಮೆಂಟಿನವರಿಗೆ ಒಂದು ಅರ್ಜಿಯನ್ನು ಬರೆದುಕೊಂಡಿರಲು, ಸರ್ಕಾರದವರು ಸಮ್ಮತಿಸಿ, ಈಗ ಆಕೆಯು, ಗತಿಸಿದ ತನ್ನ ಪತಿಯು ಮಾಡುತಲಿದ್ದ ಸರ್ಕಾರ್ ನೌಕರಿಯನ್ನು ನೋಡುತಲಿರುತ್ತಾಳೆ.

ಕಾಲದ ಮಹಿಮೆಯು ಒಂದೊಂದಾಗಿ ತೋರಿಬರುತಲಿರುತದೆ. ಅಮೆರಿಕಾ ಖಂಡದ ದಕ್ಷಿಣ ನದಿಯಮೇಲೆ ೨,೪೦೦ ಅಡಿಗಳ ದೂರದ ವರಿವಿಗೂ ಮಧ್ಯೇ ಯಾವ ವಿಧವಾದ ಅವಲಂಬನವೂ ಇಲ್ಲದಂತೆ, ಪ್ರಸಿದ್ಧನಾದ ಬ್ರುಕ್ಲಿನ್ ಸೇತುವೆಗಿಂತಲೂ ೧೫೦ ಅಡಿಗಳು ಎತ್ತರವಾಗಿ, ೫೦,೦೦,೦೦೦ ರೂಪಾಯಿಗಳನ್ನು ವ್ಯಯಮಾಡಿ ಒಂದು ಸೇತುವೆಯನ್ನು ಕಟ್ಟಿಸಲು ಪ್ರಯತ್ನಿಸಿರುತ್ತಾರೆ, ಇದರ ಕೆಲಸ ಪೂರೈಸಲು ೬ ವರ್ಷಗಳಕಾಲ ಬೇಕೆಂದು ನಿಶ್ಚಯಿಸಿರುತ್ತಾರೆ

ಮನಸೋಟಾವಿಗೆ ಸೇರಿದ ಸ್ಟೆರ್‌ವಾಟರ್ ಎಂಬ ಸ್ಥಳದಲ್ಲಿ, ಬಹುಕಾಲ ಕಾರಾಗೃಹ ವಾಸವನ್ನು ಮಾಡಬೇಕಾಗಿ ಇರುವ ವೃದ್ಧರಿಗಾಗಿ "ಪ್ರಿಜನ್ ಮಿರರ್" ಎಂಬ ಅಭಿಧಾನದಿಂದ ಒಂದು ನೂತನ ವಾರಪತ್ರಿಕೆಯನ್ನು ಪ್ರಕಟಿಸಲುತಕ್ಕವರಿಸಿರುತ್ತಾರೆ. ಈ ಪತ್ರಿಕೆಗೆ ಬರೆಯತಕ್ಕವನೂ, ಛಾಪಾಖಾನೆಯಲ್ಲಿ ಅಕ್ಷರಗಳನ್ನು ಜೋಡಿಸುವವನೂ, ಮುದ್ರಾಪಿಸುವವನೂ ಸಮಸ್ತರೂ ಖೈದಿಗಳು. ಈ ಪತ್ರಿಕೆಯು ಪ್ರತಿವಾರದಲ್ಲಿಯೂ ೪,೦೦೦ ಪ್ರತಿಗಳು ಖರ್ಚಾಗುವದಂತೆ.

ಬಸ್ರಿಕಾಖಂಡದಲ್ಲಿ ದಾಹೋಮೆ ಎಂಬದಾಗಿ ಒಂದು ದೇಶವಿರುತದೆ. ಅಲ್ಲಿ ರಾಜನಾಗಿರತಕ್ಕವನು ಕಾರು ಮನುಷ್ಯರಂತೆಯೇ ಇರುವನು. ಈತನ ಬಳಿಯಲ್ಲಿ ಅತಿ ಪರಾಕ್ರಮಶಾಲಿಗಳಾಗಿಯೂ, ಭೀಕರರಾಗಿಯೂ, ಬಹುಜನ ಸೈನಿಕರಿರುವರು. ಇವರ ಪೈಕಿ ಅವಿವಾಹಿತರಾಗಿರುವ ಸ್ತ್ರೀಯರು ೫,೦೦೦. ಇವರೆಲ್ಲರೂ ಪುರುಷರ ಕೆಯ್ ಒಟಾಗಿರಿಡಿದ ಆಗಿರುವರು; ಅಲ್ಲದೆ, ಯಾವಾಗಲೂ ತಮ್ಮೊಡನೆ ಒಂದು ಕತ್ತಿಯನ್ನೂ, ಒಂದು ಬಂದೂಕನ್ನೂ ತೆಗೆದುಕೊಂಡು ಹೋಗುವರು. ಇವರ ರಾಜರು ಎಲ್ಲಿ ಹೋದಾಗಲೂ, ಈ ಸ್ತ್ರೀ ಸೈನ್ಯವನ್ನು ಬಿಟ್ಟು ಹೋಗುವದಿಲ್ಲ.

ಮೈಸೂರಿನ ಐಶ್ವರ್ಯವು ಇಷ್ಟೆಂದು ಹೇಳುವದಕ್ಕಾಗುವದಿಲ್ಲ. ಈ ದೇಶದ ನಾನಾ ಸ್ಥಳಗಳಲ್ಲಿಯೂ ಚಿನ್ನ ಮುತಾದ್ದನ್ನು ಹುಡುಕಿ ತೆಗೆಯುವತೆ ಕಳೆದ ವಾರದಲ್ಲಿ ತಿಳಿಸಿದ್ದೆವಷ್ಟೆ. ಅದರ ಇವಕ್ಕಿಂತಲೂ ಶ್ರೇಷ್ಠವಾದ ಮತ್ತೊಂದು ವಸ್ತುವೂ ಇಲ್ಲಿ ಸಿಕ್ಕುವದಾಗಿ ಈ ವಾರದಲ್ಲಿ ತಿಳಿಯುತ್ತೇವೆ. ನವರತ್ನದಲ್ಲಿ ಒಂದಾದ ಕೆಂಪನ್ನು ಯಾರುತಾನೆ ಅಮೂಲ್ಯವಾದದ್ದೆಂದು ಎಣಿಸದಿರುವರು? ಇದುವರಿವಿಗೂ ಬರ್ಮಾದೇಶವು ಮಾತ್ರ ಇದಕ್ಕೆ ಮಾತೃಸ್ಥಾನವಾಗಿತ್ತು. ರತ್ನಪರೀಕ್ಷೆಯಲ್ಲಿ ನಿಪುಣರೆನಿಸಿಕೊಂಡು ಬರ್ಮಾದೇಶದಲ್ಲಿ ಈ ವೃತ್ತಿಯಲ್ಲೇ ಇರುತಲಿರುವ ಡಾಕ್ಟರ್ ಕ್ಯಾಲ್ಟಿನ್ ಎಂಬ ಇಂಗ್ಲಿಷ್ ದೊಡ್ಡ ಮನುಷ್ಯನೊಬ್ಬರು ಈ ದೇಶದ ಕೆಲವು ರತ್ನಗಳನ್ನು ಮಾದರಿಗಾಗಿ ತರಿಸಿಕೊಂಡು ಪರೀಕ್ಷಿಸಿ, ಬರ್ಮಾ ದೇಶದಲ್ಲಿ ಸಿಕ್ಕುತ್ತಲಿರುವ ಕೆಂಪುಗಳಿಗಿಂತಲೂ, ಇಲ್ಲಿನವುಗಳು ಬಹಳ ಶ್ರೇಷ್ಠವಾದವುಗಳೆಂದು ನಿಷ್ಕರ್ಷಿಸಿರುವರು ಈ ರತ್ನದಲ್ಲಿ ಸರ್ವೋತ್ಕೃಷ್ಟವಾದವುಗಳು ಬಾಣಾವಾರದ ಬಳಿಯಲ್ಲಿ ಯಥೋಚಿತವಾಗಿರುವುವೆ ಇವರು ಹೇಳುವರು. ರತ್ನವ್ಯಾಪಾರಿಗಳಾದ ಕೆಲವರು ಯೂರೋಪಿಯನ್ ವರ್ತಕರು, ತಮ್ಮ ಇಚ್ಛಾನುಸಾರವಾಗಿ ಈ ದೇಶದ ಕೆಲವು ತಾಲ್ಲೂಕುಗಳಲ್ಲಿ ಸಿಕ್ಕಬಹುದಾದ ರತ್ನಗಳ ವಿಷಯದಲ್ಲಿ ೫ ವರ್ಷಕಾಲ ತಮಗೆ ಸರ್ವಸ್ವಾತಂತ್ರ್ಯವನ್ನು ವಹಿಸಿಕೊಡಬೇಕೆಂದು ಅಗಲೇ ದರಖಾಸ್ತುಗಳನ್ನು ಕೊಟ್ಟಿರುವರು. ಗೌರ್ವರ್ನ್‌ಮೆಂಟಿನವರು ಇದಕ್ಕೆ ಒಪ್ಪಲಿಲ್ಲವೆಂತಲೂ, ಆದರೆ ೧—೨ ಚದರ ಮೈಲಿ ವಿಸ್ತೀರ್ಣಕ್ಕೆ ಈ ದರುಗಳನ್ನು ತೆಗೆದುಕೊಳ್ಳುವರೆಂತಲೂ, ನಿಶ್ಚಯಿಸಿರುವರು.—ವೃ. ಪ.

BANGALORE.—Printed and published at the KARNATAKA PRESS, No. 114, SRINIVASA MANDIRAM ROAD, PETTAH.—1890

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

Vol. XVII] BANGALORE—MONDAY, SEPTEMBER 22, 1890 [No. 38.

ಬೆಂಗಳೂರು:—ಸನ್ ೧೮೯೦ನೇ ಇಸವಿ ಸೆಪ್ಟೆಂಬರ್ ೨೨ನೇ ತಾರೀಖ್ ಸೋಮವಾರ.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡ ಚಂದಾಗಳಿಗೆ.

ಮುಂಗಡವಾಗಿ	8—0—0	9—0—0
[illegible]	9—0—0	10—8—0

ಇಂಗ್ಲಿಷ್ ಅಥವಾ ಕನ್ನಡ ಚಂದಾಗಳಿಗೆ.

ಮುಂಗಡವಾಗಿ	4—0—0	5—0—0
[illegible]	5—0—0	6—0—0

[illegible]

ಪ್ರಕಟನೆಯ ರಿವಾಜ್.

[illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs 5-0-0

ವೈದ್ಯಸಾರ ಸಂಗ್ರಹ.

[illegible]

ಬೆಲೆ ಅಂಚೆ ಸಹಿತ ರೂ 5-0—0

[illegible] ಬೆಂಗಳೂರು, 41ನೇ ನಂ. ಮನೆ.

ADVERTISEMENTS.

ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ಬಿಕರಿಗೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

[illegible]

ಕನ್ನಡ ಗ್ರಂಥಗಳು.

[illegible]

ನೋಟೀಸ್.

ಮನೆಗಳಲ್ಲಿ ಗಿಲಿಟ್ ಮಾಡುವದಕ್ಕೆ ಅನುಕೂಲವಾದ ಬೆಳ್ಳಿ ದ್ರಾವಕವು.

[illegible]

ಇದರ ಕ್ರಯ ಸೀಸೆ ೧ಕ್ಕೆ ೦—೮—೦

ಚಿನ್ನದ ದ್ರಾವಕವು.

[illegible]

ಇದರ ಕ್ರಯ ಸೀಸೆ ೧ಕ್ಕೆ ೨—೮—೦

ಮೈಸೂರು ಮಹಾರಾಜರವರ ಅರಳೇ ಯಂತ್ರದ ಕಾರ್ಖಾನೆ.

ನೋಟೀಸ್.

ಮೈಸೂರು ಮಹಾರಾಜರವರ ಅರಳೆ ಯಂತ್ರದ ಕಾರ್ಖಾನೆಯಲ್ಲಿ ಹೊಸ ನಮೂನೆ ಯಂತ್ರದ ಮೂಲಕ ಉತ್ತಮವಾದ ಗೋಧಿ ಹಿಟ್ಟು, ರವೆ, ಬೊಟ್ಟು ತಯಾರಾಗುತ್ತವೆ. [illegible]

ದಕ್ಷಿಣ ಮಹಾರಾಷ್ಟ್ರ ರೈಲ್ವೆ. ಮೈಸೂರು ಸ್ಟೇಟ್ ರೈಲ್ವೆ ಸಹ.

ಪ್ರಕಟನೆ.

ಮೂರನೇ ತರಗತಿ ಪ್ರಯಾಣಸ್ಥರ ಹಾಸನಿನ ದರ.

ಇದರಿಂದ ತಿಳಿಯಪಡಿಸುವದೇನೆಂದರೆ.—

ಸನ್ ೧೮೯೦ನೇ ಇಸವಿ ಅಕ್ಟೋಬರ್ ತಿಂಗಳು ೧ನೇ ತಾರೀಖ್ ಬುಧವಾರದ ದಿನದಿಂದ ಈ ರೈಲ್ವೆಯ [illegible] ಮೈಸೂರ್ ಭಾಗದ ಮೇಲೆ ಮೂರನೇ ತರಗತಿ ಪ್ರಯಾಣಸ್ಥರ ಹಾಸನಿನ ದರ [illegible] ಮಾಡಲ್ಪಡುವದು.

ನಾರ್ವಿಚ್, ೧೦ನೇ ಸಪ್ಟೆಂಬರ್ ೧೮೯೦. ಜೇಮ್ಸ್ ಕ್ರಾಕ್, ಟ್ರಾಫಿಕ್ ಮ್ಯಾನೇಜರ್.

ನೋಟೀಸ್.

ಈ ಕೆಳಗೆ ನಮೂದಿಸಿದ ಬಾಬತು ಒಳ್ಳೇ ಮಾದರಿ [illegible] ದೊರೆಕುತ್ತವೆ

ಉದ್ದ 6 ಅಡಿ ಇಂದ 8 ಅಡಿ ವರೆಗೆ

ಅಗಲ 7 ಇಂಚಿನಿಂದ 8 ಇಂಚಿನ ವರೆಗೆ.

ದಪ್ಪ 3½ ಇಂಚಿನಿಂದ 4 ಇಂಚಿನ ವರೆಗೆ.

ಕೊಡಗು ಫಾರೆಸ್ಟ್ ಡಿಪ್ಟಿ ಕನ್ಸರ್ವೇಟರ್ ರವರಿಗೆ ಬರಕೊಳ್ಳುವದು.

Dated Mercara, The 9th Septr. 1890 } McKee, Dy. Conservator of Forests, Coorg.

Bangalore City Municipality

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಸನ್ ೧೮೯೦ನೇ ಇಸವಿ ಸೆಪ್ಟೆಂಬರ್ ೨೬ನೇ ತಾರೀಖ್ ಶುಕ್ರವಾರ ಪ್ರಾತಃಕಾಲ ೮ ಘಂಟೆಗೆ ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ನವರು ತಮ್ಮ ಆಫಿಸು ಕಟ್ಟಡದಲ್ಲಿ ಸಾಮಾನ್ಯ ಸಭೆ ಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳ ಯಾದಾಸ್ತು.

೧. ಸನ್ ೧೮೯೦ನೇ ಇಸವಿ ಆಗಸ್ಟ್ ಮಾಹೆ ಬಾಬತು ನಗದು ಜಮಾಖರ್ಚು ಮತ್ತು ದುರಣ ಲೆಕ್ಕಗಳು.

೨. ಆಸ್ಪತ್ರೆಯ ಜವಾನ್ [illegible] ಅವನನ್ನು ಕೆಲಸದಿಂದ [illegible] ಸಿವಿಲ್ ಸರ್ಜನ್ ಮತ್ತು ಸಾನಿಟರಿ ಕಮಿಷನರವರು ಬರೆದ ೧೮೯೦ನೇ ಇಸವಿ ಆಗಸ್ಟ್ ೨೩ನೇ ಮತ್ತು ೨೫ನೇ ನಂಬರುಳ್ಳ ಡಾಕೆಟ.

೩. [illegible] ವಿಷಯ. [illegible] ಸೂಚನೆ.

೪. [illegible] ಎಂಬವನು [illegible]

೫. [illegible]

ನಿಶ್ಚಿಸಲ್ಪಟ್ಟ ವಿಷಯಗಳು.

೬. ಸ್ಕೂಟಿಕ ವಿಷಯಕವಾದ ಮಸೂದೆ ನಿಬಂಧನೆಗಳು.

೭. ಮ್ಯುನಿಸಿಪಲ್ ಗಾರ್ಡನ್ನಿನ ಖಾರಿನ್ನು ದರಕ್ಕೆ ಇಂಗ್ಲಿಷ್ ಮತ್ತು ನೇಟಿವ್ ಬ್ಯಾಂಡ್‌ಗಳ ಜಮಾಖರ್ಚು ತೆಲ್ಲೆ.

ಬೆಂಗಳೂರು, ೧೩ನೇ ಸಪ್ಟೆಂಬರ್ ೧೮೯೦. } V. P. Madhava Rao, President, City Municipal Comm.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, SEPTEMBER 22, 1890.

೧೮೯೦ನೇ ಸೆಪ್ಟೆಂಬರ್ ೨೨ನೇ ಸೋಮವಾರ.

SANSKRIT EDUCATION IN INDIA.

ಈ ಭೂಮಂಡಲದೊಳು ಎಲ್ಲ ದೇಶಗಳಿಗಿಂತ ಬಹು ಪ್ರಸಿದ್ಧವಾದ ಇಂಡ್ಯದೇಶದ ಕೀರ್ತಿಗೂ ಪ್ರಸ್ತ್ಯಗಳಿಗೆ ಮುಖ್ಯ ಕಾರಣವಾದ ಗ್ರಂಥ [illegible] ಗೌರವನ್ನ [illegible] ಬಂದಿರುವುದೆಲ್ಲ ಅಷ್ಟು ಪ್ರಾಯಶಃ ಅಗೋಚರನಾಗಿರುವಿವೆ. ಕಾಲ ಧರ್ಮದಿಂದಲೂ, ರಾಜನೀತಿ ವಿಪರ್ಯಾಸದಿಂದಲೂ, ದೇಶದ ನಿಗ್ರಹದಿಂದಲೂ ನಮ್ಮ ದೇಶೀಯರ ಸ್ಥಿತಿಯು ಬಹಳ ಕ್ಷೀಣಿಸುತ ಬರುತಲಿದೆಂಬುದು ಅನುಭವಸಿದ್ಧವಾದ ವಿಷಯವಾಗಿರುತಿದೆ. ಇಂಡ್ಯದೇಶೀಯರಾದ ನಮ್ಮ ಪೂರ್ವಿಕರು ರಾಜತಂತ್ರದಲ್ಲಿಯೂ ಕೃಷಿ ವಾಣಿಜ್ಯಾದಿಗಳಲ್ಲಿಯೂ ಶಿಲ್ಪಾದಿ ನಾನಾವಿಧ ಕಲೆಗಳಲ್ಲಿಯೂ ತರ್ಕ ವೇದಾಂತವ್ಯಾಕರಣ ಮೀಮಾಂಸಾದಿ ಶಾಸ್ತ್ರಗಳಲ್ಲಿಯೂ ಕಾವ್ಯನಾಟಕ ಪ್ರಹಸನ ಪ್ರಬಂಧ ನಿರ್ಮಾಣದಲ್ಲಿಯೂ

ಶಿಕ್ಷಾಪ್ರಭೆಗಳೆಲ್ಲ ಕೇವಲ ಭಿನ್ನರಾಗಿರುತಿದ್ದು ಸದರೀ ಕೇಸು ಹೈಕೋರ್ಟಿಗೆ ಅಪೀಲಾಗಿ ಪ್ರ ತುತವಲ್ಲೀ ಈ ಕೇಸಿಗಾಗಿ ನ್ಯಾಯಪ್ರಭುವಾದ ಮದ್ರಾಸ್ ಹೈಕೋರ್ಟ್ ಚೀಫ್ ಜಡ್ಜಿಯವರು ಮೊದಲಾದ ಪ್ರಸಂಗಗಳಿಂದಲೇ ಇಲ್ಲಿನ ಪ್ರಜೆಗಳು ಸಂತೋಷಯುಕ್ತರಾಗಿ ಅಪೀಲ್ ಕೋರ್ಟ್ ಇತ್ಯ ರ್ಥವನ್ನು ಕೇಳಲಿಕ್ಕೆ ಕೇವಲಾತುರರಾಗಿದ್ದರು.

ಆಗಿನ ತಿಂಗಳ ೧೫ನೇ ತಾರೀಖಿನ ಹಿಂದೂ ಪೇಪರಿನಲ್ಲಿ ಸದರೀ ಸಂಧಿಗೆ ಶ್ಯಾಪೆಯಾದದ್ದನ್ನು ನೋಡಿ ಇಲ್ಲಿನ ಪ್ರಜೆಗಳು ಪಟ್ಟ ಆನಂದವನ್ನು ನಾನು ಇಷ್ಟೆಂತ ಅರಿಕೆಮಾಡಲಿಕ್ಕೆ ಸಾಧ್ಯವಲ್ಲ ವಾಗಿರುತ್ತಾದಾಗ್ಯೂ ಆಸುತೋಷದಲ್ಲಿ ನಡೆದ ಉತ್ಸವದಪೈಕಿ ಕೆಲವು ಭಾಗವಂಮಾತ್ರ ಅರಿಕೆ ಮಾಡಿಕೊಳ್ಳುತ್ತೇನೆ. ಈ ದಿವಸ ಸಾಯಂಕಾಲ ೫ ಘಂಟೆಗೆ ಮಾಲೂರು ರೀಡಿಂಗರೂಮಿನ ಪಾ ಲಿನಲ್ಲಿ ಇಲ್ಲಿನ ಪಾಠಶಾಲಾ ಮ|| ರಾ|| ಲಿಂಗಪ್ಪ ಯ್ಯ ಪೇರಶಟ್ಟಿ ವಗೈರೆ ದೊಡ್ಡಮನುಷ್ಯರ ಕೋರಿಕೆಯ ಪ್ರಕಾರ ಮ ರಾ|| ಅಮಲ್ದಾರರು ರಾಜ ಗೋಪಾಲಾಚಾರ್ಲು B. A. ಯವರು, ಶಿರಸ್ತೇ ದಾರರು ಬಾಲಕಾಪಟಿ ನಾರಾಯಣಸ್ವಾಮಿನಾ ಯಿಡರವರು, ಪ್ರೊಬೇಷನ್ ಇನ್ಸ್ಪೆಕ್ಟರ್ ಕೃಷ್ಣ ರಾಯರವರು, ಶಾನುಭೋಗ ರೇಂಜಿ ಕೃಷ್ಣಸ್ವಾ ಮಿಅಯ್ಯರ್‌ಯವರು, ಆಸ್ಪತ್ರೆ ಅಸಿಸ್ಟೆಂಟ್ ಕೃ ಷ್ಣಸ್ವಾಮಿ ಮೊದಲಿಯಾರ್ ವರು, ಇನ್ನೂ ಈ ಕ ಸಬಾವಲ್ಲಿ ಇರತಕ್ಕ ಅನೇಕ ದೊಡ್ಡ ಮನುಷ್ಯ ರು ಸಹ ಒಂದು ಸಭೆ ಸೇರಿಸಿದರು. ಆ ಕಾಲದಲ್ಲಿ ಆಸ್ಥಳದಲ್ಲಿ ಹಾಕಿದ್ದ ಆಸನಗಳಿಂದಲೂ ಹಚ್ಚಿ ದ್ದ ದೀವಿಗೆಗಳಿಂದಲೂ ಒಬ್ಬರಿಗೊಬ್ಬರು ವಾ ತನಾಡಿಕೊಳ್ಳುತಿದ್ದ ಶುಭಸಮಾಚಾರಗಳಿಂದಲೂ ಸಂತೋಷಕಾರರು ಮಾತತಕ್ಕ ಕ್ಲಾರಿನೆಟ್ ವಗೈರೆ ವಾದ್ಯಗಳಿಂದಲೂ ಆ ಸ್ಥಾನವು ಕೇವಲ ರಮಣೀ ಯವಾಗಿ ಕಾಣಿಸುತಿತ್ತು. ಆ ಕಾಲದಲ್ಲಿಯೇ ಶ್ರೀ ಕ್ಟೂಯರ್ ಸ್ಕೂಲ್ ಮ್ಯಾನೇಜರ್ ಮ|| ಲಿಂಗಪ್ಪ ಯ್ಯನವರು ಎದ್ದು ನಿಂತುಕೊಂಡು ಅಲ್ಲಿ ಸೇರಿ ದ್ದ ಸಾವಿರಾರುಜನಗಳಿಗೆ ಸಂತೋಷಕಾರಣವ ನ್ನು ಸೂಚಿಸಿದರು. ಅನಂತರ ಶಿಪಾಯಿಜಾರ್ ಅಲ್ಲಿ ಸೇರಿದ್ದ ಜನಗಳಿಗೆಲ್ಲ ತಿಳಿಸುವುದಕ್ಕೋಸ್ಕರ ಮ ಹಾರಾಜಶ್ರೀ ಶಿರಸ್ತೇದಾರ್ ನಾರಾಯಣಸ್ವಾಮಿ ನಾಯಿಡರವರು ಪ್ರೀತ್ಯಾದರಪಡಿಸಿದ್ದರಮೇಲೆ ಪ್ರೊಬೇಷನ್ ಇನ್ಸ್ಪೆಕ್ಟರ್ ಮ|| ರಾ|| ಕೃಷ್ಣರಾ ಯರವರು ಎದ್ದು ನಿಂತುಕೊಂಡು ಈ ಕೆಳಗಿ ನಂತೆ ಉಪನ್ಯಾಸವನ್ನು ಮಾಡಿದರು.

ದೊಡ್ಡಮನುಷ್ಯರುಗಳಿರಾ, ಕೋತ್ತಾಲಂ ಯೆಂಬ ಸ್ಥಳವು ಹಿಂದೂಜನಗಳಿಗೆ ಯೋಗ್ಯವಾದ ತಾಂ ಬ್ರಪರ್ಣೀನದಿಯ ಉತ್ಪತ್ತಿಸ್ಥಳ. ಅಲ್ಲಿ ದೇವ ಸ್ಥಾನವಿದ್ದುದು, ಇಂಡಿಯಾದೇಶದಲ್ಲಿರತಕ್ಕ ಹಿಂದೂಗಳೆಲ್ಲ ಅದು ಕೇವಲ ಪುಣ್ಯಸ್ಥಳವೆಂತ ಲೂ ಮತ್ತು ಆರೋಗ್ಯ ಭೂಮಿಯೆಂತಲೂ ಅನಾದಿಯಿಂದಲೂ ಆಚರಿಸಿಕೊಂಡು ತೀರ್ಥ ಯಾತ್ರೆಗಳು ಹೋಗುತ್ತಾಯಿದಾರೆ. ಅದರಂ ತೆಯೇ ನಮ್ಮ ದಿವಾನ್ ಬಹದೂರ್ ಮ|| ರಾ|| ಮಾಧವರಾಯರವರು ಸಹ ಆರೋಗ್ಯಾರ್ಥವಾ ಗಿಯೂ ತೀರ್ಥಸ್ನಾನ ದೇವತಾದರ್ಶನಾರ್ಥವಾ ಗಿಯೂ ಸಹ ಕೆಲವು ದಿವಸಗಳೊಳಗೆ ಅಲ್ಲಿಗೆ ದ ಯಮಾಡಿದ್ದರು. ಆ ಕಾಲದಲ್ಲಿ ಒಬ್ಬ ಪ್ಲೀಡರ್ ಕೃಷ್ಣಯ್ಯರ್ ಯೆಂಬಾತನ ಹೆಂಡತಿ ಪ್ರಾತಃಕಾ ಲದಲ್ಲಿ ಸ್ನಾನಮಾಡುತಿದ್ದದನ್ನು ಕಂಡು ಅಲ್ಲಿ ವಾಸವಾಗಿರತಕ್ಕ ಪ್ಲಾಂಟರ್ ಮ|| ಕ್ಯಾರ್ಪ್ ಯೆಂಬಾತನು ಕೇವಲ ಅವಮಾನಕರವಾಗಿ ಆಕೆ ಯನ್ನು ಹೊಡೆದನು ಆಕೆಗೆ ನೆಲೆಯಿಲ್ಲದೆ ಬಂ ದದ್ದನ್ನು ಸಮೀಪದಲ್ಲಿದ್ದ ಆಕೆಯ ಗಂಡ ತನ್ನ ಹೆಂಡತಿಗೆ ಆತ ಅಕ್ರಮ ಜುಲುಮನ್ನು ಚೆನ್ನಾ ಗಿಸೋದಿ ಹೊಡೆದುಬಿಟ್ಟುಕೊಂಡದ್ದರಮೇಲೆ ಈ ಅಕೃತ್ಯಕ್ಕಾಗಿ ಮತಾಭಿಮಾನಿಗಳಾದ ದೊಡ್ಡ ಮನುಷ್ಯರೆಲ್ಲ ಅಲ್ಲಿ ಒಂದು ಮೀಟಿಂಗ್ ಮಾಡಿ ಮ ದರಾಸ್ ಗವರ್ನಮೆಂಟಿಗೆ ಒಂದು ಮೆಮೋರಿಯಲ್ ರವಾನಿಸಿದರು. ಕೃಷ್ಣಯ್ಯರ್ ತನ್ನ ಹೆಂಡತಿ ಮೇಲೆ ನಡೆದ ಜುಲುಂ ಕೇಸು ರಾತ್ರಿ ನಾಡಿ ಳ್ಳಿಂದ ಆತನ ಸುಗಾತಿಕೆಯನು ವರ್ಣನಿಲಿಕ್ಕೆ ವಾಡಿಕೆಯಾಗಿದೆ.

Medical scholarships—ವೈದ್ಯಶಾಸ್ತ್ರಾಭ್ಯಾಸ ಮಾಡತಕ್ಕಂತ ವಿದ್ಯಾರ್ಥಿಗಳ ವೇತನಗಳಬಗ್ಗೆ ಚಾಲ್ತೀಸಾಲಿಗೆ ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡ್ ಫಂಡಿನಿಂದ ೩೦೦ ರೂಪಾಯಿಗಳು ವಿಲೇ ಮಾಡಲ್ಪಟ್ಟಿರುವದಾಗಿ ತಿಳಿಯಬರುತ್ತದೆ.

An English girl school at Kolar —ಚಿನ್ನದಗನಿಗಳಲ್ಲಿ ಕೆಲಸಮಾಡತಕ್ಕ ಯೂರೋಪಿಯನ್ ನೌಕರ್ ಮಾತೆಯರ ಮಕ್ಕಳ ವಿದ್ಯಾಭಿವೃದ್ಧಿಯಬಗ್ಗೆ ಕೋಲಾರ್‌ನಲ್ಲಿ ಮಿಸ್ ಕ್ಯಾರ್ಟರ್ ಸರ್ದಿಂಬಾಕೆಯ ವಿಚಾರಣೆಯಲ್ಲಿ ಒಂದು ಬಾಲಿಕಾಪಾಠಶಾಲೆಯು ಸ್ಥಾಪಿಸಲ್ಪಡುವ ಸಂಭವವುಂಟಾಗಿದೆಯೆಂದು ನಮ್ಮ ಕೋಲಾರ್‌ಬಾತಮಿದಾರನು ಬರೆಯುತ್ತಾನೆ.

Meeting of Railway officials.—ಮದರಾಸ್ ಮತ್ತು ದಕ್ಷಿಣ ಮಹರಾಷ್ಟ್ರ ರೈಲ್ವೇ ಕಂಪೆನಿಗಳ ಮುಖ್ಯಾಧಿಕಾರಿಗಳು ಮಾಹೇ ಮಜಕೂರ್ ೧೫ನೇ ತಾರೀಖ್ ಬುಧವಾರದ ದಿನ ಸೇರಿ ಬೆಂಗಳೂರು ಗುಂಟಕಲ್ ಪ್ಯಾಸೆಂಜರುಗಳ ರೈಲು ಗಾಡಿಗಳ ಆಮದ್ ರಫ್ತು ವಿಷಯದಲ್ಲಿ ಕೆಲವು ಹೊಸ ಏರ್ಪಾಡುಗಳನ್ನು ಆಲೋಚಿಸುವಂತೆ ವ್ಯವಸ್ಥೆಯಾಗಿರುತ್ತದೆ.

The Jubilee Hall of Hassan.—ಹಾಸನದಲ್ಲಿ ಕಟ್ಟಲ್ಪಡುತ್ತಲಿರುವ ಜ್ಯೂಬಿಲಿಹಾಲ್ ಕಾಮಗಾರಿಯು ಪ್ರಾರಂಭಿಸುತ್ತ ಬಂದಂತೆಯೂ ಪರಸ್ಥಳಗಳಿಂದ ವಿದ್ಯಾಭ್ಯಾಸಕ್ಕಾಗಿ ಅಲ್ಲಿಗೆ ಹೋಗತಕ್ಕ ವಿದ್ಯಾರ್ಥಿಗಳ ಪ್ರಯೋಜನಾರ್ಥ ಈಗ ಸ್ಥಾಪಿಸಲ್ಪಟ್ಟಿರುವ ಸ್ಕೂಲುಬೋರ್ಡಿಂಗ್‌ಹೋಮಿಗೆ ಸದರೀ ಕಟ್ಟಡದ ಪೈಕಿ ಒಂದುಭಾಗ ಕೊಡಲ್ಪಡುವದಾಗಿಯೂ ತಿಳಿಯಬರುತ್ತದೆ.

The weather—ಗತವಾರದ ಪ್ರಾರಂಭದಲ್ಲಿ ಒಂದೆರಡಾವರ್ತಿ ಒಳ್ಳೇ ಮಳೆಯಾಗಿ ಅದರಿಂದೀಚೆಗೆ ಸ್ವಲ್ಪ ಹಿಮ್ಮಟ್ಟ ಕಬ್ಬು ಉಂಟಾಗಿದೆ. ಆದಾಗ್ಯೂ ಕೆಲವು ವೇಳೆಗಳಲ್ಲಿ ಮೋಡವಾಗುತಲೂ ಮತ್ತು ಕೆಲವು ಸಮಯದಲ್ಲಿ ಚನ್ನಾಗಿ ಬಿಸಿಲು ಕಾಯುತಲೂ ಇದೆ. ಋತುಧರ್ಮವು ಸಾಧ್ಯವಾದಮಟ್ಟಿಗೆ ನಡೆವಂತೆ ಹೇಳಬಹುದು. ಜನಾರೋಗ್ಯವೂ ಕೊರತೆಯಾಗಿಲ್ಲವು. ಸದ್ಯಃ ಪಶುಗಳಿಗೆ ಜಲ ತೃಣ ಸಮೃದ್ಧಿಯೂ ಸುಖವೂ ಉಂಟು. ರಾಗಿ ವಿನಾ ಕಡಮೆ ಪದಾರ್ಥಗಳ ಧಾರಣೆಯು ತಗ್ಗಲಿಲ್ಲವು.

Obituary.—ಈ ಪ್ರಾಂತ್ಯದಲ್ಲಿರತಕ್ಕ ಪ್ರಸಿದ್ಧ ವರ್ತಕರಲ್ಲೊಬ್ಬರಾದ ಮ|| ರಾ|| ಏಕಾಂಬರ ಸಾಹುಕಾರಯವರ ತಮ್ಮಂದಿರಾದ ಮ|| ರಾ|| ಶಂಕರ ಸಾಹುಕಾರಯವರು ಈಗ್ಯೆ ಕೆಲವು ದಿನಗಳ ಮೊದಲು ಪರಿಣಾಮಶೂಲೆಯಿಂದ ಸಂಕಟ ಪಡುತ್ತಲಿದ್ದು ಗತ ಶುಕ್ರವಾರದದಿನ ಮಧ್ಯಾಹ್ನ ೩ ಘಂಟೆಗೆ ಕಾಲಗತಿಯನ್ನೈದಿದರೆಂದು ತಿಳಿಸಲಿಕ್ಕೆ ವಿಷಾದಿಸುತ್ತೇವೆ. ಈಗ್ಯೆ ನಾಲ್ಕು ವರುಷಗಳ ಹಿಂದೆ ಇವರಿಗೆ ಪುತ್ರಶೋಕ ಒಂದು ಪ್ರಾಪ್ತವಾಗಿ ತನ್ಮೂಲಕವಾಗಿಯು ಸಹ ಬಹಳ ಕುಗ್ಗಿಹೋಗಿದ್ದರು.

Pension for Municipal servants.—ಸಿವಿಲ್ ವ ಮಿಲಿಟರಿಸ್ಟೇಷನಿನ ಮ್ಯೂನಿಸಿಪಲ್ ಚಾಕರಿ ನೌಕರರಿಗೆ ಪೆನ್ಷನ್ ಕೊಡತಕ್ಕ ವಿಷಯದಲ್ಲಿ ಸದರೀ ಬೋರ್ಡಿನ ಕಮಿಟಿಯವರಿಗಳ ಲ್ಲೊಬ್ಬರಾದ ಮಿ|| ಕೂಕಿಯವರು ಹೊಸದಾಗಿ ಕೆಲವು ನಿಬಂಧನೆಗಳನ್ನು ಮಾಡಿರುತ್ತಾರೆಂತಲೂ, ಅವು ಗವರ್ನಮೆಂಟಿನವರಿಗೆ ಲಾಭಕರವಾಗಿರುವದರಿಂದ ಇಂಡ್ಯ ಗವರ್ನಮೆಂಟಿನವರುಕೂಡ ಬಹುಶಃ ಅವುಂ ಅಂಗೀಕರಿಸಬಹುದೆಂತಲೂ ತಿಳಿಯಬರುತ್ತದೆ.

Taxation.—ಮಾಹೇ ಮಜಕೂರ್ ೧೧ ನೇ ತಾರೀಖ್ ದಿನ ಸಿವಿಲ್ ವ ಮಿಲಿಟರಿ ಸ್ಟೇಷನಿನ ಮ್ಯೂನಿಸಿಪಲ್ ಸಭ ಕಮಿಟಿಯವರು ಸಭೆ ಸೇರಿ ಕಸಬ್‌ದಾರಿ ತೆರಿಗೆಯನ್ನು ವಜಾ ಮಾಡುವ ಸಂದರ್ಭದಲ್ಲಿ ಪರಸ್ ತೆರಿಗೆಯು ಪೂರ್ವದಂತೇ ಪಾನ್ ಸುಪಾರಿ, ತಂಬಾಖ್, ತೆಂಗಿನಕಾಯಿ ಮೊದಲಾದ ಪದಾರ್ಥಗಳ ಮೇಲೆ ವಸೂಲ್ಮಾಡಲ್ಪಡಬಹುದೆಂತಲೂ, ಇದಲ್ಲದೆ ಕೆರೋಸಿನ್ ಎಣ್ಣೆ ಟಿನ್ ಒಂದಕ್ಕೆ ಎರಡಾಣೆ ಪ್ರಕಾರ ವಸೂಲ್ಮಾಡುವದೆ ಇವುಗಳ ಮೂಲಕ ಮ್ಯೂನಿಸಿ ಪಾಲಿಟಿಗೆ ಸಾಲೀಯಾನಾ ಕುಮಾರ್ ೪೩,೦೦೦ ರೂಪಾಯಿಗಳಿಗೆ ಜಾಸ್ತೀಯಾಗಿ ಹುಟ್ಟುವಳಿಯಾಗಬಹುದೆಂತಲೂ, ಸದರೀ ಮೊಬಲಗು ರಸ್ತೆಗಳ ಮತ್ತು ಚರಂಡಿಗಳ ರಿಪೇರಿ ವಗೈರೆ ಜಾಸ್ತೀ ಖರ್ಚುಗಳಿಗೆಲ್ಲ ಸಾಕಾಗಬಹುದೆಂದು ತಾವು ಭಾವಿಸಿರುವದಾಗಿಯೂ ನಿಶ್ಚಯಿಸಿ ರಿಪೋರ್ಟ್ ಮಾಡಿದಂತೆ ಕೇಳುತ್ತೇವೆ. ಇದರಿಂದ ಕೆರೋಸಿನ್ ಎಣ್ಣೆಯ ಕ್ರಯವು ಜಾಸ್ತಿಯಾಗಲಿಕ್ಕೆ ಕಾರಣವಾಗುವದು.

Review of troops —ಮದರಾಸ್ ಪ್ರೆಸಿಡೆನ್ಸೀ ಕಮಾಂಡರ್ ಇನ್‌ಚೀಫರವರಾದ ಜನರಲ್ ಸರ್ ಚಾರ್ಲ್ಸ್ ಅರ್ಬತ್‌ನಾಟ್ ಯವರು ಇಲ್ಲಿಗೆ ಬಂದಿರುವದರಿಂದ ಅವರ ಅಪ್ಪಣೆಯ ಮೇರೆಗೆ ಗತ ಶನಿವಾರದ ದಿನ ಬೆಳಗ್ಯೆ ೮ ಘಂಟೆಗೆ ಈ ಗ್ಯಾರಿಸನ್ನಲ್ಲಿ ಹಾಜರಿರತಕ್ಕ ಬ್ರಿಟಿಷ್ ಯೂರೋಪಿಯನ್ ಮತ್ತು ನೇಟಿವ್ ಸೇನೆಯ ಜನರಲ್ ರಿವ್ಯೂ ಒಂದು ನಡೆಯಿತು. ಆ ಕಾಲದಲ್ಲಿ ಮಹಾರಾಜಾ ಸರ್ಕಾರದವರ ಬಾರ್ ಸವಾರ್ ಫೌಜಿನವರು ಸಹ ಬ್ರಿಟಿಷ್ ಸೈನ್ಯದೊಡನೆ ಸರಿಯಾಗಿ ತಮ್ಮ ಯುಕ್ತಿ ಶಕ್ತಿ ಸಾಮರ್ಥ್ಯಗಳನ್ನು ವ್ಯಕ್ತಪಡಿಸಿದರು. ಬ್ರಿಟಿಷ್ ಸೇನಾ ಕೌಶಲ್ಯ ಪ್ರದರ್ಶನವು ಬಹಳ ವಿನೋದಕರವಾಗಿತ್ತಲ್ಲದೆ ಅವರ ಜಾಗರೂಕತೆಯೂ, ಅನುವರ್ತಿತ್ವ ಕ್ರಮವೂ, ಬಹಳ ಕೊಂಡಾಡತಕ್ಕವಾಗಿದ್ದವು. ರಿವ್ಯೂ ಮುಗಿದ ಮೇಲೆ ಸೈನ್ಯಗಳೆಲ್ಲವು ಸ್ವಸ್ಥಾನಗಳಿಗೆ ಹೊರಟುಹೋಗುವಾಗ್ಯೆ ಹರ್ಷಧ್ವನಿಯುಂಟಾಯಿತು.

SUMMARY OF NEWS
ವೃತ್ತಾಂತಸಂಗ್ರಹವು.

ದಕ್ಷಿಣ ಕಾಲೇಜ್ ವಿದ್ಯಾರ್ಥಿಗಳಲ್ಲಿ ಕೆಲವರು ಒಂದು ಸಭೆಯನ್ನು ಮಾಡಿಕೊಂಡು ತಾವು ತ ಮ್ಮ ಪೂರ್ವಾಚಾರವನ್ನನುಸರಿಸಿ ಈದೇಶದ ವ ಸ್ತ್ರಗಳನ್ನೇ ಧರಿಸಿಕೊಳ್ಳಬೇಕೆಂದು ನಿರ್ಣಯಿ ಸಿರುತ್ತಾರೆ

ಮುಂಬೈಪಟ್ಟಣದಲ್ಲಿರುವ ಮಹಮ್ಮದೀಯ ನೊಬ್ಬನು ಪರಸ್ತ್ರೀಯೊಬ್ಬಳಲ್ಲಿ ಅನುರಕ್ತ ನಾಗಿರುವ ಸ್ವಲ್ಪ ದಿನಗಳತರುವಾಯ ಕಾರ ಣಾಂತರಗಳಿಂದ ಆಕೆಯ ಮೂಗನ್ನು ಕಚ್ಚಿದ ನೆಂದು ಆತನಿಗೆ ೧೨ ತಿಂಗಳ ಕಠಿಣಸಜಾ ವಿಧಿ ಸಲ್ಪಟ್ಟಿತು.

ಹಾಳೆ ಯೆಂಬ ಲತೆಯ ಎಲೆಗಳನ್ನು ಕುಯಿ ದು ಒಣಗಿಸಿ ಅದನ್ನು ಚೀಲದಲ್ಲಿತುಂಬಿ ತಲೆದಿಂ ಬುಮಾಡಿ ಅದರಮೇಲೆ ತಲೆಯಿಟ್ಟುಕೊಂಡು ಮಲಗಿಕೊಂಡರೆ ಸುಖಕರವಾದ ನಿದ್ರೆಬರುವ ದು. ಈಎಲೆಯ ನಿಷ್ಠಾ ಪುಗುರ್ಣವು ದೇಗಲದೆ ಶರೀರಕ್ಕೆ ಆರೋಗ್ಯವುಂಟಾಗುವದಂತ

ಭರದ್ವಾಜ್ ಡಿಸ್ಟ್ರಿಕ್ಟ ಆಫಿಷಿಯೇಟಿಂಗ್ ಮ್ಯಾಜಿಸ್ಟ್ರೇಟ ಮತ್ತು ಕಲೆಕ್ಟರಾದ ಮ|| ಆರ್. ಸಿ. ದತ್ತಾ ಯೆಂಬವರು ಖಾಯಂ ತರಗತಿ ಮ್ಯಾಜಿಸ್ಟ್ರೇಟ ಮತ್ತು ಕಲೆಕ್ಟರಾಗಿ ಎಪಲೀ ನೋಡುವಂತೆ ಮೊಕರರ್‍ ಮಾಡಲ್ಪಟ್ಟರೆಂದು ಕೇ ಳುತ್ತೇವೆ

ಕಳೆದ ಸೆಪ್ಟೆಂಬರ್ ೨೭ನೇ ತಾರೀಖಿಗೆ ಪೂರ್ತಿ ಯಾದ ವಾರದೊಳಗೆ ಪಂಜಾಬಿನಲ್ಲಿ ಮರಳಿ ೨೭೪ ಮಂದಿಗೆ ವಾಂತಿಭೇದಿ ರೋಗ ಬಂದು ಅವರಲ್ಲಿ ೧೯೪ ಮಂದಿ ಮೃತಪಟ್ಟರು ಈಸಾಲ ಪ ಟ್ಟು ೫,೫೦೪ ಮಂದಿಗೆ ಸದರೀ ರೋಗ ಬಂದು ಅವರಲ್ಲಿ ೩,೧೭೮ ಮಂದಿ ಮೃತಪಟ್ಟರು

ಕಲ್ಕತ್ತಾ ಹೈಕೋರ್ಟ ಜಡ್ಜಿಗಳಲ್ಲೊಬ್ಬ ರಾದ ಆನರೆಬಲ್ ಮಿ ಜಸ್ಟಿಸ್ ಪ್ರಿನ್ಸೆಪ್ ಸಾಹೇಬ ಎಂಬವರೂ, ಸದರೀ ಕೋರ್ಟಿನ್ನ ಹಿಂದೆ ಜಡ್ಜಿಯಾಗಿದ್ದ ಸರ್ ರೋಮೇಶ್ ಚಂ ದ್ರಮಿತ್ತರ್ ಯವರೂ ಈ ತಿಂಗಳ ಗುನೇ ತಾ ರೀಖಿನ ದಿನ ಮುಂಬೈಗೆ ಬಂದು ಪರಿಮಾಣ ಹೊಸ ಎಂಬ [illegible]

ಮದ್ರಾಸಿನಲ್ಲಿ ಇಂಜನಿಯರಾಗಿರುವ ಮಿ ಎಲ್ಲಿಸರವರ ಮನೆಯನ್ನು ಸುಮಾರಿಸಿಕೊಳ್ಳು ವದಕ್ಕಾಗಿ ಕಂಟ್ರಾಕ್ಟದಾರ್ ಯೂಸಫ್ ಸಾ ಹೇಬರವರು ಒಂದುನೂರು ರೂಪಾಯಿನ ನೋಟ ನ್ನು ಒಂದು ಕವರಿನಲ್ಲಿಹಾಕಿ ಕಳುಹಿಸಿದ್ದಕ್ಕಾ ಗಿ ಸದರೀ ಸಾಹೇಬರಿಗೆ ೩ ತಿಂಗಳ ಸಜಾ ವಿಧಿ ಸಲ್ಪಟ್ಟಿದು.

ಕಲ್ಕತ್ತಾ ಸ್ಟೇಟಸ್ಮನ್ ಪತ್ರಿಕೆ ಎಂಬ ಪತ್ರಿಕೆ ಯ ಮೇಲೆ ಭೀರೇಂದ್ರನಾಥ ಚಟರ್ಜಿ ಎಂಬವ ರು ತಂದ ಮಾನನಷ್ಟ ಮೊಕದ್ದಮೆಯು ಆಬ ಬುಧವಾರದ ದಿನ ಫೈಸಲ್ಲೆಯಾಯಿತು ಪತ್ರಿ ಕಾಧಿಪತಿಯು ತಾವು ಮಾಡಿದ ತಪ್ಪಿತದ ಒಪ್ಪಿ ಕೊಂಡು ವಾದಿಯ ಕ್ಷಮಾಪಣೆಯಂ ಕೇಳಿಕೊ ಳ್ಳಲು ಪಿರ್ಯಾದಿಯು ಅದು ಅಂಗೀಕರಿಸಿ ಮೊಕ ದ್ದಮೆಯಂ ವಾಪಸು ತೆಗದುಕೊಂಡರು.

೧೮೯೦ ನೇ ಇಸವಿ ಏಪ್ರಿಲ್ ತಿಂಗಳಲ್ಲಿ ಖಾಲಿಯಾದ ಕೆಲಸಕ್ಕೆ ನಿಯಮಿಸಲ್ಪಟ್ಟರು ವ [illegible] ಬಗ್ಗೆ ಮುಂ ಬೈ ಹೈಕೋರ್ಟಿನ ಅಪೀಲ್ ಸೈಡ ಮತ್ತು ಅದ ರ ತಾಬೇದಾರಿ ಕೋರ್ಟುಗಳು ಸದರೀ ತಿಂಗಳ ೩೧, ೩೬ ಮತ್ತು ೨೩ ನೇ ತಾರೀಖುಗಳಲ್ಲಿ ಸು ಟ್ಟಿಸಲ್ಪಟ್ಟು ಆಫೀಸಗಳ ನೌಕರರು ಸರ್ಕಾರ ಕೆಲ ಸಕ್ಕೆ ಹೋಗತಕ್ಕದ್ದೆಂದು ಮುಂಬೈ ಹೈಕೋ ರ್ಟಿನವರು ಹುಕುಂ ಮಾಡಿರುತ್ತಾರೆ

ಬಂಗಾಳಾಧಿಪತ್ಯದಲ್ಲಿ ಬಂಗಾರದ ಗಣಿಗಳು ವಿಶೇಷವಾಗಿದೆ ಯೆಂಬದಾಗಿ ಯಾರೋ ಅಲ್ಲಿನ ಜನಗಳಿಗೆ ಮಂಕುಬೂದಿ ಚೆಲ್ಲಿದ್ದರಿಂದ ಕಲ್ಲ

ತ್ತೆ ಪಟ್ಟಣದಲ್ಲಿ ಯಾಸಬ್ [illegible] ನೋಡಿದ ರೆ ಭೂಗಾರದ ಗಣಿಗಳನ್ನು ಅಗೆಯುವ ಕಂಪೆ ನಿಗಳ ಬೋರ್ಡುಗಳೇ ಕಾಣುತವೆ. ಇನ್ನೇನು ಅವರ ಅದೃಷ್ಟಕ್ಕೆ ಎಣೆಯೇ ಯಿಲ್ಲ. ಜಾಗ್ರತೆ ಯಲ್ಲೇ ಲಕ್ಷಾಧಿಕಾರಿಗಳು ಭಿಕ್ಷಾಧಿಕಾರಿಗಳಾಗಿ ಯೂ, ಬಿಕ್ಷಾಧಿಕಾರಿಗಳು ಲಕ್ಷಾಧಿಕಾರಿಗಳಾಗಿ ಯೂ ಆಗುವರು.

ಈ ತಿಂಗಳ ೧ನೇ ತಾ|| ಮದ್ಯಾಹ್ನದಲ್ಲಿಸಿಕಂ ದರಾಬಾದ್ ನಿವಾಸಿಯಾದ ೧೬ ೧೭ ವರ್ಷಗಳ ವ ಯಸ್ಸುಳ್ಳ ತರುಣಿಯೊಬ್ಬಳು ಮನೆಗೆಬಂದು ತ ನು ತೂರ್ಗಸ್ತಳಾಗಿದ್ದ ಕಾಲದಲ್ಲಿ ಒಬ್ಬ ನು ಬಂದು ತನ್ನನ್ನು ಬಲಾತ್ಕಾರದಿಂದ ಮನೆಕೋ ಟಕ್ಕೆ ಸಳೆದುಕೊಂಡು ಹೋಗಿ ಕೈಕಾಲುಗಳು ಕಟ್ಟಿ ಮಾನಭಂಗವಂ ಮಾಡಿದನೆಂದು ಕೇಳಿ ಕೊಳ್ಳಲು ಮನೆಯವರು ಕೂಡಲೇ ಅವನನ್ನು ವಿ ಚಾರಿಸುವದಕ್ಕೆ ಹೋಗಿ ಅವನನ್ನು [illegible]

[illegible]

ಮದರ್ ಪ್ರಾವಿನ್ಸ್ [illegible] [illegible]

[illegible]

ಬಿರ್ಲಾಂಡದ [illegible] ಶ್ರೀಮತಿ ಡಾಕ್ಟರ್ [illegible] [illegible] ಸಿರ್ಣಯಿಸಿದರು.

ಬಾಲ್ಯವಿವಾಹ ಮಾಡಿಕೊಂಡ ಹೆಂಗಸೊಬ್ಬ ಳು ಕರ್ನಾಟಕದ [illegible] ತಾನು ಮಾಡಿಕೊಂಡ ವಿವಾಹವು ಅಸಿದ್ಧವೆಂ ದು ನಿರ್ಣಯಿಸಬೇಕೆಂಬದಾಗಿ [illegible] [illegible] ತಿಳಿಸುತ್ತಾರೆ [illegible] ಕಾಲದಲ್ಲಿ ವಿವಾಹವಾಗಲಿಲ್ಲ ಈಗ ತನ್ನನ್ನ ಯಸ್ಸುಬಂದಿದ್ದ [illegible] ಮೆಯಾದಮೇಲೆ ತಾನು ಮುಂಬೈಗೆ [illegible] ಮಳೆಯೂ, ತನ್ನಗಂಡನು ಜ್ಯೋತಿಷ್ಯಲ್ಲಿ ಮಿ ದೇನಕೆಯೂ, ತಾನು ತನ್ನಗಂಡನ ಸುಖಕರವೂ ಬಿಡಲಿಲ್ಲವೆಂದೂ, ಅವನ ಸುಗತಿಯಾದರೂ ಲಕ್ಕೆ ಮಾಡುಂದರ ಮನೆಯಲ್ಲಾದರೂ ವಾಸಮಾಡ ದ್ದಿಲ್ಲವೆಂದೂ, ತನಗೆ ವಯಸ್ಸುಬಂದಮೇಲೂ ಯ

ಲು ಮತ್ತು ಆತರುವಾಗು ತನ್ನ ವಿವಾಹ ಅಕ್ರ ಮವಾದದ್ದೆಂದು ಒಪ್ಪಿಸುತ ಬಂದವಾಗಿಯೂ ಹೇಳುತ್ತಾಳೆ ಈಮೊಕದ್ದಮೆ ಯಾವ ರೀತಿ ಯಲ್ಲಿ ಪರ್ಯವಸಾನವಂ ಹೊಂದುವದೊ ನೋ ಡಬೇಕು

ಬ್ರಿಟನಿಯಲ್ಲಿ ವಿವಾಹವಿಷಯವಾಗಿ ಅತಿ ವಿ ಚಿತ್ರವಾದ ಒಂದುಪದ್ಧತಿಯು ಈಗಲೂ ರೂಢ ಯಲ್ಲಿರುವದು ಅವಿವಾಹಿತರಾಗಿರತಕ್ಕ ತರು ಣರುಗಳು ಯಾವ ಸಭೆಗೆ ಹೋಗಬೇಕಾದಾಗ್ಯೂ ತಾವು [illegible] ಬಳ ಬಣ್ಣಗಳ ಸರಗುಗಳ [illegible] ರಗಳನ್ನು ರೊಟ್ಟುಕೊಂಡು [illegible] ಈ ರೀತಿಯಲ್ಲಿರತಕ್ಕ ಪಟ್ಟೆಗಳನ್ನು ನೋಡಿದವ ರ್ಕೆ ತಂದೆಯಾದವರು ತನ್ನಮಗಳ ಜೊತೆಯ ಲ್ಲಿ [illegible] [illegible]

ಅಷ್ಟ್ರೇಲಿಯಾ [illegible]

[illegible]

EXTRACTS

ಖ್ಯಾತಿ ಸಂಪನ್ನರ 'ಮುಂಬೈ ಟ್ಯಾಂಡ ರ್ಡ' ಪತ್ರಿಕೆಯ [illegible] ದ್ದರಿಂದ ಅಲ್ಲಿಯ ಜನರು ದಂಗೆಯನ್ನ ಯೆಬ್ಬಿ ಸಿದ್ದರು ಈ ದಂಗೆಯನ್ನು ಸಮಾಧಾನ ಪಡಿ ಸಕ್ಕೆ ಬರೋಡಾದಿಂದ ಅಧಿಕಾರಿ [illegible] [illegible] ಈ ಬಂಡಿಯನ್ನು ಸನಿಮನಿಾನ ಪಡಿಸುವ [illegible] ಗುಂದು ತಾಕಿ ೧೩ ಮಂದಿ ಮೃತಪಟ್ಟರು. ಮ ತ್ತು ೫೦ ಮಂದಿ ಘಾಯವಾದರು ಇದಲ್ಲದ ೫೦ ಮಂದಿಯು ಪರಿಹರಿದು [illegible] ಈ ಜನಗಳೊಳಗೆ ಕೆಲವರು ಸುಮ್ಮನೆ ನೋ ಡಲಿಕ್ಕೆ ನಿಂತಿದ್ದವರನ್ನು ಕೂಡ ಬಿಟ್ಟುಕೊಟ್ಟ ರಂತೆ ಈ ಘಟಮಕರವಾದ ದಂಗೆಯ ಸ್ಥಾಪ ಸುಸ್ಥಾನದ ಬಿದ ಬೊವ ವೆ || ಕಾಮರಾಜ್ ನಾ ರಾಯಣ ಅವ ಅವರ ವಿರೋಧಿಗಳ ಪ್ರೇರಣೆ

ಯಿಂದ ಹುಟ್ಟಿತೆಂಬ ಅನುಮಾನವಿರುತದೆ. ಈ ದಂಗೆಯ ಸಂಕ್ಷೇಪ ವೃತ್ತಾಂತವನ್ನು ಕಳೆದ ತಿಂಗಳ ೨೩ನೇ ತಾರೀಖಿನ ಮುಂಬೈ ಗೆಜೆಟ ನಲ್ಲಿ ಸೇರಿಸಿ ಮಾಡಲ್ಪಟ್ಟಿರುತಿದೆ

ಕಳೆದ ವರ್ಷ ಕ್ಯಾಂಟಿನಸಂಸ್ಥಾನದಲ್ಲಿ ಮುಂಬೈ ಇಲಾಖೆಯ ಉತ್ತರಭಾಗದ ಕಮ್ಮಿಷನರಾದ ಮಿ ಷಷ್ಪರ್ಡ ಸಾಹೇಬರ ಸೂಚನೆಯ ಅನ್ವಯ ಹೊಸ ಸರ್ವೆಯಾಯಿತು ಹಳೇ ಸರ್ವೆಯುಮೇ ರೆಗೆ ರೈತರು ತಮ್ಮ ಕಂದಾಯವನ್ನು ದ್ರವ್ಯ ಮತ್ತು ಧಾನ್ಯ ಇವೆರಡರ ರೂಪದಿಂದಲೂ ಕೊ ಡುತಿದ್ದರು. ಆದರೆ ಈ ಹೊಸ ಸರ್ವೆಯು ಆ ದದಂದಿನ ರೈತರು ತಮ್ಮ ಕಂದಾಯವನ್ನು ದ್ರ ವ್ಯರೂಪದಿಂದಲೇ ಕೊಡಬೇಕೆಂದು ದರಾಪ ಮಾ ಡಲ್ಪಟ್ಟಿತು ಈ ದರಾಪ ಸ್ವಂತ ಕ್ಯಾಂಪಿ ಮ ತ್ತು ಅದರ ಸುತ್ತಮುತ್ತಲಿನ ಯೆರಡು ಹಳ್ಳಿ ಗಳು ವಿನಾ ಉಳಿದ ಕಡೆಗೆಲ್ಲ ಅಮಲಿನಲ್ಲಿ ಬಂದಿ ತ್ತು. ಸ್ವಂತ ಕ್ಯಾಂಪಿಯಲ್ಲಿರುವಂತಾ ಕೆಲವು ಜನರು (ಮಿಸ್ಟರ್ ರಾಮರಾವರ ಶತ್ರುಗಳು) ಹಳ್ಳಿ ಹಳ್ಳಿಗಳಿಗೆ ಹೋಗಿ ನೀವು ಹೊಸ ಸರ್ವೆ ಯಮೇರಿಗೆ ಕಂದಾಯ ಕೊಡಬೇಡಿರಿ, ಇದೆಲ್ಲ [illegible] ತರುವಾಯ ಆಯಿತು, ಒಳ್ಳೇದು ನಾವೆಲ್ಲರು [illegible] ರ ಮನಸ್ಸಿನಲ್ಲಿ ಪ್ರೇರಣೆ ಮಾಡಿದರೆ. ಆದ ರಿಂದ ಅವರು ಸದ ಇವರನ್ನು ಕೂಡಿಕೊಂಡು ಈಜನಗಳೆಲ್ಲರು ಕ್ಯಾಂಪಿಯಲ್ಲಿ ಹೊದಲು [illegible] ಕಡೆಗೆ [illegible] [illegible] ಅವರು ಈ ಅರ್ಜಿಯನ್ನು ತಮ್ಮ ಸ್ವಾಧಿ [illegible] ಕಳುಹಿಸಿದರು ಅಲ್ಲಿಂದಲೂ ಯಾತಾ ಉತ್ತರ ವೇ ಬಾರದು ಇದೆ ಜನರು ತಮ್ಮತಮ್ಮ [illegible] ವ್ಯಾಪಾರ ಮತ್ತು ವ್ಯವಹಾರಗಳನ್ನು ನಿಲ್ಲಿಸಿ ಬಿಟ್ಟಿದ್ದರು ಇದನ್ನು ನೋಡಿ ಮಿ ನವಾಬ [illegible] ಪ್ರೊವಿನ್ಸ್ [illegible] ಈ ಬಗ್ಗೆ [illegible] ಗದೆ [illegible], ಅಲ್ಲಿಗೆ ಹೋದ ಸ್ವಲ್ಪ ಹೊತ್ತಿ ನಲ್ಲಿಯೆ ತಮ್ಮ ಸುಸ್ಥಾನದಲ್ಲಿ ರೈತಜನರು ಸ ತ್ಯಾಗ್ರಹ [illegible] ದಿಗೆಯನ್ನು ಮಾಡಲಿಕ್ಕೆ [illegible] ವರ್ತಮಾನವು ಇವರಿಗೆ ಬಂದ ಅದನ್ನು ನೋಡಿಕೊಂಡು ಪ್ರೊ ವಿನ್ಸಿ ಎಜಂಟರು [illegible] [illegible] ಊಗ ನಿಮ್ಮ ನಿಮ್ಮ ಮನೆಗೆ ಹೋಗಿರಿ, ಮಿಂ ಬಗವೆ ನಿಮ್ಮನ್ನು ಕರೆದು ಪ್ರೊವಿನ್ಸ್ ಏ ಜಂಟರು ನಿಮ್ಮ ದುಃಖಾದಿಗಳನ್ನು ಕುರಿತು ವಿಚಾರ ಮಾಡುತ್ತಾರೆ ಎಂದು ಹೇಳಿ ಹೋಳ ಕಳುಹಿಸಿದರು ಅದಕ್ಕೆ ಜನರು ಉಪ್ಪದ ಉ ತ್ತರಗಳನ್ನು ಕೊಡುವದರೊ ಇದ್ದರು. ಆಗ್ಯೆ ಸ್ವತಂತ್ರ ಜನರಿಗೆ ಅವರನ್ನು ಬಲಾತ್ಕಾರದಿಂದ ಚೆದರಿಸಲಿಕ್ಕೆ ಮತ್ತು ಮನೆಗೆ ಕಳುಹಿಸಲಿಕ್ಕೆ ಹುಕುಂ ಮಾಡಲ್ಪಟ್ಟಿತು ಸೈನ್ಯದ ಜನರು ಎಂದು ಗುಂಡನ್ನು ಜಬರಿಕೆಯಬಗ್ಗೆ ಹಾರಿಸಿ ದರು. ಈ ಗುಂಡುತಾಕಿ ಮೇಲೆ ಹೇಳಿದ ಭಯಂ ಕರ ಪರಿಣಾಮವು ಸಂಭವಿಸಿತು- ಚಾಂಡ್ರೋ ದಯ.

BANGALORE —Printed and published at the KARNATAK PRESS, No 111, SRINIVASA MANDIRAM ROAD, PETTAH —1890

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XVII.] BANGALORE—MONDAY, OCTOBER 20, 1890. [No. 42.

ಸಂಪುಟ ೧೭.] ಬೆಂಗಳೂರು:—ಸನ್ ೧೮೯೦ನೇ ಇಸವಿ ಅಕ್ಟೋಬರ್ ೨೦ನೇ ತಾರೀಖ್ ಸೋಮವಾರ. [ಸಂಖ್ಯೆ ೪೨.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಕಾಲ್ ಅಕ್ಕೆ	ಸ್ಥಳದವರಿಗೆ ಪರಸ್ಥಳದವರಿಗೆ.	
	ಪಾಸ್ಟೇಜಿಲ್ಲದೆ.	ಪಾಸ್ಟೇಜುಸೇರಿ.
ಮುಂಗಡವಾಗಿ ಸಂವತ್ಸರಕ್ಕೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡವಾಗಿ ಸಂವತ್ಸರಕ್ಕೆ	4—0—0	5—0—0
ತರುವಾಯ ,,	5—0—0	6—0—0

[illegible]

[illegible]

ಪ್ರಕಟನೆಯ ರಿವಾಜು.

[illegible]

[illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs 5-0-0

ವೈದ್ಯಸಾರ ಸಂಗ್ರಹ.

[illegible]

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ವಾಸ್ತಲ ಬೆಲೆ ಸಹ ರೂ 5—0—0

ಟಿ. ವಿ. ವೆಂಕಟಾಚಾರ್, [illegible]

ADVERTISEMENTS.

ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರಿಗೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

	ರೂ. ಅ. ಪೈ
ಸಟೀಕಾ ವೈದ್ಯಸಾರ ಸಂಗ್ರಹ ...	೪ ೦ ೦
,, ಶಿವಗೀತೆ ...	೧ ೧ ೦
,, ಶಿವಾನಂದಲಹರಿ ...	೦ ೪ ೦
,, ಕಾಲಾಮೃತ ...	೧ ೨ ೦
,, ಮುಹೂರ್ತದರ್ಪಣ ...	೦ ೧೨ ೦
,, ಬಾಲರಾಮಾಯಣ ...	೦ ೮ ೧
,, [illegible] ಗೀತೆ ...	೦ ೧ ೬
,, ಚಾಣಕ್ಯನೀತಿ (ಸುಭಾಷಿತ) ...	೦ ೬ ೦
ವಿಷ್ಣುಸಹಸ್ರನಾಮ ಪತ್ರಿಕೆ ...	೦ ೪ ೦
ಸೂರ್ಯಸಹಸ್ರನಾಮ ...	೦ ೩ ೨
ಕೃಷ್ಣಕರ್ಣಾಮೃತ ...	೦ ೨ ೬
[illegible] ಮೂಲ ...	೦ ೨ ೬
೧ ಕಾಂಡ ...	೦ ೧ ೦

ಕನ್ನಡ ಗ್ರಂಥಗಳು.

[illegible] ಕೃತಿ ...	೩ ೦ ೦
ಡಿಟೋ [illegible] ...	೦ ೪ ೦
[illegible] ...	೦ ೪ ೦
[illegible] ...	೦ ೪ ೦
[illegible] ...	೦ ೪ ೦
[illegible] ...	೦ ೨ ೬
[illegible] ...	೦ ೨ ೬
[illegible] ...	೦ ೨ ೦
[illegible] ...	೦ ೨ ೦
[illegible] ...	೦ ೨ ೦
[illegible] ...	೦ ೨ ೬
[illegible] ...	೦ ೦ ೦
[illegible] ...	೦ ೧೦ ೦

ನೋಟೀಸ್.

ಮನೆಗಳಲ್ಲಿ ಗಿರಿಟ್ ಮಾಡುವದಕ್ಕೆ ಅನುಕೂಲವಾದ ಬೆಳ್ಳಿ ದ್ರಾವಕವು.

[illegible]

ಇದರ ಕ್ರಯ ಸೀಸೆ ೧ಕ್ಕೆ ೩—೦—೦

ಮೈಸೂರು ಗವರ್ನಮೆಂಟ್.

ಫಾರೆಸ್ಟ್ ಖಾತಾ.

ಇಷ್ತಿಹಾರ್ ನಾಮೆ.

ತಾರೀಖ್ 29ನೇ ಸೆಪ್ಟಂಬರ್, 1890.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ,—

ಮೈಸೂರು ಸೀಮೆಯಲ್ಲಿ [illegible] ಇದರಡಿ ತಿಳಿಸಲ್ಪಡುವ ಸ್ಥಳಗಳಲ್ಲಿ ಮತ್ತು [illegible] ನೇಮಿಸಿರುವ ತಾರೀಖುಗಳಲ್ಲಿ, ಆಯಾ ಡಿಸ್ಟ್ರಿಕ್ಟ್ [illegible] ಫಾರೆಸ್ಟ್ [illegible] ನಡೆಸಲ್ಪಡುವವು.—

ಶಿವಮೊಗ್ಗ ಡಿಸ್ಟ್ರಿಕ್ಟ್.

[illegible] ಕೋಠಿ.	1890ನೇ ಇಸವಿ ನವಂಬರ್ 14ನೇ ತಾರೀಖಿನಲ್ಲಿ.		[illegible]	250 [illegible]
[illegible] ಕೋಠಿ.	ಡಿಟೋ	17ನೇ ಡಿಟೋ	ಡಿಟೋ	450 ಡಿಟೋ.
[illegible] ಕೋಠಿ.	ಡಿಟೋ	22ನೇ ಡಿಟೋ	ಡಿಟೋ	100 ಡಿಟೋ

ಕಡೂರು ಡಿಸ್ಟ್ರಿಕ್ಟ್.

ಚಿಕ್ಕಮಗಳೂರು ಕೋಠಿ	ಡಿಟೋ	28ನೇ ತಾರೀಖಿನಲ್ಲಿ	ಡಿಟೋ	200 ಡಿಟೋ.

ಹಾಸನ ಡಿಸ್ಟ್ರಿಕ್ಟ್.

ಹಾಸನ ಕೋಠಿ.	ಡಿಟೋ ಡಿಸೆಂಬರ್	4ನೇ ತಾರೀಖಿನಲ್ಲಿ	ಡಿಟೋ	300 ಡಿಟೋ.

ಮೈಸೂರು ಡಿಸ್ಟ್ರಿಕ್ಟ್.

ಶ್ರೀರಂಗಪಟ್ಟಣದ ಕೋಠಿ.	ಡಿಟೋ ಡಿಸೆಂಬರ್	10ನೇ ತಾರೀಖಿನಲ್ಲಿ	ಡಿಟೋ	450 ಡಿಟೋ.
[illegible] ಕೋಠಿ.	ಡಿಟೋ ,,	15ನೇ ಡಿಟೋ	ಡಿಟೋ	450 ಡಿಟೋ.

ಬೆಂಗಳೂರು ಡಿಸ್ಟ್ರಿಕ್ಟ್.

[illegible] ಕೋಠಿ.	ಡಿಟೋ ಡಿಸೆಂಬರ್	20ನೇ ತಾರೀಖಿನಲ್ಲಿ	ಡಿಟೋ	150 ಡಿಟೋ.

ಹರಾಜಿನ ಷರತ್ತುಗಳು.—ಸನ್ 1887 ನೇ ಇಸವಿ ಆಗಸ್ಟ್ 27 ಮತ್ತು ಸೆಪ್ಟಂಬರ್ 3ನೇ ತಾರೀಖುಗಳಲ್ಲಿ 34 ವ 35 ನೇ ನಂಬರ್ ಮೈಸೂರ್ ಗೆಜೆಟುಗಳಲ್ಲಿ ಪ್ರಕಟಿಸಲ್ಪಟ್ಟ ಇಸ್ತಿಹಾರಗಳನ್ನು ನೋಡಿಕೊಳ್ಳತಕ್ಕದ್ದು. ಸದರೀ ಇಸ್ತಿಹಾರಗಳು ಹರಾಜ್ ಕಾಲದಲ್ಲಿ ಓದಲ್ಪಡುವವು.

L. RICKETTS,

Inspector General of Forests in Mysore.

ಚಿನ್ನದ ದ್ರಾವಕವು.

[illegible]

ಇದರ ಕ್ರಯ ಸೀಸೆ ೧ಕ್ಕೆ ೩—೪—೦

[illegible]

ಮೈಸೂರು ಮಹಾರಾಜರವರ ಅರಳೆ ಯಂತ್ರದ ಕಾರ್ಖಾನೆ.

ನೋಟೀಸ್.

ಮೈಸೂರು ಮಹಾರಾಜರವರ ಅರಳೆ ಯಂತ್ರ ಕಾರ್ಖಾನೆಯಲ್ಲಿ ಹೊಸ ನಮೂನೆ ಯಂತ್ರದ ಮೂಲಕ [illegible]

[illegible]

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, OCTOBER 20, 1890.

[illegible]

ATTACKS UPON THE CHARACTER OF GOVERNMENT SERVANTS.

ಸರ್ಕಾರಿ ಉದ್ಯೋಗಸ್ಥರು [illegible]

[illegible]

ರ್ಣಾನವು ಸಹ ಕಾಪಾಡತಕ್ಕಾದದ್ದಾಗಿದ್ದು ಇಳಿಗಾಗಬೇಕಾಗುತ್ತಿದೆ. ಹೀಗೆ ಪ್ರತಿ ಮನುಷ್ಯನ ನಡತೆಯನ್ನು ಪ್ರೋಟಿಸಬೇಕಾದರೆ ವಿವೇಕತನವಿಲ್ಲದೆ ಹೋಗುವದಲ್ಲದೆ ಅರ್ಥನ್ಯಾಯವೂ ಅಧಿಕವಾಗುತ್ತಿದೆ. ಆದುದರಿಂದ ಆಕಾಶನು ಗುಪ್ತ್ಯ ನೋಯಿಸಿಕೊಂಡು ವ್ಯರ್ಥಶ್ರಮಪಡುವಂತೆ ವೃತ್ತಾಂತಪತ್ರಿಕೆಗಳ ಗುಣದೋಷ ವಿಮರ್ಶೆಗಳಂ ಲಕ್ಷ್ಯವಿಲ್ಲದೆ ವ್ಯರ್ಥನಷ್ಟಗಳಿಗೆ ಗುರಿಯಾಗುವದಕ್ಕಿಂತಲೂ ಬಧಿರರಂತೆ ಸುಮ್ಮನಿರುವದು ಕ್ಷೇಮಕರವೆಂಬ ತಾತ್ಪರ್ಯದಿಂದಲೋ ಏನೋ ಇಂಡ್ಯ ಗವರ್ನಮೆಂಟಿನವರು ಈಚೆಗೊಂದು ನಿಬಂಧನೆಯಂ ಮಾಡಿರುವಂತೆ ತಿಳಿಯಬರುತ್ತಿದೇನೆಂದರೆ —

" ಈಗ ಸರ್ಕಾರಿಉದ್ಯೋಗಸ್ಥರ ಗುಣಗಳನ್ನೂ ನಡತೆಗಳನ್ನೂ ಆಕ್ಷೇಪಿಸಿ ಬರೆಯುವದರಲ್ಲಿ ಸಾಮಾನ್ಯವಾಗಿ ಜನರಿಗೆ ಅಭಿರುಚಿಯೂ ಪ್ರವೃತ್ತಿಯೂ ಅಧಿಕವಾಗುತಲಿರುವದರಿಂದ ಇಂಡ್ಯ ಗವರ್ನಮೆಂಟಿನವರು ಇದರಿಂದ ನಿಬಂಧಿಸುವದೇನೆಂದರೆ,— ಒಬ್ಬ ಸರ್ಕಾರಿ ಉದ್ಯೋಗಸ್ಥನು ತಾನುಯಾವ ಗವರ್ನಮೆಂಟಿನಲ್ಲಿ ನೌಕರಿಯೊಳಿರುತ್ತಾನೆಯೋ ಆ ಗವರ್ನಮೆಂಟಿನ ನಿರ್ಣಯವಿಲ್ಲದೆ ಪ್ರಕಾಶಪತ್ರಿಕೆಗಳ ಆಕ್ಷೇಪಣೆಗಳ ದೆಸೆಯಿಂದ ಉದ್ಯೋಗಧರ್ಮದಲ್ಲಿ ತನ್ನ ಗುಣಗಳನ್ನು ನಡತೆಗಳನ್ನು ಕಾಪಾಡಿಕೊಳ್ಳುವದಕ್ಕಾಗಿ ಮಾನನಷ್ಟದ ಬಗ್ಗೆ ಕೋರ್ಟುಗಳಿಗೆ ಹೋಗುವದು ಖಂಡಿತವಾಗಿ ನಿಷೇಧಿಸಲ್ಪಟ್ಟಿರುತ್ತದೆ. ಲೋಕಲ್ ಗವರ್ನಮೆಂಟಿನವರು, ಮೇಲೆಕಂಡಂತೆ ಫಿರ್ಯಾದು ಮಾಡಲಿಕ್ಕೆ ತಮ್ಮ ಅನುಮತಿಯಂ ಕೊಡುವಾಗ ಮೊಕದ್ದಮೆಯಂ ನಡೆಸುವಲ್ಲಿ ತಗಲಬಹುದಾದ ಖರ್ಚು ವೆಚ್ಚಗಳನ್ನು ಗವರ್ನಮೆಂಟಿನವರು ಸ್ವತಃ ವಹಿಸಬೇಕಾದದ್ದೋ, ಅಥವಾ ಆಪೀಸರ ತನ್ನ ಸ್ವಂತ ಖರ್ಚಿನಿಂದಲೇ ಫಿರ್ಯಾದವನ್ನು ಜರಗಿಸಿಕೊಳ್ಳುವಂತೆ ಮಾಡತಕ್ಕದ್ದೋ ಯೆಂಬ ಅಂಶವನ್ನು ಮೊಕದ್ದಮೆಯ ಸ್ಥಿತಿಯನ್ನನುಸರಿಸಿ ನಿಶ್ಚಯಿಸಬೇಕಾದದ್ದು ಅವರ ಕರ್ತವ್ಯವಾಗಿರುತ್ತದೆ. ಮೊಕದ್ದಮೆಯೊಂದುವೇಳೆ ಆಫಿಸರರ ಪರವಾಗಿ ವ್ಯವಸ್ಥೆಯಾದರೆ ಆ ಬಗ್ಗೆ ತಗಲಿದ ಖರ್ಚುಗಳ ವೈಕ ಪೂರಾವಾಗಲಿ, ಅಥವಾ ಅದರ ವೈಕ ಯಾವ ಭಾಗವನ್ನಾಗಲಿ, ಆತನಿಗೆ ಗವರ್ನಮೆಂಟಿನವರು ಕೊಡತಕ್ಕದ್ದೋ ಇಲ್ಲವೋ ಎಂಬದನ್ನು ಸಹ ನಿರ್ಣಯಿಸಲಿಕ್ಕೆ ಸದರೀ ಗವರ್ನಮೆಂಟಿನವರು ಸಂಪೂರ್ಣ ಸ್ವಾತಂತ್ರ್ಯಯುಕ್ತರಾಗಿರುತ್ತಾರೆ. ಆದುದರಿಂದ ಈವಿಷಯವು ಆಯಾ ಪ್ರೊವಿನ್ಸಿಯಲ್ ಗವರ್ನಮೆಂಟಿನವರ ಯುಕ್ತಾಯುಕ್ತ ವಿವೇಚನೆಗೆ ಒಳಗಾದದ್ದಾಗಿರುತ್ತದೆ" ಎಂಬದು.

ಮೇಲೆ ಕಂಡ ನಿಬಂಧನೆಯಂ ನಾವು ನೋಡಲಾಗಿ ಗವರ್ನಮೆಂಟಿನವರು, ತಮ್ಮಮೇಲೆ ಭಾರ ಬೀಳತಕ್ಕ ಸಂದರ್ಭಗಳಲ್ಲಿ ಫಿರ್ಯಾದು ಬಗ್ಗೆ ಸುಲಭವಾಗಿ ಹುಕುಂ ಕೊಡುವರೆಂದು ತೋರುವದಿಲ್ಲವು. ಕೈಯಿಂದ ಖರ್ಚಾಗುವದಾಗಿರುವ ಸಂದರ್ಭಗಳಲ್ಲಿ ಅನಿಯತಗಳಾದ ಜಯಾಪಜಯಗಳಂ ನಂಬಿ ಅಧಿಕಾರಿಗಳು ಮುಂದಾಲೋಚನೆಯಿಲ್ಲದೆ ತ್ವರೆಪಟ್ಟು ವೃತ್ತಾಂತಪತ್ರಿಕಾಲೇಖಕರಂ ಕೋರ್ಟುಗಳಿಗೆ ಸೆಳೆಯುವರೆಂಬದೂ ಸಂದೇಹಿಸತಕ್ಕದ್ದಾಗಿರುತ್ತದೆ. ಏತನ್ಮಧ್ಯೆ ಸರ್ಕಾರಿ ಉದ್ಯೋಗಸ್ಥರ ನಡತೆಗಳು ಅವಿಚಾರಣೀಯಗಳಾಗಲಿಕ್ಕೆ ಬೇಕಾದ ಅವಕಾಶ ಪ್ರಾಪ್ತವಾಗದೆ ಹೋಗಲಾರದು. ತಮ್ಮ ಲೇಖನವು ನಿರರ್ಥಕವಾಗುವ ಬಗ್ಗೆ ವೃತ್ತಾಂತಪತ್ರಿಕಾ ಲೇಖಕರಿಗೆ ಸ್ವೈರಾಸ್ಯಮೂಲಕವಾದ ಅನಾಸ್ಥೆಯೂ, ಇದರಿಂದ ಉದ್ಯೋಗಸ್ಥರಮನಸ್ಸಿನ ಪ್ರವರ್ತನಕ್ಕೆ ಮತ್ತೊಂದು ಪಿಪಾದ ಪ್ರೋತ್ಸಾಹವೂ ಉಂಟಾದರೂ ಪ್ರಾಯಾಗದೆ ಹೋಗಲಾರದು. ಆದಕಾರಣ ಮುಂದೆ ಪತ್ರಿಕಾ ಲೇಖಕರ ಸ್ಥಿತಿಯು ಅವರವರ ವರ್ತನವನ್ನನುಸರಿಸಿದ್ದಾಗಿರುವುದು. ಮುಖ್ಯವಾ ಕ್ಷೋಣದಶೆಯಲ್ಲಿರುವ ದೇಶಭಾಷಾಪತ್ರಿಕೆಗಳು ತಮ್ಮ ಸ್ಥಿತಿಯನ್ನರಿತು ವರ್ತಿಸುವದು ಯೆಲ್ಲರಿಗೂ ಕ್ಷೇಮವು.

THE LINGAYATS AND THE NEXT CENSUS

ಲಿಂಗಾಯತ ಮತಸ್ಥರು ತಮ್ಮನ್ನು ೧೮೯೧ನೇ ಇಸವಿಯ ಸೆನಸೆಸರಿಪೋರ್ಟನೊಳು ಶೂದ್ರರಗತಿಯಲ್ಲಿ ಸೇರಿಸಿದ್ದು ತಮಗೆ ಬಹಳ ಮಾನಹಾನಿಕರವೆಂಬದಾಗಿ ಶ್ರೀಮನ್ಮಹಾರಾಜರ ಸರ್ಕಾರಕ್ಕೆ ಬರೆದು ಕಳುಹಿಸಿದ ಒಂದು ಅರ್ಜಿಯನ್ನು ಮಾರ್ಚಿ ತಾರೀಖಿನ ಈಪತ್ರಿಕೆಯಲ್ಲಿ ಪ್ರಕಟಿಸಿದ್ದೆವಷ್ಟೆ. ಈವಿಷಯದಲ್ಲಿ ನಮಗೆ ತೋರಿದ ಕೆಲವು ಅಂಶಗಳನ್ನಿಲ್ಲಿ ಪ್ರಕಟಿಸುವದು ನ್ಯಾಯವೆಂದು ಭಾವಿಸುವೆವು.

ಮೇಲೆಕಂಡ ಅರ್ಜಿಯ ಮೊದಲನೆಯ ಕಲಂನಲ್ಲಿ "ನಾಮಸಾದೃಶ್ಯತಿಕ್ರಮಿಸಿ ನಮ್ಮ ವೀರಶೈವ ಮತಸ್ಥರನ್ನು ಶೂದ್ರತರಗತಿಯಲ್ಲಿ ಸೇರಿಸಿರುತ್ತಾರೆ." ಎಂದು ತಿಳಿಸಲ್ಪಟ್ಟಿರುತ್ತದೆ. ಮಾಮೂಲಿಪ್ರಕಾರ ೧೮೭೧ನೇ ಇಸವಿಯ ಸೆನಸೆಸ ರಿಪೋರ್ಟಿನಲ್ಲ ಬರೆಯಲ್ಪಟ್ಟಿಲ್ಲವೆಂಬುವದೋ, ಅಥವಾ ಸಾರ್ವಜನಿಕ ತಮಾಷಾಗದಕ್ಕೆ ಬೇನೇ ಷಿನಾರಿ ಅದವಾತ್ ರೆಕ್ಕಾಗಳಲ್ಲಿ ನಮೂದಿಸಲ್ಪಡಲಿಲ್ಲವೆಂಬುವದೋ ಗೊತ್ತಿಲ್ಲವು. ಶೂದ್ರರೆಂಬ ಶಬ್ದವು ಜಾತಿಸೂಚಕವಾದದ್ದು, ಮತವೆಂಬದು ಮನೋನಿಶ್ಚಯರೂಪವಾದದ್ದು. ಜಾತಿಗೂ ಮತಕ್ಕೂ ಯಾವ್ಯಥ ಸಂಬಂಧ ವಿರುವಂತೆ ಅರ್ಜೀದಾರರುಭಾವಿಸಿ ನಮೂದಿಸಿದರೋ ತಿಳಿಯಲಿಲ್ಲವು.

ಸದರೀ ಅರ್ಜಿಯ ಮೂರನೆಯ ಕಲಂನಲ್ಲಿ "ನಮ್ಮ ವೀರಶೈವಮತವು ವೇದಾಗಮಾದಿಗಳಲ್ಲಿ ಅತ್ಯುತ್ತಮವಾದದ್ದೆಂದು ಹೇಳಲ್ಪಟ್ಟದೆ" ಎಂದು ನಮೂದಾಗಿರುತ್ತದೆ. ಅತ್ಯುತ್ತಮವೆಂಬ ವಿಶೇಷಣವು ಕೇವಲ ಸ್ವೋತ್ಕರ್ಷವನ್ನು ವ್ಯಕ್ತಪಡಿಸುವದಾಗಿರುತ್ತದೆ. ಅದು ಎಲ್ಲರಿಂದಲೂ ಅಂಗೀಕರಿಸಲ್ಪಡತಕ್ಕದ್ದಲ್ಲವು. ವೇದಾಗಮಾದಿಗಳಲ್ಲಿ ಹೇಳಲ್ಪಟ್ಟದೆ ಯೆಂಬದನ್ನು ನಾವು ನಿಜವಾಗಿ ಒಪ್ಪಿಕೊಳ್ಳುತ್ತೇವೆ. ಅದೇ ಕಲಂನಲ್ಲಿ "ಆಚಾರ್ಯರೇ ಬೇರೆ, ಭಾಷ್ಯವೇ ಬೇರೆ, ಆಚಾರಗಳೇ ಬೇರೆ." ಎಂಬದಾಗಿ ನಮೂದಾಗಿರುತ್ತದೆ ಇದನ್ನೂ ನಾವು ನಿಸ್ಸಂದೇಹವಾಗಿ ಒಪ್ಪಿಕೊಳ್ಳುವೆವು.

ಸೆನಸೆಸ ರಿಪೋರ್ಟನೊಳು ಮತಪ್ರಕ್ರಿಯೆಯಂ ತಿಳಿಸುವದರಲ್ಲಿ ಶೈವ ವೈಷ್ಣವ, ಜೈನ ಬೌದ್ಧ ಮೊದಲಾದ ಅನೇಕ ಪ್ರಭೇದಗಳು ವಿಂಗಡಿಸಲ್ಪಟ್ಟಿರುವದಾಗಿ ಅವುಗಳಲ್ಲಿ ಆಯಾ ಮತಾವಲಂಬಿಗಳಾದ ನಾಲ್ಕು ವರ್ಣದವರೂ ಸೇರದಿರುವದಿಲ್ಲವು. ಇದರಿಂದ ವೀರಶೈವ ಮತವು ಸೇರಲಿಲ್ಲವೆಂಬದಕ್ಕೆ ಅವಕಾಶ ಕಾಣಿಸಲಿಲ್ಲವು. ಸಾಮಾನ್ಯ ಶೈವರೆಂದು ಅಂಗೀಕರಿಸುವ ಸ್ಮಾರ್ತಬ್ರಾಹ್ಮಣರಾಗಲಿ ವೀರಸಾಮಾನ್ಯರೆಂದು ಕರೆಯಲ್ಪಡುವ ಆರಾಧ್ಯ ಬ್ರಾಹ್ಮಣರಾಗಲಿ ಶೂದ್ರಜಾತಿಯೊಡನೆ ಸೇರಿಸಲ್ಪಟ್ಟಂತೆ ಯಲ್ಲಿಯೂ ಕಾಣಿಸಲಿಲ್ಲವು.

ಆರನೇಯ ಕಲಂನಲ್ಲಿ ದಾಸರಿ, ರಂಗಾರಿ, ಸರಿಗೆ ಮೊದಲಾದವರನ್ನು ಕ್ಷತ್ರಿಯರು ವೈಶ್ಯರು ಇತರ ಟಿಲ್ಲವೇ ಉತ್ತಮಜಾತಿಯವರು, ಎಂಬ ಎರಡನೇ ತರಗತಿಯವರೊಡನೆ ಸೇರಿಸಲಿಕ್ಕೆ ಕಾರಣವೇನೋ ತಿಳಿಯ ಲಿಲ್ಲವೆಂದು ನಮೂದಿಸಿರುತ್ತಾರೆ ದಾಸರಿಯೆಂಬ ಶಬ್ದವು ಮೇಲಿನತರಗತಿಯಲ್ಲಿ ಸೇರಿದ್ದಾಗಿದ್ದರೆ ವೀರಶೈವರು ವ್ಯಸನಪಡಬೇಕಾದದ್ದು ನ್ಯಾಯವಾಗಿರುತ್ತದೆ. ಅವರಿಗಂ ತಲೂಲಿಂಗಾಯತರು ಕಡಮೆಯೆಂದು ಯಾರು ತಾನೇ ಹೇಳುತ್ತಾರೆ.

ಬಾಳೇಹಳ್ಳಿ, ಉಜ್ಜನೀ, ಶ್ರೀಗಿರಿ, ದುರ್ಗ ಮೊದಲಾದ ಮಠಗಳು ಬ್ರಾಹ್ಮಣ ಮಠಗಳಿಗೆ ಸೇರಲಿಲ್ಲವೆಂಬದಾಗಿ ನಮ್ಮ ಸ್ನೇಹಿತರೊಬ್ಬರು ತಮ್ಮ ಚಿರಕಾಲಿಕವಾದ ಅನುಭವದಮೇಲೆ ತಿಳಿಸುತ್ತಾರೆ.

ಆದುದರಿಂದ ಶ್ರೀಮನ್ಮಹಾರಾಜಾ ಸರ್ಕಾರದವರು ಕ್ರಮಪ್ರಕಾರ ವಿಚಾರಣೆಮಾಡಿ ಯಾವ ಭಾಗದಲ್ಲಿ ಯಾರಿಗೆ ಅವಮಾನಕರವಾಗಿ ಪರಿಣಮಿಸುವದೋ ಅದು ಚೆನ್ನಾಗಿ ಪರ್ಯಾಲೋಚಿಸಿ ಹುಕುಂ ಕೊಡುವರೆಂದು ನಂಬುತ್ತೇವೆ.

FINANCIAL REPORT FOR 1889—90

ಕಳೆದ ಮಾರ್ಚಿ ತಿಂಗಳ ೩೧ ನೇ ತಾರೀಖಿಗೆ ಖೈದಾದ ಸರ್ಕಾರೀ ಸಾಲಿ ಬಾಬತು, ೧೮೮೯–೯೦ನೇ ಇಸವಿಯ ಫೈನಾನ್ಷಿಯಲ್ ರಿಪೋರ್ಟ್ ಯಾನೆ ನಗದು ಜಮಾಖರ್ಚುಗಳನ್ನು ತೋರಿಸುವ ಸಾಲಿಯಾದೆ ರಿವೋರ್ಟ್ ಒಂದು ಕಂಟ್ರೋಲರವರಿಂದ ಕಳೆದ ತಿಂಗಳ ೨೭ ನೇ ತಾರೀಖಿನಲ್ಲಿ ಮಹಾರಾಜಾ ಸರ್ಕಾರಕ್ಕೆ ಕಳುಹಿಸಲ್ಪಟ್ಟಿರುತ್ತದೆ. ಸದರೀ ರಿಪೋರ್ಟನ್ನು ಆ ಮೂಲಾಗ್ರ ನೋಡುವಲ್ಲಿ ಈಸಂಸ್ಥಾನದ ಅಭಿವೃದ್ಧಿಸ್ಥಿತಿಯು ಗೊತ್ತಾಗದೆ ಹೋಗುವದಿಲ್ಲವು. ಮುಂದಿನ ವಾರದಲ್ಲಿದೇ ವಿಷಯವಂ ಕುರಿತು ಪ್ರತಿನಿಧಿ ಸಮಾಜದಲ್ಲಿ ದಿವಾನರವರು ತಿಳಿಸುವರಾದುದರಿಂದ ಇದುಕುರಿತ ಕೆಲವು ಅಂಶಗಳನ್ನು ಜನಗಳು ಮುಂದಾಗಿ ಅರಿಯುವದಾವಶ್ಯಕವೆಂದು ಭಾವಿಸು ಇದರಡಿ ಪ್ರಕಟಸುವೆವು ಹ್ಯಾಗೆಂದರೆ.—

೧೮೮೯—೯೦ ನೇ ಇಸವಿಯಲ್ಲಿ ಸಾಧಾರಣವಾಗಿ ಸಂಸ್ಥಾನದ ಒಟ್ಟು ಹುಟ್ಟುವಳಿಯು ೧,೭೨,೯೪,೨೬೩ ರೂಪಾಯಿಗಳಾಗಿರುತ್ತವೆ. ಅದರ ಹಿಂದಿನ ಸಾಲಿನಲ್ಲಿ ೧,೩೭,೨೭,೦೬೬ ರೂಪಾಯಿಗಳು ಜಮೆ ಬಂದಿರುತ್ತದೆ. ಕಳೆದ ಸಾಲಿನಲ್ಲಿ, ಅದರ ಹಿಂದಿನವರ್ಷದಲ್ಲಿ ಖರ್ಚಾದ ೧,೧೩,೪೦,೩೭೩ ರೂಪಾಯಿಗಳಿಗಿಂತ ಜಾಸ್ತಿಯಾಗಿ ಒಟ್ಟು, ೧,೨೭,೯೩,೫೧೭ ರೂಪಾಯಿಗಳು ವ್ಯಯವಾಗಿರುತ್ತವೆ. ರೆಯಿಲ್ವೇಬಾಬತ್ತು ಒಟ್ಟು ಹುಟ್ಟುವಳಿಯಲ್ಲಿ ಮೂರು ರೂಪಾಯಿ ಅಂದರೆ, ೧,೩೯,೫೩೪ ರೂಪಾಯಿಗಳ ಜನರು ಇಂಡ್ಯ ಗವರ್ನಮೆಂಟಿನವರಿಗೆ ಬಾವತಿ ಮಾಡಲ್ಪಟ್ಟಿತಲ್ಲದೆ ಬಡ್ಡಿ ವಗ್ಯೆರೆಗಾಗಿ ಸದರ್ನ್ ಮಹರಾಟಾ ರೆಯಿಲ್ವೇಕಂಪೆನಿಯವರಿಗೆ ೬,೯೯,೭೯ ರೂಪಾಯಿಗಳು ಕೊಡಲ್ಪಟ್ಟಿರುತ್ತವೆ. ಬೆಂಗಳೂರಿಂದ ಹಿಂದೂಪುರದ ಸರಿಹದ್ದಿಗೆ ಹಾಕಲ್ಪಡುತಲಿರುವ ರೆಯಿಲ್ ರಸ್ತೆಯ ಪೈನಾಯಿಷಿಗಾಗಿ ೧,೫೪೧ ರೂಪಾಯಿಗಳುಖರ್ಚಾಗಿರುತ್ತವೆ ಈ ಬಾಬಗಳನ್ನು ಸೇರಿಸಿದರೆ ಕ್ರಮವಾಗಿ ಒಟ್ಟು ೧,೮೪,೩೩,೬೬೩ ರೂ ಜಮೆ ಯಾದಂತೆ ಯೂ, ೧,೭೯,೯೬,೭೭೩ ರೂಪಾಯಿಗಳು ಖರ್ಚಾದಂತೆಯೂ ಸ್ಪಷ್ಟವಾಗುತ್ತದೆ. ಅದರ ಹಿಂದಿನ ವರುಷದ ಜಮಾ ಬಾಬತ್ತು ಒಟ್ಟು ೧,೩೭,೬೯,೩೧೩ ರೂಪಾಯಿಗಳನ್ನೂ ೧,೨೧,೫೩,೭೭ ರೂಪಾಯಿಗಳ ಖರ್ಚನ್ನೂ ತಾಳೆ ನೋಡಲಾಗಿ ಅದರಹಿಂದಿನ ವರುಷದ ಸಿಲ್ಕು ೯೧,೬೩೫ ರೂಪಾಯಿಗಳಿಗಿಂತಲೂ, ಗತ ಸಾಲಿನಲ್ಲಿ ೧೪,೭೫,೫೯೦ ರೂಪಾಯಿಗಳು ಜಾಸ್ತೀ ಉಳಿದಂತೆ ವ್ಯಕ್ತವಾಗುತ್ತದೆ. ಹೋದವರ್ಷದೊಳು ಅನೇಕಬಾಬಗಳಲ್ಲಿ ಅಂದಾಜಿಗಿಂತಲೂ ೧೫, ೯೩,೬೫೭ ರೂಪಾಯಿಗಳು ಖರ್ಚು ಜಾಸ್ತಿಯಾಯಿತು. ಅಂದಾಜ್ ಬಹಳ ಜಾಗರೂಕತೆಯೊಡನೆ ಮಾಡಲ್ಪಟ್ಟು ಅನಿರೀಕ್ಷಿತಗಳಾದ ಜಾಸ್ತೀಖರ್ಚುಗಳಿಗೆಲ್ಲ ಅದರಲ್ಲಿ ವಿಲೇವಾರಿಮಾಡಲ್ಪಟ್ಟದ್ದಾಗ್ಯೂ ದೇಶದಹುಟ್ಟುವಳಿಯೂ,ಕಾಲಸ್ಥಿತಿಯೂ ಅನುಕೂಲವಾಗಿರುವದರಿಂದ ಮೇಲೆಕಂಡ ಜಾಸ್ತಿ ಖರ್ಚನ್ನು ಸುಲಭವಾಗಿ ವಹಿಸಲಿಕ್ಕೆ ಸಾಧ್ಯವಾದಂತೆ ರಿಪೋರ್ಟಿನ ಮೂಲಕವ್ಯಕ್ತವಾಗುತ್ತದೆ.

Occasional Notes
ನೈಮಿತ್ತಿಕ ವಿಷಯನ್ಯಾಸ.

The next M A Degree examination. ಬರುವ ಜನವರಿತಿಂಗಳಲ್ಲಿ ನಡೆಯುವ ಎಂ. ಎ. ಡಿಗ್ರೀಪರೀಕ್ಷೆಗೆ ಹನ್ನೊಂದುಮಂದಿ ಉಮೇದವಾರರು ದರಖಾಸ್ತು ಮಾಡಿರುತ್ತಾರೆಂದು ತಿಳಿಯಬರುತ್ತದೆ.

Income Tax.—ಈಸಂವತ್ಸರದಲ್ಲಿ ಇನ್ಕಂ ಟ್ಯಾಕ್ಸ ಎಂಬ ಆದಾಯಾನೀತರಿಗೆಯ ಮೂಲಕ ಒಟ್ಟು ೭೧,೪೪,೦೫೭ ರೂಪಾಯಿಗಳು ವಸೂಲಾದಂತೆ ಒಂದಾನೊಂದುಪತ್ರಿಕೆಯ ಕಲ್ಕತ್ತಾ ಬಾತಮಿದಾರನು ಬರೆಯುತ್ತಾನೆ.

An offer declined.—ಕ್ಯಾಂಬೆ ಸಂಸ್ಥಾನದ ದಿವಾನ್ ಅಧಿಕಾರವು ಖಾಲಿಯಾಗಿ ಅದು ಮೆ॥ ಜೆಸಡಜಿ. ಖಂಡಾಲವಾಲಾ ಎಂಬವರಿಗೆ ಕೊಡಲ್ಪಡುವದಾಗಿ ತಿಳಿಸಲ್ಪಟ್ಟಿತಷ್ಟೆ, ಸದರೀಯವರು ಅದಂ ಅಂಗೀಕರಿಸಲಿಲ್ಲವೆಂದು ಒಂದಾನೊಂದುಪತ್ರಿಕೆ ತಿಳಿಸುತ್ತದೆ.

The Mahant of Tirupati.—ತಿರುಪತಿ ಮಹಂತರಾದ ಭಗವಾನ್ ದಾಸರವರು ತಿರುಚನಾಪಲ್ಲಿ ಜೆಯಿಲಿನಲ್ಲಿಡಲ್ಪಟ್ಟದ್ದರಷ್ಟೆ. ಅಲ್ಲಿ ಅವರಿಗುಂಟಾದ ಅನಾರೋಗ್ಯದದೆಸೆಯಿಂದ, ಸದರೀ ಜೆಯಿಲ್ ಸೂಪರಿಂಟೆಂಡೆಂಟರು ಮಾಡಿದ ಶಿಫಾರಸನ್ನನುಸರಿಸಿ, ವೇಲೂರು ಜೆಯಿಲಿಗೆ ಕಳುಹಿಸಲ್ಪಟ್ಟಿರುತ್ತಾರೆ.

Mule-breeding in Patiala.—ಪಟಿಯಾಲಾಸಂಸ್ಥಾನದ ಮಹಾರಾಜರವರು ಹೇಸರಕತ್ತೆಗಳಂ ವೃದ್ಧಿಪಡಿಸಬೇಕೆಂದಾಲೋಚಿಸಿ, ಆಬಗ್ಯೆ ತಮ್ಮ ಸಂಸ್ಥಾನದೊಳು ಒಂದು ಇಲಾಖೆಯಂ ಏರ್ಪಡಿಸಿ ಗವರ್ನಮೆಂಟಿನಿಂದ ಉತ್ತಮ ಕತ್ತೆಗಳಂ ಕೊಂಡುಕೊಳ್ಳಬೇಕೆಂದು ಯೋಚಿಸುತಲಿದಾರಂತೆ.

Escape of dacoits.—ಈಚೆಗೆ ಡಾಕಾ ಜೆಯಿಲಿನಿಂದ ನಾಲ್ವರು ದರೋಡೆಕಳ್ಳರು ತಪ್ಪಿಸಿಕೊಂಡು ಓಡಿಹೋದರು. ದರೋಡೆಕಳ್ಳರು ಸಾಮಾನ್ಯವಾಗಿ ಮಂತ್ರಶಕ್ತಿಯುಳ್ಳವರಾದುದರಿಂದ ತಮಗೆ ಹಾಕಲ್ಪಟ್ಟಿರುವ ಬೇಡಿಯಮಂಕೆ ಬಾಯಿಂದ ಊದಿದಮಾತ್ರದಿಂದಲೇ ಬೇಡಿಯು ಪುಡಿಪುಡಿಯಾಗಿ ಬಿದ್ದುಹೋಗುತ್ತದೆಯೆಂದು ಆ ಪ್ರಾಂತದ ದೇಶಭಾಷಾ ಪತ್ರಿಕೆಯೊಂದು ತಿಳಿಸುತ್ತದೆ.

Fined.—ಲ ಹೋರಿ ಟ್ರಿಬ್ಯೂನ್ ಎಂಬ ಪತ್ರಿಕೆಯ ಪ್ರೊಪ್ರೈಟರ ಮತ್ತು ಎಡಿಟರಮೇಲೆ ಮೆ॥ವಾರ್ಬರ್ಟನ್ ಎಂಬವರು ತಂದಿದ್ದ ಮಾನನಷ್ಟ ಮೊಕದ್ದಮೆಯ ವಿಚಾರಣೆಯು ಪ್ರಾತಿಯಾಗಿ ಈತಿಂಗಳ ೧೧ನೇತಾರೀಖಿನಲ್ಲಿ ಸದರೀ ಪತ್ರಿಕೆಯ ಪ್ರೊಪ್ರೈಟರಾದ ಸರ್ದಾರ್ ದಿಯಾಲ್ ಸಿಂಗ್ ಎಂಬವರು ೫೦೦ ರೂಪಾಯಿಗಳ ಜುಲ್ಮಾನೆಯೂ, ಎಡಿಟರಾದ ಸಿತಾಲಕಾಂತ ಚಟರ್ಜಿ ಎಂಬವರು ೧,೦೦೦ ರೂಪಾಯಿಗಳ ಜುಲ್ಮಾನೆಯೂ ವಿಧಿಸಲ್ಪಟ್ಟರು.

Suppression of cow killing.—ಗೋವಧೆಯಂ ನಿರೋಧಿಸಬೇಕಾದವಿಷಯದಲ್ಲಿ ಪಂಜಾಬ ದೇಶಿಯರು ಈಚೆಗೆ ಒಂದು ನೂತನೋಪಾಯವಂ ಕಲ್ಪಿಸಿಕೊಂಡಿರುತ್ತಾರೆ. ದೆಹಲಿ ಮೊದಲಾದ ಆಸಪಾಸ ಪ್ರದೇಶಗಳಲ್ಲಿ ಗೋವುಗಳನ್ನಿಟ್ಟುಕೊಂಡಿರುವಂತವರಿಗೆ ವರ್ತಮಾನ ಕಳುಹಿಸಿ, ಯಾವ ಸಂದರ್ಭದಲ್ಲೂ ಮುಸಲ್ಮಾನರಿಗೆ ತಮ್ಮ ಗೋವುಗಳಂ ಮಾರಕೂಡದೆಂದು ಕೇಳಿಕೊಂಡಿರುತ್ತಾರೆ.

A report called for.—ಮದರಾಸ್ ಪ್ರೆಸಿಡೆನ್ಸಿ ಡಿಸ್ಟ್ರಿಕ್ಟ ಜೇಲ್ನಲ್ಲಿ ಖೈದಿಯು ಒಬ್ಬನ ಒಂದಕ್ಕೆ ಒಂದೂಕಾಲು ಪೌಂಡ್ ಮೇರೆ ಸಾಲೀಯಾನಾ ಸ್ವಲ್ಪ ಹೆಚ್ಚುಕಡಿಮೆ ಯೆಷ್ಟು ಅಕ್ಕಿ ಖರ್ಚಾಗುತ್ತಿದೆಯೋ ಆಬಗ್ಯೆ ರಿಪೋರ್ಟ್ ಮಾಡತಕ್ಕದ್ದೆಂದು ಮದರಾಸ್ ರೆವಿನ್ಯೂ ಬೋರ್ಡ್ ಆಗ್ರಿಕಲ್ಚರಲ್ ಇಲಾಖೆಯವರು ಆಯಾ ಡಿಸ್ಟ್ರಿಕ್ಟ ಕಲೆಕ್ಟರಗಳಂ ಕೇಳಿರುತ್ತಾರೆ. ಇದು ಯಾತಕ್ಕಾಗಿರಬಹುದು ?

Opening of a new railway.—ಬರುವ ನವಂಬರತಿಂಗಳ ೧೫ನೇ ತಾರೀಖಿನಲ್ಲಿ ವಿಳ್ಳುಪುರದಿಂದ ಗುಂಟಕಲ್ಲುವರಿವಿಗೆ ಹಾಕಲ್ಪಡುತಲಿರುವ ರೆಯಿಲ್ವೆರಸ್ತೆಯಲ್ಲಿಕ ಯೊಂದುಭಾಗದವರಿವಿಗೆ ಪ್ರಯಾಣಸ್ಥರ ಮತ್ತು ಸರಕುಗಳ ಆಮದುರಪ್ತಿನ ಉಪಯೋಗಾರ್ಥ ಗಾಡಿಗಳು ನಡೆಸಲ್ಪಡುವವು. ಮತ್ತು ವಿಳ್ಳುಪುರದಿಂದ ತಿರುವಣ್ಣಾಮಲೆಯವರಿವಿಗೆ ೩೯ ಮೈಲಿಗಳ ಫಾಸಲೆಯವರಿವಿಗೆ ಯಾತ್ರಾರ್ಥಿಗಳಿಗೆ ಅನುಕೂಲವಾಗಿ ಗಾಡಿಗಳು ನಡೆಸಲ್ಪಡುವವು.

A ruling of the Calcutta High Court.—ಕಲ್ಕತ್ತಾ ಹೈಕೋರ್ಟಿನವರು ಈಚೆಗೆ ಒಂದು ನಿಬಂಧನೆಯಂ ಮಾಡಿರುತ್ತಾರೇನೆಂದರೆ,—ಪರಸ್ಥಳಗಳ ಸೀನಿಯ ಕೋರ್ಟುಗಳಲ್ಲಿ ಅಮಲ್ ಜಾರೀ ಮೊಕದ್ದಮೆಗಳ ವಿಷಯದಲ್ಲಿ ನಡೆಸಲ್ಪಡುವ ಕ್ರಮಗಳು ಸುತರಾಂ ತೃಪ್ತಿಕರವಾಗಿಲ್ಲವು. ಪ್ರಾಯಶಃ ಕೋರ್ಟು ಶಿರಸ್ತೇದಾರರು ನ್ಯಾಯಾಧಿಪತಿಗಳು ತಮ್ಮ ಕರ್ತವ್ಯವನ್ನು ಅಜಾಗ್ರತೆಯಿಂದಲೂ ಅತಿ ಸ್ವಾತಂತ್ರ್ಯದಿಂದಲೂ ನಡಸುತಲಿದಾರೆ. ಬಂಗಾಳೇ ದೇಶದ ಕಕ್ಷಿಗಾರರಿಗೆ ತಮ್ಮ ಮೊಕದ್ದಮೆಗಳು ವ್ಯವಸ್ಥೆಯಾದ ಬಳಿಕ ಪ್ರಾಪ್ತವಾದ ... ಡಿಕ್ರೀ ಫಲಗಳನ್ನು ಪಡೆಯುವುದು ಕಷ್ಟಸಾಧ್ಯವಾಗಿ ಹೋಗುತ್ತಿದೆ. ಆದುದರಿಂದ ಬಂಗಾಳೇ ಸಿವಿಲ್ ಕೋರ್ಟು ಗಳೆಲ್ಲ ಅಮಲ್ ಜಾರೀ ಮೊಕದ್ದಮೆಗಳ ವ್ಯವಸ್ಥೆಯಬಗ್ಗೆ ಮಾಡತಕ್ಕ ... ಕ್ರಮಗಳನ್ನು ಅನುಸರಿಸತಕ್ಕದ್ದು, ಎಂಬದು.

A meeting.—ಸ್ತ್ರೀಯರ ಪುನರ್ವಿವಾಹ ... ಸಭೆ ... [illegible]

A timely warning.—ನೇಟಿವ್ ಸಂಸ್ಥಾನಗಳ ವಿಷಯದಲ್ಲಿ ... [illegible] ... ನೇಟಿವ್ ಅರಸರುಗಳ ಅಧಿಕಾರಕ್ಕೆ ... ಅಧಿಕಾರಿಗಳು ... ಅಂಥಾ ಅಧಿಕಾರಿಗಳು ತಮ್ಮ ... ನೇಟಿವ್ ಅರಸರುಗಳಿಗೆ ನಾವು ತಿಳಿಸುವುದೇನಂದರೆ ... ಅವರ ಪ್ರಜೆಗಳ ... ಗುಲಾಮರು ಎಂಬದಾಗಿ ಬಹುಕಾಲದಿಂದುಂಟಾಗಿರುವ ನಂಬಿಕೆಯಂ ಬಿಟ್ಟು ವಿವೇಕ ಪೂರ್ವಕವಾದ ಕ್ರಮವಂ ನಡೆಸಿಕೊಳ್ಳಬೇಕು. ಈಗಿನ ಕಾಲದ ಅಭಿಪ್ರಾಯಾನುಗುಣವಾಗಿ, ಅರಸನೊಬ್ಬನು ಅಭಿಜಾತವಾದ ಒಂದು ಹಿಂದೂ ಕುಟುಂಬಕ್ಕೆ ಸೇರಿದವನಾದ ಮಾತ್ರದಿಂದಲೇ, ಒಡೆಯ ಬಾಗಸ್ತನಿಲ್ಲದ ... ಗಳಾಗಿಯೂ ಇರುತ್ತಾರೆ ಯಾವ ಸಂದರ್ಭದಲ್ಲೂ ತಮಗೆ ನಿರಂಕುಶಾಧಿಕಾರ ದೊರೆತಿದೆಯೆಂಬ ಪುರಾತನ ನಂಬಿಕೆಯನ್ನು ಮರೆತು ಬಿಟ್ಟು ಈಗಿನ ಕಾಲಕ್ಕೆ ಅನುಸಾರವಾದ ರೀತಿಯಲ್ಲಿ ರಾಜ್ಯಕಾರ್ಯವಂ ನಿರ್ವಹಿಸುತ್ತ ಬರಬೇಕು, ಎಂಬದು.

Affairs at Indore.—ಇಂದೋರ್ ಸಂಸ್ಥಾನದ ಪ್ರಸ್ತುತ ಸ್ಥಿತಿಯಂ ಕುರಿತು ಗುಜರಾತಿ ಎಂಬ ಪತ್ರಿಕೆ ತಿಳಿಸುವದೇನಂದರೆ.—ಈ ವಾರದಲ್ಲಿ ಇಂದೋರ್ ಸಂಸ್ಥಾನವಂ ಕುರಿತು ಅತೃಪ್ತಿಕರವಾದ ಕೆಲವು ವೃತ್ತಾಂತಗಳು ಬಂದಿರುತಿವೆ ಅವುಗಳಂ ವಿವರವಾಗಿ ಇಲ್ಲಿ ತಿಳಿಸುವದಕ್ಕೆ ಕೆಲವು ಕಾರಣಗಳ ... ಅನುಕೂಲವಿರಲಿಲ್ಲವು. ... ಗವರ್ನರ್ ಜನರಲರ ಏಜಂಟರವರು ... ಅನುಸರಿಸಿದ ... ಪರಿಣಾಮ ... ಕೋರುತ್ತೇವೆ. ... ಮಹಾರಾಜರವರ ... ನೇಟಿವ್ ಅಧಿಕಾರಿಯೊಬ್ಬರ ... ಅವರು ... ವಿಶೇಷ ಜಾಗರೂಕತೆಯಿಂದ ... ಅಂಶಗಳಾಗಿರುತಿವೆ ಮೇಲೆ ನಾವು ತಿಳಿಸಿದ ಅಂಶಗಳ ಪೈಕಿ ಯಾವದಾದರು ಅನ್ಯಾಯವೆಂದು ... ಗವರ್ನಮೆಂಟಿನವರು ... ಇಂದೋರ್ ಸಂಸ್ಥಾನದ ಕ್ಷೇಮವಂ ... ನೇಟಿವ್ ರಾಜ್ಯಗಳ ವಿಷಯದಲ್ಲಿ ಪ್ರಜೆಗಳಿಗೆ ನಂಬಿಕೆಯನ್ನು ... ಸರ್ ಲೆಪೆಲ್ ಗ್ರಿಫಿನ್ ರವರು ... ಸಂಸ್ಥಾನವನ್ನು ಬಿಟ್ಟು ಹೊರಟು ಹೋದರು. ಮಿ|| ಕ್ರಾಸ್ಟ್‌ವೇಟ್ ರವರ ... ಮಹಾರಾಜರವರ ... ತಿಳಿದು ಬರುವ ... ಕಾರಣವೆಂದು ... ವಾಗಿ ಹೇಳಬಹುದ.

LOCAL AND PROVINCIAL NEWS

ಮೈಸೂರು ಮತ್ತು ಪ್ರಾಂತ್ಯದ ವೃತ್ತಾಂತಗಳು

Want of additional funds.—ಮೈಸೂರು ... ಡಿಸ್ಟ್ರಿಕ್ಟ್ ... ಅಸಿಸ್ಟೆಂಟ್ ಕಮಿಷನರವರ ... ಈಗಿರುವ ... ಗವರ್ನಮೆಂಟಿಗೆ ಬರೆದಿರುತ್ತಾರೆಂತಲೂ, ಅದು ಪ್ರಾಯಶಃ ... ಮಂಜೂರಾಗಬಹುದೆಂತಲೂ ಬಳವೇಶದ ಪತ್ರಿಕೆಯೊಂದು ತಿಳಿಸುತಿದೆ ಮುಂದಿನ ಬಜೆಟಿನಿಂದ ಅದನ್ನು ... ಈಗಲೇ ಅನೇಕರು ಉಪಸರ್ಗಪಡುತಲಿದಾರೆ. ಇದರ ಅವಶ್ಯಕತೆಯಂ ನೋಡಬೇಕು.

The Arya Balika Patasala.—ಕೆಲವರು ನೇಟಿವ್ ದೊಡ್ಡ ಮನುಷ್ಯರ ಪ್ರೋತ್ಸಾಹದಲ್ಲಿ ಕಳೆದ ಸಂವತ್ಸರದಲ್ಲಿ ಈ ಊರು ಚಿಕ್ಕಪೇಟೆಯಲ್ಲಿ ಸ್ಥಾಪಿಸಲ್ಪಟ್ಟು ನಡೆಯುತ್ತಬರುವ ಆರ್ಯಬಾಲಿಕಾ ಪಾಠಶಾಲೆಯು ಈವರೆವಿಗೂ ಗವರ್ನಮೆಂಟು ಬಾಲಿಕಾ ಪಾಠಶಾಲೆಯೊಡನೆ ಸೇರಿಸಲ್ಪಡುವದೆಂಬದಾಗಿ ... ಸ್ಥಳದಲ್ಲಿರುವ ಪಾಠಶಾಲೆಯು ಮ್ಯುನಿಸಿಪಲ್ ಸ್ಕೂಲ್ ಕಟ್ಟಡಕ್ಕೆ ವರ್ಗಾಯಿಸಲ್ಪಡುವುದೆಂಬದಾಗಿಯೂ ತಿಳಿಯಬರುತಿದೆ ಇಷ್ಟು ದೊಡ್ಡ ಪಟ್ಟಣದಲ್ಲಿ ಸಾವಿರಾರು ರೂಪಾಯಿಗಳ ಬಹಳ ... ಅನೇಕ ಲಕ್ಷ ರೂಪಾಯಿಗಳಿಗೆ ಒಡೆಯರಾಗಿದ್ದಾಗ್ಯೂ ಸರ್ಕಾರದವರ ನಿಸ್ಸಹಾಯ ... ಸ್ವತಂತ್ರವಾಗಿ ಒಂದು ಪಾಠಶಾಲೆಯನ್ನು ತಮ್ಮದೇಶೀಯರಾದ ಸ್ತ್ರೀಯರ ... ಮಕ್ಕಳ ಅಭಿವೃದ್ಧಿಯಬಗ್ಗೆ ... ನಡೆಸಿಕೊಂಡುಹೋಗಲು ಇಷ್ಟವಿಲ್ಲದಿದ್ದರೂ ಸ್ವದೇಶಾಭಿಮಾನವಂ ಕುರಿತು ಪರಿಶೀಲಿಸದೇನ ಮಾತನಾಡತಕ್ಕವರೇ ಅನೇಕರಿರುತ್ತಾರೆ!

A serious accident.—ಶ್ರೀಮನ್ಮಹಾರಾಜರವರ ಮಿಲಿಟರಿ ಸೆಕ್ರೆಟರಿಗಳಾದ ಮೇಜರ್ ಮೆಕ್ಇಂಟೈರ್‌ಯವರು ನವರಾತ್ರಿಮಹೋತ್ಸವಕ್ಕಾಗಿ ಮೈಸೂರಿಗೆ ಬಂದದ್ದು ಸರಿಯಷ್ಟೆ, ಇವರು ಕಳೆದ ಬುಧವಾರ ಸಾಯಂಕಾಲದಲ್ಲಿ ಶ್ರೀಮನ್ಮಹಾರಾಜರವರ ಎಳೆಯ ಕುದುರೆಗಳನ್ನು ಸಾಕಿ ಪಳಗಿಸತಕ್ಕ ... ಸವಾರಿಮಾಡುತಲಿರುವಲ್ಲಿ ಕುದುರೆಗಳು ... ಹೋಗಲಿಲ್ಲವೆ ... ಮೇಜರ್ ಮೆಕ್‌ಇಂಟೈರ್‌ಯವರು ಮುಖಕೆಳಗಾಗಿ ಮೇಲಿನಿಂದಬಿದ್ದು ಗಾಯವಾದದ್ದಲ್ಲದೆ ಪ್ರಜ್ಞೆಯೇ ಇಲ್ಲದಂತೆ ಅಲ್ಲಿಬಿದ್ದಿದ್ದರು. ಸ್ವಲ್ಪ ಹೊತ್ತಾದಮೇಲೆ ಇಲ್ಲಿನ ಲೋವರ್ ಕ್ಯಾಂಪಿನ ... ಕುದುರೇಸವಾರಿಮಾಡುತ್ತ ... ಬಂದು ಪ್ರಜ್ಞೆತಪ್ಪಿಬಿದ್ದಿದ್ದ ಇವರನ್ನು ನೋಡಿ ಎತ್ತಿಕೊಂಡು ... ಮೇಲೆ ಮಲಗಿಸಿ ಗೌರ್ನಮೆಂಟು ಬಂಗ್ಲೆಗೆ ಬೇಗ ಡಾಕ್ಟರ್ ... ಹೇಳಿ ಕಳುಹಿಸಿದರು ಅವರು ಬಂದು ಎಷ್ಟು ಚಿಕಿತ್ಸೆಗಳನ್ನು ನಡಿಸಿದಾಗ್ಯೂ ಪ್ರಜ್ಞೆಯೇ ಬರಲಿಲ್ಲ ... ಸ್ಥಿತಿಯಲ್ಲಿಯೇ ಇರುತ್ತಾ ... ಮಹಾರಾಜರವರ ಪ್ಯಾಲೇಸಿನಲ್ಲಿಟ್ಟಿದ್ದರು. ಇವರು ಈಗ ಚೇತರಿಸಿಕೊಂಡಿರುವರೆಂದು ಕೇಳಿ ಸಂತೋಷಪಡುತ್ತೇವೆ.—ವೃ ಪ.

Deprivation of University degrees.—ಈ ತಿಂಗಳ ೩ನೇ ತಾರೀಖಿನಲ್ಲಿ ಮದರಾಸ್ ಯೂನಿವರ್ಸಿಟಿ ಸೆನೆಟ್ ಸಭಾಜನರು ಸೇರಿದ್ದಲ್ಲಿ, ಹಿಂದಿನ ಸಾಲಿಸಿಟರ್ ಜನರಲ್ ... ಮಹಾಶಯರ ... ನೆರವೇರಿಸುವದಕ್ಕಾಗಿಯೂ, ಆನರೆಬಲ್ ಮಿ|| ಮುತ್ತುಸ್ವಾಮಿ ಅಯ್ಯರವರ ಅಭಿಪ್ರಾಯಾನುಸಾರವಾಗಿಯೂ ... ಉಪನಿಬಂಧನೆಯನ್ನು ... ಉಪನಿಬಂಧನೆಗೆ ಸೇರಿಸುವಂತೆ ಸಿಂಡಿಕೇಟ್ ಸಭಾಸದರು ತೀರ್ಮಾನಮಾಡಿದರು. ಮದರಾಸ್ ಯೂನಿವರ್ಸಿಟಿ ಯಾವದಾದರೊಂದು ಡಿಗ್ರಿಯಂ ಪಡೆದ ಅಥವಾ ಯೂನಿವರ್ಸಿಟಿ ಪರೀಕ್ಷೆಗಳ ಪೈಕಿ ಯಾವದರಲ್ಲಾದರೂ ತೇರ್ಗಡೆಯಾದ ಬಗ್ಗೆ ಸರ್ಟಿಫಿಕೇಟಂ ಪಡೆದಿರುವ ಯಾವ ಮನುಷ್ಯನಾದರೂ ಕ್ರಿಮಿನಲ್ ಕೋರ್ಟಿನಿಂದ ಯಾವದಾದರೊಂದು ತಪ್ಪಿತದ ಬಗ್ಗೆ ದಂಡಿಸಲ್ಪಟ್ಟಾಗ್ಯೂ, ಅಥವಾ ಅಂಥವನು ಅಪಮಾನಕರವಾದ ಮನೋವರ್ತನೆಯುಳ್ಳವನಾಗಿದ್ದಾಗ್ಯೂ, ಅಂಥಾ ಅವನ ತಪ್ಪಿತವನು ವಿಚಾರಿಸಿ ತಿಳಿದುಕೊಂಡಮೇಲೆ, ಅವನಿಗೆ ಕೊಡಲ್ಪಟ್ಟಿರುವ ಡಿಗ್ರಿ ಅಥವಾ ಪರೀಕ್ಷೆ ಕೊಟ್ಟ ಬಗ್ಗೆ ಪಡೆದಿರುವ ಸರ್ಟಿಫಿಕೇಟನ್ನು ತಪ್ಪಿಸುವದಕ್ಕೆ ಯೂನಿವರ್ಸಿಟಿಯವರಿಗೆ ಅಧಿಕಾರ ವುಂಟಾಗಿರತಕ್ಕದ್ದು. ಸ ಭೆಕು ಆ ರೀತಿ ಮಾಡಬೇಕಾದರೆ, ಸಿಂಡಿಕೇಟಿನ ಸಭಾಜನರ ಮೆಂಬರುಗಳ ಸಂಖ್ಯೆಯಲ್ಲಿ ಮೂರರಲ್ಲಿ ಎರಡುಭಾಗ ಮೆಂಬರುಗಳ ಶಿಫಾರಸ್ಸಿನ ಮೇಲೆ, ಅಂತಾ ಶಿಫಾರಸ್ಸನ್ನು ಸೆನೆಟ್ ಮೀಟಿಂಗಿನಲ್ಲಿ ಹಾಜರಿರುವ ಮೆಂಬರುಗಳ ಪೈಕಿ ಅಧಿಕಸಂಖ್ಯೆಯುಳ್ಳವರ ಒಪ್ಪಿತದಮೇಲೆಯೂ, ಯೂನಿವರ್ಸಿಟಿ ಚಾನ್ಸಿಲರ್ ಮತ್ತು ವೈಸ್ ಚಾನ್ಸಿಲರ ಸಮ್ಮತಿಯಮೇಲೂ, ಮಾಡಬೇಕು, ಎಂಬದು. ಈ ನಿಬಂಧನೆಯು ಜಾರಿಯಲ್ಲಿ ತರಲ್ಪಟ್ಟರೆ ಕೆಲವರಿಗೆ ಅಸಮಾಧಾನಕರವಾಗಿ ತೋರಬಹುದು.

CORRESPONDENCE

ಮ|| ರಾ|| ಕರ್ಣಾಟಕಪ್ರಕಾಶಿಕಾ ಎಡಿಟರವರ ಸನ್ನಿಧಿಗೆ

ಅಯ್ಯಾ—ಈಗ ಸಾಮಾನ್ಯವಾಗಿ ವಿತಂತು ವಿವಾಹ, ಬಾಲ್ಯವಿವಾಹ, ಸ್ತ್ರೀ ವಿದ್ಯಾಭ್ಯಾಸ, ವಿವಾಹಸಂಬಂಧಪರಿತ್ಯಾಗ, ವಿಧವಾಮುಂಡನ, ಸಂಭೋಗಾನುಮತಿ, ಪತಿವರಣ ಸ್ವಾತಂತ್ರ್ಯ, ಎಂಬ ಈ ವಿಷಯಗಳೂ ಸ್ತ್ರೀರಾಜ್ಯಕ್ಕೆ ಸರ್ವಾಂಗಗಳಾಗಿ ಪರಿಣಮಿಸಿ ಇಂಡ್ಯದೇಶದ ವೃತ್ತಾಂತಪತ್ರಿಕಾ ವಿಚಾರಕ್ಕೆ ಮುಖ್ಯ ವಿಷಯಗಳಾಗಿ ಹ್ಯಾಗೆ ಕೂಡಿರುತಿವೆಯೋ ಅದೇರೀತಿ ಮೈಸೂರುದೇಶದ ಪತ್ರಿಕೆಗಳಿಗೆಲ್ಲ ಡಾಕ್ಟರ್ ಧನಕೋಟಿರಾಜುಯವರಿಗೆ ಸರ್ಕಾರದವರು ಕಬ್ಬಿಣ ತಯಾರೀಬಗ್ಗೆ ತೋರಿಸಿರುವ ರಿಯಾಯತಿಗಳು ಮುಖ್ಯಾಂಶಗಳಾಗಿರುವಂತೆ ತೋರುತಿದೆ, ಹ್ಯಾಗೆಂದರೆ, ಯಾವ ಪತ್ರಿಕೆಯನ್ನು ನೋಡಿದರೂ, ಕಬ್ಬಿಣಕಾರ್ಖಾನೆ, ಧನಕೋಟಿರಾಜರವರು, ಮೈಸೂರು ದಿವಾನರವರು, ಈ ಮೂರು ಮಾತುಗಳು ವಿನಾ ಮತ್ಯಾವದೂ ನನಗೆ ಕಾಣಿಸುವದಿಲ್ಲವು ಪ್ರಕೃತವಿಷಯದಲ್ಲಿ ಮಾಡಲ್ಪಟ್ಟ ಏರ್ಪಾಡುಗಳು ಯೋಗ್ಯಗಳೆಂದು ಕೆಲವು ಅಯೋಗ್ಯವೆಂದು ಕೆಲವು, ಈರೀತಿ ಪತ್ರಿಕೆಗಳು ಭಿನ್ನಾಭಿಪ್ರಾಯಗಳೊಡನೆ ಕಂಠಶೋಷಣ ಮಾಡುತಲಿರುವದಕ್ಕಾಗಿ ನಾನು ಬಹಳ ವಿಷಾದಿಸುತ್ತೇನೆ. ಈಗ ಕಬ್ಬಿಣ ತಯಾರೀವಿಷಯದಲ್ಲಿ ಡಾಕ್ಟರ್ ಧನಕೋಟಿರಾಜು ಯವರಿಗೆ ಕೊಡಲ್ಪಟ್ಟ ರಿಯಾಯತಿಗಳಬಗ್ಗೆ ವ್ಯರ್ಥವಾಗಿ ಯಾತಕ್ಕೆ ಸಂಕಟ ಪಡಬೇಕೋ ನಾನರಿಯೆನು. ಈ ಏರ್ಪಾಟಿನಿಂದ ಸಂಸ್ಥಾನಕ್ಕೆ ಮುಂದೆ ಲಾಭನಷ್ಟಗಳ್ಯಾವದುಂಟಾದಾಗ್ಯೂ ಈಗಿನವರು ತಾವದನ್ನು ಪ್ರತ್ಯಕ್ಷವಾಗಿ ನೋಡಲಾರರು. ಐವತ್ತು ವರ್ಷಗಳು ಕಳೆದ ಬಳಿಕ ಉಂಟಾಗುವ ಲಾಭನಷ್ಟಗಳಿಗೆ ಯಾರು ಗುರಿಯಾಗುವರು? ಇದರಿಂದ ನಷ್ಟವುಂಟಾದರೆ ಅದಕ್ಕಾಗಿ ರಿಯಾಯತಿಗಳನ್ನು ಕೊಡುವ ಡಾಕ್ಟರವರಾಗಲಿ ಅವು ಕೊಟ್ಟಂಥಾ ದಿವಾನರಾಗಲಿ ತಾವತ್ಪರ್ಯಂತವಿದ್ದು ಚಿಂತಿಸತಕ್ಕವರಲ್ಲವು. ಅದೇರೀತಿ ಲಾಭವುಂಟಾದಾಗ್ಯೂ ತತ್ಪ್ರಯುಕ್ತವಾದ ಕೀರ್ತ್ಯನುಭವಕ್ಕೂ ಅವರೆಷ್ಟುಕಾಲ ಇದೇರೀತಿಯಾಗಿರಲಾರರು ಇದಕ್ಕಾಗಿ ಗುದ್ದಾಡುವ ವೃತ್ತಾಂತಪತ್ರಿಕೆಗಳೂ ಊರ್ಜಿತವಾಗಿರಲಾರವು. ಅದು ಯಾಕೆಂದರೆ ಯುಕ್ತವೆಂದು ಭಾವಿಸಿ ನೋವುಬೇದಗಳನ್ನನುಭವಿಸುವ ಈಗಿನ ಪ್ರಜೆಗಳೂ ಇದೇಸ್ಥಿತಿಯಲ್ಲಿರುವರೆಂಬದು ಅನುಮಾನಗ್ರಸ್ತವು. ಇನ್ನೈವತ್ತು ವರುಷಗಳಮುಂದೆ ಇದ್ದಂತಾಸ್ಥಿತಿಯಲ್ಲೀರಾಜ್ಯ ವೀಗ ಇರುವಂತೆಯಾಗಲಿ ಪ್ರಜೆಗಳು ಈಗಯಿದ್ದಂತೆಯೇ ಈಗ ಇರುವರೆಂದಾಗಲಿ ಯಾರಾದರು ಹೇಳಬಲ್ಲರೆ? ಲಾಭನಷ್ಟಗಳಿಗೆ ಗುರಿಯಾದ ಪ್ರಭುಗಳು ಮಾಸೀನರಾಗಿರುವಾಗ್ಯೂ, ಅರಮನೆಭಕ್ತಿಯ ಕಲಹ ಮಾಡುವಂತೆ ವೃತ್ತಾಂತಪತ್ರಿಕಾಲೇಖಕರಾದ ನೀವು ಯಾತಕ್ಕೆ ವಿವಾದಿಸಬೇಕು ಎಲ್ಲವೂ ಕಾಲಾನುಗುಣವಾದ ಬದಲಾವಣೆಗಳಿಗೊಳಪಡತಕ್ಕವಾಗಿರುವದರಿಂದ ಈಗ ಮಾಡಲ್ಪಟ್ಟ ಏರ್ಪಾಡುಗಳು ಐವತ್ತು ವರುಷಗಳವರೆವಿಗೂ ಯಥಾವತ್ತಿಯನ್ನು ಹೊಂದುವವೋ, ಹೇಳಲಸಾಧ್ಯವು. ಆದುದರಿಂದ ಸದರೀ ವಿಷಯವು ತಮ್ಮ ಪತ್ರಿಕಾವಲೋಕನೋತ್ಸಾಹಿಗಳಿಗೆ ವಿಶೇಷ ಸಂತೃಪ್ತಿಯನ್ನುಂಟುಮಾಡುವದಾಗಿಲ್ಲವು.

ತಮ್ಮವಿಧೇಯ,

ಸರ್ವಸುಹೃತ್.

SUMMARY OF NEWS
ವೃತ್ತಾಂತಸಂಗ್ರಹವು

ನವ್ಯಕ್ ಮತ್ತು ಅಬ್ಕಾರೀ ಇಲಾಖೆಗಳ ಪರೀಕ್ಷೆಗಳು ಮದರಾಸಿನಲ್ಲಿ ಈ ದಿನ ಮೊದಲು ನಡೆಯುವವು

ಕರಛಿ ಎಂಬ ಪ್ರದೇಶದಲ್ಲಿರುವ ಒಬ್ಬ ದೊಡ್ಡ ಯೂರೋಪಿಯನ್ ಆಫೀಸರ ಮಗಳು ಒಂದು ಷಾಪಿನಲ್ಲಿ ಅಸಿಸ್ಟೆಂಟನಾಗಿರುವವನ ಸಂಗಡ ಓಡಿಹೋಗಲು ತೊಡಗಿದವನು ಬೆನ್ನಟ್ಟಿ ಹೋಗಿ ಮರುದಿನ ಮಗಳನ್ನು ಕಂಡು ಹಿಡಿದು ಕೇವಲ ನಿರ್ಬಂಧದಿಂದ ಆಕೆಯನ್ನು ಮರಳಿ ಮನೆಗೆ ಕರೆದುಕೊಂಡು ಹೋದನು

ಢಾಕಾ ಪಟ್ಟಣದಲ್ಲಿ ಹನ್ನೆರಡು ವರ್ಷಗಳ ವಯಸ್ಸುಳ್ಳ ಬ್ರಾಹ್ಮಣ ಗರ್ಭಿಣಿಯಾದ ಹುಡುಗಿಯೊಬ್ಬಳು ಆರುವರ್ಷಗಳ ವಯಸ್ಸುಳ್ಳ ಬೇರೆಯೊಂದು ಹುಡುಗಿಯ ಮೈಮೇಲಿನ ಒಡವೆಗಳಂ ಅಪಹರಿಸಬೇಕೆಂಬ ದುರಾಲೋಚನೆಯಿಂದ ಸಹ ದರೀ ಹುಡುಗಿಯಂ ಬಾವಿ ನಲ್ಲಿ ನೂಕಿದ ಪ್ರೈತದ ಬಗ್ಗೆ ದರ್ಯಾಪ್ತಿಗೆ ಗುರಿಯಾಗಿರುತ್ತಾಳೆ

ಹಿಂದುಗಳೂ ಮಹಮ್ಮದೀಯರೂ ಒಂದಾಗಿರತಕ್ಕದ್ದು ಅವಶ್ಯಕವೆಂದು, ವಾಯುವ್ಯ ಪ್ರಾಂತದಲ್ಲಿರುವ ಮಹಮ್ಮದೀಯ ಪಂಡಿತರಲ್ಲಿ ಕೆಲವರು ತಮ್ಮಲ್ಲಿ ಯಾರೂ ಗೋವಧೆಯನ್ನು ಮಾಡತಕ್ಕದ್ದು ಸರಿಯಲ್ಲವೆಂದು ನಿಷ್ಕರ್ಷೆಮಾಡಿಕೊಂಡು ಇತರರುಕೂಡ ದಯೆಯಿಂದ ನಡೆಯಬೇಕೆಂದು ಅಲ್ಲಲ್ಲಿ ಬೋಧಿಸುತ್ತಿರುವದಾಗಿ ತಿಳಿದುಬರುತ್ತದೆ

ಬಹುಕಾಲದ ಮೊದಲು ಮುರ್ಶಿದಾಬಾದ್ ಪ್ರಾಂತದಲ್ಲಿ ಉಂಟಾಗಿದ್ದ ನೆಮ್ಮದಿಗೆ ಈಚೆಗೆ ಭಂಗ ಪ್ರಾಪ್ತವಾಯಿತು. ಸ್ಕೂಲ್ ವಿದ್ಯಾರ್ಥಿಯೊಬ್ಬನ ನಾಯಿಯನ್ನು ಪೊಲೀಸ್ ಆಫೀಸರು ಗೋಲಿಯಿಂದ ಹೊಡೆದು ಬಿಡಲು ಸದರೀ ಹುಡುಗನು ಸದರೀಯಾತನಮೇಲೆ ಕ್ರಿಮಿನಲ್ ಕೋರ್ಟಿನಲ್ಲಿ ದಾವೆ ಮಾಡಿರುತ್ತಾನೆ ಈ ವಿಷಯವು ಸ್ಕೂಲ್ ವಿದ್ಯಾರ್ಥಿ ಸಮೂಹದಲ್ಲಿ ವಿಶೇಷ ಕಳವಳವನ್ನುಂಟುಮಾಡಿರುತ್ತದೆ

ಸ್ತ್ರೀಯರು ಪುರುಷ ಸಂಸರ್ಗಕ್ಕೆ ಅರ್ಹರೆನಿಸಿಕೊಳ್ಳಬೇಕಾದ ವಿಷಯದಲ್ಲಿ ಈಗ ವಿಧಿಸಲ್ಪಟ್ಟಿರುವ ವಯಃಪರಿಮಾಣವನ್ನು ಹೆಚ್ಚಿಸಬೇಕಾದ ವಿಷಯವು ಕುರಿತು ನಿರ್ಣಯಿಸುತ್ತ ಬಗ್ಗೆ ಮುರ್ಶಿದಾಬಾದ್ ನಲ್ಲಿ ಆದ ವಾರದೊಳು ಸೇರಿಸಲ್ಪಟ್ಟ ಸಭೆಗೆ ನಾಲ್ವರೇ ಬಂದಿದ್ದರೆಂದು ಸಿವಿಲ್ ಮಿಲಿಟರಿ ಗೆಜೆಟ್ ಪತ್ರಿಕೆ ತಿಳಿಸಿ ಇಂತಾ ಪ್ರಬಲ ವಿಷಯದಲ್ಲಿ ಅಲ್ಲಿನವರಿಗೆ ಅಕ್ಕರೆ ಇಲ್ಲದೆಹೋದಬಗ್ಗೆ ಬಹಳ ಚಿಂತಿಸುತ್ತದೆ

ಹೊಸಕೇರಿಯಲ್ಲಿ ಹೊಸದಾಗಿ ಒಂದು ವರ್ತಮಾನ ಪತ್ರಿಕೆಯನ್ನು ಪ್ರಕಟಿಸುವದಕ್ಕಾಗಿ ಒಂದು ಮುದ್ರಾಕ್ಷರಶಾಲೆಯನ್ನು ಸ್ಥಾಪಿಸಿದವರು ಅದನ್ನು ನ್ಯಾಯಾನುಸಾರವಾಗಿ ರಿಜಿಸ್ಟರ್ ಮಾಡಿಸಿ, ಸರ್ಕಾರಕ್ಕೆ ಬೇಕಾದ ಕೆಲವು ಅಂಶಗಳನ್ನು ತಿಳಿಸದಿಲ್ಲವಾಗಿ ಕಾರ್ಯನಿರ್ವಾಹಕ ಪ್ರೊಪ್ರೈಟರ್ ಎಡಿಟರ್ ಮೊದಲಾದವರಿಗೆ ೫೦ ರೂಪಾಯಿಗಳ ಜುಲ್ಮಾನೆ ವಿಧಿಸಲು, ಅದನ್ನು ಕೊಡುವದಕ್ಕೆ ಶಕ್ತಿಯಿಲ್ಲವೆಂದು ತಿಳಿದು ಬಂದು, ಎಡಿಟರನ್ನು ಜೈಲಿನಲ್ಲಿ ಇಡಗಿ, ಮುದ್ರಾಕ್ಷರಶಾಲೆಯನ್ನು ಸರ್ಕಾರದವರು ತಮ್ಮ ಸ್ವಾಧೀನದಲ್ಲಿ ತೆಗೆದುಕೊಂಡರು

ಬರುವ ಡಿಸೆಂಬರ್ ತಿಂಗಳಲ್ಲಿ ಕಲ್ಕತ್ತೆಯೊಳು ನಡೆಯುವದಾಗಿರುವ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಭೆಗೆ ಪ್ರತಿನಿಧಿಯಂ ಚುನಾಯಿಸುವದಕ್ಕಾಗಿಯೂ, ಲಂಡನ್ ಪಟ್ಟಣದೊಳು ಸ್ಥಾಪಿಸಲ್ಪಟ್ಟಿರುವ ರಾಜ್ಯಕಾರ್ಯ ಪ್ರವರ್ತಕ ಸಮಿತಿಯವರಿಗೆ ಚಂದಾ ಮೂಲಕ ದ್ರವ್ಯಶೇಖರ ಮಾಡಿ ಕಳುಹಿಸುವದಕ್ಕಾಗಿಯೂ, ಕಳೆದ ವಾರದೊಳು ಬೆಂಗಳೂರಿನಲ್ಲಿ ನೇಟಿವ್ ಹೈಸ್ಕೂಲ್ ಸೌಧದಲ್ಲಿ ಒಂದು ಸಭೆ ನೆರೆದಿತ್ತು ಅದಕ್ಕೆ ರಾಯಬಹದ್ದೂರ್ ಮೆ॥ ಅನಂತಾಚಾರ್ಯರು, ಮೆ॥ ವೀರರಾಘವಾಚಾರ್ಯರು, ಮೆ॥ ಎಂ. ರಾಮಸ್ವಾಮಿ ನಾಯುಡು, ಬಹುಮಂದಿ ಜಹಗೀರ್ದಾರರು, ವಕೀಲರುಗಳು, ಗೌರವಸ್ಥರಾದ ವರ್ತಕರು ಮೊದಲಾಗಿ ೩೦೦ ಮಂದಿ ದೊಡ್ಡಮನುಷ್ಯರು ಬಂದು ನೆರೆದಿದ್ದರು. ಮೆ॥ ತಾತಾಚಾರ್ಯರವರು ಅಗ್ರಾಸನವಂ ವಹಿಸಿ, ಮೆ॥ ಅನಂತಾಚಾರ್ಯರವರು ಇಂಗ್ಲೀಷಿನಲ್ಲೂ, ಮೆ॥ ವೀರರಾಘವಾಚಾರ್ಯರು ಕರ್ನಾಟಕಭಾಷೆಯಲ್ಲೂ ಸಭೆಯ ಉದ್ದೇಶವಂಕುರಿತು ಸವಿಸ್ತರವ್ಯಾಖ್ಯಾನ ಉಪನ್ಯಾಸ ಮಾಡಬೇಕೆಂದು ಸೂಚಿಸಿದರು. ಸಭೆಯು ಬೇರೆಬೇರೆ ನ್ಯಾಯವಿನಾಯಕ ಸಭೆಯಂ ವಿಸರ್ಜನಮಾಡತಕ್ಕಾದ ವಿಷಯದಲ್ಲಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಕ್ರಾಸ್‌ರವರು ರಚಿಸಿದ ಮಸೂದೆಯನ್ನು ಆಧೇಯವಿಷಯದಲ್ಲಿ ಪಾರ್ಲಿಮೆಂಟ್ ಮೆಂಬರಾದ ಮೆ॥ ಬ್ರಾಡ್ಲಾರವರು ಮಾಡಿದ ಮಸೂದೆ ವಾಕ್ಯವನ್ನು ಕುರಿತು ಒಂದು ಘಂಟೆಯಕಾಲ ಮೆ॥ ಅನಂತಾಚಾರ್ಯರವರು ಉಪನ್ಯಾಸಮಾಡಿದ ಮೇಲೆ ಪ್ರಕೃತ ಕಾರ್ಯಸಾಧನಕ್ಕಾಗಿ ಇಂಗ್ಲೆಂಡಿನಲ್ಲಿ ಸ್ಥಾಪಿಸಿರುವ ಸಮಿತಿಯವರುಗಳಿಗೆ ಆವಶ್ಯಕವಾದ ಧನಸಹಾಯವು ಮಾಡಬೇಕೆಂದು ಅಲ್ಲಿನ ಕಾರ್ಯಗಳು ಕ್ರಮವಾಗಿ ನಡೆಯಲಾರವೆಂದು ತಿಳಿಸಿದರು. ಸಭೆ ಬರಖಾಸ್ತಾಯಿತು

EXTRACTS

ಆದಿ ಭಾನುವಾರ ಮದ್ಯಾಹ್ನ ನಾಲ್ಕುಘಂಟೆಗೆ ತಿಪ್ಪನಲ್ಲಿ ಹೆಬ್ಬೆಳಿಂದ ಬಂದಿರುವ ಮೆ॥ ಎ ಕಾಳಶಾಸ್ತ್ರಿ ಸುಬ್ರಹ್ಮಣ್ಯ ಶಾಸ್ತ್ರಿಗಳು ಆಶ್ಚರ್ಯಕರ್ತವ್ಯವಾಗಿ ಶ್ರೋತೃ ವರ್ಗದಲ್ಲಿ ಉಪನ್ಯಾಸವನ್ನು ನಡೆಸಿದರು ಸದರೀ ಉಪನ್ಯಾಸದ ಸಾರಾಂಶವೇನೆಂದರೆ, ಎಲ್ಲರು ತಮ್ಮ ಶಾಸ್ತ್ರದ ಮತಧರ್ಮಗಳನ್ನು ತಿಳಿಯಬೇಕೆಂದೂ, ಇದರ ಉತ್ಕೃಷ್ಟವಾದವೇದಶಾಸ್ತ್ರಗಳ ರಹಸ್ಯವನ್ನು ತಿಳಿಯತಕ್ಕದೆಂದೂ ಅನ್ಯಾಯವಾಗಿ ಮತಭ್ರಾಂತಿಗಳನ್ನು ಹೊಂದುತ್ತಾರೆ. ಎಲ್ಲರೂ ನಿಜವಾದ ರುಚಿಯನ್ನು ತಿಳಿಯಬೇಕಾದ ಶಾಸ್ತ್ರ ವಿಷಯದಲ್ಲಿ ಪ್ರಾಚೀನರ ನಡವಳಿಕೆಗಳನ್ನು ಅತಿಕ್ರಮಿಸಿ ಕೆಲವು ಬಾಹ್ಯಶಾಸ್ತ್ರಗ್ರಂಥಗಳನ್ನು ಮಾಡಿ ಅವರನ್ನು ಅನೇಕ ಆಕ್ಷೇಪಗಳಿಗೆ ಗುರಿಪಡಿಸುತ್ತಿದ್ದಾರೆ ಇದನ್ನೆಲ್ಲಾ ತಪ್ಪಿಸಿ ಹಿಂದೂ ವಿದ್ಯಾರ್ಥಿಗಳ ಬುದ್ಧಿ ಸುಗುಣಗ್ರಹಣಗಳನ್ನು ಮಾಡಿಕೊಂಡು ವೈದಿಕರೂ, ಲೌಕಿಕರೂ, ಐಕಮತ್ಯವಾಗಿ ಉಭಯ ತಿದ್ದುಪಡಿಗಳನ್ನು ಮಾಡಿಕೊಳ್ಳಬೇಕು. ಮತ್ತು ಜ್ಞಾನಕ್ಕೆ ಪ್ರಮುಖವಾದ ವ್ಯಾಖ್ಯಾನ ಶ್ರವಣವೊ ದಾರಿಪ್ರಿಯರಿಗೂ ಸಾಧಿಸಿದ್ದಾದರೆ ದೇಶಕ್ಕೆ ಅನುಕೂಲವಾದ್ದಾಗುವದೆಂದು ಮೊದಲಾದ ಸಂಗತಿಗಳಿಗೆ ಅನೇಕವೈದಿಕಲೌಕಿಕ ದೃಷ್ಟಾಂತಗಳ ಮೂಲಕ ದ್ರಾವಿಡಭಾಷೆಯಲ್ಲಿ ಉಪನ್ಯಾಸವಮಾಡಿದರು. ಬೆಂ.

ರಿಜಿಸ್ಟ್ರೇಷನ್ ಇಲಾಖೆಯಲ್ಲಿ ಕೆಲವು ಹೊಸ ಏರ್ಪಾಡುಗಳನ್ನು ಮಾಡಬೇಕೆಂದು ಸದರೀ ಇಲಾಖಾ ಇನಸ್ಪೆಕ್ಟರ್ ಜನರಲ್‌ರವರು ಗವರ್ನಮೆಂಟಿಗೆ ತಿಳಿಸಲು, ಬೆಂಗಳೂರು ಮೈಸೂರು ಡಿಸ್ಟ್ರಿಕ್ಟು ರಿಜಿಸ್ಟ್ರಾರ್‌ಗಳ ಸಂಬಳವು ಸರಿಯಾಗಿಯೇ ಇರುವದೆಂತಲೂ, ಆದರೆ ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಗುಮಾಸ್ತೆಯರ ಸಂಬಳಗಳು ಮಾತ್ರ ಇರುವದಕ್ಕಿಂತ ಹೆಚ್ಚಿಸಲ್ಪಡುವದೆಂತಲೂ, ಹಾಸನ ತಿಪಟೂರು ಸ್ಥಳಗಳಲ್ಲಿರುವ ಡಿಸ್ಟ್ರಿಕ್ಟು ರಿಜಿಸ್ಟ್ರಾರ್‌ಗಳ ಸಂಬಂಧವಾಗಿ, ಪ್ರಕೃತದಲ್ಲಿರುವ ಕ್ಲಾರ್ಕ್‌ಗಳಿಗೆ ಸಹಾಯವಾಗಿರುವಂತೆ ಸಾಹೇಬಾನಾ ೧೫ ರೂಪಾಯಿಗಳ ತಿಂಗಳ ಸಂಬಳ ಗುಮಾಸ್ತೆಯನ್ನು ನೇಮಿಸಿಕೊಳ್ಳತಕ್ಕದೆಂತಲೂ, ಪ್ರೊವಿನ್ಸ ಸಬ್ ಡಿವಿಜನ್‌ನಲ್ಲಿರುವ ಕ್ಲಾರ್ಕ್‌ಗೆ ಕೆಲಸವು ಬಹಳ ಹೆಚ್ಚಾಗಿರುವದರಿಂದ ಸಂಬಳವಿಲ್ಲದ ಕ್ಲಾರ್ಕ್‌ಗಳನ್ನು ಹೆಚ್ಚಿಸುವದೆಂತಲೂ, ಈ ರೀತಿಯಲ್ಲಿ ಡಿಸ್ಟ್ರಿಕ್ಟು ರಿಜಿಸ್ಟ್ರಾರ್ ಮುಂತಾದವರುಗಳ ಸಂಬಂಧಗಳ ಖರ್ಚಿಗಾಗಿ ಮಾಹೇವಾರಾ ೩೪ ರೂಪಾಯಿಗಳು ಆದರ ಸಲುವಾಗಿ ೪೦೩ ರೂಪಾಯಿಗಳು ಹೆಚ್ಚಾಗಿ ಸಂಗಿಸ್ಟ್ ಮಾಡಲ್ಪಟ್ಟಿರುವದೆಂತಲೂ, ಈಗ ಹೊಸದಾಗಿ ಏರ್ಪಡಿಸಲ್ಪಡುವದಿಲ್ಲವೆ. ಮೈಸೂರಿನಲ್ಲಿರುವ ಸವರಿವಿಶ್ವಾತ್ರಿಗೆ ೫೦ ರೂಪಾಯಿಗಳಿಂದ ೫೫ ರೂಪಾಯಿಗಳಿಗೂ, ಶಿವಮೊಗ್ಗದ ಸಬ್‌ರಿಜಿಸ್ಟ್ರಾರಿಗೆ ೩೦ ರಿಂದ ೩೫ಕ್ಕೂ, ತಿರುಮಕೂಡ್ಲು ನರಸೀಪುರದವರಿಗೆ ೩೦ರಿಂದ ೩೫ಕ್ಕೂ ಹೀಗೆಯೇ ಈ ಎರಡೆಯವಲ್ಲಿರುವವರಿಗೂ, ಪ್ರಮೋಷನ್ ಮಾಡಿ, ಶಿವಮೊಗ್ಗದಲ್ಲಿರುವ ಸಬ್‌ರಿಜಿಸ್ಟ್ರಾರರ ಆಫೀಸಿನಲ್ಲಿ ೫ ರೂಪಾಯಿಗಳಿಗೆ ಒಬ್ಬ ಜವಾನನ್ನು ನೇಮಿಸಿಕೊಳ್ಳುವದೆಂದು ಈ ಬಾಬಿನಲ್ಲಿಯೂ ತಿಂಗಳೊಂದಕ್ಕೆ ೫೦ ರೂಪಾಯಿಗಳು ಹೆಚ್ಚಾಗಿ ನಿಷ್ಕರ್ಷೆ ಮಾಡಿರುವದು ಪರ ಮ ರಿಜಿಸ್ಟ್ರೇಷನ್ ಇಲಾಖೆಗಾಗಿ ತಿಂಗಳೊಂದಕ್ಕೆ ೭೭ ರೂಪಾಯಿಗಳು, ಅಂದರೆ ವರ್ಷ ಒಕ್ಕೆ ೧,೦೩೬ ರೂಪಾಯಿಗಳು ಮುಂಚೆಗಿಂತಲೂ ಈಗ ಹೆಚ್ಚಾಗಿ ವ್ಯಯವಾಗುವಂತೆ ಏರ್ಪಡಿಸಿರುವರು ಈ ಏರ್ಪಾಡುಗಳು ಈ ಅಕ್ಟೋಬರ್ ತಿಂಗಳಿಂದಲೇ ಜಾರಿಗೆ ಬರತಕ್ಕದ್ದಾಗಿರುವದು ಆದರೆ ಹಾಸನ ಶಿವಮೊಗ್ಗ ಈ ಸ್ಥಳಗಳಲ್ಲಿ ಹೊಸದಾಗಿ ನೇಮಿಸಲ್ಪಡತಕ್ಕ ಗುಮಾಸ್ತೆಯರ ವಿಷಯದಲ್ಲಿ ಮಾತ್ರ ಈ ಮಸ ಸಕಾಲದಲ್ಲಿ ತಿಳಿಯದಿಲ್ಲವಾಗಿ ಎಷ್ಟು ಸಿದ್ಧ ಕಾಗದ— ಸ.

ಈಗ ಒಂದು ತಿಂಗಳಿಂದ ಬೆಂಗಳೂರಿನಲ್ಲಿ ಮತ್ತು ಆ ಪ್ರಾಂತದ ಕೆಲವು ಗ್ರಾಮಗಳಲ್ಲಿಯೂ, ಕೆಲವರು ವೇಷಧಾರಿಗಳಾಗಿ ಅಲ್ಲಲ್ಲಿ ತಿರುಗಿ, ಜನಗಳನ್ನು, ಮುಖ್ಯವಾಗಿ ಬ್ರಾಹ್ಮಣ ವರ್ಣದ ಹುಡುಗರ ಗೋತ್ರವಾದ ಸ್ಥಳಕ್ಕೆ ಕರೆದುಕೊಂಡು ಹೋಗಿ ಯಾವದೋ ಒಂದು ಇರಸಲಿ ಬಿಡುತ್ತಿರುವರು ಎಂದು ಪ್ರಸಿದ್ಧವಾಗುತ್ತಿರುವದು ಇದರಿಂದ ಜನರಲ್ಲಿ ಭೀತಿ ಉಂಟಾಗಿರುವದಲ್ಲದೆ, ಅನೇಕ ಜನ ಬ್ರಾಹ್ಮಣರಲ್ಲಿ ಕೆಲವರು ಬ್ರಾಹ್ಮಣ ಇದೇ ರೀತಿಯಲ್ಲಿ ಮರುಳಾಗಿ, ಓಡಿಹೋಗಿ ತಲೆಮರೆಸಿಕೊಂಡಿರುವರು, ಇದರ ನಿಮಿತ್ತ ಕೆಲವರು ಸಂದರ್ಶಿಸಿ ಅವರ ಕಡೆಯವರ ಸಂಗಡ ತಿರುಗಿದವರೆಂಬ ಅಪ್ರಸ್ತುತ ಸುದ್ದಿಯನ್ನು ತಿಳಿಸುತ್ತಾರೆ ಈ ನಮ್ಮ ಪ್ರಾಂತದಲ್ಲಿ ಹಿಂದೂಗಳು ಈಗ ಕದ್ದಿರುವುದನ್ನು ಮಾಡುವರೆಂಬುದು ವೈಷ್ಣವರು ಮೊದಲಾದ ಈಗ ಕೆಲವು ವರ್ಷಗಳ ಹಿಂದೆಯೂ ಬಹಳ ಪ್ರಬಲವಾಗಿತ್ತು ಈಗ ದುರ್ಗಾದೇವಿಯು ಪ್ರತ್ಯಕ್ಷವಾಗಿ ಉತ್ತಮರಾದವರನ್ನೇ ಬಲಿಯನ್ನಾಗಿ ಅಪೇಕ್ಷಿಸುತ್ತಾಳೆಂದು, ತಾವು ಹೇಗಾದರೂ ಬಲಿಯನ್ನು ಕೊಡಬೇಕೆಂದು ಕೆಲವರು ಬರಿ ಬಿಗಿ ಹೋಗಿ ಬಂದು ಬರುವ ವರ್ಣದವರನ್ನು ಉಪಾಯಾಂತರಗಳಿಂದ ಕರೆದುಕೊಂಡು ಹೋಗಿ ಉಕ್ತರೀತಿಯಲ್ಲಿ ಅವರನ್ನು ಈ ದೇವಿಯ ಸಮ್ಮುಖದಲ್ಲಿ ಸಿದ್ಧತೆಯನ್ನಾಗಿ ಮಾಡಿ, ಅವರ ಹಿಂದೆ ಇರಾ ಮಗನನ್ನು ಇವರಿಬ್ಬರುಗಳನ್ನು ನಿಶ್ಚಯಿಸಿ ಕಾಲಕ್ಕೆ ಗುರಿಮಾಡಿ, ದ್ರವ್ಯ ಪತ್ರ ಸಿದ್ಧಿಯನ್ನು ಪಡೆಯುತ್ತಿದ್ದರೆಂಬ ವಿಷಯಕ್ಕೆ ತಮ್ಮ ಸಹಭಾವದವರನ್ನು ಅತಿ ನಿಷ್ಠುರವಾಗಿ ಹಿಂಸಿಸುವ ಪದ್ಧತಿ, ಧರ್ಮಸ್ಥವಾದ ರಾಜ್ಯಕ್ಕೆ ಒಳಗಾಗಿರುವ ದ್ದರು. ಈಚೆಗೆ ಈ ಪ್ರಾಂತದಲ್ಲಿ ಇಂತಾ ದುಷ್ಕರ್ಮಗಳಿಗೆ ಸರ್ಕಾರದವರು ಅವಕಾಶವನ್ನು ಕೊಡದೆ ನಿರ್ಬಂಧ ಪಡಿಸುತ್ತಿರುವದರಿಂದಲೂ, ಹೀಗ ನರಹತ್ಯವನ್ನು ಮಾಡತಕ್ಕವರೇ ಸರಿಯೆಂದು ಸ್ವಲ್ಪ ತಿಳಿದು ಬಂದರೂ ಇಂಥವರಿಗೆ ಕ್ರೂರತರವಾದ ಶಿಕ್ಷೆಯನ್ನು ವಿಧಿಸುವಂತೆ ಏರ್ಪಡಿಸಿದ್ದರಿಂದ ಈಗ ಕೆಲವು ದಿವಸಗಳವರೆಗೆ, ದುರ್ಗಾದೇವಿಗೆ ಬಲಿ ಕೊಡುವದೆಂಬ ಪ್ರವಾದವು ನಿಂತಿತ್ತು ಈ ದುರ್ಗಾದೇವಿಯ ಪೂಜೆಯೂ, ಮೆರವಣಿಗೆಯು ಕೆಲವು ಈ ಗ್ರಾಮದಲ್ಲಿ ವಿಶೇಷವಾಗಿ ನಡೆಯುತ್ತಿಲ್ಲ ಆದರೆ ಬಹುಳ ಪ್ರದೇಶದಲ್ಲಿ ದುರ್ಗಾಪೂಜೆ ಎಂಬುದಕ್ಕೆ ಇದ್ದ ಬಹು ಪ್ರಸಿದ್ಧವಾದದ್ದು ಈಗಲೂ ಅಲ್ಲಲ್ಲಿ ಕೆಲವರು, ಬಹಳ ಸಾಹಸವನ್ನಾದರೂ ಪಟ್ಟು, ಆ ದುರ್ಗಾದೇವಿಗೆ ನರಬಲಿಯನ್ನು ಕೊಡುತ್ತಲೂ, ಎಲ್ಲ ಬಹಿರಂಗಕ್ಕೆ ಬಂದರೆ ಅವಕ್ಕೆ ತಕ್ಕ ಫಲವನ್ನು ಹೊಂದುತ್ತಲೂ ಇರುವಂತೆ ಅಲ್ಲಿನ ಪತ್ರಿಕೆಗಳು ಆಗಾಗ್ಗೆ ಸೂಚಿಸುತ್ತಲಿರುವವು. ಮನುಷ್ಯರು ಈ ರೀತಿಯಲ್ಲಿ ಪ್ರವರ್ತಿಸುವದಾದರೆ, ಇತರರಿಗೂ ಮೃಗಗಳಿಗೂ ಯಾವ ವ್ಯತ್ಯಾಸವೂ ಇಲ್ಲವೆಂದು ಹೇಳಬಹುದು. ಸರ್ವವ್ಯಾಪಕನೂ ಸ್ವರೂಪನಾದ ಪರಬ್ರಹ್ಮನು, ತಾನು ಸೃಷ್ಟಿಸಿದ ಪ್ರಾಣಿಯನ್ನು ವಧಿಸುವದನ್ನು ನೋಡಿ, ಅಸಹ್ಯಗೊಳ್ಳುವನೇ ಹೊರತು, ಎಂದಿಗೂ ತೃಪ್ತನಾಗುವದಿಲ್ಲ ಈ ಕೃತ್ಯವನ್ನು ನಡೆಸತಕ್ಕ ಪಾತಕಿಗಳು, ತಮ್ಮ ಗುಟ್ಟು ರಟ್ಟಾದ ಕೂಡಲೇ ಈ ಲೋಕದಲ್ಲಿ ತಮ್ಮ ಸಹಭೂತರಾದವರ ಕಾಣಿಸುತ್ತಿಗೆ ತಕ್ಕ ಶಿಕ್ಷೆಯನ್ನು ಹೊಂದುವದಲ್ಲದೆ, ಮರಣಾನಂತರವೂ, ಅವರು ನಿರೀಕ್ಷಿಸಿದ ಮೋಕ್ಷಕ್ಕೆ ಬದಲಾಗಿ ದುರ್ಗತಿಯೇ ಆಗಿರುವದು —ವೃ ಪ

THE MYSORE GAZETTE
ಮೈಸೂರು ಗೆಜೆಟ್.

ರೆವಿನ್ಯೂ ಮತ್ತು ಸೆಟಲ್‌ಮೆಂಟ್ ಇಲಾಖೆಗಳ ಸರ್ಕಾರದಿಂದ ಹೊರಡಿಸಲಾದ ಇಷ್ತಿಹಾರ ಮುಂತಾದವು

ನಂ ೭೯೧ ತಾ॥೧೬ನೇ ಅಕ್ಟೋಬರ್ ೧೮೯೦ ಮೆ॥ ಕೃಷ್ಣಯ್ಯಂಗಾರ್ಯರವರು, ಮೈಸೂರು ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ್ ಕಮಿಷನರರವರ ಆಫೀಸಿನ ಹೆಡ್ ಮುನ್ಷಿ ಸನ್ ೧೮೯೦ನೇ ಇಸವಿ ಸೆಪ್ಟೆಂಬರ್ ೨೫ನೇ ತಾರೀಖಿನ ಆದರಾಬ್ಯದಲ್ಲಿ ತಾವು ಮಹಮ್ಮದ್ದಲೀಯವರಿಗೊಪ್ಪಿಸಲು ಆ ಸ್ಥಾನ ತೆಗೆದುಕೊಂಡಿರುತ್ತಾರೆ

ನಂ ೭೯೨ ಅಸಿಸ್ಟೆಂಟ್ ಕಮಿಷನರ್ ಮೆ॥ ಸಾಯಂಗರ ರುಕ್ಮಿಣೀಅಮ್ಮ ಕುಮಾರ ಶಿವಪ್ಪ ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ್ ಕಮಿಷನರ್ ಕೋಲಾರ ಜಿಲ್ಲೆ, ೧೮೯೦ನೇ ಇಸವಿ ಅಕ್ಟೋಬರ್ ೧೦ನೇ ತಾರೀಖಿನ ಅಪರಾಹ್ಣದಲ್ಲಿ ತಗಲು ಕೊಡುತ್ತಾರೆ

ನಂ ೮೦, ತಾ॥ ೧೦ನೇ ಅಕ್ಟೋಬರ್ ೧೮೯೦ ಕೋಲಾರ ತಾಲ್ಲೂಕು ಅಮಲ್ದಾರ ಮೆ॥ ವಾಸುದೇವಯ್ಯನವರಿಗೆ ಅವರು ಮಾಡಿದ ಕೆಲಸದ ತಾಕೀತ್ ಎಂ ಗೋವಿಂದ ಒಂದು ವರ್ಷದ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ. ಇದು ಮಹಮ್ಮದೀಯನವರು ರಜಾ ಮೇಲೆ ಸ್ಪೆಷಲ್ ಡ್ಯೂಟಿಯಾಗಿರತಕ್ಕಾಲದಲ್ಲಿ ಅಥವಾ ಮತ್ತೆ ಯಾವ ಕೆಲಸಕ್ಕೆ ಕರೆಯಲ್ಪಡುವವರೆಗೂ ಗುಡಿಬಂಡೆ ಡೆಪ್ಯುಟಿ ಅಮಲ್ದಾರ್ ಗುಲಾಂ ಮಹಮ್ಮದ್ ಸಾಹೇಬರು ಕೋಲಾರ ತಾಲ್ಲೂಕಿನ ಅಮಲ್ದಾರರಾಗಿ ಸೆಕೆಂಡ್ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಅಧಿಕಾರವೀಯಲ್ಪಟ್ಟು ಕೆಲಸನೋಡುವಂತೆ ನೇಮಕಮಾಡಲ್ಪಟ್ಟಿರುತ್ತಾರೆ ಚಿಕ್ಕಬಳ್ಳಾಪುರ ತಾಲ್ಲೂಕಿನ ಶಿರಸ್ತೇದಾರ ಶಾಮರಾಯರವರು, ಗುಲಾಂ ಮಹಮ್ಮದ್ ಸಾಹೇಬರವರು ಇತರ ಕೆಲಸದಮೇಲಿರತಕ್ಕ ಕಾಲದಲ್ಲಿ ಅಥವಾ ಮತ್ತೆ ಯಾವುದಾದರೂ ಕೆಲಸಕ್ಕೆ ನೇಮಿಸಲ್ಪಡುವವರೆಗೆ ಗುಡಿಬಂಡೆ ಡೆಪ್ಯುಟಿ ಅಮಲ್ದಾರ್ ಮತ್ತು ಥರ್ಡ್‌ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಅಧಿಕಾರವೀಯಲ್ಪಟ್ಟು ಕೆಲಸನೋಡುವಂತೆ ನೇಮಕಮಾಡಲ್ಪಟ್ಟಿರುತ್ತಾರೆ

ನಂ ೮೧ ತಾ॥ ೧೫ನೇ ಅಕ್ಟೋಬರ್ ೧೮೯೦ ಸಾಗರ ತಾಲ್ಲೂಕಿನ ವಾಸಸ್ಥರಾದ ಸಾಹುಕಾರ್ ರಂಗಣ್ಣನೆಂಬವರ ತಮ್ಮನ ಕುಮಾರನಾದ ರುದ್ರಪ್ಪನೆಂಬಾತನಮೇಲೆಬಿದ್ದ ೧೧೦೦ ರೂಪಾಯಿಗಳ ಕ್ರಯವುಳ್ಳ ಬಂಗಾರದ ಕೈಕಡಗ ಒಂದು ಜೋಡಿ, ಉಂಗುರವೊಂದು, ಉದ್ದಾರವೊಂದು, ಈ ಆಭರಣಗಳನ್ನು ಅಪಹರಿಸಿ, ಸದರೀ ಬಾಲಕನನ್ನು ಕೊಲೆಮಾಡಿದಂತವರ ಪತ್ತೆಗೆ ಸಹಾಯಕವಾದ ವೃತ್ತಾಂತವನ್ನು ಕೊಡತಕ್ಕಂತವರಿಗೆ ಮೇಲೆಹೇಳಿದ ಸಾಹುಕಾರ್ ರಂಗಣ್ಣನವರು ೩೦ ರೂಪಾಯಿಗಳನ್ನೂ ಗವರ್ನಮೆಂಟಿನವರು ೧೦೦ ರೂಪಾಯಿಗಳನ್ನೂ ಹೀಗೆ ೧೩೦ ರೂಪಾಯಿಗಳ ಇನಾಂ ಕೊಡುವಂತೆ ತಿಳಿಸಲ್ಪಟ್ಟಿದೆ.

BANGALORE.—Printed and published at the Karnataka Press, No. 111, Sultanpet Main Road, Pettah.—1890

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಕಾಶುವಿವಿದ್ವನ್ಮನ್ನೋಪೆಗವಾರ್ಥ ಕರ್ಣಾಟಕಪ್ರಕಾಶನರಾಭಿಧಾಪ್ರಥಿತಸಾಹಿತಿಕೊಥಿತಾ। ವ್ಯಗ್ರಾಂಕಹಿತವಾಸರೆನಿಹಿತಮುದ್ರಣಾಸಜ್ಜನ್ಯೆರ್ನಿತಾಸುದರಿದೊಟುತಾದಿಕರಿತಿಮಾನಸಂಸುಮುದಂ॥

Vol. XVII.]	BANGALORE—MONDAY, OCTOBER 27, 1890.	[No. 43.
ಸಂಪುಟ ೧೭.]	ಬೆಂಗಳೂರು:—ಸರ್ ೧೮೯೦ನೇ ಇಸವಿ ಅಕ್ಟೋಬರ್ ೨೭ನೇ ತಾರೀಖು ಸೋಮವಾರ.	[ಸಂಚಿಕೆ ೪೩.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷು ಮತ್ತು ಕನ್ನಡಭಾಗಗಳಿಗೆ.

[illegible]	[illegible]	
ಮುಂಗಡಕೊಡತಕ್ಕವರಿಗೆ	8—0—0	9—0—0
ತರುವಾಯ	„ 9—0—0	10—8—0

ಇಂಗ್ಲಿಷು ಅಥವಾ ಕನ್ನಡಭಾಗಗಳಿಗೆ.

ಮುಂಗಡಕೊಡತಕ್ಕವರಿಗೆ	4—0—0	5—0—0
ತರುವಾಯ	„ 5—0—0	6—0—0

ಈ ಪತ್ರಿಕೆಗೆ ದಯಮಾಡಿ [illegible] ತಾರೀಖು [illegible] ಪತ್ರಿಕೆ [illegible] ಇಂಗ್ಲಿಷ್ [illegible] ಕನ್ನಡ [illegible]

[illegible]

[illegible] ದರ.

[illegible]

[illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5-0-0

ವೈದ್ಯಸಾರ ಸಂಗ್ರಹ.

[illegible]

[illegible]

ADVERTISEMENTS.

ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರಿಗೇ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

	ಪೋಸ್ಟ್ ಸಹಿ ರೂ. ಆ. ಪೈ
ಸಟೀಕಾ [illegible] ಸಂಗ್ರಹ	೫ ೦ ೦
„ ಶಿವಗೀತೆ	೧ ೧ ೦
„ [illegible]	೦ ೪ ೦
„ [illegible]	೧ ೨ ೦
„ [illegible]	೦ ೧೨ ೦
„ ಬಾಲರಾಮಾಯಣ	೦ ೮ ೦
„ [illegible] ಗೀತೆ	೦ ೧ ೬
„ [illegible] (ಸಂಗ್ರಹ)	೦ ೩ ೦
ವಿಷ್ಣುಸಹಸ್ರನಾಮ [illegible]	೦ ೫ ೦
ಸೂರ್ಯಸಹಸ್ರನಾಮ	೦ ೩ ೦
ಕೃಷ್ಣಕರ್ಣಾಮೃತ	೦ ೧ ೬
[illegible]	೦ ೨ ೬
[illegible]	೦ ೧ ೦

ಕನ್ನಡ ಗ್ರಂಥಗಳು.

[illegible]	೩ ೦ ೦
[illegible]	೧ ೪ ೦
[illegible]	೧ ೪ ೦
[illegible]	೦ ೪ ೦
[illegible]	೦ ೪ ೦
[illegible]	೦ ೨ ೧
[illegible]	೦ ೨ ೬
[illegible]	೦ ೩ ೦
[illegible]	೧ ೨ ೦
[illegible]	೦ ೨ ೦
[illegible]	೦ ೨ ೬
[illegible]	೧ ೦ ೦
[illegible]	೦ ೧೨ ೦

[illegible]

ನೋಟೀಸ್.

[illegible]

[illegible]

[illegible] ಇದರ ಕ್ರಯ [illegible]

ಚಿನ್ನದ ದ್ರಾವಕವು.

ಇದು ಬೆಳ್ಳಿ, ಹಿತ್ತಾಳೆ, ತಾಮ್ರ ಮೊದಲಾದ ಪದಾರ್ಥಗಳನ್ನು ಗಿಲ್ಟು ಮಾಡುವುದಕ್ಕೆ ಬಹಳ ಉಪಯುಕ್ತವಾಗಿರುವದಲ್ಲದೆ [illegible] ಗಿಲ್ಟು ಮಾಡುವುದಕ್ಕೆ ಈ ದ್ರಾವಕವು ಕೇವಲ ಪ್ರಯೋಜನಕರವಾಗಿರುವದು.

ಇದರ ಕ್ರಯ [illegible]

[illegible]

ಮೈಸೂರು ಮಹಾರಾಜರವರ ಅರಳೇ ಯಂತ್ರದ ಕಾರ್ಖಾನೆ.

ನೋಟೀಸ್.

ಮೈಸೂರು ಮಹಾರಾಜರವರ ಅರಳೆ ಯಂತ್ರದ ಕಾರ್ಖಾನೆಯಲ್ಲಿ ಹೊಸ ನಮೂನೆ ಯಂತ್ರದ ಮೂಲಕ ಉತ್ತಮವಾದ ಗೋಧಿ ಹಿಟ್ಟು, ರವೆ, ಹೊಟ್ಟು ತಯಾರುಮಾಡಲ್ಪಟ್ಟು, ಜೇಬಿಯಲ್ಲಿರುವ ಸದರೀ ಕಾರ್ಖಾನೆಗೆ ಸೇರಿದ ಷಾಪುಗಳಲ್ಲಿಯೂ, ಬೆಂಗಳೂರು ಕಂಟೋನ್ಮೆಂಟಿನಲ್ಲಿ ಏಜೆಂಟರಾಗಿರುವ [illegible] ರಸ್ತೆಯಲ್ಲಿರುವ ಷಾಪಿನಲ್ಲಿಯೂ ದೊರಕುತ್ತವೆ.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, OCTOBER 27, 1890

೧೮೯೦ನೇ ಅಕ್ಟೋಬರ್ ೨೭ನೇ ಸೋಮವಾರ

WOMEN IN ANCIENT INDIA

ಆರ್ಯಸ್ತ್ರೀಯರ ಪ್ರಾಚೀನಾವಸ್ಥಾ ನಿರೂಪಣವು

ಸಕಲ ವಿಷಯಗಳಲ್ಲಿಯೂ ಈಗಿನ ಕಾಲವು ಪ್ರತಿಕ್ರಿಯಾ ರೂಪವಾದುದಾಗಿ [illegible]. [illegible] ಆ ಪ್ರತಿಕ್ರಿಯೆಯ ಫಲಾಫಲಗಳು [illegible] ಆವಶ್ಯಕತೆ [illegible]. ಅದರಲ್ಲಿ ಹಿಂದೂ ಅಬಲೆಯರ ಸಾಮಾಜಿಕ ಸ್ಥಿತಿಯೂ, ಅವರ ವಿಷಯದಲ್ಲಿ [illegible] ಪುರುಷರು [illegible], ಪಾಶ್ಚಾತ್ಯ [illegible] ಸ್ವಾತಂತ್ರ್ಯ [illegible] ಸ್ತ್ರೀಯರು [illegible] ಅನುಭವಿಸುತ್ತಿರುವ ಪರಿಯನ್ನೂ, ಅವರ [illegible] ವಿಷಯಗಳಾಗಿ [illegible]. ಪ್ರಸಕ್ತ ವಿಷಯ ವಿಚಾರ ಪ್ರವರ್ತಕರೆಲ್ಲರೂ [illegible] ಆದುದರಿಂದ ಪ್ರಸಕ್ತವಿಚಾರಾರ್ಹವಾಗಿರುವ ಹಿಂದೂ ಮಹಿಳೆಯರ ಪ್ರಾಚೀನಾವಸ್ಥಾ ನಿರೂಪಣಕ್ಕೆ ಪ್ರತ್ಯೇಕ ಕಾರಣವು ಅನಾವಶ್ಯಕವಾಗಿರುತ್ತದೆ. ಪೂರ್ವ ಕಾಲದಲ್ಲಿ ಭರತಖಂಡ ನಿವಾಸಿಗಳಾಗಿದ್ದ ಸ್ತ್ರೀಯರ ಸ್ಥಿತಿಗಳಂ ಕುರಿತ ವಿವರಣವು ಈ ಕಾಲದೊಳು ಅನಾವಶ್ಯಕವೆಂದು ಕೆಲವರು ಭಾವಿಸಬಹುದು. ಆದರೆ ಪ್ರಕೃತ ವಿಷಯವು ಪುರಾತನವಾದುದಾಗಿಯೂ, ಒಂದು ಸಮುದಾಯಕ್ಕೆ ಸಂಬಂಧಿಸಿದ್ದಾಗಿಯೂ ಇರುವದರಿಂದ ಇದು ಅನೇಕರಿಗೆ ಗೌರವವನ್ನು ಹುಟ್ಟಿಸಬಹುದೆಂದು ನಂಬುತ್ತೇವೆ. ಏತದ್ವಿಷಯ ವಿಚಾರಕ್ಕೆ ಪೂರ್ವಭಾವಿಯಾಗಿ "ಪುರಾತನ" ವೆಂದುಪಯೋಗಿಸಲ್ಪಟ್ಟಿರತಕ್ಕ ಕಾಲಪರವಾದ ಒಂದು ಶಬ್ದಕ್ಕೆ, ಮುಸಲ್ಮಾನರ ಅಭಿಷೇಣನಕ್ಕೆ ಪೂರ್ವ ಯಾವಕಾಲವೆಂದಾದರು ಅರ್ಥವೆಂಬದಾಗಿ ಎಲ್ಲರೂ ಗ್ರಹಿಸಬೇಕೆಂದು ಕೋರುವೆವು. ಏತಕ್ಕೆಂದರೆ, ಮುಸಲ್ಮಾನರ ಪ್ರಾಬಲ್ಯಕಾಲದಿಂದೀಚೆಗೆ ಇಂಡ್ಯಾ ದೇಶೀಯರ ಕೀರ್ತಿ ಪ್ರಾಭವ ವೈಭವಗಳೆಲ್ಲವು ಕುಗ್ಗಿಂಗವಾಗಿ ನಷ್ಟವಾದಂತೆ ಏರ್ಪಡುವದರಿಂದ ಅದಕ್ಕೆ ಮುಂದು ಅವಸ್ಥೆಯಾಗಿ ಪರಿಗಣಿಸಬೇಕಾಗಿರುತ್ತದೆ. ಮೇಲೆ ಕಂಡ "ಪುರಾತನ" ಕಾಲವು, ಸುಗಮವಾದ ವಿಮರ್ಶಕರಾದ ವರ್ತಮಾನಕಾಲದ ಪ್ರಸಿದ್ಧ ಸುಸ್ಕೃತ ಪಂಡಿತರುಗಳ, ಒಂದು ಮುಖ್ಯ ಕಾರಣಕ್ಕಾಗಿ ಅಂದರೆ, ಅಂತಾ ಕಾಲನಿರ್ಣಯವು ಪ್ರವಿಶಾಲ ಸ್ಥಿತಿಯಂ ಪೌರಾಣಿಕಾಧಾರಗಳ ಮೂಲಕ ಕಂಡು ಹಿಡಿಯಲಿಕ್ಕೆ ಸುಲಭವಾಗಿರುವದರಿಂದ, ಮೂರು ಅವಸ್ಥೆಗಳನ್ನಾಗಿ ವಿಭಾಗಿಸಬೇಕಾಯಿತು. ಪುರಾತನ ಸಂಸ್ಕೃತ ಗ್ರಂಥಗಳನ್ನು ವಿವೇಕದಿಂ ಪರಿಷ್ಕಾರವಾಗಿ ಓದುವದರಿಂದ ಅಂತಾ ಅವಸ್ಥೆಗಳಂ ಚೆನ್ನಾಗಿ ಕಂಡುಕೊಳ್ಳಬಹುದಾಗಿರುತ್ತದೆ. ವರುಷ ನಿಷ್ಕೃಷ್ಟವಾದ ದಿನವೂ ಸಂವತ್ಸರವೂ ಈಗ ಅನಾವಶ್ಯಕವಾಗಿರುತ್ತದೆ. ಏತಕ್ಕೆಂದರೆ ಪ್ರಕೃತ ನಮ್ಮ ಉದ್ದೇಶಕ್ಕೆ ಸಾಧಕವಾಗಿ ಮೇಲೆ ತಿಳಿಸಲ್ಪಟ್ಟ ಅವಸ್ಥಾತ್ರಯಗಳನ್ನು ಅವುಗಳ ಮುಖ್ಯ ಲಕ್ಷಣಗಳನ್ನು ತಿಳಿಸಿದರೆ ಸಾಕಾಗಿರುವದಲ್ಲದೆ ಅವುಗಳನ್ನು ಕಾಲಕ್ರಮಾನುಗುಣವಾಗಿ ವ್ಯವಸ್ಥೆ ಮಾಡಬೇಕಾದ ಆವಶ್ಯಕತೆ ಯಾವದೂ ಕಾಣಿಸಲಿಲ್ಲವು. ಈಗ ನಾವು ತಿಳಿಸುವ ಮುಖ್ಯಾವಸ್ಥೆಗಳು ಯಾವವೆಂದರೆ,—

ಮೊದಲನೆಯದು.-ವೈದಿಕಾವಸ್ಥೆಯು.—ಈ ಕಾಲದಲ್ಲಿ ಆರ್ಯರೆಲ್ಲರೂ ಶ್ರುತಿಸ್ಮೃತಿ ಪ್ರತಿಪಾದ್ಯಗಳಾದ ಗ್ರಂಥಗಳಲ್ಲಿ ವಿಧಿಸಲ್ಪಟ್ಟಿರುವರೀತಿ ಜೀವಿಸುತಲಿದ್ದಂತೆ ಅನೇಕ ನಿದರ್ಶನಗಳಿಂದ ವ್ಯಕ್ತವಾಗುತ್ತಿದೆಯಾಗಿ, ಅದಂ ತಕ್ಕಂತೆಯೇ ವ್ಯವಹರಿಸಬೇಕಾಯಿತು ಭರತಖಂಡದ ಪ್ರಾಚೀನ ಕಾವ್ಯ, ಪ್ರಬಂಧ, ನಾಟಕ, ಇತಿಹಾಸಾದಿಗಳಲ್ಲಿ ವರ್ಣಿಸಲ್ಪಟ್ಟಿರುವಾಕೆಲ್ಲ ಆ ಕಾಲದಲ್ಲಿ ಜನರು ವರ್ತಿಸುತಲಿದ್ದದರಿಂದಲೇ ಅವುಗಳಿಗೆ ಯುಗಧರ್ಮಗಳೆಂಬ ವ್ಯವಹಾರ ಸಹ ಪ್ರಯೋಗವಾಗುತ್ತಿದೆ. ಏತದವಸ್ಥಾ ನಿವಾರಣಾನಂತರ [illegible] ಪ್ರಸಿದ್ಧವಾಯಿತು. ಇದು [illegible] ಎನಿಸಿ, [illegible] ಸ್ತ್ರೀಯ [illegible] ಕರೆಯಬೇಕಾಗಿರುತ್ತದೆ. [illegible] ಯಾವದೆಂದರೆ, ಸಮುದಾಯದ [illegible] ವಿಷ್ಣುವನ್ನು ಪ್ರಬಲಿಸಿ [illegible] ವಿದ್ಯೆಯಿಂದ ಶಕ್ತಿಗಳಿಂದ [illegible] ಶಾಸ್ತ್ರಸಿದ್ಧಾಂತಗಳನ್ನೇ [illegible]

ಸಿದರು. ಈ ಅವಸ್ಥೆಯಲ್ಲಿಯೇ ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ರಚಿಸಿದ ಪ್ರಸಿದ್ಧರನೇಕರು ಜೀವಿಸಿದ್ದಂತೆ ತಿಳಿಯಬರುತ್ತಿದೆ. ಇದಲ್ಲದೆ ಅನರು ಆ ಕಾಲದಲ್ಲಿ ಪ್ರಾಬಲ್ಯದಶೆಯೊಳಿದ್ದ ಬೌದ್ಧ ಚಾರ್ವಾಕಾದಿ ಸಿದ್ಧಾಂತಾವಲಂಬಿಗಳನ್ನು ವಾದದಲ್ಲಿ ಜಯಿಸಿದುದು ಸ್ಪಷ್ಟವಾಗುತ್ತಿದೆ. ಇಂತಾ ಅವಸ್ಥೆಯು ಗತಿಸಿ ಪೌರಾಣಿಕಾವಸ್ಥೆಯೊಂದು ಪ್ರಾಪ್ತವಾಯಿತು. ಈ ಅವಸ್ಥೆಯಲ್ಲಿ ಜನರ ಸ್ಥಿತಿಗತಿಗಳೆಲ್ಲವು ಪುರಾಣೋಕ್ತಗಳಾದ ವಿಧಿನಿಷೇಧಗಳನ್ನನುಸರಿಸಿದವಾಗಿದ್ದವು. ಇದನ್ನು ಕೆಲವರು ಚರಿತ್ರಲೇಖಕರು ಹಿಂದೂಗಳ ಪುನರುಜ್ಜೀವನಾವಸ್ಥೆಯೆಂಬದಾಗಿ ವ್ಯವಹರಿಸುತ್ತಾರೆ. ಆದರೆ ಪ್ರಸಕ್ತ ನಮ್ಮ ವಿಚಾರಕ್ಕೆ ಇದರಿಂದ ಸ್ವಲ್ಪವಾದರೂ ಯಾವ ಪ್ರಯೋಜನವೂ ಕಾಣಿಸುವದಿಲ್ಲವಾಗಿ ಇದನ್ನುಪೇಕ್ಷಿಸಿ ವಿಚಾರಪಾದನೆ ಎರಡನೆಯದರ ಅಂತರಾಳಕಾವಸ್ಥೆಯಾಗಿ ಪರಿಭಾವಿಸುವೆವು. ಕಡೆಯದಾದ ತೃತೀಯಾವಸ್ಥೆ ಎಂಬದು, ನಾವು ಮೊದಲು ತಿಳಿಸಿದಂತೆ, ಮುಸಲ್ಮಾನರು ಈ ದೇಶದ ಮೇಲೆ ದಂಡೆತ್ತಿ ಬಂದು ಇಲ್ಲಿ ಸ್ಥಿರವಾಗಿ ನೆಲಸಿದ ಕಾಲಕ್ಕೆ ಮೊದಲಾಯಿತು ಎಂದು ಹೇಳಬಹುದು. ಅದರೆ ವರ್ತಮಾನ ಕಾಲಿಕವಾದ ಬೇರೊಂದವಸ್ಥೆ ಆರಂಭವಾದದರಿಂದ ಅದನ್ನು ಮಧ್ಯಮಾವಸ್ಥೆಯೆಂದು ನುಡಿಯಬಹುದು. ಎನ್ನು ಕ್ರಮವಾಗಿ ಅವಸ್ಥೆಗಳ ಲಕ್ಷಣಗಳಂ ವಿವರಿಸುತ್ತೇವೆ ಹ್ಯಾಗೆಂದರೆ,—

೧. ವೈದಿಕಾವಸ್ಥೆ —ಈ ಕಾಲದಲ್ಲಿ ಪ್ರಾಯಶಃ ಸ್ತ್ರೀ ಪುರುಷರೆಲ್ಲರೂ ದೃಢಾಂಗಿಗಳಾಗಿಯೂ ಜಿತೇಂದ್ರಿಯರಾಗಿಯೂ ಐಹಿಕಸುಖಾಪೇಕ್ಷೆಯಾ ಆಮುಷ್ಮಿಕ ಸುಖಸಂತೋಷಗಳನ್ನೇ ಮುಖ್ಯವಾಗಿ ಕೋರುತ ಅದಕ್ಕಾಗಿ ಅನವರತ ಪರಿಶ್ರಮವುಳ್ಳವರಾಗಿಯೂ, ದುರ್ವಿಷಯಾಭಿನಿವೇಶವಿಲ್ಲದವರಾಗಿಯೂ ಇದ್ದದರಿಂದ, ಅನರಿಬ್ಬರೂ ಪರಸ್ಪರ ಗೌರವ ಪುರಸ್ಕಾರಗಳೊಡನೆ ವರ್ತಿಸುತಲಿದ್ದರಲ್ಲದೆ ಅವರವರಿಗೆ ಇಷ್ಟಬಂದಾಗಲೂ, ವಿವಾಹಾರ್ಹರಾದಾಗಲೂ, ಮದುವೆ ಮಾಡಿಕೊಳ್ಳುತಲಿದ್ದಂತೆ ತಿಳಿಯಬರುತ್ತಿದೆ. ಆ ಕಾಲದಲ್ಲಿ ಪುರುಷರು ಹ್ಯಾಗೆ ದೀರ್ಘ ಬ್ರಹ್ಮಚಾರಿಗಳಾಗಿದ್ದುಕೊಂಡು ವೇದಶಾಸ್ತ್ರಾಭ್ಯಾಸಗಳಂ ಮಾಡುತ ತಪೋನಿಷ್ಠರಾಗಿರುತಲಿದ್ದರೋ ಅದೇ ರೀತಿ ಆ ಕಾಲದ ಸ್ತ್ರೀಯರು ಸಹ ಬ್ರಹ್ಮವಾದಿನಿಗಳೆಂತಲೂ, ಸದ್ಯೋವಧೂಗಳೆಂತಲೂ, ಎರಡು ಪ್ರಭೇದದವರಾಗಿ ಏರ್ಪಟ್ಟಿದ್ದರು. ಮೊದಲನೆಯವರಾದ ಬ್ರಹ್ಮವಾದಿನಿಗಳು ಅಧ್ಯಾತ್ಮ ವಿಚಾರಪರರಾಗಿ, ಯಾವಾಗಲು ಭಗವತ್ಸ್ವರೂಪವನ್ನೂ ಅತಿಶಯವಾದ ಆತನಗುಣವರ್ಣನೆಯನ್ನೂ ಮೋಕ್ಷವಿಧಾನವನ್ನೂ, ತತ್ಪ್ರಾಪ್ತ್ಯುಪಾಯವನ್ನೂ ಕುರಿತು ಪಂಡಿತರಾದ ಮುನಿವರ್ಯರೊಡನೆ ಪ್ರಕಟವಾಗಿ ವಾಕ್ಯಾರ್ಥ ನಡೆಸುತಲಿದ್ದರು. ಇವಲ್ಲದೆ ಕೆಲವರು, ಯೋಗಮಾರ್ಗಾನುಸಾರಿಗಳಾಗಿ ತಪಸ್ಸನ್ನಾಚರಿಸುವರಾಗಿಯೂ ವನವೃತ್ತಿಯಲ್ಲೇ ಇದ್ದು ಗತಿಸಿದರೆಂದು ಸಹ ತಿಳಿಯಬರುತ್ತಿದೆ. ಇವಕ್ಕೆ ಆಧಾರವಾಗಿ ಶ್ರೀಬೃಹದಾರಣ್ಯಕೋಪನಿಷತ್ತಿನ ಐದನೇ ಅಧ್ಯಾಯದ ೪ನೇ ಬ್ರಾಹ್ಮಣದಲ್ಲಿ ತಿಳಿಸಲ್ಪಟ್ಟಿರುವ ಒಂದು ಆಖ್ಯಾನದ ಪೈಕಿ ಗಾರ್ಗಿ ಯಾಜ್ಞವಲ್ಕ್ಯ ಸಂವಾದ ರೂಪವಾದ ಇದರಡಿ ಕಂಡ ವಿಷಯವನ್ನು ನಿದರ್ಶನತ್ವೇನ ಉದಹರಿಸುವೆವು.—

೧. ಬಳಿಕ ವಾಚಕ್ನವಿ ಎಂಬ ಋಷಿ ಪುತ್ರಿಯು ತಿಳಿಸಿದಳೇನಂದರೆ, ಪೂಜ್ಯರಾದ ದ್ವಿಜೋತ್ತಮರೇ! ಈ ಉದ್ದಾಲಕರಂ ಕುರಿತು, ನಾನು ಎರಡು ಪ್ರಶ್ನೆಗಳಂ ಕೇಳ್ವೆನು, ಅವುಗಳಿಗೆ ಅವರು ಸಮಂಜಸವಾದ ಉತ್ತರಗಳಂ ಕೊಡುವದಾದರೆ ಅವರಂ ನೀವು ಯಾರೂ ಬ್ರಹ್ಮವಿಚಾರದಲ್ಲಿ ಜಯಿಸಲಾರಿರೆಂದೆಣಿಸುತ್ತೇನೆ ಎಂಬದು. ಆಗ ಯಾಜ್ಞವಲ್ಕ್ಯರು ಗಾರ್ಗಿಯಂ ಕುರಿತು, ಓ ಗಾರ್ಗೀ! ನೀನು ತಿಳಿಸಿದ ಪ್ರಶ್ನೆಗಳಂ ಕೇಳಬಹುದೆಂದರು.

ಗಾರ್ಗಿ—ಯಾಜ್ಞವಲ್ಕ್ಯರೇ! ವಿಖ್ಯಾತವಾದ ಕಾಶೀ ರಾಜವಂಶದಲ್ಲಾಗಲಿ, ವಿದೇಹ ರಾಜವಂಶದಲ್ಲಾಗಲಿ ಜನಿಸಿದ ಶೂರನಾದ ರಾಜಪುತ್ರನೊಬ್ಬನು, ಅವತಾರಿತವಾದ ಧನುಸ್ಸಿನ ಗುಣವಂ ಮರಳಬಂಧಿಸಿ ಶತ್ರುಹೃದಯಗ್ರಂಥಿವಿಚ್ಛೇದಕವಾಗಿರುವ ತೀಕ್ಷ್ಣಗಳಾದ ಎರಡು ಬಾಣಗಳ ಕರಸಂಧಾನವಂ ಮಾಡಿ ಶತ್ರುನಿಗ್ರಹೇಚ್ಛೆಯೊಡನೆ ಸಮರಾಭಿಮುಖನಾಗಿ ಹ್ಯಾಗೆ ತೆರಳುವನೋ ತದ್ವತ್ ಕರವಾಯುಗಳಾದ ಆಧ್ಯಾತ್ಮಿಕ ವಿಷಯವೆಂಬ ಪ್ರಶ್ನದ್ವಯವಂ ವಿಚಾರವೆಂಬ ಗುಣದಿಂ ಬಂಧವಾದ ಮನವೆಂಬ ಧನುಸ್ಸಿನಲ್ಲಿ ಸಂಧಾನ ಮಾಡಿ ತಮ್ಮ ಸಾನ್ನಿಧ್ಯದಲ್ಲಿ ಯುದ್ಧಾಂಕಾಂಕ್ಷೆಯೊಡನೆ ಬಂದು ನಿಂತು ವಾಕ್ಯಾರ್ಥವೆಂಬ ಯುದ್ಧಕ್ಕೆ ಉಪಕ್ರಮಿಸಿರುತ್ತೇನೆ. ಅಂತಾ ನನ್ನ ಶರಪೂರವೆಂ ಸದುತ್ತರಗಳೆಂಬ ಫಲನಾಶ್ರಯದಿಂ ದೇಕಾದರೆ ಆತ್ಮರಕ್ಷಣೆ ಮಾಡಿಕೊಳ್ಳಬಹುದು. ಅದುದರಿಂದ ನೀವು ನನ್ನ ಪ್ರಶ್ನೆಗಳಿಗೆ ಉತ್ತರಗಳಂ ಹೇಳಿರೆಂದು ನುಡಿದಳು. ಅದಂ ಕೇಳಿ ಯಾಜ್ಞವಲ್ಕ್ಯರು—ಓ ಗಾರ್ಗೀ! ನೀನು ದಾರಾಳವಾಗಿ ಕೇಳಬಹುದೆಂದರು.

೨. ಓ ಯಾಜ್ಞವಲ್ಕ್ಯರೇ! ಈ ಅಣ್ಡಕಪಾಲ ದೂರ್ಧ್ವಭಾಗವಲ್ಲಿಯೂ, ಅದರ ಅಧೋಭಾಗದಲ್ಲಿಯೂ, ದ್ಯಾವಾಪೃಥ್ವಿಗಳ ಮಧ್ಯದಲ್ಲಿಯೂ, ಭೂತಭವಿಷ್ಯದ್ವರ್ತಮಾನಗಳೆಂಬ ಕಾಲತ್ರಯ ಪರಿಚ್ಛಿನ್ನವಾಗಿ ತಂತುನಿಷ್ಠಗಳಾದ ಓತಪ್ರೋತಗಳಂತೆ (ಅಂದರೆ ಬಟ್ಟೆಯಲ್ಲಿರುವ ಹಾಸಿಕೆ ಅಡ್ಡ ಎಳೆಗಳಂತೆ) ಯಾವದು ಸರ್ವವ್ಯಾಪಕವಾಗಿರುವಂತೆ ನುಡಿಯಲ್ಪಡುತ್ತಿದೆಯೋ ಅಂತಾ ವಸ್ತುವಂ ನನಗೆ ತಿಳಿಸಿರೆಂದು ಗಾರ್ಗಿಯು ಪ್ರಶ್ನೆ ಮಾಡಿದಳು. ಅದಕ್ಕೆ ಯಾಜ್ಞವಲ್ಕ್ಯರು—

೪. ಓ ಗಾರ್ಗೀ! ಯಾವದು ಅಣ್ಡಕಪಾಲದೂರ್ಧ್ವಭಾಗದಲ್ಲಿಯೂ, ತದಧೋಭಾಗದಲ್ಲಿಯೂ ದ್ಯಾವಾಪೃಥ್ವಿಗಳ ಮಧ್ಯದಲ್ಲಿಯೂ, ಭೂತಭವಿಷ್ಯದ್ವರ್ತಮಾನಗಳೆಂಬ ಕಾಲತ್ರಯ ಪರಿಚ್ಛಿನ್ನವಾದುದಾಗಿ ತಂತುನಿಷ್ಠಗಳಾದ ಓತಪ್ರೋತಗಳಂತೆ ವ್ಯಾಪಿಸಿರುವದೆಂದು ಹೇಳುತ್ತಾರೆಯೋ ಅದಂ ನೀನು ಅವ್ಯಾಕೃತಾಕಾಶವೆಂದು ಯಾತಕ್ಕೆ ನುಡಿಯೆಂದು ಹೇಳಿದರು. ಅದುಕೇಳಿ ಗಾರ್ಗಿಯು, ಯಾಜ್ಞವಲ್ಕ್ಯರೇ! ದುರವಗಾಹವಾದ ನನ್ನ ಪ್ರಶ್ನೆಗೆ ತಕ್ಕ ಉತ್ತರವಂ ಕೊಟ್ಟದಕ್ಕಾಗಿ ನಾನು ತಮಗೆ ವಂದನವನ್ನಾಚರಿಸುವೆನು. ಇನ್ನು ನನ್ನ ಎರಡನೆಯ ಪ್ರಶ್ನೆಗೆ ಉತ್ತರವಂ ದಯಪಾಲಿಸಿರೆಂದು ನುಡಿಯಲು ಆಗ ಯಾಜ್ಞವಲ್ಕ್ಯರು ಕೇಳು ಗಾರ್ಗಿಯೆಂದು ಹೇಳಿದರು. ಆಗ ಮರಳಿ ಆಕೆ ಪ್ರಶ್ನೆ ಮಾಡಿದಳೆಂತೆಂದರೆ,—

೫. ಈ ಅಣ್ಡಕಪಾಲದೂರ್ಧ್ವಭಾಗದಲ್ಲಿಯೂ ಅದರ ಅಧೋಭಾಗದಲ್ಲಿಯೂ, ದ್ಯಾವಾಪೃಥ್ವಿಗಳ ಮಧ್ಯದಲ್ಲಿಯೂ ಭೂತಭವಿಷ್ಯದ್ವರ್ತಮಾನ ಕಾಲಪರಿಚ್ಛಿನ್ನವಾಗಿ ತಂತುನಿಷ್ಠಗಳಾದ ಓತಪ್ರೋತಗಳಂತೆ ಯಾವದರಲ್ಲಿ ವ್ಯಾಪ್ತವಾಗಿದೆಯೋ ಅದಂ ತಿಳಿಸಿರೆಂದಳು. ಅದಕ್ಕೆ ಯಾಜ್ಞವಲ್ಕ್ಯರು,

೬-೭ ಆಕಾಶಾದೂರ್ಧ್ವಭಾಗದಲ್ಲಿಯೂ, ಭೂಮ್ಯಧೋಭಾಗದಲ್ಲಿಯೂ, ಭೂಮ್ಯಾಕಾಶದ ಮಧ್ಯಭಾಗದಲ್ಲಿಯೂ, ತ್ರೈಕಾಲಿಕವಾಗಿ ಓತಪ್ರೋತಗಳಂತೆ ನೆಯ್ಯಲ್ಪಟ್ಟಿರುವದು ಆಕಾಶದಲ್ಲಿ ವಿನಾ ಬೇರಲ್ಲವು. ಇದನ್ನು ಬ್ರಾಹ್ಮಣರು, ಅಕ್ಷರವಂ ಪರಿ ನಾಶರಹಿತವಾದದ್ದೆಂದು ಕರೆಯುತ್ತಾರೆ. ಅದು ಅಸ್ಥೂಲವಾಗಿಯೂ, ಅನಣುವಾಗಿಯೂ, ಅಹ್ರಸ್ವವಾಗಿಯೂ, ಅದೀರ್ಘವಾಗಿಯೂ, ಅಗ್ನಿಯಂತೆ ಅಲೋಹಿತವಾಗಿಯೂ, ಜಲದಂತೆ ಅಸ್ನೇಹವಾಗಿಯೂ, ಅಚ್ಛಾಯೆಯಾಗಿಯೂ, ಅತಮಸ್ಸಾಗಿಯೂ, ಅವಾಯುವಾಗಿಯೂ, ಅನಾಕಾಶವಾಗಿಯೂ, ಸಂಗರಹಿತವಾದದ್ದಾಗಿಯೂ ಅರಸವಾಗಿಯೂ, ಅಗಂಧವಾಗಿಯೂ, ಅಚಕ್ಷುಷ್ಕವಾಗಿಯೂ, ಮನಸ್ಸಿಲ್ಲದ್ದಾಗಿಯೂ, ತೇಜೋರಹಿತವಾದುದಾಗಿಯೂ, ಪ್ರಾಣವಿಲ್ಲದ್ದಾಗಿಯೂ, ಮುಖವಿಲ್ಲದ್ದಾಗಿಯೂ, ಪರಿಮಾಣರಹಿತವಾದದ್ದಾಗಿಯೂ, ಅನಂತರವಾಗಿಯೂ ಅಬಾಹ್ಯವಾಗಿಯೂ ಯಾವದನ್ನೂ ಭಕ್ಷಿಸದ್ದಾಗಿಯೂ, ಯಾವದರಿಂದಲೂ ಭಕ್ಷಿಸಲ್ಪಡದ್ದಾಗಿಯೂ ಇರುತ್ತಿದೆ. ಅಂದರೆ ಸರ್ವ ವಿಶೇಷಣ ರಹಿತವಾದ ದ್ವಂದ್ವರ್ಥವು. ಅದು ಒಂದೇ ಒಂದಾಗಿಯೂ ಅದ್ವಿತೀಯವಾದುದಾಗಿಯೂ ಇರುವದೆಂದರಿಯತಕ್ಕದ್ದು, ಎಂಬದು.

(ಇದರ ಶೇಷವು ಮುಂದಿನ ವಾರಕ್ಕೆ.)

Occasional Notes
ನೈಮಿತ್ತಿಕ ವಿಷಯನ್ಯಾಸ.

The new Prime Minister of Indore ಇಂದೂರ್‌ಸಂಸ್ಥಾನದ ಪ್ರಾತಿಕಾಜ್‌ಕೋರ್ಟ್ ಜಡ್ಜಿಯವರಾಗಿದ್ದ ರಾವ್‌ಬಹದೂರ್ ಖಿತಾಪ್‌ಚಂದ್ ಯೆಂಬವರು ಸದರೀ ಸಂಸ್ಥಾನದ ಪ್ರಧಾನಮಂತ್ರಿಯವರಾಗಿ ನೇಮಕಮಾಡಲ್ಪಟ್ಟರೆಂದು ತಿಳಿಯಬರುತ್ತಿದೆ.

The East Coast Railway.—ಇಸ್ಟರ್ನ್ ಕೋಸ್ಟ್ ಮದ್ರಾಸ್ ಪ್ರಾಂತದ ರೈಲ್ವೆ ಕಂಪೆನಿಯ ಪೈಕಿ ಗಂಜಾಂ ವರಿಗೆ ಕೆಲಸವನ್ನು ಪ್ರಾರಂಭಿಸತಕ್ಕ ಬಗ್ಗೆ ಅರವತ್ತು ಲಕ್ಷ ರೂಪಾಯಿಗಳು ಮಂಜೂರಾಗಿರುವದರಿಂದ ಕೂಡಲೆ ಸದರೀ ಕೆಲಸವು ಪ್ರಾರಂಭಿಸಲ್ಪಡುವುದು.

Water supply in Cantonments—ಬ್ರಿಟಿಷ್ ಕಂಟೋನ್ಮೆಂಟುಗಳಲ್ಲಿ ಜಲವಸತಿಯನ್ನುಂಟುಮಾಡತಕ್ಕ ವಿಷಯವು ಮಿಲಿಟರಿ ಅಧಿಕಾರಿಗಳ ಅವಧಾನಕ್ಕೆ ಬಂದು ಆ ಭಾಗದಲ್ಲುಂಟಾಗಿರುವ ದೋಷವಂ ಪರಿಹರಿಸುವ ಉದ್ದೇಶದೊಡನೆ ಒಂದು ಏರ್ಪಾಟು ಮಾಡಬೇಕೆಂಬಯೋಚನೆಯುಂಟಾಗಿರುವಂತೆ ತಿಳಿಯಲಾದೆವು.

The Lieut Governorship of Bengal ಬಂಗಾಳದೇಶದ ಲೆಫ್ಟಿನೆಂಟ್ ಗವರ್ನರಾದ ಸರ್ ಸ್ಟೂವರ್ಟ್ ಬೇಲಿಯವರು ತಮ್ಮ ಅಧಿಕಾರದಿಂ ನಿವೃತ್ತರಾಗುವವರಾಗಿರುವದರಿಂದ ಅವರ ಕೆಲಸಕ್ಕೆ ಸರ್ ಚಾರ್ಲ್ಸ್ ಯಲಿಯಟ್ ಯವರೂ, ಅವರ ಕೆಲಸಕ್ಕೆ ಬರ್ಮಾ ಚೀಫ್ ಕಮೀಷನರಾದ ಸರ್ ಎ ಪಿ ಡಬ್ಲ್ಯು ಕ್ರಾಸ್ಥ್‌ವೈಟ್ ಯವರೂ ನೇಮಕಮಾಡಲ್ಪಡುವರೆಂದು ತಿಳಿಯಬರುತ್ತಿದೆ.

Appointment of British Residents.—ಜಯಪುರಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಟ್ರೀವೋರ್ ಯೆಂಬವರಿಗೆ ಬದಲಾಗಿ ಕರ್ನಲ್ ಪೀಕಾಕ್ ಯೆಂಬವರು ನೇಮಕಮಾಡಲ್ಪಟ್ಟಿರುವದಲ್ಲದೆ ಮೇಜರ್ ಅಬ್ಬಾಟ್ ಯೆಂಬವರು ಆಫೀಸಿಯೇಟಿಂಗ್ ರೆಸಿಡೆಂಟರಾಗಿ ತತ್ಕಾಲದಲ್ಲಿ ಕೆಲಸ ನೋಡುತಲಿರತಕ್ಕಬಗ್ಗೆ ಉದಯಪುರಕ್ಕೆ ಕಳುಹಿಸಲ್ಪಟ್ಟಿರುತ್ತಾರೆ.

Mr. Rudra, Barrister-at-law—ಕೆಲವು ಸಂವತ್ಸರಗಳಹಿಂದೆ ಆಗ್ರಾ ಕೋರ್ಟುಗಳಲ್ಲಿ ವಕಾಲತ್ ಮಾಡುತಲಿದ್ದ ಬ್ಯಾರಿಸ್ಟರ್ ಮಿ ರುದ್ರ ಯೆಂಬವರನ್ನು ಮಾಸಿಯಾನಾ ೧,೫೦೦ ರೂಪಾಯಿಗಳ ಸಂಬಳದಲ್ಲಿ ಆರುತಿಂಗಳವರಿವಿಗೆ ತಮ್ಮ ಲೀಗಲ್ ಅಡ್ವೈಸರಾಗಿ ನವಾಬ್ ಸರ್ ಕುರ್ಷಿದ್‌ಜಾ ಎಂಬವರು ಇಟ್ಟುಕೊಂಡಿರುತ್ತಾರೆಂದು ತಿಳಿಯಬರುತ್ತಿದೆ.

The probable resignation of H. E the Viceroy—ಇಂಡ್ಯಾದೇಶದ ವೈಸ್‌ರಾಯಿ ವ ಗವರ್ನರ್ ಜನರಲ್ಲವರಾದ ಲಾರ್ಡ್ ಲ್ಯಾನ್ಸ್‌ಡೌನ್ ಯವರಿಗೆ ಈಚೆಗೆ ಪ್ರಾಪ್ತವಾಗಿದ್ದ ಶರೀರಾಲಸ್ಯದಿಂ ತಮ್ಮ ಕೆಲಸಕ್ಕೆ ಬಹುಶಃ ರಾಜೀನಾಮೆಕೊಡುವ ತಾತ್ಪರ್ಯವುಳ್ಳವರಾಗಿದ್ದರೆಂಬ ಪ್ರವಾದವು ಮಿಥ್ಯಾಂಗವಾಗಿ ನಿರಾಧಾರವಾದದ್ದೆಂದು ತಿಳಿಯಬರುತ್ತಿದೆಯಲ್ಲದೆ ವೈಸ್‌ರಾಯಿಯವರಿಗೆ ಈಗ ಸಂಪೂರ್ಣ ಆರೋಗ್ಯವುಂಟಾಗಿ ದೃಢಾಂಗರಾಗಿರುವಂತೆ ಅರಿತೆವು.

A ruling of the Government.—ಮ್ಯುನಿಸಿಪಲ್ ಅಥವಾ ಲೋಕಲ್‌ಬೋರ್ಡಿನವರು ತಮ್ಮ ಉಪಯೋಗಾರ್ಥ ಒಂದು ಜಮೀನನ್ನು ತೆಗೆದುಕೊಂಡು ಅಂತಾ ಜಮೀನ್ ಸ್ವಾಧೀನದನು ಸವರ್ನಮೆಂಟಿಗೆ ಕೊಡಬೇಕಾದ ಕಂದಾಯವನ್ನು ವಜಾ ಕೊಡುವ ಸಂದರ್ಭಗಳಲ್ಲಿ ಅದರ ಬೆಲೆಯಿಂದ ಗವರ್ನಮೆಂಟಿಗೆ ಉಂಟಾಗುವ ಕಂದಾಯ ನಷ್ಟವನ್ನು ಸದರೀ ಬೋರ್ಡಿನವರು ಪರ್ಮನೆಂಟಾದವರ್ಣ ಕೊಟ್ಟು ಅಥವಾ ಸದರೀ ಮೊಬಲಗು ಬಡ್ಡಿ ಮೂಲಕ ಉತ್ಪತ್ತಿಯಾಗುವಷ್ಟು ಮೂಲಧನವನ್ನು ಕೊಡುವದರಮೂಲಕ ಈಡುಮಾಡಬೇಕೆಂದು ಗವರ್ನಮೆಂಟಿನವರು ನಿರ್ಣಯಿಸಿರುತ್ತಾರೆ.

Military worth of Russian soldiery—ಆಸ್ಟ್ರಿಯಾಸಂಸ್ಥಾನದೊಳಿಚೆಗೆ ನಡೆದ ಸೈನಿಕವ್ಯೂಹದ ಸುವಿಭಾಗ ಸಂದರ್ಭದೊಳು ಜರ್ಮನೀ ದೇಶದ ಚಕ್ರವರ್ತಿಯವರು ಹಾಜರಿದ್ದದಷ್ಟೆ ಸದರೀಯವರಸಂಗಡ ಅಲ್ಲಿಗೆಹೋಗಿದ್ದ ಮಿಲಿಟರಿ ಆಫೀಸರುಗಳು ರಷಿಯಾದೇಶದ ಮಿಲಿಟರಿಜನರ ಧೈರ್ಯ ಸಾಹಸಗಳಂ ನೋಡಿ ಬಹಳ ಆಶ್ಚರ್ಯ ಪಟ್ಟರಂತೆ, ಹ್ಯಾಗುವರೆ, ಸದರೀ ಸೇನೆಯು ಕವಾಯತು ಮಾಡುತ ಒಂದು ದಿವಸ ಬಹಳ ಸೇನೆಯೊಡನೆ ಒಂದು ನದೀತೀರದಲ್ಲಿ ಬಂದು ನಿಂತುಕೊಂಡು ಬಂಡಿಗಳು ತೆಗೆದುಹಾಕಿ, ನದಿಯಂ ದಾಟಬೇಕೆಂಬ ಸಂಜ್ಞೆಯುಂಟಾಗಿ, ತಾನು ಮೊದಲು ನೀರಿನಲ್ಲಿ ದುಮಿಕಿದಕೂಡಲೆ ಸೈನ್ಯವೆಲ್ಲಹಿಂಬಾಲಿಸಿ ಈಜಿಕೊಂಡುಹೋಗಿ ಆಚೆದಡವಂ ಸೇರಿದರು.

A new mode of treating cobra poison ಸರ್ಪವಿಷ ಪರಿಹರಕ್ಕೆ ಈಚೆಗೆ ಬಂದು ನೂತನ ಶೋಧನೆಯು ಒಬ್ಬಾತನಿಂದ ಕಂಡುಹಿಡಿಯಲ್ಪಟ್ಟದ್ದಾಗಿ ಒಂದಾನೊಂದು ಪತ್ರಿಕೆ ತಿಳಿಸುತಿದೆ ಹ್ಯಾಗಂದರೆ—ಬಂಗಾಳದೇಶದೊಳು ಹಾವುಕಚ್ಚಿದ ಒಬ್ಬನಿಗೆ ಬಹುವಿಧ ಚಿಕಿತ್ಸೆಗಳಂ ಮಾಡಿ ಅವೆಲ್ಲವು ನಿಷ್ಪ್ರಯೋಜಕಗಳಾಗಿ ಹೋದ ಮೇಲೆ, ಒಬ್ಬ ವೈದ್ಯನು ಹೆಣ್ಣುಕೋಳಿಗಳಂತಂ ಹಾವುಕಚ್ಚಿದ ಸ್ಥಳವನ್ನು ಹಿಡಿದು ಹೀರುವಂತೆ ಮಾಡಲು ಒಂಭತ್ತು ಕೋಳಿಗಳು ಕೂಡಲೇ ಬಿದ್ದು ಸತ್ತುಹೋದವು. ಹತ್ತನೇ ಕೋಳಿ ಧಾರಾಳವಸ್ಥಿತಿಗೆ ಬಂತು, ಹನ್ನೊಂದನೇ ಕೋಳಿಗೆ ದೈವಾತ್ ವಿಷತ್ವಗಳಡೆ ವಿಷವನ್ನು ಮಾತ್ರವು ಪೂರ್ಣವಾಗಿ ಹೀರಿಬಿಡಲು ಹಾವುಕಚ್ಚಿದ ರೋಗಿಗೆ ಕೂಡಲೆ ಗುಣವಾಯಿತು, ಎಂಬದು.

The free trade principle.—ಇಂದೂರಿಸಂಸ್ಥಾನದಲ್ಲಿ ಕೆಲವುಕಾಲ ದಿವಾನರಾಗಿದ್ದ ಮಹಾರಾಜ ದಿವಾನ್ ಬಹದೂರ್ ಆರ್ ರಘುನಾಥರಾಯರವರು ಈಚೆಗೊಂದು ಸಂದರ್ಭದಲ್ಲಿ ಮಾಡಿದ ಉಪನ್ಯಾಸಕಾಲದೊಳು, ಸದರೀ ಸಂಸ್ಥಾನದಲ್ಲಿ ಅಲ್ಲಿನ ಬ್ರಿಟಿಷ್ ರೆಸಿಡೆಂಟರವರ ಕೋರಿಕೆಯನ್ನನುಸರಿಸಿ ಫ್ರೀಟ್ರೇಡ್ ಪ್ರಿನ್ಸಿಪಲ್, ಅಂದರೆ ಸ್ವತಂತ್ರ ವ್ಯಾಪಾರಪದ್ಧತಿಯು ಜಾರಿಯಲ್ಲಿ ತರಲ್ಪಟ್ಟದ್ದಾಗ್ಯೂ ಅದು ಸಂಸ್ಥಾನದ ಮುಖ್ಯಪ್ರಯೋಜನಕ್ಕೆ ವಿಶೇಷತಃ ಬಾಧಕವಾಗಿ ಏರ್ಪಟ್ಟಿರುತ್ತಿದೆ ಯೆಂಬದಾಗಿ ತಿಳಿಸಿದರು. ಸದರೀ ವ್ಯಾಪಾರಕ್ರಮವು ಒಂದು ವಿಧದಲ್ಲಿ ದೇಶಕ್ಕೆ ಸಾಧಕವಾಗಿಯೂ ಮತ್ತೊಂದು ವಿಧದಲ್ಲಿ ಪ್ರತ್ಯುತ ಬಾಧಕವಾಗಿಯೂ ಪರಿಣಮಿಸದಿರಲಿಲ್ಲವು.

Affairs of Cooch Behar—ಕೂಚ್ ಬಿಹಾರ್ ಸಂಸ್ಥಾನದ ಪ್ರಕೃತಸ್ಥಿತಿಯು ಪರ್ಯಾಲೋಚಿಸಲಾಗಿ ಈಗ ಅದಂ ಪಾಲಿಸುತಲಿರತಕ್ಕ ಮಹಾರಾಜರವರ ವಿಲಕ್ಷಣ ಪ್ರಭುತ್ವದಲ್ಲಿ ಅದು ಏರಬಹುದಾದ ದಶೆಯೊಳಿಲ್ಲವೆಂಬದಾಗಿ ಹೇಳಬಹುದು. ಏತಕ್ಕೆಂದರೆ ಈಗಿನ ಮಹಾರಾಜರವರಿಗೆ ದೌಲತ್ ಒಪ್ಪಿಸಲ್ಪಟ್ಟಕಾಲದಲ್ಲಿ ಖಜಾನೆಯು ಭರ್ತಿಯಾಗಿ ನಗದ್ ಎಂಟು ಲಕ್ಷರೂಪಾಯಿಗಳು ಹಾಜರಿದ್ದಂತೆಯೂ, ಈಗ ಅದು ಪ್ರಾಯಶಃ ಶುದ್ಧಾಂಗ ಖಾಲಿಯಾಗಿರುವದಲ್ಲದೆ ತಮ್ಮ ಸಂಸ್ಥಾನದಲ್ಲಿ ಒಂದು ರೈಲುರಸ್ತೆ ಹಾಕತಕ್ಕಬಗ್ಗೆ ಬೇಕಾಗಿರುವ ಕೆಲವು ಲಕ್ಷರೂಪಾಯಿಗಳ ಸಾಲ ಕೊಡಬೇಕೆಂದು ಮಹಾರಾಜರವರು ಇಂಡ್ಯಾ ಗವರ್ನಮೆಂಟಿನವರನ್ನು ಕೇಳಿಕೊಂಡದಕ್ಕೆ ಅವರು ಸಾಲ ಕೊಡುವದಕ್ಕೆ ಸಾಧ್ಯವಾಗಲಾರದೆಂದು ಹೇಳಿದಂತೆಯೂ ತಿಳಿಯಬರುತಿದೆ. ಒಂದುವಿಧದೊಳು ಸದರೀ ಜವಾಬಯುಕ್ತವಾದದ್ದೆಂದೇ ಭಾವಿಸುವೆವು

A faithful wife.—ರಾಣಾಬಿನ್ನೂರಿಗೆ ಸೇರಿದ ನೇರಲಗಿ ಗ್ರಾಮದಲ್ಲಿರತಕ್ಕ ವ್ಯವಸಾಯ ಮಾಡತಕ್ಕವನೊಬ್ಬನು ಅಚೇಹಾರದಲ್ಲಿ ಯಾವ ದೋಷವೊಂದು ನಿಮಿತ್ತದಿಂ ಮೃತಪಟ್ಟನು. ಆತನಭಾರ್ಯೆಯು ಅವನಲ್ಲಿ ಅಂತರವಾದ ಭಕ್ತಿ ಗೌರವ ವಿಶ್ವಾಸಗಳುಳ್ಳವಳಾಗಿದ್ದದರಿಂದ ಪತಿವಿಯೋಗ ಜನ್ಯವಾದ ದುಃಖವು ತಾಳಲಾರದೆ ಸ ದರೀ ಸಾಧ್ವಿಯು ತಾತ್ಕಾಲಿಕವಾದ ಆವೇಶದಲ್ಲಿ ದಹನಭೂಮಿಗೆ ಸ್ವತಃ ಹೋಗಿ ಚಿತೆಯ ಮೇಲಿ ಟ್ಟಿದ್ದ ತನ್ನ ಪತಿಯ ಶವವು ದಹನವಾಗುತಿರುವಾಗ್ಯೆ ಆ ಪ್ರಾಂತ್ಯದಲ್ಲಿ ಬರಿಕೆಗಾಗಿ ಆಕೆಯು ಬಿದ್ದಳು. ಪರಂತು ಜ್ವಾಲೆಯು ಅಧಿಕವಾಗಿ ಅವಳಿಗುಂಟಾಗಿದ್ದ ದುಃಖಾವೇಶವನ್ನು ... ಆಕೆ ಸ್ವತಃ ತಪ್ಪಿಸಿಕೊಂಡು ... ಬರುವಷ್ಟರಲ್ಲಿಯೇ ಆಕೆಯ ... ಬಹಳ ಸುಟ್ಟುಹೋಗಿ ... ತನ್ನ ಚರ್ತ್ರ ಸಾನ್ನಿಧ್ಯವನ್ನೇ ... ತಿಳಿಯಬರುತಿದೆ. ಈಗಲೂ ಆಸ್ಪತ್ರೆಯಲ್ಲಿ ಕೆಲವರಿಗೆ ... ಯು ತಪ್ಪಿದ್ದಲ್ಲವು.

The Ameer of Cabul.—ಕಾಬೂಲ್ ಅಮೀರರವರಿಗೆ ... ಗೋರಿ ... [illegible]

[illegible]

A failure.—[illegible]

[illegible]

ಖಿನ್ನರಾಗಿರುವ ... ಹಿಂಜರಿಯುವಂತಿಲ್ಲವು. ಇದಕ್ಕೆ ದಾರಿದ್ರ್ಯ ಅಥವಾ ದುರ್ವ್ಯಸನವಿನಾ ಇನ್ನೇನಾದರು ಕಾರಣವುಂಟೋ ?

An attempt opposed.—ಮುಂಬಯಿಯಲ್ಲಿ ಪ್ರಕಟಿಸಲ್ಪಡುವ ಇಂಡ್ಯಾ ಸ್ಪೆಕ್ಟೇಟರ್ ಪತ್ರಿಕೆಯ ಅಧಿಪತಿ ... ಬರೆಯುತ್ತಾನೇನೆಂದರೆ, ಪುಣೇಯೊಂದ ... ಒಂದು ಇಲ್ಲಿಗೆ ... ರಾವ್‌ಸಾಹೇಬ ... ಪಂಡಿತರಾದ ... ಸಿ. ಐ. ಇ. ಯೆಂಬವರು, ಕಳೆದ ತಿಂಗಳ ... ತಾರೀಖಿನಲ್ಲಿ ರಾವಬ ಹಾದೂರ್ ... ಸಭೆಯಲ್ಲಿ ಒಂದು ... ಅರ್ಜಿಯಲ್ಲಿ ... ಸ್ತ್ರೀಯರು ಪುರುಷ ... [illegible]

[illegible]

LOCAL AND PROVINCIAL NEWS.

ಸ್ಥಳೀಕವಾದ ಮತ್ತು ತಾಲ್ಲೂಕುಗಳ ವೃತ್ತಾಂತಗಳು

H. H the Maharaja.—ಶ್ರೀಮನ್ಮಹಾರಾಜರವರು ಬರುವ ತಿಂಗಳ ... ನೋಡುವದಕ್ಕಾಗಿ ... ಕೇಳುತ್ತೇವೆ.

Maharani.—ಈ ಸಂಸ್ಥಾನದಲ್ಲಿರುವ ... [illegible]

A rumour.—[illegible]

Budget estimates.—[illegible]

Retirement and provision.—ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟರವರು ತಮ್ಮ ಇಲಾಖೆಯಲ್ಲಿ ೫೦ ಮಂದಿಯ ನೌಕರಿಯು ಬರುವ ನವಂಬರ್ ಗುರ್ರೋಲಾಗಾಯತು ಅನಾವಶ್ಯಕವಾಗಿ ರುವದರಿಂದ ಅವರಿಗೆ ಅನ್ಯತ್ರ ವಿಲೇ ಮಾಡಬೇಕೆಂದು, ತಿಳಿಸಲು ಆರುಮಂದಿ ಪೆನ್ಷನ್ ಮೇಲೆ ನಿವೃತ್ತರಾಗಬೇಕೆಂತಲೂ, ಉಳಿದವರಿಗೆ ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಗಳು ಶೇಕ್‌ದಾರಿ ವಗೈರೆ ಕೆಲಸಗಳ ಕೊಟ್ಟು ವಿಲೇ ಮಾಡಬೇಕೆಂತಲೂ, ಆಬಿತಿ ವಿಲೇ ಹೊಂದ ದಂತವರು ಕೆಲಸದಿಂದ ನಿವೃತ್ತರಾಗತಕ್ಕದ್ದೆಂತಲೂ ಹುಕುಂಕೊಟ್ಟಿರುವದಾಗಿ ತಿಳಿಯಬರುತಿದೆ.

A course of lectures at Theological High School.—ಕೆಲವರು ನೇಟಿವ್ ದೊಡ್ಡಮನುಷ್ಯರ ಪ್ರೋತ್ಸಾಹದ ಮೇರೆ ... ಥಿಯೊಲಾಜಿಕಲ್ ಹೈಸ್ಕೂಲಿನಲ್ಲಿ ಅದರ ಮುಖ್ಯಪ್ರವರ್ತಕರ ... ದಲ್ಲಿ ಪ್ರತಿದಿನದ ಸಾಯಂಕಾಲದಲ್ಲಿ ಆಪೂರ್ವವಿರತಕ್ಕ ... ಧರ್ಮಾಚಾರಗಳನ್ನೂ ಇತರ ಕೆಲವು ಲೌಕಿಕ ... ಉಪನ್ಯಾಸ ... ಬರುವರಾದರೆ ಅವರಿಗೆ ಬಹಳ ಪ್ರಯೋಜನಕರವಾಗಿರುವವು.

The Weather.—ನಿನ್ನೆಯ ದಿನ ಮಧ್ಯಾಹ್ನಾನಂತರ ಸುಮಾರು ಎರಡು ಘಂಟೆಯ ಮೇಲೆ ... ಮಳೆ ಬತ್ತು. ... ಡಿಸ್ಟ್ರಿಕ್ಟ್‌ನ ... ಅನೇಕ ಪ್ರದೇಶಗಳೊಳು ... [illegible]

Revenue survey.—ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟರು ಸೂಚಿಸಿದ್ದರ ಮೇಲೆ, ಗವರ್ನಮೆಂಟವರು ತಾಲ್ಲೂಕ್ ... [illegible]

CORRESPONDENCE.

ಮ|| ರಾ|| ಕರ್ಣಾಟಕ ಪ್ರಕಾಶಿಕಾ ಪತ್ರಿಕಾಧಿಪತಿಗಳವರ ಸನ್ನಿಧಿಗೆ

ಅಯ್ಯಾ,—ಗೀರ್ವಾಣ ವಾಣ್ಯಾಭಿಮಾನಿ ಎಂಬ ಮಾಸಿಕ ಪತ್ರಿಕೆಯೊಂದು ... ನಿಜಭಾಗ್ಯವದಕ್ಕೆ ... ಸುಧಾಕರ ... ಪರಿಪೂರಿತವಾದ ಪತ್ರಿಕೆಯು ... ತಮ್ಮ ಉಪನ್ಯಾಸವು ... ತೃಪ್ತಿಕರವಾಗಿದೆ. ... ರಾಜಧಾನಿಯಲ್ಲಿ ... ಸಂಸ್ಕೃತ ವಿದ್ಯಾಭಿಮಾನಿ.

ಯಡೆಹಳ್ಳಿ ತಾ|| ೧೭—೧೦—೯೧.

ಅಯ್ಯಾ,—ಇದರಕೆಳಗೆ ಉದಹರಿಸಿರುವ ಕೆಲವು ಅಂಶಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುವಿರಿ ಯೆಂದು ನಂಬಿದೇನೆ.

ಈ ಮಾಹೆ ೬ನೇ ತಾರೀಖಿನ ತಮ್ಮ ಪತ್ರಿಕೆಯ ... ಬರುವ ಸೆನ್ಸಸ್, ಯೆಂಬ ಒಂದು ಹೆಸರಿನಿಂದ ಪ್ರಕಟಿಸಿರುವ ವಿಷಯಗಳಿಗೆ ಪ್ರತ್ಯುತ್ತರವಾಗಿ ತಿಳಿಸುತ್ತೇನೆ.

೧. ಈ ಮೈಸೂರು ದೇಶದಲ್ಲಿ ಇದುವರಿವಿಗೆ ಬೆರೆತಾವರೆ ಸೆನ್ಸಸ್‌ಗಳು ನಡೆಸಲ್ಪಟ್ಟವೆ ೧೮೭೧ನೇ ಇಸವಿಯಲ್ಲಿ ನಡೆದ ಸೆನ್ಸಸ್ಸಿನಲ್ಲಿ ಲಿಂಗಾಯತರಾದ ವೀರಶೈವರನ್ನು ಇತರರು ಎಂಬ ಪಟ್ಟಿನಲ್ಲಿ ದಾಖಲ್ಮಾಡಿಸಿತ್ತು. ೧೮೮೧ನೇ ಇಸವಿಯಲ್ಲಿ ನಡೆದ ಸೆನ್ಸಸ್ಸಿನಲ್ಲಿ ... ಗವರ್ನಮೆಂಟ್ ರೆಕಾರ್ಡಲ್ಲಿಯೂ ನಮೂದಾಗಿ ಇದ ... ೧೮೯೧ನೇ ಇಸವಿಯಲ್ಲಿ ... [illegible]

೨. ಹಿಂದೂ ಮತದಲ್ಲಿ ಅನೇಕ ಪ್ರಭೇದಗಳು ... ಅತ್ಯುತ್ತಮವಾದದ್ದೆಂದು ... [illegible]

೩. ಸೆನ್ಸಸ್ ರಿಪೋರ್ಟಿನಲ್ಲಿ ಮತಪ್ರಶ್ನೆಯ ತಿಳಿಸುವದರಲ್ಲಿ ಶೈವ, ವೈಷ್ಣವ, ಜೈನ, ಬೌದ್ಧ ಮೊದಲಾದ ಅನೇಕ ಪ್ರಭೇದಗಳು ವಿಂಗಡಿಸಲ್ಪಟ್ಟಿರುವದು ನಿಶ್ಚಯವು. ಜೈನ ಬೌದ್ಧ ಮತದವರನ್ನು ೧೮೮೧ನೇ ಇಸವಿಯ ಸೆನ್ಸಸ್ ರಿಪೋರ್ಟಿನಲ್ಲಿ ಯಾವಯಾವ ಸ್ಥಳದಲ್ಲ

ನಮೂದಿಸಿತ್ತೋ ಅದರ ಮಾರ್ಗ ದೃಷ್ಟಿಗೆ ಬೀಳದಿರುವದಕ್ಕೆ ವ್ಯಸನ ಪಡಬೇಕಾಗಿದೆ. ತಾವು ಹೇಳುವ ರೀತಿ ಶೈವಾರಾಧ್ಯಬ್ರಾಹ್ಮಣರ ವಿಷಯ ನಾನು ಹೇಳುವದಿಲ್ಲ. ಪ್ರಕೃತ ಸಂದರ್ಭದಲ್ಲಿ ವೀರಶೈವ ಆರಾಧ್ಯಬ್ರಾಹ್ಮಣರ ವಿಷಯ ಚರ್ಚಿಸಬೇಕಾಗಿದೆ.

೮. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ಈ ತರಹೇಗಳ ವಿವೇಚನೆಯು ಚೆನ್ನಾಗಿ ತಿಳಿದಿರಬಹುದು. ಆಯಾ ಪ್ರಭೇದಗಳ ತರಹೇದಾರಿಯು ನ್ಯಾಯವಾಗಿತೋರಿಸದೆ ಬೇರೆ ಬೇರೆ ವರ್ತಿಸುವ ಹೆಸರುಗಳಿಗೆ ದಾಖಲ್ಮಾಡಿಸಿರುವದರಿಂದ ವ್ಯಸನಪಟ್ಟ ಭಾವವಾಗಿದೆ.

೫ ವೀರಶೈವರಿಗೆ ಇರತಕ್ಕ ಪಂಚಾರಾಧ್ಯರ ಮಾತಗಳೂ ಗೋತ್ರ ಸೂತ್ರ ಪ್ರವರಗಳು ಸಹ ನನ್ನ ಮುಂದಣೇ ಲಿಖಿತದಲ್ಲಿ ಉದಹರಿಸುವೆನು.

ತಮ್ಮ ವಿಧೇಯನಾದ,

ಮೈಸೂರು, ೨೭ನೇ ಅಕ್ಟೋಬರ್ ೯೦. | ಮೂಡಗೆರೆ ಮಠದ ಪಟ್ಟದ ಶಿದ್ಧಲಿಂಗಯ್ಯ

SUMMARY OF NEWS.

ವೃತ್ತಾಂತಸಂಗ್ರಹವು.

ಸ್ಕೂಲ್‍ಫೈನಲ್ ಪರೀಕ್ಷೆಯು ಮದರಾಸ್ ಪ್ರಸಿಡೆನ್ಸಿಯಲ್ಲಿ ಅದಕ್ಕೆ ನಿಶ್ಚಯಿಸಲ್ಪಟ್ಟಿರುವ ಸ್ಥಳಗಳೊಳು ಬರುವ ಫೆಬ್ರುವರಿ ತಿಂಗಳ ೯ನೇ ತಾರೀಖಿನಲ್ಲಿ ಪ್ರಾರಂಭವಾಗಿ ನಡೆಯುವದು.

ಬಯೋಫ್ಲೈ ಮತ್ತು ಜೋಸೆಫ್‍ಕಂಪೆನಿ ರೈಲ್ವೆ ಸ್ಟೇಷನ್‍ಗಳಲ್ಲಿ ಪ್ರಯಾಣಸ್ಥರ ಮೂಟೆಗಳನ್ನು ಗಾಡಿಗಳಿಂದ ಇಳಿಸುವ ಮತ್ತು ಗಾಡಿಗಳಲ್ಲಿ ಇಡುವ ಕೆಲಸಗಳಿಗಾಗಿ ಕಂಪೆನಿ ಖರ್ಚಿನಲ್ಲಿ ಪೋರ್ಟರ್‌ಗಳೆಂಬ ಆಳುಗಳನ್ನಿಟ್ಟಿರುತ್ತಾರೆ.

ಮದರಾಸ್ ಹೈಕೋರ್ಟ್ ಜಡ್ಜಿಯರ ಪೈಕಿಯೊಬ್ಬರಾದ ಮಿ ಜಸ್ಟಿಸ್ ಶೆಫರ್ಡರವರು ರಜಾ ಮೇಲೆ ಈಗ ಸ್ವದೇಶಕ್ಕೆ ಹೋಗಿರುತ್ತಾರೆಯಷ್ಟೆ. ಸದರೀಯವರು ಬರುವ ನವಂಬರ್ ೧೭ನೇ ತಾರೀಖಿನಲ್ಲಿ ಮದರಾಸಿಗೆ ಬಂದು ತಮ್ಮ ಕೆಲಸದ ಚಾರ್ಜು ಮರಳಿ ವಹಿಸುವರು.

ಮಹಾರಾಜ್ಞೀ ಇಂಡ್ಯಾ ಚಕ್ರವರ್ತಿನೀಯವರ ಜೂಬಿಲೀ ಮಹೋತ್ಸವದ ಜ್ಞಾಪಕಾರ್ಥ ತಿರುವಾಂಕೂರು ಗವರ್ನಮೆಂಟಿನವರು ಅಲ್ಲಿನ ಕವಾಯತಿ ಮೈದಾನ್ನಲ್ಲಿ ಟೌನ್ ಹಾಲ್ ಎಂಬ ಒಂದು ಕಟ್ಟಡವು ಕಟ್ಟಿಸಬೇಕೆಂದು ಯೋಚಿಸಿ ಆಬಗ್ಗೆ ಹುಕುಂ ಕೊಟ್ಟಿರುತ್ತಾರೆ

ಈಚೆಗೆ ಮದುರೆಯ ಸಮೀಪದಲ್ಲಿರುವ ಒಂದು ಗ್ರಾಮದೊಳು ಕಳ್ಳರಜಾತಿ ಹೆಂಗಸೊಬ್ಬಳು ಒಂದು ಹೆಣ್ಣು, ಎರಡುಗಂಡು, ಈ ಮೂರೆ ಮಕ್ಕಳನ್ನು ಹೆತ್ತು ಅವೆಲ್ಲವು ಕೂಡಲೆ ಮೃತಪಟ್ಟವೆಂತಲೂ, ಆವಳು ಸಹ ಐದನೇ ದಿನ ಸತ್ತುಹೋದಳೆಂತಲೂ ಮಧುರೆಪತ್ರಿಕೆಯೊಂದು ತಿಳಿಸುತಿದೆ.

ಚಿತ್ರಲೇಖನದಲ್ಲಿ ವಿಶೇಷ ಪ್ರಶಸ್ತಿಯು ಪಡೆದ ತಿರುವಾಂಕೂರ್ ನಿವಾಸಿಯಾದ ರವಿವರ್ಮ ಕೋಯಿಲ್ ತಂಬುರಾನ್‍ಯೆಂಬಾತನು, ಬರೋಡೆ ಗಾಯಕವಾಡಿ ಮಹಾರಾಜರವರಿಗಾಗಿ ಮಹಾಭಾರತ ಮತ್ತು ಶ್ರೀಮದ್ರಾಮಾಯಣ ಕಥಾಸೂಚಕವಾದ ಕೆಲವು ಚಿತ್ರಗಳ ಲೇಖನಕಾರ್ಯವು ಪೂರ್ತಿಮಾಡಿರುವಂತೆ ತಿಳಿಯಲಾದೆವು.

ತಿರುವಾಂಕೂರು ಮಹಾರಾಜರವರು ಬರುವ ತಿಂಗಳಲ್ಲಿ ರಾಮೇಶ್ವರ ಮೊದಲಾದ ಸ್ಥಳಗಳಿಗೆ ಯಾತ್ರಾರ್ಥ ತಮ್ಮ ದಿವಾನರು ಮೊದಲಾದ ಪರಿಜನ ಪರಿಚಾರಕರೊಡನೆ ರಾಜಧಾನಿಯಿಂದಹೊರಡುವವರಾಗಿದಾರೆ. ಈಗಿನ ಏರ್ಪಾಡನ್ನನುಸರಿಸಿ ಮಹಾರಾಜರವರು ಮುಂದಿನತಿಂಗಳ ೪ನೇ ತಾರೀಖಿನಲ್ಲಿ ಪ್ರಯಾಣಮಾಡಿ, ಡಿಸೆಂಬರ್ ೧೫ನೇ ತಾರೀಖು ಸುಮಾರಿಗೆ ರಾಜಧಾನಿಗೆ ವಾಪಸ್ ಬರುವರು.

ನೇಪಾಳಸಂಸ್ಥಾನದಲ್ಲಿ ಪ್ರಸಿದ್ಧರಾದ ರಾಜ್ಯತಂತ್ರಜ್ಞರಪೈಕಿ ಯೊಬ್ಬರಾದ ರಾಜಗುರು ರೋಕರಾಜ ಪಂಡಿತರೆಂಬವರು ಕಾಲಗತಿಯನ್ನೈದಿದರೆಂಬ ವೃತ್ತಾಂತ ಬಂದಿರುತ್ತಿದೆ. ಸದರೀ ವೃದ್ಧಮನುಷ್ಯರು ಕೇವಲ ಉದಾರ ಮನಸ್ಕರಾಗಿಯೂ, ಅದಯೇವ ಅಲ್ಲಿನಪ್ರಜೆಗಳ ಪ್ರೀತಿ ಗೌರವಗಳಿಗೆ ವಿಶೇಷತಃ ವಿಷಯರಾಗಿಯೂ ಇರುತಲಿದ್ದದರಿಂದ ಇವರ ಮರಣವು ಸಾಮಾನ್ಯವಾಗಿ ಅಲ್ಲಿನವರೆಲ್ಲರಿಗೂ ದುಃಖಕಾರಿಯಾಗಿ ಯೇರ್ಪಟ್ಟಿತು.

ದರ್ಬಿಟ್ಯೆಂಸ್ ಪತ್ರಿಕೆಯ ಎಡಿಟರ್ ನೆ ಪ್ರೊಪ್ರೈಟರವರು ಡರ್ಬ್ ಸ್ಟ್ಯಾಂಡಾರ್ಡ್ ಪತ್ರಿಕೆಯ ಯೆಡಿಟರಮೇಲೂ ಇತರು ಅವರಮೇಲೂ ಮಾನನಷ್ಟ ದಾವೆಗಳು ತಂದು ಇಬ್ಬರಿಗೂ ವಾರಂಟುಗಳು ಹುಟ್ಟಿ ಇಬ್ಬರೂ ಫೀ ಐನೂರು ರೂಪಾಯಿಗಳಿಗೆ ಸ್ವತಃ ಜಾಮೀನ್ ಮುಚ್ಚಳಿಕೆ ಬರೆದುಕೊಡಬೇಕು, ಅಥವಾ ಫೀ ಐನೂರು ರೂಪಾಯಿಗಳ ಮೇರೆ ಒಬ್ಬೊಬ್ಬರು ಇಬ್ಬರ ಜಾಮೀನ್‍ಗಳು ಕೊಡಿಸಬೇಕೆಂದು ಮ್ಯಾಜಿಸ್ಟ್ರೇಟರ ಹುಕುಂ ಆಗಿದೆ.

ಈ ತಿಂಗಳ ೩ನೇ ತಾರೀಖು ಶುಕ್ರವಾರದಿನ ತಿರುವಾಂಕೂರು ಮಹಾರಾಜರವರ ಮೂವತ್ತುಮೂರನೇ ವರ್ಷ ವರ್ಧಂತಿ ಪ್ರಯುಕ್ತವಾದ ಉತ್ಸವಗಳು ಅತಿ ವಿಜೃಂಭಣೆಯಿಂದ ನಡೆದವು ಆ ದಿನ ರಾತ್ರಿ ಮಹಾರಾಜರವರು ದಿವಿವಾಲಂಕಾರ ಶೋಭಿತರಾಗಿದ್ದ ಆನೆ ವಾದ್ಯಗಳು ಕಟ್ಟಲ್ಪಟ್ಟಿದ್ದ ರಾಜಾರ್ಹವಾದ ರಥದಲ್ಲಿ ಕುಳಿತು ಸವಾರಿ ಬಾಕ್ ಫೌಜುಗಳೊಡನೆ ತೋರಣ ಕವಳೀ ಸ್ತಂಭ ದೀಪಾವಳಿಗಳಿಂದಲಂಕೃತವಾಗಿ ಕಣ್ಗೊಳಿಸುತಲಿದ್ದ ರಾಜಮಾರ್ಗವಾಗಿ ಮೆರವಣಿಗೆ ಹೊರಟಿದ್ದರು. ಹಿಂದೂ ಮುಖ್ಯಮನುಷ್ಯರಿಗೆ ಪದ್ಮನಾಭ ವಿಲಾಸವೆಂಬ ಭವನದಲ್ಲಿ ಔತನ ನಡೆಸಲ್ಪಟ್ಟಿತು. ಫೌಜುದಾರಿ ಶಿಪಾಯರಿಗೆ ಮಹಾರಾಜರವರು ೫೦೦ ರೂಪಾಯಿಗಳ ಕ್ರಯ ಬಾಳತಕ್ಕ ಸಹರತ್ನ ಖಚಿತವಾದ ಒಂದು ಜೊತೆ ಕಡಗಗಳನ್ನು ಬಹುಮಾನವಾಗಿತ್ತರು.

EXTRACTS

ಕ್ವೇಟಾ ಪಟ್ಟಣದಲ್ಲಿ ಉತ್ತಮವರ್ಣದ ಸ್ತ್ರೀಯೊಬ್ಬಳು, ಕೆಲವು ದಿವಸಗಳಿಂದೀಚೆಗೆ ಒಂದು ವಿಚಿತ್ರವಾದ ರೋಗದಿಂದ ಪೀಡಿತಳಾಗಿ, ನಾನಾ ವಿಧವಾದ ಔಷದವನ್ನು ಕೊಟ್ಟರೂ ನಿಷ್ಪ್ರಯೋಜನವಾಗಿ, ರೋಗವು ದಿನೇ ದಿನೇ ವೃದ್ಧಿಯಾಗುತ್ತಲಿರಲಾಗಿ, ಒಂದೆರಡು ವಾರಗಳ ಹಿಂದೆ, ಸಿದ್ಧಪುರುಷನೊಬ್ಬನು ಆ ಮನೆಯ ಯಜಮಾನನನ್ನು ಕಂಡು ಆತನು ಹೋಗಲು, ಅಲ್ಲಿ ಆಕೆಯ ಪತಿಯು ತನ್ನ ಪತ್ನಿಯ ರೋಗವನ್ನು ಹೇಳಿದನು ಈತನು ಅದನ್ನು ಗ್ರಹಿಸಿ ತಾನು ಗುಣ ಮಾಡುವನಾಗಿ ಹೇಳಿ, ಒಡನೆ ಆಕೆಯನ್ನು ಕರೆಸಿ, ಒಂದು ಪಾತ್ರೆಯಲ್ಲಿ ಸ್ವಲ್ಪ ನೀರನ್ನು ತೆಗೆದುಕೊಂಡು ಬಂದು ಮುಖವನ್ನು ತೊಳೆದುಕೊಂಡು ಆ ಪಾತ್ರೆಯಲ್ಲೇ ಇನ್ನು ಸ್ವಲ್ಪ ನೀರನ್ನು ಹರುವಂತೆ ಹೇಳಿ ತಾನು ಮಂತ್ರವನ್ನು ಜಪಿಸುತ ಆಕೆಯ ದೇಹಸ್ಥಿತಿಯನ್ನು ಹೇಳಲು, ಆಕೆಯು ಚೆನ್ನಾಗಿಲ್ಲದಿರುವಂತೆ ಹೇಳಿದಳು. ಅನಂತರ ಆ ಪಾತ್ರೆಯಲ್ಲಿದ್ದ ನೀರನ್ನು ಆಕೆಯು ತನ್ನ ಬಾಯಿಗೆ ಬಿಟ್ಟುಕೊಳ್ಳುವಂತೆಯೂ, ಆ ನೀರನ್ನು ಕುಡಿಯದೆ ಬಾಯನ್ನು ಮೇಲಕ್ಕೆ ಎತ್ತಿಕೊಂಡು, ಹಿಳನಾಲಿಗೆಯ ಬಳಿಯಲ್ಲೇ ನಿಲ್ಲಿಸಿಕೊಂಡು “ಗಳಗಳ” ಶಬ್ದ ಮಾಡಿ ಆ ನೀರನ್ನು ಸ್ವಲ್ಪವೂ ನುಂಗದೆ ಕೆಳಗಿದ್ದ ಪಾತ್ರೆಯಲ್ಲಿ ಉಗಿಯುವಂತೆ ಹೇಳಿದನು. ಈಕೆಯು ಅದೇರೀತಿಗೆ ಮಾಡಿ ಕೆಳಗಿದ್ದ ನೀರಿನ ಪಾತ್ರೆಯನ್ನು ನೋಡಲು, ಅದರಲ್ಲಿ ಒಂದು ಚಿಕ್ಕ ಕಪ್ಪೆಯು ಸ್ವಲ್ಪಹೊತ್ತಿನ ಮಟ್ಟಿಗೆ ಸತ್ತಂತೆ ಬಿದ್ದಿದ್ದು, ಅನಂತರ ಈಜಾಡಕ್ಕೆ ಉಪಕ್ರಮಿಸಿತು ಈಕೆಯು ತಾನಿದೆ ವ್ಯಾಗೋ ಒಂದು ಚಿಕ್ಕ ಕಪ್ಪೆಯನ್ನು ನೀರಿನೊಡನೆ ಕುಡಿದಂತೆಯೂ, ಅದರಿಂದ ಆ ರೋಗ ವೆಂತಲೂ, ಆತನು ಹೇಳಿದನು. ಈ ಕಪ್ಪೆಯನ್ನು ತೆಗೆದಾರಭ್ಯ ಆ ಸ್ತ್ರೀಯು ಸುಖಿಯಾಗಿರುತ್ತಾಳೆ.—ವೃ. ಚಿಂ.

ಬಹುಮಾನ ಸನ್ಮಾನಗಳ ವಿಷಯದಲ್ಲಿ ಜನಗಳಿಗಿರತಕ್ಕ ಅಭಿಪ್ರಾಯವು ನಾನಾವಿಧವಾಗಿರತಕ್ಕದ್ದು ಸ್ವಾಭಾವಿಕವಾದದ್ದೇ, ಆದರೆ ಮೈಸೂರಿನಲ್ಲಿ ಶ್ರೀಮನ್ ಮಹಾರಾಜರವರು ನವರಾತ್ರಿಯಲ್ಲಿ ದರ್ಬಾರ್‌ಗಳನ್ನು ನಡೆಸುವಾಗ ಗೌರ್ನಮೆಂಟ್ ಅಧಿಕಾರಿಗಳನ್ನು ಪುರಸ್ಕರಿಸಿ ಅವರುಗಳಿಗೆ ಉಚಿತವಾದ ಸ್ಥಾನಗಳನ್ನು ಕೊಡುವ ವಿಷಯದಲ್ಲಿ ಈಗ ಆಗಿರತಕ್ಕ ನೂತನ ಏರ್ಪಾಡುಗಳಿಂದ ಬಹುಜನ ನೇಟಿವ್ ಅಧಿಕಾರಿಗಳಿಗೆ ಅಸಮಾಧಾನ ಪ್ರಾಪ್ತವಾಗಲು ಹೇತುವಾದಹಾಗೆ ಸ್ಫುಟವಿರುವದೆಂದು ಎಣಿಸುವೆವು ಸದರೀ ಅಧಿಕಾರಿಗಳಿಗೆ ದರ್ಬಾರ್‌ಗಳಲ್ಲಿ ಸ್ಥಾನದ ಔಚಿತ್ಯವನ್ನೂ ಪ್ರಾಶಸ್ತ್ಯವನ್ನೂ ಕೊಡ ಅವರವರು ಪಡೆಯುತಲಿರುವ ಸಂಬಳಗಳಿಗನುಸಾರವಾಗಿ ನಿಷ್ಕರ್ಷಿಸಬೇಕೆಂದಲೂ ಅಧಿಕಾರವನ್ನೂ ದರ್ಜೆಯನ್ನೂ ನೋಡಿ ಅಲ್ಲವೆಂತಲೂ ನಿರ್ಧಾರಕನಾದಿರುವದು ಇದರಿಂದ ಕನಿಷ್ಠತಲವ್ ಪಡೆಯುತಲೂ ದರ್ಜೆಯಲ್ಲಿ ಮುಖ್ಯಸ್ಥರಾಗಿಯೂ ಇರುವವರು ಕೆಲವರು, ಜಾಸ್ತೀ ತಲಬ್ ಪಡೆಯುತಲಿದ್ದರೂ ದರ್ಜೆಯಲ್ಲಿ ಕನಿಷ್ಠ ದರ್ಜೆಯಲ್ಲಿರುವರಿರುವವರಿಗಿಂತಲೂ ಕೆಳಗೆ ಬರಬೇಕಾಗುವದು ಈವಿಧವಾದ ಏರ್ಪಾಡಿನಿಂದ ಬಹುಜನರ ಮನಸ್ಸು ನೋಯುವದಕ್ಕೆ ಅವಕಾಶವಾಗಿರುವದರಲ್ಲಿ ಸಂಶಯವಿಲ್ಲ ಪರಂತು ಹೀಗೆ ಏರ್ಪಡಿಸಿರತಕ್ಕವರು ಈಸ್ಥಾನದಲ್ಲಿದ್ದು ಅವಕ್ಕೆ ಒಳಪಡತಕ್ಕವರಾಗಿದ್ದು ವ್ಯವಹಾರದಲ್ಲಿ ತಾವು ಎಷ್ಟುಮಟ್ಟಿಗೆ ವ್ಯಸನಪಡುತಲಿದ್ದರೋ ಅಥವಾ ಸಂತೋಷಿಸುತಲಿದ್ದರೋ ಅದನ್ನು ಕೂಡ ತಮ್ಮಗಣನೆಗೆ ತಂದುಕೊಂಡಲ್ಲವೆ ಈವಿಧವಾದ ಏರ್ಪಾಡುಗಳನ್ನು ಮಾಡತಕ್ಕವರಾಗಿರಬೇಕು? ಇದು ಹ್ಯಾಗಾದರೂ ಆಗಲಿ, ಔಚಿತ್ಯವನ್ನಾಗಲಿ ಪ್ರಾಶಸ್ತ್ಯವನ್ನಾಗಲಿ ಸ್ವಲ್ಪವೂ ತಮ್ಮಗಣನೆಗೆ ತಂದುಕೊಳ್ಳದೆ ಬಹುಮಾನಗಳಿಗೆ ಅಂಶವಾಗಿದ್ದು ಅಥವಾ ಒಂದು ವೇಳೆ ಬಹುಮಾನವನ್ನೂ ಬಯಸದಿದ್ದಾಗ್ಯೂ ಈ ಬಗೆಯ ಅವಮಾನಕ್ಕೆ ಎಡೆಯಿಲ್ಲದಂತೆ ಸ್ಥಿತಿಯಲ್ಲಿ ಇರತಕ್ಕವರೇ ಸುಖಿಗಳಲ್ಲವೇ? ವೃ. ಪ.

ಪಟಿಯಾಲಾ, ೨೭ ನೇ ಅಕ್ಟೋಬರ್.— ಪಟಿಯಾಲಾ ಸಂಸ್ಥಾನದ ಮಹಾರಾಜರವರು ಇದುವರೆವಿಗೆ ಬಾಲ್ಯದೆಸೆಯಲ್ಲಿರುವ ಮಂತ್ರಿ ಸಮಾಜದಿಂದ ರಾಜ್ಯತಂತ್ರ ನಡೆಸಲ್ಪಡುತ ಬಂದದಷ್ಟೆ. ಈಗ ಮಹಾರಾಜರವರು ಪ್ರಾಪ್ತವಯಸ್ಕರಾದದರಿಂದ ಇಂಡ್ಯಾರಾಜ್ಯದ ವೈಸ್‌ರಾಯ್ ಮಹಾದ ಲಾರ್ಡ್ ಲ್ಯಾನ್ಸ್‌ಡೌನ್ ಪ್ರಭುವರವರು ಸದರೀ ಸಂಸ್ಥಾನಕ್ಕೆ ದಯಮಾಡಿ, ಮಹಾರಾಜರಿಗೆ ಸರ್ವಾಧಿಕಾರವನ್ನು ಕೊಟ್ಟು ಬುದ್ಧಿವಾದ ರೂಪವಾಗಿ ಅವರಿಗೆ ಕೆಲವುಗಳು ತಿಳಿಸಿ, ಮಹಾರಾಜರವರ ಬಾಲ್ಯದೆಸೆಯಲ್ಲಿ, ರಕ್ಷಕರಾಗಿಯೂ, ಅನುವರ್ತಿಗಳಾಗಿಯೂ ಇರುವ ತ್ರೀವರು ಮಹಾಮ್ಮದ್‌ಹುಸೇನ್ ಮತ್ತು ಸರ್ದಾರ್ ಜುವಾಸಿಂಗ್ ಎಂಬವರು ಮಂತ್ರಿಗಳಾಗಿ ಏರ್ಪಟ್ಟು ರಾಜ್ಯಕಾರ್ಯವು ಬಹಳ ತೃಪ್ತಿಕರವಾಗಿ ನಡೆಸುತ ಬಂದ ಬಗ್ಗೆ ತಮಗುಂಟಾದ ಸಂತೃಪ್ತಿಯು ವಿಶೇಷತಃ ಪ್ರಕಾಶಿಸಿ ತಿಳಿಸುವದೇನೆಂದರೆ,—

“ ಇಂಡ್ಯಾದೇಶದ ಸಂರಕ್ಷಣೆಯ ಬಗ್ಗೆ ಈ ಸಂಸ್ಥಾನದಿಂದ ಸಹಾಯರೂಪವಾಗಿ ಕೊಡತಕ್ಕ ಸೈನ್ಯವನ್ನು ನೀವೆ ಸ್ವತಃ ರಕ್ತವನ್ನಾಗಿ ಮಾಡುತ, ಎವ್ವಿಷಯದಲ್ಲಿದ್ದಗೆ ಕಾರಣಗಳಾದ ಕಾರ್ಯಗಳು ನಡೆಸುತ, ವ್ಯವಸಾಯಾಭಿವೃದ್ಧಿಗೆ ಉಪಯುಕ್ತಗಳಾದ ಏರ್ಪಾಡುಗಳು ಮಾಡುವದರಲ್ಲಿ ಇದುವರೆವಿಗೇನೆ ತಾವು ಅವಲಂಬಿಸುತಬಂದ ಮಾರ್ಗವು ನೋಡಿ ನಾನು ತೃಪ್ತನಾಗಿರುತ್ತೇನೆ. ತಮ್ಮ ಸೈನ್ಯದ ಠಕ್ಕಾರೀ ಕ್ರಮವೂ ಅದರ ಸ್ವಭಾವವೂ ಬಹಳ ತೃಪ್ತಿಕರವಾಗಿಯೂ, ಪ್ರೋತ್ಸಾಹಕರವಾಗಿಯೂ ಇದೆ ಯೆಂಬ ವಾರ್ತೆಯು ಕೇಳಿ ನಾನು ಸಂತೋಷಿಸುತ್ತೇನೆ. ಸಿಪಾಯಿಯವರಲ್ಲಿ ತಕ್ಕಷ್ಟು ಕರವಾದ ಕೆಲವು ಗುಣಗಳು ನಾನು ತಿಳಿದಿರುತ್ತೇವೆ. ಹಿಂದೆ ಅವರು ಶೂರರಾದ ಮತ್ತು ಭಯಂಕರರಾದ ಶತ್ರುಗಳಾಗಿದ್ದಾಗ್ಯೂ ಈಗ ಮಹಾರಾಜ್ಞೀ ಚಕ್ರವರ್ತಿನೀ ಯವರಲ್ಲಿ ರಾಜಭಕ್ತಿ ವಿಶ್ವಾಸಗಳುಳ್ಳ ಅವರ ಪ್ರಜೆಗಳಲ್ಲಿ ಅವರು ಅಗ್ರಮರೆಂದು ನಾವು ತಿಳಿದಿರುತ್ತೇವೆ. ತಮಗೆ ಈ ದಿನ ಒಪ್ಪಿಸಲ್ಪಟ್ಟ ಅಧಿಕಾರಗಳನ್ನು, ತಮ್ಮ ಜೀವಿತ ಕಾಲದಲ್ಲೂ, ಅದರ ತರುವಾಯಲೂ, ಇಂಡ್ಯಾ ಗವರ್ನಮೆಂಟಿನವರೂ, ತಮ್ಮ ಪ್ರಜೆಗಳೂ, ತಮ್ಮ ಜಾತಿಯವರಾದ ಸಿಕ್ಖಜನರೂ, ವಿವೇಕಶಾಲಿಯಾದ, ನ್ಯಾಯಬದ್ಧರಾದ, ಪ್ರಾಮಾಣಿಕರಾದ ಅರಸರೆಂತಲೂ, ಪ್ರಜೆಗಳು ಸುಖಿಗಳಾಗಿಯೂ ತೃಪ್ತರಾಗಿಯೂ ಇದಾರೆಂತಲೂ ಹೇಳಿಕೊಳ್ಳುವದಕ್ಕೆ ಅನುಕೂಲವಾಗಿರುವಂತೆ ಉಪಯೋಗಿಸಿಕೊಳ್ಳಬೇಕು, ” ಎಂಬದು.

೧೮ ನೇ ತಾರೀಖಿನ ದಿನ ಪಿಷಿಹರ್ಸ್ ಕ್ಯಾಂಪ್ ಎಂಬ ಭವನದಲ್ಲಿ ವೈಸರಾಯ್ ಯವರಿಗೆ ನಡೆಸಲ್ಪಟ್ಟ ಔತಣೋತ್ಸವ ಸಂದರ್ಭದಲ್ಲಿ, ಇಂಡ್ಯಾರಾಜ್ಯದ ರಕ್ಷಣೆಯಬಗ್ಗೆ ತಂಗಾರ್ಪಾದಲ್ಪಟ್ಟ ಸೈನ್ಯವನ್ನು ಬಗ್ಗೆ ಮರಳಿ ತಿಳಿಸಿದರೇನೆಂದರೆ — “ಲಾರ್ಡ್ ಡಫರಿನ್ ಸಾಹೇಬರವರಿಂದ ಪ್ರಾರಂಭಿಸಲ್ಪಟ್ಟ ಪ್ರಬಲ ಪ್ರಯತ್ನೋದ್ದೇಶವನ್ನು ಪಟಿಯಾಲಾ ಸಂಸ್ಥಾನದವರು ಮೊದಲು ಗ್ರಹಿಸಿದರು. ಇಂಡ್ಯಾದೇಶದ ಆಯಾ ಭಾಗಗಳಲ್ಲಿರುವ ಮುಖ್ಯಗಳಾದ ನೇಟಿವ್ ಸಂಸ್ಥಾನಗಳಲ್ಲಿ ಇಂಡ್ಯಾದೇಶದ ರಕ್ಷಣೆಗೆ ಉಪಯೋಗಿ, ೬,೮೦೦ ಸವಾರ್ ಸೇನೆಯೂ, ೭,೦೦೦ ಕಾಲ್ಬಲವೂ ತಯಾರಾಗುತಲಿವೆ. ಈ ಸಂಖ್ಯೆಯು ಸುಲಭವಾಗಿ ಹೆಚ್ಚಿಸಲ್ಪಟ್ಟಿರಬಹುದೆಂಬದನ್ನು ನಾನು ಕೇಳಿರುತ್ತೇನೆ ಪರಂತು ಹಾಗೆ ಮಾಡಬೇಕೆಂದು ಇದುವರೆವಿಗೂ ತಿಳಿಸದೆ ಹೋದಬಗ್ಗೆ ನಾನು ಪ್ರಶ್ನದಲ್ಲಿ ನಿಂದನೆಗೆ ಗುರಿಯಾಗದೆ ಹೋಗಲಾರೆನು. ನೇಟಿವ್ ಸಂಸ್ಥಾನಾಧಿಪತಿಗಳು ಪ್ರಾಮಾಣಿಕವಾಗಿ ತಮ್ಮ ಸೇನೆಯು ನಮ್ಮ ನೌಕರಿಗೆ ಕೊಡುವದಾಗಿ ಹೇಳಿದ ಮೇರೆಗೆ ಕಮ್ಮಿಬಡಿ ನೇಟಿವ್ ಸಂಸ್ಥಾನಗಳಿಂದ ಸಹಾಯವು ಅಂಗೀಕರಿಸತಕ್ಕದೆಂದು ನಾನು ನಿಶ್ಚಯಿಸಿರುತ್ತೇನೆ. ಮತ್ತು ಎಂಥಾ ಸೇನೆಯೂ ಬ್ರಿಟಿಷ್ ಸೇನೆಯೊಡನೆ ಸಮನಾಗಿ ನಿಲ್ಲಿಸುವಣವು ಗೌರವಸೂಚಕವಾಗಿ ನಾನು ಎಣಿಸುತ್ತೇನೆ. ಪರಂತು ಹಾಗೆ ಮಾಡುವದರಲ್ಲಿ ನೇಟಿವ್ ಸಂಸ್ಥಾನಗಳಿಗೆ ನಿರ್ಬಂಧವು ಇಲ್ಲದೆ ಇರಬೇಕು. ಬಲಾತ್ಕಾರ ಮಾಡಕೂಡದು. ಸೈನ್ಯಕ್ಕೆ ಬದಲು ಪ್ರತ್ಯರೂಪವಾದ ಸಹಾಯವು ಮಾಡುವದಾಗಿ ಕೆಲವರು ನೇಟಿವ್ ಅರಸರು ತಿಳಿಸಿದ್ದರಾಗ್ಯೂ ನಾನು ಅಂಗೀಕರಿಸಲಿಲ್ಲವು. ಇಂಡ್ಯಾದೇಶದ ರಕ್ಷಣೆಯಬಗ್ಗೆ ನೇಟಿವ್ ಸಂಸ್ಥಾನಗಳಿಂದ ಹಣವನ್ನು ವಸೂಲ್ ಮಾಡಬೇಕೆಂದು ನಾವು ಪ್ರಯತ್ನ ಪಡಲಿಲ್ಲವು ಸಣ್ಣಸಂಸ್ಥಾನಾಧಿಪತಿಗಳು ಕೆಲವರು ಕೆಲವು ಸ್ವೀಕರಣ ಕಳುಹಿಸಿಕೊಡುವದೆಂದು ಅವರನ್ನೆಲ್ಲ ಸೇರಿಸಿ ಒಂದುಕೆ ಸೇನೆಯಾಗಿ ಮಾಡಬಹುದೆಂತಲೂ ಅದು ಪ್ರಾಯೋಜಕವಾಗಿ ಇರಬಹುದೆಂಬ ಅವಶ್ಯವಿಲ್ಲವೆಂದು ನಾವು ಅವರಿಗೆ ತಿಳಿಸಿದ್ದೆವು. ಅಂಥಾ ಏರ್ಪಾಡಿನಲ್ಲಿ ಆಯಾ ಸಂಸ್ಥಾನಗಳ ವಿಶಿಷ್ಟ ಗೌರವಕ್ಕೆ ಲೋಪಬರುವದು. ಆದುದರಿಂದ ಅದು ನಾನು ನಿರಾಕರಿಸಿದ್ದು ನ್ಯಾಯ್ಯವಾಗಿರುವದು. ದೇಶ ಸಂರಕ್ಷಣೆಗೆ ಸಹಾಯ ಮಾಡಬೇಕಾದ ವಿಷಯದಲ್ಲಿ ಸಂಸ್ಥಾನಗಳನ್ನು ಜಾಗರೂಕತೆಯೊಡನೆ ಬೋಧಿಸುವದೇ ಪ್ರಕೃತ ಪ್ರಯತ್ನದ ಮುಖ್ಯೋದ್ದೇಶವಾಗಿರುತದೆ. ಪ್ರತಿಯೊಂದು ಸಂಸ್ಥಾನಾಧಿಪತಿಯೂ ತಮ್ಮ ಸ್ವಂತ ಸೈನ್ಯವನ್ನು ಸ್ವಂತ ಅಧಿಪತಿಗಳೊಡನೆ ಸಜ್ಜುಗೊಳಿಸಬೇಕು ಈ ಪ್ರಬಲ ಪ್ರಯತ್ನಕ್ಕೆ ಪಟಿಯಾಲಾ ಸಂಸ್ಥಾನದವರು ಮೊದಲು ನಿಗೆಕೊಟ್ಟು ಪ್ರಾರಂಭಿಸಿದ್ದು ಕೇವಲ ತೃಪ್ತಿಕರವಾದ ಕಾರ್ಯವಾಗಿರುತಿದೆ, ಎಂಬದು

BANGALORE —Printed and published at the KARNATAKA PRESS, No 134, SRINIVASA MANDIRAM ROAD, BALEPET —1890

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XVII.] BANGALORE—MONDAY, NOVEMBER 3, 1890. [No. 44.

ಸಂಪುಟ ೧೭.] ಬೆಂಗಳೂರು:—ಸನ್ ೧೮೯೦ನೇ ಇಸವಿ ನವಂಬರ್ ೩ನೇ ತಾರೀಖು ಸೋಮವಾರ. [ಸಂಚಿಕೆ ೪೪

ಕರ್ನಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	[illegible]	[illegible]
ಮುಂಗಡವಾಗಿ ವರ್ಷವೊಂದಕ್ಕೆ	8—0—0	9—4—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡ ವರ್ಷವೊಂದಕ್ಕೆ	4—0—0	5—0—0
ತರುವಾಯ ,,	5—0—0	6—0—0

[illegible]

ವರ್ತಮಾನ ವಿಚಾರ.

[illegible] ೦—೨—೦

[illegible] ೦—೧—೦

[illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs. 5 0 0

ವೈದ್ಯಸಾರ ಸಂಗ್ರಹ.

[illegible]

ಬೆಲೆ ಅಂಚೆ ಸಹ ಒಂದಕ್ಕೆ ರೂ ೫—೦—೦

ಬಿ. ಬಿ. [illegible]

[illegible] 41ನೇ ನಂ. [illegible]

ADVERTISEMENTS.

ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ಮಾರಾಟಕ್ಕೆ ಸಿದ್ಧವಾಗಿವೆ. ಬೇಕಾದವರು ಮೊಬಲಗು [illegible] ಪಡೆದುಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

	ರೂ. ಆ. ಪೈ
[illegible]	೪ ೦ ೦
,, [illegible]	೦ ೧ ೦
,, [illegible]	೦ ೪ ೦
,, [illegible]	೧ ೨ ೦
,, [illegible]	೦ ೧೨ ೦
,, [illegible]	೦ ೪ ೦
,, [illegible]	೦ ೧ ೬
,, [illegible]	೦ ೬ ೦
[illegible]	೦ ೪ ೦
[illegible]	೦ ೩ ೦
[illegible]	೦ ೧ ೬
ತ್ರಿಕಾಂಡ ಅಮರ ಮೂಲ	೦ ೨ ೬
೧ ಕಾಂಡ	೦ ೧ ೦

ಕನ್ನಡ ಗ್ರಂಥಗಳು.

[illegible]	೩ ೦ ೦
[illegible]	೦ ೪ ೦
[illegible]	೦ ೪ ೦
[illegible]	೦ ೪ ೦
[illegible]	೦ ೪ ೦
[illegible]	೦ ೨ ೬
[illegible]	೦ ೨ ೬
[illegible]	೦ ೩ ೦
[illegible]	೦ ೨ ೦
[illegible]	೦ ೨ ೦
[illegible]	೦ ೨ ೬
[illegible]	೧ ೨ ೦
[illegible]	೦ ೧೨ ೦

[illegible]

ಮೈಸೂರು ಮಹಾರಾಜರವರ ಅರಳೀ ಯಂತ್ರದ ಕಾರ್ಖಾನೆ.

ನೋಟೀಸ್.

[illegible]

Bangalore City Municipality.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಸನ್ ೧೮೯೦ನೇ ಇಸವಿ ನವಂಬರ್ ೪ನೇ ತಾರೀಖ್ ಮಂಗಳವಾರ ಪ್ರಾತಃಕಾಲ ೮ ಘಂಟೆಗೆ ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ನವರು ಕಚೇರಿಯಲ್ಲಿ ತಮ್ಮ ಹೊಸ ಅಧಿಕಾರಪಟ್ಟದಲ್ಲಿ [illegible] ಆಲೋಚನೆಗೆ ತರಲ್ಪಡುವ ವಿಷಯಗಳ ಯಾದಾಸ್ತು.

೧. ಸನ್ ೧೮೯೦ನೇ ಇಸವಿ ಸೆಪ್ಟೆಂಬರ್ [illegible] ಜಮಾಖರ್ಚು ಲೆಕ್ಕ ಮತ್ತು [illegible] ಲೆಕ್ಕಗಳು.

೨. ಮ್ಯುನಿಸಿಪಲ್ [illegible] ಸನ್ ೧೮೯೦ನೇ ಇಸವಿ ಸೆಪ್ಟೆಂಬರ್ ೧೧ನೇ ತಾರೀಖಿನ [illegible] ನಂಬರುಗಳುಳ್ಳ ಇಸ್ತಿಹಾರುಗಳು.

೩. ಮ್ಯುನಿಸಿಪಲ್ [illegible] ಸನ್ ೧೮೯೦ನೇ ಇಸವಿ ಸೆಪ್ಟೆಂಬರ್ ೧೧ನೇ ತಾರೀಖಿನಲ್ಲಿ [illegible] ನಂಬರ್ [illegible] ಇಸ್ತಿಹಾರುಗಳು.

೪. [illegible] ಬರೆದು ಕೊಂಡ ಅರ್ಜಿ.

೫. [illegible] ಸನ್ ೧೮೯೦ನೇ ಇಸವಿ ಸೆಪ್ಟೆಂಬರ್ [illegible] ಬರೆದುಕೊಂಡ ಅರ್ಜಿ.

೬. ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ [illegible] ನಿಯಮಿಸಬೇಕಾದ ವಿಷಯ.

೭. [illegible] ಮಾಡುವಿಕೆ.

೮. [illegible] ವಿಷಯ.

೯. [illegible] ವಿಷಯ.

೧೦. [illegible] ವಿಷಯ.

V. P. MADHAVA RAO,
President,
City Municipal Commission.

ನೋಟೀಸ್.

[illegible]

ಬ್ರೂಸ್ಕ್ಯಾನ್, ಜೆ. ಎ.

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, NOVEMBER 3, 1890.

೧೮೯೦ನೇ ನವಂಬರ್ ೩ನೇ ಸೋಮವಾರ.

WOMEN IN ANCIENT INDIA.

ಆರ್ಯನಾರಿಯರ ಪ್ರಾಚೀನಾವಸ್ಥಾ ನಿರೂಪಣ.

ಗತವಾರದಶೇಷವು.

ಬ್ರಹ್ಮವಾದಿನಿಗಳಸ್ಥಿತಿಯಂಕುರಿತು ವಿಚಾರಮಾಡುವಾಗ್ಯೆ ಅದಕ್ಕೆ ಆಧಾರವಾಗಿ ಗಾರ್ಗಿ ಯೂ ಯಾಜ್ಞವಲ್ಕ್ಯರಿಗೂ ಅಧ್ಯಾತ್ಮ ವಿಚಾರದೊಳಾನದೆ ಕೆಲವು ಸಂವಾದಗಳನ್ನು ಗತವಾರ ದಲ್ಲಿ ತಿಳಿಸಿದ್ದೇವಷ್ಟೆ. ಇನ್ನೂ ಆ ಕಾಲದ ಸ್ತ್ರೀಯರು [illegible]

[illegible]

ಎರಡನೆಯ ತರದವರಾದ ಸದ್ಯೋವಧೂಗಳೆನಿಸಿರ್ಪವರು ವೇದ ವಿದ್ಯಾಭ್ಯಾಸಿಗಳಾಗಿದ್ದರೂ ವಿವಾಹ ಮಾಡಿಕೊಳ್ಳುತಲಿದ್ದರು. ಅವರ ವಿವಾಹವು ಈಗ ನಡೆಯುವ ರೂಢವಾಗಿ ಕರೆಯಲ್ಪಡುತಲಿರುವ ಕ್ರೂರವಾದ ಮಾಂಸವಿಕ್ರಯದಂತಿರಲಿಲ್ಲವು, ಪರಂತು ಅವರ ವಿವಾಹ ಸಹ ಬಾಲ್ಯಕವಾದುದಾಗಿಯೂ ಅವರ ಸ್ವಾಂತವರೂಢ ಮೇಲೇರ್ಪಡತಕ್ಕದ್ದಾಗಿಯೂ ಇತ್ತು. ಅವರಿಗೆ ತಮ್ಮ ಪತಿಯಂ ವರಿಸುವ ಸ್ವಾತಂತ್ರ್ಯವುಕೊಡಲ್ಪಟ್ಟದ್ದಾಗ್ಯೂ ಅವರ ಮನಸ್ಸೀ ವರ್ತನಕ್ಕೆ ಅವಕಾಶವಿಲ್ಲದಂತೆ ಯುಕ್ತಾಯುಕ್ತ ವಿವೇಚಕರಾದ ಮತ್ತು ದೀರ್ಘದರ್ಶಿಗಳಾದ ಅವರ ತಾಯಿತಂದೆಗಳ ಆಜ್ಞಾರೂಪವಾದ ಅನುಮತಿಯು ಅವರು ಬಹಳಮಟ್ಟಿಗೆ ನಿರ್ಬಂಧಪಡಿಸದಿರಲಿಲ್ಲವು. ಕನ್ಯಾದಾನವಿಷಯದಲ್ಲಿ ಪ್ರವರ್ತಿಸುವ ವೈವಾಹಿಕ ವೇದಮಂತ್ರಗಳೆಲ್ಲವು ಪರಿಣಯವಾಗತಕ್ಕ ದಂಪತಿಗಳು ತಾವು ಅಗ್ನಿಸನ್ನಿಧಿಯಲ್ಲಿ ಪ್ರಮಾಣಪೂರ್ವಕ ಮಾಡಿಕೊಳ್ಳುವ ಪರಸ್ಪರ ಪ್ರತಿಜ್ಞಾರೂಪವಾದ ಮಂತ್ರಾರ್ಥಗಳನ್ನು ಜವಾಬುದ್ದೇಶಗಳನ್ನು ಸರಿಯಾಗಿ ಗ್ರಹಿಸಿ ತದ್ವತ್ ಆಚರಿಸಲಿಕ್ಕೆ ಶಕ್ತರಾಗಿರುವಷ್ಟು ಪ್ರೌಢವಯಸ್ಕರಾಗಿರಬೇಕೆಂದು ತಿಳಿಸುತವೆ. ಇಂತಾವರೆಯು ನಿಜವಾಗಿ ಪ್ರಾಪ್ತವಾಗುವತನಕ ಪೂರ್ವಕಾಲದಲ್ಲಿ ವಿವಾಹವು ನಡೆಸಲ್ಪಡುತಲಿರಲಿಲ್ಲವು. ಮತ್ತು ವಿವಾಹದ ಆವಶ್ಯಕತೆಯು ಈಗಿನಂತೆ ಸ್ತ್ರೀಯರಿಗೆ ಬಹಳ ಉಂಟಾಗಿರಲಿಲ್ಲವು. ಅವರು ಪ್ರೌಢೆಯರಾದಾಗ್ಯೂ ಸಾತ್ವಿಕವೃತ್ತಿಯೊಳಿದ್ದುದರಿಂದ ಅವರಸಂರಕ್ಷಣೆಯು ಹೆತ್ತವರಿಗೆ ವಿಶೇಷ ಚಿಂತನೀಯವಾಗಿರಲಿಲ್ಲವು. ಆದುದರಿಂದಲೇ ಅವರ ವಿವಾಹವು ಕಾಲಾತಿಕ್ರಮವಾಗಿನದಾಗ್ಯೂ ಅವರ ಸ್ಥಿತಿಗತಿಗಳುಮಾತ್ರ ನಿರ್ದುಷ್ಟಗಳಾಗಿದ್ದವು. ಋಗ್ವೇದದ ಹತ್ತನೆಯಮಂಡಲದಲ್ಲಿ ೮೫ನೇ ಸೂಕ್ತ, ೩೬, ೩೭, ೪೩, ೪೬, ಋಕ್ಕುಗಳಲ್ಲಿ ವರನು ವಧುವನೋಡಿ ತಿಳಿಸುತ್ತಾನೇನೆಂದರೆ—"ಓ ವಧು! ಈಗ ನಿನ್ನಂ ನಾನು ಪರಿಗ್ರಹಿಸಿರುವೆನು, ಏತಕ್ಕೆನ್ನುತಿಯೋ ನೀನು ಯಶಸ್ವಿನೀಯಾಗಿರುವದಕ್ಕಾಗಿ, ನಾನೊಬ್ಬ ಗೃಹಸ್ಥನು ಅಥವಾ ಕುಟುಂಬಿಯಾಗಿರುವದಕ್ಕಾಗಿಯೂ, ವಾರ್ಧಕಾವಸ್ಥೆಯಲ್ಲಿ ಯೆನ್ನನ್ನಗಲದಿರುವದಕ್ಕಾಗಿಯೂ ಅರ್ಯಮನು ಮೊದಲಾದ ದೇವತೆಗಳು ಅನುಗ್ರಹಿಸಿ ನಿನ್ನಂ ಯೆನಗೆ ದಾನವಾಗಿ ಕೊಟ್ಟಿರುತ್ತಾರೆ. ಸೌಭಾಗ್ಯೆ! ಸುತಾನವು ಪ್ರತಿಮನುಷ್ಯನಿಗೂ ಕೇವಲ ಅಪೇಕ್ಷಿತವಾಗಿರುವದರಿಂದ ಯಶಸ್ವಿನೀಯಾದ ಈವಧುವು ಅನುರಕ್ತನಾದ ಪತಿಯೊಡನೆ ಭೋಗಿಸುವಂತೆ ಅಕೆಯಂ ಪ್ರೇರಿಸು. ಓವಧು ನೀನು ನಿನ್ನ ಪತಿಗೃಹಕ್ಕೆ ತೆರಳಿ ಅದರ ಯಜಮಾನಿಯೆನಿಸಿ ನಿನ್ನಮನೆಗೆ ಬರತಕ್ಕಂತಾ ಅತಿಥಿಗಳಿಗೆ ಸಂಪ್ರೀತಳಾಗು.

೪೩-೪೬—(ವಧೂವರರವಾಕ್ಯವು) ಪ್ರಜಾಪತಿಯು ನಮಗೆ ಪುತ್ರರನ್ನನುಗ್ರಹಿಸಲಿ, ಅರ್ಯಮನು ನಮಗೆ ಆಯುರ್ವೃದ್ಧಿಯಂಗೈಯಲಿ, ವಧುವುಕುರಿತು-ಸುಪ್ರಹೃಷ್ಟವಾದ ಮನಸ್ಸುಳ್ಳವಳಾಗಿಯೂ, ಒಳ್ಳೆಯವರ್ಚಸ್ವಿಯಾಗಿಯೂ ವೀರಪ್ರಸವಿನೀಯಾಗಿಯೂ, ದೈವಭಕ್ತಿಯುಳ್ಳವಳಾಗಿಯೂ ಆಗು. ಋಕ್ಕು ೪೫ನೇ "ದಶಾಸ್ಯಾಂ ಪುತ್ರಾನಾಧೇಹಿ ಪತಿಮೇಕಾದಶಂ ಕೃಧಿ" ಅಂದರೆ ಪ್ರತಿಗೃಹೀತಳಾದ ಈಕೆಯು ಸತ್ಪುತ್ರನ ಪಡೆಯುವವಳಾಗಿಯೂ, ತನ್ನ ಪತಿಯೊಡನೆ ೧೧ ಮಂದಿ ಕುಟುಂಬದಲ್ಲಿರುವಂತೆ ಹತ್ತುಮಂದಿ ಮಕ್ಕಳಂ ಪಡೆಯತಕ್ಕವಳಾಗಿಯೂ, ಆಗಲಿ ಸಂರಾಜ್ಞೀ ಶ್ವಶುರೇಭವ, ಸಂರಾಜ್ಞೀ ಶ್ವಶ್ರ್ವಾಂಭವ, ನನಾಂದರಿಸಮ್ರಾಜ್ಞೀಭವ, ಸಮ್ರಾಜ್ಞೀ ಅಧಿದೇವೃಷು ಅಂದರೆ ನೀನು ನಿನ್ನ ಅತ್ತೆಮಾವಂದಿರಮೇಲೂ, ನಾದಿನಿ ಮೈದುನರಮೇಲೂ ಅಧಿಕಾರವಂ ಪಡೆದು ಶ್ರೇಷ್ಠಳಾಗಿ ವರ್ತಿಸು ವಿಶ್ವೇದೇವತೆಗಳು ನಮ್ಮಿಬ್ಬರಿಗೂ ಹೃದಯಾನುಕೂಲ್ಯವನ್ನುಂಟುಮಾಡಿ ವಾಗ್ದೇವಿಯು ನಮ್ಮನ್ನಗಲಿಸದಿರಲಿ ಯಜುರ್ವೇದ, ಮಂತ್ರಪ್ರಶ್ನ ಮೊದಲನೆಯ ಪ್ರಪಾಠಕ, ಮೂರನೇಕಾಂಡ, ೫ನೇ ಮಂತ್ರದಲ್ಲಿಯೂ, ಸಾಮವೇದದ ಮಂತ್ರ ಬ್ರಾಹ್ಮಣ, ೩ನೇ ಪಟಲ, ೧೫ನೇ ಶ್ಲೋಕದಲ್ಲಿಯೂ, ತಿಳಿಸಲ್ಪಟ್ಟಿರುವ ವಿವಾಹ ವಿಷಯಕವಾದ ವಾಕ್ಯಗಳೆಲ್ಲವೂ ಮೇಲೆ ಕಂಡಂತೆ ಸಮಾನಾರ್ಥ ಪೂರ್ಣವಾಗಿರುತಿವೆ. ಯಜುರ್ವೇದದ ಮೂರನೆಯ ಕಾಂಡದಲ್ಲಿರುವ ಒಂದು ವಾಕ್ಯವನ್ನಿದರಡಿ ತಿಳಿಸುವೆವೇನೆಂದರೆ,—

"ವಧುವಿನ ವಾಕ್ಯವು—ನೀನು ಪ್ರತಿಷ್ಠಾಪಕಗಳಾದ ಕಾರ್ಯಗಳಂ ಮಾಡಿದಂತವನಾಗಿಯೂ, ಧ್ಯಾನಧಾರಣಾದಿ ತಪೋಮಹಿಮೆಗಳಿಂದ ಪರಿಶುದ್ಧನಾಗಿಯೂ, ಅಥವಾ ಪೂರ್ವ ಜನ್ಮಗಳಲ್ಲಿ ಶ್ಲಾಘ್ಯಗಳಾದ ಪುಣ್ಯಕರ್ಮಗಳಂ ಮಾಡಿ ಈ ಉತ್ತಮ ಜನ್ಮವಂ ಪಡೆದಿರುವವನಾಗಿಯೂ ನನ್ನ ಮನಸ್ಸಿನೊಳು ತೋರುತಿದೆ. ಪುತ್ರಾಭಿಲಾಷಿಯಾದ ನೀನು, ನನ್ನಲ್ಲಿ ಅನುರಕ್ತನಾಗಿ ಪುತ್ರರಂ ಪಡೆಯಬಹುದು.

ವರನವಾಕ್ಯವು-ನೀನು ಪತಿಯನ್ನಾಶ್ರಯಿಸಬೇಕೆಂಬ ಕೋರಿಕೆಯುಳ್ಳವಳಾಗಿರುವಂತೆ ನನ್ನ ಬುದ್ಧಿಯಲ್ಲಿ ತೋರುತಿದೆ. ಪುತ್ರಾಕಾಂಕ್ಷಿಣಿಯಾದ ನೀನು, ಉತ್ತಮಳೆನಿಸಿ ನನ್ನೊರಗೂಡಿ ಸುಖವಾಗಿದ್ದುಕೊಂಡು ಅನುರೂಪರಾದ ಪುತ್ರರಂ ಪಡೆಯಬಹುದು" ಎಂಬದು. ವಿವಾಹಗಳಿಗಾಗಿ ಪ್ರವರ್ತಿಸಿರುವ ಮೇಲೆ ಕಂಡ ವಾಕ್ಯಗಳಂ ನೋಡಲಾಗಿ ಪೂರ್ವಕಾಲದೊಳು ಜರುಗುತಲಿದ್ದಂತಾ ಪರಿಣಯಗಳ ನಿಜವಾದ ಸ್ವರೂಪವು ಮೇಲೆ ತಿಳಿಸಿದಂತೆ ಸ್ಪಷ್ಟವಾಗುತದೆ.

(ಇದರ ಶೇಷ ಮುಂದಿನ ವಾರಕ್ಕೆ)

SOCIAL REFORM.

A PRACTICAL SUGGESTION.

ಈಗ ಸರ್ವದೇಶ ಸರ್ವಕಾಲಾವಸ್ಥೆಯಲ್ಲಿಯೂ ಜನಗಳ ವಿಚಾರಕ್ಕೆ ವಿಷಯವಾಗಿರತಕ್ಕ ಹಿಂದೂಸಮಾಜಾಚಾರ ಪರಿಷ್ಕರಣ ವಿಷಯದಲ್ಲಿ ಪ್ರಜಾಭಿಪ್ರಾಯಗಳು ನಾನಾಪ್ರಕಾರವಾಗಿರುತಲಿವೆ. ಇವುಗಳಿಗೆ ಶಾಸ್ತ್ರಗಳಲ್ಲಿ ತಕ್ಕ ಪ್ರಮಾಣಗಳಿಲ್ಲದ್ದರಿಂದ ಯಾವ ವಿನಿಮಯವೂ ಮಾಡಲ್ಪಡಕೂಡದೆಂದು ನುಡಿಯತಕ್ಕವರು ಕೆಲವರು; ಕದಾಚಿತ್ ಶಾಸ್ತ್ರಗಳಲ್ಲಿ ಆಧಾರಗಳಿದ್ದರೂ ಜನಗಳ ವ್ಯವಹಾರದೊಳು ತರಲ್ಪಡದಿರುವದರಿಂದ ಈಗ ಪೂರ್ವಸ್ಥಿತಿಯಂ ಬದಲಾಯಿಸಕೂಡದೆಂದು ವಾದಿಸತಕ್ಕವರು ಇನ್ನು ಕೆಲವರು; ಈಗಿನ ಕಾಲ ದೇಶ ವಿಧ್ಯಮಾನಗಳನ್ನಾಲೋಚಿಸಲಾಗಿ ಬಹುಕಾಲದಿಂದ ನಡೆದುಬರುವ ಮತ್ತು ಯಾವದೋ ಒಂದು ಪ್ರಬಲಾಧಾರದಮೇಲೆ ನೆಲೆಗೊಂಡಿರುವ ಪೂರ್ವ ಪದ್ಧತಿಯು ಗೋಜಿಗೆ ಹೋದರೆ ಮೂಲಕೋ ಹಾನಿಗೆ ಕಾರಣವಾಗುವದಾಗಿ ಆರೀತಿ ಮಾಡಕೂಡದೆಂದು ನಿಷೇಧಿಸತಕ್ಕವರು ಮತ್ತುಕೆಲವರು; ಇದೇರೀತಿ ಆವಶ್ಯಕವೆಂದು ವಾದಿಸತಕ್ಕವರಲ್ಲಿ, ಪ್ರತಿಷೇಧಕೋಟಿಯವರು ತಿಳಿಸುವ ಪ್ರಕಾರ ಈಗಿನ ಕಾಲದ ಜನರ ಅಭಿರುಚಿ ವರ್ತನಗಳಿಗೆ ತಕ್ಕಂತೆ ಬೇಕಾದ ಏರ್ಪಾಟುಗಳಂ ಮಾಡಿಕೊಳ್ಳದಿದ್ದರೆ ಅವರು ಅಭಿವೃದ್ಧಿಯಾಗುವ ಮಾರ್ಗವಿಲ್ಲವಾದುದರಿಂದ ಕಾಲದೇಶೋಚಿತಗಳಾದ ವಿನಿಮಯಗಳತ್ಯಾವಶ್ಯಕಗಳೆಂದು ಹೇಳತಕ್ಕವರು ಬೇರೆ ಕೆಲವರು; ಸುಖ ಸಂತೋಷಾನುಭವಗಳಲ್ಲಿ ಈಶ್ವರ ಸೃಷ್ಟಿಯೊಳು ಸ್ತ್ರೀ ಪುರುಷರು ಸಮಾನ ಬಾಧ್ಯತೆಯುಳ್ಳವರಾಗಿರುವಲ್ಲಿ ಅವರೊಳು ಪರಸ್ಪರ ಭೇದ ಕಲ್ಪನವು ಅನುಚಿತವೆಂದು ನುಡಿದು ಯೆಲ್ಲರೂ ಸಮನಾಗಿ ವರ್ತಿಸಲಿಕ್ಕೆ ಆವಶ್ಯಕಗಳಾದ ಏರ್ಪಾಡುಗಳನ್ನು ಮಾಡುವದುಚಿತವೆಂಬದಾಗಿ ನುಡಿಯತಕ್ಕವರು ಕೆಲವರು; ಶಾಸ್ತ್ರವಚನಗಳೆಂಬವು ಆಯಾ ಕಾಲಗಳಲ್ಲಿ ವಿವೇಕಿಗಳಾಗಿದ್ದ ಪಂಡಿತರಿಂದ ಶಕ್ತ್ಯಾಲೋಚಿತವಾಗಿ ಮಾಡಿಕೊಳ್ಳಲ್ಪಟ್ಟ ಒಂದು ನಿಬಂಧನೆಯಾಗಿದೆಯೇ ಹೊರತು ಅವು ಬದಲಾಯಿಸಕೂಡದೆಂದಾಗಲಿ, ಅದೇ ಸರ್ವಕಾಲದಲ್ಲಿಯೂ ಅನುಸರಿಸಲ್ಪಡತಕ್ಕದ್ದೆಂದಾಗಲಿ ಯಾವ ನಿಯಮವೂ ಇಲ್ಲದಿರುವದರಿಂದ ಈಗ ಪ್ರಕೃತಸ್ಥಿತಿಗೆ ಬೇಕಾದ ಸಾಗಲ್ಲ ಬದಲಾಯಿಸಿಕೊಳ್ಳುವದುಚಿತವೆನ್ನತಕ್ಕವರು ಅನ್ಯರು ಕೆಲವರು. ಹೀಗೆವಾದಿಸುವಂತಾ ಉಭಯ ಕಕ್ಷಿಯವರಲ್ಲಿ ಸಮಾನವಾಗಿ ಹಿಂದೂಗಳೂ, ಪಾರಸೀಗಳೂ, ಯೂರೋಪಿಯರ್ಗಳೂ, ಕದಾಚಿತ್ ಮುಸಲ್ಮಾನರೂ ಸೇರಿರುತ್ತಾರೆ. ಇವರಲ್ಲಿ ಕೆಲವರು ಸರ್ಕಾರದವರ ಪ್ರವೇಶವು ಆವಶ್ಯಕವೆಂತಲೂ, ಇನ್ನು ಕೆಲವರು, ಅವರ ಪ್ರವೇಶವು ಜಾತಿ ಮತ ಪ್ರಯುಕ್ತಗಳಲ್ಲದೆ ರಾಜಕೀಯಗಳಾದ ಪ್ರಬಲಾನರ್ಥಗಳಿಗೆ ಕಾರಣವಾಗುವದಾಗಿ ಸರ್ವಾತ್ಮನಾ ಕೂಡದೆಂದು ನಿಷೇಧಿಸುತ, ತಮ್ಮ ತಮ್ಮ ಯಾವಚ್ಛಕ್ತಿಯುಕ್ತಿಗಳನ್ನು ಸ್ವಪಕ್ಷ ನಿರ್ಧಾರಣಾರ್ಥ ಉಪಯೋಗಿಸುತಲೂ ಇದ್ದಾರೆ. ಪರಂತು ಇದರ ಪರ್ಯವಸಾನವು ಕಾಲಾಧೀನವಾದುದಾಗಿರುತಿದೆ. ಪ್ರಕೃತ ವಿಚಾರಾರ್ಹಗಳಾಗಿರುವ ವಿಷಯಗಳು ಸ್ತ್ರೀ ಸಂಬಂಧವಾದವಾಗಿಯೂ, ಅವುಗಳ ಯುಕ್ತಾಯುಕ್ತತೆಯಂ ಕುರಿತು ವಿಮರ್ಶಿಸಿ ಪರಿಷ್ಕರಿಸಲಿಕ್ಕೆ ಪ್ರವರ್ತಿಸತಕ್ಕವರು ಪುರುಷರಾಗಿಯೂ ಇರುತ್ತಾರೆ. ಸವರೇ ಮುಖ್ಯವಿಷಯಗಳ್ಯಾವವೆಂದರೆ, ಸ್ತ್ರೀವಿದ್ಯಾಭ್ಯಾಸ, ವಿತಂತೂ ವಿವಾಹ, ಬಾಲ್ಯವಿವಾಹ, ವಿಧವಾಮುಂಡನ, ಸಂಭೋಗಾನುಮತಿ, ಪತಿವರಣ ಸ್ವಾತಂತ್ರ್ಯ, ವಿವಾಹಸಂಬಂಧ ನಿರಾಕರಣ, ಇವುಗಳು ವಿನಾ ಬೇರೊಂದೂ ಇರುವದಿಲ್ಲವು. ಈ ಪ್ರಸ್ತಾವದಲ್ಲಿಯೂ ಸ್ತ್ರೀಯರ ಸಂಬಂಧವೂ ಅನುಮತಿಯೂ ಸ್ವಾತಂತ್ರ್ಯವೂ ಅಪೇಕ್ಷಿತವಾಗಿರುತಿವೆ. ವಿದ್ಯಾಭ್ಯಾಸದಿಂದ ಸುಖಸ್ವಾತಂತ್ರ್ಯ ವಿವೇಕಗಳುಂಟಾಗುತ್ತಿವೆ ಯೆಂಬ ನಿಶ್ಚಯಜ್ಞಾನವುಂಟಾದರೆ ಬಳಿಕ ಸ್ತ್ರೀಯರು ಅದಂ ಅನಾವಶ್ಯಕವೆಂದು ಭಾವಿಸಲಾರರು. ತಾದೃಶ ವಿದ್ಯಾಮೂಲಕವಾದ ವಿವೇಕವು ಅವರಿಗುಂಟಾದ ಬಳಿಕ ಬಹಳ ನೀಚವಾದ ವೈಧವ್ಯವನ್ನನುಭವಿಸುತ ಸಕಲ ಲೌಕಿಕಸುಖ ಬಾಹ್ಯರಾಗುವದು ಯೋಗ್ಯವೆಂದು ತೋರಲಾರದಾಗಿ ಆಗ ಅವರೇ ಆ ನಿರ್ಬಂಧದಿಂದ ನಿವೃತ್ತಿಸಿಕೊಳ್ಳಲಿಕ್ಕೆ ಪ್ರಯತ್ನಿಸತುವರು. ಅವರಿಗೆ ಸ್ವಾತಂತ್ರ್ಯ ಸ್ವರೂಪವಿಂತಾದ್ದೆಂದು ತಿಳಿಯಬಂದಮೇಲೆ ಪರಾಧೀನರಾಗಿ ವಿವಾಹ ನಿರ್ಬಂಧಕ್ಕೆ ಸ್ವಲ್ಪಮಾತ್ರವೂ ಒಡಂಬಡಲಾರರು. ವಿಜಾತೀಯಾನುಭವಗಳಿಂದಾಗಲಿ ಬಹುವಿಷಯಾವಲೋಕನದಿಂದುಂಟಾಗುವ ಮನೋವಿಕಾಸದಿಂದಾಗಲಿ ಲಭಿಸಬಹುದಾದ ಗುಣದೋಷ ಜ್ಞಾನವು ನಿರೂಢವಾದರೆ ಮುಂದ ನರೂಪವಾದ ಆತ್ಮ ವಿರೂಪಕ್ಕೆ ಸ್ವಲ್ಪವೂ ಸಮ್ಮತಿಸಲಾರರು. ಸ್ವತಃ ಶರೀರವಾರ್ಧ್ಯವೂ, ರಸಗ್ರಹಣ ಪಾಟವವೂ, ಪುರುಷಸಂಭೋಗಾಪೇಕ್ಷೆಯೂ ಉಂಟಾದಾಗ ಅವು ವಿಭಾವಾನುಭಾವ ವ್ಯಭಿಚಾರ ಸಾತ್ವಿಕಾದಿಭಾವಗಳಿಂದ ವ್ಯಕ್ತಪಡಿಸಬೇಕಾದ ಕಾಲವೂ ವಿಧಾನವೂ ಉಚಿತ ಕಾಲಗಳಲ್ಲಿ ಅಲಂಕಾರಿಕರಾಗಿದ್ದರೆ ಅವರಿಗೆ ಸ್ವಾಭಾವಿಕವಾಗಿಯೇ ತಿಳಿಯಬರುವದರಿಂದ ಆ ಭಾರವು ಅವರಿಗೇ ಒಪ್ಪಿಸುವದೊಳ್ಳೆಯದೆಂದು ತೋರುತಿದೆ. ಸೌಜಾತ್ಯಾಭಿಮಾನವೂ ಅನುರೂಪರಲ್ಲನುರಕ್ತಿಯೂ ಸಹಜಗುಣಗಳಾದುದರಿಂದ ಪ್ರೌಢಾಂಗನೆಯು ಅನನುರೂಪನಾದ ಮತ್ತು ಶಠನಾದ ನಾಯಕನನ್ನೆಂದಿಗೂ ಕೋರಿ ವರಿಸಲಾರಳು. ಆದುದರಿಂದ ಆನುಕೂಲ್ಯಕ್ಕೆ ಪ್ರಾಧಾನ್ಯವೇ ಅವಶ್ಯಕವು. ಅನನುರೂಪನಾದ ಪತಿಯೊಬ್ಬನು ಪರರ ನಿರ್ಬಂಧದಿಂ ಅಥವಾತ್ ಪ್ರಾಪ್ತವಾದರೆ ಅನಭಿಮತನಾದ ಆತನೊಡನೆ ಕೂಡಿರುವದಕ್ಕಿಂತಲೂ ಸ್ವಚ್ಛಂದವಾಗಿರುವದು ಸುಖವೆಂಬ ಜ್ಞಾನವೂ ಸ್ವಾತಂತ್ರ್ಯವೂ ಉಂಟಾದಾಗ ಸ್ವತಃ ಅವರೇ ವಿವಾಹ ಸಂಬಂಧ ಪರಿತ್ಯಾಗ ಮಾಡಿಕೊಳ್ಳುವರು. ಅದಕಾರಣ ಈಗ ಇವುಗಳಿಗಾಗಿ ಪುರುಷರು ಪ್ರಯತ್ನಪಡುತ ಸಂಕಟ ಪಡುವದು ಕೇವಲ ಅನಪೇಕ್ಷಿತವಾಗಿಯೂ ಭ್ರಾಂತಿಜನ್ಯವಾಗಿಯೂ, ಇರುತಿದೆ. ಆದರೆ ಪುರುಷನೆನಿಸಿದ ಪ್ರತಿವ್ಯಕ್ತಿಯೂ ಈಗ ಮಾಡಬೇಕಾಗಿರುವದೇನೆಂದರೆ, ಸ್ತ್ರೀಯರನ್ನು ವಿದ್ಯಾವತಿಯರನ್ನಾಗಿ ಮಾಡತಕ್ಕದ್ದು, ಇದಕ್ಕೆ ಅಲ್ಪಸ್ವಲ್ಪ ವಿದ್ಯಾಭ್ಯಾಸವು ಪ್ರಯೋಜನಕಾರಿಯಾಗಲಾರದು. ಯಾವ್ವಿಧವಾದ ವಿದ್ಯಾಭ್ಯಾಸವಂ ಮಾಡಿಸಿದರೆ ಸ್ವವಿಷಯಕಗಳಾದ ಮೇಲೆ ಕಂಡ ಏರ್ಪಾಡುಗಳೆಲ್ಲವಂ ಪುರುಷ ಸಹಾಯಾಪೇಕ್ಷೆಯಿಲ್ಲದೆ ಸ್ವತಃ ಪರಿಷ್ಕರಿಸಿಕೊಳ್ಳಲಿಕ್ಕೆ ಶಕ್ತರಾಗುವರೋ ಅಂತಾ ವಿದ್ಯಾಭ್ಯಾಸವನ್ನೇ ತಕ್ಕ ಸಾಧನ ಸಂಪತ್ತಿಗಳೊಡನೆ ಕಲ್ಪಿಸಿಕೊಡಬೇಕಾಗಿರುತಿದೆ. ಇಂತಾ ಪದ್ಧತಿಯು, ಸ್ವಲ್ಪ ಹೆಚ್ಚು ಕಡಮೆಯಾಗಿ ಆಸೇತು ಹಿಮಾಚಲಮಧ್ಯಗತದೇಶಗಳಲ್ಲಿ ಸ್ತ್ರೀವಿದ್ಯಾಭಿವೃದ್ಧಿಯೊಳು ಶ್ರೇಷ್ಠವಾಗಿಯೂ ನಿದರ್ಶನ ರೂಪವಾಗಿಯೂ ಇತರರಿಗೆ ಮಾರ್ಗದರ್ಶಿಯಾಗಿಯೂ ಇರುವ ಈದೇಶದಲ್ಲೊಂದುಕಡೆ ಮಾತ್ರವೇ ನಡೆಗೊಂಡು ಅಭಿವೃದ್ಧಿಯಾಗುತಲಿದೆ. ಮುಖ್ಯವಾಗಿ ಇಂತಾ ಕ್ರಮವನ್ನೇ ಅಭಿವೃದ್ಧಿಗೊಳಿಸಲಿಕ್ಕೆಲ್ಲರೂ ಪ್ರಯತ್ನಪಡಬೇಕಾದುದು ಆವಶ್ಯಕವಾಗಿರುವದರಿಂದಲೇ ಬರೋಡೆ ಮೊದಲಾದ ಸಂಸ್ಥಾನಾಧಿಪತಿಗಳನೇಕರು ಇದನ್ನನುಕರಿಸಲಾರಂಭಿಸಿದಾರೆ. ಈಚೆಗೆ ಪ್ರಕಟವಾದ ಒಂದು ಬಾಲಿಕಾ ಪಾಠಶಾಲೆಯ ಸಾಂವತ್ಸರಿಕರಿಪೋರ್ಟನ್ನು ನೋಡಲಾಗಿ ಅದರಲ್ಲಿ ಕಳೆದ ಅಕ್ಟೋಬರ್ ಮೊದಲನೆಯ ತಾರೀಖಿನಲ್ಲಿ ೫೯೫ ಮಂದಿ ವಿದ್ಯಾರ್ಥಿನೀಯರಿದ್ದರೆಂತಲೂ, ಇವರಲ್ಲಿ ೧೩ ಮಂದಿ ಮಾತ್ರ ೧೨ ರಿಂದ ೧೫ ವರುಷಗಳ ವಯಸ್ಸುಳ್ಳವರಾಗಿದ್ದರೆಂತಲೂ, ೨೩ ಮಂದಿ ೧೫ರಿಂದ ೨೦ವರುಷಗಳ ವಯಸ್ಸಿನವರೆಂತಲೂ, ೫ ಮಂದಿ ೨೦ ರಿಂದ ೨೫ ವರುಷಗಳ ವಯಸ್ಸಿನವರೆಂತಲೂ, ಒಬ್ಬರಿಬ್ಬರು ಮೂವತ್ತು ವಯಸ್ಸಿನವರಾಗಿದ್ದಾರೆಂತಲೂ, ಇದಲ್ಲದೆ "ಹೋಂ ಡಿಪಾರ್ಟುಮೆಂಟಿನಲ್ಲಿ" ೩೪ ಮಂದಿ ಪ್ರೌಢೆಯರಿದ್ದಾರೆಂತಲೂ ತಿಳಿಯಬರುತಿದೆ. ಈ ಪ್ರೌಢಾಂಗನೆಯರ ಪರ್ಯಾಲೋಚನೆಗೆ ಮೇಲೆ ಕಂಡ ೭ ವಿಷಯಗಳನ್ನೊಪ್ಪಿಸಿ ನೀವೇ ವ್ಯವಸ್ಥೆಗೊಳಿಸಿರೆಂದು ಬಿಟ್ಟರೆ ಅವರು ತಮಗೆ ವಿರುದ್ಧವಾಗಿ ಪ್ರತ್ಯೇಕ ಸ್ವಸುಖಭಂಜಕಗಳಾದ ಏರ್ಪಾಡುಗಳನ್ನೆಂದಿಗಾದರು ಮಾಡುವರೆ? ಮುಖ್ಯವಾಗಿ, ಇಂತಾವಿಷಯಗಳಂ ಸ್ತ್ರೀಯರೇವಿಮರ್ಶಿಸಿಕೊಳ್ಳುವದು ಆವಶ್ಯಕವೆಂದು ಯೋಚಿಸಿ ಅವರಿಗೆ, ಡಿಬೇಟಿಂಗ್‌ಕ್ಲಬ್ ಎಂಬ ಹೆಸರುಳ್ಳ ಒಂದು ವಿಷಯವಿಚಾರಸಭೆಯನ್ನೇರ್ಪಡಿಸಿ ಅವರು ವಾರಕ್ಕೊಂದಾವರ್ತಿ ಒಬ್ಬೊಬ್ಬರು ಕಾಲಕ್ಲುಪ್ತಿಯಿಂದ ಭಾಷಣಪಡಿಸಿದರೊಂದು ವಿಷಯವಂ ಕುರಿತು ಉಪನ್ಯಾಸ ಮಾಡಬೇಕೆಂಬದಾಗಿ ನಿರ್ಬಂಧಿಸಲ್ಪಟ್ಟಿರುತಿದೆ. ಆದುದರಿಂದ ಮೇಲೆ ಕಂಡ ಪ್ರೌಢಾಂಗನೆಯರು ತಮ್ಮ ಭಗಿನೀ ದುಃಖ ನಿವೃತ್ತ್ಯರ್ಥಿಯಾಗಿ ಕುರಿತು ರಮ್ಯಳು ವಿಚಾರಮಾಡಿ ಒಂದು ನಿರ್ಣಯವಂ ಮಾಡುವಂತೆ ಸಮಾಜಾಚಾರ ವ್ಯವಸ್ಥಾಪಕರು ಅವರಿಗೆ ಒಪ್ಪಿಸಿದರೆ ಒಳ್ಳೇದೆಂದು ಭಾವಿಸುವೆವು

THE PROSPERITY OF MYSRE

ಈ ಸಲದ ದಸರಾ ರಿಪೋರ್ಟನ್ನು ನೋಡುವಲ್ಲಿ ಸನ್ ೧೮೮೯-೯೦ನೇ ಇಸವಿಯಲ್ಲಿ, ಒಟ್ಟು ೧,೪೩,೯೪,೨೮೩ ರೂಪಾಯಿಗಳು ಹುಟ್ಟುವಳಿಯಾದಂತೆಯೂ, ೧,೩೨,೯೭,೫೦೭ ರೂಪಾಯಿಗಳು ಒಟ್ಟು ಖರ್ಚಾಗಿರುವಂತೆಯೂ ಇದರಿಂದ ಹಿಂದಿನವರ್ಷಕ್ಕಿಂತಲೂ ಹತ್ತು ಮುಕ್ಕಾಲು ಲಕ್ಷರೂಪಾಯಿಗಳು ಜಾಸ್ತೀಹುಟ್ಟುವಳಿಯಾದಂತೆಯೂ ಆ ಜಾಸ್ತೀಮೊಬಲಗು ಲ್ಯಾಂಡರೆವಿನ್ಯೂ, ಫಾರೆಸ್ಟು ಚೆಕ್ಕು, ಅಬಕಾರಿ ಬಾಬುಗಳಲ್ಲಿ ಕಂಡುಬಂದಂತೆಯೂ ಹೀಗೆಯೇ ಇತರ ಎಲ್ಲಾ ಬಾಬು ಗಳಲ್ಲಿಯೂ ಸ್ವಲ್ಪ ಜಾಸ್ತೀಕಂಡುಬಂದಿರುವಂತೆಯೂ ಖರ್ಚುಬಾಬಿನಲ್ಲಿ ಸನ್೮೮—೮೯ ನೆಸಾಲಿಗಿಂತಲೂ ೫,೫೬,೨೪೯ ರೂಪಾಯಿಗಳು ಅಬ್ಕಾರಿ ಪೋಲೀಸ್ ವಿದ್ಯಾಭ್ಯಾಸದಿಲಾಖೆ ಪಬ್ಲಿಕ್ ವರ್ಕ್ಸ್ ಯಾನೆ ಮರಮ್ಮತಿಇಲಾಖೆ ಮೊದಲಾದ ಬಾಬುಗಳಲ್ಲಿ ಹೆಚ್ಚು ಖರ್ಚಾಗಿರುವಂತೆಯೂ ತಿಳಿಯಬರುತಿದೆ. ಶ್ರೀಗಂಧದ ಗಿರಾಕಿಯು ಹೆಚ್ಚಾದದ್ದರಿಂದ ಅದರಹರಾಜಿನಮೂಲಕ ಭಾರೀಯಾಗಿ ೪,೪೩,೦೩೦ ರೂಪಾಯಿಗಳುತ್ಪತ್ತಿ

ಯಾದದ್ದಲ್ಲದೆ, ಬಂಗಡಿ ಪಿಕಾರಿಯಲ್ಲಿ ಹಿಡಿಯಲ್ಪಟ್ಟ ಆನೆಗಳ ವಿಕ್ರಯದಿಂದಲೂ ಭಂಗಾರದಗಣಿಗಳಿಂದ ೧,೯೬,೬೩೪ ರೂಪಾಯಿಗಳ ರಾಯಲ್ಟೀಟಸೂಲಿಯಿಂದಲೂ ಸಂಸ್ಥಾನದ ಹುಟ್ಟುವಳಿ ವಿಶೇಷತಃ ಜಾಸ್ತಿಯಾದಂತೆ ವ್ಯಕ್ತವಾಗುತಿದೆ.

Occasional Notes.
ನೈಮಿತ್ತಿಕ ವಿಷಯನ್ಯಾಸ.

Floods—ತಿರುಚನಾಪಲ್ಲಿಬಳಿ ಪ್ರವಹಿಸುವ ಕಾವೇರೀನದಿಯ ಶಾಖೆಯಾದ ಕೊಲ್ಲದದಲ್ಲಿ ಈಗ ಪೂರ್ಣಪ್ರವಾಹ ಹರಿದು ಅದರ ದೆಸೆಯಿಂದ ಮೂರುಗ್ರಾಮಗಳು ನಾಮಮಾತ್ರಾವಶಿಷ್ಟವಾಗಿ ಕೊಚ್ಚಲ್ಪಟ್ಟುಹೋದಂತೆ ಒಂದಾನೊಂದು ಪತ್ರಿಕೆಯ ಮೂಲಕ ತಿಳಿಯಲಾದೆವು.

South Indian Railway.—ದಕ್ಷಿಣ ಇಂಡಿಯಾ ರೇಲ್ವೇರಸ್ತೆಯನ್ನು ಗವರ್ನ್‌ಮೆಂಟಿನವರು ಈಚೆಗೆ ಕೊಂಡುಕೊಂಡು ಅದನ್ನು ತಮ್ಮ ಸ್ವಾಧೀನ ನಡಿಸಿಕೊಂಡದರಿಂದ ಸದರೀ ಇಲಾಖಾ ನೌಕರಿಯೊಳಿರುವ ಕರ್ಣಾಟಕನೌಕರರು ಕೆಲವರ ನೌಕರಿಯು ಬರುವ ಜನವರಿತಿಂಗಳು ಮೊದಲು ಅವಶ್ಯಕವಿಲ್ಲವೆಂದು ಅವರಿಗೆ ನೋಟೀಸು ಕೊಡಲ್ಪಟ್ಟಿದೆ.

Rain in Southern Districts.—ಕಳೆದ ವಾರದೊಳು ತಿರುಚನಾಪಲ್ಲಿ ಶ್ರೀರಂಗ ಮೊದಲಾದ ಪ್ರದೇಶಗಳೊಳು ಅಪರಿಮಿತವಾಗಿ ವರ್ಷಬಿದ್ದು ಜನ ಕ್ಲೇಶ ಉಂಟಾದ ಕಾವೇರೀ ಪ್ರವಾಹದ ದೆಸೆಯಿಂದ ಶ್ರೀರಂಗದಲ್ಲಿ ಬೀದಿಗಳಲ್ಲೂ ದೇವಸ್ಥಾನದಲ್ಲೂ ನೀರುನುಗ್ಗಿದ್ದಲ್ಲದೆ ಆ ದ್ವೀಪದಲ್ಲಿ ಎತ್ತ ನೋಡಿದರೂ ಜಲಮಯವಾಗಿರುವಂತೆ ಅಲ್ಲಿಂದ ಬಂದ ಒಬ್ಬ ದೇಶಸ್ಥ ಮನುಷ್ಯರ ಮೂಲಕ ತಿಳಿಯಲಾದೆವು.

A proposal.—ಪ್ರಮುಚ್ಚೇರಿ ನಿವಾಸಿಗಳಾದ ಹಿಂದೂ ಪ್ರಮುಖರು ಕೆಲವರು ಹಿಂದೂ ವಿತಂತುಗಳಿಗೆ ವಿವಾಹಮಾಡಿಸುವದು ಯೋಗ್ಯವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುವದಕ್ಕಾಗಿ ಸದರೀ ಪಟ್ಟಣದೊಳೊಂದು ಮೀಟಿಂಗ್ ಮಾಡಬೇಕೆಂದು ಯೋಚಿಸಿದಾರೆ. ಈ ಪ್ರಯತ್ನಕ್ಕೆ ಅಲ್ಲಿ ಅನೇಕರು ಪೂರ್ಣ ಪಕ್ಷಪಾತಿಗಳಾಗಿ ಏರ್ಪಟ್ಟಿರುವದಲ್ಲದೆ ಸದರೀ ಮೀಟಿಂಗಿಗೆ ಬರಬೇಕೆಂದು ದಿವಾನ್ ಬಹದೂರ್ ರಘುನಾಥರಾಯರವರನ್ನು ಪ್ರಾರ್ಥಿಸಿರುವಂತೆ ಸಹ ತಿಳಿಯಬರುತಿದೆ.

An Indian mission to England.—ಬಂಗಾಳೇದೇಶ ನಿವಾಸಿಯಾದ ಮೆ|| ರಾಜೇಂದ್ರ ದತ್ತರೆಂಬುವರು, ಇಂಡ್ಯಾದೇಶೀಯರಿಗೆ ಉಂಟಾಗಿರುವ ಸಂಕಟಗಳು ಬ್ರಿಟಿಷ ಜನರಿಗೂ ಬ್ರಿಟಿಷ ವೃತ್ತಾಂತ ಪತ್ರಿಕಾಲೇಖಕರಿಗೂ ಬ್ರಿಟಿಷ್ ಪಾರ್ಲಿಯಮೆಂಟಿಗೂ ಉಚಿತವಾದ ಮಾರ್ಗದಲ್ಲಿ ತಿಳಿಸುವ ಉದ್ದೇಶದೊಡನೆ ಇಬ್ಬರು ಹಿಂದೂಗಳು, ಮೂವರು ಮುಸಲ್ಮಾನ್ ಉಪನ್ಯಾಸಕರೊಡನೆ ಇಂಗ್ಲಾಂಡಿಗಾಗಿ ಮುಂಬೈಯಲ್ಲಿ ಹಡಗು ಹತ್ತಿದರೆಂದು ಮದರಾಸ್ ಮೆಯಿಲ್‌ಪತ್ರಿಕೆಗೆ ಮುಂಬೈಯಿಂದ ಒಬ್ಬ ಬಾತಮೀದಾರರು ತಿಳಿಸುತ್ತಾರೆ.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕ್ ವಾರ್ತಾವೃತ್ತಾಂತಗಳು.

The Mysore Deputy Commissioner.—ಮೈಸೂರು ಡಿಪ್ಟೀ ಕಮಿಷನರಾದ ಮೆ|| ಮ್ಯಾಕಿಂಜೀ ಸಾಹೇಬರವರು ಕೊಡಗು ಕಮಿಷನರ್ ಕೆಲಸಕ್ಕೆ ಹೋಗುವಪಕ್ಷದಲ್ಲಿ ಈಗ ಕೋಲಾರದಲ್ಲಿ ಡಿಪ್ಟೀ ಕಮಿಷನರಾಗಿರುವ ಮೆ|| ರಾಜಾ ಮಾಧ್ಯಮಯ್ಯನವರು ಇಲ್ಲಿಗೆ ಡಿಪ್ಟೀ ಕಮಿಷನರಾಗಿ ಬರುವರೆಂದು ಪ್ರವಾದವಿದೆ.—ವ್ಯ. ಚಿ.

Return of Dassara visitors.—ಈ ಸಲದ ನವರಾತ್ರಿ ಉತ್ಸವ ವಿಭವಗಳು ನೋಡುವ ಕುತೂಹಲದೊಡನೆ ಮೈಸೂರಿಗೆ ಹೋಗಿದ್ದವರೆಲ್ಲರೂ ಪ್ರಾಯಶಃ ವಾಪಸ್ ಬಂದುಬಿಟ್ಟರು. ಏತದ್ವರ್ಷ ಇಲ್ಲಿಗೂ ಮೈಸೂರಿಗೂ ಮೋ(?)ಗಿ ಬರುತಲಿದ್ದ ಸ್ಪೆಷಿಯಲ್ ಟ್ರೈಯಿನ್‌ಗಳು ಮನ್ನಾ ಮಾಡಲ್ಪಟ್ಟವು.

An entertainment.—ನಿನ್ನೆಯ ಭಾನುವಾರದದಿವಸ ದಿವಾನರವರ ಮನೆಯಲ್ಲಿ ನವರಾತ್ರಿ ಮಹೋತ್ಸವಕ್ಕಾಗಿ ಬಂದಿರತಕ್ಕ ಪ್ರಜಾ ಪ್ರತಿನಿಧಿಗಳಿಗೂ ಮತ್ತು ದೊಡ್ಡದೊಡ್ಡ ಹುದ್ದೇದಾರರಿಗೂ ಪಟ್ಟಣ ನಿವಾಸಿಗಳಲ್ಲಿನ ದೊಡ್ಡ ಮನುಷ್ಯರಿಗೂ ಅತ್ಯಂತ ವಿಜೃಂಭಣೆಯಿಂದ ಔತಣ ನಡೆಯಿತು.—ವ್ಯ. ಚಿ.

The weather.—ಗತ ಶುಕ್ರ ಶನಿವಾರಗಳ ದಿನ ಪಳ್ಳೀ ವರ್ಷವಾಗಿ ಕೆರೆ ಕುಂಟೆಗಳಿಗೆ ಬಹಳ ನೀರು ಬಂದಿರುತಿದೆ. ವರ್ಷ ಹಿನ್ನಿಂತಿದ್ದ ಬಗ್ಗೆ ಜನರಿಗುಂಟಾಗಿದ್ದ ಚಿಂತೆಯೆಲ್ಲವು ಗತ ಎರಡು ದಿನಗಳ ಮಳೆಯಿಂದ ಬಹಳ ಮಟ್ಟಿಗೆ ನಿವೃತ್ತಿಯಾದಂತೆ ಹೇಳಬಹುದಾಗಿರುತಿದೆ. ಈ ವೊನ್ನೆ ಬಿದ್ದ ಮಳೆಯು ಪರನೈಳಗಳಲ್ಲಿಯೂ ಬಿದ್ದಿದ್ದ ಪಕ್ಷಕ್ಕೆ ರಾಗಿ ಫಸಲು ಉಳಿದುಕೊಂಡಂತೆ ಹೇಳಬಹುದು. ಇನ್ನೂ ವರ್ಷಸೂಚನೆಗಳು ಕಾಣುತಲಿವೆ.

A theft.—ಮದ್ದೂರ್ ಕಸಬೆಯಲ್ಲಿ ಒಬ್ಬ ಪೋಸ್ಟ್‌ಮ್ಯಾನ್ ಪೋಸ್ಟಾಫೀಸಿನಲ್ಲಿ ಚಕ್ಕಳದ ಚೀಲದಲ್ಲಿಟ್ಟಿದ್ದ ಆಫೀಸಿಗೆ ಸಂಬಂಧಪಟ್ಟ ೮೭ ಚಿಲ್ರೆ ರೂಪಾಯಿಗಳನ್ನೂ ಮತ್ತು ಪೋಸ್ಟ್‌ಮ್ಯಾಸ್ಟರ್ ಸ್ವಾಂತ ಬಾಬತ್ತಿನ ಒಂದು ಚಿನ್ನದ ಉಂಗರವನ್ನೂ ಮತ್ತು ಕೆಲವು ರೂಪಾಯಿಗಳನ್ನೂ ಕದ್ದುಕೊಂಡು ಬಂದು ಒಂದು ಜೇಡಿಯ ಬಳಿಯಲ್ಲಿ ಹೂಳಿಟ್ಟಿದ್ದನು. ಪೋಲೀಸಿನವರು ಈ ಸಂಗತಿಯನ್ನು ಪತ್ತೇ ಮಾಡಿ ಅವನನ್ನು ಶ್ರೀರಂಗಪಟ್ಟಣದ ತಾಲ್ಲೂಕ್ ಸೆಕೆಂಡ್ ಕ್ಲಾಸ್ ಮ್ಯಾಜಿಸ್ಟ್ರೇಟರಲ್ಲಿ ಹಾಜರ್ಮಾಡಲು ವಿಚಾರಣೆಯಿಂದ ಸದರೀ ಪೋಸ್ಟ್‌ಮ್ಯಾನನಿಗೆ ೮ ತಿಂಗಳು ಕಠಿಣಸಜಾ ಹಾಗು ೧೦ ರೂಪಾಯಿ ಜುರ್ಮಾನೆಯನ್ನು ವಿಧಿಸಿದರು.—ವ್ಯ. ಚಿ.

State insurance.—ಇದುವರಿಗೆ ಅನೇಕರು ಮುಂಬೈ ಮೊದಲಾದ ಕಡೆಗಳಲ್ಲಿರುವ ಪ್ರೈವೇಟ್ ಕಂಪೆನಿಗಳಲ್ಲಿ ಲೈಫ್ ಇನ್‌ಷ್ಯೂರ್ ಮಾಡಿ, ಮೊಬಲಗುಗಳನ್ನು ಪಡೆಯುತಲಿದ್ದಾರೆ ಯಷ್ಟೆ. ಇದೇರೀತಿ ಈ ಸಂಸ್ಥಾನದಲ್ಲಿ ಸರಕಾರದವರೇ ಹಣ ರೂಪಾಯಿಗಳಗೊಳಪಟ್ಟು, ೨ ರೂಪಾಯಿಗಳಿಗೆ ಮೇಲ್ಪಟ್ಟು ತಲಬ್ ಪಡೆಯತಕ್ಕವರು ಕೆಲಸದಿಂದ ನಿವೃತ್ತರಾಗುವ ಕಾಲದಲ್ಲಿ ಅವರಿಗಾಗಲಿ, ಅವರ ಕುಟುಂಬದವರಿಗಾಗಲಿ, ದ್ರವ್ಯಸಹಾಯ ಮಾಡುವ ಉದ್ದೇಶದೊಡನೆ ಸರ್ಕಾರದವರ ಜವಾಬ್‌ದಾರಿಯಮೇಲೆ ಇನ್‌ಷ್ಯೂರೆನ್ಸ್ ಪದ್ಧತಿಯನ್ನೇರ್ಪಡಿಸುವ ಆಲೋಚನೆಯೊಡನೆ ಅದರ ಕುರಿತ ಕೆಲವು ಅಂಶಗಳನ್ನು ದಿವಾನರವರು ಈ ಸಲದ ತಮ್ಮ ರಿಪೋರ್ಟಿನಲ್ಲಿ ಸೂಚಿಸಿರುತ್ತಾರೆ. ಇದರ ಕುರಿತ ಪಟ್ಟೀಲೆಗಳನ್ನು ಮುಂದಿನವಾರದಲ್ಲಿ ತಿಳಿಸುವೆವು. ಪ್ರಸಕ್ತ ಏರ್ಪಾಡು ಕ್ರಮವಾಗಿ ಜರಿಗಿದರೆ ಜುಜುಬಿ ತಲಬುಗಳುಳ್ಳ ಸರ್ಕಾರ್ ನೌಕರರಿಗೆ ತಮ್ಮ ಕುಟುಂಬ ನಿರ್ವಹಣೆಯು ಕಾಲಾಂತರದಲ್ಲಿ ವಿಶೇಷ ಶ್ರಮಕರವಾಗಿರಲಾರದು.

[ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವ ವಾಕಿವಿಂದಾರರ ಬರವಣಿಗೆಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್‌ದಾರರಾಗುವದಿಲ್ಲವು.—ಎಡಿಟರ್ ಕ. ಪ್ರ.]

CORRESPONDENCE

ಮ|| ರಾ|| ಕರ್ಣಾಟಕಪ್ರಕಾಶಿಕಾ ಎಡಿಟರವರ || ಗೆ.

ಅಯ್ಯಾ,—ಈ ಕೆಳಗೆ ಉದಹರಿಸಿರುವ ಕೆಲವು ಅಂಶಗಳನ್ನು ಪ್ರಕಟಿಸಬೇಕಾಗಿ ಕೋರುತ್ತೇನೆ.

ಈ ಮಾಹೆ ೨೩ನೇ ತಾರೀಖಿನ ತಮ್ಮ ಪತ್ರಿಕೆಯ ೩ನೇ ಪೇಜಿನಲ್ಲಿ ವಾದ್ಯಸ್ಥ ಕೊಟ್ಟಿರುವ ರೀತಿ ವೀರಶೈವರ ವಿಷಯಾನುಕ್ರಮವನ್ನು ಸೂಚಿಸುತ್ತೇನೆ.

೧. ಶ್ರೇಷ್ಠರಾದ ಪಂಚಾಚಾರ್ಯರು.—೧ ಘಂಟಾಕರ್ಣ ಗಣೇಶ್ವರನು, ೨ ಗಜಕರ್ಣ ಗಣೇಶ್ವರನು, ೩. ರೇಣುಕನು, ೪. ದಾರುಕನು, ೫ ವಿಶ್ವಕರ್ಣನೆಂದು ಈಶ್ವರನ ಪಂಚಮುಖೋದ್ಭವನ್ನರಾದ್ದರಿಂದ ಪಂಚಾರಾಧ್ಯರೆಂದು ಹೇಳಿಸಿಕೊಂಡರು. ಇವರುಗಳೇ ೪ ಯುಗಗಳ ಭೇದದಿಂದ ಪ್ರತಿನಾಮಗಳನ್ನು ಹೊಂದಿ ಕಲಿಯುಗದಲ್ಲಿ—೧. ರೇಣುಕಾರಾಧ್ಯರು, ೨. ಪಂಡಿತಾರಾಧ್ಯರು, ೩. ಏಕೋರಾಮಾರಾಧ್ಯರು, ೪. ಮರುಳಸಿದ್ಧರು ೫ ವಿಶ್ವಾರಾಧ್ಯರೆಂದು ಈಶ್ವರನ ಸದ್ಯೋಜಾತಾದಿ ಪಂಚ ಮುಖದಿಂದ ಉತ್ಪನ್ನವಾಗಿ ಪಂಚಬ್ರಹ್ಮ ಕಲಶಗಳನ್ನು ಭೂಲೋಕದಲ್ಲಿ ಸ್ಥಾಪಿಸಿ ಋತ್ವಿಜರಾಗಿ ವೀರಶೈವರಿಗೆ ದೀಕ್ಷಾನುಗ್ರಹ ಕಾರಣಕ್ಕಾಗಿ ತಮ್ಮ ವಂಶದಲ್ಲಿ ಹುಟ್ಟಿದವರುಗಳನ್ನು ಭೂಲೋಕದಲ್ಲಿ ಬಿಟ್ಟು ಆಚಾರ್ಯರುಗಳು ಪುನಃ ಕೈಲಾಸವನ್ನು ಸೇರಿದರೆಂದು ಸ್ವಯಂಭುವಾಗಮದಲ್ಲಿ ಈಶ್ವರನಿಂದ ಘಂಟಾಘೋಷವಾಗಿ ಹೇಳಲ್ಪಟ್ಟಿದೆ. ಅವರುಗಳು ನೆಲೆಗೊಂಡ ಸ್ಥಾನಗಳಿಗೆ ಪಂಚ ಪೀಠಗಳೆಂದು ಮತ್ತು ಪಂಚ ಸಿಂಹಾಸನಗಳೆಂದು ಹೆಸರಾಗಿ ಈಹಾ ಪರಿವಿಗೂ ಊರ್ಜಿತವಾಗಿವೆ. ೧ ಬಾಳೇಹಳ್ಳಿ, ೨ ಉಜ್ಜಯನಿ, ೩ ಪರ್ವತಾ, ೪ ಕೊಲ್ಲಿಪಾಕ್ಕೆ, ೫ ಹಿಮಾಚಲ

೨. ಮಸಲಾ ರೇಕೋರಾಮರ ಒಬ್ಬ ಶಿಷ್ಯನಿಗೆ, ೧ ಋಗ್ವೇದ ಶಾಖಾ, ೨ ಘಂಟಾಕರ್ಣ ಗಣೇಶ್ವರನ ಗೋತ್ರ, ೩ ಶ್ರೀ ವೀರಶೈವ ತಂತ್ರವೆಂಬ ಸೂತ್ರ, ರೇಕೋರಾಮ ಗಣೇಶ್ವರನ ಪ್ರವರ, ಪಂಚ ಕಲಶಗಳ ಪೈಕಿ ಪಶ್ಚಿಮದಿಕ್ಕಿನ ಕಲಶಕ್ಕೆ ಪಡೆಯುರು ಆಯಾ ಸೂತ್ರಾನುಸಾರವಾಗಿ ಮಂತ್ರ, ಜಪ, ದಂಡ, ಕಾಷಾಯ, ಕಲಶ, ಜಟೆ, ಅಕ್ಷಮಾಲೆ, ಮತ್ತು ಭಿಕ್ಷ ಇವೆಲ್ಲ ಸಾಂಗವಾಗಿಯೇ ನಡೆಯುತಿದೆ. ಈ ಆರಾಧ್ಯರ ಶಿಷ್ಯರು ಅಬ್ರಾಹ್ಮಣರು, ಇವರುಗಳು ಋಷಿಗೋತ್ರಜರಲ್ಲ. ಪಂಚಾಚಾರ್ಯರ ಪೈಕಿ ಒಬ್ಬನೇ ಋತ್ವಿಜರು, ಇವನೇ ಗುರುವು ಯಾವ ಸೂತ್ರದ ಶಿಷ್ಯನೋ ಆ ಸೂತ್ರದ ಗುರುವೇ ಮನೆಸೇರಿಕೊಂಡು ಆ ಕಲಶಕ್ಕೆ ಅಧಿಪತಿಗಳಾಗಿರುತ್ತಾರೆ.

೩. ವೀರಶೈವ ಬ್ರಾಹ್ಮಣರುಗಳಿಗೆ ಆರು ಕರ್ಮಗಳು, ಪಂಚ ಯಜ್ಞಗಳು, ಮತ್ತು ಷೋಡಶ ಕರ್ಮಗಳ ಪೈಕಿ ಕೆಲವು ಉಂಟು.

ದಾನಪ್ರತಿಗ್ರಹ, ಅಧ್ಯಯನ, ಅಧ್ಯಾಪನ, ಯಜನ ಯಾಜನ. ತಪಸ್ಸು, ನಿತ್ಯಕರ್ಮ, ಜಪ, ಧ್ಯಾನ, ಮತ್ತು ಜ್ಞಾನ, ಇವರ ಆಧಾರದ ಮೂಲಕವಾಗಿ ವೇದದೀಕ್ಷೆ, ಮಂತ್ರದೀಕ್ಷೆ, ಮತ್ತು ಕ್ರಿಯಾದೀಕ್ಷೆ, ಎಂಬ ೩ ತರದ ದೀಕ್ಷೆಗಳು, ದೀಕ್ಷೆ ಆದ ತರುವಾಯ, ವೀರಶೈವ ವಿವಾಹ, ಗರ್ಭಾದಾನ, ಸೀಮಂತ, ಪುಂಸವನ, ಜಾತಕರ್ಮವೆಂಬ ಲಿಂಗಧಾರಣ, ನಾಮಕರಣ, ಅನ್ನಪ್ರಾಶನ ಅಂತರಾರೋಹಣ, ಮತ್ತು ಚೌಲ, ಇವು ಮೊದಲಾದ ಷೋಡಶ ಕರ್ಮಗಳಲ್ಲಿ ಪ್ರಯೋಗವಿಟಯಾಗಿ ವೀರಶೈವಾಚಾರ ಶಾಸ್ತ್ರದಲ್ಲಿ ಪ್ರಕಾಶಿಸುತ್ತೆ.

೪. ವೀರಶೈವರಲ್ಲಿ ಇರುವ ಚಾತುರ್ವರ್ಣದ ವಿವಾಹವನ್ನು ನಾಳೆ ಮತ್ತೊಂದು ಲಿಖಿತದಿಂದ ಪ್ರಕಟಪಡಿಸುತ್ತೇನೆ. ಮತ್ತು ಇನ್ನೂ ಕೆಲವು ಪ್ರಮೇಯಗಳನ್ನು ವಿವರಿಸಿ ದನ್ಮೂಲಕ ಬಹಿರಂಗ ಪಡಿಸುವದರಲ್ಲಿ ಸಿದ್ಧನಾಗಿರುವೆನು.

ತಮ್ಮ ವಿಧೇಯನಾದ,

ಮಾಗಡಿ, ೩೧ನೇ ಅಕ್ಟೋಬರ್ ೯೦. | ಮಾಗಡಿ ಮಠದ ಪಟ್ಟದ ಶಿವಲಿಂಗಸ್ವಾಮಿಗಳವರು

ಈ ಕೆಳಗೆ ರುಜು ಮಾಡಿರುವವನು ಪ್ರತಿಪಾದಿಸುವದೇನೆಂದರೆ,—ಈ ಕೆಳಗೆ ವಿವರಿಸುವ ವಿಷಯವನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಪ್ರಾರ್ಥಿಸುತ್ತೇನೆ.

ಈ ವರುಷ ನಡೆಯಬೇಕಾದ ಸೆನ್ಸಸ್ಸಿನಲ್ಲಿ ತಮ್ಮನ್ನ ಉತ್ತಮವರ್ಣದಲ್ಲಿಯೇ ಸೇರಿಸಬೇಕೆಂದು ಶಿವಾಚಾರ ಮತಸ್ಥರಾದ ಕೆಲವರು ಶ್ರೀಮನ್ಮಹಾರಾಜಾ ಸರ್ಕಾರಕ್ಕೆ ಬರೆದುಕೊಂಡ ಅರ್ಜಿಯು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದವನ್ನು ನೋಡಿದೆವು. ಶೂದ್ರಪಂಕ್ತಿಯಲ್ಲಿ ಅವರುಗಳನ್ನ ಪರಿಗಣಿಸುವದಕ್ಕೆ ಸಂಬಂಧ ಮುಖ್ಯ ಕಾರಣಗಳು ಅವರ ಪ್ಲ್ಯಾವಕಕ್ಕೆ ಬಾರದೆ, ಅಸಾಧ್ಯವಾದ ಈ ವಿಷಯದಲ್ಲಿ ಅವರು ಜಡಾಭೇದವನ್ನು ನಿವರ್ತಿಸಿಕೊಳ್ಳುವದಕ್ಕೆ ತಮ್ಮ ಪತ್ರಿಕೆಯಲ್ಲಿಯೇ ಪ್ರಕಟಿಸಬೇಕಾದರೆ ಅವರ ತಿಳವಳಿಕೆಗೋಸ್ಕರವೆಯಲ್ಲಿ ಬರುವದಾಗಿ ವಿಜ್ಞಾಪಿಸಿ ಇದ್ದೇವೆ.

ತಾವೂ ಉತ್ತಮವರ್ಣದವರೆನ್ನುವದಕ್ಕೆ ತಮಗೆ ಭಾಧ್ಯವಿರುತ್ತೆಂತಲೂ, ಪ್ರಸಿದ್ಧವಾದ ಗುರುಪೀಠಗಳು ಇರುತವೆಂತಲೂ, ಇವುಗಳೇ ಮುಖ್ಯ ಕಾರಣವಾಗಿ ಅಭಿಪ್ರಾಯ ಪಡುತ್ತಾರೆ.

ಜಾತಿಯನ್ನ ನಿರ್ಧರಿಸುವದಕ್ಕೆ ಈ ಕಾರಣಗಳು ಶ್ರುತಿ ಸ್ಮೃತಿಗಳಲ್ಲಿ ಉಕ್ತವಾಗಿರುವದಿಲ್ಲ. ಮೂಲ ಸ್ಮೃತಿಗಳಲ್ಲಿ ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ವರ್ಣಚತುಷ್ಟಯವೆಂತಲೂ, ನೀಚರಾದವರು ಪಂಚಮರೆಂತಲೂ ೫ ಬಗೆಯಾಗಿ ಜಾತಿಗಳು ವಿಂಗಡಿಸಲ್ಪಟ್ಟು ಉತ್ತಮ ವರ್ಣದಲ್ಲಿ ಗರ್ಭಾದಾನಾದಿ ಷೋಡಶ ಕರ್ಮಗಳಿಗೆ ಕಾಲಕ್ಲುಪ್ತವಾಗಿಯೂ, ೧೬ ನೇ ದಾದ ಉತ್ತರಕರ್ಮಕ್ಕೆ ಅನೇಕ ಪ್ರಯೋಗಗಳೂ ಏರ್ಪಟ್ಟಿರುತವೆ. ಆ ರೀತಿ ಆಚರಣೆಯಲ್ಲಿಯೂ ಇದೆ. ಪ್ರಸಕ್ತ ವಿಚಾರಕ್ಕೆ ವಿಷಯರಾದ ಶಿವಾಚಾರದವರಲ್ಲಿ ವಿವಾಹಕ್ಕೆ ಪೂರ್ವ ನಡೆಯಬೇಕಾದ ಉಪನಯನಾದಿ ಕರ್ಮಗಳು ಒಂದೂ ಆಚರಣೆಯಲ್ಲಿಲ್ಲವು. ಮತ್ತು ಬ್ರಾಹ್ಮಣ್ಯಕ್ಕೆ ಮುಖ್ಯವಾದ ಮಾತಾಪಿತೃಗಳೇ ಮೊದಲಾದವರುಗಳ ಸಾಂವತ್ಸರಿಕ ಶ್ರಾದ್ಧಗಳೇ ಆಗಲಿ, ಗ್ರಹಣ ಸಂಕ್ರಮಣ ಅಮಾವಾಸ್ಯಾದಿ ಪ್ರತ್ಯೇಕ ದಿವಸಗಳಲ್ಲಿ ನಡೆಸಬೇಕಾದ ಪಿತೃತರ್ಪಣಾದಿ ಪಿತೃಕಾರ್ಯಗಳೇ ಆಗಲಿ, ರುದ್ರಾಂಗ ನಡವಳಿಕೆಯಲ್ಲಿ ಇಲ್ಲ. ಪ್ರಕೃತಿ ಇವರ ಆಚಾರ ಸ್ಥಿತಿ ಹ್ಯಾಗಿರುತ್ತೆಂದರೆ,—ಸ್ಮೃತಿಗಳಲ್ಲಿ ಶೂದ್ರವರ್ಣಕ್ಕೆ ಉಕ್ತವಾಗಿರುವಂತ ವಿವಾಹಮಾತ್ರ ನಡೆಯುವದಲ್ಲದೆ ಪುರೋಧರ್ಮ ನಿರ್ಣಯವಿಲ್ಲದೆ ಯುಕ್ತವಾದ ನಂತರ ಕನ್ಯಾದಾನ ಪ್ರತಿಗ್ರಹಗಳೂ, ವಿತಂತುಗಳಿಗೆ ೨ನೇ ಕೂಡಿಕೆ ಮದುವೆಯೂ, ಅಂತವರಲ್ಲಿ "ಸ್ವೈಪ್ಸನ್ನ"ರಾದ ಪುಂ ಪ್ರಜೆಗಳಿಗೆ ದಾಯಾದಿಕಾರವೂ ಇವುಗಳೇ ಮೊದಲಾದ ಶೂದ್ರಧರ್ಮನ ಸಂಪೂರ್ಣ ಇರುತಿವೆಯಲ್ಲದೆ ಉತ್ತಮವರ್ಣಕ್ಕೆ ನಿಷಿದ್ಧವಾದ ನಾಪಿಕಾದ್ಯನ್ತ್ಯಾಂತರ ಜೀವನಗಳು ಸಹ ಅವರಲ್ಲಿ ರೂಢವಾಗಿರುತ್ತೆ. ಇಂತಾ ಶೂದ್ರ ಧರ್ಮನಿಷ್ಠ ಇವರುಗಳೂ ಉತ್ತಮವರ್ಣದಲ್ಲಿ ಸೇರಬೇಕೆಂಬ ಪ್ರಾರ್ಥನೆ ಹ್ಯಾಗೆ ನೆರವೇರಿತು. ಶ್ರುತಿ ಸ್ಮೃತಿಗಳಲ್ಲಿ ಉಕ್ತವಾಗಿರುವ "ಲಿಂಗಧಾರಣೆಯನ್ನ" ತಮಗೆ ಅನ್ವಯಿಸಿಕೊಳ್ಳುತಿರುವದರಿಂದ ತಾವು ಬ್ರಾಹ್ಮಣರೆಂದು ಹೇಳುವದಕ್ಕೆ ಅವಕಾಶವುಂಟೆ ?

ಬ್ರಹ್ಮ ಕ್ಷತ್ರಿಯ ಜಾತಿಗಳು ನಾಲ್ಕುವಿಧವಾಗಿಯೂ, ಶೈವ, ವೈಷ್ಣವಾದಿ ಮತಗಳ ಆರು ವಿಧವಾಗಿಯೂ, ನಿರ್ಣಯವಾಗಿದೆ. ಶೈವದಲ್ಲಿ ವೀರಶೈವವೆಂತಲೂ, ವೈಷ್ಣವದಲ್ಲಿ ವೀರವೈಷ್ಣವವೆಂತಲೂ, ೨ ಪ್ರಭೇದವುಂಟು. ನಾಲ್ಕು ಜಾತಿಗಳಲ್ಲೂ ಷಣ್ಮತಗಳೂ ವ್ಯಾಪಿಸಿರುತ್ತೆ. ಆತ್ತಾಗಿ, ಸಾಮಾನ್ಯವಾದ ಶೈವ, ವೈಷ್ಣವ, ಎರಡು ಮತಗಳೂ ವಿಶೇಷ ಪ್ರಚಾರದಲ್ಲಿದೆ. ವಿಶೇಷತಃ ಲಿಂಗಧಾರಿಗಳಾದವರ್ಷ್ಟು ವೀರಶೈವರೆಂತಲೂ, ತಪ್ತ ಮುದ್ರಾಂಕಿತರಾದವರು ವೀರವೈಷ್ಣವರೆಂತಲೂ ಅಭಿಮಾನಪೂರ್ವರಾಗಿರುತ್ತಾರೆ. ತಪ್ತಮುದ್ರೆಗೂ ಲಿಂಗಧಾರಣೆಗೂ ಶ್ರುತಿಸ್ಮೃತಿಗಳಲ್ಲಿ ಆಧಾರವೂ ಇರುತ್ತೆ, ಆದದರಿಂದಲೇ ಉತ್ತಮ ವರ್ಣದವರು ಈ ಮತವನ್ನವಲಂಬಿಸಿರುತ್ತಾರೆ. ಇದರಂತೆಯೇ ತಪ್ತ ಮುದ್ರಾಂಕಿತರಾಗಿರುವ ಸಾತಾನಿ ಮೊದಲಾದವರಂತೆ ಇವರೂ ಲಿಂಗಧಾರಿಗಳಾದ ವೀರಶೈವರಾಗಿರುತ್ತಾರೆಯೇ ಹೊರತು ಶ್ರುತಿಸ್ಮೃತಿಗಳಲ್ಲಿ ಲಿಂಗಧಾರಣೋಕ್ತವಾದ ಮಾತ್ರದಿಂದಲೇ ಇವರುಗಳನ್ನ ಉತ್ತಮ ವರ್ಣದವರನ್ನಾಗಿ ಭಾವಿಸುವದಕ್ಕೆ ಅವುಗಳು ಹ್ಯಾಗೆ ಆಧಾರವಾದೀತು ? ಶಿಷ್ಯರಪ್ರಾಸ್ಥಾನ ಪೊಂದಿರಬೇಕೆಂಬ ಕಾರಣದಿಂದಲೇ ಗುರುಪೀಠಗಳು ಸ್ಥಾಪಿಸಲ್ಪಟ್ಟಿರುವವು. ಅದು ಜಾತಿ ಸಾಮಾನ್ಯಕ್ಕೆ ವುಂಟು. ಇದರಿಂದ ಬ್ರಾಹ್ಮಣರಿಗೂ ತಮಗೂ ಸಮಾನಾಧಿಕರಣವನ್ನವೇ

ಪ್ಪಿಸುವ. ಇವರ ವಿವೇಕವನ್ನು ಯೆಷ್ಟರಮಟ್ಟಿಗೆ ಕೊಂಡಾಡಿದರೂ ಸ್ವಲ್ಪವಾಗಿದೆ. ತಮಗೂ ಒಂದು ಭಾಷ್ಯವಿರುವಂತೆ ಹೇಳುತ್ತಾರೆ. ಈ ಭಾಷ್ಯಕ್ಕೆ ಮೂಲಗ್ರಂಥ ಯಾವದು? ಭಾಷ್ಯಕರ್ತರು ಯಾರು? ಅವರುಗಳನ್ನು ಮಾತ್ರ ವಿವರಿಸಲಿಲ್ಲ. ಶಂಕರ, ಮಧ್ವ, ರಾಮಾನುಜಾಚಾರ್ಯರಂತೆ ಪ್ರಸಿದ್ಧರಾದ ಭಾಷ್ಯಕಾರರುಗಳು ಇನ್ಯಾರಿರುವರೋ ಯೆಂದು ತಿಳಿದುಕೊಳ್ಳಬೇಕಾದ ಕುತೂಹಲ ಪ್ರಕ್ಷರಾಗಿದೇವೆ. ಮುಖ್ಯ ಈಗ ಇವರು ವಿಧಾಯಿಸುವ ವಿಷಯ ಸರ್ಕಾರ ಕಾಲದಲ್ಲಿಯೇ ವಿಚಾರಾರ್ಹವಾಗಿ ಪ್ರಂಸಾರ್ಗಧಿಕಾರಿಗಳಿಂದ ವ್ಯವಸ್ಥೆಯಾಗಿರುವಂತೆ ತೋರುವದರಿಂದ ಪ್ರಸ್ತುತ ಇದು ಪಿಷ್ಟಪೇಷಣನ್ಯಾಯವಾಗಿದೆ. ಈ ಪ್ರಜಾ ಪರಿಗಣನೆ ಯೆಂಬುದು ಏಕದೇಶವಾದ ಈ ಮೈಸೂರು ಸಂಸ್ಥಾನಕ್ಕೆ ಮಾತ್ರವಲ್ಲವು. ಈ ವಿಧವಾದ ಶಿವಾಚಾರ ಪ್ರಜೆಗಳು ಅನೇಕ ದೇಶಗಳಲ್ಲಿ ವ್ಯಾಪಿಸಿರುವದರಿಂದ ಯೋಗ್ಯ ಜೇಶೀಯರಾದ ಇವರ ಪ್ರಾರ್ಥನೆ ಯೆಷ್ಟರಮಟ್ಟಿಗೆ ಫಲಕಾರಿ ಯಾಗುವದೋ ಅವರೇ ಯೋಚಿಸಬಹುದು. ಕಾಶಿಗೆ ಅಜ್ಜ ಕಣ್ಣು ಹೋಯಿತು ಯೆಂಬಂತೆ ಇದಕ್ಕಾಗಿ ಮುನಿಸ್ಸಿಪಾಲ್ ಕಮಿಷನರು ಪಡುವದನ್ನು ತ್ಯಜಿಸಿ ಇವರು ಸ್ವಸ್ಥಚಿತ್ತರಾಗಿರುವಂತೆ ಪ್ರೇರಿಸಬೇಕೆಂದು ದೇವರನ್ನು ಕುರಿತು ಪ್ರಾರ್ಥಿಸಬೇಕಾಗಿದೆ.

ಮೇಲೆ ಹೇಳಲ್ಪಟ್ಟ ವಿಷಯಗಳಲ್ಲಿ ಶ್ರುತಿ ಸ್ಮೃತಿ ಪುರಾಣಗಳಲ್ಲಿ ವ್ಯಂಜಾಗಿರುವ ಅಪಾರ ಕಗಳನ್ನು ಈ ಪತ್ರಿಕಾ ಮೂಲಕ ವಿವರಿಸುವದು ಅಸಾಧ್ಯವಾದ್ದರಿಂದ ರೂಢವಾಗಿರುವ ಪುರಾತನ ಶಾಸ್ತ್ರವಾದ ವಿಶ್ವಗುಣಾದರ್ಶವೆಂಬ ಚಂಪು ಗ್ರಂಥದಿಂದ ಕೊದ್ರರಿಗೂ ಲಿಂಗಧಾರಕೆ ವ್ಯಂಜಂಬುವದು ವ್ಯಕ್ತವಾಗುತ್ತೆ. ಆ ಶ್ಲೋಕವು ಈ ಕೆಳಗೆ ಬರೆಯಲ್ಪಟ್ಟಿದೆ

ಶ್ಲೋಕದ ಸಂಖ್ಯೆ || ೫೩ || ತಿರುವಡಾರ್ಶ್ವಾದಾನ ಕಾದಂಬ್ಯಾವ್ಯಕ್ತ್ಯಕ್ಷಿಸ್ತ್ರಮಿತೀರ್ಷಯಿಷಾ || ಸೂದ್ರಾ ಇನವಿಲಿಂಗಧರಾಸ್ತ್ವಯಂತಾಸ್ತ್ವವೇದತೆಂಷ್ಯಕ್ಷ್ಯದ ಯಂತಿಶಸ್ತ್ರಂ ||

ಮೈಸೂರು, ೩೦-೧೦-೯೦. } ತಮ್ಮ ವಿಧೇಯನಾದ, ಬ್ರಾಹ್ಮಣ ಕುತಾಹಿಮಣಿ

MYSORE REPRESENTATIVE ASSEMBLY.

ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಪುನರ್ವ್ಯವಸ್ಥೆ.

ಶ್ರೀಮನ್ಮಹಾರಾಜರವರಲ್ಲಿಕೆಯ ಮೊದಲನೇ ವರ್ಷದಲ್ಲಿ ಈ ಸಭೆಯು ಉಪಕ್ರಮವಾಗಿ ಕಳೆದ ೯ ವರುಷಗಳಿಂದಲೂ ಬಹು ಪ್ರೋತ್ಸಾಹಕರವಾಗಿ ನಡೆದುಬಂದಿದೆ. ಪ್ರಾರಂಭದಲ್ಲಿ ಈ ಸಭೆಗೆ ಬರತಕ್ಕವರು ದೇಶದಲ್ಲಿರತಕ್ಕ ಪ್ರಮುಖರಾದ ರೈತರು ಮತ್ತು ವರ್ತಕರಾಗಿ ಇದ್ದರಲ್ಲದೆ, ಅವರುಗಳು ವಿಚಾರಪೂರ್ವಕವಾಗಿ ದಿವಾನರು ಮತ್ತು ಆಯಾಯ ಡೆಪ್ಯುಟಿ ಕಮಿಷನರುಗಳಿಂದ ನೇಮಿಸಲ್ಪಟ್ಟವರಾಗಿದ್ದರು. ೧೮೮೭ ನೇ ಸಾಲಿನಲ್ಲಿ ಪ್ರಜೆಗಳೊಳಗೆ ಜಹಾಯಿತಿ ಕಸಬುದಾರರು ಬಹಳ ಮುಂದಿಯಾಗಿಯೂ ಮುಖ್ಯರಾಗಿಯೂ ಇರುವುದರಿಂದ ಅವರುಗಳೊಳಗೆ ಪ್ರತಿನಿಧಿಗಳಾಗಿ ಬರತಕ್ಕವರು ಒಂದು ಕ್ಲುಪ್ತವಾದ ಆಸ್ತಿಯುಳ್ಳವರೆಂಬ ವಿಶೇಷವಾದ ಯೋಗ್ಯತೆಯುಳ್ಳವರಾಗಿರಬೇಕೆಂದಲೂ, ಆಯಾಯ ಸ್ಥಳದಲ್ಲಿ ಇರುವ ಲೋಕಲ್ ಫಂಡ್ ಬೋರ್ಡುಗಳೂ ಮ್ಯುನಿಸಿಪಾಲಿಟಿಗಳೂ ಮತ್ತು ಪಬ್ಲಿಕ್ ಅಸೋಸಿಯೇಷನ್ ಎಂಬ ಪ್ರಜಾ ಸಂಘದವರು ಸಹ ಈ ಸಭೆಗೆ ತಮ್ಮಗಳ ತರಫ್ ಮೆಂಬರುಗಳನ್ನು ಗೊತ್ತುಮಾಡಿ ಕಳುಹಿಸಬೇಕೆಂತಲೂ ವಿಧಿಸಿದ್ದಾಯಿತು. ಅನಂತರ ೩ ವರುಷಗಳಲ್ಲಿ ಆಯಾಯ ಜನಗಳ ಕ್ರಮವಾದ ತಾಲ್ಲೂಕು ವಾರ್ ಪಟ್ಟಿಗಳನ್ನು ತರಿಸಿ ಇಟ್ಟುಕೊಂಡು ಅವುಗಳಿಂದ ಜನಗಳನ್ನು ಚುನಾಯಿಸುವದರಲ್ಲಿ ಎಲ್ಲ ತರಗತಿಯವರಿಗೂ ಸಾಧ್ಯವಾದ ಮಟ್ಟಿಗೆ ಸಮಾನವಾಗಿರುವಂತೆ ಚುನಾಯಿಸಲು ಪ್ರಯತ್ನ ಮಾಡಿದೆವು. ಈ ಪ್ರಯತ್ನಗಳು ಎಷ್ಟುಮಟ್ಟಿಗೆ ಕೈಗೂಡಿಬಂದರೆ, ದೇಶದಲ್ಲಿ ಮುಖ್ಯಮುಖ್ಯವಾದ ಎಲ್ಲಾ ಕಸಬಿನವರ ಕಡೆಯಿಂದ ಈಗ್ಗಿಂತಲೂ ಹೆಚ್ಚಾಗಿ ಪ್ರತಿನಿಧಿಗಳನ್ನು ಬರಮಾಡಿಕೊಳ್ಳುವ ವಿಷಯದಲ್ಲಿ ಪ್ರಯತ್ನ ಮಾಡುವದಕ್ಕೆ ಸರಕಾರದವರಿಗೆ ಪ್ರೋತ್ಸಾಹ ಉಂಟಾಗಿದೆ. ಕಳೆದ ವರುಷದಲ್ಲಿ ನೀವು ಮಾಡಿದ ಚರ್ಚೆಗಳಲ್ಲಿ ನಮಗೆ ಕಂಡು ಬಂದ ನಿದಾನ ಗುಣವೂ ತಿಳುವಳಿಕೆಯೂ ಅನುಭವಪೂರ್ವಕವಾದ ವಿವೇಕವೂ, ಮುಖ್ಯಮುಖ್ಯವಾದ ಪ್ರಮೇಯಗಳನ್ನು ಚರ್ಚಿಸುವದರಲ್ಲಿ ನೀವು ಕೊಟ್ಟ ನವೀನವಾದ ಸಲಹೆಗಳೂ, ರಾಜ್ಯ ಸಂಬಂಧವಾದ ವಿಷಯಗಳಲ್ಲಿ ನೀವು ತೋರಿಸಿದ ನಿಷ್ಕಲವಾದ ಆಸಕ್ತಿಯೂ ಇವುಗಳನ್ನು ಯೋಚಿಸತಾಗಿ ಹೆಚ್ಚಾದ ಐಕ್ಯವೂ ಮತ್ತು ಲೋಕವ್ಯವಹಾರಜ್ಞಾನವೂ ಇವುಗಳು ಅಧಿಕವಾಗಿರುವ ತರಗತಿ ಜನಗಳು ಈ ಸಭೆಗೆ ಬರತಕ್ಕ ಮೆಂಬರುಗಳನ್ನು ತಾವು ತಾವೇ ಚುನಾಯಿಸಿಕೊಳ್ಳುವಂತೆ ಏರ್ಪಡಿಸುವದಕ್ಕೆ ಇದು ಸಕಾಲವೆಂದು ಶ್ರೀಮನ್ಮಹಾರಾಜರವರಿಗೆ ತೋರಿ ಬಂದಿರುವದು. ಈ ಅಭಿಪ್ರಾಯದಂತೆ ಮುಂದೆಗೆ ಜರುಗುವ ಈ ಸಭೆಯನ್ನು ಮುಂದೆ ಏರ್ಪಡಿಸುವ ಕ್ರಮವನ್ನು ಕುರಿತು ಕೆಲವು ಮುಖ್ಯವಾದ ನಿಬಂಧನೆಗಳನ್ನು ತಯಾರು ಮಾಡಿರುತ್ತೇವೆ. ಸದರೀ ನಿಬಂಧನೆಗಳ ಪ್ರತಿಯನ್ನು ನಿಮಗೆ ಕೊಡುವದಾಗುತ್ತೆ. ಅವುಗಳ ಮೂಲಕ ಈ ಸಭೆಗೆ ಭೂಮಿ ಜಮೀನುದಾರರೂ ಮತ್ತು ಮುಖ್ಯ ವರ್ತಕರೂ ವ್ಯಾಪಾರಸ್ಥರೂ ಸೇರಬೇಕೆಂದು ಸ್ಪಷ್ಟವಾಗುತ್ತದೆ. ಇದಲ್ಲದೆ ವಿಶೇಷವಾಗಿ ವಿದ್ಯಾವಂತರಾಗಿರುವವರನ್ನೇ ಒಂದು ಅರ್ಹತೆಯಾಗಿ ಗಣಿಸಿದೆ. ನಿಷ್ಕರ್ಷೆ ಮಾಡಿರುವ ಆಸ್ತಿ ಸಂಬಂಧವಾದ ಯೋಗ್ಯತೆಯು ಹೆಚ್ಚಾಗಿ ಕಾಣುತ್ತೆ. ಯಾಕೆಂದರೆ, ೧೦೦ ರೂಪಾಯಿ ಆಗುವಂತೆ ೩೦ ರ ವರಿವಿಗೆ ಜಮೀನು ಕಂದಾಯ ಕೊಡತಕ್ಕವರು, ೧೧ ರೂಪಾಯಿ ಆಗುವಂತೆ ೫೦ ರ ವರಿವಿಗೆ ಮೊಹತರ್ಫಾ ಕಂದಾಯ ಕೊಡತಕ್ಕವರು, ೫೦೦ ರೂಪಾಯಿ ಜಾರಿಯುಳ್ಳ ಒಂದು ಅಥವಾ ಅದಕ್ಕೆ ಮೇಲ್ಪಟ್ಟ ಇನಾಂ ಗ್ರಾಮಗಳ ಹಿಡುವಳಿದಾರರು ಈ ಸಭೆಗೆ ಅರ್ಹತೆಯ ವಿಧಿಸುತ್ತೆ. ಅವರೂ ಇದು ನಿಷ್ಕಾರಣವಾಗಿ ಹೆಚ್ಚಾದ ಮೊಬಲಗೆಂದು ಎಣಿಸತಕ್ಕದ್ದಲ್ಲ. ಹ್ಯಾಗೆಂದರೆ, ಇದರಿಂದ ನಮ್ಮ ೬೬ ತಾಲ್ಲೂಕುಗಳ ಪೈಕಿ ಪ್ರತಿ ಒಂದು ತಾಲ್ಲೂಕಿಗೂ ಸರಾಸರಿ ೩೦ ಜನಗಳಿಗೆ ಕಮ್ಮಿ ಯಿಲ್ಲದಂತೆ ಅರ್ಹರಾದ ಜನರು ದೊರೆಯುತ್ತಾರೆ. ಆಸ್ತಿ ಯಿಂದಲೂ ವಿದ್ಯೆಯಿಂದಲೂ ಸಭೆಗೆ ಅರ್ಹತೆಯುಳ್ಳವರಾಗಿ ಇರತಕ್ಕ ಜನರೆಲ್ಲರೂ ಒಂದು ಕಡೆ ಸೇರಿ ತಮ್ಮತಮ್ಮ ತಾಲ್ಲೂಕಿಗೆ ಅಥವಾ ಬೆಂಗಳೂರು ಅಥವಾ ಮೈಸೂರು ಪಟ್ಟಣಗಳಿಗೆ ಗೊತ್ತುಮಾಡಿರುವಂತೆ ೨ ೩ ಅಥವಾ ೪ ಮೆಂಬರುಗಳನ್ನು ತಮ್ಮಲ್ಲಿ ತಾವೇ ಚುನಾಯಿಸಬಹುದು. ಈ ಮೇರೆ ಚುನಾಯಿಸಲ್ಪಟ್ಟ ಮೆಂಬರುಗಳಲ್ಲದೆ ಆಯಾಯ ಲೋಕಲ್ ಫಂಡ್ ಬೋರ್ಡುಗಳು ಮತ್ತು ಮ್ಯುನಿಸಿಪಾಲಿಟಿಗಳು, ಮತ್ತು ಪಬ್ಲಿಕ್ ಅಸೋಸಿಯೇಷನ್ ಯೆಂಬ ಪ್ರಜಾ ಸಂಘದವರು ತಮ್ಮತಮ್ಮ ಕಡೆ ಮೆಂಬರುಗಳನ್ನು ಚುನಾಯಿಸಿ ಕಳುಹಿಸಬಹುದು. ಈ ಮೇರೆಗೆ ಏರ್ಪಡಿಸುವ ಸಭೆಯ ಮೆಂಬರುಗಳ ಸಂಖ್ಯೆಯು ಸುಮಾರು ೩೫೦ ಕ್ಕೆ ಹೆಚ್ಚಾಗುವದಿಲ್ಲ. ಇವರಲ್ಲಿ ಸೀಮೆಯ ಎಲ್ಲಾ ಕಸಬಿನವರು ತಕ್ಕಮಟ್ಟಿಗೆ ಸೇರಿದಹಾಗೆ ಆಗುತ್ತೆ. ಮತ್ತು ಸದರೀ ಸಭೆಗೆ ಬರತಕ್ಕ ಮೆಂಬರುಗಳು ಪ್ರಜಾ ಪ್ರತಿನಿಧಿಗಳಿಂದಲೇ ಕ್ರಮವನ್ನು ಅನುಸರಿಸಿ ಚುನಾಯಿಸಲ್ಪಡುವದರಿಂದ ಅವರುಗಳ ಸಲಹೆಗಳು ಮತ್ತು ಅಭಿಪ್ರಾಯಗಳು ಗೌರವಾರ್ಹವಾಗಿರುತ್ತವೆ. ಈ ಏರ್ಪಾಡಿನಿಂದ ಈ ಸಭೆಯ ಮೆಂಬರುಗಳನ್ನ ಸಂಪೂರ್ಣವಾಗಿ ಪ್ರಜೆಗಳೇ ಚುನಾಯಿಸಿದಂತೆ ಆಗುವದಿಲ್ಲ. ಹೀಗೆ ಮಾಡತಕ್ಕದ್ದಾದರೆ ಚುನಾಯಿಸತಕ್ಕವರು ಪ್ರಜೆಗಳ ಸಂಖ್ಯೆಗೆ ಅನುಗುಣವಾಗಿರಬೇಕಾಗುತ್ತೆ. ಈ ಬದಲಾವಣೆಯನ್ನು ಮಾಡುವ ವಿಷಯದಲ್ಲಿ ಬಹಳ ಅನಾನುಕೂಲಗಳು ಅನುಭವದಿಂದ ಉಂಟಾಗಿರುತವೆ. ಆದ್ದರಿಂದ ಯಾಕ್ಸಷ್ಟಿಲ್ಲದೆ ಈ ಬದಲಾವಣೆಯು ಉತ್ತರೋತ್ತರ ನಡೆಯುವಂತೆ ಬಿಡಬೇಕಾಗಿರುತ್ತೆ. ಪ್ರಸ್ತುತಕ್ಕೆ ಈಗ ನಾವು ಯೋಚನಾಪೂರ್ವಕವಾಗಿ ಉಪಕ್ರಮಿಸಿರುವ ಅತ್ಯವಶ್ಯಕವಾದ ಏರ್ಪಾಡೇ ಸಾಕೆಂದು ಭಾವಿಸಬೇಕಾಗಿದೆ. ಶ್ರೀಮನ್ಮಹಾರಾಜರವರು ಈಗ ಅನುಗ್ರಹ ಮಾಡಿಕೊಟ್ಟಿರುವ ರಿಯಾಯಿತಿಯು ಸಂಪೂರ್ಣವಾಗಿಯೂ ಮತ್ತು ಸಾಧ್ಯವಾದಮಟ್ಟಿಗೂ ಪ್ರಜಾಪ್ರಯೋಜನಕರವಾಗುವಂತೆಯೂ ಆಚರಣೆಯಲ್ಲಿ ತರಲ್ಪಡುವದೆಂದುನ್ನೂ, ಸದರೀ ರಿಯಾಯಿತಿಯ ಫಲವನ್ನು ಎಲ್ಲರೂ ಚನ್ನಾಗಿ ತಿಳಿದುಕೊಂಡು ಕ್ರಮೇಣ ಸದರೀ ಮೆಂಬರುಗಳನ್ನ ಚುನಾಯಿಸತಕ್ಕ ಸಂಘವನ್ನು ಸರ್ಕಾರದವರು ಏರ್ಪಡಿಸಿ ತನ್ಮೂಲಕ ಈ ಸಭೆಯ ಏರ್ಪಾಡಿನಲ್ಲಿ ಪ್ರತಿನಿಧಿತ್ವೇನ ಮೆಂಬರುಗಳು ಸೇರುವ ಕ್ರಮವನ್ನು ಅಭಿವೃದ್ಧಿಪಡಿಸುವ ಶಕ್ತಿ ಸಾಮರ್ಥ್ಯ ಉಂಟಾಗುವಂತೆ ಮಾಡುವರೆಂದುನ್ನೂ, ಶ್ರೀಮನ್ಮಹಾರಾಜರವರು ಕೋರುತ್ತಾರೆ.

ಪ್ರಜಾ ಪ್ರತಿನಿಧಿ ಸಭೆಯ ವಿಷಯದಲ್ಲಿ ತಯಾರಾದ ಮಸನಿದಾ ನಿಬಂಧನೆಗಳು.

೧ ಒಂದು ತಾಲ್ಲೂಕಿಗಾಗಿ ಈ ಸಭೆಗೆ ಮೆಂಬರುಗಳು ಆಗುವದಕ್ಕೆ ಈ ಕೆಳಗೆ ವಿವರಿಸಿರುವ ಜನಗಳು ಅರ್ಹರಾಗಿರುತ್ತಾರೆ (ಎ) ತನ್ನ ಸ್ವಂತಕ್ಕಾಗಿ ಸರಕಾರಕ್ಕೆ ಸಾಲೀಯಾನಾ ಇದಕ್ಕೆ ಲಗ್ತಿಸಿರುವ ಶಿರಸ್ತಿ ಅಥವಾ (ಬಿ) ಗುತ್ತಿಗೆ ಮೊಬಲಗಿನ ರೂಪದಲ್ಲಿ ಸಹ ಸೇರಿಸಿರುವ ಮೊಬಲಗಿನ ಹೊರತು ೧೦೦ ರೂಪಾಯಿಗೆ ಕಡಿಮೆ ಇಲ್ಲದೆ ಜಮೀನು ಕಂದಾಯವನ್ನಾಗಲಿ, ಅಥವಾ ಮೊಹತರ್ಫಾ ತೆರಿಗೆಗಳನ್ನಾಗಲಿ ಆ ತಾಲ್ಲೂಕಿಗೆ ಕೊಡತಕ್ಕ ಪ್ರತಿಒಬ್ಬ ಮನುಷ್ಯ; (ಬಿ) ಅದೇ ತಾಲ್ಲೂಕಿನಲ್ಲಿ ವಾಸಮಾಡಿಕೊಂಡಿದ್ದು ೫೦೦ ರೂಪಾಯಿ ಜಾರಿಯುಳ್ಳ ಪೂರಾ ಇನಾಂಗ್ರಾಮಗಳ ಸ್ವಂತಕರ್ತನಾಗಿರತಕ್ಕ ಪ್ರತಿಒಬ್ಬ ಮನುಷ್ಯ; (ಸಿ) ಯಾವದಾದರೂ ಇಂಡಿಯನ್ ಯೂನಿವರ್ಸಿಟಿಯಲ್ಲಿ ಡಿಗ್ರೀಗಳನ್ನು ಪಡೆದು ಆ ತಾಲ್ಲೂಕಿನಲ್ಲಿ ವಾಸಮಾಡಿಕೊಂಡಿರತಕ್ಕ ಪ್ರತಿ ಒಬ್ಬ ಮನುಷ್ಯ.

೨. ಮೇಲೆ ವಿವರಿಸಿರುವಂತೆ ಅರ್ಹತೆಯುಳ್ಳವರುಗಳು ಅಷ್ಟಾದಶಾಸದ ಮೊದಲನೇ ತಾರೀಖಿನಲ್ಲಿ ಯಾವಯಾವ ಒಂದು ಗೊತ್ತಾದ ಸ್ಥಳದಲ್ಲಿ ಅವರವರ ತಾಲ್ಲೂಕು ಕಸಬಾಸ್ಥಳದಲ್ಲಿ ಸೇರತಕ್ಕದ್ದು. ಸೇರುವದಕ್ಕೆ ಗೊತ್ತಾದ ದಿವಸ ಮೊಬಲಗು ಫಲಾನಾದೆಂದು ಒಂದು ತಿಂಗಳಿಗೆ ಕಮ್ಮಿ ಇಲ್ಲದಂತೆ ಮೊದಲೇ ನೋಟೀಸ್ ಕೊಡಲ್ಪಡುತ್ತೆ. ಅಂತಾ ದಿವಸಗಳಲ್ಲಿ ಆಮಲ್ದಾರರ ಸಮಕ್ಷಮದಲ್ಲಿ ಸದರೀ ಜನಗಳು ಮುಂದೆ ಬರುವ ದಸರಾದಲ್ಲಿ ಮೈಸೂರಿನಲ್ಲಿ ಆಗತಕ್ಕ ಪ್ರಜಾ ಪ್ರತಿನಿಧಿ ಸಭೆಗೆ ಬರತಕ್ಕ ಮೆಂಬರುಗಳನ್ನ ತಮ್ಮತಮ್ಮಲ್ಲಿಯೇ ನೇಮಿಸಿಕೊಳ್ಳಬೇಕು. ಆ ಮೇರೆಗೆ ನೇಮಿಸಲ್ಪಡುವ ಜನಗಳ ಸಂಖ್ಯೆ (೩) ಷರ್ಯೂಲಿನಲ್ಲಿ ನಮೂದಾಗುವ ಸಂಖ್ಯೆಗೆ ಹೆಚ್ಚಾಗಕೂಡದು.

೩ ಪಾಡಿಕೆಯಾಗಿ ಬೆಂಗಳೂರು ಅಥವಾ ಮೈಸೂರು ಷಹರುಗಳಲ್ಲಿ ವಾಸವಾಗಿರತಕ್ಕಂತಾ ವರುಷ ೧ ಕ್ಕೆ ೫೦ ರೂಪಾಯಿಗಳಿಗೆ ಕಮ್ಮಿಯಿಲ್ಲದ ಮನೆ ಅಥವಾ ಅಂಗಡಿ ಮೊಹತರ್ಫಾ ತೆರಿಗೆ ತೆರತಕ್ಕಂತಾ ಅಥವಾ ಯಾವದಾದರು ಒಂದು ಇಂಡಿಯನ್ ಯೂನಿವರ್ಸಿಟಿಯಲ್ಲಿ ಡಿಗ್ರೀ ಪಡೆದ ಇರತಕ್ಕಂತಾ ಜನಗಳು ಸಭೆಯ ಮೆಂಬರುಗಳಾಗುವದಕ್ಕೆ ಅರ್ಹತೆವುಳ್ಳವರಾಗುತ್ತಾರೆ. ಮೇಲೆ ನಿಬಂಧನೆಯಲ್ಲಿ ಹೇಳಿರುವ ಮೇರೆಗೆ ಅವರುಗಳು ೧ ಗೊತ್ತಾದ ದಿವಸದಲ್ಲಿ ತಮ್ಮತಮ್ಮ ಮ್ಯುನಿಸಿಪಾಲಿಟಿ ಪ್ರೆಸಿಡೆಂಟರ ಆಫೀಸಿನಲ್ಲಿ ಕಲೆತು ತಮ್ಮತಮ್ಮಲ್ಲಿಯೇ ಬೆಂಗಳೂರು ಮತ್ತು ಮೈಸೂರು ಷಹರುಗಳಿಗೆ ಒಂದೊಂದಕ್ಕೆ ನಾಲ್ಕುನಾಲ್ಕು ಮೆಂಬರುಗಳಂತೆ ನೇಮಿಸಬೇಕು.

೪. ಎರಡು ಮೂರನೇ ರೂಲ್ಸಿಗಳ ಮೇರೆಗೆ ಚುನಾಯಿಸಲ್ಪಟ್ಟ ಮೆಂಬರುಗಳಲ್ಲದೆ—(ಎ) ಪ್ರತಿಯೊಂದು ಲೋಕಲ್ ಫಂಡ್ ಬೋರ್ಡಿನವರು ಈ ಸಭೆಗೆ ತಮ್ಮ ಕಡೆ ಇಬ್ಬರು ಮೆಂಬರುಗಳನ್ನ ನೇಮಿಸಬಹುದು. (ಬಿ) ಮೈಸೂರು ಬೆಂಗಳೂರು ವಿನಾ ಇತರ ಪ್ರತಿ ಮ್ಯುನಿಸಿಪಲ್ ಬೋರ್ಡುಗಳವರು ತಮ್ಮ ಸಮಾಜದಿಂದ ಈ ಸಭೆಗೆ ಒಬ್ಬೊಬ್ಬ ಮೆಂಬರನ್ನು ಕಳುಹಿಸಬಹುದು. ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸಿನಲ್ಲಿ ಇರತಕ್ಕ ಮ್ಯುನಿಸಿಪಾಲಿಟಿಗಳಿಂದ ಅಂತಾ ಇಬ್ಬಿಬ್ಬರು ಮೆಂಬರುಗಳು ನೇಮಿಸಲ್ಪಡಬಹುದು, ಮತ್ತು (ಸಿ) ಸಮ್ಮತವಾದ ಲೋಕೋಪಯುಕ್ತ ವಿಷಯ ವಿಚಾರ ಸಮಾಜಕ್ಕೆ ಅಸೋಸಿಯೇಷನ್ಸ್ ಅಂದರೆ ಸಮಾಜಗಳು ೧೦೦ ಮೆಂಬರುಗಳಿಗಿಂತ ಕಮ್ಮಿ ಇಲ್ಲದ ಸಮಾಜವಾಗಿದ್ದರೆ ಮತ್ತು ೧೦೦ ಜನಕ್ಕಿಂತ ಕಮ್ಮಿಯಿಲ್ಲದ ಮೆಂಬರುಗಳುಳ್ಳದ್ದಾಗಿದ್ದು ಸರ್ಕಾರದವರಿಂದ ಪರಿಗಣಿಸಲ್ಪಟ್ಟ ಸಮಾಜಗಳಾಗಿದ್ದರೆ ಅವರುಗಳು ತಮ್ಮತಮ್ಮ ಸಮಾಜದಿಂದ ಒಬ್ಬೊಬ್ಬ ಮೆಂಬರನ್ನು ಸಭೆಗೆ ಕಳುಹಿಸಬಹುದು.

೫. ರಾಜಿನಾಮೆ ವರ್ಷ ವಯಸ್ಸಾಗಬಹುದೇ ಇರತಕ್ಕ ಬುದ್ಧಿಸ್ಥಿತಿ ಸರಿಯಾಗಿಲ್ಲದೆ ಇರತಕ್ಕ ಅಥವಾ ಕೆಟ್ಟನಡತೆ ಅಥವಾ ಬಹಿಷ್ಕಾರವನ್ನು ಹೊಂದತಕ್ಕ ಕ್ರಿಮಿನಲ್ ತಪ್ಪುಗಳಿಗಾಗಿ ಸಜಾ ಹೊಂದಿದ ಯಾವ ಒಬ್ಬ ಮನುಷ್ಯನೂ ಈ ಸಭೆಗೆ ಮೆಂಬರಾಗಿ ದಾಖಲ್ ಮಾಡಲ್ಪಡುವದಕ್ಕೆ ಅರ್ಹನಾಗಲಾರನು.

೬ ಸರಕಾರದ ನೌಕರರಲ್ಲದ ಇತರ ಪ್ರತಿಗಳ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕೆಂಬುದೇ ಈ ಸಭೆಯ ಉದ್ದೇಶವಾದ್ದರಿಂದ ಸರಕಾರದ ಸಂಬಳ ತೆಗೆದುಕೊಂಡು ನೌಕರಿಮಾಡುವ ಯಾವಒಬ್ಬನೇಯಾಗಲಿ ಈ ಸಭೆಗೆ ಮೆಂಬರುಗಳನ್ನ ಚುನಾಯಿಸುವದಕ್ಕೆ ಅಥವಾ ಮೆಂಬರಾಗಿ ಚುನಾಯಿಸಲ್ಪಡುವದಕ್ಕೆ ಅರ್ಹನಾಗಿರುವದಿಲ್ಲ.

* * *

೧೦. ಪ್ರತಿ ಡಿಸ್ಟ್ರಿಕ್ಟಿನಿಂದ ಬರತಕ್ಕ ಮೆಂಬರುಗಳು ಅಶ್ವೀಜ ಶುದ್ಧ ಪಾಡ್ಯಮಿಗೆ ಮುಂಚೆಯಾಗಿ ಮೈಸೂರಿನಲ್ಲಿ ಕ್ರಮವಾದ ನೋಟೀಸ್ ಮಾಡಿ ಅಂತಾ ಮೀಟಿಂಗ್ ನಲ್ಲಿ ೭—೮ ನೇ ರೂಲ್ಸಿಗಳ ಮೇರೆಗೆ ಕಳುಹಿಸಿಕೊಟ್ಟ ಮನವಿಗಳು ವಗೈರೆಗಳಲ್ಲಿ ನಮೂದಿಲ್ಲದ ಯಾವದಾದರೂ ವಿಷಯಗಳನ್ನ ಸಭೆಯಲ್ಲಿ ಪ್ರಸ್ತಾಪ ಮಾಡಬೇಕೆಂದು ತೀರ್ಮಾನಿಸುವ ಪಕ್ಷಕ್ಕೆ ಅಂತಾ ಹೆಚ್ಚು ವಿಷಯಗಳ ೧ ಸಣ್ಣ ಹೆಂಪಿ ಪಟ್ಟಿಯನ್ನು ಚೀಫ್ ಸೆಕ್ರೆಟರಿಯವರ ಬಳಿಗೆ ಅಶ್ವೀಜ ಶುದ್ಧ ಏಕಾದಶಿಯೊಳಗಾಗಿ ಮುಂಚೆ ಕಳುಹಿಸಬೇಕು.

೧೧ ಪ್ರಜಾ ಪ್ರತಿನಿಧಿ ಸಭೆಯವರು ತಮ್ಮ ವಿವಾದಗಳನ್ನ ಅಶ್ವೀಜ ಶುದ್ಧ ನವಮೀ ದಿವಸದಲ್ಲಿಯೂ ಮತ್ತು ಅದರ ಆಚೇ ದಿನಗಳಲ್ಲಿಯೂ ನಡಿಸತಕ್ಕದ್ದು.

೧೨ ಮೇಲಿನ ರೂಲ್ಸಿಗಳ ಮೇರೆಗೆ ಸಭೆಯ ಮೆಂಬರುಗಳ ಸಂಖ್ಯೆ ಈ ಕೆಳಗೆ ವಿವರಿಸಿ ಇರುವ ಸಂಖ್ಯೆಗಿಂತ ಹೆಚ್ಚಾಗಕೂಡದು:— ೧ ಮೈಸೂರು, ಬೆಂಗಳೂರು ಷಹರುಗಳಿಗಾಗಿ ಚುನಾಯಿಸಲ್ಪಟ್ಟ ಮೆಂಬರುಗಳು ೮ (೨) ಎ. ಷಡ್ಯೂಲ್ ಪ್ರಕಾರ ೬೬ ತಾಲ್ಲೂಕುಗಳಿಗೆ ಚುನಾಯಿಸಲ್ಪಟ್ಟ ಮೆಂಬರುಗಳು ೨೧೦ (೩) ೬ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್ ಮ್ಯುನಿಸಿಪಾಲಿಟಿಗಳಿಂದ ನೇಮಿಸಲ್ಪಟ್ಟ ಮೆಂಬರುಗಳು ೧೨ (೪) ಇತರ ೮೯ ಮ್ಯುನಿಸಿಪಾಲಿಟಿಗಳಿಂದ ನೇಮಿಸಲ್ಪಟ್ಟ ಮೆಂಬರುಗಳು ೮೯ (೫) ೯ ಲೋಕಲ್ ಫಂಡ್ ಬೋರ್ಡುಗಳಿಂದ ನೇಮಿಸಲ್ಪಟ್ಟ ಮೆಂಬರುಗಳು ೧೮ (೬) ಲೋಕೋಪಯುಕ್ತ ವಿಚಾರಗಳಿಗಾಗಿ ಇರುವ ಸಮಾಜಗಳಿಂದ ನೇಮಿಸಲ್ಪಟ್ಟ ಮೆಂಬರುಗಳು, ಸುಮಾರ ೮, ಜಮ್ಲಾ ೩೪೩.

೧೩ ಮೇಲಿನ ನಿಬಂಧನೆಗಳು ಮುಂದಿನ ಸಂವತ್ಸರದಲ್ಲಿ ಆಗುವ ಸಭಾ ವಿಷಯದಲ್ಲಿ ಜಾರೀಗೆ ಬರತಕ್ಕದ್ದು.—ವ್ಯ. ಪ.

BANGALORE :—Printed and published at the KARNATIC PRESS, No. 111, SRINIVASA MANDIRAM ROAD, PETTAH.—1890

ಭಾವದಲ್ಲಿ ವಿಶ್ವೇದೇವತೆಗಳು, ಇಂತಾ ದಂಪತಿಗಳಿಗೆ ರೂಪ ಯೌವನ ಸುಸಂಪನ್ನನಾದ ಪುತ್ರನು ವೃದ್ಧಿಸಲಿ, ಇವರು ನಿರವಧಿಕ ಭಾಗ್ಯ ಸಂಪನ್ನರಾಗಿ ವರ್ತಿಸಲಿ, ಇವರಿಬ್ಬರು ಚಿರಂಜೀವಿಗಳಾಗಿರಲಿ ಎಂದನುಗ್ರಹಿಸಿದರೆಂದು ತಿಳಿಸಲ್ಪಟ್ಟಿರುತಿದೆ. ಮತ್ತೊಂದು ಸಂದರ್ಭದಲ್ಲಿ ಕರ್ಮಾನುಷ್ಠಾನ ದಂಪತಿಗಳನ್ನಾರಾಧಿಸಲಿಕ್ಕೆ ದೇವರುಗಳೇ ಸ್ವತಃ ಅಪೇಕ್ಷಿಸಿದರೆಂದು ವ್ಯಕ್ತವಾಗುತಿದೆ. ಅವರು ತಮ್ಮ ಮನಸನ್ನು ಪೂತಪಡಿಸುವದಕ್ಕಾಗಿ ಪರಸ್ಪರ ಸಂಬಂಧವ ಬೆಳೆಸುತ ಇಷ್ಟದೇವತೋಪಾಸನೆ ಮಾಡುತಲಿದ್ದಂತೆ ನುಡಿಯಬಹುದಾಗಿರುತಿದೆ. ಹೆಂಗಸರು ಸಾಮಾನ್ಯವಾಗಿ ಗೃಹಕೃತ್ಯ ನಿರ್ವಾಹಕರಾಗಿದ್ದರು. ದಂಪತಿಗಳು ತಮ್ಮ ಕುಲವೃದ್ಧರು ಅಂದರೆ ಮಾತಾ ಪಿತೃಗಳು ಮೊದಲಾದವರೊಡನೆ ಸೇರಿ ವಾಸ ಮಾಡುತಲಿದ್ದಾಗ್ಯೂ ಅವರವರು ತಮ್ಮ ಸಂಪೂರ್ಣಾಧಿಕಾರವನ್ನು ಉಪಯೋಗಿಸುತಲಿದ್ದರು. ಏತಕ್ಕೆಂದರೆ, ಅವರು ಸ್ವತಃ ಪ್ರಾಪ್ತವಯಸ್ಕರಾಗಿಯೂ, ವಿದ್ಯಾವಂತರಾಗಿಯೂ, ಪ್ರಪಂಚ ಸ್ವಭಾವವನ್ನರಿತವರಾಗಿಯೂ ಇದ್ದುದರಿಂದ ಯಾವವಿಧವಿಚಾರಕ ಅಥವಾ ದಾಸ್ಯತ್ವವು ಶುದ್ಧ ಅನಾವಶ್ಯಕವಾಗಿ ತೋರಿತ್ತು. ಮೇಲೆ ತಿಳಿಸಿದಂತಾ ಕುಲ ವೃದ್ಧರುಗಳು ಉಷಃಕಾಲದೊಳಿದ್ದು ಪ್ರಾಭಾತಿಕ ಕರ್ಮಗಳೆಲ್ಲವು ವಿಧ್ಯುಕ್ತಪ್ರಕಾರ ನಡೆಸಿದಬಳಿಕ ಅಗ್ನಿಹೋತ್ರಾದಿ ಕರ್ಮಗಳಿಗೆ ಬೇಕಾದ ಏರ್ಪಾಡುಗಳೆಲ್ಲವು ಮಾಡುತಲಿದ್ದರೆಂತಲೂ, ಮಕ್ಕಳು ಅನ್ಯಕಾರ್ಯವ್ಯಾಪೃತರಾಗಿದ್ದಾಗ ಅಥವಾ ದೇಶಾಂತರಗತರಾದಾಗ ಶಿಷ್ಯರಾದ ಮಕ್ಕಳು ಪುತ್ರರಿಗೆ ಸ್ವತಃ ಶಾಸ್ತ್ರ ಪಾಠಗಳನ್ನು ಹೇಳುತಲಿದ್ದರೆಂತಲೂ ತಿಳಿಯಬರುತಿದೆ. ಮುಖ್ಯವಾಗಿ ಋಗ್ವೇದ ಸೂಕ್ತಗಳಿಂದ ವಿಶೇಷ ಕೀರ್ತಿಪ್ರಾಶಸ್ತ್ಯಗಳಂ ಪಡೆದು ಪ್ರಸಿದ್ಧರೆನಿಸಿಕೊಳ್ಳಬಹುದೋ ಅಂತಾ ಸೂಕ್ತಗಳು ಪೂರ್ವಕಾಲದಲ್ಲಿ ಆರ್ಯ ಮಹಿಳೆಯರಲ್ಲಿ ನಿರರ್ಥವಾಗಿದ್ದುದರಿಂದ ತದ್ವಂಶಜರಾದ ವರ್ತಮಾನ ಕಾಲದ ಅಬಲೆಯರು ಯಷ್ಟರ ಸ್ಥಿತಿ ಗುಣವಿಪರ್ಯಯಗಳಿಗೆ ಪಾತ್ರರೆನಿಸಿಕೊಂಡಿದ್ದಾಗ್ಯೂ ಗತಿಸಿದಂತವರಾರ್ಜಿಸಿದ್ದ ಕೀರ್ತಿ ಪ್ರತಿಷ್ಠೆಗಳು ಅದ್ಯಾಪಿ ಕೆಲವುಮಟ್ಟಿಗೆ ಈಗಿನವರು ಕಾಪಾಡತಕ್ಕದ್ದಾಗಿರುತಿವೆ. ಬೃಹದಾರಣ್ಯಕೋಪನಿಷತ್ತಿನಲ್ಲಿ ತಿಳಿಸಲ್ಪಟ್ಟಿರುವಪ್ರಕಾರ ಆ ಕಾಲದಲ್ಲಿ ಶಾಸ್ತ್ರಗಳು ಹದಿನಾಲ್ಕು ಪ್ರಭೇದಗಳುಳ್ಳವಾಗಿದ್ದವಲ್ಲದೆ ಅವುಗಳ ಪೈಕಿ ಒಂದೊಂದರಲ್ಲಿಯೂ ಅಥವಾ ಎಲ್ಲದರಲ್ಲಿಯೂ ಸ್ತ್ರೀಯರು ಸಂಪೂರ್ಣ ಜ್ಞಾನವಂ ಸಂಪಾದಿಸಿ ಪ್ರಸಿದ್ಧರೆನಿಸಿದ್ದರು. ಋಗ್ವೇದದಲ್ಲಿಯೂ, ಕೆಲವು ಯಜುರ್ವೇದದಲ್ಲಿಯೂ, ಅಗಿದ್ದ ಕ್ಷತ್ರಿಯರಲ್ಲಿ ಮಾತ್ರ ಕೆಲವರು ಅಶ್ವಮೇಧ(?) ಕೆಲವು ಸಂದರ್ಭದಲ್ಲಿ ಬಹುಭಾರ್ಯಾ ಪರಿಗ್ರಹ ಮಾಡಿಕೊಂಡಿದ್ದರೆಂದು ಸೂಚಿಸಲ್ಪಟ್ಟಿರುತಿದೆಯಲ್ಲದೆ ಸಾಮಾನ್ಯವಾಗಿ ಯಾರೂ ಒಬ್ಬಳಿಗಿಂತ ಅಧಿಕವಾಗಿ ವಿವಾಹ ಮಾಡಿಕೊಂಡಂತೆ ಕಾಣಿಸಲಿಲ್ಲವು. ಹರಿಶ್ಚಂದ್ರ ಮಹಾರಾಜನಿಗೆ ನೂರುಜನ ಭಾರ್ಯೆಯರಿದ್ದರೆಂತಲೂ, ಮತ್ತೊಬ್ಬ ಅರಸನು ಕಕ್ಷಿವತ್ ಯೆಂಬವನಿಗೆ ತನ್ನ ಹತ್ತುಜನ ಕನ್ಯೆಯರು ಕೊಟ್ಟು ವಿವಾಹ ಮಾಡಿಸಿದನೆಂತಲೂ ತಿಳಿಯಬರುತಿದೆ. ಮಕ್ಕಳನೇಕರು ಕನ್ಯಾವಿವಾಹವಲ್ಲದೆ ಕ್ರಮೇಣ ಮೃತಭರ್ತೃಕೆಯರನ್ನೂ, ಕ್ಷತ್ರಿಯ ವೈಶ್ಯ ಸ್ತ್ರೀಗಳನ್ನೂ ವಿವಾಹ ಮಾಡಿಕೊಳ್ಳುತಲಿದ್ದಂತೆ ಸ್ಪಷ್ಟವಾಗಿ ವ್ಯಕ್ತವಾಗುತಿದೆ. ಸೌಭರಿ ಯೆಂಬಾತನು ಮಾಂಧಾತನ ಐವತ್ತುಮಂದಿ ಹೆಣ್ಣುಮಕ್ಕಳಂ ಕೇಳಿ ಪಡೆದನು. ನಿಜವಾಗಿ ಇದಕ್ಕೆ ಪರಸ್ಪರ ವೈಷಮ್ಯಗಳೇ ಮುಖ್ಯಕಾರಣವು. ಋಗ್ವೇದ ಹತ್ತನೆಯ ಮಂಡಲದಲ್ಲಿನ ಒಂದು ಮಂತ್ರಪ್ರಶ್ನೆಯಲ್ಲಿ ಸ್ತ್ರೀಯೊಬ್ಬಳು ತನ್ನ ಸಪತ್ನೀ ನಾಶವಾಗಲೆಂದು ಅವಳಿಗಾಗಿ ಭಗವತ್ಪ್ರಾರ್ಥನೆಯಂ ಮಾಡಿದಳೆಂದು ತಿಳಿಸಲ್ಪಟ್ಟಿದೆ. ಯಾರಾದರು ನಿರೀಕ್ಷಿಸಬಹುದಾದ ರೀತಿಯಲ್ಲಿ ಆಗಲೂ ಹಾರಿಕ್ಕೆ(?) ರುದ್ಧಂಗವಾಗಿ ನಡೆಸದೆ ಅನೇಕರು ಸ್ವೈರಿಣಿಗಳಾಗಿದ್ದರೆಂಬದಕ್ಕೆ ದೃಷ್ಟಾಂತಗಳಿಲ್ಲದೆ ದೋಷಗಳಿಲ್ಲವು. ಪುತ್ರನುತ್ಪನ್ನನಾಗಿ ಆತನು ಪ್ರಾಪ್ತವಯಸ್ಕನಾಗಿ ಗೃಹಕೃತ್ಯ ನಿರ್ವಹಣಾ ಧುರೀಣನಾದಾಗ ಸಕಲ ಯಾಜಮಾನ್ಯವನ್ನಾತನಿಗೊಪ್ಪಿಸಿ ಮಾತಾಪಿತೃಗಳು ವನವಾಸಕ್ಕೆ ತೆರಳುತಿದ್ದರು. ಬ್ರಾಹ್ಮಣರು ವಾನಪ್ರಸ್ಥಾಶ್ರಮವಂ ವಿಶೇಷತಃ ಅಂಗೀಕರಿಸುತಲಿರಲಿಲ್ಲವು. ಏತಕ್ಕೆಂದರೆ, ಬ್ರಾಹ್ಮಣನಾದವನು ಯಾವಾಗಲು ವೇದಾಧ್ಯಯನ, ಶಾಸ್ತ್ರಾಭ್ಯಾಸಗಳಂ ಮಾಡುತ ತನ್ನ ಶಿಷ್ಯರೊಡನೆ ಅರಣ್ಯದಲ್ಲಿ ಆಶ್ರಮಗಳೊಳು ವಾಸಮಾಡುವಂತಾ ಪದ್ಧತಿ ಯೊಂದು ಸಾರ್ವತ್ರಿಕವಾಗಿ ನೆಲೆಗೊಂಡಿದ್ದುದರಿಂದ ಅವರ ವೃತ್ತಿಯು ತಾಪಸವೃತ್ತಿಯಾಗಿಯೂ, ಅವರು ವಾಸಮಾಡುತಲಿದ್ದ ಪ್ರದೇಶಗಳು ನಿರ್ಜನ ಪ್ರದೇಶಗಳಾಗಿಯೂ, ಗೃಹಗಳು ಕುಟೀರಗಳಾಗಿಯೂ ಅಂಗೀಕರಿಸುತಲಿದ್ದಂತಾ ಪದಾರ್ಥಗಳು ಕಂದಮೂಲ ಫಲಪರ್ಣಗಳಾಗಿಯೂ ಇದ್ದವು.

RESIGNATION OF LORD CONNEMARA

ಮದರಾಸ್ ಗವರ್ನರವರಾದ ಲಾರ್ಡ್ ಕಾನಿಮಾರಾಯವರು ತಮಗೆ ಕೆಲಸದಿಂದ ನಿವೃತ್ತರಾಗಬೇಕೆಂಬ ತಾತ್ಪರ್ಯವಿರುವುದಾಗಿ ಸ್ಟೇಟ್ ಶಕ್ರೆಟರಿಯವರಿಗೆ ತಿಳಿಸಿದರೆಂತಲೂ, ಅದರಮೇಲೆ ಅವರು ಶ್ರೀಮನ್ಮಹಾರಾಜ್ಞೀಯವರು ರಾಜೀನಾಮೆಯನ್ನಂಗೀಕರಿಸಿರುತ್ತಾರೆಂಬದಾಗಿ ಈಚೆಗೆ ಗವರ್ನರವರಿಗೆ ತಿಳುಹಿಸಿದರೆಂತಲೂ ಕೇಳುತ್ತೇವೆ. ಈವೃತ್ತಾಂತವು ಕೇಳಿದವರೆಲ್ಲರೂ ಪ್ರಾಯಶಃ ಆಶ್ಚರ್ಯ ಪಡದಿರಲಾರರೆಂದೆಣಿಸುತ್ತೇವೆ. ಲಾರ್ಡ್ ಕಾನಿಮಾರಾಯವರು ಬರುವ ಮಾರ್ಚಿ ತಿಂಗಳ ಅಖೈರಿನಲ್ಲಿ ತಮ್ಮ ಕೆಲಸದಿಂದ ನಿವೃತ್ತರಾಗಿ ಸ್ವದೇಶಕ್ಕೆ ಪ್ರಯಾಣವಾಗುವರೆಂದು ತೋರುತಿದೆ. ಆ ಕಾಲಕ್ಕೆ ಸರಿಯಾಗಿ ಗವರ್ನರವರು ೪ ವರುಷ ೪ ತಿಂಗಳಕಾಲ ಈ ದೇಶದೊಳಧಿಕಾರದಲ್ಲಿದ್ದಂತೆ ಯಾಗುವದು ಇವರುದ್ಯೋಗಪದದೊಳಿರಬೇಕಾದ ಪಂಚವಾರ್ಷಿಕಾವಧಿಯು ೧೮೯೧ನೇ ಇಸವಿ ನವಂಬರ್ ತಿಂಗಳಲ್ಲಿ ಪೂರೈಸುವದಾಗಿ ಅದಕ್ಕೆ ಯೆಂಟು ತಿಂಗಳ ಕಾಲ ಮುಂಚಿತವಾಗಿಯೇ ಕೆಲಸದಿಂದ ನಿವೃತ್ತರಾಗುವರೆಂಬ ಅಂಶವಂ ಅವರಿಂದ ಪರಿಪಾಲಿತರಾದ ಪ್ರಜೆಗಳೆಲ್ಲರೂ ಕೇಳಿ ಬಹಳ ವಿಷಾದಿಸಬಹುದು. ಏತಕ್ಕೆಂದರೆ, ಇವರ ಪ್ರಭುತ್ವ ಕ್ರಮವು ಇವರ ಪ್ರಾತ್ಯಿಕರ ಸ್ಮರಣೆಯಂ ಬಹಳಮಟ್ಟಿಗೆ ಹೋಗಲಾಡಿಸತಕ್ಕದ್ದಾಗಿಯೂ, ಜನರ ಪ್ರೀತಿ ಗೌರವಾನುರಾಗಗಳನ್ನಭಿವೃದ್ಧಿಗೊಳಿಸತಕ್ಕದ್ದಾಗಿಯೂ ಇರುವದರಿಂದ ಇವರ ವಿಶ್ಲೇಷವು ಚಿಂತನೀಯವಲ್ಲದೆ ಹೋಗಲಾರದು. ದಕ್ಷಿಣ ಹಿಂದೂದೇಶಕ್ಕೆಲ್ಲ ಪ್ರಧಾನ ನಗರವೆನಿಸಿರುವ ಮದರಾಸ್ ಗವರ್ನರ್‌ಗಳಾಗಿ ಬಂದಿದ್ದವರನೇಕರ ಪೈಕಿ ಲಾರ್ಡ್ ಕಾನಿಮಾರಾಯವರು, ಪ್ರಜಾನುರಾಗವುಳ್ಳವರೆಂತಲೂ, ಉದಾರಾಂತಃಕರಣರೆಂತಲೂ; ಪ್ರಜೆಗಳಲ್ಲಿ ವಿಶೇಷಸ್ನಿಗ್ಧತೆಯುಳ್ಳವರೆಂತಲೂ, ಜವಾಬ್ದಾರಿಯುಳ್ಳ ತಮ್ಮ ಮಹೋನ್ನತಾಧಿಕಾರವು ಕೇವಲ ದೈವಾನುಗ್ರಹದಿಂ ಪ್ರಾಪ್ತವಾದುದೆಂದು ಭಾವಿಸಿ ಅದಂ ಸರ್ವಜನ ಸಮ್ಮತವಾಗಿ ಜರಿಗಿಸಬೇಕೆಂಬ ಆಂತರವಾದ ಕೋರಿಕೆ ಯುಳ್ಳವರೆಂತಲೂ, ಸಾಮಾನ್ಯೇನ ಜನರಿಂದ ಪ್ರಕಟಿಸಿ ಕೊಳ್ಳುತಲಿದ್ದಾರೆ. ಪ್ರಭುತ್ವವು ಕೇವಲ ಆತ್ಮೋಪಭೋಗಾರ್ಹವಾದುದೆಂದು ಭಾವಿಸದೆ ತಮ್ಮ ಕರ್ತವ್ಯವನ್ನರಿದು ತಾವು ಉಪಕಾರಿ ಯೆನಿಸಿಕೊಳ್ಳಬೇಕೆಂಬ ಕೋರಿಕೆಯಿಂದ ದೇಶಸಂಚಾರ ಮಾಡುತ, ಅಲ್ಲಿನ ಪ್ರಜೆಗಳ ಮೋದ ಖೇದಗಳನ್ನೂ ಅಪೇಕ್ಷಿತಾನಪೇಕ್ಷಿತಾಂಶಗಳನ್ನೂ ಅವರ ಮುಖಲಕ ಅವರಿಂದಾಲೈಸಿ ಅವುಗಳಸಾಧ್ಯಾಸಾಧ್ಯತೆಗಳಂತಕ್ಕ ಮೃದುಮಧುರವಚನಗಳಿಂ ಪರಿಗರುಹಿ ಅವರಂ ಸಂತೃಪ್ತಿಗೊಳಿಸುತಬರುವರು. ಕದಾಚಿತ್ ಅಪೇಕ್ಷಿತಾಂಶಗಳು ಅಸಾಧ್ಯಗಳೆಂದು ಕಂಡುಬಂದಾಗ್ಯೂ ಗವರ್ನರವರು ಅದನ್ನರುಹು(?)ಲಿದ್ದ ವಿಷಗಳುಜನರಿಗೆ ಸ್ವಮನಸ್ಸಿಕಾರಿಯಾಗಿ ಪರಿಣಮಿಸಲಿಲ್ಲವು. ಲಾರ್ಡ್ ಕಾನಿಮಾರಾಯವರು ತಮ್ಮ ಅಧಿಕಾರ ಕಾಲದೊಳ್ ದೇಶೀಯರಿಗೆ ಮಾಡಿದ ಉಪಕಾರಗಳಪೈಕಿ ಸ್ಥಿರವಾದುದಾಗಿಯೂ, ಅಖಿಲ ಜನ ಸ್ಮರಣೀಯವಾದುದಾಗಿಯೂ ದೇಶಕ್ಷೇಮೋಪಯೋಗಿಯಾಗಿಯೂ, ದೇಶದ ಐಶ್ವರ್ಯಾಭಿವೃದ್ಧಿಗೆ ಕಾರಣಭೂತವಾದುದಾಗಿಯೂ ಇರುವಂತಾದ್ದು ಈಚೆಗೆ ಪ್ರಕಟಿಸಲ್ಪಟ್ಟ ಪೂರ್ವಸಮುದ್ರತೀರದ ರೈಲುರಸ್ತೆಯಾಗಿರುತಿದೆ. ಇವರ ಪ್ರಭುತ್ವದೊಳು ಜರಿಗಿದ ಕಾಮಗಾರಿಗಳೆಲ್ಲಕ್ಕಿಂತಲೂ ಮೇಲೆ ಕಂಡದ್ದು ಬಹಳದೊಡ್ಡದಾಗಿಯೂ ಶ್ರೇಷ್ಠವಾದುದಾಗಿಯೂ ಇರುತಿದೆ. ಇವರು ದೇಶಸಂಚಾರಮಾಡಿದಕಾಲಗಳಲ್ಲಿ ಪ್ರಜೆಗಳಿಂದೊಪ್ಪಿಸಲ್ಪಟ್ಟ ವಿಜ್ಞಾಪನ ಪತ್ರಿಕೆಗಳೆಲ್ಲವೂ ಐಕಕಂಠ್ಯದೊಡನೆ ಗವರ್ನರವರ ಔದಾರ್ಯ ಮರ್ಯಾದೆ ಯೋಗ್ಯ ಸಂಪತ್ಪ್ರಜಾಪ್ರೇಮ ಪರ ಸುಖ ಸಂತೋಷಾಭಿವೃದ್ಧಿಯನ್ನೇ ಅನವರತ ಕೋರತಕ್ಕವಾಗಿದ್ದವು. ಪರಂತು ತಾದೃಶ ಪ್ರಾರ್ಥನೆಗಳೆಲ್ಲವೂ, ಸ್ಥಿರವಾದ ಸುಜ್ಞಾನವಾಕ್ಯಗಳಾಗಿರದೆ ಹೃದಯಂಗಮಗಳಾದ ಬಾಹ್ಯಪ್ರದರ್ಶಕಗಳಾಗಿದ್ದವು. ಗವರ್ನರವರಿಗೆ ಅವರ ಅಧಿಕಾರ ಗೌರವ ಸ್ವರೂಪ ಯೋಗ್ಯತಾಪ್ರಯುಕ್ತಗಳಾದ ಸನ್ಮಾನ ಪುರಸ್ಕಾರಗಳು ಲೇಶವೂ ಲೋಪವಿಲ್ಲದಂತೆ ಅವರು ಸಂಚರಿಸಿದ ಕಡೆಗಳಲ್ಲೆಲ್ಲ ಅಪ್ರತಿಹತವಾಗಿ ನಡೆಸಲ್ಪಟ್ಟವು. ಮುಖ್ಯವಾಗಿ ಗುಣಾಢ್ಯರು ಚಿರಕಾಲ ನೆಲಸಿರಲಾರರೆಂಬದು ಸಹಜವಾದುದರಿಂದ ಪ್ರಶಂಸನೀಯಗಳಾದ ಗವರ್ನರ್‌ಗಳು ಪ್ರಾಯಶಃ ತಮ್ಮ ಅಧಿಕಾರಕಾಲವನ್ನು ಪೂರ್ತಿಯಾಗಿ ಕಳೆಯದೆ ಯಾವಾವದೋ ಒಂದು ಕಾರಣದಿಂ ಪೂರ್ವಭಾವಿಯಾಗಿಯೇ ನಿವೃತ್ತರಾಗುವದು ಅನುಭವಸಿದ್ಧವಾದ ವಿಷಯವಾಗಿರುತಿದೆ. ಪ್ರಜಾಕ್ಷೇಮಕರಾದ ಪಾಲಕರ ಪ್ರಭುತ್ವದಿಂದುಂಟಾಗಬಹುದಾದ ಪರಿಭವಗಳನ್ನನುಭವಿಸುವದಕ್ಕೆ ಈ ಸಂವತ್ಸರಗಳ ಉದ್ಯೋಗಾವಧಿಯು ಬಹಳ ದೀರ್ಘವಾದುದಾಗಿದ್ದಾಗ್ಯೂ ಗುಣದೋಷಗಳನ್ನರಿತು ಪ್ರಜಾಹಿತಕರನಾಗಬೇಕೆಂಬ ಕೋರಿಕೆಯುಳ್ಳವನಿಗುಣವಾದ ಪ್ರವೃತ್ತಿಯುಳ್ಳ ಪ್ರಭುವೊಬ್ಬನಿಗೆ ಸದರೀ ಐದುವರ್ಷಗಳ ಕಾಲಪರಿಮಾಣವು ದೇಶಸ್ಥಿತಿಯನ್ನರಿತ ಚೆನ್ನಾಗಿ ಅರಿಯುವಿಕೆಗೆ ಸಾಕಾದುದಲ್ಲವು. ಲಾರ್ಡ್ ಕಾನಿಮಾರಾಯವರಿಗೆ ಕಳೆದ ಮಾರ್ಚ್ ತಿಂಗಳೊಳಗೆ ಅರವತ್ತು ಮೂರು ವರ್ಷಗಳು ಪೂರ್ತಿಯನ್ನೈದಿದರಿಂದ ವಯೋಗುಣಗಳಾದ ವಯೋ ಲಕ್ಷಣಗಳು ಅವರಲ್ಲಿ ಸ್ಪಷ್ಟವಾಗಿ ಕಂಡುಬರುತಿವೆ. ಲಾರ್ಡ್ ಕಾನಿಮಾರಾ ಯವರು ಕಳೆದ ಜೂಲೈ ತಿಂಗಳಲ್ಲಿ ಉದಕಮಂಡಲದಿಂದ ಗಂಜಾಂ ಡಿಸ್ಟ್ರಿಕ್ಟಿಗೆ ಕ್ಷಾಮಪೀಡಿತರಾದ ಅಲ್ಲಿನ ಪ್ರಜೆಗಳ ಸ್ಥಿತಿಯಂ ಸ್ವತಃ ನೋಡುವ ಬಗ್ಗೆ ಹೋದಾಗ ಅವರಿಗೆ ಪ್ರಾಪ್ತವಾಗಿದ್ದ ಜ್ವರೋಪದ್ರವವು ನಿಶ್ಶೇಷವಾಗಿ ನಿವೃತ್ತಿಯಾಗದೆ ತತ್ಪ್ರಯುಕ್ತವಾದ ಶರೀರ ದೌರ್ಬಲ್ಯವು ವಿಶೇಷ ಶ್ರಮಕ್ಕೆ ಅನರ್ಹರಾಗಿ ಮಾಡಿತು. ಪರಂತು ಈಗ ಅವರ ಶರೀರ ಸ್ಥಿತಿಯು ನಾಜೂಕಾಗಿರುವದರಿಂದ ಬಹಳ ಜಾಗರೂಕತೆಯಂ ವಹಿಸಬೇಕಾದುದು ಅವಶ್ಯವೆಂದು ತಿಳಿಸಲ್ಪಟ್ಟದರಮೇಲೆ ನಿವೃತ್ತರಾಗುವದು ಕೋರಿದಂತೆ ಭಾವಿಸಬೇಕಾಗಿದೆ. ಈಚೆಗೆ ಲಾರ್ಡ್ ಸಾಲಿಸ್‌ಬರಿ ಯವರು, ಇಂಡ್ಯಾದೇಶದ ವೈಸ್‌ರಾಯಿ ಕೆಲಸಕ್ಕೆ, ಲಾರ್ಡ್ ಲ್ಯಾನ್ಸ್‌ಡೌನ್ ಯವರನ್ನೂ, ಮುಂಬೈ ಗವರ್ನರ್ ಕೆಲಸಕ್ಕೆ, ಲಾರ್ಡ್ ಹ್ಯಾರಿಸ್‌ಯವರನ್ನೂ ಚುನಾಯಿಸಿ ನೇಮಕಮಾಡಿ ಕಳುಹಿಸಿದ್ದನ್ನು ನೋಡಲಾಗಿ, ಪ್ರವರ್ಧಮಾನರಾಗತಕ್ಕ ಪ್ರಜೆಗಳು ಸರ್ಕಾರ್ ನೌಕರಿಯಲ್ಲಿ ಐವತ್ತೈದು ವರುಷಗಳಿಗಿಂತ ಜಾಸ್ತಿಯಾಗಿರಕೂಡದೆಂಬ ಸಾಮಾನ್ಯ ವಿಧಿಯೊಂದೇರ್ಪಟ್ಟಿರುವದರಿಂದ ಅಂತಾ ಮಧ್ಯವಯಸ್ಕರಾದ ಪ್ರಜೆಗಳನ್ನು ಪಾಲಿಸುವಂತಾ ಪಾಲಕರು ಸಹ ಸ್ವಲ್ಪ ಹೆಚ್ಚು ಕಡಮೆಯಾಗಿ ಅವರಂತೆಯೇ ಮಧ್ಯವಯಸ್ಕರಾಗಿರಬೇಕೆಂಬ ತಾತ್ಪರ್ಯವು ಸದರೀ ದೊಡ್ಡ ಮನುಷ್ಯರಿಗೆ ಅಂತಃ ನೆಲೆಗೊಂಡಿದ್ದಂತೆ ತೋರುತಿದೆ. ಹಿಂದಿನ ನಿಯಮನಗಳನ್ನಾಲೋಚಿಸಿ ನೋಡಲಾಗಿ ಲಾರ್ಡ್ ಕಾನಿಮಾರಾ ಯವರ ತರುವಾಯ ಅವರ ಕೆಲಸಕ್ಕೆ ಬರತಕ್ಕವರು ಮುವತ್ತರ ನಲವತ್ತು ವರುಷಗಳ ವಯಸ್ಸುಳ್ಳ ಯಾರೋ ಒಬ್ಬ ಲಾರ್ಡ್ ಯೆಂದೂಹಿಸಬಹುದು. ಪರಂತು ಈಗ ಇಂಗ್ಲಾಂಡಿನಲ್ಲಿ ಅಧಿಕಾರದೊಳಿರುವ ಕನ್‌ಸರ್ವೆಟಿವ್ ಕಕ್ಷಿಯವರ ಮುಂದಿನ ಸ್ಥಿತಿಯನ್ನರಿಯದೆ ಯಾವದನ್ನೂ ನಿಷ್ಕೃಷ್ಟವಾಗಿ ತಿಳಿಸಲಿಕ್ಕೆ ಸಾಧ್ಯವಾಗುವದಿಲ್ಲವು. ಮೆ|| ಗ್ಲಾಡ್‌ಸ್ಟನ್ ಯವರಿಗೆ ಬರುವ ತಿಂಗಳ ಅಖೈರಿಗೆ ೮೨ ವರುಷಗಳ ವಯಸ್ಸಾಗುತಿದೆ. ಅದಾಗ್ಯೂ ಆ ಜ್ಞಾನವಯೋವೃದ್ಧರು ಈಚೆಗೆ ಅಂದರೆ ಅದೇ ಗುರುವಾರದ ದಿನ ಕ್ಯಾರ್‌ಲೈಲ್ ಎಂಬ ಪ್ರದೇಶದ ರೈಲ್ವೇ ಸ್ಟೇಷನಿನಲ್ಲಿ ಮಾಡಿದ ಪ್ರಸಂಗದಲ್ಲಿ ಪಾರ್ಲಿಮೆಂಟ ಸಭೆಯನ್ನು ಲಾರ್ಡ್ ಸಾಲಿಸ್‌ಬರಿಯವರು ಅದ್ಯಾಪಿ ಒಡೆಯದೆ ಯಿಟ್ಟುಕೊಂಡಿರುವದಂ ಕುರಿತು ಅನ್ಯಾಯದೇಶವಾಗಿ(?) ಹೇಳಿದವರಾಗಿದ್ದರೆಂದು ತಿಳಿಯಬರುತಿದೆ. ಈಗಿರತಕ್ಕ ಪಾರ್ಲಿಮೆಂಟ್ ಸಭೆಯು ೧೮೮೬ ನೇ ಇಸವಿಯಲ್ಲಿ ಚುನಾಯಿಸಲ್ಪಟ್ಟದ್ದಾಗಿರುತಿದೆ. ಮೆ|| ಗ್ಲಾಡ್‌ಸ್ಟನ್‌ಯವರು ಅತಿಶಯಿತ ವಯೋವೃದ್ಧರಾಗಿದ್ದರೂ ಅವರ ಶರೀರ ಬುದ್ಧಿ ಬಲಗಳು ಮತ್ತೊಂದಾವರ್ತಿ ಸಂಯುಕ್ತ ರಾಜ್ಯಗಳ ಪ್ರಧಾನಮಂತ್ರಿಪದವನ್ನಂಗೀಕರಿಸುವಂತೆ ಯೋಗ್ಯವಾಗಿರುತಿವೆ. ಲಂಡನ್ ಪಟ್ಟಣದಲ್ಲಿ ನೆಲೆಗೊಂಡಿರುವ ಕನ್‌ಸರ್ವೆಟಿವ್, ಲಿಬರಲ್ ಮತ್ತು ರಾಡಿಕಲ್ ಕಕ್ಷಗಳಲ್ಲಿ, ಲಾರ್ಡ್ ಸಾಲಿಸ್‌ಬರಿ ಯವರು ಪ್ರಸ್ತುತದಲ್ಲಿಯೇ ಪಾರ್ಲಿಮೆಂಟ್ ಸಭೆಯನ್ನು ಒಡೆದು ಹೊಸದಾಗಿ ಕೂಡಿಸುವಬಗ್ಗೆ ಪ್ರಜೆಗಳಿಗೆ ಜ್ಞಾಪಿಸಿಕೊಳ್ಳುವದನಾಗಿದಾರೆಂದು ಪ್ರಸ್ತಾಪಿಸಲ್ಪಡುತಲಿರುವಂತೆ ಕೇಳುತ್ತೇವೆ. ಈ ವ್ಯವಸ್ಥೆಯ ಪರಿಣಾಮವು ಸದ್ಯಃ ನಿರೂಪಿಸಲಸಾಧ್ಯವು. ಇಂಗ್ಲಾಂಡಿನಲ್ಲಿನ ಪ್ರಜೆಗಳೆಲ್ಲರು ಪ್ರಭುತ್ವ ವಿನಿಮಯವು ಆಂತರವಾಗಿ ಕೋರುತಲಿದ್ದಾರೆ. ಇಂತಾ ಸ್ಥಿತಿಯಲ್ಲಿ ಲಾರ್ಡ್ ಕಾನಿಮಾರಾಯವರು ತಮ್ಮ ಕೆಲಸಕ್ಕೆ ರಾಜೀನಾಮೆಯಂ ಕೊಡದಿರುವದಾದರೆ ಇವರ ಉತ್ತರಾಧಿಕಾರಿಯಂ ನಿಯಮಿಸುವ ಭಾರವು ಬಹುಶಃ ಮೆ|| ಗ್ಲಾಡ್‌ಸ್ಟನ್‌ಯವರದಾಗಿರಬಹುದೆಂದೆಣಿಸುತ್ತೇವೆ. ಹಾಗೆ ಅವರು ನೇಮಕಮಾಡುವದಾಗಿದ್ದರೆ ಮದರಾಸ್ ಗವರ್ನರ್ ಕೆಲಸವನ್ನು ತಮ್ಮ ಕಕ್ಷಿಯವರಿಗೆ ಸೇರಿದವರ್ಯಾರಿಗಾದರೂ ಕೈಗೆ ಬರುತ ಕೊಡಬಹುದು. ಪರಂತು ಈಗ ಅದಕ್ಕೆ ಅವಕಾಶವಿಲ್ಲದಂತೆ ಲಾರ್ಡ್ ಸಾಲಿಸ್‌ಬರಿಯವರೇ ಬೇರೆಯೊಬ್ಬರನ್ನು ನೇಮಕಮಾಡಬೇಕಾಗಿರುವದರಿಂದ ಕನ್‌ಸರ್ವೆಟಿವ್ ಯಾ ಲಿಬರಲ್ ಯೂನಿಯನಿಸ್ಟ್ ಎಂಬ ಕಕ್ಷಗಳಿಗೆ ಸೇರಿದವರ್ಯಾರೋ ಒಬ್ಬರು ನಿಯಮಿಸಲ್ಪಡುವಂತೆ ಪರಿಣಮಿಸುವ ಬಗ್ಗೆ ಯೆಲ್ಲರೂ ವಿಷಾದಿಸಬೇಕಾಗಿದೆ. ಮುಖ್ಯವಾಗಿ ಲಾರ್ಡ್ ಕಾನಿಮಾರಾಯವರು ವಿಶೇಷಾನುಭವದೊಡನೆಯೂ ವಿಶ್ರಾಂತವಾದ ಪ್ರಾಶಸ್ತ್ಯದೊಡನೆಯೂ ಸ್ವದೇಶಕ್ಕೆ ಪ್ರಯಾಣೋನ್ಮುಖರಾಗಿರುವದರಿಂದ ಮದರಾಸ್ ಪ್ರೆಸಿಡೆನ್ಸೀ ಪ್ರಜೆಗಳೆಲ್ಲರೂ ನೈಜಗಳಾದ ಶ್ರದ್ಧಾ ಭಕ್ತಿ ಗೌರವಗಳೊಡನೆ ಅವರ ಜ್ಞಾಪಕವು ಏತದ್ದೇಶೀಯರ ಹೃದಯಗಳಲ್ಲಿ ಅನವರತ ನೆಲೆಗೊಂಡಿರುವಂತೆ ಉಚಿತರೀತಿಯ ಒಂದು ಕಾರ್ಯವು ಮಾಡುವರೆಂದು ದೃಢವಾಗಿ ನಂಬುತ್ತೇವೆ.

Occasional Notes.
ನೈಮಿತ್ತಿಕ ವಿಷಯನ್ಯಾಸ.

The mining companies of Calcutta ಕಲ್ಕತ್ತೆಯೊಳು ಈಚೆಗೆ ಸ್ಥಾಪಿಸಲ್ಪಟ್ಟ ಚಿನ್ನದಗೈರೆ ಗಣಿಗಳಬಾಬತು ೧೯ ಕಂಪೆನಿಗಳವಿಟ್ಟ ಮೂಲಧನವು ಪರ ಹಿಸ್ಸೆಒಂದುರೂಪಾಯಿ ನಮೂನೆ ೮೯ ಲಕ್ಷ ರೂಪಾಯಿಗಳು.

A national Hindu Congress.— ಹಿಂದೂಮತಾಚಾರ ಸಂಬಂಧವಾದ ಅನೇಕವಿಷ

ಹಿಗಳುಂಟಾರಿತು ಬರ್ಲಿನ ಪಟ್ಟಣದಲ್ಲಿ ನಾಮದ ಕ್ಕಾಗಿ ದೇಶವಿಭಾಗದಲ್ಲಿ ಹಿಂದೂ ನ್ಯಾಷನಲ್ ಕಾಂಗ್ರೆಸ್ಸೆಂಬ ಸಭೆಯೊಂದು ಈಚೆಗೆ ಏರ್ಪಾ ಟಾಗಿರುತದೆ.

Influenza again.—ಸಿಂಗಾ ಪೂರಿನಲ್ಲಿ ಇನ್‌ಫ್ಲ್ಯೂಯೆನ್‌ಜಾ ಎಂಬ ವಿಷಮಶೀತ ಜ್ವರದ ರೋಗವು ಮರಳಿ ವ್ಯಾಪಿಸಿ ಅದರ ದೆಸೆಯಿಂದ ಅನೇಕರು ಕೇವಲ ಅನಾರೋಗ್ಯದಶೆಯಲ್ಲಿರು ವುದಾಗಿ ಒಂದಾನೊಂದು ಪತ್ರಿಕೆಯ ವಾರ್ತಾಹರ ಕನೊಬ್ಬನು ಬರೆಯುತ್ತಾನೆ.

Combination of Chinese merchants—ಇಂಡ್ಯಾ ದೇಶದಿಂದ ರಫ್ತು ಮಾಡಲ್ಪಡುವ ನೂಲು ಮತ್ತು ಕಂಬಳಿ ದಾರಗಳಲ್ಲಿ ಬಹಳ ಕಿರಿದಾದವು ಗಳನ್ನು ಚರಿಕೆ ಮಾಡಿ ಕಳುಹಿಸಿ ಮೋಸ ಮಾ ಡುವದರಿಂದ ಮುಂದೆ ಇಂಡ್ಯಾದೇಶದಿಂದ ನೂಲು ತರಿಸಕೂಡದೆಂದು ಚೀನಾದೇಶದ ವರ್ತಕರು ಒ ಗ್ಗಟ್ಟು ಮಾಡಿಕೊಂಡಿರುತ್ತಾರೆ.

Appointment of a committee.—ಸುಪ್ರೀಂ ಗವರ್ನಮೆಂಟಿನವರು ಕೇಳದಕೂಡದ ಅವರಿಗೆ ಸರಬರಾಯಿ ಮಾಡುವದಕ್ಕೆ ಬೇಕಾದ ಸರಂ ಜಾಮುಗಳನ್ನು ಸಂಗ್ರಹಿಸುವ ಕೆಲಸಕ್ಕಾಗಿ ಒಂದು ಕಮಿಟಿಯನ್ನು ಸಿದ್ಧಪಡಿಸುವದಕ್ಕೆ ಆವಶ್ಯಕ ಗಳಾದ ಏರ್ಪಾಡುಗಳನ್ನು ಮಾಡಿ ತಮಗೆ ತಿಳಿಸು ವಂತೆ ಭಾರತವರ್ಷದ ಸಂಸ್ಥಾನಾಧಿಪತಿಗಳು ಒಂದು ಕಮಿಟಿಯನ್ನು ನೇಮಕ ಮಾಡಿರುತ್ತಾರೆ.

Birthday of H. H. the Nizam.—ಈತಿಂಗಳ ೨ನೇ ತಾರೀಖಿನಲ್ಲಿ ಘನದೊರೆಯವರಾದ ನಿಜಾಮರವರಿಗೆ ೨೫ ವರ್ಷಗಳ ವಯಸ್ಸು ಕ್ರಮಿಸಿದುದರಿಂದ ಸದರೀ ವಿಶೇಷ ಸಂದರ್ಭ ಸೂಚಕವಾಗಿ ರಾಜಧಾನಿಯಲ್ಲಿ ಒಂದು ಪ್ರಬಲ ದರ್ಬಾರ್ ನಡೆಯುವದು. ನಿಜಾಮರವರು ಸನ್ ೧೮೮೪ನೇ ಇಸವಿ ಫೆಬ್ರುವರಿ ೫ನೇ ತಾರೀಖಿನಲ್ಲಿ ರಾಜ್ಯಧುರವನ್ನು ಕೈಗೊಂಡರಾಗಿ ಬರುವ ಫೆಬ್ರುವರಿ ತಿಂಗಳಿಗೆ ೭ ವರ್ಷಗಳಕಾಲ ಸ್ವಯಂ ರಾಜ್ಯಕಾರ್ಯವನ್ನು ನಿರ್ವಹಿಸಿದಂತೆ ಆಗುತ್ತದೆ.

An accident.—ಕಳೆದ ವಾರದಲ್ಲಿ ಮದರಾಸಿನ ರೈಲುಗಾಡಿ ಬರುತ್ತಿರುವಲ್ಲಿ ಅಂಬ ತ್ತೂರು ಸ್ಟೇಷನ್ ಬಳಿ ಒಬ್ಬ ಮರ್ಚೆಂಟನ ವಯ ಸ್ಸಿನ ಮಗು ಸ್ಟೇಷನ್ ಗೋಡೆಯಿಂದ ಕೆಳಗೆ ಬಿ ದ್ದು ಹೋಗಿ ಗಾಡಿಯ ಚಕ್ರಗಳು ಮೈಮೇಲೆ ಹಾದು ಹೋದಾಗ್ಯೂ ದೈವಾತ್ ಮಗು ವಿಗೆ ವಿಶೇಷ ಘಾಯ ಯಾವದೂ ತಗಲದೆ ಜೀವ ದೊಡನೆ ಸಿಕ್ಕಿತೆಂದು ಮದರಾಸ್ ಮೆಯಿಲ್ ಪತ್ರಿ ಕೆ ತಿಳಿಸುತ್ತದೆಯಾಗಿ ರೈಲುಗಳಲ್ಲಿ ಮಕ್ಕಳೊಡನೆ ಪ್ರಯಾಣ ಮಾಡುವವರು ಅವುಗಳ ವಿಷ ಯದಲ್ಲಿ ಬಹಳ ಜಾಗರೂಕತೆ ಯುಳ್ಳವರಾ ಗಿರಬೇಕು.

Trading companies and ministerial officers.—ಬಳ್ಳಾರಿ ಡಿಸ್ಟ್ರಿಕ್ಟು ಆಫೀಸರುಗಳು ಕೆಲವರು ಅಲ್ಲಿನ ವ್ಯಾಪಾರ ಸಂಘಗಳಲ್ಲಿ ಡೈರೆ ಕ್ಟರುಗಳಾಗಿಯೂ ಷೇರುದಾರರಾಗಿಯೂ ಇದ್ದು ಕೊಂಡು ರುಸುಂ ಪಡೆಯುತ್ತಿದ್ದಾರೆಂಬ ಅಂಶ ಸದರೀ ಡಿಸ್ಟ್ರಿಕ್ಟು ಕಲೆಕ್ಟರರಾದ ಮಿಸ್ಟರ್ ಲೆಫಾನು ಎಂಬವರಿಗೆ ತಿಳಿಯಬಂದು ಗವರ್ನ ಮೆಂಟು ಶಿಫಾರಸು ಅನ್ವಯದಂತೆ ಆರೀತಿ ರುಸುಮ ನ್ನು ಪಡೆಯುವದನ್ನು ಸನ್ ೧೮೮೬ನೇ ಇಸವಿ ಏಪ್ರಿಲ್ ೧೫ನೇ ತಾರೀಖು ೧೫೩೬ನೇ ನಂಬರ್ ಗವರ್ನ್ಮೆಂಟ್ ಹುಕುಮಿಗೆ ವಿರುದ್ಧವಾದ ಕೃತ್ಯವೆಂದೂ ಆರೀತಿ ಮಾಡಬೇಕಾದರೆ ಮುಂಚಿತವಾಗಿ ತಮ್ಮ ಇಲಾಖಾ ಅಧಿಕಾರಿಯ ಅಪ್ಪಣೆಯನ್ನು ಪಡೆದುಕೊಂಡು ಮಾಡಬೇಕೆಂತಲೂ ತಮ್ಮ ತಾಬೇದಾರಿ ನೌಕರ ರಿಗೆ ಎಚ್ಚರಿಸಿರುತ್ತಾರೆ.

Throwing stones at passing trains.—ದಕ್ಷಿಣ ಇಂಡಿಯಾ ರೈಲ್ವೆ ಮಾರ್ಗದಲ್ಲಿ ಕಡೆ ಗಳು ಗಾಡಿಗಳು ಹೋಗುತ್ತಿರುವಲ್ಲಿ ರಸ್ತೆಯ ಪಕ್ಕದಲ್ಲಿರುವ ಗ್ರಾಮಗಳಲ್ಲಿನ ಹುಡುಗರು ಪ್ರಯಾಣಸ್ಥರ ಗಾಡಿಗಳ ಕಿಟಕಿಗಳ ಮೇಲೆ ಕಲ್ಲು ಗಳಂ ಬೀಸುವ ಮತ್ತು ಗಾಡಿಗಳು ನಡೆಯುವ ಕಬ್ಬಿಣದ ಮೇಲೆ ಕಲ್ಲುಗಳಂ ಇಡುವ ಕೆಟ್ಟನಡ ತೆಯು ದಿನೇದಿನೇ ವೃದ್ಧಿಯಾಗುತ ಬರುತಿದೆ ಯೆಂದು ದಕ್ಷಿಣ ಇಂಡಿಯಾ ರೈಲ್ವೆ ಏಜಂಟರು ಚೆಂಗಲ್ಪಟ್ಟು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಿ ಗೆ ರಿಪೋರ್ಟ್ ಮಾಡಿದರಾಗಿ, ಮೇಲಿನ ದು ಷ್ಕೃತ್ಯಗಳಿಗೆ ವಿಧಿಸಲ್ಪಡಬಹುದಾದ ದಂಡನೆ ಕಠಿಣವಾಗಿರುವದೆಂತಲೂ, ಪೊಲೀಸ್ ಮತ್ತು ಗ್ರಾಮಾಧಿಕಾರಿಗಳು ಸದರೀ ವಿಷಯಕ್ಕೆ ಕೂಡಲೆ ನಿಗಾ ಕೊಡಬೇಕೆಂತಲೂ ಚೆಂಗಲ್ಪಟ್ಟು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರು ಪ್ರತಿಗ್ರಾಮದ ವರಿಗೂ ಡಂಗೂರದ ಮೂಲಕ ತಿಳಿಸಿರುತ್ತಾರೆ.

LOCAL AND PROVINCIAL NEWS.
ಸ್ಥಳದೇಶ ಮತ್ತು ತಾಲ್ಲೂಕಿನ ವರ್ತಮಾನಗಳು.

City Railway Station.—ಪೇಟೆ ರೈಲ್ ಸ್ಟೇಷನ್ನಲ್ಲಿ ಇಂಗ್ಲಿಷ್ ಪ್ರಯಾಣಸ್ಥರ ಅನು ಕೂಲ್ಯದಬಗ್ಗೆ ಭೋಜನಶಾಲೆಯೊಂದು ಕಟ್ಟಿ ಸುವ ಪ್ರಯತ್ನಗಳು ನಡೆಯುತ್ತಲಿರುವಂತೆ ಕೇ ಳುತ್ತೇವೆ.

The Resident.—ಈ ಸಂಸ್ಥಾನದ ಬ್ರಿ ಟಿಷ್ ರೆಸಿಡೆಂಟರಾದ ಸರ್. ಓಲಿವರ್ ಸೇಂಟ್‌ಜಾನ್ ಯವರು ಕಳೆದ ಬುಧವಾರದ ದಿವಸ ಮೈಸೂರಿಂದ ಇಲ್ಲಿಗೆ ವಾಪಸು ಬಂದರು. ಮರಳಿ ಈಪಿನ ಮೈ ಸೂರು ಮಾರ್ಗವಾಗಿ ಕೊಡಗಿಗೆ ಹೊರಡುವವಾ ಗಿ ಕೇಳುತ್ತೇವೆ.

The weather.—ಕಳೆದವಾರದಲ್ಲಿ ಪ್ರಾ ಯಶಃ ಪ್ರತಿದಿನದಲ್ಲೂ ಒಳ್ಳೆಯ ಮಳೆಬಿದ್ದು ಕೆ ರೆಕುಂಟೆಗಳಿಗೂ ವಾಸಗೃಹಗಳೊಳಗಣ ಬಾವಿ ಗಳಿಗೂ ಯಥೋಚಿತ ನೀರು ಬಂತು, ಸದ್ಯಕ್ಕೆ ಜಲಕ್ಷಾಮದಿಂದುಂಟಾಗಬಹುದಾದ ಭಯ ತಪ್ಪಿತು. ಪದಾರ್ಥಗಳ ಧಾರಣೆಗಳು ಏಕರೂಪ ವಾಗಿವೆ. ರೋಗಾದ್ಯುಪದ್ರವಗಳು ವಿಶೇಷ ಯಾ ವದೂ ಕಾಣಿಸಲಿಲ್ಲವು.

Taking of lands for military purposes.—ಬ್ರಿಟಿಷ್ ಸೈನ್ಯಕ್ಕೆ ಸೇರಿದ ಆನೆ, ಒಂಟೆ, ಕುದುರೆ ವಗೈರೆ ಇವುಗಳ ವಾಸಕ್ಕಾಗಿ ಕಾವಲುಗುಡಿಯಿಂ ದ ಹೊಸಕೋಟೆಗೆ ಹೋಗುವ ರಸ್ತೆಯ ಬಲ ಭಾಗದಲ್ಲಿನ ಸರೀ ಸುಮಾರು ಜಮೀನುಗಳನ್ನು ಗವರ್ನಮೆಂಟಿನವರು ಬಲಾತ್ಕಾರ ಪೂರ್ವಕ ಸ್ವಾಧೀನ ಪಡಿಸಿಕೊಳ್ಳುತಲಿರುವಂತೆ ಕೇಳು ತ್ತೇವೆ ಇದರ ತಪ್ಸೀಲನ್ನು ಮುಂದಿನವಾರ ದಲ್ಲಿ ತಿಳಿಸುತ್ತೇವೆ.

Sale of building sites.—ಈ ಪೂರು ಕೋಟೆಗೆ ಪಶ್ಚಿಮಭಾಗದಲ್ಲಿರುವ ಖಾಲೀ ಜಮೀ ನನ್ನು ಈಚೆಗೆ ಇಲ್ಲಿನ ಮ್ಯುನಿಸಿಪಾಲಿಟಿಯವ ರು ಹರಾಜ್ ಮೂಲಕ ವಿಕ್ರಯಿಸಿದ್ದರಲ್ಲಿ ಪ್ಲಾಟು ಪ್ಲಾಟುಗಳು ಅಧಿಕವಾಗಿ, ಒಂದೊಂದು ತುಂಡು ಜಮೀನ್ ಸರಾಸರಿ ಸುಮಾರು ೪೦೦ ರೂಪಾಯಿ ಗಳ ವರೆಗೆ ವಿಕ್ರಯವಾಯಿತು ಇದರಿಂದ ಮ್ಯು ನಿಸಿಪಾಲಿಟಿಯವರಿಗೆ ಇದುವರೆವಿಗೆ ೬,೦೦೦ ರೂಪಾಯಿಗಳಿಗೆ ಮೇಲ್ಪಟ್ಟು ಉತ್ಪನ್ನವಾಯಿ ತೆಂತೆ ಕೇಳುತ್ತೇವೆ. ಈ ಸ್ಥಳದಲ್ಲಿ ಹೊಸದಾಗಿ ತರಕಾರಿಪೇಟೆ ಮಾಡಿಸಿ ಈಗ ಇರುವದನ್ನು ತೆ ಗೆದುಹಾಕಿಸಬೇಕೆಂಬದೇ ಮ್ಯುನಿಸಿಪಾಲಿಟಿಯ ವರ ಉದ್ದೇಶವೆಂದು ಕೇಳುತ್ತೇವೆ. ಇದನ್ನು ಕುರಿತ ನಮ್ಮ ಅಭಿಪ್ರಾಯವನ್ನು ಮುಂದೆ ತಿ ಳಿಸುವೆವು.

ADDRESS OF THE DEWAN OF THE MYSORE
to the Representative Assembly held at Mysore on Tuesday, the 28th October 1890.

ಶ್ರೀಮನ್ಮಹಾರಾಜ ರಾಜಾಸಾಹೇಬ ಬಹದೂ ರವರ ಆಜ್ಞಾನುಸಾರವಾಗಿ ಕಳೆದ ಸಂವತ್ಸರದ ಉತ್ಪನ್ನವಾದ ಮತ್ತು ಖರ್ಚಿನ ತಪಸೀಲುಗಳ ನ್ನು ಅವುಗಳ ಪೈಕಿ ಗುಜಸ್ತಾ ಸಾಲಿಗೆ ಮು ಕಾಬಲಾ ಮಾಡಲಾಗಿ ಯಾವ್ಯಾವ ಅಂಶಗಳಲ್ಲಿ ವಿಶೇಷವಾದ ವ್ಯತ್ಯಾಸಗಳು ಕಂಡುಬರುತ್ತೋ ಅವುಗಳ ಕಾರಣಗಳನ್ನೂ ಈ ದಿವಸ ನಿಮ್ಮಗ ಳಿಗೆ ತಿಳಿಯಪಡಿಸುತ್ತೇವೆ.

ರೈಲ್ವೆ ಶಿವಾಯಿ ಇತರ ಎಲ್ಲಾ ಬಾಬು ಗಳ ಜಮಾ ಇದರಡಿ ನಮೂದಿಸಿ ಇರುತ್ತೆ.

	1888—89. ರೂ.	1889—90. ರೂ.
ಲ್ಯಾಂಡ್ ರೆವಿನ್ಯೂ ವಗೈರೆ ಪೂರ್ಣಬಾಬು.	83,96,337	89,21,826
ಅಬ್ಕಾರಿ ...	15,99,615	17,62,566
ಫಾರೆಸ್ಟ್ ...	11,35,398	13,68,866
ಸ್ಟಾಂಪ್ ...	5,55,716	5,92,847
ಸಾಯರ್ ...	4,07,568	4,16,081
ಮೊಹತರ್ಫಾ ...	3,29,659	3,58,115
ಲಾ ಅಂಡ್ ಜಸ್ಟಿಸ್ ಯೂನಿವರ್ಸಿಟಿ ಪಿಟಲ್ ಮತ್ತು ಜೈಲುಗಳು.	64,699	73,541
ಅಂಚೆ ...	76,206	2,132
ರಿಜಿಸ್ಟ್ರೇಷನ್	59,605	64,916
ಅಮೃತಮಹಲ್	49,804	39,164
ವಿದ್ಯಾಭ್ಯಾಸದ ಇಲಾಖೆ	26,159	33,194
ಉಪ್ಪಿನಮೋಟೆ ...	27,391	38,808
ಪಬ್ಲಿಕ್‌ವರ್ಕ್ಸ್ ಹೊರತು ಮರಾಮತ್ತು	20,160	15,792
ಬಂಗಾರದಗಣಿಗಳು	1,09,526	1,96,628
ಮೆಡಿಕಲ್ ಸ್ಕೂಲ್‌ಗಳಿಗೆ ವೈದ್ಯಶಾಲೆಗಳ ಬಗೆ	3,522	8,739
ಸ್ಟೇಷನರಿ ಮತ್ತು ಇತರಬೆಲ್ಲರೆ ಇಲಾಖೆಗಳ ಬಗೆ.	6,842	13,568
ಜನಾಂಗದಿಂದ ಹೊಂದಬೇಕಾದ ಸಾಲದ ಬಡ್ಡಿ	29,003	36,868
ಗವರ್ನಮೆಂಟ್ ಪ್ರಾಮಿಸರಿ ನೋಟುಗಳನ್ನು ಖರೀದಿಸಿ ಕೊಟ್ಟದ್ದರಲ್ಲಿ ಬಂದ ಲಾಭ ಬಾಬತ್ತು	5,498	720
ಗವರ್ನಮೆಂಟ್ ಪ್ರಾಮಿಸರಿ ನೋಟುಗಳ ಮೂಲಕ ಇಡಲ್ಪಟ್ಟ ಹಣದ ಮೇಲಿನ ಬಡ್ಡಿ	1,81,199	2,25,265
ಮೆಹೆರ್‌ಬಾನ್ ಚಾಮರಾಜನಗರ ಬ್ರಾಂಚ್ ರೈಲ್ವೆ ಬಂಡವಾಳದ ಮೇಲಿನ ಬಡ್ಡಿ	51,153	51,818
ಚಿಲ್ಲರೆ ಬಾಬುಗಳು	85,815	77,819
ಜುಮ್ಲಾ ..	1,32,20,0881	1,42,94,283

೭ ರೈಲ್ವೆ ಶಿವಾಯಿ ಇತರ ಎಲ್ಲಾ ಬಾಬು ಗಳ ಖರ್ಚು ಇದರಡಿ ನಮೂದಿಸಿರುತ್ತೆ.

A

ಸಬ್‌ಸಿಡಿಯಾರಿ ಪೇಕಷ್	24,50,000	24,50,000
ಸಿವಿಲ್ ಲಿಸ್ಟು ಮಹಾರಾಜರವರ ಖಾಸಾ ಖರ್ಚು	13,00,000	13,00,000
ಕ್ಷಾಮ ಸಂಬಂಧವಾದ ಸಾಲ ವಾಪಸತಿ	1,99,404	...
ರೈಲ್ವೇ ಸಾಲ ತೀರಿಸುವದಕ್ಕೆ ವರ್ಷ ವರ್ಷಕ್ಕೆ ಕೊಡತಕ್ಕ ಹಣ	2,00,596	4,00,000
ರೈಲ್ವೇಸಾಲದಬಡ್ಡಿ	97,986	1,11,907
ಪ್ರಾವಿನ್ಷಿಯಲ್ ಸರ್ವಿಸಿಗಳು ಮತ್ತು ಐರೋಪ್ಯರಿಗೆ ಬದಲಾಗಿ ಕೊಡುವ ಅಲೋವನ್ಸ್‌ಗಳು	1,01,629	1,00,640
ಮಿಲಿಟರಿ	7,28,658	7,36,266
ಜುಮ್ಲಾ ...	59,78,267	60,98,813

B.

ಹುಜೂರು ಇಲಾಖೆ ಖರ್ಚು	2,04,873	2,28,829
ಲ್ಯಾಂಡ್ ರೆವಿನ್ಯೂ ಸಂಬಂಧ ವಸೂಲಾತಿ ಖರ್ಚು,—		
ಡೆಪ್ಯುಟಿ ಕಮಿಷನರುಗಳು ಮತ್ತು ಅವರ ಸಿಬ್ಬಂದಿಗಳು	1,63,366	1,66,092
ಅಸಿಸ್ಟೆಂಟ್ ಕಮಿಷನರುಗಳು ಮತ್ತು ಅವರ ಸಿಬ್ಬಂದಿಗಳು	61,182	60,070
ತಾಲ್ಲೂಕ್ ಕಚೇರಿಗಳ ಸಿಬ್ಬಂದಿ	3,20,626	3,19,916
ರೆವಿನ್ಯೂ ಸರ್ವೆ ಇಲಾಖೆ	1,73,586	1,86,654
ಇನಾಂ ಇಲಾಖೆ	7,761	7,798
ಗ್ರಾಮನೌಕರರ ಸಂಬಳ	4,20,964	5,53,806
ಇತರ ಬಾಬುಗಳು	26,205	36,727
ಅಬ್ಕಾರಿ ...	36,865	55,218
ಫಾರೆಸ್ಟ್ ...	4,36,774	5,14,821
ಸ್ಟಾಂಪ್ ...	21,545	21,197
ಸಾಯರ್ ...	14,096	12,729
ಕಾಫಿ ಲ್ಯಾಂಡ್ ಮತ್ತು ಸಾದಿಬಾನ್	73,702	79,896
ಅಮೃತಮಹಲ್	31,762	27,585
ಸ್ಟೇಷನರಿ ಮತ್ತು ಇತರ ಚಿಲ್ಲರೆ ಇಲಾಖೆಗಳು	51,603	75,556
ಜುಮ್ಲಾ ..	20,60,066	23,46,275

C.

ಲಾ ಅಂಡ್ ಜಸ್ಟಿಸ್ ಯೂನಿವರ್ಸಿಟಿ ಮತ್ತು ಜೈಲುಗಳು	7,49,895	7,55,369
ಪೊಲೀಸ್	5,96,034	6,22,801
ವಿದ್ಯಾಭ್ಯಾಸದ ಇಲಾಖೆ	1,80,920	2,61,770
ಮುಜರಾಯಿ	2,81,964	2,78,663
ಮೆಡಿಕಲ್ ಸ್ಕೂಲ್ ವೈದ್ಯಶಾಲೆಗಳ ಇಲಾಖೆ	1,89,685	1,75,806
ಪೆನ್ಷನ್‌ಗಳು ಮತ್ತು ಗ್ರಾಚ್ಯುಯಿಟಿಗಳು	2,40,937	2,67,873
ಪಬ್ಲಿಕ್ ವರ್ಕ್ಸ್ ಯೆಂದರೆ ಮರಾಮತ್ತ್	19,82,076	21,91,404
ಅಂಚೆ ...	1,36,920	16,664
ರಿಜಿಸ್ಟ್ರೇಷನ್	28,967	29,563
ಬ್ರಿಟಿಷ್ ಜಮೀನುಗಳ ಸೆಟಲ್‌ಮೆಂಟ್, ಗ್ರಾಚ್ಯುಯಿಟಿ ಕಾಂಟ್ರಾಕ್ಟ್, ದಾಖಲೆಮತ್ತು ಕೋರ್ಟ್ ಸಂಬಂಧ ವಾದಖರ್ಚುಗಳು	30,668	23,019
ಮೈಸೂರು ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ ಮೇಲಿನಬಡ್ಡಿ	52,919	57,504
ರೀಜಂಟ್ ರವರ ಶಾದಿ ಖರ್ಚು	46,029	66,014
ಕೋಟೆಗಳ ಬರಿದಿ ಮತ್ತು ರಿಪೇರಿ	3,579	14,639
ಚಿಲ್ಲರೆ ಬಾಬುಗಳು	81,798	89,541
ಜುಮ್ಲಾ ...	46,02,391	48,50,429
ಒಟ್ಟುಜುಮ್ಲಾ...	1,17,40,728	1,22,97,517

೮. ಜಮಾ.—ಕಳೆದಸಂವತ್ಸರದಲ್ಲಿ ಒಟ್ಟು ಜಮೆಯಾದ ಮೊಬಲಗು ಅದರ ಹಿಂದಿನ ಸಂವ ತ್ಸರದ ಜಮೆ ಮೊಬಲಗಿಗಿಂತಲೂ ೧೦¾ ಲಕ್ಷ ಜಾಸ್ತಿಯಾಗಿರುವದು ವಿಮರ್ಶನೀಯವಾಗಿರುತ್ತೆ.

೯. ಲ್ಯಾಂಡ್ ರೆವಿನ್ಯೂಯೆಂಬ ಜಮೀನ್ದಾ ರಿ ಜಮೆಯ ಬಾಬುಗಳ ಪೈಕಿ ಪ್ರಾಯಶಃ ಪ್ರತಿ ಒಂದು ಮುಖ್ಯ ಬಾಬಿನಿಂದಲೂ ಈ ಜಾಸ್ತಿ ಉತ್ಪನ್ನವಾಯಿತು ಕಂಡುಬಂದಿರುತ್ತೆ. ಅವುಗಳ ಪೈಕಿ ಲ್ಯಾಂಡ್ ರೆವಿನ್ಯೂ ಅಂದರೆ ಜಮೀನ್ದಾ ರಿನ ಉತ್ಪನ್ನದಲ್ಲಿ ೪೦ ಲಕ್ಷದಿಂದ ಸುಮಾರು ೪೫ ಲಕ್ಷದವರೆಗೆ ಹೆಚ್ಚು ವಿಶೇಷವಾಗಿ ಜಾಸ್ತಿ ಕಂಡುಬಂದಿದೆ. ಈಬಾಬಿನ ಒಟ್ಟು ೫ ಲಕ್ಷದ ಜಾಸ್ತಿ ಪೈಕಿ ಸುಮಾರು ೩ಲಕ್ಷ ಈಸಂವತ್ಸರ ದ ರೆವಿನ್ಯೂ ವಸೂಲಾತಿ ಹಿಂದಿನ ವರ್ಷಗಳಿಗಿಂತ ಹೆಚ್ಚಾದ ಕಾರಣದಿಂದ ಉಂಟಾಗಿರು ತ್ತೆ. ಕೋಲಾರದ ಮತ್ತು ಬೆಂಗಳೂರು ಡಿಸ್ಟ್ರಿಕ್ಟು ಗಳಲ್ಲಿ ಸರ್ವೆ ಜಮಾಬಂದಿ ಆದದ್ದರಿಂದ ೭೯,೫೭೫ ರೂಪಾಯಿಗಳು ಜಾಸ್ತಿಯಾಗಿರು ತ್ತೆ. ಇನ್ನು ೧¼ ಲಕ್ಷ ರೂಪಾಯಿನ ಎಲ್ಲಾ ಕಡೆ

ಯಲ್ಲಿಯೂ ಸಾಗುವಳಿ ಜಾಸ್ತಿ ಆದ್ದರಿಂದ ಪ್ರ [illegible] ಟಾಗಿದೆ. ನೂತನವಾಗಿ ಸಾಗುವಳಿಗೆ ಬಂದ ಜ ಮೀನಿನ ಒಟ್ಟು ವಿಸ್ತೀರ್ಣವು ಹಿಂದಿನವರ್ಷ ಕ್ಕಿಂತ ಎಕರೆಗಿಂತಲೂ ಜಾಸ್ತಿಯಾಗಿದ್ದೆ. ಈಮೇ ರೆ ಸಾಗುವಳಿಯಲ್ಲಿ ವಿಶೇಷ ವಾಸ್ತ ಕಾಣುವ ದಕ್ಕೆ ಸಕಾಲ ವೃಷ್ಟಿಯೂ ರಣೀ ಸಾಗುವಳಿಗೆ ಉಪಯೋಗವಾದ ಕಾಮಗಾರಿಗಳ ಅಭಿವೃದ್ಧಿ ಯೂ, ಮೈಸೂರು ದರಿಹದ ರೈಲ್ವೆ ಕಾಮಗಾ ರಿ ಪ್ರಾರಂಭಿಸಿದ್ದರಿಂದ ವ್ಯವಸಾಯಕ್ಕೆ ಸಾ ಮಾನ್ಯವಾಗಿ ಉಂಟಾದ ಉತ್ತೇಜನವೂ ಕಾರ ಣವಾಯಿತು

೬ ಈ ಸಂವತ್ಸರದ ಲ್ಯಾಂಡ ರೆವಿನ್ಯೂ ಜಮಾಬಂದಿ [illegible] ರೂಪಾಯಿಗಳು, ಗು ಜಸ್ತಾ ಸಾಲಿನ ಜಮಾಬಂದಿ ೪೩,೪೮,೦೦೦ರೂ ಪಾಯಿಗಳು. [illegible] ಎಸೂಲಾಗದೆ ನಿಂತ [illegible] ಬಾಕಿಯ [illegible] ಸುಮಾರು [illegible] ೧೮೮೮—೮೯ನೇ ಸಾಲಿ ಬಟ್ಟೆಬಂದ್ದ [illegible] ರೂಪಾಯಿ ಬಾಕಿನಿಂತಿದೆ

೭ ಫಾರೆಸ್ಟ್—[illegible] ಜಾಸ್ತಿ [illegible] ಪಟ್ಟದಲ್ಲಿ ಎಸೋ ಹಾಜ ಫಾರೆಸ್ಟ್ [illegible] ೧೧,೩೧,೩೯೩ ರೂ [illegible] ೧೭೬೯,೪೮೮ ರೂಪಾಯಿಗಳು ಆಯಿತು. ಶ್ರೀಗಂಧದ [illegible] ರಾಶಿ [illegible] ಅದರ [illegible] ಲಕ್ಷ [illegible] ೪,೪೨,೦೭೧ ರೂಪಾಯಿ [illegible] ವೃತ್ತಿಯಾಯಿತು.—[illegible] ೫,೯೭,೯೨೦ರೂಪಾಯಿ [illegible] ಶಿಲ್ಕ ಬಂಗಡಿ [illegible] ಬಿದಿರು [illegible] ನೆಗಳ [illegible] ೫೪,೫೪೨ ರೂಪಾಯಿಗ ಳು [illegible] ಆದಾಯ [illegible] ಹಾಬಿನಲ್ಲಿ ೭,೧೩೬೫೪ ರೂಪಾಯಿ ಇದ್ದದ್ದು ೧,೭೫,೯೬೧ ರೂಪಾಯಿಗಳಿಗೆ ಕಡಿಮೆಯಾಯ್ತು. [illegible] ಸ್ಪೀರ್ಟನ [illegible] ಗು ಜಸ್ತಾ ಸಾಲಿಗಿಂತ ಮುಜರಾಯಿಗೆ ಸ್ವಲ್ಪವಾದದ ರಿಂದ ಸದರೀ ಕನಿಷ್ಠಕ್ಕೆ ಮುಖ್ಯಕಾರಣವಾಯಿತು ಮತ್ತು [illegible] ಸರಬರಾಯಿಮಾಡಿದ [illegible] ಜಾಸ್ತಿ ಯೂ ಮತ್ತು ಇತರ ಚಿಲ್ಲರೆ [illegible] ಸೇರಿಸಿ [illegible] ಬಾಬಿನಲ್ಲಿ [illegible] ಜಾಸ್ತಿ ೬೩೩,೪೭೭ ರೂಪಾಯಿ [illegible]

೮ ಅಬ್ಕಾರಿ—ಈ ಬಾಬಿನ ಉತ್ಪನ್ನವು ಜಾಸ್ತಿಯಾಗಿದೆ ಕಳೆದಸಾಲಿನಲ್ಲಿ ನಿಮ್ಮ ಗಳಗೆ [illegible] ಅಂಬರ್ ಫ್ರಾಫ್ ಯಿಂದ [illegible] ನ ಶರಾಬ ಗ್ಯಾಲನ್ ೧ಕ್ಕೆ ಚಿಲ್ಲರೆ ಬಿಕರಿದರ [illegible] ರೂಪಾಯಿ ಇದ್ದದ್ದು [illegible] ರೂಪಾ ಯಿ [illegible] ಗ್ಯಾಲನ್ ಸದರೀ [illegible] ಮಾನಕ್ಕನುಸಾರವಾಗಿ [illegible] ಮಾಡಬೇಕೆಂದು [illegible] ಹಾಗಲ್ಲ ೧,೫೯,೭೪೮ ರೂಪಾಯಿಗಳನ್ನು ಭಾರಿ ಜಾಸ್ತಿಯುತ್ಪನ್ನವಾಗಿ ಕಂಡುಬಂತು.

೯. ಈ ಸಾಲಿನಲ್ಲಿ ಕೋಲಾರದಲ್ಲಿ ಹಾಸ್ಪಿ ಟಲಾಗಿ ಬಿಕರಿಗೆ ರಪ್ತಾದ ಶರಾಬ ಬೆಂಗ ಳೂರು ಸಿವಿಲ್ ಮಿಲಿಟರಿ ಸ್ಟೇಷನ್ ವಿನಾ ೩,೦೩,೦೦೦ ಗ್ಯಾಲನ್ ಆಯಿತು, ಗುಜಸ್ತಾಸಾಲಿ ನಲ್ಲಿ ೬,೭೫೪,೦೦೦ ಗ್ಯಾಲನ್ [illegible]. ೮೮-೮೯ನೇ ಸಾಲಿನಲ್ಲಿ ಖರ್ಚಾದ ಶರಾಬಿಗೆ ಮೊಕಾಬಲೆಮಾ ಡಲಾಗಿ ಈ ವರ್ಷ [illegible] ಸಾವಿರ ಗ್ಯಾಲನ್‌ಗಳು ಜಾಸ್ತಿಯಿಂದ ೬೯೬,೪೩೧ ಗ್ಯಾಲನ್‌ಗಳು ತ [illegible] ಖರ್ಚಾಯಿತು. ಈ ಜಾಸ್ತಿಯು ಈವರ್ಷದಲ್ಲಿ ಹೊಸದಾಗಿ ಚಿಲ್ಲರೆ ದುಕಾನ್‌ಗಳು ಸಾಗುವಳಿಗೆ ಬಂದದ್ದರಿಂದ ಉಂಟಾದ್ದಲ್ಲ. ಬಹು [illegible] ಸಾವಿರ ಗ್ಯಾಲನ್ ಜಾಸ್ತಿ ಖರ್ಚ ಕಾಣುವ ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿನ [illegible] ಹಳ್ಳಿ, ಶಿವಮೊಗ್ಗಾ, ಸಾಗರ, ಶಿಕಾರಿಪುರ, [illegible] ಹೊನ್ನಾಳಿ ಈ ತಾಲ್ಲೂಕುಗಳಲ್ಲಿ ಮು ಖ್ಯವಾಗಿ ಜಾಸ್ತಿ ಕಂಡುಬಂದಿರುತ್ತೆ. ಆ ತಾಲ್ಲೂ ಕುಗಳಲ್ಲಿನ ಕಡೆಗೆ ನಮೂದಿಸಿದ ಹೊನ್ನಾಳಿ ತಾಲ್ಲೂಕು [illegible] ತಾಲ್ಲೂಕಿನಲ್ಲೂ ಚಿಲ್ಲರೆ ದುಕಾನ್‌ಗಳ ಸಂಖ್ಯೆ [illegible] ಬೆಂಗ ಳೂರು ಡಿಸ್ಟ್ರಿಕ್ಟಿನಲ್ಲಿ ಹೊಸದಾಗಿ ಯಾವ ಚಿಲ್ಲರೆ ದುಕಾನ್‌ಗಳೂ ಸಾಗುವಳಿಗೆ ಬಾರದೇಯಿದ್ದಾಗ್ಯೂ ಖರ್ಚಾದ ಶರಾಬಿನಲ್ಲಿ ೧೭೩೦ ಗ್ಯಾಲನ್ ಜಾಸ್ತಿ ಕಂಡುಬಂತು. [illegible] ಡಿಸ್ಟ್ರಿಕ್ಟಿನಲ್ಲಿ [illegible] ನಲ್ಲಿ [illegible] ಸಂಖ್ಯೆ [illegible] ಕಡಮೆಯಾದ್ದಾಗ್ಯೂ ೩೪೭೫ ಗ್ಯಾಲನ್ ಜಾ ಸ್ತಿ ಖರ್ಚ ಕಂಡುಬಂದಿದೆ. ಮೈಸೂರು ಹಾ ಸನ ಡಿಸ್ಟ್ರಿಕ್ಟುಗಳಲ್ಲಿ ದುಕಾನ್‌ಗಳ ಸಂಖ್ಯೆ ಕ ಮ್ಮಿಯಾಗಿಯೂ ಶರಾಬು ಖರ್ಚಿನಲ್ಲಿ ಮೈಸೂ ರು ಡಿಸ್ಟ್ರಿಕ್ಟಿಗೆ ೧೪೦೦ ಗ್ಯಾಲನ್, ಹಾಸನ ಡಿ ಸ್ಟ್ರಿಕ್ಟಿಗೆ ೩,೦೦೦ ಗ್ಯಾಲನ್‌ಗಳು ಈಮೇರಿಗೆ ಜಾ ಸ್ತಿ ಖರ್ಚಾಗಿದೆ. ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ರೈಲ್ವೆ ಕಾಮಗಾರಿ ಕೆಲಸಗಳು ನಿಂತುಹೋದ [illegible] ಸುಮಾರು ೧,೪೦೦ ಗ್ಯಾಲನ್ ಕಮ್ಮಿಯಾ ಯಿತು. ತುಮಕೂರು ಡಿಸ್ಟ್ರಿಕ್ಟಿನಲ್ಲಿ ಬಹಳ [illegible] ೩೦೦ ಗ್ಯಾಲನ್ ಜಾಸ್ತಿ ಕಂಡುಬ ತು. ಕೋಲಾರದಲ್ಲಿ ಅಭಿವೃದ್ಧಿ [illegible] ವ ಬಂಗಾರದ ಗನಿ [illegible] ನಿಮಿತ್ತ [illegible] ವಾಗಿ ೬೩೦೦ ಗ್ಯಾಲನ್ ಜಾಸ್ತಿ [illegible] ದುಂಟು [illegible] ಶರಾಬ ಜಾಸ್ತಿಯಾಗಿ [illegible] ಸಪ್ಲೈ [illegible] ಮತ್ತು ಕಾ ಮಗಾರಿಗಳ [illegible] ಕಾರಣ [illegible] ಸಾಗುವಳಿ [illegible] ಕಾರಣ [illegible] ವಾಗಿದೆ.

(ಇದರಿಂದ ಮುಂದೆ [illegible])

SIGN OF MEN.

ಪ್ರತ್ಯಂತರಸಂಗ್ರಹ

[illegible] ಲಂಡನ್ ಪಟ್ಟಣದಲ್ಲಿ [illegible] ಗಳ [illegible] ಮಾಡಿದಾರೆ

ಅಲಹಾಬಾದಿನಲ್ಲಿ [illegible] (ಹಿಂ ದೂಸ್ತಾನ) [illegible] ಸ್ಥಾಪನೆಯಾಗಿರುತ್ತದೆ [illegible] ವಿಧವೆಯರಿಗೆ [illegible] ಅವರಿಗೆ ಲಗ್ನ ಸಹ ಮಾಡು [illegible]

[illegible] ೫,೦೦೦ ಜನ [illegible] ಮದ್ಯವನ್ನು ಸೇವಿಸುವದಿಲ್ಲವೆಂದು ಪ್ರತಿಜ್ಞೆ ಮಾಡಿಕೊಂಡಿರುತ್ತಾರೆ

ಉತ್ತರದೇಶದ ಒಬ್ಬನೊಬ್ಬ ಉ[illegible] ಯಾನು [illegible] ಆ ತಿದ್ದನೆಂದು [illegible] ಸಂಖ್ಯೆ [illegible] ಕಿ ತೋಳಿಂದ [illegible] ಸ್ವಲ್ಪ ದಿ ವ್ಯಾದ [illegible] ಗಳು [illegible] ಲದನೆಂದು [illegible] ಈಗ ಆ ತನ [illegible] ಉದ್ಯಾನ [illegible] ಮಾಡಿರುತ್ತಾನೆ

ಮುಜಾಫರಪುರದಲ್ಲಿ ದುರ್ಭಿಕ್ಷದಿಂದ ಬಡವರು ಬಹು ಕಷ್ಟಪಡುತ್ತಿದ್ದು ಸಾವಿರಾರು ಜನರು ಸಾಯುತ್ತಿರುವುದರಿಂದ ಅನೇಕ ಮನೆಗಳು ನಿ ರ್ಜನವಾಗುತ್ತಿವೆ ಬಡವರ ಸ್ಥಿತಿಯನ್ನು [illegible] ವರಿಕ್ಕಾಗುವದಿಲ್ಲವಾದ್ದರಿಂದ ಸರ್ಕಾರದವರು ಇವರಿಗೆ ಸಹಾಯ ಮಾಡುವದಕ್ಕಾಗಿ ಪ್ರಯ ತ್ನಿಸುವಂತೆ ಕೇಳುತ್ತೇವೆ.

ಮಡಿಕೇರಿ [illegible] ಬರೆ ಯುತ್ತಾನೇನೆಂದರೆ—“ಈ ಸಂವತ್ಸರದ [illegible] ಕ್ಕಾಗಿ [illegible] ನಿಗೆ [illegible] ಯನ್ನು [illegible] ಗಳಲ್ಲಿ [illegible] ಇದ್ದ [illegible] ಜನರನ್ನು [illegible] ಅಂತ ಸ್ಥಿತಿಗೆ ಬರುತಿವೆ. ಈ ಗಾಡಿಗಳಲ್ಲಿ ಪ್ರ ಯಾಣ ಮಾಡುತ್ತಿದ್ದ ಜನರ ಸಂಕಟಗಳು [illegible] ಶ್ರೀಮನ್ ಮಹಾ ರಾಜಾ ಸರ್ಕಾರದವರು ತಮ್ಮ ರೈಲ್ವೆಯ [illegible] ದಿವಾನರನ್ನು [illegible] ದಕ್ಷಿಣ ಮಹಾರಾಷ್ಟ್ರ ಕಂ ಪೆನಿಯವರಿಗೆ ವಹಿಸುವಕಾಲದಲ್ಲಿ ಇವರು ಇಂಥಾ [illegible] ತಿಳಿದಿದ್ದರೆ? ಅಯ್ಯೋ! ಈ ಕಂಪೆನಿಯವರ [illegible] ದುರ್ವ್ಯವಹಾರ [illegible] ಪಶ್ಚಾತ್ತಾಪ [illegible]”—[illegible]

ಅಮೆರಿಕಾ ದೇಶದ [illegible] ಎಡಿಸನ್ ಎಂಬುವರು [illegible] ಕಂಡುಹಿಡಿದಿರುವ “ಫೋನೋಗ್ರಾಫ್” ಎಂಬ ಯಂತ್ರದಿಂದ ಪ್ರಜೆಗಳಿಗೆ ನಾನಾ ಬಾಷೆಗಳ ಲ್ಲಿ ಉಂಟಾಗುತ್ತಿರುವ ಉಪಕಾರವನ್ನು [illegible] ವ್ಯಕ್ತಪಡಿಸಲು ಸ್ವಲ್ಪವೇ [illegible] ಈ ಚೆಗೆ [illegible] ಯಲ್ಲಿ ಒಬ್ಬನು [illegible] ಮನ್ನು [illegible] ಅವಳನ್ನು [illegible] ಮಾಡಿಕೊ [illegible] ನಾನಾವಿಧವಾದ [illegible] ತಾನು [illegible] ಗಳಲ್ಲಿ [illegible] ವರಿಗೆ [illegible] ಎರಡನೆಯ [illegible] ತಿಳಿದು [illegible] ನ್ನು [illegible] ಚಿಕ [illegible] ತಾನು [illegible] ಮಾಡಿಕೊಳ್ಳುವ [illegible] ತಿರಸ್ಕರಿಸಿದನು [illegible] ಅವಳು [illegible] ನ್ಯಾಯಕ್ಕಾಗಿ [illegible] ವಿಮಳು, ಆದರೂ [illegible] ನು [illegible] ಬಹಳ [illegible] ಮನುಷ್ಯನ [illegible] ಫೋನೋಗ್ರಾಫ್ [illegible] ಆ [illegible] ಹಾಜರ್ ಪಡಿಸಿದನು

ತಾಂಜಾವೂರಿನೊಳಗಿನ [illegible] ಎಂಬ [illegible] ಸವಿನ [illegible] ಸ್ಟೇಷನ್ [illegible] ಒಬ್ಬ [illegible] ಅವನು [illegible] ಸ್ಟೇಷನಿನಲ್ಲಿ [illegible] ಬಿಟ್ಟು ತಾನು [illegible] ನೋಡಿ [illegible] ಸ್ಟೇಷನ್ [illegible] ಎಲ್ಲಜನರು ಅವಳ [illegible] ಅವಳ [illegible] ಮಾಡಿದರಿಂದ [illegible] ಸಂಗತಿ [illegible] ನು ತನ್ನ [illegible] ಬಲಾತ್ಕಾರ ನಡಿಸಿದ ಎಲ್ಲ ಜನರನ್ನು [illegible] ವಿಚಾರಣೆ [illegible] ಆದರೆ [illegible] ಅವರು [illegible] ಬೇಡ [illegible] ಅದಕ್ಕೆ [illegible] ಅವರ [illegible] ಸಂಗತಿ [illegible] ಅವನು [illegible] ಆಗಿ ಅವರಸಂಗಡ [illegible] ಆಗಮೆ [illegible] ದಿಯು [illegible] ಕಳೆದುಕೊಂಡು [illegible] ಪರಿಸ್ಥಿತಿಯನ್ನು [illegible] ಸಂಗತಿಗಳಿಂದಲೂ ತಿಳಿಯಬರುತಿದೆ—[illegible]

EXTRACTS

ಲೋಕದಲ್ಲಿ [illegible] ದ [illegible] ಗಳನ್ನು ತಿಳಿದ್ದ ರು [illegible] ಎಂಬ ಮಾತಿಗೆ ಎಷ್ಟು [illegible] ಸಿ ಬರಿಯುತ್ತಿದ್ದರು ನೀವು ಇದಕ್ಕೆ [illegible] ಬರೆಯುತ್ತಿದ್ದರು. ಚಿಮುತ್ತಾ [illegible] ತೋರ್ಪಡಿಸಲು [illegible] [illegible] ಕೆಂಪು [illegible] ಸುವ [illegible] ಸಹ ಬರೆಯುತ್ತಿದ್ದರು. ಈ ವರೆಗೂ ಈಜಿಪ್ಟ ದೇಶದಲ್ಲಿ [illegible] ಕಾಣಬರುವದೆ ಮತ್ತು [illegible] ನಾಗರಿಕರಾದ [illegible] ಜನರಲ್ಲಿ ಕೂಡ [illegible] ಇದು ಬಹು ಗೌರವದ [illegible] ಸಮುದಾ [illegible] ಕ್ರಮವಾಗಿ ರೂಪಕ್ಕೆ ಬಂತು. ಮೊದ ಲು [illegible] ಗಳನ್ನು ಕಂಡು ಹಿಡಿದವರು [illegible] ಮುದಲ್ಲಿರುವ “[illegible]” ಎಂಬುವರು. ಇವರ ಲಿಪಿ ಯಿಂದ [illegible] ಲಿಪಿಗಳು ಉತ್ಪನ್ನ ವಾದವು [illegible] ಯವರ ಲಿಪಿಯಲ್ಲಿ [illegible] ಇತರ ದೇಶದ ಜನ [illegible] ಕೆಲವು ಅಕ್ಷರಗ ಳನ್ನು [illegible] ಕೊಂಡರು. ನಮ್ಮ ಹಿಂದು [illegible] ಪದ್ಯ [illegible] ಮುದ್ರಣ [illegible] ಎಂಬುವ [illegible] ಬರೆವ [illegible] ತಿಳಿಯಬರುವದೇನಂದರೆ, [illegible] ವಾಗಿ [illegible] ದ [illegible] ಮುಲ್ಲರ್ [illegible] ಅವರ [illegible] ಹೋಗಿ [illegible] ಪ್ರಾಚೀನ [illegible] ಕಾಲದಲ್ಲಿ [illegible] ರಾಜಾ [illegible] ಗಳು [illegible] ಬರೆಯುವ [illegible] ಹೇಳುವರು. [illegible] ಅವರ [illegible] ಅಭಿಪ್ರಾಯ [illegible] ದೇಶದಲ್ಲಿದ್ದಂತೆ [illegible] ಶೋಕನ ಕಾಲದಲ್ಲಿ [illegible] ಶಿಲಾಶಾಸನಗಳು [illegible] ಭಾಗದಿಂದ [illegible] ಶಿಲಾಶಾ ಸನಗಳು [illegible] ಈ ಲಿಪಿಯನ್ನು [illegible] [ಪಾಳಿ] [ಯವನಾನಿ] [illegible] ಮುಲ್ಲರ್ [illegible] ಈ [illegible] ಸಮ ಬುತ್ತಾರೆ. [illegible] ನದ್ದು ಕ್ರಿಸ್ತು ಹುಟ್ಟಿದ [illegible] ಶತಾಬ್ದದಲ್ಲಿ [illegible] ನವರು (ಕನಿಂಗಹ್ಯಾಂ) ಎಂಬವರು ಅಭಿಪ್ರಾಯ ಪಡುತ್ತಾರೆ ಅದ್ದರಿಂದ ಅಶೋಕನ ಕಾಲದಲ್ಲಿ [illegible] ಬಲದಿಂದ ಎಡಕ್ಕೆ ಬರೆಯುವ [illegible] ದೇಶದಲ್ಲಿದ್ದ [illegible] ಮುಲ್ಲರ್ [illegible] ಹೇಳುತ್ತಾರೆ. ಆದರೆ [illegible] ವಿನಾಯತಿ [illegible] ಭಾಷೆಯನ್ನು ಕುರಿತು ಮಾಡುತ್ತಾರೆ. [illegible] ಪಾಶ್ಚಾತ್ಯ [illegible] ಅವರ [illegible] ವೀರ [illegible] ವೆಂದು [illegible] ಪ್ರಸಾರ [illegible] ಸಮುದ್ರದ [illegible] ಸಿಸುತ್ತಾರೆ [illegible] ಮುಂದೆ [illegible] ತಿಳಿಸುತಿದೆ.

BANGALORE.—Printed and published at the Karnataka Press, No 114, Srinivasa Mandir Road, [illegible]—1890

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XVII | BANGALORE—MONDAY, NOVEMBER 17, 1890 | No. 46.

ಸಂಪುಟ ೧೭ | ಬೆಂಗಳೂರು—ಸರ್ ೧೮೯೦ನೇ ಇಸವಿ ನವಂಬರ್ ೧೭ನೇ ತಾರೀಖು ಸೋಮವಾರ. | ಸಂಚಿಕೆ ೪೬.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಡಾಕ್ ಸಹ್ತಿ	ಸ್ವಸ್ಥಳದವರಿಗೆ ಪಾವತಿಸಿದರೆ	ಪರಸ್ಥಳದವರಿಗೆ ಪಾವತಿಸದಿದ್ದರೆ
ಮುಂಗಡ ವರುಷಕ್ಕೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡ ವರುಷಕ್ಕೆ	4—0—0	5—0—0
ತರುವಾಯ ,,	5—0—0	6—0—0

[illegible]

ಪ್ರಕಟನೆಯ ರಿವಾಜ್.

[illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

[illegible]

ಟಿ. ವಿ. ವೆಂಕಟಾಚಾರ್,

ಬೆಂಗಳೂರು, ಅಸ್ಪತ್ರೆ ರೋಡ್ ಪೇಟೆ, 41ನೇ ನಂ ಮನೆ.

ADVERTISEMENTS.

ನೋಟೀಸ್.

ಅದ್ಭುತವಾದ ಒಂದು ಔಷಧವು.

[illegible]

Sole Agents for India

NAYLOR, SONS, GRIMES & CO.,

Wholesale Depot, 5 Clive Street, Calcutta.

[illegible]

ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ಬಿಕರಿಗೇ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

	ಪೋಸ್ಟೇಜ್ ಸಹ ರೂ. ಆ. ಪೈ
ಸಟೀಕಾ ವೈದ್ಯಸಾರ ಸಂಗ್ರಹ ...	೫ ೦ ೦
,, ಶಿವಗೀತೆ ...	೧ ೧ ೦
,, ಶಿವಾನಂದಲಹರಿ	೦ ೪ ೬
,, ಶಾರದಾಮೃತ	೧ ೨ ೦
,, ಮುಕುಂದದರ್ಪಣ ..	೦ ೧೨ ೦
,, ಬಾಲರಾಮಾಯಣ ...	೦ ೮ ೦
,, ಗೋಪಿಕಾ ಗೀತೆ ...	೦ ೧ ೬
,, ಚಾಣಕ್ಯನೀತಿ (ಸುಭಾಷಿತ)	೦ ೬ ೦
ವಿಷ್ಣುಸಹಸ್ರನಾಮ ಪತ್ರಿಕೆ ...	೦ ೫ ೦
ಸೂರ್ಯಸಹಸ್ರನಾಮ ...	೦ ೩ ೦
ಕೃಷ್ಣಕರ್ಣಾಮೃತ ...	೦ ೨ ೬
ತ್ರಿಕಾಂಡ ಅಮರ ಮೂಲ ...	೦ ೨ ೬
೧ ಕಾಂಡ ...	೦ ೧ ೦

ಕನ್ನಡ ಗ್ರಂಥಗಳು.

ಜೈಮಿನಿ ಭಾರತ ಪ್ರತಿ	೩ ೦ ೦
[illegible] ...	೧ ೮ ೦
[illegible] ..	೦ ೪ ೦
[illegible]	೦ ೪ ೦
[illegible]	೦ ೪ ೦
[illegible]	೦ ೨ ೬
[illegible]	೦ ೨ ೬
[illegible] ..	೦ ೩ ೦
[illegible]	೦ ೨ ೦
[illegible]	೦ ೨ ೦
[illegible]	೦ ೨ ೬
[illegible]	೧ ೦ ೦
[illegible]	೦ ೧೨ ೦

[illegible]

ನೋಟೀಸ್.

ಮೈಸೂರು ಮಹಾರಾಜರವರ ಅರಳೇ ಯಂತ್ರದ ಕಾರ್ಖಾನೆ.

ನೋಟೀಸ್.

[illegible]

ನೋಟೀಸ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ—

[illegible]

ಹುಕುಂ.

[illegible]

John Evans, Colonel,

Superintendent, Remount Depot.

ರಿಮೌಂಟ್ ಡಿಪೋ, ಹೊಸೂರು.
೩೦ನೇ ಅಕ್ಟೋಬರ್ ೧೮೯೦.

ಇಷ್ತಿಹಾರ್.

[illegible]

1890ನೇ ಇಸವಿ [illegible] ನಂಬರ್ 119

[illegible]

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ—

[illegible]

೧೮೯೦ನೇ ಇಸವಿ ನವಂಬರ್ ೨೪ನೇ ತಾರೀಖ್ ಮೊಕರರ್ ಮಾಡಿರುವದರಿಂದ ಇದಕ್ಕೆ ತಕರಾರದಾರ್ರುಗಳೆಲ್ಲರು ತಾವೇ ಆಗಲಿ, ತಮ್ಮಗಳ ಕಡೆ ಅಡ್ವೋಕೇಟುಗಳೇ ಆಗಲಿ, ಮೇಲ್ಕಂಡ ತಾರೀಖ್ ಹಗಲು ೧೧ ಘಂಟೆಗೆ ಬೆಂಗಳೂರು ಮೊಕ್ಕಾಂನಲ್ಲಿ ಕೋರ್ಟ್ ರೂಬರೂಪ್ ಹಾಜರಾಗತಕ್ಕದ್ದು.

"By order"
C. SRIKANTESWARAIYAR,
Sheristadar.

7—11—90.

Bangalore City Municipality
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

೧೮೯೦ನೇ ಇಸವಿ ನವಂಬರ್ ೨೨ನೇ ತಾರೀಖ್ ಶನಿವಾರ ಪ್ರಾತಃಕಾಲ ೮ ಘಂಟೆಗೆ ಸಿಟಿ ಮ್ಯುನಿಸಿಪಲ್ ಬೋರ್ಡಿನವರು ಕೋಟೆಯಲ್ಲಿರುವ ತಮ್ಮ ಆಫೀಸಿನಲ್ಲಿ ಸಾಮಾನ್ಯ ಸಭೆ ಸೇರುವಾಗ ಅವರ ಆಲೋಚನೆಗೆ ಕೊಡಲ್ಪಡುವ ವಿಷಯಗಳೇನೆಂದರೆ:—

೧. ೧೮೯೦ನೇ ಇಸವಿ ಅಕ್ಟೋಬರ್ ತಿಂಗಳ ಬಾಬತು ಜಾಬಿತಾ ನಗದು ಜಮಾಖರ್ಚು ಲೆಕ್ಕ ಮತ್ತು ಮರಣಲೆಕ್ಕಗಳು.

೨. ೧೮೯೦ನೇ ಇಸವಿ ಮಾರ್ಚಿ ೩೧ನೆ ತಾರೀಖಿಗೆ ಕೈಬಿಡುವ ವರ್ಷದ ಬಾಬತು ಮ್ಯುನಿಸಿಪಲ್ ಲೆಕ್ಕಗಳನ್ನು ತನಿಖೆಯಿಂದ ಆಡಿಟರವರು ಮಾಡಿದ ರಿಪೋರ್ಟ್.

೩. ಹೊಸ ತರಗುಪೇಟೆ ಕಟ್ಟುವದಕ್ಕಾಗಿ ವಿಕ್ರಯಿಸಲ್ಪಟ್ಟ ನಿವೇಶನಗಳ ಪಟ್ಟಿ.

೪. ಮನೆಗಳ ಪಾಯಖಾನೆಗಳನ್ನು ಪ್ರತಿದಿನವೂ ಶುಚಿಮಾಡಿಸುವ ವಿಷಯದಲ್ಲಿ ಇದುವರೆವಿಗೆ ಆದ ಅಭಿವೃದ್ಧಿಯನ್ನು ನಮೂದಿಸಿ ಅದಕ್ಕಾಗಿ ಖಾಯಂ ಆಗಿ ಕೆಲವು ಶಿಬ್ಬಂದಿಗಳನ್ನು ಇಟ್ಟುಕೊಳ್ಳಬೇಕೆಂದು ಶಿಫಾರಸ್ ಮಾಡಿ ಮ್ಯುನಿಸಿಪಲ್ ವೈಸ್ ಪ್ರಸಿಡೆಂಟರವರು ಬರೆದ ಯಾದಾಸ್ತು.

೫. ಬೆಂಗಳೂರು ಪ್ರಜೆಗಳ ಅಪೇಕ್ಷಾನುಗುಣವಾಗಿ ಕೋಟೆ ದಿನ್ನೆಯ ಪೂರ್ವಭಾಗದಲ್ಲಿ ನಾಟಕಶಾಲೆಯೊಂದನ್ನು ಕಟ್ಟಿಸುವದಕ್ಕೆ ಒಂದು ನಿವೇಶನವನ್ನು ಕೊಡಬೇಕೆಂದು ಶೇಷಯ್ಯಂಗಾರ್ರವರು ಬರೆದುಕೊಂಡ ಅರ್ಜಿ.

೬. ನೀಲಿ ವಗ್ಗೈರೆ ಬಣ್ಣ ಹಾಕತಕ್ಕ ಕೆಲಸವನ್ನು ಪೇಟೆಯಿಂದ ಅನುಕೂಲವಾದ ಬೇರೆಯೊಂದು ಸ್ಥಳಕ್ಕೆ ವರ್ಗಮಾಡಬೇಕೆಂಬದು.

೭. ಹೊಸ ತಿಗಳರಪೇಟೆಯಲ್ಲಿ ಮನೆ ಕಟ್ಟಿಸಿಕೊಳ್ಳುವದಕ್ಕಾಗಿ ಒಂದು ನಿವೇಶನಬೇಕೆಂದು ಮೆ॥ ಬಿ. ಕುಪ್ಪಸ್ವಾಮಿನಾಯಡರವರು ಬರೆದುಕೊಂಡ ಅರ್ಜಿ.

೮. ಶ್ರೀನಿವಾಸಮಂದಿರದ ಲೈಬ್ರರಿಗೆ ಸಹಾಯವಾಗಿ ೫೦ ರೂಪಾಯಿಗಳು ಕೊಡಬೇಕೆಂದು ಮೆ॥ ಎ. ಗೋಪಾಲಾಚಾರ್ಲುರವರು, ೧೮೯೦ನೇ ಇಸವಿ ಸೆಪ್ಟೆಂಬರ್ ೩ನೇ ತಾರೀಖಿನಲ್ಲಿ ಬರೆದುಕೊಂಡ ಅರ್ಜಿ.

ನಿಲ್ಲಿಸಲ್ಪಟ್ಟ ವಿಷಯಗಳು.

೯. ಹೊಸ ಅಗ್ರಹಾರದ ಕೆರೆಯಬಳಿಯು ಇರುವ ಚಿಕ್ಕರಾಯನಕೆರೆಯಬಳಿಯಲ್ಲಿರುವ ವೃಕ್ಷಗಳಿಂ ಏರ್ಪಡಿಸಿ ತಂಬಳ ಶಾಮಾರ್‌ನಿಂದ ಕೆಂಗೇರಿಮಾರ್ಗಕ್ಕೆ ಸೇರುವಂತೆ ಒಂದು ಹೊಸ ರಸ್ತೆಯನ್ನು ಹಾಕಿಸಬೇಕಾದ ವಿಷಯ ಮತ್ತು ವೈಸ್ ಪ್ರಸಿಡೆಂಟರ ಯಾದಾಸ್ತು.

೧೦. ಮೆ॥ ಅಪ್ಪಾವಚೆಟ್ಟಿರವರ ಕಾರ್ಖಾನೆಗೆ ಕೊಟ್ಟಿರುವ ಜಮೀನ್ ನೇರಿ ಕೆಮ್ಮಣ್ಣುಗುಂಡಿಯೆಂಬ ವೈಟ್ ಜಮೀನನ್ನು ಸರ್ವೆಮಾಡಿ ಅದಕ್ಕೆ ಕಟಕಟ ಹಾಕಿಸಿ ಆ ಭೂಮಿಯಾಗಿ ಉಳಿಸಿಕೊಳ್ಳಬೇಕಾದ ವಿಷಯ ಮತ್ತು ವೈಸ್ ಪ್ರಸಿಡೆಂಟರ ಯಾದಾಸ್ತು.

V. P. MADHAVA RAO,
President,
City Municipal Commission

ಕರ್ಣಾಟಕ ಪ್ರಕಾಶಿಕಾ.
THE KARNATAKA PRAKASIKA.

MONDAY, NOVEMBER 17, 1890.
೧೮೯೦ನೇ ನವಂಬರ್ ೧೭ನೇ ಸೋಮವಾರ.

REMOVAL OF PUBLIC OFFICES TO MYSORE.

ಈ ಪ್ರಾಂತದಲ್ಲಿ ಈಗ್ಯೆ ಚಿರಕಾಲದಿಂ ನಡೆಗೊಂಡಿರುವ ಹುಜೂರ್ ಇಲಾಖೆಗಳನ್ನು ಮೈಸೂರಿಗೆ ವರ್ಗಮಾಡುವ ವಿಷಯದಲ್ಲಿ ನಿಷ್ಕೃಷ್ಟವಾದ ಹುಕುಂ ಯಾವದೂ ಕೊಡಲ್ಪಡದಿದ್ದರೂ ಸರ್ಕಾರೀ ಅಂತರಂಗಗಳೆಲ್ಲ ಮೂಲಸ್ಥಾನವೆಂದು ಭಾವಿಸಲ್ಪಟ್ಟಿರುವ ಹಳದೇಶದ ಸ್ಪೆಕ್ಟೇಟರ್ ಪತ್ರಿಕೆಯು (ಮಾತ್ರ) ಒಂದೊಂದು ಇಲಾಖೆಯಾಗಿ ರವಾನಿಸಲಿಕ್ಕೆ ಸಿ ಆ ಬಗ್ಗೆ ಎಷ್ಟು ಕೇರ್‌ಟೇಕರ್ ಸೆಕ್ರೆಟರಿಯವರ ಆಫೀಸ್ಸನ್ನು ಮೊದಲು ಕಳುಹಿಸಲಿಕ್ಕೆ ಸಿದ್ಧವಿರುವ ಅವರ ಮಾತಿನ ಯಾಥಾರ್ಥ್ಯವನ್ನು ನಿಚಾರಿಸುವಲ್ಲಿ, ಸರ್ಕಾರೀಯವಾದ ಯಾವ ಯೋಚನೆಯೂ ನಡೆಯಲಿಲ್ಲವೆಂದಾಗಿ ತಿಳಿಯಬರು. ಇಲಾಖೆಗಳ ವರ್ಗದ ಕುರಿತು ಅನ್ಯರಿಗೆ ನೌಕರರಿಗಾಗಲಿ, ಇಲಾಖಾಮುಖ್ಯರಿಗಾಗಲಿ ಯಾವ ವಿಷಯವೂ ಅದ್ಯಾಪಿ ತಿಳಿದಂತೆ ಕಾಣಿಸಲಿಲ್ಲವು. ಫಲಾನೆ ಇಲಾಖೆಗಳು ಮೈಸೂರಿಗೆ ಹೋಗುವವೆಂತಲೂ ಫಲಾನೆಯವು ಇಲ್ಲೇ ನಿಲೆಗೊಂಡಿರುವವೆಂತಲೂ ನಿಶ್ಚಿತವಾಗಿ ತಿಳಿಯಬರಲಿಲ್ಲವು. ಮೈಸೂರಲ್ಲಿ ಜರುಗುತಲಿರುವಂತೆ ನಮಗೆ ತಿಳಿಯಬರುವ ಕೆಲವು ವಿಚಾರಗಳನ್ನು ಕೇಳಲಾಗಿ, ಒಂದುದಿನ ವಿಲ್ಲದಿದ್ದರು ಮತ್ತೊಂದು ದಿನವಾದರೂ ಪಬ್ಲಿಕ್ ಆಫೀಸ್‍ಗಳೆಲ್ಲ ಮುಖ್ಯವಾದವೆಲ್ಲವು ಮೈಸೂರಿಗೆ ಸಾಗಿಸಲ್ಪಡಬಹುದೆಂದೂಹಿಸಬೇಕಾಗಿದೆ. ಈಗ್ಯೆ ೫೦ ವರುಷಗಳ ಕಾಲದಮೊದಲು ರಾಜ್ಯಭಾರಕ್ಕೆ ಮುಖ್ಯಸ್ಥಾನವಾಗಿರುವ ಈ ಬೆಂಗಳೂರು ಪಟ್ಟಣವು ರಾಜ್ಯಾಭರಣಕ್ಕೆ ಮಧ್ಯನಾಯಕಮಣಿಯಂತೆ ಸಕಲ ವಿಷಯದಲ್ಲಿಯೂ ಶ್ರೇಷ್ಠವೆನ್ನಿಸಿಕೊಂಡು ಅನ್ಯಾಪೇಕ್ಷೆಗೆ ವಿಷಯವಾಗಿರುವದರಿಂದ ಇದಕ್ಕೆ ಅಲಂಕಾರ ಪ್ರಾಯಗಳಾಗಿಯೂ ಪ್ರಾಶಸ್ತ್ಯ ನಿಮಿತ್ತಕಗಳಾಗಿಯೂ ಇರುವ ಸರ್ಕಾರ್ ಇಲಾಖೆಗಳನ್ನು ಇಲ್ಲಿಂದ ನಿವೃತ್ತಿಮಾಡುವದನ್ನು ಕೇವಲ ಅಚಾತುರ್ಯವೆಂಬದಾಗಿ ಬುಸ್ತುರಾದವರೊಬ್ಬರೂ ಹೇಳದಿರಲಾರರು. ಮುಖ್ಯವಾಗಿ ಜಿವಾಸರವರ ಆಸಿಸ್ಟೆ, ಚೀಫ್ ಕೋರ್ಟ್ ಖಜಾನೆಯು ಇಲ್ಲಿಂದ ಸಾಗಿದ ಮೇಲೆ ಈ ನಗರಾಲಂಕಾರವು ಮತಿಭಾರ್ಯಾಲಂಕಾರದಂತಿರುವದೆಂಬವರಲ್ಲೀನೂ ಸಂಶಯವಿಲ್ಲವು. ಅದು ಹ್ಯಾಗೆಂದರೆ, ಪತಿಯಾದವನು ಯಾವೊಬ್ಬನನ್ನಿಸಿಕೊಂಡಿದ್ದಾಗ್ಯೂ ಜೀವಿತನಾಗಿರುವದರಿಂದ ಅವನ ಭಾರ್ಯೆಗೆ ಹ್ಯಾಗೆ ವೈಧವ್ಯವುಂಟಾಗದೆಯೂ ಪರುಷ ದೌತ್ಯಕಳೆಸುಖಾನುಭವಕ್ಕೆ ಅವಕಾಶವಿಲ್ಲವೆಯೂ ಆ ಕೆಯ ಸೌಂದರ್ಯ ಶೃಂಗಾರಾದಿಗಳು ಹ್ಯಾಗೆನಿಷ್ಪ್ರಯೋಜಕಗಳೋ ಬಹು ಸ್ಟ್ ಈ ಪೂರಿಗುಂಟಾಗಿರುವ ಶೃಂಗಾರಾದಿ ಪ್ರಾಶಸ್ತ್ಯಗಳೆಲ್ಲವು ಬಳಕ ವ್ಯರ್ಥವೆನ್ನಿಸಿಕೊಳ್ಳದೆ ಹೋಗಲಾರದು. ಈ ಇಲಾಖೆಗಳನ್ನು ಮೈಸೂರಿಗೆ ಕಳುಹಿಸುವದಕ್ಕೆ ಗೂಢಗಳಾದ ಪ್ರಬಲ ರಾಜಕೀಯೋದ್ದೇಶಗಳ್ಯಾವೋ ಇಂದುಇಲ್ಲದಿರಲಾರದು. ಅದು ಹಾಗಿರಲಿ; ಅದಗಿದ್ದಾಗ್ಯೂ ಯಾವಾಗಲಾದರೊಂದು ಕಾಲದಲ್ಲಿ ಸ್ವತಃಯೇವ ಅಭಿವ್ಯಕ್ತವಾಗದೆಹೋಗಲಾರದು. ಪರಿಶುದ್ಧತೆಯಲ್ಲಾಗಲಿ, ಆರೋಗ್ಯದೊಳಾಗಲಿ, ಜಲವಸತಿಯಲ್ಲಾಗಲಿ, ಇತರ ಸುಖೋಲ್ಯದೊಳಾಗಲಿ ಈ ಪುರಿಗಿಂತ ಮೈಸೂರು ಶ್ರೇಷ್ಠವೆನ್ನಿಸಿಕೊಳ್ಳಲಾರದು. ಇಲ್ಲಿನ ನೌಕರಿಯಲ್ಲಿರುವ ಒಬ್ಬರಿಬ್ಬರ ಅಭಿಪ್ರಾಯಗಳು ವಿಚಾರಿಸಲಾಗಿ ಮೈಸೂರಿಗಿಂತ ಈ ಪೂರು ಆರೋಗ್ಯಕರವಾಗಿರುವದರಿಂದ ತಾವು ಇಲ್ಲಿಂದ ಕದಲಲಾರವೆಂದು ತಿಳಿಸಿದಂತೆ ಕೇಳುತ್ತೇವೆ. ಬರುತಬರುತ ಅವರೂ ಒಬ್ಬೊಬ್ಬರಾಗಿ ಕೆಲಸದಿಂದ ನಿವೃತ್ತರಾಗುತ್ತ, ಅವರ ಪ್ರತ್ಯಾಮ್ನಾಯವಾಗಿ ಮೊಕರರಾಗತಕ್ಕ ನೇಟಿವ್‌ಗಳಿಗೆ ತಮ್ಮ ಅಭಿಪ್ರಾಯವನ್ನು ಬಹಿರಂಗವಾಗಿ ತಿಳಿಸುವಷ್ಟು ಮನೋದಾರ್ಢ್ಯವೂ, ವಿವೇಚನೆಯೂ ಸಾಲದ್ದರಿಂದ, ಅವರೂ ಎಲ್ಲಿಗೆ ಸೆಳೆದರೆ ಅಲ್ಲಿಗೆಲ್ಲ ಹೋಗುವದಕ್ಕೆ ಸನ್ನದ್ಧರಾಗಿರುವವರಿಂದ ಇಲಾಖೆಗಳನ್ನು ಎಲ್ಲಿಗೆ ಬೇಕಾದರೂ ಸಾಗಿಸಬಹುದು. ಗಡ್ಡಲು ಕ್ರಮಕ್ರಮವಾಗಿ ಮತ್ತನಂ ಕಟ್ಟಿದಾಗ್ಯೂ ಅದು ನಿರಾಶ್ರಯವಾದಾಗ ಸರ್ಪಗಳಿಗೆ ಹ್ಯಾಗೆ ಆಶ್ರಯವಾಗುತದೆಯೋ ಅದೇ ರೀತಿ ಹಿತುವಳೇ ಪಕ್ಕದಾರಿಯೇ ಕಡೆಯಲ್ಲಿ ಪ್ರಬಲವಾದುದಾಗಿ ಪರ್ಯವಸಿಸುವದು. ಮುಖ್ಯವಾಗಿ ಪ್ರಸಕ್ತ ವಿಚಾರವನ್ನು ಯಾವವಿಧದಿಂದಾಲೋಚಿಸಿ ನೋಡಿದಾಗ್ಯೂ ಮಹಾರಾಜಾ ಸರ್ಕಾರಕ್ಕಾಗಲಿ ನೌಕರ್ರ್ಯಾನೇಟಿವ್‌ಗಾಗಲಿ, ಸ್ವಲ್ಪವೂ ಪ್ರಯೋಜನಕಾರಿಯಾಗಿ ಕಾಣಿಸಲಿಲ್ಲವು. ಇದರಿಂದ ಗವರ್ನಮೆಂಟರವರಿಗೆ ನಷ್ಟವೂ, ಸರ್ಕಾರ್ ನೌಕರರಿಗೆ ವ್ಯರ್ಥ ಕಷ್ಟವೂ ಪರಮಪ್ರಯೋಜನವೆಂದು ಭಾವಿಸಬೇಕಾಗಿದೆ.

Occasional Notes
ನೈಮಿತ್ತಿಕ ವಿಷಯನ್ಯಾಸ.

Scarcity of water.—ಕೊಯಿಂಬತ್ತೂರು, ಅನಂತಪುರ, ಕ್ರೋಳ್ಳೇಗಾಲ, ದಂಡು, ಪಕ್ಕದ ವೈಕಿ ಕೆಲವುಭಾಗ. ಇವುಗಳಲ್ಲೆಲ್ಲ ಜಲಾಭಾವದಿಂ ಪ್ರಜೆಗಳು ಬಹಳ ಶ್ರಮಕ್ಕೆ ಗುರಿಯಾಗಿರುವಂತೆ ತಿಳಿಯಬರುತಿದೆ.

The Indian National Congress.—ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಭಾಸದರನ್ನು ಕಲ್ಕತ್ತಾ ಟೌನ್ ಹಾಲಿನಲ್ಲಿ ನಡೆಸುವ ಆಲೋಚನೆತಪ್ಪಿ ಆಬಗ್ಯೆ ಏರ್ಪಟ್ಟಿರುವ ಕಮಿಟಿಯವರು ಅದಕ್ಕಾಗಿ ಒಂದು ಚಪ್ಪರವನ್ನು ಹಾಕಿಸ ತಕ್ಕದ್ದೆಂದು ನಿಶ್ಚಯಿಸಿರುತ್ತಾರೆ.

A report.—ಮಹಾರಾಜ್ಞೀಯವರ ಪೌತ್ರರಾದ ಪ್ರಿನ್ಸ್ ಆಲ್ಬರ್ಟ್ ವಿಕ್ಟರವರು ಕಳೆದ ವರ್ಷದ ಆಖೈರಿನಲ್ಲಿ ಈ ಪೂರಿಗೆ ದಯಮಾಡಿದ್ದರಷ್ಟೆ, ಸದರೀಯವರು ಈಚೆಗೆ ಷಾಹಜಾದೀ ಗರ್ವದಿಕರಾಗಿರುವಂತೆ ಒಂದುವಿಧ ಪ್ರವಾದವುಂಟಾಗಿದೆ.

The Supreme Legislative Council. ಇಂಡ್ಯಾ ರಾಜ್ಯದ ನ್ಯಾಯವಿಧಾಯಕ ಸಭೆಯಲ್ಲಿ ಮೆಂಬರ್‌ಗಳಾಗಿದ್ದ ಸೈಯದ್ ಅಮೀರ್ ಹುಸೇನ್ ಮತ್ತು ರಾಜಾ ಮರ್ಗ ಚರ್ಣಲಾಲ್ ಎಂಬವರ ಸ್ಥಾನಗಳಲ್ಲಿ ಸರ್ ರೋಮೇಶಚಂದ್ರಮಿತ್ತರ್ ಯವರೂ ಮತ್ತು ನವಾಬ್ ಅಸನುಲ್ಲಾ ಎಂಬವರೂ ಮೊಕರರ್ ಮಾಡಲ್ಪಟ್ಟಿರುತ್ತಾರೆ.

A payment sanctioned.—ಹೈದರಾಬಾದ್ ಸಂಸ್ಥಾನದ ಪ್ರಧಾನಮಂತ್ರಿಯವರಾಗಿದ್ದು ಕಾಲಗತಿಯಂ ಹೊಂದಿದ ಲೊರ್ಡ್ ಸಾಲಾರ್ ಜಂಗರವರ ಭಾರ್ಯೆಯವರಿಗೆ ಅವರ ಕುಟುಂಬ ಜೀವನಕ್ಕಿಂದ ಮಾಸೇಯಾನಾ ೫೦೦೦ ರೂಪಾಯಿಗಳು ಕೊಡುವಂತೆ ಘನನಂ ಪದದ ನಿಜಾಮರವರು ಹುಕುಂಮಾಡಿರುತ್ತಾರೆ.

The age question.—ಇಂಡ್ಯಾ ದೇಶದೊಳು ವೈದ್ಯ ಕಸಬ್ ಮಾಡುತಲಿರುವ ೫೫ ಮಂದಿ ಯೂರೋಪಿಯನ್ ಹೆಂಗಸರು ಸೇರಿ, ಹೆಂಗಸರು ಪುರುಷ ಸಂಗಕ್ಕೆ ಅರ್ಹರಾಗುವದಕ್ಕೆ ಹದಿನಾಲ್ಕು ವರ್ಷಗಳ ವಯಸ್ಸುಳ್ಳವರಾಗಿರಬೇಕೆಂಬ ವಿಧಿಯನ್ನೇರ್ಪಡಿಸಬೇಕೆಂದು ಪ್ರಾರ್ಥಿಸಿ ವೈಸ್ರಾಯಿಯವರಿಗೆ ಅರ್ಜಿಬರೆದುಕೊಂಡಿರುತ್ತಾರೆ.

Maharaja Dhulip singh.—ಧುಲೀಪ್ ಸಿಂಗ್ ಮಹಾರಾಜರವರು ಮರಳಿ ಪೇರಿಸ್ ಪಟ್ಟಣಕ್ಕೆ ವಾಪಸ್ ಹೋಗಿ ಸೇರಿದರು. ಹಿಂದೆ ಅವರಿಗೆ ಹಿತಚಿಂತಕರಾಗಿದ್ದ ಕೆಲ್ಕಂಡು, ಪರಂತು ಮಹಾರಾಜರವರು ರಷ್ಯದೇಶಕ್ಕೆ ಹೋಗಿ ಬಲಿದ್ದ ಕಾಲದೊಳು ಬರ್ಲಿನ್ ಪಟ್ಟಣದಲ್ಲಿ ಅವರ ಸ್ವಂತಮಾತುಗಳಿಂ ಕದ್ದವರಿಗೆ ಸಹಾಯಕರಾಗಿದ್ದ ಜನರು ಯಾರು ಬಂದಾಗ್ಯೂ ಅವರಿಗೆ ತಮ್ಮಲ್ಲಿ ಅವಕಾಶ ಕೊಡದೆ ಇರುತಲಿರುವದಲ್ಲದೆ, ಫ್ರೆಂಚ್ ದೇಶದ ವೃತ್ತಾಂತ ಪತ್ರಿಕಾ ಲೇಖಕರ್ರ ಅರಸರವರನ್ನು ನೋಡುವದಕ್ಕೆ ಹೋದ ಸಂದರ್ಭದಲ್ಲಿ ವಿಕ್ಟೋರಿಯಾ ಮಹಾರಾಜ್ಞೀಯವರ ವಿಷಯದಲ್ಲಿ ವಿಶೇಷ ಗೌರವದೊಡನೆ ಪ್ರಸ್ತಾಪಿಸಿದರಂತೆ.

A monster meeting.—ಇಂಡಿಯನ್ ಪೀನಲ್ ಕೋಡ್ ೩೭೫ನೇ ಸೆಕ್ಷನನ್ನು ತಿದ್ದುಪಡಿಮಾಡುವದರಲ್ಲುಂಟಾದ ಆವಶ್ಯಕತೆ ಮತ್ತು ಔಚಿತ್ಯಗಳುಗಳಂ ಕುರಿತು ಚರ್ಚಿಸುವದಕ್ಕಾಗಿ ಈ ತಿಂಗಳ ೧ನೇ ತಾರೀಖಿನಲ್ಲಿ ಸತಾರಾ ಪ್ರಜೆಗಳು ಒಂದು ದೊಡ್ಡ ಸಭೆ ಸೇರಿದರು. ಸಭ್ಯರಲ್ಲಿ ಅನೇಕರು ಕೇವಲ ಕೋಪೋದ್ರೇಕದೊಡನೆ ಪ್ರತ್ಯರ್ಥಿಗಳಾಗಿ ವಾದಿಸಿದರಾದಾಗ್ಯು ಸಭಾ ಸದಸ್ಯರ ಅತ್ಯಧಿಕ ಸಂಖ್ಯೆಯಲ್ಲ ಮರಿಂದ ಆ ರೀತಿ ತಿದ್ದುಪಡಿ ಮಾಡಿಸಬೇಕಾದ ಆವಶ್ಯಕತೆಯಿಲ್ಲವೆಂದು ತೀರ್ಮಾನಿಸಲ್ಪಟ್ಟು ಆ ಬಗ್ಯೆ ಇಂಡ್ಯಾಗವರ್ನಮೆಂಟಿಗೆ ಕಳುಹಿಸುವದಕ್ಕಾಗಿ ಒಂದು ಅರ್ಜಿ ತಯಾರ್ ಮಾಡಲ್ಪಟ್ಟಿತು.

LOCAL AND PROVINCIAL NEWS.
ಹಳದೇಶವು ಮತ್ತು ತಾಲ್ಲೂಕಿನ ವೃತ್ತಾಂತಗಳು

The City Municipal Vice-President. ಬೆಂಗಳೂರು ಸಿಟಿ ಮ್ಯುನಿಸಿಪಲ್ ವೈಸ್ ಪ್ರಸಿಡೆಂಟರಾದ ಮೆ॥ ಏ. ಎಸ್ ರಾಘವಾಚಾರ್ಯರವರು ಮೂರುತಿಂಗಳ ಪ್ರಿವಿಲೇಜ್ ರಜಾ ತೆಗೆದುಕೊಳ್ಳುವವರಾಗಿದಾರೆಂತಲೂ, ಅವರಕೆಲಸವನ್ನು ಈ ತಾಲ್ಲೂಕ್ ಅಮಲ್ದಾರ್ ಮೆ॥ ಕುಪ್ಪುಸ್ವಾಮಿನಾಯಡರವರು ತಮ್ಮ ಸ್ವಂತ ಕೆಲಸದೊಡನೆ ನೋಡುವರೆಂತಲೂ ಹಳದೇಶದ ಪತ್ರಿಕೆಗಳು ತಿಳಿಸುತಿವೆ.

The B. A. Examination.—ಈ ಸಂವತ್ಸರದ ಬಿ.ಎ. ಪರೀಕ್ಷೆಯ ಪೂರ್ವಭಾಗವು ಈ ತಿಂಗಳ ೨೦ನೇ ತಾರೀಖ್ ಗುರುವಾರದ ಮೊದಲು, ಶನಿವಾರದ ತನಕ ಈ ಪೂರು ಸೆಂಟ್ರಲ್ ಕಾಲೇಜಿನಲ್ಲಿ ಅದರ ಪ್ರಿನ್ಸಿಪಲ್‌ರಾದ ಮೆ॥ ಕುಕ್ ಮವರ ವಿಚಾರಣೆಯಲ್ಲಿ ಜರುಗುವದು. ಸುಮಾರು ೬೦ ಮಂದಿ ಉಮೇದುವಾರರು ಈ ಸೆಂಟ್ರಲ್ ಕಾಲೇಜಿನಲ್ಲಿ ಪರೀಕ್ಷಿಸಲ್ಪಡುವವರಾಗಿರೆಂದು ತಿಳಿಯಲಾದೆವು.

The weather.—ಕರದುದು ತೂಬಕವಾಗಿ ಛಳಿಯು ದಿನೇ ದಿನೆ ಅಧಿಕವಾಗುತ್ತ ಕೊರತೆ ಪ್ರಬಲಗುತಲಿದೆ. ಮಳೆಯು ಪ್ರಾಯಶಃ ಹಿಮ್ಮೆಟ್ಟಿದಂತೆಯೇ ಹೇಳಬಹುದು. ಈಚೆಗೆ ಅಲ್ಲಿಯಲ್ಲಿ ಬಿದ್ದ ಮಳೆಯಿಂದ ರಾಗಿಯು ತೆರೆ ಬೆತ್ತಿಕೊಂಡು ಪೈರುಗಳು ನೋಡಲಿಕ್ಕೆ ಬಹಳ ಚೆನ್ನಾಗಿರುವಂತೆ ಕೇಳುತ್ತೇವೆ. ಕಾರ್ತೀಕದ ಫಲಮಾತ್ರ ಈ ವರ್ಷ ಅನೇಕಕಡೆಗಳಲ್ಲಿ ನಷ್ಟವಾಗಿಯೇದಾಗ್ಯೂ ಸರ್ಕಾರ್ ಹುಲ್ಲುವಳ ಹೊಸ್ತಿಮಾತ್ರ ಪ್ರ್ಯಾಗುವದರೂ ಆಗದೆ ಹೋಗಲಾರದು.

Civil Engineering pupils.—ಮೈಸೂರಲ್ಲಿರತಕ್ಕ ವೆಸ್ಲಿಯನ್ ಮಿಷನ್ ಹೈಸ್ಕೂಲ್ ಅಸಿಸ್ಟೆಂಟ್ ಮ್ಯಾಸ್ಟರ್, ಮೆ॥ ಬಿ. ಸಿ. ಶ್ರೀನಿವಾಸಯ್ಯಂಗಾರ್ರೆಂಬವರಿಗೂ ಕೋಲಾರ್ ಮತ್ತು ಪಮುಕೂರ್ ನಿವಾಸಸ್ಥರಾದ ಮ ಡಿ. ನರಸಿಂಗ ರಾವ್, ಪುಟ್ಟಸ್ವಾಮಿಶೆಟ್ಟಿ ಯೆಂಬ ಇಬ್ಬರು ಗ್ರಾಡ್ಯುಯೆಟಿಗಳಿಗೂ ಪುನೆ ಸಿವಿಲ್ ಇಂಜನಿಯರಿಂಗ್ ಕಾಲೇಜಿನಲ್ಲಿ ಓದುವದಕ್ಕಾಗಿ ಮಾಹೇಯಾನಾ ೫೦ ರೂಪಾಯಿಗಳಪ್ರಕಾರ ವಿದ್ಯಾರ್ಥಿ ವೇತನವನ್ನು ಈ ಗವರನ್ಮೆಂಟನವರು ಮಂಜೂರ್ ಮಾಡಿದರೆಂದು ತಿಳಿಯಲಾದೆವು.

Highway robbery near Koppa.—ಈಚೆಗೆ ಹದಿನೈದು ದಿವಸಗಳ ಹಿಂದೆ ಒಬ್ಬ ವರ್ತಕನು ಸುಮಾರ್ ೧೦,೦೦೦ ರೂಪಾಯಿಗಳ ಕ್ರಯ ಬಾಳತಕ್ಕ ಮುತ್ತುಗಳನ್ನು ತೆಗೆದುಕೊಂಡು ವ್ಯಾಪಾರಾರ್ಥ ಕೊಪ್ಪದ ಮಾರ್ಗವಾಗಿ ಹೋಗುತಲಿರುವಾಗ್ಯೆ ಮಾರ್ಗದೊಳು ಕೆಲವರು ಬಂದು ಮೇಲೆ ಬಿದ್ದು ಹೊಡೆದು ಅವನಲ್ಲಿದ್ದವನ್ನೆಲ್ಲ ಅಪಹರಿಸಿಕೊಂಡು ಹೋದರೆಂದೂ

ಪೋಲೀಸಿನವರು ಗುಮಾನಿಯಮೇಲೆ ಇಬ್ಬರನ್ನು ದಸ್ತಗಿರಿ ಮಾಡಿದಾರೆಂತಲೂ, ನಿಜವಾದ ಕಳ್ಳರುಮಾತ್ರ ಇದ್ಯಾಪಿ ದೊರೆಯಲಿಲ್ಲವೆಂತ ಗೊತ್ತಾಗುಬರುತದೆ.

Rumoured official changes — ಮಲನಾಡು ಪ್ರಾಂತದಲ್ಲಿರುವ ಕಳವು ಅಡಿಕೆ ಮತ್ತು ಕಾಫಿ ತೋಟದವರು ಮಾಡುತಲಿರುವ ಫಿರ್ಯಾದಿಗಳನ್ನು ವಿಚಾರಿಸಿ ನಿರ್ಣಯಿಸುವದಕ್ಕಾಗಿ, ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಮಿ|| ವಿ. ಪಿ. ಮಾಧವರಾಯರವರನ್ನು ಗವರ್ನಮೆಂಟಿನವರು ನಿಯಮಿಸಿರುವದರಿಂದ ಅವರು ೩ ತಿಂಗಳ ಕಾಲ ಸ್ಪೆಷಿಯಲ್ ಡ್ಯೂಟಿ ಅವರ ಬೇರೆ ಜರೂರಿಯಾಗಿ ಕೆಲಸವನ್ನು ನೋಡತಕ್ಕ ಮಹಾರಾಜರವರ ಸರ್ಕ್ಯೂಟಿನೊಂದಿಗೆ ಹೋಗುವರೆಂತಲೂ, ಅವರ ಕೆಲಸವನ್ನು ಇಲ್ಲಿನ ಅಸಿಸ್ಟೆಂಟುಗಳಲ್ಲೊಬ್ಬರು ನೋಡುವರೆಂತಲೂ ತಿಳಿಯಬರುತದೆ. ಇದಲ್ಲದೆ ಇನ್ನೂ ಕೆಲವು ಇಂಗ್ಲಿಷ್ ಪತ್ರಿಕೆಗಳು ಮತ್ತು ಮನಸ್ವೀ ವೇತನಾತಿಗಳನ್ನೂ ವರ್ಗಾವರ್ಗಗಳನ್ನೂ ಮಾಡಿ ನೋಡುವ ವರ್ತಮಾನಗಳಿಂದ ಕುತೂಹಲವನ್ನುಂಟುಮಾಡುತಲಿವೆ.

Southern Mahratta Railway. — ಸದರ್ನ್ ಮಹಾರಾಷ್ಟ್ರ ರೈಲ್ವೇ ಕಂಪೆನಿಯ ಏಜಂಟ್ ಮತ್ತು ಚೀಫ್ ಇಂಜನಿಯರಾದ ಕರ್ನಲ್ ಲಿಂಡಸೆ ಯವರು ಕ್ಷಿಪ್ರದಲ್ಲಿ ಸರ್ಕೀಟಿನಿಂದ ವಾಪಸು ಇಂಗ್ಲೆಂಡಿಗೆ ಹೊರಡುವರೆಂತಲೂ, ಅವರ ಗೈರಹಾಜರೀ ಕಾಲದಲ್ಲಿ ಡೆಪ್ಯುಟಿ ಏಜಂಟ್ ಮಿ|| ಪಿ. ಎ. ಎಂಬವರು, ಚೀಫ್ ಇಂಜನಿಯರ್ ಕೆಲಸವನ್ನೂ, ಅದಲ್ಲದೆ ಮಿ|| ಸಿ. ಕ್ಯಾಂಬೆಲ್ ಎಂಬವರು ಏಜಂಟ್ ಕೆಲಸವನ್ನೂ ನೋಡುವರೆಂತಲೂ, ಇತರ ರೈಲ್ವೇ ಕಂಪೆನಿಗಳಲ್ಲಿರುವಂತೆ ಸದರೀ ಉದ್ಯೋಗಗಳು ಮುಂದೆ ಎರಡಾಗಿ ವಿಭಾಗಿಸಲ್ಪಟ್ಟು ಪ್ರತ್ಯೇಕವಾಗಿ ಇಬ್ಬರಿಗೆ ಕೊಡಲ್ಪಡುವವೆಂತಲೂ, ಇದುವರೆವಿಗೆ ವಿಶೇಷ ಜವಾಬ್ದಾರಿಯಿಂದ ಈ ಎರಡು ಕೆಲಸಗಳೂ ಕರ್ನಲ್ ಲಿಂಡಸೆ ಯವರಿಗೆ ಸೇರಿಸಿ ಕೊಡಲ್ಪಟ್ಟಿದ್ದವೆಂತಲೂ ತಿಳಿಯಬರುತದೆ.

A liberal donation — ನಮ್ಮ ಮೈಲಾಪೋರ್ ಬಾತ್ಮೀದಾರರು ತಿಳಿಸುತ್ತಾರೇನೆಂದರೆ — ಕೊಪ್ಪ ತಾ|| ತೀಸಿಗೆ ಪ್ರಾ|| ಗಣಪ್ಪಯ್ಯನಾಯಕರೆಂಬ ದೊಡ್ಡಮನುಷ್ಯರು ಮೈಸೂರು ದಸರಾ ಮಹೋತ್ಸವಕ್ಕೆ ದಯಮಾಡಿದ್ದರು. ಇವರು ಪ್ರಜಾ ಪ್ರತಿನಿಧಿ ಸಭೆಯ ಒಬ್ಬ ಮೆಂಬರು. ಇವರು ಜಗತ್ಪ್ರಸಿದ್ಧರಾದ ಮೈಲಕೋಟೆಗೆ ದಯಮಾಡಿ ಅಲ್ಲಿನ ಅರವಿದ್ಯಾ, ಪ್ರಕಾಶನಾರ್ಥ ಅಲ್ಲಿ ಸ್ಥಾಪಿಸಲ್ಪಟ್ಟಿರುವ "ಶ್ರೀ ಯದುಗಿರಿವರ್ಧಿನೀ ಸಭಾ" ಸಮಾಜಕ್ಕೆ ದಯಮಾಡಿ ಅಲ್ಲಿನ ಉದ್ದೇಶಗಳನ್ನು ವಿಚಾರಿಸಿ ತಾವು ಸದರೀ ಸಭೆಯ ಒಬ್ಬ ಲೈಫ್ ಮೆಂಬರಾಗಿರಬೇಕೆಂಬ ಇಚ್ಛೆಯಿಂದ ಒಂದು ನೂರು ರೂಪಾಯಿಗಳ ಸಹಾಯದ್ರವ್ಯವನ್ನು ಸದರೀ ಸಮಾಜದ ಶ್ರೇಯಸ್ಸಿನ ಕಾಮಗಾರಿಯ ಬಗ್ಗೆ ಅಲ್ಲಾ ಹಿದಾ ಇಪ್ಪತ್ತೈದು ರೂಪಾಯಿಗಳನ್ನು ಕೊಟ್ಟಿರುವದಾಗಿಯೂ ಸಹ ತಿಳಿಯಬರುತ್ತೆ. ದೇಶಾಭಿಮಾನಿಗಳಾದ ಈ ದೊಡ್ಡಮನುಷ್ಯರ ಉದಾರಭಾವಕ್ಕಾಗಿ ತುಂಬಾ ಸಂತೋಷಪಡುತ್ತೇವಲ್ಲದೆ ಲೋಕೋಪಕಾರಕವಾದ ಸದರೀ ಸಮಾಜಕ್ಕೆ ಈ ದೇಶೀಯರೆಲ್ಲರು ಇವರ ಹಾಗೆ ಸಹಾಯಮಾಡಿ ಯಶಸ್ಸಂಪಾದಿಸಬೇಕೆಂದು ಕೋರುತ್ತೇವೆ.

THE MYSORE GAZETTE
ಮೈಸೂರು ಗಜೆಟ್.

ಶ್ರೀಮನ್ ಮಹಾರಾಜರಾಜಾಸಾಹೇಬ್ ಒಡೆಯರವರ ಸರ್ಕೀಟಿನಿಂದ ಕಾಣೋಣವಾದ ಚಿಸ್ತಿನ ನಾನಾಗಳು

ಮೆಮೊ ನಂ ೪೬೮೪, ತಾ|| ೧೧ನೇ ನವಂಬರ್ ೧೮೯೦ — ಘನವನ್ನು ಹೊಂದಿದ ಶ್ರೀಮನ್ಮಹಾರಾಜ ರಾಜಾ ಸಾಹೇಬ್ ಬಹದ್ದೂರವರು ಮೈಸೂರು ಡಿಸ್ಟ್ರಿಕ್ಟು ಮಾರ್ಗವಾಗಿ ಹಾಸನ ಕಡೂರು ಪ್ರಾಂತಗಳಿಗೆ ದೇಶದ ಸ್ಥಿತಿ ಪರಿಶೀಲನಾರ್ಥ ಸವಾರಿ ಚಿತ್ತೈಸುವದರಿಂದ ಅವರ ಸಂಚಾರ ಕಾಲ ಕ್ರಮಗಳು ಸಕಲ ಜನಗಳ ತಿಳುವಳಿಕೆಯಬಗ್ಗೆ ಇದರಡಿಪ್ರಕಟಿಸಲ್ಪಟ್ಟಿರುತಿವೆ.—

೧೮೯೦ ನೇ ನವಂಬರ್

25ನೇ ಮಂಗಳವಾರ	ಬೆಳಿಗ್ಗೆ ಎಡತೊರೆ; ಸಾಯಂಕಾಲ ಹೊಳೇನರಸೀಪುರ
26ನೇ ಬುಧವಾರ	ನರಸೀಪುರದಲ್ಲಿ ಮೊಕ್ಕಾಂ
27ನೇ ಗುರುವಾರ	ಹಾಸನ
28ನೇ ಶುಕ್ರವಾರ, 29ನೇ ಶನಿವಾರ	ಮೊಕ್ಕಾಂ
30ನೇ ಭಾನುವಾರ	... ಸಕಲೇಶಪುರ

೧೮೯೦ನೇ ಡಿಸೆಂಬರ್

1ನೇ ಸೋಮವಾರ	ಮೊಕ್ಕಾಂ.
2ನೇ ಮಂಗಳವಾರ	ಮಾರನಹಳ್ಳಿ
3ನೇ ಬುಧವಾರದ ಲಾಗಾಯತು 7 ನೇ ತಾರೀಖು ಭಾನುವಾರದವರೆಗೆ	ಆನೆಹಿಡಿಸುವ ಸ್ಥಳಕ್ಕೆ ಕಾಫಿ ತೋಟದ ವರ್ತಕರಿಗೆ ಆಜ ವಗೈರೆ
8ನೇ ಸೋಮವಾರ	ಮೂಡಿಗೆರೆ
9ನೇ ಮಂಗಳವಾರ	ಮೊಕ್ಕಾಂ
10ನೇ ಬುಧವಾರ	ಕೊಟ್ಟಿಗೆಹಾರ
11ನೇ ಗುರುವಾರ	ಕೆರೆಕಟ್ಟೆ.
12ನೇ ಶುಕ್ರವಾರದ ಲಾಗಾಯತು 14ನೇ ತಾರೀಖು ಭಾನುವಾರದವರೆಗೆ	ಕೊಟ್ಟಿಗೆಹಾರದಿಂದ ಕಳಸಕ್ಕೆ ಮಾರ್ಗದಲ್ಲಿ ಮೊಕ್ಕಾಂಗಳು
15ನೇ ಸೋಮವಾರ	ಕಳಸದ ಮೊಕ್ಕಾಂ
16ನೇ ಮಂಗಳವಾರದ ಮೊದಲು 19ನೇ ಶುಕ್ರವಾರದವರೆಗೆ	ಕುದುರೆ ಮುಖಕ್ಕೆ ಮತ್ತು ಅಲ್ಲಿಂದ ಕಳಸಕ್ಕೆ ವಾಪಸ್
20ನೇ ಶನಿವಾರ	ಬಿಳೇ ಹೊನ್ನೂರು
21ನೇ ಭಾನುವಾರ	ಮೊಕ್ಕಾಂ
22ನೇ ಸೋಮವಾರ	ಬಾಳೆಹೊಳೆ
23ನೇ ಮಂಗಳವಾರ	ಮೊಕ್ಕಾಂ
24ನೇ ಬುಧವಾರ	ಆಲ್ದೂರು
25ನೇ ಗುರುವಾರ	.. ಮೊಕ್ಕಾಂ,
26ನೇ ಶುಕ್ರವಾರ	ಚಿಕ್ಕಮಗಳೂರು
27ನೇ ಶನಿವಾರ, 28ನೇ ಭಾನುವಾರ	ಮೊಕ್ಕಾಂ
29ನೇ ಸೋಮವಾರ	ಬೇಲೂರು
30ನೇ ಮಂಗಳವಾರ	ಮೊಕ್ಕಾಂ
31ನೇ ಬುಧವಾರ	ಹಾಸನ

೧೮೯೧ ನೇ ಜನವರಿ

1ನೇ ಗುರುವಾರ	ಮೊಕ್ಕಾಂ.
2ನೇ ಶುಕ್ರವಾರ	ಗಂಡಸಿ
3ನೇ ಶನಿವಾರ	ಮೊಕ್ಕಾಂ.
4ನೇ ಭಾನುವಾರ	ಅರಸೀಕೆರೆ
5ನೇ ಸೋಮವಾರ	ಕೋಲಾರ...
6ನೇ ಮಂಗಳವಾರ	.. ರಾತ್ರಿ ರೈಲು ಮೈಸೂರು.

೨. ಡಿಸ್ಟ್ರಿಕ್ಟು ಆಫೀಸರ್‌ಗಳು ಅವರವರ ಡಿಸ್ಟ್ರಿಕ್ಟುಗಳ ಸರಹದ್ದಿನಲ್ಲಿ ಶ್ರೀಮನ್ಮಹಾರಾಜರವರನ್ನು ಎದುರುಗೊಳ್ಳತಕ್ಕದ್ದೆಂದು ಅಪೇಕ್ಷಿಸಲ್ಪಟ್ಟಿರುತ್ತಾರೆ.

೩. ಪ್ರತಿ ಮುಕ್ಕಾಂನಲ್ಲಿಯೂ ಬೇಕಾಗಿರತಕ್ಕ ಗಾಡಿಗಳ ಮತ್ತು ಕೂಲಿಜನರ ಸಂಖ್ಯೆಗಳನ್ನೂ ಹುಗ್ಗಾಮಿಯಾದ ಸ್ಥಳ ಏರ್ಪಾಡುಗಳನ್ನೂ ಇವುಗಳಿಗಾಗಿ ಬೇಕಾದ ಸಾಮಾನುಗಳನ್ನೂ ಕುರಿತು ಪ್ರತ್ಯೇಕವಾಗಿ ತಿಳಿಸಲ್ಪಡುವದು.

೪. ಪ್ರಸಕ್ತ ಸಂಚಾರಕ್ಕಾಗಿ ಪ್ರಜೆಗಳಿಗೆ ಯಥೋಚಿತವಾದ ಶ್ರಮ, ಅವಶ್ಯಕತೆ, ಅಡಚಣೆಯು, ಉಂಟಾಗದಿರುವಬಗ್ಗೆ ಡಿಸ್ಟ್ರಿಕ್ಟು ಆಫೀಸರ್‌ಗಳು ಸಾಧ್ಯವಾದಷ್ಟು ವಿಶೇಷ ಎಚ್ಚರಿಕೆಯನ್ನು ವಹಿಸತಕ್ಕದ್ದೆಂದು ಅಪೇಕ್ಷಿಸಲ್ಪಟ್ಟಿರುತ್ತಾರೆ. ಆವಶ್ಯಕಗಳಾದ ಧಾನ್ಯ ವಗೈರೆ ಇತರ ಪದಾರ್ಥಗಳು ಕ್ಯಾಂಪ್ ಸೂಪರಿಂಟೆಂಡೆಂಟ್ ರಿಂದ ದೊಡ್ಡ ಮಾರ್ಕೆಟುಗಳಲ್ಲಿ ಖರೀದಿ ಮಾಡಲ್ಪಟ್ಟು ಕ್ಯಾಂಪ್ ಅಂಗಡಿಗಳಲ್ಲಿ ಮಾರತಕ್ಕ ಬಗ್ಗೆ ಸಂಗತಿ ತೆಗೆದುಕೊಳ್ಳುವದು ಹೋಗಲ್ಪಡುವವು. ಸ್ಥಳದಲ್ಲಿ ಆವಶ್ಯಕವಾಗಿರತಕ್ಕಂಥಾ ಪದಾರ್ಥಗಳು ಅಂದರೆ ಹಾಲು, ಹುಲ್ಲು, ಸೌದೆ, ವಗೈರೆಗಾಗಿ ಸ್ಥಳದ ಅಮಲ್ದಾರರಿಗೆ ಕ್ಯಾಂಪ್ ಸೂಪರಿಂಟೆಂಡೆಂಟರವರು ಸಾಕಾದ ವ್ಯವಧಾನ ದೊಡನೆ ಮುಂಚಿತವಾಗಿಯೇ ತಿಳಿಯಪಡಿಸುವರು. ಸೆರಬರಾಯಿ ಮಾಡತಕ್ಕಂಥಾ ಪದಾರ್ಥಗಳಗೆಲ್ಲ ಆಯಾ ಸ್ಥಳದಲ್ಲಿಯೇ ಕ್ಯಾಂಪ್ ಸೂಪರಿಂಟೆಂಡೆಂಟರವರು ಅವುಗಳ ಖರೀದಿ ಬೆಲೆಗನ್ನು ಪಾವತಿ ಮಾಡುವರಾಗಿ ಅಮಲ್ದಾರ್ ಯಾ ಇತರ ಸ್ಥಳದ ಮೇಲ್ಪಟ್ಟ ಅಧಿಕಾರಿಗಳು ಸದರೀ ಖರೀದಿ ಬೆಲೆಗಳು ಸರಿಯಾದ ಅಂದಾಜಿಗಳಿಗೆ ಹೊಂದಿ ಆಯಿತೇ ಎಂಬದನ್ನು ವಿಚಾರಿಸಿಕೊಳ್ಳತಕ್ಕದ್ದು.

೫. ಶ್ರೀಮನ್ಮಹಾರಾಜರವರನ್ನು ಬರಮಾಡಿಕೊಳ್ಳುವದಕ್ಕಾಗಿ ಚಪ್ಪರಗಳು ಬಾಣ ಬಿರುಸುಗಳು, ನೃತ್ಯಗೀತ ವಾದ್ಯ ವಗೈರೆಗಳ ಬಗ್ಯೆ ಯಾವವಿಧ ಖರ್ಚುಗಳೂ ಸ್ವಕೀಯ ಪ್ರೋಳಗಾಗದಿರುವಂತೆ ಜನಗಳನ್ನು ಪ್ರೇರಿಸುವ ವಿಷಯದಲ್ಲಿ ಡಿಸ್ಟ್ರಿಕ್ಟು ಆಫೀಸರ್‌ಗಳು ತಮ್ಮ ಯಾವತ್ಪ್ರಯತ್ನಗಳನ್ನೂ ಲೋಪವಿಲ್ಲದೆ ಮಾಡುವರೆಂದು ಶ್ರೀಮನ್ಮಹಾರಾಜರವರು ದೃಢವಾಗಿ ನಂಬಿರುತಾರೆ.

ತಾ|| ೧೩ ನೇ ನವಂಬರ್ ೧೮೯೦— ಇದರಡಿ ಕಂಡ ಪೋಲೀಸ್ ಅಸಿಸ್ಟೆಂಟ್ ಕಮಿಷನರ್‌ಗಳ ವರ್ಗಾವರ್ಗಗಳು ಮಂಜೂರ್ ಮಾಡಲ್ಪಟ್ಟಿರುತಿವೆ.

೧. ಮಿ|| ಜೆ ಜೆ ನಾರ್ತ್ ಯವರು ಪ್ರೊಬೆಷನರಿ ಸಬ್‌ಡಿವಿಜನ್‌ಗೆ ನಿಯಮಿಸಲ್ಪಟ್ಟಿರುತ್ತಾರೆ ಇವರು ಕೂಡ್ಲೆ ಹಾಸನ ಮೇಲೆಹೋಗಿ ಹಾಜರಾಗತಕ್ಕದ್ದು.

೨. ಮಿ|| ನಾರ್ತ್ ಯವರು ಕೆಲಸದಿಂದ ಬಿಡುಗಡೆಮಾಡಿದ ಕೂಡ್ಲೆ ಮಿ|| ವಿ ಎನ್. ಗೋಪಾಲಯ್ಯಂಗಾರ್ಯರವರು ಪ್ರೊಬೆಷನರಿ ಸಬ್‌ಡಿವಿಜನ್ನಿಂದ ಹಾಸನ ಡಿಸ್ಟ್ರಿಕ್ಟಿಗೆ ಹೋಗಿ ಹಾಜರಾಗತಕ್ಕದ್ದು.

೩. ಮಿ|| ರಾಘವಾಚಾರ್ಯರವರು ಕೆಲಸದಿಂದ ಬಿಡುಗಡೆ ಮಾಡಿದ ಕೂಡ್ಲೆ ಮಿ|| ಎ. ನರಸಿಂಹಯ್ಯಂಗಾರ್ಯರವರು ತುಮಕೂರು ಡಿಸ್ಟ್ರಿಕ್ಟಿನಿಂದ ಕೋಲಾರ ಡಿಸ್ಟ್ರಿಕ್ಟಿಗೆ ಹೋಗಿ ಹಾಜರಾಗತಕ್ಕದ್ದು.

೪. ಮಿ|| ಸಿ. ರಾಘವಾಚಾರ್ಯರವರು ಕೋಲಾರದಿಂದ ತುಮಕೂರಿಗೆ ಕೂಡ್ಲೆ ಹೋಗಿ ಹಾಜರಾಗತಕ್ಕದ್ದು.

[ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವ ಬಾತ್ಮೀದಾರರ ಬರಹಗಳಿಗೆಲ್ಲ ಪತ್ರಿಕೆಯ ಅಭಿಪ್ರಾಯಕ್ಕೆ ನಾವು ಜವಾಬ್ದಾರರಾಗುವುದಿಲ್ಲವು —ಎಡಿಟರ್ ಕ ಪ್ರ.]

CORRESPONDENCE

ಮ||ರಾ||ರಾ|| ಕರ್ನಾಟಕ ಪ್ರಕಾಶಿಕಾ ಎಡಿಟರವರ||ಗೆ

ಅಯ್ಯಾ,—ಇದರಕೆಳಗೆ ಕ್ರಮವಡಿಸುವ ಕೆಲವು ವಿಷಯಗಳನ್ನು ತಮ್ಮ ಪತ್ರಿಕೆಯಲ್ಲಿ ವಿವರಿಸಬೇಕಾಗಿ ಕೋರುತ್ತೇನೆ.

ಈ ತಿಂಗಳ ೩ ನೇ ಮಧ್ಯಾಹ್ನದ ಪತ್ರಿಕೆಯಲ್ಲಿ ಬ್ರಾಹ್ಮಣ ಮತಾಭಿಮಾನಿ ಬರೆದ ಲಿಖಿತಕ್ಕೆ ಉತ್ತರವಾಗಿ ತಿಳಸುತ್ತೇನೆ.

೧. ವೀರಮಾಹೇಶ್ವರರ ಕ್ರಿಯೆಯು ಬಹಳ ರಹಸ್ಯವಾದದ್ದು, ಮೋಕ್ಷವೆಂಬ ಪದವಿಗೆ ಕಾರಣವು ಇದರಿಂದ ಪ್ರಮಥರು, ಋಷಿಗಳು,ಮತ್ತೆಲ್ಲಾ ದೇವತೆಗಳೂ ವೀರಶೈವಾಚಾರವನ್ನು ಅನುಸರಿಸಿದ್ದಾರೆಂಬುದನ್ನೂ ಮತ್ತು ಅನ್ಯದೇವತೆಗಳನ್ನೂ ಶಿವನನ್ನೂ ಪೂಜಿಸುವವನೇ ಮಹಾ ಶಿವಭಕ್ತನು. ಶಿವಭಕ್ತಗೆ ವಿಮುಖರುಗಳನ್ನು ಮುಟ್ಟಲಾಗದು ; ದರ್ಶನ ಮಾಡಲಾಗದು ; ಅವರೊಡನೆ ವಾದ ಮಾಡಲಾಗದು ; ಬೇರೆ ದೇವತೆಗಳನ್ನು ಪೂಜಿಸಲಾಗದು ; ಸ್ಮರಿಸಲಾಗದು ; ಸ್ತುತಿಸಲೂ ಆಗದು ; ಯಾವ ಮನೆಯಲ್ಲಿ ಅನ್ಯದೇವತೆ ಇರುವದೋ ಆ ಮನೆಯನ್ನೇ ಬಿಡಬೇಕು. ಅನ್ಯದೇವತಾ ಪೂಜಕರಾದ ಮನುಜರನ್ನು ಪೂಜಾಕಾಲದಲ್ಲಿ ನೋಡಲಾಗದು, ಎಂಬುವ ವಾಕ್ಯಗಳು ಸುಪ್ರಸಿದ್ಧವಾಗಿರುವದಲ್ಲಿ ಸವಿಸ್ತಾರದಿಂ ಹೊಗಳುತ್ತೆ.

೨. ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ ಪ್ರತಿಪಾದಕವಾದದ್ದು ವೀರಶೈವಾಚಾರವಾಗಿದೆ. ಇದರಲ್ಲಿ ಪುನಃ ಜನ್ಮವಾಗತಕ್ಕ ಕಾರ್ಯ ಚಾಚಣೆ ಇಲ್ಲ. ಇನ್ನು ಬಿಟ್ಟು ಶೈವಾಚರಣೆಯನ್ನು ನಂಬಲಿಕ್ಕೆ ಆಗಿತೇ? ಅನೇಕ ಶ್ರುತಿಗಳಲ್ಲಿ ಲಿಂಗಧಾರಣ ಮಹತ್ತನ್ನು ಹೇಳಿದ ಭಾಷ್ಯಾಚಾರ್ಯರುಗಳಾದ ರೇಣುಕಾಚಾರ್ಯರು, ನೀಲಕಂಠ ಶಿವಾಚಾರ್ಯರು, ಮತ್ತು ಸೋಮನಾರಾಧ್ಯರು, ಈ ಮೊದಲಾದ ಆಚಾರ್ಯರುಗಳ ನಾಮಗಳನ್ನು ಮರೆಯಲಿಕ್ಕೆ ಯೇನುಕಾರಣವೋ ತಿಳಿಯಲಿಲ್ಲ. ಬ್ರಹ್ಮಕ್ಕೆ ಮತ್ತು ಬ್ರಾಹ್ಮಣನಿಗೆ ಅಧಿಪತಿಯಾದ ಪರಬ್ರಹ್ಮವು ಶಿವನಲ್ಲದೆ ಮತ್ತೆ ಯಾರೂ ಇಲ್ಲವೆಂತ ಯಜುರ್ವೇದದಲ್ಲಿ ಹೇಳಲ್ಪಟ್ಟಿದೆ.

೩. ವೀರಶೈವ ತತ್ವ ವಿಚಾರದಲ್ಲಿ—ವೀರಶೈವಬ್ರಾಹ್ಮಣ ಮೊದಲಾದ ಚಾತುರ್ವರ್ಣ ವಿರುವದರಿಂದ ಶೈವದಲ್ಲಿ ಬ್ರಾಹ್ಮಣ ಅಧಿಯಾಗಿಕೊಂಡ್ರರವರಿವಿಗೆ ಉಪವೀತವನ್ನು ಹ್ಯಾಗೆ ಪ್ರದಯೋಗಿಸುತ್ತಾರೋ ತದ್ವತ್ ವೀರಶೈವ ಬ್ರಾಹ್ಮಣ ಆದಿಯಾಗಿ ವೀರಶೈವ ಶೂದ್ರರ ಪರಿವಿಗೂ ಉಪವೀತವೆಂಬ ಲಿಂಗಧಾರಣೆಯು ಆಗುತ ಬರುತದೆ. ನಾನು ಕೊಯಮುತ್ತೂರು, ಕಡಪ, ಕರ್ನೂಲ್, ವೇಲೂರು, ಇನ್ನೂ ಕೆಲವುಜಿಲ್ಲೆಗಳಿಗೆ ಶಿಷ್ಯಾರ್ಜನೆ ಪ್ರಯುಕ್ತ ಪ್ರಯಾಣ ಮಾಡಿದ್ದೆನು. ಆ ಕಾಲದಲ್ಲಿ ಒಬ್ಬ ಶೈವ ಶೂದ್ರನೆಂಬ ನಾಮಾಂಕಿತ ಪಡೆದ ಕಣಕಾಪಿಳ್ಳೆಯೆಂಬವನು ಬಂದು ದೀರ್ಘದಂಡ ನಮಸ್ಕಾರ ಮಾಡಿದನು. ಆತನ ಪೂರ್ವಾಪರ ವಿಚಾರಿಸಿದ್ದರಲ್ಲಿ ಜನಿವಾರವನ್ನು ಹಾಕಿಕೊಂಡು ಸಂಧ್ಯಾವಂದನ ಆಚರಣೆ ವಗೈರೆ ಉಂಟೆಂತ ಹೇಳಿದ್ದಲ್ಲದೆ ವೀರಶೈವ ಗುರುದೀಕ್ಷೆಯನ್ನು ಹೇಳಬೇಕಾಗಿ ಅಪೇಕ್ಷಿಸಿದನು ಈಕಾರಣದಿಂದ ವೀರಶೈವ ಬ್ರಾಹ್ಮಣನಾದವನು ಲಿಂಗಧಾರಣೆಯ ಸ್ವರೂಪವನ್ನು ಪಡೆದಿದ್ದರೆ ಆತನು ಶೂದ್ರನಾಗಬಲ್ಲನೆ.

೪. ನಾನು ಆತ್ಮಸ್ತುತಿಯೂ ಪರನಿಂದೆಯೂ ಮಾಡತಕ್ಕವನಲ್ಲ ವೇದಸಮ್ಮತವಾದ ಕೆಲವು ವಿಚಾರಗಳನ್ನು ಮಾಡಬೇಕಾದ ಕುತೂಹಲವುಳ್ಳವನಾಗಿದ್ದಾಗ್ಯೂ ಆ ಮಾರ್ಗವನ್ನು ಬಿಟ್ಟು ವ್ಯವಹಾರಕ್ಕೆ ಕಾರಣಭೂತವಾದ ವಾಕ್ಯಗಳನ್ನು ಉಪಯೋಗಿಸುವದರಿಂದ ಯೇನು ಪ್ರಯೋಜನವಾದೀತು? ಈಗ ನೀವು ಉಪಯೋಗಿಸಿರುವ ವಿಷಯಗಳೆಲ್ಲ ಮೈಸೂರಲ್ಲಿರುವ ಮ||ರಾ||ಶ್ರೀ ವೀರಸಂಗಪ್ಪನವರು ಮಾಡಿದ ಕರಪತ್ರಿಕೆ ಎಂಬ ಬುಕ್ಕಿನಲ್ಲಿ ಸ್ಪಷ್ಟವಾಗಿ ಜವಾಬಾಗಿಹೋಗಿದೆ ಅವನ್ನು ಪುನಃ ಪುನಃ ಬರೆಯುವದರಲ್ಲಿ ಯೇನು ಪ್ರಯೋಜನ. ಆಬುಕ್ಕನ್ನು ತರಿಸಿ ಪರಾಂಬರಿಸಿಕೆಗೆ ಬಂದರೆ ವೇದ್ಯವಾಗಬಹುದು.

೫. ಮತ್ತೊಂದುವೇಳೆ ತಾವು ಹೇಳುವದಾದರೆ ಶೈವದಲ್ಲಿ ವೀರಶೈವಾರಾಧ್ಯರ ವಿಷಯವು ವಿವರವಾಗಿ ಪ್ರಕಟಪಡಿಸುವೆನು.

ತಮ್ಮ ವಿಧೇಯನಾದ,

ಮಾನಿನಕೆರೆ, ೧೦ನೇ ನವಂಬರ್ ೯೦	ಮೂರುಗೆರೆ ಮಠದ ಪಟ್ಟದ ಶಿವಲಿಂಗಸ್ವಾಮಿನವರು

ಇದರಡಿ ಕಂಡ ವಿಜ್ಞಾಪನೆಪತ್ರಿಕೆಯು ಕೆಲವು ಜನ ಪ್ರಜಾಪ್ರತಿನಿಧಿಗಳಿಂದ ಈಸಂಸ್ಥಾನದ ದಿವಾನರವರಿಗೆ ಒಪ್ಪಿಸಲ್ಪಟ್ಟದ್ದರಿಂದ ಅದನ್ನು ತಾವು ದಯಮಾಡಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂಬ ಕೋರಿಕೆಯೊಡನೆ ತಮಗೆ ಕಳುಹಿಸಿರುತ್ತೇನೆ

ಮೈಸೂರ್ ನಿವಾಸಿ

ಶ್ರೀ—ಶ್ರೀಮತ್ಕರ್ನಾಟಕಾಧಿಪ ಚಾಮರಾಜೇಂದ್ರಮಹಾರಾಜ||ಧೀಮಂತರಿಗೆ ಸಾಷ್ಟಾಂಗಪ್ರಣಾಮಪೂರ್ವಕವಾಗಿ ಬರೆದುಕೊಂಡ ವಿಜ್ಞಾಪನೆ ||

ಶ್ರೀವ ೯ ಮಹಾರಾಜಾ ರಾಜಾಸಾಹೇಬ ಒಡೆಯರವರು, ಇವರ ದಿವಾನರವರು ಇವರ ಸನ್ನಿಧಿಯಲ್ಲಿ.

ಈ ಕೆಳಗೆ ವಿಜ್ಞಾಪಿಸುವ ಪ್ರಜಾಪ್ರತಿನಿಧಿಗಳ ಕಾರ್ಯ ಸ್ಥಾನಿ

ಪ್ರಜಾ ಪರಿಪಾಲನೆಯು ರಾಜ್ಯಭಾರಕ್ಕೆ ಮುಖ್ಯವಾದ ಒಂದು ಅಂಗವಾಗಿದೆ.

ಸುಮಂತ್ರಿಗಳಾದ ಸಿ. ಎಸ್. ಐ ಎಂಬ ಬಿರುದನ್ನು ಹೊಂದಿದವರು ಘನತರವನ್ನು ಹೊಂದಿದವರು ನಿಷ್ಪಕ್ಷಪಾತಿಗಳಾದ ದಿವಾನ್ ಶೇಷಾದ್ರಿಅಯ್ಯರ್‌ರವರು ಈ ಮೈಸೂರುಸೀಮೆಯ ದಿವಾನಗಿರಿ ಭಾರ್ಯವಹಿಸಿದನಂತರ ಮೊದಲು ಈ ದೇಶದಲ್ಲಿ ಪದೇಪದೆ ಸಂಭವಿಸುತಲಿದ್ದ ಕ್ಷಾಮವನ್ನು ಆಲೋಚಿಸಿ ಇವರ ನಿವಾರಣಾರ್ಥವಾಗಿ ನದಿ, ನಾಲೆ, ಕೆರೆ, ಕಟ್ಟೆ, ಇವುಗಳಿಗೆ ಗಮನಕೊಟ್ಟು ರೈಲ್ವೆ ಮಾರ್ಗಗಳಲ್ಲಿ ಕಾಡಿನ ಪರ್ಯಾಯದಿಂದ

ಅಂತಹ ಪ್ರಾಪುಗಳಿಗೆ ಅವಕಾಶವಿಲ್ಲದಹಾಗೆ ಮಾಡಿದ ಏರ್ಪಾಡು ಪ್ರಜಾ ಪರಿಪಾಲನೆಗೆ ವಿಶೇಷ ಕಾರಣಭೂತವಾಗಿ ಇರುತದೆ.

ಇದರಿಂದ ಇವರ ಕೀರ್ತಿಯು ಆಚಂದ್ರಾರ್ಕವಾಗಿ ಪ್ರಕಾಶಿಸುವದಕ್ಕೆ ಸಂದೇಹವಿಲ್ಲವು. ಇವರು ಮಾಡಿದ ಪ್ರಯತ್ನಗಳಿಂದ ಸರಕಾರಕ್ಕೆ ೧೦—೧೨ ಲಕ್ಷ ರೂಪಾಯಿಗಳವರಿಗೆ ಫಾಯಿದೆ ಉಂಟಾಗಿರುವದು ಹೊರ್ತು ಅನೇಕ ಪ್ರಜೆಗಳು ಸುಖವಾಗಿ ಜೀವಿಸುವದಕ್ಕೆ ನಿರಾತಂಕವಾಗಿರುತ್ತದೆ.

ಇದಲ್ಲದೆ ಮಹಾನುಭಾವರು ಮಾಡಿರುವ ನಿರ್ಬಂಧಗಳಿಂದ ಸಕಲ ಜನರಿಗೂ ವಿದ್ಯಾಭಿವೃದ್ಧಿ ಉಂಟಾಗಿ ವಿವೇಕ ಹೆಚ್ಚುತ್ತಿದೆ. ಮತ್ತು ಛತ್ರ ದೇವಸ್ಥಾನಗಳಲ್ಲಿ ಅನೇಕ ದೀನಬ್ರಾಹ್ಮಣರೇ ಮೊದಲಾದವರಿಗೆ ಸರಿಯಾದ ಅನುಕೂಲವು ಉಂಟಾಗಿರುತ್ತದೆಯೇ ಹೊರ್ತು ಪ್ರಜೆಗಳೆಲ್ಲ ಪರಸ್ಪರವಾಗಿ ಯಾವದೊಂದು ತೊಂದರೆಗಳಿಲ್ಲದೆ ರಾಜಭಕ್ತಿಯೊಡನೆ ಸಂತೋಷದಲ್ಲಿರುತ್ತಿಹರು. ಇವರ ಯಶಸ್ಸು ಶುಕ್ಲಪಕ್ಷದ ಚಂದ್ರನಂತೆ ದಿನೇದಿನೇ ಅಭಿವೃದ್ಧಿಯನ್ನು ಹೊಂದುತ್ತಾ ಪ್ರಕಾಶಿಸುತ್ತಾ ಬರುವದು. ಈ ಕರುಣಾಶಾಲಿಗಳು ಈ ಮೈಸೂರು ಸಂಸ್ಥಾನದ ಆಡಳಿತದಲ್ಲಿ ಚಿರಕಾಲ ನೆರೆಗೊಂಡು ಹೀಗೆಯೇ ಪ್ರಜಾಸೌಖ್ಯವನ್ನು ಕೊಡುತ್ತಾ ಇರಬೇಕೆಂದು ಇಷ್ಟದೇವರನ್ನು ಪ್ರಾರ್ಥಿಸುತ್ತೇವೆ.

ವಿಧೇಯರಾದ,

ಮೈಸೂರು ಡಿ. ಅತ್ತಿಕುಪ್ಪೆ ರಂಗಯ್ಯಂಗಾರ್ ಮೊದಲಾದ ಅನೇಕ ಪ್ರಜಾ ಪ್ರತಿನಿಧಿಗಳ ಸೈನಾಗಿದೆ.

ADDRESS OF THE DEWAN OF MYSORE

to the Representative Assembly held at Mysore on Tuesday, the 8th October 1890.

(ಕಳೆದವಾರಶೇಷ)

೧೦. ಕೇಂದಿಬಾಬಿನಲ್ಲಿ ಸುಮಾರು ೩೨,೦೦೦ ರೂಪಾಯಿಗಳು ಕಮ್ಮಿಯಾಯಿತು. ಆದಾಗ್ಯೂ ಕಳೆದಸಾಲಿನಲ್ಲಿ ಹಾಜರಿಮಾಡಿದ ಜಾಸ್ತಿ ಲವಣ ಸಂಬಂಧದ ಸೆಸ್ಸ ಬಾಬತು ಉತ್ಪತ್ತಿಯಿಂದ ಅದಕ್ಕೆ ಬದಲಾಗಿ ಜಾಸ್ತಿ ಕಂಡುಬಂದಿದೆ.

೧೧. ಭೂಗಾರದಗಣಿ—ಭೂಗಾರದಗಣಿಗಳಿಂದ ೧,೯೬,೬೩೮ ರೂಪಾಯಿಗಳ ರಾಜಾಯ ವಸೂಲಾಯಿತು. ಇದು ಗುದಸ್ತಾಸಾಲಿಗಿಂತ ೮೮,೧೧೨ ರೂಪಾಯಿ ಜಾಸ್ತಿಯಾಗಿದೆ. ಕೋಲಾರದಲ್ಲಿ ನಡೆಯುತ್ತಿರುವ ಈಸಂಬಂಧದ ವ್ಯವಸಾಯವು ಉತ್ತರೋತ್ತರಾಭಿವೃದ್ಧಿ ಸೂಚನೆಯನ್ನು ತೋರಿಸುತ್ತೆ. ಹಾಸನಹಳ್ಳಿಯಲ್ಲಿ ನಡೆಯುತ್ತಲಿರುವ ಕೆಲಸಗಳು ಶೀಘ್ರದಲ್ಲಿಯೇ ಒಳ್ಳೇ ಆದಾಯ ವುಂಟಾಗಬಹುದೆಂಬ ಭರವಸೆಯನ್ನು ಕೊಡುತ್ತೆ.

೧೨. ಸ್ಟಾಂಪು ಮತ್ತು ಮೊಹರ್ಫೀಬಾಬುಗಳಲ್ಲಿ ಕ್ರಮವಾಗಿ ೩೭,೦೦೦ ಮತ್ತು ೨೮,೦೦೦ ರೂಪಾಯಿಗಳು ಜಾಸ್ತಿ ಕಂಡುಬಂತು. ಸರಕಾರಕ್ಕೆ ತೆಗದುಕೊಂಡ ಗವರ್ನಮೆಂಟ ಪ್ರಾಮಿಸರೀನೋಟಿಬಾಬತು ಬಡ್ಡಿ ಮತ್ತು ಮದರಾಸಬ್ಯಾಂಕು ಕರೆಂಟ ದಿವಾಜಿ ಬಡ್ಡಿ ಸಹ ಸೇರಿ ೨,೭೭,೦೦೦ ರೂಪಾಯಿಗಳು ಆದಾಯಬಂತು. ಗುದಸ್ತಾ ಸಾಲಿನಲ್ಲಿ ಈಬಾಬಿನ ಉತ್ಪತ್ತಿ ೨,೩೮,೦೦೦ ರೂಪಾಯಿಗಳಾಗಿತ್ತು.

೧೩. ಇತರ ಎಲ್ಲಾಬಾಬುಗಳಲ್ಲಿಯೂ ಸ್ವಲ್ಪಜಾಸ್ತೀ ಕಂಡುಬಂದಿದೆ. ಇದಕ್ಕೆ ಕಳೆದ ವರ್ಷದ ವಿಶೇಷವಾದ ಸುಭಿಕ್ಷಸ್ಥಿತಿಯೇ ಕಾರಣವಾಗಿರುತ್ತೆ.

೧೪. ಪೋಸ್ಟಾಫೀಸಿನ ಆಡಳಿತವು ಈಸಂವತ್ಸರವೆಲ್ಲ ಇಂಪೀರಿಯಲ್ ಪೋಸ್ಟಲ್ ಇಲಾಖೆಯವರಿಂದ ನಡೆಸಲ್ಪಟ್ಟಿತು. ಈಬಾಬಿನಿಂದ ಸರಕಾರಕ್ಕೆ ೨,೦೦೦ ರೂಪಾಯಿವರಿಗೂ ಕೆಲವು ಚಿಲ್ಲರೆ ಜಮಾಹೊರ್ತು ಇನ್ನೇನು ಆದಾಯಬರಲಿಲ್ಲ.

೧೫ ಖರ್ಚು—ರೈಲ್ವೆಬಾಬತಿನಾಯಿ ಇತರ ಎಲ್ಲಾಬಾಬುಗಳಿಂದಲೂ ಒಟ್ಟು ೧,೨೨,೯೩,೫೧೭ ರೂಪಾಯಿಗಳು ಖರ್ಚಾಯಿತು. ಇದು ೧೮೮೮—೮೯ನೇ ಸಾಲಿನ ಖರ್ಚಿಗಿಂತ ೫,೬೬,೭೯೪ ರೂಪಾಯಿ ಜಾಸ್ತಿಯಾಯಿತು. ಜಾಸ್ತಿಬಂದ ಮುಖ್ಯಬಾಬುಗಳ ತಪ್ಸೀಲ್ ಈಕೆಳಗೆ ವಿವರಿಸುತ್ತೆ.

೧,೩೨,೬೦೦ ರೂಪಾಯಿಗಳು ಗ್ರಾಮನೌಕರರುಗಳಿಗೆ ಕೊಡಬೇಕಾಗಿದ್ದ ಹಿಂದಿನ ಸಾಲುಗಳ ಬಾಬತು ಕ್ರೋಟಗಿಬಗ್ಗೆ ಮತ್ತು ಈಚೆಗೆ ಸರ್ವೆ ಸೆಟಲ್ಮೆಂಟು ಆದ ತಾಲ್ಲೂಕುಗಳಿಗೆ ಹೊಸದಾಗಿ ಮಂಜೂರ್ ಮಾಡಿದ ಕ್ರೋಟಗಿಬಗ್ಗೆ ಸಹ ಜಾಸ್ತಿ.

೫೮,೦೦೦ ರೂಪಾಯಿಗಳು ಆನೆಬಂಗಡಿ ಬರಾಯಿಸಿದ್ದಕ್ಕೂ ಮತ್ತು ಫಾರೆಸ್ಟು ಬಾಬಿನಲ್ಲಿ ಚಿಲ್ಲರೆ ತಿಬ್ಬಂದಿ ಜಾಸ್ತೀ ಮಾಡಿದ್ದರಿಂದಲೂ ಸಹ ಜಾಸ್ತಿ.

೪೦,೦೦೦ ರೂಪಾಯಿಗಳು ತಾಲ್ಲೂಕು ಸ್ವದೇಶ ವಿದ್ಯಾಭ್ಯಾಸದ ಖರ್ಚು ಲೋಕಲ್ ಫಂಡಿನಿಂದಲೂ ಹೋದವರುಷ ನಿಮ್ಮಗಳಿಗೆ ತಿಳಿಸಿದಮೇರೆಗೆ ಕೆಲವು ಗ್ರಾಂಟ ಇನ್ ಯೆಯಿಡ ಯಾನೆ ವಿದ್ಯಾಭ್ಯಾಸಸಂಬಂಧವಾದ ಸಹಾಯದ್ರವ್ಯವನ್ನು ಬೆಂಗಳೂರು ಮ್ಯುನಿಸಿಪಾಲಿಟಿ ಯಿಂದಲೂ ಎಜ್ಯುಕೇಷನ್‌ಬಾಬಿಗೆ ವರ್ಗ ಮಾಡಿದ್ದರ ಮೂಲಕ ಜಾಸ್ತಿ.

೨,೦೯,೦೦೦ ರೂಪಾಯಿಗಳು ಮುಂದೆ ಸಂಪೂರ್ಣವಾಗಿ ವಿವರಿಸಲ್ಪಡುವ ಭಾರಿಯಾದ ಮುಖ್ಯ ಕಾಮಗಾರಿಗಳಿಗಾಗಿ ಪಬ್ಲಿಕವರ್ಕ್ಸ ಹೆಡ್ಡಿಗೆ ಜಾಸ್ತಿ.

೧೬. ಜಾಸ್ತಿ ಖರ್ಚು ಕಾಣುವ ಇತರಬಾಬುಗಳ ವಿಷಯದಲ್ಲಿ ವಿಶೇಷ ವಿವರಿಸತಕ್ಕದ್ದು ಅವಶ್ಯಕವಾಗಿರುವದಿಲ್ಲ.

೧೭ ಅಂಚೆಲಾವೆ ಮಾಕೂಫೆಯಾದ್ದರಿಂದ ಸರಾಸರಿ ಸಾಲಿಯಾನ ಸರಕಾರಕ್ಕೆ ೬೧,೦೦೦ ರೂಪಾಯಿ ಮಿಗತೆಯಾಯಿತು. ಕಳೆದಸಾರೆ ಅಂದರೆ ೮೮—೮೯ ರಲ್ಲಿ ಈ ಬಾಬಿನಲ್ಲಿ ಒಟ್ಟು ೧,೩೬,೯೨೦ ಖರ್ಚಾಯಿತು.

೧೮. ರೈಲ್ವೆಮುಟ್ಟುವಳಿ ಖರ್ಚು ಈಸಾಲಿಗೆ ರೈಲ್ವೆಮುಟ್ಟುವಳಿಯಲ್ಲಿ ನಾಲ್ಕರಲ್ಲಿ ಮೂರು ಭಾಗ ಸರಕಾರಕ್ಕೆ ಜಮೆಯಾದ್ದು ೧,೭೯,೫೭೪ ರೂಪಾಯಿಗಳು, ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯವರು ಇಂಗ್ಲಂಡಿನಲ್ಲಿ ತೆಗೆದ ರೈಲ್ವೆ ಮೂಲಧನದ ಬಡ್ಡಿಗಾಗಿ ಸರ್ಕಾರದಿಂದಕೊಟ್ಟದ್ದು ೬,೯೮,೩೯೧ ರೂಪಾಯಿಗಳು ಇದರಿಂದ ಮೈಸೂರು ಹರಿಹರದ ರೈಲ್ವೇ ಗೋಸ್ಕರ ಈ ಸಂವತ್ಸರದಲ್ಲಿ ಕೊಟ್ಟ ನಿವಳ ಮೊಬಲಗು ೫,೧೮,೮೧೭ ರೂಪಾಯಿಯಾಯಿತು. ಇದಕ್ಕೆ ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯವರಿಗೆ ಕೆಲವು ಹಳೇಬಾಕಿ ಸ್ಟೇಷನುಗಳಿಗೋಸ್ಕರ ಕೊಟ್ಟ ೮೧೮ ರೂಪಾಯಿ ಮತ್ತು ಹಿಂದೂಪುರದ ಲೈನ್ ಸರ್ವೆ ಮಾಡಿಸಿದ್ದಕ್ಕಾಗಿ ಖರ್ಚಾದ ೧,೫೮೧ ರೂಪಾಯಿ ಸಹ ಸೇರಿಸಿದರೆ ರೈಲ್ವೆ ಇಲಾಖೆಸಂಬಂಧದ ನಿವಳಖರ್ಚು ೫,೨೧,೧೨೬ ರೂಪಾಯಿಯಾಯಿತು.

೧೯. ರೈಲ್ವೆಯಿಂದ ಬಂದ ಆದಾಯಸೇರಿ ಒಟ್ಟು ಸರಕಾರಕ್ಕೆ ಪ್ರಸ್ತುತ ೧,೪೪,೭೩,೮೫೭ ರೂಪಾಯಿ ಕಂಡಿತು. ರೈಲ್ವೆಗೋಸ್ಕರವಾಗಿ ಕೊಡಲ್ಪಟ್ಟ ಗ್ಯಾರೆಂಟೆಡ್ ಇಂಟರೆಸ್ಟ್ ಯಾನೆ ಭರವಸೆ ಬಡ್ಡಿಮುಂತಾದ ಇತರ ಖರ್ಚುಸೇರಿ ಒಟ್ಟು ಖರ್ಚಿನ ಮೊಬಲಗು ೧,೨೯,೯೮,೨೭೨ ರೂಪಾಯಿ ಹೋಗಿ ಸರಕಾರಕ್ಕೆ ೧೪,೭೫,೫೯೦ ರೂಪಾಯಿಗಳು ನಿವಳಶಿಲ್ಕು ನಿಂತಿತು. ಇದಕ್ಕೆ ೧೮೮೯ನೇ ಇಸವಿ ಏಪ್ರಿಲ್ ಗುರ್ರೇತಾರೀಖಿನಲ್ಲಿದ್ದ ಶಿಲಿಕಿಲಾಶಿಲ್ಕು ೭,೭೭,೩೫,೮೩೪ ರೂಪಾಯಿಗಳು ಸೇರಿದರೆ ೧೮೯೦ನೇ ಇಸವಿ ಮಾರ್ಚಿ ೩೧ನೇ ತಾರೀಖಿನಲ್ಲಿ ೯೨,೧೧,೪೨೪ ರೂಪಾಯಿ ಆಖೈರ್ ಶಿಲ್ಕು ನಿಂತಿತು. ಈಶಿಲ್ಕಿನಲ್ಲಿ ೬೧,೫೦,೭೦೦ ರೂಪಾಯಿಗಳಿಗೆ ಗವರ್ನಮೆಂಟ ಪ್ರಾಮಿಸರೀನೋಟುಗಳು ತೆಗದುಇಟ್ಟಿರುತ್ತೆ. ಇದಲ್ಲದೆ ರೈಲ್ವೆರಿಸರ್ವ್ ರಿಡಂಪ್ಷನ್‌ಫಂಡ ಎಂಬ ರೈಲ್ವೆಸಾಲ ತೀರಿಸತಕ್ಕಬಗ್ಗೆ ಏರ್ಪಾಡಿಸಿರುವ ಫಂಡಿಗೆ ೬,೧೮,೮೫೯ ರೂಪಾಯಿ ಜಮಾಮಾಡಿಯಿದೆ. ಸದರೀಫಂಡು ಏರ್ಪಾಡು ಮಾಡಿದ ಸಂಗತಿ ಹೋದವರುಷವೇ ತಿಳಿಸಿರುತ್ತೆ.

೨೦. ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯವರಿಗೆ ಬಡ್ಡಿಗಾಗಿಯೂ ಮತ್ತು ರೈಲ್ವೆಸಾಲ ತೀರಿಸುವ ಫಂಡಿಗಾಗಿಯೂ ಸಾಲೀಯಾನ ಭಾರೀಹಣ ಸರ್ಕಾರದಿಂದ ದಾವತಿಯಾಗದೆಯಿದ್ದಲ್ಲಿ ಈವರುಷ ಖರ್ಚು ಜಾತ ಉಳಿದಶಿಲ್ಕು ಇನ್ನು ಬಹಳ ಹೆಚ್ಚಾಗಿರುತಿತ್ತು. ರೈಲ್ವೆಯಿಂದ ಸರಕಾರಕ್ಕೆ ಬಂದದ್ದು ನಾವು ಹಾಕಿರುವ ಭಾರಿಯಾದ ಮೂಲಧನವನ್ನು ಯೋಚಿಸಲಾಗಿ ನ್ಯಾಯವಾದ ಆದಾಯವೆಂತ ಎಣಿಸುವದಕ್ಕೆ ಅರ್ಹವಾದದ್ದಲ್ಲ. ಹರಿಹರದವರಿವಿಗೂ ಕಾಮಗಾರಿ ಪೂರೈಸಿದನಂತರ ರೈಲ್ವೆಯಿಂದ ಮೊದಲನೇವರ್ಷ ೩ ಲಕ್ಷ ರೂಪಾಯಿ ಆದಾಯ ಬರಬಹುದೆಂತಲೂ ಅನಂತರ ಸಾಲಿಗೆಕ್ಕೆ ಕಾಲುಲಕ್ಷದ ಪ್ರಕಾರ ಜಾಸ್ತಿಯಾಗಿ ೭ನೇ ವರ್ಷವೂ ಅದಕ್ಕೆ ಮುಂದಕ್ಕೂ ಸಾಲಿಯಾನ ೪½ ಲಕ್ಷ ಆಗಬಹುದೆಂತಲೂ ಬ್ರಿಟಿಷ ಸರಕಾರದ ಈ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು ಈರೈಲ್ವೆಯನ್ನು ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯವರಿಗೆ ವರ್ಗಾಯಿಸಿದ ಕಾಲದಲ್ಲಿ ಪರಿಗಣನೆಯನ್ನು ಮಾಡಿದರು. ಆದರೆ ಈಗ ಹುಟ್ಟತಕ್ಕ ಮೊಬಲಗನ್ನು ಭಾವಿಸಿ ನೋಡಿದರೆ ಪ್ರೊಸ್ಪೆಕ್ಟಸ್ಸು ಅಂದಾಜುಪ್ರಕಾರ ಬರಬಹುದೆಂದು ನಿರೀಕ್ಷಿಸಿದಮೇರೆಗೆ ಇನ್ನು ಮುಂದೆ ಕೆಲವು ವರ್ಷಗಳವರಿವಿಗೂ ನೆರವೇರಲಾರದೆಂದು ಎಣಿಸುವದಕ್ಕೆ ಕಾರಣ ಕಂಡುಬಂದಿರುತ್ತೆ.

೨೧. ಇದಕ್ಕೆ ಮೊದಲೇ ನಾವು ನಿಮಗೆ ನಿವರಿಸಿದ ತಪಸೀಲ್ ಅಂಕೆಗಳನ್ನು ಶೋಧಿಸಿದರೆ, ನಮ್ಮಲ್ಲಿ ಸಾಧಾರ್ಯರಿಗೆ ನಿಂತಿರುವ ಶಿಲ್ಕುಹಣ ರೈಲ್ವೆ ಸಂಬಂಧವಾಗಿ ಹಾಲಿ ನಾವು ಮಾಡುವ ನಗದುಸಾತಿ ಏರ್ಪಾಡುಗಳಿಂದ ಎಷ್ಟು ವಿಶೇಷವಾಗಿ ಕಮ್ಮಿಯಾಗಿದೆ ಯೆಂಬುವದು ನಿಮಗೆ ಕಂಡುಬರುತ್ತೆ. ನಮ್ಮಿಂದ ದಾವತಿಯಾದ ಮೊಬಲಗಿನ ತಪಸೀಲು.

(A)	ರೈಲ್ವೆ ಸಾಲತೀರಿಸುವದಕ್ಕೆ ಏರ್ಪಡಿಸಿರುವ ಫಂಡಿಗಾಗಿ ದಾವತಿ	4,00,000
(B)	ಮೈಸೂರು ರೈಲ್ವೆಗೋಸ್ಕರ ತೆಗದ 20 ಲಕ್ಷ ರೂಪಾಯಿ ಸಾಲದ ಬಡ್ಡಿಗಾಗಿ	1,14,907
(C)	ಇಂಗ್ಲಾಂಡಿನಲ್ಲಿ ತೆಗದ ರೈಲ್ವೆ ಸಾಲದ ಬಾಬ್ತ ಬಡ್ಡಿಗಾಗಿ	6,95,391
(D)	ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯವರಿಗೆ ಕೊಟ್ಟ ಚಿಲ್ಲರೆ ಬಾಬತು	818
	ಜಮ್ಲಾ	12,11,116
	ರೈಲ್ವೆ ಬಡ್ಡಿಗಾಗಿ ವಸೂಲು ಜಮಾ 1,79,574 ಮೊತ್ತವನ್ನು ಕಳೆಯಲಾಗಿ ಮೈಸೂರು ಹರಿಹರ ರೈಲ್ವೆ ಬಾಬತು ನಿವ್ವಳ ಖರ್ಚು ಜಾಸ್ತಿ	10,31,542

೨೨. ಒಡೆಯರ ಅಂದಾಜುಗಳು.—ಕಳೆದವರುಷದ ಕೇವಲ ರಾಜಾಯ ಉತ್ಪತ್ತಿ ೧,೪೪,೨೨,೦೦೦ ರೂಪಾಯಿ ಆಗಿರುತಿದೆ. ಹಾಲ್ಸೀ ಸಾಲಿನ ತಿದ್ದಿಮಾಡಿದ ಬಜೆಟಿನಲ್ಲಿ ಜಮಾ ಅಂದಾಜ ೧,೩೯,೩೫,೦೦೦ ರೂಪಾಯಿಗಳು ದಾಖಲಾಗಿ ಇದೆ. ಯಾತಕ್ಕೆಂದರೆ ಸದರೀ ಸಾಲಿನಲ್ಲಿ ಲಾಂಡ ರೆವಿನ್ಯೂ ಯಾನೆ ಜಮೀನ್ ಬಾಬಿನ ಹುಟ್ಟುವಳಿಯು ಮತ್ತು ಸಂದಲ್ ಹರಾಜು ಇವುಗಳಿಂದ ಉತ್ಪತ್ತಿಯಾದ ಅಪೂರ್ವವಾದ ಭಾರೀ ಮೊಬಲಗು ಕಾಯಂ ಇರುತ್ತೆಂಬ ಊಹೆಯಮೇರೆ ಲೆಕ್ಕ ಮಾಡತಕ್ಕದ್ದು ಯುಕ್ತವಲ್ಲವೆಂತ ಎಣಿಸಲಾಯಿತು. ಖರ್ಚಿನ ಅಂದಾಜು ಹೋದವರುಷದ ಕಡಾರುವಾಕು ಖರ್ಚು ಮೊಬಲಗನ್ನು ಬಹಳವಾಗಿ ಅನುಸರಿಸಿಯೇ ೧,೨೯,೪೬,೦೦೦ ರೂಪಾಯಿಗಳು ಬಜೆಟಿನಲ್ಲಿ ದಾಖಲುಮಾಡಿ ಇರುತ್ತೆ. ಆದರೆ ಕೆಲವು ತಿಂಗಳುಗಳಲ್ಲಿಯೇ ಕಾಮಗಾರಿ ಉಪಕ್ರಮಿಸಬಹುದಾಗಿ ತೋರುವ ಹಿಂದೂಪುರ ರೈಲ್ವೇ ಕಾಮಗಾರಿಗೋಸ್ಕರ ತಕ್ಕಷ್ಟು ಭಾರೀಮೊಬಲಗು ಅಂದಾಜಿಗೆ ಸೇರಿಸತಕ್ಕ ಅವಶ್ಯಕತೆಯು ಶೀಘ್ರದಲ್ಲಿಯೇ ಉಂಟಾಗುತ್ತೆ.

೨೩. ಜಮೀನ್ ವ್ಯವಸಾಯ ವಿಷಯ—ಕಳೆದ ವರ್ಷದ ವ್ಯವಸಾಯವು ಸರ್ವತ್ರ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಎಲ್ಲಾ ನೋಡಿದಾಗಿ ಕಾಲಸ್ಥಿತಿಯು ಅನುಕೂಲವಾಗಿದ್ದು ಶೀ ಮೆಯಲ್ಲೆಲ್ಲ ಒಳ್ಳೇ ಬೆಳೆ ಆಯಿತು. ಸಂವತ್ಸರದ ಅಂತ್ಯಭಾಗದಲ್ಲಿ ಮದರಾಸು ಸೀಮೆಯ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಕ್ಷಾಮಭಯ ಉಂಟಾದ್ದರಿಂದ ಸರಾಸರಿ ಧಾರಣೆಗಿಂತಲೂ ಹೆಚ್ಚಾದ ಧಾರಣೆಗೆ ಆಹಾರ ಧಾನ್ಯಗಳು ಈ ದೇಶದಿಂದ ವಿಶೇಷ ರಫ್ತಾಯಿತು.

೨೪ ಸಂಸ್ಥಾನದ ಅನೇಕಭಾಗದಲ್ಲಿ ಜಾನ್ವರಗಳ ರೋಗಗಳು ಕೆಲವುಕಡೆ ಪ್ರಬಲವಾಗಿಯೂ ಕೆಲವುಕಡೆ ಸ್ವಲ್ಪವಾಗಿಯೂ ವ್ಯಾಪಿಸಿದ್ದಾಗ್ಯೂ ಜಾನವರಗಳು ಸಾಮಾನ್ಯವಾಗಿ ಒಳ್ಳೇಸ್ಥಿತಿಯಲ್ಲಿದ್ದವು. ಸಾಂಕ್ರಾಮಿಕವಾಗಿ ಬರುವ ಪಶುರೋಗಗಳಿಗೆ ತಕ್ಕ ಚಿಕಿತ್ಸೆ ಮಾಡತಕ್ಕಬಗ್ಗೆ ನಮ್ಮಲ್ಲಿ ತಕ್ಕ ತಿಬ್ಬಂದಿಯು ಇರುವದಿಲ್ಲ. ಪುನಾ ಪಟ್ಟಣದಲ್ಲಿ ಏರ್ಪಡಿಸಬೇಕೆಂದು ಉದ್ದೇಶಿಸಿರುವ ಬ್ಯಾಕ್ಟೀರಿಯೊ ಲಾಜಿಕಲ್ ಲ್ಯಾಬೊರೆಟೊರಿ ಎಂಬ ಸಾಂಕ್ರಾಮಿಕರೋಗಮೂಲವನ್ನು ಕಂಡುಹಿಡಿದು ಪರಿಹಾರಪೂರ್ವಕ ಚಿಕಿತ್ಸೆಮಾಡುವ ಶಾಲೆಯಲ್ಲಿ ಸರ್ಕಾರದವರು ಪ್ರತ್ಯೇಕ ಅಧಿಕಾರಿಗಳನ್ನು ತರಬೇತುಮಾಡಿಸಿ ಇದುವರಿಗೂ ಈವಿಷಯವಾಗಿರುವ ನ್ಯೂನತೆಯನ್ನು ಪರಿಹಾರ ಮಾಡಬೇಕೆಂದು ಎಣಿಸುತಲಿದಾರೆ.

೨೫. ಕೆಲವು ವರ್ಷಗಳಿಂದೀಚೆಗೆ ಪೂರ್ವದ ಒಳ್ಳೇಸ್ಥಿತಿಗೆ ತಪ್ಪಿಬಿದ್ದ ರೇಶ್ಮೆ ವ್ಯವಸಾಯವು ಪುನರುಜ್ಜೀವನಕ್ಕೆ ಬರುವ ಸೂಚನೆಗಳು ಕಾಣುತ್ತೆ. ಈ ಹುಳಗಳು ಪೂರ್ವದೇಶದ ಜಾತ್ಯ ರಹಿತವಾಗಿರುವದರಿಂದಲೂ ಉತ್ಪತ್ತಿಯಾಗುವ ರೇಶ್ಮೆ ಶ್ರೇಷ್ಠವಾದ್ದರಿಂದಲೂ ಈ ವ್ಯವಸಾಯವು ಹೆಚ್ಚಾದ ಪ್ರೋತ್ಸಾಹವನ್ನು ಹೊಂದಿದೆ.

೨೬. ಭೂವ್ಯವಸಾಯವನ್ನು ಶಾಸ್ತ್ರಕ್ರಮ ವಿಧಾನದಿಂದ ನಡೆಸುವದಕ್ಕೆ ಬೇಕಾದ ತಿಳುವಳಿಕೆಯನ್ನು ಹೆಚ್ಚಾಗಿ ಪ್ರಚುರ ಮಾಡತಕ್ಕಬಗ್ಗೆ ಮದರಾಸಿನಲ್ಲಿರುವ ಅಗ್ರಿಕಲ್ಚರಲ್ ಕಾಲೇಜ್ ಎಂಬ ವ್ಯವಸಾಯ ಶಾಸ್ತ್ರಪಾಠಶಾಲೆಯಲ್ಲಿ ಅಭ್ಯಾಸ ಮಾಡತಕ್ಕ ವಿದ್ಯಾರ್ಥಿಗಳಲ್ಲಿ ಈಗ್ಗಿರುವ ಹೆಚ್ಚಾದ ಸಂಖ್ಯೆ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಕೊಡಬೇಕೆಂತಲೂ, ಅಂತಹ ವಿದ್ಯಾರ್ಥಿಗಳನ್ನು ಆಯಾಯ ತಾಲ್ಲೂಕುಗಳಲ್ಲಿ ಸ್ವಂತವಾಗಿ ಜಮೀನು ಮಾಡಿಕೊಂಡಿರುವ ಜನಗಳಲ್ಲಿಯೇ ಚುನಾಯಿಸಬೇಕೆಂದೂ, ಅವರು ವಿದ್ಯಾಭ್ಯಾಸವನ್ನು ಪೂರೈಸಿದ ತರುವಾಯ ತಮ್ಮಸ್ವಂತ ಜಮೀನುಗಳಲ್ಲಿಯೇ ವ್ಯವಸಾಯ ಮಾಡಬೇಕೆಂಬ ಷರತ್ತು ಏರ್ಪಡಿಸಬೇಕೆಂದೂ ಸರಕಾರದವರು ಆಲೋಚಿಸುತ್ತಾರೆ. ಈ ಪ್ರಕಾರ ಅನೇಕಸ್ಥಳಗಳಲ್ಲಿ ಕುಶಲತೆಯಿಂದ ವ್ಯವಸಾಯ ಮಾಡತಕ್ಕ ಪ್ರದೇಶಗಳನ್ನು ಕಲ್ಪಿಸುವದರಮೂಲಕ ಜನೋಪಯೋಗಿಕಾರ್ಯಗಳಲ್ಲಿ ವ್ಯವಸಾಯ ಮತ್ತು ತತ್ಸಂಬಂಧವಾದ ಇತರ ಉದ್ಯೋಗಗಳನ್ನು ನಡೆಸತಕ್ಕ ನೂತನರೀತಿಯ ತಿಳುವಳಿಕೆಯನ್ನು ಕ್ರಮೇಣ ಸರ್ವತ್ರ ಪ್ರಚಾರ ಮಾಡಬಹುದೆಂದು ಗವರ್ನಮೆಂಟಿನವರು ಎಣಿಸುತ್ತಾರೆ. ಮೇಲೆ ವಿವರಿಸಿರುವ ಯೋಚನೆಯು ಸರಾಯಿತಿದಾರರು ವ್ಯವಸಾಯ ವಿಷಯವಾದ ಜ್ಞಾನ ಸಂಪಾದಿಸುವದು ಮಾತ್ರವೇ ಅಲ್ಲದೆ ಆ ವ್ಯವಸಾಯಕಾರ್ಯದಲ್ಲಿ ಸ್ವಯಂ ಪ್ರವರ್ತಿಸಿ ಕಲಿತವಿದ್ಯೆಯ ಪ್ರಯೋಜನವನ್ನು ಪಡೆಯಬೇಕೆಂಬ ಉದ್ದೇಶದಿಂದ ಮಾಡಿರುವದೆ. ಆದರೆ ವ್ಯವಸಾಯದಿಂದ ಉತ್ಪತ್ತಿಯಾಗುವದರಲ್ಲಿ ಖರೀದಿ ಈಗಿರುವದಕ್ಕಿಂತಲೂ ಹೆಚ್ಚಾಗಿ ಲಾಭಕರವಾದ ಕ್ಕದ್ದಾಗುವವರಿವಿಗೂ ಅಥವಾ ಈಗ ಸಾಗುವಳಿಗೋಸ್ಕರ ಉಳಿದಿರುವ ಜಮೀನಿನ ವಿಸ್ತೀರ್ಣವು ಬಹಳ ಕಮ್ಮಿಯಾಗಿ ರೈತರಿಗೆ ತನ್ನಹಿಡುವಳಿ ಜಮೀನಿನಿಂದಲೇ ಈಗ್ಗಿಂತಲೂ ಅಧಿಕವಾದ ಬೆಳೆ ತೆಗೆದುಕೊಳ್ಳತಕ್ಕ ಅವಶ್ಯಕ ಪ್ರಾಪ್ತವಾಗುವವರಿವಿಗೂ ವಿಶೇಷ ಪ್ರಯೋಜನವನ್ನು ನಿರೀಕ್ಷಿಸುವದಕ್ಕೆ ಆಗುವದಿಲ್ಲ.

ಇದರಶೇಷವು ಮುಂದಿನವಾರಕ್ಕೆ

18	ಸಂಸೆಯಿಂದ ಕಳಸಕ್ಕೆ ...	6
19	ಕಳಸ ಮೊಕ್ಕಾಂ ...	
20	ಕಳಸದಿಂದ ಬಾಳೇಹೊನ್ನೂರಿಗೆ ...	24
21,22	ಬಾಳೇಹೊನ್ನೂರ್ ಮೊಕ್ಕಾಂ ...	
23	ಬಾಳೇಹೊನ್ನೂರಿಂದ ಆಲ್ದೂರಿಗೆ ..	21
24	ಆಲ್ದೂರ್ ಮೊಕ್ಕಾಂ ...	
25	ಆಲ್ದೂರಿಂದ ಚಿಕ್ಕಮಗಳೂರಿಗೆ ..	12
26,27	ಚಿಕ್ಕಮಗಳೂರು ಮೊಕ್ಕಾಂ ..	
28	ಚಿಕ್ಕಮಗಳೂರಿಂದ ಬೇಲೂರಿಗೆ ..	14½
29	ಬೇಲೂರಿಂದ ಜಾವಗಲ್ಲಿಗೆ ...	15
30, 31 ಜನವರಿ 91 1, 2,	ಜಾವಗಲ್, ಶಿರೆವಾಡಿ, ಹಾರನಹಳ್ಳಿ ಮೊದಲಾದ ಸ್ಥಳಗಳಲ್ಲಿ ಷಿಕಾರೀ ಕ್ಯಾಂಪ್	
3	ಗಂಡಸಿ ಮೊಕ್ಕಾಂ ...	
4	ಗಂಡಸಿಯಿಂದ ಅರಸೀಕೆರೆಗೆ ...	30
5	ಅರಸೀಕೆರೆಯಿಂದ ಮೇಲುಕೋಟೆಗೆ ..	16
6	ಸಾಯಂಕಾಲ ಮೇಲುಕೋಟೆಯಿಂದ ಮೈಸೂರಿಗೆ ...	

ADDRESS OF THE DEWAN OF MYSORE

to the Representative Assembly held at Mysore on Tuesday, the 6th October 1890.

(ಕಳೆದವಾರದ ಶೇಷ.)

೫೯. ಎಲ್ಲಾ ಸಂಗತಿಗಳು ಯೋಚಿಸಿದರೆ, ಸದರೀ ಹೊಸಕಸಬುಗಳೂ ಮತ್ತು ಕಾರ್ಖಾನೆಗಳು ಯಾಯಾತಿಗಳು ಅಲ್ಪವಾದವು. ಪ್ರಕೃತ ಪ್ರಪಂಚದಲ್ಲಿ ಕಸಬುದಾರರೆಂದು ಬಹು ಯಶಸ್ಸು ಪಡೆದಿರತಕ್ಕ ದೇಶಾಂತರ ಜನಗಳು ಇಂಥಾ ಉದ್ಯೋಗಗಳಿಗೆ ಕೊಡುತ್ತ ಪ್ರೋತ್ಸಾಹಗಳನ್ನು ಯೋಚಿಸಲಾಗಿ ಈಗ ಕೊಡುವದು ಸಾಲದ ಸ್ಥಿತಿಯಲ್ಲವೆಂದು ತೋರುತ್ತದೆ. ಇತರ ಜನಾಂಗದವರು ನೂತನವಾದ ಶಿಲ್ಪ ಕೌಶಲಗಳನ್ನು ಕಲಿಯುವದಕ್ಕೆ ಪರದೇಶದಿಂದ ಬರತಕ್ಕ ಸಾಮಾನುಗಳಿಗೆ ಜಾಸ್ತಿಯಾಗಿ ಆಮದು ತೀರ್ವೆ ಹಾಕುತ್ತಾ ಕಾಪಾಡಿಕೊಳ್ಳುವದು ನಮ್ಮ ಮೆಂದು ಯೋಚನೆ ಯಿಲ್ಲ. ಇದರಿಂದ ಸ್ವದೇಶದ ಉದ್ಯೋಗಗಳಿಗೇ ಪ್ರಯೋಜನಕ್ಕೆ ತಂದು ತನ್ಮೂಲಕ ದೇಶಕ್ಕೆ ಧನಸ್ಯವೃಂದವನ್ನು ಸಾಧಿಸುವದಾಗುವದೆಂದು ನನಗೆ ತೋರುವದು.

೬೦. ಇಂಡಿಯಾದೇಶದ ಇತರ ಸ್ಥಳಗಳಲ್ಲಿ ಕಬ್ಬಿಣದ ಕೆಲಸದ ವ್ಯಾಪಾರ ಸ್ಥಾಪಿಸಬೇಕೆಂದು ನಡೆದ ಪ್ರಯತ್ನಗಳು ಬಹುವಿಧ ಕಾರಣಗಳಿಂದ ಸಫಲವಾಗಲಿಲ್ಲ. ಅದೇ ಮೇರೆಗೆ ಮೈಸೂರು ದೇಶದಲ್ಲಿ ಸಫಲವಾಗದೆ ಹೋಗಬಹುದೆಂಬ ಭಯದ ಸಂಶಯವು ಇದ್ದೇಯಿದೆ. ಆದ್ಯಾಗ್ಯೂ ದರೆ ಅಷ್ಟೆಲ್ಲವೂ ಆಕೆಲಸವನ್ನು ಪರೀಕ್ಷಾರ್ಥವಾಗಿ ಧಾರುಣದಲ್ಲಿ ಪ್ರಯತ್ನಮಾಡಬೇಕೆಂದು

ಸುಮಾರು ೨, ೩ ಲಕ್ಷ ರೂಪಾಯಿಗಳ ಬಂಡವಾಳ ಎರಡುವರುಷಗಳವರಿವಿಗೆ ಶರೀರ ಆಯಾಸ ಸಹ ನಿಷ್ಪ್ರಯೋಜಕವಾಗಬಹುದು. ಅನಿರೀಕ್ಷಿತವಾದ ಯಾವದಾದರು ಕಾರಣದಿಂದ ಎರಡು ವರುಷಗಳಲ್ಲಿ ಸದರೀವ್ಯಾಪಾರವು ಸ್ಥಾಪಿತವಾಗದೆ ಹೋಗುವಪಕ್ಷಕ್ಕೆ ವಿಶಿಷ್ಟ ರಿಯಾಯತಿಯು ನಿರುಪಯೋಗಿಯಾಗಿಹೋಗುತ್ತೆ. ಆದರೆ ನಾವು ಕೋರುವಮೇರಿಗೆ ಇದು ಕೈಗೂಡಿಬಂದರೆ ಮೈಸೂರು ದೇಶಕ್ಕೆ ಕಸಬುದಾರಿ ವ್ಯಾಪಾರದ ವಿಷಯದಲ್ಲಿ ನೂತನವಾದ ಒಂದು ರಕವು ಸ್ಥಾಪಿಸಿದಂತಾಗುತ್ತೆ. ಅನುಕೂಲಕದಿಂದ ಈದೇಶದ ಜನಗಳಿಗೆ ಒಳ್ಳೇ ಫಾಯಿದೆಯುಂಟಾಗುತ್ತೆ. ಈ ದೇಶದ ಜನಗಳು ದಿನವೂ ತಾವು ಮಾಡಬೇಕಾದ ಅನೇಕ ವಿಧ ಕೆಲಸಗಳಿಗೆ ದೇಶಾಂತರದಿಂದಬಂದ ಕಬ್ಬಿಣವನ್ನು ಯಾಕ್ಕವಿಲ್ಲದೆ ಸ್ವದೇಶದಲ್ಲಿ ತಯಾರಾಗುವುದಕ್ಕಿಂತಲೂ ಹೆಚ್ಚಿನ ಬೆಲೆಕೊಟ್ಟು ಉಪಯೋಗಿಸುತಲಿದ್ದಾರೆ. ಈ ಉದ್ಯೋಗದಿಂದ ಕಷ್ಟದ ಸ್ಥಿತಿಯುಳ್ಳ ಮಜೂರೀದಾರರುಗಳಿಗೆ ಜೀವನವಾಗುವಷ್ಟು ಇದಕ್ಕಿಂತಲೂ ಹೆಚ್ಚಾದ ಮಹೋಪಯುಕ್ತ ಪದಾರ್ಥಗಳನ್ನ ತಯಾರಿಸುವ ಉದ್ಯೋಗಗಳಿಂದ ಜೀವನವಾಗುವದಿಲ್ಲ. ಈ ವ್ಯವಸ್ಥೆಗಳಿಗಾಗಿ ನೇಮಿಸಲ್ಪಡತಕ್ಕ ಅನೇಕ ಮಜೂರೀದಾರರುಗಳಿಗೆ ಕೊಡತಕ್ಕ ಮಜೂರಿಯು ಈದೇಶದ ಕೂಲೀಜನರ ಭಾಗ್ಯಕ್ಕೆ ಕಾರಣವಾಗುತ್ತೆ. ಈ ಫಾಯಿದೆ ಬೇರೇದೇಶದಿಂದ ಸಾಮಾನು ತರಿಸಿದ್ದಾದರೆ ಎಂದಿಗೂ ಉಂಟಾಗಲಾರದು. ಈಸ್ಥಳದ ಕಬ್ಬಿಣ ಕೆಲಸದವರು ದೇಶಾಂತರದಿಂದ ಬರುವ ಪದಾರ್ಥಗಳಿಗೆ ಸಮಾನವಾದ ಪದಾರ್ಥಗಳನ್ನು ಮಾರುಕಟ್ಟೆಯಲ್ಲಿ ಪ್ರೋತ್ಸಾಹಿಸುವದಕ್ಕೆ ಸಾಮರ್ಥ್ಯವಿಲ್ಲದೆ ಇರುವದರಿಂದ ಕ್ರಮೇಣ ಬಹುಜಾಗ್ರತೆಯಾಗಿ ನಶಿಸಿಹೋಗುವ ಸ್ಥಿತಿಯಲ್ಲಿದ್ದಾರೆ. ಮತ್ತು ಅವರು ಪುರಾತನಪದ್ಧತಿ ಅನುಸರಿಸಿ ಹಳೇಸಾಮಾನುಗಳಿಂದ ಯಥಾವತ್ತಾಗಿ ಮಾಡಿದಲ್ಲಿ ಸ್ವಲ್ಪವಾದ ಜೀವನವನ್ನು ಸಂಪಾದಿಸಿಕೊಳ್ಳುತ್ತಾರೆ. ಇಂತಾ ಸ್ಥಳೀಯ ಕಸಬುದಾರರಿಗೆ ಮೇಲೆ ನಮೂದಾದ ಏರ್ಪಾಟಿನಿಂದ ಸರ್ವಾತ್ಮನಾ ಬಾಧಕವಿಲ್ಲ. ಉದ್ದೇಶಿಸಿರುವ ಕಬ್ಬಿಣದ ಕಾರಖಾನೆಯಲ್ಲಿ ಇಲ್ಲಿನ ಜನಗಳು ಕಾರೀಗಾರಿಚಾತುರ್ಯವನ್ನು ಕಲಿತು ಒಳ್ಳೇ ಮಜೂರೀಯೊಂದತಕ್ಕವರಾಗುತ್ತಾರೆ. ಚೆನ್ನಾಗಿಯು ಕ್ರಮವಾಗಿಯು ಸ್ಥಾಪಿಸಲ್ಪಡುವ ಬಹು ಲಾಭಕರವಾದ ಕಬ್ಬಿಣ ಕಸಬುಗಾರಿಕೆ ವ್ಯಾಪಾರದಿಂದ ಈದೇಶದವರಿಗೆ ಉಂಟಾಗುವ ಅನೇಕ ಪ್ರಯೋಜನಗಳು ಇಷ್ಟೆಂದು ಹೇಳಲು ಸಾಧ್ಯವಲ್ಲ.

೩೧. ಭಂಗಾರದಗಣಿ.—ಇದುವರಿವಿಗೆ ಸ್ಥಾಪಿಸಲ್ಪಟ್ಟಿರುವ ಕಸಬುಗಾರಿಕೆ ವ್ಯಾಪಾರಗಳಲ್ಲಿ ಅತ್ಯಂತ ಶ್ರೇಷ್ಠವಾದ ಕೋಲಾರದ ಭಂಗಾರದಗಣಿ ಕೆಲಸವು ವಿಶೇಷವಾದ ನಿರೂಪಣೆಗೆ ಅರ್ಹವಾದ್ದಾಗಿ ಇದೆ. ದಿನೇ ದಿನೆ ಅಭಿವೃದ್ಧಿಸ್ಥಿತಿಗೆ ಬರುವ ಸೂಚನೆಗಳು ತೋರುತ್ತವೆ. ೮೯ನೇ ಸಾಲಿನಲ್ಲಿ ತೆಗದ ಚಿನ್ನದ ಒಟ್ಟು ಪ್ರಮಾಣ ಸುಮಾರು ೪೦ ಲಕ್ಷ ರೂಪಾಯಿಗಳ ಬೆಲೆಯುಳ್ಳದ್ದಾಗಿ ಇತ್ತು. ಅನೇಕ ವರ್ಷಗಳಿಂದ ಬಹಳ ಶ್ರಮಪಟ್ಟು ಮಾಡಿ ಹೇರಳವಾದ ಬಂಡವಾಳವನ್ನ ಸ್ಥಳದಲ್ಲಿ ಖರ್ಚುಮಾಡಿದ್ದರಿಂದಲೇ ಸದರೀ ಪ್ರಯೋಜನ ಉಂಟಾಯಿತು. ಕೆಲವು ವರುಷಗಳ ಮುಂಚೆ ಅರಣ್ಯವಾಗಿದ್ದ ಪ್ರದೇಶವು ಈಗ ಜನವತ್ತಾದ ಪಟ್ಟಣಗಳುಳ್ಳದ್ದಾಗಿದೆ. ಎಲ್ಲ ವಿಧವಾದ ವ್ಯಾಪಾರಕ್ಕೆ ಉಂಟಾಗಿರುವ ಉತ್ತೇಜನ ಮತ್ತು ಕೂಲೀಜನಗಳಿಗೆ ಹೆಚ್ಚಾಗಿ ಮಜೂರಿ ಸಿಕ್ಕೋಣವು ಸಹ ಎಲ್ಲರಿಗೂ ತಿಳಿದೇ ಇದೆ. ೮೯ನೇ ಸಾಲಿನಲ್ಲಿ ಮೈಸೂರು ಗಣಿ ಒಂದರಲ್ಲಿ ೪೯,೩೪೮ ಔನ್ಸ್ ಭಂಗಾರ ತೆಗಿಯಲ್ಪಟ್ಟಿತ್ತು. ಗುಜಸ್ತಾ ಸಾಲಿನಲ್ಲಿ ೧೯,೧೯೦ ಔನ್ಸ ಚಿನ್ನ ತೆಗಿಯಲ್ಪಟ್ಟಿತು. ಎರಡನೇದು ಉರಿಗದ ಗಣಿಯಲ್ಲಿ ೮೮ನೇ ಸಾಲಿನಲ್ಲಿ ೪,೧೦೩೮ ಔನ್ಸ್ ಆಗಿದ್ದದಕ್ಕೆ ಈವರುಷ ೧೬,೪೩೨ ಔನ್ಸ್ ತೆಗೆಯಲ್ಪಟ್ಟಿತು. ನಂದಿದುರ್ಗದ ಗಣಿಯಲ್ಲಿ ಗುಜಸ್ತಾ ಸಾಲಿನಲ್ಲಿ ೬,೯೧೬ ಔನ್ಸ್ ಚಿನ್ನ ಉತ್ಪತ್ತಿಯಾದ್ದಕ್ಕೆ ಈವರುಷದಲ್ಲಿ ೬,೧೩೫ ಮಾತ್ರವೇ ಆಯಿತು. ಇತರ ಐದು ಗಣಿಗಳಿಂದ ಜುಜುಬೀಯಾದ ಆದಾಯ ಬಂತು. ಇನ್ನು ಕ್ರಮೇಣ ಅಭಿವೃದ್ಧಿಗೆ ಬರುವದಾಗಿದೆ.

೩೨. ಕಾಟನ್ ಮಿಲ್ಸ್ ಯಾನೆ ಹತ್ತೀಚರಖಾ.—ನೂಲಿನ ಗಿರಾಕಿಯು ಕಮ್ಮಿಯಾಗಿ ಹತ್ತೀ ಕ್ರಯ ಜಾಸ್ತೀ ಆದ್ದರಿಂದ ಬೆಂಗಳೂರಲ್ಲಿರತಕ್ಕ ಹತ್ತಿ ಯಂತ್ರಗಳ ಕೆಲಸವು ಬಹಳ ಚೆನ್ನಾಗಿ ನಡೆಯಲಿಲ್ಲ ಆದರೆ ಈ ತಗ್ಗಿರೋಣವು ಸ್ವಲ್ಪ ಕಾಲವೇ ಇರತಕ್ಕದ್ದಾಗಿ ತೋರುತ್ತೆ. ಹತ್ತಿಯ ಧಾರಣೆಯು ಇಳಿಯುತ್ತಿರುವ ಚಿಹ್ನೆ ಸ್ಪಷ್ಟವಾಗಿ ಕಂಡುಬರುತ್ತಾ ಇರುವದರಿಂದ ಈ ಸಂಬಂಧವ ವ್ಯಾಪಾರವು ಸ್ವಲ್ಪಕಾಲದಲ್ಲಿಯೇ ಯಥಾಪ್ರಕಾರ ಒಳ್ಳೇ ಸ್ಥಿತಿಗೆ ಬರಬಹುದೆಂದು ನಿರೀಕ್ಷಿಸುತ್ತೇವೆ.

೩೩. ಉಲ್ಲನ್ ಇಂಡಸ್ಟ್ರಿ ಯಾನೆ ಕುರೀಬಂಡದ ಕಾರ್ಖಾನೆ—ಆಸ್ಟ್ರೇಲಿಯಾ ದೇಶದ ಟಗರುಗಳ ಮೂಲಕ ಈದೇಶದ ಕುರಿಗಳ ಜಾತಿಯನ್ನ ಮೇಲಾದ ಸ್ಥಿತಿಗೆ ತರುವದಕ್ಕೆ ನಡೆಯುವ ಅಜಮಾಯಿಷೀ ಕೆಲಸಗಳು ಯಥಾಪ್ರಕಾರ ಒಳ್ಳೇ ಪ್ರಯೋಜನಕರವಾಗಿ ನಡೆಯುತ್ತಾ ಇದೆ ಶ್ರೇಷ್ಠವಾದ ಕುರೀ ಹುಟ್ಟನ್ನ ಸ್ಥಾಪಿಸಿದ್ದೇ ಆದರೆ ಕುರೀ ಬಂಡದ ವ್ಯಾಪಾರದ ಕೆಲಸವು ಈ ದೇಶದ ದ್ರವ್ಯವನ್ನ ಉಪಯೋಗಿಸುವದಕ್ಕೂ ಮತ್ತು ಸಾಹಸಕ್ಕೂ ವಿಸ್ತಾರವಾದ ಅವಕಾಶ ಉಂಟುಮಾಡುತ್ತೆ.

೩೪. ಮೋಂಬತ್ತಿಗಳು ಎಣ್ಣೆಗಳಿಂದಾಗುವ ಸಬ್ಬು—೮೮ನೇ ಇಸವಿಯಲ್ಲಿ ನಡೆದ ಮೈಸೂರು ಎಗ್ಜಿಬಿಷನ್ನಲ್ಲಿ ಸಿಲ್ವರ್ ಮೆಡಲ್ ಯಾನೆ ಬೆಳ್ಳೀಬಿಲ್ಲೆ ಬಹುಮಾನವನ್ನ ಪಡೆದ ಶಿಕಾರಿಪುರ ತಾ|| ಅಮಲ್ದಾರರಾಗಿರುವ ಮ|| ನಾಗೇಶರಾಯರು ಧೂಪದ ಎಣ್ಣೆಯಿಂದ ಮೇಣಬತ್ತಿಗಳನ್ನ ತಯಾರುಮಾಡುವದಕ್ಕೆ ಮನುಷ್ಯರ ಕೈ ಬಲದಿಂದ ತಿರಿಗಿಸತಕ್ಕ ಅನುಕೂಲವಾದ ಯಂತ್ರವನ್ನ ತರಿಸಿದರು. ಕೊಬರಿ ಎಣ್ಣೆಯಿಂದ ಅವರು ತಯಾರುಮಾಡಿಸಿದ ಸಬ್ಬಿನ ಬಿಲ್ಲೆಗಳು ನೇಟಿವ್ ಜನಗಳ ಬಾಯಿಬಗೆ ಅರ್ಹವಾಗುತ್ತಾ ಇದೆ. ಸದರೀ ನಾಗೇಶರಾಯರು ಸ್ವಲ್ಪಕಾಲದಲ್ಲಿಯೇ ದೂಪದ ಮರದ ಬೀಜಗಳಿಂದ ಎಣ್ಣೆ ತೆಗೆಯುವದಕ್ಕೆ ಅದರಿಂದ ಕಲ್ಪಿತವಾದ ವಿನಾಸಕ್ಕೆ ಒಂದು ಸ್ಟೀಂಬಿ ಯಾನೆ ಕ್ರೈಸ್ಟಿನ್ ತೆಗದುಕೊಳ್ಳುವದಕ್ಕೆ ಉದ್ದೇಶ ಮಾಡಿರುವದಾಗಿ ತಿಳಿಯಬರುತ್ತೆ. ಸದರೀ ಧೂಪದ ಬೀಜವು ಶಿವಮೊಗ್ಗ ಮತ್ತು ಕಡೂರು ಡಿಸ್ಟ್ರಿಕ್ಟುಗಳ ಮಲೆನಾಡುಗಳಲ್ಲಿಯೂ, ಸಮುದ್ರ ತೀರದಲ್ಲಿಯೂ ಬಹು ವಿಸ್ತಾರವಾಗಿ ಸಿಕ್ಕುತ್ತೆ. ಅನ್ವೆ ಇದುವರಿವಿಗೂ ಯಾವ ಪ್ರಯೋಜನಕರವಾದ ಕಾರ್ಯಕ್ಕೂ ಉಪಯೋಗಿಸಲ್ಪಡಲಿಲ್ಲ.

೩೫. ಫಾರೆಸ್ಟ್ ಯಾನೆ ಕಾಡುಗಳು—ಕಳೆದ ವರುಷದಲ್ಲಿ ಫಾರೆಸ್ಟುಬಾಬಿನ ತವಳತದಿಂದ ವುಂಟಾದ ನಗದೀಯಾತಿನ ವಿದ್ಯಮಾನವು ಅತ್ಯಂತ ಪ್ರೋತ್ಸಾಹಕರವಾಗಿತ್ತು. ಎಲ್ಲಾ ಖರ್ಚನ್ನು ವಜಾಮಾಡಲಾಗಿ ಆಬಾಬಿನಲ್ಲಿ ಸಿವಳ ೮,೬೬,೪೨೮ ರೂಪಾಯಿ ಆದಾಯಬಂತು. ಈ ಆದಾಯಕ್ಕೆ ಶ್ರೀಗಂಧವೇ ಮುಖ್ಯಕಾರಣವಾಗಿರುತ್ತೆ. ಈ ಶ್ರೀಗಂಧಕ್ಕೆ ಗಿರಾಕಿ ಹೆಚ್ಚಿದ್ದರಿಂದ ಗುಜಸ್ತಾ ಸಾಲು ಆಗಾಯಿತು ಶಿಲ್ಕು ದಾಸ್ತಾನಾಗಿದ್ದ ಭಾರೀಶಿಲ್ಕು ಸಂಡಲ್ ಹರಾಜ್ ಮಾಡಿಸುವದಕ್ಕೆ ಅನುಕೂಲಿಸಿತು. ಕ್ಷೀಣಸ್ಥಿತಿಯಲ್ಲಿರುವ ಅಥವಾ ಒಣಗಿದ ಮರಗಳಿಂದಲೇ ಸಂಡಲ್ ಜಮಾವಣೆ ಮಾಡಬೇಕೆಂಬ ಖಚಿತ ನಿಯಮವು ಮಾಡಲ್ಪಟ್ಟಿತು. ನೆಲದೊಳಗೆ ವ್ಯಾಪಿಸಿದ ಬೇರುಗಳು ಸಹ ಸದರೀ ಜಾಸ್ತಿ ಉತ್ಪತ್ತಿಗೆ ಕಾರಣವಾಯಿತು. ಕಳೆದ ಮೂರುವರ್ಷಗಳಲ್ಲಿ ಹರಾಜ್ ಮಾಡಿಸಲ್ಪಟ್ಟ ಶ್ರೀಗಂಧದ ಪ್ರಮಾಣ ಮತ್ತು ಉತ್ಪತ್ತಿಯಾದ ಮೊಬಲಗು ಈಕೆಳಗೆ ವಿವರಿಸಿಯಿದೆ. ಸಂಡಲ್ ಬಾಬನ್ನು ವೃದ್ಧಿಪಡಿಸಲು ಇರತಕ್ಕ ಮರಗಳನ್ನ ಪೋಷಿಸಿ ನೂತನವಾಗಿ ಗಿಡಗಳನ್ನ ಬೆಳಸುವ ಪ್ರಯತ್ನದಲ್ಲಿ ನಾವು ಮಾಮೂಲುಮೇರಿಗೆ ಆಸಕ್ತರಾಗಿದ್ದೆವು.

		ಟನಗಳು.		ಮೊಬಲಗು ರೂ
1887—88	...	2,261	..	6,81,840
1888—89	..	1,832	...	5,9[illegible],038
1889—90	..	2,351	...	8,66,428

೩೬. ಮೈಸೂರು ಡಿಸ್ಟ್ರಿಕ್ಟಿನ ಫಾರೆಸ್ಟುಗಳಲ್ಲಿ ಇರುವ ಕೊರಬು ಬಿದ್ದ ಚಿಕ್ಕಚಿಕ್ಕ ತ್ಯಾಗದ ಮರಗಳು ಕಳೆದ ಕೆಲವು ವರುಷಗಳಿಂದ ರೈಲ್ವೆ ಸ್ಲೀಪರ್ಗಳಿಗಾಗಿ ಕಡಿಯಲ್ಪಡುತ್ತಾ ಇವೆ. ಈಗ ಉದ್ದೇಶಿಸಿರುವದೇನಂದರೆ, ಅದೇಸ್ಥಳದಿಂದ ಹಿಂದೂಪುರ ನಂಜನಗೂಡು ರೈಲ್ಗಳಗೋಸ್ಕರ ಸ್ಲೀಪರ್ಗಳನ್ನು ಸರಬರಾಯಿ ಮಾಡಬೇಕೆಂದನ್ನೂ ಕೇವಲ ಆವಶ್ಯ ಕಂಡುಬಂದರೆ ಶಿವಮೊಗ್ಗ ಕಡೂರು ಡಿಸ್ಟ್ರಿಕ್ಟುಗಳ ಫಾರೆಸ್ಟುಗಳಿಂದ ಅದೇ ತರವಾದ ಮರಗಳನ್ನು ತರಿಸಬೇಕೆಂದನ್ನೂ ಯೋಚಿಸಿದೆ.

೩೭. ಹೊಸದಾಗಿ ಗಿಡಗಳು ಹಾಕಲ್ಪಟ್ಟ ಪ್ರದೇಶದ ವಿಸ್ತೀರ್ಣವು ೪ ಚದರ ಮೈಲಿಗಳಿಗಿಂತ ಹೆಚ್ಚಾಗಿತ್ತು. ರೈಲ್ವೆ ಲೈನುಗಳ ಪಕ್ಕಗಳಲ್ಲಿ ಹೊಸದಾಗಿ ಗಿಡಗಳನ್ನು ಹಾಕಿಸುವ ಕೆಲಸವು ನಡಿಯುತಲಿದೆ.

ಇದರಶೇಷ ಮುಂದಿನವಾರಕ್ಕೆ.

ORIGIN AND HISTORY OF LINGAYATS

ಲಿಂಗಾಯತರ ಉತ್ಪತ್ತಿ ಕ್ರಮವು
(ಕಳೆದವಾರಶೇಷ.)

ಆದರೆ ಈಗಿನ ಲಿಂಗಾಯತರು ಹೇಳುವವೃತ್ತಾಂತವು ಬೇರೆಯುಂಟು. ಅದೇನೆಂದರೆ, ಬಸವನಿಗೂ ಬಿಜ್ಜಳ ಅರಸನಿಗೂ ಕಲಹವುಂಟಾಗಲಿಕ್ಕೆ ಬಿಜ್ಜಳನು ಬಸವನ ಇಬ್ಬರು ಜಂಗಮರಿಗೆ ಕಣ್ಣುಗಳನ್ನು ಕಿತ್ತಿಸಿದ್ದೇ ಕಾರಣವೆಂದು ಹೇಳುವರು. ಬಸವನು ಅರಸರ ಕ್ರೂರತನದಬಗ್ಗೆ ಅವನನ್ನು ಶಿಕ್ಷಿಸುವ ಕೆಲಸವನ್ನು ತನ್ನ ಸ್ನೇಹಿತನಾದ ಜಗದ್ದೇವನಿಗೆ ಬಿಟ್ಟುಕೊಟ್ಟು ಕಲ್ಯಾಣವನ್ನು ಬಿಟ್ಟು ಬಳ್ಳಾರಿಯ ಪಶ್ಚಿಮಕ್ಕೆ ಸುಮಾರು ನೂರುಮೈಲಿಯಮೇಲೆ ಇರುವ ಸಂಗಮೇಶ್ವರವೆಂಬ ಪವಿತ್ರಸ್ಥಾನಕ್ಕೆ ಹೊರಟು ಹೋದನು. ಮುಂದೆ ಜಗದ್ದೇವನು ಇಬ್ಬರು ಲಿಂಗವಂತ ಸನ್ಯಾಸಿಗಳ ಸಹಾಯದಿಂದ ಬಿಜ್ಜಳನನ್ನು ಕೊಂದನಂತೆ. ಬಸವನು ಹಳೇಧರ್ಮವನ್ನು ಪುನಃ ಸ್ಥಾಪಿಸುವ ಕೆಲಸವನ್ನು ಮುಗಿಸಿದ್ದರಿಂದ ಈಜನ್ಮದಿಂದ ಮುಕ್ತಿಯಾಗಬೇಕೆಂದು ಶಿವನನ್ನು ಬೇಡಿಕೊಳ್ಳಲಾಗಿ ಶಿವನೂ ಪಾರ್ವತಿಯೂ ಬಂದು ಬಸವನನ್ನು ಎತ್ತಿಕೊಂಡುಹೋಗಲು, ಅವನು ಅದೃಶ್ಯನಾದನು. ಬಸವನು ಎಷ್ಟೋ ಅಮಾನುಷ ಕೃತ್ಯಗಳನ್ನು ಮಾಡಿದ್ದರಿಂದ ಅವನಧರ್ಮವು ಹಬ್ಬಿತು

ಬಸವನಧರ್ಮದ ತತ್ವಗಳು ಯಾವವೆಂದರೆ,- ಮನುಷ್ಯನನ್ನು ರಕ್ಷಿಸುವದೇವರು ಒಬ್ಬನೇ, ಯಜ್ಞ, ಯಾಗ, ತಪಸ್ಸು, ಯಾತ್ರೆ, ಉಪವಾಸ ಇವುಗಳನ್ನು ಮಾಡುವದು ಅವಶ್ಯವಿಲ್ಲ. ಲಿಂಗಧಾರಣಮಾಡುವವರೆಲ್ಲರು ಸಮಾನಸ್ಕಂಧರಾದದರಿಂದ ಜಾತಿಭೇದವಿಲ್ಲ. ಶಿವನಲ್ಲಿ ನಂಬಿಗೆಯುಳ್ಳವನೂ ಲಿಂಗವನ್ನು ಧಾರಣ ಮಾಡುವವನೂ ಯಾವಾಗಲೂ ಶುಚಿಯಾಗಿರುವದರಿಂದ, ಹಡೆದಾಗ, ಮುಟ್ಟಾದಾಗ, ಮರಣ, ಬಚ್ಚಿದಾಗ, ಲಿಂಗವಂತನಿಗೆ ಅಶುಚಿಯು ತಟ್ಟದು. ಶಿವನಲ್ಲಿ ನಿಜವಾಗಿ ನಂಬಿಗೆಯುಳ್ಳವನು ನೆಟ್ಟಗೆ ಸ್ವರ್ಗಲೋಕಕ್ಕೆ ತೆರಳುವನು. ಶಿವನು ಸರ್ವಶಕ್ತನಾಗಿರುವದರಿಂದ ಭೂತ, ಪಿಶಾಚ, ಯಂತ್ರ, ಮಂತ್ರ, ತಂತ್ರಗಳಿಂದ ಲಿಂಗವಂತನಿಗೆ ಏನೂ ಅಪಾಯವಾಗದು ಆದರೆ ಈಧರ್ಮಸಂಬಂಧವಾದಂಥ ಎಷ್ಟೋ ತತ್ವಗಳನ್ನು ಶೀಲವಂತ ಬಣಜಿಗ ಮುಂತಾದ ಯಾವ ಲಿಂಗವಂತರೂ ಪಾಲಿಸುವದಿಲ್ಲ. ಲಿಂಗವೇ ಮುಖ್ಯದೇವರೆಂದು ತಿಳದಾಗ್ಯೂ ವೀರಭದ್ರ, ಮಲ್ಲಿಕಾರ್ಜುನ, ದ್ಯಾವಮ್ಮ, ದುರುಗಮ್ಮ, ಹನುಮಂತ, ಮುಂತಾದ ದೇವತೆಗಳನ್ನು ಪೂಜಿಸುವರು. ಇವರಲ್ಲಿ ವಿಧವೆಯರಿಗೆ ಪುನರ್ವಿವಾಹವುಂಟು. ಇವರಲ್ಲಿ ವ್ಯಾಪಾರಸ್ಥರೂ, ಸರಕಾರಿ ನೌಕರರೂ, ಒಕ್ಕಲಿಗರೂ, ಗಾಣಿಗರೂ, ಶಿಂಪಿಗರೂ, ಬಣ್ಣಗಾರರೂ, ಪತ್ತಾರರೂ, ನೇಯಿಕಾರರೂ, ಕುಂಬಾರರೂ, ಹೂಗಾರರೂ, ಕೆಲಸಿಗರೂ, ಅಗಸರೂ, ಮುಂತಾದ ಅನೇಕ ಉದ್ಯೋಗಗಳನ್ನು ಮಾಡುವಜನರುವುಂಟು. ಇವರಭಾಷೆ ಕನ್ನಡ ಇವರು ಮದ್ಯಮಾಂಸಗಳನ್ನು ತಿನ್ನುವದಿಲ್ಲ. ಧಾನ್ಯ ಕಾಯಿಪಲ್ಯಗಳೇ ಇವರ ಆಹಾರವು. ಕೂಸುಹುಟ್ಟಿದಕೂಡಲೇ ಅದರ ಕೊರಳಲ್ಲಿ ಲಿಂಗಕಟ್ಟಿ ಬಳಿಕ ಲಿಂಗವನ್ನು ತೊಟ್ಟಿಲಿನ ಕಾಲಿಗೆ ಕಟ್ಟುವರು. ಮರಣದಕಾಲಕ್ಕೆ ಜಂಗಮರ ಪಾದೋದಕವನ್ನು ಸಾಯುವಮನುಷ್ಯನ ಬಾಯಲ್ಲಿ ಹಾಕುವರು. ಸತ್ತುಜಂಗಮರಿಗೂ ಆಪ್ತಇಷ್ಟರಿಗೂ ಪ್ರಾಣಕ್ಕೆ ಹಾಕುವರು. ಆಮೇಲೆ ಜಂಗಮನು ತನ್ನ ಬಲಗಾಲನ್ನು ಸಾಯುವ ಮನುಷ್ಯನ ತಲೆಯಮೇಲೆ ಇಡುವನು. ಸತ್ತಬಳಿಕ ಒಂದೆರಡುದಿನ ಹೆಣವನ್ನುಯಿಟ್ಟು ಆಪ್ತ ಇಷ್ಟರೆಲ್ಲರುಕೂಡಿ ಒಳ್ಳೇ ಸಂಭ್ರಮದಿಂದ ಒಯ್ದು ಹುಗಿಯುವರು. ಲಿಂಗವಂತರು ತಮ್ಮಮಕ್ಕಳಿಗೆ ವಿದ್ಯೆ ಕಲಿಸುವರು. ಹೊಟ್ಟೆಗೆ ನೋಡಲಾಗಿ ಇವರು ಸೌಖ್ಯದಿಂದಿದ್ದಾರೆ.

ಲಿಂಗವಂತ (ವೀರಶೈವ) ಮತವು ಸಾಮಾನ್ಯತಃ ಅದ್ವೈತಮತವಾಗಿ ಇರುತದೆ, ಇದರಲ್ಲಿ ವಿಶೇಷವೇನಂದರೆ, ಪ್ರಕೃತಿಯಯೋಗದಿಂದ ಸಗುಣಬ್ರಹ್ಮನಾದ ಶಿವನಿಗೂ ಅವನ ಕುಟುಂಬದವರಿಗೂ ಹೊರ್ತಾಗಿ ಬೇರೆ ಯಾವದೇವತೆಗೂ ಕೈಮುಗಿಯಬಾರದು. ಶಿವನ ಆತ್ಮವೂ ಮನುಷ್ಯನ ಆತ್ಮವೂ ಒಂದೇ ಮೈಮೇಲಿನ ಲಿಂಗವು ಪರಬ್ರಹ್ಮದ ಕುರುಹೆಂದು ಅದನ್ನು ಪೂಜಿಸಬೇಕು. ಮೂರ್ತಿಗಳನ್ನು ಪೂಜಿಸಕೂಡದು. ದಾನವೆಂಬ ಕರ್ಮದಿಂದ ಧರ್ಮ ಬೇರೆ ಸಾಧನವಾವುದೂ ಮುಕ್ತಿಗೆ ಅವಶ್ಯವಿಲ್ಲ ಲಿಂಗವಂತರಿಗೆ ಅಷ್ಟಾವರಣಗಳು (ಎಂಟುಹೊದಿಕೆಗಳು) ಇರತಕ್ಕವು. ಅವು—೧ ವಿಭೂತಿ, ೨ ರುದ್ರಾಕ್ಷಿ, ೩ ಮಂತ್ರ, (ಶಿವಾಯನಮಃ), ೪ ಗುರು, ೫ ಲಿಂಗ, ೬ ಜಂಗಮ, ೭ ಪಾದೋದಕ, ೮ ಪ್ರಸಾದ, ಲಿಂಗವಂತರ ಗುರುಗಳು ೫ ಜನರುಂಟು ಅವರಿಗೆ ಪಂಚಾಚಾರ್ಯರೆನ್ನುವರು—ರೇವಣಾರಾಧ್ಯ, ಮರುಳಾರಾಧ್ಯ, ಪಂಡಿತಾರಾಧ್ಯ, ಏಕೋರಾಮ, ವಿಶ್ವಾರಾಧ್ಯ, ಇವರು ಬಸವನಿಗಿಂತ ಪ್ರಾಚೀನರು. ಇವರೇ ಅಯ್ಯನವರನ್ನು (ಬಹುಶಃ ವೀರಶೈವರನ್ನು) ಉಂಟುಮಾಡಿದರೆಂದು ಹೇಳುತ್ತಾರೆ. ಈಗಿನ ಅಯ್ಯಗಳಲ್ಲಿ ಪ್ರತಿಒಬ್ಬನು ಈ ಐವರಲ್ಲಿ ಒಬ್ಬನ ಸಗೋತ್ರದವನು, ಅಂದರೆ ಶಿಷ್ಯ ಮನೆತನದವನಾಗಿರುತ್ತಾನೆ ಒಂದೇಸಗೋತ್ರದವರಲ್ಲಿ ವಿವಾಹಸಂಬಂಧವಾಗುವದಿಲ್ಲ. ಮುಂದೆ ಅಯ್ಯನಾಗತಕ್ಕ ಹುಡುಗನಿಗೆ ೮ನೇವರ್ಷ ಮೌಂಜಿ ಮುಹೂರ್ತ (ಅಯ್ಯನ) ವೆಂಬ ಸಂಸ್ಕಾರವನ್ನು ಮಾಡುತ್ತಾರೆ

ಲಿಂಗವಂತರ ಮುಖ್ಯಗುರುವು ಮೈಸೂರು ಸೀಮೆಯಲ್ಲಿ ಚಿತ್ರಗಿರಿಮಠವೆಂಬಲ್ಲಿ ಇರುತ್ತಾನೆ. ಆಗುರುವಲ್ಲದೆ ಲಿಂಗವಂತರಮೇಲೆ ಹೆಚ್ಚುಕಡಿಮೆ ಅಧಿಕಾರ ನಡಿಸುವಂತಾ ಬಹು ಜನರಿಗೆ ಗುರುಸ್ಥಾನವೆನಿಸುವಂತ ಅಯ್ಯಗಳು ಬಹಳಕಡೆಯಲ್ಲಿ ಇರುತ್ತಾರೆ

ಲಿಂಗವಂತರಲ್ಲಿ ನಿಜಲಿಂಗವಂತರು, ಸ್ವೀಕರಿಸಿದ ಲಿಂಗವಂತರು ಅರ್ಧಲಿಂಗವಂತರು. ಯೆಂಬ ಮೂರು ದೊಡ್ಡವರ್ಗಗಳನ್ನು ಮಾಡಬಹುದು. ಮೊದಲನೇ ನಿಜಲಿಂಗವಂತರೆಂಬ ವರ್ಗದಲ್ಲಿ ಜಂಗಮರು, ಶೀಲವಂತರು, ಬಣಜಿಗರು, ಪಂಚಮಸಾಲಿಯವರು, ಎಂಬ ನಾಲ್ಕುಜಾತಿಗಳು ಬರುತ್ತವೆ. ಇವೇ ಲಿಂಗವಂತರಲ್ಲಿ ಯೆಲ್ಲಕ್ಕೂ ಶ್ರೇಷ್ಠಜಾತಿಗಳಿರುತವೆ. ಕಡಿಮೆಜಾತಿಗಳ ಜನರು ಈಜಾತಿಗಳಲ್ಲಿ ಸೇರಲಾರರು. ಈನಾಲ್ಕುಜಾತಿಗಳ ಆಚಾರವ್ಯವಹಾರಾದಿಗಳು ವಿವರವಾಗಿ ಮುಂದಿನವಾರದಲ್ಲಿ ತಿಳಿಸಲ್ಪಡುವವು,

[ಇದರ ಶೇಷ ಮುಂದಿನವಾರಕ್ಕೆ |

BANGALORE —Printed and published at the KARNATIC PRESS, No. 114, SRINIVASA MANDIRAM ROAD, PETTAH —1890

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

Vol. XVII] BANGALORE—MONDAY, DECEMBER 8, 1890. [No. 49.

ಸಂಪುಟ ೧೭.] ಬೆಂಗಳೂರು:—ಸಿ ೧೮೯೦ನೇ ಇಸವಿ ಡಿಸೆಂಬರ್ ೮ನೇ ತಾರೀಖು ಸೋಮವಾರ. [ಸಂಖ್ಯೆ ೪೯.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಮುಂಗಡವಾಗಿ	ತರುವಾಯ
ಮುಂಗಡ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡ	4—0—0	5—0—0
ತರುವಾಯ ,,	5—0—0	6—0—0

[illegible]

ಪ್ರಕಟನೆಯ ರಿವಾಜ್.

[illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs. 5 0-0

ವೈದ್ಯಸಾರ ಸಂಗ್ರಹ.

[illegible]

ಟಿ. ಬಿ. ವೆಂಕಟಾಚಾರ್,

ಕೋರಮಂಗಲ, ... 41ನೇ ನಂ. ಮನೆ

ADVERTISEMENTS.

ನೋಟೀಸ್.

ಅದ್ಭುತವಾದ ಒಂದು ಔಷಧವು.



[illegible]

Sole Agents for India.

NAYLOR, SONS, GRIMES & CO.,

Wholesale Depot, 35 Clive Street, Calcutta.

[illegible]

ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ಮಾರಾಟಕ್ಕೆ ಸಿದ್ಧವಾಗಿವೆ. ಬೇಕಾದವರು ಬೆಲೆಯನ್ನು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

	ಪೋಸ್ಟ್ ಸಹಿತ ರೂ. ಅ. ಪೈ
ಸಟೀಕಾ ವೈದ್ಯಸಾರ ಸಂಗ್ರಹ	೫ ೦ ೦
,, ಶಿವಗೀತೆ	೧ ೧ ೦
,, ಶಿವಾನಂದಲಹರಿ	೦ ೪ ೦
,, ಕಾಲಾಮೃತ	೧ ೨ ೦
,, ಮುಕುಂದಮಾಲಾ	೦ ೧೨ ೦
,, ಬಾಲರಾಮಾಯಣ	೦ ೮ ೦
,, ಗೋಪಿಕಾಗೀತೆ	೦ ೧ ೬
,, ಚಾಣಕ್ಯನೀತಿ (ಸುಭಾಷಿತ)	೦ ೬ ೦
ವಿಷ್ಣುಸಹಸ್ರನಾಮ ಪತ್ರಿಕೆ	೦ ೫ ೦
ಸೂರ್ಯಸಹಸ್ರನಾಮ	೦ ೩ ೦
ಕೃಷ್ಣಕರ್ಣಾಮೃತ	೦ ೨ ೬
ತ್ರಿಕಾಂಡ ಅಮರ ಮೂಲ	೦ ೩ ೬
೧ ಕಾಂಡ	೦ ೧ ೦

ಕನ್ನಡ ಗ್ರಂಥಗಳು.

ಶುಕಸಪ್ತತಿ ಅನ್ವರ್ ಕೃತಿ	೩ ೦ ೦
[illegible]	೦ ೫ ೦
ವೃಷಭೇಂದ್ರ ವಿಜಯ	೧ ೪ ೦
[illegible]	೦ ೪ ೦
[illegible]	೦ ೪ ೦
[illegible]	೦ ೨ ೬
[illegible]	೦ ೨ ೬
[illegible]	೦ ೩ ೦
[illegible]	೦ ೨ ೦
[illegible]	೦ ೨ ೦
[illegible]	೦ ೨ ೬
[illegible]	೧ ೦ ೦
[illegible]	೦ ೧೨ ೦

ಪವಿತ್ರ ಕ್ಯಾಲೆಂಡರ್.

[illegible]

ನೋಟೀಸ್.

ಮೈಸೂರು ಮಹಾರಾಜರವರ ಅರಳೇ ಯಂತ್ರದ ಕಾರ್ಖಾನೆ.

ನೋಟೀಸ್.

[illegible]

ಮೈಸೂರು ಸರ್ಕಾರ್,

ಪ್ರಕಟಣೆ,

ಬೆಂಗಳೂರು.

ನೋಟೀಸ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ:—

[illegible]

H. GROVES, Mem. Inst. C. Engs.,

Executive Engineer,

Bangalore-Hindupur Line

Mysore State Railway.

ಕೊಡಗು ಫಾರೆಸ್ಟ್ ಇಲಾಖಾ.
ನೋಟೀಸ್.

೧೮೯೦ನೇ ಇಸವಿ ನವಂಬರ್ ತಾರೀಖ್ ೫ರಲ್ಲೂ, ಇದೇ ಇಸವಿ ಡಿಸೆಂಬರ್ ತಾರೀಖ್ ೧೨ರಲ್ಲೂ ಫ್ರೇಜರಪೇಟೆಯಲ್ಲಿ ೩೦ ಟನ್ ಗಂಧ ಹರಾಜ ಮಾಡಲ್ಪಡುವದು.

ಶರತ್ತು:—೧೮೮೫ನೇ ಇಸವಿ ಜನವರಿ ತಾರೀಖ್ ೩. ನಂಬರ್ ೧೦ ರ ಕೊಡಗು ಡಿಸ್ಟ್ರಿಕ್ಟ್ ಗಜೆಟಿನಲ್ಲಿ ಪ್ರಾಯಿಷ ಮಾಡಲ್ಪಟ್ಟ ಕೊಡಗು ಚೀಫ್ ಕಮಿಶ್ನರ್ ಸಾಹೇಬರವರ ೧೮೮೧ನೇ ಇಸವಿ ಫೆಬ್ರುವರಿ ತಾರೀಖ್ ೧೫ ರ ಬಾಬತು ನಂಬರ್ ೫ ರ ನೋಟಿಫಿಕೇಷನ್ ಮೇರೆ.

ಕೇಕಿನ ೫೫ ರಂತೆ ಅಡ್ವಾನ್ಸ್ ಕ್ರಯದ ಮೊಬಲಗನ್ನು ಹರಾಜ್ ಕಾಲದಲ್ಲಿ ಕೊಟ್ಟು ಬಾಕೀ ಮೊಬಲಗನ್ನು ೧೮೯೧ನೇ ಇಸವಿ ಮಾರ್ಚ ತಾರೀಖ್ ೧೦ ರ ವಳಗೆ ಪ್ರಾರ್ತಿಯಾಗಿ ಪಾವತಿ ಮಾಡತಕ್ಕದ್ದು.

J. McKie,
Deputy Conservator of Forests, Coorg.

ಕೊಡಗ, ಫಾರೆಸ್ಟ್ ಇಲಾಖಾ
ನೋಟೀಸ್.

೧೮೯೦ ನೇ ಇಸವಿ ನವಂಬರ್ ತಾರೀಖ್ ೨೮ ರಲ್ಲಿ ಇವರ ನಮೂದಿಸಿದ ತೇಗದ ಪಗ್ಗಿ ಕೆ ಸೋಮವಾರಪೇಟೆ ಡಿಪೋದಲ್ಲಿ ೧೮೯೦ ನೇ ಇಸವಿ ಡಿಸೆಂಬರ್ ತಾರೀಖ್ ೧೯—೨೦ ರಲ್ಲಿ ಹರಾಜು ಮಾಡಲ್ಪಡುತ್ತವೆ.

ತ್ಯಾಗದ ತೊಲೆಗಳು	270	6700
ಹೊನ್ನೆ ಪಗ್ಗಿ	260	6400
ತ್ಯಾಗದ ಸ್ಲೀಪರ್	6260	7880
ತ್ಯಾಗದಕೊಂಬೆಯಾದಿಮರಮುಡು	180	780
ಜಾತಿಕಾಲು	1670	...

ಶರತ್:—೧೮೮೯ ನೇ ಇಸವಿ ಡಿಸೆಂಬರ್ ತಾರೀಖು ೧೯ ನಂಬರ್ ೫೩ ರರ ಚೀಫ್ ಕಮಿಶನರ್ ಸಾಹೇಬರವರ ನೋಟಿಫಿಕೇಷನ್ ಮೇರೆ ಮರದ ಕ್ರಯದ ಪ್ರತಿ ಕೇಕಿನ ಹನ್ನೆರಡು ಮೊಬಲಗನ್ನು ಹರಾಜು ಕಾಲದಲ್ಲಿ ಪಾವತಿ ಮಾಡಿ ಬಾಕಿ ಮೊಬಲಗನ್ನು ಹರಾಜು ತಾರೀಖ್ ಲಾಗಾಯಿತು ೩೦ ದಿನಗಳೊಳಗೆ ಪಾವತಿ ಮಾಡತಕ್ಕದ್ದು.

J. McKie,
ಡೆಪ್ಯುಟಿ ಕನ್ಸರ್ವೇಟರ್

ನೋಟಿಸ್.

"ಕೊರಗ್ಲೋ ಅಂತಿಮ ಶಾಲೆಗೆ ಸ್ವಿರಿ"

ಎಂಬ ಡಿಸ್ತರಿ ಪುಸ್ತಕವನ್ನು ಲಾಯರಗಳಿಗೂ, ವರ್ತಕರಿಗೂ ಮತ್ತು ಇತರ ಜನಗಳಿಗೂ ಬಹಳ ಉಪಯುಕ್ತವಾಗಿರುವಂತೆ, ಮುಖ್ಯವಾಗಿ ಕೇರಾದ ಸಂಗತಿಗಳನ್ನು ಇಂಗ್ಲಿಷ್ ತಿಂಗಳು, ತಾರೀಖ್, ಮತ್ತು ಅದಕ್ಕೆ ಸರಿಯಾದ ನಮ್ಮ ಹಿಂದೂ ಸಂವತ್ಸರ, ತಿಂಗಳು, ತಿಥಿ, ವಾರ, ನಕ್ಷತ್ರ ಮುಂತಾದ್ದು ಸೇರಿಸಿ ಜಿಲ್ಲೆಗಳಲ್ಲಿ ಇರುವದಕ್ಕೆ ಅನುಕೂಲವಾಗಿರುವಂತೆ ಟೆಬ್ಯುಲರ್ ಸ್ವರೂಪದಿಂದಾಗಿ ಒಂದು ಪುಸ್ತಕ್ಕೆ ಒಂದೇ ಡೈರೀಟ್ ಇರುವಂತೆ ಪ್ರೊಮೊನೊಲಾಯೇರಿಗೆ ೧೮೯೧ನೇ ಇಸವಿಯ ಡೈರಿಯು ವಿಕ್ರಯಕ್ಕೆ ಸಿದ್ಧವಾಗಿದೆ. ಈ ಗ್ರಂಥಮುದ್ರಣಕ್ಕೊಂದವರಿಗೆ ಪುಸ್ತಕಗಳು ದೊರೆಯುತ್ತೆ.

ಕ್ರಯ ಪ್ರತಿ ೧ಕ್ಕೆ	...	೦ ೩ ೬
ಅಂಚೆ ಹಾಸಲ್	...	೦ ೧ ೦
ರಿಜಿಸ್ಟರ್ ಅವಶ್ಯವಿದ್ದರೆ	...	೦ ೨ ೦

ಇದಲ್ಲದೆ ಕೇರಾದ ಇತರ ಪುಸ್ತಕಗಳನ್ನು ಅಲ್ಪ ಬೆಲೆಗೆ ಭದಾಣ ದೊರೆಯುತ್ತವೆ, ಬೇಕಾದವರು ತರಿಸಿಕೊಳ್ಳಬಹುದು.

ಸ. ಚಂದ್ರಶೇಖರಯ್ಯ,
ಬೆಂಗಳೂರು, } ಪ್ರಾಕ್ಟಿಕಲ್ ಪ್ರಿಂಟಿಂಗ್ ಪ್ರೆಸ್ಸಿನ, ಪ್ರೊಪ್ರೈಟರ್.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, DECEMBER 8, 1890

೧೮೯೦ನೇ ಡಿಸೆಂಬರ್ ೮ನೇ ಸೋಮವಾರ.

WOMEN IN ANCIENT INDIA
ಈ ಸಂಬಂಧ ಪ್ರಕಾಶಿಕೆಯಲ್ಲಿ ನಿರೂಪಣವು.

No V.

ಇನ್ನು ವಿವಾಹಕಾಲಾವಸ್ಥೆಯಲ್ಲಿ ಸ್ತ್ರೀಯರ ಧರ್ಮವು ಕೆಲವು ವಿಷಯಗಳಲ್ಲಿ ಭಿನ್ನವಿದ್ದಾಗ್ಯೂ ಸಮುದಾಯಕ್ಕೇನ ಪ್ರಕಾಶವಸ್ಥೆಯಲ್ಲಿದ್ದಂತೆ ಹೇ ಇರುತ್ತಿತ್ತೆಂದು ಧಾರಾಳವಾಗಿನುಡಿಯಬಹುದು. ಶ್ರೀಮದ್ರಾಮಾಯಣವನ್ನು ಮಹಾಭಾರತವನ್ನು ಓದಿ ನೋಡಿದರೆ ಆ ಕಾಲದಲ್ಲಿ ಸ್ತ್ರೀಯರು ಪಡೆದಿದ್ದ ಸ್ವಾತಂತ್ರ್ಯ ವಿಕರನಾದದ್ದೆಂದು ಸ್ಪಷ್ಟವಾಗದೆ ಹೋಗಲಾರದು. ವಿವಾಹಿತರಾದವರಿಗೆ ಜನಸಮುದಾಯದಲ್ಲಿ ಉಂಟಾಗ್ವ ಗೌರವ ಪುರಸ್ಕಾರಗಳೇ ಅವಿವಾಹಿತರಾದವರಿಗೆ ಸಹ ಸಂಭಾಗದ್ದಂತೆ ತಿಳಿಯಬರುತಿದೆ. ಇದಕ್ಕೆ ಸಾಧಕವಾಗಿ ಶ್ರೀ ಮಹಾಭಾರತದಲ್ಲಿ ಹಿಂದುಲಬಾಖ್ಯಾನವಿರುತ್ತದೇನೆಂದರೆ, ಪರಾಶರ ಗೋತ್ರೋದ್ಭವಳಾದಿಯೂ, ಪಂಚಶಿಖ ಋಷಿ ಶಿಷ್ಯಳಾಗಿಯೂ, ನಾನಾ ಶಾಸ್ತ್ರಗಳಿಂ ಸಾಂಗವಾಗಿ ಅಭ್ಯಾಸಮಾಡಿದವಳಾಗಿಯೂ, ಸಕಲ ವಿದ್ಯಾಪ್ರವೀಣಳಾಗಿಯೂ, ಸಾಂಖ್ಯಯೋಗ ವೇದಾಂಗಾದಿಗಳಲ್ಲಿ ಪ್ರವೀಣಳಾಗಿಯೂ ಇದ್ದ ಸುಲಭಾ ಎಂಬ ಪರಿವ್ರಾಜಕೆಯೊಬ್ಬಳು ಮಿಥಿಲ ದೇಶಾಧೀಶನಾದ ಜನಕ ಚಕ್ರವರ್ತಿಯ ಬಳಿಗೆ ಹೋಗಿದ್ದಳು. ಆಕೆಯು ಬಹಳ ಸುಂದರಿಯನ್ನು ಸುಕೊಂಡಿದ್ದಾಗ್ಯೂ ಪರಬ್ರಹ್ಮ ಸ್ವರೂಪವನ್ನು ವಳಿಯಬೇಕೆಂದು ದೃಢವಾಗಿ ಅದರಂತೆನಿಗೆ ಪದೇಶಿಸುವಂತಹ ಗುರುವಂ ಹುಡುಕುತ ನಾನಾದೇಶ ಸಂಚಾರವಮಾಡುತ ಮಾರ್ಗವಶಾತ್ ಮೇರೆಕರುಂತೆ ಮಿಥಿಲ ದೇಶಕ್ಕೆ ಬಂದು ಜನಕ ಸಭೆಯಲ್ಲಿ ತನ್ನ ಉದ್ದೇಶವನ್ನು ಅರಸನಿಗೆ ತಿಳಿಸಿದಳು. ಆದರೆ ಅವಳ ರೂಪ ಯೌವನ ಲಾವಣ್ಯಗಳಂ ಕಂಡು ಜನಕನು ಅವಳ ಮಾತುಗಳಂ ನಂಬದೆ ಸುಮ್ಮನಿರಲು ತರುವಾಯ ಆ ಸನ್ಯಾಸಿನಿಯು ಸದರೀ ರಾಜಸಭೆಯಲ್ಲಿ ಅದ್ವೈತ ವಿಷಯವಂ ಕುರಿತು ವಿಚಾರ ಮಾಡಲಾಗಿ ನುಡಿದಲ್ಲದೆ ರಾಜನ ಆತನಿಗೆ ತನ್ನ ಉಚ್ಚತೆಯಂ ತೋರಿಸಿ ಬಹಳ ಪ್ರಶಂಸಿಸಿದರು. ಸುಲಭೆಯಂತೆ ವಿಕೆಯಸವಿಯಾದವಳು ಕೌಶಿಕಿ ಎಂಬ ಪರಿವ್ರಾಜಕೆಯೊಬ್ಬಳು ಅಗ್ನಿಮಿತ್ರನ ರಾಜ್ಯದಲ್ಲಿ ನೆಲಸಿ ಆತನ ಅಂತಃಪುರಸ್ತ್ರೀಯರಿಗೆ ಭರತ ವೇದಾಂತಾದಿ ಶಾಸ್ತ್ರಗಳಂ ಕಲಿಸುತಲಿದ್ದಳೆಂದು ಮಾಲವಿಕಾಗ್ನಿಮಿತ್ರದಲ್ಲಿ ಪರೀಕ್ಷಿತವಾಗಿದ್ದಳು. ಹೀಗಲ್ಲದೆ ಶ್ರೀಮದ್ರಾಮಾಯಣದಲ್ಲಿ ಸಹ, ದಂಡಕಾರಣ್ಯದಲ್ಲಿ ಆಶ್ರಮವಾಸಿನಿಯಾಗಿದ್ದ ಶಬರಿಯು, ರಾವಣ ವಿಗ್ರಹಾನಂತರ ಶ್ರೀರಾಮರು ಸೀತೆಯೊಡನೆ ಅಯೋಧ್ಯೆಗೆ ಹಿಂತಿರುಗಿ ಬರುವ ಸಂದರ್ಭದಲ್ಲಿ ಅವರು ಶಬರಿಯ ಆಶ್ರಮದಲ್ಲಿ ನಿಂತು ಆಕೆಯ ಆತಿಥ್ಯವಂ ಕೈಗೊಂಡು ಅವಳ ಅಭೀಷ್ಟಗಳನ್ನು ನೆರವೇರಿಸಿದರೆಂದು ತಿಳಿಸಲ್ಪಟ್ಟಿರುತಿದೆ. ಆ ಕಾಲದಲ್ಲಿ ವಿವಾಹಿತರಾಗಿದ್ದವರ ಸ್ಥಿತಿಯಂ ವಿಚಾರಿಸಲಾಗಿ, ಅದು ಪ್ರಾಯಃ ಈಗಿನವರ ಸ್ಥಿತಿಗಿಂತಲೂ ಉತ್ತಮವಾಗಿಯೇ ಇರುತಿತ್ತು. ಈ ಅವಸ್ಥೆಯಲ್ಲಿ ಕ್ಷತ್ರಿಯರು ಬಹು ಭಾರ್ಯಾ ಪರಿಗ್ರಹಕ್ಕೆ ಪಕ್ಷಪಾತಿಗಳಾಗಿದ್ದರು ದಶರಥನು ಮುನ್ನೂರು ಮುಂದಿಗಿಂತ ಅಧಿಕವಾಗಿ ವಿವಾಹ ಮಾಡಿಕೊಂಡನು. ಜಮದಗ್ನಿಯ ಪುತ್ರನಾದ ಪರಶುರಾಮನು ಕ್ಷತ್ರಿಯ ಕುಲವಂ ನಿರ್ನಾಮಮಾಡುವಂತೆ ಪ್ರತಿಜ್ಞೆ ಮಾಡಿ ಪಕ್ಷಪಾತಮೇರೆ ಯುದ್ಧಕ್ಕೆ ಬರುವ ಕಾಲದಲ್ಲಿಯೂ ವಿವಾಹ ಏಕಪತ್ನಿಯಲ್ಲಿರುತಿದ್ದುದರಿಂದ ಆತನ ಗೋಚರಕ್ಕೆ ಹೋಗದೆ ತಪ್ಪಿಸಿಕೊಂಡನು. ಇದೇರೀತಿ ಕ್ಷತ್ರಿಯರನೇಕರು ಹಿಂದಿನಂತೆ ಕಾರಣದಿಂ ಅನೇಕಮಂದಿ ಭಾರ್ಯೆಯರು ಪರಿಗ್ರಹಿಸುತಲಿದ್ದರೆಂದು ಸ್ಪಷ್ಟವಾಗುತಿದೆ. ಸ್ತ್ರೀಯರ ವಿವಾಹ ಕ್ರಮಗಳು ಸಹ ಬದಲಾಯಿಸಿ, ಸ್ವಯಂವರವೂ ಕಡಾಚಿತ್ ಪ್ರಸಿದ್ಧವಾಗಿಯೂ ಪ್ರಬಲಗೊಂಡಿದ್ದವು. ಬ್ರಾಹ್ಮಣೀಯರಲ್ಲಿ ಅರುಂಧತಿಯು ಮಹಾ ಜ್ಞಾನಿಸಿಯಾಗಿ ವಸಿಷ್ಠರಿಂದ ಆಕೆಯು ಸುಂದರಿಸುವ ಸ್ವರೂಪಿಯು ಸಹ ಮಹಾ ಪತಿವ್ರತೆಯಾಗಿ ಭಾವಿಸಂ ವಿವಾಹದ ರಾತ್ರಿ ಪ್ರವೇಶ ಹೋಮಾನಂತರ ಧ್ರುವನಕ್ಷತ್ರದೊಡನೆ ಸಹ ಮಧ್ಯದಲ್ಲಿ ನಕ್ಷತ್ರರೂಪದಿಂ ಕಾಣ್ಸಿಸುತಿರುವ. ಸದರೀ ಸ್ತ್ರೀಯ ದರ್ಶನವು ಮಾಡಿಸುವ ವಾಡಿಕೆಯು ಬ್ರಾಹ್ಮಣರಲ್ಲಿ ಅದ್ಯಾಗಿ ನೆರೆಗೊಂಡು ನಡೆಯುತಲಿದೆ. ಅತ್ರಿ ಮುನಿಯ ಭಾರ್ಯೆಯಾದ ಅನಸೂಯೆಯೂ, ಸಾವಿತ್ರಿಯೂ ಸ್ಮರಣಾರ್ಹರಾಗಿರುತ್ತಾರೆ. ಕಶಿಕಾಂತಿಲೆಯ ಪಾತಿವ್ರತ್ಯವೂ ಅವಳ ಪುರೋಭ್ಯಸ್ತ್ರಿಯೂ, ಆಕೆಯ ನೀತಿ ಧರ್ಮಗಳೂ ಅನುವರ್ತನೀಯಗಳಾಗಿರುತಿವೆ. ಕರ್ದಮ ಪ್ರಜಾಪತಿಯ ಭಾರ್ಯೆಯಾದ ಮತ್ತು ಕಪಿಲ ಮಹರ್ಷಿಯ ತಾಯಿಯಾದ ದೇವಹೂತಿ, ದೇವಯಾನಿ, ಶರ್ಮಿಷ್ಠಾ ಮೊದಲಾದವರನೇಕರು ಪರಿಶೀಲತೆಯಿಂ ಜನಸಮುದಾಯದಲ್ಲಿ ವಿಶೇಷ ಗೌರವ ಪ್ರಾಭವಗಳನ್ನು ಪಡೆದಿದ್ದರಲ್ಲದೆ ಸತ್ಯಭಾಮೆಯಂತೆ ಇನ್ನೂ ಕೆಲವರು, ಧನುರ್ವಿದ್ಯಾ ಪಾರಂಗತರಾಗಿಯೂ, ಅಸ್ತ್ರವಿದ್ಯಾಪ್ರವೀಣರಾಗಿಯೂ ಇರುತ ಯುದ್ಧ ಕಾಲಗಳಲ್ಲಿ ತಮ್ಮ ಪತಿಗಳೊಡನೆ ಶತ್ರುನಿಗ್ರಹವಂ ಮಾಡಿದರು. ಇವಕ್ಕೆ ಅನೇಕ ದೃಷ್ಟಾಂತಗಳಿಲ್ಲದಿರಲಿಲ್ಲವು. ಈ ಅವಸ್ಥೆಯಲ್ಲಿಯೇ ಬ್ರಾಹ್ಮಣನು ಇತರ ಮೂರು ವರ್ಣದವರಲ್ಲಿಯೂ ವಿವಾಹ ಮಾಡಿಕೊಳ್ಳಬಹುದೆಂಬ ನಿಯಮವೂ, ಅವರ ಅಧಿಕಾರಗಳೂ ಅವರವರ ಪುತ್ರಪ್ರಭೇದಗಳೂ ಏರ್ಪಟ್ಟವು. ಅವು ಮುಂದಿನ ವಾರದಲ್ಲಿ ವಿವರವಾಗಿ ತಿಳಿಸುವೆವು.

Occasional Notes
ನೈಮಿತ್ತಿಕ ವಿಷಯಗಳು.

A rumour.—ಇಂಡ್ಯಾದೇಶದ ಕಮಾಂಡರ್ ಇನ್‌ಚೀಫರವರಾದ ಸರ್ ಫ್ರೆಡರಿಕ್ ರಾಬರ್ಟ್ಸ್ ಯವರು ತಮ್ಮ ಕೆಲಸದಿಂದ ನಿವೃತ್ತರಾದ ತರುವಾಯ ಅವರ ಸ್ಥಾನದಲ್ಲಿ ಮಹಾರಾಣಿಯವರ ಪುತ್ರರಾದ ಡ್ಯೂಕ್ ಆಫ್ ಕನಾಟ್‌ರವರು ನಿಯಮಿಸಲ್ಪಡುವರೆಂದು ಪ್ರಬಲವಾದ ವದಂತಿ ಹರಡಿಕೊಂಡಿರುತಿದೆ.

Death.—ಈಚೆಗೆ ಎರಡು ಮೂರು ವರ್ಷಗಳ ಕಾಲದ ಮೊದಲು ಇಂಡ್ಯಾದೇಶಕ್ಕೆ ಗೋಸಂರಕ್ಷಣೆಯಂ ತಪ್ಪಿಸಬೇಕೆಂದು ಬಹುವಿಧ ಪ್ರಯತ್ನಗಳಂ ಮಾಡುತಲಿದ್ದ ಪರಮಹಂಸ ಪರಿವ್ರಾಜಕಾಚಾರ್ಯರಾದ ಶ್ರೀಮದ್ ಸ್ವಾಮಿ ಎಂಬವರು ಜ್ವರರೋಗದಿಂದ ಪುಷ್ಕರದಲ್ಲಿ ಪರಂಧಾಮವನ್ನೈದಿದರೆಂದು ಕೇಳಿ ಬಹಳ ವಿಷಾದಿಸುತ್ತೇವೆ.

Remission of debt.—ಇಂಡ್ಯಾರಾಜ್ಯದ ವೈಸ್‌ರಾಯ್ ಯವರು ಈಚೆಗೆ ಪಶ್ತಿಯಾಲಾ ಸಂಸ್ಥಾನಕ್ಕೆ ಹೋಗಿದ್ದರಿಂದ ಅವರ ಜನ್ಮದಿವಸವನ್ನು ಮಹಾರಾಜರವರು ಸಂಸ್ಥಾನಕ್ಕೆ ಕೊಡಬೇಕಾಗಿದ್ದ ಸಾಲದ ಬಾಕಿ ನಾಲ್ಕು ಲಕ್ಷ ರೂಪಾಯಿಗಳನ್ನು ಮಾಫಿ ಕೊಟ್ಟಿರುತ್ತಾರೆ.

A decision of the Nizam's Government.—ಹೈದರಾಬಾದಿನ ಸರ್ಕಾರದವರು ತಮ್ಮ ರಾಜಧಾನಿಯಲ್ಲಿ ರಿಯಾಸತ್ ಸರ್ಕಾರ್ ಇಲಾಖೆಗಳಿಗಾಗಿ ಕೆಲವು ಕಟ್ಟಡಗಳಂ ಕಟ್ಟಿಸಬೇಕೆಂದು ಇರುವದಕ್ಕೆ, ಹಿಂದಿನಿಂದಲೂ, ಮುಖ್ಯವಾಗಿ ಸಂಬಂಧಪಟ್ಟಿರುವ ಜನರಲ್ ಹಾಸ್ಪಿಟಲ್ ನಡುವೆಯಲ್ಲಿ ಒಂದು ಹಾಸ್ಪಿಟಲ್ಲನ್ನು ಕಟ್ಟಿಸಬೇಕೆಂದು ಯೋಚಿಸಿರುವಂತೆ ತಿಳಿಯಬಂದಿದೆ.

Re-examination in Sanskrit.—ಈಚೆಗೆ ನಡೆದ ಮದರಾಸ್ ಯೂನಿವರ್ಸಿಟಿ ಬಿ.ಎ. ಪರೀಕ್ಷೆಯ ಸಂಸ್ಕೃತ ಪ್ರಶ್ನೆ ಪತ್ರಿಕೆಗಳು ಯಾವ ಮಾರ್ಗದಿಂದಲೋ ಪರೀಕ್ಷೆಗೆ ಪೂರ್ವ ಹೊರಗಾದುದರಿಂದ ಆ ಭಾಗದ ಪರೀಕ್ಷೆಯಂ ಮಾತ್ರ ಈ ತಿಂಗಳ ೩೦ ನೇ ತಾರೀಖಿನಲ್ಲಿ ಪುನಃ ಪರೀಕ್ಷಿಸ ಬೇಕೆಂದು ಸೆನೆಟಿನವರು ನಿರ್ಣಯಿಸಿರುತ್ತಾರೆ.

The cause of leprosy.—ಈಚೆಗೆ ಮುಂಬಯಿ ಪಟ್ಟಣದೊಳು ವೈದ್ಯ ಶಾಸ್ತ್ರ ಪ್ರವೀಣರಾದವರು ಸಭೆಸೇರಿ ನಡೆಸಿದ ಉಪನ್ಯಾಸಗಳಲ್ಲಿ ಸಭಾಧ್ಯಕ್ಷರಾದ ಡಾಕ್ಟರ್ ವಿಷ್ಟರ್ ಎಂಬುವರು ಕುಷ್ಠರೋಗದ ವಿಷಯದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯವೇನೆಂದರೆ, ಸದರೀ ರೋಗವು ಸುತರಾಂ ಸಾಂಕ್ರಾಮಿಕವಾದುದಲ್ಲವು, ಬರುವ ಆಹಾರದಿಂದ ಮುಖ್ಯವಾಗಿ ಮತ್ಸ್ಯಾಹಾರದಿಂ ಅದರ ವಿಷದೇಹದಲ್ಲಿ ವ್ಯಾಪಿಸಿ ಉಂಟಾಗತಕ್ಕದ್ದು, ಎಂಬದು. ಈರೋಗಕ್ಕೆ ವೈದ್ಯರಾದವರಿಗೆ ಇವರ ನವಿನಿಕೆಂದ್ರಬಂದಬಹುದೆಂದು ಕಾರಣಗಳಲ್ಲಿ ಹೇಳಿದನೆಂದಾಗಿರಬಹುದು.

An advice.—ರಾಜಾ ಸರ್. ಟಿ. ಮಾಧವ ರಾಯರವರು ವಿಕಂತುಗಳಿಗೆ ಒಂದು ವಿಧವಾದ ಬುದ್ಧಿವಾದವಂ ಹೇಳುತ್ತಾರೇನೆಂದರೆ, ಸದ್ಯದ ಧರ್ಮಕ್ಕೆ ಇಂಗ್ಲಿಷ್ ಜನರಂತೆ ವರ್ತಿಸುವ ಹುಡುಗರನ್ನು ಸ್ವೀಕಾರ ಮಾಡಿಕೊಳ್ಳಬಾರದು, ಯೇಕೆಂದರೆ ಅಂತವರು ಪುನರ್ವಿವಾಹ ಮಾಡಿಕೊಳ್ಳುವಂತೆ ನಿಮಗೆ ಬೋಧಿಸುವರು, ಎಂಬದು. ಹಿಂದೂಗಳ ಧರ್ಮಶಾಸ್ತ್ರಗಳಲ್ಲಿ ವಿಧವಾ ಸ್ತ್ರೀಕಾರಕ್ಕೆ ಪತಿಯ ಅನುಮತಿ ವಿನಾ ಅವಕಾಶವಿರುವದಿಲ್ಲವು. ಕದಾಚಿತ್ ಯಾರಾದರು ಪತಿಯ ಅನುಜ್ಞೆಯಂ ಪಡೆದಿದ್ದಾಗ್ಯೂ ಅನುವಂಶೀತನಾದ ಬಾಲಕನು ಸ್ವೀಕಾರ ಮಾಡಿಕೊಳ್ಳಬೇಕೇ ಹೊರತು ದತ್ತವರ್ನ ಮಾಡಿಕೊಳ್ಳಲಾಗದು. ಬ್ರಾಹ್ಮಣರಲ್ಲಿ ಉಪನಯನ ಕಾಲವು ಎಂಟನೇ ವರ್ಷವೆಂದು ವಿಧಿಯಾಗಿರುತಿದೆ. ಅದರೊಳಗೆ ಇಂಗ್ಲಿಷಿನವರ ಮರ್ಯಾದೆಗಳಂ ಕಲಿಯುವದಕ್ಕೆ ಅವಕಾಶವೇ ಉಂಟಾಗುವದಿಲ್ಲವಾಗಿ ಮೇಲೆ ಕಂಡ ಸಲಹೆಯು ಅಸಂಬದ್ಧವಾದುದೆಂದು ಯೋಚಿಸುತ್ತೇವೆ.

LOCAL AND PROVINCIAL NEWS
ಬಳದೇಶಮತ್ತು ಪ್ರಾಂತ್ಯ ಸಮಾಚಾರಗಳು.

Chittoor Items.—ಚಿತ್ತೂರಿನ ಮ್ಯುನಿಸಿಪಾಲಿಟಿಯ ಜನರಲ್ ಕಮಿಟಿಯವರು ಗಳ ಕೆಲಸ ಕಾರ್ಯಗಳಂ ಕುರಿತು ಮ್ಯಾಕ್ಲೀನ್ ಗವರ್ನ್‌ಮೆಂಟಿನವರು ಯೋಚನೆಯಾಗಿ ಕೆಲವು ನಿಬಂಧನೆಗಳಂ ಮಾಡಬೇಕೆಂದಾಲೋಚಿಸುತಲಿದ್ದಾರೆ.

Late train.—ಕಳೆದ ಶನಿವಾರದಿನ ಮದ್ರಾಸ್ ಒಂಬತ್ತು ಘಂಟೆಗೆ ಸರಿಯಾಗಿ ಈ ಊರು ಸೇರಬೇಕಾದ ಬ್ರೈನ್ ಮೈಲುಗಾಡಿಯು ಸಾಯಂಕಾಲ ಐದುಘಂಟೆಗೆ ಬಂದು ಸೇರಿದ್ದರಿಂದ ಪ್ರೈವೇಟಿಗೆ ಹೋಗಬೇಕಾದ ಪ್ರಯಾಣಸ್ಥರಿಗೆ ಬಹಳ ಅನಾನುಕೂಲ ಉಂಟಾಯಿತು. ಇದಕ್ಕೆ ಕಾರಣ ತಿಳಿಯಬರಲಿಲ್ಲ.

The Middle School Examination.—ಮಿಡಲ್‌ಸ್ಕೂಲ್ ಪರೀಕ್ಷೆಯು ಇದರೊಡನೆ ಮೈಸೂರು ಪ್ರಾಂತ್ಯದಲ್ಲಿ ಇದು ಗತ ಸೋಮವಾರದ ದಿನ ಪ್ರಾರಂಭವಾಗಿ ಶುಕ್ರವಾರದೊಡನೆ ಪೂರ್ತಿಯಾಯಿತು. ಸಾಧಾರಣವಾಗಿ ಈ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳಲ್ಲವು ಸುಲಭವಾಗಿಯೂ ಉಮೇದುವಾರರ ಯೋಗ್ಯತೆಗೆ ತಕ್ಕಂತೆಯೂ ಇದ್ದವು. ತತ್ಕಾಲದಲ್ಲಿ ನೇರತಾ ೮೦ ಮಂದಿ ಪ್ರಕಾರ ತೇರ್ಗಡೆಯಾಗಬಹುದೆಂದು ನಿರೀಕ್ಷಿಸಲ್ಪಟ್ಟಿರುತಿದೆ. ಪದ್ಯಪಾಠದಲ್ಲಿ ಹೆಚ್ಚಿಗಿರುವವರ ಸಂಖ್ಯೆ ಹೆಚ್ಚಾಗಿರುತಿದೆ.

A kurubia yogi.—ಈಗ್ಗೆ ಐದಾರು ದಿನಗಳ ಹಿಂದೆ ಮಾಗಡಿ ತಾಲ್ಲೂಕಿಗೆ ಸೇರಿದ ತಾವರೆಕೆರೆಯಲ್ಲಿರುವ ಕುರುಬರ ಜಾತಿಯವನಾದ ಒಬ್ಬ ಮಹಾತ್ಮನು ಯೋಗಾಭ್ಯಾಸದ ಬಲದಿಂ ಸಮಾಧಿಯಲ್ಲಿ ಕುಳಿತಿರುವಂತೆಯೂ ಆತನ ಪುನಸ್ಸಂದರ್ಶನಕ್ಕಾಗಿ ಬಹುಮಂದಿ ಕಾದಿದ್ದಾರೆಂತಲೂ ತಿಳಿಸಿದ್ದೆವಷ್ಟೆ. ಈ ಯೋಗಿಯು ಮೊದಲು ತಿಳಿಸಿದ್ದ ಪ್ರಕಾರ ಏಳನೇ ದಿವಸದ ದಿನ ಸಮಾಧಿಯಿಂದ ಬಹಿರ್ಮುಖನಾಗಿ ಅನೇಕರಿಗೆ ದರ್ಶನವನ್ನಿತ್ತು, ಈಗ ದೃಢವಾಗಿರುವರೆಂದು ಪಂಕ ನಮ್ಮ ಬಾತ್ಮೀದಾರನು ತಿಳಿಸುತ್ತಾನೆ.

Survey settlement.—ಶ್ರೀಮನ್ ಮಹಾರಾಜರವರ ಜ್ಯೇಷ್ಠ ಸಹೋದರರಾದ ಗತಿಸಿದ ಮಹಾರಾಜ ಪ್ರಿನ್ಸ್ ಗೋಪಾಲರಾಜೇ ಅರಸಿನವರ ಸ್ವೀಕೃತ ಪುತ್ರರು ಇನ್ನೂ ಪ್ರಾಯಸ್ಥರಾಗಿರುವದರಿಂದ ಅವರಿಗೆ ಪಾಲಕರಾಗಿರುವ ಶ್ರೀಮನ್ ಮಹಾರಾಜಾ ಸರ್ಕಾರದವರು ಮನೆತನಕ್ಕೆ

ಕ್ಕೋಡು, ನಂಜನಗೂಡ್ ತಾಲ್ಲೂಕ್ ಸಿಗನಸೂರ್ ಮತ್ತು ಮೈಸೂರ್ ತಾಲ್ಲೂಕ್ ಅರಿಕೆರೆ ಈ ಗ್ರಾಮಗಳನ್ನು ಸರ್ವೆ ಮಾಡಬೇಕೆಂಬದಾಗಿ ಸರ್ಕಾರ್ದವರು ಹುಕುಂ ಮಾಡಿರುವುದರಿಂದ, ಫೈಸಲಾದಮೇಲೆ ಫಲಿತಾಂಶವನ್ನು ತಮಗೆ ತಿಳಿಯಪಡಿಸಬೇಕೆಂದು ಮೈಸೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಿಗೆ ಅಜ್ಞಾಪಿಸಿದಾರೆಂತ ಕೇಳುತ್ತೇವೆ. ಈ ಗ್ರಾಮಗಳ ಸೈವಾಯಿ ವಿಷಯದಲ್ಲಿ ಸರ್ವೆ ಇಲಾಖೆಯವರು ಶೀಘ್ರ ಎಚ್ಚರಿಕೆ ಯುಳ್ಳವರಾಗಿರುವರೆಂದು ನಂಬುತ್ತೇವೆ.

[ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವ ವಾರ್ತಾಹಾರರ ಬರಹಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲವು.—ಎಡಿಟರ್ ಕ. ಪ್ರ.]

CORRESPONDENCE

THE RECENT F. A. EXAMINATION.

ಮ|| ರಾ|| ಕರ್ಣಾಟಕ ಪ್ರಕಾಶಿಕಾ ಎಡಿಟರವರ || ಕ್ಕೆ

ಸಾಮಾನ್ಯವಾಗಿ ಯೂನಿವರ್ಸಿಟಿ ಪರೀಕ್ಷೆಗಳೆಲ್ಲವು ವಿದ್ಯಾರ್ಥಿಗಳ ಜ್ಞಾನವನ್ನರಿಯುವದಕ್ಕಾಗಿ ಉದ್ದಿಷ್ಟವಾದವಾಗಿದ್ದರೂ ಕಾಲಕ್ರಮೇಣ ಈಗ ಅವುಗಳೆಲ್ಲವೂ ಪರೀಕ್ಷಕರ ಪಾಂಡಿತ್ಯ ಪ್ರದರ್ಶನಕ್ಕೆ ಮುಖ್ಯವಾದವಾಗಿ [illegible] ಗ್ರಂಥ, ಕಾಲ [illegible] ಪರೀಕ್ಷಕರ ಜನರುಗ [illegible] ವಾಡಿಕೆಯು ನಡೆಗೊಂ [illegible] ಸಿಟಿಗಳಲ್ಲಿ ಸದರೀ [illegible] ನಡೆಸುತ್ತಿದ್ದಾರೆ. [illegible] ಮಾತ್ರ ಅದು ಯಾವ [illegible] ರೀತಿಯಿಂದ [illegible] ಲಿಂಗವಾಗಿ ತೋರ್ಪಡಿಸಲ್ಪಟ್ಟಿತು [illegible] ಪ್ರಶ್ನೆಪತ್ರಿಕೆಗಳ ಸ್ವಭಾವವನ್ನು [illegible] ಸ್ವಲ್ಪ ಮಟ್ಟಿಗೆ [illegible] ತಿಳಿದುಕೊಳ್ಳಬಹುದಾಗಿರುತ್ತದೆ. ಈ ಸಲದ ಎಫ್. ಎ. ಪರೀಕ್ಷೆಯ ಕನ್ನಡ ಭಾಗದ ಮೇರೆಗ ಪ್ರಶ್ನೆ ಪತ್ರಿಕೆಗಳು ಬಹಳ ಕಠಿಣವಾಗಿದ್ದುವೆಂತಲೂ ಅದರಿಂದ ಅನೇಕರು ತಮ್ಮ ಮುಂದಿನ ಫಲಿತಾಂಶವನ್ನು ಕುರಿತು ಚಿಂತಿಸುತ್ತ, ಬಹಳ ಸಂಕಟ ಪಡುತ್ತಿರುವರೆಂತಲೂ ಕೇಳಿ, ಅದರ ಯಾಥಾರ್ಥ್ಯವನ್ನರಿಯುವುದಕ್ಕೆ ಸದರೀ ಪ್ರಶ್ನೆ ಪತ್ರಿಕೆಗಳನ್ನು ತರಿಸಿ ನೋಡಿದೆನು. ಅವುಗಳ ವಾಕ್ಯ ಶೈಲಿಯಿಂದ ಅವುಗಳ ರಚಕರು ಕನ್ನಡವಾಗಿ ಭಾವಿಸಬೇಕಾಗಿದ್ದಲ್ಲದೆ ಪ್ರಖ್ಯಾತ ಪಂಡಿತರಿಂದ ರಚಿತವಾದ ಕನ್ನಡವಾಗಿರಲಿಲ್ಲವು. ಆದರೆ ಈ ದೇಶದಲ್ಲಿಯೂ ಎಲ್ಲರೂ ಇಷ್ಟು ದೊಡ್ಡ ಪರೀಕ್ಷೆಗೆ ಪರೀಕ್ಷಕರಾಗಲಿಕ್ಕೆ ಸಾಧ್ಯವಲ್ಲವಾಗಿ ಯಾರೋ ಪ್ರಸಿದ್ಧರಾದವರೇ ಇವರು ಎಂತಲಾಗಿರಬೇಕೆಂದು ಭಾವಿಸಿ ಅವರು ತಿಳಿದುಕೊಳ್ಳಲಿಚ್ಛಿಸಿದೆನು. ಪರಂತು ನನ್ನ ಪ್ರಯತ್ನವು ವ್ಯರ್ಥವಾಗಿ ಸನ್ನನಾಗಬೇಕಾಯಿತು. ಆಗ ಆ ಪರೀಕ್ಷಕರ್ಯಾರೇ ಯಾಗಿರಲಿ; ಅವರು ತಿಳಿದುಕೊಳ್ಳಬೇಕಾದ ಕ್ರಮವೂ ಅವಶ್ಯಕತೆಯೂ ನನಗೆ ಬೇಕಾಗಿಲ್ಲವು. ಸದರೀ ಪ್ರಶ್ನೆ ಪತ್ರಿಕೆಗಳ ಸ್ವಭಾವವು ನೋಡಲಾಗಿ ಪರೀಕ್ಷಕರಾದವರಿಗೇ ಅನುಭವವಿಲ್ಲವ ಕೆಲವು ಪ್ರಶ್ನೆಗಳು ಕೇಳಲ್ಪಟ್ಟಿರುವದರಿಂದ ಅವರೇ ಇದಕ್ಕಾಗಿ ಅನ್ಯರಲ್ಲಿ ವ್ಯಾಸಂಗ ಮಾಡಿ ಬಹಳ ಶ್ರಮಪಟ್ಟು ಪರರ ಯೋಗ್ಯತಾ ನಿರ್ಣಯಕ್ಕೆ ಪ್ರಯತ್ನ ಪಟ್ಟಂತೆ ತೋರುತ್ತದೆ. ಪರೀಕ್ಷಕರ ಅತಿ ಕಠಿಣಗಳಿಂದ ಪಾಸ ಪರೀಕ್ಷೆಗಳು ಅಶಕ್ತರಾದ ವಿದ್ಯಾರ್ಥಿಗಳು ತಡೆಯುವ ಗೋಳಾಡಿದ್ದೂ ಕ್ಯಾಲೆಂಡರಿನಲ್ಲಿ ಭಾವಿಸುತ್ತೇನೆ. ಒಂದು ಪ್ರಶ್ನೆಯಲ್ಲಿ..."ಕೆ" ಎಂಬ ಶಬ್ದಾರ್ಥದಿಂದ ಬೈಸ್ಕರ ಸಿದ್ಧಾಂತವು ಎಷ್ಟರಮಟ್ಟಿಗೆ ತಿಳಿಯಪಡುವುದೆಂಬದಾಗಿ ಕೇಳಲ್ಪಟ್ಟಿದೆ. ಅಪ್ರಾಕೃತವಾದ ಅರ್ಥಕ ಸಿದ್ಧಾಂತವು ಕೇಳಿದ್ದನ್ನು ನೋಡಲಾಗಿ ವಿದ್ಯಾರ್ಥಿಗಳ ಅತಿ ಭಂಗಕ್ಕಾಗಿಯೂ, ಸ್ವಪಾಂಡಿತ್ಯ ಪ್ರದರ್ಶನಾರ್ಥವಾಗಿಯೂ ಕೇಳಲ್ಪಟ್ಟ ಇಂತಾ ಪ್ರಶ್ನೆಗಳೂ ಪ್ರಶ್ನಾರ್ಥವಂತೆ ತಿಳಿದುಕೊಳ್ಳಲಿಕ್ಕೆ ಮೂಲಾಧಾರ ಭೂತರಾದ ವೈಯಾಕರಣರೋ ಒಬ್ಬರು ಸಹಾಯಕರಾಗಿದ್ದಂತೆ ಭಾವಿಸಬೇಕಾಗಿದೆ. ಅನ್ಯ ಮತಗಳಲ್ಲಿ ಜ್ಞಾನ ಸಂಪಾದನಾರ್ಥ ಶಿಕ್ಷ್ಯಭಾವವಂ ವಹಿಸಿ ಪ್ರಚಾರದೊಳ್ಳದೆ ವಿಕಲಿತವಾಗಿರುವ ಇವರ ಸಿದ್ಧಾಂತಾಚಾರ್ಯಸಹಾರಗಳನ್ನು ತಿಳಿದುಕೊಳ್ಳುವದು ತಪ್ಪೆಂಬಮೆಂದು ನಾನೆಷ್ಟುಮಾತ್ರವೂ ಸುತಿಯುವದಿಲ್ಲವು. ಪರಂತು ಸ್ವಪಾಂಡಿತ್ಯ ಪ್ರದರ್ಶನಾರ್ಥ ತಾವು ಈಚೆಗೆ ಅನ್ಯರಲ್ಲಿ ಅರ್ಜಿಸಿದ ಅಸಂಪೂರ್ತಿಯಾದ ಜ್ಞಾನಪ್ರದರ್ಶನಾರ್ಥ ಅವ್ಯಾಪಿ ವಿವಾದಾಸ್ಪದವಾಗಿರುವ ಮತ ವಿಷಯಗಳಲ್ಲಿ ಅನುಭವರೂನ್ಯರಾಗಿರುವ ಬಾಲಕರಿಗೆ ಪ್ರಶ್ನೆಗಳಂತೆಯೂ ಮಾತ್ರ ಕ್ಷುಲ್ಲಕವೆಂದು ಭಾವಿಸಬಾರದೆ ಹೋಗಲಾರದು. ಒಂದುವೇಳೆ ಸದರೀ ಪರೀಕ್ಷಕನಿಂದ ಪರೀಕ್ಷಿಸಲ್ಪಟ್ಟಂತಾ ವಿದ್ಯಾರ್ಥಿಯೊಬ್ಬನು ಅವರ ಸ್ಥಾನದೊಳಿರುವಂತೆ ಭಾವಿಸುತ್ತ, ಪೃಚ್ಛಕರಂತಿರುತ್ತ ಅರ್ಹತೆಯ ಜೈನಾಗಮರೀತ್ಯಾ ಆತ್ಮನಿಗೆ ಕ್ಷಣಿಕತ್ವವನ್ನು ಯಾವದಕ್ಕಾಗಿ ಅಂಗೀಕರಿಸುವದಿಲ್ಲವು, ಸರ್ವಜ್ಞನುಕುರಿತು ಬೌದ್ಧರುವಾದಿದ ಆಕ್ಷೇಪಣೆಗಳಿಗೆ ಜೈನರು ಕೇಳದ ಸಮಾಧಾನವೇನು? ಮತಿ, ಶ್ರುತಿ, ಅವಧಿ, ಮನಃಪರ್ಯಾಯ, ಕೇವಲ, ನಿಸರ್ಗ, ಅಧಿಗಮ, ತ್ರಿರತ್ನ, ತ್ರಿಕರಣ/ಈ ಪದಗಳಿಗೆ ರೂಪನಿಷ್ಪತ್ತಿಗಳೊಡನೆ ಸಿದ್ಧಾಂತಾನುಗುಣವಾಗಿ ಅರ್ಥವಂ ವಿವರಿಸು ಎಂದಲ್ಲದೆ ಸ್ಯಾದ್ವಾದಸಪ್ತಭಂಗಿ ವಾದವು, ಇದಂ ಬೌದ್ಧ ವ್ಯಾಖ್ಯಾತೃ ನಿರಾಕರಿಸಿದರೆಂದು ಕೇಳುವಪಕ್ಷಕ್ಕೆ ಪಂಡಿತರಾದ ಒಬ್ಬ ಜೈನನನ್ನಾಶ್ರಯಿಸಿ ಅವನಮೂಲಕ ತಿಳಿದುಕೊಂಡ ಅವುಗಳಿಗೆ ಸಮಂಜಸಗಳಾದ ಉತ್ತರಗಳಂ ಬರೆಯಲಿಕ್ಕೆ ಮೇಲಿರುವ ಪರೀಕ್ಷಕರು ಪ್ರಥಮತಃ ಸಮರ್ಥರಾಗಿರುವರೆ? ನನಗೆ ಬೇರೆ ತೋರಲಿಲ್ಲತೆ. ಮತ್ತೊಂದು ಪ್ರಶ್ನೆಯಲ್ಲಿ ವಾಲ್ಮೀಕಿ ರಾಮಾಯಣಕ್ಕೂ ಪಂಪ ರಾಮಾಯಣಕ್ಕೂ ಕಥಾ ಸಂದರ್ಭದಲ್ಲಿರುವ ವ್ಯತ್ಯಾಸವು ಪ್ರಾಧಾನ್ಯೇನ ಕೇಳಲ್ಪಟ್ಟಿರುತ್ತದೆ. ಸದರೀ ಎರಡುರಾಮಾಯಣಗಳನ್ನೂ ಸಮಗ್ರವಾಗಿ ಓದಿ ಸಮನ್ವಯಮಾಡಿದಹೊರತು ಅವುಗಳಲ್ಲಿನ ಕಥಾಸಂದರ್ಭವು ಸ್ಪಷ್ಟವಾಗಿ ಸ್ಪಷ್ಟವಾಗುವದಿಲ್ಲವು. ಪರೀಕ್ಷೆಗಾಗಿ ಕ್ಲುಪ್ತವಾದ ಭಾಗದಿಂ ಪಠಿಸಿದ ಮಾತ್ರಭಾಗವನ್ನೇ ಸಮಗ್ರವಾಗಿ ತಿಳಿಸಲಿಕ್ಕೆ ಪರೀಕ್ಷಕರು ಸ್ವತಃ ಶಕ್ತರಾಗಿರುವರೆಂದು ನಾನು ಭಾವಿಸುವದಿಲ್ಲವು. ದೇವೀಭಾಗವತಕ್ಕೂ ಶ್ರೀಭಾಗವತಕ್ಕೂ ಕಥಾಸಂದರ್ಭದಲ್ಲಿರುವ ವ್ಯತ್ಯಾಸಗಳನ್ನೆಲ್ಲವು ಕೇಳಿಸಿರೆಂದು ಅವರನ್ನೇ ಕೇಳಿದರೆ ಅವರಿಗೆ ಸಾಧ್ಯವಾಗುವದೆ? ಮತ್ತೊಂದುಪ್ರಶ್ನೆಯಲ್ಲಿ ಯಮಕಶಬ್ದ ಶ್ಲೇಷ ಮೊದಲಾದ ಶಬ್ದಾಲಂಕಾರಗಳನ್ನುಳ್ಳ ಕಾವ್ಯವನ್ನು ಹೇಳಿ ಅವರಲ್ಲಿ ಸಾಧಕ ಬಾಧಕಗಳೇನೆಂದು ಕೇಳಲ್ಪಟ್ಟದೆ. ಇದು ವಿದ್ಯಾರ್ಥಿಗಳ ಯೋಗ್ಯತೆಗೂ ವ್ಯವಧಾನಕ್ಕೂ ಮೀರಿದಪ್ರಶ್ನೆಯಾಗಿರುತ್ತದೆ. ಇದು ಇವರಿಗೆ ಪಾಠವೇಳುವಂತಾ ಮತ್ತು ಅವರು ಕೇಳುವಂತಾವರ ಯೋಗ್ಯತೆಗೆ ಮೀರಿದ್ದೆಂದೆಣಿಸುವೆನು. ಹೀಗೆಯೇ ಪ್ರಶ್ನೆಗಳೆಲ್ಲವೂ ಕ್ಲಿಷ್ಟಗಳಾಗಿಯೂ, ಕೊಡಲ್ಪಟ್ಟ ಕಾಲಪರಿಮಾಣಕ್ಕೆ ಮೀರಿದವಾಗಿಯೂ, ವಿದ್ಯಾರ್ಥಿಗಳ ಯೋಗ್ಯತೆಯನ್ನತಿಕ್ರಮಿಸಿದವಾಗಿಯೂ ಇರುವದರಿಂದಲೇ ವಿದ್ಯಾರ್ಥಿಗಳೆಲ್ಲರೂ ಬೆದರಿಸುತಲಿಕ್ಕೆ ಕಾರಣವಾಗಿ ಏರ್ಪಟ್ಟಿತು. ಕಠಿಣಭಾಗಗಳನ್ನೆಲ್ಲವು ಪ್ರಾರ್ಥಿಸಿ ಕಥೆಗಳುತುಗಾತುಶಬ್ದಕ್ಕೆ"ಸಂಧಿಸ್ವರೂಪವನ್ನು ಕೇಳುವವರಿಂದ ವಿದ್ಯಾರ್ಥಿಗಳ ಪರಿಶ್ರಮವೆಲ್ಲವು ಅನಿಯತವಾಗದಂ ಸುತುಗಾತುವರೆವಾತಿಕೆಯುಳ್ಳ ಪರೀಕ್ಷಕರ ಅಂಕಿತವಾದ ಕಾವ್ಯವೆಂದು ತೋರುತ್ತದೆ. ಮುಖ್ಯವಾಗಿ ಪರೀಕ್ಷಕರನ್ನು ನಿಯಮಿಸುವವರಲ್ಲಿ,ಅವರ ಪಾಂಡಿತ್ಯವನ್ನೂ, ಲೋಕಾನುಭವವನ್ನೂ, ಭೂತದಯಾನುರಾಗವನ್ನೂ, ಸದ್ಬುದ್ಧಿಯನ್ನೂ ಪರೀಕ್ಷಿಸಿ ನಿಯಮಿಸದಿದ್ದಂತಾ ಕಾಲವೆಲ್ಲವೂ ಗತಿಸಿ ಪರಮಾತ್ಮ ಪದ್ಧತಿ ಯೋಜಿಸಲ್ಪಟ್ಟದರಿಂದ ಅರ್ಥಾತುರಕರೆಲ್ಲರೂ ಪರೀಕ್ಷಕರಾಗಲಿಕ್ಕೂ, ಈ ಸಲ ಉಮೇದವಾರರಾಗಿ ವಿದ್ಯಾರ್ಥಿಸ್ಥಾನದೊಳಿರುವವರು ಬರುವಸಂವತ್ಸರದಲ್ಲಿ ಪರೀಕ್ಷಕರಾಗುವದರಿಂದಲೂ ಬಹುಮುಂದಿ ವಿದ್ಯಾರ್ಥಿಗಳ ಭಾಗ್ಯ ಗಳು ಅವರಧೀನವಾಗುತ್ತವೆ. ಇವರು ಸ್ವತಃ ತೀರ್ಗಾಡಿಯಾಗುವದಕ್ಕೆ ಪೂರ್ವದಲ್ಲಿ ವಿದ್ಯಾರ್ಥಿದಶೆಯೊಳಿರುವಾಗ ಇರುವ ಚಿತ್ತವೃತ್ತಿಯೂ, ಹೃದಯಸಾರಳ್ಯವೂ, ಸಹನೆಯೂ ತಾನಿನ್ನೊಬ್ಬ ಪರೀಕ್ಷಕನಾದಕಾಲದಲ್ಲಿ ಹಾರ್ಗಸೆಲರು ತಿಳಿಸುವ ಬುದ್ಧಿಮಾಡಗಳೊಡನೆ ನಿವೃತ್ತಿಯಾಗಿ ಸ್ವೋಚ್ಛಾದ್ವಿರುದ್ಧ ಧರ್ಮಗುಣಗಳುಳ್ಳವರಾಗುತ್ತಾರೆ. ಇದಕ್ಕೆ ಕಾರಣವೇ ಯೂನಿವರ್ಸಿಟಿಯವರ ಅರ್ಥ ತುರಕ್ಕವೂ ಗವರ್ನಮೆಂಟಿನವರ ವಿದ್ಯಾಭಿವೃದ್ಧಿಪ್ರಿಯುಕ್ತವಾದ ರಾಜಕೀಯೋದ್ದೇಶವೂ ಸಹಕಾರಿಗಳಾಗಿರುವುವೆ. ದೇಶಭಾಷಾಭ್ಯಾಸದ ವಿಷಯದಲ್ಲಿ ವಿದ್ಯಾರ್ಥಿಗಳು ಹೊಂದುವ ಲಕ್ಷ್ಯವನ್ನೂ, ಕಾಲೇಜುಗಳಲ್ಲಿ ಸಂಡಿತರೆನಿಸಿರತಕ್ಕವರು ಪಾಠ ಹೇಳುವಂತಾ ಕ್ರಮವನ್ನೂ, ಇದಕ್ಕಾಗಿ ಅವರು ವಹಿಸುವ ಶ್ರಮದನ್ನೂ, ಕಡೆಗೆ ಲಭಿಸುವ ಫಲವನ್ನೂ ಮುಂದಿನಕಾಗದಲ್ಲಿ ವಿವರಿಸುತ್ತೇನೆ.

ತಮ್ಮ ವಿಧೇಯನಾದ,

B. A.

ಅಯ್ಯಾ,—ಇದರ ಕೆಳಗೆ ನಾನು ಬರೆಯುತಿರುವ ವಿಷಯವನ್ನು ಘನವಾದ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿ ಅದರಲ್ಲಿ ನನಗುಂಟಾಗಿರುವ ಸಂಶಯವು ಪರಿಹರಿಸಬೇಕೆಂದು ಪ್ರಾರ್ಥಿಸುತ್ತೇನೆಂದರೆ,—

ಕಳೆದ ಕಾರ್ತೀಕ ಶುದ್ಧ ಪೂರ್ಣಿಮಾ ಬುಧವಾರ ರಾತ್ರಿ ಪ್ರಥಮ ಯಾಮದಲ್ಲಿ ಚಂದ್ರೋಪರಾಗ ಸಂಭವಿಸಿತಷ್ಟೆ. ಆ ದಿನ ಸಾಯಂಕಾಲ ಪ್ರಥಮ ಯಾಮದಲ್ಲಿ ಭೋಜನ ಮಾಡಬಹುದೆಂದು ಈದೇಶದಲ್ಲಿ ಪ್ರಸಿದ್ಧ ಪಂಡಿತರಾದ ಕೆಲವರು ಶಾಸ್ತ್ರಾಧಾರಗಳ ಮೂಲಕ ನಿರ್ಣಯಿಸಿ ತಮ್ಮತ್ತ ತಾವು ಆಚರಿಸಿದರಲ್ಲದೆ ಅನ್ಯರೂ ಆಚರಿಸುವಂತೆ ಮಾಡಿದರು. ಬೇರೆ ಕೆಲವರು ಪಂಡಿತರು, ಆ ದಿನ ರಾತ್ರಿ ಪ್ರಥಮಯಾಮದಲ್ಲಿ ಉಪರಾಗವಾದುದರಿಂದ ಸಾಯಂಕಾಲ ಪ್ರಥಮ ಯಾಮದಲ್ಲಿ ಭೋಜನವನ್ನಾಗಲಿ ಶ್ರಾದ್ಧವನ್ನಾಗಲಿ ಮಾಡಕೂಡದು, ಪರಂತು ಶುದ್ಧಮುಂದಲ ವಾದನೋಲೆ ಮಾಡತಕ್ಕದ್ದೆಂದು ನಿರ್ಣಯಿಸಿ ಆ ರೀತಿ ತಾವೂ ಮಾಡಿ ಅನ್ಯರಿಂದಲೂ ಮಾಡಿಸಿದರು. ಕೆಲವರು ಪ್ರಥಮಪಕ್ಷವನ್ನೂ ಬೇರೆ ಕೆಲವರು ದ್ವಿತೀಯಪಕ್ಷವನ್ನೂ ಅವಲಂಬಿಸಿ ಅನುಷ್ಠಿಸಿದರು.

ಮೇಲಿನ ಉಭಯ ಕಕ್ಷಿಯವರ ವಾದವನ್ನು ಶಾಸ್ತ್ರಸಮ್ಮತವಾದುದ್ಯಾವದೋ ಅದನ್ನರಿಯಲಶಕ್ತರಾದವರು ಉದಾಸೀನಭಾವವು ವಹಿಸಿರುತ್ತಾರೆ.

ಈ ಪೂರದಲ್ಲಿ ಪ್ರಕಟಿಸಲ್ಪಡುವ ಶಾಸ್ತ್ರಸಂಜೀವಿನೀ ಎಂಬ ಪತ್ರಿಕೆಗೆ ಶಾಸ್ತ್ರಾಧಿಪಾನಿ ಎಂಬಾತನು, ಈವಿಷಯದಲ್ಲಿ ಸ್ವಾಭಿಪ್ರಾಯಪ್ರವ್ಯಕ್ತವಾಗಿ ವಿಧಿಚೋದಿತ ಆಚಾರವು ತಿಳಿಸಬೇಕೆಂದು ಸದರೀ ಪತ್ರಿಕೆಯ ಎಡಿಟರನ್ನು ಅಪೇಕ್ಷಿಸಿದ್ದವರು ಅದಕ್ಕೆ ಕೊಟ್ಟ ಉತ್ತರದಲ್ಲಿ ಮೇಹರೋಗ ಮುಂತಾದ ವ್ಯಾಧಿಗ್ರಸ್ತರು ಹಗಲು ಪ್ರಥಮಯಾಮದಲ್ಲಿ ಭೋಜನಮಾಡಬಹುದೆಂದು ವಸ್ತ್ರದ ಉಚ್ಛ್ವಲವಾದಗಳಿಂದ ಸಂಶಯ ನಿವೃತ್ತಿಮಾಡದ ಗೌರವಕ್ಕೆ ಪ್ರಿಯರಾಗಬೇಕೆಂದು ಯತ್ನಿಸಿದರೆ ವಿನಾ ಶಾಸ್ತ್ರ ಪ್ರೋಕ್ತವಾದ ಯಾವ ಅಭಿಪ್ರಾಯವನ್ನಾದರೂ ತಿಳಿಸಲಿಲ್ಲವು. ಅದನ್ನೋದಿದವರು ಪರಿಹಾರಮೆಂತಾದರೆ ಅಜೀರ್ಣರೋಗಪೀಡಿತರಾದವರು ರಾತ್ರಿವರೆವಿಗೂ ಉಪವಾಸ ವಿರಬಹುದೆಂದು ಹೇಳಿಕೊಳ್ಳುತಲಿದ್ದಾರೆ. ಇಂತಾ ಅಸಂಬದ್ಧ ಪ್ರಲಾಪದಿಂದ ತಪ್ಪಾರಾದ ನನ್ನಂತವರನೇಕರಿಗೆ ವಿಧಿಚೋದಿತವಾದ ಮಾರ್ಗವು ನಿಷ್ಕೃಷ್ಟವಾಗಿ ತಿಳಿಯದೆ ಹೃದಯ ವ್ಯಾಕುಲಿತಿಯಾಗಿರುವದರಿಂದ ಅದು ತಮ್ಮ ಪತ್ರಿಕೆಯ ಮೂಲಕ ಪರಿಹರಿಸಿಕೊಡಬೇಕೆಂದು ಪ್ರಾರ್ಥಿಸುವ,

ತಮ್ಮವಿಧೇಯನಾದ,
ವೇದಶಾಸ್ತ್ರಾಭಿಮಾನಿ.

ADDRESS OF THE DEWAN OF MYSORE

to the Representative Assembly held at Mysore on Tuesday, the 8th October 1890.

(ಹಿಂದಿನಾದರ ಶೇಷ.)

೩೪. ಸೌದೆ ಮತ್ತು ಇದ್ದಲು ಇವುಗಳ ಮೇಲೆ ಟೌನುಗಳ ಊರು ಬಾಗಲುಗಳಲ್ಲಿ ಅಕ್ರಾಯ ಬಾಬಿನ ನೌಕರರಿಂದ ಫಾರೆಸ್ಟ್ ಹಾಸಲು ವಸೂಲು ಮಾಡುತ್ತಿದ್ದ ಪದ್ಧತಿಯು ಸರಿಯಾದ್ದಲ್ಲವಾಗಿಯೂ, ಪ್ರಜೆಗಳಿಗೆ ಅನಾನುಕೂಲ ಉಂಟುಮಾಡತಕ್ಕದ್ದಾಗಿಯೂ ಕಂಡು ಬಂತು. ಆದ್ದರಿಂದ ಆ ಹಾಸಲು ಮಾಕೂಫ್ ಮಾಡಲ್ಪಟ್ಟು ಅದಕ್ಕೆ ಬದಲಾಗಿ ಸರಿಯಾದ ಹುಕ್ಕೀ ಪದ್ಧತಿಯನ್ನು ಏರ್ಪಡಿಸಲಾಯಿತು. ಸೌದೆ ಬೆಳೆಯತಕ್ಕ ಮುಖ್ಯ ಮುಖ್ಯ ಪ್ರದೇಶಗಳನ್ನು ಕ್ರಮವಾಗಿ ರಿಜರ್ವ್ಸ್ ಯಾನೆ ಸೌದೆ ಬಳ್ಳಿ ಉಳಿಸಿಕೊಂಡ ಜಂಗಲ್‌ಗಳಾಗಿ ಮಾಡಿ ಕ್ರಮವಾದ ಕನ್ಸರ್‌ವೇಸಿ ಯಾನೆ ಸಂರಕ್ಷಣೆ ಮೂಲಕ ಮೇಲ್ ವಿಚಾರಣೆಗೆ ಒಳಪಡಿಸಲ್ಪಡುತ್ತಾ ಇದೆ. ಈ ಪ್ರದೇಶಗಳಲ್ಲಿ ಕಡಿದ ಸೌದೆಗೂ ಸುಟ್ಟ ಇದ್ದಲಿಗೂ ಕ್ಲುಪ್ತವಾದ ದರದ ಮೇರೆಗೆ ಹಾಸಲನ್ನು ಮುಂಚಿತವಾಗಿಯೇ ಕೊಡಬೇಕೆಂಬ ನಿಬಂಧನೆಯನ್ನು ಏರ್ಪಡಿಸುತ್ತೆ. ಸರಕಾರದ ಜಮೀನು ಮಾಡತಕ್ಕ ರೈತರು ಮನೆ ಖರ್ಚಿಗೆ ಕಡಿದುಕೊಳ್ಳುತ್ತಾ ಇರುವ ಸುಂಕ ಕಸಿದವರು ಕಬ್ಬಿಣ ಕೊಲಿಮೆಯವರು ಸಹ ಇವುವರೆಗಿರುವಂತೆ ಯಥಾರ್ಥವಾದ ತಮ್ಮ ಕಸುಬುಗಳಿಗೋಸ್ಕರ ಬೇಕಾದ ಸೌದೆಯನ್ನು ಮುಫತ್ತಾಗಿ ತೆಗೆದುಕೊಳ್ಳಬಹುದು. ಈ ಮೇರೆಗೆ ವ್ಯಾಪಾರಸ್ಥರು ಮಾತ್ರವೇ ಹಾಸಲನ್ನು ಕೊಡತಕ್ಕವರಾಗುತ್ತಾರೆ. ಫಾರೆಸ್ಟಿನ ಹುಟ್ಟುವಳಿಗೆ ಇದು ಬಹಳ ನ್ಯಾಯವಾದ ಬಾಬಾಗಿ ಇರುತ್ತೆ.

೩೫. ಆನೇ ಖೆಡ್ಡಾ ಬಿಕಾರಿ.— ಈಚೆಗೆ ಏರ್ಪಡಿಸಲ್ಪಟ್ಟಿರುವ ಖೆಡ್ಡಾಗಳಲ್ಲಿ ೧೮೮೯ನೇ ಜುಲೈ ತಿಂಗಳವರೆಗೆ ಹೋದವರುಷ ನಿಮ್ಮಗಳಿಗೆ ತಿಳಿಸಿದ ಮೇರೆಗೆ ಮೊದಲಾದರೇ ೫೦ ಆನೆಗಳು ಹಿಡಿಯಲ್ಪಟ್ಟವು. ಹೋದ ನವಂಬರ್ ತಿಂಗಳಲ್ಲಿ ಹಿಜ್ ರಾಯಲ್ ಹೈನೆಸ್ ಪ್ರಿನ್ಸ್ ಆಫ್ ವೇಲ್ಸ್ ರವರ ವಿನೋದಾರ್ಥವಾಗಿ ೨ನೇ ದಫಾ ಆನೆಗಳ ಖೆಡ್ಡಾ ನಡೆಸಲ್ಪಟ್ಟಿತು. ಈ ಸಂದರ್ಭದಲ್ಲಿ ೩೭ ಆನೆಗಳು ಹಿಡಿಯಲ್ಪಟ್ಟು ಅ ಸೈಕಿ ೨೫ ಆನೆಗಳನ್ನು ಬಿಡಲಾಯಿತು. ಮೊದಲು ದಫಾ ಹಿಡಿದವುಗಳ ಪೈಕಿ ೨೫ ಆನೆಗಳನ್ನು ನಂಜನಗೂಡಿನಲ್ಲಿ ಹರಾಜು ಮಾಡಿಸಲಾಗಿ ೧೫,೩೭೫ ರೂಪಾಯಿ ಆಯಿತು. ಎರಡನೇ ದಫಾ ಹಿಡಿದ ಆನೆಗಳ ಪೈಕಿ ೨೭ ಶಿವಸಮುದ್ರಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ೩೩,೦೦೦ ರೂಪಾಯಿಗಳಿಗೆ ವಿಕ್ರಯಿಸಲ್ಪಟ್ಟವು. ದಂತಗಳ ಬಗ್ಗೆ ರೀತಿಯು ಸೇರಿ ಒಟ್ಟು ನಗದು ಉತ್ಪತ್ತಿಯಾದ್ದು ೫೫,೫೭೦ ರೂ. ಇದಕ್ಕೆ ಅರಮನೆಗೆ ಸಹ ರು ಒಪ್ಪಿಸಲ್ಪಟ್ಟ ಮತ್ತು ಖೆಡ್ಡಾದಲ್ಲಿ ಹಿಡಿದ ಮರಿಯನ್ನು ಮಾಡಿದ ದೊಡ್ಡ ಮರಿಗಳಿಗೆ ಕೊಟ್ಟ ನಾಲ್ಕು ಆನೆಗಳ ಕ್ರಯ ನಾಲ್ಕು ಸಾವಿರ ರೂಪಾಯಿಗಳು ಸೇರಿಸಬೇಕಾಗುತ್ತೆ. ಕಳೆದ ಸಾಲಿನ ಖರ್ಚು ಬಾಗುಡುಂಬು ಎಲ್ಲರಿಗಿವಿಗೆ ಒಟ್ಟು ಖರ್ಚು ೧,೧೦,೬೮೪ ರೂಪಾಯಿಗಳು. ಇದರಲ್ಲಿ ಹೀಗಾ ಪಟ್ಟಣದಿಂದ ಕೊಡಿಸಿದ ೧೦ ಕುಮ್ಕಿ ಆನೆಗಳ ಕ್ರಯ ಮತ್ತು ಬಾಗವೂ ಹಾಜರಿರುವ ಜಿನಸಿಗಳ ಕಿಮ್ಮತ್ತು ಸಹ ಒಟ್ಟು ೩೪,೦೦೦ ರೂಪಾಯಿಗಳು ಸೇರಿದೆ. ಮುಂದೆ ನಡೆಯಬೇಕಾದ ಕೆಲಸಗಳಿಗೆ ಅನುಕೂಲವಾದ ಈ ಹಾಜರೀ ಜಿನಸಿಗಳ ಖರ್ಚು ಕಳೆದು ಮಾಡಿದರೆ ನಿವ್ವಳ ಖರ್ಚು ೭೬,೬೮೪ ರೂಪಾಯಿಗಳಾದವು. ಈ ಖರ್ಚು ಇನ್ನೂ ಕಮ್ಮಿ ಮಾಡಬಹುದಾಗಿ ಇತ್ತು. ಆದರೆ ಹಿಜ್ ರಾಯಲ್ ಹೈನೆಸ್‌ರವರಿಗೋಸ್ಕರ ಖೆಡ್ಡಾ ಪ್ರದೇಶಕ್ಕೆ ಏ

ಕ್ಷೇತ್ರ, ನಂಜನಗೂಡ್ ತಾಲ್ಲೂಕ್ ಸಿಂಗನಲ್ಲೂರ್ ಮತ್ತು ಮೈಸೂರ್ ತಾಲ್ಲೂಕ್ ಅರಿಶೀಕೆರೆ ಈ ಗ್ರಾಮಗಳನ್ನು ಸರ್ವೆ ಮಾಡಬೇಕೆಂಬದಾಗಿ ಸರ್ವೆ ಸ್ಯೂಪರಿಂಟೆಂಡೆಂಟರಿಗೆ ಹುಕುಂ ಮಾಡಿರುವುದೆಯೂ, ಫೈನಾನ್ಸಿಯಲ್ ಕಮೀಷನರವರು ತಮಗೆ ತಿಳಿಯಪಡಿಸಬೇಕೆಂದು ಮೈಸೂರ್ ಡಿಪ್ಯುಟಿ ಕಮೀಷನರಿಗೆ ಅಪ್ಪಣೆ ಕೊಡಿಸಿದಾರೆಂತ ಕೇಳುತ್ತೇವೆ. ಈ ಗ್ರಾಮಗಳ ಪೈಮಾಷಿ ವಿಷಯದಲ್ಲಿ ಸರ್ವೆ ಇಲಾಖೆಯವರು ಶೀಘ್ರ ಯತ್ನಶೀಲರಾಗಿರುವರೆಂದು ನಂಬುತ್ತೇವೆ.

[ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವ ಬಾತ್ಮಿದಾರರ ಬರಹಗಳಲ್ಲಿ ಅಡಗಿರುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲ.—ಎಡಿಟರ್ ಕ. ಪ್ರ.]

CORRESPONDENCE

THE RECENT F. A. EXAMINATION

ಮ॥ರಾ॥ ಕರ್ಣಾಟಕಪ್ರಕಾಶಿಕಾ ಎಡಿಟರವರ ಸನ್ನಿಧಿಗೆ

ಸಾಮಾನ್ಯವಾಗಿ ಯೂನಿವರ್ಸಿಟಿ ವರ್ಗದ ಪರೀಕ್ಷೆಗಳೆಲ್ಲವು ವಿದ್ಯಾರ್ಥಿಗಳ ಜ್ಞಾನವನ್ನರಿಯುವದಕ್ಕಾಗಿ ಉದ್ದಿಷ್ಟವಾದವಾಗಿದ್ದರೂ ...

ತರಾದ ಪೈನಲ್ಲಾರೋ ಒಬ್ಬರು ಸಹಾಯಕರಾಗಿದ್ದಂತೆ ಭಾವಿಸಬೇಕಾಗಿದೆ. ಅನ್ಯ ಮತಸ್ಥರಲ್ಲಿ ಜ್ಞಾನ ಸಂಪಾದನಾರ್ಥ ಶಿಷ್ಯಭಾವವಂ ವಹಿಸಿ ಪ್ರಚಾರದೊಳಿಲ್ಲದೆ ವಿಕಲಿತವಾಗಿರುವ ಗವರ ಸಿದ್ಧಾಂತಾಚಾರವ್ಯವಹಾರಗಳನ್ನು ತಿಳಿದುಕೊಳ್ಳುವದು ತಪ್ಪೆಂತೆಂದು ನಾನೆಷ್ಟು ಮಾತ್ರವೂ ಹೇಳುವದಿಲ್ಲವು. ...

...

ತಮ್ಮ ವಿಧೇಯನಾದ,

B. A.

ಅಯ್ಯಾ,—ಇದರ ಕೆಳಗೆ ನಾನು ಬರೆಯುವ ವಿಷಯವನ್ನು ಘನವಾದ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿ ಅವರಲ್ಲಿ ನನಗುಂಟಾಗಿರುವ ಸಂಶಯವು ಪರಿಹರಿಸಬೇಕೆಂದು ಪ್ರಾರ್ಥಿಸುತ್ತೇನೆಂದರೆ,—

...

ತಮ್ಮ ವಿಧೇಯನಾದ,

ವೇದಶಾಸ್ತ್ರಾಭಿಮಾನಿ.

ADDRESS OF THE DEWAN OF MYSORE

to the Representative Assembly held at Mysore on Tuesday, the 8th October 1890.

(ಕಳೆದವಾರದ ಶೇಷ.)

೭೪. ಸೌದೆ ಮತ್ತು ಇದ್ದಲು ಇವುಗಳ ಮೇಲೆ ಪ್ರಜೆಗಳ ಊರು ಬಾಗಲುಗಳಲ್ಲಿ ಅ ರಣ್ಯ ... ಬಾಬಿನ ನೌಕರರಿಂದ ಫಾರೆಸ್ಟ್ ಹಾಸಲು ವಸೂಲು ಮಾಡುತ್ತಿದ್ದ ಪದ್ಧತಿಯು ಸರಿಯಾದ್ದಲ್ಲವಾಗಿಯೂ, ಪ್ರಜೆಗಳಿಗೆ ಅನಾನುಕೂಲ ಉಂಟುಮಾಡತಕ್ಕದ್ದಾಗಿಯೂ ಕಂಡು ಬಂತು. ಆದ್ದರಿಂದ ಆ ಹಾಸಲು ವಸೂಲ್ ಮಾಡಲ್ಪಟ್ಟು ಅದಕ್ಕೆ ಬದಲಾಗಿ ಸರಿಯಾದ ಹೊಸ ಪದ್ಧತಿಯನ್ನು ಏರ್ಪಡಿಸಲಾಯಿತು. ...

...

೭೮. ಆನೇ ಖೆಡ್ಡಾ ಶಿಕಾರಿ.— ...

ರವಣಾತಿಕೆಯಲ್ಲಿ ಮಾಡಿದ ವಿಶೇಷ ಏರ್ಪಾಡುಗಳಿಗೋಸ್ಕರ ಅಷ್ಟು ಖರ್ಚಾಗಬೇಕಾಯಿತು. ಜಂಗ್ಲಿ ಆನೆಗಳಿಂದ ವ್ಯಾಪಿಸಲ್ಪಟ್ಟು ಇರುವ ಕಾಕನಕೋಟೆ ವಗೈರೆ ಜಾಗಲುಗಳಲ್ಲಿ ಮುಂದೆ ಬಂಗಡಿ ಬಿಕಾರಿ ಕೆಲಸಗಳನ್ನು ನಡೆಸಲು ಬರ್ಮಾ ದೇಶದಿಂದ ಇನ್ನೂ ಕೆಲವು ಪಳಗಿದ ಆನೆಗಳು ಈಚೆಗೆ ತರಿಸಲ್ಪಟ್ಟವು. ಹಾಗೆ ಬಂಗಡೀ ಬಿಕಾರಿ ಸೂಪರಿಂಟೆಂಡೆಂಟರಾದ ಮಿ|| ಸಾಕ್ ತ್ರಸರ್ ಸಾಹೇಬರವರು ೫೪ ವರುಷದ ಕಾಲದ ವರಿವಿಗೆ ಈ ಸೀಮೆಯಲ್ಲಿ ಕೆಲಸ ಮಾಡುತ್ತಿರುವಂತೆ ಇಂಡ್ಯ ಗವರ್ನಮೆಂಟಿನವರು ದಯವಿಟ್ಟು ಅಪ್ಪಣೆ ಕೊಟ್ಟು ಇದ್ದಾರೆ. ಕ್ರಮಾತ ಸಂಸ್ಥಾನದ ಇತರ ಭಾಗಗಳಲ್ಲಿಯೂ ಬಂಗಡಿ ಬಿಕಾರೀ ಕೆಲಸಗಳನ್ನು ವೃದ್ಧಿಪಡಿಸಬೇಕೆಂಬ ಕೋರಿಕೆ ಇದೆ.

೪೦. ಪಬ್ಲಿಕ್ ವರ್ಕ್ಸ್ ಇಲಾಖೆಯನ್ನು ಕುರಿತು ಪ್ರಸ್ತಾಪಿಸುವ ಸಂದರ್ಭದಲ್ಲಿ ನಾವು ಪ್ರಥಮತಃ ಗಮನಿಸಬೇಕಾದ ಕಾಮಗಾರಿಗಳು ನಮ್ಮ ರೈಲ್ವೆಗಳಿಗೆ ಸಂಬಂಧಪಟ್ಟದ್ದಾಗಿರುತ್ತವೆ. ಹೋದ ವರುಷದ ಉಪನ್ಯಾಸದಲ್ಲಿ ಬೆಂಗಳೂರು — ಮೈಸೂರು ರೈಲ್ವೇ ಲೈನನ್ನು ನಂಜನಗೂಡು ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳ ಮಾರ್ಗವಾಗಿ ನೈಲಗಿರಿಗೆ ತೆಗೆದುಕೊಂಡು ಹೋಗಿ ಬಿಡಿಸಬೇಕೆಂಬ ಅಂಶ ಇಂಡಿಯಾ ಗವರ್ನ್ಮೆಂಟಿನವರ ಆಲೋಚನೆಯಲ್ಲಿ ಇತ್ತೆಂತಲೂ ಮತ್ತು ಆ ಲೈನಿನ ನಂಜನಗೂಡುವರೆಗಿನ ಸ್ವಲ್ಪ ಭಾಗವು ಕ್ಷಿಪ್ರದಲ್ಲಿಯೇ ಉಪಕ್ರಮಿಸಲ್ಪಡುವ ಸಂಭವವಿತ್ತೆಂತಲೂ ನಿಮ್ಮಗಳಿಗೆ ತಿಳಿಸಿರುತ್ತೇವಷ್ಟೆ. ಈ ಭಾಗದ ರಸ್ತೆ ಯಾವ ಮಾರ್ಗವಾಗಿ ತೆಗೆದುಕೊಂಡು ಹೋದರೆ ಉತ್ತಮವಾಗಿ ಇದ್ದೀತೆಂಬ ವಿಷಯದಲ್ಲಿಯೂ ದಕ್ಷಿಣ ಮಹಾರಾಷ್ಟ್ರ ರೈಲ್ವೇ ಇಂಜನೀರುಗಳು ತಯಾರ್ಮಾಡಿದ ಅಂದಾಜ್ ಮತ್ತು ರೋಡ್ ಸಿಸ್ಟಾರ್ಗಳಿಗೂ ಮೈಸೂರು ಸರ್ಕಾರದ ಇಂಜನೀರುಗಳಿಂದ ತಯಾರಾದವುಗಳಿಗೂ ಪರಸ್ಪರ ಹೋಲಿಕೆಯಾಗದಲಾಗಿ ಕೆಲವು ಸಂದೇಹಗಳುಂಟಾದ್ದರಿಂದ ಹೊಸದಾಗಿ ಸರ್ವೇ ಮತ್ತು ಅಂದಾಜು ಮಾಡಬೇಕಾದ ಆವಶ್ಯಕತೆ ಉಂಟಾಗಿ ತನ್ಮೂಲಕ ಕಾಮಗಾರಿ ಉಪಕ್ರಮಿಸುವದರಲ್ಲಿ ಸ್ವಲ್ಪ ತಾಮಸಕ್ಕೆ ಕಾರಣವಾಯಿತು. ಸದರೀ ಇಂಜನೀರುಗಳ ಉಭಯ ಅಭಿಪ್ರಾಯಗಳ ಪರಸ್ಪರ ಗುಣಾವಗುಣಗಳು ಕೂಲಂಕಷವಾಗಿ ಪರಿಶೋಧಿಸಲ್ಪಟ್ಟ ನಂತರ ಈ ವಿಷಯವು ಉಪಶಮವಾಯಿತು. ಅಖೈರ್ ತೀರ್ಮಾನದಲ್ಲಿ ರೈಲ್ವೆ ಲೈನು ಕಪಿನೀನದೀ ದಾಟಬೇಕಾದ ಸ್ಥಳದಲ್ಲಿ ಹಳೇ ಕಪಿನಿ ರಸ್ತೆ ಸೇತುವೆಯು ಉಪಯೋಗಿಸಲ್ಪಡಬೇಕೆಂದು ವ್ಯವಸ್ಥೆಯಾಯಿತು. ಕಳೆದ ಜೂನ್ ತಿಂಗಳಲ್ಲಿ ಕೆಲಸಕ್ಕೆ ಶುರುವಾದ್ದರಿಂದ ಪುರಾತನ ಪ್ರಸಿದ್ಧಸ್ಥಳವಾದ ನಂಜನಗೂಡಿಗೂ ಮೈಸೂರು ರಾಜಧಾನಿಗೂ ಮುಂದಿನ ಜೂನ್ ಆಖೈರಿಗೆ ಮುಂಚಿತವಾಗಿಯೇ ರೈಲ್ವೇ ಲೈನು ಸೇರಿಸಲ್ಪಡುವ ಎಲ್ಲಾ ಸಂಭವವು ಕಾಣುತ್ತೆ.

೪೧. ಬೆಂಗಳೂರ್—ಹಿಂದೂಪುರದ ಲೈನ್ ಕಾಮಗಾರಿ ವಿಷಯವೇನಂದರೆ:— ಸದರೀ ಕಾಮಗಾರಿಯು ಘನವನ್ನು ಹೊಂದಿದ ವೈಸ್ರಾಯಿ ಗವರ್ನರ್ ಜನರಲ್ ಸಾಹೇಬರವರಿಂದ ಮಂಜೂರಾಗಿರುವದ್ದರಿಂದ ಆ ಸಂಬಂಧದ ಸರ್ವೆ, ರಿಪೋರ್ಟುಗಳು ಮತ್ತು ಅಂದಾಜು ಪ್ರತಿಪಾದಿಯಾಗಿ ತಯಾರಾಗಿದೆ. ಕೆಲವು ತಿಂಗಳುಗಳೊಳಗಾಗಿ ಕಾಮಗಾರಿಯನ್ನು ಶುರು ಮಾಡುವದಕ್ಕೆ ಆದೀತೆಂದು ಕೋರುತ್ತೇವೆ. ಈ ಸಂದರ್ಭದಲ್ಲಿ ನಿಮ್ಮಗಳಿಗೆ ತಿಳಿಸತಕ್ಕದ್ದೇನೆಂದರೆ ಸದರೀ ಕಾಮಗಾರಿಗಿರುವ ಅಂದಾಜಿನಂತೆ ಒಟ್ಟು ೬೯ ಲಕ್ಷ ರೂಪಾಯಿ ಆಗುತ್ತೆ. ಅಂದರೆ ಪ್ರತಿ ಮೈಲಿ ೧ ಕ್ಕೆ ೫೩ ಸಾವಿರ ರೂಪಾಯಿಗಳು ಹಿಡಿಯುತ್ತೆ. ಈ ಲೈನು ಇತರ ಲೈನು ಪರ್ಯಾಲೋಚನೆಯಾ ಸುಲಭವಾದ್ದಾಗಿಯೂ ಮತ್ತು ಮಿತವಾದ ಅಂಗವನು ತಗಲತಕ್ಕದ್ದಾಗಿಯೂ ಇರುತ್ತಿತ್ತು. ಆದರೆ ಸದರೀ ಲೈನ್ ಪ್ರತಿ ಸುಮಾರು ೧೦ ಮೈಲಿ ವಿಸ್ತಾರದಷ್ಟು ಕಣಿವೆ ಭಾಗಗಳು ಸಿಕ್ಕುವದ್ದರಿಂದ ಆ ಅಂಶದಲ್ಲಿ ಅಧಿಕವು ಖರ್ಚು ಉಂಟಾಯಿತು. ದೊಡ್ಡಬಳ್ಳಾಪುರಕ್ಕೆ ಸ್ವಲ್ಪ ಆಚೆ ರೈಲ್ವೇ ಲೈನು ಈ ಉನ್ನತ ದೇಶದಿಂದ ಕೆಳದೇಶಕ್ಕೆ ಇಳಿಯಬೇಕಾಗುತ್ತೆ. ಹಾಗೆ ಇಳಿಯುವದರಲ್ಲಿ ಲೈನ್ ಬಿಟ್ಟು ಹತ್ತು ಮೈಲಿ ಬಳಸಿ ಮಗ್ಗಲಾಗಿ ಬಹಳ ಅಸಮಭೂಮಿ ಮೇಲೆ ಹೋಗಬೇಕಾಗಿದೆ, ಇದರಿಂದ ಪ್ರಯಾಸವಾದ ಅನೇಕ ತಿರುವುಗಳ ಪರಂಪರೆಯೂ, ಮಾಡಬೇಕಾಗುತ್ತಲ್ಲದೆ ಎತ್ತರವಾದ ಮಟ್ಟ ಭರ್ತಿ ಕಾಮಗಾರಿಯು ಬಹು ಘಟ್ಟಿಯಾದ ಭೂಮಿಯಲ್ಲಿ ಆಳವಾಗಿ ದಿಬ್ಬ ಕಡಿಯುವ ಕೆಲಸವು ಮಾಡಬೇಕಾಗುತ್ತೆ. ಬಹಳ ಖರ್ಚು ತಗಲತಕ್ಕ ಈ ಕೆಲಸದಿಂದ ಸುಲಭವಾಗಿ ಆಗಬಹುದಾದ ೫೧೦ ಮೈಲಿಗಳ ಸರಾಸರಿ ದರವು ಯತ್ನವಿಲ್ಲದೆ ಹೆಚ್ಚಾಗುತ್ತೆ. ಘಾಟ ಭಾಗದ ೧೦ ಮೈಲಿ ರಸ್ತೆಗೆ ಮೈಲಿ ೧ ಕ್ಕೆ ೪೬,೩೯೨ ರೂಪಾಯಿ, ಅಂದಾಜಾಗಿದೆ, ಬಾಕಿ ಭಾಗಕ್ಕೆ ಗಾಡಿ ವಗೈರೆ ದೇಖೀಲು ೪೫,೬೩೫ ರೂಪಾಯಿ ಮಾತ್ರವೇಯಾಗಿದೆ.

೪೨. ಈರೈಲ್ವೆ ಬಡಾವಣೆ ಕೆಲಸದ ಮೇಲ್ವಿಚಾರಕಬಗ್ಗೆ ಇಂಡಿಯಾ ಗವರ್ನಮೆಂಟಿನವರು ದಯವಿಟ್ಟು ಅನುಭವಸ್ಥರಾದ ಒಬ್ಬ ರೈಲ್ವೆ ಇಂಜನೀರನ್ನು ನಮಗೆ ಕೊಟ್ಟಿರುತ್ತಾರೆ. ಸದರೀ ಇಂಜನೀರು ಅದೃಷ್ಟವಶಾತ್ ಮೊದಲೆ ಮೈಸೂರುದೇಶದ ಕಾಮಗಾರಿ ಅನುಭವವನ್ನು ಸಂಪೂರ್ಣ ಹೊಂದಿದವರಾಗಿರುತ್ತಾರೆ. ಈ ಕೆಲಸಕ್ಕೋಸ್ಕರ ನಮ್ಮ ವಿತವಾದ ಸ್ಥಳೀಯ ಇಂಜನೀರುಗಳ ತಿಬ್ಬಂದಿಯಿಂದ ಯಾರನ್ನೂ ಕೊಡುವದಕ್ಕೆ ಅನುಕೂಲವಿಲ್ಲವಾಯಿತು.

೪೩. ಕ್ಷಾಮಕಾಲದಲ್ಲಿ ಪ್ರಜಾರಕ್ಷಣೆ ಆಗಬೇಕೆಂಬುವದೇ ಹಿಂದೂಪುರದ ಲೈನ್ ಬಡಾವಣೆ ಕಾಮಗಾರಿಯ ಮುಖ್ಯೋದ್ದೇಶವಾಗಿದೆ. ೧೮೭೬—೭೮ನೇ ಧಾತು ಈಶ್ವರ ವರುಷದ ಕ್ಷಾಮದಲ್ಲಿ ದೊಡ್ಡಬಳ್ಳಾಪುರಕ್ಕೂ ಮತ್ತು ಮೈಸೂರುದೇಶದ ಉತ್ತರಭಾಗದ ಸರಹದ್ದಿಗೂ ಮಧ್ಯೆ ಇರುವ ಡಿಸ್ಟ್ರಿಕ್ಟು ಪಟ್ಟಣಗಳಷ್ಟು ಈ ದೇಶದ ಇನ್ಯಾವಭಾಗವು ಆಗಲಿಲ್ಲ. ರೈಲ್ವೇ ಲೈನ್ ಉಪಯೋಗವನ್ನು ಸುಸ್ಥಾನದ ಯಾವ ಭಾಗಕ್ಕೆ ಮುಂಚಿತವಾಗಿ ಮಾಡಬೇಕೆಂಬ ಅಂಶವನ್ನು ಪರ್ಯಾಲೋಚಿಸಲಾಗಿ ಗೌರಿಬಿದನೂರು ಪ್ರಾಂತ್ಯವಾಗಿಯೂ ಅಲ್ಲಿಂದ ಹಿಂದೂಪುರ ಪ್ರಾಂತ್ಯವಾಗಿಯೂ ಮುಂಚಿತವಾಗಿ ಲೈನ್ ಹಾಕತಕ್ಕದ್ದೇ ಅತ್ಯಾವಶ್ಯಕವೆಂದು ಸರಕಾರಕ್ಕೆ ತಿಳಿಯಬಂತು. ಇಷ್ಟುಮಾತ್ರವೇ ಅಲ್ಲದೆ ಸದರೀ ಲೈನ್ ಆಖೈರಿಗೆ ಧರ್ಮಾವರ ಮತ್ತು ಗುಂತಕಲ್ ಮಾರ್ಗವಾಗಿ ಹೋಗುವ ಮದರಾಸ್ ರೈಲ್ವೆಗೆ ಸೇರಿದಾಗ್ಯೆ ಕೆಲವು ವರ್ಷಗಳಕಾಲದಲ್ಲಿ ನಾವು ಹಾಕಿರುವ ಹಣಕ್ಕೆ ನ್ಯಾಯವಾದಬಡ್ಡಿ ಹುಟ್ಟಬಹುದೆಂಬ ಪ್ರತೀಕ್ಷೆಯಿದೆ.

೪೪. ಈಗ ನಮ್ಮ ಇತರ ಸಾಧಾರಣವಾದ ಕಾಮಗಾರೀಗಳ ವಿಷಯಕ್ಕೆ ಗಮನಕೊಡುತ್ತೇವೆ. ಕಳೆದ ಮಾರ್ಚ್ ತಿಂಗಳ್ಕೆ ಆಖೈರಾದ ಸಾಲಿನಲ್ಲಿ ರಸ್ತೆಗಳು, ಕೆರೆಗಳು, ಮತ್ತು ನಾಲೆಗಳು ಮುಂತಾದ ಎಲ್ಲಾ ವಿಧವಾದ ಕಾಮಗಾರಿಗಳ ಅಭಿವೃದ್ಧಿಗಾಗಿ ಒಟ್ಟಿಗೆ ೬೯ ಲಕ್ಷ ರೂಪಾಯಿಯು ಖರ್ಚುಮಾಡಲ್ಪಟ್ಟಿತು. ಅದರಲ್ಲಿ ಸುಮಾರು ೬೮ ಲಕ್ಷ ಡಿಪ್ರಿಸಿಯೇಷನ್ ಫಂಡಿಗೂ ನಾಲ್ಕು ಮುಕ್ಕಾಲುಲಕ್ಷ ಡಿಸ್ಟ್ರಿಕ್ಟು ಫಂಡಿಗೂ ಲೋಕಲ್ ಫಂಡಿಗೂ ಮತ್ತು ಕಾಲು ಲಕ್ಷ ಬೆಂಗಳೂರಲ್ಲಿ ಶ್ರೀಮನ್ಮಹಾರಾಜರವರ ಮಹಲಿಗೆ ನಡೆದ ಹೆಚ್ಚು ಕಾಮಗಾರಿಗೋಸ್ಕರ ಪ್ಯಾಲೆಸ್ ಫಂಡಿಗೂ ಖರ್ಚಾಯಿತು. ಖರ್ಚಿನ ಬಾಬುವಾರು ತಪಸೀಲು ಈ ಕೆಳಗೆ ವಿವರಿಸಿರುತ್ತೆ.—

	ರೂಪಾಯಿಗಳು.
ಮಿಲಿಟರಿ ಕಟ್ಟಡಗಳಿಗೆ ..	40,000
ಸಿವಿಲ್ ಕಟ್ಟಡಗಳಿಗೆ ..	2,88,000
ಕಮ್ಯೂನಿಕೇಷನ್ಸ್ ರಸ್ತೆಗಳು ಮತ್ತು ಸೇತುವೆಗಳಿಗೆ	8,94,000
ನೀರಾವರಿ ಕಾಮಗಾರಿಗಳಿಗೆ	10,47,000
ಚಿಲ್ಲರೆ ಪಬ್ಲಿಕ್ ಇಂಪ್ರೂವ್ಮೆಂಟುಗಳಿಗೆ	1,35,000
ಅಕಸೀ ಸರಂಜಾಂ ವಗೈರೆಬಗ್ಗೆ	27,000
ಎಸ್ಟಾಬ್ಲಿಷ್ಮೆಂಟ್ ಯಾನೆ ಲವಾಜಮೆ ಖರ್ಚು ..	4,78,000
ಟೂಲ್ಸ್ ಖರ್ಚುಬಗ್ಗೆ ...	2,000
ಒಟ್ಟು .	29,00,000

(ಇದರಶೇಷ ಮುಂದಿನವಾರಕ್ಕೆ.)

SUMMARY OF NEWS
ವೃತ್ತಾಂತಸಂಗ್ರಹವು.

ಇದೇ ತಿಂಗಳ ೩ ನೇ ತಾರೀಖು ಬುಧವಾರದ ದಿವಸ ಲಾಹೋರಿನಲ್ಲಿ ರಾತ್ರಿ ೯ ಘಂಟೆ ೧೦ ನಿಮಿಷಕ್ಕೆ ಭೂಕಂಪವಾಯಿತು.

ಹತ್ತೀಕಾಳನ್ನು ಬಿತ್ತುವದಕ್ಕೆ ಮೊದಲು ಸಗಣಿಯಲ್ಲಿ ಕಲಿಸಿ ಬಿತ್ತುವ ಪದ್ಧತಿಯುಂಟು. ಆದರೆ ಸಗಣಿಯ ಬದಲು ಗಂಧಕದ ಎಸರಚ್ಚಿ ಹತ್ತಿಕಾಳು ಬಿತ್ತಿದರೆ ಹತ್ತಿಯ ಬೆಳೆಯು ಚೆನ್ನಾಗಿ ಬರುತದೆ.

ಆಕಾಶದಲ್ಲಿರುವ ನಕ್ಷತ್ರಗಳಿಗೂ, ಪೃಥ್ವಿಗೂ ಎಷ್ಟು ದೂರವಿರುತ್ತದೆಂಬುವದನ್ನು ತಿಳಿಯಲಿಕ್ಕೆ ಒಬ್ಬ ಶೋಧಕನು ಈ ಪ್ರಕಾರ ಆಲೋಚಿಸಿದ್ದಾನಲ್ಲ. ಸಕಲ ನಕ್ಷತ್ರಗಳಿಗಿಂತ ಅಗದಿ ಸಮೀಪದ ಇರುವ ನಕ್ಷತ್ರಕ್ಕೂ ಮತ್ತು ಪೃಥ್ವಿಗೂ ನಾಲು ಪಟ್ಟು ನೋಡುವದಕ್ಕೆ ಇಂಗ್ಲಂಡಿನಲ್ಲಿ ಹೊರಡುವ ಎಲ್ಲಾ ಗಿರಣಿಗಳ ನೂಲು ಪ್ರತಿದಿವಸ ೧೫,೫೦,೦೦,೦೦೦ ಮೈಲು ಇದ್ದಂತೆ ನಾಲ್ಕು ನೂರು ವರ್ಷಗಳ ನೂಲು ತೆಗೆದುಕೊಂಡು ಅಳತೆ ಮಾಡಿದರೆ ಸಮವಾಗುವದೆಂತ ಗೊತ್ತು ಪಡಿಸಿದ್ದಾನೆ.

ಮರ್ಕ್ಯಾಂಟೈಲ್ ಪತ್ರಿಕೆಯು ಬರೆದಿರುವದೇನಂದರೆ,— ಹೈದರಾಬಾದಿನಲ್ಲಿ ಒಬ್ಬ ಮುಸಲ್ಮಾನ್ ಸ್ತ್ರೀಯು ಒಂದು ಕೂಸನ್ನು ಹೆತ್ತಳು, ಅದು ಹೊಟ್ಟೆಯೊಳಗಿಂದ ಹೊರಗೆ ಬಿದ್ದ ಕೂಡಲೇ ಇತ್ತಲಾಗಿದ್ದ ಅಕ್ಕಳಿಗೆ ಹಾರ್ಯತುವದಕ್ಕೆ ಹತ್ತಿತು. ಈ ವಿಲಕ್ಷಣ ಪ್ರಕೃತಿಯೂ ತಾಯಿಯೂ ಅದನ್ನು ನೋಡಿ ಭಯನೇ ಆ ಕ್ಷಣವೇ ಮರಣಹೊಂದಿದಳು; ಅಷ್ಟರಲ್ಲಿ ಆ ಮಗುವಿನ ತಂದೆಯು ಅಲ್ಲಿಗೆ ಬಂದನು ಕೂಡಲೇ ಆ ಬಾಲಕನು ಹೆಚ್ಚಿಗೆ ಹಾರ್ಯ ಪಲಾರಂಭಿಸಿದನು; ಪರಂತು ಸ್ವಲ್ಪ ಹೊತ್ತಿನಮೇಲೆ ಆ ಕೂಸು ತನ್ನ ತಲೆಯನ್ನು ನೆಲಕ್ಕೆ ಅಪ್ಪಳಿಸಿ ಮರಣಹೊಂದಿತು !! ಆ ಬಾಲಕನ ಮೈಮೇಲೆಲ್ಲಾ ಕೂದಲುಗಳಿದ್ದವು, ಮತ್ತು ಬಾಯಿತುಂಬಾ ಮೂವತ್ತೆರಡು ಹಲ್ಲುಗಳು ಸಹ ಇದ್ದವು.

EXTRACTS
ORIGIN AND HISTORY OF LINGAYATS
ಲಿಂಗಾಯತರ ಉತ್ಪತ್ತಿ, ಕ್ರಮವು

(ಕಳೆದವಾರಶೇಷ.)

ಜಂಗಮರು—ಜಂಗಮರೆಂದರೆ ತಿರುಗಾಡುವ ಶಿವಸ್ವರೂಪಿಗಳು. ಇವರು ಯಾವತ್ತು ಲಿಂಗವಂತ ಜಾತಿಗಳಿಗೆ ಮುಖ್ಯರೆನಿಸಿಕೊಳ್ಳುತ್ತಾರೆ ಇವರಲ್ಲಿ ವಿರಕ್ತರು, ಸಾಮಾನ್ಯರು, ಗಣಾಚಾರಿಗಳು, ಮಠಪತಿಗಳು, ಯೆಂಬ ನಾಲ್ಕು ಒಳಭೇದಗಳಿರುತವೆ. ಇವರಲ್ಲಿ ವಿರಕ್ತರೇ ಯೆಲ್ಲಕ್ಕೂ ಶ್ರೇಷ್ಠರು ಇವರು ಲಗ್ನಮಾಡಿಕೊಳ್ಳುವದಿಲ್ಲ; ಹೆಂಗಸರ ಮೋರೆಯನ್ನು ನೋಡುವದಿಲ್ಲ. ಜಡೆ ಬೆಳಸುವರು, ಗಡ್ಡ ಬಿಡುವರು, ಮಠದಲ್ಲಿ ವಾಸಿಸುವರು, ಕೌಪೀನ ಧರಿಸುವರು, ಕಾವಿಯನ್ನು ಹೊರುವರು, ಭಿಕ್ಷೆಯಿಂದ ಜೀವಿಸುವರು. ಇವರ ಕೊರಳಲ್ಲಿಯೂ ತಲೆಯಮೇಲಿನ ಟೊಪ್ಪಿಗೆಗೂ ರುದ್ರಾಕ್ಷಿಮಾಲೆಗಳಿರುವವು. ಸಾಮಾನ್ಯ ಜಂಗಮರಿಗೆ ಶಾಖೆಯಾಗಿ ಅಯ್ಯಗಳೆಂದೆನ್ನುವರು. ವಿರಕ್ತರಂತೆ ಇವರಿಗೂ ಅಯ್ಯತನದ ಸಂಸ್ಕಾರವಾಗುತವೆ. ಇವರು ಲಗ್ನಮಾಡಿಕೊಂಡು ಮನೆಗಳಲ್ಲಿ ವಾಸಿಸುವರು. ಭಿಕ್ಷೆಯೇ ಇವರ ಉಪಜೀವನದ ದಾರಿಯು, ಆದರೆ ಕೆಲರು ಒಕ್ಕಲತನ, ವ್ಯಾಪಾರ, ಮುಂತಾದ ಉದ್ಯೋಗಗಳನ್ನು ಮಾಡುವರು. ಯಾವತ್ತು ಬಗೆಯ ಲಿಂಗಾಯತರಲ್ಲಿ ಲಗ್ನಕಾರ್ಯಗಳನ್ನೂ ಮರಣದ ಸಂಸ್ಕಾರಗಳನ್ನೂ ಮಾಡಿಸುವವರು ಇವರೇ. ಇವರಲ್ಲಿ "ಪಟ್ಟದಯ್ಯ" ಯೆಂಬ ಹೆಸರಿಯವರು ಕೆಲವರಿರುತ್ತಾರೆ. ಇವರು ಭಿಕ್ಷೆಬೇಡುವಾಗ ಬಾಗಿಲಿಗೆ ಜಂಗುಕಟ್ಟುವರು. ಕೆಲವರು ಸಾಧಾರಣವಾದ "ಕಾಯಕ" ಗಳಿಂದ, ಅಂದರೆ ಶರೀರವನ್ನು ವ್ಯಥೆಪಡಿಸುವದರಿಂದ ಉಪಜೀವನಮಾಡುವರು. ಮಠಪತಿಗಳಿಗೂ ಗಣಾಚಾರಿಗಳಿಗೂ ಅಯ್ಯತನದ ಸಂಸ್ಕಾರವಾಗುವದಿಲ್ಲ; ಆದದರಿಂದ ಇವರು ಸಾಮಾನ್ಯರಿಗಿಂತ ಕಡಿಮೆ ಯೋಗ್ಯತೆಯುಳ್ಳವರೆಂದು ಯೆಣಿಸಲ್ಪಡುತ್ತಾರೆ. ಇವರು ಪರಸ್ಪರ ಶರೀರಸಂಬಂಧಮಾಡುವರು, ಆದರೆ ಸಾಮಾನ್ಯರು ಇವರಕೂಡ ಶರೀರಸಂಬಂಧ ಮಾಡುವದಿಲ್ಲ. ಇವರು ವಿರಕ್ತರಿಗೂ ಸಾಮಾನ್ಯ ಅಯ್ಯಗಳಿಗೂ ಊಳಿಗದವರಂತೆ ಸಹಾಯ ಮಾಡತಕ್ಕವರು. ಈ ಕಾರಣದಿಂದ ಮಠಪತಿಗಳಿಗೂ ಗಣಾಚಾರಿಗಳಿಗೂ ಇನಾಮು ಭೂಮಿಗಳಿರುತವೆ. ಹೆಣ ಶೃಂಗರಿಸುವ ಕೆಲಸವನ್ನು ಮಠಪತಿಯು ಮಾಡಲಿಕ್ಕೆಬೇಕು. ಉಡಿಕೆಗಳನ್ನು ಗಣಾಚಾರಿಯಹೊರ್ತು ಯಾರೂ ಮಾಡಿಸುವದಿಲ್ಲ. ಯಾರಾದರು ವಿರಕ್ತರು ಬಂದರೆ, ಅವರು ಹೇಳಿದ ಕೆಲಸವನ್ನು 'ಗಣಾಚಾರಿಯು ಮಾಡಲಿಕ್ಕೆಬೇಕು. ಲಗ್ನಕಾರ್ಯವು ಗಣಾಚಾರಿಯಹೊರ್ತು ನಡೆಯುವದಿಲ್ಲ. ಮಠಪತಿ, ಗಣಾಚಾರಿ, ಇವರ ಮಕ್ಕಳಿಗೆ ಅಯ್ಯತನದ ಸಂಸ್ಕಾರವಾದರೆ ಅವರು ಸಾಮಾನ್ಯ ಜಂಗಮರಾಗುವರು. ಚಲವಾದಿಗಳು, ಸಮಗಾರರು, ಇವರಹೊರ್ತು ಲಿಂಗಾಯತರೊಳಗೆ ಬೇಕಾದ ಜಾತಿಯವರ ಮನೆಯಲ್ಲಿ ಜಂಗಮರು ಊಟಕ್ಕೆ ಹೋಗುವದು ಅವರಿಗೂ ವಾಡಿಕೆಯಾಗಿರುತದ.

ಶೀಲವಂತರ ಸಂಖ್ಯೆಯು ಬಹು ಸ್ವಲ್ಪ ಇರುವದು. ಇವರು ಅಂಗಡಿಯ ವ್ಯಾಪಾರ, ಸೊನ್ನಗಾರಿಕೆ, ಮುಂತಾದ ಉದ್ಯೋಗಗಳನ್ನುಮಾಡುವರು. ಇವರು ತಮ್ಮ ನೀರು ಸಹ ಪರರದೃಷ್ಟಿಗೆ ಬೀಳಗೊಡುವದಿಲ್ಲವಾದ್ದರಿಂದ ಇವರಿಗೆ ಈ ಹೆಸರು ಬಂದಿದೆ. ವಿಜಾಪುರಜಿಲ್ಲೆಯ ಇಲಕಲ್ಲು ಮುಂತಾದ ಗ್ರಾಮಗಳಲ್ಲಿ ವಾಸಿಸುವ ಶೀಲವಂತರು ಹೊಳೆ ಹಳ್ಳಗಳ ದಂಡೆಯಲ್ಲಿ ಒರತೆಗಳನ್ನು ಅಗಿದು ಅದರಲ್ಲಿಯ ನೀರುಮಾತ್ರ ತಕ್ಕೊಳ್ಳುವರು.

ನಿಜಲಿಂಗವಂತರಲ್ಲಿ ಬಣಜಿಗರ ಸಂಖ್ಯೆಯು ಜಂಗಮರಿಗಿಂತ ಹೆಚ್ಚಿರುತ್ತದೆ ಇವರನ್ನು ನಾಲ್ಕುಜಿಲ್ಲೆಗಳಲ್ಲಿ ಕಾಣಬಹುದು. ಇವರ ಮುಖ್ಯ ಉದ್ಯೋಗವ್ಯಾಪಾರವು ಆದರೆ ಕೆಲವರು ಒಕ್ಕಲತನವನ್ನೂ ಮಾಡುವರು. ಇವರಲ್ಲಿ "ಲೋಕಬಳಿಕೆ," "ಧೂಳಪಾವಡ" ಯೆಂಬ ಯೆರಡು ಭೇದಗಳಿರುತ್ತವೆ. ವಿಜಾಪುರಜಿಲ್ಲೆಯಲ್ಲಿ (ಹೊಳೆಯಾಚೆಯವರು,) ಹಳಗೇರಿ ಬಾಳ್ವಿಯವರು,) ಯೆಂಬೆರಡು ಪೇಟೆವರ್ಗಗಳುಂಟು. ಇವರಲ್ಲಿ ಪರಸ್ಪರ ಅನ್ನ ವ್ಯವಹಾರ ಶರೀರಸಂಬಂಧಗಳಾಗುತ್ತವೆ.

ಮೇಲಿನ ಮೂರುವರ್ಗಗಳಿಗಿಂತ ಪಂಚಮಸಾಲಿಯವರ ಸಂಖ್ಯೆಯು ಬಹಳ ಹೆಚ್ಚಿರುತದೆ. ಒಕ್ಕಲತನವೇ ಇವರಹೊರೆಯು ಬಣಜಿಗರೂ ಶೀಲವಂತರೂ ಪಂಚಮಸಾಲಿಯವರಿಂದಲೇ ನ್ಯಾಯವಾದರೆಂದು ಹೇಳುತ್ತಾರೆ. ಈಚೆತ್ತಿಗೆ ದುಡಿಮೆಗಾರಿಯಮನುಷ್ಯನು ದೀಕ್ಷೆಯನ್ನುಕೊಳ್ಳುವ ಬಣಜಿಗವಾಗಲಿಕ್ಕೆ ಅಡ್ಡಿಯಿಲ್ಲ. ಪಂಚಮಸಾಲಿಯಮಗರು ಅಯ್ಯತನದ ಸಂಸ್ಕಾರ ಹೊಂದಿ ಜಂಗಮರಾಗಬಹುದು. ವಿರಕ್ತರಾಗಲಿಕ್ಕೆ ಸಹ ಅವರಿಗೆ ಅಡ್ಡಿಯಿಲ್ಲ. ಈ ಅಧಿಕಾರವು ಸ್ವೀಕರಿಸಿದ ಲಿಂಗವಂತರಿಗಿಲ್ಲ. ಪಂಚಮಸಾಲಿಯವರೂ ಬಣಜಿಗರೂ ಶೀಲವಂತರೂ ಜಂಗಮರಾಗಬಹುದು.

(ಇದರಶೇಷ ಮುಂದಿನವಾರಕ್ಕೆ.)

BANGALORE —Printed and published at the Karnatic Press, No 114, [illegible] Mandikal Road, Pettah.—1890

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol XVIII] BANGALORE —MONDAY, DECEMBER 15, 1890. [No 50

ಸಂಪುಟ ೨] ಬೆಂಗಳೂರು — [illegible] ಡಿಸೆಂಬರ್ ೧೫ನೇ ತಾರೀಖು ಸೋಮವಾರ. [ಸಂಚಿಕೆ ೫೦

ಕರ್ನಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

[illegible]

NOTICE.

VAIDYA SARA SANGRAHA

A TREATISE ON THE HINDU SYSTEM OF

HINDU MEDICINE

Price [illegible] Postage Rs 5 0 0

ವೈದ್ಯಸಾರ ಸಂಗ್ರಹ

[illegible]

ADVERTISEMENTS

ನೋಟೀಸು.

ಅದ್ಭುತವಾದ ಹಿಂದೂ ಔಷಧವು.

[illegible]

NAYLOR ON GLEESA CO

[illegible]

ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ಬಿಕರಿಗೆ ಸಿದ್ಧವಾಗಿ [illegible]

ಸಂಸ್ಕೃತ ಗ್ರಂಥಗಳು.

[illegible]

ಕನ್ನಡ ಗ್ರಂಥಗಳು

[illegible]

[illegible]

ನೋಟೀಸ್.

ಮೈಸೂರು ಮಹಾರಾಜರವರ ಆರಲೇ ಯಂತ್ರದ ಕಾರ್ಖಾನೆ

ನೋಟೀಸ್.

ಮೈಸೂರು ಮಹಾರಾಜರವರ ಆರಲೆ ಯಂತ್ರದ ಕಾರ್ಖಾನೆಯಲ್ಲಿ [illegible]

ನೋಟೀಸ್.

"ಇಂಗ್ಲೀಷ್ ಇಂಡಿಯನ್ ಪಾಕೆಟ್ ಡೈರಿ"

[illegible]

ನೋಟೀಸ್.

ನಂದಿದುರ್ಗ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟು.

೧೮೯೦ನೇ ಇಸವಿ ಮಿಸಲೇನಿಯಸ್ ಪಿಟಿಷನ್ ನಂಬರ್ [illegible]

[illegible]

By order,

V. VAIDYALINGAMUDALIAR,

Sheristadar.

ಕರ್ನಾಟಕ ಪ್ರಕಾಶಿಕಾ.
THE KARNATAKA PRAKASIKA.
MONDAY, DECEMBER 15, 1890.
೧೮೯೦ನೇ ಡಿಸೆಂಬರ್ ೧೫ನೇ ಸೋಮವಾರ.

THE BHARATA DHARMA MAHAMANDALA.

ಪುರಾತನವಾದುದಾಗಿಯೂ ಪುರಾಣಪ್ರಸಿದ್ಧವಾದುದಾಗಿಯೂ ಇರತಕ್ಕ ಇಂದ್ರಪ್ರಸ್ಥವೆಂಬ ಕುರುಕ್ಷೇತ್ರದಲ್ಲಿ ಈಗ್ಗೆ ಎರಡುವಾರಗಳ ಹಿಂದೆ ಸೇರಿದ್ದ ಒಂದು ಮಹಾಜನಸಭೆಯಿಂದ ಆಪುರುಷ್ಯ ವಿಶೇಷ ಶೋಭಾಯಮಾನವಾಗಿ ಕಣ್ಗೊಳಿಸುತಲಿದ್ದಂತೆ ತಿಳಿಯಬರುತಿದೆ. ಪ್ರಸಕ್ತ ಸಭೆಗೆ, ಸ್ವಲ್ಪ ಹೆಚ್ಚು ಕಡಮೆಯಾಗಿ ವೈದಿಕರಾಗಿಯೂ ಪಂಡಿತರಾಗಿಯೂ ಇರತಕ್ಕ ೫೦೦ ಮಂದಿ ಪ್ರತಿನಿಧಿಗಳು ಬಂಗಾಳೆ, ರಾಜಪುಟಾನಾ, ವಾಯುವ್ಯದೇಶ ಮೊದಲಾದ ಪ್ರಾಂತಗಳ ಜನರಿಂ ನಿಯಮಿತರಾಗಿ ಬಂದಿದ್ದರಲ್ಲದೆ ದರ್ಶನ ಕುತೂಹಲಿಗಳಾದ ೪,೦೦೦ ಪ್ರಜೆಗಳು ಬಂದಿದ್ದರು. ಈ ಸಭೆಯು, ಏತದರ್ಥ ವಿಶೇಷತಃ ನಿರ್ಮಿತವಾದ ಒಂದು ವಿಶಾಲ ರಮಣೀಯವಾದ ಚಪ್ಪರದಲ್ಲಿ ನೆರೆದಿತ್ತು. ಇದಕ್ಕೆ ಬಂಗಾಳಿ ನಿವಾಸಿಯಾದ ಧನಿಕರೊಬ್ಬರು ಸಭಾಧ್ಯಕ್ಷರಾಗಿ ನಿಯಮಿಸಲ್ಪಟ್ಟು ಅವಿಚ್ಛಿನ್ನವಾಗಿ ಐದುದಿವಸಗಳವರೆಗೆ ಸಭೆ ಜರುಗಿತಲ್ಲದೆ ಪ್ರತಿದಿನವಲ್ಲೂ ಬಹುಜನ ಪಂಡಿತರಿಂದ ಹಿಂದೂ ಮತಾಚಾರ ವ್ಯವಹಾರಗಳಕುರಿತು ಉಪನ್ಯಾಸಗಳು ಮಾಡಲ್ಪಟ್ಟವು. ಉದ್ದಿಷ್ಟಸಭೆಯ ಮುಖ್ಯೋದ್ದೇಶವು ಮತಸಂಬಂಧಗಳಾದ ಮತ್ತು ಜನಗಳ ಸದಾಚಾರ ಸಂಬಂಧಗಳಾದ ಪೂರ್ವ ಪದ್ಧತಿಗಳಲ್ಲವು ದಿನೇದಿನೇ ಪರಿಶುಷ್ಕಗಳಾಗುತ ಬರುವದರಿಂದ ಅವು ದೃಢವಾಗಿ ಊರ್ಜಿತವಡಿಸಿ ವ್ಯವಹಾರದೊಳು ತರಬೇಕೆಂಬದಾಗಿರುತಿದೆ. ಸಭೆಯು ಶುದ್ಧ ಹಿಂದೂ ಸಂಪ್ರದಾಯಾನುಗುಣವಾಗಿ ಇಷ್ಟದೇವತಾಪ್ರಾರ್ಥನಾಪೂರ್ವಕ ಉಪಕ್ರಮವಾಗಿ, ಸನ್ಯವಸಾನದಲ್ಲಿ ಸಭಾ ತಾಂಬೂಲ ದಕ್ಷಿಣೆಗಳೊಡನೆ ಪರಿಸಮಾಪ್ತಿಯನ್ನೈದಿತು. ಸಭೆಯ ಪರಿಣಾಮದಶೆಯಲ್ಲಿ ಪಂಡಿತರಿಗೆ ದಕ್ಷಿಣೆ ಕೊಡಲ್ಪಟ್ಟ ವಿಷಯದಲ್ಲಿ ವಿಜಾತೀಯರಾಗಳಾದ ಆಧುನಿಕ ವೈಲಕ್ಷಣ್ಯಾಭಿರುಚಿಯುಳ್ಳ ಮದರಾಸ್ ಹಿಂದೂಪತ್ರಿಕಾಲೇಖಕರು ಪ್ರಕಾರಾಂತರೇಣ ಹೇಳನಮಾಡುತ ಕಡೆಯಲ್ಲಿ ತಿಳಿಸಲ್ಪಟ್ಟ ದಕ್ಷಿಣೆಯವಿಷಯವು ಹಿಂದೂಪಂಡಿತರಿಗೆ ನಿಜವಾಗಿ ಸಹಜಲಕ್ಷಣವಾದುದರಿಂದ ಸ್ವೀಯವಾದ ಹಿಂದೂಸಭೆ ಸೇರಿದಕಾಲದಲ್ಲಿ ಸಹ ಅವರಹಂಕರಿಸಲಾರದೆ ದಕ್ಷಿಣೆಯಂ ಪ್ರತಿಗ್ರಹಿಸುವ ಮಹತರಿಗೊಂದು ಅನಾದಿ ಸಂಪ್ರದಾಯವಾಗಿ ಏರ್ಪಟ್ಟಿರುತಿದೆಂದು ಸೂಚಿಸಿರುತ್ತಾರೆ. ಸದರೀ ಲೇಖಕರ ಅಭಿಪ್ರಾಯವು ವಾಚ್ಯವಾಗಿಯೂ ವ್ಯಂಗ್ಯವಾಗಿಯೂ ಸಹಕೋಲವಿರುವದಿಲ್ಲವು. ಬಹುಃ ವಸ್ತುಸ್ಥಿತಿಯನ್ನರುಹತಕ್ಕದ್ದಾಗಿದ್ದರೂ, ಭಾರತೀಯ ವೈದಿಕರಾದ ಮೇಲ್ಕಂಡ ಪಂಡಿತರು ಅತ್ಯಾತುರರಾದ ನಾಗರಿಕತಾವಿಹೀನರೆಂಬ ತಾತ್ಪರ್ಯವು ವ್ಯಕ್ತವಡಿಸದಿರಲಿಲ್ಲವು. ಹಿಂದೊಂದು ಕಾಲದಲ್ಲಿ ಹಿಂದೂಮತಜ್ಞರ ಜನರೊಳೊಂದೊಂದು ವಿಧ ಆಚಾರವೇರ್ಪಟ್ಟು ಗ್ರಾಹ್ಯವಾಗಿ, ತದುಲ್ಲಂಘನವು ಪ್ರಬಲ ಪ್ರತ್ಯವಾಯವೆಂದು ಭಾವಿಸಲ್ಪಡದೆ ಹೋಗುವದಿಲ್ಲವು. ತರುವಾಯ ಸದರೀ ಸಭೆಯಲ್ಲಿದ್ದವರೆಲ್ಲರೂ ಪೂರ್ವ ಸಂಪ್ರದಾಯವನ್ನನುಸರಿಸಿ ಒಂದು ಸಿಂಹಾಸನವಂ ನೆಲಗೊಳಿಸಿ ಅದರಲ್ಲಿ ರಾಜಾರ್ಹಗಳಾದ ಕೆಲವು ಲಾಂಛನಗಳನ್ನಿಟ್ಟು ಶ್ರೀ ಸಾರ್ವಭೌಮರಾದ ಶ್ರೀಮನ್ಮಹಾರಾಜ್ಞೀ ಇಂಡ್ಯ ಚಕ್ರವರ್ತಿನೀಯವರ ನಿಶ್ಚಿಂತ್ಯದಯ ಮಂಗಳ ಪರಂಪರಾಭಿವೃದ್ಧಿಯಂ ಕೋರುವಂತೆ ಸುಪಥೋಚಿತಗಳಾದ ಕೆಲವು ಶ್ಲೋಕಗಳನ್ನು ಹೇಳಿದರು. ಅನಂತರ ಸಭಾಸದರಾದ ಪ್ರತಿನಿಧಿಗಳವರಿಂ ಕಂಡ ವಿಷಯಗಳಂ ಕುರಿತು ವಿಚಾರ ಮಾಡಿ ನಿರ್ಣಯಿಸಿರುವುದೇನಂದರೆ,—(೧) ಈಗಿನ ಕಾಲದೊಳು ಹಿಂದೂಗಳಲ್ಲಿ ಕೆಲವರು, ತಮ್ಮ ಆಚಾರ ಸಂಸ್ಕಾರಾದಿಗಳ ವಿಷಯದಲ್ಲಿ ಕೇವಲ ಉದಾಸೀನರಾಗಿರುವದರಿಂದ, ಇದು ಮೊದಲು ವಿಶಿಷ್ಟ ಧರ್ಮ ಸಭೆಯವರೂ, ಆಯಾ ಸ್ಥಳದ ಧರ್ಮಾಧಿಕಾರಿಗಳಾದ ಸಂಚಾಯತರೂ, ಮೇಲೆ ಕಂಡ ಪ್ರಾಯಶ್ಚಿತ್ತಾದಿ ಕರ್ಮಗಳು ಧರ್ಮಶಾಸ್ತ್ರಗಳಲ್ಲಿ ತಿಳಿಸಲ್ಪಟ್ಟಿರುವಂತೆ ಖಂಡಿತವಾಗಿ ನಡೆಸಲ್ಪಡುತಿದೆಯೋ ಇಲ್ಲವೆ ಎಂಬದನ್ನು ವಿಚಾರಿಸಿಕೊಳ್ಳಬೇಕಾದುದು ಆವಶ್ಯಕವೆಂಬದಾಗಿ ಈ ಮಹಾಜನ ಸಭೆಯವರು ನಿರ್ಣಯಿಸಿರುತ್ತಾರೆ. (೨) ಹಿಂದೂ ವೈವಾಹಿಕಕ್ರಮ ಪರಿಷ್ಕರಣಕ್ಕಾಗಿ ಅನ್ಯಜಾತಿಯವರಿಂದ ಮಾಡಲ್ಪಡುತಲಿರುವಂತೆ ಕೆಲವು ಪ್ರಯತ್ನಗಳನ್ನು ಈ ಮಹಾಮಂಡಲದವರು ಅತ್ಯಂತ ಅಸಮಾಧಾನದಿಂ ದೀಕ್ಷಿಸುತ, ವಿವಾಹಕಾಲ ನಿಯಮವಂ ಹೆಚ್ಚಿಸುವಂತೆ ಜಾತಿ ಮತ ಸಂಪ್ರದಾಯಗಳ ವಿಷಯದಲ್ಲಿ ಸರ್ಕಾರ್‌ಮೆಂಟಿನವರ ಪ್ರವೇಶವು ಅಯುಕ್ತವೆಂದು ಖಂಡಿತವಾಗಿ ವಿರೋಧಿಸತಕ್ಕವರಾಗಿರುತ್ತಾರೆ. (೩) ವಿವಾಹ ಕಾಲದಲ್ಲಿ ವಧೂವರರ ಕಡೆಯವರು ವಿಶೇಷವಾಗಿ ದ್ರವ್ಯವನ್ನು ವೆಚ್ಚಿಸುವುದು, ಮತ್ತು ದಿನದಿನಯ ಕಾಲಗಳಲ್ಲಿ ಅಮಿತವಾಗಿ ಧನವ್ಯಯ ಮಾಡುವಂತ ಆಚಾರಗಳು ಧರ್ಮಶಾಸ್ತ್ರ ನಿಬಂಧನೆಗೆ ವಿರುದ್ಧಗಳಾಗಿರುವದರಿಂದ ಅದಂ ಸಾಧ್ಯವಾದ ಮಟ್ಟಿಗೆ ನಿಲ್ಲಿಸಬೇಕಾದುದು ಆವಶ್ಯಕವೆಂಬದಾಗಿ ಈ ಸಭಾಸದರು ತೀರ್ಮಾನಿಸಿರುತ್ತಾರೆ. (೪) ಭಾರತಧರ್ಮ ಮಹಾಮಂಡಲ ಸಭೆಯವರ ಮುಖ್ಯೋದ್ದೇಶವು, ಏತದ್ದೇಶೀಯರಾದ ಪ್ರಜೆಗಳ ಮತ ಸಂಬಂಧಗಳಾದ ಆಚಾರ ವ್ಯವಹಾರ ಪ್ರಯುಕ್ತಗಳಾದ ಕರ್ಮಗಳನ್ನು ಅಭಿವೃದ್ಧಿಪಡಿಸಿ, ಅವರ ಜಾತಿ ಮತ ಪ್ರಯುಕ್ತಗಳಾದ ಬಾಧ್ಯತೆಯನ್ನು ಸ್ವಾತಂತ್ರ್ಯವನ್ನು ಸಾಧ್ಯವಾದ ಮಟ್ಟಿಗೆ ಕಾಪಾಡಬೇಕೆಂಬದಾಗಿರುವದರಿಂದ ಇಂತಾ ಪ್ರಯುಕ್ತೋದ್ದೇಶಗಳಿಗೆ ವಿಶಿಷ್ಟ ಧರ್ಮಾಧಿಕಾರಿಗಳೂ ಧರ್ಮ ಸಭೆಯವರೂ ತಕ್ಕ ಸಹಾಯಗಳೆಲ್ಲವಂ ಮಾಡಬೇಕೆಂಬದಾಗಿ ಸದರೀ ಸಭೆಯವರು ಕೋರುವದಲ್ಲದೆ ಗೀರ್ವಾಣವಿದ್ಯಾಭಿವೃದ್ಧಿಗೆ ಆವಶ್ಯಕಗಳಾದ ಏರ್ಪಾಡುಗಳನ್ನೆಲ್ಲ ಮಾಡಬೇಕಾದ್ದು ಕರ್ತವ್ಯವೆಂದು ಭಾವಿಸಿರುತ್ತಾರೆ.

ಮೇಲೆ ಕಂಡ ಮಹಾಜನ ಸಭೆಯಲ್ಲಿ ಇಂಗ್ಲಿಷ್ ಭಾಷಾ ಪ್ರವೀಣರಾದ ಹಿಂದೂಗಳು ಸಹ ಅನೇಕರಿದ್ದಂತೆ ತಿಳಿಯಬರುತಿದೆ. ಈ ಸಭೆ ಸೇರಿದ್ದ ಐದು ದಿನಗಳಲ್ಲಿ ನಡೆಸಲ್ಪಟ್ಟ ನಡವಳಿಕೆಗಳೂ, ಮಾಡಲ್ಪಟ್ಟ ಪ್ರಸಂಗಗಳೂ, ನಿರ್ಧರಿಸಲ್ಪಟ್ಟ ವಿಷಯಗಳೂ ವಿವರವಾಗಿ ಅದ್ಯಾಪಿ ಹೊರಗಾಗದಿದ್ದಾಗ್ಯೂ ಕೆಲವು ಪತ್ರಿಕೆಗಳಿಗೆ ಬಂದ ತಂತಿ ವೃತ್ತಾಂತಗಳ ಮೂಲಕ ಮೇಲೆ ಕಂಡ ತೀರ್ಮಾನಗಳು ಮಾಡಲ್ಪಟ್ಟಂತೆ ತಿಳಿಯಬರುತಿದೆ. ಈ ಸಂದರ್ಭದಲ್ಲಿ ಮದರಾಸ್ ಹಿಂದೂ ಪತ್ರಿಕೆಯು ವಿವೇಚಿಸಿ ತಿಳಿಸಿದ ಕೆಲವು ಅಂಶಗಳು ಸಮಯೋಚಿತಗಳಾದವಾಗಿಯೂ, ಮಹಾಜನಸಭೆಯವರು ಅವಧಾನ ಕೊಡಲಿಕ್ಕೆ ಅರ್ಹವಾದುದಾಗಿಯೂ, ಸಮಂಜಸಗಳಾದವಾಗಿಯೂ ಇರುವದರಿಂದ ಸದರೀ ಪತ್ರಿಕಾಭಿಪ್ರಾಯವು ನಾವಿವರಡಿಂ ಅನುವಾದವಮಾಡಿ ಸ್ವಾಭಿಪ್ರಾಯವಂ ತಿಳಿಯಪಡಿಸುವೆವು. ಮೇಲೆ ಕಂಡ ಪತ್ರಿಕೆಯು ಸೂಚಿಸುವಂತೆ ನಮ್ಮವರಲ್ಲೀಗ ನಡೆಗೊಂಡು ಅಂಧಪರಂಪರೆಯಾಗಿ ನಡೆಯಬರುತಲಿರುವ, ಶಾಸ್ತ್ರವಿರುದ್ಧಗಳಾದ ಕೆಲವು ದುಸ್ಸಂಪ್ರದಾಯಗಳು, ಯಾವ ಕಾಲದಲ್ಲಿಯೋ ಯಾವ ಕಾರಣದಿಂದಲೋ ಜನಿಸಿ ವೃದ್ಧಿಯನ್ನೈದುತ ಬರುತಲಿವೆಯಾಗಿ ಅವು ದೇಶ ಕಾಲೋಚಿತವಾಗಿಯೂ, ಶಾಸ್ತ್ರಕ್ಕೆ ವಿರುದ್ಧವಾಗಿಯೂ ಕ್ರಮಪಡಿಸಿ ಸ್ವದೇಶೀಯರಿಗೆ ನಿಯಮಿತವಾದ ಮೇಲನ್ನುಂಟುಮಾಡುವದಕ್ಕನುಕೂಲವಾಗಿದ್ದ ಮೇಲೆಕಂಡ ಹಳ್ಳಿ ಸಂದರ್ಭವು ವ್ಯರ್ಥವಾದಲ್ಪಟ್ಟದಕ್ಕಾಗಿ ನಾವು ಬಹಳವಿಷಾದಿಸುತ್ತೇವೆ. ಈಗಿನವರ್ಗಳು ಆಚರಣೆಯಲ್ಲಿರತಕ್ಕ ಪದ್ಧತಿಗಳ ಗುಣದೋಷಗಳಂ ಸಂಗ್ರಹಿಸಿ ವ್ಯಕ್ತಪಡಿಸುವದಕ್ಕೂ, ಸುಗುಣಗಳನ್ನು ಮಾತ್ರ ಗ್ರಹಿಸುವಂತೆ ನಿರ್ಬಂಧಿಸಿ ದುರ್ಗುಣ ಭಾಗಗಳಂ ನಿವೃತ್ತಿಸುವಂತೆ ಜನರಂ ಪ್ರೇರಿಸಲಿಕ್ಕೂ ಮೇಲೆ ಕಂಡದಕ್ಕಿಂತ ಅನುಕೂಲವಾದ ಬೇರೊಂದು ಸಮಯವು ದೊರೆಯಲಾರದು. ಏತಕ್ಕಂದರೆ, ಸಾರ್ವಜನೀನವಾದ ಪ್ರಯೋಜನಾರ್ಥ ಐಕಮತ್ಯದಿಂದೊಂದು ಕಾರ್ಯದಲ್ಲಿ ಪ್ರವೇಶಿಸಿ ಚಿತ್ತಸ್ಥೈರ್ಯದೊಡನೆ ಕೃತಿವಡಿಸಲಿಕೆ ಪ್ರವೃತ್ತಿಯೂ ಉತ್ಸಾಹವೂ ನಮ್ಮವರಲ್ಲಿ ಬಹಳ ದುರ್ಲಭವಾದುದರಿಂದ ತಾದೃಶಾಭಿಲಾಷೆಯು ಯಲ್ಲಿಯಾದರೊಂದುಕಡೆ ಸಕೃತ ತಲದೋರಿದರೆ ತಾವನ್ಮಾತ್ರದಿಂ ಸಂತೋಷಿಸಬೇಕಾಗಿರುತಿದೆ. ಮೊದಲನೆಯ ತೀರ್ಮಾನವಾದ ಪ್ರಾಯಶ್ಚಿತ್ತಾದಿ ಕರ್ಮಾಚರಣೆಯ ವಿಷಯದಲ್ಲಿ ಪಂಡಿತರು ಮಾಡಿದ ನಿರ್ಣಯದ ಮೇಲೆ, ತಮ್ಮ ಆರ್ಜನೆಗೆ ಮುಖ್ಯ ಮಾರ್ಗವಾಗಿ ಯೇರ್ಪಟ್ಟಿರುವದು ಕಳೆಯಕೊಟ್ಟರಿಕ್ಕೆ ಸದರೀ ಪಂಡಿತರಿಗೆ ಇಷ್ಟವಿಲ್ಲದ್ದಲ್ಲದೆ ಅವರು ಏವರೀತ್ಯಾ ನಿರ್ಧರಿಸಿದಂತೆ ಕಾಣುತಿದೆಂದು ಹಿಂದೂ ಪತ್ರಿಕಾಲೇಖಕರು ತಾತ್ಪರ್ಯ ಪಡುತ್ತಾರೆ. ಈ ಅಭಿಪ್ರಾಯವು ಕೇವಲ ಅಸಮಾಧಾನ ಪ್ರಯುಕ್ತವಾದುದಾಗಿಯೂ ಔಚಿತ್ಯ ಪ್ರೇರಿತವಾದುದಾಗಿಯೂ, ವೇದ ವಿಹಿತ ಕರ್ಮಾಚರಣೆಯೊಳಿರುವ ಅನಾಸ್ಥೆಯಂ ಹೊರಪಡಿಸತಕ್ಕದ್ದಾಗಿಯೂ ಇರುತಿದೆ. ವೇದ ಶಾಸ್ತ್ರಗಳಲ್ಲಿ ತಿಳಿಸಲ್ಪಟ್ಟಿರುವ ಸಕಲ ಕರ್ಮಗಳೂ, ಸಕಲ ದಾನಗಳೂ, ಸಕಲ ವ್ರತಗಳೂ ಭೂತ ಸಂಪ್ರದಾಯ ರೂಪದಿಂ ಭಗವತ್ಪ್ರೀತ್ಯರ್ಥ ಪರವಾಗಿ ಪರಿಗ್ರಹಾರ್ಹಗಳಾಗಿರುವದರಿಂದ ತತ್ಸ್ವರೂಪ ಸಾಫಲ್ಯಾರ್ಥ ಮಾಡಲ್ಪಡಬೇಕಾದ ಹೋಮ ದಾನ ಧರ್ಮಗಳನ್ನು ದ್ರವ್ಯಾಕರ್ಷಣೆಗಾಗಿ ಅಭಿಕಾರಿಸದರಾದ ವಿಪ್ರಮಂಡಲದ ಪರಿಕಲ್ಪಿತವಾದವೆಂದು ಹೇಳುವ ಪಕ್ಷಕ್ಕೆ ಮತಾಚಾರಗಳ ವಿಷಯಗಳಲ್ಲಿ ಶಾಸ್ತ್ರನಿಬಂಧನದ ಪ್ರಜೆಗಳ ಕಟ್ಟುವ ತೂ ಗುಣದೋಷ ವಿಚಾರದ ಅನಾವಶ್ಯಕಗಳಾಗಿರುತಿದೆ. ಇತ್ಯಾದಿಗಳೆಲ್ಲವು ನಿಷ್ಪ್ರಯೋಜಕಗಳೆಂದು ತೋರಿಬಂದಾಗ ಮೇಲೆಕಂಡ ಸಭೆಯವರ ಪ್ರವೃತ್ತಿನಿವೃತ್ತಿಗಳಾಗಲಿ ಸರ್ಕಾರ್‌ಮೆಂಟಿನವರ ಆನುಕೂಲ್ಯ ಪ್ರಾತಿಕೂಲ್ಯಗಳಾಗಲಿ ನಮಗೆಷ್ಟು ಮಾತ್ರವೂ ಅವಶ್ಯಕವಲ್ಲವು. ಇದರಿಂದ ಭಾರತಧರ್ಮ ಮಹಾಮಂಡಲಿಯ ಪ್ರಥಮೋದ್ದೇಶವು ಕೇವಲ ತುಚ್ಛವೆಂದು ಭಾವಿಸಲಾರೆವು. ಪ್ರಕೃತ ನಮ್ಮ ಸಾಮಾಜಿಕಸ್ಥಿತಿಯು ಕುರಿತು ಯಾರಾದರು ಪರಿಶೀಲಿಸಿ ನೋಡುವದಾದರೆ ಮೇಲೆ ಕಂಡ ನಿರ್ಣಯವು ಅನ್ಯಾವಶ್ಯಕವೆಂದು ಹೇಳಲಾರರು. ಇಂಗ್ಲಿಷ್‌ನವರು ಅನ್ಯಜಾತೀಯರೆಂತಲೂ, ವೇದವಿಹಿತ ಕರ್ಮಬಹಿಷ್ಕೃತರಲ್ಲವೆಂತಲೂ, ಭೋಜ್ಯಪಾನಾದಿಗಳಲ್ಲಿ ಅನಿಯತರೆಂತಲೂ, ಇತ್ಯಾದಿ ದೋಷಯುಕ್ತರೆಂತಲೂ ನಾನಾವಿಧದಿಂ ನಾವು ಆಕ್ಷೇಪಿಸುತ್ತೇವೆ. ಅಂತವರಲ್ಲಿಯೂ, ಗುರುತ್ವಮಹೋತ್ತರ ಯತ್ಕಿಂಚಿದ್ವಿಷಯಗಳು ಅವಿಶ್ರಾರ್ಯಗಳಾಗಿದ್ದರೂ, ಯಾವನಾದರೊಬ್ಬನದೋಷವು ಪ್ರಸಿದ್ಧವಾಗಿ ನಿರೂಪಣೆಗೆ ಬಂದರೆ ಆಗ ಸಮಾಜದೊಳಿನಿಗೆ ವ್ಯಂಗ್ಯಾಕ್ಷೇಪಕ್ಕೆ ಅವಮಾನವನ್ನು, ಪ್ರಯೋಜನರಾಹಿತ್ಯವೂ, ಬಹಿಷ್ಕಾರವೂ ಮೊದಲಾದವು ಹೇಳಕೊಡಲಾಗಿರುತಿದೆ. ಕರ್ಮಬಹಿಷ್ಕರಿಸುತ್ತು ಸದಾಚಾರ ಸಂಪನ್ನರೆನ್ನಿಸಿಕೊಂಡಿರುವ ನಮ್ಮಲ್ಲಿ ಸಂಕೋಚವಿಲ್ಲದೆ ನಡೆಸಲ್ಪಡುತಲಿರುವ ಅಕೃತ್ಯಗಳಿಗೆ ಪರಿಹಾರವೇನಿಲ್ಲವೆಂತೋಣಿತೆ. ಇಂತಾಸ್ಥಿತಿಯಲ್ಲಿ ಆಚಾರ ವ್ಯವಹಾರ ವಿಷಯಕವಾದ ಒಂದು ನಿಬಂಧನವು ಅನಿಚ್ಛಿತವಾಗಿರುತಿದೆ. ನಿಶ್ಚಯ ಕರ್ಮಾಚರಣೆಯ ವಿಷಯದಲ್ಲಿ ಮೇಲೆಕಂಡಂತಾ ಸಭೆ ಯಾವದೂ ಆವಶ್ಯಕವಾಗಿಲ್ಲವೆಂದು ಹಿಂದೂ ಪತ್ರಿಕೆಯು ತಾತ್ಪರ್ಯಪಡುತಿದೆ. ಏಕಂದರೆ ತ್ಯಾ ಸಾಮುದಾಯಿಕ ವ್ಯವಸ್ಥೆಯೂ ಕಟ್ಟುಪಾಡುಗಳೂ ಇಲ್ಲದೆ ಅನೇಕ ಕೆಡುಕುಗಳುಂಟಾಗಿರುವದಾಗ್ಯೆ ಅರಿಕೆ ಭಾವಿಸುವದು ಯುಕ್ತವೆ. ಕಿವೀಣಾರೆಯ್ತಿ, ಮಹಾಜನಸಭೆಯವರು ಮಾಡಿದ ಇತರ ತೀರ್ಮಾನಗಳಂಕುರಿತ ನಮ್ಮ ಅಭಿಪ್ರಾಯವಂ ಮುಂದಿನವಾರದಲ್ಲಿ ತಿಳಿಸುವೆವು.

Occasional Notes
ನೈಮಿತ್ತಿಕ ವಿಷಯಗಳು.

An offer accepted.—ಈ ತಿಂಗಳ ಆಖೈರಿನಲ್ಲಿ ಕಲ್ಕತ್ತೆಯೊಳು ಸೇರುವ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಭೆಯ ಅಗ್ರಾಸನಾಧಿಪತ್ಯವನ್ನು ಮುಂಬೈಯಲ್ಲಿ ಪ್ರಸಿದ್ಧರಾಗಿರುವ ಮಿ|| ಫಿರೋಜ್‌ಶಾ ಮೆಹತಾ ಎಂಬ ಪಾರ್ಸೀ ಜಾತೀ ದೊಡ್ಡ ಮನುಷ್ಯರು ಅಂಗೀಕರಿಸಿರುತ್ತಾರೆ.

A recommendation approved.—ಜಾನೀಷುವಾರಿ ಶಕ್ತಿಯಲ್ಲಿ ಮತವನ್ನು ಕುರಿತ ವಿಶ್ವಾಸ ಇರುವದರಿಂದ ಮತವನ್ನು ಕುರಿತ ತೆರಿನಾಮೆಯು ಅನಾವಶ್ಯಕವಾದುದೆಂದು ಕೌನ್ಸಿಲ್ ಸೂಪರಿಂಟೆಂಡೆಂಟವರು ಮಾಡಿದ್ದ ಶಿಫಾರಸ್ಸನ್ನು ಮದರಾಸ್ ಗವರ್ನ್‌ಮೆಂಟಿನವರು ಅಂಗೀಕರಿಸಿರುತ್ತಾರೆ.

An offer accepted.—ರಾಜಧಾನಿ ತಿಸ್ಟ್ರಾಸ್ಟ್ರನಿವಾಸಿಯಾದ ರಾವ್ ಮನಮೋಹನ ಘೋಷಯವರು ಸದರೀ ಡಿಸ್ಟ್ರಿಕ್ಟಿನಲ್ಲಿ ಪ್ರಜೆಗಳ ಉಪಯೋಗಾರ್ಥ ಭಾವಿಗಳನ್ನಗೆಯಿಸುವದಕ್ಕಾಗಿ ಹತ್ತು ಸಾವಿರ ರೂಪಾಯಿಗಳುಕೊಟ್ಟಬಗ್ಗೆ ಅವರ ಉದಾರಸ್ವಭಾವಕ್ಕಾಗಿ ಬಂಗಾಳೇ ಗವರ್ನ್‌ಮೆಂಟಿನವರು ತಮ್ಮ ಸಂತೋಷವು ಅವರಿಗೆ ತಿಳಿಸಿದರು.

Arrival of the Czarowitch.—ರಷ್ಯಾ ಚಕ್ರವರ್ತಿಯವರ ಜ್ಯೇಷ್ಠಪುತ್ರರವರು ಈ ತಿಂಗಳ ೨೩ನೇ ತಾರೀಖಿನಲ್ಲಿ ಮುಂಬೈಯಲ್ಲಿ ಬಂದಿಳಿಯುವರಾಗಿ ಅದೇದಿನ ರಾತ್ರಿ ಅವರ ಗೌರವಾರ್ಥ ಗವರ್ನ್‌ಮೆಂಟು ಹೌಸಿನಲ್ಲಿ ಔತಣೋತ್ಸವವು ನಡೆಸಲ್ಪಡುವದಾಗಿಯೂ ಮರುದಿನ ಯೆಲಿಫೆಂಟಾಕೇವ್ ಎಂಬ ಪರ್ವತ ಗಹ್ವರದಲ್ಲಿ ವನಭೋಜನವು ನಡೆಯುವದಾಗಿಯೂ ಏರ್ಪಾಡಾಗಿರುವದರಿಂದ ಅದಾದ ಕೂಡಲೆ ಅದೇದಿನ ರಾತ್ರಿ ಅವರು ಪುನೇಗೆ ಪ್ರಯಾಣವಾಗುವರು.

An attempt at human sacrifice.—ಈಚೆಗೆ ಬಂಗಾಳೇದೇಶದೊಳಗಣ ಒಂದು ಕಾಳಿಕಾದೇವಿಯ ದೇವಸ್ಥಾನಕ್ಕೆ ಯಾತ್ರಾರ್ಥಿಯಾದ ಒಬ್ಬಾತನು ಹೋಗಿ ಅಲ್ಲಿ ದೇವಿಗೆ ಕಬ್ಬನ್ನರ್ಪಿಸುತ್ತಿರುವಲ್ಲಿ ಸದರೀ ಆಲಯದ ಅರ್ಚಕನು ಮಚ್ಚುಕತ್ತಿಯಿಂದ ಆತನ ಬಲಭುಜವಂ ಕಡಿದು ಹಾಕಿದ್ದಲ್ಲದೆ ಯೆಡಗೈಯಲ್ಲಿ ನಾಲ್ಕು ಬೆರಳುಗಳಂ ಕತ್ತರಿಸಿಬಿಟ್ಟನೆಂತಲೂ ಸದರೀ ಘಾತುಕನು ಕಲ್ಕತ್ತೆ ಸೆಷನ್ ವಿಚಾರಣೆಯಬಗ್ಗೆ ಕಮಿಟ್ ಮಾಡಲ್ಪಟ್ಟಿರುತ್ತಾನೆಂತಲೂ ಆಪ್ರಾಂತಪತ್ರಿಕೆಗಳಿಂದರಿಂದ ತಿಳಿಯಬರುತಿದೆ.

A social resolution.—ಪ್ರಯಾಗ ನಿವಾಸಿ ದ ವೈಶ್ಯರ ಮಂಡಲಿ ಎಂಬ ಸಾಮಾಜಿಕರು ತಮ್ಮ ಗಂಡುಮಕ್ಕಳಿಗೆ ಇಪ್ಪತ್ತು ವರ್ಷಗಳ ವಯಸ್ಸಿಗೆ ಮುಂದಾಗಿಯೂ, ಹೆಣ್ಣು ಮಕ್ಕಳಿಗೆ ಹನ್ನೆರಡು ವರ್ಷಗಳ ವಯಸ್ಸಿಗೆ ಮುಂಚಿತವಾಗಿಯೂ ವಿವಾಹ ಮಾಡಕೂಡದೆಂತಲೂ, ವಿವಾಹ ಪ್ರಯುಕ್ತವಾದ ವ್ಯಯವು ಮಿತಪಡಿಸಬೇಕೆಂತಲೂ, ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವನ್ನುಂಟುಮಾಡಬೇಕೆಂತಲೂ ನಿರ್ಣಯಿಸಿರುವದಾಗಿ ಬಿಹಾರ ಎಂಬ ಪ್ರದೇಶದ ಸದ್ವರ್ತಿತ ವೆಂಬ ಪತ್ರಿಕೆ ತಿಳಿಸುತಿದೆ.

A meeting.—ಬಂಗಾಳೇ ದೇಶದ ಲೆಫ್ಟಿನೆಂಟ್ ಗವರ್ನರ್ ಅಧಿಕಾರದಿಂದ ನಿವೃತ್ತಿ ಸುಖವು ಪಡೆದು ಸ್ವದೇಶಕ್ಕೆ ಪ್ರಯಾಣೋನ್ಮುಖರಾಗಿರುವ ಸರ್ ಸ್ಟೂವರ್ಟ್ ಬೇಲಿ ಯವರಿಗೆ ಯಾವವಿಧವಾದ ಮರ್ಯಾದೆಯಂ ಮಾಡಬೇಕೆಂಬ ಅಂಶವಂ ಕುರಿತು ಯೋಚಿಸತಕ್ಕಬಗ್ಗೆ ಈ ತಿಂಗಳ ೬ನೇ ತಾರೀಖಿನಲ್ಲಿ ಕಲ್ಕತ್ತೆಯೊಳು ಒಂದು ಪ್ರಬಲ ಸಮಾಜ ಸೇರಿ, ಸದರೀ ಅಧಿಕಾರಿಯ ವಿಷಯದಲ್ಲಿ ಪ್ರಜೆಗಳಿಗುಂಟಾಗಿರುವ ಗೌರವಾನುರಾಗ ಸೂಚಕವಾದ ಒಂದು ವಿಜ್ಞಾಪನ ಪತ್ರಿಕೆಯನೊಪ್ಪಿಸತಕ್ಕದ್ದೆಂತಲೂ, ಶಾಶ್ವತವಾಗಿ ಅವರ ಜ್ಞಾಪಕವು ನಡೆಗೊಳಿಸುವದಕ್ಕೆ

ಆವಶ್ಯಕವಾದ ದ್ರವ್ಯೋಪಪತ್ತಿಯನ್ನುಂಟು ಮಾಡಿಕೊಳ್ಳತಕ್ಕಬಗ್ಗೆ ಚಂದಾ ವಸೂಲ್ಮಾಡುವ ದಕ್ಕಾಗಿ ಒಂದುಕಮಿಟಿಯನ್ನೇರ್ಪಡಿಸತಕ್ಕದ್ದೆಂತಲೂ ನಿರ್ಣಯವಾಗಿ,ಆಸಭೆಯಲ್ಲೇ ಚಂದಾಮೂಲಕ ೧೬,೨೦೦ ರೂಪಾಯಿಗಳು ವಸೂಲಾದವು.

LOCAL AND PROVINCIAL NEWS.

ಒಳದೇಶದವರ್ತಮಾನಗಳು ಮತ್ತು ಪ್ರಾಂತ್ಯವೃತ್ತಾಂತಗಳು.

The weather.—ನಿನ್ನೆಯ ಮಧ್ಯಾಹ್ನ ಸೂರ್ಯನು ಧನುರ್ರಾಶಿಯಂ ಪ್ರವೇಶಿಸಿದನಾಗಿ, ಹೇಮಂತಋತು ಸೂಚಕವಾಗಿ ಮಂಜೂಛಳಿಯೂ ಜಾಸ್ತಿಯಾಗಿದೆ. ಬಿಸಿಲು ಹಿತವಾಯಾಗಿ ಕಾಲಸ್ಥಿತಿಯು ಅನುಕೂಲವಾಗಿದೆ.

Magisterial appointment.—ಮೈಸೂರ್ ಡಿಸ್ಟ್ರಿಕ್ಟ್ ಟ್ರಿಜರಿ ಆರ್ಚಾಡಿನಲ್ಲಿದ್ದ ಪ್ರೊಬೆಷನರ್ ಮೆ॥ ಸುಬರಾವ್ ಅರಸಿನವರು ಕ್ರಿಮಿನಲ್ ಪ್ರೊಸೀಜರ್ ಕೋಡಿನ ೧೨ ನೇ ಸೆಕ್ಷನ್ ಅನುಸರಿಸಿ ೨ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಕರಾಗ್ಮಲ್ಪಟ್ಟಿರುತ್ತಾರೆ.

Pilgrims to Srirangam.—ಬರುವ ವೈಕುಂಠ ಏಕಾದಶೀ ಪರ್ವದಿನದ ನಿಮಿತ್ತವಾಗಿ ಅನೇಕರುಗಳು ಯಾತ್ರಾರ್ಥಿಗಳು ತಿರುಪತಿ ಶ್ರೀರಂಗ ಮೊದಲಾದ ದಿವ್ಯದೇಶಗಳಿಗೆ ದೇವರ ದರ್ಶನಕ್ಕಾಗಿ ಈ ಪೂರಿಂದ ಹೋಗುತಲಿದ್ದಾರೆ.

Sir Frederick Roberts.—ಇಂಡಿಯಾ ಕಮಾಂಡರ್ ಇನ್ ಚೀಫ್ ರವರಾದ ಸರ್ ಫ್ರೆಡರಿಕ್ ರಾಬರ್ಟ್ಸ್‌ರವರು ಈ ತಿಂಗಳಲ್ಲಿ ಈ ಊರಿಗೆ ಬರುವರೆಂದು ನಿರೀಕ್ಷಿಸಲ್ಪಟ್ಟಿತ್ತು. ಪರಂತು ಈಚೆಗೆ ತಿಳಿದು ಬರುವವರಲ್ಲಿ ಅವರು ಈ ಪೂರಿಗೆ ಬರುವ ಸಂಭವ ಕಾಣಿಸಲಿಲ್ಲ.

The Rate-payers Association.—ಈ ಪೂರಿನ ರೇಟ್ ಪೇಯರ್ಸ್ ಅಸೋಸಿಯೇಷನ್ ಸಭಿಕರು ನಿನ್ನೆಯ ದಿನ ಸಾಯಂಕಾಲ ಗವರ್ನಮೆಂಟ್ ಎಂಜಿನೀರ್ ಆಫೀಸಿನ ಸ್ಥಳದಲ್ಲಿ ಸಭೆ ಸೇರಿ ಕೆಲವು ವಿಷಯಗಳಂ ಕುರಿತು ವಿಚಾರ ಮಾಡಿ ತೀರ್ಮಾನಿಸಿದರೆಂಬದಾಗಿ ತಿಳಿಯಬರುತ್ತದೆ.

Criminal prosecution.—ಇಲ್ಲಿನ ಗವರ್ನಮೆಂಟ್ ಬುಕ್ ಡಿಪೋ ಮ್ಯಾನೇಜರ ಮೇಲೆ ಖರ್ಚ್ ಬರ್ಮ್ ನಡೆಸಿ ಆಕ್ಸೇಶನ್ ಬಗ್ಗೆ ಎಮ್ಯ್ ಕೇಷರ್ ಸೆಕ್ರೆಟರಿಯವರು ಪ್ರಾಸಿಕ್ಯೂಷನ್ ಮಾಡುವಂತೆ ಹುಕುಂ ಕೊಟ್ಟದರಿಂದ ಆತನ ಮೇಲೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದಾಗಿ ಅವರು ಜಾಮೀನಿನ ಮೇಲೆ ಬಿಡಲ್ಪಟ್ಟಿದ್ದಾರೆಂದು ಕೇಳಲಿಕ್ಕೆ ವಿಷಾದಿಸುತ್ತೇವೆ.

The S. M. Railway.—ದಕ್ಷಿಣ ಮರಾಠಾ ರೈಲ್ವೇ ಕಂಪೆನಿಯಲ್ಲಿ ಈಗ್ಯೆ ಆರೇಳು ವರುಷಗಳ ಮೊದಲು ಟ್ರಾಫಿಕ್ ಮ್ಯಾನೇಜರ್ ಕೆಲಸವನ್ನು ನಿರ್ವಹಿಸುತಲಿದ್ದಂತಾ ಮೆ॥ ಜೇಮ್ಸ್ ಕ್ರೇಕ್ ಎಂಬವರು ಮಾಸೇ ಮದರಾಸ್ ೩ ನೇ ತಾರೀಖಿನ ದಿನ ಒಂದು ವರುಷದ ಫರ್ಲೋ ಪಡೆದು ಸ್ವದೇಶವಾದ ಇಂಗ್ಲೆಂಡಿಗೆ ಪ್ರಯಾಣ ಮಾಡಿದರೆಂದು ತಿಳಿಯಬರುತ್ತದೆ.

The University Examinations.—ಈ ಸಲದ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್ ಎಫ್. ಎ. ಪರೀಕ್ಷೆಗಳು ಈ ದಿನ ಮೊದಲು ವಿಧ್ಯುಕ್ತವಾಗಿ ಶುಕ್ರವಾರದೊಡನೆ ಪ್ರಾರಂಭಿಸುವವು. ಈ ಪರೀಕ್ಷೆಗಳು ಹಿಂದಿನವರುಷದಂತೆ ಸೆಂಟ್ರಲ್ ಕಾಲೇಜ್, ಲಂಡನ್ ಮಿಷನ್ ಮತ್ತು ವೆಸ್ಲಿಯನ್ ಮಿಷನ್ ಹೈಸ್ಕೂಲ್, ಬಿಷಪ್ ಕಾಟನ್ಸ್ ಸ್ಕೂಲ್ ಈ ಕಟ್ಟಡಗಳಲ್ಲಿ ನಡೆಯುವವು.

Official changes.—ಈ ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರ್ ಮ್ಯ॥ ವಿ. ಪಿ. ಮಾಧವರಾಯರವರು ಮೊನ್ನೆಯ ದಿನ ತಮ್ಮ ಕೆಲಸದ ಚಾರ್ಜನ್ನು ಸರ್ವಿಸಿರ್ಜ ಅಧಿಕಾರಿಗಳಾದ ಮೇ॥ ನರಸು ಹ್ವಿಲ್ಸಾಹೆಬರವರಿಗೊಪ್ಪಿಸಿ ಸ್ವದೇಶ ಪ್ರಯಾಣಮಾಡಿದರೆಂತಲೂ,ಇವರು ಬರುವ ಬರುವತಿಂಗಳ ಅಖೈರಿನೊಳಗಾಗಿ ವಾಪಸ್ ಬರುವರೆಂತಲೂ ತಿಳಿಯಬರುತ್ತದೆ.

Census Superintendent.—ಬರುವ ಫೆಬ್ರುವರಿ ತಿಂಗಳಲ್ಲಿ ಜನಗಣತಿಯ ಖಾನೇಸುಮಾರಿಯ ಬಗ್ಗೆ ಪೂರ್ವಭಾವಿಯಾಗಿ ಮಾಡಲ್ಪಡಬೇಕಾಗಿರುವ ಏರ್ಪಾಡುಗಳ ಅಜಮಾಯಿಷಿ ಎಲ್ಲವು ಬರುವ ತಿಂಗಳ ಅಖೈರೊಳಗಾಗಿ ಪೂರೈಸಬೇಕಾಗಿರುವದರಿಂದ ಸ್ಯೂಪರಿಂಟೆಂಡೆಂಟರಾದ ಮೆ॥ ವಿ. ಎನ್. ನರಸಿಂಹಯ್ಯಂಗಾರ್ರವರು ಚಿತ್ರದುರ್ಗ ಪ್ರಾಂತಕ್ಕೆ ಸರಕ್ಯೂಟ ಹೋಗಿದಾರೆಂದು ತಿಳಿಯಬರುತ್ತದೆ.

Christmas holidays.—ಮೈಸೂರು ಸಂಸ್ಥಾನದ ಕೆಲವು ಪಬ್ಲಿಕ್ ಆಫೀಸುಗಳೂ ಕ್ರಿಸ್ಮಸ್ ಹಬ್ಬಕ್ಕಾಗಿ ೧೮೯೦ ನೇ ಇಸವಿ ಡಿಸೆಂಬರ್ ೨೨ ನೇ ತಾರೀಖು ಸೋಮವಾರದ ಮೊದಲು ೧೮೯೧ ನೇ ಇಸವಿ ಜನವರಿ ಮೂರನೇ ತಾರೀಖು ಶನಿವಾರದ ಪರ್ಯಂತ ಉಭಯ ದಿನಗಳೂ ಸೇರಿ ಬರಖಾಸ್ತು ಮಾಡಲ್ಪಡುವವು, ಜರೂರಿಯಾದ ಕೆಲಸಗಳ ನಿರ್ವಹಣೆಯಬಗ್ಗೆ ಆಯಾ ಮೇಲ್ಮೈಸರರಿಂದ ತಕ್ಕ ಏರ್ಪಾಡುಗಳು ಮಾಡಲ್ಪಡುವವು.

Munsiff's Court.—ಹೊಳೇನರಸೀಪುರದಲ್ಲಿ ಈಗ ನಿರ್ಮಿಸಲ್ಪಟ್ಟಿರುವ ಕೋರ್ಟಿನ ಕಟ್ಟಡವು ಬಹಳ ಸಂಕುಚಿತವಾಗಿರುವದರಿಂದ ಅದಕ್ಕಾಗಿ ಪ್ರತ್ಯೇಕ ಹೊಸ ಕಟ್ಟಡ ಕಟ್ಟಬೇಕಾಗಿರುವದನ್ನು ಗವರ್ನಮೆಂಟಿನವರು ಮಂಜೂರ್ಮಾಡಿ, ಆ ಬಗ್ಗೆ ಬಂದಾಜ್ ನೋಡಲು ಒಂದು ಪ್ಲಾನ್ ತಯಾರ್ಮಾಡಿ ಕಳುಹಿಸುವಂತೆ ಪಬ್ಲಿಕ್ ವರ್ಕ್ಸ್ ಇಲಾಖಾ ಸೆಕ್ರೆಟರಿಯವರಿಗೆ ಹುಕುಂ ಮಾಡಿರುತ್ತಾರೆಂದು ತಿಳಿಯಬರುತ್ತದೆ.

The eclipse controversy.—ಈಚೆಗೆ ಬಂದ ಚಂದ್ರೋಪರಾಗದ ವಿಷಯದಲ್ಲಿ ಸ್ಪರ್ಶ ಮೋಕ್ಷಗಳಲ್ಲಿ ಭೇದವು ಕಾಣಿಸಿತೆಂದು ಕೆಲವರೂ ಕೂಡದೆಂದು ಕೆಲವರೂ ಅಭಿಪ್ರಾಯಪಟ್ಟು ಅವರವರ ಇಷ್ಟಾನುಸಾರ ಆಚರಿಸಿದರಷ್ಟೆ. ಈ ವಿಷಯವು ಅದ್ಯಾಪಿ ಅನ್ಯವಸ್ಥಿತವಾಗಿದೆ ಉಭಯಪಕ್ಷಿಯರೂ ಒಂದುಕಡೆ ಸೇರಿ ವಾದಿಸಿ ಇಂಥವರಿಗೆ ಇರುವ ಶಾಸ್ತ್ರಾಧಾರಗಳ ಪೂರ್ವಕ ಈ ವಿಷಯವು ನಿರ್ಧರಿಸಿದರೆ ಲೋಕೋಪಕಾರಕವಾಗಿರುವುದು.

The Sub judge of Bangalore.—ಇಲ್ಲಿನ ಸಬ್ ಜಡ್ಜ್ ಮ್ಯಾಜಿಸ್ಟ್ರೇಟರವರಿಗೆ ಜಮಾಬಂದಿ ವಸೂಲಿ ಅನೇಕ ಇತರ ಕೆಲಸಗಳ ಗಲಾಟೆಯಿಂದ ಮ್ಯಾಜಿಸ್ಟ್ರೇಟ ಮೊಕದ್ದಮೆಗಳಿಗೆ ಸಂಪೂರ್ಣ ವ್ಯವಧಾನವಿಲ್ಲದೆ ಹೋಗಲು ಅವರ ಸಹಾಯಾರ್ಥ ಇಲ್ಲಿನ ಸಬ್ ಜಡ್ಜ್ ಯವರು ಕೆಲವು ಕ್ರಿಮಿನಲ್ ಮೊಕದ್ದಮೆಗಳನ್ನು ದರ್ಯಾಫ್ತು ಮಾಡಿಕೊಳ್ಳಲ್ಮಾಡುವರೆಂತಲೂ ಇದಕ್ಕಾಗಿ ಅವರಿಗೆ ಸೆಕಂಡ್ ಕ್ಲಾಸ್ ಮ್ಯಾಜಿಸ್ಟ್ರೇಟ ಅಧಿಕಾರಗಳು ಕೂಡ ಈಚೆಗೆ ಕೊಡಲ್ಪಟ್ಟವೆಂತಲೂ ಕೇಳುತ್ತೇವೆ.

Privilege leave.—ಮೈಸೂರ್ ಮಹಾರಾಣಿಯವರ ಹೆಂಗಸರ ಆಸ್ಪತ್ರೆಯ ಅಸಿಸ್ಟೆಂಟ್ ಸರ್ಜನ್ ಮಿಸ್. ಗೋವಿಂದ ರಾಜುಲು ಯವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಮೊದಲುಗೊಂಡು ಮೂರುತಿಂಗಳ ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುವಂತೆ ತಿಳಿಯಬರುತ್ತದೆ. ಚಿತ್ರದುರ್ಗ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮೆ॥ ಎಸ್. ವೆಂಕಟಸುಬ್ಬರಾಯರವರಿಗೆ ೧೮೯೦ನೇ ಇಸವಿ ಆಗಸ್ಟ್ ೨೩ ನೇ ತಾರೀಖು ೨೨ನೇ ನಂಬರ್ ಇಸ್ತಿಹಾರ ನಾಮೆಯ ಮೂಲಕ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಡಲ್ಪಟ್ಟಿದ್ದ ಎರಡು ತಿಂಗಳ ರಜಾ ಇನ್ನೂ ಎರಡುತಿಂಗಳು ಹತ್ತು ದಿವಸಗಳ ವರೆಗೆ ಜಾಸ್ತೀ ಮಾಡಲ್ಪಟ್ಟಿರುತ್ತದೆ.

The Mysore Local Service Examination.—ಕಳೆದ ಆಗಸ್ಟು ತಿಂಗಳಲ್ಲಿ ನಡೆದ ಮೈಸೂರ್ ಲೋಕಲ್ ಸರ್ವಿಸ್ ಪರೀಕ್ಷೆಯ ಫಲಿತಾಂಶವು (ರೆವಿನ್ಯೂ ಸಿವಿಲ್ ಮತ್ತು ಕ್ರಿಮಿನಲ್) ಕಳೆದ ಶನಿವಾರದ ಮೈಸೂರ್ ಗೆಜೆಟಿನಲ್ಲಿ ಪ್ರಕಟವಾಗಿರುತ್ತದೆ. ರೆವಿನ್ಯೂ ಪರೀಕ್ಷೆಯಲ್ಲಿ ೫೪ ಮಂದಿಯೂ ಕ್ರಿಮಿನಲ್‌ನಲ್ಲಿ ೨೫ ಮಂದಿಯೂ ಸಿವಿಲಿನಲ್ಲಿ ಒಬ್ಬರೂ ತೇರ್ಗಡೆಯಾಗಿರುತ್ತಾರೆ ರೆವಿನ್ಯೂ ಪರೀಕ್ಷೆಗೆ ಹೋಗಿದ್ದವರಲ್ಲಿ ಹನ್ನೊಂದು ಜನ ಒಬ್ಬೊಂದುವ ಫೈನಾನ್ಶಿಯಲ್ ಕೋಡಿನಲ್ಲಿ ಮಾತ್ರ ತಪ್ಪಿ ನಿಕ್ಕಭಾಗಗಳಲ್ಲೆಲ್ಲ ತೇರ್ಗಡೆಯಾಗಿರುವದರಿಂದ ಅಂಥವರೆಲ್ಲರೂ ಮುಂದಿನವರುಷದಲ್ಲಿ ಆಗ್ರಂಥಗಳಲ್ಲಿ ಮಾತ್ರ ಮರಳಿ ಪರೀಕ್ಷಿಸಲ್ಪಡತಕ್ಕದ್ದೆಂದು ಹುಕುಮಾಗಿರುತ್ತದೆ. ಇಪ್ಪತ್ತರಡು ಜನ ಕ್ರಿಮಿನಲ್ ಪರೀಕ್ಷೆಯಲ್ಲಿ ಒಂದೆರಡು ಗ್ರಂಥಗಳಲ್ಲಿ ತಪ್ಪಿಹೋಗಿರುತ್ತಾರೆ.

Pilgrims to Goa.—ರೋಮನ್ ಕ್ಯಾಥೋಲಿಕ್ ಗುರುಗಳಲ್ಲಿ ಪ್ರಸಿದ್ಧರಾಗಿಯೂ ಮಹಾ ಪ್ರಾಣಿಕರಾಗಿಯೂ ಇದ್ದ ಸೆಂಟ್ ಫ್ರಾನ್ಸಿಸ್ ಜೇವಿಯರ್ ಎಂಬವರು ಕಾಲಗತಿಯನ್ನೈದಿ ಈಗ್ಯೆ ಅನೇಕ ಸಂವತ್ಸರಗಳಾದಾಗ್ಯೂ ಅವರ ಕಳೇಬರವು ವಿಕೃತಿಯನ್ನೈದದೆ ಈಗಲೇ ಪ್ರಾಣವಿಯೋಗವಾದ ಶರೀರದಂತೆ ಇರುವದೆಂತಲೂ ಇದು ಹತ್ತು ವರ್ಷಗಳಿಗೊಂದಾವರ್ತಿ ತೆಗೆಯಲ್ಪಡುವದೆಂತಲೂ, ಆ ಕಾಲದಲ್ಲಿ ಅನೇಕ ಉತ್ಸವಾದಿಗಳು ಜರುಗುವವೆಂತಲೂ,ಅಂಥಾ ಮಹಾತ್ಮರ ಶರೀರ ದರ್ಶನಾರ್ಥ ರೋಮನ್ ಕ್ಯಾಥೋಲಿಕ್ ಮತಸ್ಥರು ಬಹುಮಂದಿ ಹೋಗುವದು ವಾಡಿಕೆಯಾದುದರಿಂದ ಅಂಥಾ ಸಮಯವೀಗ ಪ್ರಾಪ್ತವಾಗಿ, ಗೋವಾ ಎಂಬ ಗೋಕರ್ಣಕ್ಷೇತ್ರಕ್ಕೆ ನಮ್ಮ ಆಫಿಷಿಯೇಟಿಂಗ್ ಚೀಫ್ ಜಡ್ಜಿಯವರು ಮೊದಲಾದವರನೇಕರು ಹೋಗುವವರಾಗಿದಾರೆಂತಲೂ ತಿಳಿಯಬರುತ್ತದೆ.

Change of routine in the Chief Court.—ಸಣ್ಣ ಚಿಲ್ಲರೇ ಅಪೀಲ್ ಮೊಕದ್ದಮೆಗಳನ್ನು ಮುಂದಾಗಿ ವ್ಯವಸ್ಥೆ ಮಾಡದೆ ಕಿರಿದಾದ್ವಿಪದಗಳು ದೊಡ್ಡ ಮೊಕದ್ದಮೆಗಳನ್ನು ವಿಚಾರಣೆಮಾಡಲಿಕ್ಕೆ ಚೀಫ್ ಕೋರ್ಟ್ ಜಡ್ಜಿಗಳು ಮುಂದೆ ಅವಕ್ರಮಿಸುವದರಿಂದ ಬಹುಮಂದಿ ವಕೀಲರಿಗೆ ಅನಾನುಕೂಲವಾಗಿರುವುದಲ್ಲದೆ ಸಣ್ಣ ಚಿಲ್ಲರೆ ಮೊಕದ್ದಮೆಗಳುಳ್ಳ ವಕೀಲರೇ ಅನೇಕರಿರುವದರಿಂದ ಅವರು ಇತರ ಕೋರ್ಟುಗಳಿಗೆ ಹೋಗಲಿಕ್ಕೆ ಅವಕಾಶವಿಲ್ಲದಂತೆ ಕಾದಿರಬೇಕಾಗಿರುವಂತೆಯೂ ಆಫಿಷಿಯೇಟಿಂಗ್ ಚೀಫ್ ಜಡ್ಜಿಯವರಿಗೆ ತಿಳಿಯಬಂದು ಅವರು ಇನ್ನು ಮುಂದೆ ಚಿಲ್ಲರೆ ಮೊಕದ್ದಮೆಗಳನ್ನು ಕೋರ್ಟಿನ ಪ್ರಾರಂಭದಲ್ಲಿಯೇ ವಿಚಾರಿಸಿ ಬಳಿಕ ದೊಡ್ಡ ಮೊಕದ್ದಮೆಗಳನ್ನು ವಿಚಾರಣೆ ಮಾಡುವದು ಯುಕ್ತವೆಂಬದಾಗಿ ನಿರ್ಬಂಧನೆ ಮಾಡಿರುತ್ತಾರೆಂತಲೂ ಈ ಕಾರಣದಿಂದ, ವಕೀಲರಿಗೆ ಬಹಳ ಅನುಕೂಲವಾಯಿತೆಂತಲೂ ತಿಳಿಯಬರುತ್ತದೆ.

Dacoity with murder.—ಈಗ್ಯೆ ಎರಡು ಮೂರು ದಿವಸಗಳ ಹಿಂದೆ ಮೂಡಿಗೆರೆ ತಾಲೂಕು ಕಂಟ್ರಾಕ್ಟರ್ ಎಲೇ ಮಲ್ಲಪ್ಪಶೆಟ್ಟರವರ ಅಳಿಯನಾದ ಮ॥ ಬಿಗಡೇನಹಳ್ಳಿ ಬಸಣ್ಣಶೆಟ್ಟಿ ಎಂಬ ಸಾಹುಕಾರರೊಬ್ಬರು ಕಾಫೀ ತೋಟದ ಕೂಲಿಯವರಿಗೆ ಕಲಿಪ್ ಬಟವಾಡೆಮಾಡುವದಕ್ಕಾಗಿ ಸುಮಾರ್ ೭೦೦೦ ರೂಪಾಯಿಗಳು ನಗದಾಗಿಯೂ ಹತ್ತುಸಾವಿರ ರೂಪಾಯಿಗಳು ಕರೆನ್ಸೀ ನೋಟುಗಳಾಗಿಯೂ ತೆಗೆದುಕೊಂಡು ಹಗಲು ವೇಳೆಯಲ್ಲಿ ಬೇಲೂರು ಮಾರ್ಗದಲ್ಲಿ ಪ್ರಯಾಣವಾಗಿ ಹೋಗುತಲಿರುವಾಗ್ಯೆ ದಾರಿಹೋಕರು ಕೆಲವರು ದರೋಡೆ ಕಳ್ಳರು ಬಂದು ನೆರೆದು ಸಾಹುಕಾರರನ್ನೂ ಆತನ ಗಾಡಿಯವನನ್ನೂ ಕಡಿದುಬಿಟ್ಟು ಆತನಲ್ಲಿದ್ದವನ್ನೆಲ್ಲ ದೋಚಿಕೊಂಡು ಹೋದರೆಂತಲೂ ಕಳ್ಳರು ಅದ್ಯಾಪಿ ದೊರೆಯಲಿಲ್ಲವೆಂತಲೂ, ಈ ಪ್ರಾಂತದಲ್ಲಿರುವ ವ್ಯಾಪಾರಸ್ಥರು ತನ ಬಂಧುಗಳಿಗೆ ತಂತಿ ವೃತ್ತಾಂತ ಬಂದಿರುವದಾಗಿಯೂ ತಿಳಿಯಬರುತ್ತದೆ. ಈ ಮೊಕದ್ದಮೆಯ ಇತರ ತಪಸೀಲನ್ನು ಮುಂದೆ ತಿಳಿಯಪಡಿಸುವೆವು.

A benevolent act.—ಹಿಂದೂಗಳಿಯೂ ರೋಪಿಯನ್ನರನ್ನು ನೋಡಿ ಅವರಂತೆ ಪರೋಪಕಾರ ಬೇಕೆಂದರು ವಿಧವಾಗಿ ಪ್ರಯತ್ನ ಪಡುತ್ತಾರೆ ಅವರ ಉದ್ದೇಶ ಪ್ರಯತ್ನಗಳೆಲ್ಲವು ಕೇವಲ ಪರೋಪಕಾರ ವಿಚಾರಾಚಾರಪ್ರವರ್ತಕವಾಗಿರುವವುಗಳಲ್ಲದೆ ಇಂಗ್ಲಿಷರ ಸ್ವಭಾವಸಿದ್ಧವಾದ ಸ್ವೀಯಾಭಿಮಾನವೂ ಬಂದು ಕಟ್ಟು ನಮ್ಮವರಿಗೆ ಎಷ್ಟು ಕಾಲಾಂತರದ ಉಂಟಾಗುವ ಅಂಶ ಸಂದೇಹಿಸತಕ್ಕದ್ದಾಗಿರುತ್ತದೆ. ಸಿವಿಲ್ ವ ಮಿಲಿಟರಿ ಸ್ಟೇಷನ್ ಸೆಷನ್ಸ್ ಜಡ್ಜಿಯವರಾದ ಕರ್ನಲ್ ಪಿಟ್ ಸಾಹೆಬರವರು ಈಚೆಗೆ ಕಾಲಗತಿಯನ್ನೈದಿದ ತಮ್ಮ ಕೋರ್ಟ್ ಯೂರೋಪಿಯನ್ ಚೀಫ್ [illegible] ಎಚೆರ್ಸ್? ಒಕಾನರ್ ಎಂಬಾತನ ಭಾರ್ಯೆಯೂ ಮಕ್ಕಳು ಸದ ಅನನ್ಯ ಗತಿಕರಾಗಿ ಅನ್ನವಸ್ತ್ರಗಳಿಗಿಲ್ಲದೆ ಸಂಕಟಪಡುತಲಿರುವದಂ ನೋಡಿ ಅವರ ಜೀವನಾರ್ಥ ತಮ್ಮ ಕೋರ್ಟ್ ಅಡ್ವೋಕೇಟುಗಳ ಮೂಲಕ ಚಂದಾ ವಸೂಲ್ಮಾಡಿಸಿ ಅವರಿಗೆ ಸ್ಥಿರವಾದ ಜೀವನಾಧಾರವಂ ಕಲ್ಪಿಸತಕ್ಕವರಾಗಿದ್ದಾರೆಂದು ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ.

ADDRESS OF THE DEWAN OF MYSORE.

to the Representative Assembly held at Mysore on Tuesday, the 6th October 1890.

೨೫. ರಸ್ತೆಗಳ ನೀರಾವರಿ ಕಾಮಗಾರಿಗಳ ಮತ್ತು ಇತರ ಚಿಲ್ಲರೇ ಕಾಮಗಾರಿಗಳ ಸಂಬಂಧ ಕಾಮಗಾರಿಗಾಗಿ ಪಬ್ಲಿಕ್ ವರ್ಕ್ಸ್ ಚಾರ್ಜ ಮೊಬಲಗು ಸದರೀ ದಂಡಿನ ಪ್ರತ್ಯೇಕಿಸಿದಾಗ್ಯೂ ಸದರೀ ಒಟ್ಟು ಬಜೆಟ್ ಮುಖ್ಯವಾಗಿ ಹೋದವರುಷದ ಸಭೆಯಲ್ಲಿ ನಿಮ್ಮಗಳಿಗೆ ತಿಳಿಯಪಡಿಸಿದ ಪ್ರೋಗ್ರಾಮ್ಮನ್ನು ಅನುಸರಿಸಿ ಪಟ್ಟಿಯಲ್ಲಿ ಸೇರಿರುವ ಕಾಮಗಾರಿಗಳಿಗಾಗಿ ಮಂಜೂರಾಗಿರುವುದು. ಸದರೀ ಪ್ರೋಗ್ರಾಮ್ ಪಟ್ಟಿಯೇ ನಮ್ಮ ಪಬ್ಲಿಕ್ ವರ್ಕ್ಸ್ ಇಲಾಖಾ ಬಜೆಟ್‌ಗಳೂ ಮತ್ತು ಎಸ್ಟಿಮೇಟ್‌ಗಳೂ ಆಧಾರವಾಗಿರುವುದಲ್ಲದೆ ಮುಂದೆಯೂ ಹಾಗೆಯೇ ಇರುತ್ತೆ. ಅದರಲ್ಲಿ ಅನಿವಾರ್ಯವಾಗಿ ಕೆಲವು ಬದಲಾವಣೆಗಳು ಮಾಡಬೇಕಾಗಿರುತ್ತೆ. ಅದರಲ್ಲಿ ವಿವರಿಸಲ್ಪಟ್ಟು ಇರುವ ನೀರಾವರಿ ಕಾಮಗಾರಿಗಳಲ್ಲಿ ರಾಮಪುರದ ನಾಲಾ ಮತ್ತು ರಾಮಸಮುದ್ರದ ನಾಲಾ ಬಯಾನ್ ಇವುಗಳ ಕಾಮಗಾರಿಗಳು ಈಗಿರುವ ನಾಲೆಗಳಿಗೆ ಉಪಯೋಗಿಸುವಂತೆ ಪೂರೈಸಲ್ಪಟ್ಟಿರುತವೆ. ಮುಖ್ಯವಾದ ಹುಲ್ಲಹಳ್ಳಿನಾಲೆ ಮತ್ತು ಶ್ರೀರಾಮದೇವರ ಅಣೆಕಟ್ಟು ನಾಲಾ ಬಯಾನ್ ಇವುಗಳ ಪ್ಲಾನ್ ಎಸ್ಟಿಮೇಟು ತಯಾರಾಗಲು ಪೂರೈಸಿದ್ದಲ್ಲದೆ ಕಾಮಗಾರಿಯೂ ಪ್ರಾರಂಭ ಮಾಡಲ್ಪಟ್ಟಿತು.

೨೬. ಕಾಮಗಾರಿ ನೀರಾವರಿಯಿಂದ ಉಪಯೋಗವಾದ ಕಾಲುಗಳಿಗೆ ನೀರು ಪ್ರವಾಹ ನಿರ್ವಹಿಸುವದು ಯಾವತ್ತೂ ಸರ್ಕಾರದ ಕೆಲಸವಾಗಿದ್ದರೂ ಡಿಸ್ಟ್ರಿಕ್ಟ್‌ನಲ್ಲಿ ಸಾಲೂರು ಮತ್ತು ಕೋಲಾರ ಡಿಸ್ಟ್ರಿಕ್ಟ್‌ನಲ್ಲಿ ಸಣ್ಣಗೆರೆ ಮುಖ್ಯವಾದ ಕೆರೆಗಳು, ಹೇಮಾವತಿ, ಹಿರೆಗಳು ರಾಮಸ್ವಾಮಿ ನಾಲಾ, ರಾಜಪರಮೇಶ್ವರಿನಾಲೆ, ಮತ್ತು ಹಳ್ಳ ಪಳ್ಳ, ಯಗಚೀ ನದಿ ಅಣೆಕಟ್ಟುಗಳು, ಅವುಗಳ ಉಪನದಿಗಳಂತಲೂ ಮುಖ್ಯವಾದ ಅನೇಕ ಹಳೇನಾಲೆಗಳನ್ನು ಮೇಲಾದಸ್ಥಿತಿಗೆ ತಂದದ್ದು, ಅನೇಕ ಪುರಾತನ ಗ್ರಾಮಗಳ ಕೆರೆಗಳನ್ನು ಮೇಲಾದಸ್ಥಿತಿಗೆ ತಂದದ್ದು ಅವುಗಳಲ್ಲಿ ಮುಖ್ಯವಾಗಿ ಮದ್ದೂರು, ಸೂಳೆಕೆರೆ, ಅಯ್ಯನಕೆರೆ, ಹುಣಸೂರು, [illegible] ಗಳನ್ನು ಮೇಲಾದಸ್ಥಿತಿಗೆ ತಂದದ್ದು, [illegible] ನಾಲ್ಕು ದೊಡ್ಡ ಕೆರೆಗಳನ್ನು [illegible] ಗಳನ್ನು ಕಟ್ಟಿಸಿದ್ದು. [illegible] ಡಿಸ್ಟ್ರಿಕ್ಟ್‌ನಲ್ಲಿರುವ [illegible], ಬಾವಿಗಳು, ಅನೇಕಗಳಿಗೆ ಅಡ್ಡ ಕಟ್ಟೆ [illegible] ಹೊಸ ಡಿಸ್ಟ್ರಿಕ್ಟ್‌ನಲ್ಲಿ [illegible] ಮಾಡಿರುವ ಹಿಂದು ಉಪಯೋಗ [illegible]

ಳ್ಳುತ್ತು. ಹಳೇದಾದ ಬಹುಕೆರೆಗಳ ಬದಾವಣೀ ಕೆಲಸವು ನಡಯುತ್ತಾಯಿತ್ತು. ಏಕೆಂದರೆ ಈ ವರ್ಷದಲ್ಲಿ ನಡೆದ ವಿಶಿಷ್ಟ ನೀರಾವರಿ ಕಾಮಗಾರಿಗಳಿಂದ ಸುಮಾರು ೩೫,೦೦೦ ಎಕರೆ ಜಮೀನ್ ಹೊಂದಿಯಿದ್ದ ತರೀಜಮೀನಿಗಿಂತಲೂ ಹೆಚ್ಚಾಗಿ ಸಾಗುವಳಿಗೆ ಬಂತು.

೪೫. ಈ ಸಂದರ್ಭದಲ್ಲಿ ಪ್ರೋಗ್ರೆಸ್ಸಿವ್ ಪ್ರೋಗ್ರಾಂ ಪಟ್ಟಿಯಲ್ಲಿ ದಾಖಲಾಗಿದ್ದ ಕಾಮಗಾರಿಗಳಲ್ಲಿ ಎಲ್ಲಕ್ಕಿಂತಲೂ ಭಾರಿಯಾದ ಕಲ್ಲನಾಥಪುರದ ನಾಲಾ ಪ್ರಾಜೆಕ್ಟನ್ನು ಕುರಿತು ವಿಶೇಷವಾಗಿ ಸೂಚಿಸತಕ್ಕದ್ದು ನಮಗೆ ಯುಕ್ತವಾಗಿತೋರುತ್ತೆ. ಸದರೀ ಕಾಮಗಾರಿಯು ಮೈಸೂರು ಶಹರ್ ನಿವಾಸಿಗಳಿಗೂ ಆಜೂಬಾಜು ತಾಲ್ಲೂಕುಗಳ ರೈತರಿಗೂ ವಿಶೇಷ ಅವಶ್ಯಕತೆವುಳ್ಳದ್ದಾಗಿದೆ. ಹದಿನಾರುವರೆ ಮೈಲಿವರಿಗೆ ಸರ್ವೆ ಕೆಲಸವು ೬,೦೦೦ ಸಾವಿರ ಎಕರೆ ತರೀಜಮೀನಿಗೆ ನೀರು ಹಾಯಲೂ ಹದಿನೇಳುವರೆ ಲಕ್ಷರೂಪಾಯಿಗಳ ಅಂದಾಜ್ ಸಹ ಪೂರ್ತಿಯಾಗಿ ಮಾಡಲ್ಪಟ್ಟಿದೆ. ಸದರೀ ಕಾಮಗಾರಿಯ ಸ್ವಭಾವವನ್ನು ಕುರಿತು ಕನಸಿಲ್ಟಿಂಗ್ ಇಂಜನೀರುಗಳು ಅಭಿಪ್ರಾಯವನ್ನು ಗಮನಿಸಬೇಕಾಯಿತು. ಕಾಮಗಾರಿಯಿಂದ" ಉಂಟಾಗಬಹುದಾದ ಉತ್ತರೋತ್ತರದ ಪುಷ್ಟುವಳೀ ಪ್ರಯೋಜನವು ಪ್ರಾರಂಭದಲ್ಲಿ ತೋರಿಬಂದಷ್ಟು ಆಗಲಾರದೆಂತ ತಿಳಿಯಬಂತು ಸದರೀ ಕಾಮಗಾರಿ ನೆರವೇರುವದ್ದರಿಂದ, ಮೈಸೂರು ಸಮೀಪದಲ್ಲಿರತಕ್ಕ ಪ್ರಜೆಗಳ ಆರೋಗ್ಯಕ್ಕೆ ನ್ಯೂನತೆವುಂಟಾಗಿ ಅನ್ಯೂನಕ ಬಾಧಕ ಉಂಟಾದೀತೆಂಬ ಅಂಶ, ಕಾಮಗಾರಿಯನ್ನು ಬುದ್ಧಿತವಾಗಿ ಶುರುಮಾಡುವದಕ್ಕೆ ಮೊದಲೆ ಪೂರಾ ಜಾಗರೂಕತೆಯಿಂದ ಆಲೋಚಿಸತಕ್ಕದ್ದಾಗಿ ಕಂಡುಬಂತು. ಈ ಅಭಿಪ್ರಾಯದಿಂದ ಈ ಕಾಮಗಾರಿ ವಿಷಯವನ್ನು ಎಲ್ಲಾ ವಿಧದಿಂದಲೂ ಚೆನ್ನಾಗಿ ಆಲೋಚನೆಮಾಡಬೇಕೆಂದು ಶ್ರೀಮನ್ಮಹಾರಾಜರವರ ಕೌನ್ಸಲ್ ಮೆಂಬರುಗಳು ಮತ್ತು ಹೆಚ್ಚಾದ ಅನುಭವವುಳ್ಳ ಸಂಸ್ಥಾನದ ಆಫೀಸರುಗಳು ಅಪೇಕ್ಷಿಸಲ್ಪಟ್ಟರು. ಅವರುಗಳು ಕೊಟ್ಟ ಅಭಿಪ್ರಾಯವು ಈಗ ಗವರ್ನಮೆಂಟಿನವರ ಆಲೋಚನೆಯಲ್ಲಿದೆ. ಶೀಘ್ರದಲ್ಲಿಯೇ ಈ ಮಹತ್ತಾದ ಕಾಮಗಾರಿಯನ್ನು ಉಪಕ್ರಮಿಸಬೇಕೇ ಬೇಡವೇ, ಎಂಬುವದು ತೀರ್ಮಾನಿಸಲ್ಪಡುತ್ತೆ. ಅಂಥಾ ತೀರ್ಮಾನವಾಗುವದರೊಳಗಾಗಿ ಈ ಸಭೆಗೆ ಮೈಸೂರಿಂದಲೂ ಮೈಸೂರು ತಾಲ್ಲೂಕಿನಿಂದಲೂ ಬಂದಿರುವ ಅನುಭವಸ್ಥರಾದ ರೆಪ್ರಜೆಂಟೆಟಿವ್ ಮೆಂಬರುಗಳ ಅಭಿಪ್ರಾಯವನ್ನು ತಿಳಿದುಕೊಳ್ಳುವದು ನಮಗೆ ಸಂತೋಷಕರವಾಗಿರುತ್ತೆ. ಸದರೀ ಮೈಸೂರು ಮೆಂಬರುಗಳು ವಿಶೇಷವಾಗಿ ಭೂಮುಂಥ ಜಮೀನ್‌ದಾರರಾಗಿ ಸಂಪಾದಿಸಿರುವ ಅನುಭವದಮೇಲೆ ತರೀ ಸಾಗುವಳೀಗೆ ನೀರು ವೆಗ್ಗಡುಕೊಂಡು ಬರುವದರಿಂದ ಪ್ರಜೆಗಳ ಐಶ್ವರ್ಯಕ್ಕೂ ಎಷ್ಟು ಸಾಧಕ ಜನಾರೋಗ್ಯಕ್ಕೆ ಎಷ್ಟು ಬಾಧಕ ಎಂಬ ಅಂಶಗಳನ್ನು ನೀವು ತಿಳಿಸಬೇಕಲ್ಲದೆ ಕಲ್ಲನಾಥಪುರದ ನಾಲೆ ಕಾಮಗಾರಿ ಆಗತಕ್ಕದ್ದೆಂದು ಅಭಿಪ್ರಾಯ ಪಡುತ್ತೀರೋ ಆಗತಕ್ಕದ್ದಲ್ಲವೆಂದು ಅಭಿಪ್ರಾಯ ಪಡುತ್ತೀರೋ ಆಮೇಲಿಗೆ ಪಡುವ ಅಭಿಪ್ರಾಯಕ್ಕೆ ಗೊತ್ತಾದ ಕಾರಣಗಳನ್ನು ಸಹ ನಿಮ್ಮಿಂದ ತಿಳಿಯಲಪೇಕ್ಷಿಸುತ್ತೇವೆ. ಈ ಕಾಮಗಾರಿಯು ಮಹತ್ತಾದ ಭಾಗವಡಿನಿಂದ ಆಗತಕ್ಕದ್ದಾಗಿಯೂ ಬಹು ವಿಸ್ತಾರವಾದದ್ದು ಮತ್ತು ಭಾರಿಯಾದ ಪ್ರಶ್ನೆಗಳಿಗೆ ತಾವುಗಳಿಗೆ ಕಾರಣವಾಗತಕ್ಕದ್ದಾಗಿಯೂ ಇದೆ.

೪೬. ಉತ್ತರೋತ್ತರ ನಡೆಯಬೇಕಾದ ನವ್ಯ ನೀರಾವರಿ ಕಾಮಗಾರಿಗಳ ಪ್ರಸ್ತಾಪದ ಸಮಯದಲ್ಲಿ ನಾವು ನಿರೂಪಣ ಮಾಡಬೇಕಾದ್ದೇನೆಂದರೆ, ಮೈಸೂರು ದೇಶದಿಂದ ಹರದು ಹೋಗುವ ಪ್ರವಾಹದ ನೀರಿನ ಹಕ್ಕುದಾರಿ ತನ್ನದೆಂದು ಮದರಾಸು ಶೀಮೆಯ ರೈತರು ವಾದಿಸುವದರಿಂದ ಅನೇಕ ನಮ್ಮ ಕರೆಗಳಾಗುವಳೀ ಉಪಯೋಗಕ್ಕೆ ಕಾಮಗಾರಿಗಳು ಬಹಳ ಬಾಧಿತವಾಗಿದೆ. ಸದರೀ ಪ್ರವಾಹದ ನೀರು ಇದುವರಿಗೆ ನಿರಾತಂಕವಾಗಿ ಹರದುಹೋಗಿದೆ. ಅಥವಾ ನಮ್ಮ ಶೀಮೆಯು ಸರಹದ್ದು ಆಚೆ ಕೆಲವು ಟ್ಯಾಂಗೆ ತಡೆಮಾಡಲ್ಪಟ್ಟು ಆ ಪ್ರಾಂತ್ಯದ ಕಲೆಕ್ಟರೇಟ್ ಯಾನೆ ಜಿಲ್ಲಾಗಳಲ್ಲಿ ಅಲ್ಲಲ್ಲಿ ಕೆಲವು ಕಡೆ ಹೆಚ್ಚಾಗಿಯೂ, ಕೆಲವು ಕಡೆ ಕಮ್ಮಿಯಾಗಿಯೂ ಸಾಗುವಳಿಗೆ ಉಪಯೋಗಿಸಲ್ಪಡುತ್ತಾ ಬಂದು ಇದೆ. ಸದರೀ ಜನಗಳು ವಾದಿಸುವ ನೀರಿನ ಹಕ್ಕುದಾರೀ ವಿಷಯದಲ್ಲಿ ನ್ಯಾಯವಾದ ಬಂದು ಏರ್ಪಾಡಾಗದೆ ಹೋದಲ್ಲಿ ನಮ್ಮ ಮೇಲ್ಕಂಡ ಕಲಾಪ್ ಕಾಮಗಾರಿ ಪ್ರಾಜೆಕ್ಟುಗಳ ಪೈಕಿ ಮುಂದಕ್ಕೆ ಬಹಳ ಪಾಯಿದೆ ಉಂಟುಮಾಡತಕ್ಕ ಕೆಲವು ಪ್ರಾಜೆಕ್ಟುಗಳನ್ನು ಅಗತ್ಯವಾಗಿ ಬಿಟ್ಟುಬಿಡಬೇಕಾಗುತ್ತೆ. ಮುಂದೆ ನಾವು ಮಾಡಿಸಬೇಕಾದ ನೀರಾವರಿ ಕಾಮಗಾರಿಗಳ ಏರ್ಪಾಡಿಗೆ ಮುಖ್ಯವಾಗಿ ಸಂಬಂಧಪಡುವ ಈ ಪ್ರಬಲ ವಿಷಯವು ಇಂಡಿಯಾ ಗವರ್ನಮೆಂಟಿನವರಿಗೆ ಸಂಪೂರ್ಣವಾಗಿ ವಿಜ್ಞಾಪಿಸಲ್ಪಟ್ಟಿದೆ.

೪೭. ರೈಲ್ವೆ ಮತ್ತು ಇರಿಗೇಷನ್ ಯಾನೆ ನೀರಾವರಿ ಕಾಮಗಾರಿಗಳಂತೆಯೇ ಪ್ರೊವಿನ್ಶಿಯಲ್ ಮತ್ತು ಲೋಕಲ್ ರಸ್ತೆಗಳ ವಿಷಯವು ಮುಖ್ಯವಾದದ್ದಾಗಿ ಇದೆ. ನಮ್ಮ ಇಂಜನೀಯರುಗಳು ರಸ್ತೆಗಳನ್ನು ಮೇಲಾದ ಸ್ಥಿತಿಗೆ ತರುವದರಲ್ಲಿಯೂ ಮತ್ತು ಮುಂದಕ್ಕೆ ಬದಾಯಿಸಿ ತೆಗಿಯುಕೊಂಡು ಹೋಗುವದರಲ್ಲಿಯೂ ಯಾವಾಗಿನಂತೆಯೇ ದೃಷ್ಟಿ ಕೊಡುತ್ತಲೇ ಇದಾರೆ. ಕಳೆದ ವರುಷದಲ್ಲಿ ಮಂಗಳಪುರದಲ್ಲಿ ತುಂಗ ನದಿ ಸೇತುವೆಯೂ ಬಾಳೇಹೊನ್ನೂರಲ್ಲಿ ಭದ್ರಾನದಿ ಸೇತುವೆಯೂ ಈ ಎರಡು ದೊಡ್ಡ ಸೇತುವೆಗಳ ಕಾಮಗಾರಿ ಚೆನ್ನಾಗಿ ನಡೆದಿರುವ ಮುಂದಿನ ವರ್ಷಕಾಲದ ಜೊತ್ತಿಗೆ ಆಮುಪಸಪ್ತ್ತ ದಾಟತಕ್ಕ ಜನಗಳ ಸಂಚಾರಕ್ಕೆ ಖುಲ್ಲಾ ಮಾಡಲ್ಪಡುತ್ತೆಂದು ನಂಬಿಕೆಯಾಗಿ ತಿಳಿದು ಇದೇವೆ. ಇದರಿಂದ ಪಶ್ಚಿಮ ಸಮುದ್ರ ಪ್ರಾಂತ್ಯ ದೇಶಕ್ಕೂ ನಮ್ಮ ದೇಶಕ್ಕೂ ವ್ಯಾಪಾರ ನಡೆಯುವದಕ್ಕೆ ಸಂಭವಿಸಿದ್ದ ಎರಡು ದೊಡ್ಡವುಲಿ ಬಂಧಕಗಳು ಶಾಶ್ವತವಾಗಿ ನಿವಾರಣೆ ಮಾಡಲ್ಪಡುವುತ್ತವೆ. ಬೇಲೂರಲ್ಲಿ ನಡೆಯುವ ಲಕ್ಷಣವಾದ ಸೇತುವೆ ಕಾಮಗಾರೀ ವಿಷಯದಲ್ಲಿ ಮೇಲೆ ನಮೂದಿಸಿದ ಸೇತುವೆಗಳವಿಷಯದಲ್ಲಿ ಹೇಳಿದಷ್ಟು ಹೇಳುವದಕ್ಕೆ ಇಲ್ಲವಾಗಿದೆ. ಅದಕ್ಕೆ ಕಾರಣವೇನೆಂದರೆ, ಸದರಿಯಾ ಕಾಮಗಾರಿಯಲ್ಲಿ ಮೊದಲು ತಿಳಿಯದೆ ಹೋದ ಕಠಿನ ಬಾಗಗಳು ಕಂಡುಬಂದವು ಕೂಲೀಜನಗಳು ಸಿಕ್ಕುವದರಲ್ಲಿ ಪ್ರಯಾಸ ವುಂಟಾಯಿತು.

೪೮. ಸದರೀ ಸೇತುವೆ ಕಾಮಗಾರಿಗಳ ಕೆಲಸ ಪ್ರಾರಂಭಿಸಿದ ಜೊತ್ತೆ ಯಡತೊರೆಯಲ್ಲಿ ಕಾವೇರೀ ನದೀಗೆ ಸೇತುವೆಯು ನರಸೀಪುರದಲ್ಲಿ ಹೇಮಾವತಿ ನದಿಗೆ ಸೇತುವೆ ಇವುಗಳ ಕೆಲಸವನ್ನು ಉಪಕ್ರಮಿಸಬೇಕೆಂತ ಉದ್ದೇಶ ಮಾಡಿದೆ ರಸ್ತೆ ವಿಷಯದಲ್ಲಿ ತಯಾರು ಮಾಡಿರುವ ಪ್ರೋಗ್ರೆಸ್ಸಿವ್ ಪ್ರೋಗ್ರಾಂಪಟ್ಟಿಯಲ್ಲಿ ದಾಖಲಾಗಿರುವ ಕಾಮಗಾರಿಗಳ ಪೈಕಿ ಸದರೀ ಸೇತುವೆಗಳು ಬಹಳ ಮುಖ್ಯವಾದ್ದಾಗಿದೆ ಈ ಸೇತುವೆಗಳನ್ನು ಕಟ್ಟುವರೀತಿ ಮತ್ತು ಕಟ್ಟತಕ್ಕ ಸ್ಥಳ ಸಹ ಉತ್ತರೋತ್ತರ ನಡಿಯಬಹುದಾದ ಕಾವೇರಿ ಹೇಮಾವತೀ ನದಿಗಳ ಮಧ್ಯ ದೇಶದಲ್ಲಿ ಜನಸಂಚಾರಕ್ಕೆ ಅನುಕೂಲವಾಗಲು ಹಾಕಲ್ಪಡುವ ರೈಲ್ವೆ ಲೈನಿಗೆ ಉಪಯೋಗವಾಗುವಂತೆ ಮಾಡಬೇಕೆಂಬ ಉದ್ದಿಶ್ಯವಾಗಿದೆ.

೪೯. ಸ್ಯಾನಿಟೇಷನ್ ಯಾನೆ ಪ್ರಜಾರೋಗ್ಯ ಹೇತುವಾದ ಪಟ್ಟಣ ಪಾರಿಶುಧ್ಯ ವಿಷಯಗಳು—ಮಿಸಿಲೇನಿಯಸ್ ಪಬ್ಲಿಕ್ ಇಂಪ್ರೂವ್‌ಮೆಂಟ್ಸ್ ಎಂಬ ಚಿಲ್ಲರೆ ಕಾಮಗಾರಿಗಳ ವಿಷಯದಲ್ಲಿ ನಿಮಗೆ ತಿಳಿಸತಕ್ಕದ್ದೇನೆಂದರೆ, ಕಳೆದ ಸಾಲಿನಲ್ಲಿ ಖರ್ಚು ಮಾಡಿದ ಹಣ, ಮೈಸೂರು ಷಹರಿಗೆ ಜಲಾಧಾರ ಕಲ್ಪಿಸುವಬಗ್ಯೆ ಚರಂಡಿ ಕೆಲಸಗಳ ಬಗ್ಯೆ ಜನಾರೋಗ್ಯ ಸಂಬಂಧವಾದ ಕೆಲಸಗಳ ಬಗ್ಯೆ ಖರ್ಚು ಮಾಡಲ್ಪಟ್ಟಿತು. ಶ್ಲಾಘ್ಯವಾದ ಸಮೃದ್ಧಿಯಾದ ಜಲಾಧಾರವು ಪಟ್ಟಣದ ಯೆಲ್ಲಾ ಕಡೆಗೂ ಕಲ್ಪಿಸಲ್ಪಟ್ಟು ಇದೆ. ಬಹು ರೋಗಸಂಪಾದಕವಾದ ಪೂರ್ಣಯ್ಯನವರ ನಾಲಾ ಎಂಬ ಕಂದಕವು ಮುಚ್ಚಿಸಲ್ಪಟ್ಟಿತು. ಕೆಟ್ಟ ನೀರು ನಿಲ್ಲತಕ್ಕ ಹಳ್ಳಗಳು ಹೂಳ ಹೋಗಿದ್ದ ಚರಂಡಿಗಳು ಇಲ್ಲದಂತೆ ಮಾಡಲ್ಪಟ್ಟವು ಜನಸಮ್ಮರ್ದವಾಗಿದ್ದ ಬೀದಿಗಳು ಮತ್ತು ಗಲ್ಲೀಗಳು ವಿಸ್ತರಿಸಲ್ಪಟ್ಟವು. ಇತರ ದೊಡ್ಡ ಟೌನ್‌ಗಳಲ್ಲಿ ಜನಾರೋಗ್ಯ ಸಂಬಂಧವಾದ ಹೆಚ್ಚಾದ ಕಾಮಗಾರಿಗಳು ನಡಿಸತಕ್ಕ ಅಂಶವು ನಮ್ಮ ಆಲೋಚನೆಯಲ್ಲಿ ಇದೆ. ಅವುಗಳಲ್ಲಿ ಮುಖ್ಯವಾದ ಸ್ಥಳಗಳಿಗೆ ಜಲಾಧಾರ ಕಲ್ಪಿಸುವ ವಿಷಯವು ಚರ್ಚೆಯಲ್ಲಿ ಇದೆ. ಶಿವಮೊಗ್ಗೆಯಲ್ಲಿ ಬಹುಕಾಲದಿಂದ ಪ್ರಮಾದಕರವಾದ ಬೇಸಿಗೆಯಾಗಿದ್ದ ಕುಂಬಾರ ಗುಂಡಿ ಯೆಂಬ ಹಳ್ಳವು ಭರ್ತಿ ಆಗುತ್ತಾ ಇದೆ. ಊರಿನ ಎಲ್ಲಾ ಕಡೆಗೂ ಯುಕ್ತವಾದ ಜಲಾಧಾರವು ಮುಂದೆ ಸ್ವಲ್ಪ ಕಾಲದಲ್ಲಿಯೇ ಪಾಡಬಹುದಾಗಿದೆ. ತುಮಕೂರು ಚಿಕ್ಕಮಗಳೂರು ಬೀರೂರು ಈ ಸ್ಥಳಗಳಿಗೆ ನಿರ್ಮಲವಾದ ಮತ್ತು ಸಮೃದ್ಧಿಯಾದ ಜಲೋತ್ಪತ್ತಿ ಉಂಟುಮಾಡಿಕೊಡುವ ಕಾಮಗಾರಿಗಳ ವಿಷಯವು ಗವರ್ನಮೆಂಟಿನವರ ಆಲೋಚನೆಯಲ್ಲಿದೆ. ಕೋಲಾರಕ್ಕೂ ಬಂಗಾರಪೇಟೆ ಜಲಾಧಾರ ಕಾಮಗಾರಿ ತ್ವರಿತದಲ್ಲಿಯೇ ಆಗಬಹುದು. ಬೆಂಗಳೂರು ಪೇಟೆಗೆ ಜಲಾಧಾರ ಕಲ್ಪಿಸತಕ್ಕ ಚರ್ಚೆಯು ಕಂಟೋನ್‌ಮೆಂಟಿಗೆ ಬದಲು ಪ್ರತ್ಯೇಕ ಜಲಾಧಾರ ಕಾಮಗಾರೀ ಆಗುವ ವಿಷಯ ಇಂಡಿಯಾ ಗವರ್ನಮೆಂಟಿನವರು ಸ್ವೀಕರಿಸಿ ಮಾಡುವ ವರಿವಿಗೂ ಅನಿವಾರ್ಯವಾಗಿ ನಿಲ್ಲಿಸಲ್ಪಟ್ಟಿದೆ.

೫೦. ವಿದ್ಯಾಭ್ಯಾಸದ ವಿಷಯ—ಕಳೆದ ವರುಷದಲ್ಲಿ ವಿದ್ಯಾಶಾಲೆಗಳ ಸಂಖ್ಯೆಯು ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಾಗಿರುವದು ನೋಡಿದರೆ ವಿದ್ಯಾಭಿವೃದ್ಧಿಯೂ ಸಂತೋಷಕರವಾಗಿದೆ. ಈ ವರ್ಷದಲ್ಲಿ ೧,೬೩೦ ಗವರ್ನಮೆಂಟ್ ವಿದ್ಯಾಶಾಲೆಗಳು, ಅವುಗಳಲ್ಲಿ ೫೫,೧೯೦ ವಿದ್ಯಾರ್ಥಿಗಳು ಇದ್ದಲ್ಲದೆ ಗವರ್ನಮೆಂಟ್ ಸಹಾಯದ್ರವ್ಯವನ್ನು ಹೊಂದಿದ ಸ್ಕೂಲುಗಳು ಅವುಗಳಲ್ಲಿ ೧೧,೪೯೦ ವಿದ್ಯಾರ್ಥಿಗಳು ಇದ್ದರು. ಗುಜಸ್ತಾ ಸಾಲಿಗೂ ಈ ಸಾಲಿಗೂ ಮುಕಾಬಿಲೆ ಮಾಡಲಾಗಿ ಗವರ್ನಮೆಂಟ್ ವಿದ್ಯಾಶಾಲೆ ಸಂಖ್ಯೆಯಲ್ಲಿ ೧೭೧ ಜಾಸ್ತಿ ಅವುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ೬,೨೧೧ ಜಾಸ್ತಿ. ಸಹಾಯದ್ರವ್ಯವನ್ನು ಹೊಂದಿದ ಸ್ಕೂಲುಗಳ ಸಂಖ್ಯೆಯಲ್ಲಿ ೮೩ ಜಾಸ್ತಿ ಅಲ್ಲಿ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ೫೩೧ ಜಾಸ್ತಿ ಕಂಡುಬರುತ್ತೆ. ಸರಕಾರದ ಸಹಾಯದ್ರವ್ಯವನ್ನು ಹೊಂದಿದ ವಿದ್ಯಾಶಾಲೆಗಳು ತಿವಾಯಿ ೧೨೮೭ ಸಹಾಯವಿಲ್ಲದ ವಿದ್ಯಾಶಾಲೆಗಳಿದ್ದವು ಅವುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ೧೬,೧೯೬ ಆಗಿತ್ತು. ಎಲ್ಲಾ ಸೇರಿ ಒಟ್ಟು ವಿದ್ಯಾಶಾಲೆಗಳು ೩,೯೩೦ ವಿದ್ಯಾರ್ಥಿಗಳು ೮೩,೦೨೭ ಇದ್ದರು. ಇದರಿಂದ ನೋಡಿದರೆ ವಿದ್ಯಾಶಾಲೆಗೆ ಹೋಗತಕ್ಕ ವಯಸ್ಸುಳ್ಳ ಪುರುಷ ಪ್ರಜಾ ಸಂಖ್ಯೆಗೆ ನೇಕಡಾ ೨೦.೭೭ ಸ್ತ್ರೀಪ್ರಜಾ ಸಂಖ್ಯೆಗೆ ನೇಕಡಾ ೩.೩೪ ಆಯಿತು. ಮೈಸೂರಲ್ಲಿ ಶ್ರೀಮನ್ಮಹಾರಾಣಿಯವರ ಬಾಲಿಕಾ ಪಾಠಶಾಲೆಯಲ್ಲಿ ಯಥಾಪ್ರಕಾರ ಪ್ರಯಾಸವಾದ ಸ್ತ್ರೀವಿದ್ಯಾ ಪ್ರಚಾರ ವಿಷಯದಲ್ಲಿ ಶ್ಲಾಘ್ಯವಾದ ಉದ್ಯೋಗವು ನಡೆಯುತ್ತಲಿರುವದಲ್ಲದೆ ಪ್ರಜಾ ಸಮ್ಮತತ್ವ ಮತ್ತು ಕಾರ್ಯಕರಣ ಕ್ಷಮತ್ವ ವಿಷಯದಲ್ಲಿ ಸದರೀ ಪಾಠಶಾಲೆಯು ಯಶಸ್ಸು ಅವಿಚ್ಛಿನ್ನವಾಗಿದೆ.

೫೧. ಪುರಾತನ ಶಿಲ್ಪಾನ್ವೇಷಣ—ಕಳೆದ ಸಾಲಿನಲ್ಲಿ ೧,೬೦೦ ರ ಸಂಖ್ಯೆಗೆ ಹೆಚ್ಚಾಗಿ ಶಾಸನಗಳು ಶೋಧಿಸಲ್ಪಟ್ಟು ಯಥಾಸ್ಥಿತಿ ಪ್ರತಿ ನಕಲು ಮಾಡಲ್ಪಟ್ಟವು. ಅವುಗಳಲ್ಲಿ ವಿಶೇಷವಾಗಿ ಮನೋರಂಜಕವಾದದ್ದು ಯಾವದೆಂದರೆ, ಕದಂಬ ಮತ್ತು ಪಂಬೂಚ ರಾಜ್ಯಗಳ ಅರಸುಗಳಿಂದ ಕೊಡಲ್ಪಟ್ಟ ಶಾಸನಗಳವೆ. ಇನ್ನೂ ಮುಖ್ಯವಾಗಿ ಸೂಚಿಸತಕ್ಕದ್ದು ಯಾವದೆಂದರೆ, ನಿಸ್ಸಂದೇಹವಾಗಿ ಕ್ರಿಸ್ತಶಕದ ೪೫೦ ನೇ ಸಂವತ್ಸರದ್ದಾಗಿ ಕಾಣುವ ಶ್ರೀಪುರುಷ ಅಥವಾ ಪೃಥಿವೀ ಕೊಂಗಣಿ ಎಂಬವರ ಕಾಲದ ಗಂಗಾಶಾಸನವು ಈಗ ಕಂಡು ಹಿಡಿಯಲ್ಪಟ್ಟಿದೆ. ಈ ಮೂಲಕ ದಕ್ಷಿಣ ದೇಶದ ದೊಡ್ಡ ಜೈನರಾಜ ವಂಶವಾಗಿಯೇ ತಿಳಿಯಬೇಕಾದ ಅರಸುಗಳ ಸಂತತಿಯ ಕಾಲವನ್ನು ನಿಶ್ಚಯಿಸುವದರಲ್ಲಿ ದೊಡ್ಡ ಆಧಾರ ಸಿಕ್ಕಿದಂತಾಯಿತು. ಕಂಡು ಹಿಡಿಯಲ್ಪಟ್ಟ ಮತ್ತೊಂದು ಮುಖ್ಯ ವಿಷಯವೇನೆಂದರೆ, ಕುಯಿಸಳ ವಂಶ ಆದಿಸ್ಥಾನವೆಂತ ಹೇಳಿಕೊಳ್ಳುವ ಶಶಪುರ ಅಥವಾ ಶಶಿಕಪುರ ಯೆಂಬ ಸ್ಥಳವು ಮೂಡಗೆರೆ ತಾಲ್ಲೂಕಿನಲ್ಲಿರುವ ಅಂಗಡೀ ಯೆಂಬ ಸ್ಥಳವೇ ಆಗಿರುತ್ತೆಂತ ಕಂಡು ಹಿಡಿಯಲ್ಪಟ್ಟಿದೆ. ಕೋಲಾರ ಡಿಸ್ಟ್ರಿಕ್ಟಿನಲ್ಲಿ ಪುರಾತನವಾದ ಮಹಾಬಲೀ ಅಥವಾ ಬಾಣ, ಪಲ್ಲವ ಅಥವಾ ನೊಳಂಬ, ಮತ್ತು ಚೋಳರಾಜರಿಂದ ಕೊಡಲ್ಪಟ್ಟ ಬಹು ಶಾಸನಗಳು ಕಂಡುಬಂದವು ವೈದುಂಬ ರಾಜರ ಕಾಲದ ಒಂದು ಶಾಸನಸಿಕ್ಕಿತು.

೫೨. ಗ್ರಂಥ ಶಿಲಾಗುಳದ ಶಾಸನಗಳ ಪುಸ್ತಕವು ಪ್ರಕಟಿಸಿ ಛಾಪಿಸಲ್ಪಟ್ಟಿತು ಅದರಲ್ಲಿ ಬಹು ಮನೋರಂಜಕವಾದ ಜೈನರ ಶಾಸನಗಳು ಬಹಳ ಇರುತ್ತವೆ. ಅವುಗಳ ಪೈಕಿ ಅನೇಕ ಪ್ರಸಿದ್ಧಗಳಾದ ಕವಿಗಳಿಂದ ರಚಿಸಲ್ಪಟ್ಟದ್ದಾಗಿದೆ. ಮೈಸೂರು ಡಿಸ್ಟ್ರಿಕ್ಟಿನ ಶಾಸನಗಳ ಪುಸ್ತಕವು ಛಾಪಖಾನೆಗೆ ಕೊಡಲ್ಪಟ್ಟಿದೆ.

೫೩. ವಿಸ್ತಾರವಾದ ಸೂಚೆಯುಳ್ಳ ಕನ್ನಡ ಭಾಷಾ ಗ್ರಂಥಗಳು ಸಂಪಾದಿಸಲ್ಪಟ್ಟು ನಕಲು ಮಾಡಿಸಲ್ಪಟ್ಟಿದೆ. ಇದಕ್ಕೆ ಮೊದಲು ಪ್ರಸಿದ್ಧಪಡಿಸಲ್ಪಡದೆ ಇದ್ದು ಈಗ ಸರ್ಕಾರದಿಂದ ಪ್ರಕಟಿಸಲ್ಪಡುವ ಕನ್ನಡ ಭಾಷಾ ಪ್ರಸಿದ್ಧ ಗ್ರಂಥಗಳು ಯಾವವೆಂದರೆ, ಬಸವಪುರಾಣವೂ ಕರ್ನಾಟಕ ಶಬ್ದಾನುಶಾಸನ, ಭಾಷಾಭೂಷಣವೂ, ಈ ಗ್ರಂಥಗಳು

೫೪. ಲೆಜಿಸ್ಲೇಟಿವ್ ಯಾನೆ ಕಾನೂನ್ ವಿಷಯ ೧೮೮೯—೯೦ ನೇ ಸಾಲಿನಲ್ಲಿ ಎರಡು ರೆಗ್ಯುಲೇಷನ್‌ಗಳು ಯಾನೆ ಕಾನೂನುಗಳು ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರವರಿಂದ ಅಂಗೀಕರಿಸಲ್ಪಟ್ಟು ಜಾರಿಗೆ ತರಲ್ಪಟ್ಟವು. ಅವುಗಳಲ್ಲಿ ೧೮೯೦ ನೇ ಇಸವಿ ೧ ನೇ ನಂಬರ್ ರೆಗ್ಯುಲೇಷನ್ ಎಂಬುವದು ೨೦ ನೇ ಎಪ್ರಿಯಲ್ಲಿ ಹುಟ್ಟಿದ ಮುನ್ಸಿಸಿಪಲ್ ರೆಗ್ಯುಲೇಷನ್ ಎಂಬ ತಿದ್ದುಪಡಿಯಾಗಿ ಇದೆ. ೧೮೯೦ ನೇ ಇಸವಿ ೧೧ ನೆ ನಂಬರ ರೆಗ್ಯುಲೇಷನ್ ಎಂಬುವದು ೧೮೭೮ ನೇ ಇಸವಿ ಬಾಬತು ಮೈಸೂರು ಚೀಫ್ ಕೋರ್ಟ್ ರೆಗ್ಯುಲೇಷನ್ ಬದಲಾವಣೀ ಬಗ್ಯೆ ಹುಟ್ಟಿದ್ದಾಗಿದೆ.

೫೫. ಸದರೀ ಕಾನೂನುಗಳ ಪೈಕಿ ೨ ನೇದರ ಉದ್ದೇಶವು ಹೋದ ವರುಷದ ದಸರಾ ಉಪನ್ಯಾಸದಲ್ಲಿ ಹೇಳ್ತಗಳಿಗೆ ಸಂಪೂರ್ಣವಾಗಿ ವಿವರಿಸಲ್ಪಟ್ಟಿತು. ತದನುಸಾರವಾಗಿ ಬೆಂಗಳೂರಿನಲ್ಲಿ ಈಚೆಗೆ ಒಂದು ಡಿಸ್ಟ್ರಿಕ್ಟ್ ಕೋರ್ಟ್ ಸ್ಥಾಪಿಸಲ್ಪಟ್ಟಿತು. ಇದುವರೆಗೆ ನಂದೀದುರ್ಗ ಡಿವಿಜನ್ ಬಾಬತು ಡಿಸ್ಟ್ರಿಕ್ಟುಗಳ ಮೇಲೆ ಚೀಫ್ ಕೋರ್ಟಿನವರು ಸಿವಿಲ್ ಮತ್ತು ಕ್ರಿಮಿನಲ್ ಕೇಸುಗಳಲ್ಲಿ ಯಾವ ಅಧಿಕಾರವನ್ನು ಚಲಾಯಿಸುತ್ತಾ ಇದ್ದರೋ ಆ ಅಧಿಕಾರವು ಸದರೀ ಕೋರ್ಟಿಗೆ ವರ್ಗ ಮಾಡಲ್ಪಟ್ಟಿತು. ಬೆಂಗಳೂರು ಸಿವಿಲ್ ಕೋರ್ಟಿನಲ್ಲಿ ಬಹಳ ಹೆಚ್ಚಾಗಿರುವ ಕೆಲಸಗಳಲ್ಲಿ ಕೆಲವು ಭಾಗವನ್ನು ಸದರೀ ಹೊಸದಾಗಿ ಏರ್ಪಡಿಸಿರುವ ಡಿಸ್ಟ್ರಿಕ್ಟ್ ಕೋರ್ಟಿನವರು ತೆಗೆದುಕೊಂಡು ಆ ಕೋರ್ಟಿನ ಕೆಲಸವನ್ನು ತಗ್ಗಿಸುವ ಏರ್ಪಾಡು ಮಾಡಿ ಇದೆ.

೫೬. ೧೮೮೮ ನೇ ಇಸವಿಯಲ್ಲಿ ಹುಟ್ಟಿದ ೪ ನೇ ನಂಬರ್ ರೆವಿನ್ಯೂ ಕೋರ್ಟ್ ರೆಗ್ಯುಲೇಷನ್‌ಗೆ ಅನುಗುಣವಾದ ರೂಲ್ಸುಗಳು ಏರ್ಪಡಿಸಲ್ಪಟ್ಟು ಪ್ರಸಿದ್ಧಿ ಮಾಡಲ್ಪಟ್ಟಿವೆ.

(ಇದರಶೇಷಮುಂದಿನವಾರಕ್ಕೆ.)

BANGALORE.—Printed and published at the KARNATIC PRESS, No 114, SRINIVASA MANDIRAM ROAD, PETTAH.—1890

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XVIII.] BANGALORE:—MONDAY, DECEMBER 22, 1890. [No. 51.

[ಸಂಪುಟ ೧೮.] ಬೆಂಗಳೂರು:—ಸರ್ವಧಾರಿನಾಮ ಸಂವತ್ಸರ ಡಿಸೆಂಬರ್ ೨೨ನೇ ತಾರೀಖ್ ಸೋಮವಾರ. [ಸಂಚಿಕೆ ೫೧.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಪಾಲ್ ಖರ್ಚು	ಸ್ಥಳದವರಿಗೆ ಟಪಾಲ್ ಹಾಸಿಲ್ಲದೆ.	ಪರಸ್ಥಳದವರಿಗೆ ಟಪಾಲ್ ಸೇರಿ.
ಮುಂಗಡವಾಗಿ ವರ್ಷಕ್ಕೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡವಾಗಿ ವರ್ಷಕ್ಕೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ [illegible] ಲು ಒಂದು [illegible] ಬಹಳ [illegible] ಇಂಗ್ಲಿಷ್ [illegible] ಕನ್ನಡಭಾಗವನ್ನಾಗಲಿ [illegible] ತೆಗೆದುಕೊಳ್ಳಬಹುದು. ಮೂರು ತಿಂಗಳಿಗಿಂತ ಕಡಿಮೆ [illegible] ಅಂಗೀಕರಿಸಲ್ಪಡುವದಿಲ್ಲ.

[illegible] ಕಳುಹಿಸು [illegible] ನೋಟೀಸನ್ನು [illegible] ಒಂದಕ್ಕೆ [illegible] ಬಿಲ್ಲುಗಳನ್ನು ಕಳುಹಿಸಿಕೊಡದೆ [illegible] ಕಳುಹಿಸಲ್ಪಡುವ ಮೊಬಲಗನ್ನು [illegible] ನಾವು [illegible]

ಪ್ರಕಟನೆಯ ರಿವಾಜು.

ಮೊದಲನೆಯ ಸಾರಿ ಪಙ್ಕ್ತಿ ಒಂದಕ್ಕೆ ೦—೬—೦

ಎರಡನೆಯ ಸಾರಿ ಪಙ್ಕ್ತಿ ಒಂದಕ್ಕೆ ೦—೪—೦

ಷರಾ—[illegible] ಎಷ್ಟು [illegible] ಪಙ್ಕ್ತಿ ಒಂದಕ್ಕೆ [illegible] ಲೆಕ್ಕ [illegible] ಪ್ರಕಟನೆಗಳು [illegible] ಸ್ಪಷ್ಟವಾಗಿ [illegible] ಪ್ರಕಟಿಸುವ [illegible] ಪ್ರಕಟನೆಯ ಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು [illegible] ಪ್ರಕಟನೆಯ ಬಗ್ಗೆ ಈ ಪತ್ರಿಕೆಗೆ ಕಳುಹಿಸ [illegible] ನಾವು [illegible] ಕಳುಹಿಸಲ್ಪಡುವದಿಲ್ಲ.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs. 5-0-0

ವೈದ್ಯಸಾರ ಸಂಗ್ರಹ.

ಈ ಗ್ರಂಥವು ಬೇಕಾಗಿರುವವರು ಮೊಬಲಗಿನೊಡನೆ [illegible] ಬರೆದುಕೊಂಡರೆ ಪುಸ್ತಕ ಕೊಡಲ್ಪಡುವದು. ಮೊಬಲಗು [illegible] ಸಿಗಲ್ಪಡಲಾರದು.

ಇದರ ಕ್ರಯ—ಪ್ರೈಸ್ ಮತ್ತು ಅಂಚೆ ಪೋಸ್ಟ್

ಸೇರಿ ಪ್ರತಿ ಒಂದಕ್ಕೆ ರೂ. 5—0—0

ಟಿ. ಡಿ. ವೆಂಕಟರಾಜಾಚಾರ್,

[illegible] 41ನೇ ನಂ. ಮನೆ.

ADVERTISEMENTS.

ನೋಟೀಸ್.

ಅದ್ಭುತವಾದ ಒಂದು ಔಷಧವು.

BEECHAM'S PATENT PILLS. ST. HELENS LANCASHIRE.

ಹೊಟ್ಟೆಯಲ್ಲಿ ನಾಯು ಸೇರಿಕೊಂಡು [illegible] ಪಿತ್ತದಿಂದ ತಲೆ ಸೂಲೆ, ಕಣ್ಣುಗಳು [illegible] ತಲೆ ಗಿರ್ರನೆ [illegible] ಉಸಿರಾಡುವಿಕೆ [illegible] ನಿದ್ರಾಭಂಗ, ಭಯಂಕರವಾದ ಕನಸುಗಳು, [illegible] ಪಿತ್ತ ಮತ್ತು [illegible] ರೋಗಗಳಿಗೆಲ್ಲಾ [illegible] ಗುಳಿಗೆಗಳ ಡಬ್ಬಿ ಒಂದಕ್ಕೆ [illegible] ಕ್ರಯ [illegible] ಅಂಗೀಕರಿಸಲ್ಪಟ್ಟಿದೆ. ಈ ಗುಳಿಗೆಯನ್ನು [illegible] ಪ್ರತಿ ರೋಗಿಯೂ ಒಂದು ಡಬ್ಬಿ ಈ ಗುಳಿಗೆಗಳನ್ನು ತರಿಸಿ ಸೇವನೆ ಮಾಡಬೇಕೆಂದು ಕೋರುತ್ತೇವೆ. [illegible] ಒಂದು ಗಿನಿ [illegible]

ಎಲ್ಲಾ ವಯಸ್ಸಿನ ಹೆಂಗಸರಿಗೂ ಈ ಗುಳಿಗೆಗಳು [illegible] ಕೆಲವು [illegible] ಸೇವನೆ ಮಾಡಿದರೆ [illegible] ದೋಷ ತತ್ವಕ್ಕೆ [illegible] ಗುಳಿಗೆಗಳಿಗೆ [illegible] ಈ ಔಷಧದ ಪ್ರತಿಯೊಂದು ಡಬ್ಬಿಯ ಸಂಗಡ [illegible] ಕ್ರಮವನ್ನನುಸರಿಸಿ ಇದನ್ನು ಸೇವನೆ ಮಾಡಿದರೆ [illegible] ಅನುಭವಪೂರ್ವಕ ರುಜುವಾತಾಗಿ [illegible]

ಅನ್ನಕೋಶದ [illegible] ಪಿತ್ತಕೋಶದ [illegible] ಅದ್ಭುತವಾದ ಔಷಧ. ಇದನ್ನು ಕೆಲವು ಸಲ ಸೇವನೆ ಮಾಡಿದರೆ ಮನುಷ್ಯರ ದೇಹದಲ್ಲಿನ ಅವಯವಗಳಿಗೆ [illegible] ಅದ್ಭುತವಾದ ಕಾರ್ಯಗಳನ್ನು ಮಾಡುತ್ತದೆ. [illegible] ದೇಹಾರೋಗ್ಯದೊಡನೆ ಮನುಷ್ಯ [illegible]

ಇದು ವಾಕ್ಯವ್ಯಾಪ್ತವಾದದ್ದು, ಇದನ್ನು ಎಲ್ಲರೂ ಒಪ್ಪಿಕೊಂಡಿರುತ್ತಾರೆ. ಮತ್ತು ಈ ಪ್ರಪಂಚದಲ್ಲಿನ ಎಲ್ಲಾ [illegible] ಈ ಔಷಧ ಅಧಿಕವಾಗಿ ಖರ್ಚು ಆಗುವ [illegible] ಸರ್ವೋತ್ತಮವಾದ ಔಷಧವೆಂದು [illegible] ಕಾರಣವುಂಟಾಗಿದೆ.

Sole Agents for India,

NAYLOR, SONS, GRIMES & CO.,

Wholesale Depot, 35 Clive Street, Calcutta.

ನೋಟೀಸ್—ಔಷಧ ಬೇಕೆಂದು ಬರೆದುಕೊಂಡವರಿಗೆ [illegible] ವಾಲ್ಯೂಪೇಯಬಲ್ ಪೋಸ್ಟಿನಲ್ಲಿ [illegible] ಡಬ್ಬಿ [illegible] ಅದರ ಕ್ರಯ [illegible] ತರಿಸಿಕೊಳ್ಳಬಹುದು. [illegible] ಕೊಡಬೇಕು.

ವೈದ್ಯರಿಗೂ ಔಷಧ ಶಾಲೆಯವರಿಗೂ ಬೇಕಾದರೆ ಒಟ್ಟು ಖರೀದಿಗೆ ಕೊಡಲ್ಪಡುವದು.

ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ಬಿಕರಿಗೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

		ಟಪಾಲ್ ಸೇರಿ ರೂ. ಆ. ಪೈ
ಟೀಕಾ ವೈದ್ಯಸಾರ ಸಂಗ್ರಹ	....	೫ ೦ ೦
,, ಶಿವಗೀತೆ	...	[illegible] ೦
,, ಶಿವಾನಂದಲಹರಿ	...	೦ ೪ ೦
,, ಕಾಲಾಮೃತ	...	೧ ೨ ೦
,, ಮುಹೂರ್ತದರ್ಪಣ	...	೦ ೧೨ ೦
,, ಬಾಲರಾಮಾಯಣ	...	೧ ೮ ೦
,, ಗೋಪಿಕಾ ಗೀತೆ	...	೦ ೧ ೬
,, ಚಾಣಕ್ಯನೀತಿ (ಉಭಯಾರ್ಥ)	...	೦ ೬ ೦
ವಿಷ್ಣುಸಹಸ್ರನಾಮ ಪಙ್ಕ್ತಿ	...	೦ ೫ ೧
ಸೂರ್ಯಸಹಸ್ರನಾಮ	...	೦ ೩ ೦
ಕೃಷ್ಣಕರ್ಣಾಮೃತ	...	೦ ೨ ೬
ತ್ರಿಕಾಂಡ ಅಮರ ಮೂಲ	...	೦ ೨ ೬
,, ಕಾಂಡ	...	೦ ೧ ೦

ಕನ್ನಡ ಗ್ರಂಥಗಳು.

ಹನುಮಂತ ಶಪ್ತತಿ ಅಪ್ಪಿಲ್ ಪ್ರತಿ	...	೩ ೦ ೦
ಡಿಟೋ ರುಮ್ಮು	...	೧ ೮ ೦
ವೃಷಭೇಂದ್ರ ವಿಜಯ	...	೧ ೪ ೦
ಪಂಚಭಾಷೆ ಬಾಲಲೀಲೆ	...	೦ ೪ ೦
ಹನುಮದ್ವಿಲಾಸ	...	೦ ೪ ೦
ಕಾಳೀಯಮರ್ದನ	...	೦ ೨ ೬
ಸುಭದ್ರಾಪರಿಣಯ	...	೦ ೨ ೬
ಕೌಶಿಕೋಪಾಖ್ಯಾನ	...	೦ ೩ ೦
ಸುಧಾಮಚರಿತ್ರೆ	...	೦ ೨ ೦
ಪೌರಾವಣನ ಚರಿತ್ರೆ	...	೦ ೨ ೦
ಬಾಲಗ್ರಹ ಚಿಕಿತ್ಸೆ	...	೦ ೨ ೬
ಮಹಮ್ಮದ್ ಲಾ	...	೧ ೦ ೦
ಭಾಮಿನಿ ವಿಲಾಸ	...	೦ ೧೦ ೦

ಸಚಿತ್ರ ಕ್ಯಾಟಲಾಗ್,

ಟಿ. ಆರ್. ಕಾನಿಟಕರ್, ಮತ್ತು ಕಂಪೆನಿ, ಮುಂಬೈ ಗಿರಿಗಾಂ, ಇವರ ಹೊಸ ತರಹದ ಇಂಗ್ಲಿಷ್ ಗ್ರಂಥ ಮರಾಠಿ, ಅಥವಾ ಗೋ ಲೇಬಲ್ ಕಳುಹಿಸಿಕೊಟ್ಟರೆ ಕಳ್ಳುವದು.

ನೋಟೀಸ್.

ಮೈಸೂರು ಮಹಾರಾಜರವರ ಅರಳೆ ಯಂತ್ರದ ಕಾರ್ಖಾನೆ.

ನೋಟೀಸ್.

ಮೈಸೂರು ಮಹಾರಾಜರವರ ಅರಳೆ ಯಂತ್ರದ ಕಾರ್ಖಾನೆಯಲ್ಲಿ ಹೊಸ ನಮೂನೆ ಯಂತ್ರದ ಮೂಲಕ ಉತ್ತಮವಾದ ಗೋಣಿ ಬಟ್ಟೆ, ಜಮಖಾನೆ, ಟವಲ್ಸ್ ತಯಾರಿಸಲ್ಪಡುತ್ತ, ಪೇಟೆಯಲ್ಲಿರುವ ಸದರೀ ಕಾರ್ಖಾನೆಗೆ ಸೇರಿದ ಷಾಪುಗಳಲ್ಲಿ, ಬೆಂಗಳೂರು ಕಂಟೋನ್ಮೆಂಟಿನಲ್ಲಿ ಒಬ್ಬರೇ [illegible] ಸಾಲಿಯಾ ಮಹಮ್ಮದ್ [illegible] ಸಿಂಡಿಕೇಟ್ ದಿಸ್ಪೆನ್ಸರಿ ದಕ್ಷಿಣದಲ್ಲಿರುವ ಷಾಪಿನಲ್ಲಿಯೂ ದೊರಕಲ್ಪಡುತ್ತವೆ.

ನೋಟೀಸ್.

"ಲಂಗ್ಲೀ ಇಂಡಿಯನ್ ಪಾಕೆಟ್ ಡೈರಿ"

[illegible] ದಿನಚರಿ ಪುಸ್ತಕವನ್ನು ಲಾಯರುಗಳಿಗೂ, ವರ್ತಕರಿಗೂ ಮತ್ತು ಇತರ ಜನಗಳಿಗೂ ಬಹಳ ಉಪಯುಕ್ತವಾಗುವಂತೆ, ಮುಖ್ಯವಾಗಿ ಬೇಕಾದ ಸಂಗತಿಗಳನ್ನು, ಇಂಗ್ಲಿಷ್ ತಿಂಗಳು, ತಾರೀಖ್, ಮತ್ತು ಅದಕ್ಕೆ ಸರಿಯಾದ ನಮ್ಮ ಹಿಂದೂ ಸಂವತ್ಸರ, ತಿಂಗಳು, ತಿಥಿ, ವಾರ, ನಕ್ಷತ್ರ ಮೊದಲಾದದ್ದು ಸೇರಿಸಿ [illegible] ಅನುಕೂಲವಾಗಿರುವಂತೆ [illegible] ಒಂದು ಪುಸ್ತಕ [illegible] ಸಿದ್ಧವಾಗಿದೆ. [illegible] ಕೃಪೆಯಿಂದ [illegible] ಪುಸ್ತಕಗಳು ದೊರೆಯುತ್ತವೆ.

ಕ್ರಯ ಪ್ರತಿ ಒಕ್ಕೆ	...	[illegible]
ಟಪಾಲು ಹಾಸಿಲ್	...	೦ ೧ ೦
ರಿಜಿಸ್ಟರ್ ಆವಶ್ಯಕವಿದ್ದರೆ	...	೦ ೨ ೦

ಇನ್ನೂ ಬೇಕಾದ ಇತರ ಪುಸ್ತಕಗಳನ್ನು ಬಹಳ ಸುಲಭವಾಗಿ ದೊರೆಯುತ್ತವೆ, ಬೇಕಾದವರು ತರಿಸಿಕೊಳ್ಳಬಹುದು.

ಸಿ. ಚಂದ್ರಶೇಖರಯ್ಯ,

ಬೆಂಗಳೂರು, ೫-೧೨-೯೦. } ಪುಸ್ತಕ್ಯಾರ್ ಸ್ಟೇಷನರ್ ಡಿಪೋ, ಪ್ರೊಪ್ರೈಟರು.

ನೋಟೀಸ್.

ಇದರಿಂದ ಈ ಪತ್ರಿಕೆಯ ಚಂದಾದಾರರಿಗೆ ಇತರರಿಗೂ ತಿಳಿಸುವದೇನೆಂದರೆ:—

ಈ ತಿಂಗಳ ಆಖೈರಿನೊಳಗೆ ಈ ಸಂವತ್ಸರವು ಪೂರೈಸಲ್ಪಡುತ್ತದೆ. ಇದುವರಿವಿಗೆ ಚಂದಾ ಮೊಬಲಗನ್ನು ಮುಂಗಡ ಕೊಟ್ಟು [illegible] ತಕ್ಕವರ ಹೆಸರುಗಳು ಮಾತ್ರ ಮುಂದಿನ ಸಾಲಿನ ರಿಜಿಸ್ಟರಿನಲ್ಲಿ ದಾಖಲ್ಮಾಡಿಕೊಂಡು ಪತ್ರಿಕೆಯನ್ನು ಕಳುಹಿಸುವೆವು. ಅಂತವರ ಪೈಕಿ ಯಾರಿಗಾದರು ಪತ್ರಿಕೆಯು ಅಪೇಕ್ಷೆ ಇಲ್ಲದಿರುವದಾದರೆ ಆ ಸಂಗತಿಯನ್ನು ಕೂಡಲೆ ನಮಗೆ ಲಿಖಿತಮೂಲಕ ತಿಳಿಸಬೇಕೆಂದು ಕೋರುತ್ತೇವೆ. ಅಪೇಕ್ಷೆ ಇರತಕ್ಕವರೆಲ್ಲರೂ ತಮ್ಮ ತಮ್ಮ ಚಂದಾ ಮೊಬಲಗುಗಳನ್ನು ಹಿಂದಿನ ನಮ್ಮ ನಿಬಂಧನೆಯನ್ನನುಸರಿಸಿ ಅಡ್ವಾನ್ಸ್ ಕಳುಹಿಸಿಕೊಡಬೇಕು.

ಈ ಪತ್ರಿಕೆಯ ಇಂಗ್ಲಿಷ್ ಅಥವಾ ಕನ್ನಡ ಭಾಗಕ್ಕೆ ಮೊದಲು ಚಂದಾ ಮಾಡಿ, ಕೆಲವು ದಿನಗಳಮೇಲೆ ಕನ್ನಡಕ್ಕೆ ಬದಲು ಇಂಗ್ಲಿಷ್ ಅಥವಾ ಇಂಗ್ಲಿಷಿಗೆ ಬದಲು ಕನ್ನಡ ಕಳುಹಿಸಿ ಕೊಡಬೇಕೆಂದು ಬರೆದರೆ ಅದಕ್ಕೆ ಸುತರಾಂ ಗಿರಿ [illegible] ಕೊಡಲ್ಪಡಲಾರದು. ಮೊದಲು ಎಷ್ಟು ದಿವಸಗಳ ವರಿವಿಗೆ ಯಾವ ಭಾಗವಂ ಕಳುಹಿಸುವ [illegible] ಬರೆಯುತ್ತಾರೆಯೋ ಆ ಅವಧಿ ಪೂರ್ತಿಯಾಗುವ ವರೆಗೆ ಅದನ್ನೇ ತೆಗೆದುಕೊಳ್ಳಬೇಕು.

ಹೊಸದಾಗಿ ಚಂದಾದಾರರು ಚಂದಾ ಮೊಬಲಗಿನೊಡನೆ ಬರೆದುಕೊಂತ ಹೊರತು [illegible] ಗಳಿಗೆ ನಿಗೇ ಕೊಡಲ್ಪಡಲಾರದು. ಈ ತಿಂಗಳ ಆಖೈರಿನೊಳಗಾಗಿ ಹೊಸದಿ ವಿಷಯದಲ್ಲಿ ನಾವು ಪತ್ರಿಕೆಯನ್ನು ರಿಜಿಸ್ಟರ್ ಮಾಡಬೇಕಾಗಿರುವದರಿಂದ ಹೊಸ ಚಂದಾದಾರರೆಲ್ಲರೂ ಅದರೊಳಗಾಗಿ ತಮ್ಮ ಅರ್ಜಿಗಳಂ ಕಳುಹಿಸಿಕೊಡಬೇಕು. ಇಲ್ಲವಾದರೆ ಹಾಸಲ್ ಐದು [illegible] ಅದರಿಂದ ನಮಗೆ ಉಂಟಾಗುವ ನಷ್ಟ [illegible] ಚಂದಾದಾರರು ವಹಿಸಬೇಕಾಗಿರುವದು. ನಮ್ಮಿಂದ ಡಿ. ಪಿ. ಅಪೇಕ್ಷಿಸತಕ್ಕವರು ಕಾರ್ಡ್ ಅಥವಾ ಲೇಬಲ್ ಕಳುಹಿಸಬೇಕು.

೨೨—೧೨—೯೦ ಪ್ರ. ಕ. ಪ್ರ.

ಯಿತು. ಹಳೇದಾದ ಬಹುಕೆರೆಗಳ ಬದಾವಣೇ ಕೆಲಸವು ನಡೆಯುತ್ತಾಯಿತ್ತು. ಏಕೊಣ ಈ ವರ್ಷದಲ್ಲಿ ನಡೆದ ವಿಶಿಷ್ಟ ನೀರಾವರಿ ಕಾಮಗಾರಿಗಳಿಂದ ಸುಮಾರು ೩೫೦೦೦ ಎಕರೆ ಜಮೀನು ಹೊಸದಾಗಿಯುದ್ದ ತರೀಜಮೀನಿಗಿಂತಲೂ ಹೆಚ್ಚಾಗಿ ಸಾಗುವಳಿಗೆ ಬಂತು.

೪೨. ಈ ಸಂದರ್ಭದಲ್ಲಿ ಪ್ರೋರಿಕ್ಯಾಸ್ಟ್ ಪ್ರೋಗ್ರಾಂ ಪಟ್ಟಿಯಲ್ಲಿ ದಾಖಲಾಗಿದ್ದ ಕಾಮಗಾರಿಗಳಪೈಕಿ ಎಲ್ಲಕಿಂತಲೂ ಭಾರಿಯಾದ ಕಲ್ಲನಾಥಪುರದ ನಾಲಾ ಪ್ರಾಜೆಕ್ಟನ್ನು ಕುರಿತು ವಿಶೇಷವಾಗಿ ಸೂಚಿಸತಕ್ಕದ್ದು ನಮಗೆ ಯುಕ್ತವಾಗಿತೋರುತ್ತೆ. ಸದರೀ ಕಾಮಗಾರಿಯು ಮೈಸೂರು ಪಟನ್ ನಿವಾಸಿಗಳಿಗೂ ಅಜೂಬಾಜು ತಾಲ್ಲೂಕುಗಳ ರೈತರಿಗೂ ವಿಶೇಷ ಅವಶ್ಯಕತೆಯುಳ್ಳದ್ದಾಗಿದೆ. ಹದಿನಾರುವರೆ ಮೈಲಿವರಿಗೆ ನಡೆವ ಚಾನಲ್ಲು ೬೦೦೦ ಸಾವಿರ ಎಕರೆ ತರೀಜಮೀನಿಗೆ ನೀರು ಹಾಯಲೂ ಹದಿನೇಳುವರೆ ಲಕ್ಷರೂಪಾಯಿಗಳ ಅಂದಾಜ್ ಸಹ ಪೂರ್ತಿಯಾಗಿ ಮಾಡಲ್ಪಟ್ಟಿದೆ. ಸದರೀ ಕಾಮಗಾರಿಯು ಸ್ವಭಾವವನ್ನು ಕುರಿತು ಕನಿಷ್ಠವಾದರೂ ಇಂಜನೀರುಗಳು ಅಭಿಪ್ರಾಯವನ್ನು ಗಮನಿಸಬೇಕಾಯಿತು. ಕಾಮಗಾರಿಯಿಂದ ಉಂಟಾಗಬಹುದಾದ ಉತ್ತರೋತ್ತರ ಹುಟ್ಟುವಳೀ ಪ್ರಯೋಜನವು ಪ್ರಾರಂಭದಲ್ಲಿ ತೋರಿಬಂದಷ್ಟು ಅಗಲಾರದೆಂತ ತಿಳಿಯಬಂತು. ಸದರೀ ಕಾಮಗಾರಿ ನೆರವೇರುವದ್ದರಿಂದ, ಮೈಸೂರು ಸಮೀಪದಲ್ಲಿರತಕ್ಕ ಪ್ರಜೆಗಳ ಆರೋಗ್ಯಕ್ಕೆ ನ್ಯೂನತೆವುಂಟಾಗಿ ತನ್ಮೂಲಕ ಬಾಧಕ ಉಂಟಾದೀತೆಂಬ ಅಂಶ, ಕಾಮಗಾರಿಯನ್ನು ಖಂಡಿತವಾಗಿ ಶುರುಮಾಡುವದಕ್ಕೆ ಮೊದಲೆ ಪೂರಾ ಜಾಗರೂಕತೆಯಿಂದ ಆಲೋಚಿಸತಕ್ಕದ್ದಾಗಿ ಕಂಡುಬಂತು. ಈ ಅಭಿಪ್ರಾಯದಿಂದ ಈ ಕಾಮಗಾರಿ ವಿಷಯವನ್ನು ಎಲ್ಲಾ ವಿಧದಿಂದಲೂ ಚೆನ್ನಾಗಿ ಆಲೋಚನೆಮಾಡಬೇಕೆಂದು ಶ್ರೀಮನ್ಮಹಾರಾಜರವರ ಕೌನ್ಸಲ್ ಮೆಂಬರ್‌ಗಳು ಮತ್ತು ಹೆಚ್ಚಾದ ಅನುಭವವುಳ್ಳ ಸಂಸ್ಥಾನದ ಆಫೀಸರ್‌ಗಳೂ ಅಪೇಕ್ಷಿಸಲ್ಪಟ್ಟರು. ಅವರುಗಳು ಕೊಟ್ಟ ಅಭಿಪ್ರಾಯವು ಈಗ ಗವರ್ನಮೆಂಟಿನವರ ಆಲೋಚನೆಯಲ್ಲಿದೆ. ಶೀಘ್ರದಲ್ಲಿಯೇ ಈ ಮುಖ್ಯವಾದ ಕಾಮಗಾರಿಯನ್ನು ಉಪಕ್ರಮಿಸಬೇಕೇ ಬೇಡವೇ ಎಂಬುದು ತೀರ್ಮಾನಿಸಲ್ಪಡುತ್ತೆ. ಅಂಥಾ ತೀರ್ಮಾನವಾಗುವದರೊಳಗ್ಗಾಗಿ ಈ ಸಭೆಗೆ ಮೈಸೂರಿಂದಲೂ ಮೈಸೂರು ತಾಲೂಕಿನಿಂದಲೂ ಬಂದಿರುವ ಅನುಭವಸ್ಥರಾದ ರೆಪ್ರಜೆಂಟೆಟಿವ್ ಮೆಂಬರ್‌ಗಳ ಅಭಿಪ್ರಾಯವನ್ನ ತಿಳಿದುಕೊಳ್ಳುವದು ನಮಗೆ ಸಂತೋಷಕರವಾಗಿರುತ್ತೆ. ಸದರೀ ಮೈಸೂರು ಮೆಂಬರ್‌ಗಳು ಕೃಷಿಕ್ರಮಮುಂತಾದ ಜಮೀನ್‌ದಾರರಾಗಿ ಸಂಪಾದಿಸಿರುವ ಅನುಭವದಮೇಲೆ ತರೀ ಸಾಗುವಳೀಗೆ ನೀರುತಗದುಕೊಂಡು ಬರುವದರಿಂದ ಪ್ರಜೆಗಳ ಐಶ್ವರ್ಯಕ್ಕೂ ಎಷ್ಟು ಸಾಧಕ ಜನಾರೋಗ್ಯಕ್ಕೆ ಎಷ್ಟು ಬಾಧಕ ಎಂಬ ಅಂಶಗಳನ್ನು ನೀವು ತಿಳಿಸಬೇಕಲ್ಲದೆ ಕಲ್ಲನಾಥಪುರದ ನಾಲೆ ಕಾಮಗಾರಿ ಆಗತಕ್ಕದ್ದೆಂದು ಅಭಿಪ್ರಾಯ ಪಡುತ್ತೀರೋ ಆಗತಕ್ಕದ್ದಲ್ಲವೆಂದು ಅಭಿಪ್ರಾಯ ಪಡುತ್ತೀರೋ ಅವೇನಿಗ ಪಡುವ ಅಭಿಪ್ರಾಯಕ್ಕೆ ಗೊತ್ತಾದ ಕಾರಣಗಳನ್ನು ಸಹ ನಿಮ್ಮಿಂದ ತಿಳಿಯಲಪೇಕ್ಷಿಸುತ್ತೇವೆ. ಈ ಕಾಮಗಾರಿಯು ಮುಖ್ಯವಾದ ಭಾಗವತಿನಿಂದ ಆಗತಕ್ಕದ್ದಾಗಿಯೂ ಬಹು ವಿಸ್ತಾರವಾದದ್ದುತ್ತು ಭಾರಿಯಾದ ವೆಚ್ಚಗಳಿಗೆ ಕಾರಣವಾಗತಕ್ಕದ್ದಾಗಿಯೂ ಇರುವುದು.

೪೪. ಉತ್ತರೋತ್ತರ ನಡೆಯಬೇಕಾದ ನಮ್ಮ ನೀರಾವರಿ ಕಾಮಗಾರಿಗಳ ಪ್ರಸ್ತಾವ ಸಂದರ್ಭದಲ್ಲಿ ನಾವು ನಿರೂಪಣ ಮಾಡಬೇಕಾದ್ದೇನಂದರೆ, ಮೈಸೂರುದೇಶದಿಂದ, ಹರದು ಹೋಗುವ [illegible] ಪ್ರವಾಹದ ನೀರಿನಪು ಕೃಷ್ಣಾಗಿ ತನ್ನ ಮುದರಾಸು ಪ್ರೆಸಿಡೆನ್ಸಿ ರ[illegible]ರಿಂದ ಅನೇಕ ನಮ್ಮ ಕಾಲುವೆಗಳ ಉಪಯೋಗಕ್ಕೆ ಕಾಮಗಾರಿಗಳಿಂದ ಬಹಳ ಬಾಧಿತವಾಗಿದೆ. ಸದರೀ ಪ್ರವಾಹದ ನೀರು ಇದುವರಿಗೆ ನಿರಾತಂಕವಾಗಿ ಹರದುಹೋಗಿದೆ. ಅಥವಾ ನಮ್ಮ ಸೀಮೆಯ ಸರಹದ್ದು ದಾಟಿ ಕೆಲವು ದೂರದವರೆಗೆ ಹರಿಯುತ್ತಿದ್ದು ಆ ಪ್ರಾಂತ್ಯದ ಕಲೆಕ್ಟರೇಟು ಯಾನೆ ಜಿಲ್ಲಾಗಳಲ್ಲಿ ಅಲ್ಲಲ್ಲಿ ಕೆಲವು ಕಡೆ ಹೆಚ್ಚಾಗಿಯೂ, ಕೆಲವು ಕಡೆ ಕಮ್ಮಿಯಾಗಿಯೂ ಸಾಗುವಳಿಗೆ ಉಪಯೋಗಿಸಲ್ಪಡುತ್ತಾ ಬಂದು ಇದೆ. ಸದರೀ ಜಲಗಳು ವಾಹಿಸುವ ನೀರಿನ ಹಕ್ಕುದಾರೀ ವಿಷಯದಲ್ಲಿ ನ್ಯಾಯವಾದದ್ದು ಏನಾದಾಗಬೇ ಹೋದಲ್ಲಿ ನಮ್ಮ ದೇಶದ ಕಲಾಪ್ ಕಾಮಗಾರಿ ಪ್ರಾಜೆಕ್ಟುಗಳ ಪೈಕಿ ಮುಂದಕ್ಕೆ ಬಹಳ ಹಾಯಿವೆ ಉಂಟುಮಾಡತಕ್ಕ ಕೆಲವು ಪ್ರಾಜೆಕ್ಟುಗಳನ್ನು ಅಗತ್ಯವಾಗಿ ಬಿಟ್ಟುಬಿಡಬೇಕಾಗುತ್ತೆ. ಮುಂದೆ ನಾವು ಮಾಡಿಸಬೇಕಾದ ನೀರಾವರಿ ಕಾಮಗಾರಿಗಳ ಏರ್ಪಾಟಿಗೆ ಮುಖ್ಯವಾಗಿ ಸಂಬಂಧಪಡುವ ಈ ಪ್ರಮೇಯವು ಇಂಡಿಯಾ ಗವರ್ನಮೆಂಟಿನವರಿಗೆ ಸಂಪೂರ್ಣವಾಗಿ ವಿಜ್ಞಾಪಿಸಲ್ಪಟ್ಟಿದೆ.

೪೫. ರೈಲ್ವೆ ಮತ್ತು ಇರ್ರಿಗೇಷನ್ ಯಾನೆ ನೀರಾವರಿ ಕಾಮಗಾರಿಗಳಂತೆಯೇ ಪ್ರೊವಿನ್ಷಿಯಲ್ ಮತ್ತು ಲೋಕಲ್ ರಸ್ತೆಗಳ ನಿರ್ಮಾಣವು ಮುಖ್ಯವಾದದ್ದಾಗಿ ಇವೆ. ನಮ್ಮ ಇಂಜನೀಯರ್‌ಗಳು ರಸ್ತೆಗಳನ್ನ ಮೇಲಾದ ಸ್ಥಿತಿಗೆ ತರುವದರಲ್ಲಿಯೂ ಮತ್ತು ಮುಂದಕ್ಕೆ ಒತ್ತಾಯಿಸಿ ತೆಗೆದುಕೊಂಡು ಹೋಗುವದರಲ್ಲಿಯೂ ಯಾವಾಗಿನಂತೆಯೇ ದೃಷ್ಟಿ ಕೊಡುತ್ತಲೇ ಇದ್ದಾರೆ. ಕಳೆದ ವರುಷದಲ್ಲಿ ಹರಿಹರಪುರದಲ್ಲಿ ತುಂಗಾನದಿ ಸೇತುವೆಯೂ ಬಾಳೇಹೊನ್ನೂರಲ್ಲಿ ಭದ್ರಾ ಸೇತುವೆಯೂ ಈ ಎರಡು ದೊಡ್ಡ ಸೇತುವೆಗಳ ಕಾಮಗಾರಿ ಚೆನ್ನಾಗಿ ನಡೆಯಿತು. ಮುಂದಿನ ವರುಷದ ಕಾಲದ ಹೊತ್ತಿಗೆ ಅವು ಮುಗಿದು ಮಾರ್ಗದ ತಕ್ಕ ಜನಗಳ ಸಂಚಾರಕ್ಕೆ ಖುಲ್ಲಾ ಮಾಡಲ್ಪಡುತ್ತೆಂದು ನಂಬಿಕೆಯಾಗಿ ತಿಳಿದು ಇದೇವೆ. ಇದರಿಂದ ಪಶ್ಚಿಮ ಸಮುದ್ರ ಪ್ರಾಂತ್ಯ ದೇಶಕ್ಕೂ ನಮ್ಮ ದೇಶಕ್ಕೂ ವ್ಯಾಪಾರ ನಡೆಯುವದಕ್ಕೆ ಸಂಬಂಧಿಸಿದ್ದ ಎರಡು ದೊಡ್ಡ ಪ್ರತಿಬಂಧಕಗಳು ಶಾಶ್ವತವಾಗಿ ನಿವಾರಣೆ ಮಾಡಲ್ಪಡುತ್ತವೆ. ಬೇಲೂರಲ್ಲಿ ನಡೆಯುವ ಲಕ್ಷಣವಾದ ಸೇತುವೆ ಕಾಮಗಾರೀ ವಿಷಯದಲ್ಲಿ ಮೇಲೆ ನಮೂದಿಸಿದ ಸೇತುವೆಗಳ ವಿಷಯದಲ್ಲಿ ಹೇಳದಷ್ಟು ಹೇಳುವದಕ್ಕೆ ಇಲ್ಲವಾಗಿದೆ. ಅದಕ್ಕೆ ಕಾರಣವೇನೆಂದರೆ, ಪಾಯಾ ಕಾಮಗಾರಿಯಲ್ಲಿ ಮೊದಲು ತಿಳಿಯದೆ ಹೋದ ಕಠಿನ ಭಾಗಗಳು ಕಂಡುಬಂದವು. ಕೂಲೀಜನಗಳು ಸಿಕ್ಕುವದರಲ್ಲಿ ಪ್ರಯಾಸವುಂಟಾಯಿತು.

೪೬. ಸದರೀ ಸೇತುವೆ ಕಾಮಗಾರಿಗಳ ಕೆಲಸ ಪೂರೈಸಿದ ಕೂಡಲೇ ಯಡತೊರೆಯಲ್ಲಿ ಕಾವೇರೀ ನದಿಗೆ ಸೇತುವೆಯೂ ನರಸೀಪುರದಲ್ಲಿ ಹೇಮಾವತಿ ನದಿಗೆ ಸೇತುವೆ ಇವುಗಳ ಕೆಲಸವನ್ನು ಉಪಕ್ರಮಿಸಬೇಕೆಂತ ಉದ್ದೇಶ ಮಾಡಿದೆ. ರಸ್ತೆ ವಿಷಯದಲ್ಲಿ ಶಿವಗಾಸು ಮಾಡಿರುವ ಪ್ರೋರಿಕ್ಯಾಸ್ಟ ಪ್ರೋಗ್ರಾಂ ಪಟ್ಟಿಯಲ್ಲಿ ದಾಖಲಾಗಿರುವ ಕಾಮಗಾರಿಗಳ ಪೈಕಿ ಸದರೀ ಸೇತುವೆಗಳು ಬಹಳ ಮುಖ್ಯವಾದ್ದಾಗಿದೆ ಈ ಸೇತುವೆಗಳನ್ನು ಕಷ್ಟಪರೀತಿ ಮತ್ತು ಕಷ್ಟತಕ್ಕ ಸ್ಥಳ ನಮ ಉತ್ತರೋತ್ತರ ನಡಿಯಬಹುದಾದ ಕಾವೇರಿ ಹೇಮಾವತೀ ನದಿಗಳ ಮಧ್ಯ ದೇಶದಲ್ಲಿ ಜನಸಂಚಾರಕ್ಕೆ ಅನುಕೂಲವಾಗಲು ಹಾಕಲ್ಪರುವ ರೈಲ್ವೆ ಲೈನಿಗೆ ಉಪಯೋಗವಾಗುವಂತೆ ಮಾಡಬೇಕೆಂಬ ಉದ್ದೇಶ್ಯವಾಗಿದೆ.

೪೭. ಸ್ಯಾನಿಟೇಷನ್ ಯಾನೆ ಪ್ರಜಾರೋಗ್ಯ ಹೇತುವಾದ ಪಟ್ಟಣ ಪಾರಿಶುಧ್ಯ ವಿಷಯಗಳು—ಮಿಸಿಲೇನಿಯಸ್ ಪಬ್ಲಿಕ್ ಇಂಪ್ರೂಮೆಂಟ್ಸ್ ಎಂಬ ಚಿಲ್ಲರೆ ಕಾಮಗಾರಿಗಳ ವಿಷಯದಲ್ಲಿ ನಿಮಗೆ ತಿಳಿಸತಕ್ಕದ್ದೇನೆಂದರೆ, ಕಳೆದ ಸಾಲಿನಲ್ಲಿ ಬರ್ಚು ಮಾಡಿದ ಹಣ, ಮೈಸೂರು ನಗರಿಗೆ ಜಲಾಧಾರ ಕಲ್ಪಿಸುವಬಗ್ಗೆ ಆರಂಭ ಕೆಲಸಗಳ ಬಗ್ಗೆ ಜನಾರೋಗ್ಯ ಸಂಬಂಧವಾದ ಕೆಲಸಗಳ ಬಗ್ಗೆ ಖರ್ಚು ಮಾಡಲ್ಪಟ್ಟಿತು. ಶ್ಲಾಘ್ಯವಾದ ಸಮೃದ್ಧಿಯಾದ ಜಲಾಧಾರವು ಪಟ್ಟಣದ ಯೆಲ್ಲಾ ಕಡೆಗೂ ಕಲ್ಪಿಸಲ್ಪಟ್ಟು ಇದೆ. ಬಹು ರೋಗಸಂಪಾದಕವಾದ ಪೂರ್ಣಯ್ಯನವರ ನಾಲಾ ಎಂಬ ಕಾಲುವೆಯನ್ನು ಮುಚ್ಚಿಸಲ್ಪಟ್ಟಿತು. ಕೆಟ್ಟ ನೀರು ನಿಲ್ಲತಕ್ಕ ಹಳ್ಳಗಳು ಹಾಳೆ ಹೋಗಿದ್ದ ಚರಂಡಿಗಳು ಇಲ್ಲವಂತೆ ಮಾಡಲ್ಪಟ್ಟವು. ಜನಸಮ್ಮರ್ದನಾಗಿದ್ದ ಬೀದಿಗಳು ಮತ್ತು ಗಲ್ಲೀಗಳು ವಿಸ್ತರಿಸಲ್ಪಟ್ಟವು. ಇತರ ದೊಡ್ಡ ಟೌನ್‌ಗಳಲ್ಲಿ ಜನಾರೋಗ್ಯ ಸಂಬಂಧವಾದ ಹೆಚ್ಚಾದ ಕಾಮಗಾರಿಗಳು ನಡಿಸತಕ್ಕ ಅಂಶವು ನಮ್ಮ ಆಲೋಚನೆಯಲ್ಲಿ ಇದೆ. ಅವುಗಳಲ್ಲಿ ಮುಖ್ಯವಾದ ಸ್ಥಳಗಳಿಗೆ ಜಲಾಧಾರ ಕಲ್ಪಿಸುವ ವಿಷಯವು ಚರ್ಚೆಯಲ್ಲಿ ಇದೆ. ಶಿವಮೊಗ್ಗೆಯಲ್ಲಿ ಬಹುಕಾಲದಿಂದ ಪ್ರಮಾದಕರವಾದ ಹೊಸಗೆರೆ [illegible] ಕುಂಬಾರ ಗುಂಡಿ ಯೆಂಬ ಹಳ್ಳವು ಭರ್ತಿ ಆಗುತ್ತಾ ಇದೆ. ಊರಿನ ಎಲ್ಲಾ ಕಡೆಗೂ ಯುಕ್ತವಾದ ಜಲಧಾರವು ಮುಂದೆ ಸ್ವಲ್ಪಕಾಲದಲ್ಲಿಯೇ ಮಾಡಬಹುದಾಗಿದೆ. ದಾವಣಗೆರೆ ಚಿಕ್ಕಮಗಳೂರು ಬೀರೂರು ಈ ಸ್ಥಳಗಳಿಗೆ ನಿರ್ಮಲವಾದ ಮತ್ತು ಸಮೃದ್ಧಿಯಾದ ಜಲೋತ್ಪತ್ತಿ ಉಂಟುಮಾಡಿಕೊಡುವ ಕಾಮಗಾರಿಗಳ ವಿಷಯವು ಗವರ್ನಮೆಂಟಿನವರ ವಿಚಾರದಲ್ಲಿದೆ. ಕೋಲಾರಕ್ಕೂ ಬಂಗಾರ್‌ಪೇಟೆಗೂ ಜಲಧಾರದ ಕಾಮಗಾರಿ ಶೀಘ್ರದಲ್ಲಿಯೇ ಆಗಬಹುದು. ಬೆಂಗಳೂರು ಪೇಟೆಗೆ ಜಲಧಾರ ಕಲ್ಪಿಸತಕ್ಕ ಬಗ್ಗೆಯು ಕಂಟೋನ್ಮೆಂಟಿಗೆ ಒದಗಿಸಿರುವ ಜಲಧಾರ ಕಾಮಗಾರೀ ಆಗುವ ವಿಷಯ ಇಂಡಿಯಾ ಗವರ್ನಮೆಂಟಿನವರು ಕೈಸರಿ ಮಾಡುವ ವರಿನಿಗೂ ಅನಿವಾರ್ಯವಾಗಿ ನಿಲ್ಲಿಸಲ್ಪಟ್ಟಿದೆ.

೪೮. ವಿದ್ಯಾಭ್ಯಾಸದ ವಿಷಯ—ಕಳೆದ ವರುಷದಲ್ಲಿ ವಿದ್ಯಾಶಾಲೆಗಳ ಸಂಖ್ಯೆಯು ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಾಗಿರುವದು ನೋಡಿದರೆ ವಿದ್ಯಾಭಿವೃದ್ಧಿಯೂ ಖ್ಯಾತಿ ಸಮರ್ಪಕವಾಗಿದೆ. ಈ ವರ್ಷದಲ್ಲಿ ೧,೮೩೬ ಗವರ್ನಮೆಂಟ ವಿದ್ಯಾಶಾಲೆಗಳು, ಅವುಗಳಲ್ಲಿ ೫೭೯೦೦ ವಿದ್ಯಾರ್ಥಿಗಳು ಇದ್ದದಲ್ಲದೆ ಎಡ್ ಸಹಾಯದ್ರವ್ಯವನ್ನು ಹೊಂದಿದ ಸ್ಕೂಲುಗಳು ಅವುಗಳಲ್ಲಿ ೧೧,೪೯೩ ವಿದ್ಯಾರ್ಥಿಗಳು ಇದ್ದರು. ಗುಜಷ್ಟಾ ಸಾಲಿಗೂ ಈ ಸಾಲಿಗೂ ವಿತ್ಯಾಸವೇನಂದರೆ ಗವರ್ನಮೆಂಟ್ ವಿದ್ಯಾಶಾಲೆ ಸಂಖ್ಯೆಯಲ್ಲಿ ೧೮೦ ಜಾಸ್ತಿ ಅವುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ೬೩೦೦ ಜಾಸ್ತಿ ಸಹಾಯ ದ್ರವ್ಯವನ್ನು ಹೊಂದಿದ ಸ್ಕೂಲುಗಳ ಸಂಖ್ಯೆಯಲ್ಲಿ ೪೩ ಜಾಸ್ತಿ ಅಲ್ಲಿ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ೯೩೦ ಜಾಸ್ತೀ ಕಂಡುಬರುತ್ತೆ. ಸರ್ಕಾರಿ ಮತ್ತು ಸಹಾಯದ್ರವ್ಯವನ್ನು ಹೊಂದಿದ ವಿದ್ಯಾಶಾಲೆಗಳು ಶಿವಾಯಿ ೧೨೮೪ ಸಹಾಯವಿಲ್ಲದ ನಿದ್ಯಾಶಾಲೆಗಳಿದ್ದವು ಅವುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ೧೬೦೯೭ ಆಗಿತ್ತು. ಎಲ್ಲಾ ಸೇರಿ ಒಟ್ಟು ವಿದ್ಯಾಶಾಲೆಗಳು ೩೧೩೬ ವಿದ್ಯಾರ್ಥಿಗಳು ೮೫೦೪೮ ಆಯಿತು. ಇದರಿಂದ ನೋಡಿದರೆ ವಿದ್ಯಾಶಾಲೆಗೆ ಹೋಗತಕ್ಕ ವಯಸ್ಸುಳ್ಳಪುರುಷ ಪ್ರಜಾ ಸಂಖ್ಯೆಗೆ ನೋಡಿದಾ ೧೮೮ ಸ್ತ್ರೀಪ್ರಜಾ ಸಂಖ್ಯೆಗೆ ನೋಡಿದಾ ೩೩ರ ಆಯಿತೆ. ಮೈಸೂರಲ್ಲಿ ಶ್ರೀಮನ್ಮಹಾರಾಣಿಯವರ ಬಾಲಿಕಾ ಪಾಠಶಾಲೆಯಲ್ಲಿ ಯಥಾಪ್ರಕಾರ ಪ್ರಯಾಸವಾದ ಸ್ತ್ರೀವಿದ್ಯಾ ಪ್ರಚಾರ ವಿಷಯದಲ್ಲಿ ಶ್ಲಾಘ್ಯವಾದ ಉದ್ಯೋಗವು ನಡೆಯುತ್ತಲಿರುವದಲ್ಲದೆ ಪ್ರಜಾ ಸಮ್ಮತತ್ವ ಮತ್ತು ಕಾರ್ಯಕರಣ ಕ್ಷಮತ್ವ ವಿಷಯದಲ್ಲಿ ಸದರೀ ಪಾಠಶಾಲೆಯು ಯಶಸ್ಸು ಅವಿಚ್ಛಿನ್ನವಾಗಿದೆ.

೫೨. ಪುರಾತನ ಲಿಪ್ಯನ್ವೇಷಣ—ಕಳೆದ ಸಾಲಿನಲ್ಲಿ ೧,೫೦೦ ರ ಸಂಖ್ಯೆಗೆ ಹೆಚ್ಚಾಗಿ ಶಾಸನಗಳು ಶೋಧಿಸಲ್ಪಟ್ಟು ಯಥಾಸ್ಥಿತಿ ಪ್ರತಿ ನಕಲು ಮಾಡಲ್ಪಟ್ಟವು. ಅವುಗಳಲ್ಲಿ ವಿಶೇಷವಾಗಿ ಮನೋರಂಜಕವಾದದ್ದು ಯಾವವೆಂದರೆ, ಕದಂಬ ಮತ್ತು ಚಲುಕ್ಯ ರಾಜ್ಯಗಳ ಅರಸುಗಳಿಂದ ಕೊಡಲ್ಪಟ್ಟ ಶಾಸನಗಳಾಗಿವೆ. ಇನ್ನೂ ಮುಖ್ಯವಾಗಿ ಸೂಚಿಸತಕ್ಕದ್ದು ಯಾವದಂದರೆ, ನಿಸ್ಸಂದೇಹವಾಗಿ ಕ್ರಿಸ್ತಶಕದ ೨೫೦ ನೇ ಸಂವತ್ಸರದ್ದಾಗಿ ಕಾಣುವ ಶ್ರೀಪುರುಷ ಅಥವಾ ಪೃಥಿವೀ ಕೊಂಗಣೀ ಎಂಬವರ ಕಾಲದ ಗಂಗಾಶಾಸನವು ಈಗ ಕಂಡು ಹಿಡಿಯಲ್ಪಟ್ಟಿದೆ. ಈ ಮೂಲಕ ದಕ್ಷಿಣ ದೇಶದ ದೊಡ್ಡ ಜೈನರಾಜ ವಂಶವಾಗಿಯೇ ತಿಳಿಯಬೇಕಾದ ಅರಸುಗಳ ಸಂತತಿಯ ಕಾಲವನ್ನು ನಿಶ್ಚಯಿಸುವದರಲ್ಲಿ ದೊಡ್ಡ ಆಧಾರ ಸಿಕ್ಕಿದಂತಾಯಿತು. ಕಂಡು ಹಿಡಿಯಲ್ಪಟ್ಟ ಮತ್ತೊಂದು ಮುಖ್ಯ ವಿಷಯವೇನಂದರೆ, ಕುಮುಸಳ ರವರ ಆದಿಸ್ಥಾನವೆಂತ ಹೇಳಿಕೊಳ್ಳುವ ಶಶಿಪುರ ಅಥವಾ ಶಶಿಕಪುರ ಯೆಂಬ ಸ್ಥಳವು ಮೂಡಗೆರೆ ತಾಲ್ಲೂಕಿನಲ್ಲಿರುವ ಅಂಗಡೀ ಯೆಂಬ ಸ್ಥಳವೇ ಆಗಿರುತ್ತೆಂತ ಕಂಡು ಹಿಡಿಯಲ್ಪಟ್ಟಿದೆ. ಕೋಲಾರ ಡಿಸ್ಟ್ರಿಕ್ಟಿನಲ್ಲಿ ಪ್ರಾಚೀನವಾದ ಮಹಾಬಲೀ ಅಥವಾ ಬಾಣ, ಪಲ್ಲವ ಅಥವಾ ನೊಳಂಬ, ಮತ್ತು ಚೋಳರಾಜರಿಂದ ಕೊಡಲ್ಪಟ್ಟ ಬಹು ಶಾಸನಗಳು ಕಂಡುಬಂದವು ವೈದುಂಬ ರ ಜರ ಕಾಲದ ಒಂದು ಶಾಸನಸಿಕ್ಕಿತು.

೫೩. ಶ್ರವಣ ಬೆಳಗುಳದ ಶಾಸನಗಳ ಪುಸ್ತಕವು ಪ್ರೂಫ್ ಕಾಪಿಸಲ್ಪಟ್ಟಿತು. ಅದರಲ್ಲಿ ಬಹು ಮನೋರಂಜಕವಾದ ಜೈನರ ಶಾಸನಗಳು ಬಹಳ ಇರುತ್ತವೆ. ಅವುಗಳ ಪೈಕಿ ಅನೇಕ ಪ್ರಸಿದ್ಧಗಳಾದ ಕವಿಗಳಿಂದ ರಚಿಸಲ್ಪಟ್ಟದ್ದಾಗಿದೆ. ಮೈಸೂರು ಡಿಸ್ಟ್ರಿಕ್ಟಿನ ಶಾಸನಗಳ ಪುಸ್ತಕವು ಛಾಪಖಾನೆಗೆ ಕೊಡಲ್ಪಟ್ಟಿರುತ್ತೆ.

೫೪. ವಿಸ್ತಾರವಾದ ಸೂಚಿಯುಳ್ಳ ಕನ್ನಡ ಭಾಷೆಯ ಪ್ರಾಚೀನ ಗ್ರಂಥಗಳು ಸಂಪಾದಿಸಲ್ಪಟ್ಟ ನಕಲ್ ಮಾಡಿಸುತ್ತಲಿದೆ. ಇದಕ್ಕೆ ಮೊದಲು [illegible] ಪಡಿಸಲ್ಪಡದೆ ಇದ್ದು ಈಗ ಸುಪ್ರಸಿದ್ಧವಾಗಿ ಬಾಹಿರ ಹಾಕಿಸಿರುವ ಕನ್ನಡ ಭಾಷೆಯ ಪ್ರಸಿದ್ಧ ಗ್ರಂಥಗಳು ಯಾವವೆಂದರೆ, ಭಟ್ಟಾಕಲಂಕದೇವನ ವ್ಯಾಕರಣ ಶಬ್ದಾನುಶಾಸನ ನಾಗವರ್ಮನ ಛಂದಸ್ಸು [illegible], ಈ ಗ್ರಂಥಗಳು.

೫೫. ಲೆಜಿಸ್ಲೇಶನ್ ಯಾನೆ ಶಾಸನ ವಿಷಯ—೧೮೮೯—೯೦ ನೇ ಸಾಲಿನಲ್ಲಿ ಎರಡು ರೆಗ್ಯುಲೇಷನ್‌ಗಳು ಯಾನೆ ಶಾಸನಗಳು ಶ್ರೀ ಮನ್ಮಹಾರಾಜ ರಾಜಾ ಸಾಹೇಬ್ ಬಹದ್ದೂರವರಿಂದ ಅಂಗೀಕರಿಸಲ್ಪಟ್ಟು ಜಾರಿಗೆ ತರಲ್ಪಟ್ಟವು. ಅವುಗಳಲ್ಲಿ ೧೮೯೦ ನೇ ಇಸವಿ ೧ ನೇ ನಂಬರ್ ರೆಗ್ಯುಲೇಷನ್ ಎಂಬುವದು ೭೧ ನೇ ಇಸವಿಯಲ್ಲಿ ಹುಟ್ಟಿದ ಮ್ಯುನಿಸಿಪಲ್ ರೆಗ್ಯುಲೇಷನ್ ಬಾಲಾಪತಿಗೋಸ್ಕರ ಹುಟ್ಟಿದ್ದಾಗಿ ಇದೆ. ೧೮೯೦ ನೇ ಇಸವಿ ೧೧ ನೇ ನಂಬರ ರೆಗ್ಯುಲೇಷನ್ ಎಂಬವದು ೧೮೮೪ ನೇ ಇಸವಿ ಬಾಬತು ಮೈಸೂರು ಚೀಫ್ ಕೋರ್ಟ್ ರೆಗ್ಯುಲೇಷನ್ ಬದಲಾವಣೆ ಬಗ್ಗೆ ಹುಟ್ಟಿದ್ದಾಗಿದೆ.

೫೬. ಸದರೀ ಕಾನೂನುಗಳ ಪೈಕಿ ೨ ನೇದರ ಉದ್ದೇಶವು ಹೋದ ವರುಷದ ದಸರಾ ಉಪನ್ಯಾಸದಲ್ಲಿ ನಿಮ್ಮಗಳಿಗೆ ಸಂಪೂರ್ಣವಾಗಿ ವಿವರಿಸಲ್ಪಟ್ಟಿತು. ತದನುಸಾರವಾಗಿ ಬೆಂಗಳೂರಿನಲ್ಲಿ ಈಚೆಗೆ ಒಂದು ಡಿಸ್ಟ್ರಿಕ್ಟ್ ಕೋರ್ಟ್ ಸ್ಥಾಪಿಸಲ್ಪಟ್ಟಿತು. ಇದುವರಿಗೆ ನಂದೀದುರ್ಗ ಡಿವಿಜನ್ ಬಾಬತು ಡಿಸ್ಟ್ರಿಕ್ಟುಗಳ ಮೇಲೆ ಚೀಫ್ ಕೋರ್ಟಿನವರು ಸಿವಿಲ್ ಮತ್ತು ಕ್ರಿಮಿನಲ್ ಕೇಸುಗಳಲ್ಲಿ ಯಾವ ಅಧಿಕಾರವನ್ನು ಚಲಾಯಿಸುತ್ತಾ ಇದ್ದರೋ ಆ ಅಧಿಕಾರವು ಸದರೀ ಕೋರ್ಟಿಗೆ ವರ್ಗ ಮಾಡಲ್ಪಟ್ಟಿತು. ಬೆಂಗಳೂರು ಸಿವಿಲ್ ಕೋರ್ಟಿನಲ್ಲಿ ಬಹಳ ಹೆಚ್ಚಾಗಿರುವ ಕೆಲಸಗಳಲ್ಲಿ ಕೆಲವು ಭಾಗವನ್ನ ಸದರೀ ಹೊಸದಾಗಿ ಏರ್ಪಡಿಸಿರುವ ಡಿಸ್ಟ್ರಿಕ್ಟ್ ಕೋರ್ಟಿನವರು ತೆಗೆದುಕೊಂಡು ಆ ಕೋರ್ಟಿನ ಕೆಲಸವನ್ನ ತಗ್ಗಿಸುವ ಏರ್ಪಾಡು ಮಾಡಿ ಇದೆ.

೫೭. ೧೮೮೮ ನೇ ಇಸವಿಯಲ್ಲಿ ಹುಟ್ಟಿದ ೪ ನೇ ನಂಬರ್ ರೆವಿನ್ಯೂ ಕೋರ್ಟ್ ರೆಗ್ಯುಲೇಷನ್‌ಗೆ ಅನುಗುಣವಾದ ರೂಲ್ಸುಗಳು ಏರ್ಪಡಿಸಲ್ಪಟ್ಟು ಪ್ರಸಿದ್ಧಿ ಮಾಡಲ್ಪಟ್ಟವೆ.

(ಇದರಶೇಷಮುಂದಿನವಾರಕ್ಕೆ)

Bangalore —Printed and published at the Karnatic Press, No 114, Srinivasa Mandiram Road, Pettah.—1890

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XVII.] BANGALORE—MONDAY, DECEMBER 22, 1890. [No. 51.

[ಸಂಪುಟ ೧೭.] ಬೆಂಗಳೂರು — ಸನ ೧೮೯೦ನೇ ಇಸವಿ ಡಿಸೆಂಬರ ೨೨ನೇ ತಾರೀಖು ಸೋಮವಾರ. [ಸಂಖ್ಯೆ ೫೧.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡ ಭಾಗಗಳಿಗೆ.

	ಮುಂಗಡವಾಗಿ	ಹಿಂದಿನಿಂದ
ಮುಂಗಡ ವರ್ಷಕ್ಕೆ	8—0—0	9—0—0
ಹಿಂದಿನಿಂದ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

ಮುಂಗಡ ವರ್ಷಕ್ಕೆ	4—0—0	5—0—0
ಹಿಂದಿನಿಂದ ,,	5—0—0	6—0—0

[illegible]

ಪ್ರಕಟನೆಯ ರಿವಾಜು.

ಒಂದು ಕಾಲಮಿನ ಪಕ್ತಿ ಒಂದಕ್ಕೆ ೦—೨—೦

ಎರಡನೇ ಸಲ ಪಕ್ತಿ ಒಂದಕ್ಕೆ ೦—೧—೦

[illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ

[illegible]

ಟಿ. ಟಿ. [illegible]

ಬೆಂಗಳೂರು, [illegible] 41ನೇ ನಂ. ಮನೆ

ADVERTISEMENTS

ನೋಟೀಸ್.

ಅದ್ಭುತವಾದ ಒಂದು ಔಷಧವು

[illegible]

Sole Agents for India

NAYLOR, SONS, GRIMES & CO,

Wholesale Depot, [illegible] St., Calcutta

[illegible]

ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರಿಗೆ ಸಿದ್ಧವಾಗಿವೆ. ಬೇಕಾದವರು ವಿ. ಪಿ. ಬಲಿಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು

	ಬೆಲೆ ರೂ. ಆ. ಪೈ
ಸಟೀಕಾ ವೈದ್ಯಸಾರ ಸಂಗ್ರಹ	೫ ೦ ೦
,, ಶಿವಗೀತೆ	[illegible]
,, ಶಿವಾನಂದಲಹರಿ	೦ ೪ ೦
,, ಕಾಳಿದಾಸನವೃತ್ತ	೧ ೨ ೦
,, ಮ ಹೂರ್ತದರ್ಪಣ	೦ ೧೨ ೦
,, ಬಾಲರಾಮಾಯಣ	೦ ೮ ೦
,, ಗೊಪಿಕಾ ಗೀತೆ	೦ ೧ ೬
,, ಚಾಣಕ್ಯ ನೀತಿ (ಸವ್ಯಾಖ್ಯತ)	೦ ೬ ೦
ವಿಷ್ಣು ಸಹಸ್ರನಾಮ ಪಕ್ಷರ	೦ ೫ ೦
ಸೂರ್ಯಸಹಸ್ರನಾಮ	೦ ೩ ೧
ಕೃಷ್ಣಕರ್ಣಾಮೃತ	೦ ೨ ೬
ತ್ರಿಕಾಂಡ ಅಮರ ಮಾಲಿ	೦ ೨ ೩
೧ ಕಾಂಡ	೦ ೧ ೦

ಕನ್ನಡ ಗ್ರಂಥಗಳು.

[illegible]	೩ ೦ ೦
[illegible]	೧ ೪ ೦
[illegible]	೧ ೪ ೦
[illegible]	೦ ೪ ೦
[illegible]	೦ ೪ ೦
[illegible]	೦ ೨ ೬
[illegible]	೦ ೨ ೬
[illegible]	೦ ೩ ೦
[illegible]	೦ ೨ ೦
[illegible]	೦ ೨ ೦
[illegible]	೦ ೨ ೬
[illegible]	೧ ೮ ೦
[illegible]	೦ ೧೨ ೦

ನವರತ್ನ ಕ್ಯಾಟಲಾಗ್ [illegible]

ನೋಟೀಸ್.

ಮೈಸೂರು ಮಹಾರಾಜರವರ ಅರಮನೆ ಯಂತ್ರದ ಕಾರ್ಖಾನೆ.

ನೋಟೀಸ್.

[illegible]

ನೋಟೀಸ್.

"ಬಂಗ್ಲೋ ಇಂಡಿಯನ್ ಪಾಕೆಟ ಡೈರಿ" ಎಂಬ ದಿನಚರಿ ಪುಸ್ತಕವನ್ನು ಲಾಯರುಗಳಿಗೂ, ಚಾಕರಿಗಳೂ ಮತ್ತು ಇತರ ಜನಗಳೂ ಬಹಳ ಉಪಯುಕ್ತವಾಗಿರುವಂತೆ, ಮುಖ್ಯವಾಗಿ ಬೇಕಾದ ಸಂಗತಿಗಳನ್ನು, ಇಂಗ್ಲೀಷ್ ತಿಂಗಳು, ತಾರೀಖು, ಮತ್ತು ಅದಕ್ಕೆ ಸರಿಯಾದ ನಮ್ಮ ಹಿಂದೂ ಸಂವತ್ಸರ, ತಿಂಗಳು, ತಿಥಿ, ವಾರ, ನಕ್ಷತ್ರ ಮುಂತಾದ್ದು ಸೇರಿಸಿ [illegible] ಅನುಕೂಲವಾಗಿರುವಂತೆ ಜೇಬಿನ [illegible] ಒಂದು ಪುಟಕ್ಕೆ ಒಂದೇ ತಾರೀಖು [illegible] ಕ್ರಯವು ವಿಕ್ರಯಕ್ಕೆ ಸಿದ್ಧವಾಗಿದೆ. [illegible] ಪುಸ್ತಕಗಳು ದೊರೆಯುತ್ತವೆ.

ಕ್ರಯ ಪ್ರತಿ ಒಂದು	[illegible]
[illegible]	೦ ೧ ೦
ರಿಜಿಸ್ಟರ್ [illegible]	೦ ೨ [illegible]

ಇನ್ನೂ [illegible] ಇತರ ಪುಸ್ತಕಗಳನ್ನು ಬಹಳ [illegible] ದೇಶಾಂತರ [illegible]

ಬೆಂಗಳೂರು, ೫ ೧೨ ೯೦. [illegible] ಚಂದ್ರಶೇಖರಯ್ಯ, [illegible]

ನೋಟೀಸ್.

ಇದರಿಂದ ಈ ಪತ್ರಿಕೆಯ [illegible] ಚಂದಾದಾರರಿಗೆ ತಿಳಿಸುವದೇನೆಂದರೆ —

ಈ ತಿಂಗಳ ಆಖೈರಿನಲ್ಲಿ ಈ ಸಂವತ್ಸರವು ಪೂರೈಸುತ್ತದೆ. [illegible]

[illegible]

[illegible]

Bangalore City Municipality
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಸನ್ ೧೮೯೦ನೇ ಇಸವಿ ಡಿಸಂಬರ್ ೨೭ನೇ ತಾರೀಖು ಶನಿವಾರ ಪ್ರಾತಃಕಾಲ ೮ ಘಂಟೆಗೆ ಸಿಟಿ ಮ್ಯುನಿಸಿಪಲ್ ಬೋರ್ಡಿನವರು ಸಭೆಸೇರುವಾಗ ಅವರ ಆಲೋಚನೆಗೆ ತರಲ್ಪಡುವವಿಷಯಗಳಯಾದಿಯು.

೧. ಸನ್೧೮೯೦ನೇ ಇಸವಿ ನವಂಬರ್ ಮಾಹೆಯ ಬಾಬತು ನಗದುಜಮಾಖರ್ಚು ಲೆಕ್ಕ ಮತ್ತು ಜನನ ಮರಣ ಲೆಕ್ಕಗಳು.

೨. ಮುಂದಿನ ಸಂವತ್ಸರದ ಬಡ್ಜೆಟ್ ಲೆಕ್ಕಕ್ಕೆ ಸೇರಿಸಬೇಕಾದ ಕಾಮಗಾರಿಗಳ ಪಟ್ಟಿ.

೩. ಸನ್ ೧೮೮೩—೮೪, ೧೮೮೭—೮೮, ೧೮೮೮—೮೯, ೧೮೮೯—೯೦, ನೇ ಸಾಲಿಗಳಲ್ಲಿ ಪ್ರಸವಾಶಿಪತ್ರಿ, ಬೌರಿಂಗ್ ಹಾಸ್ಪಿಟಲ್ ಮತ್ತು ಔಷಧಶಾಲೆ, ಪಶುವಿನ ಕಾಯಿಲೆ ವೈದ್ಯಶಾಲೆ, ಇವುಗಳಿಗೆ ಸರಬರಾಯಿ ಮಾಡಿದಯೂರೋಪ್ ದೇಶದ ಔಷಧಗಳ ಕ್ರಯದ ಬಗ್ಗೆಬಂದ ಬಿಲ್ಲುಗಳ ಮೊಬಲಗು ೩,೯೭೬-೧೩-೧೧ ರೂಪಾಯಿಗಳನ್ನು ಕೊಡುವಂತೆ ಸನ್ ೧೮೯೦ ನೇ ಇಸವಿ ನವಂಬರ್ ೨೩ ನೇತಾರೀಖುಯುಳ್ಳ ೯೬೦೭—೯L—೧೦೨೭—೩೦ ನೇ ನಂಬರ್ ಗವರ್ನಮೆಂಟಿಪ್ರೊಸೀಡಿಂಗ್ಸ್, ಮತ್ತು ೧೮೯೦ನೇ ಇಸವಿ ಡಿಸಂಬರ್ ೧೦ನೇ ವ್ರರ್‍ಯಂ೩೮೭೩ನೇನಂಬರ್‌ಕಂಟ್ರೋಲರವರಹುಕುಂ.

೪. ಸನ್೧೮೯೦ನೇ ಇಸವಿ ಮಾರ್ಚಿ ೩೧ನೇ ತಾರೀಖಿಗೆ ಪೂರ್ತಿಯಾದ ವರ್ಷ ಮಾಹೇ ಬಾಬತು ಆಡಿಟರ ರಿಪ್ರೋರ್ಟು ಮತ್ತು ಅದರಮೇಲೆ ಪ್ರೆಸಿಡೆಂಟರವರ ಷರಾ.

೫. ೧೮೯೦ನೇ ಇಸವಿ ನವಂಬರ್ ೧೨ನೇ ತಾರೀಖಿನಲ್ಲಿ ಕನ್ನಡ ಬಾಲಕರ ಪಾಠಶಾಲೆಯ ಹೆಡ್ ಮಾಸ್ಟರವರು ತಲಪ್ ಹಾಸ್ಟೀಮಾಡಬೇಕೆಂದು ಬರೆದುಕೊಂಡ ಅರ್ಜಿ.

೬. ಕೋಟೆಯಲ್ಲಿ ಪ್ರಿನ್ಸ್ ವಿಕ್ಟರವರರಸ್ತೆಗೆ ರೂಬರೂ ಇರುವ ತಮ್ಮ ಕಾಂಪೌಂಡ್‌ಗೋಡೆಗೆ ಉತ್ತರದಲ್ಲಿರುವ ಖಾಲೀಜಮೀನನ್ನು ಸೇರಿಸಿಕೊಳ್ಳುವದಕ್ಕೆ ಹುಕುಂ ಕೊಡಬೇಕೆಂದು ಕೋಲಾರ್ ಡೆಪ್ಯುಟಿಕಮಿಷನರ್ ಮಿ॥ ಮಾದಯ್ಯಾನವರ ತರಫೆ ಟಿಚ್ ರಾಮಯ್ಯಾನವರು ೧೮೯೦ನೇ ಇಸವಿ ನವಂಬರ್ ೨೭ನೇ ತಾರೀಖಿನಲ್ಲಿ ಬರೆದುಕೊಂಡಅರ್ಜಿ.

೭. ಹೊಸತಿಗಳರಪೇಟೆಯಲ್ಲಿ ಒಂದುಕಟ್ಟಡದ ನಿವೇಶನವು ಕೊಡಬೇಕೆಂದು ಮಿ॥ ಕುಪ್ಪುಸ್ವಾಮಿನಾಯುಡರವರು ಬರೆದುಕೊಂಡಅರ್ಜಿ, ಅದರಮೇಲಿನ ರಿಪ್ರೋರ್ಟು.

೮. ಅನ್ಯದೇಶಗಳಿಂದ ಆಮದಾಗುವ ಹೊಗೇಸೊಪ್ಪು ಮತ್ತು ಹೊಗೇ ಬತ್ತಿಗಳಮೇಲೆ ಮ್ಯುನಿಸಿಪಲ್‌ಕಂದಾಯವಸೂಲ್ಮಾಡುವವಿಷಯ.

೯. ಸಿಟಿ ಮಾರ್ಕೆಟಿ ಪೇಟೆನಲ್ಲಿ ಕೊಡಬೇಕಾದ ಇನಾಂಗಳು ಮತ್ತು ಅದಕ್ಕೆಸೇರಿದ ಇತರ ತಪಸೀಲುಗಳು.

೧೦. ಮೈಸೂರು ರಸ್ತೆಯಲ್ಲಿ ಮರದಕೋರಿಯಬಗ್ಗೆ ಉಪಯೋಗಿಸಿ ಕೊಳ್ಳಲ್ಪಟ್ಟಿರುವ ಮ್ಯುನಿಸಿಪಲ್ ನಿವೇಶನದಮೇಲೆ ಜಾಸ್ತೀ ಕರಿಗೆ ವಸೂಲ್ಮಾಡಬೇಕಾದ್ದಕ್ಕೆ ಸಂಬಂಧಪಟ್ಟಕಾಗದಪತ್ರಗಳು.

೧೧. ನೌಕರಿಗಿನಜಿಬ್ಬಂದಿಗೆ ಸಂಬಳಗಳನ್ನು ಜಾಸ್ತೀಮಾಡಬೇಕಾದ ವಿಷಯಕ್ಕೆ ಸಂಬಂಧಪಟ್ಟ ಕಾಗದಪತ್ರಗಳು.

ಬೆಂಗಳೂರು, ತಾ॥ ೧೭ ನೇ ಡಿಸಂಬರ್ ೧೮೯೦

SYED NASIRUDDIN,
President,
City Municipal Commission.

ನೋಟಿಸ್.

ಪ್ರತಿ ಸಂವತ್ಸರದ ಕ್ರಿಸ್‌ಮಸ್ ಹಬ್ಬಕ್ಕಾಗಿ ನಮ್ಮ ನೌಕರಮಾಣೀರಿಗೆ ರಜಾ ಕೊಡುವ ಪದ್ಧತಿಯಾಗಿರುವದರಿಂದ ಅದೇರೀತಿ ಈ ಸಲವೂ ಅವರಿಗೆ ರಜಾ ಕೊಡುವ ಬಗ್ಗೆ ಮಾಹೇ ಮುಂದಿನ ೨೯ ನೇ ತಾರೀಖ್ ಸೋಮವಾರ ಪತ್ರಿಕೆಯುನಿಲ್ಲಿಸಿರುವೆವು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, DECEMBER 22, 1890

೧೮೯೦ನೇ ಡಿಸಂಬರ್ ೨೨ನೇ ಸೋಮವಾರ

THE BHARATA DHARMA MAHAMANDALA

ಈಗ್ಯೆ ಎರಡುಮೂರು ವಾರಗಳಹಿಂದೆ ದೆಹಲೀಪಟ್ಟಣದಲ್ಲಿ ಸೇರಿದ್ದ ಭರತಧರ್ಮ ಮಹಾಮಂಡಲಿಯವರು ಮಾಡಿದ ನಿರ್ಣಯಗಳಲ್ಲೆಕೆ ಮೊದಲನೆಯದಾದ ಪ್ರಾಯಶ್ಚಿತ್ತಾದಿ ಕರ್ಮಾಚರಣೆಗಳ ವಿಷಯದಲ್ಲಿ ನಮ್ಮ ಅಭಿಪ್ರಾಯವಂ ಗತವಾರದಲ್ಲಿಯೇ ತಿಳಿಸಿದ್ದೇವಷ್ಟೆ. ಮೇಲ್ಕಂಡ ಮಂಡಲಿಯವರ ಇತರ ನಿರ್ಣಯಗಳ ಸ್ವರೂಪಪ್ರಯೋಜನಗಳಂಕುರಿತು ವಿಚಾರಿಸಲಾಗಿ ನಮಗೆ ತೋರುವದೇನಂದರೆ —

ಹಿಂದೂವೈವಾಹಿಕ ಕ್ರಮ ಪರಿಷ್ಕರಣವಿಷಯದಲ್ಲಿ ಅನ್ಯಜಾತಿಯವರಿಂದ ಮಾಡಲ್ಪಡುತ್ತಲಿರುವ ಪ್ರಯತ್ನಗಳನ್ನೂ, ಪರಿಣಯಕಾಲ ನಿಯಮವಂ ವೃದ್ಧಿಗೊಳಿಸುವದರಲ್ಲಿ ಗವರ್ನಮೆಂಟಿನವರ ಪ್ರವೇಶವನ್ನೂ ಮಹಾ ಮಂಡಲಿಯವರು ಅಂಗೀಕರಿಸಿದಂತೆ ಕಾಣಿಸಲಿಲ್ಲವು ಅಂತಃ ಅವರತಾತ್ಪರ್ಯವಂ ವಿಮರ್ಶಿಸಿನೋಡಲಾಗಿ ಕೆಲವು ಕಾರಣಗಳಿಂದ ಅದು ಯೋಗ್ಯವೆಂತಲೇ ಭಾವಿಸಬೇಕಾಗಿದೆ. ಪರಂತು ಹಿಂದೂಪತ್ರಿಕಾಲೇಖಕರು ಸೂಚಿಸುವಂತೆ ಶ್ಲಾಘ್ಯವಾದ ಮೇಲ್ಕಂಡ ತಂತಾ ಸಂದರ್ಭಗಳಲ್ಲಿ ವೈದಿಕರಾಗಿಯೂ ಪಂಡಿತರಾಗಿಯೂ ಇರುವ ಸದರೀ ಸಭಾಸದರು ಪ್ರಜೆಗಳ ಸಾಮಾಜಿಕ ಪ್ರಯುಕ್ತವಾದ ಲಾಭನಷ್ಟಗಳನ್ನೂ ಅವೆ ಕ್ಷೇತಾನಪೇಕ್ಷಿತಾಂಶಗಳನ್ನೂ ಸಾಧ್ಯವಾದಮಟ್ಟಿಗೆ ಸಭೆಯಲ್ಲಿ ತರ್ಕಶಾಸ್ತ್ರಾಧಾರಗಳೊಡನೆ ವಿಚಾರಪೂರ್ವಕ ಒಂದು ವ್ಯವಸ್ಥೆಯಂಮಾಡಿ ಅದಂ ವ್ಯವಹಾರಕೆಯೊಳು ತರದಿಕ್ಕೆ ಪ್ರಯತ್ನಪಟ್ಟಿರುವರಾದಗೆ ಅವರ ಅಭಿಪ್ರಾಯವನ್ನು ವರ್ತಮಾನಕಾಲದ ವಿವಿಧ ಮಾಪೇಕ್ಷೆಗಳು ಬಹಳ ಆದರದಿಂದಂಗೀಕರಿಸಿರುವರಲ್ಲದೆ ಸದರೀ ವಿದ್ವಾಂಸರ ಪಾಂಡಿತ್ಯಕ್ಕೆ ವಿಶೇಷ ಗೌರವವಂ ಕಲ್ಪಿಸಿರುವರು. ಪ್ರತಿಕ್ರಿಯಾ ವಿಧಾನವನ್ನರುಹದೆ ಈಗ ನೇಗೊಂಡಿರುವ ಬಾಧಕಾಂಶಗಳಂಕುರಿತು ಚಿಂತಿಸದೆ ಕೇವಲ ಅವುಗಳಉದ್ದೇಶಪ್ರಯತ್ನಗಳಂಮಾತ್ರಮುಚ್ಚುವೆಂದು ನಿರಾಕರಿಸಿದ್ದರಿಂದ ಪಿತದ್ವಿಷಯಕವಾದ ಸಭ್ಯರನಿರ್ಣಯಕ್ಕೆ ತೂಕವು ಕಡಮೆಯಾಗಬೇಕಾಯಿತು. ವಿವಾಹಕಾಲಗಳಲ್ಲಿ ಉಪಪತ್ತಿಗೆ ಮೀರಿ ಅತ್ಯಧಿಕವಾಗಿ ಧನವ್ಯಯಮಾಡುವವಾಡಿಕೆಯನ್ನು ಮತ್ತು ಕನ್ಯಾಶುಲ್ಕ ಮೊದಲಾದ ವಿಷಯಗಳಂಕುರಿತ ತೀರ್ಮಾನವು ಬಹಳಕೊಂಡಾಡತಕ್ಕದ್ದಾಗಿರುತಿದೆ. ಆದರೆ ಈಭಾಗದಲ್ಲಿ ವೈದಿಕರ ಪ್ರಯೋಜನ ಕಡಮೆಮಾಡಲ್ಪಡಲಿಲ್ಲವೆಂದು ಹಿಂದೂಪತ್ರಿಕೆಯು ಅಭಿಪ್ರಾಯಪಡುತಿದೆ ಇ..ಈ ಮೊದಲನೆಯ ತೀರ್ಮಾನದವಿಷಯದಲ್ಲಿ ನಾವು ತಿಳಿಸಿರುವದೇ ಸಾಕಾದ ಉತ್ತರವಾಗಿರುತಿದೆ ಪ್ರಸಕ್ತವಿಷಯ ವಿಚಾರವು ಅಂಧಪರಂಪರೆಯಾಗಿ ಪ್ರತಿಮನುಷ್ಯನಿಂದಲೂ ಅಂಗೀಕರಿಸಲ್ಪಟ್ಟದ್ದಾಗಿರುತಿದೆ. ಎಂತಾ ಸಂದರ್ಭಗಳಲ್ಲಿ ಪುರುಷನಿಗೆ ವಿವಾಹವು ಆವಶ್ಯಕವೆಂದು ಕಂಡುಬರುತಿದೆಯೋ, ಯಾವ ಸಮಯಗಳಲ್ಲಿ ವಯಃಪರಿಮಾಣವನ್ನತಿಕ್ರಮಿಸಿ ಪುನರ್ವಿವಾಹಮಾಡಿಕೊಳ್ಳಬೇಕಾದ ನಿರ್ಬಂಧವು ಪ್ರಾಪ್ತವಾಗುತಿದೆಯೋ, ಎಂತವನಿಗೆ ಅಧಿಕವಾಗಿಯಾದರೂ ಧನವ್ಯಯಮಾಡಿ ವಿವಾಹಿತನಾಗಬೇಕೆಂಬ ಆವಶ್ಯಕತೆಯಿರುತಿದೆಯೋ, ಯಾವ ತರವವರಿಗೆ ವಿವಾಹಾದಿ ವಿಶೇಷ ಸಂದರ್ಭಗಳಲ್ಲಿ ಇಷ್ಟಮಿತ್ರರನ್ನು ಆಹ್ವಾನಪೂರ್ವಕ ಸತ್ಕರಿಸಿ ಗೌರವಿಸುವದಲ್ಲದೆ ಭೂತ ತೃಪ್ತಿಪಡಿಸಬೇಕೆಂಬ ತಾತ್ಪರ್ಯವುಂಟಾಗಿರುತಿದೆಯೋ, ಯಾವಸ್ಥಿತಿಯಲ್ಲಿರತಕ್ಕವರು ಸಾಧಾರಣವಾಗಿ ಕನ್ಯೆಗೆ ಶುಲ್ಕವನ್ನು ವಿಶೇಷತಃ ಅಪೇಕ್ಷಿಸುತ್ತಾರೆಯೋ, ಯಾವ ಉದ್ದೇಶದೊಡನೆ ಕನ್ಯೆಯ ತಾಯಿತಂದೆಗಳು ಮೊದಲೇ ಆಭರಣಕ್ಕಾಗಿ ವರನಕಡೆಯಿಂದ ಧನವನ್ನಪೇಕ್ಷಿಸುತ್ತಾರೆಯೋ, ಯಾವರೀತಿಯಿಂದ ವಿವಾಹವ್ಯಯವನ್ನು ತಗ್ಗಿಸಲಿಕ್ಕೆಸಾಧ್ಯವಾಗುವದೋ ಇಂಥವಿಧ ಖರ್ಚುಗಳನ್ನೆಲ್ಲ ಕಳೆದು ಶುದ್ಧ ವೈದಿಕಾಂಗಳಾದ ಕರ್ಮಭಾಗಕ್ಕೆಮಾತ್ರ ಯೆಷ್ಟರಮಟ್ಟಿಗೆ ದ್ರವ್ಯ ವ್ಯಯವಾಗುತಿದೆಯೋ, ಪರಿಗ್ರಹಾರ್ಹತ್ವೇನ ಭಾವಿಸಲ್ಪಟ್ಟಿರುವ ಯೂರೋಪಿಯರ್ ಮುಸಲ್ಮಾನ್ ವಗೈರೆ ಅನ್ಯಜಾತಿಯವರಲ್ಲಿ ವಿವಾಹಕಾಲಗಳೊಳು ಯೆಷ್ಟರಮಟ್ಟಿಗೆ ಖರ್ಚಾಗುತಿದೆಯೋ ವಸ್ತ್ರಾಲಂಕಾರಾದಿಗಳಿಗಾಗಿಯೂ ಭೋಜ್ಯದಾನಾದಿಗಳಿಗಾಗಿಯೂ ದಾಂಪತ್ಯಾಯಿಪ್ರಕಾರ ನಮ್ಮಲ್ಲಿಯೂ ಅವರಲ್ಲಿಯು ಸಹ ಎಷ್ಟರಮೊಬಲಗು ಖರ್ಚಾಗುತಿದೆಯೋ, ಇವು ಮೊದಲಾದ ವಿಷಯಗಳಂಕುರಿತು ಉಪಶಾಂತರಾಗಿ ವಿಚಾರಮಾಡಿ ಅದರವರ್ತಮಾನವಂ ತಿಳಿಸಿದವರುಮಾತ್ರ ಒಬ್ಬರೂ ನಮ್ಮದೃಷ್ಟಿಗೆ ಬೀಳಲಿಲ್ಲವು. ಒಬ್ಬನೇಒಂದುಮಾತಿಯಲ್ಲಿ ಯಾವದನ್ನಾದರು ತಿಳಿಸಿದರೆ ಅದನ್ನೇಯೆಲ್ಲರೂ ಅನುವಾದಮಾಡುತ ಚಪ್ಪಾಳೆತಟ್ಟುತಲಿರುವದು ನಮ್ಮವರಿಗೆ ಸಹಜಗುಣವಾಗಿರುತಿದೆ ಸ್ವಕರ್ತೃತ್ವಶಕ್ತಿ ಒಂದುಮಾತ್ರ ಹಿಂದೂಗಳಿಗೀಗ ನಷ್ಟವಾದುತೆಯೊರತು ಅನುಕರಣಶಕ್ತಿಯಲ್ಲಿ ಯಾವ ಜನಾಂಗದವರೂ ಅವರಂಮೀರಲಾರರೆಂದು ಇಂಗ್ಲಿಷನವರು ತಿಳಿಸುವದಕ್ಕಾಗಿ ನಾವು ಅನುದೂಧಾನ ಪಡಬೇಕಾದ ಆವಶ್ಯಕತೆ ಯಾವದೂ ಕಾಣಿಸಲಿಲ್ಲವು ಈ ವಿಚಾರವಂತಿರಲಿ ಇನ್ನು ಸಭ್ಯರ ನಾಲ್ಕನೆಯ ತೀರ್ಮಾನವಾದ ಸಂಸ್ಕೃತ ವಿದ್ಯಾಭಿವೃದ್ಧಿ ವಿಷಯಕವಾದ ಅಭಿಪ್ರಾಯವು ಶ್ಲಾಘ್ಯವಾದುದಾಗಿರುತಿದೆ ತತ್ರಾಪಿ ಸಂಸ್ಕೃತಭಾಷೆಯು ವೇದಭಾಷೆಯೆಂತಲೂ ಲೌಕಿಕ ಅಥವಾ ವ್ಯಾವಹಾರಿಕಭಾಷೆಯೆಂತಲೂ ಯೆರಡುವಿಧವಾಗಿರುವದರಿಂದಲೂ, ಇವುಗಳನ್ನು ಯಾವ ಪ್ರಭೇದದವರು ಯಾವಕಡೆನಾಗಿ ಯೆಷ್ಟರಮಟ್ಟಿಗೆ ಲೌಕಿಕಸುಖಕ್ಕೆ ಲೋಪವಿಲ್ಲದಂತೆ ಅಭ್ಯಾಸ ಮಾಡಬಹುದೋ ಅದಂಕುರಿತು ಸ್ವಲ್ಪವಾದರು ಆಲೋಚಿಸಿದಂತೆ ತೋರಲಿಲ್ಲವು ಇದಲ್ಲದೆ ಜನರ ಮತಸಂಬಂಧಗಳಾದ ಆಚಾರವ್ಯವಹಾರಾದಿಗಳಂಕುರಿತ ಅರ್ಹತೆಯನ್ನೂ ಸ್ವಾತಂತ್ರ್ಯವನ್ನೂ ಬಾಧ್ಯತೆಯನ್ನೂ ಕಾಪಾಡಬೇಕೆಂಬ ಸಭ್ಯರ ತಾತ್ಪರ್ಯವು ಅಧುನಿಕ ವೈಲಕ್ಷಣ್ಯಾಭಿಲಾಷಿಗಳಾದವರನೇಕರಿಗೆ ಶ್ರಾವ್ಯವಾಗಿರಲಾರದು. ಅದು ಹ್ಯಾಗಂದರೆ—ಈವಿಷಯದಲ್ಲಿ ಅಧುನಿಕರ ಪ್ರತಿನಿಧಿ ರೂಪವಾಗಿ ಏರ್ಪಟ್ಟಿರುವ ಹಿಂದೂ ಪತ್ರಿಕಾ ಲೇಖಕರು ಅಭಿಪ್ರಾಯ ಪಡುವದೇನಂದರೆ,—ಮಹಾ ಮಂಡಲಿಯವರು ಕರ್ಮಗಳ ಸಂಖ್ಯೆಯನ್ನೂ ಗಯಾದಿಗಳಗಳು ವಸೂಲ್ಮಾಡುತಂತಾ ಸುಲಿಗೆ ರೂಪವಾದ ಅತ್ಯಧಿಕ ದಕ್ಷಿಣಾಪ್ರಥವನ್ನೂ ತಗ್ಗಿಸಿ ಕರ್ಮಗಳನ್ನು ಸುಲಭಪಡಿಸಿರುವರಾದರೆ, ಹಿಂದೂಮತದ ಉತ್ತಮ ಪ್ರಯೋಜನವಂಕುರಿತು ಚಿಂತಿಸಿದವಾಗಿರುವರು. ಹಿಂದೂಮತದ ಮುಖ್ಯಸಿದ್ಧಾಂತದಲ್ಲಿ ಬೋಧಿಸುವಂತಃ ಶುದ್ಧವಾದ ಮತ್ತು ಪ್ರಸಿದ್ಧವಾದ ಪ್ರಸ್ತಯಕ್ಕೆ ಇದುವರಿವಿಗೆ ಅಪ್ರತೀಕಾರವಾದ ನಷ್ಟ ವುಂಟುಮಾಡಲ್ಪಟ್ಟಿರುತಿದೆ ಮೋಸವೂ ಕಾಪಟ್ಯವೂ ದಿನೇದಿನೇ ತೀವ್ರವಾಗಿ ಅಭಿವೃದ್ಧಿಯನ್ನೈದುತಬರುತಲಿವೆ ಕರ್ಮಬಾಹುಳ್ಯವೂ, ನಷ್ಟಗಳಾದ ಅವುಗಳ ಪೂರ್ವೋದ್ದೇಶಗಳೂ, ಪ್ರಜೆಗಳ ಪರಸ್ಪರ ಸುರಾಗವಂ ಸಂಕುಚಿತಪಡಿಸಿದವಲ್ಲದೆ ಸಾಮಾನ್ಯವಾಗಿ ಮನುಷಕೋಟಿಗೆ ಅಪೇಕ್ಷಿತಾಂಶಗಳಾಗಿರತಕ್ಕವುಗಳಲ್ಲಿ ಅವರಿಗೆ ದೃಷ್ಟಿಮಾಂದ್ಯವನ್ನುಂಟುಮಾಡಿ, ಮತಪ್ರಭೇದಗಳನ್ನು ವೃದ್ಧಿಗೊಳಿಸಿ, ಸಾಮುದಾಯಕವಾದ ಪ್ರಯೋಜನಕ್ಕಾಗಿ ಸ್ವಸುಖ ಪರಿತ್ಯಾಗ ಪ್ರವೃತ್ತಿಯಂ ಹಿಂದೂಗಳಿಗೆ ಕುದ್ದಾಂಗವಾಗಿ ಹೋಗಲಾಡಿಸಿದವು. ವಿಶಿಷ್ಟ ಕರ್ಮಗಳ ಮತ್ತು ತತ್ಪ್ರಯುಕ್ತಗಳಾದ ಪ್ರಾಯಶ್ಚಿತ್ತಗಳ ಪ್ರಾಧಾನ್ಯತೆಯನ್ನರುಹುವದಕ್ಕಾಗಿ ಪ್ರತ್ಯೇಕ ಸಭೆಯೊಂದು ಆವಶ್ಯಕವಾಗಿಲ್ಲವು ಇದಕ್ಕೆ ಬದಲಾಗಿ, ಸಮ್ಮತಿಯಾನವಂ ಕುರಿತು ಶಾಸ್ತ್ರ ಪ್ರಮಾಣಗಳೊಡನೆ ವಿಚಾರ ಮಾಡಿರುವರಾದರೆ ಪ್ರಯೋಜನಕರವಾಗಿರುತಲಿತ್ತು.

WOMEN IN ANCIENT INDIA.
ಆರ್ಯಮಹಿಳೆಯರ ಪ್ರಾಚೀನಾವಸ್ಥಾ ನಿರೂಪಣವು.

No VI

ಪೌರಾಣಿಕಾವಸ್ಥೆಯಲ್ಲಿ ಬ್ರಾಹ್ಮಣನು ನಾಲ್ಕುವರ್ಣದವರಲ್ಲಿಯೂ ಕ್ರಮವಾಗಿ ನಾಲ್ಕುಜನ ಭಾರ್ಯೆಯರನ್ನೂ, ಕ್ಷತ್ರಿಯರು ಇತರ ಮೂರುವರ್ಣದಲ್ಲಿ ಮೂವರು ಭಾರ್ಯೆಯರನ್ನೂ, ವೈಶ್ಯರು ಕಡೇ ಎರಡು ವರ್ಣದಲ್ಲಿ ಇಬ್ಬರು ಭಾರ್ಯೆಯರನ್ನೂ, ಶೂದ್ರರುಸವರ್ಣದ ವರ್ಣದವಳಾದ ಒಬ್ಬ ಭಾರ್ಯೆಯನ್ನೂ ಪರಿಗ್ರಹಿಸ ಬಹುದೆಂಬದಾಗಿ ಆಚಾರವೇರ್ಪಟ್ಟಿತು. ಈವಿಷಯದಲ್ಲಿಗೌತಮ ಪರಾಶರ, ಯಾಜ್ಞವಲ್ಕ್ಯ, ಆಪಸ್ತಂಭ,ವಿಷ್ಣು, ಬೋಧಾಯನಾದಿ ಶ್ರುತಿಗಳನ್ನು ನೋಡಿದರೆ ಸ್ಪಷ್ಟವಾಗಿ ವ್ಯಕ್ತವಾಗುವದು. ಮೇಲೆ ಕಂಡ ನಿರ್ಬಂಧವು ದೇವಯಾನಿಯ ವಿಷಯದಲ್ಲಿ ಮಾತ್ರ ಅನ್ವಯಿಸದೆಹೋಯಿತು. ಏತಕ್ಕಂದರೆ, ಅಸುರಗುರುವಾದ ಶುಕ್ರಾಚಾರ್ಯರಲ್ಲಿ ಬೃಹಸ್ಪತ್ಯಾಚಾರ್ಯರ ಪುತ್ರನಾದ ಕಚನೆಂಬವನು ಸಂಜೀವಿನೀ ವಿದ್ಯೆಯನ್ನಭ್ಯಸಿಸುವದಕ್ಕಾಗಿ ಬಹುಕಾಲ ಗುರುಕುಲವಾಸವಂ ಮಾಡುತಲಿರುವಲ್ಲಿ ಗುರುಪುತ್ರಿಯಾದ ದೇವಯಾನಿಯು ಆತನಂ ಮೋಹಿಸಲಾಗಿ ಅದಕ್ಕಾತನೊಡಂಬಡದೆ ನಿಷೇಧಿಸಲು, ನೀನು ಕಲಿತ ವಿದ್ಯೆಯು ನಿನಗೆ ಪ್ರಯೋಜನವಾಗದೆ ಹೋಗಲೆಂದು ಶಾಪವನ್ನಿತ್ತಳು. ಆಗ ಕಚನು ನಿನ್ನ ಪತಿಯುಬ್ರಾಹ್ಮಣನಲ್ಲದೆ ಹೋಗಲೆಂದು ಪುನಃ ಶಪಿಸಿದನು. ಹೀಗಿರುವಲ್ಲಿ ರಾಜಪುತ್ರಿಯಾದ ಶರ್ಮಿಷ್ಠೆಯೊಂದು ದಿನ ತನ್ನ ಕೆಳದಿಯರೊಡನೆ ಉದ್ಯಾನವನದಲ್ಲಿಜಲಕ್ರೀಡೆಯನ್ನಾಡುತಲಿರುವಾಗ್ಯೆ ಆಕೆಯುಬಿಟ್ಟವಸ್ತ್ರವನ್ನರಿಯದೆ ದೇವಯಾನಿಯು ಧರಿಸಿಕೊಂಡದಕ್ಕಾಗಿ ಅವಳ ಮೇಲೆ ಆಗ್ರಹ ಗೊಂಡು, ಭಿಕ್ಷುಕನಾದ ಇವಳ ತಂದೆಯು ನನ್ನ ಜನಕನಲ್ಲಿ ಯಾಚಿಸಿ ಜೀವಿಸುತಲಿದ್ದಾಗ್ಯೂ ಇವಳು ತನ್ನ ಸ್ಥಿತಿಯನ್ನರಿಯದೆ ಮತ್ತತೆಯಿಂದ ನನ್ನ ವಸ್ತ್ರವಂ ಧರಿಸಿರುತಾಳಾಗಿ ಇವಳಂ ಒಂದು ಕೂಪದಲ್ಲಿ ನಿರ್ದಾಕ್ಷಿಣ್ಯವಾಗಿ ತಳ್ಳಿಬಿಡಿರೆಂದು ಇತರ ಸಖಿಯರಿಗೆ ಆಜ್ಞಾಪಿಸಿದಳು. ಅವರದೇರೀತಿ ಮಾಡಲು, ಯಯಾತಿ ಮಹಾರಾಜನು ಆ ಮಾರ್ಗವಾಗಿ ಮೃಗಯಾ ವಿನೋದಾರ್ಥ ಸಂಚಾರ ಹೋಗುತಲಿರುವಾಗ ದೇವಯಾನಿಯ ಆರ್ತಧ್ವನಿಯಂಕೇಳಿ ತನ್ನ ಉತ್ತರೀಯವನ್ನಿತ್ತು ಧರಿಸಹೇಳಿ ದಕ್ಷಿಣ ಹಸ್ತಾವಲಂಬದಿಂ ಅವಳನ್ನು ಮೇಲಕ್ಕೆ ಸೆಳೆದುಕೊಂಡನು. ಆಗ ದೇವಯಾನಿಯು ಯಯಾತಿಯಂ ಕುರಿತು ನೀನು ಪಾಣಿಗ್ರಹಣ ಮಾಡಿ ರಕ್ಷಿಸಿದಿಯಾಗಿ ನಿನ್ನನ್ನೇ ಪತಿಯಾಗಿವರಿಸುತ್ತೇನೆ ದೈವಯೋಗ ಪ್ರತಪ್ಪಲಾರದು, ಪುರುಷ ವಾಕ್ಯವು ಅಸಿದ್ಧವಲ್ಲವು, ಆದಕಾರಣ ನಾನು ಅನ್ಯರನ್ನೆಂದಿಗೂವರಿಸಲಾರನೆಂದು ಹೇಳಿ ತನ್ನ ಪೂರ್ವವೃತ್ತಾಂತಗಳನ್ನೆಲ್ಲ ತಿಳಿಸಿದಳು. ಈಸಂದರ್ಭದಲ್ಲಿ ಶುಕ್ರಾಚಾರ್ಯರು ಕ್ಷತ್ರಿಯ ಪರಿಗ್ರಹಕೊಪ್ಪದೆ ಬಹಳವಾಗಿ ತಡೆದರು. ಅದಾಗ್ಯೂ ದೇವಯಾನಿಯ ದೃಢಪ್ರತಿಜ್ಞೆಯನ್ನೂ ಉತ್ತರೋತ್ತರ ಪ್ರಾಪ್ತವಾಗಬಹುದಾದ ಅನರ್ಥಗಳನ್ನೂ ಪರ್ಯಾಲೋಚಿಸಿ ವಿವಾಹಕ್ಕೆ ಅನುಜ್ಞೆಯಂ ಕೊಟ್ಟು ಇಂತಾವಿವಾಹವು ಯೆಂದಿಗೂನಡೆಯದೆ ಹೋಗಲೆಂದು ಶಾಪವನ್ನಿತ್ತರು ಪ್ರಕೃತ ದಶೆಯಲ್ಲಿ ಅದರ ಪೂರ್ವಾವಸ್ಥೆಯೊಳಿದ್ದಂತೆಯೇ ವಿವಾಹಗಳು, ಮುಖ್ಯವಾಗಿ ಬ್ರಾಹ್ಮಣರಲ್ಲಿ ಕೇವಲ ಐಹಿಕ ಸುಖಾರ್ಥವಲ್ಲದೆ ಆಮುಷ್ಮಿಕೋದ್ದೇಶದಿಂ ನಡೆಸಲ್ಪಡತಕ್ಕವಾಗಿದ್ದವು. ಮನುಪುತ್ರಿಯಾದ ದೇವಹೂತಿಯು ಬ್ರಹ್ಮ ಪುತ್ರನಾದ ಕರ್ದಮ ಪ್ರಜಾಪತಿಯನ್ನು ವರಿಸಲು, ಅದಕ್ಕಾತನು, ತನಗೊಬ್ಬ ಪುತ್ರನುದ್ಭವಿಸಿದ ಕೂಡಲೆ ಸನ್ಯಾಸಾಶ್ರಮವನ್ನಾಶ್ರಯಿಸಲಿಕ್ಕೆ ಸಮ್ಮತಿಸಿದರೆ ವಿವಾಹ ಮಾಡಿಕೊಳ್ಳುತ್ತೇನೆಂದು ಹೇಳಿದ

Bangalore City Municipality.

ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿ.

ಸನ್ ೧೮೯೦ನೇ ಇಸವಿ ಡಿಸೆಂಬರ್ ೨೭ನೇ ತಾರೀಖು ಶನಿವಾರ ಪ್ರಾತಃಕಾಲ ೮ ಘಂಟೆಗೆ ಸಿಟಿ ಮ್ಯೂನಿಸಿಪಲ್ ಬೋರ್ಡಿನವರು ಸಭೆಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳಯಾದಾವು.

೧. ಸನ್ ೧೮೯೦ನೇ ಇಸವಿ ನವಂಬರ್ ಮಾಹೆಯ ಬಾಬತ್ತು ನಗದುಜಮಾಖರ್ಚು ಲೆಕ್ಕ ಮತ್ತು ಜನನ ಮರಣ ಲೆಕ್ಕಗಳು.

೨. ಮುಂದಿನ ಸಂವತ್ಸರದ ಬಡ್ಜೆಟ್ ಲೆಕ್ಕಕ್ಕೆ ಸೇರಿಸಬೇಕಾದ ಕಾಮಗಾರಿಗಳ ಪಟ್ಟಿ.

೩. ಸನ್ ೧೮೮೩—೮೪, ೧೮೮೭—೮೮, ೧೮೮೮—೮೯, ೧೮೮೯—೯೦, ನೇ ಸಾಲಿಗಳಲ್ಲಿ ಪ್ರಸವಾಶ್ರಮ, ಬೌರಿಂಗ್ ಹಾಸ್ಪಿಟಲ್ ಮತ್ತು ಔಷಧಶಾಲೆ, ಪಶುವಿನ ಶಾಖಾ ವೈದ್ಯಶಾಲೆ, ಇವುಗಳಿಗೆ ಸರಬರಾಯಿ ಮಾಡಿದ ಯೂರೋಪ್ ದೇಶದ ಔಷಧಗಳ ಕ್ರಯದ ಬಗ್ಯೆಬಂದ ಬಿಲ್ಲುಗಳ ಮೊಬಲಗು ೩,೯೭೩-೧೩-೧೧ ರೂಪಾಯಿಗಳನ್ನು ಕೊಡುವಂತೆ ಸನ್ ೧೮೯೦ ನೇ ಇಸವಿ ನವಂಬರ್ ೨೩ ನೇ ಮುಕರ್ರಮುಖ್ಯ ೯೬೦೩—೯೬—೧೨೨—೬೦ ನೇ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್, ಮತ್ತು ೧೮೯೦ನೇ ಇಸವಿ ಡಿಸೆಂಬರ್ ೧೦ನೇ ಪ್ರಕ್ಯಂ ೩೮೭೬ ನೇ ನಂಬರ್ ಕಂಟ್ರೋಲರವರ ಡಾಕೆಟ್

೪. ಸನ್ ೧೮೯೦ನೇ ಇಸವಿ ಮಾರ್ಚಿ ೩೧ನೇ ತಾರೀಖಿಗೆ ಪೂರ್ತಿಯಾದ ಛಪ್ ಮಾಹೆ ಬಾಬತ್ತು ಆಡಿಟರ ರಿಪೋರ್ಟ್ ಮತ್ತು ಅದರಮೇಲೆ ಪ್ರೆಸಿಡೆಂಟರವರ ಷರಾ.

೫. ೧೮೯೦ನೇ ಇಸವಿ ನವಂಬರ್ ೧೦ನೇ ತಾರೀಖಿನಲ್ಲಿ ಕನ್ನಡ ಬಾಲಕರ ಪಾಠಶಾಲೆಯ ಹೆಡ್ ಮಾಸ್ಟರವರು ತಲಬ್ ಜಾಸ್ತೀಮಾಡಬೇಕೆಂದು ಬರೆದುಕೊಂಡ ಅರ್ಜಿ.

೬. ಕೋಟೆಯಲ್ಲಿ ಪ್ರಿನ್ಸ್ ವಿಕ್ಟರವರ ರಸ್ತೆಗೆ ರೂಬರೂ ಇರುವ ತಮ್ಮ ಕಂಪೌಂಡ್ ಗೋಡೆಗೆ ಉತ್ತರದಲ್ಲಿರುವ ಖಾಲೀಜಮೀನನ್ನು ಸೇರಿಸಿಕೊಳ್ಳುವದಕ್ಕೆ ಹುಕುಂ ಕೊಡಬೇಕೆಂದು ಕೋಲಾರ್ ಡೆಪ್ಯುಟಿಕಮಿಷನರ್ ಮ॥ ಮಾಧಯ್ಯನವರ ತರಫೆ ಹೆಚ್ ರಾಮಯ್ಯನವರು ೧೮೯೦ನೇ ಇಸವಿ ನವಂಬರ್ ೨ನೇ ತಾರೀಖಿನಲ್ಲಿ ಬರೆದುಕೊಂಡ ಅರ್ಜಿ.

೭. ಹೊಸತಿಗಳರಪೇಟೆಯಲ್ಲಿ ಒಂದು ಕಟ್ಟಡದ ನಿವೇಶನವು ಕೊಡಬೇಕೆಂದು ಮ॥ ಕುಪ್ಪುಸ್ವಾಮಿನಾಯುಡುರವರು ಬರೆದುಕೊಂಡ ಅರ್ಜಿ, ಅದರಮೇಲಿನ ರಿಪೋರ್ಟ್.

೮. ಅನ್ಯದೇಶಗಳಿಂದ ಆಮದಾಗುವ ಹೊಗೆಸೊಪ್ಪು ಮತ್ತು ಹೊಗೆ ಬತ್ತಿಗಳಮೇಲೆ ಮ್ಯೂನಿಸಿಪಲ್ ಕಂದಾಯ ವಸೂಲ್ಮಾಡುವ ವಿಷಯ

೯. ಸಿಟಿ ಮಾರ್ಕೆಟ್ ಷೆಡ್ಡಿನಲ್ಲಿ ಕೊಡಬೇಕಾದ ಇನಾಂಗಳು ಮತ್ತು ಅದಕ್ಕೆ ಸೇರಿದ ಇತರ ತಫಸೀಲ್ ಗಳು.

೧೦. ಮೈಸೂರು ರಸ್ತೆಯಲ್ಲಿ ಮರದ ಕೋಠಿಯ ಬಗ್ಯೆ ಉಪಯೋಗಿಸಿ ಕೊಳ್ಳಲ್ಪಟ್ಟಿರುವ ಮ್ಯೂನಿಸಿಪಲ್ ನಿವೇಶನದಮೇಲೆ ಜಾಸ್ತೀ ತೆರಿಗೆ ವಸೂಲ್ಮಾಡಬೇಕಾದ್ದಕ್ಕೆ ಸಂಬಂಧಪಟ್ಟ ಕಾಗದಪತ್ರಗಳು.

೧೧. ಹೊರಗಿನ ಶಿಬ್ಬಂದಿಗೆ ಸಂಬಳಗಳನ್ನು ಬಡ್ತೀಮಾಡಬೇಕಾದ ವಿಷಯಕ್ಕೆ ಸಂಬಂಧಪಟ್ಟ ಕಾಗದಪತ್ರಗಳು.

ಬೆಂಗಳೂರು, ತಾ॥ ೨೨ ನೇ ಡಿಸೆಂಬರ್ ೧೮೯೦.

SYED NASIRUDDIN.
President,
City Municipal Commission.

ನೋಟಿಸ್.

ಪ್ರತಿ ಸಂವತ್ಸರದ ಕ್ರಿಸ್ಮಸ್ ಹಬ್ಬಕ್ಕಾಗಿ ನಮ್ಮ ನೌಕರಿಮಾಣೇರಿಗೆ ರಜಾ ಕೊಡುವ ಪದ್ಧತಿಯಾದವರಿಂದ ಅದೇರೀತಿ ಈ ಸಲವೂ ಅವರಿಗೆ ರಜಾ ಕೊಡುವ ಬಗ್ಯೆ ಮಾಹೆ ಮಜಕೂರ್ ೨೯ ನೇ ತಾರೀಖು ಸೋಮವಾರ ಪತ್ರಿಕೆಯುನಿಲ್ಲಿಸಿರುವೆವು.

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, DECEMBER 22, 1890.
೧೮೯೦ನೇ ಡಿಸೆಂಬರ್ ೨೨ನೇ ಸೋಮವಾರ.

THE BHARATA DHARMA MAHAMANDALA.

ಈಗ್ಯೆ ಎರಡುಮೂರು ವಾರಗಳಹಿಂದೆ ದೆಹಲೀಪಟ್ಟಣದಲ್ಲಿ ಸೇರಿದ್ದ ಭರತಧರ್ಮ ಮಹಾಮಂಡಲಿಯವರು ಮಾಡಿದ ನಿರ್ಣಯಗಳಲ್ಲೊಕ್ಕಿ ಮೊದಲನೆಯದಾದ ಪ್ರಾಯಶ್ಚಿತ್ತಾದಿ ಕರ್ಮಾಚರಣೆಗಳ ವಿಷಯದಲ್ಲಿ ನಮ್ಮ ಅಭಿಪ್ರಾಯವಂ ಗತವಾರದಲ್ಲಿಯೇ ತಿಳಿಸಿದ್ದೆವಷ್ಟೆ. ಮೇಲ್ಕಂಡ ಮಂಡಲಿಯವರ ಇತರ ನಿರ್ಣಯಗಳ ಸ್ವರೂಪ ಪ್ರಯೋಜನಗಳಂಕುರಿತು ವಿಚಾರಿಸಲಾಗಿ ನಮಗೆ ತೋರುವದೇನಂದರೆ,—

ಹಿಂದೂವೈವಾಹಿಕ ಕ್ರಮ ಪರಿಷ್ಕರಣವಿಷಯದಲ್ಲಿ ಅನ್ಯಜಾತಿಯವರಿಂದ ಮಾಡಲ್ಪಡುತಲಿರುವ ಪ್ರಯತ್ನಗಳನ್ನೂ, ಪರಿಣಯಕಾಲ ನಿಯಮವಂ ವೃದ್ಧಿಗೊಳಿಸುವದರಲ್ಲಿ ಗವರ್ನಮೆಂಟಿನವರ ಪ್ರವೇಶವನ್ನೂ ಮಹಾ ಮಂಡಲಿಯವರು ಅಂಗೀಕರಿಸಿದಂತೆ ಕಾಣಿಸಲಿಲ್ಲವು. ಅಂತಃ ಅವರತಾತ್ಪರ್ಯವಂ ವಿಮರ್ಶಿಸಿನೋಡಲಾಗಿ ಕೆಲವು ಕಾರಣಗಳಿಂದ ಅದು ಯೋಗ್ಯವೆಂತಲೇ ಭಾವಿಸಬೇಕಾಗಿದೆ. ಪರಂತು ಹಿಂದೂಪತ್ರಿಕಾಲೇಖಕರು ಸೂಚಿಸುವಂತೆ ಶ್ಲಾಘ್ಯವಾದ ಮೇಲ್ಕಂಡ ಸಂದರ್ಭಗಳಲ್ಲಿ ವೈದಿಕರಾಗಿಯೂ ಪಂಡಿತರಾಗಿಯೂ ಇರುವ ಸದರೀ ಸಭಾಸದರು ಪ್ರಜೆಗಳ ಸಾಮಾಜಿಕ ಪ್ರಯುಕ್ತವಾದ ಲಾಭನಷ್ಟಗಳನ್ನೂ ಅಪೇಕ್ಷಿತಾನಪೇಕ್ಷಿತಾಂಶಗಳನ್ನೂ ಸಾಧ್ಯವಾದಮಟ್ಟಿಗೆ ಸಭೆಯಲ್ಲಿ ತರ್ಕಶಾಸ್ತ್ರಾಧಾರಗಳೊಡನೆ ವಿಚಾರಪೂರ್ವಕ ಒಂದು ವ್ಯವಸ್ಥೆಯಂಮಾಡಿ ಅದಂ ವ್ಯವಹಾರದೊಳು ತರಲಿಕ್ಕೆ ಪ್ರಯತ್ನಪಟ್ಟಿರುವರಾದರೆ ಅವರ ಅಭಿಪ್ರಾಯವನ್ನು ವರ್ತಮಾನಕಾಲದ ವಿನಿಮಯಾಪೇಕ್ಷಿಗಳು ಬಹಳ ಆದರದಿಂದಂಗೀಕರಿಸಿರುವರಲ್ಲದೆ ಸದರೀ ವಿದ್ವಾಂಸರ ಪಾಂಡಿತ್ಯಕ್ಕೆ ವಿಶೇಷ ಗೌರವವಂ ಕಲ್ಪಿಸಿರುವರು. ಪ್ರತಿಕ್ರಿಯಾ ವಿಧಾನವನ್ನರಿಯದೆ ಈಗ ನೆಲೆಗೊಂಡಿರುವ ಬಾಧಕಾಂಶಗಳಂಕುರಿತು ಚಿಂತಿಸದೆ ಕೇವಲ ಅವುಗಳುದ್ದೇಶಪ್ರಯತ್ನಗಳಂಮಾತ್ರ ತುಚ್ಛವೆಂದು ನಿರಾಕರಿಸಿದ್ದರಿಂದ ಪಂಡಿತಪರಿಷತ್ಸಭ್ಯರನಿರ್ಣಯಕ್ಕೆ ಕೂಡ ಕಡಮೆಯಾಗಬೇಕಾಯಿತು. ವಿವಾಹಕಾಲಗಳಲ್ಲಿ ಉಪಪತ್ತಿಗೆ ಮೀರಿ ಅತ್ಯಧಿಕವಾಗಿ ಧನವ್ಯಯಮಾಡುವವಾಡಿಕೆಯನ್ನು ಮತ್ತು ಕನ್ಯಾಶುಲ್ಕ ಮೊದಲಾದ ವಿಷಯಗಳಂಕುರಿತ ತೀರ್ಮಾನವು ಬಹಳ ಕೊಂಡಾಡತಕ್ಕದ್ದಾಗಿರುತ್ತದೆ. ಆದರೆ ಈ ಭಾಗದಲ್ಲಿ ವೈದಿಕರ ಪ್ರಯೋಜನ ಕಡಮೆಮಾಡಲ್ಪಡಲಿಲ್ಲವೆಂದು ಹಿಂದೂಪತ್ರಿಕೆಯು ಅಭಿಪ್ರಾಯಪಡುತ್ತದೆ. ಇದು ಮೊದಲನೆಯ ತೀರ್ಮಾನದವಿಷಯದಲ್ಲಿ ನಾವು ತಿಳಿಸಿರುವದೇ ಸಾಕಾದ ಉತ್ತರವಾಗಿರುತ್ತದೆ. ಪ್ರಸಕ್ತವಿಷಯ ವಿಚಾರವು ಅಂಧಪರಂಪರೆಯಾಗಿ ಪ್ರತಿಮನುಷ್ಯನಿಂದಲೂ ಅಂಗೀಕರಿಸಲ್ಪಟ್ಟದ್ದಾಗಿರುತ್ತದೆ. ಎಂತಾ ಸಂದರ್ಭಗಳಲ್ಲಿ ಪುರುಷನಿಗೆ ವಿವಾಹವು ಆವಶ್ಯಕವೆಂದು ಕಂಡುಬರುತ್ತಿದೆಯೋ, ಯಾವ ಸಮಯಗಳಲ್ಲಿ ವಯಃಪರಿಮಾಣವನ್ನತಿಕ್ರಮಿಸಿ ಪುನರ್ವಿವಾಹವಮಾಡಿಕೊಳ್ಳಬೇಕಾದ ನಿರ್ಬಂಧವು ಪ್ರಾಪ್ತವಾಗುತ್ತಿದೆಯೋ, ಎಂತವನಿಗೆ ಅಧಿಕವಾಗಿಯಾದರೂ ಧನವ್ಯಯಮಾಡಿ ವಿವಾಹಿತನಾಗಬೇಕೆಂಬ ಆವಶ್ಯಕತೆಯಿರುತ್ತಿದೆಯೋ, ಯಾವ ತರದವರಿಗೆ ವಿವಾಹಾದಿ ವಿಶೇಷ ಸಂದರ್ಭಗಳಲ್ಲಿ ಇಷ್ಟಮಿತ್ರರನ್ನು ಆಹ್ವಾನಪೂರ್ವಕ ಸತ್ಕರಿಸಿ ಗೌರವಿಸುವದಲ್ಲದೆ ಭೂತತೃಪ್ತಿಪಡಿಸಬೇಕೆಂಬ ತಾತ್ಪರ್ಯವುಂಟಾಗಿರುತ್ತಿದೆಯೋ, ಯಾವಸ್ಥಿತಿಯುಳ್ಳಿರತಕ್ಕವರು ಸಾಧಾರಣವಾಗಿ ಕನ್ಯೆಗೆ ಶುಲ್ಕವನ್ನು ವಿಶೇಷತಃ ಅಪೇಕ್ಷಿಸುತ್ತಾರೆಯೋ, ಯಾವ ಉದ್ದೇಶದೊಡನೆ ಕನ್ಯೆಯ ತಾಯಿತಂದೆಗಳು ಮೊದಲೇ ಆಭರಣಕ್ಕಾಗಿ ವರನಕಡೆಯಿಂದ ಧನವನ್ನಪೇಕ್ಷಿಸುತ್ತಾರೆಯೋ, ಯಾವರೂಪದಿಂ ವಿವಾಹವ್ಯಯವನ್ನು ತಗ್ಗಿಸಲಿಕ್ಕೆಸಾಧ್ಯವಾಗುವದೋ ಇತರವಿಧ ಖರ್ಚುಗಳನ್ನೆಲ್ಲ ತೊರೆದು ಶುದ್ಧವೈದಿಕಾಂಗಳಾದ ಕರ್ಮಭಾಗಕ್ಕೆ ಮಾತ್ರ ಯೆಷ್ಟರಮಟ್ಟಿಗೆ ದ್ರವ್ಯ ವ್ಯಯವಾಗುತ್ತಿದೆಯೋ, ಪರಿಗ್ರಹಾರ್ಹತ್ವೇನ ಭಾವಿಸಲ್ಪಟ್ಟಿರುವ ಯೂರೋಪಿಯನ್ ಮುಸಲ್ಮಾನ್ ವಗೈರೆ ಅನ್ಯಜಾತಿಯವರಲ್ಲಿ ವಿವಾಹಕಾಲಗಳೊಳು ಯೆಷ್ಟರಮಟ್ಟಿಗೆ ಖರ್ಚಾಗುತ್ತಿದೆಯೋ, ವಸ್ತ್ರಾಲಂಕಾರಾದಿಗಳಿಗಾಗಿಯೂ ಭೋಜ್ಯಪಾನಾದಿಗಳಿಗಾಗಿಯೂ ದಾಂಪತ್ಯಪ್ರಕಾರ ನಮ್ಮಲ್ಲಿಯೂ ಅವರಲ್ಲಿಯೂ ಸಮ ಎಷ್ಟರಮೊಬಲಗು ಖರ್ಚಾಗುತ್ತಿದೆಯೋ, ಇವು ಮೊದಲಾದ ವಿಷಯಗಳಂಕುರಿತು ಉಪಶಾಂತರಾಗಿ ವಿಚಾರಮಾಡಿ ಅದರಪರ್ಯವಸಾನವಂ ತಿಳಿಸಿದವರುಮಾತ್ರ ಒಬ್ಬರೂ ನಮ್ಮದೃಷ್ಟಿಗೆ ಬೀಳಲಿಲ್ಲವು. ಒಬ್ಬನೊಂದುಮೂಲೆಯಲ್ಲಿ ಯಾವದನ್ನಾದರು ತಿಳಿಸಿದರೆ ಅದನ್ನೇ ಯೆಲ್ಲರೂ ಅನುವಾದಮಾಡುತ ತಪ್ಪಾಳೆತಟ್ಟುತಲಿರುವದು ನಮ್ಮವರಿಗೆ ಸಹಜಗುಣವಾಗಿರುತ್ತದೆ. ಸ್ವಕರ್ತೃತ್ವಶಕ್ತಿ ಒಂದುಮಾತ್ರ ಹಿಂದೂಗಳಿಗೀಗ ನಷ್ಟವಾಯಿತೆಂಬುದರತು ಅನುಕರಣಶಕ್ತಿಯಲ್ಲಿ ಯಾವ ಜನಾಂಗದವರೂ ಅವರುಮೀರದಾರರೆಂದು ಇಂಗ್ಲೀಷಿನವರು ತಿಳಿಸುವದಕ್ಕಾಗಿ ನಾವು ಅಸಮಾಧಾನ ಪಡಬೇಕಾದ ಆವಶ್ಯಕತೆ ಯಾವದೂ ಕಾಣಿಸಲಿಲ್ಲವು ಈ ವಿಚಾರವಂತಿರಲಿ. ಇನ್ನು ಸಭ್ಯರ ನಾಲ್ಕನೆಯ ತೀರ್ಮಾನವಾದ ಸಂಸ್ಕೃತ ವಿದ್ಯಾಭಿವೃದ್ಧಿ ವಿಷಯಕವಾದ ಅಭಿಪ್ರಾಯವು ಶ್ಲಾಘ್ಯವಾದುದಾಗಿರುತ್ತದೆ. ತತ್ರಾಪಿ ಸಂಸ್ಕೃತಭಾಷೆಯು ವೇದಭಾಷೆಯೆಂತಲೂ ಲೌಕಿಕ ಅಥವಾ ವ್ಯಾವಹಾರಿಕಭಾಷೆಯೆಂತಲೂ ಯೆರಡುವಿಧವಾಗಿರುವದರಿಂದಲೂ, ಇವುಗಳನ್ನು ಯಾವ ಪ್ರಭೇದದವರು ಯಾವತೆರನಾಗಿ ಯೆಷ್ಟರಮಟ್ಟಿಗೆ ಲೌಕಿಕಸುಖಕ್ಕೆ ಲೋಪವಿಲ್ಲದಂತೆ ಅಭ್ಯಾಸ ಮಾಡಬಹುದೋ ಅದಂಕುರಿತು ಸ್ವಲ್ಪವಾದರು ಆಲೋಚಿಸಿದಂತೆ ತೋರಲಿಲ್ಲವು. ಇದಲ್ಲದೆ ಜನರ ಮತಸಂಬಂಧಗಳಾದ ಆಚಾರವ್ಯವಹಾರಾದಿಗಳಂಕುರಿತ ಅರ್ಹತೆಯನ್ನೂ ಸ್ವಾತಂತ್ರ್ಯವನ್ನೂ ಬಾಧ್ಯತೆಯನ್ನೂ ಕಾಪಾಡಬೇಕೆಂಬ ಸಭ್ಯರ ತಾತ್ಪರ್ಯವು ಅಧುನಿಕ ವೈಲಕ್ಷಣ್ಯಾಭಿಲಾಷಿಗಳಾದವರನೇಕರಿಗೆ ಗ್ರಾಹ್ಯವಾಗಲಾರದು. ಅದು ಹ್ಯಾಗಂದರೆ—ಈವಿಷಯದಲ್ಲಿ ಅಧುನಿಕರ ಪ್ರತಿನಿಧಿ ರೂಪವಾಗಿ ಏರ್ಪಟ್ಟಿರುವ ಹಿಂದೂ ಪತ್ರಿಕಾ ಲೇಖಕರು ಅಭಿಪ್ರಾಯ ಪಡುವದೇನಂದರೆ,—ಮಹಾ ಮಂಡಲಿಯವರು ಕರ್ಮಗಳ ಸಂಖ್ಯೆಯನ್ನೂ ಗಯಾಪಾಳಗಳು ವಸೂಲ್ಮಾಡುತ್ತಾ ಸುಲಿಗೆ ರೂಪವಾದ ಅತ್ಯಧಿಕ ದಕ್ಷಿಣಾದ್ರವ್ಯವನ್ನೂ ತಗ್ಗಿಸಿ ಕರ್ಮಗಳನ್ನು ಸುಲಭಪಡಿಸಿರುವರಾದರೆ, ಹಿಂದೂಮತದ ಉತ್ತಮ ಪ್ರಯೋಜನವಂ ಕುರಿತು ಚಿಂತಿಸಿದವಾಗಿರುವರು ಹಿಂದೂಮತದ ಮುಖ್ಯಸಿದ್ಧಾಂತದಲ್ಲಿ ಬೋಧಿಸುವಂತಾ ಶುದ್ಧವಾದ ಮತ್ತು ಪ್ರಸಿದ್ಧವಾದ ಪ್ರತ್ಯಯಕ್ಕೆ, ಇದುವರಿವಿಗೆ ಅಪ್ರತೀಕಾರವಾದ ನಷ್ಟ ಪ್ರಾಪ್ತವಾಗಲ್ಪಟ್ಟಿರುತ್ತದೆ. ಮೋಸವೂ ಕಾಪಟ್ಯವೂ ದಿನೇದಿನೇ ತೀವ್ರವಾಗಿ ಅಭಿವೃದ್ಧಿಯನ್ನೈದುತಬರುತಲಿವೆ. ಕರ್ಮಬಾಹುಳ್ಯವೂ, ನಷ್ಟಗಳಾದ ಅವುಗಳ ಪೂರ್ವೋದ್ದೇಶಗಳೂ, ಪ್ರಜೆಗಳ ಪರಸ್ಪರಾನುರಾಗವಂ ಸಂಕುಚಿತಗೊಳಿಸುದವಲ್ಲದೆ ಸಾಮಾನ್ಯವಾಗಿ ಮಾನುಷಕೋಟಿಗೆ ಅಪೇಕ್ಷಿತಾಂಶಗಳಾಗಿರತಕ್ಕವುಗಳಲ್ಲಿ ಅವರಿಗೆ ದೃಷ್ಟಿಮಾಂದ್ಯವನ್ನುಂಟುಮಾಡಿ, ಮತಪ್ರಭೇದಗಳನ್ನು ವೃದ್ಧಿಗೊಳಿಸಿ, ಸಾಮುದಾಯಕವಾದ ಪ್ರಯೋಜನಕ್ಕಾಗಿ ಸ್ವಸುಖ ಪರಿತ್ಯಾಗ ಪ್ರವೃತ್ತಿಯಂ ಹಿಂದೂಗಳಿಗೆ ಶುದ್ಧಾಂಗವಾಗಿ ಜೋಗಲಾಡಿಸಿದವು. ವಿಶಿಷ್ಟ ಕರ್ಮಗಳ ಮತ್ತು ತತ್ಪ್ರಾಯಶ್ಚಿತ್ತಗಳಾದ ಪ್ರಾಯಶ್ಚಿತ್ತಗಳ ಪ್ರಾಧಾನ್ಯತೆಯನ್ನರುಹುವದಕ್ಕಾಗಿ ಪ್ರತ್ಯೇಕ ಸಭೆಯೊಂದು ಆವಶ್ಯಕವಾಗಿಲ್ಲವು. ಇದಕ್ಕೆ ಬದಲಾಗಿ, ಸಮ್ಮ ಪ್ರಯಾಸವಂ ಕುರಿತು ತಕ್ಕ ಪ್ರಮಾಣಗಳೊಡನೆ ವಿಚಾರ ಮಾಡಿರುವರಾದರೆ ಪ್ರಯೋಜನಕರವಾಗಿರುತಲಿತ್ತು.

WOMEN IN ANCIENT INDIA.

ಆರ್ಯಮಹಿಳೆಯರ ಸ್ಥಿತಿಶೀಲಗಳನ್ನು ನಿರೂಪಣವು.

No VI.

ಪೂರ್ವಕಾಲದವಸ್ಥೆಯಲ್ಲಿ ಬ್ರಾಹ್ಮಣನು ನಾಲ್ಕು ವರ್ಣದವರಲ್ಲಿಯೂ ಕ್ರಮವಾಗಿ ನಾಲ್ಕುಜನ ಭಾರ್ಯೆಯರನ್ನೂ, ಕ್ಷತ್ರಿಯರು ಇತರ ಮೂರುವರ್ಣದಲ್ಲಿ ಮೂವರು ಭಾರ್ಯೆಯರನ್ನೂ, ವೈಶ್ಯರು ಕಡೇ ಎರಡು ವರ್ಣದಲ್ಲಿ ಇಬ್ಬರು ಭಾರ್ಯೆಯರನ್ನೂ, ಶೂದ್ರರು ಸಮಾನ ವರ್ಣದವಳಾದ ಒಬ್ಬ ಭಾರ್ಯೆಯನ್ನೂ ಪರಿಗ್ರಹಿಸ ಬಹುದೆಂಬದಾಗಿ ಆಚಾರವೇರ್ಪಟ್ಟಿತು. ಈವಿಷಯದಲ್ಲಿ ಗೌತಮ ಪರಾಶರ, ಯಾಜ್ಞವಲ್ಕ್ಯ, ಆಪಸ್ತಂಭ, ವಿಷ್ಣು, ಬೋಧಾಯನಾದಿ ಸ್ಮೃತಿಗಳನ್ನು ನೋಡಿದರೆ ಸ್ಪಷ್ಟವಾಗಿ ವ್ಯಕ್ತವಾಗುವದು. ಮೇಲೆ ಕಂಡ ನಿರ್ಬಂಧವು ದೇವಯಾನಿಯ ವಿಷಯದಲ್ಲಿ ಮಾತ್ರ ಅನ್ವಯಿಸದೆಹೋಯಿತು. ಹೇಗೆಂದರೆ, ಅಸುರಗುರುವಾದ ಶುಕ್ರಾಚಾರ್ಯರಲ್ಲಿ ಬೃಹಸ್ಪತ್ಯಾಚಾರ್ಯರ ಪುತ್ರನಾದ ಕಚನೆಂಬವನು ಸಂಜೀವಿನೀ ವಿದ್ಯೆಯನ್ನಭ್ಯಸಿಸುವದಕ್ಕಾಗಿ ಬಹುಕಾಲ ಗುರುಕುಲವಾಸವಂ ಮಾಡುತಲಿರುವಲ್ಲಿ ಗುರುಪುತ್ರಿಯಾದ ದೇವಯಾನಿಯು ಆತನಂ ಮೋಹಿಸಲಾಗಿ ಅದಕ್ಕಾತನೊಡಂಬಡದೆ ನಿಷೇಧಿಸಲು, ನೀನು ಕಲಿತ ವಿದ್ಯೆಯು ನಿನಗೆ ಪ್ರಯೋಜನವಾಗದೆ ಹೋಗಲೆಂದು ಶಾಪವನ್ನಿತ್ತಳು. ಆಗ ಕಚನು ನಿನ್ನ ಪತಿಯು ಬ್ರಾಹ್ಮಣನಲ್ಲದೆ ಹೋಗಲೆಂದು ಪುನಃ ಶಪಿಸಿದನು. ಹೀಗಿರುವಲ್ಲಿ ರಾಜಪುತ್ರಿಯಾದ ಶರ್ಮಿಷ್ಠೆಯೊಂದು ದಿನ ತನ್ನ ಗೆಳತಿಯರೊಡನೆ ಉದ್ಯಾನವನದಲ್ಲಿ ಜಲಕ್ರೀಡೆಯನ್ನಾಡುತಲಿರುವಾಗ್ಯೆ ಆಕೆಯುಟ್ಟಿದ್ದ ಸೀರೆಯನ್ನರಿಯದೆ ದೇವಯಾನಿಯು ಧರಿಸಿಕೊಂಡದಕ್ಕಾಗಿ ಅವಳ ಮೇಲೆ ಆಗ್ರಹಗೊಂಡು, ಭಿಕ್ಷುಕನಾದ ಇವಳ ತಂದೆಯು ನನ್ನ ಜನಕನಲ್ಲಿ ಯಾಚಿಸಿ ಜೀವಿಸುತಲಿದ್ದಾಗ್ಯೂ ಇವಳು ತನ್ನ ಸ್ಥಿತಿಯನ್ನರಿಯದೆ ಮತ್ತತೆಯಿಂದ ನನ್ನ ವಸ್ತ್ರವಂ ಧರಿಸಿರುತ್ತಾಳಾಗಿ ಇವಳು ಒಂದು ಕೂಪದಲ್ಲಿ ನಿರ್ದಾಕ್ಷಿಣ್ಯವಾಗಿ ತಳ್ಳಿಬಿಡಿರೆಂದು ಇತರ ಸಖಿಯರಿಗೆ ಆಜ್ಞಾಪಿಸಿದಳು. ಅವರದೇರೀತಿ ಮಾಡಲು, ಯಯಾತಿ ಮಹಾರಾಜನು ಆ ಮಾರ್ಗವಾಗಿ ಮೃಗಯಾ ವಿನೋದಾರ್ಥ ಸಂಚಾರ ಹೋಗುತಲಿರುವಾಗ ದೇವಯಾನಿಯ ಆರ್ತನಾದವಂ ಕೇಳಿ ತನ್ನ ಉತ್ತರೀಯವನ್ನಿತ್ತು ಧರಿಸಹೇಳಿ ದಕ್ಷಿಣ ಹಸ್ತಾವಲಂಬದಿಂ ಅವಳನ್ನು ಮೇಲಕ್ಕೆ ಸೆಳೆದುಕೊಂಡನು. ಆಗ ದೇವಯಾನಿಯು ಯಯಾತಿಯಂ ಕುರಿತು ನೀನು ಪಾಣಿಗ್ರಹಣ ಮಾಡಿ ರಕ್ಷಿಸಿದುದಾಗಿ ನಿನ್ನನ್ನೇ ಪತಿಯಾಗಿವರಿಸುತ್ತೇನೆ. ದೈವಯೋಗ ಪ್ರತಪ್ಪಲಾರದು, ಪುರುಷ ವಾಕ್ಯವು ಅಸಿದ್ಧವಲ್ಲವು, ಆದಕಾರಣ ನಾನು ಅನ್ಯರನ್ನೆಂದಿಗೂ ವರಿಸಲಾರನೆಂದು ಹೇಳಿ ತನ್ನ ಪೂರ್ವವೃತ್ತಾಂತಗಳನ್ನೆಲ್ಲ ತಿಳಿಸಿದಳು. ಈಸಂದರ್ಭದಲ್ಲಿ ಶುಕ್ರಾಚಾರ್ಯರು ಕ್ಷತ್ರಿಯ ಪರಿಗ್ರಹಕೊಪ್ಪದೆ ಬಹಳವಾಗಿ ತಡೆದರು. ಆದಾಗ್ಯೂ ದೇವಯಾನಿಯ ದೃಢಪ್ರತಿಜ್ಞೆಯನ್ನೂ ಉತ್ತರೋತ್ತರ ಪುಟ್ಟಾಗಬಹುದಾದ ಅನರ್ಥಗಳನ್ನೂ ಪರ್ಯಾಲೋಚಿಸಿ ವಿವಾಹಕ್ಕೆ ಅನುಜ್ಞೆಯಂ ಕೊಟ್ಟು ಇಂತಾವಿವಾಹವು ಯೆಂದಿಗೂ ನಡೆಯದೆ ಹೋಗತಕ್ಕದ್ದೆಂದು ಶಾಪವನ್ನಿತ್ತರು. ಪ್ರಕೃತ ದೇಶದಲ್ಲಿ ಅದರ ಪೂರ್ವಾವಸ್ಥೆಯೊಳಗುಂಟಾಯೆ ವಿವಾಹಗಳು, ಮುಖ್ಯವಾಗಿ ಬ್ರಾಹ್ಮಣರಲ್ಲಿ ಕೇವಲ ಐಹಿಕ ಸುಖಾರ್ಥವಲ್ಲದೆ ಆಮುಷ್ಮಿಕೋದ್ದೇಶವಿಂ ನಡೆಸಲ್ಪಡತಕ್ಕವಾಗಿದ್ದವು. ಮನುಪುತ್ರಿಯಾದ ದೇವಹೂತಿಯು ಬ್ರಹ್ಮಪುತ್ರನಾದ ಕರ್ದಮ ಪ್ರಜಾಪತಿಯನ್ನು ವರಿಸಲು, ಆದಕ್ಕಾತನು, ತನಗೊಬ್ಬ ಪುತ್ರನುದ್ಭವಿಸಿದ ಕೂಡಲೆ ತಪೋಮಾರ್ಗವನ್ನಾಶ್ರಯಿಸಲಿಕ್ಕೆ ಸಮ್ಮತಿಸಿದರೆ ವಿವಾಹ ಮಾಡಿಕೊಳ್ಳುತ್ತೇನೆಂದು ಹೇಳಿ

ನು. ಅದಂ ದೇವಹೂತಿಯು ಅಂಗೀಕರಿಸಿ ವಿವಾಹ ಮಾಡಿಕೊಂಡಳು. ಸೌಪ್ರಾದ್ಭಗವದಂಶ ಸಂಭೂತನಾದ ಕಪಿಲನು ಜನಿಸಿದ ಕೂಡಲೇ ಕರ್ದಮನು ವನವಾಸಕ್ಕೆ ತೆರಳುವ ಬಗ್ಗೆ ತನ್ನ ಭಾರ್ಯೆಯ ಅನುಮತಿಯಂ ಕೇಳಲು ಅವಳು ಸಮ್ಮತಿಸಿ ತನಗೆ ಜ್ಞಾನೋಪದೇಶಕನಾದ ಗುರುವನ್ನೇರ್ಪಡಿಸಿ ಹೋಗಬೇಕೆಂದು ಪ್ರಾರ್ಥಿಸಿದಳು. ಆಗ ಕರ್ದಮನು ನಿನ್ನ ಗರ್ಭದಲ್ಲಿ ಜನಿಸಿದ ಪುತ್ರನು ಮುಂದೆ ಮಹಾಜ್ಞಾನಿಯಾಗಿ ಸಿದ್ಧಾಂತ ಪ್ರವರ್ತಕನಾಗುವನಾಗಿ ಆತನೇ ನಿನಗೆ ತತ್ವಾರ್ಥಗಳನ್ನುಪದೇಶಿಸುವನೆಂ ದಾಜ್ಞಾಪಿಸಿದನು. ಅದೇ ಪ್ರಕಾರ ಕಪಿಲನು ತನ್ನ ತಾಯಿಯಾದ ದೇವಹೂತಿಗೆ ಸಾಂಖ್ಯಾದಿ ಸಕಲ ತತ್ವಗಳನ್ನೂ ಉಪದೇಶಿಸಿ ಆಕೆಯು ಮಹಾಜ್ಞಾನಿಯಾಗಿ ಮಾಡಿದನೆಂದು ಶ್ರೀ ಭಾಗವತದಿಂ ಸ್ಪಷ್ಟವಾಗುತಿದೆ. ಹೀಗೆಯೇ ಸ್ತ್ರೀಯರು ಅರವತ್ತನಾಲ್ಕು ವಿದ್ಯೆಗಳಲ್ಲೂ ಪ್ರವೀಣರೆನ್ನಿಸಿ ಪ್ರಸಿದ್ಧರಾಗಿದ್ದರೆಂಬದಕ್ಕೆ ಶ್ರೀಮದ್ಭಾಗವತದ ಅನುಶಾಸನಪರ್ವದಲ್ಲಿ ಭೀಷ್ಮನು ಧರ್ಮಪುತ್ರನುಕುರಿತು ತಿಳಿಸಿದ ವಾಕ್ಯಗಳಗಿಂತ ಅನ್ಯತರವಾದ ಪ್ರಮಾಣವು ಬೇರೊಂದೂ ಇರಲಾರದು.

LOCAL AND PROVINCIAL NEWS

ಊಳದೇಶ ಮತ್ತು ತಾಲ್ಲೂಕ್ ಜಾತಿ ವೃತ್ತಾಂತಗಳು.

Transfers.—ಶಿವಮೊಗ್ಗ ಮುನಸಫ್ ಮೆ|| ತಿರುನಾರಣಾಚಾರ್ ಬಿ. ಎ. ಬಿ ಎಲ್ ಯವರು, ಎಡಹಳ್ಳಿಗೂ ಎಡಹಳ್ಳಿ ಮುನಸಫ್ ಮೆ ಸಿ. ರಾಮರಾಯರವರು ಶಿವಮೊಗ್ಗೆಗೂ ವರ್ಗ ಮಾಡಲ್ಪಟ್ಟಿರುತ್ತಾರೆ.

Remission.—ಮಂಡ್ಯ ತಾಲ್ಲೂಕಿನಲ್ಲಿ ವಸೂಲಾಗಲಾರದೆಂದು ತಿಳಿಯಬಂದ ಸುಮಾರು ೧೧V೩ ರೂಪಾಯಿಗಳ ಹಿಂದಿನ ಕಂದಾಯ ಬಾಕಿಯನ್ನು ಮೈಸೂರು ಸರ್ಕಾರದವರು ರೆಕಾರ್ಡಿಂದ ವಜಾ ಮಾಡುವಂತೆ ಹುಕುಂಕೊಟ್ಟಿರುತ್ತಾರೆ.

Police Inspection.—ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ಲವರು ತಮ್ಮ ಅಸಿಸ್ಟೆಂಟರೊಡನೆ ಹೊಸಕೋಟೆಯ ಪ್ರಾಂತದಲ್ಲಿ ಪೋಲೀಸ್ ಅಜಮಾಯಿಷೀ ಕೆಲಸದ ಮೇಲೆ ಇರುತಲಿರುವಂತೆ ತಿಳಿಯಬರುತಿದೆ. ಅವರ ಮತ್ತೊಬ್ಬ ಅಸಿಸ್ಟೆಂಟರಾದ ಮೆ|| ಸುಬ್ಬರಾಯ ಅಯ್ಯರವರು ಗತ ಶುಕ್ರವಾರದ ದಿನ ಹೆಡ್ ಕ್ವಾರ್ಟರ್ ಪೋಲೀಸ್ ಸ್ಟೇಷನನ್ನು ತನಿಖೀ ಮಾಡಿದರು.

The weather.—ಈಗ ಕಾಲಸ್ಥಿತಿಯು ಬಹಳ ಮನೋಹರವಾಗಿಲ್ಲವು. ಬೆಳಗಿನ ಹೊತ್ತು ಚಳಿಯೂ ಮಂಜೂ ಅಧಿಕವಾಗಿವೆ. ಮಧ್ಯಾನ್ಹ ವೇಳೆಯಲ್ಲಿ ಬಿಸಿಲು ಜಾಸ್ತಿಯಾಗಿದೆ. ಅಲ್ಲಿಯಲ್ಲಿ ಶೀತೋಪದ್ರವಗಳು ತಲೆದೋರಿವೆ. ಈಸಲ ಬಿಡಿ ಮಳೆಯ ಬಾಧೆ ಉಂಟಾಗದೆ ಇದ್ದದರಿಂದ ಅವರೇ ಫಸಲ್ ಚೆನ್ನಾಗಿ ಬೆಳೆದು ಫಲವು ಅಧಿಕವಾಗಿರುತಿವೆ.

Police.—ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ಲವರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟುಗಳಿಗೂ, ಅವರವರ ಮುಂದೆ ಬರುವ ಪೋಲೀಸ್ ಮೊಕದ್ದಮೆಗಳಲ್ಲಿ ಪೋಲೀಸ್ ಜವಾನರು ಅಕ್ರಮವಾಗಿ ಜನರನ್ನು ಟ್ರೀಟ್ ಮಾಡಿದ ಅಂಶವನ್ನು ತಮಗೆ ತಿಳಿಸಬೇಕೆಂಬದಾಗಿಯೂ, ಅಕ್ರಮವಾಗಿ ವರ್ತಿಸುವಂತಾ ಪೋಲೀಸ್‌ನವರನ್ನೆಲ್ಲ ತಾವು ಇಲಾಖಾ ಮಾರೀಫತ್ ಖುದಿತವಾಗಿ ಶಿಕ್ಷಿಸುವದಾಗಿರುವಂತೆಯೂ ತಿಳಿಸಿರುವದಾಗಿ ಕೇಳುತ್ತೇವೆ.

Christmas Holidays.—ಈ ಸಲದ ಕ್ರಿಸ್ಮಸ್ ಹಬ್ಬ ಪ್ರಯುಕ್ತವಾದ ರಜಾ ಈ ಜನವರಿ ೫ರವರೆಗೂ ಆನೇಕ ಸರ್ಕಾರ್ ಇಲಾಖೆಗಳಲ್ಲಿಯೂ ಘೋಷಿಸಲ್ಪಟ್ಟವು. ೧೫ ದಿನಗಳು ಅಬದ್ಧವಾದ ರಜಾ ದೊರೆತಿರುವದರಿಂದ ಅನೇಕರು ಈ ರಜಾವನ್ನು ದೇಶಸಂಚಾರಾದಿಗಳ ಮೂಲಕ ವಿನಿಯೋಗಿಸಿಕೊಳ್ಳುವ ಕುತೂಹಲದಿಂ ಪರಸ್ಥಳಗಳಿಗೆ ಹೊರಡಬಹುದೆಂದು ತೋರುತಿದೆ. ಈ ಸಲದ ಕಾಂಗ್ರೆಸ್ ಸಭೆಯು ಕಲ್ಕತ್ತೆಯಲ್ಲಿ ಈ ವಾರದೊಳು ಜರುಗುವದರಿಂದ ಅಲ್ಲಿಗೆ ಹೋಗಲಿಕ್ಕೆ ಅನೇಕರು ದೂರದೇಶವೆಂಬ ಕಾರಣದ ಮೇಲೆ ಹಿಂಜರಿಯುತಲಿರುವಂತೆ ತಿಳಿಯಬರುವದಲ್ಲದೆ ಈ ಸಲ ಇಲ್ಲಿ ಪ್ರತಿನಿಧಿ ಸಹ ಕುದುರುವದು ಪ್ರಯಾಸವಾಗಿರುವಂತೆ ಕೇಳುತ್ತೇವೆ.

Agricultural and Statistical Reports.—ಅಗ್ರಿಕಲ್ ಚ್ಯುರಲ್ ಮತ್ತು ಸ್ಟ್ಯಾಟಿಸ್ಟಿಕಲ್ ಇಲಾಖೆಗೆ ಪ್ರತ್ಯೇಕವಾಗಿ ಇದುವರೆವಿಗೂ ಸಾಲಿಯಾನಾ ರಿಪೋರ್ಟ್ ಛಾಪಿಸಿ ಪ್ರಕಟಿಸಲ್ಪಡುತಲಿರಲಿಲ್ಲವು. ಈಗ ಗವರ್ನಮೆಂಟಿನವರು ಸದರೀ ಇಲಾಖೆಯ ರಿಪೋರ್ಟ್ ಸಹ ಆವಶ್ಯಕವಾಗಿರುವಂತೆ ಮೆ|| ರಿಕೆಟ್ಸ್ ಯವರಿಗೆ ತಿಳಿಸಿದ್ದರ ಮೇಲೆ ಆ ಇಲಾಖೆಯು ಸ್ಥಾಪಿಸಲ್ಪಟ್ಟದು ಮೊದಲು ಈ ಸರ್ಕಾರೀ ಸಾಲ್ ಆಖೈರ್ ತನಕ ಬರುವ ರಿಪೋರ್ಟ್ ತಯಾರ್ಮಾಡುತಲಿದಾರೆಂದು ಕೇಳುತ್ತೇವೆ. ಈ ಇಲಾಖೆಗೂ ಒಬ್ಬ ಅಸಿಸ್ಟೆಂಟರನ್ನು ನೌಕರಿಮಾಡಿದರೆ ಸಲೀಸಾಗಿರುವುದು.

Absence from Head Quarters.—ಶ್ರೀಮನ್ ಮಹಾರಾಜರವರು, ತಮ್ಮ ಕಾರ್ಬಾರ್ ಅಧಿಕಾರಿಯಾದ, ದಿವಾನರವರೊಡನೆ ದೇಶ ಸಂಚಾರಾರ್ಥ ದಯಮಾಡಿ ಅಲ್ಲಿಯಲ್ಲಿ ಪ್ರಜೆಗಳ ರಾಜಭಕ್ತಿ ಕೃತಜ್ಞತಾದಿ ಭಾವ ಪ್ರದರ್ಶಕಗಳಾದ ಸತ್ಕಾರಗಳನ್ನಂಗೀಕರಿಸುತ ಅತಿ ಸಂತೋಷ ಪರವಶರಾಗಿರುತ ಲಿರುವದು ಪ್ರಸಿದ್ಧವಷ್ಟೆ. ಈಗ ದೊಡ್ಡ ಆಫೀಸರುಗಳೊಬ್ಬರೂ ಹೆಡ್‌ಕ್ವಾರ್ಟರ್‌ನಲ್ಲಿಲ್ಲವು. ಕಂಟ್ರೋಲರ್, ಎಕ್ಸೈಜ್ ಕಮ್ಮಿಷನರ್, ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್, ಲೆಜಿಸ್ಲೇಟಿವ್ ಸೆಕ್ರೆಟರಿ, ಚೀಫ್ ಜಡ್ಜಿಯವರು, ಸೆಷನ್ಸ್ ಜಡ್ಜಿ ಸೂಪರಿಂಟೆಂಡೆಂಟರು, ಪಬ್ಲಿಕ್ ವರ್ಕ್ಸ್ ಸೆಕ್ರೆಟರಿ ಮೊದಲಾದವರೆಲ್ಲರೂ ಪರಸ್ಥಳಗಳಿಗೆ ದೌರೆಯ ಹೋಗಿದಾರೆ. ಇದು ಜಮಾಬಂದಿ ಕಾಲವಾಗಿಯೂ, ಕ್ರಿಸ್ಮಸ್ ಹಬ್ಬದ ದಿನಗಳಾಗಿಯೂ ಇರುವದರಿಂದ ಡಿಸ್ಟ್ರಿಕ್ಟ್ ಆಫೀಸರುಗಳು ಸಹ ಕಸಬೆಯಲ್ಲಿಲ್ಲವು. ಮುಖ್ಯವಾಗಿ, ಇದು ವಸೂಲೀ ಅಧಿಕಾರವಾದುದರಿಂದ, ಸರ್ಕಾರ್ ಆಫೀಸರುಗಳೆಲ್ಲರೂ ಹೊರಗೆ ಸಂಚರಿಸದಿದ್ದರೆ ಪ್ರಯೋಜನವಿಲ್ಲವು.

ADDRESS OF THE DEWAN OF MYSORE

to the Representative Assembly held at Mysore on Tuesday, the 8th October 1890.

೫೯. ಈಕೆಳಗೆ ನಮೂದಿಸುವ ಮಸೂದೆ ರೆಗ್ಯುಲೇಷನ್‌ಗಳು ಇಂಡಿಯಾ ಗವರ್ನಮೆಂಟಿನವರಿಂದ ಅಂಗೀಕಾರವಾಗುವದರಲ್ಲಿ ಇದೆ.

(a) ಆಯುಧಗಳು ಜಂಗೀ ಆಸ್ಬಾಬು ಮತ್ತು ಮಿಲಿಟರಿ ಸ್ಟೋರ್ಸ್ ಸಂಬಂಧಪಟ್ಟದ್ದು. ಇದು 1878ನೇ ಇಸವಿ XIನೇ ನಂಬರು ಇಂಡಿಯನ್ ಆರಮ್ಸ್ ಆಕ್ಟನ್ನು ಪ್ರಾಯಶಃ ಅನುಸರಿಸಿದ್ದಾಗಿದೆ.

(b) ಕೃಷಿ ವ್ಯಾಪಾರಾದಿ ವೃದ್ಧಿಗೋಸ್ಕರ ತೆಗೆಯತಕ್ಕ ಸಾಲಗಳ ವಿಷಯವಾದದ್ದಾಗಿಯದೆ. ಇದು ಬ್ರಿಟಿಷ್ ಇಂಡಿಯಾದೊಳಗೆ 1883ನೇ ಇಸವಿ XIXನೇ ಆಕ್ಟನ್ನು ಅನುಸರಿಸಿದ್ದಾಗಿದೆ.

(c) ಲಂಚ ಆಪೇಕ್ಷೆಯ ವೇತನಾದಿಪ್ರೇಷಣಗಳ ವಿಷಯದ್ದು. ಬ್ರಿಟಿಷ್ ಇಂಡಿಯಾದೇಶದಲ್ಲಿ ವಾಡಿಕೆಯಲ್ಲಿ ಇರುವ ಸಡಿಲ ಅಂತ ಸಾಧನವನ್ನು ಈ ಮೈಸೂರುದೇಶದಲ್ಲಿಯೂ ಲಾಂಚಿಗಳನ್ನು ಅಂತ ಮಾಡುವದರಲ್ಲಿ ನಿಯಾಮಕವಾದ ಸಂಘವನ್ನು ಏರ್ಪಡಿಸಬೇಕೆಂಬ ವಿಷಯವಾಗಿದೆ.

೬೦. ಪ್ರಕೃತದಲ್ಲಿ ದರ್ಬಾರಿನ ಆಲೋಚನೆಯಲ್ಲಿ ಇರುವ ಅನೇಕ ಪ್ರಮೇಯಗಳ ಪೈಕಿ ಮುಖ್ಯವಾದ ವಿಷಯಗಳು:—

(a) ಬಂಗಾರದ ಗಣಿಗಳಿಗೆ ಸಂಬಂಧಪಟ್ಟ ಪದಾರ್ಥಗಳ ಕಳವಿನ ಬಂದೋಬಸ್ತು ವಿಷಯದ ಕಾನೂನು.

(b) ಕಂಪೆನೀಗಳು

(c) ಗವರ್ನಮೆಂಟು ಸೆಕ್ಯೂರಿಟಿಗಳು

(d) ಫಾರೆಸ್ಟ್

(e) ಕಂಪರಾಜೇಶನ ಪ್ರಾಕ್ಟೀಷನರ್‌ಯೆಂಬ ನಿರರ್ಥಕರಾದವರು ಬಲಾತ್ಕಾರದಿಂದ ಪ್ರವೇಶಿಸುವಿಕೆ.

(f) ಲೋಕಲ್ ಬೋರ್ಡುಗಳ ವಿಷಯ

(g) ಮೈಸೂರು ಮುನಿಸಿಪಾಲಿಟೀಗಳು

(h) ಪೋಲೀಸ್.

(i) ಸಿವಿಲ್ ಪ್ರೊಸಿಡ್ಯೂರ್ ಬದಲಾವಣೆ.

ಇವುಗಳ ಪೈಕಿ ಬಹು ಪ್ರಮೇಯಗಳು ಚಾಲತಿಸಾಲಿನಲ್ಲಿ ಲೋಕಲ್ ಗೆಜೆಟಿನಲ್ಲಿ ಪ್ರಸಿದ್ಧಿಪಡಿಸುವದಕ್ಕೆ ಸಿದ್ಧವಾಗುತ್ತ. ತನ್ಮೂಲಕ ಪ್ರಜೆಗಳ ಅಭಿಪ್ರಾಯವು ತಿಳಿದುಕೊಳ್ಳಲ್ಪಡುತ್ತೆ.

೬೧. ಮಲನಾಡು ಬಗಾಯಿತ್, ಕಂದಾಯ ಇಳಿಪದರುಷದಲ್ಲಿ ನಾವು ಗಮನಕೊಟ್ಟ ಒಂದು ಮುಖ್ಯವಾದ ಸಂಗತಿ ಯಾವದೆಂದರೆ, ಮಲನಾಡಿನಲ್ಲಿ ಇರುವ ಅಡಿಕೆತೋಟಗಳ ಸ್ಥಿತಿಗಳಿಗೆ ಸಾಯರ್ ಹಾಸಲು ಶಿವಾಯಿ ಎಲ್ಲಿಯೂ ಇಲ್ಲದಷ್ಟು ಜಾಸ್ತಿ ಕಂದಾಯ ಸದರೀ ತೋಟಗಳಿಗೆ ದಾಖಲಾಗಿರುವ ಅಂಶವನ್ನು ಶಿವಮೊಗ್ಗಾ ಡಿಸ್ಟ್ರಿಕ್ಟಿನಿಂದ ಬರುವ ಮೆಂಬರುಗಳು ಪ್ರತಿವರುಷದಲ್ಲೂ ಈ ಸಭೆಯಲ್ಲಿ ಹೇಳಿಕೊಳ್ಳುತ್ತಾ ಇದಾರೆಯಷ್ಟೆ. ಹೋದವರುಷದ ಹಿಮಕಾಲದಲ್ಲಿ ನಾವು ಆ ಪ್ರಾಂತ್ಯ ಸರಕ್ಯೂಟ್ ಹೊರಟಿದ್ದಾಗ್ಯೆ ಪ್ರತ್ಯಕ್ಷ ನೋಡಿದ್ದರಲ್ಲಿಯೂ ಮತ್ತು ಸ್ಥಳದಲ್ಲಿ ವಿಚಾರಮಾಡಿದ್ದರಲ್ಲಿಯೂ ನಮ್ಮ ಮನಸ್ಸಿಗೆ ಯಥಾರ್ಥವಾಗಿ ತಿಳಿಯಬಂದದ್ದು ಏನೆಂದರೆ, ಸಾಮಾನ್ಯವಾಗಿ ತೋಟದ ತರತಕ್ಕವರು ಅದರಲ್ಲಿ ಮುಖ್ಯವಾಗಿ ಸಾಗರ ತಾಲ್ಲೂಕಿನಲ್ಲೂ ನಗರ ತಾಲ್ಲೂಕಿನ ಉತ್ತರಭಾಗದಲ್ಲೂ ಮಾಡಿರತಕ್ಕವರು ಹೇಳಿಕೊಳ್ಳುವ ಅನಾನುಕೂಲಗಳು ನಿರಾಧಾರವಾದವಲ್ಲ. ಈ ಅಭಿಪ್ರಾಯವು ನಿಷ್ಪಕ್ಷಪಾತ ನಮ್ಮ ಸಹಾಧಿಕಾರಿಗಳಾದ ಮುಖ್ಯಾಂಬು ಬಿನಲ್ಲಿ ಬಹು ಅನುಭವಸ್ಥರಾಗಿರುವ ಮೆ|| ಸಿ. ಚಂಚೆರ್ ಲೇನ್ ಸಿ. ಐ. ಈ. ಯವರ ಅಪ್ಪ್ರಾಜವಾದ ಅಭಿಪ್ರಾಯದಿಂದ ದೃಢವಟ್ಟಿರುತ್ತೆ. ಈದೊಡ್ಡಮನುಷ್ಯರು ಆದೇಶಕ್ಕೆ ಸಮೀಪವಾಗಿರುವ ಮದರಾಸ್ ಪ್ರಸಿಡೆಂಸಿಯ ಡಿಸ್ಟ್ರಿಕ್ಟುಗಳಲ್ಲಿ ರೆವಿನ್ಯೂ ಆಫೀಸರಲ್ಲಿ ಉಂಟಾಗಿರುವ ಬಹುವಿಧವಾದ ಅನುಭವವನ್ನು ಮೈಸೂರು ಗವರ್ನಮೆಂಟಿಗೆ ಅವರು ಕೊಡುವ ಸಲಹೆಗಳಲ್ಲಿ ಉಪಯೋಗಿಸುತಲಿದಾರೆ. ನಮ್ಮ ಸಂಚಾರದಲ್ಲಿ ಇವರು ನಮ್ಮ ಸಂಗಡಲೇ ಇದ್ದರು. ತೋಟಗಳಸ್ಥಿತಿಯನ್ನು ಕುರಿತು ನಾವು ರೂಬರೂವ್ ವಿಚಾರಮಾಡಿದ್ದರಲ್ಲಿಯೂ ಮತ್ತು ತೋಟದ ಮಾಲೀಕನ ಅಹವಾಲ್ ವಿಚಾರಿಸಿದ್ದರಲ್ಲಿಯೂ ಯಾವ ವಿಧದಿಂದಲಾದರು ಸದರೀ ತೋಟದ ಮಾಲೀಕರಿಗೆ ಕೂಡ್ಲೆ ಇನಸಾಫ್ ಮಾಡತಕ್ಕದ್ದು ಬಹಳ ಆವಶ್ಯಕವೆಂದು ನಮಗೆ ಚೆನ್ನಾಗಿ ಕಂಡುಬಂತು. ಈ ವಿಷಯದಲ್ಲಿ ಪುನರಪಿ ವಿಚಾರಮಾಡೋಣದರನ್ನ ಮುಂದಿನ ಹಿಮಕಾಲದಲ್ಲಿ ತೀರ್ಥಹಳ್ಳಿ ಮತ್ತು ಕೊಪ್ಪ ತಾಲ್ಲೂಕುಗಳಲ್ಲಿ ಉಪಕ್ರಮ ಮಾಡುವೆವೆಂದು ಕೋರುತ್ತೇವೆ.

೬೨. ಸಾಗರ ಮತ್ತು ನಗರ ತಾಲ್ಲೂಕುಗಳ ಅಡಿಕೆತೋಟದ ಉತ್ಪತ್ತಿ ಮೇಲೆ ವಸೂಲಾಗುವ ಸಾಯರ್ ಹಾಸಲು ಶಿವಾಯಿ ಭಾರೀಯಾದ ಜಾಸ್ತಿ ಕಂದಾಯ ಕೊಡುವದು ಮಾತ್ರವಲ್ಲದೆ ಆಳುಗಳನ್ನ ಸಂಪಾದಿಸುವದರಲ್ಲಿರುವ ಪ್ರಯಾಸದಿಂದಲೂ ಸಮೀಪವಾಗಿ ಜನಸಿ ಬಿಡಿಸಿ ಬೇಕಾದ ಆಗತಕ್ಕ ವ್ಯಾಪಾರಸ್ಥಳಗಳುಯಿಲ್ಲದೆ ಇರುವದರಿಂದಲೂ ಹೆಚ್ಚಾದ ಥಂಡೀಯಿಂದ ಹುಟ್ಟುವ ಕೊಳೆರೋಗವೆಂದು ಪ್ರಸಿದ್ಧವಾದ ವಿಜಾತೀಯ ರೋಗದಿಂದಲೂ, ಬಚ್ಚೆ ಹುಳವೆಂಬ ಒಂದು ವಿಧವಾದ ಹುಳಗಳಿಂದಾಗುವ ನಷ್ಟಗಳಿಂದಲೂ ಕಷ್ಟಪಡುತಲಿದಾರೆ. ಸದರೀ ಬಚ್ಚೆ ಹುಳವೆಂಬುವದು ಜಂಗಲಿ ವಸ್ತುವಿನಿಂದ ಕಾಣಿಸಿಕೊಳ್ಳುತ್ತವೆಂದು ಜನಗಳು ಹೇಳುತ್ತಾರೆ. ಆಳುಗಳು ಸಿಕ್ಕದೆ ಇರತಕ್ಕ ಶ್ರಮವನ್ನ ನಿವಾರಣೆಮಾಡಬೇಕಾದರೆ ಕ್ಲುಪ್ತವಾಗಿ ಹದ್ದು ಬಸ್ತುಮಾಡಲ್ಪಟ್ಟ ಪ್ರದೇಶಗಳಲ್ಲಿಯೂ ಮುಖ್ಯವಾಗಿ ಜಂಗಲ್ ಸಾಕಾಗಿರುವ ಹಳೇ ಪ್ರದೇಶಗಳಲ್ಲಿಯೂ ಕುಮರಿ ಸಾಗುವಳಿಗೆ ಅಪ್ಪಣೆಕೊಡೋಣದರಮೂಲಕ ಸ್ವಲ್ಪಮಟ್ಟಿಗೆ ಪರಿಹಾರವಾಗಬಹುದು. ಇಂತಾ ಕುಮರಿಸಾಗುವಳಿಯನ್ನ ಸ್ವಲ್ಪಮಟ್ಟಿಗೆ ಉಪಕ್ರಮಿಸೋಣವು ಈಗಿನ ಸಾಗುವಳಿಯನ್ನ ಕಾಪಾಡುವದಕ್ಕು ಮತ್ತು ಸಾಗುವಳಿದಾರ್ರ ಅನುಕೂಲತೆ ಮತ್ತು ಆರೋಗ್ಯಕ್ಕೂ ಅವಶ್ಯಕವಾಗಿರುತ್ತೆ. ಈ ದೇಶದ ಬಾಹ್ಯದಲ್ಲಿರತಕ್ಕ ಮದರಾಸ್ ಡಿ|| ಹಾಲೀಜಾರೀಲಿರುವ ರೂಲ್ಸುಗಳಂತೆ ಏರ್ಪಡಿಸಿ ಕೂಡ್ಲೆ ಜಾರೀಗೆ ತರಲ್ಪಡುತ್ತೆ. ಹೊಸದಾದ ಲೋಕಲ್ ರೋಡುಗಳನ್ನು ಮಾಡಿಸುವದರಮೂಲಕ ಈ ಸಂಸ್ಥಾನದ ಇತರ ಭಾಗಗಳಿಗೂ ಪ್ರಸಿದ್ಧಿಯಾದ ವ್ಯಾಪಾರಸ್ಥರಿಗೂ ಸಂಬಂಧವಿಲ್ಲದೆ ದೂರವಾಗಿದ್ದ ಸಾಗರ ತಾಲ್ಲೂಕಿನ ಪಶ್ಚಿಮಭಾಗದ ಮಲನಾಡು ಪ್ರಾಂತ್ಯವನ್ನ ಬುಲ್ಲಾ ಮಾಡಿಸುವದಕ್ಕೆ ಸಾಧ್ಯವಾದ ಪ್ರಯತ್ನ ಮಾಡುತಲಿದ್ದೇವೆ. ಗೋವರ್ಧನಗಿರಿ ಮತ್ತು ಹೊನ್ನಿಮಾರ್ಗವಾಗಿ ಒಂದು ಘಾಟರಸ್ತೆ ಹಾಕಿಸೋಣದರಿಂದ ಗೆರೆಸೊಪ್ಪೆ ಬಳಿ ಇರುವ ಬಹು ವ್ಯಾಪಾರ ನಡೆಯುತಕ್ಕ ಸ್ಥಳಗಳಿಗೆ ಜಿನಿಸೀ ತೆಗದುಕೊಂಡು ಹೋಗುವದಕ್ಕೆ ಬಹಳ ಅನುಕೂಲ ಉಂಟಾಗುತ್ತೆ. ಇದು ಕ್ಷಿಪ್ರದಲ್ಲಿಯೇ ಇಂಜನೀರುಗಳ ವಿಚಾರಣೆಗೆ ಒಳಪಡುತ್ತೆ. ಆದರೆ ಈ ಎಲ್ಲಾ ಪ್ರಯತ್ನಗಳೂ ಅಡಿಕೆ ಬೆಳೆಯತಕ್ಕವರಿಗೆ ಆಗಬೇಕಾದ ವಿಶೇಷ ಸಹಾಯದಲ್ಲಿ ಅತ್ಯಲ್ಪವಾದದ್ದಾಗಿರುತ್ತೆ. ರೈತನಿಗೆ ಯಾವವಿಧವಾಗಿ ಸಹಾಯ ಉಂಟುಮಾಡಿಕೊಡಬೇಕು, ಮತ್ತು ಎಷ್ಟುಮಟ್ಟಿಗೆ ಸಹಾಯಮಾಡತಕ್ಕದ್ದು ಅವಶ್ಯಕವೆಂಬ ಅಂಶಗಳು ಇನ್ನು ವಿಶದವಾಗಿ ನಮಗೆ ಬೇಕಾದ ಕೆಲ ಹೆಚ್ಚು ಸಂಗತಿಗಳನ್ನು ತಿಳಿದು ರಿಪೋರ್ಟುಕೊಡಲು ಕ್ಷಿಪ್ರದಲ್ಲಿಯೇ ನೌಕರಿ ಆಗುವ ಒಬ್ಬ ಸ್ಪೆಷಲ್ ಆಫೀಸರ ರಿಪೋರ್ಟು ಬಂದಕೂಡ್ಲೆ ವ್ಯವಸ್ಥೆಮಾಡಲ್ಪಡುತ್ತೆ. ಪ್ರಕೃತದಲ್ಲಿ ನಿರಾಕ್ಷೇಪವಾಗಿ ಹೇಳಬಹುದಾದ್ದು ಏನಂದರೆ, ಈವರೆಗೆ ಕೆಲವುವರುಷಗಳಿಂದ ಅಡಿಕೆಧಾರಣೆ ಧಡವಾಗಿರುವಂತೆ ಆಗದೆ ಇದ್ದ ಪಕ್ಷಕ್ಕೆ ಮುಖ್ಯವಾಗಿ ಸಾಗರದಲ್ಲಿ ದಾಖಲಾಗಿರುವ ಕಂದಾಯವು ತೆರುವದಕ್ಕೆ ಅಸಾಧ್ಯವಾಗುತಿತ್ತು. ಅಡಿಕೆತೋಟಗಳು ಹಾಳಿ ಇರುವದಕ್ಕಿಂತಲೂ ಹೆಚ್ಚಾಗಿ ಸಾಗುವಳಿಯಿಲ್ಲದೆ ವ್ಯರ್ಥವಾಗುತಲಿತ್ತು. ಮಿತವ್ಯಯದವಾದ ಮೈಸೂರುದೇಶದ ರೈತನನ್ನು ಮತ್ತು ಅಡಿಕೆಸಾಗುವಳಿ ವಿಷಯದಲ್ಲಿ ಅವನಿಗೆ ವಂಶಪರಂಪರೆಯಾಗಿ ಬಂದಿರುವ ಹೊಂದಿಕೆಯೊಡನೆ ಅವನ ತೋಟಗಳಲ್ಲಿಯೇ ಅವನನ್ನ ಇರಿಸಿ ತೋಟದಸಾಗುವಳೀ ಅಭಿವೃದ್ಧಿಗೋಸ್ಕರ ಎಲ್ಲಾ ಪ್ರೋತ್ಸಾಹವನ್ನು ಮಾಡಿಕೊಡಬೇಕೆಂತ ಗವರ್ನಮೆಂಟಿನವರಿಗೆ ವಿಶೇಷ ಕುತೂಹಲವಿರುತ್ತೆ.

೬೩. ಇನ್ಷ್ಯೂರೆನ್ಸ್—ಶ್ರೀಮನ್ಮಹಾರಾಜರವರ ಸರಕಾರದವರು ತಮ್ಮ ನೌಕರರ ವಿಶೇಷ ಪ್ರಯೋಜನಕ್ಕೋಸ್ಕರ ಲೈಫ್ ಇನ್ಷ್ಯೂರೆನ್ಸು ಯೆಂಬ ಪದ್ಧತಿಯನ್ನು ಏರ್ಪಡಿಸಬೇಕೆಂಬ ವಿಷಯವನ್ನು ಆಲೋಚಿಸುತಲಿದ್ದಾರೆ. ಸರಕಾರದವರು ನೇಟಿವ್‌ಜನಗಳ ಜೀವಗಳನ್ನು ಇನ್ಷ್ಯೂರು ಮಾಡುವ ಸಂಗತಿಯು ಕೆಲವುವರುಷಗಳಿಗೆ ಇಂಡಿಯಾ ಗವರ್ನಮೆಂಟಿನವರ ಅವಧಾನಕ್ಕೆ ವಿಷಯವಾಗಿತ್ತು. ಆಗ್ಯ ನಡೆದ ಚರ್ಚೆಯಲ್ಲಿ ಸದರೀ ಏರ್ಪಾಡು ಪ್ರಜೆಗಳಿಗೆ ನಿಸ್ಸಂದೇಹವಾದ ಉಪಕಾರವಾಗಿರುತ್ತೆಂದು ಎಲ್ಲರೂ ಒಂದೇ ಅಭಿಪ್ರಾಯಪಟ್ಟರು. ಆದರೆ ಸದರೀ ಆಲೋಚನವನ್ನು ನೆರವೇರಿಸುವದರಲ್ಲಿ ಇರುವ ಪ್ರಯಾಸವು ನೇಟಿವ್ ಪ್ರಜೆಗಳು ಸದರೀ ಏರ್ಪಾಡಿಗೆ ಸೇರಿ ಅದರ ಪ್ರಯೋಜನಗಳನ್ನ ಧಾರಾಳವಾಗಿ ಹೊಂದದೆ ಹೋದಾರೆಂಬ ಆಲೋಚನೆಗಳಮೇಲೆ ಸದರೀ ವಿಷಯವು ಜಾರೀಗೆ ತರಲ್ಪಡಲಿಲ್ಲ. ಆದಾಗ್ಯೂ ಈಚೆಗೆ ಕೆಲವು ಪ್ರೈವೇಟ್ ಕಂಪನೀಗಳು ನೇಟಿವ್‌ಜನಗಳ ಜೀವಗಳನ್ನ ಇನ್ಷ್ಯೂರ್ ಮಾಡುವ ಕೆಲಸವನ್ನು ವಹಿಸಿ ತಮ್ಮ ವ್ಯಾಪಾರವನ್ನ ಹೆಚ್ಚು ಮಾಡಿಕೊಂಡರು. ಆದರೆ ಸಾಧಾರಣವಾಗಿ ಎಲ್ಲಾ ಜನಗಳು ತಥಾಪಿ ಸರಕಾರ ನೌಕರರೂ ಕಂಪೆನೀಗಳು ಶಾಶ್ವತವಾಗಿ ನಡೆದೀತೆಂಬ ನಂಬಿಕೆ ಅವರುಗಳಿಗೆ ಇಲ್ಲದೆ ಯಿದ್ದದರಿಂದ ಇನ್ಷ್ಯೂರೆನ್ಸ್ ಪದ್ಧತಿಯನ್ನ ಹೊಂದುವದರಲ್ಲಿ ಆಲಸ್ಯರಾಗಿದ್ದಾರೆ. ಹೀಗಿರಬಾಗಿ ಶ್ರೀಮನ್ಮಹಾರಾಜರವರ ಸರಕಾರವು ಸರಕಾರದ ಗ್ಯಾರೆಂ

Bangalore City Municipality.
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಸರ್ ೧೮೯೦ನೇ ಇಸವಿ ಡಿಸೆಂಬರ್ ೨೭ನೇ ತಾರೀಖ್ ಶನಿವಾರ ಪ್ರಾತಃಕಾಲ ೮ ಘಂಟೆಗೆ ಸಿಟಿ ಮ್ಯುನಿಸಿಪಲ್ ಬೋರ್ಡಿನವರು ಸಭೆಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳ ಯಾದಾಸ್ತು.

೧. ಸರ್ ೧೮೯೦ನೇ ಇಸವಿ ನವೆಂಬರ್ ಮಾಹೆಯ ಬಾಬತ್ತು ನಗದು ಜಮಾಖರ್ಚು ಲೆಕ್ಕ ಮತ್ತು ಜನನ ಮರಣ ಲೆಕ್ಕಗಳು.

೨. ಮುಂದಿನ ಸಂವತ್ಸರದ ಬಡ್ಜೆಟ್ ಲೆಕ್ಕಕ್ಕೆ ಸೇರಿಸಬೇಕಾದ ಕಾಮಗಾರಿಗಳ ಪಟ್ಟಿ.

೩. ಸರ್ ೧೮೮೫—೮೬, ೧೮೮೭—೮೮, ೧೮೮೮—೮೯, ೧೮೮೯—೯೦, ನೇ ಸಾಲಿಗಳಲ್ಲಿ ಪ್ರತಮಾಶಿಪತ್ರಿ, ಟೌನ್ ಹಾಸ್ಪಿಟಲ್ ಮತ್ತು ಔಷಧಶಾಲೆ, ಪಶುವಿನ ಶಾಖಾ ವೈದ್ಯಶಾಲೆ, ಇವುಗಳಿಗೆ ಸರಬರಾಯಿ ಮಾಡಿದ ಯೂರೋಪ್ ದೇಶದ ಔಷಧಗಳ ಕ್ರಯದ ಬಗ್ಯೆ ಬಂದ ಬಿಲ್ಲುಗಳ ಮೊಬಲಗು ೩,೯೭೪-೧೩-೧೧ ರೂಪಾಯಿಗಳನ್ನು ಕೊಡುವಂತೆ ಸರ್ ೧೮೯೦ ನೇ ಇಸವಿ ನವೆಂಬರ್ ೨೩ ನೇ ಮುಕ್ಕಾಮುಳ್ಳ ೯೬೦೩—೯L—೧೨೦೩—೬೦ ನೇ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್, ಮತ್ತು ೧೮೯೦ನೇ ಇಸವಿ ಡಿಸೆಂಬರ್ ೧೦ನೇ ವ್ರ್ಕಂ೩೪೮೩೬ನೇ ನಂಬರ್ ಕಂಟ್ರೋಲರವರ ಡಾಕೆಟ್.

೪. ಸರ್ ೧೮೯೦ನೇ ಇಸವಿ ಮಾರ್ಚಿ ೩೧ನೇ ತಾರೀಖಿಗೆ ಪೂರ್ತಿಯಾದ ಛೆ ಮಾಹೇ ಬಾಬತ್ತು ಆಡಿಟರ ರಿಪೋರ್ಟ್ ಮತ್ತು ಅದರಮೇಲೆ ಪ್ರೆಸಿಡೆಂಟರವರ ಷರಾ.

೫. ೧೮೯೦ನೇ ಇಸವಿ ನವೆಂಬರ್ ೧೨ನೇ ತಾರೀಖಿನಲ್ಲಿ ಕನ್ನಡ ಬಾಲಕರ ಪಾಠಶಾಲೆಯ ಹೆಡ್ ಮಾಸ್ಟರವರು ತಲಬ್ ಜಾಸ್ತಿ ಮಾಡಬೇಕೆಂದು ಬರೆದುಕೊಂಡ ಅರ್ಜಿ.

೬. ಕೋಟೆಯಲ್ಲಿ ಪ್ರಿನ್ಸ್ ವಿಕ್ಟರವರ ರಸ್ತೆಗೆ ರೂಬರೂ ಇರುವ ತಮ್ಮ ಕಾಂಪೌಂಡ್ ಗೋಡೆಗೆ ಉತ್ತರದಲ್ಲಿರುವ ಖಾಲಿ ಜಮೀನನ್ನು ಸೇರಿಸಿಕೊಳ್ಳುವದಕ್ಕೆ ಹುಕುಂ ಕೊಡಬೇಕೆಂದು ಕೋಲಾರ್ ಡೆಪ್ಯುಟಿ ಕಮಿಷನರ್ ಮೆ॥ ಮಾದಯ್ಯನವರ ತರಫೆ ಹೆಚ್ ರಾಮಯ್ಯನವರು ೧೮೯೦ನೇ ಇಸವಿ ನವೆಂಬರ್ ೨೦ನೇ ತಾರೀಖಿನಲ್ಲಿ ಬರೆದುಕೊಂಡ ಅರ್ಜಿ.

೭. ಹೊಸತಿಗಳರಪೇಟೆಯಲ್ಲಿ ಒಂದು ಕಟ್ಟಡದ ನಿವೇಶನವಂ ಕೊಡಬೇಕೆಂದು ಮೆ॥ ಕುಪ್ಪುಸ್ವಾಮಿನಾಯಡರವರು ಬರೆದುಕೊಂಡ ಅರ್ಜಿ, ಅದರಮೇಲಿನ ರಿಪೋರ್ಟ್.

೮. ಅನ್ಯದೇಶಗಳಿಂದ ಆಮದಾಗುವ ಹೊಗೇಸೊಪ್ಪು ಮತ್ತು ಹೊಗೇ ಬತ್ತಿಗಳಮೇಲೆ ಮ್ಯುನಿಸಿಪಲ್ ಕಂದಾಯ ವಸೂಲ್ಮಾಡುವ ವಿಷಯ.

೯. ಸಿಟಿ ಮಾರ್ಕೆಟ್ ಷೋನಲ್ಲಿ ಕೊಡಬೇಕಾದ ಇನಾಂಗಳು ಮತ್ತು ಅದಕ್ಕೆ ಸೇರಿದ ಇತರ ತಪಸೀಲಿಗಳು.

೧೦. ಮೈಸೂರು ರಸ್ತೆಯಲ್ಲಿ ಮರದಕೋಠಿಯ ಬಗ್ಯೆ ಉಪಯೋಗಿಸಿ ಕೊಳ್ಳಲ್ಪಟ್ಟಿರುವ ಮ್ಯುನಿಸಿಪಲ್ ನಿವೇಶನದ ಮೇಲೆ ಜಾಸ್ತಿ ತೆರಿಗೆ ವಸೂಲ್ಮಾಡಬೇಕಾದ್ದಕ್ಕೆ ಸಂಬಂಧಪಟ್ಟ ಕಾಗದಪತ್ರಗಳು.

೧೧. ಹೊರಗಿನ ತಿಬ್ಬಂದಿಗೆ ಸಂಬಳಗಳನ್ನು ಬಡ್ತಿಮಾಡಬೇಕಾದ ವಿಷಯಕ್ಕೆ ಸಂಬಂಧಪಟ್ಟ ಕಾಗದಪತ್ರಗಳು.

ಬೆಂಗಳೂರು, ತಾ॥ ೨೨ ನೇ ಡಿಸೆಂಬರ್ ೧೮೯೦.

SYED NASIRUDDIN,
President,
City Municipal Commission

ನೋಟಿಸ್.

ಪ್ರತಿ ಸಂವತ್ಸರದ ಕ್ರಿಸ್ಮಸ್ ಹಬ್ಬಕ್ಕಾಗಿ ನಮ್ಮ ನೌಕರ್ಮಾನೇರಿಗೆ ರಜಾ ಕೊಡುವ ಪದ್ಧತಿಯಾದದರಿಂದ ಅದೇರೀತಿ ಈ ಸಲವೂ ಅವರಿಗೆ ರಜಾ ಕೊಡುವ ಬಗ್ಯೆ ಮಾಹೇ ಮಜಕೂರ್ ೨೯ ನೇ ತಾರೀಖ್ ಸೋಮವಾರ ಪತ್ರಿಕೆಯು ನಿಲ್ಲಿಸಿರುವೆವು.

ಕರ್ನಾಟಕ ಪ್ರಕಾಶಿಕಾ.
THE KARNATAKA PRAKASIKA.

MONDAY, DECEMBER 22, 1890
೧೮೯೦ನೇ ಡಿಸೆಂಬರ್ ೨೨ನೇ ಸೋಮವಾರ

THE BHARATA DHARMA MAHAMANDALA.

ಈಗ್ಯೆ ಎರಡುಮೂರು ವಾರಗಳಹಿಂದೆ ದೆಹಲೀ ಪಟ್ಟಣದಲ್ಲಿ ಸೇರಿದ್ದ ಭರತಧರ್ಮ ಮಹಾಮಂಡಲಿಯವರು ಮಾಡಿದ ನಿರ್ಣಯಗಳಪೈಕಿ ಮೊದಲನೆಯದಾದ ಪ್ರಾಯಶ್ಚಿತ್ತಾದಿ ಕರ್ಮಾಚರಣೆಗಳ ವಿಷಯದಲ್ಲಿ ನಮ್ಮ ಅಭಿಪ್ರಾಯವಂ ಗತವಾರದಲ್ಲಿಯೇ ತಿಳಿಸಿದ್ದೆವಷ್ಟೆ. ಮೇಲ್ಕಂಡ ಮಂಡಲಿಯವರ ಇತರ ನಿರ್ಣಯಗಳ ಸ್ವರೂಪ ಪ್ರಯೋಜನಗಳಂ ಕುರಿತು ವಿಚಾರಿಸಲಾಗಿ ನಮಗೆ ತೋರುವದೇನೆಂದರೆ —

ಹಿಂದೂ ವೈವಾಹಿಕ ಕ್ರಮ ಪರಿಷ್ಕರಣ ವಿಷಯದಲ್ಲಿ ಅನ್ಯಜಾತಿಯವರಿಂದ ಮಾಡಲ್ಪಡುತಲಿರುವ ಪ್ರಯತ್ನಗಳನ್ನು, ಪರಿಣಯಕಾಲ ನಿಯಮವಂ ವೃದ್ಧಿಗೊಳಿಸುವದರಲ್ಲಿ ಗವರ್ನಮೆಂಟಿನವರ ಪ್ರವೇಶವನ್ನೂ ಮಹಾ ಮಂಡಲಿಯವರು ಅಂಗೀಕರಿಸಿದಂತೆ ಕಾಣಿಸಲಿಲ್ಲವು. ಅಂತಹ ಅವರ ತಾತ್ಪರ್ಯವಂ ವಿಮರ್ಶಿಸಿನೋಡಲಾಗಿ ಕೆಲವು ಕಾರಣಗಳಿಂದ ಅದು ಯೋಗ್ಯವೆಂತಲೇ ಭಾವಿಸಬೇಕಾಗಿದೆ. ಪರಂತು ಹಿಂದೂಪತ್ರಿಕಾ ಲೇಖಕರು ಸೂಚಿಸುವಂತೆ ಶ್ಲಾಘ್ಯವಾದ ಮೇಲ್ಕಂಡ ಸಂದರ್ಭಗಳಲ್ಲಿ ವೈದಿಕರಾಗಿಯೂ ಪಂಡಿತರಾಗಿಯೂ ಇರುವ ಸದರೀ ಸಭಾಸದರು ಪ್ರಜೆಗಳ ಸಾಮಾಜಿಕ ಪ್ರಯುಕ್ತವಾದ ಲಾಭನಷ್ಟಗಳನ್ನೂ ಅಪೇಕ್ಷಿತಾನಪೇಕ್ಷಿತಾಂಶಗಳನ್ನೂ ಸಾಧ್ಯವಾದಮಟ್ಟಿಗೆ ಸಭೆಯಲ್ಲಿ ತತ್ಕಾರ್ಯಾಧಾರಗಳೊಡನೆ ವಿಚಾರಪೂರ್ವಕ ಒಂದು ವ್ಯವಸ್ಥೆಯಂ ಮಾಡಿ ಅವಂ ವ್ಯವಹರಣೆಯೊಳು ತರಲಿಕ್ಕೆ ಪ್ರಯತ್ನಪಟ್ಟಿರುವರಾದರೆ ಅವರ ಅಭಿಪ್ರಾಯವನ್ನು ವರ್ತಮಾನಕಾಲದ ವಿನಿಮಯಾಪೇಕ್ಷೆಗಳು ಬಹಳ ಆದರದಿಂದಂಗೀಕರಿಸಿರುವರಲ್ಲದೆ ಸದರೀ ವಿದ್ವಾಂಸರ ಪಾಂಡಿತ್ಯಕ್ಕೆ ವಿಶೇಷ ಗೌರವವಂ ಕಲ್ಪಿಸಿರುವರು. ಪ್ರತಿಕ್ರಿಯಾ ವಿಧಾನವನ್ನರುಹದೆ ಈಗ ನೆಲಗೊಂಡಿರುವ ಬಾಧಕಾಂಶಗಳಂ ಕುರಿತು ಚಿಂತಿಸದೆ ಕೇವಲ ಅವುಗಳ ಉದ್ದೇಶಪ್ರಯತ್ನಗಳಂ ಮಾತ್ರ ತುಚ್ಛವೆಂದು ನಿರಾಕರಿಸಿದ್ದರಿಂದ ಏತದ್ವಿಷಯಕವಾದ ಸಭ್ಯರ ನಿರ್ಣಯಕ್ಕೆ ಲೋಕವು ಕಡಮೆಯಾಗಬೇಕಾಯಿತು. ವಿವಾಹಕಾಲಗಳಲ್ಲಿ ಉಪಪತ್ತಿಗೆ ಮೀರಿ ಅತ್ಯಧಿಕವಾಗಿ ಧನವ್ಯಯಮಾಡುವವಾಡಿಕೆಯನ್ನು ಮತ್ತು ಕನ್ಯಾಶುಲ್ಕ ಮೊದಲಾದ ವಿಷಯಗಳಂಕುರಿತ ತೀರ್ಮಾನವು ಬಹಳ ಕೊಂಡಾಡತಕ್ಕದ್ದಾಗಿರುತಿದೆ. ಆದರೆ ಈ ಭಾಗದಲ್ಲಿ ವೈದಿಕರ ಪ್ರಯೋಜನ ಕಡಮೆಮಾತಲ್ಪಡಲಿಲ್ಲವೆಂದು ಹಿಂದೂಪತ್ರಿಕೆಯು ಅಭಿಪ್ರಾಯಪಡುತಿದೆ. ಇ... ಮೊದಲನೆಯ ತೀರ್ಮಾನದ ವಿಷಯದಲ್ಲಿ ನಾವು ತಿಳಿಸಿರುವದೇ ಸಾಕಾದ ಉತ್ತರವಾಗಿರುತಿದೆ. ಪ್ರಸಕ್ತ ವಿಷಯ ವಿಚಾರವು ಅಂಧಪರಂಪರೆಯಾಗಿ ಪ್ರತಿಮನುಷ್ಯನಿಂದಲೂ ಅಂಗೀಕರಿಸಲ್ಪಟ್ಟದ್ದಾಗಿರುತಿದೆ. ಎಂತಹ ಸಂದರ್ಭಗಳಲ್ಲಿ ಪುರುಷನಿಗೆ ವಿವಾಹವು ಆವಶ್ಯಕವೆಂದು ಕಂಡುಬರುತಿದೆಯೋ, ಯಾವ ಸಮಯಗಳಲ್ಲಿ ವಯಃಪರಿಮಾಣವನ್ನತಿಕ್ರಮಿಸಿ ಪುನರ್ವಿವಾಹಮಾಡಿಕೊಳ್ಳಬೇಕಾದ ನಿರ್ಬಂಧವು ಪ್ರಾಪ್ತವಾಗುತಿದೆಯೋ, ಎಂತವನಿಗೆ ಅಧಿಕವಾಗಿಯಾದರೂ ಧನವ್ಯಯಮಾಡಿ ವಿವಾಹಿತನಾಗಬೇಕೆಂಬ ಆವಶ್ಯಕತೆಯಿರುತಿದೆಯೋ, ಯಾವ ತರದವರಿಗೆ ವಿವಾಹಾದಿ ವಿಶೇಷ ಸಂದರ್ಭಗಳಲ್ಲಿ ಇಷ್ಟಮಿತ್ರರನ್ನು ಆಹ್ವಾನಪೂರ್ವಕ ಸತ್ಕರಿಸಿ ಗೌರವಿಸುವದಲ್ಲದೆ ಭೂತ ತೃಪ್ತಿಪಡಿಸಬೇಕೆಂಬ ತಾತ್ಪರ್ಯವುಂಟಾಗಿರುತಿದೆಯೋ, ಯಾವಸ್ಥಿತಿಯಲ್ಲಿರತಕ್ಕವರು ಸಾಧಾರಣವಾಗಿ ಕನ್ಯೆಗೆ ಶುಲ್ಕವನ್ನು ವಿಶೇಷತಃ ಅಪೇಕ್ಷಿಸುತ್ತಾರೆಯೋ, ಯಾವ ಉದ್ದೇಶದೊಡನೆ ಕನ್ಯೆಯ ತಾಯಿತಂದೆಗಳು ಮೊದಲೀ ಆಭರಣಕ್ಕಾಗಿ ವರನಕಡೆಯಿಂದ ಧನವನ್ನಪೇಕ್ಷಿಸುತ್ತಾರೆಯೋ, ಯಾವರೂಪದಿಂ ವಿವಾಹವ್ಯಯವನ್ನು ತಗ್ಗಿಸಲಿಕ್ಕೆ ಸಾಧ್ಯವಾಗುವದೋ ಇತರವಿಧ ಖರ್ಚುಗಳನ್ನೆಲ್ಲ ತೊರೆದು ಶುದ್ಧ ವೈದಿಕಾಂಗಳಾದ ಕರ್ಮಭಾಗಕ್ಕೆ ಮಾತ್ರ ಯಷ್ಟರಮಟ್ಟಿಗೆ ದ್ರವ್ಯ ವ್ಯಯವಾಗುತಿದೆಯೋ, ಪರಿಗ್ರಹಾರ್ಥತ್ವೇನ ಭಾವಿಸಲ್ಪಟ್ಟಿರುವ ಯೂರೋಪಿಯನ್ ಮುಸಲ್ಮಾನ ವಗೈರೆ ಅನ್ಯಜಾತಿಯವರಲ್ಲಿ ವಿವಾಹಕಾಲಗಳೊಳು ಎಷ್ಟರಮಟ್ಟಿಗೆ ಖರ್ಚಾಗುತಿದೆಯೋ, ವಸ್ತ್ರಾಲಂಕಾರಾದಿಗಳಿಗಾಗಿಯೂ ಭೋಜ್ಯಪಾನಾದಿಗಳಿಗಾಗಿಯೂ ದಾಮಾಷಾಯಿಪ್ರಕಾರ ನಮ್ಮಲ್ಲಿಯೂ ಅವರಲ್ಲಿಯು ಸಹ ಎಷ್ಟರ ಮೊಬಲಗು ಖರ್ಚಾಗುತಿದೆಯೋ, ಇವು ಮೊದಲಾದ ವಿಷಯಗಳಂಕುರಿತು ಉಪಶಾಂತರಾಗಿ ವಿಚಾರಮಾಡಿ ಅದರ ಪರ್ಯವಸಾನವಂ ತಿಳಿಸಿದವರು ಮಾತ್ರ ಒಬ್ಬರೂ ನಮ್ಮ ದೃಷ್ಟಿಗೆ ಬೀಳಲಿಲ್ಲವು. ಒಬ್ಬನೆ ಹಿಂದುಮೂಲೆಯಲ್ಲಿ ಯಾವುದನ್ನಾದರು ತಿಳಿಸಿದರೆ ಅದನ್ನೇ ಎಲ್ಲರೂ ಅನುವಾದಮಾಡುತ ತಿಪ್ಪಳಿಸುತ್ತಲಿರುವದು ನಮ್ಮವರಿಗೆ ಸಹಜಗುಣವಾಗಿರುತಿದೆ. ಸ್ವಕರ್ತೃತ್ವಶಕ್ತಿ ಒಂದುಮಾತ್ರ ಹಿಂದೂಗಳಿಗೀಗ ನಷ್ಟವಾಯಿತೆಯೊರತು ಅನುಕರಣಶಕ್ತಿಯಲ್ಲಿ ಯಾವ ಜನಾಂಗದವರೂ ಅವರುವಿಾರಲಾರರೆಂದು ಇಂಗ್ಲೀಷಿನವರು ತಿಳಿಸುವದಕ್ಕಾಗಿ ನಾವು ಅಸಮಾಧಾನ ಪಡಬೇಕಾದ ಆವಶ್ಯಕತೆ ಯಾವದೂ ಕಾಣಿಸಲಿಲ್ಲವು. ಈ ವಿಚಾರವಂತಿರಲಿ ಇನ್ನು ಸಭ್ಯರ ನಾಲ್ಕನೆಯ ತೀರ್ಮಾನವಾದ ಸಂಸ್ಕೃತ ವಿದ್ಯಾಭಿವೃದ್ಧಿ ವಿಷಯಕವಾದ ಅಭಿಪ್ರಾಯವು ಶ್ಲಾಘ್ಯವಾದುದಾಗಿರುತಿದೆ. ತತ್ರಾಪಿ ಸಂಸ್ಕೃತಭಾಷೆಯು ವೇದಭಾಷೆಯೆಂತಲೂ ಲೌಕಿಕ ಅಥವಾ ವ್ಯಾವಹಾರಿಕಭಾಷೆಯೆಂತಲೂ ಎರಡುವಿಧವಾಗಿರುವದರಿಂದಲೂ, ಇವುಗಳನ್ನು ಯಾವ ಪ್ರಭೇದದವರು ಯಾವತೆರನಾಗಿ ಎಷ್ಟರಮಟ್ಟಿಗೆ ಲೌಕಿಕಸುಖಕ್ಕೆ ಲೋಪವಿಲ್ಲದಂತೆ ಅಭ್ಯಾಸ ಮಾಡಬಹುದೋ ಅದಂಕುರಿತು ಸ್ವಲ್ಪವಾದರು ಆಲೋಚಿಸಿದಂತೆ ತೋರಲಿಲ್ಲವು. ಇದಲ್ಲದೆ ಜನರ ಮತಸಂಬಂಧಗಳಾದ ಆಚಾರವ್ಯವಹಾರಾದಿಗಳಂಕುರಿತ ಅರ್ಹತೆಯನ್ನೂ ಸ್ವಾತಂತ್ರ್ಯವನ್ನೂ ಬಾಧ್ಯತೆಯನ್ನೂ ಕಾಪಾಡಬೇಕೆಂಬ ಸಭ್ಯರ ತಾತ್ಪರ್ಯವು ಅಧುನಿಕ ವೈಲಕ್ಷಣ್ಯಾಭಿಲಾಷಿಗಳಾದವರನೇಕರಿಗೆ ಗ್ರಾಹ್ಯವಾಗಿರಲಾರದು. ಅದು ಹ್ಯಾಗೆಂದರೆ—ಈವಿಷಯದಲ್ಲಿ ಆಧುನಿಕರ ಪ್ರತಿನಿಧಿ ರೂಪವಾಗಿ ಏರ್ಪಟ್ಟಿರುವ ಹಿಂದೂ ಪತ್ರಿಕಾ ಲೇಖಕರು ಅಭಿಪ್ರಾಯ ಪಡುವದೇನೆಂದರೆ,—ಮಹಾ ಮಂಡಲಿಯವರು ಕರ್ಮಗಳ ಸಂಖ್ಯೆಯನ್ನೂ ಗಯಾವಾಳಗಳು ವಸೂಲ್ಮಾಡುವಂತಹ ಸುಲಿಗೆ ರೂಪವಾದ ಅತ್ಯಧಿಕ ದಕ್ಷಿಣಾಪ್ರಭವವನ್ನೂ ತಗ್ಗಿಸಿ ಕರ್ಮಗಳನ್ನು ಸುಲಭಪಡಿಸಿರುವರಾದರೆ, ಹಿಂದೂಮತದ ಉತ್ತಮ ಪ್ರಯೋಜನವಂ ಕುರಿತು ಚಿಂತಿಸಿದವರಾಗಿರುವರು ಹಿಂದೂಮತದ ಮುಖ್ಯಸಿದ್ಧಾಂತದಲ್ಲಿ ಬೋಧಿಸುವಂತಹ ಶುದ್ಧವಾದ ಮತ್ತು ಪ್ರಸಿದ್ಧವಾದ ಪ್ರತ್ಯಯಕ್ಕೆ, ಇದುವರಿವಿಗೆ ಅಪ್ರತೀಕಾರವಾದ ನಷ್ಟ ಪ್ರಾಪ್ತವಾದಲ್ಪಟ್ಟಿರುತಿದೆ. ಮೋಸವೂ ಕಾಪಟ್ಯವೂ ದಿನೇದಿನೇ ತೀವ್ರವಾಗಿ ಅಭಿವೃದ್ಧಿಯನ್ನೈದುತಬರುತಲಿವೆ. ಕರ್ಮಬಾಹುಳ್ಯವೂ, ನಷ್ಟಗಳಾದ ಅವುಗಳ ಪೂರ್ವೋದ್ದೇಶಗಳೂ, ಪ್ರಜೆಗಳ ಪರಸ್ಪರಾನುರಾಗವಂ ಸಂಕುಚಿತಗೊಳಿಸಿದವಲ್ಲದೆ ಸಾಮಾನ್ಯವಾಗಿ ಮಾನುಷಕೋಟಿಗೆ ಅಪೇಕ್ಷಿತಾಂಶಗಳಾಗಿರತಕ್ಕವುಗಳಲ್ಲಿ ಅವರಿಗೆ ದೃಷ್ಟಿಮಾಂದ್ಯವನ್ನುಂಟುಮಾಡಿ, ಮತಪ್ರಭೇದಗಳನ್ನು ವೃದ್ಧಿಗೊಳಿಸಿ, ಸಾಮುದಾಯಿಕವಾದ ಪ್ರಯೋಜನಕ್ಕಾಗಿ ಸ್ವಸುಖ ಪರಿತ್ಯಾಗ ಪ್ರವೃತ್ತಿಯಂ ಹಿಂದೂಗಳಿಗೆ ಪುದ್ಧಾಂಗವಾಗಿ ಹೋಗಲಾಡಿಸಿದವು. ವಿಶಿಷ್ಟ ಕರ್ಮಗಳ ಮತ್ತು ತತ್ಪ್ರಯುಕ್ತಗಳಾದ ಪ್ರಾಯಶ್ಚಿತ್ತಗಳ ಪ್ರಾಧಾನ್ಯತೆಯನ್ನರುಹುವದಕ್ಕಾಗಿ ಪ್ರತ್ಯೇಕ ಸಭೆಯೊಂದು ಆವಶ್ಯಕವಾಗಿಲ್ಲವು. ಇದಕ್ಕೆ ಬದಲಾಗಿ, ಸನ್ಯುವ್ಯಯಾನವಂ ಕುರಿತು ತಕ್ಕ ಪ್ರಮಾಣಗಳೊಡನೆ ವಿಚಾರ ಮಾಡಿರುವರಾದರೆ ಪ್ರಯೋಜನಕರವಾಗಿರುತಲಿತ್ತು.

WOMEN IN ANCIENT INDIA.
ಆರ್ಯಮಹಿಳೆಯರ ಪ್ರಾಕ್ಕಾಲೀನಾವಸ್ಥಾ ನಿರೂಪಣವು.

No VI.

ಪೌರಾಣಿಕಾವಸ್ಥೆಯಲ್ಲಿ ಬ್ರಾಹ್ಮಣನು ನಾಲ್ಕು ವರ್ಣದವರಲ್ಲಿಯೂ ಕ್ರಮವಾಗಿ ನಾಲ್ಕುಜನ ಭಾರ್ಯೆಯರನ್ನೂ, ಕ್ಷತ್ರಿಯರು ಇತರ ಮೂರುವರ್ಣದಲ್ಲಿ ಮೂವರು ಭಾರ್ಯೆಯರನ್ನೂ, ವೈಶ್ಯರು ಕಡೇ ಎರಡು ವರ್ಣದಲ್ಲಿ ಇಬ್ಬರು ಭಾರ್ಯೆಯರನ್ನೂ, ಶೂದ್ರರು ಸಮಾನ ವರ್ಣದವಳಾದ ಒಬ್ಬ ಭಾರ್ಯೆಯನ್ನೂ ಪರಿಗ್ರಹಿಸ ಬಹುದೆಂಬದಾಗಿ ಆಚಾರವೇರ್ಪಟ್ಟಿತು. ಈವಿಷಯದಲ್ಲಿ ಗೌತಮ ಪರಾಶರ, ಯಾಜ್ಞವಲ್ಕ್ಯ, ಆಪಸ್ತಂಬ, ವಿಷ್ಣು ಬೋಧಾಯನಾದಿ ಸ್ಮೃತಿಗಳನ್ನು ನೋಡಿದರೆ ಸ್ಪಷ್ಟವಾಗಿ ವ್ಯಕ್ತವಾಗುವದು. ಮೇಲೆ ಕಂಡ ನಿರ್ಬಂಧವು ದೇವಯಾನಿಯ ವಿಷಯದಲ್ಲಿ ಮಾತ್ರ ಅನ್ವಯಿಸದೆಹೋಯಿತು. ಏತಕ್ಕೆಂದರೆ, ಅಸುರಗುರುವಾದ ಶುಕ್ರಾಚಾರ್ಯರಲ್ಲಿ ಬೃಹಸ್ಪತ್ಯಾಚಾರ್ಯರ ಪುತ್ರನಾದ ಕಚನೆಂಬವನು ಸಂಜೀವಿನೀ ವಿದ್ಯೆಯನ್ನಭ್ಯಸಿಸುವದಕ್ಕಾಗಿ ಬಹುಕಾಲ ಗುರುಕುಲವಾಸವಂ ಮಾಡುತಲಿರುವಲ್ಲಿ ಗುರುಪುತ್ರಿಯಾದ ದೇವಯಾನೆಯು ಆತನು ಮೋಹಿಸಲಾಗಿ ಅದಕ್ಕಾತನೊಡಂಬಡದೆ ನಿಷೇಧಿಸಲು, ನೀನು ಕಲಿತ ವಿದ್ಯೆಯು ನಿನಗೆ ಪ್ರಯೋಜನವಾಗದೆ ಹೋಗಲೆಂದು ಶಾಪವಿತ್ತಳು. ಆಗ ಕಚನು ನಿನ್ನ ಪತಿಯು ಬ್ರಾಹ್ಮಣನಲ್ಲದೆ ಹೋಗಲೆಂದು ಪುನಃ ಶಪಿಸಿದನು. ಹೀಗಿರುವಲ್ಲಿ ರಾಜಪುತ್ರಿಯಾದ ಶರ್ಮಿಷ್ಠೆಯೊಂದು ದಿನ ತನ್ನ ಕೆಳದಿಯರೊಡನೆ ಉದ್ಯಾನವನದಲ್ಲಿ ಜಲಕ್ರೀಡೆಯನ್ನಾಡುತಲಿರುವಾಗ್ಯೆ ಆಕೆಯುಟ್ಟಿದ್ದ ಸೀರೆಯನ್ನರಿಯದೆ ದೇವಯಾನೆಯು ಧರಿಸಿಕೊಂಡದಕ್ಕಾಗಿ ಅವಳ ಮೇಲೆ ಆಗ್ರಹಗೊಂಡು, ಭಿಕ್ಷುಕನಾದ ಇವಳ ತಂದೆಯು ನನ್ನ ಜನಕನಲ್ಲಿ ಯಾಚಿಸಿ ಜೀವಿಸುತಲಿದ್ದಾಗ್ಯೂ ಇವಳು ತನ್ನ ಸ್ಥಿತಿಯನ್ನರಿಯದೆ ಮತ್ತತೆಯಿಂದ ನನ್ನ ವಸ್ತ್ರವಂ ಧರಿಸಿರುತ್ತಾಳಾಗಿ ಇವಳಂ ಒಂದು ಕೂಪದಲ್ಲಿ ನಿರ್ದಾಕ್ಷಿಣ್ಯವಾಗಿ ತಳ್ಳಿಬಿಡಿರೆಂದು ಇತರ ಸಖಿಯರಿಗೆ ಆಜ್ಞಾಪಿಸಿದಳು. ಅವರದೇರೀತಿ ಮಾಡಲು, ಯಯಾತಿ ಮಹಾರಾಜನು ಆ ಮಾರ್ಗವಾಗಿ ಮೃಗಯಾ ವಿನೋದಾರ್ಥ ಸಂಚಾರ ಹೋಗುತಲಿರುವಾಗ ದೇವಯಾನೆಯ ಆರ್ತಧ್ವನಿಯಂ ಕೇಳಿ ತನ್ನ ಉತ್ತರೀಯವನ್ನಿತ್ತು ಧರಿಸಹೇಳಿ ದಕ್ಷಿಣ ಹಸ್ತಾವಲಂಬದಿಂ ಅವಳನ್ನು ಮೇಲಕ್ಕೆ ಸೆಳೆದುಕೊಂಡನು. ಆಗ ದೇವಯಾನೆಯು ಯಯಾತಿಯಂ ಕುರಿತು ನೀನು ಪಾಣಿಗ್ರಹಣ ಮಾಡಿ ರಕ್ಷಿಸಿದಿಯಾಗಿ ನಿನ್ನನ್ನೇ ಪತಿಯಾಗಿವರಿಸುತ್ತೇನೆ ದೈವಯೋಗ ಪ್ರತಪ್ಪಲಾರದು, ಪುರುಷ ವಾಕ್ಯವು ಅಸಿದ್ಧವಲ್ಲವು, ಆದಕಾರಣ ನಾನು ಅನ್ಯರನ್ನೆಂದಿಗೂ ವರಿಸಲಾರೆನೆಂದು ಹೇಳಿ ತನ್ನ ಪೂರ್ವವೃತ್ತಾಂತಗಳನ್ನೆಲ್ಲ ತಿಳಿಸಿದಳು. ಈ ಸಂದರ್ಭದಲ್ಲಿ ಶುಕ್ರಾಚಾರ್ಯರು ಕ್ಷತ್ರಿಯ ಪರಿಗ್ರಹಕ್ಕೊಪ್ಪದೆ ಬಹಳವಾಗಿ ತಡೆದರು. ಆದಾಗ್ಯೂ ದೇವಯಾನೆಯ ದೃಢಪ್ರತಿಜ್ಞೆಯನ್ನೂ ಉತ್ತರೋತ್ತರವುಂಟಾಗಬಹುದಾದ ಅನರ್ಥಗಳನ್ನೂ ಪರ್ಯಾಲೋಚಿಸಿ ವಿವಾಹಕ್ಕೆ ಅನುಜ್ಞೆಯಂ ಕೊಟ್ಟು ಇಂತಾವಿವಾಹವು ಯೆಂದಿಗೂ ನಡೆಯದೆ ಹೋಗಕ್ಕೂಡದೆಂದು ಶಾಪವನ್ನಿತ್ತರು. ಪ್ರಕೃತ ದಶೆಯಲ್ಲಿ ಅದರ ಪೂರ್ವಾವಸ್ಥೆಯೊಳಿದ್ದಂತೆಯೇ ವಿವಾಹಗಳು, ಮುಖ್ಯವಾಗಿ ಬ್ರಾಹ್ಮಣರಲ್ಲಿ ಕೇವಲ ಐಹಿಕ ಸುಖಾರ್ಥವಲ್ಲದೆ ಆಮುಷ್ಮಿಕೋದ್ದೇಶದಿಂ ನಡೆಸಲ್ಪಡತಕ್ಕವಾಗಿದ್ದವು. ಮನುಪುತ್ರಿಯಾದ ದೇವಹೂತಿಯು ಬ್ರಹ್ಮಪುತ್ರನಾದ ಕರ್ದಮ ಪ್ರಜಾಪತಿಯನ್ನು ವರಿಸಲು, ಆದಕ್ಕಾತನು, ತನಗೊಬ್ಬ ಪುತ್ರನುದ್ಭವಿಸಿದ ಕೂಡಲೆ ತಪೋಮಾರ್ಗವನ್ನಾಶ್ರಯಿಸಲಿಕ್ಕೆ ಸಮ್ಮತಿಸಿದರೆ ವಿವಾಹ ಮಾಡಿಕೊಳ್ಳುತ್ತೇನೆಂದು ಹೇಳಿದ

ನು. ಅದಂ ದೇವಹೂತಿಯು ಅಂಗೀಕರಿಸಿ ವಿಶ್ರಾಂತ ಮಾಡಿಕೊಂಡಳು. ಸಾಕ್ಷಾದ್ಭಗವದಂಶಸಂಭೂತನಾದ ಕಪಿಲನು ಜನಿಸಿದ ಕೂಡಲೇ ಕರ್ದಮನು ವನವಾಸಕ್ಕೆ ತೆರಳುವ ಬಗ್ಗೆ ತನ್ನ ಭಾರ್ಯೆಯ ಅನುಮತಿಯಂ ಕೇಳಲು ಅವಳು ಸಮ್ಮತಿಸಿ ತನಗೆ ಜ್ಞಾನೋಪದೇಶಕನಾದ ಗುರುವನ್ನೇರ್ಪಡಿಸಿ ಹೋಗಬೇಕೆಂದು ಪ್ರಾರ್ಥಿಸಿದಳು. ಆಗ ಕರ್ದಮನು ನಿನ್ನ ಗರ್ಭದಲ್ಲಿ ಜನಿಸಿದ ಪುತ್ರನು ಮುಂದೆ ಮಹಾಜ್ಞಾನಿಯಾಗಿ ಸಿದ್ಧಾಂತ ಪ್ರವರ್ತಕನಾಗುವನಾಗಿ ಆತನೇ ನಿನಗೆ ತತ್ತ್ವಾರ್ಥಗಳನ್ನುಪದೇಶಿಸುವನೆಂದು ಹಾಜರ್ಪಡಿಸಿದನು. ಅದೇ ಪ್ರಕಾರ ಕಪಿಲನು ತನ್ನ ತಾಯಿಯಾದ ದೇವಹೂತಿಗೆ ಸಾಂಖ್ಯಾದಿ ಸಕಲ ತತ್ತ್ವಗಳನ್ನು ಉಪದೇಶಿಸಿ ಆಕೆಯಂ ಮಹಾಜ್ಞಾನಿಯಾಗಿ ಮಾಡಿದನೆಂದು ಶ್ರೀ ಭಾಗವತದಿಂ ಸ್ಪಷ್ಟವಾಗುತಿದೆ. ಹೀಗೆಯೇ ಸ್ತ್ರೀಯರು ಅರವತ್ತುನಾಲ್ಕು ವಿದ್ಯೆಗಳಲ್ಲೂ ಪ್ರವೀಣರೆನ್ನಿಸಿ ಪ್ರಸಿದ್ಧರಾಗಿದ್ದರೆಂಬದಕ್ಕೆ ಶ್ರೀಮನ್ಮಹಾಭಾರತದ ಅನುಶಾಸನಪರ್ವದಲ್ಲಿ ಭೀಷ್ಮನು ಧರ್ಮಪುತ್ರನುಕುರಿತು ತಿಳಿಸಿದ ವಾಕ್ಯಗಳಿಗಿಂತ ಅನ್ಯತರವಾದ ಪ್ರಮಾಣಾಂತರ ಬೇರೊಂದೂ ಇರಲಾರದು.

LOCAL AND PRIVINCIAL NEWS
ಒಳದೇಶ ಮತ್ತು ತಾಲ್ಲೂಕು ವಾರ್ತೆಗಳು

Transfers—ಶಿವಮೊಗ್ಗ ಮುನ್ಸಿಫ್ ಮ|| ತಿರುನಾರಣಾಚಾರ್ ಬಿ. ಎ. ಬಿ. ಎಲ್ ಯವರು, ಎಡತೊರೆಗೂ ಎಡತೊರೆ ಮುನ್ಸಿಫ್ ಮ|| ಸಿ. ರಾಮರಾಯರವರು ಶಿವಮೊಗ್ಗೆಗೂ ವರ್ಗ ಮಾಡಲ್ಪಟ್ಟಿರುತ್ತಾರೆ.

Remission—ಮಂಡ್ಯ ತಾಲ್ಲೂಕಿನಲ್ಲಿ ವಸೂಲಾಗಲಾರದೆಂದು ತಿಳಿಯಬಂದ ಫುಸಲಿ ೧೨೯೭ ರ ಅನಾಮಿಕಗಳ ಹಿಂದಿನ ಕಂದಾಯ ಬಾಕಿಯನ್ನು ಮೈಸೂರ್ ಸರ್ಕಾರದವರು ರೆಮಿಷನ್ ವಜಾ ಮಾಡುವಂತೆ ಹುಕುಂ ಕೊಟ್ಟಿರುತ್ತಾರೆ.

Police Inspection — ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ಲವರು ತಮ್ಮ ಅಸಿಸ್ಟೆಂಟರೊಡನೆ ಹೊಸಕೋಟೆಯ ಪ್ರಾಂತದಲ್ಲಿ ಪೊಲೀಸ್ ಅಜಮಾಯಿಷೀ ಕೆಲಸದ ಮೇಲೆ ಇರುತಲಿರುವಂತೆ ತಿಳಿಯಬರುತಿದೆ. ಅವರ ಮತ್ತೊಬ್ಬ ಅಸಿಸ್ಟೆಂಟರಾದ ಮ|| ಸುಬ್ಬರಾಯ ಅಯ್ಯರವರು ಗತ ಶುಕ್ರವಾರದ ದಿನ ಹೆಡ್‌ಕ್ವಾರ್ಟರ್ಸ್ ಪೊಲೀಸ್ ಸ್ಟೇಷನನ್ನು ತನಿಖೀ ಮಾಡಿದರು.

The weather — ಈಗ ಕಾಲಸ್ಥಿತಿಯು ಬಹಳ ಮನೋಹರವಾಗಿಲ್ಲವು. ಬೆಳಗಿನ ಹೊತ್ತು ಛಳಿಯೂ ಮಂಜೂ ಅಧಿಕವಾಗಿವೆ. ಮಧ್ಯಾಹ್ನ ವೇಳೆಯಲ್ಲಿ ಬಿಸಿಲು ಜಾಸ್ತಿಯಾಗಿದೆ. ಅಲ್ಲಿಯಲ್ಲಿ ಶೀತೋಪದ್ರವಗಳು ತಲೆದೋರಿವೆ. ಈ ಸಲ ಜಡಿಮಳೆಯ ಬಾಧೆ ಉಂಟಾಗದೆ ಇದ್ದದರಿಂದ ಅವರೇ ಫಸಲ್ ಚೆನ್ನಾಗಿ ಬೆಳೆದು ಫಲವು ಅಧಿಕವಾಗಿರುತಿದೆ.

Police —ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ಲವರು ವಿಶಿಷ್ಟ ಮ್ಯಾಜಿಸ್ಟ್ರೇಟುಗಳಿಗೂ, ಅವರವರ ಮುಂದೆ ಬರುವ ಪೊಲೀಸ್ ಮೊಕದ್ದಮೆಗಳಲ್ಲಿ ಪೊಲೀಸ್ ಜವಾನರು ಅಕ್ರಮವಾಗಿ ಜನರನ್ನು ಟ್ರೇಪ್ ಮಾಡಿದ ಅಂಶವನ್ನು ತಮಗೆ ತಿಳಿಸಬೇಕೆಂಬದಾಗಿಯೂ, ಅಕ್ರಮವಾಗಿ ನಡೆಸುವಂತಾ ಪೊಲೀಸ್‌ನವರನ್ನೆಲ್ಲ ತಪ್ಪು ಖಚಿತಪಡಿಸಿ ಅಪರಾಧಿಗಳಾಗಿ ಶಿಕ್ಷಿಸುವದಾಗಿರುವಂತೆಯೂ ತಿಳಿಸಿರುವದಾಗಿ ಕೇಳುತ್ತೇವೆ.

Christmas Holidays.—ಈ ಸಲದ ಕ್ರಿಸ್ಮಸ್ ಹಬ್ಬ ಪ್ರಯುಕ್ತವಾದ ರಜಾ ಈ ದಿನದಿಂ ಪ್ರಾರಂಭವಾಗಿ ಅನೇಕ ಸರ್ಕಾರ್ ಇಲಾಖೆಗಳಲ್ಲವೂ ಮುಚ್ಚಲ್ಪಟ್ಟವು. ಆ ದಿನಗಳು ಅಧಿಕವಾದ ರಜಾ ದೊರೆತಿರುವದರಿಂದ ಅನೇಕರು ಈ ರಜಾವನ್ನು ದೇಶಸಂಚಾರಾದಿಗಳ ಮೂಲಕ ವಿನಿಯೋಗಿಸಿಕೊಳ್ಳುವ ಕುತೂಹಲದಿಂ ಪರಸ್ಥಳಗಳಿಗೆ ಹೊರಡಬಹುದೆಂದು ತೋರುತಿದೆ. ಈ ಸಲದ ಕಾಂಗ್ರೆಸ್ ಸಭೆಯು ಕಲ್ಕತ್ತೆಯಲ್ಲಿ ಈ ವಾರದೊಳು ಜರುಗುವದರಿಂದ ಅಲ್ಲಿಗೆ ಹೋಗಲಿಕ್ಕೆ ಅನೇಕರು ದೂರದೇಶವೆಂಬ ಕಾರಣದ ಮೇಲೆ ಹಿಂಜರಿಯುತಲಿರುವಂತೆ ತಿಳಿಯಬರುವದಲ್ಲದೆ ಈ ಸಲ ಇಲ್ಲಿ ಪ್ರತಿನಿಧಿ ಸಹ ಕುದುರುವದು ಪ್ರಯಾಸವಾಗಿರುವಂತೆ ಕೇಳುತ್ತೇವೆ.

Agricultural and Statistical Reports ಅಗ್ರಿಕಲ್ಚರಲ್ ಮತ್ತು ಸ್ಟ್ಯಾಟಿಸ್ಟಿಕಲ್ ಇಲಾಖೆಗೆ ಪ್ರತ್ಯೇಕವಾಗಿ ಇದುವರಿವಿಗೂ ಸಾಲಿಯಾನೆ ರಿಪೋರ್ಟ್ ಪ್ರಕಟ ಮಾಡಲ್ಪಡುತಲಿರಲಿಲ್ಲವು. ಈಗ ಗವರ್ನಮೆಂಟಿನವರು ಸದರೀ ಇಲಾಖೆಯ ರಿಪೋರ್ಟ್ ಸಹ ಆವಶ್ಯಕವಾಗಿರುವಂತೆ ಮ|| ರಿಕೆಟ್ಸ್ ಯವರಿಗೆ ತಿಳಿಸಿದ್ದರ ಮೇಲೆ ಆ ಇಲಾಖೆಯು ಸ್ಥಾಪಿಸಲ್ಪಟ್ಟದು ಮೊದಲು ಈ ಸರ್ಕಾರೀ ಸಾಲ್ ಅಕ್ಟೋಬರ್ ತನಕ ಬಂದು ರಿಪೋರ್ಟ್ ತಯಾರ್ಮಾಡುತಲಿದಾರೆಂದು ಕೇಳುತ್ತೇವೆ. ಈ ಇಲಾಖೆಗೂ ಒಬ್ಬ ಅಸಿಸ್ಟೆಂಟರನ್ನು ನೇಮಕ ಮಾಡಿದರೆ ಸರಿಯಾಗಿರುವದು.

Absence from Head Quarters.—ಶ್ರೀಮನ್ಮಹಾರಾಜರವರು, ತಮ್ಮ ಕಾರ್ಬಾರ್ ಅಧಿಕಾರಿಯಾದ, ದಿವಾನರವರೊಡನೆ ದೇಶ ಸಂಚಾರಾರ್ಥ ದಯಮಾಡಿ ಅಲ್ಲಿಯಲ್ಲಿ ಪ್ರಜೆಗಳ ರಾಜಭಕ್ತಿ ಕೃತಜ್ಞತಾದಿ ಭಾವ ಪ್ರದರ್ಶನಗಳಾದ ಸತ್ಕಾರಗಳನ್ನಂಗೀಕರಿಸುತ ಅತಿ ಸಂತೋಷ ಪರವಶರಾಗಿರುತ ಇರುವದು ಪ್ರಸಿದ್ಧವಷ್ಟೆ. ಈಗ ಹೊರ್ಡ್ಡ ಅಧಿಕಾರಿಗಳೊಬ್ಬರೂ ಹೆಡ್‌ಕ್ವಾರ್ಟರ್ಸಲ್ಲಿಲ್ಲವು. ಕಂಟ್ರೋಲರ್, ಎಕ್ಸೈಜ್ ಕಮಿಷನರ್, ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್, ರೆಜಿಸ್ಟ್ರೇಷನ್ ಸೆಕ್ರೆಟರಿ, ಚೀಫ್ ಇಂಜಿನಿಯರವರು, ಸೆಟಲ್ಮೆಂಟ್ ಸೂಪರಿಂಟೆಂಡೆಂಟರು, ಪಬ್ಲಿಕ್ ವರ್ಕ್ಸ್ ಸೆಕ್ರೆಟರಿ ಮೊದಲಾದವರೆಲ್ಲರೂ ಪರಸ್ಥಳಗಳಿಗೆ ದೌರಾ ಹೋಗಿದಾರೆ. ಇದು ಜಮಾಬಂದಿ ಕಾಲವಾಗಿಯೂ, ಕ್ರಿಸ್ಮಸ್ ಹಬ್ಬದ ದಿನಗಳಾಗಿಯೂ ಇರುವದರಿಂದ ಡಿಸ್ಟ್ರಿಕ್ಟ್ ಆಫೀಸರುಗಳು ಸಹ ಕಸಬೆಯಲ್ಲಿಲ್ಲವು. ಮುಖ್ಯವಾಗಿ, ಇದು ವಸೂಲೀ ಆಯಾವಾದುದರಿಂದ, ಸರ್ಕಾರ್ ಆಫೀಸರುಗಳೆಲ್ಲರೂ ಹೊರಗೆ ಸಂಚರಿಸದಿದ್ದರೆ ಪ್ರಯೋಜನವಿಲ್ಲವು.

ADDRESS OF THE DEWAN OF MYSORE

to the Representative Assembly held at Mysore on Tuesday, the 7th October 1890.

೫೯. ಈಚೆಗೆ ನಮೂದಿಸುವ ಮಸೂದೆ ರೆಗ್ಯುಲೇಷನ್‌ಗಳು ಇಂಡಿಯಾ ಗವರ್ನಮೆಂಟಿನವರಿಂದ ಅಂಗೀಕಾರವಾಗುವದರಲ್ಲಿ ಇವೆ.

(a) ಆಯುಧಗಳು ಜಂಗೀ ಅಸಬಾಬು ಮತ್ತು ಮಿಲಿಟರಿ ಸ್ಟೋರಿಗೆ ಸಂಬಂಧಪಟ್ಟವು. ಇದು 1878ನೇ ಇಸವಿ XIನೇ ನಂಬರು ಇಂಡಿಯನ್ ಆರ್ಮ್ಸ್ ಆಕ್ಟನ್ನು ಸ್ವಲ್ಪ ಹೆಚ್ಚು ಅನುಸರಿಸಿದ್ದಾಗಿದೆ.

(b) ಕೃಷಿ ವ್ಯಾಪಾರಾಭಿವೃದ್ಧಿಗೋಸ್ಕರ ತಗಾವಿ ಕೊಡತಕ್ಕ ಸಾಲಗಳ ವಿಷಯವಾಗಿದ್ದಾಗಿಯಿದೆ. ಇದು ಸ್ವಲ್ಪ ದರಬದಲು ಕೂಡ 1883ನೇ ಇಸವಿ XIXನೇ ಆಕ್ಟನ್ನು ಅನುಸರಿಸಿದ್ದಾಗಿದೆ.

(c) ಲಂಡನ್ ಅಳತೆ ಬೇಕಾದಳತೆಗಳ ವಿಷಯದ್ದು. ಬ್ರಿಟಿಷ್ ಇಂಡಿಯಾದೇಶದಲ್ಲಿ ವಾಡಿಕೆಯಲ್ಲಿ ಇರುವ ಗಜದ ಅಳತೆ ಸಾಧನವನ್ನು ಈ ಮೈಸೂರುದೇಶದಲ್ಲಿಯೂ ಲಾಂಚನಗಳನ್ನು ಅಳತೆ ಮಾಡುವದರಲ್ಲಿ ನಿಯಾಮಕವಾದ ಸಾಧನವಾಗಿ ಏರ್ಪಡಿಸಬೇಕೆಂಬ ವಿಷಯವಾಗಿದೆ.

೬೦. ಪ್ರಕೃತದಲ್ಲಿ ದರ್ಬಾರಿನ ಆಲೋಚನೆಯಲ್ಲಿ ಇರುವ ಅನೇಕ ಪ್ರಮೇಯಗಳ ಪೈಕಿ ಮುಖ್ಯವಾದ ವಿಷಯಗಳು:—

(a) ಬಂಗಾರದ ಗಣಿಗಳಿಗೆ ಸಂಬಂಧಪಟ್ಟ ದಸ್ತಾವೇಜುಗಳ ಕಳವಿನ ಬಂದೋಬಸ್ತು ವಿಷಯದ ಕಾನೂನು.

(b) ಕಂಪೆನಿಗಳು

(c) ಗವರ್ನಮೆಂಟು ಸಿಕ್ಯೂರಿಟಿಗಳು

(d) ಫಾರೆಸ್ಟ್

(e) ಕಂಟಲ್ಮೆಂಟಿನ ಮ್ಯಾಜಿಸ್ಟ್ರೇಟ್‌ರಯಾನೆ ಸರ್ಕಾರದವರು ಬಲಾತ್ಕಾರದಿಂದ ಪಡೆದುಕೊಳ್ಳುವಿಕೆ.

(f) ಲೋಕಲ್ ಬೋರ್ಡುಗಳ ವಿಷಯ.

(g) ಮ್ಯುನಿಸಿಪಾಲಿಟಿಗಳು

(h) ಪೊಲೀಸ್.

(i) ಸಿವಿಲ್ ಪ್ರೊಸಿಡ್ಯೂರ್ ಬದಲಾವಣೆ

ಇವುಗಳಪೈಕಿ ಬಹು ಪ್ರಮೇಯಗಳು ಚಾಲತಿನಾಲಿನಲ್ಲಿ ಲೋಕಲ್ ಗೆಜೆಟಿನಲ್ಲಿ ಪ್ರಸಿದ್ಧಿಪಡಿಸುವದಕ್ಕೆ ಸಿದ್ಧವಾಗುತ್ತೆ. ತನ್ಮೂಲಕ ಪ್ರಜೆಗಳ ಅಭಿಪ್ರಾಯವು ತಿಳಿದುಕೊಳ್ಳಲ್ಪಡುತ್ತೆ.

೬೧. ಮಲನಾಡು ಬಾಗಾಯಿತ್, ಕಂದಾಯ ಕಳೆದವರುಷದಲ್ಲಿ ನಾಂವು ಗಮನಕೊಟ್ಟ ಒಂದು ಮುಖ್ಯವಾದ ಸಂಗತಿ ಯಾವದೆಂದರೆ, ಮಲನಾಡು ಸೀಮೆಯಲ್ಲಿ ಇರುವ ಅಡಿಕೆತೋಟಗಳ ಸ್ಥಿತಿಗಳಿಗೆ ಸಾಯರ್ ಹಾಸಲು ಶಿವಾಯಿ ಎಲ್ಲಿಯೂ ಇಲ್ಲದಷ್ಟು ಜವಿರ್ ಕಂದಾಯ ಸದರೀ ತೋಟಗಳಿಗೆ ದಾಖಲಾಗಿರುವ ಅಂಶವನ್ನು ಶಿವಮೊಗ್ಗ ಡಿಸ್ಟ್ರಿಕ್ಟಿನಿಂದ ಬರುವ ಮೆಂಬರ್‌ಗಳು ಪ್ರತಿವರ್ಷದಲ್ಲೂ ಈ ಸಭೆಯಲ್ಲಿ ಹೇಳಿಕೊಳ್ಳುತ್ತಾ ಇದಾರೆಯಷ್ಟೆ. ಹೋದವರುಷದ ಹಿಮಕಾಲದಲ್ಲಿ ನಾವು ಆ ಪ್ರಾಂತ್ಯ ಸರಕ್ಯೂಟ್ ಹೊರಟುಯಿದ್ದಾಗ್ಯೆ ಪ್ರತ್ಯಕ್ಷ ನೋಡಿದ್ದರಲ್ಲಿಯೂ ಮತ್ತು ಸ್ಥಳದಲ್ಲಿ ವಿಚಾರಮಾಡಿದ್ದರಲ್ಲಿಯೂ ನಮ್ಮ ಮನಸ್ಸಿಗೆ ಯಥಾರ್ಥವಾಗಿ ತಿಳಿಯಬಂದದ್ದು ಏನೆಂದರೆ, ಸಾಮಾನ್ಯವಾಗಿ ತೋಟಮಾಲಿಕರಿಗೆ ತಕ್ಕವರು ಅದರಲ್ಲಿ ಮುಖ್ಯವಾಗಿ ಸಾಗರತಾಲ್ಲೂಕಿನಲ್ಲೂ ನಗರ ತಾಲ್ಲೂಕಿನ ಉತ್ತರಭಾಗದಲ್ಲೂ ಮಾಡತಕ್ಕವರು ಹೇಳಿಕೊಳ್ಳುವ ಅನಾನುಕೂಲಗಳು ನಿರಾಧಾರವಾದದ್ದಲ್ಲ. ಈ ಅಭಿಪ್ರಾಯವು ನಮ್ಮ ಸಹಾಯಕಾರಿಗಳಾದ ಮುಖ್ಯೋದ್ಯೋಗದಲ್ಲಿ ಬಹು ಅನುಭವಸ್ಥರಾಗಿರುವ ಮ|| ಬಿ. ಚೆಂಚಲರಾವ್ ಸಿ. ಐ. ಈ. ಯವರ ಅವ್ಯಾಜವಾದ ಅಭಿಪ್ರಾಯದಿಂದ ದೃಢಪಟ್ಟಿರುತ್ತೆ. ಈದೊಡ್ಡಮನುಷ್ಯರು ಈದೇಶಕ್ಕೆ ಸಮೀಪವಾಗಿರುವ ಮದರಾಸ್ ಪ್ರಸಿಡೆಂಸಿಯ ಡಿಸ್ಟ್ರಿಕ್ಟುಗಳಲ್ಲಿ ರೆವಿನ್ಯೂ ಅಧಿಕಾರದಲ್ಲಿ ಉಂಟಾಗಿರುವ ಬಹುವಿಧವಾದ ಅನುಭವವನ್ನು ಮೈಸೂರು ಗವರ್ನ್‌ಮೆಂಟಿಗೆ ಅವರು ಕೊಡುವ ಸಲಹೆಗಳಲ್ಲಿ ಉಪಯೋಗಿಸುತಲಿದಾರೆ. ನಮ್ಮ ಸಂಚಾರದಲ್ಲಿ ಇವರು ನಮ್ಮ ಸಂಗಡಲಿದ್ದರು. ತೋಟಗಳಸ್ಥಿತಿಯನ್ನು ಕುರಿತು ನಾವು ರೂಬರೂಪ್ ವಿಚಾರಮಾಡಿದ್ದರಲ್ಲಿಯೂ ಮತ್ತು ತೋಟದ ಮಾಲೀಕನ ಅಪಚಾರ ನಿರ್ಧರಿಸಿದ್ದರಲ್ಲಿಯೂ ಯಾವ ವಿಧದಿಂದಲಾದರು ಸದರೀ ತೋಟದ ಮಾಲೀಕರಿಗೆ ಕೂಡ್ಲೆ ಇನ್ಸಾಫ್ ಮಾಡತಕ್ಕದ್ದು ಬಹಳ ಆವಶ್ಯಕವೆಂದು ನಮಗೆ ಚೆನ್ನಾಗಿ ಕಂಡುಬಂತು. ಈ ವಿಷಯದಲ್ಲಿ ಪುನರಪಿ ವಿಚಾರಮಾಡೋಣವರನ್ನ ಮುಂದಿನ ಹಿಮಕಾಲದಲ್ಲಿ ತೀರ್ಥಹಳ್ಳಿ ಮತ್ತು ಕೊಪ್ಪತಾಲ್ಲೂಕುಗಳಲ್ಲಿಉಪಕ್ರಮ ಮಾಡುವೆವೆಂದುಕೋರುತ್ತೇವೆ.

೬೨. ಸಾಗರ ಮತ್ತು ನಗರ ತಾಲ್ಲೂಕುಗಳ ಅಡಿಕೆತೋಟದ ಉತ್ಪತ್ತಿ ಮೇಲೆ ವಸೂಲಾಗುವ ಸಾಯರ್ ಹಾಸಲು ಶಿವಾಯಿ ಭಾರೀಯಾದ ಜವಿರ್ ಕಂದಾಯ ಕೊಡುವದುಮಾತ್ರವೆ ಅಲ್ಲದೆ ಆಳುಗಳನ್ನ ಸಂಪಾದಿಸುವದರಲ್ಲಿರುವ ಪ್ರಯಾಸದಿಂದಲೂ ಸಮೀಪದವಾಗಿ ಜೆನಿಸೀ ಖರೀದಿ ಆಗತಕ್ಕ ವ್ಯಾಪಾರಸ್ಥಳಗಳುಯಿಲ್ಲದೆ ಇರುವದ್ದರಿಂದಲೂ ಹೆಚ್ಚಾದ ಥಂಡಿಯಿಂದ ಹುಟ್ಟುವ ಜೊಳರೋಗವೆಂದು ಪ್ರಸಿದ್ಧವಾದ ವಿಜಾತೀಯ ರೋಗದಿಂದಲೂ, ಬಚ್ಚೆ ಹುಳವೆಂಬ ಒಂದು ವಿವಾದ ಹುಳಗಳಿಂದಾಗುವ ನಷ್ಟಗಳಿಂದಲೂ ಕಷ್ಟಪಡುತಲಿದಾರೆ. ಸದರೀ ಬಚ್ಚೆ ಹುಳವೆಂಬುವದು ಜುಗರಿ ವಸ್ತುವದರಿಂದ ಕಾಣಿಸಿಕೊಳ್ಳುತ್ತವೆಂದು ಜನಗಳು ಹೇಳುತ್ತಾರೆ. ಆಳುಗಳು ಸಿಕ್ಕದೆಯಿರತಕ್ಕ ಕ್ರಮವನ್ನ ನಿವಾರಣೆಮಾಡಬೇಕಾದರೆ ಕ್ಲುಪ್ತವಾಗಿ ರಸ್ತೆ ಬಸ್ತುಮಾಡಲ್ಪಟ್ಟ ಪ್ರದೇಶಗಳಲ್ಲಿಯೂ ಮುಖ್ಯವಾಗಿ ಜಂಗಲ್ ಸಾಕಾಗಿರುವ ಬಯಲೀ ಪ್ರದೇಶಗಳಲ್ಲಿಯೂ ಕುಮುರಿ ಸಾಗುವಳಿಗೆ ಅಪ್ಪಣೆಕೊಡೋಣದರಮೂಲಕ ಸ್ವಲ್ಪಮಟ್ಟಿಗೆ ಪರಿಹಾರವಾಗಬಹುದು. ಇಂತಾ ಕುಮುರಿ ಸಾಗುವಳಿಯನ್ನ ಸ್ವಲ್ಪಮಟ್ಟಿಗೆ ಉಪಕ್ರಮಿಸೋಣವು ಈಗಿನ ಸಾಗುವಳಿಯನ್ನ ಕಾಪಾಡುವದಕ್ಕೂ ಮತ್ತು ಸಾಗುವಳಿದಾರ್ರ ಅನುಕೂಲತ ಮತ್ತು ಆರೋಗ್ಯಕ್ಕೂ ಆವಶ್ಯಕವಾಗಿರುತ್ತೆ. ಈದೇಶದಬಾಜಾರದಲ್ಲಿರತಕ್ಕ ಮದರಾಸ್ ಡಿ|| ಜಾಲೀಜಾರೀಲಿರುವ ರೂಲ್ಸುಗಳಂತೆ ಏರ್ಪಡಿಸಿ ಕೂಡ್ಲೆ ಜಾರೀಗೆ ತರಲ್ಪಡುತ್ತೆ. ಹೊಸದಾದ ಲೋಕಲ್ ರೋಡುಗಳನ್ನು ಮಾಡಿಸುವದರಮೂಲಕ ಈಸಂಸ್ಥಾನದ ಇತರ ಭಾಗಗಳಿಗೂ ಪ್ರಸಿದ್ಧಿಯಾದ ವ್ಯಾಪಾರಸ್ಥರಿಗೂ ಸಂಬಂಧವಿಲ್ಲದೆ ದೂರವಾಗಿದ್ದ ಸಾಗರತಾಲ್ಲೂಕಿನ ಪಶ್ಚಿಮಭಾಗದ ಮಲನಾಡು ಪ್ರಾಂತ್ಯವನ್ನ ಸುಲಭಮಾಡಿಸುವದಕ್ಕೆ ಸಾಧ್ಯವಾದ ಪ್ರಯತ್ನ ಮಾಡುತಲಿದ್ದೇವೆ. ಗೋವರ್ಧನಗಿರಿ ಮತ್ತು ಹೊನಿವಾರ್ಗವಾಗಿ ಒಂದು ಘಾಟರಸ್ತೆ ಹಾಕಿಸೋಣದರಿಂದ ಗೆರೆಸೊಪ್ಪೆಬಳಿಇರುವ ಬಹು ವ್ಯಾಪಾರ ನಡೆಯತಕ್ಕ ಸ್ಥಳಗಳಿಗೆ ಜೆನಿಸೀ ತೆಗದುಕೊಂಡು ಹೋಗುವದಕ್ಕೆ ಬಹಳ ಅನುಕೂಲ ಉಂಟಾಗುತ್ತೆ. ಇದು ಕ್ಷಿಪ್ರದಲ್ಲಿಯೇ ಇಂಜನೀರುಗಳ ವಿಚಾರಣೆಗೆ ಒಳಪಡುತ್ತೆ. ಆದರೆ ಈ ಎಲ್ಲಾ ಪ್ರಯತ್ನಗಳೊಡನೆ ಬೆಳೆಯತಕ್ಕವರಿಗೆ ಆಗಬೇಕಾದ ವಿಶೇಷಸಹಾಯದಲ್ಲಿ ಅತ್ಯಲ್ಪವಾದದ್ದಾಗಿರುತ್ತೆ. ರೈತನಿಗೆ ಯಾವವಿಧವಾಗಿ ಸಹಾಯ ಉಂಟುಮಾಡಿಕೊಡಬೇಕು, ಮತ್ತು ಎಷ್ಟುಮಟ್ಟಿಗೆ ಸಹಾಯಮಾಡತಕ್ಕದ್ದು ಅವಶ್ಯಕವೆಂಬ ಅಂಶಗಳು ಇನ್ನು ವಿಶದವಾಗಿ ನಮಗೆ ಬೇಕಾದ ಕೆಲ ಹೆಚ್ಚು ಸಂಗತಿಗಳನ್ನು ತಿಳಿದು ರಿಪೋರ್ಟುಕೊಡಲು ಕ್ಷಿಪ್ರದಲ್ಲಿಯೇ ನೇಮಕರಾಗುವ ಒಬ್ಬ ಸ್ಪೆಷಲ್ ಆಫಿಸರ ರಿಪೋರ್ಟ್ ಬಂದಕೂಡ್ಲೆ ವ್ಯವಸ್ಥೆಮಾಡಲ್ಪಡುತ್ತೆ. ಪ್ರಕೃತದಲ್ಲಿ ನಿರಾಕ್ಷೇಪವಾಗಿ ಹೇಳಬಹುದಾದ್ದು ಏನೆಂದರೆ, ಈಗ ಕೆಲವುವರುಷಗಳಿಂದ ಅಡಿಕೆಧಾರಣೆ ಕಡಿಮೆಯಾಗಿರುವಂತೆ ಆಗದೆ ಇದ್ದಪಕ್ಷಕ್ಕೆ ಮುಖ್ಯವಾಗಿ ಸಾಗರದಲ್ಲಿ ದಾಖಲಾಗಿರುವ ಕಂದಾಯವು ತೆರುವದಕ್ಕೆ ಅಸಾಧ್ಯವಾಗುತಿತ್ತು. ಅಡಿಕೆತೋಟಗಳು ಹಾಳಿ ಇರುವದಕ್ಕಿಂತಲೂ ಹೆಚ್ಚಾಗಿ ಸಾಗುವಳಿಇಲ್ಲದೆ ಪೈರ್ ಆಗುತಲಿತ್ತು. ಮಿತವ್ಯಯಿಯಾದ ಮಲನಾಡುದೇಶದ ರೈತನನ್ನು ಮತ್ತು ಅಡಿಕೆಸಾಗುವಳಿ ವಿಷಯದಲ್ಲಿ ಅವನಿಗೆ ವಂಶಪರಂಪರೆಯಾಗಿ ಬಂದಿರುವ ಹೊಂದಿಕೆಯೊಡನೆ ಅವನ ತೋಟಗಳಲ್ಲಿಯೇ ಅವನನ್ನ ಇರಿಸಿ ತೋಟದಸಾಗುವಳೀ ಅಭಿವೃದ್ಧಿಗೋಸ್ಕರ ಎಲ್ಲಾ ಪ್ರೋತ್ಸಾಹವನ್ನು ಮಾಡಿಕೊಡಬೇಕೆಂತ ಗವರ್ನಮೆಂಟವರಿಗೆ ವಿಶೇಷ ಕುತೂಹಲವಿರುತ್ತೆ.

೬೩. ಇನ್ಷ್ಯೂರೆನ್ಸ್—ಶ್ರೀಮನ್ಮಹಾರಾಜರವರ ಸರಕಾರದವರು ತಮ್ಮ ನೌಕರರ ವಿಶೇಷಪ್ರಯೋಜನಕ್ಕೋಸ್ಕರ ಲೈಫ್ ಇನ್ಷ್ಯೂರೆನ್ಸು ಯೆಂಬ ಪದ್ಧತಿಯನ್ನು ಏರ್ಪಡಿಸಬೇಕೆಂಬ ವಿಷಯವನ್ನು ಆಲೋಚಿಸುತಲಿದ್ದಾರೆ. ಸರಕಾರದವರು ನೇಟಿವ್‌ಜನಗಳ ಜೀವಗಳನ್ನು ಇನ್ಷ್ಯೂರು ಮಾಡುವ ಸಂಗತಿಯು ಕೆಲವುವರ್ಷಗಳಿಗೆ ಇಂಡಿಯಾ ಗವರ್ನಮೆಂಟಿನವರ ಅವಧಾನಕ್ಕೆ ವಿಷಯವಾಗಿತ್ತು. ಆಗ್ಯೆ ನಡೆದ ಚರ್ಚೆಯಲ್ಲಿ ಸದರೀ ಏರ್ಪಾಡು ಪ್ರಜೆಗಳಿಗೆ ನಿಸ್ಸಂದೇಹವಾದ ಉಪಕಾರವಾಗಿರುತ್ತೆಂದು ಎಲ್ಲರೂ ಒಂದೇಅಭಿಪ್ರಾಯಪಟ್ಟರು. ಆದರೆ ಸದರೀ ಕೆಲಸವನ್ನ ನೆರವೇರಿಸುವದರಲ್ಲಿ ಇರುವ ಪ್ರಯಾಸವು ನೇಟಿವ್ ಪ್ರಜೆಗಳು ಸದರೀ ಏರ್ಪಾಡಿಗೆ ಸೇರಿ ಅದರ ಪ್ರಯೋಜನಗಳನ್ನ ಧಾರಾಳವಾಗಿ ಹೊಂದದೆ ಹೋದಾರೆಂಬ ಆಲೋಚನೆಗಳಮೇಲೆ ಸದರೀ ವಿಷಯವು ಜಾರೀಗೆ ತರಲ್ಪಡಲಿಲ್ಲ. ಆದಾಗ್ಯೂ ಕೆಲವು ಪ್ರೈವೇಟ್ ಕಂಪೆನಿಗಳು ನೇಟಿವ್‌ಜನಗಳ ಜೀವಗಳನ್ನ ಇನ್ಷ್ಯೂರ್‌ಮಾಡುವ ಕೆಲಸವನ್ನು ವಹಿಸಿ ತಮ್ಮ ವ್ಯಾಪಾರವನ್ನ ಹೆಚ್ಚು ಮಾಡಿಕೊಂಡರು. ಆದರೆ ಸಾಧಾರಣವಾಗಿ ಎಲ್ಲಾ ಜನಗಳು ತತ್ಕಾಲ ಸರಕಾರ ನೌಕರರೂ ಕಂಪೆನಿಗಳು ಶಾಶ್ವತವಾಗಿ ನಡೆದೀತೆಂಬ ನಂಬಿಕೆ ಅವರುಗಳಿಗೆ ಇಲ್ಲದೆ ಯಿದ್ದರಿಂದ ಇನ್ಷ್ಯೂರೆನ್ಸ್ ಫಾಯಿದೆಯನ್ನ ಹೊಂದುವದರಲ್ಲಿ ಆಲಸರಾಗಿದ್ದಾರೆ. ಹೀಗಿರಲಾಗಿ ಶ್ರೀಮನ್ಮಹಾರಾಜರವರ ಸರಕಾರವು ಸರಕಾರದ ಗ್ಯಾರಂ

ಪ್ರತಿಷ್ಠಿತನೆ ತಮ್ಮ ಸ್ವಂತ ನೌಕರರ ಪ್ರಯೋಜನಕ್ಕೋಸ್ಕರವಾಗಿ ಈಗಿನ ಪೆನ್ಶನ್ ಕೊಡುವ ಶಾಸ್ತ್ರಬದ್ಧಕ್ಕೆ ಪೆನ್ಶನ್ ಮತ್ತು ಗ್ರ್ಯಾಚ್ಯುಯಿಟಿ ಅಲ್ಲದೆ, ಅದರಮೇಲೆ, ಉಪಯೋಗವಾಗುವಂತೆ ಇನ್ಶ್ಯೂರೆನ್ಸ್ ಏರ್ಪಾಡನ್ನು ಮಾಡತಕ್ಕದ್ದು ಅಪೇಕ್ಷಿತವಾದ್ದೆಂದು ಎಣಿಸುತ್ತಾರೆ. ಸದರೀ ಏರ್ಪಾಡಿನ ಆಶಯವೇನಂದರೆ, ಸರಕಾರ ನೌಕರರು ಸ್ವಲ್ಪಸ್ವಲ್ಪವಾಗಿ ಕೂಡಿಹಾಕುವ ಹಣವನ್ನು ಯಾವಾಗಲಾದರು ತೆಗೆದುಕೊಂದು ಆ ಹಣಕ್ಕೆ ಅಪ್ರಯೋಜನವಿಲ್ಲದಹಾಗೆ ಫಾಯಿದೆ ಬರುವಂತೆ ಮಾಡುವದು. ಮತ್ತು ಸದರೀ ಹಣವನ್ನು ಕೊಟ್ಟಂಥವರಿಗೂ ಮತ್ತು ಅವರ ಕುಟುಂಬದವರಿಗೂ ಮುಂದಕ್ಕೆ ರಕ್ಷ ಜೀವನೋಪಾಯವನ್ನು ಉಂಟುಮಾಡುವದು. ಇದಕ್ಕಾಗಿ ಸದರೀ ನೌಕರರು ಬಹಳವರುಷಗಳವರೆಗೂ ಜಾಗ್ರತೆಯಾಗಿ ತಮ್ಮಗಳಿಗೆ ಭಾರವೆಂತ ತೋರದಷ್ಟು ಸ್ವಲ್ಪವಾಗಿ ಹಣ ಕೊಡುತ್ತಾ ಹೋಗುವದು ಈಮೇರೆಗೆ ಏರ್ಪಾಡು ಮಾಡಲ್ಪಡುತ್ತೆ. ಈಏರ್ಪಾಡಿನಿಂದ ಸರಕಾರದವರು ಲಾಭ ಸಂಪಾದಿಸಬೇಕೆಂಬ ಅಪೇಕ್ಷೆ ಇರುವದಿಲ್ಲವಾದ್ದರಿಂದ ಈಗ ಇರುವ ಪ್ರೈವೇಟ್ ಕಂಪೆನಿಗಿಂತಲೂ ಮೇಲಾದ ಫಾಯಿದೆಯನ್ನು ಹಣ ಕೊಟ್ಟವರಿಗೆ ನಡಸಿಕೊಡಲು ಸಮರ್ಥರಾಗಿರುತ್ತಾರೆ.

೭೪. ಸರಕಾರದವರು ತಮ್ಮ ಆಫೀಸರುಗಳನ್ನು ಉತ್ತರೋತ್ತರ ಅವರ ಕುಟುಂಬದವರಿಗೆ ಯೋಗ್ಯವಾದ ಜೀವನಾಧಾರವನ್ನು ಉಂಟುಮಾಡಿಕೊಡುವದಕ್ಕೆ ಸಮರ್ಥರನ್ನಾಗಿಮಾಡಿ ಯಾವ ವಿಧವಾದ ದುರಾಶೆಯು ಅಂದರೆ ಇತರ ಯಾವವಿಧವಾದ ಪ್ರಯೋಜನದ ಅಪೇಕ್ಷೆಯು ಇಲ್ಲದವರನ್ನಾಗಿ ಮಾಡಬೇಕೆಂಬುವದರಲ್ಲಿ ಯಾವಾಗಲೂ ವಿಶೇಷ ಕುತೂಹಲವುಳ್ಳವರಾಗಿರುತ್ತಾರೆ. ಒಬ್ಬ ಆಫೀಸರ ಅವಿವೇಕದಿಂದಲೋ ಅಥವಾ ಅಕಾಲ ಮರಣದಿಂದಲೋ ತನ್ನ ಕುಟುಂಬದ ಜೀವನಕ್ಕೆ ಏನೂ ಏರ್ಪಾಡುಮಾಡದೆ ಹೋಗುವದು ಅನೇಕವಿಷಯದಲ್ಲಿ ಅನೇಕ ವ್ಯಾಳೆ ಸಂಭವಿಸುತಲೇ ಇದೆ. ಈಮುಂತಾದ ಸಂಗತಿಗಳನ್ನು ಗವರ್ನ್‌ಮೆಂಟನವರು ಆಲೋಚನೆಮಾಡಿ ಎಲ್ಲಾ ಸರಕಾರ ನೌಕರರು ತಮ್ಮ ಜೀವನಗಳನ್ನು ಇನ್ಶ್ಯೂರ್ ಮಾಡಿಸುವ ಏರ್ಪಾಡನ್ನು ಮಾಡತಕ್ಕದ್ದು ಯುಕ್ತವೆಂದು ಎಣಿಸುತ್ತಾರೆ. ಈಪದ್ಧತಿಯಿಂದ ಸರಕಾರನೌಕರರಿಗೆ ತುಂಬಾ ಪ್ರಯೋಜನವಿರುವದಲ್ಲದೆ ಅವರು ಇತರಾಪೇಕ್ಷೆ ಇಲ್ಲದೆ ಇರುವಂತೆಯೂ, ಒಳ್ಳೇ ನಡತೆಯುಳ್ಳವರಾಗಿ ಇರುವಂತೆಯೂ ಸಾಮಾನ್ಯವಾಗಿ ಮೇಲಾದಸ್ಥಿತಿಯುಳ್ಳವರಾಗುವಂತೆಯೂ ಏರ್ಪಡಿಸಲ್ಪಟ್ಟಿದೆ. ತಾವು ಗಳಿಸುವ ಸ್ವಲ್ಪ ಸಂಬಳದಿಂದ ವಿಶೇಷ ಕೂಡಿಹಾಕುವದಕ್ಕೆ ಅಶಕ್ತರಾದ ಸರಕಾರದ ನೌಕರರುಗಳಿಗೆ ಈಪದ್ಧತಿಯು ಸಹಾಯ ಮಾಡತಕ್ಕದ್ದಾಗಿರುತ್ತೆ. ಸದರೀ ನೌಕರನು ಅವನಸಂಬಳ ಎಷ್ಟು ಸ್ವಲ್ಪವಾಗಿದ್ದಾಗ್ಯೂ ಈ ಏರ್ಪಾಡಿನ ಪ್ರಯೋಜನವನ್ನು ಹೊಂದಕೂಡದೆಂಬ ನಿರ್ಬಂಧವೇನೂ ಇರುವದಿಲ್ಲ. ಆದರೆ ಅನುಕೂಲವಾಗಿ ಕೆಲಸಗಳನ್ನು ನಡಿಸತಕ್ಕಬಗ್ಗೆ ಪ್ರಾರಂಭದಲ್ಲಿ ಒಂದು ಎರಡು ವರುಷಗಳವರಿವಿಗೂ ಒಂದು ಮಿನಿಮಮ್ ಹದ್ದು ಗೊತ್ತುಮಾಡತಕ್ಕದ್ದು ಅವಶ್ಯಕವಾಗಿ ತೋರುತ್ತೆ. ಆದರೆ ಆ ಹದ್ದನ್ನು ಕ್ರಮಕ್ರಮವಾಗಿಯೂ ತಗ್ಗಿಸಿ ಕಡೆಗೆ ಸಾಧ್ಯವಾದಲ್ಲಿ ಸಂಪೂರ್ಣವಾಗಿ ಮೌಕೂಫ್‌ಮಾಡುವದಾಗುತ್ತೆ. ದೊಡ್ಡ ಸಂಬಳಗಳು ತೆಗೆದುಕೊಳ್ಳತಕ್ಕವರು ತಮ್ಮ ಕುಟುಂಬಗಳಿಗೆ ಯುಕ್ತವಾದ ಜೀವನೋಪಾಯವನ್ನು ಕಲ್ಪಿಸಬೇಕು. ಈ ಏರ್ಪಾಡಿನಲ್ಲಿ ಅವರನ್ನು ಸೇರಿಸಬೇಕಾದ ಅವಶ್ಯಕವಿಲ್ಲ. ಆದರೆ ಅವರವಿಷಯದಲ್ಲಿ ಅವರು ಕೊಡಬೇಕಾದ ಪ್ರೀಮಿಯಮ್ ಹಣಕ್ಕೂ ಅನಂತರ ಅವರಿಗೆ ಸಿಕ್ಕಬಹುದಾದ ಬೋನಸ್ಸು ಹಣಕ್ಕೂ ಒಂದು ಹೆಚ್ಚಾದ ಹದ್ದು ಏರ್ಪಡಿಸಲ್ಪಡಬಹುದು. ಪ್ರಥಮತಃ ಮಿನಿಮಮ್ ಲಿಮಿಟ್ ಅಂದರೆ ಸಣ್ಣದಾದ ಹದ್ದು ... ಅಥವಾ ೧೦ ರೂಪಾಯಿ ಸಂಬಳವೂ ಮ್ಯಾಕ್ಸಿಮಮ್ ಅಂದರೆ ಹೆಚ್ಚಾದ ಹದ್ದು ಏನೂರುರೂಪಾಯಿ ಸಂಬಳವೆಂತಲೂ ಯೋಚಿಸಿಯಿದೆ.

೭೫. ಸದರೀ ಏರ್ಪಾಡಿನ ಮುಖ್ಯಾಂಶಗಳನ್ನು ಸಂಕ್ಷೇಪವಾಗಿ ಕೆಳಗೆ ವಿವರಿಸುತ್ತೆ.

(1) ಒಂದುಹದ್ದು ಕ್ಲಿಷ್ಟವಾಗುವ ಸಂಬಳಕ್ಕೆ ಕಡಿಮೆಯಿಲ್ಲದ ಸರಕಾರ ನೌಕರಿಯಲ್ಲಿ ಹೊಸದಾಗಿ ಪ್ರವೇಶಿಸುವ ಪ್ರತಿಯೊಬ್ಬ ಮನುಷ್ಯನು ತಿಂಗಳಿಗೆ ಹತ್ತು ಅಥವಾ ಇಪ್ಪತ್ತುರೂಪಾಯಿ ಸಂಬಳದ ಕ್ಲಿಷ್ಟವನ್ನು ಪ್ರತ್ಯೇಕವಾಗಿ [illegible] ಮಾಡತಕ್ಕದ್ದು ತನ್ನ ಜೀವವನ್ನು ಗವರ್ನ್‌ಮೆಂಟಿನಲ್ಲಿ ಬೋನಸ್ ಎಂಬ [illegible] ಇನ್ಶ್ಯೂರ್ ಮಾಡತಕ್ಕದ್ದು ಆ ಹಣವು ಅವನಿಗೆ ೫೫ ವರುಷ ವಯಸ್ಸು ಪ್ರಾಪ್ತವಾದಾಗ್ಯೂ ಆಗಲಿ ಅಥವಾ ಅನುಮಾನ ಮುಂಚಿತವಾಗಿ ಸಾಯುವದಕ್ಷಕ್ಕೆ ಅವನ ಕುಟುಂಬಕ್ಕೆ ಆಗಲಿ ಕೊಡತಕ್ಕದ್ದಾಗುತ್ತೆ.

(2) ಸದರೀ ಪ್ರೀಮಿಯಮ್ ರುಸುಂ [illegible] ಮಾಸಿಕ ತತ್ಕಾಲದಲ್ಲಿ ಇರುವ ತಿಂಗಳ ಸಂಬಳದ [illegible] ಗೊತ್ತುಮಾಡಲ್ಪಡುತ್ತೆ. ಸದರೀ ನೌಕರರ ತಿಂಗಳು ಸಂಬಳದಲ್ಲಿ ವಜಾಮಾಡಲ್ಪಡತಕ್ಕದ್ದು [illegible] ಕೊಡುವ ಪ್ರೀಮಿಯಂಗೆ [illegible] ಬೋನಸ್ ಹಣ [illegible] ಕೊಡತಕ್ಕದ್ದು.

(3) ಇದಕ್ಕೆ ಹೊರತು ಸರಕಾರ ನೌಕರಿಯಲ್ಲಿ ಪ್ರವೇಶವಾಗಿರುವ ನೌಕರರು ತಮ್ಮ ಜೀವಗಳನ್ನು ಇನ್ಶ್ಯೂರ್ ಮಾಡಿಸಿಕೊಳ್ಳುವದಕ್ಕೆ ಅಪ್ಪಣೆ ಕೊಡಲ್ಪಡುತ್ತೆ. ಆದರೆ ಆಪದವರು [illegible] ೧೫ವರುಷ ಅತಿಕ್ರಮಿಸಿ [illegible].

(4) ಮೇಲ್ಕಂಡ ಪ್ರಸ್ತಾಪಗಳು ಸಂಪೂರ್ಣವಾಗಿ ಇರುವ ಬಗ್ಗೆ ತಿಂಗಳು [illegible] ಕೊಡತಕ್ಕ ರುಸುಮಿನ [illegible] ಮತ್ತು ಬೋನಸ್ಸಿನ ಒಂದು ವ್ಯಾಖ್ಯಾನವೂ [illegible] ಈ ವಿಷಯ [illegible] ರೂಪಾಯಿಗೆ ಮೇಲ್ಪಟ್ಟ ಸಂಬಳಗಳಲ್ಲೆಲ್ಲ [illegible] ರೂಪಾಯಿ ಸಂಬಳಗಳಿಗೂ ಹಾಕಲ್ಪಡುವದು.

(5) ೫೫ನೇ ವರುಷ ವಯಸ್ಸು ತುಂಬುವದಕ್ಕೆ ಮುಂಚಿತವಾಗಿ ಮೆಡಿಕಲ್ ಅಥವಾ ಇತರ ಕಾರಣದಮೇಲೆ ನೌಕರಿಯಿಂದ ನಿವೃತ್ತನಾಗುವ ಮನುಷ್ಯರಿಗೆ ಈ ಕೆಳಗೆ ಕಾಣಿಸುವ ರಿಯಾಯಿತಿಗಳನ್ನು ಕೊಡತಕ್ಕದ್ದು.

(a) ತಿಂಗಳು ತಿಂಗಳಿಗೆ ನಿಗದಿಯಾದ ಪ್ರೀಮಿಯಂ ಕೊಡುತ್ತಾ ಹೋಗಿ ನಿವೃತ್ತನಾದ ಕಾಲದಲ್ಲಿ [illegible] ವನ್ನು ಪಡೆಯೋಣ ಅಥವಾ

(b) ಗೊತ್ತುಮಾಡಲ್ಪಡುವ ಸ್ಕೇಲ್‌ಪ್ರಕಾರ ಕಮ್ಮಿ [illegible] ಬಳವನ್ನು ತೊತ್ತೆ ತೆಗೆದುಕೊಳ್ಳೋಣ, ಅಥವಾ

(c) ಪ್ರೀಮಿಯಂ ಕೊಡೋಣವನ್ನೇ ನಿಲ್ಲಿಸಿಬಿಟ್ಟು ೫೫ನೇ ವರುಷ ವಯಸ್ಸಿನವನಾಗಲಿ ಅಥವಾ ಅದಕ್ಕೆ ಮುಂಚಿತವಾಗಿ ಸತ್ತ ಪಕ್ಷದಲ್ಲಿ ಪರಿಣಾಮ [illegible] ಆಗಲಿ ಕಮ್ಮಿಯೊಬ್ಬಳಿಗೆ ಸಲ್ಲತಕ್ಕಬಗ್ಗೆ [illegible] ಒಂದುಸೇರಿದ ದಸ್ತವೇಜನ್ನು ಪಡೆಯೋಣ

(d) ೫೫ನೇ ವರುಷ ವಯಸ್ಸಿಗೆ ಮುಂಚಿತವಾಗಿಯೇ ಬರ್ತರಫ್ ಆಗುವ ಮನುಷ್ಯನಿಗೆ ಅವನು ಕೊಟ್ಟಿದ್ದ ಪ್ರೀಮಿಯಂಮೇಲೆ ಲೆಕ್ಕಮಾಡಿ ಅವನಿಗೆ ಸಲ್ಲತಕ್ಕ ಸರಂಡರ್ ವಾಲ್ಯೂ ಎಂಬ ಮೊಬಲಗು ಕೊಡಲ್ಪಡುತ್ತೆ.

೭೬. ಗೊತ್ತಾದ ಪ್ರೀಮಿಯಂ ಎಂಬ ರುಸುಮನ್ನು ಅನುಸರಿಸಿ ಆಯಾಯ ವಯಸ್ಸಿನವರಿಗಾಗಿ ಕೊಡತಕ್ಕ ಬೋನಸ್ ವಗೈರೆ ತಪಸೀಲ್ ತೋರಿಸುವಂತೆ ಒಂದು ತಖ್ತೆ ತಯಾರುಮಾಡಲ್ಪಟ್ಟಿದೆ. ತಿಂಗಳು ಒಂದಕ್ಕೆ ೧೦ ರೂಪಾಯಿ ಮತ್ತು ಅದಕ್ಕೆ ಮೇಲ್ಪಟ್ಟ ಸಂಬಳ ತೆಗೆದುಕೊಳ್ಳುವ ಎಲ್ಲಾ ಸರಕಾರ ಉದ್ಯೋಗಸ್ಥರ ವಯಸ್ಸು ಮತ್ತು ಸಂಬಳಗಳ ತಫ್ಸೀಲ್ ಸಂಗ್ರಹ ಮಾಡಲ್ಪಟ್ಟಿದೆ. ಕೆಲಸದ ವಹಿವಾಟು ನಡಿಸತಕ್ಕ ಬಗ್ಗೆ ನಿಬಂಧನೆಗಳು ಮುಸೂದೆ ಮಾಡಲ್ಪಟ್ಟಿವೆ. ಸರ್ಕಾರ್ ನೌಕರಿಯಲ್ಲಿ ೬೫ ವರುಷ ವಯಸ್ಸಿಗೆ ಒಳಪಟ್ಟ ೧೦ ರೂಪಾಯಿ ಅದಕ್ಕೆ ಮೇಲ್ಪಟ್ಟ ಸಂಬಳ ತೆಗೆದುಕೊಳ್ಳತಕ್ಕವರು ೩೮೦೦ ಅವರೆಲ್ಲರನ್ನೂ ಈ ಏರ್ಪಾಟಿನ ಕ್ರಮಕ್ಕೆ ಒಳಪಡಿಸಿದರೆ ಅವರಿಂದ ಬರಬೇಕಾದ ಪ್ರೀಮಿಯಾಂ ಹಣವು ವರುಷ ಒಂದಕ್ಕೆ ೧,೬೨,೦೦೦ ರೂಪಾಯಿಗಳು ಆಗುತ್ತೆ. ಸರಕಾರದವರಿಂದ ಅವರಿಗೆ ಮುಂದಕ್ಕೆ ಕ್ಲಿಷ್ಟವಾದ ನಾಮಿನಿಯಲ್ಲಿ ಕೊಡಬೇಕಾದ ಬೋನಸ್ಸು ಹಣ ಒಟ್ಟಿಗೆ ಭಾರೀಯಾಗಿ ೬೩,೦೦,೦೦೦ ರೂಪಾಯಿ ಆಗುತ್ತೆ. ಇಂಥಾ ವಿಸ್ತಾರವಾದ ವ್ಯಾಪಾರದಲ್ಲಿ ಪ್ರವೇಶಿಸುವದಕ್ಕೆ ಮುಂಚಿತವಾಗಿಯೇ ಈ ಏರ್ಪಾಡನ್ನು ಚೆನ್ನಾಗಿ ಪರಿಶೋಧನೆ ಮಾಡಬೇಕೆಂದು ಗವರ್ನ್‌ಮೆಂಟನವರು ಅಪೇಕ್ಷಿಸುತ್ತಾರಲ್ಲದೆ ಉತ್ತರೋತ್ತರ ಸರಕಾರಕ್ಕೆ ಲಾಭ ನಷ್ಟವಾಗುವ ಪ್ರಮಾದವಿಲ್ಲದೆಯೂ ಉದ್ಯೋಗಸ್ಥರಿಗೆ ವಾಗ್ದಾನ ಮಾಡಲ್ಪಟ್ಟ ಬೋನಸ್ಸಿನ ಹಣವು ಸಾಧ್ಯವಾದಷ್ಟು ಹೆಚ್ಚಾಗಿ ಕೊಡುವಂತೆಯೂ ಈ ಪದ್ಧತಿಯನ್ನು ಏರ್ಪಡಿಸಬೇಕೆಂದು ಗವರ್ನ್‌ಮೆಂಟನವರು ಅಪೇಕ್ಷಿಸುತ್ತಾರೆ. ಈ ವಿಷಯದ ವಿಚಾರವನ್ನು ಇದುವರಿಗೆ ಸಾಕಾದಷ್ಟು ನಡಿಸಿ ಇರುವದರಿಂದ ಗವರ್ನ್‌ಮೆಂಟನವರು ಸ್ವಲ್ಪ ಕಾಲದಲ್ಲಿಯೇ ಈ ಏರ್ಪಾಡನ್ನು ವಿಳಂಬವಿಲ್ಲದೆ ಸಾರ್ವಜನಿಕವಾದ ಪಕ್ಷಾಪಾಯದ ಮೇರೆ ಜಾರೀಗೆ ತರುವದಕ್ಕೆ ಆಲೋಚಿಸುತ್ತಾರೆ. ಅದುವರಿವಿಗೆ ನೀವುಗಳು ಈ ವಿಷಯದಲ್ಲಿ ಕೊಡಬಹುದಾದ ಸಲಹೆಗಳನ್ನು ಸರಕಾರದವರಿಗೆ ತಿಳಿಸಬಹುದಾಗಿರುತ್ತೆ.

೭೭. ಸಭೆಯ ಏರ್ಪಾಡು.—ಈ ಉಪನ್ಯಾಸವನ್ನು ಮುಗಿಸುವದಕ್ಕೆ ಮುಂಚೆ ಮುಖ್ಯವಾಗಿ ಈ ಸಭೆಯ ಏರ್ಪಾಟಿನ ವಿಷಯದಲ್ಲಿ ಕೆಲವು ಸಂಗತಿಗಳನ್ನು ನಿಮಗೆ ತಿಳಿಸಬೇಕೆಂದು ಅಪೇಕ್ಷಿಸುತ್ತೇನೆ. ಶ್ರೀಮನ್ಮಹಾರಾಜರವರ ಆಳ್ವಿಕೆಯ ಮೊದಲನೇ ವರ್ಷದಲ್ಲಿ ಈ ಸಭೆಯು ಉಪಕ್ರಮವಾಗಿ ಕಳೆದ ಒಂಭತ್ತು ವರುಷಗಳಲ್ಲಿ ಬಹು ಪ್ರೋತ್ಸಾಹಕರವಾಗಿ ನಡೆದು ಬಂದು ಇದೆ. ಪ್ರಾರಂಭದಲ್ಲಿ ಈ ಸಭೆಗೆ ದೇಶದ ಎಲ್ಲಾ ಪ್ರಮುಖರಾದ ರೈತರು ಮತ್ತು ವರ್ತಕರು ಸೇರಿದ್ದರು; ಅವರುಗಳು ವಿಚಾರಪೂರ್ವಕವಾಗಿ ದಿವಾನರು ಮತ್ತು ಆಯಾಯ ಡಿಪ್ಯುಟಿ ಕಮಿಷನರುಗಳಿಂದ ನೇಮಿಸಲ್ಪಟ್ಟವರಾಗಿದ್ದರು. ೧೮೮೭ ನೇ ಸಾಲಿನಲ್ಲಿ, ಪ್ರಜೆಗಳೊಳಗೆ ವಿದ್ಯೆಯು ಕಸುಬುಗಳು ಬಹಳ ಮುಂದವರಿದಾಗಿಯೂ ಮುಖ್ಯವಾಗಿಯೂ ಇರುವದರಿಂದ ಅವರುಗಳೊಳಗೆ ಪ್ರತಿನಿಧಿಗಳಾಗಿ ಬರತಕ್ಕವರ ಒಂದು ಕ್ಲಿಷ್ಟವಾದ ಆಸ್ತಿ ಪ್ರಮಾಣ ವಿದ್ಯೆ ಎಂಬ ವಿಶೇಷವಾದ ಅರ್ಹತೆಯ ಉಳ್ಳವರಾಗಿರಬೇಕೆಂದು ನಾನು ಆಯಾಯ ಸ್ಥಳದಲ್ಲಿ ಇರುವ ಲೋಕಲ್ ಫಂಡ್ ಬೋರ್ಡುಗಳೂ ಮುನಿಸಿಪಾಲಿಟಿಗಳೂ ಮತ್ತು ಪಬ್ಲಿಕ್ ಅಸೋಸಿಯೇಷನ್ ಎಂಬ ಪ್ರಜಾ ಸಂಘಗಳವರು ಸಹ ಈ ಸಭೆಗೆ ತಮ್ಮಗಳ ಕಡೆಯಿಂದ ಮೆಂಬರುಗಳನ್ನು ಗೊತ್ತುಮಾಡಿ ಕಳುಹಿಸಬೇಕೆಂದು ನಿಯಮಿಸಿದೆನು. ಆ ನಂತರ ಎರಡು ವರುಷಗಳಲ್ಲಿ ಆಯಾ ಭಾಗದ ಜನಗಳ ಪ್ರಮಾಣವಾದ ತಾಲ್ಲೂಕುವಾರ್ ಪಟ್ಟಿಗಳನ್ನು ತರಿಸಿ ಇಟ್ಟುಕೊಂಡು ಅವುಗಳಿಂದ ಜನಗಳನ್ನು ಚುನಾಯಿಸುವದರಲ್ಲಿ ಎಲ್ಲಾ ತರಗತಿಯವರಿಗೂ ಸಾಧ್ಯವಾದ ಮಟ್ಟಿಗೆ ಸಮರ್ಪಕವಾಗಿರುವಂತೆ ಚುನಾಯಿಸಲು ಪ್ರಯತ್ನ ಮಾಡಿದೆನು. ಈ ಪ್ರಯತ್ನಗಳು ಎಷ್ಟುಮಟ್ಟಿಗೆ ಕೈಗೂಡಿಬಂದವಂದರೆ, ದೇಶದಲ್ಲಿ ಮುಖ್ಯಮುಖ್ಯವಾದ ಎಲ್ಲಾ ಕಸಬಿನವರ ಕಡೆಯಿಂದ [illegible] ಹೆಚ್ಚಾಗಿ ಪ್ರತಿನಿಧಿಗಳನ್ನು ಬರಮಾಡಿಕೊಳ್ಳುವ ವಿಷಯದಲ್ಲಿ ಪ್ರಯತ್ನ ಮಾಡುವದಕ್ಕೆ ಸರಕಾರದವರಿಗೆ ಪ್ರೋತ್ಸಾಹ ಉಂಟಾಗಿದೆ. ಕಳೆದ ವರುಷಗಳಲ್ಲಿ ನೀವು ಮಾಡಿದ ಚರ್ಚೆಗಳಲ್ಲಿ ನಮಗೆ ಕಂಡುಬಂದ ನಿಮ್ಮ ಸಿಹಾನಗುಣವೂ ತಿಳುವಳಿಕೆಯೂ ಅನುಭವಪೂರ್ವಕವಾದ ವಿವೇಕವೂ ಮುಖ್ಯಮುಖ್ಯ ಪ್ರಮೇಯಗಳನ್ನು ಚರ್ಚಿಸುವದರಲ್ಲಿ ನೀವು ಕೊಟ್ಟ ಸವಿಸ್ತಾರವಾದ ಸಲಹೆಗಳು ರಾಜ್ಯ ಸಂಬಂಧವಾದ ವಿಷಯದಲ್ಲಿ ನೀವು ತೋರಿಸಿದ ನಿಷ್ಕಪಟವಾದ ಆಸಕ್ತಿಯೂ ಇವುಗಳನ್ನು ಯೋಚಿಸಲಾಗಿ ಹೆಚ್ಚಾದ ಐಶ್ವರ್ಯವೂ ಮತ್ತು ಲೋಕವ್ಯವಹಾರಜ್ಞಾನವೂ ಅಧಿಕವಾಗಿ ಇರುವ ತರಗತಿ ಜನಗಳು ಈ ಸಭೆಗೆ ಬರತಕ್ಕ ಮೆಂಬರುಗಳನ್ನು ತಾವೇ ಚುನಾಯಿಸಿಕೊಳ್ಳುವಂತೆ ಏರ್ಪಡಿಸುವದಕ್ಕೆ ಇದು ಸಕಾಲವೆಂದು ಶ್ರೀಮನ್ಮಹಾರಾಜರವರಿಗೆ ತೋರಿಬಂದಿದೆ. ಈ ಅಭಿಪ್ರಾಯದಂತೆ ಜಾರೀಗೆ ತರಲು ಈ ಸಭೆಯನ್ನು ಮುಂದೆ ಏರ್ಪಡಿಸುವ ಕ್ರಮವನ್ನು ಕುರಿತು ಕೆಲವು ಮುಸೂದೆ ನಿಬಂಧನೆಗಳನ್ನು ತಯಾರುಮಾಡಿರುತ್ತೆ. ಸದರೀ ನಿಬಂಧನೆಗಳ ಪ್ರತಿಯನ್ನು ನಿಮಗೆ ಕೊಡುವದಾಗುತ್ತೆ. ಅದು ನೋಡಲಾಗಿ ಈ ಸಭೆಗೆ ಭಾರೀ ಜಮೀನ್ದಾರರೂ ಮತ್ತು ಮುಖ್ಯದ ವರ್ತಕರೂ ವ್ಯಾಪಾರಸ್ಥರೂ ಸೇರಬೇಕೆಂದು ವ್ಯಕ್ತವಾಗುತ್ತೆ. ಇದಲ್ಲದೆ ವಿಶೇಷವಾಗಿ ವಿದ್ಯಾವಂತರಾಗಿ ಇರುವವರನ್ನೇ ಒಂದು ಅರ್ಹತೆಯಾಗಿ ಗಣಿಸಿದ್ದು ನಿಷ್ಕರ್ಷೆ ಮಾಡಿರುವ ಆಸ್ತಿಸಂಬಂಧವಾದ ಅರ್ಹತೆಯು ಹೆಚ್ಚಾಗಿ ಕಾಣುತ್ತೆ. ಯಾಕಂದರೆ, ೧೦೦ ರೂಪಾಯಿಯಾಗಾಯಿತು ೫೦ ರವರಿಗೆ ಜಮೀನ್ ಕಂದಾಯ ಕೊಡತಕ್ಕವರೂ ೧೫ ರೂಪಾಯಿಯಾಗಾಯಿತು ೫೦ ರವರಿಗೆ ಮೊಹತರಫಾ ಕಂದಾಯ ಕೊಡತಕ್ಕವರೂ ೫೦೦ ರೂಪಾಯಿ ಬೆಲೆ [illegible] ಅಥವಾ ಇದಕ್ಕೆ ಮೇಲ್ಪಟ್ಟ ಇನಾಂಗ್ರಾಮಗಳ ಹಿಡುವಳಿದಾರರೂ ಈಸಭೆಗೆ ಅರ್ಹರೆಂದು ವಿಧಿಸಿರುತ್ತೆ. ಆದರೂ ಇದು ನಿಷ್ಕರ್ಷವಾಗಿ ಹೆಚ್ಚಾದ ಮೊಬಲಗೆಂದು ಎಣಿಸತಕ್ಕದ್ದಲ್ಲ ಹ್ಯಾಗಂದರೆ, ಇದರಿಂದ ನಮ್ಮ ೭೭ ತಾಲ್ಲೂಕುಗಳಲ್ಲಿಯೂ ಪ್ರತಿಯೊಂದು ತಾಲ್ಲೂಕಿಗೂ ಸರಾಸರಿ ೫೦ ಜನಗಳಿಗೆ ಕಡಿಮೆಯಿಲ್ಲದಂತೆ ಅರ್ಹರಾದಜನರು ದೊರೆಯುತ್ತಾರೆ. ಆಸ್ತಿಯಿಂದಲೂ ವಿದ್ಯೆಯಿಂದಲೂ ಸಭೆಗೆ ಅರ್ಹತೆಯುಂಟಾಗಿರತಕ್ಕ ಜನರೆಲ್ಲರೂ ಮುಂದಕ್ಕೆ ತಮ್ಮತಮ್ಮ ತಾಲ್ಲೂಕಿಗೆ ಅಥವಾ ಜಿಲ್ಲೆಗಳವರು ಅಥವಾ ಮೈಸೂರು ನಗರಿಗೆ ಗೊತ್ತುಮಾಡಿರುವಂತೆ ೧-೨ ಅಥವಾ ೪ ಮೆಂಬರುಗಳನ್ನು ತಮ್ಮಲ್ಲಿ ಯಾವರೇ ಸಭೆಗೆ ಚುನಾಯಿಸಬಹುದು. ಈಮೇರೆ ಚುನಾಯಿಸಲ್ಪಟ್ಟ ಮೆಂಬರುಗಳಲ್ಲದೆ ಆಯಾಯ ಲೋಕಲ್ ಫಂಡ್ ಬೋರ್ಡುಗಳು ಮತ್ತು ಮುನಿಸಿಪಾಲಿಟಿಗಳು ಇಷ್ಟು ಅಸೋಸಿಯೇಷನ್ ಗಳಂಥ ಪ್ರಜಾಸಂಘಗಳವರು ತಮ್ಮತಮ್ಮ ಕಡೆ ಮೆಂಬರುಗಳನ್ನು ಚುನಾಯಿಸಿ ಕಳುಹಿಸಬಹುದು. ಈ ಮೇರೆಗೆ ಏರ್ಪಡಿಸುವ ಸಭೆಯ ಮೆಂಬರುಗಳ ಸಂಖ್ಯೆಯು ಸುಮಾರು ೩೫೦ಕ್ಕೆ ಹೆಚ್ಚಾಗುವದಿಲ್ಲ. ಅದರಲ್ಲಿ ರೈತರು ವರ್ತಕರು ಮೊದಲಾದವರು [illegible] ಮಟ್ಟಿಗೆ ಸೇರಿದಹಾಗೆ ಆಗುತ್ತೆ. ಮತ್ತು ಸದರೀ ರೀತಿಗೆ ಬರತಕ್ಕ ಮೆಂಬರುಗಳು ಪ್ರಜಾಪ್ರತಿನಿಧಿಗಳಂದಲೆ [illegible] ಅನುಸರಿಸಿ ಚುನಾಯಿಸಲ್ಪಡುವದರಿಂದ ಅವರುಗಳ ಸಲಹೆಗಳು ಮತ್ತು ಅಭಿಪ್ರಾಯಗಳು ಗೌರವಾರ್ಹವಾಗಿರುತ್ತವೆ. ಈ ಏರ್ಪಾಡಿನಿಂದ ಈಗಿರುವ ಪದ್ಧತಿಯನ್ನು ಸಂಪೂರ್ಣವಾಗಿ ಪ್ರಜೆಗಳೇ ಚುನಾಯಿಸುವಂತೆ ಆಗುವದಿಲ್ಲ ಹೀಗೆ ಮಾಡಿ ಹಾಗೆ ಚುನಾಯಿಸತಕ್ಕವರು ಪ್ರಜೆಗಳ ಸಂಖ್ಯೆಗೆ ಅನುಗುಣವಾಗಿರಬೇಕಾಗುತ್ತೆ. ಈ ಬದಲಾವಣೆಯನ್ನು ಮಾಡುವವಿಷಯದಲ್ಲಿ ಬಹಳ ಅನಾನುಕೂಲಗಳು ಅನುಭವಕ್ಕೆ ಉಂಟಾಗುತ್ತವೆ. ಅದ್ದರಿಂದ ಯುಕ್ತನಿಲ್ಲದೆ ಆ ಬದಲಾವಣೆಯು ಉತ್ತರೋತ್ತರ ನಡೆಯುವಂತೆ ಬಿಡಬೇಕಾಗುತ್ತೆ. ಪ್ರಕೃತಕ್ಕೆ ಈಗ ನಾವು ಜಾಗ್ರತೆಯಿಂದ [illegible] ಉಪಕ್ರಮಿಸಿರುವ [illegible] ಪ್ರಕಾರ ಶ್ರೀಮನ್ಮಹಾರಾಜರವರು ಈಗ ಅನುಗ್ರಹಮಾಡಿಕೊಟ್ಟಿರುವ ರಿಯಾಯಿತಿಯು ಸಂಪೂರ್ಣವಾಗಿಯೂ ಮತ್ತು ಸಾಧ್ಯವಾದಮಟ್ಟಿಗೂ ಪ್ರಜಾಪ್ರಯೋಜನಕರವಾಗುವಂತೆಯೂ ಆಚರಣೆಯಲ್ಲಿ ತರಲ್ಪಡುವದೆಂದು ನಮ್ಮ ಸದರೀ ರಿಯಾಯಿತಿಯ ಫಲವನ್ನು ಪೂರ್ತಿ ಚೆನ್ನಾಗಿ ತಿಳಿದುಕೊಂಡು ಶ್ರಮವಹಿಸಿ ಸಭಾಮೆಂಬರುಗಳನ್ನು ಚುನಾಯಿಸತಕ್ಕ ಸಂಘಗಳನ್ನು ಸರ್ಕಾರದವರು ಬಲಪಡಿಸಿ ತನ್ಮೂಲಕ ಈ ಸಭೆಯ ಏರ್ಪಾಟಿನಲ್ಲಿ ಪ್ರತಿನಿಧಿತ್ವೇನ ಮೆಂಬರುಗಳು ಸೇರುವ ಕ್ರಮವನ್ನು ಅಭಿವೃದ್ಧಿಪಡಿಸುವದಕ್ಕೆ ಸೌಲಭ್ಯ ಉಂಟಾಗುವಂತೆ ಮಾಡುವರೆಂದು ಶ್ರೀಮನ್ಮಹಾರಾಜರವರು ಕೋರುತ್ತಾರೆ.

ಮೈಸೂರ್, 28ನೇ ಅಕ್ಟೋಬರ್ 90 } ಕೆ. ಶೇಷಾದ್ರಿ ಐಯ್ಯರ್, ಮೈಸೂರ್ ಸಂ|| ದಿವಾನರು

Bangalore :—Printed and published at the Karnatic Press, No. 114, Srinivasa Mandiram Road, Pettah—1890.